UNIVERSAL
LIBRARY
OU_200726
UNIVERSAL
LIBRARY


OSMANIA UNIVERSITY LIBRARY

Call No. K294.11/V46R Accession No K. 5230.

Author ವೆಂಕಟಾಚಲಯ್ಯ H.P.

Title ಮಹಾಭಾರತ ಪಂಡಿತರು. ಭಾಗ. 5

This book should be returned on or before the date last marked below.



Karnatak Sahitya Mandira.
Market, DHARWAR.
(Mysore State)

ಶ್ರೀ ಜಯಚಾಮರಾಜೇಂದ್ರ ವೇದರತ್ನಮಾಲಾ

ಸಂಖ್ಯೆ—೫

RIG-VEDA

ಸಾಯಣಭಾಷ್ಯಸಮೇತಾ

ಋಗ್ವೇದ ಸಂಹಿತಾ

(ಕರ್ನಾಟಕ ಭಾಷಾರ್ಥಾನುವಾದವಿವರಣೆಗಳೊಡನೆ)

ಭಾಗ—೫

ಪೃಥಮಾಷ್ಟಕದಲ್ಲಿ ನಾಲ್ಕನೆಯ ಅಧ್ಯಾಯವು

ಪೃಥಮ ಮಂಡಲದ ಸೂಕ್ತಗಳು ೪೭-೬೧

Translated with Exhaustive Critical Notes

by

Asthana Mahavidwan

H. P. VENKATA RAO,

Editor.

Printed at

Sri Chamundeswari Electric Press,

CLOCK TOWER SQUARE,

MYSORE.

1950

Published by the gracious permission of

His Highness

Sri Jayachamarajendra Wadiyar Bahadur,

G.C.B., G.C.S.I., Maharaja of Mysore.



ಯದುವಂಶಪಯಃಪಾರಾಸುಧಾಕರರೂ ಸತ್ಸಂಪ್ರದಾಯವೈದಿಕವಿದ್ಯಾವರ್ಧಕರೂ ಮೈಸೂರು ದೇಶವನ್ನಾಳುವ
ಧರ್ಮಪ್ರಭುಗಳೂ ಆದ ಶ್ರೀಮನ್ಮಹಾರಾಜ

ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್, ಜಿ.ಸಿ.ಬಿ., ಜಿ.ಸಿ.ಎಸ್.ಐ. ರವರು.

ವೇದಪ್ರಕಟನಕಾರ್ಯಕ್ಕಾಗಿ ನಿಯಮಿತವಾಗಿರುವ

ವೇದವಿಮರ್ಶನ ವಿದ್ವನ್ಮಂಡಲಿ

ಅಧ್ಯಕ್ಷರು :

ಶ್ರೀ ಜಗದ್ಗುರು ನಾಗಲಿಂಗಪರಿವ್ರಾಜಕಾಚಾರ್ಯ ಪೀಠಾಧ್ಯಕ್ಷರಾದ

ಶಿಲ್ಪಸಿದ್ಧಾಂತಿ ಶಿವಯೋಗಿ ಶ್ರೀ ಸಿದ್ಧಲಿಂಗಸ್ವಾಮಿಗಳವರು.

Translater & Editor

ಆಸ್ಥಾನ ಮಹಾವಿದ್ವಾನ್ H. P. ವೆಂಕಟರಾವ್,

ಸಹಾಯಕವಿದ್ವನ್ಮಂಡಲಿ

1. ಬ್ರ॥ ಶ್ರೀ॥ ಜಿ. ವಿಷ್ಣುಮೂರ್ತಿಭಟ್ಟರು, ವ್ಯಾಕರಣವಿದ್ವಾನ್ ಶ್ರೀಮನ್ಮಹಾರಾಜರವರ ಸಂಸ್ಕೃತಮಹಾಪಾಠಶಾಲಾ, ಮೈಸೂರು.

2. ಆಸ್ಥಾನವಿದ್ವಾನ್ ಬ್ರ॥ ಶ್ರೀ॥ H. ಗಂಗಾಧರಶಾಸ್ತ್ರಿಗಳು, ಜ್ಯೌತಿಷವಿದ್ವಾನ್ ಮತ್ತು ಕರ್ಣಾಟಕಭಾಷಾ ಪಂಡಿತರು.

3. ಬ್ರ॥ ಶ್ರೀ ॥ N. ಶ್ರೀನಿವಾಸಶಾಸ್ತ್ರಿಗಳು, ಋಗ್ವೇದಘನಪಾಠಿಗಳು.

4. ಬ್ರ॥ ಶ್ರೀ ॥ ಹಿಟ್ಟವಳ್ಳಿ ಬಿಳಿಗಿರಿ ರಂಗಾಜೋಯಿಸರು, ಶ್ರೌತವಿದ್ವಾನ್.


5. ಬ್ರ॥ ಶ್ರೀ ॥ ಹಿಟ್ಟವಳ್ಳಿ ದೇವರ ಭಟ್ಟರು, ಮೀಮಾಂಸಾದರ್ಶನಪಂಡಿತರು.

6. ಬ್ರ॥ ಶ್ರೀ ॥ G. N. ಚಕ್ರವರ್ತಿ ಎ :· ಎ.
Professor of Sanskrit, St Philomina's College, Mysore.

7. ಬ್ರ॥ ಶ್ರೀ ॥ M· S. ವೆಂಕಟರಮಣಾಚಾರ್, M. A., B. T. ಸಾಹಿತ್ಯವಿದ್ವಾನ್.

8. ಬ್ರ॥ ಶ್ರೀ ॥ ರಂಗನಾಥನ್, ಸಾಹಿತ್ಯ ವಿದ್ವಾನ್, ಅರಮನೆ ಸರಸ್ವತೀ ಭಂಡಾರ.

9. ಬ್ರ॥ ಶ್ರೀ ॥ S. ಸೀತಾರಾಮಶಾಸ್ತ್ರಿಗಳು, ರಿಟೈರ್ಡ್ ಪಂಡಿತರು,
Govt. Oriental Research Institute, Mysore.



ಶ್ರೀ ಜಗದ್ಗುರು ನಾಗಲಿಂಗಪರಿವ್ರಾಜಕಾಚಾರ್ಯ ಪೀಠಾಧ್ಯಕ್ಷರಾದ
ಶಿಲ್ಪಸಿದ್ಧಾಂತಿ ಶಿವಯೋಗಿ ಶ್ರೀ ಸಿದ್ಧಲಿಂಗಸ್ವಾಮಿಗಳವರು
ವೇದವಿಮರ್ಶನ ವಿದ್ವನ್ಮಂಡಲಿಯ ಅಧ್ಯಕ್ಷರು.

ಮುನ್ನುಡಿ

ಋಗ್ವೇದಸಂಹಿತೆಯ ಪ್ರಥಮಾಷ್ಟಕದ ನಾಲ್ಕನೆಯ ಅಧ್ಯಾಯವನ್ನೊಳಗೊಂಡಿರುವ ಈ ಭಾಗದಲ್ಲಿ ಪ್ರಥಮ ಮಂಡಲದ ೪೭-೬೧ ಸೂಕ್ತಗಳು ಅಡಕವಾಗಿವೆ. ಇವುಗಳಲ್ಲಿ ೪೭-೫೦ ಸೂಕ್ತಗಳಿಗೆ **ಪುಷ್ಕಣ್ವಿಃ ಕಾಣ್ವಿಃ** ಎಂಬ ಋಷಿಯೂ, ೫೧-೫೭ ಸೂಕ್ತಗಳಿಗೆ **ಸವ್ಯ ಆಂಗೀರಸಃ** ಎಂಬ ಋಷಿಯೂ, ೫೮-೬೧ ಸೂಕ್ತಗಳಿಗೆ **ನೋಧಾ ಗೌತಮಃ** ಎಂಬ ಋಷಿಯೂ ಸೂಕ್ತಗಳ ದ್ರಷ್ಟೃಗಳಾಗಿದ್ದಾರೆ. ನಾವು ಹಿಂದೆಯೇ ತಿಳಿಸಿದಂತೆ ಈ ಮಂಡಲದ ಋಷಿಗಳಿಗೆ ಶತರ್ಚಿನರೆಂದು ಹೆಸರು ಎಂದರೆ ಇವರಲ್ಲಿ ಒಬ್ಬೊಬ್ಬರೂ ಸುಮಾರು ನೂರು ಋಕ್ಕುಗಳ ದ್ರಷ್ಟೃಗಳಾಗಿರುವರು.

ಪ್ರಸ್ಕಣ್ವನೆಂಬುವನು ಪ್ರಸಿದ್ಧನಾದ ಕಣ್ವಋಷಿಯ ಪುತ್ರನು. ನಿರುಕ್ತದಲ್ಲಿ ಯಾಸ್ಕರು—**ಪ್ರಸ್ಕಣ್ವಃ ಕಣ್ವಸ್ಯ ಪುತ್ರಃ ಕಣ್ವಪ್ರಭವೋ ಯೆಥಾ ಸ್ಯಾಗ್ರ್ಯಂ** (ನಿ. ೩-೧೭) ಪ್ರಸ್ಕಣ್ವನು ಕಣ್ವಋಷಿಯ ಪುತ್ರನು. ಕಣ್ವಋಷಿಯೇ ಮೊದಲಾದವರಂತೆ ಇವನೂ ಪ್ರತಿಭಾಶಾಲಿಯು ಎಂದು ಹೇಳಿರುವರು. ಈ ಋಷಿಯು ಋಗ್ವೇದ ಪ್ರಥಮ ಮಂಡಲದ ೪೪-೫೦ ಸೂಕ್ತಗಳು (೮೨ ಋಕ್ಕುಗಳು) ಎಂಟನೆಯ ಮಂಡಲದ ೪೯ ನೆಯ ಸೂಕ್ತ (೧೦ ಋಕ್ಕುಗಳೂ), ಒಂಭತ್ತನೆಯ ಮಂಡಲದ ೫೫ ನೆಯ ಸೂಕ್ತ (೫ ಋಕ್ಕುಗಳೂ), ಒಟ್ಟು ೯೭ ಋಕ್ಕುಗಳಿಗೆ ದ್ರಷ್ಟೃವಾಗಿರುವನು. ಈ ಋಷಿಯ ಹೆಸರು ಋಗ್ವೇದದ ೧-೪೪-೬ ; ೧-೪೫-೩ ; ೪-೩೩-೩ ; ೪-೫೩-೨ ; ೪-೫೪-೪ ಇತ್ಯಾದಿ ಋಕ್ಕುಗಳಲ್ಲಿಯೂ ನಿರುಕ್ತ ೩-೧೭ ರಲ್ಲಿಯೂ ಪ್ರಸ್ತಾಪಿಸಲ್ಪಟ್ಟಿರುವುದು.

ಆಂಗೀರಸಗೋತ್ರೋತ್ಪನ್ನನಾದ ಸವ್ಯನೆಂಬ ಋಷಿಯ ವಿಷಯವು ವಿಶದವಾಗಿಲ್ಲ. ಈ ಋಷಿದೃಷ್ಟವಾದ ಸೂಕ್ತಗಳು ಋಗ್ವೇದದ ಪ್ರಥಮ ಮಂಡಲದಲ್ಲಿ ೫೧-೫೭ (೭೨ ಋಕ್ಕುಗಳು) ಸೂಕ್ತಗಳುಮಾತ್ರ ವಿರುವವು.

ನೋಧಾ ಗೌತಮಃ ಎಂಬ ಋಷಿಯ ವಿಷಯವಾಗಿ ಯಾಸ್ಕರು ತಮ್ಮ ನಿರುಕ್ತದಲ್ಲಿ-**ನೋಧಾ ಋಷಿರ್ಭವತಿ । ನವನಂ ದಧಾತಿ । ಸ ಯೆಥಾ ಸ್ತುತ್ಯಾ ಕಾಮಾನಾವಿಷ್ಕರುತೇ** (ನಿ. ೪-೧೬). ನೋಧಾಃ ಎಂಬ ಋಷಿಯು ತನ್ನ ನೂತನವಾದುದೂ, ಕಾವ್ಯರೂಪವಾದುದೂ ಆದ ಸ್ತುತಿಗಳಿಂದ ಅಂತರ್ಗತವಾದ ತನ್ನ ಅಭಿಲಾಷೆಗಳನ್ನು ಬಿಚ್ಚಿ ತೋರಿಸುವಂತೆ ಉಷಸ್ಸೂ ಸಹ ತನ್ನ ಸುಸ್ತವಾಗಿದ್ದ ಕಾಂತಿಯನ್ನೂ ಪ್ರಕಾಶಪಡಿಸುತ್ತಾಳೆಂದು—

ಉಪೋ ಅದರ್ಶಿ ಶುಂಧ್ಯುವೋ ನ ವಕ್ಷೋ ನೋಧಾ ಇವಾವಿರಕೃತ ಪ್ರಿಯಾಣಿ ।
ಅದ್ಮಸನ್ನ ಸಸತೋ ಬೋಧಯಂತೀ ಶಶ್ವತ್ತಮಾಗಾತ್ಪುನರೇಯುಷೀಣಾಂ ॥

(ಋ. ಸಂ. ೧-೪೮-೪)

ಎಂಬ ಋಕ್ಕನ್ನು ವಿವರಿಸುವಾಗ ನಿರ್ವಚನವನ್ನು ಹೇಳಿರುವರು.

ನೋಧಾ ಎಂಬ ಋಷಿಯು ಗೋತಮ ಎಂಬ ಋಷಿಯ ಪುತ್ರನು ಅಥವಾ ಗೋತಮನ ವಂಶೋದ್ಭವನು. ಈ ಋಷಿಯು ಋಕ್ಸಂಹಿತೆಯ ಪ್ರಥಮ ಮಂಡಲದಲ್ಲಿ ೫೮-೬೪ ನೇ ಸೂಕ್ತಗಳಿಗೂ, (೭೪ ಋಕ್ಕುಗಳು) ಎಂಟನೆಯ ಮಂಡಲದಲ್ಲಿ ೮೮ ನೇ ಸೂಕ್ತಕ್ಕೂ (೬ ಋಕ್ಕುಗಳು) ಒಂಭತ್ತನೆಯ ಮಂಡಲದಲ್ಲಿ ೯೩ ನೇ ಸೂಕ್ತಕ್ಕೂ (೫ ಋಕ್ಕುಗಳು) ಒಟ್ಟು ೮೫ ಋಕ್ಕುಗಳ ದ್ರಷ್ಟೃವೆಂದು ಪ್ರಸಿದ್ಧನಾಗಿದಾನೆ. ಇವನ ವಿಷಯವನ್ನು ಋಕ್ಸಂಹಿತೆಯಲ್ಲಿಯೇ ಅನೇಕಕಡೆ ಹೇಳಿದೆ—

ತಂತ್ವಾ ವಯಂ ಪತಿಮಗ್ನೇ ರಯೀಣಾಂ ಪ್ರಶಂಸಾಮೋ ಮತಿಭಿರ್ಗೋತಮಾಸಃ ।
ಅಶುಂ ನ ವಾಜಂಭರಂ ಮರ್ಜಯಂತಃ ಪ್ರಾತರ್ಮಕ್ಷೂ ಧಿಯಾವಸುರ್ಜಗಮ್ಯಾತ್ ॥

(ಋ. ಸಂ. ೧-೬೦-೫)

ಇತ್ಯಾದಿ ಋಕ್ಕುಗಳಲ್ಲಿ ಗೋತಮ ಪುತ್ರರೆಂದೂ, ಧನಪತಿಯಾದ ಅಗ್ನಿಯನ್ನು ಸ್ತುತಿಸುವರೆಂದೂ ಹೇಳಿದೆ.

ಏವಾ ತೇ ಹಾರಿಯೋಜನಾ ಸುವೃಕ್ತೀಂದ್ರ ಬ್ರಹ್ಮಾಣಿ ಗೋತಮಾಸೋ ಅಕ್ರನ್ ।
ಏಷು ವಿಶ್ವಪೇಶಸಂ ಧಿಯಂ ಧಾಃ ಪ್ರಾತರ್ಮಕ್ಷೂ ಧಿಯಾವಸುರ್ಜಗಮ್ಯಾತ್ ॥

(ಋ. ಸಂ. ೧-೬೧-೧೬)

ಎಂಬಲ್ಲಿ ಇಂದ್ರನನ್ನುದ್ದೇಶಿಸಿ ಗೋತಮಪುತ್ರರಾದ ನೋಧಸ್ಸುಗಳು ಸ್ತುತಿಯನ್ನು ರಚಿಸಿದರೆಂದು **ಪಠಿಸಿದೆ.** ಈ ಋಷಿಯ ಹೆಸರು ಋಗ್ವೇದ ಸಂಹಿತೆಯ ೧-೬೧-೧೪ ; ೧-೬೨-೧೩ ; ೧-೬೪-೧ ; ೧-೧೨೪-೪ ; ನಿರುಕ್ತ ೪-೧೬ ; ಐತರೇಯ ಬ್ರಾಹ್ಮಣ ೬-೧೮ ಇತ್ಯಾದಿ ಸ್ಥಳಗಳಲ್ಲಿ ಸೂಚಿತವಾಗಿದೆ. ಪಂಚವಿಂಶ ಬ್ರಾಹ್ಮಣರಲ್ಲಿ (೭-೧೦-೧೦ ; ೨೧-೯-೧೨) ಕಕ್ಷೀವಾನ್ ಎಂಬ ಋಷಿಯ ವಂಶಸ್ಥನಾದ ಕಕ್ಷೀವತ ಎಂದು ಕರೆಯಲ್ಪಟ್ಟಿದ್ದಾನೆ. ಇದಕ್ಕೆ ಐತರೇಯಬ್ರಾಹ್ಮಣದಲ್ಲೂ (ಐ. ಬ್ರಾ. ೪-೨೭ ; ೮-೧೨-೧೭) ಅಥರ್ವವೇದದಲ್ಲಿಯೂ (ಅ. ವೇ. ೧೫-೨-೪ ; ೧೫-೪-೪) ಸಮರ್ಥನೆ ಇರುವುದು.

ಶತರ್ಚಿನರಲ್ಲಿ ಈ ಭಾಗಕ್ಕೆ ಸಂಬಂಧಪಟ್ಟ ಮೂರು ಋಷಿಗಳ ವಿಷಯವನ್ನು ಮಾತ್ರ ಇಲ್ಲಿ ಪ್ರಸ್ತಾಪ ಮಾಡಿರುವೆವು. ಈ ಮಂಡಲದ ಎಲ್ಲಾ ಋಷಿಗಳ ವಿಷಯವನ್ನು ಈ ಮಂಡಲದ ಕೊನೆಯಲ್ಲಿ ಎಂದರೆ ಋ. ಸಂ. ೧೪ ನೆಯ ಭಾಗದಲ್ಲಿ ವಿಸ್ತಾರವಾಗಿ ವಿವರಿಸಲಾಗುವುದು.

ಅತಿ ಪ್ರಾಚೀನವೂ, ಅತಿ ಗಹನವೂ, ಅತಿ ವಿಸ್ತಾರವೂ, ಸರ್ವಶಾಸ್ತ್ರಗಳಿಗೂ ಮೂಲಭೂತವೂ ಆದ ಇಂತಹ ಋಗ್ವೇದಸಂಹಿತೆಯನ್ನು ಸರಳವಾದ ಕನ್ನಡಭಾಷೆಯಲ್ಲಿ ವಿಮರ್ಶಾನುವಾದಸಹಿತವಾಗಿ ಪ್ರಕಾಶಪಡಿಸುವುದು ಸುಲಭವಾದ ಕೆಲಸವಲ್ಲ. ಆದರೂ ಇಂತಹ ಮಹತ್ಕಾರ್ಯದಿಂದ ಪಂಡಿತಪಾಮರಾದಿಯಾದ ಸಕಲ ಜನರೂ ಜ್ಞಾನಾಭಿವೃದ್ಧಿಯನ್ನು ಪಡೆದು ಈಶ್ವರಾನುಗ್ರಹಕ್ಕೆ ಪಾತ್ರರಾಗಲೆಂಬ ಘನವಾದ ಉದ್ದೇಶದಿಂದ, ಕರ್ನಾಟಕಸಿಂಹಾಸನಾಧೀಶ್ವರರೂ, ವೇದವಿದ್ಯಾಭಿಮಾನಿಗಳೂ, ಸ್ವಯಂ ಪಂಡಿತರೂ, ಪ್ರಜಾನುರಾಗಿಗಳೂ, ದೈವಭಕ್ತಿತತ್ಪರರೂ ಆದ ಶ್ರೀ **ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್ ಜಿ.ಸಿ.ಬಿ., ಜಿ.ಸಿ.ಎಸ್.ಐ.** ಮಹಾಪ್ರಭುವರ್ಯರು ಬಹುದ್ರವ್ಯಸಾಧ್ಯವಾದ ಈ ಗ್ರಂಥಪ್ರಕಟನೆಯನ್ನು ತಮ್ಮ ಉದಾರಾಶ್ರಯದಿಂದ ಪ್ರೋತ್ಸಾಹವಾಡುತ್ತಿರುವುದು ಕರ್ನಾಟಕ ಜನಕೋಟಿಯ ಸುಕೃತವೆಂದೇ ಹೇಳಬೇಕು. ಇಂತಹ ಉದಾರಮತಿಗಳಾದ ನಮ್ಮ ಪ್ರಭುವರ್ಯರಿಗೂ, ಅವರ ಕುಟುಂಬಕ್ಕೂ (ವೇದಮಂತ್ರಗಳಲ್ಲಿ ಅತಿಮುಖ್ಯವೆಂದು ಪರಿಗಣಿಸಲ್ಪಟ್ಟಿರುವ ಗಾಯತ್ರೀ ಎಂಬ ಮಂತ್ರನಾಮಾಂಕಿತರಾದ) ರಾಜಕುಮಾರಿಗೂ, ಸಮಸ್ತ ಪ್ರಜಾಕೋಟಿಗೂ ಸಹ ವೇದಪುರುಷನಾದ ಸರ್ವೇಶ್ವರನು ಐಹಿಕಫಲಗಳಾದ, ಆಯುರಾರೋಗ್ಯೈಶ್ವರ್ಯಾದಿ ಸಕಲ ಸಂಪತ್ತನ್ನೂ ಪಾರಮಾರ್ಥಿಕವಾದ ಅಧ್ಯಾತ್ಮಜ್ಞಾನವನ್ನೂ ಇತೋಪ್ಯತಿಶಯವಾಗಿ ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇನೆ.

ಮೈಸೂರು
ವಿಕೃತಿನಾಮ. ಸಂ. ಆ. ಆಷಾಢ ಶು. ಏಕಾದಶೀ
ಸೋಮವಾರ, ತಾ॥ 26–6–50

ಆಸ್ಥಾನಮಹಾವಿದ್ವಾನ್
ಹೆಚ್. ಪಿ. ವೆಂಕಟರಾವ್
Translator & Editor

॥ ವಿಷಯಾನುಕ್ರಮಣಿಕೆ ॥

ಪುಟಸಂಖ್ಯೆ

೪೭. **ಅಯಂ ವಾಂ ಮಧುಮತ್ತಮಃ ಎಂಬ ನಲವತ್ತೇಳನೆಯ ಸೂಕ್ತವು—**

ಸೂಕ್ತದ ವಿನಿಯೋಗವು 1
ಋಷಿದೇವತಾಛಂದಸ್ಸುಗಳು 2
ಅಶ್ವಿನೀದೇವತೆಗಳ ರಥಸ್ವರೂಪ ಇತ್ಯಾದಿ 7

೪೮. **ಸಹ ವಾಮೇನ ಎಂಬ ನಲವತ್ತೆಂಟನೆಯ ಸೂಕ್ತವು—**

ಸೂಕ್ತದ ವಿನಿಯೋಗ ಮತ್ತು ಋಷಿದೇವತಾಛಂದಸ್ಸುಗಳು 30
ಉಷೋದೇವತೆಯ ಸ್ವರೂಪ, ಉಷಶ್ಶಬ್ದಾರ್ಥ-ನಿಷ್ಪತ್ತಿ ಇತ್ಯಾದಿ 32
ಸೂನರೀ, ಪ್ರಭುಂಜತೀ, ಜರಯಂತೀ ಮೊದಲಾದ ಶಬ್ದಗಳ ಅರ್ಥವಿವರಣೆ 46
ಓದತೀ ಶಬ್ದದ ಅರ್ಥವಿವರಣೆ ಇತ್ಯಾದಿ 51
ಭಾನು, ದಿವಿಷ್ಟಿಷು ಶಬ್ದಗಳ ವಿವರಣೆ 61
ವಿಶ್ವವಾರಂ ಶಬ್ದದ ವಿವರಣೆ ಇತ್ಯಾದಿ 77

೪೯. **ಉಷೋ ಭದ್ರೇಭಿಃ ಎಂಬ ನಲವತ್ತೊಂಭತ್ತನೆಯ ಸೂಕ್ತವು—**

ಸೂಕ್ತದ ವಿನಿಯೋಗ ಮತ್ತು ಋಷಿದೇವತಾಛಂದಸ್ಸುಗಳು 91
ಅರುಣಪ್ಸವಃ ಎಂಬ ಶಬ್ದದ ಅರ್ಥವಿವರಣೆ 93

೫೦. **ಉದುತ್ಯಂ** ಎಂಬ ಐವತ್ತನೆಯ ಸೂಕ್ತವು—

ಸೂಕ್ತದ ವಿನಿಯೋಗ ಮತ್ತು ಋಷಿದೇವತಾಛಂದಸ್ಸುಗಳು 106
ಸೂರ್ಯಶಬ್ದ ನಿಷ್ಪತ್ತಿ ಇತ್ಯಾದಿ 108
ನಕ್ಷತ್ರಶಬ್ದ ವಿವರಣೆ 111
ತರಣಿಃ ವಿಶ್ವದರ್ಶತಃ ಇತ್ಯಾದಿ ಶಬ್ದಗಳ ವಿವರಣೆ 118
ಭುರಣ್ಯಂತಂಶಬ್ದದ ವಿವರಣೆ 124
ಉದ್ವಯಂ ತಮಸಃ ಎಂಬ ಋಕ್ಕಿನ ವಿಶೇಷವಿನಿಯೋಗ ಇತ್ಯಾದಿ 136

೫೧. **ಅಭಿತ್ಯಂ ಮೇಷಂ** ಎಂಬ ಐವತ್ತೊಂದನೆಯ ಸೂಕ್ತವು—

ಸೂಕ್ತದ ವಿನಿಯೋಗ 147
ಋಷಿದೇವತಾಛಂದಸ್ಸುಗಳು 148
ಋಭುಶಬ್ದದ ರೂಪನಿಷ್ಪತ್ತಿ ಮತ್ತು ಅರ್ಥವಿವರಣೆ 156
ಅದ್ರಿಶಬ್ದವಿವರಣೆ 161
ಪಿಪ್ರುವಿನ ವೃತ್ತಾಂತ 168
ಋಜಿಶ್ವನ ವಿಷಯ 169
ಕುತ್ಸ, ಅತಿಥಿಗ್ವ ಇವರ ವಿಷಯ 173

		ಪುಟಸಂಖ್ಯೆ
	ಶಂಬರನ ವಿಚಾರ	174
	ಆರ್ಯೇಶಬ್ದ ವಿವರಣೆ ಇತ್ಯಾದಿ	183
	ಉಶನಾಃ ಎಂಬ ಋಷಿಯ ವೃತ್ತಾಂತ	190
	ಶಾರ್ಯಾತನ ವಿಷಯ ಇತ್ಯಾದಿ	197
	ವ್ಯಚಿಯಾ ಎಂಬ ಸ್ತ್ರೀಯ, ವೃಷಣಶ್ವ ಎಂಬ ರಾಜನ ವೃತ್ತಾಂತ	201
	ಕಕ್ಷೀವಾನ್ ಎಂಬ ಋಷಿಯ ವೃತ್ತಾಂತ	202
೫೨.	**ತ್ಯಂ ಸುಮೇಷಂ** ಎಂಬ ಐವತ್ತೆರಡನೆಯ ಸೂಕ್ತವು—	
	ಸೂಕ್ತದ ವಿನಿಯೋಗ ಮತ್ತು ಋಷಿದೇವತಾಛಂದಸ್ಸುಗಳು	212
	ಏಕತ, ದ್ವಿತ, ತ್ರಿತ ಮತ್ತು ತ್ರೈತನ ಎಂಬುವರ ವೃತ್ತಾಂತವು	230
	ವಲನ ವಿಚಾರವು	232
	ದ್ಯಾವಾಪೃಥಿವಿಗಳು ಇಂದ್ರನ ಭಯದಿಂದ ನಡುಗಿದವು ಇತ್ಯಾದಿ ವಿಚಾರ	247
	ತ್ವಂ ಭುವಃ ಎಂಬ ಋಕ್ಕಿನ ವಿಶೇಷವಿನಿಯೋಗ	257
೫೩.	**ನ್ಯೂ ಷು ವಾಚಂ** ಎಂಬ ಐವತ್ತಮೂರನೆಯ ಸೂಕ್ತವು—	
	ಸೂಕ್ತದ ವಿನಿಯೋಗ	264
	ಋಷಿದೇವತಾ ಛಂದಸ್ಸುಗಳು	265
	ಪುರುಶ್ಚಂದ್ರ ಮತ್ತು **ಗೋಅಗ್ರ** ಶಬ್ದಗಳ ಅರ್ಥವಿವರಣೆ	281
	ಇಂದ್ರನು **ನಮುಚಿ** ಎಂಬ ಅಸುರನನ್ನು ಸಂಹರಿಸಿದ ವೃತ್ತಾಂತ	287
	ಕರಂಜ, ಪರ್ಣಯ, ಅನನುದ ಇತ್ಯಾದಿ ಶಬ್ದವಿವರಣೆ	292
	ಸುಶ್ರವಸ್ ಎಂಬ ರಾಜನ ವಿಷಯ	295
	ತೂರ್ವಯಾಣ ನೆಂಬ ರಾಜನ ವಿಷಯ	299
೫೪.	**ಮಾ ನೋ ಅಸ್ಮಿನ್** ಎಂಬ ಐವತ್ತನಾಲ್ಕನೆಯ ಸೂಕ್ತವು—	
	ಸೂಕ್ತದ ವಿನಿಯೋಗ	303
	ಋಷಿದೇವತಾ ಛಂದಸ್ಸುಗಳು	304
	ಶಂಬರಾಸುರನೊಡನೆ ಇಂದ್ರನು ಯುದ್ಧಮಾಡಿದ ವಿವರ	315
	ಇಂದ್ರನು **ಶುಷ್ಣಾ**ಸುರನೊಡನೆ ಯುದ್ಧಮಾಡಿದ ವಿಷಯ	319
	ತುರ್ವಶ, ಯದು, ವಯ್ಯ, ತುರ್ವೀತಿ ಇವರ ವಿಚಾರ	322
೫೫.	**ದಿವಶ್ಚಿದಸ್ಯ** ಎಂಬ ಐವತ್ತೈದನೆಯ ಸೂಕ್ತವು—	
	ಸೂಕ್ತದ ವಿನಿಯೋಗ ಮತ್ತು ಋಷಿದೇವತಾಛಂದಸ್ಸುಗಳು	341
	ಋಕ್ಕುಗಳ ಪ್ರತಿಪದಾರ್ಥ	343
೫೬.	**ಏಷ ಪ್ರ ಪೂರ್ವೀಃ** ಎಂಬ ಐವತ್ತಾರನೆಯ ಸೂಕ್ತವು—	
	ಸೂಕ್ತದ ವಿನಿಯೋಗ	371

ಪುಟಸಂಖ್ಯೆ

ಋಷಿದೇವತಾಛಂದಸ್ಸುಗಳು 372

೫೭. ಪ್ರ ಮಂಹಿಷ್ಠಾಯ ಎಂಬ ಐವತ್ತೇಳನೆಯ ಸೂಕ್ತವು—

ಸೂಕ್ತದ ವಿನಿಯೋಗವು 392

ಋಷಿದೇವತಾಛಂದಸ್ಸುಗಳು 393

ಉಷಃಕಾಲದ ವಿವರಣೆ ಇತ್ಯಾದಿ 401

೫೮. ನೂಚಿತ್ಸಹೋಜಾಃ ಎಂಬ ಐವತ್ತೆಂಟನೆಯ ಸೂಕ್ತವು—

ಸೂಕ್ತದ ವಿನಿಯೋಗ 411

ಋಷಿದೇವತಾಛಂದಸ್ಸುಗಳು 412

ಪ್ರತಿಪದಾರ್ಥ, ಭಾವಾರ್ಥ ಇತ್ಯಾದಿ 413

೫೯. ವಯೂ ಇದಗ್ನೇ ಎಂಬ ಐವತ್ತೊಂಭತ್ತನೆಯ ಸೂಕ್ತವು—

ಸೂಕ್ತದ ವಿನಿಯೋಗ ಮತ್ತು ಋಷಿದೇವತಾಛಂದಸ್ಸುಗಳು 439

ಮೂರ್ಧಾ ದಿವೋ ಎಂಬ ಋಕ್ಕಿನ ವಿಶೇಷವಿನಿಯೋಗ 443

ವೈಶ್ವಾನರ ಶಬ್ದದ ರೂಪನಿಷ್ಪತ್ತಿ 455

೬೦. ವಹ್ನಿಂ ಯಶಸಂ ಎಂಬ ಅರವತ್ತನೆಯ ಸೂಕ್ತವು—

ಸೂಕ್ತದವಿನಿಯೋಗವು 461

ಋಷಿದೇನತಾಛಂದಸ್ಸುಗಳು 462

ಪ್ರತಿಪದಾರ್ಥ ಇತ್ಯಾದಿ 463

೬೧. ಅಸ್ಮಾ ಇದು ಎಂಬ ಅರವತ್ತೊಂದನೆಯ ಸೂಕ್ತವು—

ಸೂಕ್ತದ ವಿನಿಯೋಗ 478

ಋಷಿದೇವತಾಛಂದಸ್ಸುಗಳು 479

ಕಿಯೇಧಾಃ ಶಬ್ದವಿವರಣೆ ಇತ್ಯಾದಿ 497

ವರಾಹ ಶಬ್ದದ ರೂಪನಿಷ್ಪತ್ತಿ ಅರ್ಥ ಇತ್ಯಾದಿ 501

ನೋಧಾ ಶಬ್ದದ ಅರ್ಥವಿವರಣೆ 522

ಸ್ವಶ್ವ ಎಂಬ ರಾಜನ ವಿಷಯ 525

ಪರಿಶಿಷ್ಟ

೧. ಸ್ವರ್ಗಸ್ಥಾನದ ದೇವತೆಗಳು—

ದ್ಯೌಃ 531

ವರುಣ 532

ಮಿತ್ರ 539

ಸೂರ್ಯ 540


ಸವಿತೃ 542

	ಪುಟಸಂಖ್ಯೆ
ಪೂಷಣ	547
ವಿಷ್ಣು	550
ವಿವಸ್ವಾನ್	555
ಆದಿತ್ಯರು	557
ಉಷಾಃ	560
ಅಶ್ವಿನೀದೇವತೆಗಳು	563
೨. ಅಂತರಿಕ್ಷದ ದೇವತೆಗಳು—	
ಇಂದ್ರಃ	569
ತ್ರಿತ ಆಪ್ತ್ಯಃ	582
ಅಪಾಂನಪಾತ್	585
ಮಾತರಿಶ್ವಾ	586
ಅಹಿರ್ಬುಧ್ನ್ಯಃ	588
ಅಜ ಏಕಪಾತ್	588
ರುದ್ರ	589
ಮರುದ್ದೇವತೆಗಳು	593
ವಾಯು-ವಾತ	598
ಪರ್ಜನ್ಯ	606
೩. ಭೂಮಿಯ ದೇವತೆಗಳು—	
ನದಿಗಳು	603
ಪೃಥ್ವೀ	605
ಅಗ್ನಿ	606
ಬೃಹಸ್ಪತಿ	622
ಸೋಮ	626
೪. ಭಾವನಾರೂಪದ ದೇವತೆಗಳು—	
ತ್ವಷ್ಟೃ	639
ವಿಶ್ವಕರ್ಮಾ-ಪ್ರಜಾಪತಿ	642
ಮನ್ಯು ಶ್ರದ್ಧಾ ಇತ್ಯಾದಿ	644
ಅದಿತಿ	645
ದಿತಿ	648
೫. ಸ್ತ್ರೀ ದೇವತೆಗಳ	649
೬. ದೇವತಾದ್ವಂದ್ವಗಳು	651
೭. ದೇವತಾಗಣಗಳು	657

		ಪುಟಸಂಖ್ಯೆ
೮.	**ಅಧಮ ದೇವತೆಗಳು-ಋಭುಗಳು**	658
೯.	**ಅಪ್ಸರಸ್ತ್ರೀಯರು**	662
೧೦.	**ಗಂಧರ್ವರು**	665
೧೧.	**ರಕ್ಷಕ ದೇವತೆಗಳು**	667
೧೨.	**ಐತಿಹಾಸಿಕ ಪುರುಷರು**	
	ಮನು	568
	ಭೃಗುಗಳು	669
	ಅಥರ್ವಾ	671
	ದಧ್ಯಂಚ	671
	ಅಂಗಿರಸರು	672
	ವಿರೂಪಾಃ	674
	ನವಗ್ವಾಃ, ದಶಗ್ವಾಃ, ಸಪ್ತರ್ಷಿಗಳು	675
	ಅತ್ರಿ	676
	ಕಣ್ವ, ಮೇಧ್ಯಾತಿಥಿ	677
	ಕುತ್ಸ	678
	ಕಾವ್ಯ ಉಶನಾ	679
೧೩.	**ಪ್ರಾಣಿಗಳು ಮತ್ತು ನಿರ್ಜೀವ ವಸ್ತುಗಳು—**	679
	ಅಶ್ವ ದಧಿಕ್ರಾ	680
	ತಾರ್ಕ್ಷ್ಯ, ವೈದ್ಯ	681
	ಏತಶ	682
	ವೃಷಭ	682
	ಗೋವು, ಅಜ, ಗರ್ದಭ, ಸರಮೆ	683
	ವರಾಹ, ಕೂರ್ಮ, ವಾನರ, ಮಂಡೂಕ, ಪಕ್ಷಿ ಹಿಂಸ್ರಪಶುಗಳು	684
	ಅಹಿ	685
೧೪.	**ಭೌತಿಕವಸ್ತುಗಳು**	685
	ಓಷಧಿಗಳ ವನಸ್ಪತಿಗಳು	686
	ಉಪಕರಣಗಳು	686
	ಆಯುಧಗಳು, ಲಾಂಛನಗಳು	687
೧೫.	**ಪಾಪದೇವತೆಗಳು ಮತ್ತು ಪಿಶಾಚಿಗಳು—**	
	ಅಸುರರು	688
	ಪಣಿಗಳು, ದಾಸ ಅಥವಾ ದಸ್ಯು	689
	ವೃಶ್ರ	691

		ಪುಟಸಂಖ್ಯೆ
	ವಲ	692
	ಅರ್ಬುದ, ವಿಶ್ವರೂಪ, ಸ್ವರ್ಭಾನು, ಉರಣ, ಶುಷ್ಣ	693
	ಶಂಬರ, ಪಿಪ್ರು	694
	ನಮುಚಿ, ಧುನಿ, ಚುಮುರಿ	695
	ವರ್ಚಿಃ ರಕ್ಷಸಃ	696
	ಪಿಶಾಚ, ಅರಾತಿ, ಕಿಮಿದೀ	698
೧೬.	**ಅಂತ್ಯಕ್ರಿಯೆ**—	699
	ಆತ್ಮ	700
	ಸ್ವರ್ಗ	701
	ನರಕ	704
	ಪಿತೃಗಳು	705
	ಯಮ	706
	ಮೃತ್ಯು. ವಿವಸ್ವತ ಇತ್ಯಾದಿ	707

ವಿಷಯಾನುಕ್ರಮಣಿಕೆ ಸಮಾಪ್ತವು



ಸಂಕೇತಾಕ್ಷರಗಳ ವಿವರಣೆಯು

———

ಅಥ. ಸಂ. ಅಥವಾ ಅ. ವೇ.—ಅಥರ್ವವೇದಸಂಹಿತಾ
ಆಪ. ಸೂ.—ಆಪಸ್ತಂಬಶ್ರೌತಸೂತ್ರ
ಆಪ- ಧ. ಸೂ.—ಆಪಸ್ತಂಬಧರ್ಮಸೂತ್ರ
ಆಪ. ಪ. ಸೂ.—ಆಪಸ್ತಂಬಪರಿಭಾಷಾಸೂತ್ರ
ಆಸೂ. —ಆಶ್ವಲಾಯನಶ್ರೌತಸೂತ್ರ
ಉ. ಸೂ. —ಉಣಾದಿಸೂತ್ರ
ಋ. ಸಂ.—ಋಗ್ವೇದಸಂಹಿತಾ
ಐ ಆ.—ಐತರೇಯಾರಣ್ಯಕ
ಐ. ಉ.—ಐತರೇಯೋಪನಿಷತ್
ಐ ಬ್ರಾ.—ಐತರೇಯಬ್ರಾಹ್ಮಣ
ಛಾ. ಉ—ಛಾಂದೋಗ್ಯೋಪನಿಷತ್
ಜೈ. ಸೂ.—ಜೈಮಿನಿಯ ಪೂರ್ವಮೀಮಾಂಸಾಸೂತ್ರ
ಜೈ. ನ್ಯಾ. ವಿ.—ಜೈಮಿನಿಯ ನ್ಯಾಯಮಾಲಾವಿಸ್ತರ
ತಾ. ಬ್ರಾ.—ತಾಂಡ್ಯಮಹಾಬ್ರಾಹ್ಮಣ
ತೈ ಆ.—ತೈತ್ತಿರೀಯ ಆರಣ್ಯಕ
ತೈ. ಬ್ರಾ.—ತೈತ್ತಿರೀಯಬ್ರಾಹ್ಮಣ
ತೈ. ಸಂ.—ತೈತ್ತಿರೀಯ ಸಂಹಿತಾ
ನಿ.—ನಿರುಕ್ತ, ನಿಘಂಟು
ಪಾ. ಸೂ—ಪಾಣಿನೀಯ ಸೂತ್ರ
ಪಾ. ಶಿ.—ಪಾಣಿನೀಯ ಶಿಕ್ಷಾ
ಫಿ ಸೂ—ಫಿಟ್‌ಸೂತ್ರ
ಬ್ರ. ಸೂ.—ಬ್ರಹ್ಮಸೂತ್ರ
ಮ. ಭಾ—ಮಹಾಭಾರತ
ಮ ಸ್ಮೃ.—ಮನುಸ್ಮೃತಿ
ಮೈ. ಸಂ.—ಮೈತ್ರಾಯಣೀಸಂಹಿತಾ
ಯಾ. ಸ್ಮೃ—ಯಾಜ್ಞವಲ್ಕ್ಯಸ್ಮೃತಿ
ವಾ. ಸಂ.—ವಾಜಸನೇಯಸಂಹಿತಾ
ವಾ. ಪು.—ವಾಯುಪುರಾಣ
ವಿ. ಪು.—ವಿಷ್ಣುಪುರಾಣ
ವೇ. ಸೂ.—ವೇದಾಂತಸೂತ್ರ
ಶ. ಬ್ರಾ—ಶತಪಥಬ್ರಾಹ್ಮಣ
ಸಾ. ಸಂ—ಸಾಮವೇದಸಂಹಿತಾ ಇತ್ಯಾದಿ

———

॥ ಶ್ರೀಮಹಾಗಣಾಧಿಪತಯೇ ನಮಃ ॥

ಸಾಯಣಭಾಷ್ಯಸಹಿತಾ

ಋಗ್ವೇದ ಸಂಹಿತಾ

ಭಾಗ—೫

ಪ್ರಥಮಾಷ್ಟಕೇ ಚತುರ್ಥೋಽಧ್ಯಾಯಃ
ಮೊದಲನೆಯ ಅಷ್ಟಕದಲ್ಲಿ ನಾಲ್ಕನೆಯ ಅಧ್ಯಾಯವು.

ವಾಗೀಶಾದ್ಯಾಃ ಸುಮನಸಃ ಸರ್ವಾರ್ಥಾನಾಮುಪಕ್ರಮೇ ।
ಯಂ ನತ್ವಾ ಕೃತಕೃತ್ಯಾಃ ಸ್ಯುಸ್ತಂ ನಮಾಮಿ ಗಜಾನನಂ ॥
ಯಸ್ಯ ನಿಃಶ್ವಸಿತಂ ವೇದಾ ಯೋ ವೇದೇಭ್ಯೋಽಖಿಲಂ ಜಗತ್ ।
ನಿರ್ಮಮೇ ತಮಹಂ ವಂದೇ ವಿದ್ಯಾತೀರ್ಥಮಹೇಶ್ವರಂ ॥
ವೇದಃ ಶಿವಃ ಶಿವೋ ವೇದೋ ವೇದಾಧ್ಯಾಯಾ ಸದಾಶಿವಃ ।
ತಸ್ಮಾತ್ಸರ್ವಪ್ರಯತ್ನೇನ ವೇದಮೇವ ಸದಾ ಜಪೇತ್ ॥

ಅಥ ಪ್ರಥಮಾಷ್ಟಕೇ ಚತುರ್ಥೋಽಧ್ಯಾಯ ಆರಭ್ಯತೇ । ಅಯಂ ವಾಮಿತಿ ನವಮಾನು-ವಾಕಸ್ಯ ಚತುರ್ಥಂ ಸೂಕ್ತಂ ದಶರ್ಚಂ । ಅತ್ರಾನುಕ್ರಾಂತಂ । ಅಯಂ ದಶ ಪ್ರಾಗಾಥಂ ತ್ರಿತಿ । ಋಷಿ-ಶ್ಚಾನ್ಯಸ್ಮಾದೃಷೇರಿತಿ ಪರಿಭಾಷಿತತ್ವಾತ್ಕಣ್ವಪುತ್ರಃ ಪ್ರಸ್ಕಣ್ವ ಋಷಿಃ । ತಥಾ ಪೂರ್ವತ್ರಾಶ್ವಿನಂ ತ್ರಿತ್ಯುಕ್ತ-ತ್ವಾತ್ತು ಹ್ಯಾದಿಪರಿಭಾಷಯೇದಮಪಿ ಸೂಕ್ತಮಶ್ವಿದೇವತಾಕಂ । ಅನಯೈವ ಪರಿಭಾಷಯೇದಮುತ್ತರಂ ಚ ಪ್ರಾಗಾಥಂ । ಅತಃ ಪ್ರಥಮಾತೃತೀಯೋದ್ಯಾ ಅಯುಜೋ ಬೃಹತ್ಯಃ । ದ್ವಿತೀಯೋಚತುರ್ಥ್ಯಾದ್ಯಾ ಯುಜಃ ಸತೋಬೃಹತ್ಯಃ ॥ ಪ್ರಾತರನುವಾಕ ಆಶ್ವಿನೇ ಕ್ರತೌ ಬಾರ್ಹತೇ ಛಂದಸ್ಯೇತತ್ಸೂಕ್ತಂ । ಅಥಾಶ್ವಿನ ಇತಿ ಖಂಡೇ ಸೂತ್ರಿತಂ । ಇಮಾ ಉ ವಾಮಯಂ ವಾಂ । ಆ ೪-೧೫ । ಇತಿ ॥ ಆಶ್ವಿನಶಸ್ತ್ರೇಽಸ್ಯೇ-ತತ್ಸೂಕ್ತಂ ಪ್ರಾತರನುವಾಕನ್ಯಾಯೇನ । ಆ. ೬-೫ । ಇತ್ಯತಿದಿಷ್ಟತ್ವಾತ್ ॥

ಅನುವಾದವು—ಅಯಂ ವಾಂ ಎಂಬ ಸೂಕ್ತವು ಒಂಭತ್ತನೆಯ ಅನುವಾಕದಲ್ಲಿ ನಾಲ್ಕನೆಯ ಸೂಕ್ತವು. ಇದರಲ್ಲಿ ಹತ್ತು ಋಕ್ಕುಗಳಿವೆ. ಅನುಕ್ರಮಣಿಕೆಯಲ್ಲಿ ಈ ಸೂಕ್ತದ ಹತ್ತು ಋಕ್ಕುಗಳು ಪ್ರಾಗಾಥ ಛಂದಸ್ಸಿನ ಋಕ್ಕುಗಳೆಂದು ಹೇಳಲ್ಪಟ್ಟಿದೆ ಈ ಸೂಕ್ತಕ್ಕೆ ಕಣ್ವಪುತ್ರನಾದ ಪ್ರಸ್ಕಣ್ವನು ಋಷಿಯು. ಅಶ್ವಿನೀದೇವತೆಗಳೇ ಈ ಸೂಕ್ತಕ್ಕೆ ದೇವತೆಗಳು. ಪ್ರಾಗಾಥಂ ಬಾರ್ಹತಂ ಎಂಬದು ಛಂದಸ್ಸು ಎಂದರೆ ಪರಿಭಾಷಾಸೂತ್ರದ

ಪ್ರಕಾರ ೧, ೩, ೫, ೭, ೯ನೆಯ ಋಕ್ಕುಗಳು ಬೃಹತೀಛಂದಸ್ಸಿನವು. ೨, ೪, ೬, ೮, ೧೦ ನೆಯ ಋಕ್ಕುಗಳು ಸತೋಬೃಹತೀಛಂದಸ್ಸಿನವು. ಪ್ರಾತರನುವಾಕಮಂತ್ರಪಠನಕಾಲದಲ್ಲಿ ಆಶ್ವಿನಕ್ರತುವೆಂಬ ಆಶ್ವಿನೀದೇವತಾಕವಾದ ಮಂತ್ರಗಳಲ್ಲಿ ಬೃಹತೀಛಂದಸ್ಸಿನ ಮಂತ್ರಗಳನ್ನು ಹೇಳುವಾಗ ಈ ಸೂಕ್ತವನ್ನು ಪಠಿಸುವರು. ಈ ವಿಷಯವು ಆಶ್ವಲಾಯನಶ್ರೌತಸೂತ್ರದ ಅಥಾಶ್ವಿನ ಎಂಬ ಖಂಡದ ಇಮಾ ಉ ವಾಮಯೋಂ ವಾಂ ಎಂಬ ಸೂತ್ರದಿಂದ ಹೇಳಲ್ಪಟ್ಟಿರುವುದು (ಅ. ೪-೧೫) ಮತ್ತು ಅದೇ ಶ್ರೌತಸೂತ್ರದಲ್ಲಿ ಆಶ್ವಿನೀದೇವತಾಕವಾದ ಶಸ್ತ್ರಮಂತ್ರ ಪಠನಕಾಲದಲ್ಲಿ ಪ್ರಾತರನುವಾಕಮಂತ್ರಗಳನ್ನಾಗಿ ಈ ಸೂಕ್ತವನ್ನು ಉಪಯೋಗಿಸಬೇಕೆಂದು ಹೇಳಿದೆ (ಅ. ೬-೫).

ಸೂಕ್ತ—೪೭

ಮಂಡಲ—೧ ॥ ಅನುವಾಕ—೯ ॥ ಸೂಕ್ತ—೪೭
ಅಷ್ಟಕ—೧ ॥ ಅಧ್ಯಾಯ—೪ ॥ ವರ್ಗ— ೧, ೨ ॥

ಸೂಕ್ತದಲ್ಲಿರುವ ಋಕ್ಸಂಖ್ಯೆ—೧-೧೦
ಋಷಿಃ—ಪ್ರಸ್ಕಣ್ವಃ ಕಾಣ್ವಃ ॥
ದೇವತಾ—ಅಶ್ವಿನೌ ॥
ಛಂದಃ—ಪ್ರಾಗಾಥಂ ಬಾರ್ಹತಂ ೧, ೩, ೫, ೭, ೯, ಬೃಹತೀ । ೨, ೪, ೬, ೮, ೧೦. ಸತೋ ಬೃಹತೀ ॥

॥ ಸಂಹಿತಾಪಾಠಃ ॥

ಅಯಂ ವಾಂ ಮಧುಮತ್ತಮಃ ಸುತಃ ಸೋಮ ಋತಾವೃಧಾ ।
ತಮಶ್ವಿನಾ ಪಿಬತಂ ತಿರೋಅಹ್ನ್ಯಂ ಧತ್ತಂ ರತ್ನಾನಿ ದಾಶುಷೇ ॥೧॥

॥ ಪದಪಾಠಃ ॥

ಅಯಂ । ವಾಂ । ಮಧುಮತ್ ೩ ತಮಃ । ಸುತಃ । ಸೋಮಃ । ಋತಾ೩ವೃಧಾ ॥
ತಂ । ಅಶ್ವಿನಾ । ಪಿಬತಂ । ತಿರಃ೩ಅಹ್ನ್ಯಂ । ಧತ್ತಂ । ರತ್ನಾನಿ । ದಾಶುಷೇ ॥ ೧॥

॥ ಸಾಯಣಭಾಷ್ಯಂ ॥

ಹೇ ಋತಾವೃಧಾ ಋತಸ್ಯ ಸತ್ಯಸ್ಯ ಯಜ್ಞಸ್ಯ ವಾ ವರ್ಧಯಿತಾರಾವಶ್ವಿನಾ ಅಶ್ವಿನೌ ವಾಂ ಯುವಯೋರಯಂ ಪುರೋವರ್ತೀ ಸೋಮಃ ಸುತೋ೨ಭಿಷುತಃ । ಕೀದೃಶಃ । ಮಧುಮತ್ತಮೋ೨ತಿ-

ಶಯೇನ ಮಾಧುರ್ಯವಾನ್ । ತಿರೋಅಹ್ನ್ಯಂ ತಿರೋಭೂತೇ ಪೂರ್ವಸ್ಮಿನ್ದಿನೇಽಭಿಷುತಂ ತಂ ಸೋಮಂ ಪಿಬತಂ । ದಾಶುಷೇ ಹವಿರ್ದತ್ತವತೇ ಯಜಮಾನಾಯ ರತ್ನಾನಿ ರಮಣೀಯಾನಿ ಧನಾನಿ ಧತ್ತಂ । ಪ್ರಯಚ್ಛತಂ ॥ ವಾಂ । ಯುಷ್ಮದಸ್ಮದೋಃ ಷಷ್ಠೀಚತುರ್ಥೀದ್ವಿತೀಯಾಸ್ಥಯೋರ್ವಾಂನಾವೌ । ಪಾ ೮-೧-೨೦ । ಇತಿ ಷಷ್ಠೀದ್ವಿವಚನಸ್ಯ ವಾಮಾದೇಶಃ । ಸ ಚಾನುದಾತ್ತಃ । ಮಧುಮತ್ತಮಃ । ಮನ ಜ್ಞಾನೇ । ಮನ್ಯತ ಇತಿ ಮಧು । ಫಲಿಪಾಟಿನಮಿನ್ಯಾದಿನೋಪ್ರತ್ಯಯಃ । ನಿದಿತ್ಯನುವೃತ್ತೇರಾದ್ಯುದಾತ್ತತ್ವಂ । ಥಕಾರಶ್ಚಾಂತಾದೇಶಃ । ಅತಿಶಯೇನ ಮಧುಮಾನ್ ಮಧುಮತ್ತಮಃ । ಮತುಪ್ತಮಪೋಃ ಪಿತ್ತ್ವಾದನುದಾತ್ತತ್ವೇ ಪದಸ್ವರ ಏವ ಶಿಷ್ಯತೇ । ಋತಾವೃಧಾ । ವೃಧೇರಂತರ್ಭಾವಿತಣ್ಯರ್ಥಾತ್ ಕ್ವಿಪ್ಪ್ರತ್ಯಯೇ ಕ್ವಿಪ್ । ಅನ್ಯೇಷಾಮಪಿ ದೃಶ್ಯತ ಇತಿ ಪೂರ್ವಪದಸ್ಯ ದೀರ್ಘತ್ವಂ । ತಿರೋಅಹ್ನ್ಯಂ । ಅಹ್ನಿ ಭವೋಽಹ್ನ್ಯಃ । ಭವೇ ಛಂದಸೀತಿ ಯತ್ । ಅಹ್ನಷ್ಟಖೋರೇವ । ಪಾ ೬-೪-೧೪೫ । ಇತಿ ನಿಯಮಾನ್ನಸ್ತದ್ಧಿತ ಇತಿ ಟಲೋಽಸಾಭಾವಃ । ಸರ್ವೇ ವಿಧಯಶ್ಛಂದಸಿ ವಿಕಲ್ಪ್ಯಂತ ಇತಿ ವಚನಾದ್ಯೇ ಚಾಭಾವಕರ್ಮಣೋಃ । ಪಾ ೬-೪-೧೬೪ । ಇತಿ ಪ್ರಕೃತಿಭಾವಾಭಾವೇಽಲ್ಲೋಪೋಽನ ಇತ್ಯಕಾರಲೋಪಃ। ತಿರೋಹಿತೋಽಹ್ನ್ಯಸ್ತಿರೋ ಅಹ್ನ್ಯಃ । ತಿರೋಽಂತರ್ಧೌ । ಪಾ ೧-೪-೯೧ । ಇತಿ ಗತಿತ್ವೇನ ನಿಪಾತತ್ವಾದವ್ಯಯತ್ವೇ ಪ್ರಾದಿಸಮಾಸೇಽವ್ಯಯಪೂರ್ವಪದಪ್ರಕೃತಿಸ್ವರತ್ವಂ । ದಾಶುಷೇ । ದಾಶ್ವಾನ್ದಾಹ್ವಾನಿತ್ಯಾದಿನಾ ಕ್ವಸುಪ್ರತ್ಯಯಾಂತೋ ನಿಪಾತಿತಃ । ಚತುರ್ಥ್ಯೇಕವಚನೇ ವಸೋಃ ಸಂಪ್ರಸಾರಣಮಿತಿ ಸಂಪ್ರಸಾರಣಂ । ಶಾಸಿವಸಿಘಸೀನಾಂ ಚೇತಿ ಷತ್ವಂ ॥

॥ ಪ್ರತಿಪದಾರ್ಥ ॥

ಋತಾವೃಧಾ—ಯಜ್ಞದ ಅಥವಾ ಸತ್ಯದ ವರ್ಧಕರಾದ । **ಅಶ್ವಿನಾ**—ಎಲೈ ಅಶ್ವಿನೀದೇವತೆಗಳೇ । **ವಾಂ**—ನಿಮಗೋಸ್ಕರ । **ಮಧುಮತ್ತಮಃ**—ಅತ್ಯಂತಮಧುರವಾದ । **ಅಯಂ ಸೋಮಃ**—ಈ ಸೋಮರಸವು। **ಸುತಃ**—ಹಿಂಡಲ್ಪಟ್ಟಿದೆ। **ತಿರೋಅಹ್ನ್ಯಂ**—ಮೊದಲನೇ (ಹಿಂದಿನ)ದಿನ ಹಿಂಡಿದ । **ತಂ**—ಆ ಸೋಮರಸವನ್ನು। **ಪಿಬತಂ**—ಕುಡಿಯಿರಿ । **ದಾಶುಷೇ**—ಹವಿರ್ದಾತನಾದ ಯಜಮಾನನಿಗೆ । **ರತ್ನಾನಿ**—ರಮಣೀಯಗಳಾದ ಧನಗಳನ್ನು । **ಧತ್ತಂ**—ಕೊಡಿರಿ.

॥ ಭಾವಾರ್ಥ ॥

ಎಲೈ ಅಶ್ವಿನೀದೇವತೆಗಳೇ, ನೀವು ಯಜ್ಞವನ್ನು ಅಥವಾ ಸತ್ಯವನ್ನು ಅಭಿವೃದ್ಧಿಪಡಿಸುವವರು. ನಿಮಗೋಸ್ಕರವಾಗಿ ಈ ಸೋಮರಸವು ಮೊದಲನೇ ದಿನವೇ ಹಿಂಡಿ ಸಿದ್ಧವಾಗಿದೆ. ಅತ್ಯಂತ ಮಧುರವಾದ ಈ ಸೋಮರಸವನ್ನು ಪಾನಮಾಡಿರಿ. ಹವಿರ್ದಾತನಾದ ಯಜಮಾನನಿಗೆ ಮನಸ್ಸಂತೋಷಕರಗಳಾದ ಧನಗಳನ್ನು ಕೊಡಿರಿ.

English Translation.

O Aswins, encouragers of sacrifice, this most sweet Soma juice is prepared for you; it is of yesterday's expressing; drink it and grant riches to the sacrificer

॥ ವಿಶೇಷ ವಿಷಯಗಳು ॥

ಋತಾವೃಧಾ—ಸತ್ಯ ಅಥವಾ ಯಜ್ಞದ ಪ್ರವರ್ಧಕರು. ಈ ಶಬ್ದದ ಅರ್ಥವನ್ನು ನಾವು ಹಿಂದೆಯೇ ವಿವರಿಸಿದೇವೆ.

ತಿರೋಅಹ್ನ್ಯಂ—**ತಿರೋಭೂತೇ ಪೂರ್ವಸ್ಮಿನ್ದಿನೇ** । **ತಿರೋಹಿತೋಽಹ್ಯಸ್ತಿರೋಅಹ್ನ್ಯಃ** । ಕಳೆದು ಹೋದ ಹಿಂದಿನ ದಿನ, ನಿನ್ನೆಯ ದಿನ.

ದಾಶುಷೇ—**ಹವಿರ್ದತ್ತವತೇ ಯಜಮಾನಾಯ** । ಹವಿಸ್ಸನ್ನು ಸಮರ್ಪಿಸುವ ಯಜಮಾನನಿಗೆ.

॥ ವ್ಯಾಕರಣಪ್ರಕ್ರಿಯಾ ॥

ವಾಮ್—ಯುವಯೋಃ ಎಂಬ ಯುಷ್ಮಚ್ಛಬ್ದದ ಷಷ್ಠೀದ್ವಿವಚನಾಂತಕ್ಕೆ **ಯೋಷ್ಮದಸ್ಮದೋಃ ಷಷ್ಠೀಚತುರ್ಥೀದ್ವಿತೀಯಾಸ್ಥಯೋರ್ವಾಂನಾವೌ** (ಪಾ. ಸೂ. ೮-೧-೨೦) ಪದದ ಮುಂದೆ ಇರುವುದೂ ಪಾದದ ಆದಿಯಲ್ಲಿಲ್ಲದವೂ ಆದ ಯುಷ್ಮತ್, ಅಸ್ಮತ್ ಶಬ್ದಗಳ ಷಷ್ಠೀಚತುರ್ಥೀ ದ್ವಿತೀಯಾ ವಿಭಕ್ತ್ಯಂತಗಳಿಗೆ ಕ್ರಮವಾಗಿ ವಾಂ, ನೌ ಆದೇಶಗಳು ಬರುವುವು. ಅವು ಅನುದಾತ್ತಗಳೂ ಆಗುವುವು ಎಂದು ಸೂತ್ರಾರ್ಥ. ಏಕವಚನದಲ್ಲಿ ತ್ವ, ಮಾ ಆದೇಶಗಳೂ ಬಹುವಚನದಲ್ಲಿ ವಸ್ ನಸ್ ಆದೇಶಗಳೂ ಬರುವುದರಿಂದ, ಈ ಸೂತ್ರದಲ್ಲಿ ವಿಹಿತವಾದ ವಾಂ, ನೌ ಆದೇಶಗಳೂ ಪರಿಶೇಷದಿಂದ ದ್ವಿವಚನದಲ್ಲಿಯೇ ಬರುವುವು. ಇದರಿಂದ ವಾಂ ಆದೇಶ ಬಂದರೆ ವಾವ್ ಎಂದಾಗುತ್ತೆ. ಇದೇ ಸೂತ್ರದಿಂದಲೇ ಅದು ಅನುದಾತ್ತವಾಗುತ್ತೆ.

ಮಧುಮತ್ತಮಃ—ಮನ್ಯತೇ ಇತಿ ಮಧು ಎಂದು ವಿಗ್ರಹ. ಮನಜ್ಞಾನೇ ಧಾತುವಿನ ಮುಂದೆ **ಫಲಿಪಾಟಿನಮಿ ಮನಿಜನಾಂ ಗುಕ್ ಪೆಟಿನಾಕಿಧತೇಶ್ಚ** (ಉ.ಸೂ. ೧-೧೮) ಫಲ ನಿಷ್ಪತ್ತೌ, ಪಟ ಗತೌ ಣಿಚ್ಪ್ರತ್ಯಯಾಂತ ಣಮ ಪ್ರಹ್ವತ್ವೇ ಶಬ್ದೇ, ಮನ ಜ್ಞಾನೇ, ಜನೀ ಪ್ರಾದುರ್ಭಾವೇ ಈ ಧಾತುಗಳ ಮುಂದೆ ಉ ಪ್ರತ್ಯಯ ಬರುತ್ತೆ. ಅದು ನಿತ್ ಆಗುತ್ತೆ. ಅಲ್ಲದೆ ಫಲ ಧಾತುವಿಗೆ ಅಂತಾವಯವವಾಗಿ ಗುಕ್ ಆಗಮ, ಪಾಟಿಗೆ ಪಟಿ ಆದೇಶ, ನಮ್ ಧಾತುವಿಗೆ ನಾಕಿ ಆದೇಶ, ಮನ್ ಧಾತುವಿನ ನಕಾರಕ್ಕೆ ಧಕಾರಾದೇಶ, ಜನ್ ಧಾತುವಿನ ನಕಾರಕ್ಕೆ ತಕಾರಾದೇಶವೂ ಸಹ ಬರುತ್ತೆ. ಇದರಿಂದ ಮನ ಧಾತುವಿನ ಮುಂದೆ ಉ ಪ್ರತ್ಯಯ ಬಂದು ನಕಾರಕ್ಕೆ ಧಕಾರಾದೇಶ ಬಂದರೆ ಮಧು ಎಂದಾಗುತ್ತೆ. **ಞ್ನಿತ್ಯಾದಿರ್ನಿತ್ಯಂ** (ಪಾ. ಸೂ. ೬-೧-೧೯೭) ಎಂದು ನಿತ್ಸ್ವರದಿಂದ ಆದ್ಯುದಾತ್ತ ಬರುತ್ತೆ. ಮಧು ಅಸ್ಯ ಅಸ್ತಿ ಎಂದು ವಿಗ್ರಹವಾದಾಗ **ತದಸ್ಯಾಸ್ತ್ಯಸ್ಮಿನ್ನಿತಿ ಮತುಪ್** (ಪಾ. ಸೂ. ೫-೨-೯೪) ಎಂದು ಮತುಪ್ ಪ್ರತ್ಯಯ ಬಂದು ಮಧುಮಾನ್ ಎಂದಾಗುತ್ತೆ. ಅತಿಶಯಾರ್ಥವನ್ನು ವಿವಕ್ಷೆಮಾಡಿದರೆ **ಅತಿಶಾಯನೇ ತಮಬಿಷ್ಠನೌ** (ಪಾ. ಸೂ. ೫-೩-೫೫) ಎಂದು ತಮಪ್ ಪ್ರತ್ಯಯ ಬರುತ್ತೆ. ಅತಿಶಯೇನ ಮಧುಮಾನ್ ಮಧುಮತ್ತಮಃ ಎಂದು ವಿಗ್ರಹ. ಮತುಪ್ ತಮಪ್ ಎರಡೂ ಪಿತ್. **ಅನುದಾತ್ತೌ ಸುಪ್ಪಿತೌ** (ಪಾ. ಸೂ. ೩-೧-೪) ಎಂಬುದರಿಂದ ಅನುದಾತ್ತಗಳು. ಮಧು ಎಂಬ ಪದಕ್ಕೆ ಬಂದ ಆದ್ಯುದಾತ್ತವೇ ನಿಲ್ಲುವುದು. ಮಿಕ್ಕವುಗಳಿಗೆ ಶೇಷಾನುದಾತ್ತ ಬರುತ್ತೆ. ಉದಾತ್ತದ ಮುಂದಿರುವ ಧು ಎಂಬುದು **ಉದಾತ್ತಾದನುದಾತ್ತಸ್ಯ** ಎಂಬುದರಿಂಜ ಸ್ವರಿತ. ಮಿಕ್ಕವು **ಸ್ವರಿತ್ಸಾಂಹಿತಾಯಾಂ** ಎಂದು ಪ್ರಚಯಗಳಾಗುವುವು.

ಋತಾವೃಧಾ—ಣಿಚ್ಪ್ರತ್ಯಯ ಇಲ್ಲದೇ ಇದ್ದರೂ ಅದರ ಅರ್ಥವನ್ನು ಹೇಳುವ **ವೃಧು ವರ್ಧನೇ** ಧಾತುವಿನ ಮುಂದೆ **ಕ್ವಿಪ್ಚೆ** (ಪಾ. ಸೂ. ೩-೬-೭೬) ಎಂದು ಕ್ವಿಪ್ ಪ್ರತ್ಯಯ, ಪ್ರತ್ಯಯದ ಅಕ್ಷರಗಳಿಗೆಲ್ಲ

ಖಂಡಶಃ ಲೋಪ. **ಅನ್ಯೇಷಾಮಪಿ ದೃಶ್ಯತೇ** (ಪಾ. ಸೂ. ೬-೩-೧೩೭) ನಿಪಾತನೇ ಮೊದಲಾದ ಹಿಂದೆ ಹೇಳಿದ ಶಬ್ದಗಳಿಗಿಂತಲೂ ಬೇರೆಯಾದ **ಪೂರ್ವಪದ**ಗಳಿಗೂ ದೀರ್ಘ ದೃಷ್ಟವಾಗಿದೆ ಎಂದು ಋತಶಬ್ದಕ್ಕೆ ದೀರ್ಘ, ಋತಾವೃಧ್ ಎಂದಾಯಿತು. ಸಂಬೋಧನ ಪ್ರಥಮಾದ್ವಿವಚನ ಔ ಪ್ರತ್ಯಯ. ಋತಾವೃಧೌ ಎಂದಾಗುತ್ತೆ.

ತಿರೋ ಅಹ್ನ್ಯಂ—ಅಹ್ನಿ ಭವಃ ಎಂದರೆ ದಿವಸದಲ್ಲಿ ಆದುದು ಎಂದರ್ಥ. **ಭವೇ ಛಂದಸಿ** (ಪಾ.ಸೂ.೪-೪-೧೧೦)ಸಪ್ತಮ್ಯಂತವಾದ ಸಮರ್ಥದಮುಂದೆ ಭವ ಎಂಬ ಅರ್ಥದಲ್ಲಿ ಛಂದಸ್ಸಿನಲ್ಲಿ ಯತ್ ಪ್ರತ್ಯಯ ಬರುತ್ತೆ ಎಂದು ಯತ್ ಅಹನ್+ಯ, ಹಕಾರದ ಮುಂದಿರುವ ಅನ್ ಎಂಬುದು ಟಿ- ಇದಕ್ಕೆ **ನಸ್ತದ್ಧಿತೇ** (ಪಾ. ಸೂ. ೬-೪-೧೪೪ **ತದ್ಧಿತ**ಪ್ರತ್ಯಯ ಪರದಲ್ಲಿರುವಾಗ ನಕಾರಾಂತವೂ ಭಸಂಜ್ಞೆಯುಳ್ಳದ್ದೂ ಆದ ಅಂಗದ ಟಿಗೆ ಲೋಪ ಬರುವುದು ಎಂದು ಅನ್‌ಗೆ ಲೋಪವು ಪ್ರಾಪ್ತವಾಗುತ್ತೆ. ಆದರೂ **ಅಹ್ನಷ್ಟಖೋರೇವ** (ಪಾ. ಸೂ. ೬-೪-೧೪೫) ಟ ಖ ಎರಡು ಪ್ರತ್ಯಯಗಳು ಮಾತ್ರ ಪರದಲ್ಲಿರುವಾಗಲೇ ಅಹನ್ ಶಬ್ದದ ಟಿಗೆ ಲೋಪ ಬರುತ್ತೆ. ಮಿಕ್ಕ ಪ್ರತ್ಯಯಗಳು ಪರದಲ್ಲಿರುವಾಗ ಟಿಲೋಪ ಬರುವುದಿಲ್ಲ ಎಂಬ ನಿಯಮದಿಂದ ಇಲ್ಲಿ ಅನ್‌ಗೆ ಲೋಪ ಬರುವುದಿಲ್ಲ. ತಿರಸ್+ಅಹನ್ ಯ ಎಂಬಲ್ಲಿ ಸಕಾರಕ್ಕೆ **ಸಸಜುಷೋರುಃ** (ಪಾ. ಸೂ. ೮-೩-೧೦೩) ಎಂದು ರು ಆದೇಶ. ಅದಕ್ಕೆ **ಅತೋರೋರಪ್ಲುತಾದಪ್ಲುತೇ** (ಪಾ. ಸೂ. ೬-೧-೧೧೩) ಎಂದು ಉ ಆದೇಶ. ಗುಣ. ತಿರೋ+ಅಹನ್+ಯ ಇಲ್ಲಿ **ಯೇಚಾಭಾವಕರ್ಮಣೋಃ** (ಪಾ. ಸೂ. ೬-೪-೧೬೪) ಭಾವ ಅಥವಾ ಕರ್ಮ ಎಂಬ ಅರ್ಥಗಳನ್ನು ಬೋಧಿಸದೇ ಇರುವ ಯಕಾರಾದಿ ತದ್ಧಿತಪ್ರತ್ಯಯ ಪರದಲ್ಲಿದ್ದರೆ ಅನ್ ಎಂಬುದು ಪ್ರಕೃತಿಭಾವವನ್ನು ಹೊಂದುವುದು ಎಂದು ವಿಹಿತವಾದ ಪ್ರಕೃತಿಭಾವವು ನ್ಯಾಯವಾಗಿ ಬರಬೇಕು- ಆದರೂ **ಸರ್ವೇವಿಧಯೆಶ್ಛಂದಸಿ ವಿಕಲ್ಪ್ಯಂತೇ** (ಪರಿಭಾ. ೩೫) ಎಲ್ಲಾ ಶಾಸ್ತ್ರಗಳೂ ಛಂದಸ್ಸಿನಲ್ಲಿ ವಿಕಲ್ಪವಾಗಿ ಬರುವುವು ಎಂಬ ಪರಿಭಾಷೆಯಿಂದ ಈ ಪ್ರಕೃತಿಭಾವ ಶಾಸ್ತ್ರವೂ ವಿಕಲ್ಪವಾಗುವುದರಿಂದ ಇಲ್ಲಿ ಬರುವುದಿಲ್ಲ. **ಅಲ್ಲೋಪೋಽನಃ** (ಪಾ. ಸೂ. ೬-೪-೧೩೪) ಕಪ್ರತ್ಯಯಾವಧಿಕಯಾದ್ಯಜಾದ್ಯನ್ಯತರಸ್ವಾದಿಪ್ರತ್ಯಯಾನ್ವವಹಿತಪೂರ್ವದಲ್ಲಿರುವ ಅನ್ ಎಂಬುದರ ಹ್ರಸ್ವಾಕಾರಕ್ಕೆ ಲೋಪ ಬರುತ್ತೆ ಎಂದು ಅನ್ ನ ಅಗೆ ಲೋಪ. ತಿರೋ+ಅಹ್ನ್+ಯ ತಿರೋಹಿತಃ ಅಹ್ನ್ಯಃ ತಿರೋಅಹ್ನ್ಯಃ **ಕುಗತಿಪ್ರಾದಯಃ** (ಪಾ. ಸೂ. ೨-೨-೧೮) ಎಂಬುದರಿಂದ ಸಮಾಸ. **ತಿರೋಽನ್ತರ್ಧೌ** (ಪಾ. ಸೂ. ೧-೪-೭೧ ವ್ಯವಧಾನ ಎಂಬ ಅರ್ಥದಲ್ಲಿರುವ ತಿರಸ್ ಎಂಬುದು ಗತಿಸಂಜ್ಞೆಯನ್ನು ಹೊಂದುವುದು ಎಂದು ಗತಿಸಂಜ್ಞೆ ಇದೆ, ಸ್ವರಾದಿಯಲ್ಲಿ ತಿರಸ್ ಎಂದು ಪಾಠವಿದೆ. ಆದ್ದರಿಂದ **ಸರ್ವಾದಿನಿಪಾತಮವ್ಯಯಂ** ಎಂಬುದರಿಂದ ಅವ್ಯಯಸಂಜ್ಞೆ ಬರುತ್ತೆ. **ತತ್ಪುರುಷೇತುಲ್ಯಾರ್ಥ-**,(ಪಾ. ಸೂ. ೬-೩-೨) ಎಂದು ಅವ್ಯಯ ಪೂರ್ವಪದ ಪ್ರಕೃತಿಸ್ವರ ಬರುತ್ತೆ.

ದಾಶುಷೇ—ದಾಶೃ ದಾನೇ ಧಾತು. **ದಾಶ್ವಾನ್ಸಾಹ್ವಾನ್ಮೀಢ್ವಾಂಶ್ಚ**(ಪಾ.ಸೂ.೬-೧-೧೨) ದಾಶೃ ದಾನೇ, ಷಹಮರ್ಷಣೇ, ಮಿಹ ಸೇಚನೇ, ಈ ಧಾತುಗಳು ಕ್ವಸುಪ್ರತ್ಯಯಾಂತವಾಗಿ ನಿಪಾತಿಸಲ್ಪಡುವುವು, ಮೂರು ಸ್ಥಳದಲ್ಲಿಯೂ ದ್ವಿತ್ವವಿಲ್ಲದೆ ಇರುವಿಕೆಯೂ ಇಡಾಗಮ ಇಲ್ಲದಿರುವಿಕೆಯೂ ಸಹ ನಿಪಾತಿಸಲ್ಪಡುತ್ತೆ. ಎರಡನೆಯದರಲ್ಲಿ ಪರಸ್ಮೈಪದವೂ, ಉಪಧಾಧೀರ್ಘವೂ ಸಹ ನಿಪಾತಿಸಲ್ಪಡುವುದು. ದಾಶ+ವಸ್=ದಾಶ್ವಸ್, ಙೀಪ್ರತ್ಯಯ, ದಾಶ್ವಸ್+ಏ **ವಸೋಸ್ಸಂಪ್ರಸಾರಣಂ** (ಪಾ. ಸೂ. ೬-೪-೧೩೧) ವಸುಪ್ರತ್ಯಯಾಂತವೂ ಭಸಂಜ್ಞಕವೂ ಆದ ಅಂಗಕ್ಕೆ ಸಂಪ್ರಸಾರಣ (ವಕಾರಕ್ಕೆ ಉಕಾರ) ಬರುತ್ತೆ ಎಂದು ವ್‌ಗೆ ಉ. ಪೂರ್ವರೂಪ. ದಾಶುಸ್+ಏ **ಆದೇಶಪ್ರತ್ಯಯಯೋಃ** (ಪಾ. ಸೂ. ೮-೩-೬೦) ಎಂದು ಸಕಾರಕ್ಕೆ ಷಕಾರ. **ಶಾಸಿವಸಿಘೀನಾಂ ಚ** (ಪಾ. ಸೂ. ಎಂಬಲ್ಲಿ ವಸ್ ಎಂಬುದರಿಂದ ವಸಧಾತುವಿಗೆ ಗ್ರಹಣವು ಪ್ರತ್ಯಯಕ್ಕೆ ಗ್ರಹಣವಿಲ್ಲ. **ಸಹಚರಿತಾಸಹಚರಿತಯೋಸ್ಸಹಚರಿತಸ್ಯ ಗ್ರಹಣಮ್** (ಪರಿಭಾ ೧೧೨) ಎಂಬ ಪರಿಭಾಷೆಯಿಂದ ಪೂರ್ವೋತ್ತರಗಳಲ್ಲಿರುವ ಧಾತು ಸಾಹಚರ್ಯದಿಂದ ಮಧ್ಯದಲ್ಲಿರುವ ವಸ್ ಎಂಬುದರಿಂದಲೂ ಧಾತುವಿಗೆ ಗ್ರಹಣವು ಉಚಿತ. ಈ ಸೂತ್ರದಲ್ಲಿ ಶೇಖರ

ಕಾರರು ಆದೇಶಪ್ರತ್ಯಯೇತ್ಯಾಭಾವಾದಸ್ಪಾಸ್ತೇ ವಿಧಿರಯೇಮ್ ಎಂದಿರುವರು. ಇಂತಹ ಭ್ರಮನಿವಾರಣೆಗಾಗಿಯೇ ೧ ನೇ ಗಣದಲ್ಲಿ ವಸ ನಿವಾಸೇ ಧಾತುನಿರೂಪಣದಲ್ಲಿ ಕೌಮುದೀಕಾರರು ಈ ಸೂತ್ರವನ್ನು ಉದಹರಿಸಿರುವರು. ॥ ೧ ॥

॥ ಸಂಹಿತಾಪಾಠಃ ॥

ತ್ರಿವಂಧುರೇಣ᳖ ತ್ರಿವೃತಾ᳖ ಸುಪೇಶಸಾ᳖ ರಥೇನಾ᳖ ಯಾತಮಶ್ವಿನಾ।
ಕಣ್ವಾಸೋ᳖ ವಾಂ ಬ್ರಹ್ಮ᳖ ಕೃಣ್ವಂತ್ಯಧ್ವರೇ ತೇಷಾಂ ಸು᳖ ಶೃಣುತಂ
ಹವಂ᳖ ॥ ೨ ॥

॥ ಪದಪಾಠಃ ॥

ತ್ರಿಽವಂಧುರೇಣ᳖ । ತ್ರಿವೃತಾ᳖ । ಸುಽಪೇಶಸಾ । ರಥೇನ । ಆ । ಯಾತಂ ।
ಅಶ್ವಿನಾ ॥
ಕಣ್ವಾಸಃ । ವಾಂ । ಬ್ರಹ್ಮ᳖ । ಕೃಣ್ವಂತಿ । ಅಧ್ವರೇ । ತೇಷಾಂ᳖ । ಸು । ಶೃಣುತಂ ।
ಹವಂ᳖ ॥ ೨ ॥

॥ ಸಾಯಣಭಾಷ್ಯಂ ॥

ಹೇ ಅಶ್ವಿನಾ ತ್ರಿವಂಧುರೇಣೋನ್ನತಾನತರೂಪತ್ರಿವಿಧಬಂಧನಕಾಷ್ಠಯುಕ್ತೇನ । ತ್ರಿವೃತಾಪ್ರತಿಹತಗತಿತಯಾ ಲೋಕತ್ರಯೇ ವರ್ತಮಾನೇನ ಸುಪೇಶಸಾ ಶೋಭನಸುವರ್ಣಯುಕ್ತೇನ ರಥೇನಾ ಯಾತಂ। ಇಹಾಗಚ್ಛತಂ । ಕಣ್ವಾಸಃ ಕಣ್ವಪುತ್ರಾ ಮೇಧಾವಿನ ಋತ್ವಿಜೋ ವಾ ವಾಂ ಯುವಯೋರಧ್ವರೇ ಯಾಗೇ ಬ್ರಹ್ಮ ಸ್ತೋತ್ರರೂಪಂ ಮಂತ್ರಂ ಹವಿರ್ಲಕ್ಷಣಮನ್ನಂ ವಾ ಕೃಣ್ವಂತಿ । ಕುರ್ವಂತಿ । ತೇಷಾಂ ಕಣ್ವಾನಾಂ ಹವಮಾಹ್ವಾನಂ ಸು ಶೃಣುತಂ । ಸುಷ್ಠ್ವಾದರೇಣ ಶೃಣುತಂ ॥ ತ್ರಿವಂಧುರೇಣ । ಬಧ್ನಂತೀತಿ ಬಂಧುರಾಃ । ಬಂಧೇರೌಣಾದಿಕ ಉರನ್ಪ್ರತ್ಯಯಃ । ತ್ರಯೋ ಬಂಧುರಾ ಯಸ್ಯಾಸೌ ತ್ರಿಬಂಧುರಃ । ತ್ರಿಚಕ್ರಾದಿಷು ಪಾಠಾತ್ ತ್ರಿಚಕ್ರಾದೀನಾಂ ಛಂದಸ್ಯುಪಸಂಖ್ಯಾನಂ । ಪಾ. ೬-೨-೧೯೯-೧ । ಇತ್ಯುತ್ತರಪದಾಂತೋದಾತ್ತತ್ವಂ । ತ್ರಿವೃತಾ । ತ್ರಿಷು ಲೋಕೇಷು ವರ್ತತ ಇತಿ ತ್ರಿವೃತ್ । ಕ್ವಿಪ್ಚೇತಿ ಕ್ವಿಪ್ । ಸುಪೇಶಸಾ । ಪೇಶ ಇತಿ ಹಿರಣ್ಯನಾಮ । ಶೋಭನಂ ಪೇಶೋ ಯಸ್ಯಾಸೌ ಸುಪೇಶಾಃ । ಆದ್ಯುದಾತ್ತಂ ದ್ವ್ಯಚ್ಛಂದಸೀತ್ಯುತ್ತರಪದಾದ್ಯುದಾತ್ತತ್ವಂ । ಶೃಣುತಂ । ಶ್ರು ಶ್ರವಣೇ । ಶ್ರುವಃ ಶೃ ಚೇತಿ ಶ್ನುಃ । ತಪ್ಸಂನಿಯೋಗೇನ ಧಾತೋಃ ಶೃಭಾವಶ್ಚ । ಹವಂ । ಹೂಯತೇಽರ್ಥಾವೇತ್ಯನುಪಸರ್ಗಸ್ಯ । ಪಾ. ೩-೩-೨೫। ಇತ್ಯಪ್ । ಸಂಪ್ರಸಾರಣಂ ಚೇ ಗುಣಾವಾದೇಶೌ । ಪ್ರತ್ಯಯಸ್ಯ ಪಿತ್ತ್ವಾದನುದಾತ್ತತ್ವೇ ಧಾತುಸ್ವರಃ ॥

॥ ಪ್ರತಿಪದಾರ್ಥ ॥

ಅಶ್ವಿನಾ—ಎಲೈ ಅಶ್ವಿನೀದೇವತೆಗಳೇ । **ತ್ರಿವಂಧುರೇಣ**—ಮೂರು ಮೂಕಿಮರಗಳಿಂದ ಮನೋಹರವಾಗಿರುವುದೂ । **ತ್ರಿವೃತಾ**—(ಪ್ರತಿಬಂಧಕವಿಲ್ಲದಿರುವುದರಿಂದ) ಮೂರು ಲೋಕಗಳಲ್ಲಿಯೂ ಇರತಕ್ಕದ್ದೂ (ಸಂಚರಿಸತಕ್ಕದ್ದೂ) । **ಸುಪೇಶಸಾ**—ಶ್ರೇಷ್ಠವಾದ ಸುವರ್ಣದಿಂದ ನಿರ್ಮಿತವಾದದ್ದೂ ಆದ । **ರಥೇನ**—ರಥದಿಂದ **ಆಯಾತಂ**—(ಇಲ್ಲಿಗೆ) ಬನ್ನಿರಿ । **ಕಣ್ವಾಸಃ**—ಕಣ್ವಪುತ್ರರು ಅಥವಾ ಮೇಧಾವಿಗಳಾದ ಋತ್ವಿಕ್ಕುಗಳು । **ವಾಂ**—ನಿಮಗೆ । **ಅಧ್ವರೇ**—ಯಾಗದಲ್ಲಿ । **ಬ್ರಹ್ಮ**—ಸ್ತೋತ್ರರೂಪವಾದ ಮಂತ್ರವನ್ನು ಅಥವಾ ಹವಿಸ್ಸಿನ ರೂಪದಲ್ಲಿರುವ ಅನ್ನವನ್ನು । **ಕೃಣ್ವಂತಿ**—ಮಾಡುತ್ತಾರೆ (ಅರ್ಪಿಸುತ್ತಾರೆ) । **ತೇಷಾಂ**—ಆ ಕಣ್ವ ಪುತ್ರರ ಅಥವಾ ಮೇಧಾವಿಗಳಾದ ಋತ್ವಿಕ್ಕುಗಳ । **ಹವಂ**—ಆಹ್ವಾನವನ್ನು । **ಸು ಶೃಣುತಂ**—ಆದರದಿಂದ ಕೇಳಿರಿ

॥ ಭಾವಾರ್ಥ ॥

ಎಲೈ ಅಶ್ವಿನೀದೇವತೆಗಳೇ, ನಿಮ್ಮ ಸುವರ್ಣನಿರ್ಮಿತವಾದದ್ದೂ ಮೂರು ಮೂಕಿಮರಗಳಿಂದ ಕೂಡಿ ಮನೋಹರವಾದದ್ದೂ ಆದ ರಥವು ಪ್ರತಿಬಂಧಕವಿಲ್ಲದೇ ಮೂರು ಲೋಕದಲ್ಲೂ ಸಂಚರಿಸುವುದು. ಆ ರಥದಲ್ಲಿ ಕುಳಿತುಕೊಂಡು ಈ ಯಜ್ಞಭೂಮಿಗೆ ಬನ್ನಿ. ಇಲ್ಲಿ ಕಣ್ವಪುತ್ರರು ಅಥವಾ ಮೇಧಾವಿಗಳಾದ ಋತ್ವಿಕ್ಕುಗಳು ನಿಮಗೆ ಯಜ್ಞದಲ್ಲಿ ಸ್ತೋತ್ರರೂಪವಾದ ಮಂತ್ರವನ್ನು ಅಥವಾ ಹವಿಸ್ಸಿನ ರೂಪದಲ್ಲಿರುವ ಅನ್ನವನ್ನು ಅರ್ಪಿಸತ್ತಾರೆ. ಅವರ ಆಹ್ವಾನವನ್ನು ಆದರದಿಂದ ಕೇಳಿರಿ.

English Translation.

Come hither, O Aswins, in your triangular and beautiful car of the three-fold pole. The Kanwas compose and repeat your praise at the sacrifice ; Kindly hear their invocation.

॥ ವಿಶೇಷ ವಿಷಯಗಳು ॥

ಈ ಋಕ್ಕಿನಲ್ಲಿ ಅಶ್ವಿನೀದೇವತೆಗಳ ರಥಸ್ವರೂಪವನ್ನು ಹೇಳಿದೆ. **ತ್ರಿವಂಧುರೇಣ ತ್ರಿವೃತಾ ರಥೇನ** ಇವರ ರಥವು ತ್ರಿಕೋಣಾಕಾರವಾಗಿಯೂ ಮೂರು ಕಂಭಗಳುಳ್ಳದ್ದಾಗಿಯೂ ಇರುವುದೆಂದಭಿಪ್ರಾಯವು. ಭಾಷ್ಯಕಾರರು ತ್ರಿವೃತಾ ಎಂಬ ಶಬ್ದಕ್ಕೆ ಮೂರು ಲೋಕಗಳಲ್ಲಿಯೂ ಅಪ್ರತಿಹತವಾದ ಗಮನವುಳ್ಳದ್ದೆಂದು ಅರ್ಥವಿವರಣೆ ಮಾಡಿರುವರು. ಈ ಅಶ್ವಿನೀದೇವತೆಗಳ ರಥವನ್ನು ಈ ಶಬ್ದಗಳಿಂದ ವರ್ಣಿಸುವುದು ಋಗ್ವೇದದಲ್ಲಿ ಕೆಲವು ಕಡೆ ಕಂಡುಬರುವುದು. ಉದಾಹರಣೆಗಾಗಿ

ತ್ರಿವಂಧುರೇಣ ತ್ರಿವೃತಾ ರಥೇನ ತ್ರಿಚಕ್ರೇಣ ಸುವೃತಾ ಯಾತಮರ್ವಾಕ್ ॥

(ಋ. ಸಂ. ೧-೧೧೪-೨)

ತ್ರಿವಂಧುರೇಣ ತ್ರಿವೃತಾ ರಥೇನಾ ಯಾತಮಶ್ವಿನಾ ॥

(ಋ- ಸಂ. ೮-೮೫.೮)

अवार्ङ् त्रिचक्रो मधुवाहनो रथो जीराश्वो अश्विनोर्यातु सुष्टुतिः।
त्रिबन्धुरो मघवा विश्वसौभगः शं न आ वक्षद्द्विपदे चतुष्पदे ॥

(ऋ. सं. ८-८७८-३)

इत्यादि ऋक्कुगळन्नु कॊडबहुदु ई ऋक्कुगळल्लि हेळिरुवंते अश्विनीदेवतेगळ रथक्के मूरु चक्रगळॆंदु अनेक कडेगळल्लियू वर्णिसल्पट्टिरुवुदु. आदुदरिंद अश्विनीदेवतेगळ रथवन्नु वर्णने माडुवाग त्रिवंधुर, त्रिवृत, त्रिचक्र ऎंब शब्दगळु अनेक ऋषिगळिंद उपयोगिसल्प ट्टिरुवुदरिंद ई शब्दगळिगॆ ऒंदु निर्दिष्टवाद अर्थविरुवुदॆंदु तिळियबहुदु.

कण्वासः—**मेधाविनो ऋत्विजः** । बुद्धिवंतराद ऋत्विक्कुगळु, अथवा कण्वऋषिय पुत्ररु, कण्वऋषिय वंशस्थरु.

ब्रह्म—अंधः वाजः मॊदलाद इप्पत्तॆंटु अन्ननामगळ मध्यदल्लि ब्रह्मशब्दवु पठित वागिरुवुदरिंद ब्रह्मशब्दक्के अन्नवॆंदू, (नि. ५-९) मघं, रेक्णः मॊदलाद इप्पत्तॆंटु धननाम गळ मध्यदल्लि ब्रह्मशब्दवु पठितवागिरुवुदरिंद ब्रह्मशब्दक्के धनवॆंदू (नि. ५-९) मत्तु (नि. ८१-५४) प्रकार ब्रह्मशब्दक्के स्तोत्रवॆंदू मूरु अर्थगळिरुवुवु. इल्लि यावद अर्थवन्नादरू हेळबहुदु.

॥ व्याकरणप्रक्रियाः ॥

त्रिबन्धुरेण—बन्ध बन्धने धातु. बध्नन्ति इति बन्धुराः ऎंदु विग्रह. बन्ध धातुविन मुंदॆ ऊणादिकवाद उरन् प्रत्ययः. त्रयः बन्धुराः यस्य सः, मूरु विधवाद कट्टुव मरवुळ्ळ ऎंदर्थ. बन्धुर शब्दवु निघण्टुविंद आद्युदात्त. त्रिशब्दवु प्रातिपदिक स्वरदिंद अंतोदात्त. बहुव्रीहिसमास बंदमेलॆ बहुव्रीहौ प्रकृत्या-,(पा. सू. ६-२-१) ऎंदु पूर्वपदप्रकृतिस्वरबरबेकागुत्तदॆ. **अंतोदात्तप्रकरणे त्रिचक्र्यादीनां छंदस्युपसंख्यानम्** (पा. सू. ६-२-१९९-१) ऎंदरॆ अंतोदात्तप्रकरणदल्लि त्रिचक्र्यादीनां छंदसि ऎंदु पठिसबेकु ऎंदर्थ. ई वचनक्के छंदस्सिनल्लि त्रिचक्र, त्रिबंधुर मॊदलाद शब्दगळ कॊनॆय वर्णक्के उदात्त बरुत्तॆ ऎंदर्थ. इदरिंद पूर्वपदप्रकृतिस्वरवन्नु बाधिसि अंतोदात्त बरुत्तॆ.

त्रिवृता—त्रिषु लोकेषु वर्तते=मूरु लोकगळल्लियू इदॆ ऎंदु विग्रह. त्रिशब्दोपपदकवाद वृतु वर्तने ऎंब धातुविन मुंदॆ क्विप् बरुत्तॆ. तृतीयैकवचनान्त.

सुसेशसा—सेश ऎंदु हिरण्य (चिन्न)क्के हॆसरु. शोभनं सेशः यस्य सः ऒळ्ळॆय चिन्नवुळ्ळ ऎंदर्थ. **आद्युदात्तॊंद्व्यच् छंदसि** (पा. सू. ६-२-१७९) सु शब्दद मुंदिरुव उत्तर पदवु एरडु अच्चुगळन्नु हॊंदिद्दु आद्युदात्तवागिद्दरॆ अदु छंदस्सिनल्लि आद्युदात्तवा गुत्तॆ ऎंदु अर्थ. इल्लि दीपनार्थकवाद षिशि धातुविन मुंदॆ ऊणादिक असुन् प्रत्ययः बंदु सेश ऎंबुदु मध्योदात्त ऎंदु ऎर्पडुत्तॆ.

ಶೃಣುತಮ್—ಶ್ರು ಶ್ರವಣೇ ಧಾತು. ಲೋಟ್ ಮಧ್ಯಮಪುರುಷ ದ್ವಿವಚನ ಥಸ್. **ಲೋಟೋ ಲಙ್ವತ್** (ಪಾ. ಸೂ. ೩-೪-೯೫) ಎಂದು ಲಙ್ವದ್ಭಾವ. **ತೆಸ್ಥಸ್ಥಮಿಪಾಂತಾಂತೇಂತಾಮಃ** (ಪಾ. ಸೂ. ೩-೪-೧೦೭) ಎಂದು ತಮ್ ಆದೇಶ. ಶ್ರು+ತ ಈಗ **ಶ್ರುವಃಶೃ ಚೆ** (ಪಾ. ಸೂ. ೩-೧-೭೪) ಶಬ್ವಿಷಯಲ್ಲಿ ಎಂದರೆ ಕರ್ತೃ ಎಂಬ ಅರ್ಥಕೊಡುವ ಸಾರ್ವಧಾತುಕ ಪ್ರತ್ಯಯವು ಪರದಲ್ಲಿರುವಾಗ ಶ್ರು ಧಾತುವಿಗೆ ಶೃ ಎಂಬ ಆದೇಶವೂ ಶಬ್ವಿಕರಣಕ್ಕೆ ಬದಲಾಗಿ ಶ್ನು ವಿಕರಣವೂ ಬರುತ್ತೆ ಎಂದು ಶ್ನು ವಿಕರಣ ಶೃ ಆದೇಶಗಳು ಬಂದರೆ ಶೃ+ನು+ತ, ಇಲ್ಲಿ ಆದೇಶವಿಕರಣಗಳೆರಡೂ ಸನ್ನಿಯೋಗಶಿಷ್ಟವಾದುವು. ಸನ್ನಿಯೋಗ= ಸಹಭಾವ, ಶಿಷ್ಟ=ವಿಹಿತವಾದುದು. ಆದ್ದರಿಂದ ಎರಡೂ ಜತೆಯಲ್ಲಿ ಲಕ್ಷ್ಯಗಳಲ್ಲಿ ಬರುವುವು. **ಋವರ್ಣಾನ್ನಸ್ಯ ಣತ್ವೇ ವಾಚ್ಯೇ** ಎಂದು ನಕಾರಕ್ಕೆ ಣಕಾರ. ಶೃಣುತ ಎಂದಾಗುತ್ತೆ.

ಹವಮ್—ಹ್ವೇಞ್ ಸ್ಪರ್ಧಾಯಾಂ ಶಬ್ದೇ ಚ ಧಾತು. **ಭಾವೇಽನುಪಸರ್ಗಸ್ಯ** (ಪಾ. ಸೂ. ೩-೩-೭೫) ಭಾವಾರ್ಥದಲ್ಲಿ ಉಪಸರ್ಗದಿಂದ ಕೂಡಿಲ್ಲದ ಹ್ವೇಞ್ ಧಾತುವಿಗೆ ಸಂಪ್ರಸಾರಣ (ವಕಾರಕ್ಕೆ ಉಕಾರ)ವೂ, ಆ ಧಾತುಗಿಂತಲೂ ಪರದಲ್ಲಿ ಅಪ್ ಪ್ರತ್ಯಯವೂ ಬರುತ್ತೆ ಎಂದು ಅಪ್ ಸಂಪ್ರಸಾರಣಗಳು ಬಂದರೆ ಹು+ಏ+ಅ, ಪೂರ್ವರೂಪ. ಹು+ಅ, **ಸಾರ್ವಧಾತುಕಾರ್ಧಧಾತುಕಯೋಃ** ಎಂದು ಗುಣ, ಉಕಾರಕ್ಕೆ ಓಕಾರ. ಆದಕ್ಕೆ ಆಮ್ ಆದೇಶ ದ್ವಿತೀಯಾ ಏಕವಚನ ಅಮ್, ಹವಮ್ ಎಂದಾಗುತ್ತೆ. ಇಲ್ಲಿ ಅಪ್ ಪ್ರತ್ಯಯ ಪಿತ್, ಅಮ್ ವಿಭಕ್ತಿಯು ಸುಪ್ ಆದ್ದರಿಂದ **ಅನುದಾತ್ತೌ ಸುಪ್ಪಿತೌ** ಎಂದು ಎರಡೂ ಅನುದಾತ್ತಗಳು. ಧಾತು ಸ್ವರವೇ ಉಳಿಯುತ್ತದೆ ॥ ೨ ॥

ಸಂಹಿತಾಪಾಠಃ

ಅಶ್ವಿನಾ ಮಧುಮತ್ತಮಂ ಪಾತಂ ಸೋಮಮೃತಾವೃಧಾ ।
ಅಥಾದ್ಯ ದಸ್ರಾ ವಸು ಬಿಭ್ರತಾ ರಥೇ ದಾಶ್ವಾಂಸಮುಪ
ಗಚ್ಛತಂ ॥ ೩ ॥

ಪದಪಾಠಃ

ಅಶ್ವಿನಾ । ಮಧುಮತ್ऽತಮಂ । ಪಾತಂ । ಸೋಮಂ । ಋತಽವೃಧಾ ।
ಅಥ । ಅದ್ಯ । ದಸ್ರಾ । ವಸು । ಬಿಭ್ರತಾ । ರಥೇ । ದಾಶ್ವಾಂಸಂ । ಉಪ ।
ಗಚ್ಛತಂ ॥ ೩ ॥

॥ ಸಾಯಣಭಾಷ್ಯಂ ॥

ಹೇ ಋತಾವೃಧಾ ಯಜ್ಞಸ್ಯ ವರ್ಧಕಾವಶ್ವಿನೌ ಮಧುಮತ್ತಮಂ ಸೋಮಂ ಪಾತಂ । ಪಿಬತಂ ಹೇ ದಸ್ರಾಶ್ವಿನೌ ಸೋಮಪಾನಾರ್ಥಮಥಾಸ್ಮದಾಹ್ವಾನಾನಂತರಮದ್ಯಾಸ್ಮಿನ್ನೇ ರಥೇ ಸ್ವಕೀಯೇ ವಸು

ಬಿಭೃತಾ ಅಸ್ಮದುಪಯುಕ್ತಂ ಧನಂ ಧಾರಯೆಂತೌ ದಾಶ್ವಾಂಸಂ ಹವಿಷ್ಮದಂ ಯಜಮಾನಮುಪ ಗಚ್ಛೆತಂ ಸಮೀಪೇ ಪ್ರಾಪ್ನುತಂ ॥ ಬಿಭೃತಾ । ಡುಭೃಞ್ ಧಾರಣಪೋಷಣಯೋಃ । ಶತರಿ ಜುಹೋತ್ಯಾದಿತ್ವಾದಿ-ತ್ವಾಚ್ಛಪಃ ಶ್ಲುಃ । ಭೃಞಾಮಿದಿತ್ಯಭ್ಯಾಸಸ್ಯೇತ್ವಂ । ಶತುರ್ಋತ್ವಾದ್ಗುಣಾಭಾವೇ ಯಣಾದೇಶಃ । ಅಭ್ಯ-ಸ್ತಾನಾಮಾದಿರಿತ್ಯಾದ್ಯುದಾತ್ತತ್ವಂ ॥

॥ ಪ್ರತಿಪದಾರ್ಥ ॥

ಋತಾವೃಧಾ—ಯಜ್ಞವರ್ಧಕರಾದ ಅಶ್ವಿದೇವತೆಗಳೇ । **ಮಧುಮತ್ತಮಂ**—ಅತ್ಯಂತ ಮಧುರವಾದ **ಸೋಮಂ**—ಸೋಮರಸವನ್ನು । **ಪಾತಂ**—ಕುಡಿಯಿರಿ। **ದಸ್ರಾ**—ರಮಣೀಯರೂಪರಾದ ಅಶ್ವಿನೀ ದೇವತೆಗಳೇ। (ಸೋಮರಸಪಾನಕ್ಕಾಗಿ) । **ಅಥ**—ನಮ್ಮ ಆಹ್ವಾನದ ಅನಂತರ । **ಅದ್ಯ**—ಇಂದು । **ರಥೇ**—ನಿಮ್ಮ ರಥದಲ್ಲಿ । **ವಸು**—(ನಮಗೆ ಉಪಯುಕ್ತವಾದ) ಧನವನ್ನು । **ಬಿಭೃತಾ**—ಹೊತ್ತುಕೊಂಡು । **ದಾಶ್ವಾಂಸಂ**—ಹವಿರ್ದಾತನಾದ ಯಜಮಾನನನ್ನು ಕುರಿತು । **ಉಪ ಗಚ್ಛೆತಂ**—ಸಮೀಪಿಸಿರಿ.

॥ ಭಾವಾರ್ಥ ॥

ಯಜ್ಞವರ್ಧಕರೂ ರಮಣೀಯರೂಪವುಳ್ಳವರೂ ಆದ ಎಲೈ ಅಶ್ವಿನೀದೇವತೆಗಳೇ, ಅತ್ಯಂತ ಮಧುರವಾದ ಸೋಮರಸವನ್ನು ಪಾನಮಾಡಿರಿ. ಸೋಮರಸಪಾನಕ್ಕಾಗಿ ನಮ್ಮ ಆಹ್ವಾನವನ್ನು ಮನ್ನಿಸಿ ನಿಮ್ಮ ರಥದಲ್ಲಿ ನಮಗೆ ಉಪಯುಕ್ತವಾದ ಧನವನ್ನು ಹೊತ್ತುಕೊಂಡು ಹವಿರ್ದಾತನಾದ ಯಜಮಾನನ ಸಮೀಪಕ್ಕೆ ಬನ್ನಿ.

English Translation.

Aswins, encouragers of sacrifice and of pleasing aspects, drink this most sweet soma juice; approach to-day the giver of the offering, bearing wealth.

॥ ವಿಶೇಷ ವಿಷಯಗಳು ॥

ಋತಾವೃಧಾ—ಈ ಶಬ್ದದ ವಿವರಣೆಯನ್ನು ಈ ಸೂಕ್ತದ ಮೊದಲನೆಯ ಋಕ್ಕಿನಲ್ಲಿಯೇ ಕೊಟ್ಟಿದೆ. ಈ ಶಬ್ದವು ಅಶ್ವಿನೀದೇವತೆಗಳನ್ನು ಸ್ತೋತ್ರವಾಡುವಾಗ ವಿಶೇಷವಾಗಿ ಉಪಯೋಗಿಸಲ್ಪಡುವುದು.

ಅದ್ಯ—ಈಗ ಅಥವಾ ಈದಿನ.

ದಸ್ರಾ—ಅಶ್ವಿನೀದೇವತೆಗಳಲ್ಲಿ ಒಬ್ಬನ ಹೆಸರು ದಸ್ರಾ ಎಂದೂ ಮತ್ತೊಬ್ಬನ ಹೆಸರು ನಾಸತ್ಯಾ ಎಂದೂ ಇದ್ದರೂ ಇಲ್ಲಿ ಈ ಶಬ್ದವು ಇಬ್ಬರನ್ನೂ ನಿರ್ದೇಶಿಸಲು ಉಪಯೋಗಿಸಲ್ಪಟ್ಟಿರುವುದು.

॥ ವ್ಯಾಕರಣಪ್ರಕ್ರಿಯಾ ॥

ಬಿಭೃತಾ— ಡುಭೃಞ್ ಧಾರಣಪೋಷಣಯೋಃ ಧಾತು. ಲಟ್. **ಲಟಶ್ಶತೃಶಾನಚೌ**—(ಪಾ. ಸೂ.೩-೨-೧೨೪) ಎಂದು ಲಟ್ಟಿಗೆ ಶತೃ ಆದೇಶ. ಶಪ್. **ಜುಹೋತ್ಯಾದಿಭ್ಯಃ ಶ್ಲುಃ** (ಪಾ. ಸೂ.೩-೧-೮೫) ಜುಹೋತ್ಯಾದಿ ಧಾತುಗಳ ಮುಂದಿರುವ ಶಪ್‌ಗೆ ಶ್ಲು (ಲೋಪ) ಬರುತ್ತೆ ಎಂದು ಶಪ್‌ಗೆ ಲೋಪ, **ಶ್ಲೌ**

(ಪಾ. ಸೂ. ೬-೧-೧೦) ಶ್ಲು ಶಬ್ದವನ್ನುಚ್ಚರಿಸಿ ವಿಕರಣಕ್ಕೆ ಲೋಪ ಬರಲು ಧಾತುವಿಗೆ ದ್ವಿತ್ವ ಎಂದರೆ ಎರಡಾವರ್ತಿ ಪ್ರಯೋಗ ಬರುತ್ತೆ, ಎಂದು ದ್ವಿತ್ವ ಬಂದರೆ ಭೃ+ಭೃ+ಅತ್ ಭೃಞಾಮಿತ್ (ಪಾ. ಸೂ. ೭-೪-೭೬) ನಿಜಾಂತ್ರಯಾಣಾಂಗುಣಃ ಶ್ಲೌ (ಪಾ. ಸೂ.೭-೪-೭೫) ಎಂಬ ಸೂತ್ರದಿಂದ ತ್ರಯಾಣಾಂ ಶ್ಲೌ ಎಂಬ ಪದಗಳು ಅನುವೃತ್ತವಾಗುವುವು. ಭೃಞ್ ಮೊದಲಾದಮೂರು ಧಾತುಗಳ ಅಭ್ಯಾಸಕ್ಕೆ ಇತ್ವವು ಶ್ಲು ಬಂದಾಗ ಬರುತ್ತೆ- ಎಂದು ಇತ್ವಬರುತ್ತೆ. ಅದು ಋಕಾರ ಸ್ಥಾನದಲ್ಲಿ ಬರುವುದರಿಂದ ಉರಣ್ರಪರಃ ಎಂದು ರೇಫ ಶಿರಸ್ಕವಾಗಿ ಬರುತ್ತೆ, ಭಿರ್+ಭೃ+ಅತ್ ಹಲಾದಿಃ ಶೇಷಃ ಎಂದು ರೇಫಕ್ಕೆ ಲೋಪ, ಶತೃಪ್ರತ್ಯಯ ಪಿತ್ ಅಲ್ಲ. ಸಾರ್ವಧಾತುಕವೂ ಆಗಿದೆ. ಅದ್ದರಿಂದ ಸಾರ್ವಧಾತುಕಮಪಿತ್ (ಪಾ. ಸೂ. ೧-೨-೪) ಪಿತ್ ಅಲ್ಲದ ಸಾರ್ವಧಾತುಕವು ಙಿತ್ ಆಗುತ್ತೆ ಎಂಬ ಅತಿದೇಶಶಾಸ್ತ್ರದಿಂದ ಶತೃಪ್ರತ್ಯಯವು ಙಿತ್ತಾಗುತ್ತೆ. ಆದ್ದರಿಂದ ಕ್ಙಿತಿ ಚ (ಪಾ. ಸೂ. ೧-೧-೫) ಗಿತ್-ಕಿತ್-ಙಿತ್-ಅಥವಾ ಙಿತ್ ಆದ ಪ್ರತ್ಯಯಗಳನ್ನು ನಿಮಿತ್ತ ಮಾಡಿಕೊಂಡು ಇಗ್ಲಕ್ಷಣವಾದ ಗುಣಬರುವುದಿಲ್ಲ ಎಂದು ನಿಷೇಧ ಬರುವುದರಿಂದ ಸಾರ್ವಧಾತುಕಾರ್ಧಧಾತುಕಯೋಃ (ಪಾ. ಸೂ. ೭-೩-೮೪) ಎಂದು ಗುಣ ಬರುವುದಿಲ್ಲ. ಇಕೋ ಯಣಚಿ ಎಂಬುದರಿಂದ ಯಣಾದೇಶ ಬರುತ್ತೆ. ಅಂದರೆ ಋಗೆ ರೇಫ ಬರುತ್ತೆ. ಪ್ರಥಮಾದ್ವಿಚನ ಔ ಪ್ರತ್ಯಯಕ್ಕೆ ಸುಪಾಂ ಸುಲುಕ್, (ಪಾ. ಸೂ. ೭-೧-೩೯) ಎಂದು ಆಕಾರದೇಶ, ಬಿಭ್ರತಾ ಎಂದಾಗುತ್ತೆ.

ಅಭ್ಯಸ್ತಾನಾಮಾದಿಃ—(ಪಾ. ಸೂ. ೬-೧-೧೯೯) ಇಡಾಗಮಭಿನ್ನವಾದ ಅಜಾದಿಯಾದ ಲಕಾರಸ್ಥಾನದಲ್ಲಿ ಬಂದ ಸಾರ್ವಧಾತುಕವು ಪರದಲ್ಲಿದ್ದರೆ ಅಭ್ಯಸ್ತದ ಎಂದರೆ ಎರಡಾವರ್ತಿ ಪ್ರಯೋಗಿಸಿದ ಶಬ್ದದ ಆದಿಯು ಉದಾತ್ತವಾಗುತ್ತೆ ಎಂದು ಆದ್ಯುದಾತ್ತ ಬರುತ್ತೆ. ಇಲ್ಲಿ ಅತ್ ಎಂಬುದು ಅಜಾದಿಯಾದ ಲಸ್ಥಾನಿಕಸಾರ್ವಧಾತುಕ ಬಿಭೃ ಎಂಬುದು ಅಭ್ಯಸ್ತ, ಆದರ ಆದಿ ಭಿ, ಅದಕ್ಕೆ ಉದಾತ್ತ ಬರುತ್ತದೆ.

ಸಂಹಿತಾಪಾಠಃ

ತ್ರಿಷಧಸ್ಥೇ ಬರ್ಹಿಷಿ ವಿಶ್ವವೇದಸಾ ಮಧ್ವಾ ಯಜ್ಞಂ ಮಿಮಿಕ್ಷತಂ॥
ಕಣ್ವಾಸೋ ವಾಂ ಸುತಸೋಮಾ ಅಭಿದ್ಯವೋ ಯುವಾಂ ಹವಂತೇ
ಅಶ್ವಿನಾ ॥ ೪ ॥

ಪದಪಾಠಃ

ತ್ರಿಽಸಧಸ್ಥೇ | ಬರ್ಹಿಷಿ | ವಿಶ್ವವೇದಸಾ | ಮಧ್ವಾ | ಯಜ್ಞಂ | ಮಿಮಿಕ್ಷತಂ ॥
ಕಣ್ವಾಸಃ | ವಾಂ | ಸುತಽಸೋಮಾಃ | ಅಭಿಽದ್ಯವಃ | ಯುವಾಂ | ಹವಂತೇ |
ಅಶ್ವಿನಾ ॥ ೪ ॥

॥ ಸಾಯಣಭಾಷ್ಯಂ ॥

ಹೇ ವಿಶ್ವವೇದಸಾ ಸರ್ವಜ್ಞಾವಶ್ವಿನೌ ತ್ರಿಷಧಸ್ಥೇ ಕೃಷ್ಯಾತ್ರೆಯೆರೂಪೇಣಾಸ್ತೀರ್ಣತಯೌ ತ್ರಿಷು ಸ್ಥಾನೇಷ್ವವಸ್ಥಿತೇ ಬರ್ಹಿಷಿ ದರ್ಭೇ ಸ್ಥಿತ್ವಾ ಮಧ್ವಾ ಮಧುರೇಣ ರಸೇನ ಯಜ್ಞಂ ಮಿಮಿಕ್ಷತಂ । ಸೇಕ್ತು-ಮಿಚ್ಛತಂ । ಹೇ ಅಶ್ವಿನಾ ವಾಂ ಯುವಯೋರ್ದರ್ಥಂ ಸುತಸೋಮಾ ಅಭಿಷುತಸೋಮಯುಕ್ತಾ ಅಭಿದ್ಯವೋ ದ್ಯೋತಮಾನಾಭಿಗತದೀಪ್ತಯಃ ಕಣ್ವಾಸೋ ಯುವಾಮುಭೌ ಹವಂತೇ । ಆಹ್ವಯಂತೇ ॥ ತ್ರಿಷಧಸ್ಥೇ । ತ್ರಿಷು ಸ್ಥಾನೇಷು ಸಹ ತಿಷ್ಠತೀತಿ ತ್ರಿಷಧಸ್ಥಂ ಬರ್ಹಿಃ । ಸುಪಿ ಸ್ಥ ಇತಿ ಕಪ್ರತ್ಯಯಃ । ಆತೋ ಲೋಪಇಟಿ ಚೇತ್ಯಾಕಾರಲೋಪಃ । ಸಧ ಮಾದಸ್ಥಯೋಶ್ಛಂದಸಿ । ಪಾ. ೬-೩-೯೬ । ಇತಿ ಸಹಶಬ್ದಸ್ಯ ಸಧಾದೇಶಃ । ಮಧ್ವಾ । ಆಗಮಾನುಶಾಸನಸ್ಯಾನಿತ್ಯತ್ವಾನ್ನುಮಭಾವಃ ।ಜಸಿ ಚೇತ್ಯತ್ರ ಜಸಾದಿಷು ಛಂದಸಿ ವಾವಚನೇನ । ಪಾ.೭-೩-೧೦೯-೧ । ಇತಿ ವಚನಾನ್ನಾಭಾವಾಭಾವಶ್ಚ । ಮಿಮಿಕ್ಷತಂ। ಮಿಹ ಸೇಚನೇ । ಸನ್ಯೇಕಾಚೆ ಇತೀಟ್ಪ್ರತಿಷೇಧಃ । ಹಲಂತಾಚ್ಚೇತಿ ಸನಃ ಕಿತ್ತ್ವಾಲ್ಲಘೂಪಧಗುಣಾಭಾವಃ । ಅಭ್ಯಾಸಹಲಾದಿಶೇಷೌ । ಧಷ್ವ-ಕುತ್ವಷಷ್ಟ್ವಾನಿ । ಸುತಸೋಮಾಃ । ಸುತಃ ಸೋಮೋ ಯೈಃ । ಬಹುವ್ರೀಹಿಸ್ವರಃ । ಅಭಿದ್ಯವಃ । ದ್ಯುರಿತಿ-ಹರ್ನಾಮ । ತೇನ ತತ್ಸಂಬಂಧೀ ಪ್ರಕಾಶೋ ಲಕ್ಷ್ಯತೇ । ಅಭಿಗತಾ ದ್ಯುಂ । ಅತ್ಯಾದಯಃ ಕ್ರಾಂತಾದ್ಯರ್ಥೇ ದ್ವಿತೀಯೆಯಾ । ಮ. ೨-೨-೧೮-೪ । ಇತಿ ಸಮಾಸಃ । ಅವ್ಯಯೆಪೂರ್ವಪದಪ್ರಕೃತಿಸ್ವರತ್ವಂ ॥

॥ ಪ್ರತಿಪದಾರ್ಥ ॥

ವಿಶ್ವವೇದಸಾ-ಸರ್ವಜ್ಞರಾದ ಅಶ್ವಿನೀದೇವತೆಗಳೇ ।**ತ್ರಿಷಧಸ್ಥೇ**-ಮೂರು ಸ್ಥಾನಗಳಲ್ಲಿ ಹಾಕಿರತಕ್ಕ। **ಬರ್ಹಿಷಿ**—ದರ್ಭಾಸನಗಳ ಮೇಲೆ ಕುಳಿತು । **ಮಧ್ವಾ**—ಮಧುರವಾದ ರಸದಿಂದ । **ಯಜ್ಞಂ**—ಯಜ್ಞವನ್ನು । **ಮಿಮಿಕ್ಷತಂ**—ಪ್ರೋಕ್ಷಿಸಲಿಚ್ಛಿಸಿರಿ । **ಅಶ್ವಿನಾ**—ಎಲೈ ಅಶ್ವಿನೀದೇವತೆಗಳೇ । **ವಾಂ**—ನಿಮಗೋಸ್ಕರ । **ಸುತ-ಸೋಮಾಃ**—ಹಿಂಡಿದ ಸೋಮರಸಯುಕ್ತರಾಗಿಯೂ । **ಅಭಿದ್ಯವಃ**—ಪ್ರಕಾಶಯುತರಾಗಿಯೂ ಇರುವ । **ಕಣ್ವಾಸಃ**—ಕಣ್ವಪುತ್ರರು ಅಥವಾ ಮೇಧಾವಿಗಳಾದ ಋತ್ವಿಕ್ಕುಗಳು । **ಯುವಾಂ**—ನಿಮ್ಮಿಬ್ಬರನ್ನೂ । **ಹವಂತೇ**—ಪ್ರಾರ್ಥಿಸಿ ಕರೆಯುತ್ತಾರೆ.

॥ ಭಾವಾರ್ಥ ॥

ಸರ್ವಜ್ಞರಾದ ಅಶ್ವಿನೀದೇವತೆಗಳೇ, ನೀವು ಕುಳಿತುಕೊಳ್ಳುವುದಕ್ಕಾಗಿ ಮೂರು ಸ್ಥಾನಗಳಲ್ಲಿ ಅನುಕ್ರಮವಾಗಿ ದರ್ಭಾಸನಗಳು ಸಿದ್ಧವಾಗಿವೆ. ಅವುಗಳ ಮೇಲೆ ಕುಳಿತು ಮಧುರವಾದ ರಸದಿಂದ ಯಜ್ಞವನ್ನು ಪ್ರೋಕ್ಷಿಸಲಿಚ್ಛಿಸಿರಿ. ಎಲೈ ದೇವತೆಗಳೇ, ಪ್ರಕಾಶಯುತರಾದ ಕಣ್ವಪುತ್ರರು ಅಥವಾ ಮೇಧಾವಿಗಳಾದ ಋತ್ವಿಕ್ಕುಗಳು ಹಿಂಡಿದ ಸೋಮರಸವನ್ನು ಹಿಡಿದುಕೊಂಡು ನಿಮ್ಮಿಬ್ಬರನ್ನೂ ಪ್ರಾರ್ಥಿಸಿ ಕರೆಯುತ್ತಾರೆ.

English Translation.

Omniscient Aswins, sitting on the thrice heaped kusa grass, sprinkle the sacrifice with the sweet (soma) juice; the bright Kanwas having extracted the soma juice are invoking you.

॥ ವಿಶೇಷ ವಿಷಯಗಳು ॥

ತ್ರಿಷಧಸ್ಥೇ—**ಕಕ್ಷ್ಯಾತ್ರಯೆರೂಪೇಣಾಸ್ತೀರ್ಣತಯೌ ತ್ರಿಷು ಸ್ಥಾನೇಷ್ವವಸ್ಥಿತೇ ಬರ್ಹಿಷಿ ದರ್ಭೇ**॥ ಕುಳಿತುಕೊಳ್ಳುವ ದರ್ಭಾಸನವು ಮೆತ್ತಗಿರುವುದಕ್ಕಾಗಿ ದರ್ಭೆಗಳನ್ನು ಒಂದು ಪದರದ ಮೇಲೆ ಮತ್ತೊಂದರಂತೆ ಮೂರಾವರ್ತಿ ಹರಡಿ ಸಿದ್ಧಪಡಿಸಿರುವ ದರ್ಭಾಸನದಲ್ಲಿ ಎಂದರ್ಥವು.

ವಿಶ್ವವೇದಸಾ—ಎಲ್ಲವನ್ನೂ ತಿಳಿದವರು, ಸರ್ವಜ್ಞರು, Omniscient

ಮಧ್ವಾ—ಮಧುಶಬ್ದಕ್ಕೆ ಜೇನುತುಪ್ಪವೆಂದರ್ಥವಿದ್ದರೂ ಋಗ್ವೇದದಲ್ಲಿ ಮಧುಶಬ್ದವು ಸಾಧಾರಣವಾಗಿ ಸೋಮರಸಕ್ಕೆ ವಿಶೇಷಣಪದವಾಗಿ ಉಪಯೋಗಿಸಲ್ಪಡುವುದು. ಇಂತಹ ಸಂದರ್ಭದಲ್ಲಿ ಮಧುಶಬ್ದಕ್ಕೆ ಮಧುವಿನಂತೆ ಸಿಹಿಯಾದ, ರುಚಿಕರವಾದ ಎಂದರ್ಥವನ್ನು ಹೇಳಬೇಕು. ಅನೇಕ ಕಡೆ ವಿಶೇಷ್ಯವಾದ ಸೋಮ ಶಬ್ದವಿಲ್ಲದೆ ಮಧುಶಬ್ದವನ್ನೇ ಸೋಮಶಬ್ದವನ್ನು ಸೂಚಿಸುವುದಕ್ಕಾಗಿ ಪ್ರಯೋಗಿಸಲ್ಪಡುವುದು. ಈ ಋಕ್ಕಿನಲ್ಲಿಯೂ ಹಾಗೆಯೇ ಇದೆ.

ಸುತಸೋಮಾಃ—ಸೋಮರಸವನ್ನು ಹಿಂಡಿ ಸಿದ್ಧಪಡಿಸಿರುವ.

ಅಭಿದ್ಯವಃ—ಅಭಿಗತದೀಪ್ತಯಃ । ಪ್ರಕಾಶಮಾನರಾದ ಎಂದರೆ ಪ್ರಸಿದ್ಧರಾದ.

॥ ವ್ಯಾಕರಣಪ್ರಕ್ರಿಯಾ ॥

ತ್ರಿಷಧಸ್ಥೇ—**ತ್ರಿಷು**=ಮೂರು ಸ್ಥಾನಗಳಲ್ಲಿ ಸಹ=ಒಟ್ಟಿಗೆ **ತಿಷ್ಠತಿ**=ಇರುತ್ತೆ ಎಂದು ವಿಗ್ರಹ. **ತ್ರಿಸದಸ್ಥಂ** ಎಂದರೆ ಬರ್ಹಿ (ದರ್ಭೆ) ಎಂದರ್ಥ. **ಸುಪಿಸ್ಥಃ** (ಪಾ. ಸೂ. ೩-೨-೪) ಸುಬಂತವು ಉಪಪದವಾಗಿರುವಾಗ ಸ್ಥಾ ಧಾತುವಿನ ಮುಂದೆ ಕ ಪ್ರತ್ಯಯ ಬರುತ್ತೆ ಎಂದು ಸ್ಥಾ ಧಾತುವಿನ ಮುಂದೆ ಕಪ್ರತ್ಯಯ ತ್ರಿ+ಸಹ+ಸ್ಥಾ+ಅ. **ಆತೋಲೋಪಇಟಿಚ** (ಪಾ. ಸೂ. ೬-೪-೬೪) ಕಿತ್ ಅಥವಾ ಙಿತ್ ಆದ ಅಜಾದ್ಯಾರ್ಧಧಾತುಕ ಪರದಲ್ಲಿದ್ದರೂ ಇಡಾಗಮ ಪರದಲ್ಲಿದ್ದರೂ ಆಕಾರಕ್ಕೆ ಲೋಪ ಬರುತ್ತೆ ಎಂದು ಸ್ಥಾಧಾತುವಿನ ಆಗೆ ಲೋಪ. **ಸಧಮಾದ ಸ್ಥಯೋಶ್ಛಂದಸಿ** (ಪಾ. ಸೂ. ೬-೩-೯೬) ವೇದದಲ್ಲಿ ಮಾದ ಅಥವಾ ಸ್ಥ ಈ ಉತ್ತರಪದಗಳು ಪರದಲ್ಲಿದ್ದರೆ **ಸಹ** ಶಬ್ದಕ್ಕೆ ಸಧ ಆದೇಶ ಬರುತ್ತೆ. ಎಂದು ಸಹ ಶಬ್ದಕ್ಕೆ ಸಧ ಆದೇಶ. ತ್ರಿ+ಸಧ+ಸ್ಥ್+ಅ, **ಪೂರ್ವಪದಾತ್** (ಪಾ. ಸೂ. ೮-೩-೧೦೬) ಪೂರ್ವಪದದಲ್ಲಿರುವ ಇಣ್‌ಕವರ್ಗಗಳ ಮುಂದೆ ಇರುವ ಷಕಾರಕ್ಕೆ ಷಕಾರ ಬರುತ್ತೆ ಎಂದು ತ್ರಿಶಬ್ದದ ಇಕಾರದ ಮುಂದೆ ಇರುವ ಸಧಶಬ್ದದ ಸಕಾರಕ್ಕೆ ಷಕಾರ. ತ್ರಿಷಧಸ್ಥಮ್ ಎಂದಾಗುತ್ತೆ.

ಮಧ್ವಾ—**ಥಲಿಪಾಟಿ** ಇತ್ಯಾದಿ ಉಣಾದಿಸೂತ್ರದಿಂದ ಮಧುಶಬ್ದವು ನಿಷ್ಪನ್ನವಾಗುತ್ತೆ. ಅದು ನಿತ್ಯ ನಪುಂಸಕಲಿಂಗ. ಇದರ ಮುಂದೆ ತೃತೀಯಾ ಏಕವಚನ ಟಾಪ್ರತ್ಯಯ. **ಇಕೋಚಿ ವಿಭಕ್ತೌ** (ಪಾ. ಸೂ. ೭-೧-೭೩) ಅಜಾದಿ ವಿಭಕ್ತಿಪರದಲ್ಲಿರುವಾಗ ಇ. ಉ. ಋಗಳನ್ನು ಕೊನೆಯಲ್ಲಿ ಹೊಂದಿರುವ ಅಂಗಕ್ಕೆ ನುಮ್ ಆಗಮ ಬರುತ್ತೆ. ಎಂದು ನುಮಾಗಮವು ನ್ಯಾಯವಾಗಿ ಬರಬೇಕಾಗುತ್ತೆ. ಅದು **ಆಗಮಶಾಸ್ತ್ರಮನಿತ್ಯಮ್** (ಪರಿಭಾ ೯೬) ಆಗಮಶಾಸ್ತ್ರ ಅನಿತ್ಯವಾದುದು ಎಂದರೆ ನಿಯತವಾಗಿ ಎಲ್ಲ ಕಡೆಗಳಲ್ಲಿಯೂ ಪ್ರವರ್ತಿಸದು ಎಂಬುದರಿಂದ ಇಲ್ಲಿ ಬರುವುದಿಲ್ಲ **ಆಙೋ ನಾಸ್ತ್ರಿಯಾಮ್** (ಪಾ. ಸೂ ೭-೩-೧೨೦) ಘಿ ಸಂಜ್ಞಕದ ಮುಂದೆ ಇರುವ ಟಾಗೆ ನಾ ಆದೇಶ ಬರುತ್ತೆ. ಇದು ಸ್ತ್ರೀಲಿಂಗದಲ್ಲಿ ಬರುವುದಿಲ್ಲ ಎಂಬುದರಿಂದ ನಾ ಆದೇಶವು

न्यायवಾಗಿ ಬರಬೇಕು. ಆದರೂ **ಜಸಿಚಿ** (ಪಾ. ಸೂ. ೭-೩-೮೬) **ಈ ಸೂತ್ರದಲ್ಲಿ ಜಸಾದಿಷು ಛಂದಸಿ. ವಾವಚನಂಪ್ರಾಙ್ ಣೌಚ್ಚ್ಯುಪಧಾಯಾಃ** ಎಂದು ವಚನವಿದೆ, ಇಲ್ಲಿ ಆದಿಶಬ್ದಪ್ರಭೃತ್ಯರ್ಥಕವಲ್ಲ ಪ್ರಕಾರಾರ್ಥಕ, ಪ್ರಕಾರ ಎಂದರೆ ಸಾದೃಶ್ಯ, ಏಕಪ್ರಕರಣೋಚ್ಚರಿತತ್ವನಿಬಂಧನಂ ಸಾದೃಶ್ಯಮಿಹ ವಿವಕ್ಷಿತಂ, **ಣೌಚ್ಚ್ಯುಪಧಾಯಾ ಹ್ರಸ್ವಃ** (ಪಾ. ಸೂ. ೭-೪-೧) ಎಂಬಲ್ಲಿಯವರಿಗೆ ಈ ಪ್ರಕರಣ ವಿಹಿತಕಾರ್ಯಗಳು ಛಂದಸ್ಸಿನಲ್ಲಿ ವಿಕಲ್ಪವಾಗಿ ಬರುವುವು ಎಂಬುದರಿಂದ ಇಲ್ಲಿ ನಾ ಆದೇಶ ಬರುವುದಿಲ್ಲ. ಯಣಾದೇಶ ಬಂದು ಮಧ್ವಾ ಎಂದಾಗುತ್ತೆ.

ಮಿಮಿಕ್ಷತಂ—ಮಿಹ ಸೇಚನೇ ಧಾತು. **ಧಾತೋಃ ಕರ್ಮಣಃ-,**(ಪಾ. ಸೂ. ೩-೧-೭) ಎಂದು **ಸನ್. ಏಕಾಚೋ ಉಪದೇಶೇಽನುದಾತ್ತಾತ್** (ಪಾ. ಸೂ. ೭-೨-೧೦) ಉಪದೇಶದಲ್ಲಿ ಒಂದು ಅಚ್ಚನ್ನು ಹೊಂದಿರುವುದೂ, ಉಪದೇಶದಲ್ಲಿ ಅನುದಾತ್ತವೂ ಆದ ಧಾತುವಿನ ಮುಂದೆ ಇರುವ ವಲಾದಿಯಾದ ಆರ್ಧ ಧಾತುಕಕ್ಕೆ ಇಟ್ ಆಗಮ ಬುರುವುದಿಲ್ಲ. ಎಂದು ಸೂತ್ರಾರ್ಥ. ಪಾಣಿನ್ಯಾದಿ ಮೂರು ಋಷಿಗಳ ಅದ್ಯೋಚ್ಚಾರಣೆಗೆ ಉಪದೇಶ ಎನ್ನುವರು. ಮಿಹ್ ಇಲ್ಲಿ ಒಂದೇ ಅಚ್ಚಿದೆ. **ವಸತಿರ್ದಹ್ ದಿಹಿ ದುಹೋನಹ್ ಮಿಹ್** ಎಂದು ಅನುದಾತ್ತೋಪದೇಶದಲ್ಲಿ ಮಿಹ್ ಧಾತು ಪಠಿತವಾಗಿದೆ. ಆದ್ದರಿಂದ ಎಂಬ ವಲಾದಿಯಾದ ಆರ್ಧಧಾತುಕಕ್ಕೆ ಇಟ್ ಬರುವುದಿಲ್ಲ. **ಹಲನ್ತಾಚ್ಚೇ** (ಪಾ. ಸೂ. ೧-೨-೧೦) ಇ ಉ ಋ ಳಗಳ ಹತ್ತಿರದಲ್ಲಿರುವ ವ್ಯಂಜನದ ಮುಂದೆ ಇರುವ ಝಲಾದಿಯಾದ ಸನ್ಪ್ರತ್ಯಯವು ಕಿತ್ ಆಗುತ್ತೆ ಎಂಬುದರಿಂದ ಸನ್ ಕಿತ್ತಾಗುತ್ತದೆ. **ಕ್ಡಿತಿಚ** ಎಂದು ನಿಷೇಧಬರುವುದರಿಂದ **ಪುಗಂತಲಘೂಪಧಸ್ಯಚ** ಎಂದು ಲಘೂಪಧಗುಣ ಬರುವುದಿಲ್ಲ. ದ್ವಿತ್ವ ಆ ಮಿಹ್+ಮಿಹ್ ಸ, **ಹಲಾದಿಃಶೇಷಃ** ಎಂದು ಅಭ್ಯಾಸದಲ್ಲಿರುವ ಹ್‌ಗೆ ಲೋಪ, **ಹೋಢಃ** (ಪಾ. ಸೂ. ೮-೨-೩೧) ಝಲ್ ಪರದಲ್ಲಿರುವಾಗಲೂ **ಪದಾಂತ** ವಿಷಯದಲ್ಲಿಯೂ ಸಹ ಹ್‌ಗೆ ಢ್ ಬರುತ್ತೆ ಎಂದು ಢಕಾರದೇಶ. **ಷಢೋಃಕಸ್ಸಿ** (ಪಾ. ಸೂ. ೮-೨-೪೧) ಸಕಾರ ಪರದಲ್ಲಿರುವಾಗ ಷಕಾರ ಢಕಾರಗಳಿಗೆ ಕಕಾರಬರುತ್ತೆ ಎಂದು ಕಕಾರವು ಢಕಾರಕ್ಕೆ ಬರುತ್ತೆ. **ಆದೇಶಪ್ರತ್ಯಯಯೋಃ** (ಪಾ. ಸೂ. ೮-೩-೫೯) ಎಂದು ಸಕಾರಕ್ಕೆ ಷಕಾರ **ಮಿಮಿಕ್ಷತ** ಎಂದಾಗುತ್ತೆ.

ಸುತಸೋಮಃ—ಸುತಃ ಸೋಮಃ ಯೈಸ್ತೇ ಯಾರಿಂದ ಸೋಮರಸವು ಸುರಿಸಲ್ಪಟ್ಟಿತೋ ಅವರು ಬಹುವ್ರೀಹಿಯಾದುದರಿಂದ ಪೂರ್ವಪದಪ್ರಕೃತಿಸ್ವರ ಬರುತ್ತೆ.

ಅಭಿದ್ಯವಃ— ದ್ಯು ಎಂದು ಅಹಸ್ಸಿಗೆ ಹೆಸರು. ರಾತ್ರಿಯಲ್ಲಿ ಕತ್ತಲೆಯೂ ಅಹಸ್ಸಿನಲ್ಲಿ ಪ್ರಕಾಶವೂ ನಿಯತವು. ಈ ಅಹಸ್ಸಂಬಂಧವನ್ನು ಮುನ್ನಿಟ್ಟುಕೊಂಡು ದ್ಯು ಶಬ್ದವು ಲಕ್ಷಣಾವೃತ್ತಿಯಿಂದ ಅಹಸ್ಸಂಬಂಧಿಯಾದ ಪ್ರಕಾಶವನ್ನು ಬೋಧಿಸುತ್ತೆ. ಅಭಿಗತಾಃ ದ್ಯುಂ, ಎಂದರೆ ಪ್ರಕಾಶವನ್ನು ಹೊಂದಿರುವವರಾದ ಎಂದರ್ಥ. ಇಲ್ಲಿ **ಅತ್ಯಾದಯಃ ಕ್ರಾಂತಾದ್ಯರ್ಥೇ ದ್ವಿತೀಯಯಾ** (ಪಾ. ಸೂ. ೨-೨-೧೮-೪) ಅತಿ ಮೊದಲಾದ ಸುಬಂತಗಳು ಕ್ರಾಂತ ಮೊದಲಾದ ಅರ್ಥಗಳಲ್ಲಿ ದ್ವಿತೀಯಾನ್ತ ಸುಬಂತದೊಂದಿಗೆ ಸಮಾಸವನ್ನು ಹೊಂದುವುವು. ಎಂಬುದರಿಂದ ಸಮಾಸ. ಪೂರ್ವಪದವಾದ ಅಭಿ ಎಂಬುದು ಅವ್ಯಯ, **ತತ್ಪುರುಷೇತುಲ್ಯಾರ್ಥ**, ಎಂದು ಅವ್ಯಯ ಪೂರ್ವಪದಪ್ರಕೃತಿಸ್ವರವೇ ಬರುತ್ತೆ ॥ ೪ ॥

ಸಂಹಿತಾಪಾಠಃ

ಯಾಭಿಃ ಕಣ್ವ ಮಭಿಷ್ಟಿಭಿಃ ಪ್ರಾವತಂ ಯುವಮಶ್ವಿನಾ ।
ತಾಭಿಃ ಷ್ವ೧ಸ್ಮಾ ಅವತಂ ಶುಭಸ್ಪತೀ ಪಾತಂ ಸೋಮ-
ಮೃತಾವೃಧಾ ॥ ೫ ॥

ಪದಪಾಠಃ

ಯಾಭಿಃ । ಕಣ್ವಂ । ಅಭಿಷ್ಟಿಭಿಃ । ಪ್ರ । ಆವತಂ । ಯುವಂ । ಅಶ್ವಿನಾ ।
ತಾಭಿಃ । ಸು । ಅಸ್ಮಾನ್ । ಅವತಂ । ಶುಭಃ । ಪತೀ ಇತಿ । ಪಾತಂ ।
ಸೋಮಂ । ಋತಾವೃಧಾ ॥ ೫ ॥

ಸಾಯಣಭಾಷ್ಯಂ

ಹೇ ಅಶ್ವಿನಾ ಯುವಂ ಯುವಾಮುಭೌ ಯಾಭಿರಭಿಷ್ಟಿಭಿರಪೇಕ್ಷಿತಾಭೀ ರಕ್ಷಾಭಿಃ ಕಣ್ವಂ ಮಹರ್ಷಿಂ ಪ್ರಾವತಂ ರಕ್ಷಿತವಂತೌ ಹೇ ಶುಭಸ್ಪತೀ ಶೋಭನಸ್ಯ ಕರ್ಮಣಃ ಪಾಲಕೌ ತಾಭೀ ರಕ್ಷಾಭಿ-ರಸ್ಮಾನನುಷ್ಠಾತೄನ್ಸ್ತ್ವವತಂ । ಸುಷ್ಠು ರಕ್ಷತಂ । ಸ್ಪಷ್ಟಮನ್ಯತ್ ॥ ಅಭಿಷ್ಟಿಭಿಃ । ಅಭಿಮುಖ್ಯೇನೇಷ್ಯಂತ ಇತ್ಯಭಿಷ್ಟಯಃ ಫಲಾನಿ । ಇಷು ಇಚ್ಛಾಯಾಂ । ಕರ್ಮಣಿ ಕ್ತಿನಿ ತಿತುತ್ರೇತ್ಯಾದಿನೇಟ್ಪ್ರತಿಷೇಧಃ । ಏಮನಾದಿಷು ಚ್ಛಂದಸಿ ಪರರೂಪಂ ವಕ್ತವ್ಯಂ । ಪಾ. ೬-೧-೯೪-೬ । ಇತಿ ಪರರೂಪತ್ವಂ । ತಾದೌ ಚೇತಿ ಗತೇಃ ಪ್ರಕೃತಿಸ್ವರತ್ವಂ । ಉಪಸರ್ಗಾಶ್ಚಾಭಿವರ್ಜಂ । ಫಿ ೪-೧೩ । ಇತ್ಯಭಿರಂತೋದಾತ್ತಃ । ಶುಭಸ್ಪತೀ । ಶುಭ ದೀಪ್ತೌ । ಕ್ವಿಪ್ಚೇತಿ ಕ್ವಿಪ್ । ಷಷ್ಠ್ಯಾಃ ಪತಿಪುತ್ರೇತಿ ವಿಸರ್ಜನೀಯಸ್ಯ ಸತ್ವಂ । ಸುಬಾಮಂತ್ರಿತ ಇತಿ ಷಷ್ಠ್ಯಂತಸ್ಯ ಪರಾಂಗವದ್ಭಾವಾತ್ ಷಷ್ಠ್ಯಮಂತ್ರಿತಸಮುದಾಯಸ್ಯಾಷ್ಟಮಿಕಂ ಸರ್ವಾನುದಾತ್ತತ್ವಂ ॥ ೧ ॥

॥ ಪ್ರತಿಪದಾರ್ಥ ॥

ಶುಭಸ್ಪತೀ—ಪವಿತ್ರಕರ್ಮಗಳ ಅಥವಾ ಧರ್ಮಕಾರ್ಯಗಳ ಪಾಲಕರಾದ । ಅಶ್ವಿನಾ—ಎಲೈ ಅಶ್ವಿನೀ ದೇವತೆಗಳೇ । ಯುವಂ—ನೀವಿಬ್ಬರೂ । ಯಾಭಿಃ—ಯಾವ । ಅಭಿಷ್ಟಿಭಿಃ—ಹಾರೈಸಿದ ರಕ್ಷಣೆಗಳಿಂದ । ಕಣ್ವಂ—ಕಣ್ವಮಹರ್ಷಿಯನ್ನು । ಪ್ರಾವತಂ—ಕಾಪಾಡಿದಿರೋ ।ತಾಭಿಃ—ಅದೇ ರಕ್ಷಣೆಗಳಿಂದ । ಅಸ್ಮಾ—(ಯಜ್ಞಾನುಷ್ಠಾತೃಗಳಾದ) ನಮ್ಮನ್ನು । ಸು ಅವತಂ—ಚೆನ್ನಾಗಿ ಕಾಪಾಡಿರಿ । ಋತಾವೃಧಾ—ಯಜ್ಞದ ಅಥವಾ ಸತ್ಯದ ವರ್ಧಕರಾದ ಅಶ್ವಿನೀದೇವತೆಗಳೇ । ಸೋಮಂ—ಸೋಮರಸವನ್ನು । ಪಾತಂ—ಕುಡಿಯಿರಿ.

॥ ಭಾವಾರ್ಥ ॥

ಪವಿತ್ರಕರ್ಮಗಳಪಾಲಕರಾದ ಎಲೈ ಅಶ್ವಿನೀದೇವತೆಗಳೇ, ನೀವಿಬ್ಬರೂ ಸಹ ಕಣ್ವಮಹರ್ಷಿಯನ್ನು ಅವನು ಅಪೇಕ್ಷಿಸಿದ ಯಾವ ರಕ್ಷಣೆಗಳಿಂದ ಕಾಪಾಡಿದರೋ, ಅದೇ ರಕ್ಷಣೆಗಳಿಂದ ಯಜ್ಞಾನುಷ್ಠಾನವನ್ನು ನೆರವೇರಿಸತಕ್ಕ ನಮ್ಮನ್ನೂ ಚೆನ್ನಾಗಿ ಕಾಪಾಡಿರಿ. ಯಜ್ಞದ ಅಥವಾ ಸತ್ಯದ ವರ್ಧಕರಾದ ಎಲೈ ಅಶ್ವಿನೀದೇವತೆಗಳೇ ಸೋಮರಸವನ್ನು ಕುಡಿಯಿರಿ.

English Translation.

O Aswins, with such protection as you extended to Kanwa protect us also ; cherishers of pious acts, drink, the soma juice.

॥ ವಿಶೇಷ ವಿಷಯಗಳು ॥

ಕಣ್ವಋಷಿಯ ವಂಶಸ್ಥರಾದ ಕಾಣ್ವರು ಅಶ್ವಿನೀದೇವತೆಗಳನ್ನು ಪ್ರಾರ್ಥಿಸುವಾಗ—ತಮ್ಮ ವಂಶಕ್ಕೆ ಮೂಲಪುರುಷನಾದ ಕಣ್ವಋಷಿಯನ್ನು ನೀವು ಹೇಗೆ ಕಾಪಾಡಿದಿರೋ ಆದರಂತೆ ನಮ್ಮನ್ನೂ ಕಾಪಾಡಬೇಕೆಂದು ಬೇಡಿಕೊಳ್ಳುವರು.

ಅಭಿಷ್ಟಿಭಿಃ—ಅಪೇಕ್ಷಿತಾಭೀ ರಕ್ಷಾಭಿಃ । ಅವಶ್ಯಕವಾದ ಅಥವಾ ನಾವು ಅಪೇಕ್ಷಿಸುವ ರಕ್ಷಣೆಗಳಿಂದ ಎಂದರೆ ಶತ್ರುವಿನ ಭಯದಿಂದ ಅಥವಾ ಕ್ರೂರಮೃಗಗಳ ಬಾಧೆಯಿಂದ, ಅಥವಾ ವ್ಯಾಧಿಗಳ ಭಯದಿಂದ ನಮ್ಮನ್ನು ರಕ್ಷಿಸಬೇಕೆಂದು ಅಭಿಪ್ರಾಯವು.

ಶುಭಸ್ಪತೀ—ಈ ಶಬ್ದಗಳು ಅಶ್ವಿನೀದೇವತೆಗಳನ್ನುದ್ದೇಶಿಸಿ ಸ್ತೋತ್ರಮಾಡುವಾಗ ವಿಶೇಷವಾಗಿ ಉಪಯೋಗಿಸಲ್ಪಡುವುದು.

॥ ವ್ಯಾಕರಣಪ್ರಕ್ರಿಯಾ ॥

ಅಭಿಷ್ಟಿಭಿಃ—ಅಭಿ= ಅಭಿಮುಖವಾಗಿ, **ಇಷ್ಯನ್ತೇ**—ಇಚ್ಛಿಸಲ್ಪಡುತ್ತವೆ ಎಂದು ವಿಗ್ರಹ. ಅಭಿಷ್ಟಿ ಎಂದರೆ ಫಲ ಎಂದರ್ಥ. ಇಷು ಇಚ್ಛಾಯಾಂ ಧಾತು. **ಸ್ತ್ರಿಯಾಂಕ್ತಿನ್** (ಪಾ. ಸೂ. ೩-೩-೯೪) ಸ್ತ್ರೀಲಿಂಗದಲ್ಲಿ ಎಲ್ಲಾ ಧಾತುಗಳ ಮುಂದೆಯೂ ಭಾವಾರ್ಥದಲ್ಲಿಯೂ ಕರ್ತೃಭಿನ್ನ ಕಾರಕಾರ್ಥದಲ್ಲಿಯೂ ಸಹ ಕ್ತಿನ್ ಪ್ರತ್ಯಯ ಬರುತ್ತೆ ಎಂದು ಸೂತ್ರಾರ್ಥ. ಇದರಿಂದ ಕರ್ಮ ಎಂಬ ಅರ್ಥದಲ್ಲಿ ಇಷ್ ಧಾತುವಿನ ಮುಂದೆ ಕ್ತಿನ್. ಇಷ್+ತಿ. **ತಿತುತ್ರತಥಸಿಸುಸರಕಸೇಸು ಚ** (ಪಾ. ಸೂ. ೭-೨-೯) ಈ ಹತ್ತು ಕೃತ್ಪ್ರತ್ಯಯಗಳಿಗೆ ಇಟ್ ಆಗಮ ಬರುವುದಿಲ್ಲ ಎಂದು ಇಟ್ಟಿಗೆ ನಿಷೇಧ. **ಏಮನ್ನಾದಿಷು ಛಂದಸಿ ಪರರೂಪಂ ವಕ್ತವ್ಯಮ್** (ಪಾ. ಸೂ. ೬-೧-೯೪-೬) ಛಂದಸ್ಸಿನಲ್ಲಿ ಏಮನ್ ಮೊದಲಾದ ಶಬ್ದಗಳು ಪರದಲ್ಲಿದ್ದರೆ ಪರರೂಪವನ್ನು ಹೇಳಬೇಕು ಎಂದರ್ಥ ಏಮನ್ ಮೊದಲಾದ ಶಬ್ದಗಳಲ್ಲಿ ಇಷ್ಟಿ ಶಬ್ದವನ್ನೂ ಸೇರಿಸಿಕೊಳ್ಳಬೇಕು. ಆದ್ದರಿಂದ ಅಭಿ+ಇಷ್ಟಿ ಎಂದಿರುವಾಗ ಸವರ್ಣ ದೀರ್ಘವನ್ನು ಬಾಧಿಸಿ ಪರರೂಪ ಬಂದರೆ ಎರಡು ಇಕಾರಸ್ಥಾನದಲ್ಲಿ ಪರದಲ್ಲಿರುವ ಇಗೆ ಸದೃಶವಾದ ಇ ಒಂದೇ ಬರುತ್ತೆ. ಕ್ತಿನ್ ಎಂಬುದು ನಿತ್ ಆದ ಕೃತ್ತು. ಆದ್ದರಿಂದ **ತಾದೌಚ ನಿತಿ ಕೃತ್ಯತೌ** (ಪಾ. ಸೂ ೬-೩-೫೦) ತಕಾರಾದಿಯೂ ನಿತ್ತೂ ಆದ ತುಶಬ್ದಭಿನ್ನವಾದ ಕೃತ್ತು ಪರದಲ್ಲಿದ್ದರೆ ಅವ್ಯವಹಿತವಾದ ಗತಿಯು

ಪ್ರಕೃತಿ ಸ್ವರವನ್ನು ಹೊಂದುತ್ತೆ ಎಂದು ಅಭಿಗೆ ಪ್ರಕೃತಿಸ್ವರ ಬರುತ್ತೆ. ಅಭಿಯು **ಉಪಸರ್ಗಾಶ್ಚಾಭಿವರ್ಜಂ** (ಫಿ. ಸೂ. ೮೧) ಎಂದು ಅಂತೋದಾತ್ತ. ಸಮಾಸ ಬಂದಮೇಲೂ ಇದೇ ನಿಲ್ಲುತ್ತೆ.

ಶುಭಸ್ಪತೀ—ಶುಭ ದೀಪ್ತೌ ಧಾತು. **ಕ್ವಿಪ್ ಚ** (ಪಾ.ಸೂ. ೩-೨-೭೬) ಎಲ್ಲಾ ಧಾತುಗಳ ಮುಂದೆಯೂ ಉಪಪದವಿದ್ದರೂ ಇಲ್ಲದಿದ್ದರೂ ಲೋಕದಲ್ಲಿಯೂ ವೇದದಲ್ಲಿಯೂ ಸಹ ಕ್ವಿಪ್ ಪ್ರತ್ಯಯ ಬರುತ್ತೆ ಎಂದು ಕ್ವಿಪ್ ಶುಭಃ+ಪತೀ ಎಂಬಲ್ಲಿ **ಷಷ್ಠ್ಯಾಃ ಪತಿಪುತ್ರ ಪೃಷ್ಠಪಾರ ಪದಪಯಸ್ಪೋಷೇಷು** (ಪಾ. ಸೂ. ೮-೩-೫೩) ಪತಿ ಮೊದಲಾದ ಶಬ್ದಗಳುಪರದಲ್ಲಿದ್ದರೆ ಷಷ್ಠೀವಿಭಕ್ತಿಯ ವಿಸರ್ಗಕ್ಕೆ ಸಕಾರಾದೇಶ ಬರುತ್ತೆ ಎಂದು ವಿಸರ್ಗಕ್ಕೆ **ಸಕಾರಾದೇಶ. ಸುಬಾಮನ್ತ್ರಿತೇಪರಾಙ್ಗವತ್ಸ್ವರೇ** (ಪಾ. ಸೂ. ೨-೧-೨) ಸ್ವರವನ್ನು ಮಾಡುವಾಗ ಆಮನ್ತ್ರಿತವು ಪರದ ಲ್ಲಿದ್ದರೆ ಸುಬಂತವು ಪರದಲ್ಲಿರುವ ಪದಕ್ಕೆ ಅಂಗವಾದಂತೆ ಆಗುತ್ತೆ ಎಂದು ಶುಭಃ ಎಂಬುದು ಪತೀ ಎಂಬುದಕ್ಕೆ ಅಂಗವಾದಂತೆ ಆಗಿ ಈ ಎರಡೂ ಸೇರಿ ಒಂದೇ ಪದವೆಂಬ ಭಾವನೆಯು ಸ್ವರವನ್ನು ಮಾಡುವಾಗ ಇರುತ್ತೆ. ಸಂಬೋಧನ ಪ್ರಥಮಾವಿಭಕ್ತ್ಯಂತಕ್ಕೆ ಆಮನ್ತ್ರಿತ ಎಂದು ಎನ್ನುವರು. **ಆಮನ್ತ್ರಿತಸ್ಯ ಚ** (ಪಾ. ಸೂ. ೮-೧-೧೯) ಎಂಬುದರಿಂದ ಎರಡಕ್ಕೂ ಸರ್ವಾನುದಾತ್ತ ಬರುತ್ತೆ ॥ ೫ ॥

॥ ಸಂಹಿತಾಪಾಠಃ ॥

ಸುದಾಸೇ ದಸ್ರಾ ವಸು ಬಿಭ್ರತಾ ರಥೇ ಪೃಕ್ಷೋ ವಹತಮಶ್ವಿನಾ ।
ರಯಿಂ ಸಮುದ್ರಾದುತ ವಾ ದಿವಸ್ಪರ್ಯಸ್ಮೇ ಧತ್ತಂ ಪುರುಸ್ಪೃಹಂ ॥

ಪದಪಾಠಃ

ಸುಽದಾಸೇ । ದಸ್ರಾ । ವಸು । ಬಿಭ್ರತಾ । ರಥೇ । ಪೃಕ್ಷಃ । ವಹತಂ । ಅಶ್ವಿನಾ ॥
ರಯಿಂ । ಸಮುದ್ರಾತ್ । ಉತ । ವಾ । ದಿವಃ । ಪರಿ । ಅಸ್ಮೇ ಇತಿ । ಧತ್ತಂ ॥
ಪುರುಸ್ಪೃಹಂ ॥ ೬ ॥

॥ ಸಾಯಣಭಾಷ್ಯಂ ॥

ಹೇ ದಸ್ರಾ ದರ್ಶನೀಯಾವಶ್ವಿನೌ ಸುದಾಸೇ ಶೋಭನದಾನಯುಕ್ತಾಯ ರಾಜ್ಞೇ ಪಿಜವನ-ಪುತ್ರಾಯ ರಥೇ ವಸು ಬಿಭ್ರತಾ ಯುವಾಂ ಪೃಕ್ಷೋಽನ್ನಂ ವಹತಂ । ಪ್ರಾಪಿತವಂತೌ । ಸಮುದ್ರಾದಂತರಿಕ್ಷಾತ್ । ಸಮುದ್ರಮಿತ್ಯಂತರಿಕ್ಷನಾಮ । ಸಮುದ್ರೋಽಧ್ವರಮಿತಿ ತನ್ನಾಮಸು ಪಾಠಾತ್ । ಉತ ವಾ ದಿವಸ್ಪರಿ ಅಥವಾ ಸ್ವರ್ಗಾತ್ಪರ್ಯಾಹೃತ್ಯ ಪುರುಸ್ಪೃಹಂ ಬಹುಭಿಃ ಸ್ಪೃಹಣೀಯಂ ರಯಿಂ ಧನಮಸ್ಮೇ ಧತ್ತಂ । ಅಸ್ಮಾಸು ಸ್ಥಾಪಯತಂ ॥ ಸುಷ್ಠು ದದಾತೀತಿ ಸುದಾಃ । ಅಸುನಿ ಕೃದುತ್ತರಪದಪ್ರಕೃತಿಸ್ವರತ್ವಂ ।

ದಿವಸ್ಪರಿ । ಪಂಚಮ್ಯಾಃ ಪರಾವಧ್ಯರ್ಥೇ । ಪಾ. ೮-೩-೫೧ । ಇತಿ ವಿಸರ್ಜನೀಯಸ್ಯ ಸತ್ವಂ । ಪುರುಸ್ಪೃಹಂ । ಸ್ಪೃಹ ಈಪ್ಸಾಯಾಂ । ಚುರಾದಿರದಂತಃ । ಪುರುಭಿಃ ಸ್ಪೃಹ್ಯತೇ ಇತಿ ಪುರುಸ್ಪೃಹಃ । ಕರ್ಮಣಿ ಘಞ್ । ಅತೋ ಲೋಪಸ್ಯ ಸ್ಥಾನಿವತ್ತ್ವಾಲ್ಲಘೂಪಧಗುಣಾಭಾವಃ । ಞ್ನಿತ್ಸ್ವರೇಣೋತ್ತರಪದಪ್ರಕೃತಿಸ್ವರೇಣೋತ್ತರಪದಸ್ಯಾದ್ಯುದಾತ್ತತ್ವೇ ಕೃದುತ್ತರಪದಪ್ರಕೃತಿಸ್ವರೇಣ ತದೇವ ಶಿಷ್ಯತೇ ॥

ಪ್ರತಿಪದಾರ್ಥ

ದಸ್ರಾ—ಸುಂದರರೂಪರಾದ ಅಶ್ವಿನೀದೇವತೆಗಳೇ । ಸುದಾಸೇ—ಶ್ರೇಷ್ಠವಾದ ದಾನಯುಕ್ತನಾದ (ಮತ್ತು ಪಿಜವನ ಪುತ್ರನಾದ) ದೊರೆಗೆ । ರಥೇ—ರಥದಲ್ಲಿ । ವಸು—ಧನವನ್ನು । ಬಿಭ್ರತಾ—ಹೊತ್ತುಕೊಂಡು ಬಂದ ನೀವು । ಪೈಕ್ಷಃ—(ಪ್ರಭೂತವಾದ) ಅನ್ನವನ್ನು । ವಹತಂ—ಒದಗಿಸಿದಿರಿ । ಸಮುದ್ರಾತ್—ಅಂತರಿಕ್ಷದಿಂದಾಗಲಿ ಉತ ವಾ—ಅಥವಾ । ದಿವಸ್ಪರಿ—ಸ್ವರ್ಗದಿಂದಾಗಲಿ (ತೆಗೆದುಕೊಂಡು ಬಂದು) । ಪುರುಸ್ಪೃಹಂ—ಬಹುಜನರಿಂದ ಹಾರೈಸಲ್ಪಡುವ । ರಯಿಂ—ಧನವನ್ನು । ಅಸ್ಮೇ—ನಮ್ಮಲ್ಲಿ । ಧತ್ತಂ—ಸ್ಥಾಪಿಸಿರಿ (ನಮಗೂ ಒದಗಿಸಿರಿ)

॥ ಭಾವಾರ್ಥ ॥

ಎಲೈ ದರ್ಶನೀಯರೂಪರಾದ ಅಶ್ವಿನೀದೇವತೆಗಳೇ, ಶ್ರೇಷ್ಠವಾದ ಮತ್ತು ದಾನಿಯಾದ ಪಿಜವನ ಪುತ್ರನಾದ ಸುದಾಸನೆಂಬ ದೊರೆಗೆ ನೀವು ರಥದಲ್ಲಿ ಧನವನ್ನು ಹೊತ್ತುಕೊಂಡು ಬಂದು ಪ್ರಭೂತವಾಗಿ ಅನ್ನವನ್ನು ಒದಗಿಸಿದಿರಿ. ಅದರಂತೆಯೇ ಅಂತರಿಕ್ಷದಿಂದಾಗಲಿ ಅಥವಾ ಸ್ವರ್ಗದಿಂದಾಗಲಿ ನಮಗೂ ಸಹ ಬಹುಜನಗಳು ಹಾರೈಸುವ ಧನವನ್ನು ತಂದು ಒದಗಿಸಿರಿ.

English Translation.

Good-looking Aswins, you brought in your car abundant food to Sudas; In the same manner bring us riches which many covet whether from the sky or from heaven beyond.

॥ ವಿಶೇಷ ವಿಷಯಗಳು ॥

ಸುದಾಸೇ—ಸುದಾಸನೆಂಬುವನು ಪಿಜವನನೆಂಬ ಪ್ರಸಿದ್ಧನಾದ ಒಬ್ಬ ರಾಜನ ಪುತ್ರನು. ವಿಷ್ಣು ಪುರಾಣದಲ್ಲಿ ಸುದಾಸನೆಂಬ ರಾಜನು ಸೂರ್ಯವಂಶದಲ್ಲಿ ಒಬ್ಬನಿದ್ದನೆಂದೂ, ಅದೇ ಹೆಸರಿನ ಮತ್ತೊಬ್ಬ ರಾಜನು ಚಂದ್ರವಂಶದಲ್ಲಿ ಒಬ್ಬನಿದ್ದನೆಂದೂ, ಅದೇ ಹೆಸರಿನ ಮತ್ತೊಬ್ಬ ರಾಜನು ಚಂದ್ರವಂಶದಲ್ಲಿ ದಿವೋದಾಸನೆಂಬ ರಾಜನ ಪುತ್ರನಾಗಿದ್ದನೆಂದೂ ವಿವರಣೆ ಇದೆ. ದಿವೋದಾಸನ ಹೆಸರು ಋಗ್ವೇದದಲ್ಲಿ ಉಕ್ತವಾಗಿರುವುದು.

ಪೈಕ್ಷಃ—ಅಂಘಃ ವಾಜಃ ಮೊದಲಾದ ಇಪ್ಪತ್ತೆಂಟು ಅನ್ನವಾಚಕಶಬ್ದಗಳ ಮಧ್ಯದಲ್ಲಿ ಪೃಕ್ಷಃ ಎಂಬ ಶಬ್ದವು ಪಠಿತವಾಗಿರುವುದರಿಂದ (ನಿ. ೩-೯) ಪೃಕ್ಷಶಬ್ದಕ್ಕೆ ಅನ್ನ ಅಥವಾ ಆಹಾರವೆಂದರ್ಥವು.

ಸಮುದ್ರಾತ್—ಅಂಬರಂ ವಿಯತ್ ಮೊದಲಾದ ಹದಿನಾರು ಅಂತರಿಕ್ಷನಾಮಗಳ ಮಧ್ಯದಲ್ಲಿ ಸಮುದ್ರಃ ಎಂಬ ಶಬ್ದವು ಪಠಿತವಾಗಿರುವುದರಿಂದ (ನಿ. ೨-೧೦) ಸಮುದ್ರಾತ್ ಎಂದರೆ ಅಂತರಿಕ್ಷದಿಂದ ಎಂದರ್ಥವು. ಇದಲ್ಲದೆ ಈ ಋಕ್ಕಿನಲ್ಲಿ **ಉತ ವಾ ದಿವಸ್ಪರಿ** ಎಂಬ ಶಬ್ದಗಳ ಪ್ರಯೋಗವಿರುವುದರಿಂದ ಅಶ್ವಿನೀದೇವತೆಗಳ ಸ್ವಸ್ಥಾನವಾದ ಸ್ವರ್ಗ ಅಥವಾ ಅಂತರಿಕ್ಷದಿಂದ ಧನವನ್ನು ತಂದುಕೊಡಬೇಕೆಂದು ಋಷಿಯು ಪ್ರಾರ್ಥಿಸಿರುವನು.

ಪುರುಸ್ಪೃಹಂ—ಬಹುಭಿಃ ಸ್ಪೃಹಣೀಯಂ! ಬಹುಜನರಿಂದ ಅಪೇಕ್ಷಿಸಲ್ಪಡುವ, ಎಲ್ಲರೂ ಅಪೇಕ್ಷಿಸುವ, ಧನಾದ್ಯೈಶ್ವರ್ಯವನ್ನು ಎಲ್ಲರೂ ಅಪೇಕ್ಷಿಸುವರು. ಅದು ಎಲ್ಲರಿಗೂ ಬೇಕಾಗಿರುವುದು. ಅಂತಹ ಧನವನ್ನು ಕೂಡಬೇಕೆಂದು ಋಷಿಯ ಅಭಿಪ್ರಾಯವು.

॥ ವ್ಯಾಕರಣಪಕ್ರಿಯಾ ॥

ಸುದಾನೇ—ಸುಷ್ಠು ದದಾತಿ ಇತಿ ಸುದಾಃ, ಸು ಪೂರ್ವಕ (ಡು) ದಾಞ್ ದಾನೇ ಧಾತುವಿನ ಮುಂದೆ **ಸರ್ವಧಾತುಭ್ಯೋ೭ಸುನ್** (ಉ.ಸೂ. ೪-೬೨) ಎಂದು ಅಸುನ್ ಪ್ರತ್ಯಯ, ನಿಶ್ಚ್ವರದಿಂದ ಉತ್ತರಪದವು ಆದ್ಯುದಾತ್ತ. **ಗತಿಕಾರಕೋ**—(ಪಾ. ಸೂ.೬-೨-೧೫೯) ಎಂಬ ಕೃದುತ್ತರಪದ ಪ್ರಕೃತಿಸ್ವರದಿಂದ ಅದೇ ಸ್ವರ ನಿಲ್ಲುತ್ತೆ. ಚತುರ್ಥೀಏಕವಚನಾಂತ.

ದಿವಸ್ಪರಿ—ದಿವಃ-ಇದು ಪಂಚಮ್ಯಂತ, ಪರಿ ಶಬ್ದವು ಪರದಲ್ಲಿದೆ. **ಪಂಚಮ್ಯಾಃ ಪರಾವಧ್ಯರ್ಥೇ** (ಪಾ. ಸೂ. ೮-೩-೫೧) ಉಪರಿಭಾವ ಎಂದರೆ ಮೇಲೆ ಇರತಕ್ಕ ಎಂಬ ಅಧಿಶಬ್ದದ ಅರ್ಥವನ್ನು ಬೋಧಿಸುವ ಪರಿ ಶಬ್ದ ಪರದಲ್ಲಿದ್ದ ಪಂಚಮ್ಯಾವಿಭಕ್ತಿಯ ಸಂಬಂಧಿಯಾದ ವಿಸರ್ಗಕ್ಕೆ ಸಕಾರಾದೇಶ ಬರುತ್ತೆ ಎಂದು ವಿಸರ್ಗಕ್ಕೆ ಸಕಾರ.

ಪುರುಸ್ಪೃಹಮ್—ಸ್ಪೃಹ ಈಪ್ಸಾಯಾಂ, ಹತ್ತನೇಗಣದಲ್ಲಿ ಅಕಾರಾಂತವಾಗಿ ಪಠಿತವಾದ ಧಾತು. ಪುರುಭಿಃ=ಬಹುಜನರಿಂದ, ಸ್ಪೃಹ್ಯತೇ=ಅಪೇಕ್ಷಿಸಲ್ಪಡುತ್ತೆ ಎಂದು ವಿಗ್ರಹ. ಕರ್ಮಾರ್ಥದಲ್ಲಿ ಘಞ್. **ಅತೋ ಲೋಪಃ** (ಪಾ.ಸೂ.೬-೪-೪೮) ಎಂದು ಅಕಾರಲೋಪ. ಸ್ಪೃಹ್+ಅ. **ಅಚೇಃಪರಸ್ಮಿನ್**— (ಪಾ. ಸೂ. ೧-೧-೫೨) ಲುಪ್ತವಾದ ಅಕಾರಲೋಪಕ್ಕೆ ಸ್ಥಾನಿವದ್ಭಾವ ಬರುತ್ತೆ. ಆದ್ದರಿಂದ **ಪುಗಂತೆ**—(ಪಾ. ಸೂ. ೭-೩-೮೬) ಎಂದು ಲಘೂಪಧ ಗುಣ ಬರುವುದಿಲ್ಲ. ಉತ್ತರಪದ ಞಿತ್ಸ್ವರದಿಂದ ಆದ್ಯುದಾತ್ತ. ಸಮಾಸಬಂದ ಮೇಲೆ ಕೃದುತ್ತರಪದ ಪ್ರಕೃತಿಸ್ವರ ಬಂದು ಅದೇ ನಿಲ್ಲುತ್ತೆ. ॥ ೬ ॥

॥ ಸಂಹಿತಾಪಾಠಃ ॥

यन्नासत्या परावति यद्वा स्वो अधि तुर्वशे ।
अतो रथेन सुवृता न आ गतं साकं सूर्यस्य रश्मिभिः ॥

॥ ಪದಪಾಠಃ ॥

ಯತ್ । ನಾಸತ್ಯಾ । ಪರಾವತಿ । ಯತ್ । ವಾ । ಸ್ಥಃ । ಅಧಿ । ತುರ್ವಶೇ ॥
ಅತಃ । ರಥೇನ । ಸುವೃತಾ । ನಃ । ಆ । ಗತಂ । ಸಾಕಂ । ಸೂರ್ಯಸ್ಯ ।
ರಶ್ಮಿಭಿಃ ॥ ೭ ॥

ಸಾಯಣಭಾಷ್ಯಂ

ಹೇ ನಾಸತ್ಯಾಸತ್ಯರಹಿತಾವಶ್ವಿನೌ ಯದ್ಯದಿ ಯುವಾಂ ಪರಾವತಿ ದೂರದೇಶೇ ಸ್ಥೋ ವರ್ತೇಥೇ। ಯದ್ವಾ ಅಥವಾಧಿ ತುರ್ವಶೇಽಧಿಕೇ ಸವಿಾಪೇ ಸ್ಥಃ । ಅತೋಽಸ್ಮಾದ್ದೂರಾತ್ಸವಿಾಪಾದ್ವಾ ಸೂರ್ಯಸ್ಯ ರಶ್ಮಿಭಿಃ ಸಾಕಂ ಸೂರ್ಯೋದಯಕಾಲೇ ಸುವೃತಾ ಶೋಭನವರ್ತನಯುಕ್ತೇನ ರಥೇನ ನೋಽಸ್ಮಾನ್ ಪ್ರತ್ಯಾ ಗತಂ । ಆಗಚ್ಛತಂ ॥ ನಾಸತ್ಯಾ । ಸತ್ಸು ಭವೌ ಸತ್ಯೌ । ನ ಸತ್ಯಾವಸತ್ಯೌ । ನ ಅಸತ್ಯೌನಾಸತ್ಯೌ ನಭ್ರಾಣ್ನಪಾದಿತ್ಯಾದಿನಾ ನಞಃ ಪ್ರಕೃತಿಭಾವಃ। ಸ್ಥಃ। ಅಸ ಭುವಿ। ಶ್ನಸೋರಲ್ಲೋಪೇ ಇತ್ಯಕಾರಲೋಪಃ। ಯದ್ವೃತ್ತಯೋಗಾದನಿಘಾತಃ । ಗತಂ । ಗಮೇರ್ಲೋಟಿ ಬಹುಲಂ ಛಂದಸೀತಿ ಶಪ್ಲೋ ಲುಕ್ । ಅನುದಾತ್ತೋಪದೇಶೇತ್ಯಾದಿನಾನುನಾಸಿಕಲೋಪಃ ॥

॥ ಪ್ರತಿಪದಾರ್ಥ ॥

ನಾಸತ್ಯಾ—ಅಸತ್ಯರಹಿತರಾದ ಅಶ್ವಿನೀದೇವತೆಗಳೇ । ಯತ್—ಒಂದುವೇಳೆ (ನೀವು)। ಪರಾವತಿ—ದೂರದೇಶದಲ್ಲಿ । ಸ್ಥಃ—ಇದ್ದರೂ । ಯದ್ವಾ—ಅಥವಾ। ಅಧಿ ತುರ್ವಶೇ—ಅತ್ಯಂತ ಸವಿಾಪದಲ್ಲಿ (ಇದ್ದರೂ)। ಅತಃ—ಅಲ್ಲಿಂದ (ದೂರದೇಶದಿಂದಾಗಲಿ ಅಥವಾ ಸವಿಾಪಪ್ರದೇಶದಿಂದಾಗಲಿ) । ಸೂರ್ಯಸ್ಯ—ಸೂರ್ಯನ ರಶ್ಮಿಭಿಃ ಸಾಕಂ—ಕಿರಣಗಳೊಡನೆ (ಸೂರ್ಯೋದಯಕಾಲದಲ್ಲಿ) । ಸುವೃತಾ—ಶ್ರೇಷ್ಠವಾದ ಸಂಚಾರವುಳ್ಳ । ರಥೇನ—ರಥದಲ್ಲಿ । ನಃ—ನಮ್ಮ ಅಭಿಮುಖವಾಗಿ । ಆಗತಂ—ಬನ್ನಿರಿ.

॥ ಭಾವಾರ್ಥ ॥

ಅಸತ್ಯರಹಿತರಾದ ಎಲೈ ಅಶ್ವಿನೀದೇವತೆಗಳೇ, ನೀವು ದೂರದೇಶದಲ್ಲಿದ್ದರೂ ಅಥವಾ ನಮಗೆ ಅತ್ಯಂತ ಸವಿಾಪಪ್ರದೇಶದಲ್ಲಿದ್ದರೂ, ಸೂರ್ಯೋದಯಕಾಲದಲ್ಲಿ ಸೂರ್ಯನ ಕಿರಣಗಳ ಜೊತೆಯಲ್ಲಿ ನೀವಿರುವ ಪ್ರದೇಶದಿಂದ ನಿಮ್ಮ ಶ್ರೇಷ್ಠವಾದ ಸಂಚಾರ ಶಕ್ತಿಯುಳ್ಳ ರಥದಲ್ಲಿ ನಮ್ಮ ಅಭಿಮುಖವಾಗಿ ಬನ್ನಿರಿ.

English Translation.

O Truthful Nasatyas, whether you happen to be far off at a distance or close at hand, come to us in your well-constructed chariot along with rays of the sun (in the morning).

॥ ವಿಶೇಷ ವಿಷಯಗಳು ॥

ಪರಾವತಿ—**ಆಕೇ ಪರಾಕೇ** ಮೊದಲಾದ ಐದು ದೂರನಾಮಗಳ ಮಧ್ಯದಲ್ಲಿ **ಪರಾವತಶಬ್ದವು** ಪಠಿತವಾಗಿರುವುದರಿಂದ (ನಿ. ೩-೨೦) **ಪರಾವತಿ** ಎಂದರೆ ದೂರದಲ್ಲಿ ಎಂದರ್ಥವು.

ತುರ್ವಶೇ—ತಳಿತ್, **ಆಸಾತ್** ಮೊದಲಾದ ಹನ್ನೊಂದು ಅಂತಿಕವಾಚಕನಾಮಗಳ ಮಧ್ಯದಲ್ಲಿ **ತುರ್ವಶೇ** ಎಂಬ ಶಬ್ದವು ಪಠಿತವಾಗಿರುವುದರಿಂದ (ನಿ. ೩-೯) **ತುರ್ವಶೇ** ಎಂದರೆ **ಸಮೀಪದಲ್ಲಿ** ಎಂದರ್ಥವು.

ಆ ಗತಂ ಸಾಕಂ ಸೂರ್ಯಸ್ಯ ರಶ್ಮಿಭಿಃ—ಸೂರ್ಯನ ರಶ್ಮಿಗಳೊಡನೆ ಬನ್ನಿ ಎಂದರೆ **ಪ್ರಾತಃಕಾಲದಲ್ಲಿ ಸೂರ್ಯೋದಯವಾದಕೂಡಲೆ ಬನ್ನಿ ಎಂದಭಿಪ್ರಾಯವು.**

॥ ವ್ಯಾಕರಣಪ್ರಕ್ರಿಯಾ ॥

ನಾಸತ್ಯಾ—ಸತ್ಸು ಸಾಧೂ ಸತ್ಯೌ, ನ ಸತ್ಯೌ-ಅಸತ್ಯೌ, ನ ಅಸತ್ಯೌ ನಾಸತ್ಯೌ ಎಂದು ವಿಗ್ರಹ. **ತತ್ರ ಸಾಧುಃ** (ಪಾ. ಸೂ. ೪-೪-೯೮) ಎಂಬುದರಿಂದ ಯತ್ ಪ್ರತ್ಯಯ ಬರುತ್ತೆ, ಸತ್ಸು ಭವೌ ಎಂದು ವಿಗ್ರಹವಾದರೆ **ಭವೇಛಂದಸಿ** (ಪಾ. ಸೂ. ೪-೪-೧೧೦) ಎಂದು ಯತ್ (ಋ. ಸಂ. ೧-೩-೩)ರಲ್ಲಿ ಮತ್ತೊಂದು ವಿಧವಾಗಿ ಪ್ರಕ್ರಿಯೆಯು ನಿರೂಪಿತವಾಗಿದೆ. ಎಲ್ಲ ಕಡೆಯಲ್ಲೂ **ನಭ್ರಾಣ್ನಪಾನ್ನೇದಾನಾಸತ್ಯಾ**—(ಪಾ. ಸೂ. ೬-೩-೭೫) ಎಂದು ಪ್ರಕೃತಿಭಾವ ಬರುವುದರಿಂದ ನಕಾರಕ್ಕೆ ಲೋಪ ಬರುವುದಿಲ್ಲ.

ಸ್ಥಃ—ಅಸ ಭುವಿ ಧಾತು. ಲಟ್ **ಮಧ್ಯಮಪುರುಷದ್ವಿವಚನ ಥಸ್ ಶ್ನಸೋರಲ್ಲೋಪಃ** (ಪಾ. ಸೂ. ೬-೪-೧೧೧) ಕಿತ್ ಙಿತ್ ಆದ ಸಾರ್ವಧಾತುಕ ಪರದಲ್ಲಿದ್ದರೆ ಶ್ನಮ್ ಪ್ರತ್ಯಯ ಅಸ್ ಧಾತು ಇವುಗಳ ಅಕಾರಕ್ಕೆ ಲೋಪ ಬರುತ್ತೆ ಎಂದು ಅಸ್ ಧಾತುವಿನ ಅಕಾರಕ್ಕೆ ಲೋಪ ಸ್+ಥಸ್, ರುತ್ವವಿಸರ್ಗಗಳು. ಸ್ಥಃ ಎಂದಾಗುತ್ತೆ. **ಯೇದ್ವಾಸ್ಥೋ ಅಧಿ** ಎಂದು ಯಚ್ಛಬ್ದಯೋಗ ಇದೆ. **ಯೇದ್ಯೋತ್ತಾನ್ನಿತ್ಯಮ್** (ಪಾ. ಸೂ. ೮-೧-೬೬) **ಯೇದಸ್ಮಿನ್ವರ್ತತೇ ಇತಿ ಯೇದ್ಯೋತ್ತಂ** ಎಂದು ಮಹಾಭಾಷ್ಯದಲ್ಲಿ ವಿಗ್ರಹವನ್ನು ತೋರಿರುವರು. ಆದ್ದರಿಂದ ಯಾವ ಪದದಲ್ಲಿ ಯತ್ ಎಂಬ ಪದವಿದೆಯೋ ಅದರ ಮುಂದಿರುವ ತಿಙಂತವು ಅನುದಾತ್ತವಾಗುವುದಿಲ್ಲ ಎಂದು ಸರ್ವಾನುದಾತ್ತಕ್ಕೆ ನಿಷೇಧಬರುತ್ತೆ **ಪೂಜನಾತ್ಪೂಜಿತ**—(ಪಾ.ಸೂ ೮-೧-೬೭) ಎಂಬಲ್ಲಿ ಪುನಃ ಪೂಜಿತಗ್ರಹಣದಿಂದ 'ಅತ್ರಪ್ರಕರಣೇ ಪಂಚಮ್ಯಾ ನಿರ್ದೇಶೇಪಿ ನಾನಂತರ್ಯಮಿಷ್ಯತೇ' ಎಂದು ಜ್ಞಾಪಿತವಾಗುತ್ತೆ. ಆದ್ದರಿಂದ ವಾಶಬ್ದದಿಂದ ವ್ಯವಧಾನವಿದ್ದರೂ, ಈ ನಿಷೇಧಬರುತ್ತೆ.

ಗತಮ್—ಗಮ್ಲೃ ಗತೌಧಾತು. ಲೋಟ್, ಲಜ್ವದ್ಭಾವ, **ತಸ್ಥಸ್ಥಮಿಪಾಂ**-(ಪಾ. ಸೂ. ೩-೪-೧೦೧-ಎಂದು ಥಸ್, ತಮ್ ಆದೇಶ, ಶಪ್‌ಗೆ **ಬಹುಲಂ ಛಂದಸಿ** (ಪಾ. ಸೂ. ೨-೪-೭೩) ಎಂದು ಲುಕ್ **ಅನುದಾತ್ತೋಪದೇಶ**-(ಪಾ. ಸೂ. ೬-೪-೩೭) ಅನುನಾಸಿಕವಾದ **ಮ**ಕಾರಕ್ಕೆ ಲೋಪ ॥ ೭ ॥

॥ ಸಂಹಿತಾಪಾಠಃ ॥

ಅ॒ರ್ವಾ॑ಂಚಾ ವಾಂ॑ ಸಪ್ತ॒ಯೋ॑ ಽಧ್ವ॒ರಶ್ರಿ॑ಯೋ॒ ವಹ॑ಂತು ಸವ॒ನೇದು॑ಪ ।
ಇಷ॑ಂ ಪೃಂಚಂತಾ ಸು॒ಕೃ॑ತೇ ಸು॒ದಾನ॑ವ ಆ ಬ॒ರ್ಹಿಃ ಸೀ॑ದತಂ ನರಾ ॥ ೮ ॥

॥ ಪದಪಾಠಃ ॥

ಅ॒ರ್ವಾ॒ಂಚಾ । ವಾ॒ಂ । ಸ॒ಪ್ತ॒ಯಃ । ಅ॒ಧ್ವ॒ರ॒ಶ್ರಿ॒ಯಃ । ವ॒ಹ॒ಂತು । ಸ॒ವ॒ನಾ ।
ಇತ್ । ಉ॒ಪ ॥
ಇ॒ಷ॒ಂ । ಪೃ॒ಂಚ॒ಂತಾ॒ । ಸು॒ಽಕೃ॒ತೇ । ಸು॒ಽದಾ॒ನ॒ವೇ । ಆ । ಬ॒ರ್ಹಿಃ । ಸೀ॒ದ॒ತ॒ಂ ।
ನ॒ರಾ ॥ ೪ ॥

ಸಾಯಣಭಾಷ್ಯಂ

ಹೇ ಅಶ್ವಿನೌ ಅಧ್ವರಶ್ರಿಯೋ ಯಾಗಸೇವಿನಃ ಸಪ್ತಯೋಽಶ್ವಾಃ ಸವನೇದುಪಾಸ್ಮದನುಷ್ಠೇಯಾನಿ ತ್ರೀಣಿ ಸವನಾನ್ಯೇವೋಪಲಕ್ಷ್ಯಾರ್ವಾಂಚಾಭಿಮುಖೌ ವಾಂ ಯುವಾಂ ವಹಂತು । ಪ್ರಾಪಯಂತು। ಹೇ ನರಾಶ್ವಿನೌ ಸುಕೃತೇ ಸುಷ್ಠು ಕರ್ಮಕಾರಿಣೇ ಸುದಾನವೇ ಶೋಭನದಾನಯುಕ್ತಾಯ; ಯಜಮಾನಾಯೇಷಮನ್ನಂ ಪೃಂಚಂತಾ ಸಂಯೋಜಯಂತೌ ಯುವಾಂ ಬರ್ಹಿರಾ ಸೀದತಂ । ದರ್ಭಂ ಪ್ರಾಪ್ನುತಂ ॥ ಅರ್ವಾಂಚಾ । ಸುಸಾಂ ಸುಲುಗಿತಿ ವಿಭಕ್ತೇರಾಕಾರಃ । ಅಧ್ವರಶ್ರಿಯಃ । ಅಧ್ವರಂ ಶ್ರಯಂತೀತ್ಯಧ್ವರಶ್ರಿಯಃ । ಕ್ವಿಬ್ಬಹುಲಮಿತ್ಯಾದಿನಾ । ಉ ೨-೫೭ । ಕ್ವಿಬ್ದೀರ್ಘಶ್ಚ । ವಹಂತು । ವಹ ಪ್ರಾಪಣೇ । ಶಪಃ ಪಿತ್ತ್ವಾದನುದಾತ್ತತ್ವಂ । ತಿಙಶ್ಚ ಲಸಾರ್ವಧಾತುಕಸ್ವರೇಣ ಧಾತುಸ್ವರೇಣಾದ್ಯುದಾತ್ತತ್ವಂ । ಪಾದಾದಿತ್ವಾನ್ನಿಘಾತಾಭಾವಃ। ಸವನಾ । ಷುಞಙ್ ಅಭಿಷವೇ । ಅಭಿಷೂಯತೇ ಸೋಮ ಏಷ್ವಿತಿ ಸವನಾನಿ । ಅಧಿಕರಣೇ ಲ್ಯುಟ್ । ಯೋರನಾದೇಶಃ । ಗುಣಾವಾದೇಶೌ । ಲಿತೀತಿ ಪ್ರತ್ಯಯಾತ್ಪೂರ್ವಸ್ಯೋದಾತ್ತತ್ವಂ । ಶೇಶ್ಚಂದಸಿ ಬಹುಲಮಿತಿ ಶೇರ್ಲೋಪಃ । ಪೃಂಚಂತಾ । ಪೃಚೀ ಸಂಪರ್ಕೇ । ಶತರಿ ರುಧಾದಿತ್ವಾತ್ ಶ್ನಂ । ಶ್ನಸೋರಲ್ಲೋಪ ಇತ್ಯಕಾರಲೋಪಃ । ಪ್ರತ್ಯಯಸ್ವರಃ । ಸುಕೃತೇ । ಸುಕರ್ಮಾಪಾಪೇತ್ಯಾದಿನಾ । ಪಾ. ೩-೨-೮೪ । ಕರೋತೇರ್ಭೂತೇ ಕಾಲೇ ಕ್ವಿಪ್ । ಹ್ರಸ್ವಸ್ಯ ಪಿತಿ । ಪಾ. ೬-೧-೭೧ । ಇತಿ ತುಕ್ । ಸುದಾನವೇ । ಶೋಭನಂ ದಾನು ದಾನಂ ಯಸ್ಯಾಸೌ ಸುದಾನುಃ । ದಾನುಶಬ್ದೋ ನುಪ್ರತ್ಯಯೋಂತ ಆದ್ಯುದಾತ್ತಃ । ಆದ್ಯುದಾತ್ತಂ ದ್ವ್ಯಚ್ಛಂದಸೀತಿ ಬಹುವ್ರೀಹಾವುತ್ತರಪದಾದ್ಯುದಾತ್ತತ್ವಂ । ಸೀದತಂ । ಷದ್ಲೃ ವಿಶರಣಗತ್ಯವಸಾದನೇಷು ॥

॥ ಪ್ರತಿಪದಾರ್ಥ ॥

ಅಧ್ವರಶ್ರಿಯಃ—(ಎಲೈ ಅಶ್ವಿನೀದೇವತೆಗಳೇ) ಯಾಗಸೇವಿಗಳಾದ । **ಸಪ್ತಯಃ**—ಕುದುರೆಗಳು । **ಸವನೇದುಪ**—(ನಾವು ಅನುಷ್ಠಾನಮಾಡುವ) ಸವನತ್ರಯವನ್ನೂ ಉದ್ದೇಶಿಸಿ । **ಅರ್ವಾಂಚಾ**—ಅವುಗಳ ಅಭಿಮುಖರನ್ನಾಗಿ । **ವಾಂ**—ನಿಮ್ಮಿಬ್ಬರನ್ನೂ । **ವಹಂತು**—ಕರೆದುಕೊಂಡುಬಂದು ಸೇರಿಸಲಿ । **ನರಾ**—ನೇತೃಗಳಾದ ಅಶ್ವಿಗಳೇ । **ಸುಕೃತೇ**—ಪವಿತ್ರವಾದ ಕರ್ಮಗಳನ್ನು ಮಾಡತಕ್ಕವನೂ । **ಸುದಾನವೇ**—ಶ್ರೇಷ್ಠವಾದ ದಾನಯುಕ್ತನೂ ಆದ ಯಜಮಾನನಿಗೆ । **ಇಷಂ**—ಅನ್ನವನ್ನು । **ಪೃಂಚಂತಾ**—ಒದಗಿಸುತ್ತಾ । **ಬರ್ಹಿಃ**—ದರ್ಭಾಸನದ ಮೇಲೆ । **ಆ ಸೀದತಂ**—ಕುಳಿತುಕೊಳ್ಳಿ.

॥ ಭಾವಾರ್ಥ ॥

ಎಲೈ ಅಶ್ವಿನೀದೇವತೆಗಳೇ, ಯಾಗಸೇವಿಗಳಾದ ನಿಮ್ಮ ಕುದುರೆಗಳು ನಾವು ಅನುಷ್ಠಿಸುವ ಸವನತ್ರಯ ಕಾಲಗಳಲ್ಲೂ ನಮ್ಮ ಯಜ್ಞಾಭಿಮುಖರನ್ನಾಗಿ ನಿಮ್ಮಿಬ್ಬರನ್ನೂ ಕರೆದುಕೊಂಡುಬಂದು ಸೇರಿಸಲಿ. ಎಲೈ ನೇತೃಗಳೇ, ಯಜ್ಞಕರ್ತನಾದ ಯಜಮಾನನು ಪವಿತ್ರಗಳಾದ ಕರ್ಮಗಳನ್ನು ಮಾಡತಕ್ಕವನು. ಶ್ರೇಷ್ಠವಾದ ದಾನದಿಂದ ಕೂಡಿದವನು. ಅವನಿಗೆ ಅನ್ನವನ್ನು ಒದಗಿಸುತ್ತ ದರ್ಭಾಸನದ ಮೇಲೆ ಬಂದು ಕುಳಿತುಕೊಳ್ಳಿರಿ.

English Translation.

May your horses, the grace of the sacrifice, bring you to be present at our rite; guides (of men) bestowing food upon the pious and liberal donor of he offering, sit down on the sacred grass.

॥ ವಿಶೇಷ ವಿಷಯಗಳು ॥

ಅಧ್ವರಶ್ರಿಯಃ—ಅಧ್ವರಂ ಶ್ರಯಂತೀತ್ಯಧ್ವರಶ್ರಿಯಃ । ಯೋಗಸೇವಿನಃ ॥ ಯಜ್ಞಾರ್ಥವಾಗಿ ಗಮನವುಳ್ಳ ಅಥವಾ ಯಜ್ಞಕ್ಕಾಗಿ ಶ್ರಮಿಸುವ.

ಸಪ್ತಯೆಃ—ಕುದುರೆಗಳು. ಅತ್ಯಃ ಹಯಃ ಮೊದಲಾದ ಇಪ್ಪತ್ತಾರು ಅಶ್ವನಾಮಗಳ ಮಧ್ಯದಲ್ಲಿ ಸಪ್ತಿ ಶಬ್ದವು ಪಠಿತವಾಗಿರುವುದು. (ನಿ. ೨-೨೭)

ಸವನಾ—ತ್ರೀಣಿ ಸವನಾನಿ। ಯಜ್ಞಗಳಲ್ಲಿ ಆಚರಿಸಲ್ಪಡುವ ಪ್ರಾತಸ್ಸವನ, ಮಾಧ್ಯಂದಿನಸವನ ತೃತೀಯಸವನ ಎಂಬ ಪ್ರಾತಃಕಾಲ, ಮಧ್ಯಾಹ್ನ, ಸಾಯಂಕಾಲಗಳಲ್ಲಿ ಸೋಮರಸವನ್ನು ಹಿಂಡಿ ಸಿದ್ಧಪಡಿಸುವ ಕರ್ಮವಿಶೇಷಗಳಿಗೆ ಸವನಗಳೆಂದು ಹೆಸರು. ಸವನಗಳು ಮೂರು ಇರುವವು.

ಪೃಂಚೆಂತಾ—ಪೃಚೀ ಸಂಪರ್ಕೇ । ಸೇರಿಸುತ್ತಾ, ಒದಗಿಸುತ್ತಾ ಸಂಪರ್ಕವನ್ನುಂಟುಮಾಡುತ್ತಾ.

॥ ವ್ಯಾಕರಣಪ್ರಕ್ರಿಯಾ ॥

ಆರ್ವಾಞ್ಚಾ-ಸುಪಾಂಸುಲುಕ್ (ಪಾ. ಸೂ. ೭-೧-೩೯) ಎಂದು ದ್ವಿತೀಯಾದ್ವಿವಚನ ಔಗೆ ಆಕಾರಾದೇಶ.

ಅಧ್ವರಶ್ರಿಯಃ—ನ ವಿದ್ಯತೇ ಧ್ವರಃ ಹಿಂಸಾ ಯಸ್ಮಿನ್ ಸಃ ಎಂದು ವಿಗ್ರಹ. ಅಧ್ವರಂ ಶ್ರಯಂತಿ ಇತ್ಯಧ್ವರ ಶ್ರಿಯಃ, ಯಾಗವನ್ನು ಆಶ್ರಯಿಸಿರುವವು ಎಂದು ಅರ್ಥ. **ಕ್ವಿಬ್ಬಹುಲಂ ಶ್ರಿಸ್ರುದ್ರುಹ್ರುಜ್ವಾಂ ದೀರ್ಘೋಽಸಂಪ್ರಸಾರಣಂಚ** (ಉ. ಸೂ. ೨-೭೬) ವಚ್ ಮೊದಲಾದ ಧಾತುಗಳ ಮುಂದೆ ಕ್ವಿಪ್ ಬರುತ್ತೆ, ದೀರ್ಘ ಬರುತ್ತೆ, ಮತ್ತು ಕಿತ್ವನಿಮಿತ್ತಕವಾಗಿ ಪ್ರಾಪ್ತವಾಗುವ ಸಂಪ್ರಸಾರಣ ಬರುವುದೂ ಇಲ್ಲ ಎಂದು ಇಲ್ಲಿ ಶ್ರಿಞ್ ಸೇವಾಯಾಂ ಧಾತುವಿನ ಮುಂದೆ ಕ್ವಿಪ್, ದೀರ್ಘಬಂದರೆ ಅಧ್ವರಶ್ರೀ ಎಂದಾಗುತ್ತೆ. ಜಸ್, ಇಯಙಾದೇಶ.

ವಹನ್ತು—ವಹ ಪ್ರಾಪಣೇ ಲೋಟ್, ಶಪ್, ಇದು ಪಿತ್ತಾದ್ದರಿಂದ ಅನುದಾತ್ತ. ಅದುಪದೇಶದ ಮುಂದೆ ಇರುವ ಲಸ್ಥಾನಿಕ ಸಾರ್ವಧಾತುಕಕ್ಕೆ **ತಾಸ್ಯನುದಾತ್ತೇತ್** – (ಪಾ. ಸೂ. ೬-೧-೧೮೬) ಎಂದು ಅನುದಾತ್ತ. ಧಾತುಸ್ವರ ಉಳಿಯುತ್ತೆ- ವಹನ್ತು ಎಂಬುದು ಪಾದಾದಿಯಲ್ಲಿರುವುದು. ಸರ್ವಾನುದಾತ್ತ ಬರುವುದಿಲ್ಲ.

ಸವನಾ—ಷುಞ್ ಅಭಿಷವೇ ಧಾತು. ಅಭಿಷೂಯತೇ ಸೋಮ ಏಷ್ವಿತಿ ಸವನಾನಿ ಎಂದು ವಿಗ್ರಹ. ಅಭಿ ಉಪಸರ್ಗ. ಅದು ಪೂರ್ವದಲ್ಲಿರುವಾಗ ಷು ಧಾತುವಿನ ಮುಂದೆ **ಕರಣಾಧಿಕರಣಯೋಶ್ಚ** (ಪಾ. ಸೂ. ೩-೩-೧೧೭) ಎಂದು ಅಧಿಕರಣಾರ್ಥದಲ್ಲಿ ಲ್ಯುಟ್ ಪ್ರತ್ಯಯ. **ಧಾತ್ವಾದೇಃ ಷಃ ಸಃ** (ಪಾ. ಸೂ. ೬-೧-೬೪) ಎಂದು ಷಕಾರಕ್ಕೆ ಸಕಾರ. ಸು+ಯು. **ಯುವೋರನಾಕೌ** (ಪಾ. ಸೂ. ೭-೧-೧) ಎಂದು ಯು ಗೆ ಅನ ಆದೇಶ. **ಸಾರ್ವಧಾತುಕಾರ್ಧಧಾತುಕಯೋಃ** (ಪಾ. ಸೂ. ೭-೩-೮೪) ಎಂದು ಗುಣ. ಉಕಾರಕ್ಕೆ ಓಕಾರ. ಸೋ+ಅನ. ಅವಾದೇಶ. ಸವನ ಎಂದಾಯಿತು. ಇದರ ಮುಂದೆ ದ್ವಿತೀಯಾ ಬಹುವಚನ ಶಸ್ **ಜಶ್ಶಸೋಶ್ಶಿಃ** (ಪಾ. ಸೂ. ೭-೧-೨೦) ನಪುಂಸಕಲಿಂಗವಾದ ಅಂಗದ ಮುಂದಿರುವ ಜಸ್ ಅಥವಾ ಶಸ್‌ಗಳಿಗೆ ಶಿ ಆದೇಶ ಬರುತ್ತೆ ಎಂದು ಶಸ್‌ಗೆ ಶಿ ಆದೇಶ ಸವನಾ+ಶಿ, **ಶಿಸರ್ವನಾಮಸ್ಥಾನಮ್** (ಪಾ. ಸೂ. ೧-೧-೪೨) ಎಂದು ಶಿಗೆ ಸರ್ವನಾಮಸ್ಥಾನ ಸಂಜ್ಞೆ. ನಪುಂಸಕಸ್ಯ ಝಲಚಿಃ (ಪಾ. ಸೂ. ೭-೧-೭೨) ಸರ್ವನಾಮಸ್ಥಾನ ಪ್ರತ್ಯಯ ಪರದಲ್ಲಿರುವಾಗ ನಪುಂಸಕಲಿಂಗದಲ್ಲಿ ಝಲಂತ, ವಾ ಅಜಂತವಾದ ಅಂಗಕ್ಕೆ ನುಮ್ ಆಗಮ ಬರುತ್ತೆ ಎಂದು ನುಮಾಗಮ. ನವನನ್+ಶಿ **ಸರ್ವನಾಮಸ್ಥಾನೇಚಾಸಂಬುದ್ಧೌ** (ಪಾ. ಸೂ. ೬-೪-೮) ಎಂದು ಉಪಧಾದೀರ್ಘ **ಶೇ ಶ್ಚಂದಸಿ ಬಹುಲಂ** (ಪಾ. ಸೂ. ೬-೧-೭೦) ವೇದದಲ್ಲಿ ಶಿಗೆ ಬಹುಲವಾಗಿ ಲೋಪ ಬರುತ್ತೆ ಎಂದು ಶಿಗೆ ಲೋಪ **ನಲೋಪಃ ಪ್ರಾತಿಪದಿಕಾಂತಸ್ಯ** (ಪಾ. ಸೂ. ೮-೨-೭) ಎಂದು ನಕಾರಕ್ಕೆ ಲೋಪ, ಸವನಾ ಎಂದಾಗುತ್ತೆ.

ಪೃಞ್ಚತಾ--ಪೃಚೀ ಸಂಪರ್ಕೇ ಧಾತು. ಲಟ್ ಅದಕ್ಕೆ ಶತೃ. **ರುಧಾದಿಭ್ಯಃಶ್ನಮ್** ಎಂದು ಶ್ನಮ್ ವಿಕರಣ. ಅದು ಮಿತ್ ಆದ್ದರಿಂದ ಪೃಗೆ ಪರದಲ್ಲಿ ಬರುತ್ತೆ. ಪೃನಚ್+ಅತ್, **ಶ್ನಸೋರಲ್ಲೋಪಃ** (ಪಾ. ಸೂ. ೬-೪-೧೧೧) ಕಿತ್ ಅಥವಾ ಙಿತ್ ಆದ ತಿಙ್ ಪ್ರತ್ಯಯ ಅಥವಾ ಅಂತಹ ಶಕಾರೇತ್ಸಂಜ್ಞಕ ಪ್ರತ್ಯಯಗಳು ಪರದಲ್ಲಿದ್ದರೆ ಶ್ನ-ಅಸ್‌ಗಳ ಅಕಾರಕ್ಕೆ ಲೋಪಬರುತ್ತೆ ಎಂದು ಶ್ನ ಪ್ರತ್ಯಯದ ಅಕಾರಕ್ಕೆ ಲೋಪ. **ನಶ್ಚಾಪದಾಂತಸ್ಯಝಲಿ** ಎಂದು ನಕಾರಕ್ಕೆ ಅನುಸ್ವಾರ, **ಅನುಸ್ವಾರಸ್ಯ ಯಯಿಪರಸವರ್ಣಃ** ಎಂದು ಪರಸವರ್ಣ, ಪೃಞ್ಚತ್ ಎಂದಾಯಿತು. ಪ್ರಥಮಾ ದ್ವಿವಚನಕ್ಕೆ ಆಕಾರಾದೇಶ. ಶತೃ ಪ್ರತ್ಯಯದ ಅಕಾರವು ಪ್ರತ್ಯಯ ಸ್ವರದಿಂದ ಉದಾತ್ತ.

ಸುಕೃತೇ—ಸು ಉಪಸರ್ಗ. ಕೃಞ್ ಕರಣೇ ಧಾತು. **ಸುಕರ್ಮಪಾಪಮನ್ತ್ರ ಪುಣ್ಯೇಷುಕೃಞಃ** (ಪಾ. ಸೂ. ೩-೨-೮೯) ಸು ಮೊದಲಾದ ಶಬ್ದಗಳು ಉಪಪದವಾಗಿರುವಾಗ ಭೂತಾರ್ಥದಲ್ಲಿರುವ ಕೃಞ್ ಧಾತುವಿನ ಮುಂದೆ ಕ್ವಿಪ್ ಬರುತ್ತೆ ಎಂದು ಕ್ವಿಪ್. **ಹ್ರಸ್ವಸ್ಯಪಿತಿಕೃತಿತುಕ್** (ಪಾ. ಸೂ. ೬-೧-೭೧) ಪಿತ್ ಆದ ಕೃತ್ತು ಪರದಲ್ಲಿರುವಾಗ ಹ್ರಸ್ವವರ್ಣಕ್ಕೆ ತುಕ್ ಆಗಮ ಬರುತ್ತೆ ಎಂದು ತುಗಾಗಮ ಸುಕೃತ್. ಚತುರ್ಥೀ ಏಕವಚನ.

ಸುದಾನವೇ—ಸು= ಒಳ್ಳೆಯ, ದಾನು-ದಾನವು, ಯಸ್ಯಸಃ= ಯಾವನಿಗೆ ಇದೆಯೋ ಅವನು ಎಂದು ಬಹುವ್ರೀಹಿ. **ದಾಭಾಭ್ಯಾಂನುಃ** (ಉ. ಸೂ. ೩-೩೧) **ಸುಶ್ರುಭ್ಯಾಂನಿಚ್ಚ** ಎಂಬುದರಿಂದ ನಿತ್ ಅನುವೃತ್ತಿ. ದಾ-ಧಾತುಗಳ ಮುಂದೆ ನು ಪ್ರತ್ಯಯ ಬರುತ್ತೆ, ಅದು ನಿತ್ ಆಗುತ್ತೆ ಎಂದು ನು ಪ್ರತ್ಯಯ. ಪ್ರತ್ಯಯ ನಿತ್ತಾದ್ದ

ರಿಂದ ಇದು ಆದ್ಯುದಾತ್ತವಾದ ಪದ **ಆದ್ಯುದಾತ್ತೆಂದ್ವ್ಯಚ್ ಛಂದಸಿ**(ಪಾ.ಸೂ. ೬-೨-೧೧೯)ಸು ಶಬ್ದದ ಮುಂದಿರುವ ಆದ್ಯುದಾತ್ತವೂ ಎರಡು ಅಚ್ಚುಗಳುಳ್ಳದ್ದೂ ಆದ ಉತ್ತರಪದವು ಬಹುವ್ರೀಹಿಯಲ್ಲಿ ಆದ್ಯುದಾತ್ತವಾಗುತ್ತೆ ಎಂದು ಉತ್ತರಪದಕ್ಕೆ ಆದ್ಯುದಾತ್ತ ಬರುತ್ತೆ.

ಸೀದತಮ್—ಷದ್ಲೃಧಾತು, ಲೋಟ್, ಥಸ್, ತಮ್ ಆದೇಶ, ಶಪ್. **ಸಾಹ್ವಾಧ್ಮಾ** ಎಂದು ಸೀದ ಆದೇಶ, ಸರ್ವಾನುದಾತ್ತ ॥ ೮ ॥

ಸಂಹಿತಾಪಾಠಃ

ತೇನ॑ ನಾಸತ್యా గ॑తం రథే॑న సూర్య॑త్వచా ।
యే॑న శశ్వ॑దూహథు॑ర్దా॒శుషే॒ వసు॒ మధ్వ॒ः సో॑మ॒స్య
పీ॒తయే॑ ॥ ೯ ॥

ಪದಪಾಠಃ

తే॑న । నా॒స॒త్యా॒ । ఆ । గ॒తం॒ । రథే॑న । సూర్యే॑ ऽ త్వ॒చా॒ ॥
యే॑న । శశ్వ॑త్ । ఊ॒హథు॑ः । దా॒శుషే॑ । వసు॑ । మధ్వ॑ः । సో॑మ॒స్య ।
పీ॒తయే॑ ॥ ೯ ॥

ಸಾಯಣಭಾಷ್ಯಂ

ಹೇ ನಾಸತ್యా ಸೂರ್ಯತ್ವಚಾ ಸೂರ್ಯಸಂವೃತೇನ ಸೂರ್ಯರಶ್ಮಿಸದೃಶೇನ ವಾ ತೇನ ಪ್ರಸಿದ್ಧೇನ ರಥೇನಾ ಗತಂ ಆಗಚ್ಛತಂ । ದಾಶುಷೇ ಹವಿರ್ದತ್ತವತೇ ಯಜಮಾನಾಯ ವಸು ಧನಂ ಶಶ್ವತ್ ಸರ್ವದಾ ಯೇನ ರಥೇನೋಹಥುಃ ಪ್ರಾಪಿತವಂತೌ। ತೇನ ರಥೇನೇತಿ ಪೂರ್ವತ್ರಾನ್ವಯಃ। ಕಿಮರ್ಥಮಾಗಮನಮಿತಿ ಕೆದುಚ್ಯತೇ । ಮಧ್ವೋ ಮಧುರಸ್ಯ ಸೋಮಸ್ಯ ಪೀತಯೇ ಸೋಮಪಾನಾರ್ಥಂ ॥ ಸೂರ್ಯತ್ವಚಾ । ತ್ವಚೆ ಸಂವರಣೇ । ತ್ವಚತಿ ಸಂವೃಣೋತೀತಿ ತ್ವಗ್ರಶ್ಮಿಃ । ಸೂರ್ಯಸ್ಯ ತ್ವಗಿವ ತ್ವಗ್ಯಸ್ಯ । ಸಹ್ಯೆಮ್ಯುಪಮಾನೇತ್ಯಾದಿನಾ । ಪಾ. ೨-೨-೨೪-೧೨ । ಬಹುವ್ರೀಹಿರುತ್ತರಪದಲೋಪಶ್ಚ । ಸೂರ್ಯಶಬ್ದಃ ಷೂ ಪ್ರೇರಣ ಇತ್ಯಸ್ಮಾತ್ ಕ್ಯಪಿ ರಾಜಸೂಯಸೂರ್ಯೇತ್ಯಾದಿನಾ ರುಡಾಗಮಸಹಿತೋ ನಿಪಾತಿತಃ । ತತಃ ಪ್ರತ್ಯಯಸ್ಯ ಪಿತ್ತ್ವಾದನುದಾತ್ತತ್ವೇ ಧಾತುಸ್ವರೇಣಾದ್ಯುದಾತ್ತಃ । ಸ ಏವ ಬಹುವ್ರೀಹೌ ಪೂರ್ವಪದ। ಪ್ರಕೃತಿಸ್ವರೇಣ ತಿಷ್ಠತೇ । ಊಹಥುಃ । ವಹ ಪ್ರಾಪಣೇ । ಲಿಟ್ಯಸಂಯೋಗಾಲ್ಲಿಟ್ ಕಿತ್ । ಪಾ. ೧-೨-೫-ಇತಿ ಲಿಟಃ ಕಿತ್ತ್ವೇ ವಚಿಸ್ವಪಿಯಾದಿನಾ ಸಂಪ್ರಸಾರಣಂ । ಅಭ್ಯಾಸಹಲಾದಿಶೇಷೌ ಸವರ್ಣದೀರ್ಘಃ । ಪ್ರತ್ಯಯಸ್ವರಃ । ಯದ್ವೃತ್ತಯೋಗಾದನಿಘಾತಃ ॥

॥ ಪ್ರತಿಪದಾರ್ಥ ॥

ನಾಸತ್ಯಾ—ಎಲೈ ಅಶ್ವಿನೀದೇವತೆಗಳೇ । **ಯೇನ**—ಯಾವ ರಥದೊಡನೆ (ಯಾವುದರಲ್ಲಿ)। **ದಾಶುಷೇ**—ಹವಿರ್ದಾತನಾದ ಯಜಮಾನನಿಗೆ । **ವಸು**—ಧನವನ್ನು । **ಶಶ್ವತ್**—ಯಾವಾಗಲೂ । **ಊಹಥುಃ**—ಸಾಗಿಸಿ ತಲಪಿಸಿದ್ದೀರೋ । **ಸೂರ್ಯತ್ವಚಾ**—ಸೂರ್ಯನಿಂದ (ಸೂರ್ಯನ ಕಿರಣಗಳಿಂದ) ಆಚ್ಛಾದಿತವಾದ ಅಥವಾ ಸೂರ್ಯಕಿರಣಗಳಿಗೆ ಸದೃಶವಾದ । **ತೇನ**—ಪ್ರಸಿದ್ಧವಾದ । **ರಥೇನ**—(ಆ) ರಥದೊಡನೆ (ಅದರಲ್ಲಿ ಕುಳಿತು) **ಮಧ್ವಃ**—ಮಧುರವಾದ । **ಸೋಮಸ್ಯ**—ಸೋಮರಸದ । **ಪೀತಯೇ**—ಪಾನಕ್ಕಾಗಿ । **ಆ ಗತಂ**—ಬನ್ನಿರಿ.

॥ ಭಾವಾರ್ಥ ॥

ಎಲೈ ಅಶ್ವಿನೀದೇವತೆಗಳೇ, ನಿಮ್ಮ ರಥವು ಲೋಕಪ್ರಸಿದ್ಧವಾದುದು. ಅದರಲ್ಲಿ ನೀವು ಯಾವಾಗಲೂ ಹವಿರ್ದಾತನಾದ ಯಜ್ಞಕರ್ತನಿಗೆ ಧನವನ್ನು ಸಾಗಿಸಿ ತಲಪಿಸಿದ್ದೀರಿ. ಅದು ಸಂಚಾರ ಕಾಲದಲ್ಲಿ ಸೂರ್ಯಕಿರಣಗಳಿಂದ ಆಚ್ಛಾದಿತವಾಗಿ ಅಥವಾ ಸೂರ್ಯಕಿರಣಗಳಿಗೆ ಸದೃಶವಾಗಿ ಶೋಭಿಸುತ್ತದೆ. ಆ ರಥದಲ್ಲಿ ಕುಳಿತು ಸೋಮರಸಪಾನಕ್ಕಾಗಿ ಬನ್ನಿರಿ.

English Translation.

Truthful Aswins, come hither to drink the sweet soma with your chariot, bright as the sun in which you have ever conveyed wealth to the worshipper.

॥ ವಿಶೇಷ ವಿಷಯಗಳು ॥

ಸೂರ್ಯತ್ವಚಾ—**ಸೂರ್ಯಸಂವೃತೇನ, ಸೂರ್ಯರಶ್ಮಿಸದೃಶೇನ ವಾ** । ಸೂರ್ಯನಿಂದ ಆವೃತವಾದ ಅಥವಾ ಸೂರ್ಯರಶ್ಮಿಸದೃಶವಾದ ಎಂದರೆ ಸೂರ್ಯನಂತೆ ಪ್ರಕಾಶಮಾನವಾದ.

ಶಶ್ವತ್—**ಸರ್ವದಾ** । ಯಾವಾಗಲೂ.

ಈ ಋಕ್ಕಿನಲ್ಲಿ ಯಚ್ಛಬ್ದತಚ್ಛಬ್ದಗಳ ಪ್ರಯೋಗವಿರುವುದು.

ಎಲೈ ಅಶ್ವಿನೀದೇವತೆಗಳೇ ನೀವು ಯಾವ ನಿಮ್ಮ ರಥದಲ್ಲಿ ಧನಾದ್ಯೈಶ್ವರ್ಯವನ್ನು ತುಂಬಿಕೊಂಡು ಯಜ್ಞಮಾಡುವ ಯಜಮಾನನಿಗೆ ತಂದುಕೊಡುತ್ತಿದ್ದಿರೋ ಅಂತಹ ನಿಮ್ಮ ಸೂರ್ಯನಂತೆ ಪ್ರಕಾಶಮಾನವಾದ ರಥದೊಡನೆ ಎಂದರೆ ರಥದಲ್ಲಿ ಕುಳಿತು ಸೋಮಪಾನಕ್ಕಾಗಿ ಇಲ್ಲಿಗೆ ಬನ್ನಿರಿ ಎಂದಭಿಪ್ರಾಯವು.

॥ ವ್ಯಾಕರಣಪ್ರಕ್ರಿಯಾ ॥

ಸೂರ್ಯತ್ವಚಾ—ತ್ವಚ ಸಂವರಣೇ ತ್ವಚತಿ ಸಂವೃಣೋತಿ ಇತಿ ತ್ವಕ್ ಸಂವರಣ ಎಂದರೆ ಆಚ್ಛಾದನೆ. ಹೊದಿಸುವುದು ಎಂದರ್ಥ, ಸೂರ್ಯನ ಕಿರಣವು ಪ್ರಪಂಚವನ್ನೆಲ್ಲಾ ಹೊದಿಸುವುದು. ಅಥವಾ ಮುಚ್ಚುವುದು. ಅದ್ದರಿಂದ ಅದಕ್ಕೆ ಈ ಹೆಸರು. ಸೂರ್ಯಸ್ಯ ತ್ವಗಿವ ತ್ವಕ್ ಯಸ್ಯ ಸಃ= ಸೂರ್ಯನ ಕಿರಣದಂತೆ ಕಿರಣವುಳ್ಳದ್ದು. **ರಾಜಸೂಯೆ ಸೂರ್ಯ**—(ಪಾ. ಸೂ. ೩-೧-೧೧೪) ಈ ಸೂತ್ರದಲ್ಲಿರುವ ಶಬ್ದಗಳ ಕ್ಯಬಂತವಾಗಿ

ನಿಪಾತಿಸಲ್ಪಡುವುವು. ಸೂರ್ಯಶಬ್ದದಲ್ಲಿ ರುಟ್ ಎಂಬ ಆಗಮವೂ ನಿಪಾತಿತವಾಗಿದೆ. ಪ್ರತ್ಯಯ ಪಿತ್, ಆದ್ದರಿಂದ ಅನುದಾತ್ತ, ಬಹುವ್ರೀಹಿಯಲ್ಲಿ ಪೂರ್ವಪದಪ್ರಕೃತಿಸ್ವರಬರುತ್ತೆ.

ಊಹಥುಃ—**ವಹಪ್ರಾಪಣೇ** ಲಿಟ್ ಥಸ್, **ತಸ್ಥಸ್ಥಮಿಪಾಂ** ಎಂದು ಆಥುಸ್, **ಅಸಂಯೋಗಾಲ್ಲಿಟ್ಕಿತ್** (ಪಾ. ಸೂ. ೧-೨-೫) ಎಂದು ಲಿಟ್ ಕಿತ್ ಆಗುತ್ತೆ. ದ್ವಿತ್ವ **ಲಿಟ್ಯಭ್ಯಾಸಸ್ಯೋಭಯೇಷಾಂ** (ಪಾ. ಸೂ. ೬-೧-೧೭) ಲಿಟ್ ಪರದಲ್ಲಿರುವಾಗ ವಚ್ಯಾದಿ ಮತ್ತು ಗ್ರಹ್ಯಾದಿ ಧಾತುಗಳ ಅಭ್ಯಾಸಕ್ಕೆ ಸಂಪ್ರಸಾರಣ ಬರುತ್ತೆ ಎಂದು ಅಭ್ಯಾಸದ ವಕಾರಕ್ಕೆ ಉಕಾರ, ಪೂರ್ವರೂಪ. **ಹಲಾದಿಃಶೇಷಃ** ಎಂದು ಹಕಾರ ಲೋಪ, ಉ+ವಹ್+ಅಥುಸ್ **ವಚಿಸ್ವಪಿಯಾದೀನಾಂಕಿತಿ** (ಪಾ. ಸೂ. ೬-೧-೧೫) ಕಿತ್ ಆದ ಪ್ರತ್ಯಯ ಪರದಲ್ಲಿದ್ದರೆ ವಚ್ ಸ್ವಪ್ ಧಾತುಗಳಿಗೂ ಯಜಾದಿ ಧಾತುಗಳಿಗೂ ಸಂಪ್ರಸಾರಣ ಬರುತ್ತೆ ಎಂದು ಸಂಪ್ರಸಾರಣ. ಪೂರ್ವರೂಪ ಉ-ಉಹ್-ಅಥುಸ್, ಸವರ್ಣದೀರ್ಘ, ರುತ್ವವಿಸರ್ಗಗಳು ಪ್ರತ್ಯಯಸ್ವರ ಬರುತ್ತೆ. ಯೇನ ಎಂಬ ಯದ್ವೃತ್ತದ ಯೋಗ ಇದೆ. ಆದ್ದರಿಂದ ಸರ್ವಾನುದಾತ್ತ ಬರುವುದಿಲ್ಲ ॥ ೯ ॥

ಸಂಹಿತಾಪಾಠಃ

ಉಕ್ಥೇಭಿರ್ವಾಗವಸೇ ಪುರೂವಸೂ ಆರ್ಕ್ಯೈಶ್ಚ ನಿ ಹ್ವಯಾಮಹೇ ।
ಶಶ್ವತ್ಕಣ್ವಾನಾಂ ಸದಸಿ ಪ್ರಿಯೇ ಹಿ ಕಂ ಸೋಮಂ ಪಪಥುರಶ್ವಿನಾ ॥೧೦॥

ಪದಪಾಠಃ

ಉಕ್ಥೇಭಿಃ । ಅರ್ವಾಕ್ । ಅವಸೇ । ಪುರುವಸೂ ಇತಿ ಪುರು ೩ ವಸೂ । ಆರ್ಕ್ಯೈಃ ।
ಚ । ನಿ । ಹ್ವಯಾಮಹೇ ॥
ಶಶ್ವತ್ । ಕಣ್ವಾನಾಂ । ಸದಸಿ । ಪ್ರಿಯೇ । ಹಿ । ಕಂ । ಸೋಮಂ । ಪಪಥುಃ ।
ಅಶ್ವಿನಾ ॥ ೧೦ ॥

ಸಾಯಣಭಾಷ್ಯಂ

ಪುರೂವಸೂ ಪ್ರಭೂತಧನಾವಶ್ವಿನಾವವಸೇ೨ಸ್ಮದ್ರಕ್ಷಣಾರ್ಥಮುಕ್ಥೇಭಿರುಕ್ಥೈಃ ಶಸ್ತ್ರೈರರ್ಕ್ಯೈಶ್ಚಾರ್ಚನಸಾಧನೈಃ ಸ್ತೋತ್ರೈಶ್ಚಾರ್ವಾಗಸ್ಮದಾಭಿಮುಖ್ಯೇನ ನಿ ಹ್ವಯಾಮಹೇ । ನಿತರಾಮಾಹ್ವಯಾಮಃ । ಹೇ ಅಶ್ವಿನಾ ಕಣ್ವಾನಾಂ ಕಣ್ವಪುತ್ರಾಣಾಂ ಮೇಧಾವಿನಾಂ ವಾ ಪ್ರಿಯೇ ಸದಸಿ ಯಜ್ಞಸ್ಥಾನೇ ಶಶ್ವತ್ಸರ್ವದಾ ಸೋಮಂ ಪಪಥುರ್ಹಿ ಕಂ । ಯುವಾಂ ಪೀತವಂತೌ ಖಲು । ಉಕ್ಥೇಭಿಃ । ಬಹುಲಂ ಛಂದ-

ಸೀತಿ ಭಿಸ ಐಸಾದೇಶಾಭಾವಃ । ಬಹುವಚನೇ ಝಲ್ಯೇದಿತ್ಯೇತ್ವಂ । ಅರ್ಕೈಃ । ಋಚೆ ಸ್ತುತೌ । ಪುಂಸಿ ಸಂಜ್ಞಾಯಾಂ ಘಃ ಪ್ರಾಯೇಣೇತಿ ಕರಣೇ ಘಃ । ಚಜೋಃ ಕು ಘಿಣ್ಯತೋರಿತಿ ಕುತ್ವಂ । ನಿ ಹ್ವಯಾಮಹೇ । ನಿಸಮುಪವಿಭ್ಯೋ ಹ್ವಃ । ಪಾ. ೧-೩-೩೦ । ಇತ್ಯಾತ್ಮನೇಪದಂ । ಸದಸಿ । ಸೀದಂತ್ಯಸ್ಮಿನ್ನಿತಿ ಸದಃ । ಅಸುನೋ ನಿತ್ತ್ವಾದಾದ್ಯುದಾತ್ತತ್ವಂ । ಪಪಥುಃ । ಪಾ ಪಾನೇ । ಲಿಟ್ಯಾತೋ ಲೋಪ ಇಟಿ ಚೇತ್ಯಾಕಾರಲೋಪಃ । ಪ್ರತ್ಯಯಸ್ವರಃ । ಹಿ ಚೇತಿ ನಿಘಾತಪ್ರತಿಷೇಧಃ ॥ ೨ ॥

॥ ಪ್ರತಿಪದಾರ್ಥ ॥

ಪುರೂವಸೂ—ಸಮೃದ್ಧವಾದ ಧನವುಳ್ಳ ಅಶ್ವಿನೀದೇವತೆಗಳನ್ನು । **ಅವಸೇ**—(ನಮ್ಮ) ರಕ್ಷಣಾರ್ಥವಾಗಿ । **ಉಕ್ಥೇಭಿಃ**—ಶಸ್ತ್ರಮಂತ್ರಗಳಿಂದಲೂ । **ಅರ್ಕೈಶ್ಚ**—ಪೂಜಾಸ್ತೋತ್ರಗಳಿಂದಲೂ । **ಅರ್ವಾಕ್**—ನಮಗೆ ಅಭಿಮುಖರನ್ನಾಗಿ (ನಮ್ಮಲ್ಲಿಗೆ ಬರುವುದಕ್ಕಾಗಿ) **ನಿ ಹ್ವಯಾಮಹೇ**—ಬಹಳವಾಗಿ (ಪ್ರಾರ್ಥಿಸಿ) ಕರೆಯುತ್ತೇವೆ। **ಅಶ್ವಿನಾ**—ಎಲೈ ಅಶ್ವಿನೀದೇವತೆಗಳೇ । **ಕಣ್ವಾನಾಂ**—ಕಣ್ವಪುತ್ರರ ಅಥವಾ ಮೇಧಾವಿಗಳಾದ ಋತ್ವಿಕ್ಕುಗಳ । **ಪ್ರಿಯೇ ಸದಸಿ**—ಬಲವುಳ್ಳ ಯಜ್ಞಸ್ಥಾನದಲ್ಲಿ । **ಶಶ್ವತ್**—ಯಾವಾಗಲೂ । **ಸೋಮಂ**—ಸೋಮರಸವನ್ನು । **ಪಪಥುಃ ಹಿ ಕಂ**—ಕುಡಿದಿದ್ದೀರಲ್ಲವೆ ?

॥ ಭಾವಾರ್ಥ ॥

ಸಮೃದ್ಧವಾದ ಐಶ್ವರ್ಯವುಳ್ಳ ಅಶ್ವಿನೀದೇವತೆಗಳನ್ನು, ನಮ್ಮ ರಕ್ಷಣಾರ್ಥವಾಗಿ ಇಲ್ಲಿ ನಮ್ಮ ಸವಿಾಪಕ್ಕೆ ದಯಮಾಡಲು ಉಕ್ಥಮಂತ್ರಗಳಿಂದಲೂ ಪೂಜಾಸ್ತೋತ್ರಗಳಿಂದಲೂ ಬಹಳವಾಗಿ ಪ್ರಾರ್ಥಿಸಿ ಕರೆಯುತ್ತೇವೆ. ಎಲೈ ಅಶ್ವಿನೀದೇವತೆಗಳೆ, ಕಣ್ವಪುತ್ರರ ಅಥವಾ ಮೇಧಾವಿಗಳಾದ ಋತ್ವಿಕ್ಕುಗಳ ಪ್ರೀತಿಪಾತ್ರವಾದ ಯಜ್ಞಸದಸ್ಸಿನಲ್ಲಿ ನೀವು ಯಾವಾಗಲೂ ಸೋಮರಸವನ್ನು ಕುಡಿದಿದ್ದೀರಲ್ಲವೇ ?

English Translation.

With hymns and songs we invoke the wealthy Aswins to be present for our protection. Have you not always drunk the soma juice in the favoured dwelling of the Kanwas ?

॥ ವಿಶೇಷ ವಿಷಯಗಳು ॥

ಉಕ್ಥೇಭಿಃ—ಶಸ್ತ್ರ ಮಂತ್ರಗಳಿಂದ ಎಂದರೆ ಗಟ್ಟಿಯಾಗಿ ಪಠಿಸುವ ಋಗ್ವೇದಮಂತ್ರಗಳಿಂದ.

ಅರ್ಕೈಶ್ಚ—**ಸೋತ್ರೈಶ್ಚ** । ಗಾನಮಾಡಲು ಯೋಗ್ಯವಾದ ಸಾಮವೇದಮಂತ್ರಗಳಿಂದ.

ಸದಸಿ ಪ್ರಿಯೇ—ನಿಮಗೆ ಪ್ರೀತಿಪಾತ್ರವಾದ ಕಣ್ವವಂಶಸ್ಥರ ಯಜ್ಞಶಾಲೆಯಲ್ಲಿ. **ಸೀದಂತ್ಯಸ್ಮಿನ್ನಿತಿ ಸದಃ** ಎಂದರೆ ಕುಳಿತುಕೊಳ್ಳುವ ಸ್ಥಳ, ಸಭೆ ಯಜ್ಞಶಾಲೆ ಇತ್ಯಾದಿ.

॥ ವ್ಯಾಕರಣಪ್ರಕ್ರಿಯಾ ॥

ಉಕ್ಥೇಭಿಃ—ವಚ ಪರಿಭಾಷಣೇ, **ಪಾತ್ರ್ಯಾ ತುದಿ ವಚಿ ರಿಚಿ ಸಿಚಿಭ್ಯಸ್ಥಕ್** (ಉ. ಸೂ. ೨-೧೬೪) ಈ ಧಾತುಗಳ ಮುಂದೆ ಥಕ್ ಬರುತ್ತೆ ಎಂದು ಥಕ್, **ವಚಿಸ್ವಪಿ** ಎಂದು ಸಂಪ್ರಸಾರಣ. **ಬಹುಲಂ ಛಂದಸಿ** (ಪಾ. ಸೂ. ೭-೧-೧೦) ಎಂದು ಐಸ್ ಬರುವುದಿಲ್ಲ. **ಬಹುವಚನೇ ಝಲ್ಯೇತ್** (ಪಾ. ಸೂ. ೭-೩-೧೦೩) ಝಲಾದಿಬಹುವಚನ ಸುಪ್ ಪರದಲ್ಲಿದ್ದರೆ ಅದಂತವಾದ ಅಂಗಕ್ಕೆ ಏತ್ವ ಬರುತ್ತೆ ಎಂದು ಏತ್ವ

ಆರ್ಕೈಃ—ಋಚ ಗತೌ ಧಾತು. **ಪುಂಸಿಸಂಜ್ಞಾಯಾಂ ಘಃ ಪ್ರಾಯೇಣ** (ಪಾ. ಸೂ. ೩-೩-೧೧೮) ಕರಣ ಅಥವಾ ಅಧಿಕರಣ ಎಂಬ ಅರ್ಥದಲ್ಲಿ ಧಾತುವಿನ ಮುಂದೆ ಪುಲ್ಲಿಂಗದಲ್ಲಿ ಪ್ರಾಯಃ ಘ ಪ್ರತ್ಯಯ ಬರುತ್ತೆ ಎಂದು ಘ ಪ್ರತ್ಯಯ. **ಚೇಜೋಃ ಕುಘಿಣ್ಯತೋಃ** (ಪಾ. ಸೂ. ೭-೩-೫೨) ಘಕಾರೇತ್ಸಂಜ್ಞಕ ಪ್ರತ್ಯಯ, ಣ್ಯತ್ ಪ್ರತ್ಯಯ, ಇವು ಪರದಲ್ಲಿರುವಾಗ ಚಕಾರ ಜಕಾರಗಳಿಗೆ ಕುತ್ವ ಅಂದರೆ ಕ್ರಮವಾಗಿ ಕಕಾರ ಗಕಾರಗಳು ಬರುತ್ತವೆ ಎಂದು ಚಕಾರಕ್ಕೆ ಕಕಾರ, ಋಕಾರಕ್ಕೆ ಲಘೂಪಧಗುಣ, ರಪರತ್ವ, ಅರ್ಕ ಎಂದಾಯಿತು.

ನಿಷ್ಪಯೋಮಹೇ—ಷ್ಟ್ಯೇಙ್ ಷ್ಪರ್ಧಾಯಾಂ ಶಬ್ದೇ ಚ ಧಾತು. ಇದು ಞಿತ್, ಕ್ರಿಯಾಫಲವು ಕರ್ತೃವಿಗೆ ಸೇರುವಾಗ ಇದರ ಮುಂದೆ ಆತ್ಮನೇಪದವು **ಸ್ವರಿತಞಿತಃ**, (ಪಾ. ಸೂ. ೧-೩-೭೨) ಎಂಬುದರಿಂದ ಸಿದ್ಧವಾಗುತ್ತೆ. ಫಲವು ಕರ್ತೃವಿಗೆ ಸೇರದೇ ಇದ್ದರೂ ಕೆಲವೆಡೆಗಳಲ್ಲಿ ಬರುತ್ತೆ. **ನಿಸಮುಪವಿಭ್ಯೋಽಪ್ಸ್ವಃ** (ಪಾ. ಸೂ. ೧-೩-೩೦) ನಿ ಸಮ್ ಉಪ ವಿ, ಈ ಉಪಸರ್ಗಗಳ ಮುಂದಿರುವ ಷ್ಟ್ಯೇಙ್ ಧಾತುವಿನಮುಂದಿರುವ ಲಕಾರಕ್ಕೆ ಆತ್ಮನೇಪದ ಬರುತ್ತೆ ಎಂಬುದರಿಂದ ಆತ್ಮನೇಪದ ಬರುತ್ತೆ.

ಸದಸಿ—ಸೀದನ್ತ್ಯಸ್ಮಿನ್ನಿತಿ ಸದಃ, ಎಲ್ಲರೂ ಒಟ್ಟಾಗಿ ಕೂರುವ ಸ್ಥಳ. **ಸರ್ವಧಾತುಭ್ಯೋಽಸುನ್** (ಉ. ಸೂ. ೪-೬೫೪) ಎಂದು ಷದ್ಲೃ (ಸದ್) ಧಾತುವಿನ ಮುದೆ ಅಸುನ್ ಪ್ರತ್ಯಯ, ನಿತ್ಸ್ವರ ಆದ್ಯುದಾತ್ತ ಬರುತ್ತೆ.

ಪಪಥುಃ—ಪಾ ಪಾನೇ ಧಾತು. ಲಿಟ್ ಥಸ್ ಅಥುಸ್, ಪಾ+ಅಥುಸ್ ದ್ವಿತ್ವ ಅಭ್ಯಾಸಕ್ಕೆ ಹ್ರಸ್ವ, ಪಪಾ+ಅಥುಸ್ **ಆತೋಲೋಪಃ ಇಟಿ ಚ** (ಪಾ- ಸೂ. ೬-೪-೬೪) ಕಿತ್ ಙಿತ್, ಆದ ಆಜಾದ್ಯಾರ್ಧಧಾತುಕವೂ ಇಡಾಗಮವೂ ಪರದಲ್ಲಿದ್ದರೆ ದೀರ್ಘಾಕಾರಕ್ಕೆ ಆಲೋಪ ಗೆ, ಬರುತ್ತೆ ಎಂದು ಆಗೆ ಲೋಪ. ರುತ್ವವಿಸರ್ಗಗಳು **ಹಿ, ಚೆ** (ಪಾ. ಸೂ. ೮-೧-೩೪) ಹಿ ಶಬ್ದದ ಯೋಗ ಇದ್ದರೆ ತಿಙಂತ ಅನುದಾತ್ತವಾಗುವುದಿಲ್ಲ ಎಂದು ಸರ್ವಾನುದಾತ್ತಕ್ಕೆ ಪ್ರತಿಷೇಧ. ಪ್ರತ್ಯಯಸ್ವರದಿಂದ ಅಥುಸ್ ನ ಅಕಾರ ಉದಾತ್ತ ॥ ೧೦ ॥

ನಲವತ್ತೆಂಟನೆಯ ಸೂಕ್ತವು

॥ ಸಾಯಣಭಾಷ್ಯಂ ॥

ಸಹ ವಾಮೇನೇತಿ ಷೋಡಶರ್ಚಂ ಪಂಚಮಂ ಸೂಕ್ತಂ । ಪ್ರಸ್ಕಣ್ವ ಋಷಿಃ । ಬಾರ್ಹತಶ್ವಾದಯೋಜೋ ಬೃಹತ್ಯೋ ಯೋಜಃ ಸತೋಬೃಹತ್ಯಃ । ಉಷಾ ದೇವತಾ । ಸಹ ಷೋಳಶೋಷಸ್ಯಂ ಶ್ವಿತ್ಯನುಕ್ರಮಣಿಕಾ । ಪ್ರಾತರನುವಾಕ ಉಷಸ್ಯೇ ಕ್ರತೌ ಬಾರ್ಹತೇ ಛಂದಸೀದಂ ಸೂಕ್ತಂ । ಅಥೋಷಸ್ಯ ಇತಿ ಖಂಡೇ ಸೂತ್ರಿತಂ । ಪ್ರತ್ಯು ಅದರ್ಶಿ ಸಹ ವಾಮೇನೇತಿ ಬಾರ್ಹತಂ । ಆ. ೪-೧೪ । ಇತಿ । ತಥಾ । ಶ್ವಿನಶಸ್ತ್ರೇಽಸ್ಯೇತತ್ಸೂಕ್ತಂ । ಪ್ರಾತರನುವಾಕನ್ಯಾಯೇನ । ಆ. ೬-೫ । ಇತ್ಯತಿದಿಷ್ಟತ್ವಾತ್ ॥

ಅನುವಾದ—ಸಹ ವಾಮೇನ ಎಂದು ಪ್ರಾರಂಭವಾಗುವ ಸೂಕ್ತವು ಒಂಭತ್ತನೆಯ ಅನುವಾಕದಲ್ಲಿ ಐದನೆಯ ಸೂಕ್ತವು. ಇದರಲ್ಲಿ ಹದಿನಾರು ಋಕ್ಕುಗಳಿರುವವು. ಈ ಸೂಕ್ತಕ್ಕೆ ಕಣ್ವಪುತ್ರನಾದ ಪ್ರಸ್ಕಣ್ವನು ಋಷಿಯು. ಈ ಸೂಕ್ತದ ಅಸಮಸಂಖ್ಯಾಕವಾದ ಎಂದರೆ ೧, ೩, ೫ ಇತ್ಯಾದಿ ಋಕ್ಕುಗಳು ಬೃಹತೀ ಛಂದಸ್ಸಿನವು. ಸಮಸಂಖ್ಯಾಕವಾದ ಋಕ್ಕುಗಳು ಎಂದರೆ ೨, ೪, ೬, ಇತ್ಯಾದಿ ಋಕ್ಕುಗಳು ಸತೋಬೃಹತೀಛಂದಸ್ಸಿನವು. ಉಷಾಃ ಎಂಬುದು ದೇವತೆಯು. **ಸಹ ಷೋಳಶೋಷಸ್ಯಂ** ಎಂದು ಅನುಕ್ರಮಣಿಕೆಯಲ್ಲಿ ಋಷಿದೇವತಾಛಂದಸ್ಸುಗಳ ವಿವರಣೆಯಿರುವುದು. ಪ್ರಾತರನುವಾಕಮಂತ್ರಪಠನಕಾಲದಲ್ಲಿ ಉಷಸ್ಯಕ್ರತು ಸಂಬಂಧವಾದ ಬೃಹತೀಛಂದಸ್ಸಿನ ಮಂತ್ರಗಳಿಗಾಗಿ ಈ ಸೂಕ್ತದ ಋಕ್ಕುಗಳನ್ನು ಪಠಿಸುವರು. ಈ ವಿಷಯವು ಆಶ್ವಲಾಯನ ಶ್ರೌತಸೂತ್ರದ ಅಥೋಷಸ್ಯ ಎಂಬ ಖಂಡದಲ್ಲಿ ಪ್ರತ್ಯು ಅದರ್ಶಿ ಸಹ ವಾಮೇನೇತಿ ಎಂಬ ಸೂತ್ರದಿಂದ ವಿವರಿಸಲ್ಪಟ್ಟಿರುವುದು. (ಆ. ೪-೧೪) ಇದಲ್ಲದೆ ಪ್ರಾತರನುವಾಕ ಮಂತ್ರಪಠನಕಾಲದಲ್ಲಿ ಆಶ್ವಿನಶಸ್ತ್ರಮಂತ್ರಗಳಿಗಾಗಿಯೂ ಈ ಸೂಕ್ತದ ವಿನಿಯೋಗವಿರುವುದೆಂದು ಅಲ್ಲಿಯೇ (ಆ. ೬-೫) ಹೇಳಿರುವುದು.

ಸೂಕ್ತ—೪೮

ಮಂಡಲ—೧ ॥ ಅನುವಾಕ—೯ ॥ ಸೂಕ್ತ—೪೮

ಅಷ್ಟಕ—೧ ॥ ಅಧ್ಯಾಯ—೪ ॥ ವರ್ಗ— ೩, ೪, ೫ ॥

ಸೂಕ್ತದಲ್ಲಿರುವ ಋಕ್ಸಂಖ್ಯೆ—೧-೧೬

ಋಷಿಃ—ಪ್ರಸ್ಕಣ್ವಃ ಕಾಣ್ವಃ ॥

ದೇವತಾ— ಉಷಾಃ ॥

ಛಂದಃ—ಪ್ರಾಗಾಥಂ ಬಾರ್ಹತಂ । ೧, ೩, ೫, ೭, ೯, ೧೧, ೧೩, ೧೫ ಬೃಹತೀ ।
೨, ೪, ೬, ೮, ೧೦. ೧೨, ೧೪, ೧೬ ಸತೋ ಬೃಹತೀ ॥

ಸಂಹಿತಾಪಾಠಃ

ಸಹ ವಾಮೇನ ನ ಉಷೋ ವ್ಯುಚ್ಛಾ ದುಹಿತರ್ದಿವಃ ।
ಸಹ ದ್ಯುಮ್ನೇನ ಬೃಹತಾ ವಿಭಾವರಿ ರಾಯಾ ದೇವಿ ದಾಸ್ವತೀ ॥ ೧॥

॥ ಪದಪಾಠಃ ॥

ಸಹ । ವಾಮೇನ । ನಃ । ಉಷಃ । ವಿ । ಉಚ್ಛ । ದುಹಿತಃ । ದಿವಃ ॥
ಸಹ । ದ್ಯುಮ್ನೇನ । ಬೃಹತಾ । ವಿಭಾ ऽ ವರಿ । ರಾಯಾ । ದೇವಿ । ದಾಸ್ವತೀ ॥೧॥

ಸಾಯಣಭಾಷ್ಯಂ

ಹೇ ದುಹಿತರ್ದಿವೋ ದ್ಯುದೇವತಾಯಾಃ ಪುತ್ರಿ ಉಷ ಉಷಃಕಾಲದೇವತೇ ನೋ೭ಸ್ಮದರ್ಥಂ ವಾಮೇನ ಧನೇನ ಸಹ ವ್ಯುಚ್ಛ । ಪ್ರಭಾತಂ ಕುರು । ಹೇ ವಿಭಾವರ್ಯುಷೋದೇವತೇ ಬೃಹತಾ ಪ್ರಭೂತೇನ ದ್ಯುಮ್ನೇನಾನ್ನೇನ ಸಹ ವ್ಯುಚ್ಛ । ಹೇ ದೇವಿ ತ್ವಂ ದಾಸ್ವತೀ ದಾನಯುಕ್ತಾ ಸತೀ ರಾಯಾ ಪಶುಲಕ್ಷಣೇನ ಧನೇನ ಸಹ ವ್ಯುಚ್ಛ ॥ ಉಚ್ಛ । ಉಛೀ ವಿವಾಸೇ । ದುಹಿತರ್ದಿವಃ । ಸುಬಾಮಂತ್ರಿತೇ ಪರಾಂಗವತ್ಸ್ವರ ಇತ್ಯತ್ರ ಪರಮಪಿ ಚ್ಛಂದಸಿ । ಪಾ. ೨-೧-೨-೬ । ಇತಿ ವಚನಾತ್ ದಿವ ಇತ್ಯಸ್ಯ ಪೂರ್ವಾಂಗವದ್ಭಾವೇ ಸತ್ಯಾಮಂತ್ರಿತಸ್ಯ ಚೇತಿ ಷಷ್ಠ್ಯಾಮಂತ್ರಿತಸಮುದಾಯಸ್ಯಾಷ್ಟಮಿಕಂ ಸರ್ವಾನುದಾತ್ತತ್ವಂ । ಬೃಹತಾ । ಬೃಹನ್ಮಹತೋರುಪಸಂಖ್ಯಾನಮಿತಿ ವಿಭಕ್ತೇರುದಾತ್ತತ್ವಂ । ವಿಭಾವರಿ । ಭಾ ದೀಪ್ತೌ । ಆತೋ ಮನಿನ್ನಿತ್ಯಾದಿನಾ ವನಿಪ್ । ವನೋ ರ ಚೇತಿ ಙೀಪ್ । ತಕ್ಪಂನಿಯೋಗೇನ ನಕಾರಸ್ಯ ರೇಫಾದೇಶಃ । ಸಂಬುದ್ಧೌ ಹ್ರಸ್ವತ್ವಂ । ದಾಸ್ವತೀ । ಡುದಾಞ್ ದಾನೇ । ಭಾವೇ೭ಸುನ್ಪ್ರತ್ಯಯಃ । ತದಭ್ಯಸ್ತಿ । ಪಾ. ೫-೨-೦೪ । ಇತಿ ದಾಸ್ವತೀ । ಮಾದುಪಧಾಯಾ ಇತಿ ಮತುಪೋ ವತ್ವಂ । ಉಗಿತಶ್ಚೇತಿ ಙೀಪ್ ॥

॥ ಪ್ರತಿಪದಾರ್ಥ ॥

ದುಹಿತರ್ದಿವಃ—ದ್ಯುದೇವತೆಯ ಪುತ್ರಿಯಾದ । ಉಷಃ—ಎಲೈ ಉಷೋದೇವತೆಯೇ । ನಃ—ನಮಗಾಗಿ । ವಾಮೇನ ಸಹ—ಧನದೊಂದಿಗೆ । ವ್ಯುಚ್ಛ—ಉದಯಿಸು । ವಿಭಾವರಿ—ಪ್ರಭೆಯನ್ನು ಹರಡುವ ಎಲೈ ಉಷಸ್ಸೇ । ಬೃಹತಾ—ಸಮೃದ್ಧವಾದ । ದ್ಯುಮ್ನೇನ ಸಹ—ಅನ್ನದೊಂದಿಗೆ (ಉದಯಿಸು) । ದೇವಿ—ಎಲೈ ದೇವಿಯೇ । ದಾಸ್ವತೀ—ದಾನಯುಕ್ತಳಾಗಿ । ರಾಯಾ—ಪಶುರೂಪವಾದ ಧನದೊಂದಿಗೆ (ಉದಯಿಸು).

॥ ಭಾವಾರ್ಥ ॥

ಸ್ವರ್ಗದ ಪುತ್ರಿಯಾದ ಎಲೈ ಉಷೋದೇವತೆಯೇ ನಮಗೋಸ್ಕರ ಧನದೊಂದಿಗೆ ಉದಯಿಸು. ಪ್ರಭಾಪ್ರಸಾರಕಳಾದ ಎಲೈ ಉಷಸ್ಸೇ, ಸಮೃದ್ಧವಾದ ಅನ್ನದೊಂದಿಗೆ ಉದಯಿಸು. ಎಲೈ ದೇವಿಯೇ ದಾನಯುಕ್ತಳಾಗಿ ಪಶ್ವಾದಿಧನದೊಂದಿಗೆ ಉದಯಿಸು.

English Translation.

O Ushas, daughter of heaven, dawn upon us with riches; O brilliant goddess dawn upon us with abundant food; bountiful goddess, dawn upon us with wealth (of cattle).

॥ ವಿಶೇಷ ವಿಷಯಗಳು ॥

ಈ ಸೂಕ್ತಕ್ಕೆ ಉಷಃಕಾಲವು ಅಥವಾ ಉಷಃಕಾಲಾಭಿಮಾನಿಯು ದೇವತೆಯು. ಋಗ್ವೇದದಲ್ಲಿ ಉಷೋದೇವತಾಕವಾದ ಸುಮಾರು ಇಪ್ಪತ್ತು ಸೂಕ್ತಗಳಿವೆ. ಇವುಗಳೆಲ್ಲಾ ಬಹಳ ಉತ್ತಮಶ್ರೇಣಿಗೆ ಸೇರಿದ ಸೂಕ್ತಗಳು ಎಂದರೆ ವರ್ಣನೆಯಲ್ಲಿಯೂ ಪದಗಳ ಜೋಡಣೆಯಲ್ಲಿಯೂ, ವಿಷಯನಿರೂಪಣೆಯಲ್ಲಿಯೂ ಬಹಳ ಮಹತ್ತ್ವಪೂರಿತವಾಗಿವೆ. ಸೂರ್ಯೋದಯಕ್ಕೆ ಮುಂಚೆ ರಾತ್ರಿ ಕಳೆದು ಬೆಳಕು ಹರಿಯುವಾಗ ಉಂಟಾಗುವ ಪ್ರಕಾಶವೇ ಉಷಃಕಾಲವು. ಈ ಉಷಃಕಾಲವು ಆಗಿನ ಕಾಲದ ಋಷಿಗಳಿಗೂ ಜನರಿಗೂ ಬಹಳ ಆನಂದವನ್ನುಂಟುಮಾಡಿರಬೇಕು. ಆದುದರಿಂದ ಅವರು ಉಷಃಕಾಲವರ್ಣನೆಯನ್ನು ಬಹಳ ಚೆನ್ನಾಗಿ ಮಾಡಿದಾರೆ. ಸಾಧಾರಣವಾಗಿ ಉಷಃಕಾಲವನ್ನು ಶರೀರಯುಕ್ತಳಾದ ಓರ್ವ ಸ್ತ್ರೀಯಂತೆ ಭಾವಿಸಿ ಆ ದೇವತೆಯ ಗುಣಗಳನ್ನೂ ಅಲಂಕಾರಾದಿಗಳನ್ನು ವಿಧವಿಧವಾಗಿ ಮಾಡಿರುವರು. ಅಂತರಿಕ್ಷದಿಂದ ನಮಗೆ ಬೆಳಕು ಬರುವುದರಿಂದ ಉಷಃಕಾಲವನ್ನು **ದುಹಿತರ್ದಿವಃ** ಎಂದರೆ ಅಂತರಿಕ್ಷದ ಅಥವಾ ಸ್ವರ್ಗದ ಪುತ್ರಿ ಎಂದು ವರ್ಣಿಸಿರುವುದು ಸಹಜವಾಗಿಯೇ ಇದೆ. ಈ ದೇವತೆಯು ಪ್ರತಿದಿನವೂ ಉದಯಿಸುತ್ತಿರುವುದರಿಂದ ಯಾವಾಗಲೂ ನವಯೌವನಭರಿತಳಾದ ತರುಣಿಯೆಂದೂ, ದಿನಗಳು ಕಳೆದಂತೆಲ್ಲಾ ಮನುಷ್ಯರ ಆಯುಸ್ಸನ್ನು ಕಡಮೆ ಮಾಡುವವಳೆಂದೂ ತಾನು ಉದಯಿಸಿದೊಡನೆಯೇ ಸಕಲ ಪ್ರಾಣಿಗಳಿಗೂ ಸಂತೋಷವನ್ನುಂಟುಮಾಡುವಳೆಂದೂ, ರಾತ್ರಿಯಲ್ಲಿ ಸಂಚಾರ ಮಾಡುವ ರಾಕ್ಷಸಪಿಶಾಚಾದಿನಿಶಾಚರರನ್ನು ತಾನು ಉದಯಿಸಿ ಓಡಿಸುವಳೆಂದೂ, ಪ್ರಾತಃಕಾಲದಲ್ಲಿ ಬೆಳಕನ್ನುಂಟುಮಾಡಿ ಗೋವುಗಳು ಕೊಟ್ಟಿಗೆಯಿಂದ ಹೊರಗೆ ಬರುವಂತೆ ಮಾಡುವುದರಿಂದ ಗೋವುಗಳ ತಾಯಿಯೆಂದೂ, ಸೂರ್ಯೋದಯಕಾಲದಲ್ಲಿ ಸೂರ್ಯರಶ್ಮಿಗಳು ಸ್ವಲ್ಪ ಕೆಂಪಾಗಿರುವುದರಿಂದ ಈ ದೇವತೆಯು ಕೆಂಪು ಕುದುರೆಗಳನ್ನು ಅಥವಾ ಎತ್ತುಗಳನ್ನು ಕಟ್ಟಿದ ರಥದಲ್ಲಿ ಕುಳಿತು ವೇಗವಾಗಿ ಸಂಚರಿಸುವಳೆಂದೂ ವಿಧವಿಧವಾದ ವರ್ಣನೆಗಳಿವೆ.

ಉಷಶ್ಶಬ್ದದ ರೂಪನಿಷ್ಪತ್ತಿಯ ವಿಚಾರದಲ್ಲಿ ಯಾಸ್ಕಮಹರ್ಷಿಗಳ ವಿವರಣೆಯು ಈರೀತಿ ಇರುವುದು—

ಉಷಾಃ ಕಸ್ಮಾದುಚ್ಛತೀತಿ ಸತ್ಯಾ ರಾತ್ರೇರಪರಃ ಕಾಲಃ ॥

ಉಷಾಃ ಎಂಬ ಶಬ್ದವು ಹೇಗುಂಟಾಯಿತು ಎಂದರೆ '' ಉಚ್ಛತೀತಿ ಸತ್ಯಾಃ ಉಚ್ಛೀ ವಿವಾಸೇ । ವಿವಾಸಯತಿ ಹೀಯಂ ತಮಾಂಸಿ ತಸ್ಮಾದುಚ್ಛತೀತ್ಯೇನಮಸ್ಯಾ ಉಷಾ ಇತ್ಯೇತಭಿಧಾನಂ ಭವತಿ । ಪುನರಿಯಮುಷಾ? ರಾತ್ರೇರಪರಃ ಕಾಲಃ ॥ (ನಿ. ೨-೧೯).

ಉಷಾಃ ಎಂಬ ಶಬ್ದವು ಉಚ್ಛೀ ಎಂಬ ಧಾತುವಿನಿಂದ ಉಂಟಾಗಿದೆ. ಈ ಧಾತುವಿಗೆ ಹೊರದೂಡುವುದು ಎಂದರ್ಥವು. ಏನನ್ನು ಹೊರದೂಡುವುದು ಎಂದರೆ ಕತ್ತಲೆಯನ್ನು. ಕತ್ತಲೆಯನ್ನು ಹೊರದೂಡಿ ಬೆಳಕನ್ನುಂಟುಮಾಡುವುದರಿಂದ ಈ ದೇವತೆಗೆ ಉಷಾಃ ಎಂದು ಹೆಸರು. ಈ ದೇವತೆಯು ಯಾರು ಎಂದರೆ ರಾತ್ರಿಯ ಕೊನೆಯಭಾಗವು, ಎಂದರೆ ರಾತ್ರಿಯು ಕಳೆದು ಸೂರ್ಯೋದಯಕ್ಕೆ ಪೂರ್ವದಲ್ಲಿ ಬೆಳಕು ಹರಿಯುವ ಕಾಲವು. ಇದಕ್ಕೆ ರಾತ್ರೇರಪರಃಕಾಲಃ ಎಂದು ಹೆಸರು. ಯಾಸ್ಕರು ತಮ್ಮ ನಿರುಕ್ತದ ಮತ್ತೊಂದು ಸ್ಥಳದಲ್ಲಿ ಇನ್ನೊಂದು ವಿಧವಾದ ಅರ್ಥವನ್ನು ಹೇಳಿರುವರು—

ಉಷಾಃ ವಷ್ಟೇಃ ಕಾಂತಿಕರ್ಮಣ ಉಚ್ಛತೇರಿತರಾ ಮಾಧ್ಯಮಿಕಾ ॥

(ನಿ. ೧೨-೭)

ಎಂದರೆ ಉಷಶ್ಶಬ್ದವು '' ವಶಕಾಂತೌ '' ಎಂಬ ಧಾತುವಿನಿಂದ ಉಂಟಾಗಿದೆ. ಪ್ರಕಾಶವನ್ನುಂಟುಮಾಡುವುದರಿಂದ ಈ ದೇವತೆಗೆ ಉಷಾಃ ಎಂದು ಹೆಸರು (ಕತ್ತಲೆಯನ್ನು ಹೊರದೂಡುವುದು ಎಂಬ ಅರ್ಥವನ್ನು ಕೊಡುವ ಉಚ್ಛತಿಧಾತುವಿನಿಂದ ಈ ಶಬ್ದನಿಷ್ಪತ್ತಿಯಾಗಿರುವುದನ್ನು ಮಾಧ್ಯಮಿಕವೆಂದು (optional) ಹೇಳಬೇಕು.

ಈ ಉಷೋದೇವತೆಯುಳ್ಳ ಋಷಿಗಳು—ಸೂರ್ಯನು ಹಿಂದಾಲಿಸುವುದರಿಂದ ಸೂರ್ಯನ ಪ್ರಿಯತಮೆ, ರಾತ್ರಿ ಮುಗಿದು ಬಳಿಕ ಉಷಃಕಾಲವು ಹುಟ್ಟುವುದರಿಂದ ರಾತ್ರಿಯ ಪುತ್ರಿ, ಆದಿತ್ಯ, ಭಗ, ವರುಣ ಇವರುಗಳ ಸಹೋದರಿ, ಸ್ವರ್ಗದ ಪುತ್ರಿ, ಅಶ್ವಿನೀದೇವತೆಗಳ ಸಖಿ ಮುಂತಾದ ವಿಶೇಷಣಗಳಿಂದ ಅನೇಕ ವಿಧವಾಗಿ ವರ್ಣಿಸಿದಾರೆ;

ದುಹಿತರ್ದಿವಃ—ಸ್ವರ್ಗದ ಅಥವಾ ಅಂತರಿಕ್ಷದ ಪುತ್ರಿ. ಬೆಳಕು ಎಂದರೆ ಸೂರ್ಯನ ಬೆಳಕು ನಮಗೆ ಅಂತರಿಕ್ಷ (ಸ್ವರ್ಗ)ದಿಂದ ಲಭಿಸುವುದರಿಂದಲೂ, ಸೂರ್ಯೋದಯಕ್ಕೆ **ಪೂರ್ವಭಾವಿಯಾಗಿಯೇ** ಉಷಃಕಾಲವು ಉಂಟಾಗುವುದರಿಂದಲೂ ಉಷೋದೇವತೆಯು **ದುಹಿತರ್ದಿವಃ** ಸ್ವರ್ಗದಪುತ್ರಿ (daughter of heaven) ಎಂದು ಕರೆಯಲ್ಪಡುವಳು.

ದ್ಯುಮ್ನಂ—ದ್ಯುಮ್ನಂ ದ್ಯೋತತೇರ್ಯಶೋ ವಾ ಅನ್ನಂ ವಾ ॥

(ನಿ. ೫-೬)

ದ್ಯುಮ್ನ ಶಬ್ದಕ್ಕೆ ಅನೇಕಾರ್ಥಗಳಿರುವವು. ಯಶಸ್ಸು ಅಥವಾ ಅನ್ನ. ಈ ಋಕ್ಕಿನಲ್ಲಿ ಧಾಷ್ಟ್ಯಕಾರರು ಅನ್ನವೆಂಬ ಅರ್ಥವನ್ನು ಸ್ವೀಕರಿಸಿರುವರು. ಮತ್ತು ಮಘಂ ರೇಕ್ಣಃ ಮೊದಲಾದ ಇಪ್ಪತ್ತೈಂಟು ಧನನಾಮಕ ಶಬ್ದಗಳ ಮಧ್ಯದಲ್ಲಿ ದ್ಯುಮ್ನ ಶಬ್ದವು ಪಠಿತವಾಗಿರುವುದರಿಂದ (ನಿ. ೩-೯) ದ್ಯುಮ್ನವೆಂದರೆ ಧನವೆಂದೂ ಅರ್ಥವಾಗುವುದು.

ವಿಭಾವರೀ—ವಿಭಾವರೀ, ಸೂನರೀ, ಭಾಸ್ವತೀ ಮೊದಲಾದ ಹದಿನಾರು ಉಷೋನಾಮಗಳ ಮಧ್ಯದಲ್ಲಿ ವಿಭಾವರೀ ಎಂಬ ಶಬ್ದವು ಪಠಿತವಾಗಿರುವುದರಿಂದ (ನಿ. ೨-೧೯) ವಿಭಾವರೀ ಎಂದರೆ ಉಷೋದೇವತೆಯು.

ದಾಸ್ವತೀ—ದಾನಯೋಗಾ । ಡುದಾಞ್ ದಾನೇ । ಕೊಡುವವಳು, ಅನ್ನ, ಧನ ಮೊದಲಾದವುಗಳನ್ನು ಕೊಡುವವಳು ಎಂದರ್ಥವು.

॥ ವ್ಯಾಕರಣಪ್ರಕ್ರಿಯಾ ॥

ಉಚ್ಛ—ಉಛೀ ವಿವಾಸೇ ಧಾತು. ಭ್ವಾದಿ. ಇದು ಸಾಮಾನ್ಯವಾಗಿ ವಿ ಎಂಬ ಉಪಸರ್ಗದಿಂದ ಕೂಡಿಯೇ ಇರುವುದು. ವಿವಾಸವೆಂದರೆ ಸಮಾಪ್ತಿ ಎಂದರ್ಥ. ಶಪ್ ವಿಕರಣ ಪ್ರತ್ಯಯ. ಮಧ್ಯಮಪುರುಷೈಕವಚನದ ಸಿಪ್ಪಿಗೆ ಹಿ ಆದೇಶಬಂದರೆ ಅಕಾರದ ಪರದಲ್ಲಿರುವುದರಿಂದ ಬಂದಿರುವ ಹಿಗೆ ಲುಕ್ ಬರುತ್ತದೆ. ಆಗ ಉಚ್ಛ ಎಂದು ರೂಪವಾಗುತ್ತದೆ-

ದುಹಿತರ್ದಿವಃ—**ಸುಬಾಮಂತ್ರಿತೇ ಪರಾಂಗವತ್‌ಸ್ವರೇ** (ಪಾ. ಸೂ. ೨-೧-೨) ಸ್ವರವನ್ನು ಮಾಡುವಾಗ ಸುಬಂತವಾದ ಒಂದು ಆಮಂತ್ರಿತ ಶಬ್ದವು ಪರದಲ್ಲಿರುವಾಗ ಪರದ ಅವಯವದಂತೆಯೇ ಆಗುವುದು. **ಈ ಸೂತ್ರದಲ್ಲಿ ಪರಮಪಿ ಛಂದಸಿ ಪೂರ್ವಾಂಗವಚ್ಛೇತಿವಕ್ತವ್ಯಂ** (ಪಾ. ಸೂ. ೨-೧-೨ ವಾರ್ತಿಕ ೧೬) ಎಂಬ ವಾರ್ತಿಕವು ಆರಬ್ಧವಾಗಿದೆ. ಛಂದಸ್ಸಿನಲ್ಲಿ ಪರದಲ್ಲಿರುವುದಕ್ಕೂ ಪೂರ್ವಾಂಗವದ್ಭಾವ ಬರುತ್ತದೆ ಎಂದು ಅದರರ್ಥ. ಇದನ್ನನುಸರಿಸಿ ಇಲ್ಲಿ ದುಹಿತಃ ಎಂಬುದು ಪೂರ್ವದಲ್ಲಿ ಆಮಂತ್ರಿತವಿದೆ. ಸಂಭೋಧನ ಪ್ರಥಮಾ ವಿಭಕ್ತಿಗೆ ಆಮಂತ್ರಿತವೆಂದು ಸಂಜ್ಞೆ. ಇದಕ್ಕೆ ದಿವಃ ಎಂಬ ಶಬ್ದವು ಪರದಲ್ಲಿದ್ದರೂ ಪೂರ್ವಾಂಗವದ್ಭಾವವನ್ನು ಹೊಂದುತ್ತದೆ. ದುಹಿತಃ ಎಂಬುದರ ಅಂಗವಾದುದರಿಂದ ದುಹಿತರ್ದಿವಃ ಎಂಬುದು ಒಂದು ಆಮಂತ್ರಿತವಾದ

ಹಾಗಾಗುತ್ತದೆ. ಆಗ **ಆಮಂತ್ರಿತಸ್ಯ ಚ** (ಪಾ. ಸೂ. ೮-೧-೧೯) ಪದದ ಪರದಲ್ಲಿರುವ ಪಾದದ ಆದಿಯಲ್ಲಿರದ ಆಮಂತ್ರಿತಕ್ಕೆ ಸರ್ವಾನುದಾತ್ತಸ್ವರ ಬರುತ್ತದೆ ಎಂಬುದರಿಂದ ಇಲ್ಲಿ ಆಮಂತ್ರಿತ ಸಮುದಾಯಕ್ಕೆ ಸರ್ವಾನುದಾತ್ತ ಸ್ವರ ಬರುತ್ತದೆ.

ಬೃಹತಾ—ಬೃಹತ್ ಶಬ್ದದ ಮೇಲೆ ತೃತೀಯೈಕವಚನ ಟಾ ವಿಭಕ್ತಿ ಬಂದರೆ ರೂಪಸಿದ್ಧಿಯಾಗುತ್ತದೆ. ವಿಭಕ್ತಿಗೆ ಆದ್ಯುದಾತ್ತವು ಪ್ರಾಪ್ತವಾದರೆ ಬೃಹನ್ಮಹತೋರುಪಸಂಖ್ಯಾನಮ್ (ವಾರ್ತಿಕ) ಎಂಬುದರಿಂದ ಬೃಹಚ್ಛಬ್ದದ ಪರದಲ್ಲಿರುವ ವಿಭಕ್ತಿಯು ಉದಾತ್ತವಾಗುತ್ತದೆ.

ವಿಭಾವರಿ—ಭಾ ದೀಪ್ತೌ ಧಾತು. ಅದಾದಿ. **ಆತೋಮನಿನ್ ಕ್ವನಿಪ್ ವನಿಪಶ್ಚ** (ಪಾ. ಸೂ. ೩-೨-೭೪) ಸುಬಂತವಾದ ಶಬ್ದವಾಗಲೀ ಉಪಸರ್ಗವಾಗ ಉಪಪದವಾಗಿರುವಾಗಲೀ ಅದಂತವಾದ ಧಾತುವಿಗೆ ಛಂದಸ್ಸಿನಲ್ಲಿ ಮನಿನಾದಿ ಪ್ರತ್ಯಯತ್ರಯಗಳು ಬರುತ್ತವೆ ಎಂಬುದರಿಂದ ಇಲ್ಲಿ ವಿ ಎಂಬ ಉಪಸರ್ಗವು ಉಪಪದವಾಗಿರುವುದರಿಂದ (ಸಮಾಪದಲ್ಲಿ ಉಚ್ಚರಿತವಾದ ಪದಕ್ಕೆ ಉಪಪದವೆಂದು ಹೆಸರು) ಭಾ ಧಾತುವಿಗೆ ವನಿಪ್ ಪ್ರತ್ಯಯಬರುತ್ತದೆ. ವಿಭಾವನ್ ಎಂದು ನಾಂತವಾದ ಶಬ್ದವಾಗುತ್ತದೆ. **ವನೋರಚಿ** (ಪಾ.ಸೂ.೪-೧-೭) ವನ್ನಂತವಾದುದರ ಮೇಲೂ ವನ್ನಂತವೇ ಅಂತ್ಯದಲ್ಲಿರುವ ಪ್ರಾತಿಪದಿಕದ ಮೇಲೂ ಸ್ತ್ರೀತ್ವವಿವಕ್ಷಾ ಮಾಡಿದಾಗ ಙೀಪ್ ಬರುತ್ತದೆ. ವನ್ ಎಂಬುದು ಇಲ್ಲಿ ಸಾಮಾನ್ಯ ಗ್ರಹಣ, ಅಂದರೆ ಜ್ವನಿಪ್, ಕ್ವನಿಪ್, ವನಿಪ್ ಈ ಮೂರರ ಅನುಬಂಧಗಳನ್ನು ತೆಗೆದರೆ ಉಳಿಯುವುದು ವನ್ನಾದುದರಿಂದ ಮೂರು ಪ್ರತ್ಯಯಗಳನ್ನು ತೆಗೆದುಕೊಳ್ಳಬೇಕು. ಪ್ರತ್ಯಯವನ್ನು ತೆಗೆದುಕೊಳ್ಳುವಾಗ ಅದು ಯಾವುದರಮೇಲೆ ವಿಹಿತವಾಗಿದೆಯೋ ಅದೇ ಆದಿಯಾಗಿ ಪ್ರತ್ಯಯವೇ ಅಂತವಾಗಿರುವ ಶಬ್ದಸ್ವರೂಪವನ್ನು ತೆಗೆದುಕೊಳ್ಳಬೇಕು. ಆದುದರಿಂದ ಇಲ್ಲಿ ಉಪಸರ್ಗವಿಶಿಷ್ಟವಾದುದರ ಮೇಲೆ ವನಿಪ್ ವಿಹಿತವಾದುದರಿಂದ ವಿಭಾವನ್ ಸಂಪೂರ್ಣ ತೆಗೆದುಕೊಳ್ಳಬೇಕು. ಅಂದರೆ ವನಿಬಂತವಾವುದು ಭಾವನೆಯೆಂಬುದು ಆಗುತ್ತದೆ ಇದನ್ನು ಅಧಿಕೃತವಾದ ಪ್ರಾತಿಪದಿಕಕ್ಕೆ ವಿಶೇಷಣಮಾಡುವುದರಿಂದ ವನಿಬಂತವೇ ಅಂತವಾಗಿರುವುದು ಎಂದರ್ಥವಾಗುತ್ತದೆ. ಙೀಪ್ ಬರುವಾಗ ಅದರೊಡನೆ ನಕಾರಕ್ಕೆ ರೇಫವೂ ಆದೇಶವಾಗಿ ಬರುತ್ತದೆ. ಆಗ **ವಿಭಾವರೀ** ಎಂದು ಙ್ಯಂತ ಶಬ್ದವಾಗುತ್ತದೆ. ಆದುದರಿಂದ **ಯೂಸ್ತ್ರ್ಯಾಖ್ಯೌ ನದೀ** (ಪಾ. ಸೂ. ೧-೪-೩) ಎಂಬುದರಿಂದ ನದೀ ಎಂಬ ಸಂಜ್ಞೆಯನ್ನು ಹೊಂದುತ್ತದೆ. ಇದಕ್ಕೆ ಸಂಬುದ್ಧಿವಾಡಿದಾಗ **ಅಂಬಾರ್ಥನದ್ಯೋರ್ಹ್ರಸ್ವಃ** (ಪಾ. ಸೂ. ೭-೩-೧೦೭) ಎಂಬುದರಿಂದ ನದ್ಯಂತಕ್ಕೆ ಹ್ರಸ್ವ ಬರುತ್ತದೆ. **ವಿಙ್ಹ್ರಸ್ವಾತ್ ಸಂಬುದ್ಧೇಃ** (ಪಾ. ಸೂ. ೬-೧-೬೯) ಎಂಬುದರಿಂದ ಹ್ರಸ್ವಾಂತದ ಪರದಲ್ಲಿರುವ ಸಂಬೋಧನೆಯ ಸು ವಿಭಕ್ತಿಗೆ ಲೋಪ ಬರುತ್ತದೆ.

ದಾಸ್ವತೀ—ಡುದಾಞ್ ದಾನೇ ಧಾತು. ಜುಹೋತ್ಯಾದಿ, ಇದಕ್ಕೆ **ಸರ್ವಧಾತುಭ್ಯೋಽಸುನ್** (ಉ. ಸೂ. ೬-೨೪) ಎಂಬುದರಿಂದ ಭಾವಾರ್ಥದಲ್ಲಿ ಅಸುನ್ ಪ್ರತ್ಯಯ ಬರುತ್ತದೆ. ಸಾಂತವಾದ ಶಬ್ದವಾಗುತ್ತದೆ. ದಾಃ= ದಾನಂ ಅಸ್ಯಾಸ್ತೀತಿ ದಾಸ್ವತೀ **ತದಸ್ಯಾಸ್ತ್ಯಸ್ಮಿನ್ ಇತಿ ಮತುಪ್** (ಪಾ. ಸೂ. ೫-೨-೯೪) ಎಂಬುದರಿಂದ ಮತುಪ್ ಪ್ರತ್ಯಯ ಬರುತ್ತದೆ. ದಾಸ್+ಮತುಪ್ ಎಂದಿರುವಾಗ **ಮಾಧುಮದಾಯೋಶ್ಚ** (ಪಾ. ಸೂ. ೮-೨-೯) ಎಂಬುದರಿಂದ ಇಲ್ಲಿ ಅಕಾರವು ಉಪಧೆಯಾಗಿರುವುದರಿಂದ ಪರದಲ್ಲಿರುವ ಮತುಪಿನ ಮಕಾರಕ್ಕೆ ವಕಾರ ಬರುತ್ತದೆ. ದಾಸ್ವತ್ ಶಬ್ದವಾಗುತ್ತದೆ. ಅದಕ್ಕೆ ಸ್ತ್ರೀತ್ವವನ್ನು ವಿವಕ್ಷೆಮಾಡಿದಾಗ **ಉಗಿತಶ್ಚ** (ಪಾ. ಸೂ. ೪-೩-೬) ಉಗಿದಂತವಾದ ಪ್ರಾತಿಪದಿಕದಮೇಲೆ ಸ್ತ್ರೀತ್ವವಿವಕ್ಷಾಮಾಡಿದಾಗ ಙೀಪ್ ಬರುತ್ತದೆ ಎಂಬುದರಿಂದ ಮತುಪಿನಲ್ಲಿ ಉಕಾರರೂಪ ಉಕ್ ಇತ್ತಾದುದರಿಂದ ತದಂತವಾದ ಪ್ರಾತಿಪದಿಕವಾದುದರಿಂದ ಙೀಪ್ ಬರುತ್ತದೆ. ದಾಸ್ವತೀ ಎಂಬುದು ಙ್ಯಂತವಾದ ಪದವಾಗುತ್ತದೆ. ॥ ೧ ॥

॥ ಸಂಹಿತಾಪಾಠಃ ॥

ಅಶ್ವಾವತೀರ್ಗೋಮತೀರ್ವಿಶ್ವಸುವಿದೋ ಭೂರಿ ಚ್ಯವಂತ ವಸ್ತವೇ ।
ಉದೀರಯ ಪ್ರತಿ ಮಾ ಸೂನೃತಾ ಉಷಶ್ಚೋದ ರಾಧೋ
ಮಘೋನಾಂ ॥ ೨ ॥

ಪದಪಾಠಃ

ಅಶ್ವಾ ಽವತೀಃ । ಗೋ ಽಮತೀಃ । ವಿಶ್ವ ಽಸುವಿದಃ । ಭೂರಿ । ಚ್ಯವಂತ । ವಸ್ತವೇ ।
ಉತ್ । ಈರಯ । ಪ್ರತಿ । ಮಾ । ಸೂನೃತಾಃ । ಉಷಃ । ಚೋದ । ರಾಧಃ ।
ಮಘೋನಾಂ ॥ ೨ ॥

ಸಾಯಣಭಾಷ್ಯಂ

ಅಶ್ವಾವತೀರ್ಬಹ್ವಶ್ವೋಪೇತಾ ಗೋಮತೀರ್ಬಹುಭಿರ್ಗೋಭಿರ್ಯುಕ್ತಾ ವಿಶ್ವಸುವಿದಃ ಕೃತ್ಸ್ನ-
ಸ್ಯ ಧನಸ್ಯ ಸುಷ್ಠು ಲಂಭಯಿತ್ರ್ಯ ಉಷೋದೇವತಾ ವಸ್ತವೇ ಪ್ರಜಾನಾಂ ನಿವಾಸಾಯ ಭೂರಿ ಪ್ರ-
ಭೂತಂ ಯಥಾ ಭವತಿ ತಥಾ ಚ್ಯವಂತ । ಪ್ರಾಪ್ತಾಃ । ಹೇ ಉಷೋದೇವತೇ ಮಾ ಪ್ರತಿ ಮಾಮುದ್ದಿಶ್ಯ
ಸೂನೃತಾಃ ಪ್ರಿಯಹಿತವಾಚ ಉದೀರಯ । ಬ್ರೂಹಿ । ಮಘೋನಾಂ ಧನವತಾಂ ಸಂಬಂಧಿ ರಾಧೋ
ಧನಂ ಚೋದ । ಅಸ್ಮದರ್ಥಂ ಪ್ರೇರಯ ॥ ಅಶ್ವಾವತೀಃ । ಮಂತ್ರೇ ಸೋಮಾಶ್ವೇಂದ್ರಿಯವಿಶ್ವದೇವ್ಯಸ್ಯ
ಮತೌ । ಪಾ. ೬-೩-೧೩೧ । ಇತಿ ಪೂರ್ವಪದಸ್ಯ ದೀರ್ಘತ್ವಂ । ವಾ ಛಂದಸೀತಿ ಪೂರ್ವಸವರ್ಣದೀರ್ಘ-
ನಿಷೇಧಸ್ಯ ಸಾಪ್ತಿಕಸ್ಯೋಕ್ತೇಃ ಪೂರ್ವಸವರ್ಣದೀರ್ಘತ್ವಂ । ಚ್ಯವಂತ । ಚ್ಯುಙ್ ಗತೌ । ಲಙಿ ಬಹುಲಂ
ಛಂದಸ್ಯಮಾಙ್ಯೋಗೇಽಪೀತ್ಯಡಭಾವಃ । ವಸ್ತವೇ । ವಸ ನಿವಾಸೇ । ತುಮರ್ಥೇ ಸೇಸೇನಿತಿ ತವೇನ್ಪ್ರ-
ತ್ಯಯಃ । ನಿತ್ತ್ವಾದಾದ್ಯುದಾತ್ತತ್ವಂ । ಈರಯ । ಈರ ಗತೌ ಕಂಪನೇ ಚ । ಹೇತುಮತಿ ಣಿಚ್ ।
ಚೋದ । ಚುದ ಸಂಚೋದನೇ ಚೌರಾದಿಕಃ । ಲೋಟಿ ಛಂದಸ್ಯಭಯೇಷೇತಿ ಶಪ ಆರ್ಧಧಾತುಕತ್ವಾತ್
ಣೇರನಿಟೀತಿ ಣಿಲೋಪಃ । ಶಪಃ ಪಿತ್ತ್ವಾದನುದಾತ್ತತ್ವೇ ಧಾತುಸ್ವರಃ । ಪಾದಾದಿತ್ವಾನ್ನಿಘಾತಾಭಾವಃ ।
ಮಘೋನಾಂ । ಷಷ್ಠ್ಯೇಬಹುವಚನೇ ಶ್ವಯುವಮಘೋನಾಮತದ್ಧಿತೇ । ಪಾ. ೬-೪-೧೩೩ । ಇತಿ ಸಂಪ್ರ-
ಸಾರಣಂ ॥

॥ ಪ್ರತಿಪದಾರ್ಥ ॥

ಅಶ್ವವತೀಃ—(ಬಹಳವಾಗಿ) ಅಶ್ವಗಳಿಂದೊಡಗೂಡಿದವರಾಗಿಯೂ । **ಗೋಮತೀಃ**—(ಬಹುವಾಗಿ) ಗೋವುಗಳುಳ್ಳವರಾಗಿಯೂ । **ವಿಶ್ವಸುವಿದಃ**—ಸಕಲ ವಿಧವಾದ ಧನವನ್ನೂ ಒದಗಿಸಿ ಅನುಗ್ರಹಿಸತಕ್ಕವರಾಗಿಯೂ ಇರುವ ಉಷೋದೇವತೆಗಳು । **ವಸ್ತೇವೇ**—(ಪ್ರಜೆಗಳ) ವಾಸಸ್ಥಾನಕ್ಕಾಗಿ । **ಭೂರಿ**—ಅತ್ಯಧಿಕವಾಗಿ (ಎಲ್ಲರಿಗೂ ಪರ್ಯಾಪ್ತವಾಗಿ ಆಗುವಂತೆ) । **ಚಿತ್ರಂವಂತೆ**—ಹೊಂದಿದ್ದಾರೆ । **ಉಷಃ**—ಎಲೈ ಉಷೋದೇವತೆಯೇ! **ಮಾ ಪ್ರತಿ**—ನನ್ನನ್ನು ಕುರಿತು (ನನ್ನೊಂದಿಗೆ) **ಸೂನೃತಾಃ**—ಪ್ರಿಯವಾಗಿಯೂ ಹಿತಕರವಾಗಿಯೂ ಇರುವ ಮಾತುಗಳನ್ನು । **ಉದೀರಯ**—ಆಡು । **ಮಘೋನಾಂ**—ಐಶ್ವರ್ಯವಂತರಿಗೆ ಸೇರಿದ । **ರಾಧಃ**—ಧನವನ್ನು । **ಚೋದ**—(ನಮಗೆ) ಕಳುಹಿಸು (ಬರುವಂತೆ ಮಾಡು).

॥ ಭಾವಾರ್ಥ ॥

ಉಷಃಕಾಲದ ದೇವತೆಗಳು ಅಶ್ವಗಳರೂಪವಾಗಿಯೂ, ಗೋವುಗಳ ರೂಪದಲ್ಲಿಯೂ ಇರತಕ್ಕ ಧನವನ್ನು ಸಮೃದ್ಧವಾಗಿ ಹೊಂದಿದ್ದಾರೆ. ಸಕಲ ಪ್ರಜೆಗಳ ವಾಸಸ್ಥಾನಕ್ಕೂ ಪರ್ಯಾಪ್ತವಾಗಿ ಆಗುವಂತೆ ಮಾಡುವ ಸಂಪತ್ತುಳ್ಳವರಾಗಿದ್ದಾರೆ. ಸಕಲ ವಿಧವಾದ ಧನಗಳನ್ನೂ ಪ್ರಜೆಗಳಿಗೆ ಒದಗಿಸಿ ಅನುಗ್ರಹಿಸತಕ್ಕವರು. ಎಲೈ ಉಷೋದೇವತೆಯೇ ನನ್ನೊಂದಿಗೆ ಪ್ರಿಯವಾಗಿಯೂ ಹಿತಕರವಾಗಿಯೂ ಇರುವ ಮಾತುಗಳನ್ನಾಡು. ಐಶ್ವರ್ಯವಂತರಲ್ಲಿರತಕ್ಕ ಧನವನ್ನು ನಮಗೂ ಸೇರುವಂತೆ ಮಾಡು.

English Translation.

Ushases, rich in horses, rich in cows, procurers of all wealth have many times dawned and passed away. Ushas, speak to me kind words and send us the affuence of the wealthy.

॥ ವಿಶೇಷ ವಿಷಯಗಳು ॥

ಈ ಋಕ್ಕಿನ ಪೂರ್ವಾರ್ಧದಲ್ಲಿ ಅಶ್ವಾವತೀಃ ಗೋಮತೀಃ ವಿಶ್ವಸುವಿದಃ ಎಂಬ ಬಹುವಚನಾಂತ ಶಬ್ದಗಳನ್ನು ಉಷೋದೇವತೆಗೆ ವಿಶೇಷಣವನ್ನಾಗಿ ಉಪಯೋಗಿಸಲಾಗಿದೆ. ಪ್ರತಿದಿನವೂ ಉಷಃಕಾಲವು ಪ್ರಾಪ್ತವಾಗುವುದರಿಂದ ಋಷಿಯು ಉಷೋದೇವತೆಯನ್ನು ಅನೇಕ ದೇವತೆಗಳೆಂದು ಭಾವಿಸಿ ಸ್ತೋತ್ರಮಾಡಿರುವನು. ಋಕ್ಕಿನ ಉತ್ತರಾರ್ಧದಲ್ಲಿ ಉಷೋದೇವತೆಯನ್ನು ಏಕವಚನದಲ್ಲಿ ಸಂಬೋಧನೆಮಾಡಲಾಗಿದೆ.

ಅಶ್ವಾವತೀಃ, ಗೋಮತೀಃ, ವಿಶ್ವಸುವಿದಃ—ಅಶ್ವಮೊದಲಾದವುಗಳನ್ನು ಹೊಂದಿರುವ ಎಂದರೆ ಅಶ್ವಗಳು, ಗೋವುಗಳು, ಧನ ಇವುಗಳನ್ನು ಕೊಡುವ ಎಂದಭಿಪ್ರಾಯವು. ಸ್ತೋತ್ರಮಾಡುವವರಿಗೆ ಅಶ್ವಾದಿಗಳನ್ನು ಕೊಟ್ಟು ಅವರ ವಿಷಯದಲ್ಲಿ ಹಿತವಚನಗಳನ್ನು ಆಡಬೇಕೆಂದೂ, ಐಶ್ವರ್ಯವಂತರಲ್ಲಿ ಇರುವಂತೆ ತನಗೂ ಧನವನ್ನು ಕೊಡಬೇಕೆಂದೂ ಮುಖ್ಯಾಭಿಪ್ರಾಯವು.

ಚ್ಯವಂತ—ಚ್ಯುಜ್ ಗತೌ । ಹೊಂದಿಸಿರಿ, ಸೇರಿಸಿರಿ.

ವಸ್ತವೇ—ವಸ ನಿವಾಸೇ । ನಿವಾಸಸ್ಥಾನಕ್ಕಾಗಿ ಎಂದರೆ ಗೃಹ ಮೊದಲಾದ ನಿವಾಸಸ್ಥಾನಗಳನ್ನು ನಮಗೆ ಲಭಿಸುವಂತೆ ಮಾಡಿರಿ ಎಂದಭಿಪ್ರಾಯವು.

ಚೋದ—ಪ್ರೇರಯ । ಪ್ರೇರಿಸು, ಅನುಗ್ರಹಿಸು.

ಮಘೋನಾಂ--ಮಘವೆಂದರೆ ಧನವು. ಧನವಂತರಲ್ಲಿ ಸಹಜವಾಗಿರಬೇಕಾದ ಧನವನ್ನು ನಮಗೂ ಅನುಗ್ರಹಿಸಿ ನಮ್ಮನ್ನೂ ಧನವಂತರನ್ನಾಗಿ ಮಾಡಬೇಕೆಂದು ಋಷಿಯ ಆಶಯವು.

॥ ವ್ಯಾಕರಣಪ್ರಕ್ರಿಯಾ ॥

ಅಶ್ವಾವತೀಃ—ಅಶ್ವಾಃ ಅಸಾಂ ಸಂತಿ ಎಂಬರ್ಥದಲ್ಲಿ **ಮತುಪ್** ಪ್ರತ್ಯಯ ಬಂದಿದೆ. ಅಕಾರದ ಪರದಲ್ಲಿ ಮತುಪ್ ಬಂದುದರಿಂದ **ಮಾದುಪಧಾಯಾಶ್ಚ**—ಸೂತ್ರದಿಂದ ಮಕಾರಕ್ಕೆ ವಕಾರಬರುತ್ತದೆ. **ಸ್ತ್ರೀತ್ವವಿವಕ್ಷಾಯಾಮಾಡಿ** ದಾಗ ಉಗಿತಶ್ಚ--ಸೂತ್ರದಿಂದ ಙೀಪ್ ಬರುತ್ತದೆ. ಅಶ್ವವತೀ ಎಂದಿರುವಾಗ, **ಮಂತ್ರೇ ಸೋಮಾಶ್ವೇಂದ್ರಿಯ ವಿಶ್ವದೇವ್ಯಸ್ಯ ಮತೌ** (ಪಾ. ಸೂ. ೬-೩-೧೩೧) ಸೋಮ, ಅಶ್ವ, ಇಂದ್ರಿಯ, ವಿಶ್ವದೇವ್ಯ. ಈ ನಾಲ್ಕುಶಬ್ದಗಳಿಗೆ ಮಂತ್ರದಲ್ಲಿ ಮತುಪ್ ಪರದಲ್ಲಿರುವಾಗ ದೀರ್ಘ ಬರುತ್ತದೆ. ಅಶ್ವಾವತೀ ಎಂದಾಗುತ್ತದೆ. ಪ್ರಥಮಾಬಹುವಚನ ಜಸ್ ಪರದಲ್ಲಿರುವಾಗ **ಪ್ರಥಮಯೋಃ ಪೂರ್ವಸವರ್ಣಃ** (ಪಾ. ಸೂ. ೬-೧-೧೦೨) ಎಂಬುದರಿಂದ ಪೂರ್ವಸವರ್ಣದೀರ್ಘವು ಪ್ರಾಪ್ತವಾದರೆ **ದೀರ್ಘಾಜ್ಜಸಿಚಿ** (ಪಾ. ಸೂ. ೬-೧-೧೦೫) ದೀರ್ಘದ ಪರದಲ್ಲಿ ಜಸ್ ಪರದಲ್ಲಿರುವಾಗಲೂ ಇಚ್ ಪರದಲ್ಲಿರುವಾಗಲೂ ಪೂರ್ವಸವರ್ಣದೀರ್ಘ ಬರುವುದಿಲ್ಲ ಎಂದು ನಿಷೇಧ ಬರುತ್ತದೆ. ಅಶ್ವಾವತ್ಯಃ ಎಂದಾಗಬೇಕಾಗುತ್ತದೆ. ಆದರೆ **ವಾ ಛಂದಸಿ** (ಪಾ. ಸೂ. ೬-೧-೧೦೬) ದೀರ್ಘದ ಪರದಲ್ಲಿ ಜಸ್ ಮತ್ತು ಇಚ್ ಪರದಲ್ಲಿರುವಾಗ ಪೂರ್ವಸವರ್ಣದೀರ್ಘವು ಛಂದಸ್ಸಿನಲ್ಲಿ ವಿಕಲ್ಪವಾಗಿ ಬರುತ್ತದೆ ಎಂಬುದರಿಂದ ಇಲ್ಲಿ ಪೂರ್ವಸವರ್ಣದೀರ್ಘ ಬಂದು ಅಶ್ವಾವತೀಃ ಎಂದಾಗುತ್ತದೆ.

ಚ್ಯವಂತ—ಚ್ಯುಙ ಗತೌ ಧಾತು. ಭ್ವಾದಿ. ಲಙ್ ಪ್ರಥಮಪುರುಷಬಹುವಚನರೂಪ. ಬಹುವಚನದ ಝಿ ಎಂಬುದಕ್ಕೆ ಅಂತಾದೇಶ ಬರುತ್ತದೆ. ಶಪ್ ವಿಕರಣ. ಲಙ್ ಪರದಲ್ಲಿರುವಾಗ ಧಾತುವಿಗೆ ಅಡಾಗಮ ಪ್ರಾಪ್ತವಾದರೆ **ಬಹುಲಂ ಛಂದಸ್ಯಾಮಾಙ್ಯೋಗೇಪಿ** (ಪಾ. ಸೂ. ೬-೪-೭೫) ಮಾಙ್ ಸಂಯೋಗವಿಲ್ಲದಿದ್ದರೂ ಛಂದಸ್ಸಿನಲ್ಲಿ ಅಟ್ ಆಟಗಳು ಬರುವುದಿಲ್ಲವೆಂಬುದರಿಂದ ಇಲ್ಲಿ ಅಡಾಗಮ ಬರುವುದಿಲ್ಲ. ಶಪ್ ಪರದಲ್ಲಿರುವಾಗ ಧಾತುವಿಗೆ ಗುಣ ಬರುತ್ತದೆ. ಅವಾದೇಶಪರರೂಪಗಳು ಬಂದರೆ ರೂಪಸಿದ್ಧಿಯಾಗುತ್ತದೆ.

ವಸ್ತವೇ—ವಸ ನಿವಾಸೇ ಧಾತು. ಭ್ವಾದಿ. ಕ್ರಿಯಾರ್ಥ ತೋರುವಾಗ ತುಮುನ್ ಪ್ರತ್ಯಯ ಪ್ರಾಪ್ತವಾದರೆ **ತುಮರ್ಥೇ ಸೇಸೇನ್** (ಪಾ. ಸೂ. ೩-೪-೯) ಎಂಬುದರಿಂದ ತುಮನರ್ಥದಲ್ಲಿ ತವೇನ್ ಪ್ರತ್ಯಯ ಬರುತ್ತದೆ. ತವೇನ್ ಎಂಬಲ್ಲಿ ನಕಾರ ಇತ್ಸಾಗುತ್ತದೆ. ಆದುದರಿಂದ **ಞ್ನಿತ್ಯಾದಿರ್ನಿತ್ಯಂ** (ಪಾ. ಸೂ. ೬-೧-೧೯೭) ಎಂಬುದರಿಂದ ಆದ್ಯುದಾತ್ತವಾಗುತ್ತದೆ.

ಈರಯ—ಈರ ಗತೌ ಕಂಪನೇ ಚ ಧಾತು- ಅದಾದಿ. **ಹೇತುಮತಿಚ** (ಪಾ. ಸೂ. ೩-೧-೨೬) ಪ್ರಯೋಜಕನ ಪೋಷಣಾದಿವ್ಯಾಪಾರವು ತೋರುತ್ತಿರುವಾಗ ಧಾತುವಿಗೆ ಣಿಚ್ ಬರುತ್ತದೆ ಎಂಬುದರಿಂದ ಇಲ್ಲಿ

ಪೋಷಣವು ತೋರುವುದರಿಂದ ಣಿಚ್ ಬಂದಿದೆ. ಸನಾದಿಯಲ್ಲಿ ಣಿಚ್ ಸೇರಿರುವುದರಿಂದ ಣಿಜಂತಕ್ಕೆ ಧಾತು ಸಂಜ್ಞೆ ಬರುತ್ತದೆ. ಲೋಟ್ ಮಧ್ಯಮಪುರುಷೈಕವಚನ ಸಿಪ್ ಪರದಲ್ಲಿರುವಾಗ ಶಪ್ ವಿಕರಣ ಬರುತ್ತದೆ. ಸಿಪ್ಪಿಗೆ ಹಿ ಆದೇಶ ಬಂದರೆ ಅಕಾರದ ಪರದಲ್ಲಿರುವುದರಿಂದ ಲುಕ್ ಬರುತ್ತದೆ. ಈರಿ+ ಆ ಎಂದಿರುವಾಗ ಗುಣ ಅಯಾದೇಶ ಗಳು ಬರುತ್ತವೆ.

ಚೋದ— ಚುದ ಸಂಚೋದನೆ ಧಾತು. ಚುರಾದಿ. ಚುರಾದಿಗಳಿಗೆ **ಸತ್ಯಾಪಪಾಶ** (ಪಾ. ಸೂ.೩-೧-೨೫) ಎಂಬುದರಿಂದ ಸ್ವಾರ್ಥದಲ್ಲಿ ಣಿಚ್ ಬರುತ್ತದೆ. ಣಿಚ್ ಪರದಲ್ಲಿರುವಾಗ ಧಾತುವಿನ ಲಘೂಪಧಕ್ಕೆ ಗುಣ ಬರುತ್ತದೆ. ಲೋಟ್ ಮಧ್ಯಮಪುರುಷ ಸಿಪ್ ಸ್ಥಾನಿತ ಹಿ ಪರದಲ್ಲಿರುವಾಗ ಣಿಜಂತಧಾತುವಿಗೆ ಶಪ್ ವಿಕರಣ ಬರುತ್ತದೆ ಚೋದಿ+ಅ+ಹಿ ಎಂದಿರುವಾಗ ಅಕಾರದ ಪರದಲ್ಲಿರುವ ಹಿಗೆ ಲುಕ್ ಬರುತ್ತದೆ. **ಛಂದೆಸ್ಯುಭಯೆಥಾ** (ಪಾ. ಸೂ. ೩-೪-೧೧೭) ಧಾತ್ವಧಿಕಾರದಲ್ಲಿ ವಿಹಿತಗಳಾದ ಪ್ರತ್ಯಯಗಳು ಸಾರ್ವಧಾತುಕ ಆರ್ಧಧಾತುಕಸಂಜ್ಞೆಗಳನ್ನು ಹೊಂದುತ್ತವೆ ಎಂಬುದರಿಂದ ಇಲ್ಲಿ ಶಪ್ ಪ್ರತ್ಯಯವು ಆರ್ಧಧಾತುಕಸಂಜ್ಞೆಯನ್ನು ಹೊಂದುತ್ತದೆ. ಆಗ **ಣೇರನಿಟಿ** (ಪಾ. ಸೂ. ೬-೪-೫೧) ಅನಿಡಾದಿಯಾದ ಆರ್ಧಧಾತುಕ ಪರದಲ್ಲಿರುವಾಗ ಣಿಗೆ ಲೋಪ ಬರುತ್ತದೆ ಎಂಬುದರಿಂದ ಶಪ್ ಪರದಲ್ಲಿರುವಾಗ ಣಿಗೆ ಲೋಪ ಬರುತ್ತದೆ. ಶಪಿನ ಅಕಾರ ಸೇರಿಸಿದಾಗ ಚೋದ ಎಂದು ರೂಪಸಿದ್ಧಿಯಾಗುತ್ತದೆ. ಶಪ್ ಪಿತ್ವಾದ್ದರಿಂದ **ಅನುದಾತ್ತಂ ಸುಪ್ಪಿತೌ** (ಪಾ. ಸೂ. ೩-೧-೪) ಎಂಬುದರಿಂದ ಅನುದಾತ್ತವಾಗುತ್ತದೆ. ಆಗ ಧಾತುಸ್ವರವೇ (ಅಂತೋದಾತ್ತ) ಉಳಿಯುತ್ತದೆ. **ತಿಙ್ಶಿತಿಜಃ** ಎಂಬುದರಿಂದ ನಿಘಾತವು ಪ್ರಾಪ್ತವಾದರೆ ಅಪವಾದವೌ ಎಂದು ನಿಷೇಧಿಸಿರುವುದರಿಂದ ಇಲ್ಲಿ ಪಾದದ ಆದಿಯಲ್ಲಿರುವುದರಿಂದ ಸರ್ವಾನುದಾತ್ತವು ಬರುವುದಿಲ್ಲ.

ಮಘೋನಾಮ್— ಶ್ವನ್ಯುಷ್ಟನ್ (ಉ. ಸೂ. ೧-೧೫೬) ಎಂಬುದರಿಂದ ನಿಪಾತಿತವಾಗಿದೆ. ಮಹ ಶಬ್ದದ ಮೇಲೆ ಕನಿಪ್ರತ್ಯಯವೂ ಪ್ರಕೃತಿಗೆ ಅವುಗಾಗಮವೂ ಹಕಾರಕ್ಕೆ ಘಕಾರವೂ ಶಾಸ್ತ್ರಾಂತರದಿಂದ ಬಾರದಿರುವುದರಿಂದ ನಿಪಾತಿತಗಳಾಗಿವೆ. ಇದರಮೇಲೆ ಷಷ್ಠೀಬಹುವಚನ ವಿವಕ್ಷಾಮಾಡಿದಾಗ ಮಘವನ್+ಆಮ್ ಎಂದಿರುವಾಗ, **ಸ್ವಯುವಮಘೋನಾಮತದ್ಧಿತೆ** (ಪಾ. ಸೂ. ೬-೪-೧೩೩) ಶ್ವನ್), ಯುವನ್, ಮಘವನ್ ಎಂಬ ಅನ್ನಂತವಾದ, ಭಸಂಜ್ಞೆಯುಳ್ಳ ಅಂಗಕ್ಕೆ ತದ್ಧಿತಭಿನ್ನಪ್ರತ್ಯಯ ಪರದಲ್ಲಿರುವಾಗ ಸಂಪ್ರಸಾರಣಬರುತ್ತದೆ ಎಂಬುದರಿಂದ ಇಲ್ಲಿ ಅಜಾದಿಪ್ರತ್ಯಯ ಪರದಲ್ಲಿರುವುದರಿಂದ **ಯಜಿಭಂ** ಎಂಬುದರಿಂದ ಭಸಂಜ್ಞೆ ಇರುವುದರಿಂದ ಸಂಪ್ರಸಾರಣ ಬರುತ್ತದೆ. **ಇಗ್ಯಣಃ ಸಂಪ್ರಸಾರಣಂ** ಎಂಬುದರಿಂದ ಯಣಿನ ಸ್ಥಾನಕ್ಕೆ ಬರುವ ಇಕ್ಕಿಗೆ ಸಂಪ್ರಸಾರಣವೆಂದು ಸಂಜ್ಞೆ. ಮಘವನ್ ಎಂಬಲ್ಲಿ ವಕಾರ ಯಣ್ಣಾದುದರಿಂದ ಇದಕ್ಕೆ ಆಂತರತಮ್ಯದಿಂದ ಉಕಾರ ರೂಪ ಸಂಪ್ರಸಾರಣವು ಬರುತ್ತದೆ. ಮಘು+ಉ+ಅನ್+ಆಮ್ ಎಂದಿರುವಾಗ **ಸಂಪ್ರಸಾರಣಾಚ್ಚ** (ಪಾ. ಸೂ. ೬-೧-೧೦೮) ಎಂಬುದರಿಂದ ಸಂಪ್ರಸಾರಣದ ಪರದಲ್ಲಿರುವ ಅಚಿಗೆ ಪೂರ್ವರೂಪವು ಬರುತ್ತದೆ. ಮಘು+ಉನ್+ಆಮ್ ಎಂದಿರುವಾಗ ಗುಣಸಂಧಿಬಂದರೆ ಉಕ್ತರೂಪಸಿದ್ಧಿಯಾಗುತ್ತದೆ ॥ ೨ ॥

॥ ಸಂಹಿತಾಪಾಠಃ ॥

ಉವಾಸೋಷಾ ಉಚ್ಛಾಚ್ಚ ನು ದೇವೀ ಜೀರಾ ರಥಾನಾಂ ।
ಯೇ ಅಸ್ಯಾ ಆಚರಣೇಷು ದಧ್ರಿರೇ ಸಮುದ್ರೋ ನ ಶ್ರವಸ್ಯವಃ ॥೩॥

॥ ಪದಪಾಠಃ ॥

ಉವಾ॑ಸ । ಉ॒ಷಾಃ । ಉ॒ಚ್ಚಾ॑ತ್ । ಚ॒ । ನು । ದೇ॒ವೀ । ಜೀ॒ರಾ । ರ॒ಥಾ॑ನಾಂ ।
ಯೇ । ಅ॒ಸ್ಯಾಃ । ಆ ಽ ಚ॑ರ॒ಣೇ॑ಷು । ದ॒ಧ್ರಿ॒ರೇ । ಸ॒ಮು॒ದ್ರೇ । ನ । ಶ್ರ॒ವ॒ಸ್ಯ॒ವಃ ೩॥

ಸಾಯಣಭಾಷ್ಯಂ

ಉಷಾ ದೇವ್ಯುವಾಸ । ಪುರಾ ನಿವಾಸಮಕರೋತ್ । ಪ್ರಭಾತಂ ಕೃತವತೀತ್ಯರ್ಥಃ । ಚ ನು ಅದ್ಯಾಪ್ಯುಚ್ಚಾತ್ । ವ್ಯುಚ್ಚತಿ । ಪ್ರಭಾತಂ ಕರೋತಿ । ಕೀದೃಶೀ ದೇವೀ । ರಥಾನಾಂ ಜೀರಾ ಪ್ರೇರಯಿತ್ರೀ । ಉಷಃಕಾಲೇ ಹಿ ರಥಾಃ ಪ್ರೇರ್ಯಂತೇ । ಅಸ್ಯಾ ಉಷಸ ಆಚರಣೇಷ್ವಾಗಮನೇಷು ಯೇ ರಥಾಃ ದಧ್ರಿರೇ ಧೃತಾಃ ಸಜ್ಜೀಕೃತಾ ಭವಂತಿ । ತೇಷಾಂ ರಥಾನಾಮಿತಿ ಪೂರ್ವತ್ರಾನ್ವಯಃ । ರಥಪ್ರೇರಣೇ ದೈಷ್ಟ್ಯಾಂತಃ । ಶ್ರವಸ್ಯವೋ ಧನಕಾಮಾಃ ಸಮುದ್ರೇ ನ । ಯಥಾ ಸಮುದ್ರಮಧ್ಯೇ ನಾವಃ ಸಜ್ಜೀಕೃತ್ಯ ಪ್ರೇರಯಂತಿ ತದ್ವತ್ ॥ ಉವಾಸ । ವಸ ನಿವಾಸೇ । ಣಲಿ ಲಿಟ್ಯಭ್ಯಾಸಸ್ಯೋಭಯೇಷಾಂ । ಪಾ. ೬-೧-೧೭। ಇತ್ಯಭ್ಯಾಸಸ್ಯ ಸಂಪ್ರಸಾರಣಂ । ಲಿತ್ಸ್ವರೇಣ ಪ್ರತ್ಯಯಾತ್ಪೂರ್ವಸ್ಯೋದಾತ್ತತ್ವಂ । ಉಚ್ಚಾತ್ । ಲೇಟ್ಯಾಡಾಗಮಃ । ಇತಶ್ಚ ಲೋಪ ಇತೀಕಾರಲೋಪಃ । ತುದಾದಿತ್ವಾಚ್ಛಪ್ರತ್ಯಯಃ । ತಿಗಮಾನುದಾತ್ತತ್ವೇ ಪ್ರತ್ಯಯಸ್ವರಃ । ಉಷಾ ಇತ್ಯಸ್ಯ ವಾಕ್ಯಾಂತರಗತತ್ವಾತ್ತದಪೇಕ್ಷಯಾಸ್ಯ ನಿಘಾತೋ ನ ಭವತಿ । ಸಮಾನವಾಕ್ಯೇ ನಿಘಾತಯುಷ್ಮದಸ್ಮದಾದೇಶಾ ವಕ್ತವ್ಯಾಃ । ಪಾ. ೮-೧-೧೮-೫ । ಇತಿ ವಚನಾತ್ । ಜೀರಾ । ಜು ಇತಿ ಗತ್ಯರ್ಥಃ ಸೌತ್ರೋ ಧಾತುಃ । ಜೋರೀ ಚ । ಉ. ೨-೨೩ । ಇತಿ ರಕ್ಪ್ರತ್ಯಯಃ । ಅಸ್ಯಾಃ । ಇದಮೋಽನ್ವಾದೇಶ ಇತ್ಯಶಾದೇಶೋಽನುದಾತ್ತಃ । ವಿಭಕ್ತಿರಪಿ ಸುಪ್ತ್ವಾದನುದಾತ್ತೇತಿ ಸರ್ವಾನುದಾತ್ತತ್ವಂ । ಆಚರಣೇಷು । ಚರ ಗತ್ಯರ್ಥಃ । ಲ್ಯುಟ್ಟ । ಪಾ. ೩-೩-೧೧೫ । ಇತಿ ಭಾವೇ ಲ್ಯುಟ್ । ಲಿತ್ಸ್ವರೇಣ ಪ್ರತ್ಯಯಾತ್ಪೂರ್ವಸ್ಯೋದಾತ್ತತ್ವಂ । ಕೃದುತ್ತರಪದಪ್ರಕೃತಿಸ್ವರತ್ವಂ । ದಧ್ರಿರೇ । ಧೃಙ್ ಅವಸ್ಥಾನೇ । ಲಿಟಃ ಕಿತ್ತ್ವಾದ್ಗುಣಾಭಾವೇ ಯೆಣಾದೇಶಃ । ಚಿತ್ತ್ವಾದಂತೋದಾತ್ತತ್ವಂ । ಯುಚ್ಛ್ಬ್ಯೋರ್ಗಾದನಿಘಾತಃ । ಶ್ರವಸ್ಯವಃ । ಶ್ರೂಯತ ಇತಿ ಶ್ರವೋ ಧನಂ । ಅಸುನ್ । ತದಾತ್ಮನ ಇಚ್ಛಂತೀತಿ ಶ್ರವಸ್ಯವಃ । ಸುಪ ಆತ್ಮನಃ ಕ್ಯಚ್ । ಕ್ಯಾಚ್ಛಂದಸೀತ್ಯುಪ್ರತ್ಯಯಃ ॥

॥ ಪ್ರತಿಪದಾರ್ಥ ॥

ಶ್ರವಸ್ಯವಃ—ಧನವನ್ನಪೇಕ್ಷಿಸುವವರು । **ಸಮುದ್ರೇ ನ**—ಸಮುದ್ರ (ಮಧ್ಯ)ದಲ್ಲಿ ದೋಣಿಗಳನ್ನು ಕಟ್ಟಿಕೊಂಡು ನಡಿಸುವಂತೆ । **ಅಸ್ಯಾಃ**—ಈ ಉಷಸ್ಸಿನ । **ಆಚರಣೇಷು**—ಆಗಮನಕಾಲಗಳಲ್ಲಿ । **ಯೇ**—ಯಾವ ರಥಗಳು । **ದಧ್ರಿರೇ**—ಕುದುರೆಗಳನ್ನು ಕಟ್ಟಿ ಪ್ರಯಾಣಕ್ಕೆ ಸಿದ್ಧ ಮಾಡಲ್ಪಡುವುವೋ । **ರಥಾನಾಂ**—(ಆ) ರಥಗಳ । **ಜೀರಾ**—ಪ್ರೇರಕಳಾದ । **ಉಷಾಃ ದೇವೀ**—ದಿವ್ಯ ಸ್ವರೂಪವುಳ್ಳ ಉಷೋ ದೇವತೆಯು । **ಉವಾಸ**—ವಾಸಸ್ಥಾನವನ್ನು ಮಾಡಿಕೊಂಡಳು. (ಪೂರ್ವದಲ್ಲೂ ಉದಯಿಸಿ ಪ್ರಭಾತವನ್ನುಂಟು ಮಾಡಿದಳು) । **ಚ ನು**—ಈಗಲೂ ಕೂಡ । **ಉಚ್ಚಾತ್**—ಉದಯಿಸಿ ಪ್ರಭಾತವನ್ನುಂಟುಮಾಡುತ್ತಾಳೆ.

॥ ಭಾವಾರ್ಥ ॥

ಧನಾಪೇಕ್ಷಿಗಳು ಸಮುದ್ರ ಮಧ್ಯದಲ್ಲಿ ನೌಕೆಗಳನ್ನು ಕಟ್ಟಿಕೊಂಡು ಯಾವರೀತಿ ಅವನ್ನು ನಡಿಸುವರೋ ಅದರಂತೆ ತನ್ನ ಆಗಮನಕಾಲಗಳಲ್ಲಿ ಪ್ರಯಾಣಕ್ಕೆ ಸಿದ್ಧಮಾಡಲ್ಪಟ್ಟ ರಥಗಳನ್ನು ದಿವ್ಯಸ್ವರೂಪಳಾದ ಉಷೋದೇವತೆಯು ನಡೆಸುವಳು. ಆ ರಥಗಳ ಪ್ರೇರಕಳಾದ ಉಷೋದೇವತೆಯು ಹಿಂದೆ (ಅನೇಕಾವರ್ತಿ) ಉದಯಿಸಿ ಪ್ರಭಾತವನ್ನುಂಟುಮಾಡಿದ್ದಾಳೆ. ಈಗಲೂ ಕೂಡ ಉದಯಿಸಿ ಪ್ರಭಾತವನ್ನುಂಟುಮಾಡುತ್ತಾಳೆ.

English Translation.

The divine Ushas dwelt (many times); may she dawn to-day, the propeller of chariots which are harnessed (with horses) at her coming, as those who are desirous of wealth send ships to sea.

॥ ವಿಶೇಷ ವಿಷಯಗಳು ॥

ಉವಾಸೋಷಾಃ—ಉಷೋದೇವತೆಯು (ಹಿಂದೆ) ವಾಸಮಾಡಿದಳು ಎಂದರೆ ಹಿಂದೆ ಅನೇಕಾವರ್ತಿ ಉದಯಿಸಿರುವಳು. ಈಗಲೂ ಮುಂದೆಯೂ ಉದಯಿಸುವಳು ಎಂದಭಿಪ್ರಾಯವು.

ಶ್ರವಸ್ಯವಃ—ಶ್ರೂಯತ ಇತಿ ಶ್ರವೋ ಧನಂ ! ಮಘಂ ರೇಕ್ಣಃ ಮೊದಲಾದ ಇಪ್ಪತ್ತೈಂಟು ಧನನಾಮಗಳ ಮಧ್ಯದಲ್ಲಿ ಶ್ರವಃ ಎಂಬ ಶಬ್ದವು ಪಠಿತವಾಗಿರುವುದರಿಂದ ಶ್ರವಃ ಎಂದರೆ ಧನವು. **ತದಾತ್ಮನ ಇಚ್ಛಂತೀತಿ ಶ್ರವಸ್ಯವಃ** ಧನವನ್ನು ಅಪೇಕ್ಷಿಸುವವರಿಗೆ ಶ್ರವಸ್ಯವಃ ಎಂದು ಹೆಸರು.

॥ ವ್ಯಾಕರಣಪ್ರಕ್ರಿಯಾ ॥

ಉವಾಸ—ವಸ ನಿವಾಸೇ ಧಾತು. ಭ್ವಾದಿ ಲಿಚ್ ಪ್ರಥಮಪುರುಷೈಕವಚನರೂಪ. ಲಿಚಿನ ತಿಪ್ಪಿಗೆ **ಪೆರಸ್ಮೈಪದಾನಾಂ**—(ಪಾ. ಸೂ. ೩-೪-೮೨) ಎಂಬುದರಿಂದ ಣಲ್ ಎಂಬ ಆದೇಶ ಬರುತ್ತದೆ. ಲಿಟ್ ಪರದಲ್ಲಿರುವಾಗ **ಲಿಟಿಧಾತೋ** (ಪಾ. ಸೂ. ೬-೧-೮) ಎಂಬುದರಿಂದ ಧಾತುವಿಗೆ ದ್ವಿತ್ವಬರುತ್ತದೆ. ವಸ್ ವಸ್+ಅ ಎಂದಿರುವಾಗ **ಹಲಾದಿಃಶೇಷಃ** (ಪಾ. ಸೂ. ೭-೪-೬೦) ಎಂಬುದರಿಂದ ಅಭ್ಯಾಸಸಂಜ್ಞೆಯುಳ್ಳ ಪೂರ್ವಖಂಡದ ಆದಿಯ ಹಲ್ ಮಾತ್ರ ಉಳಿಯುತ್ತದೆ. **ಲಿಚ್ಯಾಭ್ಯಾಸಸ್ಯೋಭಯೇಷಾಂ** (ಪಾ. ಸೂ. ೬-೧-೧೭) ಲಿಟ್ ಪರದಲ್ಲಿರುವಾಗ ವಚ್ಯಾದಿಗಳ ಮತ್ತು ಗೃಹ್ಯಾದಿಗಳ ಅಭ್ಯಾಸಕ್ಕೆ ಸಂಪ್ರಸಾರಣವು ಬರುತ್ತದೆ. ವಚ್ಯಾದಿಯಲ್ಲಿರುವ ಯಜಾದಿಗಳಲ್ಲಿ ವಸಧಾತುವು ಸೇರಿದೆ. ಆದುದರಿಂದ ಇದರ ಅಭ್ಯಾಸಕ್ಕೆ ಸಂಪ್ರಸಾರಣ ಬರುತ್ತದೆ. ಸಂಪ್ರಸಾರಣದ ಪರದ ಅಚಿಗೆ ಪೂರ್ವರೂಪವು ಬರುತ್ತದೆ. ಉವಸ್+ಅ ಎಂದಿರುವಾಗ ಣಲಿನಲ್ಲಿ ಣಕಾರವು ಇತ್ತಾದುದರಿಂದ **ಅತ ಉಪಧಾಯಾಃ** (ಪಾ. ಸೂ. ೭-೨-೧೧೬) ಎಂಬುದರಿಂದ ಉಪಧಾವೃದ್ಧಿ ಬರುತ್ತದೆ. ಉವಾಸ ಎಂದು ರೂಪಸಿದ್ಧವಾಗುತ್ತದೆ. ಣಲ್ ಪ್ರತ್ಯಯವು ಲಿತ್ತಾದುದರಿಂದ **ಲಿತಿ** (ಪಾ. ಸೂ. ೬-೧-೧೯೩) ಲಿತ್ತಾದ ಪ್ರತ್ಯಯದ ಪೂರ್ವದಲ್ಲಿರುವುದು ಉದಾತ್ತವಾಗುತ್ತದೆ ಎಂಬುದರಿಂದ ಇಲ್ಲಿ ವಕಾರೋತ್ತರಾಕಾರವು ಉದಾತ್ತವಾಗುತ್ತದೆ. **ಅನುದಾತ್ತಂ ಪದಮೇಕವರ್ಜಂ** ಎಂಬುದರಿಂದ ಉಳಿದಿದ್ದು ಅನುದಾತ್ತವಾಗುತ್ತದೆ. ಸಕಾರೋತ್ತರಾಕಾರವು ಉದಾತ್ತದ ಪರದಲ್ಲಿರುವುದರಿಂದ ಸ್ವರಿತವಾಗುತ್ತದೆ.

ಉಚ್ಚಾತ್—ಉಛೀ ವಿವಾಸೇ ಧಾತು ತುದಾದಿ. ಭ್ವಾದಿಪಠಿತವಾದುದು ಸಾಮಾನ್ಯವಾಗಿ ವಿಪೂರ್ವವಾಗಿಯೇ ಇರುತ್ತದೆ. ತುದಾದಿಯಾದುದರಿಂದ **ತುದಾದಿಭ್ಯಃ ಶಃ** (ಪಾ.ಸೂ. ೩-೧-೭೭) ಎಂಬುದರಿಂದ ಶ ಎಂಬ ವಿಕರಣ ಬರುತ್ತದೆ. ಲೇಟ್ ಪ್ರಥಮಪುರುಷೈಕವಚನ ತಿಪ್ ಪ್ರತ್ಯಯ ವಾಡಿದಾಗ ತಿ ಎಂಬುದರ ಇಕಾರಕ್ಕೆ **ಇತಶ್ಚ ಲೋಪಃ ಪರಸ್ಮೈಪದೇಷು** (೩-೪-೯೭) ಲೇಟಿನ ತಿಜಿ ಪ್ರತ್ಯಯಗಳ ಇಕಾರಕ್ಕೆ ಪರಸ್ಮೈಪದವಿಷಯದಲ್ಲಿ ಲೋಪ ಬರುತ್ತದೆ ಎಂಬುದರಿಂದ ಲೋಪಬರುತ್ತದೆ. **ಲೇಟೋಡಾಟೌ** (ಪಾ.ಸೂ. ೩-೪-೯೪) ಲೇಟಿಗೆ ಆಟ್ ಆಟ್ ಎಂಬ ಎರಡು ಆಗಮುಗಳು ಬರುತ್ತವೆ ಎಂಬುದರಿಂದ ಇಲ್ಲಿ ಆಡಾಗಮು ಬರುತ್ತದೆ. **ಛೇಚೆ** ಎಂಬುದರಿಂದ ಉರೂಪ ಹ್ರಸ್ವಕ್ಕೆ ಛಕಾರ ಪರದಲ್ಲಿರುವುದರಿಂದ ತುಕಾಗಮವು ಬರುತ್ತದೆ. ಆದಕ್ಕೆ ಶ್ಚುತ್ವದಿಂದ ಚಕಾರ ಬರುರ್ತದೆ. ಉಚ್ಚಾತ್ ಎಂದಿರುವಾಗ ಇಲ್ಲಿ ಶಪ್ ಪಿತ್ತಾದುದರಿಂದ ಅನುದಾತ್ತ ಸ್ವರವು ಬರುತ್ತದೆ. ಲೇಟಿಗೆ ಬಂದಿರುವ ಆಟಾಗಮವು **ಆಗಮಾ ಅನುದಾತ್ತಾಃ** ಎಂಬುದರಿಂದ ಅನುದಾತ್ತವಾಗುತ್ತದೆ. ಆಗ **ಆದ್ಯುದಾತ್ತಶ್ಚ** (ಪಾ.ಸೂ. ೩-೧-೩) ಎಂಬುದರಿಂದ ಪ್ರತ್ಯಯದ ಆದ್ಯುದಾತ್ತಸ್ವರ ಬರುತ್ತದೆ. ಆದುದರಿಂದ ಅಂತೋದಾತ್ತವಾಗಿ ಉಚ್ಚಾತ್ ಎಂಬುದಾಗಿ ಆಗುತ್ತದೆ. **ಸಮಾನವಾಕ್ಯೇ ನಿಘಾತಯೆುಷ್ಮದಸ್ಮದ್ಗಾದೇಶಾ ವಕ್ತವ್ಯಾಃ** (ಪಾ. ಸೂ. ೮-೧-೧೮ ವಾ. ೫) ನಿಮಿತ್ತ ನಿಮಿತ್ತಗಳು ಏಕವಾಕ್ಯದಲ್ಲಿರುವಾಗ ನಿಘಾತವನ್ನು (ಸರ್ವಾನುದಾತ್ತ) ಹೇಳಬೇಕು ಎಂಬುದರಿಂದ, ಇಲ್ಲಿ ಉಷಾಃ ಎಂಬುದರ ಪರದಲ್ಲಿ ತಿಙಂತಬಂದರೂ ಉಷಾಃ ಎಂಬುದು ಬೇರೆ ವಾಕ್ಯದ ಸಂಬಂಧವನ್ನು ಹೊಂದಿರುವುದರಿಂದ ವಾಕ್ಯಾಂತರದಲ್ಲಿರುವ ಉಚ್ಚಾತ್ ಎಂಬುದಕ್ಕೆ ಯಾವ ಸಂಬಂಧವೂ ಇಲ್ಲದಿದ್ದುರಿಂದ ತಿಙ್ಙತಿಙಃ ಎಂಬುದರಿಂದ ನಿಘಾತವು ಬರುವುದಿಲ್ಲ.

ಜೀರಾ—ಜು ಗತೌ ಧಾತು. ಇದು ಭ್ವಾದಿ ಪಠಿತವಾದುದಲ್ಲ. ಗತ್ಯರ್ಥಕವಾಗ ಸೌತ್ರಧಾತುವು. ಸೂತ್ರದಲ್ಲಿ ಮಾತ್ರ ನಿರ್ದಿಷ್ಟವಾಗಿದೆ. ಇದಕ್ಕೆ **ಜೋರೀಚ** (ಉ. ಸೂ. ೨-೧೪೧) ಎಂಬುದರಿಂದ ರಕ್ ಪ್ರತ್ಯಯವು ಬರುತ್ತದೆ. ರಕ್ ಬರುವಾಗ ಪ್ರಕೃತಿಧಾತುವಿಗೆ ಈತ್ವವೂ ಬರುತ್ತದೆ. ಸ್ತ್ರೀತ್ವವಿವಕ್ಷಾ ಮಾಡಿದಾಗ ಆದಂತವಾದುದರಿಂದ ಟಾಪ್ ಬರುತ್ತದೆ. ಟಾಪಿನಲ್ಲಿ ಉಳಿಯುವ ಆಕಾರ ಸೇರಿಸಿದಾಗ ಜೀರಾ ಎಂಬುದಾಗಿ ಆಗುತ್ತದೆ.

ಅಸ್ಯಾಃ—ಇದಮ್ ಶಬ್ದದ ಮೇಲೆ ಷಷ್ಠೀ ಏಕವಚನ ಪ್ರತ್ಯಯವು (ಙಸ್) ಇರುವಾಗ **ಇದಮೋನ್ವಾದೇಶೇಶನುದಾತ್ತಸ್ತೃತೀಯಾದೌ** (ಪಾ. ಸೂ. ೨-೪-೩೩) ತೃತೀಯಾದಿ ವಿಭಕ್ತಿ ಪರದಲ್ಲಿರುವಾಗ ಅನ್ವಾದೇಶ ವಿಷಯದಲ್ಲಿ ಇದಮ್ ಶಬ್ದಕ್ಕೆ ಅನುದಾತ್ತವಾದ ಅಶ್ ಎಂಬ ಆದೇಶ ಬರುತ್ತದೆ ಎಂಬುದರಿಂದ ಅಶ್ ಆದೇಶ ಬರುತ್ತದೆ. ಪಿತ್ತಾದುದರಿಂದ ಸರ್ವಾದೇಶವಾಗಿ ಬರುತ್ತದೆ. ಸ್ತ್ರೀತ್ವ ತೋರುವಾಗ **ಸರ್ವನಾಮ್ನಃ ಸ್ಯಾಡ್ಢ್ರಸ್ವಶ್ಚ** (ಪಾ. ಸೂ. ೭-೪-೧೧೪) ಎಂಬುದರಿಂದ ಙಸ್ಸಿಗೆ ಸ್ಯಾಟ್ಆಗಮವು ಬರುತ್ತದೆ. ಟಾಪಿಗೆ ಹ್ರಸ್ವಬರುತ್ತದೆ. ಪ್ರತ್ಯಯ ಸೇರಿಸಿದಾಗ ಅಸ್ಯಾಃ ಎಂಬುದಾಗಿ ಆಗುತ್ತದೆ. ಇಲ್ಲಿ ವಿಭಕ್ತಿಗೆ **ಅನುದಾತ್ತೌ ಸುಪ್ಪಿತೌ** ಎಂಬುದರಿಂದ ಅನುದಾತ್ತಸ್ವರವು ಬರುತ್ತದೆ. ಇದಮಿಗೆ ಬಂದಿರುವ ಆಶಾದೇಶವೂ ಅನುದಾತ್ತವಾಗಿ ಬರುತ್ತದೆ ಎಂಬುದರಿಂದ ಅನುದಾತ್ತವಾಗುತ್ತದೆ. ಹೀಗೆ ಅಸ್ಯಾಃ ಎಂಬುದು ಸರ್ವಾನುದಾತ್ತವಾಗುತ್ತದೆ.

ಆಚರಣೇಷು—ಚರಗತಿಭಕ್ಷಣಯೋಃ ಧಾತು ಭ್ವಾದಿ. ಇಲ್ಲಿ ಗತ್ಯರ್ಥದಲ್ಲಿ ಇದೆ **ಲ್ಯುಟ್ ಚ** (ಪಾ.ಸೂ. ೩-೩-೧೧೫) ನಪುಂಸಕೇ ಭಾವೇಕ್ತಃ ಎಂಬುದರಿಂದ ಭಾವೆ ಎಂಬುದು ಅನುವೃತ್ತವಾಗುತ್ತದೆ. ಭಾವಾರ್ಥದಲ್ಲಿ ಲ್ಯುಟ್ ಪ್ರತ್ಯಯ ಧಾತುಸಾಮಾನ್ಯಕ್ಕೆ ಬರುತ್ತದೆ. ಚರ್ ಧಾತುವಿಗೆ ಭಾವಾರ್ಥದಲ್ಲಿ (ಗಮನವೆಂಬ ಧಾತ್ವರ್ಥದಲ್ಲಿ) ಲ್ಯುಟ್ ಬಂದಾಗ ಲ್ಯುಟಿನಲ್ಲಿ ಯು ಎಂಬುದು ಉಳಿಯುತ್ತದೆ. ಯು ಎಂಬುದಕ್ಕೆ **ಯೆುವೋರನಾಕೌ** ಎಂಬುದರಿಂದ ಅನ ಎಂಬ ಆದೇಶವು ಬರುತ್ತದೆ. ಚರನ ಎಂದಿರುವಾಗ **ಆಟ್ಕುಪ್ವಾಙನುಮ್ವ್ಯವಾಯೇಽಪಿ** (ಪಾ. ಸೂ. ೮-

४-३) ಎಂಬುದರಿಂದ ಅಟ್‌ನ ವ್ಯವಧಾನವಿರುವಾಗ ರೇಫದ ಪರದಲ್ಲಿರುವ ನಕಾರಕ್ಕೆ ಣತ್ವ ಬರುತ್ತದೆ. ಅಙ್ ಉಪಸರ್ಗ. **सप्तमी** ಬಹುವಚನದಲ್ಲಿ ಆಚರಣೇಷು ಎಂಬ ರೂಪವಾಗುತ್ತದೆ. ಇಲ್ಲಿ ಲ್ಯುಟ್‌ನಲ್ಲಿ ಲಿತ್ವಾದುದರಿಂದ **लिति** (ಪಾ. ಸೂ. ೬-೧-೧೯೩) ಎಂಬುದರಿಂದ ಪ್ರತ್ಯಯದ ಪೂರ್ವಕ್ಕೆ ಉದಾತ್ತ ಸ್ವರಬರುತ್ತದೆ. ಆಗ **चकार** ರದ ಮೇಲಿರುವ ಅಕಾರವು ಉದಾತ್ತವಾಗುತ್ತದೆ. ಆಚರಣ ಎಂಬ ವಿಶಿಷ್ಟಪದದಲ್ಲಿ ಚರಣವೆಂಬುದು ಕೃದಂತವಾದ ಉತ್ತರಪದವಾಗಿದೆ. ಆದುದರಿಂದ ಸಮಾಸದಲ್ಲಿ **गतिकारकोपपदात् कृत्** (ಪಾ. ಸೂ. ೬-೨-೧೩೯) ಎಂಬುದರಿಂದ ಗತಿಯಪರದಲ್ಲಿರುವ ಕೃದಂತವು ಪ್ರಕೃತಿ ಸ್ವರವನ್ನು ಹೊಂದುತ್ತದೆ. ಆಚರಣೇಷು ಎಂಬುದು ಕೃದುತ್ತರಪದಪ್ರಕೃತಿಸ್ವರವುಳ್ಳದು ಆಗುತ್ತದೆ.

दधिरे— ಧೃಙ್ ಅವಸ್ಥಾನೇ. ಧಾತು ದಿವಾದಿ ಲಿಟ್ ಪ್ರಥಮಪುರುಷ ಬಹುವಚನ ಪರದಲ್ಲಿರುವಾಗ ಝು ಎಂಬ ಲಿಟ್‌ನ ತಿಙ್‌ಗೆ ಇರೇಚ್ ಎಂಬ ಆದೇಶ ಬರುತ್ತದೆ. ಲಿಟ್ ಪರದಲ್ಲಿರುವಾಗ ಧಾತುವಿಗೆ ದ್ವಿತ್ವ ಬರುತ್ತದೆ. ಧೃ ಧೃ+ಇರೆ ಎಂದಿರುವಾಗ **ऋतः** (ಪಾ. ಸೂ. ೭-೪-೭೭) ಅಭ್ಯಾಸದ ಋ ವರ್ಣಕ್ಕೆ ಅತ್ವ ಬರುತ್ತದೆ ಎಂಬುದರಿಂದ ಅಕಾರ ಬರುತ್ತದೆ. ಋಕಾರ ಸ್ಥಾನಕ್ಕೆ ಬರುವ ಅಕಾರವು ರಪರವಾಗಿ ಬಂದರೆ ಹಲಾದಿಶೇಷದಿಂದ ಧ ಎಂದು ಉಳಿಯುತ್ತದೆ. ಅಭ್ಯಾಸಜತ್ವದಿಂದ ಅದಕ್ಕೆ ದಕಾರ ಬರುತ್ತದೆ. ದಧೃ+ಇರೆ ಎಂದಿರುವಾಗ ಆರ್ಧಧಾತುಕ ಪರದಲ್ಲಿರುವಾಗ ಗುಣವು ಪ್ರಾಪ್ತವಾದರೆ **असंयोगाल्लिट् कित्** (ಪಾ. ಸೂ. ೧-೨-೫) ಎಂಬುದರಿಂದ ಲಿಟ್‌ಗೆ ಕಿತ್ವವಿಧಾನ ಮಾಡಿರುವುದರಿಂದ **क्ङिति च** ಸೂತ್ರದಿಂದ ಗುಣನಿಷೇಧ ಬರುತ್ತದೆ. ಗುಣಬಾರದಿರುವುದರಿಂದ ಯಣ್ ಸಂಧಿಮಾಡಿದರೆ ದಧ್ರಿರೆ ಎಂದು ರೂಪವಾಗುತ್ತದೆ. ಇಲ್ಲಿ ಲಿಟ್‌ಗೆ ಬಂದಿರುವ ಇರೇಚ್ ಎಂಬ ಆದೇಶವು ಚಿತ್ವಾದುದರಿಂದ **चितः** (ಪಾ. ಸೂ. ೬-೧-೧೬೩) ಸೂತ್ರದಿಂದ ಅಂತೋದಾತ್ತವಾಗುತ್ತದೆ. ಚಿತಃ ಸಪ್ರಕೃತೇರ್ಬಹ್ವಕಜರ್ಥಂ ಎಂಬುದರಿಂದ ಪ್ರಕೃತಿಪ್ರತ್ಯಯ ಸಮುದಾಯಕ್ಕೆ ಅಂತೋದಾತ್ತಸ್ವರ ಬರುತ್ತದೆ. ಯೆ ಎಂದು ಪೂರ್ವದಲ್ಲಿ ಯಚ್ಶಬ್ದಯೋಗವಿರುವುದರಿಂದ **तिङ्ङतिङः** ಸೂತ್ರದಿಂದ ಸರ್ವಾನುದಾತ್ತಸ್ವರ ಬರುವುದಿಲ್ಲ.

श्रवस्यवः— ಶ್ರೂಯತೇ ಇತಿ ಶ್ರವಃ ಧನಂ ಶಬ್ದಮಾಡಲ್ಪಡುವುದು ಅಥವಾ ಆಶ್ರಯಿಸಲ್ಪಡುವುದು ಧನ. ಶ್ರು ಧಾತುವಿಗೆ, **सर्वधातुभ्योऽसुन्** (ಉ.ಸೂ. ೪-೬೨೮) ಎಂಬುದರಿಂದ ಅಸುನ್ ಪ್ರತ್ಯಯ ಬರುತ್ತದೆ. ಅಸುನ್ ಪರದಲ್ಲಿರುವಾಗ ಧಾತುವಿಗೆ ಗುಣಬರುತ್ತದೆ. ಅಪರದಲ್ಲಿರುವುದರಿಂದ ಗುಣಕ್ಕೆ (ಓಕಾರಕ್ಕೆ) ಅವಾದೇಶ ಬರುತ್ತದೆ. ಶ್ರವಸ್ ಎಂದುರೂಪವಾಗುತ್ತದೆ- ಶ್ರವಃ ಆತ್ಮನಃ ಇಚ್ಛಂತಿ, ಧನವನ್ನು ತನಗೆ ಅಪೇಕ್ಷಿಸುತ್ತಾರೆ ಎಂಬರ್ಥದಲ್ಲಿ ಶ್ರವಸ್ಯವಃ ಎಂತಾಗುತ್ತದೆ. **सुप आत्मनः क्यच्** (ಪಾ.ಸೂ. ೩-೧-೮) ಇಚ್ಛಾರ್ಥದಲ್ಲಿ ಕರ್ಮವಾಗಿಯೂ ಇಚ್ಛಾಕರ್ತೃ ಸಂಬಂಧವುಳ್ಳದ್ದಾಗಿಯೂ ಇರುವ ಸುಬಂತದ ಮೇಲೆ ಇಚ್ಛಾತೋರುತ್ತಿರುವಾಗ ಕ್ಯಚ್ ಪ್ರತ್ಯಯ ಬರುತ್ತದೆ. ಕ್ಯಚ್‌ಸನಾದಿಯಲ್ಲಿ ಸೇರಿರುವುದರಿಂದ ಕ್ಯಜಂತಕ್ಕೆ ಧಾತುಸಂಜ್ಞೆ ಬರುತ್ತದೆ. ಶ್ರವಸ್ಯಂತಿ ಇತಿ ಶ್ರವಸ್ಯವಃ. **क्याच्छन्दसि**(ಪಾ. ಸೂ. ೩-೨-೧೭೦) ಕ್ಯ ಪ್ರತ್ಯಯಾಂತದ ಮೇಲೆ ತಚ್ಛೀಲಾದಿಗಳು ತೋರುತ್ತಿರುವಾಗ ಛಂದಸ್ಸಿನಲ್ಲಿ ಉ ಪ್ರತ್ಯಯ ಬರುತ್ತದೆ. ಶ್ರವಸ್ಯಎಂಬುದು ಕೃಜಂತವಾದುದರಿಂದ ತಚ್ಛೀಲವು ಇಲ್ಲಿ ತೋರುವುದರಿಂದ ಉ ಪ್ರತ್ಯಯವು ಬಂದರೆ ಶ್ರವಸ್ಯ+ಉ ಎಂದಾಗುತ್ತದೆ. ಆಗ **अतो लोपः** (ಪಾ.ಸೂ. ೬-೪-೪೮) ಎಂಬುದರಿಂದ ಶ್ರವಸ್ಯಎಂಬಲ್ಲಿರುವ ಅಕಾರವು ಲೋಪವಾಗುತ್ತದೆ. ಪ್ರತ್ಯಯ ಸೇರಿಸಿದರೆ ಶ್ರವಸ್ಯು ಎಂದು ಉಕಾರಾಂತ ಶಬ್ದವಾಗುತ್ತದೆ. ಪ್ರಥಮಾ ಬಹುವಚನ ಜಸ್ ಪ್ರತ್ಯಯ ಮಾಡಿದಾಗ ಶ್ರವಸ್ಯವಃ ಎಂಬ ರೂಪವಾಗುತ್ತದೆ ॥ ೩ ॥

ಸಂಹಿತಾಪಾಠಃ

ಉಷೋ ಯೇ ತೇ ಪ್ರ ಯಾಮೇಷು ಯುಂಜತೇ ಮನೋ ದಾನಾಯ ಸೂರಯಃ ।
ಅತ್ರಾಹ ತತ್ಕಣ್ವ ಏಷಾಂ ಕಣ್ವತಮೋ ನಾಮ ಗೃಣಾತಿ ನೃಣಾಂ ॥ ೪ ॥

ಪದಪಾಠಃ

ಉಷಃ । ಯೇ । ತೇ । ಪ್ರ । ಯಾಮೇಷು । ಯುಂಜತೇ । ಮನಃ । ದಾನಾಯ । ಸೂರಯಃ ॥
ಅತ್ರ । ಅಹ । ತತ್ । ಕಣ್ವಃ । ಏಷಾಂ । ಕಣ್ವತಮಃ । ನಾಮ । ಗೃಣಾತಿ । ನೃಣಾಂ ॥ ೪ ॥

ಸಾಯಣಭಾಷ್ಯಂ

ಹೇ ಉಷಸ್ತೇ ತವ ಯಾಮೇಷು ಗಮನೇಷು ಸತ್ಸು ಯೇ ಸೂರಯೋ ವಿದ್ವಾಂಸೋ ದಾನಾಭಿಜ್ಞಾ ದಾನಾಯ ಧನಾದಿದಾನಾರ್ಥಂ ಮನಃ ಸ್ವಕೀಯಂ ಪ್ರ ಯುಂಜತೇ ಪ್ರೇರಯಂತಿ । ದಾನಶೀಲಾ ಉದಾರಾಃ ಪ್ರಭವಃ ಪ್ರಾತಃಕಾಲೇ ದಾತುಮಿಚ್ಛಂತೀತ್ಯರ್ಥಃ । ಏಷಾಂ ದಾತುಮಿಚ್ಛತಾಂ ನೃಣಾಂ ತನ್ನಾಮ ದಾನವಿಷಯೇ ಲೋಕಪ್ರಸಿದ್ಧಂ ನಾಮ ಕಣ್ವತಮೋಽತಿಶಯೇನ ಮೇಧಾವೀ ಕಣ್ವೋ ಮಹರ್ಷಿರತ್ರಾಹ ಅಸ್ಮಿನ್ವೋಷಃಕಾಲೇ ಗೃಣಾತಿ । ಉಚ್ಚಾರಯತಿ । ಯೋ ದಾತುಮಿಚ್ಛತಿ ಯಶ್ಚ ನಾಮಗ್ರಹಣೇನ ದಾತಾರಂ ಪ್ರಶಂಸತಿ ತಾವುಭಾವಪ್ಯುಷಃಕಾಲ ಏವ ತಥಾ ಕುರುತ ಇತ್ಯುಷಸಃ ಸ್ತುತಿಃ ॥ ಗೃಣಾತಿ । ಗೃ ಶಬ್ದೇ । ಕ್ರೈಯಾದಿಕಃ । ಸ್ನಾದೀನಾಂ ಹ್ರಸ್ವ ಇತಿ ಹ್ರಸ್ವತ್ವಂ । ನೃಣಾಂ । ನಾಮಿ ನೈ ಚೇ । ಪಾ. ೬-೪-೬ ಇತಿ ದೀರ್ಘಪ್ರತಿಷೇಧಃ ನೈ ಚಾನ್ಯತರಸ್ಯಾಂ । ಪಾ. ೬-೧-೧೮೪ । ಇತಿ ವಿಭಕ್ತೇರುದಾತ್ತತ್ವಂ ॥

॥ ಪ್ರತಿಪದಾರ್ಥ ॥

ಉಷಃ—ಎಲೈ ಉಷೋದೇವತೆಯೇ । **ತೇ**—ನಿನ್ನ । **ಯಾಮೇಷು**—ಸಂಚಾರವಿರಲಾಗಿ (ಪ್ರಭಾತಕಾಲದಲ್ಲಿ) । **ಯೇ ಸೂರಯಃ**—(ದಾನದ ಮಹಿಮೆಯನ್ನು ತಿಳಿದ) ಯಾವ (ಉದಾರಿಗಳಾದ ಪ್ರಭುಗಳು) ಪ್ರಾಜ್ಞರು । **ದಾನಾಯ**—(ಧನಾಧಿ) ದಾನ ಮಾಡುವುದಕ್ಕಾಗಿ । **ಮನಃ**—(ತಮ್ಮ ಮನಸ್ಸನ್ನು । **ಪ್ರಯುಂಜತೇ**—ಪ್ರೇರಿಸುತ್ತಾರೋ (ದಾನಮಾಡಲಿಚ್ಛಿಸುತ್ತಾರೋ) । **ಏಷಾಂ ನೃಣಾಂ**—ಇಂತಹ (ದಾನಮಾಡಲಿಚ್ಛಿಸುವ) ಮನುಷ್ಯರ । **ತತ್ ನಾಮ**—(ದಾತೃಗಳೆಂದು) ಲೋಕಪ್ರಸಿದ್ಧವಾದ ಆ ಹೆಸರುಗಳನ್ನು । **ಕಣ್ವತಮಃ**—ಅತ್ಯಂತ ಮೇಧಾವಿಯಾದ । **ಕಣ್ವಃ**—ಕಣ್ವಮಹರ್ಷಿಯು । **ಅತ್ರಾಹ**—ಈ ಉಷಃಕಾಲದಲ್ಲಿಯೇ । **ಗೃಣಾತಿ**—ಉಚ್ಚರಿಸುತ್ತಾನೆ. (ಪ್ರಶಂಸಿಸುತ್ತಾನೆ).

॥ ಭಾವಾರ್ಥ ॥

ಎಲೈ ಉಷೋದೇವತೆಯೇ, ಪ್ರಭಾತಕಾಲದಲ್ಲಿ ನಿನ್ನ ಉದಯವಾದೊಡನೆ ದಾನದ ಮಹಿಮೆಯನ್ನು ತಿಳಿದ ಪ್ರಾಜ್ಞರಾದ ಪ್ರಭುಗಳು ದಾನನೂಡಲು ಅಪೇಕ್ಷಿಸುತ್ತಾರೆ ದಾತೃಗಳೆಂದು ಲೋಕಪ್ರಸಿದ್ಧರಾದ ಇಂತಹ ಉದಾರಿಗಳ ಹೆಸರನ್ನು ಮೇಧಾವಿಯಾದ ಕಣ್ವಮಹರ್ಷಿಯು ಈ ಉಷಃಕಾಲದಲ್ಲಿಯೇ ಪ್ರಶಂಸಿಸುತ್ತಾನೆ. ಹೀಗೆ ಉದಾರಿಗಳ ದಾನವೂ ಈ ದಾತೃಗಳ ಪ್ರಶಂಸೆಯೂ ಉಷಃಕಾಲದಲ್ಲಿಯೇ ನಡೆಯುತ್ತದೆ. ಇದು ಉಷಃಕಾಲದ ಪ್ರಭಾವವಾಗಿರುತ್ತೆ.

English Translation.

Ushas, at your comings wise men turn their minds to free gifts; of these men, the most wise Kanwa proclaims the fame.

॥ ವಿಶೇಷ ವಿಷಯಗಳು ॥

ಅತ್ರ ಅಹ—ಈಗ ಅಥವಾ ಈ ಉಷಃಕಾಲದಲ್ಲಿ.

ಕಣ್ವತಮಃ—ಅತಿಶಯೇನ ಮೇಧಾವೀ—ಕಣ್ವವಂಶಸ್ಥರಲ್ಲಿ ಅತ್ಯಂತ ಮೇಧಾವಿಯಾದವನು ಅಥವಾ ಕಣ್ವಋಷಿಯು.

ಋಕ್ಕಿನ ಅರ್ಥವು ಸ್ವಲ್ಪ ಕ್ಲಿಷ್ಟವಾಗಿರುವುದು. ಆದರೂ ಋಷಿಯ ಅಭಿಪ್ರಾಯವನ್ನು ತಿಳಿದುಕೊಳ್ಳುವುದೇನೂ ಕಷ್ಟವಾಗಿಲ್ಲ.

॥ ವ್ಯಾಕರಣಪ್ರಕ್ರಿಯಾ ॥

ಗೃಣಾತಿ—ಗ್ರಾ ಶಬ್ದೆ ಧಾತು. **ಕ್ರ್ಯಾದಿ ಕ್ರ್ಯಾದಿಭ್ಯಃಶ್ನಾ** (ಪಾ. ಸೂ. ೩-೧-೮೧) ಎಂಬುದರಿಂದ **ಕ್ರ್ಯಾದಿ**ಗಳಿಗೆ **ಶ್ನಾ** ವಿಕರಣ **ಪ್ರತ್ಯಯ** ಬರುತ್ತದೆ. ಪ್ರಥಮಪುರುಷೈಕವಚನ **ತಿ** ಪ್ರತ್ಯಯಪರದಲ್ಲಿರುವಾಗ ವಿಕರಣಪ್ರತ್ಯಯ ಧಾತುವಿಗೆ ಬರುತ್ತದೆ. **ವಿಕರಣ**ದಲ್ಲಿ ಶಕಾರ ಇತ್ತಾಗುತ್ತದೆ. ಗೃನಾತಿ ಎಂದಿರುವಾಗ **ಪ್ವಾದೀನಾಂ ಹ್ರಸ್ವಃ** (ಪಾ. ಸೂ. ೭-೩-೮೦) ಸೂತ್ರದಿಂದ ಧಾತುವಿಗೆ ಹ್ರಸ್ವಬರುತ್ತದೆ. **ಋವರ್ಣಾನ್ನಸ್ಯ ಣತ್ವಂವಾಚ್ಯಂ** (ವಾ) ಎಂಬುದರಿಂದ ಋಕಾರದ ಪರದಲ್ಲಿರುವ ನಕಾರಕ್ಕೆ ಣತ್ವ ಬರುತ್ತದೆ. ಅತಿಜಂತದ ಪರದಲ್ಲಿರುವುದರಿಂದ **ತಿಙ್ಙತಿಙಃ** ಎಂಬುದರಿಂದ ಸರ್ವಾನುದಾತ್ತವಾಗಿ ಗೃಣಾತಿ ಎಂಬುದಾಗಿ ರೂಪವಾಗುತ್ತದೆ.

ನೃಣಾಂ ಋಕಾರಾಂತ ಪುಲ್ಲಿಂಗ ನೃ ಶಬ್ದ. ಇದಕ್ಕೆ ಷಷ್ಠ್ಯೇ ಬಹುವಚನವಾದ ಆಮ್ ಪ್ರತ್ಯಯ ವಿವಕ್ಷೆನುಮಾಡಿದಾಗ ನೃ+ಆಮ್ ಎಂದಿರುವಾಗ **ಹ್ರಸ್ವನದ್ಯಾಪ್ಪೋನುಚ್** (ಪಾ. ಸೂ. ೭-೧-೫೪) ಸೂತ್ರದಿಂದ ಆಮಿಗೆ ನುಟ್ಆಗಮ ಬರುತ್ತದೆ. ಚಿತ್ತಾದುದರಿಂದ ಆದ್ಯವಯವವಾಗಿ ಬಂದರೆ ನೃ+ನಾಮ್ ಎಂದಾಗುತ್ತದೆ. ಆಗ **ನಾಮಿ** (ಪಾ. ಸೂ. ೯-೪-೩) ಸೂತ್ರದಿಂದ ಅಜಂತವಾದ ನೃ ಎಂಬ ಅಂಗಕ್ಕೆ ದೀರ್ಘ ಪ್ರಾಪ್ತವಾಗುತ್ತದೆ. **ನೃಚ** (ಪಾ. ಸೂ ೬-೪- ೬) ನೃ ಶಬ್ದಕ್ಕೆ ನಾಮ್ ಪರದಲ್ಲಿರುವಾಗ ವಿಕಲ್ಪವಾಗಿ ದೀರ್ಘ ಬರುತ್ತದೆ ಎಂಬುದರಿಂದ ಇಲ್ಲಿ ದೀರ್ಘವನ್ನು ಮಾಡಲಿಲ್ಲ **ಅನುದಾತ್ತೌ ಸುಪ್ಪಿತೌ** ಸೂತ್ರದಿಂದ ವಿಭಕ್ತಿಗೆ ಅನುದಾತ್ತಸ್ವರವು ಪ್ರಾಪ್ತವಾದರೆ **ನೃಚಾನ್ಯತರಸ್ಯಾಂ** (ಪಾ. ಸೂ. ೬-೧ ೧೮೪) ನೃಶಬ್ದದ ಪರದಲ್ಲಿರುವ ಹಲಾದಿವಿಭಕ್ತಿಯು

ವಿಕಲ್ಪವಾಗಿ ಉದಾತ್ತವಾಗುತ್ತದೆ ಎಂಬುದರಿಂದ ವಿಭಕ್ತಿಯು ಉದಾತ್ತವಾಗುತ್ತದೆ. ನುಡಾಗಮ ಬಂದ ಮೇಲೆ ವಿಭಕ್ತಿಯು ಹಲಾದಿಯಾಗುತ್ತದೆ. ವಿಭಕ್ತಿಯು ಉದಾತ್ತವಾಗುವುದರಿಂದ ನೃಣಾಂ ಎಂಬ ಶಬ್ದವು ಅಂತೋದಾತ್ತವಾದ ಶಬ್ದವಾಗುತ್ತದೆ. ॥ ೪ ॥

॥ ಸಂಹಿತಾಪಾಠಃ ॥

ಆ ಘಾ ಯೋಷೇವ ಸೂನಯ್ಯುಷಾ ಯಾತಿ ಪ್ರಭುಂಜತೀ ।
ಜರಯಂತೀ ವೃಜನಂ ಪದ್ವದೀಯತ ಉತ್ಪಾತಯತಿ ಪಕ್ಷಿಣಃ ॥ ೫ ॥

॥ ಪದಪಾಠಃ ॥

ಆ । ಘ । ಯೋಷಾ ಽಇವ । ಸೂನರೀ । ಉಷಾಃ । ಯಾತಿ । ಪ್ರ ಽಭುಂಜತೀ ॥
ಜರಯಂತೀ । ವೃಜನಂ । ಪತ್ ಽವತ್ । ಈಯತೇ । ಉತ್ । ಪಾತಯತೀತಿ ।
ಪಕ್ಷಿಣಃ ॥ ೫ ॥

॥ ಸಾಯಣಭಾಷ್ಯಂ ॥

ಉಷಾ ದೇವೀ ಪ್ರಭುಂಜತೀ ಪ್ರಕರ್ಷೇಣ ಸರ್ವಂ ಪಾಲಯಂತ್ಯಾ ಯಾತಿ ಘ । ಪ್ರತಿದಿನಮಾಗಚ್ಛತಿ ಖಲು । ತತ್ರ ದೃಷ್ಟಾಂತಃ । ಸೂನರೀ ಸುಷ್ಠು ಗೃಹಕೃತ್ಯಸ್ಯ ನೇತ್ರೀ ಯೋಷೇವ ಗೃಹಣೀವ । ಕೀದೃಶ್ಯುಷಾಃ । ವೃಜನಂ ಗಮನಶೀಲಂ ಜಂಗಮಂ ಪ್ರಾಣಿಜಾತಂ ಜರಯಂತೀ ಜರಾಂ ಪ್ರಾಪಯಂತೀ । ಅಸಕೃದುಷಸ್ಯಾವೃತ್ತ್ಯಾಯಾಂ ವಯೋಹಾನ್ಯಾ ಪ್ರಾಣಿನೋ ಜೀರ್ಣಾ ಭವಂತಿ । ಕಿಂಚ ಉಷಃಕಾಲೇ ಪದ್ವತ್ ಪಾದಯುಕ್ತಂ ಪ್ರಾಣಿಜಾತಮೀಯತೇ । ನಿದ್ರಾಂ ಪರಿತ್ಯಜ್ಯ ಸ್ವಸ್ವಕೃತ್ಯಾರ್ಥಂ ಗಚ್ಛತಿ। ಕಿಂಚ ಇಯಮುಷಾಃ ಪಕ್ಷಿಣ ಉತ್ಪಾತಯತಿ । ಪಕ್ಷಿಣೋ ಹ್ಯುಷಃಕಾಲೇ ಸಮುತ್ಥಾಯ ತತ್ರ ತತ್ರ ವ್ರಜಂತಿ ॥ ಋಚಿ ತುನುಷೇತ್ಯಾದಿನಾ ಸಂಹಿತಾಯಾಂ ದೀರ್ಘಃ । ಸುಷ್ಠು ನಯತೀತಿ ಸೂನರೀ । ನೃ ನಯೇ । ಅಚ ಇತೀಪ್ರತ್ಯಯಃ । ಗತಿಸಮಾಸೇ ಕೃದ್ಗ್ರಹಣೇ ಗತಿಕಾರಕಪೂರ್ವಸ್ಯಾಪಿ ಗ್ರಹಣಂ । ಪರಿ. ೨೮ । ಇತಿ ವಚನಾತ್ಕೃದಿಕಾರಾದಕ್ತಿನಃ। ಪಾ. ೪-೧-೪೫। ಇತಿ ಙೀಷ್ । ಪರಾದಿಶ್ಚಂದಸಿ ಬಹುಲಮಿತ್ಯುತ್ತರಪದಾದ್ಯುದಾತ್ತತ್ವಂ । ನಿಪಾತಸ್ಯ ಚೇತಿ ಪೂರ್ವಪದಸ್ಯ ದೀರ್ಘಃ । ಪ್ರಭುಂಜತೀ ! ಭುಜಪಾಲನಾಭ್ಯವಹಾರಯೋಃ । ಲಟಃ ಶತೃ । ರುಧಾದಿತ್ವಾಚ್ಛ್ನಂ । ಶ್ನಸೋರಲ್ಲೋಪೇ ಇತ್ಯಕಾರಲೋಪಃ । ಉಗಿತಶ್ಚೇತಿ ಙೀಷ್ । ಶತುರನುಮ ಇತಿ ನದ್ಯಾ ಉದಾತ್ತತ್ವಂ । ವೃಜನಂ ವೃಜೀ ವರ್ಜನೇ । ವರ್ಜ್ಯತ ಇತಿ ವೃಜನಂ

ಪ್ರಾಣಿಜಾತಂ । ಕ್ಷ್ಮಾ ಪ್ಷ್ಮಾ ವೃಚಿಮಂದಿನಿಧಾಞ್ಭ್ಯಃ ಕ್ಯುಃ । ಉ. ೨-೮೧ । ಇತಿ ಕ್ಯುಪ್ರತ್ಯಯಃ । ಕಿತ್ತ್ವಾ-ಲ್ಲಘೂಪಧಗುಣಾಭಾವಃ । ಯೋರನಾದೇಶೇ ಪ್ರತ್ಯಯಸ್ವರಃ । ಪದ್ವತ್ । ಪತ್ ಪಾದಃ । ತದಸ್ಯಾಸ್ತೀತಿ ಪದ್ವತ್ । ಋಯ ಇತಿ ಮತುಪೋ ವತ್ವಂ । ವ್ಯತ್ಯಯೇನ ಮತುಪ ಉದಾತ್ತತ್ವಂ । ನ ಚ ಸ್ವರವಿಧೌ ವ್ಯಂಜನಮವಿದ್ಯಮಾನವತ್ । ಪರಿ. ೭೯ । ಇತಿ ವ್ಯಂಜನಸ್ಯಾವಿದ್ಯಮಾನವತ್ತ್ವೇ ಸತಿ ಹ್ರಸ್ವನುಡ್ಭ್ಯಾಂ ಮತುಬಿತಿ ಮತುಪ ಉದಾತ್ತತ್ವಮಿತಿ ವಾಚ್ಯಂ । ಹ್ರಸ್ವಾದಿತ್ಯೇವ ಸಿದ್ಧೇ ಪುನರ್ನುಡ್ ಗ್ರಹಣಸಾಮರ್ಥ್ಯಾ-ದೇಷಾ ಪರಿಭಾಷಾ ನಾಶ್ರೀಯತ ಇತಿ ವೃತ್ತ್ಯಾವುಕ್ತಂ । ಕಾ. ೬-೧-೧೭೬ । ಇತರಥಾ ಹಿ ಮರುತ್ವಾನಿತ್ಯ-ತ್ರಾಪಿ ಮತುಪ ಉದಾತ್ತತ್ವಂ ಸ್ಯಾತ್ ॥ ೩ ॥

॥ ಪ್ರತಿಪದಾರ್ಥ ॥

ಉಷಾಃ—ಉಷೋದೇವಿಯು । **ಸೂನರೀ**—(ಗೃಹಕೃತ್ಯಗಳಲ್ಲಿ) ಒಳ್ಳೆಯ ಆದರ್ಶಪ್ರಾಯಳಾದ । **ಯೋಷೇವ**—(ಮನೆಯ ಯಜಮಾನಿಯಾದ) ಹೆಂಗಸಿನಂತೆ । **ಪ್ರಭುಂಜತೀ**—(ಎಲ್ಲರನ್ನೂ) ಚೆನ್ನಾಗಿ ಪೋಷಿಸುತ್ತ । **ವ್ರಜನಂ**—ಚರಾತ್ಮಕವಾದ ಸಕಲ ಪ್ರಾಣಿ ಸಮೂಹವನ್ನೂ । **ಜರಯಂತೀ**—ಮುಪ್ಪಿಗೆ ಒಯ್ಯುತ್ತ । **ಆಯಾತಿ ಹಿ**—(ಪ್ರತಿದಿನವೂ) ಬರುತ್ತಾಳಲ್ಲವೇ! (ಉಷಃಕಾಲದಲ್ಲಿ) **ಪದ್ವತ್**—ಪಾದಗಳುಳ್ಳ (ಸಂಚಾರ ಸ್ವಭಾವವುಳ್ಳ) ಪ್ರಾಣಿ ಸಮೂಹವು । **ಈಯತೇ**—(ನಿದ್ರೆಯಿಂದ ಎದ್ದು ತನ್ನ ತನ್ನ ಕೆಲಸಕ್ಕೆ) ಹೋಗುತ್ತದೆ. (ಮತ್ತು ಈ ಉಷಸ್ಸು) **ಪಕ್ಷಿಣಃ**—ಪಕ್ಷಿಗಳನ್ನು । **ಉತ್ಪಾತಯತಿ**—(ಎಬ್ಬಿಸಿ) ಹಾರುವಂತೆ ಮಾಡುತ್ತಾಳೆ.

॥ ಭಾವಾರ್ಥ ॥

ಗೃಹಕೃತ್ಯದಲ್ಲಿ ನಿಪುಣಳೂ ಆದರ್ಶಪ್ರಾಯಳೂ ಆದ ಗೃಹಿಣಿಯಾದ ಹೆಂಗಸು ಮನೆಯಲ್ಲಿ ಸಕಲರನ್ನೂ ಪೋಷಿಸುವಂತೆ ಉಷೋದೇವಿಯು ಪ್ರತಿದಿನವೂ ಉದಯಿಸಿ ಲೋಕದಲ್ಲಿ ಎಲ್ಲರನ್ನೂ ಪೋಷಿಸುತ್ತಾಳೆ. ಆದರೆ ಅವಳು ಹೀಗೆ ಅನೇಕಾವರ್ತಿ ಉದಯಿಸಿದರೆ ಚರಾತ್ಮಕವಾದ ಸಕಲಪ್ರಾಣಿ ಸಮೂಹವನ್ನೂ ಮುಪ್ಪಿಗೆ ಒಯ್ಯುತ್ತಾಳೆ. ಸಂಚಾರ ಸ್ವಭಾವವಿದ್ದು ಪಾದಗಳಿಂದ ಕೂಡಿದ ಸಕಲ ಪ್ರಾಣಿಸಮೂಹವೂ ಉಷಃಕಾಲದಲ್ಲಿ ನಿದ್ರೆಯಿಂದ ಎದ್ದು ತನ್ನ ತನ್ನ ಕೆಲಸಕ್ಕೆ ಹೋಗುತ್ತದೆ. ಪಕ್ಷಿಗಳು ಎದ್ದು ತಮ್ಮ ತಮ್ಮ ಆಹಾರಾರ್ಥವಾಗಿ ಹಾರಿಹೋಗುತ್ತವೆ

English Translation.

Ushas, nourishing all comes daily like a beautiful young damsel well versed in household duties; she makes the people old; at her coming those beings that have feet get up from their sleep and make a stir; she wakes up the birds.

॥ ವಿಶೇಷ ವಿಷಯಗಳು ॥

ಯೋಷೇವ—ಯುವತಿಯಂತೆ, ಉತ್ತಮ ಸ್ತ್ರೀಯಂತೆ ಎಂದರೆ ಗೃಹಿಣಿಯಂತೆ.

ಸೂನರೀ—ಸೂನರೀ ಶಬ್ದವು ಹದಿನಾರು ಉಷೋನಾಮಗಳ ಮಧ್ಯದಲ್ಲಿ ಪಠಿತವಾಗಿದ್ದರೂ (ನಿ. ೨-೧೯) ಇಲ್ಲಿ ಭಾಷ್ಯಕಾರರು ಈ ಶಬ್ದಕ್ಕೆ **ಸುಷ್ಠು ಗೃಹಕೃತ್ಯಸ್ಯ ನೇತ್ರೀ ಗೃಹಿಣೀ**—ಗೃಹಕೃತ್ಯಗಳನ್ನು ಚೆನ್ನಾಗಿ ನಿರ್ವಹಿಸುವ ಗೃಹಿಣಿ ಎಂದು ಅರ್ಥವಿವರಣೆ ಮಾಡಿರುವರು. ಏಕೆಂದರೆ ಉಷಾಃ ಎಂಬ ಪ್ರತ್ಯೇಕಶಬ್ದವು ಈ ಋಕ್ಕಿನಲ್ಲಿರುವುದು.

ಪ್ರಭುಂಜತೀ—ಪ್ರಕರ್ಷೇಣ ಸರ್ವಂ ಪಾಲಯಂತೀ । ಭುಜಪಾಲನಾಭ್ಯವಹಾರಯೋಃ । ಸರ್ವರನ್ನೂ ಪೋಷಣೆಮಾಡುತ್ತಾ ಪಾಲಿಸುವವಳು.

ಜರಯಂತೀ ವೃಜನಂ—ಚಲಿಸುವ ಪ್ರಾಣಿಸಮೂಹದ ಆಯುಸ್ಸನ್ನು ಕ್ಷೀಣಮಾಡುವವಳು, ಸಮೀಯಿಸುವವಳು. ಏಕೆಂದರೆ ಉಷೋದೇವತೆಯು ಪ್ರತಿದಿನವೂ ಉದಯಿಸುವುದರಿಂದ ಪ್ರಾಣಿಗಳ ಆಯುಸ್ಸಿನಲ್ಲಿ ಒಂದೊಂದಾಗಿ ದಿನಗಳು ಕಳೆದು ಹೋಗಿ ಇವುಗಳ ಆಯುಃಪ್ರಮಾಣವು ಕ್ಷೀಣಿಸುವುದೆಂದಭಿಪ್ರಾಯವು.

ಪದ್ವತ್—ಪಾದಯುಕ್ತಂ ಪ್ರಾಣಿಜಾತಂ । ಪಾದಗಳು ಅಥವಾ ಕಾಲುಗಳುಳ್ಳ ಮನುಷ್ಯರೇ ಮೊದಲಾದ ಪ್ರಾಣಿಗಳು.

ಪಕ್ಷಿಣಃ ಉತ್ಪಾತಯತಿ—ಉಷಃಕಾಲವಾದೊಡನೆಯೇ ಬೆಳಕಾಗುವುದರಿಂದ ನಿದ್ರಾಪರವಶವಾದ ಪಕ್ಷಿಗಳು ಎಚ್ಚರಗೊಂಡು ಆಹಾರಸಂಪಾದನೆಗಾಗಿ ಸಂಚರಿಸುವವು. ರಾತ್ರಿಕಾಲದಲ್ಲಿ ಕತ್ತಲೆಯಾಗಿರುವುದರಿಂದ ಪಕ್ಷಿಗಳು ಚಲಿಸಲು ಸಾಧ್ಯವಿಲ್ಲದೆ ತಮ್ಮ ತಮ್ಮ ಗೂಡುಗಳಲ್ಲಿ ನಿದ್ರೆಗೈಯ್ಯುವವು. ಉಷಃಕಾಲದಲ್ಲಿ ಬೆಳಕಾದೊಡನೆಯೇ ನಿದ್ರೆಯಿಂದೆಚ್ಚತ್ತು ತಮ್ಮ ವ್ಯವಹಾರಗಳಲ್ಲಿ ತೊಡಗುವವು. ಆದುದರಿಂದ ಉಷಃಕಾಲವು ಅಥವಾ ಉಷೋದೇವತೆಯು ಪಕ್ಷಿಗಳನ್ನು ಎಬ್ಬಿಸಿ ಚಲಿಸುವಂತೆ ಮಾಡುವಳು ಎಂದು ಋಷಿಯು ವರ್ಣಿಸಿರುವನು.

॥ ವ್ಯಾಕರಣಪ್ರಕ್ರಿಯಾ ॥

ಘ—ಖಲು ಎಂಬ ಅರ್ಥದಲ್ಲಿದೆ. **ಖಯಚಿ ತುನುಘಮಕ್ಷು** (ಪಾ. ಸೂ. ೬-೩-೧೩೩) ಎಂಬುದರಿಂದ ಮಂತ್ರದಲ್ಲಿ ದೀರ್ಘಬರುತ್ತದೆ. ಘಾ ಎಂದು ಮಂತ್ರಪಾಠದಲ್ಲಿ ರೂಪವನ್ನು ಹೊಂದುತ್ತದೆ

ಸೂನರೀ—ಸುಷ್ಠು ನಯತೀತಿ ಸೂನರೀ ಚೆನ್ನಾಗಿ ಕಾರ್ಯವನ್ನು ನೆರವೇರಿಸುವವಳು. ಸು ಎಂಬುದು ನಿಪಾತ. ಉಪಸರ್ಗಕ್ಕೂ ನಿಪಾತ ಸಂಜ್ಞೆ ಬರುತ್ತದೆ. ನ್ಯಾ ನಯೆ ಧಾತು ಕ್ರ್ಯಾದಿ. ಇದಕ್ಕೆ **ಆಚ್ಛಿಞಃ** (ಉ. ಸೂ. ೫೭೮) ಅಜಂತವಾದ ಧಾತುವಿಗೆ ಇ ಪ್ರತ್ಯಯ ಬರುತ್ತದೆ ಎಂಬುದರಿಂದ (ಧಾತುವಿಗೆ) ಇ ಪ್ರತ್ಯಯ ಬರುತ್ತದೆ. **ಸಾರ್ವಧಾತುಕಾರ್ಧಧಾತುಕಯೋಃ** ಸೂತ್ರದಿಂದ ಇ ಪರದಲ್ಲಿರುವಾಗ ಧಾತುವಿಗೆ ಗುಣ ಬಂದರೆ ನರ್+ಇ ನಾಯಿ ಎಂದಾಗುತ್ತದೆ ಸು ನಿಪಾತದೊಡನೆ ಸಮಾಸವಾಗುತ್ತದೆ. ಇದಕ್ಕೆ ಗತಿ ಸಮಾಸವೆಂದು ಹೆಸರು. ಸು ಎಂಬುದಕ್ಕೆ ನಿಪಾತಸಂಜ್ಞಾದೊಡನೆ ಗತಿ ಎಂಬ ಸಂಜ್ಞೆಯೂ ಧಾತುಯೋಗವಿರುವುದರಿಂದ ಬರುತ್ತದೆ. **ಕೃದ್ಗ್ರಹಣಿಗತಿಕಾರಕಪೂರ್ವಸ್ಯಾಪಿ ಗ್ರಹಣಂ** (ಪರಿಭಾ. ೨೮) ಕೃತ್ ಪ್ರತ್ಯಯವಾದುದರಿಂದ ತದಂತಗ್ರಹಣದಿಂದ ಕೃದಂತವೆಂದಾಗುತ್ತದೆ. ಕೃದಂತಕ್ಕೆ ಉಪಾದಾನವಿರುವೆಡೆಯಲ್ಲಿ ಗತಿಪೂರ್ವವಾಗಿರುವ ಕೃದಂತಕ್ಕೂ ಕಾರಕಪೂರ್ವವಾಗಿರುವುದಕ್ಕೂ ಗ್ರಹಣ ಬರುತ್ತದೆ. ಇಲ್ಲಿ ಗತಿಪೂರ್ವಕವಾದುದರಿಂದ ವಿಶಿಷ್ಟ ಕೃದಂತವೆಂದೇ ಗ್ರಹಿಸಬೇಕು. **ಕೃದಿಕಾರಾದಕ್ತಿನಃ** (ಪಾ. ಸೂ. ೪-೧-೪೫ ಗ.) ಕ್ತಿನ್ ಭಿನ್ನವಾದ ಇಕಾರಾಂತ ಕೃದಂತ ಪ್ರಾತಿಪದಿಕಕ್ಕೆ ಸ್ತ್ರೀತ್ವ ವಿವಕ್ಷಾ ಮಾಡಿದಾಗ ಙೀಷ್ ಬರುತ್ತದೆ. ಹಿಂದಿ ಹೇಳಿದಂತೆ ಕೃದಂತವಿಷಯದಲ್ಲಿ ವಿಶಿಷ್ಟಗ್ರಹಣವಿರುವುದರಿಂದ ಇಲ್ಲಿ ಗತಿಪೂರ್ವವಾದ ಸೂನರಿ ಎಂಬುದೇ ಕೃದಂತವಾಗುತ್ತದೆ. ಇ ರೂಪ ಕೃದಂತವಾದುದರಿಂದ ಙೀಷ್ ಬರುತ್ತದೆ. ಸೂನರೀ ಎಂಬುದಾಗಿ ರೂಪವಾಗುತ್ತದೆ. **ಪರಾದಿಶ್ಛಂದಸಿಬಹುಲಂ** (ಪಾ. ಸೂ. ೬-೨-೧೯೯) ಛಂದಸ್ಸಿನಲ್ಲಿ ಪರ ಶಬ್ದಕ್ಕೆ ಆದಿ ಉದಾತ್ತ ಬರುತ್ತದೆ ಎಂಬುದರಿಂದ ಇಲ್ಲಿ ಉತ್ತರಪದದ ಆದ್ಯುದಾತ್ತ ಸ್ವರವು ಸತಿಶಿಷ್ಟವಾಗಿ ಪ್ರಧಾನವಾಗುತ್ತದೆ. ಯದ್ಯಪಿ ಪೂರ್ವಸೂತ್ರದಲ್ಲಿ ಪರದ ಉಕ್ಥಶಬ್ದಕ್ಕೆ ಮಾತ್ರ ಆದ್ಯುದಾತ್ತವು ವಿಹಿತವಾಗಿರುತ್ತದೆ. ಆದರೆ ಬಹುಲಗ್ರಹಣದಿಂದ ಉಕ್ತಾರ್ಥವು ಸಿದ್ಧವಾಗುತ್ತದೆ. **ನಿಪಾತಸ್ಯ ಚ** (ಪಾ. ಸೂ.

६-३-८३६) **निपातवाद पूर्वपदक्कै** छंदस्सिनल्लि दीर्घ बरुत्तदे. सु ऎंबुदु निपातवादुद रिंद दीर्घबंदरे सूनरीः ऎंबुदागि रूपवागुत्तदे.

प्रभुंजतीः—प्र उपसर्ग. भुज पालनाभ्यवहारयोः धातु. रुधादि. **लटः शतृशानचौ** (पा. सू. ३-२-१२४) ऎंबुदरिंद लटन स्थानदल्लि शतृ बरुत्तदे. शकार ऋकार गळु इत्संज्ञेगुत्तवे. शित् प्रत्ययु परदल्लिरुवुदरिंद रुधादि विकरणवाद श्नम् प्रत्ययवु बरुत्तदे. **मिदचोन्त्यात्परः** (पा. सू. १-१-४८) सूत्रदिंद श्नम् मित्संज्ञेयुदरिंद धातु विन अंत्यद अचिनपरक्कॆ बरुत्तदे. भु+न+ज्+अत् ऎंदिरुवाग नकारावयवक्कॆ **श्नसोरल्लोपः** (पा. सू. ६-४-१११) कित्तु ञित्संज्ञेयाद **सार्वधातुकवु** परदल्लिरुवाग श्न प्रत्ययद अकारवू उस् धातुविन अकारवू लोपवागुत्तदे ऎंबुदरिंद लोपपडुत्तदे. नकारक्कॆ अनुस्वार सरसवर्णगळु बंदरे भुञ्जत् ऎंदु रूपवागुत्तदे. इदक्कॆ स्त्रीत्वविवक्षे माडिदाग शतृप्रत्ययदल्लि उगित्संज्ञेयुदरिंद **उगितश्च** (पा.सू. ४-१-६) ऎंबुदरिंद ङीप् प्रत्ययु बरुत्तदे. भुंजतीः ऎंबुदागि रूपवागुत्तदे. शतुरनुमोनद्यजादीः (पा. सू. ६-१-१८३) नुमागमु हॊंददिरुव शतृप्रत्ययांतकवादुदर मेलिरुव नदीः (ई मत्तु ऊ) ऎंबुदु उदात्तवागुत्तदे. ऎंबुदरिंद इल्लि नुमु बारदिरुवुदरिंद नदी संज्ञॆयुळ्ळ ङीपिन ईकारवु उदात्तवागुत्तदे. प्रभुंजतीः ऎंबुदु अंतोदात्तवागुत्तदे.

वृजनं—वृजीं वर्जने. धातु अदादि वर्ज्यतॆ इति वृजनं प्राणिजातं. हॊगुव स्वभावविळ्ळवुगळु प्राणिसनूहवॆंदर्थ. **कृसृभृवृजिमंदिनिधाञ्भ्यः क्युः** (उ. सू. ३-३१९) ऎंबुदरिंद क्यु प्रत्ययु बरुत्तदे. क्यु प्रत्ययदल्लि ककारवु इत्संज्ञेगुत्तदे. युः ऎंबुदक्कॆ **युवोरनाकौ** सूत्रदिंद अन ऎंब आदेश बरुत्तदे. ककार इत्संज्ञेयुदरिंद **क्ङिति च** (पा.सू. १-१-५) ऎंबुदरिंद धातुविगॆ बरबेकाद लघूपधगुण निषेध बरुत्तदे. प्रत्ययु सेरिसिदरे वृजन ऎंदु रूपवागुत्तदे. **आद्युदात्तश्च** (पा. सू. ३-१-३) ऎंबुदरिंद प्रत्ययु स्वरवु बरुत्तदे.

पद्वत्—**पत्** ऎंदरे पाद. पत् अस्य अस्तीति (कालु इवक्कॆ इदॆ) ऎंबर्थदल्लि **तदस्यास्त्यस्मिन्निति मतुप्** (पा.सू. ५-२-९४) सूत्रदिंद मतुप् प्रत्ययु बरुत्तदे. तकारक्कॆ जश्त्वदिंद दकार बरुत्तदे. **ऋयेः** (पा. सू. ५-४-११९) ऋयिन परदल्लिरुव मतुपिन मकारक्कॆ वकारबरुत्तदे. **व्यत्ययोबहुलं** ऎंबुदरिंद मतुप् उदात्तवागुत्तदे. मतुप् पित्संज्ञेयुदरिंद अनुदात्तवागबेकागुत्तदे. आदुदरिंद व्यत्ययवन्नु स्वीकरिसबेकु. **स्वरविधौ व्यंजनमविद्यमानवत्** (परिभाषा ९९) स्वरविधान माडुवाग मध्यॆ व्यंजनविद्दरू इल्ल दंतॆयॆ आगुत्तदॆ ऎंदु विधानमाडिरुवरु. आदुदरिंद इल्लि व्यत्ययवु स्वीकरिसिदरे उदात्तवन्नु साधिसलु साध्यवागुत्तदॆ ऎंदु ऒंदु पूर्वपक्षवु बरुत्तदे. अदु हेगॆंदरॆ, पद्वत् ऎंबल्लि पकारद अकारक्कू मतुपिगू मध्यॆ दकारद व्यवधानमात्र विदॆ. हिंदॆ हेळिद परिभाषॆयर्थदंतॆ अदक्कॆ अविद्यमानवद्भाव हेळिदरॆ ह्रस्वाकारद परदल्लि मतुप् बंदंतॆ आगु

ತ್ತದೆ. ಆಗ ಹ್ರಸ್ವಾನುಡ್ಭ್ಯೋ ಮತುಪ್ (ಪಾ. ಸೂ. ೬-೧-೧೭೬) ಹ್ರಸ್ವಾಂತದ ಅಂತೋದಾತ್ತದ ಪರದಲ್ಲಿರುವ ನುಟ್ಪನ ಪರದಲ್ಲಿರುವ ಮತುಪ್ ಉದಾತ್ತವಾಗುತ್ತದೆ ಎಂಬುದರಿಂದ ಉದಾತ್ತವಾಗುತ್ತದೆ. ಅದಕ್ಕೋಸ್ಕರ ವ್ಯತ್ಯಯವನ್ನು ಸ್ವೀಕರಿಸುವುದು ವ್ಯರ್ಥ ಎಂದು ಶಂಕೆ ಬಂದರೆ ಅದಕ್ಕೆ ಈ ಸೂತ್ರದಲ್ಲಿ ಅವಕಾಶವಿಲ್ಲ. ಹಾಗೆ ಮಧ್ಯೆ ವ್ಯಂಜನವಿಲ್ಲವೆಂದು ಭಾವಿಸಿ ಬರುವುದಾದರೆ ಈ ಸೂತ್ರದಲ್ಲಿ ನುಟ್ ಗ್ರಹಣ ವ್ಯರ್ಥವಾಗುತ್ತದೆ- ಅಕ್ಷ್ಣ್ವಂತಃ ಇತ್ಯಾದಿಗಳು ನುಟಿನ ಪರದಲ್ಲಿರುವ ಮತುಪಿಗೆ ಉದಾತ್ತ ಬಂದುದಕ್ಕೆ ಉದಾಹರಣೆಗಳು. ಸೂತ್ರದಲ್ಲಿ ನುಟ್ ಇಲ್ಲದಿದ್ದರೂ ಪರಿಭಾಷಾರ್ಥದಂತೆ ಮಧ್ಯೆ ನುಟ್ಟಿದ್ದರೂ ಸ್ವರವಿಧಾನದಲ್ಲಿ ಇಲ್ಲವೆಂದು ಭಾವಿಸಿ ಉದಾತ್ತ ಸ್ವರವನ್ನು ಹೇಳಲು ಬರುತ್ತದೆ. ಹೀಗಿರುವಾಗ ನುಟ್ ಏಕೆ ಹೇಳಬೇಕು? ಆದುದರಿಂದ ಆ ಪರಿಭಾಷೆಯು ಇಲ್ಲಿ ಆಶ್ರಯಿಸಲ್ಪಡುವುದಿಲ್ಲವೆಂದು ವೃತ್ತಿಯಲ್ಲಿಯೂ ಹೇಳಿರುವರು. (ಕಾ. ೬-೧-೧೭೬) ಈ ಸೂತ್ರದಲ್ಲಿ ಪರಿಭಾಷೆಯನ್ನು ಆಶ್ರಯಿಸುವುದಿಲ್ಲವೆಂದು ಹೇಳಬೇಕು. ಇಲ್ಲವಾದರೆ ಮರುತ್ವಾನ್ ಮುಂತಾದ ಸ್ಥಳದಲ್ಲಿ ವ್ಯಂಜನಮಧ್ಯೆ ಇಲ್ಲವೆಂದು ಮತುಪಿಗೆ ಉದಾತ್ತಸ್ವರವು ಬರಬೇಕಾಗುತ್ತದೆ. ಹಾಗೆ ಎಲ್ಲಿಯೂ ಮಾಡಲಿಲ್ಲ. ಆದುದರಿಂದ ಪದ್ವತ್ ಎಂಬಲ್ಲಿ ವ್ಯತ್ಯಯದಿಂದಲೇ ಮತುಪಿಗೆ ಉದಾತ್ತಸ್ವರವನ್ನು ಹೇಳಬೇಕು ॥ ೫ ॥

ಸಂಹಿತಾಪಾಠಃ

ವಿ ಯಾ ಸೃಜತಿ ಸಮನಂ ವ್ಯರ್ಥಿನಃ ಪದಂ ನ ವೇತ್ಯೋದತೀ ।
ವಯೋ ನಕಿಷ್ಟೇ ಪಪ್ತಿವಾಂಸ ಆಸತೇ ವ್ಯುಷ್ಟೌ ವಾಜಿನೀವತಿ ॥ ೬ ॥

॥ ಪದಪಾಠಃ ॥

ವಿ । ಯಾ । ಸೃಜತಿ । ಸಮನಂ । ವಿ । ಅರ್ಥಿನಃ । ಪದಂ । ನ । ವೇತಿ । ಓದತೀ ।
ವಯಃ । ನಕಿಃ । ತೇ । ಪಪ್ತಿವಾಂಸಃ । ಆಸತೇ । ವಿಽಉಷ್ಟೌ । ವಾಜಿನೀವತಿ ॥ ೬ ॥

ಸಾಯಣಭಾಷ್ಯಂ

ಯಾ ದೇವತಾ ಸಮನಂ ಸಮಾಪಿನಷ್ಟೇಷ್ಟಾವಂತಂ ಪುರುಷಂ ವಿ ಸೃಜತಿ ಪ್ರೇರಯತಿ । ಗೃಹಾರಾಮಾದಿಷ್ಟೇಷ್ಟಾಕುಶಲಾನ್ಪುರುಷಾನುಷಃಕಾಲಃ ಶಯನಾದುತ್ಥಾಪ್ಯ ಸ್ವಸ್ವವ್ಯಾಪಾರೇ ಪ್ರೇರಯತೀತಿ ಪ್ರಸಿದ್ಧಂ । ಕಿಂಚ ಉಷಾ ಅರ್ಥಿನೋ ಯಾಚಕಾನ್ವಿ ಸೃಜತಿ । ತೇಽಪಿ ಹ್ಯುಷಃಕಾಲೇ ಸಮುತ್ಥಾಯ ಸ್ವಕೀಯೇದಾತೃಗೃಹೇ ಗಚ್ಛಂತಿ। ಓದತ್ಯುಷೋದೇವತಾ ಪದಂ ಸ್ಥಾನಂ ನ ವೇತಿ। ನ ಕಾಮಯತೇ । ಉಷಃಕಾಲಃ ಶೀಘ್ರಂ ಗಚ್ಛತೀತ್ಯರ್ಥಃ । ಹೇ ವಾಜಿನೀವತ್ಯುಷೋದೇವತೇ ತೇ ವ್ಯುಷ್ಟೌ ತ್ವದೀಯೇ ಪ್ರಭಾತ-

ಕಾಲೇ ಪಪ್ತಿವಾಂಸಃ ಪತನಯುಕ್ತಾ ವಯಃ ಪಕ್ಷಿಣೋ ನಕಿರಾಸತೇ । ನ ತಿಷ್ಠಂತಿ । ಕಿಂತು ಸ್ವಸ್ವನೀಡಾದ್ವಿನಿರ್ಗತ್ಯ ಗಚ್ಛಂತೀತ್ಯರ್ಥಃ ॥ ಸೃಜತಿ । ಸೃಜ ವಿಸರ್ಗೇ । ತುದಾದಿತ್ವಾಚ್ಛಪ್ । ತಸ್ಯ ಜಿತ್ತ್ವಾಲ್ಲಘೂಪಧಗುಣಾಭಾವಃ । ಪ್ರತ್ಯಯಸ್ಯ ಪಿತ್ತ್ವಾದನುದಾತ್ತತ್ವೇ ವಿಕರಣಸ್ವರಃ । ಯೆದ್ವೃತ್ತಯೋಗಾದನಿಘಾತಃ ಓದತೀ । ಉನ್ದೀ ಕ್ಲೇದನೇ । ಉನತ್ತಿ ಸರ್ವಂ ನೀಹಾರೇಣೇತ್ಯೋದತ್ಯುಷಾಃ । ಶತರಿ ವ್ಯತ್ಯಯೇನ ಶಪ್ । ವ್ಯತ್ಯಯೇನಾನುನಾಸಿಕಲೋಪೇ ಲಘೂಪಧಗುಣಃ । ಉಗಿತಶ್ಚೇತಿ ಙೀಪ್ । ಆಗಮಾನುಶಾಸನಸ್ಯಾನಿತ್ಯತ್ವಾನ್ನುಮಭಾವಃ । ಶಪಃ ಪಿತ್ತ್ವಾದನುದಾತ್ತತ್ವಂ । ಶತುರದುಪದೇಶಾಲ್ಲಸಾರ್ವಧಾತುಕಾನುದಾತ್ತತ್ವೇ ಧಾತುಸ್ವರೇಣಾದ್ಯುದಾತ್ತತ್ವಂ । ನ ಚ ಶತುರನುಮ ಇತಿ ನದ್ಯಾ ಉದಾತ್ತತ್ವಂ । ಅಂತೋದಾತ್ತಾಚ್ಚೇತುಃ ಪರಸ್ಯಾಸ್ತ್ಯುದ್ವಿಧಾನಾತ್ । ನಕಿಷ್ಟೇ । ಯುಷ್ಮತ್ತತ್ತತಕ್ಷುಃ ಷ್ಟಂತಃಪಾದಮಿತಿ ಷತ್ವಂ । ಪಪ್ತಿವಾಂಸಃ । ಪತ್ಲೃ ಗತೌ । ಲಿಟಃ ಕ್ವಸುಃ । ಕ್ವಾದಿನಿಯಮನಾತ್ಪ್ರಾಪ್ತಸ್ಯ ಇಟ್ ವಸ್ವೇಕಾಜಾದ್ಧಸಾಮಿತಿ ನಿಯಮಾನ್ನ ಪ್ರಾಪ್ನೋತಿ ತಕ್ಕ್ರಯತೇ ಸರ್ವವಿಧೀನಾಂ ಛಂದಸಿ ವಿಕಲ್ಪಿತತ್ವಾತ್ । ಕನಿಪತ್ಯೋಶ್ಛಂದಸಿ । ಪಾ. ೬-೪-೯೯ । ಇತ್ಯುಪಧಾಲೋಪಃ । ದ್ವಿರ್ವಚನೇಚೀತಿ ಸ್ಥಾನಿವದ್ಭಾವಾದ್ಧ್ರಸ್ವಾಭಾವಃ । ಪ್ರತ್ಯಯಸ್ವರಃ । ವಾಜಿನೀವತಿ । ವಾಜೋಽನ್ನಮಸ್ಯಾ ಅಸ್ತೀತಿ ವಾಜಿನೀ ಕ್ರಿಯಾ । ಮತ್ವರ್ಥೀಯ ಇನಿಃ । ಋನ್ನೇಭ್ಯ ಇತಿ ಙೀಪ್ । ತಾದೃಶೀ ಕ್ರಿಯಾ ಯಸ್ಯಾಃ ಸಾ । ತದಸ್ಯಾಸ್ತೀತಿ ಮತುಪ್ । ಸಂಜ್ಞಾಯಾಮಿತಿ ಮತುಪೋ ವತ್ವಂ ॥

॥ ಪ್ರತಿಪದಾರ್ಥ ॥

ಯಾ—(ಯಾವ) ಉಷೋದೇವತೆಯು । ಸಮನಂ—ಉದ್ಯೋಗಶೀಲನಾದ ಪುರುಷನನ್ನು । ವಿಸೃಜತಿ—(ಅವನ ಕೆಲಸಕ್ಕೆ) ಪ್ರೇರಿಸುತ್ತಾಳೆ । ಅರ್ಥಿನಃ—ಯಾಚಕರನ್ನು । ವಿ (ಸೃಜತಿ)—(ಅವರವರ ದಾತೃಗಳ ಮನೆಗೆ) ಹೋಗುವಂತೆ ಪ್ರೇರಿಸುತ್ತಾಳೆ । ಓದತೀ—ಉಷೋದೇವತೆಯು । ಪದಂ—(ಶಾಶ್ವತವಾದ) ಸ್ಥಾನವನ್ನು । ನನೇತಿ—ಇಚ್ಛಿಸುವುದಿಲ್ಲ. ಉದಯವಾದೊಡನೆ ಹೊರಟುಹೋಗುತ್ತಾಳೆ) । ವಾಜಿನೀವತಿ—ಅನ್ನಯುಕ್ತ(ದಾತ)ಳಾದ ಉಷೋದೇವತೆಯೇ ॥ ತೇ ಪ್ಯುಷ್ಟೌ—ನಿನ್ನ ಉದಯಕಾಲದಲ್ಲಿ । ಪಪ್ತಿವಾಂಸಃ—ಹಾರುವ ಸ್ವಭಾವವುಳ್ಳ । ವಯಃ—ಪಕ್ಷಿಗಳು । ನಕಿಃ ಆಸತೇ—(ಗೂಡುಗಳಲ್ಲಿ) ನಿಲ್ಲುವುದೇ ಇಲ್ಲ.

॥ ಭಾವಾರ್ಥ ॥

ಉಷೋದೇವತೆಯು (ಉಷಃಕಾಲವು) ಮನೆ, ತೋಟ ಮುಂತಾದ ಸ್ಥಳಗಳಲ್ಲಿ ಉದ್ಯೋಗಗಳನ್ನು ನಿಯತವಾಗಿಟ್ಟುಕೊಂಡಿರುವ ಪುರುಷರನ್ನು ಅವರವರ ಹಾಸಿಗೆಯಿಂದೆಬ್ಬಿಸಿ ಅವರವರ ಕೆಲಸಗಳಲ್ಲಿ ತೊಡಗುವಂತೆ ಪ್ರೇರಿಸುತ್ತಾಳೆ. ಯಾಚಕರನ್ನು ಅವರವರ ದಾತೃಗಳ ಮನೆಗೆ ಹೋಗುವಂತೆ ಪ್ರೇರಿಸುತ್ತಾಳೆ. ಇವಳು ಉದಯಿಸಿದ ಮೇಲೆ ಅದೇ ಸ್ಥಾನದಲ್ಲಿ ಶಾಶ್ವತವಾಗಿ ನಿಲ್ಲದೇ ಓಡನೇ ತಿರೋಹಿತಳಾಗುತ್ತಾಳೆ. ಅನ್ನಯುಕ್ತಳೂ ಅನ್ನದಾತಳೂ ಆದ ಉಷೋದೇವತೆಯೇ, ನಿನ್ನ ಉದಯವಾದೊಡನೆಯೇ ಪಕ್ಷಿಗಳು ತಮ್ಮ ಗೂಡುಗಳಲ್ಲಿ ನಿಲ್ಲದೇ ಆಹಾರಾರ್ಥವಾಗಿ ಹಾರಿಹೋಗುತ್ತವೆ.

English Translation.

She animates the industrious and sends solicitors to their donors; she never stays in one place (but moves on). O bestower of food, birds no longer stay but begin to fly at your approach.

॥ ವಿಶೇಷ ವಿಷಯಗಳು ॥

ಸೃಜತಿ—**ಸೃಜ ವಿಸರ್ಗೆ** । ಕಳುಹಿಸುವಳು, ಹೋಗುವಂತೆ ಪ್ರೇರಿಸುವಳು.

ಸಮನಂ—**ಸವಿಾಚೀನಚೇಷ್ಟಾವಂತಂ** । ಚಟುವಟಕೆಯಿಂದ ಕೆಲಸಮಾಡುವ ಮನುಷ್ಯನನ್ನು, ಉದ್ಯೋಗಶೀಲನನ್ನು, diligent, busy, industrious.

ಓದತೀ—**ಉಂದೀ ಕ್ಲೇದನೇ** । **ಉನತ್ತಿ ಸರ್ವಂ ನೀಹಾರೇಣೇತ್ಯೋದತ್ಯುಷಾಃ** ಓದತೀ ಎಂಬ ಶಬ್ದವು ಉಂದೀ ಎಂಬ ಧಾತುವಿನಿಂದ ಉಂಟಾಗಿದೆ. ಈ ಧಾತುವಿಗೆ ನೆನೆಯಿಸು ಎಂದರ್ಥವಿರುವುದು. ಉಷಃ ಕಾಲದಲ್ಲಿ ಸೂರ್ಯೋದಯಕ್ಕೆ ಮುಂಚೆ ಭೂಮಿಯ ಮೇಲೂ ತೃಣಾದಿಗಳ ಮೇಲೂ ಹಿಮವು ಬಿದ್ದು ಎಲ್ಲವೂ ನೆನೆದಿರುವುದರಿಂದ ಉಷೋದೇವತೆಯು ಎಲ್ಲವನ್ನೂ ನೆನೆಯಿಸುವವಳು. ಆದುದರಿಂದ ಉಷೋದೇವತೆಯನ್ನು ಓದತೀ-ನೆನೆಯಿಸುವವಳು ಎಂದು ಹೇಳಬೇಕು.

ನಕಿಃ—ಎಲ್ಲ, ಸಮಸ್ತ. ಹಿಕಂ ನುಕಂ ಮೊದಲಾದ ಒಂಭತ್ತು ಸರ್ವನಾಮಗಳಲ್ಲಿ ನಕಿಃ ಎಂಬ ಶಬ್ದವು ಪಠಿತವಾಗಿರುವುದರಿಂದ (ನಿ. ೩-೧೩) ನಕಿಃ ಎಂದರೆ ಎಲ್ಲವೂ, ಸಮಸ್ತವೂ ಎಂದರ್ಥವು.

॥ ವ್ಯಾಕರಪ್ರಕ್ರಿಯಾ ॥

ಸೃಜತಿ—ಸೃಜ ವಿಸರ್ಗೆ ಧಾತು. ತುದಾದಿ. ಪ್ರಥಮಪುರುಷ ಏಕವಚನ ತುದಾದಿಗೆ ಶ ವಿಕರಣ ಬರುತ್ತದೆ. **ಸಾರ್ವಧಾತುಕಮಪಿತ್** (ಪಾ. ಸೂ. ೧-೨-೪) ಎಂಬುದರಿಂದ ಅದು ಙಿತ್ತಾಗುತ್ತದೆ. ಸೃಜ್+ಅ+ತಿ ಎಂದಿರುವಾಗ ಶ ಙಿತ್ತಾದುದರಿಂದ ಲಘೂಪಧ ಗುಣವು ಬರುವುದಿಲ್ಲ. ಸೃಜತಿ ಎಂದಿರುವಾಗ **ತಿಪ್** ಪಿತ್ತಾದುದರಿಂದ **ಅನುದಾತ್ತೌಸುಪ್ಪಿತೌ** ಎಂಬುದರಿಂದ ಅನುದಾತ್ತವಾಗುತ್ತದೆ. ಆಗ ವಿಕರಣಸ್ವರನೇ ಸತಿ ಶಿಷ್ಟವಾಗುತ್ತದೆ. **ಆದ್ಯುದಾತ್ತಶ್ಚ** ಎಂಬುದರಿಂದ ಅದು ಉದಾತ್ತವಾಗುತ್ತದೆ. ಜಕಾರೋತ್ತರ ಅಕಾರವು ಉದಾತ್ತವೆಂದು ತಿಳಿಯಬೇಕು. ಉದಾತ್ತದ ಪರದಲ್ಲಿ ಅನುದಾತ್ತ ಬಂದುದರಿಂದ **ತಿಪ್** ಪ್ರತ್ಯಯ ಸ್ವರವು ಸ್ವರಿತವಾಗುತ್ತದೆ. ಸೃಜತಿ ಎಂಬುದರ ಹಿಂದೆ ಯಾ ಶಬ್ದವಿರುವುದರಿಂದ ಯದ್ವೃತ್ತಯೋಗದಿಂದ **ತಿಙ್ಙತಿಙಿಃ** ಎಂಬುದರಿಂದ ಸರ್ವಾನುದಾತ್ತವಾಗುವುದಿಲ್ಲ. ಯಚ್ಛಬ್ದಯೋಗವಿರುವಾಗ ನಿಷೇಧ ಹೇಳಿರುತ್ತಾರೆ.

ಓದತೀ—ಉಂದೀ ಕ್ಲೇದನೆ ಧಾತು. ರುಧಾದಿ. **ಉನತ್ತಿ ಸರ್ವಂ ನೀಹಾರೇಣ** ಇತಿ ಓದತೀ ಉಷಾಃ ಹಿಮಕಿರಣಗಳಿಂದ ಎಲ್ಲವನ್ನೂ ವದ್ದೆ ಮಾಡುವವಳು (ಉಷೆ) ಎಂದರ್ಥ. ಲಡರ್ಥದಲ್ಲಿ **ಲಟಃ ಶತೃ-ಶಾನಚಾ**—ಸೂತ್ರದಿಂದ ಶತೃ ಪ್ರತ್ಯಯ ಬರುತ್ತದೆ. ಶತೃ ಪ್ರತ್ಯಯ ಪರದಲ್ಲಿರುವಾಗ ರುಧಾದಿಗಳಿಗೆ **ಪ್ರಾಪ್ತ** ವಾಗುವ ಶ್ನಮ್ ವಿಕರಣವು ಬಂದರೆ ಅದಕ್ಕೆ ಬದಲಾಗಿ **ವ್ಯತ್ಯಯೋಬಹುಲಂ** ಸೂತ್ರದಿಂದ ವ್ಯತ್ಯಯದಿಂದ **ಶಪ್** ವಿಕರಣ ಪ್ರತ್ಯಯ ಬರುತ್ತದೆ. ಉಂದ್+ಅ+ಅತ್ ಎಂದಿರುವಾಗ ಝಲಾದಿಯಾದ ಙಿತ್ತು ಕಿತ್ತು ಪ್ರತ್ಯಯಪರದಲ್ಲಿ ಇಲ್ಲದಿದ್ದರೂ ವ್ಯತ್ಯಯದಿಂದಲೇ ಛಂದಸ್ಸಿನಲ್ಲಿ ಅನುನಾಸಿಕಕ್ಕೆ ಲೋಪಬರುತ್ತದೆ. ಆಗ ಉದ್ ಎಂಬ ಲಘೂಪಧೆಯ ಅಂಗಕ್ಕೆ **ಪುಗಂತಲಘೂಪಧಸ್ಯ ಚ** (ಪಾ. ಸೂ. ೭-೩-೮೬) ಸೂತ್ರದಿಂದ ಗುಣಬರುತ್ತದೆ. ಓದತ್ ಎಂದು ವಿಶಿಷ್ಟರೂಪವಿರುವಾಗ ಸ್ತ್ರೀತ್ವ ವಿವಕ್ಷವಾಡಿದರೆ, **ಉಗಿತಶ್ಚ** (ಪಾ. ಸೂ. ೪-೧-೬) ಉಗಿದಂತವಾದ **ಪ್ರಾತಿಪದಿಕ**ಕ್ಕೆ ಙೀಪ್ ಬರುತ್ತದೆ ಎಂಬುದರಿಂದ **ಙೀಪ್** ಬರುತ್ತದೆ. ಓದತೀ ಎಂದು ರೂಪವಾಗುತ್ತದೆ. ಶತೃ ಉಗಿತ್ತಾದುದರಿಂದ ಸರ್ವನಾಮಸ್ಥಾನ ಸಂಜ್ಞೆಯುಳ್ಳ ಪ್ರಥಮೈಕವಚನ ಪರದಲ್ಲಿರುವಾಗ **ಉಗಿದಚಾಂ**

ಸರ್ವನಾಮ (ಪಾ ಸೂ. ೭-೧-೭೦) ಎಂಬುದರಿಂದ ಇಲ್ಲಿ ನುಮಾಗಮ **ಪ್ರಾಪ್ತ**ವಾಗುತ್ತದೆ. ಆದರೆ ಆಗಮ **ಶಾಸ್ತ್ರ**ಮನಿತ್ಯಂ (ಪರಿಭಾಷಾ ೯೬) ಎಂಬುದರಿಂದ ಇಲ್ಲಿ ಅನಿತ್ಯತ್ವ ಆಶ್ರಯಣದಿಂದ, ನುಮಾಗಮವಾದುದರಿಂದ ಬರುವುದಿಲ್ಲ. ಓದ್+ಅ+ಅತ್ ಎಂಬಲ್ಲಿ ಶಪ್ ಪಿತ್ವಾದುದರಿಂದ **ಅನುದಾತ್ತೌ ಸುಪ್ಪಿತೌ** ಸೂತ್ರದಿಂದ ಅನುದಾತ್ತವಾಗುತ್ತದೆ. ಶತೃಪ್ರತ್ಯಯ ಸ್ವರದಿಂದ ಅಂತೋದಾತ್ತವಾದರೆ, **ತಾಸ್ಯನುದಾತ್ತೇತ್** (ಪಾ. ಸೂ. ೬-೧-೧೮೬) ಸೂತ್ರದಿಂದ ಲಸಾರ್ವಧಾತುಕವಾದುದರಿಂದ ಅನುದಾತ್ತವಾಗುತ್ತದೆ. ಆಗ **ಧಾತೋಃ** ಸೂತ್ರದಿಂದ ಬಂದಿರುವ ಅಂತೋದಾತ್ತವಾದ ಧಾತುಸ್ವರವೇ ಉಳಿಯುವುದು. ಇದರಿಂದ ಓದತೀ ಎಂಬುದು ಆದ್ಯುದಾತ್ತಪದವಾಗುತ್ತದೆ. ಇಲ್ಲಿ **ಶತೃರನುನೋ ನದ್ಯಜಾದೀ** ಸೂತ್ರದಿಂದ ನದೀ ಸಂಜ್ಞೆಯುಳ್ಳ ಈಕಾರವು ಉದಾತ್ತವೇಕೆ ಆಗುವುದಿಲ್ಲವೆಂದು ಶಂಕೆ ಬರುತ್ತದೆ. ನುಮನ್ನು ಹೊಂದದಿರುವ ಶತೃವಿನ ಪರದಲ್ಲಿರುವ ನದಿಯೂ (ಈ ಮತ್ತು ಊ) ಅಜಾದಿ ಶಸಾದಿ ವಿಭಕ್ತಿಯೂ ಉದಾತ್ತವಾಗುತ್ತದೆ ಎಂದು ಆ ಸೂತ್ರದ ಅರ್ಥ. ಆದುದರಿಂದ ಉದಾತ್ತವಾಗಲಿ ಎಂದರೆ, ಆ ಸೂತ್ರದಲ್ಲಿ ಅಂತೋದಾತ್ತವೆಂದೂ ಅನುವೃತ್ತವಾಗಿದೆ. ಶತೃಪ್ರತ್ಯಯಾಂತವಾದ ಅಂತೋದಾತ್ತದ ಪರದಲ್ಲಿರುವ ನದಿಯು ಉದಾತ್ತವಾಗುತ್ತದೆ ಎಂದು ಅರ್ಥವಾಗುತ್ತದೆ. ಇಲ್ಲಿ ಶತೃಪ್ರತ್ಯಯದ ಪರದಲ್ಲಿದ್ದರೂ ಅಂತೋದಾತ್ತದ ಪರದಲ್ಲಿ ಬಂದಂತಾಗುವುದಿಲ್ಲ. ಶಪ್ ಪಿತ್ವಾದುದರಿಂದ ಅನುದಾತ್ತವಾಗುತ್ತದೆ ಎಂದು ಹೇಳಿದೆ. ಅನುದಾತ್ತದಪರದಲ್ಲಿರುವ ಶತೃಪ್ರತ್ಯಯವೂ ಹಿಂದೆ ಹೇಳಿದಂತೆ ಅನುದಾತ್ತವಾಗುತ್ತದೆ ಎಂದು ಹೇಳಿದೆ. ಆದುದರಿಂದ ನಿಮಿತ್ತವಿಲ್ಲದಿರುವುದರಿಂದ ನದಿಗೆ ಉದಾತ್ತ ಸ್ವರವು ಬರುವುದಿಲ್ಲ.

ನಕಿಷ್ಟೆ—ನಕಿಃ ತೆ ಎಂದಿರುವಾಗ **ವಿಸರ್ಜನೀಯಸ್ಯ ಸಃ** (ಪಾ. ಸೂ. ೮-೩-೩೪) ಸೂತ್ರದಿಂದ ವಿಸರ್ಗಕ್ಕೆ ಸತ್ವಬರುತ್ತದೆ. ನಕಿಸ್+ತೆ ಎಂದಿರುವಾಗ **ಯುಷ್ಮತ್ತತ**ಷ್ಠುಷ್ಟಂತಃ ಪಾದಂ (ಪಾ. ಸೂ. ೮-೩-೧೦೩) ಪಾದ ಮಧ್ಯದಲ್ಲಿರುವ ಸಕಾರಕ್ಕೆ ಯುಷ್ಮದಾದೇಶಗಳಿಂದ ತಾದಿಗಳೂ ಪರದಲ್ಲಿರುವಾಗ ಷತ್ವ ಬರುತ್ತದೆ. ಎಂಬುದರಿಂದ ಸಕಾರಕ್ಕೆ ಷಕಾರ ಬರುತ್ತದೆ. ಇಲ್ಲಿ ಯುಷ್ಮಚ್ಛಬ್ದಕ್ಕೆ **ತೇಮಯಾವೇಕವಚನಸ್ಯ** ಸೂತ್ರದಿಂದ ತೇ ಎಂಬ ಆದೇಶ ಬಂದಿದೆ. ಷತ್ವ ಬಂದರೆ ವಕಾರಕ್ಕೆ ಷಕಾರಯೋಗವಿರುವುದರಿಂದ **ಷ್ಟುನಾಷ್ಟುಃ** (ಪಾ. ಸೂ. ೮-೪-೪೧) ಸೂತ್ರದಿಂದ ಷ್ಟುತ್ವಸಂಧಿ ಬರುತ್ತದೆ. ತಕಾರಕ್ಕೆ ಟಕಾರ ಬಂದರೆ ನಕಿಷ್ಟೆ ಎಂದು ರೂಪವಾಗುತ್ತದೆ.

ಪಪ್ತಿವಾಂಸಃ—ಪತ್ಲೃ ಗತೌ ಧಾತು ಭ್ವಾದಿ ಛಂದಸಿಲಿಟ್ ಎಂದು ಅನುವೃತ್ತವಾಗುವಾಗ **ಕ್ವಸುಶ್ಚ** (ಪಾ. ಸೂ. ೩-೨-೧೦೭) ಭೂತಸಾಮಾನ್ಯದಲ್ಲಿ ಲಟಿನಸ್ಥಾನದಲ್ಲಿ ಕ್ವಸು ಪ್ರತ್ಯಯ ಬರುತ್ತದೆ. ಕ್ವಸು ಎಂಬಲ್ಲಿ ವಸ್ ಮಾತ್ರ ಉಳಿಯುತ್ತದೆ. ತಿಙ, ಶಿತ್, ವ್ಯತಿರಿಕ್ತವಾದುದರಿಂದ ಇದು ಆರ್ಧಧಾತುಕ ಸಂಜ್ಞೆಯನ್ನು ಹೊಂದುತ್ತದೆ. ವಲಾದಿ ಆರ್ಧಧಾತುಕಗಳಿಗೆ ಇಟ್ ಪ್ರಾಪ್ತವಾದರೆ ಕೈ ಸೈ ಭೈ (ಪಾ. ಸೂ. ೭-೨-೧೩) ಸೂತ್ರದಿಂದ ನಿಯಮ ಮಾಡಿರುತ್ತಾರೆ. ಇಣ್ ನಿಷೇಧ ಬರುವುದಾದರೆ ಈ ಸೂತ್ರದಲ್ಲಿ ಹೇಳಿದವುಗಳಿಗೆ ಮಾತ್ರವೇ ಬರುವುದು. ಬೇರೆ ಧಾತುಗಳಿಗೆ ಇಟ್ ಬರುತ್ತದೆ ಎಂದು ಆ ನಿಯಮದಿಂದ ಸಿದ್ಧವಾಗುತ್ತದೆ. ಆದರೆ ಈ ಪ್ರತ್ಯಯ ವಿಷಯದಲ್ಲಿ ಇನ್ನೊಂದು ನಿಯಮವು ಆರಬ್ಧವಾಗಿರುತ್ತದೆ. **ವಸ್ವೇಕಾಜಾದ್ಘಸಾಂ** (ಪಾ. ಸೂ. ೭-೨-೬೭) ದ್ವಿತ್ವವನ್ನು ಹೊಂದಿರುವ ಏಕಾಚಾದ ಧಾತುಗಳ, ಆದಂತ ಧಾತುಗಳ, ಘಸಾದೇಶದ, ಪರದಲ್ಲಿರುವ ವಸುವಿಗೆ ಇಟ್ ಇರುತ್ತದೆ. ಇಲ್ಲಿ ವಸು ಎಂಬುದು ವಲಾದಿ ಆರ್ಧಧಾತುಕವಾದುದರಿಂದ ಸಾಮಾನ್ಯ ಸೂತ್ರದಿಂದ ಪ್ರಾಪ್ತವಾಗುವಾಗ ಪುನಃ ಈ ಸೂತ್ರದಿಂದ ಇಡ್ವಿಧಾನ ಮಾಡಿದುದರಿಂದ ನಿಯಮವಾಗುತ್ತದೆ ಎಂದು ತಿಳಿಯಬೇಕು. ಈ ನಿಯಮದಿಂದ ಪ್ರಕೃತಸ್ಥಲದಲ್ಲಿ ಇಟ್ ಬಾರದೇ ಇರಬೇಕಾಗುತ್ತದೆ ಅದು ಹೇಗೆಂದರೆ; ಲಿಟನ ಸ್ಥಾನದಲ್ಲಿ ಕ್ವಸು ಪ್ರತ್ಯಯ ಬಂದಿರುತ್ತದೆ. ಆದುದರಿಂದ ಅದು ಪರದಲ್ಲಿರುವಾಗ ದ್ವಿತ್ವ ಬರುತ್ತದೆ. ದ್ವಿತ್ವಕ್ಕಿಂತಲೂ ಮೊದಲು

ತೆನಿಪತ್ಯೋಶ್ಛಂದಸಿ (ಪಾ. ಸೂ. ೬-೪-೯೯) ಈ ಎರಡು ಧಾತುಗಳಿಗೆ ಛಂದಸ್ಸಿನಲ್ಲಿ ಕಿತ್ ಜ್ಞಿತ್ತಾದ ಪ್ರತ್ಯಯಗಳು ಪರದಲ್ಲಿರುವಾಗ ಉಪಧಾ ಲೋಪ ಬರುತ್ತದೆ ಎಂಬುದರಿಂದ ಉಪಧೆಯಾದ ಅಕಾರಕ್ಕೆ ಲೋಪ ಬರುತ್ತದೆ. ಆಮೇಲೆ ದ್ವಿತ್ವಮಾಡುವಾಗ **ದ್ವಿರ್ವಚನೇಚಿ** (ಪಾ. ಸೂ. ೧-೧-೫೬) ದ್ವಿತ್ವನಿಮಿತ್ತಕವಾದ ಪ್ರತ್ಯಯಪರದಲ್ಲಿರುವಾಗ ಅಚ್‌ಸ್ಥಾನಿಕ ಆದೇಶಕ್ಕೆ ಸ್ಥಾನಿವದ್ಭಾವ ಬರುತ್ತದೆ ಎಂಬುದರಿಂದ ಲೋಪ ರೂಪಾದೇಶಕ್ಕೆ ಸ್ಥಾನಿವದ್ಭಾವ ಬಂದರೆ ಅಕಾರವಿದ್ದಂತೆಯೇ ಆಗುವುದು. ದ್ವಿತ್ವಬಂದಾಗ ಪತ್+ಪತ್+ವಸ್ ಎಂತಾಗುತ್ತದೆ. **ಹಲಾದಿಶೇಷ** ಸೂತ್ರದಿಂದ ಪಪತ್‌ವಸ್ ಎಂತಾಗುತ್ತದೆ. ಈಗ ಧಾತುವು ಅನೇಕಾಚ್ಚಾಗುತ್ತದೆ. ದ್ವಿತ್ವ ಬಂದಾಗಲೂ ಏಕಾಚ್ಚಾಗಿರುವ ಧಾತುವಿನ ಮೇಲಿರುವ ವಸುವಿಗೆ ಮಾತ್ರ ಇಡಾಗಮವನ್ನು ನಿಯಮಸೂತ್ರದಲ್ಲಿ ಹೇಳಿರುತ್ತಾರೆ. ಆದುದರಿಂದ ಪುನಃ ಇಣ್ನಿಷೇಧ ಪ್ರಾಪ್ತವಾಗುತ್ತದೆ. ಆದುದರಿಂದ **ಷಷ್ಠೀಯುಕ್ತಃ ಛಂದಸಿವಾ** (ಪಾ. ಸೂ. ೧-೪-೯) ಸೂತ್ರದಲ್ಲಿ ಯೋಗ ವಿಭಾಗದಿಂದ ಸಿದ್ಧವಾದ ಅರ್ಥವನ್ನು ಆಶ್ರಯಿಸಬೇಕು. ಅಲ್ಲಿ ಛಂದಸಿ ವಾ ಎಂದು ಯೋಗ ವಿಭಾಗ ಮಾಡಿಕೊಂಡು ಛಂದಸ್ಸಿನಲ್ಲಿ ಎಲ್ಲಾ ಕಾರ್ಯಗಳೂ ವಿಕಲ್ಪವೆಂದು ತಿಳಿಯಬೇಕು. ಆ ಅರ್ಥವನ್ನು ಸ್ವೀಕರಿಸಿದುದರಿಂದ ವಸುಪ್ರತ್ಯಯದ ನಿಯಮವೂ ವಿಕಲ್ಪವಾಗುವುದರಿಂದ ಪ್ರಕೃತಸ್ಥಲದಲ್ಲಿ ಬರುವುದಿಲ್ಲ. ಆಗ ಪುನಃ ಇಡಾಗಮ ಬರುತ್ತದೆ. ಉಪಧಾಲೋಪ ಬಂದು ಪ್ರತ್ಯಯಕ್ಕೆ ಇಡಾಗಮ ಬಂದರೆ ಪಪ್ತ್+ಇವಸ್ ಎಂದಾಗುತ್ತದೆ. ಪಪ್ತಿವಸ್ ಶಬ್ದವು ಸಕಾರಾಂತವಾಗುತ್ತದೆ. ಬಹುವಚನ ಜಸ್ ಪರದಲ್ಲಿರುವಾಗ (ಸರ್ವನಾಮಸ್ಥಾನ) ನುಮಾಗಮ ಬರುತ್ತದೆ. **ಅತ್ವಸಂತಸ್ಯ** ಸೂತ್ರದಿಂದ ಉಪಧೆಗೆ ದೀರ್ಘ ಬರುತ್ತದೆ. ನುಮಿನ ನಕಾರಕ್ಕೆ **ನಶ್ಚಾಪದಾಂತಸ್ಯ ಝಲಿ** ಸೂತ್ರದಿಂದ ಅನುಸ್ವಾರ ಬಂದು ವಿಭಕ್ತಿ ಸೇರಿಸಿದರೆ ಪಪ್ತಿವಾಂಸಃ ಎಂದು ರೂಪವಾಗುತ್ತದೆ. ಪ್ರತ್ಯಯಸ್ವರದಿಂದ ಕ್ವಸು ಎಂಬುದು ಆದ್ಯುದಾತ್ತವಾಗುತ್ತದೆ. ಪರದಲ್ಲಿರುವ ವಿಭಕ್ತಿಯ ಅನುದಾತ್ತಸ್ವರಕ್ಕೆ ಸ್ವರಿತವು ಬರುತ್ತದೆ. ಪಪ್ತಿವಾಂಸ ಶಬ್ದದಲ್ಲಿ ವಕಾರೋತ್ತರಾಕಾರ ಉದಾತ್ತವಾದುದರಿಂದ ಉಳಿದವುಗಳು ಅನುದಾತ್ತಗಳು.

ವಾಜಿನೀವತಿ—ವಾಜವೆಂದರೆ ಅನ್ನ. ವಾಜಃ ಅನ್ನಂ ಅಸ್ಯಾ ಅಸ್ತೀತಿ ವಾಜಿನೀ. ಇಲ್ಲಿ ಕ್ರಿಯಾ ಎಂದು ತಾತ್ಪರ್ಯ. ತದಸ್ಯಾಸ್ತಿ ಎಂಬರ್ಥದಲ್ಲಿ **ಅತಃ ಇನಿಠನೌ** (ಪಾ. ಸೂ. ೫-೨-೧೧೫) ಎಂಬ ಸೂತ್ರದಿಂದ ಇನಿ ಪ್ರತ್ಯಯ ಬರುತ್ತದೆ ಇಕಾರ ಉಚ್ಚಾರಣಾರ್ಥವಾದುದರಿಂದ ಇನ್ ಉಳಿಯುತ್ತದೆ. ಪ್ರತ್ಯಯ ಪರದಲ್ಲಿರುವಾಗ **ಯಸ್ಯೇತಿಚೆ** (ಪಾ. ಸೂ. ೬-೪-೧೪೮) ಸೂತ್ರದಿಂದ ಪ್ರಕೃತಿಯ ಈಕಾರಕ್ಕೆ ಲೋಪ ಬರುತ್ತದೆ. ವಾಜಿನ್ ಎಂದು ನಾಂತವಾದ ಪದವಾದುದರಿಂದ ಸ್ತ್ರೀಲಿಂಗದಲ್ಲಿ **ಋನ್ನೇಭ್ಯೋ ಙೀಸ್** (ಪಾ. ಸೂ. ೪-೧-೫) ಸೂತ್ರದಿಂದ ಙೀಪ್ ಬಂದರೆ ವಾಜಿನೀ ಎಂದಾಗುತ್ತದೆ. ತಾದೃಶೀ ಕ್ರಿಯಾ ಯಸ್ಯಾಃ ಸಾ, ಆ ರೀತಿಯಾದ ವ್ಯಾಪಾರವು ಯಾವಳಿಗಿದೆಯೋ ಅವಳು ಎಂಬರ್ಥದಲ್ಲಿ ತಿರುಗಿ **ತದಸ್ಯಾಸ್ತ್ಯಸ್ಮಿನ್ನಿತಿ ಮತುಪ್** (ಪಾ. ಸೂ. ೫-೨-೯೪) ಸೂತ್ರದಿಂದ ಮತುಪ್ ಬರುತ್ತದೆ. ವಾಜಿನೀ ಮತ್ ಎಂದಿರುವಾಗ **ಸಂಜ್ಞಾಯಾಂ** (ಪಾ. ಸೂ. ೮-೨-೧೧) ಸಂಜ್ಞಾ ತೋರುವಾಗ ಮತುಪಿನ ಮಕಾರಕ್ಕೆ ವಕಾರ ಬರುತ್ತದೆ ಎಂಬುದರಿಂದ ಮತುಪಿಗೆ ವಕಾರ ಬರುತ್ತದೆ. ವಾಜಿನೀವತ್ ಎಂದು ಶಬ್ದವಿರುವಾಗ ಸ್ತ್ರೀಲಿಂಗದಲ್ಲಿ **ಉಗಿತಶ್ಚ** ಸೂತ್ರದಿಂದ ಙೀಪ್ ಬರುತ್ತದೆ. ಆಗ ವಾಜಿನೀವತೀ ಎಂದು ಈಕಾರಾಂತ ಶಬ್ದವಾಗುತ್ತದೆ. ಸಂಬುದ್ಧಿಯಲ್ಲಿ **ಅಂಬಾರ್ಥನದ್ಯೋರ್ಹ್ರಸ್ವಃ** ಎಂಬುದರಿಂದ ಹ್ರಸ್ವವು ಬಂದು ಸುಲೋಪವಾದರೆ ವಾಜಿನೀವತಿ ಎಂದು ರೂಪವಾಗುತ್ತದೆ ॥ ೬ ॥

॥ संहितापाठः ॥

एषायुक्त परावतः सूर्यस्योदयनादधि ।
शतं रथेभिः सुभगोषा इयं वि यात्यभि मानुषान् ॥

पदपाठः

एषा । अयुक्त । परा२वतः । सूर्यस्य । उत् ऽ अयनात् । अधि ।
शतं । रथेभिः । सु ऽ भगा । उषाः । इयं । वि । यात । अभि ।
मानुषान् ॥ ६ ॥

सायणभाष्यं

एषोषोदेवि शतमयुक्त । स्वकीयानां रथानां शतं योजितवती ।
सुभगा सौभाग्ययुक्तेयमुषाः परावतोः दूरस्थात् सूर्यस्योदयनादधि
सूर्योदयस्थानादधिकाद्द्युलोकान्मानुषानभि मनुष्यानुद्दिश्य रथेभिः शतसंख्या-
कैर्युक्तैः रथैर्वि याति । विशेषेण गच्छति ॥ अयुक्त । युजिर् रुधादिः ।
पा. ल-३-३६ । इति सिचोः लोपः । उदयनात् । उदेत्यत्रेत्युदयनं । इण् गतौ ।
अधिकरणे ल्युट् । कृदुत्तरपदप्रकृतिस्वरत्वं । सुभगा । शोभनोः भगोः यस्याः सा
अद्युदात्तं द्व्यच्छन्दसीत्युत्तरपदाद्युदात्तत्वं । मानुषान् । मनोः पुत्राः मानु-
षाः । मनोर्जातावञ्यतौ षक् चेत्यञ् षुगागमश्च । ञ्नित्त्वादाद्युदात्तत्वं ॥

॥ प्रतिपदार्थ ॥

एषा—ಈ ಉಷೋದೇವಿಯು । शतं—(ತನ್ನ ರಥಗಳಲ್ಲಿ) ನೂರನ್ನು । अयुक्त—ಸಿದ್ಧಪಡಿಸಿಕೊಂಡಳು । सुभगा—ಮಂಗಳಕರಳಾದ । इयं उषाः—ಈ ಉಷೋದೇವತೆಯು । परावतः—ಬಹಳ ದೂರದೇಶವಾಗಿಯೂ । सूर्यस्य उदयनाधधि—ಸೂರ್ಯನ ಉದಯಸ್ಥಾನಕ್ಕಿಂತಲೂ ಎತ್ತರವಾಗಿಯೂ ಇರುವ ದ್ಯುಲೋಕದಿಂದ । मानुषान् अभि—ಮನುಷ್ಯರ ಅಭಿಮುಖವಾಗಿ । रथेभिः—(ತನ್ನ ನೂರು ರಥಗಳೊಡನೆ। वि याति—ವೈಭವದಿಂದ ಬರುತ್ತಾಳೆ.

॥ भावार्थ ॥

ಮಂಗಳಕರಳಾದ ಉಷೋದೇವಿಯು ತನ್ನ ಉದಯಕಾಲದಲ್ಲಿ ನೂರು ರಥಗಳನ್ನು ಸಿದ್ಧಪಡಿಸಿಕೊಂಡು, ಸೂರ್ಯನ ಉದಯಸ್ಥಾನಕ್ಕಿಂತಲೂ ಎತ್ತರವಾಗಿ ಬಹುದೂರದೇಶವಾದ ದ್ಯುಲೋಕದಿಂದ ಮನುಷ್ಯರ ಅಭಿಮುಖವಾಗಿ ತನ್ನ ನೂರು ರಥಗಳೊಡನೆ ವೈಭವದಿಂದ ಬರುತ್ತಾಳೆ.

English Translation.

This auspicious Ushas has harnessed (her chariot) from afar, above the rising of the sun; and she goes gloriously towards men with a hundred chariots.

॥ ವಿಶೇಷ ವಿಷಯಗಳು ॥

ಪರಾವತಃ ಸೂರ್ಯಸ್ಯ—ದೂರದಲ್ಲಿರುವ ಸೂರ್ಯನ, ಸೂರ್ಯನು ಬಹುದೂರದಲ್ಲಿ ಉದಯಿಸುವನು. ಅದಕ್ಕಿಂತ ದೂರದಿಂದಲೂ ಉಷೋದೇವಿಯು ಬರುವಳು ಎಂದಭಿಪ್ರಾಯವು.

ಶತಂ ರಥೇಭಿಃ—ನೂರು ಅಥವಾ ಅನೇಕ ರಥಗಳಿಂದ ಸಹಿತಳಾಗಿ, ಅನೇಕ ರಥಗಳಲ್ಲಿ ಕುಳಿತು. ಇಲ್ಲಿ ರಥಗಳೆಂದರೆ ಸೂರ್ಯನ ರಶ್ಮಿಗಳಿರಬಹುದೆಂದು ಕೆಲವರ ಅಭಿಪ್ರಾಯವಿರುವುದು.

ಸುಭಗಾ—**ಸೌಭಾಗ್ಯಯುಕ್ತಾ**। ಮಂಗಳಕರಳಾದ, ಸೌಭಾಗ್ಯ ಅಥವಾ ಶ್ರೇಯಸ್ಸನುಂಟುಮಾಡುವ.

ಅಭಿ ಮಾನುಷಾನ್—ಮನುಷ್ಯರ ಅಭಿಮುಖವಾಗಿ. ಸ್ವರ್ಗಲೋಕ ಅಥವಾ ಅಂತರಿಕ್ಷದಿಂದ ಹೊರಟು ಮನುಷ್ಯಲೋಕವಾದ ಭೂಮಿಗಭಿಮುಖವಾಗಿ ಬರುವಳೆಂದಭಿಪ್ರಾಯವು.

॥ ವ್ಯಾಕರಣಪ್ರಕ್ರಿಯಾ ॥

ಅಯುಕ್ತ—ಯುಜಿರ್ ಯೋಗೇ. ಧಾತು ರುಧಾದಿ ಉಭಯಪದಿ ಲುಙ್ ಪ್ರಥಮಪುರುಷ ಏಕವಚನ ಪ್ರತ್ಯಯ ವಿವಕ್ಷಾ ಮಾಡಿದಾಗ ಯುಜ್+ತ ಎಂದಾಗುತ್ತದೆ. **ಜಿಚ್ಲಿ ಲುಙಿ** ಎಂದು ಸಾಮಾನ್ಯ ಪ್ರಾಪ್ತವಾದ ಚ್ಲಿಗೆ **ಚ್ಲೇಃ ಸಿಚ್** ಸೂತ್ರದಿಂದ ಸಿಚ್ ವಿಕರಣ ಪ್ರತ್ಯಯ ಬರುತ್ತದೆ. ಯುಜ್+ಸ್+ತ ಎಂದಿರುವಾಗ **ಝಲೋರ್ಝಲಿ** (ಪಾ. ಸೂ. ೮-೨-೨೬) ಝಲಿನ ಪರದಲ್ಲಿರುವ **ಸ**ಕಾರಕ್ಕೆ ಝಲ್ ಪರದಲ್ಲಿರುವಾಗ **ಲೋಪ** ಬರುತ್ತದೆ ಎಂಬುದರಿಂದ ಇಲ್ಲಿ ಝಲಿನ ಜಕಾರದ ಪರದಲ್ಲಿ ಸಿಚ್ ಬಂದುದರಿಂದಲೂ ಆದಕ್ಕೆ ಝಲಿನ ತಕಾರ ಪರದಲ್ಲಿರುವುದರಿಂದಲೂ ಲೋಪ ಬರುತ್ತದೆ. ಯುಜ್+ತ ಎಂದಿರುವಾಗ ಧಾತುವಿಗೆ ಆಡಾಗಮ ಬರುತ್ತದೆ. ಜಕಾರಕ್ಕೆ **ಚೋಃ ಕುಃ** ಸೂತ್ರದಿಂದ ಕುತ್ವ ಬಂದರೆ ಗಕಾರ ಬರುತ್ತದೆ. **ಗ**ಕಾರಕ್ಕೆ ಚರ್ತ್ವದಿಂದ ಕಕಾರ ಬರುತ್ತದೆ. ಆಗ ಅಯುಕ್ತ ಎಂದು ರೂಪವಾಗುತ್ತದೆ.

ಉದೆಯೇನಾತ್—ಉದೇಷ್ಯತಿ ಅತ್ರ ಇತಿ ಉದಯನಮ್ ಇಲ್ಲಿ ಉದಯವನ್ನು ಹೊಂದುತ್ತಾನೆ ಎಂಬ ಅರ್ಥದಲ್ಲಿ ಉದಯನಂ ಎಂತಾಗುತ್ತದೆ. ಇಣ್ ಗತೌ ಧಾತು. ಇದಕ್ಕೆ **ಲ್ಯುಟ್ಚ** (ಪಾ. ಸೂ. ೩-೩-೧೧೫) ಸೂತ್ರದಿಂದ ಅಧಿಕರಣಾರ್ಥದಲ್ಲಿ ಲ್ಯುಟ್ ಪ್ರತ್ಯಯ ಬರುತ್ತದೆ. ಲ್ಯುಟಿನಲ್ಲಿ ಯು ಎಂಬುದು ಉಳಿಯುತ್ತದೆ. **ಯುವೋನಾಕೌ** (ಪಾ. ಸೂ. ೭-೧-೧) ಸೂತ್ರದಿಂದ ಯು ಎಂಬುದಕ್ಕೆ ಅನ ಎಂಬ ಆದೇಶ ಬರುತ್ತದೆ. ಧಾತು ಇನ ಇಕಾರಕ್ಕೆ **ಸಾರ್ವಧಾತುಕಾರ್ಧಧಾತುಕಯೋಃ** ಸೂತ್ರದಿಂದ ಗುಣ ಬರುತ್ತದೆ. ಗುಣಕ್ಕೆ ಅಯಾದೇಶ ಬಂದರೆ ಅಯನ ಎಂದಾಗುತ್ತದೆ. ಉತ್ ಎಂಬುದರಿಂದ ಸನಾಸವಾದಾಗ ಕೃದುತ್ತರ ಪ್ರಕೃತಿಸ್ವರ ಬರುತ್ತದೆ. ಲ್ಯುಟನಲ್ಲಿ ಲಿತ್ತಾದುದರಿಂದ **ಲಿತಿ** (ಪಾ. ಸೂ. ೬-೧-೧೯೩) ಸೂತ್ರದಿಂದ ಪ್ರತ್ಯಯದ ಪೂರ್ವಕ್ಕೆ ಉದಾತ್ತಸ್ವರ ಬರುತ್ತದೆ. ಆಗ ಧಾತುವಿಗೆ ಬಂದ ಅಯ್ ಎಂಬುದು ಉದಾತ್ತವಾಗುತ್ತದೆ. **ಗತಿಕಾರಕೋಪಪದಾತ್ ಕೃತ್** (ಪಾ. ಸೂ. ೬-೨-೧೩೯) ಸೂತ್ರದಿಂದ ಗತಿಯ ಪರದಲ್ಲಿರುವ ಕೃದಂತವಾದುದರಿಂದ ಪ್ರಕೃತಿಯ ಸ್ವರವೇ ಉಳಿಯುತ್ತದೆ. ಆಗ ಉದಯನಾತ್ ಎಂಬಲ್ಲಿ ದಕಾರೋತ್ತರಾಕಾರ ಮಾತ್ರ ಉದಾತ್ತವಾಗುತ್ತದೆ.

ಸುಭಗಾ—ಶೋಭನಂ ಭಗೋ ಯಸ್ಯಾಃ ಸಾ ಸುಭಗಾ । ಮಹತ್ತಾದ ಐಶ್ವರ್ಯಾದಿಗಳುಳ್ಳವಳು ಎಂದರ್ಥ. **ಆದ್ಯುದಾತ್ತಂ ದ್ವ್ಯಚ್ ಛಂದಸಿ** (ಪಾ. ಸೂ. ೬-೨-೧೧೯) ಆದ್ಯುದಾತ್ತವಾದ ಎರಡು ಅಜುಳ್ಳ ಪದವು ಬಹುವ್ರೀಹಿಯಲ್ಲಿ ಸುವಿನ ಉತ್ತರದಲ್ಲಿ ಬಂದರೂ ಆದ್ಯುದಾತ್ತವೇ ಆಗುತ್ತದೆ. ಎಂಬುದರಿಂದ ಇಲ್ಲಿ ಸುಪರದಲ್ಲಿರುವ ಆದ್ಯುದಾತ್ತವಾದ ಭಗ ಶಬ್ದವು ಸಮಾಸದಲ್ಲಿಯೂ ಆದ್ಯುದಾತ್ತವಾಗಿರುತ್ತದೆ. ಆಗ ಸುಭಗಾ ಶಬ್ದವು ಮಧ್ಯೋದಾತ್ತ ಶಬ್ದವಾಗುತ್ತದೆ.

ಮಾನುಷಾತ್—ಮನೋಃ ಪುತ್ರಾಃ ಮಾನುಷಾಃ ಮನುವಿನ ಮಕ್ಕಳು ಎಂದರ್ಥ. **ಮನೋರ್ಜಾತಾವಞ್ಯತೌ ಷುಕ್ಚ** (ಪಾ. ಸೂ. ೪-೧-೧೬೧) ಮನು ಶಬ್ದಕ್ಕೆ ಜಾತಿ ಎಂಬರ್ಥದಲ್ಲಿ (ಸಮುದಾಯ) ಅಞ್ ಮತ್ತು ಯಞ್ ಪ್ರತ್ಯಯಗಳು ಬರುತ್ತವೆ. ಪ್ರಕೃತಿಗೆ ಷುಕಾಗಮವು ಬರುತ್ತದೆ. ಷುಕ್ ಕಿತ್ತಾದುದರಿಂದ ಅಂತಾವಯವವಾಗಿ ಬರುತ್ತದೆ. ಇಲ್ಲಿ ಅಞ್ ಪ್ರತ್ಯಯವು ಬಂದಿದೆ. ಮನು+ಷ್+ಅ ಎಂದಿರುವಾಗ ಪ್ರತ್ಯಯವು ಞಿತ್ತಾದುದರಿಂದ **ತದ್ಧಿತೇಷ್ವಚಾಮಾದೇಃ** (ಪಾ. ಸೂ. ೭-೨-೧೧೭) ಸೂತ್ರದಿಂದ ಪ್ರಕೃತಿಯ ಆದ್ಯಚಿಗೆ ವೃದ್ಧಿ ಬರುತ್ತದೆ. ಮಾನುಷ ಎಂದು ರೂಪವಾಗುತ್ತದೆ. ಪ್ರತ್ಯಯವು ಞಿತ್ತಾದುದರಿಂದ **ಞ್ನಿತ್ಯಾದಿರ್ನಿತ್ಯಂ** (ಪಾ. ಸೂ. ೬-೧-೧೯೭) ಸೂತ್ರದಿಂದ ಆದ್ಯುದಾತ್ತ ಸ್ವರ ಬರುತ್ತದೆ. ದ್ವಿತೀಯಾ ಬಹುವಚನವಾದ ಮಾನುಷಾನ್ ಎಂಬ ಶಬ್ದವು ಆದ್ಯುದಾತ್ತವಾಗುತ್ತದೆ. ಉದಾತ್ತದ ಪರದಲ್ಲಿರುವ ನಕಾರೋತ್ತರದಲ್ಲಿರುವ ಉಕಾರವು ಅನುದಾತ್ತವು ಸ್ವರಿತವಾಗುತ್ತದೆ. ಸ್ವರಿತದ ಪರದಲ್ಲಿರುವ ಷಕಾರೋತ್ತರದಲ್ಲಿರುವ ಅನುದಾತ್ತಾಕಾರವು ಪ್ರಚಯವಾಗುತ್ತದೆ ॥ ೬ ॥

॥ ಸಂಹಿತಾಪಾಠಃ ॥

ವಿಶ್ವಮಸ್ಯಾ ನಾನಾಮ ಚಕ್ಷಸೇ ಜಗಜ್ಜ್ಯೋತಿಷ್ಕೃಣೋತಿ ಸೂನರೀ ।
ಅಪ ದ್ವೇಷೋ ಮಘೋನೀ ದುಹಿತಾ ದಿವ ಉಷಾ ಉಚ್ಛದಪಸ್ರಿಧಃ ॥೮॥

॥ ಪದಪಾಠಃ ॥

ವಿಶ್ವಂ । ಅಸ್ಯಾಃ । ನನಾಮ । ಚಕ್ಷಸೇ । ಜಗತ್ । ಜ್ಯೋತಿಃ । ಕೃಣೋತಿ । ಸೂನರೀ ।
ಅಪ । ದ್ವೇಷಃ । ಮಘೋನೀ । ದುಹಿತಾ । ದಿವಃ । ಉಷಾಃ । ಉಚ್ಛತ್ । ಅಪ। ಸ್ರಿಧಃ ॥ ೮ ॥

ಸಾಯಣಭಾಷ್ಯಂ

ವಿಶ್ವಂ ಸರ್ವಂ ಜಗತ್ ಜಂಗಮಂ ಪ್ರಾಣಿಜಾತಮಸ್ಯಾ ಉಷಸಶ್ಚಕ್ಷಸೇ ಪ್ರಕಾಶಾಯ ನನಾಮ । ಪ್ರಹ್ವೀಭವತಿ । ರಾತ್ರೌ ತಮಸಿ ನಿಮಗ್ನಾಃ ಸರ್ವೇ ಜನಾಸ್ತನ್ನಿವಾರಯಿತ್ರೀಮುಷಸಮುಪಲಭ್ಯ ನಮ-

ಸ್ಕುರ್ವಂತೀತ್ಯರ್ಥಃ । ಕುತಃ । ಯಸ್ಮಾದೇಷಾ ಸೂನರೀ ಸುಷ್ಠು ನೇತ್ರೀ ಅಭಿಮತಫಲಸ್ಯ ಪ್ರಾಪಯಿತ್ರ್ಯಷಾ ಜ್ಯೋತಿಷ್ಕೃಣೋತಿ ಸರ್ವಂ ಪ್ರಕಾಶಯತಿ । ಕಿಂಚ ಮಘೋನೀ ಮಘವತೀ ಧನವತೀ ದಿವೋ ದುಹಿತಾ ದ್ಯುಲೋಕಸಕಾಶಾದುತ್ಪನ್ನೋಷಾ ದ್ವೇಷೋ ದ್ವೇಷ್ಟೄನಪೋಚ್ಛತ್ । ಅಪವರ್ಜಯತಿ । ತಥಾ ಸ್ಪಿಧಃ ಶೋಷಯಿತೄನಪೋಚ್ಛತ್ । ಅಪವರ್ಜಯತಿ । ತಸ್ಮಾದಿಷ್ಟಪ್ರಾಪ್ತ್ಯನಿಷ್ಟಪರಿಹಾರಹೇತುಭೂತಾಮುಷೋದೇವತಾಂ ವಿಶ್ವಂ ಜಗನ್ನಮಸ್ಕರೋತೀತ್ಯರ್ಥಃ । ಅಸ್ಯಾಃ । ಇದನೋಽನ್ಯಾದೇಶ ಇಶ್ಯಶಾದೇಶೋಽನುದಾತ್ತಃ । ವಿಭಕ್ತಿಶ್ಚ ಸುಪಾಮಿದನುದಾತ್ತೇತಿ ಸರ್ವಾನುದಾತ್ತತ್ವಂ । ನನಾಮ । ಸಂಹಿತಾಯಾಮನ್ಯೇಷಾಮಪಿ ದೃಶ್ಯತ ಇತ್ಯಭ್ಯಾಸಸ್ಯ ದೀರ್ಘತ್ವಂ । ತುಜಾದಿತ್ವೇ ಹಿ ತೂತುಜಾನ ಇತ್ಯಾದಾವಿವ ಪದಕಾಲೇಽಪಿ ದೀರ್ಘಃ ಶ್ರೂಯತೇ । ಜ್ಯೋತಿಃ । ಇಣಃ ಷ ಇತ್ಯನುವೃತ್ತಾವಿಸುಸೋಃ ಸಾಮರ್ಥ್ಯೇ । ಪಾ. ೮-೩-೪೪ । ಇತಿ ವಿಸರ್ಜನೀಯಸ್ಯ ಷತ್ವಂ । ದ್ವೇಷಃ । ದ್ವಿಷ ಅಪ್ರೀತೌ । ಅನ್ಯೇಭ್ಯೋಽಪಿ ದೃಶ್ಯಂತ ಇತಿ ವಿಚ್ । ಲಘೂಪಧಗುಣಃ । ಮಘೋನೀ । ಮಘಂ ವನತಿ ಸಂಭಜತ ಇತಿ ಮಘೋನೀ । ಶ್ನನ್ನಪ್ನಿತ್ಯಾದಿನಾ ಮಘವಚ್ಶಬ್ದಃ ಕನಿನ್ಪ್ರತ್ಯಯಾಂತೋ ನಿಪಾತಿತಃ । ಸ್ತ್ರಿಯಾಮನ್ನೇಭ್ಯೋ ಙೀಬಿತಿ ಙೀಪ್ । ಭಸಂಜ್ಞಾಯಾಂ ಶ್ವಯುವಮಘೋನಾಮತದ್ಧಿತ ಇತಿ ಸಂಪ್ರಸಾರಣಂ । ಉಚ್ಛತ್ । ಉಛೀ ವಿವಾಸೇ । ವಿವಾಸೋ ವರ್ಜನಂ । ಛಂದಸಿ ಲುಙ್ಲಙ್ಲಿಟ ಇತಿ ವರ್ತಮಾನೇ ಲಙ್ । ಬಹುಲಂ ಛಂದಸ್ಯಮಾಙ್ಯೋಗೇಽಪೀತ್ಯಡಾಗಮಾಭಾವಃ । ಸ್ಪಿಧಃ । ಸ್ಪಿಧು ಶೋಷಣೇ । ಕ್ವಿಪ್ಚೇತಿ ಕ್ವಿಪ್ ॥

॥ ಪ್ರತಿಪದಾರ್ಥ ॥

ವಿಶ್ವಂ ಜಗತ್—ಸಕಲ ಜಗತ್ತೂ (ಪ್ರಾಣಿ ಸಮೂಹವೂ) । **ಅಸ್ಯಾಃ**—ಈ ಉಷೋದೇವಿಯ । **ಪಕ್ಷಸೇ**—ಪ್ರಕಾಶಕ್ಕಾಗಿ । **ನನಾಮ**—ನಮಸ್ಕರಿಸುತ್ತದೆ । **ಸೂನರೀ**—(ಅಭಿಮತವಾದ ಫಲವನ್ನು) ಸಂಪಾದಿಸಿಕೊಡತಕ್ಕ ಉಷೋದೇವಿಯು । **ಜ್ಯೋತಿಷ್ಕೃಣೋತಿ**—(ಎಲ್ಲವನ್ನೂ) ಬೆಳಗಿಸುತ್ತಾಳೆ । **ಮಘೋನೀ**—ಧನವಂತಳೂ । **ದಿವಃ ದುಹಿತಾ**—ದ್ಯುಲೋಕದಿಂದ ಉತ್ಪನ್ನಳಾದವಳೂ ಆದ । **ಉಷಾಃ**—ಉಷೋದೇವಿಯು । **ದ್ವೇಷ್ಟೄನ್**—ಕೇಡು ಬಯಸುವವರನ್ನು । **ಅಪ ಉಚ್ಛತ್**—ಓಡಿಸುತ್ತಾಳೆ । **ಸ್ಪಿಧಃ**—(ನಮ್ಮ ಧನವನ್ನೂ ಬಲವನ್ನೂ) ಹೀರುವ ಶತ್ರುಗಳನ್ನೂ । **ಅಪ (ಉಚ್ಛತ್)**—ಚದುರಿಸುತ್ತಾಳೆ.

॥ ಭಾವಾರ್ಥ ॥

ರಾತ್ರಿಯೆಲ್ಲ ಕಗ್ಗತ್ತಲೆಯನ್ನನುಭವಿಸಿದ ಸಕಲ ಜಗತ್ತೂ ಉದಯಕಾಲದಲ್ಲಿ ಆ ತಮಸ್ಸನ್ನು ನಾಶಮಾಡಿ ಪ್ರಕಾಶವನ್ನು ಕೊಡುವುದಕ್ಕಾಗಿ ಉಷೋದೇವಿಗೆ ನಮಸ್ಕರಿಸಿ ಆರಾಧಿಸುತ್ತದೆ. ಸಕಲರ ಇಷ್ಟಾರ್ಥವನ್ನೂ ನೆರವೇರಿಸತಕ್ಕ ಈ ಉಷೋದೇವಿಯು ಜಗತ್ತಿನಲ್ಲಿ ಎಲ್ಲವನ್ನೂ ಬೆಳಗಿಸುತ್ತಾಳೆ. ಈ ದೇವಿಯು ನಮಗೆ ಕೇಡುಬಯಸುವ ಶತ್ರುಗಳನ್ನೂ ನಮ್ಮ ಸಕಲವನ್ನೂ ಹಿಂಡಿ ಹೀರುವ ಶತ್ರುಗಳನ್ನೂ ಚದುರಿಸಿ ಓಡಿಸುತ್ತಾಳೆ.

English Translation.

All creation bows to her manifestation ; bringer of good, she lights up the world ; the rich daughter of heaven drives away the haters and disperses the absorbers (of moisture ?)

॥ ವಿಶೇಷ ವಿಷಯಗಳು ॥

ನನಾಮ—ನಮಸ್ಕರಿಸುವುದು. ಛಂದಸ್ಸಿನ ಅನುಕೂಲಕ್ಕಾಗಿ ಈ ಶಬ್ದದ ಪ್ರಥಮಾಕ್ಷರವು ದೀರ್ಘವಾಗಿರುವುದು.

ಜ್ಯೋತಿಷ್ಕೃಣೋತಿ—**ಸರ್ವಂ ಪ್ರಕಾಶಯತಿ** | ಸಮಸ್ತ ಜಗತ್ತನ್ನು ಬೆಳಗುತ್ತಾಳೆ. ರಾತ್ರಿಯ ಕತ್ತಲೆಯನ್ನು ಹೋಗಲಾಡಿಸಿ ಬೆಳಕನುಂಟುಮಾಡಿ ಸಮಸ್ತ ಪ್ರಾಣಿಗಳಿಗೂ ಆನಂದವನ್ನುಂಟುಮಾಡುತ್ತಾಳೆ. ಇಂತಹ ಉಪಕಾರವನ್ನು ಮಾಡುವ ಈ ಉಷೋದೇವಿಯನ್ನು ಸರ್ವರೂ ಕೃತಜ್ಞತೆಯಿಂದ ನಮಸ್ಕರಿಸುತ್ತಾರೆಂದಭಿಪ್ರಾಯವು.

ಸೂನರೀ—ಸೂನರೀ ಎಂಬ ಶಬ್ದಕ್ಕೆ ಉಷೋದೇವತೆಯೆಂಬ ಅರ್ಥವಿದ್ದರೂ ಈ ಋಕ್ಕಿನಲ್ಲಿ ಉಷಾಃ ಎಂಬ ಪ್ರತ್ಯೇಕ ಶಬ್ದವಿರುವುದರಿಂದ ಸೂನರೀ ಶಬ್ದಕ್ಕೆ ಭಾಷ್ಯಕಾರರು **ಸುಷ್ಠು ನೇತ್ರೀ, ಅಭಿಮತ ಫಲಸ್ಯ ಪ್ರಾಪಯಿತ್ರ್ಯೀ** ಎಂದು ಅವಯವಾರ್ಥವನ್ನು ಕಲ್ಪಿಸಿರುವರು.

ದ್ವೇಷಃ—ದ್ವೇಷಿಸುವವರನ್ನು, ಶತ್ರುಗಳನ್ನು.

ಮಘೋನೀ—ಮಘವೆಂದರೆ ಧನ, ಧನ ಅಥವಾ ಐಶ್ವರ್ಯಯುಕ್ತಳು ಅಥವಾ ಧನವನ್ನು ಕೊಡುವವಳು.

ದುಹಿತಾ ದಿವಃ—ಸ್ವರ್ಗದ ಪುತ್ರಿಯು. ಸ್ವರ್ಗಲೋಕದಲ್ಲಿರುವ (ಅಂತರಿಕ್ಷದಲ್ಲಿರುವ) ಸೂರ್ಯನ ಬಳಿಯಿಂದ ಬರುವವಳಾದ್ದರಿಂದ ಸ್ವರ್ಗದ ಪುತ್ರಿಯೆಂದು ಕರೆಯುವರು.

ಸ್ಪಿಧಃ—**ಸ್ಪಿಧು ಶೋಷಣೇ** | ಒಣಗಿಸುವವರು, ಹೀರುವವರು. ಏನನ್ನು ಹೀರುವರು ಎಂಬುದು ಸ್ಪಷ್ಟವಾಗಿಲ್ಲ.

॥ ವ್ಯಾಕರಣಪ್ರಕ್ರಿಯಾ ॥

ಅಸ್ಯಾಃ—ಇದಮ್ ಶಬ್ದದ ಮೇಲೆ **ಷಷ್ಠ್ಯೇಕವಚನ ವಿವಕ್ಷಾ ಮಾಡಿದಾಗ ಇದಮ್+ಙಸ್** ಎಂದಿರುತ್ತದೆ. ಅನ್ವಾದೇಶದಲ್ಲಿ ಅಂದರೆ ಹಿಂದೆ ಪ್ರಸಕ್ತವಾದುದಕ್ಕೇ **ಕಾರ್ಯಾಂತರಕ್ಕೋಸ್ಕರ ಪುನಃ** ಅದನ್ನೇ ತೆಗೆದುಕೊಳ್ಳುವಲ್ಲಿ, **ಇದಏತನ್ವಾದೇಶೇಽನುದಾತ್ತಸ್ತೃತೀಯಾದೌ** (ಪಾ. ಸೂ. ೨-೪-೩೨) ಅನ್ವಾದೇಶದಲ್ಲಿ ಇದಮ್ ಶಬ್ದಕ್ಕೆ ತೃತೀಯಾದಿ ವಿಭಕ್ತಿ ಪರದಲ್ಲಿರುವಾಗ ಅನುದಾತ್ತವಾದ ಅಶ್ ಎಂಬ ಆದೇಶವು ಬರುತ್ತದೆ. ಎಂಬುದರಿಂದ ಇಲ್ಲಿ ಅಶಾದೇಶ ಬರುತ್ತದೆ. ಶಿತ್ವಾದುದರಿಂದ ಇದು ಸರ್ವಾದೇಶವಾಗಿ ಬಂದರೆ ಅ+ಅಸ್ ಎಂತಾಗುತ್ತದೆ. ಸರ್ವನಾಮವಾದುದರಿಂದ ಸ್ತ್ರೀಲಿಂಗದಲ್ಲಿ ಸ್ಯಾಡಾಗಮವೂ ಪ್ರಕೃತಿಗೆ ಹ್ರಸ್ವವೂ ಬಂದಾಗ, ಪ್ರತ್ಯಯಕ್ಕೆ ರುತ್ವವಿಸರ್ಗಗಳು ಮಾಡಿದಾಗ ಅಸ್ಯಾಃ ಎಂದು ರೂಪವಾಗುತ್ತದೆ. ಇಲ್ಲಿ **ಅನುದಾತ್ತೌ ಸುಪ್ಪಿತೌ** ಎಂಬುದರಿಂದ ವಿಭಕ್ತಿಯು ಅನುದಾತ್ತವಾಗುತ್ತದೆ. ಪ್ರಕೃತ್ಯಾದೇಶವೂ ಅನುದಾತ್ತವಾಗಿಯೇ ಬರುವುದೆಂಬುದರಿಂದ ಅನುದಾತ್ತವಾಯಿತು. ಹೀಗೆ ಅಸ್ಯಾಃ ಎಂಬ ಸಂಪೂರ್ಣರೂಪವು ಅನುದಾತ್ತ ಸ್ವರವುಳ್ಳದ್ದೇ ಆಗುತ್ತದೆ.

ನನಾಮ—ಣಮು **ಪ್ರಹ್ವತ್ವೇ ಶಬ್ದೇ ಚ** ಧಾತು ಭ್ವಾದಿ ಲಿಟ್ ಪ್ರಥಮಪುರುಷೈಕವಚನದ ರೂಪ. ಸಂಹಿತಾದಲ್ಲಿ **ಅನ್ಯೇಷಾಮಪಿ ದೃಶ್ಯತೆ** (೬-೩-೧೩೭) ಸೂತ್ರದಿಂದ ಅಭ್ಯಾಸಕ್ಕೆ ದೀರ್ಘ ಬರುತ್ತದೆ. ಪೂರ್ವದಲ್ಲಿ ವಿಶೇಷ ಶಬ್ದಗಳಿಗೆ ದೀರ್ಘ ವಿಧಾನ ಮಾಡಿರುತ್ತಾರೆ. ಅಲ್ಲಿ ಹೇಳಿದ ನಿಮಿತ್ತವಿಲ್ಲದಿದ್ದರೂ ಸಂಹಿತಾದಲ್ಲಿ ಕೆಲವು ಕಡೆ ದೀರ್ಘ ಬರುತ್ತದೆ ಎಂದು ಆ ಸೂತ್ರದ ಅರ್ಥ. ಇಲ್ಲಿ ಒಂದು ಆಶಂಕೆ ಬರುತ್ತದೆ. ಅಭ್ಯಾಸದ ದೀರ್ಘಕ್ಕೋಸ್ಕರ ಇದನ್ನು ತುಜಾದಿಯಲ್ಲಿ ಪಾಠಮಾಡಬಹುದಷ್ಟೆ. ತುಜಾದಿಗಳಿಗೆ **ತುಜಾದೀನಾಂ ದೀರ್ಘೋಭ್ಯಾಸಸ್ಯ** ಸೂತ್ರದಿಂದ ಅಭ್ಯಾಸದೀರ್ಘ ಮಾಡಿರುತ್ತಾರೆ. ಆದುದರಿಂದ ಸುಲಭದಿಂದಲೇ ದೀರ್ಘವು ಸಿದ್ಧವಾ

ಗುತ್ತದೆ. ಅದಕ್ಕೋಸ್ಕರ ಗೌಣಪಕ್ಷವನ್ನು ಆಶ್ರಯಿಸಬೇಕಾಗಿಲ್ಲವೆಂದು **ಪೂರ್ವಪಕ್ಷವು** ಬರುತ್ತದೆ. ಆದರೆ **ತುಜಾದಿಯಲ್ಲಿ** ಈ ಧಾತುವನ್ನು ಸೇರಿಸಿ ಅಭ್ಯಾಸಕ್ಕೆ ದೀರ್ಘವಿಧಾನ ಮಾಡುವುದಾದರೆ ಅದು ನಿತ್ಯವಾದುದರಿಂದ ಪದಕಾಲದಲ್ಲಿಯೂ ದೀರ್ಘವು ಶ್ರವಣವಾಗಬೇಕಾಗುತ್ತದೆ. ಆದರೆ ಇಲ್ಲಿ ಕೇವಲ ಸಂಹಿತಾದಲ್ಲಿ ಮಾತ್ರ ದೀರ್ಘ ಶ್ರುತವಾಗಿದೆ. ಆದುದರಿಂದ ಹಿಂದೆ ಹೇಳಿದಂತೆಯೇ **ಅನ್ಯೇಷಾಂ**—ಸೂತ್ರದಿಂದಲೇ ಸಂಹಿತಾದಲ್ಲಿ ಮಾತ್ರ ದೀರ್ಘವನ್ನು ಹೇಳಬೇಕು.

ಜ್ಯೋತಿಃ—ಜ್ಯೋತಿಸ್+ಕೃಣೋತಿ ಎಂದಿರುವಾಗ ಸಕಾರಕ್ಕೆ ರುತ್ವವಿಸರ್ಗಗಳು ಬರುತ್ತವೆ. ಆಗ, **ಇಸುಸೋಃ ಸಾಮರ್ಥ್ಯೇ** (ಪಾ. ಸೂ. ೮-೩-೪೪) ಇಸ್, ಉಸ್ ಇವುಗಳ ವಿಸರ್ಗಕ್ಕೆ ಕವರ್ಗ ಪವರ್ಗ ಪರದಲ್ಲಿರುವಾಗ **ವಿಕಲ್ಪವಾಗಿ** ಷಕಾರ ಬರುತ್ತದೆ. **ಇಣಃಷಃ** ಸೂತ್ರದಿಂದ ಷಃ ಎಂಬುದು ಅನುವೃತ್ತವಾಗುತ್ತದೆ. ಎಂಬುದರಿಂದ ಇಲ್ಲಿ ವಿಸರ್ಗಕ್ಕೆ ಷತ್ವವು ಬರುತ್ತದೆ **ಸಾ**ಮರ್ಥ್ಯವು ಸಂಸ್ಕೃತದಲ್ಲಿ ಎರಡು ವಿಧವಾಗಿದೆ. ಇಲ್ಲಿ ವ್ಯಪೇಕ್ಷಾ ಲಕ್ಷಣ ಸಾಮರ್ಥ್ಯವನ್ನು ಸ್ವೀಕರಿಸಬೇಕು ಪದಗಳಿಗೆ ಆಕಾಂಕ್ಷಾಯೋಗ್ಯತಾ ಸನ್ನಿಧಿಗಳಿಂದ ಪರ ಸ್ಪರಾನ್ವಯ ಬರುವುದೇ ವ್ಯಪೇಕ್ಷಾಲಕ್ಷಣಸಾಮರ್ಥ್ಯವಾಗುತ್ತದೆ. ಇಲ್ಲಿ ಜ್ಯೋತಿಸ್ಸಿಗೂ ಧಾತುನಿಗೂ ಸಂಬಂಧ ವಿರುವುದರಿಂದ ಆ ಸಾಮರ್ಥ್ಯವು ತೋರುತ್ತದೆ. ಆದುದರಿಂದ ವಿಸರ್ಗಕ್ಕೆ ಷಕಾರ ಬಂದರೆ ಜ್ಯೋತಿಷ್ಕೃಣೋತಿ ಎಂಬುದಾಗಿ ರೂಪವಾಗುತ್ತದೆ.

ದ್ವೇಷಃ—ದ್ವಿಷ ಅಪ್ರೀತೌ. ಧಾತು ಆದಾದಿ **ಅನ್ಯೇಭ್ಯೋಽಪಿ ದೃಶ್ಯಂತೆ** (ಪಾ. ಸೂ. ೩-೩-೭೫) ನಿಮಿತ್ತವಿಲ್ಲದಿದ್ದರೂ ಧಾತುಗಳ ಮೇಲೆ ವಿಚ್ ಪ್ರತ್ಯಯ ಬರುತ್ತದೆ ಎಂಬುದರಿಂದ ವಿಚ್ ಪ್ರತ್ಯಯ ಬರುತ್ತದೆ ವಿಚಿನಲ್ಲಿ ಚಕಾರ ಇತ್ಸಾಗುತ್ತದೆ. ಇಕಾರ ಉಚ್ಚಾರಣಾರ್ಥವಾದುದರಿಂದ ಹೋಗುತ್ತದೆ. ವಕಾರವು **ವೇರಪೃಕ್ತಸ್ಯ** ಸೂತ್ರದಿಂದ ಲೋಪವಾಗುತ್ತದೆ. ಹೀಗೆ ಸರ್ವಲೋಪವಾಗುವುದರಿಂದ ಧಾತುಮಾತ್ರ ಉಳಿಯುತ್ತದೆ. **ಪುಗಂತ ಲಘೂಪಧಸ್ಯ ಚ** ಸೂತ್ರದಿಂದ ಧಾತುವಿನ ಇಕಾರಕ್ಕೆ ಗುಣಬಂದರೆ ದ್ವೇಷ್ ಎಂತಾಗುತ್ತದೆ. ಇದಕ್ಕೆ ದ್ವಿತೀಯಾ ಬಹುವಚನ ಶಸ್ ಪ್ರತ್ಯಯ ಸೇರಿಸಿದಾಗ **ದ್ವೇಷಃ** ಎಂಬುದಾಗಿ ರೂಪವಾಗುತ್ತದೆ.

ಮಘೋನೀ— ಮಘಂ ವನತಿ ಸಂಭಜತೇ ಇತಿ ಮಘೋನೀ ಐಶ್ವರ್ಯವನ್ನು ಹೊಂದುವುದು ಎಂಬರ್ಥದಲ್ಲಿ ರೂಪವಾಗುತ್ತದೆ. **ಶ್ವನ್ನುಕ್ಷನ್** (ಉ. ಸೂ. ೧-೧೫೬) ಸೂತ್ರದಿಂದ ಮಘವನ್ ಶಬ್ದವು ಕನಿನ್ ಪ್ರತ್ಯಯಾಂತವಾಗಿ ನಿಪಾತಿತವಾಗಿದೆ. ಮಹ ಪೂಜಾಯಾಂ ಧಾತು. ಇದಕ್ಕೆ ಕನಿನ್ ಪ್ರತ್ಯಯ ಪರದಲ್ಲಿರುವಾಗ ಅವುಕಾಗಮವೂ ಹಕಾರಕ್ಕೆ ಘಕಾರವೂ ಬರುತ್ತದೆ. ಮಘ್+ಅವ್+ಅನ್=ಮಘವನ್ ಎಂಬುದಾಗಿ ರೂಪವಾಗುತ್ತದೆ. ಇದಕ್ಕೆ ಸ್ತ್ರೀಲಿಂಗದಲ್ಲಿ **ಋನ್ನೇಭ್ಯೋ ಙೀಸ್** (ಪಾ. ಸೂ. ೪-೧-೫) ಸೂತ್ರದಿಂದ ನಾಂತವಾದುದರಿಂದ ಙೀಪ್ ಬರುತ್ತದೆ. ಮಘವನ್+ಈ ಎಂದಿರುವಾಗ ಅಜಾದಿ ಪ್ರತ್ಯಯ ಪರದಲ್ಲಿರುವುದರಿಂದ ಭಸಂಜ್ಞಾ ಇರುತ್ತದೆ. **ಶ್ವಯವ ಮಘೋನಾಮತದ್ಧಿತೆ** (ಪಾ. ಸೂ ೬-೪-೧೩೩) ಇವುಗಳಿಗೆ ತದ್ಧಿತಭಿನ್ನ ಪ್ರತ್ಯಯ ಪರದಲ್ಲಿರುವಾಗ ಸಂಪ್ರಸಾರಣ ಬರುತ್ತದೆ, ಎಂಬುದರಿಂದ ಇಲ್ಲಿ ಈ ಪರದಲ್ಲಿರುವಾಗ ವಕಾರಕ್ಕೆ ಉಕಾರರೂಪವಾದ ಸಂಪ್ರಸಾರಣ ಬಂದರೆ ಸಂಪ್ರಸಾರಣದ ಪರದಲ್ಲಿರುವ ಅಚಿಗೆ ಪೂರ್ವರೂಪಬಂದರೆ ಮಘು+ಉನ್+ಈ ಎಂತಾಗುತ್ತದೆ. ಗುಣಬಂದರೆ ಮಘೋನೀ ಎಂಬುದಾಗಿ ರೂಪವಾಗುತ್ತದೆ

ಉಚ್ಛತ್—ಉಛೀ ವಿವಾಸೇ ಧಾತು. ತುದಾದಿ. **ಛಂದಸಿ ಲುಙ್ಲಙ್ಲಿಟಃ** (ಪಾ ಸೂ. ೩-೪-೬) ಸೂತ್ರದಿಂದ ಛಂದಸ್ಸಿನಲ್ಲಿ ವರ್ತಮಾನಾರ್ಥದಲ್ಲಿ ಲಙ್ ಬರುತ್ತದೆ. ತುದಾದಿಗಳಿಗೆ ಶ ವಿಕರಣಪ್ರತ್ಯಯ

ಬರುತ್ತದೆ. ಉಚ್ಛ್+ಅ+ತಿ ಎಂದಿರುವಾಗ **ಇತಶ್ಚ** ಸೂತ್ರದಿಂದ ಲಙಾನ ಇಕಾರಕ್ಕೆ ಲೋಪ ಬರುತ್ತದೆ. **ಬಹುಲಂ ಛಂದಸ್ಯಮಾಙ್ಯೋಗೇಽಪಿ** (ಪಾ. ಸೂ. ೬-೪-೭೫) ಛಂದಸ್ಸಿನಲ್ಲಿ **ಮಾಙ್**ಯೋಗವಿಲ್ಲದಿದ್ದರೂ ಅಚ್ ಆಟ್‌ಗಳು ಧಾತುವಿಗೆ ಬರುವುದಿಲ್ಲ ಎಂಬುದರಿಂದ ಇಲ್ಲಿ ಲಙ್ ಪರದಲ್ಲಿರುವಾಗ ಬರಬೇಕಾದ ಅಡಾಗಮವು ಬರುವುದಿಲ್ಲ. ಅಡಾಗಮ ಬಾರದಿರುವಾಗ ಉಚ್ಛತ್ ಎಂದು ರೂಪವಾಗುತ್ತದೆ.

ಸ್ರಿಧಃ—ಸ್ರಿಧು ಶೋಷಣೆ ಧಾತು. **ಕ್ವಿಪ್‌ಚೌ** (ಪಾ. ಸೂ. ೩-೨-೭೬) ಸಾಮಾನ್ಯವಾಗಿ ವಿಜಾದಿಗಳಂತೆ ಧಾತುಗಳ ಮೇಲೆ **ಈ** ಪ್ರತ್ಯಯ ಬರುತ್ತದೆ. ಕ್ವಿಪ್ ಪ್ರತ್ಯಯದಲ್ಲಿ ವಿಚಿನಲ್ಲಿ ಹೇಳಿದಂತೆ ಸರ್ವವೂ ಲೋಪವಾಗುತ್ತದೆ. ಸ್ರಿಧ್ ಎಂಬುದು ಕೃದಂತವಾದುದರಿಂದ **ಪ್ರಾತಿಪದಿಕ**ವಾಗುತ್ತದೆ. ದ್ವಿತೀಯಾಬಹುವಚನ **ಶಸ್** ಪ್ರತ್ಯಯವನ್ನು ಸೇರಿಸಿದಾಗ ಸ್ರಿಧಃ ಎಂಬುದಾಗಿ ರೂಪವಾಗುತ್ತದೆ. ॥ ೮ ॥

ಸಂಹಿತಾಪಾಠಃ

ಉಷ ಆ ಭಾಹಿ ಭಾನುನಾ ಚಂದ್ರೇಣ ದುಹಿತರ್ದಿವಃ ।
ಆವಹಂತೀ ಭೂರ್ಯಸ್ಮಭ್ಯಂ ಸೌಭಗಂ ವ್ಯುಚ್ಛಂತೀ ದಿವಿಷ್ಟಿಷು ॥೯॥

ಪದಪಾಠಃ

ಉಷಃ । ಆ । ಭಾಹಿ । ಭಾನುನಾ । ಚಂದ್ರೇಣ । ದುಹಿತಃ । ದಿವಃ ।
ಆ ಽವಹಂತೀ । ಭೂರಿ । ಅಸ್ಮಭ್ಯಂ । ಸೌಭಗಂ । ವಿ ಽ ಉಚ್ಛಂತೀ । ದಿವಿಷ್ಟಿಷು ॥೯॥

॥ ಸಾಯಣಭಾಷ್ಯಂ ॥

ಹೇ ದಿವೋ ದುಹಿತರ್ದ್ಯುಲೋಕಸ್ಯ ಪುತ್ರಿ ಉಷ ಉಷೋದೇವತೇ ಚಂದ್ರೇಣ ಸರ್ವೇಷಾಮಾಹ್ಲಾದಕೇನ ಭಾನುನಾ ಪ್ರಕಾಶೇನ ಆ ಸಮಂತಾದ್ಭಾಹಿ। ಪ್ರಕಾಶಸ್ವ । ಕಿಂ ಕುರ್ವತೀ। ದಿವಿಷ್ಟಿಷು ದಿವಸೇಷು ಭೂರಿ ಪ್ರಭೂತಂ ಸೌಭಗಂ ಸೌಭಾಗ್ಯಮಸ್ಮಭ್ಯಮಾವಹಂತೀ ಸಂಪಾದಯಂತೀ । ತಥಾ ವ್ಯುಚ್ಛಂತೀ ತಮಾಂಸಿ ವರ್ಜಯಂತೀ ॥ ಉಷಃ । ಷಾಷ್ಠಿಕಮಾಮಂತ್ರಿತಾದ್ಯುದಾತ್ತತ್ವಂ । ದುಹಿತರ್ದಿವಃ । ಪರಮಪಿ ಛಂದಸೀತಿ ದಿವ ಇತ್ಯಸ್ಯ ಪರಸ್ಯ ಷಷ್ಠ್ಯಂತಸ್ಯ ಪೂರ್ವಾಮಂತ್ರಿತಾಂಗವದ್ಭಾವೇ ಸತಿ ಷಷ್ಠ್ಯಾಮಂತ್ರಿತಸಮುದಾಯಸ್ಯಾಷ್ಟಮಿಕಂ ಸರ್ವಾನುದಾತ್ತತ್ವಂ । ಆವಹಂತೀ । ಜೀಪ್ಶಪೌ ಪಿತ್ತ್ವಾದನುದಾತ್ತೌ । ಶತುಶ್ಚಾದುಪದೇಶಾಲ್ಲಸಾರ್ವಧಾತುಕಸ್ವರೇಣಾನುದಾತ್ತೇತ್ವಂ । ಅತೋ ಧಾತುಸ್ವರಃ ಶಿಷ್ಯತೇ । ಸಮಾಸೇ ಕೃದುತ್ತರಪದಪ್ರಕೃತಿಸ್ವರತ್ವಂ । ಭೂರಿ । ಪ್ರಭವತಿ ನ ವಿನಶ್ಯತೀತಿ ಭೂರಿ । ಆದಿಶದಿಭೂಶುಭಿಭ್ಯಃ ಕ್ರಿನ್ । ಉ. ೪-೫೫ । ಇತಿ ಕ್ರಿನ್ । ನಿತ್ತ್ವಾದಾದ್ಯುದಾತ್ತತ್ವಂ । ಸುಭಗಸ್ಯ ಭಾವಃ ಸೌಭಗಂ । ಸುಭ.

ಗಾನ್ಮಂತ್ರ ಇತ್ಯುದ್ಗಾತ್ರಾದಿಷು ಪಾಠಾದಪ್ಯೃತ್ಯಯಃ । ಹೃದ್ಭಗಸಿಂಧ್ವಂತೇ ಪೂರ್ವಪದಸ್ಯ ಚೇತ್ಯುಭಯಪದವೃದ್ಧಾ ಪ್ಯಾಪ್ತಾಯಾಂ ಸರ್ವೇ ವಿಧಯಶ್ಛಂದಸಿ ವಿಕಲ್ಪ್ಯಂತೇ ಇತಿ ವಚನಾದತ್ತ್ರೋತ್ತರಪದವೃದ್ಧಿರ್ಭವತೀತಿ ವೃತ್ತಾವುಕ್ತಂ । ಕಾ. ೭-೩-೧೯ । ವ್ಯುಚ್ಛಂತೀ । ಉಛೀ ವಿವಾಸೇ । ವಿವಾಸೋ ವರ್ಜನಂ । ತೌದಾದಿಕಃ । ಆದುಪದೇಶಾಲ್ಲಸಾರ್ವಧಾತುಕಾನುದಾತ್ತತ್ವೇ ವಿಕರಣಸ್ವರಃ । ದಿವಿಷ್ಟಿಷು । ದಿವ್ಶಬ್ದೇನ ದಿವಿಷ್ಠ ಆದಿತ್ಯೋ ಲಕ್ಷ್ಯತೇ । ತಸ್ಯೇಷ್ಟಯೇ ಏಷಣಾನಿ ಗಮನಾನಿ ಯೇಷು ದಿವಸೇಷು ತೇ ದಿವಿಷ್ಟಯೇಃ । ಬಹುವ್ರೀಹೌ ಪೂರ್ವಪದಪ್ರಕೃತಿಸ್ವರತ್ವಂ ॥

॥ ಪ್ರತಿಪದಾರ್ಥ ॥

ದಿನಃ ದುಹಿತಃ—ದ್ಯುಲೋಕದ ಪುತ್ರಿಯಾದ । **ಉಷಃ**—ಎಲೈ ಉಷೋದೇವಿಯೇ। **ದಿವಿಷ್ಟಿಷು**—ಪ್ರತಿದಿನವೂ । **ಭೂರಿ**—ಅತ್ಯಧಿಕವಾಗಿ । **ಸೌಭಗಂ**—ಸೌಖ್ಯವನ್ನು । **ಅಸ್ಮಭ್ಯಂ**—ನಮಗೆ । **ಆವಹಂತೀ**— ಸಂಪಾದಿಸಿಕೊಡುತ್ತಲೂ । **ವ್ಯುಚ್ಛಂತೀ**—(ಕತ್ತಲನ್ನು) ಚದುರಿಸುತ್ತಲೂ । **ಚಂದ್ರೇಣ**—ಆಹ್ಲಾದವನ್ನುಂಟುಮಾಡತಕ್ಕ । **ಭಾನುನಾ**—ಪ್ರಭೆಯಿಂದ । **ಆ ಭಾಹಿ**—ಸುತ್ತಲೂ ಪ್ರಕಾಶಿಸು.

॥ ಭಾವಾರ್ಥ ॥

ದ್ಯುಲೋಕೋತ್ಪನ್ನಳಾದ ಎಲೈ ಉಷೋದೇವಿಯೇ, ಪ್ರತಿದಿನವೂ ನಮಗೆ ಅಧಿಕವಾಗಿ ಸೌಖ್ಯವನ್ನು ಸಂಪಾದಿಸಿಕೊಡು. ನಮ್ಮ ಕಾರ್ಯಗಳಿಗೆ ವಿಘ್ನಮಾಡತಕ್ಕ ಕತ್ತಲೆಯನ್ನು ಚದುರಿಸು. ಸರ್ವರಿಗೂ ಸಂತೋಷದಾಯಕವಾದ ನಿನ್ನ ಪ್ರಭೆಯಿಂದ ಎಲ್ಲೆಲ್ಲೂ ಪ್ರಕಾಶಿಸು.

English Translation.

Ushas, shine around with delightful brightness, bringing us every day much happiness and dispersing darkness.

॥ ವಿಶೇಷ ವಿಷಯಗಳು ॥

ಭಾನುನಾ—ಪ್ರಕಾಶೇನ । ಪ್ರಕಾಶದಿಂದ. ಭಾನು ಶಬ್ದಕ್ಕೆ ನಿರುಕ್ತದಲ್ಲಿ (ನಿ. ೨-೨೧) **ಅಹಃ** ಎಂದರೆ ಹಗಲು ಎಂಬರ್ಥವನ್ನು ಹೇಳಿದ್ದರೂ ಭಾಷ್ಯಕಾರರು ಹಗಲಿನಲ್ಲಿ ಸೂರ್ಯಪ್ರಕಾಶವಿರುವುದರಿಂದ ಭಾನು ಶಬ್ದಕ್ಕೆ ಪ್ರಕಾಶವೆಂದು ಅರ್ಥಮಾಡಿರುವರು. ಅಥವಾ ಉಷಃಕಾಲದಲ್ಲಿ ಚಂದ್ರನು ಇನ್ನೂ ಮುಳಗದೆ ಕಾಣುತ್ತಿರುವುದರಿಂದಲೂ ಸೂರ್ಯನು ಸಹ ಉದಯಿಸಲು ಪ್ರಾರಂಭಿಸುತ್ತಿರುವುದರಿಂದಲೂ ಉಷೋದೇವತೆಯು ಸೂರ್ಯಚಂದ್ರರೊಡಗೂಡಿ ಪ್ರಕಾಶಿಸು ಎಂದು ಋಷಿಯು ಪ್ರಾರ್ಥಿಸಿರಬಹುದೇ ಎಂಬ ಶಂಕೆಗೆ ಆಸ್ಪದವಿರುವುದು. ಚಂದ್ರಶಬ್ದಕ್ಕೆ ಹಿರಣ್ಯವೆಂದು ನಿರುಕ್ತದಲ್ಲಿ (ನಿ. ೨-೧೦) ಹೇಳಿದೆ ಮತ್ತು ಅಲ್ಲಿಯೇ (ನಿ. ೧೧-೫) **ಚಂದ್ರಶ್ಚಂದತೇಃ ಕಾಂತಿಕರ್ಮಣಃ** ಎಂದು ಹೇಳಿರುವುದರಿಂದ ಚಂದ್ರಶಬ್ದವು ಕಾಂತಿವಾಚಕವೂ ಆಗಿರುವುದು. ಮುಖ್ಯಾಭಿಪ್ರಾಯವನ್ನು ಗ್ರಹಿಸಿ ಭಾಷ್ಯಕಾರರು ಚಂದ್ರಶಬ್ದಕ್ಕೆ ಚಂದ್ರನಂತೆ ಆಹ್ಲಾದಕರವಾದ ಎಂಬರ್ಥವನ್ನೂ, ಭಾನುಶಬ್ದಕ್ಕೆ ಸೂರ್ಯನಂತೆ ಪ್ರಕಾಶವೆಂಬ ಅರ್ಥವನ್ನು ಹೇಳಿರುವುದು ಸ್ವೀಕಾರಾರ್ಹವಾಗಿಯೇ ಇರುವುದು)

ದಿವಿಷ್ಟಿಷು—ಈ ಶಬ್ದಕ್ಕೆ ಭಾಷ್ಯಕಾರರು **ದಿವಸೇಷು**—ದಿನಗಳಲ್ಲಿ ಎಂದರ್ಥವನ್ನು ಹೇಳಿರುವರು. ಯಾಸ್ಕಮಹರ್ಷಿಗಳ ನಿರುಕ್ತದಲ್ಲಿ (ನಿ. ೬-೨೩) **ದಿವಿಷ್ಟಿಷು ದಿವ ಏಷಣೇಷು** ಎಂದು ಹೇಳಿರುವರು. ಎಂದರೆ **ಯಾಭಿಃ ಕ್ರಿಯಾಭಿರ್ದಿವಮಿಚ್ಛಂತಿ ಗಂತುಂ ತಾ ದಿವಿಷ್ಟಯಃ** ಯಾವ ಕರ್ಮಗಳಿಂದ ಸ್ವರ್ಗವನ್ನು ಪಡೆಯಲಿಚ್ಛಿಸುವರೋ ಅಂತಹ ಕರ್ಮಗಳಿಗೆ ದಿವಿಷ್ಟಯಃ ಎಂದು ಹೆಸರು. ಆದುದರಿಂದ ದಿವಿಷ್ಟಿಷು ಎಂದರೆ ಸ್ವರ್ಗಾಪೇಕ್ಷೆಯಿಂದ ಮಾಡುವ ಕರ್ಮಗಳಲ್ಲಿ ಎಂದು **ಈ** ಶಬ್ದದ ಅರ್ಥವು. ಆದರೆ ಪ್ರಕೃತಸಂದರ್ಭದಲ್ಲಿ **ಈ** ಅರ್ಥವು ಹೊಂದುವುದಿಲ್ಲ.

॥ ವ್ಯಾಕರಣಪ್ರಕ್ರಿಯಾ ॥

ಉಷಃ—ಉಷಸ್ ಶಬ್ದದ ಸಂಬುದ್ಧಿ ಏಕವಚನ. ಇದಕ್ಕೆ ಆಮಂತ್ರಿತ ಎಂದು ಸಂಜ್ಞೆ ಇದೆ. ಆಮಂತ್ರಿತಕ್ಕೆ ಸರ್ವಾನುದಾತ್ತವು ಎಂಟನೇ ಅಧ್ಯಾಯದ ಸೂತ್ರದಿಂದ ವಿಹಿತವಾಗಿದೆ. ಇಲ್ಲಿ **ಆಮಂತ್ರಿತಸ್ಯ ಚ** (ಪಾ. ಸೂ. ೬-೧-೧೯೮) ಆಮಂತ್ರಿತಕ್ಕೆ ಆದ್ಯುದಾತ್ತಸ್ವರ ಬರುತ್ತದೆ ಎಂಬುದರಿಂದ ಆರನೇ ಅಧ್ಯಾಯದ ಸೂತ್ರದಿಂದ ಆದ್ಯುದಾತ್ತಸ್ವರ ಬಂದಿದೆ.

ದುಹಿತರ್ದಿವಃ—**ಸುಬಾಮಂತ್ರಿತೇ ಪರಾಂಗವತ್ ಸ್ವರೆ** (ಪಾ.ಸೂ. ೨-೧-೨) ಎಂಬುದರಿಂದ ಪೂರ್ವದಲ್ಲಿರುವ ಸುಬಂತವು ಪರದಲ್ಲಿರುವ ಆಮಂತ್ರಿತಕ್ಕೆ ಅಂಗವಾಗುವುದರಿಂದ ಆಮಂತ್ರಿತಸ್ವರನನ್ನು ಹೊಂದುವುದು. ಆದರೆ ಛಂದಸ್ಸಿನಲ್ಲಿ **ಪರಮಪಿ ಛಂದಸಿ** (ವಾ) (ಪೂರ್ವಾಂಗವಚ್ಚೇತಿವಕ್ತವ್ಯಂ ಎಂದು ಪಾಠಾಂತರವಿದೆ) ಎಂಬುದರಿಂದ ಪರದಲ್ಲಿರುವ ಸುಬಂತವು ಪೂರ್ವದಲ್ಲಿರುವ ಆಮಂತ್ರಿತಕ್ಕೆ ಅವಯವದಂತೆ ಆಗುತ್ತದೆ. ಆದುದರಿಂದ **ಆಮಂತ್ರಿತಸ್ಯ ಚ** (ಪಾ. ಸೂ. ೮-೧-೧೯) ಪದದ ಪರದಲ್ಲಿರುವ ಪಾದದ ಆದಿಯಲ್ಲಿರದ ಆಮಂತ್ರಿತಕ್ಕೆ ಸರ್ವಾನುದಾತ್ತ ಬರುತ್ತದೆ ಎಂಬುದರಿಂದ ಇಲ್ಲಿ ದಿವಃ ಎಂಬುದು ಪೂರ್ವದಲ್ಲಿರುವ ದುಹಿತಃ ಎಂಬ ಆಮಂತ್ರಿತಕ್ಕೆ ಅಂಗವಾದುದರಿಂದ ದುಹಿತರ್ದಿವಃ ಎಂಬುದು ಸರ್ವವೂ ಅನುದಾತ್ತವಾಗುತ್ತದೆ.

ಆವಹಂತೀ—ಆಙ್ ಉಪಸರ್ಗ. ವಹ ಪ್ರಾಪಣೇ ಧಾತು. ಲಡರ್ಥದಲ್ಲಿ ಶತೃ ಪ್ರತ್ಯಯ ಬರುತ್ತದೆ. ಋಕಾರ ಇತ್ತಾದುದರಿಂದ ಸ್ತ್ರೀಲಿಂಗದಲ್ಲಿ **ಉಗಿತಶ್ಚ** ಸೂತ್ರದಿಂದ **ಙೀಪ್** ಪ್ರತ್ಯಯ ಬರುತ್ತದೆ. ವಹ್+ಅತ್+ಈ ಎಂದಿರುವಾಗ ಋಕಾರ ಇತ್ತಾದುದರಿಂದಲೇ **ಉಗಿದಚಾಂ ಸರ್ವನಾಮಸ್ಥಾನೇಧಾತೋಃ** (ಪಾ. ಸೂ. ೭-೧-೭೦) ಸೂತ್ರದಿಂದ ನುಮಾಗಮ ಬರುತ್ತದೆ. ಮಧ್ಯೆ ಶಪ್ ವಿಕರಣ ಬಂದು ಪರರೂಪವನ್ನು ಹೊಂದಿರುತ್ತದೆ. ನುಮಿನ ನಕಾರಕ್ಕೆ ಅನುಸ್ವಾರ ಪರಸವರ್ಣ ಬಂದರೆ ವಹಂತೀ ಎಂದು ರೂಪವಾಗುತ್ತದೆ. ಇಲ್ಲಿ **ಙೀಪ್** ಮತ್ತು ಶಪ್ ಪ್ರತ್ಯಯಗಳು ಪಿತ್ತಾದುದರಿಂದ ಅನುದಾತ್ತವಾಗುತ್ತವೆ. ಶತೃಪ್ರತ್ಯಯವೂ ಲಸಾರ್ವಧಾತುಕವಾದುದರಿಂದ **ತಾಸ್ಯನುದಾತ್ತೇತ್** (ಪಾ. ಸೂ. ೬-೧-೧೮೬) ಸೂತ್ರದಿಂದ ಅನುದಾತ್ತವಾಗುತ್ತದೆ. ಆಗ **ಧಾತೋಃ** ಸೂತ್ರದಿಂದ ಬಂದಿರುವ ಅಂತೋದಾತ್ತಧಾತುಸ್ವರವೇ ಉಳಿಯುತ್ತದೆ. ಆಙನಿಂದ ಸಮಾಸ ಮಾಡಿದಾಗ ಸಮಾಸಸ್ವರಕ್ಕೆ ಅಪವಾದವಾಗಿ **ಗತಿಕಾರಕೋಪಪದಾತ್ ಕೃತ್** (ಪಾ. ಸೂ. ೬-೨-೧೩೯) ಸೂತ್ರದಿಂದ ಕೃದಂತವಾದುದು ಉತ್ತರಪದವಾಗಿರುವುದರಿಂದ ಕೃದುತ್ತರಪ್ರಕೃತಿಸ್ವರವು ಬರುತ್ತದೆ. ಆದರ ಸ್ವರವು ಹಾಗೆಯೇ ಉಳಿಯುವುದು ಎಂದರ್ಥ. ಆಗ ಆವಹಂತೀ ಶಬ್ದದಲ್ಲಿ ವಕಾರೋತ್ತರಾಕಾರಮಾತ್ರ ಉದಾತ್ತವೂ ಉಳಿದದ್ದೆಲ್ಲಾ ಅನುದಾತ್ತಗಳೂ ಆಗುತ್ತವೆ.

ಭೂರಿ—ಪ್ರಭವತಿ ನ ವಿನಶ್ಯತಿ ಇತಿ ಭೂರಿ ಹೆಚ್ಚಾಗುತ್ತದೆ. ನಾಶವಾಗುವುದಿಲ್ಲ. ಎಂಬರ್ಥದಲ್ಲಿ ಭೂರಿ ಶಬ್ದವಾಗುತ್ತದೆ. **ಅದಿಶಭಿಭೂ ಕ್ಯಿನ್** (ಉ. ಸೂ. ೪-೫೦೫) ಈ ಧಾತುಗಳಿಗೆ ಕ್ಯಿನ್ ಪ್ರತ್ಯಯ ಬರುತ್ತದೆ. ಕ್ಯಿನ್ನಿನಲ್ಲಿ ಇ ಎಂದುಮಾತ್ರ ಉಳಿಯುತ್ತದೆ. ಕಿತ್ತಾದುದರಿಂದ ಗುಣ ಬರುವುದಿಲ್ಲ ನಿತ್ತಾದುದರಿಂದ **ಙ್ಣಿತ್ಯಾದಿರ್ನಿತ್ಯಂ** (ಪಾ. ಸೂ. ೬-೧-೧೯೭) ಸೂತ್ರದಿಂದ ಆದ್ಯುದಾತ್ತವಾಗುತ್ತದೆ. ಉದಾತ್ತದ ಪರದಲ್ಲಿರುವುದರಿಂದ ರೇಫದ ಮೇಲಿರುವ ಇಕಾರವು ಅನುದಾತ್ತಸ್ವರಿತವಾಗುತ್ತದೆ. ಭೂರಿ ಎಂಬುದು ಆದ್ಯುದಾತ್ತವಾದ ಪಪ.

ಸೌಭಗಂ—ಉದ್ಗಾತ್ರಾದಿಗಣಪಠಿತವಾದವುಗಳಿಗೆ ಅಞ್ ಪ್ರತ್ಯಯವು ವಿಹಿತವಾಗಿದೆ. **ಅಲ್ಲಿ ಸುಭಗಾನ್ಮಂತ್ರೇ** ಎಂದು ವಿಶೇಷಾರ್ಥದಲ್ಲಿ ಪಾಠಮಾಡಿರುವುದರಿಂದ ಸುಭಗ ಶಬ್ದದ ಮೇಲೆ ಛಂದಸ್ಸಿನಲ್ಲಿಮಾತ್ರ ಅಞ್ ಪ್ರತ್ಯಯ ಬರುತ್ತದೆ. ಸುಭಗ+ಅ ಎಂದಿರುವಾಗ ಪ್ರತ್ಯಯ ಞಿತ್ತಾದುದರಿಂದ ಆದಿವೃದ್ಧಿಯನ್ನು **ಬಾಧಿಸಿ ಹೃದ್ಭಗಸಿಂಧ್ವಂತೆ ಪೂರ್ವಪದಸ್ಯ ಚ** (ಪಾ. ಸೂ. ೬-೩-೧೯) ಸೂತ್ರದಿಂದ ಭಗಶಬ್ದ ಅಂತವಾಗಿರುವುದರಿಂದ ಉಭಯಪದ ವೃದ್ಧಿಯು ಪ್ರಾಪ್ತವಾಗುತ್ತದೆ. ಆದರೆ **ವಾ ಛಂದಸಿ** ಎಂದು ಯೋಗವಿಭಾಗದಿಂದ **ಸಿದ್ಧ**ವಾದ **ಸರ್ವೇ ವಿಧಯಶ್ಛಂದಸಿ ವಿಕಲ್ಪ್ಯಂತೆ** ಎಂಬ ವಚನದಂತೆ ಇಲ್ಲಿ ಉತ್ತರಪದವೃದ್ಧಿಯು ಬರುವುದಿಲ್ಲವೆಂದು ವೃತ್ತಿಯಲ್ಲಿ (ಕಾ. ೬-೩-೧೯) ಹೇಳಿರುತ್ತಾರೆ. ಆಗ **ತದ್ಧಿತೇಷ್ವ** ಎಂಬ ಸಾಮಾನ್ಯ ಸೂತ್ರದಿಂದಲೇ ಆದ್ಯಚಿಗೆ ವೃದ್ಧಿ ಬಂದರೆ ಸೌಭಗಂ ಎಂಬ ರೂಪವಾಗುತ್ತದೆ.

ವ್ಯುಚ್ಛಂತೀ—ಉಛೀ ವಿವಾಸೇ ಧಾತು. ತುದಾದಿ. ಇದು ಸಾಮಾನ್ಯವಾಗಿ ವಿ ಉಪಸರ್ಗ ಪೂರ್ವವಾಗಿಯೇ ಇರುತ್ತದೆ. ವಿವಾಸವೆಂದರೆ ವರ್ಜನ ತ್ಯಜಿಸುವುದು ಎಂದರ್ಥ. **ಶತೃಪ್ರತ್ಯಯ** ಮಾಡಿದಾಗ ಧಾತುವಿಗೆ ತುದಾದಿಯ ಶವಿಕರಣ ಬರುತ್ತದೆ. ಉಚ್ಛ್+ಅ+**ಅತ್** ಎಂದಿರುವಾಗ **ಅತೋಗುಣೇ** ಸೂತ್ರದಿಂದ ಪರರೂಪ ಬರುತ್ತದೆ. ಶತೃನಲ್ಲಿ ಋಕಾರರೂಪ ಉಗಿತ್ತಾದುದರಿಂದ ನುಮ್ ಬರುತ್ತದೆ. **ಉಗಿತಶ್ಚ** ಸೂತ್ರ ದಿಂದ ಸ್ತ್ರೀತ್ವ ವಿವಕ್ಷಾಮಾಡಿದಾಗ ಙೀಪ್ ಬರುತ್ತದೆ. ವಿ ಉಪಸರ್ಗದ ಇಕಾರಕ್ಕೆ ಯಣಾದೇಶ ಬಂದರೆ ಛಕಾರದ ಹಿಂದೆ ಹ್ರಸ್ವಕ್ಕೆ ತುಕಾಗಮ ಬಂದು ಶ್ಚುತ್ವ ಬಂದರೆ ವ್ಯುಚ್ಛಂತೀ ಎಂದು ರೂಪವಾಗುತ್ತದೆ. ಇಲ್ಲಿ ಶತೃಲಸಾರ್ವಧಾತುಕವಾದುದರಿಂದ **ತಾಸ್ಯನುದಾತ್ತೇತ್** (ಪಾ. ಸೂ. ೬-೧-೧೮೬) ಸೂತ್ರದಿಂದ ಅನುದಾತ್ತ ವಾಗುತ್ತದೆ. ಆಗ ಶವಿಕರಣಸ್ವರವೇ ಸತಿಶಿಷ್ಟವಾಗುವುದರಿಂದ **ಆದ್ಯುದಾತ್ತಶ್ಚ** ಸೂತ್ರದಿಂದ ಉದಾತ್ತವಾಗು ತ್ತದೆ. ಉಳಿದದ್ದು ಅನುದಾತ್ತವಾಗುತ್ತದೆ. ವ್ಯುಚ್ಛಂತೀ ಎಂಬಲ್ಲಿ ಛಕಾರೋತ್ತರಾಕಾರವು ಉದಾತ್ತ ನುಮ್ ಬಂದಿರುವುದರಿಂದ ನದಿಗೆ ಉದಾತ್ತತ್ವವು ಬರುವುದಿಲ್ಲ.

ದಿವಿಷ್ಟಿಷು—ಇಲ್ಲಿ ದಿವ್ ಶಬ್ದದಿಂದ ಆಕಾಶದಲ್ಲಿರುವ ಸೂರ್ಯನು ಲಕ್ಷಣಯಾ ಗೃಹೀತನಾಗು ತ್ತಾನೆ. ಇದಕ್ಕೆ ಗೌಣಲಾಕ್ಷಣಿಕಪ್ರಯೋಗವೆಂದು ಹೆಸರು. ದಿವಃ ಇಷ್ಟಯಃ ಏಷಣಾನಿ ಗಮನಾನಿ ಏಷು ದಿವಸೇಷು ತೇ ದಿವಿಷ್ಟಯಃ ಸೂರ್ಯನ ಗಮನಗಳು ಭ್ರಮಣಗಳು ಯಾವುದರಲ್ಲಿ ಇರುತ್ತವೆಯೋ ಅವುಗಳು ಎಂದು ತಾತ್ಪರ್ಯ. ಬಹುವ್ರೀಹಿ ಸಮಾಸವಾದುದರಿಂದ ಸಮಾಸಸ್ವರವು ಬಾಧಿತವಾಗಿ ಬಹುವ್ರೀಹೌ **ಪ್ರಕೃತ್ಯಾ ಪೂರ್ವಪದಂ** (ಪಾ. ಸೂ. ೬-೩-೧) ಎಂಬುದರಿಂದ ಪೂರ್ವಪದಪ್ರಕೃತಿಸ್ವರವು ಬರುತ್ತದೆ. ದಿವ್ ಎಂಬುದು ಉದಾತ್ತವಾದುದರಿಂದ ದಿವಿಷ್ಟಿಷು ಎಂಬುದು ಆದ್ಯುದಾತ್ತವಾದ ಪದವಾಗುತ್ತದೆ. ಉದಾತ್ತದ ಪರದಲ್ಲಿರು ವುದರಿಂದ ವಕಾರೋತ್ತರ ಇಕಾರವು ಅನುದಾತ್ತಸ್ವರಿತವಾಗುತ್ತದೆ. ಉಳಿದದ್ದು ಪ್ರಚಯವಾಗುತ್ತದೆ. ॥ ೯ ॥

॥ ಸಂಹಿತಾಪಾಠಃ ॥

ವಿಶ್ವಸ್ಯ ಹಿ ಪ್ರಾಣನಂ ಜೀವನಂ ತ್ವೇ ವಿ ಯದುಚ್ಛಸಿ ಸೂನರಿ ।
ಸಾ ನೋ ರಥೇನ ಬೃಹತಾ ವಿಭಾವರಿ ಶ್ರುಧಿ ಚಿತ್ರಾಮಘೇ ಹವಂ ॥೧೦॥

॥ ಪದಪಾಠಃ ॥

ವಿಶ್ವಸ್ಯ । ಹಿ । ಪ್ರಾಣನಂ । ಜೀವನಂ । ತ್ವೇ ಇತಿ । ವಿ । ಯತ್ । ಉಚ್ಛಸಿ ।
ಸೂನರಿ ॥
ಸಾ । ನಃ । ರಥೇನ । ಬೃಹತಾ । ವಿಭಾವರಿ । ಶ್ರುಧಿ । ಚಿತ್ರಮಘ ಇತಿ ಚಿತ್ರಾಽಮಘೇ । ಹವಂ ॥೧೦॥

ಸಾಯಣಭಾಷ್ಯಂ

ಹೇ ಸೂನರೀ ಉಷೋದೇವಿ ವಿಶ್ವಸ್ಯ ಸರ್ವಸ್ಯ ಪ್ರಾಣಿಜಾತಸ್ಯ ಪ್ರಾಣನಂ ಚೇಷ್ಟನಂ ಜೀವನಂ ಪ್ರಾಣಧಾರಣಂ ಚ ತ್ವೇ ಹಿ ತ್ವಯ್ಯೇವ ವರ್ತತೇ । ಯದ್ಯಸ್ಮಾತ್ತ್ವಂ ವ್ಯುಚ್ಛಸಿ ತಮೋ ವರ್ಜಯಸಿ । ಹೇ ವಿಭಾವರಿ ವಿಶಿಷ್ಟಪ್ರಕಾಶಯುಕ್ತೇ ಸಾ ತಾದೃಶೀ ತ್ವಂ ನೋಽಸ್ಮಾನ್ಪ್ರತಿ ಬೃಹತಾ ಪೌಢೇನ ರಥೇನಾಯಾಹೀತಿ ಶೇಷಃ । ತಥಾ ಹೇ ಚಿತ್ರಾಮಘೇ ವಿಚಿತ್ರಧನಯುಕ್ತ ಉಷೋದೇವಿ ನೋಽಸ್ಮದೀಯಂ ಹವಮಾಹ್ವಾನಂ ಶ್ರುಧಿ । ಶೃಣು ॥ ಪಾಣನಂ । ಟನ ಚೇಷ್ಟಾಯಾಂ । ಲ್ಯುಟ್ಟೀತಿ ಭಾವೇ ಲ್ಯುಟ್ । ಯೋರನಾದೇಶಃ । ಸಮಾಸೇಽನಿತೇಃ । ಪಾ. ೮-೪-೧೯ । ಇತ್ಯುಪಸರ್ಗಸ್ಥಾತ್ಕಿರಾನ್ನಿಮಿತ್ತಾದುತ್ತರಸ್ಯ ನಕಾರಸ್ಯ ಣತ್ವಂ । ನನ್ವನಿತೇರಿತೀಟಾ ನಿರ್ದೇಶಾತ್ಕಥಮನ ಚೇಷ್ಟಾಯಾಮಿತ್ಯಸ್ಯ ಣತ್ವಂ । ತರ್ಹಿ ಜೀವನಸ್ಯ ಪೃಥಗುಪಾದಾನಾತ್ತ್ವೇನೈವ ಧಾತುನಾ ಚೇಷ್ಟಾ ಲಕ್ಷ್ಯತೇ । ಸಮಾಸೇ ಕೃದುತ್ತರಪದಪ್ರಕೃತಿಸ್ವರತ್ವಂ । ಸಂಹಿತಾಯಾಮೇಕಾದೇಶಸ್ವರೇಣೈಕಾದೇಶಸ್ಯೋದಾತ್ತತ್ವಂ । ತ್ವೇ । ಸುಪಾಂ ಸುಲುಗಿತಿ ಸಪ್ತಮ್ಯಾಃ ಶೇಆದೇಶಃ । ಉಚ್ಛಸಿ । ಉಛೀ ವಿವಾಸೇ । ತೌದಾದಿಕಃ । ಸಿಸಃ ಪಿತ್ತ್ವಾದನುದಾತ್ತತ್ವೇ ವಿಕರಣಸ್ವರಃ । ನಿಪಾತೈರ್ಯದ್ಯದಿಹಂತೇತಿ ನಿಘಾತಪ್ರತಿಷೇಧಃ । ಸೂನರಿ । ಸುಷ್ಠು ನಯತೀತಿ ಸೂನರೀ । ನೃ ನಯೇ ಇತ್ಯಸ್ಮಾದಚೇ ಇರಿತ್ಯೌಣಾದಿಕ ಇಪ್ರತ್ಯಯಃ । ಗತಿಸಮಾಸೇ ಕೃದ್ಗ್ರಹಣೇ ಗತಿಕಾರಕಪೂರ್ವಸ್ಯಾಪಿ ಗ್ರಹಣಾತ್ ಕೃದಿಕಾರಾದಕ್ತಿನ ಇತಿ ಙೀಷ್ । ನಿಪಾತಸ್ಯ ಚೇತಿ ಪೂರ್ವಪದಸ್ಯ ದೀರ್ಘತ್ವಂ । ಪರಾದಿಶ್ಛಂದಸಿ ಬಹುಲಮಿತ್ಯುತ್ತರಪದಾದ್ಯುದಾತ್ತತ್ವೇ ಪ್ರಾಪ್ತೇ ಆಮಂತ್ರಿತಸ್ಯ ಚೇತ್ಯಾಮ್ಪ್ರತಿಷೇಧಃ । ವಿಭಾವರಿ । ವಿಶಿಷ್ಟಾ ಭಾ ಯಸ್ಯಾಃ ಸಾ । ಛಂದಸೀವನಿಪೌ । ಪಾ. ೫-೨-೧೦೯-೨ । ಇತಿ ಮತ್ವರ್ಥೀಯೋ ವನಿಪ್ । ವನೋ ರ ಚೇತಿ ಙೀಪ್ ತಸ್ಯಂನಿಯೋಗೇನ ನಕಾರಸ್ಯ ರೇಫಾದೇಶಶ್ಚ । ಶ್ರುಧಿ । ಶ್ರುಶೃಣುಪ್ರ್ಕೃವೃಭ್ಯಶ್ಛಂದಸೀತಿ ಹೇರ್ಧಿರಾದೇಶಃ । ಬಹುಲಂ ಛಂದಸೀತಿ ವಿಕರಣಸ್ಯ ಲುಕ್ । ಹೇರ-

ಪಿತ್ತ್ವೇವ ಪ್ರತ್ಯಯೆಸ್ವರೇಣಾಂತೋದಾತ್ತತ್ವಂ । ಪಾದಾದಿತ್ವಾನ್ನಿಘಾತಾಭಾವಃ । ಮಘವಿತಿ ಧನನಾಮ । ಚಿತ್ರಂ ಮಘಂ ಯಸ್ಯಾಃ ಸಾ ಚಿತ್ರಮಘಾ । ಅನ್ಯೇಷಾಮಪಿ ದೃಶ್ಯತ ಇತಿ ಸಂಹಿತಾಯಾಂ ಪೂರ್ವಪದಸ್ಯ ದೀರ್ಘತ್ವಂ । ಹವಂ । ಹ್ವೇಞ್ ಸ್ಪರ್ಧಾಯಾಂ ಶಬ್ದೇ ಚ । ಭಾವೇಽನುಪಸರ್ಗಸ್ಯೇತ್ಯಪ್ರತ್ಯಯಃ । ತತ್ಸಂನಿಯೋಗೇನ ಸಂಪ್ರಸಾರಣಂ ಚ ॥ ೪ ॥

॥ ಪ್ರತಿಪದಾರ್ಥ ॥

ಸೂನರಿ—ಮಾರ್ಗದರ್ಶಕಳಾದ ಎಲೈ ಉಷೋದೇವಿಯೇ । **ಯತ್**—ಯಾವ ಕಾರಣದಿಂದ । **ವಿ ಉಚ್ಛಸಿ**—(ನೀನು) ತಮಸ್ಸನ್ನು ಚದುರಿಸಿ (ಬೆಳಕನ್ನು ತರುತ್ತೀಯೋ ಆದ್ದರಿಂದಲೇ) । **ವಿಶ್ವಸ್ಯ**—ಸಕಲ ಪ್ರಾಣಿವರ್ಗದ । **ಪ್ರಾಣನಂ**—ಉಸಿರೂ । **ಜೀವನಂ**—ಪ್ರಾಣಧಾರಣವೂ । **ತ್ವೇ ಹಿ** ನಿನ್ನಲ್ಲೇ (ಇವೆ. ನಿನ್ನನ್ನೇ ನಂಬಿವೆ) । **ವಿಭಾವರಿ**—ವಿಶಿಷ್ಟಪ್ರಭಾಯುತಳಾದ ಎಲೈ ಉಷಸ್ಸೇ । **ಸಾ**—ಅಂತಹ (ಸಕಲಜೀವನಾಧಾರವಾದ) ನೀನು । **ನಃ**—ನಮ್ಮನ್ನು ಕುರಿತು । **ಬೃಹತೀ**—ಉನ್ನತವಾಗಿಯೂ ವಿಸ್ತಾರವಾಗಿಯೂ ಇರುವ । **ರಥ್ಯೇನ**—ರಥ (ದಲ್ಲಿ)ದೊಡನೆ (ದಯೆಯಾದು) । **ಚಿತ್ರಾಮಘೇ**—ವಿವಿಧವಾಗಿಯೂ ಆಶ್ಚರ್ಯಕರವಾಗಿಯೂ ಇರುವ ಧನದಿಂದ ಕೂಡಿದ ಎಲೈ ಉಷಸ್ಸೇ । **ನಃ**—ನಮ್ಮ । **ಹವಂ**—ಆಹ್ವಾನವನ್ನು । **ಶ್ರುಧಿ**—ಆಲಿಸು.

॥ ಭಾವಾರ್ಥ ॥

ಲೋಕಕ್ಕೆ ಮಂಗಳವನ್ನುಂಟುಮಾಡುವ ಮತ್ತು ಮಾರ್ಗದರ್ಶಕಳಾದ ಎಲೈ ಉಷೋದೇವಿಯೇ, ನೀನು ಕಗ್ಗತ್ತಲೆಯನ್ನು ಚದುರಿಸಿ ಲೋಕಕ್ಕೆ ಬೆಳಕನ್ನು ತರುವುದರಿಂದ ಸಕಲಪ್ರಾಣಿವರ್ಗದ ಉಸಿರೂ ಜೀವನಾಧಾರವೂ ನಿನ್ನಲ್ಲಿಯೇ ಇವೆ. ಸಕಲ ಜೀವನಾಧಾರವಾದ ಅಂತಹ ನೀನು ವಿಶಿಷ್ಟಪ್ರಭಾಯುತಳಾಗಿ ಉನ್ನತವಾಗಿಯೂ ವಿಸ್ತಾರವಾಗಿಯೂ ಇರುವ ನಿನ್ನ ರಥದೊಡನೆ ನಮ್ಮಲ್ಲಿಗೆ ದಯಮಾಡು. ವಿವಿಧವಾದ ಮತ್ತು ಆಶ್ಚರ್ಯಕರವಾದ ಧನದಿಂದ ಕೂಡಿದ ಎಲೈ ಉಷೋದೇವಿಯೇ, ನಮ್ಮ ಆಹ್ವಾನವನ್ನು ಆಲಿಸು.

English Translation.

O fair Ushas, when you dawn forth, the breath and life of all (creatures) lies in you; bright goddess, possessor of wondrous wealth, come to us with your spacious car and hear our invocation.

॥ ವಿಶೇಷ ವಿಷಯಗಳು ॥

ವಿಶ್ವಸ್ಯ—ಸಮಸ್ತ ಪ್ರಪಂಚದ, ಸಮಸ್ತ ಜೀವರಾಶಿಗಳ, of all creatures of the Universe etc.

ಪ್ರಾಣನಂ—ಅನ ಚೇಷ್ಟಾಯಾಂ । ಪ್ರಾಣಿಗಳು ಜೀವಿಸುವುದಕ್ಕೆ ಅತ್ಯವಶ್ಯಕವಾದ ಉಸಿರು ಅಥವಾ ಜೀವವುಳ್ಳ ಪ್ರಾಣಿಗಳಿಗೆ ಸಹಜಧರ್ಮವೆನಿಸಿದ ಚೇಷ್ಟಾದಿವ್ಯಾಪಾರಗಳು; movements.

ಜೀವನಂ—ಜೀವಿಸಿರುವುದು, ಬದುಕಿರುವುದು, life.

ವಿ ಉಚ್ಛಸಿ—ತಮೋ ವರ್ಜಯಸಿ । ಕತ್ತಲೆಯನ್ನು ನಾಶಮಾಡುವೆ.

ಚಿತ್ರಾಮಘೇ—ನಾನಾವಿಧವಾದ ಧನಾದಿಗಳಿಂದ ಯುಕ್ತಳಾದ, ಮಘವೆಂದರೆ ಧನವು. ಚಿತ್ರವೆಂದರೆ ನಾನಾವಿಧವಾದ, ಎಂದರೆ ದ್ರವ್ಯ, ರತ್ನಗಳು, ಪಶುಗಳು ಇತ್ಯಾದಿ ವಿಧವಿಧವಾದ.

॥ ವ್ಯಾಕರಣಪ್ರಕ್ರಿಯಾ ॥

ಪ್ರಾಣನಂ—ಅನ ಚೇಷ್ಟಾಯಾಂ ಧಾತು ಪ್ರ ಉಪಸರ್ಗ. **ಲ್ಯುಟ್ಚ** (ಪಾ- ಸೂ. ೩-೩-೧೧೫) ಸೂತ್ರದಿಂದ ಭಾವಾರ್ಥದಲ್ಲಿ ಲ್ಯುಟ್ ಪ್ರತ್ಯಯ ಬರುತ್ತದೆ. ಲ್ಯುಟಿನಲ್ಲಿ ಉಳಿಯುವ ಯು ಎಂಬುದಕ್ಕೆ ಅನ ಎಂಬ ಆದೇಶವು ಬರುತ್ತದೆ. ಅನನಂ ಎಂದಾಗುತ್ತದೆ. ಪ್ರ ಎಂಬುದರೊಡನೆ ಸಮಾಸ ಮಾಡಿದಾಗ, **ಅನಿತೇಃ** (ಪಾ. ಸೂ. ೮-೧-೪) ಉಪಸರ್ಗದಲ್ಲಿರುವ ನಿಮಿತ್ತದ ಪರದಲ್ಲಿರುವ ಅನಧಾತುವಿನ ನಕಾರಕ್ಕೆ ಣಕಾರವು ಬರುತ್ತದೆ ಎಂಬುದರಿಂದ ಣತ್ವ ಬರುತ್ತದೆ. ಣತ್ವಕ್ಕೆ ನಿಮಿತ್ತವು ರೇಫ ಅಥವಾ ಷಕಾರ. ಇಲ್ಲಿ ಪ್ರ ಎಂಬಲ್ಲಿ ರೇಫವಿದೆ. ಪರದಲ್ಲಿ ಅನಧಾತು ಬಂದುದರಿಂದ ನಕಾರಕ್ಕೆ ಣಕಾರ ಬಂದರೆ ಪ್ರಾಣನಂ ಎಂದಾಗುತ್ತದೆ. ಮಂತ್ರದಲ್ಲಿ ಪ್ರಾಣಂ ಜೀವನಂ ಎಂದು ಎರಡು ಶಬ್ದಗಳು ಉಪಾತ್ತವಾದುದರಿಂದ ಪ್ರಾಣನಂ ಎಂಬಲ್ಲಿ ಅನ-ಚೇಷ್ಟಾಯಾಂ ಎಂಬ ಧಾತುವನ್ನು ಸ್ವೀಕರಿಸಿರುವುದು. ಆದರೆ ಹಾಗೆ ಚೇಷ್ಟಾರ್ಥಕ ಅನಧಾತುವನ್ನು ತೆಗೆದು ಕೊಂಡರೆ ರೂಪಸಿದ್ಧಿಯಾಗುವುದಿಲ್ಲ. ಏಕೆಂದರೆ ಣತ್ವವಿಧಾನಮಾಡುವ ಸೂತ್ರದಲ್ಲಿ ಅನಿತೇಃ ಎಂದು ಇಚ್ ಸಹಿತವಾಗಿ ಉಚ್ಚರಿಸಿರುವುದರಿಂದ ಅನ ಪ್ರಾಣನೆ ಎಂಬ ಧಾತುವನ್ನು ಸ್ವೀಕರಿಸಬೇಕು. ಇದು ಅನಿಟ್ಟಾದ್ದರಿಂದ ಆ ರೂಪವನ್ನು ಹೊಂದುವುದಿಲ್ಲ. ಹೀಗಿರುವಾಗ ಚೇಷ್ಟಾರ್ಥಕ ಧಾತುವಿಗೆ ಣತ್ವ ಬಾರದೆ ಉಕ್ತರೂಪಸಿದ್ಧಿಯಾಗಲಾರದು. ಪ್ರಾಣನಾರ್ಥಕ ಅನಧಾತುವನ್ನೇ ತೆಗೆದುಕೊಳ್ಳೋಣವೆಂದರೆ ಮುಂದೆ ಮಂತ್ರದಲ್ಲಿ ಜೀವನಂ ಎಂದಿರುವುದರಿಂದ ವ್ಯರ್ಥವಾಗುತ್ತದೆ. ಹೀಗೆ ಪೂರ್ವಪಕ್ಷವು ಬಂದರೆ ಆಗ ಪ್ರಾಣನಾರ್ಥಕ ಅನಧಾತುವೇ ಇಲ್ಲಿ ಉಪಾತ್ತವಾಗದು ಎಂದು ಹೇಳಬೇಕು. ಆಗ ರೂಪಸಿದ್ಧಿಯಾಗುವುದರಲ್ಲಿ ಅಭ್ಯಂತರವಿಲ್ಲ. ಆದರೆ ಅರ್ಥ ವಿಷಯದಲ್ಲಿ ಪೌನರುಕ್ತ್ಯ ದೋಷ ಬರುತ್ತದೆ. ಆಗ ಅನ ಧಾತುವಿಗೆ ಚೇಷ್ಟಾರೂಪ ಅರ್ಥವನ್ನು ಲಕ್ಷಣಯಾ ಹೇಳಬೇಕು. ಜೀವಿಸಿರುವವನ ಲಕ್ಷಣ ಚೇಷ್ಟಾವೆಂಬುದು ಸರ್ವಸಂಮತವಾದುದು. ಪ್ರ ಎಂಬುದು ಗತಿಯಾದುದರಿಂದಲೂ ಅನನಂ ಎಂಬುದು ಕೃದಂತವಾದುದರಿಂದಲೂ **ಗತಿಕಾರಕೋಪಪದಾತ್ ಕೃತ್** ಸೂತ್ರದಿಂದ ಕೃದುತ್ತರಪದಪ್ರಕೃತಿಸ್ವರ ಬರುತ್ತದೆ. ಪ್ರ+ಅನನಂ ಎಂದಿರುವಾಗ ಧಾತುವಿನ ಅಕಾರ ಉದಾತ್ತವಾಗುತ್ತದೆ. ಗತಿಯ ಅಕಾರದೊಡನೆ ಏಕಾದೇಶ ಬಂದಾಗ **ಏಕಾದೇಶ ಉದಾತ್ತೇನೋದಾತ್ತಃ** (ಪಾ. ಸೂ. ೮-೪-೫) ಉದಾತ್ತದಿಂದ ಕೂಡಿಕೊಂಡು ಏಕಾದೇಶ ಬಂದಾಗ ಉದಾತ್ತವೇ ಆಗುತ್ತದೆ ಎಂಬುದರಿಂದ ಪ್ರಾ ಎಂಬುದು ಉದಾತ್ತವಾಗುತ್ತದೆ. ಣಕಾರಾಕಾರವು ಸ್ವರಿತವಾಗುತ್ತದೆ. ಪ್ರಾಣನಂ ಎಂಬುದು ಆದ್ಯುದಾತ್ತವಾದ ಪದವಾಗುತ್ತದೆ.

ತ್ವೇ - ಯುಷ್ಮದ್ ಶಬ್ದದಮೇಲೆ ಸಪ್ತಮೀ ಏಕವಚನ ವಿವಕ್ಷಿತವಾಡಿದಾಗ ಯುಷ್ಮದ್+ಇ (ಙಿ) ಎಂದಿರುತ್ತದೆ. **ಸುಪಾಂಸುಲುಕ್** (ಪಾ. ಸೂ. ೭-೧-೩೯) ಸೂತ್ರದಿಂದ ಸಪ್ತಮಿಯ ಙಿಗೆ ಶೆ ಎಂಬ ಆದೇಶ ಬರುತ್ತದೆ. ಶೆ ಎಂಬಲ್ಲಿ ಶಕಾರವು ಇತ್ಸಾಗುತ್ತದೆ. ಯುಷ್ಮದ್ ಶಬ್ದದ ಮುಪರ್ಯಂತಕ್ಕೆ ತ್ವ ಆದೇಶವು **ತ್ವಮಾವೇಕವಚನೇ** ಸೂತ್ರದಿಂದ ಬರುತ್ತದೆ. ಆದ್ ಎಂಬ ಶೇಷಕ್ಕೆ ಮುಪರ್ಯಂತಸ್ಯ ಎಂಬುದರಿಂದ ಲೋಪ ಬರುತ್ತದೆ. ತ್ವ+ಎ ಎಂದಿರುವಾಗ ಗುಣ ಬಂದರೆ ತ್ವೇ ಎಂದು ರೂಪವಾಗುತ್ತದೆ.

ಉಚ್ಛಸಿ—ಉಛೀ ವಿವಾಸೇ ಧಾತು ತುದಾದಿ. ಲಟ್ ಮಧ್ಯಮಪುರುಷೈಕವಚನ ಪ್ರತ್ಯಯ ಪರದಲ್ಲಿರುವಾಗ ಉಚ್ಛ್+ಸಿ ಎಂದಿರುವಾಗ ತುದಾದಿಯ **ಶವಿಕರಣಪ್ರತ್ಯಯ** ಬಂದರೆ **ಉಚ್ಛಸಿ** ಎಂದಾಗುತ್ತದೆ ಇಲ್ಲಿ **ಸಿಪ್** ಪ್ರತ್ಯಯ ಪಿತ್ತಾದುದರಿಂದ ಅನುದಾತ್ತವಾಗುತ್ತದೆ. ಆಗ ವಿಕರಣದ ಆದ್ಯುದಾತ್ತಸ್ವರವೇ ಪ್ರಬಲವಾಗುತ್ತದೆ **ನಿಪಾತೈರ್ಯದ್ಯದಿ** (ಪಾ. ಸೂ. ೮-೧-೩೦) ಯದಾದಿಯೋಗವಿರುವಾಗ ಸರ್ವಾನುದಾತ್ತವು ಬರುವುದಿಲ್ಲ. ಎಂಬುದರಿಂದ ಇಲ್ಲಿ **ತಿಙ್ಶಿತಿಙಃ** ಎಂಬುದರಿಂದ ನಿಘಾತವು ಬರುವುದಿಲ್ಲ. ಹಿಂದೆ ಯಚ್ಛಬ್ದದ ಸಂಬಂಧವಿದೆ. ಆದುದರಿಂದ ಉಚ್ಛಸಿ ಎಂಬುದು ಆದ್ಯುದಾತ್ತವಾದ ಪದವಾಗುತ್ತದೆ.

ಸೂನರಿ—ಸುಷ್ಠು ನಯತಿ ಇತಿ **ಸೂನರೀ** ಚೆನ್ನಾಗಿ । ಕೊಂಡೊಯ್ಯುವವಳು ಎಂದರ್ಥ. ನೃ ನಯೆ ಧಾತು. ಇದಕ್ಕೆ **ಅಚ ಇಃ** (ಉ ಸೂ ೪-೫೫-೭೮) ಅಜಂತವಾದ ಧಾತುವಿಗೆ ಇ ಪ್ರತ್ಯಯ ಬರುತ್ತದೆ ಎಂಬುದರಿಂದ ಇ ಪ್ರತ್ಯಯ ಬರುತ್ತದೆ. ಇದು ಆಧ್ಯರ್ಧಧಾತುಕಸಂಜ್ಞೆಯನ್ನು ಹೊಂದಿರುವುದರಿಂದ ಧಾತುವಿಗೆ ಗುಣ ಬರುತ್ತದೆ. ಸೂನರಿ ಎಂದು ಇಕಾರಾಂತ ಶಬ್ದವಾಗುತ್ತದೆ. ಗತಿಸಮಾಸವನ್ನು ಹೊಂದಿರುವುದರಿಂದ ಇಲ್ಲಿ ಕೃದಂತವನ್ನು ತೆಗೆದುಕೊಳ್ಳುವಾಗ ಗತಿ **ಕಾರಕಪೂರ್ವದಲ್ಲಿರುವವುಗಳನ್ನೂ** ತೆಗೆದುಕೊಳ್ಳಬೇಕೆಂದು **ಪರಿಭಾಷೆ** ಯಿಂದ ಲಭ್ಯವಾಗುತ್ತದೆ ಎಂದು ಹಿಂದೆ ಹೇಳಿದೆ. ಆದುದರಿಂದ ಇಲ್ಲಿ ಸ್ತ್ರೀತ್ವವಿವಕ್ಷಾಮಾಡಿದಾಗ **ಕೃದಿಕಾರಾದಕ್ತಿನಃ** ಎಂಬುದರಿಂದ ಙೀಷ್ ಪ್ರತ್ಯಯ ಬರುತ್ತದೆ. ಕ್ತಿನ್ ಭಿನ್ನವಾದ ಇಕಾರಾಂತ ಕೃತ್ ಪ್ರತ್ಯಯಾಂತ ಶಬ್ದಕ್ಕೆ ಙೀಷ್ ಬರುತ್ತದೆ ಎಂಬುದರಿಂದ ಇಲ್ಲಿ ಗತಿಪೂರ್ವಕವಾದ ಸೂನರಿ ಎಂಬುದಕ್ಕೆ ಙೀಷ್ ಬರುತ್ತದೆ. **ನಿಪಾತಸ್ಯ ಚ** (ಪಾ. ಸೂ. ೬-೩-೧೩೬) ಎಂಬುದರಿಂದ ಸು ಎಂಬ ನಿಪಾತಕ್ಕೆ ದೀರ್ಘವಾಗುತ್ತದೆ. ಸೂನರಿ ಶಬ್ದಕ್ಕೆ ಸಂಬುದ್ಧಿಯಲ್ಲಿ **ಅಂಬಾರ್ಥನದ್ಯೋ ರ್ಹ್ರಸ್ವಃ** ಎಂಬುದರಿಂದ ಹ್ರಸ್ವ ಬರುತ್ತದೆ. ಹ್ರಸ್ವದ ಪರದಲ್ಲಿರುವ ಸಂಬುದ್ಧಿಯ ಸು ವಿಭಕ್ತಿಗೆ ಲೋಪ ಬಂದರೆ ಸೂನರಿ ಎಂದು ರೂಪವಾಗುತ್ತದೆ. ಪರಾದಿಶ್ಛಂದಸಿ ಬಹುಲಂ (ಪಾ ಸೂ. ೬-೩-೧೯೯) ಎಂಬುದರಿಂದ ಉತ್ತರಪದಕ್ಕೆ ಆದ್ಯುದಾತ್ತವು ಪ್ರಾಪ್ತವಾದರೆ **ಆಮಂತ್ರಿತಸ್ಯ ಚ** ಎಂಬ ಎಂಟನೇ ಅಧ್ಯಾಯದ ಸೂತ್ರದಿಂದ ಸರ್ವಾನುದಾತ್ತಸ್ವರವು ಬರುತ್ತದೆ.

ವಿಭಾವರಿ—ವಿಶಿಷ್ಟಾ ಭಾ ಯಸ್ಯಾಃ ಸಾ **ವಿಭಾವರೀ**. **ಹೆಚ್ಚಾದ ಕಾಂತಿಯುಳ್ಳವಳು** ಎಂದರ್ಥ. **ತದಸ್ಯಾಸ್ತೀತಿ** ಸೂತ್ರದಿಂದ ಮತುಪ್ ಪ್ರಾಪ್ತವಾದರೆ- **ಛಂದಸೀ ವನಿಪೌ** (ಪಾ. ಸೂ. ೫-೨-೧೦೯) ಛಂದಸ್ಸಿನಲ್ಲಿ ಮತ್ವರ್ಥದಲ್ಲಿ **ಈ ವನಿಪ್** ಪ್ರತ್ಯಯಗಳು ಬರುತ್ತವೆ ಎಂಬುದರಿಂದ **ವನಿಪ್** ಪ್ರತ್ಯಯ ಬರುತ್ತದೆ. ವನಿಪ್ಪಿನಲ್ಲಿ **ವನ್** ಉಳಿಯುತ್ತದೆ. ವಿಭಾವನ್ ಎಂದು ನಾಂತವಾದ ಶಬ್ದವಾಗುತ್ತದೆ. ಸ್ತ್ರೀಲಿಂಗದಲ್ಲಿ **ವನೋರಚೆ** (ಪಾ. ಸೂ. ೪-೧-೭) ಸೂತ್ರದಿಂದ ವನ್ನಂತಾತಕ್ಕೆ ಙೀಪ್ ಪ್ರತ್ಯಯವೂ ನಕಾರಕ್ಕೆ ರೇಫವೂ ಬರುತ್ತದೆ. ವಿಭಾವರೀ ಎಂದು ರೂಪವಾಗುತ್ತದೆ. ಸಂಬುದ್ಧಿಯಲ್ಲಿ ಹ್ರಸ್ವ ಬಂದು ಸುಲೋಪವಾದಾಗ ವಿಭಾವರಿ ಎಂದು ರೂಪವಾಗುತ್ತದೆ. ಆಮಂತ್ರಿತ ನಿಘಾತಸ್ವರವು ಬಂದಿದೆ.

ಶ್ರುಧಿ—ಶ್ರು ಶ್ರವಣೆ ಧಾತು. ಭ್ವಾದಿ ಲೋಟ್ ಮಧ್ಯಮಪುರುಷೈಕವಚನದಲ್ಲಿ ಸಿಪ್ ಪ್ರತ್ಯಯ ಬರುತ್ತದೆ. **ಸೇರ್ಧ್ಯಪಿಚ್ಚ** ಸೂತ್ರದಿಂದ ಸಿಪ್ಪಿಗೆ ಹಿ ಎಂಬ ಆದೇಶ ಬರುತ್ತದೆ. ಅದಕ್ಕೆ **ಶ್ರುಶೃಣಪ್ರ್ಕೃವಿಭ್ಯಶ್ಛಂದಸಿ** (ಪಾ. ಸೂ. ೬-೪-೧೦೨) ಎಂಬುದರಿಂದ ಛಂದಸ್ಸಿನಲ್ಲಿ ಧಿ ಎಂಬ ಆದೇಶವು ಬರುತ್ತದೆ. **ಶ್ರುವಃಶೃಚ** ಸೂತ್ರದಿಂದ ಪ್ರಕೃತ್ಯಾದೇಶವೂ ಶ್ನು ವಿಕರಣವೂ ಪ್ರಾಪ್ತವಾದರೆ ಆಗ, **ಬಹುಲಂ ಛಂದಸಿ** (ಪಾ. ಸೂ. ೨-೪-೭೩) ಛಂದಸ್ಸಿನಲ್ಲಿ ವಿಕಲ್ಪವಾಗಿ ವಿಕರಣಕ್ಕೆ ಲುಕ್ ಬರುತ್ತದೆ ; ಎಂಬುದರಿಂದ ಇಲ್ಲಿ ವಿಕರಣಕ್ಕೆ ಲುಕ್ ಬರುತ್ತದೆ. **ತಸ್ಪನ್ನಿಯೋಗದಿಂದ** ಬರುವ ಪ್ರಕೃತ್ಯಾದೇಶವೂ ಬರುವುದಿಲ್ಲ. ಶೃಧಿ ಎಂಬ ರೂಪವು ಆಗುತ್ತದೆ. ಇಲ್ಲಿ

ಏಪ್ಪಿಗೆ ಬಂದಿರುವ ಹಿ ಆದೇಶಕ್ಕೆ ಅಪಿತ್ವವನ್ನು ಅತಿದೇಶಮಾಡಿರುವುದರಿಂದ ಅನುದಾತ್ತಸ್ವರವು ಬರುವುದಿಲ್ಲ. ಆಗ **ಆದ್ಯುದಾತ್ತಶ್ಚ** ಸೂತ್ರದಿಂದ ಪ್ರತ್ಯಯದ ಆದ್ಯುದಾತ್ತಸ್ವರವು ಬರುತ್ತದೆ. **ತಿಙ್ಚತಿಙಃ** ಸೂತ್ರದಿಂದ ನಿಘಾತವು ಪ್ರಾಪ್ತವಾದರೆ **ಅಸಾದಾದೌ** ಎಂದು ನಿಷೇಧಮಾಡಿರುವುದರಿಂದ ಇಲ್ಲಿ ಪಾದದ ಆದಿಯಲ್ಲಿ ಬಂದಿರುವುದರಿಂದ ನಿಘಾತಸ್ವರವು (ಸರ್ವಾನುದಾತ್ತ) ಬರುವುದಿಲ್ಲ ಶ್ರುಧಿ ಎಂಬುದು ಅಂತೋದಾತ್ತವಾದ ಪದವಾಗುತ್ತದೆ.

ಚಿತ್ರಾಮಘೇ—ಮಘ ಎಂದರೆ ಧನದ ಹೆಸರು. ಚಿತ್ರಂ ಮಘಂ ಯಸ್ಯಾಃ ಸಾ ಚಿತ್ರಮಘಾ ನಾನಾವಿಧವಾದ ಐಶ್ವರ್ಯವುಳ್ಳವಳು ಎಂದರ್ಥ. **ಅನ್ಯೇಷಾಮಪಿ ದೃಶ್ಯತೆ** (ಪಾ. ಸೂ. ೬-೩-೧೩೭) ಬೇರೆ **ಪೂರ್ವ** ಪದಗಳಿಗೂ ಸಂಹಿತಾದಲ್ಲಿ ದೀರ್ಘ ಬರುತ್ತದೆ ಎಂಬುದರಿಂದ ಇಲ್ಲಿ ಮಂತ್ರದಲ್ಲಿ **ಪೂರ್ವ**ಪದವಾದ ಚಿತ್ರವೆಂಬುದಕ್ಕೆ ದೀರ್ಘ ಬಂದಿದೆ. ಸಂಬುದ್ಧಿಯಲ್ಲಿ **ಸಂಬುದ್ಧೌ ಚ** (ಪಾ. ಸೂ. ೭-೩-೧೦೬) ಸೂತ್ರದಿಂದ ಆಬಂತಕ್ಕೆ ಏಕಾರ ಬರುತ್ತದೆ. ಏಕಾರದ ಪರದಲ್ಲಿ ಸು ಬಂದುದರಿಂದ ಲೋಪಬಂದರೆ ಚಿತ್ರಾಮಘೆ ಎಂದು ರೂಪನಾಗುತ್ತದೆ.

ಹವಂ—ಹ್ವೇಞ್ ಸ್ಪರ್ಧಾಯಾಂ ಶಬ್ದೇ ಚ ಧಾತು. ಭ್ವಾದಿ. **ಭಾವೇಽನುಪಸರ್ಗಸ್ಯ** (ಪಾ. ಸೂ. ೩-೩-೨೫) ಅನುಪಸರ್ಗವುಳ್ಳ (ಕೇವಲವಾದ) ಹ್ವೇಞ್ ಧಾತುವಿಗೆ ಭಾವಾರ್ಥದಲ್ಲಿ ಅಪ್ ಪ್ರತ್ಯಯವು ಬರುತ್ತದೆ ಆದರೊಡನೆ ಧಾತುವಿಗೆ ಸಂಪ್ರಸಾರಣವೂ ಬರುತ್ತದೆ. ಇಲ್ಲಿ ಕೇವಲ ಧಾತುವಿರುವುದರಿಂದ ಅಪ್ ಪ್ರತ್ಯಯ ಬರುತ್ತದೆ. ಹ್ವೇಞನ ವಕಾರಕ್ಕೆ ಉಕಾರರೂಪವಾದ ಸಂಪ್ರಸಾರಣವು ಬರುತ್ತದೆ. ಹು+ಏ+ಅ ಎಂದಿರುವಾಗ **ಸಂಪ್ರಸಾರಣಾಚ್ಚ** ಸೂತ್ರದಿಂದ ಸಂಪ್ರಸಾರಣದ ಪರದಲ್ಲಿರುವ ಏಕಾರಕ್ಕೆ ಪೂರ್ವರೂಪ ಬರುತ್ತದೆ. ಹು+ಅ ಎಂದಿರುವಾಗ ಗುಣ ಆವಾದೇಶಗಳು ಬಂದರೆ ಹವಂ ಎಂಬ ರೂಪವಾಗುತ್ತದೆ.

ಸಂಹಿತಾಪಾಠಃ

ಉಷೋ ವಾಜಂ ಹಿ ವಂಸ್ವ ಯಶ್ಚಿತ್ರೋ ಮಾನುಷೇ ಜನೇ ।
ತೇನಾ ವಹ ಸುಕೃತೋ ಅಧ್ವರಾ ಉಪ ಯೇ ತ್ವಾ ಗೃಣಂತಿ
ವನ್ಪತಯಃ ॥ ೧೧ ॥

ಪದಪಾಠಃ

ಉಷಃ । ವಾಜಂ । ಹಿ । ವಂಸ್ವ । ಯಃ । ಚಿತ್ರಃ । ಮಾನುಷೇ । ಜನೇ ।
ತೇನ । ಆ । ವಹ । ಸುಽಕೃತಃ । ಅಧ್ವರಾನ್ । ಉಪ । ಯೇ । ತ್ವಾ । ಗೃಣಂತಿ ।
ವನ್ಪತಯಃ ॥ ೧೧ ॥

ಸಾಯಣಭಾಷ್ಯಂ

ಹೇ ಉಷೋ ವಾಜಂ ಹವಿರ್ಲಕ್ಷಣಮನ್ನಂ ಹಿ ಶ್ರುತಿಷು ಪ್ರಸಿದ್ಧಂ ವಂಸ್ವ । ಯಾಚಸ್ವ । ಸ್ವೀ. ಕುರ್ವಿತ್ಯರ್ಥಃ । ಯೋ ವಾಜಶ್ಚಿತ್ರಶ್ಚಾಯನೀಯೋ ಮಾನುಷೇ ಮನುಷ್ಯೇ ಜನೇ ಜಾತೇ ಯಜಮಾನೇ ವರ್ತತೇ । ತಂ ವಾಜಮಿತಿ ಪೂರ್ವತ್ರಾನ್ವಯಃ । ತೇನ ಕಾರಣೇನ ಸುಕೃತಃ ಸುಷ್ಠು ಕೃತವತೋ ಯಜಮಾನಾನಧ್ವರಾನ್ । ಹಿಂಸಾರಹಿತಾನ್ ಯಾಗಾನುಪಾ ವಹ । ಪ್ರಾಪಯೇತಿ । ಯೇ ಯಜಮಾನಾ ವಹ್ನಯೋ ಯಜ್ಞನಿರ್ವಾಹಕಾಸ್ತ್ವಾ ತ್ವಾಂ ಗೃಣಂತಿ ಸ್ತುವಂತಿ । ತಾನ್ ಸುಕೃತ ಇತಿ ಪೂರ್ವೇಣ ಸಂಬಂಧಃ । ಏತದುಕ್ತಂ ಭವತಿ । ಯಜಮಾನೈಃ ಪ್ರಥಮಂ ಹವಿಃ ಸ್ವೀಕೃತ್ಯ ಪುನರಪಿ ತೇಷಾಂ ಯಜ್ಞಂ ಸಂಪಾದಯೇತಿ ॥ ವಾಜಂ । ವಜ ವ್ರಜ ಗತೌ । ಕರ್ಮಣಿ ಘಞ್ । ಅಜಿವ್ರಜ್ಯೋರ್ಞ್ಞ । ಪಾ. ೭-೩-೭೦ । ಇತ್ಯತ್ರ ಚಶಬ್ದಸ್ಯಾನುಕ್ತಸಮುಚ್ಚಯಾರ್ಥತ್ವಾದ್ವಾಜೋ ವಾಜ್ಯಮಿತ್ಯತ್ರಾಪಿ ಕುತ್ವಾಭಾವ ಇತಿ ವೃತ್ತ್ಯಾವುಕ್ತತ್ವಾತ್ಕುತ್ವಾಭಾವಃ । ಕರ್ಷಾರ್ತ್ವತ ಇತ್ಯಂತೋದಾತ್ತತ್ವೇ ಪ್ರಾಪ್ತೇ ವೃಷಾದಿತ್ವಾದಾದ್ಯುದಾತ್ತತ್ವಂ । ವಂಸ್ವ । ವನು ಯಾಚನೇ । ಅತ್ರ ಯಾಚನವಾಚಿನಾ ಧಾತುನಾ ತೆದುತ್ತರಭಾವೀ ಸ್ವೀಕಾರೋ ಲಕ್ಷ್ಯತೇ । ಬಹುಲಂ ಛಂದಸೀತಿ ವಿಕರಣಸ್ಯ ಲುಕ್ । ಅನುದಾತ್ತೇಶ್ಚಾ ್ವಲ್ಲಸಾರ್ವಧಾತುಕಾನುದಾತ್ತತ್ವೇ ಧಾತುಸ್ವರಃ । ಹಿ ಚೇತಿ ನಿಘಾತಪ್ರತಿಷೇಧಃ । ಸುಕೃತಃ । ಸುಕರ್ಮಪಾಪೇತ್ಯಾದಿನಾ ಕರೋತೇರ್ಭೂತಾರ್ಥೇ ಕ್ವಿಪ್ । ತುಗಾಗಮಃ । ಕೃದುತ್ತರಪದಪ್ರಕೃತಿಸ್ವರತ್ವಂ । ಅಧ್ವರಾನ್ । ಧ್ವರೋ ಹಿಂಸಾ ನಾಸ್ತ್ಯಸ್ಮಿನ್ನಿತಿ ಬಹುವ್ರೀಹೌ ನಞ್ಸ್ಭ್ಯಾಮಿತ್ಯುತ್ತರಪದಾಂತೋದಾತ್ತತ್ವಂ । ಅಧ್ವರಾನಿತ್ಯಸ್ಯೇಪ್ಸಿತತಮತ್ವಾತ್ಕರ್ತುರೀಪ್ಸಿತತಮಂ । ಪಾ. ೧-೪-೪೯ । ಇತಿ ಕರ್ಮಸಂಜ್ಞಾ । ಸುಕೃತ ಇತ್ಯಸ್ಯ ತ್ವಕಥಿತಂ ಚ । ಪಾ. ೧-೪-೫೧ । ಇತಿ । ನೀವಹ್ಯೋರ್ಹರತೇಶ್ಚ । ಮ. ೧-೪-೫೧ । ಇತಿ ದ್ವಿಕರ್ಮಕೇಷು ವಹತೇಃ ಪರಿಗಣಿತತ್ವಾತ್ । ಅಧ್ವರಾನಿತ್ಯತ್ರ ನಕಾರಸ್ಯ ಸಂಹಿತಾಯಾಂ ದೀರ್ಘಾದಟೀತಿ ರುತ್ವಂ । ಆತೋಽಟಿ ನಿತ್ಯಮಿತಿ ಪೂರ್ವಸ್ಯಾಕಾರಸ್ಯ ಸಾನುನಾಸಿಕತಾ । ಗೃಣಂತಿ । ಗೃ ಶಬ್ದೇ । ಕ್ರ್ಯಾದಿಭ್ಯಃ ಶ್ನಾ । ಸ್ವಾದೀನಾಂ ಹ್ರಸ್ವ ಇತಿ ಹ್ರಸ್ವತ್ವಂ । ಶ್ನಾಭ್ಯಸ್ತಯೋರಾತ ಇತ್ಯಾಕಾರಲೋಪಃ । ಪ್ರತ್ಯಯಸ್ವರಃ । ಯದ್ವೃತ್ತಯೋಗಾದನಿಘಾತಃ ॥

॥ ಪ್ರತಿಪದಾರ್ಥ ॥

ಉಷಃ—ಎಲೈ ಉಷೋದೇವಿಯೇ, । **ಚಿತ್ರಃ**—ಉತ್ತಮವಾದ । **ಯಃ**—ಯಾವ ಅನ್ನವು । **ಮಾನಷೇ ಜನೇ**—ಮಾನವನಾದ ಯಜ್ಞಕರ್ತನಲ್ಲಿ ಸಂಪಾದಿತವಾಗಿದೆಯೋ । **(ತಂ) ವಾಜಂ ಹಿ**—ಶ್ರುತಿಪ್ರಸಿದ್ಧವಾಗಿ ಹವಿಸ್ಸಿನ ರೂಪದಲ್ಲಿರುವ ಆ ಅನ್ನವನ್ನು । **ವಂಸ್ವ**—ಸ್ವೀಕರಿಸು. । **ತೇನ**—ಆ ಕಾರಣದಿಂದ । **ಯೇ**—ಯಾವ ಯಜಮಾನರು । **ವಹ್ನಯಃ**—ಯಜ್ಞನಿರ್ವಾಹಕರಾಗಿ । **ತ್ವಾಂ**—ನಿನ್ನನ್ನು । **ಗೃಣಂತಿ**—ಸ್ತುತಿಸುತ್ತಾರೋ । **(ತಾರ್) ಸುಕೃತಃ**—ಪವಿತ್ರಕರ್ಮಗಳನ್ನುಮಾಡುವ ಆ ಯಜ್ಞಕರ್ತರನ್ನು । **ಅಧ್ವರಾನ್**—ಹಿಂಸಾರಹಿತವಾದ ಯಜ್ಞಗಳ ಬಳಿಗೆ । **ಉಪಾ ವಹ**—ಕರೆತಂದು ಸೇರಿಸು.

॥ ಭಾವಾರ್ಥ ॥

ಎಲೈ ಉಷೋದೇವಿಯೇ, ಮಾನವನಾದ ಯಜ್ಞಕರ್ತನಲ್ಲಿ ಶ್ರುತಿಪ್ರಸಿದ್ಧವಾದ ಹವಿಸ್ಸಿನ ರೂಪದಲ್ಲಿರುವ ಅನ್ನವನ್ನು ಸ್ವೀಕರಿಸು. ಈ ರೀತಿ ಅವನ ಯಜ್ಞವನ್ನು ಸಾಂಗವಾಗಿ ನೆರವೇರಿಸಿ ಪುನಃ ಆ ಯಜ್ಞಸಂಪಾದನಾರ್ಥವಾಗಿ, ಯಜ್ಞನಿರ್ವಾಹಕರೂ, ನಿನ್ನನ್ನು ಸ್ತುತಿಸುವವರೂ ಮತ್ತು ಪವಿತ್ರಕರ್ಮಗಳನ್ನು ಮಾಡುವವರೂ ಆದ ಯಜಮಾನರನ್ನು ಹಿಂಸಾರಹಿತವಾದ ಯಜ್ಞಗಳ ಸ್ಥಾನಕ್ಕೆ ಕರೆತಂದುಸೇರಿಸು.

English Translation.

Ushas, accept true Sacrificial food of best quality which exists among men and thereby bring to true Ceremony (Sacrifice) the pious, who offering oblations praise you

॥ ವಿಶೇಷ ವಿಷಯಗಳು ॥

ವಂಸ್ವ— ವನು ಯಾಚನೇ । ಅಶ್ರ ಯಾಚನವಾಚಿನಾ ಧಾತುನಾ ತದುತ್ತರಭಾವೀ ಸ್ವೀಕಾರೋ ಲಕ್ಷ್ಯತೇ । ವಂಸ್ವ ಎಂಬ ಕ್ರಿಯಾಪದವು, ವನು ಯಾಚನೇ-ಯಾಚಿಸು ಎಂಬ ಧಾತುವಿನಿಂದ ಉಂಟಾಗಿದೆ ಈ ಧಾತುವಿಗೆ ಯಾಚನೆಮಾಡು ಎಂಬ ಅರ್ಥವಿದ್ದರೂ, ಆ ಯಾಚನೆಗೆ ಉತ್ತರರೂಪವಾಗಿ ಕೊಡುವ ವಸ್ತು ವನ್ನು ಸ್ವೀಕಾರಮಾಡು ಎಂಬ ಅರ್ಥವೇ ಇಲ್ಲಿ ಪರಿಗ್ರಾಹ್ಯವೆಂದು ಭಾಷ್ಯಕಾರರು ಹೇಳಿರುವರು-

ಚಿತ್ರಃ— ಚಾಯನೀಯಃ, ಶ್ರೇಷ್ಠಃ, ಪೂಜನೀಯಃ—ಉತ್ತಮವಾದ

ಸುಕೃತಃ—ಸುಷ್ಠು ಕೃತವತಃ । ಯಜ್ಞಾನುಷ್ಠಾನವನ್ನು ಚೆನ್ನಾಗಿ ಮಾಡಿರುವ (ಯಜಮಾನರು)

ವಹ್ನಯಃ—ವೋಢಾರಃ ಯಜ್ಞಾನಿರ್ವಾಹಕಾಃ । ಯಜ್ಞಗಳನ್ನು ನಿರ್ವಹಿಸುವ

ಈ ಋಕ್ಕಿನ ಉತ್ತರಾರ್ಧಕ್ಕೆ ಭಾಷ್ಯಕಾರರು ಅರ್ಥಮಾಡಿರುವುದಕ್ಕಿಂತ—**ದೇವೇಷು ಜನೇಷು ಯದ್ಧನಮುತ್ತಮಮಿತಿ ಈಥ ತೇ ತತ್ತು ಅಸ್ಮಾದ್ಭಗ್ವಿರ್ತೈರಲಭ್ಯಮೇವ । ಯತ್ಪುನರ್ಮನುಷ್ಯ-ಜನೇಷೂತ್ತಮಮಿತಿ ಗಣ್ಯತೇ ತತ್ತ್ವಾಂ ಸ್ತುವದ್ಭ್ಯಃ ಅಸ್ಮಾದೈಗ್ಭ್ಯಸ್ತ್ವಂ ದೇಹಿ । ತದ್ದದಾಸಿ ಚೇತ್ತೇನ ಸಮೃದ್ಧಾ ವಯಂ ಯಾನ್ ಯಜ್ಞಾನ್ ಕರಿಷ್ಯಾಮಸ್ತಾನ್ನೃತಿ ಸುಕರ್ಮಕಾರಿಣೋ ದೇವಾ ಹವಿರ್ಗ್ರಹ-ಣಾರ್ಥಮವಶ್ಯಮೇವ ಆಗಮಿಷ್ಯಂತೀತಿ** ॥ ಎಲೈ ಉಷೋ ದೇವತೆಯೇ, ನಿನ್ನನ್ನು ಯಾವ ಯಜ್ಞಾನು ಷ್ಠಾನಮಾಡುವ ಜನರು ಸ್ತುತಿಸುವರೋ ಅವರು ಮಾಡುತ್ತಿರುವ ಯಜ್ಞಗಳಿಗೆ ದೇವತೆಗಳನ್ನು (ಸುಕೃತ) ಕರೆದುಕೊಂಡುಬಾ ಎಂಬ ಅರ್ಥವು ಸರಿಯಾಗಿ ಹೊಂದುವುದೆಂದು ಹೇಳಬಹುದು.

॥ ವ್ಯಾಕರಣಪ್ರಕ್ರಿಯಾ ॥

ವಾಜಂ—ವಜ ವ್ರಜ ಗತೌ ಧಾತು. ಕರ್ಮಾರ್ಥದಲ್ಲಿ ಘಞ್ ಪ್ರತ್ಯಯ ಬರುತ್ತದೆ. ವಜ್+ಅ ಎಂದಿರುವಾಗ ಞಿತ್ತಾದುದರಿಂದ **ಅತಉಪಧಾಯಾಃ** ಸೂತ್ರದಿಂದ ಧಾತುವಿಗೆ ವೃದ್ಧಿ ಬರುತ್ತದೆ. **ಚಜೋಃ ಕುಘಿಣ್ಯತೋಃ** ಎಂಬ ಸೂತ್ರದಿಂದ ಕುತ್ವವು ಪ್ರಾಪ್ತವಾದರೆ **ಆಜಿವ್ರಜ್ಯೋಶ್ಚ** (ಪಾ. ಸೂ. ೭-೩-೬೦) ಎಂಬುದರಿಂದ ಕುತ್ವನಿಷೇಧಬರುತ್ತದೆ. ಅಲ್ಲಿ ವಜ ಧಾತುವನ್ನು ಸೇರಿಸದಿದ್ದರೂ ಚಕಾರವನ್ನು ಪಾಠಮಾಡಿರು ವುದರಿಂದ ಅದು ಅನುಕ್ತಸಮುಚ್ಚಾಯಕವಾಗುತ್ತದೆ. ಅನುಕ್ತವಾದ ಧಾತುವೆಂದರೆ ಈ ವಜ ಧಾತುವೇ. ಆದುದರಿಂದ ವಾಜಂ ವಾಜ್ಯಂ ಎಂದು ಘಿತ್ತು ಣಿತ್ತು ಆದ ಪ್ರತ್ಯಯಪರಲ್ಲಿರುವಾಗ ಕುತ್ವವು ಬರುವುದಿಲ್ಲ. ಈ ವಿಷಯವನ್ನು ವೃತ್ತಿಯಲ್ಲಿ ಹೇಳಿರುತ್ತಾರೆ. ವಾಜ ಶಬ್ದವು ಘಞಂತವಾದುದರಿಂದ **ಕರ್ಷಾತ್ವತೋ ಘ-ಞೋಂತ ಉದಾತ್ತಃ** (ಪಾ. ಸೂ. ೬-೧-೧೫೯) ಸೂತ್ರದಿಂದ ಅಂತೋದಾತ್ತವು ಪ್ರಾಪ್ತವಾದರೆ **ವೃಷಾ-**

ದೀನಾಂ ಚ (ಪಾ. ಸೂ- ೬-೧-೨೦೩) ವೃಷಾದಿಗಣಪಠಿತವಾದವುಗಳಿಗೆ ಆದ್ಯುದಾತ್ತಸ್ವರ ಬರುತ್ತದೆ. ಎಂಬುದರಿಂದ ವೃಷಾದಿಯಲ್ಲಿ ವಾಜ ಶಬ್ದವನ್ನು ಪಾಠಮಾಡಿರುವುದರಿಂದ ಆದ್ಯುದಾತ್ತವಾಗುತ್ತದೆ. ವಾಜಂ ಎಂಬುದು ಆದ್ಯುದಾತ್ತವಾದ ಪದ.

ವಂಸ್ವ—ವನು ಯಾಚನೇ ಧಾತು. ತನಾದಿ. ಇಲ್ಲಿ ಯಾಚನೆ ಮಾತ್ರ ಅರ್ಥವಲ್ಲ. ಯಾಚನೆ ಯಾದನಂತರ ಮುಂದಿನ ವ್ಯಾಪಾರವು ಅಂದರೆ ಸ್ವೀಕಾರವು ಅರ್ಥ. ಲಕ್ಷಣಾಪ್ರಯೋಗ. ತನಾದಿಗೆ ಬರುವ ವಿಕರಣವು (ಉ) ಪ್ರಾಪ್ತವಾದರೆ **ಬಹುಲಂ ಛಂದಸಿ** (ಪಾ. ಸೂ. ೨-೪-೭೩) ಎಂಬುದರಿಂದ ವಿಕರಣಕ್ಕೆ ಲುಕ್ ಬರುತ್ತದೆ. **ಧಾಸಃ ಸೆ** (ಪಾ. ಸೂ. ೩-೪-೮೦) ಸೂತ್ರದಿಂದ ಲೋಟಿನ ಮಧ್ಯಮಪುರುಷದ ಧಾಸಿಗೆ ಸೆ ಆದೇಶ ಬಂದರೆ **ಸವಾಭ್ಯಾಂ ವಾಮೌ** (ಪಾ. ಸೂ. ೩-೪-೯೧) ಸೂತ್ರದಿಂದ ಸಪರದಲ್ಲಿರುವ ಏಕಾರಕ್ಕೆ ವ ಎಂಬ ಆದೇಶ ಬರುತ್ತದೆ. ವನ್+ಸ ಎಂದಿರುವಾಗ **ನಶ್ಚ** ಸೂತ್ರದಿಂದ ಅನುಸ್ವಾರಬಂದರೆ ವಂಸ್ವ ಎಂದಾಗುತ್ತದೆ. ವನು ಧಾತುವು ಅನುದಾತ್ತೇತ್ತಾದುದರಿಂದ **ತಾಸ್ಯನುದಾತ್ತೇಡ್** (ಪಾ. ಸೂ. ೬-೧-೧೮೬) ಸೂತ್ರದಿಂದ ಲಸಾರ್ವಧಾತುಕವಾದ ಸ್ವ ಎಂಬುದು ಅನುದಾತ್ತವಾಗುತ್ತದೆ. ಆಗ ಧಾತುಸ್ವರವೇ (ಅಂತೋದಾತ್ತ) ಉಳಿಯುತ್ತದೆ. **ಹಿಚ** (ಪಾ. ಸೂ. ೮-೧-೩೪) ಹಿ ಶಬ್ದದ ಸಂಬಂಧವಿರುವಾಗ ತಿಙಂತಕ್ಕೆ ನಿಘಾತ ಬರುವುದಿಲ್ಲ ಎಂಬುದರಿಂದ **ತಿಙ್ಙತಿಙಃ** ಸೂತ್ರದಿಂದ ಸರ್ವಾನುದಾತ್ತಸ್ವರ ಬರುವುದಿಲ್ಲ.

ಸುಕೃತಃ—ಸು ಉಪಸರ್ಗ. ಡುಕೃಞ್ ಕರಣೆ ಧಾತು. ಇದಕ್ಕೆ **ಸುಕರ್ಮಪಾಪಮಂತ್ರಪುಣ್ಯೇಷು ಕೃಞಃ** (ಪಾ. ಸೂ. ೩-೨-೮೯) ಇವುಗಳು ಉಪಪದವಾಗಿರುವಾಗ ಕೃಞ್ ಧಾತುವಿಗೆ ಭೂತಾರ್ಥದಲ್ಲಿ ಕ್ವಿಪ್ ಪ್ರತ್ಯಯ ಬರುತ್ತದೆ ಎಂಬುದರಿಂದ ಭೂತಾರ್ಥದಲ್ಲಿ **ಕ್ವಿಪ್** ಪ್ರತ್ಯಯ ಬರುತ್ತದೆ. ಸುಕೃ+ಕ್ವಿಪ್ ಎಂದಿರುವಾಗ ಪ್ರತ್ಯಯಕ್ಕೆ **ಸರ್ವಲೋಪ** ಬಂದರೆ ಅದು ಪಿತ್ತಾದುದರಿಂದ **ಹ್ರಸ್ವಸ್ಯ ಪಿತಿ ಕೃತಿ ತುಕ್** ಸೂತ್ರದಿಂದ ಧಾತುವಿನ ಹ್ರಸ್ವ ಋಕಾರಕ್ಕೆ ತುಗಾಗಮ ಬರುತ್ತದೆ. ಸುಕೃತ್ ಎಂದಾಗುತ್ತದೆ. ತಕಾರಾಂತವಾದ ಈ ಶಬ್ದದ ಮೇಲೆ ದ್ವಿತೀಯಾಬಹುವಚನ ಪ್ರತ್ಯಯವನ್ನು ಸೇರಿಸಿದರೆ ಸುಕೃತಃ ಎಂದು ರೂಪವಾಗುತ್ತವೆ. **ಗತಿಕಾರಕೋಪಪದಾತ್ ಕೃತ್** ಸೂತ್ರದಿಂದ ಕೃದಂತೋತ್ತರಪದಪ್ರಕೃತಿಸ್ವರ ಬರುತ್ತದೆ. ಕಕಾರೋತ್ತರ ಋಕಾರವು ಉದಾತ್ತವಾಗುತ್ತದೆ. ಸುಕೃತಃ ಎಂಬುದು ಮಧ್ಯೋದಾತ್ತವಾದ ಶಬ್ದವಾಗುತ್ತದೆ. ಉದಾತ್ತದ ಪರದಲ್ಲಿರುವ ಅನುದಾತ್ತವು ಸ್ವರಿತವಾಗುತ್ತದೆ.

ಅಧ್ವರಾನ್—ಧ್ವರಃ ಹಿಂಸಾ ನಾಸ್ತಿ ಅಸ್ಮಿನ್ ಇತಿ ಅಧ್ವರಃ ಯಾವುದರಲ್ಲಿ ಹಿಂಸಾನೆಂಬುದು ಇಲ್ಲವೋ ಅದು ಅಧ್ವರವೆಂದು ತಾತ್ಪರ್ಯ. ಇದು ಬಹುವ್ರೀಹಿಸಮಾಸ. ಬಹುವ್ರೀಯಲ್ಲಿ ಪೂರ್ವಪದಪ್ರಕೃತಿಸ್ವರವು ಪ್ರಾಪ್ತವಾದರೆ, **ನಞ್‌ಸುಭ್ಯಾಂ** (ಪಾ. ಸೂ. ೬-೨-೧೭೨) ನಞ್, ಸು, ಪರದಲ್ಲಿರುವ ಉತ್ತರಪದವು ಬಹುವ್ರೀಹಿಯಲ್ಲಿ ಅಂತೋದಾತ್ತವಾಗುತ್ತದೆ ಎಂಬುದರಿಂದ ಇಲ್ಲಿ ಉತ್ತರಪದಾಂತೋದಾತ್ತಸ್ವರವು ಬರುತ್ತದೆ. ಅಧ್ವರಶಬ್ದವು ಅಂತೋದಾತ್ತವಾದ ಶಬ್ದವಾಗುತ್ತದೆ. ದ್ವಿತೀಯಾಬಹುವಚನದಲ್ಲಿ ಪೂರ್ವಸವರ್ಣದೀರ್ಘ ಬಂದು ನತ್ವ ಬಂದರೆ ಅಧ್ವರಾನ್ ಎಂದು ರೂಪವಾಗುತ್ತದೆ. **ಕರ್ತುರೀಪ್ಸಿತತಮಂ ಕರ್ಮ** (ಪಾ. ಸೂ. ೧-೪-೪೯) ಕರ್ತೃವ್ಯಾಪಾರದಿಂದುಂಟಾಗುವ ಫಲದ ಸಂಬಂಧವು ಎಲ್ಲಿ ಉಂಟಾಗಬೇಕೆಂದು ಉತ್ಕಟವಾದ ಇಚ್ಛೆಯಿರುವುದೋ ಆ ಇಚ್ಛಾಶ್ರಯದಲ್ಲಿ ವಿಷಯವಾದ ಕರ್ಮವೆಂಬ ಸಂಜ್ಞೆಯನ್ನು ಯೊಂದುತ್ತದೆ. ತಂಡುಲಂ ಪಚತಿ ಎಂಬಲ್ಲಿ ಪಾಕಕ್ರಿಯೆಯಿಂದುಂಟಾಗುವ ಶಿಥಿಲವಾಗುವ ಫಲವನ್ನು ಅಕ್ಕಿಯಲ್ಲಿ ಬಯಸುವುದರಿಂದ ಅದು

कर्मवागुत्तदे. हागे इल्लि अध्वरान् वह एंदु प्रयुक्तवादुदरिंद वह धातुविन व्यापार दिंदुंटागुव फलवन्नु अध्वरदल्लि विशेषवागि अन्वयिसुवुदरिंद हिंदिन सूत्रदिंद अध्वरशब्दक्के कर्मसंज्ञा बंदिदे. आदुदरिंद **कर्मणि द्वितीयाऽ** एंब सूत्रदिंद द्वितीयाविभक्ति बंदिरुत्तदे. **अकथितं च** (पा. सू. ८-४-४८) अपादानादिगळन्नु विवक्षेमाडदे इरुवाग केवल संबंधि एंदु विवक्षेमाडिदाग कर्मसंज्ञे बरुत्तदे. एल्ला धातुप्रयोगविरुवागलू हीगे कर्मसंज्ञे प्राप्तवादरे भाष्यदल्लि इष्टे धातुगळन्नु तेगेदुकोळ्ळबेकेंदु परिगणन माडिरुवरु. अल्लि **नी वहोऽर्हरतेश्च** (पा. मं. ८-४-४८) एंदु पठितवादव्रुगळ जोतेगे वह धातुवन्नू सेरिसिरुत्तारे. इल्लि पठितवाद धातुगळेल्लवू द्विकर्मकगळागुत्तवे इल्लि वह धातुविरुवुदरिंद वसुधात्वर्थदल्लि सामर्थ्यवागि कर्मवादुदु अध्वरवेंदु हिंदे हेळिरुत्तदे. अकथितं च सूत्रदिंद सुकृतः एंबुदक्कू कर्मसंज्ञेयु बरुत्तदे. सुकृतः एंबल्लिरुव कर्तृकारकवन्नु विवक्षेमाडदे संबंधमात्र विवक्षेमाडिदुदरिंद कर्मसंज्ञा बंदु द्वितीयाविभक्ति बंदिदे. अध्वरान् एंबल्लि मंत्रदल्लि **दीर्घादटि समानपादे** (पा. सू. ८-३-९) दीर्घद परदल्लिरुव नकारक्के अट् परदल्लिरुवाग समानपादददल्लि रुत्व बरुत्तदे एंबुदरिंद नकारवु दीर्घद परदल्लिरुवदरिंदलू आदक्के उप एंबल्लिरुव अञ् परदल्लिरुवुदरिंदलू रुत्व बरुत्तदे अध्वरार्+उप एंदिरुवाग रुत्वक्के यत्ववू लोपवू बरुत्तदे. **आतोऽटि नित्यं** (पा. सू. ८-३-३) अट् परदल्लिरुवाग रुविन पूर्वदल्लिरुव आकारक्के नित्यवागि अनुनासिक बरुत्तदे. इदरिंद हिंदे हेळिदंते अट् परदल्लिरुवुदरिंद रेफदमेलिरुव आकारवु अनुनासिकवागुत्तदे. इदु मंत्रदल्लि मात्र वेंदुदरिंद पदकालदल्लि इल्ल.

गृणंति---ग्रॅ शब्दे धातु. क्र्यादि. प्रथमपुरुष बहुवचन विवक्षेमाडिदाग झि प्रत्ययु बंदरे आदक्के अंतादेश बरुत्तदे **क्र्यादिभ्यः श्ना** (पा. सू. ३-१-८१) सूत्रदिंद श्ना विकरण प्रत्ययु बरुत्तदे. ग्रॅ+ना+अंति एंदिरुवाग **श्नाद्दीनां ह्रस्वः** (पा. सू. ६-४-८०) सूत्रदिंद श्नादियल्लि ई धातुवु सेरिरुवुदरिंद ह्रस्व बरुत्तदे. **श्नाभ्यस्तयोः** **रातः** (पा. सू. ६-४-११२) सूत्रदिंद आजादि झित्ताद प्रत्ययु परदल्लिरुवुदरिंद विकरणद आकारक्के लोपबरुत्तदे. ऋकारद परदल्लिरुवुदरिंद नकारक्के णत्व बंदरे गृणंति एंदु रूप वागुत्तदे. प्रत्ययस्वरवु प्रबलवादुदरिंद प्रत्ययक्के आद्युदात्तस्वरबरुत्तदे. णकारोत्तर आकारवु उदात्तवागुत्तदे. गृणंति एंबुदु मध्योदात्तवाद पदवागुत्तदे. हिंदे यो एंब यच्छब्दद संबंधविरुवुदरिंद **यो द्वे वृत्तान्नित्यं** (पा. सू. ८-१-६६) सूत्रदिंद निघात प्रतिषेध बरुत्तदे. ॥ ८८ ॥

॥ संहितापाठः ॥

विश्वान्देवाँ आ वह सोमपीतयेऽन्तरिक्षादुषस्त्वं।
सासाऽस्मासु धा गोमदश्वावदुक्थ्यं मुषो वाजं
सुवीर्यं ॥८॥

॥ पदपाठः ॥

विश्वान्। देवान्। आ। वह। सोमपीतये। अन्तरिक्षात्। उषः।
त्वं।
सा। असासु। धाः। गोमत्। अश्वावत्। उक्थ्यं। उषः।
वाजं। सुऽवीर्यं ॥८॥

सायणभाष्यं

हे उषस्त्वं सोमपीतये सोमपानायाऽन्तरिक्षादन्तरिक्षलोकाद्विश्वान्सर्वान्देवानस्मदीयं देवयजनदेशं वह। अस्मदीयेन देवयजनदेशेन सह प्रापय। हे उषः सा तादृशी त्वं गोमत् गोमन्तं बहुभिर्गोभिर्युक्तमश्वावदश्वैरुपेतमुक्थ्यं प्रशस्यं सुवीर्यं शोभनवीर्योपेतं वाजमन्नमस्मासु धाः। निधेहि। स्थापयेत्यर्थः। धाः। दधातेर्हिः छन्दसि लुङ्लङ्लिटि इति प्रार्थनायां लुङ्। गातिस्थेति सिचो लुक्। बहुलं छन्दस्यमाङ्योगेऽपीत्यडभावः। गोमत्। अश्वावत्। मन्त्रे सोमाश्वेन्द्रियेति मत्वर्थीयो दीर्घत्वं। उभयत्र सुपां सुलुगिति विभक्तेर्लुक्। उक्थ्यं। उक्थं स्तोत्रं। तत्र भवमुक्थ्यं। भवे छन्दसीति यत्। सर्वे विधयश्छन्दसि विकल्प्यन्त इति यतोऽनाव इत्याद्युदात्तत्वाभावे तित्स्वरितमिति स्वरितत्वं। उषः। आमन्त्रितादुदात्तत्वं। पादादित्वान्निघाताभावः। सुवीर्यं। शोभनं वीर्यं यस्य। वीरवीर्यो चेत्युत्तरपदादुदात्तत्वं ॥

॥ प्रतिपदार्थ ॥

उषः—ಎಲೈ ಉಷೋದೇವಿಯೇ, । **त्वं**—ನೀನು । **सोमपीतये**—ಸೋಮರಸಪಾನಕ್ಕಾಗಿ। **अन्तरिक्षात्**-ಅಂತರಿಕ್ಷಲೋಕದಿಂದ । **विश्वान् देवान्**-ಸಕಲದೇವತೆಗಳನ್ನೂ । **आ वह**—(ನಮ್ಮ ಯಜ್ಞ ಭೂಮಿಗೆ) ಕರೆದುಕೊಂಡು ಬಾ । **उषः**—ಎಲೈ ದೇವಿಯೇ, ! **सा**—ಅಂತಹ ನೀನು । **गोमत्**—(ಬಹಳ)

ಗೋವುಗಳಿಂದಕೂಡಿಯೂ । ಅಶ್ವಾವತ್—(ಬಹಳ) ಅಶ್ವಗಳಿಂದಕೂಡಿಯೂ । **ಉಕ್ಥ್ಯಂ**—ಪ್ರಶಸ್ಯವಾಗಿಯೂ । **ಸುವೀರ್ಯಂ**—ಶ್ರೇಷ್ಠವಾದ ವೀರ್ಯದಿಂದಕೂಡಿಯೂ (ಪುಷ್ಟಿಕರವಾದ) ಇರುವ। **ವಾಜಂ**—ಅನ್ನವನ್ನು। **ಅಸ್ಮಾಸು**—ನಮ್ಮಲ್ಲಿ । **ಧಾಃ**—ಸ್ಥಾಪಿಸು (ಶಾಶ್ವತವಾಗಿರಿಸು).

॥ ಭಾವಾರ್ಥ ॥

ಎಲೈ ಉಷೋದೇವಿಯೇ, ಸೋಮರಸಪಾನಕ್ಕಾಗಿ ನೀನು ಅಂತರಿಕ್ಷಲೋಕದಿಂದ ಸಕಲದೇವತೆಗಳನ್ನೂ ನಮ್ಮ ಯಜ್ಞಭೂಮಿಗೆ ಕರೆದುಕೊಂಡು ಬಾ, ಎಲೈ ದೇವಿಯೇ ನಮಗೆ ಉಪಕಾರಕಳಾದ ಅಂತಹ ನೀನು ಗೋವುಗಳಿಂದಲೂ ಅಶ್ವಗಳಿಂದಲೂ ಕೂಡಿ ಪ್ರಶಸ್ಯವಾಗಿಯೂ ಶ್ರೇಷ್ಠವಾದ ವೀರ್ಯದಿಂದೊಡಗೂಡಿಯೂ (ಪುಷ್ಟಿಕರವಾಗಿಯೂ) ಇರುವ ಅನ್ನವನ್ನು ನಮಗೆ ಶಾಶ್ವತವಾಗಿ ಕೊಡು.

English Translation.

Ushas, bring from the firmament, all the Gods to drink the Soma juice and bestow upon us excellent and invigorating food, cattle and horses.

॥ ವಿಶೇಷ ವಿಷಯಗಳು ॥

ಅಸ್ಮಾಸು ಧಾಃ—**ನಿಧೇಹಿ ಸ್ಥಾಪಯ** । ನಮ್ಮಲ್ಲಿ ಇರಿಸು ಎಂದರೆ ನಮಗೆ ದೊರಕಿಸಿಕೊಡು.

ಗೋಮತ್, ಅಶ್ವಾವತ್, ಉಕ್ಥ್ಯಂ, ಸುವೀರ್ಯಂ ಎಂಬ ಶಬ್ದಗಳು ವಾಜಂ ಎಂಬ ಶಬ್ದಕ್ಕೆ ವಿಶೇಷಣಗಳು. ಮುಖ್ಯಾಭಿಪ್ರಾಯವೇನೆಂದರೆ—ಗೋವುಗಳು, ಅಶ್ವಗಳು, ಶ್ರೇಷ್ಠವಾದ ಮತ್ತು ಪುಷ್ಟಿಕರವಾದ ಆಹಾರ ಇವುಗಳನ್ನು ಕೊಡು ಎಂದಭಿಪ್ರಾಯವು.

॥ ವ್ಯಾಕರಣಪ್ರಕ್ರಿಯಾ ॥

ಧಾಃ—ಡುಧಾಞ್ ಧಾರಣಪೋಷಣಯೋಃ ಧಾತು ಅದಾದಿ. **ಛಂದಸಿ ಲುಙ್‌ಲಙ್‌ಲಿಟಃ** (ಪಾ.ಸೂ. ೩-೪-೬) ಸೂತ್ರದಿಂದ ಪ್ರಾರ್ಥನಾರೂಪ ಅರ್ಥದಲ್ಲಿ ಲುಙ್ ಬರುತ್ತದೆ. ಮಧ್ಯಮಪುರುಷೈಕವಚನ ಸಿಪ್ ಪರದಲ್ಲಿರುವಾಗ ಸಾಮಾನ್ಯಪ್ರಾಪ್ತವಾದ ಚ್ಲಿಗೆ ಸಿಚ್ ಬಂದರೆ ಧಾ+ಸ್+ಸಿ ಎಂದಿರುವಾಗ **ಗಾತಿಸ್ಥಾಘುಪಾ** (ಪಾ.ಸೂ. ೨-೪-೭೭) ಸೂತ್ರದಿಂದ ಸಿಚಿಗೆ ಲುಕ್ ಬರುತ್ತದೆ. ಸಿಪಿನ ಇಕಾರಕ್ಕೆ **ಇತಶ್ಚ** ಸೂತ್ರದಿಂದ ಲೋಪ ಬರುತ್ತದೆ. ಆಡಾಗಮ ಧಾತುವಿಗೆ ಪ್ರಾಪ್ತವಾದರೆ **ಬಹುಲಂಛಂದಸ್ಯಮಾಙ್‌ಯೋಗೇಽಪಿ** (ಪಾ.ಸೂ. ೬-೪-೭೫) ಸೂತ್ರದಿಂದ ಮಾಙ್ ಯೋಗವಿಲ್ಲದಿದ್ದರೂ ಆಡಾಗಮ ಬರುವುದಿಲ್ಲ. ಸಿಪಿನ ಸಕಾರಕ್ಕೆ ರುತ್ವವಿಸರ್ಗಗಳು ಬಂದರೆ ಧಾಃ ಎಂದು ರೂಪವಾಗುತ್ತದೆ.

ಗೋಮತ್ । ಅಶ್ವಾವತ್—**ತದಸ್ಯಾಸ್ತ್ಯಸ್ಮಿನ್ನಿತಿ ಮತುಪ್** ಎಂಬ ಸೂತ್ರದಿಂದ ಎರಡು ಶಬ್ದಗಳಿಗೂ ಮತುಪ್ ಪ್ರತ್ಯಯ ಬರುತ್ತದೆ ಅಶ್ವಾವತ್ ಎಂಬಲ್ಲಿ ಅಕಾರವು ಪರದಲ್ಲಿರುವುದರಿಂದ **ಮಾಧುಪಧಾಯಾಃ**—ಸೂತ್ರದಿಂದ ಪುಕಾರಕ್ಕೆ ವಕಾರ ಬರುತ್ತದೆ. ಮತ್ತು **ಮಂತ್ರೇ ಸೋಮಾಶ್ವೇಂದ್ರಿಯ** (ಪಾ.ಸೂ. ೬-೩-೧೩೧) ಸೂತ್ರದಿಂದ ಮತುಪ್ ಪರದಲ್ಲಿರುವುದರಿಂದ ಅಶ್ವಶಬ್ದಕ್ಕೆ ದೀರ್ಘವೂ ಬರುತ್ತದೆ.

ಎರಡು ಶಬ್ದಗಳಲ್ಲಿಯೂ ದ್ವಿತೀಯಾ ಏಕವಚನದ ಅಮ್ ವಿಭಕ್ತಿಗೆ **ಸುಪಾಂ ಸುಲುಕ್** ಸೂತ್ರದಿಂದ ಲುಕ್ ಬರುತ್ತದೆ. ವಿಭಕ್ತಿ ಲುಕ್ಕಾದುದರಿಂದ ಗೋಮತ್, ಅಶ್ವಾವತ್ ಎಂದು ರೂಪ ಸಿದ್ಧಿಯಾಗುತ್ತದೆ.

ಉಕ್ಥ್ಯಂ—ಉಕ್ಥಂ ಸ್ತೋತ್ರಂ ಸ್ತುತಿಸುವ ಮಂತ್ರವೆಂದರ್ಥ. ಉಕ್ಥೇ ಭವಂ ಉಕ್ಥ್ಯಮ್. **ಭವೇ ಛಂದಸಿ** (ಪಾ.ಸೂ. ೪-೪-೧೧೦) ಸಪ್ತಮ್ಯಂತದ ಮೇಲೆ ಭವಾರ್ಥದಲ್ಲಿ ಯತ್ ಪ್ರತ್ಯಯ ಬರುತ್ತದೆ ಎಂಬುದರಿಂದ ಇಲ್ಲಿ ಯತ್ ಪ್ರತ್ಯಯ ಬರುತ್ತದೆ. **ಯೆಸ್ಯೇತಿ ಚ** ಸೂತ್ರದಿಂದ ಪ್ರತ್ಯಯಪರದಲ್ಲಿರುವಾಗ ಅಕಾರ **ಲೋಪವಾದಶಿ** ಉಕ್ಥ್ಯಂ ಎಂದು ರೂಪವಾಗುತ್ತದೆ. ಇಲ್ಲಿ **ಯತೋಽನಾವಃ** (ಪಾ.ಸೂ. ೬-೧-೨೧೩) ನೌ ಶಬ್ದವನ್ನು ಬಿಟ್ಟು ಎರಡು ಅಚ್ಚುಗಳುಳ್ಳ ಯತ್ ಪ್ರತ್ಯಯಾಂತವಾದುದಕ್ಕೆ ಆದ್ಯುದಾತ್ತಸ್ವರವು ಬರುತ್ತದೆ ಎಂಬುದರಿಂದ ಆದ್ಯುದಾತ್ತಸ್ವರ ಪ್ರಾಪ್ತವಾದರೆ **ಸರ್ವೇ ವಿಧಯಶ್ಛಂದಸಿ ವಿಕಲ್ಪ್ಯಂತೆ** । ಎಂಬುದರಿಂದ ಆದ್ಯುದಾತ್ತಸ್ವರವು ಬರುವುದಿಲ್ಲ. **ಚಿಗ ತಿತ್ಸ್ವರಿತಮ್** (ಪಾ ಸೂ ೬-೧-೧೮೫) ಸೂತ್ರದಿಂದ ಯತ್ ಪ್ರತ್ಯಯ ತಿತ್ತಾದುದರಿಂದ ಸ್ವರಿತಸ್ವರವೇ ಬರುತ್ತದೆ. ಉಕ್ಥ್ಯಂ ಎಂಬುದು ಸ್ವರಿತಾಂತವಾದ ಪದವಾಗುತ್ತದೆ.

ಉಷಃ—ಇಲ್ಲಿ ಪಾದದ ಆದಿಯಲ್ಲಿರುವುದರಿಂದ ಎಂಟನೇ ಅಧ್ಯಾಯದ ಆಮಂತ್ರಿತ ಸರ್ವಾನುದಾತ್ತ ಸ್ವರವು ಬರುವುದಿಲ್ಲ. ಆದುದರಿಂದ **ಆಮಂತ್ರಿತಸ್ಯ ಚ** (ಪಾ.ಸೂ. ೬-೧-೧೯೮) ಸೂತ್ರದಿಂದ ಆದ್ಯುದಾತ್ತ ಸ್ವರ ಬರುತ್ತದೆ.

ಸುವೀರ್ಯಂ—ಶೋಭನಂ ವೀರ್ಯಂ ಯಸ್ಯ ತತ್ ಸುವೀರ್ಯಂ. ಅತಿಶಯವಾದ ಶಕ್ತಿ ಉಳ್ಳದ್ದು ಎಂದರ್ಥ. ಇದು ಬಹುವ್ರೀಹಿ ಸಮಾಸ **ವೀರವೀರ್ಯೌ ಚ** (ಪಾ.ಸೂ. ೬-೩-೧೩೦) ಸುವಿನ ಪರದಲ್ಲಿರುವ ಶಬ್ದಕ್ಕೆ ಬಹುವ್ರೀಹಿಯಲ್ಲಿ ಆದ್ಯುದಾತ್ತ ಸ್ವರ ಬರುತ್ತದೆ. ಇಲ್ಲಿ ಸುವಿನ ಪರದಲ್ಲಿ ವೀರ್ಯ ಶಬ್ದವಿರುವುದರಿಂದ ವಕಾರೋತ್ತರ ಈಕಾರವು ಉದಾತ್ತವಾಗುತ್ತದೆ. ಸುವೀರ್ಯಂ ಎಂಬುದು ಮಧ್ಯೋದಾತ್ತವಾದ ಶಬ್ದವಾಗುತ್ತದೆ.

॥ ಸಂಹಿತಾಪಾಠಃ ॥

ಯಸ್ಯಾ ರುಶಂತೋ ಅರ್ಚಯಃ ಪ್ರತಿ ಭದ್ರಾ ಅದೃಕ್ಷತ ।
ಸಾ ನೋ ರಯಿಂ ವಿಶ್ವವಾರಂ ಸುಪೇಶಸಮುಷಾ ದದಾತು
ಸುಗ್ಮ್ಯಂ ॥೧೩॥

॥ ಪದಪಾಠಃ ॥

ಯೆಸ್ಯಾಃ । ರುಶಂತಃ । ಅರ್ಚಯಃ । ಪ್ರತಿ । ಭದ್ರಾಃ । ಅದೃಕ್ಷತ ।
ಸಾ । ನಃ । ರಯಿಂ । ವಿಶ್ವವಾರಂ । ಸುಪೇಶಸಂ । ಉಷಾಃ । ದದಾತು ।
ಸುಗ್ಮ್ಯಂ ॥೧೩॥

ಸಾಯಣಭಾಷ್ಯಂ

ಯಸ್ಯಾ ಉಷಸೋಽರ್ಚಯಃ ಪ್ರಕಾಶಾ ರುಶಂತಃ ಶತ್ರೂನ್ಹಿಂಸಂತೋ ಭದ್ರಾಃ ಕಲ್ಯಾಣಾಃ ಪ್ರತ್ಯದೃಕ್ಷತ ಪ್ರತಿದೃಶ್ಯಂತೇ ಸಾ ತಥಾಭೂತೋಷಾ ನೋಽಸ್ಮಭ್ಯಂ ರಯಿಂ ದದಾತು । ಕೀದೃಶಂ ರಯಿಂ । ವಿಶ್ವವಾರಂ ವಿಶ್ವಸ್ಯ ವಾರಕಂ । ಯದ್ವಾ । ವಿಶ್ವೈರ್ವರಣೀಯಂ । ಸುಪೇಶಸಂ ಪೇಶ ಇತಿ ರೂಪನಾಮ । ಶೋಭನರೂಪೋಪೇತಂ ಸುಗ್ಮ್ಯಂ ಸುಷ್ಠು ಗಂತವ್ಯಂ । ಯದ್ವಾ । ಸುಗ್ಮ್ಯಮಿತಿ ಸುಖನಾಮ । ತದ್ಧೇತುತ್ವಾತ್ತಾಚ್ಛಬ್ದ್ಯಂ ॥ ರುಶಂತಃ । ರುಶ ರಿಶ ಹಿಂಸಾಯಾಂ । ಶತರಿ ತುದಾದಿತ್ವಾಚ್ಛಃ ಅದುಪದೇಶಾಲ್ಲಸಾರ್ವಧಾತುಕಾನುದಾತ್ತತ್ವೇ ಸತಿ ಶಿಷ್ಟತ್ವಾದ್ವಿಕರಣಸ್ಸರೇ ಪ್ರಾಪ್ತೇ ವ್ಯತ್ಯಯೇನಾದ್ಯುದಾತ್ತತ್ವಂ । ಅದೃಕ್ಷತ । ದೃಶೇಃ ಕರ್ಮಣಿ ಲುಜಿ ಝಸ್ಯಾದಾದೇಶಃ ಚ್ಲೇಃ ಸಿಚ್ । ನ ದೃಶಃ । ಪಾ. ೩-೧-೪೭ । ಇತಿ ಕ್ಸಪ್ರತಿಷೇಧಃ । ಏಕಾಚ ಇತೀಟ್ಪ್ರತಿಷೇಧಃ । ಲಿಚ್ಸಿಚಾವಾತ್ಮನೇಪದೇಷು । ಪಾ ೧-೨-೧೧ । ಇತಿ ಸಿಚಃ ಕಿತ್ತ್ವಾಲ್ಲಘೂಪಧಗುಣಾಭಾವಃ । ಸೃಜಿದೃಶೋರ್ಝಲ್ಯಮಕಿತಿ । ಪಾ ೬-೧-೫೮ । ಇತ್ಯಮಾಗಮಾಭಾವಶ್ಚ ಕಿತ್ತ್ವಾದೇವ । ಷತ್ವಕತ್ವಷತ್ವಾನಿ । ಅಡಾಗಮ ಉದಾತ್ತಃ । ಯದ್ವೃತ್ತ್ಯೋಗಾದನಿಘಾತಃ । ವಿಶ್ವವಾರಂ । ವಿಶ್ವಂ ವೃಣೋತೀತಿ ವಿಶ್ವವಾರಃ । ವೃಞ್ ವರಣೇ ಕರ್ಮಣ್ಯಣ್ । ಯದ್ವಾ । ವಿಶ್ವೈರ್ವ್ರಿಯತ ಇತಿ ವಿಶ್ವವಾರಃ । ಕರ್ಮಣಿ ಘಞ್ । ಮರುದ್ವೃಧಾದಿತ್ವಾತ್ಪೂರ್ವಪದಾಂತೋದಾತ್ತತ್ವಂ । ಸುಗ್ಮ್ಯಂ ಸುಷ್ಠು ಗಂತವ್ಯಃ ಸುಗ್ಮಃ । ಗಮೇರ್ಘಞರ್ಥೇ ಕವಿಧಾನಮಿತಿ ಕಪ್ರತ್ಯಯಃ । ಗಮಹನೇತ್ಯಾದಿನೋಪಧಾಲೋಪಃ । ತತ್ರ ಭವಂ ಸುಗ್ಮ್ಯಂ । ಭವೇ ಛಂದಸೀತಿ ಯತ್ । ಯತೋಽನಾವ ಇತ್ಯಾದ್ಯುದಾತ್ತತ್ವಂ ॥

॥ ಪ್ರತಿಪದಾರ್ಥ ॥

ಯಸ್ಯಾಃ—ಯಾವ ಉಷೋದೇವತೆಯ । **ಅರ್ಚಯಃ**—ಕಿರಣಗಳು । **ರುಶಂತಃ**—ಶತ್ರುಗಳನ್ನು ಹಿಂಸಿಸುತ್ತ । **ಭದ್ರಾಃ**—ಮಂಗಳರೂಪವುಳ್ಳವುಗಳಾಗಿ । **ಪ್ರತಿ ಅದೃಕ್ಷತ**—ಸುತ್ತಲೂ ಕಾಣಿಸಿಕೊಳ್ಳುವುವೋ । **ಸಾ ಉಷಾಃ**—ಅಂತಹ ಉಷಸ್ಸು । **ನಃ**—ನಮಗೆ । **ವಿಶ್ವವಾರಂ**—ಸರ್ವರಿಂದಲೂ ಹಾರೈಸಲ್ಪಡುವುದೂ । **ಸುಪೇಶಸಂ**—ರಮಣೀಯವಾದ ರೂಪವುಳ್ಳದ್ದೂ । **ಸುಗ್ಮ್ಯಂ**—ಸುಲಭವಾಗಿ ಹೊಂದತಕ್ಕದ್ದೂ ಆದ । **ರಯಿಂ**—ಐಶ್ವರ್ಯವನ್ನು । **ದದಾತು**—ಕೊಡಲಿ.

॥ ಭಾವಾರ್ಥ ॥

ಉಷೋದೇವತೆಯ ಕಿರಣಗಳು ಉದಯವಾದೊಡನೆಯೇ ಶತ್ರುಗಳನ್ನು ಹಿಂಸಿಸುತ್ತ ನಮ್ಮ ಕಣ್ಣಿಗೆ ಮಂಗಳರೂಪವುಳ್ಳವುಗಳಾಗಿ ಸುತ್ತಲೂ ಬೆಳಗುವುವು. ಅಂತಹ ಪ್ರಭೆಯುಳ್ಳ ಉಷೋದೇವಿಯು ನಮಗೆ ಸರ್ವರಿಗೂ ಪ್ರಿಯವಾದದ್ದೂ, ಸರ್ವರಿಗೂ ಆಕರ್ಷಕವಾದದ್ದೂ ಮತ್ತು ಸುಲಭವಾಗಿ ಹೊಂದತಕ್ಕದ್ದೂ ಆದ ಐಶ್ವರ್ಯವನ್ನು ಕೊಡಲಿ.

English Translation.

May that Ushas whose bright and refreshing rays are visible all round, grant us agreeable and easily attainable riches that all may envy.

॥ ವಿಶೇಷ ವಿಷಯಗಳು ॥

ರುಶಂತಃ—ಶತ್ರೂನ್ ಹಿಂಸಂತಃ ಭದ್ರಾಃ ಕಲ್ಯಾಣಾಃ। ರುಶ ರಿಶ ಹಿಂಸಾಯಾಂ। ಶತ್ರುಗಳನ್ನು ಹಿಂಸಿಸುವ ಅಥವಾ ಮಂಗಳಕರವಾದ, (dazzling to the eyes, auspicious, refreshing &c.

ಅರ್ಚಯಃ—ಜಮತ್, ಕೆಲ್ಪಲೀಕಿನಂ ಮೊದಲಾದ ಹನೊಂದು ಜ್ವಲನ್ನಾಮಗಳ ಮಧ್ಯದಲ್ಲಿ ಅರ್ಚಿಃ ಎಂಬ ಶಬ್ದವು ಪಠಿತವಾಗಿರುವುದರಿಂದ (ನಿ. ೨-೨೪) ಅರ್ಚಯಃ ಎಂದರೆ ಪ್ರಕಾಶಮಾನವಾದ ಕಿರಣಗಳು.

ವಿಶ್ವವಾರಂ—ವಿಶ್ವೈರ್ವರಣೀಯಂ। ಎಲ್ಲರಿಂದಲೂ ಅಪೇಕ್ಷಿಸಲ್ಪಡುವ, ಎಲ್ಲರಿಗೂ ಬೇಕಾದ, (desirable by all). ಈ ಶಬ್ದವನ್ನು ಅನೇಕ ಋಷಿಗಳು ಅನೇಕ ಸಂದರ್ಭಗಳಲ್ಲಿ ಉಪಯೋಗಿಸಿರುವುದರಿಂದ ಈ ಶಬ್ದವು ವಿಶೇಷ ಬಳಕೆಯಲ್ಲಿತ್ತೆಂದು ತೋರುವುದು. ನಾವು ಒಂದೆರಡು ಉದಾಹರಣೆಗಳನ್ನು ಕೊಡುವೆವು.—

ಅಸ್ಮೇ ರಯಿಂ ವಿಶ್ವವಾರಂ ಸಮಿನ್ವಾಸ್ಮೇ ವಿಶ್ವಾನಿ ದ್ರವಿಣಾನಿ ಧೇಹಿ ॥
(ಋ. ಸಂ. ೫-೪-೭)

ಆವಾರ್ಗ್ರಥಂ ವಿಶ್ವವಾರಂ ತ ಉಗ್ರೇಂದ್ರ ಯುಕ್ತಾಸೋ ಹರಯೋ ವಹಂತು ॥
(ಋ. ಸಂ, ೬-೩೭-೧)

ಪ್ರ ವಾಯುಮಚ್ಛಾ ಬೃಹತೀ ಮನೀಷಾ ಬೃಹದ್ರಯಿಂ ವಿಶ್ವವಾರಂ ರಥಪ್ರಾಂ ॥
(ಋ. ಸಂ. ೬-೪೯-೪)

ದ್ಯಾವಾ ಯಂ ಪೃಥಿವೀ ವಾವೃಧಾತೇ ಆ ಯಂ ಹೋತಾ ಯಜತಿ ವಿಶ್ವವಾರಂ ॥
(ಋ. ಸಂ. ೭-೭-೫)

ಆದಿತ್ಯೇಭಿರದಿತಿಂ ವಿಶ್ವಜನ್ಯಾಂ ಬೃಹಸ್ಪತಿಮೃಕ್ವಭಿರ್ವಿಶ್ವವಾರಂ ॥
(ಋ. ಸಂ. ೭-೧೦-೪)

ಆಸ್ಮೇ ಇಂದ್ರಾವರುಣಾ ವಿಶ್ವವಾರಂ ರಯಿಂ ಧತ್ತಂ ವಸುಮಂತಂ ಪುರುಕ್ಷುಂ ॥
(ಋ. ಸಂ. ೭-೮೪-೪)

ರಯಿಂ ದೇಹಿ ವಿಶ್ವವಾರಂ ॥ (ಋ. ಸಂ. ೮-೭೧-೩)

ತ್ವಾಮು ಜಾತವೇದಸಂ ವಿಶ್ವವಾರಂ ಗೃಣೇ ಧಿಯಾ ॥
(ಋ. ಸಂ. ೧೦-೧೫೦-೩)

ಇತ್ಯಾದಿ—

ಸುಪೇಶಸಂ—ಪೇಶ ಇತಿ ರೂಪನಾಮ। ಶೋಭನರೂಪೋಪೇತಂ ॥ ಒಳ್ಳೆಯ ರೂಪವುಳ್ಳ

ಸುಗ್ಮ್ಯಂ—ಸುಷ್ಠು ಗಂತವ್ಯಂ। ಯದ್ವಾ ಸುಗ್ಮ್ಯಮಿತಿ ಸುಖನಾಮ। ಶಂಬಾತಾ ಶತರಾ ಮೊದಲಾದ ಇಪ್ಪತ್ತು ಸುಖನಾಮಗಳ ಮಧ್ಯದಲ್ಲಿ ಸುಗ್ಮ್ಯಂ ಎಂಬ ಶಬ್ದವು ಪಠಿತವಾಗಿರುವುದರಿಂದ (ನಿ. ೩-೧೩) ಸುಗ್ಮ್ಯಂ ಎಂದರೆ ಸುಖವೆಂದರ್ಥವು. ಉಷೋದೇವತೆಯು ನನಗೆ ಎಲ್ಲರೂ ಅಪೇಕ್ಷಿಸುವ ಧನವನ್ನೂ ಸುಖವನ್ನೂ ಕೊಡಲೆಂದಭಿಪ್ರಾಯವು.

॥ ವ್ಯಾಕರಣಪ್ರಕ್ರಿಯಾ ॥

ರುಶಂತಃ—ರುಶ ರಿಶ **ಹಿಂಸಾಯಾಂ** ಧಾತು. ತುದಾದಿ. ಲಟ್‌ಸ್ಥಾನದಲ್ಲಿ ಶತೃಪ್ರತ್ಯಯವಿಟ್ಟಾಗ ರುಶ್+ಅತ್ ಎಂದಿರುವಾಗ ತುದಾದಿಯ ಶವಿಕರಣಪ್ರತ್ಯಯ ಬರುತ್ತದೆ. ಶ ಪ್ರತ್ಯಯದ ಆಕಾರಕ್ಕೂ ಶತೃವಿನ ಅಕಾರಕ್ಕೂ **ಅತೋ ಗುಣೇ** ಎಂಬುದರಿಂದ ಪರರೂಪ ಬರುತ್ತದೆ. ರುಶತ್ ಎಂದು ತಕಾರಾಂತವಾದ ಶಬ್ದವಾಗುತ್ತದೆ. ಶತೃಪ್ರತ್ಯಯದಲ್ಲಿ ಉಗಿತ್ತಾದುದರಿಂದ ಸರ್ವನಾಮಸ್ಥಾನಸಂಜ್ಞೆಯುಳ್ಳ ಪ್ರಥಮಾ **ಜಸ್** ಪ್ರತ್ಯಯಪರದಲ್ಲಿರುವಾಗ **ಉಗಿದಚಾಂ**—ಎಂಬ ಸೂತ್ರದಿಂದ ನುಮಾಗಮ ಬರುತ್ತದೆ. ನುಮಿಗೆ ಅನುಸ್ವಾರ ಪರಸವರ್ಣಗಳು ಬಂದು ಸಕಾರಕ್ಕೆ ರುತ್ವವಿಸರ್ಗಗಳು ಬಂದರೆ ರುಶನ್ತಃ ಎಂದು ರೂಪವಾಗುತ್ತದೆ. ಇಲ್ಲಿ ಶತೃ ಲಸಾರ್ವಧಾತುಕವಾದುದರಿಂದ **ತಾಸ್ಯನುದಾತ್ತೇತ್**—ಸೂತ್ರದಿಂದ ಅನುದಾತ್ತವಾಗುತ್ತದೆ. ಆಗ ವಿಕರಣದ ಉದಾತ್ತಸ್ವರವೇ ಸತಿಶಿಷ್ಟವಾದುದರಿಂದ ಪ್ರಧಾನವಾಗುತ್ತದೆ. ಅದರೆ ಇಲ್ಲಿ ವ್ಯತ್ಯಯೋ ಬಹುಲಂ (ಪಾ.ಸೂ. ೩-೧-೮೫) ಸೂತ್ರದಿಂದ ಧಾತುವಿನ ಸ್ವರವೇ ಪ್ರಧಾನವಾಗುತ್ತದೆ. ಆದ್ಯುದಾತ್ತವಾದುದರಿಂದ **ರುಶಂತಃ** ಎಂಬಲ್ಲಿ ರೇಫದ ಮೇಲಿರುವ ಉಕಾರವು ಉದಾತ್ತವಾಗುತ್ತದೆ. ರುಶಂತಃ ಎಂಬುದು ಆದ್ಯುದಾತ್ತವಾದ ಪದ.

ಅದೃಕ್ಷತ—ದೃಶಿರ್ ಪ್ರೇಕ್ಷಣೇ ಧಾತು. ಭ್ವಾದಿ. ಕರ್ಮಣಿ ಲುಙ್ ಪ್ರಥಮಪುರುಷ ಬಹುವಚನ ವಿವಕ್ಷಾಮಾಡಿದಾಗ ದೃಶ್+ಝಿ ಎಂದಿರುತ್ತದೆ. **ಆತ್ಮನೇಪದೇಷ್ವನತಃ** (ಪಾ.ಸೂ. ೭-೧-೫) ಸೂತ್ರದಿಂದ ಅ ನಕಾರದ ಪರದಲ್ಲಿರುವುದರಿಂದ ಯ ಪ್ರತ್ಯಯಕ್ಕೆ ಆತ್ ಆದೇಶ ಬರುತ್ತದೆ. ಲುಙ್‌ನಲ್ಲಿ ಬರುವ ಚ್ಲಿವಿಕರಣಕ್ಕೆ ಸಿಚ್ ಆದೇಶವಾಗುತ್ತದೆ. ಆದಕ್ಕೆ **ಶಲ ಇಗುಪಧಾದನಿಟಃ ಕ್ಸಃ** ಸೂತ್ರದಿಂದ ಕ್ಸಾದೇಶ ಪ್ರಾಪ್ತವಾದರೆ **ನ ದೃಶಃ** (ಪಾ.ಸೂ. ೩-೧-೪೭) ಎಂಬುದರಿಂದ ನಿಷೇಧಬರುತ್ತದೆ. ದೃಶ್+ಸ್+ತ ಎಂದಿರುವಾಗ ಸಿಚ್ ಆರ್ಧಧಾತುಕವಾದುದರಿಂದ ಇಚ್ ಪ್ರಾಪ್ತವಾದರೆ **ಏಕಾ ಚ ಉಪದೇಶೇನುದಾತ್ತಾತ್** (ಪಾ.ಸೂ. ೭-೨-೧೦) ಸೂತ್ರದಿಂದ ಧಾತುವು ಏಕಾಚಾದುದರಿಂದ ಪರದಲ್ಲಿರುವ ಸಿಚಿಗೆ ಇಣ್ನಿಷೇಧ ಬರುತ್ತದೆ. **ಲಙ್‌ಸಿಚಾವಾತ್ಮನೇಪದೇಷು** (ಪಾ.ಸೂ. ೧-೨-೧೧) ಇಕ್ಕಿನ ಸಮೀಪದಲ್ಲಿರುವ ಹಲಿನ ಪರದಲ್ಲಿರುವ ಝಲಾದಿಯಾದ ಲಿಙ್ ಮತ್ತು ಆತ್ಮನೇಪದ ಪರದಲ್ಲಿರುವ ಸಿಚ್ ಪ್ರತ್ಯಯವೂ ಕಿತ್ತಾಗುತ್ತವೆ. ಇಲ್ಲಿ ಋಕಾರದ ಪರದಲ್ಲಿರುವ ಶಕಾರದ ಪರದಲ್ಲಿ ಸಿಚ್ ಬಂದುದರಿಂದಲೂ ಅದಕ್ಕೆ ಆತ್ಮನೇಪದವು ಪರದಲ್ಲಿರುವುದರಿಂದಲೂ ಕಿತ್ತಾಗುತ್ತದೆ. ಆದುದರಿಂದ ಧಾತುವಿಗೆ ಲಘೂಪಧ ಗುಣ ಬರುವುದಿಲ್ಲ. **ಕ್ಙಿತಿ ಚ** ಸೂತ್ರದಿಂದ ನಿಷೇಧ ಬರುತ್ತದೆ. ಹಾಗೆಯೇ **ಸೃಜಿದೃಶೋರ್ಝಲ್ಯಮಕಿತಿ** (ಪಾ.ಸೂ. ೬-೧-೫೮) ಈ ಎರಡು ಧಾತುಗಳಿಗೆ ಅಕಿತ್ತಾದ ಝಲಾದಿಪ್ರತ್ಯಯ ಪರದಲ್ಲಿರುವಾಗ ಅಮಾಗಮ ಬರುತ್ತದೆ. ಎಂಬುದರಿಂದ ಅಮಾಗಮವೂ ಬರುವುದಿಲ್ಲ. ಸಿಚ್ ಕಿತ್ತಾದುದರಿಂದ ಅಕಿತಿ ಎಂದು ನಿಷೇಧಮಾಡಿರುವುದರಿಂದ ಬರುವುದಿಲ್ಲವೆಂದು ತಾತ್ಪರ್ಯ. **ವೃಶ್ಚಭೃಸ್ಜ**—ಸೂತ್ರದಿಂದ ಶಕಾರಕ್ಕೆ ಷಕಾರ ಬರುತ್ತದೆ. ಅದಕ್ಕೆ ಸಕಾರಪರದಲ್ಲಿರುವುದರಿಂದ **ಷಢೋಃ ಕಃ ಸಿ** ಸೂತ್ರದಿಂದ ಕಕಾರಾದೇಶ ಬರುತ್ತದೆ. ಆಗ ಕಕಾರದ ಪರದಲ್ಲಿ ಸಿಚ್ ಬಂದುದರಿಂದ ಅದಕ್ಕೆ ಷತ್ವಬರುತ್ತದೆ. ಕಕಾರ ಷಕಾರಯೋಗವಿರುವುದರಿಂದ ಕ್ಷಕಾರವಾಗುತ್ತದೆ. ಧಾತುವಿಗೆ ಲುಙ್ ನಿಮಿತ್ತಕವಾದ ಅಡಾಗಮ ಬರುತ್ತದೆ. ಅದೃಕ್ಷತ ಎಂದು ಉಕ್ತರೂಪವಾಗುತ್ತದೆ. ಆಗಮವಾದ ಅಡಾಗಮವು ಉದಾತ್ತವಾಗಿ ಬರುತ್ತದೆ ಎಂದು ಸೂತ್ರದಲ್ಲಿ ವಿಹಿತವಾದುದರಿಂದ ಸತಿಶಿಷ್ಟವಾಗುವುದರಿಂದ ಅದೃಕ್ಷತ ಎಂಬಲ್ಲಿ ಆದಿಯ ಅಕಾರವು ಉದಾತ್ತವಾಗಿ ಆದ್ಯುದಾತ್ತಪದವಾಗುತ್ತದೆ. ಯಸ್ಯಾಃ ಎಂದು ಯಚ್ಛಬ್ದದ ಸಂಬಂಧವಿರುವುದರಿಂದ **ತಿಙ್ಶಿತಿಜಃ** ಸೂತ್ರದಿಂದ ಸರ್ವಾನುದಾತ್ತವು ಬರುವುದಿಲ್ಲ.

ವಿಶ್ವವಾರಮ್—ವಿಶ್ವಂ ವೃಣೋತೀತಿ ವಿಶ್ವವಾರಃ. ಪ್ರಪಂಚವನ್ನು ಆವರಿಸುವುದು ಎಂದರ್ಥ. ವೃಞ್ ವರಣೇ ಧಾತು. **ಕರ್ಮಣ್ಯಣ್** (ಪಾ.ಸೂ. ೩-೨-೧) ಕರ್ಮವು ಉಪಪದವಾಗಿರುವಾಗ ಧಾತುವಿಗೆ ಅಣ್ ಪ್ರತ್ಯಯ ಬರುತ್ತದೆ. ವೃ+ಅ ಎಂದಿರುವಾಗ ಅಣಿನಲ್ಲಿ ಣಿತ್ವಾದುದರಿಂದ **ಅಚೋ ಞ್ಣಿತಿ** ಸೂತ್ರದಿಂದ ಧಾತುವಿಗೆ ವೃದ್ಧಿಬರುತ್ತದೆ. ಆ ರೂಪವಾದ ವೃದ್ಧಿಯು ಋಕಾರದ ಸ್ಥಾನದಲ್ಲಿ ರ ಪರವಾಗಿ ಬರುತ್ತದೆ. ವಿಶ್ವವಾರ ಎಂದು ರೂಪವಾಗುತ್ತದೆ. ಅಥವಾ ವಿಶ್ವೈ ರ್ವ್ರೀಯತೇ **ಇತಿ ವಿಶ್ವವಾರಃ** ಪ್ರಪಂಚದಿಂದ ಅಪೇಕ್ಷಿಸಲ್ಪಡುವುದು ಎಂದು ತಾತ್ಪರ್ಯ. ಆಗ ಕರ್ಮಣಿ ಘಞ್ ಪ್ರತ್ಯಯ ಬರುತ್ತದೆ. ಘಞ್ ಞಿತ್ವಾದುದರಿಂದ ಹಿಂದಿನಂತೆಯೇ ವೃದ್ಧಿಯು ಬರುತ್ತದೆ. **ಈ** ಶಬ್ದವು ಮರುಧ್ವೃಧಾದಿಗಳಲ್ಲಿ ಪಠಿತವಾರುವುದರಿಂದ ಅವುಗಳಲ್ಲಿ ಪೂರ್ವಪದಕ್ಕೆ ಅಂತೋದಾತ್ತವು ವಿಹಿತವಾಗಿರುವುದರಿಂದ ಇಲ್ಲಿ ವಿಶ್ವ ಎಂಬಲ್ಲಿ ಕೊನೆಯ ಅಕಾರವು ಉದಾತ್ತವಾಗುತ್ತದೆ. ವಿಶ್ವವಾರಂ ಎಂಬುದು ದ್ವಿತೀಯಾಚ್ ಉದಾತ್ತವಾದ ಶಬ್ದ.

ಸುಗ್ಮ್ಯಮ್—ಸುಷ್ಠು ಗಂತವ್ಯಃ ಸುಗ್ಮಃ ಚೆನ್ನಾಗಿ ಹೊಂದಲ್ಪಡಲು ಸಾಧ್ಯವಾದದ್ದು ಎಂದರ್ಥ. (ಸುಖ). ಗಮ್ಲೃ ಗತೌ ಧಾತು. ಭ್ವಾದಿ. **ಘಞರ್ಥೇ ಕವಿಧಾನಮ್** (ಪಾ. ಸೂ. ೩-೩-೮ ವಾ. ೨೯೪) ಎಂಬುದರಿಂದ ಘಞರ್ಥದಲ್ಲಿ ಕ ಪ್ರತ್ಯಯ ಬರುತ್ತದೆ. ಸುಗಮ್+ಅ ಎಂದಿರುವಾಗ, **ಗಮಹನ ಜನಖನ** (ಪಾ.ಸೂ. ೬-೪-೯೮) ಅಜ್‌ಭಿನ್ನವಾದ ಕಿತ್ ಙಿತ್ ಪ್ರತ್ಯಯ ಪರದಲ್ಲಿರುವಾಗ ಗಮಾದಿಗಳ ಉಪಧೆಗೆ ಲೋಪ ಬರುತ್ತದೆ ಎಂಬುದರಿಂದ ಇಲ್ಲಿ ಕಿತ್ವಾದ ಪ್ರತ್ಯಯವು ಪರದಲ್ಲಿರುವುದರಿಂದ ಗಕಾರದ ಮೇಲಿರುವ ಉಪಧೆಯಾದ ಅಕಾರಕ್ಕೆ ಲೋಪ ಬರುತ್ತದೆ. ಸುಗ್ಮ ಎಂದು ರೂಪವಾಗುತ್ತದೆ. ಸುಗ್ಮೇ ಭವಂ ಸುಗ್ಮ್ಯಮ್. ಸುಗ್ಮದಲ್ಲಿ ಉಂಟಾದುದು ಎಂದರ್ಥ. **ಭವೇ ಛಂದಸಿ** (ಪಾ.ಸೂ. ೪-೪-೧೧೦) ಸೂತ್ರದಿಂದ ಸಪ್ತಮ್ಯಂತದ ಮೇಲೆ ಯತ್ ಪ್ರತ್ಯಯ ಬರುತ್ತದೆ. ಯತ್ ಪರದಲ್ಲಿರುವಾಗ ಭಸಂಜ್ಞೆ ಇರುವುದರಿಂದ ಸುಗ್ಮ ಎಂಬಲ್ಲಿರುವ ಅಕಾರಕ್ಕೆ **ಯಸ್ಯೇತಿ ಚ** ಸೂತ್ರದಿಂದ ಲೋಪಬಂದರೆ ಸುಗ್ಮ್ಯಂ ಎಂದಾಗುತ್ತದೆ. **ಯತೋಽನಾವಃ** (ಪಾ.ಸೂ. ೬-೧-೨೧೩) ಸೂತ್ರದಿಂದ ದ್ವ್ಯಚ್ಕವಾದ ಯತ್ ಪ್ರತ್ಯಯಾಂತಕ್ಕೆ ಆದ್ಯುದಾತ್ತಸ್ವರ ಬರುತ್ತದೆ. ಸುಗ್ಮ್ಯಮ್ ಎಂಬುದು ಆದ್ಯುದಾತ್ತವಾದ ಪದ. ಉದಾತ್ತದ ಪರದಲ್ಲಿರುವ ಕೊನೆಯ ಅನುದಾತ್ತವು ಸ್ವರಿತವಾಗುತ್ತದೆ.

॥ ಸಂಹಿತಾಪಾಠಃ ॥

ಯೇ ಚಿದ್ಧಿ ತ್ವಾವೃಷಯಃ ಪೂರ್ವ ಊತಯೇ ಜುಹೂರೇ ವಸೇ ಮಹಿ।
ಸಾ ನಃ ಸ್ತೋಮೇಭಾ ಅಭಿ ಗೃಣೀಹಿ ರಾಧಸೋಽಹಃ ಪ್ರಕ್ರೀಣಾ ಶೋಚಿಷಾ ॥೧೪॥

॥ ಪದಪಾಠಃ ॥

ಯೇ। ಚಿತ್। ಹಿ। ತ್ವಾಂ। ಋಷಯಃ। ಪೂರ್ವೇ। ಊತಯೇ।
ಜುಹೂರೇ। ಅವಸೇ। ಮಹಿ।
ಸಾ। ನಃ। ಸ್ತೋಮಾನ್। ಅಭಿ। ಗೃಣೀಹಿ। ರಾಧಸಾ। ಉಷಃ।
ಶುಕ್ರೇಣ। ಶೋಚಿಷಾ। ॥೧೪॥

॥ ಸಾಯಣಭಾಷ್ಯಂ ॥

ಹೇ ಮಹಿ ಮಹಿತೇ ಪೂಜನೀಯೇ ವೋಷೋದೇವತೇ ತ್ವಾಂ ಯೇ ಚಿದ್ಧಿ ಯೇ ಖಲು ಪ್ರಸಿದ್ಧಾಃ ಪೂರ್ವೇ ಚಿರಂತನಾ ಋಷಯೋ ಮಂತ್ರದ್ರಷ್ಟಾರ ಊತಯೇ ರಕ್ಷಣಾಯ। ಅವ ಇತ್ಯನ್ನನಾಮ। ಅವಸೇಽನ್ನಾಯ ಚ ಜುಹೂರೇ ಜುಹ್ವಿರೇ ಆಹೂತವಂತಃ। ಸೂಕ್ತರೂಪೈರ್ಮಂತ್ರೈಃ ಸ್ತುತವಂತ ಇತ್ಯರ್ಥಃ। ಹೇ ಉಷಃ ಸಾ ತಾದೃಶೀ ತ್ವಂ ರಾಧಸಾಸ್ಮಾಭಿರ್ದತ್ತೇನ ಹವಿರ್ಲಕ್ಷಣೇನ ಧನೇನ ಶುಕ್ರೇಣ ಶೋಚಿಷಾ ದೀಪ್ತೇನ ತನೋ ನಿವಾರಯಿತುಂ ಸಮರ್ಥೇನ ತೇಜಸಾ ಜೋಷಲಕ್ಷಿತಾ ಸತೀ ತೇಷಾಮೃಷೀಣಾಮಿವ ನೋಽಸ್ಮಾಕಂ ಸ್ತೋಮಾನಭಿ ಸ್ತುತೀರಭಿಲಕ್ಷ್ಯ ಗೃಣೀಹಿ। ಸಮ್ಯಕ್ ಸ್ತುತಿಮಿತಿ ಶಬ್ದಯ। ಅಸ್ಮದೀಯಾಭಿಃ ಸ್ತುತಿಭಿಃ ಸಂತುಷ್ಟಾ ಭವೇತ್ಯರ್ಥಃ॥ ಊತಯೇ। ಅವತೇಃ ಕ್ತಿನಿ ಜ್ವರತ್ವರೇತ್ಯಾದಿನಾ ವಕಾರಸ್ಯೋಪಧಾಯಾಶ್ಚೋಟ್। ಊತಿಯೂತೀತ್ಯಾದಿನಾ ಕ್ತಿನ್ನುದಾತ್ತೋ ನಿಪಾತಿತಃ। ಜುಹೂರೇ। ಹ್ವೇಞ್ ಸ್ಪರ್ಧಾಯಾಂ ಶಬ್ದೇ ಚ। ಲಿಡ್ಯಭ್ಯಸ್ತಸ್ಯ ಚೇತಿ ದ್ವಿರ್ವಚನಾತ್ಪೂರ್ವಮೇವಾಭ್ಯಸ್ತಕಾರಣಭೂತಸ್ಯ ಹ್ವಯತೇಃ ಸಂಪ್ರಸಾರಣಂ। ಅಭ್ಯಸ್ತಸ್ಯ ಯೋ ಹ್ವಯತಿಃ ಕಶ್ಚಾಭ್ಯಸ್ತಸ್ಯ ಹ್ವಯತಿಃ ಯಸ್ತಸ್ಯ ಕಾರಣಂ। ಕಾ ೬-೧-೩೩। ಇತಿ ವ್ಯಾಖ್ಯಾತತ್ವಾತ್। ಪರಪೂರ್ವತ್ವೇ ಹಲ ಇತಿ ದೀರ್ಘತ್ವಂ। ದ್ವಿರ್ವಚನಾದೀನಿ। ಇರಯೋರ ಇತೀರೇಚೋ ರೇಅದೇಶಃ। ಚಿತ ಇತ್ಯಂತೋದಾತ್ತತ್ವಂ। ಯದ್ವೃತ್ತಯೋಗಾದನಿಘಾತಃ। ತತ್ರ ಹಿ ಪಂಚಮ್ಯೋ ನಿರ್ದೇಶೇಽಪಿ ವ್ಯವಹಿತೇಽಪಿ ಕಾರ್ಯಂ ಭವತೀತ್ಯುಕ್ತಂ। ಕಾ. ೪-೧-೬೬। ಮಹಿ। ಮಹ ಪೂಜಾಯಾಂ। ಔಣಾದಿಕ ಇ ಪ್ರತ್ಯಯಃ। ಕೃದಿಕಾರಾದಕ್ತಿನ ಇತಿ ಜೀಷ್। ಸಂಬುದ್ಧಾವಂಬಾರ್ಥೇತಿ ಹ್ರಸ್ವತ್ವಂ। ಪಾ ೭-೩-೧೦೨। ಸ್ತೋಮಾನ್। ಸಂಹಿತಾಯಾಂ ನಕಾರಸ್ಯ ರುತ್ವಾದ್ಯುಕ್ತಂ। ನಿತ್ತ್ವಾದಾದ್ಯುದಾತ್ತತ್ವಂ। ಗೃಣೀಹಿ। ಗೃ ಶಬ್ದೇ। ಕ್ರೈಯಾದಿಕಃ। ಶಿತಿ ಪ್ರಾದೀನಾಂ ಹ್ರಸ್ವ ಇತಿ ಹ್ರಸ್ವತ್ವಂ। ರಾಧಸಾ। ರಾಧ್ನೋತ್ಯನೇನೇತಿ ರಾಧಃ। ಅಸುನೋ ನಿತ್ತ್ವಾದಾದ್ಯುದಾತ್ತತ್ವಂ। ಉಷಃ ಪಾದಾದಿತ್ವಾದಾಪ್ಪ್ರತಿಷೇಧನಿಘಾತಾಭಾವೇ ಷಾಷ್ಠಿಕಮಾಮಂತ್ರಿತಾದ್ಯುದಾತ್ತತ್ವಂ॥

॥ ಪ್ರತಿಪದಾರ್ಥ ॥

ಮಹಿ— ಪೂಜ್ಯಳಾದ ಉಷೋದೇವತೆಯೇ। **ತ್ವಾಂ**— ನಿನ್ನನ್ನು। **ಯೇ ಚಿದ್ಧಿ**— ಯಾವ ಪ್ರಸಿದ್ಧರೂ। **ಪೂರ್ವೇ**— ಪ್ರಾಚೀನರೂ ಆದ। **ಋಷಯಃ**— ಮಂತ್ರದ್ರಷ್ಟೃಗಳಾದ ಋಷಿಗಳು। **ಊತಯೇ**— ರಕ್ಷಣಕ್ಕೋಸ್ಕರವೂ। **ಅವಸೇ**— ಅನ್ನಕ್ಕೋಸ್ಕರವೂ। **ಜುಹೂರೇ**— ಕರೆದರೋ (ಸೂಕ್ತರೂಪಗಳಾದ ಮಂತ್ರಗಳಿಂದ

ಸ್ತೋತ್ರಮಾಡಿದರು) । **ಉಷಃ**—ಎಲೈ ದೇವಿಯೇ । **ಸಾ**—ಹಾಗೆ ಸ್ತುತಿಸಲ್ಪಟ್ಟ ನೀನು । **ರಾಧಸಾ**—(ನಮ್ಮಿಂದ ಅರ್ಪಿಸಲ್ಪಟ್ಟ) ಹವಿರ್ಲಕ್ಷಣವುಳ್ಳ ಧನದಿಂದಲೂ । **ಶುಕ್ರೇಣ ಶೋಚಿಷಾ**—(ತಮಸ್ಸನ್ನು ನಿವಾರಿಸಲು ಸಮರ್ಥವಾದ) ಶುಭ್ರವಾದ ತೇಜಸ್ಸಿನಿಂದಲೂ ಕೂಡಿಕೊಂಡು (ಆ ಋಷಿಗಳ ಸ್ತೋತ್ರಗಳನ್ನು ಕೇಳಿದಂತೆ) । **ನಃ**—ನಮ್ಮ । **ಸ್ತೋಮಾ ಆಭಿ**—ಸ್ತೋತ್ರಗಳನ್ನೂ ಸ್ವೀಕರಿಸಿ । **ಗೃಣೀಹಿ**—(ನಿನ್ನ ಸಂತೋಷವನ್ನು ಸೂಚಿಸುವ) ಶಬ್ದಮಾಡು.

॥ ಭಾವಾರ್ಥ ॥

ಎಲೈ ಪೂಜ್ಯಳಾದ ಉಷೋದೇವಿಯೇ, ಪ್ರಾಚೀನರೂ ಪ್ರಸಿದ್ಧರೂ ಆದ ದಿವ್ಯದೃಷ್ಟಿಯುಳ್ಳ ಮತ್ತು ಮಂತ್ರಗಳ ಸ್ವರೂಪವನ್ನು ತಿಳಿದ ಋಷಿಗಳು ನಿನ್ನನ್ನು ರಕ್ಷಣೆಗಾಗಿಯೂ ಅನ್ನಕ್ಕಾಗಿಯೂ ಸೂಕ್ತರೂಪಗಳಾದ ಮಂತ್ರಗಳಿಂದ ಸ್ತೋತ್ರಮಾಡಿ ಕರೆದರು. ನೀನು ಅವರ ಸ್ತೋತ್ರಕ್ಕೆ ತೃಪ್ತಳಾಗಿ ಅವರನ್ನು ಅನುಗ್ರಹಿಸಿದೆ. ಅದರಂತೆಯೇ ನಾವು ಅರ್ಪಿಸುವ ಹವಿಸ್ಸಿನರೂಪದ ಧನದಿಂದಲೂ, ತಮಸ್ಸನ್ನು ನಿವಾರಿಸತಕ್ಕ ನಿನ್ನ ಶುಭ್ರವಾದ ತೇಜಸ್ಸಿನಿಂದಲೂ ಕೂಡಿಕೊಂಡು ನಮ್ಮ ಸ್ತೋತ್ರಗಳನ್ನೂ ಸ್ವೀಕರಿಸಿ ನಿನ್ನ ಸಂತೋಷಸೂಚಕವಾದ ಶಬ್ದವನ್ನು ಮಾಡು.

English Translation.

Adorable Ushas, ancient sages invoked you for protection and food; you Ushas who shine with pure light, accept our offerings and commend our praises

॥ ವಿಶೇಷ ವಿಷಯಗಳು ॥

ಚಿತ್—**ಚಿದಿತ್ಯೇಷೋಽನೇಕಕರ್ಮಾ** (ನಿ. ೧-೪) ಚಿತ್ ಶಬ್ದಕ್ಕೆ ಅನೇಕ ಅರ್ಥಗಳಿವೆ. ಇಲ್ಲಿ ಭಾಷ್ಯಕಾರರು ಪ್ರಸಿದ್ಧವೆಂಬ ಅರ್ಥವನ್ನು ಹೇಳಿದಾರೆ.

ಮಹಿ—**ಮಹಿತೇ, ಪೂಜನೀಯೇ** ॥ ಪೂಜ್ಯಳೇ.

ಸ್ತೋಮಾನ್—**ಸ್ತೋತ್ರಾ** । ನಾವು ಮಾಡುವ ಸೂಕ್ತರೂಪವಾದ ಸ್ತೋತ್ರಗಳನ್ನು.

ಋಕ್ಕಿನ ಮುಖ್ಯಾಭಿಪ್ರಾಯವು—ಎಲೈ ಪೂಜ್ಯಳಾದ ಉಷೋದೇವತೆಯೇ ನಿನ್ನನ್ನು ಹಿಂದಿನ ಋಷಿಗಳು ರಕ್ಷಣೆಗಾಗಿಯೂ ಆಹಾರಕ್ಕಾಗಿಯೂ ಆಹ್ವಾನಮಾಡಿ ಪ್ರಾರ್ಥಿಸಿದ್ದಾರೆ ಅದರಂತೆ ತಮಸ್ಸನ್ನು ಹೋಗಲಾಡಿಸಿ ಪ್ರಕಾಶಮಾನವಾದ ಕಾಂತಿಯಿಂದ ಬೆಳಗುವ ನೀನು ನಾವು ಮಾಡುವ ಸ್ತೋತ್ರಗಳನ್ನು ಸ್ವೀಕರಿಸು.

॥ ವ್ಯಾಕರಣಪ್ರಕ್ರಿಯಾ ॥

ಊತಯೇ—ಅವರಕ್ಷಣೆ ಧಾತು. ಭ್ವಾದಿ. ಇದಕ್ಕೆ ಭಾವಾರ್ಥದಲ್ಲಿ ಕ್ತಿನ್ ಪ್ರತ್ಯಯ ಬರುತ್ತದೆ. ಅವ್+ಕ್ತಿ ಎಂದಿರುವಾಗ **ಜ್ವರತ್ವರಸ್ರಿವ್ಯವಿ** (ಪಾ. ಸೂ. ೬-೪-೨೦) ಕ್ವಿಪ್ ಪರದಲ್ಲಿರುವಾಗಲೂ ಝಲಾದಿಯಾದ ಅನುನಾಸಿಕಾದಿಯಾದ ಪ್ರತ್ಯಯಪರದಲ್ಲಿರುವಾಗಲೂ ಜ್ವರಾದಿಧಾತುಗಳ ಉಪಧೆಗೂ ವಕಾರಕ್ಕೂ ಸಹ ಊಠಾದೇಶ ಬರುತ್ತದೆ ಎಂಬುದರಿಂದ ಇಲ್ಲಿ ಆಕಾರವೇ ಉಪಧೆಯಾಗಿರುವುದರಿಂದ ಸರ್ವಕ್ಕೂ ಊಠ್ ಬರುತ್ತದೆ.

क्तिन् प्रत्ययदल्लि ककार इत्तादुदरिंद ऊति एंदु रूपवागुत्तदे अदक्के चतुर्थ्येकवचन प्रत्यय परदल्लिरुवाग पूर्वक्के भ संज्ञे निमित्तक गुण बंदु अयादेश बंदरे ऊतयेऽ एंदु उक्तरूपवु सिद्धवागुत्तदे. **ऊतियोतिजूति** (पा. सू. ३-३-९८) सूत्रदल्लि क्तिन् उदात्तवागि निपातितवादुदरिंद निघ्न स्वरवु बाधितवागि तकारोत्तरवाकारवु उदात्तवागुत्तदे. ऊतयेऽ एंबुदु मध्योदात्तवाद पद.

जुहूरे—ह्वेञ् स्पर्धायाम् शब्दे च धातु. भ्वादि. लिट् मध्यमपुरुष बहुवचन विवक्षेयादागि ध्वु प्रत्यय बरुत्तदे. अदक्के **लिटस्तझयोरेरिरेच्** सूत्रदिंद इरेच् आदेश बरुत्तदे. **लिटिधातोरनभ्यासस्य** सूत्रदिंद लिट् परदल्लिरुवाग द्वित्ववु प्राप्तवादरे **अभ्यस्तस्य च** (पा. सू. ६-१-३३) अभ्यस्तवन्नु मुंदे हेळुव ह्वेञिंगे संप्रसारणवु बरुत्तदे एंबुदरिंद इल्लि मोदलिगे संप्रसारणवु बरुत्तदे. द्वित्ववन्नु हेळिदमेलेयू द्वित्वहेळिद एरडु खण्डगळिगे अभ्यस्तवेंदु संज्ञे बरुत्तदे. आग अभ्यस्तक्के आश्रयवादुदु ह्वेञ् धातुवायितु. इल्लि अभ्यस्तस्य एंबुदक्के अभ्यस्तवन्नु मुंदे हेळुव एंदु अर्थ माडलु प्रमाणवु भाष्यवे. अल्लि **अभ्यस्तस्य योऽ ह्वयतिः कश्चाभ्यस्तस्य ह्वयतिः यः तस्य कारणम्** (का. ६-१-३३) एंदु व्याख्यानमाडिरुत्तारे. अभ्यस्तवाद यावा ह्वेञ् धातु विदेयो अदु. अभ्यस्तवादुदर यावुदु ? ह्वेञ् धातुवु. यावुदु अभ्यस्तक्के कारण वागुवुदो अदु एंदु अदर तात्पर्य. ह्वेञ् धातुविनल्लि संप्रसारणवन्नु हेळुवुदु वकार. अदक्के उकाररूप संप्रसारण बरुत्तदे. हु+ए+इरे एंदिरुवाग **संप्रसारणाच्च** सूत्रदिंद पूर्वरूप बरुत्तदे. हु+इरे एंदिरुवाग **हलः** (पा. सू ६-४-२) अंगावयववाद हलिन परदल्लिरुव संप्रसारणक्के दीर्घ बरुत्तदे एंबुदरिंद संप्रसारणवाद उकारक्के दीर्घबरुत्तदे. हू+इरे एंब अवस्थेयल्लि लिण्निमित्तकवाद द्वित्व बरुत्तदे अभ्यासद अचिगे **ह्रस्वः** सूत्रदिंद ह्रस्व बंदरे अभ्यासद हकारक्के **कुहोश्चुः** सूत्रदिंद जकार बंदरे जुहू+इरे एंदु रूपवागुत्तदे. **इरयोरे** (पा.सू. ६-४-७८) लिडादेशवाद इर एंबुदक्के रे एंब आदेशवु धंदस्सिनल्लि बरुत्तदे. आग जुहूरे एंदु रूपवु सिद्धवागुत्तदे. **चितः** (पा.सू ६-४-१४३) सूत्रदिंद जुहूरे एंबुदु अंतोदात्तवागुत्तदे. इल्लि इरेच् आदेशवु चित्वादुदरिंद निमित्तविदे. **यदृत्त्योगान्नित्यं** (पा.सू. ८-१-६६) सूत्रदिंद इल्लि हिंदे यॅ एंबुदर योगविरुवुदरिंद निघातस्वर बरुवुदिल्ल. इल्लि सूत्रदल्लि पंचमी निर्देशमाडिदुदरिंद वास्तवदल्लि **तस्मादित्युत्तरस्य** एंब परिभाषेयिंद अव्यवहितपरदल्लि संबंध बंदरे निषेध बरबेकागुत्तदे. आदरू व्यवधानविद्दागलू बरुत्तदे एंदु वृत्तियल्लि हेळिदुदरिंद (का. ८-१-६६) निषेध बरुत्तदे एंदु तिळियबेकु.

मुहि—मुह पूजायाम् धातु. भ्वादि. इदक्के उणादिय इ प्रत्ययवु बरुत्तदे. सर्वधातुभ्य इन् (उ सू. ४४२) एंबुदरिंद इन् प्रत्ययवु बरुत्तदे. **कृदिकारादक्तिनः** (पा.सू. ४-१-४५, ग ४०) क्तिन् भिन्नवाद इकारान्त कृदंतक्के स्त्रीलिंगदल्लि ङीष् बरुत्तदे. मुह+ई एंदिरुवाग इकार लोपवादरे मुह्ई एंदागुत्तदे. इदक्के संबुद्धियल्लि सु परदल्लिरु

ವಾಗ **ಅಂಬಾರ್ಥನದ್ಯೋರ್ಹ್ರಸ್ವಃ** (ಪಾ.ಸೂ. ೭-೩-೧೦೭) ಸೂತ್ರದಿಂದ ಹ್ರಸ್ವ ಬರುತ್ತದೆ. **ಏಙ್ಹ್ರಸ್ವಾತ್** ಸೂತ್ರದಿಂದ ಸು ಲೋಪವಾದರೆ ಮಹಿ ಎಂದು ರೂಪವಾಗುತ್ತದೆ. ಆಮಂತ್ರಿತ ನಿಘಾತ ಬಂದು ಸರ್ವಾನುದಾತ್ತ ವಾಗುತ್ತದೆ.

ಸ್ತೋಮಾನ್—ಸ್ತೋಮಶಬ್ದದ ಮೇಲೆ ದ್ವಿತೀಯಾಬಹುವಚನವಿದ್ದಾಗ ಪೂರ್ವಸವರ್ಣ ದೀರ್ಘ ನತ್ವ ಬಂದರೆ ರೂಪಸಿದ್ಧಿಯಾಗುತ್ತದೆ. ಇಲ್ಲಿ ಸೂತ್ರದಲ್ಲಿ ನಮಾತ್ರ **ದೀರ್ಘಾದಟಿ ಸಮಾನಪಾದೇ** (ಪಾ.ಸೂ. ೮-೪-೯) ಸೂತ್ರದಿಂದ ಹಿಂದೆ ಚಿಧ್ವರಾನ್ ಎಂಬಲ್ಲಿ ಹೇಳಿದಂತೆಯೇ ರುತ್ವವು ಬರುತ್ತದೆ. ರುತ್ವಕ್ಕೆ ಯತ್ವಲೋಪಗಳು ಬಂದಮೇಲೆ **ಆತೋಟಿನಿತ್ಯಂ** (ಪಾ.ಸೂ. ೮-೩-೩) ಸೂತ್ರದಿಂದ ಣನುನಾಸಿಕವು ಬರುತ್ತದೆ. ಅಧ್ವರಾ ಎಂದು ಅನುನಾಸಿಕಾಂತವಾದ ಪದವಾಗುತ್ತದೆ. ಇದು ನಿತ್ಯಾದುದರಿಂದ **ಞ್ನಿತ್ಯಾದಿರ್ನಿತ್ಯಂ** ಸೂತ್ರ ದಿಂದ ಆದ್ಯುದಾತ್ತವಾಗುತ್ತದೆ.

ಗೃಣೀಹಿ—ಗೃ ಶಬ್ದೆ ಧಾತು. ಕ್ರ್ಯಾದಿ. ಲೋಟ್ ಮಧ್ಯಮಪುರುಷೈಕವಚನದಲ್ಲಿ ಸಿಪ್ಪಿಗೆ ಹಿ ಆದೇಶ ಬಂದರೆ ಗೃ+ಹಿ ಎಂದಿರುವಾಗ ಶ್ನಾ ವಿಕರಣಪ್ರತ್ಯಯ ಬರುತ್ತದೆ. ಆದು ಶಿತ್ತಾದುದರಿಂದ **ಸ್ನಾದೀನಾಂ ಹ್ರಸ್ವಃ** (ಪಾ.ಸೂ. ೭-೩-೮೦) ಎಂಬುದರಿಂದ ಧಾತುವಿಗೆ ಹ್ರಸ್ವ ಬರುತ್ತದೆ. **ಈಹಲ್ಯಘೋಃ** (ಪಾ.ಸೂ. ೬-೪-೧೧೩) ಸಾರ್ವಧಾತುಕವಾದ ಕಿತ್ತು ಙಿತ್ತು ಆದ ಹಲಾದಿಪ್ರತ್ಯಯ ಪರದಲ್ಲಿರುವಾಗ ಶ್ನಾಅಭ್ಯಸ್ತಗಳ ಆಕಾರಕ್ಕೆ ಈಕಾರ ಬರುತ್ತದೆ ಎಂಬುದರಿಂದ ಇಲ್ಲಿ ಙಿತ್ತಾದ ಹಿ ಪರದಲ್ಲಿರುವುದರಿಂದ ಈತ್ವ ಬಂದು ಣತ್ವ ಬಂದರೆ ಗೃಣೀಹಿ ಎಂದು ರೂಪವಾಗುತ್ತದೆ. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬಂದಿದೆ.

ರಾಧಸಾ—ರಾಧ್ನೋತಿ ಅನೇನ ಇತಿ ರಾಧಃ ಇದರಿಂದ ಪುಷ್ಟರಾಗುತ್ತಾರೆ ಎಂದರ್ಥ. ಸರ್ವ ಧಾತುಭ್ಯೋಽಸುನ್ (ಉ.ಸೂ. ೪-೬೫೪) ಎಂಬುದರಿಂದ ರಾಧ ಸಂಸಿದ್ಧೌ ಧಾತುವಿಗೆ ಅಸುನ್ ಪ್ರತ್ಯಯ ಬರುತ್ತದೆ ಆಗ ಸಕಾರಾಂತವಾದ ಶಬ್ದವಾಗುತ್ತದೆ. ಅಸುನಿನಲ್ಲಿ ನಕಾರ ಇತ್ತಾದುದರಿಂದ ಆದ್ಯುದಾತ್ತಸ್ವರ ಬರುತ್ತದೆ ರಾಧಸಾ ಎಂಬುದು ತೃತೀಯಾ ವಿಭಕ್ತಿಏಕವಚನಾಂತವಾದ ಶಬ್ದ.

ಉಷಃ—ಸಂಬುದ್ಧಿ ಏಕವಚನಾಂತ. ಎಂಟನೇ ಅಧ್ಯಾಯದ ಆಮಂತ್ರಿತನಿಘಾತ ಬರಲು—**ಅಪಾದಾದೌ** ಎಂದು ನಿಷೇಧವಿರುವುದರಿಂದ ಬರುವುದಿಲ್ಲ. ಆದುದರಿಂದ ಆರನೇ ಅಧ್ಯಾಯಲ್ಲಿ ವಿಹಿತವಾದ ಆಮಂತ್ರಿತಸ್ವರದಿಂದ ಆದ್ಯುದಾತ್ತಸ್ವರ ಬರುತ್ತದೆ. **ಉಷಃ** ಎಂಬುದು ಆದ್ಯುದಾತ್ತವಾದ ಪದವಾಗುತ್ತದೆ.

॥ ಸಂಹಿತಾಪಾಠಃ ॥

ಉಷ॒ೋ ಯದ॒ದ್ಯ ಭಾ॒ನುನಾ॒ ವಿ ದ್ವಾರಾ॑ವೃಣ॒ವೋ॑ ದಿ॒ವಃ।
ಪ್ರ ನೋ॑ ಯಚ್ಛತಾದವೃ॒ಕಂ ಪೃ॑ಥು ಚ್ಛ॒ರ್ದಿಃ ಪ್ರ ದೇ॒ವಿ
ಗೋ॒ಮ॒ತ್ತೀರಿ॑ಷಃ ॥೧೫॥

॥ ಪದಪಾಠಃ ॥

ಉಷಃ । ಯತ್ । ಅದ್ಯ । ಭಾನುನಾ । ವಿ । ದ್ವಾರೌ । ಋಣವಃ । ದಿವಃ ।
ಪ್ರ । ನಃ । ಯಚ್ಛತಾತ್ । ಅವೃಕಂ । ಪೃಥು । ಛರ್ದಿಃ । ಪ್ರ । ದೇವಿ ।
ಗೋಮತೀಃ । ಇಷಃ ॥೧೫॥

॥ ಸಾಯಣಭಾಷ್ಯಂ ॥

ಹೇ ಉಷಸ್ತ್ವಮದ್ಯಾಸ್ಮಿನ್ಭೂತೇ ಸಮಯೇ ಯದ್ಯಸ್ಮಾದ್ಭಾನುನಾ ಪ್ರಕಾಶೇನ ದಿವೋಽಂತರಿಕ್ಷಸ್ಯ ದ್ವಾರೌ ದ್ವಾರಭೂತೌ ಪೂರ್ವಾಪರದಿಗ್ಭಾಗಾವಂಧಕಾರೇಣಾಚ್ಛಾದಿತೌ ವ್ಯೃಣವಃ ವಿಶ್ಲಿಷ್ಯ ಪ್ರಾಪ್ನೋಷಿ ತಸ್ಮಾತ್ತ್ವಂ ನೋಽಸ್ಮಭ್ಯಂ ಛರ್ದಿಸ್ತೇಜಸ್ವಿ ಗೃಹಂ ಪ್ರ ಯಚ್ಛತಾತ್ । ದೇಹಿ । ಕೀದೃಶಂ ಛರ್ದಿಃ । ಅವೃಕಂ ಹಿಂಸಕರಹಿತಂ ಪೃಥು ವಿಸ್ತೀರ್ಣಂ । ಅಪಿ ಚ ಹೇ ದೇವಿ ದೇವನಶೀಲೇ ಗೋಮತೀರ್ಬಹುಭಿರ್ಗೋಭಿರ್ಯುಕ್ತಾ ಇಷೋಽನ್ನಾನಿ । ಪ್ರೇತ್ಯುಪಸರ್ಗಸ್ಯಾವೃತ್ತೇರ್ಯಚ್ಛತಾದಿತ್ಯನುಷಜ್ಯತೇ । ಪ್ರಯಚ್ಛತಾತ್ । ದೇಹಿ । ತ್ವದಾಗಮನಸ್ಯಾಸ್ಮತ್ಪ್ರಶ್ನಾರ್ಥತ್ವಾದಸ್ಮದಭೀಷ್ಟಂ ಗೃಹಾದಿಕಂ ಪ್ರಯಚ್ಛೇತ್ಯರ್ಥಃ । ಛರ್ದಿರಿತಿ ಗೃಹನಾಮ । ಛರ್ದಿಶ್ಛದಿರಿತಿ ತನ್ನಾಮಸು ಪಾಠಾತ್ । ಋಣವಃ । ಋಣ ಗತೌ । ಛಾಂದಸೇ ಲಜ ಸಿಪಿ ತನಾದಿತ್ವಾದುಪ್ರತ್ಯಯಃ । ತತೋ ವ್ಯತ್ಯಯೇನ ಶಪಿ ಗುಣಾವಾದೇಶೌ । ಶಪಃ ಪಿತ್ತ್ವಾದನುದಾತ್ತತ್ವೇ ಉಪ್ರತ್ಯಯಸ್ವರಃ ಶಿಷ್ಯತೇ । ಯದ್ವೃತ್ತ್ಯೋರ್ಗಾದನಿಘಾತಃ । ದಿವಃ । ಊಡಿದಮಿತ್ಯಾದಿನಾ ವಿಭಕ್ತೇರುದಾತ್ತತ್ವಂ । ಪ್ರ ನಃ । ಉಪಸರ್ಗಾದ್ಬಹುಲಮಿತಿ ಬಹುಲವಚನಾನ್ನಸೋ ಣತ್ವಾಭಾವಃ । ಯಚ್ಛತಾತ್ । ದಾಣ ದಾನೇ । ಶಪಿ ಪಾಘ್ರೇತ್ಯಾದಿನಾ ಯಚ್ಛಾದೇಶಃ । ಅವೃಕಂ । ನಾಸ್ತಿ ವೃಕೋಽಸ್ಮಿನ್ನಿತಿ ಬಹುವ್ರೀಹೌ ನಞ್ಸುಭ್ಯಾಮಿತ್ಯುತ್ತರಪದಾಂತೋದಾತ್ತತ್ವಂ । ಪೃಥು । ಪ್ರಥ ಪ್ರಖ್ಯಾನೇ । ಪೃಥಿಮೃದಿಭ್ರಸ್ಜಾಂ ಸಂಪ್ರಸಾರಣಂ ಸಲೋಪಶ್ಚ । ಉ ೧-೨೯ । ಇತಿ ಕುಪ್ರತ್ಯಯಃ ಸಂಪ್ರಸಾರಣಂ ಚ । ಛರ್ದಿರಿತಿ ಗೃಹನಾಮ । ಉಛೃದಿರ್ ದೀಪ್ತಿದೇವನಯೋಃ । ಅರ್ಚಿಶುಚಿಹುಸೃಪಿಚ್ಛಾದಿಚ್ಛರ್ದಿಭ್ಯ ಇಸಿಃ । (ಉ ೨-೧೦೯) ಇತೀಸಿಪ್ರತ್ಯಯಃ । ಲಘೂಪಧಗುಣಃ । ಪ್ರತ್ಯಯಸ್ವರಃ ॥

॥ ಪ್ರತಿಪದಾರ್ಥ ॥

ಉಷಃ—ಎಲ್ಲೆ ಉಷೋದೇವತೆಯೆ, । **ಅದ್ಯ**—ಈಗ (ಈ ಪ್ರಭಾತಕಾಲದಲ್ಲಿ) । **ಯತ್**—ಯಾವ ಕಾರಣದಿಂದ । **ಭಾನುನಾ**—ನಿನ್ನ ಪ್ರಕಾಶದಿಂದ । **ದಿವಃ**—ಅಂತರಿಕ್ಷದ । **ದ್ವಾರೌ**—ಕತ್ತಲಿನಿಂದ (ಆಚ್ಛಾದಿತವಾಗಿ ಪೂರ್ವಾಪರ ರೂಪಗಳಾಗಿರುವ) ಎರಡು ಬಾಗಿಲುಗಳನ್ನೂ । **ವಿ ಋಣವಃ**—ಬಿಡಿಸಿತೆರೆದುಕೊಂಡು ಬಂದಿದ್ದಿಯೋ (ಆದ್ದರಿಂದ) । **ನಃ**—ನಮಗೆ । **ಅವೃಕಂ**—ಹಿಂಸಾರಹಿತವಾಗಿಯೂ (ನೆಮ್ಮದಿಯುಳ್ಳದ್ದೂ) । **ಪೃಥು**—ವಿಸ್ತಾರವಾಗಿಯೂ ಇರುವ । **ಛರ್ದಿಃ**—ತೇಜಸ್ವಿಯಾದ ವಾಸಸ್ಥಾನವನ್ನು । **ಪ್ರ ಯಚ್ಛತಾತ್**—ಅನುಗ್ರಹಿಸಿಕೊಡು । **ದೇವಿ**—ಎಲೈ ದೇವಿಯೇ । **ಗೋಮತೀಃ**—(ಬಹಳ) ಗೋವುಗಳಿಂದ ಕೂಡಿದ **ಇಷಃ**—ಅನ್ನಗಳನ್ನು । **ಪ್ರ (ಯಚ್ಛತಾತ್)** ಕೊಡು.

॥ ಭಾವಾರ್ಥ ॥

ಎಲೈ ಉಷೋದೇವಿಯೇ, ಈ ಪ್ರಭಾತಕಾಲದಲ್ಲಿ ನೀನು ತಮಸ್ಸನ್ನು ನಾಶಮಾಡುವ ನಿನ್ನ ಪ್ರಭೆಯಿಂದ ಕೂಡಿಕೊಂಡು, ಕತ್ತಲಿನಿಂದ ಆವರಿಸಲ್ಪಟ್ಟ ಪೂರ್ವಾಪರಗಳೆಂಬ ಆಂತರಿಕ್ಷದ ಎರಡು ಬಾಗಿಲುಗಳನ್ನೂ ತೆರೆದುಕೊಂಡು ನಮ್ಮ ಉಪಕಾರಕ್ಕಾಗಿಯೇ ಬಂದಿದ್ದೀಯೆ, ಆದ್ದರಿಂದ ನಮಗೆ ನೆಮ್ಮದಿಯುಳ್ಳದ್ದೂ ವಿಸ್ತಾರವುಳ್ಳದ್ದೂ, ಬೆಳಕಿನಿಂದಕೂಡಿದ್ದೂ ಆದ ವಾಸಸ್ಥಾನವನ್ನು ಕೊಡು. ಎಲೈ ದೇವಿಯೇ, ಬಹಳ ಗೋವುಗಳನ್ನೂ ಅನ್ನಗಳನ್ನೂ ಅನುಗ್ರಹಿಸು.

English Translation.

Ushas, since you have to-day set open the two gates of heaven with light, grant us spacious and secure shelter; bestow upon us cattle and food.

॥ ವಿಶೇಷ ವಿಷಯಗಳು ॥

ದ್ವಾರೌ— ದ್ವಾರಭೂತೌ ಪೂರ್ವಾಪರದಿಗ್ಭಾಗೌ ಆಂಧಕಾರೇಣಾಚ್ಛಾದಿತೌ । ಉಷಃಕಾಲಕ್ಕೆ ಮುಂಚೆ ಪೂರ್ವಪಶ್ಚಿಮದಿಕ್ಕುಗಳು ಕತ್ತಲೆಯಿಂದ ಆವೃತವಾಗಿರುವವು. ಉಷೋ ದೇವತೆಯು ಆ ಕತ್ತಲೆಯನ್ನು ಹೋಗಲಾಡಿಸಿ ಸ್ವರ್ಗಕ್ಕೆ (ಆಂತರಿಕ್ಷಕ್ಕೆ) ದ್ವಾರ ಅಥವಾ ಬಾಗಿಲುಗಳಂತಿರುವ ಪೂರ್ವಪಶ್ಚಿಮದಿಗ್ಭಾಗಗಳನ್ನು ತನ್ನ ಬೆಳಕಿನಿಂದ ತುಂಬಿ ಎಲ್ಲರಿಗೂ ಕಾಣುವಂತೆ ಮಾಡುವುದರಿಂದ ಮುಚ್ಚಿರುವ ಬಾಗಿಲುಗಳನ್ನು ತೆಗೆದಿರುವೆ ಎಂದು ಋಷಿಯು ಪ್ರಶಂಸೆಮಾಡಿರುವನು.

ಅವೃಕೇ— ವೃಕಶಬ್ದಕ್ಕೆ ವಜ್ರಾಯುಧ (ನಿ. ೩-೧೧) ಕಳ್ಳ (ನಿ. ೩-೧೯) ಚಂದ್ರ (ನಿ. ೫-೨೧) ಬಾಲ (೬-೩೬) ಎಂಬ ಅರ್ಥಗಳಿರುವುದರಿಂದ **ಅವೃಕೇ**—ಬಾಧರಹಿತವಾದ, ಅಕಂಟಕವಾದ, ಏನೊಂದೂ ಭಯವಿಲ್ಲದ ಇತ್ಯಾದಿ ಅರ್ಥಗಳನ್ನು ಹೇಳಬಹುದು.

ಛರ್ದಿಃ— ಗಯಃ ಕೃದರಃ ಮೊದಲಾದ ಇಪ್ಪತ್ತೆರಡು ಗೃಹನಾಮಗಳ ಮಧ್ಯದಲ್ಲಿ ಛರ್ದಿಃ ಎಂಬ ಶಬ್ದವು ಪಠಿತವಾಗಿರುವುದರಿಂದ ಛರ್ದಿಃ ಎಂದರೆ ಗೃಹವು, ಮನೆಯು ಎಂದರ್ಥವು.

ಗೋಮತೀಃ ಇಷಃ— ಗೋಮತೀ ಎಂಬ ಶಬ್ದವು ಇಷಃ ಎಂಬ ಶಬ್ದಕ್ಕೆ ವಿಶೇಷಣವು. ಗೋವುಗಳಿಂದ ಕೂಡಿದ ಅನ್ನ ಅಥವಾ ಆಹಾರವೆಂದರೆ ಗೋವುಗಳೂ ಮತ್ತು ಆಹಾರ ಇವುಗಳನ್ನು ಕೊಡಬೇಕೆಂದ ಭಿಪ್ರಾಯವು.

॥ ವ್ಯಾಕರಣಪ್ರಕ್ರಿಯಾ ॥

ಋಣವಃ— ಋಣು ಗತೌ ಧಾತು. ತನಾದಿ. **ಛಂದೆಸಿ ಲುಙ** (ಪಾ.ಸೂ. ೩-೪-೬) ಸೂತ್ರದಿಂದ ವರ್ತಮಾನಾರ್ಥದಲ್ಲಿ ಲಙ್. ಅದಕ್ಕೆ ಮಧ್ಯಮಪುರುಷ ಏಕವಚನ ವಿವಕ್ಷಾಮಾಡಿದಾಗ ಸಿಪ್ ಪ್ರತ್ಯಯ ಬರುತ್ತದೆ. ಮಧ್ಯೆ ತನಾದಿಯ ವಿಕರಣವಾದ ಉ ಪ್ರತ್ಯಯ ಬರುತ್ತದೆ. ಋಣ್+ಉ+ಸ್ ಎಂದಿರುವಾಗ ಪುನಃ **ವ್ಯತ್ಯಯೋ ಬಹುಲಂ** ಸೂತ್ರದಿಂದ **ಶಪ್** ವಿಕರಣ ಬರುತ್ತದೆ. ಆಗ ಶಪ್ ಪರದಲ್ಲಿರುವಾಗ ಉ ವಿಕರಣ ಪ್ರತ್ಯಯಕ್ಕೆ ಗುಣವಾದೇಶಗಳು ಬರುತ್ತವೆ. ಋಣವ್+ಅ+ಸ್ ಎಂದು ರೂಪವಿರುವಾಗ ರುತ್ವವಿಸರ್ಗಗಳು ಬಂದರೆ ಋಣವಃ ಎಂದು ರೂಪ ಸಿದ್ಧಿಯಾಗುತ್ತದೆ. ಇಲ್ಲಿ ಶಪ್ ಪಿತ್ತಾದುದರಿಂದ **ಅನುದಾತ್ತೌ ಸುಪ್ಪಿತೌ** ಸೂತ್ರದಿಂದ

ಅನುದಾತ್ತವಾಗುತ್ತದೆ. ಆಗ ಉ ವಿಕರಣಪ್ರತ್ಯಯದ ಸ್ವರವೇ ಸತಿಶಿಷ್ಯವಾಗುವುದರಿಂದ ಪ್ರಬಲವಾಗಿ ಆದ್ಯುದಾತ್ತವಾಗುತ್ತದೆ. ಋಣವಃ ಎಂಬುದು ಮಧ್ಯೋದಾತ್ತ ಪದವಾಗುತ್ತದೆ. ಯದದ್ಯ ಎಂದು ಹಿಂದೆ ಯಚ್ಛಬ್ದಸಂಬಂಧವಿರುವುದರಿಂದ **ಯದ್ವೃತ್ತಯೋಗಾನ್ನಿತ್ಯಂ** ಸೂತ್ರದಿಂದ ನಿಘಾತಪ್ರತಿಷೇಧ ಬರುವುದರಿಂದ ಸರ್ವಾನುದಾತ್ತವಾಗುವುದಿಲ್ಲ.

ದಿವಃ—ದಿವ್ ಶಬ್ದದ ಷಷ್ಠೀ ಏಕವಚನರೂಪ. **ಊಡಿದಂಪದಾದ್ಯಪ್ಪುನ್ಮೈದ್ಯುಭ್ಯಃ** (ಪಾ.ಸೂ. ೬-೧-೧೭೬) ಇವುಗಳ ಪರದಲ್ಲಿರುವ ಅಸರ್ವನಾಮಸ್ಥಾನ ವಿಭಕ್ತಿಯು ಉದಾತ್ತವಾಗುತ್ತದೆ ಎಂಬುದರಿಂದ ಇಲ್ಲಿ ಷಷ್ಠೀವಿಭಕ್ತಿಯು ಉದಾತ್ತವಾಗುತ್ತದೆ ದಿವಃ ಎಂಬುದು ಅಂತೋದಾತ್ತವಾದ ಪದವಾಗುತ್ತದೆ.

ಪುನಃ—**ನಿಕಾಜುತ್ತರಪದೇ ಣಃ**—(ಪಾ-ಸೂ. ೮-೪-೧೭) ಸೂತ್ರದಿಂದ ಪೂರ್ವಪದದ ನಿಮಿತ್ತದ ಪರದಲ್ಲಿರುವುದರಿಂದ ನಕಾರಕ್ಕೆ ಣತ್ವವು ಪ್ರಾಪ್ತವಾದರೆ **ಉಪಸರ್ಗಾದ್ಬಹುಲಂ** ಎಂದು ಬಹುಲವಚನ ಹೇಳಿರುವುದರಿಂದ ಇಲ್ಲಿ ನಸಿಗೆ ಣತ್ವ ಬರುವುದಿಲ್ಲ. ಬಹುಲವಚನ ಬಂದಲ್ಲಿ ಕೆಲವು ಕಡೆ ಅನಿತ್ಯವಾದರೂ ನಿತ್ಯವೆಂದೂ, ಕೆಲವುಕಡೆ ಬರುವಲ್ಲಿ ಬರುವುದಿಲ್ಲವೆಂದೂ, ಕೆಲವು ಕಡೆ ಅನಿತ್ಯವೆಂದೂ, ಕೆಲವುಕಡೆ ಸೂತ್ರಾರ್ಥವನ್ನು ಅತಿಕ್ರಮಿಸಿಯೂ ಕಾರ್ಯ ಬರುವುದೆಂದು ಪ್ರಾಚೀನರ ಅಭಿಪ್ರಾಯ.

ಯಚ್ಛತಾತ್—ದಾಣ್ ದಾನೆ ಧಾತು. ಭ್ವಾದಿ. ಲೋಟ್ ಮಧ್ಯಮಪುರುಷೈಕವಚನ ಸಿಪ್ ಪರದಲ್ಲಿರುವಾಗ ಶಪ್ ವಿಕರಣ ಬರುತ್ತದೆ. ಸಿಪ್ಪಿಗೆ **ತುಹ್ಯೋಸ್ತಾತಙ್ ಆಶಿಷ್ಯನ್ಯತರಸ್ಯಾಂ** (ಪಾ-ಸೂ. ೭-೧-೩೫) ಸೂತ್ರದಿಂದ ತಾತಙ್ ಆದೇಶ ಬರುತ್ತದೆ. ತಾತ್ ಎಂದು ಉಳಿಯುತ್ತದೆ. ಶಪ್ ಪರದಲ್ಲಿರುವಾಗ ಧಾತುವಿಗೆ **ಪಾಘ್ರಾಧ್ಮಾಸ್ಥಾ** (ಪಾ.ಸೂ. ೭-೩-೭೮) ಸೂತ್ರದಿಂದ ಯಚ್ಛ ಎಂಬ ಆದೇಶ ಬರುತ್ತದೆ. ಯಚ್ಛತಾತ್ ಎಂದು ರೂಪವು ಸಿದ್ಧವಾಗುತ್ತದೆ. ಆತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬಂದಿರುವುದರಿಂದ ಸರ್ವಾನುದಾತ್ತವಾಗುತ್ತದೆ.

ಅವೃಕಮ್—ನಾಸ್ತಿ ವೃಕೋ ಅಸ್ಮಿನ್ನಿತಿ ಅವೃಕಮ್. ಯಾವುದರಲ್ಲಿ ಹಿಂಸಾಕೃತ್ಯವಿಲ್ಲವೋ ಅದು ಅವೃಕ. (ಮನೆ) ಇದು ಬಹುವ್ರೀಹಿಸಮಾಸ. ಇದಕ್ಕೆ ಪೂರ್ವಪದಪ್ರಕೃತಿಸ್ವರವು ಪ್ರಾಪ್ತವಾದರೆ **ನಞ್‌ಸುಭ್ಯಾಂ** (ಪಾ.ಸೂ. ೬-೨-೧೭೨) ಸೂತ್ರದಿಂದ ನಞಿನ ಪರದಲ್ಲಿ ಉತ್ತರಪದ ಬಂದಿರುವುದರಿಂದ ಬಹುವ್ರೀಹಿಸಮಾಸವಾದುದರಿಂದಲೂ ಉತ್ತರಪದ ಅಂತೋದಾತ್ತಸ್ವರವು ಬರುತ್ತದೆ. ಅವೃಕಂ ಎಂಬುದು ಅಂತೋದಾತ್ತವಾದ ಶಬ್ದವಾಗುತ್ತದೆ.

ಪೃಥು—ಪ್ರಥ ಪ್ರಖ್ಯಾನೆ ಧಾತು. ಭ್ವಾದಿ. (ಚುರಾದಿ) ಇದಕ್ಕೆ ಪೃಥಿವ್ಯಾದಿಭ್ಯಸ್ಞಾಂ ಸಂಪ್ರಸಾರಣಂ ಸಲೋಪಶ್ಚ (ಉ.ಸೂ. ೧-೨೮) ಸೂತ್ರದಿಂದ ಕು ಪ್ರತ್ಯಯ ಬರುತ್ತದೆ. ಅದರ ಸಂನಿಯೋಗದಿಂದ ಸಂಪ್ರಸಾರಣವೂ ಬರುತ್ತದೆ. ಪ್ರಥ ಎಂಬಲ್ಲಿ ರೇಫಕ್ಕೆ ಋಕಾರರೂಪ ಸಂಪ್ರಸಾರಣವು ಬರುತ್ತದೆ. ಕು ಪ್ರತ್ಯಯದಲ್ಲಿ ಉಕಾರ ಉಳಿಯುತ್ತದೆ. ಪೃಥು ಎಂದು ರೂಪವಾಗುತ್ತದೆ.

ಛರ್ದಿಃ—ಛರ್ದಿ ಎಂಬುದು ಮನೆಗೆ ಹೆಸರು. ಉಛೃದಿರ್ ದೀಪ್ತಿದೇವನಯೋಃ ಧಾತು. ರುಧಾದಿ **ಅರ್ಚಿಶುಚಿ ಹು ಸೃಪಿಚ್ಛಾದಿಚ್ಛರ್ದಿರ್ಭ್ಯ ಇಸಿಃ** (ಉ.ಸೂ. ೨-೨೬೫) ಎಂಬ ಸೂತ್ರದಿಂದ ಇಲ್ಲಿ ಇಸಿ ಪ್ರತ್ಯಯ ಬರುತ್ತದೆ. ಉಛೃದಿರ್ ಧಾತುವಿನಲ್ಲಿ ಉಕಾರ ಇತ್ಸಂಜ್ಞೆಯಿಂದ ಲೋಪವಾಗುತ್ತದೆ. ಇರಿತ್ವಾದ ಧಾತು. ಛೃದ್+ಇಸ್ ಎಂದಿರುವಾಗ **ಪುಗಂತಲಘೂಪಧಸ್ಯ ಚ** ಸೂತ್ರದಿಂದ ಲಘೂಪಧಗುಣ ಬರುತ್ತದೆ. ಇಸಿನ ಸಕಾರಕ್ಕೆ ರುತ್ವವಿಸರ್ಗಗಳು ಬರುತ್ತವೆ. ಗುಣವು ರ ಪರವಾಗಿ ಬಂದರೆ ಛರ್ದಿಃ ಎಂದಾಗುತ್ತದೆ. ಪ್ರತ್ಯಯ ಸ್ವರದಿಂದ (ಆದ್ಯುದಾತ್ತ) ಛರ್ದಿ ಎಂಬುದು ಅಂತೋದಾತ್ತವಾದ ಪದವಾಗುತ್ತದೆ. ॥ ೧೫ ॥

ಸಂಹಿತಾಪಾಠಃ

ಸಂ ನೋ॑ ರಾ॒ಯಾ ಬೃ॑ಹ॒ತಾ ವಿ॒ಶ್ವಪೇ॑ಶಸಾ ಮಿಮಿಕ್ಷ್ವ॒ ಸಮಿ॑ಳಾ॒ಭಿರಾ ।
ಸಂ ದ್ಯು॒ಮ್ನೇನ॑ ವಿಶ್ವತು॒ರೋ॑ಷೋ॒ ಮಹಿ॒ ಸಂ ವಾ॒ಜೈರ್ವಾ॑ಜಿನೀವತಿ ॥ ೧೬ ॥

ಪದಪಾಠಃ

ಸಂ । ನಃ । ರಾ॒ಯಾ । ಬೃ॒ಹ॒ತಾ । ವಿ॒ಶ್ವಽಪೇ॑ಶಸಾ । ಮಿ॒ಮಿ॒ಕ್ಷ್ವ॒ । ಸಂ । ಇ॒ಳಾ॒ಭಿಃ । ಆ ।
ಸಂ । ದ್ಯು॒ಮ್ನೇನ॑ । ವಿ॒ಶ್ವ॒ತು॒ರಾ॒ । ಉ॒ಷ॒ಃ । ಮ॒ಹಿ॒ । ಸಂ । ವಾ॒ಜೈಃ । ವಾ॒ಜಿ॒ನೀ॒ವ॒ತಿ ॥ ೧೬ ॥

ಸಾಯಣಭಾಷ್ಯಂ

ಹೇ ಉಷೋ ನೋಽಸ್ಮಾನ್ರಾಯಾ ಧನೇನ ಸಂ ಮಿಮಿಕ್ಷ್ವ । ಸಂಸಿಂಚ । ಸಂಯೋಜಯೇತ್ಯರ್ಥಃ । ಕೀದೃಶೇನ ಧನೇನ । ಬೃಹತಾ ಪ್ರಭೂತೇನ ವಿಶ್ವಪೇಶಸಾ । ಪೇಶ ಇತಿ ರೂಪನಾಮ । ಬಹುವಿಧರೂಪಯುಕ್ತೇನ । ತಥೇಳಾಭಿರಾ ಗೋಭಿಶ್ಚಾಸ್ಮಾನ್ಸಂ ಮಿಮಿಕ್ಷ್ವ । ಇಳೇತಿ ಗೋನಾಮ । ಇಳಾ ಜಗತೀತಿ ತನ್ನಾಮಸು ಪಾಠಾತ್ । ಆಕಾರಃ ಸಮುಚ್ಚಯೇ ಪದಾಂತೇ ವರ್ತಮಾನತ್ವಾತ್ । ಉಕ್ತಂ ಚ । ಏತಸ್ಮಿನ್ನೇವಾರ್ಥೇ ದೇವೇಭ್ಯಶ್ಚ ಪಿತೃಭ್ಯ ಏತ್ಯಾಕಾರಃ । ನಿ. ೧-೪ । ಇತಿ । ಕಿಂಚ ಹೇ ಮಹಿ ಮಹನೀಯೇ ಉಷೋದೇವತೇ ದ್ಯುಮ್ನೇನ ಯಶಸಾ ಸಂ ಮಿಮಿಕ್ಷ್ವ । ದ್ಯುಮ್ನಂ ದ್ಯೋತತೇಃ ಯಶೋ ವಾನ್ನಂ ವೇತಿ ಯಾಸ್ಕಃ । ನಿ. ೫-೫ । ಕೀದೃಶೇನ ದ್ಯುಮ್ನೇನ । ವಿಶ್ವತುರಾ ಸರ್ವೇಷಾಂ ಶತ್ರೂಣಾಂ ಹಿಂಸಕೇನ । ತಥಾ ಹೇ ವಾಜಿನೀವತಿ ಅನ್ನಸಾಧನಭೂತಕ್ರಿಯಾಯುಕ್ತೇ ವಾಜೈರನ್ನೈರಸ್ಮಾನ್ಸಂ ಮಿಮಿಕ್ಷ್ವ । ಅನ್ನಂ ವೈ ವಾಜಃ । ಶತ. ಬ್ರಾ. ೯-೩-೪-೧ । ಇತಿ ಶ್ರುತ್ಯಂತರಾತ್ ॥ ರಾಯಾ । ಊಡಿದಮಿತ್ಯಾದಿನಾ ವಿಭಕ್ತೇರುದಾತ್ತತ್ವಂ । ಬೃಹತಾ । ಬೃಹನ್ಮಹತೋರುಪಸಂಖ್ಯಾನಮಿತಿ ವಿಭಕ್ತೇರುದಾತ್ತಾ । ವಿಶ್ವಪೇಶಸಾ । ವಿಶ್ವಾನಿ ಪೇಶಾಂಸಿ ಯಸ್ಯಾಸೌ ವಿಶ್ವಪೇಶಾಃ । ಬಹುವ್ರೀಹೌ ವಿಶ್ವಂ ಸಂಜ್ಞಾಯಾಮಿತಿ ವ್ಯತ್ಯಯೇನಾಸಂಜ್ಞಾಯಾಮಪಿ ಪೂರ್ವಪದಾಂತೋದಾತ್ತತ್ವಂ । ಯದ್ವಾ ಮರು-

ದ್ಯೃಧಾದಿರ್ದ್ರಷ್ಟವ್ಯಃ । ಮಿಮಿಕ್ಷ್ವ । ಮಿಹ ಸೇಚನೇ । ವ್ಯತ್ಯಯೇನಾತ್ಮನೇಪದಂ । ಲೋಟಿ ಬಹುಲಂ ಛಂದಸೀತಿ ಶಪಃ ಶ್ಲುಃ । ದ್ವಿರ್ಭಾವಹಲಾದಿಶೇಷೌ । ಷಕ್ಷಕಕ್ಷಷಷ್ಟಾನಿ ಪ್ರತ್ಯಯಸ್ವರಸ್ಯ ಸತಿಶಿಷ್ಟತ್ವಾತ್ಸ ಏವ ಶಿಷ್ಯತೇ । ಪೂರ್ವಪದಸ್ಯಾಸಮಾನವಾಕ್ಯಸ್ಥತ್ವಾತ್ತ್ವಿಜ್ಜತಿಜ ಇತಿ ನಿಘಾತೋ ನ ಭವತಿ । ಸಮಾನವಾಕ್ಯೇ ನಿಘಾತಯಜುಷ್ಮದಸ್ಮದಾದೇಶಾ ವಕ್ತವ್ಯಾ ಇತಿ ವಚನಾತ್ । ವಿಶ್ವತುರಾ । ತೂರ್ವತೀತಿ ತೂಃ ತುರ್ವೀ ಹಿಂಸಾರ್ಥಃ । ಕ್ವಿಪ್ಚೇತಿ ಕ್ವಿಪ್ । ರಾಲ್ಲೋಪ ಇತಿ ವಲೋಪಃ । ವಿಶ್ವೇಷಾಂ ತೂರ್ವಿಶ್ವತೂಃ । ಸಮಾಸಸ್ಯೇತ್ಯಂತೋದಾತ್ತತ್ವಂ । ವಾಜನೀವತಿ । ವಾಜೋಽನ್ನಮಸ್ಯಾ ಅಸ್ತೀತಿ ವಾಜಿನೀ ಕ್ರಿಯಾ । ತಾದೃಶೀ ಕ್ರಿಯಾ ಯಸ್ಯಾಃ ಸಾ ತಥೋಕ್ತಾ ॥ ೫ ॥

॥ ಪ್ರತಿಪದಾರ್ಥ ॥

ಉಷಃ—ಎಲೈ ಉಷೋದೇವಿಯೇ । **ನಃ**—ನಮ್ಮನ್ನು । **ಬೃಹತಾ**—ಅತ್ಯಧಿಕವಾಗಿಯೂ, ಪ್ರಭೂತವಾಗಿಯೂ । **ವಿಶ್ವಪೇಶಸಾ**—ಬಹುವಿಧವಾದ ರೂಪವುಳ್ಳದಾಗಿಯೂ ಇರುವ । **ರಾಯಾ**—ಧನದೊಂದಿಗೆ । **ಸಂ ಮಿಮಿಕ್ಷ್ವ**—ಸಂಯೋಜಿಸು. (ಹಾಗೆಯೇ) । **ಇಳಾಭಿಃ ಆ**—ಬಹು ಸಂಖ್ಯಾತಗಳಾದ ಗೋವುಗಳೊಡನೆಯೂ । **ಸಂ (ಮಿಮಿಕ್ಷ್ವ)**—ಸಂಯೋಜಿಸು । **ಮಹಿ**—ಪೂಜ್ಯಳಾದ ಉಷೋದೇವಿಯೇ । **ವಿಶ್ವತುರಾ**—ಸಕಲಶತ್ರುಗಳನ್ನೂ ಹಿಂಸೆಮಾಡುವ (ಅವರನ್ನು ಜಯಿಸುವುದರಿಂದ ಲಭಿಸುವ) ಯಶಸ್ಸಿನೊಡನೆ । **ಸಂ ಮಿಮಿಕ್ಷ್ವ** ಸಂಯೋಜಿಸು । **ವಾಜಿನೀವತಿ**—ಅನ್ನಸಾಧನವಾದ ಕ್ರಿಯೆಯಿಂದ ಕೂಡಿದ ದೇವಿಯೇ, **ವಾಜೈಃ**—ಅನ್ನಗಳೊಂದಿಗೆ । **(ಸಂ ಮಿಮಿಕ್ಷ್ವ)**—(ನಮ್ಮನ್ನು) ಸೇರಿಸು.

॥ ಭಾವಾರ್ಥ ॥

ಪೂಜ್ಯಳೂ, ಅನ್ನವನ್ನು (ಆಹಾರವನ್ನು) ಕೊಡುವವಳೂ ಆದ ಎಲೈ ಉಷೋದೇವಿಯೇ, ನಮಗೆ ಬಹುವಿಧರೂಪಗಳುಳ್ಳ ಅತ್ಯಧಿಕವಾದ ಧನಗಳನ್ನೂ, ಬಹುಸಂಖ್ಯಾತಗಳಾದ ಗೋವುಗಳನ್ನೂ, ಸಕಲ ಶತ್ರುಗಳನ್ನೂ ಜಯಿಸುವ ಯಶಸ್ಸನ್ನೂ ಮತ್ತು ಅನ್ನಗಳನ್ನೂ ಕೊಟ್ಟು ಅನುಗ್ರಹಿಸು.

English Translation.

Adorable Ushas, associate us with (grant us) different kinds of wealth liberally; O giver of food, grant us abundant cattle and fame which can be got by conquering our enemies.

॥ ವಿಶೇಷ ವಿಷಯಗಳು ॥

ಮುಖ್ಯಾಭಿಪ್ರಾಯವು—ಎಲೈ ಉಷೋದೇವತೆಯೇ, ನೀನು ನಮಗೆ ಬಹಳವೂ ನಾನಾವಿಧವೂ ಆದ ಧನಗಳನ್ನೂ, ಗೋವುಗಳನ್ನೂ ಅನ್ನವನ್ನೂ (ಆಹಾರವನ್ನು) ಶತ್ರುಗಳನ್ನು ಜಯಿಸುವುದರಿಂದ ಲಭಿಸುವ ಯಶಸ್ಸನ್ನೂ ಬಹಳವಾಗಿ ಕೊಡು.

ಸಂ ಮಿಮಿಕ್ಷ್ವ—ಮಿಹ ಸೇಚನೇ । **ಸಂಸಿಂಚ** । **ಸಂಯೋಜಯೇತ್ಯರ್ಥಃ** । ನೀರಿನಿಂದ ನೆನೆಸುವಂತೆ ನಮಗೆ ಬೇಕಾದ ಧನಾದಿಗಳಿಂದ ನಮ್ಮನ್ನು ತೃಪ್ತಿಪಡಿಸು ಎಂದರ್ಥವು. ವೇದಗಳಲ್ಲಿ ಸೇಚನಶಬ್ದವು

ಬಹಳವಾಗಿ ಕೊಡು ಎಂಬರ್ಥದಲ್ಲಿ ಉಪಯೋಗಿಸಲ್ಪಡುವುದು.—ಉದಾಹರಣೆಗಾಗಿ—ಸಂತ್ವಾ **ಸಿಂಚಾಮಿ ಯೆಜುಷಾ ಪ್ರಜಾಮಾಯುರ್ಧನಂ ಚ** ಎಂದು ತೈತ್ತಿರೀಯ ಸಂಹಿತೆಯ ವಾಕ್ಯವಿರುವುದು (ತೈ. ಸಂ ೧-೬-೧೧)

ಇಳಾಭಿ:—ಇಳಾಶಬ್ದಕ್ಕೆ ಪೃಥಿವೀ (ನಿ. ೨-೫) ವಾಕ್ಯ (ನಿ. ೨-೨೩) ಅನ್ನ, (ನಿ. ೨-೯) ಗೋವು (ನಿ. ೩-೯) ಎಂಬ ಅನೇಕಾರ್ಥಗಳಿರುವವು. ಇವುಗಳಲ್ಲಿ ಅನ್ನ ಅಥವಾ ಗೋವು ಎಂಬ ಅರ್ಥವನ್ನು ಇಲ್ಲಿ ಸ್ವೀಕರಿಸಬಹುದು.

ದ್ಯುಮ್ನೈನ—**ದ್ಯೋತತೇರ್ಯಶೋ ವಾನ್ನಂ ವಾ**—(ನಿ. ೫-೫) ದ್ಯುಮ್ನಶಬ್ದಕ್ಕೆ ಯಶಸ್ಸು ಮತ್ತು ಅನ್ನವೆಂಬ ಅರ್ಥಗಳಿರುವವು. ಈ ಋಕ್ಕಿನಲ್ಲಿರುವ ಇಳಾಶಬ್ದಕ್ಕೆ ಅನ್ನವೆಂಬ ಅರ್ಥವನ್ನು ಸ್ವೀಕರಿಸಿದಲ್ಲಿ ದ್ಯುಮ್ನ ಶಬ್ದಕ್ಕೆ ಯಶಸ್ಸೆಂಬ ಅರ್ಥವನ್ನು ಹೇಳಬೇಕು.

ವಿಶ್ವತುರಾ—**ತೂರ್ವತೀತಿ ತೂಃ। ತುರ್ವೀ ಹಿಂಸಾರ್ಥಃ। ವಿಶ್ವೇಷಾಂ ತೂಃ ವಿಶ್ವತೂಃ। ಸರ್ವೇಷಾಂ ಶತ್ರೂಣಾಂ ಹಿಂಸಕೇನ**॥ ವಿಶ್ವ = ಸಮಸ್ತ ಶತ್ರುಗಳನ್ನು, ತುರಾ—ಹಿಂಸೆಮಾಡುವ (ಜಯಿಸುವ) ಶತ್ರುಜಯದಿಂದ ಉಂಟಾದ ಯಶಸ್ಸೆಂದಭಿಪ್ರಾಯವು ಈ ಶಬ್ದವು ದ್ಯುಮ್ನೈನ ಎಂಬ ಶಬ್ದಕ್ಕೆ ವಿಶೇಷಣವು.

ವಾಜಿನೀವತಿ—**ಅನ್ನವತಿ**। ವಾಜವೆಂದರೆ ಅನ್ನವು (ನಿ. ೩-೯). **ಅನ್ನಂ ವೈ ವಾಜಃ** ಎಂದು ಶತಪಥ ಬ್ರಾಹ್ಮಣವಾಕ್ಯವಿರುವುದು (ಶತ. ಬ್ರಾ. ೯-೩-೪-೧) ವಾಜಿನೀವತಿ ಎಂದರೆ ಅನ್ನ (ಆಹಾರ) ವುಳ್ಳವಳು ಎಂದರೆ ಅನ್ನವನ್ನು ಕೊಡಲು ಶಕ್ತಿಯುಳ್ಳವಳು.

॥ ವ್ಯಾಕರಣಪ್ರಕ್ರಿಯಾ ॥

ರಾಯೋ—ರೈ ಎಂಬುದು ಧನವಾಚಿಯಾದ ಐಕಾರಾಂತವಾದ ಶಬ್ದ. ತೃತೀಯಾ ವಿಭಕ್ತಿ ಏಕವಚನ ಟಾ ವಿವಕ್ಷಾನುಮಾಡಿದಾಗ ಆಯಾದೇಶ ಬಂದರೆ ರಾಯಾ ಎಂದು ರೂಪವಾಗುತ್ತದೆ. **ಊಡಿದಂಪದಾದ್ಯೈಪ್ಪೈ ಮ್ಪೈದ್ಯುಭ್ಯಃ** (ಪಾ. ಸೂ. ೬-೧-೧೭೬) ಇವುಗಳ ಪರದಲ್ಲಿರುವ ಅಸರ್ವನಾಮಸ್ಥಾನ ವಿಭಕ್ತಿಯು ಉದಾತ್ತವಾಗುತ್ತದೆ ಎಂಬುದರಿಂದ ಟಾ ವಿಭಕ್ತಿಯು ಉದಾತ್ತವಾಗುತ್ತದೆ. ರಾಯಾ ಎಂಬುದು ಅಂತೋದಾತ್ತವಾದ ಪದವಾಗುತ್ತದೆ.

ಬೃಹತಾ—ಬೃಹತ್ ಶಬ್ದದಮೇಲೆ ತೃತೀಯಾ ಏಕವಚನ ಪರವಾಗಿರುವಾದ ಬೃಹತಾ ಎಂದು ರೂಪವಾಗುತ್ತದೆ. ಸುಪ್ತಿಗೆ ಅನುದಾತ್ತಸ್ವರವು, ಪ್ರಾಪ್ತವಾದರೆ **ಬೃಹನ್ಮಹತೋರುಪಸಂಖ್ಯಾನಮ್** ಈ ಎರಡು ಪದದ ಪರದಲ್ಲಿರುವ ವಿಭಕ್ತಿಯು ಉದಾತ್ತವಾಗುತ್ತದೆ ಎಂಬುದರಿಂದ ಉದಾತ್ತಸ್ವರ ಬರುತ್ತದೆ. ಆಗ ಬೃಹತಾ ಎಂಬುದು ಅಂತೋದಾತ್ತವಾದ ಶಬ್ದವಾಗುತ್ತದೆ.

ವಿಶ್ವಪೇಶಸಾ—ವಿಶ್ವಾನಿ ಪೇಶಾಂಸಿ ಯಸ್ಯ ಅಸೌ ವಿಶ್ವಪೇಶಾಃ ಯಾರಿಗೆ ನಾನಾವಿಧವಾದ ರೂಪಗಳಿವೆಯೋ ಅವನು ವಿಶ್ವಪೇಶಾಃ ಬಹುವ್ರೀಹಿಸಮಾಸ. **ಬಹುವ್ರೀಹೌ ವಿಶ್ವಂ ಸಂಜ್ಞಾಯಾಂ** (ಪಾ. ಸೂ. ೬-೨-೧೦೬) ಬಹುವ್ರೀಹಿಯಲ್ಲಿ ಸಂಜ್ಞಾತೋರುತ್ತಿರುವಾಗ ಪೂರ್ವಪದವಾದ ವಿಶ್ವಶಬ್ದವು ಅಂತೋದಾತ್ತ ಸ್ವರವನ್ನು ಹೊಂದುವುದು. ಇಲ್ಲಿ ವಿಶ್ವಶಬ್ದವು ಪೂರ್ವಪದವಾಗಿದೆ. ಆದರೆ ಸಂಜ್ಞಾತೋರುವುದಿಲ್ಲ. ಆದರೂ ಅಂತೋದಾತ್ತಸ್ವರವು ಬಂದಿರುವುದರಿಂದ **ಮೃತ್ಯ್ವೋಬಹುಲಂ** ಸೂತ್ರದಿಂದ ಸಂಜ್ಞಾತೋರದಿದ್ದರೂ ಪೂರ್ವ ಸೂತ್ರದಿಂದ ವಿಶ್ವಶಬ್ದಕ್ಕೆ ಅಂತೋದಾತ್ತಸ್ವರ ಬರುತ್ತದೆ ಎಂದು ಸ್ವೀಕರಿಸಬೇಕು. ಅಥವಾ ಮುರುದ್ಭೃಧಾದಿಗಣವು ಆಕೃತಿಗಣವಾದುದರಿಂದ ಅವುಗಳಿಗೆ ಅಂತೋದಾತ್ತವನ್ನು ವಿಧಿಸಿರುವುದರಿಂದ ವಿಶ್ವಪೇಶಶ್ಶಬ್ದವನ್ನು ಆ ಗಣದಲ್ಲಿ ಪಾಠಮಾಡಿದೆ ಎಂದು ಅಂಗೀಕರಿಸಬೇಕು. ಆಗ ಸ್ವರಿತವಾಗಿ ಪೂರ್ವಪದಾಂತೋದಾತ್ತ ಸ್ವರವು ಬರುತ್ತದೆ.

ಮಿಮಿಕ್ಷ್ವ—ಮಿಹ ಸೇಚನೆ ಧಾತು. ಭ್ವಾದಿ. ಇದು ಪ್ರರಸ್ಮೈಪದಿಯಾದ ಧಾತು. ಆದರೆ **ಇಲ್ಲಿ ವ್ಯತ್ಯಯೋ ಬಹುಲಂ** ಸೂತ್ರದಿಂದ ವ್ಯತ್ಯಯದಿಂದ ಆತ್ಮನೇ ಪದಪ್ರತ್ಯಯ ಬರುತ್ತದೆ ಎಂದು ಸ್ವೀಕರಿಸ ಬೇಕು. ಲೋಟ್‌ಮಧ್ಯಮಪುರುಷ ಏಕವಚನ ಪ್ರತ್ಯಯ ವಿವಕ್ಷಾವಾಡಿದಾಗ ಮಿಹ್ + ಥಾಸ್. ಎಂದಿರುವಾಗ ಥಾಸಿಗೆ ಸೆ ಆದೇಶ ಬರುತ್ತದೆ. **ಸವಾಭ್ಯಾಂವಾಮ್** ಸೂತ್ರದಿಂದ ಸಕಾರೋತ್ತರ ಎಕಾರಕ್ಕೆ ವ ಎಂಬ ಆದೇಶ ಬರುತ್ತದೆ. ಮಿಹ್ + ಸ್ವ ಎಂದಾಗುತ್ತದೆ. ಇದು ಭ್ವಾದಿಯಾದುದರಿಂದ ಶಪ್ ವಿಕರಣಪ್ರತ್ಯಯವು ಪ್ರಾಪ್ತ ವಾದರೆ ವ್ಯತ್ಯಯದಿಂದ **ಬಹುಲಂ ಛಂದಸಿ** (ಪಾ. ಸೂ. ೨-೪-೭೩) ಸೂತ್ರದಿಂದ ಶಪಿಗೆ ಶ್ಲು ವಿಕರಣ ಬರುತ್ತದೆ. ಆಗ **ಶ್ಲೌ** (ಪ್ರಾ. ಸೂ. ೬-೧-೧೦) ಸೂತ್ರದಿಂದ ಧಾತುವಿಗೆ ದ್ವಿತ್ವ ಬರುತ್ತದೆ. ಅಭ್ಯಾಸಕ್ಕೆ ಹಲಾದಿಶೇಷಬಂದರೆ ಮಿಮಿಹ್ + ಸ್ವ ಎಂದು ಆಗುತ್ತದೆ. **ಹೋಢಃ** (ಪಾ. ಸೂ. ೮-೨-೩೧) ಸೂತ್ರದಿಂದ ಹಕಾರಕ್ಕೆ ಢಕಾರಬರುತ್ತದೆ. **ಷಢೋಃ ಕಃ ಸಿ** (ಪಾ. ಸೂ. ೮-೨-೪೧) ಸೂತ್ರದಿಂದ ಆ ಢಕಾರಕ್ಕೆ ಸಕಾರಪರದಲ್ಲಿರುವುದರಿಂದ ಕಕಾರವು ಬರುತ್ತದೆ. ಕಕಾರದಪರದಲ್ಲಿ ಸಕಾರಬಂದಿರುವುದರಿಂದ **ಸ್ಕಾರ**ಕ್ಕೆ ಷತ್ವಬರುತ್ತದೆ. ಕಕಾರ ಷಕಾರಯೋಗದಿಂದ ಕ್ಷಕಾರವಾಗುತ್ತದೆ. ಮಿಮಿಕ್ಷ್ವ ಎಂದು ರೂಪವಾಗುತ್ತದೆ. ಪ್ರತ್ಯಯದ ಆದ್ಯುದಾತ್ತಸ್ವರವು ಸತಿಶಿಷ್ಟವಾಗಿರು ವುದರಿಂದ ಆದೇ ಉಳಿಯುತ್ತದೆ. ಮಿಮಿಕ್ಷ್ವ ಎಂಬುದು ಆಂತೋದಾತ್ತವಾದ ಪದವಾಗುತ್ತದೆ. **ಸಮಾನವಾಕ್ಯೇ ನಿಘಾತಯೆುಷ್ಮದಸ್ಮದಾದೇಶಾ ವಕ್ತವ್ಯಾ** ಎಂದು ವಿಶೇಷವಾಗಿ ವಾರ್ತಿಕಕಾರರು ಹೇಳಿರುವುದರಿಂದ ಇಲ್ಲಿ ಪೂರ್ವ ಪದವು ಹಿಂದಿನವಾಕ್ಯದಲ್ಲಿಯೇ ಅನ್ವಯಿಸಿರುವುದರಿಂದ ಮಿಮಿಕ್ಷ್ವ ಎಂಬುದು ಸಮಾನವಾಕ್ಯದಲ್ಲಿರುವ ಪೂರ್ವಪದದ ಪರದಲ್ಲಿ ಬರಲಿಲ್ಲ. ಆದುದರಿಂದ **ತಿಙ್ಚಿತಿಜಿಃ** ಸೂತ್ರದಿಂದ ನಿಘಾತಬರುವುದಿಲ್ಲ.

ವಿಶ್ವತುರಾ—ತೂರ್ವತಿ ಇತಿ ತೂಃ. ಹಿಂಸೆಮಾಡುವವನು ಎಂದರ್ಥ. ತುರ್ವೀ ಹಿಂಸಾಯಾಂ ಧಾತು. (ಇತರ ಧಾತುವಿನೊಡನೆ ಸೇರಿ ಹಿಂಸಾರ್ಥದಲ್ಲಿ ಪಠಿತವಾಗಿದೆ) **ಕ್ವಿಪ್ ಚ** (ಪಾ. ಸೂ ೩-೨-೭೬) ಸೂತ್ರದಿಂದ ಕ್ವಿಪ್ ಪ್ರತ್ಯಯ ಬರುತ್ತದೆ. ಕ್ವಿಪಿನಲ್ಲಿ ಸರ್ವವೂ ಲೋಪವಾಗುತ್ತದೆ ತುರ್ವ್+ಕ್ವಿಪ್ ಎಂದಿರುವಾಗ **ರಾಲ್ಲೋಪಃ** (ಪಾ. ಸೂ. ೬-೪-೨೧) ರೇಫದ ಪರದಲ್ಲಿರುವ ಛಕಾರ ವಕಾರಗಳಿಗೆ ಕ್ವಿಪ್ ಮತ್ತು ಏನುನಾಸಿಕಾದಿ ಝಲಾದಿ ಪ್ರತ್ಯಯಪರದಲ್ಲಿರುವಾಗ ಲೋಪಬರುತ್ತದೆ ಎಂಬುದರಿಂದ ಇಲ್ಲಿ ರೇಫನಪರದಲ್ಲಿ ವಕಾರಪರದಲ್ಲಿರುವುದರಿಂದ ಲೋಪಬರುತ್ತದೆ; ತುರ್ ಎಂದು ರೇಫಾಂತ ಶಬ್ದವಾಗುತ್ತದೆ ಇದಕ್ಕೆ ಸುಪರನಲ್ಲಿರುವಾಗ **ಪೋರುಸಧಾಯಾ ದೀರ್ಘ ಇತಃ** ಸೂತ್ರದಿಂದ ಇಕಿಗೆ ದೀರ್ಘ ಬರುತ್ತದೆ. ಹಲಿನ ಪರದಲ್ಲಿರುವುದರಿಂದ ಸುಲೋಪವಾಗುತ್ತದೆ. ರೇಫಕ್ಕೆ ವಿಸರ್ಗಬಂದರೆ ತೂಃ ಎಂದು ರೂಪವಾಗುತ್ತದೆ. **ವಿಶ್ಲೇಷಾಂ ತೂಃ ವಿಶ್ವತೂಃ** ಸರ್ವವನ್ನೂ ಹಿಂಸಿಸು ವವನು ಎಂದರ್ಥ. **ಸವಾಸಸ್ಯ** (ಪ್ರಾ. ಸೂ ೬-೧-೨೩) ಸವಾಸಕ್ಕೆ ಆಂತೋದಾತ್ತ ಬರುತ್ತದೆ ಎಂಬುದರಿಂದ ಆಂತೋದಾತ್ತ ಸ್ವರಬರುತ್ತದೆ. ವಿಶ್ವತುರ್ ಎಂಬುದು ಆಂತೋದಾತ್ತ ಶಬ್ದ. ಇದಕ್ಕೆ ತೃತೀಯಾಏಕವಚನದಲ್ಲಿ ವಿಶ್ವತುರಾ ಎಂದು ರೂಪವಾಗುತ್ತದೆ.

ವಾಜಿನೀವತಿ—ವಾಜಃ ಅನ್ನಂ ಅಸ್ಯಾಃ ಅಸ್ತಿ ಇತಿ ವಾಜಿನೀ ಕ್ರಿಯಾ ಅನ್ನಸಂಪಾದಕವಾದ ವ್ಯಾಪಾರವೆಂದರ್ಥ. ಮತ್ವರ್ಥದಲ್ಲಿ ಇನಿಪ್ರತ್ಯಯ ಬರುತ್ತದೆ. ನಾಂತವಾಗುದರಿಂದ ಙೀಪ್ ಬರುತ್ತದೆ. ವಾಜಿನೀ ಕ್ರಿಯಾ ಯಸ್ಯಾಃ ಸಾ ವಾಜಿನೀವತೀ ಅನ್ನಸಂಪಾದಕವಾದ ಕ್ರಿಯೆಉಳ್ಳವಳು ಎಂದರ್ಥ. ಮತುಪ್ ಪ್ರತ್ಯಯ ಬಂದು **ಉಗಿತಶ್ಚ** ಸೂತ್ರದಿಂದ ಙೀಪ್ ಬರುತ್ತದೆ. ಮತುಪಿನ ಮಕಾರಕ್ಕೆ **ಸಂಜ್ಞಾಯಾಂ** (ಪಾ. ಸೂ ೮-೩-೧೧) ಸೂತ್ರದಿಂದ ಷಕಾರ ಬರುತ್ತದೆ. ಸಂಬುದ್ಧಿಯಲ್ಲಿ ಹ್ರಸ್ವಬಂದು ಸುಲೋಪಬರುವುದರಿಂದ ವಾಜಿನೀವತಿ ಎಂದು ರೂಪವಾಗುತ್ತದೆ ಎಂಟನೇ ಅಧ್ಯಾಯದ **ಆಮಂತ್ರಿತಸ್ಯ ಚ** ಸೂತ್ರದಿಂದ ನಿಘಾತಸ್ವರ ಬರುತ್ತದೆ. ವಾಜಿನೀವತಿ ಎಂಬುದು ಸರ್ವಾನುದಾತ್ತವಾದ ಶಬ್ದ. ॥೧೬॥

ನಲವತ್ತೊಂಭತ್ತನೆಯ ಸೂಕ್ತವು

ಉಷೋ ಭದ್ರೇಭಿರಿತಿ ಚತುರ್ಋಚಂ ಷಷ್ಠಂ ಸೂಕ್ತಂ । ಅತ್ರಾನುಕ್ರಮ್ಯತೇ । ಉಷಶ್ಚತುಷ್ಕಮಾನುಷ್ಟುಭಂ ತ್ವಿತಿ । ಕಣ್ವಪುತ್ರಃ ಪ್ರಸ್ಕಣ್ವ ಋಷಿಃ । ತುಹ್ಯಾದಿಪರಿಭಾಷಯೇದಮುತ್ತರಂ ಚಾನುಷ್ಟುಭಂ । ಪೂರ್ವತ್ರೋಷಸ್ಕಂ ತ್ವಿತ್ಯುಕ್ತತ್ವಾದಿದಮಪಿ ಸೂಕ್ತಮುಷಸ್ಯಂ । ಪ್ರಾತರನುವಾಕಸ್ಯೋಷಸ್ಯೇ ಕ್ರತಾವಾನುಷ್ಟುಭೇ ಛಂದಸ್ಯೇತತ್ಸೂಕ್ತಂ । ಸೂತ್ರ್ಯತೇ ಹಿ । ಉಷೋ ಭದ್ರೇಭಿರಿತ್ಯಾನುಷ್ಟುಭಂ । ಆ. ೪-೧೪ । ಇತಿ ॥ ಆಶ್ವಿನಶಸ್ತ್ರೇಽಪ್ಯೇತತ್ಸೂಕ್ತಂ । ಪ್ರಾತರನುವಾಕನ್ಯಾಯೇನ । ಆ ೬-೫ । ಇತ್ಯತಿದೇಶಾತ್ ॥

ಅನುವಾದ—**ಉಷೋ ಭದ್ರೇಭಿಃ** ಎಂಬುವುದು ಈ ಒಂಭತ್ತನೆಯ ಅನುವಾಕದಲ್ಲಿ ಆರನೆಯ ಸೂಕ್ತವು. ಇದರಲ್ಲಿ ನಾಲ್ಕು ಋಕ್ಕುಗಳಿರುವವು. ಅನುಕ್ರಮಣಿಕೆಯಲ್ಲಿ—**ಉಷೋ ಭದ್ರೇಭಿಃ** ಎಂಬ ಸೂಕ್ತವು ಅನುಷ್ಟುಪ್ ಛಂದಸ್ಸಿನಿಂದ ಕೂಡಿದ ನಾಲ್ಕು ಋಕ್ಕುಗಳುಳ್ಳ ಸೂಕ್ತವು ಎಂದಿರುವುದು. ಈ ಸೂಕ್ತಕ್ಕೆ ಕಣ್ವಋಷಿಯ ಪುತ್ರನಾದ ಪ್ರಸ್ಕಣ್ವನೆಂಬುವನು ಋಷಿಯು. ಅನುಷ್ಟುಪ್ ಛಂದಸ್ಸು. ಉಷೋ ದೇವತೆಯು. ಪ್ರಾತರನುವಾಕಪಠನಮಾಡುವಾಗ ಉಷಸ್ಯಕ್ರತುಮಂತ್ರಗಳಲ್ಲಿ ಅನುಷ್ಟುಪ್ ಛಂದಸ್ಸಿನ ಋಕ್ಕುಗಳನ್ನು ಪಠಿಸುವುದಕ್ಕಾಗಿ ಈ ಸೂಕ್ತವನ್ನು ಉಪಯೋಗಿಸುವರು. ಈ ವಿಷಯವು ಆಶ್ವಲಾಯನಶ್ರೌತಸೂತ್ರದಲ್ಲಿ **ಉಷೋ ಭದ್ರೇಭಿರಿತ್ಯಾನುಷ್ಟುಭಂ** ಎಂಬ ಸೂತ್ರದಿಂದ ಉಕ್ತವಾಗಿರುವುದು. (ಆ. ೪-೧೪) ಮತ್ತು ಅಲ್ಲಿಯೇ **ಪ್ರಾತರನುವಾಕನ್ಯಾಯೇನ** (ಆ. ೬-೫) ಎಂಬ ಸೂತ್ರದಿಂದ ಈ ಸೂಕ್ತವನ್ನು ಆಶ್ವಿನಶಸ್ತ್ರಮಂತ್ರಪಠನಕ್ಕಾಗಿಯೂ ಉಪಯೋಗಿಸಬೇಕೆಂದು ಹೇಳಲ್ಪಟ್ಟಿರುವುದು.

ಸೂಕ್ತ—೪೯

ಮಂಡಲ—೧ ॥ ಅನುವಾಕ—೯ ॥ ಸೂಕ್ತ—೪೯ ॥
ಅಷ್ಟಕ—೧ ॥ ಅಧ್ಯಾಯ—೪ ॥ ವರ್ಗ—೬ ॥

ಸೂಕ್ತದಲ್ಲಿರುವ ಋಕ್ಸಂಖ್ಯೆ—೪
ಋಷಿಃ—ಪ್ರಸ್ಕಣ್ವಃ ಕಾಣ್ವಃ ॥
ದೇವತಾ— ಉಷಾಃ ॥
ಛಂದಃ—ಅನುಷ್ಟುಪ್

॥ ಸಂಹಿತಾಪಾಠಃ ॥

ಉಷೋ᳡ ಭದ್ರೇಭಿರಾ ಗ᳡ಹಿ ದಿವಶ್ಚಿದ್ರೋಚನಾದಧಿ ।
ವಹನ್ತ್ವರುಣಪ್ಸವ ಉಪ᳡ ತ್ವಾ ಸೋಮಿನೋ᳡ ಗೃಹಂ ॥ ೧ ॥

॥ ಪದಪಾಠಃ ॥

ಉಷಃ । ಭದ್ರೇಭಿಃ । ಆ । ಗಹಿ । ದಿವಃ । ಚಿತ್ । ರೋಚನಾತ್ । ಅಧಿ ।
ವಹಂತು । ಅರುಣಾಸ್ಸವಃ । ಉಪ । ತ್ವಾ । ಸೋಮಿನಃ । ಗೃಹಂ ॥ ೧ ॥

॥ ಸಾಯಣಭಾಷ್ಯಂ ॥

ಹೇ ಉಷ ಉಷೋದೇವತೇ ಭದ್ರೇಭಿರ್ಭಂದನೀಯೈಃ ಶೋಭನೈರ್ಮಾರ್ಗೈರ್ದಿವೋಽಂತರಿಕ್ಷ-ಲೋಕಾತ್ ರೋಚನಾದ್ರೋಚಮಾನಾದ್ದೀಪ್ಯಮಾನಾತ್ । ಅಧಿರುಪರ್ಯರ್ಥಃ । ಉಪರಿ ವರ್ತಮಾನಾತ್ । ಚಿದಿತಿ ಪೂಜಿತಾರ್ಥಃ । ಪೂಜಿತಾದೇವಂವಿಧಾದಂತರಿಕ್ಷಲೋಕಾದಾ ಗಹಿ । ಆ ಗಚ್ಛ । ಹೇ ಉಷಃ ಅರುಣ-ಪ್ಸವೋಽರುಣವರ್ಣಾ ಗಾವಃ ಸೋಮಿನಃ ಸೋಮಯುಕ್ತಸ್ಯ ಯಜಮಾನಸ್ಯ ಗೃಹಂ ದೇವಯಜನರೂಪಂ ಯಜ್ಞಗೃಹಂ ತ್ವಾ ತ್ವಾಮುಪವಹಂತು । ಪ್ರಾಪಯಂತು ॥ ಗಹಿ । ಗಮೇರ್ಲೋಟಿ ಬಹುಲಂ ಛಂದಸೀತಿ ಶಪೋ ಲುಕ್ । ಹೇರಪಿತ್ತ್ವೇನ ಙಿತ್ತ್ವೇನ ಚಾನುದಾತ್ತೋಪದೇಶೇತ್ಯಾದಿನಾನುನಾಸಿಕಲೋಪಃ । ಅತೋ ಹೇರಿತಿ ಲುಗ್ನ ಭವತಿ । ಆಸಿದ್ಧವದತ್ರಾ ಭಾದಿತ್ಯನುನಾಸಿಕಲೋಪಸ್ಯಾಸಿದ್ಧತ್ವಾತ್ । ರೋಚನಾತ್ । ರುಚ ದೀಪ್ತೌ । ಅನುದಾತ್ತೇತಶ್ಚ ಹಲಾದೇರಿತಿ ಯುಚ್ । ಯೋರನಾದೇಶೇ ಚಿತ ಇತ್ಯಂತೋದಾತ್ತತ್ವಂ। ಅರುಣಪ್ಸವಃ । ಪ್ಸಾ ಭಕ್ಷಣೇ । ಪ್ಸಾಂತಿ ಭಕ್ಷಯಂತಿ ಸ್ತನಂ ಪಿಬಂತೀತಿ ಪ್ಸವೋ ವತ್ಸಾಃ । ಔಣಾದಿಕಃ ಕುಪ್ರತ್ಯಯಃ । ಅತೋ ಲೋಪೇ ಇಟಿ ಚೇತ್ಯಾಕಾರಲೋಪಃ । ಅರುಣಾಃ ಪ್ಸವೋ ಯಾಸಾಂ ತಾಸ್ತ-ಥೋಕ್ತಾಃ । ಅತ್ರ ವತ್ಸಾನಾಮಾರುಣ್ಯಪ್ರತಿಪಾದನಾನ್ಮಾತೃಣಾಮಪಿ ತಥಾತ್ವಂ ಗಮ್ಯತೇ । ಪೈತೃಕಮಶ್ವಾ ಅನುಹರಂತೇ ಮಾತೃಕಂ ಗಾವೋಽನುಹರಂತೇ । ಮ ೧-೩-೨೧. ೫ । ಇತಿ ಗೋನರ್ದೀಯಃ । ತಾಸಾಂ ಚೋಷೋವಾಪನಕ್ಷಂ ನಿಘಂಟಾವುಚ್ಯತೇ । ಅರುಣೋ ಗಾವ ಉಷಸಾಮಿತಿ । ಅರುಣಶಬ್ದೋಽರ್ತೇಶ್ಚ । ಉ ೩-೬೦ । ಇತ್ಯುನನ್ಪ್ರತ್ಯಯಾಂತಃ । ತೃಣಾಖ್ಯಾಯಾಂ ಚಿತ್ । ಉ. ೩-೫೯ । ಇತ್ಯತಶ್ಚಿದಿತ್ಯನುವೃತ್ತೇರಂ-ತೋದಾತ್ತಃ । ಸ ಏವ ಬಹುವ್ರೀಹೌ ಪೂರ್ವಪದಪ್ರಕೃತಿಸ್ವರತ್ವೇನ ಶಿಷ್ಯತೇ ॥

॥ ಪ್ರತಿಪದಾರ್ಥ ॥

ಉಷಃ--ಎಲೈ ಉಷೋದೇವಿಯೇ । **ಅಧಿ ಚಿತ್**—ಮೇಲುಗಡೆ **ಪೂಜ್ಯಸ್ಥಾನದಲ್ಲಿ** । **ರೋಚನಾತ್**—ಪ್ರಕಾಶಿಸತಕ್ಕ । **ದಿವಃ**—ದ್ಯುಲೋಕದಿಂದ । **ಭದ್ರೇಭಿಃ**—ಮಂಗಳಕರಗಳಾದ ಮಾರ್ಗಗಳ ಮೂಲಕ । **ಆ ಗಹಿ**—ದಯಮಾಡು । (ಎಲೈ ದೇವಿಯೇ) **ಅರುಣಪ್ಸವಃ**--ಕೆಂಪುಬಣ್ಣದ ಹಸುಗಳು । **ಸೋಮಿನಃ**—ಸೋಮರಸವನ್ನಿಟ್ಟುಕೊಂಡಿರುವ ಯಜಮಾನನ । **ಗೃಹಂ**—(ದೇವತೆಗಳನ್ನುದ್ದೇಶಿಸಿ ಮಾಡುವ) ಯಜ್ಞಗೃಹಕ್ಕೆ **ತ್ವಾ**—ನಿನ್ನನ್ನು । **ಉಪ ವಹಂತು**—ಕರೆತಂದು ಸೇರಿಸಲಿ.

॥ ಭಾವಾರ್ಥ ॥

ಎಲೈ ಉಷೋದೇವಿಯೇ, ಮೇಲುಗಡೆ ಪೂಜ್ಯಸ್ಥಾನದಲ್ಲಿ ಪ್ರಕಾಶಿಸತಕ್ಕ ಅಂತರಿಕ್ಷಲೋಕದಿಂದ ಮಂಗಳಕರಗಳಾದ ಮಾರ್ಗಗಳ ಮೂಲಕ ಇಲ್ಲಿಗೆ ದಯಮಾಡು. ಕಂದುಬಣ್ಣದ ಹಸುಗಳು ಸೋಮರಸಯುಕ್ತನಾದ ಯಜಮಾನನ ಯಜ್ಞಗೃಹಕ್ಕೆ ನಿನ್ನನ್ನು ಕರೆತರಲಿ.

English Translation.

Ushas, come by auspicious ways from above the bright region of the firmament; let the ruddy coloured cows bring you to the dwelling of the offerer of the soma juice.

॥ ವಿಶೇಷ ವಿಷಯಗಳು ॥

ಭದ್ರೇಭಿಃ— ಶೋಭನೈರ್ಮಾರ್ಗೈಃ—ಉತ್ತಮವಾದ ಮಾರ್ಗಗಳಿಂದ; ವೇದಾರ್ಥಯತ್ನಕಾರರೇ ಮೊದಲಾದ ಕೆಲವರು ಭದ್ರೇಭಿಃ ಎಂಬ ಶಬ್ದಕ್ಕೆ ಭದ್ರೇಭಿಃ ಅಶ್ವೈಃ—ಉತ್ತಮವಾದ ಕುದುರೆಗಳಿಂದ ಎಂಬ ಅರ್ಥವಿವರಣೆಮಾಡಿರುವರು. ಋಕ್ಕಿನಲ್ಲಿ ಮಾರ್ಗೈಃ ಅಥವಾ ಅಶ್ವೈಃ ಎಂಬ ಯಾವ ಶಬ್ದವೂ ಇಲ್ಲದೆ ಭದ್ರೇಭಿಃ ಎಂಬ ಶಬ್ದಮಾತ್ರವಿರುವುದರಿಂದ ಈ ಶಬ್ದಪ್ರಯೋಗದಲ್ಲಿ ಋಷಿಯ ಆಶಯವೇನಿರಬಹುದೆಂಬುದು ಸ್ಪಷ್ಟವಾಗಿಲ್ಲ.

ಅರುಣಪ್ಸವಃ—ಅರುಣ ಎಂದರೆ ಕೆಂಪಾದ, ಪ್ಸು ಎಂದರೆ ರೂಪ (ನಿ. ೩-೨೩) ಆದುದರಿಂದ ಅರುಣಪ್ಸವಃ ಎಂಬ ಶಬ್ದಕ್ಕೆ ಕೆಂಪಾದ ರೂಪಗಳು ಅಥವಾ ಕೆಂಪಾದ ರೂಪಗಳುಳ್ಳ ಎಂದರ್ಥವಾಗುವುದು-ಭಾಷ್ಯಕಾರರು ಈ ಶಬ್ದಕ್ಕೆ **ಅರುಣವರ್ಣಾ ಗಾವಃ** ಕೆಂಪುಬಣ್ಣದ ಗೋವುಗಳು ಎಂದು ವಿವರಣೆಮಾಡಿರುವರು. ಗೋವುಗಳು ಉಷೋದೇವತೆಯನ್ನು ಯಜಮಾನನ ಗೃಹಕ್ಕೆ ಕರೆತರುವವು ಎಂಬ ಅರ್ಥವು ನಿರುಕ್ತದ ನಿಘಂಟು ಪ್ರಕರಣದಲ್ಲಿ ಉಕ್ತವಾಗಿರುವುದೆಂದು ಹೇಳಿರುವರು. ಅಶ್ವಗಳಲ್ಲಿ ಕೆಂಪುಬಣ್ಣದ ಅಶ್ವಗಳಿರುವುದರಿಂದ ಕೆಂಪು ಬಣ್ಣದ ಅಶ್ವಗಳೆಂದೂ ಅರ್ಥಮಾಡಬಹುದು. ಅಥವಾ ಉಷಃಕಾಲದಲ್ಲಿ ಸೂರ್ಯೋದಯವಾಗುವಾಗ ಸೂರ್ಯನ ಕಿರಣಗಳು ಕೆಂಪುಬಣ್ಣಗಳಿಂದ ಗೋಚರವಾಗುವುದರಿಂದ ಇಲ್ಲಿ ಕೆಂಪುಬಣ್ಣದ ಕಿರಣಗಳಿಂದ ಎಂದು ಬೇಕಾದರೂ ಅರ್ಥ ಹೇಳಬಹುದು. ಉಷೋದೇವತೆಗೆ ಕೆಂಪು ಹಸುಗಳೇ ವಾಹನಗಳೆಂದು ನಿರುಕ್ತದಲ್ಲಿ ಹೇಳಿದೆ. (ನಿ. ೧೨-೧೫)

ಸೋಮಿನಃ—**ಸೋಮಯುಕ್ತಸ್ಯ ಯಜಮಾನಸ್ಯ**—ದೇವತೆಗೆ ಅರ್ಪಿಸುವುದಕ್ಕಾಗಿ ಸೋಮರಸವನ್ನು ಸಿದ್ಧಪಡಿಸಿಟ್ಟುಕೊಂಡಿರುವ ಯಜಮಾನನ.

॥ ವ್ಯಾಕರಣಪ್ರಕ್ರಿಯಾ ॥

ಗಹಿ—ಗಮ್ಲೃ ಗತೌ ಧಾತು. ಭ್ವಾದಿ. ಲೋಟ್ ಮಧ್ಯಮಪುರುಷ ಏಕವಚನ ವಿವಕ್ಷಾನುಮಾಡಿದಾಗ ಸಿಪ್ ಪ್ರತ್ಯಯ ಬರುತ್ತದೆ. **ಸೇರ್ಹ್ಯಪಿಚ್ಚೆ** ಸೂತ್ರದಿಂದ ಅದಕ್ಕೆ ಅಪಿತ್ತಾದ ಹಿ ಎಂಬ ಆದೇಶ ಬರುತ್ತದೆ. ಗಮ್+ಹಿ ಎಂದಿರುವಾಗ ಭ್ವಾದಿಯ ಶಪ್ ವಿಕರಣವು ಪ್ರಾಪ್ತವಾಗುತ್ತದೆ. ಅದಕ್ಕೆ **ಬಹುಲಂ ಛಂದಸಿ** (ಪಾ. ಸೂ. ೨-೪-೭೩) ಸೂತ್ರದಿಂದ ಲುಕ್ ಬರುತ್ತದೆ. **ಸಾರ್ವಧಾತುಕಮಪಿತ್** ಸೂತ್ರದಿಂದ ಹೀಗೆ ಅಪಿತ್ತವನ್ನು ಹೇಳಿದುದರಿಂದ ಙಿತ್ತಾಗುತ್ತದೆ. ಆಗ **ಅನುದಾತ್ತೋಪದೇಶವ** (ಪಾ. ಸೂ. ೬-೪-೩೭) ಸೂತ್ರದಿಂದ ಙಿತ್ ಪ್ರತ್ಯಯ ಪರದಲ್ಲಿರುವುದರಿಂದ ಅನುನಾಸಿಕವಾದ ಮಕಾರಕ್ಕೆ ಲೋಪ ಬರುತ್ತದೆ. ಮಕಾರಕ್ಕೆ ಲೋಪವಾದಾಗ ಗ+ಹಿ ಎಂದಾಗುತ್ತದೆ. ಇಲ್ಲಿ ಅಕಾರದ ಪರದಲ್ಲಿ ಹಿ ಬಂದಿರುವುದರಿಂದ **ಅತೋಹೇಃ** (ಪಾ. ಸೂ. ೬-೪-೧೦೫) ಸೂತ್ರದಿಂದ ಹಿ ಗೆ ಲುಕ್ ಪ್ರಾಪ್ತವಾಗುತ್ತದೆ. **ಅಸಿದ್ಧವದತ್ರಾಭಾತ್** (ಪಾ. ಸೂ. ೬-೪-೨೨) ಸಮಾನನಿಮಿತ್ತಕವಾದ ಭಸಂಜ್ಞಾಧಿಕಾರಕ್ಕೆ ಒಳಪಟ್ಟ ಕಾರ್ಯವನ್ನು ಮಾಡುವಾಗ ಭಸಂಜ್ಞಾಧಿಕಾರೀಯ ಕಾರ್ಯವು ಅಸಿದ್ಧವಾಗುತ್ತದೆ. ಇಲ್ಲಿ ಅನುದಾತ್ತೋಪದೇಶ ಸೂತ್ರವು ಭಸಂಜ್ಞಾಧಿಕಾರದಲ್ಲಿ ಸೇರಿದೆ. ಆದುದ

ರಿಂದ ಇದರಿಂದ ಮಾಡಿದ ಅನುನಾಸಿಕ ಲೋಪವು ಭಸಂಜ್ಞಾಧಿಕಾರೀಯವಾದ ಹಿಲುಕ್ ಕಾರ್ಯವನ್ನು ಕುರಿತು ಅಸಿದ್ಧವಾಗುತ್ತದೆ. ಅಂದರೆ ಲೋಪವಾದರೂ ಮಕಾರವಿದ್ದಂತೆಯೇ ಆಗುತ್ತದೆ. ಇದರಿಂದ ಅಕಾರದ ಪರದಲ್ಲಿ ಹಿ ಬಾರದಿರುವುದರಿಂದ ಲುಕ್ ಬರುವುದಿಲ್ಲ.

ರೋಚನಾತ್—ರುಚ ದೀಪ್ತೌ ಧಾತು. ಭ್ವಾದಿ. ಇದಕ್ಕೆ **ಅನುದಾತ್ತೇತಶ್ಚ ಹಲಾದೇಃ** (ಪಾ. ಸೂ. ೩-೨-೧೪೯) ಹಲಾದಿಯಾಗಿಯೂ ಅನುದಾತ್ತೇತ್ತಾಗಿಯೂ ಇರುವ ಆಕರ್ಮಕವಾದ ಧಾತುವಿನಮೇಲೆ ಯುಚ್ ಪ್ರತ್ಯಯ ಬರುತ್ತದೆ ಎಂಬುದರಿಂದ ಯುಚ್ ಪ್ರತ್ಯಯ ಬರುತ್ತದೆ. **ಯುವೋರನಾಕೌ** ಸೂತ್ರದಿಂದ ಯುಚಿನಲ್ಲಿ ಉಳಿಯುವ ಯು ಎಂಬುದಕ್ಕೆ ಅನಾದೇಶ ಬರುತ್ತದೆ **ಪುಗಂತಲಘೂಪಧಸ್ಯಚ** ಸೂತ್ರದಿಂದ ಧಾತುವಿನ ಉಪಧೆಗೆ ಗುಣ ಬಂದರೆ ರೋಚನ ಎಂದಾಗುತ್ತದೆ. ಪಂಚಮೀ ವಿಭಕ್ತಿ ಏಕವಚನದಲ್ಲಿ ರೋಚನಾತ್ ಎಂದು ರೂಪವಾಗುತ್ತದೆ. ಯುಚಿನಲ್ಲಿ ಚಕಾರ ಇತ್ತಾದುದರಿಂದ **ಚಿತಃ** (ಪಾ. ಸೂ. ೬-೧-೧೬೩) ಸೂತ್ರದಿಂದ ಅಂತೋದಾತ್ತವಾಗುತ್ತದೆ. ರೋಚನವೆಂಬುದು ಅಂತೋದಾತ್ತವಾದುದರಿಂದ ಇದಕ್ಕೆ ವಿಭಕ್ತಿಯ ಏಕಾದೇಶವೂ ಉದಾತ್ತವಾಗುತ್ತದೆ

ಅರುಣಿಪ್ಸವಃ—ಪ್ಸಾ ಭಕ್ಷಣೇ ಧಾತು. ಅದಾದಿ. ಪ್ಸಾಂತಿ ಭಕ್ಷಯಂತಿ ಸ್ತನಂ ಪಿಬಂತಿ ಇತಿ ಪ್ಸವಃ ವತ್ಸಾಃ ; ತಿನ್ನುತ್ತವೆ, ಮೊಲೆಯನ್ನು ಕುಡಿಯುತ್ತವೆ ಅಂದರೆ ಕರುಗಳು ಎಂದು ತಾತ್ಪರ್ಯ. ಈ ಧಾತುವಿಗೆ ಉಣಾದಿಸಿದ್ಧವಾದ **ಕು** ಪ್ರತ್ಯಯ ಬರುತ್ತದೆ. ಕಕಾರ ಇತ್ತಾದುದರಿಂದ **ಆತೋ ಲೋಪ ಇಟಿಚ** (ಪಾ. ಸೂ. ೬-೪ ೬೪) ಸೂತ್ರದಿಂದ ಧಾತುವು ಆಕಾರಾಂತವಾದುದರಿಂದ ಅದರ ಆಕಾರಕ್ಕೆ ಲೋಪ ಬರುತ್ತದೆ. ಪ್ಸು ಎಂದು ರೂಪವಾಗುತ್ತದೆ. ಅರುಣಾಃ ಪ್ಸವಃ ಯಾಸಾಂ ತಾಃ ಅರುಣಪ್ಸವಃ ಕೆಂಪಾದ ಕರುಗಳು ಉಳ್ಳವುಗಳು. ಹಸುಗಳು ಎಂದರ್ಥ. ಇಲ್ಲಿ ಕರುಗಳು ಕೆಂಪಾದವುಗಳು ಎಂದು ಹೇಳಿದರೂ ಆ ಕೆಂಪುಕರುಗಳುಳ್ಳ ಹಸುಗಳೂ ಕೆಂಪಾದುವುಗಳು ಎಂದು ಸ್ವರಸವಾಗಿ ಲಬ್ಧವಾಗುತ್ತದೆ. ಸಾಮಾನ್ಯವಾಗಿ ಕರುಗಳು ತಾಯಿಯ ಗುಣಗಳನ್ನು ಹೊಂದುತ್ತವೆ ಎಂದು ಲೋಕವಿದಿತವಾಗಿದೆ. **ಪೈತೃಕಮುಶ್ವಾ ಅನುಹರಂತೆ ಮಾತೃಕಂ ಗಾವೋಽನುಹರಂತೆ** (ಪಾ. ಮಂ. ೧-೩-೨೧-೫) ಇತಿ ಗೋನರ್ದೀಯಃ ಪತಂಜಲಿಮಹರ್ಷಿಗಳೂ ಭಾಷ್ಯದಲ್ಲಿ " ಕುದುರೆಗಳು ತಂದೆಯ ಗುಣಗಳನ್ನೂ ಹಸುಗಳು ತಾಯಿಯ ಗುಣಗಳನ್ನೂ ಹೊಂದುತ್ತವೆ" ಎಂದು ಹೇಳಿರುವರು. ತಾಸಾಂ ಚ ಉಷೋವಾಹನತ್ವಂ ನಿಘಂಟಾವುಕ್ತಮ್ ಅರುಣ್ಯೋ ಗಾವ ಉಷಸಾಮ್ (ನಿ. ೧-೧೫-೭) ಇತಿ। ಈ ಕೆಂಪಾದ ಹಸುಗಳು ಉಷೋದೇವತೆಯ ವಾಹನಗಳೆಂದು ನಿಘಂಟುವಿನಲ್ಲಿ ಹೇಳಿರುತ್ತಾರೆ. ಇಲ್ಲಿ ಅರುಣ ಶಬ್ದವು **ಅರ್ತೇರ್ಷ್ಣ** (ಉ. ಸೂ. ೫-೬೮೫) ಸೂತ್ರದಲ್ಲಿ ವಿಹಿತವಾದ ಉನ್ ಪ್ರತ್ಯಯಾಂತವಾದ ಶಬ್ದವು. ಅರ್ತೇರ್ಷ್ಣ ಸೂತ್ರದಲ್ಲಿ ತೃಣಾಖ್ಯಾಯಾಂ **ಚಿತ್** (ಉ. ಸೂ. ೩-೩೫೯) ಸೂತ್ರದಿಂದ ಚಿತ್ ಎಂಬುದು ಅನುವೃತ್ತವಾಗುತ್ತದೆ. ಉನ್ ಪ್ರತ್ಯಯ ಚಿತ್ತಿನಂತೆ ಆಗುವುದು ಎಂದು ತಾತ್ಪರ್ಯ. ಆದುದರಿಂದ **ಚಿತಃ** ಸೂತ್ರದಿಂದ ಅರುಣಶಬ್ದವು ಅಂತೋದಾತ್ತವಾಗುತ್ತದೆ. ಇದರೊಡನೆ ಬಹುವ್ರೀಹಿ ಸಮಾಸಮಾಡಿರುವುದರಿಂದ **ಬಹುವ್ರೀಹೌ ಪ್ರಕೃತ್ಯಾ ಪೂರ್ವಪದಮ್** (ಪಾ. ಸೂ. ೬-೨-೧) ಸೂತ್ರದಿಂದ ಪೂರ್ವಪದಪ್ರಕೃತಿಸ್ವರವೇ **ಸತಿಶಿಷ್ಟವಾಗುವುದರಿಂದ** ಸಮಾಸದ ಅಂತೋದಾತ್ತಸ್ವರವು ಬರುವುದಿಲ್ಲ. ಅರುಣಪ್ಸವಃ ಎಂಬುದು ಮಧ್ಯೋದಾತ್ತ ಶಬ್ದವಾಗುತ್ತದೆ. ಣಕಾರದ ಮೇಲಿರುವ ಅನುದಾತ್ತವು ಸ್ವರಿತವಾಗುತ್ತದೆ. ॥ ೧ ॥

॥ ಸಂಹಿತಾಪಾಠಃ ॥

ಸುಪೇಶಸಂ ಸುಖಂ ರಥಂ ಯಮಧ್ಯಸ್ಥಾ ಉಷಸ್ತ್ವಂ ।
ತೇನಾ ಸುಶ್ರವಸಂ ಜನಂ ಪ್ರಾವಾದ್ಯ ದುಹಿತರ್ದಿವಃ ॥ ೨ ॥

॥ ಪದಪಾಠಃ ॥

ಸುಽಪೇಶಸಂ । ಸುಽಖಂ । ರಥಂ । ಯಂ । ಅಧಿಽಅಸ್ಥಾಃ । ಉಷಃ । ತ್ವಂ ।
ತೇನ । ಸುಽಶ್ರವಸಂ । ಜನಂ । ಪ್ರ । ಅವ । ಅದ್ಯ । ದುಹಿತಃ । ದಿವಃ ॥ ೨ ॥

ಸಾಯಣಭಾಷ್ಯಂ

ಹೇ ಉಷಸ್ತ್ವಂ ಯಂ ರಥಮಧ್ಯಸ್ಥಾಃ ಅಧಿತಿಷ್ಠಸಿ । ಕೀದೃಶಂ ರಥಂ । ಸುಪೇಶಸಂ ಶೋಭನಾವಯವೇವಂ ಶೋಭನರೂಪಯುಕ್ತಂ ವಾ । ಪೇಶ ಇತಿ ರೂಪನಾಮೇತಿ ಯಾಸ್ಕಃ । ನಿ. ೪-೧೯ । ಯದ್ವಾ । ಶೋಭನಹಿರಣ್ಮಯಯುಕ್ತಂ । ಪೇಶಃ ಕೃಶನಮಿತಿ ತನ್ನಾಮಸು ಪಾಠಾತ್ । ಸುಖಂ ಶೋಭನೇನ ಖೇನಾಕಾಶೇನ ಯುಕ್ತಂ । ವಿಸ್ತೃತಮಿತ್ಯರ್ಥಃ । ಯದ್ವಾ । ಸುಖಹೇತುಭೂತಂ । ಅಥವಾ ಸುಖಮಿತಿ ಕ್ರಿಯಾವಿಶೇಷಣಂ । ಸುಖಂ ಯಥಾ ಭವತಿ ತಥೇತ್ಯರ್ಥಃ । ಹೇ ದಿವೋ ದುಹಿತರ್ದ್ಯುಲೋಕಸಕಾಶಾದುತ್ಪನ್ನ ಉಷೋದೇವತೇ ತೇನ ರಥೇನಾದ್ಯಾಸ್ಮಿನ್ಕಾಲೇ ಸುಶ್ರವಸಂ ಶೋಭನಹವಿರ್ಯುಕ್ತಂ ಜನಂ ಯಜಮಾನಂ ಪ್ರಾವ । ಪ್ರಕರ್ಷೇಣ ಗಚ್ಛ ॥ ಸುಪೇಶಸಂ ಪಿಶ ಅವಯವೇ । ಅಸ್ಮಾದಸುನ್ಪ್ರತ್ಯಯಃ । ನಿತ್ತ್ವಾದಾದ್ಯುದಾತ್ತಃ ಪೇಶಸ್ಶಬ್ದಃ । ಶೋಭನಂ ಪೇಶೋ ಯಸ್ಯಾಸೌ ಸುಪೇಶಾಃ । ಆದ್ಯುದಾತ್ತಂ ದ್ವ್ಯಚ್ಛಂದಸೀತ್ಯುತ್ತರಪದಾದ್ಯುದಾತ್ತತ್ವಂ । ಅಧ್ಯಸ್ಥಾಃ । ತಿಸೃಣಾಮೇಕಶ್ಛಂದಸಿ ಲುಙ್ಲಙ್ಲಿಟ ಇತಿ ವರ್ತಮಾನೇ ಲುಙಾ ಗತಿಸ್ಥೇತಿ ಸಿಚೋ ಲುಕ್ । ಅಡಾಗಮ ಉದಾತ್ತಃ । ಯದ್ವೃತ್ತಯೋಗಾದನಿಘಾತಃ । ತಿಙಿ ಚೋದಾತ್ತವತೀತಿ ಗತೇರನುದಾತ್ತತ್ವಂ । ತೇನ । ಅನ್ಯೇಷಾಮಪಿ ದೃಶ್ಯತ ಇತಿ ಸಂಹಿತಾಯಾಂ ದೀರ್ಘಃ । ಸುಶ್ರವಸಂ । ಶ್ರವ ಇತ್ಯನ್ನನಾಮ । ಶ್ರೂಯತ ಇತಿ ಸತಃ । ನಿ. ೧೦-೩ । ಇತಿ ಯಾಸ್ಕಃ । ಸುಪೇಶಸಮಿತಿವದುತ್ತರಪದಾದ್ಯುದಾತ್ತತ್ವಂ । ಅವ । ಅವ ರಕ್ಷಣಗತಿಪ್ರೀತಿತೃಪ್ತಿಷ್ವಿತ್ಯುಕ್ತತ್ವಾದತ್ರಾವತಿರ್ಗತ್ಯರ್ಥಃ । ದುಹಿತರ್ದಿವಃ ಪರಮಪಿ ಛಂದಸೀತಿ ಷಷ್ಠ್ಯಂತಸ್ಯ ಪೂರ್ವಾಮಂತ್ರಿತಾಂಗವದ್ಭಾವೇ ಸತಿ ಪದದ್ವಯಸಮುದಾಯಸ್ಯಾಷ್ಟಮಿಕಂ ಸರ್ವಾನುದಾತ್ತತ್ವಂ ॥

॥ ಪ್ರತಿಪದಾರ್ಥ ॥

ಉಷಃ— ಎಲೈ ಉಷೋದೇವತೆಯೇ । ತ್ವಂ— ನೀನು । ಸುಪೇಶಸಂ— ಶ್ರೇಷ್ಠವಾದ ಅವಯವಗಳಿಂದ ಕೂಡಿರುವುದೂ ಅಥವಾ ಶ್ರೇಷ್ಠವಾದ ರೂಪಯುಕ್ತವಾದುದೂ ಅಥವಾ ಶ್ರೇಷ್ಠವಾದ ಸುವರ್ಣಸಮೃದ್ಧವಾದುದೂ (ಮತ್ತು), । ಸುಖಂ— ಮಹತ್ತಾದ ಆಕಾಶದೊಡನೆ ಕೂಡಿ (ವಿಶಾಲವಾಗಿ) ರುವುದೂ ಅಥವಾ ಸುಖಕರ

ವಾಗಿರುವುದೂ ಆದ । **ಯಂ ರಥಂ**—ಯಾವ ರಥವನ್ನು । **ಅಧ್ಯಸ್ಥಾಃ**—ಹತ್ತಿ ಕುಳಿತಿದ್ದೀಯೋ । **ತೇನ ರಥೇನ**—ಆ ರಥದೊಂದಿಗೆ । **ದಿವಃ ದುಹಿತಃ**—ದ್ಯುಲೋಕೋತ್ಪನ್ನಳಾದ ದೇವಿಯೇ, । **ಅದ್ಯ**—ಈಗ । **ಸುಶ್ರವಸಂ**—ಉತ್ತಮವಾದ ಹವಿಸ್ಸನ್ನಿಟ್ಟುಕೊಂಡಿರುವ । **ಜನಂ**—ಯಜಮಾನನನ್ನು ಕುರಿತು । **ಪ್ರಾವ**—ಸಂಭ್ರಮದಿಂದ ಹೋಗು.

॥ ಭಾವಾರ್ಥ ॥

ಎಲೈ ಉಷೋದೇವಿಯೇ, ನೀನು ಕುಳಿತಿರುವ ರಥವು ಶ್ರೇಷ್ಠವಾದ ಅವಯವಗಳಿಂದ ಕೂಡಿದೆ; ರಮಣೀಯವಾದ ರೂಪವುಳ್ಳದ್ದು; ಉತ್ತಮವಾದ ಸುವರ್ಣದಿಂದ ನಿರ್ಮಿತವಾದದ್ದು; ಮಹತ್ತಾದ ಆಕಾಶದಂತೆ ವಿಸ್ತಾರವಾಗಿರುವುದು ಮತ್ತು ಸುಖದಾಯಕವಾಗಿರುವುದು. ದ್ಯುಲೋಕದಲ್ಲಿ ಉತ್ಪನ್ನಳಾದ ಎಲೈ ದೇವಿಯೇ, ಆ ರಥದಲ್ಲಿ ಕುಳಿತು ನೀನು ಶ್ರೇಷ್ಠವಾದ ಹವಿಸ್ಸನ್ನಿಟ್ಟುಕೊಂಡಿರುವ ಯಜಮಾನನಲ್ಲಿಗೆ ಸಂಭ್ರಮದಿಂದ ಹೋಗು.

English Translation.

Ushas, daughter of heaven, sitting in the beautiful and easy-moving chariot, come to the pious offerer of the oblation.

॥ ವಿಶೇಷ ವಿಷಯಗಳು ॥

ಸುಪೇಶಸಂ—ಪೇಶವೆಂದರೆ ರೂಪ (ನಿ. ೮-೧೧) ಸುಪೇಶಶಂ ಎಂದರೆ ಉತ್ತವಾದ ರೂಪವುಳ್ಳ, ಸುಂದರವಾದ, ನೋಡುವುದಕ್ಕೆ ಅಂದವಾದ. ಅಥವಾ ಪೇಶಶಬ್ದಕ್ಕೆ ಹಿರಣ್ಯ (ಚಿನ್ನ) ವೆಂದೂ ಅರ್ಥವಾಗುವುದರಿಂದ (ನಿ. ೩-೧೦) ಸುಪೇಶಸಂ ಎಂದರೆ ಸುವರ್ಣಮಯವಾದ ಎಂದು ಹೇಳಬಹುದು.

ಸುಖಂ—ಖಂ ಎಂದರೆ ಆಕಾಶ. ಆಕಾಶದಲ್ಲಿ ಸಂಚರಿಸುವುದರಿಂದ ಸುಖಂ ಎಂದರೆ ವಿಸ್ತಾರವಾದ ಎಂದು ಭಾಷ್ಯಕಾರರು ಅರ್ಥಮಾಡಿರುವರು. ಈ ಅರ್ಥವು ಅಷ್ಟೇನೂ ಸಮಂಜಸವಾಗಿಲ್ಲ. **ಸುಖಂ ಯಥಾ ಭವತಿ ತಥಾ** ಸುಖವಾಗಿ ಎಂದು ಕ್ರಿಯಾವಿಶೇಷಣಾರ್ಥವನ್ನೂ ಹೇಳಿರುವರು. ಈ ಅರ್ಥವೇ ಇಲ್ಲಿ ಸರಿಯಾದಿ ಹೊಂದುವುದು. ಸುಖಂ ಎಂದರೆ ಮೆತ್ತನೆಯ ಆಸನಗಳನ್ನು ಹಾಕಿ ಸಿದ್ಧಪಡಿಸಿ ಸುಖವಾಗಿ ಕುಳಿತುಕೊಳ್ಳುವಂತೆ ಸಜ್ಜುಗೊಳಿಸಿರುವ ಅಥವಾ ಕುಳಿತಿರುವವರಿಗೆ ಆಯಾಸವಾಗದಂತೆ ಸುಲಭವಾಗಿ ಚಲಿಸುವ ಎಂಬ ಅರ್ಥಗಳನ್ನೂ ಹೇಳಬಹುದು.

ಸುಶ್ರವಸಂ—ಶ್ರವ ಇತ್ಯನ್ನನಾಮ (ನಿ. ೯೦-೩) ಶೋಭನಹವಿರ್ಯುಕ್ತಂ । ಉತ್ತಮವಾದ ಹವಿಸ್ಸನ್ನು (ಅನ್ನವನ್ನು) ಸಿದ್ಧಪಡಿಸಿ ಇಟ್ಟುಕೊಂಡಿರುವ

ಪ್ರಾವ—ರಕ್ಷಣಾರ್ಥಂ ಪ್ರಕರ್ಷೇಣ ಗಚ್ಛ । ಸಂರಕ್ಷಿಸು, ಕಾಪಾಡು.

॥ ವ್ಯಾಕರಣಪ್ರಕ್ರಿಯಾ ॥

ಸುಪೇಶಸಮ್—ಪಿಶ ಅವಯವೇ ಧಾತು. **ಸರ್ವಧಾತುಭ್ಯೋ ಽಸುನ್** (ಉ. ಸೂ. ೪-೬೨೮) ಎಂಬುದರಿಂದ ಇದಕ್ಕೆ ಅಸುನ್ ಪ್ರತ್ಯಯ ಬರುತ್ತದೆ. **ಜ್ಞಾತ್ಯಾದಿರ್ನಿತ್ಯಂ** (ಪಾ. ಸೂ. ೬-೧-೧೯೭) **ಸೂತ್ರ** ದಿಂದ ಅಸುನ್ನಿನಲ್ಲಿ ನಿತ್ವಾದುದರಿಂದ ಪೇಶಸ್ ಶಬ್ದವು ಆದ್ಯುದಾತ್ತವಾಗುತ್ತದೆ. ಶೋಭನಂ ಪೇಶಃ ಯಸ್ಯ ಅಸೌ ಸುಪೇಶಾಃ ಮನೋಹರವಾದ ಅವಯವ ಅಥವಾ ರೂಪವುಳ್ಳವನು ಎಂದರ್ಥ. ಇದು ಬಹುವ್ರೀಹಿ ಸಮಾಸ. **ಆದ್ಯುದಾತ್ತಂ ದ್ವ್ಯಚ್ ಛಂದಸಿ** (ಪಾ. ಸೂ. ೬-೩-೧೧೯) ಸುವಿನ ಉತ್ತರದಲ್ಲಿರುವ ದ್ವ್ಯಚ್ಕವಾದ ಆದ್ಯುದಾತ್ತ ಪದವು ಬಹುವ್ರೀಹಿಯಲ್ಲಿಯೂ ಆದ್ಯುದಾತ್ತವಾಗುತ್ತದೆ ಎಂಬುದರಿಂದ ಪೇಶಸ್ ಆದ್ಯುದಾತ್ತವಾಗಿರುವುದರಿಂದ ಉತ್ತರಪದವಾಗಿರುವುದರಿಂದ ಸಮಾಸಸ್ವರವನ್ನು ಬಾಧಿಸಿ ಆದ್ಯುದಾತ್ತವಾಗಿಯೇ ಇರುವುದು. ಪಕಾರದ ಮೇಲಿರುವ ಏಕಾರವು ಉದಾತ್ತವಾಗಿದೆ. ದ್ವಿತೀಯೈಕವಚನವಾದ ಅಮ್ ಪ್ರತ್ಯಯ ಪರದಲ್ಲಿರುವಾಗ ಸುಪೇಶಸಂ ಎಂದಾಗುತ್ತದೆ.

ಅಧ್ಯಸ್ಥಾಃ—ಅಧಿ ಉಪಸರ್ಗ. ಷ್ಠಾ ಗತಿನಿವೃತ್ತೌ ಧಾತು. ಭ್ವಾದಿ. **ಛಂದಸಿ ಲುಙ್ಲಙ್ಲಿಟಃ** (ಪಾ. ಸೂ. ೩-೪-೬) ಸೂತ್ರದಿಂದ ವರ್ತಮಾನಾರ್ಥದಲ್ಲಿ ಲುಙ್ ಬರುತ್ತದೆ. ಲುಙ್ ಮಧ್ಯಮಪುರುಷ ಏಕವಚನ ವಿವಕ್ಷಾವಾಗಿದಾಗ ಸ್ಥಾ+ಸಿ ಎಂದಿರುತ್ತದೆ. **ಇತಶ್ಚ** ಸೂತ್ರದಿಂದ ಸಿಪಿನ ಇಕಾರಕ್ಕೆ ಲೋಪಬರುತ್ತದೆ. ಲುಙ್‌ನ ವಿಕರಣವಾದ ಚ್ಲಿಗೆ ಸಿಚ್ ಆದೇಶ ಬರುತ್ತದೆ. **ಗಾತಿಸ್ಥಾ ಘುಸಾಭೂಭ್ಯಃ ಸಿಚೇಃ ಪರಸ್ಮೈಪದೇಷು** (ಪಾ. ಸೂ. ೨-೪-೭೭) ಸೂತ್ರದಿಂದ ಸ್ಥಾ ಧಾತುವಿನ ಪರದಲ್ಲಿರುವ ಸಿಚಿಗೆ ಲುಕ್ ಬರುತ್ತದೆ. ಲುಙ್ ನಿಮಿತ್ತವಾದ ಅಡಾಗಮವು ಧಾತುವಿಗೆ ಬರುತ್ತದೆ. ಸಿಪ್ಪಿನ ಸಕಾರಕ್ಕೆ ರುತ್ವವಿಸರ್ಗಗಳು ಬಂದರೆ ಅಧಿ+ಅಸ್ಥಾಃ ಎಂದು ರೂಪವಾಗುತ್ತದೆ. ಅಗಮಾ ಉದಾತ್ತಾ ಎಂಬುದರಿಂದ ಅಡಾಗಮವು ಉದಾತ್ತವಾಗುತ್ತದೆ. **ಯದ್ವೃತ್ತಾನ್ನಿತ್ಯಂ** (ಪಾ. ಸೂ. ೮-೧-೬೬) ಸೂತ್ರದಿಂದ ಹಿಂದೆ ಯಂ ಎಂಬ ಯಚ್ಛಬ್ದಸಂಬಂಧವಿರುವುದರಿಂದ ನಿಘಾತಸ್ವರ ಬರುವುದಿಲ್ಲ. **ತಿಙಿ ಚೋದಾತ್ತವತಿ** (ಪಾ. ಸೂ. ೮-೧-೭೧) ಉದಾತ್ತವುಳ್ಳ ತಿಙಂತವು ಪರದಲ್ಲಿರುವಾಗ ಗತಿಯು ಅನುದಾತ್ತವಾಗುತ್ತದೆ ಎಂಬುದರಿಂದ ಇಲ್ಲಿ ಗತಿ ಸಂಜ್ಞೆಯುಳ್ಳ ಅಧಿ ಎಂಬುದು ಅನುದಾತ್ತವಾಗುತ್ತದೆ.

ತೇನ—ತಚ್ಛಬ್ದದಮೇಲೆ ತೃತೀಯೈಕವಚನ ಪರದಲ್ಲಿರುವಾಗ ತೇನ ಎಂದು ರೂಪವಾಗುತ್ತದೆ. **ಅನ್ಯೇಷಾಮಪಿ ದೃಶ್ಯತೇ** (ಪಾ. ಸೂ. ೬-೩-೧೩೭) ಸೂತ್ರದಿಂದ ಮಂತ್ರಪಾಠದಲ್ಲಿ ದೀರ್ಘ ಬರುತ್ತದೆ. ಆದುದರಿಂದ ತೇನಾ ಎಂದು ಸಂಹಿತೆಯಲ್ಲಿ ಮಾತ್ರ ದೀರ್ಘ ಬರುತ್ತದೆ.

ಸುಶ್ರವಸಮ್—ಶ್ರವ ಇತಿ ಅನ್ನನಾಮ ಶ್ರೂಯತೇ ಇತಿ ಸತಃ (ನಿರುಕ್ತ ೧೦-೩) ಇತಿ ಯಾಸ್ಕಃ ಸಾಂಪ್ರದಾಯಿಕರು ಶ್ರವವೆಂಬುದನ್ನು ಅನ್ನಕ್ಕೆ ಹೆಸರೆಂದು ವ್ಯವಹರಿಸುತ್ತಾರೆ ಎಂದು ಯಾಸ್ಕರು ನಿರುಕ್ತದಲ್ಲಿ ಹೇಳಿರುತ್ತಾರೆ. ಶೋಭನಂ ಶ್ರವಃ ಯಸ್ಯ ಅಸೌ ಸುಶ್ರವಾಃ ಪ್ರಶಸ್ತವಾದ ಅನ್ನ (ಹವಿಸ್ಸು) ವುಳ್ಳವರು ಎಂದರ್ಥ. ಇಲ್ಲಿಯೂ ಹಿಂದಿನಂತೆ **ಆದ್ಯುದಾತ್ತಂ ದ್ವ್ಯಚ್ ಛಂದಸಿ** ಸೂತ್ರದಿಂದ ಉತ್ತರಪದ ಆದ್ಯುದಾತ್ತಸ್ವರವು ಬರುತ್ತದೆ.

ಅವ—ಅವ ರಕ್ಷಣಗತಿ ಕಾಂತಿ ಪ್ರೀತಿ ತೃಪ್ತಿ ಅವಗಮ ಪ್ರವೇಶ ಶ್ರವಣಸ್ವಾಮಿ ಅರ್ಥಯಾಚನ ಕ್ರಿಯೇಚ್ಛಾ ದೀಪ್ತಿ ಅವಾಪ್ತಿ ಆಲಿಂಗನ ಹಿಂಸಾ ಆದಾನಭಾಗವೃದ್ಧಿಷು. ಧಾತು. ಅನೇಕಾರ್ಥದಲ್ಲಿ ಪಠಿತವಾಗಿರುವ ಅವಧಾತುವು ಇಲ್ಲಿ ಗತ್ಯರ್ಥದಲ್ಲಿ ಪಠಿತವಾಗಿದೆ. ಲೋಟ್ ಮಧ್ಯಮಪುರುಷ ಏಕವಚನ ಪರದಲ್ಲಿರುವಾಗ ಶಪ್ ವಿಕರಣಬರುತ್ತದೆ. ಸಿಪ್ಪಿಗೆ ಹಿ ಆದೇಶಬಂದು ಅಕಾರದ ಪರದಲ್ಲಿರುವುದರಿಂದ ಲುಕ್ಕಾಗುತ್ತದೆ. ಅವ ಎಂದು ರೂಪವಾಗುತ್ತದೆ.

ದುಹಿತರ್ದಿವಃ—ಸುಬಾಮಂತ್ರಿತೆ ಪರಾಂಗವತ್ಸ್ವರೆ (ಪಾ. ಸೂ. ೨-೧-೨) ಸೂತ್ರದಲ್ಲಿ ಆಮಂತ್ರಿತ ಸ್ವರವಿಧಾನದಲ್ಲಿ ಪೂರ್ವದಲ್ಲಿರುವ ಸುಬಂತವು ಪರಾಂಗವನ್ನು ಹೊಂದುತ್ತದೆ ಎಂದು ಹೇಳಿ **ಪೆರಮಪಿ ಛಂದೆಸಿ** ಎಂದು ಪರದಲ್ಲಿರುವ ಸುಬಂತವು ಪೂರ್ವದ ಆಮಂತ್ರಿತಕ್ಕೆ ಅವಯವಭಾವವನ್ನು ಹೊಂದುತ್ತದೆ ಎಂದು ಹೇಳಿರುತ್ತಾರೆ. ಆದುದರಿಂದ ಇಲ್ಲಿ ದುಹಿತಃ ಎಂಬ ಪೂರ್ವದ ಆಮಂತ್ರಿತಕ್ಕೆ ದಿವಃ ಎಂಬ ಪರಸುಬಂತವು ಅಂಗವಾಗುತ್ತದೆ. ಆದ್ದರಿಂದ **ಆಮಂತ್ರಿತಸ್ಯ ಚೆ** (ಪಾ. ಸೂ. ೮-೧-೧೯) ಸೂತ್ರದಿಂದ ಪದದ್ವಯಸಮುದಾಯಕ್ಕೂ ಸರ್ವಾನುದಾತ್ತಸ್ವರ ಬರುತ್ತದೆ.

॥ ಸಂಹಿತಾಪಾಠಃ ॥

ವಯಶ್ಚಿತ್ತೇ ಪತತ್ರಿಣೋ ದ್ವಿಪಚ್ಚತುಷ್ಪದರ್ಜುನಿ ।
ಉಷಃ ಪ್ರಾರನ್ನೃತೂರನು ದಿವೋ ಅಂತೇಭ್ಯಸ್ಪರಿ ॥ ೩ ॥

॥ ಪದಪಾಠಃ ॥

ವಯಃ । ಚಿತ್ । ತೇ । ಪತತ್ರಿಣಃ । ದ್ವಿಽಪತ್ । ಚತುಃಽಪತ್ । ಅರ್ಜುನಿ ।
ಉಷಃ । ಪ್ರ । ಆರ್ತ । ಋತೂನ್ । ಅನು । ದಿವಃ । ಅಂತೇಭ್ಯಃ । ಪರಿ ॥ ೩ ॥

॥ ಸಾಯಣಭಾಷ್ಯಂ ॥

ಹೇ ಅರ್ಜುನಿ ಶುಭ್ರವರ್ಣ ಉಷ ಉಷೋದೇವತೇ ತೇ ತವ ಋತೂನರನು ಗಮನಾನ್ಯನುಲಕ್ಷ್ಯ ದ್ವಿಪತ್ ದ್ವಿಪಾತ್ ಮನುಷ್ಯಾದಿಕಂ ಚತುಷ್ಪತ್ ಗವಾದಿಕಂ ತಥಾ ಪತತ್ರಿಣಃ ಪತತ್ರವಂತಃ ಪಕ್ಷಿಣೋಪೇತಾ ವಯಶ್ಚಿತ್ ಪಕ್ಷಿಣಶ್ಚ ದಿವೋಽಂತೇಭ್ಯ ಆಕಾಶಸ್ಯಾಂತೇಭ್ಯಃ ಪರ್ಯುಪರಿ ಪ್ರಾರನ್ । ಪ್ರಕರ್ಷೇಣ ಗಚ್ಛಂತಿ । ರಾತ್ರ್ಯಾವಂಧಕಾರೇಣಾಭಿಭೂತಾಃ ಸರ್ವೇ ಪ್ರಾಣಿನಸ್ತ್ವದಾಗಮಾನಂತರಂ ಚೇಷ್ಟಾವಂತೋ ಭವಂತೀತ್ಯರ್ಥಃ ॥ ಪತತ್ರಿಣಃ । ಪತ್ಲೃ ಗತೌ । ಪತತ್ಯನೇನೇತಿ ಪತತ್ರಂ । ಅಮಿನಕ್ಷೇತ್ಯಾದಿನಾ । ಉ. ೧-೧೦೫ । ಅತ್ರನ್ಪ್ರತ್ಯಯಃ । ತತೋ ಮತ್ವರ್ಥೀಯ ಇನಿಃ । ದ್ವಿಪತ್ । ದ್ವೌ ಪಾದಾವಸ್ಯೇತಿ ಸಂಖ್ಯಾಸುಪೂರ್ವಸ್ಯ । ಪಾ. ೫-೪-೧೪೦ । ಇತಿ ಪಾದಶಬ್ದಸ್ಯಾಂತ್ಯಲೋಪಃ ಸಮಾಸಾಂತಃ । ಅಯಸ್ಮಯಾದಿತ್ವೇನ ಭತ್ವಾತ್ ಪಾದಃ ಪತ್ । ಪಾ. ೬-೪-೧೩೦ । ಇತಿ ಪದ್ಭಾವಃ । ದ್ವಿತ್ರಿಭ್ಯಾಂ ಪಾದ್ದನ್ಮೂರ್ಧಸು ಬಹುವ್ರೀಹೌ । ಪಾ ೬-೨-೧೯೭ । ಇತ್ಯುತ್ತರಪದಾಂತೋದಾತ್ತತ್ವಂ । ಚತುಷ್ಪತ್ । ಚತ್ವಾರಃ ಪಾದಾ ಅಸ್ಯ । ಸ್ವರವ್ಯತಿರಿಕ್ತಂ ಪೂರ್ವವತ್ । ಬಹುವ್ರೀಹೌ ಪೂರ್ವಪದಪ್ರಕೃತಿಸ್ವರತ್ವಂ । ಇಣಃ ಷ ಇತ್ಯನುವೃತ್ತ್ಯಾವಿದುದುಪಧಸ್ಯ ಚಾಪ್ರತ್ಯಯಸ್ಯ । ಪಾ. ೮-೩-೪೧ । ಇತಿ ವಿಸರ್ಜನೀಯಸ್ಯ ಷತ್ವಂ । ನ ಚೆ ಪರತ್ವೇನಾಸ್ಯ ವಿದ್ಧತ್ವಾತ್ ಕುಪ್ವೋಃ ಕಃ ಪೌ ಚೆ । ಪಾ. ೮-೩-೩೭ । ಇತ್ಯುಪಧ್ಮಾನೀಯೌದೇಶಃ ಶಂಕನೀಯಃ ।

ಯೇನ ನಾಪ್ರಾಪ್ತಿನ್ಯಾಯೇನ ತಸ್ಯಾಪವಾದತ್ವಾತ್ । ಅಪವಾದಸ್ತು ಪರಮಪಿ ಪೂರ್ವಂ ಬಾಧತೇ ಏವೇತಿ ವೃತ್ತ್ಯುಕ್ತಂ । ಆರನ್ । ಋ ಗತೌ । ಛಂದಸಿ ಲುಙ್ಲಙ್ಲಿಟ ಇತಿ ವರ್ತಮಾನೇ ಲುಙ್ ಸರ್ವಿಶಾಸ್ತ್ರ್ಯರ್ತಿಭ್ಯಶ್ಚೇತಿ । ಚ್ಲೇರಙಾದೇಶಃ । ಋದೃಶೋಽಞ್ ಗುಣ ಇತಿ ಗುಣಃ । ಆಡಾಗಮಃ । ಋತೋನ್ । ಋ ಗತೌ । ಅಸ್ಮಾದೌಣಾದಿಕೋ ಭಾವೇ ಕುಪ್ರತ್ಯಯೇಃ । ಅನು । ಅನುರ್ಲಕ್ಷಣೇ । ಪಾ. ೧-೪-೮೪ । ಇತ್ಯನೋಃ ಕರ್ಮಪ್ರವಚನೀಯತ್ವಂ । ಕರ್ಮಪ್ರವಚನೀಯೆಯುಕ್ತೇ । ಪಾ. ೨-೩-೮ । ಇತಿ ದ್ವಿತೀಯಾ । ಸಂಹಿತಾಯಾಂ ದೀರ್ಘಾದಟಿ ಸಮಾನಪಾದ ಇತಿ ನಕಾರಸ್ಯ ರುತ್ವಂ । ಅತ್ರಾನುನಾಸಿಕಃ ಪೂರ್ವಸ್ಯ ತು ವೇತಿ ರೋಃ ಪೂರ್ವಸ್ಯ ವರ್ಣಸ್ಯ ಸಾನುನಾಸಿಕತ್ವಂ । ದಿವಃ । ಊಡಿದಮಿತಿ ವಿಭಕ್ತೇರುದಾತ್ತಾ । ಅಂತೇಭ್ಯಃ । ಪಂಚಮ್ಯಾಃ ಪರಾವಧ್ಯರ್ಥ ಇತಿ ವಿಸರ್ಜನೀಯಸ್ಯ ಸತ್ವಂ ॥

॥ ಪ್ರತಿಪದಾರ್ಥ ॥

ಅರ್ಜುನಿ—ಶುಭ್ರವರ್ಣವುಳ್ಳ । **ಉಷಃ**—ಎಲೈ ಉಷೋದೇವಿಯೇ । **ತೇ**—ನಿನ್ನ । **ಋತೋನ್ ಅನು**—ಗಮನಗಳನ್ನನುಸರಿಸಿ (ನೀನು ಉದಯಿಸಿದ ಕೂಡಲೇ) । **ದ್ವಿಪತ್**—ಎರಡುಕಾಲುಗಳುಳ್ಳ ಮನುಷ್ಯಾದಿ ಪ್ರಾಣಿಗಳೂ । **ಚತುಷ್ಪತ್**—ನಾಲ್ಕು ಕಾಲುಗಳುಳ್ಳ ಗವಾದಿಗಳೂ । **ಪತತ್ರಿಣಃ**—ರೆಕ್ಕೆಗಳುಳ್ಳ । **ವಯಶ್ಚಿತ್**—ಪಕ್ಷಿಗಳೂ ಕೂಡ । **ದಿವಃ**—ಅಂತರಿಕ್ಷದ । **ಅಂತೇಭ್ಯಃ**—ಪ್ರಾಂತ ಭಾಗಗಳಿಂದ (ನಾನಾ ಮೂಲೆಗಳಿಂದಲೂ) । **ಪರಿ**—ಮೇಲುಭಾಗದಲ್ಲಿ । **ಪ್ರಾರ್ಧ**—(ಗುಂಪುಕೂಡಿಕೊಂಡು) ಉತ್ಸಾಹದಿಂದ ಸಂಚರಿಸುತ್ತವೆ

॥ ಭಾವಾರ್ಥ ॥

ಶುಭ್ರವರ್ಣವುಳ್ಳ ಎಲೈ ಉಷೋದೇವಿಯೇ, ನಿನ್ನ ಉದಯವಾದೊಡನೆಯೇ ನಿನ್ನ ಗಮನಗಳನ್ನನುಸರಿಸಿ ಮನುಷ್ಯಾದಿದ್ವಿಪಾದಿಗಳೂ, ಗವಾದಿ ಚತುಷ್ಪಾದಿಗಳೂ, ಸಂಚರಿಸಲು ಪ್ರಾರಂಭಿಸುವವು. ಅಂತರಿಕ್ಷದ ನಾನಾ ಮೂಲೆಗಳಿಂದಲೂ ರೆಕ್ಕೆಗಳುಳ್ಳ ಪಕ್ಷಿಗಳೂ ಸಹ ಗುಂಪುಕಟ್ಟಿಕೊಂಡು ಉತ್ಸಾಹದಿಂದ ಸಂಚರಿಸುತ್ತವೆ.

English Translation.

O bright Ushas, at your coming in the morning the bipeds (men) and quadrupeds (animals with four legs) begin to move and even the winged birds flock around from the boundaries of the sky.

॥ ವಿಶೇಷ ವಿಷಯಗಳು ॥

ಮುಖ್ಯಾಭಿಪ್ರಾಯವು—ಉಷಃಕಾಲದಲ್ಲಿ ಬೆಳಕಾದೊಡನೆಯೇ ಎರಡು ಕಾಲುಗಳುಳ್ಳ ಮನುಷ್ಯರು, ನಾಲ್ಕು ಕಾಲುಗಳುಳ್ಳ ಗೋವು ಮೊದಲಾದ ಪ್ರಾಣಿಗಳು ಸಂಚರಿಸತೊಡಗುವವು. ರೆಕ್ಕೆಗಳುಳ್ಳ ಪಕ್ಷಿಗಳು ಅಂತರಿಕ್ಷದಲ್ಲಿ ಗುಂಪುಗುಂಪಾಗಿ ಹಾರಾಡಲು ಪ್ರಾರಂಭಿಸುವವು. ರಾತ್ರಿಯಲ್ಲಿ ಕತ್ತಲೆಯಾಗಿರುವುದರಿಂದ ಪ್ರಾಣಿಗಳ ಸಂಚಾರಕ್ಕೆ ಅವಕಾಶವಿರುವುದಿಲ್ಲ. ಬೆಳಕಾದೊಡನೆಯೇ ಮನುಷ್ಯರು, ಪ್ರಾಣಿಗಳು ಪಕ್ಷಿಗಳು ಮೊದಲಾದ ಸಮಸ್ತಜೀವಜಂತುಗಳು ತಮ್ಮ ತಮ್ಮ ಸಂಚಾರಾದಿವ್ಯಾಪಾರಗಳಲ್ಲಿ ತೊಡಗುವವು. ಆದುದರಿಂದ ಸಮಸ್ತ ಪ್ರಾಣಿಗಳೂ ನಿನ್ನ (ಉಷಃಕಾಲದ) ಆಗಮನವನ್ನು ಸ್ವಾಗತಿಸುತ್ತವೆ ಎಂದಭಿಪ್ರಾಯವು.

ಪತತ್ರಿಣಃ—**ಪತ್ಲೃ ಗತೌ**। **ಪತತ್ಯನೇನೇತಿ ಪತತ್ರಂ**—(ಆಕಾಶದಲ್ಲಿ) ಸಂಚಾರಮಾಡುವುದರಿಂದ ಅಥವಾ ರೆಕ್ಕೆಗಳುಳ್ಳದ್ದರಿಂದ ಪತತ್ರಿಣಃ ಎಂದರೆ ಪಕ್ಷಿಗಳು.

ದ್ವಿಪತ್—**ದ್ವೌ ಪಾದಾವಸ್ಯೇತಿ**—ಎರಡು ಕಾಲುಗಳುಳ್ಳ ಮನುಷ್ಯರು.

ಚತುಷ್ಪತ್—**ಚತ್ವಾರಃ ಪಾದಾ ಅಸ್ಯ**—ನಾಲ್ಕು ಕಾಲುಗಳುಳ್ಳ ಗೋವುಗಳು ಮೊದಲಾದ ಪ್ರಾಣಿಗಳು

ಅರ್ಜುನಿ—ವಿಭಾವರೀ ಸೂನರೀ ಮೊದಲಾದ ಹದಿನಾರು ಉಷೋನಾಮಗಳ ಮಧ್ಯದಲ್ಲಿ ಅರ್ಜುನಿ ಶಬ್ದವು ಪಠಿತವಾಗಿರುವುದರಿಂದ (ನಿ. ೨-೧೯) ಅರ್ಜುನೀ ಎಂದರೆ ಉಷೋದೇವತೆಯು. ಈ ಋಕ್ಕಿನಲ್ಲಿ ಉಷಃ ಎಂಬ ಶಬ್ದವೂ ಇರುವುದರಿಂದ ಅರ್ಜುನಿ ಎಂಬ ಶಬ್ದಕ್ಕೆ ಶುಭ್ರವರ್ಣವುಳ್ಳ ಎಂಬರ್ಥವನ್ನು ಭಾಷ್ಯಕಾರರು ಹೇಳಿರುವರು.

ಋತೂನ್—ಋತೇರರ್ತೀಗರ್ಗತಿಕರ್ಮಣಃ (ನಿ. ೨-೨-೬೫) ಎಂದು ನಿರುಕ್ತವಚನವಿರುವುದರಿಂದ ಋತೂನ್ ಎಂದರೆ ಗಮನಗಳನ್ನು ; ಉಷೋದೇವತೆಯ ಪ್ರತಿದಿನದ ಉದಯಗಳನ್ನು ಎಂದರ್ಥವು. ಪ್ರತಿದಿನದ ಉಷಃಕಾಲಗಳಲ್ಲಿ ಎಂಬರ್ಥವನ್ನು ಸೂಚಿಸುವುದಕ್ಕಾಗಿ ಬಹುವಚನ ಪ್ರಯೋಗವಿರುವುದು.

॥ ವ್ಯಾಕರಣಪ್ರಕ್ರಿಯಾ ॥

ಪತತ್ರಿಣಃ—**ಪತ್ಲೃ** ಗತೌ ಧಾತು. ಭ್ವಾದಿ. ಪತತಿ ಅನೇನ ಇತಿ ಪತತ್ರಂ. ಹೋಗುವುದಕ್ಕೆ (ಹಾರಲು) ಸಾಧನವಾದುದು ಎಂದರ್ಥ. **ಅಮಿನಕ್ಷಿ**—(ಉ. ಸೂ. ೩-೩೬೫) ಎಂಬುದರಿಂದ ಅತ್ರನ್ ಪ್ರತ್ಯಯ ಬರುತ್ತದೆ. ಪತತ್ರಂ ಎಂದು ರೂಪವಾಗುತ್ತದೆ. **ಪತತ್ರಂ ಅಸ್ಯ ಅಸ್ತೀತಿ ಪತತ್ರೀ**. ರೆಕ್ಕೆಗಳು ಉಳ್ಳದ್ದು ಎಂದರ್ಥ. **ಅತ** ಇನಿತನೌ ಸೂತ್ರದಿಂದ ಮತ್ವರ್ಥದಲ್ಲಿ ಇನಿ ಪ್ರತ್ಯಯ ಬರುತ್ತದೆ. ಆಗ **ಯಸ್ಯೇತಿಚ** ಸೂತ್ರದಿಂದ ಪತತ್ರ ಎಂಬಲ್ಲಿರುವ ಅಕಾರವು ಲೋಪವಾದರೆ ನಾಂತವಾದ ಪದವಾಗುತ್ತದೆ.

ದ್ವಿಪತ್—**ದ್ವೌ ಪಾದೌ ಅಸ್ಯ ಇತಿ ದ್ವಿಪತ್**. ಎರಡು ಕಾಲುಗಳು ಉಳ್ಳದ್ದು ಎಂದರ್ಥ. **ಸಂಖ್ಯಾಸುಪೂರ್ವಸ್ಯ** (ಪಾ. ಸೂ. ೫-೪-೧೪೦) ಸಂಖ್ಯಾಪೂರ್ವದಲ್ಲಿರುವ ಪಾದಶಬ್ದಕ್ಕೆ ಅಂತ್ಯ ಲೋಪ ಬರುತ್ತದೆ. **ಸಮಾಸಾಂತಾಃ** (ಪಾ. ಸೂ. ೫-೪-೭೮) ಎಂಬ ಅಧಿಕಾರದಲ್ಲಿ ಇದನ್ನು ಹೇಳಿರುವುದರಿಂದ ಲೋಪವೂ ಸಮಾಸಾಂತವಾಗುತ್ತದೆ. ಕೊನೆಯ ಅಕಾರಕ್ಕೆ ಲೋಪಬಂದರೆ ದ್ವಿಪಾದ್ ಎಂದು ರೂಪವಾಗುತ್ತದೆ. **ಅಯಸ್ಮಯಾದೀನಿ ಛಂದಸಿ** (ಪಾ. ಸೂ. ೧-೪-೨೦) ಈ ಗಣಪಠಿತವಾದವುಗಳಿಗೆ ನಿಮಿತ್ತವಿಲ್ಲದಿದ್ದರೂ ಭಸಂಜ್ಞೆ ಬರುತ್ತದೆ. ದ್ವಿಪಾದ್ ಎಂಬುದನ್ನು ಈ ಗಣದಲ್ಲಿ ಪಾಠಮಾಡಿರುವುದರಿಂದ ಭಸಂಜ್ಞಾ ಇದಕ್ಕೂ ಬರುತ್ತದೆ. ಆಗ **ಪಾದಃ ಪತ್** (ಪಾ. ಸೂ ೬-೪-೧೩೦) ಭಸಂಜ್ಞಾ ಇರುವಾಗ ಪಾದ್ ಶಬ್ದಕ್ಕೆ ಪತ್ ಎಂಬ ಆದೇಶ ಬರುತ್ತದೆ ಎಂಬುದರಿಂದ ಪದಾದೇಶ ಬರುತ್ತದೆ. ದ್ವಿಪತ್ ಎಂದು ರೂಪವಾಗುತ್ತದೆ. **ದ್ವಿತ್ರಿಭ್ಯಾಂ ಪಾದ್ದನ್ಮೂರ್ಧಸು ಬಹುವ್ರೀಹೌ** (ಪಾ. ಸೂ. ೬-೩-೧೯೭) ದ್ವಿ ತ್ರಿ ಶಬ್ದದ ಪರದಲ್ಲಿರುವ ಪಾದ್ ದತ್ ಮೂರ್ಧನ್ ಶಬ್ದಗಳಿಗೆ ಬಹುವ್ರೀಹಿಸಮಾಸದಲ್ಲಿ ಅಂತೋದಾತ್ತಸ್ವರವು ವಿಕಲ್ಪವಾಗಿ ಬರುತ್ತದೆ ಎಂಬುದರಿಂದ ಇಲ್ಲಿ ಉತ್ತರಪದ ಅಂತೋದಾತ್ತಸ್ವರವು ಬಂದಿದೆ.

ಚತುಷ್ಪತ್ ಚತ್ವಾರಃ ಪಾದಾಃ ಅಸ್ಯ ಚತುಷ್ಪತ್. ನಾಲ್ಕು ಕಾಲುಗಳು ಉಳ್ಳದ್ದು ಎಂದರ್ಥ. ಸ್ವರವನ್ನು ಬಿಟ್ಟು ಉಳಿದ ಕಾರ್ಯಗಳೆಲ್ಲವೂ ದ್ವಿಪತ್ ಶಬ್ದದಂತೆಯೇ ತಿಳಿಯಬೇಕು. ಅಂದರೆ **ಸಂಖ್ಯಾಸು-ಪೂರ್ವಸ್ಯ** ಸೂತ್ರದಿಂದ ಸಮಾಸಾಂತವನ್ನೂ ಅಯಸ್ಮಯಾದಿಯಲ್ಲಿ ಪಾಠಮಾಡಿ ಪತ್ ಆದೇಶವನ್ನು ಹೇಳಬೇಕು. ಸಮಾಸಸ್ವರವು ಪ್ರಾಪ್ತವಾದರೆ **ಬಹುವ್ರೀಹೌ ಪ್ರಕೃತ್ಯಾ ಪೂರ್ವಪದಂ** (ಪಾ. ಸೂ. ೬-೨-೧) ಸೂತ್ರದಿಂದ ಪೂರ್ವಪದ ಪ್ರಕೃತಿಸ್ವರವು ಬರುತ್ತದೆ. ಚುತುಷ್ಪದ್ ಎಂಬುದು ಆದ್ಯುದಾತ್ತವಾದ ಪದವಾಗುತ್ತದೆ. **ಚತುಃ ಪದ್** ಎಂದಿರುವಾಗ, **ಇದುದುಪಧಸ್ಯ ಚಾಪ್ರತ್ಯಯಸ್ಯ** (ಪಾ. ಸೂ. ೮-೩-೪೧) ಸೂತ್ರದಿಂದ ಷತ್ವ ಬರುತ್ತದೆ. ಆ ಸೂತ್ರದಲ್ಲಿ **ಇಣಃ ಷಃ** ಎಂದು ಪೂರ್ವಸೂತ್ರವು ಅನುವೃತ್ತವಾಗುತ್ತದೆ. ಇಕಾರ ಉಕಾರ ಉಪಧೆಯಾಗಿ ಉಳ್ಳ ಪ್ರತ್ಯಯಭಿನ್ನವಾದ ವಿಸರ್ಗಕ್ಕೆ ಕವರ್ಗ ಪವರ್ಗಗಳು ಪರದಲ್ಲಿರುವಾಗ ಷತ್ವ ಬರುತ್ತದೆ ಎಂದು ಆ ಸೂತ್ರದಲ್ಲಿ ಹೇಳಿರುವುದರಿಂದ ಇಲ್ಲಿ ವಿಸರ್ಗಕ್ಕೆ ಪಕಾರ ಪರದಲ್ಲಿರುವುದರಿಂದ ಷತ್ವಬಂದರೆ ಚತುಷ್ಪತ್ ಎಂದು ರೂಪವಾಗುತ್ತದೆ. **ಪೂರ್ವತ್ರಾಸಿದ್ಧಮ್** (ಪಾ. ಸೂ. ೮-೨-೧) ಸಪಾದ ಸಪ್ತಾಧ್ಯಾಯಿಯನ್ನು ಕುರಿತು ಮುಂದಿನ ತ್ರಿಪಾದಿಯು ಅಸಿದ್ಧವಾಗುತ್ತದೆ. ತ್ರಿಪಾದಿಯಲ್ಲಿ ಪೂರ್ವಸೂತ್ರವನ್ನು ಕುರಿತು ಪರಸೂತ್ರವು ಅಸಿದ್ಧವಾಗುತ್ತದೆ. ಇದನ್ನು ಆಶ್ರಯಿಸಿ ಇಲ್ಲಿ ಒಂದು ಪೂರ್ವಪಕ್ಷವು ಉದ್ಭವವಾಗುತ್ತದೆ ಇದಕ್ಕಿಂತ ಹಿಂದೆ, ಕುಪ್ವೋಃ ಕಃ ಪೌಚ (ಪಾ. ಸೂ. ೮-೩-೩೭) ಕವರ್ಗ ಪವರ್ಗ ಪರದಲ್ಲಿರುವಾಗ ವಿಸರ್ಗಕ್ಕೆ ವಿಸರ್ಗವೂ ಕಃ ಪ ಆದೇಶಗಳೂ ಬರುತ್ತವೆ ಎಂಬುದಾಗಿ ಒಂದು ಸೂತ್ರದಿಂದ ವಿಧಿಸಿರುತ್ತಾರೆ. ಅದು ಪೂರ್ವಸೂತ್ರವಾಗಿರುವುದರಿಂದ, ಇದುದುಪಧಸ್ಯ—ಸೂತ್ರವು ಪರವಾದುದರಿಂದ, ಇದುದುಪಧಸ್ಯ—ಸೂತ್ರವು ಅಸಿದ್ಧವಾಗುತ್ತದೆ. ಆದುದರಿಂದ ಷತ್ವವನ್ನುಮಾಡಿದರೂ ಅದು ಇಲ್ಲದ ದೃಷ್ಟಿಯಿಂದ ಹಿಂದಿನ ಕುಪ್ವೋಃ—ಸೂತ್ರದಿಂದ ಉಪಧ್ಮಾನೀಯ ಆದೇಶವು ಪ್ರಾಪ್ತವಾಗುತ್ತದೆ. ಹೀಗೆ ಪೂರ್ವಪಕ್ಷವು ಪ್ರಾಪ್ತವಾದರೆ ಅದನ್ನು ಅಪವಾದದಿಂದ ಪರಿಹರಿಸಬೇಕು. **ಪರ-ನಿತ್ಯಾಂತರಂಗ ಅಪವಾದಾನಾಂ ಉತ್ತರೋತ್ತರಂ ಬಲೀಯಃ** ಎಂದು ಹೇಳಿರುವುದರಿಂದ ಕುಪ್ವೋಃ ಸೂತ್ರಕ್ಕೆ ಇದುದುಪಧಸ್ಯ—ಸೂತ್ರವು ಅಪವಾದ. **ಯೇನ ನಾಪ್ರಾಪ್ತಯೋ ವಿಧಿರಾರಭ್ಯತೇ ಸ ತಸ್ಯ ಅಪವಾದಃ** ಎಂದು ಅಪವಾದಲಕ್ಷಣವನ್ನು ಹೇಳಿರುತ್ತಾರೆ. ಯಾವುದು ಅವಶ್ಯವಾಗಿ ಬರುತ್ತಿರುವಾಗ ಯಾವ ವಿಶೇಷವಿಧಿಯೊಂದು ಪ್ರಾಪ್ತವಾಗುವುದೋ ಅದು ಅಪವಾದವಾಗುವುದೆಂದು ತಾತ್ಪರ್ಯ. ಕುಪ್ವೋಃ ಸೂತ್ರವು ಸಾಮಾನ್ಯವಾದುದರಿಂದ ಅವಶ್ಯವಾಗಿ ಈ ಲಕ್ಷದಲ್ಲಿ ಪ್ರಾಪ್ತವಾಗುತ್ತಿರುವಾಗ ವಿಶೇಷವಾಗಿ ಇದುದುಪಧಸ್ಯ ಚ—ಸೂತ್ರವು ಆರಬ್ಧವಾದುದರಿಂದ ಅಪವಾದವಾಗುತ್ತದೆ. **ಅಪವಾದಸ್ತು ಪರಮಪಿ ಪೂರ್ವಂ ಬಾಧತ ಏವ** ಎಂದು ವೃತ್ತಿಯಲ್ಲಿ ಹೇಳಿರುತ್ತಾರೆ. ಯದ್ಯಪಿ ಇದು ಪರದಲ್ಲಿರುವುದರಿಂದ ಹಿಂದೆ ಹೇಳಿದಂತೆ ಅಸಿದ್ಧವಾಗುತ್ತದೆ. ಆದರೂ ಪೂರ್ವವನ್ನು ಬಾಧಿಸಿಯೇ ಬಾಧಿಸುತ್ತದೆ ಎಂದು ವೃತ್ತಿಕಾರರ ಅಭಿಪ್ರಾಯ. ಆದುದರಿಂದ ಉಪಧ್ಮಾನೀಯವನ್ನು ಬಾಧಿಸಿ ಷತ್ವವೇ ಬರುತ್ತದೆ.

ಅರನ್—ಋ ಗತೌ ಧಾತು. ಭಂದಸಿ ಲುಙ್‌ಲಙ್‌ಲಿಟಃ (ಪಾ.ಸೂ ೩-೪-೬) ಸೂತ್ರದಿಂದ ಭಂದಸ್ಸಿನಲ್ಲಿ ವರ್ತಮಾನಾರ್ಥದಲ್ಲಿ ಲುಙ್ ಬರುತ್ತದೆ. ಪ್ರಥಮಪುರುಷ ಬಹುವಚನ ಪ್ರತ್ಯಯ ಪರದಲ್ಲಿರುವಾಗ ಋಃಧ್ವಿ ಎಂದಿರುತ್ತದೆ. **ಝೋಂತಃ** ಸೂತ್ರದಿಂದ ಝಿಗೆ ಅಂತಾದೇಶ ಬರುತ್ತದೆ. **ಇತಶ್ಚ** ಸೂತ್ರದಿಂದ ಅಂತ್ಯದ ಇಕಾರಕ್ಕೆ ಲೋಪಬಂದರೆ ಸಂಯೋಗಾಂತಲೋಪದಿಂದ ತಕಾರ ಲೋಪವಾಗುತ್ತದೆ. ಅನ್ ಎಂದು ಉಳಿಯುತ್ತದೆ. ಲುಙ್‌ನಲ್ಲಿ ಪ್ರಾಪ್ತವಾಗುವ ಚ್ಲಿಗೆ **ಸರ್ತಿಶಾಸ್ತ್ಯರ್ತಿಭ್ಯಶ್ಚ** (ಪಾ. ಸೂ. ೩-೧-೫೬) ಸೂತ್ರದಿಂದ ಅಙಾದೇಶ ಬರುತ್ತದೆ. ಋ+ಅ+ಅನ್ ಎಂದಿರುವಾಗ **ಋದೃಶೋಽಙಿ ಗುಣಃ** (ಪಾ. ಸೂ. ೭-೪-೧೬) ಸೂತ್ರದಿಂದ

ಧಾತುವಿಗೆ ಗುಣ ಬರುತ್ತದೆ. ಅಜಾದಿ ಧಾತುವಾದುದರಿಂದ ಆಡಾಗಮ ಬರುತ್ತದೆ. ಆಙಿನ ಆಕಾರಕ್ಕೂ ಪ್ರತ್ಯಯದ ಆಕಾರಕ್ಕೂ ಪರರೂಪವು ಏಕಾದೇಶವಾಗಿ ಬರುತ್ತದೆ. ಗುಣವು ರ ಪರವಾಗಿ ಬಂದುದರಿಂದ ಆರನ್ ಎಂದು ರೂಪವಾಗುತ್ತದೆ.

ಋತೋನ್—ಋ ಗತೌ ಧಾತು. ಇದಕ್ಕೆ ಭಾವಾರ್ಥದಲ್ಲಿ (ಗಮನ) ಉಣಾದಿಸಿದ್ಧವಾದ ಕು ಪ್ರತ್ಯಯ ಬರುತ್ತದೆ. ಕಿತ್ವಾದುದರಿಂದ ಗುಣಾದಿಗಳು ಬರುವುದಿಲ್ಲ. ದ್ವಿತೀಯಾ ಬಹುವಚನದಲ್ಲಿ ಋತೂನ್ ಎಂದು ರೂಪವಾಗುತ್ತದೆ.

ಅನು—ಅನುರ್ಲಕ್ಷಣೇ (ಪಾ. ಸೂ. ೧-೪-೮೪) ಜ್ಞಾಪ್ಯಜ್ಞಾಪಕಭಾವಾದಿಗಳು ತೋರುವಾಗ ಅನು ಎಂಬುದಕ್ಕೆ ಕರ್ಮಪ್ರವಚನೀಯ ಸಂಜ್ಞೆಯು ಬರುತ್ತದೆ. ಇಲ್ಲಿ ಉಷೆಯು ಗಮನವನ್ನು ಜ್ಞಾಪಿಸಿಕೊಂಡು ಪಕ್ಷಿ ಮುಂತಾದುವುಗಳು ಹಾರುತ್ತವೆ ಎಂದು ಇರುವುದರಿಂದ ಜ್ಞಾಪ್ಯಜ್ಞಾಪಕಭಾವ ತೋರುತ್ತದೆ. ಆಗ **ಕರ್ಮಪ್ರವಚನೀಯಯುಕ್ತೇ ದ್ವಿತೀಯಾ** (ಪಾ. ಸೂ. ೨-೩-೮) ಕರ್ಮಪ್ರವಚನೀಯದ ಸಂಬಂಧವಿರುವಾಗ ಜ್ಞಾಪಕವಾಚಕದ ಮೇಲೆ ದ್ವಿತೀಯಾ ವಿಭಕ್ತಿ ಬರುತ್ತದೆ ಎಂಬುದರಿಂದ ಅನುಸಂಬಂಧವಿರುವ ಜ್ಞಾಪಕವಾಚಕವಾದ ಋತು (ಗಮನ) ಶಬ್ದದ ಮೇಲೆ ದ್ವಿತೀಯಾ ವಿಭಕ್ತಿ ಬರುತ್ತದೆ. ಋತೂನ್ ಎಂಬಲ್ಲಿ ಮಂತ್ರಪಾಠದಲ್ಲಿ **ದೀರ್ಘಾದಟಿ ಸಮಾನಪಾದೇ** (ಪಾ. ಸೂ ೮-೩-೯) ಸೂತ್ರದಿಂದ ನಕಾರಕ್ಕೆ ರುತ್ವ ಬರುತ್ತದೆ. **ಅತ್ರಾನುನಾಸಿಕಃ ಪೂರ್ವಸ್ಯ ತು ವಾ** (ಪಾ. ಸೂ. ೮-೩-೨) ರುತ್ವದ ಹಿಂದೆ ವಿಕಲ್ಪವಾಗಿ ಅನುನಾಸಿಕವು ಬರುತ್ತದೆ ಎಂಬುದರಿಂದ ಪೂರ್ವವರ್ಣಕ್ಕೆ ಅನುನಾಸಿಕತ್ವವು ಬರುತ್ತದೆ. ನಿಮಿತ್ತವಿಲ್ಲದಿರುವುದರಿಂದ ರುತ್ವದ ರೇಫಕ್ಕೆ ಬೇರೆ ಆದೇಶಗಳು ಬರುವುದಿಲ್ಲ.

ದಿವಃ—ದಿವ್ ಶಬ್ದದ ಷಷ್ಠೀ ಏಕವಚನದಲ್ಲಿ ದಿವಃ ಎಂದು ರೂಪವಾಗುತ್ತದೆ. ಇಲ್ಲಿ ವಿಭಕ್ತಿಗೆ ಅನುದಾತ್ತಸ್ವರವು ಪ್ರಾಪ್ತವಾದರೆ **ಊಡಿದಂ**—(ಪಾ. ಸೂ. ೬-೧-೧೭೧) ಸೂತ್ರದಿಂದ ವಿಭಕ್ತಿಗೆ ಉದಾತ್ತಸ್ವರವು ಬರುತ್ತದೆ. ದಿವಃ ಎಂಬುದು ಅಂತೋದಾತ್ತವಾದ ಪದವಾಗುತ್ತದೆ.

ಅಂತೇಭ್ಯಃ—ಅಂತೇಭ್ಯಃ ಪರಿ ಎಂದು ಮಂತ್ರಪಾಠದಲ್ಲಿ **ಪಂಚಮ್ಯಾಃ ಪರಾವಧ್ಯರ್ಥೇ** (ಪಾ. ಸೂ. ೮-೩-೫೧) ಪಂಚಮೀವಿಭಕ್ತಿಯು ವಿಸರ್ಗಕ್ಕೆ ಮೇಲೆ (ಉಪರಿ) ಎಂಬ ಅರ್ಥಕೊಡುವ ಪರಿ ಶಬ್ದವು ಪರದಲ್ಲಿರುವಾಗ ಸತ್ವವು ಬರುತ್ತದೆ ಎಂಬುದರಿಂದ ವಿಸರ್ಗಕ್ಕೆ ಸಕಾರ ಬರುತ್ತದೆ. ಅಂತೇಭ್ಯಸ್ಪರಿ ಎಂದು ರೂಪವಾಗುತ್ತದೆ.

॥ ಸಂಹಿತಾಪಾಠಃ ॥

ವ್ಯುಚ್ಛಂತೀ ಹಿ ರಶ್ಮಿಭಿರ್ವಿಶ್ವಮಾಭಾಸಿ ರೋಚನಂ।
ತಾಂ ತ್ವಾಮುಷರ್ವಸೂಯವೋ ಗೀರ್ಭಿಃ ಕಣ್ವಾ ಅಹೂಷತ ॥ ೪ ॥

ಪದಪಾಠಃ

ವಿ ಽ ಉಚ್ಛಂತೀ । ಹಿ । ರಶ್ಮಿಽಭಿಃ । ವಿಶ್ವಂ । ಆಽಭಾಸಿ । ರೋಚನಂ ।

ತಾಂ । ತ್ವಾಂ । ಉಷಃ । ವಸುಽಯವಃ । ಗೀಃಽಭಿಃ । ಕಣ್ವಾಃ । ಅಹೂಷತ ॥ ೪ ॥

ಸಾಯಣಭಾಷ್ಯಂ

ಹೇ ಉಷೋ ವ್ಯುಚ್ಛಂತೀ ತಮೋ ವರ್ಜಯಂತೀ ತ್ವಂ ರಶ್ಮಿಭಿಃ ಸ್ವಕೀಯೈಸ್ತೇಜೋಭಿರ್ವಿಶ್ವಂ ಸರ್ವಂ ಭೂತಜಾತಂ ರೋಚನಂ ರೋಚಮಾನಂ ಪ್ರಕಾಶಯುಕ್ತಂ ಯಥಾ ಭವತಿ ತಥಾಭಾಸಿ । ಆ ಸಮಂತಾತ್ ಪ್ರಕಾಶಸೇ । ಹಿ ಯಸ್ಮಾದೇವಂ ತಸ್ಮಾತ್ತ್ವಾಂ ತಾದೃಶೀಂ ತ್ವಾಂ ವಸೂಯವೋ ವಸು-ಕಾಮಾಃ ಕಣ್ವಾ ಮೇಧಾವಿನ ಋತ್ವಿಜಃ ಕಣ್ವಗೋತ್ರೋತ್ಪನ್ನಾ ವಾ ಮಹರ್ಷಯೋ ಗೀರ್ಭಿಃ ಸ್ತುತಿಲ-ಕ್ಷಣೈರ್ವಚೋಭಿರಹೂಷತ । ಸ್ತುತವಂತ ಇತ್ಯರ್ಥಃ । ಕಣ್ವ ಇತಿ ಮೇಧಾವಿನಾಮ । ಕಣ್ವ ಋಭುರಿತಿ ತನ್ನಾಮಸು ಪಾಠಾತ್ ॥ ಅಭಾಸಿ । ಭಾ ದೀಪ್ತೌ । ಅದಾದಿತ್ವಾಚ್ಛಪೋ ಲುಕ್ । ಸಿಪಃ ಪಿತ್ತ್ವಾದನು-ದಾತ್ತತ್ವೇ ಧಾತುಸ್ವರಃ । ಹಿ ಚೇತಿ ನಿಘಾತಪ್ರತಿಷೇಧಃ ।ತಿಙಶ್ಚೋದಾತ್ತವತೀತಿ ಗತೇರನುದಾತ್ತತ್ವಂ । ರೋಚನಂ । ರುಚ ದೀಪ್ತೌ । ಅನುದಾತ್ತೇತಶ್ಚ ಹಲಾದೇರಿತಿ ಯುಚ್ । ಚಿತ ಇತ್ಯಂತೋದಾತ್ತತ್ವಂ । ವಸೂಯವಃ । ವಸು ಧನಮಾತ್ಮನ ಇಚ್ಛಂತಃ । ಸುಪ ಆತ್ಮನಃ ಕ್ಯಚ್ । ಅಕೃತ್ಸಾರ್ವಧಾತುಕಯೋರಿತಿ ದೀರ್ಘಃ । ಕ್ಯಾಚ್ಛಂದಸೀತ್ಯುಪ್ರತ್ಯಯಃ । ಗೀರ್ಭಿಃ । ಸಾವೇಕಾಚ ಇತಿ ವಿಭಕ್ತೇರುದಾತ್ತತ್ವಂ । ಕಣ್ವಾಃ । ಕಣ ಶಬ್ದಾರ್ಥಃ । ಅಶಿಪುಸಿಲಟಿಕಣಿಕ್ಯಾದಿನಾ ಕ್ವನ್ಪ್ರತ್ಯಯಃ । ನಿತ್ತ್ವಾದಾದ್ಯುದಾತ್ತತ್ವಂ । ಅಹೂಷತ । ಹ್ವೇಞಃ ಲುಙಿ ಹ್ವಃ ಸಂಪ್ರಸಾರಣಮಿತ್ಯನುವೃತ್ತೌ ಬಹುಲಂ ಛಂದಸೀತಿ ಸಂಪ್ರಸಾರಣಂ । ಪರ-ಪೂರ್ವತ್ವೇ ಹಲ ಇತಿ ದೀರ್ಘತ್ವಂ । ಚ್ಲೇಃ ಸಿಚ್ । ಏಕಾಚ ಇತೀಟ್ಪ್ರತಿಷೇಧಃ । ಸಂಜ್ಞಾಪೂರ್ವಕಸ್ಯ ವಿಧೇರನಿತ್ಯತ್ವಾದ್ಗುಣಾಭಾವಃ ॥ ೬ ॥

॥ ಪ್ರತಿಪದಾರ್ಥ ॥

ಉಷಃ—ಎಲೈ ಉಷೋದೇವಿಯೇ, (ನೀನು) । **ವ್ಯುಚ್ಛಂತೀ**—(ಕತ್ತಲನ್ನು) ಚದುರಿಸುತ್ತ **ರಶ್ಮಿಭಿಃ**—(ನಿನ್ನ) ತೇಜಸ್ಸುಗಳಿಂದ । **ವಿಶ್ವಂ**—ಸಮಸ್ತ ಲೋಕವನ್ನೂ । **ರೋಚನಂ**—ಪ್ರಕಾಶಿಸುವಂತೆ । **ಆ ಭಾಸಿ**—ಸುತ್ತಲೂ ಬೆಳಗುತ್ತೀಯೆ । **ಹಿ**—ಆದ್ದರಿಂದಲೇ । **ತಾಂ ತ್ವಾಂ**—ಅಂತಹತೇಜೋಯುಕ್ತಳಾದ ನಿನ್ನನ್ನು । **ವಸೂಯವಃ**—ಧನಾಪೇಕ್ಷಿಗಳಾದ । **ಕಣ್ವಾಃ**—ಮೇಧಾವಿಗಳಾದ ಋತ್ವಿಕ್ಕುಗಳು ಅಥವಾ ಕಣ್ವ ಗೋತ್ರೋತ್ಪನ್ನರಾದ ಋಷಿಗಳು । **ಗೀರ್ಭಿಃ**—(ಸ್ತುತಿರೂಪಗಳಾದ) ವಾಕ್ಯುಗಳಿಂದ । **ಅಹೂಷತ**—ಸ್ತೋತ್ರ ಮಾಡಿ ಕರೆದಿದ್ದಾರೆ.

॥ ಭಾವಾರ್ಥ ॥

ಎಲೈ ಉಷೋದೇವಿಯೇ, ನೀನು ಕತ್ತಲನ್ನು ಚದುರಿಸುತ್ತ ನಿನ್ನ ತೇಜಸ್ಸುಗಳಿಂದ ನೀನೂ ಬೆಳಗಿ ಸಮಸ್ತ ಲೋಕವನ್ನೂ ಬೆಳಗಿಸುತ್ತೀಯೆ. ಅಂತಹ ತೇಜೋಯುಕ್ತಳಾದ ನಿನ್ನನ್ನು ಧನಾಪೇಕ್ಷೆಯುಳ್ಳ

ಮೇಧಾವಿಗಳಾದ ಋತ್ವಿಕ್ಕುಗಳು ಅಥವಾ ಕಣ್ವವಂಶದಲ್ಲಿ ಹುಟ್ಟಿದ ಋಷಿಗಳು ಸ್ತುತಿರೂಪವಾದ ವಾಕ್ಯುಗಳಿಂದ ಸ್ತೋತ್ರಮಾಡಿ ಕರೆದಿದ್ದಾರೆ.

English Translation.

O Ushas, dispersing the darkness you illumine the whole universe with your bright rays; therefore, O Ushas, the sons of Kanwas, desirous of wealth, praise you with their hymns.

॥ ವಿಶೇಷ ವಿಷಯಗಳು ॥

ವ್ಯುಚ್ಛಂತೀ—**ತಮೋ ವರ್ಜಯಂತೀ** । ಕತ್ತಲೆಯನ್ನು ಹೋಗಲಾಡಿಸುವವಳು.

ವಸೂಯವಃ—**ವಸುಕಾಮಾಃ ಧನಕಾಮಾಃ** । ಧನವನ್ನು ಅಪೇಕ್ಷಿಸುವ.

ಗೀರ್ಭಿಃ—**ಸ್ತುತಿಲಕ್ಷಣೈರ್ವಚೋಭಿಃ** । ಸ್ತುತಿರೂಪವಾದ ವಾಕ್ಯಗಳಿಂದ ।

ಕಣ್ವಾಃ—ಕಣ್ವಋಷಿಯ ಪುತ್ರರು ಅಥವಾ ಕಣ್ವಋಷಿಯ ವಂಶಸ್ಥರು.

॥ ವ್ಯಾಕರಣಪ್ರಕ್ರಿಯಾ ॥

ಅಭಾಸಿ—**ಅಙ್ ಉಪಸರ್ಗ. ಭಾ ದೀಪ್ತೌ** ಧಾತು. ಅದಾದಿ. ಲಟ್ ಮಧ್ಯಮಪುರುಷ ಏಕವಚನ **ಸಿಪ್** ಪ್ರತ್ಯಯ ಪರದಲ್ಲಿರುವಾಗ **ವಿಕರಣಕ್ಕೆ ಆದಿಪ್ರಭೃತಿಭ್ಯಃ ಶಪಃ** ಸೂತ್ರದಿಂದ **ಲುಕ್** ಬರುತ್ತದೆ. **ಸಿಪ್** ಪಿತ್ತಾದುದರಿಂದ ಅನುದಾತ್ತಸ್ವರ ಬರುತ್ತದೆ. ಆಗ **ಧಾತೋಃ** ಎಂಬುದರಿಂದ ಧಾತುಸ್ವರವೇ (ಅಂತೋದಾತ್ತ) ಉಳಿಯುತ್ತದೆ ಅಭಾಸಿ ಎಂಬುದು ಮಧ್ಯೋದಾತ್ತವಾದ ಪದವಾಗುತ್ತದೆ. **ಹಿಚ** (ಪಾ. ಸೂ. ೮-೧-೩೪) ಸೂತ್ರದಿಂದ ನಿಘಾತಪ್ರತಿಷೇಧ ಬರುತ್ತದೆ. **ತಿಙಿ ಚೋದಾತ್ತವತಿ** (ಪಾ. ಸೂ. ೮-೧-೭೧) ಉದಾತ್ತವಿಶಿಷ್ಟತಿಙಂತವು ಪರದಲ್ಲಿರುವಾಗ ಗತಿಯು ಅನುದಾತ್ತವಾಗುತ್ತದೆ ಎಂಬುದರಿಂದ ಗತಿ ಸಂಜ್ಞೆಯುಳ್ಳ ಅ ಎಂಬುದು ಅನುದಾತ್ತವಾಗುತ್ತದೆ.

ರೋಚನಮ್—ರುಚ ದೀಪ್ತೌ ಧಾತು. ಭ್ವಾದಿ. ಅನಾದಾತ್ಮೇತ್. **ಅನುದಾತ್ತೇತಶ್ಚ ಹಲಾದೇಃ** (ಪಾ ಸೂ. ೩-೧-೧೪೯) ಹಲಾದಿಯಾದ ಅನುದಾತ್ತೇತ್ತಾದ ಧಾತುವಿಗೆ ಯುಚ್ ಪ್ರತ್ಯಯ ಬರುತ್ತದೆ. ಇದರಿಂದ ಇಲ್ಲಿ ರುಚಧಾತುವಿಗೆ ಯುಚ್ ಪ್ರತ್ಯಯ ಬರುತ್ತದೆ. **ಯುವೋರನಾಕೌ** ಸೂತ್ರದಿಂದ ಯು ಎಂಬುದಕ್ಕೆ ಅನಾದೇಶ ಬರುತ್ತದೆ. ಧಾತುವಿಗೆ **ಲಘೂಪಧಗುಣ** ಬರುತ್ತದೆ. ರೋಚನಂ ಎಂದು ರೂಪವಾಗುತ್ತದೆ. ಯುಚ್ ಪ್ರತ್ಯಯವು ಚಿತ್ತಾದುದರಿಂದ **ಚಿತಃ** ಸೂತ್ರದಿಂದ ಅಂತೋದಾತ್ತವಾಗುತ್ತದೆ. ರೋಚನಂ ಎಂಬುದು ಅಂತೋದಾತ್ತವಾದ ಪದ.

ವಸೂಯವಃ—ವಸು ಧನಂ ಆತ್ಮನಃ ಇಚ್ಛಂತಃ ವಸೂಯವಃ ಹಣವನ್ನು ತಮಗೆ ಬಯಸುವವರು ಎಂದರ್ಥ. **ಸುಪ ಆತ್ಮನಃ ಕ್ಯಚ್** (ಪಾ. ಸೂ. ೩-೧-೮) ಸೂತ್ರದಿಂದ ವಸು ಎಂಬ ಸುಬಂತದ ಮೇಲೆ ಕ್ಯಚ್ ಪ್ರತ್ಯಯ ಬರುತ್ತದೆ. ಕ್ಯಚ್ ಸನಾದಿಯಲ್ಲಿ ಸೇರಿರುವುದರಿಂದ ಕ್ಯಜಂತಕ್ಕೆ ಧಾತುಸಂಜ್ಞೆ ಬರುತ್ತದೆ. ವಸುಯ

ಎಂದಿರುವಾಗ **ಅಶ್ವತ್ಸಾರ್ವಧಾತುಕಯೋರ್ದೀರ್ಘಃ** (ಪಾ. ಸೂ. ೬-೪-೫೫) ಕೃತ್ಸಾರ್ವಧಾತುಕಭಿನ್ನವಾದ ಯಕಾರಾದಿ ಪ್ರತ್ಯಯ ಪರದಲ್ಲಿರುವಾಗ ಅಜಂತಾಂಗಕ್ಕೆ ದೀರ್ಘ ಬರುತ್ತದೆ ಎಂಬುದರಿಂದ ಉಕಾರಕ್ಕೆ ದೀರ್ಘ ಬರುತ್ತದೆ. ವಸೂಯತಿ ಎಂದು ಕ್ರಿಯಾಪದವಾಗುತ್ತದೆ. ವಸೂಯ ಎಂಬ ಧಾತುವಿನ ಮೇಲೆ **ಕ್ಯಾಚ್ಛಂದಸಿ** (ಪಾ. ಸೂ. ೩-೨-೧೭೦) ಸೂತ್ರದಿಂದ ಛಂದಸ್ಸಿನಲ್ಲಿ ಉ ಪ್ರತ್ಯಯ ಬರುತ್ತದೆ. ವಸೂಯ+ಉ ಎಂದಿರುವಾಗ **ಅತೋಲೋಪಃ** ಸೂತ್ರದಿಂದ ಕ್ಯಚಿನ ಅಕಾರಕ್ಕೆ ಲೋಪಬಂದರೆ ವಸೂಯು ಎಂದು ಉಕಾರಾಂತ ಶಬ್ದವಾಗುತ್ತದೆ. ಪ್ರಥಮಾ ಬಹುವಚನದಲ್ಲಿ **ಜಸಿಚ** ಸೂತ್ರದಿಂದ ಗುಣ ಅವಾದೇಶಗಳು ಬಂದರೆ ವಸೂಯವಃ ಎಂದು ರೂಪವಾಗುತ್ತದೆ.

ಗೀರ್ಭಿಃ—ಗಿರ್ ಶಬ್ದದ ಪರದಲ್ಲಿ ತೃತೀಯಾ ಬಹುವಚನವಿರುವಾಗ **ರ್ಭ್ಯೋರುಪಧಾಯಾಃ** ಸೂತ್ರದಿಂದ ದೀರ್ಘ ಬಂದು ಗೀರ್ಭಿಃ ಎಂದು ರೂಪವಾಗುತ್ತದೆ **ಸಾವೇಕಾಚಸ್ತೃತೀಯಾದಿರ್ವಿಭಕ್ತಿಃ** (ಪಾ. ಸೂ ೬-೧-೧೬೮) ಸಪ್ತಮೀ ಏಕವಚನ ಪರದಲ್ಲಿರುವಾಗ ಏಕಾಚ್ ಉಳ್ಳ ಶಬ್ದದ ಪರದಲ್ಲಿರುವ ತೃತೀಯಾದಿ ವಿಭಕ್ತಿಯು ಉದಾತ್ತವಾಗುತ್ತದೆ ಎಂಬುದರಿಂದ ಇಲ್ಲಿ ಗೀರ್ಭಿಃ ಎಂಬುದು ಅಂತೋದಾತ್ತವಾಗುತ್ತದೆ.

ಕಣ್ವಾಃ—ಕಣ ಶಬ್ದಾರ್ಥಃ (ಅನೇಕ ಧಾತುಗಳೊಡನೆ ಶಬ್ದಾರ್ಥದಲ್ಲಿ ಇದನ್ನು ಪಠಿಸಿರುತ್ತಾರೆ.) ಇದಕ್ಕೆ **ಅಶಿಪ್ರುಷಿಲಟಿಕಣಿ** (ಉ. ಸೂ. ೧-೧೫೯) ಸೂತ್ರದಿಂದ ಕ್ವನ್ ಪ್ರತ್ಯಯ ಬರುತ್ತದೆ. ಕ್ವನ್ನಿನಲ್ಲಿ ವ ಎಂಬುದು ಉಳಿಯುತ್ತದೆ. ಕಣ್ವ ಎಂದು ರೂಪವಾಗುತ್ತದೆ. ನಿತ್ತಾದುದರಿಂದ **ಞ್ನಿತ್ಯಾದಿರ್ನಿತ್ಯಂ** ಸೂತ್ರದಿಂದ ಆದ್ಯುದಾತ್ತವಾಗುತ್ತದೆ. ಬಹುವಚನದಲ್ಲಿ ಆದ್ಯುದಾತ್ತವಾಗಿ ಕಣ್ವಾಃ ಎಂದು ರೂಪವಾಗುತ್ತದೆ.

ಅಹೂಷತ—ಹ್ವೇಞ್ ಸ್ಪರ್ಧಾಯಾಂ ಧಾತು. ಭ್ವಾದಿ. ಲುಙ್ ಪ್ರಥಮಪುರುಷ ಬಹುವಚನ ಪರದಲ್ಲಿರುವಾಗ ಹ್ವೆ+ಅತ ಎಂದಿರುತ್ತದೆ. **ಬಹುಲಂ ಛಂದಸಿ** (ಪಾ. ಸೂ. ೬-೧-೩೪) ಛಂದಸ್ಸಿನಲ್ಲಿ ಹ್ವೇಞ್ ಧಾತುವಿಗೆ ಸಂಪ್ರಸಾರಣ ಬರುತ್ತದೆ ಎಂಬುದರಿಂದ ಸಂಪ್ರಸಾರಣ ಬರುತ್ತದೆ. ವಕಾರಕ್ಕೆ ಉಕಾರರೂಪ ಸಂಪ್ರಸಾರಣ ಬಂದರೆ ಹು+ಎ+ಅತ ಎಂದಾಗುತ್ತದೆ. **ಸಂಪ್ರಸಾರಣಾಚ್ಚ** ಸೂತ್ರದಿಂದ ಪೂರ್ವರೂಪ ಬಂದರೆ ಹು+ಅತ ಎಂದು ರೂಪವಾಗುತ್ತದೆ. **ಹಲಃ** (ಪಾ. ಸೂ. ೬-೪-೨) ಅಂಗಾವಯವವಾದ ವ್ಯಂಜನದ ಪರದಲ್ಲಿರುವ ಸಂಪ್ರಸಾರಣಕ್ಕೆ ದೀರ್ಘ ಬರುತ್ತದೆ ಎಂಬುದರಿಂದ ಹು ಎಂಬುದಕ್ಕೆ ದೀರ್ಘ ಬರುತ್ತದೆ. ಹೂ+ಅತ ಎಂದಿರುವಾಗ ಲುಙಿನಲ್ಲಿ ಪ್ರಾಪ್ತವಾಗುವ ಚ್ಲಿಗೆ ಸಿಚ್ ವಿಕರಣ ಬರುತ್ತದೆ. **ಏಕಾಚೋ ಉಪದೇಶೀನುದಾತ್ತಾತ್** ಸೂತ್ರದಿಂದ ಆರ್ಧಧಾತುಕವಾದ ಸಿಚಿಗೆ ಇಣ್ನಿಷೇಧ ಬರುತ್ತದೆ. **ಸಂಜ್ಞಾಪೂರ್ವಕೋವಿಧಿರನಿತ್ಯಃ** (ಪರಿಭಾಷಾ. ೯೫) ಎಂಬುದರಿಂದ ಆರ್ಧಧಾತುಕವನ್ನು ನಿಮಿತ್ತೀಕರಿಸಿ ಬರುವ ಗುಣವು ಇಲ್ಲಿ ಬರುವುದಿಲ್ಲ. ಇಕಿನ ಪರದಲ್ಲಿ ಸಿಚ್ಚಿನ ಸಕಾರವಿರುವುದರಿಂದ **ಆದೇಶಪ್ರತ್ಯಯಯೋಃ** ಸೂತ್ರದಿಂದ ಷತ್ವ ಬಂದರೆ ಧಾತುವಿಗೆ ಅಡಾಗಮ ಬಂದರೆ ಅಹೂಷತ ಎಂದು ರೂಪವಾಗುತ್ತದೆ. ಅತಿಙಂತದ ಪರದಲ್ಲಿರುವುದರಿಂದ ಸರ್ವಾನುದಾತ್ತವಾಗುತ್ತದೆ.

ಐವತ್ತನೆಯ ಸೂಕ್ತವು

ಉದು ತ್ಯಮಿತಿ ತ್ರಯೋದಶರ್ಚಂ ಸಪ್ತಮಂ ಸೂಕ್ತಂ ಪ್ರಸ್ಕಣ್ವಸ್ಯಾರ್ಷಂ ಸೂರ್ಯದೇವತ್ಯಂ । ಆದೌ ನವ ಗಾಯತ್ರ್ಯಃ ಶಿಷ್ಟಾಶ್ಚತಸ್ರೋಽನುಷ್ಟುಭ ಇತ್ಯುಕ್ತಂ । ತಥಾ ಚಾನುಕ್ರಾಂತಂ । ಉದು ತ್ಯಂ ಸಪ್ತೋತಾ ಸೌರ್ಯಂ ನವಾದ್ಯಾ ಗಾಯತ್ರ್ಯ ಇತಿ ॥ ಆಶ್ವಿನಶಸ್ತ್ರೇ ಸೌರ್ಯೇ ಕ್ರತಾವುದು ತ್ಯಮಿತ್ಯಾದಯೋ ನವರ್ಚಃ ಶಂಸನೀಯಾಃ । ಸಂಸ್ಥಿತೇಷ್ವಾಶ್ವಿನಾಯೇತಿ ಖಂಡೇ ಸೂತ್ರಿತಂ । ಸೂರ್ಯೋ ನೋ ದಿವ ಉದು ತ್ಯಂ ಜಾತವೇದಸಮಿತಿ ನವ । ಅ. ೬-೫ । ಇತಿ ॥

ಅನುವಾದವು—ಉದುತ್ಯಂ ಎಂಬುದು ಒಂಭತ್ತನೆಯ ಅನುವಾಕದಲ್ಲಿ ಏಳನೆಯ ಸೂಕ್ತವು. ಇದರಲ್ಲಿ ಹದಿಮೂರು ಋಕ್ಕುಗಳಿರುವವು. ಮೊದಲನೆಯ ಒಂಭತ್ತು ಋಕ್ಕುಗಳು ಗಾಯತ್ರೀ ಛಂದಸ್ಸಿನವು, ಉಳಿದ ನಾಲ್ಕು ಋಕ್ಕುಗಳು ಅನುಷ್ಟುಪ್ ಛಂದಸ್ಸಿನವು. ಅನುಕ್ರಮಣಿಕೆಯಲ್ಲಿ—ಉದುತ್ಯಂ ಎಂಬ ಸೂಕ್ತವು ನವಮಾನುವಾಕದಲ್ಲಿ ಏಳನೆಯ ಸೂಕ್ತವು. ಇದು ಸೂರ್ಯದೇವತಾಕವಾದುದು. ಈ ಸೂಕ್ತದ ಮೊದಲ ಒಂಭತ್ತು ಋಕ್ಕುಗಳು ಗಾಯತ್ರೀ ಛಂದಸ್ಸಿನವು ಎಂದು ಹೇಳಿರುವುದು. ಆಶ್ವಿನಶಸ್ತ್ರಮಂತ್ರ ಪಠನಮಾಡುವಾಗ ಸೌರ್ಯಕ್ರತುಮಂತ್ರಗಳಿಗಾಗಿ ಉದುತ್ಯಂ ಎಂದು ಮೊದಲಾಗಿರುವ ಒಂಭತ್ತು ಋಕ್ಕುಗಳನ್ನು ಪಠಿಸಬೇಕೆಂದು ಹೇಳಲ್ಪಟ್ಟಿರುವುದು. ಈ ವಿಷಯವು ಆಶ್ವಲಾಯನಶ್ರೌತಸೂತ್ರದಲ್ಲಿ ಸಂಸ್ಥಿತೇಷ್ವಾಶ್ವಿನಾಯ ಎಂಬ ಖಂಡದಲ್ಲಿ ಸೂರ್ಯೋ ನೋ ದಿವ (ಋ. ಸಂ. ೧೦-೧೫೮) ಉದು ತ್ಯಂ ಜಾತವೇದಸಂ ನವ (ಋ. ಸಂ. ೧-೫೦-೧ ರಿಂದ ೯ ಋಕ್ಕುಗಳು) ಎಂಬ ಸೂತ್ರದಿಂದ ವಿವರಿಸಲ್ಪಟ್ಟಿರುವುದು.

ಸೂಕ್ತ—೫೦

ಮಂಡಲ—೧ ॥ ಅನುವಾಕ—೯ ॥ ಸೂಕ್ತ—೫೦ ॥
ಅಷ್ಟಕ—೧ ॥ ಅಧ್ಯಾಯ—೪ ॥ ವರ್ಗ—೭, ೮ ॥

ಸೂಕ್ತದಲ್ಲಿರುವ ಋಕ್ಸಂಖ್ಯೆ—೧-೧೩ ॥
ಋಷಿಃ—ಪ್ರಸ್ಕಣ್ವಃ ಕಾಣ್ವಃ ॥
ದೇವತಾ—ಸೂರ್ಯಃ ॥
ಛಂದಃ—೧-೯ ಗಾಯತ್ರೀ । ೧೦-೧೩ ಅನುಷ್ಟುಪ್ ॥

॥ ಸಂಹಿತಾಪಾಠಃ ॥

ಉದು ತ್ಯಂ ಜಾತವೇದಸಂ ದೇವಂ ವಹಂತಿ ಕೇತವಃ।
ದೃಶೇ ವಿಶ್ವಾಯ ಸೂರ್ಯಂ ॥ ೧ ॥

॥ ಪದಪಾಠಃ ॥

ಉತ್ । ಊಂ ಇತಿ । ತ್ಯಂ । ಜಾತಂ-ವೇದಸಂ । ದೇವಂ । ವಹಂತಿ । ಕೇತವಃ ।
ದೃಶೇ । ವಿಶ್ವಾಯ । ಸೂರ್ಯಂ ॥ ೧ ॥

॥ ಸಾಯಣಭಾಷ್ಯಂ ॥

ಕೇತವಃ ಪ್ರಜ್ಞಾಪಕಾಃ ಸೂರ್ಯಾಶ್ವಾ ಯದ್ವಾ ಸೂರ್ಯರಶ್ಮಯಃ ಸೂರ್ಯಂ ಸರ್ವಸ್ಯ ಪ್ರೇರಕಮಾದಿತ್ಯಮುದು ವಹಂತಿ । ಊರ್ಧ್ವಂ ವಹಂತಿ । ಉ ಇತಿ ಪಾದಪೂರಣಃ । ಉಕ್ತಂ ಚ । ಮಿತಾಕ್ಷರೇಷ್ವನರ್ಥಕಾಃ ಕಮೀಮಿದ್ವಿತಿ । ನಿ. ೧-೯ । ಕಿಮರ್ಥಂ ವಿಶ್ವಾಯ ವಿಶ್ವಸ್ಮೈ ಭುವನಾಯ ದೃಶೇ ದ್ರಷ್ಟುಂ । ಯಥಾ ಸರ್ವೇ ಜನಾಃ ಸೂರ್ಯಂ ಪಶ್ಯಂತಿ ತಥೋರ್ಧ್ವಂ ವಹಂತೀತ್ಯರ್ಥಃ । ಕೀದೃಶಂ ಸೂರ್ಯಂ । ತ್ಯಂ ಪ್ರಸಿದ್ಧಂ ಜಾತವೇದಸಂ ಜಾತಾನಾಂ ಪ್ರಾಣಿನಾಂ ವೇದಿತಾರಂ ಜಾತಪ್ರಜ್ಞಂ ಜಾತಧನಂ ವಾ ದೇವಂ ದ್ಯೋತಮಾನಂ । ಅತ್ರ ನಿರುಕ್ತಂ । ಉದ್ವಹಂತಿ ತಂ ಜಾತವೇದಸಂ ದೇವಮಶ್ವಾಃ ಕೇತವೋ ರಶ್ಮಯೋ ವಾ ಸರ್ವೇಷಾಂ ಭೂತಾನಾಂ ಸಂದರ್ಶನಾಯ ಸೂರ್ಯಂ । ನಿ. ೧೨-೧೫ । ಇತಿ ॥ ಜಾತವೇದಸಂ । ಜಾತಾನಿ ವೇತ್ತೀತಿ ಜಾತವೇದಾಃ । ಗತಕಾರಕಯೋರಪಿ ಪೂರ್ವಪದಪ್ರಕೃತಿಸ್ವರತ್ವಂ । ಚೇತ್ಯಸುನ್ ಪೂರ್ವಪದಪ್ರಕೃತಿಸ್ವರತ್ವಂ ಚ । ದೃಶೇ । ದೃಶೇ ವಿಖ್ಯೇ ಚ । ಪಾ. ೩-೪-೧೧ । ಇತಿ ತುಮರ್ಥೇ ನಿಪಾತಿತಃ । ಸೂರ್ಯಂ । ರಾಜಸೂಯಸೂರ್ಯೇತ್ಯಾದಿನಾ ಷೂ ಪ್ರೇರಣ ಇತ್ಯಸ್ಮಾತ್ ಕ್ಯಪಿ ರುಡಾಗಮಸಹಿತೋ ನಿಪಾತಿತಃ । ಅತಃ ಪ್ರತ್ಯಯಸ್ಯ ಪಿತ್ತ್ವಾದನುದಾತ್ತತ್ವೇ ಧಾತುಸ್ವರೇಣಾದ್ಯುದಾತ್ತತ್ವಂ ॥

॥ ಪ್ರತಿಪದಾರ್ಥ ॥

ಕೇತವಃ—(ಸೂರ್ಯನ ಆಗಮನವನ್ನು ಸೂಚಿಸತಕ್ಕ) ಸೂರ್ಯನ ಕುದುರೆಗಳು ಅಥವಾ ಸೂರ್ಯನ ಕಿರಣಗಳು । ತ್ಯಂ—(ಲೋಕ) ಪ್ರಸಿದ್ಧನಾಗಿಯೂ । ಜಾತವೇದಸಂ—ಉತ್ಪನ್ನವಾದ ಸಕಲವನ್ನು ತಿಳಿದವನಾಗಿಯೂ ಅಥವಾ ಉತ್ಪನ್ನವಾದ ಧನವುಳ್ಳವನಾಗಿಯೂ । ದೇವಂ—ಪ್ರಕಾಶಮಾನನಾಗಿಯೂ ಇರುವ । ಸೂರ್ಯಂ—(ಸರ್ವರನ್ನೂ ತಮ್ಮ ತಮ್ಮ ಕೆಲಸದಲ್ಲಿ ಪ್ರೇರಿಸತಕ್ಕ) ಸೂರ್ಯನನ್ನು । ವಿಶ್ವಾಯ—ಸಮಸ್ತಲೋಕದ । ದೃಶೇ— ದರ್ಶನಕ್ಕೋಸ್ಕರ । ಉದು ವಹಂತಿ—ಮೇಲೆತ್ತಿ ಹಿಡಿಯುತ್ತವೆ. (ವಹಿಸುತ್ತವೆ).

॥ ಭಾವಾರ್ಥ ॥

ಸರ್ವರನ್ನೂ ತಮ್ಮ ತಮ್ಮ ವ್ಯವಹಾರದಲ್ಲಿ ಪ್ರೇರಿಸತಕ್ಕ ಸೂರ್ಯದೇವನು ಲೋಕಪ್ರಸಿದ್ಧನು. ಉತ್ಪನ್ನವಾದ ಸಕಲವನ್ನೂ ತಿಳಿದವನು. ಉತ್ಪನ್ನವಾದ ಧನವುಳ್ಳವನು. ಮತ್ತು ಪ್ರಕಾಶಮಾನನು. ಇಂತಹ ದಿವ್ಯಗುಣಗಳುಳ್ಳ ಸೂರ್ಯನನ್ನು ಅವನ ಆಗಮನವನ್ನು ಸೂಚಿಸತಕ್ಕ ಕುದುರೆಗಳು ಅಥವಾ ಅವನ ಕಿರಣಗಳು ಸಮಸ್ತ ಲೋಕದ ದರ್ಶನಕ್ಕಾಗಿ ಮೇಲೆತ್ತಿ ಹಿಡಿಯುತ್ತವೆ.

English Translation.

His horses (or rays) carry on high all-knowing and divine Sun that he may be seen by all.

॥ ವಿಶೇಷ ವಿಷಯಗಳು ॥

ಈ ಸೂಕ್ತವು ಸೂರ್ಯದೇವತಾಕವು. ಋಗ್ವೇದದಲ್ಲಿ ಸೂರ್ಯದೇವತಾಕವಾದ ಋಕ್ಕುಗಳು ಒಟ್ಟು ಅರವತ್ತೂವರೆ ಇರುವವು. ಇವುಗಳನ್ನು ಒಟ್ಟುಗೂಡಿಸಿ ಸೌರಸೂಕ್ತವೆಂದು ಕರೆಯುವರು. ಸೂರ್ಯೋಪಸ್ಥಾನದಲ್ಲಿಯೂ ಸೂರ್ಯನಮಸ್ಕಾರ ಮುಂತಾದ ಪೂಜಾಕರ್ಮಗಳಲ್ಲಿಯೂ ಈ ಸೌರಸೂಕ್ತವನ್ನು ಪಠಿಸುವರು. ಸೂರ್ಯ, ಆದಿತ್ಯ, ಸವಿತೃ ಎಂಬ ದೇವತೆಗಳು ಒಂದೇ ವ್ಯಕ್ತಿಯಾದ ಸೂರ್ಯನನ್ನು ಸೂಚಿಸುವುದಾದರೂ ಋಗ್ವೇದದಲ್ಲಿ ಹಿಂದೆ ಹೇಳಿದಂತೆ ಸೂರ್ಯಪ್ರತಿಪಾದಿತವಾದ ಋಕ್ಕುಗಳು ಹೆಚ್ಚಾಗಿಲ್ಲ. ಆದಿತ್ಯಸವಿತೃದೇವತಾಕವಾದ ಅನೇಕ ಸೂಕ್ತಗಳಿರುವವು.

ಸೂರ್ಯಶಬ್ದಕ್ಕೆ ಯಾಸ್ಕರು—**ಸೂರ್ಯಃ ಸರ್ತೇರ್ವಾ। ಸುವತೇರ್ವಾ। ಸ್ವೀರ್ಯತೇರ್ವಾ॥** (ನಿ. ೧೨-೧೪) ಎಂದರೆ ಚಲಿಸುವುದರಿಂದ, ಸಮಸ್ತವನ್ನು ಹುಟ್ಟಿಸುವುದರಿಂದ ಅಥವಾ ಸಮಸ್ತಪ್ರಾಣಿವರ್ಗವನ್ನು ಪ್ರೇರಿಸುವುದರಿಂದ ಸೂರ್ಯನೆಂದು ಹೆಸರು ಎಂದು ಸೂರ್ಯ ಶಬ್ದಕ್ಕೆ ನಿಷ್ಪತ್ತಿಯನ್ನು ಹೇಳಿರುವರು ಮತ್ತು ಈ ಋಕ್ಕಿಗೆ ಈ ರೀತಿ ನಿರ್ವಚನವನ್ನು ಹೇಳಿರುವರು—

ಉದ್ವಹಂತಿ ತಂ ಜಾತವೇದಸಂ ರಶ್ಮಯಃ ಕೇತವಃ ಸರ್ವೇಷಾಂ ಭೂತಾನಾಂ ದರ್ಶನಾಯ ಸೂರ್ಯಮಿತಿ। ಕಮನ್ಯಮಾದಿತ್ಯಾದೇವಮವಷ್ಟೌತ್॥ (ನಿ. ೧೨-೧೫).

ಈ ನಿರ್ವಚನವು ಭಾಷ್ಯಕಾರರು ಹೇಳಿರುವ ಅರ್ಥದಂತೆಯೇ ಇರುವುದರಿಂದ ಇದರ ವಿವರಣೆಯು ಅವಶ್ಯಕವಿಲ್ಲ.

ತ್ಯಂ—ಈ ಶಬ್ದವು ತಚ್ಛಬ್ದಾರ್ಥವನ್ನು ಸೂಚಿಸುವುದು. ತ್ಯಂ ಎಂದರೆ ತಂ ಎಂದರ್ಥವು.

ಜಾತವೇದಸಂ—ಜಾತಾನಿ ವೇತ್ತೀತಿ ಜಾತವೇದಾಃ ತಂ। ಪ್ರಪಂಚದಲ್ಲಿ ಹುಟ್ಟಿದ ಸಮಸ್ತವನ್ನೂ ತಿಳಿಯುವವನು.

ದೇವಂ—ಪ್ರಕಾಶಮಾನವಾದ, ಸ್ವರ್ಗದಲ್ಲಿ ಬೆಳಗುತ್ತಿರುವ.

ಉದ್ವಹಂತಿ—ಮೇಲೆ ವಹಿಸುತ್ತವೆ. ಅಥವಾ ಧರಿಸುತ್ತವೆ. ಸೂರ್ಯಾಶ್ವಗಳು ಅಥವಾ ಸೂರ್ಯನ ರಶ್ಮಿಗಳು ಸೂರ್ಯನನ್ನು ಎಲ್ಲರಿಗೂ ಕಾಣಿಸುವಂತೆ ಅಂತರಿಕ್ಷದ ಮೇಲುಭಾಗದಲ್ಲಿ ಸೂರ್ಯನನ್ನು ಎತ್ತಿ ಹಿಡಿಯುತ್ತವೆ ಎಂದರೆ ಎತ್ತರವಾದ ಮಾರ್ಗದಿಂದ ಕೊಂಡೊಯ್ಯುತ್ತವೆ.

ಕೇತವಃ—ಕೇತು ಶಬ್ದಕ್ಕೆ ಪ್ರಜ್ಞೆಯೆಂದೂ (ನಿ. ೩-೧೩) ರಶ್ಮಿಯೆಂದೂ ಅರ್ಥವಿರುವುದರಿಂದ ಇಲ್ಲಿ ಪ್ರಜ್ಞೆಯಿಂದ ಕೂಡಿದ ಸೂರ್ಯಾಶ್ವಗಳು ಅಥವಾ ಸೂರ್ಯನ ರಶ್ಮಿಗಳು ಎಂಬರ್ಥವನ್ನು ಭಾಷ್ಯಕಾರರೂ ಸ್ವಂದ

ಸ್ವಾಮಿಯೂ ಹೇಳಿರುವರು. ಯಾಸ್ಕರು ಮಾತ್ರ **ಕೇತವಃ** ಎಂದರೆ ಸೂರ್ಯನ ರಶ್ಮಿಗಳೆಂದು ನಿರ್ವಚನವನ್ನು ಹೇಳಿರುವರು.

ದೃಶೇ—ದ್ರಷ್ಟುಂ । ದರ್ಶನಾಯ । ಎಲ್ಲರಿಗೂ ಕಾಣಿಸುವುದಕ್ಕಾಗಿ, ಎಲ್ಲರೂ ನೋಡುವುದಕ್ಕಾಗಿ.

ವಿಶ್ವಾಯೈ—ವಿಶ್ವಸ್ಮೈ ಭುವನಾಯ । ಸಮಸ್ತ ಪ್ರಪಂಚ ಅಥವಾ ಸಮಸ್ತ ಜನರ (ಪ್ರಾಣಿಗಳ) ದರ್ಶನಾರ್ಥವಾಗಿ.

॥ ವ್ಯಾಕರಣಪ್ರಕ್ರಿಯಾ ॥

ಜಾತವೇದಸಮ್—ಜಾತಾನಿ ವೇತ್ತಿ ಇತಿ ಜಾತವೇದಾಃ । ಹುಟ್ಟಿದವುಗಳನ್ನು ತಿಳಿಯುವವನು. **ಗತಿಕಾರಕೋಪಪದಯೋಃ ಪೂರ್ವಪದಪ್ರಕೃತಿಸ್ವರತ್ವಂ ಚ** (ಉ. ಸೂ. ೫-೬೬) ಗತಿಯೂ ಕಾರಕವೂ ಉಪಪದವಾಗಿರುವಾಗ ಧಾತುವಿಗೆ ಅಸುನ್ ಪ್ರತ್ಯಯವೂ ಪೂರ್ವಪದಪ್ರಕೃತಿಸ್ವರೂಪವೂ ಬರುತ್ತದೆ ಎಂಬುದರಿಂದ ಇಲ್ಲಿ ಜಾತವೆಂಬ ಕಾರಕವು ಉಪಪದವಾಗಿರುವಾಗ ವಿದ್ ಧಾತುವಿಗೆ ಅಸುನ್ ಪ್ರತ್ಯಯ ಬಂದಿದೆ. ಪ್ರತ್ಯಯ ಪರದಲ್ಲಿರುವಾಗ **ಪ್ರಗಂತಲಘೂಪಧಸ್ಯ ಚ** ಸೂತ್ರದಿಂದ ಲಘೂಪಧಗುಣವು ಧಾತುವಿಗೆ ಬರುತ್ತದೆ. ಜಾತವೇದಸ್ ಎಂದು ಸಕಾರಾಂತ ಶಬ್ದವಾಗುತ್ತದೆ. ದ್ವಿತೀಯಾ ಏಕವಚನದಲ್ಲಿ ಜಾತವೇದಸಂ ಎಂದು ರೂಪವಾಗುತ್ತದೆ. **ಗತಿಕಾರಕೋಪಪದಾತ್ ಕೃತ್** ಎಂಬುದರಿಂದ ಉತ್ತರಪದ ಪ್ರಕೃತಿಸ್ವರಕ್ಕೆ ಅಪವಾದವಾಗಿ ಪೂರ್ವಪದಪ್ರಕೃತಿಸ್ವರವು ಬರುತ್ತದೆ. ಪ್ರತ್ಯಯಸ್ವರದಿಂದ ಜಾತಶಬ್ದವು ಅಂತೋದಾತ್ತವಾದುದರಿಂದ ಜಾತ ವೇದಸಂ ಎಂಬಲ್ಲಿ ತಕಾರಾಕಾರವು ಉದಾತ್ತವಾಗುತ್ತದೆ.

ದೃಶೇ—ದ್ರಷ್ಟುಂ ದೃಶಿ ನೋಡುವುದಕ್ಕೋಸ್ಕರ ಎಂದರ್ಥ. ದೃಶಿರ್ ಪ್ರೇಕ್ಷಣೇ ಧಾತು. **ದೃಶೇ ವಿಖ್ಯೇ ಚ** (ಪಾ. ಸೂ. ೩-೪-೧೧) ಈ ಎರಡು ಶಬ್ದಗಳು ತುಮುನರ್ಥದಲ್ಲಿ ನಿಪಾತಿತಗಳಾಗಿರುತ್ತವೆ. ಅದುದರಿಂದ ದ್ರಷ್ಟುಂ ಎಂಬರ್ಥದಲ್ಲಿ ದೃಶೇ ಎಂದು ನಿಪಾತಿತವಾದ ಶಬ್ದ.

ಸೂರ್ಯಮ್—ಷೂ ಪ್ರೇರಣೆ ಧಾತು. ತುದಾದಿ. ರಾಜಸೂಯಸೂಯಸೂರ್ಯಮೃಷೋದ್ಯರುಚ್ಯ-ಕುಷ್ಯಕೃಷ್ಟಪಚ್ಯಾವ್ಯಥ್ಯಾಃ (ಪಾ. ಸೂ. ೩-೧-೧೧೪) ಇಲ್ಲಿ ಏಳು ಶಬ್ದಗಳು ಕ್ಯಪ್ ಪ್ರತ್ಯಯಾಂತಗಳಾಗಿ ನಿಪಾತಿತಗಳಾಗಿವೆ. ಇದರಲ್ಲಿ ಸೂರ್ಯಶಬ್ದವು ಸೇರಿದೆ. ಸರತಿ ಆಕಾಶೆ ಸೂರ್ಯಃ ಆಕಾಶದಲ್ಲಿ ಹೋಗುವವನು ಎಂಬರ್ಥದಲ್ಲಿಯೂ ಸೂರ್ಯಶಬ್ದವನ್ನು ನಿರ್ವಚನಮಾಡಬಹುದು. ಆಗ ಸೃಧಾತುವಿಗೆ ಕ್ಯಪ್ ಪ್ರತ್ಯಯವನ್ನೂ ನಿಪಾತನದಿಂದ ಉತ್ವವನ್ನೂ ದೀರ್ಘವನ್ನೂ ಹೇಳಬೇಕಾಗುತ್ತದೆ. ಅಥವಾ ಮೊದಲು ಹೇಳಿದ ಧಾತುವಿಗೇ ಕ್ಯಪ್ ಪ್ರತ್ಯಯ ಬರುತ್ತದೆ. ಆಗ ಸುವತಿ ಕರ್ಮಣಿ ಲೋಕಂ ಪ್ರೇರಯತಿ ಸೂರ್ಯಃ ಎಂದು ನಿರ್ವಚನ ಮಾಡಬೇಕು. ಅಂದರೆ ಲೋಕವನ್ನು ಕರ್ಮದಲ್ಲಿ ಪ್ರೇರೇಪಿಸುವವನು ಎಂದು ತಾತ್ಪರ್ಯ. ಕ್ಯಪ್ ಪ್ರತ್ಯಯ ಸಂನಿಯೋಗದಿಂದ ಧಾತುವಿಗೆ ರುಡಾಗಮ ಬರುತ್ತದೆ. ರುಚ್ ಚಿತ್ತಾದುದರಿಂದ ಅಂತಾವಯವನಾಗಿ ಬಂದರೆ ಸೂರ್ಯ ಎಂದು ರೂಪವಾಗುತ್ತದೆ. ಕ್ಯಪ್ ಪಿತ್ತಾದುದರಿಂದ ಪ್ರತ್ಯಯಸ್ವರವನ್ನು ಬಾಧಿಸಿ **ಅನುದಾತ್ತೌ ಸುಪ್ಪಿತೌ** ಸೂತ್ರದಿಂದ ಅನುದಾತ್ತವಾಗುತ್ತದೆ. ಆಗ **ಧಾತೋಃ** ಸೂತ್ರದಿಂದ ಬಂದಿರುವ ಧಾತುವಿನ ಅಂತೋದಾತ್ತಸ್ವರವೇ ಪ್ರಬಲವಾಗುವುದರಿಂದ ಸೂರ್ಯ ಎಂಬುದು ಆದ್ಯುದಾತ್ತವಾದ ಪದವಾಗುತ್ತದೆ. ಉದಾತ್ತದ ಪರದಲ್ಲಿ ಅನುದಾತ್ತ ಬಂದುದರಿಂದ ಪ್ರತ್ಯಯದ ಅಕಾರವು ಸ್ವರಿತವಾಗುತ್ತದೆ.

॥ ಸಂಹಿತಾಪಾಠಃ ॥

ಆಪ॒ ತ್ಯೇ ತಾ॒ಯವ॑ೋ॒ ಯಥಾ॒ ನಕ್ಷ॑ತ್ರಾ॒ ಯನ್ತ್ಯ॒ಕ್ತುಭಿಃ।
ಸೂರಾ॑ಯ ವಿ॒ಶ್ವಚ॑ಕ್ಷಸೇ ॥ ೨ ॥

॥ ಪದಪಾಠಃ ॥

ಅಪ॑। ತ್ಯೇ। ತಾ॒ಯವ॑ಃ। ಯಥಾ॑। ನಕ್ಷ॑ತ್ರಾ। ಯನ್ತಿ॑। ಅ॒ಕ್ತು॒ಭಿಃ।
ಸೂರಾ॑ಯ। ವಿ॒ಶ್ವಚ॑ಕ್ಷಸೇ ॥ ೨ ॥

॥ ಸಾಯಣಭಾಷ್ಯಂ ॥

ತ್ಯೇ ತಾಯವೋ ಯಥಾ ಪ್ರಸಿದ್ಧಾಸ್ತಸ್ಕರಾ ಇವ ನಕ್ಷತ್ರಾ ನಕ್ಷತ್ರಾಣಿ ದೇವಗೃಹರೂಪಾಣಿ। ದೇವಗೃಹಾ ವೈ ನಕ್ಷತ್ರಾಣಿ। ತೈ. ಬ್ರಾ. ೧. ೫. ೨. ೬। ಇತಿ ಶ್ರುತ್ಯಂತರಾತ್। ಯದ್ವಾ। ಇಹ ಲೋಕೇ ಕರ್ಮಾನುಷ್ಠಾಯ ಯೇ ಸ್ವರ್ಗಂ ಪ್ರಾಪ್ನುವಂತಿ ತೇ ನಕ್ಷತ್ರರೂಪೇಣ ದೃಶ್ಯಂತೇ। ತಥಾ ಚ ಶ್ರೂಯತೇ। ಯೋ ವಾ ಇಹ ಯಜತೇಽಮುಂ ಸ ಲೋಕಂ ನಕ್ಷತೇ ತನ್ನಕ್ಷತ್ರಾಣಾಂ ನಕ್ಷತ್ರತ್ವಂ। ತೈ. ಬ್ರಾ. ೧-೫-೨-೫। ಇತಿ। ಯದ್ವಾ। ತೇಷಾಂ ಸುಕೃತಿನಾಂ ಜ್ಯೋತೀಂಷಿ ನಕ್ಷತ್ರಾಣ್ಯುಚ್ಯಂತೇ। ಸುಕೃತಾಂ ವಾ ಏತಾನಿ ಜ್ಯೋತೀಂಷಿ ಯನ್ನಕ್ಷತ್ರಾಣಿ। ತೈ ಸಂ. ೫-೪-೧೨-೩। ಇತ್ಯಾಮ್ನಾನಾತ್। ಯಾಸ್ಕಸ್ತ್ವಾಹ। ನಕ್ಷತ್ರಾಣಿ ನಕ್ಷತೇರ್ಗತಿಕರ್ಮಣೋ ನೇಮಾನಿ ಪ್ಲುತ್ರಾಣೀತಿ ಚ ಬ್ರಾಹ್ಮಣಂ। ನಿ. ೩-೨೦। ಇತಿ। ತಥಾವಿಧಾನಿ ನಕ್ಷತ್ರಾಣ್ಯಕ್ತುಭೀ ರಾತ್ರಿಭಿಃ ಸಹಾಪ ಯಂತಿ। ಅಪಗಚ್ಛಂತಿ। ವಿಶ್ವಚಕ್ಷಸೇ ವಿಶ್ವಸ್ಯ ಸರ್ವಸ್ಯ ಪ್ರಕಾಶಕಸ್ಯ ಸೂರಾಯ ಸೂರ್ಯಸ್ಯಾಗಮನಂ ದೃಷ್ಟ್ವೇತಿ ಶೇಷಃ। ತಸ್ಕರಾ ನಕ್ಷತ್ರಾಣಿ ಚ ರಾತ್ರಿಭಿಃ ಸಹ ಸೂರ್ಯ ಆಗಮಿಷ್ಯತೀತಿ ಭೀತ್ಯಾ ಪಲಾಯಂತ ಇತ್ಯರ್ಥಃ। ತಾಯುರಿತಿ ಸ್ತೇನನಾಮ। ತಾಯುಸ್ತಸ್ಕರ ಇತಿ ತನ್ನಾಮಸು ಪಾಠಾತ್। ಅಕ್ತುರಿತಿ ರಾತ್ರಿನಾಮ। ಶರ್ವರ್ಯಕ್ತುರಿತಿ ತತ್ರ ಪಾಠಾತ್। ಯಥಾ। ಯಥೇತಿ ಪಾದಾಂತ ಇತಿ ಸರ್ವಾನುದಾತ್ತತ್ವಂ। ನಕ್ಷತ್ರಾ। ನಕ್ಷ ಗತೌ। ಅನಿನಕ್ಷಿ-ಯಜಿಬಂಧಿಪತಿಭ್ಯೋಽತ್ರನ್। ಉ. ೩-೧೦೫। ಇತ್ಯತ್ರನ್ಪ್ರತ್ಯಯಃ। ನಿತ್ತ್ವಾದಾದ್ಯುದಾತ್ತತ್ವಂ। ನಭ್ರಾಣ್ನಪಾದಿತ್ಯತ್ರ ವೃತ್ತ್ಯೈ ತ್ವೇವಮುಕ್ತಂ। ನ ಕ್ಷರತಿ ನ ಕ್ಷೀಯತ ಇತಿ ವಾ ನಕ್ಷತ್ರಂ। ಕ್ಷೀಯತೇಃ ಕ್ಷರತೇರ್ವಾ ನಕ್ಷತ್ರಮಿತಿ ನಿಪಾತ್ಯತ ಇತಿ। ಶೇಶ್ಛಂದಸಿ ಬಹುಲಮಿತಿ ಶೇರ್ಲೋಪಃ। ಯಂತಿ। ಇಣ್ ಗತೌ। ಇಣೋ ಯಣಿತಿ ಯಣಾದೇಶಃ। ಸೂರಾಯ ವಿಶ್ವಚಕ್ಷಸೇ। ವಿಶ್ವಂ ಚಕ್ಷ್ಯೇ ಪ್ರಕಾಶಯತೀತಿ ವಿಶ್ವಚಕ್ಷಾಃ। ಚಕ್ಷೇರ್ಬಹುಲಂ ಶಿಚ್ಚ। ಉ. ೪-೨೩೨। ಇತ್ಯಸುನ್ಪ್ರತ್ಯಯಃ। ಶಿತ್ತ್ವೇನ ಸಾರ್ವಧಾತುಕತ್ವಾತ್ ಖ್ಯಾಞಾದೇಶಾಭಾವಃ। ಉಭಯತ್ರ ಷಷ್ಠ್ಯರ್ಥೇ ಚತುರ್ಥೀ ವಕ್ತವ್ಯಾ। ಮ ೨-೩-೬೨-೧। ಇತಿ ಚತುರ್ಥೀ ॥

॥ ಪ್ರತಿಪದಾರ್ಥ ॥

ತ್ಯೇ—(ಆ) ಪ್ರಸಿದ್ಧರಾದ । **ತಾಯವೋ ಯಥಾ**—ಕಳ್ಳರಂತೆ । **ನಕ್ಷತ್ರಾ**—(ದೇವತೆಗಳ ಗೃಹ ರೂಪಗಳಾದ) ನಕ್ಷತ್ರಗಳು ಅಥವಾ ನಕ್ಷತ್ರರೂಪದಲ್ಲಿರುವ ಸುಕೃತಿಗಳ ತೇಜಸ್ಸುಗಳು । **ಅಕ್ತುಭಿಃ**—ರಾತ್ರಿ ಗಳೊಡನೆ । **ವಿಶ್ವಚಕ್ಷಸೇ**—ಸಮಸ್ತಕ್ಕೂ ಪ್ರಕಾಶಕನಾದ ಸೂರ್ಯನ (ಆಗಮನವನ್ನು ನೋಡಿ) । **ಅಪ ಯಂತಿ**—(ತಪ್ಪಿಸಿಕೊಂಡು) ಹೊರಟುಹೋಗುತ್ತವೆ.

॥ ಭಾವಾರ್ಥ ॥

ಸೂರ್ಯೋದಯಕಾಲದಲ್ಲಿ ಪ್ರಸಿದ್ಧರಾದ ಕಳ್ಳರು ಯಾವರೀತಿ ಓಡಿಹೋಗುತ್ತಾರೋ ಅದರಂತೆ ದೇವತೆಗಳ ಗೃಹರೂಪಗಳಾದ ನಕ್ಷತ್ರಗಳು ಅಥವಾ ನಕ್ಷತ್ರಗಳ ರೂಪದಲ್ಲಿರುವ ಈ ಲೋಕದ ಕರ್ಮಾನುಷ್ಠಾನ ಮಾಡಿದ ಸುಕೃತಿಗಳ ತೇಜಸ್ಸುಗಳು ರಾತ್ರಿಗಳೊಡನೆ ಸಮಸ್ತಕ್ಕೂ ಪ್ರಕಾಶಕನಾದ ಸೂರ್ಯನ ಆಗಮನವನ್ನು ನೋಡಿದೊಡನೆ ಮರೆಯಾಗಿ ಹೊರಟುಹೋಗುತ್ತವೆ. (ಕಾಣಿಸದಂತೆ ಮುಂಕಾಗುತ್ತವೆ).

English Translation.

At the approuch of the illuminating sun, the stars depart with the night like thieves.

॥ ವಿಶೇಷ ವಿಷಯಗಳು ॥

ತ್ಯೇ—ತ್ಯೇ ಎಂದರೆ ತೇ, ಆ, ಪ್ರಸಿದ್ಧರಾದ, ಎಲ್ಲರಿಗೂ ತಿಳಿದಿರುವ. ಕಳ್ಳರು ರಾತ್ರಿಕಾಲದಲ್ಲಿ ಕಳ್ಳತನವನ್ನು ಮಾಡುವರೆಂಬ ವಿಷಯವು ಪ್ರಸಿದ್ಧವಾಗಿರುವುದೆಂದಭಿಪ್ರಾಯವು.

ತಾಯವಃ—ತೃಪುಃ, ತಕ್ವಾ ಮೊದಲಾದ ಹದಿನಾಲ್ಕು ಸ್ತೇನನಾಮಗಳ ಮಧ್ಯದಲ್ಲಿ **ತಾಯುಃ** ಎಂಬ ಶಬ್ದವು ಪಠಿತವಾಗಿರುವುದರಿಂದ **ತಾಯವಃ** ಎಂದರೆ ಕಳ್ಳರು ಎಂದರ್ಥವು.

ಉಪ ಯಂತಿ—ಓಡಿಹೋಗುವರು, ಕಾಣದಂತೆ ಅಥವಾ ತಪ್ಪಿಸಿಕೊಂಡು ಹೋಗುವರು.

ನಕ್ಷತ್ರಾ—ನಕ್ಷತ್ರಗಳು ಅಥವಾ ದೇವಗೃಹಗಳು. ದೇವತೆಗಳು ವಾಸಮಾಡುವ ಗೃಹಗಳಿಗೆ ನಕ್ಷತ್ರ ಗಳೆಂದು **ದೇವಗೃಹಾ ವೈ ನಕ್ಷತ್ರಾಣಿ** (ತೈ. ಬ್ರಾ. ೧-೫-೨-೬) ಎಂದು ತೈತ್ತಿರೀಯ ಬ್ರಾಹ್ಮಣದಲ್ಲಿ ಹೇಳಿರುವುದು ಮತ್ತು **ಯೋ ವಾ ಇಹ ಯಜತೇಽಮುಂ ಲೋಕಂ ನಕ್ಷತೇ ನಕ್ಷತ್ರಾಣಾಂ ನಕ್ಷತ್ರತ್ವಂ** (ತೈ. ಬ್ರಾ. ೧-೫-೨-೫) ಈ ಲೋಕದಲ್ಲಿ ಯಜ್ಞವನ್ನು ಮಾಡುವವನು ಪರಲೋಕದಲ್ಲಿ ಪ್ರಕಾಶಮಾನವಾದ ಗೃಹದಲ್ಲಿ ವಾಸಮಾಡುವನು. ಆದುದರಿಂದ ನಕ್ಷತ್ರಗಳಿಗೆ ಈ ಹೆಸರು ಬಂದಿರುವುದು ಎಂದು ಅಲ್ಲಿಯೇ ಹೇಳಿದೆ. ಅಥವಾ **ಸುಕೃತಾಂ ವಾ ಏತಾನಿ ಜ್ಯೋತೀಂಷಿ ಯನ್ನಕ್ಷತ್ರಾಣಿ** (ತೈ. ಸಂ. ೫-೪-೧೦-೩) ಸತ್ಕರ್ಮಾನುಷ್ಠಾನಮಾಡಿ ದವರು ಪರಲೋಕದಲ್ಲಿ ನಕ್ಷತ್ರರೂಪವಾದ ತೇಜಸ್ಸಿನಿಂದ ಬೆಳಗುತ್ತಿರುವರು. ಅವರೇ ನಮಗೆ ನಕ್ಷತ್ರರೂಪದಿಂದ ಕಾಣಿಸುತ್ತಿರುವರು ಎಂದು ತೈತ್ತಿರೀಯಸಂಹಿತೆಯಲ್ಲಿ ಹೇಳಿದೆ. ಯಾಸ್ಕರು ತಮ್ಮ ನಿರುಕ್ತದಲ್ಲಿ—**ನಕ್ಷತ್ರಾಣಿ ನಕ್ಷತೇರ್ಗತಿಕರ್ಮಣಃ । ನೇಮಾನಿ ಕ್ಷತ್ರಾಣೀತಿ ಚ ಬ್ರಾಹ್ಮಣಂ** (ನಿ. ೩-೨೦) ಎಂದು ಹೇಳಿರುವರು.

ಎಂದರೆ ನಕ್ಷತಿಧಾತುವಿಗೆ ಗತ್ಯರ್ಥವಿರುವುದು. ಕ್ಷತ್ರ ಎಂದರೆ ಧನವು. ಧನರೂಪವಾದ ಹಿರಣ್ಯದಂತೆ ಪ್ರಕಾಶಮಾನವಾದುದರಿಂದ ಇವುಗಳಿಗೆ ನಕ್ಷತ್ರಗಳೆಂದು ಹೆಸರು. ಸತ್ಕರ್ಮವನ್ನು ಮಾಡಿದವರು ಸ್ವರ್ಗಲೋಕದಲ್ಲಿ ಉತ್ತಮಸ್ಥಾನದಲ್ಲಿ ವಾಸಿಸುತ್ತಾ ನಕ್ಷತ್ರರೂಪದಿಂದ ಬೆಳಗುತ್ತಿರುವರು ಎಂದು ಪ್ರತೀತಿ ಇರುವುದು.

ಅಕ್ತುಭಿಃ—ರಾತ್ರಿಗಳಿಂದ ; **ಅಕ್ತುಭೀ ರಾತ್ರಿಭಿಃ** ಎಂದು ನಿರುಕ್ತವಚನವಿರುವುದು (ನಿ. ೧೨-೨೩).

॥ ವ್ಯಾಕರಣಪ್ರಕ್ರಿಯಾ ॥

ಯಥಾ—ಇದು ನಿಪಾತಸಂಜ್ಞೆಯುಳ್ಳದ್ದು. **ಚಾದಯೋ೭ನುದಾತ್ತಾಃ** (ಫಿ.ಸೂ. ೪೪) ಎಂಬುದರಿಂದ ಸಾಮಾನ್ಯವಾಗಿ ಅನುದಾತ್ತವು ಪ್ರಾಪ್ತವಾದರೆ **ಯಥೇತಿಸಾದಾಂತೆ** (ಫಿ.ಸೂ. ೪೫) ಎಂಬುದರಿಂದ ಚಾದಿಘಟಕವಾದ ಯಥಾ ಎಂಬುದಕ್ಕೆ ಪಾದಾಂತ್ಯದಲ್ಲಿ ಮಾತ್ರ ಸರ್ವಾನುದಾತ್ತವಾಗುತ್ತದೆ ಎಂದು ವಿಧಿಸಿರುತ್ತಾರೆ. ಅದುದರಿಂದ ಇಲ್ಲಿ ಪಾದದ ಕೊನೆಯಲ್ಲಿರುವುದರಿಂದ ಸರ್ವಾನುದಾತ್ತವಾಗಿದೆ.

ನಕ್ಷತ್ರಾ—ನಕ್ಷ ಗತೌ ಧಾತು. ಭ್ವಾದಿ. ಆಮಿನಕ್ಷಿಯಜಿ ಬಂಧಿ ಪತಿಭ್ಯೋ೭ತ್ರನ್ (ಉ. ಸೂ. ೩-೩೮) ಇವುಗಳಿಗೆ ಅತ್ರನ್ ಪ್ರತ್ಯಯ ಬರುತ್ತದೆ. ಉಪದೇಶಕಾಲದಲ್ಲಿ ಣಕ್ಷ ಎಂದು ಇದರ ಸ್ವರೂಪ. **ಣೋ೭ನಃ** ಎಂಬ ಸೂತ್ರದಿಂದ ಣಕಾರಕ್ಕೆ ನಕಾರಾದೇಶ ಬರುತ್ತದೆ. ನಕ್ಷ್+ಅತ್ರನ್ ಎಂದಿರುವಾಗ ಪ್ರತ್ಯಯದ ಅಂತ್ಯಕ್ಕೆ ಲೋಪ ಬಂದರೆ ನಕ್ಷತ್ರ ಎಂದು ರೂಪವಾಗುತ್ತದೆ. ಪ್ರತ್ಯಯವು ನಿತ್ವಾದುದರಿಂದ **ಞ್ನಿತ್ಯಾದಿರ್ನಿತ್ಯಂ** (ಪಾ. ಸೂ. ೬-೧-೧೯೭) ಸೂತ್ರದಿಂದ ಆದ್ಯುದಾತ್ತವಾಗುತ್ತದೆ. ನಕ್ಷತ್ರಾ ಎಂಬುದು ಆದ್ಯುದಾತ್ತವಾದ ಪದವಾಗುತ್ತದೆ. **ನಭ್ರಾಣ್ನಪಾತ್ನ** (ಪಾ. ಸೂ. ೬-೩-೭೫) ಎಂಬ ಸೂತ್ರದ ವೃತ್ತಿಯಲ್ಲಿ **ಈ** ನಕ್ಷತ್ರಶಬ್ದದ ನಿರ್ವಚನವನ್ನು **ಈ** ರೀತಿಯಾಗಿ ಮಾಡಿರುತ್ತಾರೆ. "ನ ಕ್ಷರತಿ ನ ಕ್ಷೀಯತೆ ಇತಿ ವಾ ನಕ್ಷತ್ರಮ್ । ಕ್ಷೀಯತೇಃ ಕ್ಷರತೇ ವಾ ನಕ್ಷತ್ರಮಿತಿ ನಿಪಾತ್ಯತೆ" (ಕಾ. ೬-೩-೭೫) ಸಂಚಲಿಸದೇ ಇರುವುದು ಅಥವಾ ನಾಶವಾಗದಿರುವುದು ನಕ್ಷತ್ರ ಎಂದರ್ಥ. ಕ್ಷರ ಸಂಚಲನೆ ಧಾತು. ಭ್ವಾದಿ. ಈ ಧಾತುವನ್ನು ಸ್ವೀಕರಿಸಿ ಕ್ಷತ್ರಂ ಎಂದು ನಿಪಾತ ಮಾಡಿರುತ್ತಾರೆ. ನಕ್ಷತ್ರಂ ಎಂದು ಸಮಾಸದಲ್ಲಿ ನಞಿಗೆ ನ ಲೋಪವಾಗದೆ ಪ್ರಕೃತಿಭಾವವನ್ನೂ ನಿಪಾತ ಮಾಡಿರುತ್ತಾರೆ ಅಥವಾ ಕ್ಷಿ ಕ್ಷಯೆ ಧಾತು. ಭ್ವಾದಿ. ಈ ಧಾತುವಿನಿಂದ ನಿಷ್ಪನ್ನವಾದ ನಿಪಾತಿತಶಬ್ದವೆಂದು ಸ್ವೀಕರಿಸಬೇಕು. ನಕ್ಷತ್ರ ಶಬ್ದದಮೇಲೆ ಪ್ರಥಮಾ ಬಹುವಚನ ವಿವಕ್ಷವಾದಿದಾಗ ನಕ್ಷತ್ರ+ಜಸ್ ಎಂದಿರುವಾಗ **ಜಶ್ಶಸೋಃ ಶಿಃ** (ಪಾ. ಸೂ. ೭-೧-೨೦) ಸೂತ್ರದಿಂದ ಜಸ್ಸಿಗೆ ಶಿ ಎಂಬ ಆದೇಶ ಬರುತ್ತದೆ. ಶಿ ಗೆ **ಶೇಶ್ಛಂದಸಿ ಬಹುಲಂ** (ಪಾ. ಸೂ. ೬-೧-೭೦) ಎಂಬುದರಿಂದ ಛಂದಸ್ಸಿನಲ್ಲಿ ಲೋಪ ಬರುತ್ತದೆ. **ಶಿಸರ್ವನಾಮಸ್ಥಾನಮ್** ಎಂಬುದರಿಂದ ಶಿ ಎಂಬುದಕ್ಕೆ ಸರ್ವನಾಮಸ್ಥಾನ ಸಂಜ್ಞೆ ಇರುವುದರಿಂದ ಸರ್ವನಾಮಸ್ಥಾನ ಪರದಲ್ಲಿರುವುದರಿಂದ **ನಪುಂಸಕಸ್ಯ ಝಲಚಃ** (ಪಾ. ಸೂ. ೭-೧-೭೨) ಸೂತ್ರದಿಂದ ಅಜಂತವಾದ ನಕ್ಷತ್ರ ಎಂಬುದಕ್ಕೆ ನುಮಾಗಮ ಬರುತ್ತದೆ. ನಾಂತಲಕ್ಷಣ ಉಪಧಾದೀರ್ಘ ಬಂದು ನಲೋಪವಾದರೆ ನಕ್ಷತ್ರಾ ಎಂದು ರೂಪವಾಗುತ್ತದೆ.

ಯಂತಿ—ಇಣ್ ಗತೌ ಧಾತು ಅದಾದಿ. ಪ್ರಥಮಪುರುಷ ಬಹುವಚನ ವಿವಕ್ಷಾ ಮಾಡಿದಾಗ ಇ+ಅಂತಿ ಎಂದಿರುತ್ತದೆ. **ಆಚಿಶ್ನುಧಾತುಭ್ರುವಾಂ** (ಪಾ. ಸೂ. ೬-೪-೭೭) ಸೂತ್ರದಿಂದ ಇಯಙಾದೇಶವು ಪ್ರಾಪ್ತವಾದರೆ **ಇಣೋ೭ಯಣ್** (ಪಾ. ಸೂ. ೬-೪-೮೧) ಅಚಾದಿಪ್ರತ್ಯಯ ಪರದಲ್ಲಿರುವಾಗ ಇಣ್ ಧಾತುವಿಗೆ ಯಣಾದೇಶ ಬರುತ್ತದೆ ಎಂಬುದರಿಂದ ಇಯಙಿಗೆ ಅಪವಾದವಾದ ಯಣಾದೇಶ ಬರುತ್ತದೆ. ಇಕಾರಕ್ಕೆ ಯಕಾರ ಬಂದರೆ ಯಂತಿ ಎಂದು ರೂಪವಾಗುತ್ತದೆ. ಅತಿಙಂತದ ಪರದಲ್ಲಿ ಇರುವುದರಿಂದ ನಿಘಾತಸ್ವರ ಬರುತ್ತದೆ.

ಸೂರಾಯ—ಸೂರಶಬ್ದದ ಮೇಲೆ ಚತುರ್ಥೀ ಏಕವಚನ ವಿವಕ್ಷಾ ಮಾಡಿದಾಗ ಸೂರ+ಎ ಎಂದಿರುವಾಗ **ಜೋರ್ಯಃ** ಸೂತ್ರದಿಂದ ವಿಭಕ್ತಿಗೆ ಯಾದೇಶ ಬರುತ್ತದೆ. **ಸುಸಿಚ** ಸೂತ್ರದಿಂದ ಪ್ರಕೃತಿಗೆ ದೀರ್ಘ ಬಂದರೆ ಸೂರಾಯ ಎಂದು ರೂಪವಾಗುತ್ತದೆ. **ಷಷ್ಠ್ಯರ್ಥೇ ಚತುರ್ಥೀ ವಕ್ತವ್ಯಾ** (ಪಾ. ಮ. ೨-೩-೬೨-೧) ಎಂದು ಮಹಾಭಾಷ್ಯದಲ್ಲಿ ಹೇಳಿರುವುದರಿಂದ ಇಲ್ಲಿ ಷಷ್ಠಿಯ ಅರ್ಥದಲ್ಲಿ ಚತುರ್ಥೀವಿಭಕ್ತಿ ಬಂದಿದೆ. ಸೂರ್ಯನ ಆಗಮನ ಎಂದೇ ಅರ್ಥವಾಗುತ್ತದೆ.

ವಿಶ್ವಚಕ್ಷಸೇ—ವಿಶ್ವಂ ಚಷ್ಟೇ ಪ್ರಕಾಶಯತಿ ಇತಿ ವಿಶ್ವಚಕ್ಷಾಃ. ಪ್ರಪಂಚವನ್ನು ಪ್ರಕಾಶಿಸುವವನು ಎಂದರ್ಥ. ಚಕ್ಷಿಙ್ ವ್ಯತ್ತ್ಯಾಯಾಂ ವಾಚಿ ಧಾತು ಅದಾದಿ 'ಧಾತೂನಾಮನೇಕಾರ್ಥತ್ವಂ' ಎಂಬುದರಿಂದ ಇಲ್ಲಿ ಪ್ರಕಾಶನಾರ್ಥವನ್ನು ಸ್ವೀಕರಿಸಬೇಕು. **ಚಕ್ಷೇರ್ಬಹುಲಂ ಶಿಚ್ಚ** (ಉ. ಸೂ. ೪-೬೭೨) ಚಕ್ಷಿಙ್ ಧಾತುವಿಗೆ **ಅಸುನ್** ಪ್ರತ್ಯಯ ಬರುತ್ತದೆ. **ಈ** ಪ್ರತ್ಯಯವು ಶಿತ್ತಾಗುತ್ತದೆ ಎಂಬುದರಿಂದ ಅಸುನ್ ಪ್ರತ್ಯಯ ಬರುತ್ತದೆ. **ಚಕ್ಷಸ್** ಎಂದು ಸಕಾರಾಂತವಾದ ಶಬ್ದವಾಗುತ್ತದೆ. ಪ್ರತ್ಯಯಕ್ಕೆ ಶಿದ್ಭಾವವನ್ನು ಹೇಳಿರುವುದರಿಂದ ಸಾರ್ವಧಾತುಕ ಸಂಜ್ಞೆಯು **ತಿಙ್ ಶಿತ್ ಸಾರ್ವಧಾತುಕಂ** ಸೂತ್ರದಿಂದ ಬರುತ್ತದೆ. ಆದುದರಿಂದ ಆರ್ಧಧಾತುಕವು ಪರದಲ್ಲಿರುವಾಗ ಬರತಕ್ಕ ಖ್ಯಾಞ್ಆದೇಶವು ಚಕ್ಷಿಙಿಗೆ ಬರುವುದಿಲ್ಲ. ವಿಶ್ವಚಕ್ಷಸ್ ಶಬ್ದಕ್ಕೆ ಚತುರ್ಥೀ ಏಕವಚನದಲ್ಲಿ ವಿಶ್ವಚಕ್ಷಸೇ ಎಂದು ರೂಪವಾಗುತ್ತದೆ. ಇಲ್ಲಿಯೂ ಹಿಂದೆ ಹೇಳಿದಂತೆ **ಷಷ್ಠ್ಯರ್ಥೇ ಚತುರ್ಥೀ ವಕ್ತವ್ಯಾ** ಎಂಬ ಭಾಷ್ಯಕಾರರ ವಚನದಿಂದ ಷಷ್ಠ್ಯರ್ಥದಲ್ಲಿ ಚತುರ್ಥೀವಿಭಕ್ತಿಯು ಬರುತ್ತದೆ.

॥ ಸಂಹಿತಾಪಾಠಃ ॥

ಅದೃಶ್ರಮಸ್ಯ ಕೇತವೋ ವಿ ರಶ್ಮಯೋ ಜನಾಁ ಅನು।
ಭ್ರಾಜನ್ತೋ ಅಗ್ನಯೋ ಯಥಾ ॥ ೩ ॥

॥ ಪದಪಾಠಃ ॥

ಅದೃಶ್ರಂ। ಅ ಸ್ಯ। ಕೇತವಃ। ವಿ। ರಶ್ಮಯಃ। ಜನಾನ್। ಅನು।
ಭ್ರಾಜನ್ತಃ। ಅಗ್ನಯಃ। ಯಥಾ ॥ ೩ ॥

॥ ಸಾಯಣಭಾಷ್ಯಂ ॥

ಅಸ್ಯ ಸೂರ್ಯಸ್ಯ ಕೇತವಃ ಪ್ರಜ್ಞಾಪಕಾ ರಶ್ಮಯೋ ದೀಪ್ತಯೋ ಜನಾನನು ವ್ಯದೃಶ್ರಂ। ಜಾತಾನ್ಸರ್ವಾನನುಕ್ರಮೇಣ ಪ್ರೇಕ್ಷಂತೇ। ಸರ್ವಂ ಜಗತ್ಪ್ರಕಾಶಯಂತೀತ್ಯರ್ಥಃ। ತತ್ರ ದೃಷ್ಟಾಂತಃ। ಭ್ರಾಜಂತೋ ದೀಪ್ಯಮಾನಾ ಅಗ್ನಯೋ ಯಥಾ ಅಗ್ನಯ ಇವ ॥ ಅದೃಶ್ರಂ। ದೃಶಿರ್ ಪ್ರೇಕ್ಷಣೇ। ವರ್ತಮಾನೇ ಲುಙ್। ಇರಿತೋ ವಾ। ಪಾ. ೩-೧-೫೭। ಇತಿ ಚ್ಲೇರಙಾದೇಶಃ। ರುಡಿತ್ಯನುವೃತ್ತೌ

बहुलं छन्दसि । पा. ६-८-७ । इति रुडागमः । अत एव बहुलवचनाद्दैदृशेऽर्जि गुण इति गुणाभाव इत्युक्तम् । तिङ्ङ् तिङ्ङो भवन्तीति प्रथमपुरुषबहुवचनस्योत्तम-पुरुषैकवचनादेशः । प्रथमपुरुषान्त एव शाखान्तरे श्रूयते । अदृश्रन्नस्य केतवः । अथ. ८३-८-८७ । इति । जनानित्यस्य नकारस्य संहितायां रुत्वमित्यादि पूर्ववत् । भ्राजन्तः । शसः पित्त्वादनुदात्तत्वम् । शतुश्च लसार्वधातुकस्वरेण धातुस्वर एव शिष्यते ॥

॥ प्रतिपदार्थ ॥

अस्य—ಈ ಸೂರ್ಯದೇವನ । **केतवः**—(ಆಗಮನವನ್ನು) ಸೂಚಿಸತಕ್ಕ । **रश्मयः**—ಕಿರಣಗಳು । **भ्राजन्तः**—ಪ್ರಜ್ವಲಿಸುವ । **अग्नयो यथा**—ಅಗ್ನಿಗಳಂತೆ । **जनान्**—ಉತ್ಪನ್ನವಾದ ಸಮಸ್ತವನ್ನೂ **अनु**—ಅನುಕ್ರಮವಾಗಿ । **वि अदृश्रम्**—ಚನ್ನಾಗಿ ನೋಡುತ್ತವೆ. (ಸಕಲ ಜಗತ್ತನ್ನೂ ಪ್ರಕಾಶಿಸುವಂತೆ ಮಾಡುತ್ತವೆ.

॥ भावार्थ ॥

ಸೂರ್ಯನಿಗಿಂತಲೂ ಪೂರ್ವಭಾವಿಯಾಗಿ ಪ್ರಸರಿಸಿ ಸೂರ್ಯನ ಆಗಮನವನ್ನು ಲೋಕಕ್ಕೆ ಸೂಚಿಸುವ ಅವನ ಕಿರಣಗಳು ಪ್ರಜ್ವಲಿಸುವ ಅಗ್ನಿಗಳಂತೆ ಉತ್ಪನ್ನವಾದ ಸಮಸ್ತವನ್ನೂ ಅನುಕ್ರಮವಾಗಿ ಪ್ರಕಾಶಿಸುವಂತೆ ಮಾಡುತ್ತವೆ.

English Translation.

High illuminating rays are seen among men like blazing fires.

॥ विशेष विषयगळु ॥

केतवः प्रज्ञापकाः—ಕೇತುಶಬ್ದವು ಪ್ರಜ್ಞಾವಾಚಕವು. (ನಿ. ೩-೧೩) ಇಲ್ಲಿ केतवः ಎಂಬ ಶಬ್ದವು रश्मयः ಎಂಬ ಶಬ್ದಕ್ಕೆ ವಿಶೇಷಣವಾಗಿರುವುದರಿಂದ केतवः ಎಂದರೆ ಜ್ಞಾನವನ್ನುಂಟುಮಾಡುವ, ತಿಳುವಳಿಕೆಯನ್ನುಂಟುಮಾಡುವ, ಬುದ್ಧಿಯನ್ನು ಪ್ರೇರಿಸುವ ಇತ್ಯಾದಿ ಅರ್ಥಗಳನ್ನು ಹೇಳಬಹುದು. ಸೂರ್ಯ ರಶ್ಮಿಗಳ ಅಥವಾ ಸೂರ್ಯನ ಬೆಳಕಿನ ಸಹಾಯದಿಂದ ಬಾಹ್ಯವಸ್ತುಗಳ ಪರಿಜ್ಞಾನವು ಉಂಟಾಗುವುದರಿಂದ केतवः ಎಂದರೆ प्रज्ञापक ಎಂಬ ಅರ್ಥವನ್ನು ಭಾಷ್ಯಕಾರರು ಹೇಳಿರುವರು.

अदृश्रं रश्मयः जनान् अनु—ಸೂರ್ಯನ ರಶ್ಮಿಗಳು ಜನರನ್ನು ನೋಡುತ್ತವೆ. ಎಂದರೆ ಸೂರ್ಯನ ರಶ್ಮಿಗಳು ಜನರ ಮಧ್ಯದಲ್ಲಿ (ಲೋಕದಲ್ಲಿ) ಪ್ರಕಾಶಿಸುವುದರಿಂದ ಆ ಬೆಳಕಿನ ಸಹಾಯದಿಂದ ಜನರು ಪ್ರಪಂಚವಸ್ತುಗಳನ್ನು ನೋಡಲು ಸಮರ್ಥರಾಗುವರು ಎಂದಭಿಪ್ರಾಯವು.

भ्राजन्तो अग्नयो यथा—ಚೆನ್ನಾಗಿ ಪ್ರಕಾಶಮಾನವಾಗಿ ಉರಿಯುತ್ತಿರುವ ಅಗ್ನಿಯು ಯಾವರೀತಿ ಲೋಕವನ್ನು ಬೆಳಗುವುದೋ ಅದರಂತೆ ಸೂರ್ಯನ ಕಿರಣಗಳೂ ಸಹ ಸಮಸ್ತಪ್ರಪಂಚವನ್ನು ಬೆಳಗುವವು ಎಂದಭಿಪ್ರಾಯವು.

॥ ವ್ಯಾಕರಣಪ್ರಕ್ರಿಯಾ ॥

ಅದೃಶ್ರಮ್— ದೃಶಿರ್ ಪ್ರೇಕ್ಷಣೇ ಧಾತು. ಭ್ವಾದಿ. **ಛಂದಸಿಲುಙ್ಲಙ್ಲಿಟಃ** (ಪಾ. ಸೂ. ೩-೪-೬) ಸೂತ್ರದಿಂದ ವರ್ತಮಾನಾರ್ಥದಲ್ಲಿ ಲುಙ್ ಬರುತ್ತದೆ. ಪ್ರಥಮಪುರುಷ ಬಹುವಚನ ವಿವಕ್ಷಾಮಾಡಿದಾಗ ಝಿ ಪ್ರಾಪ್ತವಾದರೆ **ವ್ಯತ್ಯಯೋ ಬಹುಲಂ** ಎಂಬುದರಿಂದ ಸಿದ್ಧವಾದ ತಿಜಾಂ ತಿಙೋ ಭವಂತಿ ಎಂಬುದರಿಂದ ಪ್ರಥಮಪುರುಷ ಬಹುವಚನಕ್ಕೆ ಉತ್ತಮಪುರುಷ ಏಕವಚನ ಪ್ರತ್ಯಯವು ಆದೇಶವಾಗಿ ಬರುತ್ತದೆ. ದೃಶ್+ಮಿ ಎಂದಿರುವಾಗ **ಇತಶ್ಚ** ಸೂತ್ರದಿಂದ ಪ್ರತ್ಯಯದ ಇಕಾರಕ್ಕೆ ಲೋಪ ಬರುತ್ತದೆ. **ಚ್ಲಿಲುಙಿ** ಸೂತ್ರದಿಂದ ಚ್ಲಿ ಪ್ರಾಪ್ತವಾದರೆ ಅದಕ್ಕೆ **ಇರಿತೋ ವಾ** (ಪಾ. ಸೂ. ೩-೧-೫೭) ಎಂಬುದರಿಂದ ಅಙಾದೇಶ ಬರುತ್ತದೆ. ದೃಶಿರ್ ಎಂಬಲ್ಲಿ ಇರ್ ಎಂಬುದು ಇತ್ವಾಗುವುದರಿಂದ ಇರಿತ್ವಾದ ಧಾತುವಾಗುತ್ತದೆ. ದೃಶ್+ಅ+ಮ್ ಎಂದಿರುವಾಗ ಬಹುಲಂ ಛಂದಸಿ (**ಪಾ.** ಸೂ. ೭-೧-೮) ಛಂದಸ್ಸಿನಲ್ಲಿ ವಿಕಲ್ಪವಾಗಿ ಧಾತುವಿನ ಪರದಲ್ಲಿರುವ ಪ್ರತ್ಯಯಕ್ಕೆ ರುಡಾಗಮ ಬರುತ್ತದೆ ಎಂಬುದರಿಂದ ರುಡಾಗಮ ಬರುತ್ತದೆ. ಈ ಸೂತ್ರದಲ್ಲಿ **ಶೀಙ್ಶೋರುಟ್** ಎಂಬ ಸೂತ್ರದಿಂದ ರುಙ್ ಎಂಬುದು ಅನುವೃತ್ತವಾಗುತ್ತದೆ. ಲುಙ್ ನಿಮಿತ್ತವಾದ ಆಡಾಗಮವು ಧಾತುವಿಗೆ ಬಂದರೆ ಅದೃಶ್ರಮ್ ಎಂದು ರೂಪವಾಗುತ್ತದೆ. **ಋದೃಶೋಙಿ ಗುಣಃ** ಎಂಬುದರಿಂದ ಅಙ್ ಪರದಲ್ಲಿರುವಾಗ ಧಾತುವಿನ **ಋಕಾರ**ಕ್ಕೆ ಗುಣವು ಪ್ರಾಪ್ತವಾಗುತ್ತದೆ. ಆದರೆ ಹಿಂದೆ ಹೇಳಿದ **ಬಹುಲಂ ಛಂದಸಿ** ಎಂಬ ಸೂತ್ರದಲ್ಲಿ ಬಹುಲಗ್ರಹಣಮಾಡಿದುದರಿಂದಲೇ ಇಲ್ಲಿ ಗುಣವು ಒದುವುದಿಲ್ಲ ಎಂದು ಹೇಳಿರುತ್ತಾರೆ. ವ್ಯತ್ಯಯದಿಂದ ಪ್ರಥಮ ಪುರುಷ ಬಹುವಚನಕ್ಕೆ ಉತ್ತಮಪುರುಷದ ಏಕವಚನವು ಆದೇಶವಾಗಿ ಬಂದಿದೆ ಎಂದು ಹಿಂದೆ ಹೇಳಿದೆ. ಕೆಲವೆಡೆಯಲ್ಲಿ ಇತರ ಶಾಖೆಗಳಲ್ಲಿ ಪ್ರಥಮಪುರುಷ ಬಹುವಚನವೇ ಶ್ರುತನಾಗಿರುತ್ತದೆ. **ಅದೃಶ್ರನ್ನಸ್ಯ ಕೇತವಃ** (ಅ. ಸಂ. ೧೩-೩-೧೫) ಎಂದು ಅಲ್ಲಿ ಮಂತ್ರಪಾಠವಿರುತ್ತದೆ.

ಜನಾನ್— **ಆತೋಽಟಿ ನಿತ್ಯಂ** (ಪಾ. ಸೂ. ೬-೪-೭) ಸೂತ್ರದಿಂದ ಸಂಹಿತಾದಲ್ಲಿ ನಕಾರಕ್ಕೆ ರುತ್ವ ಬರುತ್ತದೆ. ರುತ್ವಕ್ಕೆ ಯತ್ವಲೋಪಗಳು ಬರುತ್ತವೆ. **ಅತ್ರಾನುನಾಸಿಕಃ** ಸೂತ್ರದಿಂದ ರುತ್ವದ ಹಿಂದೆ ಅನುನಾಸಿಕ ಬರುತ್ತದೆ. ಜನಾ ಎಂದು ಮಂತ್ರಪಾಠದಲ್ಲಿ ರೂಪವಾಗುತ್ತದೆ.

ಭ್ರಾಜಂತಃ— ಭ್ರಾಜೃ ದೀಪ್ತೌ ಧಾತು. ಭ್ವಾದಿ. **ಲಟಃ ಶತೃಶಾನಚಾ** ಸೂತ್ರದಿಂದ ಶತೃಪ್ರತ್ಯಯ ಬರುತ್ತದೆ. ಭ್ರಾಜೃಧಾತುವಿಗೆ ಶಿತ್ವಾದ ಪ್ರತ್ಯಯ ಪರದಲ್ಲಿರುವುದರಿಂದ ಶಪ್ ವಿಕರಣ ಪ್ರತ್ಯಯ ಬರುತ್ತದೆ. ಭ್ರಾಜತ್ ಎಂದು ತಕಾರಾಂತ ಶಬ್ದವಾಗುತ್ತದೆ. ಇದಕ್ಕೆ ಪ್ರಥಮಾ ಬಹುವಚನ ವಿವಕ್ಷಾಮಾಡಿದಾಗ ಜಸ್ ಪ್ರತ್ಯಯ ಬರುತ್ತದೆ. ಜಸಿಗೆ ಸರ್ವನಾಮಸ್ಥಾನ ಸಂಜ್ಞೆ ಇರುವುದರಿಂದ ಪ್ರಕೃತಿಯು ಉಗಿತ್ವಾದುದರಿಂದ **ಉಗಿದಚಾಂ ಸರ್ವನಾಮಸ್ಥಾನೇಽಧಾತೋಃ** ಸೂತ್ರದಿಂದ ನುಮಾಗಮ ಬರುತ್ತದೆ. ನಕಾರಕ್ಕೆ ಅನುಸ್ವಾರ ಪರಸವರ್ಣ ಬಂದರೆ ಭ್ರಾಜನ್ತಃ ಎಂದು ರೂಪವಾಗುತ್ತದೆ. ಇಲ್ಲಿ ಶಪ್ ಪಿತ್ವಾದುದರಿಂದ ಅನುದಾತ್ತವಾಗುತ್ತದೆ. ಶತೃ ಲಸಾರ್ವಧಾತುಕವಾದುದರಿಂದ ಶಪಿನ ಪರದಲ್ಲಿ ಬಂದುದರಿಂದ **ತಾಸ್ಯನುದಾತ್ತೇತ್** (ಪಾ. ಸೂ. ೬-೧-೧೮೬) ಸೂತ್ರದಿಂದ ಅನುದಾತ್ತವಾಗುತ್ತದೆ. ಆಗ ಧಾತುಸ್ವರವೇ ಉಳಿಯುತ್ತದೆ. ಭ್ರಾಜಂತಃ ಎಂಬುದು ಆದ್ಯುದಾತ್ತವಾದ ಪದವಾಗುತ್ತದೆ.

॥ संहितापाठः ॥

तरणिर्विश्वदर्शतो ज्योतिष्कृदसि सूर्य।
विश्वमा भासि रोचनं ॥ ५ ॥

॥ पदपाठः ॥

तरणिः। विश्वऽदर्शतः। ज्योतिःऽकृत्। असि। सूर्य्य।
विश्वं। आ। भासि। रोचनं ॥ ५ ॥

सायणभाष्यं

चातुर्मास्येषु शुनासीर्ये पर्वण्यस्मि सौर्य एककपालः। तस्य तरणिरित्येषानुवाक्या। तथा च सूत्रितं। तरणिर्विश्वदर्शतश्चित्रं देवानामुदगादनीकमिति याज्यानुवाक्याः। आ. २ २०। इति। तथातिमूर्तिनाम्न्येकाहे कृष्णपक्षे सौर्यिष्टिः कर्तव्या। तस्यामप्येषानुवाक्या। अतिमूर्तिनेति खण्डे सूत्रितं। नवो नवो भवति जायमान स्तरणिर्विश्वदर्शतः। आ ६-७। इति

हे सूर्य त्वं तरणिस्तरिता अन्येन गंतुमशक्यस्य महतोऽध्वनो गंतासि। तथा च स्मर्यते। योजनानानां सहस्रे द्वे द्वे शते द्वे च योजने। एकेन निमिषार्धेन क्रममाण नमोऽस्तु ते इति। यद्वा। उपासकानां रोगात्तारयितासि। आरोग्यं भास्करादिच्छेदिति स्मरणात्। तथा विश्वदर्शतो विश्वैः सर्वैः प्राणिभिर्दर्शनीयः। आदित्यदर्शनस्य चंडालादिदर्शनजनितसापनिर्झरणहेतुत्वात्। तथा चापस्तंबः। दर्शनं ज्योतिषां दर्शनमिति। यद्वा। विश्वं सकलं भूतजातं दर्शतं द्रष्टव्यं प्रकाश्यं येन स तथोक्तः। तथा ज्योतिष्कृत् ज्योतिषः प्रकाशस्य कर्ता। सर्वस्य वस्तुनः प्रकाशयितेत्यर्थः। यद्वा। चंद्रादीनां रात्रौ प्रकाशयिता। रात्रौ ह्यब्भ्येषु चंद्रादिबिंबेषु सूर्यकिरणाः प्रतिफलिताः संतोऽंधकारं निवारयंति यथा द्वारस्थदर्पणोपरि निपतिताः सूर्यरश्मयो गृहाभ्यंतर्गतं तमो निवारयंति तद्वदित्यर्थः। यस्मादेवं तस्माद्विश्वं व्याप्तं रोचनं रोचमानमंतरिक्षमा समंतादाभासि। प्रकाशयसि ॥ यद्वा। हे सूर्य आंतर्यामितया सर्वस्य प्रेरक परमात्मन् तरणिः संसाराब्धेस्तारकोऽसि। यस्मात्त्वं विश्वदर्शतो विश्वैः सर्वैर्मुमुक्षुभिर्दर्शतो द्रष्टव्यः। साक्षात्कर्तव्य इत्यर्थः। अधिष्ठानसाक्षात्कारे ह्यारोपितं निवर्तते। ज्योतिष्कृत् ज्योतिषः सूर्यादेः कर्ता। तथा चाम्नायते। चंद्रमा

ಮನಸೋ ಜಾತಶ್ಚಕ್ಷೋಃ ಸೂರ್ಯೋ ಅಜಾಯತೇ । ತೈ ಆ. ೩-೧೨-೬ । ಇತಿ । ಈದೃಶಸ್ತ್ವಂ ಚಿದ್ರೂಪತಯಾ ವಿಶ್ವಂ ಸರ್ವಂ ದೃಶ್ಯಜಾತಂ ರೋಚನಂ ರೋಚಮಾನಂ ದೀಪ್ಯಮಾನಂ ಯಥಾ ಭವತಿ ತಥಾ ಭಾಸಿ । ಪ್ರಕಾಶಯೆಸಿ । ಚೈತನ್ಯಸ್ಫುರಣೇ ಹಿ ಸರ್ವಂ ಜಗದ್ದೃಶ್ಯತೇ । ತಥಾ ಚಾಮ್ನಾಯತೇ । ತಮೇವ ಭಾಂತಮನುಭಾತಿ ಸರ್ವಂ ತಸ್ಯ ಭಾಸಾ ಸರ್ವಮಿದಂ ವಿಭಾತಿ । ಕ. ಉ. ೫-೧೫ । ಇತಿ । ತರಣಿಃ । ತೃ ಪ್ಲವನತರಣಯೋಃ । ಅಸ್ಮಾದಂತರ್ಭಾವಿತಣ್ಯರ್ಥಾದರ್ತಿಸೃಭೃಧೃಧಮ್ಯಶ್ಯವಿತ್ಯಾಭ್ಯೋಽನಿರಿತ್ಯನಿಪ್ರತ್ಯಯಃ । ಪ್ರತ್ಯಯಾದ್ಯುದಾತ್ತತ್ವಂ । ಜ್ಯೋತಿಃ ಕರೋತೀತಿ ಜ್ಯೋತಿಷ್ಕೃತ್ । ಕ್ವಿಪ್ಚೇತಿ ಕ್ವಿಪ್ । ನಿತ್ಯಂ ಸಮಾಸೇಽನುತ್ತರಪದಸ್ಥಸ್ಯೇತಿ ವಿಸರ್ಜನೀಯಸ್ಯ ಷತ್ವಂ । ಭಾಸಿ । ಭಾ ದೀಪ್ತೌ । ಅಂತರ್ಭಾವಿತಣ್ಯರ್ಥಾಲ್ಲಟ್ಯೆದಾದಿತ್ವಾಚ್ಛಪೋ ಲುಕ್ ॥

॥ ಪ್ರತಿಪದಾರ್ಥ ॥

ಸೂರ್ಯ—ಎಲೈ ಸೂರ್ಯದೇವನೇ (ನೀನು) । **ತರಣಿಃ**—(ಇತರರಿಂದ ಹೋಗಲಶಕ್ಯವಾದ ಮಹಾ ಮಾರ್ಗದಲ್ಲಿ) ಸಂಚರಿಸುವವನಾಗಿ ಅಥವಾ (ನಿನ್ನ ಭಕ್ತರನ್ನು ರೋಗದಿಂದ) ದಾಟಿಸುವವನಾಗಿ । **ಅಸಿ**—ಆಗಿದ್ದೀಯೆ. (ಹಾಗೆಯೇ) **ವಿಶ್ವದರ್ಶತಃ**—ಸಕಲ ಪ್ರಾಣಿಗಳಿಂದಲೂ ನೋಡಲ್ಪಡುವವನು ಅಥವಾ ಸಕಲ ಭೂತಗಳನ್ನೂ ಪ್ರಕಾಶಿಸುವಂತೆ ಮಾಡುವವನು । **ಜ್ಯೋತಿಷ್ಕೃತ್**—ಪ್ರಕಾಶವನ್ನು ಸೃಷ್ಟಿಸುವವನು ಅಥವಾ ಚಂದ್ರಾದಿಗಳನ್ನು ಜ್ಯೋತಿಃಸ್ವರೂಪರನ್ನಾಗಿ ಮಾಡುವವನು (ಆದ್ದರಿಂದಲೇ) । **ವಿಶ್ವಂ**—ಎಲ್ಲ ಕಡೆಯೂ ವ್ಯಾಪಿಸಿರುವ । **ರೋಚನಂ**—ಅಂತರಿಕ್ಷವನ್ನು । **ಆ ಭಾಸಿ**—ಸುತ್ತಲೂ ಪ್ರಕಾಶಿಸುವಂತೆ ಮಾಡುತ್ತೀಯೆ.

॥ ಭಾವಾರ್ಥ ॥

ಎಲೈ ಸೂರ್ಯದೇವನೇ, ನೀನು ಇತರರಿಂದ ಹೋಗಲಶಕ್ಯವಾದ ಮಹಾಮಾರ್ಗದಲ್ಲಿ ಸಂಚರಿಸುತ್ತೀಯೇ. ಅಥವಾ ನಿನ್ನನ್ನು ಪೂಜಿಸುವ ಭಕ್ತರನ್ನು ರೋಗದಿಂದ ದಾಟಿಸುತ್ತೀಯೆ. ನೀನು ಸಕಲ ಪ್ರಾಣಿಗಳಿಗೂ ಗೋಚರನು. ಅಥವಾ ಸಕಲ ಭೂತಗಳನ್ನೂ ಪ್ರಕಾಶಿಸುವಂತೆ ಮಾಡುವವನು. ತೇಜಸ್ಸನ್ನು ಸೃಷ್ಟಿಸುವವನು. ಅಥವಾ ನೀರಿನಿಂದ ತುಂಬಿರುವ ಚಂದ್ರಬಿಂಬದಲ್ಲಿ ನಿನ್ನ ಕಿರಣಗಳನ್ನು ತುಂಬಿ ಅದನ್ನು ಜ್ಯೋತಿಃಸ್ವರೂಪದಲ್ಲಿರುವಂತೆ ಮಾಡುವವನು. ಎಲ್ಲ ಕಡೆಯೂ ವ್ಯಾಪಿಸಿರುವ ಅಂತರಿಕ್ಷವನ್ನು ಸುತ್ತಲೂ ಪ್ರಕಾಶಿಸುವಂತೆ ಮಾಡುವವನು.

ಅಥವಾ

॥ ಪ್ರತಿಪದಾರ್ಥ ॥

ಸೂರ್ಯ—(ಅಂತರ್ಯಾಮಿಯಾಗಿ) ಸಕಲವನ್ನೂ ಪ್ರೇರಿಸತಕ್ಕ ಎಲೈ ಪರಮಾತ್ಮನೇ (ನೀನು) । **ತರಣಿಃ**—(ಸಂಸಾರಸಾಗರದಿಂದ) ದಾಟಿಸುವವನಾಗಿ । **ಅಸಿ**—ಆಗಿದ್ದೀಯೆ. (ಆದ್ದರಿಂದಲೇ ನೀನು) । **ವಿಶ್ವದರ್ಶತಃ**—(ಮೋಕ್ಷವನ್ನಿಚ್ಛಿಸುವ) ಸಕಲರಿಂದಲೂ ಸಾಕ್ಷಾತ್ಕರಿಸಲ್ಪಡುವವನು । **ಜ್ಯೋತಿಷ್ಕೃತ್**—ಜ್ಯೋತಿಃಸ್ವರೂಪದಲ್ಲಿರುವ ಸೂರ್ಯಾದಿಗಳನ್ನು ಸೃಷ್ಟಿಸುವವನು (ಈ ರೀತಿ ಚಿದ್ರೂಪಿಯಾದ ನೀನು) । **ವಿಶ್ವಂ**—ಸಮಸ್ತ ಲೋಕವನ್ನೂ । **ರೋಚನಂ**—ಪ್ರಕಾಶಮಾನವಾಗಿ ಆಗುವಂತೆ । **ಆ ಭಾಸಿ**-ಸುತ್ತಲೂ ಬೆಳಗಿಸುತ್ತೀಯೆ.

॥ ಭಾವಾರ್ಥ ॥

ಎಲ್ಲದಗಲ್ಲಿಯೂ ಆಂತರ್ಯಾಮಿಯಾಗಿದ್ದುಕೊಂಡು ಸಕಲನನ್ನೂ ಪ್ರೇರಿಸತಕ್ಕ ಎಲೈ ಪರಮಾತ್ಮನೇ, ನೀನು ಸಕಲರನ್ನೂ ಸಂಸಾರಸಾಗರದಿಂದ ದಾಟಿಸುವವನಾಗಿದ್ದೀಯೆ. ಆದ್ದರಿಂದಲೇ ಮೋಕ್ಷದಲ್ಲಿ ಅಪೇಕ್ಷೆಯುಳ್ಳವರೆಲ್ಲರೂ ನಿನ್ನನ್ನು ಸಾಕ್ಷಾತ್ಕಾರಮಾಡಲಿಚ್ಛಿಸುವರು. ನೀನು ಜ್ಯೋತಿಸ್ವರೂಪದಲ್ಲಿರುವ ಸೂರ್ಯಾದಿಗಳನ್ನು ಸೃಷ್ಟಿಸುತ್ತೀಯೆ. ಚಿದ್ರೂಪಿಯಾದ ನೀನು ಸಕಲ ಲೋಕವನ್ನೂ ಬೆಳಗಿಸುವಂತೆ ಸುತ್ತಲೂ ಪ್ರಕಾಶಿಸುತ್ತೀಯೆ.

English Translation.

O Surya, you overtake all in speed; you are visible to all; you are the source of light; you shine throughout the whole firmament.

॥ ವಿಶೇಷ ವಿಷಯಗಳು ॥

ಈ ಋಕ್ಕಿನ ವಿಶೇಷ ವಿನಿಯೋಗವು ಚಾತುರ್ಮಾಸ್ಯವೆಂಬ ಯಾಗದಲ್ಲಿ ಸೂರ್ಯನನ್ನುದ್ದೇಶಿಸಿ ಹೋಮಮಾಡುವ **ಸೌರ್ಯ ಏಕಕಪಾಲ**ವೆಂಬ ಪುರೋಡಾಶಹೋಮಮಾಡುವಾಗ **ಈ ತರಣಿರ್ವಿಶ್ವದರ್ಶತಃ** ಎಂಬ ಋಕ್ಕನ್ನು ಯಜ್ಯಾಮಂತ್ರವನ್ನಾಗಿ ಉಪಯೋಗಿಸಬೇಕೆಂದು ಆಶ್ವಲಾಯನ ಶ್ರೌತಸೂತ್ರದ **ತರಣಿರ್ವಿಶ್ವದರ್ಶಜ್ಯೋತಿಷ್ಕೃದಿತ್ಯೇಭ್ಯಃ ಸೌರ್ಯಂ ಚರುಂ ನಿರ್ವಪೇದಾದಿತ್ಯಂ ಚಾಕ್ಷುಷೀಷು ಪ್ರಜಾಸು ಪ್ರಾಯಣೀಯಾಯಾಂ ಪೌರ್ಣಮಾಸ್ಯಾಂ ಪೌರ್ಣಮಾಸೇನ ಯಜೇತ ಪಶುಕಾಮಃ ಸೌರ್ಯಮೇಕಕಪಾಲ

ಯುಕ್ತವಾಗಿಯೇ ಇದೆ. **ಆರೋಗ್ಯಂ ಭಾಸ್ಕರಾದಿಚ್ಛೇತ್** ಎಂಬ ವಚನವಿರುವುದು. ಪರಮಾತ್ಮನ ಪರವಾದ ಅರ್ಥದಲ್ಲಿ ಜೀವರುಗಳನ್ನು ಸಂಸಾರಸಾಗರದಿಂದ ದಾಟಿಸುವನೆಂಬ ಅರ್ಥವನ್ನು ಹೇಳಬಹುದು.

ವಿಶ್ವದರ್ಶತಃ—ಸಮಸ್ತ ಪ್ರಾಣಿಗಳಿಂದಲೂ ನೋಡಲ್ಪಡುವವನು ಎಂದರೆ ಸಮಸ್ತರೂ ಸೂರ್ಯನನ್ನು ನೋಡುವರು ಅಥವಾ ಸೂರ್ಯನು ಸಮಸ್ತ ಜಗತ್ತನ್ನೂ ನೋಡುವವನು ಎಂದರ್ಥವು. ಇದಲ್ಲದೆ ಸಾಧಾರಣವಾದ ಪಾಪಗಳ ಪರಿಹಾರಕ್ಕಾಗಿ ಪ್ರಾಯಶ್ಚಿತ್ತರೂಪವಾಗಿ ಸೂರ್ಯನನ್ನು ನೋಡುವುದರಿಂದ ದೋಷನಿವಾರಣೆಯಾಗುವುದೆಂದು ಪ್ರಸಿದ್ಧಿಯಾಗಿರುವುದು. **ಕರ್ಮಾನುಷ್ಠಾನಕಾಲಗಳಲ್ಲಿ ಕಾಣದೆ ಮಾಡುವ ಲೋಪದೋಷಗಳ ನಿವಾರಣೆಗಾಗಿ "ಜ್ಯೋಕ್ ಚ ಸೂರ್ಯಂ ದೃಶೇ"** ಎಂಬ ಮಂತ್ರಪಠನವು ರೂಢಿಯಲ್ಲಿರುವುದು. ಅಥವಾ ಸಮಸ್ತ ಜಗತ್ತನ್ನೂ ತನ್ನ ಪ್ರಕಾಶದಿಂದ ಬೆಳಗುವನು ಎಂಬರ್ಥವನ್ನು ಹೇಳಬಹುದು. ಪರಮಾತ್ಮನ ಪರವಾಗಿ—**ಸರ್ವೈರ್ಮುಮುಕ್ಷುಭಿರ್ದ್ರಷ್ಟವ್ಯಃ** ಮೋಕ್ಷಾಭಿಲಾಷೆಯಿಂದಿರುವ ಸಮಸ್ತ ಜ್ಞಾನಿಗಳಿಂದಲೂ ನೋಡಲ್ಪಡುವ ಎಂದರೆ ಮೋಕ್ಷಾಭಿಲಾಷಿಗಳು ಪರಮಾತ್ಮಸಾಕ್ಷಾತ್ಕಾರವನ್ನು ಬಯಸುವರು ಎಂದಭಿಪ್ರಾಯವು.

ಜ್ಯೋತಿಷ್ಕೃತ್ ಜ್ಯೋತಿಷಃ ಪ್ರಕಾಶಸ್ಯ ಕರ್ತಾ। ಪ್ರಕಾಶಕ್ಕೆ ಕಾರಣನಾದವನು. ಸೂರ್ಯನಿಂದಲೇ ನಮಗೆ ಬೆಳಕು ದೊರಕುವುದು. ಸೂರ್ಯನೇ ಎಲ್ಲಾ ವಿಧವಾದ ಬೆಳಕು ಅಥವಾ ಪ್ರಕಾಶಕ್ಕೆ ಕಾರಣಭೂತನಾದವನು. ಸೂರ್ಯನಿಲ್ಲದಿದ್ದರೆ ನನಗೆ ಯಾವ ವಿಧವಾದ ಪ್ರಕಾಶವೂ ದೊರಕುವುದಿಲ್ಲ. ಅಥವಾ ಸೂರ್ಯನು ನಮಗೆ ಪ್ರತ್ಯಕ್ಷವಾಗಿ ಬೆಳಕನ್ನು ಕೊಡುವುದಲ್ಲದೆ ಚಂದ್ರಬಿಂಬಾದಿಗಳ ಮೇಲೆ ಸೂರ್ಯನ ಕಿರಣಗಳು ಬಿದ್ದು ಅವು ಪ್ರತಿಬಿಂಬಿತವಾಗಿ ಆ ಬೆಳಕು ನಮಗೆ ಪರೋಕ್ಷರೂಪದಿಂದಲೂ ದೊರಕುವುದರಿಂದ ಸೂರ್ಯನೇ ಎಲ್ಲಾ ವಿಧವಾದ ಬೆಳಕಿಗೂ ಮೂಲವು ಎಂದಭಿಪ್ರಾಯವು. ಪರಮಾತ್ಮನ ಪರವಾಗಿ ಸೂರ್ಯಾದಿಜ್ಯೋತೀರೂಪ ಮಂಡಲಗಳನ್ನು ಸೃಷ್ಟಿಸುವ ಎಂದರ್ಥವು. **"ಚಂದ್ರಮಾ ಮನಸೋ ಜಾತಶ್ಚಕ್ಷೋಃ ಸೂರ್ಯೋ ಅಜಾಯತ** (ತೈ. ಆ. ೩-೧೨-೬) ಎಂದು ಈ ವಿಷಯದಲ್ಲಿ ಶ್ರುತಿವಾಕ್ಯವಿರುವುದು.

ವಿಶ್ವಮಾ ಭಾಸಿ ರೋಚನಂ—ಇಲ್ಲಿ ರೋಚನಂ ಎಂದರೆ ಅಂತರಿಕ್ಷವು. ಸೂರ್ಯನು ವಿಸ್ತಾರವಾದ ಅಂತರಿಕ್ಷವೆಲ್ಲವನ್ನೂ ಬೆಳಗುವನು. ಪರಮಾತ್ಮನ ಪರವಾಗಿ ಚೈತನ್ಯರೂಪದಿಂದ ಸಮಸ್ತ ಚರಾಚರಾತ್ಮಕವಾದ ಪ್ರಪಂಚವನ್ನು ಬೆಳಗುವನು. (ಪ್ರೇರಿಸುವನು) ಎಂದು **"ತಮೇವ ಭಾಂತಮನುಭಾತಿ ಸರ್ವಂ ತಸ್ಯ ಭಾಸಾ ಸರ್ವಮಿದಂ ವಿಭಾತಿ"** ಎಂದು ಕಠೋಪನಿಷದ್ವಾಕ್ಯವಿರುವುದು.

॥ ವ್ಯಾಕರಣಪ್ರಕ್ರಿಯಾ ॥

ತರಣಿಃ—ತೃ ಪ್ಲವನತರಣಯೋಃ ಭ್ವಾದಿ. ಇಲ್ಲಿ ಅಂತರ್ಭಾವಿತಣ್ಯರ್ಥವನ್ನು ಸ್ವೀಕರಿಸಬೇಕು. ಣಿಚ್ ಇಲ್ಲದಿದ್ದರೂ ಣಿಜರ್ಥವು ಧಾತ್ವರ್ಥದಲ್ಲಿ ಅಡಕವಾಗಿದೆ ಎಂದು ತಾತ್ಪರ್ಯ. ಅರ್ತಿ ಸೃ ಭೃ ಧೃ ಧೆಮ್ಯಶ್ಯ-ವಿತೃಭ್ಯೋಽನಿಃ (ಉ. ಸೂ. ೨-೩೬೦) ಸೂತ್ರದಿಂದ ಅನಿ ಪ್ರತ್ಯಯವು ಬರುತ್ತದೆ. ತೃ+ಅನಿ ಎಂದಿರುವಾಗ ಆರ್ಧಧಾತುಕ ಪರದಲ್ಲಿರುವುದರಿಂದ ಧಾತುವಿಗೆ ಗುಣ ಬರುತ್ತದೆ. ರೇಫ ನಿಮಿತ್ತವಿರುವುದರಿಂದ ಅಟ್ ವ್ಯವಧಾನವಿರುವುದರಿಂದ ನಕಾರಕ್ಕೆ ಣತ್ವ ಬಂದರೆ ತರಣಿ ಎಂದು ರೂಪವಾಗುತ್ತದೆ. ಪ್ರತ್ಯಯ ಸ್ವರದಿಂದ ಅನಿ ಎಂಬಲ್ಲಿ ಅಕಾರವು ಉದಾತ್ತವಾಗುತ್ತದೆ. ತರಣಿಃ ಎಂಬುದು ಮಧ್ಯೋದಾತ್ತವಾದ ಶಬ್ದವಾಗುತ್ತದೆ.

ಜ್ಯೋತಿಷ್ಕೃತ್—ಜ್ಯೋತಿಃ ಕರೋತಿ ಇತಿ ಜ್ಯೋತಿಷ್ಕೃತ್ ಪ್ರಕಾಶವನ್ನುಂಟುಮಾಡುವವನು ಎಂದರ್ಥ. **ಕ್ವಿಪ್ ಚ** (ಪಾ. ಸೂ. ೩-೨-೭೬) ಸೂತ್ರದಿಂದ ಕೃಞ್ ಧಾತುವಿಗೆ ಕ್ವಿಪ್ ಪ್ರತ್ಯಯ ಬರುತ್ತದೆ. (ಈ ಪ್ರತ್ಯಯವು ಉಪಪದವಿದ್ದರೂ ಇಲ್ಲದಿದ್ದರೂ ಛಂದಸ್ಸಿನಲ್ಲಿಯೂ ಲೋಕದಲ್ಲಿಯೂ ಬರುತ್ತದೆ) ಕ್ವಿಪಿನಲ್ಲಿ ಸರ್ವಲೋಪವಾಗುತ್ತದೆ. ಪಿತ್ತಾದುದರಿಂದ ಪಿತ್ತಾದ ಕೃತ್ ಪರದಲ್ಲಿರುವುದರಿಂದ ಕೃ ಎಂಬಲ್ಲಿರುವ ಹ್ರಸ್ವವಾದ ಋಕಾರಕ್ಕೆ **ಹ್ರಸ್ವಸ್ಯ ಪಿತಿ ಕೃತ್ ತುಕ್** (ಪಾ.ಸೂ. ೬-೧-೭೧) ಸೂತ್ರದಿಂದ ತುಗಾಗಮ ಬರುತ್ತದೆ. ಕಿತ್ತಾದುದರಿಂದ ಅಂತಾವಯವನವಾಗಿ ಬಂದರೆ **ಕೃತ್** ಎಂದು ರೂಪವಾಗುತ್ತದೆ. ಜ್ಯೋತಿಃ **ಕೃತ್** ಎಂದಿರುವಾಗ, **ನಿತ್ಯಂ ಸಮಾಸೇಽನುತ್ತರಪದಸ್ಥಸ್ಯ** (ಪಾ. ಸೂ. ೮-೩-೪೫) ಉತ್ತರಪದದಲ್ಲಿ ಇಲ್ಲದಿರುವ ಇಸ್, ಉಸ್‌ಗಳ **ವಿಸರ್ಜನೀಯ**ಕ್ಕೆ (ವಿಸರ್ಗಕ್ಕೆ) ಸಮಾಸದಲ್ಲಿ ಕವರ್ಗ ಪವರ್ಗ ಪರದಲ್ಲಿರುವಾಗ ನಿತ್ಯವಾಗಿ ಷತ್ವಬರುತ್ತದೆ ಎಂಬುದರಿಂದ ವಿಸರ್ಗಕ್ಕೆ ಷಕಾರ ಬಂದರೆ ಜ್ಯೋತಿಷ್ಕೃತ್ ಎಂದು ರೂಪವಾಗುತ್ತದೆ.

ಭಾಸಿ—ಭಾ ದೀಪ್ತೌ ಅದಾದಿ. ಇಲ್ಲಿಯೂ ಣಿಜರ್ಥವನ್ನು ಧಾತ್ವರ್ಥದ ಮಧ್ಯೆ ಸೇರಿಸಿ ಹೇಳಬೇಕು. ಇನ್ನೊಂದನ್ನು ಪ್ರಕಾಶಪಡಿಸುವುದು ಎಂದು ಅರ್ಥವನ್ನು ಹೇಳಬೇಕು. ಲಟ್ ಮಧ್ಯಮಪುರುಷ ಏಕವಚನದಲ್ಲಿ ಸಿಪ್ ಪ್ರತ್ಯಯ ಬರುತ್ತದೆ. ವಿಕರಣ ಶಪ್ ಪ್ರತ್ಯಯ ಪ್ರಾಪ್ತವಾದರೆ **ಅದಿಪ್ರಭೃತಿಭ್ಯಃ ಶಪಃ** (ಪಾ. ಸೂ. ೨-೪-೭೨) ಸೂತ್ರದಿಂದ ಅದಾದಿಯಾದುದರಿಂದ ಲುಕ್ ಬರುತ್ತದೆ. ಅತಿಜಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ

॥ ಸಂಹಿತಾಪಾಠಃ ॥

ಪ್ರತ್ಯಙ್ ದೇವಾನಾಂ ವಿಶಃ ಪ್ರತ್ಯಙುದೇಷಿ ಮಾನುಷಾನ್ ।
ಪ್ರತ್ಯಙ್ವಿಶ್ವಂ ಸ್ವರ್ದೃಶೇ ॥ ೫ ॥

ಪದಪಾಠಃ

ಪ್ರತ್ಯಙ್ । ದೇವಾನಾಂ । ವಿಶಃ । ಪ್ರತ್ಯಙ್ । ಉತ್ । ಏಷಿ । ಮಾನುಷಾನ್ ।
ಪ್ರತ್ಯಙ್ । ವಿಶ್ವಂ । ಸ್ವಃ । ದೃಶೇ ॥ ೫ ॥

॥ ಸಾಯಣಭಾಷ್ಯಂ ॥

ಹೇ ಸೂರ್ಯ ತ್ವಂ ದೇವಾನಾಂ ವಿಶೋ ಮರುನ್ನಾಮಕಾನ್ದೇವಾನ್ । ಮರುತೋ ವೈ ದೇವಾನಾಂ ವಿಶಃ । ತೈ. ಸಂ. ೨-೨-೫-೭ । ಇತಿ ಶ್ರುತ್ಯಂತರಾತ್ । ತಾನ್ಮರುತ್ಸಂಜ್ಞಕಾನ್ದೇವಾನ್ ಪ್ರತ್ಯಙ್ಙುದೇಷಿ । ತಾನ್ಪ್ರತಿಗಚ್ಛನ್ನುದಯಂ ಪ್ರಾಪ್ನೋಷಿ । ತೇಷಾಮಭಿಮುಖಂ ಯಥಾ ಭವತಿ ತಥೇತ್ಯರ್ಥಃ । ತಥಾ ಮಾನುಷಾನ್ಮನುಷ್ಯಾನ್ ಪ್ರತ್ಯಙ್ಙುದೇಷಿ । ತೇಽಪಿ ಯಥಾಸ್ಮದಭಿಮುಖ ಏವ ಸೂರ್ಯ ಉದೇತೀತಿ ಮನ್ಯಂತೇ । ತಥಾ ವಿಶ್ವಂ ವ್ಯಾಪ್ತಂ ಸ್ವಃ ಸ್ವರ್ಲೋಕಂ ದೃಶೇ ದ್ರಷ್ಟುಂ ಪ್ರತ್ಯಙ್ಙುದೇಷಿ । ಯಥಾ ಸ್ವ-

ಲೋಕವಾಸಿನೋ ಜನಾಃ ಸ್ವಸ್ಮಾಭಿಮುಖ್ಯೇನ ಪಶ್ಯಂತಿ ತಥೋದೇಷೀತ್ಯರ್ಥಃ। ಏತದುಕ್ತಂ ಭವತಿ। ಲೋಕತ್ರಯವರ್ತಿನೋ ಜನಾಃ ಸರ್ವೇಽಪಿ ಸ್ವಸ್ಮಾಭಿಮುಖ್ಯೇನ ಸೂರ್ಯಂ ಪಶ್ಯಂತೀತಿ। ತಥಾ ಚಾಮ್ನಾಯತೇ। ತಸ್ಮಾತ್ಸರ್ವ ಏವ ಮನ್ಯತೇ ಮಾಂ ಪ್ರತ್ಯುದಗಾದಿತಿ॥ ಪ್ರತ್ಯಙ್। ಪ್ರತ್ಯಂಚತೀತಿ ಪ್ರತ್ಯಙ್। ಅನ್ಚು ಗತಿಪೂಜನಯೋಃ। ಋತ್ವಿಗಿತ್ಯಾದಿನಾ ಕ್ವಿನ್। ಅನಿದಿತಾಮಿತಿ ನಲೋಪಃ। ಉಗಿದಚಾಮಿತಿ ನುಮ್। ಹಲ್ಙ್ಯಾದಿಸಂಯೋಗಾಂತಲೋಪೌ। ಸಂಯೋಗಾಂತಲೋಪಸ್ಯಾಸಿದ್ಧತ್ವಾದುಪಧಾದೀರ್ಘನ ಲೋಪಯೋರಭಾವಃ। ಕ್ವಿನ್ಪ್ರತ್ಯಯಸ್ಯ ಕುಃ। ಪಾ. ೮-೨-೬೨। ಇತಿ ಕುತ್ವಂ। ಅನಿಗಂತೋರ್ಞ್ಣಿತೌ। ಪಾ. ೬-೪-೫೨। ಇತ್ಯನಿಗಂತ ಇತಿ ಪರ್ಯುದಾಸಾತ್ಪೂರ್ವಪದಪ್ರಕೃತಿಸ್ವರಾಭಾವೇ ಕೃದುತ್ತರಪದ-ಪ್ರಕೃತಿಸ್ವರತ್ವಂ। ಏಷಿ। ಇಣ್ ಗತೌ। ಸಿಪ್ಯದಾದಿತ್ವಾಚ್ಛಪೋ ಲುಕ್। ಆದೇಶಪ್ರತ್ಯಯಯೋರಿತಿ ಷತ್ವಂ। ಸ್ವಃ। ಸುಪೂರ್ವಾದರ್ತೇರ್ವಿಚ್। ಗುಣೇ ಯಣಾದೇಶಃ। ನ್ಯಙ್ಸ್ವರೌ ಸ್ವರಿತೌ ಚೇತಿ ಸ್ವರಿತತ್ವಂ। ದೃಶೇ। ದೃಶಿರ್ ಪ್ರೇಕ್ಷಣ ಇತ್ಯಸ್ಮಾದ್ದೃಶೇ ವಿಖ್ಯೇ ಚೇತಿ ತುಮರ್ಥೇ ನಿಪಾತಿತಃ॥ ೭॥

॥ ಪ್ರತಿಪದಾರ್ಥ ॥

ದೇವಾನಾಂ ವಿಶಃ—(ಎಲೈ ಸೂರ್ಯದೇವನೇ, ನೀನು) ದೇವಲೋಕದ ಪ್ರಜೆಗಳಾದ ಮರುದ್ದೇವತೆಗಳ। **ಪ್ರತ್ಯಙ್**—ಅಭಿಮುಖವಾಗಿ। **ಉದೇಷಿ**—ಉದಯಿಸುತ್ತೀಯೆ। **ಮಾನುಷಾ ಪ್ರತ್ಯಙ್**—ಮನುಷ್ಯರಿಗೆ ಅಭಿಮುಖವಾಗಿ (ಉದಯಿಸುತ್ತೀಯೆ)। **ವಿಶ್ವಂ**—ಸರ್ವವ್ಯಾಪಕವಾದ। **ಸ್ವಃ**—ಸ್ವರ್ಲೋಕಕ್ಕೆ। **ದೃಶೇ**—ಗೋಚರವಾಗಲು। **ಪ್ರತ್ಯಙ್**—ಅಭಿಮುಖನಾಗಿ ಉದಯಿಸುತ್ತೀಯೆ.

॥ ಭಾವಾರ್ಥ ॥

ಎಲ್ಲೈ ಸೂರ್ಯದೇವನೇ, ನೀನು ದೇವಲೋಕದ ಪ್ರಜೆಗಳಾದ ಮರುದ್ದೇವತೆಗಳಿಗೂ, ಸಕಲಮಾನವರಿಗೂ, ಸರ್ವವ್ಯಾಪಕವಾದ ಸ್ವರ್ಲೋಕಕ್ಕೂ ಅಭಿಮುಖನಾಗಿ ಸಕಲರಿಗೂ ಗೋಚರನಾಗುವಂತೆ ಉದಯಿಸುತ್ತೀಯೇ.

English Translation.

You rise opposite to Marudgaṇa (or divine beings) opposite to the men and opposite to all the heaven that they may see.

॥ ವಿಶೇಷ ವಿಷಯಗಳು ॥

ಪ್ರತ್ಯಙ್—ಅಭಿಮುಖವಾಗಿ, ಎದುರಾಗಿ.

ದೇವಾನಾಂ ವಿಶಃ—ಈ ಶಬ್ದಗಳಿಗೆ ಮರುದ್ದೇವತೆಗಳೆಂದು ಭಾಷ್ಯಕಾರರು ಅರ್ಥವಿವರಣೆಯೂಡಿ ಈ ವಿಷಯದಲ್ಲಿ ತೈತ್ತಿರೀಯಸಂಹಿತೆಯ **ಮರುತೋ ವೈ ದೇವಾನಾಂ ವಿಶಃ** (ತೈ. ಸಂ. ೨-೨-೫-೭) ಎಂಬ ಶ್ರುತಿವಾಕ್ಯವನ್ನು ಉದಾಹರಿಸಿರುವರು.

ಸ್ವಃ—ಹೇ ಆದಿತ್ಯ, ಎಲೈ ಆದಿತ್ಯನೇ. **ಸ್ವರಾದಿತ್ಯೋ ಭವತಿ** ಎಂದು ನಿರುಕ್ತವಚನವಿರುವುದು. (ನಿ. ೨-೧೪).

ಮುಖ್ಯಾಭಿಪ್ರಾಯವೇನೆಂದರೆ—ಸೂರ್ಯನು ಉದಯಿಸುವಾಗ ಭೂಲೋಕಸ್ವರ್ಗಲೋಕದ ಜನರೆಲ್ಲರೂ ಸೂರ್ಯನನ್ನು ನೋಡುವರು. ಸೂರ್ಯನು ಉದಯಿಸಿ ಭೂಮ್ಯಂತರಿಕ್ಷಸ್ವರ್ಗಲೋಕಗಳನ್ನು ಬೆಳಗುವನು.

ಈ ಋಕ್ಕಿಗೆ ಯಾಸ್ಕರ ನಿರುಕ್ತವು—**ಪ್ರತ್ಯಙ್ಙುದಂ ಸರ್ವಮುದೇಷಿ ಪ್ರತ್ಯಙ್ಙುದಂ ಜ್ಯೋತಿರುಚ್ಯತೇ। ಪ್ರತ್ಯಙ್ಙುದಂ ಸರ್ವಮಭಿನಿಪಶ್ಯಸೀತಿ ॥** (ನಿ. ೧೨-೨೪) ಎಂದಿರುವುದು ಇದಕ್ಕೆ ವ್ಯಾಖ್ಯಾನವು—**ಪ್ರತ್ಯಙ್ ದೇವಾನಾಂ ವಿಶಸ್ತ್ಯಾಃ ಕೃತ್ವಾ ಪುರಸ್ತಾತ್ವಾಸಾಂ ಉದೇಷಿ ಮಾನುಷಾನ್ ಚೈವಮೇವ ಪ್ರತ್ಯಙ್ ಕೃತ್ವಾ ತೇಷಾಮಪಿ ಪುರಸ್ತಾದೇವ ಉದೇಷಿ। ಕಿಂ ಬಹುನಾ ಹೇ ಸ್ವಃ ಆದಿತ್ಯ ಪ್ರತ್ಯಙ್ ಇದಂ ಸರ್ವಂ ಆತ್ಮನಃ ಕೃತ್ವಾ ಪುರಸ್ತಾದುದ್ಯನ್ ಸರ್ವಮಭಿನಿಪಶ್ಯಸಿ ॥** ಇದರ ಅರ್ಥವು ಭಾಷ್ಯಕಾರರ ಅರ್ಥವಿವರಣೆಯಂತೆಯೇ ಇರುವುದರಿಂದ ಇದನ್ನು ವಿಸ್ತರಿಸುವುದು ಅನಾವಶ್ಯಕವು.

॥ ವ್ಯಾಕರಣಪ್ರಕ್ರಿಯಾ ॥

ಪ್ರತ್ಯಙ್—ಪ್ರತಿ ಅಂಚತಿ ಇತಿ ಪ್ರತ್ಯಙ್. ಅಭಿಮುಖವಾಗಿ ಚಲಿಸುವವನು ಎಂದರ್ಥ. ಅಂಚು ಗತಿಪೂಜನಯೋಃ ಧಾತು. ಭ್ವಾದಿ. **ಯುಷ್ಮದ್ಯುಷ್ಮದ್ಭ್ಯಙ್ಙಸೌ ಸ್ಯಙ್ಙಸಿಙ್ಭ್ಯಙ್ಙಸಾಂ ಚ** (ಪಾ. ಸೂ. ೩-೨-೫೯) ಇವುಗಳಿಗೆ ಕ್ವಿಪ್ ಪ್ರತ್ಯಯ ಬರುತ್ತದೆ. ಕೆಲವು ಶಬ್ದಗಳಿಗೆ ಶಾಸ್ತ್ರಾಂತರದಿಂದ ಬಾರದ ಕಾರ್ಯಗಳನ್ನು ನಿಪಾತಮಾಡಿರುತ್ತಾರೆ. ಇದರಿಂದ ಅಂಚು ಧಾತುವಿಗೆ ಸುಬಂತವು ಉಪಪದವಾಗಿರುವಾಗ ಕ್ವಿನ್ ಪ್ರತ್ಯಯ ಬರುತ್ತದೆ. ಪ್ರತಿ ಎಂಬುದು ಸುಬಂತ. **ಅವ್ಯಯೋದಾಪ್ ಸುಪಃ** ಸೂತ್ರದಿಂದ ಇದರಮೇಲೆ ಬಂದಿರುವ ಸುಪ್ ಲುಕ್ ಆಗುತ್ತದೆ. ಕ್ವಿನ್ ಪ್ರತ್ಯಯದಲ್ಲಿ ಸರ್ವವೂ ಲೋಪವಾಗುತ್ತದೆ. **ಕೃತ್ತದ್ಧಿತಸಮಾಸಾಶ್ಚ** (೧-೨-೪೬) ಸೂತ್ರದಿಂದ ಅವಶಿಷ್ಟವಾದ ಪ್ರತ್ಯಙ್ ಎಂಬುದಕ್ಕೆ **ಪ್ರಾತಿಪದಿಕಸಂಜ್ಞೆ**ಯು ಬರುತ್ತದೆ. **ಅನಿದಿತಾಂ ಹಲ ಉಪಧಾಯಾಃ**—(ಪಾ ಸೂ. ೬-೪-೨೪) ಎಂಬುದರಿಂದ ಕಿತ್ತಾದ ಪ್ರತ್ಯಯ ಪರದಲ್ಲಿರುವುದರಿಂದ ಅಂಚುಧಾತುವಿನಲ್ಲಿರುವ ಉಪಧಾಭೂತವಾದ ನಕಾರಕ್ಕೆ ಲೋಪ ಬರುತ್ತದೆ. ಅಂಚು ಎಂದು ಧಾತುವು ಉಗಿತ್ತಾಗಿರುವುದರಿಂದ **ಉಗಿದಚಾಂ ಸರ್ವನಾಮಸ್ಥಾನೇಽಧಾತೋಃ** ಸೂತ್ರದಲ್ಲಿ ಅಧಾತೋಃ ಎಂದು ನಿಷೇಧ ಮಾಡಿದರೂ ಅಚಾಂ ಎಂದು ಲುಪ್ತನಕಾರವುಳ್ಳ ಅಂಚುಧಾತುವನ್ನು ಪುನಃ ಉಪಾದಾನಮಾಡಿರುವುದರಿಂದ ಸರ್ವನಾಮಸ್ಥಾನ ಸಂಜ್ಞೆಯುಳ್ಳ ಸು ಪ್ರಥಮಾವಿಭಕ್ತಿಯು ಪರದಲ್ಲಿರುವಾಗ ನುಮಾಗಮ ಬರುತ್ತದೆ. ಮಿತ್ತಾದುದರಿಂದ ಅಂತ್ಯಾಚಿನ ಪರದಲ್ಲಿ ಅವಯವವಾಗಿ ಬಂದರೆ ಪ್ರತ್ಯನ್ಚ್+ಸ್ ಎಂದು ರೂಪವಾಗುತ್ತದೆ. ಹಲಿನ ಪರದಲ್ಲಿ ಸು ಬಂದಿರುವುದರಿಂದ **ಹಲ್ಙ್ಯಾಭ್ಯೋ ದೀರ್ಘಾತ್**—(ಪಾ. ಸೂ. ೬-೧-೬೮) ಸೂತ್ರದಿಂದ ಆದಕ್ಕೆ ಲೋಪ ಬರುತ್ತದೆ. ಸಂಯೋಗಾಂತ್ಯವಾದ ಪದವಾದುದರಿಂದ **ಸಂಯೋಗಾಂತಸ್ಯ ಲೋಪಃ** ಸೂತ್ರದಿಂದ ಕೊನೆಯ ಚಕಾರಕ್ಕೆ ಲೋಪ ಬರುತ್ತದೆ. ಪ್ರತ್ಯನ್ ಎಂದಿರುವಾಗ ಸಂಯೋಗಾಂತಲೋಪವು ಅಸಿದ್ಧವಾಗಿರುವುದರಿಂದ **ಸರ್ವನಾಮಸ್ಥಾನೇಚಾಸಂಬುದ್ಧೌ** ಸೂತ್ರದಿಂದ ನಾಂತಲಕ್ಷಣ ಉಪಧಾದೀರ್ಘವೂ **ನಲೋಪಃ ಪ್ರಾತಿಪದಿಕಾಂತಸ್ಯ** ಸೂತ್ರದಿಂದ ನ ಲೋಪವೂ ಬರುವುದಿಲ್ಲ. **ಕ್ವಿನ್ ಪ್ರತ್ಯಯಸ್ಯ ಕುಃ** (ಪಾ. ಸೂ. ೮-೨-೬೨) ಕ್ವಿನ್ ಪ್ರತ್ಯಯವು ಯಾವುದರಮೇಲೆ ವಿಹಿತವಾಗಿದೆಯೋ ಅದಕ್ಕೆ (ಅಂತ್ಯಕ್ಕೆ) **ಕುತ್ವ**ವು ಬರುತ್ತದೆ ಎಂಬುದರಿಂದ ಇಲ್ಲಿ **ಸ್ಥಾನೇಂತರತಮಃ** ಪರಿಭಾಷೆಯಿಂದ **ಪ್ರತ್ಯನ್** ಎಂಬಲ್ಲಿರುವ ಅಂತ್ಯನಕಾರಕ್ಕೆ **ಜಕಾರ**

ಬರುತ್ತದೆ. ಪ್ರತ್ಯಙ್ ಎಂದು ರೂಪವಾಗುತ್ತದೆ. **ಅನಿಗಂತೇಽಂಚತೌ ವ ಪ್ರತ್ಯಯೇ** (ಪಾ. ಸೂ. ೬-೩-೪೬) ವ ಪ್ರತ್ಯಯಾಂತವಾದ ಅಂಚುಧಾತುವು ಪರದಲ್ಲಿರುವಾಗ ಇಗಂತಭಿನ್ನವಾದ ಗತಿಯು ಪ್ರಕೃತಿಸ್ವರವನ್ನು ಹೊಂದುತ್ತದೆ. ಕ್ವಿನ್ ಪ್ರತ್ಯಯದಲ್ಲಿ ವಕಾರಮಾತ್ರ ಉಳಿಯುವುದರಿಂದ ಬೇರೆ ವರ್ಣಗಳು ಇತ್ಯಾಗುವುದರಿಂದ ವ ಪ್ರತ್ಯಯಾಂತವಾದ ಅಂಚುಧಾತುವು ಆಗುತ್ತದೆ. ಆದರೆ ಪ್ರತಿ ಎಂಬುದು ಇಗಂತವಾದುದರಿಂದ ತದ್ಭಿನ್ನವಾದ ಗತಿಗೆ ಪ್ರಕೃತಿಭಾವ ಹೇಳಲಾಗುವುದರಿಂದ ಇಲ್ಲಿ ಗತಿ ಸ್ವರಕ್ಕೆ ಬಾಧಕವಾಗಿ **ಗತಿಕಾರಕೋಪಪದಾತ್ ಕೃತ್** ಸೂತ್ರದಿಂದ ಕೃದುತ್ತರ ಪ್ರಕೃತಿಸ್ವರವೇ ಬರುತ್ತದೆ. ಪ್ರತ್ಯಙ್ ಎಂಬುದು ಅಂತೋದಾತ್ತವಾದ ಪದವಾಗುತ್ತದೆ.

ಏಷಿ—ಇಣ್ ಗತೌ ಧಾತು. ಅದಾದಿ. ಲಟ್ ಮಧ್ಯಮಪುರುಷ ಏಕವಚನ ವಿವಕ್ಷಾಮಾಡಿದಾಗ ಸಿಪ್ ಪ್ರತ್ಯಯ ಬರುತ್ತದೆ. **ಅದಿಪ್ರಭೃತಿಭ್ಯಃ ಶಪಃ** ಸೂತ್ರದಿಂದ ವಿಕರಣವಾಗಿ ಬಂದ ಶಪ್ ಪ್ರತ್ಯಯಕ್ಕೆ ಲುಕ್ ಬರುತ್ತದೆ. ಇ+ಸಿ ಎಂದಿರುವಾಗ ಇಗಂತಲಕ್ಷಣಗುಣ ಬರುತ್ತದೆ. ಪ್ರತ್ಯಯ ಸಕಾರವಾದುದರಿಂದ **ಆದೇಶ ಪ್ರತ್ಯಯಯೋಃ** (ಪಾ. ಸೂ. ೮-೩-೫೯) ಸೂತ್ರದಿಂದ ಷತ್ವ ಬರುತ್ತದೆ. ಏಷಿ ಎಂದು ರೂಪವಾಗುತ್ತದೆ. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

ಸ್ವಃ—ಸು ಎಂಬುದು ಗತಿಸಂಜ್ಞೆಯುಳ್ಳ ಉಪಪದ. ಋ ಗತೌ ಧಾತು. ಭ್ವಾದಿ. **ಆನ್ಯೇಭ್ಯೋಽಪಿ ದೃಶ್ಯಂತೇ** (ಪಾ. ಸೂ. ೩-೨-೭೫) ಮನಿನ್ ಕ್ವನಿಪ್, ವನಿಪ್, ವಿಚ್ ಪ್ರತ್ಯಯಗಳು ಧಾತುಗಳ ಮೇಲೆ ಬರುತ್ತವೆ ಎಂಬುದರಿಂದ ಇಲ್ಲಿ ವಿಚ್ ಪ್ರತ್ಯಯ ಬರುತ್ತದೆ. ವಿಚ್ ಪರದಲ್ಲಿರುವಾಗ ಧಾತುವಿಗೆ ಗುಣ ಬರುತ್ತದೆ. ಋಕಾರದ ಸ್ಥಾನಕ್ಕೆ ಬರುವುದರಿಂದ ರ ಪರವಾಗಿ ಬರುತ್ತದೆ. ಸು+ಅರ್+ವಿಚ್ ಎಂದಿರುವಾಗ ಪ್ರತ್ಯಯಕ್ಕೆ ಸರ್ವಲೋಪ ಬರುತ್ತದೆ. ಸು+ಅರ್ ಎಂಬಲ್ಲಿ ಯಣಾದೇಶ ಬರುತ್ತದೆ. ಅವಸಾನನಿಮಿತ್ತಕ ವಿಸರ್ಗ ಬಂದರೆ ಸ್ವಃ ಎಂದಾಗುತ್ತದೆ. **ನ್ಯಙ್ಸ್ವರಾ ಸ್ವರಿತಾ ಚ** (ಫಿ. ಸೂ. ೭೪) ಎಂಬುದರಿಂದ ಸ್ವರಿತಸ್ವರ ಬರುತ್ತದೆ.

ದೃಶೇ—ದೃಶಿರ್ ಪ್ರೇಕ್ಷಣೇ ಧಾತು. ಭ್ವಾದಿ. **ದೃಶೇ ವಿಖ್ಯೇ ಚ** (ಪಾ. ಸೂ. ೩-೪-೧೧) ಸೂತ್ರದಿಂದ ಈ ಧಾತುವಿಗೆ ತುಮುನರ್ಥದಲ್ಲಿ ದೃಶೇ ಎಂದು ನಿಪಾತಮಾಡಿರುತ್ತಾರೆ. ದ್ರಷ್ಟುಂ ಎಂಬರ್ಥದಲ್ಲಿ ದೃಶೇ ಎಂದು ರೂಪವಾಗುತ್ತದೆ.

॥ ಸಂಹಿತಾಪಾಠಃ ॥

ಯೇನಾ᳕ ಪಾವಕ ಚಕ್ಷಸಾ ಭುರಣ್ಯಂತಂ ಜನಾಁ ಅನು ।
ತ್ವಂ ವರುಣ ಪಶ್ಯಸಿ ॥ ೬ ॥

॥ ಪದಪಾಠಃ ॥

ಯೇನ᳕ । ಪಾವಕ । ಚಕ್ಷಸಾ । ಭುರಣ್ಯಂತಂ । ಜನಾನ್ । ಅನು ।
ತ್ವಂ । ವರುಣ । ಪಶ್ಯಸಿ ॥ ೬ ॥

॥ ಸಾಯಣಭಾಷ್ಯಂ ॥

ಹೇ ಪಾವಕ ಸರ್ವಸ್ಯ ಶೋಧಕ ವರುಣಾನಿಷ್ಟನಿವಾರಕ ಸೂರ್ಯ ತ್ವಂ ಜನಾನ್ ಜಾತಾನ್ಪ್ರಾಣಿನೋ ಭುರಣ್ಯಂತಂ ಧಾರಯಂತಂ ಪೋಷಯಂತಂ ವೇಮಂ ಲೋಕಂ ಯೇನ ಚಕ್ಷುಷಾ ಪ್ರಕಾಶೇನಾನು ಪಶ್ಯಸಿ ಅನುಕ್ರಮೇಣ ಪ್ರಕಾಶಯಸಿ । ತಂ ಪ್ರಕಾಶಂ ಸ್ತುಮ ಇತಿ ಶೇಷಃ । ಯದ್ವಾ । ಉತ್ತರಸ್ಯಾಮೃಚಿ ಸಂಬಂಧಃ । ತೇನ ಚಕ್ಷುಷಾ ವ್ಯೇಷೀತಿ । ತಥಾ ಚ ಯಾಸ್ಕೇನೋಕ್ತಂ । ತತ್ತೇ ವಯಂ ಸ್ತುಮ ಇತಿ ವಾಕ್ಯಶೇಷೋಽಪಿ ವೋತ್ತರಸ್ಯಾ ಮನ್ವಯಸ್ತೇನ ವ್ಯೇಷಿ । ನಿ. ೧೨-೨೨ । ಇತಿ ॥ ಭುರಣ್ಯಂತಂ । ಭುರಣ ಧಾರಣಪೋಷಣಯೋಃ । ಕಂಡ್ವಾದಿತ್ವಾದ್ಯಕ್ । ತತಃ ಶತರಿ ಕರ್ತರಿ ಶಪ್ । ಅದುಪದೇಶಾಲ್ಲಸಾರ್ವಧಾತುಕಾನುದಾತ್ತತ್ವೇ ಯಕ ಏವ ಸ್ವರಃ ಶಿಷ್ಯತೇ । ವರುಣ । ವೃಞ್ ವರಣೇ । ಅಸ್ಮಾದಂತರ್ಭಾವಿತಣ್ಯರ್ಥಾತ್ಕ್ವಾವೃತ್ವಾದಾರಿಭ್ಯ ಉನನ್ । ಉ. ೩-೫೩ । ಇತ್ಯುನನ್ಪ್ರತ್ಯಯಃ । ಅತ್ರ ವರುಣಶಬ್ದೇನಾದಿತ್ಯ ಏವೋಚ್ಯತೇ । ತಥಾ ಚಾನ್ಯತ್ರಾಮ್ನಾತಂ । ತಸ್ಯೈ ಮಿತ್ರಶ್ಚ ವರುಣಶ್ಚಾಜಾಯೇತಾಮಿತಿ । ಮಿತ್ರಶ್ಚ ವರುಣಶ್ಚ ಧಾತಾ ಚಾರ್ಯಮಾ ಚ । ತೈ. ಆ. ೧-೧೩-೩ । ಇತಿ ಚ ।

॥ ಪ್ರತಿಪದಾರ್ಥ ॥

ಪಾವಕ—(ಸಕಲವನ್ನೂ) ಶುದ್ಧಿಮಾಡತಕ್ಕವನನಾಗಿಯೂ । **ವರುಣ**—ಅನಿಷ್ಟವನ್ನು ತಪ್ಪಿಸುವವನನಾಗಿಯೂ ಇರುವ ಎಲೈ ಸೂರ್ಯನೇ, । **ತ್ವಂ**—ನೀನು । **ಜನಾನ್**—ಉತ್ಪನ್ನಗಳಾದ ಸಕಲ ಪ್ರಾಣಿಗಳನ್ನೂ **ಭುರಣ್ಯಂತಂ**—ಹೊತ್ತುಕೊಂಡಿರುವ ಅಥವಾ ಪೋಷಿಸುತ್ತಿರುವ ಈ **ಲೋಕ**ವನ್ನು । **ಯೇನ ಚಕ್ಷುಷಾ**—ಯಾವ ಪ್ರಕಾಶದಿಂದ । **ಅನು ಪಶ್ಯಸಿ**—ಅನುಕ್ರಮವಾಗಿ ನೋಡುತ್ತೀಯೋ (ಬೆಳಗುವಂತೆಮಾಡುತ್ತೀಯೋ ಆ ಪ್ರಕಾಶವನ್ನು **ಸ್ತೋತ್ರಮಾಡುತ್ತೇವೆ**).

॥ ಭಾವಾರ್ಥ ॥

ಎಲೈ ಸೂರ್ಯದೇವನೇ, ನೀನು ಸಕಲವನ್ನೂ ಶುದ್ಧಿಮಾಡತಕ್ಕವನು. ಅನಿಷ್ಟದಿಂದ ತಪ್ಪಿಸಿ ಎಲ್ಲರಿಗೂ ಒಳ್ಳೆಯದನ್ನು ಮಾಡುವವನು. ಸಕಲ ಪ್ರಾಣಿಗಳನ್ನೂ ಹೊತ್ತುಕೊಂಡಿರುವ ಅಥವಾ ಪೋಷಿಸುವ ಈ ಲೋಕವನ್ನು ಯಾವ ಪ್ರಕಾಶದಿಂದ ಬೆಳಗುವಂತೆ ಮಾಡುತ್ತೀಯೋ ಆ ಪ್ರಕಾಶವನ್ನು ನಾವು ಸ್ತೋತ್ರ ಮಾಡುತ್ತೇವೆ.

English Translation.

With that light with which you, the purifier and defender from evil, look upon this world full of living beings.

॥ ವಿಶೇಷ ವಿಷಯಗಳು ॥

ಭುರಣ್ಯಂತಂ—ಭುರಣ ಧಾರಣಪೋಷಣಯೋಃ । ಧಾರಯಂತಂ । ಪೋಷಯಂತಂ ವಾ ॥ ಜನರನ್ನು ಪೋಷಿಸುವ ಅಥವಾ ಧರಿಸುವ (ಕಾಪಾಡುವ).

ವರುಣ—**ವೃಞ್ ವರಣೇ**। **ಅನಿಷ್ಟನಿವಾರಕ**। ಜನರ ಅನಿಷ್ಟಗಳನ್ನು (**ಪಾಪಗಳನ್ನು**) ನಿವಾರಿಸುವವನು. ವರುಣಶಬ್ದವು ಆದಿತ್ಯನನ್ನು ಸೂಚಿಸುವುದೆಂದು ಭಾಷ್ಯಕಾರರು ಹೇಳಿ ಇದಕ್ಕೆ **ತೈತ್ತಿ॥ ಮಿತ್ರಶ್ಚ ವರುಣಶ್ಚಾಜಾಯೇತಾಂ** (ತೈ. ಬ್ರಾ. ೧-೧-೯-೨) **ಮಿತ್ರಶ್ಚ ವರುಣಶ್ಚ**। **ಧಾತಾಚಾರ್ಯೋಮಾ ಚ** (ತೈ. ಆ. ೧-೧೩-೩) ಎಂಬ ಎರಡು ಶ್ರುತಿವಾಕ್ಯಗಳ ಉದಾಹರಣೆಯನ್ನು ಕೊಟ್ಟಿರುವರು.

ಈ ಋಕ್ಕಿಗೆ ಯಾಸ್ಕರು ನಿರ್ವಚನವನ್ನು ಹೇಳಿರುವರು.—

> **ಭುರಣ್ಯುರಿತಿ ಕ್ಷಿಪ್ರನಾಮ**। **ಭುರಣ್ಯುಃ ಶಕುನಿರ್ಭೂರಿಮಧ್ವನಂ ನಯತಿ ಸ್ವರ್ಗಸ್ಯ ಲೋಕಸ್ಯಾಪಿ ವೋಳ್ಹಾ ತತ್ಸಂಪಾತೀ ಭುರಣ್ಯುರನೇನ ಪಾವಕಖ್ಯಾತೇನ**। **ಭುರಣ್ಯಂತಂ ಜನಾನ್ ಅನು**। **ತ್ವಂ ವರುಣಪಶ್ಯಸಿ**। **ತತ್ತೇ ವಯಂ ಸ್ತುಮ ಇತಿ ವಾಕ್ಯಶೇಷಃ**॥ (ನಿ. ೧೨-೨೨)

ಭುರಣ್ಯು ಶಬ್ದಕ್ಕೆ ಕ್ಷಿಪ್ರ-ಬೇಗನೆ, ಶ್ರೀಘ್ರವಾಗಿ ಎಂದರ್ಥವು. ವೇಗವಾಗಿ ಅಂತರಿಕ್ಷಮಾರ್ಗದಲ್ಲಿ ಸಂಚರಿಸುವವನು ಅಥವಾ ಸ್ವರ್ಗವನ್ನು ಧರಿಸಿರುವವನು ಅಥವಾ ಸ್ವರ್ಗವನ್ನು ಸಂರಕ್ಷಿಸತಕ್ಕವನು ಎಂದು **ಭುರಣ್ಯಂತಂ** ಎಂಬ ಶಬ್ದದ ಅರ್ಥವು ಎಲೈ ಸೂರ್ಯನೆ, ಇಂತಹ ನೀನು ಜನರನ್ನು ನೋಡುವೆ ಎಂದರೆ ಜನರು ನಿನ್ನನ್ನು ನೋಡುವರು. ಇಂತಹ ನಿನ್ನನ್ನು ಸ್ತೋತ್ರಮಾಡುವೆವು ಎಂದಭಿಪ್ರಾಯವು ಅಥವಾ ಮುಂದಿನ ಋಕ್ಕಿನಲ್ಲಿರುವ **ವಿ ವಿಷಿ** ಎಂಬ ಕ್ರಿಯಾಪದದೊಡನೆ ಸಮನ್ವಯವನ್ನು ಬೇಕಾದರೆ ಮಾಡಬಹುದು. ಎಂದರೆ **ಯೇನ ಚಕ್ಷಸಾ ವ್ಯೇಷಿ**—ಯಾವ ಪ್ರಕಾಶದಿಂದ ಉದಯಿಸುತ್ತೀಯೋ ಅಂತಹ ನೀನು ಎಂದು ಉತ್ತರ ಋಕ್ಕಿಗೆ ಸಂಬಂಧವನ್ನು ಹೇಳಬಹುದು.

॥ ವ್ಯಾಕರಣಪ್ರಕ್ರಿಯಾ ॥

ಚಕ್ಷಸಾ—ಚಕ್ಷಿಙ್ ವ್ಯಕ್ತಾಯಾಂ ವಾಚಿ ಧಾತು. **ಚಕ್ಷೇರ್ಬಹುಲಂ ಶಿಚ್ಚ** (ಉ. ಸೂ. ೪-೬೭೨) ಸೂತ್ರದಿಂದ ಅಸುನ್ **ಪ್ರತ್ಯಯ** ಬರುತ್ತದೆ. ಚಕ್ಷಸ್ ಎಂದು ಸಕಾರಾಂತ ಶಬ್ದವಾಗುತ್ತದೆ. ಶಿತ್ವಾಗುತ್ತದೆ ಎಂದುದರಿಂದ ಆರ್ಧಧಾತುಕಸಂಜ್ಞೆಯು ಬರುವುದಿಲ್ಲ. ಆದುದರಿಂದ **ಚಕ್ಷಿಙಃ ಖ್ಯಾಞ್** ಸೂತ್ರದಿಂದ ಖ್ಯಾಞಾದೇಶವೂ ಬರುವುದಿಲ್ಲ. ತೃತೀಯಾ ಏಕವಚನದಲ್ಲಿ ಚಕ್ಷಸಾ ಎಂದು ರೂಪವಾಗುತ್ತದೆ.

ಭುರಣ್ಯಂತಂ—ಭುರಣ ಧಾರಣಪೋಷಣಯೋಃ ಧಾತು. **ಕಂಡ್ವಾದಿ**. ಲಟ್ ವಿವಕ್ಷಾವಾಮಾಡಿದಾಗ ಶತೃಪ್ರತ್ಯಯ ಬರುತ್ತದೆ. ಭುರಣ್+ಅತ್ ಎಂದಿರುವಾಗ **ಕಂಡ್ವಾದಿಭ್ಯೋ ಯಕ್** (ಪಾ. ಸೂ. ೩-೧-೨೭) ಸೂತ್ರದಿಂದ ಯಕ್ ಪ್ರತ್ಯಯ ಬರುತ್ತದೆ. ಕರ್ತ್ರರ್ಥಕ ಸಾರ್ವಧಾತುಕ ಪರದಲ್ಲಿರುವುದರಿಂದ, ಶಪ್ ವಿಕರಣ ಪ್ರತ್ಯಯ ಬರುತ್ತದೆ. ಯಕ್ ಸನಾದಿಯಲ್ಲಿ ಸೇರಿರುವುದರಿಂದ **ಸನಾದ್ಯಂತಾ ಧಾತವಃ** ಸೂತ್ರದಿಂದ ಯಗಂತಕ್ಕೆ ಧಾತುಸಂಜ್ಞೆಯು ಇರುತ್ತದೆ. ಭುರಣ್ಯ+ಅ+ಅತ್ ಎಂದಿರುವಾಗ ಲಕ್ಷ್ಯಭೇದದಿಂದ ಎರಡುಸಾರಿ **ಅತೋಗುಣೆ** ಸೂತ್ರದಿಂದ ಪರರೂಪ ಬರುತ್ತದೆ. ಭುರಣ್ಯತ್ ಎಂಬ ತಾಂತಶಬ್ದದಮೇಲೆ ದ್ವಿತೀಯೈಕವಚನ ವಿವಕ್ಷಾವಾಮಾಡಿದಾಗ ಉಗಿತ್ವಾದುದರಿಂದ ಸನಾಗಮ ಬಂದರೆ **ಭುರಣ್ಯಂತಂ** ಎಂದು ರೂಪವಾಗುತ್ತದೆ. ಇಲ್ಲಿ ಶಪ್ ಅನುನಾತ್ತವಾಗುತ್ತದೆ. ಆದುಪದೇಶದ ಪರದಲ್ಲಿ ಲಸಾರ್ವಧಾತುಕವಾದ ಶತೃಪ್ರತ್ಯಯ ಬಂದುದರಿಂದ **ತಾಸ್ಯನುದಾತ್ತೇತ್**

ಸೂತ್ರದಿಂದ ಅನುದಾತ್ತವಾಗುತ್ತದೆ. ಆಗ ಯಕ್‌ಸ್ವರವೇ ಶಿಷ್ಟವಾಗುವುದರಿಂದ ಯಕ್ಕಿನಸ್ವರವೇ ಉಳಿಯುತ್ತದೆ. ಯಕಾರೋತ್ತರಾಕಾರವು ಉದಾತ್ತವಾಗುತ್ತದೆ.

ವರುಣ—ವೃಞ್ ವರಣೇ. ಧಾತು. ಸ್ವಾದಿ. ಇಲ್ಲಿ ಜಂತರ್ಭಾವಿತಣ್ಯರ್ಥವನ್ನು ಸ್ವೀಕರಿಸಬೇಕು ಣಿಜರ್ಥವನ್ನು (ಪ್ರೇರಣೆಯನ್ನು) ಧಾತ್ವರ್ಥದ ನಡುವೆ ಸೇರಿಸಿ ಹೇಳಬೇಕು. ಕೃವೃ ದಾರಿಭ್ಯಃ ಉನನ್ (ಉ. ಸೂ. ೩-೩೩) ಸೂತ್ರದಿಂದ ಉನನ್ ಪ್ರತ್ಯಯ ಬರುತ್ತದೆ. **ಸಾರ್ವಧಾತುಕಾರ್ಧಧಾತುಕಯೋಃ** ಸೂತ್ರದಿಂದ ಉನನ್ ಪ್ರತ್ಯಯ ಪರದಲ್ಲಿರುವಾಗ ಧಾತುವಿಗೆ ಗುಣ ಬರುತ್ತದೆ. ಋಕಾರದ ಸ್ಥಾನಕ್ಕೆ ಬರುವುದರಿಂದ ರ ಪರವಾಗಿ ಬಂದರೆ ವರುಣ ಎಂದು ರೂಪವಾಗುತ್ತದೆ. ರೇಫದ ಪರದಲ್ಲಿ ನಕಾರವಿರುವುದರಿಂದ **ಆಟ್‌ಕುಪ್ವಾಙ್** ಸೂತ್ರದಿಂದ ಣತ್ವ ಬರುತ್ತದೆ. ಸಂಬುದ್ಧಿಯಲ್ಲಿ ಹ್ರಸ್ವದ ಪರದಲ್ಲಿ ಸು ಬಂದಿರುವುದರಿಂದ **ಏಙಿಹ್ರಸ್ವಾತ್ಸಂಬುದ್ಧೇಃ** ಸೂತ್ರದಿಂದ ಸುವಿಗೆ ಲೋಪಬರುತ್ತದೆ. ಆಗ ವರುಣ ಎಂದು ರೂಪವಾಗುತ್ತದೆ. ಇದಕ್ಕೆ **ಅನುಂತ್ರಿತಸಂಜ್ಞೆ** ಇರುವುದರಿಂದ **ಆಮಂತ್ರಿತಸ್ಯ ಚ** ಎಂಬ ಎಂಟನೇ ಅಧ್ಯಾಯದ ಸೂತ್ರದಿಂದ ನಿಘಾತಸ್ವರ ಬರುತ್ತದೆ. ಇಲ್ಲಿ ವರುಣಶಬ್ದದಿಂದ ಸೂರ್ಯನೇ ಅಭಿಹಿತನಾಗುತ್ತಾನೆ. ಇದು ಬೇರೆಡೆಗಳಲ್ಲಿ ಶ್ರುತಿಗಳಲ್ಲಿ ಹೇಳಲ್ಪಟ್ಟಿದೆ. ತಸ್ಯೈ ಮಿತ್ರಶ್ಚ ವರುಣಶ್ಚಾಜಾಯೇತಾಮ್ (ತೈ. ಬ್ರಾ. ೧-೧-೯-೨) ಇತಿ। ತೈತ್ತಿರೀಯ ಬ್ರಾಹ್ಮಣದ ಈ ಮಂತ್ರದಲ್ಲಿ ವರುಣಶಬ್ದದಿಂದ ಅಭಿಹಿತನಾದವನು ಸೂರ್ಯನೇ. ಹಾಗೆಯೇ ತೈತ್ತಿರೀಯ ಆರಣ್ಯಕದಲ್ಲಿಯೂ-ಮಿತ್ರಶ್ಚ ವರಣಶ್ಚಾಧಾತಾಚಾರ್ಯವಾಚ (ತೈ. ಆ. ೧-೧೩-೩) ಎಂದು ಸೂರ್ಯನ ಪರ್ಯಾಯ ಪದಗಳಲ್ಲಿ ವರುಣಶಬ್ದವು ಪಠಿತವಾಗಿರುತ್ತದೆ.

॥ ಸಂಹಿತಾಪಾಠಃ ॥

ವಿ ದ್ಯಾಮೇಷಿ ರಜಸ್ಪೃಥ್ವಹಾ ಮಿಮಾನೋ ಅಕ್ತುಭಿಃ।
ಪಶ್ಯಞ್ಜನ್ಮಾನಿ ಸೂರ್ಯ ॥ ೭ ॥

॥ ಪದಪಾಠಃ ॥

ವಿ। ದ್ಯಾಂ। ಏಷಿ। ರಜಃ। ಪೃಥು। ಅಹಾ। ಮಿಮಾನಃ। ಅಕ್ತುಽಭಿಃ।
ಪಶ್ಯನ್। ಜನ್ಮಾನಿ। ಸೂರ್ಯ ॥ ೭ ॥

॥ ಸಾಯಣಭಾಷ್ಯಂ ॥

ಹೇ ಸೂರ್ಯ ತ್ವಂ ಪೃಥು ವಿಸ್ತೀರ್ಣಂ ರಜೋ ಲೋಕಂ। ಲೋಕಾ ರಜಾಂಸ್ಯುಚ್ಯಂತ ಇತಿ ಯಾಸ್ಕಃ। ನಿ. ೪-೧೯। ಕಂ ಲೋಕಂ। ದ್ಯಾಮಂತರಿಕ್ಷಲೋಕಂ। ವ್ಯೇಷಿ। ವಿಶೇಷೇಣ ಗಚ್ಛಸಿ। ಕಿಂ ಕುರ್ವನ್। ಅಹಾಹಾನ್ಯಕ್ತುಭೀ ರಾತ್ರಿಭಿಃ ಸಹ ಮಿಮಾನ ಉತ್ಪಾದಯನ್। ಆದಿತ್ಯಗತ್ಯಧೀನತ್ವಾದಹೋರಾತ್ರವಿಭಾಗಸ್ಯ। ತಥಾ ಜನ್ಮಾನಿ ಜನನವಂತಿ ಭೂತಜಾತಾನಿ ಪಶ್ಯನ್ ಪ್ರಕಾಶಯನ್। ರಜಸ್ಪೃ-

ಥ್ವಿತ್ಯತ್ರ ಚ್ಛಂದಸಿ ವಾಪ್ರಾವ್ಯೇಡಿತಯೋಃ । ಪಾ ೮-೩-೪೯ । ಇತಿ ವಿಸರ್ಜನೀಯಸ್ಯ ಸತ್ವಂ । ಅಹಃ । ಶೇಶ್ಛಂದಸಿ ಬಹುಲಮಿತಿ ಶೇರ್ಲೋಪಃ । ಮಿಮಾನಃ । ಮಾಙ್ ಮಾನೇ । ಜೌಹೋತ್ಯಾದಿಕಃ । ಶಾನಚಿ ಶ್ಲೌ ದ್ವಿರ್ಭಾವೇ ಭೃಞಾಮಿದಿತ್ಯಭ್ಯಾಸಸ್ಯೇತ್ವಂ । ಶ್ನಾಭ್ಯಸ್ತಯೋರಾತ ಇತ್ಯಾಕಾರಲೋಪಃ । ಅಭ್ಯಸ್ತಾನಾಮಾದಿರಿತ್ಯಭ್ಯಸ್ತಸ್ಯಾದ್ಯುದಾತ್ತತ್ವಂ । ಜನ್ಮಾನಿ । ಜನೀ ಪ್ರಾದುರ್ಭಾವೇ । ಅನ್ಯೇಭ್ಯೋಽಪಿ ದೃಶ್ಯಂತ ಇತಿ ಮನಿನ್ । ನಿತ್ತ್ವಾದಾದ್ಯುದಾತ್ತತ್ವಂ ॥

॥ ಪ್ರತಿಪದಾರ್ಥ ॥

ಸೂರ್ಯ—ಎಲೈ ಸೂರ್ಯದೇವನೇ । (ತ್ವಂ—ನೀನು) **ಅಹಾ**—ಹಗಲುಗಳನ್ನು । **ಅಕ್ತುಭಿಃ**—ರಾತ್ರಿಗಳೊಂದಿಗೆ । **ಮಿಮಾನಃ**—ಸೃಷ್ಟಿಸುತ್ತಾ (ಹಾಗೆಯೇ) । **ಜನ್ಮಾನಿ**—ಉತ್ಪನ್ನವಾದ ಸಕಲ ಭೂತಗಳನ್ನೂ । **ಪಶ್ಯನ್**—ಬೆಳಗಿಸುತ್ತ । **ಪೃಥು**—ವಿಸ್ತಾರವಾದ । **ದ್ಯಾಂ ರಜಃ**—ಅಂತರಿಕ್ಷಲೋಕದಲ್ಲಿ । **ವಿ ವಿಷಿ**—ಅಧಿಕವಾಗಿ ಸಂಚರಿಸುತ್ತೀಯೆ.

॥ ಭಾವಾರ್ಥ ॥

ಎಲೈ ಸೂರ್ಯದೇವನೇ ಹಗಲು ರಾತ್ರಿಗಳೆಲ್ಲವೂ ನಿನ್ನ ಗತ್ಯಧೀನಗಳು. ನಿನ್ನ ಸಂಚಾರಗಳಿಂದ ಅವುಗಳನ್ನು ಅನುಕ್ರಮವಾಗಿ ಉಂಟುಮಾಡುತ್ತ ಹಾಗೆಯೇ ಉತ್ಪನ್ನಗಳಾದ ಸಕಲ ಭೂತಗಳನ್ನೂ ಬೆಳಗಿಸುತ್ತ (ನೋಡುತ್ತಾ) ನೀನು ವಿಸ್ತಾರವಾದ ಅಂತರಿಕ್ಷಲೋಕದಲ್ಲಿ ಸರ್ವದಾ ಸಂಚರಿಸುತ್ತಿದ್ದೀಯೆ.

English Translation.

You travel through the vast space of the firmament, measuring days and nights and observing all creatures.

॥ ವಿಶೇಷ ವಿಷಯಗಳು ॥

ದ್ಯಾಂ ರಜಃ—ವಿಸ್ತಾರವಾದ ಅಂತರಿಕ್ಷಲೋಕವನ್ನು ರಜಃ ಎಂದರೆ ಲೋಕವು. ಲೋಕಾ ರಜಾಂಸ್ಯುಚ್ಯಂತೆ (ನಿ. ೪-೧೯) ಎಂದು ನಿರುಕ್ತ ವಚನವಿರುವುದು.

ಮಿಮಾನಃ—ಮಾಙ್ ಮಾನೇ । ಅಳತೆಮಾಡುತ್ತಾ ಎಂದರೆ ಅಹೋರಾತ್ರೆಗಳನ್ನು ಸಮನಾಗಿ ವಿಂಗಡಿಸುತ್ತಾ ಎಂದರ್ಥವು. ಅಹೋರಾತ್ರೆಗಳ ಪ್ರಮಾಣವು ಸಮನಾಗಿರುವುದರಿಂದ ಮಾಙ್ ಧಾತುವನ್ನು ಇಲ್ಲಿ ಉಪಯೋಗಿಸಿರುವುದು.

ಅಹಾ ಅಕ್ತುಭಿಃ—ಹಗಲುಗಳನ್ನು ರಾತ್ರೆಗಳೊಡನೆ ಸಮನಾಗಿ ಮಾಡುತ್ತಾ ಅಹೋರಾತ್ರೆಗಳ ಕಾಲಪ್ರಮಾಣವನ್ನು ಒಂದೇ ಸಮನಾಗಿರುವಂತೆ ಮಾಡುತ್ತಾ ಎಂದಭಿಪ್ರಾಯವು.

ಜನ್ಮಾನಿ—ಜನನವಂತಿ ಭೂತಜಾತಾನಿ—ಹುಟ್ಟಿದ ಅಥವಾ ಹುಟ್ಟುವ ಸಕಲ ಪ್ರಾಣಿಗಳನ್ನು; ಸೂರ್ಯನ ಕಣ್ಣಿಗೆ ಬೀಳದಿರುವ ಪ್ರಾಣಿಗಳು ಯಾವವೂ ಇರುವುದಿಲ್ಲ. ಆದುದರಿಂದ ಸೂರ್ಯನು ಎಲ್ಲವನ್ನು ನೋಡುವವನು **ಕರ್ಮಸಾಕ್ಷೀ** ಎಂದು ಹೇಳುವ ರೂಢಿಯಿರುವುದು.

ಈ ಋಕ್ಕಿಗೆ ಯಾಸ್ಕರ ನಿರುಕ್ತವು—"**ವ್ಯೇಷಿ ದ್ಯಾಂ ರಜಶ್ಚ ಪೃಥು ಮಹಾಂತಂ ಲೋಕಮಹಾನಿ ಚ ವಿಮಾನೋ ಅಕ್ತುಭೀ ರಾತ್ರಿಭಿಃ ಸಹ ಪಶ್ಯನ್ ಜನ್ಮಾನಿ ಜಾತಾನಿ ಸೂರ್ಯ**" ಎಂದಿರುವುದು. ಭಾಷ್ಯಕಾರರ ಅರ್ಥವಿವರಣೆಗೂ ಯಾಸ್ಕರ ನಿರ್ವಚನಕ್ಕೂ ಏನೂ ವ್ಯತ್ಯಾಸವಿಲ್ಲ.

॥ ವ್ಯಾಕರಣಪ್ರಕ್ರಿಯಾ ॥

ರಜಸ್ಪೃಥು—ರಜಃ ಪೃಥು ಎಂದಿರುವಾಗ **ಛಂದಸಿ ವಾಪ್ರೇಮ್ರೇಡಿತಯೋಃ** (ಪಾ. ಸೂ. ೮-೩-೪೯) ಪ್ರ ಶಬ್ದವನ್ನೂ ಆಮ್ರೇಡಿತವನ್ನೂ ಬಿಟ್ಟು ಕವರ್ಗ ಪವರ್ಗಗಳು ಪರದಲ್ಲಿರುವಾಗ ಛಂದಸ್ಸಿನಲ್ಲಿ ವಿಸರ್ಗಕ್ಕೆ ಸತ್ವವು ವಿಕಲ್ಪವಾಗಿ ಬರುತ್ತದೆ ಎಂಬುದರಿಂದ ಇಲ್ಲಿ ಪಕಾರ ಪರದಲ್ಲಿರುವುದರಿಂದ ಉಪಧ್ಮಾನೀಯವನ್ನು ಬಾಧಿಸಿ ವಿಸರ್ಗಕ್ಕೆ ಸಕಾರ ಬರುತ್ತದೆ. ರಜಸ್ಪೃಥು ಎಂದು ರೂಪವಾಗುತ್ತದೆ.

ಅಹಾ—ಅಹನ್ ಶಬ್ದದಮೇಲೆ ದ್ವಿತೀಯಾ ಬಹುವಚನ ಶಸ್ ಪರದಲ್ಲಿರುವಾಗ ಶಸಿಗೆ ನಪುಂಸಕಲಿಂಗದಲ್ಲಿ **ಶಶ್ಯಸೋಃ ಶಿಃ** ಎಂಬುದರಿಂದ ಶಿ ಆದೇಶವು ಬರುತ್ತದೆ. ಆದಕ್ಕೆ ಸರ್ವನಾಮಸ್ಥಾನ ಸಂಜ್ಞೆ ಇರುವುದರಿಂದ ಅದು ಪರದಲ್ಲಿರುವಾಗ ನಾಂತಾಂಗದ ಉಪಧೆಗೆ ದೀರ್ಘ ಬರುತ್ತದೆ. ಅಹಾನ್+ಇ ಎಂದಿರುವಾಗ **ಶೇಶ್ಛಂದಸಿ ಬಹುಲಂ** (ಪಾ. ಸೂ. ೬-೧-೭೦) ಸೂತ್ರದಿಂದ ವಿಭಕ್ತಿಯ ಶಿಗೆ ಲೋಪಬರುತ್ತದೆ. **ನಲೋಪಃ ಪ್ರಾತಿಪದಿಕಾಂತಸ್ಯ** ಸೂತ್ರದಿಂದ ನ ಲೋಪಬಂದರೆ ಅಹಾ ಎಂದು ರೂಪವಾಗುತ್ತದೆ.

ವಿಮಾನಃ—ಮಾಙ್ ಮಾನೆ ಧಾತು. ಜುಹೋತ್ಯಾದಿ. ಜುಹೋತ್ಯಾದುದರಿಂದ **ಆತ್ಮನೇ** ಪದಿ. **ಲಟಃ ಶತೃಶಾನಚಾ** ಸೂತ್ರದಿಂದ ಶಾನಚ್ ಪ್ರತ್ಯಯ ಬರುತ್ತದೆ. ಶಾನಚ್ ಪರದಲ್ಲಿರುವಾಗ ಶ್ಲು ವಿಕರಣ ಬರುತ್ತದೆ. **ಶ್ಲೌ** ಸೂತ್ರದಿಂದ ಧಾತುವಿಗೆ ದ್ವಿತ್ವ ಬರುತ್ತದೆ. ಮಾಮಾ+ಆನ ಎಂದಿರುವಾಗ **ಭೃಞಾಮಿತ್** (ಪಾ. ಸೂ. ೭-೪-೭೬) ಭೃಞ್ ಮಾಙ್ ಹಿಂಸಾರ್ಜನ ಮೂರು ಧಾತುಗಳ ಅಭ್ಯಾಸಕ್ಕೆ ಶ್ಲು ಪರದಲ್ಲಿರುವಾಗ ಇತ್ವವು ಬರುತ್ತದೆ ಎಂಬುದರಿಂದ ಅಭ್ಯಾಸಕ್ಕೆ ಇಕಾರ ಬರುತ್ತದೆ. ಮಿಮಾ+ಆನ ಎಂದಿರುವಾಗ **ಶ್ನಾಭ್ಯಸ್ತಯೋರಾತಃ** (ಪಾ. ಸೂ. ೬-೪-೧೧೨) ಎಂಬುದರಿಂದ ಧಾತುಗತ ಆಕಾರಕ್ಕೆ ಲೋಪ ಬರುತ್ತದೆ. ಮಿಮಾನ ಎಂದು ರೂಪವಾಗುತ್ತದೆ. **ಅಭ್ಯಸ್ತಾನಾಮಾದಿಃ** (ಪಾ. ಸೂ. ೬-೧-೧೮೯) ಇಟ್ಟಿಗಿನ್ನ ಅಜಾದಿ ಲಸಾರ್ವಧಾತುಕವು ಪರದಲ್ಲಿರುವಾಗ ಅಭ್ಯಸ್ತಗಳ ಆದಿಯು ಉದಾತ್ತವಾಗುತ್ತದೆ ಎಂಬುದರಿಂದ ಇಲ್ಲಿ ಶಾನಚ್ ಲಸಾರ್ವಧಾತುಕವಾದುದರಿಂದ ಧಾತೋಃ ಸ್ವರವನ್ನು ಬಾಧಿಸಿ ಆದ್ಯುದಾತ್ತವಾಗುತ್ತದೆ. ಮಿಮಾನಃ ಎಂಬುದು ಆದ್ಯುದಾತ್ತವಾದ ಪದ.

ಜನ್ಮಾನಿ—ಜನೀ ಪ್ರಾದುರ್ಭಾವೇ ಧಾತು. ದಿವಾದಿ. **ಪಞ್ಚಮ್ಯೋಬಹುಷು ದೃಶ್ಯಂತೇ** (ಪಾ ಸೂ. ೪-೩-೭೫) ಸೂತ್ರದಿಂದ ಈ ಧಾತುವಿಗೆ ಮನಿನ್ ಪ್ರತ್ಯಯ ಬರುತ್ತದೆ. ಜನ್ಮನ್ ಎಂದು ನಕಾರಾಂತ ಶಬ್ದವಾಗುತ್ತದೆ. ಇದಕ್ಕೆ ದ್ವಿತೀಯಾ ಬಹುವಚನ ಶಸ್ ಪರದಲ್ಲಿರುವಾಗ ಶಸಿಗೆ ನಪುಂಸಕದಲ್ಲಿ ಶಿ ಆದೇಶ ಬರುತ್ತದೆ. ಸರ್ವನಾಮಸ್ಥಾನಸಂಜ್ಞೆ ಇರುವುದರಿಂದ ನಾಂತವಾದ ಅಂಗದ ಉಪಧೆಗೆ ದೀರ್ಘ ಬರುತ್ತದೆ. ಜನ್ಮಾನಿ ಎಂದು ರೂಪವಾಗುತ್ತದೆ ಮನಿನ್ ಪ್ರತ್ಯಯವು ಸಿತ್ವಾದುದರಿಂದ **ಫಿಷ್ಫಿತ್ಸ್ವರಿತ್ಯಂ** ಸೂತ್ರದಿಂದ ಆದ್ಯುದಾತ್ತಸ್ವರವು ಬರುತ್ತದೆ. ಜನ್ಮಾನಿ ಎಂಬುದು ಆದ್ಯುದಾತ್ತವಾದ ಪದವಾಗುತ್ತದೆ.

॥ ಸಂಹಿತಾಪಾಠಃ ॥

ಸಪ್ತ ತ್ವಾ ಹರಿತೋ ರಥೇ ವಹನ್ತಿ ದೇವ ಸೂರ್ಯ।
ಶೋಚಿಷ್ಕೇಶಂ ವಿಚಕ್ಷಣ ॥ ೮ ॥

॥ ಪದಪಾಠಃ ॥

ಸಪ್ತ। ತ್ವಾ। ಹರಿತಃ। ರಥೇ। ವಹನ್ತಿ। ದೇವ। ಸೂರ್ಯ।
ಶೋಚಿಃಕೇಶಂ। ವಿಽಚಕ್ಷಣ ॥ ೮ ॥

॥ ಸಾಯಣಭಾಷ್ಯಂ ॥

ಹೇ ಸೂರ್ಯ ದೇವ ದ್ಯೋತಮಾನ ವಿಚಕ್ಷಣ ಸರ್ವಸ್ಯ ಪ್ರಕಾಶಯಿತಃ ಸಪ್ತ ಸಪ್ತಸಂಖ್ಯಾಕಾ ಹರಿತೋಽತ್ವಾ ರಸಹರಣಶೀಲಾ ರಶ್ಮಯೋ ವಾ ತ್ವಾ ತ್ವಾಂ ವಹಂತಿ। ಪ್ರಾಪಯಂತಿ। ಕೀದೃಶಂ। ರಥೇಽವಸ್ಥಿತಮಿತಿ ಶೇಷಃ। ತಥಾ ಶೋಚಿಷ್ಕೇಶಂ। ಶೋಚೀಂಷಿ ತೇಜಾಂಸ್ಯೇವ ಯಸ್ಮಿನ್ಕೇಶಾ ಇವ ದೃಶ್ಯಂತೇ ಸ ತಥೋಕ್ತಃ। ತಂ। ಹರಿತ ಇತ್ಯಾದಿತ್ಯಾಶ್ವಾನಾಂ ಸಂಜ್ಞಾ ಹರಿತ ಆದಿತ್ಯಸ್ಯೇತಿ ನಿಘಂಟಾವುಕ್ತತ್ವಾತ್ ॥ ಶೋಚಿಷ್ಕೇಶಂ। ಶುಚ ದೀಪ್ತೌ। ಅರ್ಚಿಶುಚಿಹೃಸೃಪಿತ್ಯಾದಿನೇಸಿಪ್ರತ್ಯಯೋಂತೋಽಂತೋದಾತ್ತಃ। ಸ ಏವ ಬಹುವ್ರೀಹೌ ಪೂರ್ವಪದಪ್ರಕೃತಿಸ್ವರತ್ವೇನ ಶಿಷ್ಯತೇ। ನಿತ್ಯಂ ಸಮಾಸೇಽನುತ್ತರಪದಸ್ಥಸ್ಯೇತಿ ವಿಸರ್ಜನೀಯಸ್ಯ ಷತ್ವಂ ॥

॥ ಪ್ರತಿಪದಾರ್ಥ ॥

ದೇವ—ಪ್ರಕಾಶಮಾನನಾಗಿಯೂ। ವಿಚಕ್ಷಣ—(ಸಮಸ್ತವನ್ನೂ) ಪ್ರಕಾಶಿಸುವಂತೆ ಮಾಡುವವನಾಗಿಯೂ ಇರುವ। ಸೂರ್ಯ—ಎಲೈ ಸೂರ್ಯದೇವನೇ,। ರಥೇ—ರಥದಲ್ಲಿ ಕುಳಿತಿರುವವನೂ (ಮತ್ತು)। ಶೋಚಿಷ್ಕೇಶಂ—ಕೂದಲುಗಳಂತಿರುವ ತೇಜಸ್ಸಿನಿಂದ ಕೂಡಿದವನೂ ಆದ। ತ್ವಾ—ನಿನ್ನನ್ನು। ಸಪ್ತ ಹರಿತಃ—ಹರಿತ್ತು ಗಳೆಂಬ ಏಳು ಕುದುರೆಗಳು ಅಥವಾ ಜಲವನ್ನು ಹೀರತಕ್ಕ ಕಿರಣಗಳು। ವಹಂತಿ—ಹೊರುತ್ತವೆ.

॥ ಭಾವಾರ್ಥ ॥

ಎಲೈ ಸೂರ್ಯದೇವನೇ, ನೀನು ಸ್ವಯಂಪ್ರಕಾಶಕನು ಮತ್ತು ಸಮಸ್ತವನ್ನೂ ಪ್ರಕಾಶಿಸುವಂತೆ ಮಾಡುವವನು. ನಿನ್ನತೇಜಸ್ಸೇ ನಿನಗೆ ತಲೆಯ ಕೂದಲುಗಳಂತೆ ಇರುತ್ತದೆ. ರಥದಲ್ಲಿ ಕುಳಿತಿರುವ ನಿನ್ನನ್ನು ಹರಿತ್ತುಗಳೆಂಬ ಏಳು ಕುದುರೆಗಳು ಅಥವಾ ರಸವನ್ನು ಹೀರತಕ್ಕ ಕಿರಣಗಳು ಹೊತ್ತುಕೊಂಡು ಸಂಚರಿಸುತ್ತವೆ.

English Translation.

Divine and light-spreading Surya, your seven horses (mares) bear you bright-haired in your car.

॥ ವಿಶೇಷ ವಿಷಯಗಳು ॥

ಸಪ್ತ ಹರಿತಃ—ಸೂರ್ಯನ ರಥಕ್ಕೆ ಏಳು ಕುದುರೆಗಳಿರುವವು. ಈ ಕುದುರೆಗಳು ಹರಿದ್ವರ್ಣಗಳೆಂದು ಪ್ರಸಿದ್ಧವು. **ಹರಿತ ಆದಿತ್ಯಸ್ಯ** (ನಿ. ೨-೨೮) ಎಂಬ ಯಾಸ್ಕರ ವಚನದಂತೆ ಸೂರ್ಯನ ಕುದುರೆಗಳಿಗೆ ಹರಿತಃ ಎಂದು ಹೆಸರು. **ಹರಿತಃ** ಎಂದರೆ ಕಿರಣಗಳೂ ಎಂದರ್ಥವಿರುವುದರಿಂದ ಸೂರ್ಯನ ಕಿರಣಗಳೇ ಸೂರ್ಯನ ಕುದುರೆಗಳೆಂದು ಹೇಳಲ್ಪಡುವವು. ವಾರದ ಏಳು ದಿನಗಳೇ ಏಳು ಕುದುರೆಗಳೆಂದು ಕೆಲವರು ಹೇಳುವರು.

ಶೋಚಿಷ್ಕೇಶಂ—**ಶುಚ ದೀಪ್ತೌ । ಶೋಚೀಂಷಿ ತೇಜಾಂಸ್ಯೇವ ಯಸ್ಮಿನ್ನೇಶಾ ಇವ ದೃಶ್ಯಂತೇ ಸ ಶೋಚಿಷ್ಕೇಶಃ** । ಪ್ರಕಾಶಮಾನವಾದ ಸೂರ್ಯಕಿರಣಗಳು ಕೂದಲಿನಂತೆ ಕಾಣುವುದರಿಂದ ಸೂರ್ಯನನ್ನು ಪ್ರಕಾಶಮಾನವಾದ ಕಿರಣಗಳುಳ್ಳವನು ಎಂಬರ್ಥವನ್ನು ಹೇಳುವುದಕ್ಕಾಗಿ **ಶೋಚಿಷ್ಕೇಶಂ** ಪ್ರಕಾಶಮಾನವಾದ ಕೂದಲುಗಳಿಂದ ಯುಕ್ತನಾದವನು ಎಂದು ಋಷಿಯು ವರ್ಣಿಸಿರುವನು.

॥ ವ್ಯಾಕರಣಪ್ರಕ್ರಿಯಾ ॥

ವಹಂತಿ—**ವಹ** ಪ್ರಾಪಣೆ ಧಾತು. ಭ್ವಾದಿ. ಪ್ರಥಮಪುರುಷ ಬಹುವಚನದಲ್ಲಿ ವಹಂತಿ ಎಂದು ರೂಪವಾಗುತ್ತದೆ. **ತಾಸ್ಯನುದಾತ್ತೇತ್** ಸೂತ್ರದಿಂದ **ತಿಙ್** ಪ್ರತ್ಯಯವು ಅನುದಾತ್ತವಾಗುತ್ತದೆ. **ಶಪ್** ಪಿತ್ತಾದುದರಿಂದ ಅನುದಾತ್ತವಾಗುತ್ತಿ. ಆಗ ಧಾತುವಿನ ಅಂತೋದಾತ್ತಸ್ವರವು ಉಳಿಯುತ್ತದೆ.

ಶೋಚಿಷ್ಕೇಶಮ್—ಶುಚ ದೀಪ್ತೌ ಧಾತು. ಭ್ವಾದಿ. **ಅರ್ಚಿಶುಚಿಹೃಷೀಟ್ಯಾದಿಷ್ವರ್ದಿಭ್ಯ ಇಸಿಃ** (ಉ. ಸೂ. ೨-೨೬೫) ಎಂಬುದರಿಂದ ಈ ಧಾತುವಿಗೆ ಇಸಿ ಪ್ರತ್ಯಯ ಬರುತ್ತದೆ. ಶುಚ್+ಇಸ್ ಎಂದಿರುವಾಗ ಧಾತುವಿಗೆ ಉಪಧಾಗುಣ ಬರುತ್ತದೆ. **ಶೋಚಿಸ್** ಎಂಬಲ್ಲಿ ರುತ್ವವಿಸರ್ಗಗಳು ಬಂದರೆ ಶೋಚಿಃ ಎಂದು ರೂಪವಾಗುತ್ತದೆ. ಶೋಚಿಃ ಎಂಬುದು ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ. ಶೋಚೀಂಷಿ ಕೇಶಾಃ ಯಸ್ಯ ಸಃ ಎಂದು ಬಹುವ್ರೀಹಿ ಸಮಾಸಮಾಡಿದಾಗ **ನಿತ್ಯಂ ಸಮಾಸೇಽನುತ್ತರಪದಸ್ಥಸ್ಯ** (ಪಾ. ಸೂ. ೮-೩-೪೫) ಸೂತ್ರದಿಂದ ಶೋಚಿಃ ಎಂಬಲ್ಲಿರುವ ಪೂರ್ವಪದದ ಇಸ್ ಸಂಬಂಧಿ ವಿಸರ್ಗಕ್ಕೆ ನಿತ್ಯವಾಗಿ ಷತ್ವ ಬರುತ್ತದೆ. ದ್ವಿತೀಯಾ ಏಕವಚನದಲ್ಲಿ ಶೋಚಿಷ್ಕೇಶಂ ಎಂದು ರೂಪವಾಗುತ್ತದೆ. ಬಹುವ್ರೀಹಿ ಸಮಾಸವಾದುದರಿಂದ **ಬಹುವ್ರೀಹೌ ಪ್ರಕೃತ್ಯಾ ಪೂರ್ವಪದಮ್** (ಪಾ. ಸೂ. ೬-೨-೧) ಸೂತ್ರದಿಂದ ಪೂರ್ವಪದ ಪ್ರಕೃತಿಸ್ವರವು ಸಮಾಸಸ್ವರಕ್ಕೆ ಅಪವಾದವಾಗಿ ಬರುತ್ತದೆ. ಶೋಚಿಷ್ಕೇಶಂ ಎಂಬಲ್ಲಿ **ಚ**ಕಾರೋತ್ತರ ಇಕಾರವು ಉದಾತ್ತವಾಗುತ್ತದೆ. ಅದರ ಮುಂದಿರುವ ಅನುದಾತ್ತವು ಸ್ವರಿತವಾಗುತ್ತದೆ.

॥ संहितापाठः ॥

अयुक्त सप्त शुन्ध्युवः सूरो रथस्य नप्त्यः।
ताभिर्याति स्वयुक्तिभिः ॥ ९ ॥

॥ पदपाठः ॥

अयुक्त । सप्त । शुन्ध्युवः । सूरः । रथस्य । नप्त्यः ।
ताभिः । याति । स्वयुक्तिऽभिः ॥ ९ ॥

॥ सायणभाष्यं ॥

सूरः सर्वस्य प्रेरकः सूर्यः शुन्ध्युवः शोधिका अश्वस्त्रियः तादृशीः सप्त सप्तसंख्याकाः अयुक्त । स्वरथे योजितवान् । कीदृश्यः । रथस्य नप्त्र्यः न पातयित्र्यः । याभिर्युक्ताभिः रथो याति न पतति तादृशीभिरित्यर्थः । एवंभूताभिस्ताभिरश्वस्त्रीभिः स्वयुक्तिभिः स्वकीययोजनेन रथे संबद्धाभिर्याति । यज्ञगृहं प्रत्यागच्छति । अतस्तस्मै हविर्दातव्यमिति वाक्यशेषः ॥ अयुक्त । युजिर् योगे । स्वरतेश्चार्तिकर्मभिप्राय आत्मनेपदं । लुङि च्लेः सिच् । ऐकाचे इतीट्प्रतिषेधः । लिङ्सिचावात्मनेपदेषु । पा. १-२-११ । इति सिचः कित्त्वाल्लघूपधगुणाभावः । रुधोरो रुधीति सिचः सकारलोपः । चोः कुरिति कुत्वं । शुन्ध्युवः । शुन्ध्वी विशुद्धौ । युजिमनिशुन्धिदसिजनिभ्यो युः । उ. ३-२० । इति युप्रत्ययः । शसि तन्वादीनां छन्दसि बहुलमुपसंख्यानं । पा. ६-४-३३-८ । इत्युवङादेशः । सूरः । षू प्रेरणे । सुसूधागृधिभ्यः क्रन् । उ. २-२४ । इति क्रन्प्रत्ययः । नित्त्वादाद्युदात्तत्वं । नप्त्र्यः । न पातयतीत्यर्थे नप्तृनेष्टृ । उ. २-९६ । इत्यादिनोणादिषु नप्तृशब्दस्तृजन्तो निपातितः । यन्नेभ्यो ङीबिति ङीप् । यणादेश उदात्तत्वे यणो ऽपरूपवार्तिकेति ङीपि उदात्तत्वं । सुपां सुपो भवन्तीति शसो जसादेशः । ततो यणादेश उदात्तस्वरितयोर्यण इति स्वरितत्वं । रेफलोपश्चान्दसः । उक्तं च । द्वौ चापरौ वर्णविकारनाशौ । का ६-३-८७ इति । शाखान्तरे तु नप्त्र्य इत्येव पठ्यते । स्वयुक्तिभिः । स्वकीयाः सूर्यसंबन्धिन्यो युक्त्यो योजनानि याभिः । बहुव्रीहौ पूर्वपदप्रकृतिस्वरत्वं ॥

॥ प्रतिपदार्थ ॥

सूरः—सकलवन्नू प्रेरिसतक्क सूर्यनु । रथस्य नप्त्र्यः—(संचरिसुवागलू) रथवन्नु केळक्के बीळिसदे इरतक्क । सप्त शुन्ध्युवः—परिशुद्धगळाद एळु हेण्णु कुदुरेगळन्नु

ಆಯುಕ್ತ—(ರಥಕ್ಕೆ) ಸೇರಿಸಿ ಕಟ್ಟಿದ್ದಾನೆ. | **ಸ್ವಯುಕ್ತಿಭಿಃ**—ತಾವೇ ಸ್ವತಃ ರಥಕ್ಕೆ ಸೇರಿಕೊಂಡಿರುವ | **ತಾಭಿಃ**— ಆ ಹೆಣ್ಣು ಕುದುರೆಗಳ ಸಹಾಯದಿಂದ | **ಯಾತಿ**— ಯಜ್ಞಗೃಹವನ್ನು ಕುರಿತು ಬರುತ್ತಾನೆ. (ಆದುದರಿಂದ ಅವನಿಗೆ ಹವಿಸ್ಸನ್ನರ್ಪಿಸಬೇಕು).

॥ ಭಾವಾರ್ಥ ॥

ಸಕಲವನ್ನೂ ಪ್ರೇರಿಸತಕ್ಕ ಸೂರ್ಯದೇವನು ತನ್ನ ರಥಕ್ಕೆ ಏಳು ಹೆಣ್ಣು ಕುದುರೆಗಳನ್ನು ಕಟ್ಟಿದ್ದಾನೆ. ಅವು ರಥವನ್ನು ಎಷ್ಟು ವೇಗವಾಗಿ ಎಳೆದುಕೊಂಡುಹೋದರೂ ಕೆಳಕ್ಕೆ ಬೀಳಿಸದೆ ಸುರಕ್ಷಿತವಾಗಿ ಎಳೆಯುತ್ತವೆ. ಈ ಪರಿಶುದ್ಧಗಳಾದ ಕುದುರೆಗಳು ತಾವೇ ಸ್ವತಃ ರಥಕ್ಕೆ ಹೂಡಿಕೊಂಡಿವೆ. ಈ ಕುದುರೆಗಳ ಸಹಾಯದಿಂದ ಸೂರ್ಯನು ಯಜ್ಞಗೃಹಕ್ಕೆ ಬರುತ್ತಾನೆ. ಆದುದರಿಂದ ಅವನಿಗೆ ಹವಿಸ್ಸನ್ನರ್ಪಿಸಬೇಕು.

English Translation.

The sun has yoked the seven horses that safely draw his chaiot and comes with those self-harnessed horses.

॥ ವಿಶೇಷ ವಿಷಯಗಳು ॥

ಶುಂಧ್ಯುವಃ—**ಶುಂಧ ವಿಶುದ್ಧೌ** | **ಶುಂಧ್ಯುರಾದಿತ್ಯೋ ಭವತಿ ಶೋಧನಾತ್** | **ತಸ್ಯ ಸ್ವಭೂತಾಃ** | ಸಕಲವನ್ನು ಶುದ್ಧಿಮಾಡುವವನಾದುದರಿಂದ ಆದಿತ್ಯನಿಗೆ ಶುಂಧ್ಯು ಎಂದು ಹೆಸರು. ಆ ಶುಂಧ್ಯುವಿನ (ಆದಿತ್ಯನ) ಸಂಬಂಧವಾದ ಕುದುರೆಗಳಿಗೆ ಶುಂಧ್ಯುವಃ ಎಂದು ಹೆಸರು. ಅಥವಾ **ಶೋಧಯಿತ್ರ್ಯಃ ಶುಂಧ್ಯುವಃ** ಸನುಷ್ಯವನ್ನೂ ಶುದ್ಧಿಮಾಡುವ ಕಿರಣಗಳು.

ಸೂರಃ—**ಸರ್ವಸ್ಯ ಪ್ರೇರಕಃ ಸೂರ್ಯಃ** | **ಸರ್ವರನ್ನೂ** ಪ್ರೇರಿಸುವ ಸೂರ್ಯನು.

ನಪ್ತ್ಯಃ—**ನ ಪಾತಯಿತ್ರ್ಯಃ** | **ಯಾಭಿರ್ಯುಕ್ತಾಭೀ ರಥೋ ಯಾತಿ ನ ಪತತಿ ತಾಃ** | ಬೀಳಿಸದಿರುವ; ಈ ಕುದುರೆಗಳನ್ನು ಕಟ್ಟುವುದರಿಂದ ರಥವು ಬೀಳದಂತೆ ಸುಗಮವಾಗಿ ಹೋಗುವುದರಿಂದ ಈ ಕುದುರೆಗಳಿಗೆ ನಪ್ತ್ಯಃ ರಥವನ್ನು ಕೆಡವದಿರುವ ಎಂದಭಿಪ್ರಾಯವು.

ಸ್ವಯುಕ್ತಿಭಿಃ—**ಸ್ವಕೀಯಯೋಜನೇನ ರಥೇ ಸಂಬದ್ಧಾಭಿಃ** | **ಸ್ವಯಮೇವ ಯಾ ರಥೇ ಯುಜ್ಯಂತೇ ತಾಃ ಸ್ವಯುಕ್ತಯಃ** | ಸೂರ್ಯನ ರಥಕ್ಕೆ ಇನ್ನೊಬ್ಬರ ಸಹಾಯವಿಲ್ಲದೆ ತಾವೇ ಹೂಡಿಕೊಳ್ಳುವವು ಎಂದರ್ಥವು. ಇಂದ್ರನ ಹರೀ ಎಂಬ ಕುದುರೆಗಳ ವಿಷಯದಲ್ಲಿಯೂ ಇದೇ ಅಭಿಪ್ರಾಯವು ಸೂಚಿತವಾಗಿರುವುದು.

॥ ವ್ಯಾಕರಣಪ್ರಕ್ರಿಯಾ ॥

ಆಯುಕ್ತ—ಯುಜಿರ್ ಯೋಗೆ ಧಾತು. ರುಧಾದಿ. ಸ್ವರಿತೇತ್ತಾದ ಧಾತು. **ಸ್ವರಿತಞಿತಃ ಶರ್ತ್ರ್ಭಿಪ್ರಾಯೇ ಕ್ರಿಯಾಫಲೆ** (ಪಾ. ಸೂ. ೧-೩-೭೨) ಸ್ವರಿತೇತ್ತಾಗಿಯೂ ಞಿತ್ತಾಗಿಯೂ ಇರುವ ಧಾತುಗಳ ಮೇಲೆ ಕ್ರಿಯಾದಿಂದುಂಟಾಗುವ ಫಲವು ಕರ್ತೃವನ್ನು ಹೊಂದುತ್ತಿರುವಾಗ ಆತ್ಮನೇಪದಪ್ರತ್ಯಯಗಳು ಬರುತ್ತವೆ.

ಇಲ್ಲಿ ಧಾತ್ವರ್ಥದಿಂದ ತೋರುವ ವ್ಯಾಪಾರಜನಿತವಾದ ಫಲವು **ಕರ್ತೃ**ವಾದ ಸೂರ್ಯನನ್ನು ಹೊಂದುವುದರಿಂದ ಧಾತುವು ಸ್ವರಿತೇತ್ತಾದುದರಿಂದ ಇದಕ್ಕೆ ಆತ್ಮನೇಪದ ಪ್ರತ್ಯಯಗಳು ಬರುತ್ತವೆ. ಲುಙ್ ಪ್ರಥಮಪುರುಷ ಏಕವಚನ ವಿವಕ್ಷಾವಾಗಿದಾಗ ತ ಎಂಬ ಪ್ರತ್ಯಯವು ಬರುತ್ತದೆ. ಯುಜ್+ತ ಎಂದಿರುವಾಗ ಚ್ಲಿ ವಿಕರಣ ಪ್ರತ್ಯಯ ಬರುತ್ತದೆ. **ಚ್ಲೇಃ ಸಿಚ್** ಸೂತ್ರದಿಂದ ಅದಕ್ಕೆ ಸಿಚಾದೇಶ ಬರುತ್ತದೆ. **ಏಕಾ ಚೆ ಉಪದೇಶೇಽನುದಾತ್ತೇತ್** (ಪಾ. ಸೂ. ೭-೨-೧೦) ಎಂಬುದರಿಂದ ಧಾತುವು ಏಕಾಚಾದುದರಿಂದ ಅದರ ಪರದಲ್ಲಿರುವ ವಲಾದಿ ಆರ್ಧಧಾತುಕವಾದ ಸಿಚಿಗೆ ಇಟ್ ಪ್ರತಿಷೇಧ ಬರುತ್ತದೆ. **ಪುಗಂತಲಘೂಪಧಸ್ಯ ಚೆ** ಸೂತ್ರದಿಂದ ಧಾತುವಿನ ಉಪಧೆಗೆ ಗುಣವು ಪ್ರಾಪ್ತವಾದರೆ **ಲಿಙ್ ಸಿಚಾವಾತ್ಮನೇಪದೇಷು** (ಪಾ. ಸೂ. ೧-೨-೧೧) ಇಕ್ಕಿನ ಪರದಲ್ಲಿ ಯಾವ ಹಲ್ ಇದೆಯೋ ಅದರ ಪರದಲ್ಲಿರುವ ಝಲಾದಿಯಾದ ಲಿಙ್ ಮತ್ತು ಆತ್ಮನೇಪದ ಪರದಲ್ಲಿರುವ ಸಿಚ್ ಪ್ರತ್ಯಯವೂ ಕಿತ್ತಾಗುತ್ತದೆ; ಎಂಬುದರಿಂದ ಇಲ್ಲಿ ಉಕಾರದ ಪರದಲ್ಲಿ ಹಲ್ ಇದ್ದು ಅದರ ಪರದಲ್ಲಿ ಆತ್ಮನೇಪದ ಪರದಲ್ಲಿರುವ ಸಿಚ್ ಬಂದುದರಿಂದ ಕಿದ್ವದ್ಭಾವವನ್ನು ಹೊಂದಿರುವುದರಿಂದ **ಕ್ಡಿತಿ ಚೆ** ಸೂತ್ರದಿಂದ ಗುಣ ನಿಷೇಧ ಬರುತ್ತದೆ. ಲಘೂಪಧಗುಣ ಬಾರದಿರುವಾಗ ಯುಜ್+ಸ್+ತ ಎಂದಿರುವಾಗ **ಝಲೋ ಝಲಿ** (ಪಾ. ಸೂ. ೮-೨-೨೬) ಝಲಿನ ಪರದಲ್ಲಿರುವ ಸಕಾರಕ್ಕೆ ಝಲ್ ಪರದಲ್ಲಿರುವಾಗ ಲೋಪ ಬರುತ್ತದೆ ಎಂಬುದರಿಂದ ಸಿಚಿನ ಸಕಾರಕ್ಕೆ ಲೋಪಬರುತ್ತದೆ ಯುಜ್+ತ ಎಂದಿರುವಾಗ ಝಲ್ ಪರದಲ್ಲಿರುವುದರಿಂದ **ಚೋಃ ಕುಃ** ಸೂತ್ರದಿಂದ ಜಕಾರಕ್ಕೆ ಕುತ್ವ ಬರುತ್ತದೆ. ಅದಕ್ಕೆ **ಖರಿ ಚೆ** ಸೂತ್ರದಿಂದ ಚರ್ತ್ವ ಬರುತ್ತದೆ. ಅಂಗಕ್ಕೆ ಲುಙ್ ನಿಮಿತ್ತವಾದ ಅಡಾಗಮ ಬಂದರೆ **ಅಯುಕ್ತ** ಎಂದು ರೂಪವಾಗುತ್ತದೆ. ಅತಿಙಂತದ ಪರದಲ್ಲಿರದಿದ್ದುದರಿಂದ ನಿಘಾತಸ್ವರ ಬರುವುದಿಲ್ಲ. ಧಾತುಸ್ವರದಿಂದ **ಆದ್ಯುದಾತ್ತ**ವಾಗುತ್ತದೆ.

ಶುಂಧ್ಯುವಃ—ಶುಂಧ ವಿಶುದ್ಧೌ ಧಾತು. ಭ್ವಾದಿ. **ಯೆಜಿಮನಿಶುಂಧಿದಸಿಜನಿಭ್ಯೋ ಯುಃ** (ಉ. ಸೂ. ೩-೩೦) ಎಂಬುದರಿಂದ ಇದಕ್ಕೆ ಯು ಪ್ರತ್ಯಯ ಬರುತ್ತದೆ. ಆಗ ಶುಂಧ್ಯು ಎಂದು ಉಕಾರಾಂತ ಶಬ್ದವಾಗುತ್ತದೆ. ಇದಕ್ಕೆ ದ್ವಿತೀಯಾ ಬಹುವಚನ ಶಸ್ ಪರದಲ್ಲಿರುವಾಗ ಶುಂಧ್ಯು+ಅಸ್ ಎಂಬಲ್ಲಿ ಪೂರ್ವಸವರ್ಣದೀರ್ಘವು ಪ್ರಾಪ್ತವಾದರೆ **ತನ್ವಾದೀನಾಂ ಛಂದಸಿ ಬಹುಲಮುಪಸಂಖ್ಯಾನಮ್** (ಪಾ. ಸೂ. ೬-೪-೭೭ ವಾ. ೧) ಎಂಬುದರಿಂದ ಉವಙಾದೇಶ ಬರುತ್ತದೆ. ಶುಂಧ್ಯುವಸ್ ಎಂದು ಇರುವಾಗ ರುತ್ವವಿಸರ್ಗ ಬಂದರೆ ಶುಂಧ್ಯುವಃ ಎಂದು ರೂಪವಾಗುತ್ತದೆ.

ಸೂರಃ—ಷೂ ಪ್ರೇರಣೆ ಧಾತು. ತುದಾದಿ. **ಧಾತ್ವಾದೇಃ ಷಃ ಸಃ** ಸೂತ್ರದಿಂದ ಷಕಾರಕ್ಕೆ ಸಕಾರ ಬರುತ್ತದೆ. ಇದಕ್ಕೆ **ಸುಸೂಧಾಗೃದಿಭ್ಯಃ ಕ್ರನ್** (ಉ. ಸೂ. ೨-೧೮೨) ಎಂಬುದರಿಂದ ಕ್ರನ್ ಪ್ರತ್ಯಯ ಬರುತ್ತದೆ. ಕ್ರನ್ನಿನಲ್ಲಿ ರೇಫ ಉಳಿಯುತ್ತದೆ. ಸೂರ ಎಂದು ರೂಪವಾಗುತ್ತದೆ. ನಿತ್ ಪ್ರತ್ಯಯಾಂತವಾದುದರಿಂದ **ಞ್ನಿತ್ಯಾದಿರ್ನಿತ್ಯಂ** ಸೂತ್ರದಿಂದ ಆದ್ಯುದಾತ್ತವಾಗುತ್ತದೆ.

ನಪ್ತ್ಯಃ—ನ ಪಾತಯತಿ ಇತಿ ನಪ್ತಾ ಕೆಡಹುವುದಿಲ್ಲವೆಂದರ್ಥ. ಈ ಅರ್ಥದಲ್ಲಿ **ನಪ್ತೃನೇಷ್ಟೃತ್ವಷ್ಟೃ** (ಉ. ಸೂ. ೨-೯೫) ಎಂಬುದರಿಂದ ಉಣಾದಿಯಲ್ಲಿ ನಪ್ತೃಶಬ್ದವು ತೃಜಂತವಾಗಿ ನಿಪಾತಿತವಾಗಿದೆ. ಇದಕ್ಕೆ ಸ್ತ್ರೀತ್ವವಿವಕ್ಷಾವಾಗಿದಾಗ **ಋನ್ನೇಭ್ಯೋಙೀಪ್** ಸೂತ್ರದಿಂದ ಙೀಪ್ ಬರುತ್ತದೆ. ನಪ್ತೃ+ಈ ಎಂದಿರುವಾಗ ಯಣಾದೇಶ ಬರುತ್ತದೆ. **ಉದಾತ್ತಯಣೋ ಹಲ್ಪೂರ್ವಾತ್** (ಪಾ. ಸೂ. ೬-೧-೧೭೪) ಉದಾತ್ತಸ್ಥಾನದಲ್ಲಿ ಯಾವ ಯಣ್ ಬಂದಿರುತ್ತದೆಯೋ ಮತ್ತು ಅದಕ್ಕೆ ಹಲ್ ಪೂರ್ವವಾಗಿದೆಯೋ ಅದರ

ಪರದಲ್ಲಿರುವ ನದಿಯೂ ಶಸಾದಿವಿಭಕ್ತಿಯೂ ಉದಾತ್ತವಾಗುತ್ತದೆ; ಎಂಬುದರಿಂದ ಇಲ್ಲಿ ನಪ್ತ್ರೀ ಎಂಬಲ್ಲಿ ಯಣ್ ಬಂದಾಗ ಪೂರ್ವದಲ್ಲಿ ಶಕಾರವಿರುವುದರಿಂದ ಯಣಿನ ಪರದಲ್ಲಿರುವ ನದೀ ಸಂಜ್ಞೆಯುಳ್ಳ ಈಕಾರವು ಉದಾತ್ತವಾಗುತ್ತದೆ. **ವ್ಯತ್ಯಯೋಬಹುಲಂ** ಎಂಬ ಸೂತ್ರದಿಂದ ಸಿದ್ಧವಾದ ಸುಪಾಂ ಸುಪೋ ಭವಂತಿ ಎಂಬುದರಿಂದ ಇಲ್ಲಿ ದ್ವಿತೀಯಾ ಬಹುವಚನದ ಶಸಿಗೆ ಬದಲಾಗಿ ಪ್ರಥಮಾ ಜಸ್ ಬರುತ್ತದೆ. ನಪ್ತ್ರೀ+ಅಸ್ ಎಂದಿರುವಾಗ **ದೀರ್ಘೋಜ್ಜಸಿಚ** ಸೂತ್ರದಿಂದ ಪೂರ್ವಸವರ್ಣ ದೀರ್ಘ ನಿಷೇಧವಿರುವುದರಿಂದ ಪುನಃ ಯಣಾದೇಶ ಬರುತ್ತದೆ **ಉದಾತ್ತಸ್ವರಿತಯೋರ್ಯಣಃ ಸ್ವರಿತೋನುದಾತ್ತಸ್ಯ** (ಪಾ. ಸೂ. ೮-೪-೪) ಉದಾತ್ತಸ್ಥಾನದಲ್ಲಿಯೂ ಸ್ವರಿತ ಸ್ಥಾನದಲ್ಲಿಯೂ ಯಾವ ಯಣ್ ಬಂದಿರುತ್ತದೆಯೋ ಅದರ ಪರದಲ್ಲಿರುವ ಅನುದಾತ್ತವು ಸ್ವರಿತವಾಗುತ್ತದೆ ಎಂಬುದರಿಂದ ಇಲ್ಲಿ ಉದಾತ್ತವಾದ ಙೀಪಿಗೆ ಯಣಾದೇಶ ಬಂದಿರುವುದರಿಂದ ಪರದಲ್ಲಿರುವ ಅನುದಾತ್ತವಾದ ವಿಭಕ್ತಿಯು ಸ್ವರಿತವಾಗುತ್ತದೆ. ಇಲ್ಲಿ ಯಣಾದೇಶ ಬಂದಾಗ ನಪ್ತ್ರೀ ಎಂದು ರೇಫವು ಶ್ರುತವಾಗಿದೆ. ಅದಕ್ಕೆ ಲೋಪವನ್ನು ಛಾಂದಸವಾಗಿ ಹೇಳಬೇಕು. ಅದುದರಿಂದ ಮಂತ್ರದಲ್ಲಿ ನಪ್ತ್ಯಃ ಎಂದು ರೇಫರಹಿತವಾಗಿ ಪಠಿತವಾಗಿದೆ. ಇದನ್ನೇ **ದ್ವೌ ಚಾಪರೌ ವರ್ಣವಿಕಾರನಾಶೌ** (ಶಾ. ೬-೩-೧೦೯) ಎಂದು ಹೇಳಿರುತ್ತಾರೆ. ಛಂದಸ್ಸಿನಲ್ಲಿ ನಿರ್ನಿಮಿತ್ತವಾಗಿಯೇ ವರ್ಣವಿಕಾರವೂ ವಿನಾಶವೂ (ಲೋಪವೂ) ಬರುತ್ತದೆ ಎಂದು ತಾತ್ಪರ್ಯ. ಶಾಖಾಂತರದಲ್ಲಿಯಾದರೋ ನಪ್ತ್ರ್ಯಃ ಎಂದು ರೇಫ ಘಟಿತವಾಗಿಯೇ ಪಠಿತವಾಗಿದೆ.

ಸ್ವಯುಕ್ತಿಭಿಃ—ಸ್ವಕೀಯಾಃ ಸೂರ್ಯಸಂಬಂಧಿನ್ಯೋ ಯುಕ್ತಯೋ ಯೋಜನಾನಿ ಯಾಸಾಂ ತಾಃ ಸ್ವಯುಕ್ತಯಃ । ಸ್ವ ಶಬ್ದದಿಂದ ಸೂರ್ಯನನ್ನು ತೆಗೆದುಕೊಳ್ಳಬೇಕು. ಯುಕ್ತಿ ಎಂದರೆ ಇಲ್ಲಿ ಸೇರಿಸುವಿಕೆ ಎಂದು ಸ್ವೀಕರಿಸಬೇಕು. ಹೀಗೆ ಇಲ್ಲಿ ಸೂರ್ಯಸಂಬಂಧವಾದ ಯೋಜನೆಗಳುಳ್ಳ ಆಶ್ವಗಳು ಎಂದು ಅನ್ಯ ಪದಾರ್ಥಪ್ರಧಾನವಾದ ಬಹುವ್ರೀಹಿ ಸಮಾಸವನ್ನು ಸ್ವೀಕರಿಸಬೇಕು. **ಬಹುವ್ರೀಹೌ ಪ್ರಕೃತ್ಯಾ ಪೂರ್ವಪದಂ** ಎಂಬುದರಿಂದ ಪೂರ್ವಪದ ಪ್ರಕೃತಿಸ್ವರವು ಬರುತ್ತದೆ.

॥ ಸಂಹಿತಾಪಾಠಃ ॥

ಉದ್ವಯಂ ತಮಸಸ್ಪರಿ ಜ್ಯೋತಿಷ್ಪಶ್ಯಂತ ಉತ್ತರಂ ।
ದೇವಂ ದೇವತ್ರಾ ಸೂರ್ಯಮಗನ್ಮ ಜ್ಯೋತಿರುತ್ತಮಂ ॥ ೧೦ ॥

॥ ಪದಪಾಠಃ ॥

ಉತ್ । ವಯಂ । ತಮಸಃ । ಪರಿ । ಜ್ಯೋತಿಃ । ಪಶ್ಯಂತಃ । ಉತ್ತರಂ ।
ದೇವಂ । ದೇವತ್ರಾ । ಸೂರ್ಯಂ । ಅಗನ್ಮ । ಜ್ಯೋತಿಃ । ಉತ್ತಮಂ ॥ ೧೦ ॥

॥ ಸಾಯಣಭಾಷ್ಯಂ ॥

ಅವಭೃಥೇಷ್ಟ್ಯಾ ಹೋತ್ರಕಾ ಜಲಾನ್ನಿಷ್ಕ್ರಮ್ಯೋದ್ವಯಂ ತಮಸಸ್ಪರೀತಿ ಮಂತ್ರಂ ಬ್ರೂಯುಃ । ತಥಾ ಚ ಪತ್ನೀಸಂಯಾಜೈಶ್ಚರಿತ್ವೇತಿ ಖಂಡೇ ಸೂತ್ರಿತಂ । ಉದ್ವಯಂ ತಮಸಸ್ಪರೀತ್ಯುದೇತ್ಯ । ಆ. ೬-೧೩ । ಇತಿ ॥

ವಯಮನುಷ್ಠಾತಾರಸ್ತಮಸಸ್ಪರಿ ತಮಸ ಉಪರಿ ರಾತ್ರೇರೂರ್ಧ್ವಂ ವರ್ತಮಾನಂ ತಮಸಃ ಪಾಪಾತ್ಪರ್ಯುಪರಿ ವರ್ತಮಾನಂ ವಾ । ಪಾಪರಹಿತಮಿತ್ಯರ್ಥಃ । ತಥಾ ಚಾಮ್ನಾಯತೇ । ಉದ್ವಯಂ ತಮಸಸ್ಪರೀತ್ಯಾಹ ಪಾಪ್ಮಾ ವೈ ತಮಃ ಪಾಪ್ಮಾನಮೇವಾಸ್ಮಾದಪ ಹಂತಿ । ತೈ. ಸಂ. ೫-೧-೪-೬ । ಇತಿ । ಜ್ಯೋತಿಸ್ತೇಜಸ್ವಿನಮುತ್ತರಮುದ್ಗತತರಮುತ್ಕೃಷ್ಟತರಂ ವಾ ದೇವತ್ರಾ ದೇವೇಷು ಮಧ್ಯೇ ದೇವಂ ದಾನಾದಿಗುಣಯುಕ್ತಂ ಸೂರ್ಯಂ ಪಶ್ಯಂತಃ ಸ್ತುತಿಭಿರ್ಹವಿರ್ಭಿಶ್ಚೋಪಾಸೀನಾಃ ಸಂತ ಉತ್ತಮಮುತ್ಕೃಷ್ಟತಮಂ ಜ್ಯೋತಿಃ ಸೂರ್ಯರೂಪಮಗನ್ಮ । ಪ್ರಾಪ್ನವಾಮ । ತಥಾ ಚ ಶ್ರೂಯತೇ । ಅಗನ್ಮ ಜ್ಯೋತಿರುತ್ತಮಮಿತ್ಯಾಹಾಸೌ ವಾ ಆದಿತ್ಯೋ ಜ್ಯೋತಿರುತ್ತಮಮಾದಿತ್ಯಸ್ಯೈವ ಸಾಯುಜ್ಯಂ ಗಚ್ಛತೀತಿ । ಯುಕ್ತಂ ಚೈತತ್ । ತಂ ಯಥಾ ಯಥೋಪಾಸತೇ ತದೇವ ಭವಂತೀತಿ ಶ್ರುತ್ಯಂತರಾತ್ ॥ ತಮಸಸ್ಪರಿ । ಪಂಚಮ್ಯಾಃ ಪರಾವಧ್ಯರ್ಥ ಇತಿ ವಿಸರ್ಜನೀಯಸ್ಯ ಸತ್ವಂ । ಜ್ಯೋತಿಷ್ಪಶ್ಯಂತಃ । ಇಸುಸೋಃ ಸಾಮರ್ಥ್ಯೇ । ಪಾ. ೮-೩-೪೪ । ಇತಿ ವಿಸರ್ಜನೀಯಸ್ಯ ಷತ್ವಂ । ವ್ಯಪೇಕ್ಷಾಲಕ್ಷಣಂ ಸಾಮರ್ಥ್ಯಂ ತತ್ಕ್ರಿಯಾಂಗೀಕ್ರಿಯತೇ । ದೇವತ್ರಾ । ದೇವಮನುಷ್ಯಪುರುಷಪುರುಮರ್ತ್ಯೇಭ್ಯೋ ದ್ವಿತೀಯಾಸಪ್ತಮ್ಯೋರ್ಬಹುಲಂ । ಪಾ. ೫-೪-೫೬ । ಇತಿ ಸಪ್ತಮ್ಯರ್ಥೇ ತ್ರಾಪ್ರತ್ಯಯಃ । ಪ್ರತ್ಯಯಸ್ವರಃ । ಅಗನ್ಮ । ಛಂದಸಿ ಲುಙ್ಲಙ್ಲಿಟ ಇತಿ ಪ್ರಾರ್ಥನಾಯಾಂ ಲಙ್ ಬಹುಲಂ ಛಂದಸೀತಿ ಶಪೋ ಲುಕ್ । ಮ್ವೋಶ್ಚ । ಪಾ ೮-೨-೬೫ । ಇತಿ ಧಾತೋರ್ಮಕಾರಸ್ಯ ನಕಾರಃ । ಆಡಾಗಮ ಉದಾತ್ತಃ । ಪಾದಾದಿತ್ವಾನ್ನಿಘಾತಾಭಾವಃ । ಉತ್ತಮಂ । ತಮಸಃ ಪಿತ್ವಾದನುದಾತ್ತತ್ವೇ ಪ್ರಾಪ್ತ ಉತ್ತಮಶಬ್ದತ್ತಮೌ ಸರ್ವತ್ರೇತ್ಯುಂಛಾದಿಷು ಪಾಠಾದಂತೋದಾತ್ತತ್ವಂ ।

॥ ಪ್ರತಿಪದಾರ್ಥ ॥

ವಯಂ—(ಯಜ್ಞಾನುಷ್ಠಾನಮಾಡುವ) ನಾವು । **ತಮಸಸ್ಪರಿ**— ಕತ್ತಲಿನಿಂದ ತುಂಬಿದ ರಾತ್ರಿಯಾದ ನಂತರ ಬರತಕ್ಕವನೂ ಅಥವಾ **ಪಾಪರಹಿತನೂ** । **ಜ್ಯೋತಿಃ**—ತೇಜಸ್ವಿಯೂ । **ಉತ್ತರಂ**—ಉದಯಿಸಿ ಮೇಲಕ್ಕೆ ಬರತಕ್ಕವನೂ ಅಥವಾ ಅತ್ಯಂತ ಶ್ರೇಷ್ಠನೂ । **ದೇವತ್ರಾ**—ದೇವತೆಗಳ ನಡುವೆ । **ದೇವಂ**—ದಾನಾದಿಗುಣಗಳಿಂದ ಕೂಡಿದವನೂ ಆದ । **ಸೂರ್ಯಂ**—ಸೂರ್ಯದೇವನನ್ನು । **ಪಶ್ಯಂತಃ**—(ಸ್ತುತಿಗಳಿಂದಲೂ ಹವಿಸ್ಸುಗಳಿಂದಲೂ) ಪೂಜಿಸುತ್ತ । **ಉತ್ತಮಂ**—ಅತ್ಯಂತ ಶ್ರೇಷ್ಠನಾದ । **ಜ್ಯೋತಿಃ**—(ಸೂರ್ಯರೂಪದಲ್ಲಿರುವ) ಜ್ಯೋತಿಯನ್ನು । **ಅಗನ್ಮ**—ಸೇರುವೆವು.

॥ ಭಾವಾರ್ಥ ॥

ಕತ್ತಲುರೂಪವಾದ ರಾತ್ರಿಯು ಕಳೆದಮೇಲೆ ಪಾಪರಹಿತನೂ ತೇಜಸ್ವಿಯೂ ಅತ್ಯಂತ ಶ್ರೇಷ್ಠನೂ ಆದ ಸೂರ್ಯನು ಉದಯಿಸಿ ಮೇಲಕ್ಕೆ ಬರುತ್ತಾನೆ. ದೇವತೆಗಳ ನಡುವೆ ದಾನಾದಿಗುಣಗಳಿಂದ ಕೂಡಿರತಕ್ಕ ಈ ಸೂರ್ಯದೇವನನ್ನು ನಾವು ಸ್ತುತಿಗಳಿಂದಲೂ ಹವಿಸ್ಸುಗಳಿಂದಲೂ ಪೂಜಿಸುತ್ತ ಈ ರೂಪದಲ್ಲಿರುವ ಜ್ಯೋತಿಯನ್ನು ಸೇರುವೆವು.

English Translation.

Beholding the up-rising light above the darkness, we approach the divine Sun among the gods, the excellent light.

॥ ವಿಶೇಷ ವಿಷಯಗಳು ॥

ಅವಭೃಥೇಷ್ಟಿಯಲ್ಲಿ ಹೋತೃವರ್ಗದ ಋತ್ವಿಕ್ಕುಗಳು ಸ್ನಾನಮಾಡಿ ನೀರಿನಿಂದ ಹೊರಕ್ಕೆ ಬರುವಾಗ **ಉದ್ವಯಂ ತಮಸಸ್ಪರಿ** ಎಂಬ ಋಕ್ಕನ್ನು ಪಠಿಸುವರು. ಈ ವಿಷಯವು ಆಶ್ವಲಾಯನ ಶ್ರೌತಸೂತ್ರದ **ತಥಾ ಚೆಪತ್ನೀಸಂಯಾಜ್ಯೈಶ್ಚರಿತ್ವಾ** ಎಂಬ ಖಂಡದಲ್ಲಿ **ಉದ್ವಯಂ ತಮಸಸ್ಪರಿತ್ಯುದೇತ್ಯ** ಎಂಬ ಸೂತ್ರದಿಂದ ವಿವೃತವಾಗಿರುವುದು (ಆ. ೬-೧೩).

ಈ ಋಕ್ಕಿಗೂ ಸಹ ಭಾಷ್ಯಕಾರರು ಎರಡು ವಿಧವಾದ ಅರ್ಥಗಳನ್ನು ಹೇಳಿರುವರು.

ತಮಸಸ್ಪರಿ—**ತಮಸ ಉಪರಿ ರಾತ್ರೇರೂರ್ಧ್ವಂ**—ಕತ್ತಲೆಯು ಹೋಗಿ ಬೆಳಕಾದ ಮೇಲೆ, ರಾತ್ರಿಯು ಕಳೆದು ಪ್ರಾತಃಕಾಲವಾದ ಮೇಲೆ ಅಥವಾ **ತಮಸಃ ಪಾಪಾತ್ಪರ್ಯುಪರಿ ವರ್ತಮಾನಂ ಪಾಪರಹಿತಮಿತ್ಯರ್ಥಃ**—ಅಜ್ಞಾನವೆಂಬ ಕತ್ತಲೆಯು ಪರಿಹಾರವಾದ ಬಳಿಕ ಅಥವಾ ಪಾಪವು ನಾಶವಾದ ಬಳಿಕ, ಪಾಪರಹಿತವಾದ ಎಂದರ್ಥವು. ಈ ವಿಷಯದಲ್ಲಿ **ಉದ್ವಯಂ ತಮಸಸ್ಪರೀತ್ಯಾಹ ಪಾಪ್ಮಾ ವೈ ತಮಃ ಪಾಪ್ಮಾನಮೇವಾಸ್ಮಾದಪಹಂತಿ**—(ತೈ. ಸಂ. ೫-೧-೮-೬) ಎಂದು ತೈತ್ತಿರೀಯಶ್ರುತಿವಾಕ್ಯವಿರುವುದು.

ದೇವತ್ರಾ—ದೇವತೆಗಳ ಮಧ್ಯದಲ್ಲಿ. ಇದು ದ್ವಿತೀಯಾ ವಿಭಕ್ತ್ಯಂತಪದವು ಸಪ್ತಮ್ಯರ್ಥದಲ್ಲಿ ಉಪಯೋಗಿಸಲ್ಪಟ್ಟಿರುವುದು. ಈ ವಿಷಯದಲ್ಲಿ **ದೇವಮನುಷ್ಯಪುರುಷಪುರುಮರ್ತ್ಯೇಭ್ಯೋ ದ್ವಿತೀಯಾಸಪ್ತಮ್ಯೋರ್ಬಹುಲಂ** (ಪಾ. ಸೂ. ೫-೪-೫೬) ಎಂದು ಪಾಣಿನಿಯ ಸೂತ್ರವಿರುವುದು.

ಅಗನ್ಮ ಜ್ಯೋತಿರುತ್ತಮಂ—ಉತ್ಕೃಷ್ಟವಾದ ಜ್ಯೋತಿಸ್ವರೂಪನಾದ ಸೂರ್ಯನನ್ನು (ಸೂರ್ಯಲೋಕವನ್ನು ಅಥವಾ ಸಾಯುಜ್ಯಪದವಿಯನ್ನು) ಹೊಂದುವೆವು. ಈ ವಿಷಯದಲ್ಲಿ **ಸ್ವರ್ಗೋ ವೈ ಲೋಕಃ । ಸೂರ್ಯೋ ಜ್ಯೋತಿರುತ್ತಮಃ । ಸ್ವರ್ಗ ಏವ ಲೋಕೇಽನ್ತತಃ ಪ್ರತಿತಿಷ್ಠತಿ ।** (ಶತ ಬ್ರಾ. ೧೨-೯-೨-೮) ಎಂಬ ಶತಪಥಬ್ರಾಹ್ಮಣಶ್ರುತಿವಾಕ್ಯವೂ, **ಅಗನ್ಮ ಜ್ಯೋತಿರುತ್ತಮಮಿತ್ಯಾಹಾಸೌ ವಾ ಆದಿತ್ಯೋ ಜ್ಯೋತಿರುತ್ತಮಮಾದಿತ್ಯಸ್ಯೈವ ಸಾಯುಜ್ಯಂ ಗಚ್ಛತಿ** ಎಂಬ ತೈತ್ತಿರೀಯ ಶ್ರುತಿವಾಕ್ಯವೂ ಈ ವಿಷಯವನ್ನು ಸಮರ್ಥಿಸುವವು.

॥ ವ್ಯಾಕರಣಪ್ರಕ್ರಿಯಾ ॥

ತಮಸಸ್ಪರಿ—ತಮಸಃ ಪರಿ ಎಂದಿರುವಾಗ ಪಂಚಮ್ಯಾಃ ಪರಾವಧ್ಯರ್ಥೇ (ಪಾ. ಸೂ ೮-೩-೫೧) ಮೇಲೆ ಎಂಬ ಅರ್ಥಕೊಡುವ ಪರಿ ಶಬ್ದವು ಪರದಲ್ಲಿರುವಾಗ ಪಂಚಮಿಯ ವಿಸರ್ಗಕ್ಕೆ ಸತ್ವವು ಬರುತ್ತದೆ ಎಂಬುದರಿಂದ ವಿಸರ್ಗಕ್ಕೆ ಸಕಾರ ಬರುತ್ತದೆ. ತಮಸಸ್ಪರಿ ಎಂದು ರೂಪವಾಗುತ್ತದೆ.

ಜ್ಯೋತಿಷ್ಪಶ್ಯಂತಃ—ಜ್ಯೋತಿಃ ಪಶ್ಯಂತಃ ಎಂದಿರುವಾಗ, **ಇಸುಸೋಃ ಸಾಮರ್ಥ್ಯೇ** (ಪಾ. ಸೂ. ೮-೩-೪೪) ನ್ಯಾಯೇಕ್ಷಾಲಕ್ಷಣಸಾಮರ್ಥ್ಯವು ತೋರುವಾಗ ಕವರ್ಗಪವರ್ಗಗಳು ಪರದಲ್ಲಿರುವ ಇಸ್ ಉಸ್ ಸಂಬಂಧಿ ವಿಸರ್ಗಕ್ಕೆ ಷತ್ವವು ಬರುತ್ತದೆ ಎಂಬುದರಿಂದ ಇಸ್ ಸಂಬಂಧಿ ವಿಸರ್ಗವಿರುವುದರಿಂದ ಷತ್ವ ಬರುತ್ತದೆ.

ಆಕಾಂಕ್ಷಾದಿಗಳಿಂದ ಪರಸ್ಪರ ಅನ್ವಯವೇ ವ್ಯಪೇಕ್ಷಾಲಕ್ಷಣಸಾಮರ್ಥ್ಯ. ಇಲ್ಲಿ ಕ್ರಿಯಾದಲ್ಲಿ ಕರ್ಮತಾಸಂಬಂಧದಿಂದ ಜ್ಯೋತಿಃಶಬ್ದಾರ್ಥಕ್ಕೆ ಅನ್ವಯವಿರುವುದರಿಂದ ಕ್ರಿಯಾಕಾರಕಭಾವ ಸಂಬಂಧವಿರುತ್ತದೆ.

ದೇವತ್ರಾ—ದೇವಮನುಷ್ಯಪುರುಮರ್ತ್ಯೇಭ್ಯೋ ದ್ವಿತೀಯಾಸಪ್ತಮ್ಯೋರ್ಬಹುಲಂ (ಪಾ. ಸೂ. ೫-೪-೫೬) ದ್ವಿತೀಯಾಂತವಾದ ಮತ್ತು ಸಪ್ತಮ್ಯಂತವಾದ ಈ ಶಬ್ದಗಳ ಮೇಲೆ ತ್ರಾ ಎಂಬ ಪ್ರತ್ಯಯ ಬರುತ್ತದೆ. ಎಂಬುದರಿಂದ ಇಲ್ಲಿ ದೇವೇಷು ಎಂಬರ್ಥದಲ್ಲಿ ದೇವಶಬ್ದದಮೇಲೆ ತ್ರಾ ಪ್ರತ್ಯಯವು ಬರುತ್ತದೆ. ದೇವತ್ರಾ ಎಂದು ರೂಪವಾಗುತ್ತದೆ. ಆದ್ಯುದಾತ್ತವಾದ ಪ್ರತ್ಯಯಸ್ವರದಿಂದ ದೇವತ್ರಾ ಎಂಬುದು ಅಂತೋದಾತ್ತವಾದ ಪದವಾಗುತ್ತದೆ.

ಅಗನ್ಮ—ಗಮಲೃ ಗತೌ ಧಾತು. ಭ್ವಾದಿ. **ಛಂದಸಿ ಲುಙ್‌ಲಙ್‌ಲಿಟಃ** ಸೂತ್ರದಿಂದ ಪ್ರಾರ್ಥನಾರ್ಥದಲ್ಲಿ ಲಙ್ ಬರುತ್ತದೆ. ಉತ್ತಮಪುರುಷಬಹುವಚನ ವಿವಕ್ಷಾಮಾಡಿದಾಗ ಮಸ್ ಪ್ರತ್ಯಯ ಬರುತ್ತದೆ. **ನಿತ್ಯಂಙಿತಃ** (ಪಾ. ಸೂ. ೩-೪-೯೯) ಸೂತ್ರದಿಂದ ಮಸ್ಸಿನ ಸಕಾರಕ್ಕೆ ಲೋಪ ಬರುತ್ತದೆ. **ಬಹುಲಂ ಛಂದಸಿ** (ಪಾ. ಸೂ. ೩-೪-೭೬) ಸೂತ್ರದಿಂದ ವಿಕರಣಪ್ರತ್ಯಯವಾದ ಶಪ್ ಎಂಬುದಕ್ಕೆ ಲೋಪ ಬರುತ್ತದೆ. ಅಂಗಕ್ಕೆ ಲಙ್ ನಿಮಿತ್ತಕವಾದ ಅಡಾಗಮ ಬರುತ್ತದೆ. ಅಗಮ್+ಮ ಎಂದಿರುವಾಗ **ಮ್ವೋಶ್ಚ** (ಪಾ. ಸೂ. ೮-೩-೬೫) ಮಾಂತವಾದ ಧಾತುವಿನ ಮಕಾರಕ್ಕೆ ಮಕಾರ ಮತ್ತು ನಕಾರ ಪರದಲ್ಲಿರುವಾಗ ನಕಾರಾದೇಶ ಬರುತ್ತದೆ. ಎಂಬುದರಿಂದ ಇಲ್ಲಿ ಗಮಿನ ಮಕಾರಕ್ಕೆ ಮಕಾರ ಪರದಲ್ಲಿರುವುದರಿಂದ ನಕಾರ ಬಂದರೆ ಅಗನ್ಮ ಎಂದು ರೂಪವಾಗುತ್ತದೆ — ಅಡುದಾತ್ತಃ ಎಂದು ಉದಾತ್ತವಾಗಿಯೇ ವಿಧಾನಮಾಡಿರುವುದರಿಂದ ಅಗನ್ಮ ಎಂಬುದು ಆದ್ಯುದಾತ್ತವಾದ ಪದವಾಗುತ್ತದೆ. ಪಾದದ ಆದಿಯಲ್ಲಿ ಬಂದಿರುವುದರಿಂದ **ಅಪಾದಾದೌ** ಎಂದು ನಿಷೇಧಮಾಡಿರುವುದರಿಂದ **ತಿಙ್ಙತಿಙಃ** ಸೂತ್ರದಿಂದ ನಿಘಾತಸ್ವರವು ಬರುವುದಿಲ್ಲ.

ಉತ್ತಮಮ್—ಅತಿಶಯಾರ್ಥದಲ್ಲಿ ತಮಪ್ ಪ್ರತ್ಯಯ ಬರುತ್ತದೆ. ತಮಪ್ ಪಿತ್ತಾದುದರಿಂದ **ಅನುದಾತ್ತೌ ಸುಪ್‌ಪಿತೌ** ಸೂತ್ರದಿಂದ ಅನುದಾತ್ತಸ್ವರವು ಪ್ರಾಪ್ತವಾಗುತ್ತದೆ. ಆದರೆ **ಉಂಛಾದೀನಾಂಚ** (ಪಾ. ಸೂ. ೬-೧-೧೬೦) ಈ ಗಣಪಠಿತವಾದವುಗಳಿಗೆ ಅಂತೋದಾತ್ತಸ್ವರ ಬರುತ್ತದೆ ಎಂಬುದರಿಂದ ಅಂತೋದಾತ್ತಸ್ವರ ಬರುತ್ತದೆ. ಉಂಛಾದಿಗಣದಲ್ಲಿ ಉತ್ತಮಶಶ್ವತ್ತಮೌ ಸರ್ವತ್ರ ಎಂದು ಪಾಠಮಾಡಿರುತ್ತಾರೆ. ಆದುದರಿಂದ ಉತ್ತಮಂ ಎಂಬುದು ಅಂತೋದಾತ್ತವಾದಶಬ್ದವಾಗುತ್ತದೆ.

॥ ಸಂಹಿತಾಪಾಠಃ ॥

ಉದ್ಯನ್ನದ್ಯ ಮಿತ್ರಮಹ ಆರೋಹನ್ನುತ್ತರಾಂ ದಿವಂ।
ಹೃದ್ರೋಗಂ ಮಮ ಸೂರ್ಯ ಹರಿಮಾಣಂ ಚ ನಾಶಯ ॥೧೧॥

॥ ಪದಪಾಠಃ ॥

ಉತ್ಽಯನ್ । ಅದ್ಯ । ಮಿತ್ರಽಮಹಃ । ಆ್ಽರೋಹನ್ । ಉತ್ಽತರಾಂ । ದಿವಂ ।
ಹೃತ್ಽರೋಗಂ । ಮಮ । ಸೂರ್ಯ । ಹರಿಮಾಣಂ । ಚ । ನಾಶಯ ॥ ೧೧ ॥

॥ ಸಾಯಣಭಾಷ್ಯಂ ॥

ಉದ್ಯನ್ನಿತ್ಯಯಂ ತೃಚೋ ರೋಗಶಾಂತ್ಯರ್ಥಃ । ತಥಾ ಚಾನುಕ್ರಮಣ್ಯಾಮುಕ್ತಂ । ಆಂತ್ಯಸ್ತೃಚೋ ರೋಗಘ್ನ ಉಪನಿಷದಿತಿ । ಯುಕ್ತಂ ಚೈತತ್ । ಯಸ್ಮಾದನೇನ ತೃಚೇನ ತ್ವಗ್ದೋಷಶಾಂತಯೇ ಪ್ರಸ್ಕಣ್ವಃ ಸೂರ್ಯಮಸ್ತೌತ್ । ತೇನ ತೃಚೇನ ಸ್ತುತಃ ಸೂರ್ಯಸ್ತಮೃಷಿಂ ರೋಗಾನ್ನಿರಗಮಯತ್ । ತಸ್ಮಾದಿದಾನೀಮಪಿ ರೋಗಶಾಂತಯೇಽನೇನ ತೃಚೇನ ಸೂರ್ಯ ಉಪಾಸನೀಯಃ । ತದುಕ್ತಂ ಶೌನಕೇನ । ಉದ್ಯನ್ನದ್ಯೇತಿ ಮಂತ್ರೋಽಯಂ ಸೌರಃ ಪಾಪಪ್ರಣಾಶನಃ । ರೋಗಘ್ನಶ್ಚ ವಿಷಘ್ನಶ್ಚ ಭುಕ್ತಿಮುಕ್ತಿಫಲಪ್ರದ ಇತಿ ॥

ಹೇ ಸೂರ್ಯ ಸರ್ವಸ್ಯ ಪ್ರೇರಕ ಮಿತ್ರಮಹಃ ಸರ್ವೇಷಾಮನುಕೂಲದೀಪ್ತಿಯುಕ್ತ ಅದ್ಯಾಸ್ಮಿನ್ಕಾಲ ಉದ್ಯನ್ ಉದಯಂ ಗಚ್ಛನ್ ಉತ್ತರಾಮುದ್ಗತತರಾಂ ದಿವಮಂತರಿಕ್ಷಮಾರೋಹನ್ ಅಭಿಮುಖ್ಯೇನ ಪ್ರಾಪ್ನುವನ್ । ಯದ್ವಾ । ದಿವಮಂತರಿಕ್ಷಮುತ್ತರಾಮಾರೋಹನ್ ಉತ್ಕರ್ಷೇಣ ಪ್ರಾಪ್ನುವನ್ । ಏವಂವಿಧಸ್ತ್ವಂ ಮಮ ಹೃದ್ರೋಗಂ ಹೃದಯೇಗತಮಾಂತರಂ ರೋಗಂ ಹರಿಮಾಣಂ ಶರೀರಗತಕಾಂತಿಹರಣಶೀಲಂ ಬಾಹ್ಯಂ ರೋಗಂ । ಯದ್ವಾ । ಶರೀರಗತಂ ಹರಿದ್ವರ್ಣಂ ರೋಗಪ್ರಾಪ್ತಂ ವೈವರ್ಣ್ಯಮಿತ್ಯರ್ಥಃ । ತದುಭಯಮಪಿ ನಾಶಯ । ಮಾಂ ಸ್ತೋತಾರಮುಭಯವಿಧಾದ್ರೋಗಾನ್ಮೋಚಯೇತ್ಯರ್ಥಃ॥ ಮಿತ್ರಮಹಃ । ಮಿತ್ರಮನುಕೂಲಂ ಮಹಸ್ತೇಜೋ ಯಸ್ಯಾಸೌ । ಆಮಂತ್ರಿತನಿಘಾತಃ । ಉತ್ತರಾಂ । ಉದಿತ್ಯನೇನೋಪಸರ್ಗೇಣ ಸ್ವಸಂಪೃಷ್ಟಧಾತ್ವರ್ಥೋ ಲಕ್ಷ್ಯತೇ । ತಸ್ಮಾದಾತಿಶಾಯನಿಕಸ್ತರಪ್ಪ್ರತ್ಯಯಃ । ಪ್ರಥಮಪಕ್ಷೇಂತರಿಕ್ಷನಿಶೇಷಣತ್ವೇನ ದ್ರವ್ಯಪ್ರಕರ್ಷಪ್ರತೀತೇರಾಂ ನ ಭವತಿ । ದ್ವಿತೀಯೇ ತ್ವಾರೋಹಣಕ್ರಿಯಾಯಾಃ ಪ್ರಕರ್ಷೋ ಗಮ್ಯತ ಇತಿ ಕಿಮೇತ್ತಿಙವ್ಯಯೇಘಾದಾಮ್ಬದ್ರವ್ಯಪ್ರಕರ್ಷೇ । ಪಾ. ೫-೪-೧೧ । ಇತಿ ಅಮುಃ । ಪ್ರಥಮಪಕ್ಷೇ ಟಾಪ್ತರಪೋಃ ಪಿತ್ತ್ವಾದನುದಾತ್ತತ್ವ ಉಪಸರ್ಗಸ್ವರ ಏವ ಶಿಷ್ಯತೇ । ದ್ವಿತೀಯೇ ತ್ವಾಮ್ಪ್ರತ್ಯಯಸ್ಯ ಸತಿ ಶಿಷ್ಟತ್ವಾತ್ತಸ್ಯೈವ ಸ್ವರೇ ಪ್ರಾಪ್ತೇ ವ್ಯತ್ಯಯೇನಾದ್ಯುದಾತ್ತತ್ವಂ । ವೃಷಾದಿರ್ವಾ ದ್ರಪ್ಪವ್ಯಃ । ಸಹ್ಯಾಕೃತಿಗಣಃ । ಹೃದ್ರೋಗಂ । ವಾ ಶೋಕಸ್ಯೇಙ್ರೋಗೇಷು । ಪಾ. ೬-೩-೫೧ । ಇತಿ ಹೃದಯಶಬ್ದಸ್ಯ ಹೃದಾದೇಶಃ । ಮಮ । ಯುಷ್ಮದಸ್ಮದೋರ್ಜಸೀಶ್ಯಾದ್ಯುದಾತ್ತತ್ವಂ । ಹರಿಮಾಣಂ । ಹೃಞ್ ಹರಣೇ । ಜನಿಹೃಭ್ಯಾಮಿಮನಿನ್ । ಉ. ೪-೧೪೮ । ಇತ್ಯೌಣಾದಿಕ ಇಮನಿನ್ಪ್ರತ್ಯಯಃ । ವ್ಯತ್ಯಯೇನಾಂತೋದಾತ್ತತ್ವಂ । ಯದ್ವಾ । ಹರಿಚ್ಛಬ್ದಸ್ಯ ವರ್ಣವಾಚಿತ್ವಾದ್ವರ್ಣದೃಢಾದಿಭ್ಯಃ ಷ್ಯಞ್ಚ । ಪಾ. ೫-೧-೧೨೩ । ಇತಿ ಚಕಾರಾದಿಮನಿನ್ಪ್ರತ್ಯಯಃ । ಇಷ್ಟೇಮೇಯಃಸ್ವಿತ್ಯನುವೃತ್ತೌ ಟೇರಿತಿ ಟಿಲೋಪಃ ॥

॥ ಪ್ರತಿಪದಾರ್ಥ ॥

ಮಿತ್ರಮಹಃ—(ಲೋಕಕ್ಕೆಲ್ಲ) ಅನುಕೂಲವಾಡತಕ್ಕ ತೇಜಸ್ಸುಳ್ಳ । **ಸೂರ್ಯ**—(ಸಮಸ್ತಕ್ಕೂ) ಪ್ರೇರಕನಾದ ಎಲೈ ಸೂರ್ಯನೇ । **ಅದ್ಯ**—ಈಗ । **ಉದ್ಯನ್**—ಉದಯಿಸುತ್ತ । **ಉತ್ತರಾಂ ದಿವಂ ಆರೋಹನ್**—ಅತ್ಯಂತ ಎತ್ತರದಲ್ಲಿರತಕ್ಕ ಅಂತರಿಕ್ಷವನ್ನು ಹತ್ತುತ್ತ । ಅಥವಾ **ದಿವಂ ಉತ್ತರಾಂ ಆರೋಹನ್**-ಅಂತರಿಕ್ಷವನ್ನು ಅತಿಶಯನಾಗಿ ಹತ್ತುತ್ತ ॥ **ಮಮ**—ನನ್ನ । **ಹೃದ್ರೋಗಂ**—ಹೃದಯಗತವಾದ (ದೇಹದ ಒಳಗಿನ) ರೋಗವನ್ನೂ । **ಹರಿಮಾಣಂ**—(ದೇಹದ ಲಾವಣ್ಯವನ್ನು) ಅಪಹರಿಸುವ (ಹೊರಗಿನ) ರೋಗವನ್ನೂ । ಅಥವಾ ವಿಕಾರವಾದ ಹಳದಿ ಬಣ್ಣವನ್ನುಂಟುಮಾಡುವ (ಕಾಮಾಲೆ, ತೊನ್ನು ಮುಂತಾದ) ರೋಗವನ್ನೂ । **ನಾಶಯ**—ನಾಶಮಾಡು.

॥ ಭಾವಾರ್ಥ ॥

ಎಲೈ ಸೂರ್ಯನೇ, ನೀನು ಲೋಕಕ್ಕೆಲ್ಲ ಅನುಕೂಲವಾಡತಕ್ಕ ತೇಜಸ್ಸಿನಿಂದ ಕೂಡಿ, ಎಲ್ಲಕ್ಕೂ ಪ್ರೇರಕನಾಗಿದ್ದೀಯೆ. ಈಗ ಉದಯಿಸಿ ಅತ್ಯಂತ ಎತ್ತರದಲ್ಲಿರತಕ್ಕ ಅಂತರಿಕ್ಷವನ್ನು ಹತ್ತುತ್ತಾ ನನ್ನ ಹೃದಯಗತವಾದ ಒಳಗಿನ ರೋಗವನ್ನೂ ಹಳದಿ ಬಣ್ಣವನ್ನುಂಟುಮಾಡುವ ಕಾಮಾಲೆ, ತೊನ್ನು ಮುಂತಾದ ದೇಹದ ಹೊರಗಿನ ರೋಗಗಳನ್ನೂ ನಾಶಮಾಡು.

English Translation.

O Sun, rising to-day and mounting into the highest heaven you look radiant with benevolent light; remove the sickness of my heart and the yellowness (of my body).

॥ ವಿಶೇಷ ವಿಷಯಗಳು ॥

ಉದ್ಯನ್ನದ್ಯ—ಎಂಬ ಈ ಋಕ್ಕೂ ಮುಂದಿನ ಎರಡು ಋಕ್ಕುಗಳೂ ರೋಗಶಾಂತ್ಯರ್ಥವಾಗಿ ಪಠಿಸಲ್ಪಡುವವೆಂದು ಪ್ರಸಿದ್ಧವಾಗಿರುವುದು. ಅನುಕ್ರಮಣಿಕೆಯಲ್ಲಿಯೂ ಸಹ **ಆಂತ್ಯಸ್ತೃಚೋ ರೋಗಘ್ನ ಉಪನಿಷದಿತಿ** ಎಂದರೆ **ಉದುತ್ಯಂ** ಎಂಬ ಈ ಸೂಕ್ತದ ಕಡೆಯ ಮೂರು ಋಕ್ಕುಗಳು ರೋಗನಾಶಕಗಳು ಎಂದು ಹೇಳಿರುವುದು. ಇದು ಯುಕ್ತವಾಗಿಯೇ ಇರುವುದು. ಏಕೆಂದರೆ ಈ ಸೂಕ್ತದ ಋಷಿಯಾದ ಪ್ರಸ್ಕಣ್ವಋಷಿಯು ಈ ಮೂರು ಋಕ್ಕುಗಳಲ್ಲಿ ಚರ್ಮಸಂಬಂಧವಾದ ರೋಗವನ್ನು ಪರಿಹಾರಮಾಡಬೇಕೆಂದು ಸೂರ್ಯನನ್ನು ಪ್ರಾರ್ಥಿಸಲು ಸೂರ್ಯನು ಅದರಂತೆ ಆ ಋಷಿಯ ರೋಗವನ್ನು ನಾಶಮಾಡಿದನು. ಆದುದರಿಂದ ಈ ಮೂರು ಋಕ್ಕುಗಳಿಂದ ಸೂರ್ಯನನ್ನು ಪ್ರಾರ್ಥನೆಮಾಡಿದರೆ ಈಗಲೂ ರೋಗ ನಿವಾರಣೆಯಾಗುವುದು. ಈ ವಿಷಯವನ್ನು **ಉದ್ಯನ್ನದ್ಯೇತಿ ಮಂತ್ರೋಕ್ತಯಂ ಸೌರಃ ಪಾಪಪ್ರಣಾಶನಃ । ರೋಗಘ್ನಶ್ಚ ವಿಷಘ್ನಶ್ಚ ಭುಕ್ತಿಮುಕ್ತಿಫಲಪ್ರದ ಇತಿ**—ಎಂದರೆ ಉದ್ಯನ್ನದ್ಯ ಎಂಬ ಸೂರ್ಯದೇವತಾಕವಾದ ಈ ಮೂರು ಋಕ್ಕುಗಳು, ಪಠಿಸಿದವರ ಪಾಪಗಳನ್ನು ನಾಶಮಾಡುವುದಲ್ಲದೆ ಸಕಲರೋಗಗಳನ್ನೂ ವಿಷವನ್ನೂ ನಾಶಮಾಡಿ ಇಹಲೋಕ ಪರಲೋಕ ಸೌಖ್ಯಗಳಾದ ಭುಕ್ತಿಮುಕ್ತಿಗಳನ್ನು ಕೊಡುವವು ಎಂದು ಶೌನಕಮಹರ್ಷಿಯು ಹೇಳಿರುವರು. ಬೃಹದ್ದೇವತಾ ಎಂಬ ಗ್ರಂಥದಲ್ಲಿಯೂ **ರೋಗಘ್ನಸ್ತೃಚೆ ಉತ್ತಮಃ** (ಬೃ. ದೆ. ೩-೧೧೩) ಎಂದು ಹೇಳಿರುವುದು.

उद्यन्नद्य—ಈಗತಾನೇ ಉದಯಿಸಿರುವ ಸೂರ್ಯನು ಪೂರ್ವದಿಕ್ಕಿನ ಅಧೋಭಾಗದಲ್ಲಿ ಉದಯಿಸಿ ಕ್ರಮವಾಗಿ **आरोहन् उत्तरां दिवं** ಎಂದರೆ ಸ್ವರ್ಗದ (ಅಂತರಿಕ್ಷದ) ಮೇಲುಭಾಗಕ್ಕೆ ಹೋಗುವನು.

मित्रमहः—**मित्रमनुकूलं महस्तेजो यस्यासौ । सर्वेषामनुकूल-दीप्तियुक्त इत्यर्थः**—ಸರ್ವರಿಗೂ ಅನುಕೂಲವಾದ ಅಥವಾ ಅತ್ಯವಶ್ಯಕವಾದ ಕಾಂತಿಯಿಂದ (ಬೆಳಕಿನಿಂದ) ಕೂಡಿರುವವನು.

उत्तरां दिवं आरोहन्—**उद्गततरां दिवमारोहन्**—ಉದಯಾನಂತರ ಕ್ರಮ ಕ್ರಮವಾಗಿ ಅಂತರಿಕ್ಷದಲ್ಲಿ ಮೇಲುಮೇಲಕ್ಕೆ ಹೋಗುವನು. ಸೂರ್ಯನು ಪ್ರಾತಃಕಾಲದಲ್ಲಿ ಅಂತರಿಕ್ಷದ ಕೆಳಭಾಗದಲ್ಲಿ ಉದಯಿಸಿ ಕ್ರಮೇಣ ಮಧ್ಯಾಹ್ನಕಾಲಕ್ಕೆ ಅಂತರಿಕ್ಷದ ಮೇಲುಭಾಗಕ್ಕೆ ಬರುವನೆಂದಭಿಪ್ರಾಯವು.

हृद्रोगं—ಹೃದಯಸಂಬಂಧವಾದ ರೋಗವನ್ನು.

हरिमाणं—ಶರೀರದಲ್ಲಿ ಉಂಟಾದ ಹಳದೀಬಣ್ಣದಿಂದ ಕೂಡಿದ ಒಂದು ವಿಧವಾದ ಚರ್ಮರೋಗ ಅಥವಾ ಈ ಶಬ್ದಕ್ಕೆ ತೊನ್ನು (Leprosy) ಎಂಬ ಅರ್ಥವನ್ನು ಕೆಲವರು ಹೇಳುವರು. ಈ ವಿಧವಾದ ಚರ್ಮರೋಗವನ್ನೂ ಪರಿಹರಿಸಬೇಕೆಂದು ಪ್ರಸ್ಕಣ್ವಋಷಿಯು ಸೂರ್ಯನನ್ನು ಪ್ರಾರ್ಥಿಸಿರುವನು.

॥ व्याकरणप्रक्रिया ॥

मित्रमहः—**मित्रं अनुकूलं महः तेजो यस्य असौ मित्रमहाः** । ಎಲ್ಲರಿಗೂ ಅನುಕೂಲವಾದ ತೇಜಸ್ಸುಳ್ಳವನು ಎಂದು ತಾತ್ಪರ್ಯ. ಮಿತ್ರಮಹಸ್ ಶಬ್ದದ ಮೇಲೆ ಸಂಬುದ್ಧಿವಿವಕ್ಷಾ ಮಾಡಿದಾಗ ಮಿತ್ರಮಹಸ್+ಸ್ ಎಂದಿರುತ್ತದೆ. ಅಸಂಬುದ್ಧೌ ಎಂದು ದೀರ್ಘ ನಿಷೇಧಮಾಡಿರುವುದರಿಂದ ದೀರ್ಘ ಬರುವುದಿಲ್ಲ. ಹಲ್ಙ್ಯಾದಿ ಲೋಪದಿಂದ ಸು ಲೋಪವಾಗುತ್ತದೆ. ಸಕಾರಕ್ಕೆ ರುತ್ವವಿಸರ್ಗಗಳು ಬಂದರೆ ಮಿತ್ರಮಹಃ ಎಂದು ರೂಪವಾಗುತ್ತದೆ. ಆಮಂತ್ರಿತಸ್ಯಚ ಎಂಬ ಎಂಟನೇ ಅಧ್ಯಾಯದ ಸೂತ್ರದಿಂತ ಸರ್ವಾನುದಾತ್ತಸ್ವರ ಬರುತ್ತದೆ.

उत्तरां—ಉತ್ ಎಂಬುದು ಉಪಸರ್ಗ. ಉಪಸರ್ಗಾಃ ಕ್ರಿಯಾಯೋಗೇ ಎಂಬುದರಿಂದ ಕ್ರಿಯೆಯು ಸಂಬಂಧವಿರುವಾಗ ಮಾತ್ರ ಉಪಸರ್ಗಸಂಜ್ಞೆ ಬರುತ್ತದೆ ಆದುದರಿಂದ ಇಲ್ಲಿ ಕೇವಲ ಉಪಸರ್ಗವಿರುವುದರಿಂದ ಉಪಸರ್ಗ ಸಂಬಂಧವಿರುವ ಪ್ರಾಕರಣಿಕವಾದ ಒಂದು ಧಾತ್ವರ್ಥವನ್ನು ಸ್ವೀಕರಿಸಬೇಕು. ಲುತಿನಿಂದ ಲಕ್ಷಣಾವೃತ್ತಿಯಿಂದ ಧಾತ್ವರ್ಥವು ಬೋಧಿತವಾಗುತ್ತದೆ. ಲಕ್ಷ್ಯವಾದ ಧಾತ್ವರ್ಥದಲ್ಲಿರುವ ಅತಿಶಯವನ್ನು ವಿವಕ್ಷಾಮಾಡಿದಾಗ ತರಪ್ ಪ್ರತ್ಯಯ ಬರುತ್ತದೆ. ಉತ್ತರಾಂ ಎಂಬಲ್ಲಿ ಹಿಂದೆ ಎರಡು ರೀತಿಯಿಂದ ವ್ಯಾಖ್ಯಾನ ತೋರಿಸಿದೆ. ಮೊದಲನೇ ವ್ಯಾಖ್ಯಾನದಲ್ಲಿ ಉತ್ತರಾಂ ಎಂಬುದು ಆಂತರಿಕ್ಷಕ್ಕೆ ವಿಶೇಷಣವಾಗಿರುತ್ತದೆ. ಆಗ ಉತ್ತರಾಂ ಎಂಬಲ್ಲಿ ವಿಶೇಷ ವಿವಕ್ಷಾಮಾಡಿದರೆ ದ್ರವಗತವಾದ ವಿಶೇಷವನ್ನು ವಿವಕ್ಷಾಮಾಡಿದಂತೆಯೇ ಆಗುತ್ತದೆ. ಆಗ ತರಪಿನ ಮೇಲೆ ಆವ್ ಪ್ರತ್ಯಯ ಬರುವುದಿಲ್ಲ. **किमेत्तिङव्ययघादाम्वद्रव्ये प्रकर्षे** (ಪಾ. ಸೂ. ೫-೪-೧೧) ಇದು ಆಮನ್ನು ವಿಧಾನಮಾಡುವ ಸೂತ್ರ. ತರಪ್ತಮಪ್ ಪ್ರತ್ಯಯಗಳಿಗೆ ಘ ಎಂದು ಸಂಜ್ಞೆ. ಕಿಮ್, ಏದಂತವಾದ ಶಬ್ದ, ತಿಙಂತ, ಅವ್ಯಯ ಇವುಗಳಮೇಲೆ ಬಂದಿರುವ ತರಪ್ತಮಪ್ ಪ್ರತ್ಯಯಗಳ ಮೇಲೆ ಆಮ್

ಬರುತ್ತದೆ. ದ್ರವ್ಯಗತವಾದ ಪ್ರಕರ್ಷ ತೋರುತ್ತಿದ್ದರೆ ಬರುವುದಿಲ್ಲ ಹೀಗೆ ಅದ್ರವ್ಯಪ್ರಕರ್ಷೆ ಎಂದು ನಿಷೇಧ ಮಾಡಿರುವುದರಿಂದ ಅಂತರಿಕ್ಷವಿಶೇಷಣವಾಗುವಾಗ ಬರುವುದಿಲ್ಲ. ಎರಡನೆಯ ವ್ಯಾಖ್ಯಾನದಲ್ಲಿ ಆರೋಹಣ ಕ್ರಿಯಾದಲ್ಲಿರುವ ಪ್ರಕರ್ಷವು ತೋರುತ್ತದೆ. ಆದುದರಿಂದ ಹಿಂದಿನ ಸೂತ್ರದಿಂದ ತರಪಿನಮೇಲೆ ಆಮ್ ಬರುತ್ತದೆ. ಪ್ರಥಮ ವ್ಯಾಖ್ಯಾನದಲ್ಲಿ ತರಪಿನಮೇಲೆ ಆಮ್ ಬರದಿರುವುದರಿಂದ ಸ್ತ್ರೀತ್ವವಿವಕ್ಷಾಮಾಡಿದಾಗ ಅದಂತವಾದುದ ರಿಂದ ಟಾಪ್ ಬರುತ್ತದೆ. ದ್ವಿತೀಯಾ ಏಕವಚನದಲ್ಲಿ ಉತ್ತರಾಂ ಎಂದು ರೂಪವಾಗುತ್ತದೆ. ಟಾಪ್ ಮತ್ತು ತರಪ್ ಎರಡು ಪ್ರತ್ಯಯಗಳೂ ಪಿತ್ವಾದುದರಿಂದ ಅನುದಾತ್ತಸ್ವರವು ಬರುವುದರಿಂದ ಉಪಸರ್ಗದ ಉದಾತ್ತ ಸ್ವರವೇ ಉಳಿಯುತ್ತದೆ. ಉತ್ತರಾಂ ಎಂಬುದು ಆದ್ಯುದಾತ್ತವಾದ ಪದವಾಗುತ್ತದೆ. ಎರಡನೇ ವ್ಯಾಖ್ಯಾನದಲ್ಲಿ ತರಪ್ ಪಿತ್ವಾದುದರಿಂದ ಅನುದಾತ್ತಸ್ವರ ಬರುತ್ತದೆ. ಆದರೆ ಅದರಮೇಲೆ ಆಮ್ ವಿಧಾನಮಾಡಿರುವುದರಿಂದ ಅದು ಸತಿಶಿಷ್ಟವಾಗುವುದರಿಂದ ಪ್ರತ್ಯಯಸ್ವರದಿಂದ ಅಂತೋದಾತ್ತವು ಪ್ರಾಪ್ತವಾದರೆ ಛಂದಸ್ಸಿನಲ್ಲಿ ವ್ಯತ್ಯಯವನ್ನು ಸ್ವೀಕರಿಸಿ ಆದ್ಯುದಾತ್ತವನ್ನು ಹೇಳಬೇಕು. ಅಥವಾ ವೃಷಾದಿಗಣವು ಆಕೃತಿಗಣವೆಂದು ಸ್ವೀಕರಿಸಿರುವುದರಿಂದ ಉತ್ತರಾಂ ಎಂಬ ಆಮಂತಶಬ್ದವನ್ನು ಆ ಗಣದಲ್ಲಿ ಪಠಿಸಿದೆ ಎಂದು ಸ್ವೀಕರಿಸಬೇಕು. ವೃಷಾದಿಗಳಿಗೆ ಆದ್ಯು ದಾತ್ತವನ್ನು ಹೇಳಿರುವುದರಿಂದ ಸ್ವರಶವಾಗಿ ಉತ್ತರಾಂ ಎಂಬುದಕ್ಕೆ ಆದ್ಯುದಾತ್ತವು ಸಿದ್ಧವಾಗುತ್ತದೆ.

ಹೃದ್ರೋಗಮ್—ಹೃದಯಸ್ಯ ರೋಗಃ ಹೃದ್ರೋಗಃ ತಂ ಹೃದ್ರೋಗಂ ॥ ದೇಹದ ಒಳಗಿನ ರೋಗ ಎಂದರ್ಥ. **ವಾ ಶೋಕಷ್ಯಞ್ರೋಗೇಷು** (ಪಾ. ಸೂ. ೬-೩-೫೧) ಹೃದಯ ಶಬ್ದಕ್ಕೆ ಶೋಕ, ಷ್ಯಞ್, ರೋಗ ಶಬ್ದಗಳು ಪರದಲ್ಲಿರುವಾಗ ಹೃದಾದೇಶವು ವಿಕಲ್ಪವಾಗಿ ಬರುತ್ತದೆ ಎಂಬುದರಿಂದ ಇಲ್ಲಿ ರೋಗಶಬ್ದ ಪರದಲ್ಲಿರು ವುದರಿಂದ ಹೃದಯಶಬ್ದಕ್ಕೆ ಹೃದಾದೇಶ ಬರುತ್ತದೆ. ಹೃದ್ರೋಗಂ ಎಂದು ರೂಪವಾಗುತ್ತದೆ.

ಮಮ—ಅಸ್ಮಚ್ಛಬ್ದಕ್ಕೆ ಷಷ್ಠೀ ಏಕವಚನ ಪರದಲ್ಲಿರುವಾಗ **ತವಮಮೌ ಙಿಸಿ** (ಪಾ. ಸೂ. ೭-೨-೯೭) ಸೂತ್ರದಿಂದ ಮಪರ್ಯಂತಕ್ಕೆ ಮಮ ಎಂಬ ಆದೇಶ ಬರುತ್ತದೆ. **ಶೇಷೇಲೋಪಃ** ಸೂತ್ರದಿಂದ ಮಪರ್ಯಂತದ ಪರದಲ್ಲಿರುವ ಅದ್ ಎಂಬುದಕ್ಕೆ ಲೋಪ ಬರುತ್ತದೆ. **ಯುಷ್ಮದಸ್ಮದ್ಭ್ಯಾಂ ಙಸೋಓಶ್** (ಪಾ. ಸೂ. ೭-೧-೨೭) ಸೂತ್ರದಿಂದ ಷಷ್ಠಿಯ ಙಸ್ ವಿಭಕ್ತಿಗೆ ಆಶಾದೇಶ ಬರುತ್ತದೆ. **ಆತೋಗುಣೆ** ಸೂತ್ರದಿಂದ ಪರರೂಪವು ಏಕಾ ದೇಶವಾಗಿ ಬಂದರೆ ಮಮ ಎಂದು ರೂಪವಾಗುತ್ತದೆ. **ಏಕಾದೇಶೇ ಉದಾತ್ತೇನೋದಾತ್ತಃ**ಸೂತ್ರದಿಂದ ವಿಭಕ್ತಿಗೆ ಉದಾತ್ತವು ಪ್ರಾಪ್ತವಾದರೆ **ಯುಷ್ಮದಸ್ಮದೋರ್ಙಸಿ** (ಪಾ. ಸೂ. ೬-೧-೨೧೧) ಎಂಬುದರಿಂದ ಆದ್ಯುದಾತ್ತ ವಾಗುತ್ತದೆ. ಮಮ ಎಂಬುದು ಆದ್ಯುದಾತ್ತವಾದ ಪದವಾಗುತ್ತದೆ-

ಹರಿಮಾಣಮ್—ಹೃಞ್ ಹರಣೆ ಧಾತು. ಭ್ವಾದಿ. **ಜನಿಹೃಭ್ಯಾಮಿಮನಿನ್** (ಉ. ಸೂ. ೪-೫೮೪) ಎಂಬ ಉಣಾದಿ ಸೂತ್ರದಿಂದ ಈ ಧಾತುವಿಗೆ ಇಮನಿನ್ ಪ್ರತ್ಯಯ ಬರುತ್ತದೆ. ಹೃ+ಇಮನಿನ್ ಎಂದಿರುವಾಗ ಇನ್ ಲೋಪವಾಗುತ್ತದೆ. ಧಾತುವಿಗೆ ಆರ್ಧಧಾತುಕನಿಮಿತ್ತವಾದ ಗುಣ ಬರುತ್ತದೆ. ಯಕಾರಸ್ಥಾನಕ್ಕೆ ಬರುವ ಗುಣವು ರ ಪರವಾಗಿ ಬಂದರೆ ಹರಿಮನ್ ಎಂದು ನಾಂತವಾದ ಪದವಾಗುತ್ತದೆ. ದ್ವಿತೀಯೈಕವಚನದಲ್ಲಿ ಆಮ್ ಪ್ರತ್ಯಯ ಬಂದಾಗ ಹರಿಮಾಣಂ ಎಂದು ರೂಪವಾಗುತ್ತದೆ. **ಅಟ್ಕುಪ್ವಾಙ್ನುಮ್ ವ್ಯವಾಯೇಽಪಿ** ಸೂತ್ರ ದಿಂದ ನಕಾರಕ್ಕೆ ಏತ್ವ ಬಂದಿರುತ್ತದೆ. ನಿತ್ ಪ್ರತ್ಯಯವಾದುದರಿಂದ ಆದ್ಯುದಾತ್ತವು ಪ್ರಾಪ್ತವಾದರೆ ವ್ಯತ್ಯಯ ದಿಂದ ಅಂತೋದಾತ್ತಸ್ವರವು ಬರುತ್ತದೆ. ಹರಿಮಾಣಂ ಎಂಬಲ್ಲಿ ಮಕಾರೋತ್ತರಾಕಾರವು ಉದಾತ್ತವಾಗುತ್ತದೆ. ಅಥವಾ ಹರಿತ್ ಎಂಬುದು ವರ್ಣವಾಚಕವಾದ ಶಬ್ದ. **ವರ್ಣಾದೃಢಾದಿಭ್ಯಃ ಷ್ಯಂಚೆ** (ಪಾ. ಸೂ. ೫-೧-೧೨೩)

ವರ್ಣವಾಚಕಶಬ್ದಗಳಿಗೂ ದೃಢಾದಿಗಳಿಗೂ ಷ್ಯಞ್ ಪ್ರತ್ಯಯವೂ ಚಕಾರದಿಂದ ಇಮನಿಚ್ ಪ್ರತ್ಯಯವೂ ಬರುತ್ತದೆ ಎಂಬುದರಿಂದ ಇಲ್ಲಿ ಹರಿತ್ ಶಬ್ದಕ್ಕೆ ಇಮನಿಚ್ ಪ್ರತ್ಯಯ ಬರುತ್ತದೆ. ಹರಿತ್+ಇಮನ್ ಎಂದಿರುವಾಗ ಟೇಃ (ಪಾ. ಸೂ. ೬-೪-೧೫೫) ಭಸಂಜ್ಞಾ ಇರುವ ಅಂಗದ ಟಿಗೆ ಇಷ್ಠನ್ ಇಮನಿಚ್ ಈಯಸುನ್ ಪ್ರತ್ಯಯಗಳು ಪರದಲ್ಲಿರುವಾಗ ಲೋಪಬರುತ್ತದೆ ಎಂಬುದರಿಂದ ಟಿಗೆ (ಇತ್) ಲೋಪಬರುತ್ತದೆ. ಆಗ ಹರಿಮನ್ ಎಂದು ನಾಂತಶಬ್ದವಾಗುತ್ತದೆ. ದ್ವಿತೀಯಾ ಏಕವಚನದಲ್ಲಿ ಹರಿಮಾಣಂ ಎಂದು ಪೂರ್ವದಂತೆಯೇ ಆಗುತ್ತದೆ.

॥ ಸಂಹಿತಾಪಾಠಃ ॥

शुकेषु मे हरिमाणं रोपणाकासु दध्मसि ।
अथो हारिद्रवेषु मे हरिमाणं नि दध्मसि ॥७॥

॥ ಪದಪಾಠಃ ॥

शुकेषु । मे । हरिमाणं । रोपणाकासु । दध्मसि ।
अथो इति । हारिद्रवेषु । मे । हरिमाणं । नि । दध्मसि ॥७॥

॥ಸಾಯಣಭಾಷ್ಯಂ ॥

ಮೇ ಮದೀಯಂ ಹರಿಮಾಣಂ ಶರೀರಗತಂ ಹರಿದ್ವರ್ಣಸ್ಯ ಭಾವಂ ಶುಕೇಷು ತಾದೃಶಂ ವರ್ಣಂ ಕಾಮಯಮಾನೇಷು ಪಕ್ಷಿಷು ತಥಾ ರೋಪಣಾಕಾಸು ಶಾರಿಕಾಸು ಪಕ್ಷಿವಿಶೇಷೇಷು ದಧ್ಮಸಿ । ಸ್ಥಾಪಯಾಮಃ । ಅಥೋ ಅಪಿ ಚ ಹಾರಿದ್ರವೇಷು ಹರಿತಾಲದ್ರುಮೇಷು ತಾದೃಗ್ವರ್ಣ ಪಕ್ಷಿ ಮೇ ಮದೀಯಂ ಹರಿಮಾಣಂ ನಿ ದಧ್ಮಸಿ । ನಿದಧೀಮಹಿ । ಸ ಚ ಹರಿಮಾ ತತ್ರೈವ ಸುಖೇನಾಸ್ತಾಮಸ್ಮಾನ್ನಾ ವಾಧಿಷ್ಟೇತ್ಯರ್ಥಃ ॥ ದಧ್ಮಸಿ । ಇದಂತೋ ಮಸಿರಿತಿ ಮಸ ಇಕಾರಾಗಮಃ ॥

॥ ಪ್ರತಿಪದಾರ್ಥ ॥

ಮೇ—ನನ್ನ (ದೇಹದ) । ಹರಿಮಾಣಂ—ಹಳದೀಬಣ್ಣವನ್ನು । ಶುಕೇಷು — (ಆ ಬಣ್ಣಕ್ಕೆ ಇಷ್ಟಪಡುವ) ಗಿಳಿ ಮುಂತಾದ ಪಕ್ಷಿಗಳಲ್ಲಿಯೂ । ರೋಪಣಾಕಾಸು—ಶಾರಿಕಾ (ಮೈನಾ) ಪಕ್ಷಿಗಳಲ್ಲಿಯೂ । ದಧ್ಮಸಿ—(ನನ್ನ ದೇಹದಿಂದ ಬದಲಾಯಿಸಿ) ಇಡೋಣ । ಅಥೋ—ಅಲ್ಲದೆ । ಹಾರಿದ್ರವೇಷು—ಹರಿತಾಳವೃಕ್ಷಗಳಲ್ಲಿಯೂ । ಮೇ—ನನ್ನ (ದೇಹದ) । ಹರಿಮಾಣಂ—ಹಳದೀ ಬಣ್ಣವನ್ನು । ನಿದಧ್ಮಸಿ—ಇಡೋಣ.

॥ ಭಾವಾರ್ಥ ॥

ನನಗೆ ಅನನುಕೂಲವಾಗಿರುವ ನನ್ನ ದೇಹದ (ಪಚ್ಚೆ) ಹಳದೀ ಬಣ್ಣವನ್ನು ಆ ಬಣ್ಣಕ್ಕೆ ಆಸೆಪಡುವ ಗಿಳಿಗಳಲ್ಲಿಯೂ ಮೈನಾ ಪಕ್ಷಿಗಳಲ್ಲಿಯೂ ಹರಿತಾಳ ವೃಕ್ಷಗಳಲ್ಲಿಯೂ ಇಡೋಣ.

English Translation.

Let us transfer the yellowness (of my body) to the parrots, to the starlings or to the Haridala tree.

॥ ವಿಶೇಷ ವಿಷಯಗಳು ॥

ಹಿಂದಿನ ಋಕ್ಕಿನಲ್ಲಿ ಪ್ರಸ್ಕಣ್ವಋಷಿಯು ತನ್ನ ಚರ್ಮಗತವಾದ ರೋಗವನ್ನು ಪರಿಹರಿಸಬೇಕೆಂದು ಸೂರ್ಯನನ್ನು ಪ್ರಾರ್ಥಿಸಿರುವನಷ್ಟೆ. ಆ ರೋಗಪರಿಹಾರಕ್ರಮವನ್ನು ಈ ಮಂತ್ರದಲ್ಲಿ ವಿಶದಪಡಿಸಿರುವನು.

ಶುಕೇಷು—ಗಿಣಿಗಳಲ್ಲಿ ; ಗಿಣಿಗಳ ಬಣ್ಣವು ಹಸುರಾಗಿಯೂ ಹಳದಿಯಾಗಿಯೂ ಇರುವುದು. ನನ್ನ ಚರ್ಮಗತವಾದ ಆ ಬಣ್ಣವು ಶುಕಾದಿಗಳಿಗೆ ಸ್ವಭಾವಸಿದ್ಧವಾದುದು. ಆದುದರಿಂದ ರೋಗಜನಿತವಾದ ಈ ಹರಿದ್ವರ್ಣವನ್ನು ಶುಕಾದಿಪಕ್ಷಿಗಳಲ್ಲಿ ಇಟ್ಟಲ್ಲಿ ಎಂದರೆ ಸೇರಿಸಿದಲ್ಲಿ ನನ್ನ ರೋಗವು ಸುಲಭವಾಗಿ ನಾಶವಾಗುವುದೆಂಬ ಉಪಾಯವನ್ನು ಸೂಚಿಸಿ ಋಷಿಯು ಸೂರ್ಯನನ್ನು ಪ್ರಾರ್ಥಿಸಿರುವನು.

ಹರಿಮಾಣಂ—**ಹರಿದ್ವರ್ಣಸ್ಯ ಭಾವಂ**। ಹಳದೀ ಬಣ್ಣದಿಂದ ಕೂಡಿದ ಈ ನನ್ನ ಚರ್ಮರೋಗವನ್ನು ; ಹಳದಿಯ ಬಣ್ಣವನ್ನು.

ರೋಪಣಾಕಾಸು—ಶಾರಿಕಾ ಎಂಬ ಪಕ್ಷಿವಿಶೇಷಗಳಲ್ಲಿ. Starlings.

ಹಾರಿದ್ರವೇಷು—ಹರಿತಾಲವೆಂಬ ವೃಕ್ಷವಿಶೇಷಗಳಲ್ಲಿ. ಇಲ್ಲಿ **ಹರಿತಾಲ** ವೃಕ್ಷವು ಯಾವುದು ಎಂಬುದು ಸ್ಪಷ್ಟವಾಗಿಲ್ಲ. ಬಹುಶಃ ಆ ವೃಕ್ಷದ ಎಲೆಗಳು ಹಳದೀ ಬಣ್ಣದ್ದಾಗಿರಬಹುದು. **ಹರಿತಾಲ** ಎಂದರೆ ಅರಸಿನ ಎಂದೂ ಹೇಳಬಹುದು.

॥ ವ್ಯಾಕರಣಪ್ರಕ್ರಿಯಾ ॥

ದಧ್ಮಸಿ—ಡುಧಾಞ್ ಧಾರಣಪೋಷಣಯೋಃ ಧಾತು. ಜುಹೋತ್ಯಾದಿ. ಲಟ್ ಉತ್ತಮಪುರುಷ ಬಹುವಚನ ವಿವಕ್ಷವಾಡಿದಾಗ ಮಸ್ ಪ್ರತ್ಯಯ ಬರುತ್ತದೆ. ಧಾ+ಮಸ್ ಎಂದಿರುವಾಗ **ಜುಹೋತ್ಯಾದಿಭ್ಯಃ ಶ್ಲುಃ** ಎಂಬುದರಿಂದ ಶ್ಲು ವಿಕರಣ ಬರುತ್ತದೆ. **ಶ್ಲೌ** ಎಂಬ ಸೂತ್ರದಿಂದ ಧಾತುವಿಗೆ ದ್ವಿತ್ವ ಬರುತ್ತದೆ. ಧಾಧಾ+ಮಸ್ ಎಂದಿರುವಾಗ **ಹ್ರಸ್ವಃ** ಸೂತ್ರದಿಂದ ಅಭ್ಯಾಸಕ್ಕೆ ಹ್ರಸ್ವ ಬರುತ್ತದೆ. **ಅಭ್ಯಾಸೇ ಚರ್ಚ** ಸೂತ್ರದಿಂದ ಜಸ್ತ್ವ ಬರುತ್ತದೆ. ದಧಾ+ಮಸ್ ಎಂದಿರುವಾಗ **ಶ್ನಾಭ್ಯಸ್ತಯೋರಾತಃ** (ಪಾ. ಸೂ. ೬-೪-೧೧೨) ಎಂಬುದರಿಂದ ಅಭ್ಯಸ್ತಸಂಜ್ಞೆ ಇರುವುದರಿಂದ ಧಾತುವಿನ ಆಕಾರಕ್ಕೆ ಲೋಪ ಬರುತ್ತದೆ. ದಧ್ಮಸ್ ಎಂದಿರುವಾಗ ಸಕಾರಕ್ಕೆ ರುತ್ವವಿಸರ್ಗಗಳು ಪ್ರಾಪ್ತವಾಗುತ್ತವೆ. **ಇದಂತೋಮಸಿ** (ಪಾ. ಸೂ. ೬-೧-೪೬) ಮಸಿ ಎಂಬುದು ವಿಭಕ್ತಿಕ

ವಾದ ನಿರ್ದೇಶ. ಇಕಾರವು ಉಚ್ಚಾರಣಾರ್ಥವಾಗಿ ಗೃಹೀತವಾಗಿದೆ. ಮುಸ್ ಎಂಬುದು ಇಕಾರರೂಪವಾದ ಅಂತ್ಯಾವಯವದಿಂದ ಕೂಡಿಕೊಂಡು ಬರುತ್ತದೆ; ಅಂದರೆ ಮುಸಿಗೆ ಇತ್ ಎಂಬುದು ಆಗಮವಾಗಿ ಬರುತ್ತದೆ ಎಂದು ತಾತ್ಪರ್ಯ. ಇದರಿಂದ ರುತ್ವವಿಸರ್ಗಗಳು ಬಾಧಿತವಾಗಿ ಮುಸಿ ಎಂದು ಪ್ರತ್ಯಯವಾಗುತ್ತದೆ. ದಧ್ಮಸಿ ಎಂದು ರೂಪವಾಗುತ್ತದೆ. ತಿಜ್ಜತಿಜಃ ಸೂತ್ರದಿಂದ ನಿಘಾತಸ್ವರ ಬರುವುದರಿಂದ ದಧ್ಮಸಿ ಎಂಬುದು ಸರ್ವಾನುದಾತ್ತ ವಾಗುತ್ತದೆ.

॥ ಸಂಹಿತಾಪಾಠಃ ॥

ಉದ್ಗಾದಯಮಾದಿತ್ಯೋ ವಿಶ್ವೇನ ಸಹಸಾ ಸಹ ।
ದ್ವಿಷನ್ತಂ ಮಹ್ಯಂ ರನ್ಧಯನ್ಮೋ ಅಹಂ ದ್ವಿಷತೇ ರಧಂ ॥ ೧೩ ॥

॥ ಪದಪಾಠಃ ॥

ಉತ್ । ಅಗಾತ್ । ಅಯಂ । ಆದಿತ್ಯಃ । ವಿಶ್ವೇನ । ಸಹಸಾ । ಸಹ ।
ದ್ವಿಷನ್ತಂ । ಮಹ್ಯಂ । ರಂಧಯನ್ । ಮೋ ಇತಿ । ಅಹಂ । ದ್ವಿಷತೇ । ರಧಂ ॥೧೩॥

॥ ಸಾಯಣಭಾಷ್ಯಂ ॥

ಅಯಂ ಪುರೋವರ್ತ್ಯಾದಿತ್ಯೋ ಽದಿತೇಃ ಪುತ್ರಃ ಸೂರ್ಯೋ ವಿಶ್ವೇನ ಸಹಸಾ ಸರ್ವೇಣ ಬಲೇನ ಸಹೋದಗಾತ್ । ಉದಯಂ ಪ್ರಾಪ್ತವಾನ್ । ಕಿಂ ಕುರ್ವನ್ । ಮಹ್ಯಂ ದ್ವಿಷಂತಂ ರಂಧಯನ್। ಮನೋಽಪದ್ರವಕಾರಿಣಂ ಹಿಂಸನ್ । ಅಪಿ ಚಾಹಂ ದ್ವಿಷತೇ ಽನಿಷ್ಟಕಾರಿಣೇ ರೋಗಾಯ ಮೋ ರಥಂ । ನೈವ ಹಿಂಸಾಂ ಕರೋಮಿ । ಸೂರ್ಯ ಏವ ಅಸ್ಮದನಿಷ್ಟಕಾರಿಣಂ ರೋಗಂ ವಿನಾಶಯತ್ವಿತ್ಯರ್ಥಃ ॥ ಅಗಾತ್ ಏತೇರ್ಲುಙೀಣೋ ಗಾ ಲುಙೀತಿ ಗಾದೇಶಃ । ಗಾತಿಸ್ಥೇತಿ ಸಿಚೋ ಲುಕ್ । ಆದಿತ್ಯಃ । ದಿತ್ಯದಿತ್ಯಾದಿತ್ಯೇತ್ಯಪತ್ಯಾರ್ಥೇ ಪ್ರಾಗ್ದೀವ್ಯತೀಯೋ ಣ್ಯಪ್ರತ್ಯಯಃ । ರಂಧಯನ್ । ರಧ ಹಿಂಸಾಸಂರಾದ್ಧ್ಯೋಃ । ಣ್ಯಂತಾಲ್ಲಟಃ ಶತೃ । ರಧಿಜಭೋರಚಿ । ಪಾ. ೭.೧-೬೧ । ಇತಿ ನುಮ್ ಧಾತೋರ್ನುಮಾಗಮಃ । ಮೋ । ಮಾ ಉ ನಿಷಾತದ್ವಯಸಮುದಾಯೋ ನೈವೇತ್ಯಸ್ಯಾರ್ಥೇ । ಓತ್ । ಪಾ ೧.೧-೧೫ । ಇತಿ ಪ್ರಗೃಹ್ಯತ್ವೇ ಪ್ಲುತಪ್ರಗೃಹ್ಯಾ ಅಚೀತಿ ಪ್ರಕೃತಿಭಾವಃ । ದ್ವಿಷತೇ । ಶತುರನುಮ ಇತಿ ವಿಭಕ್ತೇರುದಾತ್ತತ್ವಂ । ರಧಂ । ರಧೇರ್ಲುಙಿ ಪುಷಾದಿತ್ವಾತ್ ಚ್ಲೇರಙಾದೇಶಃ । ರಧಿಜಭೋರಚೀತಿ ಧಾತೋರ್ನುಂ । ಅನಿದಿತಾಮಿತ್ಯನುಷಂಗಲೋಪಃ । ನ ಮಾಙ್ಯೋಗ ಇತ್ಯಡಭಾವಃ ॥

॥ ಪ್ರತಿಪದಾರ್ಥ ॥

ಅಯಂ ಆದಿತ್ಯಃ—ಎದುರಿಗಿರುವ **ಅದಿತಿ**ಪುತ್ರನಾದ ಈ ಸೂರ್ಯನು । **ವಿಶ್ವೇನ ಸಹಸಾ ಸಹ**—(ತನ್ನ) ಸಮಸ್ತ ಬಲದೊಂದಿಗೆ । **ಮಹ್ಯಂ**—ನನಗಾಗಿ । **ದ್ವಿಷಂತಂ**—(ರೋಗರೂಪದಲ್ಲಿರುವ) ಶತ್ರುವನ್ನು । **ರಂಧಯನ್**—ಹಿಂಸಿಸುತ್ತ (ನಾಶಮಾಡುತ್ತ) । **ಉದಗಾತ್**—ಉದಯಿಸಿದ್ದಾನೆ. (ಮತ್ತು) । **ಅಹಂ**—ನಾನು **ದ್ವಿಷತೇ**—(ನನಗೆ ಕೇಡನ್ನುಂಟುಮಾಡುವ ರೋಗರೂಪವಾದ) ಶತ್ರುವಿಗೆ । **ಮೋ ರಧಂ**—ಹಿಂಸೆಯನ್ನು ಮಾಡುವುದಿಲ್ಲ. (ನನಗೋಸ್ಕರ ಸೂರ್ಯನೇ ಶತ್ರುವನ್ನು ನಾಶಮಾಡಲಿ).

॥ ಭಾವಾರ್ಥ ॥

ಎದುರಿಗಿರುವ ಅದಿತಿಪುತ್ರನಾದ ಈ ಸೂರ್ಯನು ತನ್ನ ಸಮಸ್ತ ಬಲದೊಂದಿಗೆ ನನ್ನ ರೋಗರೂಪದಲ್ಲಿರುವ ಶತ್ರುವನ್ನು ನಾಶಮಾಡುತ್ತ ಉದಯಿಸಿದ್ದಾನೆ. ಆ ಶತ್ರುನಾಶಮಾಡಲು ನನಗೆ ಶಕ್ತಿಯಿಲ್ಲ. ಸೂರ್ಯನೇ ನಾಶಮಾಡಲಿ.

English Translation.

This Aditya has risen with all his might (glory) destroying my adversary, for I am unable to resist my enemy.

॥ ವಿಶೇಷ ವಿಷಯಗಳು ॥

ಅಯಂ ಆದಿತ್ಯಃ—ಈ ಸೂರ್ಯನು ಎಂದರೆ ನನ್ನ ಮುಂದೆ ಕಾಣಿಸುತ್ತಿರುವ ಈ ಸೂರ್ಯನು, ಈಗತಾನೇ ಉದಯಿಸಿರುವ ಸೂರ್ಯನು.

ವಿಶ್ವೇನ ಸಹಸಾ ಸಹ—ಸಮಸ್ತಬಲಸಹಿತನಾಗಿ ಎಂದರೆ ಸಮಸ್ತರಶ್ಮಿಸಹಿತನಾಗಿ, ಬಹಳ ಪ್ರಕಾಶಮಾನವಾಗಿ. with all his glory. ಸಹಸ್ ಎಂಬ ಶಬ್ದವು ಬಲನಾಮಗಳಲ್ಲಿ ಪಠಿತವಾಗಿದೆ. (ನಿ. ೩-೯.)

ಮಹ್ಯಂ ದ್ವಿಷಂತಂ ರಂಧಯನ್—ನನ್ನ ಹಿಂಸೆಯನ್ನುಂಟುಮಾಡುವ ಶತ್ರುಗಳನ್ನು ಹಿಂಸಿಸುತ್ತಾ; ಸ್ಕಂದಸ್ವಾಮಿಯು ರಂಧಯನ್ ಎಂಬ ಶಬ್ದಕ್ಕೆ **ರಧ್ಯತಿರ್ವಶಗಮನೇ**। **ಮಮ ವಶಂ ನಯನ್ನಿತ್ಯರ್ಥಃ**। ಎಂದರೆ ನನ್ನ ಶತ್ರುಗಳನ್ನು ನನ್ನ ವಶವಾಡುತ್ತಾ ಎಂದರ್ಥವಿವರಣೆಮಾಡಿರುವರು. ಮತ್ತು.

ಮೋ ಅಹಂ ದ್ವಿಷತೇ ರಧಂ—**ಅಸ್ಯ ಭಗವತಃ ಪ್ರಸಾದಾನ್ಮಾಹಂ ಶತ್ರೋರ್ವಶಂ ಗಚ್ಛೇಯಂ**। ನಾನು ಸಹ ಶತ್ರುಗಳ ವಶವಾಗದಂತೆ ಮಾಡಬೇಕೆಂದು ಹೇಳುವ ಅರ್ಥವೂ ಸಮಂಜಸವಾಗಿರುವುದು. ಭಾಷ್ಯಕಾರರು ಈ ಶಬ್ದಗಳಿಗೆ ನಾನು ನನ್ನ ಶತ್ರುಗಳಾದ ರೋಗಾದಿಗಳನ್ನು ಹಿಂಸಿಸದಿರಲಿ. ಸೂರ್ಯನೇ ಅವುಗಳನ್ನು ನಾಶಮಾಡಲಿ ಎಂಬ ಅರ್ಥವನ್ನು ವಿವರಿಸಿರುವರು.

॥ ವ್ಯಾಕರಣಪ್ರಕ್ರಿಯಾ ॥

ಅಗಾತ್—ಇಣ್ ಗತೌ ಧಾತು. ಅದಾದಿ. ಲುಙ್ ಪ್ರಥಮಪುರುಷ ಏಕವಚನ ವಿವಕ್ಷಾಮಾಡಿದಾಗ **ತಿಪ್** ಪ್ರತ್ಯಯ ಬರುತ್ತದೆ. **ಇತಶ್ಚ** ಸೂತ್ರದಿಂದ ಪ್ರತ್ಯಯದ ಇಕಾರಕ್ಕೆ ಲೋಪ ಬರುತ್ತದೆ. **ಇಣೋ ಗಾ ಲುಙಿ** (ಪಾ. ಸೂ. ೭-೪-೪೫) ಲುಙ್ ಪರದಲ್ಲಿರುವಾಗ ಇಣ್ ಧಾತುವಿಗೆ ಗಾ ಎಂಬ ಆದೇಶವು ಬರುತ್ತದೆ. ಚ್ಲಿ

ವಿಕರಣಕ್ಕೆ ಸಿಜಾದೇಶ ಬರುತ್ತದೆ. ಧಾತುವಿಗೆ ಲುಙ್ ನಿಮಿತ್ತಕವಾದ ಅಡಾಗಮ ಬರುತ್ತದೆ. ಅಗಾ+ಸ್+ತ್ ಎಂದಿರುವಾಗ ಗಾತಿಸ್ಥಾಘುಪಾ (ಪಾ. ಸೂ. ೨-೪-೭೭) ಸೂತ್ರದಿಂದ ಸಿಚಿಗೆ ಲುಕ್ ಬರುತ್ತದೆ. ಅಗಾತ್ ಎಂದು ರೂಪವಾಗುತ್ತದೆ.

ಆದಿತ್ಯಃ—ಅದಿತೇಃ **ಅಪತ್ಯಂ ಪುಮಾನ್** ಆದಿತ್ಯಃ ಅದಿತಿಯ ಮಗನು ಎಂದರ್ಥ. **ದಿತ್ಯದಿತ್ಯಾದಿತ್ಯ-ಪತ್ಯುತ್ತರಪದಾಣ್ಯಃ** (ಪಾ. ಸೂ. ೪-೧-೮೫) ಸೂತ್ರದಿಂದ **ತಸ್ಯಾಪತ್ಯಂ** ಎಂಬರ್ಥದಲ್ಲಿ ಅಣಿಗೆ ಅಪವಾದವಾಗಿ ಣ್ಯ ಪ್ರತ್ಯಯವು ಬರುತ್ತದೆ. ಅದಿತಿ+ಯ ಎಂದಿರುವಾಗ ಪ್ರತ್ಯಯ ಣಿತ್ತಾದುದರಿಂದ **ತದ್ಧಿತೇಷ್ವಚಾಮಾದೇಃ** ಸೂತ್ರದಿಂದ ಆದಿವೃದ್ಧಿ ಬರುತ್ತದೆ. **ಯಸ್ಯೇತಿಚ** ಸೂತ್ರದಿಂದ ಪ್ರತ್ಯಯ ಪರದಲ್ಲಿರುವಾಗ ಕೊನೆಯ ಇಕಾರಕ್ಕೆ ಲೋಪಬಂದರೆ ಆದಿತ್ಯ ಎಂದು ರೂಪವಾಗುತ್ತದೆ. ಪ್ರತ್ಯಯ ಸ್ವರದಿಂದ ಅಂತೋದಾತ್ತವಾಗುತ್ತದೆ.

ರಂಧಯನ್—ರಧ ಹಿಂಸಾಸಂರಾಧ್ಯೋಃ ಧಾತು. ದಿವಾದಿ. ಪ್ರೇರಣಾ ತೋರುವಾಗ **ಹೇತುಮತಿಚ** ಸೂತ್ರದಿಂದ ಣಿಚ್ ಬರುತ್ತದೆ. ರಾಧಿ ಎಂದು ಧಾತುವಾಗುತ್ತದೆ. ಸನಾದಿಯಲ್ಲಿ ಣಿಚ್ ಸೇರಿರುವುದರಿಂದ **ಸನಾದ್ಯಂತಾ ಧಾತವಃ** ಸೂತ್ರದಿಂದ ಧಾತುಸಂಜ್ಞೆಯನ್ನು ಹೇಳಬೇಕು. ಲಡರ್ಥದಲ್ಲಿ **ಲಟಃ ಶತೃಶಾನಚ್** ಸೂತ್ರದಿಂದ ಶತೃಪ್ರತ್ಯಯ ಬರುತ್ತದೆ. ರಧ್+ಇ+ಅತ್ ಎಂದಿರುವಾಗ **ರಧಿಜಭೋರಚಿ** (ಪಾ. ಸೂ. ೬-೧-೬೧) ಅಚ್ ಪರದಲ್ಲಿರುವಾಗ ಈ ಎರಡು ಧಾತುಗಳಿಗೆ ನುಮ್ ಬರುತ್ತದೆ ಎಂಬುದರಿಂದ ನುಮಾಗಮ ಬರುತ್ತದೆ. ಮಿತ್ತಾದುದರಿಂದ ಅಂತ್ಯಾಚಿನ ಪರಕ್ಕೆ ಅವಯವವಾಗಿ ಬರುತ್ತದೆ. ರಂಧ್ ಎಂದಿರುವಾಗ ಅಕಾರವು ಉಪಧೆಯಾಗದಿರುವುದರಿಂದ ವೃದ್ಧಿ ಬರುವುದಿಲ್ಲ. ಣಿಚಿನ ಇಕಾರಕ್ಕೆ ಗುಣಾಯಾದೇಶಗಳು ಬಂದರೆ ರಂಧಯತ್ ಎಂಬ ತಾಂತಶಬ್ದವಾಗುತ್ತದೆ. ಪ್ರಥಮಾ ಏಕವಚನ ಪರದಲ್ಲಿರುವಾಗ **ಸರ್ವನಾಮಸ್ಥಾನಸಂಜ್ಞೆ** ಇರುವುದರಿಂದ ಅಂಗಕ್ಕೆ ನುಮಾಗಮ ಬರುತ್ತದೆ. **ಹಲ್ಙ್ಯಾದಿ** ಸೂತ್ರದಿಂದ **ಸು ಲೋಪ** ಬರುತ್ತದೆ. ಸಂಯೋಗಾಂತ ಲೋಪದಿಂದ ತಕಾರವು ಲೋಪವಾಗುತ್ತದೆ. ಸಂಯೋಗಾಂತ ಲೋಪವು ಅಸಿದ್ಧವಾದುದರಿಂದ **ಪುನಃ ನಲೋಪಃ ಪ್ರಾತಿಪದಿಕಾಂತಸ್ಯ** ಸೂತ್ರದಿಂದ ನ ಲೋಪವು ಬರುವುದಿಲ್ಲ. ರಂಧಯನ್ ಎಂದು ರೂಪವಾಗುತ್ತದೆ.

ಮೋ—ಮಾ ಮತ್ತು ಉ ಎಂಬ ಎರಡು ನಿಪಾತಗಳ ಸಮುದಾಯದಿಂದ ಮೈವ ಎಂಬರ್ಥದಲ್ಲಿ ಮೋ ಎಂಬ ರೂಪವಾಗಿದೆ. ಮೋ+ಅಹಂ ಎಂದಿರುವಾಗ ಅವಾದೇಶವು ಪ್ರಾಪ್ತವಾಗುತ್ತದೆ. **ಓತ್** (ಪಾ. ಸೂ. ೧-೧-೧೫) ಓಸಂತವಾದ ನಿಪಾತವು ಪ್ರಗೃಹ್ಯಸಂಜ್ಞೆಯನ್ನು ಹೊಂದುತ್ತದೆ. ಮೋ ಎಂಬುದು ಓದಂತವಾದ ನಿಪಾತವಾದುದರಿಂದ ಪ್ರಗೃಹ್ಯಸಂಜ್ಞೆಯು ಬರುತ್ತದೆ. **ಪ್ಲುತಪ್ರಗೃಹ್ಯಾ ಅಚಿ ನಿತ್ಯಂ (ಪಾ. ಸೂ. ೬-೧-೧೨೫)** ಸೂತ್ರದಿಂದ ಮೋ ಎಂಬುದಕ್ಕೆ ಅಚ್ ಪರದಲ್ಲಿರುವುದರಿಂದ ಅವಾದೇಶವು ಬಾಧಿತವಾಗಿ ಪ್ರಕೃತಿಭಾವವು ಬರುತ್ತದೆ. ಮೋ ಅಹಂ ಎಂದೇ ಇರುತ್ತದೆ.

ದ್ವಿಷತೆ—ದ್ವಿಷ ಅಪ್ರೀತೌ ಧಾತು, ಅದಾದಿ. ಇದಕ್ಕೆ ಶತೃಪ್ರತ್ಯಯ ಬರುತ್ತದೆ. ದ್ವಿಷತ್ ಎಂದು ತಾಂತಶಬ್ದವಾಗುತ್ತದೆ. ಚತುರ್ಥೀ ಏಕವಚನದಲ್ಲಿ ದ್ವಿಷತೆ ಎಂದು ರೂಪವಾಗುತ್ತದೆ. **ಶತುರನುಮೋ ನದ್ಯಜಾದೀ** (ವಾ. ಸೂ. ೬-೧-೧೭೩) ನುಮ್ ಹೊಂದದಿರುವ ಶತ್ರಂತದ ಪರದಲ್ಲಿರುವ ಅಜಾದಿಯಾದ ಶಸಾದಿ ವಿಭಕ್ತಿಯು ಉದಾತ್ತವಾಗುತ್ತದೆ ಎಂಬುದರಿಂದ ವಿಭಕ್ತಿಯು (ಎ) ಉದಾತ್ತವಾಗುತ್ತದೆ. ದ್ವಿಷತೆ ಎಂಬುದು ಅಂತೋದಾತ್ತವಾದ ಶಬ್ದ.

ರಧನ್—ರಧ ಹಿಂಸಾಸಂರಾಧ್ಯೋಃ ಧಾತು. ಅದಾದಿ. **ಛಂದಸಿ ಲುಙ್ಲಙ್ಲಿಟಃ** ಸೂತ್ರದಿಂದ ವರ್ತಮಾನಾರ್ಥದಲ್ಲಿ ಲುಙ್ ಬರುತ್ತದೆ. ಉತ್ತಮಪುರುಷೈಕವಚನದಲ್ಲಿ ರಧ್+ಮಿ ಎಂದಿರುವಾಗ ಇತಶ್ಚ

ಸೂತ್ರದಿಂದ ಪ್ರತ್ಯಯದ ಇಕಾರವು ಲೋಪವಾಗುತ್ತದೆ. ಪುಷಾದಿಯಲ್ಲಿ ಈ ಧಾತುವು ಪಠಿತವಾಗಿದೆ. **ಪುಷಾದಿದ್ಯುತಾ** (ಪಾ. ಸೂ. ೩-೧-೫೫) ಲುಙ್ ಪರಸ್ಮೈಪದ ಪರದಲ್ಲಿರುವಾಗ ಇವುಗಳಿಗೆ ಬಂದಿರುವ ಚ್ಲಿಗೆ ಅಜಾದೇಶ ಬರುತ್ತದೆ ಎಂಬುದರಿಂದ ಇಲ್ಲಿ ಚ್ಲಿಗೆ ಅಜಾದೇಶ ಬರುತ್ತದೆ. ರಧಿಜಭೋರತಿ ಸೂತ್ರದಿಂದ ಧಾತುವಿಗೆ ಅಙ್ ಪರದಲ್ಲಿರುವಾಗ ನುಮಾಗಮ ಬರುತ್ತದೆ. ರನ್ಧ್+ಅ+ಮ್ ಎಂದಿರುವಾಗ ಙಿತ್ತಾದ ಅಙ್ ಪರದಲ್ಲಿರುವುದರಿಂದ **ಅನಿದಿತಾಂ ಹಲಉಪಧಾಯಾಃ ಕ್ಙಿತಿ** ಸೂತ್ರದಿಂದ ನುಮಿನ ನಕಾರಕ್ಕೆ ಲೋಪ ಬರುತ್ತದೆ. **ನಮಾಙ್ಯೋಗೆ** (ಪಾ. ಸೂ. ೬-೪-೭೪) ಮಾಙ್ ಸಂಬಂಧವಿರುವಾಗ ಅಂಗಕ್ಕೆ ಲುಙ್ ನಿಮಿತ್ತಕವಾದ ಅಚ್ ಆಚ್ ಆಗಮುಗಳು ಬರುವುದಿಲ್ಲ. ಇಲ್ಲಿ ಮೋ ರಧಂ ಎಂದು ಸಂಬಂಧವಿರುವುದರಿಂದ ಮಾಙ್ ನಿಮಿತ್ತಕವಾದ ಆಡಾಗಮಕ್ಕೆ ನಿಷೇಧ ಬರುತ್ತದೆ. ರಧಮ್ ಎಂದು ರೂಪವಾಗುತ್ತದೆ. ಅತಿಜಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

ಐವತ್ತೊಂದನೆಯ ಸೂಕ್ತವು

ದಶಮೇಽನುವಾಕೇ ಸಪ್ತ ಸೂಕ್ತಾನಿ। ತತ್ರಾಭಿ ತ್ಯಮಿತಿ ಪಂಚದಶರ್ಚಂ ಪ್ರಥಮಂ ಸೂಕ್ತಂ। ಅತ್ರೇತಿಹಾಸಮಾಚಕ್ಷತೇ ಅಂಗಿರಾ ಇಂದ್ರಸದೃಶಂ ಪುತ್ರಮಾತ್ಮನಃ ಕಾಮಯಮಾನೋ ದೇವತಾ ಉಪಾಸಾಂ ಚಕ್ರೇ। ತಸ್ಯ ಸವ್ಯಾಖ್ಯೇನ ಪುತ್ರರೂಪೇಣೇಂದ್ರ ಏವ ಸ್ವಯಂ ಜಜ್ಞೇ ಜಗತಿ ಮತ್ತುಲ್ಯಃ ಕಶ್ಚಿನ್ಮಾ ಭೂದಿತಿ। ಸ ಸವ್ಯ ಆಂಗಿರಸೋಽಸ್ಯ ಸೂಕ್ತಸ್ಯ ಋಷಿಃ। ಚತುರ್ದಶೀಪಂಚದಶ್ಯೌ ತ್ರಿಷ್ಟುಭೌ। ತ್ರಿಷ್ಟುಬಂತಸ್ಯ ಸೂಕ್ತಸ್ಯ ಶಿಷ್ಟಾ ಜಗತ್ಯ ಇತಿ ಪರಿಭಾಷಯಾವಶಿಷ್ಟಾಸ್ತ್ರಯೋದಶರ್ಚೋ ಜಗತ್ಯಃ। ಇಂದ್ರೋ ದೇವತಾ। ತದೇತತ್ಸರ್ವಮನುಕ್ರಮಣ್ಯಾಮುಕ್ತಂ। ಅಭಿ ತ್ಯಂ ಪಂಚೋನಾ ಸವ್ಯೋ ದ್ವಿತ್ರಿಷ್ಟುಬಂತಮಂಗಿರಾ ಇಂದ್ರತುಲ್ಯಂ ಪುತ್ರಮಿಚ್ಛನ್ನಭ್ಯಧ್ಯಾಯತ್ಸವ್ಯ ಇತೀಂದ್ರ ಏವಾಸ್ಯ ಪುತ್ರೋಽಜಾಯತೇತಿ॥ ಅತಿರಾತ್ರೇ ಪ್ರಥಮೇ ರಾತ್ರಿಪರ್ಯಾಯೇ ಹೋತುಃ ಶಸ್ತ್ರ ಇದಂ ಸೂಕ್ತಂ ಶಂಸನೀಯಂ। ಅತಿರಾತ್ರೇ ಪರ್ಯಾಯಾಣಾಮಿತಿ ಖಂಡೇ ಸೂತ್ರಿತಂ। ಅಭಿತ್ಯಂ ಮೇಷಮಧ್ವರ್ಯವೋ ಭರತೇಂದ್ರಾಯ ಸೋಮಮಿತಿ ಯಾಜ್ಯಾ। ಆ. ೬-೪ । ಇತಿ। ಗವಾಮಯನಸ್ಯ ಮಧ್ಯಭೂತೇ ವಿಷುವತ್ಸಂಜ್ಞಕೇಽಹನ್ಯಪಿ ನಿಷ್ಕೇವಲ್ಯ ಇದಂ ಸೂಕ್ತಂ ಶಂಸನೀಯಂ। ತಥಾ ಚ ಸೂತ್ರಿತಂ। ಯೇಸ್ತಿಗ್ಮಶೃಂಗೋಽಭಿ ತ್ಯಂ ಮೇಷಮಿಂದ್ರಸ್ಯ ನು ವೀರ್ಯಾಣೀತ್ಯೇತಸ್ಮಿನ್ನೈಂದ್ರೀಂ ನಿವಿದಂ ಶಸ್ತ್ವಾ। ಆ. ೮-೬ । ಇತಿ॥

ಅನುವಾದವು— ಈ ಸೂಕ್ತದಿಂದ ಪ್ರಥಮಮಂಡಲದ ಹತ್ತನೆಯ ಅನುವಾಕವು ಆರಂಭವಾಗುವುದು. ಈ ಅನುವಾಕದಲ್ಲಿ ಏಳು ಸೂಕ್ತಗಳಿರುವವು (೫೧-೫೭) ಅವುಗಳಲ್ಲಿ **ಅಭಿ ತ್ಯಂ ಮೇಷಂ** ಎಂಬ ಮೊದಲನೆಯ ಸೂಕ್ತದಲ್ಲಿ ಹದಿನೈದು ಋಕ್ಕುಗಳಿರುವವು. ಇಲ್ಲಿ ಒಂದು ಇತಿಹಾಸವು ಉಕ್ತವಾಗಿರುವುದು. ಒಂದಾನೊಂದು ಕಾಲದಲ್ಲಿ ಅಂಗಿರಾ ಎಂಬ ಋಷಿಯು ತನಗೆ ಇಂದ್ರಸಮಾನನಾದ ಪುತ್ರನಾಗಬೇಕೆಂದು ಬಯಸಿ ದೇವತೆಗಳನ್ನು ಉಪಾಸನೆಮಾಡಿದನು. ಆಗ ಇಂದ್ರನು ಜಗತ್ತಿನಲ್ಲಿ ತನಗೆ ಸಮಾನರಾದವರು ಯಾರು ಇರಬಾರದೆಂಬ ಭಾವನೆಯಿಂದ ತಾನೇ ಆ ಋಷಿಗೆ ಸವ್ಯ ಎಂಬ ಹೆಸರಿನ ಪುತ್ರರೂಪದಿಂದ ಉತ್ಪನ್ನನಾದನು. ಅಂಗಿರಸಪುತ್ರನಾದ ಈ ಸವ್ಯನೆಂಬುವನೇ ಈ ಸೂಕ್ತಕ್ಕೆ ಋಷಿಯು. ಈ ಸೂಕ್ತದ ಹದಿನಾಲ್ಕು ಮತ್ತು ಹದಿನೈದನೆಯ ಋಕ್ಕುಗಳು ತ್ರಿಷ್ಟುಪ್ ಛಂದಸ್ಸವು. ಉಳಿದ ಋಕ್ಕುಗಳು ಜಗತೀಛಂದಸ್ಸಿನವು, ಇಂದ್ರನೇ ದೇವತೆಯು, ಇದೆಲ್ಲವೂ ಅನುಕ್ರಮಣಿಕೆ

ಯಲ್ಲಿ ಈ ರೀತಿ ಉಕ್ತವಾಗಿರುವುದು. **ಅಭಿ ತ್ಯಂ ಪಂಚೋನಾ ಸವ್ಯೋ ದ್ವಿತ್ರಿಷ್ಟುಬಂತಮುಂಗಿರಾ ಇಂದ್ರ-ತುಲ್ಯಂ ಪುತ್ರಮಿಚ್ಛನ್ನಭ್ಯಧ್ಯಾಯತ್ಸವ್ಯ ಇತೀಂದ್ರ ಏವಾಸ್ಯ ಪುತ್ರೋಽಜಾಯತೇತಿ**—ಎಂದು. ಅತಿರಾತ್ರ ವೆಂಬ ಯಾಗದ ಪ್ರಥಮರಾತ್ರಿಪರ್ಯಾಯದಲ್ಲಿ ಹೋತೃವೆಂಬ ಋತ್ವಿಜನು ಪಠಿಸಬೇಕಾದ ಶಸ್ತ್ರಮಂತ್ರಗಳಿಗಾಗಿ ಈ ಸೂಕ್ತದ ವಿನಿಯೋಗವಿರುವುದು. ಈ ವಿಷಯವು ಆಶ್ವಲಾಯನ ಶ್ರೌತಸೂತ್ರದ **ಅತಿರಾತ್ರೇ ಪರ್ಯಾ-ಯಾಣಾಂ** ಎಂಬ ಖಂಡದಲ್ಲಿ ಅಭಿತ್ಯಂ ಮೇಷಮಧ್ವರ್ಯವೋ ಭರತೇಂದ್ರಾಯ ಸೋಮಮಿತಿ ಯಾಜ್ಯಾ ಎಂಬ ಸೂತ್ರದಿಂದ ವಿವೃತವಾಗಿರುವುದು. (ಅ. ೬-೪). ಮತ್ತು ಗವಾಮಯನವೆಂಬ ಯಾಗದಲ್ಲಿಯೂ ವಿಷವತ್ಸಂಜ್ಞಕ ವೆಂಬ ಮಧ್ಯದಿನದಲ್ಲಿ ನಿಷ್ಕೇವಲ್ಯಶಸ್ತ್ರಮಂತ್ರಗಳಿಗಾಗಿ ಈ ಸೂಕ್ತದ ವಿನಿಯೋಗವಿರುವುದೆಂದು ಯಸ್ತಿಗ್ಮ ಶೃಂಗೋಽಭಿ ತ್ವಂ ಮೇಷಮಿಂದ್ರಸ್ಯ ನು ವೀರ್ಯಾಣೀತ್ಯೇತಸ್ಮಿನ್ನೈಂದ್ರೀಂ ನಿವಿದಂ ಶಂಸತ್ಯಾ ಎಂಬ ಸೂತ್ರವು ವಿವರಿಸುವುದು (ಅ. ೮-೬).

ಸೂಕ್ತ—೫೧

ಮಂಡಲ—೧ ॥ ಅನುವಾಕ—೧೦ ॥ ಸೂಕ್ತ—೫೧ ॥
ಅಷ್ಟಕ—೧ ॥ ಅಧ್ಯಾಯ—೪ ॥ ವರ್ಗ—೯, ೧೦, ೧೧ ॥

ಸೂಕ್ತದಲ್ಲಿರುವ ಋಕ್ಸಂಖ್ಯೆ—೧೫ ॥
ಋಷಿಃ—ಸವ್ಯ ಆಂಗಿರಸಃ ॥
ದೇವತಾ—ಇಂದ್ರಃ ॥
ಛಂದಃ—೧-೧೩ ಜಗತೀ । ೧೪-೧೫ ತ್ರಿಷ್ಟುಪ್ ॥

॥ ಸಂಹಿತಾಪಾಠಃ ॥

ಅಭಿ ತ್ಯಂ ಮೇಷಂ ಪುರುಹೂತಮೃಗ್ಮಿಯಮಿಂದ್ರಂ ಗೀರ್ಭಿರ್ಮದತಾ ವಸೂಯವೋ ಅರ್ಣವಂ ।
ಯಸ್ಯ ದ್ಯಾವೋ ನ ವಿಚರಂತಿ ಮಾನುಷಾ ಭುಜೇ ಮಂಹಿಷ್ಠಮಭಿ-ವಿಪ್ರಮರ್ಚತ ॥ ೧ ॥

॥ ಪದಪಾಠಃ ॥

ಅಭಿ । ತ್ಯಂ । ಮೇಷಂ । ಪುರು । ಹೂತಂ । ಋಗ್ಮಿಯಂ । ಇಂದ್ರಂ । ಗೀಃಭಿಃ ।
ಮದತ । ವಸೂಃ । ಅರ್ಣವಂ ।
ಯಸ್ಯ । ದ್ಯಾವಃ । ನ । ವಿ । ಚರಂತಿ । ಮಾನುಷಾ । ಭುಜೇ । ಮಂಹಿಷ್ಠಂ । ಅಭಿ ।
ವಿಪ್ರಂ । ಅರ್ಚತ ॥ ೧ ॥

॥ ಸಾಯಣಭಾಷ್ಯಂ ॥

ತ್ಯಂ ಪ್ರಸಿದ್ಧಂ ಮೇಷಂ ಶತ್ರುಭಿಃ ಸ್ಪರ್ಧಮಾನಂ । ಯದ್ವಾ । ಕಣ್ವಪುತ್ರಂ ಮೇಧಾತಿಥಿಂ ಯಜಮಾನಮಿಂದ್ರೋ ಮೇಷರೂಪೇಣಾಗಚ್ಛ ತದೀಯಂ ಸೋಮಂ ಪಪೌ । ಸ ಋಷಿಸ್ತಂ ಮೇಷ ಇತ್ಯವೋಚತ್ । ಅತ ಇದಾನೀಮಪಿ ಮೇಷ ಇತೀಂದ್ರೋಽಭಿಧೀಯತೇ । ಮೇಧಾತಿಥೇರ್ಮೇಷೇತಿ ಸುಬ್ಬ್ರಾಹ್ಮಣ್ಯಮಂತ್ರೈಕದೇಶಸ್ಯ ವ್ಯಾಖ್ಯಾನರೂಪಂ ಬ್ರಾಹ್ಮಣಮೇವಮಾಮ್ನಾಯತೇ । ಮೇಧಾತಿಥಿಂ ಹಿ ಕಣ್ವಾಯನಿಂ ಮೇಷೋ ಭೂತ್ವಾಜಹಾರೇತಿ । ಅಗಚ್ಛ ಸೋಮಮಪಹೃತವಾನಿತ್ಯರ್ಥಃ । ಪುರುಹೂತಂ ಪುರುಭಿರ್ಯಜಮಾನೈರಾಹೂತಂ ಋಗ್ಮಿಯಮೃಗ್ವಿಃ ಕ್ರಿಯಮಾಣಂ । ಸ್ತೂಯಮಾನಮಿತ್ಯರ್ಥಃ । ಸ್ತುತ್ಯಾ ಹಿ ದೇವತಾ ವಿಕ್ರಿಯತೇ । ಯದ್ವಾ । ಋಗ್ಭಿರ್ವಾಯತೇ ಶಬ್ದ್ಯತ ಇತಿ ಋಗ್ಮೀಃ । ತಂ । ವಸ್ವೋ ಅರ್ಣವಂ ಧನಾನಾಮಾವಾಸಭೂಮಿಂ ಏವಂಗುಣವಿಶಿಷ್ಟಮಿಂದ್ರಂ ಹೇ ಸ್ತೋತಾರೋ ಗೀರ್ಭಿಃ ಸ್ತುತಿಭಿರಭಿ ಮದತ । ಅಭಿಮುಖ್ಯೇನ ಹರ್ಷಂ ಪ್ರಾಪಯತ । ಯಸ್ಯೇಂದ್ರಸ್ಯ ಕರ್ಮಾಣಿ ಮಾನುಷಾ ಮನುಷ್ಯಾಣಾಂ ಹಿತಾನಿ ವಿಚರಂತಿ ವಿಶೇಷೇಣ ವರ್ತಂತೇ । ತತ್ರ ದೃಷ್ಟಾಂತಃ । ದ್ಯಾವೋ ನ । ಯಥಾ ಸೂರ್ಯರಶ್ಮಯಃ ಸರ್ವೇಷಾಂ ಹಿತಕರಾಃ । ಭುಜೇ ಭೋಗಾಯ ಮಂಹಿಷ್ಠಮತಿಶಯೇನ ಪ್ರವೃದ್ಧಂ ವಿಪ್ರಂ ಮೇಧಾವಿನಂ ತಥಾವಿಧಮಿಂದ್ರಮಭ್ಯರ್ಚತ । ಅಭಿಪೂಜಯತ ॥ ಮೇಷಂ ವಿಷ ಸ್ಪರ್ಧಾಯಾಂ । ಇಗುಪಧಲಕ್ಷಣೇ ಕೇ ಪ್ರಾಪ್ತೇ ದೇವಸೇನಮೇಷಾದಯಃ ಪಚಾದಿಷು ದ್ರಷ್ಟವ್ಯಾ ಇತಿ ವಚನಾದಚ್ ಪ್ರತ್ಯಯಃ । ಋಗ್ಮಿಯಂ । ತಸ್ಯ ವಿಕಾರ ಇತ್ಯರ್ಥ ವಿಕಾಚೋ ನಿತ್ಯಂ ಮಯಟಮಿಚ್ಛಂತಿ । ಕಾ. ೪-೩-೧೪೪ । ಇತಿ ಮಯಟ್ ಪ್ರತ್ಯಯಃ । ಆಕಾರಸ್ಯೇಕಾರಶ್ಛಾಂದಸಃ । ಪ್ರತ್ಯಯಸ್ವರಃ । ಯದ್ವಾ । ಮಾಙ್ ಮಾನೇ ಶಬ್ದೇ ಚ । ಋಗ್ಭಿರ್ವಾಯತ ಇತಿ ಋಗ್ಮೀಃ । ಕ್ವಿಪಿ ವಲಿ ಲೋಪಸಾತ್ಪೂರ್ವಮೇವ ಪರತ್ವಾತ್ ಘುಮಾಸ್ಥೇತೀತ್ವಂ । ಅಚಿ ಶ್ನುಧಾಸ್ಥಿತ್ಯಾದಿನೇಯಙಾದೇಶಃ । ಕೃದುತ್ತರಪದಪ್ರಕೃತಿಸ್ವರತ್ವಂ । ಮದತ । ಮದೀ ಹರ್ಷೇ । ಹೇತುಮಿತಿ ಣಿಚ್ । ಮದೀ ಹರ್ಷಗ್ಲಪನಯೋರಿತಿ ಘಟಾದಿಷು ಪಾಠಾತ್ ಹರ್ಷಾರ್ಥೇ ವರ್ತಮಾನಸ್ಯ ಘಟಾದಯೋ ಮಿತಃ । ಧಾ । ೧೯-೧ । ಇತಿ ಮಿತ್ತ್ವೇ ಸತಿ ಮಿತಾಂ ಹ್ರಸ್ವಃ । ಪಾ. ೬-೪-೯೨ । ಇತಿ ಹ್ರಸ್ವತ್ವಂ । ಲೋಣ್ಮಧ್ಯಮಪುರುಷಬಹುವನೇ ಶಪಿ ಚ್ಛಂದಸ್ಯುಭಯಥೇತ್ಯಾರ್ಧಧಾತುಕತ್ವಾತ್ ಣೇರನಿಟೀತಿ ಣಿಲೋಪಃ । ತಶಬ್ದಸ್ಯ ಸಾರ್ವಧಾತುಕಮಪಿದಿತಿ ಙಿತ್ತ್ವೇ ಯುಚಿ ತುನುಘುಮಸ್ಥಾಶ್ರುತಜ್ರುತ್ಯಾದೀರುಷ್ಯಾಣಾಮಿತಿ ದೀರ್ಘಃ । ವಸ್ವಃ । ಜಸ್ಯಾಗಮಾನುಶಾಸನಸ್ಯಾನಿತ್ಯತ್ವಾನ್ನುಮಭಾವಃ । ಜಸಾದಿಷು ಚ್ಛಂದಸಿ ವಾವಚನಂ । ಪಾ. ೭-೩-೧೦೯-೧ । ಇತಿ ವಚನಾತ್ ಘೇರ್ಙಿತಿ । ಪಾ. ೭-೩-೧೧೧ । ಇತಿ ಗುಣಾಭಾವೇ ಯಣಾದೇಶಃ । ಅರ್ಣವಂ । ಅರ್ಣ ಉದಕಮಸ್ಮಿನ್ನಸ್ತೀತ್ಯರ್ಣವಃ ಸಮುದ್ರಃ । ಅರ್ಣಸೋ ಲೋಪಶ್ಚ । ಕಾ. ೫-೨-೧೦೯-೩ । ಇತಿ ಮತ್ವರ್ಥೀಯೋ ವಪ್ರತ್ಯಯಃ ಸಲೋಪಶ್ಚ । ತೇನ ಶಬ್ದೇನ ಜಲಾಶ್ರಯವಾಚಿನಾಶ್ರಯಮಾತ್ರಂ ಲಕ್ಷ್ಯತೇ । ಪ್ರತ್ಯಯಸ್ವರಃ । ವಿಚರಂತಿ । ಚರ ಗತ್ಯರ್ಥಃ । ಅದುಪದೇಶಾಲ್ಲಸಾರ್ವಧಾತುಕಾನುದಾತ್ತತ್ವೇ ಧಾತುಸ್ವರಃ । ತಿಙಶ್ಚೋದಾತ್ತವತೀತಿ ಗತಿರನುದಾತ್ತಾ । ಯದ್ವೃತ್ತಯೋಗಾದನಿಘಾತಃ । ಮಾನುಷಾ । ಶೇಶ್ಛಂದಸಿ ಬಹುಲಮಿತಿ ಶೇರ್ಲೋಪಃ । ಭುಜೇ । ಭುಜ ಪಾಲನಾಭ್ಯವಹಾರಯೋಃ । ಸಂಪದಾದಿಲಕ್ಷಣೋ ಭಾವೇ ಕ್ವಿಪ್ । ಸಾವೇಕಾಚ ಇತಿ ವಿಭಕ್ತೇರುದಾತ್ತತ್ವಂ । ಮಂಹಿಷ್ಠಂ । ಮಹಿ ವಹಿ ವೃದ್ಧೌ । ಅತಿಶಯೇನ ಮಂಹಿತಾ ಮಂಹಿಷ್ಠಃ । ತುಶ್ಛಂದಸೀತೀಷ್ಠನ್ಪ್ರತ್ಯಯಃ । ತುರಿಷ್ಠೇಮೇಯಸ್ಸ್ವಿತಿ ತೃಲೋಪಃ । ನಿತ್ತ್ವಾದಾದ್ಯುದಾತ್ತತ್ವಂ । ಅರ್ಚತ । ಅರ್ಚ ಪೂಜಾಯಾಂ । ಭ್ವಾದಿಕಃ ॥

॥ ಪ್ರತಿಪದಾರ್ಥ ॥

ಯಸ್ಯ—ಯಾವ ಇಂದ್ರನ (ಕರ್ಮಗಳು) । **ದ್ಯಾವೋ ನ**—ಸೂರ್ಯನ ಕಿರಣಗಳಂತೆ । **ಮಾನುಷಾ**—ಮಾನವರಿಗೆ (ಹಿತಕರಗಳಾಗಿ) । **ವಿಚರಂತಿ**—ಸುತ್ತಲೂ ಪ್ರಸರಿಸುತ್ತವೆಯೋ, । **ತ್ಯಂ**—ಆ ಪ್ರಸಿದ್ಧನಾಗಿಯೂ। **ಮೇಷಂ**—ಶತ್ರುಗಳೊಡನೆ ಹೋರಾಡುವವನಾಗಿಯೂ ಅಥವಾ ಮೇಷ (ಟಗರು) ರೂಪದಲ್ಲಿರುವವನಾಗಿಯೂ **ಪುರುಹೂತಂ**—ಅನೇಕ ಯಜಮಾನರಿಂದ ಕರೆಯಲ್ಪಟ್ಟವನಾಗಿಯೂ । **ಋಗ್ಮಿಯಂ**—ಋಕ್ಕುಗಳಿಂದ ಸ್ತುತಿಸಲ್ಪಡುವವನಾಗಿಯೂ ಅಥವಾ ಕರೆಯಲ್ಪಡುವವನಾಗಿಯೂ । **ವಸ್ವಃ ಆರ್ಣವಂ**—ಧನಗಳಿಗೆ ಸಾಗರಪ್ರಾಯನಾಗಿಯೂ ಇರತಕ್ಕ । **ಇಂದ್ರಂ**—ಇಂದ್ರನನ್ನು । **ಗೀರ್ಭಿಃ**—(ಸ್ತುತಿರೂಪಗಳಾದ) ವಾಕ್ಯುಗಳಿಂದ । **ಅಭಿಮಂದತ**-ಅಭಿಮುಖರಾಗಿ ತೃಪ್ತಿಪಡಿಸಿ । **ಭುಜೇ**—(ಅಭ್ಯುದಯವನ್ನು) ಅನುಭವಿಸುವುದಕ್ಕಾಗಿ । **ಮಂಹಿಷ್ಠಂ**—ಅತ್ಯಂತ ವೃದ್ಧಿಹೊಂದಿರುವ । **ವಿಪ್ರಂ**—ಮೇಧಾವಿಯಾದ ಇಂದ್ರನನ್ನು । **ಅಭಿ ಅರ್ಚತ**—(ಸುತ್ತಲೂ) ಪೂಜಿಮಾಡಿ.

॥ ಭಾವಾರ್ಥ ॥

ಯಾವ ಇಂದ್ರನ ಕರ್ಮಗಳು ಸೂರ್ಯನ ಕಿರಣಗಳಂತೆ ಸುತ್ತಲೂ ಪ್ರಸರಿಸಿ ಮಾನವರಿಗೆ ಹಿತಕರಗಳಾಗಿವೆಯೋ, ಅಂತಹ ಪ್ರಸಿದ್ಧನಾಗಿಯೂ ಟಗರುರೂಪದಲ್ಲಿರುವವನಾಗಿಯೂ ಅನೇಕ ಯಜಮಾನರಿಂದ ಋಕ್ಕುಗಳಿಂದ ಸ್ತುತಿಸಲ್ಪಡುವವನಾಗಿಯೂ- ಧನಗಳಿಗೆ ಸಾಗರದಂತೆ ಆಧಾರನಾಗಿಯೂ ಇರತಕ್ಕ ಇಂದ್ರನನ್ನು ಸ್ತುತಿರೂಪವಾದ ವಾಕ್ಯುಗಳಿಂದ ತೃಪ್ತಿಪಡಿಸಿ. ಅತ್ಯಂತ ವೃದ್ಧಿಹೊಂದಿರುವ ಮೇಧಾವಿಯಾದ ಇಂದ್ರನನ್ನು ಅಭ್ಯುದಯವನ್ನು ಅನುಭವಿಸುವುದಕ್ಕಾಗಿ ಸುತ್ತಲೂ ಪೂಜೆಮಾಡಿ.

English Translation.

Animate with praises that ram (Indra) who is adored by many, who is gratified by hymns and is an ocean of wealth; whose good deeds spread abroad for the benefit of mankind; Worship the wise and powerful Indra for the enjoyment of prosperity.

॥ ವಿಶೇಷ ವಿಷಯಗಳು ॥

ತ್ಯಂ—ಈ ಶಬ್ದಕ್ಕೆ ತಚ್ಛಬ್ದಾರ್ಥವಿರುವುದು. ತ್ಯಂ ಎಂದರೆ ತಂ, ಆ ಅಥವಾ ಪ್ರಸಿದ್ಧವಾದ ಎಂದರ್ಥವು.

ಮೇಷಂ—ಮಿಷ ಸ್ಪರ್ಧಾಯಾಂ । ಶತ್ರುಭಿಃ ಸ್ಪರ್ಧಮಾನಂ । ಶತ್ರುಗಳೊಡನೆ ಹೋರಾಡುವ, ಅಥವಾ ಇಲ್ಲಿ ಭಾಷ್ಯಕಾರರು ಒಂದು ಪೂರ್ವೇತಿಹಾಸವನ್ನು ಹೇಳಿರುವರು. ಕಣ್ವಪುತ್ರನಾದ ಮೇಧಾತಿಥಿ ಋಷಿಯು ಯಜ್ಞಮಾಡುತ್ತಿರುವಾಗ ಇಂದ್ರನು ಮೇಷ (ಮೇಕೆ, ಟಗರು) ರೂಪದಿಂದ ಅಲ್ಲಿಗೆ ಬಂದು ಅಲ್ಲಿ ಸಿದ್ಧಪಡಿಸಿದ್ದ । ಸೋಮರಸವನ್ನು ಪಾನಮಾಡಿದನು ಆದುದರಿಂದ ಈ ಸೂಕ್ತದ ಋಷಿಯಾದ ಮೇಧಾತಿಥಿಯು ಇಂದ್ರನನ್ನು ಮೇಷ ಎಂಬದಾಗಿ ಸ್ತೋತ್ರಮಾಡಿರುವನು. **ಈ ವಿಷಯವು—ಮೇಧಾತಿಥಿಂ ಹಿ ಕಣ್ವಾಯನಿಂ ಮೇಷೋ ಭೂತ್ವಾಜಹಾರ।** ಎಂಬ ಬ್ರಾಹ್ಮಣವಾಕ್ಯವು ಸಮರ್ಥಿಸುವುದೆಂದು ಭಾಷ್ಯಕಾರರು ಹೇಳಿರುವರು.

ಪುರುಹೂತಂ—ಪುರುಭಿಃ ಬಹುಭಿರ್ಯಜಮಾನೈರಾಹೂತಂ । ಅನೇಕ ಯಜ್ಞಮಾಡುವ ಯಜಮಾನದಿಂದ ಆಹ್ವಾನಿಸಲ್ಪಡುವವನು.

ಋಗ್ಮಿಯಂ—ಋಗ್ಭಿರ್ವಿಕ್ರಿಯಮಾಣಂ ಸ್ತ್ರೂಯಮಾನಮಿತ್ಯರ್ಥಃ । ಋಕ್ಕುಗಳಿಂದ ಅಥವಾ ಮಂತ್ರಗಳಿಂದ ಸ್ತುತಿಸಲ್ಪಡುವವನು. ಇಲ್ಲಿ ದೇವತಾವಿಕ್ರಿಯವೆಂದರೆ ದೇವತಾಸ್ತೋತ್ರವೆಂದರ್ಥವು ಅಥವಾ ಋಗ್ಭಿರ್ವಾರ್ಯತೆ ಶಬ್ದ್ಯತ ಇತಿ ಋಗ್ಮೀಃ । ಋಕ್ಕುಗಳಿಂದ ಶಬ್ದಸಹಿತವಾಗಿ ಹೊಗಳಲ್ಪಡುವವನಾದುದರಿಂದ ಋಗ್ಮೀಃ ಎಂದು ಹೆಸರು.

ವಸ್ವೋ ಅರ್ಣವಂ—ಧನಗಳಿಗೆ ಆವಾಸಭೂಮಿಯು ಎಂದರೆ ಆಶ್ರಯಕರ್ತನು. ಬಹಳ ಧನವುಳ್ಳವನು, ಸಮುದ್ರವು ನೀರಿಗೆ ಹೇಗೆ ಮುಖ್ಯಾಶ್ರಯವಾಗಿರುವುದೋ ಹಾಗೆ ಇಂದ್ರನು ಧನಾದ್ಯೈಶ್ವರ್ಯಗಳಿಗೆ ಮುಖ್ಯಾಶ್ರಯನಾಗಿರುವನು.

ದ್ಯಾವೋ ನ—ಸೂರ್ಯರಶ್ಮಿಯಂತೆ ಹಿತಕರವಾದ.

ಮಂಹಿಷ್ಠಂ—**ಅತಿಶಯೇನ ಪ್ರವೃದ್ಧಂ** । ಅತಿಶಯವಾಗಿ ಪ್ರವೃದ್ಧನಾದ, ಮಹಾಮಹಿಮೆಯುಳ್ಳ,

ವಿಪ್ರಂ—**ಮೇಧಾವಿನಂ** । ಬುದ್ಧಿವಂತನಾದ, ವಿವೇಕಿಯಾದ

ಮಾನುಷಾ—**ಮನುಷ್ಯಾಣಾಂ** । ಮನುಷ್ಯರ, ಇಲ್ಲಿ ಷಷ್ಠ್ಯರ್ಥದಲ್ಲಿ ಪ್ರಥಮಾಭಕ್ತಿಯ ಪ್ರಯೋಗವಿರುವುದು. ಇಲ್ಲಿ ಹಿತಾನಿ ಎಂಬ ಪದವನ್ನು ಅಧ್ಯಾಹಾರಮಾಡಿಕೊಳ್ಳಬೇಕು.

ವಿಚರಂತಿ—**ವಿಶೇಷೇಣ ವರ್ತಂತೆ** । ವಿಶೇಷವಾಗಿ ಇರುವವು.

ಅಭಿ ಅರ್ಚತ—ಪೂಜಿಸಿರಿ, ಸ್ತೋತ್ರಮಾಡಿರಿ.

॥ ವ್ಯಾಕರಣಪ್ರಕ್ರಿಯಾ ॥

ಮೇಷಮ್—ಮಿಷ ಸ್ಪರ್ಧಾಯಾಂ ಧಾತು. ತುದಾದಿ. **ಇಗುಪಧಜ್ಞಾ ಪ್ರೀಕಿರಃ ಕಃ** ಸೂತ್ರದಿಂದ ಧಾತುವು ಇಗುಪಧವಾದುದರಿಂದ ಕ ಪ್ರತ್ಯಯವು ಪ್ರಾಪ್ತವಾಗುತ್ತದೆ. ಆದರೆ **ದೇವಸೇನಮೇಷಾದಯಃ ಪಚಾದಿಷು ದೃಷ್ಟವ್ಯಾಃ** ಎಂದು ವಚನವಿರುವುದರಿಂದ **ನಂದಿಗ್ರಹಪಚಾದಿಭ್ಯಃ** ಸೂತ್ರದಿಂದ ಅಚ್ ಪ್ರತ್ಯಯ ಬರುತ್ತದೆ. ಮಿಷ್+ಅ ಎಂದಿರುವಾಗ ಲಘೂಪಧ ಗುಣ ಬಂದರೆ ಮೇಷ ಎಂದು ರೂಪವಾಗುತ್ತದೆ. ದ್ವಿತೀಯಾ ಏಕವಚನದಲ್ಲಿ ಮೇಷಂ ಎಂದು ರೂಪವಾಗುತ್ತದೆ.

ಋಗ್ಮಿಯಮ್—ತಸ್ಯ ವಿಕಾರಃ ಎಂಬರ್ಥದಲ್ಲಿ ಅಣಾದಿಪ್ರತ್ಯಯಗಳು ಬರುತ್ತವೆ. ಋಚಾಂ ವಿಕಾರಃ ಎಂದು ಅರ್ಥವಿವಕ್ಷಾಮಾಡಿದಾಗ **ನಿತ್ಯಂ ವೃದ್ಧಶರಾದಿಭ್ಯಃ** ಎಂಬ ಸೂತ್ರದಲ್ಲಿ **ಏಕಾಚೋ ನಿತ್ಯಂ ಮಯಟಮಿಚ್ಛಂತಿ** (ಏಕಾಚೋ ನಿತ್ಯಂ) (ಕಾ. ೪-೩-೧೪೪) ಎಂದು ಪಾಠಮಾಡಿರುತ್ತಾರೆ. ವಿಕಾರಾರ್ಥದಲ್ಲಿ ಏಕಾಚಾದ ಪ್ರಾತಿಪದಿಕಕ್ಕೆ ನಿತ್ಯವಾಗಿ ಮಯಚ್ ಪ್ರತ್ಯಯ ಬರುತ್ತದೆ ಎಂದು ಅದರ ತಾತ್ಪರ್ಯ. ಋಚೆಂಬುದು ಏಕಾಚಾದುದರಿಂದ ವಿಕಾರಾರ್ಥ ನಿವಕ್ಷಾಮಾಡಿದುದರಿಂದ ಮಯಚ್ ಪ್ರತ್ಯಯ ಬರುತ್ತದೆ. ಮಯಚ್ ಪರದಲ್ಲಿರುವಾಗ ಪದಸಂಜ್ಞೆ ಇರುವುದರಿಂದ ಋಚಿನ ಚಕಾರಕ್ಕೆ **ಚೋಃ ಕುಃ** ಸೂತ್ರದಿಂದ ಕುತ್ವ ಗಕಾರ ಬರುತ್ತದೆ. ವ್ಯತ್ಯಯದಿಂದ ಮಯಚಿನ ಅಕಾರಕ್ಕೆ ಇಕಾರ ಬರುತ್ತದೆ. ಋಗ್ಮಿಯಂ ಎಂದು ರೂಪವಾಗುತ್ತದೆ. ಪ್ರತ್ಯಯಸ್ವರದಿಂದ ಋಗ್ಮಿಯಂ ಎಂಬುದು ಮಧ್ಯೋದಾತ್ತವಾಗುತ್ತದೆ. ಪ್ರತ್ಯಯವು ಆದ್ಯುದಾತ್ತವಾಗುವುದರಿಂದ

मकारद परदल्लिरुव **इ**कारवु उदात्तवागुत्तदे. अथवा मूङ् मानै शब्दे च धातु. दिवादि. (जुहोत्यादि) ऋग्भिः मीयते इति ऋग्मीः ऋक्कुगळिंद शब्दमाडल्पडुवनु (हॊगळल्पडुवनु) एंदर्थ. **क्विप् च** एंबुदरिंद मूङ् धातुविगे क्विप् बरुत्तदे. क्विपिनल्लि **क**कारवु **लशक्वतद्धिते** सूत्रदिंदलू **प**कारवु **हलन्त्यं** सूत्रदिंदलू **लोपः**वागुत्तदे. इकार उच्चारणार्थवागि हेळिदे. **व**कारक्के **वेरपृक्तस्य** (पा. सू. ६-१-६८) एंबुदरिंद लोप बरबेकादरॆ मॊदलु परसूत्रवादुदरिंद **झुमास्थागापाजहातिसांहलि** (पा. सू. ६-४-६६) एंब सूत्रवु बरुत्तदे. कित्तु क्तिन्नाद हलादिप्रत्ययगळु परदल्लिरुवाग दामुंतादुवुगळ **आ**कारक्के **ई**कार बरुत्तदे. ऋग्मी एंदु **ई**कारान्त शब्दवागुत्तदे. द्वितीयाय एकवचन अम् परदल्लिरुवाग **अचिश्नुधातुभ्रुवां य्वोरियङुवङौ** सूत्रदिंद **ई**कारक्के इयङादेश बरुत्तदे. ऋग्म्यं एंदु रूपवागुत्तदे. **गतिकारकोपपदात् कृत्** (पा. सू. ६-२-१३९) एंबुदरिंद कारकोपपदकवाद कृदंतविरुवुदरिंद कृदुत्तरपद प्रकृतिस्वर बरुत्तदे.

मदत—मदी हर्षे धातु. भ्वादि. प्रेरणार्थ तोरुवुदरिंद **हेतुमति च** (पा. सू. ३-१-२६) सूत्रदिंद णिच् बरुत्तदे. सनादियल्लि णिच् सेरिरुवुदरिंद धातुसंज्ञॆ बरुत्तदे. लोट् मध्यमपुरुष बहुवचन विवक्षे माडिदाग **थ** एंब प्रत्ययु बरुत्तदे. **लोटो लङ्वत्** एंदु लङ्वद्भाव हेळिरुवुदरिंद **तस्थस्थमिपां तांतं तामः** एंदु आयाय विभक्तिगळिगॆ आदेश हेळिरुवुदरिंद **थ** एंबुदक्के **त** एंब आदेशवु बरुत्तदे. मद्+इ+त एंदिरुवाग **अत उपधायाः** एंब सूत्रदिंद धातुविन अकारक्के वृद्धि बरुत्तदे. **घटादयो मितः** एंबुदरिंद भ्वादिय अंतर्गणवाद घटादिगे मिद्वद्भाववन्नु हेळिरुत्तारॆ. **घटादिष्वल्लि मदी हर्षग्लपनयोः** । एंदु पाठमाडिरुत्तारॆ. आदुदरिंद हर्षार्थकवाद ई धातुविगे णिच्चिनल्लि **मितां ह्रस्वः** (पा. सू. ६-४-९२) मित् संज्ञॆ उळ्ळवुगळिगॆ ह्रस्व बरुत्तदॆ एंबुदरिंद ह्रस्व बरुत्तदे. मदि+त एंदिरुवाग विकरणवाद शप् प्रत्ययु बरुत्तदे. **छंदस्युभयथा** एंबुदरिंद वास्तविकवागि इदु सार्वधातुकवादरू इल्ल आर्धधातुक संज्ञॆयन्नु हॊंदुत्तदे. आदुदरिंद मदि+अ+त एंदिरुवाग **णेरनिटि** (पा. सू. ६-४-५१) अनिट्वादियाद आर्धधातुकवु परदल्लिरुवाग णिचिगे लोप बरुत्तदे. मदत एंदु रूपवागुत्तदे. लोटन त प्रत्ययक्के **सार्वधातुकमपित्** सूत्रदिंद ङिद्वद्भाव बरुत्तदे. इदरिंद **येचि-तुनुघमक्षुतङ् कुत्सोरुपसंख्यानम्** (पा. सू. ६-३-७३वा) एंबुदरिंद मंत्रप्रातिदल्लि दीर्घ बरुत्तदे. आदुदरिंद मंत्रप्रातदल्लि मदता एंदु श्रुतवागुत्तदे.

वस्वः—वसु शब्ददमेलॆ षष्ठी एकवचन विवक्षेमाडिदाग ङस् प्रत्ययु बरुत्तदे. वसु+अस् एंदिरुवाग **इकोचिविभक्तौ** सूत्रविंद अजादिप्रत्ययु परदल्लिरुवुदरिंद नुमागमवु प्राप्तवागुत्तदे. आदरॆ **आगमशास्त्रमनित्यं** एंबुदरिंद नुमॆ आगमवादुदरिंद अनित्याश्रयणदिंद इल्लि बरुवुदिल्ल. **जसादिषुच्छंदसि वावचनम्** (पा. सू. ६-३-८०९-८) जसादिविभक्ति परदल्लिरुवाग गुणादिगळु छंदस्सिनल्लि विकल्पवागि बरुत्तवॆ. **शेषोघ्यसखि** सूत्रदिंद वसु शब्दक्के घिसंज्ञॆयिरुवाग **घेर्ङिति** (पा. सू. ७-३-१११) ङित्तादि प्रत्ययु परदल्लिरु

ವಾಗ ಭಸಂಜ್ಞಾ ಉಳ್ಳ ಅಂಗಕ್ಕೆ ಗುಣ ಬರುತ್ತದೆ ಎಂಬುದರಿಂದ ಇಲ್ಲಿ ಗುಣವು ಪ್ರಾಪ್ತವಾಗುತ್ತದೆ. ಆದರೆ ಹಿಂದೆ ಹೇಳಿದ ವಾರ್ತಿಕದಿಂದ ಇಲ್ಲಿ ಗುಣವು ಬರುವುದಿಲ್ಲ. ಆಗ ಸಾಮಾನ್ಯವಾದ ಯಣಾದೇಶವೇ ಬಂದು ರುತ್ವ ವಿಸರ್ಗಗಳು ಬಂದರೆ ವಸ್ವೇಃ ಎಂದು ರೂಪವಾಗುತ್ತದೆ.

ಅರ್ಣವಮ್—ಅರ್ಣಃ ಉದಕಂ ಅಸ್ಮಿನ್ ಅಸ್ತಿ ಇತಿ ಅರ್ಣವಃ ಸಮುದ್ರಃ ನೀರಿಗೆ ಆಶ್ರಯವಾದುದು ಎಂದರ್ಥ. **ಅರ್ಣಸೋಲೋಪಶ್ಚ** (ಕಾ. ೫-೨-೧೦೯-೨) ಅರ್ಣಸ್ ಶಬ್ದದಮೇಲೆ ಮತ್ವರ್ಥದಲ್ಲಿ ವ ಪ್ರತ್ಯಯ ಬರುತ್ತದೆ. ತತ್ಸಂನಿಯೋಗದಿಂದ ಅರ್ಣಸಿನ ಕೊನೆಯ ಸಕಾರಕ್ಕೆ ಲೋಪ ಬರುತ್ತದೆ. ಅರ್ಣವ ಎಂದು ರೂಪವಾಗುತ್ತದೆ. ನೀರಿಗೆ ಆಶ್ರಯ ಎಂಬರ್ಥಕೊಡುವ ಅರ್ಣವಶಬ್ದದಿಂದ ಇಲ್ಲಿ ಕೇವಲ ಆಶ್ರಯ ಎಂಬರ್ಥವನ್ನು ಮಾತ್ರ ಲಕ್ಷಣಾವೃತ್ತಿಯಿಂದ ಹೇಳಬೇಕು. ಪ್ರತ್ಯಯಸ್ವರದಿಂದ ಅರ್ಣವ ಶಬ್ದವು ಅಂತೋದಾತ್ತವಾಗುತ್ತದೆ.

ವಿಚರಂತಿ—ವಿ ಗತಿಸಂಜ್ಞೆಯುಳ್ಳ ಶಬ್ದ. ಚರ ಗತಿಭಕ್ಷಣಯೋಃ ಧಾತು. ಭ್ವಾದಿ. ಇಲ್ಲಿ ಗತ್ಯರ್ಥವನ್ನು ಸ್ವೀಕರಿಸಬೇಕು. ಪ್ರಥಮಪುರುಷ ಬಹುವಚನದಲ್ಲಿ ಚರಂತಿ ಎಂದು ರೂಪವಾಗುತ್ತದೆ. **ಶಪ್ ಪಿತ್ತಾದುದರಿಂದ** ಅನುದಾತ್ತವಾಗುತ್ತದೆ. **ತಾಸ್ಯನುದಾತ್ತೇತ್** ಸೂತ್ರದಿಂದ ಲಸಾರ್ವಧಾತುಕವು ಅನುದಾತ್ತವಾಗುತ್ತದೆ. ಆಗ ಧಾತುವಿನ ಅಂತೋದಾತ್ತಸ್ವರವೇ ಸತಿಶಿಷ್ಟವಾಗುತ್ತದೆ. **ತಿಙಿ ಚೋದಾತ್ತವತಿ** (ಪಾ. ಸೂ. ೪-೧-೭೧) ಸೂತ್ರದಿಂದ ವಿ ಎಂಬ ಗತಿಯು ಅನುದಾತ್ತವಾಗುತ್ತದೆ. ಹಿಂದೆ ಯಸ್ಯ ಎಂಬ ಯಚ್ಛಬ್ದಯೋಗವಿರುವುದರಿಂದ **ಯದ್ವೃತ್ತಾನ್ನಿತ್ಯಂ** (ಪಾ. ಸೂ. ೪-೧-೬೬) ಸೂತ್ರದಿಂದ ತಿಙಂತಕ್ಕೆ ನಿಘಾತಪ್ರತಿಷೇಧ ಬರುತ್ತದೆ.

ಮಾನುಷಾ—ಮಾನುಷಶಬ್ದದಮೇಲೆ ಷಷ್ಠೀ ಬಹುವಚನವಿರುವಾಗ **ಸುಪಾಂ ಸುಲುಕ್** ಸೂತ್ರದಿಂದ ಶಿ ಆದೇಶ ಬರುತ್ತದೆ. ಅದಕ್ಕೆ **ಶೇಶ್ಚಂದಸಿ ಬಹುಲಂ** ಎಂಬುದರಿಂದ ಲೋಪ ಬರುತ್ತದೆ. ಮಾನುಷಾ ಎಂದು ರೂಪವಾಗುತ್ತದೆ.

ಭುಜೇ—ಭುಜ ಪಾಲನಾಭ್ಯವಹಾರಯೋಃ ಧಾತು. ರುಧಾದಿ. **ಸಂಪದಾದಿಭ್ಯಃ ಕ್ವಿಪ್** (ವಾ. ೩೨೩೬) ಎಂಬುದರಿಂದ ಸಂಪದಾದಿಯಲ್ಲಿ ಈ ಧಾತುವು ಸೇರಿರುವುದರಿಂದ ಕ್ವಿಪ್ ಪ್ರತ್ಯಯ ಬರುತ್ತದೆ. ಕ್ವಿಪಿನಲ್ಲಿ ಸರ್ವಲೋಪವಾಗುವುದರಿಂದ ಭುಜ್ ಎಂದೇ ಉಳಿಯುತ್ತದೆ. ಕೃದಂತವಾದುದರಿಂದ **ಪ್ರಾತಿಪದಿಕಸಂಜ್ಞೆ** ಬರುತ್ತದೆ. ಚತುರ್ಥೀ ಏಕವಚನದಲ್ಲಿ ಙೀ ಪ್ರತ್ಯಯ ಬರುತ್ತದೆ. ಭುಜೆ ಎಂದು ರೂಪವಾಗುತ್ತದೆ. **ಸಾವೇಕಾಚಸ್ತೃತೀಯಾ** (ಪಾ. ಸೂ. ೬-೧-೧೬೮) ಎಂಬುದರಿಂದ ಔಭಕ್ತಿಗೆ ಉದಾತ್ತಸ್ವರ ಬರುತ್ತದೆ. ಭುಜೆ ಎಂಬುದು ಅಂತೋದಾತ್ತವಾದ ಪದವಾಗುತ್ತದೆ.

ಮಂಹಿಷ್ಠಮ್—ಮಹಿ ವಹಿ ವೃದ್ಧೌ ಧಾತು. ಅತಿಶಯೇನ ಮಂಹಿತಾ ಮಂಹಿಷ್ಠಃ । ಅತಿಶಯವಾಗಿ ಪ್ರವೃದ್ಧವಾದುದು ಎಂದರ್ಥ. ಮಹಿ ಧಾತುವು ಇದಿತ್ತಾದುದರಿಂದ ನುಮಾಗಮ ಬರುತ್ತದೆ. ಇದಕ್ಕೆ ತೃಚ್ ಪ್ರತ್ಯಯ ಪರದಲ್ಲಿರುವಾಗ ಮಂಹಿತಾ ಎಂದು ರೂಪವಾಗುತ್ತದೆ. **ತುಶ್ಚಂದಸಿ** (ಪಾ. ಸೂ. ೫-೩-೫೮) ತೃನ್ ತಜಂತದಮೇಲೆ ಅತಿಶಯಾರ್ಥದಲ್ಲಿ ಇಷ್ಠನ್ ಈಯಸುನ್ ಪ್ರತ್ಯಯಗಳು ಬರುತ್ತವೆ. ಇದರಿಂದ ಇಲ್ಲಿ ಮಂಹಿಷ್ಠ ಎಂಬ ತೃಜಂತದಮೇಲೆ ಇಷ್ಠನ್ ಪ್ರತ್ಯಯ ಬರುತ್ತದೆ. **ತುರಿಷ್ಠೇಮೇಯಃಸು** (ಪಾ. ಸೂ. ೬-೪-೧೫೪) ಎಂಬುದರಿಂದ ಇಷ್ಠನ್ ಪರದಲ್ಲಿರುವಾಗ ತೃ ಶಬ್ದಕ್ಕೆ ಲೋಪ ಬರುತ್ತದೆ. ದ್ವಿತೀಯೈಕವಚನದಲ್ಲಿ ಮಂಹಿಷ್ಠಂ ಎಂದು ರೂಪವಾಗುತ್ತದೆ. ಇಷ್ಠಿನ್ ನಿತ್ಯಾದುದರಿಂದ ಆದ್ಯುದಾತ್ತಸ್ವರ ಬರುತ್ತದೆ. ಮಂಹಿಷ್ಠಂ ಎಂಬುದು ಆದ್ಯುದಾತ್ತವಾದ ಪದವಾಗುತ್ತದೆ.

ಅರ್ಚತ—ಅರ್ಚ ಪೂಜಾಯಾಂ ಧಾತು ಭ್ವಾದಿ. ಲೋಟ್ ಮಧ್ಯಮಪುರುಷ ಬಹುವಚನದಲ್ಲಿ ಅರ್ಚತ ಎಂದು ರೂಪವಾಗುತ್ತದೆ. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

॥ संहितापाठः ॥

अभीमवन्नन्त्स्वभिष्टिमूतयोऽन्तरिक्षप्रां तविषीभिरावृतं।
इन्द्रं दक्षासऋभवो मदच्युतं शतक्रतुं जवनी सूनृता-
रुहत् ॥ ७ ॥

॥ पदपाठः ॥

अभि । ईं । अवन्वन् । सुऽअभिष्टिं । ऊतयः । अन्तरिक्षऽप्रां ।
तविषीभिः । आऽवृतं ।
इन्द्रं । दक्षासः । ऋभवः । मदऽच्युतं । शतऽक्रतुं । जवनी ।
सूनृता । आ । अरुहत् ॥ ७ ॥

॥ सायणभाष्यं ॥

ऊतयोऽविकारो रक्षिकारो दक्षासो दक्षयितारः प्रवर्धयितार ऋभवः। उरु भ्राजन्तीति स्वरुक्तव्युत्पत्त्या ऋभवोऽत्र मरुत उच्यन्ते। एवंभूता मरुत इन्द्रमभीमवन्वन्। अभिमुख्येन ऋत्वभजन्त। वृत्रेण सह युध्यमानमिन्द्रं सर्वे देवाः पर्यत्यजन्। मरुतस्तु तथा न पर्यत्याक्षुः। तथा चाम्नास्यते। विश्वे देवा अजहुर्यें सखायः। मरुद्भिरिन्द्र सख्यं ते अस्तु। ऋग्वे ८-९६-८। इति। ब्राह्मणेऽस्याम्नातं। मरुतो ह्येनं नाजहुः। ऐ. ब्रा ३-१०। इति। कीदृशमिन्द्रं। स्वभिष्टिं शोभनाभ्येषणवन्तं। शोभनाभिगमनमित्यर्थः। अन्तरिक्षप्रां। अन्तरिक्षं द्युलोकं स्वतेजसा प्राति पूरयतीत्यन्तरिक्षप्राः। द्वादशस्वादित्येषु इन्द्रस्य विद्यमानत्वात्। शाखान्तरेऽपि श्रूयतेः। तस्य इन्द्रश्च विवस्वाग्ंश्चाजायेताम्। तै. ब्रा. १-१-९-३। इति। इन्द्रश्च विवस्वांश्चेत्येते इति च। तविषीभिरावृतं। तविषीति बलनाम। तविषी शुष्मामिति तन्नामसु पाठात्। बलैरावृतं। अति बलिनमित्यर्थः। अत एव मदच्युतं शत्रूणां मदस्य गर्वस्य च्यावयितारं। किंच शतक्रतुं शतसंख्यानां क्रतू-

नामाहर्तारं बहुविधकर्मणां वा । पूर्वोक्तं तमिन्द्रं जवनी वृत्रवधं प्रति प्रेरयित्री सूनृता कैर्मरुद्भिः प्रयुक्ता प्रहर भगवो जहि वीरयस्व । ऐ. ब्रा ३-१० । इति ब्राह्मणोक्तरूपा प्रियसत्याशिका वागप्यारुहत् । आरूढवती । वृत्रवधं प्रति सापि वागिन्द्रस्योत्साहकारिण्यभूदित्यर्थः॥ अवन्वन् । वन षण संभक्तौ । लङ् शपि प्राप्ते व्यत्ययेनोपृत्ययः । स्वभिष्टिं । इष गतौ । भावे क्तिन्प्रत्ययः । शितुत्रेत्यादिनेट्प्रतिषेधः । एमन्नादित्वात्पररूपत्वं । पा. ६-१-९४-६ । शोभना अभिष्टयो यस्येति बहुव्रीहौ नञ्सुभ्यामित्युत्तरपदान्तोदात्तत्वं । ऊतयः । अवतेः कृत्यल्युटो बहुलमिति कर्तरि क्तिन्प्रत्ययः । यद्वा । क्विब्क्तौ च संज्ञायामिति क्तिच् ज्वरत्वरेत्यादिनोट् । चित इत्यन्तोदात्तत्वं । अन्तरिक्षप्राम् । प्रा पूरणे । अन्तरिक्षं प्राति पूरयतीत्यन्तरिक्षप्राः । अतो मनिन्नित्यत्र चेशब्दाद्विच् । अवृतं । वृञ् वरणे । अप्रियत इत्यावृतः । कर्मणि निष्ठा । गतिरनन्तर इति गतेः प्रकृतिस्वरत्वं । दक्षासः । दक्ष वृद्धौ । दक्षन्त एधिरिति दक्षाः । करणे घञ् । ञ्नित्त्वादाद्युदात्तत्वं । अज्जसेरसुक् । मदचय्युतं । च्युङ् गतौ । अन्तर्भावितण्यर्थात् क्विप्टेरिति क्विप् । ह्रस्वस्येति कृतीति तुक् । शतक्रतुं । शतं क्रतवो यस्य । बहुव्रीहौ पूर्वपदप्रकृतिस्वरत्वं । जवनी । जु इति सौत्रो धातुः । करणे ल्युट् । टिड्ढाणञ्इत्यादिना ङीप् । लित्स्वरेण जकारात्परस्योदात्तत्वं । अरुहत् । अरुहेर्लुङि कृमृदृरुहिभ्यश्छन्दसीति च्लेरङादेशः ॥

॥ प्रतिपदार्थ ॥

ऊतयेः—रक्षिसुववरू । दक्षासः—(पोषिसि) वृद्धि हॊंदिसुववरू अद । ऋभवः—अधिकवागि प्रकाशिसुव मरुत्तुगळु । स्वभिष्टं—गंभीरवाद गमनवुळ्ळवनू । अंतरिक्षप्राम्—अंतरिक्षवन्नु (तन्न तेजस्सिनिंद) तुंबुववनू । तविषीभिः आवृतं—बलगळिंद तुंबिदवनू (अत्यंत बलशालियादवनू) । मदचय्युतं—(अद्दरिंदलेय शत्रुविन) गर्ववन्नु नाशमाड तक्कवनू । शतक्रतुं—नूरु यज्ञकर्तनू अथवा बहुविधवाद पवित्रकर्मगळन्नु माडुववनू अद । इंद्रं—इंद्रनन्नु । अभीं अवन्वन्—अभिमुखवागि होगि सेविसिदरु. जवनी—(वृत्रवधक्कागि) प्रेरिसतक्कद्दू । सूनृता—(मरुत्तुगळिंद उच्चरिसल्पट्टु) प्रियवादद्दू सत्यरूपवुळ्ळद्दू अद वाक्कु । अरुहत्—(इंद्रनिगे उत्साहवन्नुंटुमाडुवंते) होगि सेरितु.

॥ भावार्थ ॥

लोकरक्षकरू पोषकरू अधिकवागि प्रकाशिसुववरू अद मरुत्तुगळु, गंभीरगमनवुळ्ळवनू, अंतरिक्षवन्नु तन्न तेजस्सिनिंद बेळगिसुववनू, बलशालियादवनू, अद्दरिंदलेय शत्रुगळ गर्ववन्नडगिसुववनू, नूरारु पवित्रकर्मगळन्नु माडुववनू अद इंद्रनन्नु अभिमुखवागि होगि सेविसिदरु. वृत्रवधक्के प्रेरिसलु अवरु उच्चरिसिद प्रियवादद्दू सत्यवादद्दू अद वाक्कु इंद्रनिगे उत्साहवन्नुंटुमाडितु.

English Translation.

If was this Indra, the great granter of wishes, the pervader of heaven, surrounded by powers that his allies, Marnts, loved; it was brave Indra that the mighty and wise Maruts loved; it was Indra of hundred wisdoms that their encouraging vaice reached

॥ ವಿಶೇಷ ವಿಷಯಗಳು ॥

ಋಭವಃ—**ಉರು ಭ್ರಾಂತಿ ಇತಿ ನೈರುಕ್ತವ್ಯುತ್ಪತ್ತ್ಯಾ ಋಭವೋಽತ್ರ ಮರುತ ಉಚ್ಯಂತೇ** । ಬಹಳವಾಗಿ ಪ್ರಕಾಶಿಸುವ ದೇವತೆಗಳಾದ ಮರುತ್ತುಗಳಿಗೆ ಮೇಲಿನ ನಿರುಕ್ತವ್ಯುತ್ಪತ್ತಿಯಿಂದ ಋಭು ಪದವು ವಾಚ್ಯವಾಗಿದೆ. ಮತ್ತು ನಿರುಕ್ತದಲ್ಲಿ **ಋತೇನ ಭ್ರಾಂತೀತಿ ವಾ** । **ಋತೇನ ಭವಂತೀತಿವಾ** । ಎಂದು ಬೇರೆ ಎರಡು ರೀತಿಯಲ್ಲಿ ವ್ಯುತ್ಪತ್ತಿಯನ್ನು ತೋರಿಸಿ ಸತ್ಯದಿಂದಲೂ, ಸತ್ಯದಿಂದಲೂ ಪ್ರಕಾಶಿಸುತ್ತಿರುವರು ಎಂಬರ್ಥವನ್ನು ಋಭುಪದಕ್ಕೆ ಕಲ್ಪಿಸಿರುವರು. ಇವರು ಸತ್ಯವಂತರೆಂಬುದಕ್ಕೆ ಒಂದು ನಿದರ್ಶನವಿದೆ. ವೃತ್ರಾಸುರನೊಡನೆ ಇಂದ್ರನು ಹೋರಾಡುವಾಗ ಸಕಲ ದೇವತೆಗಳೂ ವೃತ್ರನಿಗೆ ಹೆದರಿ ಓಡಿಹೋದರು. ಆದರೆ ಈ ಮರುತ್ತುಗಳು ಮಾತ್ರ ಇಂದ್ರನ ಪಕ್ಷವನ್ನು ಬಿಡಲಿಲ್ಲ. ಆದ್ದರಿಂದಲೇ ಇಂದ್ರಸುಖರಿಂದೂ ಮರುತ್ತುಗಳಿಗೆ ಪ್ರಸಿದ್ಧಿಯಿದೆ. **ವಿಶ್ವೇ ದೇವಾ ಅಜಹುರ್ಯೇ ಸಖಾಯಃ । ಮರುದ್ಭಿರಿಂದ್ರ ಸಖ್ಯಂ ತೇ ಅಸ್ತು** (ಋ. ಸಂ. ೮-೯೬-೭) “**ಮರುತೋ ಹೈನಂ ನಾಜಹುಃ**” (ಐ. ಬ್ರಾ. ೩-೨೦) ಈ ಶ್ರುತಿಗಳೂ ಅದೇ ಅರ್ಥವನ್ನೇ ಸಾರುತ್ತಿರುವುವು.

ಅಂತರಿಕ್ಷಸ್ಯಾಂ—**ಅಂತರಿಕ್ಷಂ ದ್ಯುಲೋಕಂ ಸ್ವತೇಜಸಾ ಪ್ರಾತಿ ಪೂರಯತೀತಿ ಅಂತರಿಕ್ಷಸ್ಯಾಃ** । ದ್ವಾದಶಸ್ವಾದಿತ್ಯೇಷು ಇಂದ್ರಸ್ಯ ವಿದ್ಯಮಾನತ್ವಾತ್ । ದ್ವಾದಶಾದಿತ್ಯರು ದೇವಲೋಕವನ್ನೂ ಇತರ ಎಲ್ಲ ಲೋಕಗಳನ್ನೂ ತಮ್ಮ ತೇಜಸ್ಸಿನಿಂದ ಬೆಳಗಿಸುವರು. ಆದರೆ ಅವರು ಇಂದ್ರನಿಗೆ ಅಧೀನರಾಗಿರುವುದರಿಂದ ದ್ವಾದಶಾದಿತ್ಯ ವಾಚಕವಾದ, ಈ ಪದವು ‘ಇಂದ್ರ’ ಎಂಬರ್ಥಕ್ಕೂ ವಿಶೇಷಣವಾಗಿರುವುದು. “**ತಸ್ಯಾ ಇಂದ್ರಶ್ಚ ವಿವಸ್ವಾಂಶ್ಚಾಜಾಯೇತಾಂ**” ತೈ. ಬ್ರಾ. (೧-೧-೯-೩) “**ಇಂದಶ್ಚ ವಿವಸ್ವಾಗ್ಶ್ಚೇತ್ಯೇತೇ**” (ತೈ. ಆ. ೧-೧೩-೩) ಎಂಬ ಶ್ರುತಿಗಳೂ ಇದಕ್ಕೆ ನಿದರ್ಶನಗಳಾಗಿವೆ.

ತವಿಷೀ ತವಿಷೀತಿ ಬಲನಾಮ । ‘**ತವಿಷೀ ಶುಷ್ಮಂ**’ (ನಿ. ೨-೯) ಹೀಗೆಂದು ಬಲಾರ್ಥದಲ್ಲಿ ಉಕ್ತವಾಗಿರುವುದರಿಂದ ತವಿಷೀ ಎಂದರೆ ಬಲ, ಶಕ್ತಿ ಎಂದರ್ಥ.

ಶತಕ್ರತುಂ—ನೂರು ಯಾಗಗಳನ್ನು ನಡೆಸಿದವನು, ಅಥವಾ ಅನೇಕ ಕರ್ಮಗಳನ್ನು ನಡೆಸುವವನು. ಎಂದರ್ಥವು.

ಜವನೀ—ವೃತಾಸುರವಧೆಗೆ ಪ್ರೇರಿಸಿದ ಮಾತು. ಜು. ಎಂಬುದು ಸೂತ್ರ ಸಂಬಂಧವಾದ ಧಾತು. ಇದಕ್ಕೆ ಕರಣಾರ್ಥದಲ್ಲಿ ಲ್ಯುಟ್ ಪ್ರತ್ಯಯವು ಬಂದಿದೆ.

ಸೂನೃತಾ—ಮರುದ್ದೇವತೆಗಳು ದೇವೇಂದ್ರನನ್ನು ಸ್ತುತಿಸುವ “**ಪ್ರೇಹರ ಭಗವೋ ಜಹಿ ವೀರಯೇಸ್ವ**” (ಐ. ಬ್ರಾ. ೩-೨೦) ಇತ್ಯಾದಿ ಬ್ರಾಹ್ಮಣೋಕ್ತವಾದ ಪ್ರಿಯವೂ ಸತ್ಯವೂ ಆದ ಮಾತುಗಳು.

॥ ವ್ಯಾಕರಣಪ್ರಕ್ರಿಯಾ ॥

इंद्र—ಎಲೈ ಇಂದ್ರನೇ । **यानि ब्रह्माणि**—ಯಾವ ಸ್ತೋತ್ರ (ಶಸ್ತ್ರ) ರೂಪಗಳಾದ ಮಂತ್ರಗಳು । **तव**—ನಿನ್ನ । **वर्धना**—(ಮಹಿಮೆಯನ್ನು ಕೊಂಡಾಡಿ) ಬೆಳೆಸುವುವೋ ಅವು । **ऊर्मयः**—ಜಲಪ್ರವಾಹಗಳು । **ह्रदं न**—ಸಾಗರವನ್ನು ಸೇರುವಂತೆ । **त्वा**—ನಿನ್ನನ್ನು । **न्यृषंति हि**—ಸೇರಿಯೇ ಸೇರುತ್ತವೆ। **त्वष्टा चित्**-ತ್ವಷ್ಟೃವಾದರೋ । **ते**—ನಿನ್ನ । **युज्यं**-ಯೋಗ್ಯವಾದ । **शवः**—ಬಲವನ್ನು । **ववृधे**—ವೃದ್ಧಿಯಾಗುವಂತೆ ಮಾಡಿದನು (ಮತ್ತು) । **अभिभूत्योजसं**—(ಶತ್ರುಗಳನ್ನು) ಸೋಲಿಸುವ ಶಕ್ತಿಯಿಂದ ಕೂಡಿದ । **वज्रं**—ವಜ್ರಾಯುಧವನ್ನು । **तक्षत्**—ಅತ್ಯಂತ ಹರಿತವಾಗುವಂತೆ ಮಾಡಿದನು

॥ भावार्थ ॥

ಎಲೈ ಇಂದ್ರನೇ, ನಿನ್ನ ಮಹಿಮೆಯನ್ನು ಕೊಂಡಾಡಿ ಬೆಳೆಸುವ ಸ್ತೋತ್ರರೂಪಗಳಿಂದ ಮಂತ್ರಗಳು, ಜಲಪ್ರವಾಹಗಳು ಸಾಗರವನ್ನು ಖಂಡಿತ ಸೇರುವಂತೆ, ನಿನ್ನನ್ನು ಸೇರಿಯೇ ಸೇರುತ್ತವೆ. ತ್ವಷ್ಟೃದೇವನಾದರೋ, ನಿನಗೆ ಯೋಗ್ಯವಾದ ಬಲವನ್ನು ವೃದ್ಧಿಯಾಗುವಂತೆ ಮಾಡಿದನು ಮತ್ತು ಶತ್ರುಗಳನ್ನೆಲ್ಲ ಸೋಲಿಸುವ ಶಕ್ತಿಯುಳ್ಳ ನಿನ್ನ ವಜ್ರಾಯುಧವನ್ನು ಅತ್ಯಂತ ಹರಿತವಾಗುವಂತೆ ಮಾಡಿದನು.

English Translation.

O Indra, the hymns, that glorify you, attain you as rivulets flow into a lake. Twashtri has augmented your appropriate vigour; he has sharpened your bolt with overpowering might.

॥ विशेष विषयगळु ॥

ह्रदं न—ಇವಾರ್ಥಕವಾದ ನ ಶಬ್ದ ಸಾಹಚರ್ಯದಿಂದ ಇದಕ್ಕೆ ಕೊಳವನ್ನು ಪ್ರವೇಶಿಸುವಂತೆ ಎಂದರ್ಥಬರುವುದು.

न्यृषंति—ಋಷೀ ಗತೌ ಎಂಬ ಗತ್ಯರ್ಥಕಧಾತುವಿನಿಂದ ನಿಷ್ಪನ್ನವಾದ ಈ ಶಬ್ದವು ನಿತರಾಂ ಪ್ರಾಪ್ನುವಂತಿ ತಡೆಯಿಲ್ಲದೆ ಪ್ರವೇಶಿಸುವುವು ಎಂಬರ್ಥವನ್ನು ಕೊಡುವುದು.

त्वष्टा चित्—स त्वष्टा देव एव । ಇಲ್ಲಿ ಚಿತ್ ಎಂಬ ಶಬ್ದಕ್ಕೆ ಏವಶಬ್ದಾರ್ಥವಿದೆ. ಆ ತ್ವಷ್ಟೃದೇವತೆಯಾದರೋ ಎಂದರ್ಥ.

ಅಭಿಭೂತ್ಯೋಜಸಂ—ಅಭಿಭೂತಿ+ಓಜಸಂ—ಅಭಿಭೂತಿ ಓಜೋ ಯಸ್ಯ ತತ್ । ಶತ್ರುಗಳನ್ನು ಮುಂಕುಗೊಳಿಸುವ ಅಥವಾ ತಿರಸ್ಕರಿಸುವ ಸಾಮರ್ಥ್ಯವುಳ್ಳದ್ದು ಎಂದು ಇದು ವಜ್ರಾಯುಧವನ್ನು ವಿಶೇಷಿಸುವುದು. **ಅಭಿಭೂಯತೇ ಅನೇನೇತಿ ಅಭಿಭೂತಿ** ಎಂದು ವಿಗ್ರಹವು.

॥ ವ್ಯಾಕರಣಪ್ರಕ್ರಿಯಾ ॥

ನೃಷಂತಿ—ನಿ+ಋಷಂತಿ ಋಷೀ ಗತೌ ಧಾತು. ತುದಾದಿ. **ಯೋಂತೇಃ** ಎಂಬುದರಿಂದ ಷಿಗೆ ಜಂತಾ ದೇಶ. **ತುದಾದಿಭ್ಯಃ ಶಃ** ಎಂಬುದರಿಂದ ಶವಿಕರಣ. **ಅತೋಗುಣೇ** ಸೂತ್ರದಿಂದ ಪರರೂಪ. ಋಷಂತಿ ಎಂದು ರೂಪವಾಗುತ್ತದೆ. ಅದುಪದೇಶದ ಪರದಲ್ಲಿರುವುದರಿಂದ ಲಸಾರ್ವಧಾತುಕವು **ತಾಸ್ಯನುದಾತ್ತೇತ್**—ಸೂತ್ರದಿಂದ ಅನುದಾತ್ತವಾಗುತ್ತದೆ. ಆಗ ವಿಕರಣಸ್ವರವು ಉಳಿಯುತ್ತದೆ. ನ ಹಿ ಎಂದು ಹಿ ಶಬ್ದದ ಯೋಗ ವಿರುವುದರಿಂದ **ಹಿಚೆ** (ಪಾ. ಸೂ. ೮-೧-೩೪) ಎಂಬುದರಿಂದ ನಿಘಾತಪ್ರತಿಷೇಧ.

ಊರ್ಮಯಃ—ಋ ಗತೌ ಧಾತು. ಯಚ್ಛಂತಿ-ಗಚ್ಛಂತಿ ಇತಿ ಊರ್ಮಯಃ **ಆರ್ತೇರೂಚೆ** (ಉ. ಸೂ. ೪-೬೩) ಎಂಬುದರಿಂದ ಮಿ ಪ್ರತ್ಯಯ. ಮಿ ಪರದಲ್ಲಿರುವಾಗ ಧಾತುವಿಗೆ ಗುಣಬಂದಾಗ, ಆರಿನ ಅಕಾರಕ್ಕೆ ಊಕಾರಾದೇಶ. ಊರ್ಮಿ ಶಬ್ದವಾಗುತ್ತದೆ. ಪ್ರತ್ಯಯ ಸ್ವರದಿಂದ ಅಂತೋದಾತ್ತ.

ವರ್ಧನಾ—ವೃಧು ವೃದ್ಧೌ ಧಾತು. ವರ್ಧತೇ ಏಭಿರಿತಿ ವರ್ಧನಾ. ಕರಣಾರ್ಥದಲ್ಲಿ ಲ್ಯುಟ್. ವರ್ಧನ ಶಬ್ದವಾಗುತ್ತದೆ. **ಯುವೋರನಾಕೌ** ಎಂಬುದರಿಂದ ಯು ಎಂಬುದಕ್ಕೆ ಅನಾದೇಶ. ಪ್ರಥಮಾ ಬಹುವಚನದಲ್ಲಿ ನುಮಾಗಮ ದೀರ್ಘ. **ಶೇಶ್ಛಂದಸಿ ಬಹುಲಂ** ಎಂಬುದರಿಂದ ಶಿಗೆ ಲೋಪ ಬಂದರೆ **ವರ್ಧನಾ** ಎಂದು ರೂಪ ವಾಗುತ್ತದೆ.

ತತಕ್ಷ—ತಕ್ಷೂ ತ್ವಕ್ಷೂ ತನೂಕರಣೇ ಧಾತು. ಲಿಟ್ ಪ್ರಥಮಪುರುಷದ ತಿಪಿಗೆ **ಪರಸ್ಮೈಪದಾನಾಂ** ಎಂಬುದರಿಂದ ಣಲಾದೇಶ. ಲಿಣ್ಣಿಮಿತ್ತಕವಾಗಿ ಧಾತುವಿಗೆ ದ್ವಿತ್ವ' ಅಭ್ಯಾಸಕ್ಕೆ ಹಲಾದಿಶೇಷ. ಣಲ್ ಲಿತ್ವಾ ದುದರಿಂದ **ಲಿತಿ** ಎಂಬುದರಿಂದ ಪ್ರತ್ಯಯದ ಪೂರ್ವಕ್ಕೆ ಉದಾತ್ತಸ್ವರ ಬರುತ್ತದೆ. ಪಾದದ ಆದಿಯಲ್ಲಿರುವುದ ರಿಂದ **ಅಸಾದಾದೌ** ಎಂದು ನಿಷೇಧ ಮಾಡಿರುವುದರಿಂದ ನಿಘಾತಸ್ವರ ಬರುವುದಿಲ್ಲ.

ಅಭಿಭೂತ್ಯೋಜಸಮ್—ಅಭಿಭೂಯತೇಽನೇನೇತಿ ಅಭಿಭೂತಿ. ಭೂ ಧಾತುವಿಗೆ ಕರಣಾರ್ಥದಲ್ಲಿ ಕ್ತಿನ್. **ತಾದೌಚಿನಿತಿ** (ಪಾ. ಸೂ. ೬-೨-೫೦) ಎಂಬುದರಿಂದ ಗತಿಗೆ (ಅಭಿ) ಪ್ರಕೃತಿಸ್ವರ ಬರುತ್ತದೆ. ಅಭಿ ಭೂತಿ ಓಜೋ ಯಸ್ಯ ತತ್ ಅಭಿಭೂತ್ಯೋಜಃ **ತತ್** ಬಹುವ್ರೀಹಿಸಮಾಸ. ಬಹುವ್ರೀಹೌ **ಪ್ರಕೃತ್ಯಾಪೂರ್ವ ಪದಮ್** ಎಂಬುದರಿಂದ ಪೂರ್ವಪದಪ್ರಕೃತಿಸ್ವರ ಬರುತ್ತದೆ.

॥ ಸಂಹಿತಾಪಾಠಃ ॥

ಜಘ್ನಾ॒ವ ಉ॑ ಹರಿ॒ಭಿಃ ಸಂಭೃ॑ತಕ್ರತ॒ವಿಂದ್ರ॑ ವೃ॒ತ್ರಂ ಮನು॑ಷೇ ಗಾ॒ತುಯ॑ನ್ನಪಃ
ಅಯ॑ಚ್ಛಥಾ ಬಾ॒ಹ್ವೋರ್ವ॑ಜ್ರಮಾ॒ಯಸ॑ಮ॒ಪಾರ॑ಯೋ ದಿ॒ವ್ಯಾ ಸು॒ರ್ಯಂ ದೃ॒ಶೇ ॥ ೮ ॥

॥ ಪದಪಾಠಃ ॥

ಜಘನ್ವಾನ್ । ಊಂ ಇತಿ । ಹರಿಕಭಿಃ । ಸಂಭೃತಕ್ರತೋ ಇತಿ ಸಂಭೃತಃಕ್ರತೋ ।
ಇಂದ್ರ । ವೃತ್ರಂ । ಮನುಷೇ । ಗಾತ್ವಯನ್ । ಅಪಃ ।
ಅಯಚ್ಛಥಾಃ । ಬಾಹ್ವೋಃ । ವಜ್ರಂ । ಆಯಸಂ । ಅಧಾರಯಃ । ದಿವಿ । ಆ ।
ಸೂರ್ಯಂ । ದೃಶೇ ॥ ೯ ॥

॥ ಸಾಯಣಭಾಷ್ಯ ॥

ಹೇ ಸಂಭೃತಕ್ರತೋ ಸಂಪಾದಿತಕರ್ಮನ್ ಸಂಪಾದಿತಪ್ರಜ್ಞ ವೇಂದ್ರ ಮನುಷೇ ಜನಾಯ ಗಾತುಯೆನ್ ಗಾತುಂ ಮಾರ್ಗಮಿಚ್ಛನ್ ವೃತ್ರಂ ಲೋಕಾನಾಮಾವರಕಮಸುರಂ ಹರಿಭಿರಶ್ವೈರ್ಯುಕ್ತಸ್ತ್ವಂ ಜಘನ್ವಾನ್ ಉ । ಹತವಾನ್ ಖಲು । ತದನಂತರಮಪೋ ವೃಷ್ಟ್ಯುದಕಾನಿ ಪ್ರಾವರ್ತಯ ಇತ್ಯಧ್ಯಾಹಾರಃ । ಬಾಹ್ವೋಸ್ತ್ವದೀಯಯೋರ್ಹಸ್ತಯೋರಾಯಸಮಯೋಮಯಂ ವಜ್ರಮಯಚ್ಛಥಾಃ । ಅಗ್ರಹೀಃ । ಆಕಾರಃ ಸಮುಚ್ಚಯಾರ್ಥಃ । ಸೂರ್ಯಂ ಚ ದಿವಿ ದ್ಯುಲೋಕೇ ದೃಶೇ ದ್ರಷ್ಟುಂ ಸರ್ವೇಷಾಮಸ್ಮಾಕಂ ದರ್ಶನಾಯಾಧಾರಯಃ । ಸ್ಥಾಪಯಾಂ ಚಕೃಷೇ ॥ ಜಘನ್ವಾನ್ । ಹಂತೇರ್ಲಿಟಃ ಕ್ವಸುಃ । ವಿಭಾಷಾ ಗಮಹನವಿದವಿಶಾಂ । ಪಾ. ೭-೨-೬೮ । ಇತೀಡಾಗಮಸ್ಯ ವಿಕಲ್ಪೋಕ್ತೇರಭಾವಃ । ಗಾತುಯೆನ್ । ಗಾತುಮಿಚ್ಛಸಿ । ಛಂದಸಿ ಪರೇಚ್ಛಾಯಾಮಪೀತಿ ಕ್ಯಚ್ । ಕಾ. ೩-೧-೮-೨ । ನ ಛಂದಸ್ಯಪುತ್ರಸ್ಯೇತಿ ದೀರ್ಘಪ್ರತಿಷೇಧಃ । ಕ್ಯಜಂತಾಚ್ಚ ತಕರ್ಯದುಪದೇಶಾಲ್ಲಸಾರ್ವಧಾತುಕಾನುದಾತ್ತತ್ವೇ ಕ್ಯಚ ಏವ ಸ್ವರಃ ಶಿಷ್ಯತೇ । ಬಾಹ್ವೋಃ । ಉದಾತ್ತಯಣೋ ಹಲ್ಪೂರ್ವಾದಿತಿ ವಿಭಕ್ತೇರುದಾತ್ತತ್ವಂ ॥ ೯ ॥

॥ ಪ್ರತಿಪದಾರ್ಥ ॥

ಸಂಭೃತಕ್ರತೋ—ಪವಿತ್ರಗಳಾದ ಕರ್ಮಗಳನ್ನು ನೆರವೇರಿಸಿದ ಅಥವಾ ಸಂಪಾದಿತವಾದ ಪ್ರಜ್ಞೆಯುಳ್ಳ । **ಇಂದ್ರ**—ಎಲೈ ಎಂದ್ರನೇ । **ಮನುಷೇ**—ಮಾನವನಲ್ಲಿಗೆ । **ಗಾತುಯೆ**—ಹೋಗಲು (ಮಾರ್ಗವನ್ನು ಹೊಂದಲು) ಇಚ್ಛಿಸಿದವನಾಗಿ । **ವೃತ್ರಂ**—ಲೋಕವನ್ನೆಲ್ಲ ಆವರಿಸಿದ ವೃತ್ರನನ್ನು । **ಹರಿಭಿಃ**—ಕುದುರೆಗಳಿಂದ ಕೂಡಿ (ನೀನು) । **ಜಘನ್ವಾ ಉ**—ಕೊಂದೆಯಲ್ಲವೆ. (ಆ ಮೇಲೆ) । **ಅಪಃ**—ನೀರುಗಳನ್ನು (ಬಿಡಿಸಿ ಹರಿಸಿದೆ) । **ಬಾಹ್ವೋಃ**—ನಿನ್ನೆರಡು ಕೈಗಳಲ್ಲೂ । **ಆಯಸಂ**—ಕಬ್ಬಿಣದಿಂದ ಮಾಡಿದ । **ವಜ್ರಂ**—ವಜ್ರಾಯುಧವನ್ನು । **ಅಯಚ್ಛಥಾಃ**—ಹಿಡಿದುಕೊಂಡೆ ಮತ್ತು । **ಆ ಸೂರ್ಯಂ**—ಸೂರ್ಯನನ್ನೂ ಕೂಡ । **ದಿವಿ**—ಅಂತರಿಕ್ಷದಲ್ಲಿ । **ದೃಶೇ**—(ನಮಗೆ) ಗೋಚರವಾಗಲು । **ಅಧಾರಯಃ**—ಸ್ಥಾಪಿಸಿದೆ. (ನಮಗೆ ಕಾಣುವಂತೆ ಮಾಡಿದೆ).

॥ ಭಾವಾರ್ಥ ॥

ಪವಿತ್ರಗಳಾದ ಕರ್ಮಗಳನ್ನು ನೆರವೇರಿಸಿದ ಎಲೈ ಇಂದ್ರನೇ, ನೀನು ಮಾನವನಲ್ಲಿಗೆ ಹೋಗಲಿಚ್ಛಿಸಿದಾಗ ಮಾರ್ಗವನ್ನು ಅವರಿಸಿ ನಿಂತ ವೃತ್ರಾಸುರನನ್ನು ನಿನ್ನ ಕುದುರೆಗಳಿಂದ ಕೂಡಿಕೊಂಡು ಕೊಂದೆಯಲ್ಲವೆ. ಅಮೇಲೆ ನೀನು ನೀರುಗಳನ್ನು ವೃತ್ರನಿಂದ ಬಿಡಿಸಿ ಹರಿಸಿದೆ. ಕಬ್ಬಿಣವಿಂದ ಮಾಡಿದ ನಿನ್ನ ವಜ್ರಾಯುಧವನ್ನು ನಿನ್ನೆರಡು ಕೈಗಳಲ್ಲೂ ಹಿಡಿದುಕೊಂಡೆ. ಮತ್ತು ನಮಗೆಲ್ಲ ಕಾಣಿಸುವಂತೆ ಸೂರ್ಯನನ್ನು ಅಂತರಿಕ್ಷದಲ್ಲಿ ಸ್ಥಾಪಿಸಿದೆ.

English Translation.

Indra, performer of holy acts, desirous of going to man, you, with your horses has slain Vritra (has set free) the waters, have taken in your hands your thunderbolt of iron and have made the sun visible in the sky.

॥ ವಿಶೇಷ ವಿಷಯಗಳು ॥

ಸಂಭೃತಕ್ರತೋ—ಇಲ್ಲಿ ಕ್ರತುಶಬ್ದಕ್ಕೆ ಯಾಗ ಅಥವಾ ಪ್ರಜ್ಞೆ ಎಂದು ಎರಡರ್ಥವನ್ನೂ ಮಾಡಿದ್ದಾರೆ. ಸಕಲ ಯಾಗಾದಿ ಕರ್ಮಗಳನ್ನೂ ಹೊಂದಿರುವವನು ಅಥವಾ ಸಂಪೂರ್ಣಪ್ರಜ್ಞಾಶಾಲಿ ಎಂದು ಇಂದ್ರನಿಗೆ ವಿಶೇಷಾರ್ಥವನ್ನು ಈ ಪದವು ಕಲ್ಪಿಸುವುದು.

ಮನುಷೇ—ಷಕಾರಾಂತವಾದ ಮನುಷ್ಯಶಬ್ದವು ಇಲ್ಲಿ ಜನಸಮುದಾಯಕ್ಕೆ ಎಂಬರ್ಥವನ್ನು ಕೊಡುವುದು.

ಗಾತುಯನ್—**ಗಾತುಂ ಮಾರ್ಗಮಿಚ್ಛನ್**—ವೃಷ್ಟಿಯೇ ಇಲ್ಲದೆ ಕಂಗೆಟ್ಟಿದ್ದ ಜನತೆಗೆ ಸುಖವಾದ ಮಾರ್ಗವನ್ನು ಎಂದರೆ ವೃಷ್ಟಿಯನ್ನು ದೊರಕಿಸುವ ಮಾರ್ಗವನ್ನು ಉಂಟುಮಾಡುವುದಕ್ಕಾಗಿ ಎಂದು ಇಲ್ಲಿ ವಿಶೇಷಾರ್ಥವಿದೆ.

ದೃಶೇ—**ದ್ರಷ್ಟುಂ ಸರ್ವೇಷಾಮಸ್ಮಾಕಂ ದರ್ಶನಾಯೆ** । ಸಾಮಾನ್ಯರಿಗೂ ದರ್ಶನಯೋಗ್ಯತೆಯು ಲಭಿಸಲೆಂಬ ಉದ್ದೇಶದಿಂದ ಸೂರ್ಯನನ್ನು ಅಂತರಿಕ್ಷದಲ್ಲಿ ಸ್ಥಾಪಿಸಿದೆ ಎಂದು ಇಲ್ಲಿ ಇಂದ್ರನನ್ನು ಸ್ತುತಿಸಲಾಗಿದೆ.

॥ ವ್ಯಾಕರಣಪ್ರಕ್ರಿಯಾ ॥

ಜಘನ್ವಾನ್—ಹನ ಹಿಂಸಾಗತ್ಯೋಃ ಧಾತು. ಛಂದಸಿ ಲಿಟ್ **ಕ್ವಸುಶ್ಚ** (ಪಾ. ಸೂ. ೩-೨-೧೦೭) ಎಂಬುದರಿಂದ ಲಿಟ್ಟಿಗೆ ಕ್ವಸುರಾದೇಶ. ಹನ್+ವಸ್ ಎಂದಿರುವಾಗ ಲಿಣ್ಣಿಮಿತ್ತಕವಾಗಿ ಧಾತುವಿಗೆ ದ್ವಿತ್ವ. ಅಭ್ಯಾಸಕ್ಕೆ ಹಲಾದಿಶೇಷ. **ಕುಹೋಶ್ಚುಃ** ಎಂಬುದರಿಂದ ಹಕಾರಕ್ಕೆ ಚುತ್ವ, ಜಸ್ತ್ವ. **ಅಭ್ಯಾಸಾಚ್ಚ** (ಪಾ. ಸೂ. ೭-೩-೫೫) ಎಂಬುದರಿಂದ ಅಭ್ಯಾಸದ ಪರದಲ್ಲಿರುವ ಹನಿನ ಹಕಾರಕ್ಕೆ ಕುತ್ವ. **ವಿಭಾಷಾ ಗಮಹನವಿದವಿಶಾಮ್** (ಪಾ. ಸೂ. ೭-೩-೬೮) ಎಂಬುದರಿಂದ ವಿಕಲ್ಪವಾಗಿ ಪರದಲ್ಲಿರುವ ವಲಾದ್ಯಾರ್ಧಧಾತುಕಕ್ಕೆ ಇಡಾಗಮ ಹೇಳಿರುವುದರಿಂದ ಇಲ್ಲಿ ಇಟ್ ಬರುವುದಿಲ್ಲ. **ಜಘನ್ವಸ್** ಶಬ್ದವಾಗುತ್ತದೆ. ಪ್ರಥಮಾ ಏಕವಚನ ಪರದಲ್ಲಿರುವಾಗ ಉಗಿ

ತ್ತಾದುದರಿಂದ **ಉಗಿದಚಾಂ** ಸೂತ್ರದಿಂದ ನುಮಾಗಮ ಬರುತ್ತದೆ. **ಅಶ್ವಸಂತಸ್ಯಚಾ**—ಎಂಬುದರಿಂದ ದೀರ್ಘ. **ಹಲ್ಙ್ಯಾಭ್ಯೋ**—ಸೂತ್ರದಿಂದ ಸುಲೋಪ. **ಸಂಯೋಗಾಂತಸ್ಯಲೋಪಃ** ಎಂಬುದರಿಂದ ಸಕಾರಲೋಪ. ಅದು ಅಸಿದ್ಧವಾದುದರಿಂದ **ನಲೋಪಃ**—ಸೂತ್ರದಿಂದ ನಕಾರಕ್ಕೆ ಲೋಪ ಬರುವುದಿಲ್ಲ. ಜಘೆನ್ವಾನ್ ಎಂದು ರೂಪವಾಗುತ್ತದೆ. ಪ್ರತ್ಯಯಸ್ವರದಿಂದ ಆಕಾರ ಉದಾತ್ತವಾಗುತ್ತದೆ.

ಗಾತುಯನ್—ಗಾತುಮಿಚ್ಛತಿ **ಛಂದಸಿ ಪರೇಚ್ಛಾಯಾಮಪಿ** (ಕಾ. ೩-೧-೮-೨) ಎಂಬುದರಿಂದ ಆತ್ಮಸಂಬಂಧಿಯಾಗದಿದ್ದರೂ ಪರೇಚ್ಛಾ ತೋರುತ್ತಿದ್ದರೂ ಕ್ಯಚ್ ಬರುತ್ತದೆ. ಗಾತುಯ ಎಂದು ಕ್ಯಜಂತವು ಧಾತು ಸಂಜ್ಞೆಯನ್ನು ಹೊಂದುತ್ತದೆ. **ನ ಛಂದಸ್ಯಪುತ್ರಸ್ಯ** (ಪಾ. ಸೂ. ೭-೪-೩೫) ಎಂಬುದರಿಂದ ಪೂರ್ವ ಪದಕ್ಕೆ ದೀರ್ಘ ಬರುವುದಿಲ್ಲ. ಕ್ಯಜಂತದ ಮೇಲೆ ಲಡರ್ಥದಲ್ಲಿ ಶತೃ ಪ್ರತ್ಯಯ ಬರುತ್ತದೆ. ಗಾತುಯತ್ ಶಬ್ದವಾಗುತ್ತದೆ. ಪ್ರಥಮಾ ಸು ಪರದಲ್ಲಿರುವಾಗ **ಉಗಿದಚಾಂ**—ಸೂತ್ರದಿಂದ ನುಮಾಗಮ. ಸಂಯೋಗಾಂತ ಲೋಪದಿಂದ ತಕಾರಲೋಪ ಗಾತುಯನ್ ಎಂದು ರೂಪವಾಗುತ್ತದೆ. ಅದು ಪದೇಶದ ಪರದಲ್ಲಿರುವುದರಿಂದ ಲಸಾರ್ವಧಾತುಕವು **ತಾಸ್ಯನುದಾತ್ತೇತ್** ಸೂತ್ರದಿಂದ ಅನುದಾತ್ತವಾಗುತ್ತದೆ. ಕ್ಯಚ್ ಪ್ರತ್ಯಯಸ್ವರವು ಸತಿಶಿಷ್ಟವಾಗುವುದರಿಂದ ಯಕಾರೋತ್ತರಾಕಾರವು ಉದಾತ್ತವಾಗುತ್ತದೆ.

ಅಯಚ್ಛೈಥಾಃ—ದಾಣ್ ದಾನೇ ಧಾತು. ಲಙ್ ಮಧ್ಯಮಪುರುಷ ಏಕವಚನರೂಪ. **ಪಾಘ್ರಾಧ್ಮಾಸ್ಥಾ**—ಎಂಬುದರಿಂದ ಯಚ್ಛಾದೇಶ. ಪಾದದ ಆದಿಯಲ್ಲಿರುವುದರಿಂದ ನಿಘಾತಪ್ರತಿಷೇಧ ಬರುವುದರಿಂದ ಆಟನ ಆದ್ಯುದಾತ್ತಸ್ವರವು ಉಳಿಯುತ್ತದೆ.

ಆಯಸಂ—ಅಯಸಃ ಇದಂ ಆಯಸಂ । ವಿಕಾರಾರ್ಥದಲ್ಲಿ ಅಣ್ ಪ್ರತ್ಯಯ. **ತದ್ಧಿತೇಷ್ವಚಾಂ**—ಎಂಬುದರಿಂದ ಆದಿವೃದ್ಧಿ. ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ.

ಅಧಾರಯಃ—ಪಾದದ ಆದಿಯಲ್ಲಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಅಟ್ ಉದಾತ್ತವಾದುದರಿಂದ ಆದ್ಯುದಾತ್ತವಾದ ಪದವಾಗುತ್ತದೆ.

ಬಾಹ್ವೋಃ—ಬಾಹು ಶಬ್ದದ ಷಷ್ಠೀ ದ್ವಿವಚನಾಂತದರೂಪ. **ಉದಾತ್ತಯಣೋ ಹಲ್ ಪೂರ್ವಾತ್** (ಪಾ. ಸೂ. ೬-೧-೧೭೪) ಎಂಬುದರಿಂದ ಹಲ್‌ಪೂರ್ವವಾಗಿ ಉದಾತ್ತಸ್ಥಾನದಲ್ಲಿ ಬಂದಿರುವ ಯಣಿನ ಪರದಲ್ಲಿರುವುದರಿಂದ ಓಸಿಗೆ ಉದಾತ್ತಸ್ವರ ಬರುತ್ತದೆ.

ದೃಶೇ—ದೃಷ್ಟ್ಯರ್ಥಂ ಎಂಬರ್ಥದಲ್ಲಿ **ದೃಶೇ ವಿಖ್ಯೇಚ** (ಪಾ. ಸೂ. ೩-೪-೧೧) ಎಂಬುದರಿಂದ ತುಮರ್ಥದಲ್ಲಿ ನಿಪಾತಿತವಾಗಿದೆ.

॥ ಸಂಹಿತಾಪಾಠಃ ॥

ಬೃಹತ್ಸ್ರಶ್ಚಂದ್ರಮವದ್ಯದುಕ್ಥ್ಯಮಕೃಣ್ವತ ಭಿಯಸಾ ರೋಹಣಂ ದಿವಃ ।
ಯನ್ಮಾನುಷಪ್ರಧನಾ ಇಂದ್ರಮೂತಯಃ ಸ್ವರ್ನೃಷಾಚೋ ಮರುತೋ ಮದನ್ನನು ॥ ೯ ॥

॥ ಪದಪಾಠಃ ॥

ಬೃಹತ್ । ಸ್ವಶ್ಚಂದ್ರಂ । ಅಮವತ್ । ಯತ್ । ಉಕ್ಥ್ಯಂ । ಅಕೃಣ್ವತ ।
ಭಿಯಸಾ । ರೋಹಣಂ । ದಿವಃ ।
ಯತ್ । ಮಾನುಷಪ್ರಧನಾಃ । ಇಂದ್ರಂ । ಊತಯೇ । ಸ್ವಃ । ನೃಷಾಚಃ ।
ಮರುತಃ । ಅಮದನ್ । ಅನು ॥ ೯ ॥

॥ ಸಾಯಣಭಾಷ್ಯ ॥

ಬೃಹತ್ ಬೃಹತ್ಸಾಮ ಸ್ತೋತಾರೋ ಯಜಮಾನಾ ಭಿಯಸಾ ವೃತ್ರಭಯೇನ ಯದ್ಯದೋಕ್ಥ್ಯ-ಮುಕ್ಥಾರ್ಹಂ ಸ್ತೋತ್ರಯೋಗ್ಯಮಕೃಣ್ವತ । ಅಕುರ್ವನ್ । ಕೀದೃಶಂ ಬೃಹತ್ಸಾಮ । ಸ್ವಶ್ಚಂದ್ರಂ । ಸ್ವಕೀಯೇನ ಚಂದ್ರೇಣಾಹ್ಲಾದಕೇನ ತೇಜಸಾ ಯುಕ್ತಂ ಅಮವತ್ । ಅಮತಿ ಶತ್ರೂನ್ ರುಜತ್ಯನೇ-ನೇತ್ಯಮೋ ಬಲಂ । ತದುಕ್ತಂ । ದಿವಃ ಸ್ವರ್ಗಸ್ಯ ರೋಹಣಮಾರೋಹಣಹೇತುಭೂತಂ । ಏವಂವಿ-ಧೇನ ಸ್ತೋತ್ರೇಣ ವೃತ್ರಾದ್ಭೀತಾ ಇಂದ್ರ ಇಂದ್ರಮಸ್ತೋಷತೇತ್ಯರ್ಥಃ । ಯದ್ಯದಾ ಮಾನುಷಪ್ರಧನಾಃ । ಪ್ರಕೃಷ್ಟಾರ್ಹಾನ್ಯಸ್ಮಿನ್ಧನಾನಿ ಭವಂತೀತಿ ನೈರುಕ್ತವ್ಯುತ್ಪತ್ತ್ಯಾ ಪ್ರಧನಮಿತಿ ಸಂಗ್ರಾಮನಾಮ । ನಿ. ೯-೨೩ ಮನುಷ್ಯಹಿತಸಂಗ್ರಾಮಾ ಊತಯಃ ಸ್ವರ್ದ್ಯುಲೋಕಸ್ಯ ರಕ್ಷಿತಾರೋ ಮರುತೋ ನೃಷಾಚಃ ಪ್ರಾಣರೂಪೇ-ಣ ನೃನ್ಸ್ಯೇವಮಾನಾ ಭೂತ್ವೇಂದ್ರಮಪಿ ತೇನೈವ ರೂಪೇಣಾನ್ವಮದನ್ । ಅನುಪೂರ್ವ್ಯೇಣ ಹರ್ಷಂ ಪ್ರಾಪ-ರ್ಯ । ತದಾನೀಂ ಸ ಇಂದ್ರೋ ವೃತ್ರವಧಂ ಪ್ರತ್ಯುದ್ಯುಕ್ತೋ ಬಭೂವೇತಿ ಶೇಷಃ ॥ ಸ್ವಶ್ಚಂದ್ರಂ । ಸ್ವಕೀಯಂ ಚಂದ್ರಂ ಯಸ್ಯ । ಹ್ರಸ್ವಾಚ್ಚಂದ್ರೋತ್ತರಪದೇ ಮಂತ್ರೇ । ಪಾ. ೬-೧-೧೫೧ । ಇತಿ ಸುಟ್ । ಶ್ಚುತ್ವೇನ ಶಕಾರಃ । ಬಹುವ್ರೀಹೌ ಪೂರ್ವಪದಪ್ರಕೃತಿಸ್ವರತ್ವಂ । ಭಿಯಸಾ । ಭೀಶಬ್ದಸ್ಯ ತೃತೀಯೈಕ ವಚನೇ ಛಾಂದಸೋಽಸುಗಾಗಮಃ । ತಸ್ಯೋದಾತ್ತತ್ವಂ ಚ । ನೃಷಾಚಃ । ಷಚ ಸಮವಾಯೇ । ಅಯಂ ಸೇವನಾರ್ಥ ಇತಿ ಯಾಸ್ಕಃ । ವಹಶ್ಚ । ಪಾ. ೩-೨-೬೪ । ಇತ್ಯತ್ರ ಚಶಬ್ದಸ್ಯಾನುಕ್ತಸಮುಚ್ಚಯಾರ್ಥತ್ವಾ-ದಸ್ಮಾದಪಿ ಣ್ವಪ್ರತ್ಯಯಃ । ಅಮದಂ । ಮದೀ ಹರ್ಷೇ ಣಿಚಿ ಮದೀ ಹರ್ಷಗ್ಲಪನಯೋರಿತಿ ಘಟಾದಿಷು ಪಾಠಾನ್ಮಿತ್ತ್ವೇ ಸತಿ ಮಿತಾಂ ಹ್ರಸ್ವಇತಿ ಹ್ರಸ್ವತ್ವಂ । ಲಙಿ ಛಂದಸ್ಯುಭಯಥೇತಿ ಶಪ ಆರ್ಧಧಾತುಕ ತ್ವಾತ್ ಣೇರನಿಟೀತಿಣಲೋಪಃ ॥ ೯ ॥

॥ ಪ್ರತಿಪದಾರ್ಥ ॥

ಭಿಯಸಾ—(ವೃತ್ರಾಸುರನ) ಭಯದಿಂದ । **ಯತ್**—ಯಾವಾಗ । (**ಸ್ತೋತಾರಃ**)—ಯಜ್ಞಕರ್ತರು (ಯಜಮಾನರು) । **ಸ್ವಶ್ಚಂದ್ರಂ**—ಅಹ್ಲಾದಕರವಾದ ತನ್ನ ತೇಜಸ್ಸಿನಿಂದ ಕೂಡಿದುದೂ । **ಅಮವತ್**—ಬಲ ಯುಕ್ತವಾದುದೂ । **ದಿವಃ**—ಸ್ವರ್ಗಕ್ಕೆ । **ರೋಹಣಂ**—ಹತ್ತಲು ಹೇತುಭೂತವಾದುದೂ ಆದ । **ಬೃಹತ್**—ಬೃಹತ್ ಸಾಮವೆಂಬ ಸ್ತೋತ್ರವನ್ನು । **ಉಕ್ಥ್ಯಂ**—ಸ್ತೋತ್ರಯೋಗ್ಯವನ್ನಾಗಿ । **ಅಕೃಣ್ವತ**—ಮಾಡಿದರೋ, ।

ಯತ್—ಯಾವಾಗ । **ಮಾನುಷಪ್ರಧನಾಃ**—ಮನುಷ್ಯರಿಗಾಗಿ ಯುದ್ಧಮಾಡುವವರೂ । **ಊತಯೇ ಸ್ಯುಃ**—ದ್ಯುಲೋಕದ ರಕ್ಷಕರೂ ಆದ । **ಮರುತಃ**—ಮರುತ್ತುಗಳು । **ನೈಷಾಚೇ**—(ಪ್ರಾಣರೂಪದಿಂದ) ಮಾನವರನ್ನು ಸೇವಿಸುವವರಾಗಿ । **ಇಂದ್ರಂ**—ಇಂದ್ರನನ್ನೂ (ಕೂಡ ಆದೇ ರೂಪದಿಂದ) । **ಅನು ಅಮಂದಿ**—ಉತ್ತೇಜನಗೊಳಿಸಿದರು (ಆಗ ಇಂದ್ರನು ವೃತ್ರವಧೆಗೆ ಉದ್ಯುಕ್ತನಾದನು) ।

॥ ಭಾವಾರ್ಥ ॥

ವೃತ್ರಾಸುರನಿಂದ ಭಯಪಟ್ಟ ಯಜ್ಞಕರ್ತರು ಇಂದ್ರನ ಸಹಾಯವನ್ನಪೇಕ್ಷಿಸಿ ಆಹ್ಲಾದಕರವಾದ ತನ್ನ ತೇಜಸ್ಸಿನಿಂದ ಕೂಡಿದುದೂ, ಬಲಯುಕ್ತವಾದುದೂ, ಸ್ವರ್ಗಕ್ಕೆ ಹತ್ತಲು ಹೇತುಭೂತನಾದುದೂ ಸ್ತೋತ್ರಯೋಗ್ಯವೂ ಆದ ಬೃಹತ್ ಸಾಮವನ್ನು ಗಾನಮಾಡಿದರು. ಆಗ ಮಾನವರಿಗಾಗಿ ಯುದ್ಧಮಾಡುವವರೂ ದ್ಯುಲೋಕದ ರಕ್ಷಕರೂ ಆದ ಮರುತ್ತುಗಳು ಮಾನವರನ್ನು ಸೇವಿಸುವವರಾಗಿ ಇಂದ್ರನನ್ನೂ ಉತ್ತೇಜನಗೊಳಿಸಿದರು. ಆಗ ಇಂದ್ರನು ವೃತ್ರವಧೆಗೆ ಉದ್ಯುಕ್ತನಾದನು.

English Translation.

Through fear of Vritra, your worshippers composed the suitable hymn of the Brihat Saman which is self-illuminating, strengthening and forming the staircase to heaven; on which his allies the Maruts, fighting for men (gaurdians) of heaven and protectors of mankind, excited Indra (to destroy Vritra).

॥ ವಿಶೇಷ ವಿಷಯಗಳು ॥

ಬೃಹತ್—ಬೃಹಚ್ಛಬ್ದಕ್ಕೆ ಕೇವಲ ಬೃಹತ್ಸಾಮ ಎಂಬರ್ಥವಿದ್ದರೂ ಲಕ್ಷಣದಿಂದ ಬೃಹತ್ಸಾಮವನ್ನು ಪಠಿಸುವ ಯಜಮಾನರು ಎಂದರ್ಥವನ್ನು ಹೇಳಬೇಕು.

ಸ್ವಶ್ಚಂದ್ರಂ ಅಮವತ್—ಆ ಬೃಹತ್ಸಾಮವು ಸ್ವಕೀಯವಾದ ಮತ್ತು ಆಹ್ಲಾದಕರವಾದ ಚಂದ್ರನಂತಿರುವ ತೇಜಸ್ಸಿನಿಂದ ಕೂಡಿದುದು. ಮತ್ತು ಶತ್ರುಗಳನ್ನು ಧ್ವಂಸಮಾಡುವ ಶಕ್ತಿಯುಳ್ಳದ್ದು.

ದಿವಃ ರೋಹಣಂ—ಮತ್ತು ಸ್ವರ್ಗವನ್ನು ಹೊಂದಿಸುವ ಶಕ್ತಿಯುಳ್ಳದ್ದು. ಇಂತಹ ಬೃಹತ್ಸಾಮ ಸ್ತೋತ್ರವನ್ನು ಯಜಮಾನರಿಗೆ ವೃತ್ರಾಸುರನಿಂದ ಉಂಟಾದ ಭಯವನ್ನು ತಪ್ಪಿಸಿಕೊಳ್ಳುವುದಕ್ಕಾಗಿ ಜಪಿಸಿದರು.

ಮಾನುಷಪ್ರಧನಾಃ—ಮನುಷ್ಯರಿಗೆ ಹಿತವಾಗುವ ಯುದ್ಧ ಎಂದರ್ಥ. ಪ್ರಧನ ಶಬ್ದಕ್ಕೆ **ಪ್ರಕೃಷ್ಟಾರ್ಥಾನ್ಯಸ್ಮಿನ್ ಧನಾನಿ ಭವಂತಿ** (ನಿರು. ೯-೩೩) ನಿರುಕ್ತಕಾರರು ಯುದ್ಧವೆಂದು ಅರ್ಥಮಾಡಿರುವರು.

ನೈಷಾಚೇ—**ಪ್ರಾಣರೂಪೇಣ ನೂನ್ ಸೇವಮಾನಾ ಭೂತ್ವಾ** ಮರುದ್ದೇವತೆಗಳು ವೃತ್ರಾಸುರವಧಕಾಲದಲ್ಲಿ ಮನುಷ್ಯರನ್ನು ತಾವು ಪ್ರಾಣವಾಯುರೂಪದಲ್ಲಿದ್ದುಕೊಂಡು ಕಾಪಾಡಿದರು. ಆದ್ದರಿಂದಲೇ ಮರುತ್ತಗಳಿಗೆ ನೈಶಾಚರೆಂದು ಹೆಸರಾಯಿತು. ಷಚ ಸಮವಾಯೇ ಎಂಬ ಧಾತುವಿನಿಂದ ನಿಷ್ಪನ್ನವಾದ ಈ ಶಬ್ದವು ಸೇವನಾರ್ಥಕವೆಂದು **ಅಯಂ ಸೇವನಾರ್ಥಃ** ಎಂದು ಯಾಸ್ಕರು ಹೇಳಿದ್ದಾರೆ.

॥ ವ್ಯಾಕರಣಪ್ರಕ್ರಿಯಾ ॥

ಸ್ವಶ್ಚಂದ್ರಮ್—ಸ್ವಕೀಯಂ ಚಂದ್ರಂ ಯಸ್ಯ ತತ್. ಸ್ವಶ್ಚಂದ್ರಮ್ । **ಹ್ರಸ್ವಾಚ್ಚಂದ್ರೋತ್ತರಪದೇ ಮಂತ್ರೇ** (ಪಾ. ಸೂ. ೬-೧-೧೫೧) ಎಂಬುದರಿಂದ ಸುಟ್. ಸ್ವಸ್ ಚಂದ್ರ ಎಂದಿರುವಾಗ **ಸ್ತೋಶ್ಚುನಾಶ್ಚುಃ** ಎಂಬುದರಿಂದ ಚಕಾರ ಪರದಲ್ಲಿರುವುದರಿಂದ ಸಕಾರಕ್ಕೆ ಶ್ಚುತ್ವದಿಂದ ಶಕಾರಾದೇಶ. ಬಹುವ್ರೀಹಿಸಮಾಸವಾದುದರಿಂದ **ಬಹುವ್ರೀಹೌ ಪ್ರಕೃತ್ಯಾ ಪೂರ್ವಪದಂ** ಎಂಬುದರಿಂದ **ಪೂರ್ವಪದಪ್ರಕೃತಿಸ್ವರ**ವು ಬರುತ್ತದೆ.

ಅಮವತ್—ಅಮಃ ಅಸ್ಯ ಅಸ್ತಿ ಇತಿ ಅಮವತ್. **ತದಸ್ಯಾಸ್ತ್ಯಸ್ಮಿನ್**—ಸೂತ್ರದಿಂದ ಮತುಪ್. ಅಕಾರದ ಪರದಲ್ಲಿರುವುದರಿಂದ **ಮಾದುಪಧಾಯಾಶ್ಚ**—ಸೂತ್ರದಿಂದ ಮತುಪಿನ ಮಕಾರಕ್ಕೆ ವಕಾರಾದೇಶ.

ಅಕೃಣ್ವತ—ಕೃವಿ ಹಿಂಸಾಕರಣಯೋಶ್ಚ ಧಾತು, ಸ್ವಾದಿ. ಇತ್ತ್ವಾದುದರಿಂದ **ನುಮಾಗಮಃ**. ವ್ಯತ್ಯಯದಿಂದ ಆತ್ಮನೇಪದಪ್ರತ್ಯಯ ಬರುತ್ತದೆ. **ಯೆದ್ವೃತ್ತಾನ್ನಿತ್ಯಂ** ಎಂಬುದರಿಂದ ಯಚ್ಛಬ್ದ ಸಂಬಂಧವಿರುವುದರಿಂದ ನಿಘಾತಸ್ವರ ಪ್ರತಿಷೇಧ.

ಭಿಯಸಾ—ಭೀ ಶಬ್ದಕ್ಕೆ ತೃತೀಯೈಕವಚನವು ಪರದಲ್ಲಿರುವಾಗ ಛಾಂದಸವಾಗಿ ಆಸುಕಾಗಮ ಬರುತ್ತದೆ. ಅದು ಉದಾತ್ತವಾಗುತ್ತದೆ. ಆಸ್ ಪರವಾದಾಗ ಈಕಾರಕ್ಕೆ ಇಯಜಾದೇಶ. ಭಿಯಸಾ ಎಂದು ರೂಪವಾಗುತ್ತದೆ.

ದಿವಃ—**ಊಡಿದಂಪದಾದಿ**—ಸೂತ್ರದಿಂದ ವಿಭಕ್ತಿಗೆ ಉದಾತ್ತಸ್ವರ ಬರುತ್ತದೆ.

ನೃಷಾಚಃ—ಷಚ ಸಮವಾಯೇ ಧಾತು. ಇದು **ಸೇವನಾರ್ಥ**ದಲ್ಲಿ ಇದೆಯೆಂದು ಯಾಸ್ಕರ ಮತ. **ವಹಶ್ಚ** (ಪಾ. ಸೂ. ೩-೨-೬೪) ಎಂಬಲ್ಲಿ ಚಶಬ್ದವು ಅನುಕ್ತಸಮುಚ್ಚಯಕವಾದುದರಿಂದ ಇದರ ಮೇಲೂ ಣ್ವಿ ಪ್ರತ್ಯಯ ಬರುತ್ತದೆ. ಣಿತ್ತ್ವಾದುದರಿಂದ **ಅತಉಪಧಾಯಾಃ** ಎಂಬುದರಿಂದ ಅಕಾರೋಪಧೆಗೆ ವೃದ್ಧಿ. **ನೇರಶೃಕ್ತಸ್ಯ** ಎಂಬುದರಿಂದ ವಕಾರಕ್ಕೆ ಲೋಪ ಪ್ರಥಮಾಬಹುವಚನದ ರೂಪ. **ಗತಿಕಾರಕೋಪಪದಾತ್**—ಸೂತ್ರದಿಂದ ಕೃದುತ್ತರಪದಪ್ರಕೃತಿಸ್ವರ ಬರುತ್ತದೆ.

ಅಮದನ್—ಮದೀ ಹರ್ಷೇ ಧಾತು. ಪ್ರೇರಣಾರ್ಥ ತೋರುವುದರಿಂದ **ಹೇತುಮತಿಚ** ಎಂಬುದರಿಂದ ಣಿಚ್. ಇದು ಮದೀ ಹರ್ಷಗ್ಲಪನಯೋಃ ಎಂದು ಘಟಾದಿಯಲ್ಲಿ ಪಠಿತವಾದುದರಿಂದ **ಘಟಾದಯೋ ಮಿತಃ** ಎಂಬ ವಚನದಿಂದ ಮಿತ್ ಸಂಜ್ಞೆಯನ್ನು ಹೊಂದುತ್ತದೆ. ಆಗ ಣಿಚ್ ನಿಮಿತ್ತಕವಾಗಿ ಉಪಧಾವೃದ್ಧಿ ಬಂದರೂ **ಮಿತಾಂಹ್ರಸ್ವಃ** (ಪಾ. ಸೂ. ೬-೪-೯೨) ಎಂಬುದರಿಂದ ಹ್ರಸ್ವ ಬರುತ್ತದೆ. ಲಜಿನ ಝಿಗೆ ಝೋಂತ್ಯೇ ಎಂಬುದರಿಂದ ಅಂತಾದೇಶ ಬಂದಾಗ **ಇತಶ್ಚ** ಎಂಬುದರಿಂದ ಇಕಾರಲೋಪ **ಛಂದಸ್ಯುಭಯಥಾ** (ಪಾ.ಸೂ. ೩-೪-೧೧೭) ಎಂಬುದರಿಂದ ಶಪಿಗೆ ಆರ್ಧಧಾತುಕಸಂಜ್ಞೆ ಬರುವುದರಿಂದ ಸೇರಸಿಬಿ ಎಂಬುದರಿಂದ ಎದು ಪರದಲ್ಲಿರುವಾಗ ಣಿ ಲೋಪ ಬರುತ್ತದೆ. ಸಂಯೋಗಾಂತಲೋಪದಿಂದ ಪ್ರತ್ಯಯ ತಕಾರಲೋಪ. ಅಮದನ್ ಎಂದು ರೂಪವಾಗುತ್ತದೆ. ವ್ಯವಹಿತವಾದರೂ ಯಚ್ಛಬ್ದಸಂಬಂಧವಿರುವುದರಿಂದ **ಯೆದ್ವೃತ್ತಾನ್ನಿತ್ಯಂ** ಎಂಬುದರಿಂದ ನಿಘಾತಸ್ವರ ಪ್ರತಿಷೇಧ ಬರುತ್ತದೆ.

॥ ಸಂಹಿತಾಪಾಠಃ ॥

ದೌಶ್ಚಿದಸ್ಯಮವಾ ಅಹೇಃ ಸ್ವನಾದಯೋಯವೀದ್ಭಿಯಸಾ ವಜ್ರ ಇಂದ್ರತೇ
ವೃತ್ರಸ್ಯ ಯದ್ಬದ್ಬಧಾನಸ್ಯ ರೋದಸೀ ಮದೇ ಸುತಸ್ಯ ಶವಸಾಭಿನಚ್ಛಿರಃ ೧೦

॥ ಪದಪಾಠಃ ॥

ದ್ಯೌಃ । ಚಿತ್ । ಅಸ್ಯ । ಅಮವಾನ್ । ಅಹೇಃ । ಸ್ವನಾತ್ । ಅಯೋಯವೀತ್ ।
ಭಿಯಸಾ । ವಜ್ರಃ । ಇಂದ್ರ । ತೇ ।
ವೃತ್ರಸ್ಯ । ಯತ್ । ಬದ್ಬಧಾನಸ್ಯ । ರೋದಸೀ ಇತಿ । ಮದೇ । ಸುತಸ್ಯ । ಶವಸಾ ।
ಅಭಿನತ್ । ಶಿರಃ ॥ ೧೦ ॥

॥ ಸಾಯಣಭಾಷ್ಯಂ ॥

ಅಮವಾನಿತ್ಯಪಲಕ್ಷಣಾನ್ದ್ಯೌಶ್ಚಿತ್ ದ್ಯುಲೋಕೋಽಪ್ಯಸ್ಯಾಹೇರ್ವೃತ್ರಸ್ಯ ಸ್ವನಾಚ್ಚಬ್ದಾದ್ಭಿಯಸಾ ಭಯೇನಾಯೋಯವೀತ್ । ಅತ್ಯರ್ಥಂ ಪೃಥಗ್ಭೂತ ಆಸೀತ್ । ಅಕಂಪತೇತ್ಯರ್ಥಃ । ಹೇ ಇಂದ್ರ ತೇ ತವ ಸುತಸ್ಯಾಭಿಷವಾದಿಭಿಃ ಸಂಸ್ಕೃತಸ್ಯ ಸೋಮಸ್ಯ ಪಾನೇನ ಮದೇ ಹರ್ಷೇ ಜಾತೇ ಸತಿ ತ್ವದೀಯೋ ವಜ್ರೋ ರೋದಸೀ ದ್ಯಾವಾಪೃಥಿವ್ಯೌ ಬದ್ಬಧಾನಸ್ಯ ಬಾಧನಶೀಲಸ್ಯ ವೃತ್ರಸ್ಯ ಶಿರೋ ಯದ್ಯದಾ ಶವಸಾ ಬಲೇನಾಭಿನತ್ । ಅಚ್ಛಿನತ್ । ತದಾನೀಂ ದ್ಯುಲೋಕೋ ಭಯರಾಹಿತ್ಯೇನ ನಿಶ್ಚಲೋ ಬಭೂವೇತಿ ಶೇಷಃ ॥ ಅಯೋಯವೀತ್ । ಯು ಮಿಶ್ರಣಾಮಿಶ್ರಣಯೋಃ । ಅಸ್ಮಾದ್ಯಙ್ಲುಗಂತಾಲ್ಲಙ್ ಯೇಜಸೋ ವಾ । ಪಾ. ೭-೩-೯೪ । ಇತ್ಯಪೃಕ್ತಪ್ರತ್ಯಯಸ್ಯೇಡಾಗಮಃ । ಅಡಾಗಮ ಉದಾತ್ತಃ । ಬದ್ಬಧಾನಸ್ಯ । ಬಾಧೃ ವಿಲೋಡನೇ । ತಾಚ್ಛೀಲಿಕೇ ಚಾನಶಿ ಬಹುಲಂ ಛಂದಸೀತಿ ಶಪಃ ಶ್ಲುಃ । ಹಲಾದಿಶೇಷಾಭಾವೋ ಧಾತೋರ್ಹ್ರಸ್ವತ್ವಂ ಚ ಛಾಂದಸತ್ವಾತ್ । ಚಿತ ಇತ್ಯಂತೋದಾತ್ತತ್ವಂ ॥ ೧೦ ॥

॥ ಪ್ರತಿಪದಾರ್ಥ ॥

ಅಮವಾ—ಶಕ್ತಿಯುತವಾದ । **ದ್ಯೌಶ್ಚಿತ್**—ದ್ಯುಲೋಕವೂ ಕೂಡ । **ಅಸ್ಯ ಅಹೇಃ**—ಈ ವೃತ್ರಾಸುರನ । **ಸ್ವನಾತ್**—(ಮೊರೆಯುವ) ಶಬ್ದದಿಂದ । **ಭಿಯಸಾ**—ಭಯಗೊಂಡು । **ಅಯೋಯವೀತ್**—ಸೀಳಿ ಹೋಯಿತು । **ಇಂದ್ರ**—ಎಲ್ಫೆ ಇಂದ್ರನೇ । **ತೇ**—ನಿನಗೆ । **ಸುತಸ್ಯ**—ಹಿಂಡಿ ಸಂಸ್ಕೃತವಾದ **ಸೋಮ**ರಸದ (ಪಾನದಿಂದ) । **ಮದೇ**—ಹರ್ಷವುಂಟಾದಾಗ । **ವಜ್ರಃ**—(ನಿನ್ನ) ವಜ್ರಾಯುಧವು । **ರೋದಸೀ**—ಪೃಥಿವ್ಯಂತ

ರಿಕ್ಷಗಳೆರಡನ್ನೂ । **ಬದ್ಬಧಾನಸ್ಯ**—ಬಾಧಿಸುವ ಸ್ವಭಾವವುಳ್ಳ । **ವೃತ್ರಸ್ಯ**—ವೃತ್ರಾಸುರನ । **ಶಿರಃ**—ತಲೆಯನ್ನು । **ಯತ್**—ಯಾವಾಗ । **ತವಸಾ**—ಶಕ್ತಿಯಿಂದ । **ಅಭಿನತ್**—ಸೀಳಿತೊ (ಆಗ ಅಂತರಿಕ್ಷದ ಕಂಪನವು ನಿಂತಿತು) ।

॥ ಭಾವಾರ್ಥ ॥

ಈ ವೃತ್ರಾಸುರನ ಮೊರೆಯುವ ಶಬ್ದದಿಂದ ಬಲಯುತವಾದ ಸ್ವರ್ಗಲೋಕವೂ ಕೂಡ ಭಯದಿಂದ ನಡುಗಿ ಸೀಳಿಹೋಯಿತು. ಆದರೆ, ಎಲೈ ಇಂದ್ರನೇ, ಹಿಂಡಿ ಸಂಸ್ಕೃತವಾದ ಸೋಮರಸದ ಪಾನದಿಂದ ನಿನಗೆ ಹರ್ಷವುಂಟಾದಾಗ ನಿನ್ನ ಬಲವಾದ ವಜ್ರಾಯುಧವು ಪೃಥಿವ್ಯಂತರಿಕ್ಷಗಳೆರಡನ್ನೂ ಬಾಧಿಸುವ ವೃತ್ರನ ತಲೆಯನ್ನು ಯಾವಾಗ ಸೀಳಿತೋ ಆಗ ಸ್ವರ್ಗದ ಕಂಪನವು ನಿಂತಿತು.

English Translation.

The strong heaven was rent asunder with fear at the clamour of that Ahi (Vritra) when you, Indra, delighted by drinking the effused soma-juice struck with your thunderbolt vigorously the head of Vritra, the obstructer of heaven and earth.

ವಿಶೇಷ ವಿಷಯಗಳು

ಆತ್ರೇದಮುಕ್ತಂ ಭವತಿ ಯದಾ ದ್ಯಾವಾಪೃಥಿವ್ಯೋರಪಿ **ಉಪದ್ರವಕಾರಿಣಂ ವೃತ್ರಮಿಂದ್ರೋಽವಧೀತ್ತದಾ ಪರಮಮಹಿಮಯುಕ್ತೋ ದ್ಯುಲೋಕೋಽಪಿ ಭಯೇನ ಚಕಂಪೇ । ತಥಾ ಮಹಾಬಲಯುಕ್ತಮಪೀಂದ್ರಸ್ಯ ವಜ್ರಂ ಸ್ವಕೃತಾದ್ವೃತ್ರಹನನಾದನಂತರಂ ದ್ಯುಲೋಕವದೇವ ಚಕಂಪೇ ॥** ಮುಖ್ಯಾಭಿಪ್ರಾಯವೇನೆಂದರೆ—ಸ್ವರ್ಗಲೋಕ ಭೂಲೋಕಗಳಿಗೆ ತೊಂದರೆಯನ್ನುಂಟುಮಾಡುತ್ತಿದ್ದ ವೃತ್ರನನ್ನು ಇಂದ್ರನು ಸಂಹಾರಮಾಡಿದಾಗ ಮಹಾಪ್ರಭಾವಯುಕ್ತವಾದ ಸ್ವರ್ಗಲೋಕವೂ ಸಹ ಭಯದಿಂದ ನಡಗುವಂತಾಯಿತು. ಹಾಗೆಯೇ ಇಂದ್ರನ ವಜ್ರಾಯುಧವೂ ಸಹ ಮಹಾಶಕ್ತಿಯುಳ್ಳದ್ದಾಗಿದ್ದರೂ ಸ್ವರ್ಗಲೋಕವು ಕಂಪಿಸಿದಂತೆ ತಾನೂ ಕಂಪಿಸಿತು ಎಂಬ ಅರ್ಥವನ್ನೂ ಹೇಳಬಹುದು.

ದ್ಯೌಶ್ಚಿತ್—ಅಂತರಿಕ್ಷವೂ ಕೂಡ. ಇಲ್ಲಿ ಚಿಚ್ಛಬ್ದಕ್ಕೆ ಅಪಿ ಶಬ್ದಾರ್ಥವಿದೆ.

ಅಯೋಯವೀತ್—**ಯು ಮಿಶ್ರಣಾಮಿಶ್ರಣಯೋಃ** ಎಂಬ ಧಾತುವಿನ ಯಙ್ ಲುಗಂತರೂಪವಾದ ಈ ಪದಕ್ಕೆ, ಇಲ್ಲಿ ನಡುಗಿಸಿತು ಅಥವಾ ಪ್ರತ್ಯೇಕಗೊಳಿಸಿತು ಎಂದರ್ಥವು.

ಬದ್ಬಧಾನಸ್ಯ—ಬಾಧೃ ವಿಲೋಡನೇ ಎಂಬ ಧಾತುವಿಗೆ ಚಾನಶ್ ಪ್ರತ್ಯಯ ಸೇರಿ, ಬಾಧಿಸುವ ಸ್ವಭಾವದವನು ಎಂದರ್ಥವಾಗುತ್ತದೆ.

ಸುತಸ್ಯ—ಅಭಿಷವವ ಮೊದಲಾದ ಯಾಜ್ಞಿಕ ಸಂಸ್ಕಾರಗಳಿಂದ ಸಂಸ್ಕೃತವಾದ ಸೋಮಕ್ಕೆ ಸುತ ವೆಂದು ಹೆಸರಾದರೂ, ಇಲ್ಲಿ ಪ್ರಕರಣವನ್ನನುಸರಿಸಿ ಸೋಮಪಾನದಿಂದ ಎಂದರ್ಥವನ್ನು ಹೇಳಬೇಕಾಗುವುದು.

॥ ವ್ಯಾಕರಣಪ್ರಕ್ರಿಯಾ ॥

ಅಯೋಯವೀತ್—ಯು ಮಿಶ್ರಣಾಮಿಶ್ರಣಯೋಃ ಧಾತು ಅದಾದಿ. ಇದಕ್ಕೆ ಅತಿಶಯಾರ್ಥ ತೋರುವಾಗ ಯಙ್. ಅದಕ್ಕೆ **ಯಜಾಜೋಚಿಚೆ** ಎಂಬುದರಿಂದ ಲುಕ್. ಇದಕ್ಕೆ ಲಙ್ ಪ್ರಥಮಪುರುಷ ಏಕವಚನ ಬಂದಾಗ **ಇತಶ್ಚ** ಎಂಬುದರಿಂದ ಇಕಾರಲೋಪ. **ಸನ್ಯಙೋಃ** ಎಂಬುದರಿಂದ ಧಾತುವಿಗೆ ಗುಣ. **ಗುಣೋಯಙ್ಲುಕೋಃ** ಎಂಬುದರಿಂದ ಅಭ್ಯಾಸಕ್ಕೆ ಗುಣ. **ಯಙಾಜೋವಾ** (ಪಾ. ಸೂ. ೭-೩-೯೪) ಎಂಬುದರಿಂದ ಅಪೃಕ್ತ ಸಂಜ್ಞೆಯುಳ್ಳ ತ್ ಎಂಬುದಕ್ಕೆ ಈಡಾಗಮ. ಶಪ್ ಪರದಲ್ಲಿರುವಾಗ ಸಾರ್ವಧಾತುಕನಿಬಂಧನವಾಗಿ ಧಾತುವಿಗೆ ಗುಣ. ಅವಾದೇಶ. ಅಂಗಕ್ಕೆ ಲಙ್ ನಿಮಿತ್ತವಾಗಿ ಅಡಾಗಮ. ಅಯೋಯವೀತ್ ಎಂದು ರೂಪವಾಗುತ್ತದೆ. ಪಾದದ ಆದಿಯಲ್ಲಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಅಡಾಗಮ ಉದಾತ್ತವೆಂಬುದರಿಂದ ಆದ್ಯುದಾತ್ತವಾದ ಪದವಾಗುತ್ತದೆ.

ಇಂದ್ರ—**ಆಮಂತ್ರಿತಸ್ಯಚ** (ಪಾ. ಸೂ. ೮-೧-೧೯) ಎಂಬುದರಿಂದ ಆಮಂತ್ರಿತ ನಿಘಾತಸ್ವರ ಬರುತ್ತದೆ.

ಬದ್ಬಧಾನಸ್ಯ ಬಾಧ್ಯ ವಿಲೋಡನೇ ಧಾತು. **ತಾಚ್ಛೀಲ್ಯವಯೋವಚನೇಷು ಚಾನಶ್** (ಪಾ. ಸೂ. ೩-೨-೧೨೦) ಎಂಬುದರಿಂದ ಶಪಿಗೆ ಶ್ಲು ಆದೇಶ. **ಶ್ಲೌ** ಎಂಬುದರಿಂದ ಧಾತುವಿಗೆ ದ್ವಿತ್ವ. ಛಾಂದಸವಾಗಿ **ಹಲಾದಿಃಶೇಷಃ** ಸೂತ್ರಕ್ಕೆ ಇಲ್ಲಿ ಪ್ರವೃತ್ತಿ ಬರುವುದಿಲ್ಲ. **ಹ್ರಸ್ವಃ** ಎಂಬುದರಿಂದ ಅಭ್ಯಾಸದ ಅನಂತ್ಯವಾದ ಅಚಿಗೆ ಹ್ರಸ್ವ. **ಝಲಾಂಜಶ್ಝಶಿ** ಎಂಬುದರಿಂದ ಧಕಾರಕ್ಕೆ ಜಸ್ತ್ವದಿಂದ ದಕಾರಾದೇಶ. ಬದ್ಬಧಾನ ಶಬ್ದವಾಗುತ್ತದೆ. ಷಷ್ಠ್ಯೇಕವಚನಾಂತರೂಪ. ಚಾನಶ್ ಚಿತ್ವಾದುದರಿಂದ **ಚಿತಃ** ಎಂಬುದರಿಂದ ಅಂತೋದಾತ್ತ ಸ್ವರ ಬರುತ್ತದೆ.

ಅಭಿನತ್—ಭಿದಿರ್ ವಿದಾರಣೇ ಧಾತು. ರುಧಾದಿ. ಲಙ್ ಪ್ರಥಮಪುರುಷ ಏಕವಚನದ ತಿಯ ಇಕಾರಕ್ಕೆ ಇತಶ್ಚ ಎಂಬುದರಿಂದ ಲೋಪ. **ರುಧಾದಿಭ್ಯಃ ಶ್ನಮ್** (ಪಾ. ಸೂ. ೩-೧-೭೮) ಎಂಬುದರಿಂದ ಶ್ನಮ್. ವಿಕರಣ ಮಿತ್ವಾದುದರಿಂದ **ಮಿದಚೋಂತ್ಯಾತ್‌ಪರಃ** ಎಂಬುದರಿಂದ ಅಂತ್ಯಾಚಿನಪರವಾಗಿ ಬರುತ್ತದೆ. ಅಂಗಕ್ಕೆ ಅಪಾಗಮ. ಅಭಿನೆದ್‌ತ್ ಎಂದಿರುವಾಗ ಸಂಯೋಗಾಂತಲೋಪ ಬಂದರೆ ಅಭಿನತ್ ಎಂದು ರೂಪವಾಗುತ್ತದೆ. ವ್ಯವಹಿತವಾಗಿ ಯಚ್ಛಬ್ದ ಸಂಬಂಧವಿರುವುದರಿಂದ **ಯದ್ವೃತ್ತಾನ್ನಿತ್ಯಂ** ಎಂಬುದರಿಂದ ನಿಘಾತಪ್ರತಿಷೇಧ ಬರುವುದರಿಂದ ಅಡಾಗಮ ಉದಾತ್ತವಾದುದರಿಂದ ಆದ್ಯುದಾತ್ತವಾದ ಪದವಾಗುತ್ತದೆ.

॥ संहितापाठः ॥

यदिन्निन्द्र पृथिवी दशभुजिरहानि विश्वा ततनन्त कृष्टयः ।
अत्राह ते मघवन्निष्टुतं सहो द्यामनु शवसा बर्हणा
भुवत् ॥ ८८ ॥

॥ पदपाठः ॥

यत् । इत् । नु । इन्द्र । पृथिवी । दशऽभुजिः । अहानि । विश्वा ।
ततनन्त । कृष्टयः ।
अत्र । अह । ते । मघऽवन् । विऽश्रुतं । सहः । द्याम् । अनु । शवसा ।
बर्हणा । भुवत् ॥ ८८ ॥

॥ सायणभाष्यं ॥

यदिन्नु यदा खलु पृथिवी दशभुजिर्दशगुणिता भवेत् । यदि वा कृष्टयः सर्वे मनुष्या विश्वा सर्वाण्यहानि ततनन्त । विस्तारयेयुः । हे मघवन् । धनवन्निन्द्र अत्राह अत्रैव पूर्वोक्तेष्वेव देशकालकर्तृकेषु ते त्वदीयं सहो वृत्रवधादिकारणं बलं विश्रुतं विख्यातं प्रसिद्धं । शवसा त्वदीयेन बलेन कृता बर्हणा वृत्रादेर्वधरूपा क्रिया द्यामनु भुवत् । अनुभवति । यथा द्यौर्महती तथा त्वत्कृतं वृत्रादेर्हिंसनमपि महदिति भावः ॥ ततनन्त । तनु विस्तारे । स्वरितेत्त्वादात्मनेपदं । लिङर्थे लङ्युप्रत्ययो प्राप्ते व्यत्ययेन शप् । छान्दसो द्विर्भावः । यद्वा । बहुलं छन्दसीत्युप्रत्ययस्य श्लौ सति पुनरपि व्यत्ययेन शप् । शपः पित्त्वादनुदात्तत्वं । तिङश्च लसार्वधातुकस्वरेण धातुस्वरः शिष्यते । बहुलं छन्दस्यमाङ्योगेऽप्यडभावः । यद्वृत्तयोगादनिघातः । विश्रुतं । श्रु श्रवणे । कर्मणि निष्ठा । गतिरनन्तर इति गतेः प्रकृतिस्वरत्वं । बर्हणा । वर्ह वर्ह वल्ह परिभाषणहिंसादानेषु । अस्मादौणादिकः क्युप्रत्ययः । बयोरभेद इति वकारस्य बत्वं । प्रत्ययस्वरः । निबर्हयतीति वधकर्मसु पठितं च । भुवत् । भू सत्तायां । लेट्यु-

ಡಾಗಮಃ । ಇತಶ್ಚ ಲೋಪೆ ಇತೀಕಾರಲೋಪಃ । ಬಹುಲಂ ಛಂದಸೀತಿ ಶಪ್ಲೋ ಲುಕ್ । ಭೂಸುವೋ-ಸ್ತಿಙೀತಿ ಗುಣಪ್ರತಿಷೇಧ ಉವಙಾದೇಶಃ ॥ ೧೧ ॥

॥ ಪ್ರತಿಪದಾರ್ಥ ॥

ಯದಿನ್ನು—ಒಂದು ವೇಳೆ । **ಪೃಥಿವೀ**—ಪೃಥಿವಿಯು । **ದಶಭುಜಿಃ**—(ಈಗಿರುವುದಕ್ಕಿಂತ) ಹತ್ತ ರಷ್ಟು ಬೆಳೆದರೂ । **ಕೃಷ್ಟಯಃ**—ಮನುಷ್ಯರೆಲ್ಲ । **ವಿಶ್ವಾ ಅಹಾನಿ**—ಪ್ರತಿದಿನವೂ । **ತತನಂತ**—ಅಧಿಕ ಸಂಖ್ಯೆಯಲ್ಲಿ ಬೆಳೆದರೂ ಸಹ । **ಮಘವ**—ಧನವಂತನಾದ । **ಇಂದ್ರ**—ಎಲೈ ಇಂದ್ರನೇ । **ಅತ್ರಾಹ**—ಈ ಬೆಳೆವಣಿಗೆಗಳಲ್ಲೆಲ್ಲ (ಅಷ್ಟೂ ಅಷ್ಟು ಹೆಚ್ಚಾಗಿ) । **ತೇ**—ನಿನ್ನ । **ಸಹಃ**—(ವೃತ್ರವಧಾದಿಗಳಿಗೆ ಕಾರಣವಾದ) ಬಲವು । **ವಿಶ್ರುತಂ**—ಹೆಸರುವಾಸಿಯಾಗುತ್ತದೆ। **ಶವಸಾ**—(ನಿನ್ನ) ಶಕ್ತಿಯಿಂದ (ಸಂಪಾದಿಸಿದ)। **ಬರ್ಹಣಾ**—(ವೃತ್ರವಧಾದಿರೂಪವಾದ) ಕಾರ್ಯಸಿದ್ಧಿಯು । **ದ್ಯಾಮನು**—ಅಂತರಿಕ್ಷವನ್ನನುಸರಿಸಿ (ಅದರಷ್ಟು ವಿಸ್ತಾರವಾಗಿ) । **ಭುವತ್**—(ಕೀರ್ತಿಯನ್ನು) ಅನುಭವಿಸುತ್ತದೆ. (ಆಗುತ್ತದೆ)

॥ ಭಾವಾರ್ಥ ॥

ಎಲೈ ಇಂದ್ರನೇ, ಒಂದುವೇಳೆ ಪೃಥಿವಿಯು ಈಗಿರುವುದಕಿಂತ ಹತ್ತರಷ್ಟು ಹೆಚ್ಚಾಗಿ ಬೆಳೆದರೂ, ಮನುಷ್ಯರೆಲ್ಲರೂ ಪ್ರತಿದಿನವೂ ಅಧಿಕ ಸಂಖ್ಯೆಯಲ್ಲಿ ವೃದ್ಧಿಹೊಂದಿದರೂ ಸಹ, ಈ ಬೆಳೆವಣಿಗೆಗೆ ಸಮನಾಗಿ ವೃತ್ರ ವಧಾದಿಗಳಿಗೆ ಕಾರಣವಾದ ನಿನ್ನ ಶಕ್ತಿಯೂ ಹೆಸರುವಾಸಿಯಾಗುತ್ತದೆ. ನಿನ್ನ ಸ್ವಶಕ್ತಿಯಿಂದ ಸಂಪಾದಿಸಿದ ವೃತ್ರವಧಾದಿರೂಪವಾದ ಈ ಕಾರ್ಯಸಿದ್ಧಿಯು ಅಂತರಿಕ್ಷದಷ್ಟು ವಿಸ್ತಾರವಾಗಿ ಹರಡಿದ ಕೀರ್ತಿಯನ್ನನುಭವಿಸುತ್ತದೆ

English Translation

O Indra, had the earth been tenfold (in its extent) and men multiplied every day, then, Maghavan, your prowess would have been properly renowned; the exploits, achieved by your might are vast like the sky.

॥ ವಿಶೇಷ ವಿಷಯಗಳು ॥

ಮುಖ್ಯಾಭಿಸ್ಸಾಯವು—ಅತ್ರೇದಮುಕ್ತಂ । ಇಂದ್ರಸ್ಯ ವೃತ್ರಹನನಾದಿಕ್ರಿಯಾಯಾಂ ಪ್ರಕಾಶಿ-ತೇನ ಪರಾಕ್ರಮೇಣ ಯದ್ಯಪಿ ತಸ್ಯ ಪ್ರಭಾವಃ ಪ್ರಸಿದ್ಧ ಏವಾಸ್ತಿ, ತದಪಿ ತಸ್ಯ ಪ್ರಸೇಧಯಿತೃಣಾಂ ಮನುಷ್ಯಭಾವಜನ್ಯಾದಲ್ಪಾಯುಸ್ತ್ವತ್ತೇಷಾಂ ಚ ಸ್ಥಾನಭೂತಾಯಾಃ ಪೃಥಿವ್ಯಾ ಅಲ್ಪತ್ವಾತ್ತಸ್ಯ ಮಹಿಮಾ ದ್ಯುಲೋಕಾದಾಶ್ರಾವಯಿತುಂ ನ ಶಕ್ಯತೇ । ಯದಿ ತು ಪೃಥಿವೀ ದಶಗುಣಿತಾ ಭವೇತ್ತಾ ಚ ಸ್ತೋತೃಭಿ-ರ್ಮನುಷ್ಯೈಃ ಪರಿಪೂರ್ಣಾ ಸ್ಯಾತ್ ಸ್ತೋತಾರಶ್ಚ ಮರಣರಹಿತಾ ಭೂತ್ವಾಹರ್ನಿಶಮಿಂದ್ರಸ್ಯ ಸಹಸೋ ಮಹಿಮಾನಮೇವ ವರ್ಣಯೇಯುಸ್ತದೈವ ಸ ಸರ್ವಾಮಪಿ ದ್ಯಾಂ ವ್ಯಾಪ್ನುಯಾನ್ನ ಪ್ರಾಗಿತಿ ॥ ಇಂದ್ರನು ಮಾಡಿದ ವೃತ್ರಾಸುರವಧ ಮುಂತಾದ ಸಾಹಸ ಕೃತ್ಯಗಳು ಬಹಳ ಪ್ರಸಿದ್ಧವಾಗಿದ್ದರೂ ಅಲ್ಪಾಯು ಗಳೂ, ಸಾವಿಗೀಡಾದವರೂ ಆದ ಮನುಷ್ಯರ ವಾಸಸ್ಥಾನವಾದ ಭೂಲೋಕದಿಂದ ಸ್ವರ್ಗಕ್ಕೆ ಮನುಷ್ಯರು

ಮಾಡುವ ಸ್ತೋತ್ರಾದಿಗಳು ಕೇಳಿಸುವುದು ಅಸಂಭವವು. ಒಂದು ವೇಳೆ ಈಗಿರುವ ಭೂಮಿಯ ವಿಸ್ತಾರವು ಹತ್ತುಪಾಲಿನಷ್ಟು ಹೆಚ್ಚಾಗಿದ್ದು ಸ್ತೋತ್ರಮಾಡುವ ಮನುಷ್ಯರು ಮರಣರಹಿತರಾಗಿ ಬಹುಕಾಲ ಜೀವಿಸಿರುವಂತಾದರೆ ಆಗ ಭೂಲೋಕದ ಮನುಷ್ಯರು ಮಾಡುವ ಇಂದ್ರನ ಸಾಹಸಕೃತ್ಯಗಳ ವರ್ಣನೆಯು ಸ್ವರ್ಗಲೋಕವನ್ನೆಲ್ಲಾ ವ್ಯಾಪಿಸಬಹುದು. ಇಲ್ಲದಿದ್ದರೆ ಅಸಾಧ್ಯವು. ಇಂದ್ರನ ಮಹಿಮೆಯು ಅಷ್ಟು ಅತಿಶಯವಾಗಿರುವುದು ಎಂದಭಿಪ್ರಾಯವು.

ಯತ್-ಇತ್-ನು—ಯದಿನ್ನು ಇಲ್ಲ, ಇತ್, ನು ಎಂಬ ಅವ್ಯಯಗಳು ಖಲು (ಅಷ್ಟೆ) ಎಂಬರ್ಥದಲ್ಲಿ ಪ್ರಯೋಗಿಸಲ್ಪಟ್ಟಿವೆ.

ಬರ್ಹಣಾ—**ವೃತ್ರಾದೇಃ ವಧರೂಪಾ ಕ್ರಿಯಾ**—ವರ್ಹಧಾತುವಿನಿಂದ ನಿಷ್ಪನ್ನವಾದ ಈ ಶಬ್ದವು **ವಬಯೋರಭೇದಃ** ಎಂಬ ಲೌಕಿಕ ಕ್ರಮವನ್ನು ಅನುಸರಿಸಿ ಬರ್ಹಣಾ ಎಂದಾಗಿದೆ. ನಿರುಕ್ತಕಾರರು **ಬರ್ಹಣಾ** (ನಿ. ೬-೧೯) ಎಂಬ ಸೂತ್ರದಲ್ಲಿ ವಧಕರ್ಮಾರ್ಥವಾಗಿ ಈ ಪದವನ್ನು ಪ್ರಯೋಗಿಸಿರುವರು.

ದ್ಯಾಮನು ಭುವತ್—ಅಂತರಿಕ್ಷವಷ್ಟು ದೊಡ್ಡದಾಗಿದೆ. ಎಂಬರ್ಥವು ಅನುಶಬ್ದದ ಸಾಹಚರ್ಯದಿಂದ ಬಂದಿದೆ. ಮತ್ತು ಭೂ ಧಾತುವಿನ ಲೇಡ್ರೂಪವನ್ನು ಶ್ರುತಿಯಲ್ಲಿ ನೋಡಬಹುದಾಗಿದೆ.

ವ್ಯಾಕರಣಪ್ರಕ್ರಿಯಾ

ತತನಂತ—ತನು ವಿಸ್ತಾರೇ ಧಾತು. **ಸ್ಪರಿತೇತ್ ಸ್ಪರಿತಞ್ಚಿತಃ ಕರ್ತ್ರಭಿಪ್ರಾಯೇ ಕ್ರಿಯಾಫಲೇ** ಎಂಬುದರಿಂದ ಲತ್ಸನೇಸದಪ್ರತ್ಯಯ ಬರುತ್ತದೆ. **ಛಂದಸಿಲುಙ್ಲಙ್ಲಿಟಃ** ಎಂಬುದರಿಂದ ಲಿಙರ್ಥದಲ್ಲಿ ಲಙ್. **ತನಾದಿಕೃಞ್ಭ್ಯ ಉಃ** ಎಂಬುದರಿಂದ ಉ ವಿಕರಣವು ಪ್ರಾಪ್ತವಾದರೆ **ವ್ಯತ್ಯಯೋಬಹುಲಂ** ಎಂಬುದರಿಂದ ಶಪ್ ಬಹುವಚನದಲ್ಲಿ ಝಿಗೆ **ಝೋಂತಃ** ಎಂಬುದರಿಂದ ಅಂತಾದೇಶ. ಛಾಂದಸವಾಗಿ ಧಾತುವಿಗೆ ದ್ವಿತ್ವ. ಅಭ್ಯಾಸಕ್ಕೆ ಹಲಾದಿಶೇಷ. ಶಪಿನ ಅಕಾರಕ್ಕೆ **ಅತೋಗುಣೇ** ಎಂಬುದರಿಂದ ಪರರೂಪ. ತತನಂತ ಎಂದು ರೂಪವಾಗುತ್ತದೆ. ಶಪ್ ಪಿತ್ವಾದುದರಿಂದ ಅನುದಾತ್ತ. ಅದುಪದೇಶದ ಪರದಲ್ಲಿರುವುದರಿಂದ **ತಾಸ್ಯನುದಾತ್ತೇತ್**—ಸೂತ್ರದಿಂದ ಅನುದಾತ್ತವಾಗುವುದರಿಂದ ಧಾತುವಿನ ಅಂತೋದಾತ್ತಸ್ವರ ಉಳಿಯುತ್ತದೆ. ಯದ್ಯೋಗವಿಭಾಗವಿರುವುದರಿಂದ ನಿಘಾತಬರುವುದಿಲ್ಲ. **ಬಹುಲಂ ಛಂದಸ್ಯಮಾಙ್ಯೋಗೇಽಪಿ** ಎಂಬುದರಿಂದ ಅಡಾಗಮ ಬರುವುದಿಲ್ಲ.

ವಿಶ್ರುತಮ್—ಶ್ರು ಶ್ರವಣೇ ಧಾತು. ಕರ್ಮಾರ್ಥದಲ್ಲಿ ಕ್ತ ಪ್ರತ್ಯಯ ಕಿತ್ವಾದುದರಿಂದ ಗುಣನಿಷೇಧ. **ಗತಿರನಂತರಃ** (ಪಾ. ಸೂ. ೬-೨-೪೯) ಸೂತ್ರದಿಂದ ಗತಿಗೆ (ವಿ) ಪ್ರಕೃತಿಸ್ವರ ಬರುತ್ತದೆ.

ಬರ್ಹಣಾ—ವರ್ಹ ವಲ್ಲ ಪರಿಭಾಷಣ ಹಿಂಸಾಚ್ಛಾದನೇಷು ಧಾತು ಇದಕ್ಕೆ ಔಣಾದಿಕವಾದ ಕ್ಯು ಪ್ರತ್ಯಯ. **ಯುವೋರನಾಕೌ** ಎಂಬುದರಿಂದ **ಅನಾದೇಶ**. **ವಬಯೋರಭೇದಃ** ಎಂಬುದರಿಂದ ವಕಾರಸ್ಥಾನದಲ್ಲಿ ಬಕಾರ. ಬರ್ಹಣ್ ಎಂದಾಗುತ್ತದೆ. ಸ್ತ್ರೀತ್ವದಲ್ಲಿ ಅದಂತವಾದುದರಿಂದ ಟಾಪ್ ಬರುತ್ತದೆ. ಪ್ರತ್ಯಯಸ್ವರದಿಂದ ಹಕಾರೋತ್ತರಾಕಾರ ಉದಾತ್ತವಾಗುತ್ತದೆ. **ನಿಬರ್ಹಯತಿ** (ನಿರು. ೬-೧೯) ಎಂದು ವಧಕರ್ಮದಲ್ಲಿ ಪಠಿತವಾಗಿದೆ. (ನಾಶಮಾಡುವುದು ಎಂದರ್ಥ).

ಮಘವನ್—ಪ್ರಕ್ರಿಯೆಯು ಪೂರ್ವದಲ್ಲಿ ಉಕ್ತವಾಗಿದೆ. **ಅಮಂತ್ರಿತಸ್ಯ ಚ** ಎಂಬುದರಿಂದ ನಿಘಾತಸ್ವರಬರುತ್ತದೆ.

ಭುವತ್—ಭೂ ಸತ್ತಾಯಾಂ ಧಾತು. ಲೇಟ್ ಪ್ರಥಮಪುರುಷ ಏಕವಚನದಲ್ಲಿ **ತಿಪ್. ಲೇಟೋಡಾಟೌ** ಎಂಬುದರಿಂದ ಆಡಾಗಮ. **ಇತಶ್ಚಲೋಪಃ ಪರಸ್ಮೈಪದೇಷು** (ಪಾ. ಸೂ. ೩-೪-೯೭) ಎಂಬುದರಿಂದ ತಿಪಿನ ಇಕಾರಕ್ಕೆ ಲೋಪ. **ಭೂಸುವೋಸ್ತಿಙಿ** (ಪಾ. ಸೂ. ೭-೩-೮೮) ಎಂಬುದರಿಂದ ಗುಣಪ್ರತಿಷೇಧ ಬರುವುದರಿಂದ **ಅಚಿಶ್ನುಧಾತುಭ್ರುವಾಂ** ಸೂತ್ರದಿಂದ ಉವಙಾದೇಶ. ಭುವತ್ ಎಂದು ರೂಪವಾಗುತ್ತದೆ. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

॥ ಸಂಹಿತಾಪಾಠಃ ॥

ತ್ವಮ॑ಸ್ಯ ಪಾ॒ರೇ ರಜ॑ಸೋ॒ ವ್ಯೋ॑ಮನ॒ಃ ಸ್ವಭೂ॑ತ್ಯೋಜಾ॒ ಅವ॑ಸೇ ಧೃಷ॒ನ್ಮನ॒ಃ ।
ಚ॒ಕ್ಕೃ॒ಷೇ ಭೂಮಿಂ॑ ಪ್ರ॒ತಿಮಾ॑ನಮೋ॒ಜ॑ಸೋ॒ಽಪಃ ಸ್ವ॑ಃ॒ ಪರಿ॑ಭೂರೇ॒ಷ್ಯಾ ದಿವ॑ಂ ॥ ೧೨ ॥

॥ ಪದಪಾಠಃ ॥

ತ್ವಂ । ಅ॒ಸ್ಯ । ಪಾ॒ರೇ । ರಜ॑ಸಃ । ವಿಓ॑ಮನಃ । ಸ್ವಭೂ॑ತಿಓಜಾಃ । ಅ॒ವ॑ಸೇ ।
ಧೃಷ॒ತ್ತ್ವಮ॒ನ॒ಃ ।
ಚ॒ಕ್ಕೃ॒ಷೇ । ಭೂಮಿ॑ಂ । ಪ್ರ॒ತಿಮಾ॑ನಂ । ಓಜ॑ಸಃ । ಅಪಃ । ಸ್ವ॑ರಿತಿ॒ ಸ್ವ॑ಃ । ಪರಿ॑ಭೂಃ । ಏ॒ಷಿ॒ । ಆ । ದಿವ॑ಂ ॥ ೧೨ ॥

॥ ಸಾಯಣಭಾಷ್ಯಂ ॥

ಹೇ ಧೃಷನ್ಮನಃ ಶತ್ರೂಣಾಂ ಧರ್ಷಕಮನೋಯುಕ್ತೇಂದ್ರ । ಅಸ್ಯಾಸ್ಮಾಭಿಃ ಪರಿದೃಶ್ಯಮಾನಸ್ಯ ವ್ಯೋಮನೋ ವ್ಯಾಪ್ತಸ್ಯಾಂತರಿಕ್ಷಸ್ಯ ರಜಸೋ ಲೋಕಸ್ಯ ಪಾರ ಉಪರಿಸ್ಪದೇಶೇ ವರ್ತಮಾನಃ ಸ್ವಭೂತ್ಯೋಜಾಃ ಸ್ವಭೂತಬಲಸ್ತ್ವಮವಸೇಽಸ್ಮದ್ರಕ್ಷಣಾರ್ಥಂ ಭೂಮಿಂ ಭೂಲೋಕಂ ಚಕೃಷೇ ಕೃತವಾನಸಿ । ಕಿಂಚ ಓಜಸೋ ಬಲವತಾಂ ಬಲಸ್ಯ ಪ್ರತಿಮಾನಂ ಪ್ರತಿನಿಧಿರಭೂಃ । ತಥಾ ಸ್ವಃ ಸುಷ್ಠ್ವ

ರಣೇಯಂ ಗಂತವ್ಯಂ । ಆಪ ಇತ್ಯಂತರಿಕ್ಷನಾಮ । ಆಪೋಂತರಿಕ್ಷಲೋಕಂ ಆ ದಿವಂ ದ್ಯುಲೋಕಂ ಚ ಪರಿಭೂಃ ಪರಿಗ್ರಹೀತಾ । ಪರಿಪೂರ್ವೋ ಭವತಿಃ ಪರಿಗ್ರಹಣಾರ್ಥಃ । ಏಷಿ ಪ್ರಾಪ್ನೋಷಿ ॥ ಅಸ್ಯ । ಊಡಿದಮಿತಿ ವಿಭಕ್ತೇರುದಾತ್ತತ್ವಂ । ವ್ಯೋಮನಃ । ಅವತಿರ್ಗತ್ಯರ್ಥಃ । ಅವ ರಕ್ಷಣಗತಿಕಾಂತ್ಯಾದೀತ್ಯಭಿಧಾನಾತ್ । ವಿಶೇಷೇಣ ಗಚ್ಛತಿ ವ್ಯಾಪ್ನೋತೀತಿ ವ್ಯೋಮ । ಯದ್ವಾ । ವೃಷ್ಟಿಪ್ರದಾನೇನ ವಿಶೇಷೇಣ ಪ್ರಾಣಿನೋಽವತಿ ರಕ್ಷತೀತಿ ವ್ಯೋಮ । ಅನ್ಯೇಭ್ಯೋಽಪಿ ದೃಶ್ಯಂತ ಇತಿ ಮನಿನ್ । ಜ್ವರತ್ವರೇತ್ಯಾದಿನೋಪಧಾಯಾ ವಕಾರಸ್ಯ ಚೋಟ್ । ಗುಣಃ । ದಾಸೀಭಾರಾದಿತ್ವಾತ್ಪೂರ್ವಪದಪ್ರಕೃತಿಸ್ವರತ್ವಂ । ಯದ್ವಾ । ಭಾವೇ ಮನಿನ್ । ವಿವಿಧನೋಮ ರಕ್ಷಣಂ ಯಸ್ಮಿನ್ । ಬಹುವ್ರೀಹೌ ಪೂರ್ವಪದಪ್ರಕೃತಿಸ್ವರತ್ವಂ । ಯಣಾದೇಶ ಉದಾತ್ತಸ್ವರಿತಯೋರ್ಯಣ ಇತಿ ಪರಸ್ಯಾನುದಾತ್ತಸ್ಯ ಸ್ವರಿತತ್ವಂ । ಸ್ವಃ । ಸುಪೂರ್ವಾದರ್ತೇರನ್ಯೇಭ್ಯೋಽಪಿ ದೃಶ್ಯಂತ ಇತಿ ವಿಚ್ । ಅವ್ಯಯಾದಾಪ್ಸುಪಃ । ಪಾ. ೨-೪-೮೨ । ಇತಿ ಸುಪೋ ಲುಕ್ । ನ್ಯಙ್ಸ್ವರೌ ಸ್ವರಿತೌ । ಫಿ. ೪-೬ । ಇತಿ ಸ್ವರಿತತ್ವಂ ॥

॥ ಪ್ರತಿಪದಾರ್ಥ ॥

ಧೃಷನ್ಮನಃ—(ಶತ್ರುನಾಶದಲ್ಲಿ) ಸ್ಥಿರಮನಸ್ಕನಾದ ಇಂದ್ರನೇ । **ಆಸ್ಯ**—ಈ (ನಮಗೆ ಗೋಚರವಾಗತಕ್ಕ) । **ವ್ಯೋಮನಃ**—(ಎಲ್ಲ ಕಡೆಯೂ) ವ್ಯಾಪಿಸಿರುವ । **ರಜಸಃ**—ಅಂತರಿಕ್ಷ ಲೋಕದ (ಅಂತರಿಕ್ಷವನ್ನೂ ವಿಾರಿ) । **ಪಾರೇ**—ಮೇಲ್ಭಾಗದಲ್ಲಿ । **ಸ್ವಭೂತ್ಯೋಜಾಃ**—ನಿನ್ನ ಸ್ವಶಕ್ತಿಯಲ್ಲೇ ನೆಲಸಿ । **ತ್ವಂ**—ನೀನು । **ಅವಸೇ**—(ನಮ್ಮ) ರಕ್ಷಣೆಗಾಗಿ । **ಭೂಮಿಂ**—ಭೂಲೋಕವನ್ನು । **ಚಕೃಷೇ**—ಸೃಷ್ಟಿಸಿದ್ದೀಯೆ (ಮತ್ತು) **ಓಜಸಃ**—(ಪರಾಕ್ರಮಿಗಳ) ಬಲಕ್ಕೆ । **ಪ್ರತಿಮಾನಂ**—ಮಾದರಿಯಾಗಿದ್ದೀಯೆ (ಹಾಗೆಯೇ) । **ಸ್ವಃ**—ಸುಲಭವಾಗಿ ಸಂಚರಿಸಲು ಯೋಗ್ಯವಾದ । **ಆಪಃ**—ಅಂತರಿಕ್ಷವನ್ನೂ । **ಆ ದಿವಂ**—ದ್ಯುಲೋಕವನ್ನೂ ಕೂಡ । **ಪರಿಭೂಃ**—ಸುತ್ತುವರಿದು । **ಏಷಿ**—ವ್ಯಾಪಿಸಿದ್ದೀಯೆ ॥

॥ ಭಾವಾರ್ಥ ॥

ಶತ್ರುನಾಶದಲ್ಲಿ ಸ್ಥಿರಮನಸ್ಕನಾದ ಎಲೈ ಇಂದ್ರನೇ, ಎಲ್ಲ ಕಡೆಯೂ ವ್ಯಾಪಿಸಿರುವ ಈ ಅಂತರಿಕ್ಷಲೋಕವನ್ನೂ ವಿಾರಿ ಅದರ ಮೇಲ್ಭಾಗದಲ್ಲಿ ನೀನು ನಿನ್ನ ಸ್ವಶಕ್ತಿಯಿಂದಲೇ ನೆಲಸಿ ನಮ್ಮ ರಕ್ಷಣೆಗಾಗಿ ಭೂಲೋಕವನ್ನೂ ಸೃಷ್ಟಿಸಿದ್ದೀಯೆ. ನೀನು ಪರಾಕ್ರಮಿಗಳ ಬಲಕ್ಕೆ ಮಾದರಿಯಾಗಿದ್ದೀಯೆ. ಮತ್ತು ಸುಲಭವಾಗಿ ಸಂಚರಿಸಲು ಯೋಗ್ಯವಾದ ಅಂತರಿಕ್ಷವನ್ನೂ ಮತ್ತು ದ್ಯುಲೋಕವನ್ನೂ ಸುತ್ತುವರಿದು ಎಲ್ಲೆಲ್ಲೂ ವ್ಯಾಪಿಸಿದ್ದೀಯೆ.

English Translation.

Indra, bent upon destroying the enemies, living in your strength, above the wide-expanded firmament, you have made the earth for our preservation; you are the representative of the strong; you have encompassed the firmament and the sky as far as to the heavens.

॥ ವಿಶೇಷ ವಿಷಯಗಳು ॥

ವ್ಯೋಮನಃ—ವಿಶೇಷೇಣ ಗಚ್ಛತಿ ವ್ಯಾಪ್ನೋತೀತಿ ವ್ಯೋಮ ಯದ್ವಾ ವೃಷ್ಟಿಪ್ರದಾನೇನ ವಿಶೇಷೇಣ ಪ್ರಾಣಿನೋವತಿ ರಕ್ಷತೀತಿವ್ಯೋಮ ಎಂಬ ಎರಡು ರೀತಿಯ ವ್ಯುತ್ಪತ್ತಿಯಿಂದ ಆಕಾಶವು ಸರ್ವವ್ಯಾಪಕವಾದದ್ದು. ಅಥವಾ ಪ್ರಾಣಿಗಳನ್ನು ವೃಷ್ಟಿಪ್ರದಾನದಿಂದ ರಕ್ಷಿಸಬಲ್ಲುದು ಎಂದರ್ಥವಾಗುವುದು. ವಿವಿಧಂ ಓಮ ರಕ್ಷಣಂ ಯಸ್ಮಿನ್ ಎಂಬ ವ್ಯುತ್ಪತ್ತಿಯಿಂದ ಸರ್ವರಕ್ಷಕವಾದದ್ದು ಎಂಬರ್ಥವನ್ನೂ ಹೇಳಬಹುದು.

ಸ್ವಭೂತ್ಯೋಜಾಃ—ತನ್ನದೇ ಆದ ಓಜಸ್ಸುಳ್ಳವನು. ಪರಾಪೇಕ್ಷೆಯಿಲ್ಲದವನು ಎಂದರ್ಥ.

ಸ್ವಃ···ಸುಷ್ಠು ಅರಣೀಯೇಂ ಗಂತವ್ಯಂ ಸುಲಭವಾಗಿ ಸಂಚರಿಸುವ ವಸ್ತು ನೀರು ಎಂದಾಗುವುದು. ಆದರೆ ಇಷಶ್ಯಬ್ದವು ಅಂತರಿಕ್ಷವಾಚಿಯಾಗಿರುವುದರಿಂದ (ನಿ. ೨-೧೦)ಇದಕ್ಕೂ ಅಂತರಿಕ್ಷವೆಂಬ ಅರ್ಥವನ್ನೇ ಹೇಳಬಹುದು

ಪರಿಭೂಃ—ಪರಿಗ್ರಹಿಸಿದವನಾಗಿ—ಪರಿ ಎಂಬ ಉಪಸರ್ಗಪೂರ್ವಕವಾದ ಭೂಧಾತುವಿಗೆ ಇಲ್ಲಿ ಪರಿಗ್ರಹ ಎಂಬರ್ಥವಿರುತ್ತದೆ.

॥ ವ್ಯಾಕರಣಪ್ರಕ್ರಿಯಾ ॥

ಅಸ್ಯ—ಇದಂ ಶಬ್ದದ ಷಷ್ಠ್ಯಂತದ ರೂಪ. ಊಡಿದಂಪದಾದಿ—(ಪಾ. ಸೂ. ೬-೧-೧೭೧) ಎಂಬುದರಿಂದ ವಿಭಕ್ತಿಗೆ ಉದಾತ್ತಸ್ವರ ಬರುತ್ತದೆ.

ವ್ಯೋಮನಃ—ಅವ ಧಾತುವು ಇಲ್ಲಿ ಗತ್ಯರ್ಥದಲ್ಲಿ ಪ್ರಯುಕ್ತವಾಗಿದೆ. ಅವ ರಕ್ಷಣಗತಿಕಾಂತಿ—ಎಂದು ಅನೇಕಾರ್ಥದಲ್ಲಿ ಪಠಿತವಾಗಿರುತ್ತದೆ. ವಿಶೇಷೇಣ ಗಚ್ಛತಿ ವ್ಯಾಪ್ನೋತಿ ಇತಿ ವ್ಯೋಮ ಅಥವಾ ವೃಷ್ಟಿಪ್ರದಾನೇನ ವಿಶೇಷೇಣ ಪ್ರಾಣಿನೋಽವತಿ ರಕ್ಷತೀತಿ ವ್ಯೋಮ (ಎಲ್ಲವನ್ನೂ ವ್ಯಾಪಿಸಿರುವುದು ಅಥವಾ ಮಳೆಯನ್ನು ಕೊಡುವುದರ ಮೂಲಕ ವಿಶೇಷವಾಗಿ ಪ್ರಾಣಿಗಳನ್ನು ರಕ್ಷಿಸುವುದು ಆಕಾಶ ಎಂದರ್ಥ) ಅನ್ಯೇಭ್ಯೋಽಪಿ ದೃಶ್ಯಂತೇ (ಪಾ. ಸೂ. ೩-೨-೭೫) ಎಂಬುದರಿಂದ ಮನಿನ್ ಪ್ರತ್ಯಯ. ಜ್ವರತ್ಸರಸ್ಯವಿ—(ಪಾ. ಸೂ- ೬-೪-೨೦) ಎಂಬುದರಿಂದ ಅವ್ ಎಂಬಲ್ಲಿರುವ ಉಪಧಾಭೂತ. ಆಕಾರಕ್ಕೂ ಅಂತ್ಯದ ವಕಾರಕ್ಕೂ ಒಟ್ಟಿಗೆ ಊಠಾದೇಶ ಬರುತ್ತದೆ. ಊ+ಮನ್ ಎಂದಿರುವಾಗ ಅರ್ಧಧಾತುಕನಿಮಿತ್ತಕವಾಗಿ ಊಕಾರಕ್ಕೆ ಗುಣ. ವಿ+ಓಮನ್ ಎಂದಿರುವಾಗ ಯಣಾದೇಶ. ವ್ಯೋಮನ್ ಶಬ್ದವಾಗುತ್ತದೆ. ದಾಸೀಭಾರಾದಿಯಲ್ಲಿ ಸೇರಿರುವುದರಿಂದ ಪೂರ್ವಪದಪ್ರಕೃತಿಸ್ವರ ಬರುತ್ತದೆ. ಅಥವಾ ಭಾವಾರ್ಥದಲ್ಲಿ ಮನಿನ್. ಹಿಂದಿನಂತೆ ಓಮ ಎಂದು ರೂಪವಾಗುತ್ತದೆ ವಿವಿಧಂ ಓಮ ರಕ್ಷಣಂ ಯಸ್ಮಿನ್, ವ್ಯೋಮ. ಬಹುವ್ರೀಹಿಸಮಾಸವಾದುದರಿಂದ ಬಹುವ್ರೀಹೌ ಪ್ರಕೃತ್ಯಾ ಪೂರ್ವಪದಂ ಎಂಬುದರಿಂದ ಪೂರ್ವಪದಪ್ರಕೃತಿಸ್ವರ ಬರುತ್ತದೆ. ವಿ+ಓಮನ್ ಎಂಬಲ್ಲಿ ಉದಾತ್ತವಾದ ಇಕಾರಕ್ಕೆ ಯಣಾದೇಶ ಬಂದುದರಿಂದ ಉದಾತ್ತಸ್ವರಿತಯೋರ್ಯಣಃ ಸ್ವರಿತೋನುದಾತ್ತಸ್ಯ (ಪಾ. ಸೂ. ೮-೪-೪) ಎಂಬುದರಿಂದ ಯಣಿನ ಪರದಲ್ಲಿರುವ ಅನುದಾತ್ತವಾದ ಓಕಾರಕ್ಕೆ ಸ್ವರಿತಸ್ವರ ಬರುತ್ತದೆ.

ಚಕೃಷೇ—ಡುಕೃಞ್ ಕರಣೇ ಧಾತು. ಲಿಟ್ ಮಧ್ಯಮಪುರುಷ ಏಕವಚನದ ರೂಪ. ಏಕಾಚೋಽಜಾದೇಶೇ—ಎಂಬುದರಿಂದ ಇಜ್ಞಿಷೇಧ. ಪಾದಾದಿಯಲ್ಲಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಪ್ರತ್ಯಯ ಸ್ವರದಿಂದ ಅಂತೋದಾತ್ತವಾಗುತ್ತದೆ.

ಸ್ವಃ—ಸು ಪೂರ್ವದಲ್ಲಿರುವ, ಋ ಗತೌ ಧಾತು. ಇದಕ್ಕೆ **ಅನ್ಯೇಭ್ಯೋಽಪಿ ದೃಶ್ಯಂತೇ** (ವಾ. ಸೂ. ೩-೨-೭೫) ಎಂಬುದರಿಂದ ವಿಚ್. ಪ್ರತ್ಯಯ ಪರದಲ್ಲಿರುವಾಗ ಧಾತುವಿಗೆ ಗುಣ. ಸು+ಅರ್ ಎಂದಿರುವಾಗ ಯಣಾದೇಶ. **ಸ್ವರಾದಿನಿಪಾತಮವ್ಯಯಮ್** ಎಂಬುದರಿಂದ ಅವ್ಯಯಸಂಜ್ಞಾ. **ಅವ್ಯಯಾದಾಪ್ಸುಪಃ** (ವಾ. ಸೂ. ೨-೪-೮೨) ಎಂಬುದರಿಂದ ಪರದಲ್ಲಿರುವ **ಸು**ವಿಗೆ ಲುಕ್ ಬರುತ್ತದೆ. **ಸ್ವಃ** ಎಂದು ಅವಸಾನದಲ್ಲಿ ವಿಸರ್ಗ ಬಂದಾಗ ರೂಪವಾಗುತ್ತದೆ. **ನ್ಯಙ್ಸ್ವರೌ ಸ್ವರಿತೌ** (ಫಿ. ಸೂ. ೭೪) ಎಂಬುದರಿಂದ ಸ್ವಃ ಎಂಬುದು ಸ್ವರಿತವಾಗುತ್ತದೆ.

ಏಷಿ—ಇಷ್ ಗತೌ ಧಾತು. ಅದಾದಿ ಲಟ್ ಮಧ್ಯಮಪುರುಷ ಏಕವಚನದಲ್ಲಿ ಸಿಪ್. **ಅದಿಪ್ರಭೃತಿಭ್ಯಃ ಶಪಃ** ಎಂಬುದರಿಂದ ಶಪಿಗೆ ಲುಕ್. ಸಿಪ್ **ಸಾರ್ವಧಾತುಕನಿಬಂಧನವಾಗಿ** ಧಾತುವಿಗೆ ಗುಣ. **ಆದೇಶಪ್ರತ್ಯಯಯೋಃ** ಎಂಬುದರಿಂದ ಪ್ರತ್ಯಯ ಸಕಾರಕ್ಕೆ ಷತ್ವ. ಏಷಿ ಎಂದು ರೂಪವಾಗುತ್ತದೆ. ಅತಿ ಹಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

॥ ಸಂಹಿತಾಪಾಠಃ ॥

ತ್ವಂ ಭುವಃ ಪ್ರತಿಮಾನಂ ಪೃಥಿವ್ಯಾ ಋಷ್ವವೀರಸ್ಯ ಬೃಹತಃ ಪತಿರ್ಭೂಃ।
ವಿಶ್ವಮಾಪ್ರಾ ಅಂತರಿಕ್ಷಂ ಮಹಿತ್ವಾ ಸತ್ಯಮದ್ಧಾ ನಕಿರನ್ಯಸ್ತ್ವಾವಾನ್ ॥ ೧೩ ॥

॥ ಪದಪಾಠಃ ॥

ತ್ವಂ । ಭುವಃ । ಪ್ರತಿಮಾನಂ । ಪೃಥಿವ್ಯಾಃ । ಋಷ್ವವೀರಸ್ಯ । ಬೃಹತಃ । ಪತಿಃ ।
ಭೂಃ ।
ವಿಶ್ವಂ । ಆ । ಅಪ್ರಾಃ । ಅಂತರಿಕ್ಷಂ । ಮಹಿತ್ವಾ । ಸತ್ಯಂ । ಅದ್ಧಾ । ನಕಿಃ ।
ಅನ್ಯಃ । ತ್ವಾವಾನ್ ॥ ೧೩ ॥

॥ ಸಾಯಣಭಾಷ್ಯ ॥

ಭೂನಾಮ್ನ್ಯೇಕಾಹೇ ಮರುತ್ವತೀಯಶಸ್ತ್ರೇ ನಿವಿದ್ಧಾನೀಯೌಶನಸ್ಯೋಕ್ಥಾತ್ಪುರಾ ತ್ವಂ ಭುವಃ ಪ್ರತಿಮಾನಮಿತ್ಯೇಷಾ ಶಂಸನೀಯಾ । ತಥೈವಾಸೂಕ್ತಯತ್ । ತಸ್ಯಮುಕ್ತಂ ಬೃಹಸ್ಪತಿಸವೇಷು ತ್ವಂ ಭುವಃ ಪ್ರತಿಮಾನಂ ಪೃಥಿವ್ಯಾಃ । ಅ. ೯-೫ । ಇತಿ ॥

ಹೇ ಇಂದ್ರ ತ್ವಂ ಪೃಥಿವ್ಯಾಃ ಪೃಥಿತಾಯಾ ವಿಸ್ತೀರ್ಣಾಯಾ ಭೂಮೇಃ ಪ್ರತಿಮಾನಂ ಭುವಃ । ಪ್ರತಿನಿಧಿರ್ಭವಸಿ । ಯಥಾ ಭೂರ್ಲೋಕೋ ಮಹಾನಚಿಂತ್ಯಶಕ್ತಿಃ । ಏವಂ ತ್ವಮಪೀತ್ಯರ್ಥಃ । ತಥಾ ಋಷ್ವವೀರಸ್ಯ । ವೀರಯಂತಿ ವಿಕ್ರಾಂತಾ ಭವಂತೀತಿ ವೀರಾ ದೇವಾಃ । ಋಷ್ವಾ ದರ್ಶನೀಯಾ ವೀರಾಯೆಸ್ಯ ಸ ತಥೋಕ್ತಃ । ತಸ್ಯ ಬೃಹತೋ ಬ್ರಂಹಿತಸ್ಯ ಪ್ರವೃದ್ಧಸ್ಯ ಸ್ವರ್ಗಲೋಕಸ್ಯ ಪತಿರ್ಭೂಃ । ಪಾಲಯಿತಾಸಿ । ತಥಾಂತರಿಕ್ಷಮಂತರಾ ಕ್ಷಾಂತಂ ದ್ಯಾವಾಪೃಥಿವ್ಯೋರ್ಮಧ್ಯೇ ವರ್ತಮಾನಮಾಕಾಶಂ ವಿಶ್ವಂ ಸರ್ವಮಪಿ ಮಹಿತ್ವಾ ಮಹತ್ತ್ವೇನ ಸತ್ಯಮಾಸ್ಯಾಃ । ನಿಶ್ಚಯೇನ ಆ ಸಮಂತಾದಪೂರಯಃ । ಅತಸ್ತ್ವಾವಾನ್ ತ್ವತ್ಸದೃಶೋಽನ್ಯಃ ಕಶ್ಚಿನ್ನಾಸ್ತಿ ನಾಸ್ತೀತಿ । ಯದೇತತ್ತದದ್ಧಾ ಸತ್ಯಮೇವ ॥ ಭುವಃ । ಭವತೇರ್ಲೇಟಿ ಸಿಪ್ಯಡಾಗಮಃ । ಉವಙಾದೇಶಃ । ಪೃಥಿವ್ಯಾಃ । ಉದಾತ್ತಯಣೋ ಹಲ್ಪೂರ್ವಾದಿತಿ ವಿಭಕ್ತಿರುದಾತ್ತಾ । ಬೃಹತಃ । ಬೃಹನ್ಮಹತೋರುಪಸಂಖ್ಯಾನಮಿತಿ ವಿಭಕ್ತೇರುದಾತ್ತತ್ವಂ । ಭೂಃ । ಛಾಂದಸೇ ವರ್ತಮಾನೇ ಲುಙಿ ಬಹುಲಂ ಛಂದಸ್ಯಮಾಙ್ಯೋಗೇಽಪೀತ್ಯಡಭಾವಃ । ಅಸ್ಯಾಃ । ಪ್ರಾ ಪೂರಣೇ । ಅದಾದಿಕಃ । ಲಙ್ಯಡಾಗಮಃ । ಮಹಿತ್ವಾ । ಸುಪಾಂ ಸುಲುಗಿತಿ ತೃತೀಯಾಯಾಡಾದೇಶಃ । ತ್ವಾವಾನ್ । ವತುಪ್ಪ್ರಕರಣೇ ಯುಷ್ಮದಸ್ಮದ್ಭ್ಯಾಂ ಛಂದಸಿ ಸಾದೃಶ್ಯ ಉಪಸಂಖ್ಯಾನಂ । ಪಾ. ೫-೨-೬೯-೧ । ಇತಿ ಸಾದೃಶ್ಯಾರ್ಥೇ ವತುಪ್ । ಪ್ರತ್ಯಯೋತ್ತರಪದಯೋಶ್ಚೇತಿ ಮಪರ್ಯಂತಸ್ಯ ತ್ವಾದೇಶಃ । ಆ ಸರ್ವನಾಮ್ನ ಇತ್ಯಾತ್ವಂ । ಪ್ರತ್ಯಯಸ್ಯ ಪಿತ್ತ್ವಾನುದಾತ್ತತ್ವೇ ಪ್ರಾತಿಪದಿಕಸ್ವರವಿವ ಶಿಷ್ಯತೇ ॥

॥ ಪ್ರತಿಪದಾರ್ಥ ॥

(ಎಲೈ ಇಂದ್ರನೇ) **ತ್ವಂ**—ನೀನು । **ಪೃಥಿವ್ಯಾಃ**—ವಿಸ್ತಾರವಾಗಿರುವ ಭೂಮಿಗೆ । **ಪ್ರತಿಮಾನಂ ಭುವಃ**—ಅದರ್ಶನಾಗಿದ್ದೀಯೆ । **ಋಷ್ವವೀರಸ್ಯ**—ಅಕರ್ವಕವಾದ ವೀರರಿಂದ ಕೂಡಿದ್ದೂ (ದೇವತೆಗಳಿಂದ ಕೂಡಿದ್ದು) । **ಬೃಹತಃ**—ಮಹತ್ತಾದದ್ದೂ ಆದ **ಸ್ವರ್ಗಲೋಕಕ್ಕೆ** । **ಪತಿರ್ಭೂಃ**—ಪಾಲಕನಾಗಿದ್ದೀಯೆ (ಹಾಗೆಯೇ)! **ಅಂತರಿಕ್ಷಂ ವಿಶ್ವಂ**—ದ್ಯಾವಾಪೃಥಿವಿಗಳ ನಡುವೆ ಇರುವ ಸಮಸ್ತ ಆಕಾಶವನ್ನೂ । **ಮಹಿತ್ವಾ**—ನಿನ್ನ ಪ್ರಭಾವದಿಂದ । **ಸತ್ಯಂ**—ಖಂಡಿತವಾಗಿಯೂ । **ಆ ಅಪ್ರಾಃ**—ಸುತ್ತಲೂ ತುಂಬಿ (ಕೊಂಡಿ)ದ್ದೀಯೆ (ಆದ್ದರಿಂದ) । **ತ್ವಾವಾನ್**—ನಿನಗೆ ಸಮಾನನಾದ । **ಅನ್ಯಃ**—ಬೇರೊಬ್ಬನು । **ನಕಿಃ**—ಇಲ್ಲವೇ ಇಲ್ಲವೆಂಬುದು । **ಅದ್ಧಾ**—ಸತ್ಯವು ॥

॥ ಭಾವಾರ್ಥ ॥

ಎಲ್ಲೆ ಇಂದ್ರನೇ, ನೀನು ವಿಸ್ತಾರವಾಗಿ ಹರಡಿರುವ ಭೂಮಿಗೆ ಅದರ್ಶನಾಗಿದ್ದೀಯೆ. ಶ್ರೇಷ್ಠವಾಗಿಯೂ ವೀರರಾಗಿಯೂ ಇರುವ ದೇವತೆಗಳಿಂದ ಕೂಡಿದ್ದೂ ಮಹತ್ತಾದದ್ದೂ ಆದ ಸ್ವರ್ಗಕ್ಕೆ ಪಾಲಕನಾಗಿದ್ದೀಯೆ. ದ್ಯಾವಾಪೃಥಿವಿಗಳ ನಡುವೆ ಇರುವ ಸಮಸ್ತ ಆಕಾಶವನ್ನೂ ನಿನ್ನ ಪ್ರಭಾವದಿಂದ ಖಂಡಿತ ಸುತ್ತಲೂ ತುಂಬಿಕೊಂಡಿದ್ದೀಯೆ. ನಿನಗೆ ಸದೃಶನಾದವನು ಬೇರೊಬ್ಬನಿಲ್ಲವೆಂಬುದು ಸತ್ಯವೇ ಆಗಿರುವುದು.

English Translation.

You are the measure of the extended earth; you are the protector of the Swarga frequented by the goas; verily with your greatness, you fill all the firmament; for, there is none other like you.

॥ ವಿಶೇಷ ವಿಷಯಗಳು ॥

ಭೂನಾವಿ ಎಂಬ ಒಂದು ದಿನದಲ್ಲಿ ಮಾಡುವ ಯಾಗವಿಶೇಷದಲ್ಲಿ ಮರುತ್ವತೀಯಶಸ್ತ್ರಮಂತ್ರಗಳನ್ನು ಪಠಿಸುವಾಗ ನಿವಿದ್ಧಾನೀಯಸೂಕ್ತ (ಆಹ್ವಾನ ಮಾಡುವ ಸೂಕ್ತ) ಪಠನಕ್ಕೆ ಮುಂಚಿತವಾಗಿ **ತ್ವಂ ಭುವಃ ಪ್ರತಿಮಾನಂ** ಎಂಬ ಈ ಋಕ್ಕನ್ನು ಹೇಳಬೇಕೆಂದು ಆಶ್ವಲಾಯನಶ್ರೌತಸೂತ್ರದ **ತಸ್ಯೈಮುಕ್ತ್ವಂ ಬೃಹಸ್ಪತಿ-ಸವೇನ ತ್ವಂ ಭುವಃ ಪ್ರತಿಮಾನಂ ಪೃಥಿವ್ಯಾಃ** ಎಂಬ ಸೂತ್ರದಿಂದ ವಿವೃತವಾಗಿರುವುದು. (ಆ. ೯-೫).

ಪೃಥಿವ್ಯಾಃ—ಇಲ್ಲಿ ಪೃಥಿವೀ ಶಬ್ದವು ಅತ್ಯಂತ ವಿಶಾಲವಾದ ಭೂಮಿ ಎಂದರ್ಥವು.

ಪ್ರತಿಮಾನಂ ಭುವಃ— ಪ್ರತಿನಿಧಿಯಾಗಿದ್ದೀಯೆ. ಎಂದರೆ ಭೂಮಿಯು ಹೇಗೆ ಅಚಿಂತ್ಯವಾದ ಶಕ್ತಿಯುಳ್ಳದ್ದೋ ಅಷ್ಟೇ ಶಕ್ತಿಯು ನಿನ್ನಲ್ಲಿಯೂ ಇದೆ ಎಂದರ್ಥವು.

ಋಷ್ವವೀರಸ್ಯ—**ಋಷ್ವಾಃ ದರ್ಶನೀಯಾಃ ವೀರಾಃ ದೇವಾಃ ಯಸ್ಯ ಸಃ ಋಷ್ವವೀರಃ** ಎಂಬ ವ್ಯುತ್ಪತ್ತಿಯಿಂದ ಇಂದ್ರನು ಸುಂದರರೂ ಶೂರರೂ ಆದ ದೇವತೆಗಳುಳ್ಳವನು ಎಂಬರ್ಥವು ಸ್ಪಷ್ಟವಾಗುವುದು.

ಬೃಹತಃ—ಇದಕ್ಕೆ ಬೃಂಹಿತವಾದ ಎಂದರೆ ಅಭಿವೃದ್ಧಿ ಹೊಂದುತ್ತಿರುವ ಸ್ವರ್ಗಲೋಕದ ಎಂದರ್ಥ.

ಅಂತರಿಕ್ಷಂ—**ಅಂತರಾ ಕ್ಷಾಂತಂ ದ್ಯಾವಾಪೃಥಿವ್ಯೋರ್ಮಧ್ಯೇ ವರ್ತಮಾನಂ ಆಕಾಶಂ** । ಭೂಮಿ ಮತ್ತು ಸ್ವರ್ಗಲೋಕಗಳ ಮಧ್ಯೆ ಇರುವ ಅವಕಾಶವೇ ಅಂತರಿಕ್ಷವೆಂದು ಹೇಳಲ್ಪಡುವುದು.

ನಕಿಃ ಅದ್ಧಾ—ಇದೆ, ಇಲ್ಲ ಎಂಬ ಈ ಮಾತು ನಿಶ್ಚಯ. ನಕಿಃ ಎಂಬ ಪದಕ್ಕೆ **ಅಸ್ತಿ ನಾಸ್ತೀತಿ ಯದೇತತ್ ತತ್** ಎಂದು ವಾಖ್ಯಾನಮಾಡಿದ್ದಾರೆ.

॥ ವ್ಯಾಕರಣಪ್ರಕ್ರಿಯಾ ॥

ಭುವಃ—ಭೂ ಸತ್ತಾಯಾಂ ಧಾತು. ಲೇಟ್ ಮಧ್ಯಮಪುರುಷ ಏಕವಚನದಲ್ಲಿ ಸಿಪ್. **ಇತಶ್ಚ-ಲೋಪಃ ಪರಸ್ಮೈಪದೇಷು** ಎಂಬುದರಿಂದ ಅದರ ಇಕಾರಕ್ಕೆ ಲೋಪ. ಉವಙಾದೇಶ. ಸಕಾರಕ್ಕೆ ರುತ್ವ ವಿಸರ್ಗ. ಭುವಃ ಎಂದಾಗುತ್ತದೆ. **ತಿಙ್ಶಿತಿಜಃ** ಎಂಬುದರಿಂದ ನಿಘಾತಸ್ವರ ಬರುತ್ತದೆ.

ಪೃಥಿವ್ಯಾಃ—ಪೃಥಿವೀ+ಙಸ್ ಎಂದಿರುವಾಗ **ಆಙ್ನದ್ಯಾಃ** ಎಂಬುದರಿಂದ ವಿಭಕ್ತಿಗೆ ಆಡಾಗಮ ಈಕಾರಕ್ಕೆ ಯಣಾದೇಶ. ಸಕಾರಕ್ಕೆ ರುತ್ವವಿಸರ್ಗ. ಪೃಥಿವ್ಯಾಃ ಎಂದು ರೂಪವಾಗುತ್ತದೆ. **ಉದಾತ್ತ-ಯಣೋಹಲ್ಪೂರ್ವಾತ್** (ಪಾ. ಸೂ. ೬-೧-೧೭೪) ಎಂಬುದರಿಂದ ವಿಭಕ್ತಿಗೆ ಉದಾತ್ತಸ್ವರ ಬರುತ್ತದೆ.

ಬೃಹತಃ—ಷಷ್ಠೀ ಏಕವಚನಾಂತರೂಪ. **ಬೃಹನ್ಮಹತೋರುಪಸಂಖ್ಯಾನಮ್** ಎಂಬುದರಿಂದ ವಿಭಕ್ತಿಗೆ ಉದಾತ್ತಸ್ವರ ಬರುತ್ತದೆ.

ಭೂಃ—ಭೂ ಸತ್ತಾಯಾಂ ಧಾತು. **ಛಂದಸಿ ಲುಙ್ಲಙ್ಲಿಟಃ** ಎಂಬುದರಿಂದ ವರ್ತಮಾನಾರ್ಥದಲ್ಲಿ ಲುಙ್. ಮಧ್ಯಮಪುರುಷ ಏಕವಚನದಲ್ಲಿ ಸಿಪ್. **ಇತಶ್ಚ** ಎಂಬುದರಿಂದ ಅದರ ಇಕಾರಕ್ಕೆ ಲೋಪ. **ಚ್ಲೌ ಲುಙಿ** ಎಂಬುದರಿಂದ ಪ್ರಾಪ್ತವಾದ ಚ್ಲಿಗೆ **ಚ್ಲೇಃ ಸಿಚ್** ಎಂಬುದರಿಂದ ಸಿಚಾದೇಶ. **ಗಾತಿಸ್ಥಾ**—ಸೂತ್ರದಿಂದ ಸಿಚಿಗೆ ಲುಕ್. ಪ್ರತ್ಯಯಕ್ಕೆ ರುತ್ವ ವಿಸರ್ಗ. **ಬಹುಲಂ ಛಂದಸ್ಯಮಾಙ್ಯೋಗೇಽಪಿ** ಎಂಬುದರಿಂದ ಅಡಾಗಮ ಬರುವುದಿಲ್ಲ. **ತಿಙಂತನಿಘಾತಸ್ವರ** ಬರುತ್ತದೆ.

ಅಸ್ಯಾಃ—ವ್ಯಾ ಪೂರಣೇ ಧಾತು ಅದಾದಿ. **ಲಙ್** ಮಧ್ಯಮಪುರುಷ ಏಕವಚನದ ಸಿಪಿಗೆ ಇಕಾರ ಲೋಪ. **ಅದಿಪ್ರಭೃತಿಭ್ಯಃ ಶಪಃ** ಎಂಬುದರಿಂದ ಶಪಿಗೆ ಲುಕ್. ಅಂಗಕ್ಕೆ ಲಙ್ ನಿಮಿತ್ತಕವಾಗಿ ಅಡಾಗಮ. **ತಿಙಂತನಿಘಾತಸ್ವರ** ಬರುತ್ತದೆ.

ಮಹಿತ್ವಾ—**ಸುಸಾಂ ಸುಲುಕ್ ಸವರ್ಣ**—ಎಂಬುದರಿಂದ ತೃತೀಯಾ ವಿಭಕ್ತಿಗೆ ಡಾದೇಶ. **ಡಿತ್ವಾ** ದುದರಿಂದ ಟಿ ಲೋಪ.

ತ್ವಾವಾನ್—**ವತುಪ್ ಪ್ರಕರಣೇ ಯುಷ್ಮದಸ್ಮದ್ಭ್ಯಾಂ ಛಂದಸಿ ಸಾದೃಶ್ಯೇ ಉಪಸಂಖ್ಯಾನಮ್** (ಪಾ. ಸೂ. ೫-೨-೩೯-೧) ಎಂಬುದರಿಂದ ಯುಷ್ಮದ್ಶಬ್ದಕ್ಕೆ ಸಾದೃಶ್ಯಾರ್ಥದಲ್ಲಿ ವತುಪ್. ಯುಷ್ಮದ್+ವತ್ ಎಂದಿರುವಾಗ **ಪ್ರತ್ಯಯೋತ್ತರಪದಯೋಶ್ಚ** (ಪಾ. ಸೂ. ೭-೨-೯೮) ಎಂಬುದರಿಂದ ಯುಷ್ಮದಿನ ಮಪರ್ಯಂತಕ್ಕೆ ತ್ವಾದೇಶ. **ಅಸರ್ವನಾಮ್ನಃ** (ಪಾ. ಸೂ. ೬-೩-೯೧) ಸೂತ್ರದಿಂದ ವತುಪ್ ನಿಮಿತ್ತಕವಾಗಿ ಆಕಾರ ಅಂತಾದೇಶ. ತ್ವಾವತ್ ಶಬ್ದವಾಗುತ್ತದೆ. ಪ್ರಥಮೈಕವಚನದಲ್ಲಿ ಉಗಿತ್ವಾದುದರಿಂದ **ಉಗಿದಚಾಂ** ಎಂಬುದರಿಂದ ನುಮಾಗಮ. **ಅತ್ವಸಂತಸ್ಯ ಚ**—ಎಂಬುದರಿಂದ ಉಪಧಾದೀರ್ಘ. ಹಲ್ಙ್ಯಾದಿನಾ **ಸುಲೋಪ**. **ಸಂಯೋಗಾಂತಸ್ಯ ಲೋಪಃ** ಸೂತ್ರದಿಂದ ಅಂತ್ಯ ತಕಾರಕ್ಕೆ ಲೋಪ. ಅದು ಅಸಿದ್ಧವಾದುದರಿಂದ ನಲೋಪ ಬರುವುದಿಲ್ಲ. ತ್ವಾವಾನ್ ಎಂದು ರೂಪವಾಗುತ್ತದೆ. ವತುಪ್ ಪಿತ್ತಾದುದರಿಂದ **ಅನುದಾತ್ತೌ ಸುಪ್ಪಿತೌ** ಎಂಬುದರಿಂದ ಅನುದಾತ್ತ. ಆಗ ಪ್ರಾತಿಪದಿಕದ ಅಂತೋದಾತ್ತಸ್ವರವೇ ಉಳಿಯತ್ತದೆ.

॥ ಸಂಹಿತಾಪಾಠಃ ॥

ನ ಯಸ್ಯ ದ್ಯಾವಾಪೃಥಿವೀ ಅನು ವ್ಯಚೋ ನ ಸಿಂಧವೋ ರಜಸೋ ಅನ್ತ-
ಮಾನಶುಃ ।
ನೋತ ಸ್ವವೃಷ್ಟಿಂ ಮದೇ ಅಸ್ಯ ಯುಧ್ಯತ ಏಕೋ ಅನ್ಯಚ್ಚಕೃಷ್ಷೇ ವಿಶ್ವ-
ಮಾನುಷಕ್ ॥ ೧೪ ॥

॥ ಪದಪಾಠಃ ॥

ನ । ಯಸ್ಯ । ದ್ಯಾವಾಪೃಥಿವೀ ಇತಿ । ಅನು । ವ್ಯಚಃ । ನ । ಸಿಂಧವಃ । ರಜಸಃ ।
ಅಂತಂ । ಆನಶುಃ ।
ನ । ಉತ । ಸ್ಮ ಽ ವೃಷ್ಟಿಂ । ಮದೇ । ಅಸ್ಯ । ಯುಧ್ಯತಃ । ಏಕಃ । ಅನ್ಯತ್ ।
ಚಕೃಷ್ಷೇ । ವಿಶ್ವಂ । ಆನುಷಕ್ ॥ ೧೪ ॥

॥ ಸಾಯಣಭಾಷ್ಯಂ ॥

ಯಸ್ಯೇಂದ್ರಸ್ಯ ವ್ಯಚೋ ವ್ಯಾಪನಂ ದ್ಯಾವಾಪೃಥಿವೀ ದ್ಯಾವಾಪೃಥಿವ್ಯೌ ನಾನ್ವಾನಶಾತೇ ಪ್ರಾಪ್ತುಮಸಮರ್ಥೇ ಬಭೂವತುಃ । ತಥಾ ರಜಸೋಽಂತರಿಕ್ಷಲೋಕಸ್ಯೋಪರಿ ಸಿಂಧವಃ ಸ್ಯಂದನಶೀಲಾ ಆಪೋ ಯಸ್ಯೇಂದ್ರಸ್ಯ ತೇಜಸೋಽಂತಮವಸಾನಂ ನಾನಶುಃ ನ ಪ್ರಾಪುಃ । ಉತಾಪಿ ಚ ಸೋಮಪಾನೇನ ಮದೇ ಹರ್ಷೇ ಸತಿ ಸ್ವವೃಷ್ಟಿಂ ಸ್ವೀಕೃತವೃಷ್ಟಿಂ ವೃತ್ರಾದಿಂ ಯುಧ್ಯತೋ ಯುಧ್ಯಮಾನಸ್ಯೇಂದ್ರಸ್ಯ ಬಲಸ್ಯಾಂತಂ ವೃತ್ರಾದಯೋ ನ ಪ್ರಾಪುಃ । ಅತೋ ಹೇ ಇಂದ್ರ ಏಕಸ್ತ್ವಮನ್ಯತ್ಸರ್ವಮ್ ವ್ಯತಿರಿಕ್ತಂ ವಿಶ್ವಂ ಸರ್ವಂ ಭೂತಜಾತಮಾನುಷಕ್ ಆನುಷಕ್ತಂ ಚಕೃಷೇ । ಸಕಲಮಪಿ ಭೂತಜಾತಂ ತ್ವದಧೀನಮಭೂದಿತಿ ಭಾವಃ ॥ ದ್ಯಾವಾಪೃಥಿವೀ । ದ್ಯೌಶ್ಚ ಪೃಥಿವೀ ಚ ದಿವೋ ದ್ಯಾವಾ । ಪಾ. ೬-೩-೨೯ । ಇತಿ ದ್ಯಾವಾದೇಶ ಆದ್ಯುದಾತ್ತೋ ನಿಪಾತಿತಃ । ಪೃಥಿವೀಶಬ್ದಃ ಷಿದ್ಗೌರಾದಿಭ್ಯಶ್ಚೇತಿ ಙೀಷಂತೋಽನ್ತೋದಾತ್ತಃ । ದೇವತಾದ್ವಂದ್ವೇ ಚೇತ್ಯುಭಯಪದಪ್ರಕೃತಿಸ್ವರತ್ವಂ । ಅಪೃಥಿವೀರುದ್ರಪೂಷಮಂತ್ರಿಷ್ಟಿತಿ ಪರ್ಯುದಾಸಾನ್ನೋತ್ತರಪದೇಽನುದಾತ್ತಾದಾವಿತಿ ನಿಷೇಧಾಭಾವಃ । ವ್ಯಚಃ । ವ್ಯಚೇಃ ಕುಟಾದಿತ್ವಮನಸಿ । ಕಾ. ೧-೨-೧-೧ । ಇತಿ ವಚನಾತ್ ಙಿತ್ತ್ವಾಭಾವೇ ಸಂಪ್ರಸಾರಣಾಭಾವಃ । ಅನಶುಃ । ಅಶ್ನೋತೇರ್ವ್ಯತ್ಯಯೇನ ಪರಸ್ಮೈಪದಂ । ಅತ ಆದೇರಿತ್ಯಭ್ಯಾಸಸ್ಯಾತ್ವಂ । ಅಶ್ನೋತೇಶ್ಚೇತಿ ನುಡಾಗಮಃ ॥

॥ ಪ್ರತಿಪದಾರ್ಥ ॥

ಯಸ್ಯ—ಯಾವ ಇಂದ್ರನ । **ವ್ಯಚಃ**—ವ್ಯಾಪಿಸುವ ಶಕ್ತಿಯನ್ನು । **ದ್ಯಾವಾಪೃಥಿವೀ**—ಪೃಥಿವ್ಯಂತರಿಕ್ಷಗಳೆರಡೂ । **ನ ಅನು**—ಹೊಂದಲಸಮರ್ಥವಾದವೋ, (ಹಾಗೆಯೇ) । **ರಜಸಃ**—ಅಂತರಿಕ್ಷದ (ಮೇಲೆ ಹರಿಯುವ) । **ಸಿಂಧವಃ**—ನೀರಿನ ಪ್ರವಾಹಗಳು । **ಅಂತಂ**—(ಯಾವ ಇಂದ್ರನ ಪ್ರಭಾವದ) ಸೀಮೆಯನ್ನು । **ನ ಆನಶುಃ**—ಸೇರಲಿಲ್ಲವೋ, । **ಉತ**—ಮತ್ತು । **ಮದೇ**—(ಸೋಮಪಾನದಿಂದ) ಉತ್ತೇಜಿತನಾಗಿ । **ಸ್ವವೃಷ್ಟಿಂ**—ತನ್ನ ಮಳೆಯನ್ನು ತಡೆದ ವೃತ್ರನೊಡನೆ । **ಯುಧ್ಯತಃ**—ಯುದ್ಧಮಾಡತಕ್ಕ । **ಅಸ್ಯ**—ಅಂತಹ ಇಂದ್ರನ (ಶಕ್ತಿಯನ್ನು ಅವನ ಶತ್ರುಗಳು) । **ನ ಪ್ರಾಪುಃ** ಹೊಂದಲಿಲ್ಲವೋ (ಆದ್ದರಿಂದಲೇ) । (**ಇಂದ್ರ**—ಎಲೈ ಇಂದ್ರನೇ) । **ಏಕಃ**—ನೀನೊಬ್ಬನೇ । **ಅನ್ಯತ್ ವಿಶ್ವಂ**—(ನಿನ್ನೊಬ್ಬನನ್ನು ಬಿಟ್ಟು) ಉಳಿದ ಸಕಲ ಭೂತಗಳನ್ನೂ । **ಆನುಷಕ್**—ಅನುಕ್ರಮವಾಗಿ । **ಚಕೃಷೇ**—(ನಿನ್ನಧೀನವಾಗಿರುವಂತೆ) ಸೃಷ್ಟಿಸಿದ್ದೀಯೆ ॥

॥ ಭಾವಾರ್ಥ ॥

ಇಂದ್ರನ ವ್ಯಾಪನಶಕ್ತಿಯನ್ನು ಅತ್ಯಂತ ವಿಸ್ತಾರವಾಗಿರುವ ಪೃಥಿವ್ಯಂತರಿಕ್ಷಗಳೆರಡೂ ಹೊಂದಲಸಮರ್ಥವಾದುವು. ಅಂತರಿಕ್ಷದ ಮೇಲೆ ಹರಿಯುವ ನೀರಿನ ಪ್ರವಾಹಗಳು ಇಂದ್ರನ ಪ್ರಭಾವದ ಸೀಮೆಯನ್ನು ಮುಟ್ಟಲಾಗಲಿಲ್ಲ. ಸೋಮರಸಪಾನದಿಂದ ಉತ್ತೇಜಿತನಾಗಿ ಮಳೆಯನ್ನು ತಡೆದ ವೃತ್ರನೊಡನೆ ಯುದ್ಧಮಾಡತಕ್ಕ ಕಾಲದಲ್ಲಿ ಅವನ ಶಕ್ತಿಯನ್ನು ಅವನ ಶತ್ರುಗಳು ಹೊಂದಲಾಗಲಿಲ್ಲ. ಆದ್ದರಿಂದ ಎಲೈ ಇಂದ್ರನೇ, ನಿನ್ನೊಬ್ಬನನ್ನು ಬಿಟ್ಟು ಉಳಿದ ಸಕಲ ಭೂತಗಳನ್ನೂ ಕೂಡ ನೀನು ನಿನ್ನಧೀನವಾಗಿರುವಂತೆ ಸೃಷ್ಟಿಸಿದ್ದೀಯೆ.

English Translation.

You, Indra, of whom heaven and earth have not attained the amptitude; of whose energy the waters flowing above the heavens have not reached the limit; of whom, when fighting with animation, created by the Soma against the withholder of the rains, his adversaries have not equalled the prowess; you alone have made everything else dependent on you.

॥ ವಿಶೇಷ ವಿಷಯಗಳು ॥

ಮುಖ್ಯಾಭಿಪ್ರಾಯವು—**ಯೋ ಭೂಲೋಕಾಂತರಿಕ್ಷಲೋಕದ್ಯುಲೋಕಾನ್ ವ್ಯಾಪ್ಯಾವಶೇಷಯತ್ಯೃತಿ ಯಸ್ಯ ಚ ಬಲಂ ವೃತ್ರಹನನಪ್ರಸಂಗೇ ಕೇನಾಪಿ ಪರಿಮಿತತಯಾ ನ ಜ್ಞಾತಂ ಸ ಇಂದ್ರ ಏವ ವಿಶ್ವಸ್ಯೈತಸ್ಯ ವಸ್ತುಮಾತ್ರಸ್ಯ ನಿರ್ಮಾತಾ ಭವತೀತಿ ಭಾವಃ** ॥ ಇಂದ್ರನ ಬಲಪರಾಕ್ರಮಗಳು ಭೂಮ್ಯಂತರಿಕ್ಷ ಸ್ವರ್ಗಲೋಕಗಳನ್ನು ವ್ಯಾಪಿಸಿದ್ದರೂ ತುಂಬದೆ ಇನ್ನೂ ಉಳಿದಿರುವುದು. ಇಂತಹ ಇಂದ್ರನ ವೃತ್ರಹನನಾದಿ ಕಾರ್ಯಗಳ ಮಹಿಮೆಯು ಇಷ್ಟೇ ಸರಿ ಎಂಬುದನ್ನು ಯಾವ ಮನುಷ್ಯನೂ ಸರಿಯಾಗಿ ತಿಳಿಯಲಾರನು. ಇಂತಹ ಮಹಿಮೆಯುಳ್ಳ ಈ ಇಂದ್ರನೇ ಈ ವಿಶ್ವದಲ್ಲಿರುವ ಸಮಸ್ತ ವಸ್ತುಗಳನ್ನು ಸೃಷ್ಟಿಸಿರುವನು.

ವ್ಯಚಃ—**ವ್ಯಾಪನಂ ವ್ಯಚೇಃ ಕುಟಾದಿತ್ವಮನಸಿ** (ಕಾ. ೧-೨-೧-೧) ಎಂಬ ಸೂತ್ರಾನುಸಾರವಾಗಿ ಅಚ್ ಧಾತುವು ವ್ಯಚಃ ಎಂಬ ರೂಪವನ್ನು ಪಡೆದು ವ್ಯಾಪನೆಯೆಂಬ ಅರ್ಥವನ್ನು ಕೊಡುವುದು.

ಸಿಂಧವಃ—**ಸ್ಯಂದನಶೀಲಾ ಆಪಃ** ಸದಾ ಹರಿಯುವ ಸ್ವಭಾವವುಳ್ಳದ್ದು ನೀರು ಎಂಬರ್ಥವನ್ನು ಕೊಡುವುದು.

ಸ್ವವೃಷ್ಟಿಂ—ವೃಷ್ಟಿಯನ್ನು ತಡೆದು ನಿಲ್ಲಿಸುವ ಸಾಮರ್ಥ್ಯವುಳ್ಳ ವೃತ್ರಾದಿಗಳು ಎಂದರ್ಥವಾಗುವುದು.
ಅನುಷಕ್—**ಅನುಷಕ್ತಂ** ನಿಕಟಸಂಬಂಧವುಳ್ಳದ್ದನ್ನಾಗಿ ಎಂಬರ್ಥವು ಸ್ಪಷ್ಟೀಕರಿಸಲ್ಪಡುವುದು.

॥ ವ್ಯಾಕರಣಪ್ರಕ್ರಿಯಾ ॥

ದ್ಯಾವಾಪೃಥಿವೀ—**ದ್ಯೌಶ್ಚ ಪೃಥಿವೀ ಚ ದ್ಯಾವಾಪೃಥಿವೀ. ದಿವೋ ದ್ಯಾವಾ** (ಪಾ. ಸೂ. ೬-೩-೨೯) ಎಂಬುದರಿಂದ ಉತ್ತರಪದ ಪರದಲ್ಲಿರುವಾಗ ದ್ಯಾವಾದೇಶವು ಅದ್ಯುದಾತ್ತವಾಗಿ ನಿಪಾತಿತವಾಗಿದೆ. ಪೃಥಿವೀ ಶಬ್ದವು **ಷಿದ್ಗೌರಾದಿಭ್ಯಶ್ಚ** ಎಂಬುದರಿಂದ ಙೀಷ್‌ನ್ನು ಹೊಂದಿ ಅಂತೋದಾತ್ತವಾಗುತ್ತದೆ. **ದೇವತಾದ್ವಂದ್ವೇ ಚ** (ಪಾ. ಸೂ. ೬-೨-೧೪೧) ಎಂಬುದರಿಂದ ಸಮಾಸವಾದಾಗ ಉಭಯಪದ ಪ್ರಕೃತಿಸ್ವರವು ಬರುತ್ತದೆ. ಯದ್ಯಪಿ ಇಲ್ಲಿ **ನೋತ್ತರಪದೇಽನುದಾತ್ತಾದೌ** (ಪಾ. ಸೂ. ೬-೨-೧೪೨) ಎಂಬುದರಿಂದ ಅನುದಾತ್ತಾದಿಯಾದ ಪೃಥಿವೀ ಶಬ್ದವು ಪರದಲ್ಲಿರುವುದರಿಂದ ಉಭಯಪದಪ್ರಕೃತಿಸ್ವರಕ್ಕೆ ನಿಷೇಧ ಬರುತ್ತದೆ. ಆದರೂ—**ಅಪೃಥಿವೀರುದ್ರಪೂಷಮಂಥಿಷು** ಎಂದು ಅಲ್ಲಿ ನಿಷೇಧಮಾಡಿರುವುದರಿಂದ ಪೃಥಿವೀಶಬ್ದ ಪರದಲ್ಲಿರುವಾಗ ನಿಷೇಧ ಬರುವುದಿಲ್ಲ.

ವ್ಯಚಃ—ವ್ಯಚ ವ್ಯಾಜೀಕರಣೇ ಧಾತು. ತುದಾದಿ ಔಣಾದಿಕ ಅಸುನ್ ಪ್ರತ್ಯಯ. **ವ್ಯಚೇಃ ಕುಟಾದಿತ್ವಮನಸಿ** (ಕಾ. ೧-೨-೧-೧) ಎಂಬುದರಿಂದ ಅಸಿನಲ್ಲಿ ಪರ್ಯುದಾಸ ಮಾಡಿರುವುದರಿಂದ ಙಿತ್ವವು ಬರುವುದಿಲ್ಲ. ಆದುದರಿಂದ **ಗೃಹಿಜ್ಯಾ**—ಸೂತ್ರದಿಂದ ಸಂಪ್ರಸಾರಣವೂ ಬರುವುದಿಲ್ಲ. ನಿತ್ ಪ್ರತ್ಯಯಾಂತವಾದುದರಿಂದ ಆದ್ಯುದಾತ್ತಸ್ವರ ಬರುತ್ತದೆ.

अनशुः—अशू व्याप्तौ धातु. **व्यत्ययोबहुलं** ಎಂಬುದರಿಂದ ಪರಸ್ಮೈಪದ ಪ್ರತ್ಯಯ ಬರುತ್ತದೆ. ಲಿಟ್ ಪ್ರಥಮಪುರುಷದ ಝಿಗೆ **ಪರಸ್ಮೈಪದಾನಾಂ**—ಸೂತ್ರದಿಂದ ಉಸಾದೇಶ ಲಿಪ್ಸೈಮಿತ್ತವಾಗಿ ಧಾತುವಿಗೆ ದ್ವಿತ್ವ. ಅಭ್ಯಾಸಕ್ಕೆ ಹಲಾದಿಶೇಷ. **ಅತೋಗುಣೇ** ಎಂಬುದಕ್ಕೆ ಬಾಧಕವಾಗಿ **ಅತ ಆದೇಃ** ಎಂಬುದರಿಂದ ಅಭ್ಯಾಸದ ಅಕಾರಕ್ಕೆ ದೀರ್ಘ. **ಅಶ್ನೋತೇರ್ಹ್ವ** (ಪಾ. ಸೂ. ೭-೪-೭೨) ಎಂಬುದರಿಂದ ದೀರ್ಘಾಭ್ಯಾಸದ ಪರದ ವರ್ಣಕ್ಕೆ ನುಡಾಗಮ. ಅನಶುಃ ಎಂದು ರೂಪವಾಗುತ್ತದೆ. ಯಸ್ಯ ಎಂದು ಹಿಂದೆ ಯಚ್ಛಬ್ದಸಂಬಂಧವಿರುವುದರಿಂದ ಯದ್ವೃತ್ತಾ—ಸೂತ್ರದಿಂದ ನಿಘಾತಪ್ರತಿಷೇಧ ಬರುವುದರಿಂದ ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ.

युध्यतेः—युध संप्रहारे धातु. ಲಡರ್ಥದಲ್ಲಿ ಶತೃಪ್ರತ್ಯಯ. **दिवादिभ्यः श्यन्** ಎಂಬುದರಿಂದ ಶ್ಯನ್ ವಿಕರಣ. युध्यश् ಶಬ್ದವಾಗುತ್ತದೆ. ಷಷ್ಠ್ಯೇಕವಚನಾಂತರೂಪ. ಅದುಪದೇಶದ ಪರದಲ್ಲಿರುವುದರಿಂದ **ತಾಸ್ಯನುದಾತ್ತೇತ್** ಸೂತ್ರದಿಂದ ಲಸಾರ್ವಧಾತುಕವು ಅನುದಾತ್ತ. ಶ್ಯನ್ ನಿತ್ತಾದುದರಿಂದ ಅದ್ಯುದಾತ್ತಸ್ವರ ಬರುತ್ತೆದೆ.

चेकृषे—ಅತಿಙಂತದ ಪರದಲ್ಲಿರುವುದರಿಂದ **तिङ्ङतिङः** ಎಂಬುದರಿಂದ ಸರ್ವಾನುದಾತ್ತಸ್ವರ ಬರುತ್ತದೆ. ಲಿಟ್ ಮಧ್ಯಮಪುರುಷ ಏಕವಚನರೂಪ.

॥ संहितापाठः ॥

आर्चन्नत्र मरुतः सस्मिन्नाजौ विश्वे देवासो अमदन्ननु त्वा।
वृत्रस्य यद्भृष्टिमता वधेन नि त्वमिन्द्र प्रत्यानं जघन्थ
॥ ८५ ॥

॥ पदपाठः ॥

आर्चन् । अत्र । मरुतः । सस्मिन् । आजौ । विश्वे । देवासः । अमदन् ।
अनु । त्वा ।
वृत्रस्य । यत् । भृष्टिऽमता । वधेन । नि । त्वं । इन्द्र । प्रति ।
आनं । जघन्थ ॥ ८५ ॥

॥ಸಾಯಣಭಾಷ್ಯಂ॥

ಹೇ ಇಂದ್ರ ತ್ವಾಂ ಮರುತೋ೭ತ್ರಾಸ್ಮಿ೯ ಸಂಗ್ರಾಮ ಆರ್ಚನ್ । ಪ್ರಹರ ಭಗವೋ ಜಹಿ ವೀರಯೆಸ್ವ । ಐ. ಬ್ರಾ. ೩-೨೦ । ಇತ್ಯನೇನ ವಚನೇನಾಪೂಜಯ೯ । ಸಸ್ಮಿ೯ ತಸ್ಮಿ೯ ಯದ್ವಾ ಸರ್ವಸ್ಮಿನ್ನಾಜೌ ಸಂಗ್ರಾಮೇ ವಿಶ್ವೇ ದೇವಾಸಸ್ತೇ ಸರ್ವೇ ದಾನಾದಿಗುಣಯುಕ್ತಾ ಮರುತಸ್ತ್ವಾ ತ್ವಾಮನ್ವಮದನ್ । ಅನುಕ್ರಮೇಣ ಹರ್ಷಂ ಪ್ರಾಪಯ೯ । ಯದ್ವಾ । ತ್ವದೀಯಮದಾನಂತರಂ ತೇ೭ಪಿ ಮದಂ ಪ್ರಾಪ್ತಾಃ । ಹೇ ಇಂದ್ರ ತ್ವಂ ಯದ್ಯದಾ ಭೃಷ್ಟಿಮತಾ । ಭ್ರಂಶಯತಿ ಶತ್ರೂನಿತಿ ಭೃಷ್ಟಿರಶ್ಮಿಃ । ತದ್ವತಾ ವಧೇನ ಹನನಸಾಧನೇನ ವಜ್ರೇಣ । ಅಶ್ರಿಮತ್ತ್ವಂ ಚ ವಜ್ರಸ್ಯ ಬ್ರಾಹ್ಮಣೇ ಸಮಾಮ್ನಾತಂ । ವಜ್ರೋ ವಾ ಏಷ ಯದ್ಯೂಪಃ ಸೋ೭ಷ್ಟಾಶ್ರಿಃ ಕರ್ತವ್ಯೋ೭ಷ್ಟಾಶ್ರಿರ್ವೈ ವಜ್ರಃ । ಐ. ಬ್ರಾ. ೨-೧ । ಇತಿ । ತೇನ ವಜ್ರೇಣ ವೃತ್ರಸ್ಯಾನಂ ಪ್ರತಿ ಆನನಂ ಮುಖಂ ಪ್ರತಿ ಯದ್ವಾ ಶ್ವಾಸಹೇತು ಘ್ರಾಣಂ ಪ್ರತಿ ನಿ ಜಘಂಥ । ನಿತರಾಂ ಪ್ರಾಹಾರ್ಷೀಃ ॥ ಅರ್ಚ । ಅರ್ಚ ಪೂಜಾಯಾಂ । ಭೌವಾದಿಕಃ । ಆಡಾಗಮ ಉದಾತ್ತಃ । ಸಸ್ಮಿ೯ । ತದೋಃ ಸಃ ಸೌ । ಪಾ- ಸೂ. ೭-೨-೧೦೬ । ಇತಿ ವಿಧೀಯಮಾನಂ ಸಕ್ಷಂ ವ್ಯತ್ಯಯೇನ ಸಪ್ತಮ್ಯಾಮಪಿ ದ್ರಷ್ಟವ್ಯಂ । ಯದ್ವಾ । ಸರ್ವಸ್ಮಿನ್ನಿತ್ಯತ್ರ ವರ್ಣಲೋಪೋ ದ್ರಷ್ಟವ್ಯಃ। ದೇವಾಸಃ । ಅಜ್ಜಸೇರಸುಕ್ । ಅನಂ । ಅನನಂ । ವರ್ಣಲೋಪಶ್ಛಾಂದಸಃ । ಯದ್ವಾ । ಅನ ಪ್ರಾಣನೇ । ಅನ್ಯತೇ೭ನೇನೇತ್ಯಾನಂ । ಘ್ರಾಣಂ । ಕರಣೇ ಘಞ್ । ಕರ್ಷಾತ್ವತ ಇತ್ಯಂತೋದಾತ್ತತ್ವಂ । ಜಘಂಥ । ಹನ ಹಿಂಸಾಗತ್ಯೋಃ । ಥಲ್ಯಪದೇಶೇ೭ತ್ವತ ಇತೀಟ್ಪ್ರತಿಷೇಧಃ । ಅಭ್ಯಾಸಾಚ್ಚೇತ್ಯಭ್ಯಾಸಾದುತ್ತರಸ್ಯ ಹಕಾರಸ್ಯ ಘತ್ವಂ । ಲಿತ್ಸ್ವರೇಣ ಪ್ರತ್ಯಯಾತ್ಪೂರ್ವಸ್ಯೋದಾತ್ತತ್ವಂ ॥

॥ ಪ್ರತಿಪದಾರ್ಥ ॥

(ಹೇ ಇಂದ್ರ—ಎಲೈ ಇಂದ್ರನೇ । ತ್ವಾಂ—ನಿನ್ನನ್ನು) । ಮರುತಃ—ಮರುತ್ತುಗಳು । ಅತ್ರ—ಈ (ಯುದ್ಧ) ಕಾಲದಲ್ಲಿ । ಆರ್ಚ೯—ಪೂಜಿಸಿದರು । ಸಸ್ಮಿ೯ ಆಜೌ—ಆ (ಅಥವಾ ಎಲ್ಲ) ಯುದ್ಧಕಾಲದಲ್ಲಿ । ಇಂದ್ರ—ಎಲೈ ಇಂದ್ರನೇ । ತ್ವಂ—ನೀನು । ಯತ್—ಯಾವಾಗ। ಭೃಷ್ಟಿಮತಾ—ಚೂಪಾಗಿಯೂ । ವಧೇನ—ವಧಸಾಧನವಾಗಿಯೂ ಇರುವ ವಜ್ರಾಯುಧದಿಂದ । ವೃತ್ರಸ್ಯ—ವೃತ್ರನ । ಆನಂ ಪ್ರತಿ—ಮುಖವನ್ನು ಕುರಿತು ಅಥವಾ ಶ್ವಾಸಹೇತುವಾದ ನಾಸಿಕದ ಮೇಲೆ । ನಿಜಘಂಥ—ಚೆನ್ನಾಗಿ ಹೊಡೆದೆಯೋ (ಆಗ)। ವಿಶ್ವೇ ದೇವಾಸಃ—ಆ ಸಕಲ ಮರುದ್ದೇವತೆಗಳೂ । ತ್ವಾ—ನಿನ್ನನ್ನು । ಅನು ಅಮರ್ದ—ಅನುಕ್ರಮವಾಗಿ ಸಂತೋಷಗೊಳಿಸಿದರು ಅಥವಾ ಅನುಸರಿಸಿ ಕ್ರಮವಾಗಿ ಸಂತೋಷಗೊಂಡರು ।

॥ ಭಾವಾರ್ಥ ॥

ಎಲೈ ಇಂದ್ರನೇ, ಈ ಯುದ್ಧಕಾಲದಲ್ಲಿ ಮರುತ್ತುಗಳು ನಿನ್ನನ್ನು ಪೂಜಿಸಿದರು. ಯುದ್ಧಮಾಡುವಾಗ ನೀನು ಚೂಪಾಗಿಯೂ, ಕೊಲ್ಲತಕ್ಕದ್ದಾಗಿಯೂ ಇರುವ ನಿನ್ನ ವಜ್ರಾಯುಧದಿಂದ ವೃತ್ರನ ಮುಖಕ್ಕೆ ಹೊಡೆದಾಗ ಎಲ್ಲ ಮರುದ್ದೇವತೆಗಳೂ ನಿನ್ನಂತೆಯೇ ಹರ್ಷಿತರಾದರು

English Translation.

The Maruts worshipped you in this battle ; all the gods in this engagement imitated you in exulation, when you had struck the face of Vritra with your sharp and fatal bolt.

॥ ವಿಶೇಷ ವಿಷಯಗಳು ॥

ಆರ್ಚನ್—ಮರುದ್ದೇವತೆಗಳು **ಪ್ರಹರ ಭಗವೋ ಜಹಿ ವೀರಯೇಸ್ಮ** (ಐ. ಬ್ರಾ. ೩-೨೦) ಇತ್ಯಾದಿ ಸ್ತುತಿವಚನಗಳಿಂದ ಇಂದ್ರನನ್ನು ಪೂಜಿಸಿದರು.

ಅನು ಅಮದನ್—ಮರುತ್ತುಗಳು ಕ್ರಮವಾಗಿ ಇಂದ್ರನಿಗೆ ಸಂತೋಷವನ್ನುಂಟುಮಾಡಿದರು. ಅಥವಾ ಇಂದ್ರನು ಸಂತೋಷಪಟ್ಟಮೇಲೆ ತಾವೂ ಹರ್ಷಯುತರಾದರು ಎಂದು ಈ ಎರಡು ರೀತಿಯಲ್ಲಿಯೂ ಅರ್ಥ ಹೇಳಬಹುದು.

ಭೃಷ್ಟಿಮತಾ—**ಭ್ರಂಶಯತಿ ಶತ್ರೂನ್ ಇತಿ ಭೃಷ್ಟಿಃ ತೇಜ್ವತಾ**—ಶತ್ರುಗಳನ್ನು ಧ್ವಂಸಮಾಡುವ ಅಲಗಿಗೆ ಭೃಷ್ಟಿ ಅಥವಾ ಅಶ್ರಿ ಎಂದು ಹೆಸರು. ವಜ್ರಾಯುಧವು ಅಂತಹ ಅಲುಗುಗಳುಳ್ಳದ್ದು. ಇದನ್ನೇ **ವಜ್ರೋ ವಾ ಏಷ ಯದ್ಯೂಪಃ ಸೋಽಷ್ಟಾಶ್ರಿಃ ಕರ್ತವ್ಯೋಽಷ್ಟಾಶ್ರಿರ್ವೈ ವಜ್ರಃ** (ಐ. ಬ್ರಾ ೨-೧) ಎಂಬ ಶ್ರುತಿಯು ತಿಳಿಸುವುದು.

ಆನಂ ಪ್ರತಿ—ಆನಶಬ್ದಕ್ಕೆ ಆನನ (ಮುಖ) ಅಥವಾ ಉಸಿರಾಡಲು ಸಾಧಕವಾದ ನಾಸಿಕ (ಮೂಗು) ಎಂಬ ಎರಡರ್ಥವಿದೆ. ಇಂದ್ರನು ವೃತ್ರಾಸುರನ ಮುಖದ ಮೇಲೋ ಅಥವಾ ಮೂಗಿನ ಮೇಲೋ ಬಲವಾಗಿ ಹೊಡೆದನು ಎಂದರ್ಥವಾಗುವುದು. ಆನನ ಶಬ್ದವು **ವರ್ಣಲೋಪ**ವಾಗಿ ವೇದದಲ್ಲಿ ಉಚ್ಚರಿತವಾದರೆ, ಮುಖವೆಂದೂ, **ಅನ್ಯತೇ ಅನೇನ** ಎಂದು ವ್ಯುತ್ಪತ್ತಿ ಮಾಡಿದರೆ ನಾಸಿಕವೆಂದೂ ಅರ್ಥವಾಗುವುದು.

॥ ವ್ಯಾಕರಣಪ್ರಕ್ರಿಯಾ ॥

ಆರ್ಚನ್—ಅರ್ಚ ಪೂಜಾಯಾಂ ಧಾತು. ಭ್ವಾದಿ ಲಙ್ ಪ್ರಥಮಪುರುಷ ಬಹುವಚನದಲ್ಲಿ **ಝೋಂತೆಃ** ಎಂಬುದರಿಂದ ಅಂತಾದೇಶ. **ಇತಶ್ಚ** ಎಂಬುದರಿಂದ ಅಲ್ಲಿ ಇಕಾರಲೋಪ. **ಕರ್ತರಿಶಪ್** ಎಂಬುದರಿಂದ ಶಪ್‌ವಿತರಣ. **ಅತೋಗುಣೇ** ಎಂಬುದರಿಂದ ಪರರೂಪ. ಅಜಾದಿಯಾದುದರಿಂದ **ಅಡಜಾದೀನಾಂ** ಎಂಬುದರಿಂದ ಅಂಗಕ್ಕೆ ಅಡಾಗಮ. **ಅಟಶ್ಚ** ಸೂತ್ರದಿಂದ ವೃದ್ಧಿ. ಪಾದಾದಿಯಲ್ಲಿರುವುದರಿಂದ ನಿಘಾತ ಪ್ರತಿಷೇಧ ಬರುವುದರಿಂದ ಅಡಾಗಮ ಉದಾತ್ತವಾದುದರಿಂದ ಆದ್ಯುದಾತ್ತವಾದ ಪದವಾಗುತ್ತದೆ.

ಸಸ್ಮಿನ್—**ತಸ್ಮಿನ್** ಎಂಬರ್ಥದಲ್ಲಿ ಸಸ್ಮಿನ್ ಎಂದಾಗುತ್ತದೆ. **ತದೋಃ ಸಃ ಸಾವನಂತ್ಯಯೋಃ** (ಪಾ. ಸೂ. ೭-೨-೧೦೬) ಎಂಬುದರಿಂದ ವಿಧಿಸಲ್ಪಡುವ ಸತ್ವವು ವ್ಯತ್ಯಯದಿಂದ ಸಪ್ತಮಿಯಲ್ಲೂ ಬರುತ್ತದೆ. ಅಥವಾ ಛಾಂದಸವಾಗಿ ಸರ್ವಸ್ಮಿನ್ ಎಂಬಲ್ಲಿ ವರ್ಣಲೋಪ ಬಂದರೆ ಸಸ್ಮಿನ್ ಎಂದು ರೂಪವಾಗುತ್ತದೆ.

ದೇವಾಸಃ—ದೇವ+ಜಸ್ ಎಂದಿರುವಾಗ **ಆಜ್ಜಸೇರಸುಕ್** (ಪಾ. ಸೂ. ೭-೧-೫೦) ಎಂಬುದರಿಂದ ಅಸುಕಾಗಮ. **ದೇವಾಸಸ್** ಎಂದಿರುವಾಗ ರುತ್ವ ವಿಸರ್ಗ ಬಂದರೆ ದೇವಾಸಃ ಎಂದು ರೂಪವಾಗುತ್ತದೆ.

ಅಮದೆನ್—ಮದೀ ಹರ್ಷೇ ಧಾತು. ಲಜ್ ಪ್ರಥಮಪುರುಷ ಬಹುವಚನದಲ್ಲಿ ಅಮದನ್ ಎಂದು ರೂಪವಾಗುತ್ತದೆ. ತಿಙಂತನಿಘಾತ ಸ್ವರ ಬರುತ್ತದೆ.

ಅನಮ್—ಅನನವ್ ಎಂದಿರುವಾಗ ಛಾಂದಸವಾಗಿ ವರ್ಣಲೋಪ ಬರುವುದರಿಂದ ಅನಂ ಎಂದಾಗುತ್ತದೆ. ಅಥವಾ ಅನ ಪ್ರಾಣನೇ ಧಾತು. **ಅನ್ಯತೇ ಅನೇನ ಇತಿ ಅನಮ್**. ಕರಣಾರ್ಥದಲ್ಲಿ **ಘಞ್** ಪ್ರತ್ಯಯ ಞಿತ್ತಾದುದರಿಂದ **ಅತಉಪಧಾಯಾಃ** ಎಂಬುದರಿಂದ ಧಾತುವಿನ ಉಪಧೆಗೆ ವೃದ್ಧಿ. ಅನಂ ಎಂದಾಗುತ್ತದೆ. **ಕರ್ಷಾತ್ವತಃ**—(ಪಾ. ಸೂ. ೬-೧-೧೫೯) ಎಂಬುದರಿಂದ ಅಂತೋದಾತ್ತಸ್ವರ ಬರುತ್ತದೆ.

ಜಘಂಥ—ಹನ ಹಿಂಸಾಗತ್ಯೋಃ ಧಾತು ಅದಾದಿ. ಲಿಟ್ ಮಧ್ಯಮಪುರುಷ ಏಕವಚನದ ಸಿಪಿಗೆ **ಪರಸ್ಮೈಪದಾನಾಂ**—ಎಂಬುದರಿಂದ ಥಲಾದೇಶ. ಥಲ್ ಪರದಲ್ಲಿರುವಾಗ ಧಾತುವಿಗೆ ದ್ವಿತ್ವ. ಅಭ್ಯಾಸಕ್ಕೆ ಹಲಾದಿಶೇಷ. **ಕುಹೋಶ್ಚುಃ** ಎಂಬುದರಿಂದ ಚುತ್ವ. **ಅಭ್ಯಾಸಾಚ್ಚ** ಎಂಬುದರಿಂದ ಅಭ್ಯಾಸದ ಪರದಲ್ಲಿರುವ ಹನಿನ ಹಕಾರಕ್ಕೆ ಕುತ್ವದಿಂದ ಘಕಾರಾದೇಶ **ಉಪದೇಶೇಜಾದ್ಯತಃ** (ಪಾ. ಸೂ. ೬-೨-೬೨) ಸೂತ್ರದಿಂದ ಇಣ್ನಿಷೇಧ. **ನಶ್ಚಾಪದಾಂತಸ್ಯಝಲಿ** ಎಂಬುದರಿಂದ ನಕಾರಕ್ಕೆ ಅನುಸ್ವಾರ **ಅನುಸ್ವಾರಸ್ಯ**—ಸೂತ್ರದಿಂದ ಪರಸವರ್ಣದಿಂದ ನಕಾರಾದೇಶ. **ಜಘನ್ಥ** ಎಂದು ರೂಪವಾಗುತ್ತದೆ. **ಥಲ್ ಲಿತ್ತಾದುದರಿಂದ ಲಿತಿ** ಎಂಬುದರಿಂದ ಪ್ರತ್ಯಯದ ಪೂರ್ವಕ್ಕೆ ಉದಾತ್ತಸ್ವರ ಬರುತ್ತದೆ. ಘಕಾರೋತ್ತರಾಕಾರ ಉದಾತ್ತವಾಗುತ್ತದೆ.

ಐವತ್ತಮೂರನೆಯ ಸೂಕ್ತವು

॥ ಸಾಯಣಭಾಷ್ಯಂ ॥

ನ್ಯೂ ಷ್ವಿತ್ಯೇಕಾದಶರ್ಚಂ ತೃತೀಯಂ ಸೂಕ್ತಂ । ದಶಮ್ಯೇಕಾದಶ್ಯೌ ತ್ರಿಷ್ಟುಭೌ । ಶಿಷ್ಟಾ ನವ ಜಗತ್ಯಃ । ಸವ್ಯ ಋಷಿಃ । ಇಂದ್ರೋ ದೇವತಾ । ತಥಾ ಚಾನುಕ್ರಾಂತಂ—ನ್ಯೂ ಷ್ವೇಕಾದಶಾಂತ್ಯೇ ತಿಷ್ಟುಭಾವಿತಿ । ಅತಿರಾತ್ರೇ ಪ್ರಥಮೇ ಪರ್ಯಾಯೇ ಬ್ರಾಹ್ಮಣಾಚ್ಛಂಸಿನಃ ಶಸ್ತ್ರ ಏತತ್ಸೂಕ್ತಂ । ತಥಾ ಚಾಸೂತ್ರಯದಾಚಾರ್ಯಃ । ನ್ಯೂ ಷು ವಾಚಮಪ್ರಂ ಪೂತಕ್ರತ್ಯಸ್ಯ ಹರಿವಃ ಪಿಬೇಹೇತಿ ಯಾಜ್ಯಾ । ಆಶ್ವ. ೬-೪ ಇತಿ ॥

ಅನುವಾದವು—**ನ್ಯೂ ಷು** ಎಂಬ ಸೂಕ್ತವು ಹತ್ತನೆಯ ಅನುವಾಕದಲ್ಲಿ ಮೂರನೆಯ ಸೂಕ್ತವು. ಇದರಲ್ಲಿ ಹತ್ತು ಋಕ್ಕುಗಳಿರುವವು. ಈ ಸೂಕ್ತಕ್ಕೆ ಸವ್ಯನು ಋಷಿಯು, ಇಂದ್ರನೇ ದೇವತೆಯು. ಹತ್ತು ಮತ್ತು ಹನ್ನೊಂದನೆಯ ಋಕ್ಕುಗಳು ತ್ರಿಷ್ಟುಪ್ಛಂದಸ್ಸಿನವು. ಉಳಿದ ಋಕ್ಕುಗಳು ಜಗತೀಛಂದಸ್ಸಿನವು. ಅನುಕ್ರಮಣಿಕೆಯಲ್ಲಿ **ನ್ಯೂ ಷ್ವೇಕಾದಶ್ಯಾಂತ್ಯೇ ತ್ರಿಷ್ಟುಭಾವಿತಿ** ಎಂದು ಹೇಳಿರುವುದು. ಅತಿರಾತ್ರವೆಂಬ ಯಾಗದಲ್ಲಿ ಪ್ರಥಮಪರ್ಯಾಯದಲ್ಲಿ ಬ್ರಾಹ್ಮಣಾಚ್ಛಂಸಿಯೆಂಬ ಋತ್ವಿಜನು ಶಸ್ತ್ರಮಂತ್ರಗಳಿಗಾಗಿ **ಈ ಸೂಕ್ತವನ್ನು** ಪಠಿಸಬೇಕೆಂದು ಆಶ್ವಲಾಯನ ಶ್ರೌತಸೂತ್ರವಲ್ಲಿ **ನ್ಯೂ ಷು ವಾಚಮಪ್ರಂ ಪೂತಕ್ರತ್ಯಸ್ಯ ಹರಿವಃ ಪಿಬೇಹೇತಿ ಯಾಜ್ಯಾ** ಎಂಬ ಸೂತ್ರವು ನಿರ್ದೇಶಿಸುವುದು (ಆ. ೬-೪).

ಸೂಕ್ತ ೧೫

ಮಂಡಲ—೧ ॥ ಅನುವಾಕ—೧೦ ॥ ಸೂಕ್ತ—೧೫ ॥
ಅಷ್ಟಕ—೧ ॥ ಅಧ್ಯಾಯ—೪ ॥ ವರ್ಗ—೧೫, ೧೬ ॥

ಸೂಕ್ತದಲ್ಲಿರುವ ಋಕ್ಸಂಖ್ಯೆ—೧೧ ॥
ಋಷಿಃ—ಸಪ್ತ ಆಂಗಿರಸಃ ॥
ದೇವತಾ—ಇಂದ್ರಃ ॥
ಛಂದಃ—೧-೯ ಜಗತೀ । ೧೦, ೧೧ ತ್ರಿಷ್ಟುಪ್ ॥

॥ ಸಂಹಿತಾಪಾಠಃ ॥

ನ್ಯೃ॑ಷಿ ಷು ವಾಚ॑ಂ ಪ್ರ ಮ॒ಹೇ ಭ॑ರಾಮಹೇ॒ ಗಿರ॒ ಇಂದ್రಾ॑ಯ॒ ಸದ॑ನೇ ವಿವಸ್ವ॒ತಃ ।
ನೂ ಚಿ॒ದ್ಧಿ ರ॒ತ್ನಂ ಸ॒ಸತಾ॑ಮಿವಾವಿ॒ದನ್ನ ದು॒ಷ್ಟುತಿ॒ರ್ದ್ರವಿ॑ಣೋ॒ದೇಷು॑ ಶಸ್ಯತೇ ॥ ೧ ॥

ಪದಪಾಠಃ

ನಿ । ಊಂ ಇತಿ॑ । ಸು । ವಾಚ॑ಂ । ಪ್ರ । ಮ॒ಹೇ । ಭ॒ರಾ॒ಮ॒ಹೇ॒ । ಗಿರಃ॑ । ಇಂದ್ರಾ॑ಯ । ಸದ॑ನೇ । ವಿ॒ವ॒ಸ್ವ॒ತಃ ।
ನು । ಚಿತ್ । ಹಿ । ರ॒ತ್ನಂ । ಸ॒ಸತಾ॑ಂ ಇ॒ವ । ಅ॒ವಿ॒ದ॒ತ್ । ನ । ದುಃ॒ಸ್ತುತಿಃ । ದ್ರವಿ॑ಣಃ । ದೇ॒ಷು॒ । ಶ॒ಸ್ಯ॒ತೇ॒ ॥ ೧ ॥

॥ ಸಾಯಣಭಾಷ್ಯಂ ॥

ಮಹೇ ಮಹತ ಇಂದ್ರಾಯ ಸು ವಾಚಂ ಶೋಭನಾಂ ಸ್ತುತಿಂ ನಿ ಪ್ರ ಭರಾಮಹೇ । ನಿತರಾಂ ಪ್ರಯುಂಜ್ಮಹೇ । ಊ ಇತಿ ಪಾದಪೂರಣಃ । ಯತೋ ವಿವಸ್ವತಃ ಪರಿಚರತೋ ಯಜಮಾನಸ್ಯ ಸದನೇ ಯಜ್ಞಗೃಹ ಇಂದ್ರಾಯ ಗಿರಃ ಸ್ತುತಯಃ ಕ್ರಿಯಂತೇ । ಹಿ ಯಸ್ಮಾತ್ಸ ಇಂದ್ರೋ ನೂ ಚಿತ್ ಕ್ಷಿಪ್ರ-ಮೇವ ರತ್ನಂ ರಮಣೀಯಮಸುರಾಣಾಂ ಧನಮವಿದತ್ ವಿಂದತಿ । ತತ್ರ ದೃಷ್ಟಾಂತಃ । ಸಸತಾಮಿವ ।

ಯೆಥಾ ಸ್ವಪತಾಂ ಪುರುಷಾಣಾಂ ಧನಂ ಚೋರಃ ಕ್ಷಿಪ್ರಂ ಲಭತೇ ತದ್ವತ್ । ಅತೋಽಸ್ಮಭ್ಯಂ ಧನಂ ದಾತುಂ ಶಕ್ತ ಇತಿ ಭಾವಃ । ದ್ರವಿಣೋದೇಷು ಧನಸ್ಯ ದಾತೃಷು ಪುರುಷೇಷು ದುಷ್ಟುತಿರಸಮಾಚೀನಾ ಸ್ತುತಿರ್ನ ಶಸ್ಯತೇ ನಾಭಿಧೀಯತೇ । ಅತಃ ಸುವಾಚಂ ಪ್ರ ಭರಾಮಹ ಇತಿ ಪೂರ್ವೇಣ ಸಂಬಂಧಃ ॥ ನ್ಯೊ ಷು ಇತ್ಯಸ್ಯೋದಾತ್ತಸ್ವರಿತಯೋರ್ಯಣ ಇತಿ ಸ್ವರಿತತ್ವಂ । ತತ್ಪೋದಾತ್ತಪರತ್ವಾತ್ಸಂಹಿತಾಯಾಂ ಕಂಪ್ಯತೇ । ಇಕಃ ಸುಞಿ । ಪಾ. ೬-೩-೧೩೪ । ಇತಿ ದೀರ್ಘತ್ವಂ । ಸುಞ ಇತಿ ಷತ್ವಂ । ಮಹೇ । ಮಹ ಪೂಜಾಯಾಮಿತ್ಯಸ್ಮಾತ್ ಕ್ವಿಪ್ಪೂರ್ವೇತಿ ಕ್ವಿಪ್ । ಸಾವೇಕಾಚ ಇತಿ ವಿಭಕ್ತೇರುದಾತ್ತತ್ವಂ । ಯದ್ವಾ । ಮಹಚ್ಛಬ್ದಸ್ಯಾಚ್ಛಬ್ದಲೋಪಶ್ಚಾಂದಸಃ । ನೂ ಚಿತ್ । ಋಚಿ ತುನುಘೇತ್ಯಾದಿನಾ । ದೀರ್ಘಃ । ಸಸತಾಮಿವ । ಷಸ ಸ್ವಪ್ನೇ । ಅಸ್ಮಾಚ್ಛತೃಂತಾದಂತೋದಾತ್ತಾತ್ಪರಸ್ಯಾ ವಿಭಕ್ತೇಃ ಶತುರನುಮಃ ಇತ್ಯುದಾತ್ತತ್ವಂ । ಇವೇನ ವಿಭಕ್ತ್ಯಲೋಪಃ ಪೂರ್ವಪದಪ್ರಕೃತಿಸ್ವರತ್ವಂ ಚ । ಪಾ. ೨-೧-೪-೨ । ಇತಿ ಸಮಾಸಃ । ಅವಿದತ್ । ವಿದ್ಲೃ ಲಾಭೇ । ಛಂದಸಿ ಲುಙ್ಲಙ್ಲಿಟ ಇತಿ ವರ್ತಮಾನೇ ಲುಙ್ ಪುಷಾದಿದ್ಯುತಾದೀತಿ ಚ್ಲೇರಙಾದೇಶಃ । ಅಡಾಗಮ ಉದಾತ್ತಃ । ಹಿ ಚೇತಿ ನಿಘಾತಪ್ರತಿಷೇಧಃ । ದ್ರವಿಣೋದೇಷು । ದ್ರವಿಣಾನಿ ಧನಾನಿ ದದಾತೀತಿ ದ್ರವಿಣೋದಾಃ । ದ್ರು ಗತಾವಿತ್ಯಸ್ಮಾತ್ ದ್ರುದಕ್ಷಿಭ್ಯಾಮಿನನ್ । ಉ. ೨-೫೦ । ಇತೀನನ್ಪ್ರತ್ಯಯಾಂತೋ ದ್ರವಿಣಶಬ್ದಃ । ತಸ್ಮಿನ್ ಕರ್ಮಣ್ಯುಪಪದ ಆತೋಽನುಪಸರ್ಗೇ ಕ ಇತಿ ಕಃ । ಪೂರ್ವಪದಸ್ಯ ಸುಗಾಗಮಶ್ಚಾಂದಸಃ । ಕೃದುತ್ತರಪದಪ್ರಕೃತಿಸ್ವರತ್ವಂ । ಶಸ್ಯತೇ । ಶನ್ಸು ಸ್ತುತೌ । ಯೆಷ್ಯನಿದಿತಾಮಿತಿ ನಲೋಪಃ ॥

॥ ಭಾಷ್ಯಾರ್ಥ ॥

ಮಹೇ—ಅದ್ಭುತ ಪ್ರಭಾವವುಳ್ಳ । **ಇಂದ್ರಾಯ**—ಇಂದ್ರನಿಗೆ । **ಸು ವಾಚಂ**—ಶ್ರೇಷ್ಠವಾದ ಸ್ತೋತ್ರವನ್ನು । **ನಿ ಪ್ರ ಭರಾಮಹೇ**—ಸಂಪೂರ್ಣವಾಗಿ ಅರ್ಪಿಸುವೆವು । **ವಿವಸ್ವತಃ**—ಪೂಜಕನಾದ ಯಜಮಾನನ । **ಸದನೇ**—ಯಜ್ಞ ಗೃಹದಲ್ಲಿ । **ಗಿರಃ**—(ಇಂದ್ರನಿಗೆ) ಸ್ತೋತ್ರಗಳು (ಅರ್ಪಿತವಾಗುತ್ತವೆ) । **ಹಿ**—ಏತಕ್ಕೆಂದರೆ । (**ಇಂದ್ರಃ**—ಇಂದ್ರನು) । **ನೂ ಚಿತ್**—ಜಾಗ್ರತೆಯಾಗಿಯೇ । **ರತ್ನಂ**—(ರಾಕ್ಷಸರ) ರಮಣೀಯವಾದ ಧನವನ್ನು । **ಸಸತಾಂ ಇವ**—ನಿದ್ರೆಮಾಡುವ ಧನಿಕರ ಧನವನ್ನು (ಕಳ್ಳರು ಜಾಗ್ರತೆ) ಹೊಂದುವಂತೆ । **ಅವಿದತ್**—ಹೊಂದುತ್ತಾನೆ (ಅಪಹರಿಸುತ್ತಾನೆ ಮತ್ತು ನಮಗೆ ಕೊಡಲು ಶಕ್ತನಾಗುತ್ತಾನೆ) । **ದ್ರವಿಣೋದೇಷು**—ಧನವನ್ನು ದಾನಮಾಡುವವರಲ್ಲಿ । **ದುಷ್ಟುತಿಃ**—ಅಯೋಗ್ಯಗಳಾದ ಸ್ತೋತ್ರಗಳು । **ನ ಶಸ್ಯತೇ**—ಗೌರವಿಸಲ್ಪಡುವುದಿಲ್ಲ ॥

॥ ಭಾವಾರ್ಥ ॥

ಇಂದ್ರನ ಪ್ರಭಾವವು ಅತ್ಯದ್ಭುತವಾದುದು. ಶ್ರೇಷ್ಠವಾದ ಸ್ತೋತ್ರಗಳನ್ನರ್ಪಿಸಿ ಅವನನ್ನು ತೃಪ್ತಿಪಡಿಸುವೆವು. ಯಜ್ಞಕರ್ತನಾದ ಯಜಮಾನನ ಯಜ್ಞ ಗೃಹದಲ್ಲಿ ಅವನಿಗೆ ಸ್ತೋತ್ರಗಳು ಅರ್ಪಿತವಾಗುವುವು. ಈ ಸ್ತೋತ್ರಗಳಿಂದ ಉತ್ತೇಜನ ಹೊಂದಿ ಅವನು ಬಹಳ ಜಾಗ್ರತೆಯಲ್ಲಿಯೇ ಕಳ್ಳರು ನಿದ್ರೆಮಾಡುವ ಧನಿಕನ ಧನವನ್ನು ಅಪಹರಿಸುವಂತೆ ರಾಕ್ಷಸರ ರಮಣೀಯಗಳಾದ ಧನಗಳನ್ನು ಅಪಹರಿಸಿ ನಮಗೆ ಹಂಚುವನು. ಧನದಾತರಲ್ಲಿ ಸ್ತೋತ್ರಗಳನ್ನು ಅಯೋಗ್ಯವಾದ ರೀತಿಯಲ್ಲಿ ಅರ್ಪಿಸಿದರೆ ಅವಕ್ಕೆ ಬೆಲೆಯಿಲ್ಲ.

English Translation.

We offer laudatory words to the mighty Indra; we offer filling praise to Indra in the house of the sacrificer engaged in the service. He (Indra) has quickly acquired riches, as a thief hastily carries off the property of the sleeping; Ill-expressed words are not praised among the grivers of wealth.

॥ ವಿಶೇಷ ವಿಷಯಗಳು ॥

ಮುಖ್ಯಾಭಿಪ್ರಾಯವು—ಅತ್ರೇದಮುಕ್ತಂ ಭವತಿ । ನಿದ್ರಿತಾಃ ಪುರುಷಾ ಇವ ಯದಾ ಮನುಷ್ಯಾ ಧನಂ ನೋಪೇಕ್ಷಂತೇ ತದಪಿ ತೇಭ್ಯ ಇಂದ್ರಃ ಕ್ಷಿಪ್ರಂ ಧನಂ ದದಾತಿ । ಏತಾದೃಶೇಷು ಧನದೇಷು ವಿಷಯೇಷು ಚ ಸಮ್ಯೋಚೀನಾ ಸ್ತುತಿಃ ಶಂಸ್ಯಾ ಭವತಿ । ಅತಃ ಕಾರಣಾತ್ಸಮ್ಯೋಚೀನಾನಿ ಸ್ತೋತ್ರಾಣಿ ರಚಯಿತ್ವಾಸ್ಯ ನೋ ಯಜಮಾನಸ್ಯ ಯಜ್ಞಶಾಲಾಯಾಂ ಮಹತ ಇಂದ್ರಾಯಾರ್ಚಯೂ ಮೇತಿ ॥ ನಿದ್ರೆಮಾಡುತ್ತಿರುವ ಮನುಷ್ಯರಿಗೆ ದ್ರವ್ಯದ ವಿಷಯದಲ್ಲಿ ಯಾವ ಚಿಂತೆಯೂ ಇರುವುದಿಲ್ಲ. ಅದರಂತೆ ದ್ರವ್ಯ ವಿಷಯದಲ್ಲಿ ಗಮನವಿಲ್ಲದಿದ್ದರೂ ಇಂದ್ರನನ್ನು ಸ್ತುತಿಸುವ ಸ್ತೋತೃಗಳಿಗೆ ಇಂದ್ರನು ಬೇಗನೆ ಧನವನ್ನು ಕೊಟ್ಟೇಕೊಡುವನು. ಆದುದರಿಂದ ಯಜ್ಞಮಾಡುವ ಯಜಮಾನನ ಯಜ್ಞಶಾಲೆಯಲ್ಲಿ ಸ್ತೋತ್ರಾರ್ಹನಾದ ಇಂದ್ರನ ವಿಷಯದಲ್ಲಿ ಉತ್ತಮವಾದ ಸ್ತೋತ್ರಗಳನ್ನು ರಚಿಸಿ ಇಂದ್ರನಿಗೆ ಅರ್ಪಿಸೋಣ ಎಂಬ ಅಭಿಪ್ರಾಯವು ವ್ಯಕ್ತವಾಗುವುದು.

ನಿ+ಊ+ಷು= ನ್ಯೂಷು—ಇಲ್ಲಿ ನಿ ಎಂಬುದು ಉಪಸರ್ಗ. ಊಕಾರವು ಪಾದಪೂರಣಾರ್ಥಕವಾದುದು. ಅದಕ್ಕೆ ಯಾವ ಅರ್ಥವೂ ಇರುವುದಿಲ್ಲ. ಷು ಶಬ್ದಕ್ಕೆ ಶೋಭನವಾದ ಎಂದರ್ಥ. ಷು ಶಬ್ದವು ವಾಕ್ ಶಬ್ದಕ್ಕೆ ವಿಶೇಷಣವೆನಿಸಿದೆ.

ರತ್ನಂ—ರಮಣೀಯವಾದ ರಾಕ್ಷಸರ ಧನ ಎಂಬುದು ಇಲ್ಲಿ ಪ್ರಕರಣದಿಂದ ಲಭಿಸುವ ಅರ್ಥ.

ಸಸತಾಂ ಇವ—ಷಸ ಸ್ವಪ್ನೇ ಎಂಬ ಧಾತುವಿನಿಂದ ನಿಷ್ಪನ್ನವಾದ ಈ ಶಬ್ದವು ನಿದ್ರೆಮಾಡುವವರ ಹಣದಂತೆ ಎಂದರ್ಥಕೊಡುವುದು. ಇಂದ್ರನು ರಾಕ್ಷಸರ ಧನವನ್ನೆಲ್ಲಾ ಅಪಹರಿಸಿ ಯಜಮಾನನೇ ಮೊದಲಾದ ಸತ್ಪುರುಷರಿಗೆ ಕೊಡುವನು ಎಂಬುದಕ್ಕೆ ಮೇಲಿನ ವಿಷಯವು ದೃಷ್ಟಾಂತವಾಗಿ ಕೊಡಲ್ಪಟ್ಟಿದೆ.

ದುಷ್ಟುತಿಃ—ಅಸಮ್ಯೋಚೀನಾ ಸ್ತುತಿಃ—ಮನಸ್ಸಿಗೆ ಹಿತವಲ್ಲದ ಸ್ತೋತ್ರ ಎಂದರ್ಥ.

ದ್ರವಿಣೋದೇಷು—ದ್ರು ಗತೌ ಎಂಬ ಧಾತುವಿನಿಂದ ದ್ರವಿಣಶಬ್ದವು ಸಿದ್ಧವಾಗಿದೆ. ಅಂತಹ ದ್ರವಿಣ (ಚಂಚಲವಾದ ದ್ರವ್ಯ)ವನ್ನು ಕೊಡುವವರು ದ್ರವಿಣೋದರು. ದ್ರವ್ಯವನ್ನು ದಾನಮಾಡುವವರಲ್ಲಿ ಅಸಮ್ಯೋಚೀನವಾದ ಸ್ತುತಿಯು ಫಲಕಾರಿಯಾಗಲಾರದು ಎಂಬುದು ಪ್ರಸಿದ್ಧವಾಗಿಯೇ ಇರುವುದು.

॥ ವ್ಯಾಕರಣಪ್ರಕ್ರಿಯಾ ॥

ನ್ಯೂ ಷು—ನಿ+ಊ ಎಂದಿರುವಾಗ ಯಣಾದೇಶ. **ಉದಾತ್ತಸ್ವರಿತಯೋರ್ಯಣಃ ಸ್ವರಿತೋನುದಾತ್ತಸ್ಯ** ಎಂಬುದರಿಂದ ಉದಾತ್ತಸ್ಥಾನಕ್ಕೆ ಯಣ್ ಬಂದಿರುವುದರಿಂದ ಅದರ ಮುಂದಿರುವ ಅನುದಾತ್ತವಾದ ಉ ಎಂಬುದಕ್ಕೆ ಸ್ವರಿತಸ್ವರ ಬರುತ್ತದೆ. ಅದಕ್ಕೆ ಷು ಎಂಬ ಉದಾತ್ತವು ಪರದಲ್ಲಿರುವುದರಿಂದ ಸಂಹಿತಾಪಾಠ

सुश्रवसा—शोभनं श्रवः अन्नं यस्य सुश्रवाः तेन. **आद्युदात्तं द्व्यच् छंदसि** (पा. सू. ६-२-१७९) ಸುವಿನ ಪರದಲ್ಲಿರುವ ದ್ವ್ಯಚ್ಕವಾದ ಉತ್ತರಪದವು ಆದ್ಯುದಾತ್ತವಾಗುತ್ತದೆ ಎಂಬುದರಿಂದ ಉಪಪದ ಆದ್ಯುದಾತ್ತಸ್ವರ ಬರುತ್ತದೆ.

उपजग्मुषः—ಗಮಲೃ ಗತೌ ಧಾತು. **क्वसुश्च** (वा. सू. ३-२-१०७) ಎಂಬುದರಿಂದ ಲಿಟಿಗೆ ಕ್ವಸು ಪ್ರತ್ಯಯ. ತನ್ನಿಮಿತ್ತವಾಗಿ ಧಾತುವಿಗೆ ದ್ವಿತ್ವ. ಅಭ್ಯಾಸಕ್ಕೆ ಹಲಾದಿಶೇಷ. ಚುತ್ವ **गमहनजन**— (पा. सू. ६-४-९८) ಎಂಬುದರಿಂದ ಧಾತುವಿನ ಉಪಧೆಗೆ ಲೋಪ. ಉಪಜಗ್ಮ್ವಸ್ ಶಬ್ದವಾಗುತ್ತದೆ. ಶಸ್

ಪರದಲ್ಲಿರುವಾಗ **ವಸೋಃ ಸಂಪ್ರಸಾರಣಂ** (ಪಾ. ಸೂ. ೬-೪-೧೩೧) ಎಂಬುದರಿಂದ ವಕಾರಕ್ಕೆ ಸಂಪ್ರಸಾರಣ. **ಸಂಪ್ರಸಾರಣಾಚ್ಚ** ಎಂಬುದರಿಂದ ಪೂರ್ವರೂಪ. **ಶಾಸಿವಸಿಘಸೀನಾಂಚ** (ಪಾ. ಸೂ. ೮-೩-೬೦) ಎಂಬುದರಿಂದ ವಸಿನ ಸಕಾರಕ್ಕೆ ಷತ್ವ. ಶಸಿನ ಸಕಾರಕ್ಕೆ ರುತ್ವವಿಸರ್ಗ. ಉಪಜಗ್ಮುಷಃ ಎಂದು ರೂಪವಾಗುತ್ತದೆ. ಗತಿಪೂರ್ವಪದವಾಗಿರುವುದರಿಂದ **ಗತಿಕಾರಕೋಪಪದಾತ್ ಕೃತ್** ಎಂಬುದರಿಂದ ಕೃದುತ್ತರಪದಪ್ರಕೃತಿಸ್ವರದಿಂದ ವಸುವಿನ ಸ್ವರ ಉಳಿಯುತ್ತದೆ.

ರಥ್ಯಾ—ರಥಸ್ಯ ಇದಂ ರಥ್ಯಮ್. **ರಥಾದ್ಯತ್** (ಪಾ. ಸೂ. ೪-೩-೧೨೧) ಎಂಬುದರಿಂದ ಯತ್ ಪ್ರತ್ಯಯ. ಸ್ವರಿತವು ಪ್ರಾಪ್ತವಾದರೆ **ಯೆತೋಽನಾವಃ** (ಪಾ. ಸೂ. ೬-೧-೨೧೩) ಎಂಬುದರಿಂದ ಆದ್ಯುದಾತ್ತ ಸ್ವರ ಬರುತ್ತದೆ. ತೃತೀಯಾ ಏಕವಚನ ಪರದಲ್ಲಿರುವಾಗ **ಸುಪಾಂಸುಲುಕ್** ಎಂಬುದರಿಂದ ವಿಭಕ್ತಿಗೆ ಆಕಾರಾದೇಶ. ರಥ್ಯಾ ಎಂದು ರೂಪವಾಗುತ್ತದೆ.

ದುಷ್ಪದಾ—ಪದ ಗತೌ ಧಾತು. **ಈಷದ್ದುಃಸುಷು** (ಪಾ. ಸೂ. ೩-೩-೧೨೬) ಎಂಬುದರಿಂದ ಖಲ್ ಪ್ರತ್ಯಯ. ದುಷ್ಪದ ಶಬ್ದವಾಗುತ್ತದೆ. ಖಲ್ ಲಿತ್ವಾದುದರಿಂದ **ಲಿತಿ** ಎಂಬುದರಿಂದ ಪ್ರತ್ಯಯದ ಪೂರ್ವಕ್ಕೆ ಉದಾತ್ತಸ್ವರ ಬರುತ್ತದೆ. ಇಲ್ಲಿಯೂ ತೃತೀಯಾದ ಟಾ ವಿಭಕ್ತಿಗೆ **ಸುಪಾಂಸುಲುಕ್** ಸೂತ್ರದಿಂದ ಆಕಾರಾದೇಶ.

ಅವೃಣಕ್—ವೃಜೀ ವರ್ಜನೇ ಧಾತು. ರುಧಾದಿ ಲಙ್ ಮಧ್ಯಮಪುರುಷ ಏಕವಚನದಲ್ಲಿ ಸಿಪ್. **ಇತಶ್ಚ** ಎಂಬುದರಿಂದ ಅದರ ಇಕಾರಕ್ಕೆ ಲೋಪ. **ರುಧಾದಿಭ್ಯಃ ಶ್ನಮ್** ಎಂಬುದರಿಂದ ಶ್ನಮ್ ವಿಕರಣ. ಮಿತ್ವಾದುದರಿಂದ ಅಂತ್ಯಾಚಿನಪರವಾಗಿ ಬರುತ್ತದೆ. ಋಕಾರದ ಪರದಲ್ಲಿರುವುದರಿಂದ ಶ್ನಮಿನ ನಕಾರಕ್ಕೆ ಣತ್ವ. ಹಲಿನ ಪರದಲ್ಲಿರುವುದರಿಂದ **ಹಲ್ಙ್ಯಾಭ್ಯೋ**—ಸೂತ್ರದಿಂದ ಪ್ರತ್ಯಯಕ್ಕೆ ಲೋಪ. **ಚೋಃ ಕುಃ** ಎಂಬುದರಿಂದ ಧಾತ್ವಂತ್ಯದ ಜಕಾರಕ್ಕೆ ಕುತ್ವ. **ವಾವಸಾನೇ** ಎಂಬುದರಿಂದ ಚರ್ತ್ವ. ಅಂಗಕ್ಕೆ ಲಙ್ ಮಿತ್ವವಾಗಿ ಅಡಾಗಮ. ಅವೃಣಕ್ ಎಂದು ರೂಪವಾಗುತ್ತದೆ. ಅತಿಜಂತದ ಪರದಲ್ಲಿರುವುದರಿಂದ **ತಿಙ್ಙತಿಙಃ** ಎಂಬುದರಿಂದ ನಿಘಾತಸ್ವರ ಬರುತ್ತದೆ.

॥ ಸಂಹಿತಾಪಾಠಃ ॥

ತ್ವಮಾವಿಥ ಸುಶ್ರವಸಂ ತವೋತಿಭಿಸ್ತವ ತ್ರಾಮಭಿರಿಂದ್ರ ತೂರ್ವ-
ಯಾಣಂ ।
ತ್ವಮಸ್ಮ್ಯ ಕುತ್ಸಮತಿಥಿಗ್ವಮಾಯುಂ ವಹೇ ರಾಜ್ಞೇ ಯೂನೇ ಅರಂ-
ಧನಾಯಃ ॥ ೧೦ ॥

॥ ಪದಪಾಠಃ ॥

ತ್ವಂ । ಆವಿಥ । ಸುಶ್ರವಸಂ । ತವ । ಊತಿಭಿಃ । ತವ । ತ್ರಾಮಭಿಃ । ಇಂದ್ರ । ತೂರ್ವಯಾಣಂ ।
ತ್ವಂ । ಅಸ್ಯೈ । ಕುತ್ಸಂ । ಅತಿಥಿಗ್ವಂ । ಆಯುಂ । ಮಹೇ । ರಾಜ್ಞೇ । ಯೂನೇ । ಅರಂಧನಾಯಃ ॥ ೧೦ ॥

॥ ಸಾಯಣಭಾಷ್ಯ ॥

ಹೇ ಇಂದ್ರ ತ್ವಂ ತವೋತಿಭಿಸ್ತ್ವದೀಯೈಃ ಪಾಲನೈಃ ಸುಶ್ರವಸಂ ಪೂರ್ವೋಕ್ತಂ ರಾಜಾನಮಾವಿಥ ರಕ್ಷಿತವಾನಸಿ । ತಥಾ ತೂರ್ವಯಾಣಮೇತನ್ನಾಮಾನಂ ರಾಜಾನಂ ತವ ತ್ರಾಮಭಿಸ್ತ್ವದೀಯೈಸ್ತ್ರಾಯಕೈಃ ಪಾಲಕೈರ್ಬಲೈರಾವಿಥೇತಿ ಶೇಷಃ । ಕಿಂಚ ತ್ವಂ ಮಹೇ ಮಹತೇ ಯೂನೇ ತರುಣಾಯಾಸ್ಮೈ ಸುಶ್ರವಸೇ ರಾಜ್ಞೇ ಕುತ್ಸಾದೀಂಸ್ತ್ರೀನ್ರಾಜ್ಞೋರಂಧನಾಯಃ । ವಶಮನಯಃ । ರಧ್ಯತಿರ್ವಶಗಮನೇ । ನಿ. ೬-೩೨ । ಇತಿ ಯಾಸ್ಕಃ ॥ ತ್ರಾಮಭಿಃ । ತ್ರೈಙ್ ಪಾಲನೇ । ಆದೇಚ ಇತ್ಯಾತ್ವಂ । ಆತೋ ಮನಿನ್ವನಿಬಿ ಮನಿರ್ । ನಿತ್ವಾದಾದ್ಯುದಾತ್ತತ್ವಂ । ಅರಂಧನಾಯಃ । ರಂಧನಂ ವಶೀಕರಣಂ ಕರೋತಿ ರಂಧನಯತಿ । ತತ್ಕರೋತಿ । ಸೂ. ೩-೧-೨೬-೫ । ಇತಿ ಣಿಚ್ । ಇಷ್ಯವಣ್ಣೌ ಪ್ರಾತಿಪದಿಕಸ್ಯ । ಸೂ. ೬-೪-೧೫೫-೧ । ಇತೀಷ್ಯವದ್ಭಾವಾಟ್ಟಿಲೋಪಃ । ಲಙಿ ಸಿಪಿ ದೀರ್ಘಶ್ಛಾಂದಸಃ ॥

॥ ಪ್ರತಿಪದಾರ್ಥ ॥

ಇಂದ್ರ—ಎಲೈ ಇಂದ್ರನೇ । ತ್ವಂ—ನೀನು । ತವ—ನಿನ್ನ । ಊತಿಭಿಃ—ಒತ್ತಾಸೆಯಿಂದ । ಸುಶ್ರವಸಂ—ಸುಶ್ರವಸ್ಸೆಂಬ ರಾಜನನ್ನು । ಆವಿಥ—ಕಾಪಾಡಿದೆ । ತೂರ್ವಯಾಣಂ—ತೂರ್ವಯಾಣನೆಂಬ ರಾಜನನ್ನೂ । ತವ—ನಿನ್ನ । ತ್ರಾಮಭಿಃ—ರಕ್ಷಣಾಸಹಾಯದಿಂದ (ಉಳಿಸಿದೆ ಅಲ್ಲದೆ) । ತ್ವಂ—ನೀನು । ಯೂನೇ—ಯುವಕನಾದರೂ । ಮಹೇ—ಪ್ರಭಾವಯುತನಾದ । ಅಸ್ಮೈ—ಈ ಸುಶ್ರವಸ್ಸೆಂಬ । ರಾಜ್ಞೇ—ದೊರೆಗೆ । ಕುತ್ಸಂ—ಕುತ್ಸನನ್ನೂ । ಅತಿಥಿಗ್ವಂ—ಅತಿಥಿಗ್ವನನ್ನೂ । ಆಯುಂ—ಆಯುವನ್ನೂ (ಈ ಮೂರು ದೊರೆಗಳನ್ನು) । ಅರಂಧನಾಯಃ—ಅಧೀನರಾಗಿರುವಂತೆ ಮಾಡಿದೆ ॥

॥ ಭಾವಾರ್ಥ ॥

ಎಲೈ ಇಂದ್ರನೇ, ನೀನು ನಿನ್ನ ಒತ್ತಾಸೆಯಿಂದ ಸುಶ್ರವಸ್ಸೆಂಬ ರಾಜನನ್ನು ಕಾಪಾಡಿದೆ. ತೂರ್ವಯಾಣನೆಂಬ ರಾಜನನ್ನೂ ನಿನ್ನ ರಕ್ಷಣಾಸಹಾಯದಿಂದ ಉಳಿಸಿದೆ. ಅಲ್ಲದೇ ನೀನು ಈ ಸುಶ್ರವಸ್ಸು ಯುವಕನಾದರೂ ಪ್ರಭಾವಯುತನಾದುದರಿಂದ, ಈ ದೊರೆಗೆ ಕುತ್ಸ, ಅತಿಥಿಗ್ವ ಮತ್ತು ಆಯು ಎಂಬ ಮೂರು ದೊರೆಗಳೂ ಅಧೀನರಾಗಿರುವಂತೆ ಮಾಡಿದೆ.

English Translation.

Indra, you have preserved Susravas by your protection, Turvayana by your help ; you have made kutsa, Atithigwa, and Ayu subject to the mighty, though youthful Susravas.

॥ ವಿಶೇಷ ವಿಷಯಗಳು ॥

ಅತಿಥಿಗ್ವಂ—೧೭೪ನೇ ಪೇಜಿನಲ್ಲಿ ಇವನ ವಿಷಯವಾಗಿ ಬರೆದಿರುವುದನ್ನು ನೋಡಿ.

ಕುತ್ಸಂ—ಇವನ ವಿಷಯವನ್ನು ೧೭೩ನೇ ಪೇಜಿನಲ್ಲಿ ವರ್ಣಿಸಲಾಗಿರುವುದು.

ಆಯುಂ—ಆಯುವೆಂಬ ಒಬ್ಬ ರಾಜನು ಸಕ್ಥ ಎಂಬ ಜನಾಂಗದ ರಾಜನಾಗಿದ್ದನೆಂದು ತಿಳಿಯಬರುವುದು. ಇವನನ್ನು ತೂರ್ವಯಾಣನೆಂಬುವನು ಇಂದ್ರನ ಸಹಾಯದಿಂದ **ಸೋಲಿಸಿದನೆಂದೇ ಇಲ್ಲಿ ಹೇಳಿದೆ.** ಇವನ ಹೆಸರು ಋ. ಸಂ. ೬-೧೧-೪ ; ೬-೧೮-೧೩ ; ೮-೫೩-೨ ; ೧೦-೨೦-೭ ಎಂಬ ಋಕ್ಕುಗಳಲ್ಲಿ ಪಠಿತವಾಗಿದೆ.

ತವ ಊತಿಭಿಃ—ಊತಿ ಶಬ್ದಕ್ಕೆ ರಕ್ಷಣೆ ಎಂದರ್ಥವಿದ್ದರೂ ಇಲ್ಲಿ ಲಕ್ಷಣಾವೃತ್ತಿಯಿಂದ ರಕ್ಷಣೆಕೊಡುವ ಕಾರ್ಯವಿಶೇಷಗಳಿಂದ ಎಂದರ್ಥ ಮಾಡಬೇಕು.

ತೂರ್ವಯಾಣಂ—ಇಂದ್ರನಿಂದ ರಕ್ಷಣೆಪಡೆದ ಒಬ್ಬ ರಾಜನ ಹೆಸರು ಇದು. ಇವನು ಅತಿಥಿಗ್ವ, ಆಯು, ಕುತ್ಸ ಎಂಬುವರ ಶತ್ರುವೆಂದು ಋ. ಸಂ. ೨-೧೪-೭ರಲ್ಲಿಯೂ ಇವನು ಸಕ್ಥರೆಂಬ ಜನಾಂಗದ ರಾಜನೆಂದು ಋ. ಸಂ. ೧೦-೬೧-೭ರಲ್ಲಿಯೂ ಹೇಳಿದೆ. ಇವನ ಹೆಸರು ಋ. ಸಂ. ೧-೧೭೪-೩ ; ೬-೧೮-೧೩ ಎಂಬ ಋಕ್ಕುಗಳಲ್ಲಿಯೂ ಪಠಿತವಾಗಿದೆ.

ತ್ರಾಮಭಿಃ—ತ್ರೈಙ್ ಪಾಲನೇ ಎಂಬ ಧಾತುಜನ್ಯವಾದ ಈ ಪದವು ಆಶ್ರಿತರನ್ನು ರಕ್ಷಿಸುವ ಸೈನ್ಯಗಳಿಂದ ಎಂಬ ವಿಶೇಷಾರ್ಥವನ್ನು ಕೊಡುವುದು.

ರಾಜ್ಞೇ—ಸುಶ್ರವಸ್ಸೆಂಬ ರಾಜನಿಗೆ ಎಂಬುದು ಈ ಪದದ ಅರ್ಥ.

ಅರಂಧನಾಯಃ—ವಶಮಾಡಿಕೊಂಡೆ ಎಂಬುದು ಇದರ ಅರ್ಥ. ರಥ್ಯತಿರ್ವಶಗಮನೇ (ನಿ. ೬-೩೨) ಎಂಬ ಯಾಸ್ಕರ ಅಭಿಪ್ರಾಯದಂತೆ **ರಂಧನಂ ವಶೀಕರಣಂ ಕರೋತಿ ರಂಧನಯತಿ** ಎಂದು ಈ ಪದಕ್ಕೆ ಅರ್ಥವನ್ನು ವಿವರಿಸಿರುವರು.

॥ ವ್ಯಾಕರಣಪ್ರಕ್ರಿಯಾ ॥

ಆವಿಥ—ಅವ ರಕ್ಷಣೇ ಧಾತು. ಲಿಟ್ ಮಧ್ಯಮಪುರುಷಏಕವಚನಕ್ಕೆ **ಪರಸ್ಮೈಪದಾನಾಂ**—ಎಂಬುದರಿಂದ ಥಲಾದೇಶ. ಧಾತುವಿಗೆ ದ್ವಿತ್ವ. ಅಭ್ಯಾಸಕ್ಕೆ ಹಲಾದಿಶೇಷ. **ಅತಆದೇಃ** ಎಂಬುದರಿಂದ ಅದಕ್ಕೆ ದೀರ್ಘ. **ಅರ್ಧಧಾತುಕಸ್ಯೇಡ್ವಲಾದೇಃ** ಎಂಬುದರಿಂದ ಥಲಿಗೆ ಇಡಾಗಮ. ಆವಿಥ ಎಂದು ರೂಪವಾಗುತ್ತದೆ. **ಅತಿಙಂತದ ಪರದಲ್ಲಿರುವುದರಿಂದ** ನಿಘಾತಸ್ವರ ಬರುತ್ತದೆ.

ಸುಶ್ರವಸಮ್—ಹಿಂದಿನ ಮಂತ್ರದಲ್ಲಿ ವ್ಯಾಖ್ಯಾತವಾಗಿದೆ. ದ್ವಿತೀಯಾ ಏಕವಚನಾಂತರೂಪ.

ತ್ರಾಮಭಿಃ—ತ್ರೈಙ್ ಪಾಲನೇ ಧಾತು. **ಅದೇಚಉಪದೇಶೇ೨ತಿತಿ** (ಪಾ. ಸೂ. ೬-೧-೪೫) ಎಂಬು ದರಿಂದ ಧಾತುವಿಗೆ ಆತ್ವ. **ಆತೋಽಮನಿನ್ವಸಿಪ್ಕ್ವಸಿಪಶ್ಚ** (ಪಾ. ಸೂ. ೩-೨-೭೪) ಎಂಬುದರಿಂದ ಮನಿನ್ ಪ್ರತ್ಯಯ. ತ್ರಾಮನ್ ಶಬ್ದವಾಗುತ್ತದೆ. ನಿತ್ ಪ್ರತ್ಯಯಾಂತವಾದುದರಿಂದ ಆದ್ಯುದಾತ್ತವಾಗುತ್ತದೆ. ತೃತೀಯಾ ಬಹುವಚನದಲ್ಲಿ ನ ಲೋಪಃ **ಪ್ರಾತಿಪದಿಕಾಂತಸ್ಯ** (ಪಾ. ಸೂ. ೮-೨-೭) ಎಂಬುದರಿಂದ ನಲೋಪವಾಗುತ್ತದೆ.

ಅಸ್ಮೈ—ಇದಂ ಶಬ್ದಕ್ಕೆ ಅನ್ವಾದೇಶವಿಷಯದಲ್ಲಿ **ಇದಮೋನ್ವಾದೇಶೇಶನುದಾತ್ತಸ್ತೃತೀಯಾದೌ** ಎಂಬುದರಿಂದ ಅನುದಾತ್ತವಾದ ಅಶಾದೇಶ ಬಸುತ್ತದೆ. ಶಿತ್ವಾದುದರಿಂದ ಸರ್ವಾದೇಶವಾಗುತ್ತದೆ. ಅನುದಾತ್ತಂಸುಪ್ಪಿತ್ ಎಂಬುದರಿಂದ ವಿಭಕ್ತಿಯು ಅನುದಾತ್ತವಾಗುತ್ತದೆ.

ಅರುಂಧನಾಯಃ—ರಂಧನಂ ವಶೀಕರಣಂ ಕರೋತಿ ರಂಧನಯತಿ. ತತ್ಕರೋತಿ ತದಾಚಷ್ಟೆ (ಪಾ. ಸೂ. ೩-೧-೩೬-೫) ಎಂಬುದರಿಂದ ಪ್ರಾತಿಪದಿಕದ ಮೇಲೆ ಧಾತ್ವರ್ಥ ವಿವಕ್ಷಾವಾಡಿದಾಗ ಣಿಚ್. ಣಿಚ್ ಪರದಲ್ಲಿರುವಾಗ **ಇಷ್ಠವಣ್ಣೌ ಪ್ರಾತಿಪದಿಕಸ್ಯ** (ಪಾ. ಸೂ. ೬-೪-೧೫೫-೧) ಎಂಬುದರಿಂದ ಇಷ್ಠವದ್ಭಾವ ಬರುತ್ತದೆ. ಇಷ್ಠನ್ ಪರದಲ್ಲಿರುವಾಗ ಯಾವಯಾವ ಕಾರ್ಯಗಳು ಬರುತ್ತವೆಯೋ ಅವೆಲ್ಲವೂ ಣಿಚ್ ಪರದಲ್ಲಿರುವಾಗಲೂ ಬರುವುವು ಎಂದರ್ಥ. ಪ್ರಕೃತದಲ್ಲಿ ಟಿಲೋಪಮಾತ್ರ ಬರುತ್ತದೆ. ರುಂಧನಿ ಎಂಬ ಣಿಜಂತವು **ಸನಾದ್ಯಂತಾ ಧಾತವಃ** ಎಂಬುದರಿಂದ ಧಾತುಸಂಜ್ಞೆಯನ್ನು ಹೊಂದುತ್ತದೆ. ಲಙ್ ಮಧ್ಯಮಪುರುಷ ಏಕವಚನದಲ್ಲಿ ಸಿಪ್. **ಇತಶ್ಚ** ಎಂಬುದರಿಂದ ಅದರ ಇಕಾರಕ್ಕೆ ಲೋಪ. **ಕರ್ತರಿಶಪ್** ಎಂಬುದರಿಂದ ಶಪ್. ಶಪ್ ನಿಮಿತ್ತಕವಾಗಿ ಣಿಚಿಗೆ (ಧಾತುವಿನ ಇಕಿಗೆ) ಗುಣ. ಆಯಾದೇಶ ಪ್ರತ್ಯಯಸಕಾರಕ್ಕೆ ರುತ್ವ ವಿಸರ್ಗ. ಅಂಗಕ್ಕೆ ಲಙ್‌ನಿಮಿತ್ತಕವಾಗಿ ಅಡಾಗಮ. ಅರುಂಧನಯಃ ಎಂದು ರೂಪವಾಗುತ್ತದೆ. ದೀರ್ಘವು ಛಾಂದಸವಾಗಿ ಬರುವುದರಿಂದ ಅರುಂಧನಾಯಃ ಎಂದು ರೂಪವಾಗುತ್ತದೆ. ಅತಿಜಂತದ ಪರದಲ್ಲಿರುವುದರಿಂದ **ತಿಙ್ಙತಿಙಃ** ಎಂಬುದರಿಂದ ನಿಘಾತಸ್ವರ ಬರುತ್ತದೆ.

॥ ಸಂಹಿತಾಪಾಠಃ ॥

ಯ ಉದ್ಯಚೇಂದ್ರ ದೇವಗೋಪಾಃ ಸಖಾಯಸ್ತೇ ಶಿವತಮಾ ಅಸಾಮ ।
ತ್ವಾಂ ಸ್ತೋಷಾಮ ತ್ವಯಾ ಸುವೀರಾ ದ್ರಾಘೀಯ ಆಯುಃ ಪ್ರತರಂ ದಧಾನಾಃ ॥ ೧೧ ॥

॥ ಪದಪಾಠಃ ॥

ಯೇ । ಉತ್ಯಚೇ । ಇಂದ್ರ । ದೇವಗೋಪಾಃ । ಸಖಾಯಃ । ತೇ । ಶಿವತಮಾಃ । ಅಸಾಮ ।
ತ್ವಾಂ । ಸ್ತೋಷಾಮ । ತ್ವಯಾ । ಸುವೀರಾಃ । ದ್ರಾಘೀಯಃ । ಆಯುಃ । ಪ್ರತರಂ । ದಧಾನಾಃ ॥ ೧೧ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ಯೇ ವಯಂ ಉದೃಚ್ಯುದರ್ಕೇ ಯಜ್ಞಸಮಾಪ್ತೌ ವರ್ತಮಾನಾ ದೇವಗೋಪಾ ದೇವೈಃ ಪಾಲಿತಾಸ್ತೇ ತವ ಸಖಾಯಃ ಸಖಿವದತ್ಯಂತಂ ಪ್ರಿಯಾ ಅತ ಏವ ಶಿವತಮಾ ಅಸಾಮ ಅತಿಶಯೇನ ಕಲ್ಯಾಣಾ ಅಭೂಮ, ತೇ ವಯಂ ಯಜ್ಞಸಮಾಪ್ತ್ಯುತ್ತರಕಾಲಮಪಿ ತ್ವಾಂ ಸ್ತೋಷಾಮ ಸ್ತವಾಮ । ಅಸ್ಮಾಭಿಃ ಸ್ತುತೇನ ತ್ವಯಾ ಸುವೀರಾಃ ಶೋಭನಪುತ್ರವಂತಃ ಸಂತೋ ದ್ರಾಘೀಯೋಽತಿಶಯೇನ ದೀರ್ಘಮಾಯುರ್ಜೀವನಂ ಪ್ರತರಂ ಪ್ರಕೃಷ್ಟತರಂ ಯಥಾ ಭವತಿ ತಥಾ ದಧಾನಾ ಧಾರಯಂತೋ ಭೂಯಾಸ್ಮ ॥ ದೇವಗೋಪಾಃ । ದೇವಾ ಗೋಪಾ ಯೇಷಾಂ । ಬಹುವ್ರೀಹೌ ಪೂರ್ವಪದಪ್ರಕೃತಿಸ್ವರತ್ವಂ । ಅಸಾಮ । ಅಸ ಭುವಿ । ಲುಙರ್ಥೇ ಲೋಟ್ಯಾಡುತ್ತಮಸ್ಯ ಪಿಚ್ಚೇತಿ ಪಿದ್ವದ್ಭಾವಾತ್ಪಿಚ್ಚೇ ಜುನ್ನೇತಿ ಇತ್ತ್ವಾಭಾವೇ ಶ್ನಸೋರಲ್ಲೋಪ ಇತ್ಯಕಾರಲೋಪಾಭಾವಃ । ಪಿತ್ತ್ವಾದೇವ ತಿಙೋಽನುದಾತ್ತತ್ವೇ ಧಾತುಸ್ವರಃ ಶಿಷ್ಯತೇ । ಸ್ತೋಷಾಮ । ಸ್ತೌತೇರ್ಲೋಟಿ ಸಿಬ್ಬಹುಲಂ ಲೇಟೀತಿ ಬಹುಲಗ್ರಹಣಾತ್ ಲೋಟ್ಯಪಿ ಸಿಪ್ । ತಸ್ಯ ಪಿತ್ತ್ವಾದ್ಗುಣಃ । ಸುವೀರಾಃ । ವೀರವೀಯೌ ಚೇತ್ಯುತ್ತರಪದಾದ್ಯುದಾತ್ತತ್ವಂ । ದ್ರಾಘೀಯಃ । ದೀರ್ಘಶಬ್ದಾದೀಯಸುನಿ ಪ್ರಿಯಸ್ಥಿರೇತ್ಯಾದಿನಾ । ಪಾ. ೬-೪-೧೫೭ । ದ್ರಾಘಾದೇಶಃ । ನಿತ್ತ್ವಾದಾದ್ಯುದಾತ್ತತ್ವಂ । ಪ್ರತರಂ । ಪ್ರಶಬ್ದಾತ್ತರಪ್ಯಮು ಚೆಚ್ಚಂದಸಿ । ಪಾ. ಸೂ. ೫-೪-೧೨ । ಇತ್ಯದ್ರವ್ಯಪ್ರಕರ್ಷೇಽಮುಪ್ರತ್ಯಯಃ । ಪ್ರತ್ಯಯಸ್ವರೇಣಾಂತೋದಾತ್ತತ್ವಂ । ದಧಾನಾಃ । ದಧಾತೇಃ ಶಾನಚ್ಯಭ್ಯಸ್ತಾನಾಮಾದಿರಿತ್ಯಾದ್ಯುದಾತ್ತತ್ವಂ ॥

॥ ಪ್ರತಿಪದಾರ್ಥ ॥

ಇಂದ್ರ—ಎಲೈ ಇಂದ್ರನೇ । **ಯೇ**—ಯಾವ ನಾವು । **ದೇವಗೋಪಾಃ**—ದೇವತೆಗಳಿಂದ ರಕ್ಷಿಸಲ್ಪಟ್ಟವರಾಗಿ । **ಉದೃಚಿ**—ಯಜ್ಞದ ಕೊನೆಯಲ್ಲಿ । **ತೇ**—ನಿನ್ನ । **ಶಿವತಮಾಃ**—ಅತ್ಯಂತ ಅದೃಷ್ಟಶಾಲಿಗಳಾದ । **ಸಖಾಯಃ**—ಸ್ನೇಹಿತರಾಗಿ । **ಅಸಾಮ**—ಇರುವೆವೋ (ಆ ನಾವು) । **ತ್ವಾಂ**—ನಿನ್ನನ್ನು । **ಸ್ತೋಷಾಮ**—(ಯಜ್ಞ ಸಮಾಪ್ತಿಯಾದರೂ) ಸ್ತುತಿಸುತ್ತೇವೆ । **ತ್ವಯಾ**—(ಸ್ತುತನಾದ) ನಿನ್ನಿಂದ । **ಸುವೀರಾಃ**—ಶ್ರೇಷ್ಠರಾದ ಸಂತತಿಗಳುಳ್ಳವರಾಗಿ । **ದ್ರಾಘೀಯಃ**—ದೀರ್ಘವಾದದ್ದೂ । **ಪ್ರತರಂ**—ಅತ್ಯಂತ ಉಚ್ಚಾಯುಸ್ಥಿತಿಯಲ್ಲಿರುವಂತಹುದೂ ಆದ । **ಆಯುಃ**—ಆಯುಸ್ಸನ್ನು । **ದಧಾನಾಃ**—ಹೊಂದಿದವರಾಗಿ (ಇರುವೆವು) ॥

॥ ಭಾವಾರ್ಥ ॥

ಎಲೈ ಇಂದ್ರನೇ, ನಾವು ದೇವತೆಗಳಿಂದ ರಕ್ಷಿಸಲ್ಪಟ್ಟು ಯಜ್ಞದ ಕೊನೆಯಲ್ಲಿ ನಿನ್ನ ಅತ್ಯಂತ ಅದೃಷ್ಟಶಾಲಿಗಳಾದ ಸ್ನೇಹಿತರಾಗಿರುವೆವು. ನಿನ್ನ ಅನುಗ್ರಹದಿಂದ ಶ್ರೇಷ್ಠವಾದ ಸಂತತಿಗಳನ್ನೂ, ದೀರ್ಘವಾದದ್ದೂ, ಉಚ್ಚಾಯುಸ್ಥಿತಿಯನ್ನುಂಟುಮಾಡುವುದೂ ಆದ ಆಯುಸ್ಸನ್ನು ಹೊಂದುವುದರಿಂದ ಯಜ್ಞದ ಅಂತ್ಯದಲ್ಲೂ ನಿನ್ನನ್ನು ಸ್ತೋತ್ರಮಾಡುತ್ತೇವೆ.

English Translation.

Protected by the gods, remain, Indra, at the close of the sacrifice, your most fortunate friends; we praise you, for we enjoy through you excellent offspring and a long and prosperious life,

॥ ವಿಶೇಷ ವಿಷಯಗಳು ॥

ಉದ್ಯಚಿ—ಯಜ್ಞಸಮಾಪ್ತಿ ಕಾಲದಲ್ಲಿ ಎಂದರ್ಥ.

ಯೇ—ಪ್ರಕರಣಾನುರೋಧವಾಗಿ ಇಲ್ಲಿ ಯಚ್ಛಬ್ದಕ್ಕೆ ಅಸ್ಮಚ್ಛಬ್ದಾರ್ಥವನ್ನೇ ಹೇಳಬೇಕು.

ದೇವಗೋಪಾಃ—**ದೇವಾಃ ಗೋಪಾಃ ರಕ್ಷಕಾಃ ಯೇಷಾಂ** ದೇವತೆಗಳಿಂದ ರಕ್ಷಣೆಯನ್ನು ಪಡೆದು ಜೀವಿಸುವೆವು ಎಂಬುದೇ ಇದರ ಪೂರ್ಣಾರ್ಥ.

ಸುವೀರಾಃ—**ಶೋಭನರಾದ ಪುತ್ರರುಳ್ಳವರು** ಎಂಬರ್ಥದಿಂದ, ಇಂದ್ರನನ್ನು ಯಜ್ಞಸಮಾಪ್ತಿಯಲ್ಲಿಯೂ ಸ್ತುತಿಸುವವರು ಪುತ್ರಸಂಪತ್ತನ್ನು ಪಡೆಯುವರು ಎಂಬ ಫಲಶ್ರುತಿಯು ಇಲ್ಲಿ ವ್ಯಕ್ತವಾಗುವುದು.

ದ್ರಾಘೀಯಃ—ಅತಿಶಯವಾದ ಅವಧಿಯುಳ್ಳದ್ದು. ಇದು ಆಯುಸ್ಸಿಗೆ ವಿಶೇಷಣವಾಗಿರುವುದರಿಂದ ದೀರ್ಘಕಾಲ ಎಂಬರ್ಥವನ್ನು ಹೇಳಬೇಕು.

ವ್ಯಾಕರಣಪ್ರಕ್ರಿಯಾ

ದೇವಗೋಪಾಃ—ದೇವಾ ಗೋಪಾ ಯೇಷಾಂ ದೇವಗೋಪಾಃ **ಬಹುವ್ರೀಹೌ ಪ್ರಕೃತ್ಯಾ ಪೂರ್ವಪದಮ್** ಎಂಬುದರಿಂದ ಪೂರ್ವಪದಪ್ರಕೃತಿಸ್ವರವು ಬರುತ್ತದೆ.

ಅಸಾಮ—ಅಸ ಭುವಿ ಧಾತು. **ವ್ಯತ್ಯಯೋಬಹುಲಂ** ಎಂಬುದರಿಂದ ಲುಙರ್ಥದಲ್ಲಿ **ಲೋಟ್.** ಉತ್ತಮಪುರುಷ ಬಹುವಚನದಲ್ಲಿ ಮಸ್ ಪ್ರತ್ಯಯ. **ಲೋಚ್ಚೋಲಜ್ವತ್** ಎಂದುದರಿಂದ ಲಜ್ವದ್ಭಾವವಿರುವುದರಿಂದ **ನಿತ್ಯಂಙಿತಃ** ಎಂಬುದರಿಂದ ಉತ್ತಮದ ಮಸಿನ ಸಕಾರಕ್ಕೆ ಲೋಪ. **ಆಡುತ್ತಮಸ್ಯಪಿಚ್ಚ** (ಪಾ. ಸೂ. ೩-೪-೯೨) ಎಂಬುದರಿಂದ ಮಸಿಗೆ ಆಡಾಗಮ ಬರುತ್ತದೆ. **ಙಿಚ್ಚಪಿನ್ನ- ಪಿಚ್ಚಙಿನ್ನ** ಎಂದು ಭಾಷ್ಯದಲ್ಲಿ ಹೇಳಿರುವುದರಿಂದ ಆಟಗೆ ಪಿತ್ವವನ್ನು ಹೇಳಿರುವುದರಿಂದ **ಸಾರ್ವಧಾತುಕಮಪಿತ್** ಎಂಬುದರಿಂದ ಙಿದ್ವದ್ಭಾವ ಬರುವುದಿಲ್ಲ. ಆದುದರಿಂದ **ಶ್ನಸೋರಲ್ಲೋಪಃ** (ಪಾ. ಸೂ. ೬-೪-೧೧೧) ಎಂಬುದರಿಂದ ಅಸಿನ ಅಕಾರಕ್ಕೆ ಲೋಪ ಬರುವುದಿಲ್ಲ. ಪಿತ್ವ ಹೇಳಿರುವುದರಿಂದಲೇ ತಿಙ್ ಅನುದಾತ್ತವಾಗುವುದರಿಂದ ಧಾತುವಿನ ಸ್ವರವೇ ಉಳಿಯುತ್ತದೆ.

ಸ್ತೋಷಾಮ—ಷ್ಟುಞ್ ಸ್ತುತೌ ಧಾತು. ಅದಾದಿ. ಲೋಡುತ್ತಮ ಬಹುವಚನದಲ್ಲಿ ಹಿಂದಿನಂತೆಯೇ ಮಸ್. ಅದರ ಸಕಾರಕ್ಕೆ ಲೋಪ. **ಸಿಬ್ಬಹುಲಂ ಲೇಟಿ** (ಪಾ. ಸೂ. ೩-೧-೩೪) ಎಂಬಲ್ಲಿ ಬಹುಲ ಗ್ರಹಣಮಾಡಿರುವುದರಿಂದ ಲೋಟಿನಲ್ಲಿಯೂ ಸಿಪ್ ಬರುತ್ತದೆ. ಪಿತ್ತಾದುದರಿಂದ ಧಾತುವಿಗೆ ಗುಣ. ಇಕಿನ ಪರದಲ್ಲಿರುವುದರಿಂದ ಪ್ರತ್ಯಯ ಸಿಪಿನ ಸಕಾರಕ್ಕೆ ಷತ್ವ. **ಆಡುತ್ತಮಸ್ಯ** ಸೂತ್ರದಿಂದ ಆಡಾಗಮ. ಸ್ತೋಷಾಮ ಎಂದು ರೂಪವಾಗುತ್ತದೆ. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

ಸುವೀರಾಃ—ಶೋಭನಾಃ ವೀರಾಃ ಯೇಷಾಂ ಸುವೀರಾಃ **ವೀರವೀರ್ಯೌಚ** (ಪಾ. ಸೂ. ೬-೩-೧೩೦) ಎಂಬುದರಿಂದ ಉತ್ತರಪದ ಆದ್ಯುದಾತ್ತಸ್ವರ ಬರುತ್ತದೆ.

ದ್ರಾಘೀಯಃ—ದೀರ್ಘಶಬ್ದದ ಮೇಲೆ ಅತಿಶಯಾರ್ಥದಲ್ಲಿ ಗುಣವಾಚಕವಾದುದರಿಂದ **ದ್ವಿವಚನೇದಬಹ್ವೋಃಪಪದೇ** ಸೂತ್ರದಿಂದ ಈಯಸುಸ್ ಇದು ಪರದಲ್ಲಿರುವಾಗ **ಪ್ರಿಯಸ್ಥಿರೋರು** (ಪಾ. ಸೂ ೬-೪-೧೫೭) ಎಂಬುದರಿಂದ ದೀರ್ಘಶಬ್ದಕ್ಕೆ ದ್ರಾಘ ಎಂಬ ಆದೇಶ ಬರುತ್ತದೆ. **ಯಸ್ಯೇತಿಚೇ** ಎಂಬುದರಿಂದ ಅಕಾರಲೋಪವಾದರೆ ದ್ರಾಘೀಯಃ ಎಂದು ರೂಪವಾಗುತ್ತದೆ. ನಿತ್ ಪ್ರತ್ಯಯಾಂತವಾದುದರಿಂದ **ಞ್ನಿತ್ಯಾದಿರ್ನಿತ್ಯಂ** ಎಂಬುದರಿಂದ ಆದ್ಯುದಾತ್ತಸ್ವರ ಬರುತ್ತದೆ.

ಪ್ರತರಂ—ಪ್ರ ಶಬ್ದದ ಮೇಲೆ ತರಪ್ ಇರುವಾಗ **ಅಮು ಚ ಚ್ಛಂದಸಿ** (ಪಾ. ಸೂ. ೫-೪-೧೨) ಎಂಬುದರಿಂದ ಅದ್ರವ್ಯಗತಪ್ರಕರ್ಷವು ತೋರುತ್ತಿರುವಾಗ ಅಮು ಪ್ರತ್ಯಯ ಬರುತ್ತದೆ. ಪ್ರತರಂ ಎಂದು ರೂಪವಾಗುತ್ತದೆ. ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ.

ದಧಾನಾಃ—ಡುಧಾಞ್ ಧಾರಣಪೋಷಣಯೋಃ ಧಾತು. ಲಡರ್ಥದಲ್ಲಿ ಶಾನಚ್ **ಜುಹೋತ್ಯಾದಿಭ್ಯಃ ಶ್ಲುಃ** ಎಂಬುದರಿಂದ ಶ್ಲುಃ **ಶ್ಲೌ** ಎಂಬುದರಿಂದ ಧಾತುವಿಗೆ ದ್ವಿತ್ವ. ಅಭ್ಯಾಸಕ್ಕೆ ಹ್ರಸ್ವ ಜಸ್ತ್ವ. ದಧಾನ ಎಂದು ರೂಪವಾಗುತ್ತದೆ. **ಅಭ್ಯಸ್ತಾನಾಮಾದಿಃ** ಎಂಬುದರಿಂದ ಆದ್ಯುದಾತ್ತಸ್ವರ ಬರುತ್ತದೆ.

ಐವತ್ತನಾಲ್ಕನೆಯ ಸೂಕ್ತವು

||ಸಾಯಣಭಾಷ್ಯಂ||

ಮಾ ನ ಇತಿ ಏಕಾದಶರ್ಚಂ ಚತುರ್ಥಂ ಸೂಕ್ತಂ । ಷಷ್ಠ್ಯಷ್ಟಮ್ಯಾನವಮ್ಯೇಕಾದಶ್ಯಸ್ತ್ರಿಷ್ಟುಭಃ । ಶಿಷ್ಟಾಃ ಸಪ್ತ ಜಗತ್ಯಃ । ಸವ್ಯ ಋಷಿಃ । ಇಂದ್ರೋ ದೇವತಾ । ತಥಾ ಚಾನುಕ್ರಾಂತಂ । ಮಾ ನೋಽಂತ್ಯಾ ತ್ರಿಷ್ಟುಪ್ ಷಷ್ಠ್ಯಷ್ಟಮ್ಯಾ ನವಮ್ಯಾ ಚೇತಿ । ಅತಿರಾತ್ರೇ ಪ್ರಥಮೇ ಪರ್ಯಾಯೇಽಚ್ಛಾವಾಕಶಸ್ತ್ರ ಇದಂ ಸೂಕ್ತಂ । ತಥಾ ಚ ಸೂತ್ರಿತಂ । ಮಾನೋ ಅಸ್ಮಿನ್ಮಘವನ್ನಿಂದ್ರ ಪಿಬ ತುಭ್ಯಂ ಸುತೋ ಮದಾಯೇತಿ ಯಾಜ್ಯಾ । ಆ. ೬-೪ । ಇತಿ ॥

ಅನುವಾದವು—**ಮಾ ನಃ** ಎಂಬ ಈ ಸೂಕ್ತವು ಹತ್ತನೆಯ ಅನುವಾಕದಲ್ಲಿ ನಾಲ್ಕನೆಯ ಸೂಕ್ತವು. ಇದರಲ್ಲಿ ಹನ್ನೊಂದು ಋಕ್ಕುಗಳಿರುವುವು. ಈ ಸೂಕ್ತದ ಆರು, ಎಂಟು, ಒಂಭತ್ತು, ಹನ್ನೊಂದನೆಯ ಋಕ್ಕುಗಳು ತ್ರಿಷ್ಟುಪ್ಛಂದಸ್ಸಿನವು ಉಳಿದ ಏಳು ಋಕ್ಕುಗಳು ಜಗತೀಛಂದಸ್ಸಿನವು. ಈ ಸೂಕ್ತಕ್ಕೆ ಸವ್ಯನು ಋಷಿಯು. ಇಂದ್ರನು ದೇವತೆಯು. ಅನುಕ್ರಮಣಿಕೆಯಲ್ಲಿ **ಮಾ ನೋಂತ್ಯಾ ತ್ರಿಷ್ಟುಪ್ ಷಷ್ಠ್ಯಷ್ಟಮ್ಯಾ ಚೇತಿ** ಎಂದು ಹೇಳಿರುವುದು. ಅತಿರಾತ್ರವೆಂಬ ಯಾಗದಲ್ಲಿ ಪ್ರಥಮಪರ್ಯಾಯದಲ್ಲಿ ಅಚ್ಛಾವಾಕನೆಂಬ ಋತ್ವಿಜನು ಪಠಿಸಬೇಕಾದ ಶಸ್ತ್ರಮಂತ್ರಗಳಿಗಾಗಿ ಈ ಸೂಕ್ತದ ವಿನಿಯೋಗವಿರುವುದೆಂದು ಆಶ್ವಲಾಯನಶ್ರೌತಸೂತ್ರದ **ಮಾ ನೋ ಅಸ್ಮಿನ್ಮಘವನ್ನಿಂದ್ರ ಪಿಬ ತುಭ್ಯಂ ಸುತೋ ಮದಾಯೇತಿ ಯಾಜ್ಯಾ** ಎಂಬ ಸೂತ್ರದಿಂದ ವಿವೃತವಾಗಿರುವುದು. (ನಿ. ೬-೪)

ಸೂಕ್ತ—೫೪

ಮಂಡಲ—೧ ॥ ಅನುವಾಕ—೧೦ ॥ ಸೂಕ್ತ—೫೪ ॥
ಅಷ್ಟಕ—೧ ॥ ಅಧ್ಯಾಯ—೪ ॥ ವರ್ಗ—೧೭, ೧೮ ॥

ಸೂಕ್ತದಲ್ಲಿರುವ ಋಕ್ಸಂಖ್ಯೆ—೧೧ ॥

ಋಷಿಃ—ಸಪ್ತ ಆಂಗಿರಸಃ ॥

ದೇವತಾ—ಇಂದ್ರಃ ॥

ಛಂದಃ—೧-೫, ೭, ೧೦ ಜಗತೀ । ೬, ೮, ೯, ೧೧ ತ್ರಿಷ್ಟುಪ್ ॥

॥ ಸಂಹಿತಾಪಾಠಃ ॥

ಮಾ ನೋ ಅಸ್ಮಿನ್ಮಘವನ್ಪೃತ್ಸ್ವಂಹಸಿ ನಹಿ ತೇ ಅನ್ತಃ ಶವಸಃ ಪರೀಣಶೇ ।
ಅಕ್ರಂದಯೋ ನದ್ಯೋ೭ಽಧಿ ರೋರುವದ್ವನಾ ಕಥಾ ನ ಕ್ಷೋಣೀರ್ಭಿಯಸಾ ಸಮಾರತ ॥ ೧ ॥

॥ ಪದಪಾಠಃ ॥

ಮಾ । ನಃ । ಅಸ್ಮಿನ್ । ಮಘವನ್ । ಪೃತ್ಸು । ಅಂಹಸಿ । ನಹಿ । ತೇ । ಅನ್ತಃ ।
ಶವಸಃ । ಪರಿಣಶೇ ।
ಅಕ್ರಂದಯಃ । ನದ್ಯಃ । ರೋರುವತ್ । ವನಾ । ಕಥಾ । ನ । ಕ್ಷೋಣೀಃ ।
ಭಿಯಸಾ । ಸಂ । ಆರತ ॥ ೧ ।

॥ ಸಾಯಣಭಾಷ್ಯಂ ॥

ಹೇ ಮಘವನ್ ಧನವನ್ನಿಂದ್ರ ಅಸ್ಮಿನ್ ಪರಿಪೃಶ್ಯಮಾನೇಂ೭ಹಸಿ ಪಾಪೇ ಪೃತ್ಸು ಪೃತನಾಸು ಪಾಪಫಲಭೂತೇಷು ಸಂಗ್ರಾಮೇಷು ಚ ನೋ೭ಸ್ಮಾನ್ಮಾ ಪ್ರಕ್ಷೈಪ್ಸೀರಿತಿ ಶೇಷಃ । ಯಸ್ಮಾತ್ತೇ ತವ ಶವಸೋ ಬಲಸ್ಯಾಂತೋ೭ವಸಾನಂ ಪರೀಣಶೇ ಪರಿತೋ ವ್ಯಾಪ್ತುಂ ನ ಹಿ ಶಕ್ಯತೇ । ಸರ್ವೋ೭ಪಿ ಜನಸ್ತ್ವದೀಯಂ ಬಲಮತಿಕ್ರಮಿತುಂ ನ ಶಕ್ನೋತೀತ್ಯರ್ಥಃ । ತಸ್ಮಾತ್ತ್ವಮಂತರಿಕ್ಷೇ ವರ್ತಮಾನೋ ರೋರುವತ್ ಅತ್ಯರ್ಥಂ ಶಬ್ದಂ ಕುರ್ವನ್ ನದ್ಯೋಃ ನದೀರ್ವನಾ ತತ್ಸಂಬಂಧೀನ್ಯುದಕಾನಿ ಚಾಕ್ರಂದಯಃ॥

ಶಬ್ದಯಸಿ । ಕ್ಷೋಣೀಃ ಕ್ಷೋಣ್ಯಃ । ಕ್ಷೋಣೀತಿ ಪೃಥಿವೀನಾಮ । ತದುಪಲಕ್ಷಿತಾಸ್ತ್ರಯೋ ಲೋಕಾ ಭಿಯಸಾ ತ್ವದ್ಭಯೇನ ಕಥಾ ಕಥಂ ನ ಸಮಾರತ । ನ ಸಂಗಚ್ಛಂತೇ । ತ್ವದೀಯಂ ಬಲಮವಲೋಕ್ಯ ತ್ರಯೋಽಪಿ ಲೋಕಾ ಬಿಭ್ಯತೀತಿ ಭಾವಃ ॥ ಪೃತ್ಸು । ಪದಾದಿಷು ಮಾಂಸ್ಪೃಕ್ಸ್ನಾಮುಪಸಂಖ್ಯಾನಂ । ಪಾ. ೩-೧-೬೩-೧ । ಇತಿ ಪೃತನಾಶಬ್ದಸ್ಯ ಪೃದ್ಭಾವಃ । ಪರೀಣಶೇ । ನಶತಿರ್ವ್ಯಾಪ್ತಿಕರ್ಮಾ । ಕೃತ್ಯಾರ್ಥೇ ತವೈಕೇನಿತಿ ಕೇನ್ಪ್ರತ್ಯಯಃ । ನಿತ್ತ್ವಾದಾದ್ಯುದಾತ್ತತ್ವಂ । ನಿಪಾತಸ್ಯ ಚೇತಿ ಪೂರ್ವಪದಸ್ಯ ದೀರ್ಘತ್ವಂ । ನದ್ಯಃ । ದ್ವಿತೀಯಾರ್ಥೇ ಪ್ರಥಮಾ । ರೋರುವತ್ । ರು ಶಬ್ದೇ । ಯಜ್ಜುಗಂತಾಲ್ಲಟಃ ಶತೃ । ಅದಾದಿವಚ್ಛೇತಿ ವಚನಾಚ್ಛಪೋ ಲುಕ್ । ಶತುರ್ಜಿತ್ತ್ವಾದ್ಗುಣಾಭಾವ ಉವಙಾದೇಶಃ । ನಾಭ್ಯಸ್ತಾಚ್ಛತುರಿತಿ ನುಮ್ಪ್ರತಿಷೇಧಃ । ಅಭ್ಯಸ್ತಾನಾಮಾದಿರಿತ್ಯಾದ್ಯುದಾತ್ತತ್ವಂ । ಕಥಾ । ಥಾ ಹೇತೌ ಚ ಚ್ಛಂದಸೀತಿ ಕಿಂ ಶಬ್ದಾತ್ಪ್ರಕಾರವಚನೇ ಥಾಪ್ರತ್ಯಯಃ । ತಸ್ಯ ವಿಭಕ್ತಿಸಂಜ್ಞಾಯಾಂ ಕಿಮಃ ಕಃ । ಪಾ. ೭-೨-೧೦೩ । ಇತಿ ಕಾದೇಶಃ । ಅರತ । ಋ ಗತೌ । ಸಮೋ ಗಮ್ಯೃಚ್ಛ್ಯೇತ್ಯಾತ್ಮನೇಪದಂ । ಛಾಂದಸೇ ವರ್ತಮಾನೇ ಲಙ್ಯದಾದಿತ್ವಾಚ್ಛಪೋ ಲುಕ್ । ಝಸ್ಯಾದಾದೇಶಃ । ಆಡಾಗಮೋ ವೃದ್ಧಿಶ್ಚ ॥

॥ ಪ್ರತಿಪದಾರ್ಥ ॥

ಮಘವನ್—ಧನವಂತನಾದ ಇಂದ್ರನೇ । **ಅಸ್ಮಿನ್ ಅಂಹಸಿ**—(ಸ್ಪಷ್ಟವಾಗಿ ಕಾಣುವ) ಈ ಪಾಪದಲ್ಲಿಯೂ । **ಪೃತ್ಸು**—ಅಧಿಕವಾಗಿ ಪಾಪಾತ್ಮಕಗಳಾಗಿರುವ ಈ ಯುದ್ಧಗಳಲ್ಲೂ । **ನಃ**—ನಮ್ಮನ್ನು । **ಮಾ (ಪ್ರೈಷ್ಟೈಸ್ಸೀಃ)**—ಬಲಾತ್ಕರಿಸಬೇಡ. (ಏತಕ್ಕೆಂದರೆ) । **ತೇ**—ನಿನ್ನ । **ಶವಸಃ**—ಬಲದ । **ಅಂತಃ**—ಅವಧಿಯನ್ನು **ಪರೀಣಶೇ**—ವ್ಯೀರಿವ್ಯಾಪಿಸುವುದಕ್ಕೆ । ನ ಹಿ—ಸಾಧ್ಯವೇ ಇಲ್ಲ. । (ನೀನು ಅಂತರಿಕ್ಷದಲ್ಲಿ ನಿಂತುಕೊಂಡು) ರೋರುವತ್—ಗರ್ಜಿಸುವ ಶಬ್ದವನ್ನು ಮಾಡುತ್ತ । **ನದ್ಯಃ**—ನದಿಗಳನ್ನೂ । **ವನಾ**—ಅವುಗಳ ನೀರುಗಳನ್ನೂ **ಅಕ್ರಂದಯಃ**—ಶಬ್ದಮಾಡಿಸುತ್ತೀಯೇ । **ಕ್ಷೋಣೀಃ**—ಪೃಥಿವ್ಯಾದಿಮೂರು ಲೋಕಗಳೂ । **ಭಿಯಸಾ**—ನಿನ್ನ ಭಯದಿಂದ । **ಕಥಾ**—ಹೇಗೆತಾನೇ । **ನ ಸಮಾರತ**—ತುಂಬಿಕೊಳ್ಳುವುದಿಲ್ಲ ?

॥ ಭಾವಾರ್ಥ ॥

ಎಲೈ ಧನವಂತನಾದ ಇಂದ್ರನೇ, ಕಣ್ಣಿಗೆ ಕಾಣತಕ್ಕ ಈ ಪಾಪಕೃತ್ಯದಲ್ಲೂ, ಪಾಪಾತ್ಮಕಗಳಾಗಿರುವ ಈ ಯುದ್ಧಗಳಲ್ಲೂ ನಮ್ಮನ್ನು ಬಲಾತ್ಕರಿಸಬೇಡ. ಏತಕ್ಕೆಂದರೆ ನಿನ್ನ ಬಲದ ಅವಧಿಯನ್ನು ವ್ಯೀರುವುದಕ್ಕೆ ಯಾರಿಗೂ ಸಾಧ್ಯವೇ ಇಲ್ಲ. ನೀನು ಅಂತರಿಕ್ಷದಲ್ಲಿದ್ದುಕೊಂಡು ನೀನೂ ಗರ್ಜಿಸುವ ಶಬ್ದವನ್ನು ಮಾಡುತ್ತ ನದಿಗಳನ್ನೂ ಅವುಗಳ ನೀರುಗಳನ್ನೂ ಶಬ್ದಮಾಡಿಸುತ್ತೀಯೆ. ಇಂತಹ ಪ್ರಭಾವವುಳ್ಳ ನಿನಗೆ ಪೃಥಿವ್ಯಾದಿ ಮೂರು ಲೋಕಗಳೂ ಹೇಗೆ ತಾನೇ ಭಯಪಡುವುದಿಲ್ಲ ?

Engish Transation.

O Maghaven, do not throw us into this iniquity, into these sinful conflicts, for the limit of your strength cannot be measured; you are shouting in the heavens and making the waters of the rivers roar; why shall not the earth be filled with terror ?

॥ ವಿಶೇಷ ವಿಷಯಗಳು ॥

ಕೆಲವರು ಈ ರೀತಿ ಹೇಳುತ್ತಾರೆ.—**ಕಂಚಿತ್ಸೈಂಗ್ರಾಮರೂಪಂಪ್ರಾಣಸಂಕಟಪ್ರಸಂಗಮುದ್ದಿಶ್ಯ ವಚೇನಮಿದಂ ಸವ್ಯಸ್ಯ । ಯ ಇಂದ್ರೋ ವೃತ್ರಂ ಭಿತ್ವಾ ಸಗರ್ಜನೇನ ತಥಾ ಲೋಕಾಂಶ್ಚ ಭಯಹೇತುತ್ವಾತ್ಸಮಾಸಯೆತಾ ಮಹತಾ ಮೇಘಜಲವರ್ಷಣೇನ ತಜ್ಜಾತಾ ನದೀರ್ಮಹದಶಬ್ದಯೆತ್ ತೇನ ಚೆ ಸ್ವಬಲಮನಂತಮಿತ್ಯಾವಿರಭಾವಯೆತ್ ಸೋಽಸ್ಮಿನ್ಧಾರುಣ ಪ್ರಸಂಗೇಽಸ್ಮಾಕಂ ಪ್ರಾಣಸಂಕಟಸ್ಯ ನಿವಾರಕೋ ಭವಿಷ್ಯತೀತಿ ಭಾಗವತಂ ॥** ಯುದ್ಧಭಯವು ಒದಗಿದಾಗ ಸೂಕ್ತದ ಋಷಿಯಾದ ಸವ್ಯನು ಹೇಳುವ ವಚನವಿದು. ಇಂದ್ರನು ವೃತ್ರಾಸುರನನ್ನು ಸಂಹಾರಮಾಡಿದಾಗ ಲೋಕವನ್ನೆಲ್ಲಾ ಭಯಪಡಿಸುವಂತೆ ಮಹಾ ಶಬ್ದದಿಂದಲೂ ಗುಡುಗು ಮಿಂಚುಗಳಿಂದಲೂ ಯುಕ್ತವಾದ ಮಹಾವೃಷ್ಟಿಯುಂಟಾಯಿತು. ಅದರಿಂದ ಒಂದು ದೊಡ್ಡ ನದಿಯು ಮಹಾರಭಸವಾಗಿ ಗರ್ಜಿಸುತ್ತಾ ಹರಿಯತೊಡಗಿತು. ಅದನ್ನು ನೋಡಿ ಸವ್ಯನು ಹೆದರಿ ತನ್ನನ್ನು ಕಾಪಾಡಬೇಕೆಂದು ಇಂದ್ರನನ್ನು ಈ ರೀತಿ ಸ್ತೋತ್ರಮಾಡಿರುವನೆಂದು ಭಾಗವತ ಪುರಾಣಾದಿಗಳಲ್ಲಿ ಉಕ್ತವಾಗಿದೆ.

ಪೃತ್ಸು—ಪಾಪಫಲಭೂತವಾದ ಯುದ್ಧದಲ್ಲಿ ಎಂಬುದು ಇದರ ಅರ್ಥ. ಸೇನಾವಾಚಕವಾದ ಪೃತನಾ ಶಬ್ದಕ್ಕೆ ಪೃದ್ಭಾವ ಬಂದು ಪೃತ್ಸು ಎಂಬ ರೂಪವಾಗಿದೆ.

ಪರೀಣಶೇ—**ಪರಿತೋ ವ್ಯಾಪ್ತುಂ** । ಇಲ್ಲಿ ಪರಿ ಎಂಬ ಉಪಸರ್ಗಪೂರ್ವಕವಾದ ನಶ್ ಧಾತುವಿಗೆ ವ್ಯಾಪ್ತಿರೂಪವಾದ ಕ್ರಿಯೆಯನ್ನು ಅರ್ಥವಾಗಿ ಕಲ್ಪಿಸಿದ್ದಾರೆ. ಸುತ್ತಲೂ ವ್ಯಾಪಿಸುವುದಕ್ಕೆ ಎಂಬುದು ಇದರ ಅರ್ಥ.

ನದ್ಯಃ—ಇದು ತೃತೀಯಾವಿಭಕ್ತ್ಯರ್ಥದಲ್ಲಿ ಪ್ರಥಮಾಂತವಾಗಿ ಪ್ರಯೋಗಿಸಲ್ಪಟ್ಟಿದೆ.

ವನಾ—ಜಲಾರ್ಥಕವಾದ ವನಶಬ್ದವು ಇಲ್ಲಿ ದೀರ್ಘಾಂತವಾಗಿದ್ದು ನದೀ ಸಂಬಂಧವಾದ ಜಲ ಎಂದರ್ಥಕೊಡುತ್ತಿದೆ.

ಕ್ಷೋಣೀ—ಈ ಶಬ್ದಕ್ಕೆ ಸಾಮಾನ್ಯವಾಗಿ ಭೂಮಿಯೆಂದರ್ಥವಿದ್ದರೂ, ಇಲ್ಲಿ ಭೂಮ್ಯುಪಲಕ್ಷಿತವಾದ ಮೂರು ಲೋಕಗಳು ಎಂದರ್ಥ ಹೇಳಬೇಕು.

॥ ವ್ಯಾಕರಣಪ್ರಕ್ರಿಯಾ ॥

ಪೃತ್ಸು—ಪೃತನಾಶಬ್ದ ಸಪ್ತಮೀ ಬಹುವಚನದಲ್ಲಿ **ಪದಾದಿಷು ವಾಂಸ್ ಪೃತ್ ಸ್ನೋನಾಮುಪಸಂಖ್ಯಾನಮ್** (ಪಾ. ಸೂ. ೬-೧-೬೩-೧) ಎಂಬುದರಿಂದ ಇದಕ್ಕೆ ಪೃತ್ ಎಂಬ ಆದೇಶ ಬರುತ್ತದೆ. ಪೃತ್ಸು ಎಂದು ರೂಪವಾಗುತ್ತದೆ.

ಪರೀಣಶೇ—ಣಶ ಅದರ್ಶನೇ ಧಾತು. ಇಲ್ಲಿ ವ್ಯಾಪ್ತಿಕರ್ಮಕವಾಗಿದೆ. **ಕೃತ್ಯಾರ್ಥೇ ತವೈಕೇನ್** (ಪಾ. ಸೂ. ೩-೪-೧೪) ಎಂಬುದರಿಂದ ಕೇನ್ ಪ್ರತ್ಯಯ. ನಿತ್ತಾದುದರಿಂದ ಆದ್ಯುದಾತ್ತವಾಗುತ್ತದೆ. ಣಶೇ ಎಂಬುದು ಪರದಲ್ಲಿರುವಾಗ ಪರಿ ಎಂಬ ನಿಪಾತಕ್ಕೆ **ನಿಪಾತಸ್ಯ ಚ** (ಪಾ. ಸೂ. ೬-೩-೧೩೬) ಎಂಬುದರಿಂದ ದೀರ್ಘ ಬರುತ್ತದೆ.

ನದ್ಯಃ—ನದೀ ಶಬ್ದ. ಜಸ್ ಪರದಲ್ಲಿರುವಾಗ **ದೀರ್ಘಾಜ್ಜಸಿಚಿ** ಎಂಬುದರಿಂದ ಪೂರ್ವಸವರ್ಣದೀರ್ಘನಿಷೇಧ. ಯಣಾದೇಶ. ಇಲ್ಲಿ ದ್ವಿತೀಯಾರ್ಥದಲ್ಲಿ ಪ್ರಥಮಾ ಬಂದಿದೆ.

ರೋರುವತ್—ರು ಶಬ್ದೇ ಧಾತು. ಅತಿಶಯಾರ್ಥದಲ್ಲಿ ಯಙ್ **ಯೆಙೋಽಚಿ ಚ** ಎಂಬುದರಿಂದ ಆದಕ್ಕೆ ಲುಕ್ ಯಙ್ ನಿಮಿತ್ತವಾಗಿ ಧಾತುವಿಗೆ ದ್ವಿತ್ವ. **ಗುಣೋಯೆಙ್ಲುಕೋಃ** ಎಂಬುದರಿಂದ ಅಭ್ಯಾಸಕ್ಕೆ ಗುಣ. **ಸನಾದ್ಯಂತಾಧಾತವಃ** ಎಂಬುದರಿಂದ ಯಙ್ಲುಗಂತವಾದ ರೋರು ಎಂಬುದಕ್ಕೆ ಧಾತುಸಂಜ್ಞಾ. ಇದರ ಮೇಲೆ ಲಡರ್ಥದಲ್ಲಿ ಶತೃ. ಯಙ್ಲುಕಿನಲ್ಲಿ **ಅದಾದಿವಚ್ಚೆ** ಎಂದು ಅತಿದೇಶ ಮಾಡಿರುವುದರಿಂದ ಪ್ರಾಪ್ತವಾದ ಶಪಿಗೆ **ಆದಿಪ್ರಭೃತಿಭ್ಯಃಶಪಃ** ಎಂಬುದರಿಂದ ಲುಕ್. ಆಗ **ಸಾರ್ವಧಾತುಕಮಪಿತ್** ಸೂತ್ರದಿಂದ ಶತೃ ಜ್ಞಿತ್ತಾದುದರಿಂದ ಧಾತುವಿನ ಇಕಿಗೆ ಗುಣ ಬರುವುದಿಲ್ಲ. ರೋರು+ಅತ್ ಎಂದಿರುವಾಗ **ಅಚಿಶ್ನು ಧಾತುಭ್ರುವಾಂ** ಸೂತ್ರದಿಂದ ಉಕಾರಕ್ಕೆ ಉವಙಾದೇಶ. ರೋರುವತ್ ಎಂದಾಗುತ್ತದೆ. **ನಾಭ್ಯಸ್ತಾಚ್ಛತುಃ** (ಪಾ. ಸೂ. ೭-೧-೭೮) ಎಂಬುದರಿಂದ ಸರ್ವನಾಮಸ್ಥಾನಪರದಲ್ಲಿದ್ದರೂ ನುಮಾಗಮ ಬರುವುದಿಲ್ಲ. **ಹಲ್ ಙ್ಯಾಭ್ಯೋ**—ಸೂತ್ರದಿಂದ ಸುಲೋಪವಾದರೆ ರೋರುವತ್ ಎಂದು ರೂಪವಾಗುತ್ತದೆ. **ಅಭ್ಯಸ್ತಾನಾಮಾದಿಃ** (ಪಾ. ಸೂ. ೬-೧-೧೯೯) ಎಂಬುದರಿಂದ ಆದ್ಯುದಾತ್ತಸ್ವರ ಬರುತ್ತದೆ.

ಕಥಾ—ಕಿಮ್ ಶಬ್ದ. ಪುಕಾರಾರ್ಥವು ತೋರುತ್ತಿರುವಾಗ **ಥಾ ಹೇತೌಚಚ್ಛಂದಸಿ** (ಪಾ. ಸೂ. ೫-೩-೨೬) ಎಂಬುದರಿಂದ ಥಾ ಪ್ರತ್ಯಯ. **ಪ್ರಾಗ್ದಿಶೋವಿಭಕ್ತೇಃ** ಎಂಬುದರಿಂದ ಈ ಪ್ರತ್ಯಯಕ್ಕೆ ವಿಭಕ್ತಿಸಂಜ್ಞೆ ಇರುವುದರಿಂದ **ಕಿಮಃಕಃ** (ಪಾ. ಸೂ. ೭-೨-೧೦೩) ಎಂಬುದರಿಂದ ಕಿಮ್ ಶಬ್ದಕ್ಕೆ ಕ ಎಂಬ ಆದೇಶ. ಕಥಾ ಎಂದು ರೂಪವಾಗುತ್ತದೆ. ಪ್ರತ್ಯಯಸ್ವರದಿಂದ ಅಂತೋದಾತ್ತ.

ಆರತ—ಋ ಗತೌ ಧಾತು. ಸಮ್ ಪೂರ್ವಕವಾದುದರಿಂದ **ಸಮೋಗಮೃಚ್ಛಿಭ್ಯಾಂ** (ಪಾ. ಸೂ. ೧-೩-೨೯) ಎಂಬುದರಿಂದ ಆತ್ಮನೇಪದ ಪ್ರತ್ಯಯ ಬರುತ್ತದೆ. ವರ್ತಮಾನಾರ್ಥದಲ್ಲಿ **ಛಂದಸಿ ಲುಙ್ಲಙ್ ಲಿಟಃ** ಎಂಬುದರಿಂದ ಲಙ್. ಪ್ರಥಮಪುರುಷ ಬಹುವಚನದ ಝಿ ಪ್ರತ್ಯಯಕ್ಕೆ **ಆತ್ಮನೇಪದೇಷ್ವನತಃ** ಎಂಬುದರಿಂದ ಅದಾದೇಶ. ಅದಾದಿಯಲ್ಲಿ ಸೇರುವುದರಿಂದ **ಆದಿಪ್ರಭೃತಿಭ್ಯಃಶಪಃ** ಎಂಬುದರಿಂದ ಶಪಿಗೆ ಲುಕ್. **ಅಡಜಾದೀನಾಂ** ಎಂಬುದರಿಂದ ಅಂಗಕ್ಕೆ ಅಡಾಗಮ. **ಅಟಶ್ಚ** ಸೂತ್ರದಿಂದ ವೃದ್ಧಿ. ಆರತ ಎಂದು ರೂಪವಾಗುತ್ತದೆ. ತಿಙಂತನಿಘಾತಸ್ವರ ಬರುತ್ತದೆ.

॥ ಸಂಹಿತಾಪಾಠಃ ॥

ಅಚಾ॑ ಶಕ್ರಾಯ॒ ಶಾಕಿ॑ನೇ॒ ಶಚೀ॑ವತೇ॒ ಶೃಣ್ವಂ॑ತಮಿಂದ್ರಂ॒ ಮಹ॑ಯ
ನ್ನ॒ಭಿ ಷ್ಟು॑ಹಿ ।
ಯೋ ಧೃ॒ಷ್ಣುನಾ॒ ಶವ॑ಸಾ॒ ರೋದ॑ಸೀ॒ ಉಭೇ ವೃ॒ಷಾ ವೃ॒ಷತ್ವಾ॒ ವೃ॒ಷ-
ಭೋ ನ್ಯೃ॑ಂಜತೇ॒ ॥ ೨ ॥

॥ ಪದಪಾಠಃ ॥

ಅರ್ಚ । ಶಕ್ರಾಯ । ಶಾಕಿನೇ । ಶಚೀವತೇ । ಶೃಣ್ವಂತಂ । ಇಂದ್ರಂ । ಮಹ-
ಯನ್ । ಅಭಿ । ಸ್ತುಹಿ ।
ಯಃ । ಧೃಷ್ಣುನಾ । ಶವಸಾ । ರೋದಸೀ ಇತಿ । ಉಭೇ ಇತಿ । ವೃಷಾ । ವೃಷ್ಣುತ್ವಾ ।
ವೃಷಭಃ । ನಿಽಯುಂಜತೇ ॥ ೨ ॥

॥ ಸಾಯಣಭಾಷ್ಯಂ ॥

ಹೇ ಅಧ್ವರ್ಯೋ ಶಾಕಿನೇ ಶಕ್ತಿಯುಕ್ತಾಯ ಶಚೀವತೇ ಪ್ರಜ್ಞಾವತೇ ಶಕ್ರಾಯೇಂದ್ರಾಯೈಾ-ರ್ಚ । ಏವಂವಿಧಮಿಂದ್ರಂ ಪೂಜಯ । ಕಿಂಚ ಸ್ತುತೀಃ ಶೃಣ್ವಂತಂ ಸವಿಾಚೀನೇಯಂ ಸ್ತುತಿರಿತಿ ಜಾನಂತಂ ತಮಿಂದ್ರಂ ಮಹಯರ್ಚ ಪೂಜಯನ್ನಭಿಷ್ಟುಹಿ । ಅಭಿಮುಖ್ಯೇನ ತಸ್ಯ ಸ್ತೋತ್ರಂ ಕುರು । ಯ ಇಂದ್ರೋ ಧೃಷ್ಣುನಾ ಶತ್ರೂಣಾಂ ಧರ್ಷಕೇಣ ಶವಸಾ ಬಲೇನೋಭೇ ರೋದಸೀ ದ್ಯಾವಾಪೃಥಿವ್ಯೌ ನ್ಯೃಂಜತೇ ನಿತರಾಂ ಪ್ರಸಾಧಯತಿ । ಋಂಜತಿಃ ಪ್ರಸಾಧನಕರ್ಮಾ । ನಿ. ೬-೨೧ । ಇತಿ ಯಾಸ್ಕಃ । ಸ ಇಂದ್ರೋ ವೃಷಾ ಸೇಚನಸಮರ್ಥೋ ವೃಷತ್ವಾ ವೃಷತ್ವೇನಾನೇನೈವ ಸೇಚನಸಾಮರ್ಥ್ಯೇನ ವೃಷಭೋ ವರ್ಷಿತಾ ಕಾಮಾನಾಂ ಯದ್ವಾ ವೃಷ್ಣ್ಯುದಕಾನಾಂ ॥ ಅರ್ಚ । ಶಪಃ ಪಿತ್ತ್ವಾದನುದಾತ್ತತ್ವೇ ಧಾತು-ಸ್ವರಃ । ದ್ವ್ಯಚೋಽತಸ್ತಿಙ ಇತಿ ದೀರ್ಘತ್ವಂ । ಶಾಕಿನೇ । ಶಕ್ತಿಃ ಶಾಕಃ । ಶಕ್ಲೃಶಕ್ತೌ । ಭಾವೇ ಘಞ್ । ಮತ್ವರ್ಥೀಯ ಇನಿಃ । ಕ್ರಿಯಾಗ್ರಹಣಂ ಕರ್ತವ್ಯಮಿತಿ ಕರ್ಮಣಃ ಸಂಪ್ರದಾನತ್ವಾಚ್ಚ-ತುರ್ಥೀ । ಅಭಿ ಷ್ಟುಹಿ । ಸ್ತೌತೇರದಾದಿತ್ವಾಚ್ಛಪೋ ಲುಕ್ । ಉಪಸರ್ಗಾತ್ಸುನೋತೀತಿ ಷತ್ವಂ । ಷ್ಟುನಾ ಷ್ಟುರಿತಿ ಷ್ಟುತ್ವಂ । ವೃಷತ್ವಾ । ಸುಪಾಂ ಸುಲುಗಿತಿ ವಿಭಕ್ತೇರಾಕಾರಃ । ನ್ಯೃಂಜತೇ । ಋಜಿ ಭೃಜೀ ಭರ್ಜನೇ । ಇದಿತ್ತ್ವಾನ್ನುಮ್ । ಶಪಿ ಪ್ರಾಪ್ತೇ ವ್ಯತ್ಯಯೇನ ಶಃ ॥

॥ ಪ್ರತಿಪದಾರ್ಥ ॥

(ಎಲೈ ಅಧ್ವರ್ಯುವೇ) **ಶಾಕಿನೇ**—ಶಕ್ತಿವಂತನೂ । **ಶಚೀವತೇ**—ಪ್ರಜ್ಞಾವಂತನೂ ಆದ । **ಶಕ್ರಾಯ**-ಇಂದ್ರನಿಗೆ । **ಅರ್ಚ**—ಪೂಜೆಯನ್ನರ್ಪಿಸು । **ಶೃಣ್ವಂತಂ**—(ನಿಮ್ಮ ಸ್ತೋತ್ರಗಳನ್ನು) ಕೇಳುತ್ತಿರುವ ಇಂದ್ರನನ್ನು । **ಮಹಯರ್ಚ**—ಪೂಜಿಸುತ್ತ । **ಅಭಿ ಷ್ಟುಹಿ**—ಅವನ ಅಭಿಮುಖವಾಗಿದ್ದು ಸ್ತೋತ್ರಮಾಡು. । **ಯಃ**—ಯಾವ ಇಂದ್ರನು । **ಧೃಷ್ಣುನಾ**—(ಶತ್ರುಗಳನ್ನು) ಸದೆಬಡಿಯುವ । **ಶವಸಾ**—ಬಲದಿಂದ । **ಉಭೇ ರೋದಸೀ**-ದ್ಯಾವಾಪೃಥಿವಿಗಳೆರಡನ್ನೂ । **ನ್ಯೃಂಜತೇ**—ಅತ್ಯಂತವಾಗಿ ಅಲಂಕರಿಸುತ್ತಾನೋ । (**ಸಃ**—ಆ ಇಂದ್ರನು) **ವೃಷಾ**—(ಮಳೆಯನ್ನು) ಸುರಿಸಲು ಸಮರ್ಥನು । **ವೃಷತ್ವಾ**—ಈ ಸೇಚನ ಸಾಮರ್ಥ್ಯದಿಂದಲೇ । **ವೃಷಭಃ**—(ನಮ್ಮ) ಇಷ್ಟಾರ್ಥಗಳನ್ನು ಕೊಡುವವನು ಅಥವಾ ವೃಷ್ಣ್ಯುದಕಗಳ ದಾತನು. (ಎಂದು ಪ್ರಸಿದ್ಧಿಯು)

॥ ಭಾವಾರ್ಥ ॥

ಎಲೈ ಅಧ್ವರ್ಯುವೇ, ಶಕ್ತಿವಂತನೂ ಪ್ರಜ್ಞಾವಂತನೂ ಆದ ಇಂದ್ರನಿಗೆ ಪೂಜೆಯನ್ನರ್ಪಿಸು. ನಿಮ್ಮ ಸ್ತೋತ್ರಗಳನ್ನು ಕೇಳುತ್ತಿರುವ ಇಂದ್ರನನ್ನು ಪೂಜಿಸುತ್ತ ಅವನ ಅಭಿಮುಖವಾಗಿ ನಿಂತು ಸ್ತೋತ್ರಮಾಡು. ಶತ್ರುಗಳನ್ನು ಸದೆಬಡಿಯುವ ಬಲದಿಂದ ದ್ಯಾವಾಪೃಥಿವಿಗಳೆರಡನ್ನೂ ಅಲಂಕರಿಸತಕ್ಕ ಇಂದ್ರನು ಮಳೆಯನ್ನು ಸುರಿಸಲು ಸಮರ್ಥನು. ಮತ್ತು ತನ್ನ ಸಾಮರ್ಥ್ಯದಿಂದ ನಮ್ಮ ಇಷ್ಟಾರ್ಥಗಳನ್ನು ಕೊಡುವವನು.

English Translation.

Adore the wise and powerful Indra; adoring the listening Indra, praise him who adorns both heaven and earth by his irresestible might, he is the sender of showers, and by his bounty gratifies our desires.

॥ ವಿಶೇಷ ವಿಷಯಗಳು ॥

ಶಾಕಿನೇ—ಶಕ್ಲೃ ಶಕ್ತೌ ಎಂಬ ಧಾತುವಿನಿಂದ ನಿಷ್ಪನ್ನವಾದ ಶಾಕಶಬ್ದಕ್ಕೆ ಶಕ್ತಿ ಎಂದರ್ಥ. ಶಾಕ ವುಳ್ಳವನು ಶಾಕೀ ಎಂದರೆ ಸಂಪೂರ್ಣವಾದ ಶಕ್ತಿಯುಳ್ಳವನು ಎಂದರ್ಥ.

ಶೃಣ್ವಂತಂ—ಇದು ಇಂದ್ರ ಶಬ್ದಕ್ಕೆ ವಿಶೇಷಣವಾಗಿದೆ. ತನ್ನನ್ನು ಸ್ತುತಿಸುವವರ ಸ್ತೋತ್ರವನ್ನು ಮನಸ್ಸಿಟ್ಟು ಕೇಳುವವನು ಎಂದು ಅರ್ಥ.

ಅಭಿ ಷ್ಟುಹಿ—ಎದುರಿನಲ್ಲಿ ನಿಂತು ಅವನ ಸ್ತೋತ್ರವನ್ನು ಮಾಡು.

ಉಭೇ ರೋದಸೀ—ಎರಡಾದ ದ್ಯಾವಾಪೃಥಿವಿಗಳು. ಇಲ್ಲಿ ರೋದಶಬ್ದದ ಮೇಲಿರುವ ದ್ವಿವಚನ ದಿಂದಲೇ ಉಭೇ ಎಂಬ ಪದದ ಅರ್ಥವು ಪ್ರತೀತವಾಗುತ್ತಿದ್ದರೂ ಮತ್ತೆ ಉಭಶಬ್ದ ಪ್ರಯೋಗವು ಸೃಷ್ಟ್ಯರ್ಥ ವಾಗಿದೆ ಎಂದು ತಿಳಿಯಬೇಕು.

ನ್ಯೃಂಜತೇ—ನಿತರಾಂ ಪ್ರಸಾಧಯತಿ । ಋಜಿ ಭೃಜೀ ಭರ್ಜನೆ ಎಂಬ ಧಾತುವಿನಿಂದ ನಿಷ್ಪನ್ನ ವಾಗಿ ನಿ ಎಂಬ ಉಪಸರ್ಗದಿಂದ ಕೂಡಿದ ಈ ಕ್ರಿಯಾಪದಕ್ಕೆ ಅಲಂಕಾರ ಹೊಂದುತ್ತದೆ ಎಂದರ್ಥ ಬರುವುದು. ಅದಕ್ಕೆ ಋಂಜತಿಃ ಪ್ರಸಾಧನಕರ್ಮಾ (ನಿ. ೬-೨೧) ಎಂಬ ನಿರುಕ್ತವೇ ಪ್ರಮಾಣವಾಗಿದೆ.

ವೃಷಾ—ವೃಷ್ಟಿಯನ್ನು ಸುರಿಸುವವನು.

ವೃಷತ್ವಾ—ವೃಷ್ಟಿಸೇಚನ ರೂಪವಾದ ಸಾಮರ್ಥ್ಯವುಳ್ಳವನು.

ವೃಷಭಃ—ಯಾಗಕರ್ತೃಗಳ ಇಷ್ಟಾರ್ಥಗಳನ್ನು ಸಲ್ಲಿಸುವವನು. ಅಥವಾ ವೃಷ್ಟಿರೂಪವಾದ ಉಪ ಕಾರದಿಂದ ಎಲ್ಲರನ್ನೂ ತೃಪ್ತಿಪಡಿಸುವವನು. (ಇಂದ್ರ)

॥ ವ್ಯಾಕರಣಪ್ರಕ್ರಿಯಾ ॥

ಅರ್ಚೆ—ಅರ್ಚ ಪೂಜಾಯಾಂ ಧಾತು. ಲೋಟ್ ಮಧ್ಯಮಪುರುಷ ಏಕವಚನದಲ್ಲಿ ಸಿಪ್ ಸೇರ್ಯ್ ಪಿಚ್ಚೆ ಎಂಬುದರಿಂದ ಅದಕ್ಕೆ ಹಿ ಆದೇಶ. ಕರ್ತರಿ ಶಪ್ ಸೂತ್ರವಿಂದ ಶಪ್ ವಿಕರಣ. ಅಕಾರದ ಪರದಲ್ಲಿ ರುವುದರಿಂದ ಅತೋಹೇಃ ಎಂಬುದರಿಂದ ಹಿಗೆ ಲುಕ್. ಅರ್ಚ ಎಂದು ರೂಪವಾಗುತ್ತದೆ. ಪಾದಾದಿಯಲ್ಲಿ

ಇರುವುದರಿಂದ ನಿಘಾತಸ್ವರ ಬರುವುದಿಲ್ಲ. ಶಪ್ ಪಿತ್ತಾದುದರಿಂದ **ಅನುದಾತ್ತೌ ಸುಪ್ಪಿತೌ** ಎಂಬುದರಿಂದ ಅನುದಾತ್ತವಾಗುತ್ತದೆ. ಆಗ ಧಾತುವಿನ ಸ್ವರವೇ ಉಳಿಯುತ್ತದೆ. **ದ್ವ್ಯಚೋತಸ್ತಿಙಃ** (ಪಾ. ಸೂ. ೬-೩-೧೩೫) ಎಂಬುದರಿಂದ ಸಂಹಿತಾದಲ್ಲಿ ಅಂತ್ಯಕ್ಕೆ ದೀರ್ಘ ಬರುತ್ತದೆ.

ಶಾಕಿನೇ—ಶಕ್ತಿಃ ಶಾಕಃ ಶಕ್ಲೃ ಶಕ್ತೌ ಧಾತು. ಭಾವಾರ್ಥದಲ್ಲಿ ಘಞ್ ಪ್ರತ್ಯಯ. ಞ್ನಿತ್ತಾದುದರಿಂದ **ಅತ ಉಪಧಾಯಾಃ** ಎಂಬುದರಿಂದ ಧಾತುವಿನ ಉಪಧೆಗೆ ವೃದ್ಧಿ. ಶಾಕಃ ಅಸ್ಯ ಅಸ್ತಿ (ಶಕ್ತಿಯು ಇವನಿಗೆ ಇದೆ) ಎಂಬ ಮತ್ವರ್ಥವಲ್ಲಿ **ಅತ ಇನಿಠನೌ** (ಪಾ. ಸೂ. ೫-೨-೧೧೫) ಎಂಬುದರಿಂದ ಇನಿ ಪ್ರತ್ಯಯ. **ಯಸ್ಯೇತಿಚ** ಎಂಬುದರಿಂದ ಆಕಾರಕ್ಕೆ ಲೋಪ. ಶಾಕಿನ್ ಶಬ್ದವಾಗುತ್ತದೆ. ಚತುರ್ಥೀ ಏಕವಚನರೂಪ. **ಕ್ರಿಯಾಗ್ರಹಣಂ ಕರ್ತವ್ಯಂ** ಎಂಬ ವಚನದಿಂದ ಕರ್ಮಕ್ಕೆ ಸಂಪ್ರದಾನ ಸಂಜ್ಞೆ ಬರುವುದರಿಂದ ಚತುರ್ಥೀ ವಿಭಕ್ತಿ ಬಂದಿದೆ.

ಅಭಿ **ಷ್ಟುಹಿ**—ಷ್ಟುಞ್ ಸ್ತುತೌ ಧಾತು. ಲೋಟ್ ಮಧ್ಯಮಪುರುಷದ ಸಿಪಿಗೆ ಹಿ ಆದೇಶ ಬರುತ್ತದೆ ಅದಕ್ಕೆ ಅಪಿತ್ವ ಹೇಳಿರುವುದರಿಂದ ತನ್ನಿಮಿತ್ತಕವಾಗಿ ಧಾತುವಿಗೆ ಗುಣ ಬರುವುದಿಲ್ಲ. ಅದಾದಿಯಾದುದರಿಂದ **ಅದಿಪ್ರಭೃತಿಭ್ಯಃ ಶಪಃ** ಎಂಬುದರಿಂದ ಶಪಿಗೆ ಲುಕ್. ಸ್ತುಹಿ ಎಂದು ರೂಪವಾಗುತ್ತದೆ. ಅಭಿ ಎಂಬ ಉಪಸರ್ಗದ ಸಂಬಂಧವಿರುವಾಗ **ಉಪಸರ್ಗಾತ್ ಸುನೋತಿ** (ಪಾ. ಸೂ. ೮-೩-೬೫) ಎಂಬ ಸೂತ್ರದಿಂದ ಧಾತು ಸಂಬಂಧಿ ಸಕಾರಕ್ಕೆ ಧತ್ವ ಬರುತ್ತದೆ. ಷಕಾರ ಸಂಬಂಧ ತಕಾರಕ್ಕೆ ಬಂದುದರಿಂದ **ಷ್ಟುನಾಷ್ಟುಃ** ಎಂಬುದರಿಂದ ಷ್ಟುತ್ವದಿಂದ ಟಕಾರಾದೇಶ. ಷ್ಟುಹಿ ಎಂದಾಗುತ್ತದೆ. ತಿಙಂತನಿಘಾತಸ್ವರ ಬರುತ್ತದೆ.

ಧೃಷ್ಣುನಾ—ಞಿಧೃಷಾ ಪ್ರಾಗಲ್ಭ್ಯೇ ಧಾತು. **ತ್ರಸಿಗೃಧಿಧೃಷಿಕ್ಷಿಪೇಃ ಕ್ನುಃ** ಎಂಬುದರಿಂದ ಕ್ನು ಪ್ರತ್ಯಯ. ಕಿತ್ತಾದುದರಿಂದ ಲಘೂಪಧಗುಣ ಬರುವುದಿಲ್ಲ. ತೃತೀಯಾ ಏಕವಚನದಲ್ಲಿ ಘಿಸಂಜ್ಞಾ ಇರುವುದರಿಂದ ನಾಭಾವ. ಪ್ರತ್ಯಯ ಸ್ವರ ಬರುತ್ತದೆ.

ವೃಷತ್ವಾ—ವೃಷು ಸೇಚನೇ ಧಾತು. ಭಾವಾರ್ಥದಲ್ಲಿ ತ್ವ । ಪ್ರತ್ಯಯ ತೃತೀಯಾದಲ್ಲಿ **ಸುಪಾಂ ಸುಲುಕ್** ಎಂಬುದರಿಂದ ವಿಭಕ್ತಿಗೆ ಆಕಾರ ಆದೇಶ. ವೃಷತ್ವಾ ಎಂದು ರೂಪವಾಗುತ್ತದೆ. ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ.

ನೃಞ್ಜತೇ—ಋಜಿ ಭೃಜೀ ಭರ್ಜನೇ ಧಾತು. ಇದಿತ್ತಾದುದರಿಂದ **ಇದಿತೋನುಮ್ ಧಾತೋಃ** ಎಂಬುದರಿಂದ ಧಾತುವಿಗೆ ನುಮಾಗಮ. **ವ್ಯತ್ಯಯೋ ಬಹುಲಂ** ಎಂಬುದರಿಂದ ಶಪಿಗೆ ಶ ವಿಕರಣ ಬರುತ್ತದೆ. ಋಂಜತೇ ಎಂದು ರೂಪವಾಗುತ್ತದೆ. ಉಪಸರ್ಗ ಸಂಬಂಧ ಬಂದಾಗ ಅದರ ಇಕಾರಕ್ಕೆ ಯಣಾದೇಶ. ಅದುಪದೇಶದ ಪರದಲ್ಲಿರುವುದರಿಂದ **ತಾಸ್ಯನುದಾತ್ತೇಙ್** ಸೂತ್ರದಿಂದ ಲಸಾರ್ವ ಧಾತುಕವು ಅನುದಾತ್ತ. ಆಗ ವಿಕರಣಸ್ವರ ಬರುತ್ತದೆ. ಹಿಂದೆ ಯಃ ಎಂದು ಯಚ್ಛಬ್ದದ ಸಂಬಂಧವಿರುವುದರಿಂದ **ಯೇದ್ವ್ಯತ್ತಾನ್ನಿತ್ಯಂ** ಎಂಬುದರಿಂದ ನಿಘಾತಸ್ವರ ಪ್ರತಿಷೇಧ ಬರುತ್ತದೆ.

॥ संहितापाठः ॥

अर्चा दिवे बृहते शूष्यं ८ वचः स्वक्षत्रं यस्य धृषतो धृषन्मनः ।
बृहच्छ्रवा असुरो बर्हणा कृतः पुरो हरिभ्यां वृषभो रथो हि षः ॥ ४ ॥

॥ पदपाठः ॥

अर्च । दिवे । बृहते । शूष्यं । वचः । स्वऽक्षत्रं । यस्य । धृषतः ।
धृषत् । मनः ।
बृहत्ऽश्रवाः । असुरः । बर्हणा । कृतः । पुरः । हरिऽभ्यां । वृषभः
रथः । हि । सः ॥ ४ ॥

॥ सायणभाष्य ॥

हेस्तोतः दिवे दीप्तायु बृहते महते इन्द्राय शूष्यं । शूषमिति सुखनामु । तत्र साधु शूष्यं । तादृशं स्तुतिलक्षणं वचोऽर्च । उच्चारयु । यस्येंद्रस्य धृषतः शत्रून्धर्षयतः स्वक्षत्रं स्वभूतबलवन्मनो धृषत् धृष्टं भवति । हि षः स हि स ऋत्विंद्रो बृहच्छ्रवाः प्रभूतयशा असुरः शत्रूणां निरसिता । यद्वा । असुः प्राणो बलं वा । तद्वान् । रो मत्वर्थीयः । अथवा । असवः प्राणाः । तेन चापो लक्ष्यंते । प्राणा वा आपः । कै. ब्रा. ४-२-४-२ । इति श्रुतेः । तान्याति ददातीत्यसुरः । बर्हणा शत्रूणां निबर्हयिता हरिभ्यामश्विभ्यां पुरस्कृतः पूजितः वृषभः कामानां वर्षिता रथो रंहणशीलः ॥ शूष्यं । तत्र साधुरिति यत् । सर्वत्र विभाषेति छंदसि विकल्पनात इति यतोऽनाव इत्याद्युदात्तत्वाभावे तित्स्वरितं इति स्वरितत्वं । धृषतः । ऋधृषा प्रागल्भ्ये । व्यत्ययेन शः । शतुरनुम इति विभक्तेरुदात्तत्वं । बृहच्छ्रवाः । बृहच्छ्रवो यस्य । बहुव्रीहौ पूर्वपदप्रकृतिस्वरत्वं । असुरः । असु क्षेपणे । असेरुरन् । उ. ८-४५ । इत्युरन्प्रत्ययः । नित्त्वादाद्युदात्तत्वं । बर्हणा । सुपां सुलुगिति विभक्तेराकारः । पुरः । पूर्वाधरेत्यादिनासिप्रत्ययोन्तोदात्तः ॥

॥ ಪ್ರತಿಪದಾರ್ಥ ॥

(ಎಲೈ ಸ್ತೋತೃನೇ) **ದಿವೇ**—ಪ್ರಕಾಶಮಾನನೂ । **ಬೃಹತೇ**—ಅದ್ಭುತನೂ ಆದ ಇಂದ್ರನಿಗೆ । **ಶೂಷ್ಯಂ**—ಹರ್ಷದಾಯಕವಾದ । **ವಚಃ**—(ಸ್ತೋತ್ರರೂಪವಾದ) ವಾಕ್ಯನ್ನು । **ಅರ್ಚ**—(ಅರ್ಪಿಸು.) ಪಠಿಸು. । **ಧೃಷತಃ**—(ಶತ್ರುಗಳನ್ನು) ಭಯಪಡಿಸತಕ್ಕ ಅಥವಾ ನಿರ್ಭೀತನಾದ । **ಯಸ್ಯ**—ಯಾವ ಇಂದ್ರನ **ಸ್ವಶ್ಚಕ್ರೇಂ**—ಸ್ವಶಕ್ತಿಯಿಂದ ಸ್ಥಿರವಾದ । **ಮನಃ**—ಮನಸ್ಸು । **ಧೃಷತ್**—(ಏಕಾಗ್ರ ಬುದ್ಧಿಯಿಂದ) ನೆಲೆಸಿದೆಯೋ । **ಹಿ ಷಃ**—ಅದೇ ಇಂದ್ರನು । **ಬೃಹಚ್ಛ್ರವಾಃ**—ಅಧಿಕವಾದ ಯಶಸ್ಸುಳ್ಳವನು. । **ಅಸುರಃ**—ಮಳೆಯನೀರನ್ನು ಸುರಿಸುವವನು. । **ಬರ್ಹಣಾ**—ಶತ್ರುಗಳನ್ನು ಹೊಡೆದೋಡಿಸುವವನು. । **ರಥಃ**—(ಈಕಡೆ) ಸಂಚರಿಸತಕ್ಕವನು. (ನಮ್ಮಕಡೆ ಬರತಕ್ಕವನು.)

॥ ಭಾವಾರ್ಥ ॥

ಎಲೈ ಸ್ತೋತೃವೇ, ಪ್ರಕಾಶಮಾನನೂ, ಅದ್ಭುತನೂ ಆದ ಇಂದ್ರನಿಗೆ ಹರ್ಷದಾಯಕವಾದ ಸ್ತೋತ್ರವನ್ನರ್ಪಿಸು. ಶತ್ರುಗಳನ್ನು ಭಯಪಡಿಸಿ ತಾನು ನಿರ್ಭೀತನಾದ ಯಾವ ಇಂದ್ರನ ಸ್ಥಿರವಾದ ಮನಸ್ಸು ಏಕಾಗ್ರ ಬುದ್ಧಿಯಿಂದ ನೆಲೆಸಿದೆಯೋ ಆ ಇಂದ್ರನು ಅಧಿಕವಾದ ಯಶಸ್ಸುಳ್ಳವನು. ಮಳೆಯ ನೀರನ್ನು ಸುರಿಸುವವನು. ಶತ್ರುಗಳನ್ನು ಹೊಡೆದೋಡಿಸಿ ನಮ್ಮ ಕಡೆಗೆ ಬರತಕ್ಕವನು.

English Translation.

Offer pleasant laudations to the great and illustrious Indra, who is the victor of enemies and is firm-minded by his own strength. He, of great renown is obeyed by his horses, the showerer of bounties and impetuous, drives away the Asuras and enemies.

ದಿವೇ—ಅಂತರಿಕ್ಷವಾಚಕವಾದ ದಿವ್ ಶಬ್ದಕ್ಕೆ ಇಲ್ಲಿ ದೀಪ್ತ್ಯರ್ಥಕವಿದೆ. ಇದು ಬೃಹಚ್ಛಬ್ದಕ್ಕೆ ವಿಶೇಷಣವಾಗಿದೆ.

ಶೂಷ್ಯಮ್—ಶೂಷಂ ಎಂದರೆ ಸುಖ ಎಂದರ್ಥ. ಸುಖವನ್ನುಂಟುಮಾಡುವ ಸ್ತೋತ್ರವೇ ಶೂಷ್ಯವೆನಿಸುವುದು.

ಅಸುರಃ—ಶತ್ರುಗಳನ್ನು ನಿರಸನ ಮಾಡುವವನು. ಅಥವಾ **ಅಸುಃ ಪ್ರಾಣೋ ಬಲಂ ವಾ ತದ್ವಾನ್** ಅಸುರಃ ಎಂದು ವಿವರಿಸಿದರೆ ವಿಶೇಷ ಬಲವುಳ್ಳವನು ಎಂದಾಗುವುದು. ಅಥವಾ ಅಸವಃ ಎಂದರೆ ಪ್ರಾಣಗಳು ಎಂದರ್ಥ. ಅದಕ್ಕೇ ನೀರೂ ಎಂದರ್ಥವಿದೆ. **ಪ್ರಾಣಾ ವಾ ಆಪಃ** (ತೈ. ಬ್ರಾ. ೩-೨-೫-೨) ಎಂಬ ಶ್ರುತಿಯೇ ಇದಕ್ಕೆ ಪ್ರಮಾಣ. ಅಂತಹ ನೀರನ್ನು **ರಾತಿ ದದಾತಿ** ಅಂದರೆ ವೃತ್ರಾದಿ ರಾಕ್ಷಸರು ಆಗಾಗ ಮೇಘರೂಪದಿಂದಿದ್ದು ಭೂಮಿಗೆ ಜಲರೂಪದಿಂದ ಬೀಳುತ್ತಿದ್ದರು. ಅಂತಹವರನ್ನು ಕೊಲ್ಲುವವನು. ಅಥವಾ ಸ್ವಯಂ ವೃಷ್ಟಿಯನ್ನು ಭೂಮಿಗೆ ಕರೆಸುವವನು (ಇಂದ್ರ).

ಬರ್ಹಣಾ—ಶತ್ರುಗಳನ್ನು ದಿಕ್ಕಾಪಾಲಾಗಿ ಚದುರಿಸುವವನು,

ವೃಷಭಃ—ಇಷ್ಟಾರ್ಥಗಳನ್ನು ವೃಷ್ಟಿಯಂತೆ ಕರುಣಿಸುವವನು.

ರಥಃ—**ರಂಹಣಶೀಲಃ** ವೇಗವಾಗಿ ಚಲಿಸುವ ಸ್ವಭಾವವುಳ್ಳವನು. ಶತ್ರುಗಳನ್ನು ಆಕ್ರಮಿಸವವನು. (ಇಂದ್ರ).

॥ ವ್ಯಾಕರಣಪ್ರಕ್ರಿಯಾ ॥

ದಿವೇ—ದಿವ್ ಶಬ್ದದ ಚತುರ್ಥೀಏಕವಚನಾಂತರೂಪ. **ಊಡಿದಂ ಪದಾದಿ**— (ಪಾ. ಸೂ. ೬-೧-೧೭೧) ಎಂಬುದರಿಂದ ವಿಭಕ್ತಿಗೆ ಉದಾತ್ತಸ್ವರ ಬರುತ್ತದೆ-

ಶೂಷ್ಯಂ—ಶೂಷೇ ಸಾಧು ಶೂಷ್ಯಂ **ತತ್ರ ಸಾಧುಃ** (ಪಾ. ಸೂ. ೪-೪-೯೮) ಎಂಬುದರಿಂದ ಯತ್ ಪ್ರತ್ಯಯ. ಯಾದಿಯಾದುದರಿಂದ ಭಸಂಜ್ಞೆ ಬರುತ್ತದೆ. **ಯಸ್ಯೇತಿಚ** ಸೂತ್ರದಿಂದ ಅಕಾರಲೋಪ. ಶೂಷ್ಯ ಎಂದು ರೂಪವಾಗುತ್ತದೆ. ಯತ್ **ತಿತ್ತಾದುದರಿಂದ ಯತೋಽನಾವಃ** ಎಂಬುದರಿಂದ ಆದ್ಯುದಾತ್ತಸ್ವರವು ಪ್ರಾಪ್ತವಾದರೆ **ಸರ್ವೇ ವಿಧಯಶ್ಛಂದಸಿ ವಿಕಲ್ಪ್ಯಂತೇ** ಎಂಬ ವಚನದಿಂದ ಇಲ್ಲಿ ಆದ್ಯುದಾತ್ತಸ್ವರ ಬರುವುದಿಲ್ಲ. **ತಿತ್ಸ್ವರಿತಂ** (ಪಾ. ಸೂ. ೬-೧-೧೮೪) ಎಂಬುದರಿಂದ ಸ್ವರಿತಸ್ವರವು ಬರುತ್ತದೆ.

ಧೃಷತಃ—ಇಂ ಧೃಷಾ ಪ್ರಾಗಲ್ಭ್ಯೇ ಧಾತು. ಲಡರ್ಥದಲ್ಲಿ ಶತೃ ಪ್ರತ್ಯಯ. **ವ್ಯತ್ಯಯೋಬಹುಲಂ** ಎಂಬುದರಿಂದ ಶಪಿಗೆ ಬದಲಾಗಿ ಶವಿಕರಣ. ಆದುದರಿಂದ ಲಘೂಪಧಗುಣ ಬರುವುದಿಲ್ಲ. **ಸಾರ್ವಧಾತುಕಮಪಿತ್** ಎಂಬುದರಿಂದ ಅನು ಙಿತ್ವತ್ವಾಗುತ್ತದೆ. **ಅತೋಗುಣೇ** ಎಂಬುದರಿಂದ ಪರರೂಪ. ಧೃಷತ್ ಶಬ್ದವಾಗುತ್ತದೆ. ಷಷ್ಠೀ ಏಕವಚನರೂಪ. **ಶತುರನುಮೋನದ್ಯಜಾದೀ** (ಪಾ. ಸೂ. ೬-೧-೧೭೩) ಎಂಬುದರಿಂದ ವಿಭಕ್ತಿಗೆ ಉದಾತ್ತಸ್ವರ ಬರುತ್ವದೆ.

ಬೃಹಚ್ಛ್ರವಾಃ—ಬೃಹತ್ ಶ್ರವಃ ಯಸ್ಯ ಬೃಹಚ್ಛ್ರವಾಃ ಬಹುವ್ರೀಹಿ ಸಮಾಸವಾದುದರಿಂದ **ಬಹುವ್ರೀಹೌ ಪ್ರಕೃತ್ಯಾಪೂರ್ವಪದಂ** ಎಂಬುದರಿಂದ ಪೂರ್ವಪದ ಪ್ರಕೃತಿಸ್ವರ ಬರುತ್ತದೆ.

ಅಸುರಃ—ಅಸುಕ್ಷೇಪಣೇ ಧಾತು. ದಿವಾದಿ. **ಅಸೇರುರನ್** (ಉ. ಸೂ. ೧-೪೨) ಎಂಬುದರಿಂದ ಉರನ್ ಪ್ರತ್ಯಯ. ಅಸುರ ಎಂದಾಗುತ್ತದೆ. ನಿತ್ ಪ್ರತ್ಯಯಾಂತವಾದುದರಿಂದ **ಞ್ನಿತ್ಯಾದಿರ್ನಿತ್ಯಂ** ಎಂಬುದರಿಂದ ಆದ್ಯುದಾತ್ತಸ್ವರ ಬರುತ್ತದೆ.

ಬರ್ಹಿಷಾ—ಸುಪಾಂಸುಲಕ್— ಸೂತ್ರದಿಂದ ತೃತೀಯಾ ದ್ವಿವಚನಕ್ಕೆ ಆಕಾರ ಬರುತ್ತದೆ.

ಪುರಃ—ಪೂರ್ವಾಧರಾವರಾಣಾಂ—(ಪಾ. ಸೂ. ೫-೩-೩೯) ಎಂಬುದರಿಂದ ಅಸ್ತಾತ್ಯರ್ಥದಲ್ಲಿ ಅಸಿ ಪ್ರತ್ಯಯ. ತತ್ಸಂನಿಯೋಗದಿಂದ ಪೂರ್ವಶಬ್ದಕ್ಕೆ ಪುರ್ ಎಂಬ ಆದೇಶ ಬರುತ್ತದೆ. ಪುರಸ್ ಎಂತಾಗುತ್ತದೆ. ಹುತ್ವವಿಸರ್ಗಗಳು ಬಂದರೆ ಪುರ್ ಎಂದು ರೂಪವಾಗುತ್ತದೆ. ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ.

॥ ಸಂಹಿತಾಪಾಠಃ ॥

त्वं दिवो बृहतः सानु कोपयोऽव त्मना धृषता शंबरं भिनत् ।
यन्मायिनो वृन्दिनो मन्दिना धृषच्छितां गभस्तिमशनिं पृतन्यसि ॥ ५ ॥

॥ ಪದಪಾಠಃ ॥

ತ್ವಂ । ದಿವಃ । ಬೃಹತಃ । ಸಾನು । ಕೋಪಯಃ । ಅವ । ತ್ಮನಾ । ಧೃಷತಾ ।
ಶಂಬರಂ । ಭಿನತ್ ।
ಯತ್ । ಮಾಯಿನಃ । ವ್ರಂದಿನಃ । ಮಂದಿನಾ । ಧೃಷತ್ । ಶಿತಾಂ । ಗಭಸ್ತಿಂ ।
ಅಶನಿಂ । ಪೃತನ್ಯಸಿ ॥ ೪ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ತ್ವಂ ಬೃಹತೋ ಮರುತೋ ದಿವೋ ದ್ಯುಲೋಕಸ್ಯ ಸಾನು ಸಮುಚ್ಛ್ರಿತಮುಪರಿಪ್ರದೇಶಂ ಕೋಪಯಃ । ಅಕಂಪಯಃ । ಧೃಷತಾ ಶತ್ರೂಣಾಂ ಧರ್ಷಯಿತ್ರಾ ತ್ಮನಾತ್ಮನಾ ಸ್ವಯಮೇವ ಶಂಬರಮೇತತ್ಸಂಜ್ಞಮಸುರಮವಾಭಿನತ್ । ಅವಧೀಃ । ಯದ್ಯದಾ ವ್ರಂದಿನಃ ಶತ್ರೂನ್ಜೇತುಂ ಮೃದುಭಾವಂ ಸ್ರಾಸ್ತ್ರಾ । ಯದ್ವಾ । ವೃಂದಂ ಸಮೂಹಃ । ಅಸುರಸಮೂಹವತಃ । ಮಾಯಿನೋ ಮಾಯಾವಿನೋಽಸುರಾನ್ಮಂದಿನಾ ಹೃಷ್ಟೇನ ಧೃಷತ್ ಧೃಷತಾ ಪ್ರಾಗಲ್ಭ್ಯಂ ಪ್ರಾಪ್ನುವತಾ ಮನಸಾ ಯುಕ್ತಸ್ತ್ವಂ ಶಿತಾಂ ತೀಕ್ಷ್ಣೀಕೃತಾಂ ಗಭಸ್ತಿಂ ಹಸ್ತೇನ ಗೃಹೀತಾಂ । ಯದ್ವಾ । ಗಭಸ್ತಿರಿತಿ ರಶ್ಮಿನಾಮ । ತದ್ವತೀಮಶನಿಂ ವಜ್ರಂ ಪೃತನ್ಯಸಿ ।ತಾನಸುರಾ ಜೇತುಂ ಪೃತನಾರೂಪೇಣೇಚ್ಛಸಿ। ತಾನ್ಪ್ರತಿ ಪ್ರೇರಯಸೀತ್ಯರ್ಥಃ। ತದಾನೀಂ ಬೃಹತೋ ದಿವಃ ಸಾನು ಕೋಪಯ ಇತಿ ಪೂರ್ವೇಣಾನ್ವಯಃ ॥ ಕೋಪಯಃ । ಕುಪ ಕೋಪೇ । ಣ್ಯಂತಾಲ್ಲಙಿ ಬಹುಲಂ ಛಂದಸ್ಯಮಾಙ್ಯೋಗೇ ಽಪೀತ್ಯಡಭಾವಃ । ತ್ಮನಾ । ಮಂತ್ರೇಷ್ವಾಙ್ಯಾದೇರಾತ್ಮನ ಇತ್ಯಾಕಾರಲೋಪಃ । ಧೃಷತ್ । ಸುಸಾಂ ಸುಲುಗಿತಿ ತೃತೀಯೈಯಾ ಲುಕ್ । ಶಿತಾಂ । ಶೋ ತನೂಕರಣೇ । ನಿಷ್ಠಾಯಾಂ ಶಾಚ್ಛೋರನ್ಯತರಸ್ಯಾಂ । ಪಾ. ೭-೪-೪೧ । ಇತೀಕಾರಾದೇಶಃ । ಪೃತನ್ಯಸಿ । ಪೃತನಾಶಬ್ದಾತ್ಸುಪ ಆತ್ಮನಃ ಕ್ಯಚ್ । ಕವ್ಯಧ್ವರಪೃತನಸ್ಯೇಂತ್ಯಲೋಪಃ । ಪ್ರತ್ಯಯ ಸ್ವರಃ ॥

॥ ಪ್ರತಿಪದಾರ್ಥ ॥

(ಎಲೈ ಇಂದ್ರನೇ) **ಧೃಷತಾ**— (ಶತ್ರುವಿಗೆ) ಆಘಾತವನ್ನುಂಟುಮಾಡತಕ್ಕ । **ತ್ಮನಾ**— ಸ್ವಶಕ್ತಿಯಿಂದಲೇ (ನೀನೇ) । **ಶಂಬರಂ**— ಶಂಬರನೆಂಬ ರಾಕ್ಷಸನನ್ನು । **ಅವಾಭಿನತ್**— ಧ್ವಂಸಮಾಡಿದ್ದೀಯೆ । **ಯತ್**— ಯಾವಾಗ । **ವ್ರಂದಿನಃ**— (ತಮ್ಮ) ಶತ್ರುಗಳನ್ನು ಜಯಿಸಲು ಮೃದುಭಾವವನ್ನು ಹೊಂದಿದ ಅಥವಾ ಸಮೂಹದಿಂದ ಒಟ್ಟಿಗೆ ಸೇರಿದ । **ಮಾಯಿನಃ**— ಮೋಸಗಾರರಾದ ರಾಕ್ಷಸರನ್ನು । **ಮಂದಿನಾ**—ಹರ್ಷಿತವಾದದ್ದೂ । **ಧೃಷತ್ (ಧೃಷತಾ)**—(ಶತ್ರುನಾಶಕ್ಕೆ) ದೃಢನಿಶ್ಚಯವಾಡಿದ್ದೂ ಆದ ಮನಸ್ಸಿನಿಂದ ಕೂಡಿದ (ನೀನು) । **ಶಿತಾಂ**— ತೀಕ್ಷ್ಣವಾದದ್ದೂ । **ಗಭಸ್ತಿಂ**— ಕಿರಣಗಳಿಂದ ವ್ಯಾಪ್ತವಾದದ್ದೂ ಅಥವಾ ಕೈಯಿನಿಂದ ಹಿಡಿದಿದ್ದೂ ಆದ । **ಅಶನಿಂ**— ವಜ್ರಾಯುಧವನ್ನು । **ಪೃತನ್ಯಸಿ**— (ಆ ಅಸುರರ ಮೇಲೆ) ತೀವ್ರವಾಗಿ ಎಸೆದಿಯೋ, (ಆಗ) । **ತ್ವಂ**— ನೀನು । **ಬೃಹತಃ**— ಅತಿ ಮಹತ್ತಾದ । **ದಿವಃ**— ದ್ಯುಲೋಕದ । **ಸಾನು**— ಶಿಖರ ಪ್ರದೇಶವನ್ನು । **ಕೋಪಯಃ**— ನಡುಗಿಸಿದೆ.

॥ ಭಾವಾರ್ಥ ॥

ಎಲೈ ಇಂದ್ರನೇ, ನೀನು ಶತ್ರುನಾಶಕವಾದ ನಿನ್ನ ಸ್ವಶಕ್ತಿಯಿಂದಲೇ ಶಂಬರನೆಂಬ ರಾಕ್ಷಸನನ್ನು ಧ್ವಂಸ ಮಾಡಿದ್ದೀಯೆ. ಯಾವಾಗ ನಿನ್ನ ಶತ್ರುಗಳು ನಿನ್ನನ್ನು ಜಯಿಸಲು ಒಟ್ಟಿಗೆ ಸೇರಿದರೋ ಆಗ ಆ ಮಾಯಾವಿಗಳನ್ನು ನಿನ್ನ ಹೃಷ್ಟವಾದ ಮತ್ತು ದೃಢನಿಶ್ಚಯವುಳ್ಳ ಮನಸ್ಸಿನಿಂದ ತೀಕ್ಷ್ಣವಾದದ್ದೂ ಮತ್ತು ಕಿರಣಗಳಿಂದ ವ್ಯಾಪ್ತವಾದದ್ದೂ ಆದ ವಜ್ರಾಯುಧವನ್ನು ಆ ಅಸುರರ ಮೇಲೆ ತೀವ್ರವಾಗಿ ಎಸೆದೆ. ಆ ರಭಸದಿಂದ ನೀನು ಅತಿ ಮಹತ್ತಾದ ದ್ಯುಲೋಕದ ಶಿಖರಪ್ರದೇಶವನ್ನು ನಡುಗಿಸಿದೆ.

English Translation.

You have shaken the summit of the spacious heavens; you have yourself killed Sambara by your foe-destroying might; you have hurled with exulting and determined mind the sharp and bright-eyed thunderbolt against the assembled Asuras.

ವಿಶೇಷ ವಿಷಯಗಳು

ಇದಮುಕ್ತಂ ಭವತಿ । ಅನೇಕಮಾಯಾವ್ಯನುಚರಯುಕ್ತಃ ಶಂಬರ ಇಂದ್ರೇಣ ಸಹ ಯುದ್ಧಾಯಾಜಗಾಮ । ತದಾ ಹಸ್ತಗ್ರಹಣೋಚಿತಂ ತೀಕ್ಷ್ಣಂ ವಜ್ರಂ ಗೃಹೀತ್ವಾ ಸೋಮಪಾನೇನ ಜಾತಹರ್ಷ ಇಂದ್ರೋ ಧೈರ್ಯಯುಕ್ತಮನಾಃ ಸನ್ ಶಂಬರೇಣ ಸಹ ಯುದ್ಧಂ ಕೃತ್ವಾ ತಂ ಜಘಾನ । ತಸ್ಮಿನ್ಸಮಯೇ ಮಹಾನ್ ದ್ಯುಲೋಕೋಽಪಿ ಇಂದ್ರಭಿಯೇಸಾ ಚಕಂಪೇ ಇತಿ । ಮಾಯಾವಿಗಳೂ ದುಷ್ಟೋಪಾಯಚತುರರೂ ಆದ ಅನೇಕ ಅನುಚರರಿಂದ ಕೂಡಿ ಶಂಬರಾಸುರನು ಇಂದ್ರನೊಡನೆ ಯುದ್ಧಮಾಡಬೇಕೆಂದು ಬಂದನು ಆಗ ಇಂದ್ರನು ಸೋಮಪಾನಮಾಡಿ ಅದರಿಂದುಂಟಾದ ಹರ್ಷದಿಂದ ಧೈರ್ಯೋತ್ಸಾಹಗಳಿಂದ ಯುಕ್ತನಾಗಿ ಹಿಂತವಾದ ತನ್ನ ವಜ್ರಾಯುಧವನ್ನು ಕೈಯಲ್ಲಿ ಹಿಡಿದು ಶಂಬರನೊಡನೆ ಯುದ್ಧಮಾಡಿ ಅವನನ್ನು ಕೊಂದನು. ಆ ಕಾಲದಲ್ಲಿ ಇಂದ್ರನ ಆರ್ಭಟದಿಂದ ಬಹು ದೊಡ್ಡದಾದ ಸ್ವರ್ಗಲೋಕವೂ ಸಹ ಭಯದಿಂದ ತತ್ತರಿಸಿತು.

ದಿವಃ ಸಾನು—ಸ್ವರ್ಗಲೋಕದ ಮೇಲುಭಾಗ. ಲೌಕಿಕವಾಗಿ ಸಾನುಶಬ್ದಕ್ಕೆ ಬೆಟ್ಟದ ತಪ್ಪಲು ಪ್ರದೇಶವೆಂದಿದ್ದರೂ ಇಲ್ಲಿ ಊರ್ಧ್ವಭಾಗವೆಂದು ಹೇಳಿದ್ದಾರೆ.

ತ್ಮನಾ—ಆತ್ಮನ್ ಶಬ್ದವು ಛಾಂದಸವಾಗಿ ಅಕಾರದಿಂದ ಬೇರೆಯಾಗಿ ಆತ್ಮನ್ ಶಬ್ದಾರ್ಥವನ್ನೇ ಕೊಡುವುದಾಗಿದೆ.

ಶಂಬರಂ—ಶಂಬರಾಸುರನೆಂಬವನು ಪ್ರಸಿದ್ಧನಾದ ರಾಕ್ಷಸ. ಇವನನ್ನು ಮನ್ಮಥನು ಕೊಂದನೆಂದು ಪುರಾಣದಲ್ಲಿ ಅನೇಕರೀತಿಯ ಕಥೆಗಳಿವೆ.

ವ್ರಂದಿನಃ—ಇದು ಮಾಯಿನಃ ಎಂಬ ಪದಕ್ಕೆ ವಿಶೇಷಣ. ಶತ್ರುಗಳನ್ನು ಗೆಲ್ಲುವುದಕ್ಕೋಸ್ಕರ ಕಪಟದಿಂದ ವ್ಯಾಮೋಹವನ್ನು ಹೊಂದಿರುವವರು, ಅಥವಾ ಸರ್ವದಾ ಅಸುರಸಮೂಹವುಳ್ಳವರು.

ಮಂದಿನಾ—ಹೃಷ್ಟವಾದ ಮನಸ್ಸುಳ್ಳವನು. ಇದು ಇಂದ್ರನಿಗೆ ವಿಶೇಷಣವಾಗಿದೆ.

ಧೃಷತಾ—ಶತ್ರುಧ್ವಂಸಮಾಡುವಂತಹ ನಿಷ್ಠುರಸ್ವಭಾವದಿಂದ ಕೂಡಿದವನು. (ಇಲ್ಲಿ ಇಂದ್ರನನ್ನು ಹೊಗಳುವ ಪ್ರಕರಣವಿದೆ)

ಗಭಸ್ತಿಂ—**ಹಸ್ತೇನ ಗೃಹೀತಾ । ಯದ್ವಾ । ಗಭಸ್ತಿಃ ಇತಿ ರಶ್ಮಿನಾಮ ತದ್ವತೀಂ ।** ಇಂದ್ರನ ಕೈಯಿಂದ ಹಿಡಿಯಲ್ಪಡತಕ್ಕುದು, ಮತ್ತು ಪ್ರಕಾಶವಾನವಾದ ಕಿರಣಗಳುಳ್ಳದ್ದು ವಜ್ರಾಯುಧ.

ಪೃತನ್ಯಸಿ—ಸಂಗ್ರಾಮ ಅಥವಾ ಸೈನ್ಯ ಈ ಎರಡರ್ಥವೂ ಪೃತನಾಶಬ್ದಕ್ಕುಂಟು. ಇಲ್ಲಿ ವಜ್ರಾಯುಧವನ್ನು ಸೈನ್ಯವನ್ನಾಗಿ ಮಾಡಿಕೊಳ್ಳುವೆ ಎಂದರ್ಥ.

॥ ವ್ಯಾಕರಣಪ್ರಕ್ರಿಯಾ ॥

ಕೋಪಯೇಃ—ಕುಪ ಕೋಪೇ ಧಾತು. ಚುರಾದಿ. ಣ್ಯಂತದನಮೇಲೆ ಲಙ್. ಮಧ್ಯಮಪುರುಷ ಏಕವಚನದಲ್ಲಿ ಸಿಪ್. **ಇತಶ್ಚ** ಎಂಬುದರಿಂದ ಅದರ ಇಕಾರಕ್ಕೆ ಲೋಪ. ಣಿಚ್‌ನಿಮಿತ್ತವಾಗಿ ಧಾತುವಿನ ಲಘೂಪಧೆಗೆ ಗುಣ ಬರುತ್ತದೆ. ಶಪ್ ನಿಮಿತ್ತಕವಾಗಿ ಣಿಚಿಗೆ ಗುಣಾಯಾದೇಶಗಳು ಬರುತ್ತವೆ. ಪ್ರತ್ಯಯಕ್ಕೆ ರುತ್ವವಿಸರ್ಗ ಬಂದರೆ ಕೋಪಯಃ ಎಂದು ರೂಪವಾಗುತ್ತದೆ. **ಬಹುಲಂ ಛಂದಸ್ಯಮಾಙ್‌ಯೋಗೇಽಪಿ** ಎಂಬುದರಿಂದ ಅಡಾಗಮ ಬರುವುದಿಲ್ಲ- ತಿಙಂತನಿಘಾತಸ್ವರ ಬರುತ್ತದೆ.

ತ್ಮನಾ—ಆತ್ಮನ್ ಶಬ್ದದ ತೃತೀಯಾ ಏಕವಚನಾಂತರೂಪ. ಆತ್ಮನಾ ಎಂದಿರುವಾಗ ಮಂತ್ರೇಷ್ವಾಙ್ಯಾದೇರಾತ್ಮನಃ (ಪಾ. ಸೂ. ೬-೪-೧೪೧) ಎಂಬುದರಿಂದ ಆಕಾರಕ್ಕೆ ಲೋಪಬರುತ್ತದೆ.

ಮಾಯಿನಃ — ಮಾಯಾ ಶಬ್ದವು ವ್ರೀಹ್ಯಾದಿಯಲ್ಲಿ ಪಠಿತವಾದುದರಿಂದ **ವ್ರೀಹ್ಯಾದಿಭ್ಯಶ್ಚ**— ಎಂಬುದರಿಂದ ಇನಿ ಪ್ರತ್ಯಯ ಬರುತ್ತದೆ. **ಯಸ್ಯೇತಿಚ** ಎಂಬುದರಿಂದ ಆಕಾರಕ್ಕೆ ಲೋಪ. ತೃತೀಯಾ ಬಹುವಚನಾಂತರೂಪ. ಪ್ರತ್ಯಯಸ್ವರದಿಂದ ಇಕಾರವು ಉದಾತ್ತವಾಗುತ್ತದೆ.

ವೃಂದಿನಃ—ವೃಂದ ಮಸ್ಯಾಸ್ತೀತಿ ವೃಂದೀ. ಮತ್ವರ್ಥದಲ್ಲಿ **ಅತ ಇನಿಠನೌ** ಎಂಬುದರಿಂದ ಇನಿ ಪ್ರತ್ಯಯ. **ಯಸ್ಯೇತಿಚ** ಎಂಬುದರಿಂದ ಆಕಾರಲೋಪ. ತೃತೀಯಾ ಬಹುವಚನಾಂತರೂಪ. ಪ್ರತ್ಯಯದ ಆದ್ಯುದಾತ್ತ ಸ್ವರದಿಂದ ಮಧ್ಯೋದಾತ್ತವಾಗುತ್ತದೆ.

ಧೃಷತ್—ಞಿಧೃಷಾ ಪ್ರಾಗಲ್ಭ್ಯೇ ಧಾತು. ಲಡರ್ಥದಲ್ಲಿ ಶತೃ ಪ್ರತ್ಯಯ. ವ್ಯತ್ಯಯದಿಂದ ಶಪಿಗೆ ಶ ವಿಕರಣ. **ಅತೋಗುಣೇ** ಎಂಬುದರಿಂದ ಪರರೂಪ. ಧೃಷತ್ ಎಂದು ರೂಪವಾಗುತ್ತದೆ. ತೃತೀಯಾ ಏಕವಚನದಲ್ಲಿ **ಸುಪಾಂ ಸುಲುಕ್**—ಎಂಬುದರಿಂದ ವಿಭಕ್ತಿಗೆ ಲುಕ್. ವಿಕರಣಸ್ವರ ಸತಿಶಿಷ್ಟವಾಗುತ್ತದೆ.

ಶಿತಾಮ್—ಶೋ ತನೂಕರಣೇ ಧಾತು. ಕರ್ಮಣಿಯಲ್ಲಿ **ನಿಷ್ಠಾ** ಎಂಬುದರಿಂದ ಕ್ತಪ್ರತ್ಯಯ. ಶೋ+ತ ಎಂದಿರುವಾಗ ಅತ್ವಕ್ಕೆ ಅಪವಾದವಾಗಿ **ಶಾಚ್ಛೋರನ್ಯತರಸ್ಯಾಮ್** (ಪಾ. ಸೂ. ೬-೪-೪೧) ಎಂಬುದರಿಂದ ವಿಕಲ್ಪವಾಗಿ ಇಕಾರಾದೇಶ ಬರುತ್ತದೆ. ಸ್ತ್ರೀತ್ವದಲ್ಲಿ **ಅಜಾದ್ಯತೇಷ್ಟಾಪ್** ಎಂಬುದರಿದ ಟಾಪ್. ಪ್ರತ್ಯಯಸ್ವರದಿಂದ ಅಂತೋದಾತ್ತ. ಶಿತಾ ಎಂದು ರೂಪವಾಗುತ್ತದೆ. ದ್ವಿತೀಯಾ ಏಕವಚನಾಂತರೂಪ.

ಪೃತನ್ಯಸಿ—ಪೃತನಾಂ ಆತ್ಮನಃ ಇಚ್ಛತಿ ಪೃತನ್ಯತಿ. **ಸುಪ ಆತ್ಮನಃ ಕ್ಯಚ್** (ಪಾ. ಸೂ. ೩-೧-೮) ಎಂಬುದರಿಂದ ಇಚ್ಛಾರ್ಥದಲ್ಲಿ ಕ್ಯಚ್. ಪೃತನಾ+ಯ ಎಂದಿರುವಾಗ **ಕೆವ್ಯಧ್ವರಪೃತನೇ**—(ಪಾ. ಸೂ. ೬-೪-೬೯) ಎಂಬುದರಿಂದ ಅಂತಲೋಪ ಬರುತ್ತದೆ. **ಸನಾದ್ಯಂತಾ ಧಾತವಃ** ಎಂಬುದರಿಂದ ಪೃತನ್ಯ ಎಂಬ ಕ್ಯಜಂತಕ್ಕೆ

धातुसंज्ञे बरुत्तदे. इदरमेलॆ लट् मध्यमपुरुष सिप् कॆर्तरिशप् ऎंबुदरिंद शप्. अतॊ गुणे ऎंबुदरिंद पररूप. पृतन्यसि ऎंदु रूपवागुत्तदे. यत् ऎंदु आदियल्लि यत्संबंधविरुवुदरिंद यॆद्व्यृत्तान्निपात्यं ऎंबुदरिंद निघातप्रतिषेध बरुत्तदे. प्रत्ययस्वरदिंद यकारोत्तर अकारवु उदात्तवागुत्तदे.

॥ संहितापाठः ॥

नियद्वृणक्षि श्वसनस्य मूर्धनि शुष्णस्य चिद्व्रंदिनो रोरुवद्वना ।
प्राचीनेन मनसा बर्हणावता यदद्या चित्कृणवः कस्त्वा परि ॥ ४ ॥

पदपाठः

नि । यत् । वृणक्षि । श्वसनस्य । मूर्धनि । शुष्णस्य । चित् । व्रंदिनः ।
रोरुवत् । वना ।
प्राचीनेन । मनसा । बर्हणावता । यत् । अद्य । चित् । कृणवः ।
कः । त्वा । परि ॥ ४ ॥

॥ सायणभाष्यं ॥

हे इंद्र त्वं रोरुवत् मेघैरत्यर्थं शब्दयँ श्वसनस्य ।आंतरिक्षे श्वसितीति श्वसनो वायुः । तस्य व्रंदिनः स्वकिरणैरामृदुलादीन्कृदुभावं प्रापयंतः शुष्णस्य चित् रसानां शोषयितुरादित्यस्यापि मूर्धन्युपरिप्रदेशे वना वनान्युदकानि यॆद्यस्मान्निवृणक्षि अवर्जयसि । प्रापयसीत्यर्थः । वायुना सूर्यकिरणैश्च वृष्ट्वा आपः सूर्यस्योपरि पुनरवस्थाप्यंते । तदेवावस्थापनमिंद्रः करोतीत्युपचॆर्यतॆ । प्राचीनेन प्रकर्षॆण गंत्रा । अपराङ्मुखेनेत्यर्थः। बर्हणावता । निबर्हयतीति वधकर्मसु पाठाद्बर्हणा शस्त्राणां हिंसा । तद्वता । ईदृशेन मनसा युक्तस्त्वं यॆद्यस्मादद्याचिदद्यापि कृणवः । घर्मकालॆ सूर्यस्योपरि भौमार्द्र रसानवस्थापयसि वर्षासु च वर्षयसीति । यस्मादेवमतस्त्वां कोऽपीत्यर्थः । अतस्त्वमेव सर्वाधिक इति भावः ॥ वृणक्षि । वृजी वर्जनॆ । रौधादिकः । सिपः पित्त्वादनुदात्तत्वॆ विकरणस्वरः । यॆद्व्यृत्तयोः-

ಗಾದನಿಘಾತಃ । ಸ್ರಾಚೀನೇನ । ಪ್ರಪೂರ್ವಾದಂಚತೇರ್ಭುತ್ವಿಗಿತ್ಯಾದಿನಾ ಕ್ವಿ । ಅನಿದಿತಾಮಿತಿ ನಲೋಪಃ । ವಿಭಾಷಾಂಚೇರದಿಕ್ಸ್ತ್ರಿಯಾಮಿತಿ ಸ್ವಾರ್ಥೇ ಖಃ । ಖಸ್ಯೇನಾದೇಶಃ । ಅಚ ಇತ್ಯಕಾರ-ಲೋಪೇ ಚಾವಿತಿ ದೀರ್ಘತ್ವಂ । ಖಪ್ರತ್ಯಯಸ್ಯ ಸತಿ ಶಿಷ್ಟತ್ವಾತ್ತದಾದೇಶಸ್ಯೋಪದೇಶವದ್ಭಾವೇ ನೇಕಾರ ಉದಾತ್ತಃ। ಅದ್ಯಾ ಚಿತ್ । ನಿಪಾತಸ್ಯ ಚೇತಿ ದೀರ್ಘತ್ವಂ । ಕೃಣವಃ । ಕೃವಿ ಹಿಂಸಾಕರಣಯೋ-ಶ್ಚ । ಇದಿತ್ವಾನ್ನುಮ್ । ಲೇಟಿ ಏಷ್ಯಡಾಗಮಃ । ಧಿನ್ವಿಕೃಣ್ವ್ಯೋರಚ್ಚೇತ್ಯುಪ್ರತ್ಯಯೇ । ವಕಾರಸ್ಯಾ-ಕಾರಾದೇಶಶ್ಚ । ತಸ್ಯಾತೋ ಲೋಪೇ ಸತಿ ಸ್ಥಾನಿವದ್ಭಾವಾಲ್ಲಘೂಪಧಗುಣಾಭಾವಃ । ಗುಣಾವಾದೇ-ಶೌ। ಆಗಮಾನುದಾತ್ತತ್ವೇ ವಿಕರಣಸ್ವರಃ । ಅತ್ರ ನಿರುಕ್ತಂ। ವೃಂದೀ ವೃಂದತೇರ್ಮೃದೂಭಾವಕರ್ಮಣಃ । ನಿವೃಣಕ್ಷಿ ಯಚ್ಛ್ವಸನಸ್ಯ ಮೂರ್ಧನಿ ಶಬ್ದಕಾರಿಣಃ ಶುಷ್ಣಸ್ಯಾದಿತ್ಯಸ್ಯ ಚ ಶೋಷಯಿತೂ ರೋರೂಯಮಾಣೋ ವನಾನೀತಿ ವಾ ಧನಾನೀತಿ ವಾ । ನಿರು ೫-೧೬ । ಇತಿ । ಧನಾನೀತಿ ಪಕ್ಷೇ ಮೇಘಸ್ಯ ಧನಾ-ನೀತಿ ವ್ಯಾಖ್ಯೇಯಂ ॥

॥ ಪ್ರತಿಪದಾರ್ಥ ॥

(ಎಲೈ ಇಂದ್ರನೇ, ನೀನು) **ರೋರುವತ್**—(ಮೇಘಗಳಿಂದ) ಗರ್ಜನಶಬ್ದಮಾಡುತ್ತ । **ಶ್ವಸ-ನಸ್ಯ**—ವಾಯುವಿನ ಮತ್ತು । **ವೃಂದಿನಃ**—(ಫಲಗಳನ್ನು) ಪಕ್ವಮಾಡಿಸುವವನೂ । **ಶುಷ್ಣಸ್ಯ ಚಿತ್**—ರಸಗ ಳನ್ನು ಹೀರುವವನೂ ಆದ ಸೂರ್ಯನ । **ಮೂರ್ಧನಿ**—ನೆತ್ತಿಯ ಮೇಲೆ । **ವನಾ**—ನೀರುಗಳನ್ನು । **ಯೆತ್**—ಯಾವಕಾರಣದಿಂದ (ಯಾವಪ್ರಭಾವದಿಂದ) । **ನಿ ವೃಣಕ್ಷಿ**—ಸುರಿಸುತ್ತೀಯೋ (ಸುರಿಸಿದ್ದೀಯೆ ಆದೂ ಅಲ್ಲದೆ) । **ಸ್ರಾಚೀನೇನ**—ಪ್ರಕರ್ಷವಾದ (ಸ್ಥಿರವಾದ) ಗಮನವುಳ್ಳದ್ದೂ । **ಬರ್ಹಣಾವತಾ**—ಶತ್ರುನಾಶದಲ್ಲಿ ತತ್ಪರವಾದದ್ದೂ ಆದ । **ಮನಸಾ**—ಮನಸ್ಸಿನಿಂದ ಕೂಡಿ (ನೀನು) । **ಯೆತ್**—ಯಾವಕಾರಣದಿಂದ । **ಅದ್ಯಾ ಚಿತ್**—ಈಗಲೂ ಕೂಡ । **ಕೃಣವಃ**—(ಮೇಲೆಹೇಳಿದ ಅಸಾಧಾರಣ ಕಾರ್ಯಗಳನ್ನು) ಮಾಡುತ್ತಿರುತ್ತೀಯೋ (ಆ ಕಾರಣದಿಂಥ) । **ತ್ವಾ ಪರಿ**—ನಿನ್ನನ್ನು ಮೀರಿ । **ಕಃ**—ಯಾವನು (ಇದ್ದಾನೆ) ॥

॥ ಭಾವಾರ್ಥ ॥

ಎಲೈ ಇಂದ್ರನೇ, ನೀನು ಗರ್ಜನಶಬ್ದಮಾಡುತ್ತ ವಾಯುವಿನ ತಲೆಯಮೇಲೂ; ಮತ್ತು ಫಲಗಳನ್ನು ಪಕ್ವಮಾಡಿಸುವವನೂ, ರಸಗಳನ್ನು ಹೀರುವವನೂ ಆದ ಸೂರ್ಯನ ನೆತ್ತಿಯಮೇಲೂ ನೀರುಗಳನ್ನು ಸುರಿಸುವುದ ರಿಂದಲೂ, ಮತ್ತು ಈಗಲೂ ಕೂಡ ನಿನ್ನ ಪ್ರಕರ್ಷಗಮನವುಳ್ಳದ್ದೂ, ಶತ್ರುನಾಶದಲ್ಲಿ ತತ್ಪರವಾದದ್ದೂ ಆದ ಮನ-ಸ್ಸಿನಿಂದ ಕೂಡಿ ಮೇಲಿನ ಅಸಾಧಾರಣ ಕೆಲಸವನ್ನು ಮಾಡುತ್ತಿರುವುದರಿಂದ ನಿನ್ನನ್ನು ಮೀರಿದ ಪ್ರಭಾವವುಳ್ಳ ವರು ಯಾರು?

English Translation.

Loud-shouting (Indra) you have poured the rain upon the wind and on the head of the maturing and absorbing (sun). Who is above you in the work that you, endowed with a mind, unaltered and bent upon destroying enemies have done to-day?

॥ ವಿಶೇಷ ವಿಷಯಗಳು ॥

ಇದಮುಕ್ತಂ ಭವತಿ । ಇಂದ್ರಃ ಪುರಾ ಅಸ್ಶೋಷಣರೂಪಸ್ಯಾಸುರಸ್ಯ ಶುಷ್ಣನಾಮಕಸ್ಯ ಮೂರ್ಧಾನಂ ತೆದುಪರಿ ಮೇಘೋದಕಾನಾಂ ವೃಷ್ಟಿಂ ಕೃತ್ವಾ ಬಿಭೇದೇತಿ ಋಷಿವಚನೇಷು ಪ್ರಸಿದ್ಧಿಃ । ತಥೈವ ತನ್ಮೂರ್ಧಚ್ಛೇದನಂ । ಅಧುನಾಪಿ ಯದಿ ಕಾಮಯೇತ ತತ್ಕರ್ತುಂ ಶಕ್ನೋತಿ । ಏವಂ ಸತಿ ಕೋಽಸ್ತಿ ನಾಮ ಇಂದ್ರಾದಪಿ ಗರೀಯಾನ್ ? ನ ಕೋಽಪೀತ್ಯರ್ಥಃ ॥ ಪೂರ್ವದಲ್ಲಿ ಇಂದ್ರನು ಶುಷ್ಣನೆಂಬ ಹೆಸರಿನ ಅಸುರನನ್ನು ಸಂಹಾರಮಾಡಿದಾಗ ನೀರನ್ನು ಹೀರಿ ಎಲ್ಲವನ್ನು ವಣಗಿಸುವ ಸ್ವಭಾವವುಳ್ಳ ಈ ಶುಷ್ಣಾಸುರನ ತಲೆಯಮೇಲೆ ಮೇಘದಿಂದ ಜಲವನ್ನು ಸುರಿಯುವಂತೆ ಮಾಡಿ ಅವನನ್ನು ಸಂಹಾರಮಾಡಿದನೆಂದು ಋಷಿವಚನವಿರುವುದು. ಈಗಲೂ ಇಂದ್ರನು ಇಷ್ಟಪಟ್ಟರೆ ಅಂತಹ ಕಾರ್ಯವನ್ನು ಮಾಡಲು ಸಮರ್ಥನಾಗಿರುವನು. ಹೀಗಿರುವಾಗ ಇಂದ್ರನಿಗಿಂತಲೂ ಹೆಚ್ಚಾದ ಶಕ್ತಿಸಾಮರ್ಥ್ಯಗಳುಳ್ಳವನು ಯಾವನು ತಾನೇ ಇರುವನು? ಯಾರೂ ಇಲ್ಲವೆಂದಭಿಪ್ರಾಯವು.

ರೋರುವತ್—ಮೇಘಗಳ ಸಹಾಯದಿಂದ ವಿಶೇಷವಾಗಿ ಗರ್ಜಿಸುವವನು, ಇಂದ್ರನು.

ಶ್ವಸನಸ್ಯ—ಅಂತರಿಕ್ಷೇ ಶ್ವಸಿತೀತಿ ಶ್ವಸನಃ ವಾಯುಃ ಅಂತರಿಕ್ಷದಲ್ಲಿ ಉಸಿರುಬಿಡುವವನು ಎಂದರೆ ಸಂಚರಿಸುವವನು ಎಂಬರ್ಥದಲ್ಲಿ ಈ ಶಬ್ದವು ವಾಯುಶಬ್ದವಾಚ್ಯವಾಗಿದೆ.

ವ್ರಂದಿನಃ, ಶುಷ್ಣಸ್ಯ—ಈ ಎರಡು ಪದಗಳೂ ಸೂರ್ಯಾರ್ಥಕಗಳಾಗಿವೆ. ತನ್ನ ಕಿರಣಗಳ ಸಹಾಯದಿಂದ ಮಾವಿನಹಣ್ಣೇ ಮೊದಲಾದ ಕಠಿನ ವಸ್ತುಗಳನ್ನು ಮೃದುವಾಗಿ ಮಾಡುವವನು. ಹಾಗೂ ಈ ಭೂಮಿಯಲ್ಲಿ ಕಂಡುಬರುವ ಸಮಸ್ತ ರಸಗಳನ್ನೂ ಒಣಗಿಸುವವನು. ಈ ಎರಡು ವಿಧಗಳಾದ ಸಾಮರ್ಥ್ಯವೂ ಸೂರ್ಯನಲ್ಲಿರುವುದು. ಬಿಸಿಲುಕಾಲದಲ್ಲಿ ಭೂಗತವಾದ ಸಕಲರಸವನ್ನೂ ಸೂರ್ಯನ ಮೂಲಕ ಹೀರಿ ವರ್ಷಾಕಾಲದಲ್ಲಿ ಮತ್ತೆ ಸೂರ್ಯನಿಗೆ ಕೊಡುವ ಸಾಮರ್ಥ್ಯವು ಇಂದ್ರನಿಗೆ ಇರುವುದರಿಂದಲೇ ಇಂದ್ರನು ಸರ್ವಶ್ರೇಷ್ಠನೆಂದು ಹೇಳಲ್ಪಟ್ಟಿದೆ.

ವೃಣಕ್ಷಿ—ಆವರ್ಜಯಸಿ । ಸೂರ್ಯನಿಂದಲೂ ವಾಯುವಿನಿಂದಲೂ ಭೂಮಿಗೆ ಬಿದ್ದ ವೃಷ್ಟಿಯು ಮತ್ತೆ ಆವಿಯರೂಪದಿಂದ ಸೂರ್ಯನನ್ನೂ ವಾಯುವನ್ನೂ ಸೇರುವುದಷ್ಟೆ. ಈ ಕಾರ್ಯವು ಇಂದ್ರನಿಂದಲೇ ಆಗುವುದೆಂದು ಇಂದ್ರನನ್ನು ಸ್ತುತಿಸಲಾಗಿರುವುದು.

ಬರ್ಹಣಾವತಾ—ಬರ್ಹಣಾಶಬ್ದವು ಹಿಂಸಾರ್ಥದಲ್ಲಿ ಪಠಿತವಾಗಿರುವುದರಿಂದ ಬರ್ಹಣಾವತಾ ಎಂದರೆ ಹಿಂಸೆಯನ್ನುಂಟುಮಾಡುವುದು ಎಂದರ್ಥ. ಇದು ಇಂದ್ರನ ಮನಸ್ಸಿಗೆ ಅನ್ವಯಿಸುವುದು.

ಕೃಣವಃ—ಕೃವಿ ಹಿಂಸಾಕರಣಯೋಶ್ಚ ಎಂಬ ಧಾತುವಿನಿಂದ ನಿಷ್ಪನ್ನವಾದ ಈ ಶಬ್ದವು, ಇಷ್ಟು ಅರ್ಥವನ್ನು ಕೊಡುವುದು.

ವ್ರಂದಿನಃ ಶುಷ್ಣಸ್ಯ—ಈ ಪದಗಳ ವಿವರಣೆಯು ನಿರುಕ್ತದಲ್ಲಿ ಈ ರೀತಿ ಹೇಳಲ್ಪಟ್ಟಿದೆ. **ವ್ರಂದೀ ವ್ರಂದತೇರ್ಮೃದೂಭಾವಕರ್ಮಣಃ ಶುಷ್ಣಸ್ಯಾದಿತ್ಯಸ್ಯ ಚ ಶೋಷಯಿತೂ ರೋರೂಯಮಾಣೋ ವನಾತೀತಿ ವಾ ಧನಾನೀತಿ ವಾ** (ನಿರು. ೫-೧೫).

॥ ವ್ಯಾಕರಣಪ್ರಕ್ರಿಯಾ ॥

ವೃಣಕ್ಷಿ—ವೃಜೀ ವರ್ಜನೇ ಧಾತು ರುಧಾದಿ. ಲಟ್‌ಮಧ್ಯಮಪುರುಷ ಏಕವಚನದಲ್ಲಿ ಸಿಪ್. **ರುಧಾದಿಭ್ಯಃ ಶ್ನಮ್** ಎಂಬುದರಿಂದ ಶ್ನಮ್ ವಿಕರಣ. ಮಿತ್ತ್ವಾದುದರಿಂದ ಅಂತ್ಯಾಚಿನ ಪರವಾಗಿ ಬರುತ್ತದೆ. ವೃನಜ್+ಸಿ ಎಂದಿರುವಾಗ **ಚೋಃಕುಃ** ಎಂಬುದರಿಂದ ಜಕಾರಕ್ಕೆ ಕುತ್ವದಿಂದ ಗಕಾರಾದೇಶ. **ಖರಿ ಚ** ಎಂಬುದರಿಂದ ಚರ್ತ್ವದಿಂದ ಕಕಾರ. ತಕಾರದಪರದಲ್ಲಿ ಸಕಾರ ಬಂದುದರಿಂದ **ಆದೇಶಪ್ರತ್ಯಯಯೋಃ** ಎಂಬುದರಿಂದ ಸಕಾರಕ್ಕೆ ಷತ್ವ. ಕಷಸಂಬಂಧ ಬಂದಾಗ ಕ್ಷಕಾರವಾಗುತ್ತದೆ. ಋಕಾರದ ಪರದಲ್ಲಿರುವುದರಿಂದ ನಕಾರಕ್ಕೆ **ಯವರ್ಣಾನ್ನಸ್ಯ ಣತ್ವಂ ವಾಚ್ಯಂ** ಎಂಬ ವಚನದಿಂದ ಣಕಾರಾದೇಶ. ವೃಣಕ್ಷಿ ಎಂದು ರೂಪವಾಗುತ್ತೆ ಯದ್ಯೋಗವಿರುವುದರಿಂದ ನಿಘಾತಸ್ವರ ಬರುವುದಿಲ್ಲ. ವಿಕರಣಸ್ವರದಿಂದ ಮಧ್ಯೋದಾತ್ತವಾಗುತ್ತದೆ. ಸಿಪ್ ಪಿತ್ತಾದುದರಿಂದ ಅನುದಾತ್ತವಾಗುತ್ತದೆ.

ಪ್ರಾಚೀನೇನ—ಪ್ರ ಉಪಸರ್ಗಪೂರ್ವಕವಾದ ಅಂಚು ಧಾತುವಿಗೆ **ಋತ್ವಿಕ್ ದಧೃಕ್** (ಪಾ. ಸೂ. ೩-೨-೫೯) ಎಂಬುದರಿಂದ ಕ್ವಿನ್ ಪ್ರತ್ಯಯ. **ಅನಿದಿತಾಂಹಲ ಉಪಧಾಯಾಃ ಕ್ಙಿತಿ** ಎಂಬುದರಿಂದ ಉಪಧಾಭೂತನಕಾರಕ್ಕೆ ಲೋಪ. ಪ್ರಾಚ್ ಎಂದಿರುವಾಗ **ವಿಭಾಷಾಂಚೇರದಿಕ್ ಸ್ತ್ರಿಯಾಂ** (ಪಾ. ಸೂ. ೫-೪-೮) ಎಂಬುದರಿಂದ ಸ್ವಾರ್ಥದಲ್ಲಿ ಖ ಪ್ರತ್ಯಯ ಬರುತ್ತದೆ. ಅದಕ್ಕೆ **ಆಯನೇಯೀನೀ** ಎಂಬುದರಿಂದ ಈನಾದೇಶ. **ಅಚಃ** (ಪಾ. ಸೂ. ೬-೪-೧೩೮) ಲುಪ್ತನಕಾರವುಳ್ಳ ಅಂಚು ಧಾತುವಿನ ಅಕಾರಕ್ಕೆ ಲೋಪಬರುತ್ತದೆ ಎಂಬುದರಿಂದ ಭಸಂಜ್ಞಾ ಇರುವುದರಿಂದ ಅಕಾರಕ್ಕೆ ಲೋಪ. **ಚೌ** ಎಂಬುದರಿಂದ ಲುಪ್ತಾಕಾರನಕಾರವುಳ್ಳ ಅಂಚು ಧಾತುವು ಪರದಲ್ಲಿರುವುದರಿಂದ ಪೂರ್ವಪದಕ್ಕೆ ದೀರ್ಘಬಂದರೆ ಪ್ರಾಚೀನ ಎಂದು ಶಬ್ದವಾಗುತ್ತದೆ. ಇಲ್ಲಿ ಖ ಪ್ರತ್ಯಯವು ಸತಿಶಿಷ್ಟವಾಗುವುದರಿಂದ ಅದಕ್ಕೆ ಬಂದಿರುವ ಈನಾದೇಶಕ್ಕೆ ಉಪದೇಶವದ್ಭಾವ ಇರುವುದರಿಂದ ಈಕಾರವು ಉದಾತ್ತವಾಗುತ್ತದೆ. ಪ್ರಾಚೀನೇನ ತೃತೀಯಾ ಏಕವಚನರೂಪ.

ಅದ್ಯಾಚಿತ್—ಅದ್ಯ ಎಂಬುದು ನಿಪಾತ. **ನಿಪಾತಸ್ಯ ಚ** ಎಂಬುದರಿಂದ ದೀರ್ಘ ಬರುತ್ತದೆ.

ಕೃಣವಃ—ಕೃವಿ ಹಿಂಸಾಕರಣಯೋಶ್ಚ. ಧಾತು ಇದಿತ್ತಾದುದರಿಂದ **ಇದಿತೋನುಮ್ ಧಾತೋಃ** ಎಂಬುದರಿಂದ ಧಾತುವಿಗೆ ನುಮಾಗಮ. ಲೇಟ್ ಮಧ್ಯಮಪುರುಷಏಕವಚನದಲ್ಲಿ ಸಿಪ್. **ಲೇಟೋಽಡಾಟೌ** ಎಂಬುದರಿಂದ ಅದಕ್ಕೆ ಅಡಾಗಮ. **ಥಿನ್ನಿಕೃಣ್ವ್ಯೇರಚಿ** ಎಂಬುದರಿಂದ ಉ ಪ್ರತ್ಯಯ. ಧಾತುವಿನ ವಕಾರಕ್ಕೆ ಅಕಾರಾದೇಶ. **ಅತೋಲೋಪಃ** ಎಂಬುದರಿಂದ ಅದಕ್ಕೆ ಲೋಪ. ಅಲೋಪಕ್ಕೆ **ಅಚಃಪರಸ್ಮಿನ್ ಪೂರ್ವವಿಧೌ** ಎಂಬುದರಿಂದ ಸ್ಥಾನಿವದ್ಭಾವ ಬರುವುದರಿಂದ **ಪುಗಂತಲಘೂಪಧಸ್ಯ ಚ** ಎಂಬುದರಿಂದ ಧಾತುವಿನ ಲಘೂಪಧೆಗೆ ಗುಣ ಬರುವುದಿಲ್ಲ. ಕೃನು+ಅಸ್ ಎಂದಿರುವಾಗ ಋಕಾರದ ಪರದಲ್ಲಿರುವುದರಿಂದ ನಕಾರಕ್ಕೆ ಣತ್ವ. ಅಸ್ ನಿಮಿತ್ತಕವಾಗಿ ಉ ಪ್ರತ್ಯಯಕ್ಕೆ ಗುಣ. ಅವಾದೇಶ. ಪ್ರತ್ಯಯ ಸಕಾರಕ್ಕೆ ರುತ್ವವಿಸರ್ಗ. ಕೃಣವಃ ಎಂದು ರೂಪವಾಗುತ್ತದೆ. **ಆಗಮಾ ಅನುದಾತ್ತಾಃ** ಎಂಬುದರಿಂದ ಅಡಾಗಮ ಅನುದಾತ್ತ. ವಿಕರಣಸ್ವರ ಸತಿಶಿಷ್ಟವಾಗುವುದರಿಂದ ಣಕಾರೋತ್ತರಾಕಾರವು ಉದಾತ್ತವಾಗುತ್ತದೆ. ಯದ್ಯೋಗವಿರುವುದರಿಂದ ನಿಘಾತಸ್ವರ ಬರುವುದಿಲ್ಲ.

ಇಲ್ಲಿ ನಿರುಕ್ತದಲ್ಲಿ ಇನ್ನೊಂದು ರೀತಿಯಿಂದ ಪ್ರಕ್ರಿಯೆಯನ್ನು ತೋರಿಸಿರುತ್ತಾರೆ. ಮೃದೂಭಾವ ಕ್ರಿಯೆಯಲ್ಲಿ ವೃಂದ ಧಾತುವಿದೆ. ತಾಚ್ಛೀಲ್ಯದಲ್ಲಿ ಅದಕ್ಕೆ ಣಿನಿ ಪ್ರತ್ಯಯ. ವೃಂದಿನಃ ಎಂದು ಬಹುವಚನದಲ್ಲಿ ರೂಪವಾಗುತ್ತದೆ. ನಿವೃಣಕ್ಷಿ ಯತ್ ಶ್ವಸನಸ್ಯ ಮೂರ್ಧನಿ ಶಬ್ದಕಾರಿಣಃ ಶುಷ್ಣಸ್ಯ ಆದಿತ್ಯಸ್ಯ ಚ ಕೋಷ-

यितॄ रोरूयमाणोऽवनानीति धनानीति वा (निरु. ५-८४-८६) ऐसा अन्वयक्रमको बतलाते हैं. धनानीति पक्षे मेघस्य धनानीति व्याख्येयम् (मेघका जल ऐसा अर्थ).

॥ संहितापाठः ॥

त्वमाविथ नर्यं तुर्वशं यदुं त्वं तुर्वीतिं वय्यं शतक्रतो ।
त्वं रथमेतशं कृत्व्यं धने त्वं पुरो नवतिं दंभयो नव ॥ ६ ॥

॥ पदपाठः ॥

त्वं । आविथ । नर्यं । तुर्वशं । यदुं । त्वं । तुर्वीतिं । वय्यं ।
शतक्रतो इति शतऽक्रतो ।
त्वं । रथं । एतशं । कृत्व्यं । धने । त्वं । पुरः । नवतिं । दंभयुः ।
नव ॥ ६ ॥

॥ सायणभाष्यं ॥

हे इन्द्र त्वं नर्याद्दीन्स्त्रीनप्राज्ञ आविथ ररक्षिथ । तथा हे शतक्रतो बहुविधकर्मन् बहुविधप्रज्ञ वा त्वं वय्यं वय्येकुलजं तुर्वीतिनामानं राजानमाविथेत्येव । अपि च त्वं रथं रंहणस्वभावमेतशंज्ञमृषिमेतशमेतशंज्ञकं धने धननिमित्ते संग्रामे कृत्व्ये कर्तव्ये सत्याविथेति शेषः । यद्वा । पूर्व्योक्तानां राज्ञां रथं । एतशः इत्यश्वनाम । एतशमश्वं च ररक्षिथेति योज्यं । तथा त्वं शंबरस्य नवतिं नव नवोत्तरनवतिसंख्याकाः पुरः पुराणि दंभयेः व्यनेनेशः ॥ एतशं । एति गच्छतीत्येतशः । इण् गतौ । इणस्तशंतशसुनौ । उ. सू. ३-८४ इति तशन्प्रत्ययेः । गुणः । कृत्व्यं । कर्तव्य इत्यस्य शब्दस्य वर्णविकारः पृषोदरादित्वात् ॥

॥ ಪ್ರತಿಪದಾರ್ಥ ॥

(ಎಲೈ ಇಂದ್ರನೇ) **ತ್ವಂ**--ನೀನು । **ನರ್ಯಂ**—(ದೊರೆಗಳಾದ) ನರ್ಯನನ್ನೂ । **ತುರ್ವಶಂ**—ತುರ್ವಶನನ್ನೂ । **ಯದುಂ**—ಯದುವನ್ನೂ । **ಅವಿಥ**—ರಕ್ಷಿಸಿರುವೆ ।(ಹಾಗೆಯೇ) **ಶತಕ್ರತೋ**—ಅನೇಕಕರ್ಮ ಕಾರಿಯಾದ ಅಥವಾ ಬಹು ವಿಧವಾದ ಪ್ರಜ್ಞೆಯುಳ್ಳ (ಇಂದ್ರನೇ) । **ತ್ವಂ**—ನೀನು । **ವಯ್ಯಂ**—ವಯ್ಯ ವಂಶೋತ್ಪನ್ನನಾದ । **ತುರ್ವೀತಿಂ**—ತುರ್ವೀತಿಯೆಂಬ ದೊರೆಯನ್ನೂ (ರಕ್ಷಿಸಿರುವೆ) । **ತ್ವಂ**—ನೀನು । **ರಥಂ**—(ಅವರ) ರಥಗಳನ್ನೂ । **ಏತಶಂ**--ಕುದುರೆಗಳನ್ನೂ ಅಥವಾ [**ರಥಂ**—ರಥನೆಂಬ ಋಷಿಯನ್ನೂ । **ಏಕಶಂ**—ಏಕಶನೆಂಬ ಋಷಿಯನ್ನೂ] । **ಧನೇ**—ಧನನಿಮಿತ್ತವಾದ ಯುದ್ಧವು । **ಕೃತ್ವ್ಯೇ**—(ಅವಶ್ಯವಾಗಿ) ನಡೆಯಲೇ ಬೇಕಾದ ಸಂದರ್ಭದಲ್ಲಿ (ಕಾಪಾಡಿರುವೆ) । **ತ್ವಂ**--ನೀನು (ಶಂಬರಸ್ಯ—ಶಂಬರನ) । **ನವತಿಂ ನವ**—ತೊಂಭತ್ತೊಂಭತ್ತು । **ಪುರಃ**--ಪಟ್ಟಣಗಳನ್ನು । **ವಿಂಭಯಃ**—ಧ್ವಂಸಮಾಡಿದೆ

॥ ಭಾವಾರ್ಥ ॥

ಶತಕ್ರತುವಾದ ಎಲೈ ಇಂದ್ರನೇ, ನೀನು ನರ್ಯ, ತುರ್ವಶ ಮತ್ತು ಯದು ಎಂಬ ದೊರೆಗಳನ್ನೂ ಹಾಗೆಯೇ ವಯ್ಯವಂಶೋತ್ಪನ್ನನಾದ ತುರ್ವೀತಿಯೆಂಬ ದೊರೆಯನ್ನೂ ರಕ್ಷಿಸಿರುವೆ. ಇವರ ರಥಗಳನ್ನೂ ಕುದುರೆಗಳನ್ನೂ ಸಹ ಧನನಿಮಿತ್ತವಾಗಿ ಅತ್ಯವಶ್ಯವಾಗಿ ಮಾಡಬೇಕಾದ ಯುದ್ಧದಲ್ಲಿ ಕಾಪಾಡಿರುವೆ. ಮತ್ತು ಶಂಬರನ ತೊಂಭತ್ತೊಂಭತ್ತು ಪಟ್ಟಣಗಳನ್ನು ಧ್ವಂಸಮಾಡಿರುವೆ.

English Translation.

You have protected Narya, Turvasa, Yadu and Turviti, of the race of Vayya; you have protected their chariots and horses in a battle undertaken for necessary wealth; you have destroyed the ninety-nine cities (of Sambara).

॥ ವಿಶೇಷ ವಿಷಯಗಳು ॥

ತುರ್ವಶಂ, ಯದುಂ—ಇವರ ವಿಷಯವಾಗಿ ನಾವು ಋ. ಸಂ. ಭಾಗ ೪, ಪೇಜು ೨೪೦-೨೪೨ರಲ್ಲಿ ಬರೆದಿರುವುದನ್ನು ನೋಡಿ.

ತುರ್ವೀತಿಂ—ಋ. ಸಂ. ಭಾಗ ೪, ಪೇಜು ೨೪೪ರಲ್ಲಿ ಇವನ ವಿಷಯವು ವರ್ಣಿತವಾಗಿರುವುದು.

ನರ್ಯಂ—ಒಬ್ಬ ರಾಜನ ಹೆಸರು. ಇವನ ಹೆಸರು ಈ ಋಕ್ಕಿನಲ್ಲಿಯೂ ಋ. ಸಂ. ೧-೧೧೨-೯ ರಲ್ಲಿಯೂ ಪಠಿತವಾಗಿರುವುದು. ಬೇರೆಲ್ಲಿಯೂ ಇಲ್ಲವಾದ್ದರಿಂದ ಹೆಚ್ಚು ವಿಷಯಗಳು ನಮಗೆ ತಿಳಿದುಬಂದಿಲ್ಲ.

ಶತಕ್ರತೋ—ಬಹುವಿಧವಾದ ಕರ್ಮಗಳುಳ್ಳವನು, ಅಥವಾ ನಾನಾ ರೀತಿಯ ಪ್ರಜ್ಞೆಯುಳ್ಳವನು, ಅಥವಾ ನೂರು ಯಾಗಗಳನ್ನು ಮಾಡಿದವನು. ಇಂದ್ರ ಎಂದು ನಾನಾರೀತಿ ಅರ್ಥಮಾಡಿರುವರು.

ವಯ್ಯಂ ತುರ್ವೀತಿಂ—ವಯ್ಯವೆಂಬುದು ಒಂದು ವಂಶಕ್ಕೆ ಸಂಬಂಧಿಸಿದ ಹೆಸರು. ಅದರಲ್ಲಿ ಜನಿಸಿದವನು ತುರ್ವೀತಿ ಎಂಬ ರಾಜ. ಅವನನ್ನು ಇಂದ್ರನು ರಾಕ್ಷಸರ ಬಾಧೆಯಿಂದ ತಪ್ಪಿಸಿ ಕಾಪಾಡಿದನು.

ಏತಶಂ ರಥಂ—ರಥ, ಏತಶ ಈ ಎರಡು ಶಬ್ದಗಳೂ ಬೇರೆ ಬೇರೆ ರಾಜರ ಹೆಸರನ್ನೂ ಸೂಚಿಸುತ್ತವೆ. ಅಥವಾ ರಥ ಶಬ್ದವು ಹಿಂದೆ ಹೇಳಿದ ಕೆಲವು ರಾಜರ ರಥ ಎಂಬರ್ಥವನ್ನೂ, ಏತಶ ಶಬ್ದವು ಕುದುರೆ ಎಂಬರ್ಥವನ್ನೂ ಕೊಡುವುದೆಂದೂ ಹೇಳಬಹುದು. ಕುದುರೆ ಎಂಬರ್ಥದಲ್ಲಿ **ಏತಿ ಗಚ್ಛತೀತಿ ಏತಶಃ** ಎಂದು ವ್ಯುತ್ಪತ್ತಿ ಮಾಡಬೇಕು.

ನವತಿಂ ನವ—ಇದಕ್ಕೆ ತೊಂಬತ್ತೊಂಭತ್ತು ಎಂದರ್ಥ. ಪುರಃ ಎಂಬ ಪದಕ್ಕೆ ಇದು ವಿಶೇಷಣವಾಗಿದೆ. ಶಂಬರಾಸುರನಿಗೆ ತೊಂಬತ್ತೊಂಭತ್ತು ಪಟ್ಟಣಗಳಿದ್ದುವು. ಅವೆಲ್ಲವನ್ನೂ ಇಂದ್ರನು ಧ್ವಂಸಮಾಡಿದನು ಎಂದು ಇಲ್ಲಿ ಇಂದ್ರನನ್ನು ಸ್ತುತಿಸಲಾಗಿದೆ.

॥ ವ್ಯಾಕರಣಪ್ರಕ್ರಿಯಾ ॥

ಅವಿಥ—ಅವ ರಕ್ಷಣೇ ಧಾತು. ಲಿಟ್ ಮಧ್ಯಮಪುರುಷ ಏಕವಚನದಲ್ಲಿ ಪ್ರತ್ಯಯಕ್ಕೆ ಥಲಾದೇಶ. ಲಿಣ್ಣಿಮಿತ್ತವಾಗಿ ಧಾತುವಿಗೆ ದ್ವಿತ್ವ. ಅಭ್ಯಾಸಕ್ಕೆ ಹಲಾದಿಶೇಷ. **ಅತಆದೇಃ** ಎಂಬುದರಿಂದ ದೀರ್ಘ. ಪ್ರತ್ಯಯಕ್ಕೆ ಇಡಾಗಮ ಅವಿಥ ಎಂದು ರೂಪವಾಗುತ್ತದೆ. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

ಶತಕ್ರತೋ---**ಅಮಂತ್ರಿತಸ್ಯ ಚ** ಎಂಬುದರಿಂದ ನಿಘಾತಸ್ವರ ಬರುತ್ತದೆ.

ಏತಶಮ್—ಏತಿ ಗಚ್ಛತಿ ಇತಿ ಏತಶಃ ಇಣ್ ಗತೌ ಧಾತು ಅದಾದಿ. **ಇಣಸ್ತಶಂತಶಸುನೌ** (ಉ. ಸೂ. ೩-೪೨) ಎಂಬುದರಿಂದ ತಶನ್ ಪ್ರತ್ಯಯ. ತಶನ್ ಪರದಲ್ಲಿರುವಾಗ **ಸಾರ್ವಧಾತುಕಾರ್ಧಧಾತುಕಯೋಃ** ಎಂಬುದರಿಂದ ಧಾತುವಿಗೆ ಗುಣ. ಏತಶ ಎಂದು ರೂಪವಾಗುತ್ತದೆ. **ಞ್ನಿತ್ಯಾದಿರ್ನಿತ್ಯಂ** ಎಂಬುದರಿಂದ ಆದ್ಯುದಾತ್ತಸ್ವರ ಬರುತ್ತದೆ.

ಕೃತ್ವ್ಯೇ—**ಪೃಷೋದರಾದೀನಿ ಯಥೋಪದಿಷ್ಟಂ** ಎಂದುದರಿಂದ ಕರ್ತವ್ಯೇ ಎಂಬುದು ಅದರಲ್ಲಿ ಸೇರಿರುವುದರಿಂದ ವರ್ಣವಿಕಾರ ಲೋಪಗಳಿಂದ ಕೃತ್ವ್ಯೇ ಎಂದು ರೂಪವಾಗುತ್ತದೆ.

ದಂಭಯಃ—ದಂಭು ದಂಭೇ ಧಾತು ಚುರಾದಿ. ಲಙ್ ಮಧ್ಯಮಪುರುಷಏಕವಚನದಲ್ಲಿ ಸಿಪ್. **ಇತಶ್ಚ** ಎಂಬುದರಿಂದ ಅದರ ಇಕಾರಕ್ಕೆ ಲೋಪ. **ಕರ್ತರಿಶಪ್** ಎಂಬುದರಿಂದ ಣಿಜಂತದಮೇಲೆ ಶಪ್. ಣಿಚಿಗೆ ಶಬ್ನಿಮಿತ್ತಕವಾಗಿ ಗುಣ. ಅಯಾದೇಶ, ಪ್ರತ್ಯಯ ಸಕಾರಕ್ಕೆ ರುತ್ವವಿಸರ್ಗ. **ಬಹುಲಂ ಛಂದಸ್ಯಮಾಙ್ಯೋಗೇಽಪಿ** ಎಂಬುದರಿಂದ ಅಡಾಗಮ ಬರುವುದಿಲ್ಲ. ದಂಭಯಃ ಎಂದು ರೂಪವಾಗುತ್ತದೆ. **ತಿಙ್ಶಿತಿಜಃ** ಎಂಬುದರಿಂದ ನಿಘಾತಸ್ವರಬರುತ್ತದೆ.

॥ संहितापाठः ॥

स घा राजा सत्पतिः शूशुवज्जनो रातहव्यः प्रति यः शास-
मिन्वति ।
उक्था वा यो अभिगृणाति राधसा दानुरस्मा उपरा पि-
न्वते दिवः ॥ ६ ॥

॥ पदपाठः ॥

सः । घ । राजा । सत्ऽपतिः । शूशुवत् । जनः । रातऽहव्यः । प्रति ।
यः । शासं । इन्वति ।
उक्था । वा । यः । अभिऽगृणाति । राधसा । दानुः । अस्मै । उपरा ।
पिन्वते । दिवः ॥ ६ ॥

॥ सायणभाष्यं ॥

स घ स ऋलु जनो जातो राजा राजमानः सत्पतिः सतां पालयिता यजमानः शूशुवत् । अत्यानं वर्धयति । यो इन्द्रं प्रति रातहव्यो दत्तहविष्कः सन् शासमिन्द्रकर्तृकमनुशासनं यदा वा तस्य स्तुतिमिन्वति व्याप्नोति । उक्था वोक्थानि शस्त्राणि वा यः स्तोता राधसा हविर्लक्षणेनान्नेन सहाभिगृणाति तस्याभिमुखीकरणाय शंसति । अस्मै स्तोत्रे दानुरभिमतफलप्रदातेन्द्र उपरोपरान्मेघान् । उपर इति मेघनाम । स च योस्केनैवं निरुक्तः । उपर उपलो मेघो भवत्युपरमंशेऽस्मिन्नभ्राण्युपरता आप इति वा । निरु ७-१८ । इति । सन् मेघान् दिवः सकाशात्पिन्वते । सेचयति । दोग्धीति यावत् ॥ घ यचि तुनुघेत्यादिना दीर्घः । सत्पतिः । सतां पतिः सत्पतिः । षष्ठ्यैश्वर्ये इति पूर्वपदप्रकृतिस्वरत्वं । शूशुवत् । ष्टुञ्ओ स्तुतिवृद्ध्योः । ण्यंताद्वर्तमाने लुङ् च्लेश्चङादेशे संप्रसारणं संप्रसारणाश्रयं च बलीयः । म. ६-१-१८-१ । इत्यंतरंगमपि वृद्ध्यादिकं बाधित्वाऽऽ च संप्रसारणं । पा. ६-१-३१ । इति संप्रसारणं । संज्ञापूर्वकस्य विधेरनित्यत्वाद्वृद्ध्यभावे द्विर्वचनादि । उवङादेशः । रातहव्यः । बहुव्रीहौ पूर्वपदप्रकृतिस्वरत्वं । शासं । शासु अनुशिष्टावित्यस्माद्भावे घञ् कर्मण्येते इत्यंकोदात्तत्वे प्राप्ते व्यत्ययेनाद्युदात्तत्वं । वृषादिर्वा द्रष्टव्यः । सह्याकृतिगण इत्युक्तं । यदा । शंसु स्तुतावित्यस्माद्घञ् व्यत्ययेन नलोपः ।

ಇನ್ವತಿ । ಇವಿ ವ್ಯಾಪ್ತೌ । ತಪಃ ಪಿತ್ತ್ವಾದನುದಾತ್ತೇತ್ತ್ವೇ ಧಾತುಸ್ವರಃ । ಯೆದ್ವೃತ್ತ್ಯೋಗಾದನಿಘಾತಃ । ಅಭಿಗೃಣಾತಿ । ಗೃ ಶಬ್ದೇ । ಕ್ರ್ಯಾದಿನಾಂ ಹ್ರಸ್ವ ಇತಿ ಹ್ರಸ್ವತ್ವಂ । ತಿಪಃ ಪಿತ್ತ್ವಾದನುದಾತ್ತೇತ್ತ್ವೇ ವಿಕರಣಸ್ವರಃ । ಪೂರ್ವವನ್ನಿಘಾತಾಭಾವಃ । ಉಪರಾ । ಸುಪಾಂ ಸುಲುಗಿತಿ ತಸಃ ಪೂರ್ವಸವರ್ಣದೀರ್ಘತ್ವಂ । ಪಿನ್ವತೇ । ಪಿವಿ ಮಿವಿ ಣಿವಿ ಸೇಚನೇ । ವ್ಯತ್ಯಯೇನಾತ್ಮನೇಪದಂ ॥

॥ ಪ್ರತಿಪದಾರ್ಥ ॥

ಯಃ—ಯಾವನು । (ಇಂದ್ರಂ) ಪ್ರತಿ—ಇಂದ್ರನನ್ನು ಕುರಿತು । ರಾತಹವ್ಯಃ—ಹವಿಸ್ಸನ್ನು ಅರ್ಪಿಸುತ್ತ । ಶಾಸಂ—ಇಂದ್ರನ ಆಜ್ಞೆಯನ್ನು ಅಥವಾ ಸ್ತೋತ್ರವನ್ನು । ಇನ್ವತಿ—ನೆರವೇರಿಸುತ್ತಾನೋ, ಮತ್ತು ಯಃ—ಯಾವನು । ಉಕ್ಥಾ ವಾ—ಉಕ್ಥವನ್ನಾಗಲಿ ಅಥವಾ ಶಸ್ತ್ರವನ್ನಾಗಲಿ (ಉಕ್ಥರೂಪವಾದ ಅಥವಾ ಶಸ್ತ್ರರೂಪವಾದ ಮಂತ್ರವನ್ನು) । ರಾಧಸಾ—ಹವಿಸ್ಸಿನರೂಪದ ಅನ್ನದೊಡನೆ । ಅಭಿಗೃಣಾತಿ—(ತನ್ನ) ಅಭಿಮುಖವಾಗಿ ಮಾಡಿಕೊಳ್ಳಲು ಪಠಿಸುತ್ತಾನೋ । ಸ ಘ—ಅದೇ । ಜನಃ—ಮಾನವನೂ । ರಾಜಾ—ಪ್ರಕಾಶಿಸುವವನೂ । ಸತ್ಪತಿಃ—ಸಜ್ಜನರ ಪಾಲಕನೂ ಆದ ಯಜಮಾನನು । ಶೂಶುವತ್—(ತನ್ನನ್ನು) ವೃದ್ಧಿಪಡಿಸಿಕೊಳ್ಳುತ್ತಾನೆ । ಅಸ್ಮೈ—ಇಂತಹ ಸ್ತೋತೃವಿಗಾಗಿ । ದಾನುಃ—ಇಷ್ಟಾರ್ಥಗಳನ್ನು ಕೊಡತಕ್ಕ ಇಂದ್ರನು । ಉಪರಾ—ಮೇಘಗಳನ್ನು । ದಿವಃ—ಅಂತರಿಕ್ಷದಿಂದ । ಪಿನ್ವತೇ—(ಮಳೆಯನ್ನು) ಸುರಿಸುವಂತೆ ಮಾಡುತ್ತಾನೆ.

॥ ಭಾವಾರ್ಥ ॥

ಯಾವ ಸ್ತೋತೃವು ಇಂದ್ರನಿಗೆ ಹವಿಸ್ಸನ್ನು ಅರ್ಪಿಸುತ್ತ ಉಕ್ಥ ಮತ್ತು ಶಸ್ತ್ರಮಂತ್ರಗಳನ್ನು ಆ ಹವಿಸ್ಸಿನರೂಪದ ಅನ್ನದೊಡನೆ ಪಠಿಸುತ್ತಾನೆಯೋ ಆ ಮಾನವನೂ, ಪ್ರಕಾಶಿಸುವವನೂ ಮತ್ತು ಸಜ್ಜನರ ಪಾಲಕನೂ ಆದ ಯಜಮಾನನು ವೃದ್ಧಿಯನ್ನು ಹೊಂದುತ್ತಾನೆ. ಮತ್ತು ಇಂತಹ ಸ್ತೋತೃವಿಗಾಗಿ ಇಷ್ಟಾರ್ಥ ಪ್ರದನಾದ ಇಂದ್ರನು ಅಂತರಿಕ್ಷದಿಂದ ಮೇಘಗಳನ್ನು ಕರೆದು ಮಳೆಯನ್ನು ಸುರಿಸುತ್ತಾನೆ.

English Translation.

That eminent person, the cherisher of the pious, advances his own prosperity, who while offering oblations to Indra, sings his praise; or who, along with the offerings he presents, recites hymns in honour of him; for him the bounteous Indra causes the clouds to rain from heaven.

॥ ವಿಶೇಷ ವಿಷಯಗಳು ॥

ಇದಮುಕ್ತಂ ಭವತಿ । ಯೋ ಜನೋ ದತ್ತಹವಿಷ್ಕಃ ಸನ್ ತಥಾ ದತ್ತರಾಧಾಃ ಸನ್ನಿಂದ್ರಸ್ಯ ಶಾಸನಂ ಪಾಲಯತಿ ತಥಾ ತಸ್ಯ ಸ್ತುತೀರ್ಗಾಯತಿ ಸ ನಿಃಸಂಶಯಂ ಸತ್ಪತೀ ರಾಜಾ ಭೂತ್ವಾ ವರ್ಧತೇ ತದರ್ಥೇ ಚ ದಿವ್ಯಾ ಮೇಘೋದಕವೃಷ್ಟಿರ್ವಿಪುಲಂ ಯಥಾ ತಥಾ ಪತತೀತಿ ॥ ಯಜ್ಞಮಾಡುವ ಯಾವ ಯಜಮಾನನು ಇಂದ್ರನಿಗೆ ಹವಿರಾದಿಗಳನ್ನು ಅರ್ಪಿಸಿ ಅವನ ಆಜ್ಞೆಯನ್ನು ಪರಿಪಾಲಿಸುತ್ತಾ ಸ್ತೋತ್ರಾದಿಗ

ಳಿಂದ ಇಂದ್ರನನ್ನು ಸಂತೋಷಗೊಳಿಸುವನೋ ಅಂತಹ ಯಜಮಾನನು ರಾಜನಾಗುವನು. ಅವನ ಅನುಕೂಲಕ್ಕಾಗಿ ಮೇಘವು ವಿಶೇಷವಾಗಿ ವೃಷ್ಟಿಯನ್ನು ಸುರಿಸುವುದು. ಈ ವಿಷಯದಲ್ಲಿ ಸಂಶಯವಿಲ್ಲ ಎಂದಭಿಪ್ರಾಯವು.

ಘಾ—ಇದು ಘ ಶಬ್ದ. ಇದಕ್ಕೆ ಖಲು (ಅಷ್ಟೆ, ಆದರೋ) ಎಂದರ್ಥ- ಋಚಿ ತುನುಘೆ ಎಂಬ ಸೂತ್ರದಿಂದ ಸಂಹಿತೆಯಲ್ಲಿ ದೀರ್ಘ ಬಂದಿದೆ.

ಸತ್ಪತಿಃ—ಇಲ್ಲಿ ಸತ್ಪುರುಷರನ್ನು ಕಾಪಾಡುವವನು, ಯಾಗದೀಕ್ಷಿತನಾದ ಯಜಮಾನನು ಎಂದರ್ಥವು

ಶುಶೂವತ್—ಟು ಓಶ್ವಿ ಗತಿವೃದ್ಧ್ಯೋಃ ಎಂಬ ವೃದ್ಧ್ಯರ್ಥಕವಾದ ಧಾತುವಿನಿಂದ ನಿಷ್ಪನ್ನವಾದ ಈ ಶಬ್ದವು, ತನ್ನನ್ನೇ ತಾನು ವೃದ್ಧಿಪಡಿಸಿಕೊಳ್ಳುವನು ಎಂಬರ್ಥವನ್ನು ಸೂಚಿಸುವುದು.

ರಾತಹವ್ಯಃ—ರಾತಂ ಹವ್ಯಂ ಯೇನ ಸಃ ಎಂಬ ವ್ಯುತ್ಪತ್ತಿಯಿಂದ ಹವಿಸ್ಸನ್ನು ದೇವತೆಗಳಿಗೆ ಅರ್ಪಿಸಿದವನು ಎಂದರ್ಥವಾಗುವುದು.

ಶಾಸಂ—ಶಾಸು ಅನುಶಿಷ್ಟೌ ಎಂಬ ಧಾತುವಿನಿಂದ ಉಂಟಾದ ಈ ಶಬ್ದವು ಇಂದ್ರನ ಅಪ್ಪಣೆ ಎಂದೂ ಅಥವಾ ಇಂದ್ರನ ಸ್ತುತಿ ಎಂದೂ ಅರ್ಥಕೊಡುವುದು.

ರಾಧಸಾ—ಹವಿರ್ಲಕ್ಷಣದಿಂದ ಕೂಡಿದ ಅನ್ನದಿಂದ.

ಉಕ್ಥಾ ವಾ—ಇಲ್ಲಿ ಉಕ್ಥಶಬ್ದಕ್ಕೆ ಶಸ್ತ್ರಗಳೆಂಬ ಮಂತ್ರವಿಶೇಷಗಳು ಎಂದರ್ಥ.

ಉಪಂ—ಉಪರಾ ಎಂಬುದು ಮೇಘದ ಹೆಸರು. ಇದಕ್ಕೆ **ಉಪರ ಉಪಲೋ ಮೇಘೋ ಭವ. ತ್ಯುಪರಮತೇಽಸ್ಮಿನ್ನಭ್ರಾಣ್ಯುಪರತಾ ಆಪ ಇತಿ ವಾ** (ನಿರು. ೨-೨೧) ಎಂಬ ನಿರುಕ್ತವು ಪ್ರಮಾಣವಾಗಿದೆ.

ದಾನುಃ—ಯಜಮಾನರು ಕೇಳಿಕೊಳ್ಳುವ ಸಕಲ ಇಷ್ಟಾರ್ಥಗಳನ್ನೂ ಕೊಡುವವನು ಇಂದ್ರನು.

॥ ವ್ಯಾಕರಣಪ್ರಕ್ರಿಯಾ ॥

ಘ—ಯಚಿ ತುನುಘೆ--(ಪಾ. ಸೂ. ೬-೩-೧೩೩) ಎಂಬುದರಿಂದ ಸಂಹಿತಾದಲ್ಲಿ ದೀರ್ಘ ಬರುತ್ತದೆ.

ಸ ಇತ್—ಅದೇ ಇಂದ್ರನು । **ವನೇ**—ಅರಣ್ಯದಲ್ಲಿ । **ನಮಸ್ಯುಭಿಃ**—ನಮಸ್ಕಾರಪೂರ್ವಕವಾಗಿ ಪೂಜಿಸುವ ಋಷಿಗಳಿಂದ । **ವಚಸ್ಯತೇ**—ಸ್ತುತಿಸಲ್ಪಡುತ್ತಾನೆ ಅಥವಾ ಸ್ತುತನಾಗಲು ಇಚ್ಛಿಸುತ್ತಾನೆ । **ಜನೇಷು**—(ತನ್ನವರಾದ) ಮಾನವರಲ್ಲಿ । **ಇಂದ್ರಿಯಂ**—ಸ್ವವೀರ್ಯವನ್ನು । **ಪ್ರಬ್ರುವಾಣಃ**—ಪ್ರಕಟಿಸುತ್ತ । **ಚಾರು**—ರಮ್ಯನಾಗಿದ್ದಾನೆ । **ವೃಷಾ**—ಹವಿರ್ದಾತನಾಗಿಯೂ । **ಮಘವಾ**—ಧನವಂತನಾಗಿಯೂ ಇರುವ ಯಜಮಾನನು । **ಕ್ಷೇಮೇಣ**—(ಇಂದ್ರದತ್ತವಾದ) ರಕ್ಷಣೆಯಿಂದ ಕೂಡಿ । **ಯತ್**—ಯಾವಾಗ । **ಧೇನಾಂ**—ಸ್ತುತಿರೂಪವಾದ ವಾಕ್ಯನ್ನು । **ಇನ್ವತಿ**—ಅರ್ಪಿಸುತ್ತಾನೋ (ಆಗ) । **ವೃಷಾ**—(ಇಷ್ಟಾರ್ಥಗಳನ್ನು) ದಯಪಾಲಿಸುವ ಇಂದ್ರನು । **ಹರ್ಯತಃ**—(ಅವುಗಳನ್ನು ಪಡೆಯಲು) ಯಜ್ಞಮಾಡಲಿಚ್ಛಿಯುಳ್ಳ ಯಜಮಾನನಿಗೆ । **ಛಂದುಃ**—ಹರ್ಷ (ತೃಪ್ತಿ)ದಾಯಕನಾಗಿ । **ಭವತಿ**—ಆಗುತ್ತಾನೆ [ಅಥವಾ । **ಮಘವಾ**—ಧನವಂತನೂ । **ವೃಷಾ**—ಇಷ್ಟಾರ್ಥಪ್ರದನೂ ಆದಇಂದ್ರನು । **ಕ್ಷೇಮೇಣ**—ಕ್ಷೇಮವನ್ನುಂಟುಮಾಡುವ ಮನಸ್ಸಿನಿಂದ । **ಧೇನಾಂ**—(ಯಜಮಾನನಿಂದ ಅರ್ಪಿಸಲ್ಪಟ್ಟ) ಸ್ತೋತ್ರವನ್ನು । **ಯತ್**—ಯಾವಕಾರಣದಿಂದ । **ಇನ್ವತಿ**—ಸಂಪೂರ್ಣವಾಗಿ ಪಡೆಯುತ್ತಾನೋ (ಆದ್ದರಿಂದ) **ಹರ್ಯತಃ**—ಯಜ್ಞಮಾಡಲಿಚ್ಛಿಯುಳ್ಳ ಯಜಮಾನನಿಗೆ । **ಛಂದುಃ**—ಹರ್ಷ (ತೃಪ್ತಿ) ದಾಯಕನಾಗಿ । **ಭವತಿ**—ಆಗುತ್ತಾನೆ]

॥ ಭಾವಾರ್ಥ ॥

ಆದೇ ಇಂದ್ರನು ಅರಣ್ಯದಲ್ಲಿ ತನ್ನನ್ನು ಪೂಜಿಸುವ ಋಷಿಗಳಿಂದ ಸ್ತುತಿಸಲ್ಪಡುತ್ತಾನೆ. ತನ್ನವರಾದ ಮಾನವರಲ್ಲಿ ತನ್ನ ರಮ್ಯವಾದ ವೀರ್ಯವನ್ನು ಪ್ರಕಟಿಸುತ್ತಾನೆ. ಹವಿರ್ದಾತನಾಗಿಯೂ ಧನವಂತನಾಗಿಯೂ

ಇರುವ ಯಜಮಾನನು ಇಂದ್ರದತ್ತವಾದ ರಕ್ಷಣೆಯಿಂದ ಕೂಡಿ ಯಾವಾಗ ಸ್ತುತಿರೂಪವಾದ ವಾಕ್ಯನ್ನು ಅರ್ಪಿಸುತ್ತಾನೋ, ಆಗ ಇಷ್ಟಾರ್ಥಪ್ರದನಾದ ಇಂದ್ರನು ಅವುಗಳನ್ನು ಪಡೆಯಲು ಯಜ್ಞಮಾಡಲಿಚ್ಛೆಯುಳ್ಳ ಯಜಮಾನನಿಗೆ ತೃಪ್ತಿದಾಯಕನಾಗಿ ಆಗುತ್ತಾನೆ.

Engish Transation.

He is praised by adoring (sages) in the forest, he stands beautifully by anouncing his own strength amongst men, when protected by Indra, a wealthy sacrificer, the offerer of oblation, recites laudatory verses, Indra, the showerer of desires, engages him who is desirous of performing a sacrifice in that rite.

॥ ವಿಶೇಷ ವಿಷಯಗಳು ॥

ನಮಸ್ಯುಭಿಃ—**ನಮಸಾ ಸ್ತೋತ್ರೇಣ ಪೂಜಯಿತೃಭಿಃ ಋಷಿಭಿಃ** । ಕೇವಲ ಸ್ತೋತ್ರದಿಂದಲೇ ತೃಪ್ತಿಪಡಿಸುವ ಋಷಿಗಳಿಂದ ಎಂದರ್ಥ. ಸ್ತುತಿಪ್ರಿಯನಾದ ಇಂದ್ರನು ಅರಣ್ಯದಲ್ಲಿ ಋಷಿಗಳು ಮಾಡುವ ಸ್ತುತಿವಚನಗಳಿಂದಲೇ ತೃಪ್ತನಾಗುವನು.

ವಚಸ್ಯತೇ—**ವಚೆ ಇಚ್ಛೆತಿ ವಚಸ್ಯತಿ** । **ತಂ ವಚಸ್ಯಂತಂ ಕುರ್ವಂತಿ ಮುನಯೋ ವಚಸ್ಯಯಂತಿ** ಇಲ್ಲಿ ವಚಶ್ಯಬ್ದಕ್ಕೆ ಸ್ತೋತ್ರವೆಂದು ಅರ್ಥಮಾಡಿ, ಸ್ತೋತ್ರವನ್ನು ಅಪೇಕ್ಷಿಸುವವನು ಎಂದರ್ಥಮಾಡಿದ್ದಾರೆ. ಮತ್ತು ಇಂದ್ರನು ಸ್ತುತಿಪ್ರಿಯನಾಗುವಂತೆ ಮಾಡುವವರು ಮುನಿಗಳು ಎಂಬರ್ಥವೂ ಇಲ್ಲಿಉಪಾತ್ತವಾಗಿದೆ.

ಹರ್ಯತಃ—**ಪ್ರೇಪ್ಸಾವತೋ ಯಿಯಕ್ಷತಃ** । ಸ್ವಂತ ಇಚ್ಛೆಯಿಂದ ಯಾಗ ಮಾಡುವವನು.

ಛಂದುಃ ಭವತಿ—**ಉಪಚ್ಛಂದಯಿತಾ ಭವತಿ**—ಯಾಗ ಮಾಡುವವರಿಗೆ ಯಾಗ ಕರ್ಮದಲ್ಲಿ ರುಚಿಯನ್ನುಂಟುಮಾಡುವವನು ಇಂದ್ರನು ಎಂಬರ್ಥವು ಇಲ್ಲಿ ಸ್ಪಷ್ಟವಾಗಿದೆ.

ವೃಷಾ—ಇಲ್ಲಿ **ವೃಷಾ** ಎಂಬ ಶಬ್ದವು ಇಷ್ಟಾರ್ಥಗಳನ್ನು ಕೊಡುವವನು ಎಂಬರ್ಥದಲ್ಲಿ ಇಂದ್ರನ ಪರವಾಗಿಯೂ, ಹವಿಸ್ಸನ್ನರ್ಪಿಸುವವನು ಎಂಬರ್ಥದಲ್ಲಿ ಯಜಮಾನನ ಪರವಾಗಿಯೂ ಇರುವುದು.

ಧೇನಾಂ—ಸ್ತುತಿಯನ್ನು ಪ್ರದರ್ಶಿಸುವ ವಾಕ್ಯ ಎಂದರ್ಥ. ಇಂದ್ರನಿಗೆ ಪ್ರಿಯವಾದ ಸ್ತುತಿವಚನಗಳನ್ನು ಹೇಳುವವನು ಯಾಗಮಾಡುವ ಜನರಿಗೆ ಆನಂದವನ್ನುಂಟುಮಾಡುವನು ಎಂಬ ಪ್ರಕರಣದಲ್ಲಿ ಈ ಶಬ್ದವು ಬಂದಿದೆ.

॥ ವ್ಯಾಕರಣಪ್ರಕ್ರಿಯಾ ॥

ನಮಸ್ಯುಭಿಃ—**ನಮಸ್** ಎಂಬುದು ಸಾಂತ ಅವ್ಯಯ. ಪೂಜಾರ್ಥ ತೋರುವಾಗ **ನಮೋವರಿವಶ್ಚಿತ್ರಙಃ ಕ್ಯಚ್** (ಪಾ. ಸೂ. ೩-೧-೧೯) ಎಂಬುದರಿಂದ **ಕ್ಯಚ್** ಪ್ರತ್ಯಯ. **ಸನಾದ್ಯಂತಾಧಾತವಃ** ಎಂಬುದರಿಂದ ನಮಸ್ಯ ಎಂಬುದು ಧಾತುಸಂಜ್ಞೆಯನ್ನು ಹೊಂದುತ್ತದೆ. **ಕ್ಯಾಚ್ಛಂದಸಿ** (ಪಾ. ಸೂ. ೩-೨-೧೭೦)

ಎಂಬುದರಿಂದ ಛಂದಸ್ಸಿನಲ್ಲಿ ಕ್ಯಜಂತದ ಮೇಲೆ ಉ ಪ್ರತ್ಯಯ. ಉ ಪರವಾದಾಗ **ಅತೋಲೋಪಃ** ಎಂಬುದರಿಂದ ಕ್ಯಚಿನ ಅಕಾರಕ್ಕೆ ಲೋಪ. ಪ್ರತ್ಯಯಸ್ವರದಿಂದ ನಮಸ್ಯ ಎಂಬುದು ಅಂತೋದಾತ್ತವಾಗುತ್ತದೆ. ತೃತೀಯಾ ಬಹುವಚನಾಂತರೂಪ.

ವಚಸ್ಯತೇ—ವಚಃ ಇಚ್ಛತಿ ವಚಸ್ಯತಿ. **ಸುಪಆತ್ಮನಃಕ್ಯಚ್** ಎಂಬುದರಿಂದ ಇಚ್ಛಾರ್ಥದಲ್ಲಿ ಕ್ಯಚ್ ಪ್ರತ್ಯಯ. ತಂ ವಚಸ್ಯಂತಂ ಕುರ್ವಂತಿ ಮುನಯಃ ವಚಸ್ಯಯಂತಿ. **ಹೇತುಮತಿಚ** ಎಂಬುದರಿಂದ ಕ್ಯಜಂತದ ಮೇಲೆ ಣಿಚ್. ಣಿಜಂತದ ಮೇಲೆ ಕರ್ಮಣಿಯಲ್ಲಿ ಯತ್ ಬಂದಾಗ **ಣೇರನಿಟಿ** ಸೂತ್ರದಿಂದ ಣಿಚಿಗೆ ಲೋಪ. **ಯೆಸ್ಯಹಲಃ** ಎಂಬುದರಿಂದ ಕ್ಯಚಿನ ಯಕಾರಕ್ಕೆ ಲೋಪ. **ಅತೋಲೋಪಃ** ಸೂತ್ರದಿಂದ ಉಳಿದ ಅಕಾರಕ್ಕೆ ಲೋಪ. ವಚಸ್ಯತೇ ಎಂದು ರೂಪವಾಗುತ್ತದೆ. ಅಥವಾ ಕೇವಲ ಕ್ಯಚ್ ಬಂದಾಗ ವಚಸ್ಯ ಎಂದು ರೂಪವಾಗುತ್ತದೆ. ನಿಮಿತ್ತವಿಲ್ಲದಿದ್ದರೂ **ವ್ಯತ್ಯಯೋ ಬಹುಲಂ** ಎಂಬುದರಿಂದ ಆತ್ಮನೇಪದ ಪ್ರತ್ಯಯ ಬರುತ್ತದೆ. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

ಪ್ರಬ್ರುವಾಣಃ—ಬ್ರೂಞ್ ವ್ಯಕ್ತಾಯಾಂ ವಾಚಿ. ಧಾತು ಞಿತ್ವಾದುದರಿಂದ ಉಭಯಪದೀ ಲಡರ್ಥದಲ್ಲಿ ಶಾನಚ್ ಪ್ರತ್ಯಯ. ಶಪ್ ಪ್ರಾಪ್ತವಾದರೆ **ಅದಿಪ್ರಭೃತಿಭ್ಯಃ ಶಪಃ** ಎಂಬುದರಿಂದ ಅದಕ್ಕೆ ಲುಕ್. **ಸಾರ್ವಧಾತುಕಮಪಿತ್** ಎಂಬುದರಿಂದ ಶಾನಚ್ ಞಿತ್ವಾದುದರಿಂದ ತನ್ನಿಮಿತ್ತವಾಗಿ ಧಾತುವಿಗೆ ಗುಣ ಬರುವುದಿಲ್ಲ. ಆಗ **ಅಚಿಶ್ನುಧಾತುಭ್ರುವಾಂ**—ಸೂತ್ರದಿಂದ ಉವಙಾದೇಶ. **ಆಟ್ಕುಪ್ವಾಙ್**—ಸೂತ್ರದಿಂದ ಶಾನಚಿನ ನಕಾರಕ್ಕೆ ಣತ್ವ. ಬ್ರುವಾಣಃ ಎಂದು ರೂಪವಾಗುತ್ತದೆ. **ಚಿತಃ** ಎಂಬುದರಿಂದ ಅಂತೋದಾತ್ತವಾಗುತ್ತದೆ. ಪ್ರ ಎಂಬುದರೊಡನೆ ಸಮಾಸವಾದಾಗ **ಗತಿಕಾರಕೋಪಪದಾತ್ಕೃತ್** ಎಂಬುದರಿಂದ ಕೃದುತ್ತರಪದ ಪ್ರಕೃತಿಸ್ವರ ಬರುತ್ತದೆ.

ಇಂದ್ರಿಯಮ್—ಇಂದ್ರಸ್ಯ ಲಿಂಗಂ ಇಂದ್ರಿಯಮ್. ಇಂದ್ರಿಯಮಿಂದ್ರಲಿಂಗಮಿಂದ್ರದೃಷ್ಟಮಿಂದ್ರಸೃಷ್ಟಮಿಂದ್ರಜುಷ್ಟಮಿಂದ್ರದತ್ತಮಿತಿವಾ (ಪಾ. ಸೂ. ೫-೨-೯೩) ಎಂಬುದರಿಂದ ಲಿಂಗಾದ್ಯರ್ಥ ತೋರುವಾಗ ಇಂದ್ರಶಬ್ದದ ಮೇಲೆ ಘಚ್ ಪ್ರತ್ಯಯವು ನಿಪಾತಿತವಾಗಿದೆ. ಘ ಎಂಬುದಕ್ಕೆ ಇಯಾದೇಶ. ಚಿತ್ವಾದುದರಿಂದ **ಚಿತಃ** ಎಂಬುದರಿಂದ ಅಂತೋದಾತ್ತವಾಗುತ್ತದೆ.

ಇನ್ವತಿ—ಇವಿ ವ್ಯಾಪ್ತೌ ಧಾತು. **ಇದಿತೋನುಮ್ ಧಾತೋಃ** ಎಂಬುದರಿಂದ ನುಮಾಗಮ. ಲಟ್ ಪ್ರಥಮಪುರುಷ ಏಕವಚನದಲ್ಲಿ ತಿ ಪ್ರತ್ಯಯ. **ಕರ್ತರಿಶಪ್** ಸೂತ್ರದಿಂದ ಶಪ್. ವಿಕರಣವೂ ಪ್ರತ್ಯಯವೂ ಪಿತ್ವಾದುದರಿಂದ **ಅನುದಾತ್ತೌ ಸುಪ್ಪಿತೌ** ಎಂಬುದರಿಂದ ಅನುದಾತ್ತ. ಆಗ ಧಾತುಸ್ವರ ಉಳಿಯುತ್ತದೆ. ಯತ್ ಎಂದು ಹಿಂದೆ ಸಂಬಂಧವಿರುವುದರಿಂದ **ಯೆದ್ವೃತ್ತಾನ್ನಿತ್ಯಂ** ಎಂಬುದರಿಂದ ನಿಘಾತಸ್ವರ ಪ್ರತಿಷೇಧ ಬರುತ್ತದೆ.

। ಸಂಹಿತಾಪಾಠಃ ।

ಸ ಇನ್ಮಹಾನಿ ಸಮಿಥಾನಿ ಮಜ್ಮನಾ ಕೃಣೋತಿ ಯುಧ್ಮ ಓಜಸಾ ಜನೇಭ್ಯಃ ।
ಅಧಾ ಚನ ಶ್ರದ್ದಧತಿ ತ್ವಿಷೀಮತ ಇಂದ್ರಾಯ ವಜ್ರಂ ನಿಘನಿಘ್ನತೇ ವಧಂ ॥ ೫ ॥

॥ ಪದಪಾಠಃ ।

ಸಃ । ಇತ್ । ಮಹಾನಿ । ಸಂಇಥಾನಿ । ಮಜ್ಮನಾ । ಕೃಣೋತಿ । ಯುಧ್ಮಃ । ಓಜಸಾ । ಜನೇಭ್ಯಃ ।
ಅಧ । ಚನ । ಶ್ರತ್ । ದಧತಿ । ತ್ವಿಷೀಮತೇ । ಇಂದ್ರಾಯ । ವಜ್ರಂ । ನಿಘನಿ-ಘ್ನತೇ । ವಧಂ ॥ ೫ ॥

॥ ಸಾಯಣಭಾಷ್ಯಂ ॥

ಸ ಇತ್ ಸ ಏವೇಂದ್ರೋ ಯುಧ್ಮೋ ಯೋದ್ಧಾ ಮಹಾನಿ ಸಮಿಥಾನಿ ಮಹತಃ ಸಂಗ್ರಾಮಾನ್ಮಜ್ಮನಾ ಸರ್ವಸ್ಯ ಶೋಧಕೇನೌಜಸಾ ಬಲೇನ ಕೃಣೋತಿ । ಕರೋತಿ । ಕಿಮರ್ಥಂ । ಜನೇಭ್ಯಃ । ಸ್ತೋತೃಜನಾರ್ಥಂ । ಯೇದೇಂದ್ರೋ ವಧಂ ಹನನಸಾಧನಂ ವಜ್ರಮಾಯುಧಂ ಮೇಘೇಷು ನಿಘನಿಘ್ನತೇ । ನಿಹಂತಿ ಅಧಾ ಚನ ಅನಂತರಮೇವ ತ್ವೀಷೀಮತೇ ದೀಪ್ತಿಮತ ಇಂದ್ರಾಯ ಸರ್ವೇ ಜನಾಃ ಶ್ರದ್ದಧತಿ । ಶ್ರದಿತಿ ಸತ್ಯನಾಮ । ಇಂದ್ರೋ ಬಲವಾನಿತಿ ಯದುಚ್ಯತೇ ತತ್ಸತ್ಯಮೇವೇತಿ ಸರ್ವೇ ಪ್ರತಿಪದ್ಯಂತೇ ॥ ಮಹಾನಿ । ಮಹಾಂತೀತ್ಯಸ್ಯ ತಕಾರಲೋಪಶ್ಛಾಂದಸಃ । ಯದ್ವಾ । ಮಹ್ಯಂತೇ ಪೂಜ್ಯಂತ ಇತಿ ಮಹಾನಿ ಪ್ರವೃದ್ಧಾನಿ । ಘಞರ್ಥೇ ಕವಿಧಾನಮಿತಿ ಕಃ । ಪ್ರತ್ಯಯೆಸ್ವರಃ । ಸಮಿಥಾನಿ । ಇಷ್ ಗತೌ । ಸಂಯಂತಿ ಸಂಗಚ್ಛಂತೇಽಸ್ಮಿನ್ವೀರಾ ಇತಿ ಸಮಿಥಾನಿ ಸಂಗ್ರಾಮಾಃ । ಸಮಿನಾಣಃ । ಉ. ೨-೧೧೧ । ಇತಿ ಥಕ್ಪ್ರತ್ಯಯೆಃ । ಕಿತ್ತ್ವಾದ್ಗುಣಾಭಾವಃ । ಥಾಥಾದಿನೋತ್ತರಪದಾಂತೋದಾತ್ತತ್ವಂ । ಮಜ್ಮನಾ । ಟುಮಸ್ಜೋ ಶುದ್ಧೌ । ಮನಿಪ್ರತ್ಯಯೆಃ । ಝಲಾಂ ಜಶ್ ಝಶಿ । ಪಾ. ೮-೪-೫೩ । ಇತಿ ಸಕಾರಸ್ಯ ಜಶ್ತ್ವಂ ದಕಾರಃ । ತತಶ್ಚುತ್ವಂ ಜಕಾರಃ । ಪ್ರತ್ಯಯೆಸ್ವರಃ । ಅಧ । ಛಾಂದಸಂ ಧತ್ವಂ । ನಿಪಾತಸ್ಯ ಚೇತಿ ಸಾಂಹಿತಿಕೋ ದೀರ್ಘಃ । ತ್ವಿಷೀಮತೇ । ತ್ವಿಷ ದೀಪ್ತೌ । ಇನ್ಸರ್ವಧಾತುಭ್ಯ ಇತೀನ್ಪ್ರತ್ಯಯೆಃ । ದ್ಯುದಾತ್ತತ್ವಂ । ಮತುಪಃ ಪಿತ್ತ್ವಾದನುದಾತ್ತತ್ವೇ ತದೇವ ಶಿಷ್ಯತೇ । ಅನ್ಯೇಷಾಮಪಿ ದೃಶ್ಯತ

ಇತಿ ಸಾಂಹಿತಿಕೋ ದೀರ್ಘಃ । ನಿಘನಿಘ್ನತೇ । ಹಂತೇರ್ವ್ಯತ್ಯಯೇನಾತ್ಮನೇಪದಂ ಬಹುವಚನಂ ಚೆ । ಬಹುಲಂ ಛಂದಸೀತಿ ಶಪಃ ಶ್ಲುಃ । ಗಮಹನೇತ್ಯಾದಿನೋಪಧಾಲೋಪಃ । ಅಭ್ಯಾಸಸ್ಯ ಘತ್ವಂ । ನಿಗಾಗಮಶ್ಚ ಅಗನೀಗಂತೀತಿ ಚ । ಪಾ. ೭-೪-೬೫ । ಇತೀಚಶಬ್ದಃ ಪ್ರಕಾರಾರ್ಥ ಇತ್ಯುಕ್ತತ್ವಾದ್ದಾಧರ್ತ್ಯಾದಾವೇತದ್ದ್ರಷ್ಟವ್ಯಂ ॥

॥ ಪ್ರತಿಪದಾರ್ಥ ॥

ಯುಧ್ಮಃ—ಯೋಧನಾದ । **ಸ ಇತ್**—ಅದೇ ಇಂದ್ರನು । **ಮಹಾನಿ**—ಅದ್ಭುತಗಳಾದ । **ಸಮಿಥಾನಿ**—ಯುದ್ಧಗಳನ್ನು । **ಮಜ್ಮನಾ**—(ಸಕಲವನ್ನೂ) ಶೋಧಿಸತಕ್ಕ (ಶತ್ರುಗಳನ್ನು ನಿರ್ಮೂಲಮಾಡತಕ್ಕ) । **ಓಜಸಾ**—ಶಕ್ತಿಯಿಂದ । **ಜನೇಭ್ಯಃ**—(ತನ್ನ) ಭಕ್ತಜನರ ಹಿತಕ್ಕಾಗಿ । **ಕೃಣೋತಿ**—ಮಾಡುತ್ತಾನೆ (ಯಾವಾಗ ಇಂದ್ರನು) । **ವಧಂ**—ವಧಕಾರಿಯಾದ । **ವಜ್ರಂ**—ತನ್ನ ವಜ್ರಾಯುಧವನ್ನು । **ನಿಘನಿಘ್ನತೇ**—(ಮೇಘಗಳಲ್ಲಿ) ಬಿರುಸಾಗಿ ಎಸೆಯುತ್ತಾನೆಯೋ । **ಅಧಾ ಚನ**—ಆ ಒಡನೆಯೇ । **ತ್ವಿಷೀಮತೇ**—ಪ್ರಜ್ವಲಿಸುವ । **ಇಂದ್ರಾಯ**—ಇಂದ್ರನಿಗೆ । **ಶ್ರದ್ದಧತಿ**—(ಸಕಲರೂ ಸಹ ಇಂದ್ರನು ನಿಜವಾದ ಪರಾಕ್ರಮವುಳ್ಳವನು ಎಂದು) ನಂಬಿಕೆಯನ್ನು ಸೂಚಿಸುವ ಭಕ್ತಿಯನ್ನು ತೋರಿಸುತ್ತಾರೆ ॥

॥ ಭಾವಾರ್ಥ ॥

ಯೋಧನಾದ ಇಂದ್ರನು ತನ್ನ ಭಕ್ತರ ಹಿತಕ್ಕಾಗಿ ಶತ್ರುಗಳಿಂದ ಪ್ರತಿಭಟಿಸಲಶಕ್ಯವಾದ ಶಕ್ತಿಯಿಂದ ಅದ್ಭುತಗಳಾದ ಯುದ್ಧಗಳನ್ನು ಮಾಡುತ್ತಾನೆ. ಯಾವಾಗ ಇಂದ್ರನು ವಧಕಾರಿಯಾದ ತನ್ನ ವಜ್ರಾಯುಧವನ್ನು ಬಿರುಸಾಗಿ ಎಸೆಯುತ್ತಾನೆಯೋ ಆ ಒಡನೆಯೇ ಸಕಲರೂ ಸಹ ಪ್ರಜ್ವಲಿಸುವ ಇಂದ್ರನಿಗೆ ಅವನ ಪರಾಕ್ರಮದಲ್ಲಿ ನಂಬಿಕೆಯಿಡುವ ಭಕ್ತಿಯನ್ನು ಸೂಚಿಸುತ್ತಾರೆ.

English Translation.

Indra, the warrior, engages in many great conflicts for man with his all-purifying prowess; when he hurls his fatal thunderbolt, every one immediately has faith in the resplendent Indra (as being highly powerful).

॥ ವಿಶೇಷ ವಿಷಯಗಳು ॥

ಇತ್—ಇದು ಏವ ಎಂಬ ಪದದ ಅರ್ಥವನ್ನು ಕೊಡುವ ಅವ್ಯಯ.

ಯುಧ್ಮಃ—**ಯೋಧ್ಧಾ** । ಯುದ್ಧಮಾಡುವವನು

ಸಮಿಥಾನಿ—ಸಂಯಂತಿ ಸಂಗಚ್ಛಂತೇಽಸ್ಮಿನ್ ವೀರಾ ಇತಿ ಸಮಿಥಾನಿ ಸಂಗ್ರಾಮಾಃ—ವೀರರಾದವರು ಒಟ್ಟುಗೂಡಿ ನಡೆಸುವ ಯುದ್ಧಗಳು ಎಂದರ್ಥ.

ಮಜ್ಮನಾ—ಟುಮಸ್ಜೋ ಶುದ್ಧೌ ಎಂಬ ಧಾತುವಿನಿಂದ ಹುಟ್ಟಿದ ಈ ಶಬ್ದಕ್ಕೆ ಸರ್ವವನ್ನೂ ಶೋಧಿಸುವುದು ಎಂಬರ್ಥವನ್ನು ಕೊಡುವುದು.

ಅಧಾ ಚೆನ—ಈ ಪದಸಮೂಹವು ಅನಂತರದಲ್ಲಿಯೇ ಎಂಬ ನಿಶ್ಚಿತಾರ್ಥವನ್ನು ಕೊಡುವುದು.

ಶ್ರದ್ಧಧತಿ—**ಶ್ರತ್ ಇತಿ ಸತ್ಯನಾಮ** ಇಂದ್ರನು ಬಲಿಷ್ಠನಾದವನು ಎಂದು ಹೇಳಿದರೆ ಅದನ್ನು ನಿಜವೆಂದು ನಂಬುವರು.

ತ್ವಿಷೀಮತೇ—ಕಾಂತಿಯುಕ್ತನಾದ ಇಂದ್ರನಿಗೆ ಎಂದರ್ಥವು.

॥ ವ್ಯಾಕರಣಪ್ರಕ್ರಿಯಾ ॥

ಮಹಾನಿ—ಮಹತ್ ಶಬ್ದ. ನಪುಂಸಕದಲ್ಲಿ ಬಹುವಚನಕ್ಕೆ ಶಿ ಆದೇಶ ಬಂದಾಗ ಮಹಾಂತಿ ಎಂದು ರೂಪವಾಗುತ್ತದೆ. ಛಾಂದಸವಾಗಿ ಅಲ್ಲಿ ತಕಾರಲೋಪ ಬಂದರೆ ಮಹಾನಿ ಎಂದು ರೂಪವಾಗುತ್ತದೆ. ಅಥವಾ ಮಹ್ಯಂತೇ ಪೂಜ್ಯಂತೇ ಇತಿ ಮಹಾನಿ ಪ್ರವೃದ್ಧಾನಿ (ಉತ್ಕೃಷ್ಟವಾದವುಗಳು) **ಘಞಾರ್ಥೇ ಕವಿಧಾನಮ್** ಎಂಬುದರಿಂದ ಕ ಪ್ರತ್ಯಯ. ಮಹ ಶಬ್ದವಾಗುತ್ತದೆ. ನಪುಂಸಕದಲ್ಲಿ ನುಮಾಗಮ ದೀರ್ಘ. ಪ್ರತ್ಯಯಸ್ವರದಿಂದ ಹಕಾರೋತ್ತರಾಕಾರವು ಉದಾತ್ತವಾಗುತ್ತದೆ.

ಸಮಿಥಾನಿ—ಇಣ್ ಗತೌ ಧಾತು. ಸಂಯಂತಿ ಸಂಗಚ್ಛಂತೇಽಸ್ಮಿನ್ ವೀರಾ ಇತಿ ಸಮಿಥಾನಿ ಸಂಗ್ರಾಮಾಃ ॥ (ವೀರರು ಸೇರುವ ಸ್ಥಳ) **ಸಮೀಣಃ** (ಉ. ಸೂ. ೪-೫೩೨) ಎಂಬುದರಿಂದ ಸಮ್ ಉಪಪದವಾಗಿರುವಾಗ ಇಣ್ ಧಾತುವಿಗೆ ಥಕ್ ಪ್ರತ್ಯಯ. ಕಿತ್ತಾದುದರಿಂದ ಪ್ರತ್ಯಯನಿಮಿತ್ತಕವಾಗಿ ಧಾತುವಿಗೆ ಗುಣ ಬರುವುದಿಲ್ಲ. ಸಮಿಥ ಶಬ್ದವಾಗುತ್ತದೆ. **ಥಾಥಘಞ್** (ಪಾ. ಸೂ. ೬-೨-೧೪೪) ಎಂಬುದರಿಂದ ಸಮಾಸದಲ್ಲಿ ಉತ್ತರಪದಾಂತೋದಾತ್ತಸ್ವರ ಬರುತ್ತದೆ.

ಮಜ್ಮನಾ—ಟುಮಸ್ಜೋ ಶುದ್ಧೌ ಧಾತು. ಮನಿ ಪ್ರತ್ಯಯ. ಮಸ್ಜ್+ಮನ್ ಎಂದಿರುವಾಗ **ಝಲಾಂ ಜಶ್ ಝಶಿ** (ಪಾ. ಸೂ. ೮-೪-೫೩) ಎಂಬುದರಿಂದ ಸಕಾರಕ್ಕೆ ಜಸ್ತ್ವದಿಂದ ದಕಾರಾದೇಶ. **ಸ್ತೋಃ-ಶ್ಚುನಾಶ್ಚುಃ** ಸೂತ್ರದಿಂದ ಜಕಾರಯೋಗವಿರುವುದರಿಂದ ಶ್ಚುತ್ವದಿಂದ ಜಕಾರಾದೇಶ. ಪ್ರತ್ಯಯಸ್ವರದಿಂದ ಮನ್ನಿನ ಅಕಾರವು ಉದಾತ್ತವಾಗುತ್ತದೆ. ತೃತೀಯಾಏಕವಚನಾಂತರೂಪ.

ಅಧ—ಅಥ ಎಂದಿರುವಾಗ ಛಾಂದಸವಾಗಿ ಥಕಾರಕ್ಕೆ ಧತ್ವ. **ನಿಪಾತಸ್ಯ ಚ** (ಪಾ. ಸೂ. ೬-೩-೧೩೬) ಎಂಬುದರಿಂದ ಇದಕ್ಕೆ ನಿಪಾತಸಂಜ್ಞೆ ಇರುವುದರಿಂದ ಸಂಹಿತಾದಲ್ಲಿ ದೀರ್ಘ ಬರುತ್ತದೆ.

ತ್ವಿಷೀಮತೇ—ತ್ವಿಷ ದೀಪ್ತೌ ಧಾತು. ಇನ್ ಸರ್ವಧಾತುಭ್ಯಃ (ಉ. ಸೂ. ೪-೧೧೭) ಎಂಬುದರಿಂದ ಇನ್ ಪ್ರತ್ಯಯ. ತ್ವಿಷಿನ್ ಶಬ್ದವಾಗುತ್ತದೆ. ನಿತ್ ಪ್ರತ್ಯಯಾಂತವಾದುದರಿಂದ ಆದ್ಯುದಾತ್ತಸ್ವರ ಬರುತ್ತದೆ. ತ್ವಿಷೀ ಅಸ್ಯ ಅಸ್ತಿ ಎಂಬರ್ಥದಲ್ಲಿ **ತದಸ್ಯಾಸ್ತ್ಯಸ್ಮಿನ್** ಸೂತ್ರದಿಂದ ಮತುಪ್ ಪ್ರತ್ಯಯ. ಮತುಪ್ ಪಿತ್ತಾದುದರಿಂದ ಅನುದಾತ್ತವಾಗುವುದರಿಂದ ಪೂರ್ವೋಕ್ತವಾದ ಸ್ವರವೇ ಉಳಿಯುತ್ತದೆ. ತ್ವಿಷಿಮತ್ ಎಂದಿರುವಾಗ **ಅನ್ಯೇಷಾಮಪಿ ದೃಶ್ಯತೇ** ಎಂಬುದರಿಂದ ಸಂಹಿತಾದಲ್ಲಿ ಪೂರ್ವಪದಕ್ಕೆ ದೀರ್ಘ. ಚತುರ್ಥೀ ಏಕವಚನದಲ್ಲಿ ತ್ವಿಷೀಮತೇ ಎಂದು ರೂಪವಾಗುತ್ತದೆ.

ನಿಘನಿಘ್ನತೇ—ಹನ ಹಿಂಸಾಗತ್ಯೋಃ ಧಾತು. ವ್ಯತ್ಯಯೋಬಹುಲಂ ಎಂಬುದರಿಂದ ಆತ್ಮನೇಪದಪ್ರತ್ಯಯವೂ ಬಹುವಚನವೂ ಬರುತ್ತದೆ. **ಬಹುಲಂಛಂದಸಿ** ಎಂಬುದರಿಂದ ಶಪಿಗೆ ಶ್ಲು ಆದೇಶ **ಶ್ಲೌ** ಎಂಬುದರಿಂದ ಧಾತುವಿಗೆ ದ್ವಿತ್ವ. **ಗಮಹನಜನ**—(ಪಾ. ಸೂ. ೬-೪-೯೮) ಎಂಬುದರಿಂದ ಧಾತುವಿನ ಉಪಧಾಭೂತ ಅಕಾರಕ್ಕೆ ಲೋಪ. ಛಾಂದಸವಾಗಿ ಅಭ್ಯಾಸಕ್ಕೆ ಘೆತ್ವವೂ ನಿಕ್ ಆಗಮವೂ ಬರುತ್ತವೆ. **ಹೋಹಂತೇಃ**

ಸೂತ್ರದಿಂದ ಧಾತುವಿನ ಹಕಾರಕ್ಕೆ ಕುತ್ವದಿಂದ ಢಕಾರಾದೇಶ. ಅನಕಾರದ ಪಂದಲ್ಲಿರುವುದರಿಂದ ಆತ್ಮನೇಪದೇಷ್ವನತಃ ಸೂತ್ರದಿಂದ ಝ ಪ್ರತ್ಯಯಕ್ಕೆ ಅತಾದೇಶ. ನಿಢೆನಿಳ್ನೆತೇ ಎಂದು ರೂಪವಾಗುತ್ತದೆ. ಆಗನೀಗಂತೀತಿ ಚೆ (ಪಾ. ಸೂ. ೭-೪-೬೫) ಎಂಬಲ್ಲಿ ಇತಿ ಶಬ್ದವು ಪ್ರಕಾರಾರ್ಥದಲ್ಲಿ (ಇದರಂತೆ ಇರುವುದು) ಇದೆ ಎಂಬುದರಿಂದ ದಾಢರ್ತಿ. ಇತ್ಯಾದಿ ರೂಪಗಳು ಛಂದಸ್ಸಿನಲ್ಲಿ ಮಾತ್ರ ಇರುವಂತೆಯೇ ಇದನ್ನೂ ಆ ಗಣದಲ್ಲಿ ಸೇರಿಸಿ ಭಾಂದಸಕಾರ್ಯಗಳನ್ನು ಹೇಳಬೇಕು.

॥ ಸಂಹಿತಾಪಾಠಃ ॥

ಸ ಹಿ ಶ್ರವಸ್ಯುಃ ಸದನಾನಿ ಕೃತ್ರಿಮಾ ಕ್ಷ್ಮಯಾ ವೃಧಾನ ಓಜಸಾ ವಿನಾಶಯನ್ ।
ಜ್ಯೋತೀಂಷಿ ಕೃಣ್ವನ್ನವೃಕಾಣಿ ಯಜ್ಯವೇಽವ ಸುಕ್ರತುಃ ಸರ್ತವಾ ಅಪಃ ಸೃಜತ್ ॥ ೬ ॥

॥ ಪದಪಾಠಃ ॥

ಸಃ । ಹಿ । ಶ್ರವಸ್ಯುಃ । ಸದನಾನಿ । ಕೃತ್ರಿಮಾ । ಕ್ಷ್ಮಯಾ । ವೃಧಾನಃ । ಓಜಸಾ । ವಿನಾಶಯನ್ ।
ಜ್ಯೋತೀಂಷಿ । ಕೃಣ್ವನ್ । ಅವೃಕಾಣಿ । ಯಜ್ಯವೇ । ಅವ । ಸುಕ್ರತುಃ । ಸರ್ತವೈ । ಅಪಃ । ಸೃಜತ್ ॥ ೬ ॥

॥ ಸಾಯಣಭಾಷ್ಯ ॥

ಶ್ರವಸ್ಯುರನ್ನಂ ಯಶೋ ವಾತ್ಮನ ಇಚ್ಛನ್ ಕೃತ್ರಿಮಾ ಕೃತ್ರಿಮಾಣಿ ಕ್ರಿಯಮಾಣಾನಿ ನಿರ್ವೃತ್ತಾನಿ ಸದನಾನ್ಯಸುರಪುರಾಣ್ಯೋಜಸಾ ಬಲೇನ ವಿನಾಶಯನ್ ಕ್ಷ್ಮಯಾ ಭೂಮ್ಯಾ ಸಮಾನಂ ವೃಧಾನೋ ವರ್ಧನಶೀಲಃ । ಯದ್ವಾ । ಕ್ಷ್ಮಾಯೇತ್ಯೋಜೋವಿಶೇಷಣಂ । ಶತ್ರೂಣಾಮಭಿಭವಿತ್ರಾ ಬಲೇನೇತ್ಯರ್ಥಃ । ಜ್ಯೋತೀಂಷಿ ಸೂರ್ಯಾದೀನಿ ವೃತ್ರೇಣಾವೃತಾನ್ಯವೃಕಾಣಿ ವೃಕೇಣಾವರಕೇಣ ತೇನ ರಹಿತಾನಿ ಕೃಣ್ವನ್ । ಕುರ್ವನ್ ಸುಕ್ರತುಃ ಶೋಭನಕರ್ಮಸಹಿತ ಏವಂವಿಧಃ ಸ ಖಿಲ್ವಿಂದ್ರೋ ಯಜ್ಯವೇ ಯಷ್ಟ್ರೇ ಯಜಮಾನಾಯ ತದರ್ಥಂ ಸರ್ತವೈ ಸರಣಾಯಾಪೋ ವೃಷ್ಟಿಲಕ್ಷಣಾನ್ಯುದಕಾನ್ಯವಾಸೃಜತ್ । ವೃಷ್ಟಿಂ ಕೃತವಾನಿತ್ಯರ್ಥಃ ॥ ಕೃತ್ರಿಮಾ । ಡುಕೃಞ್ ಕರಣೇ । ದ್ವಿತಃ ಕ್ರಿಃ । ಪಾ. ೩-೩-೮೮ । ಇತಿ ಭಾವೇ ಕ್ರಿ-

ಪ್ರತ್ಯಯಃ । ಶ್ರೇರ್ಮಮ್ನಿತ್ಯಂ । ಪಾ. ೪-೪-೨೦ । ಇತಿ ನಿರ್ವೃತ್ತಾರ್ಥೇ ಮಪ್ । ತಸ್ಯ ಪಿತ್ತ್ವಾದನುದಾತ್ತತ್ವೇ ಕ್ವಿಪ್ರತ್ಯಯಸ್ವರ ಏವ ಶಿಷ್ಯತೇ । ಶೇಶ್ಛಂದಸಿ ಬಹುಲಮಿತಿ ಶೇರ್ಲೋಪಃ । ಕ್ಷ್ಮಯಾ । ಕ್ಷ್ಮಾಷ್ ಸಙನೇ । ಕ್ಷ್ಮತೇ ಹ್ಯಾಣಜಾತಕೃತಮುಪದ್ರವಮಿತಿ ಕ್ಷ್ಮಾ । ಷಿದ್ಭಿದಾದಿಭ್ಯೋಽ ಙ್ । ಪಾ. ೩-೩-೧೦೪ । ಇತ್ಯಙ್ಪ್ರತ್ಯಯಃ । ತತಷ್ಟಾಪ್ । ವ್ಯತ್ಯಯೇನ ಧಾತೋರುಪಧಾಲೋಪಃ । ಛಾಂದಸಂ ವಿಭಕ್ತ್ಯುದಾತ್ತತ್ವಂ । ಯದ್ವಾ । ಅಯಂ ಧಾತುರಭಿಭವಾರ್ಥಃ । ಷಹ ಅಭಿಭವ ಇತಿ ಸಹನಸ್ಯಾಭಿಭವಾರ್ಥತ್ವಾತ್ । ಅಸ್ಮಾದೌಣಾದಿಕೋ ಮನಿನ್ । ವ್ಯತ್ಯಯೇನ ಸ್ತ್ರೀಲಿಂಗತಾ । ಮನಃ । ಪಾ. ೪-೧-೧೧ । ಇತಿ ಙೀಪೋ ನಿಷೇಧೇ । ಡಾಬುಭಾಭ್ಯಾಮನ್ಯತರಸ್ಯಾಂ । ಪಾ. ೪-೧-೧೩ । ಇತಿ ಡಾಪ್ । ಟಿಲೋಪಃ । ವೃಧಾನಃ । ಶಾಚ್ಛೀಲಿಕಶ್ಚಾನಶ್ । ಬಹುಲಂ ಛಂದಸೀತಿ ಶಪೋ ಲುಕ್ । ಚಿತ ಇತ್ಯಂತೋದಾತ್ತತ್ವಂ । ಅವೃಕಾಣಿ । ವೃಞ್ ವರಣೇ । ಸೃವೃಭೂಶುಷಿಮುಷಿಭ್ಯಃ ಕಿತ್ । ಉ. ೩-೪೧ । ಇತಿ ಕನ್ಪ್ರತ್ಯಯಃ । ಬಹುವ್ರೀಹೌ ನಞ್ಸ್ನಭ್ಯಾಮಿತ್ಯುತ್ತರಪದಾಂತೋದಾತ್ತತ್ವಂ । ಯಜ್ಯವೇ । ಯಜಿಮನಿಶುಂಧಿದಸಿಜನಿಭ್ಯೋ ಯುರಿತಿ ಯುಪ್ರತ್ಯಯಃ । ವೃಷಾದೇರಾಕೃತಿಗಣತ್ವಾದಾದ್ಯುದಾತ್ತತ್ವಂ । ಸುಕ್ರತುಃ। ಬಹುವ್ರೀಹೌ ಕ್ರತ್ವಾದಯಶ್ಚೇತ್ಯುತ್ತರಪದಾದ್ಯುದಾತ್ತತ್ವಂ । ಸರ್ತವೈ । ಸೃ ಗತೌ । ಕೃತ್ಯಾರ್ಥೇ ತವೈಕೇನಿತಿ ಧಾನೇ ತವೈಪ್ರತ್ಯಯಃ । ಗುಣಃ । ಅಂತಶ್ಚ ತವೈ ಯುಗಪತ್ । ಪಾ. ೬-೧-೨೦೦ । ಇತ್ಯಾದ್ಯೆಂತ್ಯೋರ್ಯುಗಪದುದಾತ್ತತ್ವಂ । ಅಪಃ । ಊಡಿದಮಿತಿ ಶಸ ಉದಾತ್ತತ್ವಂ । ಸೃಜತ್ । ಲಙಿ ಬಹುಲಂ ಛಂದಸ್ಯಮಾಙ್ಯೋಗೇಽಪೀತ್ಯಡಭಾವಃ ॥

॥ ಪ್ರತಿಪದಾರ್ಥ ॥

ಶ್ರವಸ್ಯುಃ—ಅನ್ನವನ್ನು ಅಥವಾ ಯಶಸ್ಸನ್ನು ಅಪೇಕ್ಷಿಸುತ್ತಲೂ । **ಕೃಶ್ರಿಮಾ**—ಚೆನ್ನಾಗಿ ಕಟ್ಟಿದ । **ಸದನಾನಿ**—(ರಾಕ್ಷಸರ) ಮನೆಗಳನ್ನು । **ಓಜಸಾ**—ತನ್ನ ಬಲದಿಂದ । **ವಿನಾಶಯ್ಯ**—ನಾಶಪಡಿಸುತ್ತಲೂ । **ಕ್ಷ್ಮಯಾ**—ಪೃಥ್ವಿಗೆ ಸಮಾನವಾಗಿ ಅಥವಾ ತನ್ನ ಶಕ್ತಿಗೆ ಸಮಾನವಾಗಿ । **ವೃಧಾನಃ**—ವಿಸ್ತಾರವಾಗಿ ಬೆಳೆಯುತ್ತಲೂ । **ಜ್ಯೋತೀಂಷಿ**—ಸೂರ್ಯಾದಿ ಜ್ಯೋತಿರ್ಮಂಡಲಗಳನ್ನೂ । **ಅವೃಕಾಣಿ**—(ವೃತ್ರರೂಪವಾದ) ಮರೆಯಿಲ್ಲದಿರುವಂತಹವುಗಳನ್ನಾಗಿ । **ಕೃಣ್ವಿ**—ಮಾಡುತ್ತಲೂ । **ಸುಕ್ರತುಃ**—ಶ್ರೇಷ್ಠವಾದ ಕರ್ಮದಿಂದ ಕೂಡಿಯೂ ಇರುವ । **ಸ ಹಿ**—ಅದೇ ಇಂದ್ರನು । **ಯಜ್ಯವೇ**—ಯಾಗಮಾಡತಕ್ಕ ಯಜಮಾನನಿಗಾಗಿ । **ಸರ್ತವೈ**—ಹರಿಯುವುದಕ್ಕೆ । **ಅಪಃ**—(ವೃಷ್ಟಿರೂಪವಾದ) ನೀರುಗಳನ್ನು । **ಅವ ಸೃಜತ್**—ಬಿಡಿಸಿದನು (ಮಳೆಯನ್ನು ಸುರಿಸಿದನು).

॥ ಭಾವಾರ್ಥ ॥

ಯಶಸ್ಸನ್ನು ಅಪೇಕ್ಷಿಸುತ್ತಲೂ, ತನ್ನ ಬಲದಿಂದ ಭದ್ರವಾಗಿ ಕಟ್ಟಿದ ರಾಕ್ಷಸರ ಮನೆಗಳನ್ನು ನಾಶಪಡಿಸುತ್ತಲೂ, ಪೃಥ್ವಿಗೆ ಸಮಾನವಾಗಿ ವಿಸ್ತಾರವಾಗಿ ಬೆಳೆಯುತ್ತಲೂ, ಸೂರ್ಯಾದಿ ಜ್ಯೋತಿರ್ಮಂಡಲಗಳನ್ನೂ ವೃತ್ರರೂಪವಾದ ಮರೆಯಿಂದ ತಪ್ಪಿಸುತ್ತಲೂ ಮತ್ತು ಶ್ರೇಷ್ಠವಾದ ಕರ್ಮಗಳನ್ನು ಮಾಡುತ್ತಲೂ ಇರತಕ್ಕ ಅದೇ ಇಂದ್ರನು ಯಾಗಮಾಡತಕ್ಕ ಯಜಮಾನನ ಉಪಯೋಗಕ್ಕೆ ಮಳೆಯನ್ನು ಸುರಿಸಿ ನೀರನ್ನು ಹರಿಸಿದನು.

English Translation.

Desiring of fame, destroying the well-built houses of the Asuras with his power, expanding like the earth and setting the (heavenly) luminaries free from concealment, he, the performer of good deeds enables the waters to flow for the sake of his worshippers.

॥ ವಿಶೇಷ ವಿಷಯಗಳು ॥

ಶ್ರವಸ್ಯುಃ—ಅನ್ನಂ ಯಶೋ ವಾತ್ಮನ ಇಚ್ಛನ್—ಅನ್ನವನ್ನಾಗಲಿ ಕೀರ್ತಿಯನ್ನಾಗಲಿ ಅಪೇಕ್ಷಿಸುವವನು.

ಕೃತ್ರಿಮೋ—ಕೃತ್ರಿಮಾಣಿ ಕ್ರಿಯಯೋ ನಿರ್ವೃತ್ತಾನಿ—ಕಲ್ಪನೆ ಮಾಡಿದುದು. ಸ್ವಪ್ರಯತ್ನದಿಂದ ಸಾಧಿಸಿದುದು ಎಂದರ್ಥ.

ಕ್ಷ್ಮ್ಯಯಾ—ಶತ್ರುಗಳನ್ನು ನಾಶಗೊಳಿಸುವ ಬಲ ಎಂದರ್ಥ. ಇದು ಓಜಸಾ ಎಂಬ ಪದಕ್ಕೆ ವಿಶೇಷಣವಾಗಿದೆ,

ಜ್ಯೋತೀಂಷಿ ಅವೃಕಾಣಿ—ವೃತ್ರಾಸುರನು ಅಂತರಿಕ್ಷಗತನಾಗಿ ಸೂರ್ಯಾದಿ ಸಕಲ ಗ್ರಹಗಳನ್ನೂ ಆವರಿಸಿದ್ದನು. ಇಂದ್ರನು ಅಂತಹ ವೃತ್ರಾಸುರನನ್ನು ಕೊಂದು ಗ್ರಹಗಳಿಗೆ ವೃತ್ರನಿಂದ ಬಂದಿದ್ದ ಸಮಸ್ತ ಪೀಡೆಯನ್ನೂ ಪರಿಹರಿಸಿದನು. ಅಂದರೆ ವೃತ್ರನಿಂದ ಬಂದಿದ್ದ ಸಮಸ್ತ ಆವರಣಗಳನ್ನೂ ನಾಶಮಾಡಿದನು ಎಂದು ತಾತ್ಪರ್ಯ.

ಯಜ್ಯವೇ—ಯಷ್ಟ್ರೇ—ಯಾಗ ಮಾಡುವ ಯಜಮಾನನಿಗೆ ಎಂದರ್ಥ.

ಸರ್ತವೈ—ಸೃಗತೌ ಎಂಬ ಧಾತುನಿಷ್ಪನ್ನವಾದ ಈ ಶಬ್ದವು ಸಂಚಾರಕ್ಕಾಗಿ ಹರಿಯುವುನಕ್ಕಾಗಿ ಎಂಬರ್ಥವನ್ನು ಸೂಚಿಸುವುದು.

॥ ವ್ಯಾಕರಣಪ್ರಕ್ರಿಯಾ ॥

ಶ್ರವಸ್ಯುಃ—ಶ್ರವಃ ಅನ್ನಂ ಆತ್ಮನಃ ಇಚ್ಛತಿ ಶ್ರವಸ್ಯತಿ. **ಸುಪ ಆತ್ಮನಃ ಕ್ಯಚ್** ಎಂಬುದರಿಂದ ಕ್ಯಚ್. ಶ್ರವಸ್ಯತಿ ಇತಿ ಶ್ರವಸ್ಯುಃ **ಕ್ಯಾಚ್ಛಂದಸಿ** ಎಂಬುದರಿಂದ ಉ ಪ್ರತ್ಯಯ. **ಅತೋಲೋಪಃ** ಸೂತ್ರದಿಂದ ಉಪರವಾದಾಗ ಕ್ಯಚಿನ ಅಕಾರಕ್ಕೆ ಲೋಪ. ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ.

ಕೃತ್ರಿಮಾ—ಡುಕೃಞ್ ಕರಣೇ ಧಾತು. ಇಲ್ಲಿ ಡು ಎಂಬುದು **ಆದೇರ್ಣಿಟುಡವಃ** ಎಂಬುದರಿಂದ ಇತ್ವಾಗುತ್ತದೆ. **ತಸ್ಯಲೋಪಃ** ಸೂತ್ರದಿಂದ ಅದಕ್ಕೆ ಲೋಪ. **ಡ್ವಿತಃ ಕ್ತ್ರಿಃ** (ಪಾ. ಸೂ. ೩-೩-೮೮) ಡು ಇತ್ವಾದ ಧಾತುಗಳಿಗೆ ಭಾವಾರ್ಥದಲ್ಲಿ ಕ್ತ್ರಿ ಪ್ರತ್ಯಯ ಬರುತ್ತದೆ ಎಂಬುದರಿಂದ ಈ ಧಾತುವಿಗೆ ಕ್ತ್ರಿ ಪ್ರತ್ಯಯ. **ತ್ರೇರ್ಮಮ್ ನಿತ್ಯಂ** (ಪಾ. ಸೂ. ೪-೪-೨೦) ಎಂಬುದರಿಂದ ನಿವೃತ್ತಾರ್ಥದಲ್ಲಿ ತ್ರಿಪ್ರತ್ಯಯಾಂತವಾದುದರಿಂದ ಮಪ್. ತ್ರಿ ಪ್ರತ್ಯಯ ಕಿತ್ವಾದುದರಿಂದ ಧಾತುವಿಗೆ ಗುಣ ಬರುವುದಿಲ್ಲ. ಕೃತ್ರಿಮ ಎಂದು ರೂಪವಾಗುತ್ತದೆ. ಇಲ್ಲಿ ಮಪ್ ಪಿತ್ವಾದುದರಿಂದ ಅನುದಾತ್ತವಾಗುವುದರಿಂದ ಕ್ತ್ರಿಪ್ರತ್ಯಯಸ್ವರವೇ ಉಳಿಯುತ್ತದೆ. ನಪುಂಸಕದ ಬಹುವಚನದಲ್ಲಿ ಶಿ ಆದೇಶಬಂದಾಗ **ಶೇಶ್ಛಂದಸಿಬಹುಲಂ** ಎಂಬುದರಿಂದ ಶಿಗೆ ಲೋಪ.

ಕ್ಷ್ಮಯಾ—ಕ್ಷ್ಮಾಙ್ ಸಹನೇ ಧಾತು. ಕ್ಷ್ಮಾತೇ ಪ್ರಾಣಿಜಾತಕೃತಮುಪದ್ರವಂ ಇತಿ ಕ್ಷ್ಮಾ. **ಷಿದ್‌ಭಿದಾದಿಭ್ಯೋಽಙ್** (ಪಾ. ಸೂ. ೩-೩-೧೦೪) ಎಂಬುದರಿಂದ ಇದು ಷಿತ್ತಾದುದರಿಂದ ಅಙ್ ಪ್ರತ್ಯಯ. ಕ್ಷ್ಮಾ ಎಂದು ಅದಂತವಾದಾಗ **ಅಜಾದ್ಯತಷ್ಟಾಪ್** ಸೂತ್ರದಿಂದ ಸ್ತ್ರೀತ್ವದಲ್ಲಿ ಟಾಪ್. ವ್ಯತ್ಯಯದಿಂದ ಧಾತುವಿನ ಉಪಧೆಗೆ (ಅಕಾರ) ಲೋಪ. ಕ್ಷ್ಮಾ ಶಬ್ದವಾಗುತ್ತದೆ. ತೃತೀಯಾಏಕವಚನದಲ್ಲಿ ಕ್ಷ್ಮಯಾ ಎಂದು ರೂಪವಾಗುತ್ತದೆ. ಛಾಂದಸವಾಗಿ ವಿಭಕ್ತಿಗೆ ಉದಾತ್ತಸ್ವರಬರುತ್ತದೆ. ಅಥವಾ ಈ ಧಾತುವು ಅಭಿಭವ (ತಿರಸ್ಕಾರ) ಎಂಬರ್ಥದಲ್ಲಿ ಇದೆ. **ಷಹ ಅಭಿಭವೇ** ಎಂಬುದರಿಂದ ಸಹನ ಎಂಬುದಕ್ಕೆ ಅಭಿಭವ ಎಂಬರ್ಥವು ದೃಷ್ಟವಾಗಿದೆ. ಇದಕ್ಕೆ ಔಣಾದಿಕವಾದ ಮನಿನ್ ಪ್ರತ್ಯಯ. **ವ್ಯತ್ಯಯೋ ಬಹುಲಂ** ಎಂಬುದರಿಂದ ಸ್ತ್ರೀಲಿಂಗತ್ವವು ಬರುತ್ತದೆ. ನಾಂತವಾದುದರಿಂದ ಸ್ತ್ರೀತ್ವದಲ್ಲಿ ಙೀಪ್ ಪ್ರಾಪ್ತವಾದರೆ **ಮನಃ** (ಪಾ. ಸೂ. ೪-೧-೧೧) ಎಂಬುದರಿಂದ ಙೀಪಿಗೆ ಪ್ರತಿಷೇಧ ಬರುತ್ತದೆ. ಆಗ **ಡಾಬುಭ್ಯಾಮನ್ಯತರಸ್ಯಾಮ್** (ಪಾ. ಸೂ. ೪-೧-೧೩) ಎಂಬುದರಿಂದ ಡಾಪ್ ಪ್ರತ್ಯಯ ಡಿತ್ತಾದುದರಿಂದ ಟಿಗೆ ಲೋಪವಾಗುತ್ತದೆ. ಹಿಂದಿನಂತೆ ತೃತೀಯೈಕವಚನದಲ್ಲಿ ರೂಪವಾಗುತ್ತದೆ.

ವೃಧಾನಃ—ವೃಧು ವೃದ್ಧೌ ಧಾತು. ತಾಚ್ಛೀಲ್ಯ ತೋರುವಾಗ **ತಾಚ್ಛೀಲ್ಯವಯೋ**—ಸೂತ್ರದಿಂದ ಚಾನಶ್ ಪ್ರತ್ಯಯ. ಶಪ್ ಪ್ರಾಪ್ತವಾದರೆ **ಬಹುಲಂಛಂದಸಿ** ಎಂಬುದರಿಂದ ಅದಕ್ಕೆ ಲುಕ್. ಚಾನಶಿಗೆ ಙಿದ್ವದ್ಭಾವವಿರುವುದರಿಂದ ಲಘೂಪಧಗುಣ ಬರುವುದಿಲ್ಲ. **ಚಿತಃ** ಎಂಬುದರಿಂದ ಚಾನಶ್ ಚಿತ್ತಾದುದರಿಂದ ಅಂತೋದಾತ್ತಸ್ವರ ಬರುತ್ತದೆ.

ಅವೃಕಾಣಿ—ವೃಞ್ ವರಣೇ ಧಾತು. **ಸೃವೃಭೂಶುಷಿಮುಷಿಭ್ಯಃಕಕ್** (ಉ. ಸೂ. ೩-೩೧) ಎಂಬುದರಿಂದ ಕಕ್ ಪ್ರತ್ಯಯ. ಕಿತ್ತಾದುದರಿಂದ ಧಾತುವಿಗೆ ಗುಣಬರುವುದಿಲ್ಲ. ನ ವಿದ್ಯಂತೇ ವೃಕಾಣಿ ಯೇಷಾಂ. ಬಹುವ್ರೀಹಿಯಲ್ಲಿ **ನಞ್‌ಸುಭ್ಯಾಂ** ಎಂಬುದರಿಂದ ಉತ್ತರಪದಾಂತೋದಾತ್ತಸ್ವರ ಬರುತ್ತದೆ.

ಯೆಜ್ಯವೇ—ಯಜ ದೇವಪೂಜಾಸಂಗತಿಕರಣದಾನೇಷು ಧಾತು. ಇದಕ್ಕೆ **ಯೆಜಿಮನಿ ಶುಂಧಿ ದಸಿ ಜನಿಭ್ಯೋ ಯುಃ** (ಉ. ಸೂ. ೨-೩೦೦) ಎಂಬುದರಿಂದ ಯು ಪ್ರತ್ಯಯ. ಯಜ್ಯು ಶಬ್ದವಾಗುತ್ತದೆ. ಚತುರ್ಥೀಏಕವಚನಾಂತರೂಪ. ಪ್ರತ್ಯಯಸ್ವರದಿಂದ ಅಂತೋದಾತ್ತವು ಪ್ರಾಪ್ತವಾದರೆ, ವೃಷಾದಿಯು ಆಕೃತಿಗಣವಾದುದರಿಂದ ಅದರಲ್ಲಿ ಸೇರಿರುವುದರಿಂದ **ವೃಷಾದೀನಾಂಚೆ** (ಪಾ. ಸೂ. ೬-೧-೨೦೩) ಎಂಬುದರಿಂದ ಆದ್ಯುದಾತ್ತಸ್ವರ ಬರುತ್ತದೆ.

ಸುಕ್ರತುಃ—ಶೋಭನಃ ಕ್ರತುಃ ಯಸ್ಯ ಸಃ ಸುಕ್ರತುಃ ಬಹುವ್ರೀಹಿಯಲ್ಲಿ **ಕ್ರತ್ವಾದಯೆಶ್ಚ** (ಪಾ.ಸೂ. ೬-೨-೧೧೮) ಎಂಬುದರಿಂದ ಉತ್ತರಪದಾಂತೋದಾತ್ತವು ಬಾಧಿತವಾಗಿ ಉತ್ತರಪದ ಆದ್ಯುದಾತ್ತಸ್ವರ ಬರುತ್ತದೆ.

ಸರ್ತವೈ—ಸೃ ಗತೌ ಧಾತು. **ಕೃತ್ಯಾರ್ಥೇ ತವೈತೇನ್** (ಪಾ. ಸೂ. ೩-೪-೧೪) ಎಂಬುದರಿಂದ ಭಾವಾರ್ಥದಲ್ಲಿ ತವೈ ಪ್ರತ್ಯಯ. ಅರ್ಧಧಾತುಕಸಂಜ್ಞೆ ಇರುವುದರಿಂದ ತನ್ನಿಮಿತ್ತವಾಗಿ ಧಾತುವಿನ ಇಕಿಗೆ ಗುಣ. ಪ್ರತ್ಯಯಸ್ವರದಿಂದ ಮಧ್ಯೋದಾತ್ತವು ಪ್ರಾಪ್ತವಾದರೆ **ಅಂತಶ್ಚ ತವೈಯುಗಪೇತ್** (ಪಾ. ಸೂ. ೬-೧-೨೦೮) ಎಂಬುದರಿಂದ ಆದ್ಯಂತಕ್ಕೆ ಏಕಕಾಲದಲ್ಲಿ ಉದಾತ್ತಸ್ವರ ಬರುತ್ತದೆ.

ಆಪಃ—ಅಪ್ ಶಬ್ದ ದ್ವಿತೀಯಾಬಹುವಚನದರೂಪ. **ಊಡಿದಂಪದಾದಿ** (ಪಾ. ಸೂ. ೬-೧-೧೮೧) ಎಂಬುದರಿಂದ ಶಸ್ ವಿಭಕ್ತಿಗೆ ಉದಾತ್ತಸ್ವರ ಬರುತ್ತದೆ.

ಸೃಜತ್—ಸೃಜ ವಿಸರ್ಗೇ ಧಾತು. ಲಙ್ ಪ್ರಥಮಪುರುಷ ಏಕವಚನದಲ್ಲಿ ತಿಪ್ ಪ್ರತ್ಯಯ. **ಇತಶ್ಚ** ಎಂಬುದರಿಂದ ಅದರ ಇಕಾರಕ್ಕೆ ಲೋಪ. **ತುದಾದಿಭ್ಯಃ ಶಃ** ಎಂಬುದರಿಂದ ಶ ವಿಕರಣ. **ಸಾರ್ವ-**

ಧಾತುಳಮಪಿಚ್ ಎಂಬುದರಿಂದ ಅದಕ್ಕೆ ಜಿದ್ವದ್ಭಾವವಿರುವುದರಿಂದ ಲಘೂಪಧಗುಣ ಬರುವುದಿಲ್ಲ. **ಬಹುಲಂ-ಛಂದಸ್ಯಮಾಙ್‌ಯೋಗೇಽಪಿ** ಎಂಬುದರಿಂದ ಅಡಾಗಮ ಬರುವುದಿಲ್ಲ. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುವುದಿಲ್ಲ.

॥ ಸಂಹಿತಾಪಾಠಃ ॥

ದ್ದಾನಾಯ॒ ಮನ॑ಃ ಸೋಮಪಾವನ್ನಸ್ತು ತ್ತೇ॒ಽರ್ವಾಂಚ್ಚಾ ಹರೀ॑ ವಂದನ-
ಶ್ರುದಾ ಕ॑ೃಧಿ ।
ಯಮಿ॑ಷ್ಠಾಸ॒ಃ ಸಾರ॑ಥಯೋ॒ ಯ ಇಂ॑ದ್ರ ತೇ॒ ನ ತ್ವಾ॒ ಕೇತಾ॒ ಆ
ದ॑ಭ್ನುವಂತಿ ಭೂರ್ಣ॑ಯಃ ॥ ೭ ॥

॥ ಪದಪಾಠಃ ॥

ದ್ದಾನಾ॑ಯೇ । ಮನ॑ಃ । ಸೋಮ॑ಽಪಾವನ್ । ಅ॒ಸ್ತು॒ । ತೇ॒ । ಅ॒ರ್ವಾಂ॑ಚ್ಚಾ । ಹರೀ॒
ಇತಿ॑ । ವಂ॒ದನ॑ಽಶ್ರುತ್ । ಆ । ಕೃ॒ಧಿ॒ ।
ಯಮಿ॑ಷ್ಠಾಸಃ । ಸಾರ॑ಥಯಃ । ಯೇ । ಇಂ॒ದ್ರ॒ । ತೇ॒ । ನ । ತ್ವಾ॒ । ಕೇತಾ॒ಃ ।
ಆ । ದ॒ಭ್ನು॒ವಂ॒ತಿ॒ । ಭೂರ್ಣ॑ಯಃ ॥ ೭ ॥

॥ ಸಾಯಣಭಾಷ್ಯಂ ॥

ಹೇ ಸೋಮಪಾವನ್ ಸೋಮಸ್ಯ ಪಾತರಿಂದ್ರ ತೇ ತ್ವದೀಯಂ ಮನೋ ದಾನಾ-ಯಾಸ್ಮದಭಿಮತಫಲಸ್ಯದಾನಾಯಾಸ್ತು । ಭವತು । ಹೇ ವಂದನಶ್ರುತ್ । ವಂದನಾನಾಂ ಸ್ತುತೀನಾಂ ಶ್ರೋತಃ ಹರೀ ತ್ವದೀಯಾವಶ್ವಾವರ್ವಾಂಚಾಸ್ಮದ್ಯಜ್ಞಾಭಿಮುಖಾವಾ ಕೃಧಿ । ಅಭಿಮುಖ್ಯೇನ ಕುರು । ಹೇ ಇಂದ್ರ ತೇ ತವ ಸ್ವಭೂತಾ ಯೇ ಸಾರಥಯಃ ಸಂತಿ ತೇ ಯೆಮಿಷ್ಠಾಸೋಽತಿಶಯೇನ ಯೆಂತಾರಃ । ಅಶ್ವನಿಯಮನಕುಶಲಾ ಇತ್ಯರ್ಥಃ। ಯಸ್ಮಾದೇವಂ ತಸ್ಮಾತ್ತೇತಾಃ ಪ್ರಾತಿಕೂಲ್ಯಜ್ಞಾತಾರೋ ಭೂರ್ಣಯಃ ಸ್ವಕೀಯಾಯುಧಾದೀನಾಂ ಭರ್ತಾರಃ । ಯದ್ವಾ । ಭೀಕಾಸ್ತೀಕ್ಷ್ಣಾಃ ಶತ್ರವಸ್ತ್ವಾ ತ್ವಾಂ ನಾ ದಭ್ನುವಂತಿ ।

ನ ಹಿಂಸಂತಿ ॥ ಸೋಮಪಾವನ್ । ಅತೋ ಮನಿನ್ನಿತಿ ವನಿಪ್ । ಅಸಂಬುದ್ಧಾವಿತಿ ಪರ್ಯುದಾಸಾದ್ದೀರ್ಘಾಭಾವಃ । ಅರ್ವಾಂಚಾ । ಸುಪಾಂ ಸುಲಗಿತಿ ವಿಭಕ್ತೇರಾಕಾರಃ । ವಂದನಶ್ರುತ್ । ವದಿ ಅಭಿವಾದನಸ್ತುತ್ಯೋಃ । ಇದಿತ್ತ್ವಾನ್ನುಮ್ । ಭಾವೇ ಲ್ಯುಟ್ । ಕೇಷಾಂ ಶ್ರೋತಾ । ಶ್ರು ಶ್ರವಣೇ। ಕ್ವಿಪಿ ತುಗಾಗಮಃ । ಯಮಿಷ್ಠಾಸಃ । ಯಂತುಃ ಶದ್ಯಾತ್ತುಶ್ಛಂದಸೀತೀಷ್ಠನ್ಪ್ರತ್ಯಯಃ । ತುರಿಷ್ಠೇಮೇಯಃಸ್ವಿತಿ ತೃಲೋಪಃ । ನಿತ್ತ್ವಾದಾದ್ಯುದಾತ್ತತ್ವಂ । ಅಜ್ಜಸೇರಸುಗಿತ್ಯಸುಕ್ । ಕೇತಾಃ । ಕಿತ ಜ್ಞಾನೇ । ಚಿಕೇತತಿ ಪ್ರತಿಕೂಲಂ ಜಾನಂತೀತಿ ಕೇತಾಃ । ಪಚಾದ್ಯಚ್ । ವೃಷಾದೇರಾಕೃತಿಗಣತ್ವಾದಾದ್ಯುದಾತ್ತತ್ವಂ। ಯದ್ವಾ । ಪ್ರತಿಕೂಲತಯಾ ಜ್ಞಾಯಂತ ಇತಿ ಕೇತಾಃ । ಕರ್ಮಣಿ ಘಞ್ । ಞಿತ್ತ್ವಾದಾದ್ಯುದಾತ್ತತ್ವಂ। ದಭ್ನುವಂತಿ । ದನ್ಭು ದಂಭೇ । ಸ್ವಾದಿತ್ವಾಚ್ಛ್ನುಃ । ತಸ್ಯ ಜಿತ್ತ್ವಾದನಿದಿತಾಮಿತಿ ನಲೋಪಃ। ಸಂಯೋಗಪೂರ್ವತ್ವೇನ ಹುಶ್ನುವೋರಿತಿ ಯಣಾದೇಶಾಭಾವೇ ಽಚಿ ಶ್ನುಧಾತ್ವಿತ್ಯಾದಿನೋವಜಾದೇಶಃ । ಭೂರ್ಣಯಃ । ಭೃಞ್ ಭರಣೇ । ಘೃಣಿಃ ಪೃಶ್ನಿರಿತ್ಯಾದೌ । ಉ. ೪-೫೨ । ಅಸ್ಮಾನ್ನಿಪ್ರತ್ಯಯಾಂತೋ ನಿಪಾತ್ಯತೇ । ಋತ ಉತ್ವಂ ದೀರ್ಘಶ್ಚ । ಯದ್ವಾ । ಭ್ಯಾ ಭಯೇ ಇತ್ಯಸ್ಮಾತ್ಕೃತ್ಯಲ್ಯುಟೋ ಬಹುಲಮಿತಿ ಕರ್ತರಿ ಕ್ತಿನ್ಯುದೋಷ್ಮ್ಯಪೂರ್ವಸ್ಯೇತ್ಯುತ್ವಂ । ಹಲಿ ಚೇತಿ ದೀರ್ಘಃ । ಋಕಾರಲ್ವಾದಿಭ್ಯಃ ಕ್ತಿನ್ನಿಷ್ಠಾವದ್ಭವತಿ । ಪಾ. ೮-೨-೪೪-೧ । ಇತಿ ನಿಷ್ಠಾವದ್ಭಾವಾನ್ನತ್ವಂ । ನಿತ್ತ್ವಾದಾದ್ಯುದಾತ್ತತ್ವಂ ॥

॥ ಪ್ರತಿಪದಾರ್ಥ ॥

ಸೋಮಪಾವನ್—ಸೋಮರಸವನ್ನು ಪಾನಮಾಡತಕ್ಕ ಎಲೈ ಇಂದ್ರನೇ । **ತೇ**—ನಿನ್ನ । **ಮನಃ**—ಮನಸ್ಸು । **ದಾನಾಯ**—(ನಮ್ಮ ಇಷ್ಟಾರ್ಥಗಳನ್ನು) ದಯಪಾಲಿಸಲು । **ಅಸ್ತು**—ಆಗಲಿ (ಒಲಿಯಲಿ) । **ವಂದನಶ್ರುತ್**—(ನಮ್ಮ) ಸ್ತೋತ್ರಗಳನ್ನು ಕೇಳತಕ್ಕ ಎಲೈ ಇಂದ್ರನೇ । **ಹರೀ**—ನಿನ್ನ ಕುದುರೆಗಳನ್ನು । **ಅರ್ವಾಂಚಾ**—(ನಮ್ಮ) ಯಜ್ಞಾಭಿಮುಖವಾಗಿ । **ಆ ಕೃಧಿ**—ಬರುವಂತೆ ಮಾಡು । **ಇಂದ್ರ**—ಎಲೈ ಇಂದ್ರನೇ! **ತೇ**—ನಿನ್ನ । **ಯೇ ಸಾರಥಯಃ**—ಯಾವ ಸಾರಥಿಗಳಿದ್ದಾರೋ (ಅವರು) । **ಯಮಿಷ್ಠಾಸಃ**—ಕುದುರೆಗಳನ್ನು ಸ್ವಾಧೀನದಲ್ಲಿಟ್ಟುಕೊಂಡು ಓಡಿಸತಕ್ಕವರು (ಆದ್ದರಿಂದ) । **ಕೇತಾಃ**—ತಂತ್ರಿಗಳೂ ಅಥವಾ ಕಪಟಿಗಳೂ (ನಿನ್ನ ಶಕ್ತಿಯನ್ನು) ತಿಳಿದವರೂ । **ಭೂರ್ಣಯಃ**—(ತಮ್ಮ) ಆಯುಧಗಳನ್ನು ಹಿಡಿದವರೂ ಅಥವಾ ನಿನ್ನ ಶಕ್ತಿಗೆ ಭಯಗೊಂಡವರೂ ಕ್ರೂರಿಗಳೂ ಆದ ಶತ್ರುಗಳು । **ತ್ವಾ**—ನಿನ್ನನ್ನು । **ನ ಅ ದಭ್ನುವಂತಿ**—ಹಿಂಸೆ ಮಾಡಲಾರರು (ಜಯಿಸಲಾರರು).

॥ ಭಾವಾರ್ಥ ।

ಸೋಮರಸಪಾನಮಾಡತಕ್ಕ ಎಲೈ ಇಂದ್ರನೇ, ನಿನ್ನ ಮನಸ್ಸು ನಮ್ಮ ಇಷ್ಟಾರ್ಥಗಳನ್ನನುಗ್ರಹಿಸಲು ಒಲಿಯಲಿ. ನಮ್ಮ ಸ್ತೋತ್ರಗಳನ್ನು ಕೇಳತಕ್ಕವನೇ, ನಿನ್ನ ಕುದುರೆಗಳನ್ನು ನಮ್ಮ ಯಜ್ಞಾಭಿಮುಖವಾಗಿ ಓಡಿಬರುವಂತೆ ಮಾಡು. ಎಲೈ ಇಂದ್ರನೇ, ನಿನ್ನ ಸಾರಥಿಗಳು ನಿನ್ನ ಕುದುರೆಗಳನ್ನು ಸ್ವಾಧೀನದಲ್ಲಿಟ್ಟುಕೊಂಡು ಓಡಿಸುವುದರಲ್ಲಿ ನಿಪುಣರು. ನಿನ್ನ ಶಕ್ತಿಯನ್ನು ಅರಿತವರೂ ಕ್ರೂರಿಗಳೂ ಆದ ನಿನ್ನ ಶತ್ರುಗಳು ನಿನ್ನನ್ನು ಜಯಿಸಲಾರರು.

English Translation.

Drinker of the soma-juice, may your mind be disposed to grant our desires ; hearer of praises, let your horses be present (at our sacrifice); your charioteers are experts in restraining your horses ; thererore, (your enemies) cherishing malevolent feeligs against you and carrying arms cannot injure you.

॥ ವಿಶೇಷ ವಿಷಯಗಳು ॥

ಸೋಮಪಾವನ್—ಸೋಮಪಾಶಬ್ದಕ್ಕೆ ಸೋಮಪಾನವಮಾಡುವ ಇಂದ್ರನು ಎಂದರ್ಥ. ಸೋಮಪಾ ಶಬ್ದದ ಸಂಬೋಧನಪ್ರಥಮಾವಿಭಕ್ತಿಯರೂಪ ಸೋಮಪಾವನ್ ಎಂದಾಗುವುದು. ಎಲೈ ಸೋಮಪಾನ ಮಾಡುವ ಇಂದ್ರನೇ ಎಂದರ್ಥ.

ವಂದನಶ್ರುತ್—**ವಂದನಾನಾಂ ಸ್ತುತೀನಾಂ ಶ್ರೋತಃ**—ಈ ಪದವೂ ಸಂಬೋಧನ ಪ್ರಥಮಾ ವಿಭಕ್ತಿಯ ಏಕವಚನ. ವಂದನಶಬ್ದಕ್ಕೆ ಸ್ತೋತ್ರ, ಸ್ತುತಿ ಎಂದರ್ಥ. ಸ್ತುತಿಯನ್ನು ಕೇಳುವುದರಲ್ಲಿ ಅತ್ಯಾ ಸಕ್ತನು ಎಂದರ್ಥವಾಗುವುದು.

ಆರ್ವಾಞ್ಚಾ ಹರೀ—ಎಲೈ ಇಂದ್ರನೇ, ನಿನ್ನ ಬಲಿಷ್ಠವಾದ ಕುದುರೆ ನಮ್ಮ ಯಜ್ಞಾಭಿಮುಖವಾಗಲಿ ಎಂದರೆ ನಾವು ಮಾಡುವ ಯಾಗಕ್ಕೆ ನೀನು ರಥಸಹಿತನಾಗಿ ಬಂದು ಹವಿಸ್ಸನ್ನು ಸ್ವೀಕರಿಸು ಎಂದು ಪ್ರಾರ್ಥಿಸುವ ಪ್ರಕರಣವಿದು.

ಕೇತಾಃ—**ಪ್ರತಿಕೂಲ್ಯಜ್ಞಾತಾರಃ**—**ಚಿಕೇತತಿ ಪ್ರತಿಕೂಲಂ ಜಾನಂತೀತಿ ಕೇತಾಃ** । **ಯದ್ವಾ** । **ಪ್ರತಿಕೂಲತಯಾ ಜ್ಞಾಯಂತೇ ಇತಿ ಕೇತಾಃ** । ಎಲ್ಲವನ್ನೂ ವಿರುದ್ಧವಾಗಿ ಭಾವಿಸುವವರು. ಶತ್ರುಗಳು ಎಂದರ್ಥ.

ಧೂರ್ಣಯಃ—ಆಯುಧಗಳಿಗೆ ಯಜಮಾನರಾದವರು ಅಥವಾ ಹೆದರಿದ ಶತ್ರುಗಳು ಎಂದು ಎರಡು ರೀತಿಯಾಗಿಯೂ ಅರ್ಥಮಾಡಿದ್ದಾರೆ.

॥ ವ್ಯಾಕರಣಪ್ರಕ್ರಿಯಾ ॥

ಸೋಮಪಾವನ್—ಪಾ ಪಾನೇ ಧಾತು. **ಆತೋಮನಿನ್‌ಕ್ವನಿಪ್** (ಪಾ. ಸೂ. ೩-೨-೭೪) ಎಂಬುದರಿಂದ ವನಿಪ್ ಪ್ರತ್ಯಯ. ಸೋಮಪಾವನ್ ಶಬ್ದವಾಗುತ್ತದೆ. ಸಂಬುದ್ಧಿಯಲ್ಲಿ **ಸರ್ವನಾಮಸ್ಥಾನೇಚಾಸಂಬುದ್ಧೌ** ಎಂಬಲ್ಲಿ ಅಸಂಬುದ್ಧೌ ಎಂದು ಪರ್ಯುದಾಸ ಮಾಡಿರುವುದರಿಂದ ನಾಂತೋಪಧಕ್ಕೆ ದೀರ್ಘ ಬರುವುದಿಲ್ಲ. **ಹಲ್‌ಙ್ಯಾಭ್ಭ್ಯೋ**- ಸೂತ್ರದಿಂದ ಸುಲೋಪ. **ನಜಾಸಂಬುದ್ಧ್ಯೋಃ** ಎಂದು ನಿಷೇಧಮಾಡಿರುವುದರಿಂದ ನಲೋಪ ಬರುವುದಿಲ್ಲ. **ಆಮಂತ್ರಿತಸ್ಯಚ** ಎಂಬುದರಿಂದ ನಿಘಾತಸ್ವರ ಬರುತ್ತದೆ.

ಆರ್ವಾಂಚಾ—ಆರ್ವಾಂಚ್+ಟಾ ಎಂದಿರುವಾಗ **ಸುಪಾಂಸುಲುಕ್** ಎಂಬುದರಿಂದ ವಿಭಕ್ತಿಗೆ ಆಕಾರಾದೇಶ.

ವಂದನಶ್ರುತ್—ವದಿ ಅಭಿವಾದನಸ್ತುತ್ಯೋಃ ಧಾತು. **ಇದಿತೋನುಮ್ಧಾತೋಃ** ಎಂಬುದರಿಂದ ನುಮಾಗಮ. ಭಾವಾರ್ಥದಲ್ಲಿ ಲ್ಯುಟ್ ಪ್ರತ್ಯಯ. **ಯುವೋರನಾಕೌ** ಸೂತ್ರದಿಂದ ಅದಕ್ಕೆ ಅನಾದೇಶ.

ವಂದನಾನಾಂ ಶ್ರೋತಾ ವಂದನಶ್ರುತ್. ಶ್ರು ಶ್ರವಣೇ ಧಾತು. **ಕ್ವಿಪ್‌ಚಿ** ಎಂಬುದರಿಂದ ಕ್ವಿಪ್. **ಹ್ರಸ್ವಸ್ಯ ಪಿತಿಕೃತಿತುಕ್** ಎಂಬುದರಿಂದ ತುಕಾಗಮ. ಸಂಬುಧ್ಯಂತರೂಪ. **ಅಮಂತ್ರಿತಸ್ಯಚ** ಎಂಬುದರಿಂದ ನಿಘಾತ ಸ್ವರ ಬರುತ್ತದೆ.

ಯಮಿಷ್ಠಾಸಃ—ಯಮು ಉಪರಮೇ ಧಾತು. **ಕರ್ತರಿಯಲ್ಲಿ ತೃಚ್** ಪ್ರತ್ಯಯ ಯಂತೃ ಎಂದಾಗುತ್ತದೆ. **ತುಶ್ಛಂದಸಿ** (ಪಾ. ಸೂ. ೫-೩-೫೯) ಎಂಬುದರಿಂದ ಇದಕ್ಕೆ ಇಷ್ಠನ್ ಪ್ರತ್ಯಯ. **ತುರಿಷ್ಠೇಮೇಯೇಃಸು** (ಪಾ. ಸೂ. ೫-೩-೫೯) ಎಂಬುದರಿಂದ ಇಷ್ಠನ್ ಪರವಾದಾಗ ತೃಚಿಗೆ ಲೋಪ. ಯಮಿಷ್ಠ ಶಬ್ದವಾಗುತ್ತದೆ. ನಿತ್ ಪ್ರತ್ಯಯಾಂತವಾದುದರಿಂದ ಆದ್ಯುದಾತ್ತವಾಗುತ್ತದೆ. ಪ್ರಥಮಾ ಬಹುವಚನದಲ್ಲಿ **ಅಜ್ಜಸೇರಸುಕ್** (ಪಾ. ಸೂ ೭-೧-೫೦) ಎಂಬುದರಿಂದ ಜಸಿಗೆ ಅಸುಗಾಗಮ. ಯಮಿಷ್ಠಾಸಃ ಎಂದು ರೂಪವಾಗುತ್ತದೆ.

ಕೇತಾಃ—ಕಿತ ಜ್ಞಾನೇ ಧಾತು. ಚಿಕೇತತಿ ಪ್ರತಿಕೂಲಂ ಜಾನಂತಿ ಇತಿ ಕೇತಾಃ. ಈ ಧಾತುವು ಪಚಾದಿಯಲ್ಲಿ ಸೇರಿರುವುದರಿಂದ **ನಂದ್ರಿಗೃಹಪಚಾದಿಭ್ಯಃ** ಸೂತ್ರದಿಂದ ಅಚ್ ಪ್ರತ್ಯಯ. ಅದನ್ನು ನಿಮಿತ್ತೀಕರಿಸಿ **ಪುಗಂತಲಘೂಪಧಸ್ಯಚ** ಸೂತ್ರದಿಂದ ಧಾತುವಿನ ಲಘೂಪಧೆಗೆ ಗುಣ. **ಚಿತಃ** ಸೂತ್ರದಿಂದ ಅಂತೋದಾತ್ತವು ಪ್ರಾಪ್ತವಾದರೆ ವ್ಯಷಾದಿ ಅಕೃತಿಗಣವೆಂಬುದರಿಂದ ಅದರಲ್ಲಿದೆಯೆಂದು ಆದ್ಯುದಾತ್ತಸ್ವರ ಬರುತ್ತದೆ. ಅಥವಾ ಪ್ರತಿಕೂಲತಯಾ ಜ್ಞಾಯಂತೇ **ಇತಿ ಕೇತಾಃ** ಕರ್ಮಣಿಯಲ್ಲಿ ಘಞ್ ಪ್ರತ್ಯಯ. ಆಗ ಜ್ಞಾತ್ಯಾದಿನಿತ್ಯಂ ಎಂಬುದರಿಂದ ಆದ್ಯುದಾತ್ತಸ್ವರ ಬರುತ್ತದೆ.

ದಭ್ನುವಂತಿ—ದಂಭು ದಂಭೇ ಧಾತು ಸ್ವಾದಿ ಲಟ್ ಪ್ರಥಮಪುರುಷ ಬಹುವಚನದಲ್ಲಿ **ಝೋಂತಃ** ಎಂಬುದರಿಂದ ಅಂತಾದೇಶ. **ಸ್ವಾದಿಭ್ಯಃ ಶ್ನುಃ** ಸೂತ್ರದಿಂದ ಶ್ನು ವಿಕರಣ. **ಸಾರ್ವಧಾತುಕಮಪಿಚ್** ಎಂಬುದರಿಂದ ವಿಕರಣಕ್ಕೆ ಜಿದ್ವದ್ಭಾವವಿರುವುದರಿಂದ **ಅನಿದಿತಾಂ ಹಲಉ**—ಸೂತ್ರದಿಂದ ಧಾತುವಿನ ಉಪಧೆಯಾದ ನಕಾರಕ್ಕೆ ಲೋಪ. ಶ್ನು ವಿಕರಣಕ್ಕೆ ಸಂಯೋಗಪೂರ್ವದಲ್ಲಿರುವುದರಿಂದ **ಹುಶ್ನುವೋಃ ಸಾರ್ವಧಾತುಕೇ** (ಪಾ. ಸೂ. ೬-೪-೮೭) ಸೂತ್ರದಿಂದ ಯಣಾದೇಶ ಬರುವುದಿಲ್ಲ. ಆಗ **ಅಚಿಶ್ನುಧಾತುಭ್ರುವಾಂ**—ಸೂತ್ರದಿಂದ ಅಜಾದಿಪ್ರತ್ಯಯ ಪರದಲ್ಲಿರುವುದರಿಂದ ಉವಙಾದೇಶ. ದಭ್ನುವಂತಿ ಎಂದು ರೂಪವಾಗುತ್ತದೆ. ತಿಙಿಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

ಭೂರ್ಣಯಃ—ಭೃಞ್ ಭರಣೇ ಧಾತು. **ಭೃಣಿಪೃಶ್ನಿಪಾಸ್ನಿರ್**—(ಪಾ. ಸೂ. ೪-೪೮) ಎಂಬಲ್ಲಿ ನಿಪ್ರತ್ಯಯಾಂತವಾಗಿ ನಿಪಾತಿತವಾಗಿದೆ. ಶಾಸ್ತ್ರಾಂತರದಿಂದ ಪ್ರಾಪ್ತಿ ಇಲ್ಲದಿದ್ದರೂ ನಿವಾತದಿಂದಲೇ ಯಕಾರಕ್ಕೆ ಉತ್ವವೂ ದೀರ್ಘವೂ ಬರುತ್ತವೆ. ಅಥವಾ ಭ್ಯಾ ಭಯೇ ಧಾತು. **ಕೃತ್ಯಲ್ಯುಟೋ ಬಹುಲಂ** ಎಂಬಲ್ಲಿ ಬಹುಲಗ್ರಹಣವಿರುವುದರಿಂದ ಕರ್ತರಿಯಲ್ಲಿ ಕ್ತಿನ್ ಪ್ರತ್ಯಯ. ಆಗ **ಉದೋಷ್ಠ್ಯಪೂರ್ವಸ್ಯ** (ಪಾ. ಸೂ. ೭-೧-೧೦೨) ಎಂಬುದರಿಂದ ಋಕಾರಕ್ಕೆ ಉತ್ವ ಬರುತ್ತದೆ. **ಹಲಿಚ** ಎಂಬುದರಿಂದ ಉಪಧಾಭೂತ **ಇಕಿಗೆ** ದೀರ್ಘ. **ಋಕಾರಲ್ವಾದಿಭ್ಯಃ ಕ್ತಿನ್ನಿಷ್ಠಾವದ್ಭವತಿ** (ಪಾ. ಸೂ. ೭-೨ ೪೪-೧) ಎಂಬ ವಚನದಿಂದ ನಿಷ್ಠಾವದ್ಭಾವ ಹೇಳಿರುವುದರಿಂದ ರೇಫದ ಪರದಲ್ಲಿ ತಕಾರ ಬಂದಿರುವುದರಿಂದ ನತ್ವ ಬರುತ್ತದೆ. **ರಷಾಭ್ಯಾಂ**—ಸೂತ್ರದಿಂದ ಅದಕ್ಕೆ ಣತ್ವ. ಭೂರ್ಣಿಶಬ್ದವಾಗುತ್ತದೆ. ಪ್ರಥಮಾ ಬಹುವಚನಾಂತರೂಪ. **ಜ್ಞಾತ್ಯಾದಿರ್ನಿತ್ಯಂ** ಎಂಬುದರಿಂದ ಆದ್ಯುದಾತ್ತಸ್ವರ ಬರುತ್ತದೆ.

॥ ಸಂಹಿತಾಪಾಠಃ ॥

ಅಪ್ರಕ್ಷಿತಂ ವಸು ಬಿಭರ್ಷಿ ಹಸ್ತಯೋರಷಾಳ್ಹಂ ಸಹಸ್ತನ್ವಿ ಶ್ರುತೋ ದಧೇ ।
ಅವೃತಾಸೋಽವತಾಸೋ ನ ಕರ್ತೃಭಿಸ್ತನೂಷು ತೇ ಕ್ರತವ ಇಂದ್ರ ಭೂರಯಃ ॥ ೮ ॥

॥ ಪದಪಾಠಃ ॥

ಅಪ್ರಕ್ಷಿತಂ । ವಸು । ಬಿಭರ್ಷಿ । ಹಸ್ತಯೋಃ । ಅಷಾಳ್ಹಂ । ಸಹಃ । ತನ್ವಿ ।
ಶ್ರುತಃ । ದಧೇ ।
ಅವೃತಾಸಃ । ಅವತಾಸಃ । ನ । ಕರ್ತೃಭಿಃ । ತನೂಷು । ತೇ । ಕ್ರತವಃ ।
ಇಂದ್ರ । ಭೂರಯಃ ॥ ೮ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ತ್ವಮಪ್ರಕ್ಷಿತಂ ಪ್ರಕ್ಷಯರಹಿತಂ ವಸು ಧನಂ ಹಸ್ತಯೋರ್ಬಿಭರ್ಷಿ । ಸ್ತೋತೃ. ಭ್ಯೋ ದಾತುಂ ಧಾರಯಸಿ । ತಥಾ ಶ್ರುತಃ ಪ್ರಖ್ಯಾತೋ ಭವ ತನ್ವಾ ಶರೀರೇಣ ಸಹೋ ಬಲಂ ದಧೇ । ಧಾರಯತಿ । ತ್ವದೀಯಾಸ್ತನವಃ ಕರ್ತೃಭಿರ್ವೃತ್ರಾದೇರಸು. ರಸ್ಯ ವಧಂ ಕುರ್ವದ್ಭಿರ್ಬಲಕೃತೈಃ ಕರ್ಮಭಿರಾವೃತಾಸ ಆವೃತಾಃ । ಬಲಕೃತಾನಿ ಸರ್ವಾಣಿ ಕರ್ಮಾಣ್ಯೇ. ತಸ್ಯ ಶರೀರಮಾವೃತ್ಯಾವತಿಷ್ಠಂತೇ । ತತ್ರ ದೃಷ್ಟಾಂತಃ । ಅವತಾಸೋ ನ । ಅವತ ಇತಿ ಕೂಪನಾಮ । ಯಥಾ ಕೂಪಾ ಜಲೋದ್ಧರಣಾಯ ಪ್ರವೃತ್ತೈಃ ಪ್ರಾಣಿಭಿರಾಪ್ರಿಯಂತೇ ತದ್ವತ್ । ಯಸ್ಮಾದೇವಂ ತಸ್ಮಾತ್ ಹೇ ಇಂದ್ರ ತೇ ತವ ಶರೀರೇಷು ಕ್ರತವಃ ಕರ್ಮಾಣಿ ಭೂರಯೋ ಬಹೂನಿ ವಿದ್ಯಂತೇ ॥ ಅಪ್ರ. ಕ್ಷಿತಂ । ಕ್ಷಿ ಕ್ಷಯ ಇತ್ಯಸ್ಮಾದ್ಭಾವೇ ನಿಷ್ಠಾ । ಅಣ್ಯದರ್ಥೇ । ಪಾ. ೬-೪-೬೦ । ಇತಿ ಪರ್ಯುದಾಸಾದ್ದೀ. ರ್ಘಾಭಾವಃ । ಅತ ಏವ ಕ್ಷಿಯೋ ದೀರ್ಘಾದಿತಿ ನಿಷ್ಠಾನತ್ವಾಭಾವಃ । ಪ್ರಕೃಷ್ಟಂ ಕ್ಷಿತಂ ಯಸ್ಯ ತತ್ಪ್ರ. ಕ್ಷಿತಂ । ನ ಪ್ರಕ್ಷಿತಮಪ್ರಕ್ಷಿತಂ । ಅವ್ಯಯಪೂರ್ವಪದಪ್ರಕೃತಿಸ್ವರತ್ವಂ । ಬಿಭರ್ಷಿ । ಡುಭೃಞ್ ಧಾರಣ. ಪೋಷಣಯೋಃ । ಲಟಿ ಸಿಪಿ ಶಪಃ ಶ್ಲುಃ । ಭೃಞಾಮಿದಿತ್ಯಭ್ಯಾಸಸ್ಯೇತ್ವಂ । ಅಷಾಳ್ಹಂ । ಷಹ ಅಭಿಭವ ಇತ್ಯಸ್ಮಾನ್ನಿಷ್ಠಾಯಾಂ ತಕಾರಾದೌ ಪ್ರತ್ಯಯೇ ಶೀಷಸಹ । ಪಾ. ೭-೨-೪೮ । ಇತೀಟೋ ವಿಕಲ್ಪಿತತ್ವಾತ್

ಯಸ್ಯ ವಿಭಾಷೇತೀಟ್ಪ್ರತಿಷೇಧಃ । ಥಶ್ಚೇಥಶ್ಚಾಸ್ಯಾಶ್ಚೇಥಶ್ಚ ಸಹಿವಹೋರೋಢವರ್ಣಸ್ಯೇ-ತ್ಯೋತ್ವೇ ಪ್ರಾಪ್ತೇ ಸಾಧ್ಯೈ ಸಾಧ್ವಾ ಸಾಧೇತಿ ನಿಗಮೇ । ಪಾ. ೬-೩-೧೧೩ । ಇತಿ ನಿಪಾತನಾದಾತ್ವಂ । ಯದುಕ್ತಂ ಸಾಧೇತಿ ತ್ರಜಂತಮೇತದಿತಿ ತದುಪಲಕ್ಷಣಾರ್ಥಂ ಪ್ರತ್ಯವ್ಯಂ । ತನ್ವಿ । ಜಸಾದಿಷು ಛಂದಸಿ ವಾವಚನಮಿತಿ ಅಚ್ಚ ಘೇಃ । ಪಾ. ೬-೩-೧೦೯ । ಇತ್ಯತ್ವೌತ್ವಯೋರಭಾವೇ ಯಣಾದೇಶಃ । ಉದಾತ್ತ-ಸ್ವರಿತಯೋರ್ಯಣ ಇತಿ ವಿಭಕ್ತೇಃ ಸ್ವರಿತತ್ವಂ । ಉದಾತ್ತಯಣೋ ಹಲ್ಪೂರ್ವಾದಿತ್ಯುದಾತ್ತತ್ವಂ ತು ಛಾಂದಸತ್ವಾನ್ನ ಪ್ರವರ್ತತೇ ॥

॥ ಪ್ರತಿಪದಾರ್ಥ ॥

(ಎಲೈ ಇಂದ್ರನೇ, ನೀನು) **ಅಪ್ರಕ್ಷಿತಂ**—ಕ್ಷಯರಹಿತವಾದ । **ವಸು**—ಧನವನ್ನು । **ಹಸ್ತಯೋಃ**—ನಿನ್ನೆರಡು ಕೈಗಳಲ್ಲಿಯೂ । **ಬಿಭರ್ಷಿ**—(ನಮಗೆ ಕೊಡುವುದಕ್ಕಾಗಿ) ಹಿಡಿದುಕೊಂಡಿದ್ದೀಯೆ । **ಶ್ರುತಃ**—ಪ್ರಖ್ಯಾತನಾದ ನೀನು । **ತನ್ವಿ**—ನಿನ್ನ ಶರೀರದಲ್ಲಿ । **ಅಷಾಳ್ಹಂ**—(ಶತ್ರುಗಳಿಂದ) ಪ್ರತಿಭಟಿಸಲಸಾಧ್ಯವಾದ । **ಸಹಃ**—ಬಲವನ್ನು । **ದಧೇ**—ಹೊಂದಿದ್ದೀಯೆ. (ನಿನ್ನ ಅವಯವಗಳು) । **ಕರ್ತ್ರೈಭಿಃ**—(ವೃತ್ರಾದಿವಧರೂಪವಾದ) ವೀರ್ಯ ಕೃತ್ಯಗಳಿಂದ । **ಅವತಾಸೋ ನ**—(ನೀರಿಗಾಗಿ ಬಂದಿರುವವರಿಂದ) ಬಾವಿಯು ಸುತ್ತಲೂ ಆವೃತವಾಗಿರುವಂತೆ। **ಅವೃತಾಸಃ**—ತುಂಬಿವೆ (ಆದ್ದರಿಂದ) । **ಇಂದ್ರ**—ಎಲೈ ಇಂದ್ರನೇ । **ತೇ**—ನಿನ್ನ (ಶರೀರಗಳಲ್ಲಿ) । **ಕೃತವಃ**—ವೀರ್ಯಕರ್ಮಗಳು । **ಭೂರಯಃ**—ಹೇರಳವಾಗಿವೆ.

॥ ಭಾವಾರ್ಥ ॥

ಎಲೈ ಇಂದ್ರನೇ, ನೀನು ನಮಗೆ ಕೊಡುವುದಕ್ಕಾಗಿ ನಿನ್ನೆರಡು ಕೈಗಳಲ್ಲಿಯೂ ಅಕ್ಷಯವಾದ ಧನವನ್ನು ಹಿಡಿದಿದ್ದೀಯೆ. ಪ್ರಖ್ಯಾತನಾದ ನಿನ್ನ ಶರೀರದಲ್ಲಿ ಶತ್ರುಗಳಿಂದ ಪ್ರತಿಭಟಿಸಲಸಾಧ್ಯವಾದ ಬಲವಿದೆ. ನೀರಿಗಾಗಿ ಬಂದಿರುವವರಿಂದ ಬಾವಿಯು ಸುತ್ತಲೂ ಆವೃತವಾಗಿರುವಂತೆ ನಿನ್ನ ಅವಯವಗಳು ಸುತ್ತಲೂ ಹೇರಳವಾದ ವೀರ್ಯಕೃತ್ಯಗಳಿಂದ ತುಂಬಿವೆ.

English Translation.

You hold in you hands unexhausted wealth ; renowned Indra, you have irresistible strength in your body ; your limbs are invested with (glorious) exploits, as wells (are surrounded by those who come for water) ; Indra, you have many exploits in your body.

॥ ವಿಶೇಷ ವಿಷಯಗಳು ॥

ಅಪ್ರಕ್ಷಿತಂ—ಪ್ರಕೃಷ್ಟಂ ಕ್ಷಿತಂ ಯಸ್ಯ ತತ್-ಪ್ರಕ್ಷಿತಂ ನ ಪ್ರಕ್ಷಿತಂ ಅಪ್ರಕ್ಷಿತಂ ಪ್ರಕ್ಷಯಸಹಿತಂ ಎಂದರೆ ಯಾವರೀತಿಯ ನಾಶವೂ ಆಗದ ಸ್ಥಿರವಾದ ಹಣ ಎಂದರ್ಥ.

ತನ್ವಿ—ತನ್ನ ಶರೀರದಲ್ಲಿ ಎಂದರ್ಥ. ತನು ಶಬ್ದವು ವೇದದಲ್ಲಿ ತನ್ ಎಂಬ ರೂಪದಿಂದ ಅಲ್ಲಲ್ಲಿ ಪ್ರಯೋಗಿಸಲ್ಪಡುವುದು.

ಅಷಾಳ್ಹಂ—ಶತ್ರುಗಳಿಂದ ತಿರಸ್ಕರಿಸಲ್ಪಡದಿರುವುದು. ಇದು ಜಲಶಬ್ದಕ್ಕೆ ವಿಶೇಷಣವಾಗಿದೆ.

ಶರ್ಧೈಭಿಃ—ವೃತ್ರನೇ ಮೊದಲಾದ ರಾಕ್ಷಸರ ಸಂಹಾರ ಮೊದಲಾದ ಸಾಹಸಕೃತ್ಯಗಳಿಂದ ; ಪರಾಕ್ರಮಗಳಿಂದ.

ಅವತಾಸೋ ನ—ಅವತಶಬ್ದಕ್ಕೆ ಬಾವಿ ಎಂದರ್ಥ. (ನಿರು. ೩-೧೯) ನಿರುಕ್ತದಲ್ಲಿ ಅವತವೇ ಮೊದಲಾದ ಹದಿನಾಲ್ಕು ಶಬ್ದಗಳನ್ನು ಕೂಪವಾಚಕಗಳಾಗಿ ಪಾಠಮಾಡಿದ್ದಾರೆ. ನೀರನ್ನು ಒಯ್ಯುವುದಕ್ಕಾಗಿ ಜನರು ಬಾವಿಯನ್ನು ಸುತ್ತುಗಟ್ಟುವಂತೆ, ಸಮಸ್ತಕರ್ಮಗಳೂ ಬಲಿಷ್ಠಗಳಾಗಲು ನಿನ್ನನ್ನು ಆಶ್ರಯಿಸುವುವು ಎಂದು ಇಂದ್ರನನ್ನು ಸ್ತುತಿಸಿರುವುದು.

॥ ವ್ಯಾಕರಣಪ್ರಕ್ರಿಯಾ ॥

ಅಪ್ರಕ್ಷಿತಮ್—ಕ್ಷಿ ಕ್ಷಯೇ ಧಾತು. ಇದಕ್ಕೆ ಭಾವಾರ್ಥದಲ್ಲಿ ನಿಷ್ಠಾಪ್ರತ್ಯಯ (ಕ್ತ) **ನಿಷ್ಠಾಯಾಮಣ್ಯದರ್ಥೇ** (ಪಾ. ಸೂ. ೬-೪-೬೦) ಸೂತ್ರದಲ್ಲಿ ಅಣ್ಯದರ್ಥೇ ಎಂದು ನಿಷೇಧ ಮಾಡಿರುವುದರಿಂದ ಇಲ್ಲಿ ಣ್ಯದರ್ಥವಾದ ಭಾವ ತೋರುವುದರಿಂದ ನಿಷ್ಠಾಪರವಾದಾಗ ಬರುವ ದೀರ್ಘವು ಬರುವುದಿಲ್ಲ. ದೀರ್ಘಬಾರದಿರುವುದರಿಂದಲೇ **ಕ್ಷಿಯೋದೀರ್ಘಾತ್** (ಪಾ. ಸೂ. ೮-೨-೪೬) ಎಂಬುದರಿಂದ ನಿಷ್ಠಾತಕಾರಕ್ಕೆ ನತ್ವ ಬರುವುದಿಲ್ಲ. ಪ್ರಕೃಷ್ಟಂ ಕ್ಷಿತಂ ಯಸ್ಯ ತತ್ ಪ್ರಕ್ಷಿತಮ್. ನ ಪ್ರಕ್ಷಿತಮ್ ಅಪ್ರಕ್ಷಿತಮ್. **ತತ್ಪುರುಷೇಕುಲ್ಯಾಥ್ಯ್** ಸೂತ್ರದಿಂದ ಅವ್ಯಯಪೂರ್ವಪದಪ್ರಕೃತಿಸ್ವರ ಬರುತ್ತದೆ.

ಹಭರ್ಷಿ—ಡುಭೃಞ್ ಧಾರಣಪೋಷಣಯೋಃ ಧಾತು. ಜುಹೋತ್ಯಾದಿ ಲಟ್ ಮಧ್ಯಮಪುರುಷದಲ್ಲಿ ಸಿಪ್ ಪ್ರತ್ಯಯ. **ಜುಹೋತ್ಯಾದಿಭ್ಯಃ ಶ್ಲುಃ** ಎಂಬುದರಿಂದ ಶ್ಲು ವಿಕರಣ. **ಶ್ಲೌ** ಸೂತ್ರದಿಂದ ಧಾತುವಿಗೆ ದ್ವಿತ್ವ. ಅಭ್ಯಾಸಕ್ಕೆ ಜಸ್ತ್ವ. **ಭೃಞಾಮಿತ್** (ಪಾ. ಸೂ. ೭-೪-೭೬) ಎಂಬುದರಿಂದ ಅಭ್ಯಾಸಕ್ಕೆ ಇತ್ವ. ಸಿಪ್ ನಿಮಿತ್ತವಾಗಿ ಧಾತುವಿಗೆ ಗುಣ. ರೇಫದ ಪರದಲ್ಲಿರುವುದರಿಂದ **ಆದೇಶಪ್ರತ್ಯಯಯೋಃ** ಸೂತ್ರದಿಂದ ಪ್ರತ್ಯಯ ಸಕಾರಕ್ಕೆ ಷತ್ವ. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

ಅಷಾಳ್ಹಮ್—ಷಹ ಅಭಿಭವನೇ ಧಾತು. ಇದಕ್ಕೆ ನಿಷ್ಠಾಪ್ರತ್ಯಯ ಪರವಾದಾಗ **ತ್ರಿಷಸಹಲುಭ** (ಪಾ. ಸೂ. ೭-೨-೪೪) ಸೂತ್ರದಲ್ಲಿ ಇಷಧಾತುವಿನಪರಪ್ರತ್ಯಯಕ್ಕೆ ಇಡ್ವಿಕಲ್ಪ ಹೇಳಿರುವುದರಿಂದ **ಯಸ್ಯ-ವಿಭಾಷಾ** (ಪಾ. ಸೂ. ೭-೨-೧೫) ಎಂಬುದರಿಂದ ಕ್ತಪ್ರತ್ಯಯಕ್ಕೆ ಇಣ್ನಿಷೇಧ. ಧಾತುವಿನ ಆದಿಗೆ ಸಕಾರಾದೇಶ. ಸಹ್+ತ ಎಂದಿರುವಾಗ **ಹೋಢಃ** ಸೂತ್ರದಿಂದ ಹಕಾರಕ್ಕೆ ಢಕಾರಾದೇಶ. **ಝಷಸ್ತಥೋಃ**—ಸೂತ್ರದಿಂದ ತಕಾರಕ್ಕೆ ಧಕಾರಾದೇಶ. **ಷ್ಟುನಾಷ್ಟುಃ** ಎಂಬುದರಿಂದ ಅದಕ್ಕೆ ಢಕಾರಾದೇಶ. **ಢೋಢೇಲೋಪಃ** ಎಂಬುದರಿಂದ ಪೂರ್ವಢಕಾರಕ್ಕೆ ಲೋಪ. ಸಢ್ ಎಂದಿರುವಾಗ **ಸಹಿವಹೋರೋದವರ್ಣಸ್ಯ** ಎಂಬುದರಿಂದ ಅಕಾರಕ್ಕೆ ಓತ್ವವು ಪ್ರಾಪ್ತವಾದರೆ, **ಸಾರ್ಧ್ಯಂ ಸಾಢ್ವಾ ಸಾಢೇತಿ ನಿಗಮೇ** (ಪಾ. ಸೂ. ೬-೩-೧೦೩) ಎಂದು ನಿಪಾತಮಾಡಿರುವುದರಿಂದ ಓತ್ವ ಬರುತ್ತದೆ. ಯದ್ಯಪಿ ಆ ಸೂತ್ರದಲ್ಲಿ ಸಾಢಾ ಎಂಬುದು ತೃಜಿಂತವೆಂದು ಹೇಳಲ್ಪಟ್ಟಿದೆ. ಆದರೆ ಅದು ಉಪಲಕ್ಷಣ ಎಂದು ತಿಳಿಯಬೇಕು. ಇದರಿಂದ ಇತರ ವಿಷಯದಲ್ಲಿ ಆ ರೂಪವಾಗುತ್ತದೆ ಎಂದಾಗುತ್ತದೆ.

ತನ್ವಿ—ತನು ಶಬ್ದ. ಸಪ್ತಮೀ ಏಕವಚನ ಙಾ ವಿಭಕ್ತಿಪರವಾದಾಗ **ಆಚ್ಛೌಶಿ** (ಪಾ. ಸೂ. ೭-೩-೧೧೯) ಎಂಬುದರಿಂದ ಭಸಂಜ್ಞಾ ಇರುವುದರಿಂದ ಅತ್ವ ಔತ್ವಗಳು ಪ್ರಾಪ್ತವಾದರೆ **ಜಸಾದಿಷು ಙ್ಯೌಂದಸಿ-ವಾವಚನಮ್** ಎಂಬ ವಚನಾಂತರದಿಂದ ವಿಕಲ್ಪವೆಂಬುದರಿಂದ ಇಲ್ಲಿ ಬರುವುದಿಲ್ಲ. ಆಗ ಯಣಾದೇಶ. ಉದಾತ್ತ ಸ್ಥಾನದಲ್ಲಿ ಯಣಾದೇಶ ಬಂದುದರಿಂದ ಅದರ ಪರದಲ್ಲಿ ವಿಭಕ್ತಿ ಇರುವುದರಿಂದ **ಉದಾತ್ತಸ್ವರಿತಯೋರ್ಯಣಃ** ಎಂಬುದರಿಂದ ವಿಭಕ್ತಿಗೆ ಸ್ವರಿತಸ್ವರ ಬರುತ್ತದೆ. ಯದ್ಯಪಿ ಉದಾತ್ತಸ್ಥಾನಕ್ಕೆ ಬಂದಿರುವ ಯಣಿನ ಪೂರ್ವದಲ್ಲಿ **ಹಲ್** ಇರುವುದರಿಂದ **ಉದಾತ್ತಯಣೋ ಹಲ್ ಪೂರ್ವಾತ್** ಸೂತ್ರದಿಂದ ವಿಭಕ್ತಿಗೆ ಉದಾತ್ತಸ್ವರ ಬರಬೇಕಾಗುತ್ತದೆ. ಆದರೆ ಛಾಂದಸವಾಗಿ ಇಲ್ಲಿ ಬರುವುದಿಲ್ಲ.

ದಧೇ—ಡುಧಾಞ್ ಧಾರಣಪೋಷಣಯೋಃ ಧಾತು. ಛಾಂದಸವಾದ ಲಿಟ್ ದ್ವಿತ್ವ. **ಆತೋ ಲೋಪ ಇಟಿ ಚ** ಸೂತ್ರದಿಂದ ಆಕಾರಲೋಪ ತಿಙಂತನಿಘಾತಸ್ವರ ಬರುತ್ತದೆ.

ಐವತ್ತ ಐದನೆಯ ಸೂಕ್ತವು ಸಮಾಪ್ತವು.

ಐವತ್ತಾರನೆಯ ಸೂಕ್ತವು

॥ ಸಾಯಣಭಾಷ್ಯ ॥

ಏಷ ಪ್ರ ಪೂರ್ವೀರಿತಿ ಷಡೃಚಂ ಷಷ್ಠಂ ಸೂಕ್ತಂ ಸವ್ಯಸ್ಯಾರ್ಷಮೈಂದ್ರಂ ಜಾಗತಮಿತ್ಯುಕ್ತಂ । ಅನುಕ್ರಾಂತಂ ಚ । ಏಷ ಪ್ರ ಷಡಿತಿ ॥ ವಿಷುವತಿ ನಿಷ್ಕೇವಲ್ಯ ಏತತ್ಸೂಕ್ತಂ ಶಂಸನೀಯಂ । ವಿಷುವಾನ್ದಿವಾಕೀರ್ತ್ಯ ಇತಿ ಖಂಡೇ ಸೂತ್ರಿತಂ । ಏಷ ಪ್ರ ಪೂರ್ವೀರ್ವ್ಯಷಾಮುದಃ ಪ್ರ ಮಂಹಿಷ್ಠಾಯ । ಆ. ೮-೬ । ಇತಿ ॥

ಅನುವಾದವು—**ಏಷ ಪ್ರ ಪೂರ್ವೀ** ಎಂಬ ಈ ಸೂಕ್ತವು ಹತ್ತನೆಯ ಅನುವಾಕದಲ್ಲಿ ಆರನೆಯ ಸೂಕ್ತವು. ಇದರಲ್ಲಿ ಆರು ಋಕ್ಕುಗಳಿರುವವು. ಈ ಸೂಕ್ತಕ್ಕೆ ಸವ್ಯನು ಋಷಿಯು, ಇಂದ್ರನು ದೇವತೆಯು, ಜಗತೀಛಂದಸ್ಸು. ಅನುಕ್ರಮಣಿಕೆಯಲ್ಲಿ **ಏಷ ಪ್ರ ಷಡಿತಿ** ಎಂದು ಹೇಳಿರುವುದು. ವಿಷುವತಿಯಲ್ಲಿ ನಿಷ್ಕೇವಲ್ಯಶಸ್ತ್ರಮಂತ್ರಗಳಿಗಾಗಿ ಈ ಸೂಕ್ತವನ್ನು ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ **ವಿಷುವಾನ್ದಿವಾಕೀರ್ತ್ಯ** ಎಂಬ ಖಂಡದಲ್ಲಿ **ಏಷ ಪ್ರ ಪೂರ್ವೀರ್ವ್ಯಷಾಮುದಃ ಪ್ರ ಮಂಹಿಷ್ಠಾಯ** ಎಂಬ ಸೂತ್ರವು ನಿರ್ದೇಶಿಸುವುದು. (ಆ. ೮-೬)

ಸೂಕ್ತ—೫೬

ಮಂಡಲ—೧ ॥ ಅನುವಾಕ—೧೦ ॥ ಸೂಕ್ತ—೫೬ ॥
ಅಷ್ಟಕ—೧ ॥ ಅಧ್ಯಾಯ—೪ ॥ ವರ್ಗ— ೨೧॥

ಸೂಕ್ತದಲ್ಲಿರುವ ಋಕ್ಸಂಖ್ಯೆ—೪ ॥
ಋಷಿಃ—ಸವ್ಯ ಆಂಗಿರಸಃ ॥
ದೇವತಾ—ಇಂದ್ರಃ ।
ಛಂದಃ—ಜಗತೀ ।

ಏಷ ಪ್ರ ಪೂರ್ವೀರವ ತಸ್ಯ ಚಮ್ರಿಷೋಽತ್ಯೋ ನ ಯೇಷಾಮುದಯಂ-
ಸ್ತ ಭುರ್ವಣೀಃ ।
ದಕ್ಷಂ ಮಹೇ ಪಾಯಯತೇ ಹಿರಣ್ಯಯಂ ರಥಮಾವೃತ್ಯಾ ಹರಿಯೋಗ-
ಮೃಭ್ವಸಂ ॥ ೧ ॥

॥ ಪದಪಾಠಃ ॥

ಏಷಃ । ಪ್ರ । ಪೂರ್ವೀಃ । ಅವ । ತಸ್ಯ । ಚಮ್ರಿಷಃ । ಅತ್ಯಃ । ನ । ಯೇಷಾಂ ।
ಉತ್ । ಅಯಂಸ್ತ । ಭುರ್ವಣೀಃ ।
ದಕ್ಷಂ । ಮಹೇ । ಪಾಯಯತೇ । ಹಿರಣ್ಯಯಂ । ರಥಂ । ಆ೪ವೃತ್ಯ । ಹರಿ-
ಯೋಗಂ । ಋಭ್ವಸಂ ॥ ೧ ॥

॥ ಸಾಯಣಭಾಷ್ಯಂ ॥

ಭುರ್ವಣೀರತ್ರೈಷ ಇಂದ್ರಸ್ಯ ಯಜಮಾನಸ್ಯ ಪೂರ್ವೀಃ ಪ್ರಭೂತಾಶ್ಚಮ್ರಿಷಶ್ಚಮೂಷು ಚಮಸೇಷ್ವವಸ್ಥಿತಾಃ ಸೋಮಲಕ್ಷಣಾ ಇಷಃ ಪ್ರಾವೋದಯಂಸ್ತ । ಪ್ರಕರ್ಷೇಣ ಪಾನಾರ್ಥಮುದ್ಧರತಿ । ತತ್ರ ದೃಷ್ಟಾಂತಃ । ಅತ್ಯೋ ನ ಯೇಷಾಂ । ಯಥಾಶ್ವೋ ವಡವಾಂ ಕ್ರೀಡಾರ್ಥಮುಪಯಚ್ಛತಿ । ಸ ಚೇಂದ್ರೋ ಹಿರಣ್ಯಯಂ ಸುವರ್ಣಮಯಂ ಹರಿಯೋಗಂ ಹರಿಭ್ಯಾಂ ಯುಕ್ತಮೃಭ್ವಸಮುರು ಭಾಸಮಾನಂ ರಥಮಾವೃತ್ಯಾವಸ್ಥಾಪ್ಯ ಮಹೇ ಮಹತೇ ವೃತ್ರವಧಾದಿರೂಪಾಯ ಕರ್ಮಣೇ ದಕ್ಷಂ ಪ್ರವೃದ್ಧಮಾತ್ಮಾನಂ ಸೋಮಂ ಪಾಯಯತೇ । ಪಾನಂ ಕಾರಯತಿ ॥ ಪೂರ್ವೀಃ । ಪೃ ಪಾಲನಪೂರಣಯೋಃ ।

ಪ್ಯಭಿದಿವ್ಯಧೀತ್ಯಾದಿನಾ । ಉ ೧-೪೪ । ಕುಪ್ರತ್ಯಯಃ । ಉದೋಷ್ಯಪೂರ್ವಸ್ಯೇತ್ಯುತ್ವಂ । ಪುರುಶಬ್ದಾದ್ಡೋತೋ ಗುಣವಚನಾದಿತಿ ಙೀಷ್ । ಯಞಾದೇಶಃ । ಹಲಿ ಚೇತಿ ದೀರ್ಘತ್ವಂ । ಪ್ರತ್ಯಯಸ್ವರಃ । ಚೆಮ್ರಿಷಃ । ಚೆಮು ಅದನೇ ಇತ್ಯಸ್ಮಾತ್ಕೃಷಿಚೆಮಿತನಿಧನೀತ್ಯಾದಿನಾ । ಉ. ೧-೮೨ । ಊಪ್ರತ್ಯಯೋಂತಶ್ಚಮೂಶಬ್ದಃ । ತಸ್ಯಾಂ ವರ್ತಮಾನಾ ಇಷಶ್ಚಮ್ವಿಷಃ । ವಕಾರಸ್ಯ ರೇಫಶ್ಚಾಂದಸಃ । ಕೃದುತ್ತರಪದಪ್ರಕೃತಿಸ್ವರತ್ವಂ । ಆಯೆಂಸ್ತ । ಛಾಂದಸೇ ವರ್ತಮಾನೇ ಲುಙ್ ವ್ಯತ್ಯಯೇನಾತ್ಮನೇಪದಂ । ಏಕಾಚ ಇತೀಟ್ಪ್ರತಿಷೇಧಃ ।ಭುರ್ವಣಿಃ । ಭುರ್ವತಿರತ್ತಿಕರ್ಮಣೀತಿ ಯೋಸ್ಕಃ । ನಿ. ೯-೨೩ । ಧಾತುಪಾಠೇ ತು ಭರ್ವ ಹಿಂಸಾಯಾಮಿತಿ ಪಠ್ಯತೇ । ಅಸ್ಮಾದೌಣಾದಿಕೋಽನಿಪ್ರತ್ಯಯಃ । ಅಕಾರಸ್ಯೋಕಾರಶ್ಚಾಂದಸಃ । ಪಾಯಯೆಯೆತೇ । ಪಾ ಪಾನೇ । ಶಾಛಾಸಾಹ್ವಾಯ್ಯಾವೇಪಾಂ ಯುಕ್ । ಪಾ. ೭-೩-೪೭ । ಇತಿ ಹೇತುಮತಿ ಣಿಚಿ ಯುಗಾಗಮಃ । ಣಿಚಶ್ಚ । ಪಾ. ೧-೩-೭೪ । ಇತ್ಯಾತ್ಮನೇಪದಂ । ಹಿರಣ್ಯಯೆಂ । ಋತ್ವ್ಯವಾಸ್ತ್ವ್ಯೇತ್ಯಾದಿನಾ ಹಿರಣ್ಯಶಬ್ದಾದುತ್ತರಸ್ಯ ಮಯಟೋ ಮಶಬ್ದಲೋಪೋನ್ನಿಪಾತ್ಯತೇ। ಹರಿಯೋಗಂ । ಹರ್ಯೋರ್ಯೋರ್ಗೋ ಯೋಜನಂ ಯಸ್ಮಿನ್ । ಹರಿಶಬ್ದ ಇನ್ಪ್ರತ್ಯಯಾಂತ ಆದ್ಯುದಾತ್ತಃ । ಸ ಏವ ಬಹುನ್ರೀಹಿಸ್ವರೇಣ ಶಿಷ್ಯತೇ । ಋಭ್ವಸಂ । ಉರುಭಾಸಮಿತ್ಯಸ್ಯ ಪೃಷೋದರಾದಿತ್ವಾದೃಭ್ವಸಾದೇಶಃ ॥

॥ ಪ್ರತಿಪದಾರ್ಥ ॥

ಭುರ್ವಣಿಃ—ಭಕ್ಷಕನಾದ । **ಏಷಃ**—ಇಂದ್ರನು । **ಯೋಷಾಂ**—ಹೆಣ್ಣು ಕುದುರೆಯನ್ನು (ಕಂಡು) । **ಆತ್ಯೋ ನ**—ಗಂಡುಕುದುರೆಯು (ಕ್ರೀಡಿಸಲು ಉತ್ಸಾಹದಿಂದ) ಮುನ್ನುಗ್ಗುವಂತೆ । **ತಸ್ಯ**—ಯಜಮಾನನ । **ಪೂರ್ವೀಃ**—ಅಧಿಕವಾದುವೂ । **ಚೆಮ್ರಿಷಃ**—ಸೌಟುಗಳಲ್ಲಿರುವುವೂ ಆದ ಸೋಮರಸರೂಪಗಳಾದ ಅನ್ನಗಳನ್ನು (ಕುಡಿಯಲು) । **ಪ್ರ ಅವ ಉದಯೆಂಸ್ತ**—ಉತ್ಸಾಹದಿಂದ ಆವಿರ್ಭವಿಸಿದ್ದಾನೆ । **ಹಿರಣ್ಯಯೆಂ**—ಸುವರ್ಣನಿರ್ಮಿತವಾದದ್ದೂ । **ಹರಿಯೋಗಂ**—ಕುದುರೆಗಳಿಂದ ಕೂಡಿದ್ದೂ । **ಋಭ್ವಸಂ**—ಹೆಚ್ಚು ಪ್ರಕಾಶಮಾನವಾದದ್ದೂ ಆದ । **ರಥಂ**—ರಥವನ್ನು । **ಆವೃತ್ಯ**—ಹತ್ತಿ ಕುಳಿತು । **ಮಹೇ**—(ವೃತ್ರವಧಾದಿ) ಮಹಾಕಾರ್ಯಗಳಿಗೆ । **ದಕ್ಷಂ**—ಸಮರ್ಥವಾದ ತನಗೆ (ಉದರಕ್ಕೆ) । **ಪಾಯಯೆಯೆತೇ**—(ಸೋಮರಸವನ್ನು) ಕುಡಿಸುತ್ತಾನೆ ॥

॥ ಭಾವಾರ್ಥ ॥

ಭಕ್ಷಕನಾದ ಇಂದ್ರನು ಹೆಣ್ಣು ಕುದುರೆಯನ್ನು ಕಂಡು ಗಂಡುಕುದುರೆಯು ಕ್ರೀಡಿಸಲು ಉತ್ಸಾಹದಿಂದ ಮುನ್ನುಗ್ಗುವಂತೆ ಯಜಮಾನನಿಂದ ಅರ್ಪಿತವಾದ ಅತ್ಯಧಿಕವಾದುದೂ, ಸೌಟುಗಳಲ್ಲಿರುವುದೂ ಆದ ಸೋಮರಸವನ್ನು ಕುಡಿಯಲು ಉತ್ಸಾಹದಿಂದ ಎದ್ದಿದ್ದಾನೆ. ಸುವರ್ಣನಿರ್ಮಿತವಾದದ್ದೂ, ಕುದುರೆಗಳಿಂದ ಕೂಡಿದ್ದೂ ಮತ್ತು ಹೆಚ್ಚು ಪ್ರಕಾಶಮಾನವಾದದ್ದೂ ಆದ ರಥವನ್ನು ಹತ್ತಿ ಕುಳಿತು ಸೋಮರಸವನ್ನು ಪಾನಮಾಡಿ ತನ್ನನ್ನು ವೃತ್ರವಧಾದಿ ಮಹಾಕಾರ್ಯಗಳಿಗೆ ಸಮರ್ಥನಾಗುವಂತೆ ಮಾಡಿಕೊಳ್ಳುತ್ತಾನೆ.

English Translation

Voracious (Indra) has risen up, as a horse (approaches) a mare, to partake of the copious libitations (contained) in the sacrificial ladles; having stayed his well-horsed, golden and splendid chariot, he plies himself, capable of heroic (actions with the beverage).

॥ ವಿಶೇಷ ವಿಷಯಗಳು ॥

ಪೂರ್ವೀಃ—ಪೃ ಪಾಲನಪೂರಣಯೋಃ ಎಂಬ ಧಾತುವಿನಿಂದ ಉಂಟಾದ ಈ ಶಬ್ದವು ಬಹಳವಾದ ಅಥವಾ ಅತಿಶಯವಾದ ಎಂಬರ್ಥವನ್ನು ಕೊಡುವುದು.

ಚಮ್ರಿಷಃ—ಚಮ್ವಾಂ ವರ್ತಮಾನಾ ಇಷಃ—ಚಮ್ರಿಷಃ—ಎಂಬ ವ್ಯುತ್ಪತ್ತಿಯಂತೆ, ಚಮೂ ಎಂದರೆ ಚಮಸಪಾತ್ರೆಯಲ್ಲಿರುವ ಸೋಮ ಲಕ್ಷಣದಿಂದ ಕೂಡಿದ ಅನ್ನ. ಇಷ ಶಬ್ದವನ್ನು ನಿರುಕ್ತದಲ್ಲಿ (ನಿಂ. ೩-೯) ಅನ್ನ ಪರ್ಯಾಯಪದಗಳಲ್ಲಿ ಪಾಠಮಾಡಿದ್ದಾರೆ.

ಅತ್ಯೋ ನ ಯೋಷಾಂ—ಇಲ್ಲಿ ಅತ್ಯಶಬ್ದಕ್ಕೆ ಅಶ್ವವೆಂದರ್ಥ. ಗಂಡುಕುದುರೆಯು ಕ್ರೀಡಾರ್ಥವಾಗಿ (ಹೆಣ್ಣುಕುದುರೆಯನ್ನು) ಅಪೇಕ್ಷಿಸುವಂತೆ, ಇಂದ್ರನು ಸೋಮಲಕ್ಷಣವಿಶಿಷ್ಟವಾದ ಹವಿಸ್ಸನ್ನು ಬಯಸುತ್ತಾನೆ.

ಹರಿಯೋಗಂ—ಹರ್ಯೋಃ ಯೋಗಃ ಯೋಜನಂ ಯಸ್ಮಿನ್ ಎರಡು ಕುದುರೆಗಳಿಂದ ಹೂಡಲ್ಪಟ್ಟಿದ್ದು, ಎಂದರ್ಥ. ಇದೂ ಹಿರಣ್ಮಯಂ, ಋಭ್ವಸಂ (ವಿಶೇಷವಾಗಿ ಪ್ರಕಾಶಿಸುವುದು) ಎಂಬ ಪದಗಳು ಇಂದ್ರನ ರಥಕ್ಕೆ ವಿಶೇಷಣಗಳಾಗಿವೆ.

ಭುರ್ವಣಿಃ—ತಿನ್ನುವವನು ಎಂದರ್ಥ. **ಭುರ್ವತಿರತ್ತಿಕರ್ಮಾ** (ನಿರು. ೯-೨೩) ಎಂದು ಭರ್ವ ಹಿಂಸಾಯಾಂ ಎಂಬ ಧಾತುವಿನಿಂದ ನಿಷ್ಪನ್ನವಾದ ಈ ಶಬ್ದಕ್ಕೆ ತಿನ್ನುವವನು ಎಂದರ್ಥವನ್ನು ನಿರುಕ್ತಕಾರರು ಹೇಳಿರುವರು.

॥ ವ್ಯಾಕರಣಪ್ರಕ್ರಿಯಾ ॥

ಪೂರ್ವೀಃ—ಪೃ ಪಾಲನಪೂರಣಯೋಃ ಧಾತು. ಇದಕ್ಕೆ **ಪೃಭಿದಿ ವ್ಯಥಿ** (ಉ. ಸೂ. ೧-೨೩) ಎಂಬುದರಿಂದ ಕು ಪ್ರತ್ಯಯ. **ಉದೋಷ್ಠ್ಯಪೂರ್ವಸ್ಯ** (ಪಾ. ಸೂ. ೭-೧-೧೦೨) ಎಂಬುದರಿಂದ ಧಾತುವಿಗೆ ಉತ್ವ. **ಉರಣ್ರಪರಃ** ಸೂತ್ರದಿಂದ ಋಕಾರಸ್ಥಾನಕ್ಕೆ ಬರುವುದರಿಂದ ರಪರವಾಗಿ ಬರುತ್ತದೆ. ಪುರು ಶಬ್ದವಾಗುತ್ತದೆ. ಇದಕ್ಕೆ ಸ್ತ್ರೀತ್ವವಿವಕ್ಷಾಮಾಡಿದಾಗ **ವೋತೋಗುಣವಚನಾತ್** (ಪಾ. ಸೂ. ೪-೧-೪೪) ಎಂಬುದರಿಂದ ಙೀಷ್. ಈ ಪರವಾದಾಗ ಯಣಾದೇಶ. ಆಗ **ಹಲಿಚಿ** (ಪಾ. ಸೂ. ೮-೩-೭೭) ಸೂತ್ರದಿಂದ ರೇಫಾಂತದ ಉಪಧೆಗೆ ದೀರ್ಘ. ಪೂರ್ವೀ ಎಂದು ರೂಪವಾಗುತ್ತದೆ. ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ.

ಚಮ್ರಿಷಃ—ಚಮು ಅದನೇ ಧಾತು. ಇದಕ್ಕೆ **ಕೃಷಿಚಮಿತನಿಘನಿ**—(ಉ. ಸೂ. ೧-೮೧) ಎಂಬುದರಿಂದ ಊ ಪ್ರತ್ಯಯ. ಚಮೂ ಶಬ್ದವಾಗುತ್ತದೆ. ಇದು ನಿತ್ಯಸ್ತ್ರೀಲಿಂಗ ಶಬ್ದ. ಚಮ್ವಾಂ ವರ್ತಮಾನಾ ಇಷಃ ಚಮ್ರಿಷಃ ಸಂಹಿತಾದಲ್ಲಿ ವಕಾರಕ್ಕೆ ರೇಫಾದೇಶವು ಛಾಂದಸವಾಗಿ ಬರುತ್ತದೆ. ಕಾರಕಉಪಪದವಾಗಿ ಸಮಾಸವಾದುದರಿಂದ ಗತಿಕಾರಕೋಪಪದಾತ್ಕೃತ್ ಸೂತ್ರದಿಂದ ಕೃದುತ್ತರಪದಪ್ರಕೃತಿಸ್ವರ ಬರುತ್ತದೆ.

ಅಯಂಸ್ತ—ಯಮು ಉಪರಮೇ ಧಾತು. ವರ್ತಮಾನಾರ್ಥದಲ್ಲಿ **ಛಂದಸಿಲುಙ್ಲಙ್ಲಿಟಃ** ಎಂಬುದರಿಂದ ಲುಙ್ **ವ್ಯತ್ಯಯೋಬಹುಲಂ** ಸೂತ್ರದಿಂದ ಆತ್ಮನೇಪದಪ್ರತ್ಯಯ ಬರುತ್ತದೆ. ಪ್ರಥಮಪುರುಷ ಏಕವಚನಪರವಾದಾಗ **ಚ್ಲೇಃಸಿಚ್** ಸೂತ್ರದಿಂದ ಸಿಚ್ **ಏಕಾಚೋಉಪದೇಶೇನುದಾತ್ತಾತ್** ಎಂಬುದರಿಂದ

ಏಕಾಚಾದುದರಿಂದ ಸಿಚಿಗೆ ಇಡಾದೇಶಪ್ರತಿಷೇಧ ಬರುತ್ತದೆ. **ನಶ್ಚಾಪದಾಂತಸ್ಯ**—ಸೂತ್ರದಿಂದ ಮಕಾರಕ್ಕೆ ಅನುಸ್ವಾರಾದೇಶ. ಅಂಗಕ್ಕೆ ಅಡಾಗಮ. **ಅತಿಙಂತದಪರದಿಲ್ಲಿರುವುದರಿಂದ** ನಿಘಾತಸ್ವರ ಬರುತ್ತದೆ.

ಭುರ್ವಣಿಃ—ಭುರ್ವತಿರತ್ತಿಕರ್ಮಾ (ನಿರು. ೯-೨೩) ಇತಿ ಯಾಸ್ಕಃ. ಇವರ ಮತದಲ್ಲಿ ಭುರ್ವ ಎಂಬುದು ಧಾತುಸ್ವರೂಪವಾಗುತ್ತದೆ. ಆದರೆ ಧಾತುಪಾಠದಲ್ಲಿ ಭರ್ವ ಹಿಂಸಾಯಾಂ ಎಂದು ಪಠಿತವಾಗಿದೆ. ಇದಕ್ಕೆ ಔಣಾದಿಕವಾದ ಅನಿಪ್ರತ್ಯಯ. ಧಾತುವಿನ ಅಕಾರಕ್ಕೆ ಉಕಾರವು ಛಾಂದಸವಾಗಿ ಸ್ವೀಕರಿಸಬೇಕು. **ಅಟ್‌ಕುಪ್ವಾಙ್** ಸೂತ್ರದಿಂದ ರೇಫನಿಮಿತ್ತವಾಗಿ ಪ್ರತ್ಯಯ ನಕಾರಕ್ಕೆ ಣಕಾರಾದೇಶ. ಪ್ರತ್ಯಯಸ್ವರದಿಂದ ಮಧ್ಯೋದಾತ್ತವಾಗುತ್ತದೆ.

ಪಾಯಯಯೇ—ಪಾ ಪಾನೇ ಧಾತು. **ಹೇತುಮತಿಚ** ಎಂಬುದರಿಂದ ಪ್ರೇರಣಾವ್ಯಾಪಾರ ತೋರುವುದರಿಂದ ಣಿಚ್. **ಣೇಶ್ಚ** (ಪಾ. ಸೂ. ೧-೩-೭೪) ಎಂಬುದರಿಂದ ವ್ಯಾಪಾರಜನ್ಯಫಲವು ಕರ್ತೃಗಾಮಿಯಾಗುವಾಗ ಣಿಜಂತದ ಮೇಲೆ ಆತ್ಮನೇಪದಪ್ರತ್ಯಯ ಬರುತ್ತದೆ. ಣಿಚ್ ಪರದಲ್ಲಿರುವಾಗ **ಶಾಚ್ಛಾಸಾಹ್ವಾವ್ಯಾ-ವೇಷಾಂ ಯುಕ್** (ಪಾ. ಸೂ. ೭-೩-೩೭) ಎಂಬುದರಿಂದ ಧಾತುವಿಗೆ ಯುಕಾಗಮ. ಣಿಚಿಗೆ ಶಪ್ ಪರವಾದಾಗ ಗುಣ ಅಯಾದೇಶ. **ಟಿತಆತ್ಮನೇ**—ಸೂತ್ರದಿಂದ ಪ್ರತ್ಯಯಕ್ಕೆ ಏತ್ವ. ತಿಙಂತನಿಘಾತಸ್ವರ ಬರುತ್ತದೆ.

ಹಿರಣ್ಯಯಂ—ಹಿರಣ್ಯ ಶಬ್ದದಮೇಲೆ ವಿಕಾರಾರ್ಥದಲ್ಲಿ ಮಯಟ್ ಪ್ರತ್ಯಯ. **ಮಯತ್ಪ್ರಕೃತಾವಸ್ತ್ರಿಯಾ**— (ಪಾ. ಸೂ. ೬-೪-೧೭೫) ಎಂಬುದರಿಂದ ಮಯಟಿನ ಮ ಶಬ್ದಕ್ಕೆ ಲೋಪವು ನಿಪಾತಿತವಾಗಿದೆ.

ಹರಿಯೋಗಮ್—ಹರ್ಯೋಃ ಯೋಗಃ ಯೋಜನಂ ಯಸ್ಮಿನ್. ಬಹುವ್ರೀಹಿ ಸಮಾಸ. ಹರಿ ಶಬ್ದವು ಇನ್ ಪ್ರತ್ಯಯಾಂತವಾದುದರಿಂದ **ಇನ್ಸ್ನಿಭ್ಯಾದಿರ್ನಿತ್ಯಂ** ಸೂತ್ರದಿಂದ ಆದ್ಯುದಾತ್ತ. ಸಮಾಸದಲ್ಲಿ **ಬಹುವ್ರೀಹೌಪ್ರಕೃತ್ಯಾ ಪೂರ್ವಪದಮ್** ಎಂಬುದರಿಂದ ಪೂರ್ವಪದಪ್ರಕೃತಿಸ್ವರದಿಂದ ಹರಿಶಬ್ದದ ಸ್ವರವೇ ಉಳಿಯುತ್ತದೆ.

ಋಭ್ವಸಮ್—ಉರು ಅಧಿಕಂ ಭಾಃ ಯಸ್ಯ ಸಃ ಉರುಭಾಃ ತಂ ಉರುಭಾಸಮ್. ಇದು ಪೃಷೋದರಾದಿಯಲ್ಲಿ ಪಠಿತವಾದುದರಿಂದ **ಪೃಷೋದರಾದೀನಿ ಯಥೋಪದಿಷ್ಟಮ್** (ಪಾ. ಸೂ. ೬-೩-೧೦೯) ಎಂಬುದರಿಂದ ಋಭ್ವಸಾದೇಶಬರುತ್ತದೆ.

॥ ಸಂಹಿತಾಪಾಠಃ ॥

ತಂ ಗೂರ್ತಯೋ॑ ನೇಮನ್ನಿಷ॒ಃ ಪರೀ॑ಣಸಃ ಸಮು॒ದ್ರಂ ನ ಸಂಚರ॑ಣೇ ಸ॒ನಿಷ್ಯ॑ವಃ ।
ಪತಿಂ ದಕ್ಷ॑ಸ್ಯ ವಿ॒ದಥ॑ಸ್ಯ ನೂ ಸಹೋ॑ ಗಿರಿಂ ನ ವೇ॒ನಾ ಅಧಿ॑ ರೋಹ॒ ತೇಜ॑ಸಾ ॥ ೨ ॥

। पदपाठः ।

तं । गूर्तयः । नेमन्निषः । परीणसः । समुद्रं । न । संऽचे-
रते । सनिष्यवः ।
पतिं । दक्षस्य । विदथस्य । नु । सहः । गिरिं । न । वेनाः । अधि । रोहत ।
तेजसा ॥ ७ ॥

॥ सायणभाष्यं ॥

गूर्तयः स्तोतारोः नेमन्निषो नमस्कारपूर्वं गच्छंतः । यद्वा । नीत-हविष्याः परीणसः परितोः व्याप्नुवंतः । एवंगुणविशिष्टा यजमानास्तमिंद्रं स्तुति-भिरधिरोहंति । स्तुवंत इत्यर्थः । तत्र दृष्टांतः । सनिष्यवः सनिं धनमात्मन इच्छंतोः वणिजोः धनार्थं संचरणे संचारे निमित्तभूते सति समुद्रं न । यथा नावा समुद्रमधिरोहंति एवं स्तोतारोऽपि स्वाभिमतधनलाभायेंद्रं स्तुवंतीति भावः। हे स्तोतस्त्वं च दक्षस्य प्रवृद्धस्य विदथस्य यज्ञस्य पतिं पालयितारं सहः सह-स्वंतं बलवंतमिंद्रं तेजसा देवतात्प्रकाशकेन स्तोत्रेण नु क्षिप्रमधि रोहत । स्तुहीति यावत् । तत्र दृष्टांतः । वेनाः कांताः स्त्रियो गिरिं न । यथा पर्वतं स्वाभिमतपुष्पोत्पचयार्थमधिरोहंति ॥ गूर्तयः । गॄ शब्दे । गृणंति स्तुवंतीति गूर्तयः । क्तिच्क्तौ चेति कर्तरि क्तिच् । बहुलं छंदसीत्युत्वं । हलि चेति दीर्घः । चित इत्यंतोदात्तत्वं। नेमन्निषः। णमु प्रह्वत्व इत्यस्माच्छतरि व्यत्ययेनैत्वं । तकारस्य नकारादेशश्च । नमंत इष्यंतींद्रं स्प्राप्नुवंतीति नेमन्निषः । इषु गतावित्यस्माच् क्विप् चेति क्विप् । कृदुत्तरपदप्रकृतिस्वरत्वं । यद्वा । णीञ् प्रापण इत्यस्मादर्तिसु-स्वित्यादिना मन्प्रत्ययः । बहुलवचनान्नकारस्योत्संज्ञाभावः । नीताः प्रत्ता इषो येषां । परादिश्छंदसि बहुलमित्युत्तरपदाद्युदात्तत्वं । परीणसः । णस कौटिल्य इत्ययं धातुर्गत्यर्थोऽपि धातूनामनेकार्थत्वात् । परितोः नसंति गच्छंतीति परि-णसः । क्विप्चेति क्विप् । निपातस्य चेति पूर्वपदस्य दीर्घत्वं । उपसर्गादसमासेऽपीति णत्वं । व्यत्ययेनाद्युदात्तत्वं। यद्वा। नशतिर्गतिकर्मा । अस्मात्पूर्ववत् क्विपि शकार-स्य सकारः । सनिष्यवः । षणु दान इत्यस्मादिन्सर्वधातुभ्य इति कर्मणीन्प्रत्ययः । सनिमात्मन इच्छंतीति क्यचि । सर्वप्रातिपदिकेभ्योऽलसायोमसुगुक्तव्यः । सुगा-गमोऽपि वक्तव्यः । पा. उ-८-४८-३ । इति सुक् । क्याच्छंदसीत्युप्रत्ययः । नु । युचि तुनुघेति सांहितिको दीर्घः। सहः । अस्मादुत्तरस्य मतुपश्छंदसो लुक् ॥

॥ ಪ್ರತಿಪದಾರ್ಥ ॥

ಗೂರ್ತಯಃ— ಸ್ತೋತೃಗಳೂ । **ನೇಮನ್ನಿಷಃ**—ನಮಸ್ಕಾರಪೂರ್ವಕವಾಗಿ ಹೋಗುವವರೂ ಅಥವಾ ಹವಿಸ್ಸನ್ನು ಹೊಂದಿದವರೂ । **ಪರೀಣಸಃ**—ಸುತ್ತಲೂ ಗುಂಪುಕಟ್ಟಿಕೊಂಡವರೂ ಆದ ಯಜಮಾನರು । **ತಂ**—ಆ ಇಂದ್ರನನ್ನು । **ಸನಿಷ್ಯವಃ**—ಧನವನ್ನಪೇಕ್ಷಿಸುವ ವರ್ತಕರು । **ಸಂಚರಣೇ**—ಧನಕ್ಕಾಗಿ ಸಂಚಾರಮಾಡುವ ಕಾಲದಲ್ಲಿ । **ಸಮುದ್ರಂ ನ**—(ದೋಣಿಗಳ ಮೂಲಕ) ಗುಂಪುಕಟ್ಟಿಕೊಂಡು ಸಮುದ್ರವನ್ನು ಸೇರುವಂತೆ (ಸ್ತುತಿಗಳಮೂಲಕ ಸೇರುತ್ತಾರೆ ಎಲೈ ಸ್ತೋತೃನೇ) । **ದಕ್ಷಸ್ಯ**—ಶಕ್ತಿವಂತನಾಗಿಯೂ । **ವಿದಥಸ್ಯ**—ಪವಿತ್ರವಾದ ಯಜ್ಞಕ್ಕೆ । **ಪತಿಂ**—ಪಾಲಕನಾಗಿಯೂ । **ಸಹಃ**—ಬಲವಂತನಾಗಿಯೂ ಇರುವ ಇಂದ್ರನನ್ನು । **ತೇಜಸಾ**—(ದೇವತೆಗಳನ್ನು) ಪ್ರಕಾಶಪಡಿಸುವ ಸ್ತೋತ್ರದಿಂದ । **ವೇನಾಃ**—ರಮಣಿಯರು । **ಗಿರಿಂ ನ**—(ಪುಷ್ಪಾರ್ಥವಾಗಿ) ಪರ್ವತವನ್ನು ಹತ್ತುವಂತೆ । **ನು**—ಜಾಗ್ರತೆಯಾಗಿ । **ಅಧಿ ರೋಹ**—(ಸ್ತೋತ್ರದ ಮೂಲಕ) ಮೇಲೇರಿ ಇಂದ್ರನನ್ನು ಸಮೀಪಿಸು ॥

॥ ಭಾವಾರ್ಥ ॥

ಧನವನ್ನಪೇಕ್ಷಿಸುವ ವರ್ತಕರು ಧನಸಂಚಯದಕಾಲದಲ್ಲಿ ಗುಂಪುಕಟ್ಟಿಕೊಂಡು ದೋಣಿಗಳ ಮೂಲಕ ಸಮುದ್ರವನ್ನು ಸೇರುವಂತೆ, ಹವಿಸ್ಸನ್ನು ಹೊಂದಿದ ಸ್ತೋತೃಗಳು ಸುತ್ತಲೂ ಗುಂಪುಕಟ್ಟಿಕೊಂಡು ಸ್ತೋತ್ರಗಳ ಮೂಲಕ ಇಂದ್ರನನ್ನು ಸೇರುತ್ತಾರೆ. ಎಲೈ ಸ್ತೋತೃನೇ, ರಮಣಿಯರು ಪುಷ್ಪಾರ್ಥವಾಗಿ ಪರ್ವತವನ್ನು ಹತ್ತುವಂತೆ, ನೀನೂ ಸಹ ಶಕ್ತಿವಂತನೂ, ಪವಿತ್ರವಾದ ಯಜ್ಞದ ಪಾಲಕನೂ, ಬಲವಂತನೂ ಆದ ಇಂದ್ರನನ್ನೂ ದೇವತೆಗಳ ಪ್ರಕಾಶಕವಾದ ಸ್ತೋತ್ರದ ಮೂಲಕ ಮೇಲೇರಿ ಸಮೀಪಿಸು.

English Translation.

He adorers, bearing oblations, thronging round (him) as (merchants) covetous of gain crowd the ocean (in vessels) on a yoyage; ascend quickly, with a hymn to the powerful Indra, the protector of the solemn sacrifice as women (climb) a mountain.

॥ ವಿಶೇಷವಿಷಯಗಳು ॥

ಗೂರ್ತಯಃ—ಗೃಣಂತಿ ಸ್ತುವಂತೀತಿ ಗೂರ್ತಯಃ ಎಂದು ಇದರ ವ್ಯುತ್ಪತ್ತಿ. ಗೃ ಶಬ್ದೇ ಎಂಬ ಧಾತುವಿನಿಂದ ನಿಷ್ಪನ್ನವಾದ ಶಬ್ದ ಇದು. ಇದಕ್ಕೆ ಸ್ತೋತ್ರಮಾಡುವವರು ಎಂದರ್ಥ.

ನೇಮನ್ನಿಷಃ—ನಮಂತಃ ಇಷ್ಯಂತಿ ಇಂದ್ರಂ ಪ್ರಾಪ್ನುವಂತೀತಿ ನೇಮನ್ನಿಷಃ ಎಂದು ಈ ಪದದ ವಿಗ್ರಹವಾಕ್ಯ. ಇದಕ್ಕೆ ನಮಸ್ಕಾರಪೂರ್ವಕವಾಗಿ ಇಂದ್ರನ ಸಮೀಪಕ್ಕೆ ಹೋಗುವವರು, ಅಥವಾ ಹವಿಸ್ಸನ್ನು ಒಯ್ದು ಇಂದ್ರನಿಗೆ ಕೊಡುವವರು ಎಂದೂ ಎರಡು ರೀತಿಯಲ್ಲಿಯೂ ಅರ್ಥಮಾಡಿರುತ್ತಾರೆ.

ಪರೀಣಸಃ—ಪರಿತೋ ನಸಂತಿ ಗಚ್ಛಂತೀತಿ ಪರೀಣಸಃ ಪರಿತೋ ವ್ಯಾಪ್ನುವಂತಃ ಏವಂ ಗುಣವಿಶಿಷ್ಟಾ ಯಜಮಾನಾಃ । ಯಾಗಾಚರಣೆಗಾಗಿ ಸರ್ವತ್ರ ವ್ಯಾಪಿಸಿ ಇಂದ್ರಾದಿ ದೇವತೆಗಳನ್ನು ಸ್ತುತಿಸುತ್ತಾ ಯಜ್ಞವನ್ನು ಮುಂದುವರಿಸುವ ಯಜಮಾನರು ಎಂದರ್ಥ.

सनिष्यवः—सनिं धनमात्मन इच्छंतोऽ वणिजः—द्रव्यार्जनेगागि व्यापारियुव वर्तकरु (वैश्यरु) ऎंदर्थ. धनार्जनेगे तॊडगिदवरु दोणिय मेलॆ कुळितु समुद्रदल्लि संचरिसुवंतॆ, यजमानरु तम्म इष्टार्थप्राप्तिगागि इंद्रनन्नु स्तुतिसुवरु ऎंबुदु ई प्रकरणक्के संबंधिसिद तात्पर्य.

सहः—इदक्के सहस्वंतं, बलवंतं ऎंदरॆ अतिशयवाद बलवुळ्ळवनु ऎंदर्थ माडिद्दारॆ.

वेनाः गिरिं न—स्त्रीयरु पुष्पापचयार्थवागि पर्वतवन्नु हत्तुवंतॆ, इष्टार्थप्राप्तिगागि इंद्रनन्नु सर्वदा स्तोत्रमाडु ऎंदु इल्लि दृष्टांतपूर्वकवाग इंद्रनन्नु स्तुतिसिरुव सन्निवेशविदॆ.

॥ व्याकरणप्रक्रिया ॥

गूर्तयेः—ग्वा शब्दे धातुः. गृणंति स्तुवंति इति गूर्तयः (स्तोत्रमाडुवरु) **क्तिच् क्तौ च संज्ञायां** (पा. सू. ३-३-१७४) ऎंबुदरिंद ई धातुविगॆ कर्तरियल्लि क्तिच् प्रत्ययः. **बहुलं छंदसि** ऎंबुदरिंद धातुविगॆ उत्व. **उरण्रपरः** सूत्रदिंद रपर वागि बरुत्तदॆ. आग **हलि च** (पा. सू. ८-२-७७) ऎंबुदरिंद रेफांतद उपधॆगॆ दीर्घ. गूर्ति शब्दवागुत्तदॆ. प्रत्ययः चित्त्वादुदरिंद **चितः** (पा. सू. ६-१-१६३) ऎंबुदरिंद अंतोदात्तस्वर बरुत्तदॆ. प्रथमा बहुवचनदल्लि **जसि च** ऎंबुदरिंद अंगक्के गुण, अयादेश.

नेमन्निषः—णमु प्रह्वत्वे शब्दे च धातु. लडर्थदल्लि शतृप्रत्ययः. इदु परवादाग **व्यत्ययो बहुलं** ऎंबुदरिंद धातुविन अकारक्के ऎत्व तकारक्के नकारादेश. नमंतः इष्यंति इंद्रं प्राप्नुवंति इति नेमन्निषः. इषु गतौ धातु. इदक्के **क्विप् च** (पा. सू. ३-२-७६) ऎंबुदरिंद क्विप् प्रत्ययः. नेमन्निष् शब्दवागुत्तदॆ. **गतिकारकोपपदात् कृत्** सूत्रदिंद कृदुत्तरपद प्रकृतिस्वर बरुत्तदॆ. अथवा णेषृ प्रापणे धातु. अदक्के **अर्तिस्तुसु** (उ. सू. १-१४८) ऎंबुदरिंद मन् प्रत्ययः. छंदस्सिनल्लि बहुलवचन विरुवुदरिंद मन्निन नकारक्के **हलन्त्यम्** सूत्रदिंद इत्संज्ञॆ बरुवुदिल्ल. प्रत्ययनिमित्तवागि धातुविगॆ गुण. नेमन् ऎंदागुत्तदॆ. नीतयः **प्रत्नासः इषो** यॆषाम्. बहुव्रीहियल्लि **पूरादिश्छंदसि बहुलं** (पा. सू. ६-३-१९९) ऎंबुदरिंद उत्तरपदाद्युदात्तस्वर बरुत्तदॆ.

परीणसः—णस कौटिल्ये धातु. इदु इल्लि धातुगळिगॆ अनेकार्थविरुवुदरिंद गत्यर्थदल्लि प्रयुक्तवागिदॆ. परितो नसंति गच्छंति इति परीणसः. **क्विप् च** ऎंबुदरिंद क्विप्. **निपातस्य च** (पा. सू. ६-३-१३६) ऎंबुदरिंद निपातवाद पूर्वपदक्के दीर्घ. परीणस् शब्दवागुत्तदॆ. **उपसर्गादसमासेऽपि णोपदेशस्य** सूत्रदिंद धातुविन नकारक्के णत्व बंदिदॆ. कृदुत्तरपदप्रकृतिस्वरवु प्राप्तवादरॆ व्यत्ययदिंद अद्युदात्तस्वर बरुत्तदॆ. अथवा नशधातु गत्यर्थदल्लिदॆ. इदक्के हिंदिनंतॆ क्विप् प्रत्ययः छांदसवागि शकारक्के सकारादेश.

ಸನಿಷ್ಯವಃ—ಷಣು ದಾನೇ ಧಾತು. ಇದಕ್ಕೆ **ಇನ್‌ಸರ್ವಧಾತುಭ್ಯಃ** ಎಂಬ ಉಣಾದಿಸೂತ್ರದಿಂದ ಕರ್ಮಣಿಯಲ್ಲಿ ಇನ್ ಪ್ರತ್ಯಯ. ಧಾತ್ವಾದಿಗೆ ಸಕಾರಾದೇಶ ಸನಿ ಶಬ್ದವಾಗುತ್ತದೆ. ಸನಿಂ ಆತ್ಮನಃ ಇಚ್ಛತಿ ಎಂಬರ್ಥದಲ್ಲಿ **ಸುಪಆತ್ಮನಃ ಕ್ಯಚ್** ಸೂತ್ರದಿಂದ ಕ್ಯಚ್. ಕ್ಯಚ್ ಪರದಲ್ಲಿರುವಾಗ **ಸರ್ವಪ್ರಾತಿಪದಿಕೇಭ್ಯೋ ಲಾಲಸಾಯಾಂ ಸುಗ್ವಕ್ತವ್ಯಃ ಸುಗಾಗಮೋಽಪಿವಕ್ತವ್ಯಃ** (ಕಾ. ೭-೧-೫೧-೩) ಎಂಬ ವಚನದಿಂದ ಸನಿ ಎಂಬುದಕ್ಕೆ ಸುಗಾಗಮ. ಇಕಾರದ ಪರದಲ್ಲಿರುವುದರಿಂದ ಷತ್ವ. ಸನಿಷ್ಯ ಎಂಬುದು **ಸನಾದ್ಯಂತಾ ಧಾತವಃ** ಸೂತ್ರದಿಂದ ಧಾತುಸಂಜ್ಞೆಯನ್ನು ಹೊಂದುತ್ತದೆ. ಇದರ ಮೇಲೆ **ಕ್ಯಾಚ್ಛಂದಸಿ** ಎಂಬುದರಿಂದ ಉ ಪ್ರತ್ಯಯ. **ಅತೋಲೋಪಃ** ಎಂಬುದರಿಂದ ಕ್ಯಚಿನ ಅಕಾರಕ್ಕೆ ಲೋಪ. ಸನಿಷ್ಯು ಎಂದು ಉಕಾರಾಂತಶಬ್ದವಾಗುತ್ತದೆ. ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ. ಪ್ರಥಮಾಬಹುವಚನಲ್ಲಿ **ಜಸಿಚಿ** ಎಂಬುದರಿಂದ ಗುಣ ಅವಾದೇಶ.

ನು—**ಯುಚಿ ತುನುಘ**—ಎಂಬುದರಿಂದ ಸಂಹಿತಾದಲ್ಲಿ ದೀರ್ಘಬರುತ್ತದೆ.

ಸಹಃ—ಸಹಃ ಅಸ್ಯ ಅಸ್ತಿ ಇತಿ ಸಹಸ್ವಾನ್. **ತದಸ್ಯಾಸ್ತ್ಯ**—ಸೂತ್ರದಿಂದ ಮತುಪ್ ಪ್ರತ್ಯಯ. ಸಂಹಿತಾದಲ್ಲಿ ಛಾಂದಸವಾಗಿ ಮತುಪ್ ಪ್ರತ್ಯಯಕ್ಕೆ ಲುಕ್ ಬಂದಿದೆ.

ರೋಹ—ರುಹ ಬೀಜಜನ್ಮನಿ ಪ್ರಾದುರ್ಭಾವೇ ಧಾತು. ಲೋಟ್ ಮಧ್ಯಮಪುರುಷ ಏಕವಚನರೂಪ. ತಿಙಂತನಿಘಾತಸ್ವರ ಬರುತ್ತದೆ.

॥ ಸಂಹಿತಾಪಾಠಃ ॥

ಸ ತ್ವರ್ವಣೇರ್ಮಹಾ ಅರೇಣು ಪೌಂಸ್ಯೇ ಗಿರೇರ್ಭೃಷ್ಟಿರ್ನ ಭ್ರಾಜತೇ ತ್ವು.
ಜಾ ಶವಃ ।
ಯೇನ ಶುಷ್ಣಂ ಮಾಯಿನಮಾಯಸೋ ಮದೇ ದುಧ್ರ ಆಭೂಷು ರಾ-
ಮಯನ್ನಿ ದಾಮನಿ ॥ ೩ ॥

ಪದಪಾಠಃ

ಸಃ । ತ್ವರ್ವಣೇಃ । ಮಹಾನ್ । ಅರೇಣು । ಪೌಂಸ್ಯೇ । ಗಿರೇಃ । ಭೃಷ್ಟಿಃ । ನ ।
ಭ್ರಾಜತೇ । ತ್ವಜಾ । ಶವಃ ।
ಯೇನ । ಶುಷ್ಣಂ । ಮಾಯಿನಂ । ಆಯಸಃ । ಮದೇ । ದುಧ್ರಃ । ಆಭೂಷು ।
ರಮಯತ್ । ನಿ । ದಾಮನಿ ॥ ೩ ॥

॥ಸಾಯಣಭಾಷ್ಯಂ॥

ಸ ಇಂದ್ರಸ್ತುರ್ವಣಿಃ ಶತ್ರೂಣಾಂ ಹಿಂಸಿತಾ ಕ್ಷಿಪ್ರಕಾರೀ ವಾ । ತುರ್ವಣಿಸ್ತೂರ್ಣವನಿರಿತಿ ಯಾಸ್ಕಃ । ನಿ. ೬-೧೪ । ತೂರ್ಣಸಂಭಜನ ಇತಿ ತಸ್ಯಾರ್ಥಃ । ಮಹಾನ್ಪೃಷದ್ವಶ್ಚ ಭವತಿ । ತಸ್ಯೇಂದ್ರಸ್ಯ ತವೋ ಬಲಂ ಪೌಂಸ್ಯೇ ವೀರ್ಯೈಃ ಪುರುಷ್ಯೈಃ ಕರ್ತವ್ಯೇ ಸಂಗ್ರಾಮೇಽರೇಣ್ವನವದ್ಯಂ ತುಜಾ ಶತ್ರೂಣಾಂ ಹಿಂಸಕಂ ಸತ್ ಭ್ರಾಜತೇ । ದೀಪ್ಯತೇ । ತತ್ರ ದೃಷ್ಟಾಂತಃ । ಗಿರೇಃ ಪರ್ವತಸ್ಯ ಭೃಷ್ಟಿರ್ನ ಶೃಂಗಮಿವ। ತದ್ಯಥೋನ್ನತಂ ಸದ್ದೀಪ್ಯತೇ ತದ್ವತ್ । ಅಯಸೋಽಯೋಮಯಕವಚಯುಕ್ತದೇಹೋ ದುಧ್ರೋ ದುಷ್ಟಾನಾಂ ಶತ್ರೂಣಾಂ ಧರ್ತಾವಸ್ಥಾಪಯಿತಾ ಏವಂಭೂತ ಇಂದ್ರೋ ಮದೇ ಸೋಮಪಾನೇನ ಹರ್ಷೇ ಸತಿ ಯೇನ ಬಲೇನ ಶುಷ್ಣಂ ಸರ್ವಸ್ಯ ಶೋಷಕಮಸುರಂ ಮಾಯಿನಂ ಮಾಯಾವಿನಮಾಭೂಷು ಕಾರಾಗೃಹೇಷು ದಾಮನಿ ಬಂಧಕೇ ನಿಗಡೇ ನಿ ರಮಯತ್ ನ್ಯವಾಸಯತ್ । ತದ್ಬಲಮಿತಿ ಪೂರ್ವೇಣಾನ್ವಯಃ ॥ ತುರ್ವಣಿಃ । ತುರ್ವೀ ಹಿಂಸಾರ್ಥಃ । ಅಸ್ಮಾದೌಣಾದಿಕೋಽನಿಪ್ರತ್ಯಯಃ । ಅರೇಣು । ರೇಣುವದಾಚ್ಛಾದಕತ್ವಾದ್ರೇಣುಶಬ್ದೇನಾವದ್ಯಮುಚ್ಯತೇ । ಬಹುವ್ರೀಹೌ ನಞ್ಸುಭ್ಯಾಮಿತ್ಯುತ್ತರಪದಾಂತೋದಾತ್ತತ್ವಂ । ತುಜಾ । ತುಜ ಹಿಂಸಾಯಾಂ । ಇಗುಪಧಲಕ್ಷಣಃ ಕಃ । ಸುಪಾಂ ಸುಲುಗಿತಿ ವಿಭಕ್ತೇರಾಕಾರಃ । ದುಧ್ರಃ । ದುಷ್ಟಾನ್ ಧ್ರಿಯತೇಽವಸ್ಥಾಪಯತೀತಿ ದುಧ್ರಃ । ಧೃಙ್ ಅವಸ್ಥಾನ ಇತ್ಯಸ್ಮಾದಂತರ್ಭಾವಿತಣ್ಯರ್ಥಾನ್ಮೂಲವಿಭುಜಾದಿತ್ವಾತ್ಕಪ್ರತ್ಯಯಃ । ಪಾ. ೩-೨-೫-೨ । ಯೇಣಾದೇಶಃ । ರೇಫಲೋಪಶ್ಛಾಂದಸಃ । ರಮಯತ್ । ಅಮಂತತ್ವಾನ್ನಿತ್ತ್ವೇ ಮಿತಾಂ ಹ್ರಸ್ವ ಇತಿ ಹ್ರಸ್ವತ್ವಂ । ಛಾಂದಸಃ ಸಂಹಿತಾಯಾಂ ದೀರ್ಘಃ ॥

॥ ಪ್ರತಿಪದಾರ್ಥ ॥

ಸಃ—ಇಂದ್ರನು । **ತುರ್ವಣಿಃ**—ಶತ್ರುಹಿಂಸಕನಾಗಿಯೂ ಅಥವಾ ಶೀಘ್ರವಾಗಿ ಕೆಲಸವಮಾಡತಕ್ಕವನಾಗಿಯೂ ಮತ್ತು । **ಮಹಾ**—ಪ್ರಭಾವಯುತನಾಗಿಯೂ ಇದ್ದಾನೆ । **ಅಯಸಃ**—ಉಕ್ಕಿನ ಕವಚವನ್ನು ಧರಿಸಿದ ದೇಹವುಳ್ಳವನೂ । **ದುಧ್ರಃ**—ದುಷ್ಟ ಶತ್ರುಗಳನ್ನು ದಮನಮಾಡತಕ್ಕವನೂ ಆದ ಇಂದ್ರನು । **ಮದೇ**—ಸೋಮರಸಪಾನದಿಂದ ಹರ್ಷಿತನಾದಾಗ । **ಯೇನ**—ಯಾವ ಬಲದಿಂದ । **ಶುಷ್ಣಂ**—ಸರ್ವಶೋಷಕನೂ । **ಮಾಯಿನಂ**—ಮೋಸಗಾರನೂ ಆದ ರಾಕ್ಷಸನನ್ನು । **ಅಭೂಷು**—ಕಾರಾಗೃಹದಲ್ಲಿ । **ದಾಮನಿ**—ಬಂಧಕವಾದ ಸಂಕೋಲೆಯಲ್ಲಿ । **ನಿರಮಯತ್**—ಸಿಕ್ಕಿರುವಂತೆ ಮಾಡಿದನೋ । **ತವಃ**—ಆ ಬಲವು । **ಪೌಂಸ್ಯೇ**—ವೀರರು ನಡಿಸತಕ್ಕ ಯುದ್ಧದಲ್ಲಿ । **ಅರೇಣು**—ದೋಷರಹಿತವಾಗಿಯೂ । **ತುಜಾ**—ಶತ್ರುಹಿಂಸಕವಾಗಿಯೂ ಇದ್ದು । **ಗಿರೇಃ**—ಪರ್ವತದ । **ಭೃಷ್ಟಿರ್ನ**—ಶಿಖರದೋಪಾದಿಯಲ್ಲಿ । **ಭ್ರಾಜತೇ**—ಪ್ರಕಾಶಿಸುತ್ತದೆ ॥

॥ ಭಾವಾರ್ಥ ॥

ಇಂದ್ರನು ಶೀಘ್ರಕರ್ಮಕಾರಿಯಾಗಿಯೂ ಪ್ರಭಾವಯುತನಾಗಿಯೂ ಇದ್ದಾನೆ. ಉಕ್ಕಿನ ಕವಚವನ್ನು ಧರಿಸಿದ ದೇಹವುಳ್ಳವನೂ, ದುಷ್ಟಶತ್ರುಗಳನ್ನು ದಮನಮಾಡತಕ್ಕವನೂ ಆದ ಇಂದ್ರನು ಸೋಮರಸಪಾನದಿಂದ ಹರ್ಷಿತನಾದಾಗ ಯಾವ ಶಕ್ತಿಯಿಂದ ಸರ್ವಶೋಷಕನೂ ಮೋಸಗಾರನೂ ಆದ ರಾಕ್ಷಸನನ್ನು ಕಾರಾಗೃಹದಲ್ಲಿ ಬಂಧಕವಾದ ಸಂಕೋಲೆಯಲ್ಲಿ ಸಿಕ್ಕಿರುವಂತೆ ಮಾಡಿದನೋ ಆ ಬಲವು ವೀರರು ನಡಿಸತಕ್ಕ ಯುದ್ಧಕಾಲದಲ್ಲಿ ದೋಷರಹಿತವಾಗಿಯೂ, ಶತ್ರುಹಿಂಸಕವಾಗಿಯೂ ಇದ್ದು ಪರ್ವತದ ಶಿಖರದೋಪಾದಿಯಲ್ಲಿ ಪ್ರಕಾಶಿಸುತ್ತದೆ.

English Translation.

He is quick in actions and mighty; his faultless and destructive prowess shines in manly (conflict) like the peak of a mountain (afar) with which clothed in iron (armour), he, the suppressor of the malignant, when exhilarated by the soma-juice, cast the whily sushna into prison and into bonds.

॥ ವಿಶೇಷ ವಿಷಯಗಳು ॥

ತುರ್ವಣಿಃ—**ಶತ್ರೂಣಾಂ ಹಿಂಸಿತಾ ಕ್ಷಿಪ್ರಕಾರೀ ವಾ ತುರ್ವಣಿಸ್ತೂರ್ಣವನಿಃ** (ನಿರು. ೬-೧೪) **ತೂರ್ಣಂಹಿ ಯಃ ಸಂಭಜತೇ**—ಜಾಗ್ರತೆಯಾಗಿ ಸ್ತುತಿಸುವವನು ಎಂದರ್ಥ. "ಸತುರ್ವಣಿರ್ಮಹಾಂ ಅರೇಣುಃ" (ಋ ಸಂ. ೧-೫೬-೩) ಎಂಬುದಾಗಿ ತುರ್ವಣಿ ಶಬ್ದವು. ಇಂದ್ರನು ತನ್ನನ್ನು ಸ್ತುತಿಸುವವರಿಗೆ ಜಾಗ್ರತೆಯಾಗಿ ಫಲಕೊಡುವನೆಂಬರ್ಥವನ್ನು ಅಲ್ಲಲ್ಲಿ ಸೂಚಿಸುವುದು.

ಪೌಂಸ್ಯೇ—**ಈ ಪದಕ್ಕೆ ವೀರೈಃ ಪುರುಷೈಃ ಕರ್ತವ್ಯೇ ಸಂಗ್ರಾಮೇ** ಎಂದು ಅರ್ಥವನ್ನು ವಿವರಿಸಿ. ವೀರರು ಮಾಡುವ ಯುದ್ಧವೆಂದು ಅರ್ಥಮಾಡಿದ್ದಾರೆ.

ಅರೇಣು—**ಅನವದ್ಯಂ**—ವ್ಯರ್ಥವಲ್ಲದ್ದು.

ತುಜಾ—**ತುಜ-ಹಿಂಸಾಯಾಂ** ಎಂಬ ಧಾತುವಿನಿಂದ ನಿಷ್ಪನ್ನವಾದ ಈ ಶಬ್ದವು ಶತ್ರುಗಳಿಗೆ ಹಿಂಸೆಯನ್ನು ಕೊಡತಕ್ಕದ್ದು ಎಂಬರ್ಥವನ್ನು ಕೊಡುವುದು.

ಗಿರೇಃಭೃಷ್ವಿರ್ನ—ಪರ್ವತದ ಶಿಖರದಂತೆ ಎಂದರ್ಥ. ಇಲ್ಲಿ ನ ಶಬ್ದಕ್ಕೆ ಇವಾರ್ಥಕತ್ವವಿರುವುದು.

ದುಧ್ರಃ—ಧೃಜ್ ಅವಸ್ಥಾನೇ ಎಂಬ ಧಾತುನಿಷ್ಪನ್ನವಾದ ಈ ಶಬ್ದವು ಶತ್ರುಗಳನ್ನು ಶಿಕ್ಷಿಸಿ ಅವರವರ ಸ್ಥಳದಲ್ಲಿಯೇ ನಿಲ್ಲಿಸುವವನು ಎಂಬರ್ಥವನ್ನು ಕೊಡುವುದು.

॥ ವ್ಯಾಕರಣಪ್ರಕ್ರಿಯಾ ॥

ತುರ್ವಣಿಃ—ತುರ್ವೀ ಧಾತುವು ಹಿಂಸಾರ್ಥದಲ್ಲಿದೆ. ಇದಕ್ಕೆ ಔಣಾದಿಕವಾದ ಅನಿ ಪ್ರತ್ಯಯ. **ಆಟ್‌ಕುವ್ವಾಜ್‌ನುಮ್** ಸೂತ್ರದಿಂದ ಪ್ರತ್ಯಯ ನಕಾರಕ್ಕೆ ಣತ್ವ. ಪ್ರತ್ಯಯದ ಆದ್ಯುದಾತ್ತಸ್ವರದಿಂದ ಮಧ್ಯೋದಾತ್ತವಾದ ಶಬ್ದವಾಗುತ್ತದೆ.

ಅರೇಣು—ರೇಣುವದಾಚ್ಛಾದಕತ್ವಾತ್ ರೇಣುಶಬ್ದೇನ ಅವದ್ಯಂ ಉಚ್ಯತೇ. (ಧೂಲಿಯಂತೆ ಮುಚ್ಚುವುದರಿಂದ ಶ್ರೇಷ್ಠವಾದುದು ಎಂದು ತಾತ್ಪರ್ಯ) ಬಹುವ್ರೀಹಿ ಸಮಾಸ. **ನಞ್‌ಸುಭ್ಯಾಮ್** (ಪಾ. ಸೂ. ೬-೨-೧೭೨) ಎಂಬುದರಿಂದ ಉತ್ತರಪದಾಂತೋದಾತ್ತಸ್ವರ ಬರುತ್ತದೆ.

ಭ್ರಾಜತೇ—ಭ್ರಾಜೃ ದೀಪ್ತೌ ಧಾತು. ಲಟ್ ಪ್ರಥಮಪುರುಷ ಏಕವಚನರೂಪ. ತಿಙಂತನಿಘಾತ ಸ್ವರ ಬರುತ್ತದೆ.

ತುಜಾ—ತುಜ ಹಿಂಸಾಯಾಂ ಧಾತು. ಇತ್ ಉಪಧೆಯಾಗಿರುವುದರಿಂದ **ಇಗುಪಧಜ್ಞಾಪ್ರೀಕಿರಃ ಕಃ** (ಪಾ. ಸೂ. ೩-೧-೧೩೫) ಎಂಬುದರಿಂದ ಕಪ್ರತ್ಯಯ ಕಿತ್ವಾದುದರಿಂದ ಲಘೂಪಧಗುಣ ಬರುವುದಿಲ್ಲ. ಪ್ರಥಮಾಸುಪ್ರವಾದಾಗ **ಸುಪಾಂ ಸುಲುಕ್** ಸೂತ್ರದಿಂದ ವಿಭಕ್ತಿಗೆ ಆಕಾರಾದೇಶ.

ಮಾಯಿನಮ್—ಮಾಯಾ ಅಸ್ಯ ಅಸ್ತಿ ಎಂಬ ಮತ್ವರ್ಥದಲ್ಲಿ **ವ್ರೀಹ್ಯಾದಿಭ್ಯಶ್ಚ** (ಪಾ. ಸೂ. ೫-೨-೧೧೬) ಎಂಬುದರಿಂದ ಇನಿಪ್ರತ್ಯಯ. **ಯೆಸ್ಯೇತಿಚೆ** ಸೂತ್ರದಿಂದ ಆಕಾರಲೋಪ. ಪ್ರತ್ಯಯಸ್ವರದಿಂದ ಇಕಾರ ಉದಾತ್ತವಾಗುತ್ತದೆ.

ದುಧ್ರಃ—ದುಷ್ಟಾನ್ ಧ್ರಿಯತೇ ಅವಸ್ಥಾಪಯತಿ ಇತಿ ದುಧ್ರಃ ಧೃಙ್ ಅವಸ್ಥಾನೇ ಧಾತು. ಇದು ಅಂತರ್ಭಾವಿತಣ್ಯರ್ಥಕವಾಗಿರುವಾಗ (ಣಿಜರ್ಥ ಧಾತ್ವರ್ಥದಲ್ಲಿ ಸೇರಿರುವಾಗ) ಮೂಲವಿಭುಜಾದಿಯಲ್ಲಿ ಸೇರಿರುವುದರಿಂದ **ಕಪ್ರಕರಣೇ ಮೂಲವಿಭುಜಾದಿಭ್ಯ ಉಪಸಂಖ್ಯಾನಮ್** (ಪಾ. ಸೂ. ೩-೨-೫-೨) ಎಂಬುದರಿಂದ ಕ ಪ್ರತ್ಯಯ. ಕಿತ್ವಾದುದರಿಂದ ಗುಣ ಬರುವುದಿಲ್ಲ. ಯಣಾದೇಶ ದುರ್ ಉಪಸರ್ಗದ ರೇಫಕ್ಕೆ ಛಾಂದಸವಾಗಿ ಲೋಪ ಬರುತ್ತದೆ. ಪ್ರತ್ಯಯಸ್ವರದಿಂದ ಅಂತೋದಾತ್ತ.

ರಮಯತ್—ರಮು ಕ್ರೀಡಾಯಾಂ ಧಾತು. ಪ್ರೇರಣಾರ್ಥತೋರುವಾಗ **ಹೇತುಮತಿಚ** ಎಂಬುದರಿಂದ ಣಿಚ್. **ಅತಉಪಧಾಯಾಃ** ಸೂತ್ರದಿಂದ ಉಪಧಾವೃದ್ಧಿ. ಅಮಂತವಾದುದರಿಂದ **ಜನೀಜೃಷ್ಕ್ನಸು** ಎಂಬುದರಿಂದ ಇದು ಅಮಂತವಾದುದರಿಂದ ಮಿತ್ ಸಂಜ್ಞಾ ಬರುತ್ತದೆ. ಆಗ **ಮಿತಾಂಹ್ರಸ್ವಃ** (ಪಾ. ಸೂ. ೬-೪-೯೨) ಎಂಬುದರಿಂದ ಉಪಧಾ ಹ್ರಸ್ವ. ಲಙ್ ಪ್ರಥಮಪುರುಷ ಏಕವಚನದಲ್ಲಿ ತಿಪ್ ಪ್ರತ್ಯಯ. **ಇತಶ್ಚ** ಸೂತ್ರದಿಂದ ಇಕಾರ ಲೋಪ. ಶಪ್ ವಿಕರಣ. ತನ್ನಿಮಿತ್ತವಾಗಿ ಣಿಚಿಗೆ ಗುಣ ಅಯಾದೇಶ. **ಬಹುಲಂ-ಛಂದಸ್ಯಮಾಙ್ಯೋಗೇಽಪಿ** ಎಂಬುದರಿಂದ ಅಡಾಗಮ ಬರುವುದಿಲ್ಲ. ಯೇನ ಎಂದು ಹಿಂದೆ ಸಂಬಂಧವಿರುವುದರಿಂದ **ಯದ್ವೃತ್ತಾನ್ನಿತ್ಯಮ್** ಎಂಬುದರಿಂದ ನಿಘಾತಪ್ರತಿಷೇಧ. ಣಿಚ್ ಸ್ವರದಿಂದ ಮಕಾರೋತ್ತರಾಕಾರ ಉದಾತ್ತವಾಗುತ್ತದೆ. ಸಂಹಿತಾಪಾಠದಲ್ಲಿ ಛಾಂದಸವಾಗಿ ಅದಿ ದೀರ್ಘ ಬರುತ್ತದೆ.

॥ ಸಂಹಿತಾಪಾಠಃ ॥

ದೇವೀ ಯದಿ ತವಿಷೀ ತ್ವಾವೃಧೋತಯ ಇಂದ್ರಂ ಸಿಷಕ್ತ್ಯುಷಸಂ ನ ಸೂರ್ಯಃ ।
ಯೋ ಧೃಷ್ಣುನಾ ಶವಸಾ ಬಾಧತೇ ತಮು ಇಯರ್ತಿ ರೇಣುಂ ಬೃಹದರ್ಹರಿಷ್ಣುಭಿಃ ॥ ೪ ॥

॥ ಪದಪಾಠಃ ॥

ದೇವೀ । ಯದಿ । ತವಿಷೀ । ತ್ವಾವೃಧಾ । ಊತಯೇ । ಇಂದ್ರಂ । ಸಿಷಕ್ತಿ । ಉಷಸಂ । ನ । ಸೂರ್ಯಃ ।
ಯಃ । ಧೃಷ್ಣುನಾ । ಶವಸಾ । ಬಾಧತೇ । ತಮಃ । ಇಯರ್ತಿ । ರೇಣುಂ । ಬೃಹತ್ । ಅರ್ಹರಿಷ್ಣುಭಿಃ ॥ ೪ ॥

॥ ಸಾಯಣಭಾಷ್ಯಂ ॥

ಯ ಇಂದ್ರೋ ಧೃಷ್ಣುನಾ ಧರ್ಷಕೇಣ ಶವಸಾ ಬಲೇನ ತಮಸ್ತಮೋರೂಪಂ ವೃತ್ರಾದಿಮಸುರಂ ಬಾಧತೇ ಹಿನಸ್ತಿ ಊತಯೇ ರಕ್ಷಣಾಯ ತ್ವಾವೃಧಾ ತ್ವಯಾ ಸ್ತೋತ್ರಾ ವರ್ಧಿತಂ ತಮಿಂದ್ರಂ ದೇವೀ ತವಿಷೀ ದ್ಯೋತಮಾನಂ ಬಲಂ ಯದಿ ಯದಾ ಸಿಷಕ್ತಿ ಸಮನ್ವೈತಿ । ಸೇವತ ಇತಿ ಯಾಸ್ಕಃ । ಸೂರ್ಯ ಉಷಸಂ ನ ಯಥೋಷೋದೇವತಾಂ ಸೇವತೇ । ನಿತ್ಯ ತತ್ಸಂಬದ್ಧೋ ಭವತೀತ್ಯರ್ಥಃ । ತದಾನೀಮರ್ಹರಿಷ್ಣುಣಿಃ । ಗಚ್ಛಂತೋ ಹರಂತೀತ್ಯರ್ಹರಯಃ ಶತ್ರವಃ । ತೇಷಾಂ ವ್ಯಥೋತ್ಪಾದನೇನ ಸ್ವನಯಿತಾ ಶಬ್ದಯಿತೇಂದ್ರೋ ರೇಣುಂ ರೇಷಣಂ ಹಿಂಸನಂ ಬೃಹತ್ಪ್ರಭೂತಮಿಯರ್ತಿ । ಶತ್ರೂನ್ ಗಮಯತಿ ॥ ತ್ವಾವೃಧಾ । ತ್ವಯಾ ವರ್ಧತ ಇತಿ ತ್ವಾವೃತ್ । ಕ್ವಿಪ್ಚೇತಿ ಕ್ವಿಪ್ । ಪ್ರತ್ಯಯೋತ್ತರಪದಯೋಶ್ಚೇತಿ ಮಪರ್ಯಂತಸ್ಯ ತ್ವಾದೇಶಃ । ಛಾಂದಸಂ ದಕಾರಸ್ಯಾತ್ವಂ । ಸುಪಾಂ ಸುಲುಗಿತಿ ದ್ವಿತೀಯಾಯಾ ಆಕಾರಃ । ಸಿಷಕ್ತಿ । ಷಚೆ ಸಮವಾಯೇ । ಬಹುಲಂ ಛಂದಸೀತಿ ಶಪಃ ಶ್ಲುಃ । ಬಹುಲಂ ಛಂದಸೀತ್ಯಭ್ಯಾಸಸ್ಯೇತ್ವಂ । ಇಯರ್ತಿ । ಋ ಸೃ ಗತೌ । ಜೌಹೋತ್ಯಾದಿಕಃ । ಅಸ್ಮಾದಂತರ್ಭಾವಿತಣ್ಯರ್ಥಾಲ್ಲಟ್ । ಶಪಃ ಶ್ಲುರ್ದ್ವಿರ್ಭಾವೋರದತ್ವಹಲಾದಿಶೇಷಾಃ । ಅರ್ತಿಪಿಪರ್ತ್ಯೋರ್ಶ್ಚೇತ್ಯಭ್ಯಾಸಸ್ಯೇತ್ವಂ । ಅಭ್ಯಾಸಸ್ಯಾಸವರ್ಣೇ । ಪಾ. ೬-೪-೭೮ । ಇತೀಯಜಾದೇಶಃ । ಅನುದಾತ್ತೇ ಚೇತ್ಯಭ್ಯಾಸಸ್ಯಾದ್ಯುದಾತ್ತತ್ವಂ । ಪೂರ್ವಪದಸ್ಯ ವಾಕ್ಯಾಂತರಗತತ್ವೇನ ಪದಾದಿಪರತ್ವಾನ್ನಿಘಾತಾಭಾವಃ । ರೇಣುಂ । ರೀ ಗತಿರೇಷಣಯೋಃ । ಅಸ್ಮಾದೌಣಾದಿಕೋ ನುಪ್ರತ್ಯಯಃ । ಅರ್ಹರಿಷ್ಣುಣಿಃ । ಅರ್ತೇರನ್ಯೇಭ್ಯೋಽಪಿ ದೃಶ್ಯಂತ ಇತಿ ವಿಚ್ । ಅರೋ ಗಚ್ಛಂತಶ್ಚೇನೋ ಹರಯಶ್ಚೇತ್ಯರ್ಹರಯಃ । ತೇಷಾಂ ಸ್ವನಯಿತಾ । ಸ್ಯಮು ಸ್ವನ ಧ್ವನ ಶಬ್ದೇ । ಅಸ್ಮಾಣ್ಣ್ಯಂತಾದೌಣಾದಿಕ ಇತ್ಪ್ರತ್ಯಯಃ । ಣೇರನಿಟೀತಿ ಣಿಲೋಪಃ । ಘುಮಾದಿತ್ವಾನ್ನಿತ್ತ್ವೇ ಮಿತಾಂ ಹ್ರಸ್ವ ಇತಿ ಹ್ರಸ್ವತ್ವಂ । ಕೃದುತ್ತರಪದಪ್ರಕೃತಿಸ್ವರತ್ವಂ ॥

॥ ಪ್ರತಿಪದಾರ್ಥ ॥

ಯಃ—ಯಾವ ಇಂದ್ರನು । ಧೃಷ್ಣುನಾ—(ಶತ್ರುವನ್ನು) ದಮನಮಾಡತಕ್ಕ । ಶವಸಾ – ಬಲದಿಂದ । ತಮಃ—ತಮೋರೂಪವಾದ ವೃತ್ರಾದಿ ಅಸುರರನ್ನು । ಬಾಧತೇ—ಹಿಂಸಿಸುತ್ತಾನೋ (ವತ್ತು) । ಊತಯೇ—ರಕ್ಷಣೆಗಾಗಿ । ತ್ವಾ ವೃಧಾ—ಸ್ತೋತೃವಾದ ನಿನ್ನಿಂದ ವರ್ಧಿತನಾಗುತ್ತಾನೋ। (ತಂ) ಇಂದ್ರಂ—ಆ ಇಂದ್ರನನ್ನು । ದೇವೀ—ದಿವ್ಯವಾದುದೂ । ತವಿಷೀ—ಪ್ರಕಾಶಮಾನವಾದುದೂ ಆದ ಶಕ್ತಿಯು । ಯದಿ – ಯಾವಾಗ । ಸೂರ್ಯಃ—ಸೂರ್ಯದೇವನು । ಉಷಸಂ ನ—ಉಷೋದೇವಿಯನ್ನು ಸೇವಿಸುವಂತೆ । ಸಿಷಕ್ತಿ—ಸೇವಿಸುತ್ತದೆಯೋ (ಆಗ) ಅರ್ಹರಿಷ್ಣುಣಿಃ—(ನೋವನ್ನುಂಟುಮಾಡುವುದರಿಂದ) ಶತ್ರುಗಳನ್ನು ಗಟ್ಟಿಯಾಗಿ ಕೂಗಿಕೊಳ್ಳುವಂತೆ ಮಾಡುವ ಇಂದ್ರನು । ರೇಣುಂ—ನೋವನ್ನು । ಬೃಹತ್—ಅಧಿಕವಾಗಿ । ಇಯರ್ತಿ—(ಶತ್ರುವಿಗೆ) ಉಂಟುಮಾಡುತ್ತಾನೆ ॥

॥ ಭಾವಾರ್ಥ ॥

ಶತ್ರುದಮನವನ್ನು ಮಾಡತಕ್ಕ ಶಕ್ತಿಯಿಂದ ತಮೋರೂಪವಾದ ವೃತ್ರಾದಿಗಳನ್ನು ಹಿಂಸಿಸುವವನೂ ಮತ್ತು ರಕ್ಷಣೆಗಾಗಿ ನಿನ್ನಿಂದ ವರ್ಧಿತನಾಗುವವನೂ ಆದ ಇಂದ್ರನನ್ನು ಯಾವಾಗ ದಿವ್ಯವಾದುದೂ, ಪ್ರಕಾಶಮಾನವಾದುದೂ ಆದ ಶಕ್ತಿಯು ಸೂರ್ಯನು ಉಷೋದೇವಿಯನ್ನು ಸೇವಿಸುವಂತೆ ಸೇವಿಸುತ್ತದೆಯೋ ಆಗ ಆ ಇಂದ್ರನು ಶತ್ರುವಿಗೆ ಅಧಿಕವಾದ ನೋವನ್ನುಂಟುಮಾಡಿ ಗಟ್ಟಿಯಾಗಿ ಕೂಗಿಕೊಳ್ಳುವಂತೆ ಮಾಡುತ್ತಾನೆ.

English Translation.

Divine strength waits, like the sun, upon the dawn, upon that Indra, who is made more powerful for protection by you, (his worshipper), who with resolute vigour resists the gloom, and inflicts severe castigation upon his enemies, making them cry aloud (with pain).

|| ವಿಶೇಷ ವಿಷಯಗಳು ||

ತ್ವಾವೃಧಾ—ತ್ವಯಾ ವರ್ಧತೇ ಇತಿ ತ್ವಾವೃತ್—ಈ ಪದಕ್ಕೆ ಸ್ತೋತ್ರಮಾಡುವ ನಿನ್ನಿಂದ ವೃದ್ಧಿ ಹೊಂದಲ್ಪಡುವನು ಎಂದರ್ಥ ಮಾಡಿದ್ದಾರೆ.

ಸಿಷಕ್ತಿ—ಸಮುವೈತಿ—ಸೇವತೇ ಇತಿ ಯಾಸ್ಕಃ (ನಿರು. ೩-೨೧) **ಷಚ ಸಮವಾಯೇ** ಎಂಬ ಧಾತುವಿನಿಂದ ನಿಷ್ಪನ್ನವಾದ ಈ ಶಬ್ದವು ಒಟ್ಟುಗೂಡುತ್ತದೆ ಎಂಬರ್ಥ ಕೊಡುವಂತಿದ್ದರೂ, ನಿರುಕ್ತದಲ್ಲಿ ಸೇವಿಸುತ್ತಾನೆ ಎಂಬರ್ಥವನ್ನು ಹೇಳಿರುವರು. **ಸಿಷಕ್ತು ಸಚತೇ ಇತಿ ಸೇವಮಾನಸ್ಯ । ಸನಃ ಸಿಷಕ್ತು ಯಸ್ತುರಃ** (ಋ. ಂ. ೧-೧೪-೨) ಎಂಬ ಋಕ್ಕಿನಲ್ಲಿ ಹೇಳಿರುವಂತೆ ಸಿಷಕ್ತು—ಸಚತೇ ಏತೇ ನಾಮನೀ ಸೇವಮಾನಸ್ಯ ಎಂದು ವಿವರಿಸಿರುವರು.

ಅರ್ಹರಿಷ್ಣುಃ—ಗಚ್ಛಂತೋ ಹರಂತೀತಿ ಅರ್ಹರಯಃ ಶತ್ರವಃ । ತೇಷಾಂ ವ್ಯಥೋತ್ಪಾದನೇನ ಸ್ವನಯಿತಾ ಶಬ್ದಯಿತಾ ಇಂದ್ರಃ—ಹೋಗುತ್ತಲೇ ಸರ್ವವನ್ನೂ ಪ್ರತಿಕ್ಷಣದಿಂದ ಕಸಿದುಕೊಂಡು ಹೋಗುವವರು ಶತ್ರುಗಳು. ಅಂತಹ ದ್ರೋಹಿಗಳಿಗೆ ಸರಿಯಾದ ಶಿಕ್ಷೆಮಾಡಿ ಅವರು ವ್ಯಥೆಯಿಂದ ಕೂಗಿಕೊಳ್ಳುವಂತೆ ಮಾಡುವವನಿಗೆ **ಅರ್ಹರಿಷ್ಣುಃ** ಎಂದು ಹೆಸರು.

ರೇಣುಂ—ರೇಷಣಂ-ಹಿಂಸನಂ—ಇಂದ್ರನ ತನ್ನ ಶತ್ರುಗಳಿಗೆ ಹೆಚ್ಚಾದ ಹಿಂಸೆಯನ್ನು ಕೊಡುವನು ಎಂದರ್ಥ.

|| ವ್ಯಾಕರಣಪ್ರಕ್ರಿಯಾ ||

ತ್ವಾವೃಧಾ—ತ್ವಯಾ ವರ್ಧತೇ ಇತಿ ತ್ವಾವೃತ್. ವೃಧು ವರ್ಧನೇ ಧಾತು. **ಕ್ವಿಪ್ ಚ** ಎಂಬುದರಿಂದ ಕ್ವಿಪ್ ಪ್ರತ್ಯಯ. ಯುಷ್ಮದ್+ವೃಧ್ ಎಂದಿರುವಾಗ **ಪ್ರತ್ಯಯೋತ್ತರಪದಯೋಶ್ಚ** ಎಂಬುದರಿಂದ ಉತ್ತರಪದವನ್ನು ನಿಮಿತ್ತೀಕರಿಸಿ ಯುಷ್ಮಚ್ಛಬ್ದದ ಪರ್ಯಂತಕ್ಕೆ ತ್ವ ಎಂಬಆದೇಶ **ಶೇಷೇಲೋಪಃ** ಸೂತ್ರದಿಂದ ಲೋಪಪ್ರಾಪ್ತವಾದರೆ ಭಾಂದಸವಾಗಿ ಉದಿನ ದಕಾರಕ್ಕೆ ಆಕಾರಾದೇಶ. ತ್ವಾವೃಧ್ ಶಬ್ದವಾಗುತ್ತದೆ. ದ್ವಿತೀಯಾ ಏಕವಚನಪರವಾದಾಗ **ಸುಪಾಂ ಸುಲುಕ್** ಸೂತ್ರದಿಂದ ವಿಭಕ್ತಿಗೆ ಆಕಾರಾದೇಶ.

ಸಿಷಕ್ತಿ—ಷಚ ಸಮವಾಯೇ ಧಾತು. ಪ್ರಥಮಪುರುಷ ಏಕವಚನದಲ್ಲಿ ತಿಪ್ ಪ್ರತ್ಯಯ. **ಬಹುಲಂ ಛಂದಸಿ** ಎಂಬುದರಿಂದ ಶಪಿಗೆ ಶ್ಲು ಆದೇಶ. **ಶ್ಲೌ** ಎಂಬುದರಿಂದ ಧಾತುವಿಗೆ ದ್ವಿತ್ವ. ಅಭ್ಯಾಸಕ್ಕೆ ಹಲಾದಿಶೇಷ. **ಬಹುಲಂ ಛಂದಸಿ** ಎಂಬುದರಿಂದ ಅಭ್ಯಾಸದ ಅಕಾರಕ್ಕೆ ಇತ್ವ. **ಚೋಃಕುಃ** ಸೂತ್ರದಿಂದ ಧಾತು ಚಕಾರಕ್ಕೆ ಕಕಾರಾದೇಶ. ಯದಿ ಎಂದು ಹಿಂದೆ ಸಂಬಂಧವಿರುವುದರಿಂದ **ನಿಘಾತೈಯಃ**—(ಪಾ. ಸೂ. ೮-೧-೩೦) ಎಂಬು

ದರಿಂದ ನಿಘಾತಸ್ವರ ಪ್ರತಿಷೇಧ. **ಅನುದಾತ್ತೇಚ** (ಪಾ. ಸೂ. ೬-೧-೧೯೦) ಎಂಬುದರಿಂದ ಅಭ್ಯಸ್ತದ ಆದಿಗೆ ಉದಾತ್ತ ಬರುತ್ತದೆ.

ಬಾಧತೇ—ಬಾಧೃ ಲೋಡನೇ. ಲೋಡನಂ ಪ್ರತೀಘಾತಃ ಲಟ್ ಪ್ರಥಮಪುರುಷಏಕವಚನರೂಪ. ಯಃ ಎಂಬುದರ ಸಂಬಂಧವಿರುವುದರಿಂದ ನಿಘಾತಪ್ರತಿಷೇಧ. ಧಾತುಸ್ವರದಿಂದ ಆದ್ಯುದಾತ್ತವಾಗುತ್ತದೆ.

ಇಯರ್ತಿ—ಋ ಸೃ ಗತೌ ಧಾತು ಜಹೋತ್ಯಾದಿ. ಣಿಜರ್ಥವು ಧಾತ್ವರ್ಥಾಂತರ್ಭೂತವಾಗಿದೆ. ಲಟ್ ಪ್ರಥಮಪುರುಷಏಕವಚನದಲ್ಲಿ ತಿಪ್ರತ್ಯಯ. **ಜುಹೋತ್ಯಾದಿಭ್ಯಃ** ಶ್ಲುಃ ಎಂಬುದರಿಂದ ಶಪಿಗೆ ಶ್ಲುವಿಕರಣ. **ಶ್ಲೌ** ಸೂತ್ರದಿಂದ ಧಾತುವಿಗೆ ದ್ವಿತ್ವ. **ಉರತ್** ಎಂಬುದರಿಂದ ಅಭ್ಯಾಸದ ಋಕಾರಕ್ಕೆ ಅತ್ವ. ರಪರವಾಗಿ ಬರುವುದರಿಂದ ಹಲಾದಿಶೇಷ. **ಅರ್ತಿಪಿಪರ್ತ್ಯೋರ್ಶ್ಚಿ** (ಪಾ. ಸೂ. ೭-೪-೭೭) ಎಂಬುದರಿಂದ ಅಭ್ಯಾಸಕ್ಕೆ ಇತ್ವ. ಇ ಋ+ತಿ ಎಂದಿರುವಾಗ **ಅಭ್ಯಾಸಸ್ಯಾಸವರ್ಣೇ** (ಪಾ. ಸೂ. ೬-೪-೭೮) ಎಂಬುದರಿಂದ ಅಸವರ್ಣ ಅಚ್ ಪರದಲ್ಲಿರುವುದರಿಂದ ಇಕಾರಕ್ಕೆ ಇಯಾಜಾದೇಶ. ಧಾತು ಋಕಾರಕ್ಕೆ ಸಾರ್ವಧಾತುಕನಿಮಿತ್ತವಾಗಿ ಗುಣ. ಇಯರ್ತಿ ಎಂದು ರೂಪವಾಗುತ್ತದೆ. **ಅನುದಾತ್ತೇಚ** ಎಂಬುದರಿಂದ ಅಭ್ಯಾಸಕ್ಕೆ ಆದ್ಯುದಾತ್ತಸ್ವರ ಬರುತ್ತದೆ. ಪೂರ್ವಪದವು ವಾಕ್ಯಾಂತರದಲ್ಲಿ ಸಂಬದ್ಧವಾದುದರಿಂದ ಪದದಪರದಲ್ಲಿ ಬಾರದಿರುವುದರಿಂದ ನಿಘಾತಸ್ವರ ಬರುವುದಿಲ್ಲ.

ರೇಣುಮ್—ರೀ ಗತಿರೇಷಣಯೋಃ ಧಾತು. ಇದಕ್ಕೆ ಔಣಾದಿಕವಾದ ನು ಪ್ರತ್ಯಯ. ಪ್ರತ್ಯಯ ನಿಮಿತ್ತವಾಗಿ ಧಾತುವಿಗೆ ಗುಣ. **ಆಟ್ಕುಪ್ವಾಙ್**—ಸೂತ್ರದಿಂದ ಪ್ರತ್ಯಯಕ್ಕೆ ಣತ್ವ. ಪ್ರತ್ಯಯಸ್ವರದಿಂದ ಅಂತೋದಾತ್ತ.

ಅರ್ಹರಿಷ್ವಣಿಃ—ಋ ಗತೌ ಧಾತು. **ಅನ್ಯೇಭ್ಯೋಪಿದೃಶ್ಯಂತೇ** ಎಂಬುದರಿಂದ ವಿಚ್ ಪ್ರತ್ಯಯ. ಧಾತುವಿಗೆ ತನ್ನಿಮಿತ್ತವಾಗಿ ಗುಣ. ಅರ್ ಶಬ್ದವಾಗುತ್ತದೆ. ಅರಃ ಗಚ್ಛಂತಶ್ಚೇಮೇ ಹರಯಶ್ಚ ಇತಿ ಅರ್ಹರಯಃ. ತೇಷಾಂ ಸ್ವನಯಿತಾ. ಸ್ಯಮು ಸ್ವನ ಧ್ವನ ಶಬ್ದೇ ಧಾತು. ಈ ಧಾತುವಿಗೆ **ಹೇತುಮತಿಚ** ಸೂತ್ರದಿಂದ ಪ್ರೇರಣಾವ್ಯಾಪಾರತೋರುವುದರಿಂದ ಣಿಚ್. ಣಿಜಂತದಮೇಲೆ ಔಣಾದಿಕವಾದ ಇನ್ ಪ್ರತ್ಯಯ. **ಣೇರನಿಟಿ** (ಪಾ. ಸೂ. ೬-೪-೫೧) ಎಂಬುದರಿಂದ ಣಿಚಿಗೆ ಲೋಪ. ಇದು ಘಟಾದಿಯಲ್ಲಿ ಸೇರಿರುವುದರಿಂದ **ಘಟಾದಯೋಮಿತಃ** ಎಂಬುದರಿಂದ ಮಿತ್ ಸಂಜ್ಞೆಯನ್ನು ಹೊಂದುತ್ತದೆ. ಆಗ ಣಿಚ್ ನಿಮಿತ್ತವಾಗಿ ಬಂದ ಉಪಧಾವೃದ್ಧಿಗೆ (ಆಕಾರಕ್ಕೆ) **ಮಿತಾಂಹ್ರಸ್ವಃ** (ಪಾ. ಸೂ. ೬-೪-೯೨) ಎಂಬುದರಿಂದ ಹ್ರಸ್ವ. ಅರ್ಹರಿಷ್ವನಿ ಎಂದಿರುವಾಗ ಧಾತುಸಕಾರಕ್ಕೆ ಮೂರ್ಧನ್ಯಾದೇಶ. ತನ್ನಿಮಿತ್ತವಾಗಿ ನಕಾರಕ್ಕೆ ಣತ್ವ. ಸ್ವನಿ ಎಂಬುದು ನಾಂತಪ್ರತ್ಯಯವಾದುದರಿಂದ ಆದ್ಯುದಾತ್ತವಾಗುತ್ತದೆ. ಸಮಾಸವಾದಾಗ ಅರ್ಹರಿ ಎಂಬುದು ಕಾರಕಪೂರ್ವಪದವಾದುದರಿಂದ **ಗತಿಕಾರಕೋಪಪದಾತ್ ಕೃತ್** ಎಂಬುದರಿಂದ ಕೃದುತ್ತರಪದ ಪ್ರಕೃತಿಸ್ವರ ಬರುತ್ತದೆ.

॥ संहितापाठः ॥

वि यत्तिरो धरुणमच्युतं रजोऽतिष्ठिपो दिव आतासु बर्हणा ।
स्वर्मीळ्हे यन्मद इन्द्र हर्ष्याहन्वृत्रं निरपामौब्जोऽर्णवं ॥ ५ ॥

॥ पदपाठः ॥

वि । यत् । तिरः । धरुणं । अच्युतं । रजः । अतिस्थिपः । दिवः । आतासु । बर्हणा ।
स्वः३मीळ्हे । यत् । मदे । इन्द्र । हर्ष्य । अहन् । वृत्रं । निः । अपां । औब्जः । अर्णवं ॥ ५ ॥

॥ सायणभाष्यं ॥

यद्यदा तिरो वृत्रेण तिरोहितं धरुणं सर्वस्य प्राणिजातस्य धारकमच्युतं विनाशरहितं रज उदकं दिवो द्युलोकादाकाशे । आङा इति दिङ्नाम । आकाशे विस्तृताकाशे दिक्षु हे इन्द्र बर्हणा हन्ता त्वं व्यतिष्ठिपो विविधं स्थापयाम् चकृषे । तथा यद्यदा स्वर्मीळ्हे । मीळ्हमिति धननाम । स्वः सुष्ठु गन्तव्यं मीळ्हं धनं यस्मिन् तस्मिन्संग्रामे मदे तव सोमपानेन हर्षे सति हर्ष्य हर्षयित्र्या शक्त्या वृत्रमावरकमसुरमहन् त्वमवधीः । तदानीमपां पूर्णमर्णवं मेघं निरौब्जः । वर्षणाभिमुखमधोमुखमकार्षीः । वृष्टेरावरकं वृत्रं हत्वा वृष्टिजलेन भूमिं न्यसिञ्चरिति तात्पर्यार्थः ॥ अतिष्ठिपः । तिष्ठतेर्ण्यन्ताल्लुङ् च्लेश्चङादेशः । णेरलोपः । तिष्ठतेरित् । पा. ६-४-७१ इत्युपधायाः इत्त्वं । चेर्ङि पा. ६-१-५८ । इति द्विर्वचनेऽचि शपूर्वाः खयः इति थकारः शिष्यते । चेर्ष्टेर्न तकारः । आडागमः उदात्तः । येद्धृत्तेर्योगादनिघातः । बर्हणा । सुपां सुलुगिति सोरादेशः । स्वर्मीळ्हे । मिह सेचने । निष्ठा । हो ढः । पा. ८-२-३१ । इति ढत्वं । ष्टुनाष्टुस्तथो-

ಘೋಽಧ ಇತಿ ತಕಾರಸ್ಯ ಧತ್ವಂ । ತಸ್ಯ ಷ್ಟುತ್ವೇ ಧೋ ಧೇ ಲೋಪಃ । ಪಾ. ೮-೩-೧೩ । ಇತಿ ಧಲೋಪಃ । ಧ್ರಲೋಪೇ ಪೂರ್ವಸ್ಯ । ಪಾ. ೬-೩-೧೧೧ । ಇತಿ ದೀರ್ಘತ್ವಂ । ಸ್ವಂಶ್ಯೇತತ್ ನ್ಯಙ್ಸ್ವರೌ ಸ್ವರಿತಾವಿತಿ ಸ್ವರ್ಯತೇ । ಬಹುವ್ರೀಹೌ ಪೂರ್ವಪದಪ್ರಕೃತಿಸ್ವರತ್ವೇನ ತದೇವ ತಿಷ್ಠತೇ । ಅಹನ್ । ಹಂತೇರ್ಲಙಿ ಮಧ್ಯಮೈಕವಚನೇ ಹಲ್ಙ್ಯಾಬ್ಭ್ಯ ಇತಿ ಸೇರ್ಲೋಪಃ । ಯದ್ವೃತ್ತಯೋಗಾದವಿಘಾತಃ । ಔಬ್ಜಃ । ಉಬ್ಜ ಆರ್ಜವೇ । ಲಜ್ಯಾಡಾಗಮೋ ವೃದ್ಧಿಶ್ಚ ॥

॥ ಪ್ರತಿಪದಾರ್ಥ ॥

ಬರ್ಹಣಾ—(ಶತ್ರು) ಹಂತಕನಾದ । **ಇಂದ್ರ**—ಇಂದ್ರನೇ । **ಯತ್**—ಯಾವಾಗ । **ತಿರಃ**—ವೃತನಿಂದ ಮರೆಸಲ್ಪಟ್ಟ । **ಧರುಣಂ**—(ಸಕಲ ಪ್ರಾಣಿಗಳಿಗೂ) ಜೀವಾತುವಾಗಿರುವುದೂ । **ಅಚ್ಯುತಂ**—ನಾಶರಹಿತವಾಗಿರುವುದೂ ಆದ । **ರಜಃ**—ನೀರನ್ನು । **ದಿವಃ**—ದ್ಯುಲೋಕದಿಂದ । **ಆಶಾಸು**—ವಿಸ್ತಾರವಾದ ನಾನಾ ದಿಕ್ಕುಗಳಲ್ಲಿ । **ವಿ ಅತಿಷ್ಠಿಪಃ**—ನಾನಾ ಕಡೆಯೂ ಹರಡಿ ಸ್ಥಾಪಿಸಿದೆಯೋ (ಹಾಗೆಯೇ) । **ಯತ್**—ಯಾವಾಗ । **ಸ್ವಮ್ಮೀಳ್ಹೇ**—ಹೆಚ್ಚು ಧನವನ್ನು ಹೊಂದಲು ನಡೆಸಿದ ಸಂಗ್ರಾಮದಲ್ಲಿ । **ಮದೇ**—(ಸೋಮಪಾನದಿಂದ) ನಿನಗೆ ಹರ್ಷವಾದಾಗ । **ಹರ್ಷ್ಯಾ**—ಹರ್ಷಪೂರಿತವಾದ ಶಕ್ತಿಯಿಂದ । **ವೃತ್ರಂ**—(ಎಲ್ಲವನ್ನೂ ಮರೆಸಿದ) ವೃತನನ್ನು । **ಅಹರ್**—ಕೊಂದೆಯೋ (ಆಗ) । **ಅಸಾಂ**—ನೀರಿನಿಂದ ತುಂಬಿದ । **ಅರ್ಣವಂ**—ಸಮುದ್ರದಂತಿರುವ ಮೇಘವನ್ನು । **ನಿಃ ಔಬ್ಜಃ**—ಕೆಳಕ್ಕೆ ಕಳುಹಿಸಿ ಮಳೆಯನ್ನು ಬರಮಾಡಿದೆ.

॥ ಭಾವಾರ್ಥ ॥

ಶತ್ರುಹಂತಕನಾದ ಎಲೈ ಇಂದ್ರನೇ, ಯಾವಾಗ ನೀನು ಲೋಕಕ್ಕೆ ಜೀವಾತುವಾಗಿರುವುದೂ, ನಾಶರಹಿತವಾಗಿರುವುದೂ ಆದ ನೀರನ್ನು ವೃತ್ರನ ಮರೆಯಿಂದ ಬಿಡಿಸಿ ದ್ಯುಲೋಕದಿಂದ ವಿಸ್ತಾರವಾದ ನಾನಾ ದಿಕ್ಕುಗಳಲ್ಲಿಯೂ ಬಿದ್ದು ಎಲ್ಲೆಲ್ಲಿಯೂ ಹರಡಿಸಿದೆಯೋ ಮತ್ತು ಯಾವಾಗ ಧನಾರ್ಥವಾದ ಸಂಗ್ರಾಮದಲ್ಲಿ ನೀನು ಸೋಮಪಾನ ಮಾಡಿ ನಿನ್ನ ಹರ್ಷಪೂರಿತವಾದ ಶಕ್ತಿಯಿಂದ ವೃತ್ರನನ್ನು ಕೊಂದೆಯೋ, ಆಗ ಮೇಘದಿಂದ ನೀರನ್ನು ಸುರಿಸಿ ನೀರಿನ ಸಮುದ್ರವನ್ನುಂಟುಮಾಡಿದೆ.

English Translation.

When you, destroying India, distributed the hidden, life-sustaining, undecaying waters through the different quarters of the heaven, then, animated (by the Soma-juice) you engaged in battle, and with exulting (prowess) slew Vritra and sent down an ocean of waters.

॥ ವಿಶೇಷ ವಿಷಯಗಳು ॥

ತಿರಃ—ಇದು ಜಲಶಬ್ದವಾಚಕವಾದ ರಜಶ್ಶಬ್ದಕ್ಕೆ ವಿಶೇಷಣ, ವೃತ್ರಾಸುರನಿಂದ ಆಚ್ಛಾದಿತವಾದದ್ದು ಎಂದು ಇದರ ಅರ್ಥ.

अशासु—निरुक्तदल्लि अतानः, अशानः एंबुदागि एंटु पदगळन्नु दिग्वाचकगळागि हेळिरुवरु. विशालवाद दिक्कुगळल्लि एंदर्थ.

स्वमीळ्हे—**मीळ्हं इति धननाम | स्वः सुशब्दः गंतव्यं मीळ्हं धनं यस्मिन् तस्मिन् संग्रामे**—द्रव्यवन्नु संपादिसुवंतह युद्ध एंदर्थ. मीळ्हशब्दवु निरुक्तदल्लि धन पर्यायपदवागि पठितवागिदे.

ऊब्जः—**वर्षणाभिमुखमधोमुखमकार्षीत्**—वृष्टिगे प्रतिबंधकनागिद्द वृत्रासुरनन्नु कॊंदु मळेयन्नु अधोमुखवागि माडि अंदरे भूमिगे मळेयन्नु करेसि भूलोकवन्नु उळिसिदे एंबुदु इल्लिय तात्पर्यार्थ.

॥ व्याकरणप्रक्रियाः ॥

अतिष्मिपः—ष्मा गतिनिवृत्तौ धातु. प्रेरणा तोरुवुदरिंद **हेतुमतिच** एंबुदरिंद णिच्. धातुविन आदिगे सकाराादेश. आदंतवादुदरिंद णिच् परवादागा **आर्धधातुके**—(पा. सू. ७-३-३६) एंबुदरिंद धातुविगे पुगागमः. णिजंतद मेले लुङ् मध्यमपुरुष एकवचनदल्लि सिप्. **इतश्च** सूत्रदिंद अदर इकारक्के लोप. च्लि प्राप्तवादागा **णेश्विदुसु**—(पा. सू. ३-१-४८) एंबुदरिंद च्लिगे चङादेश. **णेरनिटि** सूत्रदिंद चङ्निमित्तवागि णिचिगे **लोपः**. **चेङ्** (पा. सू. ६-१-११) सूत्रदिंद धातुविगे द्वित्व. **ह्रस्वः** सूत्रदिंद अभ्यासक्के ह्रस्व. **शर्पूर्वाः** खयः (पा. सू. ७-४-६१) एंबुदरिंद अभ्यासदल्लि थकार उळियुत्तदे. **तिष्ठतेरित्** (पा. सू. ७-४-३) एंबुदरिंद णिच् परवादागा धातुविन उपधेगे इत्व बरुवुदरिंद स्थिष् शब्दक्के द्वित्व. अभ्यासदल्लि थि एंदु उळिदिरुवाग **अभ्यासे चर्च** एंबुदरिंद अदक्के तकाराादेश. अल्लिरुव इकारवन्नु निमित्तीकरिसि धातुसकारक्के मूर्धन्यादेश (षत्व) प्रत्यय सकारक्के रुत्वविसर्ग. अंगक्के अडागमः. अतिष्मिपः एंदु रूपवागुत्तदे. यत् एंदु हिंदे इरुवुदरिंद **यंद्यैकात्न्नित्यं** एंबुदरिंद निघातस्वर प्रतिषेध बरुत्तदे. अडागम उदात्तवादुदरिंद अद्युदात्तवाद पदवागुत्तदे.

बर्हणा—**सुसां सुलुक्**—सूत्रदिंद सुविगे आकाराादेश. प्रत्ययस्वरदिंद मध्योदात्तवागुत्तदे.

स्वमीर्ळ्हे—मिह सेचने धातु. कर्मणियल्लि क्त प्रत्ययः. मिह्+त एंदिरुवाग **हो ढः** (पा. सू. ८-२-३१) एंबुदरिंद ह्रुल् परदल्लिरुवुदरिंद हकारक्के ढकाराादेश. **ह्रुषस्तथोर्धोर्ऽधः** (पा. सू. ८-२-४०) एंबुदरिंद तकारक्के धकाराादेश. ढकार संबंधविरुवुदरिंद **झषन्तस्य** सूत्रदिंद अदक्के झत्वदिंद ढकाराादेश. आग **ढो ढे लोपः** (पा. सू. ८-३-१३) एंबुदरिंद पूर्व ढकारक्के लोपः. **ढलोपक्के** निमित्तवादुदु (ढकार) परदल्लिरुवाग **ढ्रलोपे पूर्वस्य** (पा. सू. ६-३-१११) एंबुदरिंद पूर्वदल्लिरुव अणिगे

ದೀರ್ಘ. ಸ್ವಃ ಸುಷ್ಠುಗಂತವ್ಯಂ ಮೀಳ್ಹಂ ಧನಂ ಯಸ್ಮಿನ್ ಸಃ ಸ್ವಮೀರ್ಳ್ಹಃ ತಸ್ಮಿನ್. ಸ್ವರ್ ಎಂಬುದು **ನ್ಯಙ್ಸ್ವರೌ ಸ್ವರಿತೌ** (ಫಿ. ಸೂ. ೭೪) ಎಂಬುದರಿಂದ ಸ್ವರಿತವಾಗುತ್ತದೆ. ಹಿಂದೆ ಹೇಳಿದಂತೆ ಬಹುವ್ರೀಹಿ ಸಮಾಸದಲ್ಲಿ **ಬಹುವ್ರೀಹೌಪ್ರಕೃತ್ಯಾಪೂರ್ವಪದಮ್** ಎಂಬುದರಿಂದ ಪೂರ್ವಪದಪ್ರಕೃತಿಸ್ವರ ಬರುವುದರಿಂದ ಸ್ವರಿತವೇ ಉಳಿಯುತ್ತದೆ. ಸಪ್ತಮೀ ಏಕವಚನಾಂತರೂಪ.

ಅಹನ್—ಹನ ಹಿಂಸಾಗತ್ಯೋಃ ಧಾತು. ಲಙ್ ಮಧ್ಯಮಪುರುಷ ಏಕವಚನದಲ್ಲಿ ಸಿಪ್. **ಇತಶ್ಚ** ಎಂಬುದರಿಂದ ಆದರ ಇಕಾರಕ್ಕೆ ಲೋಪ. **ಅದಿಪ್ರಭೃತಿಭ್ಯಃ ಶಪಃ** ಸೂತ್ರದಿಂದ ಶಪಿಗೆ ಲುಕ್. **ಹಲ್-ಙ್ಯಾಭ್ಯೋ** ಸೂತ್ರದಿಂದ ಸಿಪಿಗೆ ಲೋಪ. ಅಂಗಕ್ಕೆ ಅಡಾಗಮ. **ಯೆಭ್ಯೋ ಹೃತ್ತಾನ್ನಿತ್ಯಂ** ಎಂಬುದರಿಂದ ಹಿಂದೆ ಯಶ್ ಎಂದಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಅಡಾಗಮ ಉದಾತ್ತವಾದುದರಿಂದ ಆದ್ಯುದಾತ್ತವಾಗುತ್ತದೆ.

ಔಬ್ಜಃ—ಉಬ್ಜ ಆರ್ಜವೇ ಧಾತು. ಲಙ್ ಮಧ್ಯಮಪುರುಷ ಏಕವಚನದಲ್ಲಿ ಸಿಪ್. ಇಕಾರ ಲೋಪ **ಕರ್ತರಿಶಪ್** ಎಂಬುದರಿಂದ ಶಪ್ ವಿಕರಣ. **ಅಡಜಾದೀನಾಂ** ಎಂಬುದರಿಂದ ಅಂಗಕ್ಕೆ ಅಡಾಗಮ. **ಅಟಶ್ಚ** ಎಂಬುದರಿಂದ ವೃದ್ಧಿ. ಪ್ರತ್ಯಯಸಕಾರಕ್ಕೆ ರುತ್ವವಿಸರ್ಗ. ಅತಿಙಂತದ ಪರದಲ್ಲಿರುವುದರಿಂದ ನಿಘಾತ ಸ್ವರ ಬರುತ್ತದೆ.

॥ ಸಂಹಿತಾಪಾಠಃ ॥

ತ್ವಂ ದಿವೋ ಧರುಣಂ ಧಿಷ ಓಜಸಾ ಪೃಥಿವ್ಯಾ ಇಂದ್ರ ಸದನೇಷು ಮಾ-
ಹಿನಃ ।
ತ್ವಂ ಸುತಸ್ಯ ಮದೇ ಅರಿಣಾ ಅಪೋ ವಿ ವೃತ್ರಸ್ಯ ಸಮಯಾ ಪಾಷ್ಯಾ-
ರುಜಃ ॥ ೬ ॥

॥ ಭಾವಾರ್ಥ ॥

ತ್ವಂ । ದಿವಃ । ಧರುಣಂ । ಧಿಷೇ । ಓಜಸಾ । ಪೃಥಿವ್ಯಾಃ । ಇಂದ್ರ । ಸದನೇಷು ।
ಮಾಹಿನಃ ।
ತ್ವಂ । ಸುತಸ್ಯ । ಮದೇ । ಅರಿಣಾಃ । ಅಪಃ । ವಿ । ವೃತ್ರಸ್ಯ । ಸಮಯಾ ।
ಪಾಷ್ಯಾ । ಅರುಜಃ ॥ ೬ ॥

॥ सायणभाष्य ॥

हे इंद्र महिनः प्रवृद्धस्त्वं दिवो द्युलोकात्पृथिव्याः सदनेषु प्रदेशेष्वोजसा बलेन धरुणं सर्वस्य जगतो धारकं वृष्टिजलं धिषे । दधिषे । स्थापयसि । यस्मात्त्वं सुतस्य सोमस्य पानेन मदे हर्षे सत्यपो जलान्यरिणा मेघान्निरगमयेः वृत्रस्यावरकं वृत्रं च समया घृष्ट्या पाषाण्या शिलया यद्वा शक्त्या व्यरुजो विशेषेणाभाङ्क्षीः ॥ धिषे । दधातेश्छान्दसो वर्तमाने लिट् । द्विर्वचनप्रकरणे धृषिशसी वेति वक्तव्यं । कं. ६-८-७-८ । इति वचनाद्द्विर्वचनाभावः । क्र्यादिनियमादिडागम आतो लोप इटि चेत्याकारलोपः । महिनः । महेरिनण् च । उ. ४.१५८ । इति मह पूजायामित्यस्मादौणादिक इनण्प्रत्ययः । अत उपधाया इति वृद्धिः । अरिणाः । रे गतिरेषणयोः क्र्यादिकः । लङि सिपि स्यादीनां ह्रस्व इति ह्रस्वत्वं । समया । समन्त्यमु वैक्लव्ये । समतीति समा । पचाद्यच् । चित इत्यंतोदात्तत्वं । पाषाण्या । पिष्लृ संचूर्णन इत्यस्मादौणादिक इन्प्रत्ययः । बहुलवचनादुपधाया आकारः । कृदिकारादक्तिनः । पा. ४-८-४५ । इति ङीष् । प्रत्ययस्वरेणाद्योदात्तः । तृतीयैकवचने यणादेशे सत्युदात्तस्वरितयोर्यण इति स्वंशत्वं । अरुजः । रुजो भंगे । तौदादिकः । शस्य ङित्त्वात्पुगभावः ॥

॥ प्रतिपदार्थ ॥

इंद्र—ಎಲೈ ಇಂದ್ರನೇ । मंहिनः—ಅದ್ಭುತನಾದ (ಪೂಜ್ಯನಾದ) । त्वं—ನೀನು । दिवः—ದ್ಯುಲೋಕದಿಂದ । पृथिव्याः—ಭೂಮಿಯ । सदनेषु—(ನಾನಾ) ಪ್ರದೇಶಗಳಲ್ಲಿ । ओजसा—(ನಿನ್ನ) ಶಕ್ತಿಯಿಂದ । धरुणं—(ಸಕಲ ಜಗತ್ತಿಗೂ) ಧಾರಕವಾದ ನೀರನ್ನು (ಜೀವಾತುವಾದ) । धिषे—ಸ್ಥಾಪಿಸುತ್ತೀಯೆ. । त्वं—ನೀನು । सुतस्य—ಸೋಮರಸದ (ಪಾನದಿಂದ) । मदे—ಸಂತೋಷವುಂಟಾದಾಗ । अपः—ನೀರುಗಳನ್ನು । अरिणाः—(ಮೇಘಗಳಿಂದ) ಹೊರಡಿಸಿದೆ । वृत्रस्य—ವೃತ್ರನನ್ನು । समया—ಕಠಿಣವಾದ (ಘನೀಭೂತವಾದ) । पाषाण्या—ಶಿಲೆಯಿಂದ ಅಥವಾ ಶಕ್ತಿಯಿಂದ । वि अरुजः—ಚೆನ್ನಾಗಿ ಧ್ವಂಸಮಾಡಿದೆ.

॥ भावार्थ ॥

ಎಲೈ ಇಂದ್ರನೇ, ನಿನ್ನ ಅದ್ಭುತವಾದ ಶಕ್ತಿಯಿಂದ ನೀನು ದ್ಯುಲೋಕದಿಂದ ಭೂಮಿಯ ನಾನಾಪ್ರದೇಶಗಳಲ್ಲಿ ಸಕಲ ಜಗತ್ತಿಗೂ ಜೀವಾತುವಾದ ಮಳೆಯ ನೀರನ್ನು ಸುರಿಸಿ ಸ್ಥಾಪಿಸುತ್ತೀಯೆ. ಸೋಮರಸದ ಪಾನದಿಂದ ನಿನಗೆ ಸಂತೋಷವುಂಟಾದಾಗ ಮೇಘಗಳಿಂದ ನೀರನ್ನು ಹೊರಡಿಸಿದೆ. ಮತ್ತು ವೃತ್ರನನ್ನು ಕಠಿಣವಾದ ಶಿಲೆಯಿಂದ ಹೊಡೆದು ಧ್ವಂಸಮಾಡಿದೆ.

English Translation.

O mighty Indra, you sent down from heaven, by your power, upon the realms of earth, the world-sustaining rain; exhilarated by the (soma-juice) you have expelled the waters (from the clouds) and have crushed Vritra by a solid rock.

ವಿಶೇಷ ವಿಷಯಗಳು

ಮಾಹಿನಃ—ಮಹ ಪೂಜಾಯಾಂ ಎಂಬ ಧಾತುವಿನಿಂದ ನಿಷ್ಪನ್ನವಾದ ಶಬ್ದ ಇದು. ಅಭಿವೃದ್ಧಿ ಹೊಂದುವವನು. ಅಥವಾ ಪೂಜ್ಯನು ಎಂಬರ್ಥದಲ್ಲಿ ಇದು ಇಂದ್ರ ಶಬ್ದಕ್ಕೆ ವಿಶೇಷಣವಾಗಿರುವುದು.

ಧರುಣಂ—ಸರ್ವಸ್ಯ ಜಗತೋ ಧಾರಕಂ ವೃಷ್ಟಿಜಲಂ—ಸಮಸ್ತ ಜಗತ್ತಿಗೂ ಆಧಾರಭೂತವಾದ ವೃಷ್ಟಿಯ ಜಲ ಎಂದು ಇಲ್ಲಿಯ ವಿಶೇಷಾರ್ಥ.

ಸಮಯಾ—**ಸಮಮಿತಿ ಸಮಾ** ಷಮು-ಶ್ವಮು-ಅನ್ಯೇಕಲ್ಯೇ ಎಂಬ ಧಾತುವಿನಿಂದ ಈ ಶಬ್ದವು ನಿಷ್ಪನ್ನವಾಗಿದೆ. ಸ್ಥಿರವಾದ ಅಥವಾ ಪ್ರಬಲವಾದ ಎಂಬುದು ಇದರ ಅರ್ಥ.

ಪಾಷ್ಯಾ—ಈ ಶಬ್ದಕ್ಕೆ ಕಲ್ಲು ಅಥವಾ ಶಕ್ತಿ ಎಂಬ ಎರಡರ್ಥವೂ ಉಂಟು.

ವಿ ಅರುಜಃ—ವಿಶೇಷವಾದ ರೀತಿಯಲ್ಲಿ ನಾಶಮಾಡಿದೆಯಲ್ಲವೇ. ರುಜ-ಭಂಗೇ ಎಂಬ ಧಾತುವಿನ ಕ್ರಿಯಾರೂಪ ಇದು.

ವ್ಯಾಕರಣಪ್ರಕ್ರಿಯಾ

ವಿವಃ—**ಊಡಿದಂಪದಾದಿ** ಸೂತ್ರದಿಂದ ವಿಭಕ್ತಿಗೆ ಉದಾತ್ತಸ್ವರ ಬರುತ್ತದೆ.

ಧಿಷೇ—ಡುಧಾಞ್ ಧಾರಣಪೋಷಣಯೋಃ ಧಾತು. **ಛಂದಸಿಲುಙ್ಲಙ್ಲಿಟಃ** ಎಂಬುದರಿಂದ ವರ್ತಮಾನಾರ್ಥದಲ್ಲಿ ಲಿಟ್. ಮಧ್ಯಮಪುರುಷ ಏಕವಚನದಲ್ಲಿ ಥಾಸ್ ಪ್ರತ್ಯಯ. **ಥಾಸಃಸೇ** ಸೂತ್ರದಿಂದ ಅದಕ್ಕೆ ಸೇ ಆದೇಶ. **ದ್ವಿರ್ವಚನೇಪ್ರಕರಣೇ ಛಂದಸಿ ವೇತಿ ವಕ್ತವ್ಯಮ್** (ಕಾ. ೬-೧-೮-೧) ಎಂಬ ವಚನದಿಂದ ಲಿಣ್ನಿಮಿತ್ತವಾತ ದ್ವಿತ್ವ ಬರುವುದಿಲ್ಲ. **ಕೈಸ್ಯಭ್ಯವೈ**—ಸೂತ್ರದಲ್ಲಿ ಏಕಾಚಾದ ಧಾತುಗಳಿಗೆ ಲಿಟನಲ್ಲಿ ಇಣ್ನಿಷೇಧ ಬರುವುದಾದರೆ ಅಸೂತ್ರಪಠಿತವಾದವುಗಳಿಗೆ ಮಾತ್ರವೆಂದು ನಿಯಮ ಮಾಡಿರುವುದರಿಂದ ಧಾಞ್-ಧಾತುವು ಅನಿಟ್ಟಾದರೂ ಲಿಟನಲ್ಲಿ ಇಡಾಗಮ ಬರುತ್ತದೆ. ಇಕಾರದ ಪರದಲ್ಲಿರುವುದರಿಂದ **ಆದೇಶಪ್ರತ್ಯಯೆಯೋಃ** ಎಂಬುದರಿಂದ ಪ್ರತ್ಯಯಸಕಾರಕ್ಕೆ ಷತ್ವ. ಇಡಾದಿ. ಪ್ರತ್ಯಯ ಪರದಲ್ಲಿರುವುದರಿಂದ **ಅತೋಲೋಪಇಟಿಚ** (ಪಾ. ಸೂ. ೬-೪-೬೪) ಎಂಬುದರಿಂದ ಧಾತುವಿನ ಆಕಾರಕ್ಕೆ ಲೋಪ. ಧಿಷೇ ಎಂದು ರೂಪವಾಗುತ್ತದೆ. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

ಮಾಹಿನಃ—ಮಹ ಪೂಜಾಯಾಂ ಧಾತು. ಇದಕ್ಕೆ **ಮಹೇರಿನಣ್ಚ** (ಉ. ಸೂ. ೨-೨೧೪) ಎಂಬುದರಿಂದ ಔಣಾದಿಕವಾದ ಇನಣ್ ಪ್ರತ್ಯಯ. **ಅತಉಪಧಾಯಾಃ** ಎಂಬುದರಿಂದ ಪ್ರತ್ಯಯ ಣಿತ್ವಾದುದರಿಂದ ತನ್ನಿಮಿತ್ತವಾಗಿ ಧಾತುವಿನ ಉಪಧೆಗೆ ವೃದ್ಧಿ. ಮಾಹಿನ್ ಶಬ್ದವಾಗುತ್ತದೆ. ಅನಿನ್ ಪ್ರತ್ಯಯ ನಿತ್ವಾದುದರಿಂದ ಆದ್ಯುದಾತ್ತಸ್ವರ ಬರುತ್ತದೆ.

ಅರಿಣಾಃ—ರೀ ಗತಿರೇಷಣಯೋಃ ಧಾತು. ಕ್ರ್ಯಾದಿ ಲಙ್ ಮಧ್ಯಮಪುರುಷ ಏಕವಚನದಲ್ಲಿ ಸಿಪ್. ಆದರ ಇಕಾರಕ್ಕೆ ಲೋಪ. ಪ್ವಾದಿಯಲ್ಲಿ ಸೇರಿರುವುದರಿಂದ **ಪ್ವಾದೀನಾಂ ಹ್ರಸ್ವಃ** (ಪಾ. ಸೂ. ೭-೩-೮೦) ಎಂಬುದರಿಂದ ಧಾತುವಿಗೆ ಹ್ರಸ್ವ ಬರುತ್ತದೆ. **ಕ್ರ್ಯಾದಿಭ್ಯಃ ಶ್ನಾ** ಎಂಬುದರಿಂದ ಶ್ನಾ ವಿಕರಣ. **ಆಟ್ಕುಪ್ವಾಙ್** ಸೂತ್ರದಿಂದ ಅಲ್ಲಿ ಉಳಿಯುವ ನಾ ಎಂಬುದಕ್ಕೆ ಣತ್ವ. ಪ್ರತ್ಯಯ ಸಕಾರಕ್ಕೆ ರುತ್ವವಿಸರ್ಗ. ಅಂಗಕ್ಕೆ ಆಡಾಗಮ. ಅರಿಣಾಃ ಎಂಬುದು ಅತಿಙಂತದ ಪರದಲ್ಲಿರುವುದರಿಂದ **ತಿಙ್ಶಿತಿಜಃ** ಸೂತ್ರದಿಂದ ಸರ್ವಾನುದಾತ್ತವಾಗುತ್ತದೆ.

ಸಮಯಾ—**ಷಮು** ಷ್ಟಮು ಅವೈಕಲ್ಯೇ ಧಾತು. ಸಮತೀತಿ ಸಮಾ **ನಂದಿಗ್ರಹಪಚಾದಿಭ್ಯಃ** ಸೂತ್ರದಿಂದ ಅಚ್ ಪ್ರತ್ಯಯ. ಧಾತುವಿನ ಆದಿಗೆ ಸಕಾರಾದೇಶ. **ಚಿತಃ** ಎಂಬುದರಿಂದ ಅಂತೋದಾತ್ತವಾಗುತ್ತದೆ. ತೃತೀಯಾ ಏಕವಚನಾಂತರೂಪ.

ಪಾಷ್ಯಾ—ಪಿಷ್‌ಲೃ ಸಂಚೂರ್ಣನೇ ಧಾತು. **ಸರ್ವಧಾತುಭ್ಯಇನ್** (ಉ. ಸೂ. ೪-೫೫೭) ಎಂಬುದರಿಂದ ಇನ್ ಪ್ರತ್ಯಯ. ಉಣಾದಿಯಲ್ಲಿ ಬಹುಲವಚನವಿರುವುದರಿಂದ ಧಾತುವಿನ ಉಪಧೆಗೆ ಇಕಾರಕ್ಕೆ ಅಕಾರಾದೇಶ. ಸ್ತ್ರೀತ್ವವಿವಕ್ಷಾವಾಡಿದಾಗ **ಕೃದಿಕಾರಾದಕ್ತಿನಃ** (ಪಾ. ಸೂ. ೪-೧-೪೫ ಗ) ಕ್ತಿನ್ ಭಿನ್ನವಾದ ಇಕಾರಾಂತ ಕೃದಂತದ ಪ್ರಾದಿಪದಕಕ್ಕೆ ಙೀಷ್ ಎಂಬುದರಿಂದ ಇಲ್ಲಿ ಙೀಷ್ ಬರುತ್ತದೆ. **ಪಾಷೀ** ಶಬ್ದದ ತೃತೀಯಾ ಏಕವಚನಾಂತರೂಪ. ಪ್ರತ್ಯಯಸ್ವರದಿಂದ ಅಂತೋದಾತ್ತ. ಇದಕ್ಕೆ **ವಿಭಕ್ತಿಪರ** ವಾದಾಗ ಯಣಾದೇಶ ಬಂದುದರಿಂದ **ಉದಾತ್ತಸ್ವರಿತಯೋರ್ಯಣಃ ಸ್ವರಿತೋನುದಾತ್ತಸ್ಯ** (ಪಾ. ಸೂ. ೮-೪-೬೬) ಎಂಬುದರಿಂದ ಸ್ವರಿತ ಬರುತ್ತದೆ.

ಅರುಜಃ—ರುಜೋ ಭಂಗೇ ಧಾತು. ತುದಾದಿ. ಲಙ್ ಮಧ್ಯಮಪುರುಷಏಕವಚನದಲ್ಲಿ ಸಿಪ್. **ಇತಶ್ಚ** ಸೂತ್ರದಿಂದ ಇಕಾರಲೋಪ. **ತುದಾದಿಭ್ಯಃಶಃ** ಸೂತ್ರದಿಂದ ಶ ವಿಕರಣ. **ಸಾರ್ವಧಾತುಕಮಪಿತ್** ಸೂತ್ರದಿಂದ ಅದು ಙಿತ್ತಾದುದರಿಂದ **ಪುಗಂತಲಘೂಪಧಸ್ಯಚ** ಸೂತ್ರದಿಂದ ಧಾತುವಿನ ಲಘೂಪಧೆಗೆ ಗುಣ ಬರುವುದಿಲ್ಲ. ಅಂಗಕ್ಕೆ ಲಙ್ ನಿಮಿತ್ತವಾಗಿ ಅಡಾಗಮ. ಪ್ರತ್ಯಯಸಕಾರಕ್ಕೆ ರುತ್ವ ವಿಸರ್ಗ. ಅರುಜಃ ಎಂದು ರೂಪವಾಗುತ್ತದೆ. ಅತಿಙಂತದ ಪರದಲ್ಲಿರುವುದರಿಂದ **ತಿಙ್ಙತಿಙಃ** ಸೂತ್ರದಿಂದ ನಿಘಾತಸ್ವರ ಬರುತ್ತದೆ.

ಐವತ್ತಾರನೆಯ ಸೂಕ್ತವು ಸಮಾಪ್ತವು.

ಐವತ್ತೇಳನೆಯ ಸೂಕ್ತವು

ಪ್ರ ಮಂಹಿಷ್ಠಾಯೇತಿ ಷಡೃಚಂ ಸಪ್ತಮಂ ಸೂಕ್ತಂ ಸವ್ಯಸ್ಯಾರ್ಷಮೈಂದ್ರಂ ಜಾಗತಂ । ತಥಾ ಜಾನುಕ್ರಾಂತಂ । ಪ್ರ ಮಂಹಿಷ್ಠಾಯೇತಿ ॥ ವಿಷುವತಿ ನಿಷ್ಕೇವಲ್ಯ ಇದಂ ಸೂಕ್ತಂ ಶಂಸನೀಯಂ । ಸೂತ್ರಿತಂ ಚ । ಪ್ರ ಮಂಹಿಷ್ಠಾಯ ತ್ಯಮೂಷ್ಟಿತೀಹ ತಾರ್ಕ್ಷ್ಯಮಂತತಃ ॥ ಆ. ೮-೬ ಇತಿ ॥ ಉಕ್ಥ್ಯ-ಸಂಸ್ಥೇ ಕ್ರತೌ ತೃತೀಯಸವನೇ ಬ್ರಾಹ್ಮಣಾಚ್ಛಂಸಿಶಸ್ತ್ರೇಽಸ್ಯೇತತ್ಸೂಕ್ತಂ । ಸೂತ್ರಿತಂ ಚ । ಸರ್ವಾಃ ಕಕುಭಃ ಪ್ರ ಮಂಹಿಷ್ಠಾಯೋದಪ್ರುತಃ । ಆ. ೬-೧ । ಇತಿ ॥

ಅನುವಾದವು—**ಪ್ರ ಮಂಹಿಷ್ಠಾಯ** ಎಂಬ ಈ ಸೂಕ್ತವು ಹತ್ತನೆಯ ಅನುವಾಕದಲ್ಲಿ ಏಳನೆಯ ಸೂಕ್ತವು. ಇದರಲ್ಲಿ ಆರು ಋಕ್ಕುಗಳಿರುವವು. ಈ ಸೂಕ್ತಕ್ಕೆ ಸವ್ಯನೆಂಬುವನು ಋಷಿಯು. ಇಂದ್ರನು ದೇವತೆಯು. ಜಗತೀ ಛಂದಸ್ಸು. ಅನುಕ್ರಮಣಿಕೆಯಲ್ಲಿ **ಪ್ರ ಮಂಹಿಷ್ಠಾಯೇತಿ** ಎಂದು ಹೇಳಿರುವುದು **ವಿಷುವತ್ಸಂಜ್ಞಯಾಗದಲ್ಲಿ ನಿಷ್ಕೇವಲ್ಯಶಸ್ತ್ರಮಂತ್ರಗಳಿಗಾಗಿ ಈ ಸೂಕ್ತದ ವಿನಿಯೋಗವಿರುವುದೆಂದು ಆಶ್ವಲಾಯನ ಶ್ರೌತಸೂತ್ರದ ಪ್ರ ಮಂಹಿಷ್ಠಾಯ ತ್ಯಮೂ ಷ್ಟಿತೀಹ ತಾರ್ಕ್ಷ್ಯಮಂತತಃ** ಎಂಬ ಸೂತ್ರವು ನಿರ್ದೇಶಿಸುವುದು. (ಆ. ೮-೬) **ಉಕ್ಥಸಂಸ್ಥೆಯೆಂಬ ಕ್ರತುವಿನಲ್ಲಿಯೂ ತೃತೀಯಸವನದಲ್ಲಿ ಬ್ರಾಹ್ಮಣಾಚ್ಛಂಸಿಯೂ ಈ ಸೂಕ್ತವನ್ನು ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ ಸರ್ವಾಃ ಕಕುಭಃ ಪ್ರ ಮಂಹಿಷ್ಠಾಯೋದಪ್ರುತಃ ಎಂಬ ಸೂತ್ರದಿಂದ ವಿವೃತವಾಗಿರುವುದು (ಆ. ೬-೧).**

ಸೂಕ್ತ—೫೭

ಮಂಡಲ—೧ ॥ ಅನುವಾಕ—೧೦ ॥ ಸೂಕ್ತ—೫೭ ॥
ಅಷ್ಟಕ—೧ ॥ ಅಧ್ಯಾಯ—೪ ॥ ವರ್ಗ— ೨೨॥

ಸೂಕ್ತದಲ್ಲಿರುವ ಋಕ್ಸಂಖ್ಯೆ—೬ ॥
ಋಷಿಃ—ಸವ್ಯ ಆಂಗಿರಸಃ ॥
ದೇವತಾ—ಇಂದ್ರಃ ॥
ಛಂದಃ—ಜಗತೀ ।

॥ ಸಂಹಿತಾಪಾಠಃ ॥

ಪ್ರ ಮಂಹಿಷ್ಠಾಯ ಬೃಹತೇ ಬೃಹದ್ರಯೇ ಸತ್ಯಶುಷ್ಮಾಯ ತವಸೇ
ಮತಿಂ ಭರೇ ।
ಅಪಾಮಿವ ಪ್ರವಣೇ ಯಸ್ಯ ದುರ್ಧರಂ ರಾಧೋ ವಿಶ್ವಾಯು ಶವಸೇ
ಅಪಾವೃತಂ ॥ ೧ ॥

॥ ಪದಪಾಠಃ ॥

ಪ್ರ । ಮಂಹಿಷ್ಠಾಯ । ಬೃಹತೇ । ಬೃಹದ್ರಯೇ । ಸತ್ಯಶುಷ್ಮಾಯ । ತವಸೇ ।
ಮತಿಂ । ಭರೇ ।
ಅಪಾಮಿವ । ಪ್ರವಣೇ । ಯಸ್ಯ । ದುರ್ಧರಂ । ರಾಧಃ । ವಿಶ್ವಆಯು । ಶವಸೇ ।
ಅಪವೃತಂ ॥ ೧ ॥

॥ ಸಾಯಣಭಾಷ್ಯ ॥

ಮಂಹಿಷ್ಠಾಯ । ಮಂಹತಿರ್ದಾನಕರ್ಮೇತಿ ಯಾಸ್ಕಃ । ನಿ. ೧-೭ । ದಾತೃತಮಾಯ ಬೃಹತೇ ಗುಣೈರ್ಮಹತೇ ಬೃಹದ್ರಯೇ ಮಹಾಧನಾಯ ಸತ್ಯಶುಷ್ಮಾಯಾವಿತಥಬಲಾಯ ತವಸ ಆಕಾರತಃ ಪ್ರವೃದ್ಧಾಯ । ಏವಂಗುಣವಿಶಿಷ್ಟಾಯೇಂದ್ರಾಯ ಮತಿಂ ಮನನೀಯಾಂ ಸ್ತುತಿಂ ಪ್ರ ಭರೇ । ಪ್ರಕರ್ಷೇಣ ಸಂಪಾದಯಾಮಿ । ಯಸ್ಯೇಂದ್ರಸ್ಯ ಬಲಂ ದುರ್ಧರಮನ್ಯೈರ್ಧರ್ತುಮಶಕ್ಯಂ । ತತ್ರ ದೃಷ್ಟಾಂತಃ । ಪ್ರವಣೇ ನಿಮ್ನಪ್ರದೇಶೇಽಪಾಮಿವ । ಯಥಾ ಜಲಾನಾಂ ವೇಗಃ ಕೇನಾಪ್ಯವಸ್ಥಾಪಯಿತುಂ ನ ಶಕ್ಯತೇ

ತದ್ವತ್ । ತಥಾ ರಾಧೋ ಧನಂ ವಿಶ್ವಾಯು ಸರ್ವೇಷು ವ್ಯಾಪ್ತಂ ತವಸೇ ಸ್ತೋತೄಣಾಂ ಬಲಾಯೇ ಯೇನೇಂದ್ರೇಣಾಪಾವೃತಂ । ಅಪಗತಾವರಣಂ ಕ್ರಿಯತೇ ತಸ್ಮೈಂದ್ರಸ್ಯೇತಿ ಪೂರ್ವೇಣ ಸಂಬಂಧಃ ॥ ಮಂಹಿಷ್ಠಾಯ । ಅತಿಶಯೇನ ಮಂಹಿತಾ ಮಂಹಿಷ್ಠಃ । ತುಶ್ಚಂದಸೀತೀಷ್ಠನ್ಪ್ರತ್ಯಯಃ । ತುರೀಷ್ಠೇಮೇಯಃಸ್ವಿತಿ ಶ್ಯಲೋಪಃ । ಬೃಹತೇ । ಬೃಹನ್ಮಹತೋರುಪಸಂಖ್ಯಾನಮಿತಿ ವಿಭಕ್ತೇರುದಾತ್ತತ್ವಂ । ಉತ್ತರಯೋರ್ಬಹುವ್ರೀಹಿಸ್ವರಃ । ಮತಿಂ । ಮಂತ್ರೇ ವೃಷೇತ್ಯಾದಿನಾ ಕ್ತಿನ್ನುದಾತ್ತತ್ವಂ । ಅನುದಾತ್ತೋಪದೇಶೇತ್ಯಾದಿನಾನುನಾಸಿಕಲೋಪಃ । ದುರ್ಧರಂ । ಧೃಞ್ ಧಾರಣೇ । ಈಷದ್ದುಃಸುಷ್ವಿತಿ ಕರ್ಮಣಿ ಖಲ್ । ವಿಶ್ವಾಯು । ವಿಶ್ವಸ್ಮಿನ್ಸರ್ವಸ್ಮಿನ್ನಾಯು ಗಮನಂ ಯಸ್ಯ ತದ್ವಿಶ್ವಾಯು । ಏತೇಭ್ಯಶ್ಚಂದಸೀಣಃ । ಉ. ೧-೨ । ಇತ್ಯುಣ್ಪ್ರತ್ಯಯಃ । ಬಹುವ್ರೀಹೌ ವಿಶ್ವಂ ಸಂಜ್ಞಾಯಾಮಿತಿ ಪೂರ್ವಪದಾಂತೋದಾತ್ತತ್ವಂ । ಅಪಾವೃತಂ । ಕರ್ಮಣಿ ನಿಷ್ಠಾ । ಗತಿರನಂತರ ಇತಿ ಗತೇಃ ಪ್ರಕೃತಿಸ್ವರತ್ವಂ ॥

॥ ಪ್ರತಿಪದಾರ್ಥ ॥

ಯಸ್ಯ—ಯಾವ ಇಂದ್ರನ (ಬಲವು) । **ಪ್ರವಣೇ**—(ಯಾರಿಂದಲೂ ತಡೆಗಟ್ಟಲು **ಸಾಧ್ಯ**ವಿಲ್ಲದೇ) ನಿಮ್ನ ಪ್ರದೇಶದಲ್ಲಿ (ಹರಿಯುವ) । **ಅಪಾಂ** ಇವ—ನೀರುಗಳ ಪ್ರವಾಹದಂತೆ । **ದುರ್ಧರಂ**—(ಶತ್ರುಗಳಿಂದ) ಪ್ರತಿಭಟಿಸಲು **ಸಾಧ್ಯ**ವಿಲ್ಲವೋ ಮತ್ತು । **ರಾಧಃ**—(ಯಾವ ಇಂದ್ರನ) ಧನವು । **ವಿಶ್ವಾಯು**—ಸಕಲರಲ್ಲಿಯೂ ಹರಡಿ । **ತವಸೇ**—(ಭಕ್ತರ) ಬಲಸಂಪಾದನೆಗಾಗಿ । **ಅಪಾವೃತಂ**—ತೆರೆಯಲ್ಪಟ್ಟದೆಯೋ ಅಂತಹ । **ಮಂಹಿಷ್ಠಾಯ**—ಅತ್ಯಂತ ಉದಾರವಾದ ದಾನಿಯೂ । **ಬೃಹತೇ**—ಗುಣಗಳಿಂದ ದೊಡ್ಡವನೂ । **ಬೃಹದ್ರಯೇ**—ಸಮೃದ್ಧವಾದ ಧನವಂತನೂ । **ಸತ್ಯಶುಷ್ಮಾಯೆ**—ಸಾರ್ಥಕವಾದ ಪರಾಕ್ರಮವುಳ್ಳವನೂ । **ತವಸೇ**—ಪ್ರಭಾವಶಾಲಿಯೂ ಆದ ಇಂದ್ರನಿಗೆ । **ಮತಿಂ**—ಪೂಜ್ಯವಾದ ಸ್ತೋತ್ರವನ್ನು । **ಪ್ರ ಭರೇ**—ಶ್ರೇಷ್ಠವಾಗಿ ಸಂಪಾದಿಸುತ್ತೇನೆ. (ಪಠಿಸುತ್ತೇನೆ)

॥ ಭಾವಾರ್ಥ ॥

ನಿಮ್ನ ಪ್ರದೇಶದಲ್ಲಿ ಹರಿಯುವ ನೀರಿನ ಪ್ರವಾಹವು ಯಾರಿಂದಲೂ ತಡೆಗಟ್ಟಲು ಸಾಧ್ಯವಿಲ್ಲದಿರುವಂತೆ ಇಂದ್ರನ ಶಕ್ತಿಯು ಶತ್ರುಗಳಿಂದ ಪ್ರತಿಭಟಿಸಲಸಾಧ್ಯವಾದುದು. ಅವನ ಧನವು ಸಕಲ ಭಕ್ತರ ಬಲ ಸಂಪಾದನೆಗಾಗಿ ಸಕಲರಲ್ಲಿಯೂ ಹರಡುವಂತೆ ತೆರೆದಿಟ್ಟಿದೆ. ಅತ್ಯಂತ ಉದಾರವಾದ ದಾನಿಯೂ, ಗುಣಗಳಿಂದ ದೊಡ್ಡವನೂ, ಸಮೃದ್ಧವಾದ ಧನವಂತನೂ, ಸಾರ್ಥಕವಾದ ಪರಾಕ್ರಮವುಳ್ಳವನೂ ಮತ್ತು ಪ್ರಭಾವಶಾಲಿಯೂ ಆದ ಇಂದ್ರನಿಗೆ ಪೂಜ್ಯವಾದ ಸ್ತೋತ್ರವನ್ನರ್ಪಿಸುತ್ತೇನೆ.

English Translation.

I offer the most desirable praise to the most bountiful, the great, the opulent, the highly powerful and stately Indra, whose irresistible impetuosity is like the rush of waters down a precipice, and by whom, widely-diffused wealth is laid open (to his worshippers) to sustain their strength.

॥ ವಿಶೇಷ ವಿಷಯಗಳು ॥

ಮಂಹಿಷ್ಠಾಯ—ಮಂಹತಿರ್ದಾನಕರ್ಮಾ (ನಿರು. ೧-೭) **ಅತಿಶಯೇನ ಮಂಹಿತಾ ಮಂಹಿಷ್ಠಃ** ಎಂಬುದು ಇದರ ವ್ಯುತ್ಪತ್ತಿ. ಮಂಹತಿ ಶಬ್ದಕ್ಕೆ ದಾನಮಾಡುವ ಕೆಲಸವೆಂದು ನಿರುಕ್ತಕಾರರು ನಿಶ್ಚಯ ಮಾಡಿರುತ್ತಾರೆ. ಇಲ್ಲಿ ದಾನಮಾಡುವವರಲ್ಲಿ ಅತ್ಯಂತ ಶ್ರೇಷ್ಠನೆಂದರ್ಥ.

ಸತ್ಯಶುಷ್ಮಾಯ—ಸತ್ಯಂ ಶುಷ್ಮ ಯಸ್ಯ ಎಂಬ ವಿವರಣೆಯಿಂದ ವ್ಯರ್ಥವಿಲ್ಲದ ಶಕ್ತಿಯುಳ್ಳವನು ಎಂದರ್ಥವಾಗುವುದು.

ತವಸೇ—ಮಹತ್ತಾದ ಆಕಾರವುಳ್ಳವನು. ಇದು ಇಂದ್ರನಿಗೆ ವಿಶೇಷಣವಾಗಿರುವುದು.

ಪ್ರವಣೇ ಅಸಾಮಿವ—ಹಳ್ಳಕ್ಕೆ ಹರಿಯುವ ನೀರಿನಂತೆ, ಅತಿಶಯವಾದ ಬಲವುಳ್ಳವನು ಇಂದ್ರ. ಇಲ್ಲಿ ಇಂದ್ರನ ಶಕ್ತಿಯನ್ನು ಯಾರೂ ತಡೆಯಲಾರರೆಂಬ ಪ್ರಶಂಸಾವಾಕ್ಯದಲ್ಲಿ ಹಳ್ಳಕ್ಕೆ ಹರಿಯುವ ನೀರಿನ ವೇಗವು ದೃಷ್ಟಾಂತವಾಗಿ ಕೊಡಲ್ಪಟ್ಟಿದೆ.

ವಿಶ್ವಾಯು—ವಿಶ್ವಸ್ಮಿನ್ ಸರ್ವಸ್ಮಿನ್ ಆಯು ಗಮನಂ ಯಸ್ಯೇತತ್ ಪ್ರಪಂಚದ ಸರ್ವಪ್ರದೇಶದಲ್ಲಿಯೂ ವ್ಯಾಪಿಸಲ್ಪಟ್ಟಿರುವ ವಸ್ತು ಎಂದರ್ಥ.

॥ ವ್ಯಾಕರಣಪ್ರಕ್ರಿಯಾ ॥

ಮಂಹಿಷ್ಠಾಯ—ಮಹಿ ವೃದ್ಧೌ ಧಾತು. **ತೃಚ್** ಪ್ರತ್ಯಯ. ಇದಿತ್ತಾದುದರಿಂದ ನಮಾಗನು. ಮಂಹಿತೃಶಬ್ದವಾಗುತ್ತದೆ. ಅತಿಶಯೇನಮಂಹಿತಾ ಮಂಹಿಷ್ಠಃ **ತುಶ್ಛಂದಸಿ** (ಪಾ. ಸೂ. ೫-೩-೫೯) ಎಂಬುದರಿಂದ ಇಷ್ಠನ್ ಪ್ರತ್ಯಯ. **ತುರಿಷ್ಠೇಮೇಯಃ ಸು** (ಪಾ. ಸೂ. ೬-೪ ೧೫೪) ಎಂಬುದರಿಂದ ಇಷ್ಠನ್ ಪ್ರತ್ಯಯ ಪರದಲ್ಲಿರುವಾಗ ತೃಚಿಗೆ ಲೋಪ. ಮಂಹಿಷ್ಠಶಬ್ದವಾಗುತ್ತದೆ. ಇಷ್ಠನ್ ನಿತ್ತಾದುದರಿಂದ **ಜ್ನಿತ್ಯಾದಿರ್ನಿತ್ಯಮ್** ಎಂಬುದರಿಂದ ಆದ್ಯುದಾತ್ತಸ್ವರ ಬರುತ್ತದೆ. ಚತುರ್ಥೀ ಏಕವಚನಾಂತರೂಪ.

ಬೃಹತೇ—ಬೃಹಚ್ಛಬ್ದ. ಚತುರ್ಥೀ ಏಕವಚನಾಂತರೂಪ. **ಬೃಹನ್ಮಹತೋರುಪಸಂಖ್ಯಾನಮ್** ಎಂಬುದರಿಂದ ವಿಭಕ್ತಿಗೆ ಉದಾತ್ತಸ್ವರ ಬರುತ್ತದೆ.

ಬೃಹದ್ರಯೇ ಮತ್ತು ಸತ್ಯಶುಷ್ಮಾಯ ಎಂಬ ಎರಡು ಶಬ್ದಗಳು ಬಹುವ್ರೀಹಿ ಸಮಾಸದಿಂದ ನಿಷ್ಪನ್ನವಾಗಿವೆ. ಆಗ **ಬಹುವ್ರೀಹೌಪ್ರಕೃತ್ಯಾಪೂರ್ವಪದಮ್** ಎಂಬುದರಿಂದ ಪೂರ್ವಪದಪ್ರಕೃತಿಸ್ವರ ಬರುತ್ತದೆ.

ಮತಿಮ್—ಮನ ಜ್ಞಾನೇ ಧಾತು. **ಸ್ತ್ರಿಯಾಂ ಕ್ತಿನ್** ಎಂಬುದರಿಂದ ಕ್ತಿನ್ ಪ್ರತ್ಯಯ. **ಅನುದಾತ್ತೋಪದೇಶ** (ಪಾ. ಸೂ. ೬-೪-೩೬) ಎಂಬುದರಿಂದ ಧಾತುವಿನ ಅನುನಾಸಿಕಕ್ಕೆ (ಸಕಾರ) ಲೋಪ **ಮಂತ್ರೇವೃಷೇಷವಚೇ** (ಪಾ. ಸೂ. ೩-೩-೯೬) ಸೂತ್ರದಿಂದ ಕ್ತಿನ್ ಪ್ರತ್ಯಯವು ಉದಾತ್ತವಾಗುತ್ತದೆ. ದ್ವಿತೀಯಾ ಏಕವಚನದಲ್ಲಿ **ಅಮಿಪೂರ್ವಃ** ಸೂತ್ರದಿಂದ ಪೂರ್ವರೂಪ ಬಂದಾಗ **ಏಕಾದೇಶಉದಾತ್ತೇನೋದಾತ್ತಃ** (ಪಾ. ಸೂ. ೮-೨-೫) ಸೂತ್ರದಿಂದ ಉದಾತ್ತವಾಗುತ್ತದೆ.

ಭರೇ— ಭೃಞ್ ಭರಣೇ ಧಾತು. ಲಡುತ್ತಮಪುರುಷ ಏಕವಚನರೂಪ. **ತಿಙಂತನಿಘಾತಸ್ವರ** ಬರುತ್ತದೆ.

ಅಪಾಮ್— ಊಡಿದಂಪದಾದಿ— ಸೂತ್ರದಿಂದ ಷಷ್ಠೀಬಹುವಚನ ವಿಭಕ್ತಿಗೆ ಉದಾತ್ತಸ್ವರ ಬರುತ್ತದೆ.

ದುರ್ಧರಮ್—ಧೃಞ್ ಧಾರಣೇ ಧಾತು **ಈಷದ್ದುಃಸುಷುಕೃ** (ಪಾ. ಸೂ. ೩-೩-೧೨೬) ಎಂಬುದರಿಂದ ಕೃಚ್ಛ್ರಾರ್ಥದಲ್ಲಿ ದುಸ್ ಉಪಪದವಾಗಿರುವಾಗ ಖಲ್ ಪ್ರತ್ಯಯ. ಪ್ರತ್ಯಯನಿಮಿತ್ತವಾಗಿ ಧಾತುವಿಗೆ ಗುಣ. **ಉರಣ್ಯಪರಃ** ಸೂತ್ರದಿಂದ ರಪರವಾಗಿ ಬರುತ್ತದೆ. **ಲಿತಿ** ಸೂತ್ರದಿಂದ ಪ್ರತ್ಯಯದ ಪೂರ್ವಕ್ಕೆ ಉದಾತ್ತಸ್ವರ ಬರುತ್ತದೆ.

ವಿಶ್ವಾಯು—ವಿಶ್ವಸ್ಮಿನ್=ಸರ್ವಸ್ಮಿನ್ ಆಯು ಗಮನಂ ಯಸ್ಯ ತತ್ ವಿಶ್ವಾಯು. ಇಙ್ ಗತೌ ಧಾತು. ಇದಕ್ಕೆ **ಛಂದಸೀಣಃ** (ಉ. ಸೂ. ೧-೨) ಎಂಬುದರಿಂದ **ಉಣ್** ಪ್ರತ್ಯಯ. ಣಿತ್ತಾದುದರಿಂದ **ಅಚೋಞ್ಣಿತಿ** ಸೂತ್ರದಿಂದ ಧಾತುವಿನ ಇಕಾರಕ್ಕೆ ವೃದ್ಧಿ. ಆಯಾದೇಶ ಆಯು ಶಬ್ದವಾಗುತ್ತದೆ. ವಿಶ್ವ ಶಬ್ದದೊಡನೆ ಬಹುವ್ರೀಹಿಸಮಾಸವಾದಾಗ **ಬಹುವ್ರೀಹೌ ವಿಶ್ವಂಸಂಜ್ಞಾಯಾಂ** (ಪಾ. ಸೂ. ೬-೨-೧೦೬) ಎಂಬುದರಿಂದ ಪೂರ್ವಪದಾಂತೋದಾತ್ತಸ್ವರ ಬರುತ್ತದೆ.

ಅಪಾವೃತಮ್—ವೃಞ್ ವರಣೇ ಧಾತು. ಕರ್ಮಣಿಯಲ್ಲಿ ಕ್ತಪ್ರತ್ಯಯ ಕಿತ್ತಾದುದರಿಂದ ಧಾತುವಿನ ಇಕಿಗೆ ಗುಣ ಬರುವುದಿಲ್ಲ. **ಗತಿರನಂತರಃ** (ಪಾ. ಸೂ. ೬-೨-೪೯) ಸೂತ್ರದಿಂದ ಗತಿಗೆ ಪ್ರಕೃತಿಸ್ವರ ಬರುತ್ತದೆ.

॥ ಸಂಹಿತಾಪಾಠಃ ॥

ಅಧ॑ ತ್ವೇ ವಿಶ್ವಮನು॑ ಹಾಸದಿಷ್ಟಯ ಆಪ್ಯೋ॑ ನಿಮ್ನೇ॑ವ ಸವ॑ನಾ ಹ॒ವಿಷ್ಕೃ॑ತಃ ।
ಯತ್ಪ॒ರ್ವತೇ॑ ನ ಸ॒ಮಶೀ॑ತ ಹರ್ಯತ ಇಂದ್ರ॑ಸ್ಯ ವ॒ಜ್ರಃ ಶ್ನಥಿ॑ತಾ ಹಿರ॒-
ಣ್ಯ॑ಯಃ ॥ ೨ ॥

|| ಪದಪಾಠಃ ||

ಅಧ॑ । ತ್ವೇ । ವಿಶ್ವ॑ಂ । ಅನು॑ । ಹ॒ । ಅಸ॑ತ್ । ಇಷ್ಟ॑ಯೇ । ಆಪ॑ಃ । ನಿಮ್ನಾ॑ಃಇವ ।
ಸವ॑ನಾ । ಹ॒ವಿಷ್ಕೃ॑ತಃ ।
ಯತ್ । ಪ॒ರ್ವ॒ತೇ॑ । ನ । ಸ॒ಂಅ॒ಶೀ॒ತ॒ । ಹ॒ರ್ಯ॒ತಃ॒ । ಇಂದ್ರ॑ಸ್ಯ । ವ॒ಜ್ರಃ । ಶ್ನಥಿ॑ತಾ ।
ಹಿ॒ರ॒ಣ್ಯ॑ಯಃ ॥ ೨ ॥

॥ ಸಾಯಣಭಾಷ್ಯಂ ॥

ಅಥ ಹಾನಂತರಮೇವ ಹೇ ಇಂದ್ರ ವಿಶ್ವಂ ಸರ್ವಮಿದಂ ಜಗತ್ತೇ ತವ ಸಂಬಂಧಿನ ಇಷ್ಟಯೇ ಯೋಗಾಯೋನ್ನಸತ್ । ಅನ್ನಭವತ್ । ಯದ್ವಾ । ಇಷ್ಟಯೇ ಹವಿರಾದಿಭಿಸ್ತವ ಪ್ರಾಪ್ತಯ ಇತಿ ಯೋಜ್ಯಂ । ಹವಿಷ್ಕೃತೋ ಯಜಮಾನಸ್ಯ ಸವನಾ ಸವನಾನಿ ಯಜ್ಞಜಾತಾನಿ ನಿಮ್ನೇವ ನಿಮ್ನಾನಿ ಭೂಸ್ಥಲಾನ್ಯಾಪ ಇವ ತ್ವಾಂ ಸಂಭಜಂತ ಇತಿ ಶೇಷಃ । ಹರ್ಯತಃ ಶತ್ರುವಧಂ ಪ್ರೇಪ್ಸತ ಇಂದ್ರಸ್ಯ । ಹರ್ಯತಿಃ ಪ್ರೇಪ್ಸಾಕರ್ಮೇತಿ ಯಾಸ್ಕಃ । ನಿ. ೭-೧೭ । ಯದ್ವಾ । ಹರ್ಯತಃ ಶೋಭನಃ । ಹಿರಣ್ಯಯೋ ಹಿರಣ್ಮಯಃ ಶ್ನಥಿತಾ ಶತ್ರೂಣಾಂ ಹಿಂಸನಶೀಲೋ ವಜ್ರಃ ಪರ್ವತೇ ಪರ್ವವತಿ ಶಿಲೋಚ್ಚಯೇ ವೃತ್ರೇ ವಾ ಯದ್ಯದಾ ನ ಸಮಶೀತ ಸಂಸುಪ್ತೋ ನಾಭವತ್ । ಕಿಂತು ಜಾಗರಿತಃ ಸನ್ನವಧೀದಿತ್ಯರ್ಥಃ । ಯದೇಂದ್ರೇಣ ಪ್ರೇರಿತೋ ವಜ್ರೋಽಪ್ರತಿಹತಃ ಸನ್ವೃತ್ರಮವಧೀತ್ತದಾಪ್ಸ್ವಭೃತ್ಯೇವ ತಂ ಯೇಷ್ವಂ ಸರ್ವೇ ಯೇಜಮಾನಾಃ ಸ್ವಾವರ್ತಿಷತೇತಿ ಭಾವಃ ॥ ಅಥ । ಛಾಂದಸಂ ಧತ್ವಂ । ಅಸತ್ । ಅಸ್ತೇರ್ಲಙಿ ಬಹುಲಂ ಛಂದಸೀತಿ ಶಪೋ ಲುಗಭಾವಃ । ಇಷ್ಟಯೇ । ಯಜತೇರ್ಭಾವೇ ಕ್ತಿನಿ ವಚಿಸ್ವಪಿಯಾದಿನಾ ಸಂಪ್ರಸಾರಣಂ । ವ್ರಶ್ಚಾದಿನಾ ಷತ್ವಂ । ವ್ಯತ್ಯಯೇನಾಂತೋದಾತ್ತತ್ವಂ । ಯದ್ವಾ । ಇಷ ಗತಾವಿತ್ಯಸ್ಮಾದ್ಭಾವೇ ಕ್ತಿನಿ ಮಂತ್ರೇ ವೃಷೇಷಪೇತಿ ತಸ್ಯೋದಾತ್ತತ್ವಂ । ನಿಮ್ನೇವ ಸವನಾ । ಶೇಶ್ಛಂದಸೀತಿ ಶೇರ್ಲೋಪಃ । ಸಮಶೀತ । ಶೀಙ್ ಸ್ವಪ್ನೇ । ಲಙಃ ಸಂಜ್ಞಾಪೂರ್ವಕಸ್ಯ ವಿಧೇರನಿತ್ಯತ್ವಾತ್ ಶೀಙಃ ಸಾರ್ವಧಾತುಕೇ । ಪಾ. ೭-೪-೧೧ ।ಇತಿ ಗುಣಾಭಾವಃ । ಹರ್ಯತಃ । ಹರ್ಯ ಗತಿಕಾಂತ್ಯೋಃ । ಭೃಮೃದೃಶೀತ್ಯಾದಿನಾ ಶ್ಪ್ರತ್ಯಯೇ । ಶ್ನಥಿತಾ । ಶ್ನಥ ಕ್ನಥ ಕ್ರಥ ಹಿಂಸಾರ್ಥಾಃ । ತಾಚ್ಛೀಲಿಕಸ್ತೃನ್ಪ್ರತ್ಯಯೇ । ನಿತ್ತ್ವಾದಾದ್ಯುದಾತ್ತತ್ವಂ ॥

॥ ಪ್ರತಿಪದಾರ್ಥ ॥

ಹರ್ಯತಃ—(ಶತ್ರು) ವಧವನ್ನು ನಿರೀಕ್ಷಿಸಿದ । ಇಂದ್ರಸ್ಯ—ಇಂದ್ರನ । ಹಿರಣ್ಯಯಃ—ಸುವರ್ಣನಿರ್ಮಿತವಾದದ್ದೂ । ಶ್ನಥಿತಾ—ಶತ್ರುಗಳನ್ನು ನಾಶಮಾಡತಕ್ಕದ್ದೂ ಆದ । ವಜ್ರಃ—ವಜ್ರಾಯುಧವು । ಪರ್ವತೇ—ಪರ್ವತದಲ್ಲಿ ಅಥವಾ ವೃತ್ರನಮೇಲೆ ಬೀಸಿ ಎಸೆದಾಗ । ಯತ್—ಯಾವಾಗ । ನ ಸಮಶೀತ—ಮಲಗಿ ನಿದ್ರೆ ಮಾಡಲಿಲ್ಲವೋ (ಅಂದರೆ ಚುರುಕಾಗಿದ್ದು ಶತ್ರುವನ್ನು ಕೊಂದಿತೋ) ಆಗ । ಅಥ ಹ—ಒಡನೆಯೇ । ವಿಶ್ವಂ—ಸಕಲ ಜಗತ್ತೂ । ತೇ—ನಿನ್ನನ್ನು ಉದ್ದೇಶಿಸಿ । ಇಷ್ಟಯೇ—ಯಾಗಕ್ಕಾಗಿ । ಅನ್ನ ಅಸತ್ ಸಿದ್ಧವಾಯಿತು । ಹವಿಷ್ಕೃತಃ—ಯಜಮಾನನ । ಸವನಾ—ಪೂಜೆಗಳು (ಹವಿಸ್ಸುಗಳು) । ನಿಮ್ನೇವ ಆಪಃ—ನಿಮ್ನ ಪ್ರದೇಶದಲ್ಲಿ ಹರಿಯುವ ನೀರಿನಂತೆ । (ತಡೆಯಿಲ್ಲದೆ ನಿನ್ನನ್ನು ಸೇರಿದವು) ॥

॥ ಭಾವಾರ್ಥ ॥

ಇಲೈ ಇಂದ್ರನೇ, ನೀನು ಶತ್ರುವಧವನ್ನಪೇಕ್ಷಿಸಿದಾಗ ನಿನ್ನ ಸುವರ್ಣನಿರ್ಮಿತವಾದದ್ದೂ, ಶತ್ರುಗಳನ್ನು ನಾಶಮಾಡತಕ್ಕದ್ದೂ ಆದ ವಜ್ರಾಯುಧವು ವೃತ್ರಾಸುರನ ಮೇಲೆ ಬೀಸಿ ಎಸೆದಾಗ ಸ್ವಲ್ಪವೂ ಸಾವಕಾಶವಿಲ್ಲದೇ ಶತ್ರುವನ್ನು ಕೊಂದಿತು. ಆ ಒಡನೆಯೇ ಸಕಲ ಜಗತ್ತೂ ಸಹ ನಿನ್ನನ್ನು ಉದ್ದೇಶಿಸಿ ಯಾಗಮಾಡಲನುವಾಯಿತು. ಯಜಮಾನನ ಹವಿಸ್ಸುಗಳು ನಿಮ್ನ ಪ್ರದೇಶದಲ್ಲಿ ಹರಿಯುವ ನೀರಿನಂತೆ ತಡೆಯಿಲ್ಲದೇ ನಿನ್ನನ್ನು ಸೇರಿದವು.

English Translation.

Indra, this entire universe was engaged in your sacrifice; the oblations of the sacrificer flowed like water falling to a depth; the beautiful, golden, fatal thunderbolt of Indra did not sleep upon the mountain.

॥ ವಿಶೇಷ ವಿಷಯಗಳು ॥

ಅಧ—ಅಥಶಬ್ದವು ಅಥ (ಅನಂತರ) ಎಂಬರ್ಥದಲ್ಲಿ ಪ್ರಯೋಗಿಸಲ್ಪಟ್ಟಿದೆ.

ಇಷ್ಟಯೇ—ಯಾಗಕ್ಕಾಗಿ ಅಥವಾ ಹವಿಸ್ಸೇ ಮೊದಲಾದುವುಗಳಿಂದ ಕೂಡಿ ನಿನ್ನನ್ನು ಪೂಜಿಸುವುದಕ್ಕಾಗಿ ಎಂದು ಎರಡು ರೀತಿಯಲ್ಲಿಯೂ ಅರ್ಥಮಾಡಿರುವರು.

ಸವನಾ—ಈ ಶಬ್ದಕ್ಕೆ ಕೇವಲ ಯಜ್ಞವಾಚಕತ್ವವಿದ್ದರೂ ಇಲ್ಲಿ ಲಕ್ಷಣಾವೃತ್ತಿಯಿಂದ ಯಾಗದಲ್ಲಿ ಉಂಟಾದ ಸಕಲ ಕರ್ಮಗಳೂ ಎಂದರ್ಥವಾಗುವುದು.

ಹರ್ಯತಃ—ಶತ್ರುವಧಂ ಪ್ರೇಪ್ಸತಃ—ಹರ್ಯತಿಃಪ್ರೇಪ್ಸಾಕರ್ಮಾ (ನಿರು. ೭-೧೭) ಎಂಬ ನಿರುಕ್ತರೀತಿಯಾಗಿ ಹರ್ಯಗತಿಕಾಂತ್ಯೋಃ ಎಂಬ ಗತಿ ಮತ್ತು ಕಾಂತ್ಯರ್ಥಕವಾದ ಹರ್ಯಧಾತುವಿಗೆ ತನಗೆ ಅಭೀಷ್ಟವಾದ ಕರ್ಮ ಎಂದರ್ಥವು ಸ್ಪಷ್ಟಪಡುವುದು. ಮತ್ತು ಈ ಶಬ್ದಕ್ಕೆ **ಪ್ರಶಸ್ತ**ವಾದ ಎಂದರ್ಥವನ್ನೂ ಹೇಳಿರುವರು.

ಶ್ನಥಿತಾ—ಶತ್ರುಗಳನ್ನು ಹಿಂಸಿಸುವ ಸ್ವಭಾವವುಳ್ಳದ್ದು ವಜ್ರಾಯುಧ. ಈ ಪದವು ವಜ್ರಾಯುಧಕ್ಕೆ ವಿಶೇಷಣವಾಗಿದೆ. ಇಂದ್ರನಿಂದ ಪ್ರೇರಿತವಾದ ವಜ್ರಾಯುಧವು ಶತ್ರುಗಳನ್ನು ನಿರ್ಮೂಲ ಮಾಡಿದಮೇಲೆ ಸರ್ವರೂ ಯಜ್ಞಕರ್ಮದಿಂದ ಇಂದ್ರನನ್ನು ತೃಪ್ತಿಪಡಿಸಲು ಪ್ರಾರಂಭಿಸಿದರು ಎಂಬುದು ಇಲ್ಲಿಯ ತಾತ್ಪರ್ಯಾರ್ಥ.

॥ ವ್ಯಾಕರಣಪ್ರಕ್ರಿಯಾ ॥

ಅಧ—ಅಥ ಎಂದಿರುವಾಗ ಸಂಹಿತಾದಲ್ಲಿ ಛಾಂದಸವಾಗಿ ಧತ್ವಬರುತ್ತದೆ.

ಅಸತ್—ಅಸ ಭುವಿ ಧಾತು. ಲಙ್ ಪ್ರಥಮಪುರುಷ ಏಕವಚನದಲ್ಲಿ ತಿವ್ ಪ್ರತ್ಯಯ. **ಇತಶ್ಚ** ಸೂತ್ರದಿಂದ ಇಕಾರಲೋಪ. **ಬಹುಲಂಛಂದಸಿ** ಎಂಬುದರಿಂದ ಶಪಿಗೆ ಲುಕ್ ಬರುವುದಿಲ್ಲ. **ಬಹುಲಂ ಛಂದಸ್ಯಮಾಙ್ಯೋಗೇಽಪಿ** ಸೂತ್ರದಿಂದ ಆಡಾಗಮ ಬರುವುದಿಲ್ಲ. ಅತಿಙಂತದಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

ಇಷ್ಟಯೇ—ಯಜ ದೇವಪೂಜಾಸಂಗತಿಕರಣದಾನೇಷು ಧಾತು. ಭಾವಾರ್ಥದಲ್ಲಿ ಕ್ತಿನ್ ಪ್ರತ್ಯಯ. ಕಿತ್ವಾದುದರಿಂದ **ವಚಿಸ್ವಪಿಯಜಾದೀನಾಂ** (ಪಾ. ಸೂ. ೬-೧-೧೫) ಎಂಬುದರಿಂದ ಧಾತುವಿಗೆ (ಯಕಾರ) **ಸಂಪ್ರಸಾರಣಾಚ್ಚಿ** ಸೂತ್ರದಿಂದ ಪೂರ್ವರೂಪ. ಇಜ್+ತಿ ಎಂದಿರುವಾಗ **ವೃಶ್ಚಭೃಸ್ಜ** ಎಂಬುದರಿಂದ ಜಕಾರಕ್ಕೆ ಷತ್ವ. ಷಕಾರಯೋಗ ಬಂದುದರಿಂದ ಪ್ರತ್ಯಯ ತಕಾರಕ್ಕೆ ಷ್ಟುತ್ವದಿಂದ ಟಕಾರಾದೇಶ ಇಷ್ಟಿ ಶಬ್ದವಾಗುತ್ತದೆ. ಪ್ರತ್ಯಯ ನಿತ್ವಾದರೂ ವ್ಯತ್ಯಯದಿಂದ ಅಂತೋದಾತ್ತಸ್ವರ ಬರುತ್ತದೆ. ಅಥವಾ ಇಷ ಗತೌ ಧಾತು. ಇದಕ್ಕೆ ಭಾವಾರ್ಥದಲ್ಲಿ ಕ್ತಿನ್ ಪ್ರತ್ಯಯ. ಕಿತ್ವಾದುದರಿಂದ ಲಘೂಪಧಗುಣ ಬರುವುದಿಲ್ಲ.

ಪ್ರತ್ಯಯಕ್ಕೆ ಹಿಂದಿನಂತೆ ಸ್ವುತ್ವ. **ಮಂತ್ರೇವೃಷೇಷ** (ಪಾ. ಸೂ. ೩-೩-೯೬) ಎಂಬುದರಿಂದಕ್ತಿನ್ನಿಗೆ ಉದಾತ್ತ ಸ್ವರ ಬರುತ್ತದೆ. ಚತುರ್ಥೀ ಏಕವಚನಾಂತರೂಪ.

ನಿಮ್ನೇವ ಸವನಾ—ನಿಮ್ನಾ ಸವನಾ ಈ ಎರಡು ಶಬ್ದಗಳು ನಪುಂಸಕ ಬಹುವಚನದಲ್ಲಿ ಸಿದ್ಧವಾಗುತ್ತವೆ. **ಶೇಶ್ಛಂದಸಿಬಹುಲಂ** (ಪಾ. ಸೂ. ೬-೧-೭೦) ಎಂಬುದರಿಂದ ಅಲ್ಲಿ ಜಸಿಗೆ ಆದೇಶವಾಗಿ ಬಂದ ಶಿಗೆ ಲೋಪ.

ಸಮಶೀತ—**ಶೀಙ್ ಸ್ವಪ್ನೇ** ಧಾತು ಆದಾದಿ. ಲಙ್ ಪ್ರಥಮಪುರುಷ ಏಕವಚನದಲ್ಲಿ ತ ಪ್ರತ್ಯಯ. **ಸಾರ್ವಧಾತುಕಮಪಿತ್** ಸೂತ್ರದಿಂದ ಇದು ಙಿದ್ವದ್ಭಾವವನ್ನು ಹೊಂದುತ್ತದೆ. **ಅದಿಪ್ರಭೃತಿಭ್ಯಃಶಪಃ** ಎಂಬುದರಿಂದ ಶಪಿಗೆ ಲುಕ್. ಇಲ್ಲಿ **ಶೀಙಃ ಸಾರ್ವಧಾತುಕೇ ಗುಣಃ** (ಪಾ. ಸೂ. ೭-೪-೨೧) ಸೂತ್ರದಿಂದ ಗುಣವು ಪ್ರಾಪ್ತವಾದರೆ **ಸಂಜ್ಞಾಪೂರ್ವಕೋ ವಿಧಿರನಿತ್ಯಃ** (ಪರಿ. ೯೫) ಎಂಬುದರಿಂದ ಅದು ಬರುವುದಿಲ್ಲ. ಅಂಗಕ್ಕೆ ಅಡಾಗಮ. ಅಶೀತ ಎಂದು ರೂಪವಾಗುತ್ತದೆ. ಯತ್ ಎಂದು ಹಿಂದೆ ಸಂಬಂಧವಿರುವುದರಿಂದ **ಯದ್ವೃತ್ತಾನ್ನಿತ್ಯಮ್** ಸೂತ್ರದಿಂದ ನಿಘಾತಪ್ರತಿಷೇಧ ಬರುತ್ತದೆ. ಅಡಾಗಮದ ಉದಾತ್ತಸ್ವರ ಉಳಿಯುತ್ತದೆ.

ಹರ್ಯತಃ—ಹರ್ಯ ಗತಿಕಾಂತ್ಯೋಃ ಧಾತು. **ಭೃಮೃದೃಶಿಯಜಿ**—(ಉ. ಸೂ. ೩-೩೯) ಎಂಬುದರಿಂದ ಅತಚ್ ಪ್ರತ್ಯಯ. ಚಿತ್ತ್ವಾದುದರಿಂದ **ಚಿತಃ** ಎಂಬುದರಿಂದ ಅಂತೋದಾತ್ತವಾಗುತ್ತದೆ.

ಶ್ನಥಿತಾ—**ಶ್ನಥ ಕ್ನಥ ಕ್ರಥ ಹಿಂಸಾರ್ಥಾಃ** ಧಾತು. ತಾಚ್ಛೀಲ್ಯಾರ್ಥದಲ್ಲಿ ತೃನ್ ಪ್ರತ್ಯಯ **ಆರ್ಧಧಾತುಕಸ್ಯೇಡ್ವಲಾದೇಃ** ಸೂತ್ರದಿಂದ ಅದಕ್ಕೆ ಇಡಾಗಮ. ಶ್ನಥಿತೃ ಶಬ್ದವಾಗುತ್ತದೆ. ನಿತ್ತ್ವಾದುದರಿಂದ ಆದ್ಯುದಾತ್ತಸ್ವರ ಬರುತ್ತದೆ. ಪ್ರಥಮಾ ಸು ಪರವಾದರೆ **ಋದುಶನಸ್ಪು**—ಸೂತ್ರದಿಂದ ಅನಙಾದೇಶ. **ಅಸ್-ತೃನ್ತೃಚ್** ಸೂತ್ರದಿಂದ ಉಪಧಾದೀರ್ಘ. **ಹಲ್ಙ್ಯಾದಿ** ಸೂತ್ರದಿಂದ ಸುಲೋಪ. **ನಲೋಪಃಪ್ರಾ**— ಸೂತ್ರದಿಂದ ನಲೋಪ.

॥ ಸಂಹಿತಾಪಾಠಃ ॥

ಅಸ್ಮೈ ಭೀಮಾಯ ನಮಸಾ ಸಮಧ್ವರ ಉಷಸೋ ನ ಶುಭ್ರ ಆ ಭರ
ಪನೀಯಸೇ ।
ಯಸ್ಯ ಧಾಮ ಶ್ರವಸೇ ನಾಮೇಂದ್ರಿಯಂ ಜ್ಯೋತಿರಕಾರಿ ಹರಿತೋ
ನಾಯಸೇ ॥ ೩ ॥

ಪದಪಾಠಃ

ಅಸ್ಮೈ । ಭೀಮಾಯ । ನಮಸಾ । ಸಂ । ಅಧ್ವರೇ । ಉಷಃ । ನ । ಶುಭ್ರೇ । ಆ ।
ಭರ । ಪನೀಯಸೇ ।
ಯಸ್ಯ । ಧಾಮ । ಶ್ರವಸೇ । ನಾಮ । ಇಂದ್ರಿಯಂ । ಜ್ಯೋತಿಃ । ಅಕಾರಿ ।
ಹರಿತಃ । ನ । ಅಯಸೇ ॥ ೩ ॥

॥ ಸಾಯಣಭಾಷ್ಯಂ ॥

ಹೇ ಉಷ ಉಷೋದೇವತೇ ಶುಭ್ರೇ ಶೋಭಸೇ ತ್ವಂ ಭೀಮಾಯ ತತ್ಕೃಷ್ಣಾಂ ಭಯಂಕರಾಯ ಪನೀಯಸೇಽತಿಶಯೇನ ಸ್ತೋತವ್ಯಾಯಾಸ್ಮಾ ಇಂದ್ರಾಯಾಧ್ವರೇ ಹಿಂಸಾರಹಿತೇಽಸ್ಮಿನ್ಯಾಗೇ । ನೇತಿ ಸಂಪ್ರತ್ಯರ್ಥೇ । ತಥಾ ಚ ಯಾಸ್ಕಃ । ಅಸ್ತು ತ್ರಿಪಮಾರ್ಥಸ್ಯ ಸಂಪ್ರತ್ಯರ್ಥೇ ಪ್ರಯೋಗ ಇಹೇವ ನಿಧೇಹಿ । ನಿ. ೭-೩೧ । ಇತಿ । ಸಂಪ್ರತೀದಾನೀಂ ನಮಸಾ ನಮೋ ಹವಿರ್ಲಕ್ಷಣಮನ್ನಂ ಸಮಾ ಭರ । ಸಮ್ಯಕ್ ಸಂಪಾದಯ । ಧಾಮ ಸರ್ವಸ್ಯ ಧಾರಕಂ ನಾಮ ಸ್ತೋತೃಷು ನಮನಶೀಲಂ ಪ್ರಸಿದ್ಧಂ ವೇಂದ್ರಿಯಮಿಂದ್ರಸ್ಯ ಪರಮೈಶ್ವರ್ಯಸ್ಯ ಲಿಂಗಂ ಯಸ್ಯೇಂದ್ರಸ್ಯೈವಂವಿಧಂ ಜ್ಯೋತಿಃ ಶ್ರವಸೇಽನ್ನಾಯ ಹವಿರ್ಲಕ್ಷಣಾನ್ನಲಾಭಾರ್ಥಮಯಸೇ ಇತಿಸ್ತೋ ಗಮನಾಯೋಕಾರಿ । ಕ್ರಿಯತೇ ಹರಿತೋ ನ । ಯಥಾಶ್ವಾನ್ಸಾದಿನಃ ಸ್ವಾಭಿಲಷಿತದೇಶಂ ಗಮಯಂತಿ ತದ್ವದಿಂದ್ರೋಽಪಿ ಸ್ವಾಭಿಮತಹವಿರ್ಲಾಭಾಯ ಸ್ವಕೀಯಂ ತೇಜೋ ಗಮಯತೀತಿ ಭಾವಃ ॥ ಉಷಃ । ಪಾದಾದಿತ್ವಾನ್ನಿಘಾತಾಭಾವಃ । ಶುಭ್ರೇ । ಶುಭ ದೀಪ್ತೌ । ಸ್ಫಾಯಿತಂಚೀತ್ಯಾದಿನಾ ರಕ್ । ಭರ । ಹ್ಯಗ್ರಹೋರ್ಭ ಇತಿ ಭಕ್ವಂ । ದ್ವ್ಯಚೋಽತಸ್ತಿಙ ಇತಿ ದೀರ್ಘಃ । ಪನೀಯಸೇ । ಪನತೇಃ ಸ್ತುತ್ಯರ್ಥಾದ್ಪಹುಲವಚನಾತ್ಕರ್ಮಣ್ಯಸುನ್ । ತಸ್ಮಾದಾತಿಶಾಯನಿಕ ಈಯಸುನಿ ಟೇರಿತಿ ಟಿಲೋಪಃ । ಅಕಾರಿ । ಭಂದಸಿ ಲುಙ್ಲಙ್ಲಿಟ ಇತಿ ವರ್ತಮಾನೇ ಕರ್ಮಣಿ ಲುಙ್ । ಯೆದ್ಭೃತ್ತ್ಯೋಗಾದನಿಘಾತಃ । ಅಡಾಗಮ ಉದಾತ್ತಃ । ಅಯಸೇ । ಅಯ ಗತಾವಿತ್ಯಸ್ಮಾದ್ಭಾವೇಽಸುನ್ ॥

॥ ಪ್ರತಿಪದಾರ್ಥ ॥

ಶುಭ್ರೇ—ಪಾವನಳಾದ । **ಉಷಃ**—ಎಲೈ ಉಷೋದೇವತೆಯೇ । **ಭೀಮಾಯೆ**—(ಶತ್ರುಗಳಿಗೆ) ಭಯಂಕರನಾಗಿಯೂ । **ಪನೀಯಸೇ**—ಅತ್ಯಂತ ಸ್ತೋತ್ರಾರ್ಹನಾಗಿಯೂ ಇರುವ । **ಅಸ್ಮೈ**—ಈ ಇಂದ್ರನಿಗೆ । **ಅಧ್ವರೇ**—ಹಿಂಸಾರಹಿತವಾದ ಈ ಯಾಗದಲ್ಲಿ । **ನ**—ಈಗ । **ನಮಸಾ**—ಹವಿಸ್ಸಿನರೂಪದ ಅನ್ನವನ್ನು । **ಸಮಾಭರ**—ಚೆನ್ನಾಗಿ ಸಂಪಾದಿಸು । **ಧಾಮ**—(ಸಕಲರಿಗೂ) ಆಧಾರವಾಗಿಯೂ । **ನಾಮ**—ಪ್ರಶಸ್ತವಾಗಿಯೂ । **ಇಂದ್ರಿಯಂ**—ಇಂದ್ರನ ಅಸಾಧಾರಣವಾದ ಲಕ್ಷಣಸೂಚಕವಾಗಿಯೂ ಇರುವ । **ಜ್ಯೋತಿಃ**—(ಇಂದ್ರನ) ತೇಜಸ್ಸು । **ಶ್ರವಸೇ**—ಹವಿಸ್ಸಿನರೂಪದ ಅನ್ನಕ್ಕಾಗಿ । **ಹರಿತೋ ನ**—(ಸಾರಥಿಯು)ಕುದುರೆಗಳನ್ನು ತನ್ನ ಇಷ್ಟಕ್ಕನುಸಾರವಾಗಿ ಹೊಡೆಯುವಂತೆ । **ಅಯಸೇ**—ನಾನಾ ಕಡೆಗಳ ಸಂಚಾರಕ್ಕೆ ಮನಸ್ಸುಮಾಡುವಂತೆ) । **ಅಕಾರಿ**—ಮಾಡಲ್ಪಡುತ್ತದೆ.

॥ ಭಾವಾರ್ಥ ॥

ಪಾವನಳಾದ ಎಲೈ ಉಷೋದೇವತೆಯೇ, ಶತ್ರುಗಳಿಗೆ ಭಯಂಕರನಾಗಿಯೂ, ಅತ್ಯಂತ ಸ್ತೋತ್ರಾರ್ಹನಾಗಿಯೂ ಇರುವ ಈ ಇಂದ್ರನಿಗೆ ಹಿಂಸಾರಹಿತನಾದ ಈ ಯಾಗದಲ್ಲಿ ಹವಿಸ್ಸಿನ ರೂಪದ ಅನ್ನವನ್ನು ಚೆನ್ನಾಗಿ ಸಂಪಾದಿಸು. ಸಕಲರಿಗೂ ಆಧಾರವಾಗಿಯೂ, ಪ್ರಶಸ್ತವಾಗಿಯೂ, ಇಂದ್ರನ ಅಸಾಧಾರಣವಾದ ಲಕ್ಷಣವನ್ನು ಸೂಚಿಸುವುದಾಗಿಯೂ ಇರುವ ಇಂದ್ರನ ತೇಜಸ್ಸು, ಸಾರಥಿಯು ಕುದುರೆಗಳನ್ನು ತನ್ನಿಷ್ಟಕ್ಕನುಸಾರವಾಗಿ ಹೊಡೆಯುವಂತೆ ಹವಿಸ್ಸಿನ ಸಂಚಯನಕ್ಕಾಗಿ ನಾನಾಕಡೆಗೆ ಸಂಚರಿಸುವಂತೆ ಮಾಡಲ್ಪಡುತ್ತದೆ.

English Translation.

Beautiful Ushas, now present the oblation in this rite to the formidable, praise-deserving Indra, whose all-sustaining, celebrated and characteristic radiance has impelled him hither and thither, (in quest) of (sacrificial) food, as a charioteer drives his horses (in various directions).

॥ ವಿಶೇಷ ವಿಷಯಗಳು ॥

ಉಷಃ—ಇದು ಉಷೋನಾಮಕವಾದ ದೇವತೆಯ ಹೆಸರು. ನಿರುಕ್ತದಲ್ಲಿ (ನಿ. ೨-೧೯) ಉಷೋದೇವತೆಗೆ ಹದಿನಾರು ನಾಮಾಂತರಗಳನ್ನು ಹೇಳಿರುವರು. **ರಾತ್ರೇರೇವ ಹ್ಯಪರಃ ಕಾಲಃ ಉಷ ಆಖ್ಯೋ ಭವತೀತಿ ರಾತ್ರಿನಾಮಭ್ಯ ಉತ್ತರಾಣಿ ಉಷೋನಾಮಾನಿ** ಎಂಬುದಾಗಿ ಉಷಶ್ಶಬ್ದನಿರ್ವಚನ ಮಾಡುತ್ತಾ, "ಇದಂ ಶ್ರೇಷ್ಠಂ ಜ್ಯೋತಿಷಾಂ ಜ್ಯೋತಿರಾಗಾಚ್ಚಿತ್ರಃ ಪ್ರಕೇತೋ ಅಜನಿಷ್ಟ ವಿಭ್ವಾ | ಯಥಾ ಪ್ರಸೂತಾ ಸವಿತುಸ್ಸವಾಯ ಏವಾ ರಾತ್ರ್ಯುಷಸೇ ಯೋನಿಮಾರೈಕ್" ಮಂತ್ರದಲ್ಲಿರುವ ಉಷಶ್ಶಬ್ದಾರ್ಥವನ್ನು ಸ್ಪಷ್ಟವಾಗಿ ವಿವರಿಸಿರುವರು. ಒಟ್ಟಿನಲ್ಲಿ ರಾತ್ರಿಯ ಅಪರಾರ್ಧದ ಕಾಲಕ್ಕೆ ಉಷಃಕಾಲವೆಂದೂ, ಆ ಕಾಲಾಭಿಮಾನದೇವತೆಯೇ ಉಷಸ್ಸೆಂದೂ ವಿವರಿಸಿರುತ್ತಾರೆ.

ಪನೀಯಸೇ—ಸ್ತುತ್ಯರ್ಥಕವಾದ ಪನ್ ಧಾತುವಿಗೆ ಅತಿಶಾಯನಿಕಾರ್ಥದಲ್ಲಿ ಪ್ರತ್ಯಯವು ಸೇರಿ ಅತಿಶಯವಾದ ಸ್ತುತಿಗೆ ಪಾತ್ರನಾದವನು ಎಂದರ್ಥವಾಗುವುದು.

ನ—ಇಲ್ಲಿನ ನಶಬ್ದಕ್ಕೆ ಸಂಪ್ರತಿ ಅಂದರೆ ಈಗ ಎಂದರ್ಥ. ನಿರುಕ್ತದಲ್ಲಿ (ನಿರು. ೬-೩೧) **ಅಸ್ತ್ಯಪಮಾರ್ಥಸ್ಯ ಸಂಪ್ರತ್ಯರ್ಥೇ ಪ್ರಯೋಗ ಇಹೇವ ನಿಧೇಹಿ** ಎಂದು ಹೇಳಿ ನಶಬ್ದಕ್ಕೆ ಇವಾರ್ಥಕತ್ವವನ್ನೂ, ಸಂಪ್ರತ್ಯರ್ಥಕತ್ವವನ್ನೂ ನಿರೂಪಣೆ ಮಾಡಿರುವರು.

ಇಂದ್ರಿಯಂ—**ಇಂದ್ರೈತ್ವಸ್ಯ ಪರಮೈಶ್ವರ್ಯಸ್ಯ ಲಿಂಗಂ ಯಸ್ಯ ಇಂದ್ರಸ್ಯ ಏವಂವಿಧಂ** | ಇದು ಇಂದ್ರನ ತೇಜಸ್ಸು ಎಂಬರ್ಥವನ್ನು ಸೂಚಿಸುವುದು. ಇಂದ್ರನಲ್ಲಿರುವ ಪರಮೈಶ್ವರ್ಯಸೂಚಕವಾದ ಅಂಶವನ್ನು ತೋರ್ಪಡಿಸುವ ತೇಜಸ್ಸೇ ಇದು. ಹವಿರ್ಲಕ್ಷಣವಿಶಿಷ್ಟವಾದ ಯಜ್ಞಭಾಗವನ್ನು ಇಂದ್ರನು ತನ್ನ ತೇಜಸ್ಸಿನ ಮೂಲಕ ಸ್ವೀಕರಿಸುತ್ತಾನೆ.

ಹರಿತೋ ನ—ಇಲ್ಲಿ **ಕುದುರೆಗಳಂತೆ** ಎಂದರ್ಥವು. ಸವಾರರು ತಮಗೆ ಇಷ್ಟಬಂದಕಡೆಗೆ ತಮ್ಮ ಕುದುರೆಗಳನ್ನು ನಡೆಸಿಕೊಂಡು ಹೋಗುವಂತೆ, ಇಂದ್ರನು ಹವಿರ್ಭಾಗವನ್ನು ಸ್ವೀಕರಿಸುವುದಕ್ಕಾಗಿ ತನ್ನ ತೇಜಸ್ಸನ್ನು ಅಲ್ಲಿಗೆ ಕಳುಹಿಸುವನು.

॥ ವ್ಯಾಕರಣಪ್ರಕ್ರಿಯಾ ॥

ಅಸ್ಮೈ—ಇದಮ್ ಶಬ್ದ ಚತುರ್ಥೀ ಏಕವಚನಾಂತರೂಪ. **ಊಡಿದಂಪದಾದಿ**—(ಪಾ. ಸೂ. ೪-೧-೧೭೧) ಎಂಬುದರಿಂದ ವಿಭಕ್ತಿಗೆ ಉದಾತ್ತಸ್ವರ ಬರುತ್ತದೆ.

ಉಷಃ—ಸಂಬುದ್ಧ್ಯಂತರೂಪ ಪದಾದಿಯಲ್ಲಿರುವುದರಿಂದ ನಿಘಾತಸ್ವರ ಬರುವುದಿಲ್ಲ. **ಆಮಂತ್ರಿತಸ್ಯ** (ಪಾ. ಸೂ. ೬-೧-೧೯೮) ಎಂಬುದರಿಂದ ಅದ್ಯುದಾತ್ತಸ್ವರ ಬರುತ್ತದೆ.

ಶುಭ್ರೇ—ಶುಭ ದೀಪ್ತೌ ಧಾತು. **ಸ್ಫಾಯಿತಂಚಿವಂಚಿಶಕಿ**—(ಉ. ಸೂ. ೨-೧೭೦) ಎಂಬುದರಿಂದ ರಕ್ ಪ್ರತ್ಯಯ. ಕಿತ್ವಾದುದರಿಂದ ಲಘೂಪಧಗುಣ ಬರುವುದಿಲ್ಲ. ಶುಭ್ರ ಶಬ್ದವಾಗುತ್ತದೆ. ಪ್ರೀತ್ವದಲ್ಲಿ ಟಾಪ್ ಸಂಬುಧ್ಯಂತರೂಪ. **ಅಮಂತ್ರಿತಸ್ಯಚ** (ಪಾ. ಸೂ. ೮-೧-೧೯) ಎಂಬುದರಿಂದ ನಿಘಾತಸ್ವರ ಬರುತ್ತದೆ.

ಭರ—ಹೃಞ್ ಹರಣೇ ಧಾತು. ಲೋಟ್ ಮಧ್ಯಮಪುರುಷೈಕವಚನದಲ್ಲಿ ಸಿಪಿಗೆ ಹಿ ಆದೇಶ. ಶಪ್ ವಿಕರಣ. **ಅತೋಹೇಃ** ಸೂತ್ರದಿಂದ ಹಿಗೆ ಲುಕ್. ಶಪ್ ನಿಮಿತ್ತವಾಗ ಧಾತುವಿಗೆ ಗುಣ. **ಹೃಗ್ರ-ಹೋರ್ಭಶ್ಛಂದಸಿ** ಎಂಬುದರಿಂದ ಹಕಾರಕ್ಕೆ ಭಕಾರಾದೇಶ. ಅತಿಙಂತದಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ. **ದ್ವ್ಯಚೋತಸ್ತಿಙಃ** (ಪಾ. ಸೂ. ೬-೩-೧೩೫) ಎಂದುದರಿಂದ ಇದು ದ್ವ್ಯಚ್ಕವಾಗಿರುವುದರಿಂದ ಸಂಹಿತಾದಲ್ಲಿ ದೀರ್ಘ ಬರುತ್ತದೆ.

ಪನೀಯಸೇ—ಪನ ವ್ಯವಹಾರೇ ಸ್ತುತೌ ಚ ಧಾತು. ಇಲ್ಲಿ ಸ್ತುತ್ಯರ್ಥದಲ್ಲಿ ಪ್ರಯುಕ್ತವಾಗಿದೆ. ಉಣಾದಿಯಲ್ಲಿ ಒಹುಲವಚನವಿರುವುದರಿಂದ ಕರ್ಮಣಿಯೆಲ್ಲಿ ಸರ್ವಧಾತುನಿಬಂಧನವಾದ ಅಸುನ್ ಪ್ರತ್ಯಯ ಬರುತ್ತದೆ. ಪನಸ್ ಶಬ್ದವಾಗುತ್ತದೆ. ಅತಿಶಯೇನ ಪನಃ ಎಂದು ಅರ್ಥ ವಿವಕ್ಷಾಮಾಡಿದಾಗ **ದ್ವಿವಚನ-ವಿಭಜ್ಯೋಪ**—ಸೂತ್ರದಿಂದ ಅತಿಶಾಯನಿಕವಾದ ಈಯಸುನ್ ಪ್ರತ್ಯಯ. ಈಯಸುನ್ ಪರವಾದಾಗ **ಟೇಃ** ಎಂಬುದರಿಂದ ಪನಸ್ ಪ್ರಕೃತಿಯ ಟಿಗೆ (ಅಸ್) ಲೋಪ. ಪನೀಯಸ್ ಶಬ್ದವಾಗುತ್ತದೆ. ನಿತ್ವಾದುದರಿಂದ ಆದ್ಯುದಾತ್ತವಾಗುತ್ತದೆ. ಚತುರ್ಥೀ ಏಕವಚನಾಂತರೂಪ.

ಇಂದ್ರಿಯಮ್—ಇಂದ್ರಿಯಮಿಂದ್ರಲಿಂಗ (ಪಾ. ಸೂ. ೫-೨-೯೩) ಎಂಬುದರಿಂದ ಇಂದ್ರ ಶಬ್ದಕ್ಕೆ ಘಚ್ ಪ್ರತ್ಯಯವು ನಿಪಾತಿತವಾಗಿದೆ. ಚಿತ್ವಾದುದರಿಂದ ಅಂತೋದಾತ್ತವಾಗುತ್ತದೆ.

ಅಕಾರಿ—ಡುಕೃಞ್ ಕರಣೇ ಧಾತು. **ಛಂದಸಿಲುಙ್ಲಙ್ಲಿಟಃ** ಎಂಬುದರಿಂದ ವರ್ತಮಾನಾರ್ಥದಲ್ಲಿ ಕರ್ಮಣಿಯಲ್ಲಿ ಲುಙ್. ಪ್ರಥಮಪುರುಷ ಏಕವಚನದಲ್ಲಿ ತಶಬ್ದ ಪ್ರತ್ಯಯ. **ಚಿಣ್ಭಾವಕರ್ಮಣೋಃ** (ಪಾ. ಸೂ ೩-೧-೬೬) ಎಂಬುದರಿಂದ ಲುಙಿನಲ್ಲಿ ಪ್ರಾಪ್ತವಾದ ಚ್ಲಿಗೆ ಚಿಣಾದೇಶ. **ಚಿಣೋಲುಕ್** ಎಂಬುದರಿಂದ ಚಿಣಿನ ಒರದಲ್ಲಿರುವ ತ ಶಬ್ದಕ್ಕೆ ಲುಕ್. ನಿತ್ವಾದುದರಿಂದ ಚಿಣ್ ಪರವಾದಾಗ ಧಾತುವಿಗೆ ವೃದ್ಧಿ. ಲುಙ್ ನಿಮಿತ್ತವಾಗಿ ಅಡಾಗಮ. ಅಕಾರಿ ಎಂದು ರೂಪವಾಗುತ್ತದೆ. ಮುಖ್ಯ ಎಂದು ಹಿಂದೆ ಸಂಬಂಧವಿರುವುದರಿಂದ **ಯೆದ್ಧೃತ್ವಾನ್ನಿತ್ಯಂ** ಎಂಬುದರಿಂದ ನಿಘಾತಸ್ವರ ಪ್ರತಿಷೇಧ ಬರುತ್ತದೆ ಅಡಾಗಮ. ಉದಾತ್ತವೆಂಬುದರಿಂದ ಆದ್ಯುದಾತ್ತವಾದ ಪದವಾಗುತ್ತದೆ

ಅಯಸೇ—ಅಯ ಗತೌ ಧಾತು. ಭಾವಾರ್ಥದಲ್ಲಿ **ಸರ್ವಧಾತುಭ್ಯೋಽಸುನ್** ಎಂಬುದರಿಂದ ಅಸುನ್ ಪ್ರತ್ಯಯ ಅಯಸ್ ಶಬ್ದವಾಗುತ್ತದೆ. ಪ್ರತ್ಯಯ ನಿತ್ವಾದುದರಿಂದ ಆದ್ಯುದಾತ್ತವಾಗುತ್ತದೆ. ಚತುರ್ಥೀ ಏಕವಚನಾಂತರೂಪ.

॥ ಸಂಹಿತಾಪಾಠಃ ॥

ಇಮೇ ತ ಇಂದ್ರ ತೇ ವಯಂ ಪುರುಷ್ಟುತ ಯೇ ತ್ವಾರಭ್ಯ ಚರಾಮಸಿ
ಪ್ರಭೂವಸೋ ।
ನಹಿ ತ್ವದನ್ಯೋ ಗಿರ್ವಣೋ ಗಿರಃ ಸಘತ್ಕ್ರುಣೋರಿವ ಪ್ರತಿ ನೋ ಹರ್ಯ ತದ್ವಚಃ ॥ ೪ ॥

। ಪದಪಾಠಃ ।

ಇಮೇ । ತೇ । ಇಂದ್ರ । ತೇ । ವಯಂ । ಪುರುಷ್ಟುತ । ಯೇ । ತ್ವಾ । ಆರಭ್ಯ ।
ಚರಾಮಸಿ । ಪ್ರಭುವಸೋ ಇತಿ ಪ್ರಭುಃವಸೋ ।
ನಹಿ । ತ್ವತ್ । ಅನ್ಯಃ । ಗಿರ್ವಣಃ । ಗಿರಃ । ಸಘತ್ । ಕ್ಷೋಣೀಃಇವ
ಪ್ರತಿ । ನಃ । ಹರ್ಯ । ತತ್ । ವಚಃ ॥ ೪ ॥

॥ ಸಾಯಣಭಾಷ್ಯ ॥

ಹೇ ಇಂದ್ರ ಪ್ರಭೂವಸೋ ಪ್ರಭೂತಧನ ಅತ ಏವ ಪುರುಷ್ಟುತ ಪುರುಭಿರ್ಬಹುಭಿರ್ಯಜಮಾನೈಃ ಸ್ತುತ ಯೇ ಚ ವಯಂ ತ್ವಾ ತ್ವಾಮಾರಭ್ಯಾಶ್ರಯತಯಾವಲಂಬ್ಯ ಚರಾಮಸಿ ಚರಾಮೋ ಯಾಗೇ ವರ್ತಾಮಹೇ ತ ಇಮೇ ವಯಂ ತೇ ತವ ಸ್ವಭೂತಾಃ । ಹೇ ಗಿರ್ವಣೋ ಗೀರ್ಭಿರ್ವನನೀಯೇಂದ್ರ ತ್ವದನ್ಯಸ್ತ್ವತ್ತೋಽನ್ಯಃ ಕಶ್ಚಿದಪಿ ಗಿರಃ ಸ್ತುತೀರ್ನಹಿ ಸಘತ್ । ನ ಹಿ ಪ್ರಾಪ್ನೋತಿ । ಅತಸ್ತ್ವಂ ನೋಽಸ್ಮಾಕಂ ತತ್ಸ್ತುತಿಲಕ್ಷಣಂ ವಚಃ ಪ್ರತಿ ಹರ್ಯ । ಕಾಮಯಸ್ವ । ಕ್ಷೋಣೀರಿವ । ಯಥಾ ಕ್ಷೋಣೀ ಪೃಥಿವೀ ಸ್ವಕೀಯಾನಿ ಭೂತಜಾತಾನಿ ಕಾಮಯತೇ ॥ ಚರಾಮಸಿ । ಇದಂತೋ ಮಸಿಃ। ತಪಃ ಪಿತ್ವಾದನುದಾತ್ತತ್ವೇ ಧಾತುಸ್ವರಃ । ಯದ್ವೃತ್ತಯೋಗಾದನಿಘಾತಃ । ಸಘತ್ । ಷಘ ಹಿಂಸಾಯಾಂ । ಅತ್ರ ಪ್ರಾಪ್ತ್ಯರ್ಥೋ ಧಾತೂನಾಮನೇಕಾರ್ಥತ್ವಾತ್ । ಲೇಟ್ಯಡಾಗಮಃ । ಬಹುಲಂ ಛಂದಸೀತಿ ವಿಕರಣಸ್ಯ ಲುಕ್ । ಸಾದಾದಿತ್ವಾನ್ನಿಘಾತಾಭಾವಃ । ಕ್ಷೋಣೀರಿವ । ಹಲ್ಙ್ಯಬ್ಭ್ಯ ಇತಿ ಸುಲೋಪಾಭಾವಶ್ಛಾಂದಸಃ ॥

॥ ಪ್ರತಿಪದಾರ್ಥ ॥

ಪ್ರಭೂವಸೋ—ಸಮೃದ್ಧವಾದ ಧನವುಳ್ಳವನೂ । ಪುರುಷ್ಟುತ—(ಅದ್ದರಿಂದಲೇ) ಬಹು ಜನರಿಂದ ಸ್ತುತಿಸಲ್ಪಡುವವನೂ ಆದ । ಇಂದ್ರ—ಎಲೈ ಇಂದ್ರನೇ । ಯೇ—ಯಾವ ನಾವು । ತ್ವಾ—ನಿನ್ನನ್ನು । ಆರಭ್ಯ—ಆಶ್ರಯಿಸಿ । ಚರಾಮಸಿ—ಯಾಗದಲ್ಲಿ (ನಿನ್ನ ಸಮೀಪದಲ್ಲಿ)ರುತ್ತೇವೆಯೋ । ತೇ ಇಮೇ ವಯಂ—ಆ ನಾವು । ತೇ—ನಿನ್ನವರೇ ಆಗಿದ್ದೇವೆ । ಗಿರ್ವಣಃ—ಸ್ತುತಿಪ್ರೀತನಾದ ಇಂದ್ರನೇ । ತ್ವದನ್ಯಃ—ನಿನಗಿಂತ ಬೇರೆ ಯಾರೂ । ಗಿರಃ—ಸ್ತುತಿಗಳನ್ನು । ನಹಿ ಸಘತ್—ಹೊಂದುವುದಿಲ್ಲ (ಅದ್ದರಿಂದ) । ನಃ—ನಮ್ಮ । ತತ್—ಆ ಸ್ತುತಿರೂಪವಾದ । ವಚಃ—ವಾಕ್ಯಗಳನ್ನು । ಕ್ಷೋಣೀರಿವ—ಪೃಥಿವಿಯು (ತನ್ನಲ್ಲಿ ಉತ್ಪನ್ನವಾದ ಭೂತಗಳನ್ನು) ಪ್ರೀತಿಸುವಂತೆ (ಪೋಷಿಸುವಂತೆ) । ಪ್ರತಿ ಹರ್ಯ—ಪ್ರೀತಿಸು.

॥ ಭಾವಾರ್ಥ ॥

ಎಲೈ ಇಂದ್ರನೇ, ನೀನು ಸಮೃದ್ಧವಾದ ಧನವುಳ್ಳವನು. ಮತ್ತು ಬಹುಜನರಿಂದ ಸ್ತುತಿಸಲ್ಪಡುವವನು. ನಾವು ನಿನ್ನನ್ನೇ ಆಶ್ರಯಿಸಿ ಯಾಗದಲ್ಲಿ ನಿನ್ನ ಸಮೀಪದಲ್ಲೇ ಇರುವುದರಿಂದ ನಿನ್ನವರೇ ಆಗಿದ್ದೇವೆ. ನೀನು ಸ್ತುತಿಪ್ರೀತನಾದುದರಿಂದ ನಿನ್ನನ್ನು ಬಿಟ್ಟು ಇತರರಿಗೂ ನಮ್ಮ ಸ್ತುತಿಗಳು ಹೋಗುವುದಿಲ್ಲ. ಪೃಥಿವಿಯು ತನ್ನಲ್ಲಿ ಉತ್ಪನ್ನವಾದ ಸಕಲ ಭೂತಗಳನ್ನೂ ಪೋಷಿಸುವಂತೆ ನೀನೂ ನಮ್ಮ ಆ ಸ್ತುತಿರೂಪಗಳಾದ ವಾಕ್ಯಗಳನ್ನು ಪ್ರೀತಿಸಿ ಬೆಳಸು.

English Translation.

Much-praised and most opulent Indra, we are those, who relying on your favour, approach you ; accepter of praise, no other than you receives our commendations ; be pleased (with our address) as the earth (cherishes her creatures).

॥ ವಿಶೇಷವಿಷಯಗಳು ॥

ಪ್ರಭೂವಸೋ—ಪ್ರಭೂತಂ ವಸು ಯಸ್ಯ ಎಂಬ ವ್ಯುತ್ಪತ್ತಿಯಂತೆ ವಿಶೇಷವಾದ ಐಶ್ವರ್ಯವುಳ್ಳವನು. ಅಥವಾ ತನ್ನ ಐಶ್ವರ್ಯವನ್ನು ಸರ್ವದಾ ಹೆಚ್ಚಿಸಿಕೊಳ್ಳುವವನು ಎಂಬರ್ಥವು ಈ ಪದದಿಂದ ವ್ಯಕ್ತವಾಗಿದೆ.

ಪುರುಷ್ಟುತ—ಪುರುಭಿಃ ಬಹುಭಿಃ ಯಜಮಾನೈಃ ಸ್ತುತ—ಯಾಗದಲ್ಲಿ ದೀಕ್ಷೆವಹಿಸಿರುವ ಸಮುಸ್ತ ಯಜಮಾನರಿಂದಲೂ ಸ್ತುತಿಸಲ್ಪಡುವವನು

ಗಿರ್ವಣಃ—ಗೀರ್ಭಿಃ ವನನೀಯಃ—ಸ್ತುತಿವಚನಗಳಿಂದ ಸರ್ವದಾ ಸ್ತುತಿಸಲ್ಪಡುವವನು.

ನಹಿ ಸಘತ್—ನಹಿ ಪ್ರಾಪ್ನೋತಿ—ಸಘೆ ಹಿಂಸಾಯಾಂ ಎಂಬ ಹಿಂಸಾರ್ಥಕಧಾತುವಿನಿಂದ ನಿಷ್ಪನ್ನವಾದ ಈ ಶಬ್ದವು ಹಿಂಸಿಸುವುದಿಲ್ಲ ಎಂದರ್ಥವನ್ನು ಕೊಡಬೇಕಾಗಿದ್ದರೂ, **ಧಾತೋರನೇಕಾರ್ಥತ್ವಾತ್** ಎಂಬ ವಾಕ್ಯದಂತೆ ಇಲ್ಲಿ ಹೊಂದುವುದಿಲ್ಲ ಎಂಬರ್ಥವನ್ನು ಸೂಚಿಸಿದ್ದಾರೆ.

ಪ್ರತಿ ನೋ ಹರ್ಯ ತದ್ವಚಃ—ನಾವು ಹೇಳುವ ಸ್ತುತಿಯಲ್ಲಿ ನೀನು ವಿಶೇಷವಾದ ಪ್ರೀತಿಯನ್ನಿಡು. ಇದಕ್ಕೆ ದೃಷ್ಟಾಂತವಾಗಿ, ಭೂಮಿಯು ತನ್ನಲ್ಲಿರುವ ಸಮಸ್ತ ಪ್ರಾಣಿಗಳನ್ನು ಹೇಗೆ ಪ್ರೀತಿಸಿ ಪೋಷಿಸುವುದೋ ಹಾಗೆ ನೀನು ನಮ್ಮ ಸ್ತುತಿವಚನಗಳನ್ನು ಆದರದಿಂದ ಕೇಳಿ ನಮ್ಮನ್ನು ಸಂರಕ್ಷಿಸು ಎಂದಭಿಪ್ರಾಯವು.

॥ ವ್ಯಾಕರಣಪ್ರಕ್ರಿಯಾ ॥

ಪುರುಷ್ಟುತ—ಪುರುಭಿಃ ಬಹುಭಿಃ ಸ್ತುತಃ ಪುರುಷ್ಟುತಃ । ಷ್ಟುಞ್ ಸ್ತುತೌ ಧಾತು ಅದಾದಿ. ಕರ್ಮಣಿಯಲ್ಲಿ ಕ್ತ ಪ್ರತ್ಯಯ. ಸಂಬುದ್ಧ್ಯಂತರೂಪ **ಆಮಂತ್ರಿತಸ್ಯ ಚ** (ಪಾ. ಸೂ. ೮-೧-೧೯) ಎಂಬುದರಿಂದ ನಿಘಾತ ಸ್ವರ ಬರುತ್ತದೆ.

ಅರಭ್ಯ—ರಭ ರಾಭಸ್ಯೇ ಧಾತು ಭ್ವಾದಿ. ಇದು ಸಾಮಾನ್ಯವಾಗಿ **ಅಞ್** ಪೂರ್ವವಾಗಿಯೇ ಇರುತ್ತದೆ. **ಸಮಾಸೇ ನಞ್‌ಪೂರ್ವೇ**—ಸೂತ್ರದಿಂದ **ಕ್ತ್ವಾ**ಪ್ರತ್ಯಯಕ್ಕೆ ಲ್ಯಬಾದೇಶ. ಪಿತ್ತಾದುದರಿಂದ ಅನುದಾತ್ತವಾಗುತ್ತದೆ.

ಚೆರಾಮಸಿ—ಚರ ಗತಿಭಕ್ಷಣಯೋಃ ಧಾತು. ಲಟ್ ಉತ್ತಮಪುರುಷ ಬಹುವಚನದಲ್ಲಿ ಮಸ್ ಪ್ರತ್ಯಯ. **ಕರ್ತರಿಶಪ್** ಸೂತ್ರದಿಂದ ಶಪ್ ವಿಕರಣ. **ಅತೋದೀರ್ಘೋ ಯಞಿ** ಎಂಬುದರಿಂದ ವಿಕರಣವಿಶಿಷ್ಟಾಂಗಕ್ಕೆ ದೀರ್ಘ. **ಇದಂತೋ ಮಸಿಃ** (ಪಾ. ಸೂ. ೭-೧-೪೬) ಎಂಬುದರಿಂದ ಪ್ರತ್ಯಯಕ್ಕೆ ಇಕಾಗಮ. ಯೇ ಎಂದು ಹಿಂದೆ ಯಚ್ಶಬ್ದವಿರುವುದರಿಂದ ನಿಘಾತಸ್ವರ ಪ್ರತಿಷೇಧ ಬರುತ್ತದೆ. ಶಪ್ ಪಿತ್ತಾದುದರಿಂದ ಅನುದಾತ್ತ. ಅನುದಾತ್ತೋಪದೇಶದಪರದಲ್ಲಿರುವುದರಿಂದ ಲಸಾರ್ವಧಾತುಕವು (ಮಸಿ) ಅನುದಾತ್ತ. ಆಗ ಧಾತುಸ್ವರ ಉಳಿಯುತ್ತದೆ.

ಸಘತ್—ಷಘೆ ಹಿಂಸಾಯಾಂ ಧಾತು. ಧಾತುಗಳಿಗೆ ಅನೇಕಾರ್ಥವಿರುವುದರಿಂದ ಇಲ್ಲಿ ಇದು ಪ್ರಾಪ್ತ್ಯರ್ಥದಲ್ಲಿ ಪ್ರಯುಕ್ತವಾಗಿದೆ. **ಧಾತ್ವಾದೇಃ ಷಃ ಸಃ** ಎಂಬುದರಿಂದ ಆದಿ ಷಕಾರಕ್ಕೆ ಸಕಾರಾದೇಶ. ಲೇಟ್ ಪ್ರಥಮಪುರುಷ ಏಕವಚನದಲ್ಲಿ **ತಿಪ್**. **ಇತಶ್ಚ ಲೋಪಃ ಪರಸ್ಮೈಪದೇಷು** ಎಂಬುದರಿಂದ ಅದರ ಇಕಾರಕ್ಕೆ ಲೋಪ. **ಲೇಟೋಡಾಟೌ** (ಪಾ. ಸೂ. ೩-೪-೯೪) ಎಂಬುದರಿಂದ ಅದಕ್ಕೆ ಅಡಾಗಮ. **ಬಹುಲಂ ಛಂದಸಿ** ಎಂಬುದರಿಂದ ವಿಕರಣಕ್ಕೆ ಲುಕ್. ಪದಾದಿಯಲ್ಲಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಪ್ರತ್ಯಯ ಪಿತ್ತಾದುದರಿಂದ ಅನುದಾತ್ತ. ಧಾತುಸ್ವರದಿಂದ ಆದ್ಯುದಾತ್ತವಾಗುತ್ತದೆ.

ಕ್ಷೋಣೀರಿವ—ಕ್ಷೋಣೀ ಶಬ್ದವು ಙ್ಯಂತವಾದುದರಿಂದ ನಿತ್ಯಸ್ತ್ರೀಲಿಂಗ. ಇದಕ್ಕೆ ಸು ಪರವಾದಾಗ **ಹಲ್‌ಙ್ಯಾಭ್ಭ್ಯೋ** ಸೂತ್ರದಿಂದ ಸುವಿಗೆ ಲೋಪ ಪ್ರಾಪ್ತವಾಗುತ್ತದೆ. ಆದರೆ ಇಲ್ಲಿ ಛಾಂದಸವಾಗಿ ಲೋಪ ಬರುವುದಿಲ್ಲ. **ಸಸಜುಷೋರುಃ** ಎಂಬುದರಿಂದ ಅದಕ್ಕೆ ರುತ್ವ.

ಹರ್ಯೆ—ಹರ್ಯ ಗತಿಕಾಂತ್ಯೋಃ ಧಾತು. ಕಾಂತಿ ಎಂದರೆ ಇಚ್ಛಾ. ಲೋಟ್ ಮಧ್ಯಮಪುರುಷ ಏಕವಚನದಲ್ಲಿ ಸಿಪ್. ಅದಕ್ಕೆ ಹಿ ಆದೇಶ. ವಿಕರಣ ಬಂದಾಗ ಅಕಾರದ ಪರದಲ್ಲಿರುವುದರಿಂದ **ಅತೋ ಹೇಃ** ಎಂಬುದರಿಂದ ಅದಕ್ಕೆ ಲುಕ್. ಅತಿಙಂತದ ಪರದಲ್ಲಿರುವುದರಿಂದ **ತಿಙ್ಶಿತಿಙಃ** ಎಂಬುದರಿಂದ ನಿಘಾತಸ್ವರ ಬರುತ್ತದೆ.

॥ ಸಂಹಿತಾಪಾಠಃ ॥

ಭೂರಿ॑ ತ ಇಂದ್ರ॒ ವೀರ್ಯಂ॑ ಗ॒ತವ॑ ಸ್ಮಸ್ಮಸ್ಯ॑ ಸ್ತೋ॒ತುರ್ಮ॑ಘವನ್ಯಾ॒ವ್ಯ॒-
ಮಾ ಪ॑ಣ ।
ಅನು॑ ತೇ॒ ದ್ಯೌರ್ಬೃ॑ಹ॒ತೀ ವೀರ್ಯಂ॑ ಮ॒ಮ ಇ॒ಯಂ ಚ॑ ತೇ ಪೃಥಿ॒ವೀ
ನೇ॑ಮ॒ ಓಜ॑ಸೇ ॥ ೫ ॥

। ಪದಪಾಠಃ ।

ಭೂರಿ । ತೇ । ಇಂದ್ರ । ವೀರ್ಯಂ । ತವ । ಸ್ಮಸಿ । ಅಸ್ಯ । ಸ್ತೋತುಃ । ಮಘವನ್ । ಕಾಮಂ । ಆ । ಪೃಣ ।

ಅನು । ತೇ । ದ್ಯೌಃ । ಬೃಹತೀ । ವೀರ್ಯಂ । ಮಮೇ । ಇಯಂ । ಚ । ತೇ । ಪೃಥಿವೀ । ನೇಮೇ । ಓಜಸೇ ॥ ೫ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ತೇ ತವ ವೀರ್ಯಂ ಸಾಮರ್ಥ್ಯಂ ಭೂರಿ ಬಹು । ನ ಕೇನಾಪ್ಯವಚ್ಛೇತ್ತುಂ ಶಕ್ಯತೇ । ತಾದೃಶಸ್ಯ ತವ ವಯಂ ಸ್ಮಸಿ । ಸ್ವಭೂತಾ ಭವಾಮಃ । ಹೇ ಮಘವನ್ನಸ್ಯ ಸ್ತೋತುಃ ತ್ವಾಂ ಸ್ತುವತೋ ಯಜಮಾನಸ್ಯ ಕಾಮಮಭಿಲಾಷಮಾ ಪೃಣ । ಆಪೂರಯ । ಬೃಹತೀ ದ್ಯೌರ್ಮಹಾನ್ ದ್ಯುಲೋಕೋಽಪಿ ತೇ ತವ ವೀರ್ಯಮನು ಮಮೇ । ಅನ್ವಮಂಸ್ತ । ಇಂದ್ರೇಣ ಸಹಾವಸ್ಥಾನಾದಿಯಂ ಚೇಯಮಪಿ ಪೃಥಿವೀ ತೇ ತವೌಜಸೇ ಬಲಾಯ ನೇಮೇ । ಪ್ರಹ್ವೀಬಭೂವ । ತ್ವದ್ಬಲಾದ್ಭೀತಾ ಸತ್ಯಥ ಏವ ವರ್ತತ ಇತಿ ಭಾವಃ ॥ ಸ್ಮಸಿ । ಅಸ ಭುವಿ । ಲಟಿ ಶ್ನಸೋರಲ್ಲೋಪ ಇತ್ಯಕಾರಲೋಪಃ । ಇದಂತೋ ಮಸಿಃ । ಪೃಣ । ಪೃಣ ಪ್ರೀಣನೇ । ಅತ್ರ ಪ್ರೀತಿಹೇತುತಯಾ ಪೂರಣಂ ಲಕ್ಷ್ಯತೇ । ತುದಾದಿತ್ವಾಚ್ಛಪ್ರತ್ಯಯಃ । ತಸ್ಯ ಜಿತ್ತ್ವಾದ್ಗುಣಾಭಾವಃ । ಮನೇ । ಮಾಙ್ ಮಾನೇ ಶಬ್ದೇ ಚ । ಜಿತ್ತ್ವಾದಾತ್ಮನೇಪದಂ । ಲಿಟ್ಯಾತೋ ಲೋಪ ಇಟಿ ಚೇತ್ಯಾಕಾರಲೋಪಃ । ನೇಮೇ । ಣಮು ಪ್ರಹ್ವತ್ವೇ । ಲಿಟ್ಯತ ಏಕಹಲ್ಮಧ್ಯ ಇತ್ಯೇತ್ತ್ವಾಭ್ಯಾಸಲೋಪೌ । ತಿಙ್ಙತಿಙ ಇತಿ ನಿಘಾತಃ ॥

॥ ಪ್ರತಿಪದಾರ್ಥ ॥

ಇಂದ್ರ—ಎಲೈ ಇಂದ್ರನೇ । ತೇ—ನಿನ್ನ । ವೀರ್ಯಂ—ಪರಾಕ್ರಮವು । ಭೂರಿ—ಅಧಿಕವಾದುದು । ತವ—(ಅಂತಹ) ನಿನ್ನ (ಸಂಬಂಧಿಗಳಾಗಿ) । ಸ್ಮಸಿ—(ನಾವು) ಇದ್ದೇವೆ । ಮಘವನ್—ಎಲೈ ಇಂದ್ರನೇ । ಅಸ್ಯ ಸ್ತೋತುಃ—ನಿನ್ನನ್ನು ಸ್ತೋತ್ರಮಾಡತಕ್ಕ ಈ ಯಜಮಾನನ । ಕಾಮಂ—ಅಭಿಲಾಷೆಯನ್ನು । ಆ ಪೃಣ—ಪೂರೈಸು । ಬೃಹತೀ—ಮಹತ್ತಾದ । ದ್ಯೌಃ—ದ್ಯುಲೋಕವು । ತೇ—ನಿನ್ನ । ವೀರ್ಯಂ—ಪರಾಕ್ರಮವನ್ನು । ಅನು ಮಮೇ—ಅಂಗೀಕರಿಸಿದೆ । ಇಯಂ ಚ ಪೃಥಿವೀ—ಈ ಪೃಥ್ವಿಯೂ ಸಹ । ತೇ—ನಿನ್ನ । ಓಜಸೇ—ಶಕ್ತಿಗೆ (ಶಕ್ತಿಯ ಮುಂದೆ) । ನೇಮೇ—(ನಮ್ರಳಾಗಿ) ಬಗ್ಗಿದೆ.

॥ ಭಾವಾರ್ಥ ॥

ಎಲೈ ಇಂದ್ರನೇ, ನಿನ್ನ ಪರಾಕ್ರಮವು ಅತ್ಯಧಿಕವಾದುದು. ನಾವು ಅಂತಹ ನಿನ್ನ ಸಂಬಂಧಿಗಳಾಗಿ ನಿನ್ನವರೇ ಆಗಿದ್ದೇವೆ. ಎಲೈ ಇಂದ್ರನೇ, ನಿನ್ನನ್ನು ಸ್ತುತಿಸತಕ್ಕ ಈ ಯಜಮಾನನ ಅಭಿಲಾಷೆಯನ್ನು ಪೂರೈಸು. ಮಹತ್ತಾದ ದ್ಯುಲೋಕವು ನಿನ್ನ ಪರಾಕ್ರಮವನ್ನು ಅಂಗೀಕರಿಸಿದೆ. ಈ ಪೃಥ್ವಿಯೂ ಸಹ ನಿನ್ನ ಶಕ್ತಿಯ ಮುಂದೆ ನಮ್ರವಾಗಿ ಬಗ್ಗಿದೆ.

English Translation.

Indra, great is your prowess; we are yours; satisfy, Maghavan, the desires of this your worshipper; the vast heaven has acknowledged your might; this earth has been bowed down through your vigour.

॥ ವಿಶೇಷ ವಿಷಯಗಳು ॥

ಸ್ಮಸಿ—**ಸ್ವಭೂತಾ ಭವಾಮಃ** । ಇದು ಅಸ ಭುವಿ ಎಂಬ ಧಾತ್ವರ್ಥದಿಂದ ಅಕಾರಲೋಪವಾಗಿ ನಿಷ್ಪನ್ನವಾಗಿದೆ. ನಿನ್ನವರಾಗಿ ಆಗುವೆವು ಎಂದು ಇದರ ಅರ್ಥ.

ಆ ಪೃಣ—**ಆಪೂರಯ**—**ಪೃಣ-ಪ್ರೀಣನೇ** ಎಂಬ ಧಾತುವಿನಿಂದ ಉಂಟಾದ ಈ ಶಬ್ದವು ಪ್ರೀತಿ ಹೇತುಕವೆಂಬ ಅರ್ಥವನ್ನು ಕೊಡುವುದಾದರೂ, ಲಕ್ಷಣಾವೃತ್ತಿಯಿಂದ ಪೂರಣಾರ್ಥವನ್ನು ಕಲ್ಪಿಸಿರುವರು. ಸಂಪೂರ್ಣವಾಗಿ ನಮ್ಮ ಇಷ್ಟಾರ್ಥಗಳನ್ನು ಪೂರೈಸು ಎಂದು ಇದರ ತಾತ್ಪರ್ಯಾರ್ಥ.

ನೇಮೇ—**ಣಮು-ಶ್ರೌಹ್ಮತ್ವೇ** ಎಂಬ ಧಾತುವಿನಿಂದ ಹುಟ್ಟಿದ ರೂಪ ಇದು. ನಿನ್ನ ಬಲದಿಂದ ಹೆದರಿದ ಭೂಮಿಯು ನಿನಗೆ ನಮ್ರವಾಗಿರುವುದು ಎಂದು ಇಂದ್ರನನ್ನು ಸ್ತುತಿಸಲಾಗಿದೆ.

॥ ವ್ಯಾಕರಣಪ್ರಕ್ರಿಯಾ ॥

ಸ್ಮಸಿ—ಅಸ ಭುವಿ ಧಾತು ಅದಾದಿ. ಲಟ್ ಮಧ್ಯಮಪುರುಷ ಬಹುವಚನದಲ್ಲಿ ಮಸ್ ಪ್ರತ್ಯಯ. **ಅದಿಪ್ರಭೃತಿಭ್ಯಃ ಶಪಃ** ಸೂತ್ರದಿಂದ ಶಪಿಗೆ **ಲುಕ್. ಸಾರ್ವಧಾತುಕಮಪಿತ್** ಎಂಬುದರಿಂದ ಪ್ರತ್ಯಯವು ಙಿದ್ವದ್ಭಾವವನ್ನು ಹೊಂದುವುದರಿಂದ **ಶ್ನಸೋರಲ್ಲೋಪಃ** (ಪಾ. ಸೂ. ೬-೪-೧೧೧) ಎಂಬುದರಿಂದ ಮಸ್ ಪರವಾದಾಗ ಅಸಿನ ಅಕಾರಕ್ಕೆ ಲೋಪ. **ಇದಂತೋ ಮಸಿ** ಎಂಬುದರಿಂದ ಮಸಿಗೆ ಇಕಾರಾಗಮ. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

ಅಸ್ಯ—ಇದಮ್ ಶಬ್ದ ಷಷ್ಠ್ಯೇಕವಚನಾಂತರೂಪ. **ಊಡಿದೇಂಪದಾದಿ** ಸೂತ್ರದಿಂದ ವಿಭಕ್ತಿಗೆ ಉದಾತ್ತಸ್ವರ ಬರುತ್ತದೆ.

ಸ್ತೋತುಃ—**ಷ್ಟುಞ್ ಸ್ತುತೌ** ಧಾತು. **ಕರ್ತೃರ್ಥದಲ್ಲಿ ತೃಚ್** ಪ್ರತ್ಯಯ. **ಚಿತಃ** ಎಂಬುದರಿಂದ ಅಂತೋದಾತ್ತವಾಗುತ್ತದೆ. ಷಷ್ಠ್ಯೇಕವಚನಾಂತರೂಪ.

ಪೃಣ—ಪೃಣ ಪ್ರೀಣನೇ ಧಾತು. ಇಲ್ಲಿ ಪ್ರೀತಿ ಹೇತುವಾದ ಪೂರಣಾರ್ಥವು ಲಕ್ಷಣಾವೃತ್ತಿಯಿಂದ ತೋರುತ್ತದೆ. ಲೋಟ್ ಮಧ್ಯಮಪುರುಷದ ಏಪಿಗೆ ಹಿ ಆದೇಶ. **ತುದಾದಿಭ್ಯಃ ಶಃ** ಸೂತ್ರದಿಂದ ಶ ವಿಕರಣ. **ಸಾರ್ವಧಾತುಕಮಪಿತ್** ಸೂತ್ರದಿಂದ ಆದು ಙಿತ್ತಾದುದರಿಂದ **ಪುಗಂತಲಘೂಪಧಸ್ಯಚ** ಸೂತ್ರದಿಂದ ಧಾತು ವಿನ ಲಘೂಪಧೆಗೆ ಗುಣ ಬರುವುದಿಲ್ಲ. **ಅತೋಹೇಃ** ಸೂತ್ರದಿಂದ ಹಿಗೆ ಲುಕ್. ತಿಙಂತನಿಘಾತಸ್ವರ ಬರುತ್ತದೆ.

ಮಮೇ—ಮಾಙ್ ಮಾನೇ ಶಬ್ದೇಚ ಧಾತು. ಙಿತ್ತಾದುದರಿಂದ **ಅನುದಾತ್ತ. ಙಿತ ಆತ್ಮನೇ-ಪದಮ್** ಎಂಬುದರಿಂದ ಆತ್ಮನೇ ಪದಪ್ರತ್ಯಯವನ್ನು ಹೊಂದುತ್ತದೆ. ಲಿಟ್ ಪ್ರಥಮಪುರುಷ ಏಕವಚನದಲ್ಲಿ ತ ಪ್ರತ್ಯಯಕ್ಕೆ **ಲಿಟಃತಝುಥೋರೇಶಿರೇಚ್** ಎಂಬುದರಿಂದ ಏಶಾದೇಶ. ಶಿತ್ತಾದುದರಿಂದ ಸರ್ವಾದೇಶ ವಾಗಿ ಬರುತ್ತದೆ. ಲಿಣ್ಮಿತ್ತವಾಗಿ ಧಾತುವಿಗೆ ದ್ವಿತ್ವ. ಅಭ್ಯಾಸಕ್ಕೆ ಹ್ರಸ್ವ. **ಅಸಂಯೋಗಾಲ್ಲಿಟ್ಕಿತ್** ಎಂಬುದರಿಂದ ಪ್ರತ್ಯಯವು ಕಿತ್ತಾದುದರಿಂದ ಆದು ಪರವಾದಾಗ **ಅತೋಲೋಪಃ ಇಟಿಚ** (ವಾ. ಸೂ. ೬-೪-೬೪) ಎಂಬುದರಿಂದ ಧಾತುವಿನ ಆಕಾರಕ್ಕೆ ಲೋಪ. ತಿಙಂತನಿಘಾತಸ್ವರ ಬರುತ್ತದೆ.

ನೇಮೇ—ಣಮು ಪ್ರಹ್ವತ್ವೇ (ಶಬ್ದೇಚ) ಧಾತು. ಲಿಟ್ ಪ್ರಥಮಪುರುಷ ಏಕವಚನದಲ್ಲಿ ಏಶಾ ದೇಶ. ಕಿತ್ತಾದುದರಿಂದ ದ್ವಿತ್ವ ಬಂದಾಗ ಧಾತುವಿನ ಆಕಾರವು ಅಸಂಯುಕ್ತ **ಹಲ್** ಮಧ್ಯದಲ್ಲಿರುವುದರಿಂದ **ಅತ-ಏಕಹಲ್ಮಧ್ಯೇಽನಾದೇಶಾದೇರ್ಲಿಟಿ** (ವಾ. ಸೂ. ೬-೪-೧೨೦) ಎಂಬುದರಿಂದ ಧಾತುವಿನ ಆಕಾರಕ್ಕೆ ಏತ್ವವೂ ಅಭ್ಯಾಸಕ್ಕೆ ಲೋಪವೂ ಬರುತ್ತವೆ. ನೇಮೇ ಎಂದು ರೂಪವಾಗುತ್ತದೆ. **ತಿಙ್ಶಿತಿಙಃ** ಎಂಬುದರಿಂದ ನಿಘಾತ ಸ್ವರ ಬರುತ್ತದೆ.

॥ ಸಂಹಿತಾಪಾಠಃ ॥

ತ್ವಂ ತಮಿಂದ್ರ ಪರ್ವತಂ ಮಹಾಮುರುಂ ವಜ್ರೇಣ ವಜ್ರಿನ್ಪರ್ವತಶ್ಚಕರ್ತಿಥ ।
ಅವಾಸೃಜೋ ನಿವೃತಾಃ ಸರ್ತವಾ ಅಪಃ ಸತ್ರಾ ವಿಶ್ವಂ ದಧಿಷೇ ಕೇವಲಂ ಸಹಃ ॥ ೬ ॥

॥ ಪದಪಾಠಃ ॥

ತ್ವಂ । ತಂ । ಇಂದ್ರ । ಪರ್ವತಂ । ಮಹಾಂ । ಉರುಂ । ವಜ್ರೇಣ । ವಜ್ರಿನ್ । ಪರ್ವತಶಃ । ಚಕರ್ತಿಥ ।
ಅವ । ಅಸೃಜಃ । ನಿವೃತಾಃ । ಸರ್ತವೈ । ಅಪಃ । ಸತ್ರಾ । ವಿಶ್ವಂ । ದಧಿಷೇ ।
ಕೇವಲಂ । ಸಹಃ ॥ ೬ ॥

॥ ಸಾಯಣಭಾಷ್ಯಂ ॥

ಹೇ ವಜ್ರಿನ್ವಜ್ರವನ್ನಿಂದ್ರ ತ್ವಂ ತಂ ಪ್ರಸಿದ್ಧಂ ಮಹಾಮಾಯಮಾಮತೋ ಮಹಾಂತಮುರುಂ ವಿಸ್ತೀರ್ಣಂ ಪರ್ವತಂ ಪರ್ವವಂತಂ ಮೇಘಂ ವ್ಯತ್ಕ್ರಾಸುರಂ ವಾ ವಜ್ರೇಣಾಯುಧೇನ ಪರ್ವಶಃ ಪರ್ವಣಿ ಪರ್ವಣಿ ಚಕರ್ತಿಥ । ಶಕಲೀಚಕೃಷೇ । ತೇನ ಮೇಘೇನ ನಿವೃತಾ ಆವೃತಾ ಅಪಃ ಸರ್ತವೈ ಸರಣಾಯೈ ಗಮನಾಯೈ ಅವಾಸೃಜಃ । ಅವಾಙ್ಮುಖಮಸ್ರಾಕ್ಷೀಃ । ಅತಸ್ತ್ವಮೇವ ಕೇವಲಂ ವಿಶ್ವಂ ವ್ಯಾಪ್ತಂ ಸಹೋ ಬಲಂ ದಧಿಷೇ । ಧಾರಯಸಿ । ನಾನ್ಯಃ ಕಶ್ಚಿದಿತಿ । ಯದೇತತ್ತ್ವಸ್ತಾ ಸತ್ಯಮೇವ । ಸತ್ರೇತಿ ಸತ್ಯನಾಮ । ಸತ್ರೇತ್ಥೇತಿ ತನ್ನಾಮಸು ಪಾಠಾತ್ ॥ ಮಹಾಂ । ಮಹಾಂತಂ । ನಕಾರತಕಾರಯೋರ್ಲೋಪಶ್ಛಾಂದಸಃ । ಚಕರ್ತಿಥ । ಕೃತೀ ಛೇದನೇ । ಲಿಟಿ ಥಲ್ಯಭ್ಯಾಸಸ್ಯೋರದತ್ವಹಲಾದಿಶೇಷಚುತ್ವಾನಿ । ಸರ್ತವೈ । ಕೃತ್ಯಾರ್ಥೇ ತವೈಕೇನಿತಿ ಭಾವೇ ತವೈಪ್ರತ್ಯಯಃ । ಕೃನ್ಮೇಜಂತಃ । ಪಾ. ೧-೧-೩೯ । ಇತ್ಯವ್ಯಯತ್ವೇಽವ್ಯಯಾದಾಪ್ಸುಪ ಇತಿ ಸುಪ್ತೋ ಲುಕ್ । ಅಂತಶ್ಚ ತವೈ ಯುಗಪದಿತ್ಯಾದ್ಯಂತಯೋರ್ಯುಗಪದುದಾತ್ತತ್ವಂ । ದಧಿಷೇ । ಲಿಟಿ ಕ್ರಾದಿನಿಯಮಾದಿಟ್ ॥

॥ ಪ್ರತಿಪದಾರ್ಥ ॥

ವಜ್ರಿ—ವಜ್ರಾಯುಧವುಳ್ಳ । **ಇಂದ್ರ**—ಇಂದ್ರನೇ । **ತ್ವಂ**—ನೀನು । **ತಂ**—ಆ ಪ್ರಸಿದ್ಧವಾದ । **ಮಹಾಂ**—ಮಹತ್ತಾದುದೂ । **ಉರುಂ**—ವಿಸ್ತಾರವಾದುದೂ ಆದ । **ಪರ್ವತಂ**—ಮೇಘವನ್ನು ಅಥವಾ ವೃತ್ರನನ್ನು । **ವಜ್ರೇಣ**—ನಿನ್ನ ವಜ್ರಾಯುಧದಿಂದ । **ಪರ್ವಶಃ**—ಪ್ರತಿಯೊಂದು ಏಣುಗಳಲ್ಲಿಯೂ । **ಚಕರ್ತಿಥ**—ಚೂರುಚೂರಾಗಿ ಸೀಳಿದ್ದೀಯೆ । **ನಿವೃತಾಃ**—(ಆ ಮೇಘದಿಂದ) ಆವರಿಸಲ್ಪಟ್ಟ । **ಅಪಃ**—ನೀರುಗಳನ್ನು । **ಸರ್ತವೈ**—ಹರಿಯುವುದಕ್ಕಾಗಿ । **ಅವಾಸೃಜಃ**—ಕೆಳಕ್ಕೆ ಸುರಿಸಿದೆ (ಆದ್ದರಿಂದ) । **ಕೇವಲಂ**—ನೀನೊಬ್ಬನೇ । **ವಿಶ್ವಂ ಸಹಃ**—ಸಕಲ ಶಕ್ತಿಯನ್ನೂ । **ದಧಿಷೇ**—ಹೊಂದಿದ್ದೀಯೆಂಬುದು । **ಸತ್ರಾ**—ಸತ್ಯವು.

॥ ಭಾವಾರ್ಥ ॥

ವಜ್ರಾಯುಧಧಾರಿಯಾದ ಎಲೈ ಇಂದ್ರನೇ, ನೀನು ಮಹತ್ತಾದುದೂ, ವಿಸ್ತಾರವಾದುದೂ ಆದ ಪ್ರಸಿದ್ಧವಾದ ಆ ಮೇಘವನ್ನು ನಿನ್ನ ವಜ್ರಾಯುಧದಿಂದ ಚೂರು ಚೂರಾಗಿ ಸೀಳಿದೆ. ಆದರಿಂದ ಆವರಿಸಲ್ಪಟ್ಟ ನೀರುಗಳನ್ನು ಹರಿಯುವುದಕ್ಕಾಗಿ ಕೆಳಕ್ಕೆ ಸುರಿಸಿದೆ.ಆದ್ದರಿಂದ ಸಕಲ ಶಕ್ತಿಯನ್ನೂ ನೀನೊಬ್ಬನೇ ಹೊಂದಿದ್ದೀಯೆಂಬುದು ಸತ್ಯವಾದ ವಿಷಯವಾಗಿದೆ.

English Translation.

Weilder of the thunderbolt, you have shattered with your bolt, the broad and massive cloud into fragments, and have sent down the waters that were confined in it, to flow (at will); verily you alone possess all power.

॥ ವಿಶೇಷ ವಿಷಯಗಳು ॥

ಮಹಾಂ—ವಿಸ್ತಾರದಲ್ಲಿ ಹೆಚ್ಚು ದೊಡ್ಡದಾದದ್ದು.

ಪರ್ವತಂ—ಈ ಪದಕ್ಕೆ ಮೇಘವೆಂದೂ (ನಿ. ೨-೨೧) ಮೇಘರೂಪದಿಂದ ಇರುವ ವೃತ್ರಾಸುರನೆಂದೂ, ಪರ್ವತವೆಂದೂ ಅರ್ಥಗಳಿರುವುವು. **ಪರ್ವಾನ್ ಪರ್ವತಃ । ಪರ್ವ ಪುನಃ ಪ್ರೀಣಾತೀರ್ವಾ । ದೇವಾನ-ಸ್ಮಾನ್ ಪ್ರೀಣಂತೀತಿ । ಮೇಘೋಽಪಿ ಗಿರಿರೇತಸ್ಮಾದೇವ ।** (ನಿ. ೧-೨೦) ಎಂದು ಯಾಸ್ಕರು ಹೇಳಿರುವರು.

ಸತ್ರಾ—ಇದು ಸತ್ಯವೆಂಬ ಅರ್ಥವನ್ನು ಸೂಚಿಸುವುದು. **ಸತ್ರಾ ಇತ್ಥಾ** (ನಿ. ೩-೧೦) ಎಂಬುದಾಗಿ ಸತ್ರಾಶಬ್ದವನ್ನು ಸತ್ಯಪರ್ಯಾಯಪದವನ್ನಾಗಿ ಪಾಠಮಾಡಿದ್ದಾರೆ.

ಪರ್ವಶಃ—**ಪರ್ವಣಿ ಪರ್ವಣಿ** ಖಂಡಖಂಡವಾಗಿ ಎಂದರ್ಥ.

॥ ವ್ಯಾಕರಣಪ್ರಕ್ರಿಯಾ ॥

ಮಹಾಮ್—ಮಹಚ್ಛಬ್ದ. ದ್ವಿತೀಯಾ ಏಕವಚನದಲ್ಲಿ ಮಹಾಂತಂ ಎಂದು ರೂಪವಾಗುತ್ತದೆ. ಸಂಹಿತಾದಲ್ಲಿ ನಕಾರತಕಾರಗಳಿಗೆ ಛಾಂದಸವಾಗಿ ಲೋಪಬರುತ್ತದೆ.

ಪರ್ವಶಃ—**ಸಂಖ್ಯೈಕವಚನಾಚ್ಚ ವೀಪ್ಸಾಯಾಂ** (ಪಾ. ಸೂ. ೫-೪-೪೩) ಎಂಬುದರಿಂದ ವೀಪ್ಸಾ ತೋರುವಾಗ ಏಕತ್ವವಿಶಿಷ್ಟಾರ್ಥವಾಚಕವಾದ ಪರ್ವ ಶಬ್ದಕ್ಕೆ ಶಸ್ ಪ್ರತ್ಯಯ.

ಚಕರ್ತಿರ್ಥ—ಕೃತೀ ಛೇದನೇ ಧಾತು. ಲಿಟ್ ಮಧ್ಯಮಪುರುಷ ಏಕವಚನದಲ್ಲಿ ಸಿಬೆಗೆ **ಪರಸ್ಮೈ-ಪದಾನಾಂ** ಸೂತ್ರದಿಂದ ಥಲಾದೇಶ. ಲಿಣ್ಮಿತ್ತವಾಗಿ ಧಾತುವಿಗೆ ದ್ವಿತ್ವ. ಅಭ್ಯಾಸಕ್ಕೆ ಹಲಾದಿಶೇಷ. **ಉರತ್** ಎಂಬುದರಿಂದ ಅತ್ವ. ರಪರವಾಗಿ ಬರುವುದರಿಂದ ಪುನಃ ಹಲಾದಿಶೇಷ. **ಕುಹೋಶ್ಚುಃ** ಎಂಬುದರಿಂದ ಚುತ್ವದಿಂದ ಕಕಾರಾದೇಶ. **ಆರ್ಧಧಾತುಕಸ್ಯೇ**—ಸೂತ್ರದಿಂದ ಥಲಿಗೆ ಇಡಾಗಮ. **ಪುಗಂತಲಘೂ-ಪಧಸ್ಯ ಚ** ಎಂಬುದರಿಂದ ಧಾತುವಿನ ಲಘೂಪಧಗೆ ಗುಣ. ತಿತಿಜಂತದ ಪರದಲ್ಲಿರುವುದರಿಂದ ಸಿಘ್ವಾತಶ್ಚರ ಬರುತ್ತದೆ.

ಆಸ್ಪೃಜಃ ಸೃಜ ವಿಸರ್ಗೇ ಧಾತು ಇದಾಗಿದೆ. ಲಙ್ ಮಧ್ಯಮಪುರುಷ ಏಕವಚನದರೂಪ. ಶ ವಿಕರಣ ಬಂದ್ದಾದುದರಿಂದ ಲಘೂಪಧಗುಣ ಬರುವುದಿಲ್ಲ. ತಿಜಂತಸಿಘ್ವಾತಶ್ಚರ ಬರುತ್ತದೆ.

ಸರ್ತವೈ—ಸೃ ಗತೌ ಧಾತು. ಇದಕ್ಕೆ **ಕೃತ್ಯಾರ್ಥೇ ತವೈಕೇನ್** (ಪಾ. ಸೂ. ೩-೪-೧೪) ಎಂಬುದರಿಂದ ಭಾವಾರ್ಥದಲ್ಲಿ ತವೈ ಪ್ರತ್ಯಯ. **ಸಾರ್ವಧಾತುಕಾರ್ಧಧಾತುಕಯೋಃ** ಎಂಬುದರಿಂದ ಧಾತುವಿನ ಇಕಿಗೆ ಗುಣ. **ಕೃನ್ಮೇಜಂತಃ** (ಪಾ. ಸೂ. ೧-೧-೩೯) ಮಕಾರಾಂತ ಏಜಂತವಾದ ಕೃತ್ ಪ್ರತ್ಯಯವು ಅಂತದಲ್ಲಿರುವ ಶಬ್ದಸ್ವರೂಪವು ಅವ್ಯಯ ಸಂಜ್ಞೆಯನ್ನು ಪೊಂದುತ್ತದೆ ಎಂಬುದರಿಂದ ಇಲ್ಲಿ ಐಕಾರಾಂತವಾದುದರಿಂದ ಅವ್ಯಯತ್ವವು ಬಂದಾಗ ಇದರ ಪರದಲ್ಲಿ ಬಂದ ಚತುರ್ಥಿಗೆ **ಅವ್ಯಯಾದಾಪ್ಸುಪಃ** (ಪಾ. ಸೂ. ೨-೪-೮೨) ಎಂಬುದರಿಂದ ಲುಕ್ ಬರುತ್ತದೆ. **ಅಂತಶ್ಚ ತವೈ ಯುಗಪತ್** (ಪಾ ಸೂ. ೬-೧-೨೦೦) ಎಂಬುದರಿಂದ ಪ್ರತ್ಯಯಾಂತದ ಆದ್ಯಂತಕ್ಕೆ ಏಕಕಾಲದಲ್ಲಿ ಉದಾತ್ತಸ್ವರ ಬರುತ್ತದೆ.

ವೆಧಿಷೇ—ಡುಧಾಞ್ ಧಾರಣಪೋಷಣಯೋಃ ಧಾತು. **ಛಂದಸಿಲುಙ್ಲಙ್ಲಿಟಃ** ಎಂಬುದರಿಂದ ಲಿಟ್. ಮಧ್ಯಮಪುರುಷ ಏಕವಚನದಲ್ಲಿ **ಥಾಸಃಸೇ** ಸೂತ್ರದಿಂದ ಸೇ ಆದೇಶ. ಲಿಣ್ಮಿತ್ತವಾಗಿ ಧಾತುವಿಗೆ ದ್ವಿತ್ವ. ಅಭ್ಯಾಸಕ್ಕೆ **ಹ್ರಸ್ವಃ**. ಜಶ್ತ್ವ. **ಕ್ಷ್ಯಾದಿನಿಮಿತ್ತಾದಿನಿ**ಮಿತ್ತದಿಂದ ಆನಿಟ್ವಾದರೂ ಲಿಟಿನಲ್ಲಿ ಇದಕ್ಕೆ

ಇಟ್ ಬರುತ್ತದೆ. ಪ್ರತ್ಯಯಕ್ಕೆ **ಅಸಂಯೋಗಾಲ್ಲಿಟ್ ಕಿತ್** ಎಂಬುದರಿಂದ ಕಿತ್ವ ಬರುವುದರಿಂದ **ಆತೋ-ಲೋಪ ಇಟಿಚ** ಎಂಬುದರಿಂದ ಧಾತುವಿನ ಆಕಾರಕ್ಕೆ ಲೋಪ. ಇಣಿನ ಪರದಲ್ಲಿರುವುದರಿಂದ ಪ್ರತ್ಯಯ ಸಕಾರಕ್ಕೆ **ಆದೇಶಪ್ರತ್ಯಯಯೋಃ** ಸೂತ್ರದಿಂದ ಷತ್ವ. ಅತಿಜಂತದ ಪರದಲ್ಲಿರುವುದರಿಂದ **ತಿಜ್ಜತಿಜಃ** ಎಂಬುದರಿಂದ ನಿಘಾತಸ್ವರ ಬರುತ್ತದೆ.

ಐವತ್ತ ಏಳನೆಯ ಸೂಕ್ತವು ಸಮಾಪ್ತವು.

ಐವತ್ತೆಂಟನೆಯ ಸೂಕ್ತವು

॥ ಸಾಯಣಭಾಷ್ಯಂ ॥

ಏಕಾದಶಾನುವಾಕೇ ಸಪ್ತ ಸೂಕ್ತಾನಿ । ತತ್ರ ನೂ ಚಿದಿತಿ ನವರ್ಚಂ ಪ್ರಥಮಂ ಸೂಕ್ತಂ ಗೌತಮಸ್ಯ ನೋಧಸ ಆರ್ಷಮಾಗ್ನೇಯಂ । ಆದ್ಯಾಃ ಪಂಚ ಜಗತ್ಯಃ । ಶಿಷ್ಟ್ವಾಶ್ಚತಸ್ರಸ್ತ್ರಿಷ್ಟುಭಃ । ತಥಾ ಚಾನುಕ್ರಾಂತಂ । ನೂ ಚಿನ್ನ ನೋಧಾ ಗೌತಮ ಆಗ್ನೇಯಂ ಹಿ ಚತುಸ್ತ್ರಿಷ್ಟುಬಂತಮಿತಿ । ಹೀತಿ ವಚನಾದುತ್ತರೇ ಚ ದ್ವೇ ಸೂಕ್ತೇ ಅಗ್ನಿದೇವತಾಕೇ ॥ ಅಭಿಪ್ಲವಷಡಹಸ್ಯ ಪಂಚಮೇಽಹನ್ಯಾಗ್ನಿಮಾರುತ ಇದಂ ಜಾತವೇದಸ್ಯಂ ನಿವಿದ್ಧಾನಂ । ತೃತೀಯಸ್ಯೇತಿ ಖಂಡೇ ಸೂತ್ರಿತಂ । ಪೃಷ್ಠಸ್ಯ ವೃಷ್ಣೋ ವೃಷ್ಣೇ ಶರ್ಧಾಯ ನೂ ಚಿತ್ಸಹೋಜಾ ಇತ್ಯಾಗ್ನಿಮಾರುತಂ । ಆ. ೭ ೭ । ಇತಿ ॥ ಪ್ರಾತರನುವಾಕಸ್ಯಾಗ್ನೇಯೇ ಕ್ರತಾವಾಶ್ವಿನಶಸ್ತ್ರೇ ಚ ಜಾಗತೇ ಛಂದಸ್ಯಾದಿತಃ ಪಂಚರ್ಚಃ । ಸೂತ್ರಿತಂ ಚ । ತ್ವಮಗ್ನೇ ಪ್ರಥಮೋ ಅಂಗಿರಾ ನೂ ಚಿತ್ಸಹೋಜಾ ಅಮೃತೋ ನಿ ತುಂದತ ಇತಿ ಪಂಚ । ಆ. ೪.೧೩ । ಇತಿ ॥

ಅನುವಾದವು—ಈ ಸೂಕ್ತದಿಂದ ಪ್ರಥಮಮಂಡಲದ ಹನ್ನೊಂದನೆಯ ಅನುವಾಕವು ಪ್ರಾರಂಭವಾಗುವುದು. ಈ ಅನುವಾಕದಲ್ಲಿ ಏಳು ಸೂಕ್ತಗಳಿರುವವು. ಅವುಗಳಲ್ಲಿ **ನೂ ಚಿತ್** ಎಂಬ ಈ ಸೂಕ್ತವು ಮೊದಲನೆಯದು. ಇದರಲ್ಲಿ ಒಂಭತ್ತು ಋಕ್ಕುಗಳಿರುವವು. ಈ ಸೂಕ್ತಕ್ಕೆ ಗೋತಮಪುತ್ರನಾದ ನೋಧಾಃ ಎಂಬುವನು ಋಷಿಯು. ಅಗ್ನಿಯೇ ದೇವತೆಯು. ಈ ಸೂಕ್ತದ ಮೊದಲಿನ ಐದು ಋಕ್ಕುಗಳು ಜಗತೀಛಂದಸ್ಸಿನವು. ಉಳಿದ ನಾಲ್ಕು ಋಕ್ಕುಗಳು ತ್ರಿಷ್ಟುಪ್ ಛಂದಸ್ಸಿನವು. ಅನುಕ್ರಮಣಿಕೆಯಲ್ಲಿ **ನೂ ಚಿನ್ನ ನೋಧಾ ಗೌತಮ ಆಗ್ನೇಯಂ ಹಿ ಚತುಸ್ತ್ರಿಷ್ಟುಬಂತಮಿತಿ** ಎಂದು ಹೇಳಿರುವುದು. ಹಿ ಎಂಬ ಪದಪ್ರಯೋಗದಿಂದ ಮುಂದಿನ ಎರಡು ಸೂಕ್ತಗಳು ಅಗ್ನಿದೇವತಾಕವೆಂದು ಸೂಚಿತವಾಗುವುದು. ಅಭಿಪ್ಲವಷಡಹವೆಂಬ ಯಾಗದ ಐದನೆಯ ದಿವಸದಲ್ಲಿ ಅಗ್ನಿಮಾರುತಮಂತ್ರಗಳಲ್ಲಿ ಜಾತವೇದಸ್ಸಂಬಂಧವಾದ ನಿವಿದ್ಧಾನ ಮಂತ್ರಗಳಿಗಾಗಿ ಈ ಸೂಕ್ತವನ್ನು ಪಯೋಗಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ **ತೃತೀಯಸ್ಯ** ಎಂಬ ಖಂಡದ **ಪೃಷ್ಠಸ್ಯ ವೃಷ್ಣೋ ವೃಷ್ಣೇ ಶರ್ಧಾಯ ನೂ ಚಿತ್ಸಹೋಜಾ ಇತ್ಯಾಗ್ನಿಮಾರುತಂ** ಎಂಬ ಸೂತ್ರದಿಂದ ವಿವೃತವಾಗಿರುವುದು. (ಆ. ೭-೭) ಮತ್ತು ಪ್ರಾತರನುವಾಕಮಂತ್ರಪಠನಕಾಲದಲ್ಲಿ ಆಗ್ನೇಯಕ್ರತು ಮತ್ತು ಆಶ್ವಿನ ಶಸ್ತ್ರ ಮಂತ್ರಗಳಲ್ಲಿ ಜಗತೀಛಂದಸ್ಸಿನ ಮಂತ್ರಗಳಿಗಾಗಿ ಈ ಸೂಕ್ತದ ಮೊದಲನೆಯ ಐದು ಋಕ್ಕುಗಳ ವಿನಿಯೋಗ ವಿರುವುದೆಂದು ಆಶ್ವಲಾಯನಶ್ರೌತಸೂತ್ರದ **ತ್ವಮಗ್ನೇ ಪ್ರಥಮೋ ಅಂಗಿರಾ ನೂ ಚಿತ್ಸಹೋಜಾ ಅಮೃತೋ ನಿ ತುಂದತ ಇತಿ ಪಂಚ** ಎಂಬ ಸೂತ್ರವು ನಿರ್ದೇಶಿಸುವುದು. (ಆ. ೪.೧೩)

ಸೂಕ್ತ—೫೮

ಮಂಡಲ—೧ ॥ ಅನುವಾಕ—೧೧ ॥ ಸೂಕ್ತ—೫೮ ॥
ಅಷ್ಟಕ—೧ ॥ ಅಧ್ಯಾಯ—೪ ॥ ವರ್ಗ— ೨೩, ೨೪॥
ಸೂಕ್ತದಲ್ಲಿರುವ ಋಕ್ಸಂಖ್ಯೆ— ೯
ಋಷಿಃ—ನೋಧಾ ಗೌತಮಃ ॥
ದೇವತಾ—ಅಗ್ನಿಃ ॥
ಛಂದಃ—೧-೫ ಜಗತೀ । ೬-೯ ತ್ರಿಷ್ಟುಪ್

॥ ಸಂಹಿತಾಪಾಠಃ ॥

ನೂ ಚಿ॑ತ್ಸ॒ಹೋ॒ಜಾ ಅ॒ಮೃ॒ತೋ॒ ನಿ ತು॑ಂದತೇ॒ ಹೋತ್ರಾ॒ ಯದ್ದೂ॒ತೋ॑ ಅ॑ಭವದ್ವಿವ॒ಸ್ವತಃ ।
ವಿ ಸಾ॑ಧಿ॒ಷ್ಟೇಭಿಃ ಪ॒ಥಿ॒ಭಿ॒ರ್ ರಜೋ॒ ಮಮ॒ ಆ ದೇ॒ವತಾ॑ತಾ ಹ॒ವಿಷಾ॒ ವಿವಾ॑ಸತಿ ॥ ೧ ॥

॥ ಪದಪಾಠಃ ॥

ನು । ಚಿತ್ । ಸ॒ಹಃ॒ಜಾಃ । ಅ॒ಮೃ॒ತಃ॒ । ನಿ । ತು॒ಂ॒ದ॒ತೇ॒ । ಹೋತ್ರಾ॑ । ಯತ್ ।
ದೂ॒ತಃ॑ । ಅ॒ಭ॒ವ॒ತ್ । ವಿ॒ವ॒ಸ್ವತಃ ।
ವಿ । ಸಾ॒ಧಿ॒ಷ್ಟೇಭಿಃ । ಪ॒ಥಿ॒ಭಿಃ । ರಜಃ । ಮಮೇ । ಆ । ದೇ॒ವ॒ತಾ॑ತಾ । ಹ॒ವಿಷಾ॑ ।
ವಿವಾ॑ಸತಿ ॥ ೧ ॥

॥ ಸಾಯಣಭಾಷ್ಯ ॥

ಸಹೋಜಾಃ ಸಹಸಾ ಬಲೇನ ಜಾತಃ । ಅಗ್ನಿರ್ಹಿ ಬಲೇನ ಮಥ್ಯಮಾನೋಽರಣ್ಯೋಃ ಸಕಾಶಾಜ್ಜಾಯತೇ । ಅಮೃತೋ ಮರಣರಹಿತಃ । ಏವಂಭೂತೋಽಗ್ನಿರ್ನೂ ಚಿತ್ ಕ್ಷಿಪ್ರಮೇವ ನಿ ತುಂದತೇ । ನಿತರಾಂ ವ್ಯಥಯತಿ । ಉಕ್ಷನ್ನಮಾಶ್ರೀಸ್ಯಾಗ್ನೇಃ ಸ್ಪ್ರಹ್ಯುಮಶಕ್ಯತ್ವಾತ್ । ಯದ್ವಾ । ನಿರ್ಗಚ್ಛತಿ । ತುಂದತಿರ್ಗತ್ಯರ್ಥಃ ಸೌತ್ರೋ ಧಾತುಃ । ಯದ್ಯದಾ ಹೋತಾ ದೇವಾನಾಮಾಹ್ವಾತಾ ಹೋಮನಿಷ್ಪಾದಕೋ ನಾಯಮಗ್ನಿರ್ವಿವಸ್ವತಃ ಪರಿಚರತೋ ಯಜಮಾನಸ್ಯ ದೇವಾನ್ಪ್ರತಿ ಹವಿರ್ವಹನಾಯ ದೂತೋಽಭವತ್ ಹವಿರ್ವಹನೇ ನಿಯುಕ್ತೋ ಭವತಿ ತದಾನೀಂ ಸಾಧಿಷ್ಟೇಭಿಃ ಸಮಾಖ್ಯೇಯೈಃ ಪಥಿಭಿ-

ರ್ಮಾರ್ಗೈರ್ಗಚ್ಛನ್ ರಜೋಽಂತರಿಕ್ಷಲೋಕಂ ವಿ ಮಮೇ । ನಿರ್ಮಮೇ । ಪೂರ್ವಂ ವಿಧ್ಯಮಾನಮಪ್ಯಂತರಿಕ್ಷಮಸತ್ಕಲ್ಪಮಭೂತ್ । ಇದಾನೀಂ ತಸ್ಯ ತೇಜಸಾ ಪ್ರಕಾಶಮಾನಂ ಸದುತ್ಪನ್ನಮಿವ ದೃಶ್ಯತೇ । ಕಿಂಚ । ದೇವತಾತೇತಿ ಯಜ್ಞನಾಮ । ದೇವತಾತಾ ದೇವತಾತೌ ಯಜ್ಞೇ ಹವಿಷಾ ಚರುಪುರೋಡಾಶಾದಿಲಕ್ಷಣೇನ ದೇವಾನಾ ವಿವಾಸತಿ । ಪರಿಚರತಿ ॥ ಅಮೃತಃ । ಮೃತಂ ಮರಣಮಸ್ಯ ನಾಸ್ತೀತಿ ಬಹುವ್ರೀಹೌ ನಞಿಃ ಜರಮರಮಿತ್ರಮೃತಾ ಇತ್ಯುತ್ತರಪದಾದ್ಯುದಾತ್ತತ್ವಂ । ತುಂದತೇ । ತುದ ವ್ಯಥನೇ । ಸ್ವರಿತೇತ್ತ್ವಾದಾತ್ಮನೇಪದಂ । ನಕಾರೋಪಜನಶ್ಚಾಂದಸಃ । ಸಾಧಿಷ್ಠೇಭಿಃ । ವಾಥಶಬ್ದಾದಾತಿಶಾಯನಿಕ ಇಷ್ಠನ್ಯಂತಿಕವಾಥಯೋರ್ನೇದಸಾಧೌ । ಪಾ. ೫-೩-೬೩ । ಇತಿ ಸಾಧಾದೇಶಃ । ಬಹುಲಂ ಛಂದಸೀತಿ ಭಿಸ ಐಸಭಾವಃ । ನಿತ್ತ್ವಾದಾದ್ಯುದಾತ್ತತ್ವಂ । ದೇವತಾತಾ । ಸರ್ವದೇವಾತ್ತಾತಿಲ್ । ಪಾ. ೪-೪-೧೪೨ । ಇತಿ ಸ್ವಾರ್ಥಿಕಸ್ತಾತಿಲ್ಪ್ರತ್ಯಯಃ । ತೇನ ಚ ತತ್ಸಂಬಂಧೀ ಯಜ್ಞೋ ಲಕ್ಷ್ಯತೇ । ಯದ್ವಾ । ದೇವಾನ್ಹವಿಷಾ ಆ ವಿವಾಸತೀತಿ ಯೋಜ್ಯಂ । ಸುಪಾಂ ಸುಲುಗಿತಿ ವಿಭಕ್ತೇರ್ಡಾದೇಶಃ । ಲಿತ್ಸ್ವರೇಣ ಪ್ರತ್ಯಯಾತ್ಪೂರ್ವಸ್ಯೋದಾತ್ತತ್ವಂ ॥

॥ ಪ್ರತಿಪದಾರ್ಥ ॥

ಸಹೋಜಾಃ—(ಘರ್ಷಣ) ಶಕ್ತಿಯಿಂದ ಉತ್ಪನ್ನನಾದವನೂ । **ಅಮೃತಃ**—ಮರಣರಹಿತನೂ ಆದ ಅಗ್ನಿಯು । **ನೂ ಚಿತ್**—ಜಾಗ್ರತೆಯಾಗಿಯೇ । **ನಿ ತುಂದತೇ**—ಅವಿರ್ಭವಿಸುತ್ತಾನೆ (ಅಥವಾ ಸುಡುತ್ತಾನೆ) । **ಯತ್**—ಯಾವಾಗ । **ಹೋತಾ**—ದೇವತೆಗಳನ್ನು ಕರೆಯತಕ್ಕ ಅಥವಾ ಹೋಮಸಂಪಾದಕನಾದ ಅಗ್ನಿಯು । **ವಿವಸ್ವತಃ**—ಯಜಮಾನನಿಗೆ (ದೇವತೆಗಳಿಗೆ ಹವಿಸ್ಸನ್ನು ತಲಪಿಸಲು) । **ದೂತಃ ಅಭವತ್**—ದೂತನಾದನೋ (ಆಗ) **ಸಾಧಿಷ್ಠೇಭಿಃ**—ಅನುಕೂಲಗಳಾದ । **ಪಥಿಭಿಃ**—ದಾರಿಗಳಿಂದ (ಸಂಚರಿಸುತ್ತ) । **ರಜಃ**—ಅಂತರಿಕ್ಷವನ್ನು । **ವಿ ಮಮೇ**—ನಿರ್ಮಿಸಿದನು (ಕತ್ತಲಾಗಿದ್ದ ಅಂತರಿಕ್ಷವನ್ನು ಬೆಳಗಿಸಿದನು ಮತ್ತು) । **ದೇವತಾತಾ**—ಯಜ್ಞದಲ್ಲಿ । **ಹವಿಷಾ**—ಹವಿಸ್ಸಿನಿಂದ । **ಆ ವಿವಾಸತಿ**—(ದೇವತೆಗಳನ್ನು) ಪೂಜಿಸುತ್ತಾನೆ.

। ಭಾವಾರ್ಥ ।

ಶಕ್ತಿಯಿಂದ ಉತ್ಪನ್ನನಾದವನೂ ಮರಣರಹಿತನೂ ಆದ ಅಗ್ನಿಯು ಜಾಗ್ರತೆಯಾಗಿ ಅವಿರ್ಭವಿಸುತ್ತಾನೆ. ದೇವತೆಗಳನ್ನು ಯಜ್ಞಕ್ಕೆ ಕರೆಯುವ ಅಗ್ನಿಯು ಯಾವಾಗ ಯಜಮಾನನ ದೂತನಾದನೋ ಆಗ ಅನುಕೂಲಗಳಾದ ದಾರಿಯಿಂದ ಸಂಚರಿಸುತ್ತ ಅಂತರಿಕ್ಷವನ್ನು ಬೆಳಗಿದ್ದಾನೆ. ಮತ್ತು ಯಜ್ಞದಲ್ಲಿ ಹವಿಸ್ಸಿನಿಂದ ದೇವತೆಗಳನ್ನು ಪೂಜಿಸುತ್ತಾನೆ.

English Translation.

The immortal Agni, generated by great strength, quickly issues forth, when he became the invoker of the gods and the messenger (of the sacrificer); he, going by suitable paths created the firmament; he worships (the gods) in the sacrifice with oblations.

॥ ವಿಶೇಷ ವಿಷಯಗಳು ॥

ಸಹೋಜಾಃ—ಸಹಸಾ ಬಲೇನ ಜಾತಃ—ಮಂತ್ರಪೂತವಾಗಿ ಅರಣಿಗಳಲ್ಲಿ ಬಲಪ್ರಯೋಗ ಮಾಡುವುದರಿಂದ ಅಗ್ನಿಯುತ್ಪತ್ತಿಯಾಗುವುದು. ಆದುದರಿಂದಲೇ ಅಗ್ನಿಗೆ ಬಲಜಾತ ಅಥವಾ ಸಹೋಜಸ್ಸೆಂಬ ಹೆಸರು ಬಂದಿರುವುದು.

ಅಮೃತಃ—**ಮೃತಂ ಮರಣಂ ಅಸ್ಯ ನಾಸ್ತೀತಿ-ಅಮೃತಃ** ಮರಣರಹಿತನಾದವನು ಎಂದರ್ಥ. ಇದು ಅಗ್ನಿಗೆ ವಿಶೇಷಣವಾಗಿದೆ.

ನೂ ಚಿತ್—ಇವೆರಡೂ ಅವ್ಯಯಗಳು. ಜಾಗ್ರತೆಯಾಗಿಯೇ ಎಂದು ಇವುಗಳ ಅರ್ಥ. ಚಿತ್ ಶಬ್ದವು ಏವಕಾರಾರ್ಥದಲ್ಲಿ ಪ್ರಯೋಗಿಸಲ್ಪಟ್ಟಿದೆ.

ನಿ ತುಂದತೇ—**ನಿತರಾಂ ವ್ಯಥಯತಿ ಅಥವಾ ನಿರ್ಗಚ್ಛತಿ**—ಅರಣಿಯಿಂದ ಹುಟ್ಟಿದ ಅಗ್ನಿಯನ್ನು ಯಾರಿಂದಲೂ ಸ್ಪರ್ಶಿಸುವುದಕ್ಕೆ ಸಾಧ್ಯವಿಲ್ಲ. ಒಂದುವೇಳೆ ಮುಟ್ಟಿದರೆ ವ್ಯಥೆಯನ್ನುಂಟುಮಾಡುವುದು. ಅಥವಾ ಅರಣಿಯಿಂದ ಹೊರಹೊರಟು, ತಾನು ಮೊದಲು ಅಡಗಿದ್ದ ಸ್ವರೂಪವನ್ನು ವ್ಯಕ್ತಪಡಿಸುವುದು. ಹೀಗೆಂದು ಎರಡು ರೀತಿಯಿಂದಲೂ ಅರ್ಥವಿವರಣೆ ಮಾಡಿದ್ದಾರೆ. ಇಲ್ಲಿ ಹಿಂಸಾರ್ಥಕವಾದ ತುದ ಧಾತುವಿಗೆ ಗತ್ಯರ್ಥವನ್ನು ಕಲ್ಪಿಸಿದ್ದಾರೆ.

ಹೋತಾ—ಯಜ್ಞದಲ್ಲಿ ಸಮಸ್ತ ದೇವತೆಗಳನ್ನೂ ಆಹ್ವಾನಿಸುವವನು ಹೋತೃವೆನಿಸಿಕೊಳ್ಳುವನು. ಇಲ್ಲಿ ಹಾಗೆ ದೇವತೆಗಳನ್ನು ಅಗ್ನಿಯೇ ಕರೆಯುವನು ಎಂಬರ್ಥದಲ್ಲಿ ಅಗ್ನಿಯನ್ನೇ ಹೋತೃವೆಂದು ಹೇಳಿರುವರು.

ವಿವಸ್ವತಃ—ಯಜ್ಞದಲ್ಲಿ ಮಂತ್ರಪೂರ್ವಕವಾಗಿ ದೇವತೆಗಳಿಗೆ ಯಜಮಾನನು ಕೊಟ್ಟ ಹವಿಸ್ಸನ್ನು ಅಗ್ನಿಯು ಅಯಾ ದೇವತೆಗಳಿಗೆ ತಲಪಿಸುವನು. ಅಗ್ನಿಯನ್ನು ಸೇವೆಮಾಡತಕ್ಕ ಯಜಮಾನನ ಎಂದರ್ಥವು.

ದೇವತಾತಾ—ಇದು ಯಜ್ಞದ ಹೆಸರು. ನಿರುಕ್ತ (೩-೧೯)ದಲ್ಲಿ ಯಜ್ಞವಾಚಕಗಳಾಗಿ ಹದಿನೈದು ಪರ್ಯಾಯಪದಗಳನ್ನು ಪಾಠಮಾಡಿದ್ದಾರೆ. **ಯಜ್ಞನಾಮಾನ್ಯುತ್ತರಾಣಿ ಪಂಚದಶ.** ಈ ಪದವು ಪ್ರಥಮಾ ವಿಭಕ್ತಿಯಲ್ಲಿದ್ದರೂ ಸಪ್ತಮ್ಯರ್ಥದಲ್ಲಿ ಪ್ರಯುಕ್ತವಾಗಿದೆ.

॥ ವ್ಯಾಕರಣಪ್ರಕ್ರಿಯಾ ॥

ನು—ಯಚಿತುನುಭ್ಯಾ—(ಪಾ. ಸೂ. ೯-೩-೧೩೩) ಎಂಬುದರಿಂದ ಸಂಹಿತಾದಲ್ಲಿ ದೀರ್ಘ ಬರುತ್ತದೆ.

ಅಮೃತಃ—ನ್ಯತಂ ಮರಣಂ ಅಸ್ಯ ನಾಸ್ತಿ ಇತಿ ಅಮೃತಃ ಬಹುವ್ರೀಹಿಸಮಾಸಮಾಡಿದಾಗ **ನಞೋ ಜರಮರಮಿತ್ರಮೃತಾಃ** (ಪಾ. ಸೂ. ೬-೨-೧೧೬) ಎಂಬುದರಿಂದ ಉತ್ತರಪದಾದ್ಯುದಾತ್ತಸ್ವರ ಬರುತ್ತದೆ.

ತುಂದತೇ—ತುದ ವ್ಯಥನೇ ಧಾತು. **ಸ್ವರಿತೇತ್ತಾದುದರಿಂದ ಸ್ವರಿತೇಞಿತಃ ಕ**—ಸೂತ್ರದಿಂದ ಆತ್ಮನೇ ಪದಪ್ರತ್ಯಯ ಬರುತ್ತದೆ. **ಟಿತಆತ್ಮನೇಪದಾನಾಂ ಟೇರೇ** ಎಂಬುದರಿಂದ ಏಕವಚನ ತಪ್ರತ್ಯಯಕ್ಕೆ ಏತ್ವ. **ತುದಾದಿಭ್ಯಃ ಶಃ** ಎಂಬುದರಿಂದ ಶ ವಿಕರಣ. ಇದು ಜಿತ್ತಾದುದರಿಂದ ಧಾತುವಿನ ಲಘೂಪಧೆಗೆ ಗುಣ ಬರು

ವುದಿಲ್ಲ. ಇಲ್ಲಿ ನಕಾರಾಗಮವು ಛಾಂದಸವಾಗಿ ಬರುತ್ತದೆ. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

ಅಭವತ್—ಭೂ ಸತ್ತಾಯಾಂ ಧಾತು. ಲಙ್ ಪ್ರಥಮಪುರುಷ ಏಕವಚನರೂಪ. ಯದ್ಯೋಗ ವಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಆಡಾಗಮ ಉದಾತ್ತವಾದುದರಿಂದ ಆದ್ಯುದಾತ್ತವಾಗುತ್ತದೆ.

ಸಾಧಿಷ್ಠೇಭಿಃ—ಬಾಢ ಶಬ್ದಕ್ಕೆ ಅತಿಶಯಾರ್ಥವಿವಕ್ಷಾಮಾಡಿದಾಗ ಇಷ್ಠನ್ ಪ್ರತ್ಯಯ. ಇದು ಪರವಾದಾಗ **ಅಂತಿಕ ಬಾಢಯೋರ್ನೇದಸಾಧೌ** (ಪಾ. ಸೂ. ೫-೩-೬೩) ಎಂಬುದರಿಂದ ಬಾಢ ಶಬ್ದಕ್ಕೆ ಸಾಧಾದೇಶ. **ಟೇಃ** ಎಂಬುದರಿಂದ ಅಕಾರಕ್ಕೆ ಲೋಪ. ಸಾಧಿಷ್ಠ ಶಬ್ದವಾಗುತ್ತದೆ. ಇದಕ್ಕೆ ಭಿಸ್ ಪರವಾದಾಗ **ಬಹುಲಂಛಂದಸಿ** ಎಂಬುದರಿಂದ ಭಿಸಿಗೆ ಐಸಾದೇಶ ಬರುವುದಿಲ್ಲ. **ಬಹುವಚನೇ ಝಲ್ಯೇತ್** ಸೂತ್ರದಿಂದ ಅಕಾರಕ್ಕೆ ಏತ್ವ. ಪ್ರತ್ಯಯಸಕಾರಕ್ಕೆ ರುತ್ವ ವಿಸರ್ಗ. ಇಷ್ಠನ್ ನಿತ್ವಾದುದರಿಂದ ಆದ್ಯುದಾತ್ತಸ್ವರ ಬರುತ್ತದೆ.

ದೇವತಾತಾ—ದೇವಶಬ್ದದಮೇಲೆ ಸ್ವಾರ್ಥದಲ್ಲಿ **ಸರ್ವದೇವಾತ್ತಾತಿಲ್** (ಪಾ. ಸೂ. ೪-೪-೧೪೨) ಎಂಬುದರಿಂದ ತಾತಿಲ್ ಪ್ರತ್ಯಯ. ದೇವತಾತಿ ಶಬ್ದವಾಗುತ್ತದೆ. ಇಲ್ಲಿ ದೇವತಾ ಸಂಬಂಧಿ ಯಜ್ಞವು ಲಕ್ಷಣಾವೃತ್ತಿಯಿಂದ ಬೋಧಿತವಾಗುತ್ತದೆ. ಅಥವಾ ದೇವಾನ್ ಹವಿಷಾ ಆ ವಿವಾಸತಿ ಇತಿ ಯೋಜ್ಯಮ್. (ದೇವತೆಗಳನ್ನು ಹವಿಸ್ಸಿನಿಂದ ಇಲ್ಲಿ ಸೇವಿಸುತ್ತಾನೆ ಎಂದು ಕ್ರಿಯಾಪದದೊಡನೆ ಸಂಬಂಧವನ್ನು ಹೇಳಬೇಕು.) ದ್ವಿತೀಯಾ ವಿಭಕ್ತಿಗೆ **ಸುಪಾಂಸುಲುಕ್** ಸೂತ್ರದಿಂದ ಡಾದೇಶ. ಡಿತ್ವಾದುದರಿಂದ ಪ್ರಾತಿಪದಿಕದ ಟಿಗೆ ಲೋಪ. ದೇವತಾತಾ ಎಂದು ರೂಪವಾಗುತ್ತದೆ. ತಾತಿಲ್ ಲಿತ್ವಾದುದರಿಂದ **ಲಿತಿ** ಎಂಬುದರಿಂದ ಪ್ರತ್ಯಯದ ಪೂರ್ವಕ್ಕೆ ಉದಾತ್ತಸ್ವರ ಬರುತ್ತದೆ.

ವಿವಾಸತಿ—ವಿವಾಸ ಧಾತುವು ಪರಿಚರಣಾರ್ಥದಲ್ಲಿದೆ. ಲಟ್ ಪ್ರಥಮಪುರುಷ ಏಕವಚನರೂಪ. ತಿಙಂತನಿಘಾತಸ್ವರ ಬರುತ್ತದೆ.

॥ ಸಂಹಿತಾಪಾಠಃ ॥

ಆ ಸ್ವಮದ್ಮ ಯುವಮಾನೋ ಅಜರಸ್ತೃಷ್ವವಿಷ್ಯನ್ನತ್ತಸೇಷು ತಿಷ್ಠತಿ ।
ಅತ್ಯೋ ನ ಪೃಷ್ಠಂ ಪ್ರುಷಿತಸ್ಯ ರೋಚತೇ ದಿವೋ ನ ಸಾನು ಸ್ತನಯನ್ನಚಿಕ್ರದತ್ ॥ ೨ ॥

॥ ಪದಪಾಠಃ ॥

ಆ । ಸ್ವಂ । ಅದ್ಮ । ಯುವಮಾನಃ । ಅಜರಃ । ತೃಷು । ಅವಿಷ್ಯನ್ । ಅತ್ತಸೇಷು ।
ತಿಷ್ಠತಿ ।
ಅತ್ಯಃ । ನ । ಪೃಷ್ಠಂ । ಪ್ರುಷಿತಸ್ಯ । ರೋಚತೇ । ದಿವಃ । ನ । ಸಾನು । ಸ್ತನಯನ್ । ಅಚಿಕ್ರದತ್ ॥ ೨ ॥

॥ ಸಾಯಣಭಾಷ್ಯ ॥

ಅಜರೋ ಜರಾರಹಿತೋಽಯಮಗ್ನಿಃ ಸ್ವಂ ಸ್ವಕೀಯಮದ್ಯಾದನೀಯಂ ತೃಣಗುಲ್ಮಾದಿಕಂ ಯುವಮಾನಃ ಸ್ವಕೀಯಜ್ವಾಲಯಾ ಸಂಮಿಶ್ರಯನ್ ತದನಂತರಂ ಚಾವಿಷ್ಯನ್ ಭಕ್ಷಯಂಶ್ಚ । ಅವಿಷ್ಯನ್ನಿತ್ಯೇತದತ್ತಿಕರ್ಮಸು ಪಠಿತಂ । ಏವಂಭೂತೋಽಗ್ನಿಸ್ತೃಷು ಕ್ಷಿಪ್ರಮೇವಾತಸೇಷು ಪ್ರಭೂತೇಷು ಕಾಷ್ಠೇಷ್ವಾ ತಿಷ್ಠತಿ । ಅರೋಹತಿ । ಅತ್ರಾತಸಶಬ್ದಃ ಕಾಷ್ಠವಾಚೀ । ಅತಸಂ ನ ಶುಷ್ಕಂ । ಯಜ್ವೇ. ೪-೪-೪ । ಇತಿ ದರ್ಶನಾತ್ । ಪ್ರುಷಿತಸ್ಯ ದಗ್ಧುಮಿತಸ್ತತಃ ಪ್ರವೃತ್ತಸ್ಯಾಗ್ನೇಃ ಪೃಷ್ಠಮುಪರ್ಯವಸ್ಥಿತಂ ಜ್ವಾಲಾಜಾಲಮತ್ಯೋ ನ ರೋಚತೇ । ಯಥಾ ಸತತಗಮನಶೀಲೋಽಶ್ವ ಇತಸ್ತತೋ ಗಚ್ಛನ್ ಶೋಭತೇ ಏವಮಗ್ನೇರ್ಜ್ವಾಲಾಪಿ ಸರ್ವತ್ರ ಗಚ್ಛಂತೀ ಶೋಭತ ಇತಿ ಭಾವಃ । ತಥಾನೀಂ ದಿವೋ ದ್ಯುಲೋಕಸ್ಯ ಸಂಬಂಧಿ ಸಾನು ಸಮುಚ್ಛ್ರಿತಮಭ್ರಂ ಸ್ತನಯನ್ನಿವ ಶಬ್ದಯನ್ನಿವಾಚಿಕ್ರದತ್ । ಗಂಭೀರಂ ಶಬ್ದಮಾತ್ಮನಮಚೀಕರತ್ ॥ ಯುವಮಾನಃ । ಯು ಮಿಶ್ರಣೇ । ವ್ಯತ್ಯಯೇನಾತ್ಮನೇಪದಂ । ಶಪಿ ಪ್ರಾಪ್ತೇ ವ್ಯತ್ಯಯೇನ ಶಃ । ತಸ್ಯ ಬಹುಲಂ ಛಂದಸೀತಿ ಲುಗಭಾವಃ । ಅದುಪದೇಶಾಲ್ಲಸಾರ್ವಧಾತುಕಾನುದಾತ್ತತ್ವೇ ವಿಕರಣಸ್ವರ ಏವ ಶಿಷ್ಯತೇ । ಅಜರಃ । ಬಹುವ್ರೀಹೌ ನಞೋ ಜರಮರಮಿತ್ರಮೃತಾ ಇತ್ಯುತ್ತರಪದಾದ್ಯುದಾತ್ತತ್ವಂ । ಅಚಿಕ್ರದತ್ । ಕದಿ ಕ್ರದಿ ಕ್ಲದಿ ಆಹ್ವಾನೇ ರೋದನೇ ಚ । ಅಸ್ಮಾಣ್ಣ್ಯಂತಾಲ್ಲುಙಿ ಚಙ್ಯಾಗಮಾನುಶಾಸನಸ್ಯಾನಿತ್ಯತ್ವಾನ್ನುಮಭಾವಃ । ದ್ವಿರ್ಭಾವಹಲಾದಿಶೇಷಸನ್ವದ್ಭಾವೇತ್ವಾನಿ ।

॥ ಪ್ರತಿಪದಾರ್ಥ ॥

ಅಜರಃ—ಮುಪ್ಪಿಲ್ಲದ ಅಗ್ನಿಯು । ಸ್ವಂ—ತನ್ನ । ಅದ್ಮ—ಭಕ್ಷ್ಯವನ್ನು । ಯುವಮಾನಃ—(ತನ್ನ ಜ್ವಾಲೆಯೊಂದಿಗೆ) ಸೇರಿಸಿಕೊಂಡು । ಅವಿಷ್ಯ—ಭಕ್ಷಿಸುತ್ತಾ । ತೃಷು—ಜಾಗ್ರತೆಯಾಗಿಯೇ । ಅತಸೇಷು—ಒಣಗಿದ ಕಟ್ಟಿಗೆಗಳಲ್ಲಿ । ಆ ತಿಷ್ಠತಿ—ಹತ್ತುತ್ತಾನೆ । ಪ್ರುಷಿತಸ್ಯ—ದಹಿಸಲು ಸುತ್ತಲೂ ಹರಡಿರುವ ಅಗ್ನಿಯ । ಪೃಷ್ಠಂ—ಮೇಲೆದ್ದಿರುವ ಜ್ವಾಲೆಯು । ಅತ್ಯೋ ನ—ಯಾವಾಗಲೂ ಸಂಚರಿಸುವ ಸ್ವಭಾವವುಳ್ಳ ಕುದುರೆಯಂತೆ। ರೋಚತೇ—ಶೋಭಿಸುತ್ತದೆ (ಆಗ) । ದಿವಃ—ದ್ಯುಲೋಕದ । ಸಾನು—ಶಿಖರಪ್ರದೇಶದಲ್ಲಿರುವ (ಮೇಘವು) । ಸ್ತನಯನ್ ನ—ಶಬ್ದಮಾಡುವಂತೆ । ಅಚಿಕ್ರದತ್—(ಗಂಭೀರವಾಗಿ) ಶಬ್ದಮಾಡಿತು (ಮಾಡುತ್ತದೆ).

॥ ಭಾವಾರ್ಥ ॥

ಮುಪ್ಪಿಲ್ಲದ (ಎದರೆ ಅರಿಹೋಗದಿರುವ) ಅಗ್ನಿಯು ತನ್ನ ಭಕ್ಷ್ಯವಾದ ತೃಣಗುಲ್ಮಾದಿಗಳನ್ನು ತನ್ನ ಜ್ವಾಲೆಯೊಂದಿಗೆ ಸೇರಿಸಿಕೊಂಡು ಭಕ್ಷಿಸುತ್ತ ಜಾಗ್ರತೆಯಾಗಿಯೇ ಒಣಗಿದ ಕಟ್ಟಿಗೆಗಳಲ್ಲಿ ಹತ್ತಿ ಉರಿಯುತ್ತದೆ. ದಹಿಸಲು ಸುತ್ತಲೂ ಹರಡಿರುವ ಅಗ್ನಿಯ ಜ್ವಾಲೆಯು ಯಾವಾಗಲೂ ಸಂಚರಿಸುವ ಸ್ವಭಾವವುಳ್ಳ ಕುದುರೆಯಂತೆ ಶೋಭಿಸುತ್ತದೆ. ಅಗ್ನಿಯು ಆಗ ದ್ಯುಲೋಕದ ಶಿಖರಪ್ರದೇಶದಲ್ಲಿರುವ ಮೇಘವು ಶಬ್ದಮಾಡುವಂತೆ ಗಂಭೀರವಾಗಿ ಶಬ್ದಮಾಡುತ್ತದೆ.

English Translation.

Undecaying Agni, combining his food (with his flame) and devouring it quickly, ascends the dry wood; (the blaze) situate on the back (of Agni) spreading hither and thither for consuming, shines like a horse and roars like a roaring (cloud) in the height of heaven.

॥ ವಿಶೇಷ ವಿಷಯಗಳು ॥

ಅದ್ಮ—ಅದನೀಯಂ ತೃಣಗುಲ್ಮಾದಿಕಂ—ಅಗ್ನಿಗೆ ಆಹಾರವಾಗಿರುವ ತೃಣಗುಲ್ಮಾದಿಗಳಿಗೆ ಇಲ್ಲಿ ಅದ್ಮ ಎಂಬ ಹೆಸರು. ತಿನ್ನುವದಕ್ಕೆ ಅಥವಾ ದಹಿಸುವುದಕ್ಕೆ ಯೋಗ್ಯವಾದ ವಸ್ತುವು.

ಯುವಮಾನಃ ಆವಿಷ್ಯನ್—ಸ್ವಕೀಯೇಜ್ವಾಲಯಾ ಸಂಮಿಶ್ರಯನ್ ತದನಂತರಂ ಚ ಭಕ್ಷಯನ್—ತನ್ನ ಆಹಾರವಾದ ತೃಣಾದಿಗಳನ್ನು ಯಜ್ಞಾದಲ್ಲಿ ಹವಿಸ್ಸಿನೊಡನೆ ಬೆರಸಿ ಭಕ್ಷಿಸುವವನು ಅಗ್ನಿ. **ಆವಿಷ್ಯನ್** ಎಂಬ ಪದವನ್ನು ನಿರುಕ್ತಕಾರರು **ಅತ್ತಿ**ಕರ್ಮದಲ್ಲಿ ಅಂದರೆ ಭಕ್ಷಣಾರ್ಥದಲ್ಲಿ ಪಾಠಮಾಡಿರುವರು (ನಿ. ರು. ೨-೮).

ಅತಸೇಷು—ಹೆಚ್ಚಾದ ಕಟ್ಟಿಗೆಯೇ ಮೊದಲಾದುವುಗಳಲ್ಲಿ ಅತಸ ಶಬ್ದವು ಕಾಷ್ಠವಾಚಿಯಾಗಿ **ಅತಸಂ ನ ಶುಷ್ಕಮ್** (ಋ. ಸಂ. ೪-೪-೪) ಎಂದು ಹೇಳಲಾಗಿದೆ.

ಪುಷಿತಸ್ಯ—ದಗ್ಧುಮಿತಸ್ತತಃ ಪ್ರವೃತ್ತಸ್ಯಾಗ್ನೇಃ—ಸರ್ವವನ್ನೂ ದಹಿಸುವ ಸ್ವಭಾವವುಳ್ಳ ಅಗ್ನಿಯು ಅಲ್ಲಲ್ಲಿ ಹರಡುವುದು. ಈ ಅರ್ಥದಲ್ಲಿ ಅಗ್ನಿಗೆ ಪುಷಿತನೆಂಬ ಹೆಸರು ಬಂದಿದೆ.

ಅತ್ಯೋ ನ ರೋಚತೇ—ಇಲ್ಲಿ ಅತ್ಯಶಬ್ದವು ಅಶ್ವಾರ್ಥಕವಾಗಿದೆ. ನ ಶಬ್ದಕ್ಕೆ ಇವಾರ್ಥಕತ್ವವುಂಟು. ಕುದುರೆಯು ಅಲ್ಲಲ್ಲಿ ಸಂಚರಿಸುತ್ತಾ ಹೇಗೆ ಶೋಭಿಸುವುದೋ, ಅದೇರೀತಿ ಅಗ್ನಿಯು ತನ್ನ ಜ್ವಾಲಾವರಣದಿಂದ ಸರ್ವತ್ರ ವ್ಯಾಪಿಸಿ ಪ್ರಕಾಶಿಸುತ್ತಾನೆ ಎಂದು ತಾತ್ಪರ್ಯಾರ್ಥ.

॥ ವ್ಯಾಕರಣಪ್ರಕ್ರಿಯಾ ॥

ಅದ್ಮ—ಅದ ಭಕ್ಷಣೇ ಧಾತು. ಔಣಾದಿಕಮನ್ ಪ್ರತ್ಯಯ ನಿತ್ತಾದುದರಿಂದ ಆದ್ಯುದಾತ್ತವಾಗುತ್ತದೆ.

ಯುವಮಾನಃ—ಯು ಮಿಶ್ರಣೇ (ಅಮಿಶ್ರಣೇಚ) ಧಾತು. ಅದಾದಿ **ವ್ಯತ್ಯಯೋಬಹುಲಂ** ಎಂಬುದರಿಂದ ಆತ್ಮನೇ ಪದವಾಗುತ್ತದೆ. ಲಡರ್ಥದಲ್ಲಿ ಶಾನಚ್ ಪ್ರತ್ಯಯ. **ಕರ್ತರಿಶಪ್** ಸೂತ್ರದಿಂದ ಶಪ್ ಪ್ರಾಪ್ತವಾದರೆ ವ್ಯತ್ಯಯದಿಂದ ಶ ವಿಕರಣ ಬರುತ್ತದೆ. ಅದಕ್ಕೆ **ಬಹುಲಂಛಂದಸಿ** ಎಂಬುದರಿಂದ ಲುಕ್ ಬರುವುದಿಲ್ಲ. **ಆಚಿಶ್ನುಧಾತುಭ್ರುವಾಂ** ಸೂತ್ರದಿಂದ ಶ ವಿಕರಣ ಪರವಾದಾಗ ಜುತ್ತಾದುದರಿಂದ ಗುಣ ಬಾರದಿರುವಾಗ ಉವಙಾದೇಶ. **ಆನೇಮುಕ್** (ಪಾ. ಸೂ. ೭-೩-೮೦) ಎಂಬುದರಿಂದ ಅಜಂತಾಂಗಕ್ಕೆ ಮುಕಾಗಮ. ಅದುಪದೇಶದ ಪರದಲ್ಲಿರುವುದರಿಂದ ಲಸಾರ್ವಧಾತುಕವು (ಆನ) **ತಾಸ್ಯನುದಾತ್ತೇಶ್** (ಪಾ. ಸೂ. ೬-೧-೧೮೬) ಎಂಬುದರಿಂದ ಅನುದಾತ್ತವಾಗುತ್ತದೆ. ಆಗ ವಿಕರಣಸ್ವರ ಉಳಿಯುತ್ತದೆ. ವಕಾರೋತ್ತರಾಕಾರ ಉದಾತ್ತವಾಗುತ್ತದೆ.

ಅಜರಃ—ನ ವಿದ್ಯತೇ ಜರಾ ಯಸ್ಯ ಸಃ ಅಜರಃ. ಬಹುವ್ರೀಹಿಸಮಾಸದಲ್ಲಿ **ನಞೋ ಜರಮರ ಮಿತ್ರಮೃತಾಃ** (ಪಾ. ಸೂ. ೬-೩.೧೧೬) ಎಂಬುದರಿಂದ ಉತ್ತರಪದಾದ್ಯುದಾತ್ತಸ್ವರ ಬರುತ್ತದೆ.

ತಿಷ್ಠತಿ—ಷ್ಠಾ ಗತಿನಿವೃತ್ತೌ ಧಾತು. ಲಟ್ ಪ್ರಥಮಪುರುಷಏಕವಚನದರೂಪ. **ಸ್ಥಾಘ್ವೋರಿದ್ಧಾ**—ಸೂತ್ರದಿಂದ ಶಪ್ ಪರವಾದಾಗ ಪ್ರಕೃತಿಗೆ ತಿಷ್ಠ ಎಂಬ ಆದೇಶ. **ತಿಙಂತನಿಘಾತಸ್ವರ** ಬರುತ್ತದೆ.

ಅಚಿಕ್ರದತ್—ಕದಿ ಕ್ರದಿ ಕ್ಲದಿ ಅಹ್ವಾನೇ ರೋದನೇ ಚ ಧಾತು. **ಅಗಮಾನುಶಾಸನಮನಿತ್ಯಮ್** ಎಂಬುದರಿಂದ ಇದಿತ್ತಾದರೂ ನುಮಾಗಮ ಬರುವುದಿಲ್ಲ. ಪ್ರೇರಣಾರ್ಥ ತೋರುವುದರಿಂದ **ಹೇತುಮತಿಚ** ಎಂಬುದರಿಂದ ಣಿಚ್. ಣಿಜಂತದ ಮೇಲೆ ಲುಙ್. ಪ್ರಥಮಪುರುಷ ಏಕವಚನದಲ್ಲಿ **ತಿಪ್** ಪ್ರತ್ಯಯ. **ಇತಶ್ಚ** ಎಂಬುದರಿಂದ ಇಕಾರಲೋಪ. **ಚ್ಲಿಲುಙೀ** ಸೂತ್ರದಿಂದ ಪ್ರಾಪ್ತವಾದ ಚ್ಲಿಗೆ **ಣಿಶ್ರಿದ್ರುಸ್ರುಭ್ಯಃ ಕರ್ತರಿ ಚಙ್** (ಪಾ. ಸೂ. ೩-೧-೪೮) ಎಂಬುದರಿಂದ ಚಙಾದೇಶ. **ಚಙೀ** (ಪಾ. ಸೂ. ೬-೧-೧೧) ಎಂಬುದರಿಂದ ಧಾತುವಿಗೆ ದ್ವಿತ್ವ. ಅಭ್ಯಾಸಕ್ಕೆ ಹಲಾದಿಶೇಷ. **ಕುಹೋಶ್ಚುಃ** ಎಂಬುದರಿಂದ ಚುತ್ವ. **ಸನ್ವಲ್ಲಘುನಿ ಚಙಿ** ಸೂತ್ರದಿಂದ ಸನ್ವದ್ಭಾವ ಬರುವುದರಿಂದ **ಸನ್ಯತಃ** ಎಂಬುದರಿಂದ ಅಭ್ಯಾಸಾಕಾರಕ್ಕೆ ಇತ್ವ. ಸಂಯುಕ್ತಾಕ್ಷರ ಪರದಲ್ಲಿರುವುದರಿಂದ ಲಘುಸಂಜ್ಞೆ ಇಲ್ಲದಿರುವುದರಿಂದ ದೀರ್ಘ ಬರುವುದಿಲ್ಲ. ಅತಿಙಂತದ ಪರದಲ್ಲಿರುವುದರಿಂದ ತಿಙಂತನಿಘಾತಸ್ವರ ಬರುತ್ತದೆ.

॥ ಸಂಹಿತಾಪಾಠಃ ॥

ಕ್ರಾಣಾ ರುದ್ರೇಭಿರ್ವಸುಭಿಃ ಪುರೋಹಿತೋ ಹೋತಾ ನಿಷತ್ತೋ ರ-
ಯಿಷಾಳಮರ್ತ್ಯಃ ।
ರಥೋ ನ ವಿಕ್ಷ್ವೃಂಜಸಾನ ಆಯುಷು ವ್ಯಾನುಷಗ್ವಾರ್ಯಾ ದೇವ
ಋಣ್ವತಿ ॥ ೩ ॥

॥ ಪದಪಾಠಃ ॥

ಕ್ರಾಣಾ । ರುದ್ರೇಭಿಃ । ವಸುಭಿಃ । ಪುರಃಹಿತಃ । ಹೋತಾ । ನಿಷತ್ತಃ । ರಯಿ-
ಷಾಟ್ । ಅಮರ್ತ್ಯಃ ।
ರಥಃ । ನ । ವಿಕ್ಷು । ಋಂಜಸಾನಃ । ಆಯುಷು । ವಿ । ಆನುಷಕ್ । ವಾರ್ಯಾ ।
ದೇವಃ । ಋಣ್ವತಿ ॥ ೩ ॥

॥ ಸಾಯಣಭಾಷ್ಯಂ ॥

ಕ್ರಾಣಾ ಹವಿರ್ವಹನಂ ಕುರ್ವಾಣೋ ರುದ್ರೇಭೀ ರುದ್ರೈರ್ವಸುಭಿಶ್ಚ ಪುರೋಹಿತಃ ಪುರ-
ಸ್ಕೃತೋ ಹೋತಾ ದೇವಾನಾಮಾಹ್ವಾತಾ ನಿಷತ್ತೋ ಹವಿಃಸ್ವೀಕರಣಾಯ ದೇವಯಜನೇ ನಿಷಣ್ಣೋ
ರಯಿಷಾಟ್ ರಯೀಣಾಂ ಶತ್ರುಧನಾನಾಮಭಿಭವಿತಾಮರ್ತ್ಯೋ ಮರಣಧರ್ಮಾ । ಏವಂಭೂತೋ ದೇವೋ
ದ್ಯೋತಮಾನೋಽಗ್ನಿರ್ವಿಕ್ಷು ಪ್ರಜಾಸು ಲೌಕಿಕಜನೇಷು ರಥೋ ನ ರಥ ಇವಾಯುಷು ಯಜಮಾನ-
ಲಕ್ಷಣೇಷು ಮನುಷ್ಯೇಷ್ವೃಂಜಸಾನಃ ಸ್ತೂಯಮಾನೋ ವಾರ್ಯಾ ವಾರ್ಯಾಣಿ ಸಂಭಜನೀಯಾನಿ
ಧನಾನ್ಯಾನುಷಕ್ ಆನುಷಕ್ತಂ ಯಥಾ ಭವತಿ ತಥಾ ವ್ಯೃಣ್ವತಿ । ವಿಶೇಷೇಣ ಪ್ರಾಪಯತಿ । ಯದ್ವಾ ।

ವಾರ್ಯಾಣಿ ವರಣೀಯಾನಿ ಹವೀಂಷಿ ಸ್ವಯಂ ಪ್ರಾಪ್ನೋತಿ ॥ ಕ್ರಾಣಾ । ಕರೋತೇಃ ಶಾನಚಿ ಬಹುಲಂ ಛಂದಸೀತಿ ವಿಕರಣಸ್ಯ ಲುಕ್ । ಶಾನಚೋ ಜ್ಞಾತ್ವಾದ್ಯುಪಾಧಾವೇ ಯಜಾದೇಶಃ । ಚಿತ ಇತ್ಯಂತೋದಾತ್ತತ್ವಂ । ಸುಪಾಂ ಸುಲುಗಿತಿ ಸೋಃ ಪೂರ್ವಸವರ್ಣದೀರ್ಘತ್ವಂ । ನಿಷತ್ತಃ । ಷದ್ಲೃ ವಿಕರಣಗತ್ಯವಸಾದನೇಷು । ಅಸ್ಮಾತ್ಕರ್ಮಣಿ ನಿಷ್ಠಾ । ನಸತ್ತನಿಷತ್ತೇತ್ಯಾದಿನಾ । ಪಾ. ೮-೨-೬೧ । ನಿಷ್ಠಾನತ್ವಾಭಾವೋ ನಿಪಾತಿತಃ । ಗತಿರನಂತರ ಇತಿ ಗತೇಃ ಪ್ರಕೃತಿಸ್ವರತ್ವಂ । ರಯಿಷಾಟ್ । ಷಹ ಅಭಿಭವೇ । ಛಂದಸಿ ಸಹಃ । ಪಾ. ೩-೨-೬೩ । ಇತಿ ಣ್ವಿಃ । ಸಹೇಃ ಸಾಡಃ ಸಃ । ಪಾ. ೮-೩-೫೬ । ಇತಿ ಷತ್ವಂ । ಋಂಜಸಾನಃ । ಋಂಜತಿಃ ಸ್ತುತಿಕರ್ಮಾ । ಅಸಾನಜಿತ್ಯನುವೃತ್ತಾವೃಂಜಿವೃಧಿಮಂದಿಸಹಿಭ್ಯಃ ಕಿತ್ । ಉ. ೨-೬೭ । ಇತಿ ಕರ್ಮಣ್ಯಸಾನಚ್ಪ್ರತ್ಯಯಃ । ಚಿತ ಇತ್ಯಂತೋದಾತ್ತತ್ವಂ । ಆಯುಷು । ಆಯವ ಇತಿ ಮನುಷ್ಯನಾಮ । ಇಣ್ ಗತಾವಿತ್ಯಸ್ಮಾಚ್ಛಂದಸೀಣ ಇತ್ಯುಣ್ಪ್ರತ್ಯಯಃ । ವೃದ್ಧ್ಯಭ್ಯಾದೇಶೌ । ವಾರ್ಯಾ । ವೃಙ್ ಸಂಭಕ್ತೌ । ಯಹಲೋರ್ಣ್ಯರ್ತ್ । ತಿಪ್ಸ್ವರಿತೇ ಪ್ರಾಪ್ತೇ ಈಡವಂದವೃಶಂಸದುಹಾಂ ಣ್ಯತ ಇತ್ಯಾದ್ಯುದಾತ್ತತ್ವಂ । ಶೇಶ್ಛಂದಸೀತಿ ಶೇರ್ಲೋಪಃ । ಋಣ್ವತಿ । ರಿವಿ ಗತೌ । ವ್ಯತ್ಯಯೇನ ಸಂಪ್ರಸಾರಣಂ । ಇದಿತ್ತ್ವಾನ್ನುಮ್ । ಕರ್ತರಿ ಶಪ್ ॥

॥ ಪ್ರತಿಪದಾರ್ಥ ॥

ಕ್ರಾಣಾ—(ಹವಿಸ್ಸನ್ನು) ವಹಿಸುವವನೂ । **ರುದ್ರೇಭಿಃ**—ರುದ್ರರಿಂದಲೂ । **ವಸುಭಿಃ**—ವಸುಗಳಿಂದಲೂ । **ಪುರೋಹಿತಃ**—ಪೂಜಿಸಲ್ಪಡುವವನೂ । **ಹೋತಾ**—ದೇವತೆಗಳನ್ನು (ಯಜ್ಞಕ್ಕೆ) ಕರೆಯುವವನೂ । **ನಿಷತ್ತಃ**—(ಯಜ್ಞದಲ್ಲಿ ಅಗ್ರಾಸನವಹಿಸಿ) ಕುಳಿತುಕೊಳ್ಳುವವನೂ । **ರಯಿಷಾಟ್**—(ಶತ್ರುಗಳ) ಧನವನ್ನು ಜಯಿಸಿ ಹಂಚುವವನೂ । **ಅಮರ್ತ್ಯಃ**—ಮರಣರಹಿತನೂ ಆದ । **ದೇವಃ**—ಪ್ರಕಾಶಮಾನನಾದ ಅಗ್ನಿಯು । **ವಿಕ್ಷು**—ಪ್ರಜೆಗಳಲ್ಲಿ । **ರಥೋ ನ**—ರಥಗಳು ಪೂಜಿಸಲ್ಪಡುವಂತೆ । **ಆಯುಷು**—ಯಜಮಾನರೂಪರಾದ ಮನುಷ್ಯರಲ್ಲಿ । **ಋಂಜಸಾನಃ**—ಸ್ತುತನಾಗಿ । **ವಾರ್ಯಾ**—ಅಪೇಕ್ಷಿತಗಳಾದ ಹವಿಸ್ಸುಗಳನ್ನು । **ಅನುಷಕ್**—ಅನುಕ್ರಮವಾಗಿಯೂ । **ವಿ ಋಣ್ವತಿ**—ಅಧಿಕವಾಗಿಯೂ ಪಡೆಯುತ್ತಾನೆ ಅಥವಾ ಅಪೇಕ್ಷಿತಗಳಾದ ಧನಗಳನ್ನು ಯಜಮಾನರಿಗೆ ಒದಗಿಸುತ್ತಾನೆ.

॥ ಭಾವಾರ್ಥ ॥

ಹವಿರ್ವಾಹಕನೂ, ರುದ್ರರಿಂದಲೂ ವಸುಗಳಿಂದಲೂ ಪೂಜಿತನೂ, ದೇವತೆಗಳನ್ನು ಯಜ್ಞಕ್ಕೆ ಕರೆಯುವವನೂ, ಯಜ್ಞದಲ್ಲಿ ಅಗ್ರಾಸನವನ್ನು ವಹಿಸುವವನೂ, ಶತ್ರುಧನಗಳನ್ನು ಜಯಿಸಿ ಹಂಚುವವನೂ, ಮರಣರಹಿತನೂ ಮತ್ತು ಪ್ರಕಾಶಮಾನನೂ ಆದ ಅಗ್ನಿಯು, ಪ್ರಜೆಗಳಿಂದ ರಥಗಳು ಪೂಜಿಸಲ್ಪಡುವಂತೆ ಯಜಮಾನರೂಪದಲ್ಲಿರುವ ಮಾನವರಿಂದ ಸ್ತುತನಾಗಿ ಅನುಕ್ರಮವಾಗಿ ಅರ್ಪಿಸಿದ ಮತ್ತು ಅಪೇಕ್ಷಿತಗಳಾದ ಹವಿಸ್ಸುಗಳನ್ನು ಅಧಿಕವಾಗಿ ಪಡೆಯುತ್ತಾನೆ.

English Translation.

The immortal and effulgent Agni, the bearer of oblations, placed in front of all by the Rudras and Vasus, the invoker (of the gods) who is present at a sacrifice and conquers the wealth (of the enemies), lauded by his worshippers, and admired like a chariot amongst mankind, accepts the oblations that are successively presented.

|| ವಿಶೇಷ ವಿಷಯಗಳು ||

ಕ್ರಾಣಾ—ಹವಿರ್ವಹನಂ ಕುರ್ವಾಣಃ—ಹವಿಸ್ಸನ್ನು ಯಜ್ಞದಲ್ಲಿ ದೇವತೆಗಳಿಗೆ ಒಯ್ಯುವವನು

ನಿಷತ್ತಃ—ಹವಿಃಸ್ವೀಕರಣಾಯ ದೇವಯಜನೇ ನಿಷಣ್ಣಃ—ದೇವತೋದ್ದೇಶಕವಾಗಿ ನಡೆಸುವ ಸಕಲ ಯಾಗಕರ್ಮಗಳಲ್ಲಿಯೂ ಅಗ್ನಿಯು ಹವಿಸ್ಸನ್ನು ಸ್ವೀಕರಿಸಲು ಸಿದ್ಧನಾಗಿ ಕುಳಿತಿರುವನು.

ರಯಿಷಾಟ್—ಷಹ ಅಭಿಭವೇ ಎಂಬ ಅಭಿಭವಾರ್ಥಕ (ತಿರಸ್ಕಾರ)ವಾದ ಷಹ ಧಾತುವಿನಿಂದ ನಿಷ್ಪನ್ನವಾದ ಷಾಟ್ ಎಂಬ ಶಬ್ದವು ತಿರಸ್ಕರಿಸುವವನು ಎಂಬರ್ಥವನ್ನು ಕೊಡುವುದು. ರಯಿ ಶಬ್ದಕ್ಕೆ ಇಲ್ಲಿ ಶತ್ರು ಧನವೆಂದು ಹೆಸರು. ಶತ್ರುಗಳ ದ್ರವ್ಯವನ್ನು ಸಂಪೂರ್ಣವಾಗಿ ನಾಶಗೊಳಿಸುವನು ಎಂದರೆ ಗೆದ್ದು ತರುವನು ಎಂದರ್ಥ.

ವಿಶ್ಪತಿ ರಥೋ ನ—ಪ್ರಜಾಸು ಲೌಕಿಕಜನೇಷು—ಲೋಕವ್ಯವಹಾರದಲ್ಲಿ ತೊಡಗಿರುವ ಜನರಿಗೆ ರಥವು ಹೇಗೆ ಇಷ್ಟಾರ್ಥಸಾಧಕವಾಗುವುದೋ ಅದೇರೀತಿ ಯಜ್ಞದಲ್ಲಿ ಯಜಮಾನರಿಗೆ ತನ್ಮ ಇಷ್ಟದಂತೆ ಆಯಾ ದೇವತೆಗಳಿಗೆ ಯಜ್ಞಭಾಗವನ್ನು ಒದಗಿಸುವುದರಲ್ಲಿ ಅಗ್ನಿಯು ವಿಶೇಷ ಸಹಾಯಕನಾಗುವನು.

ಅಯುಷು—ಯಜಮಾನಲಕ್ಷಣೇಷು ಮನುಷ್ಯೇಷು—ಇಲ್ಲಿ ಅಯುಶ್ಶಬ್ದವು ಮನುಷ್ಯವಾಚಿಯಾಗಿ ನಿರುಕ್ತದಲ್ಲಿ ಪಠಿತವಾಗಿದೆ (ನಿರು. ೨-೩-೧೭).

ಏ ಋಣ್ವತಿ—ರಿವಿ ಗತೌ ಎಂಬ ಧಾತುವಿನಿಂದ ನಿಷ್ಪನ್ನನಾದ ಈ ಶಬ್ದವು ವಿಶೇಷರೀತಿಯಿಂದ ಹೊಂದಿಸುವುದು ಎಂಬರ್ಥವನ್ನು ಕೊಡುವುದು.

ವ್ಯಾಕರಣಪ್ರಕ್ರಿಯಾ

ಕ್ರಾಣಾ—ಡುಕೃಞ್ ಕರಣೇ ಧಾತು. ಲಡರ್ಥದಲ್ಲಿ ಶಾನಚ್ ಪ್ರತ್ಯಯ. **ಬಹುಲಂ ಛಂದಸಿ** ಎಂಬುದರಿಂದ ವಿಕರಣಕ್ಕೆ (ಉ) ಲುಕ್. ಅಪಿತ್ ಸಾರ್ವಧಾತುಕವಾದುದರಿಂದ ಙಿದ್ವದ್ಭಾವವಿರುವುದರಿಂದ ಶಾನಚ್ ನಿಮಿತ್ತವಾಗಿ ಧಾತುವಿನ ಇಕಿಗೆ ಗುಣ ಬರುವುದಿಲ್ಲ ಯಣಾದೇಶ. ರೇಫನಿಮಿತ್ತವಾಗಿ **ಆಟ್ಕುಪ್ವಾಙ್** ಸೂತ್ರದಿಂದ ಶಾನಚಿನ **ನ**ಕಾರಕ್ಕೆ ಣತ್ವ. **ಚಿತಃ** ಎಂಬುದರಿಂದ ಅಂತೋದಾತ್ತಸ್ವರ ಬರುತ್ತದೆ. ಸು ಪರವಾಂದಾಗ ಸುಪಾಂಸುಲುಕ್ ಎಂಬುದರಿಂದ ವಿಭಕ್ತಿಗೆ ಪೂರ್ವಸವರ್ಣದೀರ್ಘ. ಕ್ರಾಣಾ ಎಂದು ರೂಪವಾಗುತ್ತದೆ.

ನಿಷತ್ತಃ—ಷದಲೃ-ವಿಶರಣಗತ್ಯವಸಾದನೇಷು ಧಾತು. ಇದಕ್ಕೆ ಕರ್ಮಣಿಯಲ್ಲಿ ಕ್ತ ಪ್ರತ್ಯಯ. ದಕಾರದಪರದಲ್ಲಿ ಬಂದುದರಿಂದ ನಿಷ್ಠಾತಕಾರಕ್ಕೆ ಣತ್ವವು ಪ್ರಾಪ್ತವಾದರೆ **ನಸತ್ತನಿಷತ್ತ** (ಪಾ. ಸೂ. ೮-೩-೬೧) ಎಂಬುದರಿಂದ ನಿಷ್ಠಾನತ್ವಾಭಾವವು ನಿಪಾತಿತವಾಗಿದೆ. **ಉಪಸರ್ಗಾತ್**—ಸೂತ್ರದಿಂದ ಧಾತು ಸಕಾರಕ್ಕೆ ಷತ್ವ. **ಗತಿರನಂತರಃ** ಎಂಬುದರಿಂದ ಗತಿಗೆ (ನಿ) ಪ್ರತ್ಯಯಸ್ವರ ಬರುತ್ತದೆ.

ರಯಿಷಾಟ್ || ಷಹ ಅಭಿಭವೇ ಧಾತು. **ಛಂದಸಿ ಸಹಃ** (ಪಾ. ಸೂ. ೩-೨-೬೩) ಎಂಬುದರಿಂದ ಣ್ವಿ ಪ್ರತ್ಯಯ. ಣಿಶ್ಚಾದುದರಿಂದ **ಅತಉಪಧಾಯಾಃ** ಎಂಬುದರಿಂದ ಧಾತುವಿನ ಉಪಧೆಗೆ ವೃದ್ಧಿ ಬರುತ್ತದೆ. ಪ್ರಥಮಾ ಸು ಪರವಾದಾಗ **ಸೋಧಃ** ಸೂತ್ರದಿಂದ ಢತ್ವ. **ಝಲಾಂ ಜಶೋಂತೇ** ಸೂತ್ರದಿಂದ ಜಶ್ತ್ವ. **ವಾವಸಾನೇ** ಎಂಬುದರಿಂದ ವಿಕಲ್ಪವಾಗಿ ಚರ್ತ್ವ. ಪದಾಂತ ವಿಷಯದಲ್ಲಿ **ಸಹೇಃ ಸಾಡಃ ಸಃ** (ಪಾ. ಸೂ. ೮-೩-೫೬) ಎಂಬುದರಿಂದ ಸಕಾರಕ್ಕೆ ಷತ್ವ ರಯಿಷಾಟ್ ಎಂದು ರೂಪವಾಗುತ್ತದೆ.

ಋಞ್ಜಾನಃ—ಋಂಜ ಧಾತುವು ಸ್ತುತ್ಯರ್ಥದಲ್ಲಿದೆ. ಹಿಂದಿನ ಸೂತ್ರದಿಂದ ಅಸಾನಚ್ ಎಂದು ಅನುವೃತ್ತವಾಗುವಾಗ **ಋಞ್ಜಿವೃಧಿಮುಂದಿ ಸಹಿಭ್ಯಃ ಕಿತ್** (ಉ. ಸೂ. ೨-೨೪೪) ಎಂಬುದರಿಂದ ಕರ್ಮಣಿ ಯಲ್ಲಿ **ಅಸಾನಚ್** ಪ್ರತ್ಯಯ. **ಚಿತಃ** ಎಂಬುದರಿಂದ ಇದು ಚಿತ್ವಾದುದರಿಂದ ಅಂತೋದಾತ್ತವಾಗುತ್ತದೆ.

ಆಯುಷು—ಆಯವಃ **ಇತಿ ಮನುಷ್ಯನಾಮ** (ನಿರು. ೨-೩-೧೭) ಇದು ಮನುಷ್ಯಪರ್ಯಾಯವಾಚಿ ಎಂದು **ತಾತ್ಪರ್ಯ**. ಇಣ್ ಗತೌ ಧಾತು. ಇದಕ್ಕೆ **ಛಂದಸೀಣಃ** (ಉ. ಸೂ. ೧-೨) ಎಂಬುದರಿಂದ **ಉಣ್** ಪ್ರತ್ಯಯ. ಣಿತ್ವಾದುದರಿಂದ **ಅಚೋಞ್ಣಿತಿ** ಸೂತ್ರದಿಂದ ಧಾತುವಿಗೆ ವೃದ್ಧಿ. ಆಯಾದೇಶ. ಆಯು ಶಬ್ದವಾಗುತ್ತದೆ. ಪ್ರತ್ಯಯಸ್ವರದಿಂದ ಅಂತೋದಾತ್ತ. **ಸಪ್ತಮ್ಯೀ ಬಹುವಚನಾಂತರೂಪ.**

ವಾರ್ಯಾ—ವೃಙ್ ಸಂಭಕ್ತೌ ಧಾತು. **ಋಹಲೋರ್ಣ್ಯತ್** (ಪಾ. ಸೂ. ೩-೧-೧೨೪) ಎಂಬುದರಿಂದ ಣ್ಯತ್ ಪ್ರತ್ಯಯ. ಣಿತ್ವಾದುದರಿಂದ **ಅಚೋಞ್ಣಿತಿ** ಸೂತ್ರದಿಂದ ಧಾತುವಿಗೆ ವೃದ್ಧಿ. ವಾರ್ಯಾ ಎಂದು ರೂಪವಾಗುತ್ತದೆ. ತಿತ್ವಾದುದರಿಂದ ಸ್ವರಿತವು ಪ್ರಾಪ್ತವಾದರೆ **ಈಡವಂದವೃಶಂಸೆ** (ಪಾ. ಸೂ. ೬-೧-೨೧೪) ಎಂಬುದರಿಂದ ಆದ್ಯುದಾತ್ತಸ್ವರ ಬರುತ್ತದೆ. ನಪುಂಸಕ ಬಹುವಚನದಲ್ಲಿ ಶಿ ಆದೇಶ ಬಂದಾಗ **ಶೇಶ್ಛಂದಸಿ-ಬಹುಲಂ** ಎಂಬುದರಿಂದ ಶಿ ಗೆ ಲೋಪ ಬರುತ್ತದೆ.

ಋಣ್ವತಿ—ರಿವಿ ಗತೌ ಧಾತು. **ಇದಿತೋನುಮ್** ಧಾತೋಃ ಎಂಬುದರಿಂದ ನುಮಾಗಮ. ವ್ಯತ್ಯಯದಿಂದ ಸಂಪ್ರಸಾರಣ. **ಸಂಪ್ರಸಾರಣಾಚ್ಚ** ಎಂಬುದರಿಂದ ಪೂರ್ವರೂಪ. ಲಟ್ ಪ್ರಥಮಪುರುಷಏಕವಚನ ಪರವಾದಾಗ **ಕರ್ತರಿಶಪ್** ಸೂತ್ರದಿಂದ ಶಪ್ ವಿಕರಣ. **ಋವರ್ಣಾನ್ನಸ್ಯ**—ಣತ್ವಂ **ವಾಚ್ಯಂ** ಎಂಬುದರಿಂದ ನುವಿನ ನಕಾರಕ್ಕೆ ಣತ್ವ. ಅತಿಜಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

॥ ಸಂಹಿತಾಪಾಠಃ ॥

ಏ ವಾತಜೂತೋ ಅತಸೇಷು ತಿಷ್ಠತೇ ವೃಥಾ ಜುಹೂಭಿಃ ಸೃಣ್ಯಾ ತುವಿ ಷ್ವಣಿಃ ।
ತ್ವಷು ಯದಗ್ನೇ ವನಿನೋ ವೃಷಾಯಸೇ ಕೃಷ್ಣಂ ತ ಏಮ ರುಶದೂರ್ಮೇ ಅಜರ ॥ ೪ ॥

ಪದಪಾಠಃ

ಏ । ವಾತಜೂತಃ । ಅತಸೇಷು । ತಿಷ್ಠತೇ । ವೃಥಾ । ಜುಹೂಭಿಃ । ಸೃಣ್ಯಾ । ತುವಿಷ್ವಣಿಃ ।
ತ್ವಷು । ಯತ್ । ಅಗ್ನೇ । ವನಿನಃ । ವೃಷಾಯಸೇ । ಕೃಷ್ಣಂ । ತೇ । ಏಮ । ರುಶತ್ । ಊರ್ಮೇ । ಅಜರ ॥ ೪ ॥

॥ ಸಾಯಣಭಾಷ್ಯಂ ॥

ವಾತಜೂತೋ ವಾಯುನಾ ಪ್ರೇರಿತಸ್ತುವಿಷ್ವಣಿರ್ಮಹಾಸ್ವನಃ ಏವಂಭೂತೋಽಗ್ನಿರ್ಜುಹೂಭಿಃ ಸ್ವಕೀಯಾಭಿರ್ಜಿಹ್ವಾಭಿಃ ಸೃಣ್ಯಾ ಸರಣಶೀಲೇನ ತೇಜಃಸಮೂಹೇನ ಚ ಯುಕ್ತಃ ಸನ್ । ವ್ಯಥೇತ್ಯನಾಯಾಸವಚನಃ । ವೃಥಾನಾಯಾಸೇನೈವಾತಸೇಷೂನ್ನತೇಷು ವೃಕ್ಷೇಷು ವಿ ತಿಷ್ಠತೇ । ವಿಶೇಷೇಣ ತಿಷ್ಠತಿ । ಹೇ ಅಗ್ನೇ ಯದ್ಯದಾ ವನಿನೋ ವನಸಂಬಂಧಾನ್ವೃಷ್ಣಾನ್ದಗ್ಧುಂ ವೃಷಾಯಸೇ ವೃಷವದಾಚರಸಿ ದಹಸೀತ್ಯರ್ಥಃ । ಹೇ ರುಶದೂರ್ಮೇ ದೀಪ್ತಜ್ವಾಲ ಅಜರ ಜರಾರಹಿತಾಗ್ನೇ ತೇ ತವೈವ ಗಮನಮಾರ್ಗಃ ಕೃಷ್ಣಂ ಕೃಷ್ಣವರ್ಣೋ ಭವತಿ ॥ ವಾತಜೂತಃ । ಜೂ ಇತಿ ಸೌತ್ರೋ ಧಾತುಃ । ವಾತೇನ ಜೂತೋ ವಾತಜೂತಃ । ತೃತೀಯಾ ಕರ್ಮಣೀತಿ ಪೂರ್ವಪದಪ್ರಕೃತಿಸ್ವರತ್ವಂ । ವಿ ತಿಷ್ಠತೇ । ಸಮವಪ್ರವಿಭ್ಯಃ ಸ್ಥ ಇತ್ಯಾತ್ಮನೇಪದಂ । ಜುಹೂಭಿಃ । ಹು ದಾನಾದನಯೋಃ । ಹೂಯತೇ ಅಸ್ಮಿನ್ ಜುಹೂಃ । ಹುವಃ ಶ್ಲುವಚ್ಚ । ಉ. ೨-೬೦ । ಇತಿ ಕ್ವಿಪ್ । ಚಕಾರಾದ್ದೀರ್ಘಃ । ಶ್ಲುವಧ್ಚಾವಾದ್ವಿರ್ಭಾವಾದಿ । ಧಾತೋರಿತ್ಯಂತೋದಾತ್ತತ್ವಂ । ಸೃಣ್ಯಾ । ಸೃ ಗತೌ । ಸರತೀತಿ ಸೃಣಿಃ । ಸೃವೃಷಿಭ್ಯಾಂ ಕಿತ್ । ಉ. ೪-೪೯ । ಇತಿ ನಿಪ್ರತ್ಯಯಃ । ಏಮ । ಏತ್ಯನೇನೇತ್ಯೇಮ ಮಾರ್ಗಃ । ಇಙ್ ಗತಾವಿತ್ಯಸ್ಮಾತ್ಕರಣ ಔಣಾದಿಕೋ ಮನಿನ್ । ನಿತ್ತ್ವಾದಾದ್ಯುದಾತ್ತತ್ವಂ ॥

॥ ಪ್ರತಿಪದಾರ್ಥ ॥

ವಾತಜೂತಃ—ವಾಯುವಿನಿಂದ ಪ್ರೇರಿತನೂ । **ತುವಿಷ್ವಣಿಃ**—ಗರ್ಜಿಸುವ ಶಬ್ದವುಳ್ಳವನೂ ಆದ ಅಗ್ನಿಯು । **ಜುಹೂಭಿಃ**—ತನ್ನ ಜ್ವಾಲೆಗಳಿಂದಲೂ । **ಸೃಣ್ಯಾ**—ಪ್ರಸರಿಸುವ ತೇಜಸ್ಸಿನಿಂದಲೂ ಕೂಡಿ । **ವೃಥಾ**—ಶ್ರಮವಿಲ್ಲದೇ । **ಆತಸೇಷು**—(ಉನ್ನತವಾದ) ಕಾಷ್ಠವೃಕ್ಷಗಳಲ್ಲಿ । **ವಿ ತಿಷ್ಠತೇ**—ವ್ಯಾಪಿಸಿಕೊಂಡು ನಿಲ್ಲುತ್ತಾನೆ । **ರುಶದೂರ್ಮೇ**—ಭಯಂಕರವಾದ ಜ್ವಾಲೆಯುಳ್ಳವನೂ । **ಅಜರ**—ಮುಪ್ಪಿಲ್ಲದವನೂ ಆದ । **ಅಗ್ನೇ**—ಎಲೈ ಅಗ್ನಿಯೇ । **ಯತ್**—ಯಾವಾಗ । **ವನಿನಃ**—ವನವೃಕ್ಷಗಳನ್ನು (ಸುಡುವುದಕ್ಕೆ) । **ವೃಷಾ**—ಜಾಗ್ರತೆಯಾಗಿ । **ವೃಷಾಯಸೇ**—ಎತ್ತಿನಂತೆ ಮುಂದೆ ನುಗ್ಗುತ್ತೀಯೋ (ಆಗ) । **ತೇ**—ನಿನ್ನ । **ಏಮ**—(ನೀನು) ಸಂಚಾರ ಮಾಡಿದ ಮಾರ್ಗವು । **ಕೃಷ್ಣಂ**—ಕಪ್ಪಾಗಿ ಆಗುತ್ತದೆ.

॥ ಭಾವಾರ್ಥ ॥

ವಾಯುವಿನಿಂದ ಪ್ರೇರಿತನೂ ಮತ್ತು ಗರ್ಜಿಸುವ ಶಬ್ದವುಳ್ಳವನೂ ಆದ ಅಗ್ನಿಯು ತನ್ನ ಜ್ವಾಲೆಗಳಿಂದಲೂ ಮತ್ತು ಪ್ರಸರಿಸುವ ತೇಜಸ್ಸಿನಿಂದಲೂ ಕೂಡಿಕೊಂಡು ಅನಾಯಾಸವಾಗಿ ಉನ್ನತವಾದ ಕಾಷ್ಠವೃಕ್ಷಗಳನ್ನು ವ್ಯಾಪಿಸಿ ದಹಿಸುತ್ತಾನೆ. ಭಯಂಕರವಾದ ಜ್ವಾಲೆಯುಳ್ಳವನೂ, ಮುಪ್ಪಿಲ್ಲದವನೂ ಆದ ಎಲೈ ಅಗ್ನಿಯೇ, ವನ ವೃಕ್ಷಗಳನ್ನು ದಹಿಸಲು ನೀನು ವೃಷಭದಂತೆ ಮುನ್ನುಗ್ಗಿದಾಗ ನಿನ್ನ ಸಂಚಾರಮಾರ್ಗವು ಕಪ್ಪಗೆ ಆಗುತ್ತದೆ.

English Translation.

Urged on by the wind, and roaring loudly, Agni easily sits upon the trees with his burning tongue and deffusive energy; when, undecaying and fiercely-blazing Agni, you rush rapidly like a bull amongst the forest trees, your hath is blackened.

॥ ವಿಶೇಷ ವಿಷಯಗಳು ॥

ವಾತಜೂತಃ—**ವಾತೇನ ಜೂತಃ**—ವಾಯುವಿನಿಂದ ಪ್ರೇರಿತನಾಗಿ ಎಂದರ್ಥ. ಜೂಧಾತುವು ಕೇವಲ ಸೂತ್ರಧಾತುವು. ಲೌಕಿಕ ಪ್ರಯೋಗದಲ್ಲಿ ಹೆಚ್ಚಾಗಿ ಕಂಡುಬರುವುದಿಲ್ಲ.

ತುವಿಷ್ವಣಿಃ—**ಮಹಾಸ್ವನಃ**—ಹವಿಸ್ಸನ್ನು ಸ್ವೀಕರಿಸುವ ಕಾಲದಲ್ಲಿ ಅಗ್ನಿಯು ಛಟಛಟಾತ್ಕಾರದಿಂದ ಶಬ್ದಮಾಡುತ್ತಿರುವನು. ಅದ್ದರಿಂದಲೇ ಇಲ್ಲಿ ಅಗ್ನಿಯು ಧ್ವನಿವಿಶಿಷ್ಟನೆಂದೂ, ಆ ಧ್ವನಿಗೆ ವಾಯುವು ಕಾರಣನೆಂದೂ ಹೇಳಲಾಗಿದೆ.

ಸೃಣ್ಯಾ—**ಸರತೀತಿ ಸೃಣಿಃ**—ಇಲ್ಲಿ ಗತ್ಯರ್ಥಕವಾದ ಸೃಧಾತುವಿನಿಂದ ಉಂಟಾದ ಈ ಶಬ್ದವು ಅಗ್ನಿಯು ಎಲ್ಲವನ್ನೂ ವ್ಯಾಪಿಸಿ ದಹಿಸುವನು ಎಂಬುದನ್ನು ಸೂಚಿಸುವುದು.

ವೃಥಾ—ಇಲ್ಲಿ ವೃಥಾಶಬ್ದವು ಅನಾಯಾಸವೆಂಬರ್ಥವನ್ನು ಸೂಚಿಸುವುದು.

ವನಿನೋ ವೃಷಾಯಸೇ—ವನಸಂಬಂಧವಾದ ಮರಗಳನ್ನು ಸುಡುವುದರಲ್ಲಿ ವೃಷಭನಂತೆ ಅಂದರೆ ಗೂಳಿಯಂತೆ ಮುಂದವರಿಯುವೆ. ಎಂದರೆ ಯಾವ ವಸ್ತುವನ್ನು ದಹಿಸಬೇಕಾದರೂ ನೀನು ಅನಾಯಾಸವಾಗಿ ಅಲ್ಪವಾದ ಶಕ್ತಿಯಿಂದಲೇ ಮುಂದುವರಿಯುವೆ. ಯಾವ ಕಾರ್ಯಸಾಧನೆಗೂ ನಿನ್ನ ಪೂರ್ಣಶಕ್ತಿ ಬೇಕಿಲ್ಲವೆಂದೇ ಭಾವಾರ್ಥ.

ರುಶದೂರ್ಮೇ—**ರುಶಂತಃ ಊರ್ಮಯಃ ಯಸ್ಯ**—ಪ್ರಕಾಶಮಾನವಾದ ಜ್ವಾಲೆಯುಳ್ಳವನು ದೀಪ್ತಿಜ್ವಾಲನು ಎಂದು ಅಗ್ನಿಯನ್ನು ಇಲ್ಲಿ ಸ್ತುತಿಸಿದೆ.

ಏಮ—**ಏತ್ಯನೇನೇತಿ ಏಮ**—ಇಣ್ ಗತೌ ಎಂಬ ಧಾತುವಿನಿಂದ ನಿಷ್ಪನ್ನವಾದ ಈ ಶಬ್ದಕ್ಕೆ ಮಾರ್ಗವೆಂದರ್ಥ.

॥ ವ್ಯಾಕರಣಪ್ರಕ್ರಿಯಾ ॥

ವಾತಜೂತಃ—ಜೂ ಎಂಬುದು ಸೂತ್ರನಿರ್ದಿಷ್ಟವಾದ ಧಾತು. ಇದಕ್ಕೆ ಕ್ತ ಪ್ರತ್ಯಯ. ವಾತೇನ ಜೂತಃ ವಾತಜೂತಃ. ತೃತೀಯಾ ಕರ್ಮಣಿ (ಪಾ. ಸೂ. ೬-೨-೪೮) ಎಂಬುದರಿಂದ ಸಮಾಸದಲ್ಲಿ ಪೂರ್ವಪದ ಪ್ರಕೃತಿಸ್ವರ.ಬರುತ್ತದೆ.

ವಿತಿಷ್ಠತೇ—ಷ್ಠಾ ಗತಿನಿವೃತ್ತೌ ಧಾತು. ಪರಸ್ಮೈಪದೀ **ತಮಾನಪ್ರವಿಭ್ಯಃಸ್ಥಃ** (ಪಾ. ಸೂ. ೧-೩-೭೨) ಎಂಬುದರಿಂದ ವಿ ಉಪಸರ್ಗ ಪೂರ್ವದಲ್ಲಿರುವುದರಿಂದ ಆತ್ಮನೇಪದಪ್ರತ್ಯಯ ಬರುತ್ತದೆ. ಲಟ್ ಪ್ರಥಮಪುರುಷ ಏಕವಚನದಲ್ಲಿ **ಟಿತಆತ್ಮನೇಪದಾನಾಂ**—ಎಂಬುದರಿಂದ ಏತ್ವ. **ಷಾಢ್ಯೋಧ್ವಾಸ್ಮಾ**—ಸೂತ್ರದಿಂದ ಪ್ರಕೃತಿಗೆ ತಿಸ್ಮ ಎಂಬ ಆದೇಶ. **ತಿಙಂತನಿಘಾತಸ್ವರ** ಬರುತ್ತದೆ.

ಜುಹೂಭಿಃ—ಹು ದಾನಾದನಯೋಃ ಧಾತು. ಹೂಯತೇ ಅಸು ಇತಿ ಜುಹ್ವಃ. **ಹುವಃ ಶ್ಲುವಚ್ಚೌ** (ಉ. ಸೂ. ೨-೨೧೪) ಎಂಬುದರಿಂದ ಕ್ವಿಪ್ ಪ್ರತ್ಯಯ. ಚಕಾರದಿಂದ ದೀರ್ಘ ಬರುತ್ತದೆ. ಆದಕ್ಕೆ ಶ್ಲುವ ದ್ಭಾವ ಹೇಳಿರುವುದರಿಂದ ಶ್ಲ ಎಂಬುದರಿಂದ ಬರುವ ದ್ವಿತ್ವ ಇದಕ್ಕೂ ಬರುತ್ತದೆ. **ಹ್ರಸ್ವಃ** ಎಂಬುದರಿಂದ ಅಭ್ಯಾಸಕ್ಕೆ ಹ್ರಸ್ವ. **ಕುಹೋಶ್ಚುಃ** ಸೂತ್ರದಿಂದ ಚುತ್ವ. ಜುಹೂ ಶಬ್ದವಾಗುತ್ತದೆ. ಪ್ರತ್ಯಯ ಸರ್ವಾಪಲುಪ್ತವಾಗುವುದರಿಂದ **ಧಾತೋಃ** ಎಂಬುದರಿಂದ ಅಂತೋದಾತ್ತಸ್ವರ ಬರುತ್ತದೆ.

ಸೃಣ್ಯಾ—ಸೃ ಗತೌ ಧಾತು. ಸರತಿ ಇತಿ ಸೃಣಿಃ. **ಸೃವೃಷಿಭ್ಯಾಂಕಿತ್** (ಉ. ಸೂ. ೪-೪೪೯) ಎಂಬುದರಿಂದ ನಿಪ್ರತ್ಯಯ. ಕಿದ್ವದ್ಭಾವ ಹೇಳಿರುವುದರಿಂದ ಧಾತುವಿಗೆ ಗುಣ ಬರುವುದಿಲ್ಲ. ಋಕಾರದ ಪರದಲ್ಲಿ ಬಂದುದರಿಂದ ನಕಾರಕ್ಕೆ ಣತ್ವ.

ವೃಷಾಯಸೇ—ವೃಷವತ್ ಆಚರಸಿ ವೃಷಾಯಸೇ. ವೃಷಶಬ್ದದ ಮೇಲೆ **ಉಪಮಾನಾದಾಚಾರೇ** ಎಂಬುದರಿಂದ ಆಚಾರಾರ್ಥದಲ್ಲಿ ಕ್ಯಚ್ ಪ್ರತ್ಯಯ. ಜ್ಞಿತ್ವಾದುದರಿಂದ ಆತ್ಮನೇಪದಿಯಾಗುತ್ತದೆ. ಯದ್ಯೋಗ ವಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಕ್ಯಚ್ ಪ್ರತ್ಯಯಸ್ವರ ಉಳಿಯುತ್ತದೆ. ಲಸಾರ್ವಧಾತುಕವು ಅನುದಾತ್ತವಾಗುತ್ತದೆ.

ಏಮ—ಏತ್ಯನೇನೇತಿ ಏಮ ಮಾರ್ಗ. ಇಙ್ ಗತೌ ಧಾತು. ಇದಕ್ಕೆ ಕರಣಾರ್ಥದಲ್ಲಿ ಉಣಾದಿ ಸಿದ್ಧವಾದ ಮನಿನ್ ಪ್ರತ್ಯಯ. ಧಾತುವಿಗೆ ತನ್ನಿಮಿತ್ತವಾಗಿ ಗುಣ. ಏಮನ್ ಶಬ್ದವಾಗುತ್ತದೆ. ನಪುಂಸಕ ಪ್ರಥಮಾ ಸು ಪರವಾದಾಗ **ಸ್ವಮೋರ್ನಪುಂಸಕಾತ್** ಸೂತ್ರದಿಂದ ಸುಲೋಪ. **ನಲೋಪಃ ಪ್ರಾತಿಪದಿಕಾಂತಸ್ಯ** ಸೂತ್ರದಿಂದ ನಲೋಪ. ಪ್ರತ್ಯಯ ನಿತ್ವಾದುದರಿಂದ ಆದ್ಯುದಾತ್ತಸ್ವರ ಬರುತ್ತದೆ.

॥ ಸಂಹಿತಾಪಾಠಃ ॥

ತಪುರ್ಜಂಭೋ ವನ ಆ ವಾತಚೋದಿತೋ ಯೂಥೇ ನ ಸಾಹ್ವಾ ಅವ
ವಾತಿ ವಂಸಗಃ ।
ಅಭಿವ್ರಜನ್ನಕ್ಷಿತಂ ಪಾಜಸಾ ರಜಃ ಸ್ಥಾತುಶ್ಚರಥಂ ಭಯತೇ ಪತತ್ರಿಣಃ
॥ ೫ ॥

॥ ಪದಪಾಠಃ ॥

ತಪುಃಽಜಂಭಃ । ವನೇ । ಆ । ವಾತ॑ಚೋದಿತಃ । ಯೂಥೇ । ನ । ಸಹ್ವಾನ್ ।
ಅವ । ವಾತಿ । ವಂಸಗಃ ।
ಅಭಿವ್ರಜನ್ । ಅಕ್ಷಿತಂ । ಪಾಜಸಾ । ರಜಃ । ಸ್ಥಾತುಃ । ಚರಥಂ । ಭಯತೇ ।
ಪತತ್ರಿಣಃ ॥ ೫ ॥

॥ ಸಾಯಣಭಾಷ್ಯಂ ॥

ತಪುರ್ಜಂಭಃ । ತಪೂಂಷಿ ಜ್ವಾಲಾ ಏವ ಜಂಭಾ ಆಯುಧಾನಿ ಮುಖಾನಿ ವಾ ಯಸ್ಯ ಸ ತಥೋಕ್ತಃ । ವಾತಚೋದಿತೋ ವಾಯುನಾ ಪ್ರೇರಿತಃ । ಏವಂಭೂತೋಽಗ್ನಿರ್ಯೂಥೇ ಜ್ವಾಲಾಸಮೂಹೇ ಸತ್ಯಕ್ಷಿತಮಕ್ಷೀಣಂ ರಜ ಆರ್ದ್ರವೃಕ್ಷಾಂತರ್ಗತಮುದಕಂ ಪಾಜಸಾ ತೇಜೋಬಲೇನಾಭಿವ್ರಜನ್ ಆಭಿಮುಖ್ಯೇನ ಗಚ್ಛನ್ವನೇಽರಣ್ಯೇ ಸಾಹ್ವಾನ್ ಸರ್ವಮಭಿಭವನ್ ಆ ಅಭಿಮುಖ್ಯೇನಾವ ವಾತಿ । ವ್ಯಾಪ್ನೋತಿ । ತತ್ರ ದೃಷ್ಟಾಂತಃ । ವಂಸಗೋ ನ । ಯಥಾ ವನನೀಯಗತಿರ್ವೃಷಭೋ ಗೋಯೂಥೇ ಸರ್ವಮಭಿಭವನ್ಪರ್ಯತೇ ತದ್ವತ್ । ಯಸ್ಮಾದೇವಂ ತಸ್ಮಾತ್ಪತತ್ರಿಣಃ ಪತನವತೋಽಗ್ನೇಃ ಸಕಾಶಾತ್ಸ್ಥಾತುಃ ಸ್ಥಾವರಂ ಚರಥಂ ಚ ಜಂಗಮಂ ಚ ಭಯತೇ । ಬಿಭೇತಿ ॥ ಸಾಹ್ವಾನ್ । ದಾಶ್ವಾನ್ಸಾಹ್ವಾನಿತಿ ಕ್ವಸುಪ್ರತ್ಯಯಾಂತೋ ನಿಪಾತಿತಃ । ದೀರ್ಘಾದಟಿ ಸಮಾನಪಾದ ಇತಿ ಸಂಹಿತಾಯಾಂ ನಕಾರಸ್ಯ ರುತ್ವಂ। ಆತೋಽಟಿ ನಿತ್ಯಮಿತಿ ಸಾನುನಾಸಿಕ ಆಕಾರಃ । ಯತ್ವಲೋಪೌ । ಹ್ರಸ್ವತ್ವಂ ಛಾಂದಸಂ । ಸ್ಥಾತುಃ । ಕೃಮಿಮನಿಜನೀತ್ಯಾದಿನಾ । ಉ. ೧-೭೩ । ವಿಹಿತಸ್ತುಪ್ರತ್ಯಯೋ ಬಹುಲವಚನಾತ್ತ್ರಿಷ್ವಪೀತರೇಷ್ವಪಿ ಭವತಿ । ಯದ್ವಾ । ಸ್ಥಾತುರನಂತರಂ ಚರಥಂ ಭಯತೇ । ಪ್ರಥಮಂ ಸ್ಥಾತೄ ಸ್ಥಾವರಂ ಬಿಭೇತಿ ಪಶ್ಚಾಚ್ಚರಥಮಿತ್ಯರ್ಥಃ । ಚರಥಂ । ಚರ ಗತ್ಯರ್ಥಃ । ಅಸ್ಮಾದೌಣಾದಿಕೋಽಥಪ್ರತ್ಯಯಃ । ಭಯತೇ । ಞಿಭೀ ಭಯೇ । ವ್ಯತ್ಯಯೇನಾತ್ಮನೇಪದಂ । ಬಹುಲಂ ಛಂದಸೀತಿ ಶ್ಲೋರಭಾವಃ । ಗುಣಾವಾದೇಶೌ ॥

॥ ಪ್ರತಿಪದಾರ್ಥ ॥

ತಪುರ್ಜಂಭಃ—ಜ್ವಾಲೆಗಳೇ ಆಯುಧಗಳಾಗಿ ಉಳ್ಳವನೂ । ವಾತಚೋದಿತಃ—ವಾಯುವಿನಿಂದ ಪ್ರೇರಿತನೂ ಆದ ಅಗ್ನಿಯು । ಯೂಥೇ—ಜ್ವಾಲಾಸಮೂಹವಿರಲು । ಅಕ್ಷಿತಂ—ಇಂಗದಿರುವ ಮತ್ತು । ರಜಃ—ವದ್ದೆಯಾಗಿರುವ (ವೃಕ್ಷದಲ್ಲಿರುವ) ನೀರನ್ನು ಕುರಿತು । ಪಾಜಸಾ—(ತನ್ನ) ತೇಜೋಬಲದಿಂದ । ಅಭಿವ್ರಜನ್—ಎದುರಾಗಿ ನುಗ್ಗುತ್ತಾ । ಸಾಹ್ವಾನ್—ಎಲ್ಲರನ್ನು ಜಯಿಸಿ । ವನೇ—ಕಾಡಿನಲ್ಲಿ । ವಂಸಗಃ ನ—ಆಕರ್ಷಕವಾದ ಗತಿಯುಳ್ಳ ಎತ್ತಿನಂತೆ ವಿಜಯಿಯಾಗಿ । ಅವ ವಾತಿ—ಸುತ್ತಲೂ ತುಂಬಿಕೊಳ್ಳುತ್ತಾನೆ (ಆದ್ದರಿಂದಲೇ) । ಪತತ್ರಿಣಃ—ಹಾರುವಂತೆ ಮುನ್ನುಗ್ಗುವ ಅಗ್ನಿಯಿಂದ । ಸ್ಥಾತುಃ—ಸ್ಥಾವರವಾದ ಜಗತ್ತೂ । ಚರಥಂ—ಜಂಗಮವಾದ ಜಗತ್ತೂ ಅಥವಾ ಸ್ಥಾವರ ಜಗತ್ತಿನನಂತರ ಜಂಗಮವಾದ ಜಗತ್ತು । ಭಯತೇ—ಭಯಪಡುತ್ತದೆ.

॥ ಭಾವಾರ್ಥ ॥

ಜ್ವಾಲಾರೂಪದಲ್ಲಿರುವ ಆಯುಧವುಳ್ಳವನೂ, ವಾಯುವಿನಿಂದ ಪ್ರೇರಿತನೂ ಆದ ಅಗ್ನಿಯು ತನ್ನ ಜ್ವಾಲಾಸಮೂಹದೊಂದಿಗೂ, ತೇಜೋಬಲದೊಂದಿಗೂ ಸಹ ವೃಕ್ಷಗಳಲ್ಲಿ ಇಂಗದಿರುವ ನೀರಿಗಭಿಮುಖವಾಗಿ ಮುನ್ನುಗ್ಗುತ್ತಾನೆ. ತನ್ನೆದುರಿಗೆ ಸಿಕ್ಕಿದ ಸಮಸ್ತವನ್ನೂ ಜಯಿಸಿ, ಕಾಡಿನ ವೃಷಭವು ಗೋ ಸಮೂಹದಲ್ಲಿ ಸಮಸ್ತವನ್ನೂ ಜಯಿಸಿ ವಿಜಯಿಯಾಗಿ ತನ್ನ ಆಕರ್ಷಕವಾದ ಗತಿಯಿಂದ ಮೆರೆಯುವಂತೆ ಅಗ್ನಿಯೂ ಸಹ ಕಾಡಿನ ಸುತ್ತಲೂ ವಿಜಯಿಯಾಗಿ ತುಂಬಿಕೊಳ್ಳುತ್ತಾನೆ. ಹಾರುವಂತೆ ಮುನ್ನುಗ್ಗುವ ಅಗ್ನಿಗೆ ಸ್ಥಾವರ ಮತ್ತು ಜಂಗಮರೂಪವಾದ ಸಮಸ್ತ ಜಗತ್ತೂ ಸಹ ಭಯಪಡುತ್ತದೆ.

English Translation.

The flame-weaponed and breeze-excited Agni, assailing the unexhaled moisture (of the trees) with all his strength, in a volume of fire, rushes triumphant (against all things) in the forest, like a bull, and all, whether stationary or moveable, are afraid of him as he flies along.

॥ ವಿಶೇಷ ವಿಷಯಗಳು ॥

ತಪುರ್ಜಂಭಃ—ತಪೂಂಷಿ ಜ್ವಾಲಾ ಏವ ಜಂಭಾ ಆಯುಧಾನಿ ಮುಖಾನಿ ವಾ ಯಸ್ಯ ಸ ತಥೋಕ್ತಃ—ಅಗ್ನಿಗೆ ಜ್ವಾಲೆಯೇ ಆಯುಧಗಳು. ಅಥವಾ ಜ್ವಾಲೆಯಿಂದಲೇ ಸರ್ವವನ್ನೂ ಸ್ವೀಕರಿಸುವನಾದ್ದರಿಂದ ಅಗ್ನಿಗೆ ಜ್ವಾಲೆಗಳೇ ಮುಖಗಳಾಗಿವೆ ಎಂದು ವಿವರಿಸಿದ್ದಾರೆ. (ಋ.ಸಂ. ಭಾಗ. ೪ ಪೇಜು 234 ನೋಡಿ)

ರಜಃ—ಅರ್ದ್ರಂ ವೃಕ್ಷಾಂತರ್ಗತಮುದಕಂ—ಅಗ್ನಿಯು ತನ್ನ ಜ್ವಾಲಾಸಮೂಹದಿಂದ ವೃಕ್ಷಾಂತರ್ಗತವಾದ ಜಲಸಮೂಹವನ್ನು (ಹಸಿವನ್ನು) ಒಣಗಿಸಿ ನಿಸ್ಸಾರವನ್ನಾಗಿ ಮಾಡಿ ದಹಿಸಿಬಿಡುವುದು. ಇಲ್ಲಿ ಜಲಾರ್ಥದಲ್ಲಿ ರಜಶ್ಶಬ್ದಪ್ರಯೋಗವಿದೆ.

ವಂಸಗಃ ನ—ವನನೀಯೇಗತಿಃ ವೃಷಃ ಗೋಯೂಥೇ ಸರ್ವಮಭಿಭವನ್ ವರ್ತತೇ ತದ್ವತ್—ಧೈರ್ಯದಿಂದ ಸಂಚಾರಮಾಡುವ ಸ್ವಭಾವವುಳ್ಳದ್ದು ಗೂಳಿ. ಅಂತಹ ಗೂಳಿಯು ಗೋವುಗಳ ಸಮೂಹದಲ್ಲಿ ಯಾವುದನ್ನೂ ಲಕ್ಷಮಾಡದೆ ಸಂಚರಿಸುವಂತೆ ಸ್ಥಾವರಜಂಗಮಾತ್ಮಕವಾದ ಯಾವ ವಸ್ತುಗಳನ್ನೂ ಲಕ್ಷಿಸದೆ ಅಗ್ನಿಯು ಎಲ್ಲವನ್ನೂ ದಹಿಸುವುದು.

ಸ್ಥಾತುಃ ಚರಥಂ ಚ—ಸ್ಥಾವರಗಳಾದ ಅಂದರೆ ಚಲಿಸದೆ ಸ್ಥಿರವಾಗಿ ನಿಂತಿರುವ ವೃಕ್ಷಾದಿಗಳು, ಚರಥಂ ಅಂದರೆ ಸಂಚರಿಸುವ ಪ್ರಾಣಿಗಳು. ಇಲ್ಲಿ ಮೊದಲು ಸ್ಥಾವರ ವಸ್ತುಗಳನ್ನು ದಹಿಸಿ ಅನಂತರ ಚರ (ಜಂಗಮ) ವಸ್ತುಗಳನ್ನು ಸುಡುವೆ ಎಂದೂ ಸ್ತುತಿಸಿರುವರು. ಚರಥಂ ಎಂಬ ಪದದಲ್ಲಿರುವ ಚರಧಾತುವಿಗೆ ಗತ್ಯರ್ಥವಿದೆ. ಈ ಋಕ್ಕಿನಲ್ಲಿ ದಾವಾಗ್ನಿ ಅಥವಾ ಕಾಡುಕಿಚ್ಚನ್ನು ವರ್ಣಿಸಲಾಗಿರುವುದು.

॥ ವ್ಯಾಕರಣಪ್ರಕ್ರಿಯಾ ॥

ಸಾಹ್ವಾನ್—ದಾಶ್ವಾನ್ ಸಾಹ್ವಾನ್ ಮೀ—(ಪಾ. ಸೂ. ೬-೧-೧೨) ಎಂಬುದರಿಂದ ಕ್ವಸ್ವಶ್ರುತ್ಯಯಾಂತಕವಾಗಿ ನಿಪಾತಿತವಾಗಿದೆ. ಸಾಹ್ವಾನ್+ಅವ ಎಂದಿರುವಾಗ **ದೀರ್ಘಾದಟಿ ಸಮಾನಪಾದೇ** (ಪಾ.

ಸೂ. ೪.೩-೯) ಎಂಬುದರಿಂದ ಅಕಾರವನ್ನು ನಿಮಿತ್ತೀಕರಿಸಿ ನಕಾರಕ್ಕೆ ರುತ್ವ. **ಅತೋಟಿ ನಿತ್ಯಮ್** ಎಂಬುದರಿಂದ ಪೂರ್ವದಲ್ಲಿರುವ ಅಕಾರಕ್ಕೆ ಅನುನಾಸಿಕತ್ವ. **ಭೋಭಗೋಅ**—ಸೂತ್ರದಿಂದ ರುತ್ವಕ್ಕೆ ಯತ್ವ **ಲೋಪಃ ಶಾಕಲ್ಯಸ್ಯ** ಎಂಬುದರಿಂದ ಅ ಯಕಾರಕ್ಕೆ ಲೋಪ.

ವಾತಿ—ವಾ ಗತಿಗಂಧನಯೋಃ ಧಾತು ಅದಾದಿ. ಲಟ್ ಪ್ರಥಮಪುರುಷ ಏಕವಚನರೂಪ. **ತಿಙಂತ** ನಿಘಾತಸ್ವರ ಬರುತ್ತದೆ.

ಸ್ಥಾತುಃ—ಷ್ಠಾ ಗತಿನಿವೃತ್ತೌ ಧಾತು. ಉಣಾದಿಯಲ್ಲಿ ಬಹುಲವಚನವಿರುವುದರಿಂದ **ಕಮಿಮನಿಜನಿ** (ಉ. ಸೂ. ೧-೨-೨) ಎಂಬುದರಿಂದ ವಿಧಿಸಲ್ಪಡುವ ತು ಪ್ರತ್ಯಯವು ಇದಕ್ಕೂ ಬರುತ್ತದೆ. ಅಥವಾ ಇದಕ್ಕೆ ತೃಚ್ ಪ್ರತ್ಯಯ. ಸ್ಥಾತೃ ಶಬ್ದವಾಗುತ್ತದೆ. ಆಗ ಸ್ಥಾತುರನಂತರಂ ಚರಥಂ ಭಯತೇ ಎಂದು ಅನ್ವಯ. ಪ್ರಥಮಂ ಸ್ಥಾತೃ ಸ್ಥಾವರಂ ಬಿಭೇತಿ ಪಶ್ಚಾತ್ ಚರಥಮಿತ್ಯರ್ಥಃ (ಮೊದಲು ಸ್ಥಾವರವೂ ಅಮೇಲೆ ಜಂಗಮವೂ ಹೆದರುತ್ತದೆ ಎಂದು ಅನ್ವಯಮಾಡಬೇಕು) ಪಂಚಮೀ ಏಕವಚನರೂಪವಾಗುತ್ತದೆ.

ಚರಥಮ್—ಚರ ಗತಿಭಕ್ಷಣಯೋಃ ಧಾತು. ಇಲ್ಲಿ ಗತ್ಯರ್ಥದಲ್ಲಿ ಪ್ರಯುಕ್ತವಾಗಿದೆ. ಇದಕ್ಕೆ ಔಣಾದಿಕವಾದ ಅಥ ಪ್ರತ್ಯಯ. ಪ್ರತ್ಯಯಸ್ವರದಿಂದ ಮಧ್ಯೋದಾತ್ತವಾಗುತ್ತದೆ.

ಭಯತೇ—ಞಿಭೀ ಭಯೇ ಧಾತು. **ವ್ಯತ್ಯಯೋಬಹುಲಂ** ಸೂತ್ರದಿಂದ ಆತ್ಮನೇಪದಪ್ರತ್ಯಯ ಬರುತ್ತದೆ. ಜೌಹೋತ್ಯಾದಿಕವಾದರೂ **ಬಹುಲಂ ಛಂದಸಿ** ಎಂಬುದರಿಂದ ಶ್ಲು ಬರುವುದಿಲ್ಲ. **ಕರ್ತರಿಶಪ್** ಸೂತ್ರದಿಂದ ಶಪ್. ತನ್ನಿಮಿತ್ತವಾಗಿ ಧಾತುವಿಗೆ ಗುಣ. ಅಚ್ ಪರದಲ್ಲಿರುವುದರಿಂದ ಅದಕ್ಕೆ ಅಯಾದೇಶ. **ಟಿತಆತ್ಮನೇಪದಾನಾಂ**--ಸೂತ್ರದಿಂದ ಪ್ರತ್ಯಯಕ್ಕೆ ಏತ್ವ. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

॥ ಸಂಹಿತಾಪಾಠಃ ॥

ದ್ರಘುಷ್ಯಾ॑ವ ಭೃಗ॑ವೋ॒ ಮಾನು॑ಷೇಷ್ವಾ॒ ರಯಿಂ॑ ನ ಚಾರು॑ಂ ಸು॒ಹವ॑ಂ ಜನೇ॑ಭ್ಯಃ ।
ಹೋತಾ॑ರಮಗ್ನೇ॒ ಅತಿ॑ಥಿಂ ವರೇ॑ಣ್ಯಂ॒ ಮಿತ್ರಂ॑ ನ ಶೇವ॑ಂ ದಿ॒ವ್ಯಾಯ॒ ಜನ್ಮ॑ನೇ ॥ ೬ ॥

॥ ಪದಪಾಠಃ ॥

ದಧುಃ । ತ್ವಾ । ಭೃಗವಃ । ಮಾನುಷೇಷು । ಆ । ರಯಿಂ । ನ । ಚಾರುಂ । ಸುಹವಂ । ಜನೇಭ್ಯಃ ।
ಹೋತಾರಂ । ಅಗ್ನೇ । ಅತಿಥಿಂ । ವರೇಣ್ಯಂ । ಮಿತ್ರಂ । ನ । ಶೇವಂ । ದಿವ್ಯಾಯ । ಜನ್ಮನೇ ॥ ೬ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ತ್ವಾ ತ್ವಾಂ ಮಾನುಷೇಷು ಮನುಷ್ಯೇಷು ಮಧ್ಯೇ ಭೃಗವ ಏತತ್ಸಂಜ್ಞಾ ಮಹರ್ಷಯೋ ದಿವ್ಯಾಯ ಜನ್ಮನೇ ದೇವತ್ವಪ್ರಾಪ್ತಯೇ ಚಾರುಂ ರಯಿಂ ನ ಶೋಭನಂ ಧನಮಿವಾ ದಧುಃ । ಆಧಾನಸಂಭಾರೇಷು ಮಂತ್ರೈಃ ಸ್ಥಾಪನೇನ ಸಮಸ್ಕುರ್ವನ್ । ಕೀದೃಶಂ ತ್ವಾಂ । ಜನೇಭ್ಯಃ ಸುಹವಂ ಯಜಮಾನಾರ್ಥಮಾಹ್ವಾತುಂ ಸುಶಕಂ ಹೋತಾರಂ ದೇವಾನಾಮಾಹ್ವಾತಾರಂ ಅತಿಥಿಮತಿಥಿವತ್ಪೂಜ್ಯಂ । ಯದ್ವಾ । ದೇವಯಜನದೇಶೇಷು ಸತತಂ ಗಂತಾರಂ । ವರೇಣ್ಯಂ ವರಣೀಯಂ ಮಿತ್ರಂ ನ ಶೇವಂ । ಯಥಾ ಸಖಾ ಸುಖಕರೋ ಭವತಿ ತದ್ವತ್ ಸುಖಕರಮಿತ್ಯರ್ಥಃ ॥ ದಧುಃ । ಲಿಟ್ಯುಸ್ಯಾತೋ ಲೋಪೇ ಇಟಿ ಚೇತ್ಯಾಕಾರಲೋಪಃ । ಯುಷ್ಮತ್ತತ್ತತಕ್ಷುಃಷ್ವಂತಃಪಾದಮಿತಿ ವಿಸರ್ಜನೀಯಸ್ಯ ಷತ್ವಂ । ಸುಹವಂ । ಹ್ವಯತೇರೀಷದ್ದುಃಸುಷ್ವಿತಿ ಖಲ್ । ಬಹುಲಂ ಛಂದಸೀತಿ ಸಂಪ್ರಸಾರಣಂ । ಪರಪೂರ್ವತ್ವಂ । ಗುಣಾವಾದೇಶೌ । ಲಿತೀತಿ ಪ್ರತ್ಯಯಾತ್ಪೂರ್ವಸ್ಯೋದಾತ್ತತ್ವಂ । ಕೈದುತ್ತರಪದಪ್ರಕೃತಿಸ್ವರತ್ವಂ ॥

॥ ಪ್ರತಿಪದಾರ್ಥ ॥

ಅಗ್ನೇ—ಎಲೈ ಅಗ್ನಿಯೇ । **ಜನೇಭ್ಯಃ**—ಯಜಮಾನರಿಗಾಗಿ । **ಸುಹವಂ**—ಚೆನ್ನಾಗಿ ಯಜ್ಞವಾಡುವ ಶಕ್ತಿಯುಳ್ಳವನೂ । **ಹೋತಾರಂ**—(ಯಜ್ಞಕ್ಕೆ) ದೇವತೆಗಳನ್ನು ಕರೆಯುವವನೂ । **ಅತಿಥಿಂ**—(ಶ್ರೇಷ್ಠನಾದ) ಅತಿಥಿಯೂ (ಅಥವಾ ಯಜ್ಞದೇಶಕ್ಕೆ ಆಗಾಗ್ಗೆ ಬರುವವನೂ) । **ವರೇಣ್ಯಂ**—ಇಷ್ಟತಮನಾದ । **ಮಿತ್ರಂ ನ**—ಸ್ನೇಹಿತನಂತೆ । **ಶೇವಂ**—ಸುಖಕರನೂ ಆದ । **ತ್ವಾ**—ನಿನ್ನನ್ನು । **ಮಾನುಷೇಷು**—ಮಾನವರ ನಡುವೆ । **ಭೃಗವಃ**—ಭೃಗುಋಷಿಗಳು । **ದಿವ್ಯಾಯ ಜನ್ಮನೇ**—ದೇವಾತ್ಮಕವಾದ ಜನ್ಮವನ್ನು ಪಡೆಯಲು । **ಚಾರುಂ ರಯಿಂ ನ**—ಮನೋಹರವಾದ ನಿಧಿಯಂತೆ । **ಆ ದಧುಃ**—ಇಟ್ಟು ಆದರಿಸಿದರು.

॥ ಭಾವಾರ್ಥ ॥

ಎಲೈ ಅಗ್ನಿಯೇ, ನೀನು ಯಜಮಾನರಿಗಾಗಿ ಯಾಗಮಾಡುವವನು. ಯಜ್ಞಕ್ಕೆ ದೇವತೆಗಳನ್ನು ಕರೆಯುವವನು. ಪ್ರಿಯನಾದ ಅತಿಥಿಯು. ಇಷ್ಟತಮನಾದ ಸ್ನೇಹಿತನಂತೆ ಸುಖದಾಯಕನು. ಇಂತಹ

ನಿನ್ನನ್ನು ಮಾನವರ ನಡುವೆ ಭೃಗುಋಷಿಗಳು ತಾವು ದೇವತಾತ್ಮಕವಾದ ಜನ್ಮವನ್ನು ಪಡೆಯಲು ಮನೋಹರವೂ ಇಷ್ಟತಮವೂ ಆದ ನಿಧಿಯಂತೆ ಇಟ್ಟುಕೊಂಡು ಪೋಷಿಸಿ ಆದರಿಸಿದರು.

English Translation.

The Bhrigus amongst men, for the sake of being born as gods, cherished you like a costly treasure. Agni, you sacrifice for men, you are the invoker of the gods, the welcome guest at sacrifices and you are to be esteemed like a loving friend.

॥ ವಿಶೇಷ ವಿಷಯಗಳು ॥

ಭೃಗವಃ—ಭೃಗುವೆಂಬ ಋಷಿಯ ವಂಶದಲ್ಲಿ ಉತ್ಪನ್ನರಾದವರು.

ದಿವ್ಯಾಯ ಜನ್ಮನೇ—ದೇವಭಾವವನ್ನು ಹೊಂದುವುದಕ್ಕಾಗಿ ಅಂದರೆ ಸ್ವರ್ಗಫಲವನ್ನು ಅನುಭವಿಸಲು ಎಂದರ್ಥ.

ಚಾರುಂ ರಯಿಂ ನ—ಸರ್ವಜನಾಹ್ಲಾದಕವಾದ ಹಣದಂತೆ ಎಲ್ಲರೂ ನಿನ್ನನ್ನು ಸೇವಿಸುವರು ಎಂದರ್ಥ. ಹಣವು ಎಲ್ಲರಿಗೂ ಬೇಕಾದ ವಸ್ತುವು.

ಸುಹವಂ— **ಯಜಮಾನಾರ್ಥಮಾಹ್ವಾತುಂ ಸುಶಕಂ**—ಯಜಮಾನನಿಗಾಗಿ ಸಕಲ ದೇವತೆಗಳನ್ನೂ ಸುಲಭವಾಗಿ ಆಹ್ವಾನಿಸುವುದಕ್ಕೆ.

ಅತಿಥಿಂ—ಅತಿಥಿಯಂತೆ ಪೂಜ್ಯನು. ಅಥವಾ ದೇವಯಜನ ದೇಶಗಳಲ್ಲಿ ಸದಾ ಸಂಚರಿಸುವವನು ಎಂದರ್ಥ.

ಮಿತ್ರಂ ನ ಶೇವಂ—ಮಿತ್ರನಂತೆ ಸುಖಕರನು ಎಂದರ್ಥ. ಹೇಗೆ ಪ್ರಿಯಸ್ನೇಹಿತನು ಸುಖವನ್ನು ಬಯಸುವನೋ ಆದರಂತೆ ಅಗ್ನಿಯೂ ಯಜಮಾನನಿಗೆ ಸುಖಪ್ರದನು ಎಂದು ಭಾವವು.

॥ ವ್ಯಾಕರಣಪ್ರಕ್ರಿಯಾ ॥

ದಧುಃ—ಡುಧಾಞ್ ಧಾರಣಪೋಷಣಯೋಃ ಧಾತು. ಲಿಟ್ ಪ್ರಥಮಪುರುಷ ಬಹುವಚನಕ್ಕೆ **ಪರಸ್ಮೈಪದಾನಾಂ**—ಸೂತ್ರದಿಂದ ಉಸಾದೇಶ. ಧಾತುವಿಗೆ ದ್ವಿತ್ವ. ಅಭ್ಯಾಸಕ್ಕೆ ಹ್ರಸ್ವ. ಜಸ್ತ್ವ **ಅಸಂಯೋಗಾಲ್ಲಿಟ್ ಕಿತ್** ಸೂತ್ರದಿಂದ ಪ್ರತ್ಯಯವು ಕಿತ್ತಾಗುತ್ತದೆ. ಆಗ **ಆತೋಲೋಪಇಟಿಚ** ಎಂಬುದರಿಂದ ಆಕಾರಕ್ಕೆ ಲೋಪ. ಪ್ರತ್ಯಯ ಸಕಾರಕ್ಕೆ ರುತ್ವ ವಿಸರ್ಗ. ದಧುಃ ಎಂದು ರೂಪವಾಗುತ್ತದೆ. ತ್ವಾ ಪರವಾದಾಗ **ಯುಷ್ಮತ್ತತಕ್ಷುಷ್ಮಂತಃ ಪಾದಮ್** (ಪಾ. ಸೂ. ೮-೩-೧೦೩) ಎಂಬುದರಿಂದ ವಿಸರ್ಜನೀಯಕ್ಕೆ ಷತ್ವ ಬರುತ್ತದೆ.

ಸುಹವಮ್—ಹ್ವೇಞ್ **ಸ್ಪರ್ಧಾಯಾಂ ಶಬ್ದೇ ಚ** ಧಾತು. ಇದಕ್ಕೆ ಸು ಉಪಪದವಾದಾಗ **ಈಷದ್ದುಃಸುಷುಕೃಚ್ಛ್ರಾ**—(ಪಾ. ಸೂ. ೩-೩-೧೨೬) ಎಂಬುದರಿಂದ ಖಲ್ ಪ್ರತ್ಯಯ. ನಿಮಿತ್ತವಿಲ್ಲದಿದ್ದರೂ

ಬಹುಲಂ ಛಂದಸಿ ಎಂಬುದರಿಂದ ಸಂಪ್ರಸಾರಣ. ಹು+ಏ+ಅ ಎಂದಿರುವಾಗ **ಸಂಪ್ರಸಾರಣಾಚ್ಚ** ಎಂಬುದರಿಂದ ಪೂರ್ವರೂಪ. ಆಗ ಪ್ರತ್ಯಯನಿಮಿತ್ತವಾಗಿ ಧಾತುವಿನ ಉಕಾರಕ್ಕೆ ಗುಣ. ಅವಾದೇಶ. **ಲಿತಿ** (ಪಾ. ಸೂ. ೬-೧-೧೯೩) ಎಂಬುದರಿಂದ ಪ್ರತ್ಯಯದ ಪೂರ್ವಕ್ಕೆ ಉದಾತ್ತಸ್ವರ ಬರುತ್ತದೆ. ಗತಿಸಂಜ್ಞೆಯುಳ್ಳ ಸು ಎಂಬುದರೊಡನೆ ಸಮಾಸವಾದಾಗ **ಗತಿಕಾರಕೋಪಪದಾತ್ ಕೃತ್** ಸೂತ್ರದಿಂದ ಕೃದುತ್ತರಪದಪ್ರಕೃತಿಸ್ವರ ಬರುತ್ತದೆ.

ಹೋತಾರಮ್—ಹು ದಾನಾದ್ಯನಯೋಃ ಧಾತು. ತೃನ್ ಪ್ರತ್ಯಯ. ನಿತ್ತಾದುದರಿಂದ ಆದ್ಯುದಾತ್ತವಾಗುತ್ತದೆ. ದ್ವಿತೀಯಾ ಏಕವಚನ ಪರವಾದಾಗ **ಋತೋಜಿ ಸರ್ವನಾಮಸ್ಥಾನಯೋಃ** ಎಂಬುದರಿಂದ ಋಕಾರಕ್ಕೆ ಗುಣ. **ಅಕ್ ಸೈನ್ ಕೃಚ್** ಸೂತ್ರದಿಂದ ಉಪಧಾದೀರ್ಘ.

॥ ಸಂಹಿತಾಪಾಠಃ ॥

ಹೋತಾ॑ರಂ ಸ॒ಪ್ತ ಜು॒ಹ್ವೋ॑ ಋ॒ಷಿಂ ಯ॑ಜಿ॒ಷ್ಠಂ ಯಂ ವಾ॒ಘತೋ॑ ವೃ॒ಣತೇ॑ ಅಧ್ವ॒ರೇಷು॑ ।
ಅ॒ಗ್ನಿಂ ವಿಶ್ವೇ॑ಷಾಮರ॒ತಿಂ ವ॒॑ಸೂನಾಂ॑ ಸ॒ಪರ್ಯಾ॑ಮಿ ಪ್ರ॒ಯಸಾ॑ ಯಾಮಿ ರ॒ತ್ನಂ ॥ ೭ ॥

॥ ಪದಪಾಠಃ ॥

ಹೋತಾ॑ರಂ । ಸ॒ಪ್ತ । ಜು॒ಹ್ವಃ॑ । ಯ॒ಜಿ॒ಷ್ಠಂ । ಯಂ । ವಾ॒ಘತ॑ಃ । ವೃ॒ಣತೇ॑ । ಅಧ್ವ॒ರೇಷು॑ ।
ಅ॒ಗ್ನಿಂ । ವಿಶ್ವೇ॑ಷಾಂ । ಅ॒ರ॒ತಿಂ । ವ॒॒ಸೂನಾಂ॑ । ಸ॒ಪರ್ಯಾ॑ಮಿ । ಪ್ರ॒ಯಸಾ॑ । ಯಾಮಿ । ರ॒ತ್ನಂ ॥ ೭ ॥

॥ಸಾಯಣಭಾಷ್ಯಂ॥

ಸಪ್ತ ಸಪ್ತಸಂಖ್ಯಾಕಾ ಜುಹ್ವೋ ಹೋತಾರೋ ವಾಘತ ಋತ್ವಿಜೋಽಧ್ವರೇಷು ಯಾಗೇಷು ಯಜಿಷ್ಠಂ ಯಷ್ಟೃತಮಂ ಹೋತಾರಂ ದೇವಾನಾಮಾಹ್ವಾತಾರಂ ಯಮಗ್ನಿಂ ವೃಣತೇ ಸಂಭಜಂತೇ ವಿಶ್ವೇಷಾಂ ಸರ್ವೇಷಾಂ ವಸೂನಾಮರತಿಂ ಪ್ರಾಪಯಿತಾರಂ ತಮಗ್ನಿಂ ಪ್ರಯಸಾ ಹವಿರ್ಲಕ್ಷಣೇನಾನ್ನೇನ ಸಪರ್ಯಾಮಿ । ಪರಿಚರಾಮಿ । ರತ್ನಂ ರಮಣೀಯಂ ಕರ್ಮಫಲಂ ಚ ಯಾಮಿ । ಯಾಚಾಮಿ ॥

ವೃಣತೇ । ವೃಙ್ ಸಂಭಕ್ತೌ । ಕ್ರೈಯಾದಿಕಃ । ಪ್ರತ್ಯಯಸ್ವರಃ । ಅರತಿಂ । ಋ. ಗತಿಪ್ರಾಪಣಯೋಃ । ಅಸ್ಮಾದೌಣಾದಿಕೋ ಪಹಿವಸ್ಯರ್ತಿಭ್ಯಶ್ಚಿತ್ । ಉ. ೪-೬೦ । ಇತ್ಯತಿಪ್ರತ್ಯಯಃ । ಚಿತ್ತ್ವಾದಂತೋದಾತ್ತತ್ವಂ । ಸಪರ್ಯಾಮಿ । ಸಪರ್ಯತಿಃ ಪರಿಚರಣಕರ್ಮಾ। ಸಪರ ಪೂಜಾಯಾಮಿತಿ ಧಾತುಃ ಕಂಡ್ವಾದಿಃ। ಅತೋ ಯಕಿ ಏವ ಸ್ವರಃ ಶಿಷ್ಯತೇ । ಸಾದಾದಿತ್ವಾನ್ನಿಘಾತಾಭಾವಃ । ಯಾಮಿ । ಯಾಚಾಮೀತ್ಯಸ್ಯ ವರ್ಣಲೋಪಶ್ಛಾಂದಸಃ ॥

॥ ಪ್ರತಿಪದಾರ್ಥ ॥

ಸಪ್ತ—ಏಳುಜನ । **ಜುಹ್ವಃ**—ಹೋತೃಸ್ಥಾನದಲ್ಲಿರುವ । **ವಾಘತಃ**—ಋತ್ವಿಕ್ಕುಗಳು । **ಅಧ್ವರೇಷು**—ಯಾಗಗಳಲ್ಲಿ । **ಯೆಜಿಷ್ಠಂ**—ಪೂಜ್ಯತಮನೂ । **ಹೋತಾರಂ**—(ದೇವತೆಗಳನ್ನು ಯಜ್ಞಕ್ಕೆ) ಕರೆಯುವವನೂ ಆದ । **ಯಂ**—ಯಾವ ಅಗ್ನಿಯನ್ನು । **ವೃಣತೇ**—ಆರಿಸಿ ಪೂಜಿಸುತ್ತಾರೋ (ಅಂತಹ) । **ವಿಶ್ವೇಷಾಂ**—ಸಕಲವಾದ । **ವಸೂನಾಂ**—ಧನಗಳಿಗೂ । **ಅರತಿಂ**—ದಾತನಾದ । **ಅಗ್ನಿಂ**—ಅಗ್ನಿಯನ್ನು । **ಪ್ರಯಸಾ**—ಹವಿಸ್ಸಿನ ರೂಪದಲ್ಲಿರುವ ಅನ್ನದಿಂದ । **ಸಪರ್ಯಾಮಿ**—ಪೂಜಿಸುತ್ತೇನೆ (ಮತ್ತು) । **ರತ್ನಂ**—ರಮಣೀಯವಾದ ಯಜ್ಞಫಲವನ್ನು (ಐಶ್ವರ್ಯವನ್ನು) । **ಯಾಮಿ**—ಬೇಡುತ್ತೇನೆ ॥

॥ ಭಾವಾರ್ಥ ॥

ಹೋತೃ ಸ್ಥಾನದಲ್ಲಿರುವ ಏಳು ಜನ ಋತ್ವಿಕ್ಕುಗಳು ಯಾಗಗಳಲ್ಲಿ ಪೂಜ್ಯತಮನೂ, ದೇವತೆಗಳನ್ನು ಯಜ್ಞಕ್ಕೆ ಕರೆಯುವವನೂ ಆದ ಯಾವ ಅಗ್ನಿಯನ್ನು ಆಹ್ವಾನಿಸಿ ಪೂಜಿಸುತ್ತಾರೋ ಅಂತಹ ಸಕಲ ಧನದಾತನಾದ ಅಗ್ನಿಯನ್ನು ಹವಿಸ್ಸಿನರೂಪದಲ್ಲಿರುವ ಅನ್ನದಿಂದ ಪೂಜಿಸುತ್ತೇನೆ. ಅಲ್ಲದೆ ರಮಣೀಯವಾದ ಐಶ್ವರ್ಯಕ್ಕಾಗಿ ಬೇಡುತ್ತೇನೆ.

English Translation.

I worship with oblations that Agni whom the seven invoking priests invite as the invoker of the gods; who is most worthy of adoration at sacrifies, and who is the giver of all riches; I solicit of him riches;

ವಿಶೇಷ ವಿಷಯಗಳು

ಸಪ್ತ ಜುಹ್ವಃ—ಏಳು ಸಂಖ್ಯೆಯ ಹೋತೃಗಳು. ಯಜ್ಞದಲ್ಲಿ ದೇವತೆಗಳನ್ನು ಆಹ್ವಾನಿಸುವುದಕ್ಕಾಗಿ ಏಳು ಜನ ಋತ್ವಿಕ್ಕುಗಳಿಂದ ಕೂಡಿದ ಹೋತೃವರ್ಗವಿರುವುದು.

ವಾಘತಃ—ಋತ್ವಿಕ್ಕುಗಳು. ಭಾರತಾಃ ಕರವಃ ಮೊದಲಾದ ಎಂಟು ಋತ್ವಿಜ್ಞಾಮಗಳ ಮಧ್ಯದಲ್ಲಿ ವಾಘತಃ ಎಂಬ ಶಬ್ದವು ಪಠಿತವಾಗಿರುವುದರಿಂದ ವಾಘತಃ ಎಂದರೆ ಋತ್ವಿಕ್ಕುಗಳು ಎಂದರ್ಥವು. (ನಿ. ೩-೧೪)

ಯಜಿಷ್ಠಂ—ಯಾಗಮಾಡುವವರಲ್ಲಿ ಅತ್ಯಂತಶ್ರೇಷ್ಠರಾದವರು.

ವಸೂನಾಂ ಅರತಿಂ—ಸಂಪೂರ್ಣ ಐಶ್ವರ್ಯವನ್ನು ಹೊಂದಿಸುವವನು ಅಗ್ನಿಪುರುಷ.

ಸಪರ್ಯಾಮಿ—ಸೇವಿಸುವೆನು. **ಸಪರ್ಯತಿಃ ಪರಿಚರಣಕರ್ಮಾ ಸಪರ ಪೂಜಾಯಾಂ** ಎಂಬು ಧಾತು ವಿನಿಂದ ಉತ್ಪನ್ನವಾದ ಶಬ್ದ ಇದು.

ಯಾಮಿ—ಯಾಚಾಮಿ ಎಂಬ ಕ್ರಿಯಾರೂಪದಲ್ಲಿ ಮಧ್ಯಮವರ್ಣ ಲೋಪವಾಗಿ, ಅದೇ ಅರ್ಥದಲ್ಲಿ ಈ ಪದವು ಪ್ರಯೋಗಿಸಲ್ಪಟ್ಟಿದೆ.

॥ ವ್ಯಾಕರಣಪ್ರಕ್ರಿಯಾ ॥

ಯಜಿಷ್ಠಮ್—ಯಷ್ಟೃ ಶಬ್ದ. **ತುಶ್ಛಂದಸಿ** ಎಂಬುದರಿಂದ ಅತಿಶಯಾರ್ಥದಲ್ಲಿ ಇಷ್ಠನ್ ಪ್ರತ್ಯಯ. **ತುರಿಷ್ಠೇಮೇಯಃಸು** ಎಂಬುದರಿಂದ ಇಷ್ಠನ್ ಪರವಾದಾಗ ತೃಚಿಗೆ ಲೋಪ. ಇಷ್ಠನ್ ನಿಶ್ತಾದುದರಿಂದ ಆದ್ಯುದಾತ್ತವಾಗುತ್ತದೆ.

ವೃಣತೇ—ವೃಜ್ ಸಂಭಕ್ತೌ ಧಾತು. **ಕ್ರ್ಯಾದಿ** ಲಟ್ ಪ್ರಥಮಪುರುಷದಲ್ಲಿ ಝಿ ಪ್ರತ್ಯಯ. **ಕ್ರ್ಯಾದಿಭ್ಯಃ ಶ್ನಾ** ಎಂಬುದರಿಂದ ಶ್ನಾ ವಿಕರಣ. **ಆತ್ಮನೇಪದೇಷ್ವನತೇಃ** ಸೂತ್ರದಿಂದ ಝಿ.ಪ್ರತ್ಯಯಕ್ಕೆ ಅತಾದೇಶ. **ಸಾರ್ವಧಾತುಕಮಪಿತ್** ಸೂತ್ರದಿಂದ ಇದಕ್ಕೆ ಙಿದ್ವದ್ಭಾವವಿರುವುದರಿಂದ **ಶ್ನಾಭ್ಯಸ್ತಯೋರಾತಃ** ಎಂಬುದರಿಂದ ಶ್ನಾ ಪ್ರತ್ಯಯದ ಆಕಾರಕ್ಕೆ ಲೋಪ. ಶ್ನಾ ಪ್ರತ್ಯಯವೂ ಙಿತ್ತಾದುದರಿಂದ ಧಾತುವಿನ ಋಕಾರಕ್ಕೆ ಗುಣ ಬರುವುದಿಲ್ಲ. ವೃಣತೇ ಎಂದು ರೂಪವಾಗುತ್ತದೆ. ಯಜ್ಞೋಗವಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಪ್ರತ್ಯಯಸ್ವರದಿಂದ ಮಧ್ಯೋದಾತ್ತವಾಗುತ್ತದೆ.

ಅರತಿಮ್—ಋ ಗತಿಪ್ರಾಪಣಯೋಃ ಧಾತು. ಇದಕ್ಕೆ ಔಣಾದಿಕವಾದ **ವಹಿವಸ್ಯರ್ತಿಭ್ಯಶ್ಚಿತ್** (ಉ. ಸೂ. ೪-೫೦) ಎಂಬುದರಿಂದ ಅತಿ ಪ್ರತ್ಯಯ. ಪ್ರತ್ಯಯನಿಮಿತ್ತವಾಗಿ ಧಾತುವಿಗೆ ಗುಣ **ಉರಣ್ರಪರಃ** ಸೂತ್ರದಿಂದ ರಪರವಾಗಿ ಬರುತ್ತದೆ. ಪ್ರತ್ಯಯಕ್ಕೆ ಚಿತ್ವ ಅತಿದೇಶವಾಡಿರುವುದರಿಂದ **ಚಿತೇಃ** ಎಂಬುದರಿಂದ ಅಂತೋದಾತ್ತಸ್ವರ ಬರುತ್ತದೆ. ದ್ವಿತೀಯಾ ಏಕವಚನಾಂತರೂಪ.

ಸಪರ್ಯಾಮಿ—ಸಪರ್ಯತಿಃ ಪರಿಚರಣಕರ್ಮಾ. (ಸೇವಾರ್ಥದಲ್ಲಿದೆ) **ಸಪರ ಪೂಜಾಯಾಂ** ಎಂದು ಈ ಧಾತುವು ಕಂಡ್ವಾದಿಯಲ್ಲಿ ಪಠಿತವಾಗಿದೆ. **ಕಂಡ್ವಾದಿಭ್ಯೋಯಕ್** (ಪಾ. ಸೂ. ೩-೧-೨೭) ಎಂಬುದರಿಂದ ಕಂಡ್ವಾದಿಗಳಿಗೆ ಸ್ವಾರ್ಥದಲ್ಲಿ ಯಕ್ ಬರುತ್ತದೆ. ಲಟ್ ಉತ್ತಮಪುರುಷ ಏಕವಚನದಲ್ಲಿ ಮಿಪ್ ಪ್ರತ್ಯಯ. **ಅತೋಲೋಪಃ** ಸೂತ್ರದಿಂದ ಯಕ್ ಪರವಾದಾಗ ಅಕಾರಕ್ಕೆ ಲೋಪ. **ಅತೋದೀರ್ಘೋಯಞಿ** ಸೂತ್ರದಿಂದ ಮಿ ನಿಮಿತ್ತವಾಗಿ ಅದಂತಾಂಗಕ್ಕೆ ದೀರ್ಘ. ಪಾದಾದಿಯಲ್ಲಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಯಕ್ ಸ್ವರವು ಉಳಿಯುವುದರಿಂದ ಯಕಾರೋತ್ತರಾಕಾರವು ಉದಾತ್ತವಾಗುತ್ತದೆ.

ಯಾಮಿ—ಟುಯಾಚೃ ಯಾಚ್ಞಾಯಾಂ ಧಾತು, ಉಭಯಪದೀ. ಲಟ್ ಉತ್ತಮಪುರುಷ ಏಕವಚನದಲ್ಲಿ ಮಿಪ್ ಪ್ರತ್ಯಯ. ಯಾಚಾಮಿ ಎಂದಿರುವಾಗ ಮಧ್ಯ ಚಕಾರಕ್ಕೆ ಛಾಂದಸವಾಗಿ ಲೋಪ ಬರುತ್ತದೆ.

। संहितापाठः ।

अच्छिद्रा सूनोः सहसो नो अद्य स्तोतृभ्यो मित्रमहः
शर्म यच्छ ।
अग्ने गृणन्तमंहस उरुष्योर्जो न पात्प्रभिरायसीभिः ॥ ९ ॥

॥ पदपाठः ॥

अच्छिद्रा । सूनोः इति । सहसः । नः । अद्य । स्तोतृभ्यः । मित्रऽमहः ।
शर्म । यच्छ ।
अग्ने । गृणन्तं । अंहसः । उरुष्य । ऊर्जः । नपात् । प्रऽभिः ।
आयसीभिः ॥ ९ ॥

॥ सायणभाष्यं ॥

हे सहसः सूनोः बलस्य पुत्र । बलेन हि मर्त्यमनोऽग्निर्जायतेऽतः । मित्रमहोऽनुकूलदीप्तिमन्नग्ने नोऽस्मभ्यं स्तोतृभ्योऽद्यास्मिन्कर्मण्यच्छिद्रा अच्छिद्राणि शर्म शर्माणि सुखानि यच्छ । देहि । किंच हे ऊर्जो नपात् अन्नस्य पुत्र । भुक्तेऽन्नेन जठराग्नेः प्रवर्धनादग्नेरन्नपुत्रत्वं । एवंविधाग्ने गृणन्तं त्वां स्तुवन्तमायसीभिर्व्याप्तैः । यद्वा । आयोऽवद्दृढतरैः । पूर्भिः सालनैरंहसः पापादुरुष्य । रक्ष । उरुष्यतीति रक्षाकर्मा । नि. ५-२३ । इति यास्कः ॥ अच्छिद्रा । शेश्छन्दसीति शेर्लोपः । सूनोः सहसः । परमपि च्छन्दसीति परस्य षष्ठ्यन्तस्य पूर्वामन्त्रितांगवद्भावे सति पददयसमुदायस्याष्टमिकं सर्वानुदात्तत्वं । शर्म । सुपां सुलुगिति विभक्तेर्लुक् । ऊर्जो नपात् । न पातयतीति नपात् । नञ्राण्नपादिति नञः प्रकृतिभावः । सुबामन्त्रित इति षष्ठ्यन्तस्य परांगवद्भावे सति पादादित्वादाष्टमिकनिघातस्याभावे पाष्मिकमामन्त्रितादुदात्तत्वं । पूर्भिः । पॄ पालनपूरणयोरिति पॄङ्धातोः क्विप्प्रत्ययस्यासंपदादिलक्षणो भावे क्विप् । उत्वदीर्घौ । सावेकाचेति विभक्तेरुदात्तत्वं ॥

॥ ಪ್ರತಿಪದಾರ್ಥ ॥

ಸಹಸಃ ಸೂನೋ—ಶಕ್ತಿಯ ಪುತ್ರನೂ । **ಮಿತ್ರಮಹಃ**—ಅನುಕೂಲವಾದ ತೇಜಸ್ಸುಳ್ಳವನೂ ಆದ ಎಲೈ ಅಗ್ನಿಯೇ । **ನಃ ಸ್ತೋತೃಭ್ಯಃ**—ಸ್ತೋತೃಗಳಾದ ನಮಗೆ । **ಅದ್ಯ**—ಈ ಯಾಗಕರ್ಮದಲ್ಲಿ । **ಅಚ್ಛಿದ್ರಾ**—ತಡೆಯಿಲ್ಲದ (ಅವಿಚ್ಛಿನ್ನಗಳಾದ) । **ಶರ್ಮ**—ಸುಖಗಳನ್ನು । **ಯಚ್ಛ**—ಕೊಡು (ಮತ್ತು) । **ಊರ್ಜೋ ನಪಾತ್**—ಅನ್ನದ ಪುತ್ರನಾದ । **ಅಗ್ನೇ**—ಅಗ್ನಿಯೇ । **ಗೃಣಂತಂ**—(ನಿನ್ನನ್ನು) ಸ್ತೋತ್ರ ಮಾಡುವ ಭಕ್ತನನ್ನು । **ಅಯಸೀಭಿಃ**—ವಿಸ್ತಾರವಾದ ಅಥವಾ ಕಬ್ಬಿಣದಂತೆ ಘನವಾದ । **ಪೂರ್ಭಿಃ**—ರಕ್ಷಣೆಗಳ ಮೂಲಕ । **ಅಂಹಸಃ**—ಪಾಪದಿಂದ । **ಉರುಷ್ಯ**—ಕಾಪಾಡು ॥

॥ ಭಾವಾರ್ಥ ॥

ಶಕ್ತಿಪುತ್ರನೂ, ಅನುಕೂಲವಾದ ತೇಜಸ್ಸುಳ್ಳವನೂ ಆದ ಎಲೈ ಅಗ್ನಿಯೇ, ಸ್ತೋತೃಗಳಾದ ನಮಗೆ ಈ ಯಾಗಕರ್ಮದಲ್ಲಿ ಅವಿಚ್ಛಿನ್ನಗಳಾದ ಸುಖಗಳನ್ನು ದಯಪಾಲಿಸು. ಅನ್ನಪುತ್ರನಾದ ಅಗ್ನಿಯೇ, ನಿನ್ನನ್ನು ಸ್ತೋತ್ರಮಾಡುವ ನಿನ್ನ ಭಕ್ತನನ್ನು ಕಬ್ಬಿಣದಂತೆ ದೃಢವಾದ ರಕ್ಷಣೆಗಳ ಮೂಲಕ ಪಾಪದಿಂದ ಕಾಪಾಡು.

English Translation.

Son of strength, favourably-shining Agni, grant to your adorers, on this occasion, uninterrupted happiness; offspring of food, preserve him who praises you from sin with guards of iron.

॥ ವಿಶೇಷ ವಿಷಯಗಳು ॥

ಸಹಸಃ ಸೂನೋ—ಇದು ಅಗ್ನಿವಾಚಕವಾದ ಶಬ್ದದ ಸಂಬೋಧನೆ. ಬಲಪ್ರಯೋಗದಿಂದಲೇ ಅರಣಿಯ ಸಹಾಯದಿಂದ ಅಗ್ನಿಯನ್ನು ಉತ್ಪತ್ತಿ ಮಾಡುವುದಾದುದರಿಂದ, ಬಲಪುತ್ರತ್ವವು ಅಗ್ನಿಗೆ ಸಿದ್ಧಿಸಿದಂತಾಯಿತು.

ಮಿತ್ರಮಹ—ಮಿತ್ರಂ ಮಹಃ ಯಸ್ಯ । ಅನುಕೂಲವಾದ ಕಾಂತಿಯುಳ್ಳವನು. ಎಂದರೆ ಅಗ್ನಿಯು ಯಜ್ಞದಲ್ಲಿ ತನ್ನ ಕಾಂತಿಯಿಂದ ಯಾರಿಗೂ ತೊಂದರೆ ಕೊಡುವವನಲ್ಲ ಎಂದು ತಾತ್ಪರ್ಯ.

ಊರ್ಜೋ ನ ಪಾತ್—ನ ಪಾತಯತೀತಿ ನಪಾತ್ ಅನ್ನಸ್ಯ ಪುತ್ರ । ಮಾನವರು ತಾವು ತಿಂದ ಅನ್ನದಿಂದ ಜಠರಾಗ್ನಿಯನ್ನು ಹೆಚ್ಚಿಸಿಕೊಳ್ಳುವರು. ಆಗ ಅನ್ನದಿಂದ ವೃದ್ಧಿಹೊಂದುವ ಶಕ್ತಿ ಅಗ್ನಿಗೆ ಬಂದಿತು. ಆದ್ದರಿಂದಲೇ ಅನ್ನಪುತ್ರನು ಅಗ್ನಿಯು ಎಂದು ಹೇಳಬೇಕು.

ಅಯಸೀಭಿಃ—ವ್ಯಾಪ್ತೈಃ ಯದ್ವಾ ಅಯೋವತ್ ದೃಢತರೈಃ । ಎಂದರೆ ಈ ಪದಕ್ಕೆ ಸರ್ವವ್ಯಾಪ್ತ ಗಳಾದ, ಅಥವಾ ಕಬ್ಬಿಣದಂತೆ ದೃಢತರಗಳಾದ ಎಂಬ ಎರಡು ಅರ್ಥಗಳನ್ನೂ ಇಲ್ಲಿ ಕಲ್ಪಿಸಿದ್ದಾರೆ.

ಉರುಷ್ಯ—ರಕ್ಷಿಸು—ಉರುಷ್ಯತೀ ರಕ್ಷಾಕರ್ಮಾ (ನಿರು. ೫-೨೩) ಎಂದು ನಿರುಕ್ತದಲ್ಲಿ ಉರುಧಾತ್ವಿಗೆ ರಕ್ಷಣೆ ಎಂಬರ್ಥವನ್ನು ಸೂಚಿಸಿದ್ದಾರೆ.

॥ ವ್ಯಾಕರಣಪ್ರಕ್ರಿಯಾ ॥

ಅಚ್ಛಿದ್ರಾ—ನ ಛಿದ್ರಾಣಿ ಅಚ್ಛಿದ್ರಾಣಿ. ಸಂಹಿತಾದಲ್ಲಿ **ಶೇಶ್ಛಂದಸಿ ಬಹುಲಂ** ಎಂಬುದರಿಂದ ಶಿಗೆ ಲೋಪ.

ಸೂನೋ ಸಹಸಃ—**ಪರಮಪಿ ಛಂದಸಿ** ಎಂಬ ವಚನದಿಂದ ಆಮಂತ್ರಿತಕ್ಕೆ ಪರದಲ್ಲಿದ್ದರೂ ಸಹಸಃ ಎಂಬ ಷಷ್ಠ್ಯಂತಪದವು ಪೂರ್ವದ ಆಮಂತ್ರಿತಕ್ಕೆ ಅಂಗವಾಗುವುದರಿಂದ **ಆಮಂತ್ರಿತಸ್ಯ ಚ** ಎಂಬ ಅಸ್ವರಿಕ ಸೂತ್ರದಿಂದ ಬರುವ ನಿಘಾತಸ್ವರವು ಪದದ್ವಯ ಸಮುದಾಯಕ್ಕೆ ಬರುತ್ತದೆ.

ಶರ್ಮ—ಶರ್ಮಾಣಿ ಎಂದು ದ್ವಿತೀಯಾ ಬಹುವಚನದಲ್ಲಿ ರೂಪವಾಗುತ್ತದೆ. **ಸುಪಾಂಸುಲುಕ್** ಸೂತ್ರದಿಂದ ವಿಭಕ್ತಿಗೆ ಲುಕ್ ಬಂದಿದೆ.

ಯಚ್ಛ—ದಾಣ್ ದಾನೇ ಧಾತು. ಲೋಟ್ ಮಧ್ಯಮಪುರುಷ ಏಕವಚನಲ್ಲಿ ಸಿಪಿಗೆ ಹಿ ಆದೇಶ. **ಶಾಷ್ಪ್ರತ್ಯಯಾಧ್ಯಾ** ಸೂತ್ರದಿಂದ ಯಚ್ಛಾದೇಶ ಬರುತ್ತದೆ. ಶಪ್ ವಿಕರಣ ಅದಂತದ ಪರದಲ್ಲಿರುವುದರಿಂದ ಹಿಗೆ ಲುಕ್ **ತಿಙಂತನಿಘಾತಸ್ವರ** ಬರುತ್ತದೆ.

ಊರ್ಜೋ೯ನಪಾತ್—ನ ಪಾತಯತಿ ಇತಿ ನಪಾತ್. **ನಭ್ರಾಣ್ನಪಾತ್ ನಾಸತ್ಯಾ**—(ಪಾ. ಸೂ. ೬.೩-೭೫) ಎಂಬುದರಿಂದ ನಞ್ಗೆ ಪ್ರಕೃತಿಭಾವ. **ಸುಬಾಮಂತ್ರಿತೇ ಪರಾಂಗವತ್ಸ್ವರೇ** (ಪಾ. ಸೂ. ೨-೧-೨) ಎಂಬುದರಿಂದ ಷಷ್ಠ್ಯಂತಕ್ಕೆ ಪರಾಂಗವದ್ಭಾವವಿರುವುದರಿಂದ ಇದು ಪಾದದ ಆದಿಯಲ್ಲಿ ಬಂದುದರಿಂದ ಅಸ್ವರಿಕ ನಿಘಾತಸ್ವರ ಬರುವುದಿಲ್ಲ. ಆಗ **ಆಮಂತ್ರಿತಸ್ಯ** (ಪಾ. ಸೂ. ೬-೧-೧೯೮) ಎಂಬುದರಿಂದ ಆದ್ಯುದಾತ್ತಸ್ವರ ಬರುತ್ತದೆ.

ಪೂರ್ಭಿಃ—ಪೃ ಪಾಲನ ಪೂರಣಯೋಃ ಧಾತು. ಇದಕ್ಕೆ **ಸಂಪದಾದಿಭ್ಯಃ ಕ್ವಿಪ್** ಎಂಬುದರಿಂದ ಭಾವಾರ್ಥದಲ್ಲಿ ಕ್ವಿಪ್. **ಉದೋಷ್ಠ್ಯಪೂರ್ವಸ್ಯ** (ಪಾ. ಸೂ. ೭-೧-೧೦೨) ಎಂಬುದರಿಂದ ಉತ್ವ. ಋಕಾರದ ಸ್ಥಾನಕ್ಕೆ ಬರುವುದರಿಂದ ರಪರವಾಗಿ ಬರುತ್ತದೆ. ಭಿಸ್ ಪರವಾದಾಗ **ಹಲಿ ಚ** ಎಂಬುದರಿಂದ ಉಷಧಾ ಭೂತವಾದ ಇತಿಗೆ ದೀರ್ಘ. **ಸಾವೇಕಾಚಸ್ತೃತೀಯಾದಿಃ** (ಪಾ. ಸೂ. ೬-೧-೧೬೮) ಎಂಬುದರಿಂದ ಏಕಾಜಾ ದುದರಿಂದ ಪರದಲ್ಲಿರುವ ವಿಭಕ್ತಿಗೆ ಉದಾತ್ತಸ್ವರ ಬರುತ್ತದೆ.

॥ ಸಂಹಿತಾಪಾಠಃ ॥

ಭವಾ ವರೂಥಂ ಗೃಣತೇ ವಿಭಾವೋ ಭವಾ ಮಘವನ್ಮಘವದ್ಭ್ಯಃ ಶರ್ಮ।
ಉರುಷ್ಯಾಗ್ನೇ ಅಂಹಸೋ ಗೃಣಂತಂ ಪ್ರಾತರ್ಮಕ್ಷೂ ಧಿಯಾವಸುರ್ಜ-
ಗಮ್ಯಾತ್ ॥ ೯ ॥

॥ ಪದಪಾಠಃ ॥

ಭವ । ವರೂಥಂ । ಗೃಣತೇ । ವಿಭಾವಃ । ಭವ । ಮಘವನ್ । ಮಘವದ್ಭ್ಯಃ । ಶರ್ಮ ।

ಉರುಷ್ಯ । ಅಗ್ನೇ । ಅಂಹಸಃ । ಗೃಣಂತಂ । ಪ್ರಾತಃ । ಮಕ್ಷು । ಧಿಯಾವಸುಃ

ಜಗಮ್ಯಾತ್ ॥ ೯ ॥

॥ ಸಾಯಣಭಾಷ್ಯ ॥

ಹೇ ವಿಭಾವೋ ವಿಶಿಷ್ಟಪ್ರಕಾಶಾಗ್ನೇ ಗೃಣತೇ ತ್ವಾಂ ಸ್ತುವತೇ ಯಜಮಾನಾಯ । ವರೂಥಮಿತಿ ಗೃಹನಾಮ । ವರೂಥಮನಿಷ್ಟನಿವಾರಕಂ ಗೃಹಂ ಭವ । ಹೇ ಮಘವನ್ ಧನವನ್ನಗ್ನೇ ಮಘವದ್ಭ್ಯೋ ಹವಿರ್ಲಕ್ಷಣಧನಯುಕ್ತೇಭ್ಯೋ ಯಜಮಾನೇಭ್ಯಃ ಶರ್ಮ ಸುಖಂ ಯಥಾ ಭವತಿ ತಥಾ ಭವ । ಹೇ ಅಗ್ನೇ ಗೃಣಂತಂ ಸ್ತುವಂತಮಂಹಸಃ ಪಾಪಕಾರಿಣಃ ಶತ್ರೋರುರುಷ್ಯ । ರಕ್ಷ । ಧಿಯಾವಸುಃ ಕರ್ಮಣಾ ಬುದ್ಧ್ಯಾ ವಾ ಪ್ರಾಪ್ತಧನೋಽಗ್ನಿಃ ಪ್ರಾತರಿದಾನೀಮಿವ ಪರೇದ್ಯುರಪಿ ಮಕ್ಷು ಶೀಘ್ರಂ ಜಗಮ್ಯಾತ್ । ಆಗಚ್ಛತು ॥ ವರೂಥಂ । ವೃಞ್ ವರಣೇ । ಜ್ವೃವೃಞ್ಭ್ಯಮೂಥನ್ । ಉ. ೨-೬ । ಇತ್ಯೂಥನ್ಪ್ರತ್ಯಯಃ । ನಿತ್ತ್ವಾದಾದ್ಯುದಾತ್ತತ್ವಂ । ಗೃಣತೇ । ಶತುರನುಮ ಇತಿ ವಿಭಕ್ತೇರುದಾತ್ತತ್ವಂ । ವಿಭಾವಃ । ವಿಶಿಷ್ಟಾ ಭಾ ವಿಭಾಃ । ಆತೋ ಮನಿನ್ನಿತಿ ವಿಚ್ । ತದಸ್ಯಾಸ್ತೀತಿ ಮತುಪ್ । ವಾದುಪಧಾಯಾ ಇತಿ ಮತುಪೋ ವತ್ವಂ । ಮತುವಸೋ ರುಂತಿ ನಕಾರಸ್ಯ ರುತ್ವಂ । ಮಘವದ್ಭ್ಯಃ । ಮಘವಾ ಬಹುಲಂ । ಪಾ. ೬-೪-೧೨೮ । ಇತಿ ಮಘವನ್ಶಬ್ದಸ್ಯ ತೃಆದೇಶಃ । ಸ ಚ ನಾನುಬಂಧಕೃತಮನೇಕಾಲ್ತ್ವಂ । ಪರಿ. ೬ ಮ. ೧-೧-೫೫ । ಇತಿ ವಚನಾತ್ ಆಲೋಽಂತ್ಯಸ್ಯ । ಪಾ. ೧-೧-೫೨ । ಇತ್ಯಂತಸ್ಯ ಭವತಿ । ಮಕ್ಷು । ಋಚಿ ತುನುಘಮಕ್ಷ್ವಿತಿ ದೀರ್ಘಃ । ಧಿಯಾವಸುಃ । ಬಹುವ್ರೀಹೌ ಪೂರ್ವಪದಪ್ರಕೃತಿಸ್ವರತ್ವಂ । ಪೂರ್ವಪದಸ್ಯ ಸಾವೇಕಾಚೇ ಇತಿ ವಿಭಕ್ತೇರುದಾತ್ತಾ । ಲುಗಭಾವಶ್ಛಾಂದಸಃ । ಜಗಮ್ಯಾತ್ । ಗಮ್ಲೃ ಸೃಪ್ಲೃ ಗತೌ । ಲಿಙಾ ಬಹುಲಂ ಛಂದಸೀತಿ ಶಪಃ ಶ್ಲುಃ ॥

॥ ಪ್ರತಿಪದಾರ್ಥ ॥

ವಿಭಾವಃ—ವಿಶೇಷವಾದ ಪ್ರಕಾಶವುಳ್ಳ ಅಗ್ನಿಯೇ । **ಗೃಣತೇ**—ನಿನ್ನನ್ನು ಸ್ತೋತ್ರಮಾಡುವ ಯಜಮಾನನಿಗೆ । **ವರೂಥಂ**—(ಅನಿಷ್ಟವನ್ನು ತಪ್ಪಿಸುವ) ಮನೆ (ಆಸರೆ)ಯಾಗಿ । **ಭವ**—ಆಗು । **ಮಘವನ್**—ಧನವಂತನಾದ ಅಗ್ನಿಯೇ । **ಮಘವದ್ಭ್ಯಃ**—(ಹವಿಸ್ಸಿನ ರೂಪದ) ಧನವಂತರಾದ ಯಜಮಾನರಿಗೆ । **ಶರ್ಮ**—ಸುಖವುಂಟಾಗುವಂತೆ (ಸುಖದಾಯಕನಾಗಿ) । **ಭವ**—ಆಗು । **ಅಗ್ನೇ**—ಎಲೈ ಅಗ್ನಿಯೇ । **ಗೃಣಂತಂ**—ಸ್ತೋತ್ರಮಾಡುವವನನ್ನು । **ಅಂಹಸಃ**—ಪಾಪಕಾರಿಯಾದ ಶತ್ರುವಿನಿಂದ । **ಉರುಷ್ಯ**—ಕಾಪಾಡು । **ಧಿಯಾ**

ವಸುಃ—ಪವಿತ್ರವಾದ ಕರ್ಮದಿಂದ ಅಥವಾ ಬುದ್ಧಿಯಿಂದ ಧನವಂತನಾದ ಅಗ್ನಿಯು । **ಪ್ರಾತಃ**—(ಈಗಿನಂತೆ) ಬೆಳಗ್ಗೆ (ಯೂ) । **ಮಷ್ಟು**—ಜಾಗ್ರತೆಯಾಗಿ । **ಜಗಮ್ಯಾತ್**—ಬರಲಿ ॥

॥ ಭಾವಾರ್ಥ ॥

ವಿಶೇಷವಾದ ಪ್ರಕಾಶವುಳ್ಳ ಎಲೈ ಅಗ್ನಿಯೇ, ನಿನ್ನನ್ನು ಸ್ತೋತ್ರಮಾಡುವ ಯಜಮಾನನಿಗೆ ಆಸರೆಯಾಗಿರು. ಧನವಂತನಾದ ಎಲೈ ಅಗ್ನಿಯೆ, ಹವಿಸ್ಸಿನರೂಪದ ಧೆನವನ್ನು ಹೊಂದಿರುವ ಯಜ್ಞಕರ್ತರಿಗೆ ಸುಖದಾಯಕನಾಗಿ ಆಗು. ಎಲೈ ಅಗ್ನಿಯೇ, ನಿನ್ನನ್ನು ಸ್ತೋತ್ರಮಾಡುವವರನ್ನು ಪಾಪದಿಂದ (ಪಾಪಕಾರಿಯಾದ ಶತ್ರುವಿನಿಂದ) ಕಾಪಾಡು. ಪವಿತ್ರವಾದ ಕರ್ಮರೂಪದ ಧನವನ್ನು ಹೊಂದಿದ ಅಗ್ನಿಯು ಬೆಳಗ್ಗೆಯೂ ಜಾಗ್ರತೆಯಾಗಿ ದಯಮಾಡಲಿ.

English Translation.

Agni of various rays, be a house to him who praises you; wealthy Agni, be a source of happiness to the wealthy (sacrificers); protect, Agni, your worshippers from sin; may Agni who is rich with righteous deeds, come to us speedily in the morning.

॥ ವಿಶೇಷ ವಿಷಯಗಳು ॥

ವಿಭಾವಃ—ವಿಶೇಷರೀತಿಯಲ್ಲಿ ಪ್ರಾಕಾಶಿಸುವ ಅಗ್ನಿ. ವಿಶಿಷ್ಟಾ ಭಾಃ ವಿಭಾಃ ಎಂಬುದು ಇದರ ವ್ಯುತ್ಪತ್ತಿ.

ವರೂಥಂ—ವರೂಥ ಶಬ್ದವು ಗೃಹಪರ್ಯಾಯ ಪದಗಳಲ್ಲಿ ಸೇರಿದೆ. ಲೌಕಿಕವಾಗಿ ವರೂಥ ಶಬ್ದಕ್ಕೆ ರಥವೆಂಬ ಅರ್ಥವಿದೆ. **ಗೃಹನಾಮಾನ್ಯುತ್ತರಾಣಿ ದ್ವಾವಿಂಶತಿಃ** ಎಂದು (೩-೧೩) ನಿರುಕ್ತದಲ್ಲಿ ಇಪ್ಪತ್ತೆರಡು ಪದಗಳನ್ನು ಗೃಹವಾಚಕಗಳಾಗಿ ಬರೆದಿದ್ದಾರೆ. ಇಲ್ಲಿ ವರೂಥಶಬ್ದಕ್ಕೆ ಅನಿಷ್ಟನಿವಾರಕವಾದ ಗೃಹವೆಂಬ ಅರ್ಥವಿದೆ.

ಧಿಯಾವಸುಃ—**ಕರ್ಮಣಾ ಬುದ್ಧ್ಯಾ ವಾ ಪ್ರಾಪ್ತಧನೋऽಗ್ನಿಃ** । ಕ್ರಿಯೆಯಿಂದಾಗಲಿ ಬುದ್ಧಿಶಕ್ತಿಯಿಂದಾಗಲಿ, ಸಂಪೂರ್ಣವಾದ ಐಶ್ವರ್ಯವನ್ನು ಸಂಪಾದಿಸುವವನು ಅಗ್ನಿ. **ಧಿಯಾ ವಸುಃ ಯಸ್ಯ** ಎಂಬ ವಿಗ್ರಹವಾಕ್ಯದಲ್ಲಿ ತೃತೀಯಾ ವಿಭಕ್ತಿಯು ಲೋಪವಾಗದಿರುವುದು ಕೇವಲ ಛಾಂದಸ.

ಮಷ್ಟು ಜಗಮ್ಯಾತ್—ಶೀಘ್ರಂ ಆಗಚ್ಛತು. **ಗಮ್ಲೃ ಸೃಪ್ಲೃಗತೌ** ಎಂಬ ಧಾತುವಿನಿಂದ ಉತ್ಪನ್ನವಾದ ಕ್ರಿಯಾರೂಪ ಇದು.

॥ ವ್ಯಾಕರಣಪ್ರಕ್ರಿಯಾ ॥

ಭವ—**ಭೂ ಸತ್ತಾಯಾಂ** ಧಾತು. ಲೋಟ್ ಮಧ್ಯಮಪುರುಷಏಕವಚನರೂಪ. **ಧ್ವೈಚೋऽತೇ-ಸ್ತಿಙಃ** ಎಂಬುದರಿಂದ ಸಂಹಿತಾದಲ್ಲಿ ಅಂತ್ಯ ದೀರ್ಘ.

ವರೂಥಮ್—ವೃಞ್ ವರಣೇ ಧಾತು. **ಜ್ವೃವೃಞ್ಭ್ಯಾಮೂಥನ್** (ಉ. ಸೂ. ೨-೧೬೩) ಎಂಬುದರಿಂದ ಇದಕ್ಕೆ ಊಥನ್ ಪ್ರತ್ಯಯ. ಪ್ರತ್ಯಯನಿಮಿತ್ತವಾಗಿ ಧಾತುವಿನ ಇಕಿಗೆ ಗುಣ. ರಪರವಾಗಿ ಬರುತ್ತದೆ. ಪ್ರತ್ಯಯ ನಿತ್ವಾದುದರಿಂದ **ಞ್ನಿತ್ಯಾದಿರ್ನಿತ್ಯಮ್** ಎಂಬುದರಿಂದ ಆದ್ಯುದಾತ್ತಸ್ವರ ಬರುತ್ತದೆ.

ಗೃಣತೇ—ಗೃ ಶಬ್ದೇ ಧಾತು. (ಇಲ್ಲಿ **ಸ್ತೋತಾರ್ಥ**ದಲ್ಲಿದೆ) ಲಡರ್ಥದಲ್ಲಿ ಶತೃಪ್ರತ್ಯಯ. **ಕ್ರ್ಯಾದಿಭ್ಯಃ ಶ್ನಾ** ಎಂಬುದರಿಂದ ಶ್ನಾ ವಿಕರಣ. **ಶ್ನಾದೀನಾಂ ಹ್ರಸ್ವಃ** ಎಂಬುದರಿಂದ ಧಾತುವಿಗೆ ಹ್ರಸ್ವ. ಶತೃ ಙಿತ್ವಾದುದರಿಂದ **ಙಿಶ್ನಾಭ್ಯಸ್ತ**—ಎಂಬುದರಿಂದ ಶ್ನಾ ಪ್ರತ್ಯಯದ ಆಕಾರಕ್ಕೆ ಲೋಪ. ಋಕಾರವನ್ನು ನಿಮಿತ್ತೀಕರಿಸಿ ನಕಾರಕ್ಕೆ ಣತ್ವ. ಗೃಣತ್ ಶಬ್ದವಾಗುತ್ತದೆ. ಚತುರ್ಥೀ ಏಕವಚನಾಂತರೂಪ. **ಶತುರನುಮೋ ನದ್ಯಜಾದೀ** ಎಂಬುದರಿಂದ ನುಮ್ ಶೂನ್ಯವಾದುದರಿಂದ ವಿಭಕ್ತಿಗೆ ಉದಾತ್ತಸ್ವರ ಬರುತ್ತದೆ.

ವಿಭಾವಃ—ವಿಶಿಷ್ಟಾ ಭಾಃ ವಿಭಾಃ. ಭಾ ದೀಪ್ತೌ ಧಾತು. **ಆತೋಮನಿನ್**—(**ಪಾ.** ಸೂ. ೩-೨-೭೪) ಎಂಬುದರಿಂದ ವಿಚ್ ಪ್ರತ್ಯಯ ವಿಚಿನಲ್ಲಿ **ಸರ್ವ**ವೂ ಲೋಪವಾಗುತ್ತದೆ. ವಿಭಾಃ ಅಸ್ಯ ಅಸ್ತಿ ಇತಿ ವಿಭಾವನ್. **ತದಸ್ಯಾಸ್ತಿ**—ಎಂಬುದರಿಂದ ಮತುಪ್ ಪ್ರತ್ಯಯ. ಅಕಾರದ ಪರದಲ್ಲಿ ಬಂದುದರಿಂದ **ಮಾದುಪಧಾಯಾಶ್ಚ ಮತೋ**—(ಪಾ. ಸೂ. ೮-೨-೯) ಎಂಬುದರಿಂದ ಮತುಪಿನ ಮಕಾರಕ್ಕೆ ವಕಾರಾದೇಶ. ಸಂಬುದ್ಧಿ ಸುಪರವಾದಾಗ **ಮತುವಸೋರುಃ ಸಂಬುದ್ಧೌ** (ಪಾ. ಸೂ. ೮-೩-೧) ಎಂಬುದರಿಂದ ನಕಾರಕ್ಕೆ ರುತ್ವ. **ಆಮಂತ್ರಿತಸ್ಯಚ** (ಪಾ. ಸೂ. ೮-೧-೧೯) ಎಂಬುದರಿಂದ ನಿಘಾತಸ್ವರ ಬರುತ್ತದೆ.

ಮಘವದ್ಭ್ಯಃ—**ಮಘವಾ ಬಹುಲಂ** (ಪಾ. ಸೂ. ೬-೪-೧೨೮) ಎಂಬುದರಿಂದ ಮಘವನ್ ಶಬ್ದಕ್ಕೆ ತೃ ಎಂಬುದು ಅಂತಾದೇಶವಾಗಿ ಬರುತ್ತದೆ. ತೃ ಎಂಬಲ್ಲಿ ಋಕಾರ ಇತ್ ಸಂಜ್ಞೆಯಿಂದ ಲೋಪವಾಗುತ್ತದೆ. **ನಾನುಬಂಧಕೃತಮನೇಕಾಲ್ತ್ವಮ್** (ಪರಿಭಾಷಾ ೩) ಇತ್ ಸಂಜ್ಞೆಯುಳ್ಳವರ್ಣವನ್ನು ನಿಮಿತ್ತೀಕರಿಸಿ ಅನೇಕಾಲ್ತ್ವವನ್ನು ಹೇಳಬಾರದು ಎಂಬ ವಚನದಿಂದ ಇಲ್ಲಿ ತೃ ಎಂಬುದು ಸರ್ವಾದೇಶವಾಗಿ ಬರುವುದಿಲ್ಲ. ಆದುದರಿಂದ ಹಿಂದೆ ಹೇಳಿದಂತೆ **ಅಲೋಂತ್ಯಸ್ಯ** (ಪಾ. ಸೂ. ೧-೧-೫೨) ಎಂಬುದರಿಂದ ಅಂತ್ಯಕ್ಕೆ ಬರುತ್ತದೆ

ಉರುಷ್ಯ—ಉರುಷ್ಯ ಎಂಬ ಧಾತುವು ರಕ್ಷಣಾರ್ಥದಲ್ಲಿದೆ. ಲೋಟ್ ಮಧ್ಯಮಪುರುಷ ಏಕವಚನದರೂಪ. ಪಾದಾದಿಯಲ್ಲಿರುವುದರಿಂದ ನಿಘಾತಸ್ವರ ಬರುವುದಿಲ್ಲ.

ಮಕ್ಷೂ—**ಋಚಿತುನುಘ**—ಎಂಬುದರಿಂದ ಸಂಹಿತಾದಲ್ಲಿ ದೀರ್ಘ ಬರುತ್ತದೆ.

ಧಿಯಾವಸುಃ—ಧಿಯಾ ವಸು ಯಸ್ಯ ಸಃ ಧಿಯಾವಸುಃ ಬಹುವ್ರೀಹಿಸಮಾಸ. ಛಾಂದಸವಾಗಿ ಸಮಾಸದಲ್ಲಿ ಸುಪಿಗೆ ಲುಕ್ ಬರುವುದಿಲ್ಲ. ಧಿಯಾ ಎಂಬುದು **ಸಾವೇಕಾಚಸ್ತೃತೀಯಾದಿಃ** ಸೂತ್ರದಿಂದ ವಿಭಕ್ತಿಗೆ ಉದಾತ್ತಸ್ವರ ಬರುವುದರಿಂದ ಅಂತೋದಾತ್ತವಾಗುತ್ತದೆ. **ಬಹುವ್ರೀಹೌಪ್ರಕೃತ್ಯಾಪೂರ್ವಪದಮ್** ಎಂಬುದರಿಂದ ಪೂರ್ವಪದಪ್ರಕೃತಿಸ್ವರ ಬಂದಾಗ ಅದೇ ಉಳಿಯುತ್ತದೆ.

ಜಗಮ್ಯಾತ್—ಗಮ್ಲೃ ಸೃಪ್ಲೃ ಗತೌ ಧಾತು. ಲಙ್ ಪ್ರಥಮಪುರುಷ ಏಕವಚನದಲ್ಲಿ **ತಿಪ್** ಪ್ರತ್ಯಯ. **ಇತಶ್ಚ** ಸೂತ್ರದಿಂದ ಅಂತ್ಯಲೋಪ. **ಬಹುಲಂ ಛಂದಸಿ** ಎಂಬುದರಿಂದ ಶಪಿಗೆ ಶ್ಲು ಆದೇಶ. **ಶ್ಲೌ** ಎಂಬುದರಿಂದ ಧಾತುವಿಗೆ ದ್ವಿತ್ವ. **ಅಭ್ಯಾಸಕ್ಕೆ ಹಲಾದಿಶೇಷ. ಕುಹೋಶ್ಚುಃ** ಸೂತ್ರದಿಂದ ಗಕಾರಕ್ಕೆ ಜಕಾರಾದೇಶ. **ಯಾಸುಟ್ ಪರಸ್ಮೈಪದೇಷು**—ಸೂತ್ರದಿಂದ ಲಿಙಿಗೆ ಯಾಸುಟಾಗಮ. **ಸುಟ್ತಿಥೋಃ**

ಎಂಬುದರಿಂದ ತಕಾರಕ್ಕೆ ಸುಡಾಗಮ. ಲಿಙಃಸಲೋಪೋನಂತ್ಯಸ್ಯ ಎಂಬುದರಿಂದ ಅನಂತ್ಯವಾದ ಎರಡು ಸಕಾರಗಳಿಗೂ ಲೋಪ. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರಬರುತ್ತದೆ.

ಐವತ್ತ ಎಂಟನೆಯ ಸೂಕ್ತ ಸಮಾಪ್ತವು.

ಐವತ್ತೊಂಭತ್ತನೆಯ ಸೂಕ್ತವು

॥ ಸಾಯಣಭಾಷ್ಯಂ ॥

ವಯೋ ಇದಿತಿ ಸಪ್ತರ್ಚಂ ದ್ವಿತೀಯಂ ಸೂಕ್ತಂ ನೋಧಸ ಆರ್ಷಂ ತ್ರೈಷ್ಟುಭಂ । ವೈಶ್ವಾನರ-ಗುಣಕೋಽಗ್ನಿರ್ದೇವತಾ । ತಥಾ ಚಾನುಕ್ರಾಂತಂ । ವಯೋ ಇತ್ಸಪ್ತೆ ವೈಶ್ವಾನರೀಯೆಮಿತಿ ॥ ಸೂಕ್ತ-ವಿನಿಯೋಗೋ ಲಿಂಗಾದವಗಂತವ್ಯಃ ॥

ಅನುವಾದವು—ವಯೋ ಇತ್ ಎಂಬ ಈ ಸೂಕ್ತವು ಹನ್ನೊಂದನೆಯ ಅನುವಾಕದಲ್ಲಿ ಎರಡನೆಯ ಸೂಕ್ತವು. ಇದರಲ್ಲಿ ಏಳು ಋಕ್ಕುಗಳಿರುವವು. ಈ ಸೂಕ್ತಕ್ಕೆ ನೋಧಾ ಗೌತಮನೆಂಬುವನು ಋಷಿಯು. ತ್ರಿಷ್ಟುಪ್ ಛಂದಸ್ಸು. ವೈಶ್ವಾನರನಾಮಕನಾದ ಅಗ್ನಿಯು ದೇವತೆಯು. ಅನುಕ್ರಮಣಿಕೆಯಲ್ಲಿ **ವಯೋ ಇತ್ಸಪ್ತೆ ವೈಶ್ವಾ-ನರೀಯೆಮಿತಿ** ಎಂದು ಹೇಳಿರುವುದು. ಸೂಕ್ತದ ವಿನಿಯೋಗವನ್ನು ಅರ್ಥಾನುಸಾರವಾಗಿ ತಿಳಿದುಕೊಳ್ಳಬೇಕು.

ಸೂಕ್ತ—೫೯

ಮಂಡಲ—೧ ॥ ಅನುವಾಕ—೧೧ ॥ ಸೂಕ್ತ—೫೯ ॥
ಅಷ್ಟಕ—೧ ॥ ಅಧ್ಯಾಯ—೪ ॥ ವರ್ಗ— ೨೫ ॥

ಸೂಕ್ತದಲ್ಲಿರುವ ಋಕ್ಸಂಖ್ಯೆ—೭
ಋಷಿಃ—ನೋಧಾ ಗೌತಮಃ ॥
ದೇವತಾ—ಅಗ್ನಿರ್ವೈಶ್ವಾನರಃ ।
ಛಂದಃ—ತ್ರಿಷ್ಟುಪ್ ॥

॥ ಸಂಹಿತಾಪಾಠಃ ॥

ವಯೋ ಇದ್ಅಗ್ನೇ ಅಗ್ನಯಸ್ತೇ ಅನ್ಯೇ ತ್ವೇ ವಿಶ್ವೇ ಅಮೃತಾ ಮಾದಯಂತೇ
ವೈಶ್ವಾನರ ನಾಭಿರಸಿ ಕ್ಷಿತೀನಾಂ ಸ್ಥೂಣೇವ ಜನಾ ಉಪಮಿದ್ಯಯಂಥ
॥ ೧ ॥

पदपाठः

वयाः । इत् । अग्ने । अग्नयः । ते । अन्ये । त्वे इति । विश्वे ।
अमृताः । मादयन्ते ।
वैश्वानर । नाभिः । असि । क्षितीनाम् । स्थूणाऽइव । जनान् । उपऽक्षि-
मित् । यययन्थ ॥ ८ ॥

॥ सायणभाष्यं ॥

वयाः शाखा नेतेर्वार्ताया॒ना भवन्तीति यास्कः । नि. ८-४ । हे अग्ने येऽन्येऽग्नयः सन्ति ते सर्वेऽपि ते तव वयाः इत् शाखा एव । ततस्त्वत्तोऽन्ये न सन्तीति भावः । किंच त्वे त्वयि सति विश्वे सर्वेऽमृता अमरणधर्माणो देवा मादयन्ते । हृष्यन्ति । न हि त्वद्व्यतिरेकेण तैर्जीवितुं शक्यते । हे वैश्वानर विश्वेषां नराणां जातरूपेण संबन्धिन्नग्ने क्षितीनां मनुष्याणां नाभिः संनद्धोऽसि । अवस्थापकोऽसि । अतस्त्वमुपमिदुपस्थापयिता सन् । यद्वा । उपमिदित्येतद्दृष्टान्तविशेषणं । जनान्यययंथ । अधारयः । तत्र दृष्टान्तः । उपमिदुपनिखाता स्थूणेव । वंशधारणार्थं निखातः स्तंभो यथा गृहोपरिस्थं वंशं धारयति तद्वत् ॥ वैश्वानर । विश्वे चेमे नरा विश्वानराः । नरे संज्ञायां । पा. ६-३-८७ । इति पूर्वपदस्य दीर्घः । तत्संबन्धी वैश्वानरः । तस्येदमित्यण् । नाभिः । नहो मश्च । उ. ४-८७ । इतीञ्प्रत्ययो भकारश्चान्तादेशः । ञित्त्वादाद्युदात्तत्वं । असि । तासस्त्योर्लोपः इति सलोपः । क्षितीनां । क्षि निवासगत्योः । अस्मात् क्तिच्क्तौ च संज्ञायामिति क्तिच् । अंतोदात्तात्किच्छब्दादुत्तरस्य नामो नामन्यतरस्यामित्युदात्तत्वं । उपमित् । डुमिञ् प्रक्षेपणे । अस्मादुपपूर्वाद्बहुलवचनात्कर्मणि क्विप् । तुगागमः । यययन्थ । यमु उपरमे । लिटि थलि क्र्यादिनियमादिटि प्राप्ते उपदेशेऽत्वतः । पा. ६-४-६२ । इति प्रतिषेधः ॥

॥ प्रतिपदार्थ ॥

अग्ने—ಎಲೈ ಅಗ್ನಿಯೇ । **अन्ये अग्नयः**—ಇತರ ಯಾವ ಅಗ್ನಿಗಳಿರುವರೋ ಅವರೆಲ್ಲರೂ । **ते**—ನಿನ್ನ । **वयाः इत्**—ಶಾಖೆಗಳೇ । **त्वे**—ನೀನಿರಲು । **विश्वे अमृताः**—ಮರಣರಹಿತರಾದ ಸಮಸ್ತ ದೇವತೆಗಳೂ । **मादयन्ते**—ಸಂತೋಷಪಡುತ್ತಾರೆ । **वैश्वानर**—ಮಾನವರಲ್ಲೆಲ್ಲಾ ಜಾತ

ರಾಗ್ನಿರೂಪದಿಂದ ಇರುವ ಎಲೈ ಅಗ್ನಿಯೇ । **ಕ್ಷಿತೀನಾಂ**—ಮಾನವರ । **ನಾಭಿಃ ಅಸಿ**—ಹೊಕ್ಕಳುರೂಪದಲ್ಲಿ ಕೇಂದ್ರೀಕೃತನಾಗಿದ್ದೀಯೆ (ಆದ್ದರಿಂದಲೇ) **ಉಪಮಿತ್**—ಆಳವಾಗಿ ನೆಡಲ್ಪಟ್ಟ । **ಸ್ಥೂಣೇವ**—ಸ್ತಂಭವು (ಮನೆಯನ್ನು) ಭದ್ರವಾಗಿ ಹಿಡಿದಿರುವಂತೆ । **ಜನಾ**—ಮನುಷ್ಯರನ್ನು **ಯಯಂಥ**—ಅವಲಂಬನವನ್ನು ಕೊಟ್ಟು ಹಿಡಿದಿದ್ದೀಯೆ ॥

॥ ಭಾವಾರ್ಥ ॥

ಎಲೈ ಅಗ್ನಿದೇವನೇ, ವಿಶ್ವದಲ್ಲಿ ಇತರ ಯಾವ ಯಾವ ಅಗ್ನಿಗಳಿರುವರೋ ಅವರೆಲ್ಲರೂ ನಿನ್ನ ಶಾಖೆಗಳೇ ಆಗಿರುವರು. ನಿನ್ನಿಂದಲೇ ಅವರೆಲ್ಲರೂ ಮರಣರಹಿತರಾಗಿ ಸಂತೋಷಪಡುತ್ತಾರೆ. ನೀನು ಜಾಠರರೂಪದಿಂದ ಸಕಲ ಮಾನವರಲ್ಲೂ ನಾಭಿಯಲ್ಲಿ ಕೇಂದ್ರಿತನಾಗಿದ್ದೀಯೆ. ಆದ್ದರಿಂದಲೇ ಆಳವಾಗಿ ನೆಟ್ಟ ಸ್ತಂಭವು ಮನೆಯ ಮೇಲ್ಛಾವಣಿಯನ್ನು ಭದ್ರವಾಗಿ ಹಿಡಿದಿರುವಂತೆ ನೀನು ಮನುಷ್ಯರಿಗೆಲ್ಲ ಅವಲಂಬನವನ್ನು ಕೊಟ್ಟು ಹಿಡಿದು ನಿಲ್ಲಿಸಿದ್ದೀಯೆ.

English Translation.

O Agni, whatever other fires there may be, they are but ramifications of you; all the immortals rejoice in you; you Vaiswanara, are the navel of men and uphold them like a deep-planted column.

॥ ವಿಶೇಷವಿಷಯಗಳು ॥

ವಯಾಃ—**ವಯಾ ಶಾಖಾ ವೇತೇವರ್ವಾತಾಯೇನಾ ಭವಂತಿ** (ನಿರು. ೧-೪) ಎಂಬ ನಿರುಕ್ತದಂತೆ ವಯಶ್ಶಬ್ದಕ್ಕೆ ಶಾಖೆ ಎಂದರ್ಥ. ವಯಶ್ಶಬ್ದವನ್ನು ಶಾಖಾಶಬ್ದಪರ್ಯಾಯವನ್ನಾಗಿ ಪಠಿಸಿದ್ದಾರೆ. **ವಯಾಃಶಾಖಾಃ ಇತಿ ಪರ್ಯಾಯವಚನಃ**—ಎಂದು ನಿರುಕ್ತದಲ್ಲಿ ವಿವರಣೆ ಇದೆ.

ಮಾದಯಂತೇ—**ಹೃಷ್ಯಂತಿ**। ದೇವತೆಗಳು ಅತಿಶಯವಾದ ರೀತಿಯಲ್ಲಿ ಸಂತೋಷಪಡಬೇಕಾದರೆ ಅಗ್ನಿ ಸಹಾಯ ಬೇಕೇ ಬೇಕು. ಅಗ್ನಿ ಸಹಾಯವಿಲ್ಲದೆ ಅವರು ತೃಪ್ತಿಪಡಲಾರರು ಎಂಬುದೇ ಭಾವಾರ್ಥ.

ವೈಶ್ವಾನರ—**ವಿಶ್ವೇ ಜೀಮೇ ನರಾ ವಿಶ್ವಾನರಾಃ ಕತ್ಸಂಬಂಧೀ ವೈಶ್ವಾನರಃ**—ಸಮಸ್ತ ಮಾನವರ ಹೃದಯದಲ್ಲಿಯೂ ಜಠರಾಗ್ನಿಯ ರೂಪದಿಂದಿರುವವನು ಅಗ್ನಿಯು ಎಂದು ವೈಶ್ವಾನರ ಪದದ ವಿವರಣೆ.

ಉಪಮಿತ್—ಸ್ಥಾಪನೆ ಮಾಡುವವನು. ಈ ಪದವನ್ನು ಅಗ್ನಿಗೂ ಅಥವಾ ಇಲ್ಲಿ ದೃಷ್ಟಾಂತವಾಗಿ ಕೊಟ್ಟಿರುವ ಸ್ಥಾಣುವಿಗೂ ವಿಶೇಷಣವನ್ನಾಗಿ ಮಾಡಬಹುದು. ಮನೆಯ ಛಾವಣಿಯನ್ನು ಹೊರುವುದಕ್ಕಾಗಿ ನೆಟ್ಟಕಂಬವು ಮನೆಯ ಭಾರವನ್ನೆಲ್ಲಾ ಹೊರುವಂತೆ ಮಾನವರ ಜಠರದಲ್ಲಿ ನಿಂತು ಸರ್ವರ ಪ್ರಾಣಕ್ಕೂ ಆಶ್ರಯನಾಗಿರುವೆ ಎಂಬುದು ಈ ಪದದಿಂದ ತೋರಿಬರುವ ವಿವರಣೆ.

॥ ವ್ಯಾಕರಣಪ್ರಕ್ರಿಯಾ ॥

ಮಾದಯಂತೇ—ಮದ ತೃಪ್ತಿಯೋಗೇ ಧಾತು. ಚುರಾದಿ. **ಸತ್ಯಾಪಪಾಶ**—ಸೂತ್ರದಿಂದ ಸ್ವಾರ್ಥದಲ್ಲಿ ಣಿಚ್. **ಅತ ಉಪಧಾಯಾಃ** ಸೂತ್ರದಿಂದ ಧಾತುವಿನ ಉಪಧೆಗೆ ವೃದ್ಧಿ. ಲಟ್ ಪ್ರಥಮಪುರುಷ ಬಹುವಚನರೂಪ. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

ವೈಶ್ವಾನರ—ವಿಶ್ವೇ ಚ ಇನೇ ನರಾಶ್ಚ ವಿಶ್ವಾನರಾಃ **ನರೇಸಂಜ್ಞಾಯಾಂ** (ಪಾ. ಸೂ. ೬-೩-೧೨೯) ಎಂಬುದರಿಂದ ಸಂಜ್ಞಾತೋರುವಾಗ ನರಶಬ್ದ ಪರವಾದುದರಿಂದ ಪೂರ್ವಪದಕ್ಕೆ ದೀರ್ಘ. ವಿಶ್ವಾನರಸ್ಯ ಅಯಂ ವೈಶ್ವಾನರಃ ತತ್ಸಂಬಂಧಿ ಎಂಬರ್ಥದಲ್ಲಿ **ತಸ್ಯೇದಮ್** (ಪಾ. ಸೂ. ೪-೩-೧೨೦) ಎಂಬುದರಿಂದ ಅಣ್ ಪ್ರತ್ಯಯ. ಣಿತ್ತಾದುದರಿಂದ **ತದ್ಧಿತೇಷ್ವಚಾಮಾದೇಃ** ಎಂಬುದರಿಂದ ಆದಿವೃದ್ಧಿ. ಸಂಬುದ್ಧಿಯಲ್ಲಿ **ಏಙ್ಹ್ರಸ್ವಾತ್ ಸಂಬುದ್ಧೇಃ** ಸೂತ್ರದಿಂದ ಸುಲೋಪ. ಪಾದಾದಿಯಲ್ಲಿರುವುದರಿಂದ ಆಷ್ಟಮಿಕ ನಿಘಾತಸ್ವರ ಬರುವುದಿಲ್ಲ. **ಆಮಂತ್ರಿತಸ್ಯ** (ಪಾ. ಸೂ. ೬-೧-೧೯೮) ಎಂಬುದರಿಂದ ಆದ್ಯುದಾತ್ತಸ್ವರ ಬರುತ್ತದೆ.

ನಾಭಿಃ—ಣಹ ಬಂಧನೇ ಧಾತು. **ಣೋನಃ** ಎಂಬುದರಿಂದ ಣಕಾರಕ್ಕೆ ನಕಾರಾದೇಶ. **ನಹೋ-ಭಶ್ಚ** (ಉ. ಸೂ. ೪-೫೬೫) ಎಂಬುದರಿಂದ **ಇಞ್** ಪ್ರತ್ಯಯ. ತತ್ಸಂನಿಯೋಗದಿಂದ ಭಕಾರವು ಅಂತಾದೇಶವಾಗಿ ಬರುತ್ತದೆ. ಞಿತ್ತಾದುದರಿಂದ **ಅತಉಪಧಾಯಾಃ** ಸೂತ್ರದಿಂದ ಧಾತುವಿನ ಉಪಧೆಗೆ ವೃದ್ಧಿ. **ಞ್ನಿತ್ಯಾದಿರ್ನಿತ್ಯಮ್** ಎಂಬುದರಿಂದ ಆದ್ಯುದಾತ್ತಸ್ವರ ಬರುತ್ತದೆ.

ಅಸಿ—ಅಸ ಭುವಿ ಧಾತು. ಲಟ್ ಮಧ್ಯಮಪುರುಷ ಏಕವಚನದಲ್ಲಿ ಸಿಪ್ ಪ್ರತ್ಯಯ. ಸಾದಿಪ್ರತ್ಯಯಪರವಾದುದರಿಂದ **ತಾಸಸ್ತ್ಯೋರ್ಲೋಪಃ** (ಪಾ. ಸೂ. ೬-೪-೩೦) ಎಂಬುದರಿಂದ ಅಸಿನ ಸಕಾರಕ್ಕೆ ಲೋಪ ಅತಿಙಂತದಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

ಕ್ಷೇತೀನಾಮ್—ಕ್ಷಿ ನಿವಾಸಗತ್ಯೋಃ ಧಾತು. ಇದಕ್ಕೆ ಸಂಜ್ಞಾತೋರುವಾಗ **ಕ್ತಿಚ್ಕ್ತೌಚ ಸಂಜ್ಞಾಯಾಮ್** (ಪಾ. ಸೂ. ೩-೩.೧೭೪) ಎಂಬುದರಿಂದ ಕ್ತಿಚ್ ಪ್ರತ್ಯಯ ಕಿತ್ತಾದುದರಿಂದ ಧಾತುವಿಗೆ ಗುಣ ಬರುವುದಿಲ್ಲ. **ಚಿತಃ** ಎಂಬುದರಿಂದ ಕ್ಷಿತಿ ಶಬ್ದವು ಅಂತೋದಾತ್ತವಾಗುತ್ತದೆ. **ಷಷ್ಠೀ ಬಹುವಚನದಲ್ಲಿ ಆಮ್** ಪ್ರತ್ಯಯ. **ಹ್ರಸ್ವನದ್ಯಾಪೋನುಟ್** ಸೂತ್ರದಿಂದ ಆಮಿಗೆ ನುಡಾಗಮ. **ನಾಮಿ** ಸೂತ್ರದಿಂದ ಸ್ವಸ್ವಾಂಗಕ್ಕೆ ದೀರ್ಘ. ಆಗ **ನಾಮನ್ಯತರಸ್ಯಾಮ್** (ಪಾ. ಸೂ. ೬-೧ ೧೭೭) ಎಂಬುದರಿಂದ ಅಂತೋದಾತ್ತದ ಪರದಲ್ಲಿರುವ ನಾಮಿಗೆ ಉದಾತ್ತಸ್ವರ ಬರುತ್ತದೆ.

ಜನಾನ್—ದ್ವಿತೀಯಾ ಬಹುವಚನಾಂತರೂಪ. ಇದಕ್ಕೆ ಉಪ ಪರವಾದಾಗ **ದೀರ್ಘಾದಟಿ ಸಮಾನಪಾದೇ** ಎಂಬುದರಿಂದ ನಕಾರಕ್ಕೆ ರುತ್ವ. **ಆತೋಽಟಿನಿತ್ಯಮ್** ಸೂತ್ರದಿಂದ ಪೂರ್ವಾಕಾರಕ್ಕೆ ಅನುನಾಸಿಕ ಭಾವ.

ಉಪಮಿತ್—ಡುಮಿಞ್ ಪ್ರಕ್ಷೇಪಣೇ ಧಾತು. ಇದಕ್ಕೆ ಉಪ ಎಂಬುದು ಪೂರ್ವದಲ್ಲಿರುವಾಗ ಬಹುಲವಚನದಿಂದ ಕರ್ಮಣಿಯಲ್ಲಿ ಕ್ವಿಪ್ ಪ್ರತ್ಯಯ. **ಹ್ರಸ್ವಸ್ಯಪಿತಿಕೃತಿ ತುಕ್** ಎಂಬುದರಿಂದ ಧಾತುವಿಗೆ ತುಕಾಗಮ. **ಗತಿಕಾರಕೋಪಪದಾತ್ ಕೃತ್** ಎಂಬುದರಿಂದ ಕೃದುತ್ತರಪದ ಪ್ರಕೃತಿಸ್ವರ ಬರುತ್ತದೆ.

ಯೆಯೆನ್ನ—ಯಮು ಉಪರಮೇ ಧಾತು. ಲಿಟ್ ಮಧ್ಯಮಪುರುಷ ಏಕವಚನದಲ್ಲಿ **ಪರಸ್ಮೈಪದಾನಾಂ**—ಸೂತ್ರದಿಂದ ಸಿಪಿಗೆ ಥಲಾದೇಶ. ಅನಿಟ್ವಾದರೂ **ಕ್ರಾದಿನಿಯಮದಿಂದ** ಥಲಿನಲ್ಲಿ ಇಟ್ ಪ್ರಾಪ್ತವಾದರಿ

ಉಪದೇಶೇತ್ವತಃ (ಪಾ. ಸೂ. ೭-೨-೬೨) ಎಂಬುದರಿಂದ ಉಪದೇಶಕಾಲದಲ್ಲಿ ಅಕಾರವುಳ್ಳ ಧಾತುವಾದುದರಿಂದ ಪುನಃ ಇಣ್ನಿಷೇಧ ಬರುತ್ತದೆ. ಮಕಾರಕ್ಕೆ ನಶ್ಚಾಪದಾಂ—ಸೂತ್ರದಿಂದ ಅನುಸ್ವಾರ. ಅನುಸ್ವಾರಸ್ಯಯಯಿ ಪರಸವರ್ಣಃ ಎಂಬುದರಿಂದ ಪರಸವರ್ಣದಿಂದ ನಕಾರಾದೇಶ. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

ಸಂಹಿತಾಪಾಠಃ

ಮೂರ್ಧಾ ದಿವೋ ನಾಭಿರಗ್ನಿಃ ಪೃಥಿವ್ಯಾ ಅಥಾಭವದರತೀ ರೋದಸ್ಯೋಃ।
ತಂ ತ್ವಾ ದೇವಾಸೋಽಜನಯಂತ ದೇವಂ ವೈಶ್ವಾನರ ಜ್ಯೋತಿರಿದಾ-
ರ್ಯಾಯ ॥ ೨ ॥

॥ ಪದಪಾಠಃ ॥

ಮೂರ್ಧಾ । ದಿವಃ । ನಾಭಿಃ । ಅಗ್ನಿಃ । ಪೃಥಿವ್ಯಾಃ । ಅಥ । ಅಭವತ್ । ಅರತಿಃ
ರೋದಸ್ಯೋಃ ।
ತಂ । ತ್ವಾ । ದೇವಾಸಃ । ಅಜನಯಂತ । ದೇವಂ । ವೈಶ್ವಾನರ । ಜ್ಯೋತಿಃ । ಇತ್
ಆರ್ಯಾಯ ॥ ೨ ॥

॥ ಸಾಯಣಭಾಷ್ಯ ॥

ವಿಷುವತ್ಸಂಜ್ಞೋಽಹನ್ಯಾಗ್ನಿಮಾರುತೇ ಮೂರ್ಧಾ ದಿವೋ ನಾಭಿರಗ್ನಿಃ ಪೃಥಿವ್ಯಾ ಇತಿ ವೈಕಲ್ಪಿಕೋಽನುರೂಪಸ್ತೃಚಃ । ವಿಷುವಾನ್ವಿವಾಕೀತ್ಯ ಇತಿ ಖಂಡೇ ಸೂತ್ರಿತಂ । ಮೂರ್ಧಾನಂ ದಿವೋ ಅರತಿಂ ಪೃಥಿವ್ಯಾ ಮೂರ್ಧಾ ದಿವೋ ನಾಭಿರಗ್ನಿಃ ಪೃಥಿವ್ಯಾ ಇತಿ ವಾ । ಆ. ೮-೬ । ಇತಿ ॥

ಅಯಮಗ್ನಿರ್ದಿವೋ ದ್ಯುಲೋಕಸ್ಯ ಮೂರ್ಧಾ ಶಿರೋವತ್ಪ್ರಧಾನಭೂತೋ ಭವತಿ। ಪೃಥಿವ್ಯಾ ಭೂಮೇಶ್ಚ ನಾಭಿಃ ಸಂನಾಹಕಃ । ರಜ್ಜುಕ ಇತ್ಯರ್ಥಃ । ಅಥಾನಂತರಂ ರೋದಸ್ಯೋರ್ದ್ಯಾವಾಪೃಥಿವ್ಯೋರಯಮರತಿರಧಿಪತಿರಭವತ್ । ಹೇ ವೈಶ್ವಾನರ ತಂ ತಾದೃಶಂ ದೇವಂ ದಾನಾದಿಗುಣಯುಕ್ತಂ ತ್ವಾ ತ್ವಾಂ ದೇವಾಸಃ ಸರ್ವೇ ದೇವಾ ಆರ್ಯಾಯ ವಿದುಷೇ ಮನನೇ ಯಜಮಾನಾಯ ವಾ ಜ್ಯೋತಿರಿತ್ ಜ್ಯೋತಿರೂಪಮೇವಾಜನಯಂತ । ಉದಪಾದಯನ್ ॥ ಮೂರ್ತಮಸ್ಮಿನ್ಧೀಯತ ಇತಿ ಮೂರ್ಧಾ । ನಿ. ೭-೨೭ । ಶ್ವನ್ನುಕ್ಷನ್ನಿತ್ಯಾದೌ ನಿಪಾತನಾದ್ಧ್ರಸ್ವಸಿದ್ಧಿಃ । ಪೃಥಿವ್ಯಾಃ । ಪೃಥಿವೀಶಬ್ದಃ ಷಿದ್ಗೌರಾದಿಭ್ಯಶ್ಚೇತಿ ಙೀಪ್ಪ್ರತ್ಯಯಾಂತೋಽಂತೋದಾತ್ತಃ । ಅಜನಯಂತ । ಜನೀಜ್ಯಾಪ್ಕ್ನಸುರಂಜೋಽಮಂತಾಶ್ಚ । ಧಾ. ೧೪-೬೩,೬೭ । ಇತಿ ಮಿತ್ತ್ವಾನ್ಣಿತಾಂ ಹ್ರಸ್ವ ಇತಿ ಹ್ರಸ್ವತ್ವಂ ॥

॥ ಪ್ರತಿಪದಾರ್ಥ ॥

ಅಗ್ನಿಃ—ಅಗ್ನಿದೇವನು । **ದಿವಃ**—ದ್ಯುಲೋಕಕ್ಕೆ । **ಮೂರ್ಧಾ**—(ಪ್ರಧಾನವಾದ) ಶಿರಃಪ್ರಾಯನಾಗಿಯೂ । **ಪೃಥಿವ್ಯಾಃ**—ಭೂಮಿಗೆ । **ನಾಭಿಃ**—(ಕೇಂದ್ರದ) ಹೊಕ್ಕಳು ರೂಪದಲ್ಲಿ (ಸಂರಕ್ಷಕನಾಗಿಯೂ) । **ಅಥ**—ಮತ್ತು । **ರೋದಸ್ಯೋಃ**—ದ್ಯಾವಾಪೃಥಿವಿಗಳಿಗೆ । **ಅರತಿಃ**—ಅಧಿಪತಿಯಾಗಿಯೂ । **ಅಭವತ್**—ಆಗಿದ್ದಾನೆ । **ವೈಶ್ವಾನರ**—ಎಲೈ ಅಗ್ನಿಯೇ । **ತಂ**—ಅಂತಹ । **ದೇವಂ**—ದಾನಾದಿಗುಣಗಳಿಂದ ಕೂಡಿದ। **ತ್ವಾ**—ನಿನ್ನನ್ನು । **ದೇವಾಸಃ**—ಸಕಲದೇವತೆಗಳೂ । **ಆರ್ಯಾಯ**—ಪ್ರಾಜ್ಞನಾದ ಮನುವಿಗಾಗಿ ಅಥವಾ ಯಜಮಾನನಿಗಾಗಿ । **ಜ್ಯೋತಿರಿತ್**—ಜ್ಯೋತಿಯರೂಪದಲ್ಲಿ । **ಅಜನಯಂತ**—ಸೃಷ್ಟಿಮಾಡಿದರು ॥

॥ ಭಾವಾರ್ಥ ॥

ಅಗ್ನಿದೇವನು ದ್ಯುಲೋಕಕ್ಕೆ ಶಿರಸ್ಸಿನಂತೆ ಪ್ರಧಾನನಾಗಿಯೂ ಭೂಲೋಕಕ್ಕೆ ಹೊಕ್ಕಳಿನಂತೆ ಸಂರಕ್ಷಕನಾಗಿಯೂ ಮತ್ತು ದ್ಯಾವಾಪೃಥಿವಿಗಳೆರಡಕ್ಕೂ ಅಧಿಪತಿಯಾಗಿಯೂ ಆಗಿದ್ದಾನೆ. ಎಲೈ ಅಗ್ನಿಯೇ, ನೀನು ದಾನಾದಿಗುಣಗಳಿಂದ ಕೂಡಿದವನು. ನಿನ್ನನ್ನು ಸಕಲ ದೇವತೆಗಳೂ ಸಹ ಪ್ರಾಜ್ಞನಾದ ಯಜಮಾನನಿಗಾಗಿ ಜ್ಯೋತಿಯ ರೂಪದಲ್ಲಿ ಸೃಷ್ಟಿಮಾಡಿದರು.

English Transation.

Agni, the head of heaven, the navel of earth, became the ruler over earth and heaven; all the gods created you, Vaiswanara, in the shape of light for the Arya.

॥ ವಿಶೇಷ ವಿಷಯಗಳು ॥

ವಿಷುವತ್ಸಂಜ್ಞವೆಂಬ ಯಾಗದಲ್ಲಿ ಅಗ್ನಿಮಾರುತ ಶಸ್ತ್ರಮಂತ್ರಪಠನವಾಡುವಾಗ **ಮೂರ್ಧಾ ದಿವೋ ನಾಭಿರಗ್ನಿಃ ಪೃಥಿವ್ಯಾ** ಎಂದು ಮೊದಲಾಗುವ ಮೂರು ಋಕ್ಕುಗಳನ್ನು ವೈಕಲ್ಪಿಕವಾಗಿ ಪಠಿಸಬಹುದೆಂದು ಆಶ್ವಲಾಯನಶ್ರೌತಸೂತ್ರದ **ವಿಷುವಾನ್ದಿವಾಕೀರ್ತ್ಯ** ಎಂಬ ಖಂಡದಲ್ಲಿ **ಮೂರ್ಧಾನಂ ದಿವೋ ಅರತಿಂ ಪೃಥಿವ್ಯಾ ಮೂರ್ಧಾ ದಿವೋ ನಾಭಿರಗ್ನಿಃ ಪೃಥಿವ್ಯಾ ಇತಿ ವಾ** ಎಂಬ ಸೂತ್ರದಿಂದ ವಿವೃತವಾಗಿರುವುದು. (ಆ. ೮-೬)

ಮೂರ್ಧಾ—ಶಿರೋವತ್ಪ್ರಧಾನಭೂತೋ ಭವತಿ—ತಲೆಯಂತೆ ಎಲ್ಲ ದೇವತೆಗಳಿಗೂ ಪ್ರಧಾನ ಭೂತನಾಗಿದ್ದೀಯೆ. ಇದೇ ಅರ್ಥವನ್ನು ಮೂರ್ತಮಸ್ಮಿನ್ ಧೀಯತೇ ಇತಿ ಮೂರ್ಧಾ (ನಿರು. ೭-೨೭) ಎಂದು ನಿರುಕ್ತಕಾರರು ಸಮರ್ಥಿಸಿರುವರು.

ಆರ್ಯಾಯ—ವಿದ್ವಾಂಸನಿಗೆ, ಮನುವಿಗೆ, ಯಜಮಾನನಿಗೆ ಹೀಗೇ ಮೂರ್ಥವನ್ನೂ ಇಲ್ಲಿ ವಿವರಿಸಿದ್ದಾರೆ

ಜ್ಯೋರಿತ್—**ಜ್ಯೋತೀರೂಪಮೇವ**—ಇಲ್ಲಿ ಇತ್ ಶಬ್ದವು ಏವಕಾರಾರ್ಥದಲ್ಲಿ ನಿರೂಪಿತವಾಗಿದೆ. ಜ್ಯೋತಿಯೇ ಆಗಿದ್ದೀಯೆ ಎಂಬುದು ಇದರ ಅರ್ಥ.

॥ ವ್ಯಾಕರಣಪ್ರಕ್ರಿಯಾ ॥

ಮೂರ್ಧಾ—**ಮೂರ್ಧನ್ಯಮಸ್ಮಿನ್ ಧೀಯತೇ ಇತಿ ಮೂರ್ಧಾ.** (ನಿರು. ೬-೨೭) ಎಂದು ಯಾಸ್ಕರು ನಿರ್ವಚನ ಮಾಡಿರುತ್ತಾರೆ. **ಶ್ವನ್ನುಕ್ಷನ್** (ಉ. ಸೂ. ೧-೧೫೭) ಎಂಬುದರಿಂದ ನಿಪಾತಿತವಾದುದರಿಂದ ರೂಪ ಸಿದ್ಧಿಯಾಗುತ್ತದೆ.

ದಿವಃ—**ಊಡಿದಂಪದಾದಿ**—ಸೂತ್ರದಿಂದ ವಿಭಕ್ತಿಗೆ ಉದಾತ್ತಸ್ವರ ಬರುತ್ತದೆ.

ಪೃಥಿವ್ಯಾಃ—ಪೃಥಿವೀಶಬ್ದವು. **ಷಿದ್ಗೌರಾದಿಭ್ಯಶ್ಚ** (ಪಾ. ಸೂ. ೪-೧-೪೧) ಎಂಬುದರಿಂದ ಙೀಪ್ ಪ್ರತ್ಯಯಾಂತವಾದುದರಿಂದ ಅಂತೋದಾತ್ತವಾಗುತ್ತದೆ. ಷಷ್ಠೀ ಏಕವಚನಾಂತರೂಪ. ಉದಾತ್ತ ಯಣೋಹಲ್ ಪೂರ್ವಾತ್ ಸೂತ್ರದಿಂದ ವಿಭಕ್ತಿಗೆ ಉದಾತ್ತಸ್ವರ ಬರುತ್ತದೆ.

ಅಭವತ್—ಭೂ ಸತ್ತಾಯಾಂ ಧಾತು ಲಙ್ ಪ್ರಥಮಪುರುಷ ಏಕವಚನರೂಪ. ತಿಙಂತನಿಘಾತ ಸ್ವರ ಬರುತ್ತದೆ.

ದೇವಾಸಃ—ದೇವ ಶಬ್ದಕ್ಕೆ ಜಸ್ ಪರವಾದಾಗ **ಆಜ್ಜಸೇರಸುಕ್** ಎಂಬುದರಿಂದ ಜಸಿಗೆ ಅಸು ಕಾಗಮ.

ಅಜನಯಂತ—ಜನೀ ಪ್ರಾದುರ್ಭಾವೇ ಧಾತು. ಪ್ರೇರಣಾತೋರುವುದರಿಂದ **ಹೇತುಮತಿಚ** ಎಂಬುದರಿಂದ ಣಿಚ್ ಬರುತ್ತದೆ. **ಅತಉಪಧಾಯಾಃ** ಸೂತ್ರದಿಂದ ಧಾತುವಿನ ಉಪಧಾ ಆಕಾರಕ್ಕೆ ವೃದ್ಧಿ. ಜಾನಿ ಎಂಬುದು **ಸನಾದ್ಯಂತಾಧಾತವಃ** ಎಂಬುದರಿಂದ ಧಾತುಸಂಜ್ಞೆಯನ್ನು ಹೊಂದುತ್ತದೆ. ಲಙ್ ಪ್ರಥಮ ಪುರುಷ ಬಹುವಚನದಲ್ಲಿ ಝಿ ಪ್ರತ್ಯಯಕ್ಕೆ **ಝೋಂತಃ** ಎಂಬುದರಿಂದ ಅಂತಾದೇಶ. **ಜನೀ ಜೃಷ್ಕ್ನಸು-ರಂಜೋಮಂತಾಶ್ಚ** ಎಂಬುದರಿಂದ ಈ ಧಾತುವಿಗೆ ಮಿತ್ ಸಂಜ್ಞಾ ಬರುವುದರಿಂದ **ಮಿತಾಂಹ್ರಸ್ವಃ** (ಪಾ. ಸೂ. ೬-೪-೯೨) ಎಂಬುದರಿಂದ ಉಪಧಾಹ್ರಸ್ವ. ಣಿಚಿಗೆ ಶಪ್ ನಿಮಿತ್ತವಾಗಿ ಗುಣ ಅವಾದೇಶ. ಲಙ್ ನಿಮಿತ್ತವಾಗಿ ಆಂಗಕ್ಕೆ ಅಡಾಗಮ. ಆತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

ನಾಭಿಃ, **ವೈಶ್ವಾನರ**—ಹಿಂದಿನ ಮಂತ್ರದಲ್ಲಿ ವ್ಯಾಖ್ಯಾತವಾಗಿದೆ.

॥ ಸಂಹಿತಾಪಾಠಃ ॥

ಆ ಸೂರ್ಯೋ ನ ರಶ್ಮಯೋ ಧ್ರುವಾಸೋ ವೈಶ್ವಾನರೇ ದಧಿರೇಽಗ್ನಾ ವಸೂನಿ ।
ಯಾ ಪರ್ವತೇಷ್ವೋಷಧೀಷ್ವಪ್ಸು ಯಾ ಮಾನುಷೇಷ್ವಸಿ ತಸ್ಯ ರಾಜಾ ॥ ೩ ॥

॥ ಪದಪಾಠಃ ॥

ಆ । ಸೂರ್ಯೇ । ನ । ರಶ್ಮಯಃ । ಧ್ರುವಾಸಃ । ವೈಶ್ವಾನರೇ । ದಧಿರೇ । ಅಗ್ನಾ ।
ವಸೂನಿ ।
ಯಾ । ಪರ್ವತೇಷು । ಓಷಧೀಷು । ಅಪ್ಸು । ಯಾ । ಮಾನುಷೇಷು । ಅಸಿ ।
ತಸ್ಯ । ರಾಜಾ ॥ ೩ ॥

॥ ಸಾಯಣಭಾಷ್ಯಂ ॥

ಅಗ್ನಾ ವೈಶ್ವಾನರೇತ್ಯಗ್ನೌ ವಸೂನಿ ಧನಾನ್ಯಾ ದಧಿರೇ । ಆಹಿತಾನಿ ಸ್ಥಾಪಿತಾನಿ ಬಭೂವುಃ । ತತ್ರ ದೃಷ್ಟಾಂತಃ । ಧ್ರುವಾಸೋ ನಿಶ್ಚಲಾ ರಶ್ಮಯಃ ಕಿರಣಾಃ ಸೂರ್ಯೇ ನ ಯಥಾ ಸೂರ್ಯ ಆಧೀಯಂತೇ ತದ್ವತ್ । ಅತಸ್ತ್ವಂ ಪರ್ವತಾದಿಷು ಯಾನಿ ಧನಾನಿ ವಿದ್ಯಂತೇ ತಸ್ಯ ಧನಜಾತಸ್ಯ ರಾಜಾಸಿ । ಅಧಿಪತಿರ್ಭವಸಿ ॥ ಅಗ್ನಾ । ಸುಪಾಂ ಸುಲುಗಿತಿ ವಿಭಕ್ತೇರಾಡಾದೇಶಃ । ಯಾ । ಶೇಶ್ಛಂದಸಿ ಬಹುಲಮಿತಿ ಶೇರ್ಲೋಪಃ । ಓಷಧೀಷು । ಉಷ ದಾಹೇ । ಓಷತಿ ಪಾಕಃ । ಭಾವೇ ಘಞ್ । ಞಿತ್ತ್ವಾದಾದ್ಯುದಾತ್ತತ್ವಂ । ಓಷ ಆಸು ಧೀಯತ ಇತ್ಯೋಷಧಯಃ । ಕರ್ಮಣ್ಯಧಿಕರಣೇ ಚೇತಿ ಕಿಪ್ಪ್ರತ್ಯಯಃ । ದಾಸೀಭಾರಾದಿಷು ಪಠಿತತ್ವಾತ್ಪೂರ್ವಪದಪ್ರಕೃತಿಸ್ವರತ್ವಂ । ಸಪ್ತಮ್ಯಾಬಹುವಚನ ಓಷಧೇಶ್ಚ ವಿಭಕ್ತಾವಪ್ರಥಮಾಯಾಂ । ಪಾ. ೬-೩-೧೩೨ । ಇತಿ ದೀರ್ಘಃ । ಅಪ್ಸು । ಊಡಿದಮಿತಿ ವಿಭಕ್ತೇರುದಾತ್ತತ್ವಂ ॥

॥ ಪ್ರತಿಪದಾರ್ಥ ॥

ವೈಶ್ವಾನರೇ ಅಗ್ನಾ—ವೈಶ್ವಾನರರೂಪದಲ್ಲಿರುವ ಅಗ್ನಿಯಲ್ಲಿ । **ವಸೂನಿ**—(ಸಕಲ) ಧನಗಳೂ । **ಧ್ರುವಾಸಃ**—ಶಾಶ್ವತಗಳಾದ । **ರಶ್ಮಯಃ**—ಕಿರಣಗಳು । **ಸೂರ್ಯೇ ನ**—ಸೂರ್ಯನಲ್ಲಿ ಸ್ಥಾಪಿತಗಳಾಗಿರುವಂತೆ । **ಆ ದಧಿರೇ**—ನಿಕ್ಷೇಪಗಳಂತೆ ಸ್ಥಾಪಿತಗಳಾಗಿವೆ (ಆದ್ದರಿಂದ ನೀನು) । **ಪರ್ವತೇಷು**—ಪರ್ವತಗಳಲ್ಲಿಯೂ । **ಓಷಧೀಷು**—ಮೂಲಿಕೆಗಳಲ್ಲಿಯೂ । **ಅಪ್ಸು**—ನೀರುಗಳಲ್ಲಿಯೂ । **ಮಾನುಷೇಷು**—ಮಾನವರಲ್ಲಿಯೂ । **ಯಾ**—ಯಾವ ಧನಗಳವೆಯೋ । **ತಸ್ಯ**—ಆ ಸಕಲಧನ ಸಮೂಹಕ್ಕೂ । **ರಾಜಾ ಅಸಿ**—ಅಧಿಪತಿಯಾಗಿದ್ದೀಯೆ.

॥ ಭಾವಾರ್ಥ ॥

ಶಾಶ್ವತಗಳಾದ ಕಿರಣಗಳು ಸೂರ್ಯನಲ್ಲಿ ಸ್ಥಾಪಿತಗಳಾಗಿರುವಂತೆ ಸಕಲಧನಗಳೂ ವೈಶ್ವಾನರ ರೂಪದಲ್ಲಿರುವ ಅಗ್ನಿಯಲ್ಲಿ ನಿಕ್ಷೇಪಗಳಂತೆ ಸ್ಥಾಪಿತಗಳಾಗಿವೆ. ಆದ್ದರಿಂದ ಎಲೈ ಅಗ್ನಿಯೇ, ನೀನು ಪರ್ವತೆಗಳಲ್ಲಿಯೂ. ಮೂಲಿಕೆಗಳಲ್ಲಿಯೂ, ನೀರುಗಳಲ್ಲಿಯೂ ಮತ್ತು ಮಾನವರಲ್ಲಿಯೂ ಯಾವ ಧನಗಳವೆಯೋ ಆ ಸಕಲ ಧನಗಳಿಗೂ ಒಡೆಯನಾಗಿದ್ದೀಯೆ.

English Translation.

Treasures were deposited in Agni, Vaiswanara, like the permanent rays (of light) the Sun ; You are the sovereign of all the treasures that exist in the mountains, in the herbs, in the waters, or amongst men

॥ ವಿಶೇಷ ವಿಷಯಗಳು ॥

ಅಗ್ನಾ—ಇಲ್ಲಿ **ಹೇ ಅಗ್ನೇ** ಎಂಬರ್ಥದಲ್ಲಿ ಸಂಬೋಧನ ಪ್ರಥಮಾವಿಭಕ್ತಿಗೆ ಆಕಾರಾದೇಶವು ಬಂದಿದೆ.

ಆ ದಧಿರೆ—**ಆಹಿತಾನಿ ಸ್ಥಾಪಿತಾನಿ ಬಭೂವುಃ** ಸಂಪೂರ್ಣವಾಗಿ ನಿಲ್ಲಿಸಲ್ಪಟ್ಟುವು.

ಸೂರ್ಯೇಣ—ನಿಶ್ಚಲವಾದ ಕಿರಣಗಳು ಸೂರ್ಯನಲ್ಲಿ ಹೇಗೆ ಅಡಗಿವೆಯೋ, ಅದರಂತೆ ನಿನ್ನಲ್ಲಿ ಸಮಸ್ತ ಧನಜಾತವೂ ಅಡಗಿರುವುದು ಎಂಬುದು ಪ್ರಕೃತ ಅಗ್ನಿಸ್ತುತಿಗೆ ದೃಷ್ಟಾಂತವಾಗಿರುವುದು.

ಓಷಧೀಷು—ಉಷ-ದಾಹೇ ಎಂಬ ಧಾತುವಿನಿಂದ ನಿಷ್ಪನ್ನವಾದ ರೂಪ ಇದು. ಓಷಃ ಎಂದರೆ **ಪಾಕ** ಎಂದರ್ಥ. ಓಷಃ ಅಸು ಧೀಯಂತೆ ಇತಿ ಓಷಧಯಃ ಎಂಬ ವ್ಯುತ್ಪತ್ತಿಯಂತೆ ಸಕಲ ವಿಧವಾದ ಗುಣವೂ ಪಾಕಜನ್ಯವಾಗಿರುವುದು ಎಂಬರ್ಥವು ಓಷಧ ಪದಕ್ಕೆ ನಿರೂಪಿಸಲ್ಪಟ್ಟಿದೆ.

॥ ವ್ಯಾಕರಣಪ್ರಕ್ರಿಯಾ ॥

ಧ್ರುವಾಸಃ—ಪ್ರಥಮಾ ಬಹುವಚನದಲ್ಲಿ ಜಸಿಗೆ **ಅಜ್ಜಸೇರಸುಕ್** ಎಂಬುದರಿಂದ ಅಸುಕಾಗಮ.

ದಧಿರೇ—ಡುಧಾಞ್ ಧಾರಣಪೋಷಣಯೋಃ ಧಾತು. ಲಿಟ್ ಪ್ರಥಮಪುರುಷ ಬಹುವಚನದಲ್ಲಿ **ಲಿಟಸ್ತ್ರಯೋಏರೇಶಿರೇಚ್** ಎಂಬುದರಿಂದ ಇರೇಚಾದೇಶ. **ತಿಙಿಂತನಿಘಾತಸ್ವರ** ಬರುತ್ತದೆ.

ಅಗ್ನಾ—ಅಗ್ನಿಶಬ್ದಕ್ಕೆ ಸಪ್ತಮೀ ಏಕವಚನ ಪರವಾದಾಗ **ಸುಪಾಂ ಸುಲುಕ್** ಸೂತ್ರದಿಂದ ವಿಭಕ್ತಿಗೆ ಡಾದೇಶ. ಡಿತ್ ಸಾಮರ್ಥ್ಯದಿಂದ ಟಿಗೆ ಲೋಪ.

ಯಾ—ಯಚ್ಛಬ್ದ. ನಪುಂಸಕ ಬಹುವಚನದಲ್ಲಿ **ಜಸಿಗೆ ಶಿ** ಆದೇಶ ಬಂದಾಗ **ಶೇಶ್ಚಂದಸಿ ಬಹುಲಂ** ಎಂಬುದರಿಂದ ಶಿಗೆ ಲೋಪ.

ಓಷಧೀಷು—ಉಷ ದಾಹೇ ಧಾತು. ಓಷಃ **ಪಾಕಃ** ಭಾವಾರ್ಥದಲ್ಲಿ **ಘಞ್** ಪ್ರತ್ಯಯ. ಪ್ರತ್ಯಯ ನಿಮಿತ್ತವಾಗಿ ಧಾತುವಿನ ಲಘೂಪಧೆಗೆ ಗುಣ. **ಞೀತ್ಸ್ತ್ರಾದುದರಿಂದ ಞ್ನಿತ್ಯಾದಿರ್ನಿತ್ಯಮ್** ಎಂಬುದರಿಂದ **ಆದ್ಯುದಾತ್ತಸ್ವರ** ಬರುತ್ತದೆ. ಓಷಃ ಅಸು ಧೀಯತೇ ಇತಿ ಓಷಧಯಃ. **ಕರ್ಮಣ್ಯಧಿಕರಣೇಚ** (ಪಾ. ಸೂ. ೩-೩-೯೩) ಎಂಬುದರಿಂದ ಅಧಿಕರಣಾರ್ಥದಲ್ಲಿ ಕಿ ಪ್ರತ್ಯಯ. **ಅತೋಲೋಪ ಇಟಿಚ** ಎಂಬುದರಿಂದ ಧಾ ಧಾತುವಿನ ಆಕಾರಕ್ಕೆ ಲೋಪ. **ದಾಸೀಭಾರಾದಿಯಲ್ಲಿ** ಪಠಿತವಾದುದರಿಂದ ಪೂರ್ವಪದಪ್ರಕೃತಿಸ್ವರಬರುತ್ತದೆ.

ಅಪ್ಸು—ಅಪ್ಶಬ್ದದ ಸಪ್ತಮೀ ಬಹುವಚನಾಂತರೂಪ. **ಊಡಿದಂಪದಾದಿ**—(ಪಾ. ಸೂ. ೬-೧-೧೭೧) ಎಂಬುದರಿಂದ ವಿಭಕ್ತಿಗೆ ಉದಾತ್ತಸ್ವರ ಬರುತ್ತದೆ.

ಅಸಿ—ಯೆದ್ವೃತ್ತಾನ್ನಿತ್ಯಮ್ ಎಂಬುದರಿಂದ ಯಾ ಎಂದು ಹಿಂದೆ ಸಂಬಧವಿರುವುದರಿಂದ ನಿಘಾತ ಸ್ವರ ಬರುವುದಿಲ್ಲ. ಧಾತುವಿನ ಸ್ವರವು ಉಳಿಯುವುದರಿಂದ ಆದ್ಯುದಾತ್ತವಾಗುತ್ತದೆ.

॥ ಸಂಹಿತಾಪಾಠಃ ॥

ಬೃಹತೀ ಇವ ಸೂನವೇ ರೋದಸೀ ಗಿರೋ ಹೋತಾ ಮನುಷ್ಯೋ ಷಿ-
ನ ದಕ್ಷಃ ।
ಸ್ವರ್ವತೇ ಸತ್ಯಶುಷ್ಮಾಯ ಪೂರ್ವೀರ್ವೈಶ್ವಾನರಾಯ ನೃತಮಾಯ
ಯಹ್ವೀಃ ॥ ೪ ॥

॥ ಪದಪಾಠಃ ॥

ಬೃಹತೀ ಇವೇತಿ ಬೃಹತೀಃ ಇವ । ಸೂನವೇ । ರೋದಸೀ ಇತಿ । ಗಿರಃ । ಹೋತಾ ।
ಮನುಷ್ಯಃ । ನ । ದಕ್ಷಃ ।
ಸ್ವಃವತೇ । ಸತ್ಯಶುಷ್ಮಾಯ । ಪೂರ್ವೀಃ । ವೈಶ್ವಾನರಾಯ । ನೃತಮಾಯ ।
ಯಹ್ವೀಃ ॥ ೪ ॥

॥ ಸಾಯಣಭಾಷ್ಯಂ ॥

ರೋದಸೀ ದ್ಯಾವಾಪೃಥಿವ್ಯೌ ಸೂನವೇ ಸ್ವಪುತ್ರಾಯ ವೈಶ್ವಾನರಾಯ ಬೃಹತೀ ಇವ ಪ್ರಭೂತೇ ಇವಾಭೂತಾಂ । ವೈಶ್ವಾನರಸ್ಯ ದ್ಯಾವಾಪೃಥಿವ್ಯೋಃ ಪುತ್ರತ್ವಂ ಮಂತ್ರಾಂತರೇ ಸ್ಪಷ್ಟಮವಗಮ್ಯತೇ । ಉಭಾ ಪಿತರಾ ಮಹಯನ್ನಜಾಯತಾಗ್ನಿರ್ದ್ಯಾವಾಪೃಥಿವೀ ಭೂರಿರೇತಸೇತಿ। ಋಗ್ವೇ. ೩-೩-೧೧ । ಇತಿ। ಮಹತೋ ವೈಶ್ವಾನರಸ್ಯಾವಸ್ಥಾನಾಯ ದ್ಯಾವಾಪೃಥಿವ್ಯೌ ವಿಸ್ತೃತೇ ಜಾತೇ ಇತ್ಯರ್ಥಃ । ಕಿಂಚಾಯಂ ಹೋತಾ ದಕ್ಷಃ ಸಮರ್ಥಃ ಪೂರ್ವೀರ್ಬಹುವಿಧಾ ಯಹ್ವೀರ್ಮಹತೀರ್ಗಿರಃ ಸ್ತುತೀರ್ವೈಶ್ವಾನರಾಯಾಗ್ನಯೇ ಪ್ರಾಯುಂಕ್ತೇತಿ ಶೇಷಃ । ಕೀದೃಶಾಯ । ಸ್ವರ್ವತೇ । ಶೋಭನಗಮನಯುಕ್ತಾಯ । ಸತ್ಯಶುಷ್ಮಾಯಾವಿತಥಬಲಾಯ । ನೃತಮಾಯಾತಿಶಯೇನ ಸರ್ವೇಷಾಂ ನೇತ್ರೇ । ತತ್ರ ದೃಷ್ಟಾಂತಃ । ಮನುಷ್ಯೋ ನ । ಯಥಾ ಮನುಷ್ಯೋ ಲೌಕಿಕೋ ವಂದೀ ದಾತಾರಂ ಪ್ರಭುಂ ಬಹುವಿಧಯಾ ಸ್ತುತ್ಯಾ ಸ್ತೌತಿ ತದ್ವತ್ ॥ ಮನುಷ್ಯಃ । ಮನೋರ್ಜಾತಾವಞ್ಯತೌ ಷುಕ್ಚೇತಿ ಜಾತೌ ಗಮ್ಯಮಾನಾಯಾಂ ಮನುಶಬ್ದಾದ್ಯಕ್ ಷುಗಾಗಮಶ್ಚ । ತತ್ಸ್ವರಿತ ಇತಿ ಸ್ವರಿತತ್ವಂ । ಯತೋಽನಾವ ಇತ್ಯಾದ್ಯುದಾತ್ತತ್ವಂ ನ ಭವತಿ । ತತ್ರ ಹಿ ದ್ವ್ಯಚ್ತ್ಯನುವರ್ತತೇ । ಸ್ವರ್ವತೇ । ಸುಪೂರ್ವಾದರ್ತೇರ್ಭಾವೇ ವಿಚ್ । ತತೋ ಮತುಪ್ । ಮಾದುಪಧಾಯಾ ಇತಿ ವತ್ವಂ ॥

|| ಪ್ರತಿಪದಾರ್ಥ ||

ರೋದಸೀ—ದ್ಯಾವಾಪೃಥಿವಿಗಳೆರಡೂ । **ಸೂನವೇ**—(ವೈಶ್ವಾನರ ರೂಪದಲ್ಲಿರುವ) ತಮ್ಮ ಮಗನಿಗಾಗಿ । **ಬೃಹತೀ ಇವ**—ವಿಸ್ತೃತಗಳಾದವೋ ಎಂಬಂತಾದವು । **ದಕ್ಷಃ**—ಸಮರ್ಥನಾದ । **ಹೋತಾ**—ಹೋತೃವು । **ಸ್ವರ್ವತೇ**—ಆಕರ್ಷಕವಾದ ಗಮನವುಳ್ಳವನೂ । **ಸತ್ಯಶುಷ್ಮಾಯ**—ಸಾರ್ಥಕವಾದ ಬಲವುಳ್ಳವನೂ । **ನೃತಮಾಯ**—ಶ್ರೇಷ್ಠನಾದ ಮಾರ್ಗದರ್ಶಕನೂ ಆದ । **ವೈಶ್ವಾನರಾಯ**—ಅಗ್ನಿಗೆ । **ಮನುಷ್ಯೋನ**—(ರಾಜನ ಗುಣಗಳನ್ನು ಹೊಗಳಿ) ಲೌಕಿಕನಾದ ಹೊಗಳುಭಟನು ಸ್ತೋತ್ರಮಾಡುವಂತೆ । **ಪೂರ್ವೀಃ**—ಪುರಾತನವೂ ಅಥವಾ ಬಹುವಿಧವಾದುವೂ । **ಯಹ್ವೀಃ**—ಮಹತ್ತಾದುವೂ ಆದ । **ಗಿರಃ**—ಸ್ತೋತ್ರಗಳನ್ನು (ಅರ್ಪಿಸುತ್ತಾನೆ) ॥

|| ಭಾವಾರ್ಥ ||

ದ್ಯಾವಾಪೃಥಿವಿಗಳೆರಡೂ ತಮ್ಮ ಮಗನಾದ ಅಗ್ನಿಗಾಗಿ ವಿಸ್ತೃತಗಳಾದಂತೆ ಕಂಡುಬಂದವು. ಸಮರ್ಥನಾದ ಹೋತೃವು ಲೌಕಿಕನಾದ ಹೊಗಳುಭಟನು ರಾಜನ ಗುಣಗಳನ್ನು ವರ್ಣಿಸಿ ಸ್ತೋತ್ರಮಾಡುವಂತೆ ಆಕರ್ಷಕವಾದ ಗಮನವುಳ್ಳವನೂ ಸಾರ್ಥಕವಾದ ಬಲವುಳ್ಳವನೂ ಮತ್ತು ಶ್ರೇಷ್ಠನಾದ ಮಾರ್ಗದರ್ಶಕನೂ ಆದ ಅಗ್ನಿಗೆ ಪುರಾತನವೂ ಮತ್ತು ಮಹತ್ತಾದವೂ ಆದ ಸ್ತೋತ್ರಗಳನ್ನೂ ಅರ್ಪಿಸುತ್ತಾನೆ.

English Translation.

Heaven and earth expanded as it were for their son. The experienced sacrificer recites, like a bard, many ancient and copious praises addressed to the graceful-moving, truly-vigorous and all-guiding Vaiswanara.

|| ವಿಶೇಷವಿಷಯಗಳು ||

ಸೂನವೇ—ಇಲ್ಲಿ ದ್ಯಾವಾಪೃಥಿವಿಗಳಿಗೆ ಅಗ್ನಿಯು ಮಗನು ಎಂಬರ್ಥವಿದೆ. ಇದಕ್ಕೆ ಪ್ರಮಾಣವಾಗಿ **ಉಭಾ ಪಿತರಾ ಮಹಯನ್ನಜಾಯತಾಗ್ನಿರ್ದ್ಯಾವಾಪೃಥಿವೀ ಭೂರಿ ರೇತಸಾ** (ಋ. ಸಂ. ೩-೩-೧೧) ಎಂಬ ಶ್ರುತಿಯು ಅಗ್ನಿಗೆ ದ್ಯಾವಾಪೃಥಿವಿಗಳೇ ಮಾತಾಪಿತೃಗಳು ಎಂದು ಹೇಳುತ್ತಿದೆ. ಎಂದರೆ ಮಹತ್ಪರಿಣಾಮವುಳ್ಳ ಅಗ್ನಿಯು ವಿಸ್ತಾರವಾಗಿ ಹರಡುವುದಕ್ಕಾಗಿ, ಭೂಮ್ಯಂತರಿಕ್ಷಗಳು ಬಹು ವಿಸ್ತಾರಗಳಾದುವು. ಈ ಅರ್ಥದಲ್ಲಿ ದ್ಯಾವಾಪೃಥಿವಿಗಳು ಅಗ್ನಿಗೆ ಮಾತಾಪಿತೃಸ್ಥಾನದಲ್ಲಿವೆ ಎಂದು ವರ್ಣಿತವಾಗಿದೆ.

ಸ್ವರ್ವತೇ-ಸತ್ಯಶುಷ್ಮಾಯ—ಈ ಎರಡು ಶಬ್ದಗಳೂ ಅಗ್ನಿಯ ಗಮನ ವಿಶೇಷವನ್ನು ತಿಳಿಸುವುವು. ಅಗ್ನಿಯು ನಡಗೆಯು ಶೋಭನವಾಗಿದ್ದರೂ, ವಿಶೇಷಬಲವುಳ್ಳದ್ದು ಎಂದು ಅಗ್ನಿಯನ್ನು ಸ್ತುತಿಸಿರುವುದು.

ಮನುಷ್ಯೋನ—**ಮನುಷ್ಯನಂತೆ** ಎಂದರ್ಥ. ಇದು ಈ ಪ್ರಕರಣದಲ್ಲಿ ದೃಷ್ಟಾಂತವಾಗಿದೆ. ಲೋಕದಲ್ಲಿ ಮಾನವನು ಹೇಗೆ ಹೊಗಳುಭಟನಾಗಿದ್ದು ದ್ರವ್ಯವನ್ನು ಕೊಡುವ ಪ್ರಭುವನ್ನು ಯಾವರೀತಿ

ನಾನಾ ಸ್ತುತಿವಚನಗಳಿಂದ ತೃಪ್ತಿಪಡಿಸುವನೋ ಆದರಂತೆ, ಹೋತೃವು ಅಗ್ನಿಯನ್ನು ಅನೇಕ ಸ್ತೋತ್ರಗಳಿಂದ ಸ್ತೋತ್ರಮಾಡುವನು.

॥ ವ್ಯಾಕರಣಪ್ರಕ್ರಿಯಾ ॥

ಮನುಷ್ಯಃ—**ಮನೋರ್ಜಾತಾವಞ್ಯಾತೌ ಷುಕ್ ಚ** (ಪಾ. ಸೂ. ೪-೧-೧೬೧) ಎಂಬುದರಿಂದ ಮನು ಶಬ್ದಕ್ಕೆ ಯತ್ ಪ್ರತ್ಯಯ. ತತ್ಸಂನಿಯೋಗದಿಂದ ಷುಕಾಗಮ. ಜಾತಿಯು ಗಮ್ಯಮಾನವಾಗಿದೆ. ಮನುಷ್ಯ ಎಂದು ರೂಪವಾಗುತ್ತದೆ. **ತಿತ್ಸ್ವರಿತಮ್** (ಪಾ. ಸೂ. ೬-೧-೧೭೫) ಎಂಬುದರಿಂದ ಪ್ರತ್ಯಯಕ್ಕೆ ಸ್ವರಿತಸ್ವರ ಬರುತ್ತದೆ. ಯದ್ಯಪಿ ಇಲ್ಲಿ **ಯತೋಽನಾವಃ** ಎಂಬುದರಿಂದ ಆದ್ಯುದಾತ್ತಸ್ವರ ಬರಬೇಕಾಗುತ್ತದೆ. ಆದರೆ ಆ ಸೂತ್ರದಲ್ಲಿ **ಪ್ವ್ಯಚಃ** ಎಂಬುದಕ್ಕೆ ಅನುವೃತ್ತಿ ಇರುವುದರಿಂದ ಇಲ್ಲಿ ಅನೇಕಾಚ್ ಇರುವುದರಿಂದ ಆ ಸೂತ್ರದಿಂದ ಉಕ್ತಸ್ವರ ಬರುವುದಲ್ಲ.

ಸ್ವರ್ವತೇ—ಋ ಗತೌ ಧಾತು. ಸು ಪೂರ್ವದಲ್ಲಿರುವಾಗ ಈ ಧಾತುವಿಗೆ **ಭಾವಾರ್ಥದಲ್ಲಿ ವಿಚ್** ಪ್ರತ್ಯಯ. ತನ್ನಿಮಿತ್ತವಾಗಿ ಧಾತುವಿಗೆ ಗುಣ ಸ್ವರ್ ಎಂದು ರೂಪವಾಗುತ್ತದೆ. ಸ್ವರ್ ಅಸ್ಯ ಅಸ್ತಿ ಎಂದು ಅರ್ಥವಿವಕ್ಷಾ ಮಾಡಿದಾಗ **ತದಸ್ಯಾಸ್ತಿ**—ಎಂಬುದರಿಂದ ಮತುಪ್ ಪ್ರತ್ಯಯ. ಸ್ವರ್ ಎಂಬಲ್ಲಿ ಅಕಾರ ಉಪಧೆಯಾಗಿರುವುದರಿಂದ ಅದರ ಪರದಲ್ಲಿ ಮತುಪ್ ಬಂದುದರಿಂದ **ಮಾದುಪಧಾಯಾಶ್ಚ**—ಎಂಬುದರಿಂದ ಮತುಪಿನ ಮಕಾರಕ್ಕೆ ವಕಾರಾದೇಶ. ಸ್ವರ್ವತ್ ಶಬ್ದವಾಗುತ್ತದೆ. **ನ್ಯಙ್ ಸ್ವರೌ ಸ್ವರಿತೌ** ಎಂಬುದರಿಂದ ಸ್ವರ್ ಎಂಬುದಕ್ಕೆ ಸ್ವರಿತಸ್ವರ ಬರುತ್ತದೆ. ಚತುರ್ಥೀ ಏಕವಚನಾಂತರೂಪ.

ಸತ್ಯತುಷ್ಟ್ಯಾಯೈ—**ಬಹುವ್ರೀಹೌ ಪ್ರಕೃತ್ಯಾಪೂರ್ವಪದಮ್** ಎಂಬುದರಿಂದ ಸಮಾಸಸ್ವರವು ಬಾಧಿತವಾಗಿ ಪೂರ್ವಪದಪ್ರಕೃತಿಸ್ವರ ಬರುತ್ತದೆ.

ಪೂರ್ವೀಃ—ಪೃ ಪಾಲನಪೂರಣಯೋಃ ಧಾತು. **ಪೃಭಿದಿವ್ಯಧಿ**—(ಉ. ಸೂ. ೧-೨೩) ಎಂಬುದರಿಂದ ಕು ಪ್ರತ್ಯಯ. **ಉದೋಷ್ಠ್ಯಪೂರ್ವಸ್ಯ** ಎಂಬುದರಿಂದ ಋಕಾರಕ್ಕೆ ಉತ್ವ. ಪುರು ಎಂದು ರೂಪವಾಗುತ್ತದೆ. ಇದು ಗುಣವಾಚಕವಾದುದರಿಂದ **ವೋತೋಗುಣವಚನಾತ್** ಎಂಬುದರಿಂದ ಸ್ತ್ರೀತ್ವದಲ್ಲಿ ಙೀಷ್. ಉದಾತ್ತ ಉಕಾರಕ್ಕೆ ಯಣಾದೇಶ. **ಹಲಿಚಿ** ಎಂಬುದರಿಂದ ದೀರ್ಘ. ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ.

ಸಂಹಿತಾಪಾಠಃ

ದಿವಶ್ಚಿತ್ತೇ ಬೃಹತೋ ಜಾತವೇದೋ ವೈಶ್ವಾನರ ಪ್ರ ರಿರಿಚೇ ಮಹಿತ್ವಂ ।
ರಾಜಾ ಕೃಷ್ಟೀನಾಮಸಿ ಮಾನುಷೀಣಾಂ ಯುಧಾ ದೇವೇಭ್ಯೋ ವರಿವ-
ಶ್ಚಕರ್ಥ ॥ ೫ ॥

। ಪದಪಾಠಃ ।

ದಿವಃ । ಚಿತ್ । ತೇ । ಬೃಹತಃ । ಜಾತವೇದಃ । ವೈಶ್ವಾನರ । ಪ್ರ । ರಿರಿಚೇ । ಮಹಿತ್ವಂ ।

ರಾಜಾ । ಕೃಷ್ಟೀನಾಂ । ಅಸಿ । ಮಾನುಷೀಣಾಂ । ಯುಧಾ । ದೇವೇಭ್ಯಃ । ವರಿವಃ । ಚಕರ್ಥ ॥ ೫ ॥

॥ ಸಾಯಣಭಾಷ್ಯಂ ॥

ಹೇ ಜಾತವೇದೋ ಜಾತಾನಾಂ ವೇದಿತರ್ವೈಶ್ವಾನರಾಗ್ನೇ ತೇ ತವ ಮಹಿತ್ವಂ ಮಹಾತ್ಮ್ಯಂ ಬೃಹತೋ ಮಹತೋ ದಿವಶ್ಚಿತ್ ದ್ಯುಲೋಕಾದಪಿ ಪ್ರ ರಿರಿಚೇ । ಪ್ರವವೃಧೇ । ಕಿಂಚ ತ್ವಂ ಮಾನುಷೀಣಾಂ ಮನೋರ್ಜಾತಾನಾಂ ಕೃಷ್ಟೀನಾಂ ಪ್ರಜಾನಾಂ ರಾಜಾಸಿ । ಅಧಿಪತಿರ್ಭವಸಿ । ತಥಾ ವರಿವೋಽಸುರೈರಪಹೃತಂ ಧನಂ ಯುಧಾ ಯುದ್ಧೇನ ದೇವೇಭ್ಯಶ್ಚಕರ್ಥ । ದೇವಾಧೀನಮಕಾರ್ಷೀಃ ॥ ವೈಶ್ವಾನರ । ಪಾದಾದಿತ್ವಾದಾಷ್ಟ್ವುನಿಕನಿಘಾತಾಭಾವಃ । ರಿರಿಚೇ । ರಿಚಿರ್ ವಿರೇಚನೇ । ಅತ್ರೋಪಸರ್ಗವಶಾತ್ತ್ವಿಪರೀತ ಆಧಿಕ್ಯೇ ವರ್ತತೇ । ಕೃಷ್ಟೀನಾಂ । ನಾಮನ್ಯತರಸ್ಯಾಮಿತಿ ನಾಮ ಉದಾತ್ತತ್ವಂ । ಮಾನುಷೀಣಾಂ । ಮಾನುಷಶಬ್ದೋ ಮನೋರ್ಜಾತಾವಿತ್ಯಞ್ಪ್ರತ್ಯಯಾಂತಃ । ಜಾತಿಲಕ್ಷಣೇ ಙೀಷಿ ಪ್ರಾಪ್ತೇ ತದಪವಾದತಯಾ ಶಾರ್ಙ್ಗರವಾದ್ಯಞ ಇತಿ ಙೀನ್ । ನಿತ್ತ್ವಾದಾದ್ಯುದಾತ್ತತ್ವಂ । ಜ್ಯಾಶ್ಚಂದಸಿ ಬಹುಲಂ । ಪಾ. ೬-೧-೧೭೮ । ಇತಿ ಬಹುಲವಚನಾನ್ನಾಮ ಉದಾತ್ತಸ್ಯಾಭಾವಃ । ಯುಧಾ । ಯುಧ ಸಂಪ್ರಹಾರ ಇತ್ಯಸ್ಮಾತ್ಸಂಪದಾದಿಲಕ್ಷಣೋ ಭಾವೇ ಕ್ವಿಪ್ । ವರಿವ ಇತಿ ಧನನಾಮ । ನಬ್ವಿಷಯಸ್ಯೇತ್ಯಾದ್ಯುದಾತ್ತತ್ವಂ ॥

॥ ಪ್ರತಿಪದಾರ್ಥ ॥

ಜಾತವೇದಃ—ಉತ್ಪನ್ನವಾದ ಸಕಲವನ್ನೂ ತಿಳಿದ । **ವೈಶ್ವಾನರ**—ಎಲೈ ಅಗ್ನಿಯೇ । **ತೇ**—ನಿನ್ನ । **ಮಹಿತ್ವಂ**—ಮಾಹಾತ್ಮ್ಯವು । **ಬೃಹತಃ**—ವಿಸ್ತಾರವಾದ । **ದಿವಶ್ಚಿತ್**—ದ್ಯುಲೋಕಕ್ಕಿಂತಲೂ । **ಪ್ರ ರಿರಿಚೇ**—ಅತ್ಯಧಿಕವಾಗಿ ಬೆಳೆಯಿತು (ಮತ್ತು ನೀನು) । **ಮಾನುಷೀಣಾಂ**—ಮನುವಿನಿಂದ ಉತ್ಪನ್ನರಾದ । **ಕೃಷ್ಟೀನಾಂ**—ಪ್ರಜೆಗಳಿಗೆಲ್ಲ । **ರಾಜಾ ಅಸಿ**—ಅಧಿಪತಿಯಾಗಿದ್ದೀಯೆ (ಹಾಗೆಯೇ) । **ವರಿವಃ**—(ಅಸುರರಿಂದ ಅಪಹೃತವಾದ) ಧನವನ್ನು । **ಯುಧಾ**—ಯುದ್ಧದಿಂದ । **ದೇವೇಭ್ಯಃ**—ದೇವತೆಗಳಿಗಾಗಿ । **ಚಕರ್ಥ**—(ಪುನಃ) ಗಳಿಸಿದೆ ॥

॥ ಭಾವಾರ್ಥ ॥

ಎಲೈ ಅಗ್ನಿಯೇ, ನೀನು ಉತ್ಪನ್ನವಾದ ಸಕಲ ವಸ್ತುಗಳನ್ನೂ ತಿಳಿದವನು. ನಿನ್ನ ಮಾಹಾತ್ಮ್ಯವು ವಿಸ್ತಾರವಾದ ದ್ಯುಲೋಕಕ್ಕಿಂತಲೂ ಅತ್ಯಧಿಕವಾಗಿ ಬೆಳೆದಿದೆ. ಮತ್ತು ನೀನು ಮನುವಿನಿಂದ ಉತ್ಪನ್ನರಾದ

ಸಕಲ ಪ್ರಜೆಗಳಿಗೂ ಅಧಿಪತಿಯಾಗಿದ್ದೀಯೆ. ಹಾಗೆಯೇ ಅಸುರರಿಂದ ಅಪಹೃತವಾದ ಧನವನ್ನು ಅವರೊಡನೆ ಯುದ್ಧಮಾಡಿ ಪುನಃ ದೇವತೆಗಳಿಗಾಗಿ ಗಳಿಸಿಕೊಟ್ಟೆ.

English Translation.

Vaiswanara, who knows all that are born, your magnitude has exceeded that of the spacious heaven; you are the monarch of Manu-descended men; you have regained for the gods in battle, the wealth (carried off by the Asuras)

|| ವಿಶೇಷವಿಷಯಗಳು ||

ಜಾತವೇದಃ—**ಜಾತಾನಾಂ ವೇದಿತಃ**—ಹುಟ್ಟಿದ ಸಮಸ್ತ ವಸ್ತುಗಳನ್ನು ತಿಳಿದವನು ಅಥವಾ ಸಮಸ್ತರಿಂದ ತಿಳಿಯಲ್ಪಡುವವನು.

ವೈಶ್ವಾನರ—ಸಮಸ್ತ ಮಾನವರ ಹೃದಯದಲ್ಲಿಯೂ ಜಠರಾಗ್ನಿಯರೂಪದಿಂದ ನೆಲಸಿರುವವನು (ಅಗ್ನಿ).

ವರಿವಃ—**ಅಸುರೈರಪಹೃತಂ ಧನಂ** ಶತ್ರುಗಳಿಂದ ಅಪಹೃತವಾಗಿದ್ದ ಧನವನ್ನು ಯುದ್ಧಮಾಡಿ ಮತ್ತೆ ಅದನ್ನು ದೇವತೆಗಳಿಗೆ ಕೊಡಿಸಿದೆ ಎಂದು ಅಗ್ನಿಯನ್ನು ಪ್ರಾರ್ಥಿಸಲಾಗಿದೆ. ವರಿವ ಶಬ್ದವು ನಿರುಕ್ತದಲ್ಲಿ ಮಘಂ ರೇಕ್ಷಃ ಮೊದಲಾದ ಇಪ್ಪತ್ತೈಂಟು ಧನಪರ್ಯಾಯಪದಗಳಲ್ಲಿ ಪಠಿತವಾಗಿದೆ. (ನಿರು. ೩-೯).

|| ವ್ಯಾಕರಣಪ್ರಕ್ರಿಯಾ ||

ವೈಶ್ವಾನರ—ಇದರ ಪ್ರಕ್ರಿಯಾ ಇದೇ ಸೂಕ್ತದ ಒಂದನೇ ಮಂತ್ರದಲ್ಲಿ ವ್ಯಾಖ್ಯಾತವಾಗಿದೆ. **ಪಾದಾ**ದಿಯಲ್ಲಿರುವುದರಿಂದ ಆಷ್ಟಮಿಕ ನಿಘಾತಸ್ವರ ಬರುವುದಿಲ್ಲ. **ಆಮಂತ್ರಿತಸ್ಯ** ಎಂಬ **ಷಾಷ್ಠ** ಸೂತ್ರದಿಂದ ಆದ್ಯುದಾತ್ತಸ್ವರ ಬರುತ್ತದೆ.

ರಿರಿಚೇ—ರಿಚಿರ್ ವಿರೇಚನೇ ಧಾತು. ಉಪಸರ್ಗೇಣ ಧಾತ್ವರ್ಥಃ ಬಲಾದನ್ಯಃ ಪ್ರತೀಯತೇ ಎಂಬ ವಚನವನ್ನು ಅನುಸರಿಸಿ ಇಲ್ಲಿ ಪ್ರ ಎಂಬ ಉಪಸರ್ಗ ಸಂಬಂಧದಿಂದ ಹಿಂದೆ ಹೇಳಿದ ಧಾತ್ವರ್ಥಕ್ಕೆ ವಿಪರೀತವಾಗಿ ಅಧಿಕಾರ್ಥದಲ್ಲಿ ಇದೆ. ಲಿಟ್ ಪ್ರಥಮಪುರುಷ ಏಕವಚನದಲ್ಲಿ ಪ್ರತ್ಯಯಕ್ಕೆ ಏಶಾದೇಶ. ಧಾತುವಿಗೆ ದ್ವಿತ್ವ. ಅಭ್ಯಾಸಕ್ಕೆ ಹಲಾದಿಶೇಷ. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

ಕೃಷ್ಟೀನಾಮ್—ಷಷ್ಠಿಯಲ್ಲಿ **ಹ್ರಸ್ವನದ್ಯಾಪೋನುಟ್** ಎಂಬುದರಿಂದ ಆಮಿಗೆ ನುಟ್. **ನಾಮಿ** ಸೂತ್ರದಿಂದ ಅಜಂತಾಂಗಕ್ಕೆ ದೀರ್ಘ. **ನಾಮನ್ಯತರಸ್ಯಾಮ್** (ಪಾ. ಸೂ. ೬-೧-೧೭೭) ಎಂಬುದರಿಂದ ನಾಮಿಗೆ ಉದಾತ್ತಸ್ವರ ಬರುತ್ತದೆ.

ಮಾನುಷೀಣಾಮ್—**ಮನೋರ್ಜಾತಾವಞ್ಯಾಷೌ ಷುಕ್ಚ** ಎಂಬುದರಿಂದ ಅಞ್ ಪ್ರತ್ಯಯಾಂತವಾದುದು ಮಾನುಷ ಶಬ್ದ. ಇದಕ್ಕೆ **ಸ್ತ್ರೀತ್ವ** ವಿವಕ್ಷಾ ಮಾಡಿದಾಗ **ಜಾತೇರಸ್ತ್ರೀವಿಷಯಾದಯೋಪಧಾತ್**

(ಪಾ. ಸೂ. ೪-೧-೬೩) ಎಂಬುದರಿಂದ ಜಾತಿಲಕ್ಷಣವಾದ ಙೀಷ್ ಪ್ರಾಪ್ತವಾದರೆ ಅದಕ್ಕೆ ಅಪವಾದವಾಗಿ ಶಾರ್ಙರವಾದ್ಯೆಞೋ ಜೀನ್ (ಪಾ. ಸೂ. ೪-೧-೭೩) ಎಂಬುದರಿಂದ ಙೀನ್ ಪ್ರತ್ಯಯ ಬರುತ್ತದೆ. ನಿತ್ತಾ ದುದರಿಂದ ಆದ್ಯುದಾತ್ತಸ್ವರ ಬರುತ್ತದೆ ಷಷ್ಠೀಬಹುವಚನಾಂತರೂಪ. ಇಲ್ಲಿ ನಾಮನ್ಯತರಸ್ಯಾಂ ಎಂಬುದರಿಂದ ನಾಮಿಗೆ ಉದಾತ್ತಸ್ವರವು ಪ್ರಾಪ್ತವಾಗುತ್ತದೆ. ಆದರೆ ಙ್ಯಂತದ ಪರದಲ್ಲಿರುವುದರಿಂದ ಙ್ಯಾ ಶ್ಛಂದಸಿ ಬಹುಲಂ (ಪಾ. ಸೂ. ೬-೧-೧೭೮) ಎಂಬಲ್ಲಿ ಬಹುಲಗ್ರಹಣದಿಂದ ಇಲ್ಲಿ ಉದಾತ್ತಸ್ವರ ಬರುವುದಿಲ್ಲ.

ಯುಧಾ—ಯುಧ ಸಂಪ್ರಹಾರೇ ಧಾತು. ಸಂಪದಾದಿಯಲ್ಲಿ ಸೇರಿರುವುದರಿಂದ ಸಂಪದಾದಿಭ್ಯಃ ಕ್ವಿಪ್ ಎಂಬುದರಿಂದ ಭಾವಾರ್ಥದಲ್ಲಿ ಕ್ವಿಪ್. ಯುಧ್ ಶಬ್ದವಾಗುತ್ತದೆ. ತೃತೀಯಾ ಏಕವಚನಾಂತರೂಪ ಸಾವೇಕಾಚಸ್ತೃತೀಯಾದಿಃ ಎಂಬುದರಿಂದ ಏಕಾಚ್ಚಾದುದರಿಂದ ವಿಭಕ್ತಿಗೆ ಉದಾತ್ತಸ್ವರ ಬರುತ್ತದೆ.

ವರಿವಃ—ವರಿವಸ್ ಶಬ್ದ ಧನ ಎಂಬ ಅರ್ಥವನ್ನು ತಿಳಿಸುತ್ತದೆ. ಇದು ನಿತ್ಯನಪುಂಸಕಲಿಂಗವಾದುದರಿಂದ ನಬ್ವಿಷಯಸ್ಯ (ಫಿ. ಸೂ. ೨೬) ಎಂಬುದರಿಂದ ಆದ್ಯುದಾತ್ತವಾಗುತ್ತದೆ.

ಚಕರ್ಥ—ಡುಕೃಞ್ ಕರಣೇ ಲಟ್ ಮಧ್ಯಮಪುರುಷಏಕವಚನರೂಪ ಕ್ರಾದಿ. ನಿಯಮದಿಂದ ಥಲಿಗೆ ಇಡಾಗಮ ಬರುವುದಿಲ್ಲ. ತಿಙಂತನಿಘಾತಸ್ವರ ಬರುತ್ತದೆ.

॥ ಸಂಹಿತಾಪಾಠಃ ॥

ಪ್ರ ನೂ ಮಹಿತ್ವಂ ವೃಷಭಸ್ಯ ವೋಚಂ ಯಂ ಪೂರವೋ ವೃತ್ರಹಣಂ ಸಚಂತೇ ।
ವೈಶ್ವಾನರೋ ದಸ್ಯುಮಗ್ನಿರ್ಜಘನ್ವಾ ಅಧೂನೋತ್ಕಾಷ್ಠಾ ಅವ ಶಂಬರಂ ಭವೇತ್ ॥ ೬ ॥

॥ ಪದಪಾಠಃ ॥

ಪ್ರ । ನು । ಮಹಿತ್ವಂ । ವೃಷಭಸ್ಯ । ವೋಚಂ । ಯಂ । ಪೂರವಃ । ವೃತ್ರಹನಂ। ಸಚಂತೇ ।
ವೈಶ್ವಾನರಃ । ದಸ್ಯುಂ । ಅಗ್ನಿಃ । ಜಘನ್ವಾನ್ । ಅಧೂನೋತ್ । ಕಾಷ್ಠಾಃ । ಅವ । ಶಂಬರಂ । ಭೇತ್ ॥ ೬ ॥

॥ ಸಾಯಣಭಾಷ್ಯಂ ॥

ಅತ್ರ ವೈಶ್ವಾನರಶಬ್ದೇನ ಮಧ್ಯಮಸ್ಥಾನಸ್ಥೋ ವೈದ್ಯುತೋಽಗ್ನಿರಭಿಧೀಯತೇ । ಪೂರವ ಇತಿ ಮನುಷ್ಯನಾಮ । ಪೂರವೋ ಮನುಷ್ಯಾ ವೃತ್ರಹಣಮಾವರಕಸ್ಯ ಮೇಘಸ್ಯ ಹಂತಾರಂ ಯಂ ವೈಶ್ವಾನರಂ

सचंतेऽ । वर्षार्थिनः सेवंतेऽ । तस्य वृषभस्यासाꣳ वर्हिषस्तुर्वैश्वानरस्य महित्वं माहात्म्यं नु क्षिप्रं प्र वोचं । प्रब्रवीमि । किं तदित्यत आह । अयं वैश्वानरोऽग्निर्दस्युं रसानां कर्मणां वोपक्षयिकारं राक्षसादिकं जघन्वान् हतवान् । तथा काष्ठा अपो वृष्ण्यदकान्यधूनोत् । अधोमुखान्यसातयत् । शंबरं तं निरोधकारिणं मेघमव भेत् । अवाभिनत् ॥ वोचं । छंदसि लुङ्लङ्लिटः इति वर्तमाने लुङ्यस्मृतिवक्तीत्यादिना च्लेरङादेशः । वच उमित्युमागमः । गुणः । बहुलं छंदस्यमाङ्योगेऽपीत्यडभावः । जघन्वान् । हंतेर्लिटः क्वसुः । आभ्यासाच्छेत्यभ्यासादुत्तरस्य हकारस्य घत्वं । विभाषा गमहनेति विकल्पनादिडभावः । भेत् । भिदिर् विदारणे । लङ्य बहुलं छंदसीति विकरणस्य लुक् । हल्ङ्याब्भ्य इति तकारस्य लोपः । पूर्ववदडभावः ॥ अत्र निरुक्तं । प्र ब्रवीमि तन्महित्त्वं माहाभाग्यं वृषभस्य वर्हितुरसाꣳ यं पूरवः पूरयितव्या मनुष्या वृत्रहणं मेघहनं सचंते सेवंते वर्षकामा दस्युर्दस्यतेः क्षयार्थादुपदस्यंत्यस्मिन्रसा उपदासयति कर्मणि तमग्निर्वैश्वानरो घ्नन्नवाधूनोदपः काष्ठा अभिनच्छंबरं मेघꣳ । नि. २-२३ । इति ॥ अत्रेदं चिंतनीयं । कोऽसौ वैश्वानर इति । तत्र केचिदाहुः । मध्यमस्थानस्थो वायुरिंद्रो वा वैश्वानरः । तस्य हि वर्षकर्मणा संस्तव उपपद्यते । न त्वग्नेः पृथिवीस्थानत्वादिति । अन्ये त्वेवं मन्यंते । द्युस्थानः सूर्यो वैश्वानर इति । युक्तं चाहुः । प्रातःसवनादीनि त्रीणि सवनानि लोकत्रयात्मकानि । तत्र तृतीयसवनं प्राप्तो यजमानः स्वर्गं प्राप्त इति पृथिव्याः प्रच्युतो भवेत् । तत्प्रच्युतिपरिहारायाग्निमारुतेऽंतिमे शस्त्रे होता स्वर्गाद्भूमिं प्रत्यवरोहति । कथमिति तदुच्यते । इतरशस्त्रवत् । स्तोत्रियर्तृचेन प्रारंभमुक्त्वा द्युस्थानसंबंधिना वैश्वानरीयेण सूक्तेन शस्त्रं प्रारभते । ततो मध्यमस्थानसंबंधिनं रुद्रं मरुतश्च प्रति तद्देवत्यसूक्तपातेनावरोहति । तत्र पृथिवीस्थानमग्निं । यद्यत्र वैश्वानरः सूर्यो न स्यात् तदानीमवरोहो नोपपद्यते । तदेतन्मतद्वयमप्यनुपपन्नं । अयमेवाग्निर्वैश्वानरः । कुतः । वैश्वानरशब्दस्यर्वाचीनानुरोधात् । विश्वेषां नराणां लोकांतरं प्रति नेतृतया संबंधी वैश्वानरः । तथा चाम्नातं । वैश्वानर पुत्रः पित्रे लोकं जानीतवेदो वहेमं सुकृतां यत्र लोका इति । यद्वा । विश्वे सर्वे नरा अनमग्निं यज्ञादौ प्रणयंतीति तत्संबंधाद्वैश्वानरः । यद्वा । विश्वान् सर्वान्प्राणिनः प्रत्यृतो गच्छत इति वैश्वानरो मध्यमोत्तमौ । युगतावित्यस्मात्प्रत्ययाच्च । लुगभावश्छांदसः । ताभ्यामुत्पन्नत्वादयमग्निर्वैश्वानरः । वैद्युतोऽग्निर्हि मध्यमसकाशाज्जायते । अतश्निपतनानंतरमयमेव पार्थिवोऽग्निः संपद्यते । आदित्यसकाशादपि घर्मकाले सूर्यकांतादिमणिष्वग्नेरुत्पत्तिः प्रसिद्धा । तस्मान्नानिर्वचनानुरोधेनायमेवाग्निर्वैश्वानर इत्येतदुपपन्नं । अस्यापि वर्षकर्मणा स्तुतिः संभवति । अग्नौ प्रास्ताहुतिः सम्यगादित्यमुपतिष्ठते । आदित्याज्जायते वृष्टिर्वृष्टेरन्नं ततः प्रजाः । मनु. ३-७६ । इति स्मरणात् । प्रत्यवरोहेऽपि न कर्त-

ವ್ಯಃ । ತೃತೀಯೆಸವನಸ್ಯ ಭಕ್ತಸ್ತರ್ಗತ್ವಾತ್ । ಏತತ್ಸರ್ವಂ ಯಾಸ್ಕೇನ ವೈಶ್ವಾನರಃ ಕಸ್ಮಾದಿತ್ಯಾದಿನಾ ಬಹುಧಾ ಪ್ರಪಂಚಿತಂ । ನಿ. ೭-೨೧ । ಅತ್ರ ಯದನುಕ್ತಂ ತತ್ಸರ್ವಂ ತತ್ರೈವಾನುಸಂಧೇಯಂ ॥

॥ ಪ್ರತಿಪದಾರ್ಥ ॥

ಪೂರವಃ—ಮಾನವರು । **ವೃತ್ರಹಣಂ**—(ಲೋಕವನ್ನೆಲ್ಲ) ಆವರಿಸಿದ ಮೇಘದ ಭೇದಕನಾದ । **ಯಂ**—ಯಾವ ವೈಶ್ವಾನರಾಗ್ನಿಯನ್ನು । **ಸಚಂತೇ**—(ಮಳೆಯನ್ನು ಅಪೇಕ್ಷಿಸಿ) ಸೇವಿಸುತ್ತಾರೋ । **ವೃಷಭಸ್ಯ**—ಮಳೆಯನ್ನು ಸುರಿಸುವ ಆ ಅಗ್ನಿಯ । **ಮಹಿತ್ವಂ**—ಮಾಹಾತ್ಮ್ಯವನ್ನು । **ನು**—ಜಾಗ್ರತೆಯಾಗಿಯೇ । **ಪ್ರ ವೋಚಂ**—ಪಠಿಸುತ್ತೇನೆ । **ವೈಶ್ವಾನರಃ ಅಗ್ನಿಃ**—ವೈಶ್ವಾನರರೂಪದಲ್ಲಿರುವ ಅಗ್ನಿಯು। **ದಸ್ಯುಂ**—ನೀರನ್ನು ಅಥವಾ ಕರ್ಮಗಳನ್ನು ಕದಿಯುವ ರಾಕ್ಷಸಾದಿಗಳನ್ನು । **ಜಘನ್ವಾ**—ಕೊಂದನು (ಹಾಗೆಯೇ) । **ಕಾಷ್ಠಾಃ**—ಮಳೆಯ ನೀರುಗಳನ್ನು । **ಅಧೂನೋತ್**—ಕೆಳಕ್ಕೆ ಬೀಳಿಸಿದನು । **ಶಂಬರಂ**—(ನೀರನ್ನು ತಡೆದಿರುವ) ಮೇಘವನ್ನು । **ಅವ ಭೇತ್**—ಸೀಳಿದನು ॥

॥ ಭಾವಾರ್ಥ ॥

ಲೋಕವನ್ನೆಲ್ಲ ಆವರಿಸಿದ ಮೇಘದ ಭೇದಕನಾದ ಯಾವ (ವಿದ್ಯುದ್ರೂಪದಲ್ಲಿರುವ) ವೈಶ್ವಾನರಾಗ್ನಿಯನ್ನು ಮಳೆಯನ್ನಪೇಕ್ಷಿಸಿ ಮಾನವರೆಲ್ಲ ಸೇವಿಸುತ್ತಾರೋ ಆ ಅಗ್ನಿಯು ಮಳೆಯನ್ನು ಸುರಿಸುವುದರಿಂದ ಅವನ ಮಾಹಾತ್ಮ್ಯವನ್ನು ಜಾಗ್ರತೆಯಾಗಿಯೇ ಪಠಿಸುತ್ತೇನೆ. ಆ ಅಗ್ನಿಯು ನೀರನ್ನು ಕದಿಯುವ ರಾಕ್ಷಸಾದಿಗಳನ್ನು ಕೊಂದನು. ಮತ್ತು ನೀರನ್ನು ತಡೆದಿರುವ ಮೇಘವನ್ನು ಸೀಳಿ ಮಳೆಯ ನೀರುಗಳನ್ನು ಕೆಳಕ್ಕೆ ಬಿಳಿಸಿದನು.

English Translation.

I extol the greatness of that showerer of rain whom men celebrate as the slayer of Vritra; Vaiswanara, Agni killed the stealer (of the waters) and sent them down (upon earth), and clove the (obstructing) cloud.

॥ ವಿಶೇಷ ವಿಷಯಗಳು ॥

ಪೂರವಃ—**ಮನುಷ್ಯಾಃ** ಪೂರುಶಬ್ದವನ್ನು ಮನುಷ್ಯವಾಚಕವನ್ನಾಗಿ ನಿರುಕ್ತದಲ್ಲಿ ಪಾಠಮಾಡಿದ್ದಾರೆ. (ನಿರು. ೩-೮) ಇಲ್ಲಿ **ಮನುಷ್ಯನಾಮಾನ್ಯುತ್ತರಾಣಿ ಪಂಚವಿಂಶತಿಃ** ಎಂದು ಹೇಳುತ್ತಾ ಇಪ್ಪತ್ತೈದು ಶಬ್ದಗಳನ್ನು ಮನುಷ್ಯಪರ್ಯಾಯಪದಗಳನ್ನಾಗಿ ಹೇಳಿದ್ದಾರೆ.

ವೈಶ್ವಾನರಃ—ಹಿಂದೆ ಹೇಳಿದಂತೆ ವೈಶ್ವಾನರ ಶಬ್ದಕ್ಕೆ **ವಿಶ್ವೇ ಸರ್ವೇ ನರಾ ಏನಮಗ್ನಿಂ ಯಜ್ಞಾದೌ ಪ್ರಣಯಂತೀತಿ ವಿಶ್ವೇನರಾಃ ತತ್ಸಂಬಂಧಾದ್ವೈಶ್ವಾನರಃ** ಎಂಬುದಾಗಿಯೂ **ವಿಶ್ವೇಷಾಂ ನರಾಣಾಂ ಲೋಕಾಂತರಂ ಪ್ರತಿ ನೇತೃತಯಾ ಸಂಬಂಧೀ ವೈಶ್ವಾನರಃ** ಎಂದೂ **ವಿಶ್ವಾನ್ ಸರ್ವಾನ್ ಪ್ರಾಣಿನಃ**

ಪ್ರತ್ಯೃಶೋ ಗಚ್ಛತೆ ಇತಿ ವೈಶ್ವಾನರೌ, ಮಧ್ಯಮೋತ್ತಮೌ, ತಾಭ್ಯಾಮುತ್ಪನ್ನಃ ವೈಶ್ವಾನರಃ ಎಂಬುದಾಗಿಯೂ ಮೂರು ರೀತಿಯಿಂದ ವೈಶ್ವಾನರ ಶಬ್ದವನ್ನು ನಿರ್ವಚನಮಾಡಿದ್ದಾರೆ. ಈ ಋಕ್ಕಿನಲ್ಲಿ ಮೇಘಾವರಕನಾದ ವೃತ್ರನನ್ನು ಕೊಂದವನೂ, ವೃಷ್ಟಿಪ್ರದನೂ, ರಾಕ್ಷಸನಾಶಕನೂ ಆದ ವೈಶ್ವಾನರನ ಮಹಿಮೆಯನ್ನು ವರ್ಣಿಸಿರುವ ಭಾವವು ಉಕ್ತವಾಗಿದೆ. ಇದೇ ತಾಕ್ಷ್ಯರ್ಯವನ್ನು ಸೂಚಿಸುವ ನಿರುಕ್ತವು ಈರೀತಿ ಇದೆ. **ಪ್ರಬ್ರವೀಮಿ ತನ್ಮಹಿತ್ವಂ ಮಹಾಭಾಗ್ಯಂ ವೃಷಭಸ್ಯ ವರ್ಷಿಷ್ಠುರಪಾಂ ಯೇಂ ಪೂರವಃ ಪೂರಯಿತವ್ಯಾ ಮನುಷ್ಯಾ ವೃತ್ರಹಣಂ ಮೇಘಹನಂ ಸಚಂತೇ ಸೇವಂತೇ ವರ್ಷಕಾಮಾ ದಸ್ಯುರ್ದಸ್ಯತೇಃ ಕ್ಷಯಾರ್ಥಾದುಪದಸ್ಯಂತ್ಯಸ್ಮಿನ್ ರಸಾ ಉಪದಾಸಯತಿ ಕರ್ಮಾಣಿ ತಮಗ್ನಿಮೇವೈಶ್ವಾನರೋ ಘ್ನನ್ನವಾಧೂನೋದಹಃ ಕಾಷ್ಠಾ ಅಭಿನಚ್ಛಂಬರಂ ಮೇಘಂ** (ನಿರು. ೭-೨೦) ಇದರ ಮೇಲೆ ಇಲ್ಲಿ ಹೇಳಲ್ಪಟ್ಟಿರುವ ವೈಶ್ವಾನರನು ಯಾರು ಎಂದು ವಿಚಾರಮಾಡಿದ್ದಾರೆ. ಆಗ ಕೆಲವರು ಮಧ್ಯಮಸ್ಥಾನದಲ್ಲಿರುವ ವಾಯುವನ್ನೋ, ಇಂದ್ರನನ್ನೋ ವೈಶ್ವಾನರನೆನ್ನಬೇಕು ಎಂದಿರುವರು. ಏಕೆಂದರೆ ಅವರಿಬ್ಬರಿಗೆ ವರ್ಷಕರ್ಮದಲ್ಲಿ ಅಧಿಕಾರವಿರುವುದು. ವೃಷ್ಟಿಪ್ರಾಪ್ತಿಯ ವಿಷಯದಲ್ಲಿ ಸಾಮಾನ್ಯವಾಗಿ ಅವರನ್ನೇ ಸ್ತುತಿಸಬೇಕು. ಅಗ್ನಿಗೆ ಪೃಥಿವಿಯನ್ನೇ ಸ್ಥಾನವನ್ನಾಗಿ ಹೇಳಿರುವುದರಿಂದ ಅದು ಸಾಧ್ಯವಿಲ್ಲ ಎಂದು ಸಮರ್ಥಿಸಿರುವರು. ಮತ್ತೆ ಕೆಲವರು ಇಲ್ಲಿ ಹೇಳಲ್ಪಟ್ಟಿರುವ ವೈಶ್ವಾನರ ಶಬ್ದವು ಸೂರ್ಯನನ್ನು ಸೂಚಿಸುವುದು ಎಂದು ಹೇಳುತ್ತಾರೆ. ಏಕೆಂದರೆ, ಪ್ರಾತಸ್ಸವನ, ಮಾಧ್ಯಂದಿನಸವನ, ಸಾಯಂಸವನಗಳನ್ನು ಕ್ರಮವಾಗಿ, ಭೂಲೋಕ, ಭುವರ್ಲೋಕ, ಸ್ವರ್ಗಲೋಕಗಳೆಂದು ನಿರೂಪಿಸಿ, ಆಯಾಸವನಗಳ ಅನುಷ್ಠಾನದಿಂದ ಆಯಾ ಲೋಕಗಳು ದೊರೆಯುವವೆಂದೂ ತೀರ್ಮಾನಿಸಿದ್ದಾರೆ. ಆಗ ಸಾಯಂಸವನಾನುಷ್ಠಾನದಿಂದ ಸ್ವರ್ಗಪ್ರಾಪ್ತಿಯಾಗುವುದು. ಮತ್ತು ಭೂಮಿಯಿಂದ ಸಂಪೂರ್ಣವಾಗಿ ಚ್ಯುತಿಯೊದಗುವುದು. ಅಂತಹ ಪ್ರಚ್ಯುತಿಪರಿಹಾರಕ್ಕಾಗಿ ಅಗ್ನಿಮಾರುತಾತ್ಮಕವಾದ ಕೊನೆಯ ಶಸ್ತ್ರದಿಂದ ಮತ್ತೆ ಭೂಮಿಗೆ ಬರಲು ಆ ಶಸ್ತ್ರಮಂತ್ರವನ್ನು ಪಠಿಸುವರು. ಆ ಶಸ್ತ್ರಮಂತ್ರವು ವೈಶ್ವಾನರ ಸೂಕ್ತದಿಂದ ಆರಂಭವಾಗುವುದು. ಅನಂತರ ಮಧ್ಯಮಸ್ಥಾನ ಸಂಬಂಧವಾದ ರುದ್ರದೇವತೆ ಮತ್ತು ಮರುದ್ದೇವತೆಯರನ್ನು ತದ್ದೇವತಾಕವಾದ ಸೂಕ್ತಪಾಠದಿಂದ ಅವರೋಹಿಸುವರು. ಅಗ್ನಿಗೆ ಪೃಥಿವೀ ಸ್ಥಾನವಿರುವುದರಿಂದ, ಇಲ್ಲಿ ವೈಶ್ವಾನರಶಬ್ದಕ್ಕೆ ಸೂರ್ಯವಾಚಕತ್ವವಿಲ್ಲದಿದ್ದರೆ, ಪೃಥಿವಿಗೆ ಅವರೋಹಣವು ಹೇಗೆತಾನೆ ಸಂಬಂಧಿಸೀತು ? ಎಂದು ಸಿದ್ಧಾಂತಮಾಡಿ ವೈಶ್ವಾನರ ಶಬ್ದಕ್ಕೆ ಸೂರ್ಯನೆಂದು ಅರ್ಥಮಾಡಿರುವರು. ಆದರೆ ಸಾಯಣಾಚಾರ್ಯರ ಅಭಿಪ್ರಾಯವು ಮಾತ್ರ ವೈಶ್ವಾನರ ಶಬ್ದಕ್ಕೆ ಮಧ್ಯಮಸ್ಥಾನಗತವಾದ ವಿದ್ಯುತ್ಸಂಬಂಧವಾದ ಅಗ್ನಿ ಎಂದಾಗಿದೆ.

ಶಂಬರಂ—ತನ್ನಿರೋಧಕಾರಿಣಂ **ಮೇಘಂ**—ನೀರನ್ನು ತಡೆಗಟ್ಟುವ ಮೇಘ ಎಂದರ್ಥ.

|| ವ್ಯಾಕರಣಪ್ರಕ್ರಿಯಾ ||

ವೋಚೇಮ್—ವಚ ಪರಿಭಾಷಣೇ ಧಾತ್ವ. **ಛಂದಸಿಲುಙ್‌ಲಙ್‌ಲಿಟಃ** ಎಂಬುದರಿಂದ ವರ್ತಮಾನಾರ್ಥದಲ್ಲಿ ಲುಙ್. ಉತ್ತಮಪುರುಷ ಏಕವಚನದಲ್ಲಿ ಮಿಪ್ ಪ್ರತ್ಯಯ. **ತಸ್‌ಥಸ್‌ಥಮಿಪಾಂ**—ಎಂಬುದರಿಂದ ಅದಕ್ಕೆ ಅಮಾದೇಶ. **ಚ್ಲಿಲುঙು** ಎಂಬುದರಿಂದ ಪ್ರಾಪ್ತವಾದ ಚ್ಲಿಗೆ **ಅಸ್ಯತಿವಕ್ತಿಖ್ಯಾತಿಭ್ಯೋঙ್** (ಪಾ. ಸೂ. ೩-೧-೫೨) ಎಂಬುದರಿಂದ ಅಙಾದೇಶ. **ವಚಿಸ್ವಪಿಯಜಾದೀನಾಂ** (ಪಾ. ಸೂ. ೬-೪-೨೦) ಎಂಬುದರಿಂದ ಧಾತುವಿಗೆ ಉಮಾಗಮ. **ಮಿದಚೋಽಂತ್ಯಾತ್ಪರಃ** ಎಂಬುದರಿಂದ ಅಂತ್ಯಾಚಿನ ಪರವಾಗಿ ಬರುತ್ತದೆ. ಆಗ

ಗುಣ ಏಕಾದೇಶವಾಗಿ ಬರುತ್ತದೆ. **ಬಹುಲಂ ಛಂದಸ್ಯಮಾಙ್ಯೋಗೇಽಪಿ** ಎಂಬುದರಿಂದ ಅಡಾಗಮ ಬರುವುದಿಲ್ಲ. **ವೋಚಮ್** ಎಂದು ರೂಪವಾಗುತ್ತದೆ. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

ಸಚೇಂತೇ—ಷಚ ಸೇಚನೇ ಸೇವನೇ ಚ ಧಾತು ಭ್ವಾದಿ. ಲಟ್ ಪ್ರಥಮಪುರುಷ ಬಹುವಚನರೂಪ. ಯದ್ಯೋಗವಿರುವುದರಿಂದ ನಿಘಾತಸ್ವರ ಬರುವುದಿಲ್ಲ. **ಶಪ್**, ಲಸಾರ್ವಧಾತುಕವು ಅನುದಾತ್ತವಾಗುವುದರಿಂದ ಧಾತುಸ್ವರ ಉಳಿಯುತ್ತದೆ.

ಜಘ್ನಿವಾನ್—ಹನ ಹಿಂಸಾಗತ್ಯೋಃ ಧಾತು. **ಕ್ವಸುಶ್ಚ** ಎಂಬುದರಿಂದ ಲಿಟಿಗೆ ಕ್ವಸುರಾದೇಶ. ಅದನ್ನು ನಿಮಿತ್ತಕರಿಸಿ ಧಾತುವಿಗೆ ದ್ವಿತ್ವ. ಅಭ್ಯಾಸಕ್ಕೆ ಹಲಾದಿಶೇಷ. **ಕುಹೋಶ್ಚುಃ** ಎಂಬುದರಿಂದ ಚುತ್ವ. **ಅಭ್ಯಾಸಾಚ್ಚ** (ಪಾ. ಸೂ. ೭-೩-೫೫) ಎಂಬಾದರಿಂದ ಅಭ್ಯಾಸದ ಪರದಲ್ಲಿರುವ ಧಾತು ಹಕಾರಕ್ಕೆ ಕುತ್ವ. ಆಂತರತಮ್ಯದಿಂದ ಘಕಾರಾದೇಶ. **ವಿಭಾಷಾ ಗಮಹನ**—(ಪಾ. ಸೂ. ೭-೨-೬೮) ಎಂಬುದರಿಂದ ವಿಕಲ್ಪ ಹೇಳಿರುವುದರಿಂದ ವಕಾರಕ್ಕೆ ಇಡಾಗಮ ಬರುವುದಿಲ್ಲ. ಜಘನ್ವಸ್ ಶಬ್ದವಾಗುತ್ತದೆ. ಪ್ರಥಮಾ ಸು ಪರವಾದಾಗ **ಅತ್ವಸಂತಸ್ಯ ಚಾಧಾತೋಃ** ಎಂಬುದರಿಂದ ಉಪಧಾದೀರ್ಘ. ಉಗಿತ್ತ್ವಾದುದರಿಂದ **ಉಗಿದಚಾಂ**—ಸೂತ್ರದಿಂದ ನುಮಾಗಮ. **ಹಲ್ಙ್ಯಾಭ್ಯೋ**— ಸೂತ್ರದಿಂದ ಸುಲೋಪ. **ಸಂಯೋಗಾಂತಸ್ಯ ಲೋಪಃ** ಎಂಬುದರಿಂದ ವಸುವಿನ ಸಕಾರಕ್ಕೆ ಲೋಪ. ಜಘನ್ವಾನ್+ಅಧೂನೋತ್ ಎಂದಿರುವಾಗ **ದೀರ್ಘಾದಟಿ ಸಮಾನಪಾದೇ** ಎಂಬುದರಿಂದ ರುತ್ವ. **ಆತೋಟಿನಿತ್ಯಂ** ಎಂಬುದರಿಂದ ಪೂರ್ವಪದ ಆಕಾರಕ್ಕೆ ಅನುನಾಸಿಕತ್ವ.

ಅಧೂನೋತ್—ಧೂಞ್ ಕಂಪನೇ ಧಾತು. ಲಙ್ ಪ್ರಥಮಪುರುಷ ಏಕವಚನದಲ್ಲಿ **ತಿಪ್. ಇತಶ್ಚ** ಸೂತ್ರದಿಂದ ಇಕಾರಲೋಪ. **ಸ್ವಾದಿಭ್ಯಃಶ್ನುಃ** ಸೂತ್ರದಿಂದ ಶ್ನು ವಿಕರಣ ಪ್ರತ್ಯಯನಿಮಿತ್ತವಾಗಿ ಅದಕ್ಕೆ ಗುಣ. ಅಂಗಕ್ಕೆ ಅಡಾಗಮ. ಪಾದಾದಿಯಲ್ಲಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಅಡಾಗಮ ಉದಾತ್ತವಾದುದರಿಂದ ಆದ್ಯುದಾತ್ತವಾಗುತ್ತದೆ.

ಭೇತ್—ಭಿದಿರ್ ವಿದಾರಣೇ ಧಾತು. ಲಙ್ ಪ್ರಥಮಪುರುಷ ಏಕವಚನದಲ್ಲಿ ತಿಪ್ ಇಕಾರಲೋಪ. **ಬಹುಲಂಛಂದಸಿ** ಎಂಬುದರಿಂದ ವಿಕರಣಕ್ಕೆ (ಶ್ನಮ್) ಲುಕ್. ಪ್ರತ್ಯಯನಿಮಿತ್ತವಾಗಿ **ಪುಗಂತಲಘೂಪಧಸ್ಯ ಚ** ಎಂಬುದರಿಂದ ಧಾತುವಿನ ಉಪಧೆಗೆ ಗುಣ. ಭೇದ್+ತ್ ಎಂದಿರುವಾಗ **ಹಲ್ಙ್ಯಾಭ್ಯೋ** ಸೂತ್ರದಿಂದ ಪ್ರತ್ಯಯಕ್ಕೆ ಲೋಪ. **ಬಹುಲಂಛಂದಸ್ಯಮಾಙ್ಯೋಗೇಽಪಿ** ಎಂಬುದರಿಂದ ಅಡಾಗಮ ಬರುವುದಿಲ್ಲ. ತಿಙಂತನಿಘಾತಸ್ವರ ಬರುತ್ತದೆ.

ವೈಶ್ವಾನರಃ—ಇದಕ್ಕೆ ಹಿಂದೆ ಒಂದು ಪ್ರಕ್ರಿಯಾ ತೋರಿಸಿದೆ. ಅರ್ಥಸ್ವಾರಸ್ಯದಿಂದ ಇನ್ನೊಂದು ರೀತಿಯಿಂದ ನಿರ್ವಚನ ಮಾಡಬಹುದು. ವಿಶ್ವಾನ್ ಸರ್ವಾನ್ ಪ್ರಾಣಿನಃ ಪ್ರತಿ ಋತೋ ಗಚ್ಛತಃ ಇತಿ ವಿಶ್ವಾನರೌ ಮಧ್ಯಮೋತ್ತಮೌ | ಋ ಗತೌ ಧಾತು **ನಂದಿಗ್ರಹಪಚಾದಿಭ್ಯಃ**—ಎಂಬುದರಿಂದ ಅಚ್ ಪ್ರತ್ಯಯ. ವಿಶ್ವಾನ್ ಎಂಬಲ್ಲಿ ವೃತ್ತಿಯಲ್ಲಿ ಛಾಂದಸವಾಗಿ ಲುಕ್ ಬರುವುದಿಲ್ಲ. ಪ್ರತ್ಯಯನಿಮಿತ್ತವಾಗಿ ಧಾತುವಿಗೆ ಗುಣ. ತಾಭ್ಯಾಮುತ್ಪನ್ನತ್ವಾತ್ ಅಯಮಗ್ನಿರ್ವೈಶ್ವಾನರಃ ಅಣ್ ಪ್ರತ್ಯಯ **ಮಾಡಿದಾಗ ಯಸ್ಯೇತಿಚ** ಎಂಬುದರಿಂದ ಆಕಾರಕ್ಕೆ ಲೋಪ. **ತದ್ಧಿತೇಷ್ವಚಾಮಾದೇಃ** ಎಂಬುದರಿಂದ ಆದಿವೃದ್ಧಿ. ವೈಶ್ವಾನರ ಎಂದು ರೂಪವಾಗುತ್ತದೆ.

॥ संहितापाठः ॥

वैश्वानरो मह्ना विश्वकृष्टिर्भरद्वाजेषु यजतो विभावा ।
शातवनेये शतिनीभिरग्निः पुरुणीथे जरते सूनृतावान् ॥ २ ॥

पदपाठः

वैश्वानरः । मह्ना । विश्वऽकृष्टिः । भरत्ऽवाजेषु । यजतः । वि-
भाऽवा ।
शातऽवनेये । शतिनीभिः । अग्निः । पुरुऽनीथे । जरते । सूनृताऽ-
वान् ॥ २ ॥

॥ सायणभाष्य ॥

वैश्वानरोऽग्निर्महिम्ना मसत्त्वेन विश्वकृष्टिः । कृष्टिरिति मनुष्यनाम । विश्वे सर्वे मनुष्या यस्य स्वभूताः स तथोक्तः । भरद्वाजेषु पुष्टिकरहविर्लक्षणान्नवत्सु यागेषु । यद्वा । एतत्संज्ञेष्वृषिषु । यजतः यष्टव्यो विभावा विशेषेण प्रकाशयिता सूनृतावान् । सूनृता प्रिया सत्या वाक् । तद्युक्तः । एवंभूतोऽग्निः शातवनेये । शतसंख्याकान् क्रतून्वनतिसंभजत इति शतवनिः । तस्य पुत्रः शातवनेयः । तस्मिन् पुराणेथे बहूनां नेतर्यीतत्संज्ञके राजनि च शतिनीभिर्बहुभिः स्तुतिभिर्जरते । स्तूयते ॥ भरद्वाजेषु । भरन्ति पोषयन्ति भोक्तॄनिति भरन्तः । तादृशा वाजा येषु । बहुव्रीहौ पूर्वपदप्रकृतिस्वरत्वे प्राप्ते मरुद्भ्यृधादित्वात्पूर्वपदान्तोदात्तत्वं । यजतः । भृमृदृशियजिपर्वपचमिनमिहर्यीभ्योऽतच् । उ. ३-१८० । इति यजतेरतच्प्रत्ययः । विभावा । भा दीप्तौ । अतोमनिन्निति वनिप् । तस्य पित्त्वादनुदात्तत्वे धातुस्वरः शिष्यते । शातवनेये । इन्सर्वधातुभ्य इतीन्प्रत्ययः शतवनिशब्दः । इतश्चानिञः । सा. ४-१-१२१ । इति ढक् । किति इत्यंतोदात्तत्वं । शतिनीभिः । शतशब्दान्नित्त्वार्थीये इनिः । युष्मेभ्य इति ङीप् । पुरुणीथे । पूर्वपदात्संज्ञायामगः । सा. ६-४-३ । इति णत्वं । जरते । व्यत्ययेन कर्मणि कर्तृप्रत्ययः ॥

॥ ಪ್ರತಿಪದಾರ್ಥ ॥

ವೈಶ್ವಾನರಃ—ವೈಶ್ವಾನರರೂಪದಲ್ಲಿರುವ ಅಗ್ನಿಯು । **ಮಹಿಮ್ನಾ**—ತನ್ನ ಮಹತ್ತ್ವದಿಂದ । **ವಿಶ್ವ-ಕೃಷ್ಟಿಃ**—ಸಕಲಮನುಷ್ಯರಲ್ಲಿಯೂ ಐಕ್ಯನಾಗಿದ್ದಾನೆ (ಮತ್ತು) । **ಭರದ್ವಾಜೇಷು**—ಪುಷ್ಟಿಕರವಾದ ಹವಿಸ್ಸಿನ ಅನ್ನವುಳ್ಳ ಯಾಗಗಳಲ್ಲಿ ಅಥವಾ ಭರದ್ವಾಜಋಷಿಗಳಲ್ಲಿ । **ವಿಭಾವಾ**—ಅತ್ಯಂತ ಪ್ರಕಾಶಕನಾಗಿಯೂ । **ಯೆಜತಃ**—ಪೂಜ್ಯನಾಗಿಯೂ । **ಸೂನೃತಾವಾ**—ಪ್ರಿಯವಾದ ಮತ್ತು ಸತ್ಯವಾದ ವಾಕ್ಕುಳ್ಳವನಾಗಿಯೂ ಇರುವ । **ಅಗ್ನಿಃ**—ಅಗ್ನಿಯು । **ಶಾತವನೇಯೇ**—ಶಾತವನಿಯಮಗನಲ್ಲಿಯೂ । **ಪುರುಣೀಥೇ**—ಅನೇಕರಿಗೆ ಮಾರ್ಗದರ್ಶಕನಾದ ಪುರುನೀಥನೆಂಬ ರಾಜನಲ್ಲಿಯೂ । **ಶತಿನೀಭಿಃ**—ಅನೇಕ ಸ್ತೋತ್ರಗಳಿಂದ । **ಜರತೇ**—ಸ್ತುತಿಸಲ್ಪಡುತ್ತಾನೆ ॥

॥ ಭಾವಾರ್ಥ ॥

ವೈಶ್ವಾನರಾಗ್ನಿಯು ಸಕಲ ಮಾನವರಲ್ಲಿಯೂ ತನ್ನ ಮಹತ್ತ್ವದಿಂದ ಸಂಬಂಧಿಸಿ ಐಕ್ಯನಾಗಿದ್ದಾನೆ. ಪುಷ್ಟಿಕರವಾಗಿಯೂ ಹವಿಸ್ಸಿನರೂಪದಲ್ಲಿಯೂ ಇರುವ ಅನ್ನವುಳ್ಳ ಯಾಗಗಳಲ್ಲಿ ಅತ್ಯಂತ ಪ್ರಕಾಶಕನಾಗಿಯೂ, ಪೂಜ್ಯನಾಗಿಯೂ, ಪ್ರಿಯವಾದ ಮತ್ತು ಸತ್ಯವಾದ ವಾಕ್ಕುಳ್ಳವನಾಗಿಯೂ ಇರುವ ಅಗ್ನಿಯು ಶಾತವನಿಯ ಮಗನಲ್ಲಿಯೂ, ಅನೇಕರಿಗೆ ಮಾರ್ಗದರ್ಶಕನಾದ ಪುರುನೀಥನೆಂಬ ರಾಜನಲ್ಲಿಯೂ ಅನೇಕ ಸ್ತೋತ್ರಗಳಿಂದ ಸ್ತುತಿಸಲ್ಪಡುತ್ತಾನೆ.

English Translation.

Vaiswanara by his magnitude exists in all men, and is worthy of being adored in sacrifices of nourishing foods; Agni, endowed with rays and truthful speech, is praised with many commendations, by Purunitha, and the son of Satavani.

॥ ವಿಶೇಷ ವಿಷಯಗಳು ॥

ವಿಶ್ವಕೃಷ್ಟಿಃ—**ವಿಶ್ವೇ ಸರ್ವೇ ಮನುಷ್ಯಾ ಯೆಸ್ಯ**—ಇಲ್ಲಿ ಕೃಷ್ಟಿಶಬ್ದಕ್ಕೆ ಮನುಷ್ಯ ಎಂದರ್ಥ. ನಿರುಕ್ತದಲ್ಲಿ ಕೃಷ್ಟಿ ಶಬ್ದವನ್ನು ಮನುಷ್ಯವಾಚಕವನ್ನಾಗಿ ಪಾಠಮಾಡಿದ್ದಾರೆ.

ಭರದ್ವಾಜೇಷು—ಪುಷ್ಟಿಯನುಂಟುಸಾಡುವ ಹವಿಸ್ಸಿನ ಲಕ್ಷಣದಿಂದ ಕೂಡಿದ ಅನ್ನವುಳ್ಳ ಯಾಗ, ಅಥವಾ ಭರದ್ವಾಜಋಷಿ ಪರಂಪರೆಯಲ್ಲಿ ಎಂದು ಎರಡು ರೀತಿಯಲ್ಲಿಯೂ ಅರ್ಥಮಾಡಿದ್ದಾರೆ. **ಭರಂತಿ, ಪೋಷಯಂತಿ, ಭೋಕ್ತೂ ್ಯಾನ್ ಇತಿ ಭರಂತೇಃ, ತಾದೃಶಾ ವಾಜಾ ಯೇಷು ಭರದ್ವಾಜಾಃ** ಎಂದು ಯಾಗ ವಿಷಯಕವಾದ ಅರ್ಥದಲ್ಲಿ ವ್ಯುತ್ಪತ್ತಿಯನ್ನು ಕಲ್ಪಿಸಿದ್ದಾರೆ.

ವಿಭಾವಾ—ಭಾ ದೀಪ್ತೌ ಎಂಬ ಧಾತುವಿನಿಂದ ನಿಷ್ಪನ್ನವಾದ ರೂಪ ಇದು. ವಿಶೇಷವಾಗಿ ಪ್ರಕಾಶಿಸುವುದು ಎಂದು ಇದರ ವಿಶೇಷಾರ್ಥ.

ಸೂನೃತಾವಾನ್—ಸೂನೃತಾ ಪ್ರಿಯೋ ಸತ್ಯಾ ವಾಕ್ ತದ್ಯುಕ್ತಃ—ಪ್ರಿಯವಾದ ಮತ್ತು ಸತ್ಯವಾದ ಮಾತುಗಳುಳ್ಳವನು. ಅಗ್ನಿಗೆ ಇದು ವಿಶೇಷಣವಾಗಿದೆ.

ಶಾತವನೇಯೇ—ಶತಸಂಖ್ಯಾಕಾನ್ ಕ್ರತೂನ್ ವನತಿ ಸಂಭಜತೇ ಇತಿ ಶತವನಿಃ ತಸ್ಯ ಪುತ್ರಃ ಶಾತವನೇಯಃ | ನೂರು ಯಾಗಗಳನ್ನು ಮಾಡಿದ ಶತವನಿ ಮಹರ್ಷಿಯ ಪುತ್ರನು ಶಾತವನೇಯನು.

ಪುರುಣೇಥೇ—ಬಹುಜನರಿಗೆ ಮುಖಂಡನಾದವನು—ಅಥವಾ ಪುರುಣೇಥನೆಂಬ ರಾಜನು ಎಂದು ಎರಡರ್ಥವನ್ನೂ ಸೂಚಿಸಿದ್ದಾರೆ.

|| ವ್ಯಾಕರಣಪ್ರಕ್ರಿಯಾ ||

ಭರದ್ವಾಜೇಷು—ಭರಂತಿ ಪೋಷಯಂತಿ ಭೋಕ್ತೃನ್ ಇತಿ ಭರಂತಃ. ಡುಭೃಞ್ ಭರಣೇ ಧಾತು. ಲಡರ್ಥದಲ್ಲಿ ಶತೃ ಪ್ರತ್ಯಯ. ಭರಂತಃ ವಾಜಾಃ ಯೇಷು ತೇ ಭರದ್ವಾಜಾಃ ತೇಷು. ಬಹುವ್ರೀಹಿಯಲ್ಲಿ **ಬಹುವ್ರೀಹೌಪ್ರಕೃತ್ಯಾ ಪೂರ್ವಪದಮ್** ಎಂಬುದರಿಂದ ಪೂರ್ವಪದಪ್ರಕೃತಿಸ್ವರವು (ಆದ್ಯುದಾತ್ತ) ಪ್ರಾಪ್ತವಾದರೆ ಮರುದ್ವೃಧಾದಿಯಲ್ಲಿ ಸೇರಿರುವುದರಿಂದ **ಪೂರ್ವಪದಾಂತೋದಾತ್ತಸ್ವರ** ಬರುತ್ತದೆ.

ಯೆಜತಃ—ಯಜ ದೇವಪೂಜಾಸಂಗತಿಕರಣದಾನೇಷು ಧಾತು. ಇದಕ್ಕೆ **ಭೃಮೃ ದೃಶಿ ಯಜಿ ಪರ್ಯ ಪಚ್ಯ ಮಿತ ಮಿನ ಮಿಹಯೋರ್ಭ್ಯೋಽತಚ್** (ಉ. ಸೂ. ೩ ೪೦) ಎಂಬುದರಿಂದ ಅತಚ್ ಪ್ರತ್ಯಯ. **ಚಿತಃ** ಎಂಬುದರಿಂದ ಅಂತೋದಾತ್ತಸ್ವರ ಬರುತ್ತದೆ.

ವಿಭಾವಾ—ಅತೋಮನಿನ್ ಕ್ವನಿಬ್ವನಿಬಶ್ಚ (ಪಾ. ಸೂ. ೩-೨-೭೪) ಎಂಬುದರಿಂದ ವನಿಪ್ ಪ್ರತ್ಯಯ. ವಿಭಾವನ್ ಶಬ್ದವಾಗುತ್ತದೆ. ಅದು ಪಿತ್ತಾದುದರಿಂದ ಅನುದಾತ್ತವಾಗುವುದರಿಂದ ಧಾತುಸ್ವರ ಉಳಿಯುತ್ತದೆ. ಪ್ರಥಮಾ ಸು ಪರವಾದಾಗ **ಸರ್ವನಾಮಸ್ಥಾನೇಚಾಸಂಬುದ್ಧೌ** ಎಂಬುದರಿಂದ ಉಪಧಾ ದೀರ್ಘ. **ಹಲ್ಙ್ಯಾಭ್ಯೋ**—ಸೂತ್ರದಿಂದ ಸುಲೋಪ. **ನಲೋಪಃಪ್ರಾತಿ**—ಸೂತ್ರದಿಂದ ನಕಾರಲೋಪ.

ಶಾತವನೇಯೇ—**ಇನ್ ಸರ್ವಧಾತುಭ್ಯಃ** (ಉ. ಸೂ. ೪-೧೧೭) ಎಂಬುದರಿಂದ ಇನ್ ಪ್ರತ್ಯಯ. ಶತವನಿ ಶಬ್ದವಾಗುತ್ತದೆ. **ಇತಶ್ಚಾನಿಙಃ** (ಪಾ. ಸೂ. ೪-೧-೧೫೨) ಎಂಬುದರಿಂದ ಙಿಙ್ ವ್ಯತಿರಿಕ್ತ ಇಕಾರಾಂತವಾದುದರಿಂದ ಢಕ್ ಪ್ರತ್ಯಯ. ಢಕ್ ಕಿತ್ತಾದುದರಿಂದ **ಕಿತಿಚ** (ಪಾ. ಸೂ. ೭-೨-೧೧೮) ಎಂಬುದರಿಂದ ಆದಿವೃದ್ಧಿ. **ಆಯನೇಯೀ**—ಸೂತ್ರದಿಂದ ಢಕ್ಕೆ ಏಯಾದೇಶ. ಶಾತವನೇಯ ಶಬ್ದವಾಗುತ್ತದೆ. **ಕಿತಃ** (ಪಾ. ಸೂ. ೬ ೧-೧೬೫) ಎಂಬುದರಿಂದ ಅಂತೋದಾತ್ತಸ್ವರ ಬರುತ್ತದೆ. ಸಪ್ತಮೀ ಏಕವಚನಾಂತರೂಪ.

ಶತಿನೀಭಿಃ—ಶತ ಶಬ್ದದ ಮೇಲೆ ಮತ್ವರ್ಥದಲ್ಲಿ (ತತ್‌ಅಸ್ಯ ಅಸ್ತಿ) ಇನಿ ಪ್ರತ್ಯಯ. **ಯಸ್ಯೇತಿಚ** ಎಂಬುದರಿಂದ ಅಕಾರಕ್ಕೆ ಲೋಪ. ಶತಿನ್ ಶಬ್ದವಾಗುತ್ತದೆ. ನಾಂತವಾದುದರಿಂದ **ಸ್ತ್ರೀತ್ವವಿವಕ್ಷಾಯಾಮಾಡಿದಾಗ ಋನ್ನೇಭ್ಯೋಙೀಪ್** ಎಂಬುದರಿಂದ ಙೀಪ್ ಪ್ರತ್ಯಯ. ಙೀಪ್ ಪಿತ್ತಾದುದರಿಂದ ಅನುದಾತ್ತ. ಆಗ ಇನಿಪ್ರತ್ಯಯದ ಸ್ವರ ಉಳಿಯುವುದರಿಂದ ತಕಾರೋತ್ತರ ಇಕಾರವು ಉದಾತ್ತವಾಗುತ್ತದೆ. ತೃತೀಯಾ ಬಹುವಚನಾಂತರೂಪ.

ಪುರುಣೇಥೇ—ಪುರು ಎಂಬ ಪೂರ್ವಪದದಲ್ಲಿರುವ ನಿಮಿತ್ತವನ್ನು(ರೇಫ)ಪರಿ **ಪೂರ್ವಪದಾತ್ ಸಂಜ್ಞಾಯಾಮಗಃ** (ಪಾ. ಸೂ. ೮-೪-೩) ಎಂಬುದರಿಂದ ಉತ್ತರಪದದಲ್ಲಿರುವ ನಕಾರಕ್ಕೆ ಣತ್ವ.

ಜರತೇ—ಜೃಷ್ ವಯೋಹಾನೌ ಧಾತು. ಇಲ್ಲಿ ಸ್ತುತಿಕರ್ಮದಲ್ಲಿ ಪ್ರಯುಕ್ತವಾಗಿದೆ. **ವ್ಯತ್ಯಯೋ ಬಹುಲಂ** ಎಂಬುದರಿಂದ ಕರ್ಮಣಿಯಲ್ಲಿ ಕರ್ತೃ ಪ್ರತ್ಯಯ. ಲಟ್ ಪ್ರಥಮಪುರುಷ ಏಕವಚನದಲ್ಲಿ **ಟಿತ-ಆತ್ಮನೇಪದಾನಾಂ** ಸೂತ್ರದಿಂದ ಏತ್ವ. **ಕರ್ತರಿಶಪ್** ಸೂತ್ರದಿಂದ ಶಪ್ ವಿಕರಣ. ತನ್ನಿಮಿತ್ತವಾಗಿ ಧಾತು ವಿನ ಇಕಿಗೆ ಗುಣ. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

ಸೂನೃತಾವಾನ್—ಸೂನೃತಾ ಸತ್ಯಾ ವಾಕ್ ಅಸ್ಯ ಅಸ್ತಿ ಇತಿ. **ತದಸ್ಯಾಸ್ತಿ**—ಸೂತ್ರದಿಂದ ಮತುಪ್. ಅಕಾರದ ಪರದಲ್ಲಿ ಬಂದುದರಿಂದ **ಮಾದುಪಧಾಯಾಶ್ಚ**—ಸೂತ್ರದಿಂದ ಮಕಾರಕ್ಕೆ ವಕಾರಾದೇಶ. ಸು ಪರವಾದಾಗ **ಅತ್ಸಂಜ್ಞಕಸ್ಯ** ಸೂತ್ರದಿಂದ ಉಪಧಾದೀರ್ಘ. ಉಗಿತ್ತಾದುದರಿಂದ ನುಮಾಗಮ. ತಲೋಪವಸಿದ್ಧವಾದುದರಿಂದ ನಲೋಪ ಬರುವುದಿಲ್ಲ.



ಆರವತ್ತನೆಯ ಸೂಕ್ತವು

॥ ಸಾಯಣಭಾಷ್ಯಂ ॥

ವಹ್ನಿಮಿತಿ ಪಂಚರ್ಚಂ ತೃತೀಯಂ ಸೂಕ್ತಂ ನೋಧಸ ಆರ್ಷಂ ತ್ರೈಷ್ಟುಭಮಾಗ್ನೇಯಂ । ಅನುಕ್ರಾಂತಂ ಚ । ವಹ್ನಿಂ ಪಂಚೇತಿ ॥ ಪ್ರಾತರನುವಾಕಸ್ಯಾಗ್ನೇಯೇ ಕ್ರತೌ ತ್ರೈಷ್ಟುಭೇ ಛಂದಸೀದಂ ಸೂಕ್ತಮಾಶ್ವಿನೇ ಶಸ್ತ್ರೇ ಚ । ತಥಾ ಚ ಸೂತ್ರಿತಂ । ವಹ್ನಿಂ ಯಶಸಮುಪ ಪ್ರ ಜಿನ್ವನ್ನಿತಿ ತ್ರೀಣಿ । ಆ. ೪-೧೩ । ಇತಿ ॥

ಅನುವಾದವು—**ವಹ್ನಿಂ** ಎಂಬ ಈ ಸೂಕ್ತವು ಹನ್ನೊಂದನೆಯ ಅನುವಾಕದಲ್ಲಿ ಮೂರನೆಯ ಸೂಕ್ತವು. ಇದರಲ್ಲಿ ಐದು ಋಕ್ಕುಗಳಿರುವವು. ಈ ಸೂಕ್ತಕ್ಕೆ ನೋಧಾಃ ಎಂಬುವನು **ಋಷಿ**ಯು ಅಗ್ನಿಯು ದೇವತೆಯು. ತ್ರಿಷ್ಟುಪ್ ಛಂದಸ್ಸು. ಅನುಕ್ರಮಣಿಕೆಯಲ್ಲಿ **ವಹ್ನಿಂ ಪಂಚೇತಿ** ಎಂದು ಹೇಳಿರುವುದು. ಪ್ರಾತರನುವಾಕಮಂತ್ರಪಠನಕಾಲದಲ್ಲಿ ಆಗ್ನೇಯಕ್ರತುಸಂಬಂಧವಾದ ತ್ರಿಷ್ಟುಪ್ ಛಂದಸ್ಸಿನ ಋಕ್ಕಿಗಳಿಗಾಗಿಯೂ, ಆಶ್ವಿನಶಸ್ತ್ರ ಮಂತ್ರಗಳಿಗಾಗಿಯೂ ಈ ಸೂಕ್ತದ ವಿನಿಯೋಗವಿರುವುದೆಂದು ಆಶ್ವಲಾಯನಶ್ರೌತಸೂತ್ರದ **ವಹ್ನಿಂ ಯಶಸಮುಪ ಪ್ರ ಜಿನ್ವನ್ನಿತಿ ತ್ರೀಣಿ** ಎಂಬ ಸೂತ್ರದಿಂದ ನಿರ್ದೇಶಿಸಲ್ಪಟ್ಟಿರುವುದು. (ಆ. ೪-೧೩)

ಸೂಕ್ತ—೬೦

ಮಂಡಲ—೧ ॥ ಅನುವಾಕ—೧೧ । ಸೂಕ್ತ—೬೦ ॥
ಅಷ್ಟಕ—೧ ॥ ಅಧ್ಯಾಯ—೪ ॥ ವರ್ಗ— ೨೬ ॥

ಸೂಕ್ತದಲ್ಲಿರುವ ಋಕ್ಸಂಖ್ಯೆ— ೫
ಋಷಿಃ—ನೋಧಾ ಗೌತಮಃ ॥
ದೇವತಾ—ಅಗ್ನಿಃ ।
ಛಂದಃ—ತ್ರಿಷ್ಟುಪ್ ।

॥ ಸಂಹಿತಾಪಾಠಃ ॥

ವಹ್ನಿಂ ಯಶಸಂ ವಿದಥಸ್ಯ ಕೇತುಂ ಸುಪ್ರಾವ್ಯಂ ದೂತಂ ಸದ್ಯೋಽರ್ಥಂ ।
ದ್ವಿಜನ್ಮಾನಂ ರಯಿಮಿವ ಪ್ರಶಸ್ತಂ ರಾತಿಂ ಭರದ್ಭೃಗವೇ ಮಾತರಿಶ್ವಾ
॥ ೧ ॥

॥ ಪದಪಾಠಃ ॥

ವಹ್ನಿಂ । ಯಶಸಂ । ವಿದಥಸ್ಯ । ಕೇತುಂ । ಸುಪ್ರಾವ್ಯಂ । ದೂತಂ । ಸದ್ಯಃ-
ಅರ್ಥಂ ।
ದ್ವಿಜನ್ಮಾನಂ । ರಯಿಂ-ಇವ । ಪ್ರಶಸ್ತಂ । ರಾತಿಂ । ಭರತ್ । ಭೃಗವೇ । ಮಾ-
ತರಿಶ್ವಾ ॥ ೧ ॥

॥ ಸಾಯಣಭಾಷ್ಯ ॥

ವಹ್ನಿಂ ಹವಿಷಾಂ ವೋಢಾರಂ ಯಶಸಂ ಯಶಸ್ವಿನಂ ವಿದಥಸ್ಯ ಕೇತುಂ ಯಜ್ಞಸ್ಯ ಪ್ರಕಾಶ-
ಯಿತಾರಂ ಸುಪ್ರಾವ್ಯಂ ಸುಷ್ಠು ಪ್ರಕರ್ಷೇಣ ರಕ್ಷಿತಾರಂ ದೂತಂ ದೇವೈರ್ಹವಿರ್ವಹನಲಕ್ಷಣೇ ದೂತ್ಯೇ
ನಿಯುಕ್ತಂ । ಸದ್ಯೋ ಅರ್ಥಂ । ಯದಾ ಹವೀಂಷಿ ಜುಹ್ವತಿ ಸದ್ಯಸ್ತದಾನೀಮೇವ ಹವಿರ್ಭಿಃ ಸಹ
ದೇವಾನ್ಗಂತಾರಂ । ಯದ್ವಾ । ಸದ್ಯೋಽರ್ಥಮರಣಂ ಗಮನಂ ಯಸ್ಯ ತಂ । ದ್ವಿಜನ್ಮಾನಂ । ದ್ವಯೋ-

ದ್ಯಾವಾಪೃಥಿವ್ಯೋರರಣ್ಯೋರ್ವಾ ಜಾಯಮಾನಂ ರಯಿಮಿವ ಧನಮಿವ ಪ್ರಶಸ್ತಂ ಪ್ರಖ್ಯಾತಂ । ಏವಂಭೂತಮಗ್ನಿಂ ಮಾತರಿಶ್ವಾ ವಾಯುರ್ಭೃಗವ ಏತತ್ಸಂಜ್ಞಕಾಯೈ ಮಹರ್ಷಯೇ ರಾತಿಂ ಭರತ್ । ಮಿತ್ರಮಹರತ್ । ಅಕರೋದಿತ್ಯರ್ಥಃ । ರಾತಿನಾ ಸಂಭಾಷ್ಯೇತ್ಯತ್ರೈ । ಆಪ. ಗೃ ೧೨-೧೪ । ರಾತಿರ್ಮಿತ್ರೈಮಿತಿ ಕಪರ್ದಿನೋಕ್ತಂ । ರಾತಿಃ ಪುತ್ರ ಇತ್ಯೇಕೇ । ಏತದರ್ಥಪ್ರತಿಪಾದಕಂ ಮಂತ್ರಾಂತರಂ ಚ ಭವತಿ । ರಾತಿಂ ಭೃಗೂಣಾಮುಶಿಜಂ ಕವಿಕ್ರತುಂ । ಋಗ್ವೇ. ೩-೨-೪ । ಇತಿ ॥ ವಹ್ನಿಂ । ವಹಿಶ್ರಿಯುಶ್ರುಗ್ಲಾ-ಹಾತ್ವರಿಭ್ಯೋ ನಿದಿತಿ ವಹತೇರ್ನಿಪ್ರತ್ಯಯಃ । ನಿದ್ವದ್ಭಾವಾದಾದ್ಯುದಾತ್ತತ್ವಂ । ಯೆಶಸಂ । ಯೆಶಸ್-ಶಬ್ದಾದುತ್ತರಸ್ಯ ವಿನೋ ಲುಕ್ । ವ್ಯತ್ಯಯೇನಾಂತೋದಾತ್ತತ್ವಂ । ಯದ್ವಾ । ಅರ್ಶಆದಿತ್ವಾದಚ್ । ಸ್ವರಃ ಪೂರ್ವವತ್ । ಸುಪ್ರಾವ್ಯಂ । ಸುಷ್ಠು ಪ್ರಕರ್ಷೇಣಾವತಿ ರಕ್ಷತೀತಿ ಸುಪ್ರಾವೀಃ । ಉಪಸರ್ಗದ್ವ್ಯೋಃಪಸೃಷ್ಟಾದವತೇರವಿತ್ರಾಸ್ತೃತಂತ್ರಿಭ್ಯ ಈಃ । ಉ. ೩-೧೫೮ । ಇತೀಕಾರಪ್ರತ್ಯಯಃ । ವಾ ಛಂದಸೀತ್ಯಮಿ ಪೂರ್ವ ಇತ್ಯಸ್ಯ ವಿಕಲ್ಪೇ ಸತಿ ಯೆಣಾದೇಶಃ । ಉದಾತ್ತಸ್ವರಿತಯೋರ್ಯೆಣಃ ಇತಿ ಸ್ವರಿತತ್ವಂ । ಸದ್ಯೋಽರ್ಥಂ । ಉಷಿಕುಷಿಗಾರ್ತಿಭ್ಯಸ್ಥನ್ನಿತ್ಯರ್ತೇಃ ಕರ್ತರಿ ಥನ್ಪ್ರತ್ಯಯಃ । ಸದ್ಯ ಏವಾರ್ಥೋ ಗಂತಾ ಸದ್ಯೋಽರ್ಥಃ । ಅವ್ಯಯಪೂರ್ವಪದಪ್ರಕೃತಿಸ್ವರತ್ವಂ । ಯದಿ ತ್ವವ್ಯಯೇ ಇಳಿಮ್ಯನಿಸಾತನಾಮಿತಿ ವಕ್ತವ್ಯಂ । ಪಾ. ೬-೨-೨-೩ । ಇತ್ಯವ್ಯಯಗ್ರಹಣೇನ ತ್ರಿತಯಂ ಗೃಹ್ಯೇತ ತರ್ಹಿ ಬಹುವ್ರೀಹಿ-ಸ್ವರೋ ಭವಿಷ್ಯತಿ । ಮಾತರಿಶ್ವಾ । ಸರ್ವನಿರ್ಮಾಣಾಹೇತುತ್ವಾನ್ಮಾತಾಂತರಿಕ್ಷಂ । ಶ್ವಸಿತಿರತ್ರ ಗತಿಕರ್ಮಾ। ಮಾತರ್ಯಂತರಿಕ್ಷೇ ಶ್ವಸಿತಿ ಗಚ್ಛತೀತಿ ಮಾತರಿಶ್ವಾ । ಶ್ವನ್ನುಕ್ಷನ್ನಿತ್ಯಾದೌ ನಿಪಾತನಾದ್ಡೂಪಸಿದ್ಧಿಃ । ಯದ್ವಾ । ಮಾತರ್ಯಂತರಿಕ್ಷೇ ಶ್ವಾಶ್ವಸತಿ ಗಚ್ಛತೀತಿ ಮಾತರಿಶ್ವಾ । ಅಸ ಗತಿದೀಪ್ತ್ಯಾದಾನೇಷ್ವಿತ್ಯಸ್ಮಾದೌಣಾದಿಕೋ ಡ್ವನಪ್ರತ್ಯಯಃ । ಏತಚ್ಚ ಯಾಸ್ಕೇನೋಕ್ತಂ ॥ ನಿ. ೭-೨೬ ॥

॥ ಪ್ರತಿಪದಾರ್ಥ ॥

ವಹ್ನಿಂ—ಹವಿಸ್ಸನ್ನು ವಹಿಸುವವನೂ । **ಯೆಶಸಂ**—ಪ್ರಖ್ಯಾತನಾದವನೂ। **ವಿದಥಸ್ಯ**—ಯಜ್ಞಕ್ಕೆ । **ಕೇತುಂ**—ಪ್ರಕಾಶಕನಾದವನೂ । **ಸುಪ್ರಾವ್ಯಂ**—ಚೆನ್ನಾಗಿ ಕಾಪಾಡುವವನೂ । **ದೂತಂ** (ಹವಿಸ್ಸನ್ನು ವಹಿಸುವ) ದೂತನಾದವನೂ । **ಸದ್ಯೋಽರ್ಥಂ**—ತತ್ಕ್ಷಣವೇ (ದೇವತೆಗಳಿಗೆ) ಹವಿಸ್ಸನ್ನು ಒದಗಿಸುವವನೂ । **ದ್ವಿಜನ್ಮಾನಂ**—ದ್ಯಾವಾಪೃಥಿವಿಗಳಿಬ್ಬರಿಂದಲೂ ಅಥವಾ ಅರಣಿ ದ್ವಯದಿಂದಲೂ ಉತ್ಪನ್ನನಾದವನೂ । **ರಯಿಮಿವ**—ಧನದಂತೆ । **ಪ್ರಶಸ್ತಂ**—ಅಮೌಲ್ಯವಾದವನೂ ಆದ ಅಗ್ನಿಯನ್ನು । **ಮಾತರಿಶ್ವಾ**—ವಾಯುವು । **ಭೃಗವೇ**—ಭೃಗುಋಷಿಗೆ । **ರಾತಿಂ**—ಸ್ನೇಹಿತನಂತೆ । **ಭರತ್**—ಕರಿತಂದನು (ಸ್ನೇಹಿತನನ್ನಾಗಿ ಮಾಡಿದನು) ॥

॥ ಭಾವಾರ್ಥ ॥

ಹವಿರ್ವಾಹಕನೂ, ಪ್ರಖ್ಯಾತನೂ, ಯಜ್ಞದಪ್ರಕಾಶಕನೂ, ಒಳ್ಳೆಯರಕ್ಷಕನೂ, ದೇವತೆಗಳಿಗೆ ಒಡನೆಯೇ ಹವಿಸ್ಸನ್ನು ವಹಿಸುವ ದೂತನೂ, ದ್ಯಾವಾ ಪೃಥಿವಿಗಳಿಂದ ಅಥವಾ ಅರಣಿದ್ವಯದಿಂದ ಉತ್ಪನ್ನನಾದವನೂ, ಐಶ್ವರ್ಯದಂತೆ ಅಮೂಲ್ಯವಾದವನೂ ಆದ ಅಗ್ನಿಯನ್ನು ವಾಯುವು ಕರಿತಂದು ಭೃಗುಮಹರ್ಷಿಗೆ ಸ್ನೇಹಿತನನ್ನಾಗಿ ಮಾಡಿದನು.

English Translation.

Matariswan brought as a friend to Bhrigu the celebrated Vanhi, (Agni) the illuminator of sacrifices, the careful protector (of his worshippers) the swift-coursing messenger (of the gods) the offspring of two parents, highly spoken of like wealth.

॥ ವಿಶೇಷ ವಿಷಯಗಳು ॥

ಯಶಸಂ—ಯಶಸ್ಸುಳ್ಳವನು ಎಂಬರ್ಥಕೊಡುವ ಪ್ರತ್ಯಯವಿಲ್ಲದಿದ್ದರೂ ಇಲ್ಲಿ **ಯಶಸ್ವಿನಂ** ಯಶಸ್ವಿಯು ಎಂದರ್ಥ ಹೇಳಬೇಕು.

ಕೇತುಂ—ಯಜ್ಞವನ್ನು ಪ್ರಕಾಶಗೊಳಿಸುವವನು ಅಗ್ನಿ. ಕೇತುಶಬ್ದಕ್ಕೆ ಧ್ವಜವೆಂಬ ಅರ್ಥವಿರುವುದರಿಂದ ಯಜ್ಞಕ್ಕೆ ಅಗ್ನಿಯು ಧ್ವಜಪ್ರಾಯನು ಎಂದರ್ಥ.

ಸದ್ಯೋಅರ್ಥಂ—**ಸದ್ಯಃ ಅರ್ಥಂ ಅರಣಂ ಗಮನಂ ಯಸ್ಯ ತಂ ಅಥವಾ ಸದ್ಯೋ ಅರ್ಥಂ ಯದಾ ಹವೀಂಷಿ ಜುಹ್ವತಿ ಸದ್ಯಸ್ತದಾನೀಮೇವ ಹವಿರ್ಭಿಸ್ಸಹ ದೇವಾನ್ ಗಂತಾರಂ** ದೇವತೆಗಳಿಗೆ ಯಜ್ಞದಲ್ಲಿ ಕೊಟ್ಟ ಹವಿಸ್ಸನ್ನು ಒಡನೆಯೇ ದೇವತೆಗಳಿಗೆ ತಲಪಿಸುವವನು ಅಥವಾ ಹವಿರ್ದ್ರವ್ಯಸಮೇತನಾಗಿ ಸದಾ ಸಂಚರಿಸುವವನು ಎಂದು ಎರಡು ರೀತಿಯಲ್ಲಿಯೂ ಅರ್ಥಮಾಡಿದ್ದಾರೆ.

ದ್ವಿಜನ್ಮಾನಂ—ದ್ಯಾವಾಪೃಥಿವಿಗಳಿಂದ, ಅಥವಾ ಎರಡು ಅರಣಿಗಳಿಂದ ಹುಟ್ಟಿದ ಅಗ್ನಿಯನ್ನು ಎಂದರ್ಥ.

ಭೃಗವೇ—ಭೃಗುವೆಂಬ ಹೆಸರಿನ ಮಹರ್ಷಿಗೆ.

ರಾತಿಂ ಭರತ್—ಸ್ನೇಹಿತನನ್ನಾಗಿ ಮಾಡಿದನು. ರಾತಿನಾ ಸಂಭಾಷ್ಯ (ಆಪ. ಗೃ. ೧೨ ೧೪) ಎಂಬ ಸ್ಥಳದಲ್ಲಿ ರಾತಿಶಬ್ದಕ್ಕೆ ಮಿತ್ರನೆಂಬರ್ಥವನ್ನು ಕಪರ್ದಿಮಹರ್ಷಿಗಳು ಹೇಳಿರುವರು. ಮತ್ತೆ ಕೆಲವರು ರಾತಿ ಶಬ್ದಕ್ಕೆ ಪುತ್ರನೆಂದು ಅರ್ಥಮಾಡಿರುವರು. ಈ ಅರ್ಥವನ್ನು ಸೂಚಿಸುವ ಮಂತ್ರವು **ರಾತಿಂ ಭೃಗೂಣಾ ಮುಶಿಜಂ ಕವಿಕ್ರತುಂ** (ಋ. ಸಂ. ೩-೨-೪) ಋಗ್ವೇದದಲ್ಲಿದೆ. ಭೃಗುವಂಶದಲ್ಲಿ ಪುತ್ರನೆನಿಸಿಕೊಂಡಿರುವವನು ಉಶಿಜನು ಎಂದು ಆ ಮಂತ್ರಭಾಗದ ಅರ್ಥ.

ಮಾತರಿಶ್ವಾ—**ಸರ್ವನಿರ್ಮಾಣಹೇತುತ್ವಾತ್ ಮಾತಾ ಅಂತರಿಕ್ಷಂ ಶ್ವಸಿತಿರತ್ರ ಗತಿಕರ್ಮಾ**—ಮಾತರಿ ಅಂತರಿಕ್ಷೇ ಶ್ವಸಿತಿ ಗಚ್ಛತೀತಿ ಮಾತರಿಶ್ವಾ. ಅಂತರಿಕ್ಷದಲ್ಲಿ ಸಂಚರಿಸುವವನು ವಾಯು ಎಂದರ್ಥ.

॥ ವ್ಯಾಕರಣಪ್ರಕ್ರಿಯಾ ॥

ವಹ್ನಿಮ್—ವಹ ಪ್ರಾಪಣೇ ಧಾತು. ಇದಕ್ಕೆ **ವಹಿಶ್ರಿಯುಶ್ರುಗ್ಲಾಹಾತ್ವರಿಭ್ಯೋ ನಿತ್** (ಉ. ಸೂ. ೩-೪೯) ಎಂಬುದರಿಂದ ನಿ ಪ್ರತ್ಯಯ. ನಿತ್ವವನ್ನು ಅತಿದೇಶ ಮಾಡಿರುವುದರಿಂದ **ಞ್ನಿತ್ಯಾದಿ-ರ್ನಿತ್ಯಮ್** ಎಂಬುದರಿಂದ ಆದ್ಯುದಾತ್ತಸ್ವರ ಬರುತ್ತದೆ. ದ್ವಿತೀಯಾ ಏಕವಚನಾಂತರೂಪ.

ಯಶಸಮ್ — ಯಶಃ ಅಸ್ಯ ಅಸ್ತಿ ಇತಿ ಯಶಸ್ವೀ. **ಅಸ್ಮಾಯಾಮೇಧಾಸ್ರಜೋವಿನಿಃ** (ಪಾ. ಸೂ. ೫-೨-೧೨೧) ಎಂಬುದರಿಂದ ಅಸಂತವಾದುದರಿಂದ **ವಿನಿ** ಪ್ರತ್ಯಯ. ಇಲ್ಲಿ ಛಾಂದಸವಾಗಿ ವಿನಿಗೆ

ಲುಕ್ ಬಂದಿದೆ. ವೃತ್ಯಯದಿಂದ ಅಂತೋದಾತ್ತವಾಗುತ್ತದೆ. ಅಥವಾ ಅರ್ಶ ಆದಿಗಣದಲ್ಲಿ ಸೇರಿರುವುದರಿಂದ **ಅರ್ಶ ಆದಿಭ್ಯೋ೭ಚ್** (ಪಾ. ಸೂ. ೫-೨-೧೨೭) ಎಂಬುದರಿಂದ ಮತ್ವರ್ಥದಲ್ಲಿ ಅಚ್ ಪ್ರತ್ಯಯ. ಆಗ **ಚಿತಃ** ಎಂಬುದರಿಂದ ಅಂತೋದಾತ್ತಸ್ವರ ಬರುತ್ತದೆ.

ಸುಪ್ರಾವ್ಯಮ್—ಸುಷ್ಠು ಪ್ರಕರ್ಷೇಣ ಅವತಿ ರಕ್ಷತಿ ಇತಿ ಸುಪ್ರಾವೀಃ. ಸು ಮತ್ತು ಪ್ರ ಎಂಬ ಎರಡು ಉಪಸರ್ಗಗಳು ಉಪಪದವಾಗಿರುವಾಗ **ಆವಿತೃ ಸ್ತೃತಂತ್ರಿಭ್ಯ ಈಃ** (ಉ. ಸೂ. ೩-೪೩೮) ಎಂಬುದರಿಂದ **ಈ**ಕಾರರೂಪ ಪ್ರತ್ಯಯ. ಸುಪ್ರಾವೀ ಶಬ್ದವಾಗುತ್ತದೆ. ಇದಕ್ಕೆ ದ್ವಿತೀಯಾ ಏಕವಚನ ಅಮ್ ಪರವಾದಾಗ **ವಾ ಛಂದಸಿ** (ಪಾ. ಸೂ. ೬-೧-೧೦೬) ಎಂಬುದರಿಂದ **ಅಮಿಪೂರ್ವಃ** ಸೂತ್ರದಿಂದ ಬರುವ **ಪೂರ್ವರೂಪವು** ವಿಕಲ್ಪವೆಂದುದರಿಂದ ಯಣಾದೇಶ. ಉದಾತ್ತಸ್ಥಾನದಲ್ಲಿ ಯಣಾದೇಶ ಬಂದು ಅದರ ಪರದಲ್ಲಿ ವಿಭಕ್ತಿಯು ಅಮ್ ಬಂದುದರಿಂದ **ಉದಾತ್ತ ಸ್ವರಿತಯೋರ್ಯಣಃ ಸ್ವರಿತೋನುದಾತ್ತಸ್ಯ** (ಪಾ. ಸೂ. ೮-೪-೪) ಎಂಬುದರಿಂದ ವಿಭಕ್ತಿಗೆ ಸ್ವರಿತ ಸ್ವರ ಬರುತ್ತದೆ.

ಸದ್ಯೋ೭ರ್ಥಮ್—ಋ ಗತೌ ಧಾತು. ಇದಕ್ಕೆ ಕರ್ತೃರ್ಥದಲ್ಲಿ **ಉಷಿಕುಷಿಗಾರ್ತಿಭ್ಯಸ್ಥನ್** (ಉ. ಸೂ. ೨-೧೬೧) ಎಂಬುದರಿಂದ ಥನ್ ಪ್ರತ್ಯಯ. ತನ್ನಿಮಿತ್ತವಾಗಿ ಧಾತುವಿಗೆ ಗುಣ. ಅರ್ಥಶಬ್ದವಾಗುತ್ತದೆ- ಸದ್ಯ ಏವ ಅರ್ಥಃ ಗಂತಾ ಸದ್ಯೋ ಅರ್ಥಃ (ಬೇಗನೆ ಹೊಂದುವವನು) **ತತ್ಪುರುಷೇತುಲ್ಯಾರ್ಥ** (ಪಾ. ಸೂ. ೬-೨-೨) ಎಂಬುದರಿಂದ ಅವ್ಯಯಪೂರ್ವಪದ ಪ್ರಕೃತಿಸ್ವರ ಬರುತ್ತದೆ. ಯದ್ಯಪಿ ಆ ಸೂತ್ರದಲ್ಲಿ ಅವ್ಯಯ ಪದದಿಂದ **ಅವ್ಯಯೇ ನಞ್ಕು ನಿಪಾತಾನಾಮಿತಿವಕ್ತವ್ಯಮ್** (ಪಾ. ಸೂ. ೬-೨-೨-೩) ಎಂದು ಕೇವಲ ಮೂರನ್ನು ಮಾತ್ರ ತೆಗೆದುಕೊಳ್ಳಬೇಕು ಎಂದು ನಿಯಮ ಮಾಡಿರುತ್ತಾರೆ. ಆಗ ಸದ್ಯಃ ಎಂಬುದನ್ನು ತೆಗೆದುಕೊಳ್ಳಲಾಗುವುದಿಲ್ಲ. ಆಗ ಬಹುವ್ರೀಹಿ ಸಮಾಸಮಾಡಬೇಕು. ಸದ್ಯಃ ಅರ್ಥಃ ಯಸ್ಯ ಸಃ ಎಂದು ವಿಗ್ರಹ. ಬಹುವ್ರೀಹೌ **ಪ್ರಕೃತ್ಯಾ ಪೂರ್ವಪದಮ್** ಎಂಬುದರಿಂದ ಪೂರ್ವಪದ ಪ್ರಕೃತಿಸ್ವರ ಬರುತ್ತದೆ.

ಮಾತರಿಶ್ವಾ—ಶ್ವಸ ಪ್ರಾಣನೇ ಧಾತು. ಅದಾದಿ. ಇಲ್ಲಿ ಗತ್ಯರ್ಥದಲ್ಲಿದೆ. ಮಾತರಿ ಅಂತರಿಕ್ಷೇ ಶ್ವಸಿತಿ ಗಚ್ಛತಿ ಇತಿ ಮಾತರಿಶ್ವಾ. **ಶ್ವನ್ಮ್ಷ್ಟನ್** (ಉ. ಸೂ. ೧-೧೫೬) ಎಂಬುದರಿಂದ ನಿಪಾತಿತವಾದುದರಿಂದ ರೂಪಸಿದ್ಧವಾಗುತ್ತದೆ. ಅಥವಾ ಮಾತರಿ ಅಂತರಿಕ್ಷೇ ಶ್ವಸಿತಿ ಗಚ್ಛತಿ ಇತಿ ಮಾತರಿಶ್ವಾ. ಅಸ ಗತಿದೀಪ್ತ್ಯಾದಾನೇಷು ಧಾತು. ಇದಕ್ಕೆ ಔಣಾದಿಕವಾದ ಡ್ವನ್ ಪ್ರತ್ಯಯ. ಡಿತ್ ಸಾಮರ್ಥ್ಯದಿಂದ ಟಿಗೆ ಲೋಪ. ಮಾತರಿಶ್ವನ್ ಶಬ್ದವಾಗುತ್ತದೆ. ಇದು ಯಾಸ್ಕರಿಂದ ಉಕ್ತವಾಗಿದೆ. (ನಿರು. ೭-೨೬)

ಭರತ್—ಹೃಞ್ ಹರಣೇ ಧಾತು. ಲಙ್ ಪ್ರಥಮಪುರುಷ ಏಕವಚನದಲ್ಲಿ **ತಿಪ್** ಪ್ರತ್ಯಯ. **ಇತಶ್ಚ** ಸೂತ್ರದಿಂದ ಇಕಾರ ಲೋಪ. ಶಪ್ ವಿಕರಣ. ಶಪ್ ನಿಮಿತ್ತವಾಗಿ ಧಾತುವಿಗೆ ಗುಣ. **ಬಹುಲಂ ಛಂದಸ್ಯಮಾಙ್ಯೋಗೇ೭ಪಿ** ಎಂಬುದರಿಂದ ಅಡಾಗಮ ಬರುವುದಿಲ್ಲ. **ಹೃಗ್ರಹೋರ್ಭಶ್ಛಂದಸಿ** ಎಂಬುದರಿಂದ ಹಕಾರಕ್ಕೆ ಭಕಾರಾದೇಶ. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

॥ संहितापाठः ॥

अस्य शासुरुभयासः सचन्तेऽ हविष्मन्त उशिजो यो च मर्ताः ।
दिवश्चित्पूर्वो न्यसादि होत्तापृच्छ्यो विश्पतिर्विक्षु वेधाः॥

॥ पदपाठः ॥

अस्य । शासुः । उभयासः । सचन्ते । हविष्मन्तः । उशिजः । यो । च । मर्ताः ।
दिवः । चित् । पूर्वः । नि । असादि । होता । आऽपृच्छ्यः । विश्पतिः । विक्षु । वेधाः ॥ ७ ॥

॥ सायणभाष्यं ॥

शासुः शासितुरस्याग्नेरुभयासः उभयेऽपि देवा मनुष्याश्च । यदा । स्तुतिभिः स्तोतारोऽ यज्ञैर्यजमानाश्चैममग्निं शासितारं सचन्तेऽ । सेवन्ते । उशिजः कामयमाना देवा हविष्मन्तोऽ हविषा युक्ता यो च मर्ता मरणधर्माणोऽ यजमानाः । यदा । उशिज इति मेधाविनामऽ । उशिजोऽ मेधाविनः स्तोतारोऽ हविष्मन्तोऽ हविर्युक्ता मर्ता यजमानाः । किंचायं होता होमनिष्पादकोऽग्निर्दिवश्चित् आदित्यादपि पूर्व उषःसु वर्तमानोऽ भूत्वाग्निहोत्रहोमनिमित्तं विक्षु यजमानेषु न्यसादि । अध्वर्युर्माणाग्न्याधेयतने न्यधायि । स्थापयतेऽ । कीदृशोऽ होता । आपृच्छ्यऽ आ प्रष्टव्यः । पूज्य इत्यर्थः । विश्पतिर्विशां प्रजानां पालयिता वेधाः । विधातामिमतफलस्य कर्ता ॥ शासुः शासु अनुशिष्टौ । तृन्नृचौ शंसिशसिशासिभ्यः संज्ञायां चानिटौ । उ. ३-१४ । इति तृन् । इडागमाभावश्च । षष्ठ्येकवचनेऽ तकारलोपश्छांदसः । नित्त्वादाद्युदात्तत्वं । उशिजः । वशः किच् । उ. ३-३८ । इति वशेरिजिप्रत्ययेऽ । ग्रहिज्यादिना संप्रसारणं । मर्ताः । मृजूष् प्राणत्यागे । असिहसिमृग्रिणाम्यादिना तन्प्रत्ययेऽ । नित्त्वादाद्युदात्तत्वं ।

ಆಪೃಚ್ಛ್ಯಃ । **ಪ್ರಚ್ಛ** ಜೀಪ್ಸಾಯಾಂ । **ಆಙ್ಪೂರ್ವಾದಸ್ಮಾಚ್ಛಂದಸಿ ನಿಷ್ಪ್ರತ್ಯೇತ್ಯಾದೌ** । **ಪಾ** ೩.೧-೧೨೩ । **ಕ್ಯಪ್ಪ್ರತ್ಯಯೋ ನಿಪಾತಿತಃ** । **ಗ್ರಹಿಜ್ಯಾದಿನಾ ಸಂಪ್ರಸಾರಣಂ** । **ಕ್ಯಪಃ ಪಿತ್ತ್ವಾದನುದಾತ್ತತ್ವೇ ಧಾತುಸ್ವರಃ ಶಿಷ್ಯತೇ** । **ವಿಶ್ಪತಿಃ** । **ಪತ್ಯಾವೈಶ್ವರ್ಯೇ** ಇತಿ **ಪೂರ್ವಪದಪ್ರಕೃತಿಸ್ವರತ್ವೇ ಪ್ರಾಪ್ತೇ ಪರಾದಿಶ್ಚಂದಸಿ ಬಹುಲಮಿತ್ಯುತ್ತರಪದಾದ್ಯುದಾತ್ತತ್ವಂ** ॥

॥ ಪ್ರತಿಪದಾರ್ಥ ॥

ಉಶಿಜಃ—(ಸಹಾಯಕ್ಕಾಗಿ) ಅಪೇಕ್ಷಿತರಾದ ದೇವತೆಗಳೂ ಅಥವಾ ಮೇಧಾವಿಗಳಾದ ಸ್ತೋತೃಗಳೂ ಮತ್ತು । **ಹವಿಷ್ಮಂತಃ**—ಹವಿಸ್ಸಿನಿಂದ ಕೂಡಿದ । **ಯೇ ಚ ಮರ್ತಾಃ**—ಮರ್ತ್ಯರಾದ ಯಜಮಾನರೂ ಆದ । **ಉಭಯಾಸಃ**—ಈ ಎರಡು ಗುಂಪಿನವರೂ (ದೇವತೆಗಳೂ ಮಾನವರೂ ಅಥವಾ ಸ್ತೋತೃಗಳೂ, ಯಜಮಾನರೂ ಸಹ) । **ಶಾಸುಃ**—(ಎಲ್ಲರಿಗೂ) ಅಧಿಪತಿಯಾದ । **ಅಸ್ಯ**—ಈ ಅಗ್ನಿಗೆ (ಅಗ್ನಿಯನ್ನು) । **ಸಚಂತೇ**—ಸೇವಿಸುತ್ತಾರೆ (ಅಲ್ಲದೇ) । **ಆಪೃಚ್ಛ್ಯಃ**—ಪೂಜ್ಯನೂ । **ವಿಶ್ಪತಿಃ**—ಪ್ರಜೆಗಳ ಪಾಲಕನೂ । **ವೇಧಾಃ**—ಅಭಿಮತಫಲಗಳ ದಾಯಕನೂ ಮತ್ತು । **ಹೋತಾ**—ಹೋಮಸಂಪಾದಕನೂ ಆದ ಅಗ್ನಿಯು । **ದಿವಶ್ಚಿತ್**—ಸೂರ್ಯನ ಉದಯಕ್ಕಿಂತಲೂ । **ಪೂರ್ವಃ**—ಮುಂಚೆಯೇ (ಉಷಃಕಾಲದಲ್ಲಿಯೇ) । **ನಿಷ್ಟು**—ಯಜಮಾನರಲ್ಲಿ (ಅವರ ನಡುವೆ) । **ನ್ಯಸಾದಿ**—(ಅಧ್ವರ್ಯುವಿನಿಂದ ಅಗ್ನಿಗೃಹದಲ್ಲಿ) ಇಡಲ್ಪಟ್ಟಿರುತ್ತಾನೆ.

॥ ಭಾವಾರ್ಥ ॥

ಮಾನವರಿಂದ ಅಪೇಕ್ಷಿತರಾದ ದೇವತೆಗಳೂ ಮತ್ತು ಹವಿಸ್ಸನ್ನು ಹೊಂದಿದ ಮಾನವರೂ, ಈ ಎರಡು ಗುಂಪಿನವರೂ ಸಹ ಈ ಅಧಿಪತಿಯಾದ ಅಗ್ನಿಯನ್ನು ಸೇವಿಸುತ್ತಾರೆ. ಪೂಜ್ಯನೂ, ಪ್ರಜೆಗಳ ಪಾಲಕನೂ, ಅಭಿಮತಗಳಾದ ಫಲಗಳದಾಯಕನೂ ಮತ್ತು ಹೋಮಸಂಪಾದಕನೂ ಆದ ಅಗ್ನಿಯು ಸೂರ್ಯೋದಯಕ್ಕೆ ಮುಂಚೆ ಉಷಃಕಾಲದಲ್ಲಿಯೇ ಅಧ್ವರ್ಯುವಿನಿಂದ ಅಗ್ನಿ ಗೃಹದಲ್ಲಿ ವೇದಿಕೆಯ ಮೇಲೆ ಪ್ರತಿಷ್ಠಾಪಿತನಾಗಿರುತ್ತಾನೆ.

English Translation.

Both (gods and men) are the worshippers of this ruler; those who are to be desired (gods) and the mortals bearing oblations (are also worshippers); for this adorable invoker (of the gods), the protector of people and distributer of desired-for objects, was placed by the officiating priests (upon the altar), before the Sun was in the sky.

॥ ವಿಶೇಷ ವಿಷಯಗಳು ॥

ಉಭಯಾಸಃ—ಇಲ್ಲಿ ಅಗ್ನಿಯನ್ನು ದೇವತೆಗಳೂ ಮಾನವರೂ ಸಮಕಾಲದಲ್ಲಿ ಸ್ತುತಿಸುವರು. ಅಥವಾ ಸ್ತುತಿಪಾಠಕರು ಸ್ತೋತೃಗಳೆಂದಲೂ, ಯಜಮಾನರು ಯಾಗಗಳೆಂದಲೂ ಅಗ್ನಿಯನ್ನು ತೃಪ್ತಿಗೊಳಿಸುವರು ಎಂದರ್ಥ.

ಉಶಿಜಃ—ಸರ್ವವನ್ನೂ (ಹವಿಸ್ಸನ್ನೂ) ಅಪೇಕ್ಷಿಸುವ ದೇವತೆಗಳು ಎಂದರ್ಥ ಮತ್ತು ಉಶಿಕ್ ಶಬ್ದಕ್ಕೆ ನಿರುಕ್ತದಲ್ಲಿ ಮೇಧಾವಿ ಎಂದರ್ಥವಾಡಿ, ಮೇಧಾವಿಪರ್ಯಾಯಪದಗಳಲ್ಲಿ ಪಾಠವಾಡಿರುವರು. (ನಿರು. ೩-೧೯) **ಮೇಧಾವಿ ನಾಮಾನ್ಯುತ್ತರಾಣಿ ಚತುರ್ವಿಂಶತಿಃ.** ಈ ಅರ್ಥದಿಂದ ಮೇಧಾವಿಗಳಾಗಿ ಯಜ್ಞದಲ್ಲಿ ನಾನಾರೀತಿ ಸ್ತೋತ್ರವಾಡುವ ಮಾನವರು ಎಂದೂ ಅರ್ಥವನ್ನು ಕಲ್ಪಿಸಿದ್ದಾರೆ.

ದಿವಷ್ಟಿತ್ ಪೂರ್ವಃ—ಹೊಸುನಿಷ್ಪಾದಕವಾದ ಅಗ್ನಿಯನ್ನು ಸೂರ್ಯೋದಯಕಾಲಕ್ಕೆ ಮುಂಚೆಯೇ ಆಧ್ವರ್ಯು ಮೊದಲಾದ ಋತ್ವಿಜರು ಯಜ್ಞವೇದಿಕೆಯಲ್ಲಿ ಪ್ರತಿಷ್ಠಿಸುತ್ತಾರೆ ಎಂದಭಿಪ್ರಾಯವು. ಯಜಮಾನರಲ್ಲಿ ಮತ್ತು ಅಧ್ವರ್ಯುಗಳಲ್ಲಿ ಸ್ಥಿರವಾಗಿ ನಿಲ್ಲುವನು.

ವಿಶ್ಪತಿಃ—ವಿಶಾಂ ಪತಿಃ—ಪ್ರಜೆಗಳನ್ನು ಕಾಪಾಡುವವನು ಎಂದರ್ಥ.

ವೇಧಾಃ—ವಿಧಾತೃವಿಗೆ ಅಭಿಮತವಾದ ಫಲವನ್ನು ಕೊಡುವವನು (ಬ್ರಹ್ಮಣ್ಯಾನೀಯನು) ಎಂದರ್ಥ.

॥ ವ್ಯಾಕರಣಪ್ರಕ್ರಿಯಾ ॥

ಶಾಸುಃ—ಶಾಸು ಅನುಶಿಷ್ಟ್ಯು ಧಾತು. **ತೃನ್ಕೃಚೌ ಶಂಸಿ ಶಸಿ ಶಾಸಿಕ್ಷ್ವದಾದಿಭ್ಯಃ ಸಂಜ್ಞಾಯಾಮನಿಟೌ** (ಉ. ಸು. ೨-೭೫೦) ಎಂಬುದರಿಂದ ಇದಕ್ಕೆ ತೃನ್ ಪ್ರತ್ಯಯ ಇಡಾಗನುಾಭಾವವೂ ವಿಹಿತವಾಗಿದೆ. ಶಾಸ್ತೃ ಶಬ್ದವಾಗುತ್ತದೆ. ಷಷ್ಠ್ಯೇಕವಚನ ಪರವಾದಾಗ **ಯೋತಉತ್** ಎಂಬುದರಿಂದ ಉತ್ವ. ಆಗ ತಕಾರ ಲೋಪವು ಛಾಂದಸವಾಗಿ ಬರುತ್ತದೆ. ತೃನ್ ನಿತ್ತಾದುದರಿಂದ **ಙ್ಯಾತ್ಯಾದಿರ್ನಿತ್ಯೇಮ್** ಎಂಬುದರಿಂದ ಆದ್ಯುದಾತ್ತವಾಗುತ್ತದೆ.

ಉಭಯೋಸಃ—**ಉಭಯೋರ್ಯತ್ರ** ಎಂಬುದರಿಂದ ಜಸ್ ಪರವಾದಾಗ ಉಭಶಬ್ದಕ್ಕೆ ಅಯಾಚಾದೇಶ. **ಆಜ್ಜಸೇರಸುಕ್** ಸೂತ್ರದಿಂದ ಜಸಿಗೆ ಅಸುಕಾಗಮ. ಅಂತ್ಯ ಸಕಾರಕ್ಕೆ ರುತ್ವ ವಿಸರ್ಗ.

ಉಶಿಜಃ—ವಶ ಕಾಂತೌ ಧಾತು. ಇದಕ್ಕೆ **ವಶಃ ಕಿತ್** (ಉ. ಸೂ. ೨-೨೭೯) ಎಂಬುದರಿಂದ ಇಜಿ ಪ್ರತ್ಯಯ. ಇದಕ್ಕೆ ಕಿತ್ವ ಅತಿದೇಶ ಮಾಡಿರುವುದರಿಂದ **ಪ್ರಹಿಜ್ಯಾವಯಿ**—(ಪಾ. ಸೂ. ೬-೧-೧೬) ಎಂಬುದರಿಂದ ಧಾತುವಿಗೆ (ವಕಾರಕ್ಕೆ) ಸಂಪ್ರಸಾರಣ. **ಸಂಪ್ರಸಾರಣಾಚ್ಚಿ** ಎಂಬುದರಿಂದ ಪೂರ್ವರೂಪ ಉಶಿಜಃ ಎಂಬುದು ಪ್ರಥಮಾ ಬಹುವಚನಾಂತರೂಪ. ಪ್ರತ್ಯಯಸ್ವರದಿಂದ ಇಕಾರ ಉದಾತ್ತವಾಗುತ್ತದೆ.

ಮರ್ತಾಃ—ಮೃಙ್ ಪ್ರಾಣತ್ಯಾಗೇ ಧಾತು. ಇದಕ್ಕೆ **ಅಸಿಹಸಿಮೃಗ್ರಿಣ್ವಾವಿ**—ಎಂಬುದರಿಂದ ತನ್ ಪ್ರತ್ಯಯ. ಪ್ರತ್ಯಯನಿಮಿತ್ತವಾಗಿ ಧಾತುವಿನ ಇಕಿಗೆ ಗುಣ ಮರ್ತ ಎಂದು ರೂಪವಾಗುತ್ತದೆ. ನಿತ್ ಪ್ರತ್ಯಯಾಂತವಾದುದರಿಂದ ಆದ್ಯುದಾತ್ತಸ್ವರ ಬರುತ್ತದೆ. ಪ್ರಥಮಾಬಹುವಚನಾಂತರೂಪ.

ಆಪೈಚ್ಛ್ಯಃ—ಪ್ರಚ್ಛ ಜ್ಞೀಪ್ಸಾಯಾಂ ವಾಚಿ. ಧಾತು ಆಙ್ ಉಪಸರ್ಗ ಪೂರ್ವದಲ್ಲಿರುವಾಗ ಛಂದಸಿನಿಷ್ಟಕ್ಯ್—(ಪಾ. ಸೂ.೩-೧-೧೩೩) ಎಂಬ ಸೂತ್ರದಿಂದ ಕ್ಯಪ್ ಪ್ರತ್ಯಯಾಂತವಾಗಿ ನಿಪಾತಿತವಾಗಿದೆ. ಕಿತ್ತಾದುದರಿಂದ ಪ್ರತ್ಯಯ ನಿಮಿತ್ತವಾಗಿ **ಗ್ರಹೀಜ್ಯಾವಯಿ**—ಸೂತ್ರದಿಂದ ಧಾತುವಿನ ರೇಫಕ್ಕೆ ಸಂಪ್ರಸಾರಣ. ಕ್ಯಪ್ ಪಿತ್ತಾದುದರಿಂದ **ಅನುದಾತ್ತೌಸುಪ್ಪಿತೌ** ಎಂಬುದರಿಂದ ಅನುದಾತ್ತವಾಗುವುದರಿಂದ ಧಾತುಸ್ವರ ಉಳಿಯುತ್ತದೆ.

ವಿಶ್ಪತಿಃ—ವಿಶಾಂ ಪತಿಃ ಪಾಲಯಿತಾ ವಿಶ್ಪತಿಃ. **ಪತ್ಯಾವೈಶ್ವರ್ಯೇ** (ಪಾ. ಸೂ. ೬-೨-೧೫) ಎಂಬುದರಿಂದ ಪೂರ್ವಪದ ಪ್ರಕೃತಿಸ್ವರವು ಪ್ರಾಪ್ತವಾದರೆ ಅದನ್ನು ಬಾಧಿಸಿ **ಪೆರಾದಿಶ್ಛಂದಸಿಬಹುಲಂ** (ಪಾ. ಸೂ. ೬-೨-೧೯೯) ಎಂಬುದರಿಂದ ಉತ್ತರಪದಾದ್ಯುದಾತ್ತಸ್ವರ ಬರುತ್ತದೆ.

ವಿಕ್ಷು—ಸಪ್ತಮೀ ಬಹುವಚನಾಂತರೂಪ **ಸಾವೇಕಾಚಸ್ತೃತೀಯಾದಿಃ** ಎಂಬುದರಿಂದ ವಿಭಕ್ತಿಗೆ ಉದಾತ್ತಸ್ವರ ಬರುತ್ತದೆ.

॥ संहितापाठः ॥

तं नव्यसी हृदऽआ जायमानमस्मत्सुकीर्तिर्मधुजिह्वमश्याः ।
यमृत्विजो व्यजने मानुषासः प्रयस्वन्त आयवो जीजनन्त ॥ ३ ॥

॥ पदपाठः ॥

तं । नव्यसी । हृदः । आ जायमानं । अस्मत् । सुऽकीर्तिः । मधुऽजिह्वं । अश्याः ।
यं । ऋत्विजः । व्यजने । मानुषासः । प्रयस्वन्तः । आयवः । जीजनन्त ॥ ३ ॥

॥ सायणभाष्यं ॥

नव्यसी नवतरा सुकीर्तिः सुष्ठु कीर्तयित्र्यस्मत् अस्माकं स्तुतिर्हृदो हृद्यवस्थितात्प्राणाज्जायमानमुत्पद्यमानं । अग्निर्हि वायोरुत्पद्यते वायुश्च प्राण एव । यः प्राणः स वायुरित्यामनानात् । मधुजिह्वं मादयितृज्वालं । एवंभूतं तमग्निमाश्याः । अभिमुख्येन व्याप्नोतु । व्यजने संग्रामे प्राप्ते सत्याय एवो मनुष्या यमग्निं जीजनन्त यज्ञार्थमुदसादयन् । कीदृशा मनुष्याः । ऋत्विजः ऋतौ काले यष्टारो मानुषासो मनोः पुत्राः प्रयस्वन्तो हविर्लक्षणान्नोपेताः॥ नव्यसी । नवीयसीत्यत्रेकारलोपश्छान्दसः । हृदः । अत्र हृदयशब्देन तत्स्थः प्राणो लक्ष्यते । षद्दन्नित्यादिना हृदयशब्दस्य हृदादेशः । जायमानं । जनी प्रादुर्भावे । शयनि ज्ञाजनोर्जेति जादेशः । आदुपदेशाल्लसार्वधातुकानुदात्तत्वे शयनो नित्त्वादाद्युदात्तत्वं । अस्मत् । सुपां सुलुगिति विभक्तेर्लुक् । अश्याः । अशू व्याप्तौ । लिङ् बहुलं छन्दसीति विकरणस्य लुक् । व्यत्ययेन परस्मैपदमध्यमौ । जीजनन्त । जनी प्रादुर्भावे । ण्यन्ताल्लुङ् च्लेश्चङादेशः । द्विर्भावहलादिशेषः । सन्वद्भावेत्वदीर्घौ । आदुपदेशाल्लसार्वधातुकानुदात्तत्वे चङि एव स्वरे प्राप्ते व्यत्ययेनाभ्यस्तादुदात्तत्वं ॥

॥ ಪ್ರತಿಪದಾರ್ಥ ॥

ನವ್ಯಸೀ—ಅತ್ಯಂತ ನವೀನವಾದುದೂ । **ಸುಕೀರ್ತಿಃ**—ಚೆನ್ನಾಗಿ ಗುಣಗಾನಮಾಡತಕ್ಕುದೂ ಆದ । **ಅಸ್ಮತ್**—ನಮ್ಮ ಸ್ತೋತ್ರವು । **ಹೃದಃ**—ಹೃದಯದಲ್ಲಿನ ಪ್ರಾಣದಿಂದ । **ಜಾಯಮಾನಂ**—ಉತ್ಪನ್ನನಾಗುವವನೂ । **ಮಧುಜಿಹ್ವಂ**—ಹರ್ಷದಾಯಕವಾದ ಜ್ವಾಲೆಯುಳ್ಳವನೂ ಆದ, ಮತ್ತು । **ಯಂ**—ಯಾವನನ್ನು । **ಮೃಜನೇ**—ಯುದ್ಧವು ಪ್ರಾಪ್ತವಾಗಲು । **ಋತ್ವಿಜಃ**—ಸಕಾಲದಲ್ಲಿ ಯಜ್ಞಮಾಡತಕ್ಕವರೂ । **ಮಾನುಷಾಸಃ**—ಮನುಪುತ್ರರೂ । **ಪ್ರಯಸ್ವಂತಃ**—ಹವಿಸ್ಸಿನರೂಪದ ಅನ್ನದಿಂದ ಕೂಡಿದವರೂ ಆದ । **ಅಯೇವಃ**—ಮನುಷ್ಯರು । **ಜೀಜನಂತ**—(ಯಜ್ಞಕ್ಕಾಗಿ) ಉತ್ಪನ್ನನಾಗುವಂತೆ ಮಾಡಿದರೋ ಅಂತಹ । **ತಂ**—ಅಗ್ನಿಯನ್ನು । **ಆ ಅಶ್ಯಾಃ**—ಅಭಿಮುಖವಾಗಿ ಹೋಗಿ ಸೇರಿಕೊಳ್ಳಲಿ.

॥ ಭಾವಾರ್ಥ ॥

ಹೃದಯದ ಪ್ರಾಣದಿಂದ ಉತ್ಪನ್ನನಾಗುವವನೂ, ಹರ್ಷದಾಯಕವಾದ ಜ್ವಾಲೆಯುಳ್ಳವನೂ ಆದ ಮತ್ತು ಯಾವನನ್ನು ಯುದ್ಧಕಾಲದಲ್ಲಿ ಯಜ್ಞಕರ್ತರೂ, ಮನುಪುತ್ರರೂ ಮತ್ತು ಹವಿಸ್ಸಿನಿಂದ ಕೂಡಿದವರೂ ಆದ ಮನುಷ್ಯರು ಯಜ್ಞಕ್ಕಾಗಿ ಉತ್ಪನ್ನನಾಗುವಂತೆ ಮಾಡುವರೋ ಅಂತಹ ಅಗ್ನಿಯನ್ನು ನಮ್ಮ ಅತ್ಯಂತ ನವೀನವಾದುದೂ ಮತ್ತು ಚೆನ್ನಾಗಿ ಗುಣಗಾನಮಾಡತಕ್ಕುದೂ ಆದ ಸ್ತೋತ್ರವು ಅಭಿಮುಖವಾಗಿ ಹೋಗಿಸೇರಿಕೊಳ್ಳಲಿ.

English Translation.

May our newest hymn reach that Agni, who is sweet-tonged, and is to be engendered in the heart; whom the decendants of Manu, sacrificing and presenting oblations to him, beget in the time of battle.

॥ ವಿಶೇಷ ವಿಷಯಗಳು ॥

ಸುಕೀರ್ತಿಃ—**ಸುಷ್ಠು ಕೀರ್ತಯಿತ್ರೀ** — ಪ್ರಶಸ್ತವಾದ ರೀತಿಯಲ್ಲಿ ಕೀರ್ತಿಯನ್ನು ಸೂಚಿಸುವ ಸ್ತುತಿ ಎಂದರ್ಥವು.

ಹೃದಃ—**ಹೃತ್** ಶಬ್ದಕ್ಕೆ ಕೇವಲ ಹೃದಯವೆಂದೇ ಅರ್ಥವಿದ್ದರೂ ಇಲ್ಲಿ ಲಕ್ಷಣಾವೃತ್ತಿಯಿಂದ ಹೃದಯಾಂತರ್ಗತವಾದ ಪ್ರಾಣ ಎಂದರ್ಥಮಾಡಿದ್ದಾರೆ. ಅಗ್ನಿಯು **ಪ್ರಾಣವಾಯುವಿನಿಂದ** ಹುಟ್ಟುವವನು **ಎಂಬಂಶವನ್ನು ಅಗ್ನಿರ್ಹಿ ವಾಯೋರುತ್ಪದ್ಯತೇ ವಾಯುಶ್ಚ ಪ್ರಾಣ ಏವ ಯಃ ಪ್ರಾಣಸ್ಯ ವಾಯುಃ** ಎಂಬ ಪ್ರಮಾಣ ಪುರಸ್ಸರವಾಗಿ ಸಿದ್ಧಾಂತಮಾಡಿರುವರು.

ಮಧುಜಿಹ್ವಂ—ಸರ್ವವನ್ನೂ ಭಸ್ಮಾದಿಸುವ ನಾಲಿಗೆ ಅಂದರೆ ಜ್ವಾಲೆ ಎಂದರ್ಥ. ಅಂತಹ ಜ್ವಾಲೆಯುಳ್ಳವನು ಅಗ್ನಿಯು.

ಋತ್ವಿಜಃ—**ಋತೌ ಕಾಲೇ ಯಜಂತೀತಿ**— ಕಾಲಾತಿಕ್ರಮಣವಿಲ್ಲದೆ ಅಗ್ನಿಹೋತ್ರಾದಿ ಕರ್ಮಗಳನ್ನು ನಡೆಸುತ್ತಾ ಆಹುತಿಕೊಡುತ್ತಿರುವವರು ಎಂದರ್ಥ.

ಮಾನುಷಾಸಃ—**ಮನೋಃ ಪುತ್ರಾಃ**—ಮಾನವರು ಎಂದರ್ಥ.

॥ ವ್ಯಾಕರಣಪ್ರಕ್ರಿಯಾ ॥

ನವ್ಯಸೀ—ನವಶಬ್ದ. ಇದಕ್ಕೆ ಅತಿಶಯಾರ್ಥತೋರುವಾಗ **ದ್ವಿವಚನವಿಭಜ್ಯೋಪಪದೇ**—ಸೂತ್ರದಿಂದ **ಈಯಸುನ್** ಪ್ರತ್ಯಯ. ಪ್ರತ್ಯಯನಿಮಿತ್ತವಾಗಿ ಅಕಾರಲೋಪ. **ಈಯಸುನ್** ಪ್ರತ್ಯಯದಲ್ಲಿ ಉಕಾರ ನಕಾರಗಳು ಇತ್ಸಂಜ್ಞೆಯನ್ನು ಹೊಂದುತ್ತವೆ. **ಸ್ವ್ರೇತ್ವತೋರುವಾಗ ಉಗಿತಶ್ಚ** (ಪಾ. ಸೂ. ೪-೧-೬) ಎಂಬುದರಿಂದ ಙೀಪ್. ಙೀಪ್ ಪಿತ್ವಾದುದರಿಂದ ಅನುದಾತ್ತ. **ಈಯಸುನ್** ನಿತ್ವಾದುದರಿಂದ ಆದ್ಯುದಾತ್ತವಾಗುತ್ತದೆ. ಛಾಂದಸವಾಗಿ ಸಂಹಿತಾದಲ್ಲಿ ಈಕಾರಕ್ಕೆ ಲೋಪ ಬಂದಿದೆ.

ಹೃದಃ—ಹೃದಯ ಶಬ್ದ. ಇಲ್ಲಿ ಹೃದಯ ಶಬ್ದದಿಂದ ಹೃದಯದಲ್ಲಿರುವ ಪ್ರಾಣವು ಲಕ್ಷಣಾವೃತ್ತಿಯಿಂದ ಬೋಧಿತವಾಗುತ್ತದೆ. **ಪದ್ದನ್ನೋಮಾಸ್**—(ಪಾ. ಸೂ. ೬.೧-೬೩) ಎಂಬುದರಿಂದ ಪಂಚಮಿಯಾ ಏಕವಚನಸರವಾದಾಗ ಪ್ರಕೃತಿಗೆ ಹೃದಾದೇಶ. **ಊಡಿದಂಪದಾದಿ**—ಎಂಬುದರಿಂದ ವಿಭಕ್ತಿಗೆ ಉದಾತ್ತಸ್ವರ ಬರುತ್ತದೆ.

ಜಾಯಮಾನಮ್—ಜನೀ ಪ್ರಾದುರ್ಭಾವೇ ಧಾತು. ಲಡರ್ಥದಲ್ಲಿ ಶಾನಚ್ ಪ್ರತ್ಯಯ. **ದಿವಾದಿಭ್ಯಃ ಶ್ಯನ್** ಎಂಬುದರಿಂದ ಶ್ಯನ್ ವಿಕರಣ. ಇದು ಪರವಾದಾಗ **ಜ್ಞಾಜನೋರ್ಜಾ** (ಪಾ. ಸೂ. ೭-೩-೭೯) ಎಂಬುದರಿಂದ ಧಾತುವಿಗೆ ಜಾದೇಶ. **ಆನೇಮುಕ್** ಸೂತ್ರದಿಂದ ವಿಕರಣವಿಶಿಷ್ಟವಾದ ಅಂಗಕ್ಕೆ ಮುಕಾಗಮ ಕಿತ್ವಾದುದರಿಂದ ಅಂತಾವಯವವಾಗಿ ಬರುತ್ತದೆ. ಉದುಪದೇಶದ ಪರದಲ್ಲಿರುವುದರಿಂದ ಲಸಾರ್ವಧಾತುಕವು (ಆನ) **ತಾಸ್ಯನುದಾತ್ತೇತ್**—ಸೂತ್ರದಿಂದ ಅನುದಾತ್ತವಾಗುತ್ತದೆ. ಶ್ಯನ್ ನಿತ್ವಾದುದರಿಂದ **ಫ್ಗಿತ್ಯಾದಿರ್ನಿತ್ಯಮ್** ಎಂಬುದು ಆದ್ಯುದಾತ್ತಸ್ವರ ಬರುತ್ತದೆ. ದ್ವಿತೀಯಾ ಏಕವಚನಾಂತರೂಪ.

ಅಸ್ಮತ್—ಷಷ್ಠೀಬಹುವಚನ (ಆಮ್) ಸರವಾದಾಗ **ಸುಪಾಂಸುಲುಕ್**—ಸೂತ್ರದಿಂದ ಆಮಿಗೆ ಲುಕ್.

ಅಶ್ವ್ಯಾಃ—ಅಶೂ ವ್ಯಾಪ್ತೌ ಧಾತು. ಲಿಙ್ ಮಧ್ಯಮಪುರುಷ ಏಕವಚನದಲ್ಲಿ ಸಿಪ್. **ಇತಶ್ಚ** ಎಂಬುದರಿಂದ ಅದರ ಇಕಾರಕ್ಕೆ ಲೋಪ. **ಬಹುಲಂಛಂದಸಿ** ಎಂಬುದರಿಂದ ವಿಕರಣಕ್ಕೆ (ಶ್ನು) ಲುಕ್. **ವ್ಯತ್ಯಯೋಬಹುಲಂ** ಎಂಬುದರಿಂದ ಅನುದಾತ್ತೇತ್ವಾದರೂ ಆತ್ಮನೇಪದಪ್ರತ್ಯಯ ಬಂದಿದೆ. **ಯಾಸುಟ್ಪರ**—ಸೂತ್ರದಿಂದ ಯಾಸುಟಾಗಮ. **ಲಿಙಃಸಲೋಪೋನಂತ್ಯಸ್ಯ** ಸೂತ್ರದಿಂದ ಸಕಾರಕ್ಕೆ ಲೋಪ. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

ಜೀಜನಂತ—ಜನೀ ಪ್ರಾದುರ್ಭಾವೇ ಧಾತು. ಪ್ರೇರಣಾರ್ಥ ತೋರುವುದರಿಂದ **ಹೇತುಮತಿಚ** ಸೂತ್ರದಿಂದ ಣಿಚ್. **ಸನಾದ್ಯಂತಾಧಾತವಃ** ಎಂಬುದರಿಂದ ಣಿಜಂತಕ್ಕೆ ಧಾತುಸಂಜ್ಞೆ. ಣ್ಯಂತದಮೇಲೆ ಲುಙ್. ಪ್ರಥಮಪುರುಷ ಬಹುವಚನದಲ್ಲಿ **ಝೋಂತಃ** ಎಂಬುದರಿಂದ ಅಂತಾದೇಶ. ಲುಙಿನಲ್ಲಿ ಪ್ರಾಪ್ತವಾದ ಚ್ಲಿಗೆ **ಣಿಶ್ರಿದ್ರುಸ್ರುಭ್ಯಃ ಕರ್ತರಿಚಙ್** (ಪಾ. ಸೂ. ೩-೧-೪೮) ಎಂಬುದರಿಂದ ಚಙಾದೇಶ. **ಚಙಿ** (ಪಾ. ಸೂ. ೬-೧-೧೧) ಎಂಬುದರಿಂದ ಧಾತುವಿಗೆ ದ್ವಿತ್ವ. ಅಭ್ಯಾಸಕ್ಕೆ ಹಲಾದಿಶೇಷ **ಸನ್ವಲ್ಲಘುನಿ ಚಙಿ ಪರೇ**—(ಪಾ. ಸೂ. ೭-೪-೯೩) ಎಂಬುದರಿಂದ ಚಙಂತಕ್ಕೆ ಸನ್ವದ್ಭಾವ. ಆಗ **ಸನ್ಯತಃ** (ಪಾ. ಸೂ. ೭-೪-೭೯) ಎಂಬುದರಿಂದ ಅಭ್ಯಾಸ ಅಕಾರಕ್ಕೆ ಇತ್ವ. **ದೀರ್ಘೋಲಘೋಃ** ಎಂಬುದರಿಂದ ಅದಕ್ಕೆ ದೀರ್ಘ. **ಬಹುಲಂ ಛಂದಸ್ಯಮಾಙ್ಯೋಗೇಽಪಿ** ಎಂಬುದರಿಂದ ಅಡಾಗಮ ಬರುವುದಿಲ್ಲ. ಇಲ್ಲಿ ಉದುಪದೇಶದ ಪರದಲ್ಲಿ ಲಸಾರ್ವಧಾತುಕವು (ಝು) ಬಂದುದರಿಂದ **ತಾಸ್ಯನುದಾತ್ತೇತ್**—ಸೂತ್ರದಿಂದ ಅನುದಾತ್ತವಾಗುತ್ತದೆ. ಆಗ ಚಙ್ ಪ್ರತ್ಯಯ

ಸ್ವರವು ಸತಿಶಿಷ್ಟವಾಗುವುದರಿಂದ ಅದು ಉಳಿಯಬೇಕಾಗುತ್ತದೆ. ಆದರೆ ವ್ಯತ್ಯಯದಿಂದ **ಅಭ್ಯಸ್ತಾನಾಮಾದಿಃ** (ಪಾ. ಸೂ. ೬-೧-೧೭೯) ಎಂಬುದರಿಂದ ಅಭ್ಯಸ್ತಾದ್ಯುದಾತ್ತಸ್ವರ ಬರುತ್ತದೆ.

ಸಂಹಿತಾಪಾಠಃ

ಉಶಿಕ್ಪಾವಕೋ ವಸುರ್ಮಾನುಷೇಷು ವರೇಣ್ಯೋ ಹೋತಾಧಾಯಿ
ವಿಕ್ಷು ।
ದಮೂನಾ ಗೃಹಪತಿರ್ದಮ ಆ ಅಗ್ನಿರ್ಭುವದ್ರಯಿಪತೀ ರಯೀಣಾಂ ॥೪॥

॥ ಪದಪಾಠಃ ॥

ಉಶಿಕ್ । ಪಾವಕಃ । ವಸುಃ । ಮಾನುಷೇಷು । ವರೇಣ್ಯಃ । ಹೋತಾ । ಅಧಾಯಿ
ವಿಕ್ಷು ।
ದಮೂನಾಃ । ಗೃಹಪತಿಃ । ದಮೇ । ಆ । ಅಗ್ನಿಃ । ಭುವತ್ । ರಯಿಪತಿಃ । ರ-
ಯೀಣಾಂ ॥ ೪ ॥

॥ ಸಾಯಣಭಾಷ್ಯಂ ॥

ಉಶಿಕ್ ಕಾಮಯಮಾನಃ ಪಾವಕಃ ಶೋಧಕೋ ವಸುರ್ನಿವಾಸಯಿತಾ ವರೇಣ್ಯೋ ವರಣ-
ಶೀಲಃ ಏವಂಭೂತೋ ಹೋತಾಗ್ನಿರ್ವಿಕ್ಷು ಯಜ್ಞಗೃಹಂ ಪ್ರವಿಷ್ಟೇಷು ಮಾನುಷೇಷು ಯಜಮಾನೇ-
ಷ್ವಧಾಯಿ । ಸ್ಥಾಪ್ಯತೇ । ಸ ಚಾಗ್ನಿರ್ದಮೂನಾ ರಕ್ಷಸಾಂ ದಮನಕರೇಣ ಮನಸಾ ಯುಕ್ತೋ ಗೃಹಪತಿ-
ರ್ಗೃಹಾಣಾಂ ಪಾಲಯಿತಾ ಚ ಸನ್ದಮೇ ಯಜ್ಞಗೃಹೇ ರಯಿಪತಿರ್ಧನಾಧಿಪತಿರಾ ಭುವತ್ । ಆ ಸಮಂತಾ-
ದ್ಭವತಿ । ನ ಕೇವಲಮೇಕಸ್ಯ ರಯೇರಪಿ ತು ಸರ್ವೇಷಾಮಿತ್ಯಾಹ ರಯೀಣಾಮಿತಿ । ಯದ್ವಾ ।
ರಯೀಣಾಂ ಮಧ್ಯ ಉತ್ಕೃಷ್ಟಂ ಯದ್ಧನಂ ತಸ್ಯ ಪತಿರಿತ್ಯರ್ಥಃ ॥ ಅಧಾಯಿ । ಛಂದಸಿ ಲುಙ್ಲಙ್ಲಿಟ
ಇತಿ ವರ್ತಮಾನೇ ಕರ್ಮಣಿ ಲುಙ್ ಶ್ಲೇಶ್ಚಿಣಾದೇಶ ಆತೋ ಯುಕ್ ಚಿಣ್ಕೃತೋರಿತಿ ಯುಗಾಗಮಃ ।
ದಮಯತಿ ರಾಕ್ಷಸಾದಿಕಮಿತಿ ದಮೂನಾಃ । ದಮ ಉಪಶಮೇ । ದಮೇರೂನಸಿಃ । ಉ. ೪-೨೩೪ ।
ಇತ್ಯೂನಾದಿಕ ಊನಸಿಪ್ರತ್ಯಯಃ । ಯದಾಸ್ಯಸ್ತ್ವಾಹ । ದಮೂನಾ ದಮಮನಾ ವಾ ದಾನಮನಾ ವಾ
ದಾಂತಮನಾ ವಾಪಿ ವಾ ದಮ ಇತಿ ಗೃಹನಾಮ ತನ್ಮನಾಃ ಸ್ಯಾತ್ । ನಿ. ೪-೪ । ಇತಿ । ದಮ ಆ ಅಗ್ನಿಃ ।
ಅಜಹೋತ್ಯನುನಾಸಿಕಶ್ಛಂದಸೀತ್ಯಾಕಾರಸ್ಯ ಸಾನುನಾಸಿಕತ್ವಂ । ಪ್ರಕೃತಿಭಾವಶ್ಚ । ಭುವತ್ । ಲೇಟ್ಯಡಾ-
ಗಮಃ । ಇತಶ್ಚ ಲೋಪೇ ಇತೀಕಾರಲೋಪಃ । ರಯಿಪತಿಃ । ಪರಾದಿಶ್ಛಂದಸಿ ಬಹುಲಮಿತ್ಯುತ್ತರಪ-
ದಾದ್ಯುದಾತ್ತತ್ವಂ । ರಯೀಣಾಂ । ನಾಮನ್ಯತರಸ್ಯಾಮಿತಿ ನಾಮ ಉದಾತ್ತತ್ವಂ ॥

॥ ಪ್ರತಿಪದಾರ್ಥ ॥

ಉಶಿಕ್—ಪ್ರಿಯನಾದವನೂ । **ಪಾವಕಃ**—ಶುದ್ಧಿಮಾಡತಕ್ಕವನೂ । **ವಸುಃ**—ವಾಸಸ್ಥಾನವನ್ನು ಕಲ್ಪಿಸುವವನೂ । **ವರೇಣ್ಯಃ**—ಶ್ರೇಷ್ಠನೂ ಆದ । **ಹೋತಾ**—ಅಗ್ನಿಯು । **ವಿಕ್ಷು**—ಯಜ್ಞಗೃಹವನ್ನು ಪ್ರವೇಶಿಸಿದ (ಗೃಹದಲ್ಲಿರುವ) । **ಮಾನುಷೇಷು**—ಯಜಮಾನರ ನಡುವೆ । **ಅಧಾಯಿ**—(ವೇದಿಕೆಯ ಮೇಲೆ) ಸ್ಥಾಪಿತನಾಗುತ್ತಾನೆ । **ಅಗ್ನಿಃ**—ಆ ಅಗ್ನಿಯು । **ದಮೂನಾಃ**—ಶತ್ರುನಾಶಕನಾದ ಮನಸ್ಸಿನಿಂದ ಕೂಡಿಯೂ । **ಗೃಹಪತಿಃ**—ಗೃಹಪಾಲಕನಾಗಿಯೂ । **ದಮೇ**—ಯಜ್ಞಗೃಹದಲ್ಲಿ । **ರಯೀಣಾಂ**—ಐಶ್ವರ್ಯಗಳ ನಡುವೆ । **ರಯಿಪತಿಃ**—(ಉತ್ತಮವಾದ) ಧನಕ್ಕೆ ಅಧಿಪತಿಯಾಗಿಯೂ । **ಆ ಭುವತ್**—ಇರಲಿ ॥

॥ ಭಾವಾರ್ಥ ॥

ಪ್ರಿಯನೂ, ಪಾವನಕಾರಕನೂ, ವಾಸಸ್ಥಾನದಾತನೂ ಮತ್ತು ಶ್ರೇಷ್ಠನೂ ಆದ ಅಗ್ನಿಯು ಯಜ್ಞಗೃಹದಲ್ಲಿ ಯಜಮಾನರ ನಡುವೆ ವೇದಿಕೆಯಮೇಲೆ ಸ್ಥಾಪಿತನಾಗುತ್ತಾನೆ. ಆ ಅಗ್ನಿಯು ಶತ್ರುನಾಶಕವಾದ ಮನಸ್ಸಿನಿಂದ ಕೂಡಿಯೂ ಗೃಹಪಾಲಕನಾಗಿಯೂ ಯಜ್ಞಗೃಹದಲ್ಲಿರುವ ಶ್ರೇಷ್ಠವಾಗ ಐಶ್ವರ್ಯಗಳ ನಡುವೆ ಉತ್ತಮವಾದ ಧನಕ್ಕೆ ಅಧಿಪತಿಯಾಗಿಯೂ ಇರಲಿ.

English Translation.

Agni, the desirable, the purifying, the giver of dwellings, the excellent, the invoker (of the gods) has been placed (upon the altar) among men; may he be determined upon subduing (our foes) the protector of our dwellings, and the lord of treasures in the sacrificial chamber.

ವಿಶೇಷ ವಿಷಯಗಳು

ಉಶಿಕ್—**ಕಾಮಯಮಾನಃ**—ವಿಶೇಷವಾಗಿ ಅಪೇಕ್ಷಿಸುವವನು.

ದಮೂನಾಃ—**ದಮು-ಉಪಶಮೇ । ದಮಯತಿ ರಾಕ್ಷಸಾದಿಕಮಿತಿ ದಮೂನಾಃ** । ರಾಕ್ಷಸರನ್ನು ನಾಶಗೊಳಿಸುವ ಮನಸ್ಸಿನಿಂದ ಕೂಡಿದವನು. **ದಮೂನಾ ದಮಮಾನಾ ವಾ, ದಾನಮನಾ ವಾ, ದಾಂತಮನಾ ವಾಸಿ, ವಾ ದಮ ಇತಿ ಗೃಹನಾಮ ತನ್ಮನಾಃ ಸ್ಯಾತ್** (ನಿರು. ೪-೪) ಎಂಬ ನಿರುಕ್ತದ ರೀತಿಯಾಗಿ, ನಾಶ ಮಾಡುವ ಮನಸ್ಸಿನವ ಎಂದು ಇಲ್ಲಿ ಅರ್ಥಮಾಡಿದ್ದಾರೆ.

ರಯಿಪತಿಃ ರಯೀಣಾಂ—**ರಯೀಣಾಂ ಮಧ್ಯೇ ಉತ್ಕೃಷ್ಟಂ ಯದ್ಧನಂ ತಸ್ಯ ಪತಿರಿತ್ಯರ್ಥಃ** । ರಯಿಶಬ್ದಕ್ಕೆ ಇಲ್ಲಿ ಧನವೆಂದರ್ಥ. ಕೇವಲ ಧನಕ್ಕೆ ಮಾತ್ರ ಅಧಿಪತಿಯಲ್ಲ. ಅಗ್ನಿಯು ಪ್ರಪಂಚದಲ್ಲಿ ಸಮಸ್ತವಿಧವಾದ ಐಶ್ವರ್ಯಗಳಿಗೂ ಒಡೆಯನಾದವನು ಎಂಬರ್ಥವನ್ನು ಸೂಚಿಸಲು ಮೇಲೆ ಹೇಳಿದಂತೆ ಈ ಶಬ್ದಕ್ಕೆ ವ್ಯುತ್ಪತ್ತಿಯನ್ನು ಕಲ್ಪಿಸಿದ್ದಾರೆ.

ಆ ಭುವತ್—**ಆಸಮಂತಾತ್ ಭವತಿ**—ಸಂಪೂರ್ಣವಾದ ರೀತಿಯಲ್ಲಿ ಸಮರ್ಥನಾಗಿರುತ್ತಾನೆ.

॥ ವ್ಯಾಕರಣಪ್ರಕ್ರಿಯಾ ॥

ಅಧಾಯಿ—ಡುಧಾಞ್ ಧಾರಣಪೋಷಣಯೋಃ ಧಾತು. ವರ್ತಮಾನಾರ್ಥದಲ್ಲಿ ಛಾಂದಸವಾಗಿ ಕರ್ಮಣಿಯೆಲ್ಲಿ ಲುಙ್. ಪ್ರಥಮಪುರುಷ ಏಕವಚನದಲ್ಲಿ ತ ಪ್ರತ್ಯಯ. **ಚಿಣ್ಭಾವಕರ್ಮಣೋಃ** ಎಂಬುದರಿಂದ ಚ್ಲಿಗೆ ಚಿಣಾದೇಶ. **ಅತೋಯೆುಕ್ ಚಿಣ್ಕೃತೋಃ** (ಪಾ. ಸೂ. ೭-೩-೩೩) ಎಂಬುದರಿಂದ ಚಿಣ್ ಪರವಾದಾಗ ಪೂರ್ವಕ್ಕೆ ಯುಕಾಗಮ. **ಚಿಣೋಲುಕ್**—ಎಂಬುದರಿಂದ ಚಿಣಿನ ಪರದಲ್ಲಿರುವ ಶಬ್ದಕ್ಕೆ ಲುಕ್. ಅಂಗಕ್ಕೆ ಅಡಾಗಮ. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

ವಿಕ್ಷು—ವಿಶ್ ಶಬ್ದದ ಸಪ್ತಮೀ ಬಹುವಚನಾಂತರೂಪ. **ಸಾವೇಕಾಚಸ್ತೃತೀಯಾದಿಃ** ಎಂಬುದರಿಂದ ವಿಭಕ್ತಿಗೆ ಉದಾತ್ತಸ್ವರ ಬರುತ್ತದೆ.

ದಮೂನಾಃ—ದಮಯಂತಿ ರಾಕ್ಷಸಾದಿಕಮಿತಿ ದಮೂನಾಃ ದಮು ಉಪಶಮೇ ಧಾತು. ಇದಕ್ಕೆ **ದಮೇರೂನಸಿಃ** (ಉ. ಸೂ. ೪-೬೭೪) ಎಂಬುದರಿಂದ ಊನಸಿ ಪ್ರತ್ಯಯ. ದಮೂನಸ್ ಶಬ್ದವಾಗುತ್ತದೆ. ಯಾಸ್ಕರು ಈ ರೀತಿಯಾಗಿ ನಿರ್ವಚನ ಮಾಡಿರುತ್ತಾರೆ. ದಮೂನಾ ದಮವಾನಾ ವಾ ದಾನವಾನಾ ವಾ ದಾಂತವಾನಾ ವಾಪಿ ವಾ ದಮು ಇತಿ ಗೃಹನಾಮ ತನ್ಮನಾಃ ಸ್ಯಾತ್ (ನಿರು. ೪-೪) ಶಾಂತಿ ಹೊಂದುವವರು, ದಾನವನಸ್ಸುಳ್ಳವರು. ಅಥವಾ ನಿಗ್ರಹಿಸಲ್ಪಟ್ಟ ಮನಸ್ಸುಳ್ಳವರು ಅಥವ ದಮನೆಂದರೆ ಮನೆ ಇದರಲ್ಲಾಸಕ್ತಿಯುಳ್ಳವರು ಎಂದರ್ಥ.

ದಮು ಆ ಅಗ್ನಿಃ—**ಅಜೋನುನಾಸಿಕಶ್ಛಂದಸಿ** (ಪಾ. ಸೂ. ೬-೧-೧೭೬) ಎಂಬುದರಿಂದ ಆಕಾರಕ್ಕೆ ಸಾನುನಾಸಿಕತ್ವವೂ ಪ್ರಕೃತಿಭಾವವೂ ಬರುತ್ತದೆ.

ಭುವತ್—ಭೂ ಸತ್ತಾಯಾಂ ಧಾತು. ಲೇಟ್ ಪ್ರಥಮಪುರುಷ ಏಕವಚನದಲ್ಲಿ ತಿಪ್ ಪ್ರತ್ಯಯ. **ಇತಶ್ಚ ಲೋಪಃಪರಸ್ಮೈಪದೇಷು** ಎಂಬುದರಿಂದ ಅದರ ಇಕಾರಕ್ಕೆ ಲೋಪ. **ಲೇಟೋಡಾಟೌ** ಎಂಬುದರಿಂದ ಅಡಾಗಮ. **ಬಹುಲಂಛಂದಸಿ** ಎಂಬುದರಿಂದ ಶಪಿಗೆ ಲುಕ್. ತಿಙಂತನಿಘಾತಸ್ವರ ಬರುತ್ತದೆ.

ರಯಿಪತಿಃ—ಷಷ್ಠೀ ತತ್ಪುರುಷ ಸಮಾಸ. **ಪರಾದಿಶ್ಛಂದಸಿಬಹುಲಂ** (ಪಾ. ಸೂ. ೬-೨-೧೯೯) ಎಂಬುದರಿಂದ ಉತ್ತರಪದ ಆದ್ಯುದಾತ್ತಸ್ವರ ಬರುತ್ತದೆ.

ರಯೀಣಾಮ್—ರಯಿ ಶಬ್ದಕ್ಕೆ ಷಷ್ಠೀ ಬಹುವಚನ ಪರವಾದಾಗ **ಹ್ರಸ್ವನದ್ಯಾಪೋನುಟ್** ಎಂಬುದರಿಂದ ನುಡಾಗಮ. ನಾಮಿ ಸೂತ್ರದಿಂದ ಅಜಂತಾಂಗಕ್ಕೆ ದೀರ್ಘ. **ನಾಮ್ಯನ್ತರಸ್ಯಾಮ್** (ಪಾ. ಸೂ. ೬-೧-೧೭೭) ಎಂಬುದರಿಂದ ನಾಮಿಗೆ ಉದಾತ್ತಸ್ವರ ಬರುತ್ತದೆ.

॥ ಸಂಹಿತಾಪಾಠಃ ॥

ತಂ ತ್ವಾ ವಯಂ ಪತಿಮಗ್ನೇ ರಯೀಣಾಂ ಪ್ರ ಶಂಸಾಮೋ ಮತಿಭಿ-
ರ್ಗೋತಮಾಸಃ
ಆಶುಂ ನ ವಾಜಂಭರಂ ಮರ್ಜಯಂತಃ ಪ್ರಾತರ್ಮಕ್ಷೂಧಿಯಾವಸುರ್ಜ-
ಗಮ್ಯಾತ್ ॥ ೫ ॥

॥ पदपाठः ॥

तं । त्वा । वयं । पतिं । अग्ने । रयीणाम् । प्र । शंसामः । मति-
भिः । गोतमासः ।
आशुं । न । वाजंभरं । मर्जयंतः । प्रातः । मक्षु । धियावसुः । जगम्यात् ॥ ५ ॥

॥ सायणभाष्यं ॥

गोतमासो गोतमगोत्रोत्पन्ना वयं । नोधसः स्तोतुरेकस्यैवाप्यृषेः पूजार्थं बहुवचनं । हे अग्ने रयीणां धनानां पतिं रक्षितारं तादृशं त्वा त्वां मतिभिर्मननीयैः स्तोत्रैः प्रशंसामः । प्रकर्षेण स्तुमः । किं कुर्वंतः । वाजंभरं वाजस्य हविर्लक्षणान्नस्य भर्तारं त्वां मर्जयंतो मार्जयंतः । तत्र दृष्टान्तः । आशुं न अश्वमिव । यथाश्वमारोहंतः पुरुषास्तस्य वहनप्रदेशं हस्तैर्निमृजंति । तद्वद्यमग्नेरर्हविर्वहनप्रदेशं निमृजंत इत्यर्थः । तथा चाग्निसंमार्जनप्रकरणे वाजसनेयिभिरामान्नातं । अथ मध्ये तूष्णीमेव स्रुचः संमार्ष्टि यथा युक्त्वा प्रेहि वहेति व्रजेदेवमेतदग्निं युक्त्वोपसत्पतिं प्रेहि देवेभ्यो हव्यं वहेति । धियावसुः कर्मणा बुद्ध्या वा प्राप्तधनः सोऽग्निः प्रातः श्वोभूतस्याह्नः प्रातःकाले मक्षु शीघ्रं जगम्यात् । अगच्छतु ॥ मतिभिः । मन ज्ञाने इत्यस्मात्कर्मणि क्तिन् । मंत्रैः वृषेषेत्यादिना तस्योदात्तत्वं । वाजंभरं । अग्नेरेषा वैदिकी संज्ञा । संज्ञायां भृत्यृवैजीति । पा. ३-२-५६ । वाजशब्दे कर्मण्युपपदे ऋच्प्रत्ययः । अरुर्द्विषदजंतस्य मुम् । पा. ६-३-६७ । इति मुमागमः । चित इत्यंतोदात्तत्वं । मर्जयंतः । संज्ञापूर्वकस्य विधेरनित्यत्वात् मृजेर्वृद्धिः । पा. २-४-७७ । इति वृद्ध्यभावः । अदुपदेशाल्लसार्वधातुकानुदात्तत्वे णिच एव स्वरः शिष्यते । जगम्यात् । लिङि बहुलं छंदसीति शपः श्लुः ॥

॥ प्रतिपदार्थ ॥

अग्ने—ಎಲೈ ಅಗ್ನಿಯೇ । गोतमासः—ಗೋತಮವಂಶೋತ್ಪನ್ನರಾದ । वयं—ನಾವು । रयीणाम्—ಧನಗಳಿಗೆ । पतिं—ಪಾಲಕನಾದ । तं त्वा—ಆ ನಿನ್ನನ್ನು । मतिभिः—ಗ್ರಾಹ್ಯಗಳಾದ ಸ್ತೋತ್ರಗಳಿಂದ । आशुं न—(ಆಶ್ವಾರೋಹಿಯು) ಕುದುರೆಯನ್ನು ಉಜ್ಜುವಂತೆ । वाजंभरं—ಹವಿಸ್ಸಿನ ರೂಪದ ಅನ್ನಕ್ಕೆ ಒಡೆಯನಾದ ನಿನ್ನನ್ನು । मर्जयंतः—ಉಜ್ಜುತ್ತ । प्र शंसामः—ಸ್ತುತಿಸುವೆವು ।

ಧಿಯಾವಸುಃ—(ಪವಿತ್ರವಾದ) ಕರ್ಮದಿಂದ ಅಥವಾ ಬುದ್ಧಿಯಿಂದ ಹೊಂದಿದ ಧನವುಳ್ಳ ಅಗ್ನಿಯು। **ಪ್ರಾತಃ**—ಬೆಳಿಗ್ಗೆ । **ಮಕ್ಷು**—ಜಾಗ್ರತೆಯಾಗಿ । **ಜಗಮ್ಯಾತ್**—ಬರಲಿ ॥

॥ ಪ್ರತಿಪದಾರ್ಥ ॥

ಎಲೈ ಅಗ್ನಿಯೇ, ಗೋತಮ ವಂಶೋತ್ಪನ್ನರಾದ ನಾವು ಧನಗಳ ಪಾಲಕನಾದ ನಿನ್ನನ್ನು ಗ್ರಾಹ್ಯಗಳಾದ ಸ್ತೋತ್ರಗಳಿಂದ ಅಶ್ವಾರೋಹಿಯು ಕುದುರೆಯನ್ನು ಉಜ್ಜುವಂತೆ ಹವಿಸ್ಸಿಗೆ ಒಡೆಯನಾದ ನಿನ್ನನ್ನು ಉಜ್ಜುತ್ತ ಸ್ತುತಿಸುವೆವು. ಪವಿತ್ರಕರ್ಮದಿಂದ ಸಂಪಾದಿಸಿದ ಧನವುಳ್ಳ ಅಗ್ನಿಯು ಬೆಳಿಗ್ಗೆ ಯಜ್ಞಭೂಮಿಗೆ ಜಾಗ್ರತೆ ಬರಲಿ.

English Translation.

We, born of the race of Gotama, praise you, Agni, the protector of riches, with desirable hymns; rubbing you, the bearer of oblations (as a rider rubs down) a horse; may he who has acquired riches by sacred rites, come hither quickly in the morning.

॥ ವಿಶೇಷ ವಿಷಯಗಳು ॥

ಗೋತಮಾಸಃ—ಗೋತಮಗೋತ್ರೋತ್ಪನ್ನರಾದವರು. ಇದು ವಯಂ ಎಂಬ ಪದಕ್ಕೆ ವಿಶೇಷಣವೆನಿಸಿ ಬಹುವಚನವಾಗಿದೆ. ಪ್ರಕೃತಸಂದರ್ಭದಲ್ಲಿ ಸ್ತೋತ್ರಮಾಡುವವನು ಒಬ್ಬನೇ ಆಗಿದ್ದರೂ ಬಹುವಚನವನ್ನು ಉಪಯೋಗಿಸಿರುವುದು. ತನ್ನಲ್ಲಿ ಪೂಜಾರ್ಥವಾದ ಮರ್ಯಾದೆಯನ್ನು ಸೂಚಿಸುವುದಕ್ಕಾಗಿ.

ಮತಿಭಿಃ—ಮನನೀಯೈಃ ಸ್ತೋತೃಭ್ಯೈಃ—ಜ್ಞಾನವಿಷಯಕವಾದ ಸ್ತುತಿವಚನಗಳಿಂದ. ಮನ ಜ್ಞಾನೇ ಎಂಬ ಧಾತುಜನ್ಯವಾದ ಪದ ಇದು.

ವಾಜಂಭರಂ—ವಾಜವೆಂದರೆ ಹವಿರ್ಲಕ್ಷಣದಿಂದ ಕೂಡಿದ ಅನ್ನ. (ನಿರು. ೩-೯) ಅಂತಹ ಅನ್ನಕ್ಕೆ ಅಧಿಪತಿಯಾದವನು ವಾಜಂಭರ—ಅಗ್ನಿ.

ಅಶುಂ ನ—ಅಶ್ವಮಿವ—ಇಲ್ಲಿ ಅಗ್ನಿ ಸಂಮಾರ್ಜನಪ್ರಕರಣವನ್ನು ಸೂಚಿಸಲಾಗಿದೆ. ಕುದುರೆಯ ಮೇಲೆ ಕುಳಿತುಕೊಳ್ಳುವವರು ಮೊದಲು ಕುದುರೆಯ ಬೆನ್ನನ್ನು ಶುದ್ಧಿಗೊಳಿಸುವಂತೆ ಹವಿಸ್ಸನ್ನು ದೇವತೆಗಳಿಗೆ ಒಯ್ಯುವ ಅಗ್ನಿಯನ್ನು ಮೊದಲು ಮಾರ್ಜನಾದಿಗಳಿಂದ ಶುದ್ಧಿಗೊಳಿಸುವರು. ಅಗ್ನಿಸಂಮಾರ್ಜನ ಪ್ರಕರಣದಲ್ಲಿ ವಾಜಸನೇಯ ಮಂತ್ರವು ಈ ರೀತಿ ಇರುವುದು. **ಅಥ ಮಧ್ಯೇ ತೂಷ್ಣೀಮೇವ ಶ್ರಿಃ ಸಂಮಾರ್ಷ್ಟಿ ಯಥಾ ಯುಕ್ತ್ವಾಪ್ರೇಹಿ ವಹೇತಿ ವ್ರಜೇದೇವಮೇತದಗ್ನಿಂ ಯುಕ್ತ್ವೋಪಕ್ಷಿಪತಿ ಪ್ರೇಹಿ ದೇವೇಭ್ಯೋ ಹವ್ಯಂ ವಹ.**

ಧಿಯಾವಸುಃ—ಕರ್ಮಣಾ ಬುದ್ಧ್ಯಾ ವಾ ಪ್ರಾಪ್ತಧನಃ ಸೋಽಗ್ನಿಃ । ಕರ್ಮದಿಂದಾಗಲಿ, ಬುದ್ಧಿಪೂರ್ವಕವಾಗಿಯಾಗಲಿ, ಸಮಸ್ತ ಐಶ್ವರ್ಯವನ್ನೂ ಪಡೆದಿರುವವನು ಅಗ್ನಿಯು.

॥ ವ್ಯಾಕರಣಪ್ರಕ್ರಿಯಾ ॥

ಶಂಸಾಮಃ—ಶಂಸು ಸ್ತುತೌ ಧಾತು. ಲಟ್ ಉತ್ತಮಪುರುಷ ಬಹುವಚನರೂಪ. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

ಮತಿಭಿಃ—ಮನ ಜ್ಞಾನೇ ಧಾತು. ಇದಕ್ಕೆ ಕರ್ಮಣಿಯಲ್ಲಿ ಕ್ತಿನ್ ಪ್ರತ್ಯಯ. **ಅನುದಾತ್ತೋಪದೇಶ**—ಸೂತ್ರದಿಂದ ಧಾತುವಿನ ಅನುನಾಸಿಕವಾದ ನಕಾರಕ್ಕೆ ಲೋಪ. ನಿತ್ತಾದುದರಿಂದ ಆದ್ಯುದಾತ್ತಸ್ವರ ಪ್ರಾಪ್ತವಾದರೆ **ಮಂತ್ರೇವಷೇಷಪಚೆ**—(ಪಾ. ಸೂ. ೩-೩-೯೬) ಎಂಬುದರಿಂದ ಪ್ರತ್ಯಯಕ್ಕೆ ಉದಾತ್ತಸ್ವರ ಬರುತ್ತದೆ.

ಗೋತಮಾಸಃ—ಪ್ರಥಮಾ ಜಸಿಗೆ **ಆಜ್ಜಸೇರಸುಕ್** ಎಂಬುದರಿಂದ ಅಸುಕಾಗಮ.

ವಾಜಂಭರಮ್—ಅಗ್ನಿಗೆ ಇದು ವೈದಿಕವಾದ ಸಂಜ್ಞೆ. ಡುಭೃಞ್ ಭರಣೇ ಧಾತು. ವಾಜ ಎಂಬ ಕರ್ಮವಾಚಕಪದವು ಉಪಪದವಾಗಿರುವಾಗ **ಸಂಜ್ಞಾಯಾಂ ಭೃತೃ ವೃಜಿ**—(ಪಾ. ಸೂ. ೩-೨-೪೬) ಎಂಬುದರಿಂದ ಈ ಧಾತುವಿಗೆ ಖಚ್ ಪ್ರತ್ಯಯ. ತಸ್ಮಿನ್ನಿತ್ತ್ವವಾಗಿ **ಸಾರ್ವಧಾತುಕಾರ್ಧಧಾತುಕಯೋಃ** ಎಂಬುದರಿಂದ ಧಾತುವಿಗೆ ಗುಣ. **ಅರುರ್ದ್ವಿಷದಜಂತಸ್ಯಮುಮ್** (ಪಾ. ಸೂ. ೬-೩-೬೭) ಎಂಬುದರಿಂದ ಖಜಂತ ಪರವಾದಾಗ ಪೂರ್ವದಲ್ಲಿರುವ ಅಜಂತವಾದ ವಾಜ ಎಂಬುದಕ್ಕೆ ಮುಮಾಗಮ. **ಮಿದಚೋಂತ್ಯಾತ್ಪರಃ** ಸೂತ್ರದಿಂದ ಅಂತ್ಯಾಚಿನ ಪರವಾಗಿ ಬರುತ್ತದೆ. ವಾಜಂಭರ ಶಬ್ದವಾಗುತ್ತದೆ. ಪ್ರತ್ಯಯ ಚಿತ್ತಾದುದರಿಂದ **ಚಿತಃ** ಎಂಬುದರಿಂದ ಅಂತೋದಾತ್ತಸ್ವರ ಬರುತ್ತದೆ.

ಮರ್ಜಯಂತಃ—ಮೃಜೂ ಶುದ್ಧೌ ಧಾತು. ಪ್ರೇರಣಾರ್ಥ ತೋರುವಾಗ **ಹೇತುಮತಿಚ** ಎಂಬುದರಿಂದ ಣಿಚ್. **ಸಂಜ್ಞಾಪೂರ್ವತೋವಿಧಿರನಿತ್ಯಃ** ಎಂಬ ವಚನದಿಂದ ಇಲ್ಲಿ **ಮೃಜೇರ್ವೃದ್ಧಿಃ** (ಪಾ. ಸೂ. ೭-೨-೧೧೪) ಎಂಬುದರಿಂದ ಧಾತುವಿನ ಇಕಿಗೆ ವೃದ್ಧಿ ಬರುವುದಿಲ್ಲ. ಣಿಜಂತದ ಮೇಲೆ ಲಡರ್ಥದಲ್ಲಿ ಶತೃ ಪ್ರತ್ಯಯ. ಶಪ್ ವಿಕರಣ. ತಸ್ಮಿನ್ನಿತ್ತ್ವವಾಗಿ ಣಿಜಿಗೆ ಗುಣ ಅಯಾದೇಶ. ಮಾರ್ಜಯತ್ ಶಬ್ದವಾಗುತ್ತದೆ. ಅದುಪದೇಶದ ಪರದಲ್ಲಿರುವುದರಿಂದ ಲಸಾರ್ವಧಾತುಕವು (ಶತೃ) **ತಾಸ್ಯನುದಾತ್ತೇಚ್**—ಸೂತ್ರದಿಂದ ಅನುದಾತ್ತವಾಗುತ್ತದೆ. ಆಗ ಣಿಚಿನ ಸ್ವರನೇ ಉಳಿಯುತ್ತದೆ. ಪ್ರಥಮಾಬಹುವಚನ ಪರವಾದಾಗ ಉಗಿತ್ತಾದುದರಿಂದ **ಉಗಿದಚಾಂ**—ಸೂತ್ರದಿಂದ ನುಮಾಗಮ. ನಕಾರಕ್ಕೆ ಅನುಸ್ವಾರಪರಸವರ್ಣ. ಜಸಿನ ಸಕಾರಕ್ಕೆ ರುತ್ವ, ವಿಸರ್ಗ.

ಮುಷ್ಣೂ—ಯುಚಿತುನುಷ್ಣು—ಎಂಬುದರಿಂದ ಸಂಹಿತಾದಲ್ಲಿ ದೀರ್ಘ ಬರುತ್ತದೆ.

ಜಗಮ್ಯಾತ್—ಗಮ್ಲೃ ಗತೌ ಧಾತು. ಲಿಙ್ ಪ್ರಥಮಪುರುಷ ಏಕವಚನದಲ್ಲಿ ತಿವ್. **ಇತಶ್ಚ** ಸೂತ್ರದಿಂದ ಇಕಾರಲೋಪ. **ಬಹುಲಂಛಂದಸಿ** ಎಂಬುದರಿಂದ ಶಪಿಗೆ ಶ್ಲು ಆದೇಶ. **ಶ್ಲೌ** ಎಂಬುದರಿಂದ ಧಾತುವಿಗೆ ದ್ವಿತ್ವ. ಅಭ್ಯಾಸಕ್ಕೆ ಹಲಾದಿಶೇಷ. **ಕುಹೋಶ್ಚುಃ** ಎಂಬುದರಿಂದ ಚುತ್ವದಿಂದ ಜಕಾರಾದೇಶ. **ಯೋಸುಟ್ಪರಸ್ಮೈಪೆ**—ಸೂತ್ರದಿಂದ ಯಾಸುಟಾಗಮ. **ಸುಟ್ತಿಥೋಃ** ಎಂಬುದರಿಂದ ಸುಡಾಗಮ. **ಲಿಙಃ.**

ಸಲೋಪೋನಂತಸ್ಯ ಎಂಬುದರಿಂದ ಎರಡು ಸಕಾರಗಳಿಗೂ ಲೋಪ. ಅತಿಜಂತದ ಪರದಲ್ಲಿರುವುದರಿಂದ ತಿಙ್ಶಿತಿಜಃ ಸೂತ್ರದಿಂದ ನಿಘಾತಸ್ವರ ಬರುತ್ತದೆ.

ಆರವತ್ತನೆಯ ಸೂಕ್ತವು ಸಮಾಪ್ತವು

ಆರವತ್ತೊಂದನೆಯ ಸೂಕ್ತವು

॥ ಸಾಯಣಭಾಷ್ಯ ॥

ಅಸ್ಯಾ ಇದು ಪ್ರ ತವಸ ಇತಿ ನೋಧಸ ಆರ್ಷಮೈಂದ್ರಂ ತ್ರೈಷ್ಟುಭಂ । ಅನುಕ್ರಾಂತಂ ಚ । ಅಸ್ಯಾ ಇದು ಸೋಳಶೇತಿ । ಅಸ್ಯ ಸೂಕ್ತಸ್ಯ ನೋಧಾ ದ್ರಷ್ಟೇತ್ಯೇತದ್ಬ್ರಾಹ್ಮಣೇ ಸಮಾಮ್ನಾಯತೇ । ಅಸ್ಯಾ ಇದು ಪ್ರ ತವಸೇ ತುರಾಯೇತಿ ನೋಧಾಸ್ತ ಏತೇ ಪ್ರಾತಃಸವನೇ। ಐ. ಬ್ರಾ. ೬-೧೪ । ಇತಿ ॥ ಷಳಹಸ್ತ್ರೋತ್ರಿಯಾವಾವಸನಯುಕ್ತವಾದು ಚತುರ್ವಿಂಶಮಹಾವ್ರತಾದಿಷ್ವಹಃಸು ಮಾಧ್ಯಂದಿನೇ ಸವನೇ ಬ್ರಾಹ್ಮಣಾಚ್ಛಂಸಿಶಸ್ತ್ರೇ ಬ್ರಹ್ಮಣಾ ತೇ ಬ್ರಹ್ಮಯುಜೇತ್ಯಸ್ಯಾ ಆರಂಭಣೀಯಾಯಾ ಊರ್ಧ್ವಮಹೀನಸೂಕ್ತಸಂಜ್ಞೋಮೇತಚ್ಛಂಸನೀಯಂ । ತಥಾ ಚ ಸೂತ್ರಿತಂ । ಅಸ್ಯಾ ಇದು ಪ್ರ ತವಸೇ ಶಾಸದ್ವಹ್ನಿರಿತೀತರಾವಹೀನಸೂಕ್ತೇ । ಆ. ೭-೪ । ಇತಿ । ಬ್ರಾಹ್ಮಣಂ ಚ ಭವತಿ । ತ ಏತೇ ಪ್ರಾತಃಸವನೇ ಷಳಹಸ್ತ್ರೋತ್ರಿಯಾಞ್ಛಸ್ತ್ವಾ ಮಾಧ್ಯಂದಿನೇಽಹೀನಸೂಕ್ತಾನಿ ಶಂಸಂತೀತಿ ॥

ಅನುವಾದವು—ಅಸ್ಯಾ ಇದು ಪ್ರ ತವಸೇ ಎಂಬ ಈ ಸೂಕ್ತವು ಹನ್ನೊಂದನೆಯ ಅನುವಾಕದಲ್ಲಿ ನಾಲ್ಕನೆಯ ಸೂಕ್ತವು. ಇದರಲ್ಲಿ ಹದಿನಾರು ಋಕ್ಕುಗಳಿರುವವು. ಈ ಸೂಕ್ತಕ್ಕೆ **ನೋಧಾಃ** ಎಂಬುವನು ಋಷಿಯು. ಇಂದ್ರನು ದೇವತೆಯು. ತ್ರಿಷ್ಟುಪ್ಛಂದಸ್ಸು. ಅನುಕ್ರಮಣಿಕೆಯಲ್ಲಿ **ಅಸ್ಯಾ ಇದು ಸೋಳಶೇತಿ** ಎಂದು ಹೇಳಿರುವುದು. ಈ ಸೂಕ್ತಕ್ಕೆ ನೋಧಾ ಎಂಬ ಋಷಿಯು ದ್ರಷ್ಟೃವೆಂದು ಐತರೇಯ ಬ್ರಾಹ್ಮಣದಲ್ಲಿ **ಅಸ್ಯಾ ಇದು ಪ್ರ ತವಸೇ ತುರಾಯೇತಿ ನೋಧಾಸ್ತ ಏತೇ ಪ್ರಾತಃಸವನೇ** । ಐ. ಬ್ರಾ. ೬-೧೪ । ಎಂದು ಉಕ್ತವಾಗಿರುವುದು. ಷಳಹಸ್ತ್ರೋತ್ರಿಯಾವಾವಸನಯುಕ್ತವಾದ ಚತುರ್ವಿಂಶಮಹಾವ್ರತಾದಿ ಯಾಗಗಳಲ್ಲಿ ಮಾಧ್ಯಂದಿನಸವನಕಾಲದಲ್ಲಿ ಬ್ರಾಹ್ಮಣಾಚ್ಛಂಸಿ ಎಂಬ ಋತ್ವಿಜನು ಪಠಿಸಬೇಕಾದ ಶಸ್ತ್ರಮಂತ್ರಗಳಲ್ಲಿ **ಬ್ರಹ್ಮಣಾ ತೇ ಬ್ರಹ್ಮಯುಜಾ** ಎಂಬ ಋಕ್ಕಿನಿಂದ ಪ್ರಾರಂಭಿಸಿ ಊರ್ಧ್ವಮಹೀನಸೂಕ್ತವೆಂಬ ಸಂಜ್ಞೆಯುಳ್ಳ ಈ ಸೂಕ್ತವನ್ನು ಹೇಳಬೇಕೆಂದು ಆಶ್ವಲಾಯನಶ್ರೌತಸೂತ್ರದ **ಅಸ್ಯಾ ಇದು ಪ್ರ ತವಸೇ ಶಾಸದ್ವಹ್ನಿರಿತೀತರಾವಹೀನಸೂಕ್ತೇ** ಎಂಬ ಸೂತ್ರದಿಂದ ವಿವೃತವಾಗಿರುವುದು. (ಆ. ೭-೪) ಈ ವಿಷಯದಲ್ಲಿ **ತ ಏತೇ ಪ್ರಾತಃಸವನೇಷಳಹಸ್ತ್ರೋತ್ರಿಯಾಞ್ಛಸ್ತ್ವಾ ಮಾಧ್ಯಂದಿನೇಽಹೀನಸೂಕ್ತಾನಿ ಶಂಸಂತೀತಿ** ಎಂದು ಬ್ರಾಹ್ಮಣವಾಕ್ಯವಿರುವುದು.

ಸೂಕ್ತ—೭೧

ಮಂಡಲ—೧ ॥ ಅನುವಾಕ—೧೧ ॥ ಸೂಕ್ತ—೭೧ ॥
ಅಷ್ಟಕ—೧ ॥ ಅಧ್ಯಾಯ—೪ ॥ ವರ್ಗ—೨೭, ೨೮, ೨೯ ॥

ಸೂಕ್ತದಲ್ಲಿರುವ ಋಕ್ಸಂಖ್ಯೆ—೧೬ ॥
ಋಷಿಃ—ನೋಧಾ ಗೌತಮಃ ॥
ದೇವತಾ—ಇಂದ್ರಃ ॥
ಛಂದಃ—ತ್ರಿಷ್ಟುಪ್ ॥

ಸಂಹಿತಾಪಾಠಃ

ಅಸ್ಯಾ ಇದು ಪ್ರ ತವಸೇ ತುರಾಯ ಪ್ರಯೋ ನ ಹರ್ಮಿ ಸ್ತೋಮಂ ಮಾಹಿನಾಯ ।
ಋಚೀಷಮಾಯಾಧ್ರಿಗವ ಓಹಮಿಂದ್ರಾಯ ಬ್ರಹ್ಮಾಣಿ ರಾತತಮಾ ॥ ೧ ॥

॥ ಪದಪಾಠಃ ॥

ಅಸ್ಮೈ । ಇತ್ । ಊಂ ಇತಿ । ಪ್ರ । ತವಸೇ । ತುರಾಯ। ಪ್ರಯೋಃ। ನ। ಹರ್ಮಿ। ಸ್ತೋಮಂ । ಮಾಹಿನಾಯ ।
ಋಚೀಷಮಾಯ । ಅಧ್ರಿಗವೇ । ಓಹಂ । ಇಂದ್ರಾಯ । ಬ್ರಹ್ಮಾಣಿ । ರಾತಽತಮಾ ॥ ೧ ॥

॥ ಸಾಯಣಭಾಷ್ಯಂ ॥

ಇದು ಇತಿ ನಿಪಾತಶ್ಚಯಂ ಪಾದಪೂರಣೇ । ಅಥಾಪಿ ಪಾದಪೂರಣಾಃ ಕಮಿಮಾಮಿದ್ವೀತಿ ಯಾಸ್ಕಃ । ಯದ್ವಾ । ಅವಧಾರಣಾರ್ಥಂ । ತವಸೇ ಪ್ರವೃದ್ಧಾಯ ತುರಾಯ ತ್ವರಮಾಣಾಯ । ಯದ್ವಾ। ತುರ್ವಿತ್ರೇ । ತತ್ರೂಣಾಂ ಹಿಂಸಿತ್ರೇ । ಮಾಹಿನಾಯ ಗುಣೈರ್ಮಹತೇ ಋಚೀಷಮಾಯ ಋಚಾ

ಸಮಾಯು । ಯಾದೃಶೀ ಸ್ತುತಿಃ ಕ್ರಿಯತೇ ತತ್ಸಮಾಯೇತ್ಯರ್ಥಃ । ಅಧ್ರಿಗವೇಽಧೃತಗಮನಾಯು । ಅಪ್ರತಿಹತಗಮನಾಯೇತ್ಯರ್ಥಃ । ತಥಾ ಚ ಯಾಸ್ಕಃ । ಅಧೃತಗಮನಕರ್ಮವನ್ನಿಂದ್ರೋಽಪ್ಯಧ್ರಿಗುರುಚ್ಯತೇ । ನಿ.೫-೧೧ । ಇತಿ । ಏವಂಭೂತಾಯಾಸ್ಮಾ ಇಂದ್ರಾಯು ಸ್ತೋಮಂ ಸ್ತೋತ್ರಂ ಪ್ರ ಹರ್ಮಿ । ಪ್ರಹರಾಮಿ । ಕರೋಮೀತ್ಯರ್ಥಃ । ತತ್ರ ದೃಷ್ಟಾಂತಃ । ಪ್ರಯೋ ನ । ಪ್ರಯು ಇತ್ಯನ್ನನಾಮ । ಯಥಾ ಬುಭುಕ್ಷಿತಾಯು ಪುರುಷಾಯು ಕಶ್ಚಿದನ್ನಂ ಪ್ರಹರತಿ । ಕೀದೃಶಂ ಸ್ತೋಮಂ । ಓಹಂ । ವಹನೀಯಂ । ಪ್ರಾಪಣೀಯಂ ವಾ । ಅತ್ಯಂತೋತ್ಕೃಷ್ಟಮಿತ್ಯರ್ಥಃ । ನ ಕೇವಲಂ ಸ್ತೋಮಂ ಕಿಂತರ್ಹಿ ಬ್ರಹ್ಮಾಣಿ ಹವಿರ್ಲಕ್ಷಣಾನ್ಯನ್ನಾನಿ । ಕೀದೃಶಾನಿ । ರಾತತಮಾ । ಪೂರ್ವೈರ್ಯಜಮಾನೈರತಿಶಯೇನ ದತ್ತಾನಿ । ಇಂದ್ರಂ ಸ್ತುತ್ಯಾ ಹವಿಷಾ ಚ ಪರಿಚರೇಮೇತಿ ಭಾವಃ ॥ ತುರಾಯು । ತುರ ತ್ವರಣೇ । ಔಗುಪಧಲಕ್ಷಣಃ ಕಃ । ಯದ್ವಾ । ತುರ್ವೀ ಹಿಂಸಾರ್ಥಃ । ತುರ್ವತೀತಿ ತುರಃ । ಪಚಾದ್ಯಚಿ ಛಾಂದಸೋ ವಲೋಪಃ । ಹರ್ಮಿ । ಹೃಞ್ ಹರಣೇ । ಬಹುಲಂ ಛಂದಸೀತಿ ಶಪೋ ಲುಕ್ । ಮಾಹಿನಾಯು । ಮಹ ಪೂಜಾಯಾಮಿತ್ಯಸ್ಮಾನ್ನಪೇರಿನಣ್ ಚ । ಉ. ೨-೫೬ । ಇತೀನಣ್ಪ್ರತ್ಯಯಃ । ಉಪಧಾವೃದ್ಧಿಶ್ಚ । ಋಚೀಷಮಾಯು । ಋಚೀಷನು ಋಚಾ ಸಮಃ । ನಿ. ೬-೨೩ । ಇತಿ ಯಾಸ್ಕಃ । ತೃತೀಯಾ ತತ್ಕೃತೇತಿ ಸಮಾಸಃ । ಪಾ. ೨-೧-೩೦ । ತೃತೀಯಾಪೂರ್ವಪದಪ್ರಕೃತಿಸ್ವರತ್ವಂ । ಪೃಷೋದರಾದಿತ್ವಾದೀಕಾರೋಪಜನಃ । ಸುಷಾಮಾದಿತ್ವಾತ್ ಷತ್ವಂ । ಕೇಚಿದಾಹುಃ । ಋಚ ಸ್ತುತಾವಿತ್ಯಸ್ಮಾದಿಗುಪಧಾತ್ಕಿದಿತೀಪ್ರತ್ಯಯಃ । ಕೃದಿಕಾರಾದಕ್ತಿನ ಇತಿ ಜೀಷ್ । ಋಚೀ ಸ್ತುತಿಃ । ತಯಾ ಸಮಃ । ಪೂರ್ವವತ್ ಷತ್ವಂ । ಅಸ್ಮಿನ್ಪಕ್ಷೇ ತೃತೀಯಾಪೂರ್ವಪದಪ್ರಕೃತಿಸ್ವರತ್ವೇ ಸತಿ ಜೀಷ ಉದಾತ್ತತ್ವೇನ ಭವಿತವ್ಯಂ । ತಥಾ ಚ ನ ದೃಶ್ಯತೇ । ತಸ್ಮಾತ್ಸ್ವರಶ್ಚಿಂತನೀಯಃ । ಯದ್ವಾ । ದಿವೋದಾಸಾದಿರ್ದ್ರಷ್ಟವ್ಯಃ । ಅಧ್ರಿಗವೇ । ಅಧೃತೋಽನ್ಯೇನಾನಿವಾಂತೋ ಗೌರ್ಗಮನಂ ಯಸ್ಯ ಸ ತಥೋಕ್ತಃ । ಗೋಸ್ತ್ರಿಯೋರುಪಸರ್ಜನಸ್ಯ । ಪಾ. ೧-೨-೪೮ । ಇತಿ ಹ್ರಸ್ವತ್ವಂ । ಪೃಷೋದರಾದಿತ್ವಾದಧೃತಶಬ್ದಸ್ಯಾಧ್ರಿಭಾವಃ । ಓಹಂ । ವಹತೇಃ ಕರ್ಮಣಿ ಘಞ್ ಛಾಂದಸಂ ಸಂಪ್ರಸಾರಣಂ । ಯದ್ವಾ । ತುಹಿರ್ ದುಹಿರ್ ಉಹಿರ್ ಅರ್ದ ನ ಇತ್ಯಸ್ಮಾದೋಹತೇಃ ಪೂರ್ವವದ್ಘಞ್ । ರಾತತಮಾ । ರಾ ದಾನ ಇತ್ಯಸ್ಮಾನ್ನಿಷ್ಠಾಂತಾದಾತಿಶಾಯಿನಿಕಸ್ತಮಪ್ । ಶೇಶ್ಛಂದಸೀತಿ ಶೇಲೋಪಃ ॥

॥ ಪ್ರತಿಪದಾರ್ಥ ॥

ತವಸೇ—ಬಲಶಾಲಿಯೂ । **ತುರಾಯ**—ಶೀಘ್ರಗಾಮಿಯೂ ಅಥವಾ ಶತ್ರುಹಿಂಸಕನೂ । **ಮಾಹಿನಾಯ**—ಗುಣಗಳಿಂದ ಶ್ರೇಷ್ಠನೂ । **ಋಚೀಷಮಾಯ**—ಸ್ತೋತ್ರಕ್ಕೆ ಅನುರೂಪನೂ । **ಅಧ್ರಿಗವೇ**—ಅಪ್ರತಿಹತವಾದ ಗಮನವುಳ್ಳವನೂ ಆದ । **ಅಸ್ಮೈ** ಇಂದ್ರಾಯ—ಈ ಇಂದ್ರನಿಗೆ । **ಓಹಂ**—ಉತ್ಕೃಷ್ಟವಾದ । **ಸ್ತೋಮಂ**—ಸ್ತೋತ್ರವನ್ನೂ । **ರಾತತಮಾ**—(ಹಿಂದಿನ ಯಜಮಾನರಿಂದ) ಮತ್ತು ಪ್ರೀತಿಯಿಂದ ದತ್ತವಾದ । **ಬ್ರಹ್ಮಾಣಿ**—ಹವಿಸ್ಸುಗಳನ್ನೂ । **ಪ್ರಯೋ ನ**—(ಹಸಿದವನಿಗೆ) ಅನ್ನವನ್ನು ಕೊಡುವಂತೆ । **ಪ್ರ ಹರ್ಮಿ**—ಚೆನ್ನಾಗಿ ಅರ್ಪಿಸುತ್ತೇನೆ

॥ ಭಾವಾರ್ಥ ॥

ಬಲಶಾಲಿಯೂ, ಶೀಘ್ರಗಾಮಿಯೂ, ಗುಣಗಳಿಂದ ಶ್ರೇಷ್ಠನೂ, ಸ್ತೋತ್ರಕ್ಕೆ ಅನುರೂಪನೂ, ಅಪ್ರತಿಹತವಾದ ಗಮನವುಳ್ಳವನೂ ಆದ ಇಂದ್ರನಿಗೆ ಉತ್ಕೃಷ್ಟವಾದ ಸ್ತೋತ್ರವನ್ನೂ ಮತ್ತು ಹಿಂದಿನ ಯಜಮಾನರಿಂದ ಪ್ರೀತಿಯಿಂದ ದತ್ತವಾದ ಹವಿಸ್ಸುಗಳನ್ನೂ ಹಸಿದವನಿಗೆ ಅನ್ನವನ್ನು ಕೊಡುವಂತೆ ಆದರದಿಂದ ಅರ್ಪಿಸುತ್ತೇನೆ.

English Translation.

I offer acceptable adorations and oblations, offered by the preceeding sacrificers, to that powerful, quick-coursing, mighty, praiseworthy and unobstructed Indra, as food (to a hungry man).

॥ ವಿಶೇಷ ವಿಷಯಗಳು ॥

ಇತ್-ಉ—ಇವು ವ್ಯಾಕರಣದಲ್ಲಿ ನಿಪಾತಗಳೆಂದು ಹೇಳಲ್ಪಟ್ಟಿವೆ. ಇವುಗಳಿಗೆ ಇಲ್ಲಿ ಅರ್ಥವಿಲ್ಲ. ಪಾದಪೂರಣಾರ್ಥವಾಗಿ ಇಡಲ್ಪಟ್ಟಿವೆ. **ಅಥಾಪಿ ಪಾದಪೂರಣಾಃ ಕಮಿಮೇಮಿದ್ವಿತಿ** ಎಂಬುದಾಗಿ ನಿರುಕ್ತಕಾರರು ವೇದದಲ್ಲಿಯೂ ಪಾದಪೂರಣಾರ್ಥಕವಾದ ಕಂ, ಈಂ, ಇತ್, ಉ ಎಂಬ ಕೆಲವು ಶಬ್ದಗಳನ್ನು ಹೇಳಿದ್ದಾರೆ.

ತುರಾಯ—**ತ್ವರಮಾಣಾಯ ಯದ್ವಾ ತುರ್ವಿತ್ರೇ ಶತ್ರೂಣಾಂ ಹಿಂಸಿತ್ರೇ**—ಜಾಗ್ರತೆಯಾಗಿ ಹೋಗುವವನು. ಅಥವಾ, ಶತ್ರುಗಳನ್ನು ಧ್ವಂಸಮಾಡುವವನು ಇಂತಹವನಿಗೆ ಎಂದು ಎರಡು ರೀತಿಯಲ್ಲಿಯೂ ಅರ್ಥಮಾಡಿದ್ದಾರೆ.

ಋಚೀಷಮಾಯ—**ಋಚಾ ಸಮಾಯ**—ಇದು ಇಂದ್ರಾಯ ಎಂಬ ಪದಕ್ಕೆ ವಿಶೇಷಣವಾಗಿದೆ. ಋಕ್ಕುಗಳಲ್ಲಿ ಇಂದ್ರನ ಸ್ತುತಿ ಯಾವರೀತಿ ಇರುವುದೋ, ಅದೇ ವಿಧವಾದ ಗುಣಗಳುಳ್ಳವನು ಎಂದರ್ಥ. ಋಚೀಷಮ ಋಚಾಸಮಃ (ನಿರು. ೬-೨೩).

ಅಧ್ರಿಗವೇ—**ಅಧೃತಗಮನಾಯ**—ತಡೆಯಿಲ್ಲದ ನಡಗೆಯುಳ್ಳವನು ಎಂದರ್ಥ. **ಅಧೃತಕರ್ಮವನ್ನಿಂದ್ರೋಽಪ್ಯಧ್ರಿಗುರುಚ್ಯತೇ** (ನಿರು. ೫-೧೧) ಎಂದು ನಿರುಕ್ತಕಾರರೇ ಈ ಅರ್ಥದಲ್ಲಿ ಅಧ್ರಿಗುಪದವನ್ನು ಇಂದ್ರಶಬ್ದ ಪರ್ಯಾಯವನ್ನಾಗಿ ಪಠಿಸಿದ್ದಾರೆ.

ಪ್ರಯೋ ನ—**ಪ್ರಯೆ ಇವ**—ಪ್ರಯಶ್ಶಬ್ದವು ಅನ್ನ ಪರ್ಯಾಯ ಪದವಾಗಿ (ನಿರು. ೩-೯) ನಿರುಕ್ತದಲ್ಲಿ ಪಠಿತವಾಗಿದೆ,

ಓಹಂ—ವಹ್ ಧಾತುವಿನಿಂದ ಹುಟ್ಟಿದ ಈ ಪದಕ್ಕೆ ಹೊರಲು ಯೋಗ್ಯವಾದದ್ದು. ಅಥವಾ ಒಯ್ಯಲು ಅರ್ಹವಾದದ್ದು ಎಂಬ ಎರಡರ್ಥವನ್ನೂ ಸ್ಪಷ್ಟಪಡಿಸಿದ್ದಾರೆ.

॥ ವ್ಯಾಕರಣಪ್ರಕ್ರಿಯಾ ॥

ತುರಾಯ—ತುರ ತ್ವರಣೇ ಧಾತು. **ಇಗುಪಧಜ್ಞಾಪ್ರೀಕಿರಃ ಕಃ** (ಪಾ. ಸೂ. ೩-೧-೧೩೫) ಎಂಬುದರಿಂದ ಇಗುಪಧವಾಗಿರುವುದರಿಂದ ಕಪ್ರತ್ಯಯ. **ಲಶಕ್ವತದ್ಧಿತೇ** ಎಂಬುದರಿಂದ ಕಕಾರ ಇತ್ವಾಗುತ್ತದೆ. ಆದುದರಿಂದ ಲಘೂಪಧಗುಣ ಬರುವುದಿಲ್ಲ. **ಅಥವಾ ತುರ್ವೀ ಹಿಂಸಾರ್ಥಃ ತುರ್ವತೀತಿ ತುರಃ. ನಂದಿಗ್ರಹಪಚಾದಿಭ್ಯೋ**—ಎಂಬುದರಿಂದ **ಅಚ್** ಪ್ರತ್ಯಯ. ಆಗ ಛಾಂದಸವಾಗಿ ವಕಾರಲೋಪ ಬರುತ್ತದೆ. **ಚಿತಃ** ಎಂಬುದರಿಂದ ಅಂತೋದಾತ್ತಸ್ವರ ಬರುತ್ತದೆ. **ಚತುರ್ಥೀ ಏಕವಚನಾಂತರೂಪ.**

ಹರ್ಮಿ—ಹೃಞ್ ಹರಣೇ ಧಾತು. ಲಟ್ ಉತ್ತಮಪುರುಷ ಬಹುವಚನದಲ್ಲಿ ಮಿಪ್ ಪ್ರತ್ಯಯ. **ಬಹುಲಂಛಂದಸಿ** ಎಂಬುದರಿಂದ ಶಪಿಗೆ ಲುಕ್. ಮಿಪ್ ನಿಮಿತ್ತವಾಗಿ ಧಾತುವಿಗೆ ಗುಣ. ಹರ್ಮಿ ಎಂದು ರೂಪವಾಗುತ್ತದೆ. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

ಮಾಹಿನಾಯೈ—ಮಹ ಪೂಜಾಯಾಂ ಧಾತು. ಇದಕ್ಕೆ **ಮಹೇರಿನಣ್ಚೆ** (ಉ. ಸೂ. ೨-೨೧೪) ಎಂಬುದರಿಂದ ಇನಣ್ ಪ್ರತ್ಯಯ. ಣಿತ್ವಾದುದರಿಂದ **ಅತೆಲುಪಧಾಯಾಃ** ಎಂಬುದರಿಂದ ಉಪಧಾವೃದ್ಧಿ. ಮಾಹಿನ ಶಬ್ದವಾಗುತ್ತದೆ. ಚತುರ್ಥೀ ಏಕವಚನಾಂತರೂಪ.

ಋಚೀಷಮಾಯೈ—ಋಚೀಷಮಃ ಋಚಾಸಮಃ (ನಿರು. ೬-೨೩) ಎಂದು ಯಾಸ್ಕರು ಹೇಳಿರುತ್ತಾರೆ. (ಋಕ್ಕಿಗೆ ಸಮಾನವಾದುದು). **ತೃತೀಯಾ ತತ್ಕೃತ**—(ಪಾ. ಸೂ. ೨-೧-೩೦) ಎಂಬುದರಿಂದ ತೃತೀಯಾ. ತತ್ಪುರುಷ ಸಮಾಸ. ತೃತೀಯಾಪೂರ್ವಪದ ಪ್ರಕೃತಿಸ್ವರ ಬರುತ್ತದೆ. ಪೃಷೋದರಾದಿಯಲ್ಲಿ ಸೇರಿರುವುದರಿಂದ ಈಕಾರಾಗಮ ಬರುತ್ತದೆ. ಸುಷ್ಠಾವಾದಿಯಲ್ಲಿ ಸೇರಿರುವುದರಿಂದ **ಸುಷ್ಠಾಮಾದಿಷುಚೆ** (ಪಾ. ಸೂ. ೮-೩-೯೫) ಎಂಬುದರಿಂದ ಸಮದ ಸಕಾರಕ್ಕೆ ಷತ್ವ. ಚತುರ್ಥೀ ಏಕವಚನಾಂತರೂಪ. ಕೆಲವರು ಹೇಳುತ್ತಾರೆ. ಋಚ ಸ್ತುತೌ ಧಾತು. ಇದಕ್ಕೆ **ಇಗುಪಧಾತ್ ಕಿತ್** (ಉ. ಸೂ. ೪-೫೫೯) ಎಂಬುದರಿಂದ ಇ ಪ್ರತ್ಯಯ. ಕಿದ್ವದ್ಭಾವವಿರುವುದರಿಂದ ಗುಣ ಬರುವುದಿಲ್ಲ. ಋಚಿ ಶಬ್ದವಾಗುತ್ತದೆ. ಇದಕ್ಕೆ ಸ್ತ್ರೀತ್ವ ವಿವಕ್ಷಾ ಮಾಡಿದಾಗ **ಕೃದಿಕಾರಾದಕ್ತಿನಃ** ಎಂಬುದರಿಂದ ಙೀಷ್ ಬರುತ್ತದೆ. ಋಚೀ ಸ್ತುತಿಃ ತಯಾ ಸಮಃ ಋಚೀಸಮಃ ಹಿಂದಿನಂತೆಯೇ ಷತ್ವ ಬರುತ್ತದೆ. ಈ ಪಕ್ಷದಲ್ಲಿಯೂ ತೃತೀಯಪೂರ್ವಪದ ಪ್ರಕೃತಿಸ್ವರವು ಬರಬೇಕಾದುದರಿಂದ ಙೀಷ್ ಉದಾತ್ತವಾದುದರಿಂದ ಅದರ ಸ್ವರವು ಶ್ರೂಯಮಾಣವಾಗಬೇಕಾಗುತ್ತದೆ. ಆದರೆ ಸಂಹಿತಾದಲ್ಲಿ ಹಾಗಿಲ್ಲ. ಆಗ ಸ್ವರವಿಷಯ ಚಿಂತಿಸಬೇಕಾದುದೇ. ಅಥವಾ ದಿವೋದಾಸಾದಿಗಣವು ಆಕೃತಿಗಣವೆಂದು ಅದರಲ್ಲಿ ಸೇರಿದೆಯೆಂದು ತಿಳಿಯಬೇಕು.

ಅಧ್ರಿಗವೇ—ಅಧೃತಃ ಅಸ್ಯೇನ ಅನಿವಾರಿತೋ ಗೌರ್ಗಮನಂ ಯಸ್ಯ ಸಃ ಅಧ್ರಿಗುಃ **ಗೋಸ್ತ್ರಿಯೋ-ರುಪಸರ್ಜನಸ್ಯ** (ಪಾ. ಸೂ. ೧-೨-೪೮) ಎಂಬುದರಿಂದ ಸಮಾಸದಲ್ಲಿ ಗೋಶಬ್ದವು ಅಪ್ರಧಾನವಾದುದರಿಂದ ಅದಕ್ಕೆ ಹ್ರಸ್ವ. **ಏಚೆ ಇಕ್ಹ್ರಸ್ವಾದೇಶೇ** ಎಂದು ನಿಯಮ ಮಾಡಿರುವುದರಿಂದ ಉಕಾರ ಬರುತ್ತದೆ. ಇದು ಪೃಷೋದರಾದಿಯಲ್ಲಿ ಸೇರಿರುವುದರಿಂದ ಅಧೃತ ಶಬ್ದಕ್ಕೆ ಅಧ್ರಿಭಾವ ಬರುವುದರಿಂದ ಅಧ್ರಿಗು ಶಬ್ದವಾಗುತ್ತದೆ. ಚತುರ್ಥೀ ಏಕವಚನಾಂತರೂಪ.

ಓಹಮ್—ವಹ ಪ್ರಾಪಣೇ ಧಾತು. ಬಹುಲಗ್ರಹಣದಿಂದ ಕರ್ಮಣಿಯಲ್ಲಿ ಘಞ್. ಆಗ ಛಾಂದಸವಾಗಿ ಧಾತುವಿಗೆ (ವಕಾರಕ್ಕೆ) ಸಂಪ್ರಸಾರಣ. **ಸಂಪ್ರಸಾರಣಾಚ್ಚಿ** ಸೂತ್ರದಿಂದ ಪೂರ್ವರೂಪ. ಉಹ್+ಅ ಎಂದಿರುವಾಗ ಪ್ರತ್ಯಯನಿಮಿತ್ತವಾಗಿ ಲಘೂಪಧಗೆ ಗುಣ ಓಹಶಬ್ದವಾಗುತ್ತದೆ. ಅಥವಾ ತುಹಿರ್. ದುಹಿರ್ ಉಹಿರ್ ಅರ್ಧನೇ ಧಾತು. ಇದಕ್ಕೆ ಹಿಂದಿನಂತೆ ಕರ್ಮಣಿಯಲ್ಲಿ ಘಞ್. ಆಗ ಲಘೂಪಧ ಗುಣದಿಂದ ಉಕ್ತರೂಪ ಸಿದ್ಧಿಯಾಗುತ್ತದೆ. ಪ್ರತ್ಯಯ ಞಿತ್ವಾದುದರಿಂದ **ಞ್ನಿತ್ಯಾದಿರ್ನಿತ್ಯಮ್** ಎಂಬುದರಿಂದ ಆದ್ಯುದಾತ್ತಸ್ವರ ಬರುತ್ತದೆ.

ರಾತಶಮಾ—ರಾ ದಾನೇ ಧಾತು. ಇದಕ್ಕೆ ಕ್ತ ಪ್ರತ್ಯಯ ರಾತ ಎಂದು ರೂಪವಾಗುತ್ತದೆ. ಇದಕ್ಕೆ **ಅತಿಶಯಾರ್ಥ** ವಿವಕ್ಷಾ ಮಾಡಿದಾಗ ತಮಪ್ ಪ್ರತ್ಯಯ. ನಪುಂಸಕದಲ್ಲಿ ಶಿ ಆದೇಶ ಬಂದಾಗ **ಶೇಶ್ಛಂದಸಿ ಬಹುಲಂ** ಎಂಬುದರಿಂದ ಶಿಗೆ ಲೋಪ.

। संहितापाठः ॥

अस्या इदु प्रयइव प्र यंसि भरामाङ्गूषं बाधे सुवृक्ति ।
इन्द्राय हृदा मनसा मनीषा प्रत्नाय पत्ये धियो मर्जयन्त ॥ ३ ॥

। पदपाठः ।

अस्यै । इत् । ऊं इति । प्रयःऽइव । प्र । यंसि । भरामि । आं. गूषं । बाधे । सुऽवृक्ति ।
इन्द्राय । हृदा । मनसा । मनीषा । प्रऽत्नाय । पत्ये । धियः । मर्जयन्त ॥ ३ ॥

॥ सायणभाष्यं ॥

अस्या इदु अस्या एवेन्द्राय । प्रय इत्यन्ननाम । प्रय इवान्नमिव प्र यंसि । प्रयच्छामि । तदेव स्पष्टीक्रियते । बाधे शत्रूणां बाधनाय समर्थं सुवृक्ति सुष्ठ्वर्जकमाङ्गूषं स्तोत्ररूपमाघोषं भरामि । संपादयामि । अन्येऽपि स्तोतारः प्रत्नाय पुराणाय पत्ये स्वामिन इन्द्राय हृदा हृदयेन मनसा तदंतर्वर्तिनान्तःकरणेन मनीषा मनीषया तज्जन्येन ज्ञानेन च धियः स्तुतीः कर्माणि वा मर्जयन्त । मार्जयन्ति । संस्कुर्वन्ति ॥ प्र यंसि । यमु उपरम इत्यस्माल्लटि पुरुषव्यत्ययः । बहुलं छंदसीति शपो लुक् । आंगूषं । आंगूषः स्तोम आघोषः । नि. ५.८८ । इति यास्कः । आङ् पूर्वाद्घुषेर्घञ् शपोदरादित्वाद्घोष इत्यस्य गू आदेशः । आङो ऽकारस्य लोपाभावश्च । थाथादिनोत्तरपदान्तोदात्तत्वं । बाधे । बाधृ विलोडन इत्यस्मात्कृत्यार्थे तवैकेनेति भावे केन्प्रत्ययः । एजंतत्वादव्ययत्वेन सुपो लुक् । मनीषा । सुपां सुलुगिति तृतीयायाः डादेशः । पत्ये । पतिः समास एव । पा. ८-४-७ । इति षिसंज्ञायाः समासविषयत्वात् षेर्ङ्-ङीति गुणाभावे यणादेशः ॥

॥ ಪ್ರತಿಪದಾರ್ಥ ॥

ಅಸ್ಮಾ ಇದು—ಇದೇ ಇಂದ್ರನಿಗೆ । **ಪ್ರಯೆಇವ**—ಅನ್ನದಂತೆ (ಗ್ರಾಹ್ಯವಾದ ಹವಿಸ್ಸನ್ನು) । **ಪ್ರಯೆಂಸಿ**—ಅರ್ಪಿಸುತ್ತೇನೆ । **ಬಾಧೇ**—ಶತ್ರುವನ್ನು ಹಿಂಸಿಸುವುದರಲ್ಲಿ । **ಸುವೃಕ್ತಿ**—ಒಳ್ಳೆಯ ಕಾರ್ಯಕಾರಿಯಾದ । **ಅಂಗೂಷಂ**—ಸ್ತೋತ್ರರೂಪವಾದ ಘೋಷವನ್ನು । **ಭರಾಮಿ**—ಪಠಿಸುತ್ತೇನೆ (ಇತರ ಸ್ತೋತೃಗಳೂ ಸಹ) **ಪ್ರತ್ನಾಯೆ**—ಪುರಾತನನೂ । **ಪತ್ಯೇ**—ಒಡೆಯನೂ ಆದ । **ಇಂದ್ರಾಯೆ**—ಇಂದ್ರನಿಗೆ । **ಹೃದಾ**—ಹೃದಯದಿಂದಲೂ । **ಮನಸಾ**—(ತದಂತರ್ವರ್ತಿಯಾದ) ಮನಸ್ಸಿನಿಂದಲೂ । **ಮನೀಷಾ**—(ಅದರಿಂದ ಉತ್ಪನ್ನವಾದ) ಜ್ಞಾನದಿಂದಲೂ । **ಧಿಯಃ**—ಸ್ತುತಿಗಳನ್ನು ಅಥವಾ ಕರ್ಮಗಳನ್ನು । **ಮರ್ಜಯೆಂತ**—ಸಿದ್ಧಪಡಿಸುತ್ತಾರೆ ॥

॥ ಭಾವಾರ್ಥ ॥

ಇಂದ್ರನಿಗೆ ಅನ್ನದಂತೆ ಗ್ರಾಹ್ಯವಾದ ಹವಿಸ್ಸನ್ನು ಅರ್ಪಿಸುತ್ತೇನೆ. ಶತ್ರುವನ್ನು ಹಿಂಸಿಸುವುದರಲ್ಲಿ ಕಾರ್ಯಕಾರಿಯಾದ ಸ್ತೋತ್ರರೂಪವಾದ ಘೋಷವನ್ನು ಪಠಿಸುತ್ತೇನೆ. ಇತರ ಸ್ತೋತೃಗಳೂ ಸಹ ಪುರಾತನನೂ ಒಡೆಯನೂ ಆದ ಇಂದ್ರನಿಗೆ ಹೃದಯದಿಂದಲೂ, ಮನಸ್ಸಿನಿಂದಲೂ ಯತ್ತು ಜ್ಞಾನದಿಂದಲೂ ಸಹ ಸ್ತುತಿಗಳನ್ನು ಅರ್ಪಿಸಿ ಪೂಜಿಸುತ್ತಾರೆ.

English Translation.

I offer (oblations acceptable as) food (to the hungry) to that Indra; I raise (to him) exclamations that may be of efficacy in discomfiting (my enimies); others (also) adore Indra, the ancient lord, in heart, in mind, and in understanding.

॥ ವಿಶೇಷ ವಿಷಯಗಳು ॥

ಅಸ್ಮಾ ಇದು—ಅಸ್ಮೈ ಏವ—ಇಲ್ಲಿ ಇತ್, ಉ ಎಂಬ ಅವ್ಯಯಗಳು ಏವಕಾರಾರ್ಥದಲ್ಲಿ ಉಪಯೋಗಿಸಲ್ಪಟ್ಟಿವೆ. ಇವನಿಗೇ (ಇಂದ್ರನಿಗೇ) ಎಂಬುದೇ ಇಲ್ಲಿ ಪ್ರಕರಣಾನುಗತವಾದ ಅರ್ಥ.

ಪ್ರಯಃ—ಇದು ಅನ್ನಕ್ಕೆ ಹೆಸರು. (ನಿರು. ೩-೯). ಅನ್ನನಾಮಗಳಲ್ಲಿ ಪಠಿತವಾಗಿದೆ.

ಅಜ್ಞೂಷಂ—ಸ್ತೋತ್ರೆರೂಪಮಾಘೋಷಂ—ಸ್ತುತಿರೂಪವಾದ ಘೋಷಣೆ. **ಅಜ್ಞೂಷಃ ಸ್ತೋಮ ಆಘೋಷಃ** (ನಿರು. ೫-೧೧) ಹೀಗೆ ನಿರುಕ್ತಕಾರರು ಸ್ತುತಿಘೋಷಣಾರ್ಥದಲ್ಲಿ ಹೇಳಿರುತ್ತಾರೆ.

ಹೃದಾ—ಹೃದಯದಿಂದ; ಇಲ್ಲಿ ಹೃದಯಶಬ್ದಕ್ಕೆ ಲಕ್ಷಣಯಾ ಹೃದಯಾಂತರ್ಗತವಾದ **ಅಂತಃಕರಣ** ವೆಂದರ್ಥ ಮಾಡಿರುವರು.

ಮರ್ಜಯೆಂತ—ಮಾರ್ಜಯೆಂತಿ ಸಂಸ್ಕುರ್ವಂತಿ—ಶುದ್ಧಿರೂಪವಾದ ಸಂಸ್ಕಾರವನ್ನು ಮಾಡುತ್ತಾರೆ.

॥ ವ್ಯಾಕರಣಪ್ರಕ್ರಿಯಾ ॥

ಹ್ವಯೆಂಸಿ—ಯಮ ಉಪರಮೇ ಧಾತು. ಲಡುತ್ತಮಪುರುಷ ಏಕವಚನಕ್ಕೆ ಬದಲಾಗಿ **ವ್ಯತ್ಯಯೋ ಬಹುಲಮ್** ಎಂಬುದರಿಂದ ಮಧ್ಯಮಪುರುಷದ ಸಿಪ್ ಪ್ರತ್ಯಯ. **ಬಹುಲಂಛಂದಸಿ** ಎಂಬುದರಿಂದ ಶಪ್ ವಿಕರಣಕ್ಕೆ ಲುಕ್. **ನಶ್ಚಾಪದಾಂತಸ್ಯ ಝಲಿ** ಎಂಬುದರಿಂದ ಮಕಾರಕ್ಕೆ ಅನುಸ್ವಾರ. ಅತಿಜಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

ಭರಾಮಿ—ಡುಭೃಞ್ ಭರಣೇ ಧಾತು. ಲಡುತ್ತಮಪುರುಷ ಏಕವಚನರೂಪ. ತಿಙಂತದ ಪರದಲ್ಲಿ ಬಂದುದರಿಂದ **ಅತಿಙಃ** ಎಂದು ಪರ್ಯುದಾಸ ಮಾಡಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಅದುಪದೇಶದ ಪರವಲ್ಲಿ **ಲಸಾರ್ವಧಾತುಕವು** ಬಂದುದರಿಂದ ಅನುದಾತ್ತವಾಗುತ್ತದೆ. ಆಗ ಧಾತುಸ್ವರ ಉಳಿಯುತ್ತದೆ.

ಆಜ್ರ್ಯಸಮ್—ಆಜ್ರ್ಯಸಃ ಸ್ತೋಮ ಆಸ್ಫೋಸಃ (ನಿರು. ೫-೧೧) ಇತಿ ಯಾಸ್ಕಃ । ಆಙ್‌ಪೂರ್ವಕವಾದ ಘುಷಿರ್ ವಿಶಬ್ದನೇ ಧಾತುವಿಗೆ ಘಞ್ ಪ್ರತ್ಯಯ. ಪೃಷೋದರಾದಿಯಲ್ಲಿ **ಸೇರಿರುವುದರಿಂದ** ಘೋ ಎಂಬುದಕ್ಕೆ ಗೂ ಎಂಬ ವರ್ಣವಿಕಾರವೂ ಆಙಿನ ಙಕಾರಕ್ಕೆ ಲೋಪಾಭಾವವೂ ಬರುತ್ತದೆ. **ಥಾಥಘಞ್ಕ್ತಾಜ**—(ಪಾ. ಸೂ. ೬-೨-೧೪೪) ಎಂಬುದರಿಂದ ಞಿತ್ ಸ್ವರವು ಬಾಧಿತವಾಗಿ ಉತ್ತರಪದಾಂತೋದಾತ್ತಸ್ವರ ಬರುತ್ತದೆ.

ಬಾಧೇ—ಬಾಧೃ ವಿಲೋಡನೇ ಧಾತು. ಇದಕ್ಕೆ ಕೃತ್ಯಾರ್ಥದಲ್ಲಿ **ಕೃತ್ಯಾಶ್ಚೇರ್ ತವ್ಯೈಕೇನ್**—(ಪಾ. ಸೂ. ೩-೪-೧೪) ಎಂಬುದರಿಂದ ಭಾವಾರ್ಥದಲ್ಲಿ ಕೇನ್ ಪ್ರತ್ಯಯ. ಏಜಂತವಾದ ಕೃದಂತವಾದುದರಿಂದ **ಕೃನ್ಮೇಜಂತಃ** ಎಂಬುದರಿಂದ ಅವ್ಯಯ ಸಂಜ್ಞೆಯನ್ನು ಹೊಂದುತ್ತದೆ. ಆಗ **ಅವ್ಯಯಾದಾಪ್ಸುಪಃ** ಎಂಬುದರಿಂದ ಇದರ ಮೇಲೆ ಬಂದಿರುವ ಸುಪಿಗೆ ಲುಕ್.

ಮನೀಷಾ—ಮನೀಷಾ ಆಕಾರಾಂತವಾದ ನಿತ್ಯಸ್ತ್ರೀಲಿಂಗಶಬ್ದ. ಇದಕ್ಕೆ ತೃತೀಯಾ ಏಕವಚನ ವಿವಕ್ಷಾಮಾಡಿದಾಗ ಅದಕ್ಕೆ **ಸುಪಾಂಸುಲುಕ್** ಎಂಬುದರಿಂದ ಡಾದೇಶ.

ಪತ್ಯೇ—ಪತಿ ಶಬ್ದ. ಇಕಾರಾಂತವಾದರೂ **ಪತಿಃಸಮಾಸ ಏವ** (ಪಾ. ಸೂ. ೧-೪-೮) ಎಂಬುದರಿಂದ ಸಮಾಸಮಾತ್ರದಲ್ಲಿ ಘಿಸಂಜ್ಞಾ ವಿಧಿಸಿರುವುದರಿಂದ ಕೇವಲವಾದುದಕ್ಕೆ ಬರುವುದಿಲ್ಲ. ಆದುದರಿಂದ ಚತುರ್ಥೀ ಏಕವಚನಪರವಾದಾಗ **ಘೇರ್ಙಿತಿ** ಎಂಬುದರಿಂದ ಗುಣ ಬರುವುದಿಲ್ಲ. **ಇಕೋಯಣಚಿ** ಎಂಬುದರಿಂದ ಯಣಾದೇಶ.

ಮರ್ಜಯೆಂತ—ಮೃಜೂ ಶುದ್ಧೌ ಧಾತು. ಣಿಜಂತದಮೇಲೆ ಛಾಂದಸವಾದ ಲಙ್. ಪ್ರಥಮಪುರುಷ ಬಹುವಚನದಲ್ಲಿ ಅಂತಾದೇಶ. **ಸಂಜ್ಞಾಪೂರ್ವಕೋ ವಿಧಿರನಿತ್ಯಃ ಬಹುಲಂಛಂದಸ್ಯಮಾಙ್ಯೋಗೇಽಪಿ** ಎಂಬುದರಿಂದ ಅಡಾಗಮ ಬರುವುದಿಲ್ಲ. ತಿಙಂತನಿಘಾತಸ್ವರ ಬರುತ್ತದೆ.

———

॥ संहितापाठः ॥

अस्मा इदु त्यमुपमं स्वर्णां भरामाꣳगूषमास्येन ।
मꣳहिष्ठमच्छोक्तिभिर्मतीनां सुवृक्तिभिः सूरिं वावृधध्यै ॥ ६ ॥

पदपाठः

अस्मै । इत् । ऊं इति । त्यं । उपऽमं । स्वःऽसां । भरामि ।
आंगूषं । आस्येन ।
मꣳहिष्ठं । अच्छोक्तिऽभिः । मतीनां । सुऽवृक्तिऽभिः । सूरिं । व-
वृधध्यै ॥ ६ ॥

॥ सायणभाष्यं ॥

अस्मा इदु अस्मा एनमेंद्रायेदु त्यं तं प्रसिद्धमुपममुपमानहेतुभूतं स्वर्णां सुष्ठ्वरणीयस्य धनस्य दातारं सूरिं विपश्चितमिंद्रं ववृधध्यै वर्धयितुं सुवृक्तिभिः सुष्ठ्वर्जकैः । समर्थैरित्यर्थः । मतीनां स्तुतीनां संबंधिभिरच्छोक्तिभिः स्वर्चैर्वचोभिर्मꣳहिष्ठमतिशयेन प्रवृद्धमेवंलक्षणमाꣳगूषमाघोषमास्येन मुखेन भरामि । करोम्याहेत्यर्थः ॥ उपमं । उपमीयतेऽनेनेत्युपमः । घञर्थे कविधानमिति करणे कप्रत्ययः । अतो लोप इटि चेत्याकारलोपः । स्वर्णां । सुपूर्वादर्तेर्विजंतात् स्वर्शब्दः । षणु दाने । जनसनखनक्रमगमो विट् । विड्वनोरनुनासिकस्यादित्यात्वं । सनोतेरनः । पा. ८-३-१०८ । इति षत्वं । भरामि । सार्वधातुकत्वान्न श्नाभावः । अच्छोक्तिभिः । अच्छा उक्त्योः येषां । बहुव्रीहौ पूर्वपदप्रकृतिस्वरत्वं । मतीनां । नामन्यतरस्यामिति नाम उदात्तत्वं । ववृधध्यै । वृधु वृद्धाविति स्मादेंतर्भावितण्यर्थात्तुमर्थे सेसेनिति कध्यैप्रत्ययः । कित्त्वाद्गुणाभावः । द्विर्भावश्छांदसः । यद्वा । यजुर्लुगंतादस्मिन्प्रत्यये आगमानुशासनस्यानित्यत्वाद्द्विरागाद्यभावः । अन्येषामपि दृश्यत इति सांहितिकमभ्यासस्य दीर्घत्वं । प्रत्ययोदात्तत्वं ॥

॥ प्रतिपदार्थ ॥

अस्मा इदु—ಇದೇ ಇಂದ್ರನಿಗೆ । त्यं—ಪ್ರಸಿದ್ಧನಾಗಿಯೂ । उपमं—ಮಾದರಿಯಾಗಿಯೂ । स्वर्णां—ಒಳ್ಳೆಯ ಧನದಾತನಾಗಿಯೂ । सूरिं—ಪ್ರಾಜ್ಞನಾಗಿಯೂ ಇರುವ ಇಂದ್ರನನ್ನು । ववृ-

ಧಥ್ಯೈ—ಉನ್ನತವಾಗಿ ಬೆಳೆಸುವುದಕ್ಕೋಸ್ಕರ। **ಸುವೃಕ್ತಿಭಿಃ**—ಸಮರ್ಥವಾಗಿ ಕಾರ್ಯಕಾರಿಗಳಾದ। **ಮತೀನಾಂ**—ಸ್ತೋತ್ರಗಳ । **ಅಚ್ಛೋಕ್ತಿಭಿಃ**—ಶುದ್ಧವಾದ ವಾಕ್ಯಗಳಿಂದ । **ಮಂಹಿಷ್ಠಂ**—ಅತ್ಯಂತ ವೃದ್ಧಿಹೊಂದಿದ । **ಅಂಗೂಷಂ**—ಸ್ತೋತ್ರಘೋಷವನ್ನು । **ಆಸ್ಯೇನ**—ಮುಖದಿಂದ । **ಭರಾಮಿ**—ಪಠಿಸುತ್ತೇನೆ ॥

॥ ಭಾವಾರ್ಥ ॥

ಪ್ರಸಿದ್ಧನಾಗಿಯೂ, ಮಾದರಿಯಾಗಿಯೂ, ಒಳ್ಳೆಯಧನದಾತನಾಗಿಯೂ ಮತ್ತು ಪ್ರಾಜ್ಞನಾಗಿಯೂ ಇರುವ ಇಂದ್ರನ ಶ್ರೇಷ್ಠವಾದ ಗುಣಗಾನಮಾಡುವುದಕ್ಕಾಗಿ ಸಮರ್ಥವಾದವೂ, ಸ್ತೋತ್ರಗಳಿಗೆ ಸಂಬಂಧಿಸಿದವೂ ಆದ ಶುದ್ಧವಾದ ವಾಕ್ಯಗಳಿಂದ ವೃದ್ಧಿಹೊಂದಿದ ಸ್ತೋತ್ರಘೋಷವನ್ನು ನನ್ನ ಮುಖದಿಂದ ಪಠಿಸುತ್ತೇನೆ.

English Translation.

I offer with my mouth a loud exclamation with powerful and pure words of praise, to exalt him who is the type (of all), the giver (of good things) the great, the wise.

॥ ವಿಶೇಷ ವಿಷಯಗಳು ॥

ಸ್ವರ್ಣಾಂ—ಸುಷ್ಠು ಆರಣೀಯೇಸ್ಯ ಧನಸ್ಯ ದಾತಾರಂ—ಪ್ರಕರ್ಷವಾದ ಧನಸಮುದಾಯವನ್ನು ಕೊಡುವ ಇಂದ್ರನನ್ನು.

ಮಂಹಿಷ್ಠಂ—ಅತಿಶಯವಾದ ರೀತಿಯಲ್ಲಿ ವೃದ್ಧಿಹೊಂದುವ. ಇದು ಅಂಗೂಷಂ ಎಂಬ ಪದಕ್ಕೆ ವಿಶೇಷಣ.

ಆಜ್ಞೂಷಂ—ಆಜ್ಞೂಷಃಸ್ತೋಮ ಆಘೋಷಃ (ನಿರು. ೫-೧೧) ಸ್ತುತಿವಿಷಯವಾದ ಘೋಷಣೆ.

ಉಪಮಂ—ಉಪಮೀಯತೇ ಅನೇನೇತಿ ಉಪಮಃ—ಉಪಮಾನ ಹೇತುಭೂತಂ—ಹೋಲಿಕೆಗೆ ಮೂಲಕಾರಣವಾದದ್ದು.

ಭರಾಮಿ—ಕರೋಮೀತ್ಯರ್ಥಃ—ಧರಿಸುತ್ತೇನೆ ಎಂದು ಧಾತುವಿನ ಅರ್ಥವಾಗಿದ್ದರೂ, ಇಲ್ಲಿ ಮಾಡುತ್ತೇನೆ ಎಂಬರ್ಥವನ್ನು ಹೇಳಿದ್ದಾರೆ.

॥ ವ್ಯಾಕರಣಪ್ರಕ್ರಿಯಾ ॥

ತ್ಯಮ್—ತ್ಯದ್ ಶಬ್ದ. ಅಮ್ ಪರವಾದಾಗ **ತ್ಯದಾದೀನಾಮಃ** ಎಂಬುದರಿಂದ ಅತ್ವ. **ಅತೋ-ಗುಣೇ** ಸೂತ್ರದಿಂದ ಪರರೂಪ. **ಅಮಿಪೂರ್ವಃ** ಸೂತ್ರದಿಂದ ಪೂರ್ವರೂಪ.

ಉಪಮಮ್—ಉಪಮೀಯತೇಽನೇನೇತಿ ಉಪಮಃ ಮಾಙ್ ಮಾನೇ ಧಾತು. **ಘಞಾರ್ಥೇಕ-ವಿಧಾನಮ್** ಎಂಬ ವಚನದಿಂದ ಕರಣಾರ್ಥದಲ್ಲಿ ಕ ಪ್ರತ್ಯಯ. ಕಿತ್ತ್ವಾದುದರಿಂದ **ಆತೋ ಲೋಪ ಇಟಿಚ** (ಪಾ. ಸೂ. ೬-೪-೬೪) ಎಂಬುದರಿಂದ ಆಕಾರಲೋಪ. ಪ್ರತ್ಯಯಸ್ವರದಿಂದ ಅಂತೋದಾತ್ತ.

स्वर्षाम्—सु गतौ धातु. सु पूर्ववागिरुवाग इदक्के **अन्येभ्योऽपि दृश्यन्ते** एंबुदरिंद विच् प्रत्ययु. तन्निमित्तवागि धातुविगे गुण. स्वर् शब्दवागुत्तदे. षणु दाने धातु. **जनसेनक्षयनक्रमगमोवित्** (पा. सू. ३-३-९८) एंबुदरिंद इदक्के वित् प्रत्ययु. इदु परवादाग **विड्वनोरनुनासिकस्यात्** (पा. सू. ६-४-४८) एंबुदरिंद आत्व. **सनोतेरनः** (पा. सू. ८-३-१०८) एंबुदरिंद धातु सकारक्के षत्व. स्वर्षा शब्दवागुत्तदे. **गतिकारकोपपदात् कृत्** एंबुदरिंद कृदुत्तरपद प्रकृतिस्वर बरुत्तदे. द्वितीयाय एकवच नान्तरूप.

भरामि—डुभृञ् भरणे धातु. लडुत्तमपुरुष एकवचनरूप. पादादियल्लि बंदुदरिंद निघातस्वर बरुवुदिल्ल. अदु पदेशद परदल्लि बंदुदरिंद लसार्वधातुकवु अनुदात्तवागुवुदरिंद धातुस्वर उळयुत्तदे.

मंहिष्ठम्—मह वृद्धौ धातु. इदक्के तृच् प्रत्ययु बंदाग महितृ शब्दवागुत्तदे. अतिशयार्थविवक्षे मूडिदाग इष्ठन् प्रत्ययु. **तुरिष्ठेमेयःसु** एंबुदरिंद तृचिगे लोप. इष्ठन् नित्वादुदरिंद आद्युदात्तस्वर बरुत्तदे.

आजोक्तिभिः—अच्यै उक्तयो येषाम्. अच्योक्तयः । **बहुव्रीहौ प्रकृत्या पूर्वपदम्** एंबुदरिंद पूर्वपदप्रकृतिस्वर बरुत्तदे. तृतीयाय बहुवचनान्तरूप.

मतीनाम्—मन ज्ञाने धातु. क्तिच् प्रत्ययु. अनुनासिक लोप. षष्ठी बहुवचनदल्लि आम् प्रत्ययु. अदक्के नुडागम. पूर्वद अजंतांगक्के दीर्घ. **नामन्यतरस्याम्** (पा. सू. ६-१-१८८) एंबुदरिंद नामिगे उदात्तस्वर बरुत्तदे.

वव्यधद्धिम्—व्यधु वृद्धौ धातु. णिजर्थवु (प्रेरणा) धात्वर्थांतर्भूतवागिरुवाग इदक्के तुमर्थेसेसेन—(पा. सू. ३-४-९) एंबुदरिंद कध्यै प्रत्ययु. कित्वादुदरिंद गुण बरुवुदिल्ल- प्रत्ययपरवादाग छांदसवागि धातुविगे द्वित्वादिगळु बरुत्तवे. अथवा अतिशयार्थदल्लि यङ्. **यजिजोरचिच** एंबुदरिंद अदक्के लुक्. यङ्लुबंतद मेले हिंदिनंते कद्धिम् प्रत्ययु. आग **अगमानुशासनमनित्यम्** एंब वचनदिंद यङ् निमित्तवागि धातुविगे द्वित्व बंदाग रीगागमवु अभ्यासक्के बरुवुदिल्ल. **अन्येषामपि दृश्यते** (पा. सू. ६-३-१३८) एंबुदरिंद संहितादल्लि अभ्यासक्के दीर्घ बरुत्तदे. एजंतवादुदरिंद **कृन्मेजंतः** सूत्रदिंद अव्ययसंज्ञेयन्नु हॊंदुत्तदे. प्रत्ययद आद्युदात्तस्वरदिंद धकारोत्तरवाकारवु उदात्तवागुत्तदे.

॥ ಸಂಹಿತಾಪಾಠಃ ॥

ಅಸ್ಮಾ ಇದು ಸ್ತೋಮಂ ಸಂ ಹಿನೋಮಿ ರಥಂ ನ ತಷ್ಟೇವ ತತ್ಸಿನಾಯ ।
ಗಿರಶ್ಚ ಗಿರ್ವಾಹಸೇ ಸುವೃಕ್ತೀಂದ್ರಾಯ ವಿಶ್ವಮಿನ್ವಂ ಮೇಧಿರಾಯ ॥೪॥

॥ ಪದಪಾಠಃ ॥

ಅಸ್ಮೈ । ಇತ್ । ಊಂ ಇತಿ । ಸ್ತೋಮಂ । ಸಂ । ಹಿನೋಮಿ । ರಥಂ । ನ ।
ತಷ್ಟಾ೨ಇವ । ತತ್ಸಿನಾಯ ।
ಗಿರಃ । ಚ । ಗಿರ್ವಾಹಸೇ । ಸು೨ವೃಕ್ತಿ । ಇಂದ್ರಾಯ । ವಿಶ್ವಂ೨ಇನ್ವಂ । ಮೇಧಿ-
ರಾಯ ॥ ೪ ॥

॥ ಸಾಯಣಭಾಷ್ಯಂ ॥

ಅಸ್ಮಾ ಏವೇಂದ್ರಾಯ ಸ್ತೋಮಂ ಶಸ್ತ್ರರೂಪಂ ಸ್ತೋತ್ರಂ ಸಂ ಹಿನೋಮಿ । ಪ್ರೇರಯಾಮಿ । ತತ್ರ ದೃಷ್ಟಾಂತಃ । ತಷ್ಟೇವ ತಷ್ಟಾ ಸಿನಮಿತ್ಯನ್ನನಾಮ । ಸಿನಮನ್ನಂ ಭವತಿ ಸಿನಾತಿ ಭೂತಾನೀತಿ ಯಾಸ್ಕಃ। ನಿ. ೫-೫ । ತೇನ ರಥೇನ ಸಿನಮನ್ನಂ ಯಸ್ಯ ಸ ತಥೋಕ್ತಃ । ತಸ್ಮೈ ರಥಸ್ವಾಮಿನೇ ತಷ್ಟೇವ ತಷ್ಟಾ ತಕ್ಷಕೋ ರಥನಿರ್ಮಾತಾ ರಥಂ ನ । ಯಥಾ ರಥಂ ಪ್ರೇರಯತಿ ತದ್ವತ್ । ಇವೇತ್ಯೇತತ್ಪದಪೂರಣಂ । ತಥಾ ಗಿರ್ವಾಹಸೇ ಗೀರ್ಭಿಃ ಸ್ತುತಿಭಿರುಹ್ಯಮಾನಾಯೇಂದ್ರಾಯ ಗಿರಶ್ಚ ಶಸ್ತ್ರಸಂಬಂಧಿನೀಃ ಕೇವಲಾ ಋಚಶ್ಚ ಸುವೃಕ್ತಿ ಶೋಭನಮಾವರ್ಜನಂ ಯಥಾ ಭವತಿ ತಥಾ ಪ್ರೇರಯಾಮಿ । ತಥಾ ಮೇಧಿರಾಯ ಮೇಧಾವಿನ ಇಂದ್ರಾಯ ವಿಶ್ವಮಿನ್ವಂ ವಿಶ್ವವ್ಯಾಪಕಂ ವಿಶ್ವೈರ್ವ್ಯಾಪ್ತಂ ಸರ್ವೋತ್ಕೃಷ್ಟಂ ಹವಿಶ್ಚ ಸಂ ಹಿನೋಮೀತ್ಯನುಷಂಗಃ ॥ ಹಿನೋಮಿ । ಹಿ ಗತೌ ವೃದ್ಧೌ ಚ । ಸ್ವಾದಿತ್ವಾತ್ ಶ್ನುಃ । ತಷ್ಟೇವ । ತಕ್ಷೂ ತ್ವಕ್ಷೂ ತನೂಕರಣೇ । ತಾಚ್ಛೀಲಿಕಸ್ತೃನ್ । ಊದಿತ್ತ್ವಾತ್ತ್ವಕ್ಷ ಇಡಭಾವಃ।ಸ್ತೋಃ ಸಂಯೋಗಾದ್ಯೋರಂತೇ ಚೇತಿ ಕಕಾರಲೋಪಃ । ನಿತ್ತ್ವಾದಾದ್ಯುದಾತ್ತತ್ವಂ । ತತ್ಸಿನಾಯ । ಶಿನಶಬ್ದಃ ಷಿಞ್ ಬಂಧನ ಇತ್ಯಸ್ಮಾದ್ದಿಷ್ಷಿಞ್ಷೇಃ ಷುಟ್ಯಭ್ಯೋ ನಕ್ । ಉ. ೩-೨ । ಇತಿ ನಕ್ಪ್ರತ್ಯಯಾಂತಃ । ಬಹುವ್ರೀಹೌ ಪೂರ್ವಪದಪ್ರಕೃತಿಸ್ವರತ್ವಂ । ಗಿರ್ವಾಹಸೇ । ವಾಹಿಹಾಧಾಭ್ಯೋ ಹೃಶ್ಚಂದಸೀತಿ ವಹತೇಃ ಕೇವಲಾದ್ವಿಹಿತೋ೨ಸುನ್ಪ್ರತ್ಯಯೋ ಗತಿಕಾರಕಯೋರಪಿ ಪೂರ್ವಪದಪ್ರಕೃತಿಸ್ವರತ್ವಂ ಚೇತಿ ವಚನಾತ್ಕಾರಕಪೂರ್ವಸ್ಯಾಪಿ ಭವತಿ ಪೂರ್ವಪದಪ್ರಕೃತಿಸ್ವರತ್ವಂ ಚ । ಣೆದಿತ್ಕೃನುವೃತ್ತೇರುಪಧಾವೃದ್ಧಿಃ । ಹಲಿ ಚೇತಿ ದೀರ್ಘಾಭಾವಶ್ಛಾಂದಸಃ ।ವಿಶ್ವಮಿನ್ವಂ । ಇವಿ ವ್ಯಾಪ್ತೌ । ವಿಶ್ವಮಿನ್ವತಿ ವ್ಯಾಪ್ನೋತೀತಿ ವಿಶ್ವಮಿನ್ವಂ । ಪಚಾದ್ಯಚ್ । ಲುಗಭಾವಶ್ಛಾಂದಸಃ । ಯದ್ವಾ । ಖಜ್ಪ್ರತ್ಯಯೋ ಬಹುಲವಚನಾದಸ್ಮಾದಪಿ ಧಾತೋರ್ದ್ರಷ್ಟವ್ಯಃ । ಮೇಧಿರಾಯ । ಮೇಧಾ ಅಸ್ಯಾಸ್ತೀತಿ ಮೇಧಿರಃ । ಮೇಧಾರಥಾಭ್ಯಾಮಿರನಿರಜೌ ವಕ್ತವ್ಯೌ । ಪಾ. ೫-೨-೧೦೯-೩ । ಇತಿ ಮತ್ವರ್ಥೀಯ ಇರನ್ । ನಿತ್ತ್ವಾದಾದ್ಯುದಾತ್ತತ್ವಂ ॥

॥ ಪ್ರತಿಪದಾರ್ಥ ॥

ತತ್ಸಿನಾಯ—(ಸಾರಥಿಗೆ) ಅನ್ನಸಂಪಾದನೆಗಾಗಿ । **ತಷ್ಟೇವ ರಥಂ ನ**—ಬಡಗಿಯು ರಥವನ್ನು ನಿರ್ಮಿಸುವಂತೆ । **ಗಿರ್ವಾಹಸೇ**—ಸ್ತುತಿಗಳಿಂದ ವರ್ಧಿಸಲ್ಪಡುವ (ವೃದ್ಧಿಹೊಂದುವ) । **ಇಂದ್ರಾಯ**—ಇಂದ್ರನಿಗೋಸ್ಕರ । **ಸ್ತೋಮಂ**—ಶಸ್ತ್ರರೂಪವಾದ ಸ್ತೋತ್ರವನ್ನೂ । **ಗಿರಶ್ಚ**—(ಶಸ್ತ್ರಸಂಬಂಧಗಳಾದ ಕೇವಲ) ಋಕ್ಕುಗಳನ್ನೂ । **ಸುವೃಕ್ತಿ**—ಒಳ್ಳೆಯ ಕಾರ್ಯಕಾರಿಗಳಾಗುವಂತೆ । **ಸಂ ಹಿನೋಮಿ**—ನಿರ್ಮಿಸಿ ಅರ್ಪಿಸುತ್ತೇನೆ (ಮತ್ತು) । **ಮೇಧಿರಾಯ**—ಪ್ರಾಜ್ಞನಾದ ಇಂದ್ರನಿಗೆ । **ವಿಶ್ವಮಿನ್ವಂ**—ಸರ್ವಶ್ರೇಷ್ಠವಾದ ಹವಿಸ್ಸನ್ನು । (**ಸಂ ಹಿನೋಮಿ**—ನಿರ್ಮಿಸಿ ಅರ್ಪಿಸುತ್ತೇನೆ) ॥

॥ ಭಾವಾರ್ಥ ॥

ಬಡಗಿಯು ಸಾರಥಿಯ ಅನ್ನ ಸಂಪಾದನೆಗಾಗಿ ರಥವನ್ನು ನಿರ್ಮಿಸುವಂತೆ ನಾನೂ ಸಹ ಸ್ತುತಿಗಳಿಂದ ವೃದ್ಧಿಹೊಂದುವ ಇಂದ್ರನಿಗಾಗಿ ಶಸ್ತ್ರರೂಪವಾದ ಸ್ತೋತ್ರವನ್ನೂ ಮತ್ತು ತತ್ಸಂಬಂಧವಾದ ಕೇವಲ ಋಕ್ಕುಗಳನ್ನೂ ಸಹ ಸಾರ್ಥಕಗಳಾಗುವಂತೆ ನಿರ್ಮಿಸಿ ಅರ್ಪಿಸುತ್ತೇನೆ. ಮತ್ತು ಪ್ರಾಜ್ಞನಾದ ಇಂದ್ರನಿಗೆ ಸರ್ವಶ್ರೇಷ್ಠವಾದ ಹವಿಸ್ಸನ್ನೂ ಅರ್ಪಿಸುತ್ತೇನೆ

English Translation.

I send hymns to him (Indra) as the constructor of a car drives it to its owner, (so that he) may thence (obtain) food; I send praises to him who is entitled to commendation; and most excellent oblations to the wise Indra.

॥ ವಿಶೇಷವಿಷಯಗಳು ॥

ಸ್ತೋಮಂ—**ಶಸ್ತ್ರರೂಪಂ ಸ್ತೋತ್ರಂ**—ಯಾಗದಲ್ಲಿ ಇಂದ್ರನನ್ನು ಸ್ತುತಿಸುವ ಹಲವು ಮಂತ್ರಗಳಿಗೆ ಶಸ್ತ್ರಗಳೆಂದು ಹೆಸರು. ಇಂತಹ ಮಂತ್ರಸಮೂಹಗಳಿಗೆ ಸ್ತೋಮವೆಂದು ಹೆಸರು.

ತತ್ಸಿನಾಯ—**ತೇನ ರಥೇನ ಸಿನಮನ್ನಂ ಯಸ್ಯ** ಎಂಬ ವ್ಯುತ್ಪತ್ತಿಯಂತೆ ರಥಸಹಿತವಾದ ಹವಿರ್ಲಕ್ಷಣವಿಶಿಷ್ಟವಾದ ಅನ್ನದಿಂದ ಎಂಬುದು ಇದರ ಅರ್ಥ. **ಸಿನಮನ್ನಂ ಭವತಿ ಸಿನಾತಿ ಭೂತಾನಿ** (ನಿರು. ೫-೫) ಎಂದು ನಿರುಕ್ತದಲ್ಲಿ ಸಿನಶಬ್ದಕ್ಕೆ ಅನ್ನ ಎಂಬರ್ಥವನ್ನು ಕಲ್ಪಿಸಿದ್ದಾರೆ.

ತಷ್ಟೇವ—**ತಷ್ಟಾ ಇವ**—**ತಕ್ಷಕೋ ರಥನಿರ್ಮಾತಾ** ರಥವನ್ನು ನಿರ್ಮಿಸುವ ತಕ್ಷಕನಂತೆ ಎಂದರ್ಥ. ಇಲ್ಲಿ ಇವ ಶಬ್ದವು ಕೇವಲ ಪಾದಪೂರಣಾರ್ಥಕ. ಏಕೆಂದರೆ ಇದೇ ಅರ್ಥಕೊಡುವ ನ ಶಬ್ದವು ರಥಶಬ್ದಾನ್ವಯದಿಂದ ಈ ಅರ್ಥವನ್ನು ಕೊಡುವುದು.

ಗಿರ್ವಾಹಸೇ—**ಗೀರ್ಭಿಃ ಸ್ತುತಿಭಿಃ ಉದ್ಯಮಾನಾಯ**—ಇದು ಇಂದ್ರಾಯ ಎಂಬ ಪದಕ್ಕೆ ವಿಶೇಷಣ. ಹೋತೃವು ಮಾಡಿದ ಸ್ತುತಿ ವಚನಗಳನ್ನು ಪೂರ್ಣವಾಗಿ ಅಂಗೀಕರಿಸುವವನು ಎಂದರ್ಥ.

ಸುವೃಕ್ತಿ—**ಶೋಭನಮಾವರ್ಜನಂ ಯಥಾ ಭವತಿ ತಥಾ ಪ್ರೇರಯಾಮಿ** ಇಂದ್ರನಿಗೆ ಅತ್ಯಂತ ತೃಪ್ತಿಯಾಗುವಂತೆ ಸ್ತೋತ್ರಮಾಡುತ್ತೇನೆ. ಅಥವಾ ಸ್ತೋತ್ರಮಂತ್ರಗಳನ್ನು ಆರೀತಿ ಪ್ರೇರಿಸುತ್ತೇನೆ ಎಂದು ತಾತ್ಪರ್ಯಾರ್ಥ.

ವಿಶ್ವಮಿನ್ವಂ—**ವಿಶ್ವವ್ಯಾಪಕಂ ವಿಶ್ವೈರ್ವ್ಯಾಪ್ತಂ ಸರ್ವೋತ್ಕೃಷ್ಟಂ ಹವಿಷ್ಕೃತಂ ಹಿನೋಮೀತ್ಯರ್ಥಃ**—**ವಿಶ್ವಮಿನ್ವತಿ ವ್ಯಾಪ್ನೋತಿ ಇತಿ ವಿಶ್ವಮಿನ್ವಂ**—ಇದು ಹವಿಃ ಎಂಬ ಪದಕ್ಕೆ ವಿಶೇಷಣವಾಗಿದೆ. ಈ ಹವಿಸ್ಸು, ಪ್ರಪಂಚದಲ್ಲೆಲ್ಲಾ ಪ್ರಸಿದ್ಧವಾದದ್ದು, ಅಥವಾ ವಿಶ್ವನನ್ನೇ ವ್ಯಾಪಿಸಿದುದು, ವಿಶ್ವಾತ್ಮಕವಾದದ್ದು ಸರ್ವೋತ್ಕೃಷ್ಟವಾದದ್ದು, ಎಂದು ಹವಿಸ್ಸಿನ ಸ್ತುತಿ ಇಲ್ಲಿದೆ.

॥ ವ್ಯಾಕರಣಪ್ರಕ್ರಿಯಾ ॥

ಹಿನೋಮಿ—ಹಿ ಗತೌ ವೃದ್ಧೌ ಚ. ಧಾತು ಸ್ವಾದಿ. ಲಡುತ್ತಮಪುರುಷದಲ್ಲಿ ಮಿಪ್ ಪ್ರತ್ಯಯ. **ಸ್ವಾದಿಭ್ಯಃ ಶ್ನುಃ** ಎಂಬುದರಿಂದ ಶ್ನು ವಿಕರಣ. **ಸಾರ್ವಧಾತುಕಮಪಿತ್** ಎಂಬುದರಿಂದ ಇದು ಙಿದ್ವದ್ಭಾವವನ್ನು ಹೊಂದುವುದರಿಂದ ಧಾತುವಿಗೆ ಗುಣ ಬರುವುದಿಲ್ಲ. ಮಿಪ್ ನಿಮಿತ್ತವಾಗಿ ವಿಕರಣಕ್ಕೆ ಗುಣ. ತಿಙಂತ ನಿಘಾತಸ್ವರ ಬರುತ್ತದೆ.

ತಕ್ಷೇವ—ತಕ್ಷೂ ತ್ವಕ್ಷೂ ತನೂಕರಣೇ ಧಾತು. ಇದಕ್ಕೆ ತಚ್ಛೀಲಾರ್ಥದಲ್ಲಿ ತೃನ್ ಪ್ರತ್ಯಯ. ಧಾತುವು **ಊದಿತ್ತಾ**ದುದರಿಂದ **ಸ್ವರತಿಸೂತಿ**—(**ಪಾ.** ಸೂ. ೭-೨-೪೪) ಎಂಬುದರಿಂದ ಇಡ್ವಿಕಲ್ಪವಿಧಾನ ಮಾಡಿರುವುದರಿಂದ ಇಲ್ಲಿ ಇಡಾಗಮ ಬರುವುದಿಲ್ಲ. **ತಕ್ಷ್+ತೃ** ಎಂದಿರುವಾಗ ಝಲ್ ಪರವಾದುದರಿಂದ **ಸ್ಕೋಃ ಸಂಯೋಗಾದ್ಯೋರಂತೇಚ** ಎಂಬುದರಿಂದ ಸಂಯೋಗಾದಿಯಾದ ಕಕಾರಕ್ಕೆ ಲೋಪ. **ಷ್ಟುನಾಷ್ಟುಃ** ಎಂಬುದರಿಂದ **ಪ್ರತ್ಯಯಂ**ನ ತಕಾರಕ್ಕೆ ಷ್ಟುತ್ವ. ತಷ್ಟೃ ಶಬ್ದವಾಗುತ್ತದೆ. ಪ್ರತ್ಯಯ ನಿತ್ತಾದುದರಿಂದ ಆದ್ಯುದಾತ್ತ ಸ್ವರ ಬರುತ್ತದೆ. ಪ್ರಥಮಾ ಸು ಪರವಾದಾಗ **ಋದುಶನಸ್ಪುರು** ಸೂತ್ರದಿಂದ ಅನಙಾದೇಶ. **ಅಪ್ತೃನ್-ತೃಚ್**—ಎಂಬುದರಿಂದ ಉಸಥಾದೀರ್ಘ ತಷ್ಟಾ ಎಂದು ರೂಪವಾಗುತ್ತದೆ.

ತಸ್ಯಿನಾಯ—ಸಿನ ಶಬ್ದ. ಷಿಞ್ ಬಂಧನೇ ಧಾತು. ಇದಕ್ಕೆ **ಇಷ್ಷಿಞಿ ಜಿ ದೀಙಭ್ಯ-ವಿಭ್ಯೋ ನಕ್** (ಉ. ಸೂ. ೩-೨೮೨) ಎಂಬುದರಿಂದ ನಕ್ ಪ್ರತ್ಯಯ. ಧಾತ್ವಾದಿಗೆ ಸಕಾರಾದೇಶ. ಕಿತ್ತಾದುದರಿಂದ ಧಾತುವಿಗೆ ಗುಣ ಬರುವುದಿಲ್ಲ. **ತೇನ ಸಿನಂ ಯಸ್ಯ ಸಃ ತಸ್ಯಿನಃ ಬಹುವ್ರೀಹೌಪ್ರಕೃತ್ಯಾ ಪೂರ್ವಪದಮ್** ಎಂಬುದರಿಂದ ಪೂರ್ವಪದ ಪ್ರಕೃತಿಸ್ವರ ಬರುತ್ತದೆ.

ಗಿರ್ವಾಹಸೇ—ವಹ ಪ್ರಾಪಣೇ ಧಾತು. **ವಹಿಹಾಧಾಞ್ಭ್ಯಶ್ಛಂದಸಿ** (ಉ. ಸೂ. ೪-೬೬೦) ಎಂಬುದರಿಂದ ಕೇವಲವಾದ ವಹ್ ಧಾತುವಿಗೆ ವಿಹಿತವಾದ ಅಸುನ್ ಪ್ರತ್ಯಯವು **ಗತಿಕಾರಕಯೋರಪಿ ಪೂರ್ವಪದಪ್ರಕೃತಿಸ್ವರತ್ವಂಚ** (ಉ. ಸೂ. ೪-೬೬೬) ಎಂಬ ವಚನವಿರುವುದರಿಂದ ಕಾರಕಪೂರ್ವವಾಗಿರುವಾಗಲೂ ಬರುತ್ತದೆ. ಆದರೊಡನೆ ಪೂರ್ವಪದಪ್ರಕೃತಿಸ್ವರವೂ ಬರುತ್ತದೆ. ಹಿಂದಿನ ಸೂತ್ರದಿಂದ ಣಿತ್ ಎಂದು ಅನುವೃತ್ತವಾಗಿರುವುದರಿಂದ ಅಸುನಿಗೆ ಣಿದ್ವದ್ಭಾವವಿರುವುದರಿಂದ ಧಾತುವಿನ ಉಪಧೆಗೆ **ಅತಉಪಧಾಯಾಃ** ಎಂಬುದರಿಂದ ವೃದ್ಧಿ ಬರುತ್ತದೆ. ಗಿರ್ವಾಹಸ್ ಶಬ್ದವಾಗುತ್ತದೆ. ಗಿರ್ ಎಂಬಲ್ಲಿ ಯದ್ಯಪಿ ಹಲ್ ಪರವಾದುದರಿಂದ **ಹಲಿಚ** ಎಂಬುದರಿಂದ ದೀರ್ಘ ಬರಬೇಕಾಗುತ್ತದೆ. ಆದರೆ ಛಾಂದಸವಾಗಿ ಇಲ್ಲಿ ದೀರ್ಘ ಬರುವುದಿಲ್ಲ. **ಚತುರ್ಥೀ** ಏಕವಚನರೂಪ.

ವಿಶ್ವಮಿನ್ವಮ್—ಇವಿ ವ್ಯಾಪ್ತೌ ಧಾತು. ವಿಶ್ವಮಿನ್ವತಿ ವ್ಯಾಪ್ನೋತಿ ಇತಿ ವಿಶ್ವಮಿನ್ವಮ್. **ಇದಿತೋನುಮ್ಧಾತೋಃ** ಎಂಬುದರಿಂದ ಧಾತುವಿಗೆ ನುಮಾಗಮ. **ಪಚಾದಿಯಲ್ಲಿ ಸೇರಿರುವುದರಿಂದ ನಂದಿ-ಗ್ರಹಪಚಾದಿಭ್ಯಃ**—ಎಂಬುದರಿಂದ **ಕರ್ತೃರ್ಥ**ದಲ್ಲಿ **ಅಚ್** ಪ್ರತ್ಯಯ. ಸಮಾಸವಾದಾಗ **ವಿಶ್ವಮ್** ಎಂಬಲ್ಲಿ

ಲುಗಭಾವವು ಛಾಂದಸವಾಗಿ ಬರುತ್ತದೆ. ಅಥವಾ ಬಹುಲಗ್ರಹಣದಿಂದ ಖಚ್ ಪ್ರತ್ಯಯವು ಈ ಧಾತುವಿಗೂ ಬರುತ್ತದೆ. ಆಗ **ಅರುರ್ದಿಷದಜಂತಸ್ಯ ಮುಮ್** (ಪಾ. ಸೂ. ೬-೩-೬೭) ಎಂಬುದರಿಂದ ವಿಶ್ವ ಎಂಬ ಅಜಂತಕ್ಕೆ ಮುಮಾಗಮ

ಮೇಧಿರಾಯೇ—ಮೇಧಾ ಅಸ್ಯ ಅಸ್ತಿ ಇತಿ ಮೇಧಿರಃ **ಮೇಧಾರಥಾಭ್ಯಾಮಿರನ್ನಿರಚೌ ವಕ್ತವ್ಯೌ** (ಪಾ. ಸೂ. ೫-೨-೧೦೯-೩) ಎಂಬುದರಿಂದ ಮತ್ವರ್ಥದಲ್ಲಿ ಇರನ್ ಪ್ರತ್ಯಯ. **ಯಸ್ಯೇತಿಚ** ಎಂಬುದರಿಂದ ಆಕಾರಲೋಪ ಮೇಧಿರ ಶಬ್ದವಾಗುತ್ತದೆ. ಇರನ್ ನಿತ್ವಾದುದರಿಂದ **ಙ್ಞಿತ್ಯಾದಿರ್ನಿತ್ಯಮ್** ಎಂಬುದರಿಂದ ಆದ್ಯುದಾತ್ತಸ್ವರ ಬರುತ್ತದೆ. ಚತುರ್ಥೀ ಏಕವಚನಾಂತರೂಪ.

॥ ಸಂಹಿತಾಪಾಠಃ ॥

ಅಸ್ಯಾ ಇದು ಸಪ್ತಿಮಿವ ಶ್ರವಸ್ಯೇಂದ್ರಾಯಾರ್ಕಂ ಜುಹ್ವಾ ಸಮಂಜೇ।
ವೀರಂ ದಾನೌಕಸಂ ವಂದಧ್ಯೈ ಪುರಾಂ ಗೂರ್ತಶ್ರವಸಂ ದಮ್ರ್ಮಾಣಂ॥೫॥

॥ ಪದಪಾಠಃ ॥

ಅಸ್ಯೈ । ಇತ್ । ಊಂ ಇತಿ । ಸಪ್ತಿಂ ಇವ । ಶ್ರವಸ್ಯಾ । ಇಂದ್ರಾಯ । ಅರ್ಕಂ ।
ಜುಹ್ವಾ । ಸಂ । ಅಂಜೇ ।
ವೀರಂ । ದಾನಉಕಸಂ । ವಂದಧ್ಯೈ । ಪುರಾಂ । ಗೂರ್ತಉಶ್ರವಸಂ । ದ-
ಮ್ರ್ಮಾಣಂ ॥ ೫ ॥

॥ ಸಾಯಣಭಾಷ್ಯ ॥

ಅಸ್ಯಾ ಏವೇಂದ್ರಾಯಾರ್ಕಂ ಸ್ತುತಿರೂಪಂ ಮಂತ್ರಂ ಶ್ರವಸ್ಯಾ ಶ್ರವಸ್ಯಯಾನ್ನೇಚ್ಛಯಾ । ಅನ್ನಲಾಭಾಯೇತ್ಯರ್ಥಃ । ಜುಹ್ವಾಹ್ವಾನಸಾಧನೇನ ವಾಗಿಂದ್ರಿಯೇಣ ಸಮಂಜೇ । ಸಮಕ್ತಂ ಕರೋಮಿ। ಏಕೀಕರೋಮೀತ್ಯರ್ಥಃ । ತತ್ರ ದೃಷ್ಟಾಂತಃ । ಸಪ್ತಿಮಿವ । ಯಥಾನ್ನಲಾಭಾಯ ಗಂತುಕಾಮಃ ಪುಮಾನಶ್ವಂ ರಥೇನೈಕೀಕರೋತಿ ತದ್ವತ್ । ಏಕೀಕೃತ್ಯ ಚ ವೀರಂ ಶತ್ರುಕ್ಷೇಪಣಕುಶಲಂ ದಾನೌಕಸಂ ದಾನಾನಾಮೇಕನಿಲಯಂ ಗೂರ್ತಶ್ರವಸಂ ಪ್ರಶಸ್ಯಾನ್ನಂ ಪುರಾಮಸುರಪುರಾಣಾಂ ದಮ್ರ್ಮಾಣಂ ವಿದಾರಯಿತಾರಂ । ಏವಂಗುಣವಿಶಿಷ್ಟಮಿಂದ್ರಂ ವಂದಧ್ಯೈ ವಂದಿತುಂ ಸ್ತೋತುಂ ಪ್ರವೃತ್ತೋಽಸ್ಮೀತಿ ಶೇಷಃ ॥ ಸಪ್ತಿಮಿವ । ಷಪ ಸಮವಾಯೇ । ಸಮವೈತಿ ರಥೇನೈಕೀಭವತೀತಿ ಸಪ್ತಿರಶ್ವಃ । ವಸಸ್ತಿಸ್ । ಉ. ೪-೧೭೯ । ಇತಿ ವಿಧೀಯಮಾನಸ್ತಿಸ್ಪ್ರತ್ಯಯೋ ಬಹುಲವಚನಾದಸ್ಮಾದಪಿ ಧಾತೋರ್ಭವತಿ । ಪ್ರತ್ಯಯಸ್ಯ ಪಿತ್ತ್ವಾದನುದಾತ್ತತ್ವೇ ಧಾತುಸ್ವರಃ । ಇವೇನ ಸಮಾಸ ಉಕ್ತಃ । ಶ್ರವಸ್ಯಾ । ಶ್ರವಸ್-

ಶಬ್ದಾತ್ಸುಪ ಆತ್ಮನಃ ಕ್ಯಚ್ । ಕ್ಯಜಂತಾದ್ಧಾತೋರ್ಭಾವೇ ಅ ಪ್ರತ್ಯಯಾತ್ । ಪಾ. ೩-೩-೧೦೨ । ಇತ್ಯ-ಕಾರಪ್ರತ್ಯಯಃ । ತತಷ್ಟಾಪ್ । ಸುಪಾಂ ಸುಲುಗಿತಿ ತೃತೀಯೈಯಾಯಾ ಡಾದೇಶಃ । ಉದಾತ್ತನಿವೃತ್ತಿಸ್ವ-ರೇಣ ತಸ್ಯೋದಾತ್ತತ್ವಂ । ಅರ್ಕಂ । ಋಚ ಸ್ತುತೌ । ಋಚ್ಯತೇ ಸ್ತೂಯತೇಽನೇನೇತ್ಯರ್ಕೋ ಮಂತ್ರಃ। ಪುಂಸಿ ಸಂಜ್ಞಾಯಾಂ ಘಃ ಪ್ರಾಯೇಣೇತಿ ಕರಣೇ ಘಪ್ರತ್ಯಯಃ । ಚಜೋಃ ಕು ಘಿಣ್ಣ್ಯತೋರಿತಿ ಕುತ್ವಂ । ಲಘೂಪಧಗುಣಃ । ಪ್ರತ್ಯಯಸ್ವರಃ । ಜುಹ್ವಾ । ಬಹುಲಂ ಛಂದಸೀತಿ ಕೃತಸಂಪ್ರಸಾರಣಸ್ಯ ಹ್ವೇಞಶ್ಚೋ ಹುವಃ ಹುವಃಶ್ಲುವಚ್ಚೇ । ಉ. ೨-೬೦ । ಇತಿ ಕ್ವಿಪ್ । ಧಾತೋರ್ದೀರ್ಘಶ್ಚ । ಧಾತುಸ್ವರೇ-ಣಾಂತೋದಾತ್ತತ್ವಂ । ತೃತೀಯೈಕವಚನ ಉದಾತ್ತಸ್ವರಿತಯೋರ್ಯಣ ಇತಿ ಸ್ವರಿತತ್ವಂ । ಉದಾತ್ತ-ಯಣೋ ಹಲ್ಪೂರ್ವಾದಿತ್ಯಸ್ಯ ವಿಭಕ್ತ್ಯುದಾತ್ತತ್ವಸ್ಯ ನೋಜ್ಞಾಧಾತ್ವೋಃ । ಪಾ. ೬-೧-೧೭೫ । ಇತಿ ಪ್ರತಿಷೇಧಃ । ಅಂಜೇ । ಅಂಜೂ ವ್ಯಕ್ತಿಮ್ರಕ್ಷಣಕಾಂತಿಗತಿಷು । ವ್ಯತ್ಯಯೇನಾತ್ಮನೇಪದಂ । ವಂದಧ್ಯೈ। ವದಿ ಅಭಿವಾದನಸ್ತುತ್ಯೋಃ । ತುಮರ್ಥೇ ಸೇಸೇನಿತಿ ಕಧ್ಯೈಪ್ರತ್ಯಯಃ । ಗೂರ್ತಶ್ರವಸಂ । ಗೃ ಶಬ್ದೇ। ನಿಷ್ಠಾಯಾಂ ಶ್ರುಕಃ ಕಿತೀತೀಟ್ಪ್ರತಿಷೇಧಃ । ಬಹುಲಂ ಛಂದಸೀತ್ಯುತ್ವಂ । ಹಲಿ ಚೇತಿ ದೀರ್ಘಃ । ನಸತ್ತನಿಷತ್ತೇತ್ಯಾದೌ । ಪಾ. ೮-೩-೧೧೭ । ನಿಪಾತನಾನ್ನಿಷ್ಠಾನತ್ವಾಭಾವಃ । ಗೂರ್ತಂ ಶ್ರವೋ ಯಸ್ಯ । ಬಹುವ್ರೀಹೌ ಪೂರ್ವಪದಪ್ರಕೃತಿಸ್ವರತ್ವಂ । ದಮ್ಯಾಣಂ । ದ್ಯ ವಿದಾರಣೇ । ಅನ್ಯೇಭ್ಯೋಽಪಿ ದೃಶ್ಯಂತ ಇತಿ ಮನಿನ್ । ನೇಡ್ವಶಿ ಕೃತೀತೀಟ್ಪ್ರತಿಷೇಧಃ । ವ್ಯತ್ಯಯೇನ ಪ್ರತ್ಯಯೋದ್ಯುದಾತ್ತತ್ವಂ । ಯದ್ವಾ । ಔಣಾದಿಕೋ ಮನಿಪ್ರತ್ಯಯೋ ಪ್ರಷ್ಟವ್ಯಃ ॥

॥ ಪ್ರತಿಪದಾರ್ಥ ॥

ಶ್ರವಸ್ಯಾ—ಅನ್ನ ಸಂಪಾದನೆಯ ಇಚ್ಛೆಯಿಂದ । **ಅಸ್ಮೈ ಇದು ಇಂದ್ರಾಯ**—ಈ ಇಂದ್ರನಿಗೇ (ಈ ಇಂದ್ರನನ್ನೇ ಉದ್ದೇಶಿಸಿ) । **ಅರ್ಕಂ**—ಸ್ತುತಿರೂಪವಾದ ಮಂತ್ರವನ್ನು । **ಜುಹ್ವಾ**—(ಆಹ್ವಾನಸಾಧನವಾದ) ವಾಗುಕ್ತಿಯೊಡನೆ । **ಸಪ್ತಿಮಿವ**—(ಅನ್ನಸಂಪಾದನೆಗೆ ಹೋಗುವ ಪುರುಷನು) ಕುದುರೆಯನ್ನು (ರಥದೊಡನೆ) ಸೇರಿಸುವಂತೆ । **ಸಂ ಆಂಜೇ**—ಒಂದಾಗಿ ಸೇರಿಸುತ್ತೇನೆ । **ವೀರಂ**—ಪರಾಕ್ರಮಿಯೂ । **ದಾನೌಕಸಂ**—ಉದಾರವಾದ ದಾನಾಶ್ರಯನೂ । **ಗೂರ್ತಶ್ರವಸಂ**—ಸ್ತೋರ್ತಾರ್ಹವಾದ ಅನ್ನವುಳ್ಳವನೂ । **ಪುರಾಂ**—(ಶತ್ರು) ಪಟ್ಟಣಗಳ । **ದರ್ಮಾಣಂ**—ಧ್ವಂಸಕನೂ ಆದ ಇಂದ್ರನನ್ನು । **ವಂದಧ್ಯೈ**—ಪೂಜಿಸುವುದಕ್ಕಾಗಿ (ಮಂತ್ರವನ್ನೂ ವಾಗುಕ್ತಿಯನ್ನೂ ಒಂದಾಗಿ ಸೇರಿಸುತ್ತೇನೆ)

॥ ಭಾವಾರ್ಥ ॥

ಅನ್ನ ಸಂಪಾದನೆಗೆ ಹೋಗುವ ಪುರುಷನು ಕುದುರೆಯನ್ನೂ ರಥವನ್ನೂ ಒಂದಾಗಿ ಸೇರಿಸುವಂತೆ ನಾನೂ ಸಹ ಅನ್ನೇಚ್ಛೆಯಿಂದ ಇಂದ್ರನ ಸ್ತೋತ್ರಕ್ಕಾಗಿ ಸ್ತುತಿರೂಪವಾದ ಮಂತ್ರವನ್ನು ಆಹ್ವಾನಸಾಧನವಾದ ವಾಗುಕ್ತಿಯೊಡನೆ ಒಂದಾಗಿ ಸೇರಿಸುತ್ತೇನೆ. ಪರಾಕ್ರಮಿಯೂ, ಉದಾರಾಶ್ರಯನೂ ಸ್ತೋತ್ರಾರ್ಹವಾದ ಅನ್ನವುಳ್ಳವನೂ, ಶತ್ರುಪಟ್ಟಣಗಳ ಧ್ವಂಸಕನೂ ಆದ ಇಂದ್ರನನ್ನು ಪೂಜಿಸುವುದಕ್ಕಾಗಿ ಮಂತ್ರವನ್ನೂ ವಾಗುಕ್ತಿಯನ್ನು ಒಂದಾಗಿ ಸೇರಿಸಿ ಸ್ತೋತ್ರಮಾಡುತ್ತೇನೆ.

English Translation.

For the sake of food, I combine praise with the instrument of invocation as a man harnesses a horse to a car ; I begin to celebrate the heroic, munificent and food-conferring Indra, the destroyer of the cities (of the Asuras).

|| ವಿಶೇಷ ವಿಷಯಗಳು ||

ಅರ್ಕಃ—**ಋಚ್ಯತೇ ಸ್ತೂಯತೇ ಅನೇನೇತಿ ಅರ್ಕಃ** (**ಮಂತ್ರಃ**) ಸ್ತುತಿರೂಪವಾದ ಮಂತ್ರ ಎಂದರ್ಥ. **ಅರ್ಕೋ ಮಂತ್ರೋ ಭವತಿ ಯದನೇನಾರ್ಚಂತಿ** । (ನಿ. ೫-೪) ಎಂದು ನಿರುಕ್ತವಚನವಿರುವುದು.

ಶ್ರವಸ್ಯಾ—**ಶ್ರವಸ್ಯಯಾ ಅನ್ನೇಚ್ಛಯಾ**—**ಅನ್ನಲಾಭಾಯೇತ್ಯರ್ಥಃ** ಅನ್ನಪ್ರಾಪ್ತಿಗಾಗಿ ಎಂದರ್ಥ.

ಸಪ್ತಿಮಿವ ಹಪ ಸಮವಾಯೇ—**ಸಮವೈತಿ ರಥೇನೈಕೀಭವತೀತಿ ಸಪ್ತಿರಶ್ವಃ**—ರಥದೊಡನೆ ಕೂಡುವುದು ಕುದುರೆ. ಆಹಾರಪ್ರಾಪ್ತಿಗೋಸ್ಕರ ಪ್ರಯಾಣಮಾಡುವವನು ಅಶ್ವವನ್ನು ರಥಕ್ಕೆ ಹೂಡುವಂತೆ ಇಂದ್ರನಿಂದ ಇಷ್ಟಾರ್ಥಪ್ರಾಪ್ತಿಗಾಗಿ ಇಂದ್ರನನ್ನು ಸ್ತುತಿರೂಪವಾದ ಮಂತ್ರದಿಂದ ಸ್ತುತಿಸುವೆನು ಎಂದು ದೃಷ್ಟಾಂತರೂಪವಾದ ವಿವರಣೆ.

ದಾನೌಕಸಂ—**ದಾನಾನಾಂ ಏಕನಿಲಯಂ**—ಯಜಮಾನರ ಸಮಸ್ತ ಇಷ್ಟಾರ್ಥಗಳನ್ನೂ ನೆರವೇರಿಸುವವನು.

ಗೂರ್ತಶ್ರವಸಂ—**ಗೂರ್ತಂ ಶ್ರವೋ ಯಸ್ಯ**—**ಗೃ-ಶಬ್ದೇ** ಎಂಬ ಧಾತುಜನ್ಯವಾದ ಗೂರ್ತ ಶಬ್ದಕ್ಕೆ ಪ್ರಶಸ್ತವೆಂದರ್ಥ. ಪ್ರಶಸ್ತವಾದ ಅನ್ನವುಳ್ಳವನು ಅಥವಾ ಹವಿರ್ದ್ರವ್ಯವುಳ್ಳವನು.

ದರ್ಮಾಣಂ—**ದೃ-ವಿದಾರಣೇ ವಿದಾರಯಿತಾರಂ**—ಶತ್ರುಗಳ ಪಟ್ಟಣಗಳನ್ನು ಧ್ವಂಸಮಾಡುವವನು ಎಂದರ್ಥ.

|| ವ್ಯಾಕರಣಪ್ರಕ್ರಿಯಾ ||

ಸಪ್ತಿಮಿವ—ಷಪ ಸಮವಾಯೇ ಧಾತು. ಸಮವೈತಿ ರಥೇನೈಕೀಭವತಿ ಇತಿ ಸಪ್ತಿರಶ್ವಃ. **ವಸಿಸ್ತಿಪ್** (ಉ. ಸೂ. ೪-೬೧೯) ಎಂಬುದರಿಂದ ವಿಧಿಸಲ್ಪಡುವ ತಿಪ್ ಪ್ರತ್ಯಯವು ಬಹುಲವಚನದಿಂದ ಈ ಧಾತುವಿಗೂ ಬರುತ್ತದೆ. **ಅನುದಾತ್ತೌಸುಪ್ಪಿತೌ** ಎಂಬುದರಿಂದ ಪ್ರತ್ಯಯವು ಪಿತ್ತಾದುದರಿಂದ ಅನುದಾತ್ತವಾಗುತ್ತದೆ. ಆಗ ಧಾತುಸ್ವರ ಉಳಿಯುತ್ತದೆ. **ಇವೇನಸಮಾಸಃ ವಿಭಕ್ತ್ಯಲೋಪಶ್ಚ** ಎಂದುದರಿಂದ ಸಮಾಸವಾದಾಗ ವಿಭಕ್ತಿಗೆ ಲೋಪ ಬರುವುದಿಲ್ಲ.

ಶ್ರವಸ್ಯಾ—ಶ್ರು ಶ್ರವಣೇ ಧಾತು. ಇದಕ್ಕೆ ಅಸುನ್ ಪ್ರತ್ಯಯ ಶ್ರವಸ್ ಶಬ್ದವಾಗುತ್ತದೆ. **ಶ್ರವಃ ಅತ್ಮನಃ ಇಚ್ಛತಿ** ಎಂಬರ್ಥ ವಿವಕ್ಷಾಮಾಡಿದಾಗ **ಸುಪಆತ್ಮನಃ ಕ್ಯಚ್** ಎಂಬುದರಿಂದ ಕ್ಯಚ್ ಪ್ರತ್ಯಯ. ಶ್ರವಸ್ಯ ಎಂಬುದು **ಸನಾದ್ಯಂತಾಧಾತವಃ** ಸೂತ್ರದಿಂದ ಧಾತುಸಂಜ್ಞೆಯನ್ನು ಹೊಂದುತ್ತದೆ. ಕ್ಯಜಂತಧಾತುವಿನ ಮೇಲೆ ಭಾವಾರ್ಥದಲ್ಲಿ **ಅ ಪ್ರತ್ಯಯೋತ್** (ಪಾ. ಸೂ. ೩-೩-೧೦೩) ಎಂಬುದರಿಂದ ಪ್ರತ್ಯಯಾಂತವಾದುದರಿಂದ ಅಕಾರ ಪ್ರತ್ಯಯ ಬರುತ್ತದೆ. ಆಗ ಸ್ತ್ರೀತ್ವವಿವಕ್ಷಾ ಮಾಡಿದಾಗ **ಅಜಾದ್ಯತಷ್ಟಾಪ್** ಎಂಬುದರಿಂದ ಟಾಪ್ ಪ್ರತ್ಯಯ. ಶ್ರವಸ್ಯಾ ಶಬ್ದವಾಗುತ್ತದೆ. ತೃತೀಯಾವಿಭಕ್ತಿಏಕವಚನಪರವಾದಾಗ **ಸುಪಾಂಸುಲುಕ್** ಎಂಬುದರಿಂದ ಆದಕ್ಕೆ ಡಾದೇಶ. **ಅನುದಾತ್ತಸ್ಯ ಯತ್ರೋದಾತ್ತಲೋಪಃ** (**ಪಾ. ಸೂ. ೬-೧-೧೬೧**) ಎಂಬುದರಿಂದ ಅನುದಾತ್ತಪರವಾದಾಗ ಉದಾತ್ತವು ನಿವೃತ್ತವಾದುದರಿಂದ **ಅನುದಾತ್ತ**ಕ್ಕೆ ಉದಾತ್ತಸ್ವರ ಬರುತ್ತದೆ.

ಅರ್ಕಮ್—**ಋಚ ಸ್ತುತೌ** ಧಾತು. **ಋಚ್ಯತೇ ಸ್ತೂಯತೇ ಅನೇನ ಇತಿ ಅರ್ಕೋ ಮಂತ್ರಃ ಪುಂಸಿ ಸಂಜ್ಞಾಯಾಂ ಘಃ ಪ್ರಾಯೇಣ** (ಪಾ. ಸೂ. ೩-೩-೧೦೮) ಎಂಬುದರಿಂದ **ಕರಣಾರ್ಥದಲ್ಲಿ ಸಂಜ್ಞಾ**

ತೋರುವುದರಿಂದ ಘ ಪ್ರತ್ಯಯ. ತನ್ನಿಮಿತ್ತವಾಗಿ ಧಾತುವಿನ **ಉಪಧೆಗೆ** ಗುಣ. **ಚೆಜೋಃ ಕು ಘಿಣ್ಯತೋಃ** (ಪಾ. ಸೂ. ೭-೩-೫೨) ಎಂಬುದರಿಂದ **ಚ**ಕಾರಕ್ಕೆ **ಕುತ್ವ**. ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ. ದ್ವಿತೀಯಾ ಏಕವಚನಾಂತರೂಪ.

ಜುಹ್ವಾ—ಹ್ವೇಞ್ **ಸ್ಪರ್ಧಾಯಾಂ ಶಬ್ದೇ ಚ** ಧಾತು. **ಬಹುಲಂಛಂದಸಿ** ಎಂಬುದರಿಂದ ಇದಕ್ಕೆ ಸಂಪ್ರಸಾರಣ. **ಸಂಪ್ರಸಾರಣಾಚ್ಚ** ಎಂಬುದರಿಂದ ಪೂರ್ವರೂಪ. **ಸಂಪ್ರಸಾರಣಹೊಂದಿದ ಈ ಧಾತುವಿಗೆ ಹುವಃಶ್ಲುವಚ್ಚ** (ಉ. ಸೂ. ೨-೨೧೪) ಎಂಬುದರಿಂದ **ಕ್ವಿಪ್**. ತತ್ಸಂನಿಯೋಗದಿಂದ ಧಾತುವಿಗೆ ದೀರ್ಘ. ಕ್ವಿಪಿನಲ್ಲಿ ಸರ್ವವೂ ಲೋಪವಾಗುತ್ತದೆ. ಶ್ಲುವದ್ಭಾವ ಹೇಳಿರುವುದರಿಂದ ಧಾತುವಿಗೆ ದ್ವಿತ್ವ. ಅಭ್ಯಾಸಕ್ಕೆ ಹ್ರಸ್ವ. **ಕುಹೋಶ್ಚುಃ** ಎಂಬುದರಿಂದ **ಚು**ತ್ವ. ಜುಹೂ ಶಬ್ದವಾಗುತ್ತದೆ ಧಾತುವಿನ ಅಂತೋದಾತ್ತಸ್ವರದಿಂದ ಅಂತೋದಾತ್ತವಾಗುತ್ತದೆ. ತೃತೀಯಾ ಏಕವಚನದಲ್ಲಿ **ಟಾ**ಪ್ರತ್ಯಯ ಬಂದಾಗ ಯಣಾದೇಶ. ಆಗ ಉದಾತ್ತಸ್ಥಾನದಲ್ಲಿ ಯಣ್ ಬಂದುದರಿಂದ **ಉದಾತ್ತೇ ಸ್ವರಿತಯೋರ್ಯಣಃ ಸ್ವರಿತೋನುದಾತ್ತಸ್ಯ** (ಪಾ. ಸೂ. ೬-೧-೪) ಎಂಬುದರಿಂದ ಪರದಲ್ಲಿರುವ ಅನುದಾತ್ತಕ್ಕೆ ಸ್ವರಿತಸ್ವರ ಬರುತ್ತದೆ. ಯದ್ಯಪಿ ಇಲ್ಲಿ **ಉದಾತ್ತಯ**ಣೋ ಹ**ಲ್‌ಪೂರ್ವಾತ್** (ಪಾ. ಸೂ. ೬-೧-೧೭೪) ಎಂಬುದರಿಂದ ವಿಭಕ್ತಿಗೆ ಉದಾತ್ತಸ್ವರ ಬರಬೇಕಾಗುತ್ತದೆ ಆದರೆ **ನೋಭ್ಧಾತ್ವೋಃ** (ಪಾ. ಸೂ. ೬-೧-೧೭೫) ಎಂಬುದರಿಂದ ಅದಕ್ಕೆ ಪ್ರತಿಷೇಧ ಬರುತ್ತದೆ

ಅಂಜೇ—ಅಞ್ಜೂ ವ್ಯಕ್ತಿಮ್ರಕ್ಷಣಕಾಂತಿಗತಿಷು ಧಾತು ಇದು ಪರಸ್ಮೈಪದಿಯಾದರೂ **ವ್ಯತ್ಯಯೋ**-**ಬಹುಲಂ** ಎಂಬುದರಿಂದ ಆತ್ಮನೇಪದಪ್ರತ್ಯಯವನ್ನು ಹೊಂದುತ್ತದೆ. ಲಡುತ್ತಮಪುರುಷ ಏಕವಚನರೂಪ. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

ವಂದಧ್ಯೈ—ವದಿ ಅಭಿವಾದನಸ್ತುತ್ಯೋಃ ಧಾತು. ತುಮುನರ್ಥತೋರುವಾಗ **ತುಮುಣ್ವುಲ್ತೃಚೌ ಸೇಸೇ**-**ನಸೇ**—(ಪಾ. ಸೂ. ೩-೪-೯) ಎಂಬುದರಿಂದ **ಕಧ್ಯೈ** ಪ್ರತ್ಯಯ. **ಇದಿತೋನುಮ್‌ಧಾತೋಃ** ಎಂಬುದರಿಂದ ಧಾತುವಿಗೆ ನುಮಾಗಮ ಏಜಂತವಾದುದರಿಂದ **ಕ್ಯನ್ಕ್ಲೇಜಂತಃ** ಎಂಬುದರಿಂದ **ಅವ್ಯಯಸಂಜ್ಞೆ**ಯನ್ನು ಹೊಂದುತ್ತದೆ.

ಗೂರ್ತಶ್ರವಸಮ್—ಗೃ ಶಬ್ದೇ ಧಾತು ಇದಕ್ಕೆ **ಕ್ತ** ಪ್ರತ್ಯಯ ಪರವಾದಾಗ **ಶ್ರ್ಯುಕಃ ಕಿತಿ** (ಪಾ. ಸೂ. ೭-೨-೧೧) ಎಂಬುದರಿಂದ ಇಣ್ನಿಷೇಧ. **ಬಹುಲಂ ಛಂದಸಿ** ಎಂಬುದರಿಂದ ಉತ್ವ. **ಉರಣ್ರಪರಃ** ಎಂಬುದರಿಂದ ರಪರವಾಗಿ ಬರುತ್ತದೆ. **ಹಲಿಚ** ಎಂಬುದರಿಂದ ಉಪಧಾದೀರ್ಘ. ಗೂರ್ತ ಎಂದು ರೂಪವಾಗುತ್ತದೆ. ರೇಫದ ಪರದಲ್ಲಿ ನಿಷ್ಠಾತಕಾರ ಬಂದುದರಿಂದ **ರದಾಭ್ಯಂ**—ಸೂತ್ರದಿಂದ ಅದಕ್ಕೆ ನತ್ವವು ಪ್ರಾಪ್ತವಾದರೆ **ನಸತ್ತನಿಷತ್ತ**—(ಪಾ. ಸೂ. ೮-೩-೬೧) ಎಂಬುದರಿಂದ ನಿಪಾತಮಾಡಿರುವುದರಿಂದ ನಿಷ್ಠಾನತ್ವ ಬರುವುದಿಲ್ಲ. ಗೂರ್ತಂ ಶ್ರವೋ ಯಸ್ಯ ಸಃ **ಗೂರ್ತಶ್ರವಾಃ**. **ಬಹುವ್ರೀಹೌ ಪ್ರಕೃತ್ಯಾಪೂರ್ವಪದಮ್** ಎಂಬುದರಿಂದ **ಪೂರ್ವ**ಪದ ಪ್ರಕೃತಿಸ್ವರ ಬರುತ್ತದೆ. ದ್ವಿತೀಯಾ ಏಕವಚನಾಂತರೂಪ.

ದರ್ಮಾಣಮ್—ದೃ ವಿದಾರಣೇ ಧಾತು. **ಅನ್ಯೇಭ್ಯೋಪಿದೃಶ್ಯಂತೇ** (ಪಾ. ಸೂ. ೩-೨-೭೫) ಎಂಬುದರಿಂದ **ಮನಿನ್** ಪ್ರತ್ಯಯ. ತನ್ನಿಮಿತ್ತವಾಗಿ ಧಾತುವಿಗೆ ಗುಣ. **ನೇಡ್ವಶಿಕೃತಿ** ಎಂಬುದರಿಂದ ವಶಾದಿಯಾದುದರಿಂದ **ಮನಿನಿ**ಗೆ ಇಡಾಗಮ ಬರುವುದಿಲ್ಲ. ದರ್ಮನ್ ಶಬ್ದವಾಗುತ್ತದೆ. ವ್ಯತ್ಯಯದಿಂದ ನಿತ್ತಾದರೂ ಪ್ರತ್ಯಯ ಆದ್ಯುದಾತ್ತಸ್ವರ ಬರುತ್ತದೆ. ಅಥವಾ ಈ ಧಾತುವಿಗೆ ಬಹುಲಗ್ರಹಣದಿಂದ ಔಣಾದಿಕವಾದ **ಮನಿ** ಪ್ರತ್ಯಯ. ಆಗ ಸ್ವರಸವಾಗಿ ಪ್ರತ್ಯಯಾದ್ಯುದಾತ್ತಸ್ವರ ಬರುತ್ತದೆ. ದ್ವಿತೀಯಾ ಏಕವಚನದಲ್ಲಿ **ಸರ್ವನಾಮಸ್ಥಾನೇಚಾಸಂಬುದ್ಧೌ** ಎಂಬುದರಿಂದ ನಾಂತೋಪಧೆಗೆ ದೀರ್ಘ. ರೇಫನಿಮಿತ್ತವಾಗಿ ನಕಾರಕ್ಕೆ **ಣತ್ವ**.

संहितापाठः

अस्मा इदु त्वष्टा तक्षद्वज्रं स्वपस्तमं स्वर्यं ग रणाय ।
वृत्रस्य चिद्विदद्येन मर्म तुजन्नीशानस्तुजता किये धाः ॥६॥

॥ पदपाठः ॥

अस्मै । इत् । ऊं इति । त्वष्टा । तक्षत् । वज्रं । स्वपःऽतमं ।
स्वर्यं । रणाय ।
वृत्रस्य । चित् । विदत् । येन । मर्म । तुजन् । ईशानः । तुजता ।
किये धाः ॥ ६ ॥

॥ सायणभाष्यं ॥

त्वष्टा विश्वकर्मास्मा इदु अस्मा एवेंद्राय वज्रं वर्जकर्मायुधं रणाय युद्धार्थं तक्षत् । तीक्ष्णमकरोत् । कीदृशं वज्रं । स्वपस्तमं अतिशयेन शोभनकर्माणं स्वर्यं सुष्ठु शत्रुषु प्रेर्यं यद्वा स्तुत्यं । तुजन् शत्रून्हिंसन् ईशान ऐश्वर्यवान् किये धाः बलवान् एवंगुणविशिष्ट इंद्रो वृत्रस्य चित् अवरकस्यासुरस्य मर्म मर्मस्थानं तुजता हिंसता येन वज्रेण विदत् । प्राहार्षीदित्यर्थः ॥ स्वपस्तमं । शोभनमपः कर्म यस्यासौ । अतिशयेन स्वपाः स्वपस्तमः । तमपः पित्त्वादनुदात्तत्वं । सोर्मनसीं अलोपोमोषसीं इत्युत्तरपदादाद्युदात्तत्वं । स्वर्यं । स्वर्यं तक्षत् । ऋग्वे ८.४३.३ । इत्यत्रोक्तं । विदत् । विद्लृ लाभे । लृदित्त्वात् च्लेरङादेशः । बहुलं छंदस्यमाङ्योगेपीत्यडभावः । यद्वृत्तयोगादनिघातः । तुजन् । तुज हिंसायां । शपि प्राप्ते व्यत्ययेन शः । अदुपदेशाल्लसार्वधातुकानुदात्तत्वे विकरणस्वरः । ईशानः । ईश ऐश्वर्ये । शानच्यादित्वाच्छपो लुक् । अनुदात्तेत्त्वाल्लसार्वधातुकानुदात्तत्वे धातुस्वरः । तुजता । शतुरनुमइति विभक्तेरुदात्तत्वं । किये धाः । अत्र निरुक्तं । किये धाः क्रियेद्धा इति वा क्रमुमाणधा इति वेति । नि. ६.२० । असाय्येमभिप्रायेः । किये किंपरिमाणमित्यस्य बलस्य तादृशं बलं दधाति धारयतीति कियेद्धाः । योसकोऽप्यस्य बलस्येयत्तां न जानातीत्यर्थः । यद्वा । क्रमुमाणमाक्रमुमाणं परेषां बलं धारयति निवारयतीति क्रमुमाणधाः । उभयथापि पृषोदरादित्वात्पूर्वपदस्य किये भावः । दधातेर्विच् ॥

|| ಪ್ರತಿಪದಾರ್ಥ ||

ತುಜರ್—(ಶತ್ರು) ಹಿಂಸಕನೂ । **ಈಶಾನಃ**—ಅಧಿಪತಿಯೂ । **ಕಿಯೇಧಾಃ**—ಶಕ್ತಿವಂತನೂ ಆದ ಇಂದ್ರನು । **ವೃತ್ರಸ್ಯ ಚಿತ್**—ವೃತ್ರಾಸುರನ । **ಮರ್ಮ**—ಮರ್ಮಪ್ರದೇಶವನ್ನು । **ತುಜತಾ**—(ಶತ್ರುವನ್ನು) ಹಿಂಸಿಸತಕ್ಕ (ನಾಶಕವಾದ) । **ಯೇನ**—ಯಾವ ವಜ್ರಾಯುಧದಿಂದ । **ದಿದೇತ್**—ಪ್ರಹರಿಸಿದನೋ ಅದೇ ಆದ । **ಸ್ವಪಸ್ತಮಂ**—ಅತ್ಯಂತ ಶ್ರೇಷ್ಠವಾದ ಕೆಲಸವನ್ನು ಮಾಡತಕ್ಕುದೂ । **ಸ್ವರ್ಯಂ**—ಶತ್ರುವಿಗೆ ಲಕ್ಷ್ಯವಿಟ್ಟು ಹೊಡೆಯತಕ್ಕುದೂ ಅಥವಾ ಸ್ತುತ್ಯವಾದುದೂ ಆದ । **ವಜ್ರಂ**—ವಜ್ರಾಯುಧವನ್ನು । **ತ್ವಷ್ಟಾ**—ವಿಶ್ವಕರ್ಮನು । **ಅಸ್ಮೈ ಇದು**—ಈ ಇಂದ್ರನಿಗೋಸ್ಕರವೇ । **ರಣಾಯ**—ಯುದ್ಧಮಾಡುವುದಕ್ಕಾಗಿ । **ತಕ್ಷತ್**—ಹರಿತ ಮಾಡಿದನು ॥

|| ಭಾವಾರ್ಥ ||

ಅತ್ಯಂತ ಶ್ರೇಷ್ಠವಾದ ಕೆಲಸವನ್ನು ಮಾಡತಕ್ಕುದೂ ಮತ್ತು ಶತ್ರುವಿಗೆ ಲಕ್ಷವಿಟ್ಟು ಹೊಡೆಯತಕ್ಕುದೂ ಆದ ವಜ್ರಾಯುಧವನ್ನು ವಿಶ್ವಕರ್ಮನು ಇಂದ್ರನಿಗೋಸ್ಕರ ಯುದ್ಧಮಾಡುವುದಕ್ಕಾಗಿ ಹರಿತ ಮಾಡಿದನು. ಮತ್ತು ಆದೇ ವಜ್ರಾಯುಧದಿಂದ ಶತ್ರುಹಿಂಸಕನೂ, ಲೋಕಾಧಿಪತಿಯೂ ಮತ್ತು ಶಕ್ತಿವಂತನೂ ಆದ ಇಂದ್ರನು ವೃತ್ರಾಸುರನ ಮರ್ಮಸ್ಥಾನವನ್ನು ಹೊಡೆದು ಸೀಳಿದನು.

English Translation.

For that Indra, verily Twashtri sharpened the well-acting, sure-aimed thunderbolt for the battle, with which fatal (weapon), the mighty and lordly (Indra) desirous of killing his enemies, pierced the vital parts of Vritra.

|| ವಿಶೇಷವಿಷಯಗಳು ||

ತ್ವಷ್ಟಾ—ತ್ವಷ್ಟೃಶಬ್ದಕ್ಕೆ ಇಲ್ಲಿ ದೇವಶಿಲ್ಪಿಯಾದ ವಿಶ್ವಕರ್ಮನೆಂದರ್ಥ.

ಸ್ವಪಸ್ತಮಮ್—**ಅತಿಶಯೇನ ಶೋಭನಕರ್ಮಾಣಂ—ಶೋಭನಂ ಅಪಃ ಕರ್ಮ ಯಸ್ಯಾಸೌ ಅತಿಶಯೇನ ಸ್ವಪಾಃ ಸ್ವಪಸ್ತಮಃ**—ಈ ರೀತಿ ಶಬ್ದವನ್ನು ವಿವರಿಸಿ, ಯಾವಾಗಲೂ ದುಷ್ಟವಧರೂಪವಾದ ಕರ್ಮಗಳನ್ನು ಮಾಡುವುದು ವಜ್ರಾಯುಧ ಎಂದರ್ಥಮಾಡಿದ್ದಾರೆ.

ಸ್ವರ್ಯಂ—**ಸುಷ್ಠು ಶತ್ರುಷು ಪ್ರೇರ್ಯಂ ಯದ್ವಾ ಸ್ತುತ್ಯಂ**—ಶತ್ರುಗಳ ವಿಷಯದಲ್ಲಿ ನಿರ್ದಾಕ್ಷಿಣ್ಯವಾತ ಪ್ರೇರಿಸುವುದು ಅಥವಾ ಸ್ತುತಿಗೆ ವಿಷಯವಾದದ್ದು. **ಸ್ವರ್ಯಂ ತತಕ್ಷ** (ಋ. ಸಂ. ೧-೩೨-೨) ಎಂದು ಋಕ್ಸಂಹಿತೆಯಲ್ಲಿ ಇದೇ ಅರ್ಥದಲ್ಲಿ ಈ ಶಬ್ದವು ಉಪಾತ್ತವಾಗಿದೆ. (ಋ. ಸಂ. ೧-೩೨-೨)

ಕಿಯೇಧಾಃ—ಬಲಿಷ್ಠನು ಎಂದರ್ಥ. **ಕಿಯೇಧಾಃ ಕಿಯದ್ಧಾ ಇತಿ ವಾ ಕ್ರಮಮಾಣಧಾ ಇತಿ ವಾ** (ನಿರು. ೬-೨೦) ಎಂದು ನಿರುಕ್ತದಲ್ಲಿ ಈ ಪದವನ್ನು ಈ ರೀತಿ ವಿವರಿಸಿರುವರು. **ಕಿಯತ್ ಕಿಂಪರಿಮಾಣಮಿತ್ಯಸ್ಯ ಬಲಸ್ಯ ಶಾದೃಶಂ ಬಲಂ ದಧಾತಿ ಧಾರಯತೀತಿ ಕಿಯೇದ್ಧಾಃ ಯೋಽಕೋಽಸ್ಯಸ್ಯ ಬಲಸ್ಯೇಯತ್ತಾಂ ನ ಜಾನಾತೀತ್ಯರ್ಥಃ । ಯದ್ವಾ ಕ್ರಮಮಾಣಮಾಕ್ರಮಮಾಣಂ ಪರೇಷಾಂ ಬಲಂ ಧಾರಯತಿ ನಿವಾರಯತೀತಿ ಕ್ರಮಮಾಣಧಾಃ** ಅತಿಶಯವಾದ ಬಲವನ್ನು ಧರಿಸುವುದು. ಮತ್ತು ಇದರ ಬಲವನ್ನು ಯಾರೂ ತಿಳಿಯಲಾರರು. ಅಥವಾ ಆಕ್ರಮಿಸುವ ಸ್ವಭಾವವುಳ್ಳ ಶತ್ರುಗಳ ಬಲವನ್ನು ಪೂರ್ಣವಾಗಿ ತಡೆಯುವ ಸ್ವಭಾವವುಳ್ಳದ್ದು ಎಂದರ್ಥ.

॥ ವ್ಯಾಕರಣಪ್ರಕ್ರಿಯಾ ॥

ತಕ್ಷತ್—ತಕ್ಷ ತನೂಕರಣೇ ಧಾತು- ಲಙ್ ಪ್ರಥಮಪುರುಷ ಏಕವಚನರೂಪ. **ಬಹುಲಂ ಛಂದಸ್ಯಮಾಙ್ಯೋಗೇಽಪಿ** ಎಂಬುದರಿಂದ ಅಡಾಗಮ ಬರುವುದಿಲ್ಲ. ತಿಙಂತ ನಿಘಾತಸ್ವರ ಬರುತ್ತದೆ.

ಸ್ವರ್ಯಮ್—ಸ್ವರ್ಯಂ ತತಕ್ಷ (ಋ. ಸಂ. ೧-೩೨-೨) ಎಂಬಲ್ಲಿ ವ್ಯಾಖ್ಯಾತವಾಗಿದೆ.

ವಿದತ್—ವಿದ್ಲೃ ಲಾಭೇ ಧಾತು. ಲುಙ್ ಪ್ರಥಮಪುರುಷ ಏಕವಚನದಲ್ಲಿ ತಿಪ್ ಪ್ರತ್ಯಯ. **ಇತಶ್ಚ** ಎಂಬುದರಿಂದ ಇಕಾರಲೋಪ. **ಲೃದಿತ್ಸಾದುದರಿಂದ **ಪುಷಾದಿದ್ಯುತಾದಿ**—ಎಂಬುದರಿಂದ ಲುಙಾನಲ್ಲಿ ಪ್ರಾಪ್ತವಾದ ಚ್ಲಿಗೆ ಅಙಾದೇಶ. ಙಿತ್ತಾದುದರಿಂದ ಧಾತುವಿಗೆ ಲಘೂಪಧಗುಣ ಬರುವುದಿಲ್ಲ. **ಬಹುಲಂ ಛಂದಸ್ಯಮಾಙ್ಯೋಗೇಽಪಿ** ಎಂಬುದರಿಂದ ಅಡಾಗಮ ಬರುವುದಿಲ್ಲ. ಯದ್ಯೋಗವಿರುವುದರಿಂದ **ಯೆದ್ವೃತ್ತಾನ್ನಿತ್ಯಮ್** ಎಂಬುದರಿಂದ ನಿಘಾತಸ್ವರ ಬರುವುದಿಲ್ಲ. ಅಙಾನ ಸ್ವರವು ಸತಿಶಿಷ್ಟವಾಗುವುದರಿಂದ ದಕಾರೋತ್ತರಾಕಾರ ಉದಾತ್ತವಾಗುತ್ತದೆ.

ಸ್ವಪಸ್ತಮಮ್—ಶೋಭನಂ ಅಪಃ ಕರ್ಮ ಯಸ್ಯ ಅಸೌ. ಸ್ವಪಾಃ ಅತಿಶಯೇನ ಸ್ವಪಾಃ ಸ್ವಪಸ್ತಮಃ. ಅತಿಶಯಾರ್ಥ ತೋರುವುದರಿಂದ ತಮಪ್ ಪ್ರತ್ಯಯ. ಪಿತ್ತಾದುದರಿಂದ ಇದು ಅನುದಾತ್ತವಾಗುತ್ತದೆ. **ಸೋರ್ಮನಸೀ ಅಲೋಪೋಽಸಸೀ** (ಪಾ. ಸೂ. ೬-೨-೧೧೭) ಎಂಬುದರಿಂದ ಉತ್ತರಪದಾದ್ಯುದಾತ್ತಸ್ವರ ಬರುತ್ತದೆ.

ತುಜನ್—ತುಜ ಹಿಂಸಾಯಾಮ್ ಧಾತು ಲಡರ್ಥದಲ್ಲಿ ಶತೃಪ್ರತ್ಯಯ. ವ್ಯತ್ಯಯೋ ಬಹುಲಂ ಎಂಬುದರಿಂದ ಶಪಿಗೆ ಶ ವಿಕರಣ ಬರುತ್ತದೆ. ತುಜತ್ ಶಬ್ದವಾಗುತ್ತದೆ. ಅದುಪದೇಶ ಪರದಲ್ಲಿರುವುದರಿಂದ ಲಸಾರ್ವಧಾತುಕವು (ಶತೃ) **ತಾಸ್ಯನುದಾತ್ತೇತ್**—ಸೂತ್ರದಿಂದ ಅನುದಾತ್ತವಾಗುತ್ತದೆ. ಆಗ ವಿಕರಣಸ್ವರ ಉಳಿಯುತ್ತದೆ. ಪ್ರಥಮಾ ಸು ಪರವಾದಾಗ ಉಗಿತ್ತಾದುದರಿಂದ ನವಾಗಮ. ಹಲ್ಙ್ಯಾದಿನಾ ಸುಲೋಪ. ಸಂಯೋಗಾಂತಲೋಪದಿಂದ ತಕಾರಲೋಪ. ತುಜನ್ ಎಂದು ರೂಪವಾಗುತ್ತದೆ.

ತುಜತಾ—ಹಿಂದಿನಂತೆ ಶತೃಪ್ರತ್ಯಯ ತೃತೀಯಾ ಏಕವಚನಾಂತರೂಪ. **ಶತುರನುಮೋ ನದ್ಯಜಾದೀ** ಎಂಬುದರಿಂದ ವಿಭಕ್ತಿಗೆ ಉದಾತ್ತಸ್ವರ ಬರುತ್ತದೆ.

ಕಿಯೇಧಾಃ—ಈ ಶಬ್ದ ವಿಷಯದಲ್ಲಿ ನಿರುಕ್ತದಲ್ಲಿ ಹೀಗೆ ಹೇಳಿದೆ. ಕಿಯೇಧಾಃ ಕಿಯದ್ಧಾ ಇತಿ ವಾ ಕ್ರಮಮಾಣಧಾ ಇತಿ ವಾ (ನಿರು. ೬-೨೦) ಇತಿ. ಅದಕ್ಕೆ ತಾತ್ಪರ್ಯಾರ್ಥ. ಕಿಯದ್ಧಾ ಎಂಬ ವಿವರಣೆಯಲ್ಲಿ ಕಿಯತ್ ಕಂ ಪರಿಮಾಣಂ ಅಸ್ಯ ಬಲಸ್ಯ ತಾದೃಶಂ ಬಲಂ ದಧಾತಿ ಧಾರಯತಿ ಇತಿ ಕಿಯದ್ಧಾಃ. ಯಃ ಕೋಽಪಿ ಅಸ್ಯ ಬಲಸ್ಯೇಯತ್ತಾಂ ನ ಜಾನಾತೀತ್ಯರ್ಥಃ (ಇವನಲ್ಲಿರುವ ಬಲವು ಎಷ್ಟಿದೆಯೆಂದು ಯಾರಿಗೂ ತಿಳಿಯಲು ಸಾಧ್ಯವಿಲ್ಲ.) ಅಥವಾ ಕ್ರಮಮಾಣಧಾ ಎಂಬ ವಿವರಣೆಯಲ್ಲಿ ಕ್ರಮಮಾಣಮಾಕ್ರಮಮಾಣಂ ಪರೇಷಾಂ ಬಲಂ ಧಾರಯತಿ ನಿವಾರಯತಿ ಇತಿ ಕ್ರಮಮಾಣಧಾಃ (ಆಕ್ರಮಿಸುವ ಇತರರ ಬಲವನ್ನು ನಿವಾರಿಸುವವನು) ಎರಡುರೀತಿಯಾಗಿ ನಿರ್ವಚನ ಮಾಡಿದಾಗಲೂ ಪೃಷೋದರಾದಿಯಲ್ಲಿ ಸೇರಿದೆಯೆಂದು ಪೂರ್ವಪದಕ್ಕೆ ಕಿಯೇ ಎಂಬ ಆದೇಶವಾಗುತ್ತದೆ. ಧಾ ಧಾತುವಿಗೆ ವಿಚ್ ಬಂದಾಗ ಧಾಃ ಎಂದು ರೂಪವಾಗುತ್ತದೆ. ಕೃದುತ್ತರಪದ ಪ್ರಕೃತಿಸ್ವರ ಬರುತ್ತದೆ.

। संहितापाठः ।

अस्येदु मातुः सवनेषु सद्यो महः पितुं पपिवाञ्चार्वन्ना ।
मुषायद्विष्णुः पचतं सहीयान्विध्यद्वराहं तिरो अद्रिमस्ता ॥ २ ॥

। पदपाठः ।

अस्य । इत् । ऊं इति । मातुः । सवनेषु । सद्यः । महः । पितुं ।
पपिवान् । चारु । अन्ना ।
मुषायत् । विष्णुः । पचतं । सहीयान् । विध्यत् । वराहं ।
तिरः । अद्रिं । अस्ता ॥ २ ॥

॥सायणभाष्यं॥

इदु इत्येतन्निपातद्वयं पादपूरणं । यद्वावधारणार्थं । मातुर्वर्षितु-
र्द्यावापृथिवीरूपस्य जगतो निर्मातुर्महो महतोऽस्य यज्ञस्य सवनेष्ववयवभू-
तेषु प्रातःसवनादिषु त्रिषु सवनेषु पितुं सोमलक्षणमन्नं सद्यः पपिवान् ।
यदाग्नौ हूयतेऽसौ तदानीमेव पानं कृतवानित्यर्थः । तथा चार्वन्ना चारूणि
शोभनानि धानाकरंभादिहविर्लक्षणान्यन्नानि भक्षितवानिति शेषः । किंच विष्णुः सर्वस्य
जगतो व्यापकः पचतं परिपक्वमसुराणां धनं यदस्ति तन्मुषायत् अपहरन्
सहीयान् अतिशयेन शत्रूणामभिभवितादित्यमस्तारं क्षेपकः । एवंभूत
इन्द्रस्तिरः । सत इति प्राप्तस्य । नि. ३-२० । इति यास्कः । तिरः प्राप्तः सन् वराहं मेघं
विध्यत् । अताडयत् । यद्वा । विष्णुः सुत्यादिवसात्मको यज्ञः । यज्ञो वै देवेभ्यो
निलाय विष्णुरूपं कृत्वेत्याम्नानात् । स विष्णुः पचतं परिपक्वमसुरधनं यत्तन्मु-
षायत् । अचोरयत् । तदनंतरं दीक्षोपसदात्मनां दुर्गरूपाणां सप्तना-
मह्नां परस्तादासीत् अद्रिमस्ता सहीयानिंद्रो दुर्गाण्यतीत्य तिरः प्राप्तः सन्
वराहमुत्कृष्टदिवसरूपं तं यज्ञं विध्यत् । तथा च तैत्तिरीयकं । वराहोऽयं

ನಾಮಮೋಷಃ ಸಪ್ತಾನಾಂ ಗಿರೀಣಾಂ ಪರಸ್ತಾದ್ವಿತ್ತೇ ವೇದ್ಯಮಸುರಾಣಾಂ ಬಿಭರ್ತೀತಿ । ಸ ದರ್ಭಪುಂಜೀಲಮುದ್ಭೃಹ್ಯ ಸಪ್ತ ಗಿರೀನ್ಭಿತ್ತ್ವಾ ತಮಹನ್ನಿತಿ ಚ । ತೈ- ಸಂ. ೬-೨-೪-೨, ೩ ॥ ಮಹಃ । ಮಹತಃ । ಅಚ್ಪೃಬ್ದಲೋಪಶ್ಚಾಂದಸಃ । ಯದ್ವಾ । ಮಹ ಇತ್ಯೇತತ್ಪ್ರಿತುವಿಶೇಷಣಂ । ಮಹಃ ಪ್ರಶಸ್ತಂ ಪಿತುಮಿತ್ಯರ್ಥಃ । ಪಪಿವಾನ್ । ಪಿಬತೇರ್ಲಿಟಃ ಕ್ವಸುಃ । ವಸ್ವೇಕಾಜಾದ್ಧಸಾಮಿತೀಡಾಗಮಃ । ಅತೋ ಲೋಪೇ ಇಟಿ ಚೇತ್ಯಾಕಾರಲೋಪಃ । ಪ್ರತ್ಯಯೆಸ್ವರಃ । ಜಾರು । ಸುಷಾಂ ಸುಲುಗಿತಿ ವಿಭಕ್ತೇರ್ಲುಕ್ । ಮುಷಾಯೆತ್ । ಮುಷ ಸ್ತೇಯೇ । ಘಞರ್ಥೇ ಕವಿಧಾನಮಿತಿ ಭಾವೇ ಕಪ್ರತ್ಯಯೆಃ । ಮುಷಮಾತ್ಮನ ಇಚ್ಛತಿ-ಸುಪ ಆತ್ಮನಃ ಕ್ಯಚ್ । ನ ಛಂದಸ್ಯಪುತ್ರಸ್ಯೇತೀತ್ವವದ್ವಿರ್ಧಸ್ಯಾಪಿ ಪ್ರತಿಷೇಧೇ ವ್ಯತ್ಯಯೇನ ದೀರ್ಘಃ । ಅಸ್ಯಾತ್ಕ್ಯಜಂತಾಲ್ಲಟಃ ಶತೃ । ಆಗಮಾನುಶಾಸನಸ್ಯಾನಿತ್ಯತ್ವಾನ್ನುಮಭಾವಃ । ದ್ವಿತೀಯೆಪಕ್ಷೇ ತು ಕ್ಯಜಂತಾಲ್ಲಙಿ ಬಹುಲಂ ಛಂದಸ್ಯಮಾಙ್ಯೋಗೇಽಪೀತ್ಯಡಭಾವಃ । ಅತ್ರ ಸ್ತೇಯೇಚ್ಛೆಯಾ ತದುತ್ತರಭಾವಿನೀ ಕ್ರಿಯಾ ಲಕ್ಷ್ಯತೇ । ಪಚತಂ । ಭೃಮೃದೃಶೀತ್ಯಾದಿನಾ ಪಚತೇರತಚ್ಪ್ರತ್ಯಯೆಃ । ಚಿತ್ತ್ವಾದಂತೋದಾತ್ತತ್ವಂ । ವಿಧ್ಯತ್ । ವ್ಯಧ ತಾಡನೇ । ಲಙಿ ದಿವಾತಿತ್ವಾತ್ ಶ್ಯನ್ । ತಸ್ಯ ಜಿತ್ತ್ವಾದ್ಗ್ರಹಿಜ್ಯಾದಿನಾ ಸಂಪ್ರಸಾರಣಂ । ಶ್ಯನೋ ನಿತ್ತ್ವಾದಾದ್ಯುದಾತ್ತತ್ವಂ । ಷಾದಾದಿತ್ವಾನ್ನಿಘಾತಾಭಾವಃ । ವರಾಹಂ । ವರಮುದಕಮಾಹಾರೋ ಯೆಸ್ಯ । ಯದ್ವಾ । ವರಮಾಹರತೀತಿ ವರಾಹಾರಃ ಸನ್ ಪೃಷೋದರಾದಿತ್ವಾದ್ವೆರಾಹ ಇತ್ಯುಚ್ಯತೇ । ಅತ್ರ ನಿರುಕ್ತಂ । ವರಾಹೋ ಮೇಘೋ ಭವತಿ ವರಾಹಾರಃ । ವರಮಾಹಾರಮಾಹಾರ್ಷೀರಿತಿ ಚ ಬ್ರಾಹ್ಮಣಮಿತಿ । ನಿ. ೫-೪ । ಯಜ್ಞಪಕ್ಷೇ ತು ವರಂ ಚ ತದಹೋ ವರಾಹಃ । ರಾಜಾಹಃಸಖಿಭ್ಯಃ । ಪಾ ೫-೪-೯೧ । ಇತಿ ಸಮಾಸಾಂತಷ್ಟಚ್ಪ್ರತ್ಯಯೆಃ । ಚಿತ್ತ್ವಾದಂತೋದಾತ್ತತ್ವಂ । ಅಸ್ತಾ । ಅಸು ಕ್ಷೇಪಣ ಇತ್ಯಸ್ಮಾತ್ತಾಸ್ಥುಕಾರಿಣೆ ತೈನ್ । ಪಾ ೩-೨-೧೩೫ । ಇಡಭಾವಶ್ಛಾಂದಸಃ । ನ ಲೋಕಾವ್ಯಯೇತಿ ಷಷ್ಠೀಪ್ರತಿಷೇಧಃ ॥

॥ ಪ್ರತಿಪದಾರ್ಥ ॥

ಮಾತುಃ—(ವೃಷ್ಟಿದ್ವಾರದಿಂದ ಸಕಲ ಜಗತ್ತಿಗೂ) ನಿರ್ಮಾತೃವಾದ ಮತ್ತು । ಮಹಃ—ಮಹತ್ತಾದ। ಅಸ್ಯ—ಈ ಯಜ್ಞದ । ಸವನೇಷು—ಪ್ರಾತಃಸವನಾದಿ ಮೂರು ಸವನಕಾಲಗಳಲ್ಲೂ । ಪಿತುಂ—ಸೋಮರಸವನ್ನು । ಸದ್ಯಃ—ಒಡನೆಯೇ । ಪಪಿವಾ—(ಗಟಗಟನೆ) ಕುಡಿದುಬಿಟ್ಟನು (ಹಾಗೆಯೇ) । ಚಾರ್ವನ್ನಾ—ಪುಷ್ಟಿಕರವಾದ ಹವಿಸ್ಸಿನ ಅನ್ನವನ್ನೂ (ನುಂಗಿಬಿಟ್ಟನು ಮತ್ತು) । ವಿಷ್ಣುಃ—ಸರ್ವವ್ಯಾಪಕನಾದ ಇಂದ್ರನು । ಪಚತಂ—(ಅಸುರರ) ಧನವನ್ನು । ಮುಷಾಯೆತ್—ಅಪಹರಿಸಿದನು। ಸಹೀಯೋ—ಶತ್ರುಗಳನ್ನು ಮರ್ದನ ಮಾಡುವವನೂ । ಅದ್ರಿಮಸ್ತಾ—ವಜ್ರಾಯುಧವನ್ನು ಬೀಸಿ ತಿರುಗಿಸತಕ್ಕವನೂ ಆದ ಇಂದ್ರನು । ತಿರಃ—(ಶತ್ರುವಿನ ಮೇಲೆ) ಎದುರುಬಿದ್ದು । ವರಾಹಂ—ಮೇಘವನ್ನು । ವಿಧ್ಯತ್—ಸೀಳಿದನು [ಅಥವಾ । ವಿಷ್ಣುಃ—ಯಜ್ಞವು । ಪಚತಂ—(ಅಸುರರ) ಧನವನ್ನು । ಮುಷಾಯೆತ್—ಅಪಹರಿಸಿತು (ಅನಂತರ ದೀಕ್ಷಾಕಾಲದಲ್ಲಿ ದುರ್ಗರೂಪಗಳಾದ ಏಳು ದಿನಗಳ ಮರೆಯಲ್ಲಿ ಅವಿತುಕೊಂಡಿತು ಆಗ) । ಅದ್ರಿಮಸ್ತಾ—ವಜ್ರಾಯುಧವನ್ನು ತಿರುಗಿಸುವವನೂ । ಸಹೀಯೋ—ಶತ್ರುವನ್ನು ಜಯಿಸುವವನೂ ಆದ ಇಂದ್ರನು (ಆ ದುರ್ಗರೂಪಗಳಾದ ದಿನಗಳನ್ನು ಕಳೆದು) । ತಿರಃ—ಪುನಃ ಹಿಂತಿರುಗಿ । ವರಾಹಂ—ಉತ್ಕೃಷ್ಟವಾದ ದಿವಸದ ರೂಪದಲ್ಲಿರುವ ಆ ಯಜ್ಞವನ್ನು । ವಿಧ್ಯತ್—ಸಮಾಪ್ತಿಗೊಳಿಸಿದನು ॥]

॥ ಭಾವಾರ್ಥ ॥

ವೃಷ್ಟಿರೂಪದಿಂದ ಸಕಲ ಜಗತ್ತಿಗೂ ನಿರ್ಮಾತೃವಾದುದೂ ಮತ್ತು ಮಹತ್ತಾದುದೂ ಆದ ಯಜ್ಞದ ಮೂರು ಸವನಕಾಲಗಳಲ್ಲೂ ಇಂದ್ರನು ಸೋಮರಸವನ್ನು ಅರ್ಪಣಮಾಡಿದೊಡನೆಯೇ ಗಟಗಟನೆ ಕುಡಿದು ಬಿಟ್ಟನು. ಹಾಗೆಯೇ ಪುಷ್ಟಿಕರವಾದ ಹವಿಸ್ಸಿನ ಅನ್ನವನ್ನೂ ನುಂಗಿಬಿಟ್ಟನು. - ಅಲ್ಲದೇ ಸರ್ವವ್ಯಾಪಕನೂ, ಶತ್ರುಗಳನ್ನು ಮರ್ದನಮಾಡುವವನೂ ಮತ್ತು ವಜ್ರಾಯುಧವನ್ನು ಬೀಸಿತಿರಿಗಿಸುವವನೂ ಆದ ಇಂದ್ರನು ಅಸುರರ ಧನವನ್ನು ಅಪಹರಿಸಿದನು. ಮತ್ತು ಶತ್ರುವಿನ ಮೇಲೆ ಎದುರುಬಿದ್ದು ಮೇಘವನ್ನು ಸೀಳಿದನು ॥

English Translation.

Quickly drinking the libations, and devouring the grateful viands (presented) at the three (daily) sacrifices which are dedicated to the creator (of the world), he, the pervader of the universe, stole the ripe (treasure of the Asuras); the vanguisher (of his foes), the hurler of the thunderbolt, encountering, pierced the cloud.

॥ ವಿಶೇಷ ವಿಶಯಗಳು ॥

ಇತ್-ಉ—ಇವೆರಡೂ ನಿಪಾತಗಳು. ಯಾವ ಅರ್ಥವೂ ಇಲ್ಲದೆ ಕೇವಲ ಪಾದಪೂರಣಾರ್ಥವಾಗಿರ ತಕ್ಕವುಗಳು. ಅಥವಾ ನಿಶ್ಚಯಾರ್ಥವನ್ನು ಸೂಚಿಸುವ ಅವ್ಯಯಗಳು ಎಂದೂ ಹೇಳಬಹುದು.

ಸವನೇಷು—ಅವಯವಭೂತಗಳಾದ ಪ್ರಾತಸ್ಸವನಾದಿ ಮೂರು ಸವನಕರ್ಮಗಳಲ್ಲಿಯೂ ಎಂದರ್ಥ.

ಸದ್ಯಃ ಪಪಿವಾನ್—**ಯದಾಗ್ನೌ ಹೂಯತೇ ತದಾನೀಮೇವ ಪಾನಂ ಕೃತವಾನಿತ್ಯರ್ಥಃ**—ಇಂದ್ರನು ಸೋಮಲಕ್ಷಣವಿಶಿಷ್ಟವಾದ ಅನ್ನವನ್ನು ಹೋಮಮಾಡಿದ ಕೂಡಲೇ ಪಾನಮಾಡುವನು ಎಂದರ್ಥ.

ಜಾರ್ವನ್ನಾ—**ಜಾರೂಣಿ ಶೋಭನಾನಿ ಧಾನಾಕರಮ್ಭಾದಿ ಹವಿರ್ಲಕ್ಷಣಾನ್ಯನ್ನಾನಿ ಭಕ್ಷಿತವಾನ್** ಧಾನಾಕರಮ್ಭವೇ ಮೊದಲಾದ ಹವಿರ್ಲಕ್ಷಣವಿಶಿಷ್ಟವಾದ ಹವಿಸ್ಸನ್ನು ವಿಶೇಷ ಪ್ರೀತಿಯಿಂದ ಇಂದ್ರನು ಭಕ್ಷಿಸುವನು ಎಂದು ತಾತ್ಪರ್ಯ.

ಪಚತಂ—ಪರಿಪಕ್ವಭೂತವಾದ ರಾಕ್ಷಸರ ದ್ರವ್ಯ ಎಂದರ್ಥ.

ತಿರಃ ವಿಷ್ಣುಃ—ಸರ್ವವ್ಯಾಪಕನಾದ ಇಂದ್ರ. ವ್ಯಾಪ್ನೋತೀತಿ ವಿಷ್ಣುಃ **ಪ್ರಾಪ್ತೆಸ್ಸನ್**—ತಿರಃಸತ ಇತಿ ಪ್ರಾಪ್ತಸ್ಯ (ನಿರು. ೩-೧೦) ಇಲ್ಲಿ ವಿಷ್ಣು ಶಬ್ದಕ್ಕೆ **ಯಜ್ಞೋವೈದೇವೇಭ್ಯೋ ನಿಲಾಯತ ವಿಷ್ಣೂ ರೂಪೆಂ ಕೃತ್ವಾ** (ತೈ. ಸಂ. ೬-೨-೪-೨) ಎಂಬ ತೈತ್ತಿರೀಯಸಂಹಿತೆಯ ಆಧಾರದಂತೆ ಯಜ್ಞವೆಂದು ಅರ್ಥ ಮಾಡಿದ್ದಾರೆ. ವಿಷ್ಣುರೂಪವಾದ ಯಜ್ಞವು ಪರಿಪಕ್ವವಾದ ಅಸುರಧನವನ್ನು ಅಪಹರಿಸಿತು. ಅನಂತರ ದೀಕ್ಷೋಪಸದಾತ್ಮಕವಾದ ಏಳು ದುರ್ಗಗಳಲ್ಲಿಯೂ ಏಳು ದಿನಗಳು ವಾಸಮಾಡಿತು. ಅದ್ರಿಭೇದಕವಾದ ವಜ್ರಾಯುಧದ ಸಹಾಯದಿಂದ ಇಂದ್ರನು ಸಪ್ತಪರ್ವತಗಳನ್ನೂ ದಾಟಿಹೋಗಿ ಆ ಯಜ್ಞವನ್ನೂ ಸಮಾಪ್ತಿಗೊಳಿಸಿದನು.

ವರಾಹಂ—**ಉತ್ಕೃಷ್ಟದಿವಸರೂಪವಾದ ಯಜ್ಞಾ**—ಈ ಅರ್ಥದಲ್ಲಿ **ವರಂ ಚ ತತ್ ಅಹಶ್ಚ** ಎಂದು ವ್ಯುತ್ಪತ್ತಿಮಾಡಿದ್ದಾರೆ. ಅಲ್ಲದೆ ವರಾಹಶಬ್ದಕ್ಕೆ ಮೇಘವೆಂದು ಅರ್ಥಮಾಡಿರುವರು. ಆ ಅರ್ಥದಲ್ಲಿ **ವರಂ ಉದಕಂ ಆಹಾರೋ ಯಸ್ಯ ಯದ್ವಾ ವರಮಾಹರತೀತಿ ವರಾಹಾರಃ** ಎಂದು ವಿವರಿಸಿ ಪ್ರಶಸ್ತವಾದ ನೀರು

ಳೆದ್ದು, ಅಥವಾ ನೀರನ್ನು ಅಪಹರಿಸತಕ್ಕುದು ಎಂದು ಹೇಳಿರುವರು. ಇದೇ ವರಾಹಶಬ್ದದ ಅರ್ಥವನ್ನು **ವಿವರಿಷತಕ್ಕ ವರಾಹೋಯಂ ವಾಮಮೋಷಃ ಸಪ್ತಾನಾಂ ಗಿರೀಣಾಂ ಪರಸ್ತಾದ್ವಿತ್ತಂ ವೇದ್ಯಮಸುರಾಣಾಂ ಬಿಭರ್ತಿ** ಮತ್ತು **ಸದರ್ಭಪುಂಜೀಲಮುದ್ಧೃತ್ಯ ಸಪ್ತಗಿರೀನ್ ಭಿತ್ವಾ ತಮಹನ್**"(ತೈ. ಸಂ. ೬-೨-೪-೨-೩) ಎಂಬ ತೈತ್ತಿರೀಯಸಂಹಿತಾ ಮಂತ್ರವು ಮೇಲಿನ ಅರ್ಥಕ್ಕೆ ಪ್ರಮಾಣವಾಗಿರುವುದು.

|| ವ್ಯಾಕರಣಪ್ರಕ್ರಿಯಾ ||

ಮಹಃ—ಮಹತ್ ಶಬ್ದ. ಷಷ್ಠೀ ಏಕವಚನದಲ್ಲಿ ಮಹತಃ ಎಂದು ರೂಪವಾಗುತ್ತದೆ. ಸಂಹಿತಾದಲ್ಲಿ ಛಾಂದಸವಾಗಿ ಅತಿಗೆ ಲೋಪ ಬರುತ್ತದೆ. ಅಥವಾ ಮಹ ಎಂಬುದು ಪಿತುವಿಗೆ ವಿಶೇಷಣ. ಮಹಃ ಪ್ರಶಸ್ತಂ ಪಿತುಂ ಎಂದರ್ಥ.

ಪಪಿವಾನ್—ಪಾ. ಪಾನೇ ಧಾತು. **ಕ್ವಸುಶ್ಚ** ಎಂಬುದರಿಂದ ಲಿಟಿಗೆ ಕ್ವಸು ಪ್ರತ್ಯಯ. **ವಸ್ವೇಕಾಜಾದ್ಧಸಾಮ್** (ಪಾ. ಸೂ. ೭-೨-೬೭) ಎಂದು ನಿಯಮಮಾಡಿರುವುದರಿಂದ ವಸುವಿಗೆ ಏಕಾಚಿನ ಪರದಲ್ಲಿರುವುದರಿಂದ ಇಡಾಗಮ. ಕಿತ್ತಾದುದರಿಂದ ಇದು ಪರವಾದಾಗ **ಅತೋಲೋಪಃ ಇಟಿಚಿ** (ಪಾ. ಸೂ. ೬-೪ ೬೪) ಎಂಬುದರಿಂದ ಧಾತುವಿನ ಅಕಾರಕ್ಕೆ ಲೋಪ. **ದ್ವಿರ್ವಚನೇಚಿ** ಸೂತ್ರದಿಂದ ದ್ವಿತ್ವಮಾಡುವಾಗ ಸ್ಥಾನಿವದ್ಭಾವ. ಅಭ್ಯಾಸಕ್ಕೆ ಹ್ರಸ್ವ. ಪಪಿವಸ್ ಶಬ್ದವಾಗುತ್ತದೆ. ಪ್ರತ್ಯಯಸ್ವರದಿಂದ ವಕಾರೋತ್ತರಾಕಾರ ಉದಾತ್ತವಾಗುತ್ತದೆ. ಪ್ರಥಮಾ ಸು ಪರವಾದಾಗ **ಅತ್ವಸಂತಸ್ಯಾಚ್ಧಾತೋಃ** ಎಂಬುದರಿಂದ ಉಪಧಾ ದೀರ್ಘ. ಉಗಿತ್ತಾದುದರಿಂದ ನುಮಾಗಮ. ಸುಲೋಪ. ಸಂಯೋಗಾಂತಲೋಪ.

ಚಾರು—ದ್ವಿತೀಯಾ ಬಹುವಚನಕ್ಕೆ **ಸುಪಾಂಸುಲುಕ್**—ಸೂತ್ರದಿಂದ ಲುಕ್.

ಮುಷಾಯೆತ್—ಮುಷ ಸ್ತೇಯೇ ಧಾತು. **ಘಞಾರ್ಥೇ ಕವಿಧಾನಮ್** ಎಂಬ ವಚನದಿಂದ ಕ ಪ್ರತ್ಯಯ. ಮುಷ ಶಬ್ದವಾಗುತ್ತದೆ. ಮುಷಮಾತ್ಮನಃ ಇಚ್ಛತಿ ಎಂಬ ಅರ್ಥದಲ್ಲಿ **ಸುಪಆತ್ಮನಃ ಕ್ಯಚ್** ಎಂಬುದರಿಂದ ಕ್ಯಚ್ ಪ್ರತ್ಯಯ. ಕ್ಯಚ್ ನಿಮಿತ್ತವಾಗಿ ಈತ್ವ ದೀರ್ಘಗಳು ಪ್ರಾಪ್ತವಾದರೆ **ನಛಂದಸ್ಯಪುತ್ರಸ್ಯ** (ಪಾ. ಸೂ. ೭-೪-೩೫) ಎಂಬುದರಿಂದ ನಿಷೇಧ ಬರುತ್ತದೆ. ಆದರೆ ವ್ಯತ್ಯಯದಿಂದ ದೀರ್ಘ ಮಾತ್ರ ಬರುತ್ತದೆ. **ಸನಾದ್ಯಂತಾಧಾತವಃ** ಎಂಬುದರಿಂದ ಕ್ಯಜಂತವಾದ ಮುಷಾಯ ಎಂಬುದು ಧಾತು ಸಂಜ್ಞೆಯನ್ನು ಹೊಂದುತ್ತದೆ. ಇದರ ಮೇಲೆ ಲಡರ್ಥದಲ್ಲಿ ಶತೃಪ್ರತ್ಯಯ ಉಗಿತ್ವಾದುದರಿಂದ ನುಮ್ ಪ್ರಾಪ್ತವಾದರೆ **ಆಗಮಾನುಶಾಸನಮನಿತ್ಯಮ್** ಎಂಬ ವಚನದಿಂದ ಇಲ್ಲಿ ನುಮ್ ಬರುವುದಿಲ್ಲ. ದ್ವಿತೀಯಪಕ್ಷದಲ್ಲಿ (ಅಚೂಚುರತ್ ಎಂಬರ್ಥದಲ್ಲಿ) ಕ್ಯಜಂತದ ಮೇಲೆ ಲಙ್ ಪ್ರಥಮಪುರುಷ ಏಕವಚನದಲ್ಲಿ ಉಕ್ತರೂಪಸಿದ್ಧಿಯಾಗುತ್ತದೆ. ಆಗ **ಬಹುಲಂ ಛಂದಸ್ಯಮಾಙ್ಯೋಗೇಽಪಿ** ಎಂಬುದರಿಂದ ಅಡಾಗಮ ಬರುವುದಿಲ್ಲ. ಇಲ್ಲಿ ಸ್ತೇಯ (ಕಳುವುದು) ಇಚ್ಛೆಯಿಂದ ಆದರಮುಂದೆ ಮಾಡುವ ಕ್ರಿಯೆಯು ಲಕ್ಷಣಾದಿಂದ ಬೋಧಿತವಾಗುತ್ತದೆ.

ಪಚತಮ್—ಡುಪಚಿಷ್ **ಪಾಕೇ** ಧಾತು. ಇದಕ್ಕೆ **ಭ್ವಮ್ಯಧೈಶಿ**—(ಉ. ಸೂ. ೩.೩೯೦) ಎಂಬುದರಿಂದ ಅತಚ್ ಪ್ರತ್ಯಯ ಚಿತ್ತಾದುದರಿಂದ **ಚಿತಃ** ಎಂಬುದರಿಂದ ಅಂತೋದಾತ್ತವಾಗುತ್ತದೆ. ದ್ವಿತೀಯಾ ಏಕವಚನಾಂತರೂಪ.

ವಿಧ್ಯತ್—ವ್ಯಧ ತಾಡನೇ ಧಾತು. ಲಙ್ ಪ್ರಥಮಪುರುಷದಲ್ಲಿ ತಿಪಿಗೆ ಇಕಾರಲೋಪ. **ದಿವಾದಿಭ್ಯಃ ಶ್ಯನ್** ಎಂಬುದರಿಂದ ಶ್ಯನ್ ವಿಕರಣ. **ಸಾರ್ವಧಾತುಕಮಪಿತ್** ಎಂಬುದರಿಂದ ಅದು ಙಿತ್ತಾಗುವುದರಿಂದ ತನ್ನಿಮಿತ್ತವಾಗಿ **ಗ್ರಹಿಜ್ಯಾವಯಿ**....(ಪಾ. ಸೂ. ೬-೧-೧೬) ಎಂಬುದರಿಂದ ಧಾತುವಿಗೆ (ಯಕಾರ

ಸಂಪ್ರಸಾರಣ. **ಸೆಂಪ್ರಸಾರಣಾಚ್ಚ** ಎಂಬುದರಿಂದ ಪೂರ್ವರೂಪ. **ಬಹುಲಂಛಂದಸ್ಯಮಾಙ್‌ಯೋಗೇಽಪಿ** ಎಂಬುದರಿಂದ ಅಡಾಗಮ ಬರುವುದಿಲ್ಲ. ಶ್ಯನ್ ನಿತ್ತಾದುದರಿಂದ ಆದ್ಯುದಾತ್ತಸ್ವರ ಬರುತ್ತದೆ. ಪಾದಾದಿಯಲ್ಲಿರುವುದರಿಂದ ನಿಘಾತಸ್ವರ ಬರುವುದಿಲ್ಲ.

ವರಾಹಮ್—ವರಂ ಉದಕಂ ಆಹಾರೋ ಯಸ್ಯ. ಅಥವಾ ವರಂ ಆಹರತಿ ಇತಿ ವರಾಹಾರಃ. ಪೃಷೋದರಾದಿಯಲ್ಲಿ ಸೇರಿರುವುದರಿಂದ ಇಷ್ಟರೂಪಸಿದ್ಧಿಯಾಗುತ್ತದೆ. ಈ ಶಬ್ದವಿಷಯದಲ್ಲಿ ನಿರುಕ್ತದಲ್ಲಿ ಹೀಗೆ ಹೇಳಿದೆ. ವರಾಹೋ ಮೇಘೋ ಭವತಿ ವರಾಹಾರಃ । ವರಮಾಹಾರ ಮಾಹಾರ್ಷೀರಿತಿ ಚ ಬ್ರಾಹ್ಮಣಮ್ (ನಿರು. ೫-೪) ।ಇತಿ. ಯಜ್ಞಪಕ್ಷದಲ್ಲಿ ವರಂ ಚ ತದಹೋ ವರಾಹಃ (ಶುಭದಿನ) **ರಾಜಾಹಃ ಸಖಿಭ್ಯಃ**—(ಪಾ. ಸೂ. ೫-೪-೯೧) ಎಂಬುದರಿಂದ ಸಮಾಸಾಂತ ಟಚ್ ಪ್ರತ್ಯಯ. ಚಿತ್ತಾದುದರಿಂದ ಅಂತೋದಾತ್ತವಾಗುತ್ತದೆ.

ಅಸ್ತಾ—ಅಸು ಕ್ಷೇಪಣೇ ।ಧಾತು. ಇದಕ್ಕೆ ಸಾಧುಕಾರಿ ಎಂಬರ್ಥ ವಿವಕ್ಷಾವಾಮಾಡಿದಾಗ **ತೈನ್** (ಪಾ. ಸೂ. ೩-೨-೧೩೫) ಎಂಬುದರಿಂದ ತೈನ್ ಪ್ರತ್ಯಯ. ಛಾಂದಸವಾಗಿ ಇಡಾಗಮ ಬರುವುದಿಲ್ಲ. ಪ್ರಥಮಾಸು ಪರವಾದಾಗ **ಋತೋಙಾ**—ಸೂತ್ರದಿಂದ ಅನಙಾದೇಶ. **ಆಪ್‌ತೈನ್**—ಸೂತ್ರದಿಂದ ಉಪಧಾ ದೀರ್ಘ. **ಹಲ್‌ಙ್ಯಾದಿ**—ಸೂತ್ರದಿಂದ ಸುಲೋಪ. **ನಲೋಪಃಸ್ಪ್ರಾತಿ**—ಸೂತ್ರದಿಂದ ನಲೋಪ. **ನಲೋಕಾವ್ಯಯೇ**—ಎಂಬುದರಿಂದ ಷಷ್ಠೀನಿಷೇಧ ಬರುವುದರಿಂದ ಅದ್ರಿಶಬ್ದಕ್ಕೆ ದ್ವಿತೀಯಾ ಬಂದಿದೆ.

ಸಂಹಿತಾಪಾಠಃ

ಅಸ್ಮಾ ಇದು ಗ್ನಾಶ್ಚಿದ್ದೇವಪತ್ನೀರಿಂದ್ರಾಯಾರ್ಕಮಹಿಹತ್ಯ ಊವುಃ ।
ಪರಿ ದ್ಯಾವಾಪೃಥಿವೀ ಜಭ್ರ ಉರ್ವೀ ನಾಸ್ಯ ತೇ ಮಹಿಮಾನಂ ಪರಿಷ್ಟಃ ॥ ೮ ॥

। ಪದಪಾಠಃ ।

ಅಸ್ಮೈ । ಇತ್ । ಊಂ ಇತಿ । ಗ್ನಾಃ । ಚಿತ್ । ದೇವಪತ್ನೀಃ । ಇಂದ್ರಾಯ ।
ಅರ್ಕಂ । ಅಹಿಹತ್ಯೇ । ಊವುರಿತ್ಯೂವುಃ ।
ಪರಿ । ದ್ಯಾವಾಪೃಥಿವೀ ಇತಿ । ಜಭ್ರೇ । ಉರ್ವೀ ಇತಿ । ನ । ಅಸ್ಯ । ತೇ ಇತಿ ।
ಮಹಿಮಾನಂ । ಪರಿ । ಷ್ಟ ಇತಿ ಸ್ತಃ ॥ ೮ ॥

॥ ಸಾಯಣಭಾಷ್ಯಂ ॥

ಅಸ್ಮಾ ಏನೇಂದ್ರಾಯಾಹಿಹತ್ಯೇ೨ಹೇರ್ವೃತ್ರಸ್ಯ ಹನನೇ ನಿಮಿತ್ತಭೂತೇ ಸತಿ ಗ್ನಾಶ್ಚಿತ್ ಗಮನಸ್ವಭಾವಾ ಅಪಿ ಸ್ಥಿತಾ ದೇವಪತ್ನೀರ್ದೇವಾನಾಂ ಪಾಲಯಿತ್ರ್ಯೋ ಗಾಯತ್ರ್ಯಾದ್ಯಾ ದೇವತಾ ಅರ್ಕಮರ್ಚನಸಾಧನಂ ಸ್ತೋತ್ರಮೂವುಃ । ಸಮತನ್ವತ । ಚಕ್ರುರಿತ್ಯರ್ಥಃ । ಸ ಚೇಂದ್ರ ಉರ್ವೀ ವಿಸ್ತೃತೇ ದ್ಯಾವಾಪೃಥಿವೀ ದ್ಯಾವಾಪೃಥಿವ್ಯೌ ಪರಿ ಜಭ್ರೇ । ಸ್ವತೇಜಸಾ ಪರಿಜಹಾರ । ಅತಿಚಕ್ರಾಮೇತ್ಯರ್ಥಃ ॥ ಊವುಃ । ವೇಞ್ ತಂತುಸಂತಾನೇ । ಲಿಟಿ ವೇಞೋ ವಯಿಃ । ಪಾ. ೨-೪-೪೧ । ಲಿಟಃ ಕಿತ್ತ್ವಾದ್ಯಜಾದಿತ್ವೇನ ಸಂಪ್ರಸಾರಣೇ ಕ್ರಿಯಮಾಣೇ ಯಕಾರಸ್ಯ ಲಿಟಿ ವಯೋ ಯಃ । ಪಾ. ೬-೧-೩೮ । ಇತಿ ಪ್ರತಿಷೇಧಾದ್ವಕಾರಸ್ಯ ಸಂಪ್ರಸಾರಣಂ ಪರಪೂರ್ವತ್ವಂ ದ್ವಿರ್ವಚನಾದಿ । ವಶ್ಚಾಸ್ಯಾನ್ಯತರಸ್ಯಾಂ ಕಿತಿ । ಪಾ. ೬-೧-೩೯ । ಇತಿ ಯಕಾರಸ್ಯ ವಕಾರಾದೇಶಃ । ಜಭ್ರೇ । ಹೃಞ್ ಹರಣೇ । ಲಿಟಿ ಋತ್ಛ್ವೃತ್ಕೃರ್ತಿಪ್ರಾಯು ಅತ್ಕನೇಪದಂ । ಹೃಗ್ರಹೋರ್ಭ ಇತಿ ಭತ್ವಂ । ಉರ್ವೀ । ಉರುಶಬ್ದಾದ್ಭೋತೋ ಗುಣವಚನಾದಿತಿ ಙೀಷ್ । ವಾ ಛಂದಸೀತಿ ಪೂರ್ವಸವರ್ಣದೀರ್ಘತ್ವಂ ॥

॥ ಪ್ರತಿಪದಾರ್ಥ ॥

ಅಹಿಹತ್ಯೇ—ಶತ್ರುವಾದ ವೃತ್ರನ ನಾಶದ ಸಂದರ್ಭದಲ್ಲಿ । **ಗ್ನಾಶ್ಚಿತ್**—ಗಮನಸ್ವಭಾವದವರಾದರೂ (ನಿಂತವರಾಗಿ) । **ದೇವಪತ್ನೀಃ**—ದೇವತೆಗಳನ್ನು ಪಾಲಿಸುವ ಗಾಯತ್ರ್ಯಾದಿ ಸ್ತ್ರೀ ದೇವತೆಗಳು । **ಅರ್ಕಂ**—ಪೂಜಾಸಾಧನವಾದ ಸ್ತೋತ್ರವನ್ನು । **ಊವುಃ**—ರಚಿಸಿ (ಅರ್ಪಿಸಿ)ದರು (ಆ ಇಂದ್ರನಾದರೋ) । **ಉರ್ವೀ**—ವಿಸ್ತೃತಗಳಾದ । **ದ್ಯಾವಾಪೃಥಿವೀ**—ಪೃಥಿವ್ಯಂತರಿಕ್ಷಗಳನ್ನು । **ಪರಿ ಜಭ್ರೇ**—(ತನ್ನ ತೇಜಸ್ಸಿನಿಂದ) ಮೀರಿದ ವಿಸ್ತಾರವುಳ್ಳವನಾದನು (ಆದರೆ ಪೃಥಿವ್ಯಂತರಿಕ್ಷಗಳೆರಡೂ) । **ಅಸ್ಯ**—ಇಂದ್ರನ । **ಮಹಿಮಾನಂ**—ಮಹತ್ತ್ವವನ್ನು । **ನ ಪರಿ ಸ್ತಃ**—ಮೀರಿಸಲಾಗಲಿಲ್ಲ.

॥ ಭಾವಾರ್ಥ ॥

ಶತ್ರುವಾದ ವೃತ್ರನ ನಾಶದ ಸಂದರ್ಭದಲ್ಲಿ ದೇವತೆಗಳ ಪಾಲಿಕೆಯರಾದ ಗಾಯತ್ರ್ಯಾದಿ ಸ್ತ್ರೀದೇವತೆಗಳು ಗಮನಸ್ವಭಾವದವರಾದರೂ ಅಲ್ಲಿಯೇ ನಿಂತವರಾಗಿ ಇಂದ್ರನನ್ನು ಉದ್ದೇಶಿಸಿ ಪೂಜಾಸಾಧನವಾದ ಸ್ತೋತ್ರವನ್ನು ರಚಿಸಿ ಅರ್ಪಿಸಿದರು. ಆ ಇಂದ್ರನಾದರೋ, ಸ್ವಭಾವವಾಗಿಯೇ ವಿಸ್ತೃಗಳಾದ ಪೃಥಿವ್ಯಂತರಿಕ್ಷಗಳೆರಡನ್ನೂ ಮೀರಿದ ವಿಸ್ತಾರವುಳ್ಳವನಾದನು. ಆದರೆ ಆ ಪೃಥಿವ್ಯಂತರಿಕ್ಷಗಳೆರಡೂ ಸಹ ಇಂದ್ರನ ಮಹತ್ತ್ವವನ್ನು ಮೀರಿಸಲಾಗಲಿಲ್ಲ.

English Translation.

To that Indra, the women, the wives of the gods addressed their hymns, on the destruction of Ahi (Vritra); he encompasses the extensive heaven and earth; they two do not surpass his vastness.

॥ ವಿಶೇಷ ವಿಷಯಗಳು ॥

ಅಹಿಹತ್ಯೇ—ಅಹೇಃ ವೃತ್ರಸ್ಯ ಹನನೇ ನಿಮಿತ್ತಭೂತೇ ಸತಿ—ವೃತ್ರಾಸುರನ ವಧೆಯ ಕಾಲದಲ್ಲಿ ಎಂದರ್ಥ

ಗ್ನಾಶ್ಚಿತ್—**ಗಮನಸ್ವಭಾವಾ ಅಪಿ ಸ್ಥಿತಾಃ**—ಸದಾ ಸಂಚರಿಸುವ ಸ್ವಭಾವವುಳ್ಳವರು. ಇದು ದೇವತೆಗಳನ್ನು ರಕ್ಷಿಸುವ ಗಾಯತ್ರಿಯೇ ಮೊದಲಾದ ದೇವತಾಸ್ತ್ರೀಯರಿಗೆ ವಿಶೇಷಣವಾಗಿದೆ.

ಆರ್ಕಂ—ಅರ್ಚನಸಾಧನವಾದ ಸ್ತೋತ್ರ, ಮಂತ್ರ

ಪರಿಜಭ್ರೇ—**ಸ್ವತೇಜಸಾ ಪರಿಜಹಾರ ಅತಿಚಕ್ರಾಮೇತ್ಯರ್ಥಃ**—ಮಿತಿಮೀರಿದ ತೇಜಸ್ಸಿನಿಂದ ಭೂಮಿಯನ್ನೂ, ದ್ಯಾವಾಪೃಥಿವಿಗಳನ್ನೂ ಮೀರಿಸಿದನು ಎಂದು ತಾತ್ಪರ್ಯ.

ತೇ—ಆ ದ್ಯಾದಾಪೃಥಿವಿಗಳು ಮಾತ್ರ ಇಂದ್ರನ ಮಹಿಮೆಯನ್ನು ಎಂದೂ ಮೀರಿಸಲಿಲ್ಲ.

|| ವ್ಯಾಕರಣಪ್ರಕ್ರಿಯಾ ||

ಅರ್ಕಮ್— ಇದೇ ಸೂಕ್ತದ ೫ನೇ ಮಂತ್ರದಲ್ಲಿ ವ್ಯಾಖ್ಯಾತವಾಗಿದೆ.

ಊವುಃ—ವೇಞ್ ತಂತುಸಂತಾನೇ ಧಾತು. ಲಿಟ್ ಪ್ರಥಮಪುರುಷ ಬಹುವಚನದಲ್ಲಿ ಝಿಗೆ **ಪರಸ್ಮೈಪದಾನಾಂ**—ಎಂಬುದರಿಂದ ಉಸಾದೇಶ. **ವೇಞೋ ವಯಿಃ** (ಪಾ. ಸೂ. ೨ ೪-೪೧) ಎಂಬುದರಿಂದ ಧಾತುವಿಗೆ ವಯಿ ಎಂಬ ಆದೇಶ. **ಅಸಂಯೋಗಾಲ್ಲಿಟ್ ಕಿತ್** ಎಂಬುದರಿಂದ ಪ್ರತ್ಯಯಕ್ಕೆ ಕಿತ್ವ ಅತಿದೇಶ ಮಾಡಿರುವುದರಿಂದ ಇದು ಯಾಜಾದಿಯಲ್ಲಿ ಸೇರಿರುವುದರಿಂದ **ಗ್ರಹಿಜ್ಯಾವಯಿ**—ಸೂತ್ರದಿಂದ ಸಂಪ್ರಸಾರಣ ಬರುತ್ತದೆ. ಇಲ್ಲಿ ಸಂಪ್ರಸಾರಣ ಹೊಂದಲು ಯೋಗ್ಯವಾದ ವರ್ಣಗಳು ಎರಡಿವೆ. **ನ ಸಂಪ್ರಸಾರಣೇ ಸಂಪ್ರಸಾರಣಮ್** ಎಂಬುದರಿಂದ ನಿಷೇಧಮಾಡಿರುವುದರಿಂದ ವಕಾರಕ್ಕೆ ಸಂಪ್ರಸಾರಣ ಬರುವುದಿಲ್ಲ. ಆದರೆ ಈ ಧಾತುವಿನಲ್ಲಿ **ಲಿಟಿ ವಯೋ ಯಃ** (ಪಾ ಸೂ ೬-೧-೩೮) ಎಂಬುದರಿಂದ ಯಕಾರಕ್ಕೆ ಪ್ರತಿಷೇಧ ಮಾಡಿರುವುದರಿಂದ ವಕಾರಕ್ಕೇ ಬರುತ್ತದೆ. **ಸಂಪ್ರಸಾರಣಾಚ್ಚ** ಎಂಬುದರಿಂದ ಪೂರ್ವರೂಪ ಉಯ್ ಎಂಬುದಕ್ಕೆ ಲಿಣ್ಮಿತ್ತವಾಗಿ ದ್ವಿತ್ವ. ಅಭ್ಯಾಸಕ್ಕೆ ಹಲಾದಿಶೇಷ. **ವಶ್ಚಾಸ್ಯಾನ್ಯತರಸ್ಯಾಂ ಕಿತಿ** (ಪಾ ಸೂ ೬-೧-೩೯) ಎಂಬುದರಿಂದ ಧಾತುವಿನ ಯಕಾರಕ್ಕೆ ವಿಕಲ್ಪವಾಗಿ ವಕಾರಾದೇಶ ಸವರ್ಣದೀರ್ಘ ಅತಿಙಂತದ ಪರದಲ್ಲಿರುವುದರಿಂದ ನಿಘಾತ ಸ್ವರ ಬರುತ್ತದೆ.

ಜಭ್ರೇ—ಹೃಞ್ ಹರಣೇ ಧಾತು ಞಿತ್ವಾದುದರಿಂದ **ಸ್ವರಿತಞಿತಃ ಕರ್ತ್ರಭಿಪ್ರಾಯೇ ಕ್ರಿಯಾಫಲೇ** ಎಂಬುದರಿಂದ ಕ್ರಿಯಾಫಲವು ಕರ್ತೃಗಾಮಿಯಾಗುವಾಗ ಆತ್ಮನೇಪದ ಪ್ರತ್ಯಯ ಬರುತ್ತದೆ. **ಲಿಟಸ್ತ-ಝುಯೋರೇಶಿರೇಚ್** ಸೂತ್ರದಿಂದ ತಕ್ಕೆ ಏಶಾದೇಶ ಧಾತುವಿಗೆ ದ್ವಿತ್ವ. ಅಭ್ಯಾಸಕ್ಕೆ ಉರದತ್ವ, ಹಲಾದಿ ಶೇಷ. **ಕುಹೋಶ್ಚುಃ** ಸೂತ್ರದಿಂದ ಚುತ್ವ. ಯಣಾದೇಶ ಜಭ್ರೇ ಎಂದಿರುವಾಗ **ಹೃಗ್ರಹೋರ್ಭಶ್ಛಂದಸಿ** ಎಂಬುದರಿಂದ ಹಕಾರಕ್ಕೆ ಭಕಾರಾದೇಶ ತಿಙಂತನಿಘಾತಸ್ವರ ಬರುತ್ತದೆ

ಉರ್ವೀ—ಉರು ಶಬ್ದ. ಗುಣವಾಚಕವಾದುದರಿಂದ ಸ್ತ್ರೀತ್ವವಿವಕ್ಷಾ ಮಾಡಿದಾಗ **ವೋತೋಗುಣವಚನಾತ್** ಎಂಬುದರಿಂದ ಙೀಷ್ ಪ್ರತ್ಯಯ ಯಣಾದೇಶ ಪ್ರತ್ಯಯಸ್ವರದಿಂದ ಅಂತೋದಾತ್ತ. ದ್ವಿವಚನ ಔ ಪರವಾದಾಗ **ವಾ ಛಂದಸಿ** ಎಂಬುದರಿಂದ **ಪೂರ್ವಸವರ್ಣದೀರ್ಘ**.

ಸ್ತಃ—ಅಸ ಭುವಿ ಧಾತು. ಲಟ್ ಪ್ರಥಮಪುರುಷದ್ವಿವಚನದಲ್ಲಿ ತಸ್ ಪ್ರತ್ಯಯ. **ಸಾರ್ವಧಾತುಕಮಪಿತ್** ಎಂಬುದರಿಂದ ಇದು ಜಿತ್ವವನ್ನು ಹೊಂದುವುದರಿಂದ **ಶ್ನಸೋರಲ್ಲೋಪಃ** (ಪಾ. ಸೂ. ೬-೪-೧೧೧) ಎಂಬುದರಿಂದ ಇದು ಪರವಾದಾಗ ಧಾತುವಿನ ಅಕಾರಕ್ಕೆ ಲೋಪ. ಪ್ರತ್ಯಯಾವಯವ ಸಕಾರಕ್ಕೆ

ರುತ್ವ ವಿಸರ್ಗ. ಅತಿಜಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ. **ಉಪಸರ್ಗಸ್ಯಾದುಭ್ಯಾಂಅಸ್ತಿ-ರ್ಯಚ್‌ಪರಃ** (ಪಾ. ಸೂ. ೮-೩-೮೭) ಎಂಬುದರಿಂದ ಪರಿ ಎಂಬ ಉಪಸರ್ಗದ ಪರದಲ್ಲಿರುವುದರಿಂದ ಸಂಹಿತಾದಲ್ಲಿ ಧಾತು ಸಕಾರಕ್ಕೆ ಷತ್ವ ಬರುತ್ತದೆ. ಆಗ **ಷ್ಟುನಾಷ್ಟು** ಎಂಬುದರಿಂದ ಪ್ರತ್ಯಯ ತಕಾರಕ್ಕೆ ಷ್ಟುತ್ವ.

॥ ಸಂಹಿತಾಪಾಠಃ ॥

ಅಸ್ಯೇದೇವ ಪ್ರ ರಿರಿಚೇ ಮಹಿತ್ವಂ ದಿವಸ್ಪೃಥಿವ್ಯಾಃ ಪರ್ಯಂತರಿಕ್ಷಾತ್ ।
ಸ್ವರಾಳಿಂದ್ರೋ ದಮ ಆ ವಿಶ್ವಗೂರ್ತಃ ಸ್ವರಿರಮತ್ರೋ ವವಕ್ಷೇ
ರಣಾಯ ॥ ೯ ॥

॥ ಪದಪಾಠಃ ॥

ಅಸ್ಯ । ಇತ್ । ಏವ । ಪ್ರ । ರಿರಿಚೇ । ಮಹಿಽತ್ವಂ । ದಿವಃ । ಪೃಥಿವ್ಯಾಃ । ಪರಿ ।
ಅಂತರಿಕ್ಷಾತ್ ।
ಸ್ವಽರಾಟ್ । ಇಂದ್ರಃ । ದಮೇ । ಆ । ವಿಶ್ವಽಗೂರ್ತಃ । ಸುಽಅರಿಃ । ಅಮತ್ರಃ ।
ವವಕ್ಷೇ । ರಣಾಯ ॥ ೯ ॥

॥ ಸಾಯಣಭಾಷ್ಯಂ ॥

ಅಸ್ಯೇದೇವ । ಇದಿತಿ ಪಾದಪೂರಣಃ । ಅಸ್ಯೈವೇಂದ್ರಸ್ಯ ಮಹಿತ್ವಂ ಮಾಹಾತ್ಮ್ಯಂ ಪ್ರ ರಿರಿಚೇ। ಅತಿರಿಚ್ಯತೇ । ಅಧಿಕಂ ಭವತೀತ್ಯರ್ಥಃ । ಅತ್ರೋಪಸರ್ಗೋ ಧಾತ್ವರ್ಥಸ್ಯ ನಿವೃತ್ತಿಮಾಚಷ್ಟೇ । ಯಥಾ ಪ್ರಸ್ಮರಣಂ ಪ್ರಸ್ಥಾನಮಿತಿ । ಕುತಃ ಸಕಾಶಾತ್ಪ್ರರಿರಿಚ ಇತ್ಯತ ಆಹ । ದಿವೋ ದ್ಯುಲೋಕಾತ್ ಪೃಥಿವ್ಯಾ ಭೂಲೋಕಾತ್ ಅಂತರಿಕ್ಷಾತ್ ದ್ಯಾವಾಪಥಿವ್ಯೋರ್ಮಧ್ಯೇ ವರ್ತಮಾನಾದಂತರಿಕ್ಷಲೋಕಾಚ್ಚ । ಪರ್ಯುಪರ್ಯರ್ಥಃ। ತ್ರಿಲ್ಲೋಕಾನತೀತ್ಯೋಪರಿ ಪ್ರರಿರಿಚ ಇತ್ಯರ್ಥಃ । ದಮೇ ದಮಯಿತವ್ಯೇ ವಿಷಯೇ ಸ್ವರಾಟ್ ಸ್ವೇನೈವ ತೇಜಸಾ ರಾಜಮಾನೋ ವಿಶ್ವಗೂರ್ತೋ ವಿಶ್ವಸ್ಮಿನ್ಸರ್ವಸ್ಮಿನ್ಕಾರ್ಯ ಉದ್ಯೂರ್ಣಃ ಸಮರ್ಥಃ । ಯದ್ವಾ ।ವಿಶ್ವಂ ಸರ್ವಮಾಯುಧಂ ಗೂರ್ತಮುದ್ಯತಂ ಯಸ್ಯ ಸ ತಥೋಕ್ತಃ। ಸ್ವರಿಃ । ಶೋಭನಶತ್ರುಕಃ । ಶೋಭನೇ ಶತ್ರೌ ಹಂತವ್ಯೇ ಸತಿ ಹಂತಾ ವೀರ್ಯವತ್ತಮ ಇತಿ ಗಮ್ಯತೇ । ಯಥಾಕವಾರಂ ದಿವ್ಯಂ ಶಾಸಮಿಂದ್ರಂ । ಋಗ್ವೇ. ೩-೪೭-೫ । ಇತಿ । ಅಕುತ್ಸಿತಾರಿಮಿತಿ ಹಿ ತಸ್ಯಾರ್ಥಃ । ಅಮತ್ರೋ ಯದ್ಧಾದಿಷು ಗಮನಕುಶಲಃ । ಮಾತ್ರಯೇಯತ್ತಯಾ ರಹಿತೋ ವಾ । ಅಮತ್ರೋಽಮಾತ್ರೋ ಮಹಾನ್ಭವತ್ಯಭ್ಯಮಿತೋ ವೇತಿ ಯಾಸ್ಕಃ । ನಿ. ೬-೨೩ । ಏವಂಭೂತ ಇಂದ್ರೋ ರಣಾಯ

ರಣಂ ಯುದ್ಧಮಾ ವವಕ್ಷೇ । ಅವಹತಿ । ಮೇಘಾನ್ಪ್ರಾಪಯತಿ । ಮೇಘೈಃ ಪರಸ್ಪರಯುದ್ಧಂ ಕಾರಯಿತ್ವಾ ವೃಷ್ಟಿಂ ಚಕಾರೇತಿ ಭಾವಃ । ಯದ್ವಾ । ಯುದ್ಧಾಯ ಸ್ವಕೀಯಾನ್ಭಟಾನ್ ಗಮಯತಿ ॥ ಅಸ್ಯ । ಊಡಿದಮಿತಿ ವಿಭಕ್ತೇರುದಾತ್ತತ್ವಂ । ರಿರಿಚೇ । ರಿಚಿರ್ ವಿರೇಚನೇ । ಛಂದಸಿ ಲುಙ್ಲಙ್ಲಿಟ ಇತಿ ವರ್ತಮಾನೇ ಕರ್ಮಣಿ ಲಿಟ್ । ಪೃಥಿವ್ಯಾಃ । ಉದಾತ್ತಯೇಣ ಇತಿ ವಿಭಕ್ತೇರುದಾತ್ತತ್ವಂ । ಸ್ವರಾಟ್ । ರಾಜ್ಞ ದೀಪ್ತಾವಿತ್ಯಸ್ಮಾತ್ಸಪ್ತಮ್ಯುದ್ವಿಷೇತಿ ಕ್ವಿಪ್ । ವ್ರಶ್ಚಾದಿನಾ ಷತ್ವೇ ಜಶ್ತ್ವಂ । ದಮೇ । ದಮು ಉಪಶಮ ಇತ್ಯಸ್ಮಾತ್ಕರ್ಮಣಿ ಘಞ ನೋದಾತ್ತೋಪದೇಶಸ್ಯ ಮಾಂತಸ್ಯಾನಾಚಮೇಃ । ಪಾ. ೭-೩-೩೪ । ಇತಿ ವೃದ್ಧಿಪ್ರತಿಷೇಧಃ । ಘುಞೋ ಞಿತ್ತ್ವಾದಾದ್ಯುದಾತ್ತತ್ವಂ । ವಿಶ್ವಗೂರ್ತಃ । ಗೃ ನಿಗರಣೇ । ಅಸ್ಮಾನಿಷ್ಠಾಯಾಂ ಶ್ರ್ಯುಕಃ ಕಿತೀತೀಟ್ಸ್ರ್ಕಿತಿಷೇಧಃ । ಬಹುಲಂ ಛಂದಸೀತ್ಯುತ್ವಂ । ಹಲಿ ಚೇತಿ ದೀರ್ಘಃ । ಯದ್ವಾ । ಗೂರೀ ಉದ್ಯಮೇ । ಅಸ್ಮಾನ್ನಿಷ್ಠಾ । ನಸತ್ತನಿಷತ್ತೇತ್ಯಾದೌ ನಿಪಾತನಾನ್ನಿಷ್ಠಾನತ್ವಾಭಾವಃ । ತತ್ಪುರುಷಪಕ್ಷೇ ಮರುದ್ವೃಧಾದಿತ್ವಾತ್ಪೂರ್ವಪದಾಂತೋದಾತ್ತತ್ವಂ । ಬಹುವ್ರೀಹಿಪಕ್ಷೇ ತು ಬಹುವ್ರೀಹೌ ವಿಶ್ವಂ ಸಂಜ್ಞಾಯಾಮಿತ್ಯಸಂಜ್ಞಾಯಾಮಪಿ ಪೂರ್ವಪದಾಂತೋದಾತ್ತತ್ವಂ । ಅಮತ್ರಃ । ಅಮ ಗತ್ಯಾದಿಷು । ಅಮಿನಕ್ಷಿಯಜಿಬಂಧೀತ್ಯಾದಿನೌಣಾದಿಕೋಽತ್ರನ್ಪ್ರತ್ಯಯಃ। ನಿತ್ತ್ವಾದಾದ್ಯುದಾತ್ತತ್ವಂ । ವವಕ್ಷೇ । ವಹೇರ್ಲೇಟಿ ಸಿಬ್ಬಹುಲಂ ಲೇಟಿತಿ ಸಿಪ್ । ಬಹುಲಂ ಛಂದಸೀತಿ ತಪಃ ಶ್ಲುಃ । ಢತ್ವಷತ್ವಕಶ್ತ್ವಾನಿ । ಲೋಪಸ್ತ ಆತ್ಮನೇಪದೇಷ್ವಿತಿ ತಲೋಪಃ । ರಣಾಯ । ಕ್ರಿಯಾಗ್ರಹಣಂ ಕರ್ತವ್ಯಮಿತಿ ಕರ್ಮಣಿ ಸಂಪ್ರದಾನತ್ವಾಚ್ಚತುರ್ಥೀ । ಯದ್ವಾ । ಗತ್ಯರ್ಥಕರ್ಮಣಿ । ಪಾಃ ೨-೩-೧೨ । ಇತಿ ಚತುರ್ಥೀ ॥

॥ ಪ್ರತಿಪದಾರ್ಥ ॥

ಅಸ್ಯದೇವ—ಇದೇ ಇಂದ್ರನ । **ಮಹಿತ್ವಂ**—ಮಾಹಾತ್ಮ್ಯವು । **ದಿವಃ**—ದ್ಯುಲೋಕಕ್ಕಿಂತಲೂ । **ಪೃಥಿವ್ಯಾಃ**—ಭೂಲೋಕಕ್ಕಿಂತಲೂ । **ಅಂತರಿಕ್ಷಾತ್**—(ಈ ಎರಡು ಲೋಕಗಳ ನಡುವೆ ಇರುವ) ಅಂತರಿಕ್ಷ ಲೋಕಕ್ಕಿಂತಲೂ । **ಪರಿ**—ಮೇಲೆ । **ಪ್ರ ರಿರಿಚೇ**—ಅಧಿಕವಾಗಿ ವಿಸ್ತರಿಸಿದೆ । **ದಮೇ**—[ಸ್ವಗೃಹದಲ್ಲಿ] [ದಮನ ಮಾಡತಕ್ಕ ಪ್ರದೇಶದಲ್ಲಿ] **ಸ್ವರಾಟ್**—ತನ್ನ ಸ್ವಂತ ತೇಜಸ್ಸಿನಿಂದ ಪ್ರಕಾಶಿಸುವವನೂ । **ವಿಶ್ವಗೂರ್ತಃ**—ಸಕಲವಾದ ವೀರ್ಯಕೃತ್ಯಕ್ಕೂ ಸಮರ್ಥನಾದವನೂ ಅಥವಾ [ಸಕಲ ಆಯುಧವನ್ನೂ ಎತ್ತಿ ಹಿಡಿದವನೂ] । **ಸ್ವರಿಃ**—(ತನ್ನ ಪರಾಕ್ರಮಕ್ಕೆ ಅನುರೂಪನಾದ) ಶ್ರೇಷ್ಠನಾದ ಶತ್ರುವುಳ್ಳವನೂ । **ಅಮತ್ರಃ**—(ಯುದ್ಧದಲ್ಲಿ) ನಿಪುಣತೆಯಿಂದ ಸಂಚರಿಸುವವನೂ ಅಥವಾ ಅಳತೆಗೆ ಮೀರಿದವನೂ ಆದ । **ಇಂದ್ರಃ**—ಇಂದ್ರನು । **ರಣಾಯ**—ಯುದ್ಧಕ್ಕೆ । **ಅ ವವಕ್ಷೇ**—(ಮೇಘಗಳನ್ನು) ಒಟ್ಟಿಗೆ ಸೇರಿಸಿದನು (ಅವುಗಳ ಘರ್ಷಣದಿಂದ ಮಳೆಯನ್ನು ಸುರಿಸಿದನು) ಅಥವಾ ಯುದ್ಧಕ್ಕೆ ತನ್ನ ಭಟರನ್ನು ಕಳುಹಿಸಿದನು ॥

॥ ಪ್ರತಿಪದಾರ್ಥ ॥

ಇಂದ್ರನ ಮಾಹಾತ್ಮ್ಯವು ದ್ಯಾವಾಪೃಥಿವಿಗಳಿಗಿಂತಲೂ ಮತ್ತು ಅಂತರಿಕ್ಷಲೋಕಕ್ಕಿಂತಲೂ ಮೀರಿ ಅಧಿಕವಾಗಿ ವಿಸ್ತರಿಸಿದೆ. ಸ್ವಗೃಹದಲ್ಲಿ ತನ್ನ ಸ್ವಂತ ತೇಜಸ್ಸಿನಿಂದ ಪ್ರಕಾಶಿಸುವವನೂ, ಸಕಲವೀರ್ಯಕೃತ್ಯಕ್ಕೂ ಸಮರ್ಥನೂ, ತನ್ನ ಪರಾಕ್ರಮಕ್ಕೆ ಅನುರೂಪನಾದ ಶತ್ರುವುಳ್ಳವನೂ ಮತ್ತು ನಿಪುಣತೆಯಿಂದ ಯುದ್ಧಭೂಮಿಯಲ್ಲಿ ಸಂಚರಿಸುವವನೂ ಆದ ಇಂದ್ರನು ಮೇಘಗಳನ್ನು ಒಟ್ಟಿಗೆ ಯುದ್ಧಕ್ಕೆ ಸೇರಿಸಿ ಅವುಗಳ ಘರ್ಷಣದಿಂದ ಮಳೆಯನ್ನು ಸುರಿಸಿದನು.

English Translation

His magnitude verily exceeds that of the heaven and earth and sky; Indra, self-irradiating in his dwelling, equal to every exploit, engaged with no unworthy foe, and skilled in conflict, calls to battle.

॥ ವಿಶೇಷವಿಷಯಗಳು ॥

ಪ್ರ ರಿರಿಚೇ—ರಿಚಿರ್-ವಿರೇಚನೇ—ವಿರೇಚನಾರ್ಥಕವಾದ ರಿಚಿರ್ ಧಾತುವಿಗೆ ಪ್ರ ಎಂಬ ಉಪಸರ್ಗ-ಸಾಹಚರ್ಯದಿಂದ ಧಾತುವಿನ ಅರ್ಥಕ್ಕೆ ವಿರುದ್ಧವಾದ ಅರ್ಥವು ಸ್ಪಷ್ಟಪಡುವುದು. ಇದರಂತೆ ಪ್ರಸ್ಮರಣ, ಪ್ರಸ್ಥಾನ. ಈ ಪದಗಳಲ್ಲಿಯೂ ಧಾತುವಿನ ವಾಚ್ಯಾರ್ಥವು ನಿವೃತ್ತಿಹೊಂದುವುದು.

ಪರಿ—ಈ ಶಬ್ದಕ್ಕೆ ಉಪರಿ (ಮೇಲೆ) ಎಂದರ್ಥ.

ವಿಶ್ವಗೂರ್ತಃ—**ವಿಶ್ವಸ್ಮಿನ್ ಸರ್ವಸ್ಮಿನ್ ಕಾರ್ಯೇ ಉದ್ಯೂರ್ಣಃ ಸಮರ್ಥಃ** । ಯದ್ವಾ. **ವಿಶ್ವಂ ಸರ್ವಮಾಯುಧಂ ಗೂರ್ತಂ ಉದ್ಯತಂ ಯಸ್ಯ ಸಃ** । ಸರ್ವಕಾರ್ಯಸಮರ್ಥನು, ಅಥವಾ ಸರ್ವವಿಧವಾದ ಆಯುಧಗಳುಳ್ಳವನು ಎಂದು ಎರಡು ರೀತಿಯಲ್ಲಿಯೂ ಅರ್ಥಮಾಡಿದ್ದಾರೆ.

ಸ್ವರಿಃ—**ಶೋಭನಶತ್ರುಕಃ**—ವೀರರಾದ ಶತ್ರುಗಳುಳ್ಳವನು. ಶತ್ರುಗಳು ವೀರರೆಂದು ಹೇಳಲ್ಪಟ್ಟರೆ, ಅಂಥಹವರನ್ನು ಕೊಂದವನು ಅವನಿಗಿಂತ ಶೂರನೆಂದು ಖ್ಯಾತಿ ಬರುವುದು. ಆದಕ್ಕಾಗಿ ಇಂದ್ರನಿಗೆ ಇಲ್ಲಿ ಸ್ವರಿಃ ಎಂಬ ವಿಶೇಷಣವನ್ನು ಕೊಡಲಾಗಿದೆ. ಇದನ್ನೇ **ಅಕೇವಾರಿಂ ದಿವ್ಯಂ ಶಾಸಮಿಂದ್ರಂ** (ಋ. ಸಂ. ೩-೪೭-೫) ಎಂಬ ಋಙ್ಮಂತ್ರವು ವಿವರಿಸುವುದು. ಕುತ್ಸಿತನಲ್ಲದ ಶತ್ರುವುಳ್ಳವನು ಇಂದ್ರ ಎಂಬುದೇ ಅದರ ಅರ್ಥ.

ಅಮತ್ರಃ—**ಯುದ್ಧಾದಿಷು ಗಮನಕುಶಲಃ**—**ಮಾತ್ರಯಾ ಇಯತ್ತಯಾ ರಹಿತೋ ವಾ** । ಯುದ್ಧವೇ ಮೊದಲಾದ ಸಕಲ ಕಾರ್ಯಗಳಲ್ಲಿಯೂ ಚಟುವಟಿಕೆಯುಳ್ಳವನು. ಶಕ್ತಿಯಲ್ಲಿ ಇಷ್ಟೇ ಎಂದು ನಿಶ್ಚಯ ಮೂಡಲಾರದವನು. **ಅಮತ್ರೋಮಾತ್ರೋ ಮಹಾನ್ ಭವತ್ಯಭ್ಯಮಿತೋ ವಾ** (ನಿ. ೬-೨೩) ಅತಿಶಯವಾದ ಪರಾಕ್ರಮವುಳ್ಳವನು ಎಂಬರ್ಥದಲ್ಲಿ ನಿರುಕ್ತಕಾರರು ಅಮತ್ರ ಶಬ್ದವನ್ನು ಪಾಠಮಾಡಿದ್ದಾರೆ.

॥ ವ್ಯಾಕರಣಪ್ರಕ್ರಿಯಾ ॥

ಅಸ್ಯ—ಇದಮ್ ಶಬ್ದ. ಷಷ್ಠೀಏಕವಚನಾಂತರೂಪ. **ಊಡಿದಂಪದಾದಿ**—(ಪಾ. ಸೂ. ೬-೧-೧೭೧) ಎಂಬುದರಿಂದ ವಿಭಕ್ತಿಗೆ ಉದಾತ್ತಸ್ವರ ಬರುತ್ತದೆ.

ರಿರಿಚೇ—ರಿಚಿರ್ ವಿರೇಚನೇ ಧಾತು. **ಛಂದಸಿಲುಙ್‌ಲಙ್‌ಲಿಟಃ** ಎಂಬುದರಿಂದ ವರ್ತಮಾನಾರ್ಥದಲ್ಲಿ ಕರ್ಮಣಿಯಲ್ಲಿ ಲಿಟ್. ಪ್ರಥಮಪುರುಷ ಏಕವಚನದಲ್ಲಿ ಏಶಾದೇಶ. ಧಾತುವಿಗೆ ದ್ವಿತ್ವ. ಅಭ್ಯಾಸಕ್ಕೆ ಹಲಾದಿಶೇಷ. ಪ್ರತ್ಯಯಕ್ಕೆ ಕಿದ್ವದ್ಭಾವವಿರುವುದರಿಂದ ಧಾತುವಿನ ಲಘೂಪಧೆಗೆ ಗುಣ ಬರುವುದಿಲ್ಲ. ತಿಙಂತನಿಘಾತಸ್ವರ ಬರುತ್ತದೆ.

ಪೈಥಿವ್ಯಾಃ—ಪಂಚಮೀ ಏಕವಚನದಲ್ಲಿ ಉಕ್ತರೂಪಸಿದ್ಧಿಯಾಗುತ್ತದೆ. ಇಲ್ಲಿ ಉದಾತ್ತಸ್ಥಾನದಲ್ಲಿ (ಙೀಸ್) ಯಣ್ ಬಂದುದರಿಂದ ಪೂರ್ವದಲ್ಲಿ ಹಲ್ ಇರುವುದರಿಂದ **ಉದಾತ್ತಯಣೋಹಲ್‌ಪೂರ್ವಾತ್** (ಪಾ. ಸೂ. ೬-೧-೧೭೪) ಎಂಬುದರಿಂದ ವಿಭಕ್ತಿಗೆ ಉದಾತ್ತಸ್ವರ ಬರುತ್ತದೆ.

ಸ್ವರಾಟ್—ರಾಜೃ ದೀಪ್ತೌ ಧಾತು. ಇದಕ್ಕೆ **ಸತ್ಸೂದ್ವಿಷ**—(ಪಾ. ಸೂ. ೩-೨-೬೧) ಎಂಬುದರಿಂದ **ಕ್ವಿಪ್**. **ವ್ರಶ್ಚಭೃಸ್ಜಮೃಜ**—ಸೂತ್ರದಿಂದ ಜಕಾರಕ್ಕೆ ಷತ್ವ. ಪದಾಂತದಲ್ಲಿ **ಝಲಾಂಜಶೋಂತೇ** ಎಂಬುದರಿಂದ ಜಶ್ತ್ವ. **ವಾವಸಾನೇ** ಎಂಬುದರಿಂದ ವಿಕಲ್ಪವಾಗಿ ಚರ್ತ್ವ.

ದಮೇ—ದಮು ಉಪಶಮೇ ಧಾತು. ಇದಕ್ಕೆ ಕರ್ಮಣಿಯಲ್ಲಿ ಘಞ್. ಘಾತ್ಯಾದುದರಿಂದ ಇದನ್ನು ನಿಮಿತ್ತೀಕರಿಸಿ ವೃದ್ಧಿಯು ಪ್ರಾಪ್ತವಾದರೆ **ನೋದಾತ್ತೋಪದೇಶಸ್ಯ ಮಾಂತಸ್ಯಾನಾಚಮೇಃ** (ಪಾ. ಸೂ. ೭-೩-೩೪) ಎಂಬುದರಿಂದ ವೃದ್ಧಿ ಪ್ರತಿಷೇಧ ಬರುತ್ತದೆ. **ಘ್ನಾತ್ಯಾದಿರ್ನಿತ್ಯಮ್** ಎಂಬುದರಿಂದ ಆದ್ಯುದಾತ್ತಸ್ವರ ಬರುತ್ತದೆ. ಸಪ್ತಮೀ ಏಕವಚನಾಂತರೂಪ.

ವಿಶ್ವಗೂರ್ತಃ—ಗೃ ನಿಗರಣೇ ಧಾತು. ಇದಕ್ಕೆ ನಿಷ್ಠಾತಕಾರಪರವಾದಾಗ **ಶ್ರೃಕಃಕಿತಿ** (ಪಾ. ಸೂ. ೭-೨-೧೧) ಎಂಬುದರಿಂದ ಇಣ್ನಿಷೇಧ ಬರುತ್ತದೆ. **ಬಹುಲಂ ಛಂದಸಿ** ಎಂಬುದರಿಂದ ಉತ್ವ. **ಉತೋ-ಣ್ಮ್ರಾಪರಃ** ಸೂತ್ರದಿಂದ ರಪರವಾಗಿ ಬಂದಾಗ **ಹಲಿಚ** ಎಂಬುದರಿಂದ ರೇಫಾಂತ ಉಪಧೆಗೆ ದೀರ್ಘ. ಗೂರ್ತಃ ಎಂದು ರೂಪವಾಗುತ್ತದೆ. ಅಥವಾ ಗೂರೀ ಉದ್ಯಮನೇ ಧಾತು. ಇದಕ್ಕೆ ನಿಷ್ಠಾಕ್ತ ಪ್ರತ್ಯಯ. ರೇಫದ ಪರದಲ್ಲಿ ಬಂದರೂ **ನಸತ್ತನಿಷತ್ತ**—ಎಂಬುದರಿಂದ ನಿಪಾತವಮಾಡಿರುವುದರಿಂದ ನಿಷ್ಠಾನತ್ವ ಬರುವುದಿಲ್ಲ. ವಿಶ್ವಸ್ಮಿನ್ ಗೂರ್ತಃ ಎಂದು ತತ್ಪುರುಷಸಮಾಸ ಮಾಡಿದಾಗ ಮರುದ್ವೃಧಾದಿಪಾಠದಿಂದ **ಪೂರ್ವಪದಾಂತೋದಾತ್ತಸ್ವರ** ಬರುತ್ತದೆ. ವಿಶ್ವಂ ಗೂರ್ತಂ ಯಸ್ಯಸಃ ವಿಶ್ವಗೂರ್ತಃ ಎಂದು ಬಹುವ್ರೀಹಿ ಸಮಾಸಮಾಡಿದಾಗ **ಬಹು-ವ್ರೀಹೌ ವಿಶ್ವಂ ಸಂಜ್ಞಾಯಾಂ** (ಪಾ. ಸೂ. ೬-೨-೧೦೬) ಎಂಬುದರಿಂದ ಅಸಂಜ್ಞಾ ತೋರುವಾಗಲೂ ಪೂರ್ವ ಪದಾಂತೋದಾತ್ತಸ್ವರ ಬರುತ್ತದೆ.

ಅಮತ್ರೈಃ—ಅಮು ಗತ್ಯಾದಿಷು ಧಾತು. ಇದಕ್ಕೆ **ಅಮಿನಕ್ಷಿಯೆಜಿಬಂಧಿ**—(ಉ. ಸೂ. ೩-೩೮೫) ಎಂಬುದರಿಂದ ಔಣಾದಿಕವಾದ ಅತ್ರನ್ ಪ್ರತ್ಯಯ ನಿತ್ಯಾದುದರಿಂದ ಆದ್ಯುದಾತ್ತಸ್ವರ ಬರುತ್ತದೆ.

ವವಕ್ಷೇ—ವಹ ಪ್ರಾಪಣೇ ಧಾತು. **ಲೇಟ್ ಸಿಬ್ಬಹುಲಂಲೇಟಿ** (ಪಾ. ಸೂ. ೩-೧-೩೪) ಎಂಬುದರಿಂದ ಸಿಪ್. **ಬಹುಲಂ ಛಂದಸಿ** ಎಂಬುದರಿಂದ ಶಪಿಗೆ ಶ್ಲು ವಿಕರಣ. **ಶ್ಲೌ** ಎಂಬುದರಿಂದ ಧಾತುವಿಗೆ ದ್ವಿತ್ವ. ಅಭ್ಯಾಸಕ್ಕೆ ಹಲಾದಿಶೇಷ. **ಹೋಢಃ** ಎಂಬುದರಿಂದ ಧಾತುಹಕಾರಕ್ಕೆ ಢತ್ವ. **ಷಢೋಃಕಃಸಿ** ಸೂತ್ರದಿಂದ ಅದಕ್ಕೆ ಕತ್ವ. ಕಕಾರದ ಪರದಲ್ಲಿ ಬಂದುದರಿಂದ ಷಕಾರಕ್ಕೆ ಷತ್ವ. **ಲೋಪಸ್ತ ಆತ್ಮನೇಪ-ದೇಷು** (ಪಾ. ಸೂ. ೬-೧-೬೫) ಎಂಬುದರಿಂದ ತಕಾರಕ್ಕೆ ಲೋಪ. ಅತಿಙಂತದ ಪರದಲ್ಲಿರುವುದರಿಂದ ನಿಘಾತ ಸ್ವರ ಬರುತ್ತದೆ.

ರಣಾಯ—**ಕರ್ಮಣಾಯಮಭಿಪ್ರೈತಿ**—ಸೂತ್ರದಲ್ಲಿ **ಕ್ರಿಯೋಗ್ರಹಣಂ ಕರ್ತವ್ಯಮ್** ಎಂಬ ವಚನ ಮಾಡಿರುವುದರಿಂದ ಕರ್ಮಕ್ಕೆ ಇಲ್ಲಿ ಸಂಪ್ರದಾನಸಂಜ್ಞೆ ಬರುವುದರಿಂದ ಚತುರ್ಥೀವಿಭಕ್ತಿ ಬಂದಿದೆ. ಅಥವಾ **ಗತ್ಯರ್ಥಕರ್ಮಣಿ**—(ಪಾ. ಸೂ. ೨-೩-೭೩) ಎಂಬುದರಿಂದ ಚತುರ್ಥೀ.

संहितापाठः

अस्येदेव शवसा शुषन्तं वि वृश्चद्वज्रेण वृत्रमिन्द्रः।
गा न व्राणा अवनीरमुञ्चदभि श्रवो दावने सचेताः॥८०॥

पदपाठः

अस्य। इत्। एव। शवसा। शुषन्तं। वि। वृश्चत्। वज्रेण। वृत्रं
इन्द्रः।
गाः। न। व्राणाः। अवनीः। अमुञ्चत्। अभि। श्रवः। दावने।
सऽचेताः॥ ८०॥

॥ सायणभाष्यं ॥

अस्येवेन्द्रस्य शवसा बलेन शुषन्तं शुष्यन्तं वृत्रमिन्द्रो वज्रेण वि वृश्चत्। व्यछिनत्। तथा गा न चोरैरपहृता गाव इव व्राणा वृत्रेणावृता अवनीः रक्षणहेतुभूता आपोऽमुञ्चत्। अवर्षीत्। तथा दावने हविर्दात्रे यजमानाय सचेतास्तेन यजमानेन समानचित्तः सन् श्रवः कर्मफलभूतमन्नममुभ्याभिमुख्येन ददातीति शेषः॥ शुषन्तं। शुष शोषणे। श्यनि स्राप्ते व्यत्ययेन शः। अदुपदेशाल्लसार्वधातुकानुदात्तत्वे विकरणस्वर एव शिष्यते। व्राणाः। वृङ् वरणे। कर्मणि लटेः शानचि बहुलं छन्दसीति यकोऽलुक्। शानचोऽपित्त्वादुङ्णाभावे यक्प्रादेशः। अवनीः। अवतेः करणेऽर्तिसृधृधमिभ्य इनिना। उ. ३-८०। अनिप्रत्ययः। प्रत्ययोदात्तत्वं। दावने। अतो मनिन्निति वनिप्। चतुर्थ्येकवचनेऽल्लोपाभावश्छान्दसः॥

॥ प्रतिपदार्थ ॥

अस्येदेव—ಇದೇ ಇಂದ್ರನ। **शवसा**—ಬಲದಿಂದ। **शुषन्तं**—(ನೀರನ್ನು) ಇಂಗಿಸತಕ್ಕ। **वृत्रं**—ವೃತ್ರನನ್ನು। **इन्द्रः**—ಇಂದ್ರನು। **वज्रेण**—ವಜ್ರಾಯುಧದಿಂದ। **वि वृश्चत्**—ಸೀಳಿದನು। **गाः न**—(ಚೋರರಿಂದ ಅಪಹೃತವಾದ) ಹಸುಗಳನ್ನು ಬಿಡಿಸುವಂತೆ। **व्राणाः**—(ವೃತ್ರನಿಂದ) ಮುಚ್ಚಲ್ಪಟ್ಟವೂ। **अवनीः**—ರಕ್ಷಣಹೇತುವಾದವೂ ಆದ ನೀರುಗಳನ್ನು। **अमुञ्चत्**—ಬಿಡಿಸಿ ಸುರಿಸಿದನು। **दावने**—ಹವಿರ್ದಾತನಾದ ಯಜಮಾನನಿಗೆ। **सचेताः**—ಅವನ ಇಷ್ಟದೊಡನೆ ಕೂಡುವ ಒಂದೇ ಮನಸ್ಸುಳ್ಳವನಾಗಿ। **श्रवः**—(ಅವನ ಕರ್ಮಫಲವಾದ) ಅನ್ನವನ್ನು। **अभि**—ಅಭಿಮುಖವಾಗಿ ಅನುಗ್ರಹಿಸುತ್ತಾನೆ॥

॥ ಭಾವಾರ್ಥ ॥

ಇಂದ್ರನು ತನ್ನ ಸ್ವಬಲದಿಂದ ನೀರನ್ನು ಇಂಗಿಸುವ ವೃತ್ರನನ್ನು ವಜ್ರಾಯುಧದಿಂದ ಸೀಳಿಹಾಕಿದನು. ಚೋರರಿಂದ ಅಪಹೃತಗಳಾದ ಗೋವುಗಳನ್ನು ಬಿಡಿಸುವಂತೆ ವೃತ್ರನಿಂದ ಆವೃತಗಳಾದ ನೀರುಗಳನ್ನು ಬಿಡಿಸಿ ಸುರಿಸಿದನು. ಮತ್ತು ಹವಿರ್ದಾತನಾದ ಯಜಮಾನನಿಗೆ ಅವನ ಇಷ್ಟವನ್ನನುಸರಿಸುವಂತೆ, ಅವನೊಂದಿಗೆ ಏಕಮನಸ್ಕನಾಗಿ ಅವನ ಕರ್ಮಫಲವಾದ ಅನ್ನವನ್ನು ಅನುಗ್ರಹಿಸುತ್ತಾನೆ.

English Translation.

Indra, by his power, cut to pieces with his thunderbolt Vritra, the absorber (of moisture), and set free the waters obstructed by Vritra and capable of protecting the universe, like cows (recovered from thieves); and in accordance with the wishes of the giver of the oblation; (grants him) food.

॥ ವಿಶೇಷ ವಿಷಯಗಳು ॥

ಶುಷಂತಂ—ಶುಷ್ಯಂತಂ-ಶುಷ-ಶೋಷಣೇ—ಶೋಷಣಾರ್ಥಕವಾದ ಶುಷಧಾತುವಿನಿಂದ ಉತ್ಪನ್ನವಾದ ಈ ಶಬ್ದವು (ಉದಕವನ್ನು) ಒಣಗಿಸುವವನನ್ನು ಎಂದರ್ಥಕೊಡುವುದು. ಇದು ವೃತ್ರಂ ಎಂಬ ಪದಕ್ಕೆ ವಿಶೇಷಣ.

ವ್ರಾಣಾಃ—ವೃತ್ರೇಣಾವೃತಾಃ—ವೃತ್ರಾಸುರನಿಂದ ಆಕ್ರಮಿಸಲ್ಪಟ್ಟ ಮೇಘದಲ್ಲಿರುವ ನೀರುಗಳು. ವೃಙ್-ವರಣೇ ಎಂಬ ಧಾತುಜನ್ಯವಾದ ಶಬ್ದ ಇದು.

ಸಚೇತಾಃ—ತೇನ ಯಜಮಾನೇನ ಚೇತಃ ಚಿತ್ತಂ ಯಸ್ಯ—ಯಜಮಾನನೊಡಗೂಡಿದ ಸ್ಥಿರ ಮನಸ್ಸುಳ್ಳವನು, ಯಜಮಾನನ ಇಷ್ಟದಂತೆ ನಡೆಯುವ ಮನಸ್ಸುಳ್ಳವನು ಎಂದಭಿಪ್ರಾಯವು

ಶ್ರವಃ—ಕರ್ಮಫಲಭೂತಂ ಅನ್ನಂ—ಇಂದ್ರನು ಯಾಗಾದಿಕರ್ಮಗಳನ್ನು ಆಚರಿಸಿದವರಿಗೆ ಅವರವರ ಯೋಗ್ಯತಾನುಸಾರವಾದ ಆಹಾರವನ್ನು ಕೊಡುತ್ತಾನೆಂದು ಭಾವ.

॥ ವ್ಯಾಕರಣಪ್ರಕ್ರಿಯಾ ॥

ಶುಷಂತಮ್—ಶುಷ ಶೋಷಣೇ ಧಾತು. ದಿವಾದಿ. ಲಡರ್ಥದಲ್ಲಿ ಶತೃಪ್ರತ್ಯಯ. **ದಿವಾದಿಭ್ಯಃ ಶ್ಯನ್** ಎಂಬುದರಿಂದ ಶ್ಯನ್ ಪ್ರಾಪ್ತವಾದರೆ **ವ್ಯತ್ಯಯೋ ಬಹುಲಂ** ಎಂಬುದರಿಂದ ಶ ವಿಕರಣ ಬರುತ್ತದೆ. ಶುಷತ್ ಶಬ್ದವಾಗುತ್ತದೆ. ಅದುಪದೇಶದ ಪರದಲ್ಲಿ ಲಸಾರ್ವಧಾತುಕವು (ಶತೃ) ಬಂದುದರಿಂದ **ತಾಸ್ಯನುದಾತ್ತೇಶ್**—ಸೂತ್ರದಿಂದ ಅನುದಾತ್ತವಾಗುತ್ತದೆ. ಆಗ ವಿಕರಣ ಸ್ವರ ಉಳಿಯುತ್ತದೆ. ದ್ವಿತೀಯಾ ಏಕವಚನದಲ್ಲಿ ಉಗಿತ್ತಾದುದರಿಂದ **ಉಗಿದಚಾಂ**—ಸೂತ್ರದಿಂದ ನುಮಾಗಮ ಬರುತ್ತದೆ. ಅದಕ್ಕೆ ಅನುಸ್ವಾರಪರಸವರ್ಣ.

ವೃಶ್ಚತ್—ಓವ್ರಶ್ಚೂ ಛೇದನೇ ಧಾತು. ಲಙ್ ಪ್ರಥಮಪುರುಷ ಏಕವಚನದ ತಿ ಪ್ರತ್ಯಯದ ಇಕಾರಕ್ಕೆ ಲೋಪ. **ತುದಾದಿಭ್ಯಃ ಶಃ** ಎಂಬುದರಿಂದ ಶವಿಕರಣ. ಇದಕ್ಕೆ **ಸಾರ್ವಧಾತುಕಮಪಿತ್** ಎಂಬುದರಿಂದ ಙಿದ್ವದ್ಭಾವವಿರುವುದರಿಂದ **ಗ್ರಹಿಜ್ಯಾವಯಿ**—ಸೂತ್ರದಿಂದ ಸಂಪ್ರಸಾರಣ. **ಬಹುಲಂಛಂದಸ್ಯಮಾಙ್**—ಎಂಬುದರಿಂದ ಅಡಾಗಮ ಬರುವುದಿಲ್ಲ. **ತಿಙಂತನಿಘಾತಸ್ವರ** ಬರುತ್ತದೆ.

व्याख्या—वृञ् वरणे धातु. कर्मणियल्लि लटगे शानच्. **बहुलं छन्दसि** एंबुदरिंद **सार्वधातुकनिबंधनवागि** बंदिरुव यकिगे लुक्. **सार्वधातुकमपित्** एंबुदरिंद शानच् ञित्तागुवुदरिंद तन्निमित्तीकरिसि धातुविगे गुण बरुवुदिल्ल. **इकोयणचि** सूत्रदिंद यणादेश. **चितः** एंबुदरिंद अंतोदात्तवागुत्तदे.

अवनीः — अव रक्षणे धातु. इदक्के करणार्थदल्लि **अर्तिस्तुसुधृधमि**—(उ. सू. ३-१३९) एंबुदरिंद अनिप्रत्यय. प्रत्ययद उदात्तस्वरदिंद वकारोत्तरवाद अकारवु उदात्तवागुत्तदे. द्वितीयाबहुवचनांतरूप.

अमुंचत्—मुच्लृ मोक्षणे धातु. **शेमुचादीनामम्** एंबुदरिंद नुमागम बरुत्तदे. लङ् प्रथमपुरुष एकवचनरूप. तिङंतनिघातस्वर बरुत्तदे.

दावने—डुदाञ् दाने धातु. **अतोमनिन्**—एंबुदरिंद वनिप् प्रत्यय. दावन् शब्दवागुत्तदे. चतुर्थी एकवचनदल्लि भाग्दसवागि अल्लोप बरुवुदिल्ल.

॥ संहितापाठः ॥

अस्येदु त्वेषसा रन्त सिन्धवः परि यद्वज्रेण सीमयच्छत् ।
ईशानकृद्दाशुषे दशस्यन्त्वर्वतेयो गाधं तुर्वणिः कः ॥८८॥

॥ पदपाठः ॥

अस्य । इत् । ऊं इति । त्वेषसा । रन्त । सिन्धवः । परि । यत् । व-
ज्रेण । सीं । अयच्छत् ।
ईशानऽकृत् । दाशुषे । दशस्यन् । त्वर्वतेयो । गाधं । तुर्वणिः
कः इति कः ॥ ८८ ॥

॥ सायणभाष्य ॥

अस्यैवेंद्रस्य त्वेषसा दीप्तेन बलेन सिंधवः समुद्राः । यद्वा । गंगाद्याः
सप्त नद्यो रंत । स्वे स्वे स्थाने रमंते । यद्यस्माद्ययमिंद्रो वज्रेण सीनेनास्मिं-
धून्वज्रेण भयंयच्छत् । परितो नियमितवान् । अपि च ईशानाकृत् वृत्रादिशत्रुव-
धेनात्मानमैश्वर्यवंतं कुर्वन्निंद्रो दाशुषे हविर्दत्तवते यजमानाय फलं

ದೆಶಸ್ಯಸ್ ಪ್ರಯಚ್ಛೈನ್ ತುರ್ವಣಿಸ್ತೂರ್ಣಸಂಭಜನಃ । ತುರ್ವಣಿಸ್ತೂರ್ಣವನಿರಿತಿ ಯಾಸ್ಕಃ । ನಿ. ೬-೧೪ । ಯದ್ವಾ । ತುರ್ವಿತಾ ಶತ್ರೂಣಾಂ ಹಿಂಸಿತಾ । ಏವಂಭೂತ ಇಂದ್ರಸ್ತುರ್ವೀತಯೆ ಏತತ್ಸಂಜ್ಞಾಯೋದಕೇ ನಿಮಗ್ನಾಯ ಯುಷಯೇ ಗಾಧಮವಸ್ಥಾನಯೋಗ್ಯಂ ಧಿಷ್ಣ್ಯಪ್ರದೇಶಂ ಕಃ । ಅಕಾರ್ಷೀತ್ ॥ ರಂತೆ । ರಮು ಕ್ರೀಡಾಯಾಂ । ಛಾಂದಸೇ ಲಙಿ ಬಹುವಚನೇ ಬಹುಲಂ ಛಂದಸೀತಿ ಶಪೋ ಲುಕ್ । ಧಾತೋರಂತ್ಯಲೋಪಶ್ಛಾಂದಸಃ । ಅಯಚ್ಛೈತ್ । ಯಮು ಉಪರಮೇ । ಇಷುಗಮಿಯಮಾಂ ಛ ಇತಿ ಛತ್ವಂ । ಕಃ । ಕರೋತೇರ್ಲುಙಿ ಮಂತ್ರೇ ಘಸಹ್ವರಣಶೇತ್ಯಾದಿನಾ । ಸಾ. ೨-೪-೮೦ । ಚ್ಲೇರ್ಲುಕ್ । ಗುಣಃ । ಹಲ್ಙ್ಯಾದಿನಾ ತಲೋಪಃ । ಬಹುಲಂ ಛಂದಸ್ಯಮಾಙ್ಯೋಗೇಽಪೀತ್ಯಡಭಾವಃ ॥

॥ ಪ್ರತಿಪದಾರ್ಥ ॥

ಯತ್—ಯಾವಕಾರಣದಿಂದ (ಇಂದ್ರನು) । **ವಜ್ರೇಣ**—ತನ್ನ ವಜ್ರಾಯುಧದಿಂದ । **ಸೀಂ**—ಈ ಎಲ್ಲ ನದಿಗಳನ್ನು । **ಪರಿ ಆಯಚ್ಛೈತ್** — ಸುತ್ತಲೂ ಹರಿಯುವಂತೆ ಮಾಡಿದನೋ (ಆದ್ದರಿಂದ) । **ಅಸ್ಯೇದು**—ಇದೇ ಇಂದ್ರನ । **ತ್ವೇಷಸಾ**—ಪ್ರಕಾಶಮಾನವಾದ ಬಲದಿಂದ । **ಸಿಂಧವಃ**—ಸಮುದ್ರಗಳು ಅಥವಾ ಗಂಗಾದಿ ಸಪ್ತನದಿಗಳು । **ರಂತ**—(ತಮ್ಮ ತಮ್ಮ ಸ್ಥಾನಗಳಲ್ಲಿ) ರಮಿಸುತ್ತವೆ (ಅಲ್ಲದೆ) । **ಈಶಾನಾಕೃತ್**—(ವೃತ್ರಾದಿ ಶತ್ರುವಧದಿಂದ ತನ್ನ) ಪ್ರಭುತ್ವವನ್ನು ಸಾರುತ್ತಲೂ (ಇಂದ್ರನು) । **ದಾಶುಷೇ**—ಹವಿರ್ದಾತನಾದ ಯಜಮಾನನಿಗೆ । **ದೆಶಸ್ಯ**—(ಫಲವನ್ನು) ಕೊಡುತ್ತಲೂ । **ತುರ್ವಣಿಃ**—ಶೀಘ್ರಗಾಮಿಯಾಗಿ ಅಥವಾ ಶತ್ರು ಹಿಂಸಕನಾಗಿ । **ತುರ್ವೀತಯೇ**—ತುರ್ವೀತಿಯೆಂಬ (ನೀರಿನಲ್ಲಿ ಮುಳುಗಿದ್ದ) ಋಷಿಗೆ । **ಗಾಧಂ**—ವಾಸದ ನೆಲೆಯನ್ನು । **ಕಃ**—ಮಾಡಿಕೊಟ್ಟನು.

॥ ಭಾವಾರ್ಥ ॥

ಇಂದ್ರನು ತನ್ನ ವಜ್ರಾಯುಧದಿಂದ ದಾರಿಯನ್ನು ಬಿಡಿಸಿ ಸಪ್ತನದಿಗಳನ್ನೂ ಸುತ್ತಲೂ ಹರಿಯುವಂತೆ ಮಾಡಿದನು. ಆದ್ದರಿಂದಲೇ ಗಂಗಾದಿ ಸಪ್ತನದಿಗಳೂ ಸಹ ಇಂದ್ರನ ಪ್ರಕಾಶಮಾನವಾನ ಒಲದ ಸಹಾಯದಿಂದಲೇ ತಮ್ಮ ತಮ್ಮ ಸ್ಥಾನಗಳಲ್ಲಿ ರಮಿಸುತ್ತವೆ. ಅಲ್ಲದೆ, ಇಂದ್ರನು ಶತ್ರುವಧದಿಂದ ತನ್ನ ಪ್ರಭುತ್ವವನ್ನು ಸಾರುತ್ತಲೂ ಹವಿರ್ದಾತನಾದ ಯಜಮಾನನಿಗೆ ಫಲವನ್ನು ಕೊಡುತ್ತಲೂ ಸಹ ತಾನೂ ಶೀಘ್ರಗಾಮಿಯಾಗಿ ತುರ್ವೀತಿಯೆಂಬ ಋಷಿಗೆ ವಾಸದ ನೆಲೆಯನ್ನು ಮಾಡಿಕೊಟ್ಟನು.

English Translation.

Through his power the rivers sport, since he has, by his thunderbolt, determined their limits; establishing his supremacy (by killing Vritra) and granting recompense to the giver (of the oblation), he, the swift-moving, provided a resting place for Turviti.

॥ ವಿಶೇಷ ವಿಷಯಗಳು ॥

ತ್ವೇಷಸಾ—ದೀಪ್ತೇನ ಬಲೇನ—ಪ್ರಕಾಶಮಾನವಾದ ಕಾಂತಿಯಿಂದಲೂ ಮತ್ತು ಬಲದಿಂದಲೂ.

ಸಿಂಧವಃ—ಇಲ್ಲಿ ಸಿಂಧುಶಬ್ದಕ್ಕೆ ಸಮುದ್ರ ಅಥವಾ ಗಂಗೆಯೇ ಮೊದಲಾದ ಏಳು ನದಿಗಳು ಎಂದು ಅರ್ಥಮಾಡಿದ್ದಾರೆ.

ರಂತ—ರಮು-ಕ್ರೀಡಾಯಾಂ—ತಮ್ಮ ತಮ್ಮ ಸ್ಥಾನದಲ್ಲಿದ್ದು ಪ್ರಕಾಶಿಸುತ್ತವೆ ಎಂದರ್ಥ.

ಸೀಮ್—ಏನಾನ್ ಸಿಂಧೂನ್—ಈ ಶಬ್ದಕ್ಕೆ ಪರಿಗ್ರಹಾರ್ಥೀಯತ್ವವೂ, ಪದಪೂರಣಾರ್ಥವು ಅಂದರೆ ಸ್ವೀಕಾರಯೋಗ್ಯವಾದ ವಸ್ತುಸೂಚಕತ್ವವೂ, ವೇದವಾಕ್ಯದ ಪೂರಣಾರ್ಥಕತ್ವವೂ ಉಂಟು. **ಸೀಮಿತಿ ಪರಿಗ್ರಹಾರ್ಥೀಯೋ ವಾ ಪದಪೂರಣೋ ವಾ** (ನಿರು. ೧-೭) ಎಂದು ನಿರುಕ್ತದಲ್ಲಿ ಮೇಲೆಹೇಳಿದ ಅರ್ಥವನ್ನೇ ಸೀಮ್ ಎಂಬ ಶಬ್ದಕ್ಕೆ ಹೇಳಿದ್ದಾರೆ.

ಈಶಾನಕೃತ್—ವೃತ್ರಾಸುರನೇ ಮೊದಲಾದವರ ವಧೆಯಿಂದ ಇಂದ್ರನ ಮಹತ್ವವನ್ನು ಸೂಚಿಸುವುದು

ತುರ್ವಣಿಃ—ತೂರ್ಣಸಂಭಜನಃ—ಜಾಗ್ರತೆಯಾಗಿ ಶತ್ರುಗಳನ್ನು ಧ್ವಂಸಮಾಡುವವನು. **ತುರ್ವಣಿ ಸ್ತೂರ್ಣವನಿಃ** (ನಿ. ೬-೧೪) **ಯದ್ವಾ ತುರ್ವಿತಾ ತತ್ರೂಣಾಂ ಹಿಂಸಿತಾ**—ಶತ್ರುಗಳನ್ನು ವಿಶೇಷವಾಗಿ ಹಿಂಸಿಸುವವನು (ಇಂದ್ರ).

ತುರ್ವೀತಯೇ—ತುರ್ವೀತನೆಂಬುವನು ಒಬ್ಬ ಮಹರ್ಷಿ. ಆತನು ನೀರಿನಲ್ಲಿ ಮುಳುಗಿಹೋಗುತ್ತಿದ್ದನು.

ಗಾಧಂ—**ಅವಸ್ಥಾನಯೋಗ್ಯಂ ಧಿಷ್ಣ್ಯಪ್ರದೇಶಂ**—ವಾಸಮಾಡಲು ಯೋಗ್ಯವಾದ ಗೃಹಾಂತರ್ಗತ ಪ್ರದೇಶ.

॥ ವ್ಯಾಕರಣಪ್ರಕ್ರಿಯಾ ॥

ರಂತ—ರಮು ಕ್ರೀಡಾಯಾಂ ಧಾತು. ವರ್ತಮಾನಾರ್ಥದಲ್ಲಿ **ಛಂದಸಿ ಲುಙ್‌ಲಙ್‌ಲಿಟಃ** ಎಂಬುದರಿಂದ ಲಙ್. ಪ್ರಥಮಪುರುಷ ಬಹುವಚನದಲ್ಲಿ **ಝೋಂತಃ** ಎಂಬುದರಿಂದ ಅಂತಾದೇಶ. **ಬಹುಲಂ-ಛಂದಸಿ** ಎಂಬುದರಿಂದ ಶಬ್ವಿಕರಣಕ್ಕೆ ಲುಕ್. ಧಾತುವಿನ ಅಂತ್ಯಕ್ಕೆ ಛಾಂದಸವಾಗಿ ಲೋಪಬರುತ್ತದೆ. **ಬಹುಲಂಛಂದಸ್ಯಮಾಙ್‌ಯೋಗೇಽಪಿ** ಎಂಬುದರಿಂದ ಆಡಾಗಮ ಬರುವುದಿಲ್ಲ. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

ಅಯಚ್ಛೈತ್—ಯಮು ಉಪರಮೇ ಧಾತು. ಲಙ್ ಪ್ರಥಮಪುರುಷ ಏಕವಚನದಲ್ಲಿ ತಿಪ್. ಇತಶ್ಚ ಎಂಬುದರಿಂದ ಇಕಾರಲೋಪ. **ಇಷುಗಮಿಯಮಾಂಛಿಷಃ** (ಪಾ. ಸೂ. ೭-೩-೭೭) ಎಂಬುದರಿಂದ ಶಪ್ ಪರವಾದಾಗ ಛಾದೇಶ. ಲಙ್ ನಿಮಿತ್ತವಾಗಿ ಅಂಗಕ್ಕೆ ಆಡಾಗಮ. **ಯೇದ್ವೃತ್ತಾನ್ನಿತ್ಯಮ್** ಎಂಬುದರಿಂದ ಯದ್ಯೋಗವಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಆಡಾಗಮ ಉದಾತ್ತವಾದುದರಿಂದ ಆದ್ಯುದಾತ್ತವಾಗುತ್ತದೆ.

ಈಶಾನಕೃತ್—ಈಶಾನಂ ಕರೋತಿ ಇತಿ ಈಶಾನಕೃತ್. ಕೃಞ್ ಧಾತುವಿಗೆ ಕ್ವಿಪ್ ಪ್ರತ್ಯಯ. ಪಿತ್ವಾದುದರಿಂದ **ಹ್ರಸ್ವಸ್ಯ ಪಿತಿ ಕೃತಿತುಕ್** ಎಂಬುದರಿಂದ ತುಗಾಗಮ. **ಗತಿಕಾರಕೋಪಪದಾತ್ಕೃತ್** ಸೂತ್ರದಿಂದ ಕೃದುತ್ತರಪದಪ್ರಕೃತಿಸ್ವರ ಬರುತ್ತದೆ.

ಕಃ—ಡುಕೃಞ್ ಕರಣೇ ಧಾತು ಲುಙ್ ಪ್ರಥಮಪುರುಷ ಏಕವಚನದಲ್ಲಿ ತಿಪ್. ಇತಶ್ಚ ಎಂಬುದರಿಂದ ಇಕಾರಲೋಪ. **ಚ್ಲಿ ಲುಙಿ** ಎಂಬುದರಿಂದ ಪ್ರಾಪ್ತವಾದ ಚ್ಲಿಗೆ **ಮಂತ್ರೇಘಸಹ್ವರಣಶ**—(ಪಾ. ಸೂ. ೨-೪-೮೦) ಎಂಬುದರಿಂದ ಲುಕ್. **ಸಾರ್ವಧಾತುಕಾರ್ಧಧಾತುಕಯೋಃ** ಸೂತ್ರದಿಂದ ತಿಪ್ ನಿಮಿತ್ತವಾಗಿ ಧಾತುವಿನ ಇಕಿಗೆ ಗುಣ. ಆಗ ಹಲಿನಪರದಲ್ಲಿ ತಿಪ್ ಅಪೃಕ್ತವಾದುದರಿಂದ **ಹಲ್‌ಙ್ಯಾಭ್ಯೋ**—ಸೂತ್ರದಿಂದ ತಿಲೋಪ. **ಬಹುಲಂಛಂದಸ್ಯಮಾಙ್‌ಯೋಗೇಽಪಿ** ಎಂಬುದರಿಂದ ಲುಙ್ ನಿಮಿತ್ತವಾಗಿ ಆಡಾಗಮ ಬರುವುದಿಲ್ಲ. ರೇಫಕ್ಕೆ ರುತ್ವ ವಿಸರ್ಗ. **ಕಃ** ಎಂದು ರೂಪವಾಗುತ್ತದೆ. ತಿಙಂತನಿಘಾತಸ್ವರ ಬರುತ್ತದೆ.

॥ ಸಂಹಿತಾಪಾಠಃ ॥

ಅಸ್ಮಾ ಇದು ಪ್ರ ಭರಾ ತೂತುಜಾನೋ ವೃತ್ರಾಯ ವಜ್ರಮೀಶಾನಃ ಕಿಯೇಧಾಃ ।
ಗೋರ್ನ ಪರ್ವ ವಿ ರದಾ ತಿರಶ್ಚೇಷ್ಯನ್ನರ್ಣಾಂಸ್ಯಪಾಂ ಚರಧ್ಯೈ ॥೧೨॥

॥ ಪದಪಾಠಃ ॥

ಅಸ್ಮೈ । ಇತ್ । ಊಂ ಇತಿ । ಪ್ರ । ಭರ । ತೂತುಜಾನಃ । ವೃತ್ರಾಯ । ವಜ್ರಂ । ಈಶಾನಃ । ಕಿಯೇಧಾಃ ।
ಗೋಃ । ನ । ಪರ್ವ । ವಿ । ರದ । ತಿರಶ್ಚಾ । ಇಷ್ಯನ್ । ಅರ್ಣಾಂಸಿ । ಅಪಾಂ । ಚರಧ್ಯೈ ॥ ೧೨ ॥

॥ ಸಾಯಣಭಾಷ್ಯ ॥

ತೂತುಜಾನ ಇತಿ ಕ್ಷಿಪ್ರನಾಮ । ತೂತುಜಾನಸ್ತ್ವರಮಾಣಃ । ಯದ್ವಾ । ಶತ್ರೂನ್ಹಿಂಸನ್ । ಈಶಾನ ಈಶ್ವರಃ ಸರ್ವೇಷಾಂ ಕಿಯೇಧಾಃ ಕಿಯತೋಽನವಧೃತಪರಿಮಾಣಸ್ಯ ಬಲಸ್ಯ ಧಾತಾ । ಯದ್ವಾ । ಕ್ರಮಮಾಣಂ ಶತ್ರುಬಲಂ ದಧಾತ್ಯವಸ್ಥಾಪಯತೀತಿ ಕಿಯೇಧಾಃ । ಹೇ ಇಂದ್ರ ಏವಂಭೂತಸ್ತ್ವಮಸ್ಮೈ ವೃತ್ರಾಯ ವಜ್ರಂ ಪ್ರ ಭರ । ಇಮಂ ವೃತ್ರಂ ವಜ್ರೇಣ ಪ್ರಹರೇತ್ಯರ್ಥಃ । ಪ್ರಹೃತ್ಯ ಚಾರ್ಣಾಂಸಿ ವೃಷ್ಟಿಜಲಾನೀಷ್ಯನ್ ತಸ್ಮಾದ್ವೃತ್ರಾದ್ಗಮಯಿಷ್ಯನ್ತ್ಸಮಪಾಂ ಚರಧ್ಯೈ ತಾಸಾಮಪಾಂ ಚರಣಾಯ ಭೂಪ್ರದೇಶಂ ಪ್ರತಿ ಗಮನಾಯ ತಸ್ಯ ವೃತ್ರಸ್ಯ ಮೇಘರೂಪಸ್ಯ ಪರ್ವ ಪರ್ವಾಣ್ಯವಯವಸಂಧೀನ್ ತಿರಶ್ಚಾ ತಿರ್ಯಗವಸ್ಥಿತೇನ ವಜ್ರೇಣ ವಿ ರದ । ವಿಲಿಖ । ಛಿಂಧೀತ್ಯರ್ಥಃ । ತತ್ರ ದೃಷ್ಟಾಂತಃ । ಗೋರ್ನ । ಯಥಾ ಮಾಂಸಸ್ಯ ವಿಕರ್ತಾರೋ ಲೌಕಿಕಾಃ ಪುರುಷಾಃ ಪಶೋರವಯವಾನಿತಸ್ತತೋ ವಿಭಜಂತಿ ತದ್ವತ್ । ಅತ್ರ ನಿರುಕ್ತಂ । ಅಸ್ಮೈ ಪ್ರಹರ ತೂರ್ಣಂ ತ್ವರಮಾಣೋ ವೃತ್ರಾಯ ವಜ್ರಮೀಶಾನಃ ಕಿಯೇಧಾಃ ಕಿಯದ್ಧಾ ಇತಿ ವಾ ಕ್ರಮಮಾಣಧಾ ಇತಿ ವಾ ಗೋರಿವ ಪರ್ವಾಣಿ ವಿರದ ಮೇಘಸ್ಯೇಷ್ಯನ್ನರ್ಣಾಂಸ್ಯಪಾಂ ಚರಣಾಯ । ನಿ. ೬-೨೦ । ಇತಿ ॥ ಭರ । ಹೃಗ್ರಹೋರ್ಭ ಇತಿ ಭತ್ವಂ । ದ್ವ್ಯಚೋಽತಸ್ತಿಙ ಇತಿ ಸಾಂಹಿತಿಕೋ ದೀರ್ಘಃ । ತೂತುಜಾನಃ । ತುಜ ಹಿಂಸಾಯಾಂ । ಕಾನಚ ತುಜಾದೀನಾಂ ದೀರ್ಘೋಽಭ್ಯಾಸಸ್ಯೇತ್ಯಭ್ಯಾಸಸ್ಯ ದೀರ್ಘತ್ವಂ । ಛಂದಸ್ಯುಭಯಥೇತಿ ಕಾನಚಿತ್ಸಾರ್ವಧಾತುಕತ್ವೇ ಸತ್ಯಭ್ಯಸ್ತಾನಾಮಾದಿರಿತ್ಯಾದ್ಯುದಾತ್ತತ್ವಂ । ಕಿಯೇಧಾಃ । ತುಜತಾ ಕಿಯೇಧಾ ಇತ್ಯತ್ರೋಕ್ತಂ । ರದ । ರದ ವಿಲೇಖನೇ । ತಿಜ್ಧಾತಿಜ ಇತಿ ನಿಘಾತಃ । ತಿರಶ್ಚಾ । ತಿರೋಽಂಚತೀತಿ

ತಿರ್ಯಚ್ । ಯತ್ಪಿಗಿತ್ಯಾದಿನಾ ಕ್ವಿನ್ । ಅನಿದಿತಾಮಿತಿ ನಲೋಪಃ । ತೃತೀಯೈಕವಚನೇ ಭಸಂಜ್ಞಾ-ಯಾಮಚ ಇತ್ಯಕಾರಲೋಪಃ । ಶ್ಚುತ್ವೇನ ಸಕಾರಸ್ಯ ಶಕಾರಃ । ಉದಾತ್ತನಿವೃತ್ತಿಸ್ವರೇಣ ವಿಭಕ್ತೇರುದಾತ್ತತ್ವಂ । ಇಷ್ಯನ್ । ಇಷ ಗತಾವಿತ್ಯಸ್ಮಾದೆಂತರ್ಣ್ಯವಿತಣ್ಯರ್ಥಾಚ್ಛತರಿ ದಿವಾದಿಭ್ಯಃ ಶ್ಯನ್ । ತಸ್ಯ ನಿತ್ತ್ವಾದಾದ್ಯುದಾತ್ತತ್ವಂ । ಚರಧ್ಯೈ । ತುಮರ್ಥೇ ಸೇಸೇನಿತಿ ಚರತೇರಧ್ಯೈಪ್ರತ್ಯಯಃ ॥

॥ ಪ್ರತಿಪದಾರ್ಥ ॥

(ಹೇ ಇಂದ್ರ—ಎಲೈ ಇಂದ್ರನೇ) । **ತೂತುಜಾನಃ**—ಶೀಘ್ರಗಮನವುಳ್ಳವನೂ ಅಥವಾ ಶತ್ರುಹಿಂಸಕನೂ । **ಈಶಾನಃ**—ಸರ್ವರಿಗೂ ಪ್ರಭುವಾದವನೂ । **ಕಿಯೇಧಾಃ**—ಅತ್ಯಂತ ಬಲಶಾಲಿಯಾದವನೂ ಅಥವಾ ಶತ್ರುಬಲವನ್ನು ಕಮ್ಮಿ ಮಾಡುವವನೂ ಆದ ನೀನು । **ಅಸ್ಮಾ ಇದು ವೃತ್ರಾಯೆ**—ಈ ವೃತ್ರಾಸುರನ ಮೇಲೆಯೇ । **ವಜ್ರಂ**—ವಜ್ರಾಯುಧವನ್ನು । **ಪ್ರ ಭರ**—ಪ್ರಯೋಗಿಸಿ ಪ್ರಹರಿಸು । **ಅರ್ಣಾಂಸಿ**—ವೃಷ್ಟ್ಯುದಕಗಳನ್ನು (ಮಳೆಯ ನೀರನ್ನು) । **ಇಷ್ಯನ್**—ವೃತ್ರಾಸುರ ಅಥವಾ ಮೇಘದಿಂದ ಹೊರಡಿಸುವ ನೀನು । **ಅಪಾಂ**—ಉದಕಗಳ । **ಚರಧ್ಯೈ**—ಸಂಚಾರಕ್ಕಾಗಿ (ಹರಿಯುವುದಕ್ಕಾಗಿ) । **ಗೋಃ ಪರ್ವ ನೆ**—(ಮೇಘರೂಪದಿಂದಿರುವ ಆ ವೃತ್ರಾಸುರನ ಅವಯವಗಳನ್ನು ಕಟುಕರು ಗೋವಿನ ಶರೀರದ ಮಾಂಸಖಂಡಗಳನ್ನು ಕತ್ತರಿಸುವಂತೆ । **ತಿರಶ್ಚಾ**—ಹರಿತವಾದ ನಿನ್ನ ವಜ್ರಾಯುಧದಿಂದ । **ವಿ ರದೆ**—ಕತ್ತರಿಸು ॥

॥ ಭಾವಾರ್ಥ ॥

ಎಲೈ ಇಂದ್ರನೇ, ಶೀಘ್ರಗಾಮಿಯೂ ಅಥವಾ ಶತ್ರುಹಿಂಸಕನೂ, ಎಲ್ಲರಿಗೂ ಪ್ರಭುವಾದವನೂ, ಅತ್ಯಂತ ಬಲಶಾಲಿಯೂ ಆದ ನೀನು **ಈ ವೃತ್ರಾಸುರನ ಮೇಲೆ** ನಿನ್ನ ವಜ್ರಾಯುಧವನ್ನು ಪ್ರಯೋಗಿಸಿ ಮೇಘರೂಪದಿಂದಿರುವ ಅವನನ್ನು ಪ್ರಹರಿಸಿ ಮೇಘದಿಂದ ಉದಕವು ಮಳೆಯರೂಪದಿಂದ ಬೀಳುವಂತೆ ಮಾಡು. ಈರೀತಿ ಮೇಘದಿಂದ ನೀರು ಬೀಳುವುದಕ್ಕಾಗಿ ಕಟುಕರು ಗೋವಿನ ಮೃತಶರೀರವನ್ನು ತುಂಡುತುಂಡಾಗಿ ಕತ್ತರಿಸುವಂತೆ ಮೇಘರೂಪದಿಂರುವ ವೃತ್ರಾಸುರನ ಶರೀರವನ್ನು ನಿನ್ನ ಹರಿತವಾದ ವಜ್ರಾಯುಧದಿಂದ ಕತ್ತರಿಸು.

English Translation.

Indra, quick-moving and strength-endowed lord of all, hirl your thunderbolt at this Vritra and cut off his joints as (butchers cut up) a cow, that the rains may issue from him, and the waters flow (over the earth).

॥ ವಿಶೇಷ ವಿಷಯಗಳು ॥

ತೂತುಜಾನಃ—ಇದು ಕ್ಷಿಪ್ರ (ಜಾಗ್ರತಿ) ಎಂಬರ್ಥವನ್ನು ಕೊಡುವ ಪದ. ನಿರುಕ್ತ (೩-೯) ದಲ್ಲಿ ಕ್ಷಿಪ್ರವಾಚಕವಾಗಿರುವ ಇಪ್ಪತ್ತಾರು ಪದಗಳನ್ನು **ನು, ಮುಂಚ್ಚು, ದ್ರುವತ್** ಎಂಬುದಾಗಿ ಏಕತ್ರ ಪಾಠವಾಡಿದ್ದಾರೆ. ಈಲ್ಲಿ ಈ ಪದಕ್ಕೆ ತ್ವರೆಗೊಳಿಸುವವನು ಅಥವಾ ಶತ್ರುಗಳನ್ನು ಹಿಂಸಿಸುವವನು ಎಂದು ಎರಡು ರೀತಿಯಿಂದಲೂ ಅರ್ಥವಾಡಿದ್ದಾರೆ.

ಕಿಯೇಧಾಃ—ಕಿಯತೋ, ಅನವಧೃತಪರಿಮಾಣಸ್ಯ ಬಲಸ್ಯ ಧಾತಾ । ಯದ್ವಾ ಕೃಮುಮಾಣಂ ಶತ್ರುಬಲಂ ದಧಾತ್ಯವಸ್ಥಾಪಯತೀತಿ ಕಿಯೇಧಾಃ । ಅನಿರ್ದಿಷ್ಟವಾದ ಬಲವನ್ನು ಸೃಷ್ಟಿಮಾಡುವವನು, ಅಥವಾ

ತಾನಾಗಿಯೇ ಆಕ್ರಮಿಸಿ ಬರುವ ಶತ್ರುಬಲವನ್ನು ಎದುರಿಸಿ ಹಿಮ್ಮೆಟ್ಟಿಸುವವನು ಇಂದ್ರ. **ಅಸ್ಮೈ ಪ್ರಹರ ತೂರ್ಣಂ ತ್ವರಮಾಣೋ ವೃತ್ರಾಯ ವಜ್ರಮೀಶಾನಃ ಕಿಯೇಧಾಃ ಕಿಯೆದ್ಧಾ ಇತಿ ವಾ ಕ್ರಮಮಾಣಧಾ ಇತಿ ವಾ ಗೋರಿವ ಪರ್ವಾಣಿ ವಿರದ ಮೇಘಸ್ಯೇಷ್ಮನ್ನರ್ಣಾಂಸ್ಯಪಾಂ ಚರಣಾಯೆ** (ನಿರು. ೬-೩೦) ಎಂಬ ನಿರುಕ್ತವಚನದಲ್ಲಿ ಆಕ್ರಮಣಕಾರರನ್ನು ಎದುರಿಸುವವನು ಎಂಬರ್ಥದಲ್ಲಿ ಕಿಯದ್ಧಾ ಎಂಬ ಪದವು ಪಠಿತವಾಗಿದೆ.

ತಸ್ಮಾತ್ ಅಪಾಂ ಚರಧ್ಯೈ—ಆ ವೃತ್ರಾಸುರನಿಂದ ಭೂಮಿಗೆ ಜಲರಾಶಿಯು ಹರಿಯುವಂತೆ ಮಾಡು. ವೃತ್ರನು ಮೇಘರೂಪದಿಂದಿದ್ದು ಭೂಮಿಗೆ ವೃಷ್ಟಿಯನ್ನೇ ತಡೆದು ನಿಲ್ಲಿಸಿದಾಗ ಇಂದ್ರನು ಅವನ ಮೇಲೆ ವಜ್ರಾಯುಧವನ್ನು ಪ್ರಯೋಗಿಸಿ ಭೂಮಿಗೆ ಜಲವೃಷ್ಟಿಯನ್ನು ಸುರಿಸಿದನು ಎಂಬ ಕಥಾನುವಾದವು ಇಲ್ಲಿ ಸ್ಮರಣೆಗೆ ಬರುವುದು.

ತಿರಶ್ಚಾ—**ತಿರ್ಯಗವಸ್ಥಿತೇನ ವಜ್ರೇಣ**—**ತಿರೋಂಚತೀತಿ.**

ತಿರ್ಯಜ್—ಅಡ್ಡಲಾಗಿ ಪ್ರವೇಶಿಸುವ, ಸದಾ ಅಡ್ಡವಾಗಿರುವಂಕೆ ಕಾಣುವ ಎಂದರ್ಥ.

ಗೌರ್ಯ—**ಹಸುವಿನಂತೆ**—ಇದು ದೃಷ್ಟಾಂತರೂಪವಾದ ಅರ್ಥವನ್ನು ಕೊಡುವುದು. ಮಾಂಸವನ್ನು ಶೇಖರಿಸುವ ಕಟುಕರು ಮೊದಲು ಪ್ರಾಣಿಯ ದೇಹವನ್ನು ತುಂಡುತುಂಡಾಗಿ ಕತ್ತರಿಸಿಟ್ಟುಕೊಳ್ಳುವಂತೆ, ಮೇಘೆ ಶೂಪದಿಂದಿರುವ ವೃತ್ರಾಸುರನನ್ನು ಚೂರುಚೂರಾಗಿ ಕತ್ತರಿಸು ಎಂದು ತಾತ್ಪರ್ಯಾರ್ಥ. ಇದೇ ಅರ್ಥವನ್ನೇ **ಅಸ್ಮೈ ಪ್ರಹರ ತೂರ್ಣಂ ತ್ವರಮಾಣೋ ವೃತ್ರಾಯ ವಜ್ರಮಿಶಾನಃ ಕಿಯೇಧಾಃ ಕಿಯದ್ಧಾ ಇತಿ ವಾ ಕ್ರಮಮಾಣಧಾ ಇಶಿ ವಾ ಗೋರಿವ ಪರ್ವಾಣಿ ವಿರದ ಮೇಘಸ್ಯೇಷ್ಮನ್ನರ್ಣಾಂಸ್ಯಪಾಂ ಚಾರಣಾಯೆ** (ನಿರು. ೬-೧೦) ಎಂಬುದಾಗಿ ನಿರುಕ್ತವು ತಿಳಿಸುವುದು.

॥ ವ್ಯಾಕರಣಪ್ರಕ್ರಿಯಾ ॥

ಭರ—ಹೃಞ್ ಹರಣೇ ಧಾತು. ಲೋಟ್ ಮಧ್ಯಮಪುರುಷ ಏಕವಚನದಲ್ಲಿ ಸಿಪಿಗೆ ಹಿ ಆದೇಶ. ಶಪ್ ವಿಕರಣ. ತನ್ನಿಮಿತ್ತವಾಗಿ ಧಾತುವಿಗೆ ಗುಣ. ಉರಣ್ಪರಃ ಎಂಬುದರಿಂದ ರಪರವಾಗಿ ಬರುತ್ತದೆ. ಅಕಾರದ ಪರದಲ್ಲಿರುವುದರಿಂದ **ಅತೋಹೇಃ** ಎಂಬುದರಿಂದ ಹಿಗೆ ಲುಕ್. **ಹೃಗ್ರಹೋರ್ಭಶ್ಛಂದಸಿ** ಎಂಬುದರಿಂದ ಧಾತುವಿನ ಹಕಾರಕ್ಕೆ ಭಕಾರಾದೇಶ. **ದ್ವ್ಯಚೋತಸ್ತಿಙಃ** (ಪಾ. ಸೂ. ೬-೪-೧೩೫) ಎಂಬುದರಿಂದ ಸಂಹಿತಾದಲ್ಲಿ ದೀರ್ಘ ಬರುತ್ತದೆ. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

ತೂತುಜಾನಃ—ತುಜ ಹಿಂಸಾಯಾಂ ಧಾತು. ಇದಕ್ಕೆ ಲಿಟಿನಲ್ಲಿ ಕಾನಚ್. ತನ್ನಿಮಿತ್ತವಾಗಿ ಧಾತುವಿಗೆ ದ್ವಿತ್ವ. ಅಭ್ಯಾಸಕ್ಕೆ ಹಲಾದಿಶೇಷ. **ತುಜಾದೀನಾಂ ದೀರ್ಘೋಭ್ಯಾಸಸ್ಯ** (ಪಾ. ಸೂ. ೬-೧-೭) ಎಂಬುದರಿಂದ ಅಭ್ಯಾಸಕ್ಕೆ ದೀರ್ಘ. **ಛಂದಸ್ಯುಭಯಥಾ** ಎಂಬುದರಿಂದ ಕಾನಚಿಗೆ **ಸಾರ್ವಧಾತುಕಸಂಜ್ಞೆ**ಯೂ ಇರುವುದರಿಂದ **ಅಭ್ಯಸ್ತಾನಾಮಾದಿಃ** ಎಂಬುದರಿಂದ ಆದ್ಯುದಾತ್ತಸ್ವರ ಬರುತ್ತದೆ.

ಕಿಯೇಧಾಃ—ತುಜತಾ ಕಿಯೇಧಾಃ (ಋ. ಸಂ ೧-೬೧-೬) ಎಂಬಲ್ಲಿ ವ್ಯಾಖ್ಯಾತವಾಗಿದೆ.

ರದ—ರದ ವಿಲೇಖನೇ ಧಾತು. ಲೋಟ್ ಮಧ್ಯಮಪುರುಷ ಏಕವಚನದಲ್ಲಿ **ಅತೋಹೇಃ** ಎಂಬುದರಿಂದ ಹಿಗೆ ಲುಕ್. **ತಿಙ್ಙತಿಙಃ** ಎಂಬುದರಿಂದ ನಿಘಾತಸ್ವರ ಬರುತ್ತದೆ.

ತಿರಶ್ಚಾ—ತಿರೋಽಞ್ಚತಿ ಇತಿ ತಿರ್ಯಙ್. **ಋತ್ವಿಕ್‌ದಧೃಕ್** ಎಂಬುದರಿಂದ ಸುಬಂತ ಉಪಪದವಾದಾಗ ಅಂಚು ಧಾತುವಿಗೆ ಕ್ವಿನ್. ಕಿತ್ತಾದುದರಿಂದ **ಅನಿದಿತಾಂಹಲ**—ಎಂಬುದರಿಂದ ಧಾತುವಿನ ಉಪಧಾನ

ಕಾರಕ್ಕೆ ಲೋಪ. ತೃತೀಯಾ ಏಕವಚನ ಪರವಾದಾಗ ಭಸಂಜ್ಞಾ ಇರುವುದರಿಂದ **ಅಚಿಃ** ಎಂಬುದರಿಂದ ಲುಪ್ತನಕಾರವುಳ್ಳ ಅಂಚುಧಾತುವಿನ ಅಕಾರಕ್ಕೆ ಲೋಪ. ಆಗ ಸಕಾರಕ್ಕೆ ಚಕಾರಯೋಗ ಬಂದುದರಿಂದ ಶ್ಚುತ್ವದಿಂದ ಸಕಾರಕ್ಕೆ ಶಕಾರಾದೇಶ. ತಿರಶ್ಚಾ ಎಂದು ರೂಪವಾಗುತ್ತದೆ. ಇಲ್ಲಿ ಅನುದಾತ್ತ ವಿಭಕ್ತಿನಿಮಿತ್ತವಾಗಿ ಉದಾತ್ತವಾದ ಧಾತುವಿನ ಅಕಾರಕ್ಕೆ ಲೋಪಬಂದುದರಿಂದ **ಅನುದಾತ್ತಸ್ಯ ಚ**—(ಪಾ. ಸೂ. ೬-೧-೧೬೧) ಎಂಬುದರಿಂದ ವಿಭಕ್ತಿಗೆ ಉದಾತ್ತಸ್ವರ ಬರುತ್ತದೆ.

ಇಷ್ಯನ್—ಇಷ ಗತೌ ಧಾತು. ಪ್ರೇರಣಾ ತೋರುವುದರಿಂದ ಅಂತರ್ಭಾವಿತಣ್ಯರ್ಥಕವಾದ ಧಾತು. ಇದಕ್ಕೆ ಲಡರ್ಥದಲ್ಲಿ ಶತೃಪ್ರತ್ಯಯ. **ದಿವಾದಿಭ್ಯಃ ಶ್ಯನ್** ಎಂಬುದರಿಂದ ಶ್ಯನ್ ವಿಕರಣ. ಅಪಿತ್ತಾದುದರಿಂದ **ಜ್ಞಿದ್ಸ್ವದ್ಭಾವವನ್ನು** ಹೊಂದುವುದರಿಂದ ಧಾತುವಿನ ಲಘೂಪಧೆಗೆ ಗುಣ ಬರುವುದಿಲ್ಲ. ಇಷ್ಯತ್ ಶಬ್ದವಾಗುತ್ತದೆ. ನಿತ್ ಪ್ರತ್ಯಯಾಂತವಾದುದರಿಂದ **ಞ್ನಿತ್ಯಾದಿರ್ನಿತ್ಯಮ್** ಎಂಬುದರಿಂದ ಆದ್ಯುದಾತ್ತವಾಗುತ್ತದೆ. ಪ್ರಥಮಾಸು ಪರವಾದಾಗ ನುಮಾಗಮ. **ಹಲ್ಙ್ಯಾಭ್ಯೋ**—ಸೂತ್ರದಿಂದ ಸುಲೋಪ. ಸಂಯೋಗಾಂತಲೋಪದಿಂದ ತಲೋಪ.

ಚರಧ್ಯೈ—ಚರ ಗತಿಭಕ್ಷಣಯೋಃ ಧಾತು. **ತುಮರ್ಥೇ ಸೇಸೇನಸೇ**—(ಪಾ. ಸೂ. ೩-೪-೯) ಎಂಬುದರಿಂದ ತುಮನರ್ಥದಲ್ಲಿ ಆಧ್ಯೈ ಪ್ರತ್ಯಯ. ಏಜಂತವಾದುದರಿಂದ **ಕೈನ್ಕ್ಯೋಜಂತಃ** ಎಂಬುದರಿಂದ ಅವ್ಯಯ ಸಂಜ್ಞೆಯನ್ನು ಹೊಂದುತ್ತದೆ.

ಅಸಾಮ್—**ಊಡಿದಂಪದಾದಿ**— ಎಂಬುದರಿಂದ ವಿಭಕ್ತಿಗೆ ಉದಾತ್ತಸ್ವರ ಬರುತ್ತದೆ.

॥ ಸಂಹಿತಾಪಾಠಃ ॥

ಅಸ್ಯೇದು ಪ್ರ ಬ್ರೂಹಿ ಪೂರ್ವ್ಯಾಣಿ ತುರಸ್ಯ ಕರ್ಮಾಣಿ ನವ್ಯ ಉಕ್ಥ್ಯಃ।
ಯುಧೇ ಯದಿಷ್ಣಾನ ಆಯುಧಾನ್ಯೃಘಾಯಮಾಣೋ ನಿರಿಣಾತಿ ಶ-
ತ್ರೂನ್ ॥ ೧೩ ॥

॥ ಪದಪಾಠಃ ॥

ಅಸ್ಯ । ಇತ್ । ಊಂ ಇತಿ । ಪ್ರ । ಬ್ರೂಹಿ । ಪೂರ್ವ್ಯಾಣಿ । ತುರಸ್ಯ । ಕರ್ಮಾಣಿ।
ನವ್ಯಃ । ಉಕ್ಥ್ಯಃ ।
ಯುಧೇ । ಯತ್ । ಇಷ್ಣಾನಃ । ಆಯುಧಾನಿ । ಋಘಾಯಮಾಣಃ । ನಿಃ । ರಿಣಾತಿ।
ಶತ್ರೂನ್ ॥ ೧೩ ॥

॥ ಸಾಯಣಭಾಷ್ಯಂ ॥

ಉಕ್ಥೈಃ ಶಸ್ತ್ರೈರ್ನವ್ಯಃ ಸ್ತುತ್ಯೋ ಯ ಇಂದ್ರ ಅಸ್ಯೇದು ಅಸ್ಯೈವ ತುರಸ್ಯ ಯುದ್ಧಾರ್ಥಂ ತ್ವರಮಾಣಸ್ಯೇಂದ್ರಸ್ಯ ಪೂರ್ವ್ಯಾಣಿ ಪುರಾಣಾನಿ ಕರ್ಮಾಣ್ಯೇತತ್ಕೃತಾನಿ ಬಲಕರ್ಮಾಣಿ ಹೇ ಸ್ತೋತಃ ಪ್ರ ಬ್ರೂಹಿ । ಪ್ರಶಂಸ । ಯದ್ಯದಾ ಯುಧೇ ಯೋಧನಾಯಾಯುಧಾನಿ ವಜ್ರಾದೀನೀಷ್ಣಾನ ಆಭೀಕ್ಷ್ಣೇನ ಪ್ರೇರಯನ್ ಶತ್ರೂನ್ಹಿಂಸಾಯಮಾಣೋ ಹಿಂಸಂಶ್ಚೇಂದ್ರೋ ನಿರಿಣಾತಿ ಅಭಿಮುಖಂ ಗಚ್ಛತಿ । ತದಾನೀಂ ಪ್ರ ಬೂಹೀತಿ ಪೂರ್ವೇಣ ಸಂಬಂಧಃ । ಪೂರ್ವ್ಯಮಿತಿ ಪುರಾಣನಾಮ । ಪೂರ್ವ್ಯಮಹ್ನಾಯೇತಿ ಪುರಾಣನಾಮಸು ಪಾಠಾತ್ ॥ ತುರಸ್ಯ । ತುರ ತ್ವರಣೇ । ಇಗುಪಧಲಕ್ಷಣಃ ಕಃ । ನವ್ಯಃ । ಣು ಸ್ತುತೌ । ಅಚೋ ಯೆದಿತಿ ಯತ್ । ಗುಣಃ । ಧಾತೋಸ್ತನ್ನಿಮಿತ್ತಸ್ಯೈವೇತ್ಯನಾದೇಶಃ । ಇಷ್ಣಾನಃ । ಆಭೀಕ್ಷ್ಣ್ಯೇ । ಕ್ರಿಯಾಯೌದಿಕಃ । ವ್ಯತ್ಯಯೇನಾತ್ಮನೇಪದಂ । ಶಾನಚಶ್ಚಿತ್ವಾತ್ಪದಾದೇರುದಾತ್ತತ್ವಂ । ಋಘಾಯಮಾಣಃ । ನಹಿ ತ್ವಾ ರೋದಸೀ ಉಭೇ ಋಘಾಯಮಾಣಂ । ಋಗ್ವೇ. ೧-೧೦-೮ । ಇತ್ಯತ್ರ ವ್ಯುತ್ಪಾದಿತಂ । ನಿರಿಣಾತಿ । ರೀ ಗತಿರೇಷಣಯೋಃ । ಕ್ರ್ಯಾದಿಭ್ಯಃ ಶ್ನಾ । ಪ್ವಾದೀನಾಂ ಹ್ರಸ್ವ ಇತಿ ಹ್ರಸ್ವತ್ವಂ । ತಿಪಃ ಪಿತ್ತ್ವಾದನುದಾತ್ತತ್ವೇ ವಿಕರಣಸ್ವರಃ ಶಿಷ್ಯತೇ । ತಿಜಿ ಚೋದಾತ್ತವತೀತಿ ಗತೇರ್ನಿಘಾತಃ । ಯದ್ವೃತ್ತಯೋಗಾತ್ತಿಜ್ಜತಿಜ ಇತಿ ನಿಘಾತಾಭಾವಃ ॥

॥ ಭಾವಾರ್ಥ ॥

(ಎಲೈ ಸ್ತೋತೃವೇ) । **ಯತ್**—ಯಾವಾಗ । **ಯುಧೇ**—ಯುದ್ಧದಲ್ಲಿ । **ಆಯುಧಾನಿ**—ವಜ್ರಾದ್ಯಾಯುಧಗಳನ್ನು । **ಇಷ್ಣಾನಃ**—ಸುತ್ತಲೂ ಪ್ರಯೋಗಿಸುತ್ತ । **ಶತ್ರೂನ್**—ಶತ್ರುಗಳನ್ನು । **ಋಘಾಯಮಾಣಃ**—ಹಿಂಸಿಸಿ ನಾಶಪಡಿಸುತ್ತ । **ನಿರಿಣಾತಿ**—(ಅವರ) ಮೇಲೆ ಬಿಳುತ್ತಾನೋ (ಆಗ) । **ಉಕ್ಥೈಃ**—ಶಸ್ತ್ರರೂಪವಾದ ಮಂತ್ರಗಳಿಂದ । **ನವ್ಯಃ**—ಸ್ತುತ್ಯನಾದ ಯಾವ ಇಂದ್ರನುಂಟೋ । **ಅಸ್ಯೇದು ತುರಸ್ಯ**—(ಯುದ್ಧಕ್ಕಾಗಿ) ತ್ವರಿಮಾಡುವ ಅದೇ ಇಂದ್ರನ । **ಪೂರ್ವ್ಯಾಣಿ**—ಹಿಂದಿನ । **ಕರ್ಮಾಣಿ**— ಸಾಹಸಕೃತ್ಯಗಳನ್ನು । **ಪ್ರ ಬ್ರೂಹಿ**—ಚೆನ್ನಾಗಿ ಪ್ರಶಂಸಿಸು ॥

॥ ಭಾವಾರ್ಥ ॥

ಎಲೈ ಸ್ತೋತೃವೇ, ಯುದ್ಧದಲ್ಲಿ ವಜ್ರಾದ್ಯಾಯುಧಗಳನ್ನು ಸುತ್ತಲೂ ಪ್ರಯೋಗಿಸುತ್ತಲೂ, ಶತ್ರುಗಳನ್ನು ಹಿಂಸಿಸಿ ನಾಶಪಡಿಸುತ್ತಲೂ ಅವರ ಮೇಲೆ ಬಿದ್ದಾಗ, ಶಸ್ತ್ರರೂಪವಾದ ಮಂತ್ರಗಳಿಂದ ಸ್ತುತ್ಯನಾದವನೂ ಮತ್ತು ಯುದ್ಧಕ್ಕೆ ತ್ವರಿಮಾಡುವವನೂ ಆದ ಆ ಇಂದ್ರನ ಹಿಂದಿನ ವೀರ್ಯಕೃತ್ಯಗಳನ್ನು ಚೆನ್ನಾಗಿ ಪ್ರಶಂಸಿಸು.

English Translation.

Describe, with new hymns, the former exploits of that quick-moving Indra, when holding his weapons in battle, he encounters and destroys his enemies.

॥ ವಿಶೇಷ ವಿಷಯಗಳು ॥

ನವ್ಯಃ—ಸ್ತುತ್ಯನಾದವನು.

ಅಸ್ಯೇದು—ಅಸ್ಯ+ಇತ್+ಉ—ಇಲ್ಲಿರುವ ಇತ್ ಮತ್ತು ಉಕಾರವು ಏವ (ಅದೇನೇ) ಎಂಬರ್ಥವನ್ನು ಕೊಡುವುವು.

ತುರಸ್ಯ—ಯುದ್ಧಕ್ಕಾಗಿ ತ್ವರೆ ಮಾಡುವ ಇಂದ್ರನು.

ಪೂರ್ವ್ಯಣೆ—ಪುರಾಣಾನಿ—ಹಿಂದಿನದಾದ—ಪೂರ್ವ್ಯಂ ಅಹ್ನಾಯ (ನಿ. ೩-೭) ಎಂಬುದಾಗಿ ನಿರುಕ್ತಕಾರರು ಈ ಪದವನ್ನು ಪುರಾಣ (ಹಳೆಯದು) ವಾಚಕಪದಗಳ ಮಧ್ಯದಲ್ಲಿ ಪಾಠಮಾಡಿದ್ದಾರೆ.

ಯಹ್ವಾಯಮಾಣಃ—ಶತ್ರುಗಳನ್ನು ಹಿಂಸಿಸುವವನು(ಇಂದ್ರ)**ನಹಿ ತ್ವಾ ರೋದಸೀ ಉಭೇ ಯಹ್ವಾ-ಯಮಾಣಂ** (ಋ. ಸಂ. ೧-೧೦೮) ಈ ಮಂತ್ರದಲ್ಲಿ ಈ ಪದದ ಅರ್ಥವು ವಿಶೇಷವಾಗಿ ವಿವರಿಸಲ್ಪಟ್ಟಿರುವುದು.

॥ ವ್ಯಾಕರಣಪ್ರಕ್ರಿಯಾ ॥

ಬ್ರೂಹಿ—ಬ್ರೂಞ್ ವ್ಯಕ್ತಾಯಾಂ ವಾಚಿ ಧಾತು. ಲೋಣ್ಮ್ಯಧ್ಯಮಪುರುಷ ಏಕವಚನರೂಪ. ಹಿಗೆ ಅಪಿತ್ವವನ್ನು ಹೇಳಿರುವುದರಿಂದ ಗುಣ ಬರುವುದಿಲ್ಲ. **ತಿಙಂತನಿಘಾತಸ್ವರ** ಬರುತ್ತದೆ.

ತುರಸ್ಯ—ತುರ ತ್ವರಣೇ ಧಾತು. ಇದಕ್ಕೆ **ಇಗುಪಧಜ್ಞಾಪ್ರೀಕಿರಃಕಃ** (ಪಾ. ಸೂ. ೩-೧-೧೩೫) ಎಂಬುದರಿಂದ ಕ ಪ್ರತ್ಯಯ. ಕಿತ್ತಾದುದರಿಂದ ಲಘೂಪಧಗುಣ ಬರುವುದಿಲ್ಲ. ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ. ಷಷ್ಠೀಏಕವಚನರೂಪ.

ನವ್ಯಃ—ಣು ಸ್ತುತೌ ಧಾತು. ಅಜಂತವಾದುದರಿಂದ **ಅಚೋಯತ್** ಎಂಬುದರಿಂದ ಯತ್ ಪ್ರತ್ಯಯ. **ಸಾರ್ವಧಾತುಕಾರ್ಧಧಾತುಕಯೋಃ** ಎಂಬುದರಿಂದ ಧಾತುವಿಗೆ ಗುಣ. ಯತ್ ಪ್ರತ್ಯಯ ನಿಮಿತ್ತವಾಗಿಯೇ ಧಾತುವಿಗೆ ಓತ್ವ ಬಂದುದರಿಂದ **ಧಾತೋಸ್ತನ್ನಿಮಿತ್ತಸ್ಯೈವ** ಎಂಬುದರಿಂದ ಅದಕ್ಕೆ ಅವಾದೇಶ ಬರುತ್ತದೆ. **ಯತೋಽನಾವಃ** ಎಂಬುದರಿಂದ ಆದ್ಯುದಾತ್ತಸ್ವರ ಬರುತ್ತದೆ.

ಯುಧ್ಯೇ—ಯುಧ ಸಂಪ್ರಹಾರೇ ಧಾತು. ಕ್ವಿಪ್ ಪ್ರತ್ಯಯ. ಚತುರ್ಥೀ ಏಕವಚನಾಂತರೂಪ. **ಸಾವೇಕಾಚಸ್ತೃತೀಯಾದಿಃ** ಎಂಬುದರಿಂದ ವಿಭಕ್ತಿಗೆ ಉದಾತ್ತಸ್ವರ ಬರುತ್ತದೆ.

ಇಷ್ಣಾನಃ—ಇಷ ಆಭೀಕ್ಷ್ಣ್ಯೇ ಧಾತು. ಕ್ರ್ಯಾದಿ. **ವ್ಯತ್ಯಯೋಬಹುಲಂ** ಎಂಬುದರಿಂದ ಆತ್ಮನೇಪದಿಯಾಗುತ್ತದೆ. ಲಡರ್ಥದಲ್ಲಿ ಶಾನಚ್ ಪ್ರತ್ಯಯ. **ಕ್ರ್ಯಾದಿಭ್ಯಃ ಶ್ನಾ** ಎಂಬುದರಿಂದ ಶ್ನಾ ವಿಕರಣ. **ಸಾರ್ವಧಾತುಕಮಪಿತ್** ಎಂಬುದರಿಂದ ಇದಕ್ಕೆ ಙಿದ್ವದ್ಭಾವವಿರುವುದರಿಂದ ಧಾತುವಿನ ಲಘೂಪಧೆಗೆ ಗುಣ ಬರುವುದಿಲ್ಲ. ಷಕಾರಯೋಗವಿರುವುದರಿಂದ ನಕಾರಕ್ಕೆ ಣತ್ವ. ಪ್ರತ್ಯಯ ಚಿತ್ತಾದುದರಿಂದ ಚಿತಃ ಎಂಬುದರಿಂದ ಅಂತೋದಾತ್ತಸ್ವರ ಬರುತ್ತದೆ.

ಯಹ್ವಾಯಮಾಣಃ—ನಹಿ ತ್ವಾ ರೋದಸೀ ಉಭೇ ಯಹ್ವಾಯಮಾಣಮ್ (ಋ. ಸಂ. ೧-೧೦-೮) ಎಂಬಲ್ಲಿ ಈ ಶಬ್ದವು ವ್ಯಾಖ್ಯಾತವಾಗಿದೆ.

ನಿರಿಣಾತಿ—ರೀ ಗತಿರೇಷಣಯೋಃ ಧಾತು. ಕ್ರ್ಯಾದಿ. ಲಟ್ ಪ್ರಥಮಪುರುಷ ಏಕವಚನದಲ್ಲಿ **ತಿಪ್** ಪ್ರತ್ಯಯ. **ಕ್ರ್ಯಾದಿಭ್ಯಃ ಶ್ನಾ** ಎಂಬುದರಿಂದ ಶ್ನಾ ವಿಕರಣ. **ಪ್ವಾದೀನಾಂ ಹ್ರಸ್ವಃ** (ಪಾ. ಸೂ. ೭-೩-೮೦) ಎಂಬುದರಿಂದ ಹ್ರಸ್ವ ದೀಘನಿಮಿತ್ತವಾಗಿ **ಅಟ್‌ಕುಪ್ವಾಙ್**—ಸೂತ್ರದಿಂದ ವಿಕರಣ ನಕಾರಕ್ಕೆ ಣತ್ವ. **ತಿಪ್** ಪಿತ್ತಾದುದರಿಂದ ಅನುದಾತ್ತವಾಗುವುದರಿಂದ ವಿಕರಣಸ್ವರ ಉಳಿಯುತ್ತದೆ. ಯಧ್ಯೋಗವಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಉದಾತ್ತವುಳ್ಳ **ತಿಙಂತವು** ಪರವಾದುದರಿಂದ **ತಿಙಿ ಚೋದಾತ್ತವತಿ** (ಪಾ. ಸೂ. ೮-೧-೭೧) ಎಂಬುದರಿಂದ ಗತಿಗೆ (ನಿ) ನಿಘಾತಸ್ವರ ಬರುತ್ತದೆ.

संहितापाठः

अस्येदु भिया गिरयश्च दृळ्हा द्यावा च भूमा जनुषस्तुजेतेः ।
उपो वेनस्य जोगुवान ओणिं सद्यो भुवद्वीर्याय नोधाः ॥ ८४ ॥

॥ पदपाठः ॥

अस्य । इत् । ऊं इति । भिया । गिरयः । च । दृळ्हाः । द्यावा । च
भूमा । जनुषः । तुजेतेः इति ।
उपो इति । वेनस्य । जोगुवानः । ओणिं । सद्यः । भुवत् । वी-
र्याय । नोधाः ॥ ८४ ॥

॥ सायणभाष्यं ॥

अस्येत्यस्येंद्रस्य भियो पक्षच्छेदभयेन गिरयः पर्वता अपि दृळ्हाः । निश्चलाः स्वस्वदेशेष्ववतिष्ठंते । जनुषः प्रादुर्भूतादस्मादेवेंद्राद्भीत्या द्यावा भूमा च द्यावापृथिव्यावपि तुजेतेः । तुजिर्हिंसार्थोऽप्यत्र कंपनेः द्रष्टव्यः । कंपेते इत्यर्थः । किंच वेनस्य कांतस्यास्यौणिं दुःखस्यापनायेकं रक्षणमुपो जोगुवानोऽनेकैः सूक्तैः पुनः पुनरुपशब्दयन् । उपशब्दोकयेन्नित्यर्थः । एवंभूतोनोधा ऋषिः सद्यस्तदानीमेव वीर्याय भुवत् । वीर्यवानभवत् ॥ द्यावा च भूमा । द्यावा भूमेत्यनियोर्मध्ये चशब्दस्य पाठश्छांदसः । दिवो द्यावेति दिव्शब्दस्य द्यावादेशः । सुपां सुलुगिति विभक्तेर्डादेशः । देवताद्वंद्वे चेत्युभयपद प्रकृतिस्वरत्वं । पदद्वयेप्रसिद्धिरपि सांप्रदायिकी । जनुषः । जनी प्रादुर्भावे । जनेरुसिः । उ. ३.८८ । इत्यौणादिक उसिप्रत्ययः ।जोगुवानः । गुङ् अव्यक्ते शब्दे । अस्माद्यङ्लुगंताद्यक्प्रत्ययेन शानच् । अदादिवच्छ्ल इति वचनाच्छपो लुक् । उवङादेशः । अभ्यस्तानामादिरित्याद्युदात्तत्वं । ओणिं । ओणृ अपनयने । अस्मादौणादिक इप्रत्ययः । भुवत् । भवतेर्लेट्यडागमः । बहुलं छंदसीति शपो लुक् । भूसुवोस्तिङीति गुणप्रतिषेधः । नोधाः । नोधा ऋषिर्भवति नवनं दधातीति यास्कः । निरु. ४.८ । तस्माद्धातोरसुन् . नवशब्दस्य नोभावश्च ॥

॥ ಪ್ರತಿಪದಾರ್ಥ ॥

ಅಸ್ಯೇದು—ಇದೇ ಇಂದ್ರನ । **ಭಿಯಾ**—(ರೆಕ್ಕೆಗಳನ್ನು ಕತ್ತರಿಸುವ) ಭಯದಿಂದ । **ಗಿರಯೆಶ್ಚ**—ಪರ್ವತಗಳೂ ಕೂಡ । **ದೈಳ್ಹಾಃ**—ಚಲನವಿಲ್ಲದೇ ಸ್ಥಿರವಾಗಿ ನಿಂತಿವೆ । **ಜನುಷಃ**—ಅವಿರ್ಭವಿಸಿದ ಈ ಇಂದ್ರನ (ಭಯದಿಂದಲೇ) । **ದ್ಯಾವಾ ಭೂಮಾ ಚೆ**—ದ್ಯಾವಾಪೃಥಿವಿಗಳೆರಡೂ । **ತುಜೇತೇ**—ಕಂಪಿಸುತ್ತವೆ (ಮತ್ತು) । **ವೇನಸ್ಯ**—ಪ್ರಿಯನಾದ ಇಂದ್ರನ । **ಓಣಿಂ**—ದುಃಖವನ್ನು ನಿವಾರಣೆಮಾಡುವ ರಕ್ಷಣೆಯನ್ನು । **ಉಪೋ ಜೋಗುವಾನಃ**—(ಸೂಕ್ತಗಳಿಂದ) ಪದೇಪದೇ ಸ್ತುತಿಸುತ್ತ । **ನೋಧಾಃ**—ನೋಧಸ್ಸೆಂಬ ಋಷಿಯು । **ಸದ್ಯಃ**—ಒಡನೆಯೇ ।**ವೀರ್ಯಾಯ ಭುವತ್**—ವೀರ್ಯವಂತನಾದನು ॥

॥ ಭಾವಾರ್ಥ ॥

ಇಂದ್ರನ ಭಯದಿಂದ ಪರ್ವತಗಳೂ ಚಲನವಿಲ್ಲದೇ ಸ್ಥಿರವಾಗಿ ನಿಂತಿವೆ. ಅವನ ಭಯದಿಂದಲೇ ದ್ಯಾವಾಪೃಥಿವಿಗಳೆರಡೂ ಕಂಪಿಸುತ್ತವೆ. ಪ್ರಿಯನಾದ ಇಂದ್ರನ ದುಃಖನಿವಾರಕವಾದ ರಕ್ಷಣೆಯನ್ನು ಶ್ರೇಷ್ಠವಾದ ಸೂಕ್ತಗಳಿಂದ ಪದೇಪದೇಪಠಿಸುತ್ತ ನೋಧಸ್ಸೆಂಬ ಋಷಿಯು ಒಡನೆಯೇ ಅತ್ಯಂತ ವೀರ್ಯವಂತನಾದನು.

English Translation.

Though fear of him, the mountains remain still; and through fear of his appearance, heaven and earth tremble; praising repeatedly with hymns the preserving power of that beloved Indra, Nodhas speedily acquired vigour.

॥ ವಿಶೇಷ ವಿಷಯಗಳು ॥

ಜನುಷಃ—**ಜನೀ ಪ್ರಾದುರ್ಭಾವೇ**—ಪ್ರಾದರ್ಭೂತನಾಗುವ ಇಂದ್ರನ ದೆಸೆಯಿಂದ.

ತುಜೇತೇ—ತುಜ್ ಧಾತುವಿಗೆ ಹಿಂಸಾರ್ಥಕತ್ವವಿದ್ದರೂ ಇಲ್ಲಿ ಕಂಪನ ಎಂಬರ್ಥವನ್ನು ಹೇಳಬೇಕು. ದ್ಯಾವಾಪೃಥಿವಿಗಳು ಇಂದ್ರನ ದೆಸೆಯಿಂದ ನಡುಗುತ್ತವೆ ಎಂದರ್ಥ.

ವೇನಸ್ಯ—**ಕಾಂತಸ್ಯಾಸ್ಯ**—ಮನೋಹರನಾದ (ಇಂದ್ರನ).

ಜೋಗುವಾನಃ—**ಗುಙ್ ಅವ್ಯಕ್ತೇ ಶಬ್ದೇ**—ಪದೇಪದೇ ಸ್ಫುಟವಲ್ಲದ ಧ್ವನಿಮಾಡುವವನು.

ನೋಧಾಃ—ಈ ಪದಕ್ಕೆ ಋಷಿ ಎಂದರ್ಥ. ಉಪೋ ಅದರ್ಶಿ ಶುಂಧ್ಯುವೋ ನವಸ್ಪೋ ನೋಧಾ ಇವಾವಿರಕೃತಪ್ರಿಯಾಣಿ (ಋ. ಸಂ. ೧-೧೩೪-೪) ಇಲ್ಲಿಯೂ ನೋಧಶ್ಶಬ್ದಕ್ಕೆ ಋಷಿ ಎಂದರ್ಥವಾಡಿದ್ದಾರೆ. **ನೋಧಾ ಇವಾವಿರಕೃತಪ್ರಿಯಾಣಿ, ನೋಧಾ ಋಷಿರ್ಭವತಿ ನವನಂ ದಧಾತಿ** ಇತ್ಯಾದಿ ನಿರುಕ್ತವ್ಯಾಖ್ಯಾನವೂ ಇದಕ್ಕೆ ಋಷಿ ಎಂಬರ್ಥವನ್ನೇ ವಿವರಿಸಿದೆ.

॥ ವ್ಯಾಕರಣಪ್ರಕ್ರಿಯಾ ॥

ಭಿಯಾ—ತೃತೀಯಾ ಏಕವಚನಾಂತರೂಪ. **ಸಾವೇಕಾಚಸ್ತೃತೀಯಾದಿ** (ಪಾ. ಸೂ. ೬-೧-೧೬೮) ಎಂಬುದರಿಂದ ವಿಭಕ್ತಿಗೆ ಉದಾತ್ತಸ್ವರ ಬರುತ್ತದೆ.

ದ್ಯಾವಾ ಚೆ ಭೂಮಾ—ದ್ಯಾವಾಭೂಮೀ ಶಬ್ದ. ದ್ಯಾವಾ ಭೂಮಾ ಎಂಬೆರಡು ಶಬ್ದಗಳ ಮಧ್ಯದಲ್ಲಿ ಛಾಂದಸವಾಗಿ **ಚ**ಕಾರ ಪಾಠಮಾಡಿದೆ. **ದಿವೋದ್ಯಾವಾ** (ಪಾ. ಸೂ. ೬-೩-೨೯) ಎಂಬುದರಿಂದ ದಿವ್ ಶಬ್ದಕ್ಕೆ

ದ್ಯಾವಾದೇಶ. **ಸುಪಾಂ ಸುಲುಕ್** ಸೂತ್ರದಿಂದ ದ್ವಿವಚನಕ್ಕೆ ಡಾದೇಶ. ಡಿತ್ತ್ವಾದುದರಿಂದ ಟಿಲೋಪ. **ದೇವತಾದ್ವಂದ್ವೇಚ** (ಪಾ. ಸೂ. ೬-೩-೧೪೧) ಎಂಬುದರಿಂದ ಉಭಯಪದಪ್ರಕೃತಿಸ್ವರ ಬರುತ್ತದೆ. ಈ ಎರಡು ಪದಸಿದ್ಧಿಯೂ ಸಾಂಪ್ರದಾಯಕವಾಗಿದೆ.

ಜನುಷಃ—ಜನೀ ಪ್ರಾದುರ್ಭಾವೇ ಧಾತು. **ಜನೇರುಸಿ** (ಉ. ಸೂ. ೨-೭೭) ಎಂಬುದರಿಂದ ಇದಕ್ಕೆ ಔಣಾದಿಕವಾದ ಉಸಿ ಪ್ರತ್ಯಯ. ಜನುಸ್ ಶಬ್ದವಾಗುತ್ತದೆ. ಪಂಚಮೀ ಏಕವಚನಾಂತರೂಪ. ಪ್ರತ್ಯಯಸ್ವರದಿಂದ ಉಕಾರ ಉದಾತ್ತವಾಗುತ್ತದೆ.

ಜೋಗುವಾನಃ—ಗುಜ್ ಅವ್ಯಕ್ತೇ ಶಬ್ದೇ ಧಾತು. ಇದಕ್ಕೆ ಅತಿಶಯಾರ್ಥದಲ್ಲಿ ಯಙ್. ಅದಕ್ಕೆ **ಯೆಜಿಜೋಚಿಚೆ** ಎಂಬುದರಿಂದ ಲುಕ್. ಇದು ಪರಸ್ಮೈಪದಿಯಾದರೂ **ವ್ಯತ್ಯಯೋಬಹುಲಂ** ಎಂಬುದರಿಂದ ಶಾನಚ್ ಪ್ರತ್ಯಯ. **ಚೆರ್ಕರೀತಂಚೆ** ಎಂದು ಯಙ್‌ಲುಙಂತವನ್ನು ಅದಾದಿಯಲ್ಲಿ ಪಾಠಮಾಡಿರುವುದರಿಂದ **ಅದಿಸ್ಪೃಭೃತಿಭ್ಯಃ ಶಪಃ** ಎಂಬುದರಿಂದ ಪ್ರಾಪ್ತವಾದ ಶಪಿಗೆ ಲುಕ್. ಯಙ್ ನಿಮಿತ್ತವಾಗಿ ಧಾತುವಿಗೆ ದ್ವಿತ್ವ. **ಗುಣೋಯಙ್‌ಲುಕೋಃ** (ಪಾ. ಸೂ. ೭-೪-೮೨) ಎಂಬುದರಿಂದ ಅಭ್ಯಾಸಕ್ಕೆ ಗುಣ. ಜೋಗು+ಅನ ಎಂದಿರುವಾಗ **ಅಚಿಶ್ನುಧಾತುಭ್ರುವಾಂ** ಸೂತ್ರದಿಂದ ಉವಙಾದೇಶ. **ಅಭ್ಯಸ್ತಾನಾಮಾದಿಃ** (ಪಾ.ಸೂ. ೬-೧-೧೮೯) ಎಂಬುದರಿಂದ ಆದ್ಯುದಾತ್ತಸ್ವರ ಬರುತ್ತದೆ.

ಓಣಿಮ್—ಓಣೃ ಅಪನಯನೇ ಧಾತು. ಇದಕ್ಕೆ ಔಣಾದಿಕವಾದ ಇ ಪ್ರತ್ಯಯ. ಪ್ರತ್ಯಯ ಸ್ವರದಿಂದ ಅಂತೋದಾತ್ತ.

ಭುವತ್—ಭೂ ಸತ್ತಾಯಾಂ ಧಾತು. ಲೇಟ್ ಪ್ರಥಮಪುರುಷ ಏಕವಚನದಲ್ಲಿ ತಿಪ್ ಪ್ರತ್ಯಯ. **ಇತಶ್ಚಲೋಪಃಪರಸ್ಮೈಪದೇಷು** ಎಂಬುದರಿಂದ ಇಕಾರ ಲೋಪ. **ಲೇಟೋಽಡಾಟೌ** ಎಂಬುದರಿಂದ ಅಡಾಗಮ. **ಬಹುಲಂಛಂದಸಿ** ಎಂಬುದರಿಂದ ಶಪಿಗೆ ಲುಕ್ **ಭೂಸುವೋಸ್ತಿಙಿ** (ಪಾ. ಸೂ. ೭-೩-೮೮) ಎಂಬುದರಿಂದ ಧಾತುವಿನ ಇಕಿಗೆ ಗುಣಬರುವುದಿಲ್ಲ. ಉವಙಾದೇಶ. **ತಿಙ್ಙತಿಙಃ** ಎಂಬುದರಿಂದ ನಿಘಾತಸ್ವರ ಬರುತ್ತದೆ.

ನೋಧಾಃ—ನೋಧಾ ಋಷಿರ್ಭವತಿ ನವನಂ ದಧಾತಿ (ನಿರು. ೪-೧೬) ಇತಿ ಯಾಸ್ಕಃ (ನೋಧಾ ಎಂಬುದು ಋಷಿಯ ಹೆಸರು) ಡುಧಾಞ್ ಧಾರಣಪೋಷಣಯೋಃ ಧಾತು. ಇದಕ್ಕೆ ಸರ್ವಧಾತುನಿಬಂಧನವಾಗಿ ಬರುವ ಅಸುನ್ ಪ್ರತ್ಯಯ. ನವನಂ ದಧಾತಿ ಎಂದು ನಿರ್ವಚನ ಮಾಡಿರುವುದರಿಂದ ನವಶಬ್ದಕ್ಕೆ ನೋಭಾವ ಬರುತ್ತದೆ. ನೋಧಸ್ ಶಬ್ದವಾಗುತ್ತದೆ. **ಗತಿಕಾರಕೋಪಪದಾತ್ಕೃತ್** ಎಂಬುದರಿಂದ ಕೃದುತ್ತರಪದ ಪ್ರಕೃತಿಸ್ವರ ಬರುತ್ತದೆ. ಪ್ರಥಮಾ ಸು ಪರವಾದಾಗ **ಅತ್ವಸಂತಸ್ಯ ಚಾಧಾತೋಃ** ಎಂಬುದರಿಂದ ಅಸಂತೋಪಧೆಗೆ ದೀರ್ಘ. **ಹಲ್‌ಙ್ಯಾಭ್ಯೋ**—ಸೂತ್ರದಿಂದ ಸುಲೋಪ. ಸಕಾರಕ್ಕೆ ರುತ್ವ ವಿಸರ್ಗ.

॥ ಸಂಹಿತಾಪಾಠಃ ॥

ಅಸ್ಮಾ ಇದು ತ್ಯದನು ದಾಯ್ಯೇಷಾಮೇಕ್ಕೋ ಯದ್ವನ್ನೇ ಭೂರ್ರೇರೀ-
ಶಾನಃ ।
ಪ್ರೈತಶ್ಚಂ ಸೂರ್ಯೇ ಪಸ್ಪೃಧಾನಂ ಸೌವಶ್ವ್ಯೇ ಸುಷ್ಟುಮಾವದಿಂದ್ರಃ

॥ ೧೫ ॥

॥ ಪದಪಾಠಃ ॥

ಅಸ್ಮೈ । ಇತ್ । ಲೂಂ ಇತಿ । ತ್ಯತ್ । ಅನು । ದಾಯಿ । ಏಷಾಂ । ಏಕಃ ।
ಯತ್ । ವನ್ನೇ । ಭೂರೇಃ । ಈಶಾನಃ ।
ಪ್ರ । ಏತಶಂ । ಸೂರ್ಯೇ । ಪಸ್ಪೃಧಾನಂ । ಸೌವಶ್ವ್ಯೇ । ಸುಷ್ವಿಂ । ಆವತ್ ।
ಇಂದ್ರಃ ॥ ೧೫ ॥

॥ ಸಾಯಣಭಾಷ್ಯಂ ॥

ಏಕ ಏಕ ಏವ ಶತ್ರೂಣ್ಜೇತುಂ ಸಮರ್ಥೋ ಭೂರೇರ್ಬಹುವಿಧಸ್ಯ ಧನಸ್ಯೇಶಾನಃ ಸ್ವಾಮೀ ಯೇಷ್ಟ್ರೋತ್ರಂ ವನ್ನೇ ಯೇಯಾಚೇ ಏಷಾಂ ಸ್ತೋತೃಣಾಂ ಸಂಬಂಧಿ । ಯದ್ವಾ । ವಿಭಕ್ತಿವ್ಯತ್ಯಯೇಃ । ಏತೈಸ್ತ್ಯತ್ ತತ್ಪ್ರಸಿದ್ಧಂ ಸ್ತೋತ್ರಮಸ್ಮಾ ಇಂದ್ರಾಯಾನು ದಾಯಿ । ಅಕಾರೀತ್ಯರ್ಥಃ । ಉತ್ತರಾರ್ಧಸ್ಯೇಯಮಾಖ್ಯಾಯಿಕಾ । ಸ್ವಶ್ನೋ ನಾಮ ಕಶ್ಚಿದ್ರಾಜಾ । ಸ ಚ ಪುತ್ರಕಾಮಃ ಸೂರ್ಯಮುಪಾಸಾಂ ಚಕ್ರೇ । ತಸ್ಯ ಚ ಸೂರ್ಯ ಏವ ಪುತ್ರೋ ಬಭೂವ । ತೇನ ಸಹೈತಶನಾಮ್ನೋ ಮಹರ್ಷೇರ್ಯುದ್ಧಂ ಜಾತಮಿತಿ ತದೇತದಿಹೋಚ್ಯತೇ ॥ ಆಯಮಿಂದ್ರಃ ಸೌವಶ್ವ್ಯೇ ಸ್ವಶ್ವಪುತ್ರೇ ಸೂರ್ಯೇ ಪಸ್ಪೃಧಾನಂ ಸ್ಪರ್ಧಮಾನಂ ಸುಷ್ವಿಂಸೋಮಾನಾಮಭಿಷೋತಾರಮೇತಶಮೇತತ್ಸಂಜ್ಞಕಮೃಷಿಂ ಪ್ರಾವತ್ । ಪ್ರಾರಕ್ಷತ್ ॥ ದಾಯಿ ।ಬಹುಲಂ ಛಂದಸ್ಯಮಾಙ್ಯೋಗೇಽಪೀತ್ಯಡಭಾವಃ ।ವನ್ನೇ । ವನು ಯಾಚನೇ । ಲಿಟಿ ವ್ಯತ್ಯಯೇನೋಪಧಾಲೋಪಃ । ಪಸ್ಪೃಧಾನಂ । ಸ್ಪರ್ಧ ಸಂಘರ್ಷೇ । ಅಸ್ಮಾಲ್ಲಿಟಃ ಕಾನಚ್ । ದ್ವಿರ್ವಚನೇ ಶರ್ಪೂರ್ವಾಃ ಖಯೀತಿ ಪಕಾರಃ ಶಿಷ್ಯತೇ । ಧಾತ್ವಕಾರಸ್ಯ ಲೋಪೋ ರೇಫಸ್ಯ ಸಂಪ್ರಸಾರಣಂ ಚ ಪೃಷೋದರಾದಿತ್ವಾತ್ । ಚಿತ್ತ್ವಾದಂತೋದಾತ್ತತ್ವಂ । ಸೌವಶ್ವ್ಯೇ । ಸ್ವಶ್ವ ಇತಿ ಜನಪದಶಬ್ದಃ ಕ್ಷತ್ರಿಯೇ ಸಂಜ್ಞಾತ್ವೇನ ವರ್ತತೇ । ವಾ ನಾಮಧೇಯೇಸ್ಯ ವೃದ್ಧಸಂಜ್ಞಾ ವಕ್ತವ್ಯಾ । ಪಾ. ೧-೧-೭೩-೫ । ಇತಿ ವೃದ್ಧಸಂಜ್ಞಾಯಾಂ ವೃದ್ಧೇಶ್ಕೋಸಲಾಜಾದಾಞ್ಞ್ಯಬ್ । ಪಾ. ೪-೧-೧೭೮ । ಇತ್ಯಪತ್ಯಾರ್ಥೇ ಞ್ಯಬ್ಪ್ರತ್ಯಯೇಃ । ನ ಯ್ವಾಭ್ಯಾಂ ಪದಾಂತಾಭ್ಯಾಂ । ಪಾ ೭-೩-೩ । ಇತಿ ವೃದ್ಧೇಃ ಪ್ರತಿಷೇಧ ಐಜಾಗಮಶ್ಚ । ಞಿತ್ತ್ವಾದಾದ್ಯುದಾತ್ತತ್ವಂ । ಸುಷ್ವಿಂ । ಷುಞ್ ಅಭಿಷವೇ । ಉತ್ಸರ್ಗಶ್ಛಂದಸಿ । ಪಾ. ೩-೨-೧೭೧-೨ । ಇತ್ಯಸ್ಮಾತ್ಕ್ವಿಪ್ರತ್ಯಯೇಃ । ಲಿಡ್ವದ್ಭಾವಾತ್ ದ್ವಿರ್ಭಾವಃ । ಯಣಾದೇಶಃ । ಉವಙಾದೇಶಾಭಾವಶ್ಛಾಂದಸಃ ॥

॥ ಪ್ರತಿಪದಾರ್ಥ ॥

ಏಕಃ—(ಶತ್ರುಗಳನ್ನು ಜಯಿಸುವುದರಲ್ಲಿ) ಏಕಮಾತ್ರನೂ । ಭೂರೇಃ—ನಾನಾವಿಧವಾದ ಧನಕ್ಕೆ । ಈಶಾನಃ—ಸ್ವಾಮಿಯೂ ಆದ ಇಂದ್ರನು । ಯತ್—ಯಾವ ಸ್ತೋತ್ರವನ್ನು (ಸ್ತೋತೃಗಳಿಂದ) । ವನ್ನೇ—ಅಪೇಕ್ಷಿಸಿದನೋ । ಏಷಾಂ—ಆ ಸ್ತೋತೃಗಳ ಅಥವಾ ಅವರಿಂದ । ತ್ಯತ್—ಪ್ರಸಿದ್ಧವಾದ ಆ ಸ್ತೋತ್ರವು । ಅಸ್ಮೈ ಇದು—ಆ ಇಂದ್ರನಿಗೇ । ಅನು ದಾಯಿ—ಅರ್ಪಿಸಲ್ಪಟ್ಟಿದೆ । ಇಂದ್ರಃ—ಇಂದ್ರನು । ಸೌವಶ್ವ್ಯೇ—ಸ್ವಶ್ವಪುತ್ರನಾದ । ಸೂರ್ಯೇ—ಸೂರ್ಯನೊಡನೆ । ಪಸ್ಪೃಧಾನಂ—ಹೆಣಗಾಡುತ್ತಿದ್ದ । ಏತಶಂ—ಏತಶನೆಂಬ ಋಷಿಯನ್ನು । ಪ್ರ ಆವತ್—ಚೆನ್ನಾಗಿ ಕಾಪಾಡಿದನು ॥

॥ ಭಾವಾರ್ಥ ॥

ಶತ್ರುಗಳನ್ನು ಜಯಿಸುವುದರಲ್ಲಿ ಏಕಮಾತ್ರನೂ, ನಾನಾ ವಿಧವಾದ ಧನಕ್ಕೆ ಸ್ವಾಮಿಯೂ ಆದ ಇಂದ್ರನು ಸ್ತೋತೃಗಳಿಂದ ಯಾವ ಸ್ತೋತ್ರವನ್ನು ಅಪೇಕ್ಷಿಸಿದನೋ ಪ್ರಸಿದ್ಧವಾದ ಆ ಸ್ತೋತ್ರವು ಅವರಿಂದ ಅರ್ಪಿತವಾಗಿದೆ. ಸ್ವಶ್ವಪುತ್ರನಾದ ಸೂರ್ಯನೊಡನೆ ಹೆಣಗಾಡುತ್ತಿದ್ದ ಏತಶನೆಂಬ ಋಷಿಯನ್ನು ಇಂದ್ರನು ಚೆನ್ನಾಗಿ ಕಾಪಾಡಿದನು.

English Translation.

He alone (is capable of subduing his enemies) and is the powerful lord of manifold riches; give unto him the hymns which he has desired for. Indra defended the pious sacrificer Etasa, when fighting Surya, the son of Swaswa.

ವಿಶೇಷ ವಿಷಯಗಳು

ಏಕಃ—ಇಲ್ಲಿ ಏಕಶಬ್ದವು ಅಸಹಾಯವಾಚಿ. ಇಂದ್ರನು ಯಾರ ಸಹಾಯವೂ ಇಲ್ಲದೆ ಒಬ್ಬನೇ ಶತ್ರುಗಳನ್ನು ಗೆಲ್ಲಲು ಸಮರ್ಥನೆಂದರ್ಥ.

ಏಷಾಂ—ಈ ಸ್ತೋತ್ರಗಳ ಎಂದರ್ಥವಾಗುವುದಾದರೂ ಇಲ್ಲಿ ವಿಭಕ್ತಿ ವ್ಯತ್ಯಾಸದಿಂದ ತೃತೀಯಾ ವಿಭಕ್ತ್ಯರ್ಥವನ್ನು ಹೇಳಿ, ಈ ಸ್ತೋತ್ರಗಳಿಂದ ಎಂದರ್ಥಮಾಡಿದ್ದಾರೆ.

ಸೌವಶ್ವ್ಯೆ—ಸ್ವಶ್ವನೆಂಬ ರಾಜನ ಮಗನಲ್ಲಿ ಎಂದರ್ಥ. ಹಿಂದೆ ಸ್ವಶ್ವನೆಂಬ ರಾಜನು ಪುತ್ರಾಭಿಲಾಷೆಯಿಂದ ಸೂರ್ಯನನ್ನು ಕುರಿತು ತಪಸ್ಸುಮಾಡಿದನು. ಅವನ ತಪಸ್ಸಿಗೆ ಮೆಚ್ಚಿ ಸೂರ್ಯನೇ ಆ ರಾಜನ ಮಗನಾಗಿ ಹುಟ್ಟಿದನು. ಅವನಿಗೂ ಏತಶನೆಂಬ ಮಹರ್ಷಿಗೂ ಘೋರವಾದ ಯುದ್ಧವಾಯಿತು.

ಸುಷ್ವಿಂ—**ಷುಞ್-ಅಭಿಷವೇ**—ಸೋಮರಸವನ್ನು ಅಭಿಷೇಚಿಸುವವನು (ಅರ್ಪಿಸುವವನು) ಮೇಲೆ ಹೇಳಿದ ಏತಶನೆಂಬ ಮಹರ್ಷಿಯು ಸೋಮಯಾಗದಿಂದ ಇಂದ್ರನನ್ನು ತೃಪ್ತಿಪಡಿಸಿದನು. ಇಂದ್ರನು ಅವನ ತಪಸ್ಸಿಗೆ ಮೆಚ್ಚಿ ಅವನನ್ನು ಸೂರ್ಯನಿಂದ ರಕ್ಷಣೆಮಾಡಿದನು.

॥ ವ್ಯಾಕರಣಪ್ರಕ್ರಿಯಾ ॥

ದಾಯಿ—ಡುದಾಞ್ ದಾನೇ ಧಾತು. ಕರ್ಮಣಿ ಲುಙ್ ಪ್ರಥಮಪುರುಷ ಏಕವಚನದಲ್ಲಿ ತ ಪ್ರತ್ಯಯ. ಚ್ಲಿಗೆ **ಚಿಣ್ಭಾವಕರ್ಮಣೋಃ** ಎಂಬುದರಿಂದ ಚಿಣಾದೇಶ. **ಚಿಣೋಲುಕ್** (ಪಾ. ಸೂ. ೬-೪-೧೦೪) ಎಂಬುದರಿಂದ ಚಿಣಿನ ಪರದಲ್ಲಿರುವ ತ ಶಬ್ದಕ್ಕೆ ಲುಕ್. **ಅತೋಯೆುಕ್ ಚಿಣ್ಕೃತೋಃ** (ಪಾ. ಸೂ. ೭-೩-೩೩) ಎಂಬುದರಿಂದ ಆಕಾರಕ್ಕೆ ಯುಕಾಗಮ. **ಬಹುಲಂಛಂದಸ್ಯಮಾಙ್ಯೋಗೇಽಪಿ** ಎಂಬುದರಿಂದ ಅಡಾಗಮ ಬರುವುದಿಲ್ಲ. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

ವವ್ನೇ—ವನು ಯಾಚನೇ ಧಾತು. ಲಿಟ್ ಪ್ರಥಮಪುರುಷ ಏಕವಚನದಲ್ಲಿ ಏಶಾದೇಶ. ಧಾತು ವಿಗೆ ದ್ವಿತ್ವ. ಅಭ್ಯಾಸಕ್ಕೆ ಹಲಾದಿಶೇಷ. ವ್ಯತ್ಯಯದಿಂದ ನಿಮಿತ್ತವಿಲ್ಲದಿದ್ದರೂ ಉಪಧಾಲೋಪ. ಯದ್ಯೋಗವಿರುವುದರಿಂದ ನಿಘಾತಸ್ವರ ಬರುವುದಿಲ್ಲ ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ.

ಪಸ್ಪೃಧಾನಮ್—ಸ್ಪರ್ಧ ಸಂಘರ್ಷೇ ಧಾತು. ಇದಕ್ಕೆ ಲಿಟ್ ಸ್ಥಾನದಲ್ಲಿ ಕಾನಚ್. ತನ್ನಿಮಿತ್ತವಾಗಿ ಧಾತುವಿಗೆ ದ್ವಿತ್ವ. ಆಗ ಅಭ್ಯಾಸದಲ್ಲಿ **ಶರ್ಪೂರ್ವಾಃಖಯಃ** (ಪಾ. ಸೂ. ೭-೪-೬೧) ಎಂಬುದರಿಂದ

ಪಕಾರವು ಉಳಿಯುತ್ತದೆ. ಇದು ಪೃಷೋದರಾದಿಯಲ್ಲಿ ಸೇರಿರುವುದರಿಂದ ಧಾತ್ವಕಾರಕ್ಕೆ ಲೋಪವೂ ರೇಫಕ್ಕೆ ಸಂಪ್ರಸಾರಣವೂ **ಪೃಷೋದರಾದೀನಿ ಯಥೋಪದಿಷ್ಟಮ್** ಎಂಬುದರಿಂದ ಸಿದ್ಧವಾಗುತ್ತವೆ. **ಚಿತೇಃ** ಎಂಬುದರಿಂದ ಅಂತೋದಾತ್ತಸ್ವರ ಬರುತ್ತದೆ.

ಸೌವಶ್ವ್ಯೇ—ಸ್ವಶ್ವಃ ಎಂಬುದು ಒಂದು ದೇಶದ ಹೆಸರು. ಇದು ಕ್ಷತ್ರಿಯಸಂಜ್ಞಾವಾಚಕವಾಗಿಯೂ ಇದೆ. ಆದುದರಿಂದ **ವಾನಾಮಧೇಯಸ್ಯ ವೃದ್ಧಸಂಜ್ಞಾ ವಕ್ತವ್ಯಾ** (ಪಾ. ಸೂ. ೧-೧-೭೩-೫) ಎಂಬುದರಿಂದ ಇದಕ್ಕೆ ವೃದ್ಧಸಂಜ್ಞೆ ಬರುತ್ತದೆ. ಆಗ **ವೃದ್ಧೇತ್ ಕೋಸಲಾಜಾದಾಞ್ಯಿಞ್** (ಪಾ. ಸೂ. ೪-೧-೧೭೮) ಎಂಬುದರಿಂದ ಸ್ವಶ್ವಸ್ಯ ಅಪತ್ಯಂ ಎಂಬರ್ಥದಲ್ಲಿ ಞ್ಯಿಞ್ ಪ್ರತ್ಯಯ. ಆದಿವೃದ್ಧಿ ಪ್ರಾಪ್ತವಾದರೆ **ನ ಯ್ಯಾಭ್ಯಾಂ ಪೂರ್ವೌತು ತಾಭ್ಯಾಮೈಚ್** (ಪಾ. ಸೂ. ೭-೩-೩) ಎಂಬುದರಿಂದ ವೃದ್ಧಿಗೆ ಪ್ರತಿಷೇಧ. ವಕಾರದ ಪೂರ್ವಕ್ಕೆ ಐಚಾಗಮ. ಸೌವಶ್ವ್ಯ ಶಬ್ದವಾಗುತ್ತದೆ. **ಞ್ನಿತ್ಯಾದಿರ್ನಿತ್ಯಮ್** ಎಂಬುದರಿಂದ ಆದ್ಯುದಾತ್ತವಾಗುತ್ತದೆ.

ಸುಷ್ವಿಮ್—ಷುಞ್ ಅಭಿಷವೇ ಧಾತು. **ಉತ್ಸರ್ಗಶ್ಛಂದಸಿ** (ಪಾ. ಸೂ. ೩-೨-೧೭೧-೨) ಎಂಬುದರಿಂದ ಇದಕ್ಕೆ ಕಿನ್ ಪ್ರತ್ಯಯ. ಇದಕ್ಕೆ ಲಿಡ್ವದ್ಭಾವವನ್ನು ಅತಿದೇಶಮಾಡಿರುವುದರಿಂದ ಧಾತುವಿಗೆ ದ್ವಿತ್ವ. ಕಿತ್ವಾದುದರಿಂದ ಗುಣ ಬರುವುದಿಲ್ಲ. ಸುಷು+ಇ ಎಂದಿರುವಾಗ ಛಾಂದಸವಾಗಿ ಉವಙಾದೇಶ ಬರುವುದಿಲ್ಲ ಯಣಾದೇಶ. ಸುಷ್ವಿ ಎಂದು ರೂಪವಾಗುತ್ತದೆ.

ಆವತ್—ಅವ ರಕ್ಷಣೇ ಧಾತು ಲಙ್ ಪ್ರಥಮಪುರುಷ ಏಕವಚನರೂಪ. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

ಸಂಹಿತಾಪಾಠಃ

ಏವಾತೇ ಹಾರಿಯೋಜನಾ ಸುವೃಕ್ತೀಂದ್ರ ಬ್ರಹ್ಮಾಣೀ ಗೋತಮಾಸೋ ಅಕ್ರನ್ ।
ಐಷು ವಿಶ್ವಪೇಶಸಂ ಧಿಯಂ ಧಾಃ ಪ್ರಾತರ್ಮಕ್ಷೂ ಧಿಯಾವಸುರ್ಜಗಮ್ಯಾತ್ ॥ ೧೬ ॥

ಪದಪಾಠಃ

ಏವ । ತೇ । ಹಾರಿಯೋಜನ । ಸುವೃಕ್ತಿ । ಇಂದ್ರ । ಬ್ರಹ್ಮಾಣಿ । ಗೋತಮಾಸಃ । ಅಕ್ರನ್ ।
ಆ । ಏಷು । ವಿಶ್ವಪೇಶಸಂ । ಧಿಯಂ । ಧಾಃ । ಪ್ರಾತಃ । ಮಕ್ಷು । ಧಿಯಾವಸುಃ । ಜಗಮ್ಯಾತ್ ॥ ೧೬ ॥

॥ ಸಾಯಣಭಾಷ್ಯ ॥

ಹರ್ಯೋರಶ್ವಯೋರ್ಯೋಜನಂ ಯಸ್ಮಿನ್ರಥೇ ಸ ತಥೋಕ್ತಃ । ತಸ್ಯ ಸ್ವಾಮಿತ್ವೇನ ಸಂಬಂಧೀ ಹಾರಿಯೋಜನಃ । ಹೇ ಹಾರಿಯೋಜನೇಂದ್ರ ಗೋತಮಾಸೋ ಗೋತಮಗೋತ್ರೋತ್ಪನ್ನಾ ಋಷಯಃ ಸುವೃಕ್ತಿ ಸುಷ್ಠ್ವಪವರ್ಜಕಾನ್ಯಭಿಮುಖೀಕರಣಕುಶಲಾನಿ ಬ್ರಹ್ಮಾಣಿ ಸ್ತುತಿರೂಪಾಣಿ ಮಂತ್ರಜಾತಾನಿ ತೇ ತವೈವಾಕೃನ್ । ಅಕೃಷತ । ಏಷು ಸ್ತೋತೃಷು ವಿಶ್ವಪೇಶಸಂ ಬಹುವಿಧರೂಪಯುಕ್ತಂ ಧಿಯಂ ಧಾಃ । ಧಿಯೋ ಲಭ್ಯತ್ವಾದ್ಧೀರ್ಧನಮುಚ್ಯತೇ । ಯದ್ವಾ । ಧೀಶಬ್ದಃ ಕರ್ಮವಚನಃ । ಪಶ್ವಾದಿಬಹುವಿಧರೂಪಂ ಧನಮಗ್ನಿಷ್ಟೋಮಾದಿಕಂ ಬಹುವಿಧರೂಪಂ ಕರ್ಮ ವಾ ಧಾಃ । ಧೇಹಿ। ಸ್ಥಾಪಯ । ಪ್ರಾತರಿದಾನೀಮಿವ ಪರೇದ್ಯುರಪಿ ಪ್ರಾತಃಕಾಲೇ ಧಿಯೋವಸುರ್ಬುದ್ಧ್ಯಾ ಕರ್ಮಣಾ ವಾ ಪ್ರಾಪ್ತಧನ ಇಂದ್ರೋ ಮಕ್ಷು ಶೀಘ್ರಂ ಜಗಮ್ಯಾತ್ । ಅಸ್ಮದ್ರಕ್ಷಣಾರ್ಥಮಾಗಚ್ಛತು ॥ ಏವ । ನಿಪಾತಸ್ಯ ಚೇತಿ ಸಂಹಿತಾಯಾಂ ದೀರ್ಘಃ । ಸುವೃಕ್ತಿ । ಸುಪಾಂ ಸುಲುಗಿತಿ ಶಸೋ ಲುಕ್ । ಅಕೃನ್ । ಕರೋತೇರ್ಲುಙಿ ಮಂತ್ರೇ ಘಸಹ್ವರೇಕ್ಯಾದಿನಾ ಚ್ಲೇರ್ಲುಕ್ । ಅಂತಾದೇಶಃ । ತಸ್ಯ ಙಿತ್ತ್ವಾದ್ಗುಣಾಭಾವೇ ಯಸಾದೇಶಃ । ಇತಶ್ಚೇತೀಕಾರಲೋಪೇ ಸಂಯೋಗಾಂತಲೋಪೇ ಚಾಡಾಗಮಃ । ಧಾಃ । ಛಂದಸಿ ಲುಙ್ಲಙ್ಲಿಟ ಇತಿ ಲೋಡರ್ಥೇ ಲುಙಿ ಗಾತಿಸ್ಥೇತಿ ಸಿಚೋ ಲುಕ್ । ಬಹುಲಂ ಛಂದಸ್ಯಮಾಙ್ಯೋಗೇಽಪೀತ್ಯಡಭಾವಃ ॥

॥ ಪ್ರತಿಪದಾರ್ಥ ॥

ಹಾರಿಯೋಜನ—(ರಥಕ್ಕೆ) ಕುದುರೆಗಳನ್ನು ಸೇರಿಸತಕ್ಕ । ಇಂದ್ರ—ಎಲೈ ಇಂದ್ರನೇ । ಗೋತಮಾಸಃ—ಗೋತಮ ವಂಶೋತ್ಪನ್ನರಾದ ಋಷಿಗಳು । ಸುವೃಕ್ತಿ—ಒಳ್ಳೆಯ ಕಾರ್ಯಕಾರಿಯಾದ । ಬ್ರಹ್ಮಾಣಿ—ಸ್ತುತಿರೂಪಗಳಾದ ಮಂತ್ರಗಳನ್ನು । ತೇ ಏವ—ನಿನಗಾಗಿಯೇ । ಅಕೃನ್—ಸೃಷ್ಟಿಸಿದ್ದಾರೆ । ಏಷು—ಈ ಸ್ತೋತೃಗಳಲ್ಲಿ । ವಿಶ್ವಪೇಶಸಂ—ನಾನಾ ವಿಧವುಳ್ಳ । ಧಿಯಂ—ಪಶ್ವಾದಿ ಧನವನ್ನು ಅಥವಾ ಅಗ್ನಿಷ್ಟೋಮಾದಿ ಕರ್ಮವನ್ನು । ಅಧಾಃ—ಅನುಗ್ರಹಿಸಿ ಸ್ಥಾಪಿಸು । ಪ್ರಾತಃ—(ಈಗಿನಂತೆ) ಮುಂದಿನ ಪ್ರಾತಃಕಾಲದಲ್ಲಿಯೂ ಸಹ । ಧಿಯೋವಸುಃ—ಬುದ್ಧಿಯಿಂದ ಅಥವಾ ಕರ್ಮದಿಂದ (ಧನವನ್ನು ಗಳಿಸಿದ) ಇಂದ್ರನು । ಮಕ್ಷು—ಜಾಗ್ರತೆಯಾಗಿ ಜಗಮ್ಯಾತ್—(ನಮ್ಮ ರಕ್ಷಣೆಗಾಗಿ) ಬರಲಿ ॥

॥ ಭಾವಾರ್ಥ ॥

ಕುದುರೆಗಳನ್ನು ಯೋಜಿಸಿ ರಥವನ್ನು ಸಿದ್ಧಪಡಿಸುವ ಎಲೈ ಇಂದ್ರನೇ, ಗೋತಮವಂಶೋತ್ಪನ್ನರಾದ ಋಷಿಗಳು ಒಳ್ಳೆಯ ಕಾರ್ಯಕಾರಿಯಾದ ಸ್ತುತಿರೂಪಗಳಾದ ಮಂತ್ರಗಳನ್ನು ನಿನಗಾಗಿಯೇ ರಚಿಸಿದ್ದಾರೆ. ಈ ಋಷಿಗಳಿಗೆ ಪಶ್ವಾದಿ ನಾನಾ ವಿಧವಾದ ಧನಗಳನ್ನು ಅನುಗ್ರಹಿಸು. ಈಗಿನಂತೆ ಮುಂದಿನ ಪ್ರಾತಃಕಾಲದಲ್ಲೂ ಸಹ ತನ್ನ ಪವಿತ್ರವಾದ ಕರ್ಮಗಳಿಂದ ಧನವನ್ನು ಗಳಿಸಿದ ಇಂದ್ರನು ನಮ್ಮ ರಕ್ಷಣೆಗಾಗಿ ಜಾಗ್ರತೆಯಾಗಿ ಇಲ್ಲಿಗೆ ಬರಲಿ.

English Translation.

O Indra, harnesser of horses, the descendants of Gotama, have offered to you well-worded hymns to secure your presence ; confer upon them manifold riches; may he (Indra) who has acquired wealth by pious deeds, come here in quickly the morning.

॥ ವಿಶೇಷ ವಿಷಯಗಳು ॥

ಹಾರಿಯೋಜನ—ಹರ್ಯೋಃ ಅಶ್ವಯೋಃ ಯೋಜನಂ ಯಸ್ಮಿನ್ ಸಃ—ಹರಿಯೋಜನಃ— ತಸ್ಯ ಸಂಬಂಧೀ (ಸ್ವಾಮೀ) **ಹಾರೀಯೋಜನಃ**—ಅಶ್ವಸಹಿತವಾದ ರಥವುಳ್ಳವರು. ಅಥವಾ ಅಶ್ವರಥದಲ್ಲಿ ಸ್ವಾಮಿಯಾಗಿ ಕುಳಿತಿರುವವನು.

ಗೋತಮಾಸಃ—ಗೋತಮ ವಂಶೋತ್ಪನ್ನರಾದ ಋಷಿಗಳು.

ಸುವೃಕ್ತಿ—ಸುಷ್ಠು ಅವರ್ಜಕಾನ್ಯಭಿಮುಖೀಕರಣಕುಶಲಾನಿ—ಪ್ರಶಸ್ತವಾದ ರೀತಿಯಲ್ಲಿ ದೇವತೆಗಳನ್ನು ಅಭಿಮುಖಗೊಳಿಸುವ ಸಾಮರ್ಥ್ಯವುಳ್ಳವುಗಳು. ಇದು ಮಂತ್ರಗಳಿಗೆ ವಿಶೇಷಣ.

ಬ್ರಹ್ಮಾಣಿ—ಸ್ತುತಿರೂಪಗಳಾದ ಮಂತ್ರಸಮೂಹಗಳು.

ವಿಶ್ವಪೇಶಸಂ—ಬಹುವಿಧರೂಪಯುಕ್ತಂ—ನಾನಾ ವಿಧಗಳಾದ ರೂಪಗಳಿಂದ ಕೂಡಿದುದು. ಇದು ಧಿಯಂ ಪದಕ್ಕೆ ವಿಶೇಷಣವಾಗಿದೆ.

ಧಿಯಂ ಧಾಃ—ಧನವನ್ನು ಕೊಡು. **ಧಿಯೋ ಲಭ್ಯತ್ವಾತ್ ಧೀಃ ಧನಮುಚ್ಯತೇ. ಯದ್ವಾ ಧೀಶಬ್ದಃ ಕರ್ಮವಚನಃ ಪಶ್ವಾದಿ ಬಹುವಿಧರೂಪಂ ಧನಂ ಅಗ್ನಿಷ್ಟೋಮಾದಿಕಂ ಬಹುವಿಧರೂಪಂ ಕರ್ಮವಾ** ಎಂದು ವ್ಯಾಖ್ಯಾನಮಾಡಿ. ಧಿಯಂ ಶಬ್ದಕ್ಕೆ, ಬುದ್ಧಿಲಭ್ಯವಾದ ವಸ್ತು (ದ್ರವ್ಯ) ಅಥವಾ ಕರ್ಮವಾಚಕವಾದ ಧೀಶಬ್ದದಿಂದ ಬಹುವಿಧರೂಪವಾದ ಅಗ್ನಿಷ್ಟೋಮಾದಿ ಕರ್ಮಗಳು ಎಂದು ಎರಡು ರೀತಿಯ ಅರ್ಥವನ್ನು ವಿವರಿಸಿರುವರು.

ಧಿಯಾವಸುಃ—ಬುದ್ಧ್ಯಾ ಕರ್ಮಣಾ ವಾ ಪ್ರಾಪ್ತಧನ ಇಂದ್ರಃ—ಬುದ್ಧಿಪೂರ್ವಕವಾಗಿ ಅಥವಾ ಕರ್ಮಫಲದಿಂದ ಸಂಪೂರ್ಣವಾದ ಐಶ್ವರ್ಯವನ್ನು ಪಡೆದವನು.

ಮಕ್ಷು ಜಗಮ್ಯಾತ್—ಶೀಘ್ರಂ ಅಸ್ಮದ್ರಕ್ಷಣಾರ್ಥಮಾಗಚ್ಛೇತು—ಜಾಗ್ರತೆಯಾಗಿ ನಮ್ಮನ್ನು ರಕ್ಷಿಸಲು ಬರಲಿ.

॥ ವ್ಯಾಕರಣಪ್ರಕ್ರಿಯಾ ॥

ಏವ—ನಿಪಾತಸ್ಯ ಚ—(ಪಾ. ಸೂ. ೬-೩-೧೩೬) ಎಂಬುದರಿಂದ ಸಂಹಿತಾದಲ್ಲಿ ದೀರ್ಘ ಬರುತ್ತದೆ.

ಹಾರಿಯೋಜನ—ಅಮಂತ್ರಿತಸ್ಯ ಚ—(ಪಾ. ಸೂ. ೮-೧-೧೯) ಎಂಬುದರಿಂದ ಆಮಂತ್ರಿತನಿಘಾತ ಸ್ವರ ಬರುತ್ತದೆ.

ಸುವೃಕ್ತಿ—ನಪುಂಸಕದಲ್ಲಿ ಶಸಿಗೆ **ಸುಪಾಂ ಸುಲುಕ್** ಎಂಬುದರಿಂದ ಲುಕ್.

ಗೋತಮಾಸಃ—ಪ್ರಥಮಾ ಜಸ್ ಪರವಾದಾಗ **ಆಜ್ಜಸೇರಸುಕ್** (ಪಾ. ಸೂ ೭-೧-೫೦) ಎಂಬುದರಿಂದ ಜಸಿಗೆ ಅಸುಕಾಗಮ.

ಅಕ್ರನ್—ಡುಕೃಞ್ ಕರಣೇ ಧಾತು. ಲುಙ್ ಪ್ರಥಮಪುರುಷ ಬಹುವಚನದಲ್ಲಿ **ಝೋಂತಃ** ಎಂಬುದರಿಂದ ಅಂತಾದೇಶ. **ಇತಶ್ಚ** ಸೂತ್ರದಿಂದ ಇಕಾರಲೋಪ. **ಚ್ಲಿ ಲುಙಿ** ಸೂತ್ರದಿಂದ ಪ್ರಾಪ್ತವಾದ ಚ್ಲಿಗೆ **ಮಂತ್ರೇ ಘಸಹ್ವರ**—(ಪಾ. ಸೂ. ೨-೪-೮೦) ಎಂಬುದರಿಂದ ಲುಕ್. **ಸಾರ್ವಧಾತುಕಮಪಿತ್** ಎಂಬುದರಿಂದ ಪ್ರತ್ಯಯಕ್ಕೆ ಙಿದ್ವದ್ಭಾವವಿರುವುದರಿಂದ ಧಾತುವಿನ ಇಕಿಗೆ ತನ್ನಿಮಿತ್ತವಾಗಿ ಗುಣಬರುವುದಿಲ್ಲ. **ಇಕೋ-ಯಣಚಿ** ಎಂಬುದರಿಂದ ಯಣಾದೇಶ. **ಸಂಯೋಗಾಂತಸ್ಯಲೋಪಃ** ಎಂಬುದರಿಂದ ಪ್ರತ್ಯಯಾಂತ ತಕಾರಕ್ಕೆ

ಲೋಪ. ಲುಪ್ ನಿಮಿತ್ತವಾಗಿ ಅಂಗಕ್ಕೆ ಆಡಾಗಮ. ಅತಿಙಂತದಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

ವಿಶ್ವಪೇಶಸಮ್—ವಿಶ್ವಾನಿ ಪೇಶಾಂಸಿ ಯಸ್ಯ ಸಃ ವಿಶ್ವಪೇಶಾಃ **ಬಹುವ್ರೀಹೌ ಪ್ರಕೃತ್ಯಾ ಪೂರ್ವಪದಮ್** ಎಂಬುದರಿಂದ ಪೂರ್ವಪದಪ್ರಕೃತಿಸ್ವರ ಬರುತ್ತದೆ.

ಧಾಃ—ಡುಧಾಞ್ ಧಾರಣಪೋಷಣಯೋಃ ಧಾತು. **ಛಂದಸಿ ಲುಙ್ಲಙ್ಲಿಟಃ** ಎಂಬುದರಿಂದ ಲೋಡರ್ಥದಲ್ಲಿ ಲುಙ್. ಮಧ್ಯಮಪುರುಷ ಏಕವಚನದಲ್ಲಿ ಸಿಪ್ ಪ್ರತ್ಯಯ. ಇತಶ್ಚ ಎಂಬುದರಿಂದ **ಅದೇರ** ಇಕಾರಕ್ಕೆ ಲೋಪ. **ಚ್ಲೇಃಸಿಚ್** ಎಂಬುದರಿಂದ ಪ್ರಾಪ್ತವಾದ ಚ್ಲಿಗೆ ಸಿಚಾದೇಶ. **ಗಾತಿಸ್ಥಾಘುಪಾ**—(ಪಾ.ಸೂ. ೨-೪-೭೭) ಎಂಬುದರಿಂದ ಇದಕ್ಕೆ ಘು ಸಂಜ್ಞೆ ಇರುವುದರಿಂದ ಇದಕ್ಕೆ ಬಂದ ಸಿಚಿಗೆ ಲುಕ್. **ಬಹುಲಂ ಛಂದಸ್ಯಮಾಙ್ಯೋಗೇಽಪಿ** ಎಂಬುದರಿಂದ ಅಡಾಗಮ ಬರುವುದಿಲ್ಲ. ಅತಿಙಂತದ ಪರದಲ್ಲಿರುವುದರಿಂದ ನಿಘಾತ ಸ್ವರ ಬರುತ್ತದೆ.

ಮಕ್ಷೂ—ಋಚಿತುನುಘೇ—(ಪಾ.ಸೂ. ೬-೩-೧೩೩) ಎಂಬುದರಿಂದ ಸಂಹಿತಾದಲ್ಲಿ ದೀರ್ಘ ಬರುತ್ತದೆ.

ಅರವತ್ತೊಂದನೆಯ ಸೂಕ್ತವು ಸಮಾಪ್ತವು

ವೇದಾರ್ಥಸ್ಯ ಪ್ರಕಾಶೇನ ತಮೋ ಹಾರ್ದಂ ನಿವಾರಯನ್ ।
ಪುಮರ್ಥಾಂಶ್ಚತುರೋ ದೇಯಾದ್ವಿದ್ಯಾತೀರ್ಥಮಹೇಶ್ವರಃ ॥

ಇತಿ ಶ್ರೀಮದ್ರಾಜಾಧಿರಾಜಪರಮೇಶ್ವರವೈದಿಕಮಾರ್ಗಪ್ರವರ್ತಕಶ್ರೀವೀರಬುಕ್ಕಭೂಪಾಲ-
ಸಮ್ರಾಜ್ಯಧುರಂಧರೇಣ ಸಾಯಣಾಚಾರ್ಯೇಣ ವಿರಚಿತೇ ಮಾಧವೀಯೇ
ವೇದಾರ್ಥಪ್ರಕಾಶೇ ಋಕ್ಸಂಹಿತಾಭಾಷ್ಯೇ ಪ್ರಥಮಾಷ್ಟಕೇ
ಚತುರ್ಥೋಽಧ್ಯಾಯಃ ಸಮಾಪ್ತಃ ॥


॥ ಓಂ ತತ್ಸತ್ ॥

ಇಲ್ಲಿಗೆ ಶ್ರೀ ಸಾಯಣಭಾಷ್ಯಸಹಿತವೂ ಕರ್ನಾಟಕಭಾಷಾನುವಾದಯುತವೂ ಆದ
ಋಗ್ವೇದಸಂಹಿತೆಯ ಪ್ರಥಮಾಷ್ಟಕದಲ್ಲಿ ನಾಲ್ಕನೆಯ ಅಧ್ಯಾಯವು ಸಮಾಪ್ತವಾದುದು

ಯದಕ್ಷರಪದಭ್ರಷ್ಟಂ ಮಾತ್ರಾಹೀನಂ ತು ಯದ್ಭವೇತ್ ।
ತತ್ಸರ್ವಂ ಕ್ಷಮ್ಯತಾಂ ದೇವ ವಾಗೀಶ್ವರ ನಮೋಽಸ್ತು ತೇ ॥

॥ ಶುಭಂ ಭೂಯಾತ್ ॥

॥ ಮಂಗಳಂ ॥





ಪರಿಶಿಷ್ಟ.

ಸೂಚನೆ :—[ಋಗ್ವೇದದಲ್ಲಿ ಕಂಡುಬರುವ ನಾನಾ ದೇವತೆಗಳ ವಿಷಯದಲ್ಲಿ ಪಾಶ್ಚಾತ್ಯವಿದ್ವಾಂಸರು ನಡೆಸಿರುವ ಪರಿಶೋಧನೆಗಳ ಸಾರಾಂಶವನ್ನೂ, ಅಲ್ಲಲ್ಲಿ ಅವಶ್ಯಕವೆಂದು ಕಂಡುಬಂದ ಸ್ಥಳಗಳಲ್ಲಿ ನಮ್ಮ ಸಂಶೋಧನೆಯ ಕೆಲವು ಭಾಗಗಳನ್ನೂ ಸೇರಿಸಿ ಈ ಭಾಗವನ್ನು ಬರೆದಿರುತ್ತೇವೆ. ವೇದವನ್ನು ವಿಮರ್ಶಕದೃಷ್ಟಿಯಿಂದ ಅಭ್ಯಾಸ ಮಾಡುವವರಿಗೂ ವೇದ ವಿಷಯದಲ್ಲಿ ಆಸಕ್ತರಾದ ಇತರರಿಗೂ ಈ ಭಾಗವು ವಿಶೇಷಪ್ರಯೋಜನಕಾರಿಯೆಂದು ಹೇಳಬೇಕಾದ ಅವಶ್ಯಕತೆ ಇಲ್ಲ. ವಾಕ್ಯದ ಕೊನೆಯಲ್ಲಿ ಕೊಟ್ಟಿರುವ ಸಂಖ್ಯೆಗಳು ಕ್ರಮವಾಗಿ ಮಂಡಲ, ಸೂಕ್ತ, ಋಕ್ಕುಗಳನ್ನು ಸೂಚಿಸುವವು.]

॥ ಸ್ವರ್ಗಸ್ಥಾನದ ದೇವತೆಗಳು ॥

ದ್ಯೌಃ

ದ್ಯೌ :—ನಮಗೆ ಕಣ್ಣಿಗೆ ಕಾಣಿಸುತ್ತಿರುವ ಆಕಾಶದ ಹೆಸರಿದು. ಈ ಅರ್ಥದಲ್ಲಿಯೇ ಹೆಚ್ಚಾಗಿ ಪ್ರಯೋಗವಿರುವುದು. ಐನೂರಕ್ಕಿಂತ ಹೆಚ್ಚುಸಲ ಆಕಾಶ ಎಂಬರ್ಥದಲ್ಲಿ ಇರುತ್ತದೆ. ಹಗಲು ಎಂತಲೂ ಐವತ್ತು ಸಲ ಉಪಯೋಗಿಸಿದೆ. ಆಕಾಶದ ದೇವತೆಯೆಂದು ವ್ಯಕ್ತಿತ್ವಾರೋಪಣೆ ಮಾಡಿದಾಗ, ಅದು ಸಾಧಾರಣವಾಗಿ ಪೃಥಿವಿಯೊಡನೆ ಸೇರಿ ' ದ್ಯಾವಾಪೃಥಿವೀ ' ಎಂದು ದ್ವಿವಚನಾಂತವಾಗಿಯೇ ಕಂಡುಬರುತ್ತದೆ. ಮತ್ತು ಅವರಿಬ್ಬರೂ' ಜಗತ್ತಿಗೆ ಮಾತಾಪಿತೃಗಳೆಂದು ಭಾವಿಸಲ್ಪಟ್ಟಿದಾರೆ. ಆಕಾಶದ ದೇವತೆಯನ್ನು ಹೊಗಳುವ ಸೂಕ್ತ ಒಂದಾದರೂ ಇಲ್ಲ. ಒಂದು ವೇಳೆ ಪ್ರತ್ಯೇಕ ಪ್ರಯೋಗವಿದ್ದರೂ, ಅಲ್ಲಿ ಪಿತೃತ್ವವೊಂದೇ ಅಭಿಪ್ರೇತವಾದ ಅಂಶ. ಷಷ್ಠೀವಿಭಕ್ತಿಯಲ್ಲಿಯೇ ಹೆಚ್ಚಾಗಿ, ಅಂದರೆ ೫೦ ಕಡೆ ಇದೆ. ಈ ಷಷ್ಠೀವಿಭಕ್ತಿರೂಪವಿದ್ದೆಡೆಯಲ್ಲೆಲ್ಲಾ, ಯಾವುದಾದರೊಂದು ದೇವತೆ ಇವನ ಮಗ ಅಥವಾ ಮಗಳು ಎಂದಿರುವುದು. ಮುಕ್ಕಾಲುಪಾಲು ಉಷೋದೇವತೆಯೇ ಇವನ ಮಗಳು; ಅಶ್ವಿನಿಗಳು ಇವನ ಸಂತಾನ; ಅಗ್ನಿ ಇವನ ಮಗ ಅಥವಾ ಶಿಶು; ಪರ್ಜನ್ಯ, ಸೂರ್ಯ, ಆದಿತ್ಯರು, ಮರುತ್ತುಗಳು, ಮತ್ತು ಅಂಗಿರಸರು ಇವನ ಪುತ್ರರು. ಪ್ರಥಮಾವಿಭಕ್ತಿಯಲ್ಲಿ ಬರುವ ಮೂವತ್ತು ಸ್ಥಳಗಳಲ್ಲಿ, ಒಂಟೆಯಾಗಿ ಪ್ರಯೋಗ ಎಂಟೇಸಲ; ಉಳಿದ ಸ್ಥಳಗಳಲ್ಲಿ ಪೃಥಿವೀ ಅಥವಾ ಇತರ ದೇವತಾಸಹಚರಿತವಾಗಿ. ಮೂರು ಸಲತಂದೆ (೧-೯೦-೭ ; ೧-೧೬೪-೩೩ ; ೪-೧-೧೦) ; ಒಂದು ಸಲ ಇಂದ್ರನ ತಂದೆ (೪-೭೨-೩) ; ಒಂದು ಸಲ ಹೆಚ್ಚಾದ ರೇತಸ್ಸುಳ್ಳವನು. ಮತ್ತು ಅಗ್ನಿ ಜನಕ (೪-೧೭-೪) ; ವೃಷಭ (೫-೩೬-೫), ಕೆಳಮುಖವಾಗಿ ಗುಟುರು ಹಾಕುವ ಕೆಂಪು ಗೂಳಿ (೫-೫೪-೬), ಮತ್ತು ವೃತ್ರವಧೆಯನ್ನು ಅನುಮೋದಿಸಿದವನು (೬-೭೨-೩) ಎಂಬುದಾಗಿ ಮೂರು ಕಡೆ. ಚತುರ್ಥೀ ವಿಭಕ್ತಿಯಲ್ಲಿ ಎಂಟು ಸಲ ಇದೆ ; ಅದರಲ್ಲಿಯೂ ಮೂರೇ ಸಲ ಪ್ರತ್ಯೇಕವಾಗಿ. ಪ್ರಖ್ಯಾತನಾದ ತಂದೆ (೧-೭೧-೫) ಶ್ರೇಷ್ಠನಾದವನು (೧-೫೪-೩) ಮತ್ತು ಉನ್ನತವಾದ ಮನೆ (೫-೪೭-೭) ಎಂತಲೂ ಇದೆ. ದ್ವಿತೀಯೆಯಲ್ಲಿರುವ ನಾಲ್ಕು ಸ್ಥಳಗಳಲ್ಲಿ ಎರಡೇ ಸಲ ಬೇರೆಯಾಗಿರುವುದು. ಒಂದು ಸಲ ಯಾವ ವಿಶೇಷಣಗಳಲ್ಲಿದೆಯೂ (೧-೧೭೪-೩) ಒಂದು ಸಲ ಅಗ್ನಿಯು ಅವನನ್ನು ಮನುಷ್ಯನಿಗೋಸ್ಕರ ಗರ್ಜಿಸುವಂತೆ ಮಾಡಿದನೆಂದೂ ೧-೩೧-೪) ಹೇಳಿದೆ.

ಈ ರೀತಿ, ದ್ಯೌಃ ಎಂಬುದು ದೇವತೆಗಳ ತಂದೆಯೆಂಬರ್ಥದಲ್ಲಿಯೇ ವಿಶೇಷವಾಗಿ ಉಪಯೋಗಿಸಲ್ಪಟ್ಟಿದೆ. ೧೫-೧೬ ಸಲಮಾತ್ರ ಅವನ ಪಿತೃತ್ವವು ಸ್ವತಂತ್ರವಾಗಿಯಾಗಲೀ, ಪೃಥಿವೀಜೊತೆಯಲ್ಲಿಯಾಗಲೀ ಸ್ಪಷ್ಟವಾಗಿ ಉಕ್ತವಾಗಿಲ್ಲ. ಈ ದೇವತೆಯ ಮುಖ್ಯಲಕ್ಷಣವೇ ಪಿತೃತ್ವ. ಬಹಳ ಕಡಿಮೆ ವಾಕ್ಯಗಳಲ್ಲಿ ಅವನು ಒಂದು ವೃಷಭಕ್ಕೆ ಹೋಲಿಸಲ್ಪಟ್ಟಿದ್ದಾನೆ. ಇಲ್ಲಿ ಭೂಮಿಯನ್ನು ಹದಮಾಡುವ, ಗುಟುರು ಹಾಕುವ ಪ್ರಾಣಿ. ಮತ್ತೊಂದು ಕಡೆ (೧೦-೬೪-೧೧) ಮುತ್ತುಗಳಿಂದ ಅಲಂಕೃತವಾದ ಕಪ್ಪುಕುದುರೆ. ಇದು ನಕ್ಷತ್ರರಂಜಿತವಾದ ಆಕಾಶವಿರಬೇಕು. ದ್ಯುದೇವತೆಯ ಹಸ್ತದಲ್ಲಿ (ಬಾಣ) ಅಶನಿಯಿದೆ ಎಂಬಲ್ಲಿ ಮನುಷ್ಯತ್ವಾರೋಪಣೆ ಇರುವಂತೆ

ತೋರುತ್ತದೆ. ಮೋಡಗಳ ನಡುವೆ ನಗುತ್ತಾನೆ (೨-೪-೬) ಇದೂ ಕೂಡ ವಿದ್ಯುದ್ರಂಜಿತ ಆಕಾಶನೇ. ಇಂತಹ ಮಂತ್ರಗಳು ಎಲ್ಲೊ ಅಲ್ಲೊಂದು ಇಲ್ಲೊಂದು ಇವೆ. ಇವು ಹೊರತು ದ್ಯುದೇವತೆಯಲ್ಲಿ ಪಶು ಅಥವಾ ಮನುಷ್ಯನೆಂಬ ಆರೋಪ ಇಲ್ಲವೇ ಇಲ್ಲವೆನ್ನಬಹುದು. ಪಿತೃ (ತಂದೆ) ಎಂಬುದೇ ಮುಖ್ಯ ಅಭಿಪ್ರಾಯ. ಪೃಥಿವಿಯೇ ತಾಯಿ. ದ್ವಿವಚನಾಂತ ಪ್ರಯೋಗವೇ ಜಾಸ್ತಿ. ಪೃಥಿವೀಸಹಿತ ದ್ಯುದೇವತೆಗೆ ಇರುವಷ್ಟು ವ್ಯಾಪಕತ್ವ ಒಂಟಿಯಾದ ದ್ಯುದೇವತೆಗೆ ಇಲ್ಲ. ದ್ಯಾವಾಪೃಥಿವೀದೇವತಾಕವಾದ ಆರು ಸೂಕ್ತಗಳಿವೆ. ಇತರ ದೊಡ್ಡ ದೊಡ್ಡ ದೇವತೆಗಳಂತೆ ಇವನೂ ಒಬ್ಬ ಅಸುರ (೧-೧೨೨-೧ ; ೧-೧೩೧-೧ ; ೪-೨೦-೧೭) ; ಒಂದು ಕಡೆ ದ್ಯೌಃಪಿತಃ, ಪೃಥಿವೀಮಾತಃ ಎಂಬುದಾಗಿ ಸಂಬೋಧನೆಯೂ (೬-೫೧-೫) ಇದೆ. ಇಪ್ಪತ್ತು ಸ್ಥಳಗಳಲ್ಲಿ ಈ ಪದವು ಸ್ತ್ರೀಲಿಂಗವಾಗಿಯೂ ಪ್ರಯುಕ್ತವಾಗಿದೆ. ಪ್ರಪಂಚಕ್ಕೇ ಪಿತೃವೆಂದೂ, ಎಲ್ಲಾ ವಸ್ತುಗಳನ್ನೂ ಅಡಗಿಸಿಕೊಂಡಿರುವನೆಂದೂ ಹೇಳಿದರೆ ಅಪಾರ್ಥಕಲ್ಪಿಸಿದಂತೆ ಆಗುತ್ತದೆ. ಮತ್ತು ಇವನಿಗಿಂತ ದೊಡ್ಡದೇವತೆಯೇ ಇಲ್ಲ ಎಂತಲೂ ಹೇಳಲಾಗುವುದಿಲ್ಲ. ಆದರೆ ಇದೇ ಋಗ್ವೇದದಲ್ಲಿ ಬೇರೆ ದೇವತೆಗಳಿಗೆ ದ್ಯುದೇವತೆಗಿಂತ ಉತ್ತಮಸ್ಥಾನವಿದೆ.

ಈ ಪದವು ದಿವ್ (ಹೊಳೆಯುವುದು) ಎಂಬ ಧಾತುವಿನಿಂದ ನಿಷ್ಪನ್ನವಾದುದು. ದೇವ ಎಂಬುದರಂತೆ ಹೊಳೆಯುವ, ಶುಭ್ರವಾದ ವಸ್ತು ಎಂದರ್ಥವಾಗುತ್ತದೆ.

ವರುಣ.

ಅತಿಶ್ರೇಷ್ಠನಾದ ದೇವತೆ, ಇಂದ್ರನಿಗೆ ಸಮಾನನು. ವರುಣ ದೇವತಾಕವಾದ ಮಂತ್ರಗಳ ಸಂಖ್ಯೆ ಬಹಳ ಕಡಿಮೆ. ಅತನನ್ನು ಮಾತ್ರ ಸ್ತುತಿಸುವ ಸೂಕ್ತಗಳು ಹನ್ನೆರಡು. ಮಂತ್ರಸಂಖ್ಯಾದೃಷ್ಟಿಯಿಂದ ನೋಡುವುದಾದರೆ ಅವನು ಮೂರನೆಯ ದರ್ಜೆಯ ದೇವತೆಯಾಗುವನು ; ಅಥವಾ ಈತನ ಜೊತೆ ದೇವತೆಯಾದ ಮಿತ್ರ ಮತ್ತು ಈತನನ್ನು ಒಟ್ಟಾಗಿ ಸ್ತುತಿಸುವ ಇಪ್ಪತ್ತುನಾಲ್ಕು ಸೂಕ್ತಗಳನ್ನು ತೆಗೆದುಕೊಂಡರೂ, ತಾರತಮ್ಯದ ಪಟ್ಟಿಯಲ್ಲಿ ಐದನೆಯ ಸ್ಥಾನ ಬರುತ್ತದೆ. ಅಶ್ವಿನೀದೇವತೆಗಳಿಗಿಂತಲೂ ಬಹಳಮಟ್ಟಿಗೆ ಕೆಳಗೂ, ಮರುತ್ತುಗಳಿಗೆ ಸಮವೂ ಆದ ಸ್ಥಾನವಿದೆ. ವರುಣದೇವತಾಕವಾದ ಮಂತ್ರಗಳ ಸಂಖ್ಯೆ ವರುಣನ ನಿಜವಾದ ಸ್ಥಾನವನ್ನಾಗಲೀ ಆತನ ಶ್ರೈಷ್ಠ್ಯವನ್ನಾಗಲೀ ವ್ಯಕ್ತಪಡಿಸುವುದಿಲ್ಲ.

ವರುಣನಿಗೆ ಮಾನುಷ ದೇಹ, ಮಾನುಷ ವ್ಯಾಪಾರಗಳುಂಟು. ಆದರೆ ಭೌತಿಕ ಶರೀರ ಮತ್ತು ವ್ಯಾಪಾರಗಳಿಗಿಂತ ಹೆಚ್ಚಾಗಿ ಆತನ ನೈತಿಕ ವ್ಯಾಪಾರಗಳ ಕಡೆಗೇ ಗಮನವಿದ್ದಂತೆ ತೋರುತ್ತದೆ. ಅವನ ದೇಹ ಮತ್ತು ಸಲಕರಣೆಗಳ ವಿವರಣೆ ಬಹಳ ಕಡಿಮೆ ; ಆತನ ಕಾರ್ಯಗಳ ವಿವರಣೆಯೇ ಹೆಚ್ಚು. ಅವನಿಗೆ ಮುಖ, ಕಣ್ಣು, ತೋಳುಗಳು ಕೈಗಳು ಮತ್ತು ಪಾದಗಳಿವೆ. ಅವನು ಕೈಗಳನ್ನಾಡಿಸುತ್ತಾನೆ ; ರಥನಡೆಯಿಸುತ್ತಾನೆ ; ಕುಳಿತುಕೊಳ್ಳುತ್ತಾನೆ ; ತಿನ್ನುತ್ತಾನೆ ಮತ್ತು ಪಾನಮಾಡುತ್ತಾನೆ. ವರುಣನ ಮುಖ (ಅನೀಕಂ) ವನ್ನು ಅಗ್ನಿಯ ಮುಖವೆಂದೇ ಭಾವಿಸಿದೆ (೭-೮೮-೨ ; ಮತ್ತು ೭-೮೭-೬ ನ್ನು ಹೋಲಿಸಿ) ಮಿತ್ರ ವರುಣರಿಗೆ ಸೂರ್ಯನೇ ನೇತ್ರ (೧-೧೧೫-೧ ; ೬-೫೧-೧ ; ೭-೬೧-೧ ; ೭-೬೩-೧ ; ೧೦-೩೭-೧) ಸೂರ್ಯನು ಇವರಿಗೆ ನೇತ್ರಪ್ರಾಯನೆಂಬ ವಿಷಯವು ಮಿತ್ರಾವರುಣದೇವತಾಕವಾದ ಸೂಕ್ತಗಳ ಮೊದಲನೆಯ ಮಂತ್ರದಲ್ಲಿಯೇ ಇರುವುದರಿಂದ, ಮಿತ್ರಾವರುಣರ ಪ್ರಸ್ತಾಪ ಬಂದಾಗಲೆಲ್ಲಾ, ಮೊದಲು ಗೋಚರವಾಗುವುದೇ ಈ ಅಂಶವೆಂದು ತೋರುತ್ತದೆ. ಸೂರ್ಯದೇವತಾಕವಾದ ಸೂಕ್ತವೊಂದರಲ್ಲಿ (೧-೫೦-೬) ವರುಣನು ತನ್ನ ನೇತ್ರದಿಂದ ಮಾನವರನ್ನು ವೀಕ್ಷಿಸುತ್ತಾನೆ ಎನ್ನುವಾಗ, ಆ ನೇತ್ರವು ಸೂರ್ಯನೇ ಇರಬೇಕು. ಅರ್ಯಮ, ಮಿತ್ರ ಮತ್ತು ವರುಣರು ಸೂರ್ಯನೇತ್ರರು (೭-೬೬-೧೦). ಈ ವಿಶೇಷಣವು ಎಲ್ಲಾ ದೇವತೆಗಳಿಗೂ ಉಪಯೋಗಿಸಿದೆ. ವರುಣನು ದೂರ

ದೃಷ್ಟಿಯುಳ್ಳವನು (೧-೨೫-೫ ರಿಂದ ೧೬ ; ೪-೯೦-೨) ಮತ್ತು ಸಹಸ್ರಾಕ್ಷನು (೭-೩೪-೧೦) ಮಿತ್ರ ಮತ್ತು ವರುಣರು ತಮ್ಮ ತೋಳುಗಳನ್ನು ಪಸ್ತರಿಸಿ (೫-೬೪-೨ ; ೭-೬೨-೫) ಸೂರ್ಯನ ಕಿರಣಗಳನ್ನೇ ತೋಳುಗಳನ್ನಾಗಿ ಮಾಡಿಕೊಂಡು ರಥವನ್ನು ಓಡಿಸುತ್ತಾರೆ. ಸವಿತೃ ಮತ್ತು ತ್ವಷ್ಟೃಗಳಂತೆ ಅವರೂ ಸುಂದರವಾದ ಹಸ್ತಗಳುಳ್ಳವರು (ಸುಪಾಣೀ). ಮಿತ್ರಾವರುಣರು ತಮ್ಮ ಪಾದಗಳಿಂದ ಶೀಘ್ರವಾಗಿ ಹೋಗುತ್ತಾರೆ (೫-೬೪-೭) ಮತ್ತು ವರುಣನು ದುಷ್ಕೃತ್ಯಗಳನ್ನು ಹೊಳೆಯುವ ಪಾದಗಳಿಂದ ತುಳಿಯುತ್ತಾನೆ (೮-೪೧-೮). ಅವನು ಯಾಗಶಾಲೆಯಲ್ಲಿ ಹರಡಿರುವ ದರ್ಭೆಗಳ ಮೇಲೆ ಕುಳಿತು (೧-೨೬-೪ ; ೫-೭೨-೨). ಮಿತ್ರನೊಡನೆ, ಇತರ ದೇವತೆಗಳಂತೆ ಸೋಮ ಪಾನ ಮಾಡುತ್ತಾನೆ (೪-೪೧-೩ ಮುಂತಾದುವು). ವರುಣನು ಸುವರ್ಣಮಯವಾದ ಮೇಲುಹೊದಿಕೆ ಅಥವಾ ನಿಲುವಂಗಿಯನ್ನೂ (ದ್ರಾಪಿ). ಮತ್ತು ಹೊಳೆಯುವ ಉಡುಪನ್ನೂ ಧರಿಸುತ್ತಾನೆ (೧-೨೫-೧೩). ತುಪ್ಪದಿಂದ ಮಾಡಿದ, ಹೊಳೆಯುವ ಉಡುಪುಳ್ಳವನೆಂದೂ ಕೆಲವು ಕಡೆ (೫-೬೨-೪ ; ೭-೬೪-೧) ಇರುವುದು, ಯಜ್ಞದಲ್ಲಿ ಮಾಡುವ ಆಜ್ಯ ಹೋಮಕ್ಕೇ ಅನ್ವಯಿಸಬೇಕು. ಅವರಿಬ್ಬರೂ ಹಾಕಿಕೊಂಡಿರುವ 'ಥಳ ಥಳಿಸುವ ಬಟ್ಟೆಗಳೂ' ಇದೇ ಅರ್ಥದಲ್ಲಿರಬೇಕು (೧-೧೫೨-೧) ಶತಪಥ ಬ್ರಾಹ್ಮಣದಲ್ಲೊಂದು ಸ್ಥಳದಲ್ಲಿ ಮಾತ್ರ (೧೩-೩-೬-೫) ವರುಣನನ್ನು ಸುಂದರನೂ, ಬೋಳಾಗಿರುವ ತಲೆಯುಳ್ಳವನೂ, ಹಳದಿಯ ಕಣ್ಣುಳ್ಳವನೂ ಆದ ಮುದುಕನೆಂದು ಚಿತ್ರಿಸಿದೆ. ಅತನ ಸಲಕರಣೆಗಳಲ್ಲಿ ಬಹಳ ಮುಖ್ಯವಾದುದು ಅವನ ರಥ. ಅದು ಸೂರ್ಯನಂತೆ ಕಾಂತಿಯುಕ್ತವಾದುದು (೧-೧೨೨-೧೫), ಅಸನ ಮತ್ತು ಚಾಟಿಗಳುಳ್ಳದ್ದು (೫-೬೨-೭) ಮತ್ತು ದೃಢವಾಗಿ ಹೂಡಿರುವ ಕುದುರೆಗಳು ಅದನ್ನು ಎಳೆಯುತ್ತವೆ. (೫-೬೨-೪). ಮಿತ್ರ ಮತ್ತು ವರುಣರು ಆಕಾಶದಲ್ಲಿ ಬಹಳ ಎತ್ತರವಾದ ಪ್ರದೇಶದಲ್ಲಿ ರಥಾರೋಹಣ ಮಾಡುತ್ತಾರೆ (೫-೬೩-೧). ಆ ರಥವನ್ನು ಭೂಮಿಯಮೇಲೆ ನೋಡಬೇಕೆಂಬ ಹಂಬಲ, ಕವಿಗೆ (೫-೬೭-೨) ಇರುವುದು.

ಮಿತ್ರ ಮತ್ತು ವರುಣರ ವಾಸಗೃಹವು ಸುವರ್ಣಮಯವಾದುದು. ಮತ್ತು ಮೇಲು ಲೋಕದಲ್ಲಿದೆ (೫-೬೭-೨ ; ೧-೧೩೬-೨) ಮತ್ತು ವರುಣನು ತನ್ನ ಪ್ರಾಸಾದದಲ್ಲಿ ಕುಳಿತು, ಪ್ರಪಂಚದಲ್ಲಿ ನಡೆಯುವದನ್ನೆಲ್ಲಾ ನೋಡುತ್ತಾನೆ (೧-೨೫-೧೦ ಮತ್ತು ೧೧) ವರುಣನ ಮತ್ತು ಮಿತ್ರನ ಆಸನವು (ಸದಸ್) ದೊಡ್ಡದು, ಬಹಳ ಎತ್ತರವಾದುದು, ಸಹಸ್ರ ಸ್ತಂಭಗಳನ್ನಾಶ್ರಯಿಸಿ, ದೃಢವಾಗಿದೆ. (೫-೬೮-೫ ; ೨-೪೧-೫) ಮತ್ತು ಅವರ ಮನೆಗೆ ಸಹಸ್ರದ್ವಾರಗಳಿವೆ (೭-೪೮-೫) ಸರ್ವದರ್ಶಿಯಾದ ಸೂರ್ಯನು ತನ್ನ ವಾಸಸ್ಥಾನದಿಂದ ಹೊರಟು, ಮಿತ್ರ ಮತ್ತು ವರುಣರ ಮನೆಗೆ, ಮನುಷ್ಯರ ಕೆಲಸಗಳನ್ನು ತಿಳಿಸಲು, ಹೋಗುತ್ತಾನೆ (೭-೬೦-೧ ಮತ್ತು ೩); ಮತ್ತು ಅವರ ಪ್ರಿಯವಾದ ಮನೆಯನ್ನು ಪ್ರವೇಶಿಸುತ್ತಾನೆ (೧-೧೫೨-೪). ಅತ್ಯುನ್ನತವಾದ ಸ್ವರ್ಗಲೋಕದಲ್ಲೇ, ಪಿತೃಗಳು ವರುಣನನ್ನು ಸಂದರ್ಶಿಸುವುದು (೧೦-೧೪-೪). ಶತಪಥಬ್ರಾಹ್ಮಣದಲ್ಲಿ, ವರುಣನು ಜಗತ್ತಿಗೇ ಒಡೆಯ, ಆಕಾಶದ ಮಧ್ಯದಲ್ಲಿ ಕುಳಿತಿದ್ದಾನೆ, ಮತ್ತು ಅಲ್ಲಿಂದ ತನ್ನ ಸುತ್ತಲೂ ಇರುವ ಶಿಕ್ಷೆ ವಿಧಿಸುವ ಪ್ರದೇಶಗಳನ್ನು ಪರಿಶೀಲಿಸುತ್ತಾನೆ ಎಂಬ ವಿವರಣೆ ಇದೆ (೧೧-೬-೧).

ಕೆಲವು ಸ್ಥಳಗಳಲ್ಲಿ ವರುಣನಿಗೆ ಗೂಢಚಾರರಿದಾರೆಂದು ಹೇಳಿದೆ. ಅವರು ಅವನ ಸುತ್ತಲೂ ಕುಳಿತಿದ್ದಾರೆ (೧-೨೪-೧೩). ಅವರು ಸ್ವರ್ಗ ಮತ್ತು ಭೂಲೋಕಗಳೆರಡನ್ನೂ ನೋಡುತ್ತಾರೆ; ಯಾಗಗಳ ವಿಚಾರವನ್ನು ಚೆನ್ನಾಗಿ ತಿಳಿದ ಇವರು ಸ್ತುತಿಪ್ರೇರಕರಾಗುತ್ತಾರೆ; (೭-೪೭-೩). ಮಿತ್ರ ಮತ್ತು ವರುಣರ ಗೂಢಚಾರರು ಪ್ರತ್ಯೇಕವಾಗಿ ಮನೆಗಳನ್ನು ಪ್ರವೇಶಿಸುತ್ತಾರೆ (೭-೬೧-೩), ಮೋಸಹೋಗುವುದಿಲ್ಲ, ಬುದ್ಧಿವಂತರು (೬-೬೭-೫) ಅಥರ್ವವೇದದಲ್ಲಿ (ಅ. ವೇ. ೪-೧೬-೪), ವರುಣನ ಚಾರರು ಸ್ವರ್ಗದಿಂದಿಳಿದು ಬಂದು, ಪ್ರಪಂಚವನ್ನೆಲ್ಲಾ

ಸುತ್ತಿ, ಸಾವಿರಾರು ಕಣ್ಣುಗಳಿಂದ ನೋಡುತ್ತಾರೆ ಎಂದಿದೆ. ಇಲ್ಲಿ ಚಾರರೆಂದರೆ ನಕ್ಷತ್ರಗಳೇ ಇರಬೇಕು. ಆದರೆ ಋಗ್ವೇದದಲ್ಲಿ ನಕ್ಷತ್ರಗಳು ವರುಣಾದಿ ದೇವತೆಗಳ ಚಾರರಾಗಿ ಅವರಿಗೆ ಪ್ರಪಂಚದ ವಿದ್ಯಮಾನಗಳನ್ನು ತಿಳಿಸುತ್ತಾರೆ ಎಂಬುದಕ್ಕೆ ಆಧಾರವಿಲ್ಲ. ಪ್ರಾಯಶಃ ಲೌಕಿಕ ರಾಜರುಗಳಂತೆ, ಇವರಿಗೂ ಚಾರರುಂಟೆಂದು ವರ್ಣನೆಯಿರಬಹುದು. ಅಥವಾ, ಚಾರರು ಮಿತ್ರಾವರಣರಿಗೆ ಮಾತ್ರವಲ್ಲ ; ಅಗ್ನಿ (೪-೪-೩) ಸೋಮ (೯-೭೩-೪ ಮತ್ತು ೭) ಇಂದ್ರನೊಡನೆ ಯುದ್ಧಮಾಡಿದ ರಾಕ್ಷಸರು (೧-೩೩-೮) ಮತ್ತು ಇತರ ದೇವತೆಗಳು, ಇವರಿಗೆಲ್ಲಾ (೧೦-೧೦-೮)ಚಾರರಿದ್ದಾರೆ. ಆದಿತ್ಯರು ಗೂಢಚಾರರಂತೆ, ಎತ್ತರವಾದ ಪ್ರದೇಶದಿಂದ ನೋಡುತ್ತಾರೆ (೮-೪೭-೧೧) ಎಂದಿದೆ. ವರುಣನ, ' ಬಂಗಾರದ ರೆಕ್ಕೆಗಳುಳ್ಳ ದೂತನು ' (೧೦-೧೩೩-೬) ಸೂರ್ಯನೇ ಇರಬೇಕು.

ವರುಣನು ಒಂಟಿಯಾಗಿ ಅಥವಾ ಮಿತ್ರಸಹಿತನಾಗಿ, ಯಮ ಮತ್ತು ಇತರ ದೇವತೆಗಳಂತೆ ಅನೇಕ ಕಡೆ ರಾಜನೆಂದು ಕರೆಯಲ್ಪಟ್ಟಿದಾನೆ. (೧-೨೪-೭ , ೮ ಇತ್ಯಾದಿ). ಅವನು, ದೇವತೆಗಳು ಮತ್ತು ಮನುಷ್ಯರು ಎಲ್ಲರಿಗೂ ರಾಜನು (೧೦-೧೩೭-೪ ; ೨-೨೭-೧೦); ಇಡೀ ಜಗತ್ತಿಗೂ (೫-೮೫-೩) ಮತ್ತು ಸಕಲ ಚರಾಚರವಸ್ತುಗಳಿಗೂ (೭-೮೭-೬) ರಾಜನು. ಸಾಮಾನ್ಯವಾಗಿ ಇಂದ್ರನು ಮಾತ್ರ ಸ್ವಾವಲಂಬಿಯೆಂಬ ರಾಜನೆಂಬ ವರ್ಣನೆ ಇದೆ. ಆದರೆ ವರುಣನೂ ಸ್ವಾವಲಂಬಿಯು (೨-೨೮-೧). ರಾಜನೆನ್ನುವುದಕ್ಕಿಂತ ಹೆಚ್ಚು ಸಂದರ್ಭಗಳಲ್ಲಿ, ವರುಣ ಅಥವಾ ಮಿತ್ರಾವರುಣರು ಸಂರಾಟ್ ಎಂದು ಕರೆಯಲ್ಪಟ್ಟಿದಾರೆ. ಈ ವಿಶೇಷಣವು ಅಗ್ನಿಗೂ ಕಂಡು ಬರುತ್ತದೆ. ಆದರೆ ಹೆಚ್ಚಾಗಿ ಇದು ಇಂದ್ರನಿಗೇ ಸಲ್ಲತಕ್ಕದ್ದು. ಇಂದ್ರನ ಎರಡರಷ್ಟು ಸಲ, ವರುಣ ಅಥವಾ ಮಿತ್ರಾ ವರುಣರಿಗೆ ಸಂರಾಟ್ ಎಂಬ ಪ್ರಯೋಗವಿದೆ. ಇಂದ್ರ ದೇವತಾಕವಾದ ಪ್ರತಿ ಎಂಟು ಹತ್ತು ಸೂಕ್ತಗಳಿಗೆ, ವರುಣ ದೇವತಾಕವಾದ ಸೂಕ್ತವಿರುವುದು ಒಂದೇ ಎಂದಮೇಲೆ, ಈ ವಿಶೇಷಣವು ವರುಣನಿಗೇ ಸಲ್ಲತಕ್ಕದ್ದೆಂದು ಹೇಳಬಹುದು.

' ಕ್ಷತ್ರ ' ನೆಂಬ ವಿಶೇಷಣವು ಸಾಧಾರಣವಾಗಿ ಮಿತ್ರನಿಂದೊಡಗೂಡಿಯೂ, ಎರಡುಸಲ ಆರ್ಯಮನ ಜೊತೆಯಲ್ಲಿಯೂ, ವರುಣನಿಗೇ ಅನ್ವಯಿಸುತ್ತದೆ. ಇದಲ್ಲದೆ, ಅಗ್ನಿ ಬೃಹಸ್ಪತಿ ಮತ್ತು ಅಶ್ವನೀದೇವತೆಗಳಿಗೆ, ಒಂದೊಂದು ಸಲ ಮಾತ್ರ ಉಪಯೋಗಿಸಿರುವುದು ಕಂಡು ಬರುತ್ತದೆ. ಇದೇರೀತಿ, (ಕ್ಷತ್ರಿಯ) ' ಆಳುವವನು ' ಎಂಬುದು ಬರುವ ಐದು ಸಂದರ್ಭಗಳಲ್ಲಿ, ನಾಲ್ಕುಸಲ ವರುಣ ಅಥವಾ ಆದಿತ್ಯರಿಗೂ, ಒಂದೇ ಒಂದು ಸಲ ಇತರ ದೇವತೆಗಳಿಗೂ ಹೇಳಿದೆ. ' ಅಸುರ ' ಎಂಬುದು, ವರುಣ ಅಥವಾ ಮಿತ್ರಾ ವರುಣರಿಗೇ ಇಂದ್ರ ಅಥವಾ ಅಗ್ನಿಗಿಂತ ಹೆಚ್ಚುಸಲ, ಉಪಯೋಗಿಸಿರುವುದು. ವರುಣದೇವತಾಕ ಸೂಕ್ತಗಳ ಅಲ್ಪಸಂಖ್ಯೆಯನ್ನು ಗಣನೆಗೆ ತಂದುಕೊಂಡರೆ, ಅಸುರನೆಂಬ ವಿಶೇಷಣವೂ ವರುಣನಿಗೇ ಹೆಚ್ಚಾಗಿ ಅನ್ವಯಿಸುವುದೆನ್ನಬೇಕು. ಇವರನ್ನು ದೇವತೆಗಳಲ್ಲಿ ರಹಸ್ಯ ಪ್ರಕೃತಿಯವರು, ಪೂಜ್ಯರು (ಅಸುರಾಃ ಆರ್ಯಾಃ) ಎಂದು ಕರೆದಿದೆ (೭-೬೫-೨).

ಮಿತ್ರ ಮತ್ತು ವರುಣರ ದೈವಿಕಶಕ್ತಿಯನ್ನು ' ಮಾಯಾ ' ಎಂಬ ಪದದಿಂದ ವರ್ಣಿಸಿದೆ ಈ ದೇವತೆಗಳಿಗೆ ಅನ್ವಯಿಸಿದರೆ ಒಳ್ಳೆಯದನ್ನು ಮಾಡಲು ಅವರಿಗಿರುವ ಗೂಢವಾದ ಶಕ್ತಿ ಎಂತಲೂ, ರಾಕ್ಷಸರಿಗೆ ಅನ್ವಯಿಸುವ ಸಂದರ್ಭದಲ್ಲಿ ಅದೇ ಪದಕ್ಕೆ ಕೆಟ್ಟದ್ದನ್ನು ಮಾಡಲು ಅವರಿಗಿರುವ ಗೂಢವಾದ ಶಕ್ತಿ ಎಂತಲೂ ಅರ್ಥ. ಒಳ್ಳೆಯ ಅರ್ಥದಲ್ಲಿ ಮಿತ್ರಾ ವರುಣರಿಗೆ ಈ ಪದವು ಸಲ್ಲುತ್ತದೆ. ಕೆಟ್ಟ ಅರ್ಥದಲ್ಲಿ ರಾಕ್ಷಸರಿಗೆ ಅನ್ವಯಿಸುತ್ತದೆ. ಇದೇರೀತಿ ' ಅಸುರ ' ಎಂಬ ಪದವೂ ' ಸಾಮಾನ್ಯರಿಗೆ ತಿಳಿಯಲಸಾಧ್ಯನು ' ಎಂಬರ್ಥದಲ್ಲಿ ಶ್ರೇಷ್ಠರಾದ ದೇವತೆಗಳಿಗೂ, ' ಸುರರಲ್ಲದವರು ' ಎಂಬರ್ಥದಲ್ಲಿ ರಾಕ್ಷಸರಿಗೂ ಹೊಂದುತ್ತದೆ. ತನ್ನಲ್ಲಿ ನಿಗೂಢ

ವಾದ ಈ ಮಾಯಾಶಕ್ತಿಯಿಂದ ವರುಣನು ವಾಯುಮಂಡಲದಲ್ಲಿ ನಿಂತು, ಅಳತೆ ಕಡ್ಡಿಯಿಂದ ಅಳೆಯುವಂತೆ, ಸೂರ್ಯನಿಂದ ಭೂಮಿಯನ್ನು ಅಳೆಯುತ್ತಾನೆ. (೫-೮೫-೫); ಮಿತ್ರ ಮತ್ತು ವರುಣರು ಉಷಸ್ಸನ್ನು ಕಳುಹಿಸುತ್ತಾರೆ (೩-೬೧-೭); ಸೂರ್ಯನು ಅಂತರಿಕ್ಷವನ್ನು ದಾಟುವಂತೆ ಮಾಡಿ, ಅವನನ್ನು ಮಳೆ ಮೋಡಗಳಿಂದ ಮಸಕಾಗುವಂತೆ ಮಾಡುತ್ತಾರೆ, ಆಗ ಮಧುಮಿಶ್ರಿತವಾದ (ಸಿಹಿಯಾದ) ಹನಿಗಳು ಉದುರುತ್ತವೆ. (೫-೬೩-೪); ಆಕಾಶವು ಮಳೆಗರೆಯುವಂತೆ ಮಾಡುತ್ತಾರೆ; ಮತ್ತು ಅಸುರನ (ದ್ಯುದೇವತೆ ಅಥವಾ ಪರ್ಜನ್ಯನ) ಅಡಗಿದ ಬಲದಿಂದ ಈ ಮೇಲೆ ಹೇಳಿದ ಕಾರ್ಯಗಳೆಲ್ಲವೂ ನಡೆಯುವಂತೆ ಮಾಡುತ್ತಾರೆ. ಆದ್ದರಿಂದ ಈ 'ಮಾಯೇ' ಎಂಬ ಪದವು ದೇವತೆಗಳಲ್ಲಿ ಮುಖ್ಯವಾಗಿ ವರುಣನಿಗೇ ಹೇಳಿದೆ. (೬-೪೮-೧೪; ೭-೨೮-೪; ೧೦-೯೯-೧೦; ೧೦-೧೪೭-೫)

ಇಂದ್ರನ ಸಂಬಂಧವಾದ ಕಥೆಗಳು ಅನೇಕ ಇವೆ. ಆದರೆ ವರುಣನ ವಿಷಯದಲ್ಲಿ ಇದಕ್ಕೆ ತೀರಾ ವಿರುದ್ಧವಾಗಿದೆ. ಒಂದಾದರೂ ಕಥೆಗಳಿಲ್ಲ. ಭೌತಿಕ ಮತ್ತು ನೈತಿಕ ವಿಧಿಗಳ ನಿಯಾಮಕನೆಂದು ಬಹಳವಾಗಿ ಹೊಗಳಿದೆ. ಪ್ರಕೃತಿ ನಿಯಮಗಳನ್ನು ವಿಧಿಸುವವನು ವರುಣನು. ಅವನೇ ಭೂಮಿ ಮತ್ತು ಸ್ವರ್ಗಗಳನ್ನು ಸ್ಥಾಪಿಸಿದನು. ಮತ್ತು ಎಲ್ಲಾ ಲೋಕಗಳಲ್ಲಿಯೂ ವಾಸಿಸುತ್ತಾನೆ (೮-೪೨-೧) ಮೂರು ಊರ್ಧ್ವಲೋಕಗಳು ಮತ್ತು ಮೂರು ಭೂಲೋಕಗಳು ಅವನಲ್ಲಿವೆ (೭-೮೭-೫) ವರುಣ ಮತ್ತು ಮಿತ್ರರು ಪ್ರಪಂಚವೆಲ್ಲವನ್ನೂ ಆಳುತ್ತಾರೆ (೫-೬೩-೭) ಅಥವಾ ಎರಡು ಲೋಕಗಳನ್ನು ಸುತ್ತುವರೆಯುತ್ತಾರೆ (೭-೬೧-೪). ಅವರೇ ಸಮಸ್ತ ಜಗತ್ತಿಗೂ ರಕ್ಷಕರು (೨-೨೭-೪ ಇತ್ಯಾದಿ) ವರುಣನ ಆಪ್ಣೆಯಿಂದಲೇ ಸ್ವರ್ಗ ಮತ್ತು ಭೂಮಿಗಳನ್ನು ಬೇರೆ ಬೇರೆ ಇಟ್ಟಿರುವುದು. (೬-೭೦-೧; ೭-೮೬-೧; ೮-೪೧-೧೦) ಮಿತ್ರನ ಸಹಾಯದಿಂದ, ವರುಣನು ಸ್ವರ್ಗ ಭೂಮಿಗಳಿಗೆ (೫-೬೨-೩) ಅಥವಾ ಸ್ವರ್ಗ, ಭೂಮಿ ಮತ್ತು ಆಕಾಶಗಳಿಗೆ ಆಧಾರಭೂತನಾಗಿದ್ದಾನೆ. (೫-೬೯-೧ ಮತ್ತು ೪) ಆಕಾಶದಲ್ಲಿ ಬಂಗಾರದ ಚಂಡು (ಸೂರ್ಯನು) ಪ್ರಕಾಶಿಸುವಂತೆ ಮಾಡಿದ್ದಾನೆ (೭-೮೭-೫). ಅವನು ಉದಕದಲ್ಲಿ ಅಗ್ನಿಯನ್ನೂ, ಆಕಾಶದಲ್ಲಿ ಸೂರ್ಯನನ್ನೂ, ಕೆಲ್ಲಿನಮೇಲೆ ಸೋಮವನ್ನೂ ಇಟ್ಟಿದ್ದಾನೆ (೫-೮೫-೨). ಸೂರ್ಯನಿಗೋಸ್ಕರ ಅಗಲವಾದ ದಾರಿಯನ್ನು ಮಾಡಿದ್ದಾನೆ. (೧-೨೪-೮; ೭-೮೭-೧) ವರುಣ, ಮಿತ್ರ ಮತ್ತು ಅರ್ಯಮರು ಸೂರ್ಯನಿಗೋಸ್ಕರ ದಾರಿಯನ್ನು ಬಿಡಿಸುತ್ತಾರೆ(೭-೬೦-೪). ಸೂರ್ಯನ ಅಶ್ವಗಳು ಓಡುವ ಸ್ಥಳಗಳಲ್ಲೆಲ್ಲಾ, ಮಿತ್ರ ಮತ್ತು ವರುಣರ ಅಧಿಕಾರವು ಸ್ಥಾಪಿತವಾಗುತ್ತದೆ(೫-೬೨-೧). ಆಕಾಶದಲ್ಲಿ ಶಬ್ದಮಾಡುತ್ತಾ ಬೀಸುವ ಗಾಳಿಯೇ ವರುಣನ ಉಸಿರು (೭-೮೭-೨).

ವರುಣನ ಆಪ್ಣೆಗಳಿಂದಲೇ (ವ್ರತಾನಿ), ಚಂದ್ರನು ರಾತ್ರಿಯವೇಳೆ ಪ್ರಕಾಶಿಸುತ್ತಾನೆ ಮತ್ತು ಅಂತರಿಕ್ಷದಲ್ಲಿ ಬಹಳ ಮೇಲೆ ಇರುವ ನಕ್ಷತ್ರಗಳು ರಾತ್ರಿ ಕಾಲದಲ್ಲಿ ಮಾತ್ರ ಕಾಣಿಸಿಕೊಂಡು, ಹಗಲು ಮರೆಯಾಗುತ್ತವೆ. (೧-೨೪-೧೦). ವರುಣನು ರಾತ್ರಿಗಳನ್ನು ಅಲಂಗಿಸಿಕೊಳ್ಳುತ್ತಾನೆ (ಪರಿಷಸ್ವಜೇ); ತನ್ನ ಗೂಢವಾದ ಶಕ್ತಿಯಿಂದಲೇ, ಪ್ರಾತಃಕಾಲ ಅಥವಾ ಹಗಲು (ಉಸ್ರಾಃ) ಆಗುವಂತೆ ಮಾಡುತ್ತಾನೆ (೮-೪೧-೩) ಇದರಿಂದ ವರುಣನಿಗೂ ರಾತ್ರಿಗೂ ಇರುವ ಸಂಬಂಧವು, ಅವನಿಗೂ ಹಗಲಿಗೂ ಇರುವುದಕ್ಕಿಂತ ಹೆಚ್ಚು ಸಮೀಪವಾದುದೆಂದು ಸೂಚಿತವಾಗುವುದಿಲ್ಲ. ನಿಜವಾಗಿ ನೋಡಿದರೆ ವರುಣನ ಜೊತೆಯಲ್ಲಿ ಯಾವಾಗಲೂ ಇರುವವನು ಸೂರ್ಯನೇ ಹೊರತು, ರಾತ್ರಿ ಅಥವಾ ಚಂದ್ರರಲ್ಲ. ಒಟ್ಟನೆಲ್ಲಿ ವರುಣನೇ ಹಗಲಿನ ಬೆಳಕಿಗೂ ಮತ್ತು ರಾತ್ರಿಯ ಬೆಳಕಿಗೂ ನಿಯಾಮಕನು. ಆದರೆ ಸೂರ್ಯನು (ಮಿತ್ರನು) ಹಗಲಿನ ಬೆಳಕಿಗೆ ಮಾತ್ರ ನಿಯಾಮಕನು

ಬ್ರಾಹ್ಮಣಗಳಲ್ಲಿ, ವರುಣನಿಗೂ ರಾತ್ರಿಗೂ ಅಥವಾ ರಾತ್ರಿಯ ಕಾಲದ ಆಕಾಶಕ್ಕೂ ವಿಶೇಷ ಸಂಬಂಧ ಹೇಳಿದೆ. ಮಿತ್ರನು ಹಗಲನ್ನೂ, ವರುಣನು ರಾತ್ರಿಯನ್ನೂ ಸೃಜಿಸಿದನು (ತೈ. ಸಂ. ೬-೪-೮-೩); ಹಗಲು

ಮಿತ್ರನಿಗೂ, ರಾತ್ರಿ ವರುಣನಿಗೂ ಸೇರಿದುದು (ತೈ. ಸಂ.೨-೧-೭-೪) ಶತಪಥಬ್ರಾಹ್ಮಣದಲ್ಲಿ ಭೂಲೋಕವು ಮಿತ್ರನೆಂದೂ, ಸ್ವರ್ಗಲೋಕವು ವರುಣನೆಂದೂ ಸ್ಪಷ್ಟವಾಗಿ ಹೇಳಿದೆ.

ಒಂದೊಂದು ಸ್ಥಳದಲ್ಲಿ ವರುಣನು ಋತುಗಳನ್ನು ವಿಭಜಿಸಿದನೆಂದು ಹೇಳಿದೆ. ಅವನಿಗೆ ಹನ್ನೆರಡು ತಿಂಗಳುಗಳೂ ತಿಳಿದಿವೆ (೧-೨೫-೪); ಮಿತ್ರ ವರುಣ ಮತ್ತು ಅರ್ಯಮರು ಶರತ್ಕಾಲ, ತಿಂಗಳು, ಹಗಲು ಮತು, ರಾತ್ರಿಗಳನ್ನು ವಿಂಗಡಿಸಿದರು (೭-೬೬-೧೧).

ಉದಕವನ್ನು ಕ್ರಮಪಡಿಸುವವನೂ ಅವನೇ ಎಂದು ಅನೇಕ ಕಡೆ ಹೇಳಿದೆ. ನದಿಗಳು ಹರಿಯುವಂತೆ ಮಾಡಿದವನೂ ಅವನೇ ; ಅವನ ಅಪ್ಪಣೆಮೇರೆಯೇ ಆವುಗಳು ಸತತವಾಗಿ ಪ್ರವಹಿಸುತ್ತವೆ (೨-೨೮-೪). ನದಿಗಳು ವೇಗವಾಗಿ ಸಮುದ್ರದೊಳಕ್ಕೆ ನೀರುತಂದು ಸುರಿಯುತ್ತಿದ್ದರೂ, ಅದನ್ನು ತುಂಬದಿರುವುದು ಅವನ ಹುದುಗಿದ ಶಕ್ತಿಯಿಂದಲೇ (೫-೮೫-೬). ವರುಣ ಮತ್ತು ಮಿತ್ರರು ನದಿಗಳ ಒಡೆಯರು (೭-೬೪-೨). ವರುಣನು ಸಾಗರಗಳಿಗೆ ಒಡೆಯನೆಂಬುದು ಸಿದ್ಧವಾದ ಅಂಶವಾದರೂ, ಋಗ್ವೇದದಲ್ಲಿ ಬರುವುದು ಬಹಳ ಅಪರೂಪ. ಪ್ರಾಯಶಃ, ಇದು ಬಹಳ ಅಮುಖ್ಯವೆಂಬುದೇ ಇದಕ್ಕೆ ಕಾರಣವಿರಬಹುದು. ಸಮುದ್ರದ ನೀರಿನಲ್ಲಿ ಸೇರಿಹೋಗುವ ವರುಣನನ್ನು ಅಂತರಿಕ್ಷದಲ್ಲಿರುವ ಮರುತ್ತ್ಗಳು, ಭೂಮಿಯಲ್ಲಿರುವ ಅಗ್ನಿ ಮತ್ತು ವಾತಾವರಣದಲ್ಲಿರುವ ವಾಯು ಇವರಿಗೆ ಹೋಲಿಸಿದೆ (೧.೧೬೧-೧೪). ಏಳು ನದಿಗಳು, ಭೋರ್ಗರೆಯುತ್ತಿರುವ ಆಳವಾದ ಕಮರಿಯಂತಿರುವ, ವರುಣನ ಬಾಯೊಳಗೆ ಧುಮುಕುತ್ತವೆ (೮-೫೮-೧೨). ಎಂಬುದು ಸಾಗರಕ್ಕೇ ಅನ್ವಯಿಸಿರಬೇಕು. ವರುಣನು ಆಕಾಶದಂತೆ (ದ್ಯೌಃ) ಸಮುದ್ರದೊಳಕ್ಕೆ ಇಳಿಯುತ್ತಾನೆ (೭-೮೭-೬). ಸಾಧಾರಣವಾಗಿ, ವರುಣನಿಗೆ ಸಂಬಂಧ ಇರುವುದೆಲ್ಲಾ ವಾಯುಮಂಡಲದಲ್ಲಿ ಇರುವ ನೀರಿನೊಡನೆಯೇ. ಮರೆಮಾಡಿಕೊಂಡಿರುವ ಸಾಗರದಂತೆ, ವರುಣನು ಆಕಾಶಕ್ಕೆ ಏರುತ್ತಾನೆ (೮-೪೧-೮). ಮನುಷ್ಯರ ಸತ್ಯಾಸತ್ಯಗಳನ್ನು ನೋಡುತ್ತಾ, ಸಿಹಿಯಾಗಿ ತಿಳಿಯಾಗಿ ಹನಿಹನಿಯಾಗಿ ಕೆಳಕ್ಕೆ ಬೀಳುವ ನೀರಿನ ಮಧ್ಯದಲ್ಲಿ, ವರುಣನು ಸಂಚರಿಸುತ್ತಾನೆ (೭-೪೯-೩). ವರುಣನು ನೀರಿನ ಬಟ್ಟೆಯನ್ನೇ ಧರಿಸುತ್ತಾನೆ (೯-೯೦-೨; ೮-೬೯-೧೧ ಮತ್ತು ೧೨ಕ್ಕೆ ಹೋಲಿಸಿ) ವೃಷ್ಟಿಗಾಗಿ ಪ್ರಾರ್ಥಿಸಲ್ಪಡುವ ದೇವತೆಗಳಲ್ಲಿ ವರುಣ ಮತ್ತು ಮಿತ್ರರೇ ಪ್ರಮುಖರು. ಪರ್ವತಗಳೆಲ್ಲಾ ಮೋಡಗಳಿಂದ ಆವೃತವಾಗಿರುವಾಗ, ಬುಡನೇಲಾದ (ಮೋಡದಿಂದ) ಬಾನೆಯಿಂದ, ಸ್ವರ್ಗ, ಭೂಮಿ ಮತ್ತು ಆಕಾಶಗಳಿಗೆ ನೀರ್ಗರೆದು, ಭೂಮಿಯನ್ನೆಲ್ಲಾ ತೇವವಾಗಿ ಮಾಡುವವನು ವರುಣನು, (೫-೮೫-೩ ಮತ್ತು ೪). ಮಿತ್ರ ಮತ್ತು ವರುಣರ ಹತ್ತಿರ, ಕ್ಷೀರಪ್ರದವಾದ ಗೋವುಗಳು ಮತ್ತು ಜೇನುತುಪ್ಪದ ನದಿಗಳು ಇವೆ (೫-೬೯-೨). ಮಳೆಯಿಂದ ಯುಕ್ತವಾದ ಆಕಾಶ ಮತ್ತು ಪ್ರವಹಿಸುತ್ತಿರುವ ನದಿಗಳೂ ಇವೆ (೫-೬೮-೫) ಹುಲ್ಲುಗಾವಲುಗಳನ್ನು ಘೃತದಿಂದ (ಮಳೆಯಿಂದ)ಲೂ ಮತ್ತು ಇತರ ಪ್ರದೇಶಗಳನ್ನು ಮಧುವಿನಿಂದಲೂ ನೆನೆಯಿಸುತ್ತಾರೆ (೩-೬೨-೧೬). ಅವರು ಆಕಾಶದಿಂದ ಮಳೆ ಮತ್ತು ದಣಿವಾರಿಸುವ ಪದಾರ್ಥಗಳನ್ನು ಕಳುಹಿಸುತ್ತಾರೆ (೭-೬೪-೨). ಸ್ವರ್ಗೀಯೋದಕದ ಮಳೆಯು ಅವರಿಂದಲೇ ಬರುತ್ತದೆ (೮-೨೫-೬). ಒಂದು ಇಡೀ ಸೂಕ್ತವೇ ಅವರ ಮಳೆಗರೆಯುವ ಶಕ್ತಿಯನ್ನು ಸ್ತುತಿಸುತ್ತದೆ (೫-೬೩) ಅಂತರಿಕ್ಷದ ಮತ್ತು ಸ್ವರ್ಗದ ದೇವತೆಗಳ ಪಟ್ಟಿಗಳೆರಡರಲ್ಲಿಯೂ ವರುಣನ ಹೆಸರು ಬಂದಿರುವುದಕ್ಕೆ, ಅವನಿಗೆ ನೀರು ಮತ್ತು ಮಳೆಯೊಡನಿರುವ ನಿಕಟಸಂಬಂಧವೇ ಕಾರಣವಿರಬೇಕು. ಬ್ರಾಹ್ಮಣಗಳಲ್ಲಿ, ಮಿತ್ರಾವರುಣರೂ ಮಳೆಯ ದೇವತೆಗಳು. ಅಥರ್ವವೇದದಲ್ಲಿ ವರುಣನಿಗೆ ಸಂರಾಜತ್ವ ಹೇಳಿಲ್ಲ ; ಆದರೆ, ನೀರಿನಮೇಲಿರುವ ಅಧಿಕಾರಮಾತ್ರ ಹಾಗೆಯೇ ಉಳಿದಿದೆ. ಸೋಮನಿಗೆ ಪರ್ವತದೊಡನೆ ಬಾಂಧವ್ಯವಿರುವಂತೆ ವರುಣನಿಗೆ ನೀರಿನ ಬಾಂಧವ್ಯ (ಅ. ವೇ. ೪-೧೫-೧೨). ಅವನ ಬಂಗಾರದ ಮನೆಯು ನೀರಿನಲ್ಲಿದೆ (ಅ. ವೇ.

೭-೮೩-೧). ಅವನು ನೀರಿಗೆಲ್ಲಾ ಒಡೆಯನು; ಅವನು ಮತ್ತು ಮಿತ್ರರು ಮಳೆಯ ಒಡೆಯರು (ಅ. ವೇ. ೫-೨೪-೪ ಮತ್ತು ೫). ಯಜುರ್ವೇದದಲ್ಲಿ ಅವನು ಮಳೆಯ ಶಿಶುವೆಂದೂ, ತಾಯಿಯಂತಿರುವ ನೀರಿನಲ್ಲಿ ಮನೆ ಮಾಡಿಕೊಂಡಿರುವನೆಂದೂ (ವಾ. ಸಂ. ೧೦-೭) ಹೇಳಿದೆ. ನೀರುಗಳು ವರುಣನ ಪತ್ನಿಯರು (ತೈ. ಸಂ. ೫-೫-೪-೧) ಮಿತ್ರ ಮತ್ತು ವರುಣರು ನೀರಿಗೆ ನಾಯಕರು (ತೈ. ಸಂ. ೬-೪-೩-೨).

ವರುಣನ ಶಾಸನಗಳು ಚೆನ್ನಾಗಿ ಸ್ಥಾಪಿತವಾಗಿವೆಯೆಂದು ಪದೇಪದೇ ಹೇಳಲ್ಪಟ್ಟಿದೆ. ಈ ಕಾರಣದಿಂದಲೇ ಅವನಿಗೆ ಧೃತವ್ರತ ಎಂದು ಹೆಸರು. ಮಿತ್ರಾವರುಣರಿಗಿಬ್ಬರಿಗೂ ಈ ವಿಶೇಷಣವು ಸಂದಿದೆ. ದೇವತೆಗಳೇ ವರುಣನ (೮-೪೧-೭), ಅಥವಾ ವರುಣ ಮಿತ್ರ ಮತ್ತು ಅರ್ಯಮರ ಆಜ್ಞೆಗಳನ್ನು ಪಾಲಿಸುತ್ತಾರೆ. ಅನಾದಿದೇವತೆಗಳೂ ಕೂಡ ಅವರ ಧೃತವ್ರತಗಳನ್ನು ಮೀರಲಾರರು (೫-೬೯-೪; ೫-೬೩-೭ನ್ನು ಹೋಲಿಸಿ) ಮಿತ್ರವರುಣರು ನಿಯಮ (ಋತ) ಮತ್ತು ಬೆಳಕಿಗೆ ನಿಯಾಮಕರು. ಈ ಶಾಸನಗಳ ಬಲದಿಂದಲೇ ಅವರು ನಿಯಮಗಳಿಗೆ ಬೆಂಬಲಕೊಡಲು ಸಾಧ್ಯವಾಗಿದೆ (೧-೨೩ ೫). ಈ ಗುಣವು ವಿಶೇಷವಾಗಿ ಇವರಿಬ್ಬರಲ್ಲಿ ಒಂದೊಂದು ವೇಳೆ ಆದಿತ್ಯರಲ್ಲಿ ಅಥವಾ ಇತರ ಸಾಧಾರಣದೇವತೆಗಳಲ್ಲಿ ಕಂಡುಬರುತ್ತದೆ. ಅವರು (ಋತ) ಸತ್ಯ ಮತ್ತು ನ್ಯಾಯಸನ್ನು ಅಭಿವೃದ್ಧಿಗೊಳಿಸುವವರು (೧-೨-೮). ವರುಣ ಅಥವಾ ಆದಿತ್ಯರು ನಿಯಮಗಳ ರಕ್ಷಕರು (ಋತಸ್ಯಗೋಪಾಃ) ಎಂದು ಕರೆಯಲ್ಪಟ್ಟಿದ್ದಾರೆ. ಅಗ್ನಿ, ಸೋಮರಿಗೂ ಇದು ಅನ್ವಯಿಸಿದೆ. ಋತಾವನ್ (ನಿಯಮಗಳನ್ನು ಪಾಲಿಸುವವನು ಎಂಬ ವಿಶೇಷಣವು ಸಾಧಾರಣವಾಗಿ ಅಗ್ನಿಯ ವಿಷಯದಲ್ಲಿ ಪ್ರಯೋಗಿಸಿದೆ. ಮಿತ್ರಾವರುಣರಿಗೂ ಅನೇಕ ವೇಳೆ ಇದು ಪ್ರಯೋಗಿಸಿರುವುದು ಕಂಡುಬರುತ್ತದೆ.

ವರುಣನ ಶಕ್ತಿಯು ಅಗಾಧವಾದುದು; ಹಾರುವ ಪಕ್ಷಿಗಳಾಗಲೀ, ಹರಿಯುವ ನದಿಗಳಾಗಲೀ ಅವನ ರಾಜ್ಯದ ಗಡಿ ಮೇರೆಯನ್ನು ಸೇರಲಾರವು; ಅವನ ಶಕ್ತಿಯನ್ನು ಮೀರಲಾರವು; ಅವನ ಕೋಪವನ್ನು ತಡೆಯಲಾರವು (೧-೨೪-೬). ಮಿತ್ರವರುಣರ ಸೀಮೆಯನ್ನು ಆಕಾಶ ಮತ್ತು ನದಿಗಳೂ ಕೂಡ ತಲುಪಿಲ್ಲ. (೧-೧೫೧-೯). ಸಮಸ್ತವೂ ವರುಣನಲ್ಲಿಯೇ ಅಡಗಿವೆ; ಎಲ್ಲಾ ಪ್ರಾಣಿಗಳ ವಸತಿಗಳೂ ಅವನಲ್ಲಿಯೇ ಇವೆ (೮-೪೧ ಮತ್ತು ೭) ಮೂರು ಸ್ವರ್ಗಲೋಕಗಳೂ ಮತ್ತು ಮೂರು ಭೂಲೋಕಗಳೂ ಅವನಲ್ಲಿಯೇ ನಿಹಿತವಾಗಿವೆ (೭-೮೭-೫). ವರುಣನು ಸರ್ವಜ್ಞನು. ಆಕಾಶದಲ್ಲಿ ಪಕ್ಷಿಗಳ ಹಾರಾಟ, ಸಮುದ್ರದಲ್ಲಿ ನಾವೆಗಳ ಸಂಚಾರ ದೂರಗಾಮಿಯಾದ ವಾಯುವಿನಗತಿ, ಇವೆಲ್ಲವೂ ಅವನಿಗೆ ತಿಳಿದಿದೆ; ಹಿಂದೆ ಕಳೆದುಹೋದ ಅಥವಾ ಮುಂದೆ ಬರುವ ಎಲ್ಲ ಪದಾರ್ಥಗಳನ್ನೂ ಅವನು ನೋಡುತ್ತಾನೆ (೧-೨೫-೭,೯,೧೧) ಮನುಷ್ಯರ ಸತ್ಯಾಸತ್ಯಗಳ ಸಾಕ್ಷಿಯಾಗಿದಾನೆ (೭-೪೯-೩) ಅವನಿಲ್ಲದೆ ಪ್ರಾಣಿಗಳು ಕಣ್ಣುರೆಪ್ಪೆ ಕೂಡ ಮಿಟುಕಿಸಲಾರವು (೨-೨೮-೬) ಮನುಷ್ಯನ ನಿಮೇಷಗಳ ಸಂಖ್ಯೆಯು ಅವನಿಗೆ ಗೊತ್ತು; ಪ್ರತಿಯೊಬ್ಬ ಮನುಷ್ಯನು ಮಾಡುವ ಕಾರ್ಯಗಳು, ಯೋಚನೆಗಳು, ಉಪಾಯಗಳು, ಎಲ್ಲವೂ ವರುಣನಿಗೆ ತಿಳಿಯುತ್ತದೆ (ಅ. ವೇ. ೪-೧೬-೨ ಮತ್ತು ೫). ಸ್ವರ್ಗ ಮತ್ತು ಭೂಲೋಕಗಳಲ್ಲಿ ಮತ್ತು ಅವುಗಳಿಂದಾಚೆ ಇರುವುದೆಲ್ಲವನ್ನೂ ಅವನು ಗ್ರಹಿಸಬಲ್ಲನು; ಆಕಾಶದಾಚೆ ಎಷ್ಟೇ ದೂರ ಓಡಿಹೋದರೂ, ಯಾರೂ ವರುಣನ ದೃಷ್ಟಿಪಥವನ್ನು ಬಿಟ್ಟುಹೋಗಲಾಗುವುದಿಲ್ಲ (ಅ. ವೇ. ೪-೧೬-೪ ಮತ್ತು ೫). ಈ ಸರ್ವಜ್ಞತ್ವವು ವರುಣನ ವೈಯಕ್ತಿಕ ಗುಣವೆಂಬುವುದಕ್ಕೆ ಈ ವಿಷಯದಲ್ಲಿ ಅಗ್ನಿಯನ್ನು ಇವನಿಗೆ ಹೋಲಿಸಿರುವುದೇ ಆಧಾರ.

ನೀತಿನಿಯಾಮಕನಾಗಿ, ವರುಣನು ಇತರ ಎಲ್ಲಾ ದೇವತೆಗಳಿಗಿಂತ ಬಹಳ ಉತ್ತಮ ದರ್ಜೆಯಲ್ಲಿದ್ದಾನೆ. ಪಾಪವೆಂದರೆ ಅವನಿಗೆ ಬಹಳ ಕೋಪಬರುತ್ತದೆ; ಅವನ ನಿಯಮಗಳನ್ನುಲ್ಲಂಘಿಸಿದರೂ ಕೋಪ.

ಇವೆರಡಕ್ಕೂ ಅವನು ಬಹಳ ಕ್ರೂರ ಶಿಕ್ಷೆಯನ್ನು ವಿಧಿಸುತ್ತಾನೆ (೭-೮೬-೩ ಮತ್ತು ೪) ಪಾಪಿಗಳನ್ನು ಬಂಧಿಸುವ ಪಾಶವು ಅನೇಕ ಕಡೆ ಉಕ್ತವಾಗಿದೆ (೧-೨೪-೧೫; ೧-೨೫-೧೧; ೬-೭೪-೪; ೧೦-೮೫-೨೪) ಏಳು ಅಥವಾ ಮೂರು ಪದರವಾಗಿ ಹಾಕಲ್ಪಟ್ಟು, ಆ ಪಾಶವು ಅನೃತವಾದಿಯನ್ನು ಬಂಧಿಸುತ್ತದೆ; ಸತ್ಯವಾದಿಯನ್ನು ಬಿಟ್ಟು ಬಿಡುತ್ತದೆ (ಅ. ವೇ. ೪-೧೬-೬) ಅನೇಕ ಶೃಂಖಲೆಗಳನ್ನಿಟ್ಟುಕೊಂಡು, ಮಿತ್ರ ಮತ್ತು ವರುಣರು ಅನೃತನಿರೋಧಕರಾಗಿದ್ದಾರೆ (೭-೬೫-೩) ಇಂದ್ರಸಹಚರಿತನಾದ ವರುಣನು ಹಗ್ಗವಲ್ಲದ ಬಂಧನಗಳಿಂದ ಕಟ್ಟುತ್ತಾನೆ (೭-೮೪-೨) ಎಂದು ಒಂದು ಸ್ಥಳದಲ್ಲಿ ಹೇಳಿದೆ. ಇಡೀ ವೇದದಲ್ಲಿ ಒಂದೇ ಒಂದು ಕಡೆ, ಈ 'ಪಾಶ' ಎಂಬ ಪದ ಅಗ್ನಿದೇವತಾಕ ಮಂತ್ರದಲ್ಲಿ ಬಂದಿದೆ; ಅದೂ ಅವನ ಭಕ್ತರನ್ನು ಬಂಧಿಸುವ ಪಾಶವನ್ನು ಬಿಡಿಸು ಎಂದು ಪ್ರಾರ್ಥಿಸುವ ಸಂದರ್ಭದಲ್ಲಿ. ಆದ್ದರಿಂದ ಈ ಪಾಶಬಂಧನ ಮತ್ತು ಮೋಚನ ಕಾರ್ಯಗಳು ವರುಣನವೇ. ಕೆಲವರು ಈ ಪಾಶ ಮತ್ತು ಅದರಿಂದ ಬಂಧನವೆಂಬುದು ನೀರನ್ನು ಅಡ್ಡಗಟ್ಟುವುದಕ್ಕೆ ಸಂಬಂಧಿಸಿದು ದೆಂತಲೂ, ಮತ್ತೆ ಕೆಲವರು ರಾತ್ರಿ ಸಂಬಂಧವಾದ ಬಂಧನಗಳೆಂದೂ ಅಭಿಪ್ರಾಯಪಡುತ್ತಾರೆ. ಆದರೆ, ನೈತಿಕವಾಗಿ ಪತಿತರನ್ನು ಬಂಧಿಸುವ ಕಟ್ಟುಗಳು ಎಂದು ವ್ಯಂಗ್ಯವಾಗಿ ಹೇಳಿದೆಯೆನ್ನಬಹುದು. ಮಿತ್ರನಿಂದ ಕೂಡಿದ ವರುಣನು ಅನೃತವನ್ನು ಓಡಿಸುವವನು, ದ್ವೇಷಿಸುವವನು ಮತ್ತು ಶಿಕ್ಷಿಸುವವನು (೧-೧೫೨-೧; ೭-೬೦-೫; ೭-೬೬-೧೩). ಅವರು ತಮ್ಮ ಪೂಜೆಯ ವಿಷಯದಲ್ಲಿ ತಾತ್ಸಾರದಿಂದಿರುವವರನ್ನು ಶಿಕ್ಷಿಸುತ್ತಾರೆ (೧-೧೨೨-೯). ಆದರೆ ವರುಣನು ಪಶ್ಚಾತ್ತಾಪಪಡುವವರನ್ನು ಮನ್ನಿಸುತ್ತಾನೆ; ಹಗ್ಗದಂತೆ ಬಿಚ್ಚುತ್ತಾನೆ. ಮತ್ತು ಪಾಶ ಪರಿಹಾರ ಮಾಡುತ್ತಾನೆ (೨-೨೮-೫; ೫-೮೫-೭ ಮತ್ತು ೮) ಸ್ವತಃ ಮಾಡಿದ ಪಾಪದಿಂದ ಮಾತ್ರವಲ್ಲ, ಅವನ ಪೂರ್ವಿಕರು ಮಾಡಿದ ಪಾಪದಿಂದಲೂ, ಮನುಷ್ಯನನ್ನು ಬಿಡುಗಡೆ ಮಾಡುತ್ತಾನೆ (೭-೮೬-೫). ತನ್ನಿಂದ ವಿಧಿಸಲ್ಪಟ್ಟ ನಿಯಮಗಳನ್ನೇ ಪ್ರತಿನಿತ್ಯವೂ ಉಲ್ಲಂಘಿಸಿ, ಅನಂತರ ಪಶ್ಚಾತ್ತಾಪಪಡುವವರನ್ನೂ ಉಳಿಸಿಕೊಡುತ್ತಾನೆ (೧-೨೫-೧); ಮತ್ತು ತನ್ನ ಆಜ್ಞೆಗಳನ್ನು ವಿಸ್ಮೃತಿಯಿಂದ ಉಲ್ಲಂಘಿಸಿದವರಲ್ಲಿ ಕನಿಕರ ತೋರಿಸುತ್ತಾನೆ (೭-೮೯-೫). ಪ್ರಾಪಂಚಿಕ ಪದಾರ್ಥಗಳಿಗಾಗಿ ಪ್ರಾರ್ಥನೆಯಿಲ್ಲದ ಇತರ ದೇವತಾಕವಾದ ಸ್ತುತಿಯೇ ಇಲ್ಲವೆನ್ನಬಹುದು; ಅದೇರೀತಿ ಅಪರಾಧಕ್ಷಮಾಪ್ರಾರ್ಥನೆಯಿಲ್ಲದ ವರುಣದೇವತಾಕವಾದ ಮಂತ್ರವೇ ಇಲ್ಲ.

ವರುಣನಲ್ಲಿ ನೂರುಗಟ್ಟಲೆ, ಸಾವಿರಗಟ್ಟಲೆ ಔಷಧಿಗಳು ಇವೆ; ಅವನು ಮೃತ್ಯುವನ್ನು ದೂರಮಾಡುತ್ತಾನೆ ಮತ್ತು ಪಾಪವನ್ನೂ ಪರಿಹಾರಮಾಡುತ್ತಾನೆ (೧-೨೫-೯). ಅವನು ಪ್ರಾಣಾಪಹಾರ ಮಾಡಬಲ್ಲನು; ಜೀವದಾನವನ್ನೂ ಮಾಡಬಲ್ಲನು (೧-೨೪-೧೧; ೧-೨೫-೧೨; ೭-೮೮-೪; ೭-೮೯-೧). ನಿತ್ಯತ್ವವನ್ನು ರಕ್ಷಣೆ ಮಾಡುವುದರಲ್ಲಿ ಬಹಳ ಕುಶಲನು (೮-೪೨-೨). ಯೋಗ್ಯರಾದವರು ಅನಂದವಾಗಿ ರಾಜ್ಯವಾಳುತ್ತಿರುವ ಇಬ್ಬರು ರಾಜರನ್ನು — ವರುಣ ಮತ್ತು ಯಮರನ್ನು — ಅಮುಷ್ಮಿಕಲೋಕದಲ್ಲಿ ನೋಡಬಯಸುತ್ತಾರೆ (೧೦-೧೪-೭).

ಅವನ ಸ್ವರ್ಗಲೋಕದ ವಾಸಗೃಹದಲ್ಲಿ ಅವನೊಡನೆ, ಅವನ ಆರಾಧಕರು ವ್ಯವಹರಿಸುತ್ತಾರೆ. ಮಾನಸಿಕ ಚಕ್ಷುಸ್ಸಿನಿಂದ ಅವನನ್ನು ನೋಡುತ್ತಾರೆ (೫-೬೫-೧೪; ೭-೮೮-೨). ಅಂತಹವರೊಡನೆ ವರುಣನು ಸರಿಸಮಾನರಂತೆ ವರ್ತಿಸುತ್ತಾನೆ (೭-೮೮-೪-೬).

ವರುಣನ ನಿಜವಾದ ಸ್ಥಾನವೇನು, ಅವನ ಸ್ವಭಾವವೇನು ಎಂಬುದನ್ನು ತಿಳಿಯೋಣ. ಈವರೆಗೆ ತಿಳಿದಿರುವುದರಿಂದ ಇಷ್ಟು ನಿಶ್ಚಿತವಾಗುತ್ತದೆ. ವರುಣನೂ ಮಿತ್ರನೂ ಸೂರ್ಯನಿಗೆ ಸಂಬಂಧಿಸಿದವರು. ವರುಣನು ಮಿತ್ರನಿಗಿಂತ ಹೆಚ್ಚಾಗಿ ಸಂಬಂಧಪಡೆದಿದಾನೆ. ವರುಣನಿಗೆ ಹೋಲಿಸಿದರೆ, ಮಿತ್ರನಿಗೆ ವ್ಯಕ್ತಿತ್ವವೇ ಇಲ್ಲದಂತಾಗುವುದು. ಮಿತ್ರನು ಸೌರವ್ಯೂಹಕ್ಕೆ ಸೇರಿದ ದೇವತಾಗ್ರಹ. ವರುಣನು ಪ್ರಕೃತಿಯ ಬೇರೆ ಒಂದಂಶ

ವನ್ನು ಪ್ರತಿಬಿಂಬಿಸಬೇಕು. ವರುಣ ಪದಕ್ಕೆ ಮೂಲಭೂತವಾದ ವೃ ಧಾತುವಿಗೆ ಆವರಿಸು ಎಂದರ್ಥ ಅದರಿಂದ ವರುಣ ಎಂದರೆ ಆವರಿಸುವವನು ಅಥವಾ ಆವರಿಸುವುದು ಎಂದರ್ಥವಾಗುತ್ತದೆ. ಆದ್ದರಿಂದ ವರುಣ ಎಂಬುದರಿಂದ ಪರಿದೃಶ್ಯಮಾನವಾದ ಆಕಾಶದ ಗುಮ್ಮಟವನ್ನು ತೆಗೆದುಕೊಳ್ಳಬಹುದು. ವರುಣ ಪದದಿಂದ ಈ ವಸ್ತುವನ್ನು ತೆಗೆದುಕೊಂಡರೆ ವರುಣನಿಂದ ಕೃತವಾದ ಕಾರ್ಯಗಳೆಲ್ಲಕ್ಕೂ ಅವಕಾಶವಿರುತ್ತದೆ. ಸೂರ್ಯನಿಗಿಂತ ಬಹಳ ವಿಸ್ತಾರವಾದ ದೊಡ್ಡ ಪದಾರ್ಥ. ಸೂರ್ಯನಿಗೂ ವರುಣನಿಗೂ ನಿಕಟ ಬಾಂಧವ್ಯವಿದೆ; ಆಕಾಶವಿಲ್ಲದೇ ಸೂರ್ಯಮಂಡಲವನ್ನು ಚಿಂತಿಸುವ ಹಾಗೆಯೇ ಇಲ್ಲ; ಸೂರ್ಯನು ವರುಣನ ಕಣ್ಣು; ಈ ಕಣ್ಣು (ಸೂರ್ಯನು) ಪ್ರಪಂಚದಲ್ಲಿ ನಡೆಯುವುದೆಲ್ಲವನ್ನೂ ವರುಣನಿಗೆ ತಿಳಿಸುತ್ತದೆ; ವರುಣನು ದೂರದೃಷ್ಟಿಯುಳ್ಳವನು; ಹಗಲು ಮತ್ತು ರಾತ್ರಿ ವೇಳೆಗಳೆರಡರಲ್ಲಿಯೂ ಪ್ರಪಂಚವು ವರುಣನ ಲಕ್ಷ್ಯದಲ್ಲಿರುತ್ತದೆ; ಇತ್ಯಾದಿಗಳೆಲ್ಲವೂ ಹೊಂದುತ್ತವೆ. ಅಲ್ಲದೆ. ಇನ್ನಾವ್ಯವನಾದರೂ, ಆಕಾಶದಷ್ಟು ಸುಲಭವಾಗಿ ಸಂರಾಜತ್ವವನ್ನು ಪಡೆಯಲು ಸಾಧ್ಯವಿಲ್ಲ; ಏಕೆಂದರೆ, ಸೂರ್ಯನೇ ಮೊದಲಾದ ತೇಜೋರಾಶಿಗಳೆಲ್ಲ ಆಶ್ರಯವಾಗಿ ಭೂಮಿಗೆ ಬಹಳ ದೂರದಲ್ಲಿ, ಮೇಲುಗಡೆ ಇರುವ ಆಕಾಶವು, ಅಹರ್ನಿಶಿಯೂ ಚರಾಚರ ವಸ್ತುಗಳನ್ನು ಲಕ್ಷದಲ್ಲಿಟ್ಟುಕೊಂಡು, ಅನುಲಂಘನೀಯವಾದ ಶಾಸನಕರ್ತೃವಾದ ದೇವತೆ ಎಂದು ಊಹಿಸುವುದು ಕಷ್ಟವಾಗಲಾರದು.

ಮಿತ್ರ.

ಮಿತ್ರ ವತ್ತು ವರುಣರ ಸಾಹಚರ್ಯವು ಬಹಳ ಹೆಚ್ಚಾಗಿರುವುದರಿಂದ ಮಿತ್ರನೊಬ್ಬನೇ ದೇವತೆಯಾಗಿ ಉಳ್ಳ ಸೂಕ್ತ ಒಂದೇ ಒಂದು ಋಗ್ವೇದದಲ್ಲಿ (೩-೫೯) ಇದೆ. ಅಲ್ಲಿಯೂ ಆ ದೇವತೆಯ ಸ್ತುತಿಭಾಗವು ಬಹಳ ಅಸ್ಪಷ್ಟ; ಆದರೆ ಮೊದಲ ಒಂದು ಮಂತ್ರದಲ್ಲಿ ಮಾತ್ರ ಮಿತ್ರನ ವೈಶಿಷ್ಟ್ಯವೊಂದು ಉಕ್ತವಾಗಿದೆ. ಶಬ್ದಮಾಡುತ್ತಾ (ಬ್ರುವಾಣಃ), ಮನುಷ್ಯರನ್ನೆಲ್ಲಾ ಒಟ್ಟಾಗಿ ಸೇರಿಸಿ (ಯಾತಯತಿ), ಉಳಶ್ತಿರುವವನ್ನು ಅನಿಮಿಷನಾಗಿ ನೋಡುತ್ತಾನೆ. ಈ ಅನಿಮಿಷಾ ಎಂಬುದು ಮಿತ್ರಾವರುಣರಿಬ್ಬರಿಗೂ (೭-೬೦-೬) ಹೇಳಿದೆ.

ಮತ್ತೊಂದೆಡೆಯಲ್ಲಿಯೂ ಇದೇ ಪದಗಳು (ಶಬ್ದಮಾಡುತ್ತಾ ಮನುಷ್ಯರನ್ನು ಒಟ್ಟಾಗಿ ಸೇರಿಸುತ್ತಾನೆ) ಮಿತ್ರನಿಗೆ ಹೇಳಲ್ಪಟ್ಟಿವೆ (೭-೩೬-೨) ಅಲ್ಲೇ ವರುಣನನ್ನು ಮಹಾಬಲಿಷ್ಠನೂ, ನಿರವದ್ಯನೂ ಆದ ಮಾರ್ಗದರ್ಶಕನೆಂದು ಕರೆದಿದೆ. ಮತ್ತೊಂದೆಡೆಯಲ್ಲಿ (೫-೮೨-೯) ಸೂರ್ಯದೇವತೆಯಾದ ಸವಿತೃವು ಎಲ್ಲಾ ಪ್ರಾಣಿಗಳೂ ತನ್ನ ಮಾತನ್ನು ಕೇಳುವಂತೆ ಮಾಡುತ್ತಾನೆ. ಮತ್ತು ಅವರನ್ನು ಒತ್ತಾಯಪಡಿಸುತ್ತಾನೆ ಎಂದಿರುವುದನ್ನು ನೋಡಿದರೆ, ಮಿತ್ರನು ಸೂರ್ಯದೇವತೆಗಳ ಗುಂಪಿಗೇ ಸೇರಿದವನೆಂದು ಊಹಿಸಬಹುದು. ಮಿತ್ರದೇವತಾಕವಾದ ಸೂಕ್ತದ ಐದನೆಯ ಮಂತ್ರದಲ್ಲಿ ಮನುಷ್ಯರನ್ನೆಲ್ಲಾ ಒಟ್ಟಾಗಿ ಸೇರಿಸುವ ಮಹನೀಯನಾದ ಆದಿತ್ಯನೆಂದು ಮಿತ್ರನನ್ನು ಕರೆದಿದೆ. ಈ (ಯಾತಯಜ್ಜನ) ಮನುಷ್ಯರನ್ನು ಒಟ್ಟಾಗಿ ಕಲೆ ಹಾಕುವುದು ಎಂಬುದು ಋಗ್ವೇದದಲ್ಲಿ ಇನ್ನು ಮೂರೇ ಸ್ಥಳಗಳಲ್ಲಿದೆ. (೫-೭೨-೨) ರಲ್ಲಿ ಆದು ಮಿತ್ರಾವರುಣರಿಗೂ, (೧-೧೩೬-೩) ರಲ್ಲಿ ಮಿತ್ರ, ವರುಣ, ಅರ್ಯಮರಿಗೂ ಮೂರನೆಯದಾದ (೮-೯೧-೧೨) ರಲ್ಲಿ ಅಗ್ನಿಗೂ ಹೇಳಿದೆ. ಕಡೆಯದರಲ್ಲಿ ಅಗ್ನಿಯನ್ನು ಮಿತ್ರನಂತೆ ಮನುಷ್ಯರನ್ನು ಒಟ್ಟಾಗಿ ಸೇರಿಸುವವನು ಎಂಬುದಾಗಿ ಮಿತ್ರನಿಗೆ ಹೋಲಿಸಿದೆ. ಆದ್ದರಿಂದ ಈ ವಿಶೇಷಣವು ಮಿತ್ರನಿಗೇ ಸಲ್ಲತಕ್ಕುದು. ಆದೇ ಸೂಕ್ತದ ಪ್ರಕಾರ ಮಿತ್ರನು ಸ್ವರ್ಗ ಮತ್ತು ಭೂಮಿಗಳಿಗೆ ಆಧಾರನಾಗಿದಾನೆ; ಮನುಷ್ಯರ ಐದು ಪಂಗಡಗಳು ಅವನಿಗೆ ವಿಧೇಯರಾಗಿದಾರೆ; ಇತರ ದೇವತೆಗಳಿಗೆಲ್ಲಾ ಜೀವನಾಧಾರನಾಗಿದಾನೆ. ಒಂದು ಕಡೆ ಅವರಿಂದ ವಿಹಿತವಾದ ವಿಧಿಗಳ ದೃಷ್ಟಿಯಿಂದ ಸವಿತೃ ಮತ್ತು ಮಿತ್ರರು ಒಂದೇ (೫-೮೧-೪) ಎಂದೂ ಮತ್ತೊಂದು ಕಡೆ (ವಾ. ೪.೩) ಮಿತ್ರನ ನಿಯಮಗಳನ್ನನುಸರಿಸಿಯೇ

ವಿಷ್ಣುವು ಮೂರು ಹೆಜ್ಜೆಗಳನ್ನು ಇಟ್ಟನೆಂದೂ ಇದೆ. ಇವೆರಡರಿಂದ ಮಿತ್ರನು ಸೂರ್ಯರಥವನ್ನು ಸರಿಪಡಿಸುತ್ತಾನೆ ಎಂದು ಹೇಳಬಹುದು. ಉಷಃಕಾಲಕ್ಕೆ ಮುಂಚೆ ಸ್ಥಾಪಿತನಾದ ಅಗ್ನಿಯು ಮಿತ್ರನನ್ನು ತಾನೇ, ತನ ಗೋಸ್ಕರ, ಉತ್ಪತ್ತಿ ಮಾಡುತ್ತಾನೆ (೧೦-೮-೪) ; ದೀಪ್ತನಾದ ಅಗ್ನಿಯೇ ಮಿತ್ರನು (೩-೫-೪) ; ಅಗ್ನಿಯು ಜನಿತನಾದಾಗ ವರುಣನು ; ದೀಪ್ತನಾದಾಗ ಮಿತ್ರನು (೫-೩-೧). ಸೂರ್ಯೋದಯದ ಮಿತ್ರನಿಗೂ ಸಾಯಂಕಾಲದ ವರುಣನಿಗೂ ವ್ಯತ್ಯಾಸವಿದೆ (ಅ. ವೇ. ೧೩-೩-೧೭) ; ರಾತ್ರಿಯಲ್ಲಿ ವರುಣನಿಂದ ಆಚ್ಛಾದಿತವಾದುದನ್ನು ಅನಾವರಣ ಮಾಡಬೇಕೆಂದು ಮಿತ್ರನು ಪ್ರಾರ್ಥಿತನಾಗಿದಾನೆ (ಅ. ವೇ. ೯-೩-೧೪). ಬ್ರಾಹ್ಮಣಗಳಲ್ಲಿ ವರುಣನನ್ನು ರಾತ್ರಿಯ ದೇವತೆಯೆಂದೂ, ಮಿತ್ರನನ್ನು ಹಗಲಿನ ದೇವತೆಯೆಂದೂ ಹೇಳಿರುವುದನ್ನು ಈ ವಾಕ್ಯಗಳು ಸಮರ್ಥಿಸುತ್ತವೆ. ಇದೇ ಅಭಿಪ್ರಾಯವು ಯಾಗಗಳ ವಿವರಣೆಯಲ್ಲಿಯೂ ವ್ಯಕ್ತವಾಗಿದೆ. ಅಲ್ಲಿ ಮಿತ್ರನಿಗೆ ಶ್ವೇತ ವರ್ಣದ ಪಶುವನ್ನೂ, ವರುಣನಿಗೆ ಕೃಷ್ಣವರ್ಣದ ಪಶುವನ್ನೂ ಬಲಿಕೊಡಬೇಕೆಂದು ವಿಧಿಸಿದೆ (ತೈ. ಸಂ. ೨-೧-೭-೪ ; ೨-೧-೯-೧ ವೈ. ಸಂ. ೨-೫-೭) ಆದುದರಿಂದ ಮಿತ್ರನು ಸೂರ್ಯದೇವತೆಯೆಂದೇ ಹೇಳಬಹುದು.

ಈ ಪದದ ನಿಷ್ಪತ್ತಿಯೂ ಸ್ಪಷ್ಟವಾಗಿಲ್ಲ. ಈ ಪದವನ್ನು ಸ್ನೇಹಿತ ಎಂಬರ್ಥದಲ್ಲಿ ಅನೇಕ ಸ್ಥಳಗಳಲ್ಲಿ ಪ್ರಯೋಗಿಸಿದೆ. ಪ್ರಾಯಶಃ ಸೂರ್ಯದೇವತೆಯು ಮನುಷ್ಯರಿಗೆ ನಾನಾ ವಿಧದಲ್ಲಿ ಉಪಕಾರಿ ಎಂಬಂಶವು ಈ ಮಿತ್ರನಿಂದ ಅಭಿವ್ಯಕ್ತವಾಗಿದೆ.

ಸೂರ್ಯ.

ಋಗ್ವೇದದಲ್ಲಿ ಹತ್ತು ಸೂಕ್ತಗಳು ಸೂರ್ಯನನ್ನು ಸ್ತುತಿಸುತ್ತವೆ. ಎಷ್ಟುಸಲ ಈಪದ ಪ್ರಯೋಗವಿದೆಯೆಂಬುದನ್ನೂ, ದೇವತೆಯನ್ನು ಸೂಚಿಸುತ್ತದೆಯೋ, ಅಥವಾ ಸೂರ್ಯಬಿಂಬವನ್ನು ಸೂಚಿಸುತ್ತದೆಯೋ ಎಂಬುದನ್ನೂ ನಿರ್ಧರವಾಗಿ ಹೇಳಲಾಗುವುದಿಲ್ಲ. ಸೂರ್ಯನಷ್ಟು ಇಂದ್ರಿಯ ಗೋಚರವಾದ ದೇವತೆ ಯಾವುದೂ ಇಲ್ಲ. ಆಕಾಶದಲ್ಲಿರುವ ಸೂರ್ಯನ ಬೆಳಕೇ ಅಗ್ನಿಯಮುಖ (೧೦-೭-೩). ಸೂರ್ಯನ ನೇತ್ರವು ಅನೇಕ ಕಡೆ ಉಕ್ತವಾಗಿದೆ (೫-೪೦-೪ ಇತ್ಯಾದಿ), ಆದರೆ ಅವನೇ, ಮಿತ್ರ ಮತ್ತು ವರುಣರ (೭-೬೬-೧೦) ಮತ್ತು ಅಗ್ನಿಯ ಕಣ್ಣೆಂದೂ ಕರೆಯಲ್ಪಟ್ಟಿದ್ದಾನೆ (೧-೧೧೫-೧) ; ಒಂದು ಸಲ. ಉಷೋದೇವತೆಯು ದೇವತೆಗಳಿಗೆಲ್ಲಾ ಕಣ್ಣನ್ನು ತರುತ್ತದೆ (೭-೭೭-೩) ಸೂರ್ಯನಿಗೂ ನೇತ್ರೇಂದಿಯಕ್ಕೂ ನಿಕಟ ಬಾಂಧವ್ಯವಿದೆ. ಮೃತನಾದ ಮನುಷ್ಯನ ನೇತ್ರೇಂದ್ರಿಯವು ಸೂರ್ಯನನ್ನು ಸೇರುತ್ತದೆ ಎಂದು ಹೇಳಿದೆ (೧೦-೧೬-೩ ; ೧೦-೯೦-೩ ಮತ್ತು ೧೦-೧೫೮-೩,೪ ಗಳನ್ನು ಹೋಲಿಸಿ.) ಸೂರ್ಯನು ನೇತ್ರೇಂದ್ರಿಯಗಳಿಗೆಲ್ಲಾ ಒಡೆಯ (ಅ. ವೆ. ೫-೨೪-೯) ; ಪ್ರಾಣಿಗಳೆಲ್ಲರಿಗೂ ಕಣ್ಣಾಗಿ ಆಕಾಶ, ಭೂಮಿ, ನೀರು, ಇವುಗಳಿಗೆಲ್ಲಾ ಆಚೆ ನೋಡುತ್ತಾನೆ (ಅ. ವೇ. ೧೩-೧೪-೫). ಅವನು ದೂರದರ್ಶಿ (೭-೫೫-೪ ; ೧೦-೩೭-೧) ; ಸರ್ವದರ್ಶಿ (೧-೫೦-೨) ; ಎಲ್ಲ ಪ್ರಪಂಚದ ಗೂಢಚಾರಿ (೪.೧೩-೩) ; ಜಂಗಮ ಪ್ರಪಂಚವನ್ನೂ, ಮಾನವರು ಮಾಡುವ ಒಳ್ಳೆಯ ಮತ್ತು ಕೆಟ್ಟ ಕೆಲಸಗಳನ್ನೂ ನೋಡುತ್ತಾನೆ (೧-೫೦-೭ ; ೬-೫೧-೨ ; ೭-೬೦-೨ ; ೭-೬೧-೧ ; ೭-೬೩-೧,೪). ಸೂರ್ಯನಿಂದ ಎಚ್ಚರಿಸಲ್ಪಟ್ಟು, ಮನುಷ್ಯರು ತಮ್ಮ ಕೆಲಸಕಾರ್ಯಗಳನ್ನು ಮಾಡುತ್ತಾರೆ (೭-೬೩-೪). ಎಲ್ಲಾ ಮನುಷ್ಯರಿಗೂ ಸೇರಿದವನು ಅವರನ್ನು ಎಚ್ಚರಿಸುತ್ತಾ ಉದಯಿಸುತ್ತಾನೆ (೭-೬೩-೨,೩) ಚರಾಚರ ವಸ್ತುಗಳಿಗೆಲ್ಲಾ ಅವನೇ ಆತ್ಮ, ಅವನೇ ರಕ್ಷಕ (೧-೧೧೫-೧ ; ೭-೬೦-೨) ಅವನ ರಥಕ್ಕೆ, ಒಂದೇ ಕುದುರೆ (೭-೬೩-೨). ಅಥವಾ ಅಸಂಖ್ಯಾತ ಅಶ್ವಗಳು (೧-೧೧೫-೩ ; ೧೦-೩೭-೩ ; ೧೦-೪೯-೭), ಅಥವಾ ಹೆಣ್ಣು ಕುದುರೆಗಳು (೫-೨೯-೫), ಅಥವಾ ಏಳು ಕುದುರೆಗಳು (೫-೪೫-೯), ಅಥವಾ ಏಳು ಹೆಣ್ಣು ಕುದುರೆಗಳು (ಹರಿತಃ ಎಂಬವು) (೧-೫೦-೮ ಮತ್ತು ೯ ; ೭-೬೦-೩), ಅಥವಾ ಏಳು ಶೀಘ್ರಗಾಮಿಗಳಾದ ಹೆಣ್ಣು ಕುದುರೆಗಳು (೪-೧೩-೩).

ವರುಣನು ಸೂರ್ಯನಿಗೋಸ್ಕರ ಅವನ ಪಥವನ್ನು ಸಿದ್ಧಪಡಿಸುತ್ತಾನೆ (೧-೨೪-೮ ; ೭-೮೭-೧), ಅಥವಾ ಮಿತ್ರ, ವರುಣ ಮತ್ತು ಅರ್ಯಮರೆಂಬ ಆದಿತ್ಯರು ಸಿದ್ಧಪಡಿಸುತ್ತಾರೆ (೭-೬೦-೪). ಪೂಷಣನು ಅವನ ದೂತನು (೬-೫೮-೩). ಉಷಃಕಾಲ ಅಥವಾ ಉಷಃಕಾಲಗಳು ಸೂರ್ಯ, ಅಗ್ನಿ ಮತ್ತು ಯಾಗಗಳನ್ನು ಅನಾವರಣ ಮಾಡುತ್ತಾರೆ ಅಥವಾ ಉತ್ಪತ್ತಿ ಮಾಡುತ್ತಾರೆ ಅಥವಾ (೭-೮೦-೨ ; ೭-೭೮-೩). ಉಷೋದೇವಿಯ ಮಿಂಚಿನಿಂದ ಪ್ರಕಾಶಿಸುತ್ತಾ, ಹೊರಹೊರಡುತ್ತಾನೆ (೭-೬೩-೩). ಬೇರೆ ಒಂದು ದೃಷ್ಟಿಯಿಂದ ಉಷೋದೇವಿಯು ಸೂರ್ಯನ ಪತ್ನಿ (೭-೭೫-೫).

ಸೂರ್ಯನಿಗೆ ಅವನ ತಾಯಿಯ ಕಡೆಯಿಂದ (೧-೫೦-೧೨ ; ೧-೧೯೧-೯ ; ೮-೯೦-೧೧) ಆದಿತ್ಯ (ಅದಿತಿಯ ಮಗ) ಅಥವಾ ಆದಿತೇಯ (೧೦-೮೮-೧೧) ಎಂದು ಹೆಸರು. ಆದರೆ ಇವನೂ ಆದಿತ್ಯರೂ ಭಿನ್ನರು (೮-೩೫-೧೩,೧೫). ದ್ಯುದೇವತೆಯು ಅವನ ಜನಕನು (೧೦-೩೭-೧). ಅವನು ದೇವತೆಗಳಿಂದ ಜನಿಸಿದವನು. ಸಾಗರದಲ್ಲಿ ಅಡಗಿದ್ದ ಅವನನ್ನು ದೇವತೆಗಳು ಮೇಲಕ್ಕೆ ಎತ್ತಿದರು (೧೦-೭೨-೭). ಅಗ್ನಿಯ ರೂಪಾಂತರವಾಗಿ ದೇವತೆಗಳು ಅವನನ್ನು ಆಕಾಶದಲ್ಲಿ ಇಟ್ಟರು (೧೦-೮೮-೧೧). ಇವನು ವಿರಾಡ್ರೂಪದ ಪುರುಷನ ನೇತ್ರದಿಂದ ಉದ್ಭವಿಸಿದನೆಂದು (೧೦-೯೦-೩) ಒಂದು ಮತ. ದಿವಾಕರನು (ಸೂರ್ಯನು) ವೃತ್ರನಿಂದ ಉದ್ಭವಿಸಿದನು (ಅ.ವೇ. ೪-೧೦-೫).

ನಾನಾ ದೇವತೆಗಳು ಪ್ರತ್ಯೇಕ ಪ್ರತ್ಯೇಕವಾಗಿ ಸೂರ್ಯನ ಉತ್ಪತ್ತಿಗೆ ಕಾರಣರೆಂದು ಹೇಳಿದೆ. ಇಂದ್ರನು ಅವನನ್ನು ಜನಿಸುವಂತೆ ಮಾಡಿ (೨-೧೩-೪), ಆಕಾಶಕ್ಕೆ ಏರಿಸಿ, ಅಲ್ಲಿ ಪ್ರಕಾಶಿಸುವಂತೆ ಮಾಡಿದನು (೩-೪೪-೨; ೪-೭೮-೭). ಇಂದ್ರ-ವಿಷ್ಣುವು ಅವನ ಜನಕರು (೪-೯೯-೪). ಬೆಳಕಿನಿಂದೊಡಗೂಡಿದ ಸೂರ್ಯನನ್ನು ಇಂದ್ರ-ಸೋಮರು ಬೆಳೆಸಿದರು (೬-೭೨-೨); ಮಿತ್ರಾವರುಣರು ಅವನನ್ನು ಆಕಾಶದಲ್ಲಿ ಸ್ಥಾಪಿಸಿದರು (೪-೧೩-೨; ೫.೬೩-೪ ಮತ್ತು ೭). ಇಂದ್ರ ವರುಣರು ಅವನನ್ನು ಆಕಾಶಕ್ಕೆ ಏರಿಸಿದರು (೭-೮೨-೩). ಸೂರ್ಯನಲ್ಲಿ ಬೆಳಕು ಸೋಮನಿಂದ ನಿಹಿತವಾಯಿತು (೬-೪೪-೨೩ ; ೯-೯೭-೪೧) ; ಸೋಮನಿಂದಲೇ ಸೂರ್ಯನು ಜನಿಸಿದನು (೯-೯೬-೫ ; ೯-೧೧೦-೫) ; ಸೋಮದೇವತೆಯೇ ಸೂರ್ಯನು ಪ್ರಕಾಶಿಸುವಂತೆ ಮಾಡಿದನು (೯-೬೩-೭) ಅಥವಾ ಆಕಾಶದಲ್ಲಿ ಮೇಲೆ ಇರುವಂತೆ ಮಾಡಿದನು (೯-೧೦೭-೭). ಸೂರ್ಯನ ಕಾಂತಿಯನ್ನು ಬಹಳ ಮೇಲೆ ಸ್ಥಾಪಿಸಿದ್ದೂ (೧೦-೩-೨) ಮತ್ತು ಆಕಾಶಕ್ಕೆ ಏರುವಂತೆ ಮಾಡಿದುದೂ (೧೦-೧೫೬-೪) ಅಗ್ನಿಯೇ. ಸೃಷ್ಟಿಕರ್ತೃವಾದ ಧಾತೃವೇ ಸೂರ್ಯಚಂದ್ರರಿಬ್ಬರನ್ನೂ ರೂಪುಗೊಳಿಸಿದುದು (೧೦-೧೯೦-೩). ಅಂಗಿರಸರ ಯಾಗ ಕರ್ಮಗಳಿಂದ ಸೂರ್ಯನು ಆಕಾಶವನ್ನು ಏರಲು ಸಾಧ್ಯವಾಯಿತು (೧೦-೬೨-೩). ಸೂರ್ಯನ ಜನ್ಮಸಂಬಂಧವಾದ ಈ ವಾಕ್ಯಗಳಲ್ಲೆಲ್ಲಾ, ಕಾಂತಿಯುಕ್ತವಾದ ಸೂರ್ಯಮಂಡಲವನೇ ಸೂಚಿತವಾದಂತಿದೆ.

ಅನೇಕ ವಾಕ್ಯಗಳಲ್ಲಿ ಸೂರ್ಯನು ಆಂತರಾಳದಲ್ಲಿ ಹಾರಾಡುತ್ತಿರುವ ಪಕ್ಷಿಯೆಂದು ಭಾವಿಸಲ್ಪಟ್ಟಿದಾನೆ. ಅವನು ಒಂದು ಪಕ್ಷಿ (೧೦.೧೭೭-೧ ಮತ್ತು ೨), ಪುಷ್ಟವಾದ ಒಂದು ಪಕ್ಷಿ (೫-೪೭-೩) ; ಸೂರ್ಯನು ಹಾರುತ್ತಾನೆ (೧-೧೯೧-೯) ; ಹಾರುತ್ತಿರುವ ಗಿಡುಗನಿಗೆ ಹೋಲಿಸಿದೆ (೭-೬೩-೫) ; ಗಿಡುಗನೆಂದೇ ಕರೆದಿದೆ (೫-೪೫-೯). ಒಂದು ಕಡೆ ಅವನನ್ನು ವೃಷಭ ವತ್ತು ಪಕ್ಷಿ ಎಂತಲೂ (೫-೪೭-೩) ಇನ್ನೊಂದು ಕಡೆ ಬಣ್ಣಬಣ್ಣವ ಜುಕ್ಕೆಗಳುಳ್ಳ ವೃಷಭ (೧೦-೧೪೯-೧ ; ೫-೪೭-೩ನ್ನು ಹೋಲಿಸಿ) ಎಂತಲೂ, ಪಕ್ಷಿ ಎಂತಲೂ, ಕರೆಯುಲ್ಪಟ್ಟಿದಾನೆ. ಉಷೋದೇವಿಯಿಂದ ಅನೀತವಾದ, ಶ್ವೇತವರ್ಣದ ಮತ್ತು ಉಜ್ವಲವಾದ ಅಶ್ವವೆಂದೊಂದು ಕಡೆ (೭-೭೭-೩), ಸೂರ್ಯನ ಸವಾಶ್ವಗಳು ಅವನ ರಶ್ಮಿಗಳು (೪-೬೧-೧೬), ಏಕೆಂದರೆ ಈ ರಶ್ಮಿಗಳು ಅವನನ್ನು ಒಯ್ಯುತ್ತ (ವಹಂತಿ) ತರುತ್ತವೆ. ಅವನ ಏಳು ಹೆಣ್ಣು ಕುದುರೆಗಳು ಅವನ ರಥದ ಪುತ್ರಿಯರು (೧-೫೦-೯).

ಒಂದೊಂದು ಸಲ ಸೂರ್ಯನು ಜಡಪದಾರ್ಥವೆಂದೂ ಪರಿಗಣಿತನಾಗಿದಾನೆ. ಅವನು ಆಕಾಶದಲ್ಲಿರುವ ಒಂದು ರತ್ನ (೭-೬೩-೪; ೬-೫೧-೧೦ನ್ನು ಹೋಲಿಸಿ); ಆಕಾಶ ಮಧ್ಯದಲ್ಲಿ ಕೆತ್ತಿರುವ ನಾನಾ ವರ್ಣದ ಶಿಲೆ (೫-೪೭-೩; ಶತ. ಬ್ರಾ. ೬-೧-೨-೩ನ್ನು ಹೋಲಿಸಿ) ಅವನು ಒಂದು ಹೊಳೆಯುತ್ತಿರುವ ಆಯುಧ; ಅದನ್ನು ಮಿತ್ರಾವರುಣರು ಮಳೆ ಸೋಡಗಳಿಂದ ಮರೆ ಮಾಡುತ್ತಾರೆ (೫-೬೩-೪). ಅವನು ಮಿತ್ರಾವರುಣರ ಪವಿ ಎಂಬ ಆಯುಧ (೫-೬೨-೨), ಅಥವಾ ಅವರಿಬ್ಬರಿಂದ ಆಕಾಶದಲ್ಲಿ ನಿಹಿತವಾದ, ಉಜ್ವಲವಾದ ರಥ (೫-೬೩-೭) ಸೂರ್ಯನೇ ಒಂದು ಚಕ್ರ (೧-೧೭೫-೫; ೪-೩೦-೪). ಸೂರ್ಯನ ಚಕ್ರವು ಅನೇಕ ಕಡೆ (೪-೨೮-೨; ೫-೭೯-೧೦) ಉಕ್ತವಾಗಿದೆ.

ಸೂರ್ಯನು ಪ್ರಕಾಶಿಸುವುದು ಪ್ರಪಂಚಕ್ಕೋಸ್ಕರ (೭-೬೩-೧); ಮನುಷ್ಯರು ಮತ್ತು ದೇವತೆಗಳ ಗೋಸ್ಕರ (೧-೫೦-೫) ತನ್ನ ಕಾಂತಿಯಿಂದ ಕತ್ತಲನ್ನು ಓಡಿಸುತ್ತಾನೆ (೧೦-೩೭-೪) ಚರ್ಮದಂತೆ ತಮಸ್ಸನ್ನು ಸುರುಳಿಸುತ್ತಿ ಬಿಡುತ್ತಾನೆ (೭-೬೩-೧). ಚರ್ಮವೊಂದನ್ನು ಎಸೆಯುವಂತೆ, ಅವನ ಕಾಂತಿಯು ತಮಸ್ಸನ್ನು ನಿರಿನೊಳಕ್ಕೆ ಎಸೆಯುತ್ತದೆ. (೪-೧೩-೪) ಅಂಧಕಾರಕ್ಕೆ ಸಂಬಂಧಿಸಿದ ವ್ಯಕ್ತಿಗಳನ್ನೂ, ಮಾಟಗಾತಿಯರನ್ನೂ ಜಯಿಸುತ್ತಾನೆ (೧-೧೯೧-೮ ಮತ್ತು ೯; ೭-೧೦೪-೨೪ನ್ನು ಹೋಲಿಸಿ). ಸೂರ್ಯನ ಪ್ರಚಂಡವಾದ ತಾಪದ ವಿಷಯವಾದ ಉಕ್ತಿಗಳು ಎರಡು ಮೂರು ಮಾತ್ರ (೭-೭೪-೧೯; ೯-೧೦೭-೨೦). ಋಗ್ವೇದದಲ್ಲಿ ಸೂರ್ಯನು ಕ್ರೂರ ದೇವತೆಯಲ್ಲ, ಸೂರ್ಯನ ಈ ಅಂಶವು ಅಥರ್ವ ವೇದ ಮತ್ತು ಬ್ರಾಹ್ಮಣಗಳಲ್ಲಿ ಸ್ಪಷ್ಟವಾಗುತ್ತದೆ.

ಸೂರ್ಯನು ದಿನಮಾನವನ್ನು ಗೊತ್ತುಮಾಡುತ್ತಾನೆ (೧-೫೦-೭) ಮತ್ತು ಜೀವದ ಅವಧಿಯನ್ನು ಹೆಚ್ಚಿಸುತ್ತಾನೆ (೮-೪೮-೭) ರೋಗರುಜಿನಗಳನ್ನೂ, ಕೆಟ್ಟ ಕನಸುಗಳನ್ನೂ ನಿವಾರಿಸುತ್ತಾನೆ. (೧೦-೩೭-೪). ಸೂರ್ಯೋದಯ ದರ್ಶನವೇ ಜೀವನದ ಗುರಿ (೪-೨೫-೪; ೬-೫೨-೫). ಎಲ್ಲಾ ಪ್ರಾಣಿಗಳೂ ಸೂರ್ಯನನ್ನಾಶ್ರಯಿಸಿವೆ (೧-೧೬೪-೧೪). ಮತ್ತು ಆಕಾಶವೂ ಅವನನ್ನೇ ಆಶ್ರಯಿಸಿದೆ (೧೦-೪೫-೧). ಅವನಿಗೆ ಸರ್ವಕರ್ತನೆಂದೂ (ವಿಶ್ವಕರ್ಮ) ಹೆಸರು (೧೦-೧೭೦-೪). ಅವನ ಮಹತ್ವದಿಂದ, ಅವನು ದೇವತೆಗಳ ಪುರೋಹಿತನಾಗಿದಾನೆ (೪-೯೦-೧೨). ಉದಯಕಾಲದಲ್ಲಿ, ಮಿತ್ರಾವರುಣರು ಮತ್ತಿತರ ದೇವತೆಗಳಿಗೆ, ತಾವು ಪಾಪರಹಿತರೆಂದು ಹೇಳಬೇಕೆಂದು, ಮನುಷ್ಯರು ಸೂರ್ಯನನ್ನು ಪ್ರಾರ್ಥಿಸುತ್ತಾರೆ (೭-೬೦-೧; ೭-೬೨-೨). ಉದಿಸಿದ ಮೇಲೆ ವೃತ್ರನನ್ನು ವಧಿಸುವ ಇಂದ್ರನ ಹತ್ತಿರ ಹೋಗುತ್ತಾನೆ ಮತ್ತು ಇಂದ್ರನೊಡನೆ ಸ್ತುತಿಸಲ್ಪಟ್ಟಾಗ ಸೂರ್ಯನೇ ವೃತ್ರನನ್ನು ಕೊಲ್ಲುತ್ತಾನೆ ಎಂದೂ ಉಕ್ತವಾಗಿದೆ (೪-೪೨-೧, ೨ ಮತ್ತು ೪).

ಸೂರ್ಯ ಸಂಬಂಧವಾದ ಇತಿಹಾಸವು ಒಂದೇ. ಇಂದ್ರನು ಅವನನ್ನು ಪರಾಜಯಗೊಳಿಸಿ (೧೦-೪೩-೫). ಅವನ ರಥಚಕ್ರವನ್ನು ಕದ್ದನು (೧-೧೭೫-೪; ೪-೩೦-೪). ಪ್ರಾಯಶಃ ಇದು, ಚಂಡಮಾರುತದಿಂದಾಗುವ ಸೂರ್ಯಮಂಡಲದ ತಿರೋಧಾನಕ್ಕೆ ಅನ್ವಯಿಸಬಹುದು.

ಸವಿತೃ

ಹನ್ನೊಂದು ಸಂಪೂರ್ಣ ಸೂಕ್ತಗಳೂ, ಮತ್ತೆ ಕೆಲವು ಸೂಕ್ತಗಳ ಭಾಗಗಳೂ ಸವಿತೃವನ್ನು ಸ್ತುತಿಸುತ್ತವೆ; ಸುಮಾರು ೧೭೦ ಸಲ ಅವನ ಹೆಸರು ಬಂದಿದೆ. ಹನ್ನೊಂದರಲ್ಲಿ ಮೂರು ಸೂಕ್ತಗಳು ಮಾತ್ರ ಒಂದು ಮತ್ತು ಹತ್ತನೆಯ ಮಂಡಲಗಳಲ್ಲಿಯೂ, ಉಳಿದವು ಬಾಕಿ ಮಂಡಲಗಳಲ್ಲಿಯೂ ಇವೆ. ಸವಿತೃವು ಬಹು ಮಟ್ಟಿಗೆ ಸುವರ್ಣಮಯನಾದ ದೇವತೆ; ಅವನಿಗೆ ಸೇರಿದವರೂ, ಅವನ ಸಲಕರಣೆಗಳೂ ಸುವರ್ಣಮಯರೆಂದೇ ವರ್ಣಿತರಾಗಿದಾರೆ. ಅವನ ಕಣ್ಣು ಬಂಗಾರದ್ದು (೧-೩೫-೪); ಕೈಗಳು ಬಂಗಾರದವು (೧-೩೫-೯ ಮತ್ತು ೧೦);

ಬಂಗಾರದ ನಾಲಿಗೆ (೬-೭೧.೩) ಯುಳ್ಳವನು. ಈ ತರಹ ವರ್ಣನೆ ಸವಿತೃವಿನ ವೈಶಿಷ್ಟ್ಯ. ಅವನ ಕೈಗಳು ಬಂಗಾರದವು (೬.೭೧-೧ ಮತ್ತು ೫ ; ೭-೪೫.೨) ಆಗಲವಾದವು (೨-೩೮-೨); ಅಥವಾ ಸುಂದರವಾದವು (೩-೩೩-೬) ಅವನದು ಸವಿನುಡಿ (೬-೭೧-೪) ಸುಂದರವಾದ ನಾಲಿಗೆ (೩-೫೪-೧೧); ಮತ್ತು ಒಂದೇ ಒಂದುಕಡೆ ಕಬ್ಬಿಣದ ದವಡೆಗಳುಳ್ಳವನೆಂದಿದೆ (೬-೭೧-೪). ಅವನ ಕೇಶವು ಹಳದಿಯ ಬಣ್ಣ (೧೦-೧೩೯-೧) ; ಅಗ್ನಿ ಮತ್ತು ಇಂದ್ರರ ಕೇಶವೂ ಇದೇ ವರ್ಣದ್ದು. ಕಪಿಲ ವರ್ಣದ ಉಡುಪು (೪-೫೩-೨). ಸ್ವರ್ಣ ದಂಡಯುಕ್ತವಾದ ಸ್ವರ್ಣರಥ (೧-೩೫-೨ ಮತ್ತು ೫). ಈ ರಥವು, ಅವನಂತೆಯೇ (೫-೪೧-೨) ಅನೇಕ ಆಕಾರವುಳ್ಳದ್ದು (೧-೩೫,೩). ಅವನ ರಥಕ್ಕೆ ಎರಡು ತೇಜೋವಿಶಿಷ್ಟವಾದ ಅಶ್ವಗಳಿವೆ. ಅಥವಾ ಎರಡು ಅಥವಾ ಹೆಚ್ಚು ಸಂಖ್ಯೆಯ ಮಾಸಲುಬಣ್ಣದ, ಬಿಳಿಯ ಗೊರಸಿನ ಕುದುರೆಗಳು ರಥವನ್ನು ಎಳೆಯುತ್ತವೆ (೧-೩೫-೨ ಮತ್ತು ೫ ; ೭-೪೫-೧).

ಅಪಾರವಾದ ತೇಜಸ್ಸು ಸವಿತೃವಿನದು. ಅವನದು ಅಮಿತವಾದ ಸುವರ್ಣಕಾಂತಿ; ಇದು ಇತರ ದೇವತೆಗಳಿಗೆ ಸಲ್ಲುವುದು ಅಪರೂಪ (೩-೩೮-೪ ; ೭-೩೮-೧). ಅವನು ಈ ಕಾಂತಿಯನ್ನು ಹೊರಕ್ಕೆ ಚಾಚುತ್ತಾನೆ ಅಥವಾ ಚಲ್ಲುತ್ತಾನೆ. ಇದರಿಂದ ವಾಯು ಮಂಡಲ, ಸ್ವರ್ಗ ಮತ್ತು ಭೂಮಿ, ಪ್ರಪಂಚ, ಭೂವಿಸ್ತರಗಳು ಮತ್ತು ಆಕಾಶ, ಎಲ್ಲವೂ ಪ್ರಕಾಶವಾಗುತ್ತವೆ (೧-೩೫-೭ ಮತ್ತು ೮ ; ೪-೧೪-೨ ; ೪-೫೩-೪ ; ೫-೪೧-೨) ದಿಗಂತದ ವರೆಗೂ ವ್ಯಾಪಿಸುವ ತನ್ನ ಬಲವಾದ ಬಂಗಾರದ ತೋಳುಗಳನ್ನು ಎತ್ತಿ, ಎಲ್ಲಾ ಪ್ರಾಣಿಗಳನ್ನೂ ಎಚ್ಚರಿಸುತ್ತಾನೆ ಮತ್ತು ಆಶೀರ್ವದಿಸುತ್ತಾನೆ (೨-೩೮-೨ ; ೪-೫೩-೩ ಮತ್ತು ೪ ; ೬-೭೧-೧ ಮತ್ತು ೫ ; ೭-೪೫-೨). ಸವಿತೃವು ತೋಳುಗಳನ್ನೆತ್ತುವಂತೆ ಇತರ ದೇವತೆಗಳು ಎಂದು ಹೋಲಿಸುವುದರಿಂದ, ಇದೂ ಒಂದು ಅವನ ವೈಯಕ್ತಿಕ ಗುಣವೆನ್ನಬಹುದು. ಅಗ್ನಿಯು ಸವಿತೃವಿನಂತೆ ಬಾಹುಗಳನ್ನು ಎತ್ತುತ್ತಾನೆ (೧-೯೫-೭) ; ಸವಿತೃವು ತನ್ನ ತೋಳನ್ನು ಚಾಚುವಂತೆ, ಉಷಸ್ಸು ಬೆಳಕನ್ನು ಚಾಚುತ್ತಾಳೆ (೭-೭೯-೨). ಇದರಂತೆ, ಸ್ತುತಿ ವಾಕ್ಯಗಳನ್ನು ಗಟ್ಟಿಯಾಗಿ ಉಚ್ಚರಿಸಬೇಕೆಂದು ಬೃಹಸ್ಪತಿಯೂ ಪ್ರಾರ್ಥಿತನಾಗಿದಾನೆ (೧-೧೯೦-೩)- ಅಧೋಮುಖವೂ ಮತ್ತು ಊರ್ಧ್ವಮುಖವೂ ಆದ ಪಥದಲ್ಲಿ, ಸವಿತೃವು, ತನ್ನ ಬಂಗಾರದ ರಥದಲ್ಲಿ ಕುಳಿತು, ಎಲ್ಲಾ ಪ್ರಾಣಿಗಳನ್ನೂ ಅವಲೋಕಿಸುತ್ತಾ, ಹೋಗುತ್ತಾನೆ (೧-೩೫-೨ ಮತ್ತು ೩). ಉಷಃಕಾಲಕ್ಕೆ ಮುಂಚೆ, ಅವನು ಅಶ್ವನೀದೇವತೆಗಳ ರಥವನ್ನು ಹೊರಡಿಸುತ್ತಾನೆ (೧-೩೪-೧೦). ಉಷೋದೇವಿಯ ಮಾರ್ಗವನ್ನನುಸರಿಸಿ, ತಾನೂ ಪ್ರಕಾಶಿಸುತ್ತಾನೆ. (೫-೪೧-೨). ಭೂಮಿಯ ಪ್ರದೇಶಗಳನ್ನು ಅಳೆದಿದಾನೆ; ಸ್ವರ್ಗಲೋಕದ ಮೂರು ಪ್ರದೇಶಗಳಿಗೆ ಹೋಗುತ್ತಾನೆ ; ಸೂರ್ಯನ ರಶ್ಮಿಗಳೊಡನೆ ಸೇರಿಹೋಗುತ್ತಾನೆ. (೫-೪೧-೩ ಮತ್ತು ೪) ಋಗ್ವೇದದಲ್ಲಿ 'ಸೂರ್ಯರಶ್ಮಿ' ಎಂಬ ಪದವು ಬರುವುದು ಒಂದೇಸಲ. ಅದು ಸವಿತೃವಿಗೆ ಸೇರಿದೆ. ಸೂರ್ಯರಶ್ಮಿಗಳಿಂದ ಪ್ರಕಾಶಿಸುತ್ತಾ, ಹರಿದ್ರಕೇಶನಾದ ಸವಿತೃವು ಪೂರ್ವದಿಕ್ಕಿನಿಂದ ತನ್ನ ಕಾಂತಿಯನ್ನು ಸತತವೂ ಬೀರುತ್ತಿರುತ್ತಾನೆ (೧೦-೧೩೯-೧). ಅವನು ವಾಯುಮಂಡಲವನ್ನೂ ಮೂರು ಆಕಾಶಗಳನ್ನೂ ಊರ್ಧ್ವ ಲೋಕದ ಮೂರು ಬೆಳಗುತ್ತಿರುವ ಪ್ರದೇಶಗಳನ್ನೂ, ಮೂರು ಸಲ ಸುತ್ತಿ ಬರುತ್ತಾನೆ (೪-೫೩-೫). ಆಕಾಶದಲ್ಲಿರುವ ಅವನು ಅನುಸರಿಸುವ ಪುರಾತನ ಮಾರ್ಗಗಳು ಶುದ್ಧವಾಗಿವೆ. ಮತ್ತು ನಡೆಯಲು ಅನುಕೂಲವಾಗಿವೆ. ಇಲ್ಲೇ, ಅವನ ಆರಾಧಕರು ಅವನನ್ನೂ " ರಕ್ಷಿಸು " ಎಂದು ಅರಸುತ್ತಾರೆ (೧-೩೫-೧೧). 'ಮೃತವ ಜೀವವನ್ನು ಸಜ್ಜೀವಗಳಿರುವ ಸ್ಥಳಕ್ಕೆ ಸೇರಿಸು' ಎಂದು ಅವನನ್ನು ಪ್ರಾರ್ಥಿಸುತ್ತಾರೆ (೧೦-೧೭,೪). ದೇವತೆಗಳಿಗೆ ಅಮರತ್ವವನ್ನೂ, ಮನುಷ್ಯರಿಗೆ ದೀರ್ಘಾಯುಸ್ಸನ್ನೂ ಕೊಡುವವನು ಅವನೇ (೪-೫೪-೨). ತಮ್ಮ ಕರ್ಮಗಳ ಸಾಮರ್ಥ್ಯದಿಂದ ತನ್ನ ಮನೆಗೆ ಬಂದ ಋಭುಗಳಿಗೆ ಅಮರತ್ವವನ್ನು ದಯಪಾಲಿಸಿದವನೂ ಅವನೇ (೧-೧೧೦-೨ ಮತ್ತು ೩). ಸೂರ್ಯನನ್ನು ಪ್ರಾರ್ಥಿಸುವಂತೆ ಸವಿತೃವನ್ನೂ, ದುಸ್ವಪ್ನ ಪರಿಹಾರಕ್ಕಾಗಿಯೂ (೫-೮೨-೪)

ಮತ್ತು ಪಾಪವಿಮೋಚನೆಗಾಗಿಯೂ(೪-೫೪-೩)ಪ್ರಾರ್ಥಿಸುತ್ತಾರೆ. ಅವನು ದುರ್ದೇವತೆಗಳನ್ನೂ, ಮಾಟಗಾರರನ್ನೂ ಓಡಿಸುತ್ತಾನೆ (೧-೩೫-೧೦ ; ೭-೩೮-೭).

ಇತರ ಕೆಲವು ದೇವತೆಗಳಂತೆ ಇವನೂ ಅಸುರನು (೪-೫೩-೧). ಅವನು ಅನುಸರಿಸುವುದು ಗೊತ್ತಾದ ಕೆಲವು ನಿಯಮಗಳನ್ನು (೪-೫೩-೪ ; ೧೦,೩೪-೮ ; ೧೦-೧೩೯-೩). ನೀರು ಮತ್ತು ಗಾಳಿಗಳು ಅವನ ನಿಯಮಗಳಿಗೆ ಒಳಪಟ್ಟಿವೆ (೨-೩೮-೨). ನೀರುಗಳಿಗೆ ಅವನೇ ದಾರಿ ತೋರಿಸುವವನು; ಅವನಿಂದ ತಳ್ಳಲ್ಪಟ್ಟು, ಆಪು ವಿಸ್ತಾರವಾಗಿ ಪ್ರವಹಿಸುತ್ತವೆ (೩-೩೩-೬ ನಿರುಕ್ತ ೨-೨೬ ನ್ನು ಹೋಲಿಸಿ) ಇತರ ದೇವತೆಗಳು ಇವನ ಮೇಲ್ಪಂಕ್ತಿಯನ್ನನುಸರಿಸುತ್ತಾರೆ (೫-೮೧-೩). ಅವನ ಮನೋ ನಿರ್ಧಾರವನ್ನೂ ಮತ್ತು ಅವನ ಸ್ವಾತಂತ್ರ್ಯವನ್ನೂ ಯಾರೂ ಪ್ರತಿಭಟಿಸಲಾರರು , ಇಂದ್ರ, ವರುಣ, ಮಿತ್ರ, ಅರ್ಯಮ, ರುದ್ರ ಮೊದಲಾದವರೂ ಪ್ರತಿಭಟಿಸಲಾರರು (೨.೩೮.೭ ಮತ್ತು ೯ , ೫-೮೩-೨). ವಸುಗಳು, ಅದಿತಿ, ವರುಣ, ಮಿತ್ರ ಮತ್ತು ಆರ್ಯಮರು ಅವನ ಕೀರ್ತಿಯನ್ನು ಪ್ರಶಂಸಿಸುತ್ತಾರೆ (೭-೩೮-೩ ಮತ್ತು ೪). ಪೂಷಣ ಮತ್ತು ಸೂರ್ಯರಂತೆ, ಸವಿತೃವು ಚರಾಚರ ವಸ್ತುಗಳಿಗೆ ಒಡೆಯನು (೪-೫೩-೬). ಸರ್ವರಿಂದ ಅಪೇಕ್ಷಣೀಯವಾದ ವಸ್ತುಗಳೆಲ್ಲವೂ ಅವನ ಅಧೀನ; ಅವನೇ ಸ್ವರ್ಗ, ಭೂಮಿ ಮತ್ತು ಆಕಾಶಗಳಿಂದ ಶುಭಪ್ರದನಾಗುತ್ತಾನೆ (೧-೩೪-೩ , ೩-೩೮-೧೧) ಎರಡುಸಲ, ಅಗ್ನಿಯಂತೆ (ಗೃಹ್ಯ). ಮನೆಗೆ ಸೇರಿದವನು (ದಮೂನಸಃ) ಎಂತಲೂ (೧-೧೨೩-೩ , ೬-೭೧-೪) ಕರೆಯಲ್ಪಟ್ಟಿದ್ದಾನೆ. ಇತರ ದೇವತೆಗಳಂತೆ, ಇವನೂ ಆಕಾಶಕ್ಕೆ ಆಧಾರಭೂತನು (೪-೫೩-೨ , ೧೦-೧೪೯-೪). ಪ್ರಪಂಚಕ್ಕೆಲ್ಲಾ ಆಧಾರನು (೪-೫೪-೪). ಭೂಮಿಯನ್ನು ಕಟ್ಟುಗಳಿಂದ ಬಂಧಿಸಿ, ಸ್ಥಿರವಾಗಿ ಇಟ್ಟಿದಾನೆ ಮತ್ತು ಆಕಾಶವನ್ನು ತೊಲೆ ತೀರುಗಳಿಲ್ಲದ ಅಂತರಾಳದಲ್ಲಿ ನಿಲ್ಲಿಸಿದಾನೆ (೧೦-೧೪೯-೧).

ಅಗ್ನಿಗೆ ಮಾತ್ರ ಸಲ್ಲುವ (ಅಪಾಂನಪಾತ್) " ನೀರಿನಿಂದಜನ್ಯವಾದುದು " ಎಂಬ ವಿಶೇಷಣವು ಒಂದು ಸಲವಾದರೂ ಸವಿತೃಗೆ ಹೇಳಲ್ಪಟ್ಟಿದೆ (೧-೨೨-೬ , ೧೦-೧೪೯-೨). ರಲ್ಲಿಯೂ ಸವಿತೃವಿಗೆ ಹೇಳಿರುವಂತೆ ಕಾಣುತ್ತದೆ. ಯಾಸ್ಕರು (ನಿರುಕ್ತ ೧೦-೩೨) ರಲ್ಲಿ, ಈ ಮೇಲೆ ಹೇಳಿದ (೧೦-೧೪೯-೨) ನೆಯ ಮಂತ್ರದ ಮೇಲೆ ಟಿಪ್ಪಣಿ ಬರೆಯುತ್ತಾ, ಮಳೆಗೆ ಕಾರಣನಾದುದರಿಂದ ಸವಿತೃವು ಮಧ್ಯ ಪ್ರದೇಶ ದೇವತೆ ಮತ್ತು ಆಕಾಶದಲ್ಲಿರುವ ಸೂರ್ಯನಿಗೂ (ಆದಿತ್ಯ) ಸವಿತೃ ಎಂಬಭಿಧಾನವಿರುವುದರಿಂದಲೂ, ಸವಿತೃವು ಈ ಮಧ್ಯ ಲೋಕದ ದೇವತೆಯೇ ಇರಬೇಕು ಎಂದು ಹೇಳಿದಾರೆ. ವೃಷ್ಟಿಕಾರಕನಾದುದರಿಂದಲೂ ವಾಯುಮಂಡಲದಲ್ಲಿಯೋ ಮಧ್ಯಲೋಕದಲ್ಲಿಯೋ (೧-೩೫-೧೧) ಸವಿತೃವಿನ ಪಥವಿರುವುದರಿಂದಲೂ, ನೈಘಂಟುಕ ಕಾಂಡದಲ್ಲಿ ಈ ದೇವತೆಯ ಹೆಸರು ಸ್ವರ್ಗ ಮತ್ತು ಮಧ್ಯ ಲೋಕಗಳ ದೇವತೆಗಳ ಪಟ್ಟಿಯಲ್ಲಿದೆ ಒಂದು ಸಲ ಸವಿತೃವನ್ನು ಪ್ರಜಾಪತಿಯೆಂತಲೂ (೪ ೫೩-೨) ಕರೆದಿದೆ. ಶತಪಥಬ್ರಾಹ್ಮಣದಲ್ಲಿ ಸವಿತೃ ಮತ್ತು ಪ್ರಜಾಪತಿ ಎರಡೂ ಒಂದೇ ದೇವತೆಯೆಂಬ ಅಭಿಪ್ರಾಯ ವ್ಯಕ್ತಪಡುತ್ತದೆ (ಶ. ಬ್ರಾ ೧೨-೩-೫-೧). ತೈತ್ತಿರೀಯ ಬ್ರಾಹ್ಮಣದಲ್ಲಿ (೧-೬-೪-೧) ಪ್ರಜಾಪತಿಯೇ ಸವಿತೃವಾಗಿ ಪ್ರಾಣಿಗಳನ್ನು ಸೃಜಿಸಿದನೆಂದು ಹೇಳಿದೆ. ಜೀವದಾನಮಾಡುವ ಶಕ್ತಿಗೆ ಅವನೊಬ್ಬನೇ ಅಧೀಶ್ವರನು, ತನ್ನ ಚಲನೆಗಳಿಂದ (ಯಾಮಭಿಃ) ಪೂಷಣನಾಗುತ್ತಾನೆ. (೫-೪೨-೫). ಪೂಷಣನು ಜೀವದಾಯಕ ಶಕ್ತಿಯುಕ್ತನಾಗಿ, ಪೋಷಕನಂತೆ, ಸರ್ವ ಪ್ರಾಣಿಗಳನ್ನೂ ಅವಲೋಕಿಸುತ್ತಾ ಸಂಚರಿಸುತ್ತಾನೆ (೧೦-೧೩೯,೧). ಎರಡು ಮಂತ್ರಗಳಲ್ಲಿ (೩-೬೨ ಮತ್ತು ೧೦) ಸವಿತೃ ಮತ್ತು ಪೂಷಣರಿಗೆ ಸಂಬಂಧವಿದೆಯೆಂದು ಹೇಳಿದೆ. ಮೊದಲನೆಯದರಲ್ಲಿ ಸರ್ವ ಪ್ರಾಣಿಗಳನ್ನೂ ನೋಡುವ ಪೂಷಣನ ಕೃಪೆಯನ್ನು ಬೇಡಿದೆ; ಎರಡನೆಯದರಲ್ಲಿ ಸವಿತೃವಿನ ಓಜಸ್ಸನ್ನೂ, ಮಹಿಮೆಯನ್ನೂ ತಿಳಿಯಲಪೇಕ್ಷಿಸುವವರ, ಆರಾಧಿಸುವವರ ಮನೋವ್ಯಾಪಾರಗಳೆಲ್ಲವೂ ಕ್ಷೇಮಕರವಾಗುವಂತೆ ಪ್ರೇರಿಸಬೇಕೆಂದು ಪ್ರಾರ್ಥಿಸಿದೆ. ಈ ಎರಡನೆಯದೇ ಪ್ರಸಿದ್ಧರಾದ ಸಾವಿತ್ರೀ ಅಥವಾ

ಗಾಯತ್ರೀ. ವೇದಾಧ್ಯಾಸದ ಮೊದಲಲ್ಲಿ ಅದನ್ನು ಉಚ್ಚರಿಸುವ ಪದ್ಧತಿ ಬಂದಿದೆ. ಸವಿತೃವು ವಿಧಿನಿಯಾಮಕನಾದುದರಿಂದ ಮಿತ್ರನೆನಿಸಿಕೊಳ್ಳುತ್ತಾನೆ (೫-೮೧-೪). ಸವಿತೃವು ಕೆಲವು ಸಲ 'ಭಗ' ನೆನ್ನಿಸಿಕೊಳ್ಳುತ್ತಾನೆ· (೫-೮೧-೧ ಮತ್ತು ೨, ೭-೩೮-೧ ಮತ್ತು ೬). ಅಥವಾ ಇದೂ ಒಂದು ಅವನಿಗನ್ವಯಿಸುವ ವಿಶೇಷಣವಿರಬಹುದು. 'ಭಗ' ಎಂಬ ಪದವು (ಮನುಷ್ಯರಿಗೆ ಶುಭ ಫಲಗಳನ್ನು ಕೊಡುವ ದೇವತೆ) ಅನೇಕವೇಳೆ ಸವಿತೃವಿಗೆ ಸೇರಿಸಲ್ಪಟ್ಟು 'ಸವಿತಾಭಗಃ' ಅಥವಾ 'ಭಗಃಸವಿತಾ' ಎಂದು ಪ್ರಯೋಗಿಸಲ್ಪಟ್ಟಿದೆ. ಇತರ ಸ್ಥಳಗಳಲ್ಲಿ, ಸವಿತೃವಿಗೂ ಮಿತ್ರ ಪೂಷಣ ಮತ್ತು ಭಗರಿಗೂ ಭೇದ ಹೇಳದೆ ಅನೇಕ ವಾಕ್ಯಗಳಲ್ಲಿ ಒಂದೇ ದೇವತೆಗೆ ಸವಿತೃ ಮತ್ತು ಸೂರ್ಯ ಎಂಬ ಎರಡು ಪದಗಳು ಉಪಯೋಗಿಸಲ್ಪಟ್ಟಿವೆ. ಸವಿತೃವು ತನ್ನ ತೇಜಸ್ಸನ್ನು ಮೇಲಕ್ಕೆ ಎತ್ತಿಹಿಡಿದು, ಪ್ರಪಂಚಕ್ಕೆಲ್ಲಾ ಬೆಳಕನ್ನು ಉಂಟುಮಾಡುತ್ತಾನೆ; ಹೆಚ್ಚಾಗಿ ಪ್ರಕಾಶಿಸುತ್ತಾ ಸೂರ್ಯನು ಸ್ವರ್ಗ, ಭೂಮಿ ಮತ್ತು ಆಕಾಶಗಳನ್ನು ತನ್ನ ಕಿರಣಗಳಿಂದ ತುಂಬುತ್ತಾನೆ (೪-೧೪-೨). ಸೂರ್ಯನಿಗೆ ೭-೬೩-೧,೨ ಮತ್ತು ೪ನೆಯ ಋಕ್ಕುಗಳಲ್ಲಿ ಸವಿತೃವಿಗೆ ಸಲ್ಲುವ 'ಪ್ರಸವಿತೃ' ಎಂಬ ವಿಶೇಷಣವು ಉಪಯೋಗಿಸಲ್ಪಟ್ಟಿದೆ. ಅದೇ ಸೂಕ್ತದ ಮೂರನೆಯ ಮಂತ್ರದಲ್ಲಿ ಸವಿತೃವೇ ಸೂರ್ಯನೆಂದು ಹೇಳಿರುವಂತಿದೆ. ಮತ್ತೆ ಕೆಲವು ಕಡೆಯೂ (೧೦-೧೫೮-೧ರಿಂದ ೪, ೧-೩೫-೧ ರಿಂದ೧೧, ೧-೧೨೪-೧) ಇವರಿಬ್ಬರನ್ನೂ ಪ್ರತ್ಯೇಕಿಸುವುದೇ ದುಸ್ತರ. ಸವಿತೃವು ಸ್ವರ್ಗ ಮತ್ತು ಭೂಮಿಗಳ ಮಧ್ಯೆ ಚಲಿಸುತ್ತಾನೆ, ರೋಗವನ್ನು ಪರಿಹರಿಸುತ್ತಾನೆ; ಸೂರ್ಯನನ್ನು ಹೊರಡಿಸುತ್ತಾನೆ, (೧-೩೫-೯) ಈ ವಾಕ್ಯದಲ್ಲಿ ಸೂರ್ಯ ಸವಿತೃಗಳಿಗೆ ಭೇದವು ಸ್ಪಷ್ಟವಾಗಿ ಉಕ್ತವಾಗಿದೆ. ಸವಿತೃವು ಸೂರ್ಯನಿಗೆ ಮನುಷ್ಯರು ಪಾಪರಹಿತರೆಂದು ಹೇಳುತ್ತಾನೆ (೧-೧೨೩-೩). ಸೂರ್ಯನ ರಶ್ಮಿಗಳೊಡನೆ ಬೆರೆಯುತ್ತಾನೆ (೫-೮೧-೪) ಅಥವಾ ಸೂರ್ಯರಶ್ಮಿಗಳ ಜೊತೆಯಲ್ಲಿ ಪ್ರಕಾಶಿಸುತ್ತಾನೆ (೧೦-೧೩೯-೧, ೧೦-೧೮೧-೩ ನ್ನು ಹೋಲಿಸಿ; ೧-೧೫೮-೧, ೭-೩೫-೮ ಮತ್ತು ೧೦). ಸೂರ್ಯೋದಯಕಾಲದಲ್ಲಿ, ಆರಾಧಕನನ್ನು ಪುನರುಜ್ಜೀವನಗೊಳಿಸುವಂತೆ, ಮಿತ್ರ, ಅರ್ಯಮ, ಭಗ, ಇವರುಗಳಿಂದ ಯುಕ್ತನಾದ ಸವಿತೃವು ಪ್ರಾರ್ಥಿತನಾಗಿರುತ್ತಾನೆ (೭-೬೬-೪).

ಯಾಸ್ಕರ ಮತದಲ್ಲಿ ಸವಿತೃವು ಕರ್ತೃ ಪರಿಹರಿಸಲ್ಪಟ್ಟ ಮೇಲೆ ಕಾಣಿಸಿಕೊಳ್ಳುತ್ತಾನೆ (ನಿ ೧೨ ೧೨). ಸಾಯಣರು (೫-೮೧-೪) ಉದಯಾತ್ಪೂರ್ವದಲ್ಲಿ ಸೂರ್ಯನಿಗೆ ಸವಿತೃವೆಂತಲೂ, ಉದಯಕಾಲದಿಂದ ಅಸ್ತಮಯ ಕಾಲದವರೆಗೂ ಸೂರ್ಯನೆಂತಲೂ, ಹೆಸರಿಂದು ಅಭಿಪ್ರಾಯಪಟ್ಟಿದಾರೆ. ಆದರೆ ಸವಿತೃವು ಪ್ರಾಣಿಗಳನ್ನು ನಿದ್ರೆ ಹೋಗುವಂತೆ ಮಾಡುತ್ತಾನೆ (೪-೫೩-೬, ೭-೪೫-೧) ಎಂದಿರುವುದರಿಂದ, ಸವಿತೃವಿಗೆ ಸಾಯಂಕಾಲ ಮತ್ತು ಪ್ರಾತಃಕಾಲಗಳೆರಡರೊಡನೆಯೂ ಸಂಬಂಧವಿರಬೇಕು ಒಂದು ಸೂಕ್ತದಲ್ಲಿ (೨-೩೮) ಅಸ್ತಮಿಸುತ್ತಿರುವ ಸೂರ್ಯನೆಂದು ಹೊಗಳಲ್ಪಟ್ಟಿದಾನೆ, ಅಲ್ಲದೆ, ಸವಿತೃವಿನ ಪರವಾದ ಸೂಕ್ತಗಳೆಲ್ಲವೂ, ಸಾಯಂಕಾಲ ಕರ್ಮಗಳ ಅಥವಾ ಪ್ರಾತಃಕಾಲದ ಹವನಗಳಲ್ಲಿ ಉಪಯೋಗಿಸಬೇಕೆಂಬ ನಿಯಮವಿರುವಂತೆ ತೋರುತ್ತದೆ. ಅವನೇ ದ್ವಿಪಾದ ಮತ್ತು ಚತುಷ್ಪಾದ ಜಂತುಗಳೆಲ್ಲವನ್ನೂ ವಿಶ್ರಮಿಸಿಕೊಳ್ಳುವಂತೆ ಮಾಡಿ ಅನಂತರ ಎಚ್ಚರಗೊಳಿಸುತ್ತಾನೆ (೬-೭೧.೨, ೪-೫೩-೩ ಮತ್ತು ೭-೪೫-೧ ನ್ನು ಹೋಲಿಸಿ). ತನ್ನ ಕುದುರೆಗಳನ್ನು ಬಿಚ್ಚುತ್ತಾನೆ, ಸಂಚರಿಸುತ್ತಿರುವವನ್ನು ವಿಶ್ರಮಿಸಿಕೊಳ್ಳುವಂತೆ ಮಾಡುತ್ತಾನೆ, ಇವನ ಅಪ್ಪಣೆಯಾಯಿತೆಂದರೆ ರಾತ್ರಿಯಾಗುತ್ತದೆ, ನೆಯ್ಗೆಯವನು ತನ್ನ ಬಟ್ಟೆಯನ್ನು ಮಡಿಚುತ್ತಾನೆ ಮತ್ತು ಕೆಲಸಗಾರನು ತನ್ನ ಅರ್ಧ ಮುಗಿದಿರುವ ಕೆಲಸವನ್ನು ಅಪ್ಪಕ್ಕೇ ನಿಲ್ಲಿಸುತ್ತಾನೆ (೨-೩೮-೩ ಮತ್ತು ೪). ಪೂರ್ವದಿಕ್ಕಿನಲ್ಲಿ ಅಗ್ನಿಯೂ, ದಕ್ಷಿಣದಲ್ಲಿ ಸೋಮನೂ ಇದಾರೆಂದು ಹೇಳುವಂತೆ, ಪಶ್ಚಿಮದಲ್ಲಿ ಸವಿತೃವು ಇದಾನೆಂದು ಹೇಳುವುದು ವಾಡಿಕೆಯಾಗಿದೆ (ಶ. ಬ್ರಾ. ೩-೨-೩-೧೮)

ಈ ಸವಿತೃ ಪದವು 'ಸೂ' ಧಾತುವಿನಿಂದ ಸಾಧಿತವಾದುದು. ಸವಿತೃ ದೇವತೆಯನ್ನು ಸ್ತುತಿಸುವಾಗ ಮಾತ್ರ ಈ ಧಾತು ನಾನಾ ರೂಪಗಳಲ್ಲಿ ಉಪಯೋಗಿಸಲ್ಪಟ್ಟಿದೆ. ಇದೇ ಅರ್ಥ ಬರಬೇಕಾದ ಸಂದರ್ಭಗಳಲ್ಲಿಯೂ ಕೂಡ, ಇತರ ದೇವತಾಕ ಮಂತ್ರಗಳಲ್ಲಿ ಬೇರೆ ಧಾತುಗಳು ಉಪಯೋಗಿಸಿರುವುದು ಕಂಡುಬರುತ್ತದೆ. ಪ್ರೋತ್ಸಾಹ, ಜಾಗೃತಿಗೊಳಿಸುವುದು, ಪುನರುಜ್ಜೀವನಗೊಳಿಸುವುದು, ಈ ಅರ್ಥಗಳೇ ಈ ಧಾತುವಿಗೆ ವಿಶೇಷವಾಗಿ ಅಭಿಪ್ರೇತವಾಗಿವೆ. ಸವಿತೃವು ಚಲಿಸುವ ಪ್ರತಿ ವಸ್ತುವನ್ನೂ ಕಾರ್ಯತತ್ಪರವನ್ನಾಗಿ (ಪ್ರಾಸಾವೀತ್) ಮಾಡಿದಾನೆ (೧-೧೫೭-೧); (ಪ್ರಸವಸ್ಯ) ಚೇತನಕೊಡುವುದಕ್ಕೆ ನೀನೇ ಸಮರ್ಥನು (೫-೮೧-೫); ಸವಿತೃವು ನಿನಗೆ ಅಮರತ್ವವನ್ನು (ಅಸುವತ್) ಅನುಗ್ರಹಿಸಿದನು (೧-೧೧೦-೩); ಸವಿತೃವು ನಮ್ಮನ್ನು ಜಾಗೃತಿಗೊಳಿಸಲು (ಸನಾಯ) ಸನ್ನದ್ಧನಾಗಿದಾನೆ (೨-೩೮-೧); ಆಕಾಶದಿಂದ ದಿನಕ್ಕೆ ಮೂರುಸಲ ಇಷ್ಟವಾದ ವಸ್ತುಗಳನ್ನು (ಸೋಸವೀತಿ) ಕಳುಹಿಸುತ್ತಾನೆ (೩-೫೬-೬); ಎಲೈ ಸವಿತೃವೇ, ನೀನು ನಮ್ಮನ್ನು ಪಾಪರಹಿತರನ್ನಾಗಿ ಮಾಡು (ಸುವತಾತ್. ೪-೫೪-೩); ಸವಿತೃವಿನ ಬಲದಿಂದ (ಸವೇ), ಅದಿತಿಯ ವಿಷಯದಲ್ಲಿ ಪಾಪರಹಿತರಾದ ನಮಗೆ, ಸಕಲ ವರಗಳೂ ಲಬ್ಧವಾಗಲಿ (೫-೮೨-೬); ದುಸ್ವಪ್ನಗಳನ್ನು ದೂರಮಾಡು (ಪರಾಸವ), ಅಪತ್ತುಗಳನ್ನು ನಿವಾರಿಸು, ಒಳ್ಳೆಯದನ್ನು (ಅಸುವ) ಅನುಗ್ರಹಿಸು (೫-೮೨-೪ ಮತ್ತು ೫); ಸವಿತೃವು ರೋಗ (ಅಪಸಾವಿಶತ್) ನಿವಾರಣೆ ಮಾಡಲಿ (೧೦-೧೦೦-೮); ಐಶ್ವರ್ಯವನ್ನನುಗ್ರಹಿಸೆಂದು ಇದೇ ಧಾತುವಿನಿಂದಲೇ ಸವಿತೃವನ್ನು ಅನೇಕ ಕಡೆ ಪ್ರಾರ್ಥಿಸಿದೆ (೨-೫೬-೬; ಇತ್ಯಾದಿ). ಈ ರೀತಿ ಈ ಧಾತುವು ಸಂಪೂರ್ಣವಾಗಿ ಸವಿತೃವಿಗೇ ಮೀಸಲಾಗಿದೆಯೆಂದು ಹೇಳಬಹುದು. ಆದರೆ ಎರಡು ಮೂರು ಸಲ ಸೂರ್ಯನಿಗೂ ಉಪಯೋಗಿಸಿದೆ (೭-೬೩-೨ ಮತ್ತು ೪; ೧೦-೩೭-೪). ಉಷಸ್ಸಿನೊಡನೆ ೭-೭೭-೧ ರಲ್ಲಿಯೂ, ವರುಣನಿಗೆ ೨_೨೮-೯ ರಲ್ಲಿಯೂ, ಆದಿತ್ಯರಿಗೆ ೮-೪೮-೧ ರಲ್ಲಿಯೂ ಮತ್ತು ಮಿತ್ರ, ಅರ್ಯಮ ಮತ್ತು ಸವಿತೃಗಳಿಗೆ ಒಟ್ಟಾಗಿ ೭-೬೬-೪ ರಲ್ಲಿಯೂ ಉಪಯೋಗಿಸಿದೆ. ಸವಿತೃವಿಗೇ ಈ ಧಾತು ಇಷ್ಟುಬಾರಿ ಉಪಯೋಗಿಸಿರುವುದರಿಂದ, ಯಾಸ್ಕರು ಸವಿತೃವನ್ನು (ಸರ್ವಸ್ಯ ಪ್ರಸವಿತಾ, ನಿ. ೧೦-೩೧) 'ಎಲ್ಲವನ್ನೂ ಉಜ್ಜೀವನಗೊಳಿಸುವವನು' ಎಂದಿದಾರೆ.

ಸವಿತೃ ಎಂಬ ಪದವು ಬರುವ ಸಂದರ್ಭಗಳಲ್ಲಿ ಸುಮಾರು ಅರ್ಧಕ್ಕಿಂತ ಹೆಚ್ಚು ಕಡೆ 'ದೇವ' ಎಂಬ ಪದದಿಂದ ಕೂಡಿಯೇ ಇದೆ. ಈ ಸ್ಥಳಗಳಲ್ಲೆಲ್ಲಾ 'ದೇವ' ಪದಕ್ಕೆ ವಿಶೇಷಾರ್ಥವೇನೂ ಇಲ್ಲದೆ, ಸಾಧಾರಣವಾಗಿ ದೇವತೆ ಎಂಬರ್ಥವೇ ತೋರುತ್ತದೆ. ಅದು ಹೇಗಾದರೂ ಇರಲಿ, ಎರಡು ವಾಕ್ಯಗಳಲ್ಲಂತೂ, ತ್ವಷ್ಟೃವಿಗೆ ವಿಶೇಷಣ ಪದವಾಗಿದೆ (ದೇವಃ ತ್ವಷ್ಟಾ ಸವಿತಾ ವಿಶ್ವರೂಪಾ ೩-೫೫-೧೯; ೧೦-೧೦-೫); ಇಲ್ಲಿ ಈ ಪದಗಳನ್ನು ಹೀಗೆ ಜೋಡಿಸಿರುವುದನ್ನು ನೋಡಿದರೆ, ಸವಿತೃ ಮತ್ತು ತ್ವಷ್ಟೃಗಳು ಒಂದೇ ಎಂದಭಿಪ್ರಾಯವಾಗುತ್ತದೆ.

ಪ್ರಪಂಚದಲ್ಲಿ ಚೇತನವನ್ನುಂಟುಮಾಡುವ ಮತ್ತು ಚಲನ ಶಕ್ತಿಯನ್ನು ಕೊಡುವ, ಸೂರ್ಯನ ಒಂದು ಶಕ್ತಿಗೆ ಈ ಸವಿತೃ ಎಂಬ ಹೆಸರಿರಬಹುದು. ಆದರೆ ಸೂರ್ಯನಿಗೆ (ನಮಗೆ ಕಾಣುವ ಸೂರ್ಯಮಂಡಲಕ್ಕೆ) ಹೋಲಿಸಿದರೆ, ಸವಿತೃವು ಬಾಹ್ಯೇಂದ್ರಿಯಗೋಚರನಾದ ದೇವತೆಯಲ್ಲವೆನ್ನಬಹುದು. ಸೂರ್ಯನು ಈ ಸ್ಥೂಲವಾದ ಆಕಾಶದಲ್ಲಿ ಪರಿದೃಶ್ಯಮಾನವಾದ, ತೇಜಃಪುಂಜವಾದ ಮಂಡಲವೆಂತಲೂ, ಸವಿತೃವು ಮೂರ್ತಿಮತ್ತಾದ, ಆ ಸೂರ್ಯನ ದೈವೀಶಕ್ತಿಯೆಂತಲೂ ಋಗ್ವೇದದಿಂದ ತಿಳಿದುಬರುತ್ತದೆ.

ಕೆಲವರ ಪ್ರಕಾರ, ಚೇತನಗೊಳಿಸುವ ಶಕ್ತಿಯೇ ಸವಿತೃವು, ಸೂರ್ಯ ಮತ್ತು ಅವನ ಕ್ಲೃಪ್ತವಾದ ಸಂಚಾರ ಇತ್ಯಾದಿಗಳೆಲ್ಲ ಅಪ್ರಧಾನವಾದ ಅಂಶಗಳು.

ಪೂಷಣ

ಈ ಹೆಸರು ಋಗ್ವೇದದಲ್ಲಿ ಸುಮಾರು ನೂರಇಪ್ಪತ್ತು ಸ್ಥಳಗಳಲ್ಲಿ ಇದೆ. ಎಂಟು ಸೂಕ್ತಗಳು. ಅವುಗಳಲ್ಲಿ ಐದು ಆರನೆಯ ಮಂಡಲದಲ್ಲಿಯೂ, ಎರಡು ಮೊದಲನೆಯದರಲ್ಲಿಯೂ, ಮತ್ತೊಂದು ಹತ್ತನೆಯದರಲ್ಲಿಯೂ, ಪೂಷಣನನ್ನು ಪ್ರಶಂಸಿಸುತ್ತವೆ. ಒಂದು ಸೂಕ್ತದಲ್ಲಿ ಇಂದ್ರನೊಡನೆಯೂ (೬-೫೭), ಮತ್ತೊಂದರಲ್ಲಿ ಸೋಮನೊಡನೆಯೂ (೨-೪೦) ಸ್ತುತನಾಗಿದಾನೆ. ಅಂಕಿ ಅಂಶಗಳನ್ನು ತೆಗೆದುಕೊಂಡರೆ, ವಿಷ್ಣುವಿಗಿಂತಲೂ ಹೆಚ್ಚು ಮಂತ್ರಗಳು ಇವನ ಪರವಾಗಿವೆ. ಬ್ರಾಹ್ಮಣಾದಿಗಳಲ್ಲಿ ಈ ಹೆಸರು ಬರುಬರುತ್ತಾ ಕಡಿಮೆಯಾಗುತ್ತಾ ಬರುತ್ತದೆ. ನಿರ್ಧರವಾದ ವ್ಯಕ್ತಿತ್ವವಿಲ್ಲ ಮತ್ತು ಶರೀರಧಾರಣಾದಿ ಮಾನವ ವ್ಯಾಪಾರಗಳು ಕಡಿಮೆ. ದುಷ್ಪರನ್ನು ತುಳಿ ಎಂದು ಪ್ರಾರ್ಥಿಸುವಾಗ ಅವನ ಪಾದದ ಉಕ್ತಿಯಿದೆ. ಅಲ್ಲೇ ಅವನ ಬಲಗೈಯೂ ಹೇಳಿದೆ (೬-೫೪-೧೦). ರುದ್ರನಂತೆ ಅವನಿಗೂ ಜಟೆಯಿದೆ (೬-೫೫-೨) ಮತ್ತು ಗಡ್ಡವಿದೆ (೧೦-೨೬-೭) ಅವನು ಒಂದು ಬಂಗಾರದ ಭರ್ಜಿಯನ್ನು (೧-೪೨-೬) ಉಪಯೋಗಿಸುತ್ತಾನೆ. ಒಂದು ಡಬ್ಬಳ (೬-೫೩-೫,೬ ಮತ್ತು ೮) ಅಥವಾ ಅಂಕುಶವನ್ನು (೬-೫೩-೯ ; ೬-೫೮-೭) ಧರಿಸಿದಾನೆ. ಚಕ್ರ, ಚಕ್ರದನೇಮಿ, ಅಥವಾ ಆಸನ (೬-೫೪-೩) ಇವೆಲ್ಲವೂ ಉಕ್ತವಾಗಿವೆ ಮತ್ತು ಅವನು ಅತ್ಯುತ್ತಮ ರಥಿಕನೆಂದೂ ಹೇಳಿದೆ (೬-೫೬-೨ ಮತ್ತು ೩) ಅವನ ರಥವನ್ನು ಎಳೆಯುವುವು ಟಗರುಗಳು (ಅಜಾಶ್ವ, ೧-೩೮-೪ ; ೬-೫೫-೩ ಮತ್ತು ೪). ಗಂಜಿಯೇ ಅವನ ಆಹಾರ (೬-೫೬-೧ ; ೩-೫೨-೭ನ್ನು ಹೋಲಿಸಿ). ಇದೇ ಕಾರಣದಿಂದಲೇ ಅವನಿಗೆ ಹಲ್ಲಿಲ್ಲವೆಂದು ಹೇಳಿರಬಹುದು (ಶ. ಬ್ರಾ. ೧-೭-೪-೭).

ಪೂಷಣನು ಎಲ್ಲಾ ಪ್ರಾಣಿಗಳನ್ನೂ ಸ್ಪಷ್ಟವಾಗಿ ಎಕೆ ಕಾಲದಲ್ಲಿ ನೋಡುತ್ತಾನೆ (೩-೬೨-೯) ಈ ಪದಗಳೇ ಅಗ್ನಿಗೂ ಹೇಳಲ್ಪಟ್ಟವೆ (೧೦-೧೮೭-೪) ಸೂರ್ಯನಂತೆ ಇವನೂ ಚಲಿಸುವ ಮತ್ತು ಚಲಿಸದಿರುವ ವಸ್ತುಗಳೆಲ್ಲಕ್ಕೂ ಒಡೆಯನು (೧-೧೧೫-೧ ; ೭-೬೦-೩). ಇವನು ತಾಯಿಯನ್ನು ಒಲಿಸಿಕೊಳ್ಳಲು ಪ್ರಯತ್ನಿಸುತ್ತಾನೆ (೬-೫೫-೫) ಅಥವಾ ಸೋದರಿಯನ್ನು ಪ್ರೀತಿಸುತ್ತಾನೆ (೬-೫೫-೪ ಮತ್ತು ೫). ಸೂರ್ಯನಿಗೂ (೧-೧೧೫-೩) ಮತ್ತು ಅಗ್ನಿಗೂ (೧೦-೩-೩) ಈ ಪದಗಳೇ ಉಪಯೋಗಿಸಲ್ಪಟ್ಟವೆ. ದೇವತೆಗಳು ಇವನಿಗೆ ಸೂರ್ಯ ಪುತ್ರಿಯಾದ ಸೂರ್ಯೆಯನ್ನು ವಿವಾಹ ಮಾಡಿದರು (೬-೫೮-೪) ವಿವಾಹಸೂಕ್ತದಲ್ಲಿ (೧೦-೮೫) ವಧುವಿನ ಕೈಹಿಡಿದುಕೊಂಡು, ಕರೆದುಕೊಂಡುಹೋಗಿ, ಸಂಸಾರಸಂಬಂಧವಾದ ವರದಾನ ಮಾಡುವಂತೆ ಪ್ರಾರ್ಥಿಸುವುದು, ಸೂರ್ಯಾಪತಿಯಾದ ಪೂಷಣನನ್ನೇ. ಮತ್ತೊಂದು ಕಡೆ (೯-೬೭-೧೦), ಅವನನ್ನು ಪೂಜೆಮಾಡುವವರಿಗೆ, ಅವರ ಪಾಲಿನ ಕನ್ಯೆಯರನ್ನು ಕೊಡುವಂತೆ ಪ್ರಾರ್ಥಿತನಾಗಿದಾನೆ. ಪ್ರೇಮದಿಂದ ಕ್ಲಿನ್ನನಾದ ಇವನು ಆಕಾಶದಲ್ಲಿ ಓಡಾಡುವ ತನ್ನ ನಾವೆಗಳಲ್ಲಿ, ಸೂರ್ಯೆಯ ದೂತನಾಗಿ ಸಂಚರಿಸುತ್ತಾನೆ (೬-೫೮-೩). ಹಾಗೆಯೇ, ಪ್ರಪಂಚವನ್ನು ವೀಕ್ಷಿಸುತ್ತಾ, ಮುಂದು ಮುಂದಕ್ಕೆ ಹೋಗುತ್ತಾನೆ (೨-೪೦-೫ ; ೬-೫೮-೨) ; ಮತ್ತು ಆಕಾಶದಲ್ಲಿ ತನ್ನ ಮನೆಯನ್ನು ರಚಿಸಿಕೊಳ್ಳುತ್ತಾನೆ (೨-೪೦-೪). ಸವಿತೃವಿನ ಪ್ರೇರಣೆಯ ಮೇರೆ ನಡೆಯುವ ಇವನೂ ಒಬ್ಬ ರಕ್ಷಕ ; ಇವನಿಗೆ ಎಲ್ಲಾ ಪ್ರಾಣಿಗಳೂ ಪರಿಚಿತರು. ಮತ್ತು ಎಲ್ಲಾ ಪ್ರಾಣಿಗಳನ್ನೂ ಅವಲೋಕಿಸುತ್ತಾನೆ. ಉತ್ತಮ ರಥಿಕನಾದ ಪೂಷಣನು ಸೂರ್ಯನ ಬಂಗಾರದ ರಥ ಚಕ್ರವನ್ನು ಅಧೋಮುಖವಾಗಿ ಓಡಿಸಿದನೆಂದು (೬-೫೬-೩) ಇದೆ. ಆದರೆ ಸಂದರ್ಭ ಸ್ವಲ್ಪ ಅಸ್ಪಷ್ಟವಾಗಿದೆ (ನಿ. ೨-೬ನ್ನು ಹೋಲಿಸಿ). ಇವನೊಬ್ಬನಿಗೇ ಸಲ್ಲುವ ವಿಶೇಷಣ (ಜಘ್ನಿ) ' ಮಿಣಗುವ ' ಎಂಬುದು. ಸವಿತೃವಿಗೇ ಸೇರಿದ್ದೆಂದು ಹೇಳಬಹುದಾದ (ಅಗೋಹ್ಯ) ' ಅಡಗಿಸಲಸಾಧ್ಯ ' ಎಂಬುದು, ಇವನ ಪರವಾಗಿಯೂ ಒಂದು ಕಡೆ ಉಪಯೋಗಿಸಿದೆ.

ಪೂಷಣನು ಜನಿಸಿದ್ದು ದಾರಿಗಳಲ್ಲೆಲ್ಲಾ ಅತ್ಯಂತ ದೂರವಾದ ದಾರಿಯಲ್ಲಿ; ದೂರವಾದ ಸ್ವರ್ಗದ ಮತ್ತು ಭೂಮಿಯ ದಾರಿಯಲ್ಲಿ; ತನಗೆ ಪ್ರಿಯವಾದ ಅವೆರಡು ಲೋಕಗಳನ್ನು ತಿಳಿದವನಾಗಿ, ಅಲ್ಲಿಗೆ ಹೋಗಿ, ಹಿಂತಿರುಗುತ್ತಾನೆ (೬-೧೭-೬) ಅಗ್ನಿ ಮತ್ತು ಸವಿತೃಗಳು ಮೃತರ ಜೀವಗಳನ್ನು ಸಜ್ಜೀವರು ದೇವತೆಗಳೊಡನೆ ಇರುವ ಪ್ರದೇಶಕ್ಕೆ ಒಯ್ಯುವಂತೆ, ಪೂಷಣನೂ ತನ್ನ ಆರಾಧಕರಲ್ಲಿ ಮೃತರನ್ನು ಬಹಳ ದೂರದ ದಾರಿಯಲ್ಲಿ ಸುರಕ್ಷಿತವಾಗಿ ಕರೆದುಕೊಂಡು ಹೋಗಿ, ಸಜ್ಜೀವರು ಇರುವ ಸ್ಥಳದಲ್ಲಿ ಬಿಡುತ್ತಾನೆ (೧೦-೧೭-೩ ರಿಂದ ೫). ಪೂಷಣನು ಸನ್ಮಾರ್ಗಗಾಮಿಗಳ ಲೋಕಕ್ಕೆ, ರಮ್ಯವಾದ ದೇವತೆಗಳ ಲೋಕಕ್ಕೆ ಒಯ್ಯುತ್ತಾನೆ (ಅ. ವೇ. ೧೬-೯-೨; ೧೪-೨-೫೩). ಪೂಷಣನ ಟಗರು ಯಜ್ಞಾಶ್ವವನ್ನು ನಡೆಯಿಸಿಕೊಂಡು ಹೋಗುತ್ತದೆ (೧-೧೬೨-೨ ಮತ್ತು ೩). ಅವನ ರಥಕ್ಕೆ ಅಶ್ವಲಿತಪದವಾದ ಟಗರುಗಳಿವೆ ಎಂಬುದರಿಂದಲೇ ಅವನಿಗೆ ಈ ಕಷ್ಟವಾದ ದಾರಿಗಳ ಪರಿಚಯವು ಇರಬಹುದು.

ದಾರಿಗಳ ಪರಿಚಯವಿರುವುದರಿಂದಲೇ, ಅವನನ್ನು ವೀಥಿಗಳ ರಕ್ಷಕನೆನ್ನುವುದು. ಒದಗಬಹುದಾದ ತೊಂದರೆಗಳನ್ನೂ, ತೋಳಗಳನ್ನೂ, ದರೋಡೆಕೋರರನ್ನೂ ರಸ್ತೆಗಳಿಂದ ಆಚೆಹಾಕು ಎಂದು ಅವನನ್ನು ಬೇಡಿಕೊಳ್ಳುತ್ತಾರೆ (೧-೪೨-೧ ರಿಂದ ೩). ಇದೇ ಸಂದರ್ಭದಲ್ಲೇ, ಅವನಿಗೆ (ವಿಮುಚೋನಪಾತ್) 'ವಿಮೋಚನೆಯ ಪುತ್ರ ಎಂದಿರುವುದು. ಇನ್ನೊಂದು ಕಡೆಯೂ (೬-೫೫-೧) ಇದೇ ವಿಶೇಷಣವಿದೆ (೬-೫೫-೧) ಮತ್ತು ಎರಡು ಸಲ (ವಿಮೋಚನ) ಬಿಡುಗಡೆ ಮಾಡಿಸುವವನು (೮-೪-೧೫ ಮತ್ತು ೧೬) ಎಂದು ಹೇಳಿದೆ. 'ವಿಮೋಚನ ಪಾತ್ ಆದುದರಿಂದಲೇ ಪಾಪದಿಂದ ವಿಮುಕ್ತರನ್ನಾಗಿ ಮಾಡು (ಅ. ವೇ. ೬-೧೧೨-೩) ಎಂದು ಪ್ರಾರ್ಥನೆ. ಶತ್ರುಗಳನ್ನು ಚದರಿಸು, ನಮ್ಮ ದಾರಿಯು ಇಷ್ಟವಾದ ವಸ್ತುಗಳೆಡೆಗೆ ನಮ್ಮನ್ನು ಒಯ್ಯಲಿ (೬-೫೩-೪); ಶತ್ರುಗಳನ್ನು ತೊಡೆದುಹಾಕು, ರಸ್ತೆಯನ್ನು ಚೆನ್ನಾಗಿರುವಂತೆ ಮಾಡು ಮತ್ತು ರಸ್ತೆಯು ಒಳ್ಳೆಯ ಮೇವಿರುವ ಸ್ಥಳವನ್ನು ಸೇರಲಿ (೧-೪೨-೭ ಮತ್ತು ೮) ದಾರಿಯಲ್ಲಿ ಬರಬಹುದಾದ ತೊಂದರೆಯನ್ನು ಪರಿಹರಿಸಿ (೬-೫೪-೯). ದಾರಿಯನ್ನು ಶುಭಪ್ರದವನ್ನಾಗಿ ಮಾಡಲಿ (೧೦-೫೯-೭). ಎಲ್ಲಾ ದಾರಿಗೂ ಅವನೇ ರಕ್ಷಕ (೬-೪೯-೮). ಅವನೇ ಒಡೆಯ (೬-೫೩-೧). ರಸ್ತೆಯಲ್ಲಿ ಅವನು ದಾರಿ ತೋರಿಸುವನು (ಪ್ರಪಥ್ಯ. ವಾ. ಸಂ. ೨೨-೨೦) ಆದ್ದರಿಂದಲೇ ಪ್ರಯಾಣೋನ್ಮುಖನಾದ ಪ್ರತಿಯೊಬ್ಬನೂ ರಸ್ತೆಗಳ ಶಿಲ್ಪಿಯಾದ ಪೂಷಣನಿಗೆ ೬-೫೩ ನೆಯ ಸೂಕ್ತವನ್ನುಚ್ಚರಿಸುತ್ತಾ ಪೂಜೆ ಸಲ್ಲಿಸಬೇಕು ಮತ್ತು ದಾರಿ ತಪ್ಪಿದವರೆಲ್ಲಾ ಪೂಷಣನನ್ನೇ ಮರೆಹೋಗಬೇಕು (ಆ. ಗೃ ಸೂ. ೩-೬-೮ ಮತ್ತು ೯; ಸಾಂ. ಶ್ರೌ. ಸೂ. ೩ ೪-೯) ಎಂದು ಹೇಳಿರುವುದು. ಅದೂ ಅಲ್ಲದೇ, ಪಾತಃಕಾಲದ ಮತ್ತು ಸಾಯಂಕಾಲದ ಸವನ ಕಾಲಗಳಲ್ಲಿ. ಎಲ್ಲಾ ದೇವತೆಗಳಿಗೂ ಹವಿರಾದಿಗಳು ಅರ್ಪಿತವಾದಾಗ, ಪೂಷಣನು ಮನೆಯ ಹೊಸ್ತಿಲಿನಲ್ಲಿ ನಿಂತು ತನ್ನ ಭಾಗವನ್ನು ಸ್ವೀಕರಿಸುತ್ತಾನೆ (ಸಾಂ. ಗೃ. ಸೂ. ೨-೧೪-೯).

ಎಲ್ಲಾ ಮಾರ್ಗಗಳೂ ತಿಳಿದಿರುವುದರಿಂದ, ಅವನು ನಿಗೂಢವಾದ ಪದಾರ್ಥಗಳನ್ನು ಬಯಲಿಗೆ ತರಬಹುದು ಮತ್ತು ಕಂಡುಹಿಡಿಯುವುದನ್ನು ಸುಲಭವಾಗಿಸಬಹುದು (೬-೪೮-೧೫). ತಪ್ಪಿಸಿಕೊಂಡ ಪ್ರಾಣಿಯನ್ನು ಹುಡುಕುವಂತೆ ಹುಡುಕಬೇಕೆಂದು ಪ್ರಾರ್ಥಿತನಾದ ಪೂಷಣನು, ನಷ್ಟನೂ, ನಿಗೂಢನೂ ಆಗಿದ್ದ ರಾಜನನ್ನು ಕಂಡುಹಿಡಿದನೆಂದಿದೆ (೧-೨೩-೧೪ ಮತ್ತು ೧೫; ತೈ. ಸಂ. ೩-೩-೯-೧೧ನ್ನು ಹೋಲಿಸಿ) ಆದುದರಿಂದಲೇ, ಏನು ಕಳೆದು ಹೋದರೂ, ಪೂಷಣನಿಗೆ ಪೂಜೆ ಸಲ್ಲಿಸಬೇಕು (ಆ. ಗೃ.ಸೂ. ೩-೭-೯). ಅದೇ ರೀತಿ, ದನಕರುಗಳನ್ನು ಹಿಂಬಾಲಿಸಿ, ಅವುಗಳನ್ನು ರಕ್ಷಿಸುವುದೂ ಪೂಷಣನ ವಿಶೇಷ ಲಕ್ಷಣ (೬-೫೪-೫, ೬ ಮತ್ತು ೧೦; ೬-೫೮-೨; ೧೦-೨೬-೩ ನ್ನು ಹೋಲಿಸಿ). ಹಳ್ಳದಲ್ಲಿ ಬಿದ್ದು ಗಾಯಗೊಳ್ಳದಂತೆ ಕಾಪಾಡಿ, ಅಪಾಯವಾಗದಂತೆ, ಮನೆಗೆ

ವಾಪಸು ಅಟ್ಟಿಕೊಂಡು ಬರುತ್ತಾನೆ; ತಪ್ಪಿಸಿಕೊಂಡಿರುವವುಗಳನ್ನೂ ಪುನಃ ತರುತ್ತಾನೆ (೬-೫೪-೭ ಮತ್ತು ೧೦). ಅವನ ಅಂಕುಶವು ದನಕರುಗಳನ್ನು ನೇರವಾಗಿ ಅಟ್ಟುತ್ತದೆ (೬-೫೩-೯). ನೇರವಾಗಿ ಅಟ್ಟುತ್ತಾನೆ ಎನ್ನುವುದರಿಂದಲೇ ಇರಬೇಕು, ಅವನು ನೇಗಿಲಿನ ಸಾಲುಗಳನ್ನು ಸರಿಪಡಿಸುತ್ತಾನೆ ಎಂಬ ಅಭಿಪ್ರಾಯ ಬಂದಿರುವುದು (೪-೫೭-೭). ಅವನು ಅಶ್ವಗಳನ್ನೂ ರಕ್ಷಿಸುತ್ತಾನೆ (೬-೫೪-೫) ಮತ್ತು ಕುರಿಗಳ ತುಪ್ಪಟವನ್ನು ನಯಮಾಡುತ್ತಾನೆ ಮತ್ತು ಸರಿಪಡಿಸುತ್ತಾನೆ (೧೦-೨೬-೬). ಆದುದರಿಂದಲೇ, ಪ್ರಾಣಿಗಳು ಪೂಷಣನ ದೃಷ್ಟಿಯಲ್ಲಿ ಪವಿತ್ರವಾದುವು (೧-೫-೧ ಮತ್ತು ೨) ಮತ್ತು ಅವನು ದನಕರುಗಳನ್ನು ಸೃಜಿಸುವವನು (ಮೈ. ಸಂ. ೪-೩-೭; ತೈ. ಬ್ರಾ. ೧-೭-೨-೪). ದನಕರುಗಳು ಮೇಯುವುದಕ್ಕೆ ಹೋಗಿ ತಪ್ಪಿಸಿಕೊಂಡಾಗ ಉಪಯೋಗಿಸಬೇಕಾದ ಪೂಷಣನ ಸ್ತುತಿವಾಕ್ಯಗಳನ್ನು ಸೂತ್ರಗಳು ತಿಳಿಸುತ್ತವೆ. (ಸಾಂ. ಗೃ. ಸೂ. ೩-೯).

ಇತರ ತೇವತೆಗಳಿಗೆ ಸಮಾನವಾದ ಅನೇಕ ಲಕ್ಷಣಗಳು ಪೂಷಣನಿಗಿವೆ. ಅವನಿಗೂ 'ಅಸುರ' ಎಂಬ ಅಭಿಧಾನವುಂಟು (೫-೫೧-೧೧); ಅವನು ಬಲಿಷ್ಠ (೫-೪೩-೯); ಸತ್ವಪೂರ್ಣ (೮-೪-೧೫); ಬಹಳ ಸುಟಿಯಾಗಿದಾನೆ (೬-೫೪-೮); ಶಕ್ತ (೧-೧೩೮,೧); ಅಪ್ರತಿಹತ (೬-೪೮-೧೫) ಮನುಷ್ಯರನ್ನು ಮೀರಿಸಿದಾನೆ ಮತ್ತು ಕೀರ್ತಿಯಲ್ಲಿ ಇತರ ದೇವತೆಗಳಿಗೆ ಸಮಾನನು (೬-೪೮-೧೯). ವೀರರ ಅಧಿನಾಯಕ (೧-೧೦೬-೪); ಅಜೇಯನಾದ ರಕ್ಷಕ (೧-೪೯-೫) ಮತ್ತು ಯುದ್ಧಗಳಲ್ಲಿ ಸಹಾಯ ಮಾಡುತ್ತಾನೆ(೬-೪೮-೧೯). ಅವನು ಪ್ರಪಂಚವನ್ನೇ ರಕ್ಷಿಸುತ್ತಾನೆ (೧೦-೧೭-೩; ೨-೪೦-೧ ನ್ನು ಹೋಲಿಸಿ). ಅವನು ಒಬ್ಬ ಋಷಿ; ಪುರೋಹಿತನಿಗೆ ರಕ್ಷಕನಾದ ಸ್ನೇಹಿತ; ದೀನರೆಲ್ಲರಿಗೂ ಎಂದಿಗೂ ಕೈಬಿಡದ ಮಿತ್ರ (೧೦-೨೬-೫ ಮತ್ತು ೮). ಅವನು ಜ್ಞಾನಿ (೧-೪೨-೫) ಮತ್ತು ಉದಾರಿ (೨-೩೧-೪). ಅವನ ಔದಾರ್ಯವು ಅನೇಕ ವೇಳೆ ಉಕ್ತವಾಗಿದೆ. ಅವನಲ್ಲಿ ಎಲ್ಲಾ ವಿಧವಾದ ಐಶ್ವರ್ಯವೂ ಇದೆ (೧-೪೯-೬); ಅಪರಿಮಿತವಾದ ಐಶ್ವರ್ಯವಿದೆ (೮-೪-೧೫); ಐಶ್ವರ್ಯಾಭಿವೃದ್ಧಿಯನ್ನುಂಟು ಮಾಡುತ್ತಾನೆ. (೧-೪೯-೫); ಉಪಕಾರಿ (೧-೧೩೮-೨); ಔದಾರ್ಯಯುಕ್ತ (೬-೫೮-೪; ೮-೪-೧೮); ಎಲ್ಲಾ ವಿಧವಾದ ಶುಭಗಳನ್ನು ಅನುಗ್ರಹಿಸುತ್ತಾನೆ (೧-೪೨-೬). ಐಶ್ವರ್ಯಕ್ಕೆ ಅವನು ದೃಢಸ್ನೇಹಿತ ಮತ್ತು ಪುಷ್ಟಿಯನ್ನು ಹೆಚ್ಚಿಸುವವನು (೧೦-೨೬-೭ ಮತ್ತು ೮). (ದಸಾ) ಐಶ್ವರ್ಯಕರ್ತೃವೆಂಬುದು ಸಾಧಾರಣವಾಗಿ ಅಶ್ವಿನೀ ದೇವತೆಗಳಿಗೆ ಸೇರಿದುದು. ಆದರೂ ಕೆಲವು ಕಡೆ ಪೂಷಣನಿಗೂ ಉಕ್ತವಾಗಿದೆ (೧-೪೨-೫; ೬-೫೬-೪) ಅದೇರೀತಿ (ದಸ್ಮ) ಆಶ್ಚರ್ಯಕರ ಎಂಬುದೂ (೧-೪೨-೧೦; ೧-೧೩೮-೪) ಮತ್ತು ಅಗ್ನಿ ಇಂದ್ರರಿಗೆ ಮಾತ್ರ ಅನ್ವಯಿಸುವ (ದಸ್ಮವರ್ಚಸ್) ಆಶ್ಚರ್ಯಕರವಾದ ಕಾಂತಿವಿಶಿಷ್ಟ ಎಂಬುದೂ (೬-೫೮-೪) ಹೇಳಲ್ಪಟ್ಟಿವೆ. ಅಗ್ನಿಗೆ ಮಾತ್ರ ಅನ್ವಯಿಸುವ (ನರಾಶಂಸ) ಮನುಷ್ಯರಿಂದ ಸ್ತುತ್ಯ ಎಂಬುದೂ ಎರಡುಸಲ ಪೂಷಣನಿಗೆ ಸಂದಿದೆ (೧-೧೦೬-೪; ೧೦-೬೪-೩) ಒಂದು ಕಡೆ ಸರ್ವವ್ಯಾಪ್ತ (೨-೪೦-೬), ಭಕ್ತ್ಯುದ್ರೇಕಕಾರಕ (೯-೪೮-೩); ಭಕ್ತಿಯನ್ನು ತ್ವರಿಗೊಳಿಸುವಂತೆ ಪ್ರಾರ್ಥನೆ ಇದೆ. (೨-೪೦-೬); ಅವನ ಅಂಕುಶವು ಸ್ತುತಿಯನ್ನು ಪ್ರೇರಿಸುತ್ತದೆ (೬-೫೩-೪).

ಇವನಿಗೆ ಮಾತ್ರ ಉಪಯೋಗಿಸಿರುವ ವಿಶೇಷಣಗಳವು: 'ಅಘೃಣೇ', 'ಅಜಾಶ್ವ' 'ವಿಮೋಚನ' 'ವಿಮುಚೋನಪಾತ್', ಮತ್ತು ಒಂದೊಂದು ಸಲ 'ಪುಷ್ಟಿಂಭರ' (ಅಭಿವೃದ್ಧಿಕಾರಕ) ಮತ್ತು 'ಅನಷ್ಟಪಶು' (ದನಕರುಗಳನ್ನು ಕಳೆದುಕೊಳ್ಳದವನು), 'ಅನಷ್ಟವೇದಸ್' (ಪದಾರ್ಥಗಳನ್ನು ಕಳೆಯದವನು) ಮತ್ತು 'ಕರಂಭಾದ' (ಗಂಜಿಯನ್ನು ತಿನ್ನುವವನು) ಈ ಕಡೆಯದು ಪೂಷಣನ ವಿಷಯದಲ್ಲಿ ಜುಗುಪ್ಸೆಗೆ ಕಾರಣವಾಗಿರಬಹುದು (೬-೫೬-೧; ೧-೧೩೮-೪ ಇವುಗಳನ್ನು ಹೋಲಿಸಿ). ಸೋಮವು ಇಂದ್ರನ ಆಹಾರವಾಗಿರುವಂತೆ, ಕರಂಭವು ಪೂಷಣನ ಆಹಾರ; ಆದರೆ ಇಂದ್ರನು ಕರಂಭದಲ್ಲಿ ಒಂದು ಭಾಗ ಸ್ವೀಕರಿಸುತ್ತಾನೆ (೩-೫೨-೭). ಕರಂಭಿಣ (ಗಂಜಿಹೊಡನೆ ಮಿಶ್ರಿತವಾದ) ಎಂಬ ಪದ ಬರುವ ಎರಡೇ ಸ್ಥಳಗಳಲ್ಲಿಯೂ, ಅದು ಇಂದ್ರನ ಆಹಾರಕ್ಕೆ ಅನ್ವ

ಯಿಸುತ್ತದೆ (೩-೫೨-೧ ; ೪-೪೦-೨). 'ಪಶುಪಾ' (ಪಶುಗಳನ್ನು ಪಾಲಿಸುವವನು) ಎಂದು ಸ್ಪಷ್ಟವಾಗಿ ಹೇಳಿರುವುದು ಪೂಷಣನಿಗೊಬ್ಬನಿಗೆ ಮಾತ್ರವೇ.

ಪೂಷಣನನ್ನು ದ್ವಿವಚನಾಂತವಾಗಿ ಉಪಯೋಗಿಸಿರುವುದು, ಸೋಮ (೨-೪೦) ಮತ್ತು ಇಂದ್ರ (೬-೫೭) ಇಬ್ಬರೊಡನೆ. ಇಂದ್ರನ ಸೋದರನೆಂದು ಒಂದು ಸಲ (೬-೫೫-೫) ಕರೆದಿದೆ. ಇವರಿಬ್ಬರನ್ನು ಬಿಟ್ಟರೆ, ಭಗನ ಜೊತೆಯಲ್ಲಿಯೇ ಹೆಚ್ಚಾಗಿ ಸಂಬೋಧಿಸಿರುವುದು (೧-೯೦-೪ ; ೪-೩೦-೨೪ ; ೫-೪೧-೪ ; ೫-೪೬-೨ ; ೧೦-೧೨೫-೨ ; ಶ. ಬ್ರಾ. ೧೧-೪-೩-೩ ; ಕಾ. ಶ್ರೌ. ಸೂ. ೫-೧೩-೧ ಗಳನ್ನು ಹೋಲಿಸಿ). ಮತ್ತು ವಿಷ್ಣುವಿನ ಜೊತೆಯಲ್ಲಿ (೧-೯೦-೫ ; ೫-೪೬-೩ ; ೬-೨೧-೯ ; ೭-೪೪-೧ ; ೧೦-೬೬-೫) ಈ ಎಲ್ಲಾ ಮಂತ್ರಗಳಲ್ಲಿಯೂ ಪೂಷಣನು ಮತ್ತು ಬೇರೆ ದೇವತೆಯೂ ಸಂಸಮಾನರಾಗಿ ಹೇಳಲ್ಪಟ್ಟಿದಾರೆ. ಇತರ ದೇವತೆಗಳೊಡನೆಯೂ ಅಲ್ಲೊಂದು ಇಲ್ಲೊಂದು ಪ್ರಯೋಗವಿದೆ.

ಇದುವರೆಗೆ ಉದಹರಿಸಿರುವ ವಾಕ್ಯಗಳಿಂದ ಪೂಷಣನು ಪ್ರಕೃತಿಯ ಒಂದಂಶವೆಂದು ವ್ಯಕ್ತಪಡುವುದಿಲ್ಲ. ಆದರೆ ಅನೇಕ ವಾಕ್ಯಗಳು ಅವನು ಸೂರ್ಯನಿಗೆ ಸಂಬಂಧವುಳ್ಳವನೆಂದು ತೋರಿಸುತ್ತವೆ. ಯಾಸ್ಕರೂ (ನಿ. ೭-೧) ಇವನನ್ನು ಎಲ್ಲಾ ವಸ್ತುಗಳನ್ನೂ ರಕ್ಷಿಸುವ ಆದಿತ್ಯನೆಂದು ಹೇಳಿದಾರೆ. ಇವನ ಮುಖ್ಯವಾದ ಕಾರ್ಯಗಳಿಂದರೆ—ಮಾರ್ಗಗಳನ್ನು ಸರಿಪಡಿಸುವುದು, ಮತ್ತು ಮೃತರನ್ನು ಸತ್ಪುರುಷರಿರುವೆಡೆ ಸೇರಿಸುವುದು, ಮೊದಲನೆಯ ಗುಣದಿಂದ, ಮಾರ್ಗದರ್ಶಕ ಮತ್ತು ಪಶುಗಳ ರಕ್ಷಕನಾಗಿದಾನೆ ಎಂದರೆ ಜನರ ಸ್ಥಿತಿಗತಿಗಳನ್ನು ಉತ್ತಮಗೊಳಿಸುವವನು ಎನ್ನಬಹುದು.

ಪೂಷಣ ಎಂಬ ಈ ಪದವು ಪುಷ್ (ಪುಷ್ಟಿಯನ್ನುಂಟುಮಾಡು) ಎಂಬ ಧಾತುವಿನಿಂದ ಆಗಿದೆ. ಈ ಗುಣವು ಅವನ ಈ ವಿಶೇಷಣಗಳಿಂದ (ವಿಶ್ವವೇದಾಃ, ಅನಷ್ಟವೇದಾಃ, ಪುರೂವಸು, ಪುಷ್ಟಿಂಭರ) ಮತ್ತು ಐಶ್ವರ್ಯಕ್ಕಾಗಿ ಪ್ರಾರ್ಥನೆಗಳಿಂದಲೂ (೬-೪೮-೧೫ ; ಇತ್ಯಾದಿ) ಸ್ಪಷ್ಟವಾಗಿದೆ. ಅವನು ಅಪಾರ ಸಂಪತ್ತಿಗೂ, ಐಶ್ವರ್ಯ ಪ್ರವಾಹಕ್ಕೂ, ರಾಶಿಗೂ ಒಡೆಯ (೬-೫೫-೨-ಮತ್ತು ೩). ಆದರೆ ಪೂಷಣನಿಂದ ಲಬ್ಧವಾದ ಐಶ್ವರ್ಯವು ಇಂದ್ರ, ಪರ್ಜನ್ಯ, ಮರುದಾದಿಗಳಿಂದ ಲಬ್ಧವಾದ ಸಂಪತ್ತಿನಂತೆ ವೃಷ್ಟಿಸಂಬಂಧವಾದುದಲ್ಲ, ತೇಜಸ್ಸಿಗೆ [ಬೆಳಕಿಗೆ] ಸಂಬಂಧಿಸಿದುದು. ಇಹಲೋಕದಲ್ಲಿ ಮನುಷ್ಯರಿಗೆ, ದನಕರುಗಳಿಗೆ, ಅವನ ನಿರ್ಭಯವಾದ ಆಶ್ರಯ; ಪರಲೋಕದಲ್ಲಿ ಆನಂದಕರವಾದ ಪ್ರದೇಶಗಳಿಗೆ ದಾರಿ ತೋರಿಸುವುದು. ಇವುಗಳಿಂದ ಜನರ ಸ್ಥಿತಿಯು ಉತ್ತಮಗೊಳ್ಳುತ್ತದೆ. ಜನರು ಸುಖಿಗಳಾಗುತ್ತಾರೆ. ಎಂದರೆ, ಪೂಷಣನು ಪ್ರಜೆಗಳಿಗೆ ಉಪಕಾರಕವಾದ ಸೂರ್ಯನ ಅಂಶವೆನ್ನಬಹುದು.

ವಿಷ್ಣು

ಬ್ರಾಹ್ಮಣಾದಿಗಳಲ್ಲಿ ಅತಿಮುಖ್ಯ ದೇವತೆಯಾದರೂ, ಋಗ್ವೇದದಲ್ಲಿ ವಿಷ್ಣುವಿಗೆ ಅಷ್ಟು ಪ್ರಾಮುಖ್ಯತೆಯಿಲ್ಲ. ಸಂಖ್ಯೆ ತೋರಿಸುವುದಕ್ಕಿಂತ, ಅವನ ಪ್ರಭಾವವು ಬಹಳ ಹೆಚ್ಚಾಗಿದೆ. ಐದು ಸೂಕ್ತಗಳು ಮತ್ತು ಒಂದು ಸೂಕ್ತದ ಕೆಲವು ಭಾಗ ಮಾತ್ರ ವಿಷ್ಣುದೇವತಾಕ. ನೂರಕಿಂತ ಹೆಚ್ಚು ಸಲ ಅವನ ಹೆಸರು ಬಂದಿಲ್ಲ. ಇವುಗಳನ್ನು ಮಾತ್ರ ತೆಗೆದುಕೊಂಡರೆ ಅವನು ನಾಲ್ಕನೆಯ ದರ್ಜೆಯದೇವತೆ. ಅವನ ಶರೀರದ ವಿಷಯದಲ್ಲಿಯೂ ಹೆಚ್ಚು ವಿವರಗಳೇನೂ ಇಲ್ಲ. ಅವನ ಹೆಜ್ಜೆಗಳು ಅನೇಕ ಸಲ ವರ್ಣಿತವಾಗಿವೆ, ಅಗಾಧ ಶರೀರವುಳ್ಳ ಯುವಕ (೧-೧೫೫-೬). ಅವನ ವಿಷಯದಲ್ಲಿ ಬಹು ಮುಖ್ಯವಾದ ಅಂಶವೇನೆಂದರೆ ಅವನು ಇಡುವ ಮೂರು ಹೆಜ್ಜೆಗಳು (ವಿಕ್ರಮ); ಸುಮಾರು ಹನ್ನೆರಡು ಸಲ ಉಕ್ತವಾಗಿದೆ. ಅವನ ವಿಶೇಷಣಗಳು 'ಉರುಗಾಯ' ಮತ್ತು

'ಉರುಕ್ರಮ' ಎಂಬಿವೂ ಕೂಡ ಅದೇ ಅಂಶವನ್ನೇ ಹೇಳುತ್ತವೆ. ಮೂರು ಹೆಜ್ಜೆಗಳಿಂದ ಭೂಭಾಗವನ್ನೆಲ್ಲಾ ಅವರಿಸಿದಾನೆ. ಅದರಲ್ಲಿ ಎರಡು ಹೆಜ್ಜೆಗಳು ಕಾಣುತ್ತವೆ, ಮೂರನೆಯದು ಪಕ್ಷಿಗಳಿಗೂ ಮರ್ತ್ಯರಿಗೂ ಅಗೋಚರ (೧-೧೫೫-೫, ೭-೯೯-೨). ವಿಷ್ಣುವಿನ ಅತ್ಯಂತ ಎತ್ತರವಾದ ಸ್ಥಾನವು ಅಗ್ನಿಯ ಸ್ಥಾನವೇ. ಏಕೆಂದರೆ, ವಿಷ್ಣುವು ಅತ್ಯುನ್ನತವಾದ, ಅಗ್ನಿಯ ಮೂರನೆಯ ಸ್ಥಾನವನ್ನು ರಕ್ಷಿಸುತ್ತಾನೆ (೧೦-೧-೩) ಮತ್ತು ಅಗ್ನಿಯು ವಿಷ್ಣುವಿನ ಆ ಉನ್ನತಸ್ಥಾನದಿಂದ ಗೋವುಗಳನ್ನು ರಕ್ಷಿಸುತ್ತಾನೆ (೫-೩-೩). ಜ್ಞಾನಿಗಳು ವಿಷ್ಣುವಿನ ಮೂರನೆಯ ಹೆಜ್ಜೆಯನ್ನು ಆಕಾಶದಲ್ಲಿ ನೆಟ್ಟ ಕಣ್ಣಿನಿಂದ ನೋಡುತ್ತಾರೆ (೧-೨೨-೨೦) ಯೋಗ್ಯರು ಅನಂದ ಮಗ್ನರಾಗುವುದು, ಮಧುವಿನ ಬಾವಿಯಿರುವುದು (೧-೧೫೪-೫) ಮತ್ತು ದೇವತೆಗಳು ಸಂತೋಷಪಡುವುದೂ (೪-೨೯-೬) ಅವನ ಪ್ರಿಯವಾದ ಆ ಗೃಹದಲ್ಲಿ. ಆ ಎತ್ತರದಲ್ಲಿರುವ ಹೆಜ್ಜೆಯು ಕೆಳಮುಖನಾಗಿ ಚೆನ್ನಾಗಿ ಪ್ರಕಾಶಿಸುತ್ತದೆ. ಅದೇ ಇಂದ್ರ ಮತ್ತು ವಿಷ್ಣುಗಳ ವಾಸಸ್ಥಾನ. ಅಲ್ಲಿ ಅನೇಕ ಕೊಂಬುಗಳುಳ್ಳ ಮತ್ತು ವೇಗವಾಗಿ ಚಲಿಸುವ ಗೋವುಗಳು ಇವೆ. ಅವುಗಳನ್ನು ಪಡೆಯಬೇಕೆಂದು ಸ್ತುತಿಸುವವನ ಹಂಬಲ (೧-೧೫೪-೬). ಈ ಮೂರು ಹೆಜ್ಜೆಗಳಲ್ಲೇ ಎಲ್ಲಾ ಪ್ರಾಣಿಗಳೂ ವಾಸಿಸುತ್ತವೆ (೧-೧೫೪-೨), ಅವು ಮಧುವಿನಿಂದ ತುಂಬಿವೆ (೧-೧೫೪-೪) ವಿಷ್ಣುವು ತನಗೆ ಪ್ರಿಯವಾದ ವಾಸಸ್ಥಳವನ್ನು ರಕ್ಷಿಸುತ್ತಾನೆ (೩-೫೫-೧೦, ೧-೧೫೪-೫). ಅವನು ಈ ಲೋಕದಿಂದ ಬಹಳ ದೂರದಲ್ಲಿ ವಾಸಿಸುತ್ತಾನೆ (೭-೧೦೦-೫). ಅವನಿಗೆ ಮೂರು ವಾಸಸ್ಥಳಗಳಿವೆ (ತ್ರಿಷ ಧಸ್ಥ ೧-೧೫೬-೫). ಈ ವಿಶೇಷಣವು ಅಗ್ನಿಗೇ ಸಾಮಾನ್ಯವಾಗಿ ಸಂದಿರುವುದು. ಇಲ್ಲಿ ಮಾತ್ರ ವಿಷ್ಣುವಿಗೆ ಉಪಯೋಗಿಸಿದೆ.

ವಿಷ್ಣುವಿನ ಈ ಮೂರು ಪಾದಗಳು ಸೂರ್ಯಪಥವೆಂಬ ವಿಷಯದಲ್ಲಿ ಭಿನ್ನಾಭಿಪ್ರಾಯವಿಲ್ಲ. ಯಾಸ್ಕರ ಪೂರ್ವೀಕನಾದ (ನಿ. ೧೨-೧೯) ಔರ್ಣವಾಭನೂ, ಬಹುಜನ ಐರೋಪ್ಯ ವಿದ್ವಾಂಸರುಗಳೂ ಈ ಮೂರು ಹೆಜ್ಜೆಗಳು, ಸೂರ್ಯನು ಉದಯಿಸುವುದು, ನೆತ್ತಿಯ ಮೇಲಿರುವುದು ಮತ್ತು ಅಸ್ತಮಿಸುವುದನ್ನು ಸೂಚಿಸುತ್ತವೆ ಎಂದು ಅಭಿಪ್ರಾಯ ಪಡುತ್ತಾರೆ. ಯಾಜ್ಞವಾದಿ ಮೂರು ವೇದಗಳು, ಬ್ರಾಹ್ಮಣಗಳು, ಯಾಸ್ಕರ ಮತ್ತೊಬ್ಬ ಪೂರ್ವೀಕನಾದ ಶಾಕಪೂಣಿ, ಮತ್ತೆ ಕೆಲವು ಐರೋಪ್ಯ ವಿದ್ವಾಂಸರುಗಳು, ಇವರ ಪ್ರಕಾರ ಮೂರು ಹೆಜ್ಜೆಗಳೂ, ಪ್ರಪಂಚದ ಮೂರು ವಿಭಾಗಗಳಲ್ಲಿ ಸೂರ್ಯನ ಸಂಚಾರವನ್ನು ಸೂಚಿಸುತ್ತವೆ.

ಚಲನೆಯು ವಿಷ್ಣುವಿನ ವೈಶಿಷ್ಟ್ಯ. ಉರುಗಾಯ, ಉರುಕ್ರಮ ಮತ್ತು ವಿಕ್ರಮ (ಧಾತುಗಳು) ಅವನಿಗೇ ಅನ್ವಯಿಸುತ್ತವೆ. ಸೂರ್ಯನಿಗೂ ಈ ಧಾತು ಉಪಯೋಗಿಸಲ್ಪಟ್ಟಿದೆ. ಅವನು ಆಕಾಶ ಮಧ್ಯದಲ್ಲಿ ಇರುವ ನಾನಾ ವರ್ಣದ ಒಂದು ಶಿಲೆ ಮತ್ತು ದೊಡ್ಡ ಹೆಜ್ಜೆಗಳನ್ನಿಟ್ಟುಕೊಂಡು ಹೋದನು (೫-೪೭-೩) ಎಂದಿದೆ. ವಿಷ್ಣುವು ವೇಗವುಳ್ಳವನು (ಏಷ) ಅಥವಾ ಶೀಘ್ರಗಾಮಿ (ಏವಯಾ, ಏವಯಾವನ್). ವಿಷ್ಣುವಿನ ಶೀಘ್ರ ಮತ್ತು ದೂರ ಗತಿಗಳಲ್ಲಿ ಒಂದು ವ್ಯವಸ್ಥೆಯಿದೆ. ಮೂರು ಹೆಜ್ಜೆಗಳನ್ನಿಡುವುದೂ ಕೆಲವು ನಿಯಮಗಳನ್ನನುಸರಿಸಿ (೧-೨೨-೧೪) ನಿಯತವಾಗಿ ಆವರ್ತಿಸುವ ಇತರ ದೇವತೆಗಳಂತೆ (ಅಗ್ನಿ, ಸೋಮ, ಸೂರ್ಯ ಮತ್ತು ಉಷಸ್ಸು,) ವಿಷ್ಣುವು ನಿಯಮಗಳಲ್ಲಿಯೇ ಸದಾ ಇರತಕ್ಕವನು, ನಿಯಮಗಳ ವಿಧಾಯಕನು, ಮತ್ತು (ಅಗ್ನಿ, ಸೂರ್ಯ, ಉಷಸ್ಸುಗಳಂತೆ) ಪುರಾತನನೂ ಹೌದು, ಅಧುನಿಕನೂ ಹೌದು (೧-೧೫೬-೨ ರಿಂದ).ಸವಿತೃವಿನಂತೆ (೫-೮೧-೩), ವಿಷ್ಣುವೂ ಭೂಭಾಗಗಳ ಪರಿಮಿತಿಯನ್ನು ಗೊತ್ತುಮಾಡಿದಾನೆ (೧-೧೫೪-೧; ೬-೪೯-೧೩) ಒಂದು ಕಡೆ (೧-೧೫೫-೬; ೧-೧೬೪-೪;೮ನ್ನು ಹೋಲಿಸಿ) ವಿಷ್ಣುವು, ಚಕ್ರದಂತೆ, ತನ್ನ ನಾಲ್ಕು ನಾಮ (ಋತು) ಗಳುಳ್ಳ ೯೦ ಅಶ್ವ (ದಿನ)ಗಳನ್ನು ಚಲಿಸುವಂತೆ ಮಾಡಿದನು. ಇದು ೩೬೦ ದಿನಗಳುಳ್ಳ ವರ್ಷವಲ್ಲದೇ ಬೇರೆ ಇರಲಾರದು ಯಾಗಕ್ಕೆ ಬೇಕಾದ ಶಾಖವನ್ನು ಅನುಗ್ರಹಿಸು ಎಂಬ ಪ್ರಾರ್ಥನೆ (ಅ. ವೇ. ೫-೨೬-೭) ಇದೆ. ವಿಷ್ಣುವಿನ ತಲೆ ಭಿನ್ನವಾದರೆ ಅದೇ ಸೂರ್ಯನಾಗುತ್ತದೆ ಎಂದು ಬ್ರಾಹ್ಮಣಗಳಲ್ಲಿದೆ. ಗರಗರನೆ ತಿರುಗುವ ಚಕ್ರವು

ಅವನ ಆಯುಧಗಳಲ್ಲಿ ಒಂದು, ಪಕ್ಷಿರಾಜನಾದ ಗರುಡನೇ ಅವನ ವಾಹನ. ಈ ವಾಹನವು ಅಗ್ನಿಯಂತೆ ಉಜ್ವಲಕಾಂತಿ ವಿಶಿಷ್ಟವಾದುದು. ಅದಕ್ಕೆ ಗರುತ್ಮಾನ್, ಸುಪರ್ಣ ಇತ್ಯಾದಿ ನಾಮಗಳಿವೆ. ಈ ನಾಮಗಳು ಸೂರ್ಯನ ಪಕ್ಷಿಗೆ ಹೇಳಿದೆ. ಕೌಸ್ತುಭವೆಂಬ ಮಣಿಯೊಂದು ಅವನ ಎದೆಯ ಮೇಲೆ ರಾಜಿಸುತ್ತದೆ. ಇದನ್ನು ಸೂರ್ಯನೆಂದು ಹೇಳುವುದು ಒಂದು ಮತ. ಪ್ರಕೃತಿಯ ಯಾವುದೊಂದು ಅಂಶವನ್ನೂ ವಿಷ್ಣುವು ಸ್ಪಷ್ಟವಾಗಿ ಹೋಲುವುದಿಲ್ಲ. ಆದರೆ, ವಿಷ್ಣುವು ನೇಗವಾಗಿ ಚಲಿಸುವ ಜ್ಯೋತಿ. ಇದು ದೂರದೂರವಾಗಿ ಹೆಜ್ಜೆಗಳನ್ನಿಟ್ಟುಕೊಂಡು, ಪ್ರಪಂಚವನ್ನು ಸುತ್ತತ್ತದೆ ಎಂದು ಹೇಳಬಹುದು. ಇದು ಸೂರ್ಯನ ಒಂದು ಅಂಶವೂ ಹೌದು. ವಿಶ್ ಧಾತುವೂ ಇದೇ ಅರ್ಥವನ್ನೇ ಕೊಡುತ್ತದೆ. ಈ ಅರ್ಥದಲ್ಲಿ ವಿಷ್ಣುವನ್ನು ಸೂರ್ಯನೆಂದೇ ಹೇಳಬೇಕು. ಆದರೆ ಕೆಲವರು ಈ ಅಭಿಪ್ರಾಯವನ್ನು ಒಪ್ಪುವುದಿಲ್ಲ. ಅವರುಗಳು ವಿಷ್ಣುವು ಬೇರೆ ದೇವತೆಯೆಂದೇ ವಾದಿಸುತ್ತಾರೆ.

ವಿಷ್ಣುವಿನ ಮೂರನೆಯ ಮತ್ತು ಮೇಲಕ್ಕೆ ಎತ್ತಲ್ಪಟ್ಟ ಪಾದವೇ ಅವನ ಧಾಮವು. ಸೂರ್ಯನ ಅತ್ಯುಚ್ಚಾಯಸ್ಥಿತಿಯ ಪ್ರದೇಶವನ್ನು ಯಾಸ್ಕರು ವಿಷ್ಣುಪದ ಎಂದಿರುವುದು ಇದೇ ಅರ್ಥದಲ್ಲಿಯೇ ಇರಬೇಕು, ಮತ್ತು ಈ ಅಭಿಪ್ರಾಯದಲ್ಲೇ (ಗಿರಿಕ್ಷಿತ್) ಪರ್ವತದಲ್ಲಿ ವಾಸಿಸುವನು. [ಗಿರಿಷ್ಠಾಃ] ಪರ್ವತದಲ್ಲಿರುವವನು ಎಂದು ವಿಷ್ಣುವಿಗೆ ಹೇಳಿರಬೇಕು [೧-೧೫೪-೨ ಮತ್ತು ೩], ೧೫೫ನೆಯ ಸೂಕ್ತದಲ್ಲಿ [೧-೧೫೫.೧] ವಿಷ್ಣು ಮತ್ತು ಇಂದ್ರರಿಗೆ, ಒಟ್ಟಾಗಿ "ಮೋಸಕ್ಕೊಳಗಾಗದ ಇಬ್ಬರು, ಪರ್ವತದ ಶಿಖರದ ಮೇಲೆ [ಸಾನುನಿ] ನಿಂತಿದ್ದಾರೆ" ಎಂದು ಹೇಳಿದೆ. ಪರ್ವತಾಕಾರವಾದ ಮೋಡಗಳ ಮೇಲೆ ನಿಂತು ಭೂಮಿಯನ್ನು ನೋಡುವ ಸೂರ್ಯನಿಗೆ, ಹಿಂದಿನ ವಾಕ್ಯ ಅನ್ವಯಿಸುತ್ತದೆ [೫-೮೬-೪ನ್ನು ಹೋಲಿಸಿ]. ಇಂತಹ ಉಕ್ತಿಗಳಿಂದಲೇ ವಿಷ್ಣುವಿಗೆ ಪರ್ವತಗಳಿಗೊಡೆಯ ಎಂದು ಹೆಸರು ಬಂದಿರುವುದು [ತೈ. ಸಂ. ೩-೪-೫-೧].

ವಿಷ್ಣುವು ಈ ರೀತಿ ಹೆಜ್ಜೆಗಳನ್ನಿಡಲು ಕಾರಣವೇನೆಂಬುದು ಅಪ್ರಧಾನವಾದ ವಿಷಯ. ದುಃಖಮುಗ್ನನಾದ ಮನುಷ್ಯನಿಗೋಸ್ಕರ ವಿಷ್ಣುವು ಭೂಭಾಗಗಳನ್ನು ಮೂರು ಸಲ ಹಾದುಹೋದುದು [೬-೪೯-೧೩]; ಮನುಷ್ಯನು ಮನೆಕಟ್ಟಿಕೊಳ್ಳಲು ಕೊಡುವುದಕ್ಕೋಸ್ಕರಲೇ, ಅವನು ಹೆಜ್ಜೆ ಹಾಕಿದುದು [೭-೧೦೦-೪]; ಇಂದ್ರನೊಡನೆ ಅವನು ದೂರದೂರವಾಗಿ ಹೆಜ್ಜೆಗಳನ್ನಿಟ್ಟು ನಾವು ಜೀವಿಸುವುದಕ್ಕೋಸ್ಕರ ಪ್ರಪಂಚವನ್ನು ವಿಸ್ತರಿಸಿದನು [೬-೬೯-೫,೬]. ಈ ಸಂಬಂಧವಾಗಿ ಮುಂದೆ ಪುರಾಣಾದಿಗಳಲ್ಲಿ, ವಾಮನಾವತಾರ ಕಥಾದಿಗಳು ಹೊರಟಿರುತ್ತವೆ. ಈ ಕಥೆಗೆ ಆಧಾರವಾಗಿ ಬ್ರಾಹ್ಮಣಗಳಲ್ಲಿ [ಶ. ಬ್ರಾ. ೧-೨-೫-೫, ತೈ. ಸಂ. ೨-೧-೩-೧, ತೈ. ಬ್ರಾ. ೧-೬-೧-೫), ಅಸುರರಿಂದ ಆವೃತವಾದ ಭೂಮಿಯನ್ನು ದೇವತೆಗಳಿಗೆ ಪುನಃ ಕೊಡಿಸುವುದಕ್ಕೋಸ್ಕರ ವಿಷ್ಣುವು ವಾಮನನಾದನು ಎಂದಿದೆ.

ವಿಷ್ಣುವಿನ ಅಪ್ರಧಾನವಾದ ಲಕ್ಷಣಗಳಲ್ಲಿ ಬಹಳ ಮುಖ್ಯವಾದುದೆಂದರೆ ಅವನಿಗೆ ಇಂದ್ರನಲ್ಲಿರುವ ಸ್ನೇಹ, ವೃತ್ರನ ಜೊತೆಯಲ್ಲಿ ಯುದ್ಧಮಾಡುವಾಗ ವಿಷ್ಣುವು ಇಂದ್ರನಿಗೆ ಬೆಂಬಲ. ಇಂದ್ರವಿಷ್ಣುಗಳಿಬ್ಬರನ್ನೂ ಸ್ತುತಿಸುವ ಸೂಕ್ತವೊಂದಿದೆ [೬-೬೯] ಮತ್ತು ಇವರಿಬ್ಬರ ಹೆಸರು ಒಟ್ಟಾಗಿ ಬಹಳ ಸಲ ಬರುತ್ತದೆ. ಅಲ್ಲದೇ, ವಿಷ್ಣುದೇವತಾಕವಾದ ಸೂಕ್ತಗಳಲ್ಲಿಯೂ ಸ್ಪಷ್ಟವಾಗಿಯಾಗಲೀ [೭-೯೯-೫ ಮತ್ತು ೬; ೧-೧೫೫-೨] ಅಸ್ಪಷ್ಟವಾಗಿಯಾಗಲೀ [೭-೯೯-೪; ೧-೧೫೫-೬ ೧-೧೫೫-೧] ಸೂಚಿತವಾಗಿರುವ ದೇವತೆಯೆಂದರೆ ಇಂದ್ರನೊಬ್ಬನೇ. ಇಂದ್ರನ ಓಜಸ್ಸಿನಿಂದ ವಿಷ್ಣುವು ಮೂರು ಹೆಜ್ಜೆಗಳನ್ನಿಟ್ಟನು [೮-೧೨-೨೭]. ವೃತ್ರನನ್ನು ವಧಿಸುವ ಸಂದರ್ಭದಲ್ಲಿ ಇಂದ್ರನು "ಮಿತ್ರನಾದ ವಿಷ್ಣುವೇ, ವಿಸ್ತಾರವಾಗಿ ಹೆಜ್ಜೆ ಹಾಕುತ್ತಾ ಹೊರಡು" [೪-೧೪-೧೧] ಎನ್ನುತ್ತಾನೆ.

ವಿಷ್ಣುವನ್ನು ಜೊತೆಯಲ್ಲಿಟ್ಟುಕೊಂಡು ಇಂದ್ರನು ವೃತ್ರನನ್ನು ವಧಿಸಿದನು (೬-೨೦-೨) ಇಂದ್ರ ಮತ್ತು ವಿಷ್ಣುಗಳ ದಾಸನನ್ನು ಜಯಿಸಿದರು; ಶಂಬರನ ೯೯ ಕೋಟಿಗಳನ್ನು ನಾಶಮಾಡಿದರು (೭-೯೯-೪ ಮತ್ತು ೫) ವಿಷ್ಣುವು ಇಂದ್ರನ ಆಪ್ತ ಮಿತ್ರ (೧-೨೨-೧೯). ತನ್ನ ಸ್ನೇಹಿತನೊಡಗೂಡಿ, ವಿಷ್ಣುವು ಕೊಟ್ಟಿಗೆಯ ಬಾಗಿಲನ್ನು ತೆಗೆಯುತ್ತಾನೆ (೧-೧೫೬-೪). ವೃತ್ರನ ಮೇಲೆ ಇಂದ್ರನು ವಜ್ರವನ್ನು ಪ್ರಯೋಗಿಸಿದಾಗ ವಿಷ್ಣುವು ಅವನ ಹಿಂದೆಯೇ ಇರುತ್ತಾನೆ (ಶ. ಬ್ರಾ. ೫-೫-೫-೧). ಅನೇಕ ಮಂತ್ರಗಳಲ್ಲಿ, ಇಂದ್ರನೊಡನೆ ವಿಷ್ಣುವನ್ನು (೪-೨-೪; ೪-೫೫-೪; ೮-೧೦-೨; ೧೦-೬೬-೪) ಆಹ್ವಾನಿಸಿದೆ. ಇಂದ್ರಾವಿಷ್ಣೂ ಎಂದು ದ್ವಿವಚನಾಂತ ಪ್ರಯೋಗವಿರುವಾಗ, ವಿಷ್ಣುವಿಗೂ ಇಂದ್ರನ ಕೆಲವು ಗುಣಗಳು ಇರುವುದು ಕಂಡುಬರುತ್ತವೆ; ಸೋಮಪಾನ ಮಾಡುವ ಶಕ್ತಿ (೬-೬೯) ಮತ್ತು ಇಂದ್ರನ ಜಯಗಳೇ (೭-೯೦-೪ರಿಂದ ೬) ಅವು. ಅದೇ ರೀತಿ ಇಂದ್ರನೂ ವಿಷ್ಣುವಿನ ದೊಡ್ಡ ಹೆಜ್ಜೆಯಿಡುವ ಶಕ್ತಿಯಲ್ಲಿ ಭಾಗಿಯಾಗುತ್ತಾನೆ (೬-೬೯-೫; ೭-೯೯-೬) ಇಬ್ಬರಿಗೂ ಒಟ್ಟಾಗಿ, ವಿಸ್ತಾರವಾದ ವಾಯುಮಂಡಲ ಸೃಷ್ಟಿ ಮತ್ತು ಪ್ರದೇಶಗಳನ್ನು ವಿಸ್ತರಿಸುವ ಕಾರ್ಯ (೬-೬೯-೫), ಮತ್ತು ಸೂರ್ಯ, ಉಷಸ್ಸು ಮತ್ತು ಅಗ್ನಿಗಳ ಜನನ ಕಾರ್ಯ (೭-೯೯-೪) ಇವುಗಳು ಲಕ್ಷಣಗಳೆಂದು ಹೇಳಿವೆ. ಈ ಸ್ನೇಹಕ್ಕೋಸ್ಕರಲೇ, ಇಂದ್ರನು ವಿಷ್ಣುವಿನೊಡನೆ ಸೋಮಪಾನ ಮಾಡಿ (೮-೩-೪; ೮-೧೨-೧೬), ಅದರಿಂದ ಅವನ ಶಕ್ತಿಯನ್ನು ಹೆಚ್ಚಿಸುತ್ತಾನೆ (೮-೩-೪; ೧೦-೧೧೩-೨). ವಿಷ್ಣುವಿನಿಂದ ಸುತವಾದ ಸೋಮವನ್ನು ಇಂದ್ರನು ಮೂರು ಬಟ್ಟಲುಗಳಲ್ಲಿ ಪಾನ ಮಾಡಿದನು (೨-೨೨-೧); ಇದು, ಮಧುಪೂರಿತವಾದ ವಿಷ್ಣುವಿನ ಮೂರು ಹೆಜ್ಜೆಗಳನ್ನು ಜ್ಞಾಪಕಕ್ಕೆ ತರುತ್ತದೆ (೧-೧೫೪-೪). ವಿಷ್ಣುವು ಇಂದ್ರನಿಗೋಸ್ಕರ ೧೦೦ ಎಮ್ಮೆಗಳನ್ನು ಪಾಕಮಾಡುತ್ತಾನೆ (೬-೧೭-೧೧) ಅಥವಾ ೧೦೦ ಎಮ್ಮೆ ಮತ್ತು ಹಾಲಿನಿಂದಾದ ಪಾನೀಯವನ್ನು ಪಾಕಮಾಡುತ್ತಾನೆ (೮-೬೬-೧೦). ಮಿತ್ರ, ವರುಣ, ಮತ್ತು ಮರುತ್ತುಗಳಿಂದ ಕೂಡಿ ವಿಷ್ಣುವು ಇಂದ್ರನನ್ನು ಸ್ತುತಿಸುತ್ತಾನೆ (೮-೧೫-೯).

ವೃತ್ರ ಯುದ್ಧದಲ್ಲಿ ಸತತವಾಗಿ ಇಂದ್ರನ ಜೊತೆಯಲ್ಲಿದ್ದ ಮರುತ್ತುಗಳೂ ವಿಷ್ಣುವಿನ ಸಹಚಾರಿಗಳಾಗಿದಾರೆ. ವಿಷ್ಣುವು ಮದಕರವಾದ ಸೋಮವನ್ನು ಅಪೇಕ್ಷಿಸಿದಾಗ ಮರುತ್ತುಗಳು ತಮ್ಮ ವೇದಿಕೆಯ ಮೇಲೆ ಪಕ್ಷಿಗಳಂತೆ ಕುಳಿತರು (೧-೮೫-೭). ಕ್ಷಿಪ್ರಗತಿಯ ವಿಷ್ಣುವಿನ ಉದ್ದೇಶವಾಗಿ ಹೋಮಮಾಡುವಾಗ, ಮರುತ್ತುಗಳು ಅಕೂತಂರಾಗುತ್ತಾರೆ (೨-೩೪-೧೧). ವೇಗಗಾಮಿಯಾದ ವಿಷ್ಣುವಿನ ಔದಾರ್ಯದ ಫಲವೇ ಈ ಮರುತ್ತುಗಳು (೮-೨೦-೩). ಪೂಷಣ ಮತ್ತು ವಿಷ್ಣುವು ಇಂದ್ರನಿಗಾಗಿ ೧೦೦ ಎಮ್ಮೆಗಳನ್ನು ಪಾಕಮಾಡುತ್ತಿದ್ದಾಗ, ಮರುತ್ತುಗಳು ಇಂದ್ರನಿಗೆ ಬೆಂಬಲರಾಗಿದ್ದರು (೬-೧೭-೧೧). ಮರುತ್ತುಗಳ ಮನೋಭಿಪ್ರಾಯವನ್ನೇ ವರುಣ ಮತ್ತು ಅಶ್ವಿನೀದೇವತೆಗಳು ಅನುಸರಿಸುತ್ತಾರೆ; ಇಂತಹ ಮರುತ್ತುಗಳಿಂದ ಸಹಚರಿತನಾಗಿಯೇ ವಿಷ್ಣುವು ವಿಧಿಗಳನ್ನು ವಿಧಿಸುವುದು (೧-೧೫೬-೪). ಒಂದು ಇಡೀ ಸೂಕ್ತದಲ್ಲಿ (೫-೮೭) ವಿಷ್ಣು ಮತ್ತು ಮರುತ್ತುಗಳು ಒಟ್ಟಾಗಿಯೇ ಇದ್ದಾರೆ. ತಾನು ಹೊರಟಾಗ ಮರುತ್ತುಗಳನ್ನೂ ಕರೆದುಕೊಂಡು ವೇಗವಾಗಿ ಹೋಗುತ್ತಾನೆ (೫-೮೭-೪ ಮತ್ತು ೫).

ಇವುಗಳಲ್ಲದೆ, ಅಲ್ಲಲ್ಲೇ ವಿಷ್ಣುವು ನಾನಾಗುಣ ಮತ್ತು ರೂಪವಿಶಿಷ್ಟನಾಗಿ ಉಕ್ತನಾಗಿದಾನೆ. "ಯುದ್ಧಕಾಲದಲ್ಲಿ ಬೇರೆರೂಪಧಾರಿಯಾದರೂ, ನಮಗೆ ಈ ರೂಪವು ಮರೆಯದಂತಿರಲಿ" (೭-೧೦೦-೬). ಅವನು ಗರ್ಭರಕ್ಷಕ (೭-೩೬-೯); ಗರ್ಭಧಾರಣೆಗೆ ಸಹಾಯಕನಾಗೆಂದು ಕೆಲವು ದೇವತೆಗಳೊಡನೆ ವಿಷ್ಣುವು ಪ್ರಾರ್ಥಿತನಾಗಿದಾನೆ (೧೦-೧೮೪-೧). ೧೦-೧೮೪-೧೭ನೇ ಮಂತ್ರವಾದ ಮೇಲೆ ಬರುವ ಖಿಲದಲ್ಲಿ, ಗರ್ಭಕೋಶದಲ್ಲಿ ಸ್ಫುರದ್ರೂಪಿಯಾದ ಪುಂಶಿಶುವನ್ನು ಇಡು ಅಥವಾ ವಿಷ್ಣುವಿನ ಅತ್ಯಂತ ಸುಂದರರೂಪದಂತೆ ರೂಪವುಳ್ಳ ಪುಂಶಿಶುವನ್ನು ಇಡು ಎಂದು ಪ್ರಾರ್ಥಿಸಲ್ಪಟ್ಟಿದಾನೆ.

ವಿಷ್ಣುವಿನ ಇತರ ಗುಣಗಳು ಸಾಧಾರಣವಾದುವು; ಇತರ ದೇವತೆಗಳಲ್ಲಿ ಕಂಡುಬರುವಂತಹವು. ಅವನು ಉದಾರಿ ಮತ್ತು ತೊಂದರೆ ಮಾಡುವವನಲ್ಲ (೮-೨೫-೧೨) ಉಪಕಾರಿ (೧-೧೫೬-೫); ಧಾರಾಳಿ (೭-೪೦-೫); ರಕ್ಷಕ (೩-೫೫-೧೦); ಅವನನ್ನು ವಂಚಿಸಲು ಸಾಧ್ಯವಿಲ್ಲ. (೧-೨೨-೧೪); ನಿರುಪದ್ರವನೂ, ಉದಾರಿಯೂ ಆದ ವಿವೇಚಕನು (೧-೧೫೫-೪). ಅವನೇ ತ್ರಿಲೋಕಗಳ, ಎಲ್ಲಾ ಪ್ರಾಣಿಗಳ ಸ್ಥಿತಿಗೆ ಕಾರಣನು (೧-೧೫೫೪ ೪). ಅವನು ಭೂಮಿಯನ್ನು ಸುತ್ತಲೂ ಗೂಟಗಳಿಗೆ ಕಟ್ಟಹಾಕಿದಾನೆ (೭-೯೯-೩). ಅವನು ವಿಧಿಗಳನ್ನು ವಿಧಿಸುವವನು (೧-೧೫೬-೪).

ಬ್ರಾಹ್ಮಣಗಳಲ್ಲಿ, ವಿಷ್ಣುವು, ಸ್ವರ್ಗ, ಆಕಾಶ ಮತ್ತು ಭೂಮಿಗಳಲ್ಲಿ ಮೂರು ಹೆಜ್ಜೆಗಳನ್ನಿಟ್ಟನೆಂದಿದೆ (ಶ. ಬ್ರಾ ೧-೯-೩-೯; ತೈ. ಬ್ರಾ. ೩-೧-೨-೭). ಈ ಮೂರು ಹೆಜ್ಜೆಗಳನ್ನು ಯಾಗ ಕರ್ತೃವು ಯಾಗದಲ್ಲಿ ಅನುಕರಿಸುತ್ತಾನೆ (ಶ. ಬ್ರಾ. ೧-೯-೩ ೧೦ ಮತ್ತು ೧೫).

ವಿಷ್ಣುವಿಗೆ ಸಂಬಂಧಿಸಿದ ಎರಡು ಕಥೆಗಳಿಗೆ ಋಗ್ವೇದದಲ್ಲಿ ಆಧಾರವಿದೆ. ಇಂದ್ರನ ರಕ್ಷನನ್ನು ವಹಿಸಿ, ರಾಕ್ಷಸನಾಶ ಮಾಡಿದಾನೆ. ಬ್ರಾಹ್ಮಣಗಳಲ್ಲಿ ದೇವತೆಗಳು ಮತ್ತು ಅಸುರರು ನಿತ್ಯ ವೈರಿಗಳು; ಪದೇ ಪದೇ ಯುದ್ಧಮಾಡುತ್ತಾರೆ. ದೇವತೆಗಳೇ ಸದಾ ಜಯಶೀಲರಲ್ಲ; ಅನೇಕ ವೇಳೆ ಸಂಪೂರ್ಣ ಪರಾಜಯ ಹೊಂದುತ್ತಾರೆ. ಆದ್ದರಿಂದ ದೇವತೆಗಳು ಜಯಪಡೆಯಲು ಉಪಾಯ ಮಾಡಬೇಕಾಗುತ್ತದೆ (ಐ. ಬ್ರಾ. ೬-೧೫)ರಲ್ಲಿ, ಇಂದ್ರ ಮತ್ತು ವಿಷ್ಣುಗಳು ಅಸುರರೊಡನೆ ಯುದ್ಧಮಾಡಿ, ಒಂದು ಒಪ್ಪಂದಕ್ಕೆ ಬರುತ್ತಾರೆ; ವಿಷ್ಣುವು ಮೂರು ಹೆಜ್ಜೆಯಲ್ಲಿ ಆವರಿಸುವಷ್ಟು ಭೂಮಿಯನ್ನು ಆ ಇಬ್ಬರು ದೇವತೆಗಳು (ಇಂದ್ರ ಮತ್ತು ವಿಷ್ಣು) ತೆಗೆದುಕೊಳ್ಳತಕ್ಕದೆಂದು. ಅದರಂತೆ ವಿಷ್ಣುವು ಪ್ರಪಂಚ, ವೇದಗಳು, ವಾಕ್ಕು ಎಲ್ಲವನ್ನೂ ಮೂರು ಹೆಜ್ಜೆಗಳಲ್ಲಿ ಮುಗಿಸಿದನು (ಶ. ಬ್ರಾ. ೧-೨-೫)ರಲ್ಲಿ ಹೀಗೆ ಹೇಳಿದೆ.—ಅಸುರರು ದೇವತೆಗಳನ್ನು ಸೋಲಿಸಿ, ಭೂಮಿಯನ್ನು ಹಂಚಿಕೊಳ್ಳಲು ಪ್ರಾರಂಭಿಸಿದರು; ಆಗ ದೇವತೆಗಳು ವಿಷ್ಣುವನ್ನು ಮುಂದೆಮಾಡಿಕೊಂಡು ಬಂದು ತನುಗೊಂದು ಭಾಗವನ್ನು ಕೇಳಿದರು. ವಾಮನರೂಪಿಯಾದ ವಿಷ್ಣುವು ಆವರಿಸಿಕೊಳ್ಳುವಷ್ಟು ಜಾಗವನ್ನು ಕೊಡಲು ಅಸುರರು ಒಪ್ಪಿದರು ಆಗ ದೇವತೆಗಳು ಯಾಗಮಾಡಿ, ವಿಷ್ಣುವಿನ ಮೂಲಕ ಭೂಮಿಯೆಲ್ಲವನ್ನೂ ಪಡೆದರು. ಇಲ್ಲಿ ಮೂರು ಹೆಜ್ಜೆ ಎಂದು ಇಲ್ಲ. ಬೇರೆ ಸ್ಥಳದಲ್ಲಿ ಇದೆ. (ಶ. ಬ್ರಾ. ೧-೯-೩-೯) ಮೂರು ಲೋಕಗಳನ್ನೂ ಹಾಯ್ದು, ವಿಷ್ಣುವು ದೇವತೆಗಳಿಗೆ ಸರ್ವತ್ರವ್ಯಾಪ್ತಿಯನ್ನು ಸಂಪಾದಿಸಿಕೊಟ್ಟನು. ವಿಷ್ಣುವು ವಾಮನನಾಗಿ, ಮೂರು ಲೋಕವನ್ನು ಗೆದ್ದನು (ತೈ. ಸಂ. ೨-೧-೩-೧). ವಾಮನರೂಪವನ್ನು ತಾಳಿದುದು ದೈತ್ಯರ ಅಪನಂಬಿಕೆಯನ್ನು ಹೋಗಲಾಡಿಸಲು. ಇದೇ ಮುಂದೆ ಪುರಾಣಗಳಲ್ಲಿ ವಿಷ್ಣುವಿನ ವಾಮನಾವತಾರ ಕಥೆಗೆ ಆಧಾರವಾಗಿದೆ.

ಎರಡನೆಯ ಕಥೆಗೆ ಆಧಾರ ಋಗ್ವೇದದ ಎರಡು ಮಂತ್ರಗಳು (೧-೬೧-೭; ೮-೬೬-೧೦). ವಿಷ್ಣುವು ಸೋಮಪಾನಮಾಡಿ, ಇಂದ್ರನಿಂದ ಪ್ರೇರಿತನಾಗಿ ವೃತ್ರ ವರಾಹನಿಗೆ ಸೇರಿದ ನೂರು ಎಮ್ಮೆಗಳನ್ನೂ ಕ್ಷೀರ ಪಾತ್ರೆಯೊಂದನ್ನೂ ಎತ್ತಿಕೊಂಡು ಹೋದನು; ಆಗ ಇಂದ್ರನು ಪರ್ವತಾಕಾರವಾದ ಮೋಡಗಳ ಮೂಲಕ ಬಾಣವನ್ನು ಹೊಡೆದು, ಆ ವರಾಹವನ್ನು ಕೊಂದನು. ಇದು ತೈತ್ತಿರೀಯ ಸಂಹಿತೆಯಲ್ಲಿ ಹೀಗೆ ರೂಪುಗೊಂಡಿದೆ. (೬-೨) ಅಸುರರ ಐಶ್ವರ್ಯವನ್ನು ದೋಚಿಕೊಂಡು ಹೋಗಿ, ಒಂದು ವರಾಹವು ಸಪ್ತಪರ್ವತಗಳ ಆಚೆ ಆ ಐಶ್ವರ್ಯವನ್ನು ಇಟ್ಟಿತು; ಆಗ ಇಂದ್ರನು ದರ್ಬೆಯೊಂದನ್ನು ತೆಗೆದುಕೊಂಡು, ಅದರಿಂದ, ಏಳು ಪರ್ವತಗಳನ್ನು ಛೇದಿಸಿ, ವರಾಹವನ್ನು ಕೊಂದನು; ವಿಷ್ಣುವು (ಯಜ್ಞವು) ಅದನ್ನು ದೇವತೆಗಳಿಗೆ ಬಲಿಯಾಗಿ ಎತ್ತಿಕೊಂಡು ಹೋದನು, ಮತ್ತು ದೇವತೆಗಳಿಗೆ ರಾಕ್ಷಸರ ಐಶ್ವರ್ಯವು ಸಿಕ್ಕಿತು. ಇದೇ ಕಥೆಯು ಸ್ವಲ್ಪ ಬದಲಾವಣೆಗೊಡನೆ ಚರಕ ಬ್ರಾಹ್ಮಣದಲ್ಲಿ ಉಕ್ತವಾಗಿದೆಯೆಂದು ಸಾಯಣರಿಂದ ೮-೬೬-೧೦ನೆಯ ಮಂತ್ರದ ವ್ಯಾಖ್ಯಾನದಲ್ಲಿ

ಉಕ್ತವಾಗಿದೆ. ಶತಪಥ ಬ್ರಾಹ್ಮಣದಲ್ಲಿ (೧೪-೧-೨-೧೧) ನೀರಿನಲ್ಲಿ ಮುಳುಗಿದ್ದ ಭೂಮಿಯನ್ನು ವರಾಹವು ಮೇಲಕ್ಕೆತ್ತಿತು ಎಂದೂ, ತೈತ್ತಿರೀಯ ಸಂಹಿತೆಯಲ್ಲಿ (೭-೧-೫-೧), ಪ್ರಳಯ ಜಲಧಿಯಿಂದ ಭೂಮಿಯನ್ನು ಉದ್ಧರಿಸಿದ ವರಾಹವು ಪ್ರಜಾಪತಿಯ ಒಂದು ರೂಪವೆಂದೂ ಹೇಳಿದೆ. ಮುಂದೆ ಪುರಾಣಗಳಲ್ಲಿ ಈ ವರಾಹವು ವಿಷ್ಣುವಿನ ಒಂದು ಅವತಾರವೆಂದು ಪ್ರಸಿದ್ಧವಾಗಿದೆ.

ಮನುವನ್ನು ಪ್ರವಾಹದಿಂದ ಬಿಡುಗಡೆ ಮಾಡಿದ (ಶ. ಬ್ರಾ. ೧-೮-೧-೧) ಮತ್ಸ್ಯವು ಮುಂದೆ ವಿಷ್ಣುವಿನ ಅವತಾರವೆಂದು ಪರಿಗಣಿತವಾಗಿದೆ. ಅದೇ ರೀತಿ, ಸೃಜಿಸಬೇಕೆಂಬ ಅಪೇಕ್ಷೆಯಿಂದ, ಪ್ರಜಾಪತಿಯು (ಶ. ಬ್ರಾ. ೭-೫-೧-೫; ತೈ. ಆ. ೧-೨೩-೩) ಪ್ರಳಯೋದಕದಲ್ಲಿ ಕೂರ್ಮರೂಪಿಯಾಗಿ ಸಂಚರಿಸುತ್ತಾನೆ; ಮುಂದೆ ಇದೂ ಒಂದು ವಿಷ್ಣುವಿನ ಅವತಾರವೆಂದು ಪ್ರಥಿತವಾಗುತ್ತದೆ.

ವಿಷ್ಣುವೇ ಮೊದಲು ಯೋಗದ ವಿಷಯವನ್ನು ತಿಳಿದು, ಬಹಳ ಪ್ರಾಮುಖ್ಯತೆಗೆ ಬರುತ್ತಾನೆ; ಬಿಲ್ಲು ಹತೋಟಿ ತಪ್ಪಿ ವಿಷ್ಣುವಿನ (ಯೋಗದ) ತಲೆ ಕತ್ತರಿಸಿ ಹೋಗಿ, ಅದೇ ಸೂರ್ಯ (ಆದಿತ್ಯ)ನಾಯಿತು (ಶ. ಬ್ರಾ. ೧೪-೧-೧). ಆಮೇಲೆ (ತೈ ಆ. ೫-೧-೧ ರಿಂದ ೭) ಅಶ್ವಿನೀದೇವತೆಗಳು ಯಾಗದ ಶಿರೋಭಾಗವನ್ನು ಮುಂಚಿನ ಸ್ಥಾನದಲ್ಲಿಟ್ಟರು; ಅದು ಸಂಪೂರ್ಣವಾಗುತ್ತಲು, ದೇವತೆಗಳು ಸ್ವರ್ಗಲೋಕವನ್ನು ಜಯಿಸಿದರು ಎಂಬ ಒಂದು ಕಥೆ.

ವಿಷ್ಣುವು ದೇವತೆಗಳಲ್ಲೆಲ್ಲಾ ದೊಡ್ಡವನು; ಅಗ್ನಿಯು ಚಿಕ್ಕವನು; ಇತರ ದೇವತೆಗಳೆಲ್ಲಾ ಇವರ ಮಧ್ಯೆ ಇದಾರೆ (ಐ. ಬ್ರಾ. ೧-೧). ವಿಷ್ಣುವು ದೇವತೆಗಳ ಬಾಗಿಲು ಕಾಯುವವನು (ಐ. ಬ್ರಾ. ೧-೩೦) ಎಂದೂ ಇದೆ; ಈ ಸಂದರ್ಭದಲ್ಲಿ ತನ್ನ ಸ್ನೇಹಿತನೊಡಗೂಡಿ, ಗೋಶಾಲೆಗಳ ಬಾಗಿಲು, ವಿಷ್ಣುವಿನಿಂದ ತೆರೆಯಲ್ಪಟ್ಟಿತು ಎಂದು ಹೇಳುವ ೧-೧೫೬-೪ನೆಯ ಮಂತ್ರವು ಉದ್ಧೃತವಾಗಿದೆ.

ವಿವಸ್ವಾನ್

ವಿವಸ್ವತನನ್ನು ಹೊಗಳುವ ಪ್ರತ್ಯೇಕಸೂಕ್ತವಿಲ್ಲ; ಆದರೆ ಸುಮಾರು ಮೂವತ್ತು ಸಲ ಆ ಹೆಸರು ಬರುತ್ತದೆ. ಅವನು ಅಶ್ವಿನೀದೇವತೆಗಳ ತಂದೆ (೧೦-೧೭೬-೨) ಮತ್ತು ಯಮನ ತಂದೆ (೧೦-೧೪-೫; ೧೦-೧೭೬-೧). ಮನುಷ್ಯರಿಗೆ ಮೂಲಪುರುಷನಾದ ಮನುವಿನ ತಂದೆ. ಈ ಮನುವಿಗೇ ವಿವಸ್ವಾನ್ (ವಾಲ. ೪-೧) ಎಂಬ ಹೆಸರಿದೆ. ಅಥರ್ವವೇದ, ಶತಪಥ ಬ್ರಾಹ್ಮಣಗಳಲ್ಲಿ ಮನುವಿಗೆ ವೈವಸ್ವತ ಎಂಬ ಅಭಿಧಾನವಿದೆ. ಮನುಷ್ಯರೂ ವಿವಸ್ವಾನ್ ಆದಿತ್ಯನ ಸಂತಾನ (ತೈ. ಸಂ. ೬-೫-೬-೨; ಶ. ಬ್ರಾ. ೩-೧-೩-೪). ಒಂದೊಂದು ಸಲ ದೇವತೆಗಳೂ ವಿವಸ್ವತನಿಂದ (ಜನಿಮಾ) ಜನಿಸಿದರೆಂದಿದೆ (೧೦-೬೩-೧). ತ್ವಷ್ಟೃವಿನ ಪುತ್ರಿ ಸರಣ್ಯುವು ವಿವಸ್ವತನ ಪತ್ನಿ (೧೦-೧೭-೧ ಮತ್ತು ೨).

ವಿವಸ್ವತ ಮತ್ತು ಮಾತರಿಶ್ವರಿಗೇ ಅಗ್ನಿಯು ಮೊದಲು ಕಾಣಿಸಿಕೊಂಡನು (೧-೩೧-೩). ಒಂದೇ ಒಂದು ಕಡೆ ಮಾತರಿಶ್ವನು ವಿವಸ್ವತನ ದೂತನು (೬-೮-೪); ಇತರ ಸ್ಥಳಗಳಲ್ಲೆಲ್ಲಾ ಅಗ್ನಿಯೇ ಇವನ ದೂತನು (೧-೫೮-೧; ೪-೭-೪; ೮-೩೯-೩; ೧೦-೨೧-೫) ಎಂದಿದೆ. ವಿವಸ್ವತನು ಋಷಿಯಾಗಲು ಅಗ್ನಿಯು ಅವನ ಮಾತಾಪಿತೃ (ಅರಣಿ)ಗಳಿಂದ ಮಥಿತನಾದನು (೫-೧೧-೩).

ವಿವಸ್ವತನ ಆಸನ ಅಥವಾ ಸ್ಥಾನವು ಐದು ಕಡೆ ಉಕ್ತವಾಗಿದೆ. ದೇವತೆಗಳು (೧೦-೧೨-೭) ಮತ್ತು ಇಂದ್ರನು (೩-೫೧-೩) ಆ ಸ್ಥಾನದಲ್ಲಿ ಆನಂದವನ್ನು ಪಡೆಯುತ್ತಾರೆ; ಅಲ್ಲಿಯೇ ಗಾಯಕರು ಇಂದ್ರನ ಮಾಹಾತ್ಮ್ಯವನ್ನು ಗಾನಮಾಡುತ್ತಾರೆ (೧-೫೩-೧; ೩-೩೪-೭); ಅಥವಾ ಉದಕದ ಮಾಹಾತ್ಮ್ಯವನ್ನು ಗಾನ ಮಾಡುತ್ತಾರೆ (೧೦-೭೫-೧). ವಿವಸ್ವತನಲ್ಲಿ ಒಂದು ಸೂಕ್ತವು ಸಹಿತವಾಯಿತು ಎಂದು (೧-೧೫೯-೧) ಹೇಳಿರುವುದೂ ಈ ಅಭಿಪ್ರಾಯದಿಂದಲೇ ಇರಬೇಕು.

ಇಂದ್ರನಿಗೂ ವಿವಸ್ವತನಿಗೂ ಅನೇಕ ಮಂತ್ರಗಳಲ್ಲಿ ಸಂಬಂಧವು ಉಕ್ತವಾಗಿದೆ. ವಿವಸ್ವತನ ಸ್ತುತಿಯಿಂದ ಇಂದ್ರನಿಗೆ ಸಂತೋಷ (೮-೬-೩೯) ತನ್ನ ನಿಧಿಯನ್ನು ವಿವಸ್ವತನ ಹತ್ತಿರ ಇಟ್ಟನು (೨-೧೩-೬). ವಿವಸ್ವತನ ಬೆರಳುಗಳಿಂದ ಇಂದ್ರನು ಪಾತ್ರೆಯನ್ನು ಆಕಾಶದಿಂದ ಬಗ್ಗಿಸುತ್ತಾನೆ (೮-೬೧-೮ ; ೫-೫೩-೬ನ್ನು ಹೋಲಿಸಿ). ವಿವಸ್ವತನಿಗೂ ಇಂದ್ರನಿಗೂ ಇಷ್ಟು ಸಾಮೀಪ್ಯವಿರುವುದರಿಂದ, ಸೋಮವು ಅಲ್ಲಿರಲೇಬೇಕು. ಒಂಬತ್ತನೆಯ ಮಂಡಲದಲ್ಲಿ ಸೋಮನಿಗೂ ವಿವಸ್ವತನಿಗೂ ಸಮೀಪಸಂಬಂಧಕಲ್ಪಿತವಾಗಿದೆ. ಸೋಮವು ವಿವಸ್ವತನೊಡನೆ ವಾಸಿಸುತ್ತದೆ (೯-೨೬-೪) ಮತ್ತು ವಿವಸ್ವತನ ಪುತ್ರಿಯರಿಂದ (ಬೆರಳುಗಳಿಂದ) ಸೋಮವು ಶುದ್ಧಿಪಡಿಸಲ್ಪಡುತ್ತದೆ (೯-೧೪-೫). ವಿವಸ್ವತನ ಪ್ರಾರ್ಥನೆಯ ಮೇಲೆ ನಸುಗೆಂಪಾದ ಸೋಮವು ಪ್ರವಹಿಸುತ್ತದ್ದೆ ಏಳು ಜನ ಸೋದರಿಯರು (ಉದಕ) ಜ್ಞಾನಿಯಾದ ಸೋಮನು ವಿವಸ್ವತನ ಮಾರ್ಗವನ್ನನುಸರಿಸುವಂತೆ ಮಾಡುತ್ತಾರೆ (೯-೬೬-೮ ; ೯-೯೯-೨). ವಿವಸ್ವತನ ಅನುಗ್ರಹವನ್ನು ಪಡೆದು, ಸೋಮಧಾರೆಗಳು ಜಿರಡಿಯಿಂದ ಬೀಳುತ್ತದೆ ಮತ್ತು ಉಷೋದೇವಿಯನ್ನು ಅನುಗ್ರಹಿಸುತ್ತವೆ (೯-೧೦೦-೫).

ವಿವಸ್ವತನೊಡನೆ ವಾಸಿಸುವ ಅಶ್ವಿನೀದೇವತೆಗಳೂ ಹವನಕ್ಕೆ ಆಹ್ವಾನಿತರಾಗಿದಾರೆ (೧-೪೬-೧೩). ಅಶ್ವಿನೀದೇವತೆಗಳ ರಥವನ್ನು ಹೂಡುವಾಗ ಆಕಾಶದ ಪುತ್ರಿಯು (ಉಷಸ್ಸು) ಮತ್ತು ವಿವಸ್ವತನ ಎರಡು ದಿನಗಳು (ಪ್ರಾಯಶಃ ಹಗಲು, ರಾತ್ರಿ) ಜನಿಸುತ್ತವೆ (೧೦-೫೯-೧೨ ; ಶ. ಬ್ರಾ- ೧೦-೫-೨-೪ನ್ನು ಹೋಲಿಸಿ).

ವರುಣ ಮತ್ತು ಇತರ ದೇವತೆಗಳೊಡನೆ ವಿವಸ್ವತನೂ ಪೂಜಿಸಲ್ಪಡುತ್ತಾನೆ (೧೦-೬೫-೬). ವಿವಸ್ವತನಲ್ಲಿ ಒಂದು ದುಷ್ಪಗುಣವಿದೆ ; ಅದಿತ್ಯನನ್ನು ಪೂಜಿಸುವವರು, ವಿವಸ್ವತನ ತೀಕ್ಷ್ಣವಾದ ಬಾಣವು ವಾರ್ಧಕ್ಯಕ್ಕಿಂತ ಮುಂಚೆ ವಧಿಸದಿರಲೆಂದು ಪ್ರಾರ್ಥಿಸುತ್ತಾರೆ (೮-೫೬-೨೦ ; ಅ. ವೇ. ೧೯-೯-೭ನ್ನು ಹೋಲಿಸಿ). ಇದಕ್ಕೆ ವಿರುದ್ಧವಾಗಿ ವಿವಸ್ವತನು ಯಮನಿಂದ ರಕ್ಷಿಸುತ್ತಾನೆಂದು ಅ. ವೇ. ೧೮-೩-೬ ರಲ್ಲಿ ಹೇಳಿದೆ.

ವಿವಸ್ವತ್ ಎಂದರೆ ಹೊಳೆಯುವ ಎಂತಲೂ ಅರ್ಥ. ಈ ಅರ್ಥದಲ್ಲಿ ಕೆಲವು ಕಡೆ ಅಗ್ನಿ ಮತ್ತು ಉಷಸ್ಸುಗಳೊಡನೆ ಪ್ರಯೋಗವಿದೆ. ಅಗ್ನಿಯು ಮನುಷ್ಯರ ಮಕ್ಕಳನ್ನೂ, ಅಮಿತ ತೇಜಸ್ಸಿನಿಂದ ಆಕಾಶ ಮತ್ತು ಉದಕಗಳನ್ನೂ ಸೃಜಿಸಿದನು (೧-೯೬-೨). ಅಗ್ನಿಯು ಜ್ಞಾನಿ, ಪಾರರಹಿತನು, ತೇಜಸ್ವಿಯಾದ ಋಷಿ ಮತ್ತು ಉಷಃಕಾಲದ ಆರಂಭದಲ್ಲಿ ಪ್ರಕಾಶಿಸುತ್ತಾನೆ (೭-೯-೩). ಕಾಂತಿಯುಕ್ತವಾದ ಉಷಸ್ಸನ್ನು ಅನುಗ್ರಹಿಸೆಂದು ಅಗ್ನಿಯನ್ನು ಬೇಡುತ್ತಾರೆ (೧-೪೪-೧) ಮತ್ತು ಮನುಷ್ಯರು, ಪ್ರಕಾಶಯುಕ್ತಳಾದ ಉಷೋದೇವಿಯ ಬೆಳಗುವ ಮುಖವನ್ನು ನೋಡಲು ಕಾತುರರಾಗಿದ್ದಾರೆ (೩-೩೦-೧೩). 'ವಿವಾಸ್' (ಚೆನ್ನಾಗಿ ಬೆಳಗು) ಎಂಬ ಧಾತುವಿನಿಂದ ವಿವಸ್ವಾ ಮತ್ತು ಉಷಃ ಎಂಬ ಪದಗಳು ಉತ್ಪನ್ನವಾಗಿವೆ. ಈ ಪದಗಳ ನಿಷ್ಪತ್ತಿಯು ಶತಪಥಬ್ರಾಹ್ಮಣದಲ್ಲಿ ಸ್ಪಷ್ಟವಾಗಿದೆ ; ಆದಿತ್ಯವಿವಸ್ವತನು ರಾತ್ರಿ ಮತ್ತು ಹಗಲುಗಳನ್ನು ಬೆಳಗುತ್ತಾನೆ (ಶ. ಬ್ರಾ. ೧೦-೫-೨-೪)

ಯಜುರ್ವೇದದಲ್ಲಿ (ವಾ. ಸಂ. ೮-೫ ; ವೈ. ಸಂ. ೧-೬-೧೨) ಮತ್ತು ಬ್ರಾಹ್ಮಣಗಳಲ್ಲಿ ವಿವಸ್ವತನಿಗೇ ಆದಿತ್ಯನೆಂದು ಹೆಸರು. ಈಚಿನ ಗ್ರಂಥಗಳಲ್ಲಿ ಸೂರ್ಯನಿಗೆ ಅದೂ ಒಂದು ನಾಮಧೇಯ.

ವಿವಸ್ವತನು ಪುರಾಣಕಥಾನಾಯಕನಾಗಿ ಅಷ್ಟು ಪ್ರಸಿದ್ಧಿಯಿಲ್ಲ. ಪದದ ನಿಷ್ಪತ್ತಿ, ಅಗ್ನಿ, ಸೋಮ, ಅಶ್ವಿನಿಗಳಿರುವ ಸಂಬಂಧ, ಯಜ್ಞಶಾಲೆಯೇ ಅವನ ಸ್ಥಾನವಾಗಿರುವುದು, ಇವುಗಳನ್ನು ಪರ್ಯಾಲೋಚಿಸಿದರೆ, ವಿವಸ್ವತನು ಉದಿಸುತ್ತಿರುವ ಸೂರ್ಯನೆನ್ನಬಹುದು. ಅನೇಕ ವಿದ್ವಾಂಸರು ವಿವಸ್ವತನು ಸೂರ್ಯನೆಂದೇ ಅಭಿಪ್ರಾಯ ಪಡುತ್ತಾರೆ. ಕೆಲವರು ಆಕಾಶಾಭಿಮಾನಿದೇವತೆಯೆನ್ನುತ್ತಾರೆ. ಅಗ್ನಿಯೇ ವಿವಸ್ವತನೆಂದು ಒಬ್ಬರ ಮತ.

(Bergaigne) ಮತ್ತು ಮತ್ತೊಬ್ಬರು (Oldenberg) ವಿವಸ್ವತನು ಬೆಳಕಿನ ಅಭಿಮಾನಿದೇವತೆಯೆನ್ನುವುದಕ್ಕೆ ಆಧಾರಗಳು ಸಾಲದೆಂದೂ, ಅವನನ್ನು ಮೊಟ್ಟಮೊದಲು ಯಜ್ಞಮಾಡಿದವನು, ಮನುಷ್ಯರಿಗೆ ಮೂಲಪುರುಷನು ಎಂದೂ ವಾದಿಸುತ್ತಾರೆ.

ಆದಿತ್ಯರು

ಇದು ಒಂದು ದೇವಗಣ. ಈ ಗಣವನ್ನು ಆರು ಸೂಕ್ತಗಳೂ, ಮತ್ತೆರಡು ಸೂಕ್ತಭಾಗಗಳೂ ಹೊಗಳುತ್ತವೆ. ಈ ಗಣದಲ್ಲಿ ಎಷ್ಟು ದೇವತೆಗಳು ಸೇರಿವೆ, ಅವರ ಹೆಸರುಗಳೇನು ಎಂಬುದು ನಿರ್ಧರವಾಗಿ ಹೇಳಲಾಗುವುದಿಲ್ಲ. ಆರಕ್ಕಿಂತ ಹೆಚ್ಚಾಗಿ ಎಲ್ಲೂ ಎಣಿಸಿಲ್ಲ; ಅದೂ ಒಂದೇ ಒಂದು ಕಡೆ ಇದೆ; ಮಿತ್ರ, ಅರ್ಯಮ, ಭಗ, ವರುಣ, ದಕ್ಷ, ಅಂಶ (೨-೨೭-೧) ಈ ಆರು; ಕಡೇ ಮಂಡಲಗಳಲ್ಲಿ ದೇವತೆಗಳ ಸಂಖ್ಯೆ ಏಳೆಂದೂ (೯-೧೧೪-೩), ಒಂದು ಸಲ ಎಂಟೆಂದೂ (೧೦-೭೨-೮), ಮತ್ತು ಅದಿತಿಯು ಮೊದಲು ಏಳು ಜನರನ್ನು ದೇವತೆಗಳಿಗೆ ಒಪ್ಪಿಸಿ, ಎಂಟನೆಯ ಮಾರ್ತಾಂಡನನ್ನು ಅನಂತರ ತಂದಳೆಂದೂ ಇದೆ. ಈ ಎರಡು ಮಂತ್ರಗಳಲ್ಲಿಯೂ ಆದಿತ್ಯರೆಂದು ಹೇಳಿಯೇ ಇಲ್ಲ. ಆದಿತಿಗೆ ಎಂಟು ಮಕ್ಕಳು (ಅ. ವೇ. ೮-೯-೨೧); ಅವರು, ಮಿತ್ರ ಅರ್ಯಮ, ವರುಣ, ಅಂಶ, ಭಗ, ಧಾತೃ, ಇಂದ್ರ ಮತ್ತು ವಿವಸ್ವತ (ತೈ. ಬ್ರಾ. ೧-೧-೯-೧); ಇದರಲ್ಲಿ ಮೊದಲ ಐದು ಹೆಸರುಗಳು ಋಗ್ವೇದದಲ್ಲಿದೆ (೨-೨೭-೧). ಮಾರ್ತಾಂಡನನ್ನು ಸೇರಿಸಿಕೊಂಡು, ಆದಿತ್ಯರು ಎಂಟು ಜನರಾದರು (ತೈ. ಬ್ರಾ.) ಮತ್ತೆರಡು ಸಂದರ್ಭಗಳಲ್ಲಿ (ಶ. ಬ್ರಾ. ೬-೧-೩-೮; ೧೧-೬-೩-೮) ಆದಿತ್ಯರು ತಿಂಗಳಿಗೊಬ್ಬರಂತೆ ಹನ್ನೆರಡು ಜನರೆಂದು ಹೇಳಿದೆ. ಪುರಾಣಗಳಲ್ಲಿ ಆದಿತ್ಯರು ತಿಂಗಳೊಬ್ಬರಂತೆ ಹನ್ನೆರಡು ಜನರು, ಅವರಲ್ಲಿ ವಿಷ್ಣುವೂ ಒಬ್ಬನು ಮತ್ತು ಅವನೇ ಅವರಲ್ಲೆಲ್ಲಾ ಶ್ರೇಷ್ಠನು. ಋಗ್ವೇದದ ಆರು ಜನದ ಜೊತೆಗೆ (೨-೨೭-೧) ಸೂರ್ಯನೂ ಆದಿತ್ಯನೆಂದು ಗಣಿತನಾಗಿದಾನೆ. ಪುರಾಣಗಳಲ್ಲಿ ಸೂರ್ಯನಿಗೆ ಆದಿತ್ಯನೆಂಬುದು ಸಾಧಾರಣವಾಗಿದೆ. ಅಗ್ನಿಯೇ ಎಂದು ಪರಿಗಣಿತನಾದ ಸೂರ್ಯನು ಆದಿತ್ಯನೆಂಬ ಹೆಸರಿನಿಂದ ಆಕಾಶದಲ್ಲಿ ದೇವತೆಗಳಿಂದ ಸ್ಥಾಪಿತನಾದನು (೧೦-೪೮-೧೧). ಒಂದು ಕಡೆ, ನಾಲ್ಕು ಜನ (ಭಗ, ವರುಣ, ಮಿತ್ರ ಮತ್ತು ಅರ್ಯಮ) ಆದಿತ್ಯರೊಡನೆ, ಸವಿತೃ ಸೇರಿಸಲ್ಪಟ್ಟಿದಾನೆ (೪-೧೪-೩). ಋಗ್ವೇದದಲ್ಲಿ ಆದಿತ್ಯರು ಏಳೇ ಆಗಿದ್ದಾರೆ. ಸೂರ್ಯನೇ ಏಳನೆಯವನು, ಅದಿತಿಯು ಒಂದು ಸಲ ಎಸೆದು ಪುನಃ (೧೦-೭೨-೪ ಮತ್ತು ೯) ತಂದ ಮಾರ್ತಾಂಡನೇ (ಅಸ್ತಮಾನ ಸೂರ್ಯ) ಎಂಟನೆಯವನಿರಬೇಕು. ಸೂರ್ಯನು ಅದಿತಿಯ ಮಗ (ಅ. ವೇ. ೧೩-೨-೪ ಮತ್ತು ೩೭), ಸೂರ್ಯಚಂದ್ರರು ಆದಿತ್ಯರು (೪.೨-೧೫), ಮತ್ತು ವಿಷ್ಣುವೂ, ಮಿತ್ರ ವರುಣ, ವಿಷ್ಣು ಭಗ, ಅಂಶ ಮತ್ತು ವಿವಸ್ವತ, ಇವರಲ್ಲಿ ಒಬ್ಬ (೧೧-೬-೨) ಆದಿತ್ಯನು. ಒಂದೇ ಒಂದು ಸ್ಥಳದಲ್ಲಿ (೯-೧-೪), ಆದಿತ್ಯರ ತಾಯಿ ಅದಿತಿಯಲ್ಲ; ವಸುಗಳ ಮಗಳು ಸ್ವರ್ಣವರ್ಣದ ಮಧುಕಶಾ ಎಂಬುವಳು ಎಂದಿದೆ.

ಆದಿತ್ಯರಲ್ಲಿ ಶ್ರೇಷ್ಠನಾದ ವರುಣನೊಡನೆ ಇಂದ್ರನೂ ಒಂದು ಸಲ ಆದಿತ್ಯನೆಂದು ಎಣಿಸಲ್ಪಟ್ಟಿದಾನೆ ೭.೮೫-೪, ಮತ್ತು ವಾಲ. ೪-೭ರಲ್ಲಿ ಇಂದ್ರನು ನಾಲ್ಕನೆಯ ಆದಿತ್ಯನು. ಮೈ. ಸಂ. ೨-೧-೧೨ ರಲ್ಲಿ ಇಂದ್ರನು ಅದಿತಿಯ ಪುತ್ರರಲ್ಲಿ ಒಬ್ಬನು, ಆದರೆ ಶ. ಬ್ರಾ. ೧೧-೬-೩-೫ರಲ್ಲಿ ಅವನು ಹನ್ನೆರಡು ಆದಿತ್ಯರಿಗಿಂತ ಭಿನ್ನನೆಂದಿದೆ. ಒಂದೇ ದೇವತೆ ಆದಿತ್ಯನೆಂದು ಹೇಳಿದಾಗಲೆಲ್ಲಾ, ವರುಣನೇ ಆದಿತ್ಯ; ಆದರೆ ಮಿತ್ರದೇವತಾಕ ಸೂಕ್ತದಲ್ಲಿ (೩-೫೯) ಮಿತ್ರದೇವತೆಯು ಆದಿತ್ಯ ಮತ್ತು ಸೂರ್ಯನೆಂದು ಕರೆಯಲ್ಪಟ್ಟಿದಾನೆ. ಇಬ್ಬರು ಮಾತ್ರ ಹೇಳಲ್ಪಟ್ಟಾಗ ಮಿತ್ರ ಮತ್ತು ವರುಣರು ಆದಿತ್ಯರು; ಒಂದು ಸಲ ಮಾತ್ರ ಇಂದ್ರವರುಣರು ಆದಿತ್ಯರು. ಮೂರು ಜನ ಆದರೆ, ವರುಣ, ಮಿತ್ರ, ಅರ್ಯಮರು ಆದಿತ್ಯರು. ಐದು ಜನ ಆದರೆ (ಒಂದೇ ಸಲ ಹೇಳಿರುವುದು). ಹಿಂದಿನ ಮೂವರ ಜೊತೆಗೆ ಸವಿತೃ ಮತ್ತು ಭಗರು ಸೇರುತ್ತಾರೆ. ದಕ್ಷನೆಂಬುದು, ಹಿಂದೆ ಹೇಳಿದ

ಆರು ಹೆಸರುಗಳ ಜೊತೆಯಲ್ಲಿ ಮಾತ್ರ ಬರುತ್ತದೆ. ಆದಿತ್ಯಗಣವನ್ನು ಅನೇಕಸಲ ಸ್ತುತಿಸಿದೆ: ಪ್ರತಿಸಲವೂ ಗಣದ ಜೊತೆಗೆ ಮಿತ್ರ ಮತ್ತು ವರುಣರ ಹೆಸರು ಉಕ್ತವಾಗಿದೆ. ಇವರಿಬ್ಬರ ಹೆಸರು ವಸುಗಳು, ರುದ್ರರು, ಮರುತ್ತುಗಳು, ಆಂಗಿರಸರು, ಋಭುಗಳು, ವಿಶ್ವೇದೇವತೆಗಳ ಜೊತೆಯಲ್ಲಿಯೂ ಬರುತ್ತದೆ ಆದಿತ್ಯರೆಂದು ಸೂರ್ಯಗಣಕ್ಕೆ ಮಾತ್ರವಲ್ಲ. ಸಾಮಾನ್ಯ ದೇವತೆಗಳಿಗೂ ಪ್ರಯೋಗಿಸಿರುವಂತೆ ತೋರುತ್ತದೆ. ಅವರ ಸ್ವಭಾವವು ಇತರ ದೇವತೆಗಳ ಸ್ವಭಾವಕ್ಕಿಂತ ಬೇರೆಯಾಗಿಲ್ಲ ಸಾಮಾನ್ಯವಾಗಿ ಸ್ವರ್ಗೀಯ ತೇಜಸ್ಸಿನ ದೇವತೆಗಳೆನ್ನಬಹುದು. ಮಿತ್ರ ಮತ್ತು ವರುಣರಂತೆ ವೈಶಿಷ್ಟ್ಯವೇನೂ ಕಂಡುಬರುವುದಿಲ್ಲ. ಅಥವಾ, ಸೂರ್ಯ, ಚಂದ್ರ, ನಕ್ಷತ್ರಗಳು, ಉಷಸ್ಸಿನಂತೆ ಬೆಳಕಿನ ಯಾವುದಾದರೊಂದು ನಿರ್ದಿಷ್ಟಕಾರ್ಯವನ್ನೂ ಆಚರಿಸುವುದಿಲ್ಲ.

ಆದಿತ್ಯರ ಪರವಾದ ಸೂಕ್ತಗಳಲ್ಲಿ ಸಾಧಾರಣವಾಗಿ, (೨-೨೭)ರಲ್ಲಿ ವಿಶೇಷವಾಗಿ, ಆದಿತ್ಯರೆಂದರೆ ಮಿತ್ರ, ವರುಣ ಮತ್ತು ಅರ್ಯಮರೇ ಉದ್ದಿಷ್ಟರು. ಅತಿ ದೂರದಲ್ಲಿರುವುದೂ ಅವರಿಗೆ ಸಮೀಪ; ಚರಾಚರ ವಸ್ತುಗಳೆಲ್ಲವನ್ನೂ ಅವರು, ಪ್ರಪಂಚವನ್ನು ದೇವತೆಗಳು ರಕ್ಷಿಸುವಂತೆ, ರಕ್ಷಿಸುತ್ತಾರೆ (೨-೨೭-೩ ಮತ್ತು ೪). ಮನುಷ್ಯರ ಮನಸ್ಸಿನಲ್ಲಿರುವ ಒಳ್ಳೆಯದು ಕೆಟ್ಟದ್ದನ್ನು ನೋಡಬಲ್ಲರು ಮತ್ತು ಪ್ರಾಮಾಣಿಕ ಮತ್ತು ಅಪ್ರಾಮಾಣಿಕರ ಭೇದವನ್ನು ತಿಳಿಯಬಲ್ಲರು (೨-೨೭-೩; ೮-೧೮-೧೫). ಅವರಿಗೆ ಸುಳ್ಳೆಂದರೆ ದ್ವೇಷ ಮತ್ತು ಪಾಪಕ್ಕೆ ಶಿಕ್ಷೆ ವಿಧಿಸುತ್ತಾರೆ (೨.೨೭-೪; ೭-೫೨-೨; ೭-೬೦-೫; ೭-೬೬-೧೩). ಪಾಪವನ್ನು ಕ್ಷಮಿಸಬೇಕೆಂದೂ (೨-೨೭-೪; ೭-೨೯-೫), ಅದರ ದುಷ್ಪರಿಣಾಮವನ್ನು ತಪ್ಪಿಸಬೇಕೆಂದೂ ಅಥವಾ ಅದನ್ನು ತ್ರಿತ ಆಪ್ತ್ಯನಿಗೆ ವರ್ಗಾಯಿಸಬೇಕೆಂದೂ (೫-೫೨-೨; ೮-೪೭-೮) ಪ್ರಾರ್ಥಿತರಾಗಿದಾರೆ. ಅವರು ಶತ್ರುಗಳನ್ನು ಸಂಕೋಲೆಗಳಿಂದ ಬಂಧಿಸುತ್ತಾರೆ (೨-೨೭-೧೬) ಆದರೆ, ಪಕ್ಷಿಗಳು ತಮ್ಮ ರೆಕ್ಕೆಗಳ ಮರೆಯಲ್ಲಿ ಮರಿಗಳನ್ನು ಕಾಪಾಡುವಂತೆ, ತಮ್ಮನ್ನು ಪೂಜಿಸುವವರನ್ನು ರಕ್ಷಿಸುತ್ತಾರೆ (೮-೪೭-೨). ಕವಚಗಳಂತೆ ಸೇವಕರನ್ನು ಒಂದು ಬಾಣವೂ ತಾಕದಂತೆ, ರಕ್ಷಿಸುತ್ತಾರೆ (೮-೪೭-೭ ಮತ್ತು ೮). ರೋಗ ಮತ್ತು ದುಃಖಗಳನ್ನು ನಿವಾರಿಸುತ್ತಾರೆ (೮-೧೮-೧೦) ಮತ್ತು ಬೆಳಕು, ದೀರ್ಘಾಯುಸ್ಸು, ಸಂತಾನ, ಸನ್ಮಾರ್ಗಪ್ರವರ್ತನ ಮುಂತಾದ ಸತ್ಫಲಗಳನ್ನು ಅನುಗ್ರಹಿಸುತ್ತಾರೆ (೨-೨೭; ೮-೧೮-೨೨; ೮-೫೬-೧೫ ಮತ್ತು ೨೦).

ಅವರಿಗೆ ಉಪಯೋಗಿಸಿರುವ ವಿಶೇಷಣಗಳು ಇವು: ಶುಚಿ, ಹಿರಣ್ಯವರ್ಣ, ಅನೇಕ ಕಣ್ಣುಗಳುಳ್ಳ (ಭೂರ್ಯಕ್ಷ). ಕಣ್ಣುಮಿಟುಕಿಸದೇ ಇರುವ (ಅನಿಮಿಷ), ನಿದ್ರೆಯಿಲ್ಲದಿರುವ (ಅಸ್ವಪ್ನಜ), ದೂರದರ್ಶಿ ದೀರ್ಘಾಧಿ ಇತ್ಯಾದಿ. ಅವರು ರಾಜರು, ಮಹಾಬಲಾಢ್ಯರು, ಬಹುದೊಡ್ಡವರು, ಗಂಭೀರರು, ಅನುಲ್ಲಂಘನೀಯರು, ನಿಯತವ್ರತರು, ನಿರ್ದೋಷರು, ಪಾಪರಹಿತರು, ಶುದ್ಧರು ಮತ್ತು ಪವಿತ್ರರು.

ಆದಿತ್ಯರು ಎಂಬ ಹೆಸರು ತಾಯಿಯ ಹೆಸರಿನಿಂದ ನಿಷ್ಪನ್ನವಾದುದು. ಆದಿತ್ಯಶಬ್ದದ ಮೂರು ನಿಷ್ಪತ್ತಿಗಳಲ್ಲಿ ಇದೂ ಒಂದು (ನಿ. ೨-೧೩ ತೈ. ಆ. ೧-೧೪ ೧೧ನ್ನು ಹೋಲಿಸಿ).

ಆದಿತ್ಯರಲ್ಲಿ ದೊಡ್ಡದೇವತೆಗಳು ಪ್ರತ್ಯೇಕವಾಗಿ ವಿವರಿಸಲ್ಪಟ್ಟಿದ್ದಾರೆ. ವೈಯಕ್ತಿಕ ವೈಶಿಷ್ಟ್ಯಗಳೇನೂ ಇಲ್ಲದ ಇತರ ದೇವತೆಗಳ ವಿಷಯ ಸ್ವಲ್ಪ ತಿಳಿದುಕೊಳ್ಳೋಣ.

ಅರ್ಯಮಾ:—ಋಗ್ವೇದದಲ್ಲಿ ನೂರು ಕಡೆ ಬಂದಿದ್ದರೂ, ಸಂಪೂರ್ಣವಾಗಿ ವ್ಯಕ್ತಿತ್ವವಿಲ್ಲದಿರುವುದರಿಂದ, ನಿಘಂಟುವಿನ ದೇವತೆಗಳ ಪಟ್ಟಿಯಲ್ಲಿ ಹೆಸರು ಬಿಟ್ಟುಹೋಗಿದೆ. ಎರಡು ಮಂತ್ರಗಳಲ್ಲಿ ಹೊರತಾಗಿ, ಬಾಕಿ ಕಡೆಗಳಲ್ಲೆಲ್ಲಾ, ಬೇರೆ ದೇವತೆಗಳ ಜೊತೆಯಲ್ಲಿಯೇ ಪ್ರಸ್ತಾಪ; ಅದೂ ಹೆಚ್ಚಾಗಿ ಮಿತ್ರ ಮತ್ತು ವರುಣರ ಜೊತೆಯಲ್ಲಿಯೇ; ಹತ್ತು ಹನ್ನೆರಡು ವಾಕ್ಯಗಳಲ್ಲಿ ಈ ಪದವು 'ಜೊತೆಗಾರ' 'ಕಾಸ್ತಾರ' ಎಂಬ ರೂಢಾರ್ಥ

ಗಳಲ್ಲಿ ಪ್ರಯೋಗಿಸಿದೆ. ಒಂದೊಂದು ಸಲ ಈ ಅರ್ಥವು ಆ ದೇವತೆಗೂ ಅನ್ವಯಿಸಬಹುದು. ಅಗ್ನಿಯನ್ನು ದ್ವೇಷಿಸಿ "ಕನ್ಯೆಯರನ್ನು ಒಲಿಸಿಕೊಳ್ಳುವಾಗ ನೀನೇ ಆರ್ಯಮ" (೫-೩-೨) ಎಂದಿದೆ ಆರ್ಯಮ್ಯ (ಆರ್ಯಮ ಸಂಬಂಧವಾದುದು) ಎಂಬುದು ಮಿತ್ರ್ಯ (ಸ್ನೇಹಿತನಿಗೆ ಸಂಬಂಧಿಸಿದುದು) ಎಂಬರ್ಥದಲ್ಲಿ (೫-೮೫-೭) ಪ್ರಯುಕ್ತವಾಗಿದೆ. ಮಿತ್ರನೆಂಬ ಆದಿತ್ಯ (ಸ್ನೇಹಿತ), ಆರ್ಯಮ, ಈ ಎರಡು ಕಲ್ಪನೆಗಳಿಗೆ ವ್ಯತ್ಯಾಸವೇ ಕಾಣುವುದಿಲ್ಲ.

ಭಗ:—ಒಂದು ಸೂಕ್ತ (೭-೪೧) ಈ ದೇವತೆಯ ಪರವಾಗಿರುವುದು; ಇತರ ದೇವತೆಗಳೂ ಆದರಲ್ಲಿ ಸ್ತುತರಾಗಿದಾರೆ. ಈ ಹೆಸರು ಸುಮಾರು ೬೦ ಬಾರಿ ಬಂದಿದೆ. ಈ ಪದಕ್ಕೆ 'ದಾತೃ, ಹಂಚಿಕೊಡುವವನು' ಎಂದರ್ಥವಾಗುತ್ತದೆ; ಇಪ್ಪತ್ತು ಸಲ ಈ ಅರ್ಥದಲ್ಲಿ, ಸಾಧಾರಣವಾಗಿ ಸವಿತೃವಿಗೆ ವಿಶೇಷಣವಾಗಿ ಉಪಯೋಗಿಸಿದೆ. ಸೂಕ್ತಗಳಲ್ಲಿ ಸಂಪತ್ತನ್ನು ಹಂಚುವವನು ಎಂದೇ ಕಲ್ಪನೆ; ಇಂದ್ರ ಮತ್ತು ಅಗ್ನಿಗಳ ಔದಾರ್ಯವನ್ನು ಶ್ಲಾಘಿಸುವಾಗ, ಭಗನಿಗೇ ಹೋಲಿಸುವುದು. ಔದಾರ್ಯ, ಸಂಪತ್ತು, ಭಾಗ್ಯ ಎಂಬರ್ಥಗಳಲ್ಲಿ ಸುಮಾರು ೨೦ ಕಡೆ ಪ್ರಯೋಗ ಮತ್ತು ಈ ಶ್ಲೇಷವನ್ನು ಉದ್ದೇಶಪೂರ್ವಕವಾಗಿ ಉಪಯೋಗಿಸಿರುವಂತೆಯೂ ಕಾಣುತ್ತದೆ. (೭-೪೧-೨)ರಲ್ಲಿ, ಭಗನಿಗೆ ಹಂಚುವವನು ಎಂದು ಹೆಸರಿಟ್ಟು, ಮನುಷ್ಯರು ತಾವೂ ಇದರಲ್ಲಿ ಭಾಗವಹಿಸುವಂತಾಗಲೆಂದು ಅಪೇಕ್ಷಿಸುತ್ತಾರೆ ಎಂದಿದೆ. ಇನ್ನೊಂದೆಡೆ (೫-೪೬-೬), ಅವನು ಹಂಚಿಕೊಡುವವನು; ಭಕ್ತರಿಗೆ ಅಪಾರ ಸಂಪತ್ತುಕೊಡುವವನಾಗಲೆಂದು (ಭಗವಾನ್) ಪ್ರಾರ್ಥನೆ.

ಉಷೋದೇವಿಯು ಭಗನ ಸೋದರಿ (೧-೧೨೩-೫). ಭಗನ ಕಣ್ಣು ರಶ್ಮಿಗಳಿಂದ ಅಲಂಕೃತವಾಗಿದೆ (೩-೫೪-೧೪)- ಯಾಸ್ಕರು (ನಿರು. ೧೨-೧೩)ರಲ್ಲಿ ಭಗನು ಬೆಳಗಿನವೇಳೆಗೆ ಒಡೆಯನೆಂದು ಹೇಳಿದಾರೆ. ಭಗನು ಉದಾರವಾಗಿ ದಾನಮಾಡುವವನು ಎಂದಿಷ್ಟೇ ಹೇಳಬೇಕು; ಅಥವಾ ಬಹಳ ಸ್ಪಷ್ಟವಾಗಿ ಹೇಳುವುದೆಂದರೆ, ಅಪಾರ ಸಂಪತ್ತುಳ್ಳ ದೇವತೆಯೆನ್ನಬಹುದು.

ಅಂಶ:—ಹನ್ನೆರಡಕ್ಕಿಂತಲೂ ಕಡಿಮೆಸಲ ಬಂದಿದೆ. ಭಗ ಎಂಬುವುದಕ್ಕೇ ಅಂಶ ಎಂಬುವುದು ಮತ್ತೊಂದು ಹೆಸರು. ಭಾಗ ಅಥವಾ ಭಾಗಗಳನ್ನು ಹಂಚುವವನು ಎಂದು ಅರ್ಥ. ಮೂರೇ ಸಲ ದೇವತೆಯ ಹೆಸರಾಗಿರುವುದು; ಈ ಮೂರರಲ್ಲಿಯೂ ಒಂದು ಸಲಮಾತ್ರ ಆ ದೇವತೆಯ ಹೆಸರಲ್ಲದೆ, ಬೇರೆ ವಿಷಯ ತಿಳಿಸಿರುವುದು. ಇಲ್ಲಿ, ಅಗ್ನಿಯೇ ಅಂಶನೆಂದೂ, ಉತ್ಸವದಲ್ಲಿ ಉದಾರಿಯಾದ ದೇವತೆಯೆಂದೂ (೨-೧-೪) ವರ್ಣನೆಯಿದೆ.

ದಕ್ಷ:—ದೇವತೆಯ ಹೆಸರಾಗಿ ಸುಮಾರು ಆರುಸಲ ಸಿಗುತ್ತದೆ. ಈ ಪದವು ಹೆಚ್ಚಾಗಿ ಅಗ್ನಿ ಮತ್ತು ಸೋಮರಿಗೆ (೩-೧೪-೭; ೯-೬೧-೧೪; ಇತ್ಯಾದಿ) "ಚುರುಕು, ಬಲಾಢ್ಯ ಚತುರ, ಬುದ್ಧಿವಂತ" ಇತ್ಯಾದಿ ಅರ್ಥಗಳಲ್ಲಿ ವಿಶೇಷಣವಾಗಿ ಪ್ರಯೋಗಿಸಿದೆ. ವ್ಯಕ್ತಿತ್ವಾರೋಪಣೆಯಿರುವೆಡೆಯಲ್ಲೆಲ್ಲಾ, ಚತುರ ಅಥವಾ ಕುಶಲನಾದ ದೇವತೆಯೆಂದಭಿಪ್ರಾಯ. ದಕ್ಷ ಎಂಬ ಪದವು ಅರು ಜನ ಆದಿತ್ಯರ ಹೆಸರು ಬರುವ (೨-೨೭-೧೨) ನೆಯ ಮಂತ್ರದಲ್ಲಿ ಹೊರತು, ಒಂದು ಮತ್ತು ಹತ್ತನೆಯ ಮಂಡಲಗಳಲ್ಲಿಯೇ ಬರುವುದು. (೧೦-೮೪-೩)ರಲ್ಲಿ ಇತರ ಆದಿತ್ಯರೊಡನೆಯೂ, (೧೦-೬೪-೫)ರಲ್ಲಿ, ಮಿತ್ರ, ವರುಣ, ಅರ್ಯಮರೊಡನೆಯೂ ನಿರ್ದೇಶಿಸಿದೆ. ಈ ಎರಡನೆಯ ಸಂದರ್ಭದಲ್ಲಿ ಅದಿತಿಯು ಅವನ ಜನಿತ್ರಿಯೆಂದೂ ಇದೆ. ಸೃಷ್ಟಿ ವಿಷಯವಾದ ಸೂಕ್ತವೊಂದರಲ್ಲಿ (೧೦-೭೨-೪ ಮತ್ತು ೫). ದಕ್ಷನು ಅದಿತಿಯಿಂದ ಉತ್ಪನ್ನನಾದನೆಂದೂ ಹೇಳಿ, ಅಲ್ಲೇ ಮುಂದಿನ ಮಂತ್ರಗಳಲ್ಲಿ, ಅದಿತಿಯು ಅವನಿಂದ ಜನಿಸಿದಳೆಂದೂ, ಅವನ ಮಗಳೆಂದೂ, ಅನಂತರ ದೇವತೆಗಳು ಜನಿಸಿದರೆಂದು ಹೇಳಿದೆ. ದಕ್ಷನ ಜನ್ಮಸ್ಥಾನವಾದ ಅದಿತಿಯ ಗರ್ಭದಲ್ಲಿ ಸೃಷ್ಟ ಮತ್ತು ಅಸೃಷ್ಟ ಪದಾರ್ಥಗಳೆಲ್ಲವೂ ಇದ್ದವು (೧೦-೫-೭). ಈ ಕಡೆಯ

ಎರಡು ವಾಕ್ಯಗಳಿಂದ ದಕ್ಷ ಅದಿತಿಯರು ಜಗನ್ಮಾತಾಪಿತೃಗಳೆಂದು ತಿಳಿದುಬರುತ್ತದೆ. ಮಕ್ಕಳು ತಂದೆ ತಾಯಿಯರ ಉತ್ಪತ್ತಿಗೆ ಕಾರಣರಾದರೆಂಬ ವಿರೋಧಾಭಾಸವು ಋಗ್ವೇದದಲ್ಲಿ ಹೊಸದಲ್ಲ. ಅದಿತ್ಯರಿಗೆ 'ದಕ್ಷಪಿತರಃ' ಎಂದರೆ ದಕ್ಷನೇ (ಕೌಶಲ್ಯವೇ) ಪಿತೃವಾಗಿ ಉಳ್ಳವರು (೬-೫೦-೨) ಎಂದು ಹೆಸರು. ಮಿತ್ರಾವರುಣರಿಗೂ ಇದೇ ಹೆಸರಿದೆ (೭-೬೬-೨; ದಕ್ಷಪಿತರೌ) ಮತ್ತು ಅವರು 'ಸುದಕ್ಷ'ರೂ ಹೌದು. ಇನ್ನೊಂದು ಕಡೆ (೮-೨೫-೫) ಇದೇ ಅಭಿಪ್ರಾಯ ಇನ್ನೂ ಸ್ಪಷ್ಟವಾಗಿದೆ (ಸೂನೂ ದಕ್ಷಸ್ಯ). ಈ ಸಂದರ್ಭಗಳಲ್ಲಿ 'ದಕ್ಷ' ಎಂಬ ಪದವು ಯಾವ ವ್ಯಕ್ತಿಗೂ ಅನ್ವಯಿಸುವುದಿಲ್ಲ. ಸಾಧಾರಣ ಯಾಗಕರ್ತೃಗಳಿಗೂ 'ದಕ್ಷಪಿತರಃ' ಎಂದು ಹೆಸರಿರುವುದು ಈ ಅಭಿಪ್ರಾಯವನ್ನು ಪುಷ್ಟೀಕರಿಸುತ್ತದೆ. ಇಂತಹ ಪದವಿನ್ಯಾಸಗಳೇ ದಕ್ಷನಿಗೆ ವ್ಯಕ್ತಿತ್ವಾರೋಪಣೆ, ಅವನಿಗೆ ಅದಿತಿಯೊಡನೆ ಸಂಬಂಧ ಇತ್ಯಾದಿಗಳಿಗೆ ಅವಕಾಶವಿತ್ತಂತೆ ಇದೆ. ತೈತ್ತಿರೀಯ ಸಂಹಿತೆಯಲ್ಲಿ ಸಾಮಾನ್ಯವಾಗಿ ದೇವತೆಗಳಿಗೆಲ್ಲಾ ದಕ್ಷಪಿತರಃ ಎಂಬ ಸಂಜ್ಞೆ ಇದೆ. ದಕ್ಷ ಮತ್ತು ಸೃಷ್ಟಿಕರ್ತೃ ಪ್ರಜಾಪತಿ ಎಂಬಿಬ್ಬರೂ ಒಬ್ಬನೇ ದೇವತೆ (ಶ. ಬ್ರಾ. ೨-೪-೪-೨).

ಉಷಾಃ

ಉಷೋದೇವತೆಯನ್ನು ಹೊಗಳುವ ಸೂಕ್ತಗಳು ಇಪ್ಪತ್ತು ಇವೆ ಮತ್ತು 'ಉಷಸ್' ಎಂಬ ಪದವು ೩೦೦ ಕ್ಕಿಂತ ಹೆಚ್ಚುಸಲ ಬರುತ್ತದೆ. ಉಷಸ್ ಎಂಬ ಪದವು ದೇವತೆ ಮತ್ತು ಉಷಃಕಾಲಗಳೆರಡನ್ನೂ ಸೂಚಿಸುತ್ತದೆ ಮತ್ತು ದೇವತೆಯ ವಿಷಯ ಚರ್ಚಿಸುವಾಗಲೂ, ಅರುಣೋದಯವು ಹಿನ್ನೆಲೆಯಲ್ಲಿ ಇದ್ದೇ ಇರುತ್ತದೆ. ಉಷೋದೇವಿಯಷ್ಟು ಮನೋಹರರೂಪ ವೇದದ ಯಾವ ದೇವತೆಗೂ ಇಲ್ಲ. ಮತಸಂಬಂಧವಾದ ಪದ್ಯಕಾವ್ಯಗಳಲ್ಲಿ ಇಷ್ಟು ರಮ್ಯವಾದ ವರ್ಣನೆ ಬೇರೆ ಎಲ್ಲಿಯೂ ಇಲ್ಲ. ಯಾಗ ಅಥವಾ ತತ್ಸಂಬಂಧವಾದ ವಿವರಣೆಗಳು ಆಕೆಯ ರೂಪಾತಿಶಯವನ್ನು ಹಾಳುಮಾಡಿಲ್ಲ. ನರ್ತಕಿಯಂತೆ ಅಂದವಾದ ಉಡುಪನ್ನು ಧರಿಸಿ, ಆಕೆಯು ತನ್ನ ವಕ್ಷಸ್ಸನ್ನು ಪ್ರದರ್ಶಿಸುತ್ತಾಳೆ (೧-೯೨-೪; ೬-೬೪-೨ನ್ನು ಹೋಲಿಸಿ). ತಾಯಿಯಿಂದ ಅಲಂಕೃತಳಾದ ಕನ್ಯೆಯಂತೆ ತನ್ನ ರೂಪವನ್ನು ತೋರಿಸುತ್ತಾಳೆ (೧-೧೨೩-೧೧). ತೇಜಸ್ಸಿನಿಂದ ಯುಕ್ತಳಾಗಿ, ಪೂರ್ವದಿಕ್ಕಿನಲ್ಲಿ ಕಾಣಿಸಿಕೊಂಡು, ತನ್ನ ಸೊಬಗನ್ನು ತೋರ್ಪಡಿಸುತ್ತಾಳೆ (೧-೧೨೪--೩ ಮತ್ತು ೪). ಅತುಲವಾದ ಸೌಂದರ್ಯದಿಂದ ಬೆಳಗುತ್ತಾ, ಚಿಕ್ಕವರು, ದೊಡ್ಡವರೆನ್ನದೆ ಎಲ್ಲರಿಗೂ ಬೆಳಕನ್ನು ಬೀರುತ್ತಾಳೆ (೧-೧೨೪-೬). ಸ್ನಾನ ಮುಗಿಸಿಕೊಂಡು ಶುದ್ಧವಾಗಿ ಬರುವಂತೆ ಉದಿಸಿ ಬಂದು ಆಕೆಯು, ಕತ್ತಲನ್ನು ಓಡಿಸಿ, ಬೆಳಕನ್ನು ಹರಡುತ್ತಾಳೆ (೫-೮೦-೫ ಮತ್ತು ೬) ಪುರಾತನಳಾದರೂ, ಪುನಃ ಪುನಃ ಜನಿಸುವುದರಿಂದ, ಆಕೆಯು ತರುಣಿ; ಒಂದೇ ಸಮನಾಗಿ ಪ್ರಕಾಶಿಸುತ್ತಾ ಅವಳು ಮರ್ತ್ಯರ ಆಯುಸ್ಸನ್ನು ಕ್ಷೀಣಮಾಡುತ್ತಾಳೆ (೧-೯೨-೧೦). ಪೂರ್ವದಲ್ಲಿ ಪ್ರಕಾಶಿಸುತ್ತಿದ್ದಂತೆ ಆಕೆಯು ಈಗಲೂ, ಮುಂದೆಯೂ ಪ್ರಕಾಶಿಸುತ್ತಾಳೆ; ಅವಳು ಅಮರಳು, ವೃದ್ಧಳಾಗುವುದೇ ಇಲ್ಲ (೧-೧೧೩-೧೩ ಮತ್ತು ೧೫). ಆ ತರುಣಿಯು ಪುನಃ ಬಂದು, ಪ್ರಪಂಚದಲ್ಲಿ ಎಲ್ಲರಿಗೂ ಮುಂಜೆ ಎಚ್ಚರವಾಗುತ್ತಾಳೆ (೧-೧೨೩-೨). ಕಳೆದುಹೋದ ಉಷಸ್ಸುಗಳಿಗೆ ಕಡೆಯವಳಾಗಿಯೂ, ಮುಂದೆ ಬರುವವುಗಳಿಗೆ ಮೊದಲನೆಯವಳಾಗಿಯೂ, ಮರ್ತ್ಯರ ಆಯುಸ್ಸನ್ನು ಯಾವಾಗಲೂ ಕಡಿಮೆ ಮಾಡುತ್ತಾ, ಪ್ರಕಾಶಿಸುತ್ತಾಳೆ (೧-೧೨೪-೨). ಯಾವಾಗಲೂ ಹೊಸಬಳಾಗಿ, ಚಕ್ರದಂತೆ ತಿರುಗುತ್ತಿರುತ್ತಾಳೆ (೩-೬೧-೩). ಪಾದಚಾರಿಗಳಾದ ಪ್ರಾಣಿಗಳನ್ನು ಎಚ್ಚರಿಸುತ್ತಾಳೆ ಮತ್ತು ಪಕ್ಷಿಗಳನ್ನು ಹಾರುವಂತೆ ಮಾಡುತ್ತಾಳೆ; ಪ್ರತಿಯೊಬ್ಬರಿಗೂ ಅವಳೇ ಉಸಿರು ಅವಳೇ ಪ್ರಾಣ (೧-೪೮-೫ ಮತ್ತು ೧೦; ೧-೪೯-೩). ಪ್ರತಿಯೊಂದು ಪ್ರಾಣಿಯನ್ನೂ ಸಂಚರಿಸುವುದ ಕ್ಕೋಸ್ಕರ, ಏಳಿಸುತ್ತಾಳೆ (೧-೯೨-೯; ೭-೭೭-೧). ಉಷಸ್ಸುಗಳು ದ್ವಿಪಾದ ಮತ್ತು ಚತುಷ್ಪಾದ ಜಂತುಗಳನ್ನು

ನಿದ್ರೆಯಿಂದೆಬ್ಬಿಸಿ, ಕಾರ್ಯೋನ್ಮುಖರನ್ನಾಗಿ ಮಾಡುತ್ತವೆ (೪-೫೧-೫). ಅರುಣೋದಯವಾದರೆ, ಪಕ್ಷಿಗಳು ಗೂಡಿನಿಂದ ಹಾರುತ್ತವೆ; ಮನುಷ್ಯರು ಆಹಾರಾನ್ವೇಷಿಗಳಾಗುತ್ತಾರೆ (೧-೧೨೪-೧೨). ಏದು ಪಂಗಡದವರನ್ನೂ ಎಬ್ಬಿಸಿ, ಮನುಷ್ಯರು ಅನುಸರಿಸಬೇಕಾದ ಮಾರ್ಗಗಳನ್ನು ತೋರಿಸುತ್ತಾಳೆ. (೭-೭೯-೧) ಎಲ್ಲಾ ಪ್ರಾಣಿಗಳನ್ನೂ ವ್ಯಕ್ತಗೊಳಿಸುತ್ತಾಳೆ. ಅವರಿಗೆಲ್ಲಾ ಹೊಸ ಚೇತನವನ್ನು ಕೊಡುತ್ತಾಳೆ (೭-೮೦-೧ ಮತ್ತು ೨). ದುಸ್ಸ್ವಪ್ನಗಳನ್ನು ತ್ರಿತ ಆಪ್ತ್ಯನ ಹತ್ತಿರಕ್ಕೆ ಓಡಿಸುತ್ತಾಳೆ (೮-೪೭-೧೪ ಮತ್ತು ೧೬) ರಾತ್ರಿಯ ಕರಿಯ ಮುಸಕನ್ನು ತೆಗೆಯುತ್ತಾಳೆ (೧-೧೧೩-೧೪). ಕತ್ತಲನ್ನು ಪರಿಹರಿಸುತ್ತಾಳೆ (೬-೬೪-೩; ೬-೬೫-೨) ದುರ್ದೇವತೆಗಳನ್ನು ಮತ್ತು ಅನಿಷ್ಟವಾದ ಕತ್ತಲನ್ನು ನಿವಾರಿಸುತ್ತಾಳೆ (೭-೭೫-೧). ತಮುಸ್ಸಿನಿಂದ ನಿಗೂಢವಾದ ನಿಧಿಗಳನ್ನು ಹೊರಗೆಡಹಿ, ಅದನ್ನು ಧಾರಾಳವಾಗಿ ಹಂಚುತ್ತಾಳೆ (೧-೧೨೩-೪ ಮತ್ತು ೬). ಅವಳು ಉದಿಸಿದಾಗ, ದಿಗಂತಗಳನ್ನು ಪ್ರಕಾಶಪಡಿಸುತ್ತಾಳೆ (೧-೯೨-೧೧). ಸ್ವರ್ಗದ (ಆಕಾಶದ) ಬಾಗಿಲುಗಳನ್ನು ತೆರೆಯುತ್ತಾಳೆ (೧-೪೮-೧೫; ೧-೧೧೩-೪). ಗೋವುಗಳು ಗೋಶಾಲೆಯ ಬಾಗಿಲನ್ನು ತೆಗೆದುಕೊಳ್ಳುವಂತೆ, ಉಷೋದೇವಿಯು ತಾನು ಬಂದೊಡನೆಯೇ, ಕತ್ತಲಿನ ಬಾಗಿಲನ್ನು ತೆಗೆಯುತ್ತಾಳೆ (೧-೯೨-೪). ಗೋವುಗಳ ಹಿಂಡುಗಳಂತೆ ಆಕೆಯ ಕಿರಣಗಳು ಕಾಣಿಸುತ್ತವೆ (೪-೫೨ ೨ರಿಂದ೪). ದನಗಳನ್ನು ಚದುರಿಸುತ್ತಾ ಇರುವಂತೆ ಅವಳು ಬಹಳದೂರ ಕಾಣಿಸುತ್ತಾಳೆ (೧-೯೨-೧೨). ರಕ್ತವರ್ಣದ ಕಿರಣಗಳು ಹೊರಡುತ್ತವೆ; ಕಪಿಲಗೋವುಗಳು ತಾವೇ ಕೆಲಸಕ್ಕೆ ತೊಡಗುತ್ತವೆ; ಕೆಂಬಣ್ಣದ ಉಷಸ್ಸುಗಳು ಮೊದಲಿನಂತೆ, ತಮ್ಮ ಬೆಳಕಿನ ಜಾಲವನ್ನು ಬೀಸುತ್ತವೆ (೧-೯೨-೨). ಆದುದರಿಂದ ಉಷೋದೇವಿಗೆ ದನಕರುಗಳ ಮಾತೆ ಎಂದು ಹೆಸರು ಬಂದಿದೆ (೪-೫೨-೨ ಮತ್ತು ೩; ೭-೭೭-೨).

ದೇವತೆಗಳ ಮತ್ತು ಪ್ರಕೃತಿಯ ವ್ಯವಸ್ಥೆಯನ್ನು ಮೀರದೆ, ಉಷಸ್ಸು ದಿನದಿನವೂ ಗೊತ್ತಾದ ಸ್ಥಳದಲ್ಲಿಯೇ ಕಾಣಿಸಿಕೊಳ್ಳುತ್ತಾಳೆ (೧-೯೨-೧೨; ೧-೧೨೩-೯; ೧-೧೨೪-೨; ೭-೭೯-೫); ವ್ಯವಸ್ಥಿತವಾದ ಮಾರ್ಗದಲ್ಲಿಯೇ ಆಕೆಯು ಸಂಚರಿಸುತ್ತಾಳೆ; ತಾನು ಅನುಸರಿಸಬೇಕಾದ ಮಾರ್ಗವು ತಿಳಿದಿರುವುದರಿಂದ, ಎಂದೂ ದಾರಿತಪ್ಪುವುದಿಲ್ಲ (೫-೮೦-೪). ಯಾಗ ಕರ್ತೃಗಳನ್ನೆಲ್ಲಾ ನಿದ್ದೆಯಿಂದ ಎಬ್ಬಿಸಿ, ಹೋಮಾಗ್ನಿಯನ್ನು ಹೊತ್ತಿಸುವಂತೆ ಮಾಡುತ್ತಾಳೆ; ಈರೀತಿ ದೇವತೆಗಳಿಗೆಲ್ಲಾ ಉಪಕಾರಮಾಡುತ್ತಾಳೆ (೧-೧೧೩-೯). ಶ್ರದ್ಧಾವಂತನೂ, ಉದಾರಿಯೂ ಆದ ಆರಾಧಕನನ್ನು ಮಾತ್ರವೇ ಎಚ್ಚರಗೊಳಿಸುವಂತೆಯೂ, ಅಶ್ರದ್ಧಾಳುವೂ, ದೀನನೂ ಆದವನನ್ನು ಹಾಗೆಯೇ ಬಿಡುವಂತೆಯೂ ಪ್ರಾರ್ಥಿತಳಾಗಿದಾಳೆ (೧-೧೨೪-೧೦; ೪-೫೧-೩) ಒಂದೊಂದು ಸಲ, ಉಷಸ್ಸು ಪೂಜೆ ಮಾಡುವವರನ್ನು ಎಚ್ಚರಗೊಳಿಸುವುದು ಬಿಟ್ಟು, ಅವರು ಆಕೆಯನ್ನು ಜಾಗೃತಿಗೊಳಿಸುತ್ತಾರೆ ಎಂದಿದೆ (೪-೫೨-೪; ಇತ್ಯಾದಿ) ಮತ್ತು ಈ ಕೆಲಸವನ್ನು ಮೊದಲು ಮಾಡಿದವರು ನಾವೇ ಎಂದು ವಸಿಷ್ಠರು ವಾದಿಸುತ್ತಾರೆ (೭-೮೦-೧). ಒಂದು ಕಡೆ, ಶತ್ರು ಅಥವಾ ಕಳ್ಳತನ ಮಾಡಿದವಳು ಎಂದೂ, ಸೂರ್ಯನು ಸುಡದಿರಬೇಕಾಪರೆ, ತ್ವರೆ ಮಾಡಬೇಕು ಎಂದೂ (೫-೭೯-೯) ಅವಳಿಗೆ ಎಚ್ಚರಕೊಟ್ಟಿದೆ. ಸೋಮಪಾನಕ್ಕಾಗಿ ದೇವತೆಗಳನ್ನು ಕರೆತರಬೇಕೆಂದು (೧-೪೪-೧೨) ಪ್ರಾರ್ಥಿಸಲ್ಪಟ್ಟಿದಾಳೆ. ಅದರಿಂದಲೇ ಇರಬಹುದು ದೇವತೆಗಳೆಲ್ಲರೂ ಉಷಸ್ಸಿನೊಡನೆ ಏಳುತ್ತಾರೆ ಎಂದು ಹೇಳಿರುವುದು (೧-೧೪೪-೯ ಇತ್ಯಾದಿ).

ಉಷೋದೇವಿಯು ಹೊಳೆಯುವ ರಥದಲ್ಲಿ ಸಂಚರಿಸುತ್ತಾಳೆ (೭-೭೮-೧); ರಥವು ಥಳಥಳಿಸುತ್ತಿದೆ (೧-೩೩-೭); ಶುಭ್ರವಾಗಿದೆ (೩-೬೧-೨); ಚೆನ್ನಾಗಿ ಅಲಂಕೃತವಾಗಿದೆ (೧-೪೯-೨); ಎಲ್ಲರಿಗೂ, ಎಲ್ಲ ವಸ್ತುಗಳಿಗೂ ಅಲಂಕಾರಪ್ರಾಯವಾಗಿದೆ (೭-೭೫-೬); ಸುದೃಢವಾಗಿದೆ (೧-೪೮-೧೦ ಇತ್ಯಾದಿ); ಮತ್ತು ಸ್ವತಂತ್ರ.

ವಾಗಿ ಹೂಡಿಕೊಳ್ಳುತ್ತದೆ (೭-೭೮-೪). ಆಕೆಯು ನೂರು ರಥಗಳ ಮೇಲೆ ಬರುತ್ತಾಳೆ (೧-೪೮-೭). ರಥಕ್ಕೆ ಕೆಂಬಣ್ಣದ (೭-೭೫-೬), ಸುಲಭವಾಗಿ ನಡೆಸಬಹುದಾದ (೩-೬೧-೨), ತಪ್ಪದೇ ಹೂಡಲ್ಪಡುವ (೪-೫೧-೫) ಕುದುರೆಗಳನ್ನು ಕಟ್ಟಿದೆ. ಕುದುರೆಗಳಿಂದ ಯುಕ್ತಳಾಗಿ ದೇದೀಪ್ಯಮಾನಳಾಗಿದಾಳೆ (೫-೭೯-೧, ೧೦). ಕೆಂಪು ಗೋವುಗಳಿಂದಲೂ ಅವಳ ರಥವು ಎಳೆಯಲ್ಪಡುತ್ತದೆ (೧-೯೨-೨ ; ೧-೧೨೪-೧೧ ; ೫-೮೦-೩). ಅಶ್ವಗಳು ಮತ್ತು ಗೋವುಗಳೆಂದರೆ, ಪ್ರಾತಃಕಾಲದ ಕಿರಣಗಳಿರಬೇಕು ; ಆದರೆ ಗೋಶಬ್ದಕ್ಕೆ ಸಾಧಾರಣವಾಗಿ ಮೇಘವೆಂದರ್ಥ. ಒಂದು ದಿನದಲ್ಲಿ, ಉಷೋದೇವಿಯು ಮೂವತ್ತು ಯೋಜನ ದೂರ ಹೋಗುತ್ತಾಳೆ (೧-೧೨೩-೮).

ಸೂರ್ಯನಿಗೂ ಉಷಸ್ಸಿಗೂ ನಿಕಟಬಾಂದವ್ಯವಿರುವುದು ಸ್ವಾಭಾವಿಕವೇ. ಸೂರ್ಯನ ಸಂಚಾರಕ್ಕಾಗಿ ಮಾರ್ಗವನ್ನು ತೆರೆದಿದಾಳೆ (೧-೧೧೩-೧೬). ದೇವತೆಗಳ ಕಣ್ಣನ್ನು (ಸೂರ್ಯನನ್ನು) ತರುತ್ತಾಳೆ ಮತ್ತು ಉತ್ತಮವಾದ ಬಿಳಿಯ ಕುದುರೆಗೆ ದಾರಿ ತೋರುತ್ತಾಳೆ (೭-೭೭-೩). ಸೂರ್ಯನ (೧-೧೧೩-೯) ತನ್ನ ಪ್ರಿಯನ ತೇಜಸ್ಸಿನಿಂದ (೧-೯೨-೧೧) ಬೆಳಗುತ್ತಾಳೆ. ಸವಿತೃವು ಉಷಸ್ಸಿನ ಮಾರ್ಗದಲ್ಲಿಯೇ ಪ್ರಕಾಶಿಸುತ್ತಾನೆ (೫-೮೧-೨). ಸೂರ್ಯನು ಉಷೋದೇವಿಯನ್ನು, ಯುವಕನು ಯುವತಿಯನ್ನು ಹಿಂಬಾಲಿಸುವಂತೆ, ಹಿಂಬಾಲಿಸುತ್ತಾನೆ (೧-೧೧೫-೨). ಅವಳನ್ನಪೇಕ್ಷಿಸುವ ದೇವತೆಯನ್ನು ಅವಳು ಸಂಧಿಸುತ್ತಾಳೆ (೧-೧೨೩-೧೦). ಅವಳು ಸೂರ್ಯನ ಪತ್ನಿ (೭-೭೫-೫) ; ಉಷೋದೇವಿಯರು ಸೂರ್ಯನ ಪತ್ನಿಯರು (೪-೫-೧೩). ಆಕಾಶದಲ್ಲಿ ಅವನಿಂದ ಅನುಸೃತಳಾದ ಆಕೆಯು ಅತನ ಪತ್ನಿ ಅಥವಾ ಪ್ರಿಯೆಯೆಂದು ಭಾವನೆ. ಕಾಲದೃಷ್ಟಿಯಿಂದ ಸೂರ್ಯನಿಗಿಂತ ಮುಂಚೆ ಬರುವ ಅವಳು ಅವನ ತಾಯಿಯೆಂದೂ ಒಂದೊಂದು ವೇಳೆ ಗಣನೆಯಿದೆ. ಅವಳು ಸೂರ್ಯ, ಯಜ್ಞ ಮತ್ತು ಅಗ್ನಿಗಳನ್ನು ಉತ್ಪತ್ತಿಮಾಡಿದಳು (೭-೭೮-೩). ಅವಳು ಹುಟ್ಟಿರುವುದೇ ಸವಿತೃವಿನ ಜನನಕ್ಕಾಗಿ ಮತ್ತು ತೇಜಃಪುಂಜವಾದ ಶಿಶುವಿನೊಡನೆ ಬಂದು ಸೇರುತ್ತಾಳೆ (೧-೧೧೩-೧ ಮತ್ತು ೨). (ಆದಿತ್ಯನಾದ) ಭಗನ ಸೋದರಿ ಆಕೆ (೧-೧೨೩-೫) ಮತ್ತು ವರುಣನ ಬಂಧು (೧-೧೨೩-೫). ಅವಳು ರಾತ್ರಿಯ ಸೋದರಿ ೧-೧೧೩-೨ ಮತ್ತು ೩ ; ೧೦-೧೨೭-೩) ಅಥವಾ ಆಕೆಯು ಅಕ್ಕ (೧-೧೨೪-೮) ; ಮತ್ತು ರಾತ್ರಿ ಉಷಸ್ಸುಗಳ ಹೆಸರುಗಳು ' ಸಕ್ತೋಷಾಸಾ ', ಉಷಾಸಾನಕ್ತಾ ' ಎಂದು ದ್ವಿವಚನಾಂತವಾಗಿ ಪ್ರಯೋಗಿಸಲ್ಪಟ್ಟಿವೆ. ಉಷಸ್ಸು ಆಕಾಶದಲ್ಲಿ ಜನಿಸುತ್ತದೆ (೭-೭೫-೧) ; ಆದುದರಿಂದಲೇ ಆಕೆಯು ಯಾವಾಗಲೂ ಆಕಾಶದ ಮಗಳು (೧-೩೦-೨೨ ಇತ್ಯಾದಿ) ಎಂದೂ, ಒಂದೇ ಒಂದುಸಲ ಆಕಾಶದ ಪ್ರಿಯೆ ಎಂದೂ (೧ ೪೬-೧) ಕರೆಯಲ್ಪಟ್ಟಿದಾಳೆ.

ಉಷಃಕಾಲದಲ್ಲೇ ಉದ್ದೀಪ್ತವಾಗುವ ಹೋಮಾಗ್ನಿಗೂ ಉಷಸ್ಸಿಗೂ ಸಂಬಂಧವಿದ್ದೇ ಇದೆ. ಇಂತಹ ಸಂದರ್ಭಗಳಲ್ಲಿ ಸಾಧಾರಣವಾಗಿ ಸೂರ್ಯನೂ ಸೂಚಿತನಾಗುತ್ತಾನೆ. ಅಗ್ನಿಯನ್ನು ಹೊತ್ತಿಸುವ ವೇಳೆಗೇ ಸೂರ್ಯನೂ ಕಾಣಿಸುತ್ತಾನೆ (೧-೧೨೪-೧ ಮತ್ತು ೧೧ ; ಇತ್ಯಾದಿ). ಅಗ್ನಿಯು ಉಷಃಕಾಲಕ್ಕೆ ಪೂರ್ವದಲ್ಲಿ ಅಥವಾ ಉಷಸ್ಸಿನೊಡನೆ ಕಾಣಿಸಿಕೊಳ್ಳುತ್ತಾನೆ. ಉಷೋದೇವಿಯು ಅಗ್ನಿಯನ್ನು ಹೊತ್ತಿಸುವಂತೆ ಮಾಡುತ್ತಾಳೆ (೧-೧೧೩-೯). ಆದ್ದರಿಂದ, ಒಂದೊಂದು ವೇಳೆ, ಸೂರ್ಯನಂತೆ, ಅಗ್ನಿಯೂ ಆಕೆಯ ಪ್ರಿಯನು (೧-೬೯-೧ ; ೭-೧೦-೧ ; ೧೦-೩-೩ನ್ನು ಹೋಲಿಸಿ). ಅಗ್ನಿಯು ಹೊಳೆಯುತ್ತಿರುವ ಉಷಸ್ಸನ್ನು ಎದುರ್ಗೊಳ್ಳಲು ಹೋಗಿ ಅವಳಿಂದ ಉತ್ತಮವಾದ ಸಂಪದಾದಿಗಳನ್ನು ಅಪೇಕ್ಷಿಸುತ್ತಾನೆ (೩-೬೧-೬). ಪ್ರಾತಃಕಾಲದ ದೇವತೆಗಳಾದ, ಅಶ್ವಿನಿಗಳೊಡನೆಯೂ ಆಕೆಗೆ ಬಾಂಧವ್ಯವಿದೆ (೧-೪೪-೨ ಇತ್ಯಾದಿ). ಅವರು ಅವಳ ಜೊತೆಯಲ್ಲಿ ಬರುತ್ತಾರೆ (೧-೧೪೩-೨) ಮತ್ತು ಅವಳು ಅವರ ಸ್ನೇಹಿತಳು (೪-೫೨-೨ ಮತ್ತು ೩). ಅವರನ್ನೆಚ್ಚರಗೊಳಿಸೆಂದು ಅವಳು ಪ್ರಾರ್ಥಿತಳಾಗಿದಾಳೆ (೮-೯-೧೭), ಮತ್ತು ಅವಳ ಸ್ತುತಿಯು ಅವರನ್ನು ಎಬ್ಬಿಸಿದೆ

(೩-೫೮-೧). ಅಶ್ವಿನೀದೇವತೆಗಳ ರಥವು ಸಿದ್ಧವಾದರೆ, ಉಷೋದೇವಿಯೂ ಜನಿಸುತ್ತಾಳೆ (೧೦-೩೯-೧೨). ಒಂದು ಸಲ ಇಂದ್ರನೊಡನೆಯೂ ಉಷಸ್ಸು ಸಂಬಂಧ ಹೊಂದಿದ್ದಾಳೆ ಎಂದು ಇದೆ. ಚಂದ್ರನು ಹೊಸ ಹೊಸದಾಗಿ ಹುಟ್ಟುವುದರಿಂದ, ಹಗಲು ಬರುವುದನ್ನು ಸೂಚಿಸುತ್ತಾ, ಉಷಃಕಾಲಕ್ಕೆ ಮುಂಚೆ, ಪ್ರಕಾಶಿಸುತ್ತಾನೆ (೧೦-೮೫-೧೦).

ಅನೇಕ ದೇವತೆಗಳು ಉಷಸ್ಸಿಗೆ ಕಾರಣರು ಅಥವಾ ಉಷಸ್ಸನ್ನು ಕಂಡುಹಿಡಿದರು. ಬೆಳಕನ್ನು ಜಯಿಸಿರುವವನೆಂದು ಪ್ರಖ್ಯಾತಿಪಡೆದಿರುವ ಇಂದ್ರನು ಉಷಸ್ಸನ್ನು ಉತ್ಪತ್ತಿಮಾಡಿದನು ಅಥವಾ ಉಷಸ್ಸಿಗೆ ಬೆಳಕು ಕೊಟ್ಟನು (೨-೧೨-೭ ಇತ್ಯಾದಿ). ಕೆಲವು ಸಲ ಅವನು ಅವಳಿಗೆ ದ್ವೇಷಿಯಾಗಿದ್ದಾನೆ; ಅವನು ಅವಳ ರಥವನ್ನು ಚೂರು ಚೂರು ಮಾಡಿದನು. ಜನಿಸಿದಾಗಲೇ, ಉಷಸ್ಸುಗಳು ಸೋಮನಿಂದ ಕಾಂತಿಯುಕ್ತವಾಗಿ ಮಾಡಲ್ಪಟ್ಟವು (೬-೫೯-೩). ಅಗ್ನಿಯಂತೆ (೭-೬-೫), ಸೋಮನೂ ಉಷಸ್ಸುಗಳನ್ನು ಉತ್ತಮನಾದವನ ಪತ್ನಿಯರನ್ನಾಗಿ ಮಾಡಿದನು (೬-೪೪-೨೩). ಕತ್ತಲನ್ನು ಬೆಳಕಿನಿಂದ ಹೋಗಲಾಡಿಸುತ್ತ, ಬೃಹಸ್ಪತಿಯು ಉಷಸ್ಸು, ಆಕಾಶ ಮತ್ತು ಅಗ್ನಿಗಳನ್ನು ಕಂಡುಹಿಡಿದನು (೧೦-೬೮-೯). ದೇವತೆಗಳ ಸಹವಾಸಿಗಳಾದ ಪಿತೃಗಳು, ತಮ್ಮ ಸ್ತುತಿಗಳಿಂದ, ಗೂಢವಾದ ಬೆಳಕನ್ನು ಕಂಡು, ಅದರಿಂದ ಉಷಸ್ಸನ್ನು ಉತ್ಪತ್ತಿಮಾಡಿದರು (೭-೭೬-೪).

ಪೂಜೆ ಮಾಡುವವನಿಗೆ ಸಂತಾನ ಮತ್ತು ಸಂಪತ್ತುಗಳನ್ನು ಅನುಗ್ರಹಿಸಿ, ದೀರ್ಘಾಯುಸ್ಸನ್ನು ಕೊಟ್ಟು ರಕ್ಷಿಸಬೇಕೆಂದು ಅನೇಕ ಸಲ ಉಷಸ್ಸನ್ನು ಬೇಡಿದಾರೆ (೧-೩೦-೨೨; ೧-೪೮-೧; ಇತ್ಯಾದಿ). ಸ್ತುತಿಸುವವನಿಗೆ ಉಪಕಾರ ಮಾಡಿದವರಿಗೆಲ್ಲಾ ಕೀರ್ತಿಯನ್ನು ಪೊರಕಿಸಬೇಕೆಂದೂ ಪ್ರಾರ್ಥನೆಯಿದೆ (೫-೭೯-೬; ೧-೪೮-೪ನ್ನು ಹೋಲಿಸಿ). ಅವಳ ಭಕ್ತರೆಲ್ಲರೂ ಅವಳಿಂದ ಐಶ್ವರ್ಯವನ್ನು ಅಪೇಕ್ಷಿಸುತ್ತಾರೆ ಮತ್ತು ತಾವು ಅವಳಿಗೆ ಮಕ್ಕಳಂತಿರಬೇಕೆಂದೂ ಅವರ ಇಚ್ಛೆ (೭-೮೧-೪). ಮೃತನ ಆತ್ಮವು ಸೂರ್ಯ ಮತ್ತು ಉಷೋದೇವಿಯರ ಸಮಾಪಕ್ಕೆ ಹೋಗುತ್ತದೆ (೧೦-೫೮-೮) ಮತ್ತು ಪಿತೃಗಳು ಕೆಂಬಣ್ಣದ ವಸ್ತುಗಳ ಮಡಲಲ್ಲಿ ಕುಳಿತಿದಾರೆ ಎನ್ನುವಾಗ, ಕೆಂಬಣ್ಣದ ವಸ್ತುಗಳು ಉಷಸ್ಸೇ ಇರಬೇಕು.

ನಿರುಕ್ತದಲ್ಲಿ (೧೨)ರುವ ಹದಿನೆಂಟಲ್ಲದೇ, ಉಷಸ್ಸಿಗೆ ಇನ್ನೂ ಅನೇಕ ವಿಶೇಷಣಗಳಿವೆ. ದೇದೀಪ್ಯಮಾನಳು; ಹೊಳೆಯುತ್ತಿದಾಳೆ: ಶುಭ್ರಳು. ಅವಳದು ಬಿಳಿಯಬಣ್ಣ, ರಕ್ತವರ್ಣ, ಸುವರ್ಣ, ಉದಾರಳು, ನಿಯಮಜಾತಳು, ಇಂದ್ರನಂತಿರುವವಳು, ದೇವತಾಸ್ವರೂಪಳು, ಅಮರಳು. ಔದಾರ್ಯವು ಅವಳಿಗೆ ಸಹಜವಾದ ಗುಣ (ಮಘೋನಿ).

ಅಶ್ವಿನೀದೇವತೆಗಳು

ಇಂದ್ರ, ಅಗ್ನಿ, ಸೋಮ, ಇವರನ್ನು ಬಿಟ್ಟರೆ, ಅಶ್ವಿನಿಗಳೆಂಬ ಯಮಳದೇವತೆಗಳೇ ಮುಖ್ಯರು. ಐವತ್ತಕ್ಕಿಂತ ಹೆಚ್ಚು ಸೂಕ್ತಗಳಲ್ಲಿಯೂ ಮತ್ತೆ ಕೆಲವು ಸೂಕ್ತಭಾಗಗಳಲ್ಲಿಯೂ ಸ್ತುತಿಸಲ್ಪಟ್ಟಿದಾರೆ. ನಾಲ್ಕು ನೂರಕ್ಕಿಂತ ಹೆಚ್ಚು ಸಲ ಅಶ್ವಿನಿಗಳ ಹೆಸರು ಬರುತ್ತದೆ. ಅವರೂ (ತೇಜಸ್ಸು) ಬೆಳಕಿನ ದೇವತೆಗಳೆಂದು ನಿಶ್ಚಿತರಾದರೂ, ಅದರ ಯಾವ ಅಂಶವನ್ನು ಅವರು ಪ್ರತಿಬಿಂಬಿಸುತ್ತಾರೆ ಎಂದು ಹೇಳವುದು ಕಷ್ಟ. ಅವರು ಅವಳದೇವತೆಗಳು, (೩-೫೯-೩; ೧೦-೧೭೭-೩) ಮತ್ತು ಪ್ರತ್ಯೇಕಿಸಲಾಗದವರು. ಇಡೀ ಒಂದು ಸೂಕ್ತದಲ್ಲಿ, ಅವರನ್ನು ಪ್ರಪಂಚದಲ್ಲಿರುವ ನಾನಾ ಯಮಳ ಅಥವಾ ಜೋಡಿ ಪದಾರ್ಥಗಳಿಗೆ (ಕಣ್ಣುಗಳು, ಕೈಗಳು, ಕಾಲುಗಳು, ರೆಕ್ಕೆಗಳು

ಪಕ್ಷಿಗಳ ಅಥವಾ ಪ್ರಾಣಿಗಳ ಜೋಡಿಗಳು, ಇತ್ಯಾದಿ) ಹೋಲಿಸಿದೆ (೫-೭೮-೧ ರಿಂದ ೩ ; ೮-೩೫-೭ ರಿಂದ ೯ ; ೧೦-೧೦೬-೨ ರಿಂದ ೧೦). ಆದರೆ ಕೆಲವು ವಾಕ್ಯಗಳು ಪ್ರಾಯಶಃ ಅವರು ಮೊದಲು ಪ್ರತ್ಯೇಕವಾಗಿದ್ದರೆನ್ನುವುದನ್ನೂ ಸೂಚಿಸುವಂತೆ ತೋರುತ್ತವೆ. ಅವರು ಬೇರೆ ಬೇರೆಯಾಗಿ ಜನಿಸಿದರು (ನಾನಾ ; ೫-೭೩-೪) ; ಅಲ್ಲಿ ಇಲ್ಲಿ ಹುಟ್ಟಿದರು (ಇಹೇಹ) ; ಒಬ್ಬನು ಜಯಶೀಲನಾದ ರಾಜಕುಮಾರನು ; ಮತ್ತೊಬ್ಬನು ಆಕಾಶದ ಮಗನು (೧-೧೮೧-೪). ಯಾಸ್ಕರೂ ಕೂಡ ಒಬ್ಬನು ರಾತ್ರಿಯ ಮಗನೆಂದೂ, ಮತ್ತೊಬ್ಬನು ಉಷಃಕಾಲದ ಮಗನೆಂದೂ ಹೇಳುವ ಒಂದು ವಾಕ್ಯವನ್ನು ಉಲ್ಲೇಖಿಸಿದಾರೆ (ನಿರು. ೧೨-೨). ಋಗ್ವೇದದಲ್ಲಿಯೇ ಒಂದು ಕಡೆ (೪-೩-೬), 'ಅವರಿಬ್ಬರನಾಸತ್ಯ' ಎಂದು ಒಬ್ಬನನ್ನೇ ಹೇಳಿದೆ. ಈ ಪದವು (ನಾಸತ್ಯ) ಸಾಮಾನ್ಯವಾಗಿ ಇಬ್ಬರಿಗೂ ಅನ್ವಯಿಸುವುದು.

ಅಶ್ವಿನೀದೇವತೆಗಳು ಎಳೆಯ ವಯಸ್ಸಿನವರು (೭-೬೭-೧೦). ಅವರು ದೇವತೆಗಳಲ್ಲೆಲ್ಲಾ ಕಿರಿಯರು (ತೈ. ಸಂ. ೭-೨-೭-೨). ಅವರು ಪುರಾತನರೂ ಹೌದು (೭-೬೨-೫). ಶುಭ್ರರು (೭-೬೮-೧) ; ಕಾಂತಿಗೆ ಒಡೆಯರು (೮-೨೬-೧೪ ; ೧೦-೯೩-೬) ; ಸುವರ್ಣದಂತೆ ಹೊಳೆಯುವವರು (೮-೮-೨) ; ಮತ್ತು ಜೇನುತುಪ್ಪದ ಬಣ್ಣವುಳ್ಳವರು (೮-೨೬-೬). ಅವರಿಗೆ ನಾನಾ ರೂಪಗಳು (೧-೧೧೭-೯). ಅವರು ಸ್ಫುರದ್ರೂಪಿಗಳು (೬-೬೨-೫ ; ೬-೬೩-೧) ; ಕಮಲ ಪುಷ್ಪದ ಹಾರಗಳನ್ನು ಧರಿಸುತ್ತಾರೆ (೧೦-೧೮೪-೨ ; ಅ. ವೇ. ೩-೨೨-೪ ; ಶ. ಬ್ರಾ. ೪-೧೫-೧೬). ಅವರು ಚುರುಕಾಗಿದಾರೆ (೬-೬೩-೫), ಮನಸ್ಸಿನಂತೆ (೮-೨೨-೧೬) ಅಥವಾ ಹದ್ದಿನಂತೆ (೫-೭೮-೪) ವೇಗಶಾಲಿಗಳು. ಬಹಳ ಬಲಿಷ್ಠರು (೧೦-೨೪-೪), ಬಹಳ ದೃಢಾಂಗರು (೬-೬೨-೫), ಮತ್ತು ಅನೇಕ ಸಲ 'ರಕ್ತ'ರು (ರೌದ್ರಾನೇಶಪ್ಸುಳ್ಳವರು) ಎಂದು ಹೇಳಲ್ಪಟ್ಟಿದಾರೆ (೫-೭೫-೩ ಇತ್ಯಾದಿ). ಅವರು ಒಳ್ಳೆಯ ಜ್ಞಾನಿಗಳು (೮-೮-೨) ಮತ್ತು ಮಾಯಾಶಕ್ತಿಯುಳ್ಳವರು (೬-೬೩-೫ ; ೧೦-೯೩-೭). ಪದೇ ಪದೇ ಉಪಯೋಗಿಸಲ್ಪಡುವ ಮತ್ತು ಅವರದೇ ಆದ ವಿಶೇಷಣಗಳೆಂದರೆ (ದಸ್ರಾ) ಆಶ್ಚರ್ಯಕರರಾದ ಮತ್ತು (ನಾಸತ್ಯಾ) 'ಅಸತ್ಯವಂತರಲ್ಲ' ಎಂಬವು ಈ ಎರಡನೆಯದಕ್ಕೆ 'ರಕ್ಷಕರು' ಮೊದಲಾದ ಅರ್ಥಗಳೂ ಸೂಚಿಸಲ್ಪಟ್ಟಿವೆ. ಈ ಎರಡು ವಿಶೇಷಣಪದಗಳೇ ಅವರ ನಾಮಧೇಯಗಳಾಗಿ ಪರಿಣತವಾಗಿವೆ. (ರುದ್ರವರ್ತನೀ) 'ರಕ್ತವರ್ಣದ ದಾರಿಯುಳ್ಳವರು' ಮತ್ತು (ಹಿರಣ್ಯವರ್ತನೀ) ಬಂಗಾರದ ದಾರಿಯುಳ್ಳವರು. ಇವೆರಡೂ ಅವರಿಗೆ ವಿಶೇಷಣಗಳು. 'ಹಿರಣ್ಯವರ್ತನೀ' ಎಂಬುದು ಎರಡುಕಡೆ ನದಿಗಳಿಗೆ ವಿಶೇಷಣವಾಗಿ ಉಪಯೋಗಿಸಲ್ಪಟ್ಟಿದೆ.

ಅಶ್ವಿನೀದೇವತೆಗಳಿಗೆ ಇತರ ದೇವತೆಗಳಿಗಿಂತ ಹೆಚ್ಚಾಗಿ ಮಧು (ಜೇನು)ವಿನ ಸಂಬಂಧವಿದೆ. ಅನೇಕ ಮಂತ್ರಗಳಲ್ಲಿ ಎರಡೂ ಒಟ್ಟಿಗೆ ಪ್ರಯುಕ್ತವಾಗಿವೆ. ಮಧುವಿನಿಂದ ತುಂಬಿದ ಒಂದು ತೊಗಲಿನ ಚೀಲ ಅವರಲ್ಲಿದೆ ; ಮಧುವನ್ನು ಸೆಳೆದುಕೊಳ್ಳುವ ದುಂಬಿಗಳು ಅದರಲ್ಲಿ ಬಹಳ ಇವೆ (೪-೪೫-೩ ಮತ್ತು ೪). ಅವರು ನೂರು ಜಾಡಿ ಮಧುವನ್ನು ಅಳೆದುಕೊಟ್ಟರು (೧-೧೧೭-೬). ಮಧುವಿನ ಚುಚ್ಚುಗೋಲು ಅವರಿಗೆ ವಿಶೇಷವಾದುದು (೧-೧೨೨-೩ ; ೧-೧೫೭-೪); ಇದರಿಂದ ಅವರು ಯಾಗವನ್ನು ಮತ್ತು ಯಜಮಾನನನ್ನು ಚುಮುಕಿಸುತ್ತಾರೆ. ಅವರ ರಥವು ಮಾತ್ರ ಮಧುವಿನ ಬಣ್ಣವುಳ್ಳದ್ದೆಂದು ವರ್ಣಿತ (ಮಧುವರ್ಣ) ವಾಗಿದೆ ಅಥವಾ ಮಧುವನ್ನು ವಹಿಸತಕ್ಕದ್ದೆಂದೂ (ಮಧುವಾಹನ) ಇದೆ. ಮಧುವೆಂದರೆ ಅವರಿಗೆ ಬಹಳ ಇಷ್ಟ. ಅದನ್ನು ಕುಡಿಯುವವರೂ (ಮಧುಪಾ) ಹೌದು. ಯಾವ ಋತ್ವಿಜನ ಹತ್ತಿರ ಅಶ್ವಿನಿಗಳು ಬರಬೇಕೆಂದು ಆಹ್ವಾನಿತರೋ ಆತನೂ ಮಧುಹಸ್ತನು (೧೦-೪೧-೩). ಅವರೇ ದುಂಬಿಗೆ ಮಧುವನ್ನು ದಾನಮಾಡುತ್ತಾರೆ (೧-೧೧೭-೨೧ ;

೦-೪೦.೬ನ್ನು ಹೋಲಿಸಿ); ಅವರನ್ನು ದುಂಬಿಗಳಿಗೆ (೧೦-೧೦೬-೧೦) ಹೋಲಿಸಿದೆ. ಇತರ ದೇವತೆಗಳಂತೆ, ಇವರಿಗೂ ಸೋಮರಸವೆಂದರೆ ಪ್ರೀತಿ (೩-೫೮-೭ ಮತ್ತು ೯; ಇತ್ಯಾದಿ) ಮತ್ತು ಉಷಸ್ಸು ಮತ್ತು ಸೂರ್ಯರೊಡನೆ ಸೋಮಪಾನ ಮಾಡಬೇಕೆಂದು ಆಹ್ವಾನಿತರಾಗುತ್ತಾರೆ (೮-೩೫-೧). ಸೋಮಪಾನಾರ್ಹದೇವತೆಗಳ ಶ್ರೇಣಿಗೆ ಇವರು ಸೇರಲಿಲ್ಲವೆಂದು ಕೆಲವು ವಿದ್ವಾಂಸರ ಅಭಿಪ್ರಾಯ.

ಅವರ ರಥವು ಸೂರ್ಯನಂತಿದೆ (೮-೮೫-೨); ಅಥವಾ ಸುವರ್ಣಮಯವಾದುದು (೪-೪೪-೪ ಮತ್ತು ೫; ಮತ್ತು ಚಕ್ರ ಉಚ್ಚು ಮೊದಲಾದ ಭಾಗಗಳೆಲ್ಲವೂ ಚಿನ್ನದಿಂದ ಮಾಡಿದುದು (೧-೧೪೦-೧ ; ೮-೫೫-೨೯ ; ೮-೭೩-೫). ಅದಕ್ಕೆ ಸಾವಿರ ಕಿರಣಗಳು (೧-೧೧೯-೧) ಅಥವಾ ಆಭರಣಗಳು (೮-೮-೧೧ ಮತ್ತು ೧೪). ಅದು ಒಂದು ವಿಲಕ್ಷಣವಾದ ರಥ; ಮೂರು ವಿಧವಾದುದು; ಮೂರು ಚಕ್ರ; ಮೂರು ಬಂಡಿಗಳು; ಮತ್ತು ಬೇರೆ ಕೆಲವು ಭಾಗಗಳೂ ಮೂರು ಮೂರು (೧-೧೧೮-೧ ಮತ್ತು ೨; ಇತ್ಯಾದಿ). ಬಹಳ ಹಗುರವಾಗಿ ಸಂಚರಿಸುತ್ತದೆ (೮-೯-೮); ಮನಸ್ಸಿಗಿಂತಲೂ (೧-೧೧೬-೨ ಇತ್ಯಾದಿ) ಅಥವಾ ನಿಮೇಷಕ್ಕಿಂತಲೂ (೮-೬೨-೨) ಹೆಚ್ಚು ಚುರುಕು. ಅದು ಋಭುಗಳಿಂದ ರಚಿತವಾಯಿತು (೧೦-೫೯-೧೩). ಮೂರು ಚಕ್ರದ ರಥವೆಂದರೆ ಅವರೊಬ್ಬರದೇ. ಸೂರ್ಯೆಯ ವಿವಾಹಕ್ಕೆ ಹೋದಾಗ, ರಥದ ಒಂದು ಚಕ್ರವು ಹಾಳಾಗಿಹೋಯಿತಂತೆ (೧೦-೮೫-೧೭;)

ಅವರ ಹೆಸರೇನೋ ಅಶ್ವವುಳ್ಳವರು ಎಂದು ಅರ್ಥಕೊಡುತ್ತದೆ, ಆದರೆ ಅವರು ಅಶ್ವಾರೋಹಿಗಳಾದುದರಿಂದ ಆ ಹೆಸರು ಅವರಿಗೆ ಬಂದಿದೆ ಎಂದು ಎಲ್ಲೂ ಇಲ್ಲ. ಅವರ ರಥವನ್ನು ಎಳೆಯುವವು ಅಶ್ವಗಳು (೧-೧೧೬-೨; ಇತ್ಯಾದಿ); ಇನ್ನೂ ಹೆಚ್ಚಾಗಿ ಪಕ್ಷಿಗಳು (೬-೬೩-೬ ; ಇತ್ಯಾದಿ) ಅಥವಾ ಪತತ್ರಿ(೧೦-೧೪೩-೫) ; ಹಂಸಗಳು (೪-೪೫-೪) ; ಗರುಡಪಕ್ಷಿಗಳು (೧-೧೧೮-೪) ಪಕ್ಷಿರೂಪಾಶ್ವಗಳು (೬-೬೩-೭); ಶ್ಯೇನರೂಪವಾದ ಅಶ್ವಗಳು (೮-೫೫-೭) ರಥವಾಹಕಗಳು. ಒಂದೊಂದು ಸಲ, ಒಂದು ಎಮ್ಮೆ, ಎಮ್ಮೆಗಳು (೫-೭೩-೭ ; ೧-೧೪೪-೩ ; ಇತ್ಯಾದಿ) ; ಒಂದು ಕತ್ತೆ (೧-೩೪-೯ ; ೧-೧೧೬-೨ ; ೮-೭೪-೭) ಅದನ್ನು ಎಳೆಯಿತೆಂದೂ ಹೇಳಿದೆ. ಸೂರ್ಯೆ ಇವರ ವಿವಾಹಕಾಲದಲ್ಲಿ, ಅಶ್ವಿನಿಗಳು ಪಂದ್ಯದಲ್ಲಿ ತಮ್ಮ ರಾಸಭ ರಥದಿಂದಲೇ ಗೆದ್ದರೆಂದಿದೆ (ಐ. ಬ್ರಾ. ೪-೭ ; ಋ. ವೇ. ೧-೧೧೬-೭ ಮತ್ತು ಅದರಮೇಲೆ ಸಾಯಣ ವ್ಯಾಖ್ಯಾನ.) ಅವರ ರಥವು ದಿಗಂತವನ್ನು ಮುಟ್ಟುತ್ತದೆ ಐದು ದೇಶಗಳವರೆಗೂ ಹಬ್ಬಿದೆ (೭-೬೩-೨ ಮತ್ತು ೩). ಅದು ಆಕಾಶದ ಸುತ್ತಲೂ ತಿರುಗುತ್ತದೆ (೧-೧೪೦-೧೦) ಸೂರ್ಯನ [೧-೧೧೫-೩] ಮತ್ತು ಉಷಾದೇವಿಯ [೪-೫೧-೫] ರಥಗಳಂತೆ, ಭೂಮ್ಯಾಕಾಶಗಳನ್ನು ಒಂದು ದಿನದಲ್ಲಿ ಹಾಯುತ್ತದೆ [೩-೫೮-೪]. ಸೂರ್ಯನಿಗೆ ಬಹಳ ದೂರದಲ್ಲಿ ಅವನನ್ನು ಸುತ್ತುತ್ತದೆ[೧-೧೧೨-೧೫]. 'ಪರಿಜ್ಮಾ' [ಗುಂಡಗೆ ತಿರುಗುವವನು] ಎಂಬ ವಿಶೇಷಣ ಇವರಿಗೆ ಬಹಳ ಕಡೆ ಪ್ರಯುಕ್ತವಾಗಿದೆ. ವಾತ, ಅಗ್ನಿ, ಸೂರ್ಯರಿಗೂ ಇದು ಪ್ರಯೋಗಿಸಿದೆ.

ಅವರ ವಾಸಸ್ಥಾನವು ನಿರ್ದಿಷ್ಟವಾಗಿಲ್ಲ ನಾನಾವಿಧವಾಗಿ ಹೇಳಲ್ಪಟ್ಟಿದೆ. ಅವರು ಬಹಳ ದೂರದಿಂದ [೮-೫-೩೦], ಸ್ವರ್ಗದಿಂದ [೮-೮-೭], ಸ್ವರ್ಗ ಮತ್ತು ಭೂಮಿಯಿಂದ [೧-೪೪-೫], ಸ್ವರ್ಗ ಮತ್ತು ವಾಯುಮಂಡಲದಿಂದ [೮-೮-೪ ; ೮-೯-೨], ವಾಯುಮಂಡಲದಿಂದ [೮-೮-೩], ಭೂಮಿ, ಸ್ವರ್ಗ ಮತ್ತು ಆಕಾಶದಿಂದ [೮-೧೦-೧], ಮತ್ತು ವಾಯುಮಂಡಲದಿಂದ, ದೂರದಿಂದ, ಹತ್ತಿರದಿಂದ [೫-೭೩-೧] ಬಂದಿದಾರೆ. ಅವರು ಆಕಾಶದ ಸಮುದ್ರದಲ್ಲಿ [೮-೭೬-೧೭], ಸ್ವರ್ಗದ ಪ್ರವಾಹಗಳಲ್ಲಿ, ತರುಗಳಲ್ಲಿ, ಮನೆಗಳಲ್ಲಿ, ಪರ್ವತಶಿಖರದ ಮೇಲೆ- ವಾಸಿಸುತ್ತಾರೆ [೭-೭೦-೩]. ಅವರು ಹಿಂದೆ, ಮುಂದೆ, ಕೆಳಗೆ, ಮೇಲೆ, ಎಲ್ಲಾಕಡೆಗಳಿಂದ ಬರುತ್ತಾರೆ [೭-೭೨-೫]. ಯಾವುದೂ ನಿರ್ಧರವಾಗಿ ತಿಳಿಯದೇ ಅವರ ವಾಸಸ್ಥಳವು ಯಾವುದೆಂದು ಪ್ರಶ್ನಿಸಲ್ಪಟ್ಟಿದೆ

[೫-೭೪-೨ ಮತ್ತು ೩ ; ೬-೬೩-೧ ; ೮-೬೨-೪]. ದಿನಕ್ಕೆ ಮೂರು ಸಲ ಆಹೂತರಾಗುವುದರಿಂದಲೋ ಏನೋ, ಅವರಿಗೆ ಮೂರು ಸ್ಥಳಗಳಿವೆಯೆಂದು [೮-೮-೨೩] ಹೇಳಿದೆ.

ಇನ್ನೂ ಕತ್ತಲಿರುವಾಗಲೇ, ಅರುಣೋದಯದವೇಳೆಗೇ, ಸಾಧಾರಣವಾಗಿ ಅವರು ಯಾಗಶಾಲೆಗೆ ಬರುವುದು (೧೦-೬೧-೪); ಅವರು ಭೂಮಿಗೆ ಬಂದು ತಮ್ಮ ಆರಾಧಕರಿಂದ ಹವಿರಾದಿಗಳನ್ನು ಸ್ವೀಕರಿಸಲು, ರಥಕ್ಕೆ ಕುದುರೆಗಳನ್ನು ಹೂಡುತ್ತಾರೆ (೧-೩೨-೧ ; ಇತ್ಯಾದಿ). ಉಷಸ್ಸು ಅವರನ್ನು ನಿದ್ರೆಯಿಂದ ಎಬ್ಬಿಸುತ್ತಾಳೆ (೪-೯-೧೭). ತಮ್ಮ ರಥದಲ್ಲಿ ಕುಳಿತು ಉಷಸ್ಸನ್ನೇ ಹಿಂಬಾಲಿಸುತ್ತಾರೆ (೮-೫-೨). ಅವರು ರಥವನ್ನು ಹೂಡುವ ಹೊತ್ತಿಗೆ ಉಷಸ್ಸು ಉದಿಸುತ್ತಾಳೆ (೧೦-೩೯-೧೨). ಅವರಿಬ್ಬರ (ಅಶ್ವಿನಿಗಳು ಮತ್ತು ಉಷಸ್ಸು) ಕಾಲವು ಪ್ರಾಯಶಃ ಅರುಣೋದಯ ಮತ್ತು ಸೂರ್ಯೋದಯಗಳ ಮಧ್ಯಕಾಲವು. ಆದರೆ ಸವಿತೃವು ಅವರ ರಥವನ್ನು ಅರುಣೋದಯಕ್ಕೂ ಮುಂಚೆ ಚಲಿಸುವಂತೆ ಮಾಡುತ್ತಾನೆ (೧-೩೪-೧೦) ಎಂದು ಒಂದು ಸ್ಥಳದಲ್ಲಿ ಇದೆ. ಎಲ್ಲೋ ಒಂದೊಂದು ಸ್ಥಳದಲ್ಲಿ, ಅಶ್ವಿನಿಗಳ ಆಗಮನ, ಯಜ್ಞಾಗ್ನಿಜ್ವಲನ, ಅರುಣೋದಯ ಮತ್ತು ಸೂರ್ಯೋದಯ ಇವೆಲ್ಲವೂ ಏಕಕಾಲದಲ್ಲಿ ನಡೆಯುತ್ತವೆ (೧-೧೫೭-೧ ; ೭-೭೨-೪) ಎಂತಲೂ ಹೇಳಿದೆ. ಅವರನ್ನು ಯಾಗ ಶಾಲೆಗೆ ಬನ್ನಿ ಎಂದು ಪ್ರಾರ್ಥಿಸುವುದು ಅವರಿಗೆ ಸಹಜವಾದ ಉಷಃಕಾಲದಲ್ಲಿ ಮಾತ್ರವಲ್ಲ, ಸಾಯಂಕಾಲ (೮ ೭೨-೧೪), ಬೆಳಿಗ್ಗೆ, ಮಧ್ಯಾಹ್ನ ಮತ್ತು ಸೂರ್ಯಾಸ್ತಮಾನಕಾಲಗಳಲ್ಲಿಯೂ (೫-೭೬-೩) ಬರಬೇಕೆಂದು ಪ್ರಾರ್ಥನೆ ಮಾಡಿದಾರೆ. ಪ್ರಾತರಾದಿ ಮೂರು ಸವನಗಳಲ್ಲಿಯೂ ಅಶ್ವಿನಿಗಳು ಇರಬೇಕೆಂಬುದೇ, ಒಂದು ಇಡೀ ಸೂಕ್ತದಲ್ಲಿ ಮೂರು ಮೂರು ಎಂದು ಉಪಯೋಗಿಸಿ ಅವರನ್ನು ಸ್ತುತಿಸಿರುವುದಕ್ಕೆ ಆಧಾರವಾಗಿರುವಂತೆ ಕಾಣುತ್ತದೆ (೧-೩೪). ಪ್ರಾತಃಕಾಲದ ದೇವತೆಗಳಾಗಿ, ಅವರು ಕತ್ತಲನ್ನು ಹೋಗಲಾಡಿಸುತ್ತಾರೆ (೩-೫೯-೩) ಮತ್ತು ಕೆಲವು ಸಲ ಪಿಶಾಚಾದಿಗಳನ್ನು ಓಡಿಸುವುದೂ ಉಂಟು (೭-೭೩-೪ ; ೮-೩೫-೧೬). ಅಶ್ವಿನೀದೇವತೆಗಳು ಉಷಾದೇವಿ ಮತ್ತು ಅಗ್ನಿಯರು ಉಷಃಕಾಲದ ದೇವತೆಗಳು (ಐ. ಬ್ರಾ. ೨-೧೫); ವೈದಿಕ ಯಜ್ಞಗಳಲ್ಲಿ ಪ್ರಾತಃ ಕಾಲಕ್ಕೆ ಸಂಬಂಧಿಸಿದ ದೇವತೆಗಳು. ಅಶ್ವಿನಿಗಳು ಶ್ವೇತರಕ್ತವರ್ಣದವರು (ಶ. ಬ್ರಾ. ೫-೫-೪-೧); ಆದುದರಿಂದ ಅವರಿಗೆ ಅಂತಹದೇ ಒಂದು ಆಡನ್ನು ಬಲಿಯಾಗಿ ಕೊಡಬೇಕು.

ಅವರಿಬ್ಬರೂ ಆಕಾಶದ ಪುತ್ರರು (೧-೧೮೨-೧ ; ೧-೧೮೪-೧ ; ೧೦-೬೧-೪) ; ಇಬ್ಬರಲ್ಲಿ ಒಬ್ಬನು, ಒಂದು ಸಲಮಾತ್ರ ಆಕಾಶದ ಮಗನೆಂದು (೧-೧೮೪-೪) ಹೇಳಿದೆ. ಒಂದುಕಡೆ ಮಾತ್ರ ಸಾಗರವು ಅವರಿಗೆ ತಾಯಿ (ಸಿಂಧುಮಾತರೌ ೧-೪೬-೩). ಒಂದು ಮಂತ್ರದಲ್ಲಿ (೧೦-೧೭೨-೨) ಅಶ್ವಿನಿಗಳು ವಿಶ್ವವತ ಮತ್ತು ತೃಷ್ಟ್ಯಪುತ್ರಿ, ಸರಣ್ಯು, ಇವರಿಬ್ಬರ ಅವಳ ಮಕ್ಕಳು ; ಉದಿಸುವ ಸೂರ್ಯ ಮತ್ತು ಉಷಃಕಾಲಗಳೇ ಕ್ರಮವಾಗಿ ವಿಶ್ವವತ ಮತ್ತು ಸರಣ್ಯುಗಳು ಇರಬೇಕು. ಪೂಷಣನು ಅಶ್ವಿನಿಗಳನ್ನು ತನ್ನ ಜನಕರೆಂದು ವಾದಿಸುತ್ತಾನೆ (೧೦-೮೫-೧೪). ಅವರ ಸೋದರಿ (೧-೧೮೨-೨) ಎಂಬುದು ಉಷೋದೇವಿಗೇ ಪ್ರಾಯಶಃ ಅನ್ವಯಿಸುತ್ತದೆ. ಬೆಳಗಿನ ಪುರುಷ ದೇವತೆಗಳಾದ ಇವರು ಅನೇಕ ಸಲ 'ಸೂರ್ಯಾ' ಅಥವಾ ಸೂರ್ಯಪುತ್ರಿಯೊಡನೆ ಸಂಬಂಧಿಸಲ್ಪಟ್ಟಿದಾರೆ ಸೂರ್ಯೆಯೇ ಅವರನ್ನು ವರಿಸಿದಳು (೭-೬೯-೪) ; ಅವರಿಬ್ಬರು ಅವಳ ಪತಿಯರು (೪-೪೩-೬ ; ೧೦-೮೫-೫೫ನ್ನು ಹೋಲಿಸಿ). ಸೂರ್ಯೆ (೫-೭೩-೫) ಅಥವಾ ಕನ್ಯೆಯು (೮-೮-೧೮) ಅವರ ರಥವನ್ನು ಏರಿದಳು. ಸೂರ್ಯನ ಪುತ್ರಿಯು ಅವರ ರಥವನ್ನು ಏರುತ್ತಾಳೆ (೧-೩೪-೫ ; ೧-೧೧೬-೧೭ ; ೧-೧೧೮-೫ ; ೬-೬೩-೫) ಅಥವಾ ಅದನ್ನು ಚುನಾಯಿಸಿಕೊಂಡಳು (೧-೧೧೭-೧೩ ; ೪-೪೩-೨). ಸೂರ್ಯೆಯನ್ನು ತಮ್ಮನವಳೆಂದು ಭಾವಿಸುತ್ತಾರೆ (೭-೬೮-೩) ಮತ್ತು ಅವಳು ರಥದಲ್ಲಿ ಅವರ ಜೊತೆಯಲ್ಲಿ ಹೋಗುತ್ತಾಳೆ ಎಂಬುದು ಒಂದು ವೈಶಿಷ್ಟ್ಯ (೮-೨೯-೮).

(೫-೪೬-೮)ರಲ್ಲಿ ಇತರ ದೇವತಾಸ್ತ್ರೀಯರೊಡನೆ ಹೇಳಿರುವ 'ಅಶ್ವಿನೀ' ಎಂಬದೇವತೆ ಅವಳೇ ಇರಬೇಕು. ಸವಿತೃವು ಸೂರ್ಯೆಯನ್ನು ಪತಿಗೆ ದಾನಮಾಡಿದಾಗ, ಸೋಮದೇವತೆಯು ಅವಳನ್ನು ಮೋಹಿಸದವನೆಂದೂ, ಅಶ್ವಿನೀದೇವತೆಗಳು ವರ ಎಂದೂ (೧೦-೮೫-೯) ಹೇಳಿದೆ. ಬೇರೊಂದು ಕಡೆ (೬-೫೮-೪) ದೇವತೆಗಳು ಸೂರ್ಯೆಗೆ ಪೂಷಣನನ್ನು ಕೊಟ್ಟರೆಂದು ಉಕ್ತವಾಗಿದೆ. ಈ ಸೂರ್ಯೆಗೆ ಸಂಬಂಧಿಸಿರುವುದರಿಂದಲೇ, ವಧುವನ್ನು ರಥದ ಮೇಲೆ ಮನೆಗೆ ಕರೆದುಕೊಂಡುಹೋಗಿ ಎಂದು ಬೇಡಿರುವುದು (೧೦-೧೮೪-೨). ವಧುವನ್ನು ಪುತ್ರವತಿಯಾಗುವಂತೆ ಅನುಗ್ರಹಿಸಬೇಕೆಂದು, ಇತರ ದೇವತೆಗಳೊಡನೆ ಇವನನ್ನೂ ಪ್ರಾರ್ಥಿಸಿದೆ. ನಪುಂಸಕನ ಪತ್ನಿಗೆ ಶಿಶು. ವನ್ನೂ ದಯಪಾಲಿಸುತ್ತಾರೆ ಮತ್ತು ಬಂಜೆ ಹಸುವು ಹಾಲುಕೊಡುವಂತೆ ಮಾಡುತ್ತಾರೆ (೧-೧೧೭-೩). ವೃದ್ಧಳಾಗಿದ್ದ ಕನ್ಯೆಗೆ ಪತಿಯನ್ನೂ ತಮ್ಮ ಪ್ರೀತಿಪಾತ್ರನೊಬ್ಬನಿಗೆ ಪತ್ನಿಯನ್ನೂ ಅನುಗ್ರಹಿಸಿದರು (೧-೧೧೬-೧). ಅವರು ಪ್ರಣಯಿಗಳನ್ನು ಒಂದುಗೂಡಿಸುತ್ತಾರೆ (ಅ ವೇ. ೨-೩೦-೨ ; ಇತ್ಯಾದಿ).

ಆರ್ತರಿಗೆ ಸಹಾಯ ಮಾಡುವುದರಲ್ಲಿ ಅಗ್ರಗಣ್ಯರು. ದುಃಖದಿಂದ ಬಿಡುಗಡೆ ಮಾಡುವುದರಲ್ಲಿಯೂ, ಸಹಾಯ ನೀಡುವುದರಲ್ಲಿಯೂ, ಇವರಷ್ಟು ಚುರುಕಾದವರು ಯಾರೂ ಇಲ್ಲ. (೧-೧೧೨-೨ ; ೧-೧೧೮-೩) ಇಂತಹ ಕಾರ್ಯಗಳಿಗಾಗಿ ಅವರು ಸದಾ ಸ್ತುತರು. ವಿಶೇಷವಾಗಿ, ಸಮುದ್ರದಲ್ಲಿ ನಾವೆಯಿಂದ ರಕ್ಷಿಸುತ್ತಾರೆ. ಸಮುದ್ರದಿಂದ ಅಥವಾ ಸ್ವರ್ಗದಿಂದ ನಿಧಿಯನ್ನು ತರುವಂತೆ ಪ್ರಾರ್ಥಿಸಲ್ಪಡುತ್ತಾರೆ (೧-೪೭-೬) ಮತ್ತು ಅವರ ರಥವು ಸಾಗರದ ಕಡೆಯಿಂದ ಸಮೀಪಿಸುತ್ತದೆ (೪-೪೩-೫) ; ಇಲ್ಲಿ ಸಾಗರವೆಂಬುದು ಆಕಾಶವಿರಬೇಕು. ಇವರು ಆರ್ತರಿಗೆ ಮಾಡುವ ಸಹಾಯವು ಶಾಂತರೀತಿಯೆದು, ಇಂದ್ರಾದಿಗಳಂತೆ ಯುದ್ಧ ಶತ್ರುಗಳಿಂದ ರಕ್ಷಣೆಯಲ್ಲ ; (ಆದರೆ ಒಂದು ಸಲ ಇವರೂ ಇಂದ್ರನ ಜೊತೆಯಲ್ಲಿ ಶತ್ರುಗಳೊಡನೆ ಹೋರಾಡಿದರೆಂದೂ, ಒಂದುಕಡೆ, ವೃತ್ರನನ್ನು ಕೊಂದವರೆಂದೂ ಹೇಳಿದೆ). ಆದ್ದರಿಂದ ಅವರು ವಿಶೇಷವಾಗಿ ದೇವವೈದ್ಯರು (೮-೦೮-೮ ; ಇತ್ಯಾದಿ) ತಮ್ಮ ಔಷಧಿಗಳಿಂದ ರೋಗಗಳನ್ನು ಗುಣಪಡಿಸುತ್ತಾರೆ (೮-೨೨-೧೦ ; ಇತ್ಯಾದಿ) ; ಕಣ್ಣು ಕಾಣಿಸುವಂತೆ ಮಾಡುತ್ತಾರೆ (೧-೧೧೬-೧೬) ; ಕುರುಡರು, ಹಾಯಿಲೆಯವರು ಮತ್ತು ಊನವಾದ ಅಂಗಗಳುಳ್ಳವರು ಇವರುಗಳನ್ನೆಲ್ಲಾ ಸರಿಪಡಿಸುತ್ತಾರೆ (೧೦-೩೯-೩). ದೇವತೆಗಳ ವೈದ್ಯರು, ಅಮರತ್ವ ರಕ್ಷಕರು. ಪೂಜೆ ಮಾಡುವವನ ಮರಣವನ್ನು ದೂರಮಾಡುತ್ತಾರೆ (ಅ. ವೇ. ೭ ೫೩-೧ ; ತೈ. ಬ್ರಾ. ೩-೧೨-೧-೧೧). ಸಹಾಯಕರು, ವೈದ್ಯರು, ಆಶ್ಚರ್ಯಕರವಾದ ಕಾರ್ಯಗಳನ್ನು ಮಾಡುವವರು ಈ ಗುಣಗಳಲ್ಲದೇ, ಅವರ ಔದಾರ್ಯವೂ ಪ್ರಶಂಸಿತವಾಗಿದೆ. ತಮ್ಮ ಆರಾಧಕನಿಗೆ ವಯಸ್ಸಾದಾಗಲೂ ನೇತ್ರಪಾಟವನ್ನೂ ಅನುಗ್ರಹಿಸಿ, ಐಶ್ವರ್ಯ, ಸಂತಾನ ಮುಂತಾದವುಗಳನ್ನು ಕೊಡುತ್ತಾರೆ (೧-೧೧೬-೨೫ ; ೮-೮-೧೩ ಇತ್ಯಾದಿ).

ಅವರು ಕಷ್ಟದಲ್ಲಿ ನೆರವಾಗುತ್ತಾರೆ ಎಂಬುದಕ್ಕೆ ಅನೇಕ ಆಖ್ಯಾಯಿಕೆಗಳಿವೆ. ವೃದ್ಧನಾಗಿ, ಪತ್ನೀ ಪುತ್ರಾದಿಗಳಿಂದ ಪರಿತ್ಯಕ್ತನಾಗಿದ್ದ ಚ್ಯವನನನ್ನು ಅವನ ಶಿಥಿಲದೇಹದಿಂದ ಬಿಡುಗಡೆ ಮಾಡಿದವರು ; ದೀರ್ಘಾಯುಸ್ಸನ್ನು ಕೊಟ್ಟು, ಪುನಃ ಯುವಕನನ್ನಾಗಿ ಮಾಡಿ, ಅವನ ಪತ್ನಿಯು ಅವನನ್ನು ಅಪೇಕ್ಷಿಸುವಂತೆ ಮಾಡಿದರು ; ಮತ್ತು ಇತರ ಕನ್ಯೆಯರು ಅವನನ್ನು ವರಿಸುವಂತೆ ಅನುಗ್ರಹಿಸಿದರು (೧-೧೧೬-೧೦ ; ಇತ್ಯಾದಿ) ಚ್ಯವನನಿಗೆ ಯೌವನದಾನದ ಕಥೆ ವಿಶದವಾಗಿ (ಶ. ಬ್ರಾ. ೪-೧-೫)ಹೇಳಿದೆ. ಅವರು ಕಲಿ ಎಂಬ ವೃದ್ಧನೊಬ್ಬನಿಗೆ ಯೌವನವನ್ನು ಪುನಃ ದೊರಕಿಸಿಕೊಟ್ಟು (೧೦-೩೯-೮), ಲಗ್ನಮಾಡಿಕೊಂಡಾಗ ಅವನ ಸ್ನೇಹಿತರೂ ಆಗಿದ್ದರು (೧-೧೧೭-೧೫). ಅವರು ವಿಮದನ ಪತ್ನಿಯರಾದ ಯುವತಿಯರಿಗೋಸ್ಕರ ರಥವೊಂದನ್ನು (೧-೧೧೭-೧೯), ಅಥವಾ ಅವನಿಗೆ ಒಬ್ಬ ಪತ್ನಿಯನ್ನು (೧-೧೧೬-೧) ಅನುಗ್ರಹಿಸಿದರು. ಅವಳು ಪುರುಮಿತ್ರನ ಪತ್ನಿಯಾಗಿ

ದ್ದಳೆಂದು ತೋರುತ್ತದೆ (೧-೧೧೭-೨೦; ೧೦-೫೯-೭) ಮತ್ತು ಅವಳ ಹೆಸರು ಕಮಧ್ಯು (೧೦-೬೫-೧೨). ಕೃಷ್ಣನ ಪುತ್ರನಾದ, ತಮ್ಮ ಆರಾಧಕ ವಿಶ್ವಕನಿಗೆ, ನಷ್ಟನಾಗಿದ್ದ ವಿಷ್ಣಾಪುವು ಕಾಣಿಸುವಂತೆ ಮಾಡಿದರು (೧-೧೧೬-೨೩; ೧-೧೧೭-೭; ೧೦-೬೫-೧೨). ಆದರೆ ಪದೇ ಪದೇ ಹೇಳಲ್ಪಡುವುದು ಭುಜ್ಯುವನ್ನು ರಕ್ಷಿಸಿದ ಕಥೆ. ಭುಜ್ಯುವು ತುಗ್ರಎಂಬುವನ ಪುತ್ರನು. ಇವನು ಸಮುದ್ರದಲ್ಲಿ ಮುಳುಗಿಹೋಗುತ್ತಿರುವಾಗ ಅಶ್ವಿನಿಗಳುಮರೆಹೊಕ್ಕನು. ಅಳವೇ ತಿಳಿಯದ ಸಾಗರದಲ್ಲಿ ನೂರು ಹುಟ್ಟುಗಳಿಂದ ಕೂಡಿದ ನೌಕೆಯಲ್ಲಿ ಅವನನ್ನು ಕೂಡಿಸಿಕೊಂಡು ಅಶ್ವಿನಿಗಳು ಮನೆಗೆ ಕರೆದುಕೊಂಡು ಹೋದರು. ಆಕಾಶದಲ್ಲಿ ಹಾರುವಂತೆ ತೋರುತ್ತಿದ್ದ, ಒಡಕುಗಳಲ್ಲದ ಹಡಗಿನಲ್ಲಿ, ನಾಲ್ಕು ಹಡಗುಗಳಲ್ಲಿ, ರೆಕ್ಕೆಗಳುಳ್ಳ ದೋಣಿಯಲ್ಲಿ ನೂರು ಪಾದಗಳು ಮತ್ತು ಆರು ಕುದುರೆಗಳುಳ್ಳ ಮೂರು ಹಾರುವ ರಥಗಳಲ್ಲಿ, ತಮ್ಮ ವೇಗಶಾಲಿಗಳಾದ, ಹಾರಿಕೊಂಡು ಹೋಗುವ ಅಶ್ವಗಳ ಸಹಾಯದಿಂದ, ಅಥವಾ ಮನೋವೇಗವುಳ್ಳ ತಮ್ಮ ರಥದಲ್ಲಿ, ಭುಜ್ಯುವನ್ನು ಕುಳ್ಳಿರಿಸಿಕೊಂಡು ಮನೆಗೆ ಸೇರಿಸಿದರು. ಅಲೆಗಳ ಮಧ್ಯದಲ್ಲಿ ಭುಜ್ಯುವು ಒಂದು ಮರದ ತುಂಡನ್ನು ಹಿಡಿದುಕೊಂಡು ತೇಲಾಡುತ್ತಿದ್ದನು. ಇರಿಯಲ್ಪಟ್ಟು, ಕೈಕಾಲು ಕಟ್ಟಹಾಕಿ, ದ್ವೇಷಿಗಳಿಂದ ಬಚ್ಚಿಡಲ್ಪಟ್ಟು, ಹತ್ತು ರಾತ್ರಿ ಮತ್ತು ಒಂಭತ್ತು ಹಗಲು ನೀರಿನಲ್ಲಿ ಬಿದ್ದಿದ್ದು, ಮೃತನಂತೆ ಪರಿಗಣಿತನಾಗಿದ್ದ ರೇಭನನ್ನು, ಸೌಟಿನಿಂದ ಸೋಮರಸವನ್ನು ಪಾತ್ರೆಯಿಂದ ಮೇಲೆ ಎತ್ತುವಂತೆ, ಅಶ್ವಿನಿಗಳು ಎತ್ತಿ, ಜೀವದಾನ ಮಾಡಿದರು. ವಂದನನನ್ನು ಅಪಾಯದಿಂದ ಪಾರುಮಾಡಿ, ಅವನನ್ನು ಬೆಳಕಿಗೆ ತಂದರು (೧-೧೧೨-೫; ೧-೧೧೬-೧೧; ೧-೧೧೭-೫; ೧-೧೧೮-೬); ಹಳ್ಳವೊಂದರಲ್ಲಿ ಮುಚ್ಚಿಡಲ್ಪಟ್ಟು ಸತ್ತಂತೆ ಬಿದ್ದಿದ್ದ ವನನ್ನು ಮೇಲಕ್ಕೆ ಎತ್ತಿದರು (೧೦-೩೯-೮); ಅಥವಾ ಕುಗ್ಗಿಹೋಗಿದ್ದವನನ್ನು ಪುನರುಜ್ಜೀವನಗೊಳಿಸಿದರು (೧-೧೧೯-೬ ಮತ್ತು ೭). ರಾಕ್ಷಸನೊಬ್ಬನ ಮಾಯೆಯಿಂದ ಚಿತೆಯಲ್ಲಿ ಎಸೆಯಲ್ಪಟ್ಟಿದ್ದ ಅತ್ರಿ ಎಂಬ ಋಷಿಯನ್ನೂ ಅವನ ಜೊತೆಗಾರರನ್ನೂ ರಕ್ಷಿಸಿದರು. ತಂಪಾದ ಮತ್ತು ಜೀತನಗೊಳಿಸುವ ಪಾನೀಯವನ್ನು ಕೊಟ್ಟು, ಉರಿಯಿಂದ ತಪ್ಪಿಸಿ, ಕೊನೆಗೆ ತಾರುಣ್ಯ ಬಲಾದಿಗಳನ್ನನುಗ್ರಹಿಸಿದರು. ಅವನನ್ನು ಕತ್ತಲಿನಿಂದ ಪಾರುಗಾಣಿಸಿದರು ಎಂತಲೂ ಇದೆ. ಅತ್ರಿಯನ್ನು ಬೆಂಕಿಯ ಕಾವಿನಿಂದ, ಅಗ್ನಿಯು ತಪ್ಪಿಸಿದನು (೧೦-೩೦-೩) ಎನ್ನುವಾಗ, ಪ್ರಾಯಶಃ, ಅದು ಅಶ್ವಿನಿಗಳ ಮಧ್ಯಸ್ಥಿಕೆಯಿಂದಲೇ ನಡೆದಿರಬೇಕು. ಅವರ ಸಹಾಯವನ್ನು ಬೇಡಿದ ವರ್ತಿಕಾ ಪಕ್ಷಿಯನ್ನು ತೋಳದಿಂದ ರಕ್ಷಿಸಿದರೆಂದೂ ಹೇಳಿದೆ.

ಋಜ್ರಾಶ್ವನು ಒಂದುನೂರ ಒಂದು ಕುರಿಗಳನ್ನು ಕೊಂದು ಒಂದು ಹೆಣ್ಣು ತೋಳಕ್ಕೆ ಆಹಾರವಾಗಿ ಕೊಟ್ಟನು. ಅವನ ತಂದೆಯು ಕುಪಿತನಾಗಿ, ಅವನನ್ನು ಅಂಧನನ್ನಾಗಿ ಮಾಡಿದನು. ಆಗ ಆ ತೋಳವು ಅಶ್ವಿನಿಗಳನ್ನು ಸ್ತುತಿಸಿತು ಅವರು ತುಷ್ಟರಾಗಿ, ಋಜ್ರಾಶ್ವನಿಗೆ ಕಣ್ಣನ್ನು ಕೊಟ್ಟನು (೧-೧೧೬-೧೬; ೧-೧೧೭-೧೭ಮತ್ತು೧೮). ಪರಾವೃಜನ ಕುರುಡುತನವನ್ನೂ, ಕುಂಟುತನವನ್ನೂ ಹೋಗಲಾಡಿಸಿದರು (೧-೧೧೭-೯) ಯುದ್ಧದಲ್ಲಿ ವಿಶ್ಪಲೆಯ ಕಾಲು ಕತ್ತರಿಸಲ್ಪಟ್ಟಿತು. ಅಶ್ವಿನಿಗಳು ಅವಳಿಗೆ ಒಂದು ಕಬ್ಬಿಣದ ಕಾಲನ್ನು ಕೊಟ್ಟರು. ವಿವಾಹವಿಲ್ಲದೇ ತಂದೆಯ ಮನೆಯಿಲ್ಲೇ ವೃದ್ಧಳಾಗುತ್ತಿದ್ದ ಘೋಷಾ ಎಂಬುವಳಿಗೆ ಪತಿಯನ್ನು ಅನುಗ್ರಹಿಸಿ, ಅವಳಿಗೆ ನೆರವಾದರು (೧-೧೧೭-೭; ೧೦-೩೯-೩ ಮತ್ತು ೬; ೧೦-೪೦-೫). ನಪುಂಸಕನೊಬ್ಬನ ಪತ್ನಿಗೆ ಹಿರಣ್ಯಹಸ್ತನೆಂಬ ಪುತ್ರನನ್ನನುಗ್ರಹಿಸಿದರು (೧-೧೧೬-೧೩, ೧-೧೧೭-೨೪; ೬-೬೨-೭, ೧೦-೩೯-೭). ಅವನಿಗೆ ಶ್ಯಾವನೆಂದೂ ಹೆಸರಿದೆ (೧೦-೬೫-೧೩). ಶಯು ಎಂಬುವನ ಗೋವು ಕರು ಹಾಕುತ್ತಿರಲಿಲ್ಲ. ಅಂತಹ ಗೋವು ಹಾಲುಕೊಡುವಂತೆ ಅಶ್ವನೀ ದೇವತೆಗಳು ಮಾಡಿದರು (೧-೧೧೬-೨೨; ಇತ್ಯಾದಿ). ಪೇದುವಿಗೆ ವೇಗಶಾಲಿಯಾದ, ಬಲಿಷ್ಠವಾದ, ಬಿಳಿಯ, ಅಸದೃಶವಾದ, ರಾಕ್ಷಸನಾಶಕವಾದ ಮತ್ತು ಇಂದ್ರ ಪ್ರೇರಿತವಾದ ಅಶ್ವವನ್ನನುಗ್ರಹಿಸಿದರು; ಆದರಿಂದ

ಅವನು ಅಪಾರವಾದ ಲಾಭವನ್ನು ಗಳಿಸಿದನು (೧-೧೧೬-೬ ; ಇತ್ಯಾದಿ). ಪಜ್ರ ಎಂಬುದರ ವಂಶೀಯನಾದ ಕಕ್ಷೀವತನಿಗೆ ಯಥೇಚ್ಛವಾಗಿ ವರಗಳನ್ನು ಕೊಟ್ಟು, ನೂರಾರು ಜಾಡಿ ಸುರಾ ಅಥವಾ ಮಧುವನ್ನು ಜರಡಿಯಿಂದ ಸುರಿಯುವಂತೆ, ಅಶ್ವದ ಗೊರಸಿನಿಂದ ಸುರಿಸಿದರು (೧-೧೧೬-೨ ; ೧-೧೧೭-೬). ಮೇಲೆ ಹೇಳಿದವರುಗಳಲ್ಲದೆ. ಇನ್ನೂ ಅನೇಕರು ಅಶ್ವಿನಿಗಳಿಂದ ಉಪಕೃತರೆಂದು ಹೇಳಿದೆ (೧-೧೧೨ ಮತ್ತು ೧೧೬–೧೧೯ ಸೂಕ್ತಗಳು). ಅಸಾಧಾರಣವಾದ ರೀತಿಯಲ್ಲಿ ರಕ್ಷಿಸಲ್ಪಟ್ಟವರು ಅಥವಾ ಗುಣಪಡಿಸಲ್ಪಟ್ಟವರು ಅನೇಕರು ಇರಬಹುದು. ಅಶ್ವಿನೀದೇವತೆಗಳು ದೇವವೈದ್ಯರಾದುದರಿಂದ, ಇವರಿಲ್ಲರೂ ಅವರಿಂದಲೇ ಈ ಸಹಾಯಗಳನ್ನು ಪಡೆದರೆಂದು ಹೇಳಿರ ಬಹುದು. ಕೆಲವು ಆಧುನಿಕ ವಿದ್ವಾಂಸರು ಹೇಳುವಂತೆ, ಸೂರ್ಯನ ಸಂಬಂಧವಾದ ನಾನಾಕಾರ್ಯಗಳಿಗೆ ಒಬ್ಬ ದೇವತೆಯ ಕಾರ್ಯಗಳೆಂದು ಒಂದು ರೂಪ ಕೊಟ್ಟರುವರೇ ಹೊರತು ನಿಜವಾಗಿ ದೇವತಾ ಕಾರ್ಯಗಳೆಲ್ಲವೆನ್ನುವುದೂ ಸರಿಯೆಂದು ತೋರುವುದಿಲ್ಲ.

ಅಶ್ವಿನಿಗಳಿಂದ ಪ್ರಕೃತಿಯ ಯಾವ ಅಂಶ ಪ್ರತಿಬಿಂಬಿಸಲ್ಪಟ್ಟಿದೆ ಎನ್ನುವುದೇ ಅನಿಶ್ಚಿತವಾದ ವಿಷಯ. ಬೆಳಕಿಗೆ ಸಂಬಂಧಪಟ್ಟ ಅಗ್ನಿ, ಉಷಸ್ಸು, ಸೂರ್ಯ ಮೊದಲಾದವರಂತೆ ಸ್ಪಷ್ಟವಾದ ಮತ್ತು ನಿರ್ದಿಷ್ಟವಾದ ಕಾರ್ಯ ಗಳಾವುವೂ ಇವರಿಗೆ ಹೇಳಿಲ್ಲ. ಯಾಸ್ಕರಂತಹವರಿಗೂ, ಅಶ್ವಿನಿಗಳ ಸ್ವಭಾವ ಸಂದಿಗ್ಧವೇ. ಅವರೂ ಕೂಡ- (ನಿರು- ೧೨–೧). ಕೆಲವರು ಅಶ್ವಿನಿಗಳನ್ನು ಸ್ವರ್ಗ ಮತ್ತು ಭೂಮಿಗಳೆಂದೂ (ಶ. ಬ್ರಾ. ದಲ್ಲಿಯೂ ೪-೧-೫.೧೬ ಇದೇ ಅಭಿಪ್ರಾಯವಿದೆ), ಕೆಲವರು ಹಗಲು ರಾತ್ರಿಗಳೆಂದೂ, ಕೆಲವರು ಸೂರ್ಯ ಚಂದ್ರರೆಂದೂ, ಮತ್ತೆ ಕೆಲವರು ಪವಿತ್ರ ಕಾರ್ಯಗಳನ್ನು ಮಾಡುವ ಇಬ್ಬರು ರಾಜರೆಂದೂ ಹೇಳುತ್ತಾರೆಂದು ನಾನಾ ಅಭಿಪ್ರಾಯಗಳನ್ನು ಮಾತ್ರ ಹೇಳಿ, ತಮ್ಮ ಸ್ವಂತ ಅಭಿಪ್ರಾಯವನ್ನೇ ಕೊಟ್ಟಿಲ್ಲ ಆಧುನಿಕ ವಿದ್ವಾಂಸರು ಒಬ್ಬೊಬ್ಬರು ಒಂದೊಂದು ಅಭಿ ಪ್ರಾಯವನ್ನು ಎತ್ತಿ ಹಿಡಿದಿದಾರೆ. ಕೆಲವರು ಅಶ್ವಿನೀದೇವತೆಗಳು ಶುಕ್ರ ನಕ್ಷತ್ರಕ್ಕೆ (ಪ್ರಾತಃಕಾಲದ ನಕ್ಷತ್ರ) ಸರಿಹೋಗುತ್ತದೆ ಎಂದು ಹೇಳುತ್ತಾರೆ ಅದು ಕಾಣಿಸುವಕಾಲ, ಪ್ರಕಾಶ, ಆಕಾಶದ ಸುತ್ತಲೂ ತಿರುಗುವುದು, ಈ ಎಲ್ಲ ವಿಧದಲ್ಲಿಯೂ ಅಶ್ವಿನಿಗಳಿಗೂ ಶುಕ್ರ (Morning Star) ನಕ್ಷತ್ರಕ್ಕೂ ಸರಿತೂಗುತ್ತದೆ. ಆದರೆ, ಯಮಳರೆಂಬುದು ಮಾತ್ರ ಸರಿ ಬರುವುದಿಲ್ಲ.

ಪ್ರಾತಃಕಾಲದ ನಕ್ಷತ್ರವೂ (ಶುಕ್ರ), ಸಾಯಂಕಾಲದ ನಕ್ಷತ್ರವೂ (ಬುಧ ಅಥವಾ ಗುರು) ಜೋಡಿಯಾ ಗಬಹುದು; ಆದರೆ ಅವೆರಡೂ ಶಾಶ್ವತವಾಗಿ ಬೇರೆಬೇರೆಯಾಗಿರುವುವು. ಅಶ್ವಿನಿಗಳಾದರೋ ಜೊತೆಯಾಗಿಯೇ ಇರುವವರು ಆದರೆ, ಋಗ್ವೇದದಲ್ಲಿ, ಅವರಿಬ್ಬರೂ (ಅಶ್ವಿನೀದೇವತೆಗಳು) ಬೇರೆ ಬೇರೆಯಾಗಿದ್ದಾರೆಂಬುದೂ ಬಂದಿದೆ. ವೈದಿಕ ಕರ್ಮಗಳಿಗೆ ಪ್ರಾತಃಕಾಲದಷ್ಟು ಪ್ರಶಸ್ತ ಸಾಯಂಕಾಲವಲ್ಲ (೫-೭೭-೨) ವಾದರೂ, ಅಶ್ವಿನಿ ಗಳು ಎರಡು ವೇಳೆಗಳಲ್ಲಿ ಕರೆಯಲ್ಪಟ್ಟಿದಾರೆ (೮-೨೨–೧೪ ; ೧೦-೩೯-೧ ; ೧೦-೪೦-೪). ಇವರಿಬ್ಬರು ಸಂಧ್ಯಾ ಕಾಲ ಮತ್ತು ಶುಕ್ರನೆಂಬ ಮತವು ಬಹಳ ಮಟ್ಟಿಗೆ ಸರಿಯೆಂದು ತೋರುತ್ತದೆ. ಏಕೆಂದರೆ, ಇತರ ಎಲ್ಲಾ ಅಂಶ ಗಳಲ್ಲಿಯೂ ಅಶ್ವಿನಿಗಳ ಲಕ್ಷಣಸರಿಬೀಳುವುದರಜೊತೆಗೆ, ಅವರು ಅವಳ ದೇವತೆಗಳು ಎಂಬುದೂ ಸರಿಹೋಗುತ್ತದೆ.

ಅಂತರಿಕ್ಷದ ದೇವತೆಗಳು

ಇಂದ್ರಃ

ಅತಿ ಮುಖ್ಯವಾದ ದೇವತೆ. ೨೫೦ ಸೂಕ್ತಗಳು ಮತ್ತು ಕೆಲವು ಸೂಕ್ತಭಾಗಗಳು ಅವ ನನ್ನು ಸ್ತುತಿಸುತ್ತವೆ. ಇಂದ್ರನು ಇತರ ಕೆಲವು ದೇವತೆಗಳೊಡನೆಯೂ ಸ್ತುತನಾಗಿದಾನೆ. ಇವೆಲ್ಲವನ್ನೂ ಸೇರಿಸಿದರೆ, ಸುಮಾರು ೩೦೦ ಸೂಕ್ತಗಳೇ ಅವನ ಪರವಾಗಿರುವುವು; ಅಂದರೆ, ಸುಮಾರು ಋಗ್ವೇದದ ಕಾಲು ಭಾಗವೇ ಆದಂತಾಯಿತು. ಪ್ರಕೃತಿಯ ಯಾವುದೊಂದಂಶವನ್ನೂ ಪ್ರತಿಬಿಂಬಿಸುತ್ತಾನೆ ಎಂದು ಖಚಿತವಾಗಿ

ಹೇಳಲಾಗುವುದಿಲ್ಲ. ಈ ಕಾರಣದಿಂದ ಇಂದ್ರನು ಮನುಷ್ಯ ಲಕ್ಷಣಗಳನ್ನೇ ಹೆಚ್ಚಾಗಿ ತೋರ್ಪಡಿಸುತ್ತಾನೆ ಮತ್ತು ಐತಿಹಾಸಿಕ ವರ್ಣನೆಗಳು ಬಹಳವಾಗಿ ಅವನನ್ನು ಆವರಿಸಿವೆ. ಮುಖ್ಯವಾಗಿ ಅವನು ವಿದ್ಯುದ್ದೇವತೆ. ತಮಸ್ಸಿನ ಅಥವಾ ಅನಾವೃಷ್ಟಿಯ ದುರ್ದೇವತೆಗಳನ್ನು ಅಥವಾ ರಾಕ್ಷಸರನ್ನು ಜಯಿಸಿ, ನೀರನ್ನೂ ಅಥವಾ ಬೆಳಕನ್ನು ಗಳಿಸುವುದೇ ಅತನ ಮುಖ್ಯಕಾರ್ಯ.

ಮಧ್ಯಲೋಕದ ದೇವತೆಗಳಲ್ಲಿ ಅತಿ ಮುಖ್ಯ. ವಾಯುಮಂಡಲವನ್ನು ವ್ಯಾಪಿಸಿದ್ದಾನೆ (೧-೫೧-೨). ನಿರುಕ್ತದಲ್ಲಿ, ವಾಯುಮಂಡಲ ದೇವತೆಗಳ ಪಟ್ಟಿಯಲ್ಲಿ ಪ್ರತ್ಯೇಕವಾಗಿ ಉಕ್ತವಾಗಿದೆ (ನಿರು. ೫-೪) ಮತ್ತು ಅಗ್ನಿ, ಇಂದ್ರ (ವಾಯು) ಸೂರ್ಯರೆಂಬ ದೇವತಾತ್ರಯದಲ್ಲಿ ಇವನೇ ವಾಯುವಿನ ಪ್ರತಿನಿಧಿಯು.

ಇಂದ್ರನ ದೇಹದ ನಾನಾ ಭಾಗಗಳು ವೇದದಲ್ಲಿ ಉಕ್ತವಾಗಿವೆ. ಅವನಿಗೊಂದುದೇಹ, ತಲೆ, ತೋಳುಗಳು, ಕೈಗಳು ಇವೆ (೨-೧೬-೨ ; ೪-೪೫-೩). ಅವನ ಸೋಮಪಾನದ ವಿಷಯ ಬಂದಾಗಲೆಲ್ಲಾ ಅವನ ಉದರವು ಹೇಳಲ್ಪಟ್ಟಿದೆ (೨-೧೬-೨ ಇತ್ಯಾದಿ). ಸೋಮದಿಂದ ತುಂಬಿರುವಾಗ ಅವನ ಉದರವು ಸರೋವರಕ್ಕೆ ಹೋಲಿಸಲ್ಪಟ್ಟಿದೆ (೩-೩೬-೪). ಅವನ ತುಟಿಗಳು, ಸುಂದರವಾದ ತುಟಿಗಳೆಂದು ವರ್ಣಿತವಾಗಿವೆ. ಸೋಮಪಾನ ಮಾಡಿದ ಮೇಲೆ ತನ್ನ ದವಡೆಗಳನ್ನು ಅಡಿಸುತ್ತಾನೆ (೪-೬೫-೧೦). ಅವನಿಗೆ ಬಹಳ ಸಂತೋಷವಾದಾಗ ಅಥವಾ ಅವನು ಚಲಿಸುವಾಗ, ಅವನ ದಾಡಿಯು ಜೋರಾಗಿ ಅಡುತ್ತದೆ (೨-೧೧-೧೭ ; ೧೦-೨೩-೧). ಅವನ ಕೇಶವು (೧೦-೯೬.೫ ಮತ್ತು ೮) ಮತ್ತು ದಾಡಿಯು ಕಂದುಬಣ್ಣ. ಅವನ ರೂಪವೇ ಕಂದುಬಣ್ಣ (೧೦-೯೬). ಕೆಲವು ಸಲ ಸುವರ್ಣ ವರ್ಣವೆಂದೂ (೧-೭-೨ ; ೪-೫೫-೩) ಇದೆ. ಈ ಸುವರ್ಣವರ್ಣ ಸವಿತೃವಿನ ವಿಶೇಷಲಕ್ಷಣ ಇಂದ್ರನು ಸವಿತೃವಿನಂತೆ ಸುವರ್ಣಬಾಹು (೭-೩೪-೪); ಅವನಹಾಗೇ ಕಬ್ಬಿಣದಂತೆ ಗಟ್ಟಿಯಾದ ಬಾಹುಗಳು (೧-೫೬-೩ ; ೧೦-೯೬-೪ ಮತ್ತು ೮). ವಿಶೇಷವಾಗಿ ವಜ್ರವನ್ನು ಪ್ರಯೋಗಿಸುತ್ತಿರುವ ಅವನ ಬಾಹುಗಳು ಮೇಲೆ ಮೇಲೆ ಪ್ರಸ್ತಾಪಿಸಲ್ಪಟ್ಟಿವೆ. ಅವು ಬಹಳ ಉದ್ದ, ದೂರ ಚಾಚಲ್ಪಟ್ಟವೆ- ದೊಡ್ಡವು (೬-೧೯-೩ ; ೪-೩೨-೧೦ ; ೪-೭೦-೧) ಬಲವಾಗಿವೆ ಮತ್ತು ಒಳ್ಳೆಯ ಆಕಾರವುಳ್ಳವು (ಸಾ. ವೇ. ೨-೧೨೧೯). ಇಂದ್ರನು ಬಹಳ ಸುಂದರವಾದ ಸೂರ್ಯನಂತೆ ಕೆಂಪುಛಾಯೆಯುಳ್ಳ ಮತ್ತು ಶುಭ್ರವಾದ ರೂಪಗಳನ್ನು ಸ್ವೀಕರಿಸುತ್ತಾನೆ (೧೦-೧೧೨-೩); ತನ್ನ ಇಚ್ಛೆಬಂದಂತೆ ನಾನಾ ರೂಪಧಾರಿಯಾಗುತ್ತಾನೆ (೩-೪೮-೪ ; ೩-೫೩-೮ ; ೬-೪೭-೧೮).

ವಜ್ರಾಯುಧವು ಇಂದ್ರನಿಗೆ ಮಾತ್ರ ಸಂಭೋಗುವ ಆಯುಧ. ಸಿಡಿಲಿಗೆ ಇತಿಹಾಸದಲ್ಲಿ ಈ ಹೆಸರು ಬಂದಿದೆ. ಸಾಧಾರಣವಾಗಿ ತ್ವಷ್ಟೃವೇ ಇದಕ್ಕೆ ರೂಪಗೊಟ್ಟವನು (೧-೩೨-೨ ಇತ್ಯಾದಿ); ಆದರೆ ಕಾವ್ಯ ಉಶನಾ ಎಂಬುವನು ಅದನ್ನು ಮಾಡಿ, ಇಂದ್ರನಿಗೆ ಕೊಟ್ಟನು ಎಂತಲೂ ಇದೆ (೧-೧೨೧-೧೨ ; ೫-೩೪-೨). ಇಂದ್ರನಿಗೆ ವಜ್ರಾಯುಧವನ್ನು ಒದಗಿಸಿದವರು ದೇವತೆಗಳು (ಐ. ಬ್ರಾ. ೪-೧). ಸಮುದ್ರದಲ್ಲಿ ನೀರಿನಿಂದಾವೃತವಾಗಿ ವಜ್ರಾಯುಧವು ಬಿದ್ದಿದೆ (೪-೪೯-೯). ಸೂರ್ಯನ ಕೆಳಗಡೆ ಅದರ ಸ್ಥಾನ (೧೦-೨೭-೨೧). ಸಾಧಾರಣವಾಗಿ ಕಬ್ಬಿಣದಿಂದ ಮಾಡಿದ್ದು ಅಥವಾ ಲೋಹಗಳಿಂದ (೧ ೫೨-೪) ಎಂದು ಹೇಳಿದೆ. ಒಂದೊಂದು ಸಲ ಬಂಗಾರದ ಬಣ್ಣವುಳ್ಳದ್ದು (೧-೫೭-೨ ಇತ್ಯಾದಿ) ; ಕಂದುಬಣ್ಣದ್ದು (೩-೪೪-೪ ; ೧೦-೯೬-೩) ; ಅಥವಾ ಶುದ್ಧ ಶ್ವೇತ ವರ್ಣದ್ದು (೩-೪೪-೫). ಅದಕ್ಕೆ ನಾಲ್ಕು ಮೂಲೆಗಳು (೪-೨೨-೨), ನೂರು ಮೂಲೆಗಳು (೪-೧೭-೧೦), ನೂರ್ಕೀಲುಗಳು (೪-೬-೬; ಇತ್ಯಾದಿ). ಮತ್ತು ಸಾವಿರ ಮೊನೆಗಳು (೧೦-೪೦-೧೨ ; ಇತ್ಯಾದಿ). ಅದು ಹರಿತವಾಗಿದೆ (೭-೧೪-೧೪ ; ಇತ್ಯಾದಿ) ಇಂದ್ರನು ಅದನ್ನು ಚಾಕುವಿನಂತೆ ಅಥವಾ ಎತ್ತು ತನ್ನ ಕೊಂಬುಗಳನ್ನು ಉಜ್ಜುವಂತೆ ಉಜ್ಜುತ್ತಾನೆ (೧-೧೩೦-೪; ೧-೫೫-೧). ಅದಕ್ಕೆ ಕಲ್ಲು ಅಥವಾ ಪರ್ವತ ಎಂತಲೂ ಹೆಸರಿದೆ (೭-೧೦೪-೧೯)

ಇಂದ್ರನ ಕೈಯಲ್ಲಿರುವ ವಜ್ರವನ್ನು ಆಕಾಶದಲ್ಲಿರುವ ಸೂರ್ಯನಿಗೆ ಹೋಲಿಸಿದೆ (೫-೫೯-೨). ವಜ್ರ ಎಂಬ ಪದದಿಂದ ನಿಷ್ಪನ್ನವಾದ, ಅಥವಾ ಅದರೊಡನೆ ಸಮಾಸವಾಗಿರುವ ಪದಗಳು ಸಾಧಾರಣವಾಗಿ ಇಂದ್ರನಿಗೇ ಉಪಯೋಗಿಸಲ್ಪಟ್ಟಿವೆ. ವಜ್ರಭೃತ್, ವಜ್ರಿವತ್, ವಜ್ರದಕ್ಷಿಣ ಇವುಗಳು ಅವನಿಗೆ ಸಂದಿವೆ; ಆದರೆ ವಜ್ರಬಾಹು, ವಜ್ರಹಸ್ತ, ವಜ್ರೀ, ಇವುಗಳು ರುದ್ರ, ಮರುತ್ತುಗಳು ಮತ್ತು ಮನ್ಯು ಇವರುಗಳಿಗೂ ಒಂದೊಂದು ಸಲ ಪ್ರಯುಕ್ತವಾಗಿವೆ.

ಇಂದ್ರನು ಚಿನ್ನದ ರಥದಲ್ಲಿ ಕುಳಿತು ಬರುತ್ತಾನೆ (೬.೨೯-೨; ಇತ್ಯಾದಿ) ಮತ್ತು ಅದು ಮನಸ್ಸಿಗಿಂತಲೂ ವೇಗವುಳ್ಳದ್ದು (೧೦-೧೧೨-೨). ಅದಕ್ಕೆ ಕಂದುಬಣ್ಣದ ಎರಡು ಕುದುರೆಗಳು ಕಟ್ಟಿವೆ. 'ಹರೀ' ಎಂತಲೇ ಅವುಗಳಿಗೆ ಹೆಸರು. ಕೆಲವು ಮಂತ್ರಗಳಲ್ಲಿ ಕುದುರೆಗಳ ಸಂಖ್ಯೆ ಎರಡಕ್ಕಿಂತ ಹೆಚ್ಚು, ನೂರು, ಸಾವಿರ ಅಥವಾ ಸಾವಿರದನೂರರವರೆಗೂ ಹೇಳಿದೆ (೨-೧೮-೪ ರಿಂದ ೭; ೪-೪೬-೩; ೬-೪೭-೧೪; ೮-೧-೯ ಮತ್ತು ೨೪). ಈ ಕುದುರೆಗಳಿಗೆ ಸೂರ್ಯನೇ ಕಣ್ಣು (೧-೧೬-೧ ಮತ್ತು ೨). ಅವು ಘೂಂಕರಿಸುತ್ತವೆ ಮತ್ತು ಕೆನೆಯುತ್ತವೆ (೧-೩೦-೧೬). ಅವಕ್ಕೆ ಹಾರಾಡುತ್ತಿರುವ ಕೇಸರವಿದೆ (೧-೧೦-೩; ಇತ್ಯಾದಿ), ಅಥವಾ ಬಂಗಾರದ ಬಣ್ಣದ ಕೂದಲು (೮-೩೨-೨೯; ೮-೮೨-೨೪). ಅವುಗಳ ಕೂದಲು ನವಿಲಿನ ಪುಕ್ಕಗಳಂತೆ ಇದೆ (೩-೪೫-೧; ೮-೧-೨೫). ಅವು ಸೇರಬೇಕಾದ ಸ್ಥಳವು ಎಷ್ಟೇ ದೂರವಿದ್ದರೂ ಬಹಳ ಶೀಘ್ರವಾಗಿ ಹೋಗಿ ಸೇರುತ್ತವೆ. ಹದ್ದು ರೆಕ್ಕೆಗಳ ಸಹಾಯದಿಂದ ಹಾರಿಹೋಗುವಂತೆ, ಇಂದ್ರನು ಈ ಅಶ್ವಗಳ ಸಹಾಯದಿಂದ ಸಂಚರಿಸುತ್ತಾನೆ (೨-೧೭-೩; ೮-೩೪-೯). ಸ್ತುತಿಗಳೇ ಅಶ್ವಗಳನ್ನು ರಥಕ್ಕೆ ಹೂಡುತ್ತವೆ (೨-೧೮-೩; ಇತ್ಯಾದಿ) ಅಂದರೆ, ಸ್ತುತಿಗಳು ಇಂದ್ರನನ್ನು ಯಾಗಶಾಲೆಗೆ ಕರೆತರುತ್ತವೆ. ಇಂದ್ರನನ್ನು ಸೂರ್ಯಾಶ್ವಗಳು (೧೦-೪೯-೭) ಅಥವಾ ವಾಯುವಿನ ಅಶ್ವಗಳು (೧೦-೨೨-೪ ರಿಂದ -೬) ಒಯ್ಯುತ್ತವೆ ಎಂದು ಕೆಲವು ಕಡೆ ಇದೆ. ಇಂದ್ರನು ವಾಯುವಿನ ಸಾರಥಿ (೪-೪೬-೨; ೪-೪೮-೨) ಅಥವಾ ಸಹರಥಿಕ (೭-೯೧-೬). ಋಭುಗಳು ಇಂದ್ರನ ರಥ ಮತ್ತು ಕುದುರೆಗಳನ್ನು ರಚಿಸಿದರು (೧-೧೧೧-೧; ೫-೩೧-೪). ಇಂದ್ರನು ಚಿನ್ನದ ಚಾಟಿಯನ್ನು ಉಪಯೋಗಿಸುತ್ತಾನೆ (೮-೩೩-೧೧).

ದೇವತೆಗಳಿಗೆಲ್ಲಾ ಸೋಮಪಾನವು ಬಹಳ ಇಷ್ಟ (೮-೨-೧೮; ೮-೫೮-೧೧); ಆದರೆ ಇಂದ್ರನಿಗೆ ಎಲ್ಲರಿಗಿಂತ ಹೆಚ್ಚಾಗಿ ಇಷ್ಟ (೧-೧೦೪-೯ ಇತ್ಯಾದಿ). ಪಾನಮಾಡುವುದಕ್ಕೋಸ್ಕರ ಅದನ್ನು ಅವನು ಕದ್ದನು (೩-೪೮-೪; ೮-೪-೪). ದೇವಮಾನವರಲ್ಲಿ ಅವನೊಬ್ಬನೇ ಸೋಮಪಾನ ಮಾಡುವವನು (೮-೨-೪); ಅವನ ಜೊತೆಗಾರನಾದ ವಾಯುವು ಅವನಿಗೆ ಸ್ವಲ್ಪವಷ್ಟಿಗೆ ಸಮಾನನು. ಸೋಮರಸವು ಇಂದ್ರನಿಗೆ ಪುಷ್ಟಿಕರ (೮-೪ ೧೨) ಸೋಮಪಾ, ಸೋಮಪಾವನ್ ಇತ್ಯಾದಿ ವಿಶೇಷಣಗಳು ಅವನಿಗೆ ಮಾತ್ರ ತಕ್ಕವು. ಅಗ್ನಿ, ಬೃಹಸ್ಪತಿ ಮತ್ತು ವಾಯುಗಳಿಗೆ ಇಂದ್ರನ ಜೊತೆಯಲ್ಲಿರುವಾಗಲೂ, ವಾಯುವಿಗೊಬ್ಬನಿಗೆ ಮಾತ್ರ ಒಂದೇ ಒಂದು ಸಲ ಪ್ರತ್ಯೇಕವಾಗಿಯೂ ಉಪಯೋಗಿಸಲ್ಪಟ್ಟಿದೆ.

ಭೂಮ್ಯಾಕಾಶಗಳಿಗೆ ಆಧಾರನಾಗುವುದು ಅಥವಾ ಭೂಮಿಯನ್ನು ಹರಡುವುದು ಮೊದಲಾದ ವಿಶ್ವದ ಕಾರ್ಯಗಳನ್ನು ಮಾಡಲು, ಸೋಮವು ಸಹಾಯಕವಾಗುವುದಂತೆ (೨-೧೫-೨). ವಿಶೇಷವಾಗಿ, ಅವನ ರಾಕ್ಷಸ ಮತ್ತು ವೃತ್ರವಧಾದಿ ಯುದ್ಧಕಾರ್ಯಗಳನ್ನು ಮಾಡಲು ಸಹಾಯಕ (೨.೧೫-೧; ೨-೧೯-೨; ೬-೪೭-೧೦ ಮತ್ತು -೨) ಅಥವಾ ಶತ್ರುಜಯರೂಪ ಕಾರ್ಯಕ್ಕೆ ನೆರವು (೬-೨೭; ೭-೨೨-೨; ೮-೮೧-೬). ಅವನ ತಾಯಿಯೇ ಅವನಿಗೆ ಅದನ್ನು ಕುಡಿಯಲು ಕೊಟ್ಟಳು ಅಥವಾ, ಅವನು ಜನಿಸಿದ ದಿನವೇ ಸೋಮಪಾನಮಾಡಿದನೆಂದಮೇಲೆ ಅದು ಅವನಿಗೆ ಎಷ್ಟು ಅವಶ್ಯಕವೆಂಬುದನ್ನು ಊಹಿಸಬಹುದು (೩-೪೮-೨ಮತ್ತು ೩; ೩-೩೨-೯ಮತ್ತು೧೦; ೬-೪೦-೨;

೭-೯೮-೩) ವೃತ್ರವಧೆಗೆ ಸಿದ್ಧನಾಗುವಾಗ ಮೂರು ಸರೋವರದಷ್ಟು ಸೋಮಪಾನ ಮಾಡಿದನು (೫-೨೯-೭); ಮೂವತ್ತು ಸರೋವರಗಳಷ್ಟು ಪಾನೀಯವನ್ನು ಒಂದೇ ಗುಟುಕಿಗೆ ಪಾನಮಾಡಿದನು (೮-೬೬-೪) ಸೋಮ ಪಾನ ಮಾಡಿದ ಮೇಲೆ ಆಗುವ ಅನುಭವಗಳನ್ನು ಇಂದ್ರನು ಒಂದು ಇಡೀ ಸೂಕ್ತ (೧೦-೧೧೯)ದಲ್ಲಿ ವರ್ಣಿಸುತ್ತಾನೆ. ಅತಿಯಾಗಿ ಮಾದಕ ಪದಾರ್ಥಗಳನ್ನು ಪಾನಮಾಡಿದರೆ ಮನುಷ್ಯರಿಗೆ ರೋಗ ಬರುವಂತೆ, ಇಂದ್ರನಿಗೆ ಅತಿಯಾದ ಸೋಮಪಾನದಿಂದಾದ ಜಾಡ್ಯವನ್ನು ಸೌತ್ರಾಮಣಿ ಯಾಗದಿಂದ ದೇವತೆಗಳು ಗುಣಪಡಿಸಬೇಕಾಯಿತು. ಮಧುಮಿಶ್ರಿತವಾದ ಕ್ಷೀರವೂ ಅವನ ಪಾನೀಯ (೮-೪-೮)

ಎತ್ತುಗಳ ಮಾಂಸವನ್ನೂ ತಿನ್ನುತ್ತಾನೆ (೧೦-೮೮-೩). ಒಂದು (೧೦-೮೭-೨), ಇಪ್ಪತ್ತು (೧೦-೮೬-೧೪), ನೂರು (೬-೧೭-೧೧; ೮-೬೬-೧೦), ಅಥವಾ ಮುನ್ನೂರು (೫-೨೯-೭) ಎಮ್ಮೆಗಳ ಅಗ್ನಿಯಿಂದ ಸುಡಲ್ಪಟ್ಟ ಮಾಂಸವನ್ನು ಭಕ್ಷಿಸುತ್ತಾನೆ. ಯಾಗದಲ್ಲಿ ಹೋಮ ಮಾಡಲ್ಪಟ್ಟ ರೊಟ್ಟಿಯನ್ನು (೩-೫೨-೭ ಮತ್ತು ೮), ಧಾನ್ಯವನ್ನು (೩-೫೩-೩ : ೩-೪೩-೪ ; ೧-೧೬-೨) ಸ್ವೀಕರಿಸುತ್ತಾನೆ. ಈ ಧಾನ್ಯವನ್ನು ಅವನ ಅಶ್ವಗಳೂ ತಿನ್ನುತ್ತವೆ (೩-೩೫-೭ ; ೩-೫೨-೭).

ಅನೇಕ ಬಾರಿ ಇಂದ್ರನು ಜನ್ಮತಾಳಿದನೆಂದು ಹೇಳಿದೆ. ಎರಡು ಸೂಕ್ತಗಳು (೩-೪೮ ; ೪-೧೭) ಅವನ ಜನನದ ವಿಷಯವನ್ನು ಪ್ರಸ್ತಾಪಿಸಿವೆ. ಪ್ರಕೃತಿವಿರುದ್ಧವಾಗಿ, ತನ್ನ ತಾಯಿಯ ಪಾರ್ಶ್ವದಿಂದ, ಜನಿಸಬೇಕೆಂದು ಇಚ್ಛಿಸಿದನಂತೆ (೪-೧೮-೧ ಮತ್ತು ೨). ಪ್ರಾಯಶಃ ಮೇಘಪಾರ್ಶ್ವದಿಂದ ಸಿಡಿಲು ಹೊರಡುತ್ತದೆ ಎಂಬುವುದರಿಂದ ಈ ವಿಷಯ ಪ್ರಸಕ್ತವಾಗಿರಬೇಕು ಜನಿಸಿ, ಆಕಾಶವನ್ನು ಬೆಳಗುತ್ತಾನೆ (೩ ೪೪-೪) ಹುಟ್ಟಿದ ಕ್ಷಣವೇ, ಸೂರ್ಯನ ಚಕ್ರವನ್ನು ಚಲಿಸುವಂತೆ ಮಾಡಿದನು (೧-೧೩೦-೯). ಅವನು ಹುಟ್ಟಿದ ಕೂಡಲೇ ಯೋಧನಾದನು (೩-೫೧-೮ ; ೫.೩೦-೫ ; ೮-೪೫-೪; ೮-೬೬-೧ ; ೧೦-೧೧೩-೪) ಮತ್ತು ಜನ್ಮಾರಭ್ಯ ಅಪ್ರತಿಹತನು (೧-೧೦೨-೮; ೧೦-೧೩೩-೨). ಅವನು ಹುಟ್ಟಿದ ಕೂಡಲೇ, ಅವನ ಭಯಕ್ಕೆ, ಅಚಲವಾದ ಪರ್ವತಗಳು, ಸ್ವರ್ಗ, ಮತ್ತು ಭೂಮಿಗಳು ಕಂಪಿಸಿದವು (೧-೬೧-೧೪). ಜನನ ಕಾಲದಲ್ಲಿ ಅವನ ಕೋಪದ ಭಯದಿಂದ ಸ್ವರ್ಗ ಮತ್ತು ಭೂಮಿಗಳು ನಡುಗಿದವು (೪-೧೭-೨) ಮತ್ತು ದೇವತೆಗಳೆಲ್ಲಾ ಅವನಿಗೆ ಹೆದರಿಕೊಂಡರು (೫-೩೦-೫). ಅವನ ತಾಯಿಯ ಹೆಸರು ಬಹಳ ಸಲ ಬಂದಿದೆ (೩-೪೮-೨ ಮತ್ತು ೩ ; ಇತ್ಯಾದಿ). ಒಂದು ಸಲ (೪-೧೮-೧೦) ಅವಳು ಗೋವು, ಅವನು ಅದರ ಕರು ; ಗೋವಿನಿಂದ ಜನಿಸಿದ (ಗಾಸ್ಪೇರ್ಯ) ವೃಷಭನೆಂದೊಂದು ಕಡೆ (೧೦-೧೧೧-೨) ಒಂದು ಕಡೆ ನಿಷ್ಟ್ರಿಗ್ರಿಯ ಮಗ (೧೦-೧೦೧-೧೨): ನಿಷ್ಟ್ರಿಗ್ರಿಯು ಅದಿತಿಯೆಂದು ಸಾಯಣರ ಮತ. ಇಂದ್ರ (ಮತ್ತು ಅಗ್ನಿಯ)ನ ತಾಯಿ 'ಏಕಾಷ್ಟಕಾ' ಎಂಬ ಪ್ರಜಾಪತಿಯ ಪುತ್ರಿ (ಅ. ವೇ. ೩-೧೦-೧೨ ಮತ್ತು ೧೩). ಅಗ್ನಿಗೆ ದ್ಯಾವಾಪೃಥಿವಿಗಳು (೬-೫೯-೨) ಜನಕ ಜನನಿಯರು ; ಇಂದ್ರನಿಗೂ ಅವರೇ. (೪-೧೭-೪)ನೆಯ ಮಂತ್ರದಲ್ಲೂ, ಒಂದು ವ್ಯಾಖ್ಯಾನದ ಪ್ರಕಾರ, ಆಕಾಶವೇ ಇಂದ್ರನ ಜನಕ. (೧೦-೧೨೦-೧ ; ೬-೩೦-೫ ; ೮-೩೬-೪ ; ೧೦-೫೪-೩ ; ೧೦-೧೩೮-೬ ; ೧೦-೧೬೪-೧೧) ಇವುಗಳಲ್ಲೂ ಇದೇ ಅಭಿಪ್ರಾಯ ಬರುತ್ತದೆ. ವಜ್ರವನ್ನು ಮಾಡಿಕೊಟ್ಟ ತ್ವಷ್ಟೃವೇ ಅವನ ತಂದೆಯೆಂದೂ (೩-೧೭-೬) ಇದೆ. ಇಂದ್ರನು, ತಂದೆಯ ಮನೆಯಲ್ಲಿ, ತಾಯಿಯು ಕೊಟ್ಟ ಸೋಮವನ್ನು ಪಾನಮಾಡಿದನು (೩-೪೮.೨) ಇಂದ್ರನು ತ್ವಷ್ಟೃವಿನ ಮನೆಯಲ್ಲಿ ಸೋಮಪಾನ ಮಾಡಿದನು (೪-೧೮-೩). ಜನಿಸಿದ ಕೂಡಲೇ ತ್ವಷ್ಟೃವನ್ನು ಸೋಲಿಸಿ, ಸೋಮವನ್ನು ಕದ್ದು, ಬಟ್ಟಲುಗಳಲ್ಲಿ ಕುಡಿದನು (೩-೪೮-೪). ಇಂದ್ರನು, ತಂದೆಯನ್ನು ಕಾಲಿನಿಂದಿತ್ತಿ ನೆಲಕ್ಕೆ ಬಡಿದನು. ಅದೇ ಪದ್ಯದಲ್ಲಿ, ತಾಯಿಯನ್ನು ವಿಧವೆಯಾಗಿ ಮಾಡಿದವರು ಯಾರೆಂದು ಪ್ರಶ್ನೆಯೂ ಇದೆ (೪-೧೮-೧೨). ಈ ವಾಕ್ಯಗಳಿಂದ, ಸೋಮವನ್ನು ಪಡೆಯುವುದಕ್ಕೋಸ್ಕರ, ಇಂದ್ರನು ವಧಿಸಿದ ಅವನ

ತಂದೆ ತ್ವಷ್ಟೃವೆಂದು ತಿಳಿದುಬರುತ್ತದೆ (೧-೮೦-೧೪) ದೇವತೆಗಳೆಲ್ಲರೂ ಅವನ ಮೇಲೆ ಯುದ್ಧಮಾಡಿದರೆಂಬುದು, (೪-೩೦-೩) ಸೋಮವನ್ನು ಬಲಾತ್ಕಾರವಾಗಿ ಪಡೆಯುವ ಈ ಸಂದರ್ಭದಲ್ಲೇ ಇರಬೇಕು.

ಇಂದ್ರನ ಜನ್ಮದ ವಿಷಯದಲ್ಲಿ ಕೆಲವು ಬೇರೆಬೇರೆ ಹೇಳಿಕೆಗಳಿವೆ. ದೇವತೆಗಳು ದುಷ್ಟರನ್ನು ನಾಶ ಮಾಡುವವನೆಂದು ಉತ್ಪತ್ತಿಮಾಡಿದರು (೩-೪೪-೧) ; ಆದರೆ ಇಲ್ಲಿ 'ಜನ್' ಧಾತುವು 'ನೇಮಿಸು' ಎನ್ನುವ ಅರ್ಥದಲ್ಲಿ ಉಪಯೋಗಿಸಿರುವಂತೆ ತೋರುತ್ತದೆ (೨-೧೩-೫ ; ೩-೫೧-೪ಗಳನ್ನು ಹೋಲಿಸಿ). ಸೋಮವು ಇಂದ್ರ ಮತ್ತು ಕೆಲವು ದೇವತೆಗಳನ್ನು ಸೃಜಿಸಿತು (೯-೯೬-೫). ಪುರುಷಸೂಕ್ತದಲ್ಲಿ, ಇಂದ್ರಾಗ್ನಿಗಳು ವಿರಾಟ್ಪುರುಷನ ಬಾಯಿಯಿಂದ ಜನಿಸಿದರೆಂದು ಇದೆ (೧೦-೯೦-೧೩) ಇಂದ್ರ, ಅಗ್ನಿ, ಸೋಮ, ಪರಮೇಷ್ಠಿಗಳು ಪ್ರಜಾಪತಿಯಿಂದ ಸೃಜಿತರೆಂದು ಹೇಳಿದೆ (ಶ. ಬ್ರಾ. ೧೧-೧-೬-೧೪). ಪ್ರಜಾಪತಿಯು ಎಲ್ಲ ದೇವತೆಗಳಿಗಿಂತ ಕಡೆಯಲ್ಲಿ ಇಂದ್ರನನ್ನು ಸೃಜಿಸಿದನು. (ತೈ. ಬ್ರಾ. ೨-೨-೧೦-೧)

ಅಗ್ನಿಯು ಇಂದ್ರನ ಅವಳಿಸೋದರನು (೬-೫೯-೨) ಮತ್ತು ಪೂಷಣನೂ ಅವನ ಸೋದರನು. ಇಂದ್ರನ ಭ್ರಾತೃವಿನ ಪುತ್ರರೆಂದು ಒಂದು ಕಡೆ (೧೦-೫೫-೧) ಇದೆ ; ಆದರೆ ಅವರು ಯಾರೆಂಬುದು ಸ್ಪಷ್ಟವಾಗಿಲ್ಲ

ಇಂದ್ರನ ಹೆಂಡತಿಯ ಹೆಸರು ಅನೇಕ ಸಲ ಬಂದಿದೆ (೧-೮೨-೫, ೬ ; ೩-೫೩-೪, ೬ ; ೧೦-೮೬-೯, ೧೦) ಅವಳಿಗೆ ಇಂದ್ರಾಣಿಯೆಂದು ಹೆಸರು (೧೦ ೮೬-೧೧, ೧೩) ; ಇನ್ನೂ ಕೆಲವು ಮಂತ್ರಗಳಲ್ಲಿ ಇತರ ದೇವತಾ ಸ್ತ್ರೀಯರ ಜೊತೆಯಲ್ಲಿಯೂ ಈ ಹೆಸರು ಬಂದಿದೆ. (೧-೨೨-೧೩ ; ೨-೩೨-೪ ; ೫-೪೬-೪) ಇಂದ್ರಾಣಿಯು ಇಂದ್ರನ ಪತ್ನಿ (ಶ. ಬ್ರಾ. ೧೪-೨-೨-೪) ಪ್ರಭಾ ಮತ್ತು ಸೇನೆಯರು ಅವನ ಪತ್ನಿಯರು. (ಐ. ಬ್ರಾ. ೩-೨೨-೭) ಇವೆರಡೂ ಇಂದ್ರಾಣಿಯ ಹೆಸರುಗಳು. (ತೈ. ಬ್ರಾ. ೨-೪-೨-೭,೪ ; ಮೈ. ಸಂ. ೩-೪-೪ ; ೪-೧೨-೧) ಶಚಿ ಎಂಬುದೇ ಅವಳ ಸರಿಯಾದ ನಾಮಧೇಯ (ವಾ. ಸಂ. ೨೦-೫೨) ಒಬ್ಬ ಅಸುರಸ್ತ್ರೀಯು ಇಂದ್ರನೆನ್ನು ದೇವತೆಗಳ ಮಧ್ಯದಿಂದ ಕೆಳಕ್ಕೆ ಎಳೆದಳು (ಅ. ವೇ. ೭-೩೮-೨) ವಿಲಿಷ್ಟೆಂಗಾ ಎಂಬ ಒಬ್ಬ ದಾನವಸ್ತ್ರೀಯನ್ನು ಮೋಹಿಸಿ ಇಂದ್ರನು ಹೆಂಗಸರ ಗುಂಪಿನಲ್ಲಿ ಹೆಂಗಸಿನಂತೆಯೂ, ಗಂಡಸರ ಮಧ್ಯದಲ್ಲಿ ಗಂಡಸಿನಂತೆಯೂ, ಕಾಣಿಸಿಕೊಳ್ಳುತ್ತಾ ಅಸುರಲೋಕದಲ್ಲಿ ವಾಸಿಸಿದನು. (ಕಾಠಕ)

ಇಂದ್ರನು ಅನೇಕ ದೇವತೆಗಳೊಡನೆ ಕಲೆಯುವುದು ಕಂಡು ಬರುತ್ತದೆ. ಅವನಿಗೆ ಬಹಳ ಮುಖ್ಯ ಸ್ನೇಹಿತರು, ಮಿತ್ರರು ಮತ್ತು ಮರುದ್ದೇವತೆಗಳು. ಅವರು ಅವನಿಗೆ ಅನೇಕ ಯುದ್ಧಗಳಲ್ಲಿ ನೆರವಾಗಿದ್ದಾರೆ. ಮರುತ್ವಾನ್ ಎಂಬ ವಿಶೇಷಣವು. ಇತರ ದೇವತೆಗಳಿಗೆ ಅನ್ವಯಿಸಿದರೂ, ಹಾಗೆ ಕರೆಯಲ್ಪಡುವುದು ಇಂದ್ರನ ವಿಶೇಷವಾದ ಹಕ್ಕು. ಇದರಂತೆಯೇ ಮರುದ್ಗಣದಿಂದ ಅನುಸೃತ ಎನ್ನುವುದೂ ಕೂಡ. (೫-೪೨-೬ ; ೯-೬೫-೧೦). ಇಂದ್ರಾಗ್ನೀ ಎಂಬುದಾಗಿ ದ್ವಂದ್ವ ದೇವತಾರೂಪವಾಗಿ, ಅಗ್ನಿಯೊಡನೆಯೇ ಹೆಚ್ಚಾಗಿ ಪ್ರಯೋಗ. ವಿದ್ಯುತ್ತೂ ಅಗ್ನಿಯ ಒಂದುರೂಪವಾದುದರಿಂದ, ಇಂದ್ರಾಗ್ನಿಗಳ ನಿಕಟವಾದ ಸಂಬಂಧ ಸಹಜವಾದುದು. ಇಂದ್ರನು ಎರಡು ಶಿಲೆಗಳ ಮಧ್ಯೆ ಅಗ್ನಿಯನ್ನು ಉತ್ಪತ್ತಿ ಮಾಡಿದನು. (೨-೧೨-೩) ಅಥವಾ ನೀರಿನಲ್ಲಿ ಮುಚ್ಚಿಡಲ್ಪಟ್ಟಿದ್ದ ಅಗ್ನಿಯನ್ನು ಕಂಡುಹಿಡಿದನು (೧೦-೩೨-೬) ವರುಣ ಮತ್ತು ವಾಯುಗಳೊಡನೆ ತಕ್ಕಮಟ್ಟಿಗೂ, ಒಂದೊಂದು ಸಲ ಸೋಮ ಬೃಹಸ್ಪತಿ, ಪೂಷಣ. ಮತ್ತು ವಿಷ್ಣುಗಳೊಡನೆಯೂ ಸೇರಿಸಲ್ಪಟ್ಟಿದಾನೆ. ವಿಷ್ಣುವು ಇಂದ್ರನಿಗೆ ಪರಮ ಮಿತ್ರ ; ರಾಕ್ಷಸರೊಡನೆ ಯುದ್ಧಗಳಲ್ಲಿ ಇಂದ್ರನಿಗೆ ನೆರವಾಗಿದಾನೆ.

ಇಂದ್ರನು ಸ್ವಲ್ಪ ಹೆಚ್ಚು ಕಡಮೆ ಸ್ಪಷ್ಟವಾಗಿಯೇ, ಸೂರ್ಯನಿಗೆ ಸಮವೆಂದು, ಮೂರು ನಾಲ್ಕು ಕಡೆ ಉಕ್ತವಾಗಿದೆ. ಇಂದ್ರನು ತಾನು ಒಂದಾನೊಂದು ಕಾಲದಲ್ಲಿ ಮನು ಮತ್ತು ಸೂರ್ಯನಾಗಿದ್ದನೆಂದು ತಾನೇ ಹೇಳಿ ಕೊಂಡಿದಾನೆ (೪-೨೬-೧) ಸೂರ್ಯನೆಂದೇ ಸಂಬೋಧನೆಯೊಂದು ಸಲ (೧೦-೪೯-೨); ಇಂದ್ರ ಸೂರ್ಯರು ಏಕದೇವತೆಯಂತೆ ಆಹ್ವಾನಿಸಲ್ಪಟ್ಟಿದಾರೆ (೮-೪೨-೪). ಇಂದ್ರನಿಗೆ ಸವಿತೃ ಎಂದು ಪ್ರಯೋಗ ಒಂದು ಸ್ಥಳದಲ್ಲಿ (೨-೩೦-೧). ಇಂದ್ರನೇ ಸೂರ್ಯ, ವೃತ್ರನು ಚಂದ್ರ (ಶ. ಬ್ರಾ ೧-೬-೪-೧೮).

ಇಂದ್ರನು ಬೃಹದಾಕಾರನು. ಎರಡು ಅನಂತವಾದ ಲೋಕಗಳನ್ನು ಕೈಗಳಲ್ಲಿ ಹಿಡಿದುಕೊಂಡಾಗ, ಅವು ಅವನ ಮುಷ್ಟಿ ಮಾತ್ರ ಇದ್ದುವು (೩-೩೦-೫). ಆಕಾರದಲ್ಲಿ ಸ್ವರ್ಗ, ಭೂಮಿ, ಆಕಾಶಗಳನ್ನು ಏಕಾರು ತ್ತಾನೆ (೩-೪೬-೩). ಎರಡು ಲೋಕಗಳೂ ಸೇರಿ, ಅವನ ಅರ್ಧದಷ್ಟು ಮಾತ್ರ ಆಗುತ್ತವೆ (೬-೩೦-೧ : ೧೦-೧೧೯-೭) ಭೂಮ್ಯಾಕಾಶಗಳು ಅವನ ಸೊಂಟದ ಪಟ್ಟಿಯನ್ನೂ ಸರಿತೂಗಲಾರವು (೧-೧೭೩-೬) ಭೂಮಿಯು ಈಗಿರುವುದರ ಹತ್ತರಷ್ಟಾದರೆ, ಆಗ ಅದು ಇಂದ್ರನಿಗೆ ಸಮವಾಗುತ್ತದೆ (೧-೫೨-೧೧). ಇಂದ್ರನಿಗೆ ನೂರು ಸ್ವರ್ಗಗಳೂ, ನೂರುಭೂಮಿಗಳೂ ಸೇರಿದರೆ, ಸಾವಿರ ಸೂರ್ಯರೂ, ಆಗ ಅವನಿಗೆ ಸಮನಾಗಲಾರರು (೮-೫೯-೫).

ಅವನ ಮಹತ್ವ ಮತ್ತು ಶಕ್ತಿಗಳನ್ನು ಮುಕ್ತಕಂಠದಿಂದ ಶ್ಲಾಘಿಸಿದಾರೆ. ಹಿಂದೆ ಜನಿಸಿರುವವರಲ್ಲಿ ಅವನಿಗೆ ಸಮಾನರು ಇಲ್ಲ (೪-೧೮-೪). ಸ್ವರ್ಗದಲ್ಲಿಯಾಗಲೀ, ಭೂಮಿಯಲ್ಲಾಗಲೀ, ಅವನಂತಿರುವವರೂ ಯಾರೂ ಜನಿಸಿಲ್ಲ (೭-೩೨-೨೩). ದೇವಮಾನವರಲ್ಲಿ ಅವನಿಗೆ ಸಮರೂ, ಪ್ರಥವಾ ಅಧಿಕರೂ ಇಲ್ಲ (೬-೩೦-೪) ಹಿಂದೆ ಇದ್ದವರು, ಮುಂದೆ ಬರುವವರು, ಅಥವಾ ಈಗ ಇರುವವರು ಯಾರೂ ಅವನಷ್ಟು ಸಾಹಸಿಗಳಲ್ಲ (೫-೪೨-೬) ಅವನ ಶಕ್ತಿಯ ಅಂಶವನ್ನು ದೇವತೆಗಳಾಗಲೀ ಮನುಷ್ಯರಾಗಲೀ, ಅಥವಾ ನೀರೇ ಆಗಲಿ ಕಂಡಿಲ್ಲ (೧-೧೦೦-೧೫). ದೇವತೆಗಳಲ್ಲಿ ಅವನಂತಿರುವವರು ಯಾರು ಇಲ್ಲ; ಜನ್ಮ ತಾಳಿದವರು, ಹಿಂದೆಯೇ ಆಗಲಿ ಅಥವಾ ಈಗಲೇ ಆಗಲಿ ಅವನೊಡನೆ ಸ್ಪರ್ಧಿಸಲಾರರು (೧-೧೬೫-೯). ಅವನು ದೇವತೆಗಳೆಲ್ಲರನ್ನು ವಿಸಾಸಿದಾನೆ (೩-೪೬-೩). ಬಲಶಕ್ತಿಗಳಲ್ಲಿ ದೇವತೆಗಳೆಲ್ಲರೂ ಅವನಿಗೆ ತಲೆತಗ್ಗಿಸುತ್ತಾರೆ (೮-೫೧-೭). ದೊಡ್ಡ ದೊಡ್ಡ ದೇವತೆಗಳೂ ತನ್ನ ಅಧಿಕಾರಗಳನ್ನು ಅವನ ಕೀರ್ತಿ ಮತ್ತು ಘನತೆಗೆ ಅಧೀನ ಮಾಡಿದರು. (೭-೨೧-೭) ಒಟ್ಟಾಗಿ ಸೇರಿದರೂ, ಅವನ ಕಾರ್ಯಗಳನ್ನು ಅವನ ಸಲಹೆಗಳನ್ನು ವಿಫಲಗೊಳಿಸಲಾರರು (೨-೩೨-೪). ವರುಣ ಸೂರ್ಯರೂ ಅವನ ಅಪ್ಪಣೆಗೆ ಒಳಪಟ್ಟವರು (೧-೧೦೧-೩ ; ೨-೩೮-೯ ನ್ನು ಹೋಲಿಸಿ). ಮಿತ್ರ, ವರುಣ, ಅರ್ಯಮರ ಶತ್ರುಗಳನ್ನು ನಾಶಮಾಡುವಂತೆ ಇಂದ್ರನಿಗೆ ಪ್ರಾರ್ಥನೆ (೧೦-೪೯-೮ ಮತ್ತು ೯) ಮತ್ತು ಯುದ್ಧಮಾಡಿ. ದೇವತೆಗಳಿಗೆ ಸಾಕಾಗುವಷ್ಟು ಸ್ಥಳ ಸಂಪಾದನೆ ಮಾಡಿದನೆಂದು (೭-೪೮-೩) ಇದೆ -ಇಂದ್ರನೇ ಪ್ರಪಂಚಕ್ಕೆಲ್ಲಾ ಒಡೆಯ (೩-೪೬-೨) ಚಲಿಸುವ ಮತ್ತು ಉಸಿರಾಡುವ ಸಮಸ್ತಕ್ಕೂ ಒಡೆಯ (೧-೧೦೧-೫). ಚಲಿಸುವ ವಸ್ತುಗಳಿಗೆ ಮತ್ತು ಮನುಷ್ಯರಿಗೆ ರಾಜನು (೫-೩೦-೫); ಚಲಿಸುವ ಮತ್ತು ನೋಡುವವುಗಳಿಗೆಲ್ಲಾ ಅವನೇ ಕಣ್ಣು (೧೦-೧೮೨-೧೨). ಮಾನವ ಮತ್ತು ದೇವಜಾತಿಗಳಿಗೆ ಅವನೇ ನಾಯಕ. ಅನೇಕ ಸಲ ಅವನಿಗೆ ಸಂರಾಟ್ (೪-೧೯-೨; ಇತ್ಯಾದಿ) ಎಂತಲೂ, ಇನ್ನೂ ಹೆಚ್ಚು ಸಲ ಸ್ವಾವಲಂಬಿಯಾದವನು ಮತ್ತು ಸರ್ವತಂತ್ರ ಸ್ವತಂತ್ರ. (೩-೪೬-೧ ; ಇತ್ಯಾದಿ) ಪುರಾತನ ಋಷಿಯಾದ ಅವನೊಬ್ಬನೇ ತನ್ನ ಸಾಮರ್ಥ್ಯದಿಂದ ಪ್ರಪಂಚವನ್ನೆಲ್ಲಾ ಆಳುತ್ತಾನೆ (೮-೬೪-೧) ಅವನು ಕೆಲವು ಸಲ ಅಸುರನೆಂದೂ ವಾಚ್ಯನಾಗಿದಾನೆ (೧-೧೭೪-೧ ; ೮-೭೯-೬) ಸಾಮರ್ಥ್ಯದ್ಯೋತಕವಾದ ಕೆಲವು ವಿಲಕ್ಷಣವಾದ ವಿಶೇಷಣಗಳವೆ. 'ಶಕ್ರ' ಎಂಬುದು ಅವನಿಗೆ ೪೦ ಸಲವೂ, ಇತರರಿಗೆ ೫ ಸಲವೂ ಪ್ರಯೋಗಿಸಲ್ಪಟ್ಟಿದೆ; 'ಶಚೀವತ್' ಎಂಬುದು ೧೫ ಸಲ ಇಂದ್ರನನ್ನೂ, ೨೦ಡೇಸಲ ಇತರರನ್ನೂ, 'ಶಚೀಪತಿ' ಎಂದೂ ಹತ್ತು ಸಲ ಇಂದ್ರನನ್ನೂ, ಒಂದೇ ಒಂದು ಸಲ ಅಶ್ವಿನಿಗಳನ್ನೂ ವರ್ಣಿಸಿದೆ.

'ಶಚೀಪತೇ ಶಚೀನಾಂ' ಎಂದೊಂದು (೧೦-೨೪-೨) ಕಡೆ ಇಂದ್ರನಿಗೆ ವಿಶೇಷಣ. ಪುರಾಣಾದಿಗಳಲ್ಲಿ ಇದೇ ವಿಶೇಷಣವು 'ಶಚೀದೇವಿಯ ಪತಿ' ಎಂಬರ್ಥದಲ್ಲಿ ರೂಢಿಗೆ ಬಂದಿದೆ. ಶತಕ್ರತು (ನೂರು ಶಕ್ತಿಯುಳ್ಳವನು) ಎಂಬುದು ೬೦ ಕಡೆ ಪ್ರಯೋಗಿಸಿರುವುದರಲ್ಲಿ ಎರಡೇ ಸಲ ಇತರ ದೇವತೆಗಳಿಗೆ ಅನ್ವಯಿಸಿದೆ. ಇದರಂತೆ 'ಸತ್ಪತಿ' (ಸಮರ್ಥನಾದ) ಎಂಬುದೂ ಸಾಧಾರಣವಾಗಿ ಇಂದ್ರನಿಗೆ ವಿಶೇಷಣ. ಇನ್ನೂ ಅನೇಕ ಪದಗಳು ಅವನ ಶಕ್ತಿ ಸಾಮರ್ಥ್ಯಗಳನ್ನು ವ್ಯಕ್ತಗೊಳಿಸುತ್ತವೆ ಅವನು ಬಲಿಷ್ಠ (ತವಃ), ಚುರುಕು (ನೃತು), ಜಯ ಶಾಲಿ (ತುರ), ಶೂರ (ಶೂರ), ಅಪಾರಶಕ್ತಿಯುಳ್ಳವನು (೧-೧೧೪-೪ ; ೧-೧೦೨-೬), ಅಪ್ರತಿಹತ ಸಾಮರ್ಥ್ಯವುಳ್ಳವನು. (೧-೪೪-೨). ಆನೆಯಂತೆ ಶಕ್ತಿಯೇ ಕವಚವಾಗಿ ಉಳ್ಳವನು ಮತ್ತು ಸಿಂಹದಂತೆ ಧೈರ್ಯವಾಗಿ ಆಯುಧಗಳನ್ನು ಪ್ರಯೋಗಿಸುತ್ತಾನೆ. (೪-೧೬-೧೪). ಯುವಕನೂ ಹೌದು (೧-೧೧-೪ ; ಇತ್ಯಾದಿ) ; ಮುಪ್ಪೇ ಇಲ್ಲ (ಅಜರ) ; ಮತ್ತು ಪುರಾತನನು (ಪೂರ್ವ).

ಇನ್ನು ಅವನ ಸಂಬಂಧವಾದ ಇತಿಹಾಸವನ್ನು ಪರಿಶೀಲಿಸೋಣ. ಸೋಮಪಾನದಿಂದ ಮತ್ತನಾಗಿ, ಮರುದ್ಗಣಸಹಿತನಾಗಿ, ಅನಾವೃಷ್ಟಿಗೆ ಕಾರಣನಾದ, ವೃತ್ರ ಅಹಿ ಇತ್ಯಾದಿ ನಾಮಗಳುಳ್ಳ ರಾಕ್ಷಸನೊಡನೆ ಯುದ್ಧಕ್ಕೆ ಸನ್ನದ್ಧನಾಗುತ್ತಾನೆ. ತನ್ನ ವಜ್ರದಿಂದ ವೃತ್ರನನ್ನು ಹೊಡೆದಾಗ, ಸ್ವರ್ಗ ಮತ್ತು ಭೂಮಿಗಳು ನಡುಗುತ್ತವೆ (೧-೮೦-೧೧; ೨-೧೧-೯ ಮತ್ತು ೧೦; ೬-೧೭-೯) ವಜ್ರವನ್ನು ಮಾಡಿದ ತ್ವಷ್ಟೃವೂ, ಇಂದ್ರನ ಕೋಪವನ್ನು ಕಂಡು ಕಂಪಿಸುತ್ತಾನೆ (೧೦–೮೦-೧೪). ಇಂದ್ರನು ವಜ್ರಾಯುಧದಿಂದ ವೃತ್ರನನ್ನು ಪುಡಿಪುಡಿ ಮಾಡುತ್ತಾನೆ (೧-೩೨-೫; ೧-೬೧-೧೦; ೧೦-೮೯-೭). ವೃತ್ರನನ್ನು ವಜ್ರದಿಂದ ಬೆನ್ನಿನ ಮೇಲೆ ಹೊಡೆಯುತ್ತಾನೆ (೧-೩೨-೭; ೧-೮೦-೫), ತನ್ನ ಮೊನಚಾದ ಆಯುಧದಿಂದ ಮುಖಕ್ಕೆ ಹೊಡೆಯುತ್ತಾನೆ (೧-೫೨-೧೫). ಅಪಾಯ ಸ್ಥಳಗಳನ್ನು ಕಂಡು ಹಿಡಿಯುತ್ತಾನೆ (೩-೩೨-೪; ೫-೩೨-೫). ನೀರನ್ನು ಸುತ್ತುವರೆದಿದ್ದಾ ವೃತ್ರನನ್ನು (೬-೨೦-೨ ಇತ್ಯಾದಿ) ಅಥವಾ ನೀರನ್ನು ಸುತ್ತಿಕೊಂಡು ಬಿದ್ದಿದ್ದ ಸರ್ಪವನ್ನು (೪-೧೯–೨) ಹೊಡೆದನು, ನೀರಿನ ಮೇಲೆ ಮಲಗಿದ್ದ ಸರ್ಪವನ್ನು ಸೋಲಿಸಿದನು (೫-೩೦-೬) ನೀರಿನಲ್ಲಿ ಬಚ್ಚಿಟ್ಟುಕೊಂಡು, ನೀರು ಆಕಾಶಗಳನ್ನು ಅಡ್ಡಿ ಮಾಡುತ್ತಿದ್ದ ಸರ್ಪವನ್ನು ವಧಿಸಿ (೨-೧೧-೫), ನೀರನ್ನು ಆವರಿಸಿಕೊಂಡಿದ್ದ ವೃತ್ರನನ್ನು, ಗಿಡವನ್ನು ಛೇದಿಸುವಂತೆ ಛೇದಿಸಿದನು (೨-೧೪-೨). ಈ ಸಂದರ್ಭದಲ್ಲಿ, ಇತರ ಯಾವ ದೇವತೆಗೂ ಸಲ್ಲದ 'ಅಪ್ಸುಜಿತ್' ಎಂಬ ವಿಶೇಷಣವಿದೆ. ಇಂದ್ರನು ವೃತ್ರನನ್ನು ಕೊಂದನು, ಕೊಲ್ಲುತ್ತಾನೆ, ವೃತ್ರನನ್ನು ವಧಿಸು ಇತ್ಯಾದಿ ಸ್ತುತಿಯಿದೆ. ಇವುಗಳನ್ನೆಲ್ಲಾ ತೆಗೆದುಕೊಂಡರೆ, ಇದು ಸತತವಾಗಿ ನಡೆಯುತ್ತಿರುವ ಘಟನೆ ಎಂಬುದು ಸ್ಪಷ್ಟವಾಗುತ್ತದೆ. ವೃತ್ರವಧೆಮಾಡಿ, ಇಂದ್ರನು ಅನೇಕ ಉಷಃ ಕಾಲಗಳಲ್ಲಿ ಮತ್ತು ಶರದೃತುಗಳಲ್ಲಿ, ನೀರನ್ನು ಬಿಡುಗಡೆ ಮಾಡಿದಾನೆ (೪-೧೯-೮), ಅಥವಾ ಮುಂದೆ ಹಾಗೆ ಮಾಡ ಬೇಕೆಂದು ಪ್ರಾರ್ಥಿತನಾಗಿದಾನೆ (೮-೭೮-೪). ಪರ್ವತಗಳನ್ನು ಸೀಳಿ, ನೀರು ಹರಿಯುವಂತೆ ಅಥವಾ ಗೋವುಗಳು ಹೊರಡುವಂತೆ ಮಾಡುತ್ತಾನೆ (೧-೫೭-೬; ೧೦-೮೯-೭), ವಜ್ರದ ಶಬ್ದಮಾತ್ರದಿಂದಲೇ ಈ ಕಾರ್ಯವಾಗುತ್ತದೆ (೬-೨೭-೪). ಪರ್ವತಗಳನ್ನು ಛೇದಿಸಿದಾಗ, ಪ್ರವಾಹಗಳು ವೇಗವಾಗಿ ಹೊರಟವು, ರಾಕ್ಷಸನು ಹತನಾದನು, ಪರ್ವತಗಳ ಕೆಚ್ಚಲಿನಂತೆ ಇದ್ದ, ಹುದುಗಿಟ್ಟ ಜಲವೆಲ್ಲವೂ ಹೊರಡುವಂತಾಯಿತು (೫-೩೨-೧ ಮತ್ತು ೨). ರಾಕ್ಷಸನನ್ನು ಕೊಂದು, ಪರ್ವತವನ್ನು ಚೂರು ಚೂರು ಮಾಡಿ, ಬಾವಿಯನ್ನು ಒಡೆದು, ಹುದುಗಿಟ್ಟಿದ್ದ ನೀರನ್ನು ಬಿಡುಗಡೆ ಮಾಡಿದನು (೧-೫೭-೬; ೫-೩೫-೧). ಕಟ್ಟಿಹಾಕಿರುವ ಗೋವುಗಳಂತಿದ್ದ ಪ್ರವಾಹಗಳನ್ನು ಮೋಚನ ಮಾಡಿಸುತ್ತಾನೆ (೧-೬೧-೧೦) ಅಥವಾ ಅವು ಅರಚುತ್ತಿರುವ ದನಗಳಂತೆ, ಸಾಗರಕ್ಕೆ ಪ್ರವಹಿಸುತ್ತವೆ (೧-೩೨-೨). ಅವನು ಗೋವುಗಳನ್ನೂ ಸೋಮವನ್ನೂ ಪಡೆದು, ಏಳು ನದಿಗಳು ಹರಿಯುವಂತೆ ಮಾಡಿದನು (೧-೩೨-೧೨: ೨-೧೨-೧೨). ಬಂಧಿತವಾಗಿದ್ದ ನೀರನ್ನು (೧-೫೭-೬; ೧-೧೦೩-೨) ಸರ್ಪದಿಂದ ಹಿಡಿದುಹಾಕಲ್ಪಟ್ಟಿದ್ದ ನೀರನ್ನೂ (೨-೧೯-೨) ವಿಮೋಚನ ಮಾಡಿದನು, ಪ್ರವಾಹಗಳಿಗಾಗಿ ವಜ್ರಾಯುಧದಿಂದ ನಾಲೆಗಳನ್ನು ತೋಡಿದನು (೨–೧೫-೩), ನೀರಿನ ಪ್ರವಾಹವು ಸಮುದ್ರಕ್ಕೆ ಪ್ರವಹಿಸುವಂತೆ ಮಾಡಿದನು (೨-೧೯-೩), ವೃತ್ರನು ಅಡ್ಡಗಟ್ಟಿದ್ದ ನೀರನ್ನು ಹರಿಯುವಂತೆ ಮಾಡಿದನು (೩-೩೬-೬; ೪-೧೭-೧). ವೃತ್ರನನ್ನು ಕೊಂದು, ಅವನು ಮುಚ್ಚಿದ್ದ ನೀರಿನ ಬಾಗಿಲನ್ನು ತೆರೆದನು

೧-೩೨ ೧೧). ಅವನ ಆಯುಧಗಳು ೯೦ ನದಿಗಳಲ್ಲಿ ಚೆದುರಿಹೋಗಿದೆ (೧-೪೦-೪). ವೃತ್ರವಧೆ ಮತ್ತು ನೀರನ್ನು ಬಿಡುಗಡೆ ಮಾಡುವ ಕಥೆ ಪದೇ ಪದೇ ಬರುತ್ತದೆ. ಒಂದು ಸೂಕ್ತ ಪೂರ್ತಿಯಾಗಿ (೧-೪೦) ಇದನ್ನು ನಾನಾ ಬಗೆಯಾಗಿ ವರ್ಣಿಸಿದೆ. ವೃತ್ರನೊಡನೆ ಯುದ್ಧವನ್ನು ಒಂದು (೧-೩೨) ಸೂಕ್ತ ವರ್ಣಿಸುತ್ತದೆ. ಈ ವರ್ಣನೆಗಳಿರುವ ಕಡೆಯೆಲ್ಲಾ ವಜ್ರ, ಪರ್ವತ, ಪ್ರವಾಹ ಎಂಬ ಪದಗಳೇ ಹೊರತು, ಸ್ವಾಭಾವಿಕವಾದ ಸಿಡಿಲು, ಗುಡುಗು, ಮೇಘ ಮತ್ತು ಮಳೆ ಎಂಬ ಪದಗಳನ್ನು ಉಪಯೋಗಿಸಿಯೇ ಇಲ್ಲವೆನ್ನಬಹುದು (೧-೫೨-೫, ೬ ಮತ್ತು ೧೪ ಇತ್ಯಾದಿ). ಇಲ್ಲಿ ಅಭಿಪ್ರೇತವಾದ ಪ್ರವಾಹಗಳು ಭೂಮಿಯ ನದಿಗಳೇ ಆಗಿದ್ದರೂ, ವೇದದಲ್ಲಿ ವಾಯುಮಂಡಲ ಮತ್ತು ಆಕಾಶಗಳ ನೀರೂ ಉಕ್ತವಾಗಿದೆ (೧-೧೦-೪; ೨-೨೦-೪; ೨-೨೨-೪). ಇಂದ್ರನಿಂದ ವಿಮೋಚಿತವಾದ ಗೋವುಗಳು ಎಂದರೆ ನೀರೇ ಇರಬೇಕು, ಅನೇಕ ಕಡೆ ನೀರು ಗೋವುಗಳಿಗೆ ಹೋಲಿಸಲ್ಪಟ್ಟಿದೆ. ಸರ್ಪವನ್ನು ಕೊಂದು, ಇಂದ್ರನು ಮನುಷ್ಯನಿಗಾಗಿ ಗೋವುಗಳನ್ನು ಕಂಡುಹಿಡಿದನು (೫ ೨೯-೩; ೧-೫೨-೪ನ್ನು ಹೋಲಿಸಿ). ಇಂದ್ರನು ಅಂಧಕಾರದಿಂದ ಬೆಳಕನ್ನೂ ಮತ್ತು ಗೋವುಗಳನ್ನು, ತನ್ನ ವಜ್ರಾಯುಧದ ಸಹಾಯದಿಂದ, ಹೊರತೆಗೆದನು (೧-೩೩-೧೦) ಎಂದಿರುವಾಗ ಗೋ ಎಂದರೆ ನೀರೆಂದೂ. ಸಾಧಾರಣವಾಗಿ ಬೆಳಕನ್ನು (ಗೋ) ಸಂಪಾದಿಸಿದನು ಎಂದಿರುವಾಗ ಗೋವುಗಳನ್ನೂ (ಹಸುಗಳನ್ನೂ) ಎಂದೂ ತಿಳಿದುಕೊಳ್ಳಬಹುದು. ಬೆಳಗ್ಗೆ ಮೊದಮೊದಲು ಕಾಣುವ ಕೆಂಪು ಕಿರಣಗಳು ಗೋಶಾಲೆಯಿಂದ ಹೊರಬೀಳುತ್ತಿರುವ ಗೋವುಗಳಿಗೆ ಹೋಲಿಸಲ್ಪಟ್ಟಿವೆ. ಮೇಘಗಳು ಸ್ಪಷ್ಟವಾಗಿ ಕಂಡು ಬರದಿದ್ದರೂ, ಕೆಚ್ಚಲು, ಬುಗ್ಗೆ, ಬಾನೆ, ಮಡಕೆ ಇತ್ಯಾದಿ ಪದಗಳಿಗೆ ಮೇಘವೆಂದೇ ಅರ್ಥವಿರಬೇಕು, ಅಲ್ಲದೆ, ಇಂದ್ರನು ಜನಿಸಿದಾಗ (೮-೫೯-೪) ಗೋವುಗಳು ಗರ್ಜಿಸಿದವು ಎಂಬಲ್ಲಿ ಗೋವುಗಳು ಎಂದರೆ ಮೇಘಗಳೇ ಇರಬೇಕು.

ಆದರೆ ಇಂದ್ರನ ಸಂಬಂಧವಾದ ಕಥೆಗಳಲ್ಲೆಲ್ಲಾ, ಪರ್ವತ, ಗಿರಿ ಎಂತಲೇ ಅವುಗಳಿಗೆ ಹೆಸರು. ರಾಕ್ಷಸರು ವಾಸಮಾಡುವ ಪರ್ವತಗಳೇ ಅವು (೧-೩೨-೨; ೧-೩೨-೧೫; ೨-೧೨-೧೧); ಅವುಗಳಿಂದಲೇ ರಾಕ್ಷಸರನ್ನು ಕೆಳಕ್ಕುರುಳಿಸುತ್ತಾನೆ (೧-೧೩೧-೭; ೪೩೦-೧೪; ೯-೨೬-೫). ಚೆನ್ನಾಗಿ ಗುರಿಕಟ್ಟಿ, ಇಂದ್ರನು ಬಾಣವನ್ನು ಈ ಪರ್ವತಗಳಿಂದಲೇ ಹೊಡೆಯುತ್ತಾನೆ (೮-೬೬-೬). ಹಸುಗಳನ್ನು ಬಿಡುಗಡೆ ಮಾಡಲು, ಈ ಪರ್ವತಗಳನ್ನು ದೊಡ್ಡದಾಗಿ ಸೀಳಿದನು (೮-೪೫-೩೦). ಅಥವಾ, ಮೇಘವೇ ಹಸುಗಳನ್ನು ಅವರಿಸಿಕೊಂಡಿರುವ ಪರ್ವತ; ಇಂದ್ರನು ಅದನ್ನು ಅದರ ಜಾಗದಿಂದ ಕದಲಿಸುತ್ತಾನೆ (೬-೧೭-೫). ಬಂಡೆಗಳನ್ನು ಸಡಿಲಿಸಿ, ಹಸುಗಳು ಸುಲಭವಾಗಿ ದೊರಕುವಂತೆ ಮಾಡಿದನು (೧೦-೧೧೨-೮) ಕಲ್ಲಿನಲ್ಲಿ ಭದ್ರವಾಗಿ ಇಡಲ್ಪಟ್ಟಿದ್ದ ಹಸುಗಳನ್ನು ವಿಮೋಚನ ಮಾಡಿದನು (೬-೪೩-೩; ೫-೩೦-೪ನ್ನು ಹೋಲಿಸಿ). ಪರ್ವತದಂತಿರುವ ಮೇಘಗಳು ಸ್ಥಾಯಿಯಾದ ಬಿಳಿಯ ನೋಡಗಳು, ಗೋವುಗಳು, ಮಳೆತರುವ ಚಲಿಸುತ್ತಾ, ಗುಡುಗುತ್ತಾ ಇರುವ ಮಳೆಯ ಮೋಡಗಳೂ ಇರಬಹುದು

' ಮೋಡಗಳು ಒಂದೊಂದು ಸಲ ಅಂತರಿಕ್ಷವಾಸಿಗಳಾದ ರಾಕ್ಷಸರ ಕೋಟಿಗಳೂ ಆಗುತ್ತವೆ. ಅಂತಹ ಕೋಟಿಗಳು, ತೊಂಬತ್ತು, ತೊಂಬತ್ತೊಂಬತ್ತು ಅಥವಾ ನೂರು (೨-೧೪-೬; ೨-೧೯-೬; ೪-೧೭-೧೪; ೪-೪೭-೬). ಇವು ಚಲಿಸುತ್ತವೆ (೪-೧-೨೮); ಶರತ್ಕಾಲದಲ್ಲಿ ಕಾಣಿಸುತ್ತವೆ (೧-೧೩೦-೭; ೧-೧೩೧-೪; ೧-೧೭೪-೨; ೬-೨೦-೧೦); ಲೋಹದಿಂದ ಮಾಡಿದವು (೨-೨೦-೪); ಅಥವಾ ಕಲ್ಲಿನಿಂದ ಮಾಡಿದವು (೪-೩೦-೨೦). ಇಂದ್ರನು ಅವುಗಳನ್ನು ಪುಡಿಪುಡಿ ಮಾಡುತ್ತಾನೆ (೧-೫೧-೫, ಇತ್ಯಾದಿ), ಆದುದರಿಂದ ಅವನಿಗೆ ಪೂರ್ಭಿದ್ ಎಂದು ಹೆಸರು. ಒಂದು ಋಕ್ಕಿನಲ್ಲಿ ಕೋಟಿಗಳನ್ನು ಒಡೆಯುವವನು ಮತ್ತು ನೀರನ್ನು ಪ್ರೀತಿಸುವವನು (೧೦-೧೧೧-೧೦) ಎಂದಿದೆ. ಮತ್ತೊಂದರಲ್ಲಿ, ಈ ಇತಿಹಾಸದ ನಾನಾ ಅಂಶಗಳು ಚಿತ್ರಿತವಾಗಿವೆ. ಅವನು ವೃತ್ರನನ್ನು ಕೊಂದನು, ಕೋಟಿಗಳನ್ನು ಒಡೆದನು, ನದಿಗಳಿಗಾಗಿ ನಾಲೆಗಳನ್ನು ಮಾಡಿದನು ಪರ್ವತವನ್ನು ಭೇದಿಸಿ, ಗೋವುಗಳನ್ನು ಸ್ನೇಹಿತರಿಗೆ ಕೊಟ್ಟನು (೧೦-೮೯-೭).

ಈ ವೃತ್ರವಧೆಯ ಕಥೆಯು ಎಷ್ಟು ಮುಖ್ಯವೆಂಬುದು, ಇಂದ್ರನಿಗೆ ರೂಢಿಯಾಗಿರುವ 'ವೃತ್ರಹಾ' ಎಂಬ ಹೆಸರಿನಿಂದಲೇ ತಿಳಿಯುತ್ತದೆ. ಈ ಹೆಸರು ೭೦ ಸಲ ಉಪಯೋಗಿಸಲ್ಪಟ್ಟಿದೆ. ಅಗ್ನಿಯು ಇಂದ್ರನ ಜೋಡಿಯಾಗಿರುವುದರಿಂದ, ಅವನಿಗೂ ಈ ಹೆಸರು ಉಪಯೋಗಿಸಿದೆ. ಸೋಮನಿಗೂ ಒಂದೊಂದು ಸಲ ಉಪಯೋಗಿಸಿದ್ದರೂ,

ಅದು ಅಷ್ಟು ಮುಖ್ಯವಲ್ಲವೆಂಬುದು ಸ್ಪಷ್ಟವಾಗಿದೆ. ಇಂದ್ರನು ವೃತ್ರನನ್ನು ತನ್ನ ಸ್ವಂತ ಸಾಮರ್ಥ್ಯದಿಂದ ವಧಿಸಿದನೆಂದು ಸ್ಪಷ್ಟವಾಗಿ ಹೇಳಿದೆ (೧-೧೬೫-೮, ೭-೨೧-೬, ೧೦-೧೩೮-೬), ಆದರೂ ಇತರ ದೇವತೆಗಳು ಇಂದ್ರನಿಗೆ ಈ ಕಾರ್ಯದಲ್ಲಿ ಸಹಾಯಕರು ದೇವತೆಗಳು ಇಂದ್ರನನ್ನು ಯುದ್ಧಕ್ಕೋಸ್ಕರ (೧-೫೫-೩, ೬-೧೭-೮) ಅಥವಾ ವೃತ್ರವಧೆಗೋಸ್ಕರ (೮-೧೨-೨೨) ರಥದಲ್ಲಿ ಕೂಡಿಸಿದರು. ವೃತ್ರನೊಡನೆ ಯುದ್ಧಕ್ಕಾಗಿ, ದೇವತೆಗಳು ಅವನ ವೀರ್ಯವನ್ನು ಹೆಚ್ಚುಮಾಡಿದರು (೧೦-೧೧೩-೮), ಅಥವಾ ಅವನಿಗೆ ಶಕ್ತಿಸಾಮರ್ಥ್ಯಗಳನ್ನು ಕೂಡಿಸಿ ಕೊಟ್ಟರು (೧೦-೮೦-೧೫, ೬-೨೦-೨. ೧೦-೪೮-೩, ೧೦-೧೨೦-೩), ಅಥವಾ ವಜ್ರಾಯುಧವನ್ನು ಅವನ ಕೈಯಲ್ಲಿಟ್ಟರು (೨-೨೦-೮) ಬಹಳ ಹೆಚ್ಚಾಗಿ ಮರುದ್ದೇವತೆಗಳೇ ಅವನನ್ನು ಪ್ರೇರಿಸುವವರು ಮತ್ತು ಅವನಿಗೆ ಬೆಂಬಲವಾಗಿರುವವರು (೩-೩೨-೪. ೧೦-೭೩-೨ ಮತ್ತು ೨, ಇತ್ಯಾದಿ). ಇತರ ದೇವತೆಗಳೆಲ್ಲಾ ವೃತ್ರನಿಗೆ ಹೆದರಿ ಓಡಿ ಹೋದಾಗಲೂ (೮-೪೫-೭. ೪-೧೮-೧೧ನ್ನು ಹೋಲಿಸಿ, ಐ. ಬ್ರಾ. ೩-೨೦), ಮರುತ್ತುಗಳು ಇಂದ್ರನಿಗೆ ನೆರವಾಗಿದ್ದರು. ಆದರೆ, ಮರುತ್ತುಗಳೇ ಅವನನ್ನು ಒಂದು ಸಲ ಪರಿತ್ಯಜಿಸಿದರೆಂದು (೮-೭-೩೧) ಇದೆ. ವೃತ್ರನೊಡನೆ ಕಾದಾಡುವಾಗ, ಅವನಿಗೆ, ಅಗ್ನಿ, ಸೋಮ, ವಿಷ್ಣುಗಳೂ ಸಹಾಯಕರಾಗಿದ್ದರು. ಋತ್ವಿಜರೂ ಈ ಯುದ್ಧದಲ್ಲಿ ಅವನಿಗೆ ನೆರವಾಗಿದ್ದಾರೆ (೫-೩೦-೮, ೮-೫೧-೧೧, ೧೦-೪೪-೯). ಪೂಜೆ ಮಾಡುವವನು (ಸ್ತೋತೃವು) ವಜ್ರಾಯುಧವನ್ನು ಅವನ ಕೈಯಲ್ಲಿಟ್ಟನು (೧ ೬೩-೨) ಮತ್ತು ಯಜ್ಞವು ರಾಕ್ಷಸ ವಧೆಯಲ್ಲಿ ವಜ್ರಾಯುಧಕ್ಕೆ ಸಹಾಯಕವಾಯಿತು (೩-೩೨-೧೨). ಸೂಕ್ತಗಳು, ಸ್ತುತಿಗಳು, ಪೂಜೆ ಮತ್ತು ಸೋಮ, ಇವುಗಳೆಲ್ಲವೂ ಇಂದ್ರನ ಸಾಮರ್ಥ್ಯವನ್ನು ಹೆಚ್ಚಿಸುತ್ತವೆ.

ವೃತ್ರನೊಡನೆ ಅಲ್ಲದೆ, ಇಂದ್ರನು ಸಣ್ಣ ಸಣ್ಣ ರಾಕ್ಷಸರೊಡನೆಯೂ ಯುದ್ಧಮಾಡಿದಾನೆ. ಉರಣ (೨-೧೪-೪)ನಿಗೆ ೯೯ ಕೈತೋಳುಗಳಿವೆ, ವಿಶ್ವರೂಪನಿಗೆ ಮೂರು ತಲೆ ಮತ್ತು ಆರು ಕಣ್ಣುಗಳು (೧೦-೮೯-೬) ಅವರುಗಳನ್ನು ವಜ್ರಾಯುಧದಿಂದಲೇ ವಧಿಸುವುದಿಲ್ಲ ಅರ್ಬುದ ಎಂಬೊಬ್ಬನನ್ನು ಕಾಲಿನಿಂದ ಒದ್ದು ಅಥವಾ ವಂಜುಗೆಡ್ಡೆಯಿಂದ ಇರಿದು ಸಾಯಿಸುತ್ತಾನೆ (೧-೫೧-೬, ೮-೩೨-೨೬). ಸಾಮಾನ್ಯರಾದ ರಾಕ್ಷಸರನ್ನು ನಾಶ ಮಾಡುತ್ತಾನೆ. ರಾಕ್ಷಸನನ್ನು ರಥಚಕ್ರದಿಂದ ಒರಸಿಬಿಡುತ್ತಾನೆ (೮-೪೫-೯), ಶುಷ್ಣವನವನ್ನು ಅಗ್ನಿಯು ದಹಿಸುವಂತೆ, ರಾಕ್ಷಸರನ್ನು ವಜ್ರದಿಂದ ನಿರ್ಮೂಲ ಮಾಡಿದನು (೬-೧೮-೧೦) ಮತ್ತು ದುರ್ದೇವತೆಗಳನ್ನು ಸೋಲಿಸುತ್ತಾನೆ (೪-೨೩-೭, ೮-೨೮-೨).

ಜಲವಿಮೋಚನದ ಜೊತೆಗೆ, ಬೆಳಕು, ಸೂರ್ಯ, ಮತ್ತು ಉಷಸ್ಸುಗಳ ಲಾಭವೂ ಸೇರಿದೆ. ಇಂದ್ರನು ಸ್ವರ್ಗೀಯ ತೇಜಸ್ಸನ್ನೂ ಮತ್ತು ಉದಕವನ್ನೂ ಗಳಿಸಿದನು (೩-೩೪-೮). ವೃತ್ರನನ್ನು ಕೊಂದು, ತೇಜಸ್ಸನ್ನು ಸಂಪಾದಿಸು ಎಂದು ಇಂದ್ರನನ್ನು ಪ್ರಾರ್ಥಿಸಿದಾರೆ (೮-೭೮-೪). ಇಂದ್ರನು ವೃತ್ರನನ್ನು ಲೋಹದಿಂದ ಮಾಡಿದ ತನ್ನ ವಜ್ರದಿಂದ ಕೊಂದು, ಮನುಷ್ಯರ ಉಪಯೋಗಕ್ಕೋಸ್ಕರ ನೀರನ್ನು ಒದಗಿಸಿದಾಗ, ಆಕಾಶದಲ್ಲಿ ಎಲ್ಲರಿಗೂ ಕಾಣಿಸುವಂತೆ ಸೂರ್ಯನನ್ನು ಸ್ಥಾಪಿಸಿದನು (೧-೫೧-೪, ೧-೫೨-೪). ವೃತ್ರಸಂಹಾರಿಯಾದ ಇಂದ್ರನು ಸಮುದ್ರದ ಕಡೆ ನೀರು ಹರಿಯುವಂತೆ ಮಾಡಿದನು, ಸೂರ್ಯನನ್ನು ಉತ್ಪತ್ತಿಮಾಡಿದನು ಮತ್ತು ಗೋವುಗಳನ್ನು ಕಂಡುಹಿಡಿದನು (೨-೧೯-೩). ರಾಕ್ಷಸರ ವಧವಾದ ಮೇಲೆ ಅವನು ಸೂರ್ಯನನ್ನು ಮತ್ತು ನೀರನ್ನು ಗಳಿಸಿದನು (೩-೩೪-೮ ಮತ್ತು ೯). ಇಂದ್ರನು, ರಾಕ್ಷಸನಾಯಕನನ್ನು ವಧಿಸಿ, ನೀರನ್ನು ಬಿಡುಗಡೆ ಮಾಡಿದಾಗ, ಸೂರ್ಯ, ಆಕಾಶ ಮತ್ತು ಉಷಸ್ಸುಗಳು ಜನಿಸುವಂತೆ ಮಾಡಿದನು (೧-೩೨-೪, ೬-೩೦-೫) ರಾಕ್ಷಸನನ್ನು ಇಂದ್ರನು ಗಾಳಿಯಲ್ಲಿ ತೂರಿಕೊಂಡು ಹೋಗುವಂತೆ ಮಾಡಿದ ಮೇಲೆ, ಸೂರ್ಯನು ಪ್ರಕಾಶಿಸಿದನು (೮-೩-೨೦). ಈ ಇಂದ್ರ ರಾಕ್ಷಸರ ಘರ್ಷಣೆಯ ಫಲ ಸೂರ್ಯನೇ ಆದರೂ, ಒಂದೊಂದು ಸಲ ಅದು (ಸೂರ್ಯಬಿಂಬವು) ಇಂದ್ರನ ಆಯುಧವೂ ಆಗಿದೆ. ಸೂರ್ಯ ಕಿರಣಗಳಿಂದ, ಇಂದ್ರನು ರಾಕ್ಷಸರನ್ನು ಸುಡುತ್ತಾನೆ (೮-೧೨-೯) ವೃತ್ರವಧೆಗೆ ಸಂಬಂಧಿಸಿದಂತೆಯೇ ಇಂದ್ರನು ಕತ್ತಲಲ್ಲಿ (೧-೧೦೮-೮, ೪-೧೬.೪) ಬೆಳಕನ್ನು ಕಂಡುಹಿಡಿದನೆಂದು (೩-೩೪-೪, ೮-೧೫೩-೫, ೧೦-೪೩-೪) ಇದೆ. ಇಂದ್ರನೇ ಸೂರ್ಯನ ಉತ್ಪತ್ತಿಗೆ ಕಾರಣ (೩-೪೯-೪). ಸೂರ್ಯನನ್ನು, ಜಾಜ್ವಲ್ಯಮಾನವಾದ ತೇಜಸ್ಸನ್ನು ಆಕಾಶದಲ್ಲಿ ಇಟ್ಟನು (೮-೧೨-೩೦). ಸೂರ್ಯನು ಪ್ರಕಾಶಿಸುವಂತೆ (೮-೩-೬, ೮-೮೭-೨) ಮತ್ತು ಆಕಾಶವನ್ನು ಏರುವಂತೆ (೧-೭೫)

ಮಾಡಿದನು. ಅವನೇ ಸೂರ್ಯನನ್ನು ಸಂಪಾದಿಸಿದನು (೧-೧೦೦-೬ ಮತ್ತು ೧೮, ೩-೩೪-೯), ಅಥವಾ ಅವನಿದ್ದ ಕತ್ತಲಿನಲ್ಲಿ ಕಂಡುಹಿಡಿದನು (೩-೩೯-೫) ಮತ್ತು ಅವನಿಗಾಗಿ ದಾರಿಯನ್ನು ಮಾಡಿದನು (೧೦-೧೧೧-೩).

ಸೂರ್ಯ ಮತ್ತು ಉಷಸ್ಸುಗಳನ್ನು ಇಂದ್ರನು ಉತ್ಪತ್ತಿ ಮಾಡುತ್ತಾನೆ (೨-೧೨-೭ ; ೨-೨೧-೪ ; ೩-೩೧-೫ ; ೩-೩೨-೪ ; ೩-೪೪-೪). ಅವನೇ ಉಷಸ್ಸುಗಳು ಮತ್ತು ಸೂರ್ಯನು ಪ್ರಕಾಶಿಸುವಂತೆ ಮಾಡಿದನು (೩-೪೪-೨). ಸೂರ್ಯ ಮತ್ತು ಉಷಸ್ಸುಗಳಿಂದ ಕತ್ತಲನ್ನು ಪರಿಹರಿಸಿದ್ದಾನೆ (೧-೬೨-೫). ಸೂರ್ಯನೊಡನೆ ಉಷಸ್ಸನ್ನು ಕದಿಯುತ್ತಾನೆ (೨-೨೦-೫). ಸೂರ್ಯ ಮತ್ತು ಉಷಸ್ಸುಗಳೊಡನೆ (೧-೬೨ ೫ ; ೨-೧೨-೭ ; ೬-೧೭-೫) ಅಥವಾ ಸೂರ್ಯನೊಬ್ಬನೊಡನೆ ಮಾತ್ರ (೧-೭-೩ ; ೨-೧೯-೩- ; ೩-೩೪-೯ ; ೬-೧೭-೩ ; ೬-೩೨-೨ ; ೧೦-೧೩೪-೨). ಉಕ್ತವಾಗಿರುವ ಮತ್ತು ಇಂದ್ರನಿಂದ ಲಬ್ಧವಾದ, ದತ್ತವಾದ ಅಥವಾ ಜಿತವಾದ ಗೋವುಗಳು ಎಂದರೆ ನೀರಾಗಲೀ ಮೇಘಗಳಾಗಲೀ ಇರಲಾರದು ; ಬೆಳಗಿನ ಕಿರಣಗಳೇ ಇರಬೇಕು. ನಸುಗೆಂಪಾದ ಮತ್ತು ಜಲಮಯವಾದ (೯ ೧೦೪-೬) ಗೋವುಗಳೆಂದರೆ ಮೇಘಗಳೆಂದು ತಿಳಿದು ಕೊಳ್ಳಬೇಕು. ಮುಂದಿನ ವಾಕ್ಯಗಳಲ್ಲಿ ಬೆಳಗಿನ ಕಿರಣಗಳು ಅಥವಾ ಮೇಘಗಳೆಂದು ತಿಳಿಯಬೇಕು. ಗೋವುಗಳೊಡೆಯನಾದ ಇಂದ್ರನನ್ನು ಕಂಡೊಡನೆಯೇ ಉಷಸ್ಸು ಅವನನ್ನು ಎದುರ್ಗೊಳ್ಳಲು ಮುಂದೆ ಹೋದಳು (೩-೩೧-೪). ವೃತ್ರನನ್ನು ಪರಾಭವಗೊಳಿಸಿ, ರಾತ್ರಿಯ ಗೋವುಗಳನ್ನು ಕಾಣಿಸುವಂತೆ ಮಾಡಿದನು (೩-೩೪-೩). ಉಷಸ್ಸಿನ ವಿಷಯದಲ್ಲಿಯೂ ಗೋವುಗಳ ಲಾಭವನ್ನು ಸೂಚಿಸುವಂತೆ ಹೇಳಿದೆ. ಗೋಶಾಲೆಯನ್ನು ಗೋವುಗಳಂತೆ, ಉಷಸ್ಸು ಕತ್ತಲಿನ ಬಾಗಿಲನ್ನು ತೆರೆದಳು (೧-೯೨-೪) ಗಟ್ಟಿಯಾದ ಬಂಡೆಯ ಬಾಗಿಲನ್ನು ಉಷೋದೇವಿಯು ತೆರೆಯುತ್ತಾಳೆ (೭-೭೯-೪). ಹಸುಗಳು ಉಷಸ್ಸಿಗಭಿಮುಖವಾಗಿ ಅರಚುತ್ತವೆ (೭-೭೫-೭). ಉನ್ನತ ಪ್ರದೇಶಗಳಲ್ಲಿದ್ದ ಉಷಾದೇವಿಯ ಗೋಶಾಲೆಗಳ ಬಾಗಿಲುಗಳನ್ನು ಅಂಗಿರಸ ಒಡೆದು ತೆಗೆಯುತ್ತಾರೆ (೬-೬೫-೫). ನೀರಿನ ವಿಷಯ ಪ್ರಸ್ತಾಪಿಸಿರುವ ಮಂತ್ರಗಳಲ್ಲಿಯೇ ಸೂರ್ಯನ ಜೊತೆಯಲ್ಲಿ ಉಷಸ್ಸೂ ಪ್ರಸ್ತಾಪಿತವಾಗಿದೆ (೧-೩೨-೧, ೨ ಮತ್ತು ೪ ; ೬-೩೦-೫ ; ೧೦ ೧೩೪-೧ ಮತ್ತು ೨). ಹೀಗೆ ಬಿರುಗಾಳಿಯ ಸಂಬಂಧವಾದ ಕತ್ತಲೆಯಿಂದ ಸೂರ್ಯನ ವಿಮೋಚನೆ ಮತ್ತು ರಾತ್ರಿಯ ಕತ್ತಲಿನಿಂದ ಅವನ ಬಿಡುಗಡೆ ಇವುಗಳ ವಿಷಯದಲ್ಲಿ ಸ್ವಲ್ಪ ತೊಡಕು ಇದ್ದಂತೆ ತೋರುತ್ತದೆ. ಎರಡನೆಯ ಗುಣ ಇಂದ್ರನಲ್ಲಿ ಇಲ್ಲದಿದ್ದರೂ, ಮೊದಲನೆಯದನ್ನೇ ಸ್ವಲ್ಪ (ವಿಸ್ತರಿಸಿ) ಮುಂದುವರಿಸಿ, ರಾತ್ರಿಯ ಕತ್ತಲಿನಿಂದಲೂ ಬಿಡುಗಡೆ ಮಾಡಿದನೆಂದು ಹೇಳಿದೆ.

ಮಳೆ ಗುಡುಗುಗಳ ವಿಷಯದಲ್ಲಿ ಇಂದ್ರನ ಪಾತ್ರವು ಇನ್ನೂ ಸ್ಪಷ್ಟವಾಗಿ ಕೆಲವು ಕಡೆ ಹೇಳಿದೆ. ಇಂದ್ರನು ಆಕಾಶದಲ್ಲಿ ಉಂಟಾಗುವ ಸಿಡಿಲುಗಳಿಗೆ ಕಾರಣನು (೨-೧೩-೭) ಮತ್ತು ನೀರು ಅಧೋಮುಖವಾಗಿ ಸುರಿಯುವಂತೆ ಮಾಡುವವನೂ ಅವನೇ (೨-೧೭-೫).

ವೃತ್ರನೊಡನೆ ಯುದ್ಧ, ಸೂರ್ಯ ಮತ್ತು ಗೋವುಗಳ ಲಾಭ ಇವುಗಳೊಡನೆ ಸೋಮವೂ ಸಂಬಂಧಿಸಿದೆ. ಇಂದ್ರನು ರಾಕ್ಷಸನನ್ನು, ವಾಯು, ಅಗ್ನಿ ಮತ್ತು ಸೂರ್ಯರ ಸಮೀಪದಿಂದ ಓಡಿಸಿದಾಗ, ಸೋಮವು ಅಭಿವ್ಯಕ್ತವಾಯಿತು (೮ ೩-೨೦). ರಾಕ್ಷಸನನ್ನು ಸೋಲಿಸಿದ ಮೇಲೆ, ಸೋಮರಸವನ್ನೇ ಪಾನೀಯವಾಗಿ ಆರಿಸಿಕೊಂಡನು (೩-೩೬-೮) ರಾಕ್ಷಸರನ್ನು ಸೋಲಿಸಿದ ಮೇಲೆ, ಸೋಮವು ಅವನ ಸ್ವಂತ ವಸ್ತುವಾಯಿತು (೭-೯೮-೫). ಅವನು ಸೋಮವನಕ್ಕೇ ರಾಜನಾದನು (೬-೨೦-೩). ಶಿಲೆಗಳಿಂದ ಸುತವಾದ ಸೋಮರಸವನ್ನು ಇಂದ್ರನು ಪ್ರಪಂಚದಲ್ಲೆ ಪ್ರಸಿದ್ಧಿಪಡಿಸಿದನು ಮತ್ತು ಗೋವುಗಳನ್ನು ಹೊರಗಟ್ಟಿದನು (೩-೪೪-೫). ಗೋವುಗಳ ಜೊತೆಯಲ್ಲಿಯೇ ಸೋಮರಸವನ್ನೂ ಗಳಿಸಿದನು (೧-೩೨-೧೨). ನಿಗೂಢವಾಗಿದ್ದ ಅಮೃತವನ್ನು ಅವನು ಸ್ವರ್ಗದಲ್ಲಿ ಕಂಡನು (೬ ೪೪-೨೩) ಕಪಿಲಗೋವಿನಲ್ಲಿ ಶೇಖರಿಸಿದ್ದ ಮಧುವನ್ನು ಕಂಡನು (೩-೩೯-೬). ಸಾಧಾರಣ ಗೋವುಗಳಲ್ಲಿ ಉತ್ತಮವಾದ ಪುಷ್ಟಿಕರವಾದ ಕ್ಷೀರವಿದೆ, ಆದರೆ, ಕಪಿಲಗೋವಿನಲ್ಲಿ. ಮಾಧುರ್ಯವೆಲ್ಲ ಅಡಕವಾಗಿದೆ, ಸಂತೋಷಾನುಭವಕ್ಕಾಗಿ ಇಂದ್ರನೇ ಅದನ್ನು ಅಲ್ಲಿ ಇಡಿಸಿದ್ದುದು (೩-೩೦-೧೪). ಕಪ್ಪು ಅಥವಾ

ಕೆಂಪು (೧-೬೨-೯) (ಮತ್ತು ತಾನು ಬಾಗಿಲು ತೆಗೆದು ಹೊರಕ್ಕೆ ಬಿಡುವ) (೬-೧೭-೬) ಹಸುಗಳಲ್ಲಿ ಪಕ್ವವಾದ (ಉತ್ಕೃಷ್ಟವಾದ) ಕ್ಷೀರವನ್ನು ಉಂಟುಮಾಡುತ್ತಾನೆ (೮-೩೨-೨೫). ಈ ಸಂದರ್ಭಗಳೆಲ್ಲಾ ಸಾಧಾರಣವಾಗಿ ಇಂದ್ರನಿಗೂ ಮಳೆ ಮೋಡಗಳಿಗೂ ಇರುವ ಸಂಬಂಧ ದ್ಯೋತಕಗಳು.

ಇಂದ್ರನು ಕಂಪಿಸುತ್ತಿದ್ದ ಪರ್ವತಗಳು ಮತ್ತು ಮೈದಾನ ಪ್ರದೇಶಗಳನ್ನು ಸ್ತಿಮಿತಕ್ಕೆ ತಂದನು ೨-೧೨-೨, ೧೦-೪೪-೮). ತಮ್ಮ ಇಚ್ಛೆ ಬಂದಲ್ಲಿ ಹಾರಿಕುಳಿತು, ಭೂಮಿಯ ಸ್ಥಿರತೆಯನ್ನು ಕೆಡಿಸುತ್ತಿದ್ದ ಪರ್ವತಗಳ ರೆಕ್ಕೆಗಳನ್ನು ಕತ್ತರಿಸಿದನೆಂದು ಇದೆ. ಈ ರೆಕ್ಕೆಗಳೇ ಮುಂದೆ ಗುಡುಗುವ ಮೇಘಗಳಾದುವು (ವೈ. ಸಂ. ೧೧೦-೧೩). ಈ ಇತಿಹಾಸಕ್ಕೆ ಆಧಾರ (೫-೫೪-೫)ನೆಯ ಋಕ್ಕಿನಲ್ಲಿರುವಂತಿದೆ. ಇಂದ್ರನೇ ಅಂತರಿಕ್ಷದಲ್ಲಿ ಬೆಳಗುತ್ತಿರುವ ಪ್ರದೇಶಗಳನ್ನು ಸ್ಥಾಪಿಸಿದ್ದು (೮-೧೪-೯). ಅವನೇ ಭೂಮಿ ಮತ್ತು ಆಕಾಶಗಳಿಗೆ ಆಧಾರ ಭೂತನು (೨-೧೭-೫ ಇತ್ಯಾದಿ). ರಥದ ಅಚ್ಚು ಗಾಲಿಗಳೆರಡನ್ನು ಪ್ರತ್ಯೇಕಿಸಿರುವಂತೆ, ಭೂಮ್ಯಾಕಾಶಗಳನ್ನು ಪ್ರತ್ಯೇಕಿಸಿರುವವನೂ ಅವನೇ (೧೦ ೮೯-೪). ದ್ಯಾನಾಪೃಥಿವಿಗಳನ್ನು ಚರ್ಮವನ್ನು (೮-೬-೫) ಹರಡುವಂತೆ ಹರಡುವವನೂ ಅವನೇ (೮-೩೬-೬). ಅವನೇ ಭೂಮ್ಯಾಕಾಶಗಳನ್ನು ಉತ್ಪತ್ತಿಮಾಡಿದವನು (೮-೩೬-೪, ೬-೪೭-೪ನ್ನು ಹೋಲಿಸಿ). ಅವನ ಗುಪ್ತನಾಮದಿಂದ, ಈಗ ಇರುವುದು ಮತ್ತು ಮುಂದೆ ಬರುವುದು ಎಲ್ಲವನ್ನೂ ಸೃಜಿಸಿದನು (೧೦-೫೫-೨) ಮತ್ತು ಅಸತ್ತಾದುದನ್ನು ಒಂದು ಕ್ಷಣದಲ್ಲಿ ಸತ್ಪದಾರ್ಥವನ್ನಾಗಿಯೂ ಮಾಡಿದನು (೬-೨೪-೫). ಭೂಮ್ಯಾಕಾಶಗಳು ಪ್ರತ್ಯೇಕವಾಗಿ ಇರುವುದು ಮತ್ತು ಅವುಗಳನ್ನು ಬೇಳದಂತೆ ಹಿಡಿದಿರುವುದು ಇವೆರಡೂ, ಈ ಎರಡು ಪ್ರದೇಶಗಳನ್ನು ಒಟ್ಟಾಗಿ ಹಿಡಿದಿದ್ದ (೮-೬-೧೭) ರಾಕ್ಷಸನೊಬ್ಬನನ್ನು ಇಂದ್ರನು ಜಯಿಸಿದುದರ ಪರಿಣಾಮ (೫-೨೯-೪). ವೃತ್ರವಧೆಗಾಗಿ ಇಂದ್ರನು ಜನಿಸಿದಾಗ, ಭೂಮಿಯನ್ನು ವಿಸ್ತರಿಸಿ, ಆಕಾಶವನ್ನು ಸ್ಥಿರಪಡಿಸಿದನು (೮-೨೮-೫). ರಾಕ್ಷಸ ಸಂಹಾರಿಯಾದ ಇಂದ್ರನು ನದಿಗಳಿಗೆ ದಾರಿಯನ್ನು ಮಾಡಿ, ಭೂಮಿಯು ಸ್ವರ್ಗಕ್ಕೆ ಕಾಣಿಸುವಂತೆ ಮಾಡಿದನು (೨-೧೩-೫). ಗುಪ್ತವಾಗಿದ್ದ ಭೂಮ್ಯಾಕಾಶಗಳನ್ನು ಕಂಡುಹಿಡಿದನು (೮-೮೫-೧೬), ಅಥವಾ ಬೆಳಕು ಮತ್ತು ನೀರುಗಳ ಜೊತೆಯಲ್ಲಿ ಅವೆರಡನ್ನೂ ಗಳಿಸಿದನು (೩-೩೪-೮). ಕತ್ತಲಿನಲ್ಲಿ ಒಂದರೊಡನೊಂದು ಸೇರಿದಂತೆ ಕಾಣುತ್ತಿದ್ದ ಆಕಾಶ ಮತ್ತು ಭೂಮಿಗಳು ಬೆಳಕು ಬಂದಮೇಲೆ ಪ್ರತ್ಯೇಕವಾಗಿ ಕಾಣುತ್ತವೆ ಎಂಬುದು, ಮೇಲೆ ಹೇಳಿದ ಅಭಿಪ್ರಾಯಗಳಿಗೆ ಎಡೆಕೊಟ್ಟಿರಬಹುದು.

ವಜ್ರಧಾರಿಯಾಗಿ, ವಾಯುಮಂಡಲದ ರಾಕ್ಷಸರನ್ನು ಯುದ್ಧದಲ್ಲಿ ನಾಶಗೊಳಿಸುವ ಇಂದ್ರನನ್ನು ಯೋಧರು ಸತತವಾಗಿ ಸ್ತುತಿಸುತ್ತಾರೆ (೪-೨೪-೩ ಇತ್ಯಾದಿ). ಯುದ್ಧದ ದೇವತೆಯೆಂದು ಇತರ ದೇವತೆಗಳಿಗಿಂತ ಹೆಚ್ಚಾಗಿ ಇವನನ್ನೇ, ಭೂದೈತ್ಯಸಂಹಾರದಲ್ಲಿ ಸಹಾಯಕನಾಗುವಂತೆ ಆರ್ಯರು ಪ್ರಾರ್ಥಿಸುವುದು. ಆರ್ಯರ ವರ್ಣವನ್ನು ರಕ್ಷಿಸಿ, ದಸ್ಯುಗಳನ್ನು ಅವರ ಅಧೀನವಾಗುತ್ತಾನೆ (೩-೩೪-೯, ೧-೧೩೦-೮). ಕಪ್ಪುಬಣ್ಣದವರಾದ ೫೦,೦೦೦ ದಸ್ಯುಗಳನ್ನು ನಾಶಮಾಡಿ, ಅವರ ಗೋಪುರಗಳನ್ನೆಲ್ಲಾ ಕೆಡವಿದನು (೪-೧೬-೧೩). ದಸ್ಯುಗಳನ್ನು ಆರ್ಯರ ಅಧೀನವಾಡಿ (೬-೧೮-೩) ಆರ್ಯರಿಗೆ ಭೂಮಿಯನ್ನು ಕೊಟ್ಟನು (೪-೨೬-೨). ಏಳು ನದಿಗಳ ಪ್ರದೇಶದಲ್ಲಿ ದಸ್ಯುಗಳ ಆಯುಧಗಳು ಆರ್ಯರ ಮೇಲೆ ಬೀಳದಂತೆ ಅವುಗಳನ್ನು ಬೇರೆಕಡೆ ತಿರುಗಿಸುತ್ತಾನೆ (೮-೨೪-೨೭). ಅಶ್ವಿನಿಗಳು (೧-೧೧೭-೨೧), ಅಗ್ನಿ (೮-೯೨-೧), ಅಥವಾ ಇತರ ದೇವತೆಗಳು (೬-೨೧-೧೧), ಒಂದೊಂದು ವೇಳೆ ಮಾತ್ರ ಆರ್ಯರ ರಕ್ಷಕರು.

ಇಂದ್ರನೊಬ್ಬನೇ ಸಹಾನುಭೂತಿಯುಳ್ಳ ಸಹಾಯಕನು (೧-೪೪-೧೯; ೮ ೫೫-೧೩, ೮-೬೯-೧); ತನ್ನ ಆರಾಧಕರನ್ನು ಬಿಡಿಸುವವನು ಮತ್ತು ಅವರ ಪರವಾಗಿ ವಾದಿಸುವವನು (೮-೮೫-೨೦); ಆರಾಧಕರಿಗೆ ಶಕ್ತಿ

ದಾಯಕನೂ (೭-೩೧-೫) ಮತ್ತು ದುರ್ಗವೂ (೮-೬೯-೭) ಅವನೇ. ಅವನ ಮಿತ್ರರನ್ನು ಕೊಲ್ಲುವವರೂ, ಪರಾಜಯಗೊಳಿಸುವವರೂ ಇಲ್ಲ (೧೦-೧೫೨-೧). ಇಂದ್ರನನ್ನು ಪೂಜಿಸುವವರಿಗೆ, ಅವನು ಮಿತ್ರನು? ಒಂದೊಂದು ವೇಳೆ ಭ್ರಾತೃವು (೩–೫೩-೫) ತಂದೆ [೪-೧೭-೧೭, ೧೦-೪೮-೧) ಅಥವಾ ತಾಯಿ ಮತ್ತು ತಂದೆ ಎರಡೂ ಅವನೇ (೮-೮೭-೧೧). ಪಿತೃಗಳಿಗೆ ಮಿತ್ರನು (೬-೨೧-೮, ೭-೩೩–೪ನ್ನು ಹೋಲಿಸಿ) ಮತ್ತು ಕುಶಿಕ ಗೋತ್ರದವಂಗೆ ಪರಮಮಿತ್ರನು, ಅದರಿಂದಲೇ ಅವನಿಗೆ ಕೌಶಿಕ (೧-೧೦-೧೧) ಎಂಬ ಹೆಸರು ಬಂದಿರಬೇಕು. ಹೋಮದ್ರವ್ಯಗಳನ್ನು ಅರ್ಪಿಸದವನ ಸ್ನೇಹ ಅವನಿಗೆ ಬೇಕಿಲ್ಲ (೧೦-೪೨-೪). ಆದರೆ ಯೋಗ್ಯನಾದವನಿಗೆ ದ್ರವ್ಯಾದಿಗಳನ್ನೆನು ಗ್ರಹಿಸುತ್ತಾನೆ (೨-೧೯-೪, ೨-೨೨-೩, ೭-೨೭–೩). ಇತರ ಆರಾಧಕರ ಕಡೆ ಗಮನ ಹೋಗದೇ ಇರಲಿ ಎಂದು ಪ್ರಾರ್ಥನೆ (೨-೧೪-೩, ಇತ್ಯಾದಿ). ಎಲ್ಲಾ ಮನುಷ್ಯರೂ ಅವನಿಂದ ಉಪಕೃತರು (೪-೫೪-೭) ಅವನ ಎರಡ ಹಸ್ತಗಳೂ ಧನಾದಿಗಳಿಂದ ತುಂಬಿವೆ (೭–೩೭-೩). ಅವನು ಐಶ್ವರ್ಯದಿಂದ ತುಂಬಿದ ಒಂದು ಕೋಶಾಗಾರ (೧೦-೪೨-೨). ಕೊಕ್ಕೆಯನ್ನು ಹಿಡಿದು, ಗಿಡದಿಂದ ಮನುಷ್ಯನು ಹಣ್ಣುಗಳನ್ನು ಉದುರಿಸುವಂತೆ, ಇಂದ್ರನು ತನ್ನ ಪೂಜಕರ ಮೇಲೆ, ಧನವನ್ನು ವರ್ಷಿಸಬಲ್ಲನು (೩-೪೫–೪). ರೋಷಾವಿಷ್ಟವಾದ ಗೂಳಿಯನ್ನು ತಡೆಗಟ್ಟುವುದು ಸುಲಭವಾಗಿರಬಹುದು, ಆದರೆ ದಾನಮಾಡಬೇಕೆಂದು ಇಚ್ಛೆಮಾಡಿದ ಮೇಲೆ ಅವನನ್ನು ತಡೆಯುವುದು ಅಸಾಧ್ಯ (೪-೭೦-೩). ಅವನು ಐಶ್ವರ್ಯಕ್ಕೆ ಸಾಗರವಿದ್ದಂತೆ (೧-೫೧–೧); ನದಿಗಳೆಲ್ಲಾ ಸಾಗರದ ಕಡೆಗೇ ಹರಿಯುವಂತೆ, ಐಶ್ವರ್ಯವೆಲ್ಲವೂ ಅವನನ್ನೇ ಸೇರುತ್ತವೆ (೬ ೧೯-೫) ಇಂದ್ರನಿಂದ ಲಭ್ಯವಾದ ನಾನಾವಿಧವಾದ ಸಂಪತ್ತನ್ನು ವರ್ಣಿಸುವುದೇ ಒಂದು ಸೂಕ್ತವಿದೆ (೧೦-೪೭) ಇತರ ದೇವತೆಗಳಂತೆ, ಇಂದ್ರನಿಂದಲೂ ಗೋವುಗಳು ಮತ್ತು ಅಶ್ವಗಳು ಪ್ರಾರ್ಥಿತವಾಗಿವೆ (೧-೧೬-೯ ; ೧-೧೦೧-೪ ಇತ್ಯಾದಿ). "ಗೋಪತಿ" ಎಂದರೆ ವಿಶೇಷವಾಗಿ ಇಂದ್ರನೇ. ಅವನು ಮಾಡುವ ಯುದ್ಧಗಳೆಲ್ಲಾ, ಸಾಧಾರಣವಾಗಿ "ಗವಿಷ್ಟಿ" (ಗೋವುಗಳಿಗಾಗಿ ಅಪೇಕ್ಷೆ ೮–೪೫-೫, ಇತ್ಯಾದಿ) ಎಂದು ಹೆಸರು. ಅವನಿಂದ ದತ್ತವಾದವುಗಳೆಲ್ಲವೂ ಅವನ ಜಯದ ಫಲ (೪-೧೭-೧೦ ಮತ್ತು ೧೧ ಇತ್ಯಾದಿ). ಇಂದ್ರನು ಪತ್ನೀಪುತ್ರಾದಿ ದಾತೃವು (೪-೧೭-೧೬, ೧–೫೩-೫) ಔದಾರ್ಯ ಅವನದೊಂದು ವಿಶೇಷಗುಣ. ಇದರಿಂದಲೇ ಅವನಿಗೆ "ಮಘವ", 'ವಸುಪತಿ' ಇತ್ಯಾದಿ ವಿಶೇಷಣಗಳು.

ಇಂದ್ರನ ಸಂಬಂಧವಾದ ಕಥೆಗಳಲ್ಲಿ ವೃತ್ರವಧೆಯೇ ಮುಖ್ಯವಾದುದಾದರೂ, ಅನೇಕ ಶೌರ್ಯ ಕಾರ್ಯಗಳನ್ನು ಮಾಡಿದನೆಂದು ಪ್ರಸಿದ್ಧಿಬಂದಿದೆ. ಕೆಲವು ವಾಕ್ಯಗಳಲ್ಲಿ ಉಷೋದೇವಿಯೊಡನೆ ಘರ್ಷಣೆಯಾಯಿತೆಂದು ಇದೆ. ಇಂದ್ರನು ಉಷೋದೇವಿಯ ಬಂಡಿಯನ್ನು ಹಾಳುಮಾಡಿದನು (೧೦-೭೩-೬) ಅವಳ ಬಂಡಿಯನ್ನು ವಜ್ರಾಯುಧದಿಂದ ಚೂರು ಚೂರು ಮಾಡಿ, ತನ್ನ ವೇಗಶಾಲಿಗಳಾದ ಅಶ್ವಗಳಿಂದ ಅವಳ ನಿದಾನವಾದ ಕುದುರೆಗಳನ್ನು ನಾಶಪಡಿಸಿದನು (೩-೧೫-೬). ಇಂದ್ರನ ವಜ್ರಕ್ಕೆ ಹೆದರಿ, ಉಷೋದೇವಿಯು ತನ್ನ ರಥದ ಬಂಡಿಯನ್ನು ಪರಿತ್ಯಾಗಮಾಡಿದಳು (೧೦–೧೩೮-೫). ಒಳಗೇ ಸಂಚುನಡಸುವ, ದುರ್ದೇವತೆಯಾದ ಉಷಸ್ಸನ್ನು ಹೊಡೆದು, ನಾಶಮಾಡಿ, ಇಂದ್ರನು ಒಂದು ಮಹತ್ಕಾರ್ಯಸಾಧನೆ ಮಾಡಿದನು; ಅವಳ ಚೂರ್ಣವಾದ ರಥವು ವಿಪಾಶೀನದಿಯಲ್ಲಿ ಬಿದ್ದಿತ್ತು, ಮತ್ತು ಅವಳು ಗಾಬರಿಯಾಗಿ ಓಡಿಹೋದಳು (೪-೩೦-೪ರಿಂದ೧೧). ಬಿರುಗಾಳಿಯಿಂದ ಉಷಸ್ಸಿನ ತಿರೋಧಾನವೇ ಈ ಕಥೆಗೆ ಆಧಾರವಾಗಿದೆ. ಮತ್ತೆ ಕೆಲವರು ತನ್ನ ನಿಯತ ಕಾಲಕ್ಕಿಂತ ಹೆಚ್ಚು ಹೊತ್ತು ಇದ್ದು ಉಷಸ್ಸನ್ನು ಅತಿಕ್ರಮಿಸಿ, ಸೂರ್ಯನು ಉದಯಿಸುವಂತೆ ಮಾಡಿದುದೇ ಇದಕ್ಕೆ ಆಧಾರವೆಂತಲೂ ಅಭಿಪ್ರಾಯಪಡುತ್ತಾರೆ.

ಸ್ವಲ್ಪ ಅಸ್ಪಷ್ಟವಾದ ಕಥೆಯೊಂದಿದೆ. ಏತಸಾ ಎಂಬ ಅಶ್ವಕ್ಕೂ, ಸೂರ್ಯನ 'ಹರಿತ'ಗಳೆಂಬ ಅಶ್ವಗಳಿಗೂ ಸ್ಪರ್ಧನಡೆದು, ಸೂರ್ಯನೇ ಮುಂದೆ ಇರುತ್ತಾನೆ. ಇಂದ್ರನು ಸೂರ್ಯನನ್ನು ಅಡ್ಡಿಪಡಿಸುತ್ತಾನೆ. ಈ

ಸಮಯದಲ್ಲಿ ಸೂರ್ಯನ ರಥದ ಒಂದು ಚಕ್ರವು ಕಳೆದುಹೋಗುತ್ತದೆ. ಇಂದ್ರನು ಸೂರ್ಯನ ಕುದುರೆಗಳನ್ನು ತಡೆದನು (೧೦-೯೨-೮) ಎಂಬುದು ಈ ಸಂದರ್ಭದಲ್ಲಿಯೇ ಇರಬಹುದು. ಸೋಮವನ್ನು ಬಲಾತ್ಕಾರವಾಗಿ ಇಂದ್ರನು ಸ್ವೀಕರಿಸಿದನೆಂದೂ ಇದೆ. ಪಣಿನಾಮಕ ಅಸುರನಿಂದ ಗೃಹೀತವಾಗಿದ್ದ ಗೋವುಗಳನ್ನು ಇಂದ್ರನು ಪಡೆದನೆಂಬುದು (೧೦-೧೦೮) ಮತ್ತೊಂದು ಕಥೆ ಈ ಪಣಿಗಳು ಮಹಾಲೋಭಿಗಳು. ಯಾಗಾದಿಗಳಿಗೋಸ್ಕರ ಅಪೇಕ್ಷಿಸಿದಾಗ್ಯೂ ಕೊಡದೇ ಅವುಗಳನ್ನು ಮುಚ್ಚಿಡುತ್ತಾರೆ. ಇಂದ್ರನ ದೂತಳಾದ ಸರಮೆ ಎಂಬ ನಾಯಿಯು ಆ ಗೋವುಗಳಿರುವ ಸ್ಥಳವನ್ನು ಕಂಡುಹಿಡಿದು, ಅವುಗಳನ್ನು ಹಿಂದಕ್ಕೆ ಕೊಡಬೇಕೆಂದು ಹೇಳುತ್ತಾಳೆ. ಪಣಿಗಳು ಅವಳನ್ನು ಹಾಸ್ಯಮಾಡುತ್ತಾರೆ. ಗೋವುಗಳನ್ನು ಪಡೆಯಬೇಕೆಂಬಾಶೆಯಿಂದ, ಇಂದ್ರನು, ವಲನ ಕೋಟೆಯನ್ನು ಭೇದಿಸಿ, ಪಣಿಗಳನ್ನು ಸೋಲಿಸಿ, ಅವುಗಳನ್ನು ಬಿಡುಗಡೆ ಮಾಡಿದನೆಂದು ಇನ್ನೊಂದು ಸ್ಥಳದಲ್ಲಿದೆ (೬-೩೯-೨). ಮತ್ತೊಂದು ಸ್ಥಳದಲ್ಲಿ ವಲನು ಗೋವುಗಳನ್ನು ಹಿಡಿದಿಟ್ಟಿದ್ದನು; ಅವುಗಳನ್ನು ಇಂದ್ರನು ಹೊರಕ್ಕಟ್ಟಿದನು (೨-೧೨-೩, ೩-೩೦-೧೦) ಎಂದಿದೆ. ಇಲ್ಲಿ ಪಣಿಯ ಹೆಸರೇ ಇಲ್ಲ. ಅನೇಕ ವಾಕ್ಯಗಳಲ್ಲಿ, ಈ ವಲನ ಪರಾಜಯ ಮತ್ತು ಗೋವಿಮೋಚನ ಕಾರ್ಯಗಳಲ್ಲಿ ಅಂಗಿರಸರು ಇಂದ್ರನಿಗೆ ಸಹಾಯಕರಾಗಿದ್ದರೆಂದು ಇದೆ.

ದಾಸ ಅಥವಾ ದಸ್ಯುಗಳನ್ನು ಇಂದ್ರನು ಸೋಲಿಸಿದನೆಂದು ಒಂದೊಂದು ಉಕ್ತಿ ಇದೆ. ಈ ದಾಸ ಅಥವಾ ದಸ್ಯುಗಳು ಮನುಷ್ಯಜಾತಿಯವರು; ಅವರ ವರ್ಣ ಕಪ್ಪು (೧-೧೩೦-೮; ೨-೨೦-೭ ನ್ನು ಹೋಲಿಸಿ) ಅವರಿಗೆ ನಾಸಿಕವಿಲ್ಲ (೫-೨೯-೧೦); ದೇವರಲ್ಲಿ ಭಕ್ತಿಯಿಲ್ಲ ಮತ್ತು ಯಜ್ಞಯಾಗಾದ್ಯಾಚರಣೆಯಿಲ್ಲ. ಇವರು ಸಾಧಾರಣವಾಗಿ ಭೂಮಿಯಲ್ಲಿರುವವರೆಂದು ಹೇಳಬೇಕು; ಏಕೆಂದರೆ, ವೃತ್ರವಧಾದಿಗಳು ಮನುಷ್ಯ ಸಾಮಾನ್ಯದ ಉಪಕಾರಕ್ಕಾಗಿ ಎಂದಿರುವಾಗ ಈ ದಸ್ಯುಗಳ ಸಂಹಾರವು ಯಾವುದಾದರೂ ಒಂದು ವ್ಯಕ್ತಿಗೋಸ್ಕರ, ಇಲ್ಲವೇ ವ್ಯಕ್ತಿಯ ಸಹಾಯದಿಂದ. ಈ ರೀತಿ ಇಂದ್ರನಿಂದ ಸಹಾಯ ಪಡೆಯುವವರು ಸಾಧಾರಣವಾಗಿ ಋಷ್ಯಾದಿಗಳು ಅಲ್ಲ; ರಾಜರು ಅಥವಾ ಯೋಧರುಗಳು. ದಿವೋದಾಸ ಅತಿಥಿಗ್ವ ಎಂಬುವನು ಸುದಾಸನೆಂಬ ರಾಜನ ಮಗ; ಅವನ ಶತ್ರು, ಕುಲಿತರನ ಮಗ ಶಂಬರ. ಆದರೆ ಈ 'ದಾಸ' ಎಂಬ ಪದಕ್ಕೆ, ಇಂದ್ರನು ನೀರನ್ನು ಬಿಡುಗಡೆ ಮಾಡುವುದಕ್ಕೋಸ್ಕರ ವಧಿಸಿದ 'ಅಹಿ' (೨-೧೧-೨) ಅಥವಾ, ತ್ರಿತನೊಡನೆ ಯುದ್ಧವಾಡಿದ ಮೂರುತಲೆ, ಆರುಕಣ್ಣಿನ ಪಿಶಾಚಿ (೧೦-೯೯-೬), ಅಥವಾ ಇಂದ್ರನ ವಸಡುಗಳನ್ನು ಹೊಡೆದುಹಾಕಿದ ವ್ಯಂಶ (೪-೧೮-೯), ಇವರುಗಳಿಗೆ ಅನ್ವಯಿಸುವ ಸಂದರ್ಭದಲ್ಲಿ ರಾಕ್ಷಸ ಎಂತಲೇ ಅರ್ಥ. ನಮುಚಿ ಮುಂತಾದ ದಸ್ಯುಗಳೊಡನೆ ಇಂದ್ರನ ಯುದ್ಧಗಳ ವಿಷಯವು ರಾಕ್ಷಸರ ವಿಷಯವು ಪ್ರಸಕ್ತವಾದಾಗ ಚರ್ಚಿಸಲ್ಪಡುತ್ತದೆ.

ಇಂದ್ರನಿಗೆ ಸಂಬಂಧಿಸಿದಂತೆ, ಇನ್ನೂ ಅನೇಕ ಅಮುಖ್ಯವಾದ ಕಥೆಗಳಿವೆ. ಇಂದ್ರ ಮತ್ತು ಇಂದ್ರಾಣಿಯರಿಗೆ, ವೃಷಾಕಪಿಯ ವಿಷಯದಲ್ಲಿ ಆದ ಮನಸ್ತಾಪ, ವೃಷಾಕಪಿಗೆ ಆದ ಶಿಕ್ಷೆ, ಅದು ಓಡಿಹೋಗುವುದು, ಅನಂತರ ಇಂದ್ರ ವೃಷಾಕಪಿಗಳಿಗೆ ಸಂಧಿಯಾಗಿ, ವೃಷಾಕಪಿ ಹಿಂತಿರುಗುವುದು ಈ ಅಂಶಗಳುಳ್ಳದೊಂದು (೧೦-೮೬) ಕಥೆ. ಇಂದ್ರನು ತುರ್ವಸು ಮತ್ತು ಯದು ಎಂಬುವರನ್ನು ಸುರಕ್ಷಿತವಾಗಿ ನದಿ ದಾಟಿಸಿದುದು. (೧-೧೭೪-೯ ಇತ್ಯಾದಿ) ಇನ್ನೊಂದು ಸುದಾಸನು ಮಾಡಿದ ಅನೇಕ ಯುದ್ಧಗಳು, ಅವುಗಳಲ್ಲಿ ಅವನಿಗೆ ಇಂದ್ರನ ಸಹಾಯ, ಇದೂ ಒಂದು. ಕಡೆಯದಾಗಿ, ಅಪಾಲಾ ಎಂಬುವಳೊಬ್ಬಳು ನದಿಯ ತೀರದಲ್ಲಿ ಸೋಮಲತೆಯನ್ನು ಕಂಡು, ಅದನ್ನು ಹಲ್ಲಿನಿಂದ ಜಜ್ಜಿ, ಬಂದ ರಸವನ್ನು ಇಂದ್ರನಿಗೆ ಅರ್ಪಿಸಿ, ಅವನಿಂದ ಬೇಕಾದ ವರಗಳನ್ನು ಪಡೆದಳೆಂಬುದು ಒಂದು ಕಥೆ.

ಒಟ್ಟಿನಲ್ಲಿ ಹೇಳುವುದಾದರೆ, ದೈಹಿಕವಾದ ಶಕ್ತ್ಯತಿಶಯ ಮತ್ತು ಭೌತಿಕ ಪ್ರಪಂಚದ ಮೇಲೆ ಅಧಿಕಾರ ಇವೆರಡೇ ಇಂದ್ರನ ಮುಖ್ಯವಾದ ಗುಣಗಳು. ಅವೇಶಪೂರಿತವಾದ ಕ್ರಿಯೆ ಅವನ ವೈಶಿಷ್ಟ್ಯ. ವರುಣನದು ಅಪ್ರವರ್ತಕವಾದ ಪ್ರಭಾವ. ವರುಣನಂತೆ ಇಂದ್ರನೂ ಸಂರಾಜನೇ. ಆದರೆ ನಿಯತವಾದ ವಿಧಿಗಳನ್ನು ಆಚರಣೆಗೆ ತರಿಸುವವನಾಗಿ ಅಲ್ಲ ಅವನ ಸಂರಾಜತ್ವ; ಅವನು ಬಹಳ ಶಕ್ತನಾದ ಯೋಧ; ಅವನಿಗೆ ಎದುರೇ ಇಲ್ಲ; ತನ್ನ ಶಕ್ತಿಯಿಂದ ಪ್ರಪಂಚವನ್ನೆಲ್ಲಾ ಜಯಿಸಬಲ್ಲ. ಅಲ್ಲದೆ ಅವನ ಔದಾರ್ಯಕ್ಕೆ ಮಿತಿಯೇ ಇಲ್ಲ ಸೋಮಪಾನದಿಂದ ತುಷ್ಟನಾಗಿ ತನ್ನನ್ನು ಪೂಜಿಸುವವಗೆ ಅಪಾರ ಧನವನ್ನು ಅನುಗ್ರಹಿಸುತ್ತಾನೆ. ಅವನಿಗೆ ವರುಣನಿಗಿರುವ ನೈತಿಕ ಉನ್ನತಿ ಘನತೆಗಳಿಲ್ಲ. ಒಂದೊಂದು ಕಡೆ ಅವನೂ ವರುಣನಂತೆ ನೈತಿಕ ಉನ್ನತಿಯನ್ನು ಪಡೆದಿದ್ದಾನೆಂದೂ, ನಿಯಮ ಬದ್ಧನಾಗಿದ್ದು, ಅದರಿಂದಲೇ ಸ್ವರ್ಗವನ್ನು ಪಡೆದನೆಂದೂ ಇದೆ (೧೦-೧೬೭-೧; ೧೦-೧೫೯-೪ ನ್ನು ಹೋಲಿಸಿ).

ತ್ರಿತ ಆಪ್ತ್ಯ

ಈ ದೇವತಾಕವಾದ ಸೂಕ್ತ ಯಾವುದೂ ಇಲ್ಲ. ಆದರೆ ೩೯ ಸೂಕ್ತಗಳಲ್ಲಿ ಹಂಚಿಕೊಂಡಿರುವ ಸುಮಾರು ೪೦ ಮಂತ್ರಗಳಲ್ಲಿ ತ್ರಿತ ಆಪ್ತ್ಯ, ತ್ರಿತ ಅಥವಾ ಆಪ್ತ್ಯ ಎಂಬುದಾಗಿ ಬಂದಿದೆ. ಇವುಗಳಲ್ಲಿ ತ್ರಿತ ಆಪ್ತ್ಯ ಅಥವಾ ಆಪ್ತ್ಯ ಎಂಬುದಾಗಿ, ನಾಲ್ಕು ಸೂಕ್ತಗಳಲ್ಲಿರುವ (೧-೧೦೯; ೫-೪೧; ೮-೪೭; ೧೦-೮) ಏಳು ವಾಕ್ಯಗಳಲ್ಲಿ ಮಾತ್ರ ಇದೆ. ಉಳಿದ ಸ್ಥಳಗಳಲ್ಲೆಲ್ಲಾ ತ್ರಿತ ಎಂಬುದಾಗಿಯೇ ಪ್ರಯೋಗಿಸಿದೆ. ಹೆಚ್ಚಾಗಿ ಇಂದ್ರನ ಜೊತೆಯಲ್ಲಿಯೇ, ಏಳು ಸಲ ಅಗ್ನಿಯ ಜೊತೆಯಲ್ಲಿ ಅಥವಾ ಅಗ್ನಿ ಎಂಬರ್ಥದಲ್ಲಿಯೂ, ಅನೇಕ ಸಲ ಮರುತ್ತುಗಳೊಡನೆಯೂ ಮತ್ತು ಹತ್ತು ಸಲ ಸೋಮದೇವತೆ ಅಥವಾ ಸೋಮರಸ ಎಂಬುದಾಗಿಯೂ ಪ್ರಯೋಗಿಸಿದೆ. ಸೋಮರಸದ ಪ್ರಭಾವದಿಂದ ತ್ರಿತನೊಬ್ಬನೇ ವೃತ್ರನನ್ನು ಛೇದಿಸಿದನೆಂದು (೧-೧೮೭-೧) ಹೇಳಿದೆ.

ತ್ರಿತ ಮತ್ತು ಇಂದ್ರರಿಗೆ ಮರುತ್ತುಗಳು ವೃತ್ರಾಸುರನನ್ನು ಗೆಲ್ಲುವುದಕ್ಕೆ ಸಹಾಯ ಮಾಡಿದರು (೮-೭-೨೪). ಇಂತಹ ಕಾರ್ಯಗಳು ತ್ರಿತನೈಶಿಷ್ಟ್ಯವಿರಬೇಕು. ಇತರ ಸ್ಥಳಗಳಲ್ಲಿ ಇದನ್ನೇ ಉದಾಹರಣೆಯಾಗಿ ಉಪಯೋಗಿಸಿದೆ. ತ್ರಿತನು ವಲನ ಕೋಟೆಗಳನ್ನು ಛೇದಿಸಿದಂತೆ ಮಳೆಯನ್ನು ನಿರೋಧಿಸಿದ್ದ ವೃತ್ರನೊಡನೆ ಯುದ್ಧಮಾಡಿದಾಗ, ಇಂದ್ರನು ವೃತ್ರನನ್ನು (೧-೫೨-೪ ಮತ್ತು ೫) ಛೇದಿಸಿದನು ಇಂದ್ರಾಗ್ನಿಗಳಿಂದ, ಸಹಾಯ ಪಡೆದ ಮನುಷ್ಯನೂ ಬಲವಾದ ದುರ್ಗಗಳನ್ನು, ತ್ರಿತನಂತೆ, ಛೇದಿಸುತ್ತಾನೆ (೫-೪೬-೧). ತ್ರಿತ ಆಪ್ತ್ಯನು ಪಿತೃದತ್ತವಾದ ಆಯುಧಸಹಿತನಾಗಿ, ಇಂದ್ರನಿಂದ ಪ್ರೇರೇಪಿಸಲ್ಪಟ್ಟು, ತ್ವಷ್ಟೃ ಪುತ್ರನಾದ ಮೂರು ತಲೆಯುಳ್ಳ ರಾಕ್ಷಸನೊಡನೆ ಹೊಡೆದಾಡಿ, ಅವನನ್ನು ವಧಿಸಿ, ಗೋವುಗಳನ್ನು ಬಿಡುಗಡೆ ಮಾಡಿದನು (೧೦-೮-೮). ಇದೇ ಕಾರ್ಯವನ್ನು ಇಂದ್ರನೂ ಮಾಡಿದಾನೆ; ತ್ವಷ್ಟೃ ಪುತ್ರನಾದ ವಿಶ್ವರೂಪನ ಮೂರುತಲೆಗಳನ್ನು ಛೇದಿಸಿ, ಗೋವುಗಳನ್ನು ಸ್ವಾಧೀನಪಡಿಸಿಕೊಳ್ಳುತ್ತಾನೆ. ಇಂದ್ರನು (ಅಥವಾ ಅಗ್ನಿಯು) ಘರ್ಜಿಸುತ್ತಿದ್ದ, ಮೂರುತಲೆ ಮತ್ತು ಆರುಕಣ್ಣಿನ ರಾಕ್ಷಸನನ್ನು ನಿಗ್ರಹಿಸಿದನು; ತ್ರಿತನು ತನ್ನ ಸಾಮರ್ಥ್ಯದಿಂದ ಕಬ್ಬಿಣದ ಅಲುಗಿನ ವಜ್ರಾಯುಧವನ್ನು ಪ್ರಯೋಗಿಸಿ ಆ ವರಾಹ (ರಾಕ್ಷಸ) ವನ್ನು ಕೊಂದನು (೧೦-೯೯-೬). ಇಬ್ಬರು ದೇವತೆಗಳೂ ಒಂದೇ ತೆರನಾದ ಸಾಹಸಕಾರ್ಯವನ್ನು ಮಾಡಿದಾರೆ ತ್ರಿತನಿಗೋಸ್ಕರ ಇಂದ್ರನು ಸರ್ಪದ ಹಿಡಿತದಿಂದ ಗೋವುಗಳನ್ನು ಬಿಡಿಸಿದನು (೧೦-೪೮-೩). ತ್ವಷ್ಟೃಪುತ್ರನಾದ ವಿಶ್ವರೂಪನನ್ನು ಇಂದ್ರನು ತ್ರಿತನಿಗೆ ಒಪ್ಪಿಸಿದನು (೩-೧೧-೧೯) ಸೋಮವನ್ನು ಹಿಂಡುತ್ತಿರುವ ತ್ರಿತನಿಂದ ಯುಕ್ತನಾಗಿ. ಇಂದ್ರನು ಅರ್ಬುದನನ್ನು ಉರುಳಿಸಿ, ಅಂಗಿರಸರಿಂದೊಡಗೂಡಿ, ವಲನನ್ನು ಛೇದಿಸಿದನು (೩-೧೧-೧೦). ಬಿರುಗಾಳಿಯು

ಬೀಸುತ್ತಿದ್ದು ಮಿಂಚು ಹೊಳೆಯುತ್ತಿದ್ದಾಗ ತ್ರಿತನು ಗುಡುಗುತ್ತಾನೆ ಮತ್ತು ನೀರು ಭೋರ್ಗರೆಯುತ್ತದೆ (೫–೫೪-೨). ಮರುದ್ದೇವತಾಕವಾದ (೨-೩೪) ಸೂಕ್ತದಲ್ಲಿ, ತ್ರಿತನು ಕಾಣಿಸಿದಾಗ, ಮರುತ್ತುಗಳ ಪಥವು ಪ್ರಕಾಶಿಸುತ್ತದೆ ಎಂದೂ, ಮರುತ್ತುಗಳನ್ನು ತ್ರಿತನು ತನ್ನ ರಥದಲ್ಲಿ ಕರೆದುಕೊಂಡು ಬಂದನೆಂದೂ ಇದೆ. ಅಗ್ನಿ ಸೂಕ್ತವೊಂದರಲ್ಲಿ ಗಾಳಿಗಳು ತ್ರಿತನನ್ನು ಕಂಡು ತಮಗೆ ಸಹಾಯ ಮಾಡುವಂತೆ ಅಪ್ಪಣೆ ಮಾಡಿದನೆಂದು (೧೦-೧೧೫-೪) ಇದೆ. ಕಮ್ಮಾರನು ತಿದಿಯಿಂದ ಗಾಳಿಯನ್ನು ಒತ್ತುವಂತೆ ತ್ರಿತನು ಆಕಾಶದಿಂದ ಬೀಸಿದಾಗ, ಬೆಂಕಿಯ ಜ್ವಾಲೆಗಳು ಹೊರಡುತ್ತವೆ (೫-೯-೫). ತ್ರಿತನು ಬಹಳ ಕಾತುರನಾಗಿ ಅಗ್ನಿಯನ್ನು ಹುಡುಕಿ, ಅವನನ್ನು ಗೋವಿನ ತಲೆಯಮೇಲೆ ಕಂಡನು. ಅದೇ ಅಗ್ನಿಯು ಮನೆಗಳಲ್ಲಿ ಜನಿಸಿದಾಗ, ಯುವಕನಂತೆ ತೇಜಸ್ಸಿಗೆ ನೆಲೆಯಾಗಿ, ಆ ಮನೆಗಳಲ್ಲಿ ಸ್ಥಿರವಾಗಿ ನಿಲ್ಲುತ್ತಾನೆ. ಜ್ವಾಲೆಗಳಿಂದ ಆವೃತನಾಗಿ, ತ್ರಿತನು ತನ್ನ ಸ್ಥಾನದಲ್ಲಿ ಕುಳಿತನು (೧೦–೪೬-೩ ಮತ್ತು ೬). ತ್ರಿತನ ವಾಸಸ್ಥಾನವು ಸ್ವರ್ಗವಿರಬೇಕು (೫-೯-೫). ಅವನ ವಾಸಸ್ಥಳವು ಗುಪ್ತವಾದುದು (೯- ೦೨-೨). ಅದು ಬಹಳ ದೂರದಲ್ಲಿದೆ; ಈ ಕಾರಣದಿಂದಲೇ, ದುಷ್ಕೃತ್ಯಗಳನ್ನೂ, ದುಸ್ಸ್ವಪ್ನಗಳನ್ನು ತ್ರಿತ ಆಪ್ತ್ಯನ ಹತ್ತಿರಕ್ಕೆ (ನಮ್ಮಿಂದ ಬಹಳ ದೂರ) ಹಾಕಿ ಬಿಡಬೇಕೆಂದು ಅದಿತ್ಯ ಮತ್ತು ಉಷಸ್ಸುಗಳಿಗೆ ಪ್ರಾರ್ಥನೆ (೮-೪೭-೧೫ರಿಂದ೧೭). ಅವನ ವಾಸಸ್ಥಳವು ಸೂರ್ಯನ ಸಮೀಪದಲ್ಲಿಲೋ ಇರಬೇಕು; ಏಕೆಂದರೆ, ತ್ರಿತನು (ಸೂರ್ಯಮಂಡಲದೊಡನೆ) ಅದರೊಡನೆ ತನಗೆ ಸಂಬಂಧವುಂಟೆಂದು ಹೇಳಿಕೊಂಡಂತಿದೆ (೧-೧೦೫-೯). ತ್ರಿತನು ಬಾವಿಯಲ್ಲಿ ಹೂಳಲ್ಪಟ್ಟಿದ್ದನೆಂದೂ, ದೇವತೆಗಳನ್ನು ಪ್ರಾರ್ಥಿಸಿದನೆಂದೂ, ಬೃಹಸ್ಪತಿಯು ಅದನ್ನು ಕೇಳಿ, ಅವನನ್ನು ಕಷ್ಟದಿಂದ ಪಾರುಗಾಣಿಸಿದನೆಂದೂ ಅದೇ ಸೂಕ್ತದಲ್ಲಿದೆ. ಇನ್ನೊಂದು ಸ್ಥಳದಲ್ಲಿ (೧೦-೮-೭), ಗರ್ತದಲ್ಲಿ ಬಿದ್ದಿದ್ದ ತ್ರಿತನು ತಂದೆಯನ್ನು ಧ್ಯಾನಿಸಿ, ಅವನಿಂದ ಅವನ ಆಯುಧಗಳನ್ನು ಪಡೆದು, ವಿಶ್ವರೂಪನೊಡನೆ (೧೦-೮-೮) ಯುದ್ಧಕ್ಕೆ ಹೊರಟನು. ಇಂದ್ರನು, ವಿಷ್ಣು, ತ್ರಿತ ಆಪ್ತ್ಯ ಅಥವಾ ಮರುತ್ತುಗಳು, ಇವರ ಪಾರ್ಶ್ವದಲ್ಲಿ ಕುಳಿತು, ಸೋಮಪಾನ ಮಾಡುತ್ತಾನೆ (೮-೧೨-೧೬), ತ್ರಿತನ ಪಾರ್ಶ್ವದಲ್ಲಿದ್ದು ತನ್ನ ಸ್ತುತಿಯನ್ನು ಕೇಳಿ ತುಷ್ಟನಾಗಿದಾನೆ (ವಾಲ. ೪-೧). ಸೋಮವನ್ನು ತ್ರಿತನೇ ಸಿದ್ಧಪಡಿಸುತ್ತಾನೆ (೨-೧೧-೨೦) ತ್ರಿತನೇ ಸೋಮರಸವನ್ನು ಶುದ್ಧಿಮಾಡುವುದು (೯-೩೪-೪). ತ್ರಿತನ ಕನ್ಯೆಯರು (ಬರಳುಗಳು) ನಸುಗೆಂಪಾದ ಸೋಮರಸದ ತೊಟ್ಟುಗಳನ್ನು, ಇಂದ್ರನ ಪಾನಕ್ಕಾಗಿ, ಕಲ್ಲಿನಿಂದ ಕೆಳಗೆ ಬೀಳುವಂತೆ (೯-೩೨-೨ ; ೯-೩೮-೨) ಪ್ರಚೋದಿಸುತ್ತಾರೆ ತ್ರಿತನ ಎಡು ಕಲ್ಲುಗಳ ಹತ್ತಿರ, ಗುಪ್ತವಾದ ಸ್ಥಾನವನ್ನು ಸೋಮವು ಆಕ್ರಮಿಸುತ್ತದೆ (೯-೧೦೨-೨); ತ್ರಿತನ ಬೆನ್ನೇಣುಗಳೆ ಮೇಲೆ, ಪ್ರವಾಹರೂಪವಾಗಿ ಸಂಪತ್ತನ್ನು ತರಬೇಕೆಂದು ಸೋಮ ಪ್ರಾರ್ಥಿತವಾಗಿದೆ (೯-೧೦೨-೩). ತ್ರಿತನ ಸ್ಥಾನಪ್ರದೇಶದಲ್ಲಿ ಸೂರ್ಯ ಮತ್ತು ಅವನ ಸಹೋದರಿಯರು ಪ್ರಕಾಶಿಸುವಂತೆ ಸೋಮವು ಮಾಡಿದೆ. (೯-೩೭-೪). ಸಮುದ್ರದಲ್ಲಿರುವ ವರುಣನಿಗೇ ತ್ರಿತನು ಉತ್ತೇಜನ ಕೊಡುತ್ತಾನೆ (೯-೯೫-೪). ಸೋಮನು ಮಧುವನ್ನು ಸುರಿಯುವಾಗ, ತ್ರಿತ ಎಂದು ಕೂಗುತ್ತಾನೆ (೯-೪೬-೨೦).

ತ್ರಿತ ದೇವತೆಯ ಸ್ವರೂಪದ ವಿಷಯವಾಗಿ ಖಚಿತವಾಗಿ ಏನು ತಿಳಿಯಲೂ ಆಧಾರಗಳು ಸರಿಯಾಗಿಲ್ಲ. ಅವನ ಹೆಸರು ಅನೇಕ (೨-೩೧-೬ ; ೫-೪೧-೪ ; ೧೮-೬೪-೩) ಪಟ್ಟಿಗಳಲ್ಲಿವೆ; ಆದರೆ, ಅವುಗಳಿಂದ ಏನೂ ಗೊತ್ತಾಗುವುದಿಲ್ಲ. ಇನ್ನೆರಡು ವಾಕ್ಯಗಳಲ್ಲಿ (೫-೪೧-೯ ಮತ್ತು ೧೦) ಅರ್ಥ ನಿರ್ಧರವಾಗಿಲ್ಲ. ವರುಣ ಸೂಕ್ತವೊಂದರಲ್ಲಿ, ಚಕ್ರನಾಭಿಯಂತೆ ತ್ರಿತನಲ್ಲಿ ಜ್ಞಾನವೆಲ್ಲ ಕೇಂದ್ರೀಕೃತವಾಗಿದೆ (೮-೪೧-೬) ಎಂದಿದೆ. ಬೇರೆ ಒಂದು ಸ್ಥಳದಲ್ಲಿ, ಯಮನಿಂದ ದತ್ತವಾದ ಮತ್ತು ಸೂರ್ಯನ ರೂಪಾಂತರವಾದ ಅಶ್ವವೊಂದನ್ನು ತ್ರಿತನು ರಥಕ್ಕೆ ಹೂಡಿದನೆಂತಲೂ, ಅದರ ಮುಂದಿನ ಮಂತ್ರದಲ್ಲಿ, ಆ ಅಶ್ವವೇ ಒಂದು ಗುಪ್ತಕ್ರಿಯೆಯಿಂದ ಯಮ, ಸೂರ್ಯ

ಮತ್ತು ತ್ರಿತರು ಆಗುತ್ತದೆ (೧-೧೬೩-೨ ಮತ್ತು ೩) ಎಂತಲೂ ಹೇಳಿದೆ. ಅಥರ್ವ ವೇದದಲ್ಲಿಯೂ ಐದಾರು ಸ್ಥಳಗಳಲ್ಲಿ 'ತ್ರಿತ' ಎಂಬ ಪದವು ಉಪಯೋಪಿಸಲ್ಪಟ್ಟಿದ್ದರೂ, ಅಲ್ಲಿಯೂ ಏನೂ ತಿಳಿಯಬರುವುದಿಲ್ಲ. ಎಲ್ಲ ಕಡೆಗಳಲ್ಲಿಯೂ, ತ್ರಿತನು ಬಹಳ ದೂರದಲ್ಲಿರುವ ದೇವತೆ, ಅವನಲ್ಲಿಗೆ ಪಾಪ ಅಥವಾ ದುಸ್ಸ್ವಪ್ನಗಳು ಕಳುಹಿಸಲ್ಪಡುತ್ತವೆ ಎಂದಿಷ್ಟು ಮಾತ್ರ ಜ್ಞಾತವಾಗುತ್ತದೆ (೧-೧೦೫ ೧ ಮತ್ತು ೩ ; ೧೯-೫೬-೪). ತೈತ್ತಿರೀಯ ಸಂಹಿತೆಯಲ್ಲಿ ಅವನು ದೀರ್ಘಾಯುಸ್ಸನ್ನು ಕೊಡತಕ್ಕವನು ಎಂದಿದೆ (ತೈ ಸಂ. ೧-೪-೧೦-೨) ಅವನು ಅಮರತ್ವದಾಯಕವಾದ ಸೋಮವನ್ನು ಸಿದ್ಧ ಮಾಡುವವನಾದುದರಿಂದ, ಇದು ಅದರಿಂದ ಜನ್ಯವಾದ ಗುಣವಿರಬಹುದು. ಬ್ರಾಹ್ಮಣಗಳಲ್ಲಿ ತ್ರಿತನು, ಏಕತ, ದ್ವಿತ ಮತ್ತು ತ್ರಿತರೆಂಬ ಮೂರು ದೇವತೆಗಳಲ್ಲೊಬ್ಬನು; ಈ ಮೂವರೂ ಅಗ್ನಿ ಪುತ್ರರು; ತ್ರಿತನು ನೀರಿನಿಂದ ಉದ್ಭವಿಸಿದವನು (ಶತ. ಬ್ರಾ. ೧-೨ ೩-೧ ಮತ್ತು ೨) ತೈ. ಬ್ರಾ ೩-೨-೪-೧೦ ಮತ್ತು ೧೧). ಋಗ್ವೇದ ೧-೧೦೫ರ ವಾಖ್ಯಾನದಲ್ಲಿ, ಸಾಯಣರು ಸಾತ್ಯಾಯನಿಗಳ ಕಥೆಯೊಂದನ್ನು ಉಲ್ಲೇಖಿಸಿದಾರೆ ಇದರಲ್ಲಿ ಈ ಏಕತ, ದ್ವಿತ ಮತ್ತು ತ್ರಿತರು ಮೂವರೂ ಋಷಿಗಳು, ಅವರಲ್ಲಿ ಮೊದಲ ಇಬ್ಬರು ತ್ರಿತನನ್ನು ಬಾವಿಗೆ ಹಾಕುತ್ತಾರೆ. ಈ ಸಂದರ್ಭಗಳಲ್ಲಿ ಈ ಪದಗಳು ಸಂಖ್ಯಾವಾಚಕಗಳಿರಬೇಕು ದ್ವಿತ ಎಂಬುದು ಋಗ್ವೇದದಲ್ಲಿ, ಒಂದು ಸಲ ತ್ರಿತದ ಜೊತೆಯಲ್ಲಿಯೂ (೮-೪೭-೧೬) ಮತ್ತೊಂದು ಸಲ ಅಗ್ನಿಸೂಕ್ತದಲ್ಲಿ ಅಗ್ನಿದ್ಯೋತಕವಾಗಿಯೂ (೫-೧೮ ೨) ಬಂದಿದೆ. ನಿಘಂಟುವಿನಲ್ಲಿ ತ್ರಿತ ಎಂಬ ಹೆಸರು ಇಲ್ಲ. ಯಾಸ್ಕರು (ನಿರು. ೪-೬) ಈ ಪದಕ್ಕೆ 'ಮಹಾಜ್ಞಾನಿ' ಏಕತಾದಿಗಳಲ್ಲಿ ಒಂದು ಸಂಖ್ಯಾವಾಚಕ ಎಂದು ಅರ್ಥಮಾಡಿದಾರೆ. ಮತ್ತೊಂದು ಸ್ಥಳದಲ್ಲಿ (ನಿರು ೯-೨೫), ಮೂರು (ಸ್ವರ್ಗ, ಭೂಮಿ ಮತ್ತು ಆಕಾಶ) ಲೋಕಗಳಲ್ಲಿರುವ ಇಂದ್ರನೆಂತಲೂ ಹೇಳಿದಾರೆ

ಋಗ್ವೇದ ವಾಕ್ಯಗಳನ್ನು ತೆಗೆದುಕೊಂಡರೆ, ೩-೪ ಸಂದರ್ಭಗಳಲ್ಲಿ, ಇಂದ್ರ ಮತ್ತು ತ್ರಿತರು ಒಂದೇ ಕಾರ್ಯವನ್ನು-ರಾಕ್ಷಸವಧೆ-ಮಾಡಿದಾರೆ ಒಂದು ಸಲ ಇಂದ್ರನು ತ್ರಿತನಿಗೆ ಪ್ರಚೋದಕನಾಗಿದಾನೆ; ಒಂದು ಕಡೆ ತ್ರಿತನಿಂದ ಇಂದ್ರನೇ ಪ್ರೋತ್ಸಾಹಿತನಾಗಿದಾನೆ; ಎರಡು ಸಲ ಇಂದ್ರನು ತ್ರಿತನಿಗಾಗಿ ಕೆಲಸಮಾಡಿದಾನೆ. ಮರುತ್ತುಗಳೂ ತ್ರಿತನೂ ಚಂಡಮಾರುತದಲ್ಲಿ ಒಟ್ಟಿಗೆ ಸೇರಿದಾರೆ. ಅಲ್ಲದೆ, ತ್ರಿತನು ಅಗ್ನಿಯನ್ನು ಹುಡುಕುತ್ತಾನೆ. ಸ್ವರ್ಗದಲ್ಲಿ ಅಗ್ನಿಯನ್ನು ಜ್ವಲನಗೊಳಿಸುತ್ತಾನೆ ಮನುಷ್ಯರ ಗೃಹಗಳಲ್ಲಿ ಅಗ್ನಿಯ ಬದಲು ವಾಸಿಸುತ್ತಾನೆ. ಅವನ ವಾಸಸ್ಥಳ ಬಹಳದೂರ ಮತ್ತು ಗುಪ್ತವಾಗಿದೆ. ಅಲ್ಲಿ ಸೋಮವೂ ಇದೆ. ಇಂದ್ರ ತ್ರಿತರಿಗೆ ಈ ವ್ಯತ್ಯಾಸವೂ ಇದೆ. ಇಂದ್ರನು ಸೋಮಪಾನ ಮಾತ್ರ ಮಾಡುತ್ತಾನೆ ಆದರೆ ತ್ರಿತನು ಸೋಮವನ್ನು ಶಯಾರಿಸುತ್ತಾನೆ.

ತ್ರಿತನಿಗೆ ಉಪಯೋಗಿಸಿರುವ ಅಪ್ತ್ಯ ಎಂಬ ವಿಶೇಷಣವು ಅಪ್ (ನೀರು) ಎಂಬುದರಿಂದ ನಿಷ್ಪನ್ನವಾದುದು. ಆದುದರಿಂದ 'ಅಪಾಂನಪಾತ್' ಎಂಬುದಕ್ಕೆ ಸಮವೆಂತಲೂ ಹೇಳಬಹುದು. ತ್ರಿತನಿಗೆ 'ವೈಭೂವಸ' ಎಂದು ಒಂದೇ ಸಲ ವಿಶೇಷಣವಿದೆ (೧೦-೪೬-೩). ಇದು ಸೋಮಕ್ಕೆ ಸಂಬಂಧಿಸಿರಬಹುದು.

ಮೇಲೆ ಹೇಳಿದ ಅಂಶಗಳಿಂದ ತ್ರಿತನು ವಿದ್ಯುದ್ದೇವತೆ ಅಂದರೆ, ಅಗ್ನಿಯ ಮೂರನೆಯ ಅಥವಾ ವಾಯುಮಂಡಲದ ರೂಪವೆನ್ನಬಹುದು; ಅಗ್ನಿ, ವಾಯು ಅಥವಾ ಇಂದ್ರ ಮತ್ತು ಸೂರ್ಯರೆಂಬ ದೇವತಾತ್ರಯದ ಮಧ್ಯಮದೇವತೆ. ಆದರೆ ಈ ದೇವತೆಯ ಕಾರ್ಯಗಳೆಲ್ಲವೂ ಇಂದ್ರನಿಂದಲೇ ಮಾಡಲ್ಪಟ್ಟವೆಯಾಗಿ, ಋಗ್ವೇದದಲ್ಲಿ ಇವನು ಅಪ್ರಧಾನದೇವತೆಯಾಗಿದಾನೆ. ವಿದ್ಯುದ್ರೂಪನಾಗಿ, ಸ್ವರ್ಗದಿಂದ ಸೋಮವನ್ನು ಭೂಮಿಗೆ ತಂದುದರಿಂದಲೇ ತ್ರಿತನಿಗೂ ಸೋಮಕ್ಕೂ ಸಂಬಂಧವು ಉಕ್ತವಾಗಿರಬಹುದು ಆಧಾರಗಳು ಕಡಿಮೆ ಇರುವುದ

ರಿಂದ ಒಬ್ಬೊಬ್ಬ ಪಂಡಿತರು ಒಂದೊಂದು ರೀತಿ ಅಭಿಪ್ರಾಯಪಟ್ಟಿದಾರೆ. ಕೆಲವನ್ನು ಮಾತ್ರ ಹೇಳುವುದಾದರೆ, ರಾತ್ (Roth) ಎಂಬುವರು ನೀರು ಮತ್ತು ಗಾಳಿಯ ದೇವತೆಯೆಂತಲೂ, ಹಿಲ್‌ಬ್ರಾಂಡ್ (Hillebranalt) ಎಂಬುವರು ಉದ್ದೀಪ್ತವಾದ ಆಕಾಶದ ದೇವತೆಯೆಂತಲೂ, (Perry) ಎಂಬುವರು ಬಿರುಗಾಳಿಯ ದೇವತೆಯೆಂತಲೂ ಹೇಳುತ್ತಾರೆ. ಪಿಶ್ಚೆಲ್ (Pischel) ಎಂಬ ಮತ್ತೊಬ್ಬರು ಮೊದಲು ಸಮುದ್ರ ಮತ್ತು ನೀರಿನ ದೇವತೆ ಅನಂತರ ಮನುಷ್ಯರಲ್ಲಿ ವೈದ್ಯ, ಆಮೇಲೆ ದೇವತ್ವವನ್ನು ಪಡೆದನೆಂದು ಹೇಳಿದಾರೆ. ಹಾರ್ಡಿ (Hardy) ಎಂಬುವರು ಚಂದ್ರದೇವತೆಯೆಂದಿದ್ದಾರೆ.

ಅಪಾಂನಪಾತ್

ಈ ದೇವತಾಕವಾದವು ಒಂದು ಸೂಕ್ತ (೨-೩೫) ಮತ್ತು ಜಲದೇವತಾಕ ಸೂಕ್ತದಲ್ಲಿ ಎರಡು ಮಂತ್ರಗಳು (೧೦-೩೦-೩, ೪) ಈ ದೇವತೆಯನ್ನು ಸ್ತುತಿಸುತ್ತವೆ. ಮೂವತ್ತು ಸಾರಿ ಈ ಹೆಸರು ಬಂದಿದೆ. ತೇಜಸ್ವಿಯಾದ ಅಪಾಂನಪಾದ್ದೇವತೆಯ (ನೀರಿನ ಮಗ) ಸುತ್ತಲೂ ನೀರು ನಿಂತಿತ್ತು. ಯುವಕನಾದ ಇವನನ್ನು ನೀರು ಸುತ್ತುತ್ತದೆ. ಶ್ರೇಷ್ಠನಾದ ಇವನಿಗೆ ಮೂವರು ದೇವತಾಸ್ತ್ರೀಯರು ಆಹಾರವನ್ನು ಕೊಡಲಿಚ್ಛಿಸುತ್ತಾರೆ; ಅದಿ ಮಾತೃಗಳ ಸ್ತನ್ಯವನ್ನು ಅವನು ಪಾನಮಾಡುತ್ತಾನೆ (೨-೩೫-೩, ೫). ವೃಷಭರೂಪನಾದ ಅವನು ಅವರಲ್ಲಿ ಗರ್ಭವನ್ನು ಸ್ಥಾಪಿಸಿದನು; ಶಿಶುರೂಪನಾದ ಅವನು ಅವರ ಸ್ತನ್ಯಪಾನಮಾಡುತ್ತಾನೆ; ಅವರು ಅವನನ್ನು ಚುಂಬಿಸುತ್ತಾರೆ. ಇವನು ನೀರಿನಲ್ಲಿಯೇ ಪ್ರವರ್ಧಮಾನನಾಗಿ ಪ್ರಕಾಶಕ್ಕೆ ಬರುತ್ತಾನೆ. ಸೌದೆ ಇತ್ಯಾದಿಗಳಿಲ್ಲದೆ ನೀರಿನಲ್ಲಿ ಪ್ರಜ್ವಲಿಸುತ್ತಾನೆ (೧೦-೩೦-೪). ಮಿಂಚನ್ನು ಉಡುಪಾಗಿ ಧರಿಸಿ, ಸ್ವಲ್ಪ ಓರೆಯಾಗಿರುವ ನೀರಿನ ಮಸಲನ್ನು ಸೇರುತ್ತಾನೆ. ವೇಗವಾಗಿ ಪ್ರವಹಿಸುವ, ಬಂಗಾರದ ಬಣ್ಣವಾಗಿರುವ ನೀರು ಅವನನ್ನು ಹೊತ್ತುಕೊಂಡು ಚಕ್ರಾಕಾರವಾಗಿ ತಿರುಗುತ್ತದೆ (೧-೯೫-೪ ಮತ್ತು ೫ರಲ್ಲಿ ಅಗ್ನಿಗೆ ಹೋಲಿಸಿ). ಇವನದು ಸ್ವರ್ಣಕಾಂತಿ, ದೇಹದ ವರ್ಣವೂ ಅದೇ, ಸ್ವರ್ಣ ಗರ್ಭದಿಂದ ಜನಿಸಿ, ಇವನು ತನ್ನನ್ನು ಪೂಜಿಸುವವನಿಗೆ ಆಹಾರವನ್ನನುಗ್ರಹಿಸುತ್ತಾನೆ. ಅತ್ಯುನ್ನತ ಪ್ರದೇಶದಲ್ಲಿದ್ದು, ಕಳೆಗುಂದದೆ ಪ್ರಕಾಶಿಸುತ್ತಾನೆ. ವೇಗವಾಗಿ ಹರಿಯುವ ನೀರುಗಳು, ತಮ್ಮ ಪುತ್ರನಿಗೆ (ಅಪಾಂನಪಾತ್) ಆಹಾರಕ್ಕಾಗಿ ಘೃತವನ್ನು ತೆಗೆದುಕೊಂಡುಬಂದು, ಉಡುಪುಗಳನ್ನು ಧರಿಸಿ, ಸುತ್ತಲೂ ಹರಿಯುತ್ತವೆ. ಇವನ ಮುಖವು ಬಂಗಾರದ ವರ್ಣದ್ದು, ಇದನ್ನು ಕನ್ಯೆಯರು ಬೆಳಗುವಂತೆ ಮಾಡುತ್ತಾರೆ; ಇವನಿಗೆ ತುಪ್ಪವೇ ಆಹಾರ; ಯಾರ ಗಮನಕ್ಕೂ ಬಾರದ ರೀತಿಯಲ್ಲಿ ಅಭಿವೃದ್ಧಿ ಹೊಂದುತ್ತಾನೆ. ಅವನ ಮನೆಯಲ್ಲಿ ಒಳ್ಳೆಯ ಹಾಲುಕೊಡುವ ಗೋವು ಒಂದಿದೆ. ಮನೋವೇಗವುಳ್ಳ ಅಶ್ವಗಳು ಇವನನ್ನು ವಹಿಸುತ್ತವೆ. ಇವನಿಗೂ ನದಿಗಳಿಗೂ ಸಂಬಂಧವಿದೆ. ಇವನೇ ಎಲ್ಲಾ ಪ್ರಾಣಿಗಳನ್ನು ಜನಿಸುವಂತೆ ಮಾಡಿದವನು; ಆ ಪ್ರಾಣಿಗಳೆಲ್ಲವೂ ಅವನ ಅಂಶಗಳು. ಈ ದೇವತಾಕವಾದ ಸೂಕ್ತದ ಕಡೆಯ ಋಕ್ಕಿನಲ್ಲಿ ಇವನೇ ಅಗ್ನಿಯೆಂದು ಹೇಳಿದೆ. ಇದೇ ರೀತಿ, ಅಗ್ನಿ ಸೂಕ್ತಗಳು ಕೆಲವದರಲ್ಲಿ, ಅಗ್ನಿಯನ್ನು ಅಪಾಂನಪಾತ್ ಎಂದು ಕರೆದಿದೆ (ವಾ. ಸಂ. ೮-೨೪ನ್ನು ಹೋಲಿಸಿ). ಅಗ್ನಿಯು ನೀರಿನ ಮಗ (೩-೯-೧). ಅಗ್ನಿಯು ಅಪಾಂನಪಾತಿನೊಡಗೂಡಿ, ವೃತ್ರನ ಮೇಲೆ ಜಯವನ್ನನುಗ್ರಹಿಸುತ್ತಾನೆ (೬-೧೩-೩). ಅಪಾಂನಪಾದ್ದೇವತೆ ಮತ್ತೊಬ್ಬನ ದೇಹದೊಡನೆ ಸೇರಿಹೋಗುತ್ತಾನೆಯೋ (೨-೩೫-೧೩) ಎಂಬಂತಿದೆ.

ಅಪಾಂನಪಾತನ ಹೆಸರು ಅನೇಕ ದೇವತೆಗಳ ಪಟ್ಟಿಗಳಲ್ಲಿದೆ; ಅದರೆ ವಿಶೇಷವಾಗಿ, ಅಜಏಕಪಾದ (೨-೩೧-೬, ೭-೩೫-೧೩)' ಅಹಿಬುಧ್ನ್ಯ (೧-೧೮೬-೫, ೨-೩೧-೬, ೭-೩೫-೧೩) ಮತ್ತು ಸವಿತೃ (೨-೩೧-೬;

೬-೫೦-೧೩)ಗಳೊಡನೆ ಹೇಳಿದೆ. ಸವಿತೃವೂ ಅಗ್ನಿಯ ಫಲವತ್ತಾಗಿ ಮಾಡುವ ಒಂದು ರೂಪವಿಶೇಷವಾದುದರಿಂದ, ಆ ಸವಿತೃವಿಗೂ 'ಅಪಾಂನಪಾತ್' ಎಂದು ಒಂದುಕಡೆ (೧-೨೨-೬) ಉಪಯೋಗಿಸಿದೆ. ಬಂಗಾರದ ಬಣ್ಣದವನೂ, ಮಿಂಚಿನ ಉಡುಪುಳ್ಳವನೂ, ಅತ್ಯುನ್ನತ ಪ್ರದೇಶದಲ್ಲಿ ವಾಸಿಸುವವನೂ, ಗುಪ್ತರೀತಿಯಲ್ಲಿ ಬೆಳೆಯುವವನೂ, ಹೆಚ್ಚಾಗಿ ಪ್ರಕಾಶಿಸುವವನೂ, ನೀರಿನ ಮಗನೂ, ಭೂಮಿಗೆ ಇಳಿದು ಬರುವವನೂ, ಅಗ್ನಿಗೆ ಸಮನೆಂದು ಪರಿಗಣಿತನೂ ಆದ ಅಪಾಂನಪಾದ್ದೇವತೆಯು, ಮೋಡಗಳಲ್ಲಿ ಅಡಗಿರುವ ಮಿಂಚಿನ ರೂಪನಾದ ಅಗ್ನಿಯೇ ಇರಬಹುದು. ಅಗ್ನಿಯನ್ನು ಅಪಾಂನಪಾತ್ ಎಂಬುದಾಗಿ ಕರೆಯುವುದಲ್ಲದೆ, ನೀರಿನ ಗರ್ಭ (ಅಪಾಂಗರ್ಭಃ) ವೆಂದೂ ಕರೆಯಲ್ಪಟ್ಟಿದಾನೆ (೭-೯-೩ : ೧.೭೦-೩). ಆ ರೂಪದಲ್ಲಿಯೇ ಮನುಷ್ಯರ ಗೃಹಗಳಲ್ಲಿ ನಿಹಿತನಾಗಿದಾನೆ (೩-೫-೩); ನೀರಿನಲ್ಲಿಯೇ ಅವನ ವಾಸ (೮-೪೩-೯); ಸಸ್ಯಗಳ ಮತ್ತು ನೀರಿನ ಗರ್ಭರೂಪನಾದ ಅಗ್ನಿಯು ಅರಣಿಗಳಿಂದ ಜನಿತನಾಗಿದಾನೆ (೩-೧-೧೩). ಅಗ್ನಿಗೆ ಪರ್ವತಪುತ್ರ (ಅದ್ರೇಃ ಸೂನುಂ ೧೦-೨೦-೭ ೬-೪೮-೫ನ್ನು ಹೋಲಿಸಿ) ನೆಂದೂ ಸಂಜ್ಞೆಯಿದೆ. ಪರ್ವತಾಕಾರವಾದ ಮೇಘದಿಂದ ಜನಿತವಾದ ವಿದ್ಯುತ್ತೇ ಪರ್ವತ ಪುತ್ರನಿರಬೇಕು. ಸ್ವರ್ಗ ಮತ್ತು ಮರ್ತ್ಯಲೋಕರೂಪಗಳಿಗೆ, ವಿರುದ್ಧವಾಗಿ, ಅಗ್ನಿಯ ತೃತೀಯ ರೂಪವು ನೀರಿನಲ್ಲಿ, ಸಾಗರದಲ್ಲಿ, ಆಕಾಶದ ಸ್ತನದಲ್ಲಿ ಅಥವಾ ನೀರಿನ ಮಡಿಲಿನಲ್ಲಿ ಪ್ರಜ್ವಲಿತವಾಗುತ್ತದೆ (೧೦-೪೫-೧೦ರಿಂದ-೩) ಎಂದಿದೆ. ಸ್ವರ್ಗೀಯಾಗ್ನಿಗೆ ನೀರು ವಾಸಸ್ಥಳವೆಂಬಂಶವು ವೈದಿಕ ಇತಿಹಾಸದಲ್ಲಿ ಸುಪ್ರಸಿದ್ಧವಾಗಿದೆ.

ಈ ದೇವತೆಯು ನೀರಿನ ದೇವತೆ, ನೀರಿನಿಂದ ಹುಟ್ಟಿದ ಅಗ್ನಿ, ಚಂದ್ರ, ಸೂರ್ಯ, ವಿದ್ಯುತ್ತು, ಇವೇ ಮೊದಲಾಗಿ ನಾನಾ ರೀತಿಯ ಅಭಿಪ್ರಾಯಕ್ಕೆ ಎಡೆಕೊಟ್ಟಿದೆ.

ಮಾತರಿಶ್ವಾ

ಈ ದೇವತೆಯೊಂದನ್ನೇ ಸ್ತುತಿಸುವ ಸೂಕ್ತವೇ ಇಲ್ಲ. ಈ ಹೆಸರು ಬರುವುದೇ ಇಪ್ಪತ್ತೇಳು ಸಲ. ಮಾತರಿಶ್ವನೂ ಅಗ್ನಿಯೂ ಒಂದೆ ಅಥವಾ ಮಾತರಿಶ್ವನು ಅಗ್ನಿಯನ್ನು ಉತ್ಪತ್ತಿಮಾಡುತ್ತಾನೆ ಎಂದು ತಿಳಿದು ಬರುತ್ತದೆ. ಮಾತರಿಶ್ವಾ ಎಂದು ಅಗ್ನಿಗೇ ಹೆಸರು (೩-೫-೯ ; ೩-೨೬-೨ ; ೧-೯೬-೪). (೯-೮೮-೧೯) ರಲ್ಲಿರುವ ಸಂಬೋಧನೆಯೂ ಅಗ್ನಿಗೇ ಅನ್ವಯಿಸಬೇಕು. ಇನ್ನೊಂದು ಕಡೆ, "ಸ್ವರ್ಗೀಯ ಅಣುರೂಪದಲ್ಲಿ" 'ತನೂನಪಾತ್' ಎಂದು ಹೆಸರು; ಜನಿಸಿದ ಮೇಲೆ 'ನರಾಶಂಸ' ನೆನ್ನಿಸಿಕೊಳ್ಳುತ್ತಾನೆ; ಮಾತರಿಶ್ವರೂಪನಾಗಿ ಉದ್ಭವಿಸಿದಾಗ, ಅವನೇ ಶೀಘ್ರ ಗತಿಯುಳ್ಳ ವಾಯುವಾಗುತ್ತಾನೆ (೩-೨೯-೧೧). ಒಬ್ಬನನ್ನೇ ಜ್ಞಾನಿಗಳು ನಾನಾ ನಾಮಗಳಿಂದ ಕರೆಯುತ್ತಾರೆ; ಅಗ್ನಿ, ಯೆಮ, ಮಾತರಿಶ್ವ ಮೊದಲಾಗಿ ಹೇಳುತ್ತಾರೆ (೧-೧೬೪-೪೬). ಅಗ್ನಿಗೆ ಸಮನೆಂದು ಅನೇಕಬಾರಿ ಹೇಳಲ್ಪಟ್ಟಿರುವ ಬೃಹಸ್ಪತಿ ಎಂಬ ನಾಮಧೇಯ ಮಾತರಿಶ್ವನಿಗೂ ಉಂಟು. "ಆ ಬೃಹಸ್ಪತಿಯೇ ಯಾಗಕಾಲದಲ್ಲಿ ಮಾತರಿಶ್ವನಾದನು" (೧-೧೯೦-೨)

ಇತರ ಕೆಲವು ಸ್ಥಳಗಳಲ್ಲಿ, ಅಗ್ನಿಯೂ ಮಾತರಿಶ್ವನೂ ಭಿನ್ನರೆಂದು ಉಕ್ತವಾಗಿದೆ. ಅವನು (ಅಗ್ನಿಯು) ಅತಿ ಎತ್ತರದಲ್ಲಿ ಸ್ವರ್ಗದಲ್ಲಿ ಜನಿಸಿ, ಮಾತರಿಶ್ವನಿಗೆ ಕಾಣಿಸಿಕೊಂಡನು (೧-೧೪೩-೨). ಅಗ್ನಿಯು ಆದಿಯಲ್ಲಿ ಮಾತರಿಶ್ವ ಮತ್ತು ವಿಶ್ವವತರಿಗೆ ಕಾಣಿಸಿದನು (೧-೩೧-೩). ತೇಜೋವಿಶಿಷ್ಟವಾದ ಗ್ರಹಗಳಲ್ಲಿ ಅತಿ ಶ್ರೇಷ್ಠನಾದುದರಿಂದ, ಅಗ್ನಿಯು ತನ್ನ ಜ್ವಾಲೆಗಳಿಂದ ಗಗನಮಂಡಲಕ್ಕೆ ಆಧಾರಭೂತನಾಗಿದಾನೆ; ನಿಗೂಢನಾಗಿದ್ದ ಆಹುತಿವಾಹಕನನ್ನು ಮಾತರಿಶ್ವನು ಪ್ರಜ್ವಲಿಸುವಂತೆ ಮಾಡಿದನು (೩-೫-೧೦). ಆಕಾಶದಿಂದ ಮಾತರಿಶ್ವನು ಒಬ್ಬನನ್ನು (ಅಗ್ನಿಯನ್ನು ತಂದನು; ಗಿಡುಗವು ಇನ್ನೊಬ್ಬನನ್ನು (ಸೋಮವನ್ನು) ಪರ್ವತದಿಂದ

ತಂದಿತು (೧-೯೩-೬). ಮಾತರಿಶ್ವನು, ಪೂಜ್ಯನಾದ ಪುರೋಹಿತನೂ, ಸ್ವರ್ಗವಾಸಿಯೂ ಆದ ಅಗ್ನಿಯನ್ನು ತಂದನು (೩-೨-೧೩). ಭೃಗುವಿನಿಂದ ಜನಿತನಾದ (ಅಗ್ನಿಯನ್ನು) ದೇವತೆಗಳು ಮನುಷ್ಯರಿಗೆ ಆದಿ ಪುರೋಹಿತನನ್ನಾಗಿ ಮಾಡಿದರು. (೧೦-೪೬-೯) ಮಾತರಿಶ್ವದೇವತೆಯು ಅವನನ್ನು (ಅಗ್ನಿಯನ್ನು) ಬಹಳ ದೂರದಿಂದ ಮನುಷ್ಯನಿಗೋಸ್ಕರ ತಂದನು (೧-೧೨೮-೨) ವಿಶ್ವವತನದೂತನಾದ ಮಾತರಿಶ್ವನು ಬಹಳ ದೂರದಿಂದ ವೈಶ್ವನರಾಗ್ನಿಯನ್ನು ತಂದನು; ಅವನನ್ನು ಬಲಿಷ್ಠರಾದವರು ನೀರಿನಲ್ಲಿ ಹಿಡಿದುಬಿಟ್ಟರು (೬-೮-೪). ಅರಣಿಮಥನದಿಂದ ಉದ್ಭೂತನೂ ನಿಗುಢನೂ ಆಗಿದ್ದ ಅಗ್ನಿಯನ್ನು ಬಹಳ ದೂರದಿಂದ ಮಾತರಿಶ್ವನು ತಂದನು (೩-೯-೫) ನಿಗೂಢನಾಗಿದ್ದ ಅಗ್ನಿಯನ್ನು ಮಾತರಿಶ್ವನು ಮಥಿಸಿ ಉತ್ಪತ್ತಿಮಾಡಿದನು (೧-೧೪೧-೩) ಮಾತರಿಶ್ವನಿಂದ ಮಥಿಸಲ್ಪಟ್ಟು, ಅಗ್ನಿಯು ಮನುಷ್ಯರ ವಸತಿಗಳಲ್ಲಿ ಸ್ಥಾಪಿಸಲ್ಪಟ್ಟನು. (೧-೭೧-೪, ೧-೧೪೪-೧) ಇಂದ್ರನು ಸರ್ಪದ ಓಡಿತದಿಂದ ತ್ರಿತನಿಗಾಗಿ ಗೋವುಗಳನ್ನು ಬಿಡುಗಡೆ ಮಾಡಿ, ಗೋಶಾಲೆಗಳನ್ನು ದಥ್ಯಂಚ ಮತ್ತು ಮಾತರಿಶ್ವರಿಗೆ ಕೊಟ್ಟನು (೧೦-೪೮-೨).

ಋಗ್ವೇದದ ಕಡೆಯ ಭಾಗದ ಕೆಲವು ಸೂಕ್ತಗಳಲ್ಲಿ, ಮಾತರಿಶ್ವನ ವಿಷಯ ಪ್ರಸ್ತಾಪಿತವಾಗಿದ್ದರೂ, ಮಾತರಿಶ್ವನ ಸ್ವಭಾವ, ಗುಣ ಇತ್ಯಾದಿ ವಿಷಯದಲ್ಲಿ ಏನೂ ತಿಳಿದು ಬರುವುದಿಲ್ಲ. ಎರಡು ಸ್ಥಳಗಳಲ್ಲಿ (೯-೬೭-೩೧; ೧೦-೧೧೪-೮), ಅವನು ಸೋಮವನ್ನು ಶೋಧಿಸಿ, ಅದನ್ನು ಪಾನಮಾಡುತ್ತಿದ್ದನೆಂದು ಹೇಳಿದೆ. ಇನ್ನೊಂದು ಸ್ಥಳದಲ್ಲಿ (ವಾಲ. ೪-೨) ಪಿತೃಗಣದಲ್ಲಿ ಈ ಹೆಸರು ಬಂದಿವೆ; ಅಲ್ಲಿ ಇಂದ್ರನು ಇವನ ಪಾರ್ಶ್ವದಲ್ಲಿ ಕುಳಿತು ಸೋಮಪಾನ ಮಾಡುತ್ತಾನೆ. ಒಂದು ಸಲ ಉತ್ತಮ ಶಿಲ್ಪಿಗೆ ಹೋಲಿಸುವಂತೆ, ಇಂದ್ರನು ಇವನಿಗೆ ಹೋಲಿಸಲ್ಪಟ್ಟಿದ್ದಾನೆ (೧೦-೧೧೫-೬). ವಿವಾಹಸಂಬಂಧವಾದ ಸೂಕ್ತದಲ್ಲಿ, ಮಾತರಿಶ್ವನು ಇತರ ದೇವತೆಗಳ ಜೊತೆಯಲ್ಲಿ, ಪ್ರೇಮಿಗಳೀರ್ವರ ಹೃದಯಗಳೆನ್ನು ಪ್ರವೇಶಿಸಬೇಕೆಂದು ಪ್ರಾರ್ಥಿತನಾಗಿರುವಾಗಲೂ, ಈ ಕೌಶಲ್ಯವೇ ಉದಿಷ್ಟವಾಗಿರಬಹುದು. ಕಡೆಯದಾಗಿ, ಒಂದು ಕಡೆ, ಮಾತರಿಶ್ವನು ಅಪಾರನೆಂದೂ, ಅಲೆದಾಡುತ್ತಿರುವವನೆಂದೂ ಹೇಳಿದೆ (೧೦-೧೦೯-೧). ಈ ಎರಡು ಗುಣಗಳೂ, ಮಾತರಿಶ್ವನೆಂದರೆ ವಾಯುವೆಂಬ ಅಭಿಪ್ರಾಯಕ್ಕೆ ಪೋಷಕವಾಗುತ್ತವೆ.

ಹೀಗೆ ಮಾತರಿಶ್ವನೆಂದರೆ ಮೂರ್ತಿಮತ್ತಾದ ಸ್ವರ್ಗೀಯಾಗ್ನಿಯೆನ್ನಬಹುದು; ಅಲ್ಲದೆ, ಸ್ವರ್ಗದಿಂದ ಭೂಲೋಕಕ್ಕೆ ಅಗ್ನಿಯನ್ನು ತಂದವನೂ ಇವನೇ. ಮಾತರಿಶ್ವನಿಗೆ ವಿದ್ಯುತ್ತೇ ಮೂಲವೆನ್ನಬಹುದು. ಅಗ್ನಿಯೂ ಈ ಎರಡು ಲೋಕಗಳ ಮಧ್ಯೆ ದೂತನಾಗಿರುವಂತೆ, ಮಾತರಿಶ್ವನು ವಿಶ್ವವತನ ದೂತನಾಗಿ ಸ್ವರ್ಗದಿಂದ ಭೂಮಿಗೆ ಬಂದನೆನ್ನಿಬಹುದು. ಅಥರ್ವವೇದದಲ್ಲಿಯೂ ಮಾತರಿಶ್ವ ಎಂಬುದು ಅಗ್ನಿಯ ನಾಮಧೇಯ (ಅ. ವೇ. ೧೦-೮-೩೯ ಮತ್ತು ೪೦); ಆದರೆ ಬ್ರಾಹ್ಮಣಾದಿಗಳಲ್ಲಿ, ಮಾತರಿಶ್ವನೆಂದರೆ ವಾಯುವೇ. ಈ ಅಭಿಪ್ರಾಯಕ್ಕೆ ಆಧಾರವು ಆಗಲೇ ಉಕ್ತವಾಗಿದೆ (೩-೨೯-೧೧). ವಾಯುಮಂಡಲದಲ್ಲಿ ಬುಸುಗುಟ್ಟುವ ಸರ್ಪದಂತಿದ್ದ ಅಗ್ನಿಯು ಬೇರೊಂದು ಕಡೆ ರಭಸದಿಂದ ನುಗ್ಗುವ ಗಾಳಿಯೆಂದು ವರ್ಣಿತನಾಗಿದಾನೆ (೧-೭೯-೧).

ಮಾತರಿಶ್ವನ್ ಎಂಬ ಪದಕ್ಕೆ ತಾಯಿಯಲ್ಲಿ ಬೆಳೆಯುವವನು, ರೂಪುಗೊಂಡವನು ಎಂಬರ್ಥವಾಗಬಹುದು. ಶು ಎಂಬ ಧಾತುವಿಗೆ ಅಭಿವೃದ್ಧಿಹೊಂದು, ಗಾತ್ರದಲ್ಲಿ ಹೆಚ್ಚಾಗು ಎಂದರ್ಥ. ಇದರಿಂದಲೇ ಶಿಶು ಮುಂತಾದ ಪದಗಳು ನಿಷ್ಪನ್ನವಾಗಿವೆ. ಮಾತರಿಶ್ವನಂತೆ ಅಗ್ನಿಯೂ ತಾಯಿಯರಲ್ಲಿ ಅಭಿವೃದ್ಧಿ ಹೊಂದುತ್ತಾನೆ (೧-೧೪೧-೫). ಮಾತರಿಶ್ವನಿಗೆ ಅನ್ವಯಿಸುವಾಗ, ಅರಣಿಯ ಕೆಳಭಾಗ ಅಥವಾ ಮೇಘವು ಮಾತೃವಿರಬಹುದು. ಮಾತರಿಶ್ವನು ಅಂತರಿಕ್ಷದಿಂದ ಬರುವುದರಿಂದ ಮೇಘವು ಅವನ ಮಾತೃವು ಎಂದು ಹೇಳಬಹುದು. ಯಾಸ್ಕರ ಮತದಲ್ಲಿ ಮಾತರಿಶ್ವ ಎಂದರೆ ವಾಯುವು; 'ಮಾತರಿ' ಎಂದರೆ ಅಂತರಿಕ್ಷದಲ್ಲಿ 'ಶ್ವನ್' ಉಸಿರಾಡುವವನು ಅಥವಾ 'ಅಶು ಅನ್' ಬೇಗಬೇಗ ಉಸಿರಾಡುವವನು ಅಂದರೆ ಗಾಳಿ ಎಂದರ್ಥ.

ಅಹಿರ್ಬುಧ್ನ್ಯ

ಅಹಿ ಬುಧ್ನ್ಯ ಎಂದರೆ ಸಮುದ್ರದ ಅಥವಾ ಪಾತಾಳಲೋಕದ ಸರ್ಪವೆನ್ನಬಹುದು ಈ ಹೆಸರು ವಿಶೇಷವಾಗಿ ವಿಶ್ವೇದೇವತಾಕವಾದ ಸೂಕ್ತಗಳಲ್ಲಿ ಬರುತ್ತದೆ. ಒಟ್ಟು ಋಗ್ವೇದದಲ್ಲಿ ಹನ್ನೆರಡು ಸಲ ಮಾತ್ರ ಉಪಯೋಗಿಸಿರುವುದು. ಐದು ಸಲ ಅಜ ಏಕಪಾದದ ಒಡನೆ ಮೂರು ಸಲ ಅಪಾಂನಪಾತನೊಡನೆ, ಮೂರು ಸಲ ಸಮುದ್ರದೊಡನೆ ಮತ್ತೆ ಎರಡು ಸಲ ಸವಿತೃವಿನೊಡನೆ ಹೇಳಿದೆ. ಮೂರೇ ಋಕ್ಕುಗಳಲ್ಲಿ (೫-೪೧-೧೬ ; ೭-೩೪-೧೬ ಮತ್ತು ೧೭) ಈ ಹೆಸರು ಒಂದೇ ಬಂದಿರುವುದು. ಇವನ ಜೊತೆಗೆ ಇನ್ನೊಂದು ದೇವತೆ ಹೇಳಿರುವಾಗಲೆಲ್ಲಾ, ಆ ದೇವತೆ ಸಾಧಾರಣವಾಗಿ ಅಜ ಏಕಪಾದ (೧೦-೬೪-೪) ಇಲ್ಲವೇ ಅಪಾಂ ನಪಾತ್ (೧-೧೪೬-೫) ಆಗಿರುತ್ತದೆ. ಅಜ ಏಕಪಾದ ಮತ್ತು ಅಹಿಬುಧ್ನ್ಯ ಇವೆರಡೂ ಒಂದೆಡೆಯಲ್ಲೆಲ್ಲಾ ಸಾಧಾರಣವಾಗಿ ಅಕ್ಕಪಕ್ಕದಲ್ಲಿ ಜೋಡಿಸಿದಂತಿರುತ್ತವೆ. ಆದರೆ (೧೦-೬೬-೧೧)ರಲ್ಲಿ ಮಾತ್ರ ಇದಕ್ಕೆ ಸ್ವಲ್ಪ ವಿರುದ್ಧವಾಗಿದೆ. ಈ ಹೆಸರ ಬರುವ ಪಟ್ಟಿಗಳು ಈ ರೀತಿ ಇವೆ. ಅಜ ಏಕಪಾದ, ಅಹಿಬುಧ್ನ್ಯ, ಸಾಗರ, ಅಪಾಂನಪಾತ್ ಮತ್ತು ಪೃಶ್ನಿ (೭-೩೫-೧೩) ಅಹಿಬುಧ್ನ್ಯ ಅಜಏಕಪಾದ ತ್ರಿತ, ಋಭುಕ್ಷಾ, ಸವಿತೃ, ಅಪಾಂನಪಾತ್ (೨-೩೧-೬) ; ಸಾಗರ, ಸಿಂಧು, ಆಕಾಶ, ಗಾಳಿ, ಅಜ ಏಕಪಾದ, ಭೋರ್ಗರೆಯುತ್ತಿರುವ ಪ್ರವಾಹ, ಅಹಿಬುಧ್ನ್ಯ, ಮತ್ತು ವಿಶ್ವೇದೇವತೆಗಳು (೧೦-೬೬-೧೧). ಈ ಪಟ್ಟಿಗಳನ್ನು ಪರಿಶೀಲಿಸಿದರೆ, ಅಹಿಬುಧ್ನ್ಯನೂ ಅಂತರಿಕ್ಷದ ದೇವತೆಗಳಲ್ಲಿ ಒಬ್ಬನೆಂದೇ ಹೇಳಬೇಕು. ನಿರುಕ್ತದಲ್ಲಿ (೫-೪) ಮಧ್ಯಲೋಕ ಅಥವಾ ವಾಯುಮಂಡಲದ ದೇವತೆಯೆಂದು ಪರಿಗಣಿತನಾಗಿದಾನೆ. ಈ ದೇವತೆಯೊಂದನ್ನೇ ಪ್ರತಿಪಾದಿಸುವ ಋಕ್ಕಿನಲ್ಲೇ, ಈ ದೇವತೆಯ ವಿಷಯವಾಗಿ ಖಚಿತವಾಗಿ ಏನಾದರೂ ತಿಳಿಯುವುದು. ಅಂತರಿಕ್ಷದ ಪ್ರವಾಹದ ತಳದಲ್ಲಿ ಕುಳಿತಿರುವ, ನೀರಿನಲ್ಲೇ ಜನಿಸಿದ ಸರ್ಪವನ್ನು ಗಾನದಿಂದ ಸ್ತುತಿಸುತ್ತೇನೆ (ತೃಪ್ತಿಪಡಿಸುತ್ತೇನೆ) ೭-೩೪-೧೬ ; ೧೦-೯೩-೫ನ್ನು ಹೋಲಿಸಿ) ಇದರಿಂದ ಈ ದೇವತೆಯು ಆಕಾಶದ ಜಲರಾಶಿಯಲ್ಲಿ ವಾಸಿಸುತ್ತಾನೆ ಎಂದು ಸೂಚಿತವಾಗುತ್ತದೆ. ಯಾಸ್ಕರು (ನಿರು. ೧೦-೪೪) ಬುಧ್ನ ಎಂಬ ಪದಕ್ಕೆ ಗಾಳಿ ಎಂದು ಅರ್ಥಮಾಡಿದಾರೆ. ಅದರ ಮುಂದಿನ ಋಕ್ಕಿನಲ್ಲಿ (೭-೩೪-೧೭) ಅವನನ್ನು ಪೂಜಿಸುವವರನ್ನು ಹಿಂಸಿಸಬಾರದೆಂದು ಪ್ರಾರ್ಥನೆಯಿದೆ. ಇನ್ನೊಂದು ಕಡೆಯೂ (೫-೪೧-೧೬) ಇದೇ ಪದಗಳು ಪ್ರಯುಕ್ತವಾಗಿವೆ. ಈ ವಾಕ್ಯಗಳಿಂದ, ಅವನ ಸ್ವಭಾವದಲ್ಲಿ ದೌಷ್ಟ್ಯವಡಗಿದೆಯೆಂದು ವ್ಯಕ್ತವಾಗುತ್ತದೆ. 'ಅಹಿ' ಎಂಬುದು ಸಾಧಾರಣವಾಗಿ ವೃತ್ರನಿಗೆ ಉಪಯೋಗಸಲ್ಪಟ್ಟಿದೆ. ವೃತ್ರನೂ ಇದೇ ರೀತಿ, ನೀರನ್ನು ಆವರಿಸಿಕೊಂಡಿದ್ದನು, ನೀರು ಅವನನ್ನು ಅತಿಕ್ರಮಿಸಿ ಹರಿಯಿತು ಅಥವಾ ನೀರಿನಲ್ಲಿ ಅಥವಾ ವಾಯುಮಂಡಲದ ತಳದಲ್ಲಿ ಬಿದ್ದಿದ್ದನು (೧-೫೨-೬) ಎಂದು ವರ್ಣನೆಯಿದೆ. ಅಂತರಿಕ್ಷದ ಅಗ್ನಿಗೆ ಅಹಿ ಎಂದೂ (೧-೭೯-೧). ಅವನು ಅಂತರಿಕ್ಷದತಳದಲ್ಲಿ ಜನಿತನಾದನೆಂದೂ (೪-೧೧-೧) ಹೇಳಿದೆ. ಅಹಿ ಬುಧ್ನ್ಯ ಮತ್ತು ಅಹಿವೃತ್ರ ಇಬ್ಬರೂ ಒಂದೇ ಆಗಿದ್ದರು ; ಅಹಿಬುಧ್ನ್ಯನೂ ದೇವತೆಯೆಂಬ ಭಾವನೆ ಬಂದು, ಅವನ ದುಷ್ಟಸ್ವಭಾವ ಸೂಕ್ಷ್ಮವಾಗಿ ಸೂಚಿತವಾಗಿದೆ. ಇತರ ವೇದಗಳಲ್ಲಿ ಅಹಿಬುಧ್ನ್ಯನಿಗೂ ಗಾರ್ಹಪತ್ಯಾಗ್ನಿಗೂ ಸಂಬಂಧವೇರ್ಪಟ್ಟಿದೆ (ವಾ. ಸಂ. ೫-೩೩ ; ಐ. ಬ್ರಾ. ೩-೩೬ ; ತೈ. ಬ್ರಾ. ೧-೧-೧೦-೩). ಪುರಾಣಾದಿಗಳಲ್ಲಿ ಅಹಿಬುಧ್ನ್ಯ ಎಂಬುದು ರುದ್ರನ ನಾಮಗಳಲ್ಲಿ ಒಂದು.

ಅಜ ಏಕಪಾದ

ಅಹಿ ಬುಧ್ನ್ಯನಿಗೂ ಅಜಏಕಪಾದನಿಗೂ ಬಹಳ ನಿಕಟಬಾಂಧವ್ಯವಿದೆ. ಎರಡೂ ಒಟ್ಟಾಗಿ ಐದು ಸಲವೂ, ಒಂದೇ ಒಂದು ಸಲ ಅಜಏಕಪಾದ ಮಾತ್ರ (೧೦-೬೫-೧೩) ಬಂದಿದೆ. ಘರ್ಜಿಸುವ ಸಾವೀರವೀ

ಏಕಪಾತ್ ಅಜ, ದಿವಃಧರ್ತಾ (ಆಕಾಶವನ್ನು ಎತ್ತಿ ಹಿಡಿದಿರುವವನು), ಸಿಂಧು, ಸಮುದ್ರದ ನೀರು ; ವಿಶ್ವೇ ದೇವತೆಗಳು, ಸರಸ್ವತೀ (೧೦-೬೫-೧೩) ಮತ್ತು ಸಾಗರ, ಸಿಂಧು, ಅಂತರಿಕ್ಷ, ಅಜಏಕಪಾದ, ಫರ್ಜನ್ಯ ಪ್ರವಾಹ, ಅಹಿಬುಧ್ನ್ಯ, ಮತ್ತು ವಿಶ್ವದೇವತೆಗಳು (೧೦-೬೬-೧೧), ಈ ಎರಡೂ ಪಟ್ಟಿಗಳು ಹೆಚ್ಚುಕಡಿಮೆ ಒಂದೇ ವಿಧವಾಗಿದೆ. ಇವುಗಳಿಂದ, ಅಜಏಕಪಾದನೂ ವಾಯುಮಂಡಲದ ದೇವತೆಗಳಲ್ಲಿ ಒಬ್ಬನೆಂದೂ ತಿಳಿದು ಬರುತ್ತದೆ. ಆದರೆ, ನಿರುಕ್ತದಲ್ಲಿ ಸ್ವರ್ಗಲೋಕದ ದೇವತೆಯೆಂದು ಪರಿಗಣನೆಯಿದೆ. ಅಥರ್ವವೇದದಲ್ಲಿ ಅಜ ಏಕಪಾದನು ಎರಡು ಲೋಕಗಳನ್ನು ಸ್ಥಿರವಾಗಿರಿಸಿದನು (ಅ. ವೇ. ೧೩-೧-೬) ಎಂದಿದೆ. ಅಜಏಕಪಾದನು ಪೂರ್ವದಿಕ್ಕಿನಲ್ಲಿ ಉದಿಸಿದನು (ತೈ. ಬ್ರಾ. ೩-೧-೩-೮). ವ್ಯಾಖ್ಯಾನಕಾರನು ಅಜಏಕಪಾದನು ಅಗ್ನಿಯ ಒಂದು ರೂಪವೆಂದೂ, ದುರ್ಗ ಎಂಬ ವ್ಯಾಖ್ಯಾನಕಾರನು ವ್ಯಾಖ್ಯಾನದಲ್ಲಿ (೧೨-೨೯) ಇವನು ಸೂರ್ಯನೆಂದೂ ಅಭಿಪ್ರಾಯಪಟ್ಟಿದ್ದಾರೆ. ಯಾಸ್ಕರು ಸ್ವತಃ ಇದರ ವಿಷಯವಾಗಿ ಸ್ಪಷ್ಟವಾಗಿ ಏನೂ ಬರೆದಿಲ್ಲ. ಅವರ ಪ್ರಕಾರ, ಅಜ ಎಂದರೆ, ಗಮಿಸುವವನು ಮತ್ತು ಏಕಪಾದ ಅಂದರೆ ಒಂದು ಕಾಲುಳ್ಳವನು ಅಥವಾ ಒಂದೇ ಕಾಲಿನಿಂದ ರಕ್ಷಿಸುವವನು ಅಥವಾ ಪಾನಮಾಡುವವನು. ಸ್ವತಂತ್ರ ದೇವತೆಯಾಗಿ ಸ್ಥಾನಮಾನಗಳೇನೂ ಇಲ್ಲದಿದ್ದರೂ, ಇವನಿಗೂ ಮತ್ತು ಅಹಿಬುಧ್ನ್ಯನಿಗೂ ಗೃಹಯಜ್ಞಗಳಲ್ಲಿ ಆಹುತಿಯಿದೆ (ಪಾರಸ್ಕರ ೨-೧೫-೨). ಪುರಾಣಗಳಲ್ಲಿ ಅಜ ಏಕಪಾದ ಎಂಬುದು ಏಕಾದಶರುದ್ರನಾಮಗಳಲ್ಲಿ ಒಂದು.

ಆಧುನಿಕ ವಿದ್ವಾಂಸರಲ್ಲಿ ಒಬ್ಬೊಬ್ಬರು ಒಂದೊಂದು ವಿಧವಾಗಿ ಅಭಿಪ್ರಾಯಪಡುತ್ತಾರೆ. ಬಿರುಗಾಳಿಯ ಒಂದು ರೂಪ, ಸೌರವ್ಯೂಹದ ದೇವತೆಗಳಲ್ಲಿ ಒಂದು. ಒಂಟೆಯಾಗಿ ಸಂಚರಿಸುವ ಈ ಅಜವು ಚಂದ್ರನು " ಏಕಪಾದವುಳ್ಳ, ಜನಿಸದೇ ಇರುವ ಇವನು " ಯಾವುದೋ ಅಜ್ಞಾತವಾದ ಲೋಕದಲ್ಲಿ ವಾಸಿಸುವ ದೇವತೆ, ಇವೇ ಮೊದಲಾದ ನಾನಾ ಅಭಿಪ್ರಾಯಗಳು ಕಂಡುಬರುತ್ತವೆ.

ರುದ್ರ

ಋಗ್ವೇದದಲ್ಲಿ ರುದ್ರನ ಸ್ಥಾನವು ಅಷ್ಟೇನೂ ಪ್ರಾಮುಖ್ಯತೆಯದಲ್ಲ ; ಮೂರು ಸೂಕ್ತಗಳು, ಒಂದು ಸೂಕ್ತಭಾಗ, ಸೋಮದೇವತೆಯೊಡನೆ ಒಂದರಲ್ಲಿ, ಇಷ್ಟೇ ಈ ದೇವತೆಯನ್ನು ಸ್ತುತಿಸುವುದು. ಈ ಹೆಸರು ಎಪ್ಪತ್ತೈದು ಸಲ ಮಾತ್ರ ಬರುತ್ತದೆ.

ಅವನ ಅಂಗಾಂಗಳ ವರ್ಣನೆ ಈ ರೀತಿ ಇದೆ. ಅವನಿಗೆ ಒಂದುಕ್ಕೆ (೨-೩೩-೭ ; ಇತ್ಯಾದಿ), ಬಾಹುಗಳು (೨-೩೩-೩ ; ವಾ. ಸಂ. ೧೬-೧) ಮತ್ತು ದೃಢವಾದ ಅಂಗಗಳು (೨-೩೩-೧೧) ಇವೆ. ಅವನ ತುಟಿಗಳು ಸುಂದರವಾದವು (೨-೩೩-೫) ಮತ್ತು ಪೂಷಣನಂತೆ ಕೂದಲು ಹೆಣೆದುಕೊಂಡಿರುತ್ತಾನೆ (೧-೧೧೪-೧ ಮತ್ತು ೫). ಅವನದು ಕಂದುಬಣ್ಣ (೨-೩೩-೫ ; ಇತ್ಯಾದಿ). ಅವನ ರೂಪವು ಕಣ್ಣುಕೊರೈಸುವಷ್ಟು ಪ್ರಕಾಶವುಳ್ಳದ್ದು (೧-೧೧೪-೫), ಮತ್ತು ಅವನು ಅನೇಕರೂಪವುಳ್ಳವನು (೨-೩೩-೯). ಜ್ವಲಿಸುವ ಸೂರ್ಯನಂತೆ, ಸುವರ್ಣದಂತೆ ಪ್ರಕಾಶಿಸುತ್ತಾನೆ (೧-೪೩-೫). ಸುವರ್ಣಾಭರಣಗಳನ್ನು (೨-೩೩-೯) ಮತ್ತು ನಾನಾ ವರ್ಣದ ಹೊಳೆಯುವ ಕಂಠಹಾರವನ್ನು (೨-೩೩-೧೦) ಧರಿಸಿದಾನೆ. ರಥದ ಆಸನದಲ್ಲಿ ಕುಳಿತಿದಾನೆ (೨-೩೩-೪). ಇತರ ಸಂಹಿತೆಗಳಲ್ಲಿ, ಅದರಲ್ಲಿಯೂ ವಾಜಸನೇಯ ಸಂಹಿತೆಯಲ್ಲಿ ಇನ್ನೂ ಅನೇಕ ಲಕ್ಷಣಗಳು ಉಕ್ತವಾಗಿವೆ. ಅವನು ಸಹಸ್ರಾಕ್ಷ (ಅ. ವೇ. ೧೧-೨-೨ ಮತ್ತು ೭ ; ವಾ. ಸಂ. ೧೬-೭). ಅವನಿಗೆ ಹೊಟ್ಟೆ, ಬಾಯಿ, ನಾಲಗೆ ಮತ್ತು ಹಲ್ಲುಗಳು (ಅ. ವೇ. ೧೧-೨-೬) ಇವೆ. ಅವನ ಹೊಟ್ಟೆಯು ಕಪ್ಪು ಮತ್ತು ಅವನ ಬೆನ್ನು ಕೆಂಪು (ಅ. ವೇ. ೧೫-೧-೭ ಮತ್ತು ೮). ಅವನ ಕಂಠವು (ವಾ. ಸಂ. ೧೬-೭) ನೀಲಿ ಮತ್ತು ಕೇಶವೂ ನೀಲಿ

(ಅ. ವೇ. ೨-೨೭-೬). ಅವನದು ತಾಮ್ರ ವರ್ಣ, ಕೆಂಪುಬಣ್ಣ (ವಾ. ಸಂ. ೧೬-೬). ಚರ್ಮಧಾರಿ (ವಾ. ಸಂ. ೩-೬೧; ೧೬-೫೧) ಮತ್ತು ಪರ್ವತವಾಸಿ (ವಾ. ಸಂ. ೧೬-೨೦ರಿಂದಳ) ಅವನು.

ಆಕ್ರಮಣಸಾಧನವಾದ ಆಯುಧಗಳು ಅನೇಕ ಇವೆ. ವಜ್ರಾಯುಧವನ್ನು ಹಿಡಿದಿದಾನೆ (೨-೩೩-೩). ಅವನ ಬಾಣವು ಆಕಾಶದಿಂದ ವಿಸೃಷ್ಟವಾಗಿ ಭೂಮಿಯನ್ನು ಹಾದುಹೋಗುತ್ತದೆ (೭-೪೬-೩). ಸಾಧಾರಣವಾಗಿ ಧನುರ್ಬಾಣಗಳನ್ನು ಧರಿಸಿರುತ್ತಾನೆ (೨-೩೩-೧೦ ಮತ್ತು ೧೧; ೫-೪೨-೧೧; ೧೦-೧೨೫-೬); ಆ ಬಾಣಗಳು ಬಲಿಷ್ಠವಾದುವು ಮತ್ತು ವೇಗವುಳ್ಳವು (೭-೪೬-೧). ಅವನು ಕೃಶಾನು ಮತ್ತು ಇತರ ಧನುರ್ಧಾರಿಗ ಳೊಡನೆ ಸ್ತುತನಾಗಿದಾನೆ (೧೦-೬೪-೪). ಇಂದ್ರನು ಧನುರ್ಧಾರಿಯೊಡನೆ ರಥದಲ್ಲಿ ಕುಳಿತಿದಾನೆ (೬-೨೦-೯; ೨-೩೩-೧೧ನ್ನು ಹೋಲಿಸು) ಎಂಬಲ್ಲಿ, ಧನುರ್ಧಾರಿಯು ರುದ್ರನೇ ಇರಬೇಕು. ಅಥರ್ವ ವೇದದಲ್ಲಿಯೂ ಅವನಿಗೆ ಧನುರ್ಧಾರಿಯೆಂತಲೇ ಸಂಜ್ಞೆ (ಅ. ವೇ. ೧-೨೪-೧; ೬-೯೩-೧; ೧೫-೫-೧೨ರಿಂದಽ). ಅಥರ್ವವೇದ ಮತ್ತು ಇತರ ವೇದಭಾಗಗಳಲ್ಲಿ ಅವನ ಧನುಸ್ಸು, ಬಾಣ, ಆಯುಧ, ವಜ್ರಾಯುಧ ಅಥವಾ ಗದೆ ಇವುಗಳು ಪದೇ ಪದೇ ಪ್ರಸಕ್ತವಾಗಿವೆ (ಅ. ವೇ. ೧-೨೪-೫ ಇತ್ಯಾದಿ; ಶ. ಬ್ರಾ. ೯-೧-೧-೬).

ರುದ್ರನ ವಿಷಯದಲ್ಲಿ ಪದೇ ಪದೇ ಪ್ರಸಕ್ತವಾಗುವ ಅಂಶವೆಂದರೆ, ಅವನಿಗೂ ಮರುತ್ತ್ಗಳಿಗೂ ಇರುವ ಸಂಬಂಧ. ರುದ್ರನು ಮರುತ್ತ್ಗಳಿಗೆ ತಂದೆಯು (೧-೧೧೪-೬ ಮತ್ತು ೯; ೨-೩೩-೧); ಅಥವಾ ಮರುತ್ತ್ಗಳು ರುದ್ರನ ಪುತ್ರರೆಂದು ಹೇಳಲ್ಪಟ್ಟಿದಾರೆ. ಮತ್ತು ಅವರಿಗೆ ರುದ್ರರು ಅಥವಾ ರುದ್ರಿಯರು ಎಂದೂ ಹೆಸರು. ಪೃಶ್ನಿಯ ಹೊಳೆಯುತ್ತಿರುವ ಕೆಚ್ಚಲಿನಿಂದ ರುದ್ರನು ಮರುತ್ತ್ಗಳನ್ನು ಸೃಜಿಸದನು (೨-೩೪-೨). ಆದರೆ, ಇಂದ್ರ ಮತ್ತು ಮರುತ್ತ್ಗಳು ಯುದ್ಧಾದಿಗಳಲ್ಲಿ ಸೇರುವಂತೆ, ರುದ್ರ ಮತ್ತು ಮರುತ್ತ್ಗಳು ಎಲ್ಲಿಯೂ ಸೇರಿಲ್ಲ; ಏಕೆಂದರೆ, ರುದ್ರನು ರಾಕ್ಷಸರೊಡನೆ ಯುದ್ಧದಲ್ಲಿ ಯಾವಾಗಲೂ ತೊಡಗಿಲ್ಲ. ಪುರಾಣಾದಿಗಳಲ್ಲಿ ಅನೇಕ ವೇಳೆ ರುದ್ರನಿಗೆ ಪ್ರಯುಕ್ತವಾದ ತ್ರ್ಯಂಬಕನೆಂಬ ಹೆಸರು ವೇದಗಳಲ್ಲಿಯೂ ಕಂಡುಬರುತ್ತದೆ (ವಾ. ಸಂ. ೩-೫೮; ಶ. ಬ್ರಾ. ೨-೬-೨-೯); ಋಗ್ವೇದದಲ್ಲಿಯೂ ಒಂದು ಕಡೆ ಅವನಿಗೆ ಪ್ರಯೋಗಿಸಿದೆ (೭-೫೯-೧೨). ಆ ಪದಕ್ಕೆ ಮೂರು ಜನ ಜನನಿಯರನ್ನು ಹೊಂದಿರುವ (೩-೫೬-೫ನ್ನು ಹೋಲಿಸಿ) ಎಂದರ್ಥ. ಇಲ್ಲಿ ಮೂರು ಜನ ಮಾತೃಗಳೆಂಬುವುದು ಪ್ರಪಂಚದ ಮೂರು ಭಾಗಗಳು ಇರಬಹುದು. ಪುರಾಣಾದಿಗಳಲ್ಲಿ ಅಂಬಿಕಾ ಎಂಬುವಳು ರುದ್ರನ ಪತ್ನಿ. ಆದರೆ ವೇದಗಳಲ್ಲಿ ಅವಳು ಅವನ ಸೋದರಿ (ವಾ. ಸ. ೩-೫೭). ಶಿವನ ಪತ್ನಿಯ ನಾಮಗಳಾದ ಉಮಾ ಮತ್ತು ಪಾರ್ವತಿ ಎಂಬಿವುಗಳು ತೈತ್ತಿರೀಯ ಆರಣ್ಯಕ ಮತ್ತು ಕೇನೋಪನಿಷತ್ತ್ಗಳಲ್ಲಿ ಬರುತ್ತವೆ.

ಅಗ್ನಿಗೆ ಸಮಾನರೆಂದು ಹೇಳಿರುವ ಅನೇಕ ದೇವತೆಳಗಲ್ಲಿ ರುದ್ರನೂ ಒಬ್ಬನು (೨-೧-೬). ಇತರ ಕಡೆಗಳಲ್ಲಿಯೂ ಅವನೂ ಅಗ್ನಿಯೂ ಒಂದು (ಅ. ವೇ. ೮-೮೭-೧; ತೈ. ಸಂ. ೫-೪-೩-೧; ೫-೫-೭-೪; ಮತ್ತು ಶ. ಬ್ರಾ. ೬-೧-೩-೧೦; ೯-೧-೧-೧ನ್ನು ಹೋಲಿಸಿ). ರುದ್ರ ಎಂಬುದು ಅನೇಕವೇಳೆ ವಿಶೇಷಣವಾಗಿ ಉಪಯುಕ್ತವಾಗಿದೆ. ಅನೇಕ ಸಲ ಅಗ್ನಿಗೂ, ಅದಕ್ಕೂ ಹೆಚ್ಚಾಗಿ ಅಶ್ವಿನಿಗಳಿಗೂ ಈ ವಿಶೇಷಣ ಉಕ್ತವಾಗಿದೆ. ರುದ್ರನಿಗೆ ಶರ್ವ ಮತ್ತು ಭವ ಎಂಬ ಎರಡು ಹೊಸ ಹೆಸರುಗಳು (ವಾ. ಸಂ. ೧೬-೧೪-೨೪). ಈ ಎರಡು ನಾಮಗಳೂ ಮತ್ತು ಅವನ ನಾಶಕಾರಕವಾದ ಬಾಣಗಳೂ ಅಥರ್ವ ವೇದದಲ್ಲಿಯೂ ಹೇಳಲ್ಪಟ್ಟಿವೆ (೨-೨೭-೬; ೬-೯೩-೧; ೧೦-೧-೨೩; ೧೧-೨-೧ ಮತ್ತು ೧೨); ಆದರೆ ಇಲ್ಲಿ ಶರ್ವ, ಭವ ಮತ್ತು ರುದ್ರ ಬೇರೆ ಬೇರೆ ದೇವತೆಗಳೆಂದು ಭಾವನೆ ಇರುವಂತಿದೆ. ಶರ್ವ ಮತ್ತು ಭವರು ರುದ್ರಪುತ್ರರು ಮತ್ತು ಬೇಟೆಯಲ್ಲಿ

ಬಹಳ ಅಸಕ್ತರು (ಸಾಂ. ಶ್ರೌ. ಸೂ. ೪.೨೦-೧). ಅಗ್ನಿ, ಅಶನಿ, ಪಶುಪತಿ, ಭವ, ಶರ್ವ, ಈಶಾನ, ಮಹಾದೇವ, ಉಗ್ರದೇವ ಮತ್ತು ಇತರರು ಒಂದೇ ದೇವತೆಯ ನಾನಾ ರೂಪಗಳು (ವಾ. ಸಂ. ೩೯-೪). ರುದ್ರ, ಶರ್ವ, ಪಶುಪತಿ, ಉಗ್ರ, ಅಶನಿ, ಭವ, ಮತ್ತು ಮಹಾನ್ ದೇವ; ಇವುಗಳು ಅಗ್ನಿಯ ಎಂಟು ರೂಪಗಳು (ಶ. ಬ್ರಾ. ೬-೧-೩-೭; ಶಾಂ. ಬ್ರಾ. ೬-೧ ಮೊದಲಾದುವನ್ನು ಹೋಲಿಸಿ); ಮತ್ತು ಶರ್ವ, ಭವ, ಪಶುಪತಿ ಮತ್ತು ರುದ್ರ, ಇವುಗಳೆಲ್ಲಾ ಅಗ್ನಿಯ ನಾಮಗಳು (ಶ. ಬ್ರಾ. ೧-೭-೩-೪). ಈ ಮೇಲಿನ ನಾಮಗಳಲ್ಲಿ ಒಂದಾದ ಅಶನಿ ಎಂಬುದು ಅಗ್ನಿಕುಮಾರ (ವಿದ್ಯುತ್)ನಿಗೆ ಹೆಸರು (೬-೧-೩-೧೦); ಆದರೆ ಮತ್ತೊಂದು ಕಡೆ (ಶಾಂ. ಬ್ರಾ.) ಅದು ಇಂದ್ರನ ನಾಮವು. ಮನೆಯಿಂದ ಓಡಿಸಲ್ಪಟ್ಟ ಗೋವುಗಳು ರುದ್ರನ ಆಘಾತಕ್ಕೆ ಒಳಪಡುವುದು ಹೆಚ್ಚು; ಅದಕ್ಕೋಸ್ಕರಲೇ ಅಂಥವುಗಳೆಲ್ಲಾ ಅವನ ರಕ್ಷಣೆಗೆ ಒಳಪಡಿಸಲ್ಪಟ್ಟವೆ. ಅದರಿಂದಲೇ ಅವನಿಗೆ ಪಶುಪತಿ ಎಂಬ ನಾಮಧೇಯ.

ರುದ್ರನು ಘೋರರೂಪಿ (೨-೩೩-೬ ಮತ್ತು ೧೧; ೧೦-೧೨೬-೫) ಮತ್ತು ಕ್ರೂರಮೃಗದಂತೆ ನಾಶಕಾರಕನು (೨-೩೩-೧೧). ಅವನು ಆಕಾಶದ, ಕೆಂಪುಛಾಯೆಯ ವರಾಹ (೧-೧೧೪-೫). ವೃಷಭ (೨-೩೩-೭, ೮ ಮತ್ತು ೧೫). ಉದಾತ್ತನು (೭-೧೦-೪); ಬಲಾಢ್ಯನು (೧-೪೩-೧; ೧-೧೧೪-೧); ಬಲಾಢ್ಯರಲ್ಲೆಲ್ಲಾ ಬಲಿಷ್ಠನು (೨-೩೩-೩); ಅಪ್ರತಿಹತನು (೭-೪೬-೧); ಪರಾಕ್ರಮದಲ್ಲಿ ಮೀರಿದವರಿಲ್ಲ (೨-೩೩-೧೦); ವೇಗಶಾಲಿಯು (೧೦-೯೨-೫); ಚುರುಕು (೧-೧೧೪-೪). ಅವನು ಪ್ರಾಯದವನು (೫-೬೦-೫) ಮತ್ತು ವೃದ್ಧನಾಗುವುದಿಲ್ಲ (೬-೪೯-೧೦). ಅವನು ಅಸುರನಾಮಧೇಯನು (೫-೪೨-೧೧) ಅಥವಾ ಸ್ವರ್ಗಲೋಕದ ಮಹಾ ಅಸುರ (೨-೧-೬). ಆತ್ಮವಿಖ್ಯಾತನು (೧-೧೨೯-೩; ೧೦-೯೨-೯); ವೀರರನ್ನು ಆಳುತ್ತಾನೆ (೧-೧೧೪-೧ ಮತ್ತು ೨; ಇತ್ಯಾದಿ) ಮತ್ತು ಈ ಪ್ರಪಂಚಕ್ಕೇ ಈಶ್ವರ (೨-೩೩-೯) ಮತ್ತು ಜನಕನು (೬-೪೯-೧೦). ಅವನು ನಿಯಮಗಳನ್ನು ವಿಧಿಸುವವನು (೬-೪೬-೧) ಮತ್ತು ತನ್ನ ವಿಧಿಗಳಿಂದ ಮತ್ತು ಜಗದಾಧಿಪತ್ಯದಿಂದ, ದೇವಮಾನವರ ಎಲ್ಲಾ ಕಾರ್ಯಗಳನ್ನೂ ಅರಿತುಕೊಳ್ಳುತ್ತಾನೆ (೭-೪೬-೨). ನದಿಗಳು ಹರಿದು, ಭೂಮಿಯೆಲ್ಲವನ್ನೂ ಆರ್ದ್ರವನ್ನಾಗಿ ಮಾಡುವುದು ಅವನ ಅಪ್ಪಣೆಯಿಂದಲೇ (೧೦-೯೨-೫). ಬುದ್ಧಿವಂತ (೧-೪೩-೧); ಜ್ಞಾನಿ (೧-೧೧೪-೪); ಮತ್ತು ಉದಾರಿ (೨-೩೩-೭; ೬-೪೯-೧೦). ಅನೇಕ ಸಲ ಅವನಿಗೆ ಮೀಢ್ವ. (ಉದಾರಿ) ಎಂಬ ಪ್ರಯೋಗವಿದೆ (೧-೧೧೪-೩) ಮತ್ತು ಇತರ ವೇದಗಳಲ್ಲಿ ರುದ್ರನಿಗೆ ಮಾತ್ರ ಈ ಪದಪ್ರಯೋಗ. ಅವನು ಸುಲಭವಾಗಿ ಸ್ತುತ್ಯನು (೨-೩೩-೬) ಮತ್ತು ಮಂಗಳಕರನು (ಶಿವ ೧೦-೯೨-೯).

ಕೆಡಕು ಮಾಡುವುದು ಇವನು ವಿಶೇಷವಿದ್ದಂತೆ ಕಾಣುತ್ತದೆ. ಅವನನ್ನು ಸ್ತುತಿಸುವ ಸೂಕ್ತಗಳಲ್ಲೆಲ್ಲಾ, ಅವನ ಬಾಣದ ಭಯ, ಅವನ ಕೋಪದ ಅನಿಷ್ಟಪರಿಣಾಮಗಳು, ಇವುಗಳೇ ಉಕ್ತವಾಗಿವೆ. ಸ್ತುತಿಸುವವರು-ಅವರ ಮಾತಾಪಿತೃಗಳು, ಮಕ್ಕಳು ಅನುಯಾಯಿಗಳು, ದನಕರುಗಳು, ಅಶ್ವಗಳು, ಇವುಗಳು ಯಾವುದನ್ನೂ ಕೋಪದಿಂದ ಕೊಲ್ಲಬಾರದು ಅಥವಾ ನೋಯಿಸಬಾರದು (೧-೧೧೪-೭ ಮತ್ತು ೮), ಆದರೆ ಅಶ್ವಗಳನ್ನು ಳಿಸಿಕೊಡಬೇಕು (೨-೩೩-೧೧) ಮತ್ತು ಬಾಣಗಳನ್ನು ಬೇರೆ ಕಡೆ ತಿರುಗಿಸಿ, ಇತರರನ್ನು ಅದರಿಂದ ಧ್ವಂಸಮಾಡಬೇಕು (೨-೩೩-೧೧ ಮತ್ತು ೧೪), ಕೋಪ ಬಂದಾಗ ತನ್ನ ವಜ್ರಾಯುಧವನ್ನು ವಿಮುಖವನ್ನಾಗಿ ಮಾಡಬೇಕೆಂದೂ, ತನ್ನ ಆರಾಧಕರನ್ನು ತೊಂದರೆಪಡಿಸಬಾರದೆಂದೂ (೬-೨೮-೭; ೬೪೬-೨ರಿಂದಲ), ಅವರ ಗೋವುಗಳನ್ನು ಮತ್ತು ಮಕ್ಕಳನ್ನು ಮತ್ತು ಗೋವುಗಳು ಮತ್ತು ಮನುಷ್ಯರನ್ನು ವಧಿಸುವ ಆಯುಧವನ್ನು ತಮ್ಮಿಂದ ದೂರ ಇಡಬೇಕೆಂದೂ (೨-೩೩-೧೧) ಪ್ರಾರ್ಥಿಸಿದಾರೆ. ಕೋಪತಾಪಗಳನ್ನು ಮಾಡಿಕೊಳ್ಳಬಾರದೆಂದೂ (೨-೩೩-೪ರಿಂದ೬ ಮತ್ತು೧೫), ಮತ್ತು 'ನಡೆಯುವ ಆಹಾರದ' ವಿಷಯದಲ್ಲಿ ಕೃಪೆಯಿಡಬೇಕೆಂದೂ ಮೊರೆಯಿಟ್ಟಿದ್ದಾರೆ (೧೦-೧೬೯-೧). ಮನುಷ್ಯರನ್ನು ವಧಿಸುವವನೆಂಬ (ನೃಘ್ನೇ ೪-೩-೬) ವಿಶೇಷಣವಿದೆ. ಮನುಷ್ಯರನ್ನು ವಧಿಸಲು ಅಪೇಕ್ಷಿಸುತ್ತಾನೆ (ಅ.ಗೃ. ೪-೮-೩೨).

ಅವನ ಕೋಪವು ಇತರ ವೇದಗಳಲ್ಲಿ ಇನ್ನೂ ಹೆಚ್ಚಾಗಿ ಪ್ರಾಮುಖ್ಯತೆಗೆ ಬಂದಿದೆ. ಪದೇ ಪದೇ ಈ ವಿಷಯದಲ್ಲಿ ಅವನಿಗೆ ಮೊರೆಯಿಟ್ಟಿದಾರೆ (ವಾ. ಸಂ. ೩-೬೧ ; ಇತ್ಯಾದಿ ; ಅ. ವೇ. ೧-೨೪-೫ ; ಇತ್ಯಾದಿ). ಸ್ವರ್ಗೀಯಾಗ್ನಿಯನ್ನು ತಮ್ಮ ಮೇಲೆ ಪ್ರಯೋಗಿಸಬಾರದೆಂದೂ, ಸಿಡಿಲು ಬೇರೆ ಯಾವುದಾದರೂ ಸ್ಥಳದಲ್ಲಿ ಬೀಳುವಂತೆ ಮಾಡಬೇಕೆಂದೂ ಬೇಡಿದಾರೆ (ಅ. ವೇ. ೧೧-೨-೨೬ ; ೧೦-೧-೨೩). ಜ್ವರ, ಕೆಮ್ಮು, ವಿಷ, ಇವುಗಳ ಮೂಲಕವೂ, ಇವನು ಮನುಷ್ಯರ ಮೇಲೆ ಕೈ ಮಾಡುತ್ತಾನೆ (ಅ. ವೇ. ೧೧-೨-೨೨ ಮತ್ತು ೨೬)- ಬೇಟೆಯನ್ನು ಅಗಿಯದೇ ನುಂಗುವ ಅಗಲವಾದ ಬಾಯುಳ್ಳ ಸದಾ ಬೊಗಳುವ ನಾಯಿಗಳೂ ಅವನ ಹತ್ತಿರ ಇವೆ. (ಅ. ವೇ. ೧೦-೧-೩೦ ; ವಾ. ಸಂ. ೧೬-೨೮ನ್ನು ಹೋಲಿಸಿ) ಹೆದೆಯೇರಿಸಿದ ಅವನ ಬಿಲ್ಲು ಮತ್ತು ಬಾಣಗಳನ್ನು ಕಂಡರೆ, ತಮ್ಮನ್ನು ಎಲ್ಲಿ ನಾಶ ಮಾಡುವನೋ ಎಂದು ದೇವತೆಗಳಿಗೂ ಭಯ (ಶ. ಬ್ರಾ. ೯-೧-೧ ೧ ಮತ್ತು ೬) ಮಹಾದೇವನಾಮನಾಗಿ, ಇವನು ಗೋವುಗಳನ್ನು ವಧಿಸುತ್ತಾನೆ (ತಾಂ. ಮ. ಬ್ರಾ. ೬-೯-೭). ಸಮಸ್ತ ಭಯಂಕರ ವಸ್ತುಗಳಿಂದ ರಚಿತನಾದವನು ಇವನು (ಐ. ಬ್ರಾ. ೩-೩೩-೧). ಬ್ರಾಹ್ಮಣ ಮತ್ತು ಸೂತ್ರಗಳಲ್ಲಿ, ಇವನು ಇತರ ದೇವತೆಗಳಿಂದ ಪ್ರತ್ಯೇಕವಾಗಿರುತ್ತಾನೆಂದು ಹೇಳಿರುವುದು, ಇವನ ಈ ಭೀಕರ ಗುಣಗಳಿಂದಲೇ ಇರಬಹುದು. ದೇವತೆಗಳೆಲ್ಲಾ ಸ್ವರ್ಗವನ್ನು ಸೇರಿದಾಗ, ರುದ್ರನು ಹಿಂದುಳಿದನು (ಶ. ಬ್ರಾ. ೧-೭-೩-೧). ವೈದಿಕ ಕರ್ಮಗಳಲ್ಲಿ, ಪ್ರಾಯಶಃ ಇತರ ದೇವತೆಗಳಿಗೆ ಆಹುತಿ ಕೊಟ್ಟಮೇಲೆ, ಉಳಿದುದು ರುದ್ರನಿಗೆ ಅರ್ಪಿತವಾಗುತ್ತದೆ (ಆ. ಧ. ಸೂ. ೨-೪-೨೩). ಯಾಗಗಳಲ್ಲಿ ಪಿಶಾಚಿಗಳ ಭಾಗವೆಂದು ರಕ್ತವನ್ನು ಕೊಡುವಂತೆ (ಐ. ಬ್ರಾ. ೨-೭-೧), ಅವನ ಸೈನಿಕರು, ರೋಗ ಮತ್ತು ಮೃತ್ಯುಗಳಿಂದ ಮನುಷ್ಯರನ್ನು ಆಕ್ರಮಿಸಿ, ತಮಗೆ ಬಲಿಯಾದವರ ರಕ್ತಸಿಕ್ತವಾದ ಅವಶಿಷ್ಟವನ್ನು ಭಕ್ಷಣ ಮಾಡುತ್ತಾರೆ (ಸಾಂ. ಶ್ರೌ. ಸೂ. ೪-೧೯-೪). ಇತರ ದೇವತೆಗಳ ವಾಸಸ್ಥಳವು ಪೂರ್ವದಿಕ್ಕಿನಲ್ಲಿದೆ ಆದರೆ ರುದ್ರನು ಉತ್ತರದಿಕ್ಕಿನಲ್ಲಿ ವಾಸಿಸುತ್ತಾನೆ. ಇವನು ರೌದ್ರ ಸ್ವಭಾವದವನಾದುದರಿಂದಲೇ ಇತರ ದೇವತೆಗಳೊಡನೆ ವಿಶೇಷವಾಗಿ ಸೇರುವುದಿಲ್ಲ ಮತ್ತು ದ್ವಂದ್ವದೇವತೆಯಾಗಿ, ಸೋಮನೊಡನೆ ಒಂದೇ ಒಂದು ಸಣ್ಣ ಸೂಕ್ತದಲ್ಲಿ ಹೊರತು, ಸ್ತುತಿಯೂ ಇಲ್ಲ.

ಇವುಗಳಲ್ಲದೆ, ಪುರಾಣಾದಿಗಳಲ್ಲಿ ಚಿತ್ರಿತನಾಗಿರುವ ರುದ್ರನ ಭೀಕರವಾದ ಮತ್ತು ಒಂದೊಂದುವೇಳೆ ಅಸಹ್ಯವಾದ ಗುಣಗಳು ಕೆಲವು ವಾಜನೇಯ ಸಂಹಿತೆಯಲ್ಲಿ ಉಕ್ತವಾಗಿವೆ.

ಆದರೆ ರುದ್ರನು ಪಿಶಾಚಾದಿಗಳಂತೆ ಸಂಪೂರ್ಣವಾಗಿ ಅನಿಷ್ಟಕಾರಕನಲ್ಲ. ಇತರ ದೇವತೆಗಳಿಂದ ಆಗಬಹುದಾದ ತೊಂದರೆಯನ್ನು ಪರಿಹರಿಸಬೇಕೆಂದು ಪ್ರಾರ್ಥಿತನಾಗಿದಾನೆ (೧-೧೧೪-೪ ; ೨-೩೩-೭). ಅಪಾಯದಿಂದ ರಕ್ಷಿಸುವುದಲ್ಲದೆ (೫-೫೧-೧೩), ವರಪ್ರದಾನ ಮಾಡುತ್ತಾನೆ. (೧-೧೧೪-೧ ಮತ್ತು ೨ ; ೨-೩೩-೬) ಮತ್ತು ಮನುಷ್ಯ ಮತ್ತು ಪ್ರಾಣಿಗಳಿಗೆ ಕ್ಷೇಮವನುಂಟುಮಾಡುತ್ತಾನೆ (೧-೪೩-೬). ರೋಗಗಳನ್ನು ಗುಣಪಡಿಸುವ ಶಕ್ತಿಯು ಇವನಿಗುಂಟೆಂದು ಪದೇ ಪದೇ ಉಕ್ತವಾಗಿದೆ. ಔಷಧಗಳನ್ನು ಅನುಗ್ರಹಿಸುತ್ತಾನೆ (೨-೩೩-೧೨) ; ಎಲ್ಲಾ ಔಷಧಿಗಳೂ ಇವನಿಗಧೀನವಾಗಿವೆ (೫-೪೨-೧೧) ; ಮತ್ತು ಸಹಸ್ರಾರು ಔಷಧಿಗಳವೆ (೭-೪೬-೩). ಅವನ ಕೈಯ್ಯಲ್ಲಿ ಉತ್ತಮವಾದ ಔಷಧಗಳವೆ (೧-೧೧೪-೫) ; ಅವನ ಹಸ್ತವೇ ಗುಣಪಡಿಸುವ ಶಕ್ತಿಯುಳ್ಳದ್ದು (೨-೩೩-೭). ತನ್ನ ಚಿಕಿತ್ಸೆಯಿಂದ ವೀರರನ್ನು ಬೆಳಸುತ್ತಾನೆ ; ಏಕೆಂದರೆ ಅವನು ವೈದ್ಯರಲ್ಲೆಲ್ಲಾ ಉತ್ತಮ ವೈದ್ಯನು (೨-೩೩-೪) ಮತ್ತು ಅವನು ಮದ್ದಿನ ಸಹಾಯದಿಂದ ಆರಾಧಕನು ನೂರು ವರ್ಷ ಜೀವಿಸಲು ಆಶಿಸುತ್ತಾನೆ (೨-೩೩-೨). ಪೂಜೆ ಮಾಡುವವರ ಸಂತಾನಕ್ಕೆ ಶುಭಪ್ರದನಾಗು (೭-೪೬-೨), ಮತ್ತು ಗ್ರಾಮದಲ್ಲಿರುವವರೆಲ್ಲರೂ ರೋಗರುಜಿನಗಳಲ್ಲದೆ, ತಿಂದುಂಡುಕೊಂಡಿರುವಂತೆ, ಪಶುಪ್ರಾಣಿಗಳಿಗೂ, ಮನುಷ್ಯರಿಗೂ ಅನುಕೂಲನಾಗಿರು (೧-೧೧೪-೧) ಎಂದು ಪ್ರಾರ್ಥನೆ. ಈ ಸಂದರ್ಭದಲ್ಲಿ ಅವನಿಗೆ ಜಲಾಶ ಮತ್ತು ಜಲಾಶಭೇಷಜ ಎಂಬ ಎರಡು ವಿಶೇಷಣಗಳವೆ (೧-೪೩-೪ ; ಅ. ವೇ. ೨.೨೭-೬). ಇಲ್ಲಿ ಔಷಧಿಗಳೆಂದರೆ ವೃಷ್ಟಿಜಲವಿರಬೇಕು (೫-೫೩-೧೪ ನ್ನು ಹೋಲಿಸಿ (೧೦-೫೯-೯). ರುದ್ರನ ವಿದ್ಯುತ್ತೂ ಮತ್ತು ಅವನ ಚಿಕಿತ್ಸಾಶಕ್ತಿಗಳು ಒಟ್ಟಾಗಿ ಹೇಳಲ್ಪಟ್ಟವೆ. (೭-೪೬-೩). ವೈದ್ಯ ರುದ್ರನು ಇತರ ರುದ್ರರೊಡನೆ ಪ್ರಸನ್ನನಾಗಬೇಕೆಂದು ಪ್ರಾರ್ಥಿತನಾಗಿದಾನೆ (೭-೩೫-೬) ರುದ್ರನ ಜೊತೆಯಲ್ಲಿ ಮರುತರಿಗೂ ಚಿಕಿತ್ಸಾ ಶಕ್ತಿಗಳು ಉಕ್ತವಾಗಿವೆ. (೨-೩೩-೧೩). ರುದ್ರನ ಈ ಶಕ್ತಿಯು ಇತರ ವೇದಗಳಲ್ಲಿಯೂ ಉಕ್ತವಾಗಿವೆ (ವಾ. ಸಂ. ೩-೫೯ ; ೧೬-೫-೪೯ ; ಅ. ವೇ. ೨-೨೭-೬); ಆದರೆ ಅವನ ವಿನಾಶಕಾರಕ ಶಕ್ತಿಯನ್ನು

ಹೇಳಿರುವಷ್ಟು ಸಲ ಈ ಶಕ್ತಿಯು ಹೇಳಲ್ಪಟ್ಟಿಲ್ಲ. ರೋಗ ಪರಿಹಾರ ಅಥವಾ ನಿವಾರಣೆಗೋಸ್ಕರ ಅವನನ್ನು ದ್ವೇಶಿಸಿ ಯಾಗಗಳು ವಿಹಿತವಾಗಿವೆ (ಆ. ಗೃ. ೪-೮-೪೦ ; ಕೌ. ಸೂ. ೫೧-೭ ; ಇತ್ಯಾದಿ).

ರುದ್ರನು ಪ್ರಕೃತಿಯ ಯಾವ ಅಂಶವನ್ನು ಪ್ರತಿಬಿಂಬಿಸುತ್ತಾನೆ ಎಂಬುದು ನಿರ್ಧರವಾಗಿಲ್ಲ. ಅವನೂ ಒಬ್ಬ ಚಂಡಮಾರುತದ ದೇವತೆ. ಆದರೆ, ಇಂದ್ರನಂತೆ ಇವನ ರೋಷವು ಹಿಂಸಾಕಾರಕರ ಮಾತ್ರ, ಮೇಲಲ್ಲ ; ಎಲ್ಲರಿಗೂ ಇವನಿಂದ ತೊಂದರೆಯುಂಟು. ಆದುದರಿಂದ ಇವನು ಚಂಡಮಾರುತದ ಒಂದು ಭಾಗ. ಹಾನಿಕರವೂ ಆದ ಸಿಡಿಲು ಎನ್ನಬಹುದು. ಈ ಅಭಿಪ್ರಾಯವನ್ನೊಪ್ಪಿದರೆ, ಬಾಣಗಳು ಮಾರಕವಾದುವು. ಚಂಡ ಮಾರುತ ದೇವತೆಗಳಿಗೆ ಜನಕ ಅಥವಾ ಅವರ ಮುಖಂಡ, ಮುಂತಾದ ಅಭಿಪ್ರಾಯಗಳು ಸಾರ್ಥಕವಾಗುತ್ತವೆ. ಇವನಿಂದ ಆಗುವ ಉಪಕಾರ ಚಿಕಿತ್ಸೆ ಮೊದಲಾದುವು ಬಿರುಗಾಳಿಯಿಂದಾಗುವ ಮಳೆಯ ಸತ್ಪರಿಣಾಮಗಳು ಎನ್ನಬಹುದು. ಇವನ ಕೋಪತಾಪಗಳ ದುಷ್ಪರಿಣಾಮ ಪರಿಹಾರವಾಗಲೆಂದೇ ಇವನಿಗೆ ಕೊಟ್ಟಿರುವ 'ಶಿವ' ಎಂಬ ಸೌಮ್ಯ ನಾಮಧೇಯವು ಇವನಿಗೆ ರೂಢಿಯಾಗಿ ಬಂದಿದೆ. ಇವನಿಗೂ ಅಗ್ನಿಗೂ ಇರುವ ನಿಕಟಬಾಂಧವ್ಯವೂ ಇದರಿಂದ ಅರ್ಥವಾಗುತ್ತದೆ.

ಮರುದ್ದೇವತೆಗಳು

ಬಹು ಮುಖ್ಯರಾದ ದೇವತೆಗಳು. ೩೩ ಸೂಕ್ತಗಳು ಪೂರ್ತಿಯಾಗಿ, ೭ ಇಂದ್ರನೊಡನೆ, ಮತ್ತು ಒಂದೊಂದು ಅಗ್ನಿ ಮತ್ತು ಪೂಷಣರೊಡನೆ, ಹೀಗೆ ಒಟ್ಟು ೪೨ ಸೂಕ್ತಗಳು ಇವರನ್ನು ಸ್ತುತಿಸುತ್ತವೆ. ಇವರು ಒಟ್ಟಾಗಿ ಒಂದು ಗಣ ಅಥವಾ ಶರ್ಧರು (೧-೩೭-೧ ; ಇತ್ಯಾದಿ) ಮತ್ತು ಬಹುವಚನದಲ್ಲಿಯೇ ಪ್ರಯೋಗ. ಅವರು ಸಂಖ್ಯೆಯಲ್ಲಿ ಅರವತ್ತರ ಮೂವತ್ತರಷ್ಟು (೪-೪೫-೪) ಅಥವಾ ಏಳರ ಮೂರರಷ್ಟು (೧-೧೩೩-೬ ; ಅ. ವೇ. ೧೩-೧-೧೩). ಅವರು ಜನನ ಹೊಂದಿದರೆಂಬುದು ಅನೇಕ ಸಾರಿ ಹೇಳಿದೆ (೫-೫೭-೫ ; ಇತ್ಯಾದಿ). ಅವರು ರುದ್ರನ ಪುತ್ರರು ; ಅವರಿಗೆ ರುದ್ರರೆಂದೇ ಹೆಸರು. (೧-೫೯-೪ ಮತ್ತು ೭ ಇತ್ಯಾದಿ); ಕೆಲವು ವೇಳೆ ರುದ್ರಿಯರೆಂದೂ (೧-೩೪-೭ ; ೨-೩೪-೧೦ ; ಇತ್ಯಾದಿ) ಹೆಸರು ; ಪೃಶ್ನಿಯ ಮಕ್ಕಳು (೨-೩೪-೨ ; ೫-೫೨-೧೬ ; ೫-೬೦-೫; ೬-೬೬-೩); ಪೃಶ್ನಿಮಾತರಃ (ಪೃಶ್ನಿಯು ತಾಯಿಯನಾಗಿ ಉಳ್ಳವರು) ಎಂದು ಅನೇಕ ಸಲ ಕರೆದಿದೆ (೧-೨೩-೧೦ ; ಇತ್ಯಾದಿ ; ಅ. ವೇ. ೫-೨೧-೧೧). ಪೃಶ್ನಿ ಎಂಬ ಗೋವು (೫-೫೨-೧೬), ಅಥವಾ ಸಾಧಾರಣವಾಗಿ ಗೋವು (೪-೪೩-೧), ಅವರ ಜನನಿ ; ಅವರನ್ನು ಗೋಮಾತರಃ ಎಂತಲೂ ಕರೆದಿದೆ (೧-೪೫-೩ ; ೪-೨೦-೪ ನ್ನು ಹೋಲಿಸಿ), ಈ ಗೋವು ಪ್ರಾಯಶಃ ಚಂಡಮಾರುತದ ನಾನಾ ವರ್ಣರಂಜಿತವಾದ ಮೇಘವಿರಬಹುದು. ದೊಡ್ಡದಾದ ಕೆಚ್ಚಲುಳ್ಳ ಗೋವುಗಳು ಉರಿಯುತ್ತಾ ಬರುತ್ತವೆ. (೨-೩೪-೫) ಎಂಬಲ್ಲಿ ಅವು ಬಿರುಗಾಳಿಯ ಕಾಲದಲ್ಲಿರುವ, ಮಿಂಚು, ಸಿಡಿಲುಗಳಿಂದ ಯುಕ್ತವಾದ ಮೋಡವಲ್ಲದೆ ಬೇರೆಯಿರಲಾರದು ಪೃಶ್ನಿಯಿಂದ ಜನಿಸಿದಾಗ, ಮರುತ್ತುಗಳನ್ನು ಅಗ್ನಿಗೆ ಹೋಲಿಸಿದೆ (೬-೬೬-೧೦ರಿಂದ೩). ಸಿಡಿಲಿನ ನಗುವಿನಿಂದ, ಮರುತ್ತುಗಳು ಜನಿಸಿದರು. (೧-೨೩-೧೨ ; ೧-೩೮-೪ ನ್ನು ಹೋಲಿಸಿ). ಅಗ್ನಿಯು ಅವರಿಗೆ ರೂಪವನ್ನು ಕೊಟ್ಟನು ಅಥವಾ ಅವರನ್ನು ಪಡೆದನು. (೬-೩-೪ ; ೧-೭೧-೪). ವಾಯುವು ಅವರನ್ನು ಅಂತರಿಕ್ಷದ ಯೋನಿಯಲ್ಲಿ ಇಟ್ಟನು (೧-೧೩೪-೪) ಮತ್ತು ಅವರು ಆಕಾಶದ ಮಕ್ಕಳು (೧೧-೭೭-೨) ; ಮತ್ತು ಆಕಾಶದ ವೀರರು (ವೀರಾಃ ೧-೬೪-೪ ; ೧-೧೨೨-೧ ; ೫-೫೪-೧೦) ಅಥವಾ ಆಕಾಶದ ಗಂಡುಗಳು (೩-೫೪-೧೩ ; ೫-೫೯-೬). ಒಂದು ಕಡೆ, ಅವರಿಗೆ ಸಮುದ್ರವು ತಾಯಿ (ಸಮುದ್ರಮಾತರಃ) ಎಂದು ಹೇಳಿದೆ (೧೦-೭೮-೬). ಬೇರೆ ಕೆಲವು ಸ್ಥಳಗಳಲ್ಲಿ, ಆತ್ಮಯೋನಿಗಳು (ತಮ್ಮಿಂದ ತಾವೇ ಜನಿಸಿದರು) (೧-೧೭೪-೨ ; ೫-೪೭-೨) ಎಂದಿದೆ.

ಅವರು ಭ್ರಾತೃಗಳು; ಆದರೆ ಜ್ಯೇಷ್ಠ ಅಥವಾ ಕನಿಷ್ಠನೆಂಬ ವ್ಯತ್ಯಾಸವಿಲ್ಲ (೫-೫೯-೬ ; ೫-೬೦-೫), ಏಕೆಂದರೆ ಅವರೆಲ್ಲರೂ ಸಮಾನವಯಸ್ಕರು (೧-೧೬೫-೧). ಅವರೆಲ್ಲಾ ಒಟ್ಟಿಗೆ ಬೆಳೆದವರು (೫-೫೬-೫ ೭-೫೮-೧) ಮತ್ತು ಏಕ ಮನಸ್ಕರು (೮-೨೦-೧ ಮತ್ತು ೨೧). ಅವರಿಗೆಲ್ಲಾ ಒಂದೇ ಜನ್ಮಸ್ಥಾನ (೫-೫೩-೩) ಮತ್ತು ಒಂದೇ ವಾಸಸ್ಥಳ (೧-೧೬೫-೧ ; ೭-೫೬-೧). ಅವರು ಆಕಾಶದಲ್ಲಿ, ಭೂಮಿಯಲ್ಲಿ, ಸ್ವರ್ಗದಲ್ಲಿ ಬೆಳೆದರು (೫-೫೫-೭) ಅಥವಾ ಮೂರು ಸ್ವರ್ಗಗಳಲ್ಲಿ ಬೆಳೆದರು (೫-೬೦-೬). ಪರ್ವತವಾಸಿಗಳೆಂದೂ ಒಂದು ಕಡೆ (೮-೮೩-೧ ಮತ್ತು ೨) ಇದೆ.

ಇಂದ್ರಾಣಿಯು ಅವರಿಗೆ ಮಿತ್ರಳು. ಇಂದ್ರಾಣಿ (೧೦-೮೬-೯) ಮತ್ತು ಸರಸ್ವತಿಯರೊಡನೆ (೭-೯೬-೨) ಕಲೆಯುತ್ತಾರೆ. ಅವರು ಈ ರೀತಿ ಬಾಂಧವ್ಯವಿಟ್ಟುಕೊಂಡಿರುವುದು ರೋದಸಿ ಎಂಬ ದೇವತೆಯೊಡನೆಯೇ ಹೆಚ್ಚು; ಅವಳು ಅವರಿಗೆ ಸುಖಸಾಧನಗಳನ್ನು ಒದಗಿಸುವವಳಾಗಿ, ಅವರೊಡನೆ ಅವರ ರಥದಲ್ಲಿ ನಿಂತಿರುತ್ತಾಳೆ (೫-೫೬-೮) ಅಥವಾ ಅವರ ಪಾರ್ಶ್ವದಲ್ಲಿ ನಿಂತಿರುತ್ತಾಳೆ (೬-೬೬-೬). ಅವಳ ಹೆಸರು ಬರುವ ಐದು ಸ್ಥಳಗಳಲ್ಲಿಯೂ ಮರುತರ ಜೊತೆಯಲ್ಲಿಯೇ ಅವಳು ಇರುವುದು (೧-೧೬೭-೪ ಮತ್ತು ೫ ಗಳನ್ನು ಹೋಲಿಸು). ಆದುದರಿಂದ ಅಶ್ವಿನಿಗಳಿಗೆ ಸೂರ್ಯೆಯಂತೆ ಅವಳು ಅವರ ವಧುವೆಂದು ಪರಿಗಣಿತಳಾಗಿದಾಳೆ. ಇದರಿಂದಲೇ ಅವರಿಗೆ "ಭದ್ರಜಾನಯಃ" (ಸುಂದರಳಾದ ಭಾರ್ಯೆಯುಳ್ಳವರು) (೫-೬೧-೪) ಎಂಬ ವಿಶೇಷಣವು; ಮತ್ತು ಅವರನ್ನು ವರರಿಗೆ (೫-೬೦-೪) ಅಥವಾ ಯುವಕರಾದ ಪ್ರಣಯಿಗಳಿಗೆ ಹೋಲಿಸಿರುವುದು (೧೦-೭೮-೬).

ಮರುದ್ದೇವತೆಗಳ ತೇಜಸ್ಸು ಆಗಾಗ್ಗೆ ಪ್ರಸಕ್ತವಾಗುತ್ತದೆ. ಅವರು ಸುವರ್ಣವರ್ಣದವರು, ಸೂರ್ಯನಂತೆ ಉಜ್ಜ್ವಲವಾದ ಕಾಂತಿಯುಳ್ಳವರು, ಜ್ವಲಿಸುವ ಅಗ್ನಿಯಂತೆ ಈಷದ್ರಕ್ತವರ್ಣದವರು (೬-೬೬-೨ ; ೭-೫೯-೧೧ ; ೮-೭-೭). ಬೆಂಕಿಯ ಜ್ವಾಲೆಗಳಂತೆ ಪ್ರಕಾಶಿಸುತ್ತಾರೆ (೧೦-೭೮-೩). ಅಗ್ನಿಯ ರೂಪವುಳ್ಳವರು ಅಥವಾ ಅಗ್ನಿಯ ತೇಜಸ್ಸುಳ್ಳವರು (೧೦-೮೪-೧ ; ೩-೨೬-೫); ತೇಜಸ್ಸಿನಲ್ಲಿ ಅಗ್ನಿಗೆ ಅವರನ್ನು ಹೋಲಿಸಿದೆ (೧೧-೭೮-೨). ಅವರು ಅಗ್ನಿಯಂತೆ (೨-೩೪-೧) ಅಥವಾ ಉದ್ದೀಪ್ತನಾದ ಅಗ್ನಿಯಂತೆ (೬-೬೬-೨) ಇದಾರೆ; ಅವರಿಗೆ ಅಗ್ನಿಯೆಂದೇ ಹೆಸರು (೩-೨೬-೪). ಸರ್ಪಗಳ ಕಾಂತಿಯುಳ್ಳವರು (ಅಹಿಭಾನವಃ ೧-೧೭೨-೧). ಪರ್ವತಗಳಲ್ಲಿ ಪ್ರಕಾಶಿಸುತ್ತಾರೆ (೮-೭-೧). ಅವರು 'ಸ್ವಭಾನು' ಗಳು (ಸ್ವತಃ ಪ್ರಕಾಶರು ೧-೩೭-೨ ; ಇತ್ಯಾದಿ). ಈ ವಿಶೇಷಣವು ಬೇರೆಯಾವ ದೇವತೆಗಳಿಗೂ ಹೇಳಿಲ್ಲ. ತೇಜಸ್ವಿಗಳು, ಜಾಜ್ವಲ್ಯಮಾನರು ಎನ್ನುವುದು ಪದೇ ಪದೇ ಬರುತ್ತದೆ (೧-೧೬೫-೧೨ ; ಇತ್ಯಾದಿ).

ವಿಶೇಷವಾಗಿ ವಿದ್ಯುತ್ತಿನೊಡನೆ ಅವರಿಗೆ ಸಂಬಂಧವಿದೆ (೫-೫೪-೨, ೩ ಮತ್ತು ೧೧ ; ೧-೬೪-೫). ಮರುತರು ಘೃತವನ್ನು ಸುರಿಯುವಾಗ, ವಿದ್ಯುತ್ತುಗಳು ಭೂಮಿಯನ್ನು ನೋಡಿ, ಹಸನ್ಮುಖರಾಗುತ್ತಾರೆ (೧-೧೬೮-೪ ; ೫-೫೨-೬ ನ್ನು ಹೋಲಿಸು). ಮರುತರು ಮಳೆಯನ್ನು ಕರೆದಾಗ, ಕರುವನ್ನು ಹಿಂಬಾಲಿಸುತ್ತಾ ಹಸುವು ಅರಚುವಂತೆ, ಸಿಡಿಲು ಧ್ವನಿಮಾಡುತ್ತದೆ (೭-೫೬-೧೩). ವಿದ್ಯುತ್ತು ಅವರಿಗೆ ಎಷ್ಟರಮಟ್ಟಿಗೆ ಸಂಬಂಧಿಸಿದೆ ಎಂದರೆ ವಿದ್ಯುತ್ತು ಸಮಸ್ತಪದವಾಗಿ ಪ್ರಯುಕ್ತವಾಗಿರುವ ಐದು ಸ್ಥಳಗಳಲ್ಲಿ, ಒಂದು ಹೊರತಾಗಿ, ಉಳಿದುದೆಲ್ಲವೂ ಮರುತ್ ಎಂಬುದರೊಡನೆಯೇ. ಸಿಡಿಲನ್ನು ಕೈಯಲ್ಲಿಯೇ ಹಿಡಿದುಕೊಂಡಿದಾರೆ (೮-೭-೨೫ ; ೫-೫೪-೧೧); ಸಿಡಿಲೆಂದರೆ ಅವರಿಗೆ ಒಹಳ ಆನಂದ (೫-೫೪-೩). ಅವರ ಕೈಯಲ್ಲಿ ಭರ್ಜಿಗಳಿವೆ. ಇಲ್ಲಿ ಭರ್ಜಿ (ಋಷ್ಟಿ) ಎಂಬುದೂ ಸಿಡಿಲೇ ಇರಬೇಕು. ಏಕೆಂದರೆ ಅವರಿಗೆ ಋಷ್ಟಿವಿದ್ಯುತ್ (ಸಿಡಿಲನ್ನೇ ಭರ್ಜಿಯನ್ನಾಗಿ ಉಪಯೋಗಿಸುವವರು ಎಂದು ವಿಶೇಷಣವಿದೆ (೧-೧೬೪-೫ ; ೫-೫೨-೧೩). ಇನ್ನು ಸ್ವಲ್ಪ ಕಡಿಮೆ ಸ್ಥಳಗಳಲ್ಲಿ ಅವರಿಗೆ ಬಂಗಾರದಿಂದ (೮-೭-೩೨)

ಮಾಡಿದ ಕೊಡಲಿಯೂ ಆಯುಧ (೧-೩೭-೨, ೧-೪೪-೩ ; ೫-೩೩ ೪ ; ೫-೫೭-೨ ; ೮-೨೦-೪). ಒಂದೇ ಒಂದು ಸಲ ಅವರು ವಜ್ರಾಯುಧವನ್ನು ಧರಿಸಿದ್ದಾರೆಂದು ಇದೆ. ಕೆಲವು ಸ್ಥಳಗಳಲ್ಲಿ ಧನುರ್ಬಾಣಧಾರಿಗಳೆಂದೂ (೫-೫೩-೪, ೫-೫೭-೨ ; ೮-೨೦-೪ ಮತ್ತು ೧೨), ಒಂದು ಸಲ ಬಾಣವನ್ನು ಬಿಡುತ್ತಿರುವ ಬಿಲ್ಲುಗಾರರೆಂದೂ ಹೇಳಿದೆ. ಆದರೆ ಈ ಲಕ್ಷಣವು ಅವರಿಗೆ ಅಪರೂಪ. ಅವರು ಪುಷ್ಪಹಾರ ಮೊದಲಾದ ಅಲಂಕಾರಗಳಿಂದ ಅಲಂಕೃತರಾಗಿದಾರೆ (೫-೫೩-೪) ಬಂಗಾರದ ನಡುಪಟ್ಟಿಗಳನ್ನು ಹಾಕಿಕೊಂಡಿದಾರೆ (೫-೫೫-೬) ವಿವಾಹಾರ್ಥಿಯಾದ ಶ್ರೀಮಂತನಂತೆ, ತಮ್ಮ ದೇಹವನ್ನು ಸುವರ್ಣಾಭರಣಗಳಿಂದ ಅಲಂಕರಿಸಿಕೊಳ್ಳುತ್ತಾರೆ (೫-೬೦-೪). ಬಾಹುಪುರಿ ಅಥವಾ ಕಾಲಂದಿಗೆ ಅವರ ವೈಯಕ್ತಿಕ ಆಭರಣ. ಈ ಆಭರಣಗಳಿಂದ ಅಲಂಕೃತರಾದ ಅವರು ನಕ್ಷತ್ರರಂಜಿತವಾದ ಆಕಾಶದಂತೆ ಅಥವಾ ಮೋಡದಿಂದ ಬೀಳುತ್ತಿರುವ ಮಳೆಯ ಹನಿಗಳಂತೆ ಥಳಥಳಿಸುತ್ತಾರೆ. ಅವರ ಭುಜದ ಮೇಲೆ ಭಲ್ಲೆಗಳೂ, ಕಾಲಿನಲ್ಲಿ ಕಾಲಂದಿಗೆಗಳೂ, ಎದೆಯ ಮೇಲೆ ಚಿನ್ನದ ಆಭರಣಗಳೂ, ಕೈಗಳಲ್ಲಿ ಕೆಂಡ ಕಾರುತ್ತಿರುವ ಸಿಡಿಲುಗಳೂ, ತಲೆಯ ಮೇಲೆ ಸುವರ್ಣಮಯವಾದ ಶಿರಸ್ತ್ರಾಣಗಳೂ ಇವೆ (೫-೫೪-೧೧).

ಮರುದ್ದೇವತೆಗಳು ಉಪಯೋಗಿಸುವ ರಥಗಳು ಮಿಂಚಿನಿಂದ ಹೊಳೆಯುತ್ತವೆ (೧-೪೪-೧; ೩-೫೪ ೧೩); ಸುವರ್ಣಮಯವಾದುವು (೫-೫೭-೧); ಚಿನ್ನದ ಚಕ್ರಗಳು ಅಥವಾ ನೇಮಿಗಳು (೧-೬೪-೧೧ ; ೧-೪೪-೫). ಅವುಗಳಲ್ಲಿ ಆಯುಧಗಳಿವೆ. (೫-೫೭-೬); ನೀರಿನ ಬಾನೆಗಳಿವೆ (೧-೪೭-೨). ರಥವನ್ನು ಎಳೆಯುವ ಕುದುರೆಗಳು ಕಂದುಬಣ್ಣ (೧-೪೪-೨ ; ೫-೫೭-೪) ; ಬಂಗಾರದ ಗೊರಸುಗಳು (೮-೭-೨೭) ಮತ್ತು ಮನೋವೇಗವುಳ್ಳವು (೧-೪೫-೪). ಈ ಅಶ್ವಗಳು ಚುಕ್ಕೆಗಳುಳ್ಳವು ; ಪೃಷದಶ್ವರೆಂದು (ಚುಕ್ಕೆ ಚುಕ್ಕೆಯಾಗಿರುವ ಅಶ್ವಗಳುಳ್ಳವರು) ಇವರಿಗೆ ವೈಯಕ್ತಿಕವಾದ ಹೆಸರು. ಇವರ ರಥಕ್ಕೆ ಹೆಣ್ಣು ಕುದುರೆಗಳನ್ನು ಕಟ್ಟಿದ್ದಾರೆ ಎಂದೂ (೧-೫೯-೬) ಇದೆ. ಇವರು ಗಾಳಿಯನ್ನು ತಮ್ಮ ರಥಕ್ಕೆ ಅಶ್ವವಾಗಿ ಕಟ್ಟಿದರೆಂದು (೫-೫೮-೭) ಹೇಳಿದೆ.

ಮರುತರು ಆಕಾಶದಂತೆ ಬೃಹದಾಕಾರರು (೫-೫೭-೪); ಭೂಮ್ಯಾಕಾಶಗಳನ್ನು ಮೀರಿದ್ದಾರೆ (೧೦-೭೭-೩) ಅವರ ಮಹತ್ವವು ಅಮಿತವಾದುದು (೫-೫೮-೨); ಅವರ ಸಾಮರ್ಥ್ಯದ ಮಿತಿಯನ್ನು ಯಾರೂ ತಿಳಿಯಲಾರರು (೧-೧೬೭-೯). ಅವರು ಯುವಕರು (೧-೬೪-೨ ; ೧-೧೬೫-೨ ; ೫-೪೨-೧೫) ಮತ್ತು ಅವರಿಗೆ ವಾರ್ಧಕ್ಯವೇ ಇಲ್ಲ (೧-೬೪-೩). ಅವರು ಅಸುರರು, ಉತ್ಸಾಹಶಾಲಿಗಳು, ಓಜಸ್ವಿಗಳು, ಕೊಳೆಯಿಲ್ಲದವರು (೧-೬೪-೨ ಮತ್ತು ೧೨) ಮತ್ತು ಧೂಳು ಇಲ್ಲದವರು (೬-೬೬-೨)- ಭಯಂಕರರೂಪರು (೧-೧೯-೪) ; ಸಿಡುಕು ಸ್ವಭಾವದವರು (೭-೫೬-೪) ; ಭಯಂಕರರು (೫-೫೬-೨ ಮತ್ತು೩, ೭-೫೮-೨) ದುಷ್ಟ ಮೃಗಗಳಂತೆ ಭೀಕರರು (೨-೩೪-೧); ಇತ್ಯಾದಿ. ಮುಕ್ಕಳಂತೆ ಅಥವಾ ಕರುಗಳಂತೆ ಕ್ರೀಡಾಸಕ್ತರು (೧-೧೬೬-೨ ; ೭-೫೬-೧೬ ; ೨೦-೭೮-೬). ಕಪ್ಪಾದ ಬೆನ್ನುಭಾಗವುಳ್ಳ ಹಂಸಗಳಂತಿದಾರೆ (೭-೫೯-೭). ಅಯೋಮಯವಾದ ಕೋರೆದಾಡೆಗಳುಳ್ಳ ಕಾಡು ಹಂದಿಗಳು (೧-೪೪-೫) ; ಸಿಂಹಗಳಂತಿದಾರೆ (೧-೬೪-೪).

ಅವರು ಗಟ್ಟಿಯಾಗಿ ಧ್ವನಿ ಮಾಡುತ್ತಾರೆ (೧-೧೬೯-೭ ; ಇತ್ಯಾದಿ). ಆ ಧ್ವನಿಯೇ ಗುಡುಗು (೧-೨೩-೧೧); ಅದು ಗಾಳಿಯು ಬೀಸುವ ಶಬ್ದವೂ ಹೌದು (೭-೫೬-೩). ಅವರು ಬಂದರೆ ಆಕಾಶವು ಭಯದಿಂದ ಅರಚುತ್ತದೆಯೋ ಎನ್ನುವಂತಿದೆ (೮-೭-೨೬). ಪರ್ವತಗಳನ್ನು ಕಂಪಿಸುವಂತೆಯೂ, ಭೂಮಿ ಅಥವಾ ಎರಡು ಲೋಕಗಳನ್ನು ನಡುಗುವಂತೆಯೂ ಮಾಡುತ್ತಾರೆ. ರಥನೇಮಿಗಳಾದ ಪರ್ವತಗಳನ್ನು ಅಥವಾ ಬಂಡೆಗಳನ್ನು ಚೂರು ಚೂರು ಮಾಡುತ್ತಾರೆ (೧-೬೪-೧೧ ; ೫-೫೨-೯). ಗಾಳಿಯಿಂದ ಸಹಿತರಾಗಿ ಬಂದಾಗಲೇ, ಅವರು ಪರ್ವತಗಳನ್ನು ಕಂಪಿಸುವಂತೆ ಮಾಡುವುದು (೮-೭-೪). ವೃಕ್ಷಗಳನ್ನು ಉರುಳಿಸಿ, ಕಾಡಾನೆಗಳಂತೆ,

ಕಾಡುಗಳನ್ನು ಭಕ್ಷಿಸುತ್ತಾರೆ (೧-೩೯-೫, ೧-೬೪-೭). ಕಾಡುಗಳು ಅವರಿಗೆ ಹೆದರಿ ನೆಲಕ್ಕೆ ಬಗ್ಗುತ್ತವೆ (೫-೬೦-೨). ಪರ್ವತಗಳಂತೆ ಅಪ್ರತಿಹತರಾಗಿ ಸ್ವರ್ಗ ಮತ್ತು ಭೂಮಿಗಳ ಪ್ರಾಣಿಗಳನ್ನು ಕೆಳಕ್ಕೆ ಎಸೆಯುತ್ತಾರೆ (೧-೬೪-೩). ಸರ್ವ ಪ್ರಾಣಿಗಳೂ ಅವರಿಗೆ ಹೆದರುತ್ತವೆ (೧-೮೫-೮). ಬಿರುಗಾಳಿಯಂತೆ ವೇಗವಾಗಿ ಚಲಿಸುತ್ತಾರೆ (೧೦-೭೮-೩); ಧೂಳನ್ನು ಸುಳಿಯ ರೂಪದಲ್ಲಿ ಮೇಲಕ್ಕೆ ಎಬ್ಬಿಸುತ್ತಾರೆ (೧-೬೪-೧೨). ಗಾಳಿಯನ್ನು ಅಥವಾ ಗಾಳಿಯ ಶಬ್ದವನ್ನು ಉಂಟುಮಾಡುತ್ತಾರೆ (೭-೫೬-೩). ಗಾಳಿಯ ಜೊತೆಯಲ್ಲಿ ಬರುತ್ತಾರೆ (೮-೭-೩ , ೪ ಮತ್ತು ೧೭); ಅದನ್ನು ತಮ್ಮ ಅಶ್ವವನ್ನಾಗಿ ಮಾಡಿಕೊಳ್ಳುತ್ತಾರೆ (೫-೫೮-೭).

ಮಳೆಗರೆಯುವುದೇ ಅವರ ಕಾರ್ಯಗಳಲ್ಲಿ ಮುಖ್ಯವಾದುದು. ಮಳೆಯು ಅವರ ಉಡುಪು (೫-೫೭-೪). ಅವರು ಸಮುದ್ರದಿಂದ ಮೇಲಕ್ಕೆ ಎದ್ದು, ಮಳೆಯನ್ನು ಸುರಿಸುತ್ತಾರೆ (೧-೩೮-೯). ಎರಡು ಪ್ರಪಂಚಗಳಲ್ಲಿಯೂ ಮಳೆ ಸುರಿಸುತ್ತಾ, ಬೀಸುತ್ತಾರೆ (೧-೬೪-೬ ; ೮.೭–೧೬). ಮಳೆಯು ಅವರನ್ನು ಅನುಸರಿಸುತ್ತದೆ (೫-೫೩-೧೦). ನೀರನ್ನು ತರುತ್ತಾರೆ ಮತ್ತು ಮಳೆಯನ್ನು ಉಂಟುಮಾಡುತ್ತಾರೆ (೫-೫೮-೩). ಮಳೆಯಿಂದ ತಮ್ಮ ಪ್ರಕಾಶವನ್ನು ಮರೆಮಾಡಿಕೊಳ್ಳುತಾರೆ (೫-೫೯-೧). ಸೂರ್ಯನ ಕಣ್ಣನ್ನು ಮಳೆಯಿಂದ ಮುಚ್ಚುತ್ತಾರೆ (೫-೫೯-೫). ಮಳೆಗರೆದಾಗ, ಮೋಡಗಳಿಂದ ಕತ್ತಲನ್ನುಂಟುಮಾಡುತ್ತಾರೆ (೧-೩೮-೯). ಗಾಳಿಯೊಡನೆ ವೇಗವಾಗಿ ಚಲಿಸುತ್ತಾ ಹಿಮವನ್ನೆರಚುತ್ತಾರೆ (೮-೭-೪). ಅಂತರಿಕ್ಷದ ಬಾನೆ (ಮೋಡ ೫-೫೩-೬ ; ೫–೫೯-೮) ಮತ್ತು ಪರ್ವತ ಪ್ರವಾಹಗಳು ನೀರು ಸುರಿಯುವಂತೆ ಮಾಡುತ್ತಾರೆ (೫-೫೯-೭). ಅವರು ಧಾವಿಸುವಾಗ ನೀರು ಪ್ರವಹಿಸುತ್ತದೆ. (೫-೫೮-೬) ಅವರ ಈ ಕಾರ್ಯದಿಂದ, ಭೂಲೋಕದ ನದಿಯೊಂದಕ್ಕೆ 'ಮರುದ್ವೃದ್ಧಾ' (ಮರುತ್ತುಗಳಿಂದ ಅಭಿವೃದ್ಧಿಪಡಿಸಲ್ಪಟ್ಟಿದು ೧೦-೭೫-೫) ಎಂಬ ಹೆಸರು ಬಂದಿದೆ. ರುದ್ರ ಪುತ್ರರ ಬೆವರೇ ಮಳೆಯಾಯಿತು (೫-೫೮-೭). ಮರುತರಿಂದ ಸೃಷ್ಟವಾದ ವೃಷ್ಟಿಯು ಆಲಂಕಾರಿಕವಾಗಿ' ಕ್ಷೀರ (೧-೧೬೬-೩), ಘೃತ (೧-೮೫-೩ ; ೧೦-೭೮-೪), ಕ್ಷೀರ ಮತ್ತು ಘೃತ (೧-೬೪-೬), ಎನ್ನಿಸಿಕೊಂಡಿದೆ. ವಸಂತಕಾಲ (ಮಧು) ವನ್ನೆ ಸುರಿಸುತ್ತಾರೆ (೧-೮೫-೧೧) ಅಥವಾ ಭೂಮಿಯನ್ನು ಮಧುವಿನಿಂದ ತೋಯಿಸುತ್ತಾರೆ (೫-೫೪-೮). ಸಮುದ್ರದಿಂದ ನೀರನ್ನು ಆಕಾಶಕ್ಕೆ ಎತ್ತಿ, ಅಲ್ಲಿಂದ ಮಳೆ ರೂಪದಲ್ಲಿ ಭೂಮಿಯ ಮೇಲೆ ಸುರಿಸುತ್ತಾರೆ (ಅ. ವೇ. ೪-೨೭-೪). ಅವರು ಸುರಿಸುವ ಮಳೆಯ ಜೊತೆಯಲ್ಲಿ ಯಾವಾಗಲೂ ಮಿಂಚು, ಗುಡುಗುಗಳು ಇದ್ದೇ ಇರುತ್ತವೆ. ನೀರನ್ನು ಸುರಿಸುವ ಇಚ್ಛೆಯಿಂದ, ಮರುತ್ತಗಳು ಘರ್ಜಿಸುತ್ತಾ, ರಭಸದಿಂದ ನುಗ್ಗುತ್ತಾರೆ (೫-೫೪-೩). ತಮ್ಮ ಸಾಮರ್ಥ್ಯದಿಂದ, ಗಾಳಿ, ಮಿಂಚು, ಸಿಡಿಲುಗಳನ್ನು ಉಂಟುಮಾಡುತ್ತಾರೆ; ಕೆಚ್ಚಲಿನಿಂದ ಸ್ವರ್ಗೀಯ ವಸ್ತುಗಳನ್ನು ದೋಹನಮಾಡಿ, ಭೂಮಿಯನ್ನು ಹಾಲಿನಿಂದ ತುಂಬಿಸುತ್ತಾರೆ (೧-೬೪-೫) ಅವರಿಂದ ದುಗ್ಧವಾಗುವ ಚಿಲುಮೆಯು ಘರ್ಜಿಸುತ್ತದೆ. (೧-೬೪-೬). ಅವರಿಂದ ಉದಕವು ವೃಷ್ಟವಾದಾಗ, ಆಕಾಶವು, ಕೆಂಬಣ್ಣದ ವೃಷಭವು, ಗುಟುರುಹಾಕುತ್ತದೆ (೫-೫೮-೬). ಅಶ್ವವು ನೀರನ್ನು ಸೃಜಿಸುವಂತೆ ಮಾಡುತ್ತಾರೆ (೧-೬೪-೬). ಆಕಾಶದ ಮಳೆಯನ್ನು ಅನುಗ್ರಹಿಸಿ, ಅಶ್ವದಿಂದ ಉತ್ಪನ್ನವಾದ ಪ್ರವಾಹಗಳು ಚೆನ್ನಾಗಿ ಪ್ರವಹಿಸುವಂತೆ ಮಾಡುತ್ತಾರೆ (೫-೮೩-೬). ಅಶ್ವದೊಡನೆ ಸೇರಿ, ನೀರನ್ನುಂಟುಮಾಡುವಾಗ, ಮರುತ್ತಗಳು ಸ್ವರ್ಣವರ್ಣದವರಾಗುತ್ತಾರೆ (೨-೩೪-೧೩) ಮೇಘಗಳು ಧ್ವನಿಗೈಯುವಾಗ, ಪ್ರವಾಹಗಳು ಮರುತ್ತಗಳ ರಥನೇಮಿಗಳ ಧ್ವನಿಯನ್ನು ಪ್ರತಿಧ್ವನಿಸುತ್ತವೆ (೧-೧೬೮-೮). ಇಂದ್ರನು ಸುರಿಸುವ ನೀರಿಗೆ 'ಮರುತ್ಸತೀಃ' (ಮರುತರಿಂದ ಸಹಿತವಾದುವು) ಎಂದು ಹೆಸರು (೧-೮೦-೪). ವೃಷ್ಟಿಕಾರಕರೆಂಬ ಅರ್ಥದಲ್ಲಿಯೇ, ಅವಂಗೆ 'ಪೃಶ್ನಿಮಾತರಃ' (೫-೫೭-೫) ಅಥವಾ 'ದ್ರಪ್ಸಿನಃ' (೧-೬೪-೨) (ಹೆಚ್ಚಾದ ಜಲಬಿಂದುಗಳುಳ್ಳವರು) ಮತ್ತು 'ಸುದಾನವಃ' (ಚೆನ್ನಾಗಿ ನೀರಿನಲ್ಲಿ ನೆನೆದಿರುವವರು) ಎಂಬ ಹೆಸರುಗಳು.

ಅವರು ಶಾಖವನ್ನೂ ಕಡಿಮೆ ಮಾಡುತ್ತಾರೆ (೫.೫೪-೧). ಆದರೆ, ಅವರೇ ಕತ್ತಲನ್ನು ಹೋಗಲಾಡಿಸಿ (೭-೫೬-೨೮). ಬೆಳಕನ್ನುಂಟುಮಾಡಿ (೧-೮೬-೧೦) ಸೂರ್ಯನಿಗೆ ದಾರಿ ಮಾಡುತ್ತಾರೆ (೮-೭-೮). ವಾಯುವಿನ ಪರಿಮಿತಿಯನ್ನು ಗೊತ್ತುಮಾಡಿದಾರೆ (೫-೫೫-೨); ಭೂಭಾಗಗಳನ್ನು ಮತ್ತು ತೇಜೋವಿಶಿಷ್ಟವಾದ ಅಕಾಶ ಭಾಗಗಳನ್ನು ವಿಸ್ತರಿಸಿ, ಎರಡು ಲೋಕಗಳನ್ನು ಪ್ರತ್ಯೇಕಿಸಿದಾರೆ (೮-೮೩-೯ ಮತ್ತು ೧೧).

ಗಾಳಿಯಲ್ಲಿ ಕೇಳಿಸುವ ಧ್ವನಿಯಿಂದಲೇ ಇರಬಹುದು, ಅವರಿಗೆ ಗಾಯಕರು (೫-೫೨-೧ ; ೫-೬೦-೮ ; ೭-೩೫-೯) ಎಂದಿರುವುದು. ಅವರು ಸ್ವರ್ಗಲೋಕದ ಗಾಯಕರು (೫-೫೭-೫). ಒಂದು ಗಾನವನ್ನು ಗಾನ ಮಾಡುತ್ತಾರೆ (೧-೧೯-೪ ; ೧-೧೬೬-೭). ಹಾಡುತ್ತಾ, ಸೂರ್ಯನು ಪ್ರಕಾಶಿಸುವಂತೆ ಮಾಡಿದರು (೮-೨೯-೧೦) ; ಕೊಳಲು ಊದುತ್ತಾ ಪರ್ವತವನ್ನು ಸೀಳಿದರು (೧-೮೫-೧೦). ಇಂದ್ರನು ಸರ್ಪವನ್ನು ವಧಿಸಿದಾಗ, ಮರುತರು ಅವನಿಗಾಗಿ, ಗಾನಮಾಡಿ, ಸೋಮರಸವನ್ನು ಸಿದ್ಧಪಡಿಸಿದರು (೫-೨೯-೨ ; ೫-೩೦-೬). ಗಾನಮಾಡಿ, ಇಂದ್ರನಿಗೆ ಸಾಮರ್ಥ್ಯವನ್ನು ಉಂಟುಮಾಡಿದರು (೧-೮೫-೨). ಅವರ ಗಾನವೆಂದರೆ, ಮುಖ್ಯವಾಗಿ ಗಾಳಿಯಲ್ಲಿ ಕೇಳಿಬರುವಶಬ್ದ (೪-೨೨-೪ನ್ನು ಹೋಲಿಸಿ) ; ಆದರೂ, ಅದು ಸ್ತುತಿಯೆಂದು ಭಾವಿಸಲ್ಪಟ್ಟಿದೆ (೩-೧೪-೪). ಇಂದ್ರ ಸಹಿತರಾಗಿರುವಾಗ, ಅವರು ಋತ್ವಿಜರಿಂದು ಆಹೂತರಾಗುತ್ತಾರೆ (೫-೨೯-೩) ಮತ್ತು ಋತ್ವಿಜರಿಗೆ ಹೋಲಿಸಲ್ಪಟ್ಟಿದಾರೆ (೧೦-೭೪-೧). ಅವರೇ ಮೊದಲು ಯಾಗ ಮಾಡಿದವರು (೨-೩೬-೨) ; ಶಿಷ್ಟರ ಮನೆಗಳಲ್ಲಿ ಅಗ್ನಿಯನ್ನು ಶುದ್ಧಿಮಾಡಿದವರೂ ಇವರೇ ; ಅಗ್ನಿಯನ್ನು ಉದ್ದೀಪ್ತಿಗೊಳಿಸಿದವರು ಭೃಗುಗಳು (೧೦-೧೨೨-೫). ಇತರ ಅನೇಕ ದೇವತೆಗಳಂತೆ, ಇವರೂ ಸೋಮಪಾನ ಮಾಡುವರೆಂದು (೨-೩೬-೨ ; ೮-೮೩-೯ ರಿಂದ ೧೨ ; ಇತ್ಯಾದಿ) ಹೇಳಲ್ಪಟ್ಟಿದಾರೆ.

ಗುಡುಗು ಮಳೆ ಮತ್ತು ಇವರೂ ಒಂದು ಎಂಬ ಭಾವನೆಯಿರುವುದರಿಂದ, ಸ್ವಭಾವವಾಗಿ ಇವರು ಇಂದ್ರನ ಸ್ನೇಹಿತರು ; ಸಹೋದ್ಯೋಗಿಗಳಾಗಿ, ಅವನೊಡನೆ ನಿಕಟ ಬಾಂಧವ್ಯವುಳ್ಳವರಾಗಿದಾರೆ. ತಮ್ಮ ಸ್ತುತಿ, ಗಾನ ಇವುಗಳಿಂದ (೧-೧೬೫-೧೧ ಇತ್ಯಾದಿ) ಇಂದ್ರನ ಶಕ್ತಿ ಸಾಮರ್ಥ್ಯಗಳನ್ನು ಹೆಚ್ಚಿಸುತ್ತಾರೆ (೩-೩೫-೯ ; ೬-೧೭-೧೧). ವೃತ್ರನೊಡನೆ ಯುದ್ಧದಲ್ಲಿ, ಸಾಧಾರಣವಾಗಿ ಮರುತರೇ ಅವನಿಗೆ ಸಹಾಯಕರು (೮-೬೫-೨ ಮತ್ತು ೩; ೧೦-೧೧೩-೩). ತ್ರಿತ ಮತ್ತು ಇಂದ್ರರಿಗೆ, ಅವರು ವೃತ್ರವಧೆಯಲ್ಲಿ ಸಹಾಯ ಮಾಡುತ್ತಾರೆ (೮-೭-೨೪). ವೃತ್ರವಧಕಾರಿಯಾದ ಸೂಕ್ತವನ್ನು ಗಾನಮಾಡುವಂತೆ ಪ್ರಾರ್ಥಿತರಾಗಿದಾರೆ (೮-೭೮-೧ ರಿಂದ ೩). ಸರ್ಪ ಮತ್ತು ಶಂಬರರೊಡನೆ ಇಂದ್ರನು ಮಾಡಿದ ಯುದ್ಧಗಳಲ್ಲಿ, ಅವನಿಗೆ ಸಹಾಯ ಮಾಡಿದರು (೩-೪೭-೩ ಮತ್ತು ೪). ಮರುತ್ಸಹಿತನಾಗಿಯೇ, ಇಂದ್ರನು ಬೆಳಕು (೮-೬೫-೪) ಮತ್ತು ಗೋವುಗಳನ್ನು (೧-೬-೫) ಪಡೆದನು ಮತ್ತು ಆಕಾಶಕ್ಕೆ ಆಧಾರಭೂತನಾದನು (೭-೪೭-೫). ವಾಸ್ತವವಾಗಿ ನೋಡಿದರೆ, ಇವರ ಸಹಾಯದಿಂದಲೇ, ಇಂದ್ರನು ತನ್ನ ಎಲ್ಲಾ ಸಾಹಸಕಾರ್ಯಗಳನ್ನೂ ಮಾಡಿರುವುದು (೧-೧೦೦, ೧೦೧ ಮತ್ತು ೧೬೫ನೆಯ ಸೂಕ್ತಗಳು ; ೧೦-೬೫). ಕೆಲವು ಸಂದರ್ಭಗಳಲ್ಲಿ ಮರುದ್ದೇವತೆಗಳೇ ಈ ಸಾಹಸ ಕಾರ್ಯಗಳಲ್ಲಿ, ಇಂದ್ರನಿಗಿಂತ ಹೆಚ್ಚು ಸ್ವತಂತ್ರರು. ಇಂದ್ರನಿಂದ ಸಹಿತರಾಗಿ, ಮರುತರು ವೃತ್ರನನ್ನು ಹೊಡೆಯುತ್ತಾರೆ (೧-೨೩-೯). ವೃತ್ರಾಸುರನ ಕೀಲುಗಳನ್ನು ಬೇರೆ ಬೇರೆ ಮಾಡಿದರು (೮-೭-೨೩) ; ಗೋವುಗಳನ್ನು ಕಂಡುಹಿಡಿದರು (೨-೩೪-೧). ಇತರ ದೇವತೆಗಳಂತೆ, ಇವರಿಗೂ ಇಂದ್ರನೇ ನಾಯಕನು (೧-೨೩-೮ ; ಇತ್ಯಾದಿ). ಇಂದ್ರನಿಂದ ಯುಕ್ತರು (೧೦-೧೨೪-೨). ಅವರು ಇಂದ್ರನಿಗೆ ಪುತ್ರಸದೃಶರು (೧-೧೦೦-೫) ; ಅವನ ಭಾತೃಗಳೆನ್ನಿಸಿಕೊಂಡಿದಾರೆ (೧-೧೭೦-೨). ಒಂದೆರಡು ಸಲ ಮಾತ್ರ ಮರುತ್ತುಗಳು ಇಂದ್ರನ ಕೈಬಿಟ್ಟುಬಿಟ್ಟರೆಂದು ಹೇಳಿದೆ. ಸರ್ಪದೊಡನೆ ಅವನೊಬ್ಬನೇ ಯುದ್ಧಮಾಡುವಂತೆ ಸನ್ನಿವೇಶವೊದಗಿಸಿ (೧-೧೬೫-೬), ಅವನನ್ನು ಒಂಟಿಯಾಗಿ ಬಿಟ್ಟುಬಿಟ್ಟರು (೮-೭-೩೧). ಒಂದೇ ಒಂದು ಋಕ್ಕಿನಲ್ಲಿ ಇಂದ್ರನಿಗೂ ಇವರಿಗೆ ದ್ವೇಷವೂ ಉಕ್ತವಾಗಿದೆ.

ಮರುತರು "ಎಲೈ ಇಂದ್ರನೇ, ನಮ್ಮನ್ನು ವಧಿಸಲು ಇಚ್ಛಿಸುವುದೇಕೆ? ಯುದ್ಧದಲ್ಲಿ ನಮ್ಮನ್ನು ವಧಿಸಬೇಡ" ಎಂದು ಇಂದ್ರನಿಗೆ ಹೇಳಿದಾರೆ (೧-೧೭೦-೨; ೧-೧೭೧-೬ನ್ನು ಹೋಲಿಸಿ). ಬ್ರಾಹ್ಮಣವೊಂದರಲ್ಲಿಯೂ (ತೈ. ಬ್ರಾ. ೨-೭-೧೧-೧) ಇಂದ್ರ ಮರುತರಿಗೆ ಘರ್ಷಣೆಯಾಯಿತೆಂದು ಹೇಳಿದೆ.

ಇಂದ್ರ ಸಹಚರಿತರಾಗದೇ ಇರುವಾಗ, ಮರುತರಲ್ಲಿ ಹಿಂಸಾತ್ಮಕ ಗುಣಗಳು ಕಂಡುಬರುತ್ತವೆ. ಈ ವಿಷಯದಲ್ಲಿ ಅವರು ತಮ್ಮ ತಂದೆಯಾದ ರುದ್ರನ ಗುಣಗಳನ್ನು ತೋರ್ಪಡಿಸುತ್ತಾರೆ. ಅವರ ಆರಾಧಕರನ್ನು ಸಿಡಿಲು ತೊಂದರೆಪಡಿಸದಂತೆಯೂ, ಅವರ ದುರಾಗ್ರಹವು ಅವರನ್ನು ಮುಟ್ಟದಂತೆಯೂ ಮಾಡಬೇಕೆಂದು (೭-೫೬-೯) ಪ್ರಾರ್ಥಿತರಾಗಿದಾರೆ. ಅವರು ಎಸೆಯುವ ಬಾಣ ಮತ್ತು ಕಲ್ಲುಗಳನ್ನು (೧-೧೭೨-೨), ಸಿಡಿಲು (೭-೫೭-೪), ಗೋವು ಮತ್ತು ಮನುಷ್ಯರನ್ನು ವಧಿಸುವ ವಜ್ರಾಯುಧ (೭-೫೬-೧೭), ಇವುಗಳನ್ನು ತಪ್ಪಿಸಬೇಕೆಂದು ಮೊರೆ ಇಟ್ಟಿದಾರೆ. ಅವರಿಂದ ಕೆಡಕುಂಟಾಗಬಹುದು (೧-೩೯-೪); ಅವರು ಕುಪಿತರಾಗಬಾರದೆಂದು ಬೇಡಿಕೆ (೧-೭೧-೧; ೭-೫೮-೫); ಅವರಿಗೆ ಸರ್ಪಗಳಂತೆ ಕೋಸ ಬರುತ್ತದೆ (೧-೬೪-೮ ಮತ್ತು ೯). ರುದ್ರನಂತೆ, ಇವರಿಂದಲೂ. ಸಿಂಧು, ಅಸಿಕ್ನಿ, ಸಮುದ್ರಗಳು ಮತ್ತು ಪರ್ವತಗಳಲ್ಲಿರುವ ಔಷಧಿಗಳು ಬೇಡಲ್ಪಟ್ಟಿವೆ (೮-೨೦-೨೩ರಿಂದ೨೬); ಶುದ್ಧವೂ, ಅನುಕೂಲವೂ, ಸುಖಕರವೂ ಆದ ಚಿಕಿತ್ಸಾ ವಿಧಾನಗಳು ಮರುತ್ಸಹಿತನಾದ ರುದ್ರನಲ್ಲಿವೆ (೨.೩೩-೧೩). ಅದನ್ನು ಮರುತ್ತಗಳು ಮಳೆಯರೂಪದಲ್ಲಿ ಕೊಡುತ್ತಾರೆ (೫-೫೩-೧೪); ಆದುದರಿಂದ ಔಷಧಿ ಎಂದರೆ ಉದಕವಿರಬೇಕು. ಅಗ್ನಿಯಂತೆ, ಇವರಿಗೂ 'ಪಾವಕ' (ಶುದ್ಧಿಮಾಡುವವರು) ಎಂದು ಹೆಸರು (೭-೫೬-೧೨; ಇತ್ಯಾದಿ).

ಮೇಲೆ ಹೇಳಿದ ಗುಣಗಳಿಂದ, ಮರುತ್ತುಗಳು ಚಂಡಮಾರುತದ ದೇವತೆಗಳೆಂಬುದು ಸ್ಪಷ್ಟವಾಗುತ್ತದೆ. 'ಮರುತ' ಎಂದರೆ ಗಾಳಿ ಎಂದರ್ಥ ಮಾಡುವುದು ಬಹಳಮಟ್ಟಿಗೆ ಸರಿಯಾದರೂ, ಮೇಲೆಕಂಡ ಗುಣಗಳೆಲ್ಲವೂ ಅದರಲ್ಲಿ ಒಳಪಟ್ಟಂತೆ ಆಗುವುದಿಲ್ಲ.

ವಾಯು-ವಾತ.

ವಾಯು ಮತ್ತು ವಾತ ಎಂಬಿವೆರಡು ಪದಗಳೂ ವಾಯುದೇವತೆ ಮತ್ತು ಗಾಳಿ, ಇವೆರಡನ್ನೂ ಸೂಚಿಸುವ ಅರ್ಥದಲ್ಲಿ ಉಪಯೋಗಿಸಲ್ಪಟ್ಟಿವೆ. ಆದರೆ ವಾಯುವು ದೇವತೆ; ವಾತವು ಜಡವಾದ ಗಾಳಿ. ವಾಯುದೇವತಾಕವಾಗಿ ಒಂದು ಪೂರ್ತಿ ಸೂಕ್ತವೂ, ಕೆಲವು ಸೂಕ್ತಭಾಗಗಳೂ ಮತ್ತು ಇಂದ್ರನ ಜೊತೆಯಲ್ಲಿ ಸುಮಾರು ಹನ್ನೆರಡು ಸೂಕ್ತಗಳೂ ಇವೆ. ವಾತದ ಪರವಾಗಿ ಹತ್ತನೆಯ ಮಂಡಲದ ಕಡೆಯಲ್ಲಿ ಎರಡು ಸಣ್ಣ ಸೂಕ್ತಗಳು ಮಾತ್ರ ಇವೆ. ಎರಡೂ ಒಂದೇ ಋಕ್ಕಿನಲ್ಲಿ ಬರುವುದೂ ಉಂಟು (೬-೫೦-೧೨; ೧೦-೯೨-೧೩). ಇವೆರಡರಲ್ಲಿ ವಾಯುವೇ ಇಂದ್ರನ ಜೊತೆಯಲ್ಲಿ ಸ್ತುತನಾಗುವುದು. ನಿರುಕ್ತದಲ್ಲಿ (ನಿರು. ೭-೫) ವಾಯು ಅಥವಾ ವಾತವು ದೇವತಾತ್ರಯಗಳಲ್ಲಿ (ಅಗ್ನಿ, ಇಂದ್ರ, ವಾಯು, ಸೂರ್ಯ ಒಂದಾಗಿ ಪರಿಗಣಿತವಾಗಿದೆ. ವಾತವು ಪರ್ಜನ್ಯನೊಡನೆ ಸಂಬಂಧಿಸಿದೆ. ಈ ಎರಡಕ್ಕೂ ಉಪಯೋಗಿಸುವ ವಿಶೇಷಣಗಳೂ ಸಾಧಾರಣವಾಗಿ ಭಿನ್ನವಾದುವು; ವಾತನ ವಿಶೇಷಣಗಳು ವೇಗ ಮತ್ತು ರಭಸವನ್ನೇ ವಿಶೇಷವಾಗಿ ಸೂಚಿಸುತ್ತವೆ.

ವಾಯುವಿನ ಮೂಲದ ವಿಷಯವಾಗಿ ಹೆಚ್ಚು ಆಧಾರಗಳಿಲ್ಲ. ಎರಡು ಲೋಕಗಳು ಐಶ್ವರ್ಯಕ್ಕೋಸ್ಕರ ಅವನನ್ನು ಸೃಜಿಸಿದವು (೭-೯೦-೩). ಅವನ ಪತ್ನಿಯ ಹೆಸರು ಇಲ್ಲದಿದ್ದರೂ, ವಾಯುವು ತ್ವಷ್ಟೃವಿನ ಜಾಮಾತೃವೆಂದು ಉಕ್ತವಾಗಿದೆ (೮-೨೬-೨೧, ೨೨). ಪುರುಷಸೂಕ್ತದಲ್ಲಿ ವಾಯುವು ವಿರಾಟ್ಪುರುಷನ

ಉಸಿರಿನಿಂದ ಉದ್ಭವಿಸಿದನೆಂದು (೧೦-೯೦-೧೩) ಹೇಳಿದೆ. ವಾಯುವಿಗೂ ಮರುತರಿಗೂ ಸಂಬಂಧವೇ ಉಕ್ತವಾಗಿಲ್ಲವೆನ್ನಬಹುದು. ಒಂದೇ ಒಂದುಕಡೆ (೧-೧೩೪-೪) ವಾಯುವು ಅಂತರಿಕ್ಷದ ಯೋನಿಯಿಂದ ಮಾರುತರನ್ನು ಉತ್ಪತ್ತಿ ಮಾಡಿದನೆಂದೂ, ಅವರು (೧-೧೪೨-೧೨) ಮತ್ತು ವಿಶ್ವೇದೇವತೆಗಳು ವಾಯುವನ್ನು ಹಿಂಬಾಲಿಸಿದರೆಂದೂ ಹೇಳಿದೆ. ಅವನ (ಗುಣಗಳೂ) ಲಕ್ಷಣಗಳೂ ಅಸ್ಪಷ್ಟವಾಗಿವೆ. ಸ್ಫುರದ್ಗುಪಿ (೧-೨-೧), ಸಹಸ್ರಾಕ್ಷನಾದ ಇವನು, ಮನೋವೇಗದಿಂದ, ಇಂದ್ರಸಹಿತನಾಗಿ ಆಕಾಶವನ್ನು ಸ್ಪರ್ಶಿಸಿದನು (೧-೨೩-೨ ಮತ್ತು ೩). ವಾಯುವಿನ ರಥವು ಹೊಳೆಯುತ್ತಿದೆ; ಅದಕ್ಕೆ ಕಂದುಬಣ್ಣದ ಅಥವಾ ಕೆಂಪುಬಣ್ಣದ ಒಂದು ತಂಡ ಅಥವಾ ಒಂದು ಜೊತೆ ಅಶ್ವಗಳು. ಆ ತಂಡದಲ್ಲಿ ೯೯ (೪-೪೮-೪) ಅಥವಾ ನೂರು ಅಥವಾ ಒಂದು ಸಾವಿರ (೪-೪೬-೩) ಕುದುರೆಗಳಿವೆ; ಅವು ಅವನ ಇಚ್ಛಾಮಾತ್ರದಿಂದಲೇ ನಿಯುಕ್ತವಾಗುತ್ತವೆ. ಈ ಅರ್ಥದ ನಿಯುತ್ವತ್ ಎಂಬ ವಿಶೇಷಣವು. ಇಂದ್ರ, ಅಗ್ನಿ, ಪೂಷಣ ಅಥವಾ ಮರುತ್ತಗಳಿಗೆ ಒಂದೆರಡು ಸಲ ಹೊರತಾಗಿ, ಸಾಧಾರಣವಾಗಿ ವಾಯುವಿಗೇ ಉಪಯೋಗಿಸಿದೆ. ರಥದಲ್ಲಿ ಕುಳಿತಾಗ, ಇವನಿಗೆ ಇಂದ್ರನು ಸಹಚರನು (೪-೪೬-೨; ೪-೪೮-೨; ೭-೯೧-೫); ಬಂಗಾರದ ಆಸನವಿದೆ; ಆಕಾಶವನ್ನು ಮುಟ್ಟುತ್ತಿದೆ (೪-೪೬-೪). ಇತರ ದೇವತೆಗಳಂತೆ, ಇವನಿಗೂ ಸೋಮರಸವು ಪ್ರಿಯವಾದುದು; ಇವನು ತನ್ನ ಅಶ್ವಗಳು ಮತ್ತು ಇಂದ್ರನೊಡನೆ ಬಂದು, ಮೊದಲು ಸೋಮಪಾನ ಮಾಡಬೇಕೆಂದು ಆಹೂತನಾಗುತ್ತಾನೆ (೧-೧೩೫-೪); ದೇವತೆಗಳಲ್ಲೆಲ್ಲಾ ಅವನೇ ಕ್ಷಿಪ್ರಗತಿಯ ದೇವತೆ (ಶ. ಬ್ರಾ. ೧೩-೧-೨-೭; ಇತ್ಯಾದಿ). ಐತರೇಯ ಬ್ರಾಹ್ಮಣದಲ್ಲಿ (೨-೨೫) ಸೋಮರಸದ ಪ್ರಥಮ ಪಾನಕ್ಕೋಸ್ಕರ ದೇವತೆಗಳಲ್ಲಿ ಪಂದ್ಯವಾಗಿ, ವಾಯುವು ಮೊದಲನೆಯವನೂ, ಇಂದ್ರನು ಎರಡನೆಯವನೂ ಆದರು ಎಂದು ಒಂದು ಕಥೆಯಿದೆ. ಅವನು ಸೋಮರಕ್ಷಕ (೧೦-೪೫-೫); ಅವನೊಬ್ಬನಿಗೇ ಶುಚಿಪಾ (ಶುದ್ಧವಾದ (ಸೋಮ) ಪಾನಮಾಡುವವನು) ಎಂಬ ವಿಶೇಷಣವಿದೆ; ಒಂದು ಸಲ ಇಂದ್ರ ಮತ್ತು ವಾಯುಗಳಿಗೆ ಒಟ್ಟಾಗಿ ಈ ವಿಶೇಷಣವು ಉಪಯೋಗಿಸಲ್ಪಟ್ಟಿದೆ. ವಾಯುವು ಯಶಸ್ಸು, ಸಂತಾನ, ಅಶ್ವಗಳು, ಗೋವುಗಳು, ಸುವರ್ಣ ಮೊದಲಾದುವನ್ನು ಅನುಗ್ರಹಿಸುತ್ತಾನೆ (೭-೯೦-೨ ಮತ್ತು ೬). ಶತ್ರುಗಳನ್ನು ಚದುರಿಸುತ್ತಾನೆ (೪-೪೮-೨); ದುರ್ಬಲರನ್ನು ರಕ್ಷಿಸಬೇಕೆಂದು (೧-೧೩೪-೫) ಪ್ರಾರ್ಥಿತನಾಗಿದಾನೆ.

ಗಾಳಿಯ ಮತ್ತೊಂದು ಹೆಸರಾದ 'ವಾತ' ಎಂಬುದು 'ವಾ' ಧಾತುವಿನಿಂದ ನಿಷ್ಪನ್ನವಾಗಿದೆ (೧೦-೧೬೮) ಸೂಕ್ತದಲ್ಲಿ ಈರೀತಿ ವರ್ಣನೆ ಇದೆ. ಎಲ್ಲವನ್ನೂ ಪುಡಿಮಾಡುತ್ತಾ, ಜೋರಾಗಿ ಶಬ್ದಮಾಡಿಕೊಂಡು ಧೂಳೆಬ್ಬಿಸುತ್ತಾ ವಾಯುಮಂಡಲದಲ್ಲಿ ಸಂಚರಿಸುತ್ತಾನೆ; ಒಂದು ದಿನವೂ ವಿಶ್ರಾಂತನಾಗುವುದಿಲ್ಲ; ಆದಿಯಲ್ಲಿ ಜನಿಸಿದ ಇವನು ನೀರಿಗೆ ಮಿತ್ರನು; ಅವನ ಜನ್ಮಸ್ಥಾನ ತಿಳಿಯದು. ಈ ದೇವತೆಯು ಮನಬಂದ ಕಡೆ ಹೋಗುತ್ತಾನೆ; ಇವನ ಶಬ್ದ ಎಲ್ಲರಿಗೂ ಕೇಳಿಸುತ್ತದೆ; ಆದರೆ ಇವನನ್ನು ಕಂಡವರಿಲ್ಲ (೧-೧೬೪-೪೪ನ್ನು ಹೋಲಿಸಿ). ಇವನು ದೇವತೆಗಳ ಉಸಿರು (೭-೮೭-೨ನ್ನು ಹೋಲಿಸಿ; ೧೦-೯೨-೧೩); ಯಾಗಗಳಲ್ಲಿ ಇವನಿಗೋಸ್ಕರ ಹೋಮ ಮಾಡುತ್ತಾರೆ.

ರುದ್ರನಂತೆ ವಾತನೂ ಔಷಧಗಳನ್ನು ಜನಗಳಿಗೆ ಕೊಡುತ್ತಾನೆ; ಆಯುಸ್ಸನ್ನು ಹೆಚ್ಚಿಸುತ್ತಾನೆ: ಏಕೆಂದರೆ, ಇವನ ಮನೆಯಲ್ಲಿ ಅಮೃತತ್ವದ ನಿಧಿಯಿದೆ (೧೦-೧೮೬). ಚಿಕಿತ್ಸಾಶಕ್ತಿಯೆಂದರೆ, ವಾಯುವಿನ ಶುದ್ಧೀಕರಣಶಕ್ತಿಯಿರಬೇಕು. ಗಾಳಿಯ ಕೆಲಸಗಳೆಲ್ಲವೂ ಚಂಡಮಾರುತಕ್ಕೆ ಸಂಬಂಧಿಸಿದೆ (೪-೧೭-೨೨; ೫-೪೩-೪; ೧೦-೧೬೮-೧ ಮತ್ತು ೨). ಕಿಡಿಲು ಹೊಡೆಯುವುದಕ್ಕೆ ಮತ್ತು ಸೂರ್ಯೋದಯಕ್ಕೆ ಪೂರ್ವಭಾವಿಯಾಗಿ ಗಾಳಿಯು ಸಾಧಾರಣವಾಗಿ ಜೋರಾಗಿ ಬೀಸುವುದರಿಂದ, ವಾತನು ರಕ್ತವರ್ಣದ ತೇಜಸ್ಸನ್ನು ಉತ್ಪತ್ತಿಮಾಡುತ್ತಾನೆ (೧೦-೧೬೮-೧) ಮತ್ತು ಉಷಸ್ಸು ಪ್ರಕಾಶಿಸುವಂತೆ ಮಾಡುತ್ತಾನೆ (೧-೧೩೪-೩) ಎಂದು ಹೇಳಿದೆ.

ವಾಯುವೇಗವೇ ದೇವತೆಗಳ ವೇಗ (೪-೧೭-೧೨ ; ೫-೪೧-೩ ; ೯-೯೭-೫೨) ಮತ್ತು ಕಾಲ್ಪನಿಕ ಅಶ್ವಗಳ ವೇಗ (೧-೧೬೩-೧೧ ; ೧೪-೩೪) ಇವುಗಳ ಹೋಲಿಕೆಗೆ ಆಧಾರ. ಅದರ ಶಬ್ದವೂ ಅನೇಕ ಕಡೆ ಉಕ್ತವಾಗಿದೆ (೪-೨೨-೪ ; ೮-೯೧-೩ ; ೧೦-೧೬೮-೧ ಮತ್ತು ೪).

ಪರ್ಜನ್ಯ

ಋಗ್ವೇದದಲ್ಲಿ ಈ ದೇವತೆಯ ಸ್ಥಾನ ಬಹಳ ಅಮುಖ್ಯ. ಮೂರೇ ಸೂಕ್ತಗಳಲ್ಲಿ ಈ ದೇವತೆಯನ್ನು ಸ್ತುತಿಸಿರುವುದು ; ಈ ಹೆಸರು ಬರುವುದೇ ಮೂವತ್ತು ಸಲ. ಅಥರ್ವವೇದದಲ್ಲಿಯೂ (೪-೧೫) ಒಂದು ಸೂಕ್ತ ಪರ್ಜನ್ಯದೇವತಾಕವಾದುದು, ಆದರೆ ಆ ಸೂಕ್ತದಲ್ಲಿನ ಋಕ್ಕುಗಳು ಬಹಳಮಟ್ಟಿಗೆ ಋಗ್ವೇದದಿಂದ ಆರಿಸಿ ಕೊಂಡವು. ಈ ಮುಂದಿನ ವಾಕ್ಯಗಳಲ್ಲಿ ಸಾಧಾರಣವಾಗಿ ಪರ್ಜನ್ಯ ಎಂದರೆ, ಪರಿಚಿತವಾದ ಮೋಡ ಎಂಬುದೇ ಆಗಿದೆ. ಮಳೆ ಮೋಡಗಳು (ಪರ್ಜನ್ಯ) ಭೂಮಿಯನ್ನು ಚೇತನಗೊಳಿಸುತ್ತವೆ (೧-೧೬೪-೫೧). ಮರುತ್ತುಗಳು ಹಗಲಿನಲ್ಲಿಯೂ, ಜಲವಾಹಕವಾದ ಮೋಡಗಳಿಂದ (ಪರ್ಜನ್ಯ) ಕತ್ತಲು ಉಂಟುಮಾಡುತ್ತಾರೆ (೧-೩೪-೯). ಅವರು ಎರಡು ಲೋಕಗಳಲ್ಲಿಯೂ ಮೋಡಗಳನ್ನು ಹರಡುತ್ತಾರೆ (೫-೫೩-೬). ಮಳೆ ಬೀಳುವಂತೆ ಮಾಡಬೇಕೆಂದೂ, ಮಳೆ ಮೋಡವನ್ನು ಕಳುಹಿಸುವಂತೆಯೂ ಬೃಹಸ್ಪತಿಯನ್ನು ಪ್ರಾರ್ಥಿಸಿದೆ (೧೦-೯೮-೧ ಮತ್ತು ೪). ಸೋಮವು ಮಳೆ ಮೋಡದಂತೆ ಪ್ರವಹಿಸುತ್ತದೆ (೯-೨-೯) ಮತ್ತು ಸೋಮಬಿಂದುಗಳು, ಮೋಡದಿಂದ ಮಳೆಯು ಬೀಳುವಂತೆ ಬೀಳುತ್ತವೆ (೯-೨೨-೨). ಅಥರ್ವ ವೇದದಲ್ಲಿ ಮಳೆಗರೆಯುವ 'ವಶಾ' ಎಂಬ ಗೋವನ್ನು ಸ್ತುತಿಸುವಾಗ "ಪರ್ಜನ್ಯವೇ ಎಂದು ನಿನ್ನ ಕೆಚ್ಚಲು" ಎಂದು ಹೇಳಿದೆ (೮. ವೇ. ೧೦-೧೦-೭). ಅದರೆ (ವಾ. ಸಂ. ೧೨-೬)ರಲ್ಲಿ ಪರ್ಜನ್ಯ ಎಂದರೆ ಸ್ತನಯಿತ್ನು (ಸಿಡಿಲು) ಎಂತಲೂ, (ಶ.ಬ್ರಾ. ೧೪-೫-೫-೧೦)ರಲ್ಲಿ, ದ್ಯೌಃ (ವಾ. ಸಂ. ೧೨-೬) ಎಂಬರ್ಥದಲ್ಲಿಯೂ ಪ್ರಯುಕ್ತವಾಗಿದೆ. ಕೆಲವು ಸಂದರ್ಭಗಳಲ್ಲಿ ಉದ್ದಿಷ್ಟವಾದುದು ರೂಢಾರ್ಥವೇ ಅಥವಾ ದೇವತಾರ್ಥವೇ ಎಂದು ಹೇಳುವುದು ಕಷ್ಟ. ಪರ್ಜನ್ಯನಂತೆ ಅಗ್ನಿಯು ಸಾಮರ್ಥ್ಯವು ಪ್ರತಿಧ್ವನಿಯನ್ನು ಕೊಡುತ್ತದೆ (೮-೯೨-೫). ಪರ್ಜನ್ಯದಿಂದ ಎಚ್ಚರಿಸಲ್ಪಟ್ಟು ಕಪ್ಪೆಗಳು ವಟಗುಟ್ಟುತ್ತವೆ (೭-೧೦೩-೧). ಪರ್ಜನ್ಯ ಎಂದರೆ ದೇವತೆಯೆಂದೇ ಸ್ಪಷ್ಟವಾಗಿ ಅನೇಕ ವಾಕ್ಯಗಳಲ್ಲಿ ತೋರಿಬರುತ್ತದೆ. ಅಂತಹ ಸಂದರ್ಭಗಳಲ್ಲಿ ಮೋಡವು, ಕೆಚ್ಚಲು, ಬಾನೆ, ನೀರಿನ ಚೀಲ ಮೊದಲಾದ ಹೆಸರಿನಿಂದ ಕರೆಯಲ್ಪಡುತ್ತದೆ (೫-೮೩-೮ ಮತ್ತು ೯ ; ೭-೧೦೧-೪). ಸ್ವಲ್ಪನುಟ್ಟಿಗೆ ಪರ್ಜನ್ಯ ದೇವತೆಯು ವೃಷಭ ಮೊದಲಾದ ಪ್ರಾಣಿಯೆಂದು ವರ್ಣಿತವಾಗಿದೆ. ವೇಗವಾಗಿ ಹರಿಯುವ ಹನಿಗಳಿಂದ ಕೂಡಿದ ಮತ್ತು ಗಟ್ಟಿಯಾಗಿ ಗುಟುರು ಹಾಕುವ ಗೂಳಿ (೫-೮೩-೧ ; ೫-೮೩-೭ ಮತ್ತು ೯ಗಳನ್ನು ಹೋಲಿಸು ; ೮. ವೇ. ೪-೧೫-೧). ಬುಸುಗುಟ್ಟುತ್ತಿರುವ ಉದಕಮಯವಾದ ವೃಷಭದಿಂದ ಬರುವ ಮತ್ತು ಭೋರ್ಗರೆಯುತ್ತಿರುವ ನೀರು ಭೂಮಿಯನ್ನು ಸಂತೋಷಪಡಿಸುತ್ತದೆ (೮. ವೇ. ೪-೧೫-೧). ಪರ್ಜನ್ಯನು ಒಂದೊಂದು ಸಲ ಗೊಡ್ಡು ಹಸು ; ಒಂದೊಂದು ವೇಳೆ ಹಾಲು ಕೊಡುವ ಹಸು, ಪರ್ಜನ್ಯನು ತನ್ನ ದೇಹವನ್ನು ಇಷ್ಟಬಂದಂತೆ ಉಪಯೋಗಿಸುತ್ತಾನೆ (೭-೧೦೧-೩).

ಮಳೆಗರೆಯುವುದೇ ಪರ್ಜನ್ಯನ ಮುಖ್ಯಕಾರ್ಯ. ಜಲಮಯವಾದ ರಥದಲ್ಲಿ ಓಡಾಡುತ್ತಾ (೫-೮೩-೭) ನೀರಿನ ಚೀಲವನ್ನು ಬಿಚ್ಚಿ, ಅಧೋಮುಖವಾಗಿ ಹಿಡಿಯುತ್ತಾನೆ. ರಥಿಕನು ಅಶ್ವಗಳನ್ನು ಹುರಿದುಂಬಿಸುವಂತೆ, ಪರ್ಜನ್ಯನು ವೃಷ್ಟಿದೂತರನ್ನು ಪ್ರದರ್ಶಿಸುತ್ತಾನೆ ; ಮಳೆಗರೆದಾಗ, ದೂರದಿಂದ ಸಿಂಹಗರ್ಜನೆಯಾಗುತ್ತದೆ ; ಮಳೆಯನ್ನು ಸುರಿಸುತ್ತಾ, ಗರ್ಜಿಸುವ ಪರ್ಜನ್ಯನು, ನಮ್ಮ ಸ್ವರ್ಗೀಯ ಜನಕನಂತೆ (ಅಸುರ), ಬರುತ್ತಾನೆ

(೫-೮೩-೩ ಮತ್ತು ೬). ಮಳೆಯನ್ನು ಸುರಿಸುವಂತೆಯೂ (೭-೧೦೧-೫), ಸುರಿಸಿದ ಮೇಲೆ ನಿಲ್ಲಿಸುವಂತೆಯೂ (೫-೮೩-೧೦) ಪ್ರಾರ್ಥಿತನಾಗಿದಾನೆ. ಪರ್ಜನ್ಯ ಮತ್ತು ಮರುತ್ತ್ಗಳು ಮಳೆ ಸುರಿಸುವುವು. ಮಿತ್ರ ಮತ್ತು ವರುಣರಿಗೆ ಅಧೀನರಾಗಿದ್ದುಕೊಂಡೇ (೫-೬೩-೩ ರಿಂದ ೬), ಅನೇಕ ಸಲ ಅವನು ಆರ್ಭಟಿಸುತ್ತಾನೆ ಎಂದು ಹೇಳಿದೆ (೫-೮೩). ಆರ್ಭಟಿಸುತ್ತಾ ಅವನು ವೃಕ್ಷಗಳು, ಪಿಶಾಚಿಗಳು, ದುಷ್ಟರು, ಎಲ್ಲರನ್ನೂ ಉರುಳಿಸುತ್ತಾನೆ. ಪ್ರಪಂಚವೇ ಅವನ ಈ ಆಯುಧಕ್ಕೆ ಹೆದರಿದೆ (೫-೮೩-೨). ಅವನು ಮತ್ತು ವಾತ, ಇಬ್ಬರು ಆ ಆಯುಧವನ್ನು ಪ್ರಯೋಗಿಸುವವರು (೧೦–೬೬-೧೦). ಸಿಡಿಲಿಗೂ ಇವನಿಗೂ ಸ್ವಲ್ಪ ಸಂಬಂಧವಿದೆ. ಪರ್ಜನ್ಯನು ಬೀಜಗಳಿಂದ ಭೂಮಿಯನ್ನು ಚೇತನಗೊಳಿಸುವಾಗ, ಗಾಳಿಬೀಸುತ್ತದೆ ಮತ್ತು ಸಿಡಿಲು ಹೊಡೆಯುತ್ತದೆ (೫-೮೩-೪). ಪರ್ಜನ್ಯನು ಸಿಡಿಲಿನಿಂದೊಡಗೂಡಿ ಸಾಗರದಲ್ಲಿ ಗರ್ಜಿಸುತ್ತಾನೆ (ಅ. ವೇ. ೧೯-೩೦-೪).

ಮಳೆಗರೆಯುವವನಾದುದರಿಂದ, ಪರ್ಜನ್ಯನು ಸಸ್ಯಗಳ ಅಭಿವೃದ್ಧಿಗೆ ಕಾರಣನು. ಭೂಮಿಯಲ್ಲಿ ಬೀಜವನ್ನು ಬಿತ್ತಿದಾಗ, ಗಿಡಗಳು ಏಳುತ್ತವೆ. ಎಲ್ಲಾ ತರಹ ಸಸ್ಯಗಳೂ ಅವನ ಕಾರ್ಯಕ್ಷೇತ್ರಕ್ಕೆ ಒಳಪಟ್ಟವೆ; ಪುಷ್ಟಿಗೋಸ್ಕರ ಅವನು ಗಿಡಗಳನ್ನು ಉತ್ಪತ್ತಿಮಾಡಿದಾನೆ (೫-೮೩-೪, ೫ ಮತ್ತು ೧೦ ; ೬-೫೨-೬ ನ್ನು ಹೋಲಿಸು ; ಅ. ವೇ. ೪-೧೫-೨, ೩ ಮತ್ತು ೧೫ ; ೮-೭-೨೧). ಗಿಡಗಳನ್ನು ಹೆಚ್ಚಿಸುವವನೂ, ಫಲಿಸುವಂತೆ ಮಾಡುವವನೂ ಅವನೇ ; ಆ ದೇವತೆಯಿಂದ ರಕ್ಷಿತವಾಗಿ, ಸಸ್ಯಗಳು ಒಳ್ಳೆಯ ಫಲ ಬಿಡುತ್ತವೆ (೭–೧೦೧-೧ ಮತ್ತು ೫). ಅವನ ಕಾರ್ಯದಿಂದಲೇ ಜೊಂಡು ಮತ್ತು ಹುಲ್ಲು ಬೆಳೆಯುತ್ತವೆ (೭-೧೦೨-೧ ; ೫-೭೫-೧೫ ನ್ನು ಹೋಲಿಸಿ ; ಅ. ವೇ. ೧–೨–೧ ; ೧-೩-೧ ; ೧೯-೩೦-೫). ಪರ್ಜನ್ಯನು ಗಿಡಗಳಲ್ಲಿ ಮಾತ್ರವಲ್ಲದೆ, ಹಸುಗಳು, ಹೆಣ್ಣು ಕುದುರೆಗಳು ಮತ್ತು ಸ್ತ್ರೀಯರಲ್ಲಿಯೂ ಅಂಕುರವನ್ನು, (ಗರ್ಭಾಣುವನ್ನು) ಸ್ಥಾಪಿಸುತ್ತಾನೆ (೭-೧೦೨-೨) ಮತ್ತು ಫಲಶಕ್ತಿಗಾಗಿ ಪ್ರಾರ್ಥಿತನಾಗಿದಾನೆ (೫-೮೩-೭ ; ೬-೫೨-೧೬ ನ್ನು ಹೋಲಿಸಿ). ಅವನು ಎಲ್ಲವನ್ನೂ ಫಲವಂತವಾಗಿ ಮಾಡುವ ವೃಷಭ ; ಪ್ರಪಂಚದಲ್ಲಿರುವ ಚರಾಚರ ವಸ್ತುಗಳೆಲ್ಲದರ ಆತ್ಮವೂ ಅವನಲ್ಲಿದೆ (೭-೧೦೧-೬ ; ೧-೧೧೫-೧ ನ್ನು ಹೋಲಿಸಿ). ಪ್ರಪಂಚವೆಲ್ಲವನ್ನೂ ಆಳುವ, ಸರ್ವ ಸ್ವಾತಂತ್ರ್ಯವುಳ್ಳ ರಾಜನು ; ಅವನಲ್ಲಿಯೇ ಎಲ್ಲಾ ಜೀವಗಳೂ ಮೂರು ಲೋಕಗಳೂ ಸ್ಥಾಪಿತವಾಗಿವೆ. ಅವನಲ್ಲಿಯೇ ತ್ರಿವಿಧವಾದ ನೀರುಹರಿಯುತ್ತದೆ(೭-೧೦೧.೨, ೪ ಮತ್ತು ೫) ಈ ಜನನ ಶಕ್ತಿಯಿಂದಲೇ, ಅವನಿಗೆ ಜನಕನೆಂಬ ವಿಶೇಷಣವು ಅನೇಕಸಲ ಉಪಯೋಗಿಸಲ್ಪಟ್ಟಿದೆ (೭-೧೦೧-೩ ; ೯-೮೨-೩ ; ಅ. ವೇ. ೪-೧೫–೧೨; ೧೨-೧–೧೨). ಅವನು ನಮ್ಮ (ಅಸುರಃಪಿತಾ) ಸ್ವರ್ಗೀಯಜನಕನು (೫-೮೩-೬).

ಭೂಮಿಯು ಅವನ ಪತ್ನಿಯೆಂದು ಧ್ವನಿತವಾಗುತ್ತದೆ (೫–೮೩–೪ ; ೭-೧೦೧-೩ ; ೧-೧೬೦-೩ ನ್ನು ಹೋಲಿಸಿ). ಅಥರ್ವ ವೇದದಲ್ಲಿ (೧೨–೧–೧೨) ಭೂಮಿಯು ತಾಯಿಯು ಮತ್ತು ಪರ್ಜನ್ಯನು ತಂದೆಯೆಂದೂ, ಮತ್ತೊಂದು ಕಡೆ (೧೦-೧೦-೬) ಸ್ಪಷ್ಟವಾಗಿ, ವಶಾ ಎಂಬುವಳು ಅವನ ಪತ್ನಿಯೆಂದೂ ಹೇಳಿದೆ. ವೃಷಭನೆನ್ನಿಸಿಕೊಳ್ಳುವುದರಲ್ಲಿ ಮತ್ತು ಗುಡುಗು, ಸಿಡಿಲು ಮತ್ತು ಮಳೆಗಳಿಗೆ ಸಂಬಂಧಿಸಿರುವುದರಲ್ಲಿಯೂ, ಪರ್ಜನ್ಯನು ದ್ಯುದೇವತೆಗೆ ಸಮಾನನು (೧೦-೪೫-೪ ; ೨-೪-೬ ; ೨-೨೭-೧೫ ಗಳನ್ನು ಹೋಲಿಸಿ). ಒಂದು ಕಡೆ ಪರ್ಜನ್ಯನು ದ್ಯುದೇವತೆಯ ಮಗನು (೭-೧೦೨-೧). ಪರ್ಜನ್ಯನೇ ಒಂದು ವತ್ಸ (ಕರು) ವನ್ನು ಉತ್ಪತ್ತಿ ಮಾಡುತ್ತಾನೆ ; ಇದೇ ಗಿಡಗಳ ಅಂಕುರ (೭-೧೦೧-೧ ; ೫-೮೩-೧ ನ್ನು ಹೋಲಿಸಿ). ಈ ಕರುವು ಸಿಡಿಲು ಅಥವಾ ಸೋಮವಿರಬಹುದು. ಒಂದು ಕಡೆ ಪರ್ಜನ್ಯನು ಸೋಮಕ್ಕೆ ತಂದೆಯೆಂದೂ (೯-೮೨-೩), ಅದು ಪರ್ಜನ್ಯನಿಂದ ಅಭಿವೃದ್ಧಿಯಾಯಿತೆಂದೂ (೯-೧೧೩-೩) ಹೇಳಿದೆ.

ಪರ್ಜನ್ಯನಿಗೆ ಇತರ ಅನೇಕ ದೇವತೆಗಳೊಡನೆ ಸಂಬಂಧವಿದೆ. ಆದರೆ ಸಂಬಂಧ ಹೆಚ್ಚಾಗಿರುವುದು ವಾತನೊಡನೆಯೇ. ಅಗ್ನಿಯೊಡನೆ ಒಂದುಸಲ ಹೊರತಾಗಿ, ವಾತನು ದ್ವಂದ್ವ ದೇವತೆಯಾಗಿ ಉಕ್ತನಾಗಿರುವುದು ಪರ್ಜನ್ಯನೊಡನೆಯೇ. ಮರುತರೂ ಪರ್ಜನ್ಯನೊಡನೆ ಸ್ತುತರಾಗಿದಾರೆ (೫-೮೩-೬ ; ೫-೮೩-೫) ; ಅವರು ಪರ್ಜನ್ಯನನ್ನು ಸ್ತುತಿಸುತ್ತಾರೆ (ಅ. ವೇ. ೪-೧೫-೪). ಎರಡು ಮಂತ್ರಗಳಲ್ಲಿ ಅಗ್ನಿಯು ಇವನೊಡನೆ ಸ್ತುತನಾಗಿದಾನೆ (೬-೫೨-೬

ಮತ್ತು ೧೬). ವೃಷ್ಟಿಯುಕ್ತನಾದ ಪರ್ಜನ್ಯನಿಗೂ ಇಂದ್ರನಿಗೂ ಸಮಾನ ಧರ್ಮಗಳು ಅನೇಕ ಇವೆ (೮-೬-೧) ಇಬ್ಬರು ದೇವತೆಗಳಿಗೂ, ಪ್ರಕೃತಿಯ ಒಂದೇ ಅಂಶವು ಆಧಾರವಾಗಿದೆ ; ಆದರೆ ಪರ್ಜನ್ಯನ ವಿಷಯದಲ್ಲಿ ಇದು ಹೆಚ್ಚು ಸ್ಪಷ್ಟವಾಗಿದೆ.

ಈ ಪದದ ನಿಷ್ಪತ್ತಿ ಸ್ಪಷ್ಟವಾಗಿಲ್ಲ. ಋಗ್ವೇದದಲ್ಲಿ ಈ ರೂಪದಿಂದ ರೂಢಾರ್ಥವಾದ ಮೋಡವೂ, ಮೇಘಾಭಿಮಾನಿದೇವತೆಯೂ ಅಭಿಪ್ರೇತವಾಗಿವೆ. ಬ್ರಾಹ್ಮಣಗಳಲ್ಲಿಯೂ ಈ ಎರಡು ಅರ್ಥಗಳೂ ರೂಢಿಯಲ್ಲಿದ್ದಂತಿವೆ. ಮಹಾಭಾರತದಲ್ಲಿ ಇಂದ್ರ ಮತ್ತು ಪರ್ಜನ್ಯರು ಇಬ್ಬರೂ ಒಂದೇ ಎಂದೂ ಭಾವಿಸಲ್ಪಟ್ಟಿದಾರೆ.

ಆಪಃ

ನಾಲ್ಕು ಸೂಕ್ತಗಳೂ (೭-೪೭ ಮತ್ತು ೪೯ ; ೧೦-೯ ಮತ್ತು ೩೦), ಮತ್ತೆ ಕೆಲವು ಋಕ್ಕುಗಳೂ ಉದಕವನ್ನು ಸ್ತುತಿಸುತ್ತವೆ. ಇತರ ದೇವತೆಗಳೊಡನೆ ಅಲ್ಲೊಂದು ಇಲ್ಲೊಂದು ಮಂತ್ರದಲ್ಲಿಯೂ ಅದರ ಸ್ತುತಿಯಿದೆ. ವ್ಯಕ್ತೀಕರಣವು ಬಹಳ ಆರಂಭದೆಶೆಯಲ್ಲಿದೆ; ವಾರಿಗಳು, ತಾಯಿಯರು, ಎಳೆಯ ವಯಸ್ಸಿನ ಪತ್ನಿಯರು, ಯಾಗಗಳಿಗೆ ಬಂದು ವರ ಪ್ರಸಾದವನ್ನು ಅನುಗ್ರಹಿಸುವ ಸ್ತ್ರೀದೇವತೆಗಳು ಎಂಬ ಅಭಿಪ್ರಾಯಗಳು ಕಂಡುಬರುತ್ತವೆ. ದೇವತೆಗಳ ಮಾರ್ಗವನ್ನು ಅನುಸರಿಸುವ ಸ್ತ್ರೀದೇವತೆಗಳು (೭-೪೭-೩). ವಜ್ರಾಯುಧವನ್ನು ಧರಿಸಿ, ಇಂದ್ರನು ನೀರು ಹರಿಯುವುದಕ್ಕೋಸ್ಕರ ಕಾಲುವೆಗಳನ್ನು ಮಾಡಿದನು (೭-೪೭-೪ ; ೭-೪೯-೧) ಮತ್ತು ಅವನ ಆಪ್ಪಣೆಗಳನ್ನು ಅವರು ಎಂದಿಗೂ ಮೀರುವುದಿಲ್ಲ (೭-೪೭-೩). ಸವಿತೃವಿನ ಆಪ್ಪಣೆಗೂ ನೀರು ಒಳಪಟ್ಟಿದೆ (೫-೫೮-೨). ಅವು ಸ್ವರ್ಗಲೋಕದಿಂದ ಬಂದವು ; ಕಾಲುವೆಗಳಲ್ಲಿ ಹರಿಯುತ್ತವೆ : ಸಮುದ್ರವೇ ಅವುಗಳ ಗಮ್ಯಸ್ಥಾನ (೭-೪೯-೨). ಮಿತ್ರಾವರುಣರು ಮತ್ತು ಇತರ ದೇವತೆಗಳು ಇರುವ ಸ್ಥಳದಲ್ಲಿ ವಾರಿಗಳೂ ಇವೆ ಎಂದು ಅಭಿಪ್ರಾಯವಿದೆ (೧೦-೩೦-೧). ಅವು ಸೂರ್ಯನ ಪಾರ್ಶ್ವದಲ್ಲಿವೆ ಮತ್ತು ಸೂರ್ಯನು ಅವುಗಳೊಡನೆ ಇದ್ದಾನೆ (೧-೨೩-೧೫). ಮನುಷ್ಯರ ಸತ್ಯಾಸತ್ಯತೆಗಳನ್ನು ವೀಕ್ಷಿಸುತ್ತಾ ವರುಣನು ಅವುಗಳ ಮಧ್ಯೆ ಸಂಚರಿಸುತ್ತಾನೆ (೭-೪೯-೩). ನಿಘಂಟುವಿನಲ್ಲಿ ಭೂಲೋಕದ ದೇವತೆಗಳಲ್ಲಿ ನೀರನ್ನೂ ಸೇರಿಸಿದೆ (ನಿರು ೫-೧).

ಅಗ್ನಿಯು ನೀರಿನಲ್ಲೇ ಮನೆಮಾಡಿಕೊಂಡಿದ್ದಾನೆಂದು ಅನೇಕಸಲ ಹೇಳಿದೆ. ನೀರಿನೊಳಕ್ಕೆ ಅಗ್ನಿಯ ಪ್ರವೇಶ ಮಾಡಿದನು (೭-೪೯-೪) ; ಅಗ್ನಿಯ ಒಂದು ರೂಪಕ್ಕೆ 'ಅಪಾಂನಪಾತ್' (ನೀರಿನ ಪುತ್ರ) ಎಂದು ಹೆಸರು ಮಾತೃಭೂತರಾದ ನೀರುಗಳು ಅಗ್ನಿಯನ್ನು ಉತ್ಪತ್ತಿಮಾಡುತ್ತವೆ (೧೦-೯೧-೬ ; ೧೦-೩-೭ ನ್ನು ಹೋಲಿಸಿ, ಅ. ವೇ. ೧-೩೩-೧). ಅಬ್ದೇವತೆಗಳು ಜನನಿಯರು (೧೦-೧೭-೧೦ ; ೧-೨೩-೧೬) ; ಪ್ರಪಂಚಕ್ಕೆ ಭಾರ್ಯೆಯರು ; ವಯಸ್ಸು ಮತ್ತು ಜನ್ಮಗಳಲ್ಲಿ ಸಮಾನರು (೧೦-೩೦-೧೦). ಪ್ರೀತಿಯುಕ್ತರಾದ ತಾಯಿಯರಂತೆ, ಮಂಗಳಕರವಾದ ದ್ರವ್ಯವನ್ನು ಕೊಡಬೇಕೆಂದು ಕೋರಿದೆ (೧೦-೯-೨). ಚರಾಚರ ವಸ್ತುಗಳನ್ನು ಸೃಜಿಸುವವರು ; ತಾಯ್ತನವು ಅವರಲ್ಲಿ ಬಹಳ ಹೆಚ್ಚಾಗಿ ವ್ಯಕ್ತಪಡುತ್ತದೆ (೬-೫೦-೭).

ನೀರು [ಮನುಷ್ಯರನ್ನು] ಶುದ್ಧಿಮಾಡಿ ಪೂತರನ್ನಾಗಿ ಮಾಡುತ್ತದೆ; ಆ ದೇವತೆಗಳು ಅಪವಿತ್ರತೆಯನ್ನು ಪರಿಹರಿಸುತ್ತವೆ. ಆರಾಧಕನು ಶುದ್ಧನೂ, ಪವಿತ್ರನೂ, ಆಗಿ ನೀರಿನಿಂದ ಹೊರಗೆ ಬರುತ್ತಾನೆ [೧೦-೧೭-೧೦]. ಕೆಟ್ಟ ನಡತೆ ಮತ್ತು ಹಿಂಸೆ, ದೂಷಣೆ ಮತ್ತು ಅಸತ್ಯ, ಇವುಗಳಿಗೆ ಸಂಬಂಧಿಸಿದ ಪಾಪಗಳಿಂದಲೂ ಪೂತರನ್ನಾಗಿ ಮಾಡಬೇಕೆಂದು ಪ್ರಾರ್ಥನೆಯಿದೆ [೧-೨೩-೨೨; ೧೦-೯-೮]. ಅವು ರೋಗ ಪರಿಹಾರಕಗಳು [೬-೫೦-೭] ; ದೀರ್ಘಾಯುಸ್ಸು, ಔಷಧಿಗಳು ಮೊದಲಾದುವನ್ನು ಅನುಗ್ರಹಿಸುತ್ತವೆ. ಔಷಧಿಗಳಲ್ಲಿ ಅಮೃತತ್ವವೂ ಸೇರಿದೆ [೧೦-೯-೫ರಿಂದಲೂ, ೧-೨೩-೧೯ರಿಂದಲೂ]. ಮನೆಯಲ್ಲಿ ಮನುಷ್ಯನ ಆರೋಗ್ಯವನ್ನು ಕಾಪಾಡುತ್ತದೆ [ಹಿ. ಗೃ. ಸೂ. ೨-೪-೫]. ವರಗಳು, ಸಂಪತ್ತು ಇವುಗಳನ್ನೂ, ದೇಹದಾರ್ಢ್ಯ ಮತ್ತು ಅಮರತ್ವಗಳನ್ನು ಅನುಗ್ರಹಿಸುತ್ತವೆ [೧೦-೯೫, ೧೦-೩೦-೧೨]. ಅವರ ಸಹಾಯ ಮತ್ತು ಕೃಪಾ

ದವು ಪದೇ ಪದೇ ಪ್ರಾರ್ಥಿಸಲ್ಪಡುತ್ತದೆ [೭-೪೭-೪, ೭-೪೯-೧ರಿಂದಲೂ, ೧೦-೯ ನೇಸೂಕ್ತ ಮತ್ತು ೧೦-೩೦-೧೧], ಅಪಾಂನಪಾತನೊಡನೆ ಬರ್ಹಿಸ್ಸಿನ ಮೇಲೆ ಆಸೀನರಾಗಿ, ಸೋಮಾಹುತಿಯನ್ನು ಸ್ವೀಕರಿಸಲು ಆಹೂತರಾಗಿದಾರೆ [೧೦-೩೦-೧೪ ಮತ್ತು ೧೫].

ನೀರಿಗೆ ಮಧುವಿನ ಸಂಬಂಧವು ಉಕ್ತವಾಗಿದೆ. ಜನನಿಯರಾದ ಇವರು ತಮ್ಮ ಹಾರಿನೊಡನೆ ಮಧುವನ್ನು ಬೆರಸುತ್ತಾರೆ [೧-೨೩-೧೬]. ನೀರಿನ ಅಲೆಗಳಲ್ಲಿ ಮಧುವು ಹೆಚ್ಚಾಗಿದೆ. ಘೃತಮಿಶ್ರಿತವಾದ ಈ ನೀರು ಇಂದ್ರನ ಪಾನೀಯವಾಗಿ, ಅವನಿಗೆ ಮದವನ್ನುಂಟುಮಾಡಿತು [೭-೪೭-೧ ಮತ್ತು ೨]. ಇಂದ್ರನಿಗೆ ಅಪಾರ ಸಾಮರ್ಥ್ಯವನ್ನು ಕೊಟ್ಟ, ಮಧುಮಿಶ್ರಿತವಾದ ನೀರನ್ನನುಗ್ರಹಿಸಬೇಕೆಂದು ಅಪಾಂನಪಾತನು ಪ್ರಾರ್ಥಿತನಾಗಿದಾನೆ [೧೦-೩೦-೪]. ಮಧುವಿನಿಂದ ಸ್ನಿಗ್ಧವಾದ ಮತ್ತು ದೇವತೆಗಳಿಗೆ ಸಂತೋಷದಾಯಕವಾದ ಅಲೆಗಳನ್ನು ಇಂದ್ರನಿಗೋಸ್ಕರ ಹೊರಡಿಸಬೇಕೆಂದು ನೀರನ್ನು ಬೇಡಿದಾರೆ. ಏಕೆಂದರೆ, ಇಂದ್ರನು ನೀರನ್ನು ಬಂಧನದಿಂದ ಬಿಡುಗಡೆ ಮಾಡಿದನು. ಅಲೆಯು ಮದವನ್ನುಂಟುಮಾಡುತ್ತದೆ. ಮತ್ತು ಅದು ಇಂದ್ರನ ಪಾನೀಯ; ಆಕಾಶದಲ್ಲಿ ಜನಿತವಾಗುತ್ತದೆ [೧೦-೩೦-೨ರಿಂದ-೯]. ಈ ಕೆಲವು ವಾಕ್ಯಗಳಲ್ಲ, ನೀರೇ ಸೋಮವೆಂದೂ ಅಥವಾ ಸೋಮಮಿಶ್ರಿತವೆಂದೂ ಅಭಿಪ್ರಾಯವಿದೆ. ಬೇರೆ ಸಂದರ್ಭಗಳಲ್ಲಿ, ಸೋಮರಸವನ್ನು ತಯಾರಿಸಲು ಉಪಯೋಗಿಸುವ ನೀರು ಅಭಿಪ್ರೇತವಿರಬಹುದು. ಘೃತ, ಕ್ಷೀರ, ಮಧು ಇವುಗಳಿಂದ ಯುಕ್ತರಾಗಿದ್ದಾಗ, ಋತ್ವಿಜರಿಗೆ ಅನುಕೂಲರಾಗಿ, ಇಂದ್ರನಿಗೋಸ್ಕರ ಚೆನ್ನಾಗಿ ತಯಾರಿಸಿದ ಸೋಮರಸಧಾರಿಗಳಾಗಿರುತ್ತಾರೆ [೧೦-೩೦-೧೩] ತರುಣನು ತರುಣಿಯರನ್ನು ಕಂಡು ಆನಂದಿಸುವಂತೆ, ಸೋಮವು ನೀರಿನಲ್ಲಿ ಆನಂದಿಸುತ್ತದೆ. ಪ್ರಣಯಿಯಂತೆ ನೀರನ್ನು ಸಮೀಪಿಸುತ್ತಾನೆ. ಅವು ಯುವಕನ ಮುಂದೆ ತಲೆತಗ್ಗಿಸಿ ನಿಂತಿರುವ ಕನ್ಯೆಯರು [೧೦-೩೦-೫ರಿಂದ೬].

ಭೂಮಿಯ ದೇವತೆಗಳು

ನದಿಗಳು

ಸ್ವರ್ಗೀಯೋದಕದಂತೆ, ನದೀ ದೇವತೆಗಳೂ ಮುಖ್ಯಸ್ಥಾನವನ್ನೇ ಪಡೆದಿವೆ- ಒಂದು ಇಡೀ ಸೂಕ್ತವೇ [೧೦-೭೫) ಸಿಂಧು ನದಿಯನ್ನು ಸ್ತುತಿಸುತ್ತದೆ. ಅದರಲ್ಲಿ ಐದನೆಯ ಋಕ್ಕು, ಸಿಂಧುವಿನ ಉಪನದಿಗಳನ್ನು ಸ್ತುತಿಸುತ್ತದೆ. ಆರನೆಯ ಋಕ್ಕಿನಲ್ಲಿ, ಇನ್ನೂ ಅನೇಕ ನದಿಗಳು ಅದರ ಉಪನದಿಗಳೆಂದು ಉಕ್ತವಾಗಿವೆ. ಇನ್ನೊಂದು ಸೂಕ್ತದಲ್ಲಿ [೩-೩೩], ವಿಪಾಟ್ ಮತ್ತು ಶುತುದ್ರಿ ಎಂಬ ಜೋಡಿ ನದಿಗಳನ್ನು ಹೊಗಳಿದೆ.

ಇತರ ಎಲ್ಲಾ ನದಿಗಳಿಗಿಂತ ಸರಸ್ವತೀನದಿಗೇ ಹೆಚ್ಚು ಪ್ರಾಶಸ್ತ್ಯ. ದೇವತೆಯೆಂಬ ಭಾವನೆ ಈ ಸಂದರ್ಭದಲ್ಲಿ ಬಹಳ ಸೆಚ್ಚಾಗಿದ್ದರೂ, ದೇವತೆ ಮತ್ತು ನದಿಗಳಿಗಿರುವ ನಿಕಟ ಬಾಂಧವ್ಯ ಸರ್ವದಾ ನೆನಪಿನಲ್ಲಿರುತ್ತದೆ. ಈ ನದಿಗೆ ಮೂರು ಸೂಕ್ತಗಳೂ, ಅನೇಕ ಬಿಡಿ ಮಂತ್ರಗಳೂ ವಿನಿಯೋಗವಾಗಿವೆ. ಸರಸ್ವತೀ, ಸರಯೂ ಮತ್ತು ಸಿಂಧುಗಳು ದೊಡ್ಡ ನದಿಗಳು [೧೦-೭೫-೫], ಗಂಗಾ, ಯಮುನಾ, ಸರಸ್ವತೀ, ಶುತುದ್ರಿ, ಪರುಷ್ಣಿ, ಮತ್ತು ಇನ್ನೂ ಕೆಲವು ಪರಿಚಿತ ಮತ್ತು ಅಪರಿಚಿತವಾದವು ಒಟ್ಟು ೨೧ ನದಿಗಳು ಹೇಳಲ್ಪಟ್ಟಿವೆ [೧೦.೭೫-೫]. ಸರಸ್ವತಿಯು ದಡದಲ್ಲಿರುವ ರಾಜರು ಮತ್ತು ಜನರ ವಿಷಯ ಸ್ತುತಾಪಿತವಾಗಿದೆ [೭-೯೬-೨, ೮-೨೧-೧೮]. ಸರಸ್ವತಿಯು ಇತರ ಎಲ್ಲಾ ನದಿಗಳಿಗಿಂತ ಮಹಿಮೆಯಲ್ಲಿ ಹಿರಿಯದು; ರಸವತ್ತಾದ ನೀರುಳ್ಳದ್ದು; ನದಿಗಳಲ್ಲೆಲ್ಲಾ ಇದೊಂದೇ ಪರಿಶುದ್ಧವಾದುದು. ಆಕಾಶದ ಸಾಗರದಿಂದ ಹರಿದು ಬರುತ್ತದೆ [೭-೯೫-೧ ಮತ್ತು ೨,

೫-೪೩-೧೧ನ್ನು ಹೋಲಿಸಿ]. ಪ್ರಚಂಡವಾದ ಅಲೆಗಳಿಂದ ಪರ್ವತಶಿಖರಗಳನ್ನು ಕೊಚ್ಚಿಕೊಂಡು ಹೋಗುತ್ತದೆ. ಅದರ ಅಗಾಧವಾದ ಪ್ರವಾಹವು ಭೋರ್ಗರೆಯುತ್ತಾ, ರಭಸದಿಂದ ನುಗ್ಗುತ್ತದೆ [೬-೬೧-೨ ಮತ್ತು ೪]. ದೊಡ್ಡದರಲ್ಲಿ ಅತಿ ದೊಡ್ಡದೂ, ಚುರುಕಾಗಿರುವುದರಲ್ಲಿ ಅತಿ ಚುರುಕಾದುದೂ ಆದ ಸರಸ್ವತಿಯು ತನ್ನ ಕ್ಷೀರವನ್ನು ಉದಾರವಾಗಿ ಕೊಡಬೇಕೆಂದು ಪ್ರಾರ್ಥಿತವಾಗಿದೆ [೬-೬೧-೧೩]. ಹೊಸ ಜಾಗಗಳಿಗೆ ಸಾಗಿಸಬೇಡವೆಂದು ಮೊರೆಯಿಟ್ಟ್ಟದಾರೆ [೬-೬೧-೧೪]. ಆಕೆಗೆ ಏಳು ಜನ ಸೋದರಿಯರು ಮತ್ತು ಆಕೆಯು ಏಳು ವಿಧವಾಗಿದಾಳೆ [೬.೬೧-೧೦ ಮತ್ತು ೧೨]. ಅವಳು ನದೀ ಮಾತೃ ; ಏಳು ನದಿಗಳಲ್ಲಿ ಒಬ್ಬಳು [೭-೩೬-೬]. ನದಿಗಳು ಮತ್ತು ದೇವತೆಗಳಲ್ಲಿ, ಅತಿಶ್ರೇಷ್ಠಳಾದ ತಾಯಿಯು [೨-೪೧-೧೬]. ಅವಳಿಗೆ ಪಾವೀರವೀ [ಸಿಡಿಲಿನ ಮಗಳು] ಎಂದು ಹೆಸರು ಮತ್ತು ಒಬ್ಬ ವೀರನ ಪತ್ನಿ [೬-೪೯-೭]. ಭೂಭಾಗಗಳನ್ನೂ, ವಿಸ್ತಾರವಾದ ಆಕಾಶವನ್ನೂ ಮತ್ತು ಮೂರು ಗೃಹಗಳನ್ನೂ ಆಕ್ರಮಿಸುತ್ತಾಳೆ [೬-೬೧-೧೧ ಮತ್ತು ೧೨]. ಆಕಾಶದಿಂದ, ದೊಡ್ಡ ಪರ್ವತದಿಂದ ಯಾಗಶಾಲೆಗೆ ಬರಬೇಕೆಂದು ಆಹ್ವಾನವಿದೆ [೫-೪೩.೧೧] ಈ ಕಡೆಯ ಮೂರು ವಾಕ್ಯಗಳಿಂದ ಸರಸ್ವತಿಗೂ, ಪುರಾಣಾದಿಗಳಲ್ಲಿ ಗಂಗೆಗೆ ಹೇಳಿರುವಂತೆ, ಸ್ವರ್ಗಲೋಕದಲ್ಲಿ ಜನ್ಮವು ಸೂಚಿತವಾಗುತ್ತದೆ. ಒಂದು ಕಡೆ ಅವಳಿಗೆ ಅಸೂರ್ಯ (ದೇವತಾಸ್ತ್ರೀ) ಎಂಬ ಪ್ರಯೋಗವಿದೆ (೭-೯-೬-೧). ಪಿತೃದೇವತೆಗಳ ರಥದಲ್ಲಿ ಅವರ ಜೊತೆಯೆಲ್ಲಿಯೇ, ಆ ದೇವತೆಯು ಬಂದು, ಕುಶಾಸನದಲ್ಲಿ ಮಂಡಿಸುತ್ತಾಳೆ. (೧೦-೧೭-೮ ಮತ್ತು ೯), ಮುಂದಿನ ಎರಡು ಮಂತ್ರಗಳಲ್ಲಿಯೂ (೧೦-೧೭-೧೦ಮತ್ತು೧೧) ನದಿಯೇ ಉದ್ದಿಷ್ಟಳಾದುದರಿಂದ ಇಲ್ಲಿಯೂ ನದೀದೇವತೆಯೇ ಅಭಿಪ್ರೇತಳಾಗಿರಬೇಕು.

ಆಕೆಯು ಸ್ವತಃ ಪವಿತ್ರರನ್ನಾಗಿ ಮಾಡುತ್ತಾಳೆ. (೧-೩-೧೦) ಪ್ರವಾಹಗಳಿಂದ ಉಕ್ಕಿ ಹರಿಯುತ್ತಾ ಬಾರೆಂದು ಕರೆಯಲ್ಪಡುತ್ತಾಳೆ. (೬-೫೨-೬) ; ಆ ನೀರುಗಳು ಐಶ್ವರ್ಯ, ಸಂತಾನ, ಮತ್ತು ಅಮರತ್ವಗಳನ್ನು ಕೊಡುವುದರ ಜೊತೆಗೆ ಆಕೆಯು ವೀರ್ಯವನ್ನು ಅನುಗ್ರಹಿಸಬೇಕೆಂದು ಪ್ರಾರ್ಥಿತಳಾಗಿದಾಳೆ. (೧೦-೩೦-೧೨) ಅವಳು ವೀರ್ಯವನ್ನೂ ಸಂತಾನವನ್ನೂ ಅನುಗ್ರಹಿಸುತ್ತಾಳೆ. (೨-೪೧-೧೬) ಮತ್ತು ಸಂತಾನಪ್ರಾಪ್ತಿಗೆ ಸಹಾಯಕರಾದ ದೇವತೆಗಳೊಡನೆ ಸೇರಿಸಲ್ಪಟ್ಟ್ಟದಾಳೆ. (೧೦-೧೪೪-೨) ವಧ್ರ್ಯಶ್ವನಿಗೆ ದಿವೋದಾಸನೆಂಬ ಪುತ್ರನನ್ನನುಗ್ರಹಿಸಿದಳು. (೬-೬೧-೧) ಯಾವಾಗಲೂ ವಿಫಲವಾಗದ ಅವಳ ಸ್ತನಗಳು (ಐ. ಬ್ರಾ. ೪-೧೯ನ್ನು ಹೋಲಿಸಿ). ಸಮಸ್ತವಿಧವಾದ ಐಶ್ವರ್ಯವನ್ನೂ ಕೊಡುತ್ತವೆ. (೧-೧೬೪-೪೯) ಐಶ್ವರ್ಯ, ಸಮೃದ್ಧಿ ಮತ್ತು ಪುಷ್ಟಿದಾಯಕಳು. (೭-೯೫-೨ ; ೪-೨೧-೧೭ ; ೯-೬೭-೩೨ ; ೧೦-೧೭೭-೪ ಮತ್ತು ೯) ಮತ್ತು ಅನೇಕಸಲ ' ಸುಭಗಾ ' (ಸಮೃದ್ಧಳು.) ಎನ್ನಿಸಿಕೊಂಡಿದಾಳೆ. (೧-೪೯-೩ ; ೭-೯೫-೪ ಮತ್ತು ೬ ; ೪-೨೧-೧೭) ತಾಯಿ (ಅಂಬಾ) ಯಾದ ಇವಳು, ಅಪ್ರಸಿದ್ಧರಿಗೆ ಪ್ರಸಿದ್ಧಿಯನ್ನುಂಟುಮಾಡುತ್ತಾಳೆ (೨-೪೧-೧೬) ತನ್ನ ಆರಾಧಕರಲ್ಲಿ ಭಕ್ತಿ ನೂಡುವಂತೆ ಮಾಡುತ್ತಾಳೆ. ಅದನ್ನು ಹೆಚ್ಚಿಸುತ್ತಾಳೆ. (೧-೩-೧೦ ಮತ್ತು ೧೧ ; ೨-೩-೪ ; ೬-೬೧-೪). ಸ್ತುತಿಗೆ ಸಂಬಂಧಿಸಿದ ದೇವತೆಗಳೊಡನೆ ಅವಳೂ ಆಹೂತಳಾಗಿದಾಳೆ (೭-೩೭-೧೧ ; ೧೦-೬೫-೧೩). ದೇವತೆಗಳನ್ನು ದೂಷಿಸುವವರನ್ನು ನಾಶಮಾಡುತ್ತಾಳೆ ; ಕ್ರೂರಳು ಮತ್ತು ವೃತ್ರನನ್ನು ಕೊಲ್ಲುವವಳು (೬-೬೧-೩ ಮತ್ತು ೭). ಆದರೆ ತನ್ನನ್ನು ಪೂಜಿಸುವವರನ್ನು ರಕ್ಷಿಸಿ, ಅವರ ಶತ್ರುಗಳನ್ನು ನಾಶಪಡಿಸುತ್ತಾಳೆ (೭-೯೫-೪ ಮತ್ತು ೫ ; ೨-೩೦-೪ ; ೯-೬೯-೭).

ಇತರ ಅನೇಕ ದೇವತೆಗಳ ಜೊತೆಯಲ್ಲಿ ಸರಸ್ವತಿಯು ಆಹೂತಳಾಗುತ್ತಾಳೆ. ಪೂಷಣ ಮತ್ತು ಇಂದ್ರರನ್ನು ಬಿಟ್ಟರೆ ವಿಶೇಷವಾಗಿ ಮರುದ್ದೇವತೆಗಳ ಜೊತೆಯಲ್ಲಿಯೇ ಆಕೆಯು ಸ್ತುತಳಾಗಿರುವುದು. (೩-೫೪-೧೩;

೭-೯-೫ ; ೭-೩೯-೫ ; ೭-೪೦-೩). ಅವರಿಂದ ಅನುಸ್ಪತಳು (೨-೩೦-೪) ಅಥವಾ ಅವರು ಇವಳ ಮಿತ್ರರು (೭-೯೬-೨) ಅಶ್ವಿನಿಗಳೊಡನೆಯೂ ಒಂದುಕಡೆ ಸೇರಿಸಲ್ಪಟ್ಟಿದಾಳೆ. ಅಶ್ವಿನಿಗಳು ಇಂದ್ರನಿಗೆ ಸಹಾಯಮಾಡಿದಾಗ ಸರಸ್ವತಿಯು ಅವನ ದಣಿವಾರಿಸಿದ್ದಾಳೆ (೧೦-೧೩೧-೫). ದೇವತೆಗಳು ಯಾಗಮಾಡಿದಾಗ, ಅಶ್ವಿನಿಗಳು ತಮ್ಮ ವೈದ್ಯವೃತ್ತಿಯಿಂದಲೂ ಸರಸ್ವತಿಯು ತನ್ನ ವಾಕ್ಶಕ್ತಿಯಿಂದಲೂ ಇಂದ್ರನಿಗೆ ಚೈತನ್ಯವನ್ನುಂಟುಮಾಡಿದರು. (ವಾ. ಸಂ. ೧೯-೧೨). ಸರಸ್ವತಿಯು ಅಶ್ವಿನಿಗೆ ಪತ್ನಿ (ವಾ. ಸಂ. ೧೯-೯೪) ಆಪ್ರಿಸೂಕ್ತದಲ್ಲಿ ಎಂಟು ಮತ್ತು ಒಂಭತ್ತನೆಯ ಋಕ್ಕುಗಳಲ್ಲಿ ಇಳಾ ಮತ್ತು ಭಾರತಿಗಳೊಡನೆ ಅನೇಕಸಲ ಜೊತೆಗೂಡಿಸಲ್ಪಟ್ಟಿದಾಳೆ ; ಮೂರು ಜನರೂ ಸೇರಿ ದೇವತಾತ್ರಯವೆಂದು ಭಾವನೆ ; ಒಂದೊಂದುವೇಳೆ ಮಹೀ ಮತ್ತು ಹೋತ್ರಾ ಇವರೊಡನೆಯೂ ಸೇರಿರುವುದುಂಟು. ಈ ಸಂಯೋಜನೆಯು ಸರಸ್ವತಿಯ ಪವಿತ್ರತೆಯನ್ನು ಸೂಚಿಸಬಹುದು. ಸರಸ್ವತಿ ಮತ್ತು ದೃಷದ್ವತಿಗಳ ತೀರದಲ್ಲಿ ಅಗ್ನಿಯು ಉದ್ದೀಪ್ತನಾದನು. (೩-೨೩-೪). ಋಷಿಗಳು ಸರಸ್ವತಿಯ ದಡದಲ್ಲಿ ಯಾಗಮಾಡಿದರು. (ಐ. ಬ್ರಾ. ೨-೧೯)

ಋಗ್ವೇದದಲ್ಲಿ ಸರಸ್ವತಿಯು ನದೀದೇವತೆಯೇ ಹೊರತು, ಬೇರೆ ಯಾವ ಗುಣವೂ ಹೇಳಲ್ಪಟ್ಟಿಲ್ಲ. ಆದರೆ ಬ್ರಾಹ್ಮಣಗಳಲ್ಲಿ ಸರಸ್ವತಿಯು ವಾಗಭಿಮಾನಿದೇವತೆ (ಶ. ಬ್ರಾ. ೩-೯-೧-೭ ; ಐ. ಬ್ರಾ. ೩-೧-೧೦), ಪುರಾಣಾದಿಗಳಲ್ಲಿ ಜ್ಞಾನ ಮತ್ತು ವಾಕ್ಪಟುತ್ವ ಇವುಗಳಿಗೆ ಅಭಿಮಾನದೇವತೆ ಮತ್ತು ಬ್ರಹ್ಮನ ಪತ್ನಿ.

ಸರಸ್ವತೀನದಿಯು ಯಾವುದೆಂಬುದು ಸ್ಪಷ್ಟವಾಗಿ ಹೇಳಲಾಗುವುದಿಲ್ಲ. ಕೆಲವು ಪಾಶ್ಚಾತ್ಯ ವಿದ್ವಾಂಸರು, ಸರಸ್ವತಿಯು ಒಂದು ದೊಡ್ಡ ನದಿಯಿರಬೇಕು. (ಪ್ರಾಯಶಃ ಸಿಂಧು ನದಿ) ಎಂದು ಅಭಿಪ್ರಾಯಪಡುತ್ತಾರೆ. ಮತ್ತೆ ಕೆಲವರು ಮಧ್ಯಪ್ರದೇಶದಲ್ಲಿರುವ ಸಣ್ಣ ನದಿಯೇ ಇದ್ದಿರಬೇಕು, ಈಗ ಅದು ಮರಳಿನಲ್ಲಿ ಇಂಗಿಹೋಗಿ, ಸಮುದ್ರವನ್ನು ಸೇರದಿದ್ದರೂ, ಹಿಂದೆ ದೊಡ್ಡ ನದಿಯಾಗಿದ್ದು, ಸಮುದ್ರವನ್ನು ಸೇರುತ್ತಿತ್ತು ಎಂದು ಹೇಳುತ್ತಾರೆ. ಶುತುದ್ರಿಯ ಉಪನದಿಯೇ ಸರಸ್ವತಿಯೆಂದೂ ಕೆಲವರು ಹೇಳುತ್ತಾರೆ.

ಸರಸ್ವತ್ ಎಂಬ ಒಂದೇವತೆಯೆಂದು, ಸರಸ್ವತಿಯ ಸ್ತುತಿಯಾದ ಮೇಲೆ ಒಂದು ಸೂಕ್ತದ ಎರಡನೆಯ ಮತ್ತು ಮೂರನೆಯ ಋಕ್ಕುಗಳಲ್ಲಿ ಸ್ತುತವಾಗಿದೆ ; ಇಲ್ಲಿ ಭಾರ್ಯೆಯರು, ಸಂತತಿ, ರಕ್ಷಣೆ ಮತ್ತು ಸಮೃದ್ಧಿಗಳು ಪ್ರಾರ್ಥಿತವಾಗಿವೆ (೭-೯೬).

ಪೃಥ್ವೀ

ಪೃಥ್ವಿಯು (ಭೂಮಿಯು) ಸಾಧಾರಣವಾಗಿ ದ್ಯುದೇವತೆಯೊಡನೆ ದ್ವಂದ್ವದೇವತೆಯಾಗಿಯೇ ಸ್ತುತವಾಗಿರುವುದು. ಪೃಥ್ವಿಯೊಂದನ್ನೇ ಸ್ತುತಿಸುವುದು ಒಂದೇ ಒಂದು, ಮೂರು ಋಕ್ಕಿನ ಸಣ್ಣ ಸೂಕ್ತ (೫-೮೪). ಅಥರ್ವ ವೇದದಲ್ಲಿ ಒಂದು ದೊಡ್ಡ ಸೂಕ್ತವು ಪೃಥ್ವೀ ದೇವತಾಕವಾದುದು ಇದೆ (೮. ವೇ. ೧೨-೧). ವ್ಯಕ್ತೀಕರಣವು ಬಹಳ ಅಲ್ಪ ; ದೇವತೆಯ ಲಕ್ಷಣಗಳೆಲ್ಲವೂ ಭೌತಿಕವಾದುವು. ಉನ್ನತ ಪ್ರದೇಶಗಳು ಅನೇಕ ಇವೆ. ಪರ್ವತಗಳ ಭಾರವನ್ನು ಹೊತ್ತಿದಾಳೆ ; ಕಾಡಿನಲ್ಲಿರುವ ವೃಕ್ಷಗಳಿಗೆ ಆಧಾರಭೂತಳು (ಕ್ಷಮಾ). ಭೂಮಿಯನ್ನು ಫಲವತ್ತಾಗಿ ಮಾಡುತ್ತಾಳೆ ; ಮಳೆಯನ್ನು ಹರಡುತ್ತಾಳೆ ; ದೊಡ್ಡವಳು, ದೃಢವಾಗಿದಾಳೆ ; ಮತ್ತೆ ಪ್ರಕಾಶಯುಕ್ತಳು,

ಪೃಥ್ವೀ ಎಂದರೆ ವಿಸ್ತಾರವಾದುದು ಎಂದರ್ಥ. ಇಂದ್ರನು ಭೂಮಿಯನ್ನು ಎತ್ತಿಹಿಡಿದನು. ಮತ್ತು ಅದನ್ನು ವಿಸ್ತರಿಸಿದನು (ಪತ್ರಥಕ್. ೨-೧೫-೨). ಇತರ ಕಡೆಗಳಲ್ಲೂ (ತೈ. ಸಂ. ೭-೧-೫ ; ತೈ. ಬ್ರಾ. ೧-೧-೩-೫) ಪೃಥ್ವೀಪದವು ಪ್ರಥ್ (ವಿಸ್ತರಿಸು) ಎಂಬ ಧಾತುವಿನಿಂದಲೇ ನಿಷ್ಪತ್ತಿ ಮಾಡಲ್ಪಟ್ಟಿದೆ.

ಪೃಥ್ವಿಯನ್ನು ಪ್ರೇಮಸ್ವರೂಪಳಾದ ಪೃಥ್ವೀಮಾತೆಯೆಂತಲೂ, ಮೃತನಾದವನು ಅಕೆಯ ಹತ್ತಿರಕ್ಕೆ ಹೋಗುತ್ತಾನೆಂತಲೂ ಹೇಳಿದೆ (೧೦-೧೪-೧೦). ದ್ಯುದೇವತೆಯ ಜೊತೆಯಲ್ಲಿ ಹೇಳಿದಾಗಲೆಲ್ಲಾ, ಪೃಥ್ವಿಗೆ ಸಾಧಾರಣವಾಗಿ ಮಾತೆಯೆಂದು ಉಕ್ತವಾಗಿದೆ.

ಅಗ್ನಿ

ವೇದಗಳಲ್ಲಿ ಕರ್ಮಸಂಬಂಧವಾದ ಮಂತ್ರಗಳಿಗೆಲ್ಲಾ ಮುಖ್ಯೋದ್ದೇಶವಾದ ಅಗ್ನಿಯು ದೇವತೆಯಾದುದರಿಂದ, ಅಗ್ನಿಯೇ ಭೂದೇವತೆಗಳಲ್ಲೆಲ್ಲಾ ಮುಖ್ಯನು. ವೇದಗಳ ದೇವತೆಗಳಲ್ಲಿ, ಇಂದ್ರನ ನಂತರ ಪ್ರಮುಖ ದೇವತೆಯೆಂದರೆ ಅಗ್ನಿಯೇ. ಇನ್ನೂರಕ್ಕಿಂತ ಹೆಚ್ಚು ಸೂಕ್ತಗಳೂ, ಇನ್ನೂ ಅನೇಕ ಸೂಕ್ತಭಾಗಗಳೂ ಅಗ್ನಿಯನ್ನು ಸ್ತುತಿಸುತ್ತವೆ

ಅಗ್ನಿಯೆಂಬುದು ಬೆಂಕಿಯ ಸರಿಯಾದ ಹೆಸರಾದುದರಿಂದ, ಮನುಷ್ಯತ್ವಾರೋಪವು ಬಹಳ ಪ್ರಾರಂಭದೆಸೆಯಲ್ಲಿದೆ. ಅಗ್ನಿಯ ಅಂಗಾಂಗ ವರ್ಣನೆಯೆಲ್ಲವೂ, ಹೋಮಾಗ್ನಿಯ ನಾನಾ ಅಂಶಗಳನ್ನು ಪ್ರತಿಬಿಂಬಿಸುತ್ತದೆ. ಅವನಿಗೆ ಘೃತಮಯವಾದ ಬೆನ್ನುಭಾಗವೂ (೫-೪-೩ ; ಇತ್ಯಾದಿ), ಘೃತಮಯವಾದ ಮುಖವೂ (೩-೧-೧೪ ; ಇತ್ಯಾದಿ) ಮತ್ತು ಸುಂದರವಾದ ನಾಲಿಗೆಯೂ (೧-೧೪-೭) ಇವೆ. ಅವನಿಗೆ ಘೃತವೇ ಕೇಶ (೮-೪೯-೨), ಜ್ವಾಲೆಯೇಕೇಶ (೧-೪೫-೬ ; ಇತ್ಯಾದಿ) ಅಥವಾ ಕಂದುಬಣ್ಣದ ಕೂದಲು (೩-೨-೧೩), ಮತ್ತು ಕಂದುಬಣ್ಣದ ಗಡ್ಡ (೫-೭-೭). ಅವನಿಗೆ ಚೂಪಾದ (೮-೪೯-೩ ; ಇತ್ಯಾದಿ) ಅಥವಾ ಜ್ವಲಿಸುತ್ತಿರುವ ದವಡೆ (೧-೫೮-೫ ; ಇತ್ಯಾದಿ), ಬಂಗಾರದ (೫-೨-೩) ಅಥವಾ ಥಳಥಳಿಸುವ ಹಲ್ಲುಗಳು (೫-೭-೪) ಮತ್ತು ಕಬ್ಬಿಣದ ದವಡೆ ಹಲ್ಲುಗಳು (೧೦-೮೭-೨). ಅವನಿಗೆ ಕಾಲುಗಳು ಮತ್ತು ತಲೆಯಿಲ್ಲವೆಂದು ಒಂದು ಕಡೆ (೪-೧-೧೧) ಹೇಳಿದೆ ; ಆದರೆ ಇತರ ಸ್ಥಳಗಳಲ್ಲಿ ಅವನಿಗೆ ಉರಿಯುತ್ತಿರುವ ತಲೆ (೭-೩-೧) ಅಥವಾ ಮೂರು ತಲೆಗಳು ಮತ್ತು ಏಳು ಕಿರಣಗಳು (೧-೧೪೬-೧ ; ೨-೫-೩) ಎಂದು ಹೇಳಿದೆ. ಅವನು ವಿಶ್ವತೋಮುಖನು (೨-೩-೧ ; ಇತ್ಯಾದಿ). ಅವನ ನಾಲಿಗೆಯು ಅನೇಕ ಸ್ಥಳಗಳಲ್ಲಿ ಉಕ್ತವಾಗಿದೆ (೮-೬೧-೧೪ ; ಇತ್ಯಾದಿ) ಅವನಿಗೆ ಮೂರು (೩-೨೦-೨) ಅಥವಾ ಏಳು (ವಾ. ಸಂ. ೧೭-೭೯) ನಾಲಗೆಗಳು. ಅವನ ಅಶ್ವಗಳಿಗೂ ಏಳು ನಾಲಗೆಗಳು (೩-೬-೨) ಈ ಏಳಕ್ಕೂ ಒಂದೊಂದು ಹೆಸರಿಡಲ್ಪಟ್ಟಿದೆ ಘೃತವೇ ಅಗ್ನಿಯ ನೇತ್ರ (೩-೨೬-೭) ; ಅವನಿಗೆ ನಾಲ್ಕು (೧-೩೧-೧೩) ಸಾವಿರ (೧-೭೯-೧೨) ಕಣ್ಣುಗಳು ಮತ್ತು ಸಾವಿರ ಕೊಂಬುಗಳು (೬-೧-೪). ಅವನ ಕೈಗಳಲ್ಲಿ ಮನುಷ್ಯರಿಗೋಸ್ಕರ ಅನೇಕ ಬಹುಮಾನಗಳು ಸದಾ ಇರುತ್ತವೆ (೧-೭೨-೧). ಅವನು ಒಬ್ಬ ಧನುರ್ಧಾರಿ (೪-೪-೧) ಅಥವಾ ಅವನನ್ನು ಧನುರ್ಧಾರಿಗೆ ಹೋಲಿಸಿದೆ (೧-೭೦-೧೧) ; ಅವನು ತನ್ನ ಜ್ವಾಲೆಯನ್ನು ಕಬ್ಬಿಣದ ಅಲುಗನಂತೆ ಹದ ಮಾಡುತ್ತಾನೆ (೬-೩-೫).

ಅನೇಕ ಸಲ, ಅಗ್ನಿಯನ್ನು ನಾನಾ ಪ್ರಾಣಿಗಳಿಗೆ ಹೋಲಿಸಿರುವುದು, ಪ್ರಾಯಶಃ ಅವನ ನಾನಾ ಕಾರ್ಯಗಳನ್ನು ಸೂಚಿಸುವುದಕ್ಕಾಗಿಯೇ ಹೊರತು, ಅವನ ರೂಪವನ್ನು ವರ್ಣಿಸುವುದಕ್ಕೆರಲಾಂದು. ಪದೇ ಪದೇ ಅವನನ್ನು ವೃಷಭ ಎಂದು ಕರೆದಿದಾರೆ (೧-೫೮-೫ ; ಇತ್ಯಾದಿ). ಸ್ಥೂಲವಾದ ಕುತ್ತಿಗೆಯುಳ್ಳ, ಮಹಾ ಬಲಿಷ್ಠನಾಗಿರುವ ವೃಷಭ (೫-೨-೧೨). ಅದರಿಂದಲೇ, ಅವನು ಗುಟುರು ಹಾಕುತ್ತಾನೆ (೧೦-೮-೧), ಅಧಿಕವಾಗಿ ರೇತೋವಿಶಿಷ್ಟನು (೪-೫೫-೩) ; ಕೊಂಬುಗಳಿವೆ (೫-೧-೮ ; ೬-೧೬-೪೯) ; ಆ ಕೊಂಬುಗಳನ್ನು ಮಸೆಯುತ್ತಾನೆ ೮-೪೯-೧೩) ಮತ್ತು ಆಡಿಸುತ್ತಾನೆ. ಅವುಗಳಿರುವುದರಿಂದಲೇ, ಅವನನ್ನು ಹಿಡಿಯುವುದು ಕಷ್ಟವಾಗಿದೆ (೧-೧೪೦-೬) ಎಂದು ಮುಂತಾಗಿ ಹೇಳಿರುವುದು. ಜನಿಸಿದಾಗ ಕರು (ವತ್ಸ)ವಾಗಿದ್ದನೆಂದು ಅನೇಕ ಸಲ ಹೇಳ

ಲ್ಪಟ್ಟಿದೆ. ಅನೇಕ ಸ್ಥಳಗಳಲ್ಲಿ ಅಗ್ನಿಯು ಅಶ್ವಕ್ಕೆ ಹೋಲಿಸಲ್ಪಟ್ಟಿದಾನೆ (೧-೫೮-೨ ; ಇತ್ಯಾದಿ) ಅಥವಾ ಅಶ್ವವೆನ್ನಿಸಿಕೊಂಡಿದಾನೆ (೧-೧೪೯-೩ ; ೬-೧೨-೬). ಅವನು ಅಶ್ವದಂತೆ (೨-೪-೪) ಅಡಿಸುವ ಬಾಲವು ಜ್ವಾಲೆಯಿರಬೇಕು. ಯಾಗಕರ್ತೃಗಳಿಂದ ಶುದ್ಧಿಮಾಡಲ್ಪಟ್ಟ ಅಗ್ನಿಯು ಚೆನ್ನಾಗಿ ಮಾಲೀಸು ಮಾಡಿದ ಕುದುರೆಗೆ ಹೋಲಿಸಲ್ಪಟ್ಟಿದಾನೆ (೧-೬೦-೫ ; ಇತ್ಯಾದಿ). ಯಾಗಮಾಡುವವರು ಅವನನ್ನು ಕುದುರೆಯಂತೆ, ನಡೆಯಿಸುತ್ತಾರೆ (೩-೨-೭), ಉದ್ರೇಕಗೊಳಿಸುತ್ತಾರೆ ಮತ್ತು ಚಲಿಸುವಂತೆ ಮಾಡುತ್ತಾರೆ (೭-೭-೧ ಇತ್ಯಾದಿ). ಅವರು ತಮ್ಮ ವಶಪಡಿಸಿಕೊಂಡು ತಮ್ಮ ಇಚ್ಛೆಬಂದಂತೆ ನಡೆಸಲು ಅಪೇಕ್ಷಿಸುವ ಕುದುರೆಯು ಅಗ್ನಿಯೇ. (೨-೫-೧ ; ೩-೨೭-೩). ದೇವತೆಗಳನ್ನು ತರುವ ಅಶ್ವವೆಂದು ಅವನನ್ನು ಹುರಿದುಂಬಿಸುತ್ತಾರೆ (೩-೨೭-೧೪). ಯಾಗ ಶಾಲೆಗಳಲ್ಲಿ ಯೂಪಗಳಿಗೆ (೨-೨-೧) ಅಥವಾ ಯಜ್ಞಾಂಗವಾದ ಕರ್ಮದಲ್ಲಿ ಯೂಪಕ್ಕೆ (೧-೧೪೩-೭) ಅಗ್ನಿಯನ್ನು ಸಂಯೋಜನೆ ಮಾಡಿದಾರೆ. ದೇವತೆಗಳಿಗೆ ಹುತವಾದುದನ್ನು ಒಯ್ಯುವುದಕ್ಕೋಸ್ಕರ ಅಗ್ನಿಯನ್ನು (ಅಶ್ವವನ್ನು) ಹೂಡುತ್ತಾರೆ (೧೦-೫೧-೭). ಕೆನೆಯುತ್ತಿರುವ ಕುದುರೆಗೆ ಹೋಲಿಸಿದೆ (೩-೨೬-೩) ಅಥವಾ ಅವನೇ ಕೆನೆಯುತ್ತಿರುವ ಕುದುರೆ (೧-೩೬-೪) ಎಂದಿದೆ ಜಯಗಳಿಸಿದ ಕುದುರೆಯಂತೆ ಇದಾನೆ (೮-೯೧-೧೨); ಅಥವಾ ಜನಗಳಿಗೆ, ಅಪಾಯದಿಂದ ತಪ್ಪಿಸಿಕೊಳ್ಳಲು ಸಹಾಯಮಾಡಿದಾನೆ (೪-೨-೪). ಇವುಗಳಲ್ಲದೇ ಅಗ್ನಿಯು ಒಂದು ಪಕ್ಷಿಯಂತಿದಾನೆ. ಅವನೇ ಆಕಾಶದ ಗಿಡುಗ (೭-೧೫-೪) ಮತ್ತು ಒಂದು ದೇವಲೋಕದ ಪಕ್ಷಿ (೧-೧೬೪-೫೨). ನೀರಿನಲ್ಲಿ ಮನೆಮಾಡಿಗೊಂಡಿರುವ ಇವನು ಹಂಸಪಕ್ಷಿಯಂತಿದಾನೆ (೧-೬೫-೯). ಗಿಡದ ಮೇಲೆ ಹಕ್ಕಿಯು ಗೂಡು ಕಟ್ಟುವಂತೆ, ಅಗ್ನಿಯೂ ಕಾಡನ್ನು ವಶಪಡಿಸಿಕೊಳ್ಳುತ್ತಾನೆ (೧-೬೬-೨ ; ೬-೩-೫ ; ೧೦-೯೧-೨). ಅವನಿಗೆ ರೆಕ್ಕೆಗಳಿವೆ (೧-೫೮-೫ ; ೨-೨-೪) ಮತ್ತು ಅವನ ಗಮನವು ಹಾರಿಕೆ (೬-೩-೭ ; ೬-೪-೬ ಇತ್ಯಾದಿ). ವೇಗವಾಗಿ ಹಾರಿ ದೇವತೆಗಳನ್ನು ಸಮೀಪಿಸುತ್ತಾನೆ (೧೦-೬-೪). ಒಂದು ಸಲ ಅವನನ್ನು ಬಸುಗುಟ್ಟುತ್ತಿರುವ ಸರ್ಪವೆಂದೂ ವರ್ಣಿಸಿದೆ (೧-೭೯-೧).

ಪದೇಪದೇ ನಿರ್ಜೀವ ಪಾಣಿಗಳಿಗೂ ಅಗ್ನಿಯು ಹೋಲಿಸಲ್ಪಟ್ಟಿದಾನೆ. ಸೂರ್ಯನಂತೆ, ಅಗ್ನಿಯೂ ಸುವರ್ಣವನ್ನು ಹೋಲುತ್ತಾನೆ (೨-೨-೪ ; ೭-೩-೬). ನಾಲಗೆಯನ್ನು ಚಾಚಿದಾಗ, ಅವನು ಕೈಗೊಡಲಿಯಂತಿರುತ್ತಾನೆ (೬-೩-೪ ; ೧೦೧೭೯-೩ ಇತ್ಯಾದಿ). ಅವನೇ ಒಂದು ರಥ (೩-೧೧-೫) ಅಥವಾ ರಥದಂತಿದಾನೆ (೧-೧೪೧-೮ ಇತ್ಯಾದಿ) ; ಐಶ್ವರ್ಯಾದಿಗಳನ್ನು ತರುತ್ತಾನೆ (೧-೫೮-೩ ; ೩-೧೫-೫) ಅಥವಾ ಯುದ್ಧದಲ್ಲಿ ಎದುರಿಸಲ ಸಾಧ್ಯನು (೧-೬೬-೬). ಇತರರಿಂದ ನಡೆಸಲ್ಪಡುವ, ತುಂಬಿದ ರಥದಂತೆ, ಇವನೂ ಯಾಗಶಾಲೆಗೆ ಸಾಗಿಸಲ್ಪಡುತ್ತಾನೆ (೧೦-೧೭೬-೩). ಐಶ್ವರ್ಯ (೧-೫೮-೬, ೧-೬೦-೧) ಅಥವಾ ಪಿತ್ರಾರ್ಜಿತವಾಗಿ ಬಂದ ಐಶ್ವರ್ಯಕ್ಕೆ (೧-೭೩-೧) ಉಪಮಿತನಾಗಿದಾನೆ.

ವನ (೨-೭-೬) ಅಥವಾ ಘೃತವು (೭-೩-೧) ಅವನ ಆಹಾರ ಮತ್ತು ಕರಗಿಸಿದ ಬೆಣ್ಣೆಯೇ ಅವನ ಪಾನೀಯ (೨-೭-೬ ; ೧೦-೬೯-೨) ಅವನ ಬಾಯೊಳಗೆ ಸುರಿದ ತುಪ್ಪದಿಂದ ತೃಪ್ತಿಹೊಂದುತ್ತಾನೆ (೩-೨೧-೧, ೫-೧೧-೩, ಇತ್ಯಾದಿ) ಮತ್ತು ಎಣ್ಣೆಯನ್ನು ಸೇವಿಸುತ್ತಾನೆ (ಅ. ವೇ. ೧-೭-೨). ತನ್ನ ಹರಿತವಾದ ಹಲ್ಲುಗಳಿಂದ ಕಾಡುಗಳನ್ನು ಅಗಿದು, ತಿನ್ನುತ್ತಾನೆ ಮತ್ತು ತನ್ನ ನಾಲಗೆಯಿಂದ ಕಪ್ಪಾಗಿ ಮಾಡುತ್ತಾನೆ (೧-೧೪೩-೫ ; ೬-೬೦-೧೦ ; ೧೦-೭೯-೨). ಅವನು ಸರ್ವಭಕ್ಷಕ (೮-೪೪-೨೬). ದಿನಕ್ಕೆ ಮೂರುಸಲ ಪುಷ್ಟಿಕರವಾದ ಆಹಾರವನ್ನು ಸೇವಿಸುತ್ತಾನೆ (೪-೧೨-೧, ೧-೧೪೦-೨ ; ೭-೧೧-೩ಗಳನ್ನು ಹೋಲಿಸಿ). ದೇವತೆಗಳು ಹೋಮದ್ರವ್ಯವನ್ನು ಸ್ವೀಕರಿಸಲು, ಅಗ್ನಿಯೇ ಮುಖ ಮತ್ತು ನಾಲಗೆ (೨-೧-೧೩ ಮತ್ತು ೧೪) ; ದೇವತೆಗಳಿಗೆ

ಆಹಾರಕೊಡುವ ಚಮಚಗಳು ಇವನ ಜ್ವಾಲೆಗಳೇ (೧-೭೬-೫ ; ೧೦-೬-೪). ಆದರೆ, ವಿಶೇಷವಾಗಿ, ಹೋಮ ದ್ರವ್ಯಗಳನ್ನು ಸ್ವೀಕರಿಸಬೇಕೆಂದು ಪ್ರಾರ್ಥಿಸಿರುವುದು ಇವನನ್ನೇ (೩-೨೧-೧೦ಂದಳ : ೩-೨೪-೧೦ಂದಟ) ನೆಟ್ಟಗೆ ನಿಂತಿರುವ, ಮತ್ತು ದೇವತೆಗಳಗಭಿಮುಖವಾದ ದೇಹವುಳ್ಳವನಾಗಿ, ಅರ್ಪಿತವಾದ ಘೃತವನ್ನು ಸ್ವೀಕರಿಸಲು ಮುಗ್ಗಿಬರುತ್ತಾನೆ (೧-೧೨೭-೧). ಅಗ್ನಿಗೆ ಸಾಧಾರಣವಾಗಿ ಸೌದೆ ಅಥವಾ ಘೃತವೇ ಆಹಾರವಾದರೂ, ಒಂದೊಂದು ವೇಳೆ ಸೋಮಪಾನಕ್ಕೂ ಆಹ್ವಾನಿತನಾಗುತ್ತಾನೆ. ಅಂತಹ ಸಂದರ್ಭಗಳಲ್ಲೆಲ್ಲಾ ಇತರ ದೇವತೆಗಳೊಡನೆಯೇ ಅವನಿಗೆ ಆಹ್ವಾನ (೧-೧೪-೧೦, ೧-೧೯-೯, ೧-೨೧-೧ ಮತ್ತು ೩ ; ೨-೩೬-೪). ಅವನಿಗೆ ಸೋಮಗೋಪ (ಸೋಮವನ್ನು ರಕ್ಷಿಸುವವನು)ನೆಂದು ವಿಶೇಷಣವಿದೆ (೧೦-೪೫-೫ ಮತ್ತು ೧೨). ಯಾಗಕ್ಕೆ ಬರಬೇಕೆಂದೂ (೧೦-೯೮-೯), ಬಂದು ದೇವತೆಗಳೊಡನೆ ದರ್ಭಾಸನವನ್ನು ಅಲಂಕರಿಸಬೇಕೆಂದೂ (೩-೧೪-೨ ; ೫-೧೧-೨ ; ೫-೨೬-೫ ; ೭-೧೧-೨ ; ೭-೪೩-೩ನ್ನು ಹೋಲಿಸಿ) ಪ್ರಾರ್ಥಿತನಾಗಿದಾನೆ.

ಅಗ್ನಿಯ ಪ್ರಕಾಶವು ಬಹಳ ವಿಸ್ತಾರವಾಗಿ ಚರ್ಚಿಸಿರುವುದು ಸ್ವಾಭಾವಿಕವಾಗಿಯೇ ಇದೆ. ಅವನದು ಶುಭ್ರವಾದ ಕಾಂತಿ (೨-೧೦-೨ ಇತ್ಯಾದಿ) ; ಜಾಜ್ವಲ್ಯಮಾನವಾದ ಜ್ವಾಲೆಗಳು (೬-೧೦-೩) ; ಪ್ರಕಾಶಮಾನವಾದ ಜ್ವಾಲೆಗಳು (೭-೧೫-೧೦ ಇತ್ಯಾದಿ), ಸ್ಪಷ್ಟವಾದ ಉರಿ (೮-೪೩-೩೧), ಬೆಳಗುವ ಬಣ್ಣ (೧-೧೪೦-೧, ೫-೨-೩). ಅವನದು ಸುವರ್ಣವರ್ಣವಾದ ರೂಪ (೪-೩-೧, ೧೦-೨೦-೯). ಸೂರ್ಯನಂತೆ ಹೊಳೆಯುತ್ತಾನೆ (೧-೧೪೯-೩ ; ೭-೩-೬). ಅವನ ಪ್ರಭೆಯು ಉಷಸ್ಸಿನ, ಸೂರ್ಯನ ಅಥವಾ ಸಿಡಲಿನ ಕಿರಣಗಳಂತೆ (೧೦-೯೧-೪ ಮತ್ತು ೫). ರಾತ್ರಿಯಲ್ಲೂ ಪ್ರಕಾಶಿಸುತ್ತಾನೆ (೫-೭-೪). ಸೂರ್ಯನಂತೆ ತನ್ನ ಕಿರಣಗಳಿಂದ ಕತ್ತಲನ್ನು ಹೋಗಲಾಡಿಸುತ್ತಾನೆ (೮-೪೩-೩೨). ಅವನು ತಮೋ ನಿವಾರಣೆ ಮಾಡುವವನು ಮತ್ತು ರಾತ್ರಿಯ ಮುಬ್ಬಿನ ಲ್ಲಿಯೂ ನೋಡಬಲ್ಲವನು (೧-೯೪-೫ ; ೭-೯-೨). ಉದ್ದೀಪ್ತನಾಗಿ, ಕತ್ತಲಿನ ಬಾಗಿಲನ್ನು ತೆರೆಯುತ್ತಾನೆ (೩-೫-೧). ಅಗ್ನಿಯು ಜನಿಸಿದಾಗ, ಅಂಧಕಾರವೃತವಾದ ಭೂಮಿಯೂ ಮತ್ತು ಆಕಾಶವೂ ಗೋಚರವಾಗುತ್ತವೆ. (೧೦-೪೮-೨). ಉಷಃಕಾಲದಲ್ಲಿ ಬೆಂಕಿಯನ್ನು ಹೊತ್ತಿಸುತ್ತಾರೆ ; ಅಗ್ನಿಗೊಬ್ಬನಿಗೇ ಉಷರ್ಬುಧನೆಂದು ಹೆಸರು.

ಅದರೆ, ಅಗ್ನಿಯ ಸಂಚಾರಮಾರ್ಗ ಮತ್ತು ರಥನೇಮಿಗಳು, ಎಲ್ಲವೂ ಕಪ್ಪು ಬಣ್ಣ (೧-೧೪೧-೭ ; ೨-೪-೬ ಮತ್ತು ೭, ೬-೬-೧, ೭-೮-೨, ೮-೨೩-೧೯), ಅವನ ಕುದುರೆಗಳು ಕಪ್ಪಗಿರುವ ಜಾಡುಗಳನ್ನು ಮಾಡುತ್ತವೆ (೧-೧೪೦-೪). ಗಾಳಿಯಿಂದ ಚೇತನಗೊಳಿಸಲ್ಪಟ್ಟು, ಕಾಡುಗಳಲ್ಲಿ ರಭಸದಿಂದ ನುಗ್ಗುತ್ತಾನೆ (೧-೫೮-೪ ಮತ್ತು ೫) ; ಕಾಡುಗಳನ್ನು ಆಕ್ರಮಿಸಿ, ಭೂಮಿಯಕೇಶಗಳನ್ನೆಲ್ಲಾ ಛೇದಿಸುತ್ತಾನೆ (೧-೬೫-೪) ; ಕ್ಷುರಕನಂತೆ ಭೂಮಿಯ ಕೇಶ ಛೇದನ ಮಾಡುತ್ತಾನೆ (೧೦-೧೪೨-೪).

ಅವನ ಜ್ವಾಲೆಗಳು ಸಮುದ್ರದ ಅಲೆಗಳಂತೆ ಭೋರ್ಗರೆಯುತ್ತವೆ. (೧-೪೪-೧೨) ಅವನ ಧ್ವನಿಯು ಗಾಳಿಯ ಶಬ್ದದಂತೆ ಅಥವಾ ಆಕಾಶದ ಗುಡುಗಿನಂತೆ (೫-೨೫-೪ ; ೭-೩-೬) ಆಕಾಶದಂತೆ (೧೦-೪೫-೪) ; ಅಥವಾ ಪರ್ಜನ್ಯನಂತೆ (೪-೯೧-೫) ಅಥವಾ ಸಿಂಹದಂತೆ (೩-೨-೧೧) ಗರ್ಜಿಸುತ್ತಾ ಕಾಡಿನ ಮರಗಳನ್ನು ಆಕ್ರಮಿಸಿದಾಗ ಗೂಳಿಯಂತೆ ಆರ್ಭಟಿಸುತ್ತಾನೆ ಮತ್ತು ಹುಲ್ಲನ್ನು ನಾಶಮಾಡುವ ಅವನ ಕೆಡಿಗಳು ಹಾರುವ ಶಬ್ದಕ್ಕೆ ಹಕ್ಕಿಗಳೆಲ್ಲಾ ಬೆದರುತ್ತವೆ. (೧೪೪-೧೦ ಮತ್ತು ೧೧) ಅಗ್ನಿಯನ್ನು ಹತೋಟಿಗೆ ತರುವುದು (೧-೧೪೬-೫). ಮರುತ್ತ್ತುಗಳನ್ನು ಅಥವಾ ದಿಕ್ಪಾಲಾಗಿ ಚದುರುತ್ತಿರುವ ಸೈನ್ಯವನ್ನು ಅಥವಾ ಸಿಡಿಲನ್ನು ಹತೋಟಿಗೆ ತರುವಷ್ಟೇ ಸುಲಭ.

ಅಗ್ನಿಯು ಊರ್ಧ್ವಮುಖನಾಗಿ ಉರಿಯುತ್ತಾನೆ (೬-೧೫-೨). ಗಾಳಿಯಿಂದ ಉದ್ರೇಕಗೊಳಿಸಲ್ಪಟ್ಟು, ಅವನ ಜ್ವಾಲೆಗಳು ಆಕಾಶದ ಕಡೆಗೆ ಚಾಚಿಕೊಳ್ಳುತ್ತವೆ (೮-೪೩-೪). ಅವನ ಹೊಗೆಯು ಅಲುಗಾಡುತ್ತದೆ ಮತ್ತು ಅವನ ಜ್ವಾಲೆಯನ್ನು ಹಿಡಿಯಲಾಗುವುದಿಲ್ಲ (೮-೨೩-೧). ಕೆಂಪಾದ ಹೊಗೆಯು ಆಕಾಶದ ಕಡೆಗೆ ಹೋಗುತ್ತದೆ. [೭-೩-೩; ೭-೧೬-೩] ಹೊಗೆಯು ಆಕಾಶದಲ್ಲಿ ಹರಡಿಕೊಳ್ಳುತ್ತದೆ (೬-೨-೬). ಸ್ತಂಭವನ್ನು ನಿಲ್ಲಿಸುವವನಂತೆ, ಅಗ್ನಿಯು ಧೂಮದಿಂದ ಆಕಾಶವನ್ನು ಬೀಳದಂತೆನಿಲ್ಲಿಸುತ್ತಾನೆ (೪-೬-೨). ತನ್ನ ಮೇಲ್ಭಾಗದಿಂದ ಮುಗಿಲನ್ನು ಮುಟ್ಟಿ, ಸೂರ್ಯರಶ್ಮಿಗಳೊಡನೆ ಬೆರೆಯುತ್ತಾನೆ (೭-೨-೧). ತನ್ನ ನಾಲಗೆಯಿಂದ ಅಂತರಿಕ್ಷವನ್ನಾವರಿಸುತ್ತಾನೆ (೮-೬೧-೧೮). ಧೂಮಕೇತುವೆನ್ನುವುದು ಅಗ್ನಿಗೆ ಪದೇ ಪದೇ ಪ್ರಯೋಗಿಸಲ್ಪಟ್ಟಿದೆ.

ಅಗ್ನಿಯು ಸಿಡಿಲಿನ (೩-೧೪-೧,) ತೇಜಃಪುಂಜವಾದ (೧-೧೪೦-೧), ಶುಭ್ರವಾದ (೧-೧೪೧-೧೨), ಹೊಳೆಯುವ (೫-೧-೧೧), ಉಜ್ವಲವಾದ (೧೦-೧-೫), ಸುವರ್ಣಮಯವಾದ (೪-೧-೮) ಅಥವಾ ರಮಣೀಯವಾದ (೪-೨-೪) ರಥದಲ್ಲಿ ಸಂಚರಿಸುತ್ತಾನೆ. ಅದಕ್ಕೆ ಎರಡು ಅಥವಾ ಹೆಚ್ಚು ಕುದುರೆಗಳು. ಆ ಕುದುರೆಗಳಿಗೆ ಬೆಣ್ಣೆಯಂತೆ ಬೆನ್ನು (೧-೧೪೪-೬); ಅವು ಕಂದುಬಣ್ಣ (೭-೪೨-೨); ಸುಂದರ (೪-೨-೨); ಸರ್ವವಿಧವಾದ ರೂಪಗಳು (೧೦-೭೦-೨); ಚುರುಕು (೨-೪-೨); ಗಾಳಿಯಿಂದ ಓಡಿಸಲ್ಪಡುತ್ತವೆ (೧-೯೪-೧೦) ಮತ್ತು ಇಚ್ಛಾಮಂತ್ರದಿಂದಲೇ ನಿಯುಕ್ತವಾಗುತ್ತವೆ (೧-೧೪೪-೬). ದೇವತೆಗಳನ್ನು ಕರೆಯುವುದಕ್ಕೋಸ್ಕರ ಅಗ್ನಿಯು ಅವುಗಳನ್ನು ಹೂಡುತ್ತಾನೆ (೧-೧೪೪-೧೨; ೩-೬-೬; ೪-೬೪-೧). ಯಜ್ಞದ (೧೦-೯೨-೧ ಇತ್ಯಾದಿ) ಸಾರಥಿ (೧-೨೫-೩ ಇತ್ಯಾದಿ). ಅಶ್ವಗಳಿಂದ ಯುಕ್ತವಾದ ರಥದಲ್ಲಿ ದೇವತೆಗಳನ್ನು ಕರೆತರುತ್ತಾನೆ (೩-೬-೯). ಅದೇ ರಥದಲ್ಲಿ ತಾನೂ ಬರುತ್ತಾನೆ (೩-೪-೧೧; ೭-೧೧-೧) ಅಥವಾ ಅವರಿಗಿಂತ ಮುಂಚೆಯೇ ಬರುತ್ತಾನೆ (೧೦-೭೦-೨). ಯಾಗಕ್ಕೆ ವರುಣನನ್ನೂ, ಆಕಾಶದಿಂದ ಇಂದ್ರನನ್ನೂ, ವಾಯುಮಂಡಲದಿಂದ ಮರುತ್ತುಗಳನ್ನೂ ಕರತರುತ್ತಾನೆ (೧೦-೭೦-೧೧).

ದ್ಯುದೇವತೆಯೇ ಅಗ್ನಿಯ ಜನಕ; ಅವನೇ ಅಗ್ನಿಯನ್ನು ಉತ್ಪತ್ತಿಮಾಡಿದವನು (೧೦-೪೫-೪). ಅಗ್ನಿಯು ಆಕಾಶದ ಶಿಶು (೪-೧೫-೬; ೬-೪೯-೨), ಆ 'ಅಸುರ'ನ ಹೊಟ್ಟೆಯಿಂದ ಜನಿಸಿದನಂತೆ (೩-೨೯-೪). ದ್ಯಾವಾಪೃಥಿವಿಗಳ ಪುತ್ರನೆಂದು ಅನೇಕ ಸಲ (೩-೨-೨; ೩.೩-೧೧; ೩-೨೫-೧; ೧೦-೧-೨; ೧೦-೨-೭; ೧೦-೧೪೦-೨) ಹೇಳಿದೆ. ತ್ವಷ್ಟೃ ಮತ್ತು ಅಬ್ದೇವತೆಗಳ, ಮತ್ತು ಸ್ವರ್ಗ ಮತ್ತು ಭೂಮಿಗಳ, ಪುತ್ರನೆಂದೂ (೧೦-೨-೭; ೧೦-೪೬-೯) ಹೇಳಿದೆ. ತ್ವಷ್ಟೃವಿನ (೧-೯೫-೨) ಅಥವಾ ಅಬ್ದೇವತೆಯ ಮಗ (೧೦-೯೧-೬; ಅ. ವೇ. ೧-೩೩-೧)- ಉಷೋದೇವಿಯರು ಅಗ್ನಿ, ಸೂರ್ಯ ಮತ್ತು ಯಜ್ಞಗಳನ್ನು (೭-೭೮-೩), ಅಥವಾ ಇಂದ್ರಾವಿಷ್ಣುಗಳು, ಅಗ್ನಿ ಸೂರ್ಯ ಮತ್ತು ಉಷಸ್ಸುಗಳನ್ನು [೭-೯೯-೪] ಅಥವಾಇಂದ್ರನು ಎರಡು ಶಿಲೆಗಳ ಮಧ್ಯೆ ಅಗ್ನಿಯನ್ನು (೨-೧೨-೩), ಉತ್ಪತ್ತಿ ಮಾಡಿದರೆಂದು ಹೇಳಿದೆ. ಅಗ್ನಿಯು ಇಳೆಯ ಮಗನೆಂದೂ (೩-೨೯-೩) ಅಥವಾ ಯಜ್ಞದ ಅಂಕುರವೆಂದೂ (೬-೪೮-೫) ಕರೆಯಲ್ಪಟ್ಟಿದಾನೆ. ಒಂದೊಂದು ಸಲ, ಅಗ್ನಿಯು ದೇವತೆಗಳಿಂದ. (೬-೭-೧; ೮-೯೧-೧೭), 'ಆರ್ಯ'ನಿಗೆ ಬೆಳಕಿಗೋಸ್ಕರ (೧-೫೯-೨) ಅಥವಾ ಮನುಷ್ಯನಿಗೋಸ್ಕರ (೧೦-೪೬-೯) ಉತ್ಪತ್ತಿ ಮಾಡಲ್ಪಟ್ಟು ಮನುಷ್ಯರಲ್ಲಿ ನಿಹಿತನಾದನು (೧-೩೬-೧೧; ೨-೪-೩; ೬-೧೬-೧; ೮-೭೩-೨). ಅಗ್ನಿಯು ದೇವತೆಗಳಿಗೆ ತಂದೆಯು (೧-೬೯-೧). ಆದಾತತಃ ಭಿನ್ನವಾದ ಈ ಅಭಿಪ್ರಾಯಗಳು ದೃಷ್ಟಿಭೇದಗಳಿಂದ ಜನಿತವಾಗಿವೆಯೆಂಬದು ಸ್ಪಷ್ಟವಾದ ವಿಷಯ.

ಅಗ್ನಿ ಸಂಬಂಧವಾದ ಇತಿಹಾಸಗಳು ಅವನ ವಿಷಯವಾಗಿ ಹೆಚ್ಚಿಗೆ ಏನನ್ನೂ ತಿಳಿಸುವುದಿಲ್ಲ; ಯಜ್ಞಾಗ್ನಿಯಾಗಿ ಅವನು ಮಾಡುವ ಕಾರ್ಯವೊಂದೇ ಮುಖ್ಯವಾದುದು; ಇದಲ್ಲದಿದ್ದರೆ, ಅವನ ಜನನ, ರೂಪವಿಶೇಷಗಳು ಮತ್ತು ವಾಸಸ್ಥಳಗಳು ಇವುಗಳ ವಿಷಯವಾಗಿ ಅಲ್ಪಸ್ವಲ್ಪ ತಿಳಿದುಬರುತ್ತದೆ.

ಅವನ ಜನನ ವಿಷಯವಾಗಿ ತಿಳಿದುಬರುವ ಭಿನ್ನಾಭಿಪ್ರಾಯಗಳು ನಿಜವಾಗಿ ಭಿನ್ನವಾದವುಗಳಲ್ಲ. ಜನ್ಮಸ್ಥಾನಗಳಿಗನುಸಾರವಾಗಿ ಬೇರೆ ಬೇರೆ ರೀತಿಯಾಗಿ ನಿರೂಪಣೆಯಿದೆ. ಅರಣಿಗಳಿಂದ ಮಥಿತನಾಗಿ ಭೂಮಿಯಲ್ಲಿ ಪ್ರತಿನಿತ್ಯವೂ ಜನಿಸುತ್ತಾನೆ (೩-೨೯-೨ : ೩-೨೩-೨ ಮತ್ತು ೩ ; ೭-೧-೧ ; ೧೦-೭-೯). ಈ ಸಂದರ್ಭದಲ್ಲಿ ಅರಣಿಗಳೇ ಅವನ ಮಾತಾಪಿತೃಗಳು ; ಮೇಲುಗಡೆಯ ಅರಣಿ ಪಿತೃವೆಂತಲೂ, ಕೆಳಗಡೆಯದು ಮಾತೃವೆಂತಲೂ ಗಣನೆ (೩-೨೯-೩) ಅಥವಾ, ಅವನಿಗೆ ಇಬ್ಬರು ತಾಯಿಯರು ಎಂದಿರುವುದರಿಂದ, ಅರಣಿಗಳೆರಡೂ ಅವನ ಜನನಿಯರು (೧-೩೧-೨). ಎರಡು ಕಾಷ್ಠಗಳೂ ಅವನನ್ನು ' ಅದೇ ಜನಿಸಿದ ಶಿಶುವಿನಂತೆ, ಉತ್ಪತ್ತಿ ಮಾಡುತ್ತಾರೆ ; ಆದರೆ ಶಿಶುವನ್ನು ಹಿಡಿದುಕೊಳ್ಳುವುದು ಕಷ್ಟ (೫-೯-೩ ಮತ್ತು ೪). ಒಣಗಿದ ಕಟ್ಟಿಗೆಯಿಂದ, ದೇವತೆಯು ಜೀವಸಹಿತನಾಗಿ ಜನಿತನಾಗುತ್ತಾನೆ (೧-೬೪-೨). ಜನನವಾದ ಕೂಡಲೇ ಶಿಶುವು ಮಾತಾಪಿತೃಗಳನ್ನು ನುಂಗಿಬಿಡುತ್ತದೆ (೧೦-೭೯-೪). ಸ್ತನ್ಯಕೊಡಲಾರದ ತಾಯಿಯಿಂದ ಅಗ್ನಿಯು ಹುಟ್ಟುತ್ತಾನೆ (೧೦-೧೧೫-೧). ಈ ಅರಣಿ ಮಥನದಲ್ಲಿ ಮನುಷ್ಯರು ಉದ್ಯುಕ್ತರಾಗುವುದರಿಂದ, ಮನುಷ್ಯರು ಅಗ್ನಿಯನ್ನು ಹುಟ್ಟಿಸುತ್ತಾರೆ (೧-೬೦-೩ ; ೪-೧-೧ ; ೭-೧-೧) ; ಮೇಲುಗಡೆಯ ಕಾಷ್ಠವನ್ನು ಉಜ್ಜುವುದಕ್ಕೆ ಉಪಯುಕ್ತವಾಗುವ ಹತ್ತು ಬೆರಳುಗಳು ಹತ್ತು ಕನ್ಯೆಯರು (೧-೯೫-೨). ಈ ಮೇಲುಗಡೆಯ ಕಾಷ್ಠಕ್ಕೆ ' ಪ್ರಮಂಥ ' ಎಂಬ ಹೆಸರಿದೆ (ಕರ್ಮಪ್ರದೀಪ ೧-೭೫).

ಅಗ್ನಿಮಥನಕ್ಕೆ ಬಹಳ ಬಲವನ್ನು ಪ್ರಯೋಗಿಸಬೇಕು. ಅದರಿಂದಲೇ ಅಗ್ನಿಗೆ ' ಸಹಸಃ ಸೂನುಃ, ಪುತ್ರಃ " (ಬಲದ ಪುತ್ರ ಎಂದು ಹೆಸರು ಬಂದಿರಬಹುದು. ಇದೇ ಅಭಿಪ್ರಾಯವೇ ಮುಂದಿನ ವಾಕ್ಯದಿಂದ ಸಮರ್ಥಿತವಾಗುತ್ತದೆ. " ಮನುಷ್ಯರಿಂದ ಬಲವಾಗಿ ಮಥನ ಮಾಡಲ್ಪಟ್ಟು, ಭೂಮಿಯ ಮೇಲೆ ಅಗ್ನಿಯು ಜನಿಸುತ್ತಾನೆ " (೬-೪೮-೫). ಅಗ್ನಿಮಥನವು ಸೂರ್ಯೋದಯಕ್ಕೆ ಮುಂಚೆ ನಡೆಯಬಾರದೆಂದು ಒಂದುಕಡೆ (ಮೈ. ಸಂ. ೧-೬-೧೦) ಹೇಳಿದೆ. ಪ್ರತಿನಿತ್ಯವೂ ಹುಟ್ಟುವುದರಿಂದ ಅಗ್ನಿಗೆ ' ಯವಿಷ್ಠ, ಯವಿಷ್ಠ್ಯ ' (ಅತ್ಯಂತ ಕಿರಿಯವನು) ಎಂಬುದು ಸಾರ್ಥಕವಾಗಿದೆ. ಅವನ ಜನನಗಳು, ಪ್ರತಿಯೊಂದೂ, ಹಿಂದಿನ ಜನನಕ್ಕೆ ವಿರುದ್ಧವಾದುದು (೩-೧-೨೦). ವೃದ್ಧನಾದ ಅಗ್ನಿಯು, ಯುವಕನಾಗಿ ಪುನಃ ಜನಿಸುತ್ತಾನೆ (೨-೪-೫). ಈ ಅರ್ಥದಲ್ಲಿ, ಅವನಿಗೆ ವಯಸ್ಸಾಗುವುದೇ ಇಲ್ಲ (೧-೧೩೪-೨) ; ಅವನ ಹೊಸ ಪ್ರಕಾಶವು ಹಳೆಯದರಂತೆಯೇ ಇರುತ್ತದೆ (೬-೧೬-೨೧). ಇತರ ದೇವತೆಗಳಂತೆ, ಇವನೂ ಯುವಕ. ವಯಸ್ಸಾದವನೂ ಹೌದು. ಅವನೇ ಮೊದಲನೆಯ ಯಾಗಮಾಡಿದವನು (೩-೧೫-೪) ; ಆದುದರಿಂದ ಅವನಿಗಿಂತ ಹಿರಿಯನಾದ ಯಾಗಕರ್ತೃ ಬೇರೆ ಇಲ್ಲ (೫-೩-೫). ಮೊದಲಿನ ಉಷಸ್ಸುಗಳ ಅನಂತರ, ಅಗ್ನಿಯು ಪ್ರಕಾಶಿಸಿದನು (೧-೪೪-೧೦). ಪೂರ್ವೀಕರ ಯಾಗಗಳಲ್ಲಿ ಅಗ್ನಿಯ ಪಾತ್ರವು ಪದೇ ಪದೇ ಉಕ್ತವಾಗಿದೆ (೮-೪೩-೧೩ ; ಇತ್ಯಾದಿ). ಒಂದೇ ವಾಕ್ಯದಲ್ಲಿ ತೀರ ವಿರುದ್ಧವಾದ ' ಪುರಾತನ ' ಮತ್ತು ' ಬಹಳ ಕಿರಿಯವನು ' ಎಂಬ ಎರಡು ವಿಶೇಷಣಗಳು ಕಂಡುಬರುತ್ತವೆ (೧೦-೪-೧ ಮತ್ತು ೨).

ಸಾಧಾರಣವಾಗಿ ಅಗ್ನಿಯು ಕಾಡಿನಲ್ಲಿ ಜನಿಸಿದನೆಂದೇ ಹೇಳಿರುವುದು (೬-೩-೩ ; ೧೦-೭೯-೭) ; ವೃಕ್ಷಗಳ ಅಂಕುರವೆಂದೂ (೨-೧-೧೪ ; ೩-೧-೧೩) ಅಥವಾ ಗಿಡಗಳಲ್ಲಿ ಹಂಜಲ್ಪಟ್ಟಿರುವನೆಂದೂ (೧೦-೧-೨) ಹೇಳಿದೆ. ಎಲ್ಲಾ ವೃಕ್ಷಗಳನ್ನೂ ಅಗ್ನಿಯು ಪ್ರವೇಶಿಸಿರುವನು ಅಥವಾ ಅವುಗಳನ್ನು ಪಡೆಯಲು ಪ್ರಯತ್ನಿಸುವನು (೪-೪೩-೯), ವೃಕ್ಷಗಳ (೧-೭೦-೪) ಅಥವಾ ಗಿಡಮರಗಳ (೨-೧-೧) ಅಂಕುರ. ಅಗ್ನಿಯು ಮರಗಳ ಪರಸ್ಪರ ಘರ್ಷಣದಿಂದ ಜನಿಸುವುದರಿಂದ ಹೀಗೆ ಹೇಳಿರಬಹುದು.

ಅಗ್ನಿಯು ಭೂಮಿಯಲ್ಲಿರುವನೆಂಬುದಕ್ಕೆ ಮತ್ತೊಂದು ಆಧಾರವಿದೆ. ಅಗ್ನಿಗೆ 'ಪೃಥಿವ್ಯಾ ನಾಭಿಃ' (ಭೂಮಿಯ ನಾಭಿ) ಎಂದು ಹೇಳಿದೆ. (೧-೫೯-೨) ಅಗ್ನಿಗೆ ಈ ಪದಗಳ ಪ್ರಯೋಗವಿರುವ ಕಡೆಯಲ್ಲೆಲ್ಲಾ, ಯಜ್ಞಾಗ್ನಿಗಾಗಿ ರಚಿಸುವ ವೇದಿಕೆಗೇ ನಿರ್ದೇಶವಿರಬಹುದು. ವೈದಿಕ ಕರ್ಮಗಳಲ್ಲಿ, ಉತ್ತರವೇದಿಯಲ್ಲಿರುವ ಕುಳಿಗೆ 'ನಾಭಿ' ಎಂದು ಹೆಸರು. ಇಲ್ಲೇ ಅಗ್ನಿಯನ್ನು ಸ್ಥಾಪಿಸುವುದು. ದೇವತೆಗಳೆಲ್ಲಾ ಅಗ್ನಿಯನ್ನೇ ಅಮರತ್ವಕ್ಕೆ ಕೇಂದ್ರವನ್ನಾಗಿ ಮಾಡಿದುದರಿಂದಲೂ ಈ ಹೆಸರು ಬಂದಿರಬಹುದು (೩-೧೭-೪). ಋಗ್ವೇದದಲ್ಲಿ ಎರಡೇ ಸಲ 'ವೇದಿಷದ್' (ವೇದಿಯಲ್ಲಿ ಕುಳಿತಿರುವವನು) ಎಂಬುದು ಪ್ರಯುಕ್ತವಾಗಿರುವುದು; ಎರಡು ಕಡೆಯೂ ಅಗ್ನಿಗೇ ಅದು ಉಪಯೋಗಿಸಿದೆ.

ಅಂತರಿಕ್ಷದ ನೀರಿನಲ್ಲಿ ಅಗ್ನಿಯು ಜನಿಸಿದನೆಂದು ಅನೇಕ ಸಲ ಉಕ್ತವಾಗಿದೆ. 'ಅಪಾಂನಪಾತ್' ಎಂಬುದು ಒಂದು ಪ್ರತ್ಯೇಕ ದೇವತೆಯೇ ಆಗಿಹೋಗಿದೆ. ಅಗ್ನಿಯೂ ನೀರಿನ ಗರ್ಭ (ಅಪಾಂಗರ್ಭಃ ೩-೧-೧೨ ಮತ್ತು ೧೩); ನೀರಿನಲ್ಲೇ ಉದ್ದೀಪ್ತನಾಗುತ್ತಾನೆ (೧೦-೪೫-೧; ಅ. ವೇ. ೧೩-೧-೫೦); ನೀರಿನ ಮಡಿಲಲ್ಲಿ ಬೆಳೆದ ಒಂದು ವೃಷಭ (೧೦-೪-೧); ಅವನು ಸಾಗರದಿಂದ ಆವೃತ (೪-೯೧-೫). ಧನು (ಮೇಘಗಳ ದ್ವೀಪ) ವಿನಿಂದ ಇಳಿದು ಬಂದಿದಾನೆ; (೧-೧೪೪-೫; ೧-೧೦೪-೫) ತೇಜೋಮಯವಾದ ಅಂತರಿಕ್ಷದಲ್ಲಿರುವ ಹೊಳೆಯುವ ಮಿಂಚೇ ಅವನು (೬-೬-೨). ಇಂತಹ ವಾಕ್ಯಗಳಲ್ಲಿ ಸಿಡಿಲಿನರೂಪನಾದ ಅಗ್ನಿಯೇ ಲಕ್ಷ್ಯದಲ್ಲಿರಬೇಕು. ಹತ್ತನೆಯ ಮಂಡಲದ ಕೆಲವು ಭಾಗಗಳಲ್ಲಿ, ಅಗ್ನಿಯು ನೀರು ಮತ್ತು ಗಿಡಗಳಲ್ಲಿ ಅಡಗಿಕೊಂಡಿದ್ದು, ಅಮೇಲೆ ದೇವತೆಗಳಿಗೆ ಸಿಕ್ಕಿದನೆಂಬುದೊಂದು ಕಥೆಯಿದೆ (೧೦-೫೧, ೫೨, ೫೫, ೧೨೪ನೆಯ ಸೂಕ್ತಗಳು). ಬ್ರಾಹ್ಮಣಗಳಲ್ಲಿಯೂ ಇದೇ ಅಂಶ ಪ್ರಸ್ತುತವಾಗಿದೆ. ಅಥರ್ವವೇದದಲ್ಲಿ, ನೀರಿನಲ್ಲಿರುವ ಅಗ್ನಿಗೂ, ಸಿಡಿಲಿನ ಅಗ್ನಿಗೂ, ಸ್ವರ್ಗೀಯಾಗ್ನಿಗೂ ವ್ಯತ್ಯಾಸ ಹೇಳಿದೆ (ಅ. ವೇ. ೩-೨೧-೧ ಮತ್ತು ೭; ೪-೧-೧೧). ನೀರಿನಲ್ಲಿರುವ ಅಗ್ನಿಗಳು ಭೂಮಿಯಲ್ಲಿ ನೆಲಸಿದವು (ಅ. ವೇ. ೧೨-೧-೪೭). ಅಗ್ನಿಯು ಎಲ್ಲಾ ಪ್ರವಾಹಗಳಲ್ಲಿಯೂ ಮನೆಮಾಡಿಕೊಂಡಿದಾನೆ (೪-೫೯-೪; ಆಪ. ಶ್ರೌ. ಸೂ. ೪-೨-೧೧ನ್ನು ಹೋಲಿಸಿ). ಕೆರೆ ಕುಂಟೆಗಳ ಸಂದರ್ಭಗಳಲ್ಲಿ ಜಲಾಂತಸ್ಥವಾದ ಅಗ್ನಿಗಳೇ ಸ್ತುತಿಸಲ್ಪಡುತ್ತವೆ. ಸೂರ್ಯನಿಗೆ ಆಕಾಶದಂತೆ, ನೀರೇ ಅಗ್ನಿಗೆ ವಾಸಸ್ಥಳವು (೫-೪೫-೨; ಅ. ವೇ. ೧೩-೧-೫೦ನ್ನು ಹೋಲಿಸಿ). ಗಿಡಮರಗಳ ಜೊತೆಯಲ್ಲಿ ನೀರೂ, ಅಗ್ನಿಯ ವಾಸಸ್ಥಳವೆಂದು ಪರಿಗಣಿತವಾಗಿದೆ (೨-೧-೧; ಇತ್ಯಾದಿ).

ಅಗ್ನಿಯು ಅಂತರಿಕ್ಷದಲ್ಲಿ ಜನಿಸಿದನೆಂದೂ ಅನೇಕ ಬಾರಿ ಹೇಳಿದೆ. ಅತ್ಯುನ್ನತವಾದ ಆಕಾಶಭಾಗದಲ್ಲಿ ಅವನು ಜನಿಸಿದನು (೧-೧೪೩-೨; ೬-೮-೨). ಅಗ್ನಿರೂಪನಾಗಿ ಅಲ್ಲಿರದಿದ್ದರೂ, ಗುಪ್ತವಾಗಿ ಅಂತರಿಕ್ಷದಲ್ಲಿದ್ದು (೧೦-೫-೭). ಬಹಳ ದೂರದ, ಆ ಪ್ರದೇಶದಿಂದ, ಮಾತರಿಶ್ವನಿಂದ ಅನೀತನಾದನು. ಇಲ್ಲಿ ಸಿಡಿಲಿನ ಅಗ್ನಿಯೇ ಇರಬೇಕು. ಸಿಡಿಲಿನ ಅಗ್ನಿಯೇ ಅಂತರಿಕ್ಷದಿಂದ ಮತ್ತು ನೀರಿನಿಂದ ಬರುವುದು (ಅ. ವೇ. ೩-೨೧-೧ ಮತ್ತು ೭; ೪-೧-೧೧); ಬ್ರಾಹ್ಮಣವೊಂದರಲ್ಲಿ (ಐ. ಬ್ರಾ. ೭-೭-೨), ಸ್ವರ್ಗ ಮತ್ತು ನೀರು (ದಿವ್ಯ, ಅಪ್ಸುಮತ್) ಎರಡರಲ್ಲಿಯೂ ಇರುವವನೆಂದು ಹೇಳಿದೆ. ವಿದ್ಯುತ್ ಎಂಬ ಪದವು ಸುಮಾರು ೩೦ ಸಲ 'ಅಗ್ನಿ'ಯ ಜೊತೆಯಲ್ಲಿ ಬರುತ್ತದೆ. ಈ ಎಲ್ಲಾ ಸಂದರ್ಭಗಳಲ್ಲೂ ಅಗ್ನಿಗೇ ಹೋಲಿಸಿದೆ, ಅಗ್ನಿಗಿಂತ ಭಿನ್ನನೆಂತಲೂ ತಿಳಿಸಿದೆ. ಇದು ದೇವತೆಗೂ ಪ್ರಕೃತಿಘಟನೆಗೂ ಇರುವ ವ್ಯತ್ಯಾಸ ಸೂಚಿಸಬಹುದು. ಅಗ್ನಿಯು ಅಂತರಿಕ್ಷದಿಂದ ಇಳಿದು ಭೂಮಿಗೆ ಬರುತ್ತಾನೆ ಎಂಬುದೂ ಸಿಡಿಲಿನಿಂದುಂಟಾಗುವ ಬೆಂಕಿಗೆ ಅನ್ವಯಿಸಬಹುದು. ಮತ್ತು ಸಿಡಿಲು ಬೆಂಕಿಗಳಿಗೆ ಇರುವ ಅಭೇದವನ್ನೂ ತೋರ್ಪಡಿಸುತ್ತದೆ. ಮನುಷ್ಯನು ಅಗ್ನಿಯನ್ನು ದೇವತೆಗಳ ವರಪ್ರಸಾದದಿಂದ ಪಡೆಯುತ್ತಾನೆ ಮತ್ತು ಮಾರಿಶ್ವನಿಂದ ಅನೀತವಾಗಿ ಮನುಷ್ಯನ ಹಸ್ತಗತವಾಗುತ್ತದೆ.

ಅಂದಮೇಲೆ, ಅಗ್ನಿಯು ಸ್ವರ್ಗಲೋಕದವನೇ ಎಂಬುದು ಸಿದ್ಧವಾದಂತಾಯಿತು. ಇದೇ ಅರ್ಥದಲ್ಲಿಯೇ ಅಗ್ನಿಯು ಮನುಷ್ಯರ ಅತಿಥಿ ಎಂದು ಹೇಳಿರಬಹುದು.

ಇನ್ನು ಕೆಲವು ವಾಕ್ಯಗಳಲ್ಲಿ, ಅಗ್ನಿಯು ಸೂರ್ಯನಿಗೆ ಸಮವೆಂದು ಗಣನೆಯಿದೆ; ಸೂರ್ಯನು ಅಗ್ನಿಯ ಒಂದು ರೂಪವೆಂಬುದೇ ವೇದಗಳ ಅಭಿಪ್ರಾಯ. ಆಕಾಶಕ್ಕೆಲ್ಲಾ ಮುಖ್ಯನಾಗಿ, ಉಷಃಕಾಲದಲ್ಲಿ ಉದಿಸಿ, ಅಗ್ನಿಯು ಆಕಾಶದ ಬೆಳಕಾಗಿರುತ್ತಾನೆ (೩-೨-೧೪). ವಾಯುಮಂಡಲಕ್ಕೆ ಆಕಡೆ ಹುಟ್ಟಿದಾನೆ, ಸಮಸ್ತ ಪದಾರ್ಥಗಳನ್ನೂ ನೋಡುತ್ತಾನೆ (೧೦-೧೪೭-೪ ಮತ್ತು ೫). ಪ್ರಾತಃಕಾಲದಲ್ಲಿ ಉದಿಸುವ ಸೂರ್ಯನಾಗಿ ಹುಟ್ಟಿದಾನೆ (೧೦-೪೫-೬). ಅಸ್ತಮಿಸಿದಾಗ ಸೂರ್ಯನು ಅಗ್ನಿಯನ್ನು ಪ್ರವೇಶಿಸಿ, ಪುನಃ ಅವನಿಂದ ಜನಿತನಾಗುತ್ತಾನೆ (ಐ. ಬ್ರಾ. ೪-೨೪-೯ ಮತ್ತು ೧೩). ಸೂರ್ಯನ ಬೆಳಕಿನೊಡನೆ ಅಥವಾ ಕಿರಣಗಳೊಡನೆ ಅಗ್ನಿಯು ಬೆರೆಯುತ್ತಾನೆ ಎಂದು ಹೇಳಿರುವ ಸ್ಥಳಗಳಲ್ಲೆಲ್ಲಾ, ಅಗ್ನಿಸೂರ್ಯರ ಈ ಸಮಾನತೆಯೇ ಉದ್ದಿಷ್ಟವಾಗಿರಬೇಕು (೫-೩೭-೧; ೭-೨-೧); ಮನುಷ್ಯರು ಬೆಂಕಿಯನ್ನು ಹೊತ್ತಿಸಿದಾಗ, ದೇವತೆಗಳೂ ಅವನನ್ನು ಪ್ರಕಾಶಗೊಳಿಸುತ್ತಾರೆ (೬-೨-೩) ಅಥವಾ ಅಗ್ನಿಯು ಸ್ವರ್ಗಲೋಕದಲ್ಲಿ ಪ್ರಕಾಶಿಸುತ್ತಾನೆ (೩-೨೭-೧೨; ೪-೪೪-೨೯) ಎಂದಿರುವಲ್ಲಿಯೂ ಇದೇ ಅಭಿಪ್ರಾಯವಿರಬೇಕು. ಕೆಲವು ಸಂದರ್ಭಗಳಲ್ಲಿ, ಸಿಡಿಲಿಗೆ ಅನ್ವಯಿಸುತ್ತದೆಯೋ ಅಥವಾ ಸೂರ್ಯನಿಗೆ ಅನ್ವಯಿಸುತ್ತದೆಯೋ ಹೇಳುವುದು ಕಷ್ಟ. ಅಗ್ನಿಗೆ ಸೌಮ್ಯವನ್ನು ಅಥವಾ ಅಗ್ನಿಯ ರೂಪಭೇದವೆಂದು ಹೇಳುವಷ್ಟು ಸೂರ್ಯನು ಸಾಮಾನ್ಯವಾದ ಪ್ರಕೃತಿ ಘಟನೆಯೆಲ್ಲ. ಸಾಧಾರಣವಾಗಿ ಸೂರ್ಯನಿಗೆ ಅಗ್ನಿಯನ್ನು ಹೋಲಿಸಿರುವುದು ಕರಿಡುಬರುತ್ತದೆ. ಸೂರ್ಯನು ಕಣ್ಣಿಗೆ ಬಿದ್ದಾಗಲೆಲ್ಲಾ, ಅಗ್ನಿಯಕಡೆ ಮನಸ್ಸು ಧಾವಿಸುತ್ತದೆ (೧-೧-೪). ಅಗ್ನಿಯ ಇತರ ರೂಪಗಳೂ ಒಂದೊಂದುಸಲ ಅಭಿಪ್ರೇತವೆಂದೂ ಕಾಣುತ್ತದೆ. ಆದ್ದರಿಂದ ಯಾವ ಸಂದರ್ಭದಲ್ಲಿ ಅಗ್ನಿಯ ಯಾವರೂಪ, ಉದ್ದಿಷ್ಟವೆಂಬುದು ನಿರ್ಧರವಾಗಿ ಹೇಳಲಾಗುವುದಿಲ್ಲ.

ಅಗ್ನಿಗೆ ನಾನಾ ವಿಧವಾದ ಜನ್ಮಗಳು ಹೇಳಿರುವುದರಿಂದ, ಅಗ್ನಿಗೆ ಮೂರು ವಿಧವಾದ ಲಕ್ಷಣಗಳು ಉಕ್ತವಾಗಿವೆ. ಅಗ್ನಿಯ ಈ ರೂಪತ್ರಯವು ಬಹಳ ಮುಖ್ಯವಾದುದು. ಅಗ್ನಿಗೆ ಮೂರು ವಿಧವಾದ ಜನ್ಮಗಳು (೧-೯೫-೩; ೪-೧-೭). ದೇವತೆಗಳು ಅವನನ್ನು ತ್ರಿವಿಧನನ್ನಾಗಿ ಮಾಡಿದರು. (೧೦-೪೮-೧೦). ಅವನು ಮೂರು ರೂಪವಾದ ಬೆಳಕು (೩-೨೬-೭); ಅವನಿಗೆ ಮೂರು ತಲೆಗಳು (೧-೧೪೬-೧), ಮೂರುನಾಲಿಗೆಗಳು, ಮೂರು ದೇಹಗಳು, ಮೂರು ಸ್ಥಾನಗಳು (೩-೨೦-೨). 'ತಿಸ್ರಧಸ್ಥ' ಎಂಬ ವಿಶೇಷಣವು ಸಾಮಾನ್ಯವಾಗಿ ಉಕ್ತವಾಗಿದೆ; ತ್ರಿಪಸ್ತ್ಯ (೪-೫-೪) ಎನ್ನುವುದು ಅಗ್ನಿಯೊಬ್ಬನಿಗೇ ಉಪಯೋಗಿಸಿರುವುದು. ಈ ಮೂರು ರೂಪಗಳು ಅಥವಾ ಸ್ಥಾನಗಳು ಒಂದೇ ಕ್ರಮದಲ್ಲಿ ಬರುವುದೂ ಇಲ್ಲ. ಅಗ್ನಿಯು ಮೊದಲು ಆಕಾಶದಿಂದಲೂ, ಎರಡನೆಯಸಲ (ಮನುಷ್ಯರಿಂದಲೂ) ನಮ್ಮಿಂದಲೂ, ಮೂರನೆಯ ಸಲ ನೀರಿನಲ್ಲಿಯೂ ಹುಟ್ಟಿದಾನೆ (೧೦-೪೫-೧) ಅಗ್ನಿಯ ಸ್ಥಾನಗಳೂ (ಆಕಾಶ ಭೂಮಿ ಮತ್ತು ನೀರು) ಇದೇ ಕ್ರಮದಲ್ಲಿವೆ (೪-೪೪-೧೬; ೧೦-೨೭.೭ ;೧೦-೪೬-೯). ಆದರೆ ಒಂದು ಕಡೆ (೧-೯೫-೩) ಅವನ ಮೂರು ಸ್ಥಾನಗಳು, ಸಾಗರ, ಆಕಾಶ ಮತ್ತು ನೀರು ಎಂದಿದೆ. ಒಂದೊಂದು ಸಲ ಭೂಮಿಯ ಅಗ್ನಿಯೇ ಮೊದಲು ಬರುತ್ತಾನೆ. ಮೊದಲು ಮನೆಗಳಲ್ಲೂ, ಆಮೇಲೆ ಆಕಾಶದ ತಳದಲ್ಲೂ, ವಾಯು ಮಂಡಲದಲ್ಲೂ ಜನಿಸಿದನು (೪-೧-೧೧); ಅಮರರಾದ ದೇವತೆಗಳು ಅಗ್ನಿಯ ಮೂರು ಜ್ವಾಲೆಗಳನ್ನು ಸೃಜಿಸಿದರು; ಒಂದನ್ನು ಮನುಷ್ಯನ ಉಪಯೋಗಕ್ಕೋಸ್ಕರ ಭೂಮಿಯಲ್ಲಿ ಸ್ಥಾಪಿಸಿದರು; ಉಳಿದ ಎರಡು ಬೇರೆ ಲೋಕಕ್ಕೆ ಹೋದವು (೩-೨-೯). ಪೃಥಿವಿಯ ಅಗ್ನಿಯು ಪ್ರಾಣಿಗಳಲ್ಲಿಯೂ, ವಾಯು ಮಂಡಲದ ಅಗ್ನಿಯು ನೀರಿನಲ್ಲಿಯೂ ಮತ್ತು ಸ್ವರ್ಗಲೋಕದ ಅಗ್ನಿಯೂ ಸೂರ್ಯನಲ್ಲಿಯೂ ಇವೆ (ಆಪ. ಶ್ರೌ.

ಸೂ. ೫-೧೬-೪). ಅಪರೂಪವಾಗಿ ಪೃಥಿವೀ ಅಗ್ನಿಯು ಮೂರನೆಯದಾಗುತ್ತದೆ. ಅಗ್ನಿಯು ಮೂರು ಜನ ಸೋದರರಲ್ಲಿ ಒಬ್ಬನು; ಅವರಲ್ಲಿ ಮಧ್ಯದವನೇ ಸಿಡಿಲು, ಮೂರನೆಯವನಿಗೆ ಬೆಣ್ಣೆಯೇ ಬೆನ್ನಾಗಿದೆ (೧-೧೬೪-೧; ೧-೧೪೧-೨ನ್ನು ಹೋಲಿಸಿ). ಅಗ್ನಿಯು ಆಕಾಶದಿಂದ ಪ್ರಕಾಶಿಸುತ್ತಾನೆ; ಅಗ್ನಿಗೇ ಈ ವಾಯುಮಂಡಲವು ಸೇರಿದೆ; ಹುತವಾದ ಪದಾರ್ಥಗಳನ್ನು ದೇವತೆಗಳಿಗೆ ಒಯ್ದು ಕೊಡುವವನೂ, ಘೃತವನ್ನು ಆಪೇಕ್ಷಿಸುವವನೂ ಆದ ಅಗ್ನಿಯನ್ನು ಮನುಷ್ಯರು ಹೊತ್ತಿಸುತ್ತಾರೆ (ಅ. ವೇ. ೧೨-೧-೨೦; ೧೩-೩-೨೧; ೧೪-೪-೧೧ಗಳನ್ನು ಹೋಲಿಸಿ).

ಮೂರನೆಯ ರೂಪವೇ ಅತಿ ಶ್ರೇಷ್ಠವಾದುದೆಂದೂ ಒಂದೊಂದು ಕಡೆ ಉಕ್ತವಾಗಿದೆ (೧೦-೧-೩; ೫-೩-೩; ೧-೭೨-೨ ಮತ್ತು ೪ಗಳನ್ನು ಹೋಲಿಸಿ). ಶಾಕಪೂಣಿಯ ಪ್ರಕಾರ, (೧೦-೪೪-೧೦)ರಲ್ಲಿ ಉಕ್ತವಾಗಿರುವ ಅಗ್ನಿಯ ಮೂರು ರೂಪಗಳು ಭೂಮಿ, ಆಕಾಶ ಮತ್ತು ಸ್ವರ್ಗಗಳಲ್ಲಿ ಇವೆ ಮತ್ತು ಒಂದು ಬ್ರಾಹ್ಮಣದಲ್ಲಿರುವಂತೆ, ಸ್ವರ್ಗದಲ್ಲಿರುವ ಅಗ್ನಿಯೇ ಸೂರ್ಯನು (ನಿರು. ೭-೨೪; ನಿರು. ೧೨-೧೯ನ್ನು ಹೋಲಿಸಿ). ಅಗ್ನಿಯ ಈ ಮೂರು ವಿಭಾಗವೂ, ಸೂರ್ಯ, ವಾಯು ಮತ್ತು ಅಗ್ನಿಯೆಂಬ ದೇವತಾತ್ರಯ ವಿಭಾಗವೂ (೪-೧೪-೧೯), ಮತ್ತು ಇತರ ವೇದಗಳಲ್ಲಿ ಉಕ್ತವಾಗಿರುವ ಸೂರ್ಯ, ಇಂದ್ರ ಮತ್ತು ಅಗ್ನಿಯೆಂಬ ದೇವತಾತ್ರಯವೂ ಒಂದೇ ಇರಬೇಕು. ಅಗ್ನಿತ್ರಯದಲ್ಲಿ ಮಧ್ಯದ ಅಗ್ನಿಗೆ, ಬ್ರಾಹ್ಮಣಗಳಲ್ಲಿ ವೈದ್ಯುತಾಗ್ನಿಯೆಂದು ನಾಮಕರಣ ಮಾಡಿದಾರೆ. ಉಳಿದ ಎರಡು ದೇವತಾತ್ರಯಗಳಲ್ಲಿ, ವೈದ್ಯುತಾಗ್ನಿಗೆ ಬದಲಾಗಿ, ವಾತ ಅಥವಾ ವಾಯು ಮತ್ತು ಇಂದ್ರರು ಸೇರಿಸಲ್ಪಟ್ಟಿದಾರೆ ಯಾಗಗಳಲ್ಲಿ ಲೌಕಿಕಾಗ್ನಿಯಲ್ಲದೇ ಮೂರು ಬೇರೆ ಅಗ್ನಿಗಳನ್ನಿಟ್ಟುಕೊಂಡೇ ಹೋಮಾದಿಗಳನ್ನು ಮಾಡುತ್ತಾರೆ. ಅಗ್ನಿತ್ರಯವೆಂಬುದು ಈ ವಿಭಜನೆಗೆ ಅನ್ವಯಿಸಬಹುದು. ದೇವತೆಗಳನ್ನು ಕರೆದುಕೊಂಡು ಬಂದು, ಮೂರು ಸ್ಥಳಗಳಲ್ಲಿ ಕುಳಿತುಕೊಳ್ಳಬೇಕೆಂದು ಅಗ್ನಿಯನ್ನು ಪ್ರಾರ್ಥಿಸುವುದು ರೂಢಿಯಾಗಿದೆ (೨-೩೬-೪; ೫-೧೧-೨; ೧೦-೧೦೫-೯ಗಳನ್ನು ಹೋಲಿಸಿ).

ಸ್ವರ್ಗ ಮತ್ತು ಮರ್ತ್ಯಲೋಕಗಳೆಂಬ ಪ್ರಪಂಚದ ವಿಭಾಗವನ್ನನುಸರಿಸಿ, ಅಗ್ನಿಗೆ ಎರಡು ಜನ್ಮಗಳೆಂದು ಹೇಳುವುದೂ ವಾಡಿಕೆಯಾಗಿದೆ. ಅವನೊಬ್ಬನಿಗೇ 'ದ್ವಿಜನ್ಮಾ' ಎಂದು ಹೆಸರಿರುವುದು (೧-೬೦-೧; ೧-೧೪೦-೨; ೧-೧೪೯-೨ ಮತ್ತು ೩). ಮೇಲಿನ (ಊರ್ಧ್ವ) ಮತ್ತು ಕೆಳಗಿನ (ಅಧಃ) ಜನ್ಮಗಳೂ (೩-೯-೩), ಉಚ್ಚನೀಚ ವಾಸಸ್ಥಳಗಳೂ (೧-೧೩೪-೩) ಉಕ್ತವಾಗಿವೆ. ಭೂಲೋಕದ ಅಗ್ನಿ ಮತ್ತು ಸ್ವರ್ಗೀಯಾಗ್ನಿಗಳೇ ಯಾವಾಗಲೂ ವಿರುದ್ಧವೆಂದು (೩-೫೪-೧; ೧೦-೪೫-೧೦) ಹೇಳುವುದು; ಆದರೆ ಒಂದೇ ಒಂದು ಸ್ಥಳದಲ್ಲಿ (೪-೪೩-೨೪). ಸ್ವರ್ಗ ಮತ್ತು ಉದಕಗಳಲ್ಲಿ ಅಗ್ನಿಯ ಜನನಗಳಿಗೆ ವ್ಯತ್ಯಾಸ ಹೇಳಿದೆ. ಅಗ್ನಿಯು ಅವನ ಅತ್ಯುನ್ನತ ವಾಸಸ್ಥಳದಿಂದ ಆಹೊತನಾಗಿ (೪-೧೧-೬), ಅಧೋಲೋಕಗಳಿಗೆ ಬರುತ್ತಾನೆ (೪-೬೪-೧೫). ಅಲ್ಲಿಂದ ಬಂದು, ವೃಕ್ಷಗಳನ್ನೇರುತ್ತಾನೆ (೧-೧೪೧-೪). ಅಗ್ನಿಯು ಮಳೆಯ ಮೂಲಕ ಕೆಳಗೆ ಬಂದು, ಗಿಡಗಳನ್ನು ಸೇರುತ್ತಾನೆ; ಆ ಗಿಡಗಳಿಂದ ಪುನಃ ಉತ್ಪನ್ನನಾಗುತ್ತಾನೆ. ನೀರಿನಂತೆ, ಅಗ್ನಿಯೂ ಭೂಮಿಗೆ ಬಂದು, ಪುನಃ ಮೇಲಕ್ಕೆ ಏರುತ್ತಾನೆ (೧-೧೬೪-೫೧). ಅಗ್ನಿಯ ಈ ದ್ವೈವಿಧ್ಯವನ್ನಾಶ್ರಯಿಸಿಯೇ, ಅಗ್ನಿಯು ತನಗೇ ಹೋಮಮಾಡಿಕೊಳ್ಳಬೇಕು (೧೦-೭-೬), ಅಗ್ನಿಯನ್ನು ಕರತರಬೇಕು (೭-೫೯-೫), ಅಥವಾ ದೇವತೆಗಳೊಡನೆ ಯಾಗಶಾಲೆಗೆ ಇಳಿದುಬರಬೇಕು (೩-೬-೯ ಇತ್ಯಾದಿ), ಮೊದಲಾದ ವಾಕ್ಯಗಳು ಹೊರಟಿರಬೇಕು. ಮನುಷ್ಯರು ಹೊತ್ತಿಸುದುದಲ್ಲದೇ, ದೇವತೆಗಳೂ ಅಗ್ನಿಯನ್ನು ಹೊತ್ತಿಸಿದರು ಎಂಬುದೂ ಈ ಅಗ್ನಿಯೂ ದ್ವಿವಿಧನೆಂಬ ಅಭಿಪ್ರಾಯಕ್ಕೆ ಪೋಷಕವಾಗುತ್ತದೆ (೬-೨-೩). ಸ್ವರ್ಗೀಯಾಗ್ನಿಯೂ ಯಾರಿಂದಲಾದರೂ ಪ್ರಜ್ವಲಿತವಾಗಬೇಕು.

ಮತ್ತು ದೇವತೆಗಳೂ ಮನುಷ್ಯರಂತೆ ಯಾಗವಾಡಬೇಕು (ಐ. ಬ್ರಾ. ೨-೩೪) ಎಂಬುದರಿಂದ ಅಗ್ನಿಯು ದೇವ ಮಾನವರಿಂದ ಪ್ರತ್ಯೇಕವಾಗಿ ಉದ್ದೀಪ್ತನಾಗುತ್ತಾನೆಂದು ರೂಢಿಗೆ ಬಂದಿರಬೇಕು.

ಬೇರೆ ಒಂದು ದೃಷ್ಟಿಯಿಂದಲೂ ಅಗ್ನಿಗೆ ನಾನಾ ಜನ್ಮಗಳೆಂದು ಹೇಳಬಹುದು (೧೦-೫-೧). ಭೂಮಿ ಯಲ್ಲಿ ಅನೇಕ ಕುಂಡಗಳಲ್ಲಿ ಅಗ್ನಿಯು ಹೊತ್ತಿಸಲ್ಪಡುವುದರಿಂದ ಅಗ್ನಿಯ ಈ ವೈವಿಧ್ಯ ಸಾಧಿತವಾಗುತ್ತದೆ. ಪ್ರತಿ ಸಂಸಾರ, ಮನೆ ವಾಸಸ್ಥಳಗಳಲ್ಲಿಯೂ ಅಗ್ನಿಯು ಇದಾನೆ (೪-೬-೪ ; ೪-೭-೧ ಮತ್ತು ೩ ; ೫-೧-೫ ; ೫-೬-೪ ಇತ್ಯಾದಿ). ಅನೇಕ ಸ್ಥಳಗಳಲ್ಲಿ (೩-೫೪-೧೯) ಉತ್ಪನ್ನನಾಗಿ, ಅನೇಕ ದೇಹಗಳುಳ್ಳವನಾಗುತ್ತಾನೆ (೧೦-೯೪-೧೦). ಅನೇಕ ಸ್ಥಳಗಳಲ್ಲಿ ಚದುರಿಕೊಂಡಿದ್ದರೂ, ಅವನು ಒಬ್ಬನೇ (೩-೫೫-೪). ಅನೇಕ ಸ್ಥಳ ಗಳಲ್ಲಿ ಜ್ವಲಿತನಾದರೂ, ಅವನು ಒಬ್ಬನೇ (ವಾಲ. ೧೦-೨). ಶಾಖೆಗಳು ವೃಕ್ಷವನ್ನು ಆಶ್ರಯಿಸುವಂತೆ, ಅನೇಕ ಅಗ್ನಿಗಳು ಅವನನ್ನಾಶ್ರಯಿಸಿಕೊಂಡಿವೆ(೪-೧೯-೩೩). ಆದುದರಿಂದ ಇತರ ಅಗ್ನಿಗಳೊಡನೆ (೭-೩-೧ ; ೫-೧೪-೯; ೪-೪೯-೧ ; ೧೮-೧೪೧-೬) ಅಥವಾ ಸಮಸ್ತ ಅಗ್ನಿಗಳೊಡನೆ ಆಹೂತನಾಗುತ್ತಾನೆ (೧-೨೬-೧೦ ; ೬-೧೨-೬).

ಅಗ್ನಿಜನನದ ವಿಷಯವಾಗಿ ಬರುವ ನಾನಾ ಕಥನಗಳನ್ನು ನೋಡಿದರೆ, ಆ ಸ್ಥಳಗಳನ್ನು ವಿಧವಿಧ ವಾಗಿ ವಿಂಗಡಿಸಬೇಕಾಗುತ್ತದೆ. ಅವನ ಪ್ರಕಾಶವು, ಸ್ವರ್ಗ, ಭೂಮಿ, ಅಂತರಿಕ್ಷ, ಉದಕ ಮತ್ತು ಸಸ್ಯಗಳಲ್ಲಿದೆ (೩-೨೨-೨), ಅಥವಾ ಅವನು ಆಕಾಶ, ಉದಕ, ಶಿಲೆ, ಕಾಡು ಮತ್ತು ಸಸ್ಯಗಳಲ್ಲಿ ಜನಿಸುತ್ತಾನೆ (೨-೧-೧). ಇನ್ನೂ ಉದ್ಭವಾದ ಪಟ್ಟಿಗಳು ಅಲ್ಲಲ್ಲೇ ಸಿಗುತ್ತವೆ (ಅ. ವೇ. ೩-೨೨-೧ ; ೧೨-೧-೧೯ ; ಆಪ. ಶ್ರೌ. ಸೂ. ೫-೧೬-೪). ಅಗ್ನಿಯು ಪರ್ವತದಲ್ಲಿದಾನೆ (೧-೭೦-೪, ೬-೪೮-೫ನ್ನು ಹೋಲಿಸಿ), ಎನ್ನುವಾಗ ಮೇಘದಲ್ಲಿ ನಿಗೂಢವಾಗಿರುವ ಸಿಡಿಲೇ ಉದ್ದಿಷ್ಟವಾಗಿರಬೇಕು. ಅಗ್ನಿಯು ಶಿಲೆಯಿಂದ ಉತ್ಪನ್ನನಾದನು (೨-೧೨-೩) ಅಥವಾ ಇಂದ್ರನು ಎರಡು ಕಲ್ಲುಗಳ ಮಧ್ಯೆ ಅಗ್ನಿಯನ್ನು ಉಂಟುಮಾಡಿದನು (೨-೧೨-೩) ಎಂದು ಹೇಳಿರು ವುದೂ ಈ ಉದ್ದೇಶದಿಂದಲೇ. ಅಥವಾ ಇಲ್ಲಿ ಚಕಿಮುಕಿ ಕಲ್ಲಿನಿಂದ ಅಗ್ನಿಯನ್ನುಂಟುಮಾಡಬಹುದೆಂಬುದಕ್ಕೆ ನಿರ್ದೇಶವಿರಬಹುದು. ಅಗ್ನಿಯು ಮನುಷ್ಯನಲ್ಲಿ (೧೦-೫-೧) ಅಥವಾ, ಪ್ರಾಣಿಗಳು, ಅಶ್ವಗಳು, ಪಕ್ಷಿಗಳು, ದ್ವಿಪಾದ ಮತ್ತು ಚತುಷ್ಪಾದ ಪ್ರಾಣಿಗಳಲ್ಲಿದಾನೆ (ಅ. ವೇ. ೩-೨೧-೨ ; ೧೨-೧-೧೯ ; ೧೨-೨-೩೩ ; ತೈ. ಸಂ. ೪-೬-೧-೩) ಎನ್ನುವಾಗ, ಜಾಠರಾಗ್ನಿಯೇ ಅಭಿಪ್ರೇತವಾಗಿರಬೇಕು. ಜೀವನಾಧಾರನೆನಿಸಿಕೊಂಡು, ಪ್ರಕೃತಿ ಯಲ್ಲಿ ಇಷ್ಟು ವ್ಯಾಪಿಸಿರುವ ಅಗ್ನಿಯನ್ನು ಚರಾಚರ ವಸ್ತುಗಳೆಲ್ಲಕ್ಕೂ ಮೂಲಾಧಾರನೆನ್ನುವುದೇನಾಶ್ಚರ್ಯ (೧-೭೦-೩, ಅ. ವೇ. ೫-೨೫-೭).

ಅಗ್ನಿಯ ಈ ತ್ರೈವಿಧ್ಯವೇ ಮೂರು ಸೋದರರೆಂಬ ಅಭಿಪ್ರಾಯಕ್ಕೆ ಅವಕಾಶಕೊಟ್ಟಿದೆ (೧-೧೬೪-೧), ಅಗ್ನಿಗೆ ಹಿರಿಯ ಸೋದರರು ಅನೇಕರು ಎಂಬುದಕ್ಕೆ ಅಪರಿಮಿತವಾದ ಹೋಮಾಗ್ನಿಗಳೇ ಆಧಾರ (೧೦-೫೧-೭). ತೈತ್ತಿರೀಯ ಸಂಹಿತೆಯಲ್ಲಿ ಇವರು ಮೂವರೆಂದು ಹೇಳಲ್ಪಟ್ಟಿದೆ (ತೈ. ಸಂ. ೨-೬-೭-೧). ದೇವತೆಗಳಿಗೆ ನಾಲ್ಕು ಜನ ಹೋತೃಗಳು ; ಅವರಲ್ಲಿ ಮೊದಲ ಮೂವರು ಮೃತರಾದರು (ಕಠ. ೨೫-೭) ಎಂಬಲ್ಲಿಯೂ ಇದೇ ಅಂಶವೇ ಪುಷ್ಟೀಕೃತವಾಗುತ್ತದೆ. ಒಂದು ಕಡೆ ವರುಣನು ಅಗ್ನಿಯ ಸೋದರನೆಂದು (೪-೧-೨) ಹೇಳಿದೆ. ಬೇರೆ ಒಂದು ಕಡೆ, ಇಂದ್ರನೂ, ಅಗ್ನಿಯೂ ಯಮಳರೆಂದೂ (೬-೫೯-೨) ಉಕ್ತವಾಗಿದೆ. ಇತರ ಎಲ್ಲಾ ದೇವತೆಗಳ ಗಿಂತ ಹೆಚ್ಚಾಗಿ ಇಂದ್ರನೇ ಅಗ್ನಿಯ ಜೊತೆಯಲ್ಲಿ ಸೇರಿರುವುದು. ಎರಡು ಸಲ ಹೊರತಾಗಿ, ಅಗ್ನಿಯ ಜೊತೆ ಯಲ್ಲಿ ದ್ವಂದ್ವದೇವತೆಯಾಗಿರುವುದು ಇಂದ್ರನೇ (೧-೨೧-೧, ೧-೧೦೮-೧, ೭-೯೩-೬, ೮-೩೮-೪ ಮತ್ತು ೭ ರಿಂದ,

ಇತ್ಯಾದಿ). ಇಂದ್ರಾಗ್ನಿಗಳ ನಿಕಟ ಬಾಂಧವ್ಯವೇ, ಅಗ್ನಿಯು ತನ್ನ ತಾಪದಿಂದ ಪರ್ವತವನ್ನು ಭೇದಿಸಿದನು (೮-೮೬-೧೬), ಮತ್ತು ಅಶ್ರದ್ಧಾಳುಗಳಾದ ಪಣಿಗಳನ್ನು (೭-೬-೩) ನಿರ್ವಂಶಮಾಡಿದನು ಎಂಬಿವುಗಳಿಗೆ ಆಧಾರ ವಿರಬಹುದು- ಒಂದು ಇಡೀ ಸೂಕ್ತವೇ (೧-೯೩) ಅಗ್ನಿ ಮತ್ತು ಸೋಮಗಳ ದ್ವಂದ್ವವನ್ನು ಹೊಗಳಿದೆ.

ಅಪರೂಪವಾಗಿ, ಅಗ್ನಿಯು ಇತರ ಕೆಲವು ದೇವತೆಗಳಿಗೆ, ವಿಶೇಷವಾಗಿ ಮಿತ್ರಾವರುಣರಿಗೆ ಸಮನೆಂದು ಹೇಳಿದೆ (೨.೧-೪ ; ೩-೫-೪ ; ೭-೧೨-೩). ಯಾಗಕ್ಕೆ ಬರುವಾಗ ಅಗ್ನಿಯೇ ವರುಣ (೧೦-೮೮-೫). ಅಗ್ನಿಯು ಜನಿಸಿದಾಗ ವರುಣನು, ಜ್ವಲಿತನಾದಾಗ ಮಿತ್ರನು ಎನಿಸಿಕೊಳ್ಳುತ್ತಾನೆ (೫-೩-೧). ಸಾಯಂಕಾಲದಲ್ಲಿ ಅಗ್ನಿಯು ವರುಣನಾಗಿ, ಪ್ರಾತಃಕಾಲದಲ್ಲಿ ಮಿತ್ರನಾಗಿ ಉದಿಸುತ್ತಾನೆ ; ಸವಿತೃವಾಗಿ ಅಂತರಿಕ್ಷದಲ್ಲಿ ಸಂಚರಿಸುತ್ತಾನೆ ; ಅಂತರಿಕ್ಷದ ಮಧ್ಯದಲ್ಲಿ (ನಡುನೆತ್ತಿಯಮೇಲೆ) ಇಂದ್ರನಾಗಿ, ಎಲ್ಲವನ್ನೂ ಪ್ರಕಾಶಗೊಳಿಸುತ್ತಾನೆ (ಅ. ವೇ. (೧೩-೩-೧೩). ಒಂದುಕಡೆ (೨-೧-೩ರಿಂದ-೭), ಅಗ್ನಿಯು, ಐದು ಸ್ತ್ರೀದೇವತೆಗಳಲ್ಲದೆ, ಹನ್ನೆರಡು ಇತರ ದೇವತೆಗಳಿಗೆ ಸಮನೆಂದು ಹೇಳಿದೆ. ಅನೇಕ ದಿವ್ಯರೂಪಗಳನ್ನು ಧರಿಸಿ (೩-೩೮-೭), ನಾನಾ ನಾಮಗಳುಳ್ಳವನಾಗುತ್ತಾನೆ (೩.೨೦-೩). ದೇವತೆಗಳೆಲ್ಲರೂ ಇವನಲ್ಲಿಯೇ ಅಡಕವಾಗುತ್ತಾರೆ (೫-೩-೧) ; ಚಕ್ರನೇಮಿಯು ಆರೆಕಾಲುಗಳನ್ನು ಸುತ್ತುಗಟ್ಟಿರುವಂತೆ, ಅಗ್ನಿಯು ದೇವತೆಗಳನ್ನೆಲ್ಲಾ ಆವರಿಸಿಕೊಂಡಿರುತ್ತಾನೆ (೫-೧೩-೬).

ಇವುಗಳೆಲ್ಲಕ್ಕಿಂತ ಪುರಾತನವಾದ ಅಗ್ನಿಯ ಕಾರ್ಯವೆಂದರೆ, ದುಷ್ಟ ಪಿಶಾಚಿಗಳನ್ನು ಓಡಿಸುವುದು ಮತ್ತು ಮಾಟ ಮುಂತಾದುವುಗಳನ್ನು ತಿರುಗಿಸುವುದು ಅಥವಾ ಅವುಗಳನ್ನು ದಹಿಸುವುದು. ಈ ಕಾರ್ಯಗಳನ್ನು ಅಗ್ನಿಯು ಮಾಡಿರುವುದು. ವೇದದಲ್ಲಿ ಕಂಡುಬರುತ್ತದೆ. ತನ್ನ ಪ್ರಕಾಶದಿಂದ ಅಗ್ನಿಯು ಪಿಶಾಚಗಳನ್ನೋಡಿಸುತ್ತಾನೆ (೩-೧೫-೧ ಇತ್ಯಾದಿ) ; ಅದರಿಂದ ಅವನಿಗೆ ' ರಕ್ಷೋಹಾ ' ಎಂಬ ವಿಶೇಷಣವು ಉಪಯೋಗಿಸಲ್ಪಟ್ಟಿದೆ (೧೦-೮೭-೧). ಉದ್ದೀಪ್ತನಾದಾಗ, ಕಬ್ಬಿಣದ ದಂತಗಳಿಂದ ಮಾಟಮಾಡುವವರನ್ನು ಮತ್ತು ಪಿಶಾಚಿಗಳನ್ನು ಅಗಿದು ನುಂಗುತ್ತಾನೆ ; ತನ್ನ ಕಾವಿನಿಂದ ಅವರನ್ನು ದಹಿಸುತ್ತಾನೆ (೧೦-೮೭-೨, ೫ ಮತ್ತು ೧೪) ; ಯಾಗವನ್ನು ಬಹಳ ಎಚ್ಚರಿಕೆಯಿಂದ ಕಾಪಾಡುತ್ತಾನೆ. ಮಂತ್ರವಾದಿಗಳ ವಂಶವೇ ಅವನಿಗೆ ಪರಿಚಿತವಾಗಿದೆ ; ಅವರನ್ನೆಲ್ಲಾ ನಾಶಮಾಡುತ್ತಾನೆ (ಅ. ವೇ. ೧-೮-೪). ಭೂಲೋಕದ ಪಿಶಾಚಿಗಳನ್ನು ಓಡಿಸುವ ಕೆಲಸದಲ್ಲಿ ಇಂದ್ರ, ಬೃಹಸ್ಪತಿ, ಅಶ್ವಿನಿಗಳು ವಿಶೇಷವಾಗಿ ಸೋಮ, ಇವರುಗಳು ಅಗ್ನಿಗೆ ಸಹಾಯಕರಾಗಿದ್ದಾಗ್ಯೂ, ಈ ಕರ್ಮವು ಅಗ್ನಿಯದೇ ಎನ್ನಬಹುದು. ಇಂದ್ರನಿಗೆ ಮಾತ್ರ ಸಲ್ಲುವ ಅಸುರವಧಾದಿ ಕಾರ್ಯಗಳಲ್ಲಿ ಅಗ್ನಿಗೆ ಔಪಚಾರಿಕವಾಗಿ ಭಾಗವಿರುವಂತೆ, ಇಲ್ಲಿಯೂ ಇಂದ್ರಾದಿಗಳಿಗೆ ಸೂಕ್ತಗಳಲ್ಲಿ ಮತ್ತು ಕರ್ಮಭಾಗದಲ್ಲಿ, ಪಿಶಾಚಗಳನ್ನೋಡಿಸುವ ಮತ್ತು ನಾಶಮಾಡುವ ಕರ್ಮವು ಅಗ್ನಿಯದೇ ಎಂದು ಸ್ಪಷ್ಟವಾಗಿದೆ.

ಮನುಷ್ಯನ ಜೀವನದ ಮೇಲೆ ಅಗ್ನಿಯಷ್ಟು ಪ್ರಭಾವ ಬೀರಿರುವ ದೇವತೆಯೇ ಬೇರೊಂದಿಲ್ಲ. ಮನುಷ್ಯರ ವಸತಿಗಳೊಡನೆ ಅಗ್ನಿಯ ಸಂಬಂಧವು ವಿಲಕ್ಷಣವಾದುದು. ಗೃಹಪತಿ (ಮನೆಯ ಯಜಮಾನ) ಯೆಂಬ ವಿಶೇಷಣವು ಇವನಿಗೊಬ್ಬನಿಗೇ ಸಂದಿರುವುದು. ಪ್ರತಿಮನೆಯಲ್ಲಿಯೂ ಅವನು ವಾಸಿಸುತ್ತಾನೆ (೭-೧೫-೨) ; ಮನೆಯನ್ನು ಬಿಟ್ಟು ಹೊರಡುವುದೇ ಇಲ್ಲ (೮-೪೯-೧೯). ' ದಮೂನಃ ' (ಗೃಹಕೃತ್ಯಕ್ಕೆ ಸಂಬಂಧಿಸಿದ) ಎಂಬ ವಿಶೇಷಣವು ಅಗ್ನಿಗೊಬ್ಬನಿಗೇ ಉಪಯೋಗಿಸಿರುವುದು (೧-೬೦-೪ ಇತ್ಯಾದಿ). ಯಾಗಗಳಲ್ಲಿನ ಅಗ್ನಿತ್ರಯದಲ್ಲಿ, ಆಹವನೀಯ ಮತ್ತು ದಕ್ಷಿಣಾಗ್ನಿಗಳು, ಗಾರ್ಹಪತ್ಯಾಗ್ನಿಯಿಂದಲೇ ತೆಗೆದುಕೊಳ್ಳಲ್ಪಡುತ್ತವೆ. ಸ್ಥಳದಿಂದ ಸ್ಥಳಕ್ಕೆ ಯಜ್ಞಾಗ್ನಿಯ ನಯನಾನಯನಗಳುಂಟು. ಅಗ್ನಿಯು ಸುತ್ತಲೂ ಒಯ್ಯಲ್ಪಡುತ್ತಾನೆ (೪-೯-೩, ೪-೧೫-೧) ; ಹೋಮದ್ರವ್ಯಗಳ ಸುತ್ತಲೂ ಶತಪಥಹಾಕುತ್ತಾನೆ (೪-೧೫-೩) ; ಯಾಗ ಪ್ರದೇಶವನ್ನು

ಮೂರು ಸಲ ಪ್ರದಕ್ಷಿಣೆ ಹಾಕುತ್ತಾನೆ (೪-೬-೪ ಮತ್ತು ೫ ; ಮತ್ತು ೪-೧೫-೨) ; ತನ್ನ ಮಾತಾಪಿತೃಗಳಿಂದ (ಅರಣಿ) ಬಿಡುಗಡೆ ಹೊಂದಿದ ಕೂಡಲೇ, ಮೊದಲು ಪೂರ್ವಕ್ಕೂ ಅನಂತರ ಪಶ್ಚಿಮಕ್ಕೂ ಒಯ್ಯಲ್ಪಡುತ್ತಾನೆ (೧-೩೧-೪).

ಹಿಂದೆ ಹೇಳಿದ ವಿಶೇಷಣಗಳಲ್ಲದೆ, ಅಗ್ನಿಗೆ, ಮನುಷ್ಯರ ಅತಿಥಿಯೆಂದೂ, ಒಂದು ವಿಶೇಷಣವಿದೆ. ಅವನು ಪ್ರತಿಮನೆಯಲ್ಲಿಯೂ ಅತಿಥಿಯಾಗಿದಾನೆ (೧೦-೯೧-೨) ; ಅತಿಥಿಗಳಲ್ಲಿ ಮೊದಲನೆಯವನು (೫-೮-೨). ಮರಣರಹಿತರಾದವರಲ್ಲಿ (ದೇವತೆಗಳಲ್ಲಿ) ಇವನೊಬ್ಬನೇ ಮರ್ತ್ಯರ ಮಧ್ಯದಲ್ಲಿ ನೆಲಸಿರುವವನು (೮-೬೦-೧), ಮನುಷ್ಯರ ವಾಸಸ್ಥಳಗಳಲ್ಲಿ ಅವನು ಸ್ಥಾಪಿತನಾಗಿದಾನೆ ಅಥವಾ ನೆಲಸಿದಾನೆ (೩-೫-೩ ; ೪-೬-೨). ಈ ಗಾರ್ಹಪತ್ಯಾಗ್ನಿಯೇ, ಮನುಷ್ಯರು ತಮ್ಮ ತಮ್ಮ ಮನೆಗಳಲ್ಲಿ ಸ್ಥಿರವಾಗಿ ನೆಲಸುವುದಕ್ಕೆ ಸಹಾಯ ಮಾಡಿರುವುದು (೩-೧-೧೭). ಅವನು ಹೊಸಪ್ರದೇಶಗಳಲ್ಲಿ ನೆಲಸುವವರಿಗೆ ಮುಖಂಡನು (೩-೨-೫) ಮತ್ತು ರಕ್ಷಕನು (೧-೯೬-೪) ; ಈ ಸಂದರ್ಭದಲ್ಲಿ ' ವಿಶ್ಪತಿ ' ಎಂಬ ಹೆಸರು ಅಗ್ನಿಗೊಬ್ಬನಿಗೇ ಹೇಳಿರುವುದು.

ಈಮೇಲೆ ಹೇಳಿದ ಪ್ರಕಾರ ಅಗ್ನಿಯು ಮನುಷ್ಯನಿಗೆ ಸ್ನೇಹಿತ (೧-೭೫-೧). ಅಥವಾ ಸಮೀಪ ಬಂಧು (೧-೨೬-೩ ; ಇತ್ಯಾದಿ) ಅಥವಾ ಸಂಬಂಧಿ (೭-೧೫-೧ ; ೮-೪೯-೧೦) ಎನ್ನಿಸಿಕೊಂಡಿದಾನೆ. ಅವನನ್ನು ತನ್ನ ಆರಾಧಕರಿಗೆ ತಂದೆಯೆಂದು ಅನೇಕ ಸಲವೂ (೬-೧-೫ ; ಇತ್ಯಾದಿ), ಪುತ್ರ (೨-೧-೯), ಜನನಿ (೬-೧-೫), ಸೋದರ (೮-೪೩-೧೬ ; ೧೦-೭-೩ ; ಇತ್ಯಾದಿ) ಮೊದಲಾಗಿ ಒಂದೊಂದು ಸಲವೂ ಕರೆಯಲ್ಪಟ್ಟಿದಾನೆ. ಇಷ್ಟು ಸಮೀಪ ಸಂಬಂಧ, ಅಗ್ನಿಯು ಯಾಗಸಾಧನ ಮಾತ್ರವಲ್ಲ, ನಿತ್ಯಜೀವನಕ್ಕೆ ಅತ್ಯಂತ ಅವಶ್ಯಕ ವಸ್ತುವೆಂಬು ವನ್ನು ವ್ಯಕ್ತಪಡಿಸುತ್ತದೆ.

ಅಗ್ನಿಯು ವಿಶೇಷಪ್ರಕಾರವಾಗಿ ಮನುಷ್ಯರ ಮನೆಗಳಲ್ಲಿ ಇರುವುದರಿಂದ, ಮನುಷ್ಯರ ಪೂರ್ವೀಕರಿಗೂ ಅಗ್ನಿಗೂ, ಇತರ ದೇವತೆಗಳಿಗಿಂತ ಹೆಚ್ಚು ಸಂಬಂಧವಿರುವುದು ಸ್ವಾಭಾವಿಕವೇ ಆಗಿದೆ (೧-೭೧-೧೦). ಪೂರ್ವೀಕರು ಅವನನ್ನೇ ಉದ್ದೀಪ್ತಗೊಳಿಸಿದರು, ಅವನನ್ನೇ ಅವರು ಸ್ತುತಿಸಿದುದು. ಭರತ (೨-೭-೧ ; ೭-೮-೪, ಇತ್ಯಾದಿ), ವಧ್ರ್ಯಶ್ವ (೧೦-೬೯-೧), ದೇವವಾತ (೩-೨೩-೩), ದಿವೋದಾಸ (೮-೪೨-೨) ಮತ್ತು ತ್ರಸದಸ್ಯು (೮-೧೯-೩೨) ಮೊದಲಾದವರ ಅಗ್ನಿಗಳು ಪ್ರಸಕ್ತವಾಗಿವೆ. ಮಂತ್ರದ್ರಷ್ಟೃಗಳಿಂದ ಋಷಿಗಳ ವಂಶದವರು ಕೆಲವರು ಅಗ್ನಿಗೆ ಸಮರೆಂದು ಉಕ್ತವಾಗಿದೆ. ಇವರಲ್ಲಿ, ವಸಿಷ್ಠಾದಿ ಕೆಲವರು ಚಾರಿತ್ರಿಕ ವ್ಯಕ್ತಿಗಳೆಂತಲೂ, ಅಂಗಿರಸರು, ಭೃಗುಗಳು ಮೊದಲಾದವರು ಕಾಲ್ಪನಿಕ ವ್ಯಕ್ತಿಗಳೆಂತಲೂ ಹೇಳಬಹುದು.

ಯಾಗಗಳಲ್ಲಿಯೂ, ಅಗ್ನಿಗೂ ಮನುಷ್ಯನ ದೈನಂದಿನ ಜೀವನಕ್ಕೂ ನಿಕಟ ಬಾಂಧವ್ಯವು ಏರ್ಪಡುತ್ತದೆ. ಅಗ್ನಿಯು ಮನುಷ್ಯನಿಂದ ಹುತವಾದುದನ್ನು ಸ್ವೀಕರಿಸುವುದು ಮಾತ್ರವಲ್ಲದೇ, ಸ್ವರ್ಗಭೂಮಿಗಳಿಗೆ ಮಧ್ಯಸ್ಥಗಾರನಾಗಿಯೂ ಕೆಲಸ ಮಾಡುತ್ತಾನೆ. ಹೋಮಮಾಡಿದ ಪದಾರ್ಥಗಳನ್ನು ದೇವತೆಗಳಿಗೆ ಸಲ್ಲಿಸುವವನೇ ಅವನು ; ಅವನಿಲ್ಲದೆ ದೇವತೆಗಳಿಗೆ ಸಂತೋಷವೇ ಉಂಟಾಗದು (೭-೧೧-೧). ಅವನು ದೇವತೆಗಳನ್ನು ಯಾಗಶಾಲೆಗೆ ಕರತರುತ್ತಾನೆ (೩-೧೪-೨) ಮತ್ತು ಹುತವಾದವುಗಳನ್ನು ತೆಗೆದುಕೊಂಡು ಹೋಗಿ ಅವರಿಗೆ ಸೇರಿಸುತ್ತಾನೆ (೭-೧೧-೫). ಹೋಮದ್ರವ್ಯವನ್ನು ಭಕ್ಷಿಸಲು (೫-೧-೧೧ ; ಇತ್ಯಾದಿ), ಅವರನ್ನು ದರ್ಭಾಸನದ ಮೇಲೆ ಕೂಡಿಸುತ್ತಾನೆ (೧-೩೧-೧೭ ; ೮-೪೪-೩). ಮಾರ್ಗಗಳನ್ನು ಚೆನ್ನಾಗಿ ತಿಳಿದಿರುವ (೬-೧೭-೩) ಅಗ್ನಿಯು, ಭೂಮಿಗೆ (೮-೭-೨) ಮತ್ತು ದೇವತೆಗಳ ಸಮೀಪಕ್ಕೆ (೧೦-೯೮-೧೧) ಹೋಗುವ ಎರಡು ದಾರಿಗಳಲ್ಲೂ

ಹೋಗುತ್ತಾನೆ. ಅದರಿಂದಲೇ ಅವನಿಗೆ ಯಾವಾಗಲೂ ದೂತನಿಂತಲೇ ಕರೆಯುವುದು ವಾಡಿಕೆ; ಇವನಿಗೆ ಮಾರ್ಗಗಳು ಚೆನ್ನಾಗಿ ತಿಳಿದಿವೆ ಮತ್ತು ಯಾಗವನ್ನು ಸ್ಥಳಾಂತರಕ್ಕೆ ಒಯ್ಯುತ್ತಾನೆ (೧-೭೨-೭) ಅಥವಾ ಎಲ್ಲಾ ವಸತಿಗಳಿಗೂ ಬೇಟಕೊಡುತ್ತಾನೆ (೪-೧-೪); ಬಹಳ ವೇಗವಾಗಿ (೧೦-೬-೪) ಭೂಮ್ಯಾಕಾಶಗಳ ಮಧ್ಯೆ (೪-೭-೮; ೪-೮-೪; ೧೦-೪-೨) ಅಥವಾ ದೇವಮಾನವರಿಂಬ ಎರಡು ಜನಾಂಗಗಳ ಮಧ್ಯೆ (೪-೨-೨- ಮತ್ತು ೩) ಓಡಾಡುತ್ತಾನೆ. ದೇವತೆಗಳು (೫-೮-೬; ಇತ್ಯಾದಿ) ಮತ್ತು ಮನುಷ್ಯರು (೧೦-೪೬-೧೦) ಅವನನ್ನು ಹವ್ಯವಾಹ ಅಥವಾ ಹವ್ಯವಾಹನನ್ನಾಗಿ (ಹವಿಸ್ಸನ್ನು ಒಯ್ಯುವವನು) ನೇಮಿಸಿದಾರೆ. (ಈ ಹೆಸರು ಅಗ್ನಿ ಗೊಬ್ಬನಿಗೇ ರೂಢಿಯಾಗಿರುವುದು). ಯಾಗಕರ್ತೃವು ಉಚ್ಚರಿಸಿದ ಮಂತ್ರವನ್ನು ದೇವತೆಗಳಿಗೆ ತಿಳಿಯಪಡಿಸುವುದು (೧-೨೭-೪) ಅಥವಾ ಯಾಗಶಾಲೆಗೆ ದೇವತೆಗಳನ್ನು ಕರತರುವುದು (೪-೮-೨). ಇವೇ ಅವನ ಕೆಲಸಗಳು. ಅವನು ದೇವತೆಗಳ (೬-೧೫-೯) ಮತ್ತು ವಿವಸ್ವತನ (೧-೫೮-೧; ೪-೭-೪; ೮-೩೯-೩; ೧೦-೨೧-೫) ದೂತನು. ಸ್ವರ್ಗದ ಮೂಲೆ ಮೂಲೆಗಳನ್ನೂ ತಿಳಿದಿರುವವನೂ, ಯಾಗಗಳನ್ನು ನಿರ್ವಹಿಸುವವನೂ, ದೇವತೆಗಳನ್ನು ಕರತರುವವನೂ ಆದ ಅಗ್ನಿಯನ್ನು ದೇವತೆಗಳ ದೂತನೆನ್ನುವುದಕಿಂತ, ಮನುಷ್ಯರ ದೂತನೆಂದರೆ ಚೆನ್ನಾಗಿ ಒಪ್ಪುವುದು. ಬೇರೆ ಒಂದು ವೇದದಲ್ಲಿ (ತೈ. ಸಂ. ೨-೫-೮-೫; ೨-೫-೧೧-೮), ಅಗ್ನಿಯು ದೇವತೆಗಳ ದೂತನೆಂದೂ, ಕಾವ್ಯ ಉಶನಾಃ ಅಥವಾ ದೈವ್ಯ ಎಂಬುವನು ಅಸುರರ ದೂತನೆಂದೂ ಹೇಳಿದೆ. ಮತ್ತೊಂದು ಕಡೆ (ತೈ. ಬ್ರಾ. ೩-೪-೧-೬). ಅಗ್ನಿಯನ್ನು ದೂತನೆಂದು ವರ್ಣಿಸದೆ, ದೇವತೆಗಳ ಸವಿಾಪಕ್ಕೆ ಹೋಗಲು ಅದು ಮಾರ್ಗವೆಂತಲೂ, ಆ ಮಾರ್ಗದಲ್ಲಿ ಹೋದರೆ, ಸ್ವರ್ಗದ ಅತಿಶ್ರೇಷ್ಠವಾದ ಸ್ಥಾನಗಳಿಗೆ ಹೋಗಬಹುದೆಂತಲೂ ವರ್ಣಿಸಿದೆ.

ಯಾಗಗಳಲ್ಲಿ ಕರ್ಮಗಳನ್ನು ಸಾಧಿಸುವುದರಲ್ಲಿ ಅಗ್ನಿಯು ಅತಿ ಮುಖ್ಯ ಪಾತ್ರವಹಿಸಿರುವನೆಂದು ಹೇಳಿರುವುದರಿಂದ, ಮನುಷ್ಯರಲ್ಲಿ ಪುರೋಹಿತರಿಗೆ ಕೊಟ್ಟಿರುವ ಸ್ಥಾನವೇ, ದೇವತೆಗಳಲ್ಲಿ ಅಗ್ನಿಗೆ ಕೊಡಲ್ಪಟ್ಟಿದೆ. ಆದುದರಿಂದ, ಅವನಿಗೆ ಋತ್ವಿಕ್, ವಿಪ್ರ, ವಿಶೇಷವಾಗಿ ಪುರೋಹಿತ, ಮೊದಲಾದ ವಿಶೇಷಣಗಳಿವೆ. ಇವುಗಳಿಲ್ಲದಕ್ಕಿಂತ ಹೆಚ್ಚಾಗಿ, ಅಗ್ನಿಯನ್ನು 'ಹೋತಾ' (ಸ್ತುತಿಸುವವನು, ಮುಖ್ಯ ಪುರೋಹಿತ) ಎಂದು ಕರೆದಿದ್ದಾರೆ. ಅಗ್ನಿಯು ಮನುಷ್ಯರಿಂದ (೪-೪೯-೧; ೧೦-೨-೫) ಮತ್ತು ದೇವತೆಗಳಿಂದ (೬-೧೬-೧) ನಿಯಮಿತನಾದ ಹೋತೃವು. ಅವನು ಹೋತೃಗಳಲ್ಲೆಲ್ಲಾ ಅತ್ಯಂತ ಪ್ರೀತಿಪಾತ್ರನು ಮತ್ತು ಅತಿ ಶ್ರೇಷ್ಠನು (೧೦-೨-೧; ೧೦ ೯೧-೪). ಅವನಿಗೆ ಅಧ್ವರ್ಯುವೆಂತಲೂ (೩-೫-೪). ಬೃಹಸ್ಪತಿ, ಸೋಮ ಮತ್ತು ಇಂದ್ರರಂತೆ, ಬ್ರಹ್ಮ ಎಂತಲೂ (೪-೯-೪) ಹೆಸರಿದೆ. ಒಂದು ವಿಧದಲ್ಲಿ ಮೇಲೆಹೇಳಿದ ಋತ್ವಿಜರ (ಹೋತೃ, ಅಧ್ವರ್ಯು, ಬ್ರಹ್ಮ) ಮತ್ತು ಇತರರ ಕರ್ಮಗಳನ್ನೆಲ್ಲವನ್ನೂ ಅವನೊಬ್ಬನೇ ಮಾಡುತ್ತಾನೆ ಎಂದು ಹೇಳಬಹುದು (೧-೯೪-೬; ೨-೧-೨; ಇತ್ಯಾದಿ). ದೇವತೆಗಳನ್ನು ಪೂಜಿಸಬೇಕು ಅಥವಾ ಗೌರವಿಸಬೇಕೆಂದು ಅಗ್ನಿಯು ಸರ್ವದಾ ಪ್ರಾರ್ಥಿತನಾಗುತ್ತಾನೆ (೩-೨೫-೧; ೭-೧೧-೩; ಇತ್ಯಾದಿ) ಮತ್ತು ಇದಕ್ಕೆ ಪ್ರತಿಯಾಗಿ, ಅಗ್ನಿಯನ್ನು ದಿನಕ್ಕೆ ಮೂರು ಬಾರಿ ಪೂಜಿಸಬೇಕೆಂದು ದೇವತೆಗಳನ್ನೂ ಪ್ರಾರ್ಥಿಸಿದೆ (೩-೪-೨). ಯಾಗ ಅಥವಾ ಕರ್ಮವನ್ನು ಸಾಧಿಸುವವನು ಅಗ್ನಿಯು (೩-೩-೩; ೩-೨೭-೨); ತನ್ನ ವಿಶೇಷ ಶಕ್ತಿಯಿಂದ ಅದನ್ನು ಸಾಂಗವಾಗಿ ಪೂರಯಿಸುತ್ತಾನೆ (೩-೨೭-೭); ಹೋಮಗಳನ್ನು ಸುವಾಸನೆಯುಳ್ಳದ್ದಾಗಿ ಮಾಡುತ್ತಾನೆ (೧೦-೧೫೮-೧೨); ತನ್ನಿಂದ ರಕ್ಷಿತವಾದ ಹವಿಸ್ಸನ್ನು ದೇವತೆಗಳಿಗೆ ಸೇರಿಸುತ್ತಾನೆ (೧-೧-೪). ಅವನು ಯಜ್ಞಕ್ಕೆ ತಂದೆಯು (೩-೩-೪), ರಾಜನು (೪-೩-೧), ಒಡೆಯನು (೧೦-೬-೩), ಮೇಲ್ವಿಚಾರಣೆ ನಡೆಸುವವನು (೪-೪೩-೨೪) ಮತ್ತು ಧ್ವಜಪ್ರಾಯನು (೩-೩-೩; ೩-೧೦-೪; ೬-೨-೩; ೧೦-೧-೫). ಒಂದು ಸೂಕ್ತದಲ್ಲಿ (೧೦-೫೧). ಅಗ್ನಿಗೆ ತನ್ನ ಕೆಲಸವು

ಬೇಜಾರಾಗಿ' ಯಾಗ ಕರ್ಮಗಳನ್ನು ನಿರ್ವಹಿಸದೇ ಬಿಟ್ಟುಬಿಟ್ಟನೆಂದೂ, ದೇವತೆಗಳಿಂದ ಬರಬೇಕಾದ ಶಾರಿ ತೋಷಿಕವು ಬಂದಮೇಲೆ ಮನುಷ್ಯರಿಗೆ, ಮುಖ್ಯಪುರೋಹಿತನಾಗಿ ಕೆಲಸಮಾಡಲು ಒಪ್ಪಿಕೊಂಡನೆಂದೂ, ಇದೆ. ಅಗ್ನಿಯ ಪಾತ್ರದಲ್ಲಿ ಬಹಳ ಪ್ರಧಾನವಾಗಿ ಕಂಡುಬರುವುದೆಂದರೆ ಅವನ ಪುರೋಹಿತತನ. ಇಂದ್ರನು ಮುಖ್ಯ ಯೋಧನಾಗಿರುವಂತೆ, ಅಗ್ನಿಯು ಮುಖ್ಯಪುರೋಹಿತ. ಅಗ್ನಿಯ ಈ ರೂಪವು ಇತ್ತೀಚಿನದು ಎಂದು ಹೇಳ ಬಹುದು. ಹವ್ಯವಾಹಕನ ಕೆಲಸವೇ ಅಗ್ನಿಯ ಮುಖ್ಯ ಕೆಲಸ. ಮುಂದೆ ಬ್ರಾಹ್ಮಣಗಳಲ್ಲಿ, ಹವ್ಯವಾಹಕ ನಾದ ಅಗ್ನಿಗೂ, ಕ್ರವ್ಯಾದನಾದ (ಮೃತರ ದೇಹಗಳನ್ನು ದಹಿಸುವ) ಅಗ್ನಿಗೂ ಭೇದವು ಉಕ್ತವಾಗಿದೆ. ವಾಜ ಸನೇಯಿಸಂಹಿತೆಯಲ್ಲಿ (ವಾ. ಸಂ. ೧-೧೭ ; ೧೪-೫೧ನ್ನು ಹೋಲಿಸಿ), ಹವ್ಯವಾಹನ (ಹೋಮಗಳನ್ನು ದೇವತೆ ಗಳಿಗೆ ಒಯ್ದುಕೊಡುವವನು), ಕವ್ಯವಾಹನ (ಔರ್ಧ್ವದೈಹಿಕ ಕರ್ಮಗಳಲ್ಲಿ ದತ್ತವಾದುದನ್ನು ಪಿತೃಗಳಿಗೆ ಸೇರಿಸು ವವನು) ಮತ್ತು ಸಹರಕ್ಷಾಃ (ಪಿಶಾಚ, ರಾಕ್ಷಸಾದಿಗಳೊಡನೆ ಸೇರಿದವನು) ಎಂದು ಅಗ್ನಿಯ ಮೂರು ರೂಪಗಳು ಉಕ್ತವಾಗಿವೆ.

ಅಗ್ನಿಯು ಋಷಿ ಮತ್ತು ಪುರೋಹಿತ (೯-೬೬-೨೦) ; ಶ್ರೇಷ್ಠನಾದ ಋಷಿಯಾದುದರಿಂದ, ಅವನು ಉದ್ದೀಪಿತನಾಗುತ್ತಾನೆ (೩-೨೧-೩) ; ಅತ್ಯಂತ ದಯಾಳುವಾದ ಋಷಿ (೬-೧೪-೨) ; ಅಂಗಿರಸನೆಂಬ ಮೊದಲ ನೆಯ ಋಷಿಯೇ ಅವನು (೧-೩೧-೧). ಜ್ಞಾನಿಗಳಲ್ಲಿ ಅವನು ದಿವ್ಯಜ್ಞಾನಿಯು (ಅಸುರ ೩-೩-೪) ಯಾಗ ಗಳು ಅವನಿಗೆ ಸ್ಪಷ್ಟವಾಗಿ ತಿಳಿದಿವೆ (೧೦-೧೧೦-೧೧) ಮತ್ತು ಎಲ್ಲಾ ಕರ್ಮಗಳನ್ನೂ ತಿಳಿದಿದಾನೆ (೧೦-೧೨೨-೨) ಯಾಗಸಂಬಂಧವಾದ ದೈವಿಕ ನಿಯಮಗಳನ್ನರಿಯದೆ, ಮನುಷ್ಯರು ಮಾಡುವ ತಪ್ಪುಗಳನ್ನು, ಕಾಲಜ್ಞನಾದ ಅಗ್ನಿಯು ಸರಿಪಡಿಸುತ್ತಾನೆ (೧೦-೨-೪ ಮತ್ತು ೫). ಸ್ವರ್ಗದ ಗುಪ್ತಸ್ಥಾನಗಳೆಲ್ಲವೂ ಅವನಿಗೆ ಜ್ಞಾತವಾಗಿವೆ (೪-೪-೨ ಮತ್ತು ೪). ತನ್ನ ಸ್ವಂತ ಬುದ್ಧಿಯಿಂದ (೧೦-೯೧-೩) ಎಲ್ಲವನ್ನೂ ತಿಳಿಯುತ್ತಾನೆ (೧೦-೧೧-೧). ಇವನು ಸರ್ವವನ್ನೂ ತಿಳಿದಿದಾನೆ (೩-೧-೧೭ ; ೧೦-೨೧-೫) ; ಚಕ್ರದ ಅರೆಗಳನ್ನು ನೇಮಿಯು ಆವರಿಸಿರುವಂತೆ, ಸರ್ವವನ್ನೂ ಆವರಿಸಿಕೊಂಡಿದಾನೆ (೨-೫-೩) ; ಈ ಸರ್ವಜ್ಞತ್ವವು ಜನ್ಮಸಿದ್ಧವಾದುದು (೧-೯೬-೧). ಸರ್ವ ವನ್ನೂ ತಿಳಿದವನು (ವಿಶ್ವವಿತ್) ; ವಿಶ್ವವೇದಾಃ, ಕವಿ, ಕವಿಕ್ರತು ನೊದಲಾದ ಸರ್ವಜ್ಞತ್ವಸೂಚಕ ಪದಗಳು ಅವನಿಗೇ ವಿಶೇಷವಾಗಿ ಅನ್ವಯಿಸುತ್ತವೆ. ಜಾತವೇದಾಃ ಎಂಬುದಕ್ಕೆ ಸರ್ವಕಾಲೀರನ್ನೂ ತಿಳಿದವನು ಎಂದು ೬-೧೫-೧೩ನಲ್ಲಿ ಅರ್ಥಮಾಡಿದೆ. ಇದು ಸುಮಾರು ೧೨೦ ಸಲ ಋಗ್ವೇದದಲ್ಲಿ ಅಗ್ನಿಯೊಬ್ಬನಿಗೇ ಪ್ರಯೋಗಿಸ ಲ್ಪಟ್ಟಿದೆ. ಅವನು ದೈವನಿಯಮಗಳನ್ನು ಮತ್ತು ಎಲ್ಲಾ ತಲೆಮಾರೆಯವರನ್ನೂ ಬಲ್ಲನು (೧-೭೦-೧ ಮತ್ತು ೩). ಎಲ್ಲಾ ಪ್ರಾಣಿಗಳೂ ಅವನಿಗೆ ಪರಿಚಿತರು ಮತ್ತು ಎಲ್ಲರನ್ನೂ ನೋಡಬಲ್ಲನು (೩-೫೫-೧೦ ; ೧೦-೧೪೭-೪); ತನಗೆ ಉದ್ದಿಷ್ಟವಾದ ಸ್ತುತಿಗಳೆಲ್ಲವನ್ನೂ ಕೇಳುತ್ತಾನೆ (೪-೪೩-೨೩). ಅಗ್ನಿಯು ಜ್ಞಾನಜನಕನೂ ಹೌದು (೪-೯೧-೪). ಜ್ಞಾನ ಮತ್ತು ಸ್ತುತಿಗಳು ಅವನಿಂದಲೇ ಉತ್ಪನ್ನವಾಗುತ್ತವೆ (೪-೧೧-೩). ಅವನು ಸ್ಫೂರ್ತಿ ದಾಯಕನು (೧೦-೪೬-೫) ; ಉತ್ತಮ ವಾಕ್ಸರಣಿಯನ್ನು ಕಂಡುಹಿಡಿದವನು (೨-೯-೪) ; ಸ್ತೋತ್ರಗಳನ್ನು ಮೊದಲು ಕಂಡುಹಿಡಿದವನು (೬-೧-೧). ಅವನು ಸ್ವತಃ ವಾಗ್ಮಿ (೬-೪-೪) ಮತ್ತು ಗಾಯಕ.

ಅಗ್ನಿಯು ತನ್ನ ಆರಾಧಕರಿಗೆ ಮಹದುಪಕಾರಿ. ಅವರನ್ನು ನೂರು ಕಬ್ಬಿಣದ ಗೋಡೆಗಳಿಂದ ರಕ್ಷಿಸುತ್ತಾನೆ (೭-೩-೭ ; ೭-೧೬-೧೦ : ೬-೪೮-೪ ; ೧-೧೪೯-೨ಗಳನ್ನು ಹೋಲಿಸಿ). ಅಪಾಯಗಳಿಂದ ರಕ್ಷಿಸು ತ್ತಾನೆ ಅಥವಾ, ಸಮುದ್ರವನ್ನು ನಾವೆಯಿಂದ ದಾಟಿಸುವಂತೆ ಅಪಾಯಗಳಿಂದ ಪಾರುಗಾಣಿಸುತ್ತಾನೆ (೩-೨೦-೪; ೫-೪-೯ ; ೭-೧೨-೨). ತನ್ನನ್ನು ಅತಿಥಿಯಂತೆ ಪೂಜಿಸುವವರಿಗೆ ಸ್ನೇಹಿತನು (೪-೪-೧೦) ಮತ್ತು ಅಂಥವ

ರನ್ನು ಕಷ್ಟಗಳಿಂದ ಬಿಡುಗಡೆ ಮಾಡುತ್ತಾನೆ (೮-೪೯-೫). ತನಗಾಗಿ ಕಷ್ಟಪಟ್ಟು ಸೌದೆ ತರುವವನನ್ನು ರಕ್ಷಿಸುತ್ತಾನೆ (೪-೨.೬). ತನಗೆ ಆಹಾರವನ್ನು ಕೊಟ್ಟು, ಹೋಮಾದಿಗಳಿಂದ ಪೋಷಿಸುವವನನ್ನು ಸಾವಿರ ಕಣ್ಣುಗಳಿಂದ ನೋಡಿಕೊಳ್ಳುತ್ತಾನೆ (೧೦-೭೯-೫). ತನ್ನ ಆರಾಧಕರ ಶತ್ರುಗಳನ್ನು, ಒಣಗಿದ ಪೊದೆಗಳಂತೆ, ಭಸ್ಮ ಮಾಡಿಬಿಡುತ್ತಾನೆ (೪–೪-೪) ; ಸಿಡಿಲು ವೃಕ್ಷಗಳನ್ನು ಬೀಳಿಸುವಂತೆ ದ್ವೇಷಿಗಳನ್ನು ಕೆಡವುತ್ತಾನೆ (೬-೮-೫ ; ಅ. ವೇ. ೩-೨-೧ ; ಇತ್ಯಾದಿಗಳನ್ನು ಹೋಲಿಸಿ). ಆದರಿಂದಲೇ, ಯುದ್ಧದಲ್ಲಿ ಸಹಾಯಕ್ಕಾಗಿ ಪ್ರಾರ್ಥಿತನಾಗಿ (೮-೪೩-೨೧), ಸೈನ್ಯದ ಮುಂಭಾಗದಲ್ಲಿ ನಾಯಕನಾಗಿ ಹೋಗುತ್ತಾನೆ (೮-೭೩-೮). ಯುದ್ಧದಲ್ಲಿ ಅಗ್ನಿಯಿಂದ ರಕ್ಷಿತನೂ ಪ್ರೋತ್ಸಾಹಿತನೂ ಆದವನು ಯಥೇಷ್ಟವಾಗಿ ಆಹಾರವನ್ನು ಸಂಪಾದಿಸುತ್ತಾನೆ ಮತ್ತು ಅಪ್ರತಿಹತನಾಗಿರುತ್ತಾನೆ (೧-೨೭-೭). ವೃಕ್ಷದಿಂದ ಶಾಖೆಗಳು ಹೊರಡುವಂತೆ, ಎಲ್ಲಾ ವರಪ್ರಸಾದಗಳೂ ಅವನಿಂದಲೇ ಹೊರಡುತ್ತವೆ (೬-೧೩-೧). ಅಪಾರ ಸಂಪತ್ತಿಗೆ ಒಡೆಯನಾದ ಅಗ್ನಿಯು ಐಶ್ವರ್ಯದಾಯಕನಾಗುತ್ತಾನೆ (೧-೧-೩ ; ೧-೩೧-೧೦ ; ೧-೩೬-೪). ಎಲ್ಲಾ ನಿಧಿಗಳೂ ಅವನಲ್ಲಿಯೇ ಸಂಗತವಾಗಿವೆ. (೧೦-೬-೬) ಮತ್ತು ನಿಧಿಯ ದ್ವಾರವನ್ನು ತೆರೆಯುತ್ತಾನೆ (೧-೬೮-೧೦). ಸ್ವರ್ಗ ಮತ್ತು ಭೂಮಿಗಳಲ್ಲಿರುವ (೪-೫–೧೧) ಅಥವಾ ಸ್ವರ್ಗ, ಭೂಮಿ ಮತ್ತು ಸಾಗರಗಳಲ್ಲಿರುವ (೭-೬-೭ ; ೧೦-೯೧-೩) ಸಂಪತ್ತುಗಳಿಗೆಲ್ಲಾ ಅವನೇ ಒಡೆಯ. ಆಕಾಶದಿಂದ ಮಳೆಯನ್ನು ಕರೆಯುತ್ತಾನೆ (೨–೬-೫) ಮತ್ತು ಅವನು ಮರುಭೂಮಿಯಲ್ಲಿ ಒಂದು ನೀರಿನ ತೊಟ್ಟಿಯಂತಿದಾನೆ (೧೦-೪-೧). ಆದುದರಿಂದಲೇ, ಅಗ್ನಿಯು, ಆಹಾರ, ಸಂಪತ್ತು, ಮತ್ತು ದಾರಿದ್ರ್ಯ, ಸಂತಾನಾಭಾವ, ಶತ್ರುಗಳು, ಪಿಶಾಚಿಗಳು ಮೊದಲಾದುವುಗಳಿಂದ ಬಿಡುಗಡೆ ಇವುಗಳಿಗೋಸ್ಕರ ಪ್ರಾರ್ಥಿತನಾಗಿದಾನೆ. ಇಂದ್ರನಿಂದ ಪ್ರಾಪ್ಯವಾದವುಗಳೆಲ್ಲಾ ಯುದ್ಧ ಮತ್ತು ಯುದ್ಧರಂಗಕ್ಕೆ ಸಂಬಂಧಿಸಿದುವು. ಆದರೆ ಅಗ್ನಿಯಿಂದ ಪ್ರಾಪ್ಯವಾದುವು ಸಂಸಾರ ಸಂಬಂಧವಾದವುಗಳೇ ಹೆಚ್ಚು. ಅಜ್ಞಾನದಿಂದ ಆಚರಿಸಲ್ಪಟ್ಟ ತಪ್ಪುಗಳನ್ನು ಕ್ಷಮಿಸುತ್ತಾನೆ (೪-೧೨-೪ ; ೭-೯೩-೭) ; ವರುಣನ ಕ್ರೋಧದಿಂದ ತೊಂದರೆಯಾಗದಂತೆ ನೋಡಿಕೊಳ್ಳುತ್ತಾನೆ (೪-೧-೪). ಪುತ್ರನಿಗೆ ಪ್ರಸನ್ನನಾಗಿ, ಅವನ ತಂದೆತಾಯಿಗಳು ಮಾಡಿದ ತಪ್ಪನ್ನೂ ಕ್ಷಮಿಸುತ್ತಾನೆ (ಅ. ವೇ. ೫-೩೦-೪ ; ತೈ. ಬ್ರಾ. ೩–೭-೧೨-೩ ಮತ್ತು ೪).

ಅಗ್ನಿಯು ಅಸುರನು, ಸಾಮ್ರಾಟನು, ಇಂದ್ರನಷ್ಟು ಬಲಿಷ್ಠನು (೭–೬-೧). ಮಹದಾಕಾಶಕಿಂತಲೂ ಅವನ ಮಹತ್ತ್ವ ಹೆಚ್ಚಿನದು (೧-೫೯-೫). ತಾನು ಜನಿಸಿದಾಗ ಆವರಿಸಿಕೊಂಡ ಎಲ್ಲಾ ಲೋಕಗಳಿಗಿಂತಲೂ (೩-೩-೧೦) ಅಥವಾ ಭೂಮ್ಯಾಕಾಶಗಳಿಗಿಂತಲೂ (೩-೬.೨ ; ೧೦-೮೮-೧೪), ಅಗ್ನಿಯು ದೊಡ್ಡವನು. ಇತರ ಎಲ್ಲಾ ದೇವತೆಗಳಿಗಿಂತಲೂ ಉತ್ತಮನು (೧-೬೮-೨). ಕತ್ತಲಿನಲ್ಲಿ ಅಡಗಿದ್ದಾಗ, ಎಲ್ಲಾ ದೇವತೆಗಳೂ ಹೆದರಿ, ಅವನಿಗೆ ಗೌರವ ಸಲ್ಲಿಸುತ್ತಾರೆ (೬-೯-೭). ವರುಣ, ಮಿತ್ರ ಮರುತ್ತುಗಳು ಮತ್ತು ಇತರ ಎಲ್ಲಾ ದೇವತೆಗಳೂ ಅವನನ್ನು ಸ್ತುತಿಸಿ, ಪೂಜಿಸುತ್ತಾರೆ (೩-೯-೮ ; ೩-೧೪-೪ ; ೧೦–೬೯-೯). ಅಗ್ನಿಯು ಪುರಾತನವಾದ ಮಹತ್ಕಾರ್ಯಗಳನ್ನು ಸಾಧಿಸಿದನು (೭-೬-೨). ಅವನ ಪರಾಕ್ರಮ ಕಾರ್ಯಗಳನ್ನು ಕೇಳಿ, ಮನುಷ್ಯರು ನಡುಗುತ್ತಾರೆ. ಯುದ್ಧದಲ್ಲಿ, ಅವನು ದೇವತೆಗಳಿಗೆ ಸ್ಥಳವನ್ನು ಕಲ್ಪಿಸಿಕೊಟ್ಟು (೧-೫೯–೫). ಅವರಿಗೆ ಶಾಪ ವಿಮೋಚನೆ ಮಾಡಿದನು (೭-೧೩-೨). ಸಹಸ್ರಾರು ಜನರನ್ನು ಜಯಿಸಿದಾನೆ. ಮನೆಯಿಂದ ದಸ್ಯುವನ್ನು ಓಡಿಸಿ, ಆರ್ಯನಿಗೆ ಬೆಳಕನ್ನು ದೊರಕಿಸಿದನು (೭-೫-೬). ಆರ್ಯರನ್ನು ಪ್ರೋತ್ಸಾಹಗೊಳಿಸಿ (೮–೪೨-೧), ದುರಾಚಾರಿಗಳಾದ ಪಣಿಗಳನ್ನು ನಾಶಮಾಡಿದನು (೭-೬-೩). ಇಂದ್ರನಿಗೇ ಮುಖ್ಯವಾಗಿ ಸಲ್ಲಬೇಕಾದ 'ವೃತ್ರಹಾ' (ವೃತ್ರನನ್ನು ವಧಿಸಿದವನು) ಎಂಬುದು ಅನೇಕ ಸಲವೂ, 'ಪುರಂದರ' (ಶತ್ರುಪುರಗಳನ್ನು ಭೇದಿಸುವವನು, ನಾಶಮಾಡುವವನು) ಎಂಬುದು ೨-೩ ಸಲವೂ, ಅಗ್ನಿಗೆ ಪ್ರಯುಕ್ತವಾಗಿವೆ. ಅಗ್ನಿಯ ವಿದ್ಯುದ್ರೂಪಕ್ಕೆ ಇಂತಹ

ಪರಾಕ್ರಮದ ಕಾರ್ಯಗಳು ತಕ್ಕುವಾದರೂ, ಈ ಗುಣಗಳು ಇಂದ್ರನಿಂದ ಲಬ್ಧವಾದುವೆಂದು ಹೇಳುವುದು ಸಾಧುವಾಗಿದೆ.

ಅಗ್ನಿಯು ಭೂಮ್ಯಾಕಾಶಗಳ ಪುತ್ರನೆಂಬುದು ಪ್ರಸಿದ್ಧವಾಗಿದ್ದರೂ, ಅವನು ಅವೆರಡನ್ನೂ ಸೃಜಿಸಿದನೆಂದೂ (೧-೯೬-೪; ೭-೫-೭ನ್ನು ಹೋಲಿಸಿ) ಹೇಳಿದೆ. ನಾಶರಹಿತವಾದ ಅವನ ನಿಯಮಗಳು (೨-೮-೩) ಭೂಮ್ಯಾಕಾಶಗಳೆರಡರಿಂದಲೂ ಅನುಸರಿಸಲ್ಪಡುತ್ತವೆ (೭-೫-೪). ಅವನು ಅವೆರಡು ಲೋಕಗಳನ್ನೂ ವಿಸ್ತರಿಸಿದನು (೩-೬-೫; ೭-೫-೪) ಅಥವಾ ಅವೆರಡನ್ನೂ ತೊಗಲಿನಂತೆ ಹರಡಿದನು (೬-೮-೩). ತನ್ನ ಜ್ವಾಲೆ ಅಥವಾ ಧೂಮದಿಂದ ಆಕಾಶವನ್ನು ನಿಲ್ಲಿಸಿದನು (೩-೫-೧೦; ೪-೬-೨). ಆ ಎರಡು ಲೋಕಗಳನ್ನೂ ಪ್ರತ್ಯೇಕಿಸಿ ಇಟ್ಟನು (೬-೮-೩). ಸತ್ಯಾರ್ಥವಾದ ಮಂತ್ರಗಳಿಂದ ಭೂಮ್ಯಾಕಾಶಗಳನ್ನು ನಿಲ್ಲಿಸಿದನು (೧-೬೭-೩). ಪ್ರಪಂಚದ ಮುಂಭಾಗದಲ್ಲಿ ಇರುತ್ತಾನೆ ಅಥವಾ ರಾತ್ರಿಯ ಹೊತ್ತು ಭೂಮಿಗೆಲ್ಲಾ ಯಜಮಾನನಾಗಿರುತ್ತಾನೆ (೧೦-೮೮-೫, ಮತ್ತು ೬), ಅವನು ಆಕಾಶಕ್ಕೆ ಯಜಮಾನ ಮತ್ತು ಶಿಖರಪ್ರಾಯನೂ ಹೌದು (೧-೫೯-೨, ೬-೭-೧, ೮-೪೪-೧೬). ವಾಯುವಿನಿಂದ ಪರಿಮಿತಿಯನ್ನು ಗೊತ್ತುಮಾಡಿ, ತನ್ನ ಮಹತ್ತ್ವದಿಂದ ಆಕಾಶದ ಗಮ್ಮಟವನ್ನು ಮುಟ್ಟಿದನು (೬-೮-೨). ಅಂತರಿಕ್ಷ ಮತ್ತು ತೇಜೋವಿಶಿಷ್ಟವಾದ ಸ್ವರ್ಗಲೋಕದ ಪ್ರದೇಶಗಳ ಅಳತೆಯನ್ನು ಗೊತ್ತುಮಾಡಿದನು (೬-೭-೭). ಸೂರ್ಯನು ಆಕಾಶವನ್ನು ಏರುವಂತೆ ಮಾಡಿದವನು ಅಗ್ನಿ (೧೦-೧೫೬-೪). ಭೂಮಿಯಲ್ಲಿ ಅಗ್ನಿಯನ್ನು ಹೊತ್ತಿಸುವುದಕ್ಕೂ, ಸೂರ್ಯೋದಯಕ್ಕೂ ವಿಲಕ್ಷಣ ಸಂಬಂಧ ವಿದೆಯೆಂಬುದು ಸ್ಪಷ್ಟವಾಗುತ್ತದೆ. ನಾವು ಇಲ್ಲಿ ನಿನ್ನನ್ನು (ಅಗ್ನಿಯನ್ನು) ಜ್ವಲನಗೊಳಿಸುತ್ತೇವೆ (೫-೬-೪), ಅಂತರಿಕ್ಷದಲ್ಲಿ ನಿನ್ನ ಆಶ್ಚರ್ಯಕರವಾದ ರೂಪವಿಶೇಷವು ಮೂಡಲಿ. ಬ್ರಾಹ್ಮಣದಲ್ಲಿ ಈ ಅಭಿಪ್ರಾಯವು ಇನ್ನೂ ಸ್ಪಷ್ಟವಾಗಿದೆ. ಸೂರ್ಯೋದಯಕ್ಕೆ ಮುಂಚೆ ಅಗ್ನಿಯಲ್ಲಿ ಹೋಮಮಾಡಿ, ಮನುಷ್ಯನು ಸೂರ್ಯನು ಉದಿಸುವಂತೆ ಮಾಡುತ್ತಾನೆ, ಇಲ್ಲದಿದ್ದರೆ, ಸೂರ್ಯನು ಉದಿಸುವುದೇ ಇಲ್ಲ (ಶ. ಬ್ರಾ. ೨-೩-೧-೫, ತೈ. ಸಂ. ೪-೭-೧೩-೩). ಸಾಧಾರಣವಾಗಿ, ಸೂರ್ಯೋದಯ ಮತ್ತು ಅಗ್ನಿಜ್ವಲನಗಳೆರಡೂ ಏಕಕಾಲದಲ್ಲಿ ಆಗುತ್ತವೆ ಎಂದು ಹೇಳಿದೆ. ಅಗ್ನಿಯು ಜನಿಸಿದಾಗ, ಸೂರ್ಯನು ಕಾಣಿಸಿಕೊಂಡನು (೪-೩-೧೧). ಅಗ್ನಿಯೇ ಆಕಾಶವನ್ನು ನಕ್ಷತ್ರರಂಜಿತವನ್ನಾಗಿ ಮಾಡಿದನು (೧-೬೮-೫). ಹಾರುವ, ನಡೆಯುವ, ನಿಂತಿರುವ ಅಥವಾ ಚಲಿಸುವ ವಸ್ತುಗಳೆಲ್ಲವನ್ನೂ ಅವನೇ ಸೃಜಿಸಿದನು (೧೦-೮೮-೪). ಈ ಪ್ರಾಣಿಗಳಲ್ಲಿ (೩-೨೯-೧೦), ಸತ್ಯಗಳಲ್ಲಿ ಮತ್ತು ಸಮಸ್ತ ಪ್ರಾಣಿಗಳಲ್ಲಿ, ಇವನಿಂದ ಗರ್ಭಾಣುವು ಸ್ಥಾಪಿತವಾಯಿತು ಮತ್ತು ಇವನಿಂದಲೇ ಭೂಮಿ ಮತ್ತು ಸ್ತ್ರೀಯರು ಫಲವತಿಯರಾದುದು (೧೦-೧೮೩-೩). ಅಗ್ನಿಯೇ ಮೊದಲು ಮನುಷ್ಯರನ್ನು ಸೃಜಿಸಿದನು (೧-೯೬-೨); ಭೂಮಿ, ಆಕಾಶ, ಉದಕ ಮೊದಲಾದವುಗಳು ಅವನಿಂದ ಸೃಷ್ಟವಾದುವೆಂದು ಹೇಳುವಾಗ ಪ್ರಾಸಂಗಿಕವಾಗಿ ಈ ಅಭಿಪ್ರಾಯವೂ ಬಂದಿರಬೇಕೇ ಹೊರತು, ಅವನೇ ಮನುಷ್ಯನನ್ನು ಸೃಜಿಸಿದನೆಂದು ಹೇಳಲಾಗುವುದಿಲ್ಲ. ಕಡೆಯದಾಗಿ, ಅಗ್ನಿಯು ಅಮೃತತ್ವಕ್ಕೆ ಒಡೆಯ (೭-೪-೬) ಮತ್ತು ರಕ್ಷಕ (೭-೭-೪) ಮತ್ತು ಮರ್ತ್ಯರಿಗೆ ಅದನ್ನು ಅನುಗ್ರಹಿಸುತ್ತಾನೆ (೧-೩೧-೭).

'ಅಪಾಂನಪಾತ್' ಮುಂತಾದ ಸ್ವರ್ಗೀಯಾಗ್ನಿಯ ಕೆಲವು ಹೆಸರುಗಳು ಪ್ರತ್ಯೇಕವಾದ ದೇವತೆಗಳೆಂದು ಗಣಿತವಾಗಿವೆ. ಮತ್ತು ಕೆಲವು ಅಸಂಪೂರ್ಣವಾದ ವ್ಯಕ್ತಿತ್ವವನ್ನು ಪಡೆದಿವೆ. ವೈಶ್ವಾನರ ಎಂಬುದು ಸುಮಾರು ೬೦ ಸಲ (ಐದು ಬಿಡಿ ಋಕ್ಕುಗಳು ಮತ್ತು ಹದಿನಾಲ್ಕು ಸೂಕ್ತಗಳಲ್ಲಿ) ಬರುತ್ತದೆ. ಎಲ್ಲ ಸಂದರ್ಭಗಳಲ್ಲೂ, ಅನುಕ್ರಮಣಿಯ ಪ್ರಕಾರ, ವೈಶ್ವಾನರಾಗ್ನಿಯೇ ದೇವತೆ. ವೈಶ್ವಾನರ ಎಂಬುದು ಒಂಟಿಯಾಗಿ

ಎಲ್ಲಿಯೂ ಬಂದಿಲ್ಲ. ವೈಶ್ವಾನರ ಎಂದರೆ, ಎಲ್ಲಾ ಮನುಷ್ಯರಿಗೂ ಸಂಬಂಧಿಸಿದುದು ಎಂದರ್ಥ. ಅಂದರೆ ಈ ಪದದಿಂದ ಅಗ್ನಿಯ ಎಲ್ಲಾ ರೂಪಗಳು ಅಭಿಪ್ರೇತವಾಗಬಹುದು. ವೈಶ್ವಾನರಾಗ್ನಿದೇವತಾಕವಾದ ಮಂತ್ರಗಳಲ್ಲಿ, ಸ್ವರ್ಗೀಯಾಗ್ನಿಯು ಭೂಮಿಗೆ ಇಳಿದು ಬಂದ ಕಥೆಯಿದೆ (೩-೨-೪ ; ೬-೮-೪); ವೈಶ್ವಾನರಾಗ್ನಿಗೇ ಮಾತರಿಶ್ವಾ ಎಂಬ ಪ್ರಯೋಗವೂ ಇದೆ (೩-೨೬-೨). ನಿರುಕ್ತದಲ್ಲಿ (೫-೧) ವೈಶ್ವಾನರ ಎಂಬುದು ಅಗ್ನಿನಾಮಗಳಲ್ಲಿ ಒಂದು. ನಿರುಕ್ತದಲ್ಲಿ ಯಾಸ್ಕರು (ನಿರು. ೭-೨೩) ಇದರ ಮೇಲೆ ವ್ಯಾಖ್ಯಾನದಲ್ಲಿ, ಪುರಾತನ ಯಾಜ್ಞಿಕರು, ವೈಶ್ವಾನರಾಗ್ನಿ ಎಂದರೆ ಸೂರ್ಯನೆಂದೂ, ಶಾಕಪೂಣಿಯು, ಈಗ ರೂಢಿಯಲ್ಲಿರುವ ಅಗ್ನಿಯೆಂದೂ, ಭಾವಿಸುತ್ತಿದ್ದರೆಂದು ಬರೆದಿದಾರೆ. ಈಗ ಬಳಕೆಯಲ್ಲಿರುವ ಅಗ್ನಿಗೇ ವೈಶ್ವಾನರಾಗ್ನಿಯೆಂದು ಹೆಸರು. ಇವನೇ ಸ್ತುತಿ ಹೊಮಾದಿಗಳಿಗೆ ಉದ್ದಿಷ್ಟನು, ಒಂದೊಂದು ಸಲ ಮಾತ್ರ, ಅಂತರಿಕ್ಷ ಮತ್ತು ಸ್ವರ್ಗಲೋಕದ ಅಗ್ನಿಗಳಿಗೆ ಈ ಹೆಸರು ಉಪಯೋಗಿಸಿದೆ, ಎಂದು ಯಾಸ್ಕರು ತನ್ನ ಸ್ವಂತ ಅಭಿಪ್ರಾಯವನ್ನು (ನಿರು.೭-೩೧-) ತಿಳಿಸಿದಾರೆ. ಆದರೆ. ಶ್ರೌತಕರ್ಮ ಸಂಬಂಧವಾದ ಗ್ರಂಥಗಳಲ್ಲಿ ವೈಶ್ವಾನರನು ಅಗ್ನಿಯ ಒಂದು ವಿಶೇಷ ರೂಪವೆಂದೇ ಗಣನೆ (ಆ. ಶ್ರೌ. ಸೂ. ೧-೩-೨೩ ; ಕಾ. ಶ್ರೌ. ಸೂ. ೨೩-೩-೧ ; ಪಂ. ಬ್ರಾ. ೨೧-೧೦-೧೧ ; ಶ. ಬ್ರಾ. ೧-೫-೧-೧೬).

ತನೂನಪಾತ್ ಎಂಬ ಅಗ್ನಿಯ ಹೆಸರು ಋಗ್ವೇದದಲ್ಲಿ ಆಪ್ರೀ ಸೂಕ್ತಗಳಲ್ಲಿ ಎಂಟು ಸಲ ಪ್ರಯೋಗಿಸಿದೆ. ಈ ಎಂಟರಲ್ಲಿ, ಎರಡು ಸಲ (೩-೨೯-೧೧ ; ೧೦-೯೨-೨) ಹೊರತಾಗಿ, ಉಳಿದವುಗಳೆಲ್ಲಾ ಆಪ್ರೀ ಸೂಕ್ತಗಳ ಎರಡನೆಯ ಋಕ್ಕಿನಲ್ಲೇ ಬರುತ್ತದೆ. ನಿರುಕ್ತದಲ್ಲಿ ಇದೂ ಅಗ್ನಿಯ ಒಂದು ಸ್ವತಂತ್ರನಾಮವು (೫-೨). ಯಾಸ್ಕರು ಈ ಪದಕ್ಕೆ (ನಿರು. ೮-೫). ತನಗೆ ಪುತ್ರನಾಗಿ ಜನಿಸಿದವನು ಅಂದರೆ ಕಾಡು ಮತ್ತು ಮೋಡಗಳಲ್ಲಿ ತಾನಾಗಿಯೇ ವ್ಯಕ್ತನಾದವನು ಎಂದು ವಿವರಣೆ ಕೊಟ್ಟಿದಾರೆ. ತನೂನಪಾತನಿಗೆ ' ಆಸುರ; ಗರ್ಭ;' (೩-೨೯-೧೧) ದೇವಲೋಕದ ದೇವತೆಗಳಿಗೆ ಸಂಬಂಧಿಸಿದ, ದಿವ್ಯವಾದ ಗರ್ಭ) ಎಂದು ಹೇಳಿದೆ. ಇದು ಮಾತರಿಶ್ವ ಮತ್ತು ನರಾಶಂಸರಿಗೆ ಎಲ್ಲಿಯೂ ಹೇಳಿಲ್ಲ. ಉಷೋದೇವಿಯು ಪುರೋಹಿತನಾದ ತನೂನಪಾತನನ್ನು ಚುಂಬಿಸುತ್ತಾಳೆ [೧೦-೯೨-೨ ; ೫-೫೮-೬ ನ್ನು ಹೋಲಿಸಿ). ತನೂನಪಾತನನ್ನು ' ಸುಜಹ್ನ ' (ಶುಭವಾದ, ಸುಂದರವಾದ ನಾಲಿಗೆಯುಳ್ಳವನೇ) ಎಂದು ಸಂಬೋಧಿಸಿದೆ (೧೦–೧೧೦-೨). ದೇವತೆಗಳಿಗೆ ಯಾಗವನ್ನು ತಲುಪಿಸು ಎಂದು ಪ್ರಾರ್ಥಿತನಾಗಿದಾನೆ [೧-೧೩-೨ ; ೧೦-೧೧೦–೨]. ಅಪರಿಮಿತವಾದ ಘೃತ ಮತ್ತು ಮಧುಯುಕ್ತವಾದ ಹೋಮವನ್ನು ಹಂಚುತ್ತಾನೆ (೧-೧೪೨-೨ ; ೧-೧೪೪-೨ ನ್ನು ಹೋಲಿಸಿ). ದೇವತೆಗಳು ಅವನಿಗೆ ಪ್ರತಿದಿನ ಮೂರು ಸಲವೂ, ವರುಣ, ಮಿತ್ರ ಮತ್ತು ಅಗ್ನಿಗಳಿಗೆ ಒಂದು ಸಲವೂ ಗೌರವವನ್ನು ಸಲ್ಲಿಸುತ್ತಾರೆ (೩-೪-೨).

ತನೂನಪಾತ್ ಎಂಬುವುದಕ್ಕಿಂತಲೂ ಹೆಚ್ಚಾಗಿ ಉಪಯೋಗಿಸಿರುವ ಪದವು ' ನರಾಶಂಸ ' ಎನ್ನುವುದು. ನಿರುಕ್ತದ ಪ್ರಕಾರ, (೫-೩) ಇದೂ ಒಂದು ಸ್ವತಂತ್ರ ನಾಮ. ಆದರೆ, ಇದು ಅಗ್ನಿಗೆ ಮಾತ್ರ ಉಕ್ತವಾಗಿಲ್ಲ ; ಪೂಷಣನಿಗೆ ಎರಡುಕಡೆ ಪ್ರಯೋಗಿಸಿದೆ [೧-೧೦೬-೪ ; ೧೦-೬೪-೩] ಈ ಪದವು ಆಪ್ರೀ ಸೂಕ್ತಗಳ ಮೂರನೆಯ ಋಕ್ಕಿನಲ್ಲಿಯೂ, ' ಆಪ್ರಿ ' ಎನ್ನುವ ಸೂಕ್ತಗಳ ಎರಡನೆಯ ಋಕ್ಕಿನಲ್ಲಿಯೂ ಬರುತ್ತದೆ. ನರಾಶಂಸನಿಗೆ ನಾಲ್ಕು ಅಂಗಗಳು [ಚತುರಂಗಃ, ೧೦-೯೨-೧೧] ಮತ್ತು ಇವನಿಗೆ ಸ್ವರ್ಗಲೋಕದ ಪತ್ನಿಯಿದ್ದಾಳೆ [ಗ್ನಾಸ್ಪತಿಃ, ೨-೩೮-೧೦]. ಕೈ ಮತ್ತು ನಾಲಿಗೆಗಳ ಮೇಲೆ ಮಧುಯುಕ್ತನಾಗಿ ಯಾಗಮಾಡುತ್ತಾನೆ [೧-೧೩-೩ ; ೫-೫–೨]. ದಿನಕ್ಕೆ ಮೂರು ಸಲ ಯಾಗದಲ್ಲಿ ಮಧುಸೇಚನ ಮಾಡುತ್ತಾನೆ [೧-೧೪೨-೩]. ಮೂರು ಸ್ವರ್ಗಲೋಕಗಳಿಗೂ, ದೇವತೆಗಳಿಗೂ ತೈಲಸೇಚನ ಮಾಡುತ್ತಾನೆ. [೨-೩-೨]. ದೇವತೆಗಳಿಗೆ ಮುಖಂಡನಾಗಿ ಬಂದು, ಅವರಿಗೆ ಯಾಗವನ್ನು ಸುಖಪ್ರದವನ್ನಾಗಿ ಮಾಡುತ್ತಾನೆ [೧೦–೭೦-೨]. ಆರಾಧಕರು ಅವನ ಯಾಗಗಳ ಮೂಲಕ, ದೇವತೆಗಳ ಮಹತ್ವವನ್ನು ಸ್ತುತಿಸುತ್ತಾರೆ [೭-೨-೨]. ನರಾಶಂಸನಿಗೂ ದೈವ್ಯನಿಗೂ ಮತ್ತು

ಸೋಮದೇವತೆಯು ಮಧ್ಯಸ್ಥಿಕೆ ಮಾಡುತ್ತಾನೆ [೯-೮೬-೪೨] ; ಅಂದರೆ ಸ್ವರ್ಗ ಮತ್ತು ಅಗ್ನಿಗಳ ಮಧ್ಯೆ ಇರಬಹುದು. ಅಗ್ನಿಯು ಜನಿಸಿದಾಗ, ಅವನಿಗೆ ನರಾಶಂಸನೆಂದು ಹೆಸರು [೩-೨೯-೧೧] ಬೃಹಸ್ಪತಿದೇವತಾಕವಾದ ಸೂಕ್ತದ [೧೦-೧೪೨-೨] ಒಂದು ಮಂತ್ರದಲ್ಲಿ ನರಾಶಂಸನಿಂದ ರಕ್ಷಣೆಯು ಪ್ರಾರ್ಥಿತವಾಗಿದೆ; ಮತ್ತೊಂದರಲ್ಲಿ ಅವನೇ ದೇವಲೋಕದ ಯಾಗಕರ್ತೃವೆಂದು ಉಕ್ತವಾಗಿದೆ [೧-೧೪೮-೯-] ಈ ಎರಡರಲ್ಲಿ ಅವನೇ ಬೃಹಸ್ಪತಿಯೆಂದು ಗಣನೆಯಿದ್ದಂತೆ ಕಾಣುತ್ತದೆ. ನರಾಶಂಸ ಪದವು, ನರ ಮತ್ತು ಶಂಸ ಪದಗಳಿಂದ ಆಗಿರುವ ಸಮಸ್ತಪದ ನರಾಂಶಂಸಃ' ಮತ್ತು[೨-೩೬-೪ ; ೧-೧೪೧-೧೧] ' ದೇವಾನಾಂ ಶಂಸಂ ' ಎಂದು ಪ್ರಯೋಗಿಸಿರುವುದರಿಂದ, ಈ ಪದಕ್ಕೆ ಮನುಷ್ಯರಿಂದ ಸ್ತುತ್ಯನು ಎಂದರ್ಥವಾಗಬಹುದು.

ಬೃಹಸ್ಪತಿ

ಈ ದೇವತೆಯು ತಕ್ಕಮಟ್ಟಿಗೆ ಪ್ರಾಮುಖ್ಯಸ್ಥಾನವನ್ನೇ ಪಡೆದಿದಾನೆ. ಹನ್ನೊಂದು ಸೂಕ್ತಗಳು ಈ ದೇವತೆಯನ್ನು ಹೊಗಳುತ್ತವೆ. ಇಂದ್ರನ ಜೊತೆಯಲ್ಲಿ ದ್ವಂದ್ವದೇವತೆಯಾಗಿ ಎರಡು ಸೂಕ್ತಗಳಲ್ಲಿ [೪-೪೯ ; ೭-೯೭] ಸ್ತುತನಾಗಿದಾನೆ. ಬೃಹಸ್ಪತಿ ಎಂಬ ಪದವು ಸುಮಾರು ೧೨೦ ಸಲವೂ, ಇದಲ್ಲದೆ, ಬ್ರಹ್ಮಣಸ್ಪತಿ ಎಂಬುದಾಗಿ ೫೦ ಸಲವೂ ಬರುತ್ತದೆ ಬೃಹಸ್ಪತಿ ಮತ್ತು ಬ್ರಹ್ಮಣಸ್ಪತಿಗಳು ಒಂದೇ ಮಂತ್ರದಲ್ಲಿ ಪರಸ್ಪರ ವಿನಿಮಯವಾಗಿವೆ [೨-೨೩]. ಅವನ ಅಂಗಾಂಗ ವರ್ಣನೆ ಬಹಳ ಕಡಿಮೆ. ಅವನಿಗೆ ಏಳು ಮುಖಗಳು ಮತ್ತು ಏಳು ಕಿರಣಗಳು [೪-೫೦-೪], ಸುಂದರ ಜಿಹ್ವೆ [೧-೧೯೦-೧ ; ೪-೫೦-೧] ; ಮೊನಚಾದ ಶೃಂಗಗಳು (೧೦.೧೫೫-೨]. ನೀಲವಾದ ಬೆನ್ನು [೫-೪೩.೧೨], ಮತ್ತು ನೂರು ರೆಕ್ಕೆಗಳು [೭-೯೭-೭]. ಅವನು ಸುವರ್ಣವರ್ಣ ಮತ್ತು ಕೆಂಪು ಛಾಯೆಯವನು. [೫-೪೩-೧೨] ತೇಜಸ್ವಿ [೩.೬೨-೭ , ೭-೯೭-೭), ಶುದ್ಧನು [೭-೯೭-೭] ಮತ್ತು ಸ್ಪಷ್ಟ ಧ್ವನಿಯುಳ್ಳವನು [೭-೯೭-೫]. ಅವನಲ್ಲಿ ಒಂದು ಧನುಸ್ಸು ಇದೆ; ಅದಕ್ಕೆ ಋತವೇ [ಯಾಗ, ಸತ್ಯ] ಹುರಿ (ಜ್ಯಾ) ಮತ್ತು ಸಾಧುತ್ವ (ಒಳ್ಳೆಯದು) ಬಾಣ [೨-೨೪-೪ ; ಅ. ವೇ, ೫-೧೪-೪, ೯ಗಳನ್ನು ಹೋಲಿಸಿ]. ಅವನು ಚಿನ್ನದ ಕೈ ಸುತ್ತಿಗೆಯನ್ನೂ (೭-೯೭-೭), ತ್ವಷ್ಟೃವಿನಿಂದ [೧೦.೫೩-೯] ಹರಿತ ಮಾಡಲ್ಪಡುವ ಒಂದು ಕಬ್ಬಿಣದ ಕೊಡಲಿಯನ್ನು ಉಪಯೋಗಿಸುತ್ತಾನೆ. ಯಾಗವೆಂಬ ರಥದಲ್ಲಿ ಸಂಚರಿಸುತ್ತಾನೆ [೧೦-೧೦೩-೪]; ಇದು ಪಿಶಾಚಿಗಳನ್ನು ವಧಿಸುತ್ತದೆ; ಗೋಶಾಲೆಗಳ ದ್ವಾರಗಳನ್ನು ಭೇದಿಸಿ ತೆಗೆಯುತ್ತದೆ; ಮತ್ತು ಬೆಳಕನ್ನು ಸಂಪಾದಿಸಿ ಕೊಡುತ್ತದೆ [೨-೨೩-೩]. ಅವನ ರಥವು ಕೆಂಪು ಛಾಯೆಯ ಕುದುರೆಗಳಿಂದ ಎಳೆಯಲ್ಪಡುತ್ತದೆ.

ಸ್ವರ್ಗದ ಅತ್ಯುನ್ನತ ಪ್ರದೇಶದಲ್ಲಿ, ತೇಜೋರಾಶಿಯಿಂದ ಬೃಹಸ್ಪತಿಯು ಜನಿಸಿ, ಗರ್ಜಿಸುತ್ತಾ ಕತ್ತಲನ್ನು ಓಡಿಸಲಾಡಿಸಿದನು [೪-೫೦-೪ ; ೧೦-೬೮-೧೨ ನ್ನು ಹೋಲಿಸಿ), ಅವನು ಎರಡು ಲೋಕಗಳ ಸಂತಾನ [೭-೯೭-೮]: ಆದರೆ ಅವನನ್ನು ತ್ವಷ್ಟೃವು ಉತ್ಪತ್ತಿ ಮಾಡಿದನೆಂದೂ (೨-೨೩-೧೭] ಹೇಳಿದೆ. ಅವನಿಗೆ ದೇವತೆಗಳ ಜನಕನೆಂದೂ [೨-೨೬-೩] ಹೇಳಿದೆ; ಕಮ್ಮಾರನ ಸುತ್ತಿಗೆಯ ಏಟಿನಿಂದ ಚೂರುಗಳು ಹಾರುವಂತೆ, ದೇವತೆಗಳು ಇವನಿಂದ ಉತ್ಪನ್ನರಾದರು [೧೦-೭೨-೮].

ಅಗ್ನಿಗೆ ವಿಶೇಷವಾಗಿ ಪ್ರಯೋಗಿಸುವ ಪುರೋಹಿತ ಶಬ್ದವು ಇವನಿಗೂ ಪ್ರಯುಕ್ತವಾಗಿದೆ (೨-೨೪-೯ ; ವಾ. ಸಂ. ೨೦-೧೧ ; ತೈ. ಸಂ. ೬-೪-೧೦ ; ಐ. ಬ್ರಾ. ೪-೨೭-೪). ಪುರಾತನ ಋಷಿಗಳು ಅವನನ್ನು ತಮ್ಮ ನಾಯಕನನ್ನಾಗಿ ಆರಿಸಿಕೊಂಡರು [೪-೫೦-೧] ಅವನು ಸೋಮನ ಪುರೋಹಿತನು [ಶ. ಬ್ರಾ. ೪-೧-೩-೪]. ಅವನು ' ಬ್ರಹ್ಮ ' ನೂ ಹೌದು [೨-೧-೩ ; ೪-೫೦-೪ ; ೧೦-೧೪೧-೩]. ಇತರ ವೇದಗಳಲ್ಲಿ, ಅವನು ದೇವತೆ

ಗಳ ಯಾಗಗಳಲ್ಲಿ 'ಬ್ರಹ್ಮ' ನಾಗಿ ಕೆಲಸ ಮಾಡಿದ್ದನೆಂದು ಹೇಳಿದೆ. ಅವನೇ ದೇವತೆಗಳು ಉಪಯೋಗಿಸುವ 'ಬ್ರಹ್ಮ' (ಎಂದರೆ ಸ್ತೋತ್ರ ತೈ. ಸಂ. ೨-೨-೯-೧ ; ಇತ್ಯಾದಿ) ಬೃಹಸ್ಪತಿಯು ಭಕ್ತಿ ಪ್ರಚೋದಕ ಮತ್ತು ಅವನಿಲ್ಲದೇ ಯಾಗವು ಜಯಪ್ರದವಾಗಿ ಕೊನೆಗಾಣುವುದಿಲ್ಲ (೧-೧೮-೭). ಮಾರ್ಗದರ್ಶಕನಾಗಿ, ದೇವತೆಗಳ ಸಮಾರಂಭಕ್ಕೆ ಸುಲಭವಾಗಿ ಲಭಿಸುವಂತೆ ಮಾಡುತ್ತಾನೆ [೨-೨೩-೬ ಮತ್ತು ೭]. ಅವನ ಮೂಲಕ, ದೇವತೆಗಳು ತಮ್ಮ ಹೋಮಭಾಗವನ್ನು ಪಡೆದರು [೨-೨೩-೧]. ಈ ಹೋಮಗಳಿಂದ, ಅವನು ದೇವತೆಗಳನ್ನು ಎಚ್ಚರ ಗೊಳಿಸುತ್ತಾನೆ [ಅ. ವೆ. ೧೯-೬೩-೧]. ಇಂದ್ರ, ವರುಣ, ಮಿತ್ರ, ಅರ್ಯಮ ಮತ್ತು ಇತರ ದೇವತೆಗಳಿಗೆ ಸಂತೋಷವುಂಟುಮಾಡುವ ಸೂಕ್ತವನ್ನು ತಾನೇ ಉಚ್ಚರಿಸುತ್ತಾನೆ (೧-೪೦-೫). ಗೀತಗಳನ್ನು ಗಾನಮಾಡು ತ್ತಾನೆ (೧೦-೩೬-೫). ಅವನ ಗಾನವು ಸ್ವರ್ಗವನ್ನು ಮುಟ್ಟುತ್ತದೆ (೧-೧೯೦-೪) ಮತ್ತು ಛಂದಸ್ಸು ಅವನಿಗೇ ಸೇರಿದುದು (ಮೈ. ಸಂ. ೧-೯-೨). ಅವನು ಗಾಯಕರೊಡನೆ ಬೆರೆಯುವುದುಂಟು (೭-೧೦-೪ ; ೧೦-೧೪-೩). ಹಂಸಗಳಂತೆ ಧ್ವನಿಮಾಡುವ ತನ್ನ ಸ್ನೇಹಿತರೊಡಗೂಡಿ (ಇಲ್ಲಿ ಹಂಸಗಳು ಹಿಂದಿನ—೧೦-೬೭-೨— ಋಕ್ಕಿನಲ್ಲಿ ಪ್ರಸಕ್ತರಾಗಿರುವ ಅಂಗಿರಸರು ಇರಬಹುದು), ಹಾಡುತ್ತಾನೆ (೧೦-೬೭-೩). ಅವನ ಜೊತೆಯಲ್ಲಿ ಗಾಯಕರ ಗುಂಪೇ ಒಂದಿದೆ (೪-೫೦-೫). ಇದರಿಂದಲೇ, ಇವನಿಗೆ 'ಗಣಪತಿ' ಎಂಬ ಹೆಸರು ಬಂದಿರಬಹುದು (೨-೨೩-೧). ಈ ಹೆಸರು ಇಂದ್ರನಿಗೂ ಒಂದು ಕಡೆ (೧೦-೧೧೨-೯) ಪ್ರಯೋಗವಿದೆ.

ಬ್ರಹ್ಮಣಸ್ಪತಿ ಎಂಬ ಪದದಿಂದ ವ್ಯಕ್ತವಾಗುವಂತೆ, ಅವನು ಸ್ತೋತ್ರಗಳಿಗೆ ಒಡೆಯ. ಸ್ತುತಿವಾಕ್ಯ ಗಳಿಗೆ ರಾಜನೆಂದೂ, ಋಷಿಗಳಲ್ಲೆಲ್ಲಾ ಅತಿ ಶ್ರೇಷ್ಠನಾದ ಋಷಿಯೆಂದೂ (೨-೨೩-೧) ಹೊಗಳಲ್ಪಟ್ಟಿದಾನೆ. ಋತ (ಯಾಗದ ಅಂಗಗಳು) ದ ರಥವನ್ನೇರಿ, ಸ್ತುತ್ಯಾದಿ ದ್ವೇಷಿಗಳನ್ನೂ, ದೇವತೆಗಳ ಶತ್ರುಗಳನ್ನೂ ಜಯಿ ಸುತ್ತಾನೆ (೨-೨೩-೩ ಮತ್ತು ೮) ಅವನಿಂದಲೇ ಎಲ್ಲಾ ಸ್ತುತಿವಾಕ್ಯಗಳೂ ಹೊರಡುತ್ತವೆ (೧-೧೯೦-೨). ಅವನು ಸ್ವತಃ ಪ್ರಾರ್ಥನಾ ವಾಕ್ಯಗಳನ್ನು ಚ್ಚರಿಸುತ್ತಾನೆ (೧-೪೦-೫); ಮತ್ತು ಅವುಗಳನ್ನು ಮನುಷ್ಯಪುರೋಹಿತನಿಗೆ ತಿಳಿಯಪಡಿಸುತ್ತಾನೆ (೧೦-೯೮-೨೭) ಹೀಗೆಯೇ, ಮುಂದೆ, ಇವನಿಗೇ 'ವಾಚಸ್ಪತಿ' (ಭಾಷೆಗೆ ಯಜಮಾನ) ಎಂಬ ಹೆಸರು ಬಂದಿರುವುದು (ಮೈ. ಸಂ. ೨-೬-೬ ; ಶ. ಬ್ರಾ. ೧೪-೪-೧-೨೩ ನ್ನು ಹೋಲಿಸಿ). ವೇದಗಳಿಂ ದೀಚಿನ ಪುರಾಣಾದಿಗಳಲ್ಲಿ ಬೃಹಸ್ಪತಿಗೆ, ವಾಚಸ್ಪತಿಯೆನ್ನುವುದು ರೂಢಿಗೆ ಬಂದಿದೆ.

ಅಗ್ನಿಗೂ ಬೃಹಸ್ಪತಿಗೂ ಸಾಮ್ಯವನ್ನು ಹೇಳುವಂತೆ ತೋರುವ ವಾಕ್ಯಗಳು ಅನೇಕ ಇವೆ. ಸ್ತುತಿ ವಾಕ್ಯಗಳಿಗೆ ಒಡೆಯನೂ, ಮಿತ್ರನಂತೆ ಸ್ಫುರದ್ರೂಪಿಯೂ ಆದ ಅಗ್ನಿಯು ಪ್ರಾರ್ಥಿಸಲ್ಪಟ್ಟಿದಾನೆ (೧-೩೮-೧೩). ಬೇರೆ ಒಂದು ವಾಕ್ಯದಲ್ಲಿ, ಅಗ್ನಿಯು ಬೃಹಸ್ಪತಿ ಮತ್ತು ಕೆಲವು ಇತರ ದೇವತೆಗಳಿಗೆ ಸಮನೆಂದು ಹೇಳಿದ್ದರೂ, ಅಗ್ನಿ ಮತ್ತು ಬೃಹಸ್ಪತಿಗಳಿರಡೇ ವಿಶೇಷವಾಗಿ ಸಂಬೋಧನೆಯಲ್ಲಿರುವುದರಿಂದ ಅಗ್ನಿಸಾಮ್ಯವೇ ಉದ್ದಿಷ್ಟವಾ ಗಿರುವಂತೆ ತೋರುವುದು. ಒಂದು ಮಂತ್ರದಲ್ಲಿ (೩-೨೬-೨), ಮಾತರಿಶ್ವಾ ಮತ್ತು ಬೃಹಸ್ಪತಿಗಳಿರಿಡೂ ಅಗ್ನಿಯ ನಾಮಗಳು ; ಇನ್ನೊಂದರಲ್ಲಿ (೧-೧೯೦-೩). ಮಾತರಿಶ್ವಾ ಎಂಬುದು ಬೃಹಸ್ಪತಿಯ ಹೆಸರು. ಪ್ರತಿ ಮನೆಯ ಲ್ಲಿಯೂ ನೆಲಸಿ, ಜೆನ್ನಾಗಿ ಪ್ರಕಾಶಿಸುವವನೂ, ಮಾಸಲು ಕೆಂಪುಬಣ್ಣದವನೂ ಆದ ಬೃಹಸ್ಪತಿಯೂ (೫-೪೩-೧೨) ಅಗ್ನಿಯೇ ಇರಬೇಕು. ಮತ್ತೆ ಎರಡು ವಾಕ್ಯಗಳಲ್ಲಿ ಬೃಹಸ್ಪತಿ ಮತ್ತು ನರಾಶಂಸಗಳು ಒಬ್ಬನನ್ನೇ ಹೇಳುವಂತೆ ತೋರುತ್ತವೆ (೧-೧೮-೧೯ ; ೧೦-೧೪೨-೨). ಅಗ್ನಿಯಂತೆ ಬೃಹಸ್ಪತಿಯೂ, ಬಲದ ಪುತ್ರ (೧-೪೦-೨), ಅಂಗಿ ರಸನು, ಪಿಶಾಚಾದಿಗಳನ್ನು ದಹಿಸುವವನು (೨-೧೩-೪) ಅಥವಾ ವಧಿಸುವವನು (೧೦-೧೦೩-೪) ಇತ್ಯಾದಿ ಲಕ್ಷಣ ವಿಶಿಷ್ಟನು. ಬೃಹಸ್ಪತಿಯೂ ಸ್ವರ್ಗಕ್ಕೆ, ಮೇಲುಲೋಕದ ಗೃಹಗಳಿಗೆ ಹತ್ತಿಕೊಂಡು ಹೋಗುತ್ತಾನೆ (೧೦-೬೭-೧೦).

ಅಗ್ನಿಯಂತೆ ಇವನಿಗೂ ಮೂರು ವಾಸಸ್ಥಳಗಳು (೪-೫೦-೧), ಮನೆಗಳಲ್ಲಿ ಪ್ರೀತಿಪಾತ್ರವಾದ ವಸ್ತು (೭-೯೭-೫), ಮತ್ತು ಸದಸಸ್ಪತಿ (೧-೧೮-೬). ಅಗ್ನಿಗೂ ಒಂದು ಕಡೆ 'ಬ್ರಹ್ಮಣಃ ಕವೀ' ಎಂದು ಪ್ರಯೋಗಿಸಿದೆ; 'ಬ್ರಹ್ಮ' (ಸ್ತುತಿ) ಗಳಿಂದ ಸ್ವರ್ಗ ಮತ್ತು ಭೂಮಿಗಳನ್ನು ಸುಲಭ ಪ್ರಾಪ್ಯಗಳನ್ನಾಗಿ ಮಾಡಬೇಕೆಂದು ಪ್ರಾರ್ಥಿತನಾಗಿದಾನೆ (೨-೨-೭). ಆದರೆ ಬೃಹಸ್ಪತಿಯ ಹೆಸರು ಅಗ್ನಿ ಮೊದಲಾದ ದೇವತೆಗಳ ಪಟ್ಟಿಗಳಲ್ಲಿ (೩-೨೦-೫ ; ಇತ್ಯಾದಿ) ಪ್ರತ್ಯೇಕವಾಗಿ ಉಕ್ತವಾಗಿರುವುದರಿಂದ, ಅಗ್ನಿ ಬೃಹಸ್ಪತಿಗಳು ಭಿನ್ನರೆಂದು ಹೇಳುವುದು ಸಾಧುವಾಗಿದೆ (೨-೨೫-೩ ; ೭-೧೦-೪ ; ೧೦-೬೮-೯).

ಇಂದ್ರನಿಂದ ಗೋವಿನೋಚನೆಯ ಇತಿಹಾಸದಲ್ಲಿ, ಅಗ್ನಿಯಂತೆ ಬೃಹಸ್ಪತಿಗೂ ಒಂದು ಮುಖ್ಯ ಪಾತ್ರವಿದೆ. ಪರ್ವತವು ಬೃಹಸ್ಪತಿಯ ರಭಸಕ್ಕೆ ತಲೆಬಾಗಿ, ಗೋಶಾಲೆಗಳನ್ನು ತೆರೆಯಲು ಅವನಿಗೆ ಅವಕಾಶ ಕೊಟ್ಟಿತು; ಇಂದ್ರಸಹಚರಿತನಾಗಿ, ಬೃಹಸ್ಪತಿಯು, ಅಂಧಕಾರಾವೃತವಾಗಿದ್ದ ಉದಕವನ್ನು ಪುನಃ ಪ್ರವಹಿಸುವಂತೆ ಮಾಡಿದನು. (೨-೨೩-೧೮ ; ೧-೫೬-೫ ; ೧-೮೯-೯ ಇವುಗಳನ್ನು ಹೋಲಿಸಿ). ಗಾಯಕನಾದ (ಅಂಗಿರಸ) ಅತಿಥೇಯನೊಡಗೂಡಿ, ಗರ್ಜಿಸುತ್ತಾ, ವಲನನ್ನು ಛೇದಿಸಿದನು; ಗಟ್ಟಿಯಾಗಿ ಕೂಗುತ್ತಾ, ಅರಚಿಕೊಳ್ಳುತ್ತಿದ್ದ ಗೋವುಗಳನ್ನು ಹೊರಕ್ಕೆ ಅಟ್ಟಿದನು (೪-೫೦-೫). ಅವನು ನಿಧಿಗಳನ್ನೂ, ದೊಡ್ಡ ದೊಡ್ಡ ಗೋಶಾಲೆಗಳನ್ನೂ ಸಂಪಾದಿಸಿದನು; ನೀರು ಮತ್ತು ಬೆಳಕುಗಳಪೇಕ್ಷೆಯಿಂದ, ಅಪ್ರತಿಹತನಾದ ಬೃಹಸ್ಪತಿಯು ಜ್ವಾಲೆಗಳಿಂದ ಶತ್ರುಗಳನ್ನು ಧ್ವಂಸಮಾಡುತ್ತಾನೆ (೬-೭೩-೩). ಧೃಢವಾಗಿದ್ದುದು ಅವನಿಂದ ಸಡಿಲಸಲ್ಪಟ್ಟಿತು; ಬಲಿಷ್ಠವಾಗಿದ್ದುದು ಅವನಿಂದ ಪರಾಭೂತವಾಯಿತು; ಗೋವುಗಳನ್ನು ಹೊರಕ್ಕೆ ಅಟ್ಟಿದನು; ವಲನನ್ನು ಮಂತ್ರದಿಂದ ಛೇದಿಸಿದನು; ಅಂಧಕಾರವನ್ನು ಆವೃತವನ್ನಾಗಿ ಮಾಡಿ, ಆಕಾಶವು ಕಣ್ಣಿಗೆ ಕಾಣಿಸುವಂತೆ ಮಾಡಿದನು; ಮಧುಭರಿತವಾದ ಕೂಪದ ಶಿಲಾದ್ವಾರವನ್ನು, ಬೃಹಸ್ಪತಿಯು ತನ್ನ ಸಾಮರ್ಥ್ಯದಿಂದ ಒಡೆದನು, ದೇವತೆಗಳು ಆ ಮಧುವನ್ನು ಪಾನಮಾಡಿ, ಯಥೇಚ್ಛವಾಗಿ ಮಳೆಗರೆದರು (೨-೨೪-೩ ಮತ್ತು ೪). ಬೃಹಸ್ಪತಿಯು ಬೆಂಕಿ ಕಾರುತ್ತಿರುವ ಕಿರಣಗಳಿಂದ ವಲನ ದುರ್ಗಾದಿಗಳನ್ನು ಛೇದಿಸಿದಾಗ ಗೋನಿಧಿಗಳು (ಗೋವೃಂದಗಳು) ಗೋಚರವಾದುವು; ಮೊಟ್ಟೆಗಳನ್ನು ಒಡೆಯುವಂತೆ, ಗೋವುಗಳನ್ನು ಹೊರಕ್ಕೆ ಅಟ್ಟಿದನು; ಶಿಲೆಯಿಂದ ಆವೃತವಾದ ಮಧುವನ್ನು ಕಂಡು, (ವಲನನ್ನು) ತನ್ನ ಸಿಂಹನಾದದಿಂದಲೇ ಸೀಳಿ, ಅದನ್ನು ಹೊರಕ್ಕೆ ಬರಮಾಡಿದನು; ವಲನ ಮಜ್ಜೆಯನ್ನು ಹೊರಹೊಮ್ಮಿಸಿದನು (೧೦-೬೮-೪ರಿಂದ). ಗೋವುಗಳನ್ನು ಹೊರಕ್ಕೆ ಹೊರಡಿಸಿ, ಅವುಗಳನ್ನು ಸ್ವರ್ಗದಲ್ಲಿ ಹಂಬಿದನು (೨-೨೪-೧೪). ಬೃಹಸ್ಪತಿಯು ಹಸುಗಳನ್ನು ಬಂಡೆಗಳಿಂದ ಹೊರಕ್ಕೆ ತಂದನು; ವಲನ ಗೋವುಗಳನ್ನು ಹಿಡಿದು, ತನ್ನ ವಶಪಡಿಸಿಕೊಂಡನು (೧೦-೬೮೫). ವಲನನ್ನು ಅವನು ಜಯಿಸಿದುದು ಅವನ ವೈಶಿಷ್ಟ್ಯ. ಅದು ನಾಣ್ಣುಡಿಯಾಗಿದೆ (ಅ ವೇ. ೯-೩-೨). ಮೇಳೈಗಳಲ್ಲಿಯೇ ತಿಳುವನಾದುದರಿಂದ, ಗೋವುಗಳನ್ನು ಅಟ್ಟಿಸುತ್ತಾನೆ (೧೦-೬೮-೧೨ ; ೧೦-೬೭-೩ ನ್ನು ಹೋಲಿಸಿ) ಇಲ್ಲಿ ಗೋವುಗಳೆಂದರೆ, ಸ್ಪಷ್ಟವಾಗಿ ಹೇಳಿರುವಂತೆ, ನೀರಿರಬಹುದು (೨-೨೩-೧೪ ; ೬-೭೩-೩) ಅಥವಾ ಉಷಸ್ಸಿನ ಕಿರಣಗಳಿರಬಹುದು (೧೦-೬೭-೫ ; ೧೦-೬೮-೯ ಗಳನ್ನು ಹೋಲಿಸಿ).

ಗೋವಿನೋಚನೆ ಮಾಡುವಾಗ ಕತ್ತಲಿನಲ್ಲಿ ಅಡಿಗಿರುವ ಬೆಳಕನ್ನು ಪಡೆಯಲು ಪ್ರಯತ್ನಿಸಿ, ಅದನ್ನು ಸಂಪಾದಿಸುತ್ತಾನೆ; ಅವನು ಉಷಸ್ಸು, ಬೆಳಕು ಮತ್ತು ಅಗ್ನಿಗಳನ್ನು ಸಂಪಾದಿಸಿ ಕತ್ತಲನ್ನು ಹೋಗಲಾಡಿಸಿದನು (೧೦-೬೮-೪ ಮತ್ತು ೯).ದುರ್ಗವನ್ನು ಛೇದಿಸುವಾಗ, ಸೂರ್ಯ, ಉಷಸ್ಸು ಮತ್ತು ಗೋವುಗಳು ಲಭಿಸಿದವು (೧೦-೬೭-೫). ಕತ್ತಲನ್ನು ಮರೆ ಮಾಡಿ ಅಥವಾ ಹೋಗಲಾಡಿಸಿ, ಬೆಳಕನ್ನು ಹೊರಗೆಡಹಿದನು (೨-೨೪-೩ ;

೪-೫೪-೪). ಈ ರೀತಿ, ಬೃಹಸ್ಪತಿಯಲ್ಲಿ ಯೋಧರ ಲಕ್ಷಣಗಳು ಕಂಡುಬರುತ್ತವೆ. ನಿಧಿಗಳಿಂದ ಯುಕ್ತವಾಗಿದ್ದ ಪರ್ವತವನ್ನು ಭೇದಿಸಿ, ಒಳಹೊಕ್ಕು, ಶಂಬರನ ದುರ್ಗಗಳನ್ನು ಭೇದಿಸಿದನು (೨-೨೪-೨). ಆದಿಯಲ್ಲಿ ಜನಿಸಿದ ಋಷಿಯಾದ, ಬೃಹಸ್ಪತಿ ಅಂಗಿರಸನು ಶಿಲೆಗಳನ್ನು ಚೂರುಮಾಡುತ್ತಾನೆ. ಎರಡೂ ಲೋಕಗಳ ಕಡೆ ಗೂಳಿಯಂತೆ ಗುಟುರು ಹಾಕುತ್ತಾನೆ; ವೃತ್ರನನ್ನು ವಧಿಸುತ್ತಾನೆ; ದುರ್ಗಗಳನ್ನು ಭೇದಿಸುತ್ತಾನೆ; ಮತ್ತು ಶತ್ರುಗಳನ್ನು ಜಯಿಸುತ್ತಾನೆ (೬-೭೩-೧ ಮತ್ತು ೨). ಶತ್ರುಗಳನ್ನು ಓಡಿಸಿ, ಜಯಗಳಿಸುತ್ತಾನೆ (೧೦-೧೦೩-೪). ಯುದ್ಧವು ಸಣ್ಣದಾಗಲೀ, ದೊಡ್ಡದಾಗಲೀ, ಬೃಹಸ್ಪತಿಯನ್ನು ಯಾರೂ ಗೆಲ್ಲಲಾರರು (೧-೪೦-೪). ಯುದ್ಧದಲ್ಲಿ ಶತ್ರುವನ್ನು ನಿರ್ಮೂಲಮಾಡುತ್ತಾನೆ (೨-೨೩-೧೧). ಯುದ್ಧಸಮಯಗಳಲ್ಲಿ ಇವನನ್ನೇ ಪ್ರಾರ್ಥಿಸಬೇಕು (೨-೨೩-೧೩) ಮತ್ತು ಅಂಥಾ ಸಂದರ್ಭಗಳಲ್ಲಿ ಬಹಳ ಅನುಕೂಲ ಹೆಚ್ಚಾಗಿ ಸ್ತುತನಾದ ಪುರೋಹಿತ (೨-೨೪-೯).

ಇಂದ್ರನ ಸ್ನೇಹಿತ ಮತ್ತು ಜೊತೆಗಾರನಾದುದರಿಂದ (೨-೨೩-೧೪ ; ೨-೨೪-೨ ; ೪-೪೫-೧೫) ಪದೇ ಪದೇ, ಆ ದೇವತೆಯೊಡನೆ ಹೊಗಳಲ್ಪಟ್ಟದಾನೆ (೪-೫೦-೧೦ ಮತ್ತು ೧೧ ಇತ್ಯಾದಿ). ಇಂದ್ರನೊಡನೆ ಅವನೂ ಸೋಮಪಾನ ಮಾಡುತ್ತಾನೆ (೪-೪೯-೩ ; ೪-೫೦-೧೦ ;) ಮತ್ತು ಅವನಂತೆಯೇ ಉದಾರಿ (ಮಘವನ್ ೨-೨೪-೧೨). ಇಂದ್ರನೊಬ್ಬನೊಡನೆಯೇ, ಬೃಹಸ್ಪತಿಯು ದ್ವಂದ್ವ ದೇವತೆಯಾಗಿರುವುದು (೨-೨೪-೧೨ ; ೪-೪೯-೧೦ನೇ ದ). ಆದರಿಂದಲೇ, ಅವನಿಗೆ 'ವಜ್ರೀ' ಎಂಬ ಹೆಸರು (೧-೪೦-೪) ಮತ್ತು ಅಸುರಘಾತಕವಾದ ವಜ್ರಾಯುಧವನ್ನು ಪ್ರಯೋಗಿಸುತ್ತಾನೆ (ಅ. ವೇ. ೧೧-೧೦-೧೩) ಎಂದಿರುವುದು. ಒಂದು ಸಲ (೧-೪೦-೧), ಇಂದ್ರ, ಮತ್ತು ಮರುತ್ತುಗಳೊಡನೆ ಸ್ತುತನಾಗಿದಾನೆ ಮತ್ತು ಮರುತ್ತುಗಳಲ್ಲಿ ಮಿತ್ರ, ವರುಣ, ಪೂಷಣರು ಯಾರೊಡನೆಯಾದರೂ ಬರಬೇಕೆಂದು ಆಹೂತನಾಗಿದಾನೆ (೧೦-೯೪-೧). ಕೂಪದಲ್ಲಿ ಹೂಳಲ್ಪಟ್ಟಿದ್ದ ತ್ರಿತನ ಪ್ರಾರ್ಥನೆಯನ್ನು ಕೇಳಿ ಅವನನ್ನು ಬಿಡುಗಡೆ ಮಾಡಿದನು (೧-೧೦೫-೧೭).

ಸ್ತೋತೃವನ್ನು ಬೃಹಸ್ಪತಿಯು ಪ್ರೀತಿಸುತ್ತಾನೆ (೨-೨೫-೧) ಆದರೆ ಸ್ತುತಿದ್ವೇಷಿಯನ್ನು ಶಿಕ್ಷಿಸುತ್ತಾನೆ (೧-೨೩-೪). ಧರ್ಮಿಷ್ಠನನ್ನು ಎಲ್ಲಾ ವಿಪತ್ತುಗಳಿಂದಲೂ ಪಾರುಮಾಡಿ, ಸಂಪದಾದಿಗಳನ್ನು ಅನುಗ್ರಹಿಸುತ್ತಾನೆ (೧-೧೮-೩ ; ೨-೨೩-೪ ರಿಂದ ೧೦) ಅಪೇಕ್ಷಣೀಯವಾದ ಸಮಸ್ತ ವಸ್ತುಗಳಿಂದ ವಿಶಿಷ್ಟನಾದ ಬೃಹಸ್ಪತಿಯು (೭-೧೦-೪ ; ೭-೯೭-೪), ಶ್ರೀಮಂತನೂ, ಸಮೃದ್ಧಿದಾಯಕನೂ ಆಗಿದಾನೆ (೧-೧೮-೨). ರೋಗ ಪರಿಹಾರಕ ಮತ್ತು ಆಯುರ್ದಾತೃ (೧-೧೮-೨). ಇಷ್ಟು ದಯಶಾಲಿಯಾದ ಇವನು ಪಿತೃವೆಂದು ಸಂಬೋಧಿತನಾಗುತ್ತಾನೆ (೪-೫೦-೬ ; ೬-೭೩-೧).

ಅವನು ದೇವತ್ವವಿಶಿಷ್ಟನು (ಅಸುರ್ಯ ೨-೨೩-೨), ಎಲ್ಲಾ ದೇವತೆಗಳಿಗೂ ಸ್ವಕೀಯನು (೩-೬೨-೪ ; ೪-೫೦-೬), ಮತ್ತು ದೇವತೆಗಳಲ್ಲೆಲ್ಲಾ, ಹೆಚ್ಚು ದೇವತ್ವವುಳ್ಳವನು (೨-೨೪-೩). ದೇವತೆಯ ರೂಪದಿಂದ, ಎಲ್ಲಾ ದೇವತೆಗಳನ್ನೂ, ಎಲ್ಲಾ ಪದಾರ್ಥಗಳನ್ನೂ ತನ್ನಲ್ಲಿ ಸೇರಿಸಿಕೊಳ್ಳುತ್ತಾನೆ (೨-೨೪-೧೧ ; ೪-೬೧-೧೪ನ್ನು ಹೋಲಿಸಿ). ಭೂಮಿಯ ಎರಡು ಕೊನೆಗಳನ್ನೂ ಸಮರ್ಥನಾದ ಇವನು ದೂರವಾಗಿ ಇಟ್ಟಿರುತ್ತಾನೆ. [೪-೫೦-೧] ಸೂರ್ಯಚಂದ್ರರು ಒಬ್ಬರಾದಮೇಲೊಬ್ಬರು ಉದಯಿಸುವುದು ಅವನ ಅನನುಕರಣೀಯವಾದ ಕೃತ್ಯವೇ [೧೦-೬೪-೧೦]. ಸಸ್ಯಗಳ ಬೆಳವಣಿಗೆಯನ್ನು ಉಂಟುಮಾಡುತ್ತಾನೆ [೧೦-೯೭-೧೫ ಮತ್ತು ೧೯]. ಬೃಹಸ್ಪತಿಗೂ ಕೆಲವು ನಕ್ಷತ್ರಗಳಿಗೂ ಸಂಬಂಧವು ಉಕ್ತವಾಗಿದೆ. ಪುಷ್ಯನಕ್ಷತ್ರದ ದೇವತೆ ಬೃಹಸ್ಪತಿ [ತೈ. ಸಂ. ೪-೪-೧೦-೧]; ಪುರಾಣಾದಿಗಳಲ್ಲಿ ಬೃಹಸ್ಪತಿ ಅಥವಾ ಗುರುಗ್ರಹವೆಂದು ವಾಚ್ಯನಾಗುತ್ತಾನೆ.

ಮೇಲೆ ಹೇಳಿರುವ ಅಂಶಗಳಿಂದ, ಬೃಹಸ್ಪತಿಯು ಅಗ್ನಿಯ ಒಂದು ರೂಪವಿಶೇಷವೆಂದು ಹೇಳ ಬಹುದು; ಭಕ್ತಿ ಅಥವಾ ಶ್ರದ್ಧೆಯ ಅಧಿದೇವತೆ; ಬೃಸ್ಪತಿಯೆಂಬ ಈ ಹೆಸರು ವಿಶಾಂಪತಿ, ಗೃಹಪತಿ, ಸದಸ ಸ್ಪತಿ, ಇವುಗಳಂತೆ ಅಗ್ನಿಗೆ ವಿಶೇಷಣವಾಗಿ ಉಳಿಯದೇ, ಸ್ವತಂತ್ರ ದೇವತೆಯೆಂದು ಪರಿಗಣಿತವಾಗಿದೆ. ಆದರೆ ಆಧುನಿಕ ವಿದ್ವಾಂಸರು, ಅಗ್ನಿಯರೂಪವಿಶೇಷ, ಶ್ರದ್ಧೆ, ಇಂದ್ರನ ರೂಪಾಂತರ, ಚಂದ್ರ, ಇತ್ಯಾದಿಯಾಗಿ ನಾನಾ ವಿಧವಾಗಿ ಅಭಿಪ್ರಾಯಪಟ್ಟಿದಾರೆ.

ಸೋಮ

ಸೋಮಯಾಗಗಳು ಋಗ್ವೇದದ ಕರ್ಮಗಳಲ್ಲಿ ಒಹು ಮುಖ್ಯವಾದುದರಿಂದ, ಸೋಮದೇವತೆಯೂ ಪ್ರಧಾನ ದೇವತೆಗಳಲ್ಲಿ ಒಂದಾಗಿರುವುದು ಸ್ವಾಭಾವಿಕವಾದುದೇ. ಒಂಭತ್ತನೆಯ ಮಂಡಲದಲ್ಲಿರುವ ೧೧೪ ಸೂಕ್ತಗಳೂ, ಜೇರೆ ೬ ಸೂಕ್ತಗಳೂ ಸೇರಿ ಒಟ್ಟು ೧೨೦ ಸೂಕ್ತಗಳು ಸೋಮದೇವತೆಯನ್ನು ಹೊಗಳುತ್ತವೆ. ೪-೫ ಸೂಕ್ತಭಾಗಗಳೂ ಮತ್ತು ಇಂದ್ರ, ಅಗ್ನಿ, ಪೂಷಣ, ಅಥವಾ ರುದ್ರರ ಜೊತೆಯಲ್ಲಿ ೫-೬ ಸೂಕ್ತಗಳೂ ಸೋಮದೇವತೆಯನ್ನು ಸ್ತುತಿಸುತ್ತವೆ. ಸೋಮ ಎಂಬ ಹೆಸರು ಒಂಟಿಯಾಗಿ ಅಥವಾ ಸಮಸ್ತಪದವಾಗಿ, ಸುಮಾರು ೧೨೦ ಸಲ ಒರುತ್ತದೆ. ಸಂಖ್ಯಾದೃಷ್ಟಿಯಿಂದ, ಸೋಮದೇವತೆಯು ಮೂರನೆಯದು. ಮನುಷ್ಯ ತ್ವಾರೋಪಣೆಯು ಬಹಳ ಮಿತವಾಗಿದೆ. ಸೋಮಲತೆ ಮತ್ತು ಅದರ ರಸಗಳು ಪದೇ ಪದೇ ಉಕ್ತನಾಗಿರುವುದ ರಿಂದ, ಸಂಪೂರ್ಣವಾಗಿ ಅವುಗಳನ್ನು ಮರೆಯುವುದು ಅಸಾಧ್ಯ. ಅದರಿಂದಲೇ ಆ ದೇವತೆಯ ರೂಪ, ಜಂಗಾಂ ಗಳು ಅಥವಾ ಚಲನವಲನಾದಿಗಳ ಪ್ರಸಕ್ತಿಯೂ ಅಪರೂಪ. ಪರಾಕ್ರಮಕಾರ್ಯಗಳೇನಾದರೂ ಉಕ್ತವಾಗಿ ದ್ದರೂ, ಇತರ ದೇವತೆಗಳಿಗೆ ಸಮಾನವಾಗಿದ್ದು, ನಿರ್ವರ್ಣ ಅಥವಾ ಅಪ್ರಧಾನವಾಗಿವೆ. ಇತರ ದೇವತೆಗಳಂತೆ, ಇಂದು ಅಥವಾ ಸೋಮ ಎಂಬ ಹೆಸರಿನಿಂದ, ಯಾಗಕ್ಕೆ ಬಂದು, ದರ್ಭಾಸನದಲ್ಲಿ ಮಂಡಿಸಿ, ಹೋಮ ದ್ರವ್ಯ ಗಳನ್ನು ಸ್ವೀಕರಿಸಬೇಕೆಂದು, ಇವನಿಗೂ ಆಹ್ವಾನವಿದೆ. ಒಂಬತ್ತನೆಯ ಮಂಡಲ ಪೂರ್ತಿ, ಸೋಮರಸದ ವಿಷಯವೇ ಪ್ರಸ್ತುತವಾಗಿರುವುದು; ಶಿಲೆಗಳಿಂದ ರಸವನ್ನು ಹಿಂಡುವುದು, ಊರ್ಣಮಯವಾದ ಜರಡಿಯ ಮೂಲಕ ಮರದ ಪಾತ್ರೆಗಳಿಗೆ ಶೋಧಿಸುವುದು, ದೇವತೆಗಳಿಗೆ ಪಾನೀಯವಾಗಿ ಅಗ್ನಿಯ ಮೂಲಕ ಅರ್ಪಿಸು ವುದು (೧-೯೪-೦೪; ೫-೫೧-೧; ೮-೪೩-೧೧ ಇತ್ಯಾದಿ), ಅಥವಾ ಋತ್ವಿಜರು ಪಾನಮಾಡುವುದು, ಇತ್ಯಾದಿ ವಿಷಯಗಳೇ ಉಕ್ತವಾಗಿವೆ.

ಈ ಲತೆ, ಅದರಿಂದ ತೆಗೆದ ರಸ, ಇವುಗಳಿಗೆ ಸಂಬಂಧಿಸಿದ ಇತಿಹಾಸವನ್ನು ಅರ್ಥಮಾಡಿಕೊಳ್ಳುವುದಕ್ಕೆ ಮೊದಲು, ಅದರ ವಿಷಯವಾಗಿ ಏನೇನು ಹೇಳಿದೆ ಎಂಬುದನ್ನು ತಿಳಿಯಬೇಕು. ರಸವನ್ನು ತೆಗೆಯಲು ಉಪ ಯೋಗಿಸುವ ಲತೆಯ ಭಾಗಕ್ಕೆ 'ಅಂಶು' (೯-೬೭-೨೮) ಎಂದು ಹೆಸರು. ಹಸುಗಳು ಕೆಚ್ಚಲಿನಿಂದ ಹಾಲನ್ನು ಕೊಡುವಂತೆ, ಈ ಚಿಗುರು ಹಾಲನ್ನು (ರಸವನ್ನು) ಕೊಡುತ್ತದೆ (೮-೯-೧೯). 'ಅಂಧಃ' ಎಂದರೆ ಸೋಮ ಲತೆಯು (೮-೪೩-೨೮; ೧೦-೯೪-೮ ಇತ್ಯಾದಿ) ಸ್ವರ್ಗದಿಂದ ಬಂದಿತು (೯-೬೧-೧೦); ಗಿಡುಗವು (ಶ್ಯೇನ) ಅದನ್ನು ತಂದಿತು (೫-೪೫-೯, ೯-೬೮-೬; ೧೦-೧೪೪-೫). 'ಅಂಧಃ' ಎಂಬ ಪದವು ರಸಕ್ಕೂ ಉಪಯೋಗಿ ಸಲ್ಪಟ್ಟಿದೆ. 'ಇಂದು'ವು ದೇವತೆಯನ್ನು ಸೂಚಿಸುತ್ತದೆ (೯-೫೧-೩; ೧೦-೧೧೫-೩). ರಸಕ್ಕೆ ಸೋಮ ಎಂತಲೂ ಹೇಳುವುದುಂಟು; ಆದರೆ ಸಾಧಾರಣನಾಗಿ 'ರಸ' ಎಂಬ ಪದವೇ ಪ್ರಯುಕ್ತವಾಗುತ್ತದೆ. ಒಂದು ಸೂಕ್ತದಲ್ಲಿ (೧-೧೪೭) ಮಾತ್ರ ರಸವೆಂಬರ್ಥದಲ್ಲಿ 'ಪಿತು' (ಪಾನೀಯ) ಎಂಬುದೂ, ಅನೇಕ ಕಡೆ 'ಮದ' (ಮದವನ್ನುಂಟುಮಾಡುವುದು) ಎಂಬುದೂ, ಒಂದೊಂದು ಸಲ, 'ಅನ್ನ' ಎಂಬುದೂ ಪ್ರಯುಕ್ತವಾಗಿವೆ

(೭-೯೮-೨ ; ೮-೪-೧೨ ; ಶ. ಬ್ರಾ. ೧-೬-೪ ಮತ್ತು ೫). ಅಶ್ವಿನೀ ದೇವತೆಗಳಿಗೆ ಸಂಬಂಧಿಸಿದಂತೆ ಉಪಯೋಗಿಸಿದಾಗ ಮಧು ಶಬ್ದಕ್ಕೆ ಜೇನುತುಪ್ಪ ಅಥವಾ ಮಾದಕದ್ರವ್ಯ ಎಂದಾಗುತ್ತದೆ. ಸಾಧಾರಣವಾದ ಸಿಹಿಯಾದ ಪಾನೀಯ ಎಂಬರ್ಥದಲ್ಲಿ, ಹಾಲು ತುಪ್ಪ ಮತ್ತು ವಿಶೇಷವಾಗಿ ಸೋಮರಸಗಳಿಗೆ ಉಪಯೋಗಿಸಲ್ಪಟ್ಟಿದೆ (೪-೨೭-೫ ; ೮-೬೯-೬). ಇತಿಹಾಸದಲ್ಲಿ, ಮಧುವೆಂದರೆ ಅಮೃತ ಅಥವಾ ಸೋಮವೆಂದಾಗುತ್ತದೆ. ಅದರಂತೆಯೇ ಸೋಮರಸವು ಉದ್ದಿಷ್ಟವಾದಾಗ ಅಮೃತಪದವು ಉಪಯೋಗಿಸಲ್ಪಟ್ಟಿದೆ (೫-೨-೩ ; ೬-೩೭-೩ ಇತ್ಯಾದಿ ; ವಾ, ಸಂ. ೬-೩೪ ; ಶ್ರ. ಬ್ರಾ. ೯-೫-೧-೮). ರಾಜನಾದ ಸೋಮನು ಅಭಿಷುತನಾದರೆ ಅಮೃತ ವಾಗುತ್ತಾನೆ (ವಾ. ಸಂ. ೧೯-೭೨). ಸೋಮ್ಯಂ ಮಧು (ಸೋಮಸಂಬಂಧವಾದ ನಾಮಪದ ಪ್ರತ್ಯಯ) ಎಂಬುದೊಂದು ಪ್ರಯೋಗ (೪-೨೬-೫ ; ೬-೨೦-೩). ಅಲಂಕಾರಿಕವಾಗಿ, ಸೋಮವು ಪೀಯೂಷ (೩-೪೮-೨ ಇತ್ಯಾದಿ) ಕ್ಷೀರ (೯-೧೦೭-೧೨), ಚಿಗುರಿನ ಅಲೆ (೯-೯೬-೮) ಅಥವಾ ಜೇನುತುಪ್ಪದ ಸಾರ (೫-೪೩-೪) ಮುಂತಾಗಿ ಕರೆಯಲ್ಪಟ್ಟಿದೆ. ಅಲಂಕಾರಿಕ ನಾಮಗಳಲ್ಲಿ ಬಹಳ ಹೆಚ್ಚಾಗಿ ಉಪಯೋಗಿಸಿರುವುದು ಇಂದು (ಹೊಳೆಯುತ್ತಿರುವ ಬಿಂದು, ಹನಿ) ಎಂಬ ಪದ. ಅದಕ್ಕಿಂತ ಕಡಿಮೆ ಸಂದರ್ಭಗಳಲ್ಲಿ ಹನಿಯೆಂದರ್ಥಕೊಡುವ 'ದ್ರಪ್ಸ' ಎಂಬ ಪದವೂ ಉಪಯೋಗಿಸಲ್ಪಟ್ಟಿದೆ.

ರಸವನ್ನು ತೆಗೆಯುವುದಕ್ಕೆ, 'ಸು' (ಹಿಂಡು) ಧಾತುವೂ (೯-೬೨-೪ ; ಇತ್ಯಾದಿ), 'ದುಹ್' (ಹಾಲು ಕರೆಯುವುದು) ಧಾತುವೂ (೩-೩೬-೬ ಮತ್ತು ೭ ಇತ್ಯಾದಿ) ಉಪಯೋಗಿಸಲ್ಪಡುತ್ತವೆ. ರಸವು ಮದವನ್ನುಂಟುಮಾಡುತ್ತದೆ (೧-೧೨೫-೩ ; ೬-೧೭-೧೧ ಮತ್ತು ೨೦) ಮತ್ತು ಮಧುಮಿಶ್ರಿತವಾಗಿದೆ (೯-೯೭-೧೪). ಮಧು ಪದಕ್ಕೆ ಸಿಹಿಯಾದ ಎಂದರ್ಥವಾದರೂ, ಸೋಮಕ್ಕೆ ಅನ್ವಯಿಸುವಾಗ ಮಧುಮಿಶ್ರಿತ (ಜೇನುತುಪ್ಪ ಬೆರೆತಿರುವುದು) ಎಂತಲೇ ಅರ್ಥಮಾಡಿಕೊಳ್ಳಬೇಕು. ಕೆಲವು ಸಂದರ್ಭಗಳಲ್ಲಿ ಈ ಮಿಶ್ರಣವು ಸ್ಪಷ್ಟವಾಗಿ ಉಕ್ತವಾಗಿದೆ (೯-೧೭-೪ ; ೯-೪೬-೪೪ ; ೯-೯೭-೧೧ ; ೯-೧೦೯-೨೦). ಗಾಣದಿಂದ ಹರಿದು ಬರುವ ಸೋಮರಸವು ಜಲಪ್ರವಾಹದ ಅಲೆಗೆ ಹೋಲಿಸಲ್ಪಟ್ಟಿದೆ (೯-೪೦-೫) ; ಅಥವಾ ಪ್ರತ್ಯಕ್ಷವಾಗಿ ಅಲೆ (೯-೬೪-೧೧ ಇತ್ಯಾದಿ), ಅಥವಾ ಜೇನುತುಪ್ಪದ ಅಲೆ (೩-೪೭-೧) ಮೊದಲಾದ ಹೆಸರುಗಳಿಂದ ವಾಚ್ಯವಾಗಿದೆ. ಮರದ ಪಾತ್ರೆಯಲ್ಲಿ ಶೇಖರಿಸಿರುವ ಸೋಮಕ್ಕೆ ಅರ್ಣವ (೧೦-೧೧೫-೩) ಸಮುದ್ರ (೫-೪೭-೩ ; ೯-೬೪-೪ ಇತ್ಯಾದಿ)ಮೊದಲಾದ ಹೆಸರು. ಸ್ವರ್ಗೀಯ ಸೋಮವನ್ನು ಉತ್ಸ (ಬಾವಿ)ವೆಂದು ಕರೆದಿದೆ ; ಇದು ಗೋವುಗಳಿರುವ ಅತ್ಯುನ್ನತ ಪ್ರದೇಶದಲ್ಲಿದೆ (೫-೪೫-೪) ; ಗೋವುಗಳಲ್ಲಿ ನಿಹಿತವಾಗಿದೆ ಮತ್ತು ಹತ್ತು ಲಗಾಮು (ಬೆರಳು)ಗಳಿಂದ ನಡೆಸಲ್ಪಡುತ್ತದೆ (೬-೪೪-೨೪) ; ಈ ಸೋಮವು ವಿಷ್ಣುವಿನ ಮೇಲಕ್ಕೆ ಎತ್ತಲ್ಪಟ್ಟ ಮೂರನೆಯ ಹೆಜ್ಜೆಯಲ್ಲಿದೆ (೧-೧೫೪-೫).

ಲತೆ ಮತ್ತು ರಸಗಳ ವರ್ಣವು ಬಭ್ರು (ಕಂದು) ಅಥವಾ ಅರುಣ ಅಥವಾ ಹೆಚ್ಚುಸಲ ಹರಿ (ಮಾಸಲು ಹಳದಿ) ಎಂದು ಹೇಳಿದೆ. ಸೋಮವು ನಸುಗೆಂಪಾದ ಗಿಡದ ಶಾಖೆ (೧೦-೯೪-೩) ; ಕೆಂಪು ಛಾಯೆಯ ರಸವನ್ನು ಕೊಡುವ ಚಿಗುರು (೭-೯೮-೧) ; ಕಪಿಲವರ್ಣದ ಚಿಗುರು ಜರಡಿಯೊಳಕ್ಕೆ ಹಿಂಡಲ್ಪಡುತ್ತದೆ (೯-೯೨-೧). ಸೋಮ ಅಥವಾ ಅದಕ್ಕೆ ಬದಲಾಗಿ ಉಪಯೋಗಿಸುವ ಪದಾರ್ಥದ ಬಣ್ಣವು ಕಪಿಲವರ್ಣವಿರಬೇಕೆಂದು ನಿಯಮವು (ಶ. ಬ್ರಾ. ೪-೫-೧೦-೧) ; ಸೋಮವನ್ನು ಕೊಳ್ಳಲು ಕೊಡುವ ಗೋವೂ ಕಪಿಲವರ್ಣದ್ದಾಗಿರಬೇಕು (ತೈ. ಸಂ. ೬-೧-೬-೭ ; ಶ. ಬ್ರಾ. ೩-೩-೧-೧೪).

ಸೋಮರಸವು ಕೈಗಳಿಂದ ಶುದ್ಧಿಮಾಡಲ್ಪಡುತ್ತದೆ (೯-೪೬-೩೪) ; ಹತ್ತು ಬೆರಳುಗಳಿಂದ (೯-೪.೪ ; ೯-೧೫-೪ ಇತ್ಯಾದಿ), ಅಥವಾ, ವ್ಯಂಗ್ಯವಾಗಿ, ಹತ್ತು ಜನ, ಸೋದರಿಯರಾದ ಕನ್ಯೆಯರಿಂದ (೯-೧-೭ ;

೯-೬-೫) ಅಥವಾ ವಿವಸ್ವತನ ಪುತ್ರಿಯರಿಂದ (೯-೧೪-೫) ಸುತವಾಗುತ್ತದೆ. ಇಂದ್ರನಿಗೆ ಪಾನೀಯವಾಗಲೆಂದು, ತ್ರಿತನ ಕನ್ಯೆಯರು, ಕೆಂಪುಛಾಯೆಯ ರಸವನ್ನು ಕಲ್ಲುಗಳ ಮೂಲಕ ಹೊರಕ್ಕೆ ಬರುವಂತೆ ಮಾಡುತ್ತಾರೆ (೯-೩೨-೨ ; ೯-೩೮-೨), ಸೋಮರಸವು ಸೂರ್ಯಪುತ್ರಿಯಿಂದ ಅನೀತವಾಯಿತು ಅಥವಾ ಶುದ್ಧಿಪಡಿಸಲ್ಪಟ್ಟಿತು (೯-೧೦-೬ ; ೯-೭೨-೩ ; ೯-೧೧೩-೩). ಒಂದೊಂದು ಸಲ ಮಂತ್ರದಿಂದಲೂ ಶುದ್ಧೀಕರಿಸಲ್ಪಡುತ್ತದೆ (೯-೯೬-೧೩ ; ೯-೧೧೩-೫). ಸೋಮಾಭಿಷವ ಮಾಡುವ ಋತ್ವಿಜರು ಅಧ್ವರ್ಯುಗಳು (೮-೪-೧೧).

ಚಿಗುರು ಕಲ್ಲಿನಿಂದ ಅರೆಯಲ್ಪಡುತ್ತದೆ (೯-೬೭-೧೯) ಅಥವಾ ಶಿಲೆಗಳಿಂದ ಕುಟ್ಟಲ್ಪಡುತ್ತದೆ (೯-೧೦೭-೧೦); ಗಿಡವನ್ನು ಕುಟ್ಟಿ ಸೋಮರಸವನ್ನು ಉತ್ಪತ್ತಿ ಮಾಡುತ್ತಾರೆ (೧೦-೮೫-೩). ಕಲ್ಲುಗಳು ಅದರ ತೊಗಟೆಯನ್ನು ತೆಗೆದುಹಾಕುತ್ತವೆ (ತೈ. ಬ್ರಾ. ೩-೭-೧೩-೧). ಆ ಶಿಲೆಗಳು ಒಂದು ಚರ್ಮದ ಮೇಲೆ ನಿಹಿತವಾಗಿವೆ; ಗೋವಿನ ಚರ್ಮದ ಮೇಲೆ ಸೋಮಲತೆಯನ್ನು ಹಿಂಡುತ್ತಾರೆ (೯-೭೯-೪). ಸೋಮವು ವೇದಿಯ ಮೇಲೆ ಇಡಲ್ಪಡುತ್ತದೆ (೫-೩೧-೧೭). ಈಗ ವೇದಿಯ ಮೇಲೆ ಇಡುವುದಿಲ್ಲ. ಕೈಗಳಿಂದ ಹಿಡಿದು ಕೊಳ್ಳಲ್ಪಡುತ್ತದೆ (೭-೨೨-೧ ; ೯-೭೯-೪, ಅ. ವೇ. ೧೧-೧-೧೦). ಎರಡು ಬಾಹುಗಳು ಮತ್ತು ಹತ್ತು ಬೆರಳುಗಳು ಕಲ್ಲನ್ನು ತಳ್ಳುತ್ತವೆ (೫-೪೩-೪). ಆದರಿಂದಲೇ, ಕಲ್ಲುಗಳು ಹತ್ತು ಲಗಾಮುಗಳಿಂದ ನಡೆಸಲ್ಪಡುತ್ತವೆ ಎಂದು ಹೇಳಿರುವುದು (೧೦-೯೪-೪). 'ಯುಕ್ತಾಃ' (ಹೂಡಲ್ಪಡುತ್ತವೆ) ಎಂದು ಹೇಳಿರುವುದರಿಂದ ಬೆರಳುಗಳು ಕುದುರೆಗಳಿಗೆ ಹೋಲಿಸಲ್ಪಡುತ್ತವೆ (೧೦-೯೪-೬). ಉಪಯೋಗಿಸುವ ಶಿಲೆಗಳಿಗೆ ಅದ್ರಿ ಅಥವಾ ಗ್ರಾವಾ ಎಂಬ ಪದಗಳೇ ಪ್ರಯೋಗಿಸಲ್ಪಟ್ಟಿರುವುದು. ಸಾಧಾರಣವಾಗಿ ಬಹುವಚನ ಅಥವಾ ಏಕವಚನದಲ್ಲಿ ಈ ಪದಗಳ ಪ್ರಯೋಗ. ಈ ಕಲ್ಲುಗಳಿಗೆ ಅಶ್ಮ (೮-೨-೨), ಭರಿತ್ರ (೩-೩೬-೭), ಪರ್ವತ (೩-೩೫-೮), ಮತ್ತು ಪರ್ವತಾ ಅದ್ರಯಃ (೧೦-೯೪-೧) ಎಂದೂ ಪ್ರಯೋಗವಿದೆ. ಶಿಲೆಗಳಿಂದ ಸೋಮವನ್ನು ಕುಟ್ಟುವುದೇ ಪ್ರಾಯಕವಾಗಿ ರೂಢಿಯಲ್ಲಿದ್ದಂತೆ ತೋರುತ್ತದೆ. ಆದರೆ ಕೆಲಪತ್ತಿನಲ್ಲಿ ಕುಟ್ಟಣಿಯಿಂದ (ಉಲೂಖಲ) ಕುಟ್ಟುವುದೂ ಸಮ್ಮತವೇ (೧-೨೮-೧೧ರಿಂದಳ).

ಹಿಂಡಲ್ಪಟ್ಟು, ರಸವು ಕನಿಹನಿಯಾಗಿ ಕುರಿಯ ತುಪ್ಪಟದಿಂದ ಮಾಡಿದ ಜರಡಿಯ ಮೇಲೆ ಸುರಿಯಲ್ಪಟ್ಟು, ಅದರಿಂದ ಶೋಧಿಸಲ್ಪಡುತ್ತದೆ (೯-೬೩-೧೦ ; ಇತ್ಯಾದಿ ; ೯-೬೯-೯). ಇಲ್ಲಿ ಕಶ್ಮಲಗಳೆಲ್ಲಾ ದೂರವಾಗಿ, ಶುದ್ಧವಾದ ಸೋಮರಸವು ದೇವತೆಗಳ ಆಸ್ವಾದನೆಗಾಗಿ ಉಪಯೋಗಿಸಲ್ಪಡುತ್ತದೆ (೯-೭೮-೧), ಈ ಜರಡಿಗೆ ನಾನಾ ಹೆಸರುಗಳು; ತ್ವಕ್, ರೋಮ, ವಾರ (ತುಪ್ಪಟ), ಪವಿತ್ರ (ಜರಡಿ), ಸಾನು ಇತ್ಯಾದಿ. ಈ ಪದಗಳೆಲ್ಲಕ್ಕೂ ಸಾಧಾರಣವಾಗಿ ಅವಿ (ಕುರಿ) ಎಂಬ ವಿಶೇಷಣವಿರುತ್ತದೆ ಅಥವಾ ಅವಿ ಎಂಬುದೇ ಈ ಜರಡಿಯನ್ನು ಸೂಚಿಸುವುದೂ ಉಂಟು. ಇದರ ಮೂಲಕ ಹಾದುಹೋದ ಸೋಮಕ್ಕೆ ಪವಮಾನ ಅಥವಾ ಪುನಾನ ಎಂದು ಹೇಳಿದೆ (ಪೂ ಶುದ್ಧಿಹೊಂದು ಎಂಬ ಧಾತುವಿನಿಂದ ನಿಷ್ಪನ್ನವಾದುದು). ಮೃಜ್-ಶುದ್ಧಿಮಾಡು ಎಂಬುದು, ಜರಡಿಯಿಂದ ಶೋಧಿಸುವುದಕ್ಕೆ ಮಾತ್ರವಲ್ಲದೇ, ಸೋಮರಸಕ್ಕೆ ಹಾಲು, ನೀರುಗಳ ಮಿಶ್ರಣಕ್ಕೂ ಅನ್ವಯಿಸುತ್ತದೆ (೯-೮೬-೧೧ ; ೯-೯೧-೨). (ಮಿಶ್ರತವಲ್ಲದ) ಶುದ್ಧವಾದ ಸೋಮಕ್ಕೆ ಶುದ್ಧ, ಶುಕ್ರ, ಶುಚಿ ಮೊದಲಾದ ಹೆಸರು (೮-೨-೧೦ ; ೯-೩೩-೨ ; ೧-೫-೫ ; ೧-೩೦-೨). ಈ ಶುದ್ಧ ಸೋಮವು ವಾಯು ಮತ್ತು ಇಂದ್ರರಿಗೆ ಮಾತ್ರ ಅರ್ಪಿತವಾಗುತ್ತದೆ ; ಶುಚಿಪಾ (ಶುದ್ಧ ಸೋಮರಸವನ್ನು ಪಾನಮಾಡುವವನು) ಎಂಬುದು ವಾಯುವಿನ ವಿಶೇಷ ಲಕ್ಷಣ. ಸೋಮ ಯಾಗಗಳಲ್ಲಿ, ಗ್ರಹಗಳನ್ನು (ದೇವತಾದ್ವಂದ್ವಗಳಿಗೆ ಅರ್ಪಿತವಾಗುವ ಸೋಮ) ಅರ್ಪಿಸುವಾಗ, ಶುದ್ಧ ಸೋಮವು ಇಂದ್ರ ವಾಯುಗಳಿಗೂ, ಕ್ಷೀರಮಿಶ್ರಿತವಾದುದು ಮಿತ್ರಾವರುಣರಿಗೂ, ಮಧು ಮಿಶ್ರಿತವಾದುದು ಅಶ್ವಿನಿಗಳಿಗೂ ಉಪಯೋಗಿಸಲ್ಪಡುತ್ತದೆ.

ಜರಡಿಯಿಂದ ಬಂದ ಮೇಲೆ, ಸೋಮವು, ಕಲಶಗಳು ಅಥವಾ ದ್ರೋಣ (ಮರದಪಾತ್ರೆ) ಗಳೊಳಕ್ಕೆ ಪ್ರವಹಿಸುತ್ತದೆ (೯-೬೦-೩ ; ಇತ್ಯಾದಿ). ಕಾಡುಗಳಿಗೆ ಎಮ್ಮೆಗಳು ನುಗ್ಗುವಂತೆ, ಸೋಮವು ದ್ರೋಣಗಳ ಕಡೆ ನುಗ್ಗುತ್ತದೆ (೯-೩೩-೧ ; ೯-೯೨-೬). ೯ ದೇವತೆಯು ಮರದ ಪಾತ್ರೆಗಳಲ್ಲಿ ನೆಲೆಸುವುದಕ್ಕೋಸ್ಕರ, ಪಕ್ಷಿಯಂತೆ ಹಾರಿಹೋಗುತ್ತಾನೆ (೯-೩-೧) ; ಪಕ್ಷಿಯು ಗಿಡದ ಮೇಲೆ ಕುಳಿತಿರುವಂತೆ, ಮಾಸಲುಗೆಂಪು ಬಣ್ಣದ ದ್ರವವು ಬೋಗುಣಿಗಳಲ್ಲಿ ನಿಲ್ಲುತ್ತದೆ (೯-೭೨-೫). ಬಾನೆಯಲ್ಲಿ ಸೋಮವು ನೀರಿನೊಡನೆ ಮಿಶ್ರಿತವಾಗುತ್ತದೆ. ಅಲೆಯೊಡನೆ ಸೇರಿ, ಕಾಂಡವು ಭೋರ್ಗರೆಯುತ್ತದೆ (೯-೭೪-೫). ಗೂಳಿಯು ದನದ ಮಂದೆಯ ಮೇಲೆ ನುಗ್ಗುವಂತೆ, ಇಂದುವು (ಸೋಮವು) ದ್ರೋಣ ಪಾತ್ರೆಯ ಕಡೆ, ಜೋರಾಗಿ ಶಬ್ದವಾಡುತ್ತಾ, ನುಗ್ಗುತ್ತದೆ; ಗಾನ ಮಾಡುತ್ತಾ, ಋತ್ವಿಜರು ನೀರು ಬೆರೆಸಿದಾಗ, ಸೋಮವು ದ್ರೋಣಪಾತ್ರೆಯ ಸುತ್ತಲೂ ವೇಗವಾಗಿ ಚಲಿಸುತ್ತದೆ (೯-೭೬-೫ ; ೯-೧೦೭-೨೬). ವಿಪ್ರರು ನೀರಿನೊಳಕ್ಕೆ ತಮ್ಮ ಕೈಗಳಿಂದ, ಹಾಲು ಕರೆದಂತೆ ಸೋಮರಸವನ್ನು ಕರೆಯುತ್ತಾರೆ (೯-೭೯-೪). ಉಣ್ಣೆಯ ಮೇಲೆ ಹಾದು ಬಂದು, ದ್ರೋಣಪಾತ್ರೆಯಲ್ಲಿ ಬಿಡುತ್ತಿರುವ ಅವನು (ಸೋಮವು) ಹತ್ತು ಜನ ಕನ್ಯೆಯರಿಂದ ಶುದ್ಧಿಮಾಡಲ್ಪಡುತ್ತಾನೆ. (೯-೬-೫). ಇನ್ನೂ ಅನೇಕ ವಾಕ್ಯಗಳು ಈ ಸೋಪು ಮತ್ತು ಉದಕಗಳ ಮಿಶ್ರಣದ ವಿಷಯವನ್ನು ಪ್ರಸ್ತಾಪಿಸುತ್ತವೆ (೯-೩೦-೫ ; ೯-೫೩-೪ ; ೯-೬೬-೮ ಮತ್ತು ೨೫). ಸೋಮ ಬಿಂದುಗಳು ಸ್ರವಾಹಗಳಿಗೆ ಹೊಳಪನ್ನು ಕೊಡುತ್ತವೆ (೯-೭೬-೧). ಶುದ್ಧಿಮಾಡುವುದಕ್ಕೆ (ಉದಕಮಿಶ್ರಣ) ಮೃಜ್ ಧಾತುವಲ್ಲದೆ, ' ಆ ಧಾವ್ ' ಧಾತುವೂ ಉಪಯೋಗಿಸಲ್ಪಡುತ್ತದೆ (೮-೧-೧೭), ಸೋಮವನ್ನು ತಯಾರಿಸುವಾಗ, ಮೊದಲು ' ಸವನ, ' ಅನಂತರ ' ಉದಕಮಿಶ್ರಣ ' ಬರುತ್ತದೆ (೭-೩೨-೬ ; ೮-೧-೧೭ ; ೮-೩೧-೫ ; ಅ. ವೇ. ೬-೨-೧) ; ಸೋಮ ಯಾಗಗಳಲ್ಲಿ, ಮೊದಲು ಸವನವೂ, ಅನಂತರ ಆಧಾವನ (ತೊಳೆಯುವುದು) ಕ್ರಮವಾಗಿ ಬರುತ್ತವೆ. ಅಗಲವಾದ ಪಾತ್ರೆಗಳಲ್ಲಿ (ಬೋಗುಣಿ), ಮಾಧುರ್ಯವನ್ನುಂಟುಮಾಡುವ (೮-೨-೩), ಕ್ಷೀರವು ಸೋಮರಸಕ್ಕೆ ಬೆರೆಸಲ್ಪಡುತ್ತದೆ (೯-೮-೬ ; ಇತ್ಯಾದಿ). ನೀರು ಹಾಲು ಎರಡೂ ಮಿಶ್ರಿತವಾಗುತ್ತವೆಯೆಂದು ಅನೇಕ ವಾಕ್ಯಗಳಲ್ಲಿ ಹೇಳಿದೆ. ಸೋಮ ದೇವತೆಯು ನೀರಿನ ಉಡುಪುಗಳನ್ನು ಧರಿಸುತ್ತಾನೆ. ಗೋವುಗಳನ್ನು (ಹಾಲು) ಧರಿಸಲಪೇಕ್ಷಿಸಿದಾಗ, ಜಲಪ್ರವಾಹಗಳು ಅವನ ಕಡೆ ಹರಿಯುತ್ತವೆ (೯-೨-೩, ೪). ಜನರು ಕಲ್ಲುಗಳಿಂದ ಸೋಮಲತೆಯನ್ನು ಕುಟ್ಟಿ, ರಸವನ್ನು ನೀರಿನಲ್ಲಿ ತೊಳೆದು, ಗೋರೂಪ ವಸ್ತ್ರಗಳಿಂದ ಅಲಂಕರಿಸಿ, ಅವನನ್ನು ಸೋಮಲತೆಗಳಿಂದ ಹೊರಕ್ಕೆ ತೆಗೆಯುತ್ತಾರೆ (೮-೧-೧೭ ; ೨-೩೬-೧ ; ೬-೪೦-೨ ; ೯-೮೬-೨೪, ೨೫ ; ೯-೯೬-೧೯ ಗಳನ್ನು ಹೋಲಿಸಿ).

ಸೋಮರಸವು ಮೂರು ವಿಧವಾಗಿ ಮಿಶ್ರಿತವಾಗುತ್ತದೆ (ತ್ರ್ಯಾಶಿರಃ. ೫-೨೭-೫), ಕ್ಷೀರಮಿಶ್ರಿತ (ಗವಾಶಿರ), ದಧಿಮಿಶ್ರಿತ (ದಧ್ಯಾಶಿರ) ಮತ್ತು ಯವ ಮಿಶ್ರಿತ (ಯವಾಶಿರ). ಈ ಮಿಶ್ರಣಕ್ಕೆ ವಸ್ತ್ರಧಾರಣವೆಂದು (ವಸ್ತ್ರ, ವಾಸಃ, ಅತ್ಕ) ಹೇಳಿದೆ ; ' ನಿರ್ಣಿಕ್ ' (ಹೊಳೆಯುವ ಉಡುಪು ೯-೧೪-೫) ಎಂದು ಹೇಳುವುದೂ ಉಂಟು. ಈ ಪದವು ಜರಡಿಗೂ ಪ್ರಯೋಗಿಸಿದೆ (೯-೭೦-೭) ಇದರಿಂದಲೇ ಸೋಮವನ್ನು ಸೌಂದರ್ಯಯುಕ್ತವಾದುದು (೯-೩೪-೪ ; ಇತ್ಯಾದಿ) ಮತ್ತು ಯಥೇಚ್ಛವಾಗಿ ಒಡವೆಗಳಿಂದ ಅಲಂಕೃತವಾದುದು (೯-೮೧-೨) ಎಂದು ವರ್ಣಿಸಿರುವುದು. ಅಪರೂಪವಾಗಿ ಘೃತ (೯-೮೨-೨) ಅಥವಾ ಉದಕ ಮಿಶ್ರಣವೂ ಉಕ್ತವಾಗಿದೆ; ಆದರೆ ಇವುಗಳಿಗೆ ಆಶಿರ ಪದವನ್ನು ಉಪಯೋಗಿಸಿಲ್ಲ.

ಯಾಗಗಳಲ್ಲಿ ಅಪ್ಯಾಯನ (ಅರ್ಧ ಹಿಂಡಲ್ಪಟ್ಟ ಸೋಮಲತೆಗಳನ್ನು ಪುನಃ ನೀರಿನಲ್ಲಿ ನೆನೆಯಿಸುವುದು) ವೆನ್ನುವುದೊಂದು ಕರ್ಮ (ಮೈ. ಸಂ. ೪-೫-೫). ಋಗ್ವೇದದಲ್ಲಿ ಈ ಧಾತುವು (ಆಪ್ಯಾ) ಸೋಮಕ್ಕೆ

ಸಂಬಂಧಿಸಿದಂದೆ ಪ್ರಯೋಗಿಸಲ್ಪಟ್ಟಿದೆ. ಆದರೆ ಇಲ್ಲಿ ಸೋಮನು ಚಂದ್ರನಿಗೆ ಸಮಾನನು ಎಂದು ಸೂಚಿಸುವು ದಕ್ಕಾಗಿ ಆ ಧಾತು ಉಪಯೋಗಿಸಿರುವುದು. ಒಂದು ಸ್ಥಳದಲ್ಲಿ (೯-೩೧-೪) ಮಾತ್ರ ಈ ಯಜ್ಞಾಂಗ ಕರ್ಮ ವನ್ನು ಸೂಚಿಸಬಹುದು. ಸೋಮರಸವು, ನದಿ ಅಥವಾ ಸಮುದ್ರದಂತೆ ಉಬ್ಬುತ್ತದೆ (೯-೬೪-೮, ೯-೧೦೭-೧೨).

ಸೋಮವು ದಿನಕ್ಕೆ ಮೂರುಸಲ ಹಿಂಡಲ್ಪಡುತ್ತದೆ. ಋಭು ದೇವತೆಗಳು ಸಾಯಂಸವನಕ್ಕೂ (೪-೩೫-೧೧ ; ಇತ್ಯಾದಿ), ಇಂದ್ರನು ಒಬ್ಬನೇ [೪-೩೬-೭] ಮಧ್ಯಾಹ್ನ ಸವನಕ್ಕೂ [೩-೨೧-೧ ಮತ್ತು ೨ ; ೪-೩೭-೧], ಮತ್ತು ಇಂದ್ರನು ಪ್ರಥಮ ಪಾನಮಾಡಲು ಪ್ರಾತಃಸವನಕ್ಕೂ ಆಹೂತರಾಗುತ್ತಾರೆ [೧೦-೧೧೨-೧]. ಸೋಮರಸದ ಅಥವಾ ದೇವತೆಯ ಸ್ಥಾನ [ಸಧಸ್ಥ] ವು ಪದೇ ಪದೇ ಪ್ರಸಕ್ತವಾಗುತ್ತದೆ ; ಒಂದು ಸಲ ಅವನಿಗೆ ಮೂರು ಸ್ಥಾನಗಳು ಉಕ್ತವಾಗಿವೆ. ಶುದ್ಧವಾದ ಮೇಲೆ, ಈ ಮೂರು ಸ್ಥಾನಗಳನ್ನು ಆಲಂಕರಿ ಸುತ್ತದೆ [೯-೧೦೩-೨]. ತ್ರಿಸಧಸ್ಥ ಎಂಬ ವಿಶೇಷಣವು ಸೋಮಕ್ಕೆ ಹೇಳಿದೆ [೮-೮೩-೫]. ಈ ಮೂರು ಸ್ಥಾನ ಗಳೆಂದರೆ, ಶುದ್ಧವಾದ ಸೋಮವನ್ನು ಹಾಕುವ ಮೂರು ದ್ರೋಣಗಳಿರಬಹುದು [ತೈ. ಸಂ. ೩-೨-೧-೨ ; ಕಾ. ಶ್ರೌ. ಸೂ. ೯-೫-೧೭ ; ೯-೭-೪ ; ಋ. ವೇ. ೮-೨-೪ನ್ನು ಹೋಲಿಸಿ]. ಇಂದ್ರನು ಮೂರು ಸರೋವರಗಳಿಂದ ಪಾನ ಮಾಡುತ್ತಾನೆ (೫-೨೯-೭ ಮತ್ತು ೮ ; ೬-೧೭-೧೧ ; ೮-೭-೧೦). 'ತ್ರಿಪ್ರಷ್ಠ' ಎನ್ನುವ ವಿಶೇಷಣವು ಸೋಮ್ಯ ದೇವತೆಗೆ ವಿಲಕ್ಷಣವಾದುದು. ರಸಕ್ಕೆ ಇದು ಒಂದುಸಲವಾದರೂ ಉಪಯೋಗಿಸಲ್ಪಟ್ಟಿದೆ (೭-೩೭-೧). 'ಘೃತ ಪ್ರಷ್ಠ' ಎಂದು ಅಗ್ನಿಗೆ ಹೇಳಿದಾಗ, ಆಜ್ಯ ಹೋಮವೆಂದು ಅರ್ಥಮಾಡಿಕೊಳ್ಳುವಂತೆ, ಇಲ್ಲಿಯೂ, ಮೂರು ವಿಧವಾದ ಮಿಶ್ರಣವೆಂದು ತಿಳಿದುಕೊಳ್ಳಬೇಕು.

ಸೋಮರಸಕ್ಕೆ ನೀರು ಬೆರೆಯಿಸುತ್ತಾರೆ ಎಂಬುದು ವಿಧ ವಿಧವಾಗಿ ವರ್ಣಿತವಾಗಿದೆ. ನದಿಗಳು ಸೋಮವನ್ನುದ್ದೇಶಿಸಿ ಹರಿದು ಬರುತ್ತವೆ (೯-೩೧-೩). ವಾರಿಗಳು ಅವನ ನಿಯಮಗಳನ್ನೇ ಪಾಲಿಸುತ್ತವೆ (೯-೮೨-೫). ಸೋಮವು ಪ್ರವಾಹಗಳ ಮುಂದುಗಡೆ ಹರಿಯುತ್ತದೆ (೯-೮೬-೧೨); ನದಿಗಳಿಗೆಲ್ಲಾ ಯಜಮಾನ ಮತ್ತೂ ರಾಜ (೯-೧೫-೫ ; ೯-೮೬-೩೩ ; ೯-೮೯-೨), ಅನೇಕ ಪ್ನಿಯರಿಗೆ ಯಜಮಾನ (೯-೮೬-೩೨) ಮತ್ತು ಸಮುದ್ರರಾಜ, ದೇವತೆ (೯-೧೦೭-೧೬). ನೀರುಗಳು ಅವನ ಭಗಿನಿಯರು (೯-೮೨-೩). ನೀರುಗಳಿಗೆ ನಾಯಕ ನಾದುದರಿಂದ, ಮಳೆಗೂ ಅವನೇ ಒಡೆಯ (೯-೭೪-೩). ನೀರನ್ನು ಉತ್ಪತ್ತಿ ಮಾಡುತ್ತಾನೆ ಮತ್ತು ಭೂಮ್ಯಾ ಕಾಶಗಳು ಮಳೆಗರೆಯುವಂತೆ ಮಾಡುತ್ತಾನೆ (೯-೯೬-೩). ಆಕಾಶದಿಂದ ಮಳೆ ಪ್ರವಾಹವನ್ನು ಹೊರಡಿಸುತ್ತಾನೆ (೯-೮-೮ ; ೯-೪೯-೧ ; ೯-೯೭-೧೭; ೯-೧೦೮-೯ ಮತ್ತು ೧೦). ಒಂದೊಂದು ಸಲ ಸೋಮ ಬಿಂದುಗಳೇ ಮಳೆ ಹನಿಗಳು ಎಂದು ಕರೆಯಲ್ಪಡುತ್ತವೆ (೯-೪೧-೩ ; ೯-೪೯-೧ ; ೯-೧೦೬-೯). ಮಳೆ ಮೋಡದಂತೆ, ಮಧುಮಿಶ್ರಿತ ವಾದ ಸೋಮವು ಚಲಿಸುತ್ತದೆ (೯-೨-೯). ಅದೇರೀತಿ, ಪವಮಾನ ಬಿಂದುಗಳೂ (ಸೋಮಬಿಂದುಗಳು), ಸ್ವರ್ಗ ದಿಂದ, ಆಕಾಶದಿಂದ, ಭೂಭಾಗಗಳ ಮೇಲೆ ಬೀಳುತ್ತವೆ (೯-೬೩-೨೭). ಸುತವಾದ ಸೋಮವು, ಇನ್ನೂ ಅನೇಕ ವಾಕ್ಯಗಳಲ್ಲಿ ಮಳೆನೀರಿಗೆ ಹೋಲಿಸಲ್ಪಟ್ಟಿದೆ (೮-೭-೧೦ ; ೯-೭೪೪ ; ೧೦-೩೦-೪ ನ್ನು ಹೋಲಿಸಿ).

ಇಂದ್ರನ ಪಾನೀಯವಾದ ಮಾದಕದ್ರವ್ಯವನ್ನು ಚಲಿಸುವಂತೆ ಮಾಡಬೇಕೆಂದು ನೀರನ್ನು ಪ್ರಾರ್ಥಿಸಿ ದಾರೆ (೧೦-೩೦-೯). ಸೋಮವು ನೀರಿನಲ್ಲೇ ಅಭಿವೃದ್ಧಿಯಾಗುವ ಬಿಂದು (೯-೮೫-೧೦ ; ೯-೮೯-೨). ಅದ ರಿಂದಲೇ, ಅವನು ನೀರಿನ ಅಂಕುರ (೯-೯೭-೪೧ ; ಶ. ಬ್ರಾ. ೪-೪-೫-೨೧) ಅಥವಾ ಶಿಶು ; ಹೊಸದಾಗಿ ಜನಿ ಸಿದ ಶಿಶುವಾದ ನೀರಿನಲ್ಲಿರುವ ಗಂಧರ್ವ (ಅಪಾಂ ಗಂಧರ್ವಃ) ನನ್ನು ಏಳು ಜನ ಸಹೋದರಿಯರು, ಅವನ

ಜನನಿಯರಂತೆ, ಸುತ್ತುಗಟ್ಟಿಕೊಂಡಿದಾರೆ (೯-೮೬-೩೬ : ೧೦-೧೩೩-೫ ನ್ನು ಹೋಲಿಸಿ); ಅಥವಾ ನೀರುಗಳೇ ಅವನ ತಾಯಿಯರು (೯-೬೧-೪). ನೀರು ಅಥವಾ ಗೋವುಗಳ ಮಧ್ಯದಲ್ಲಿರುವ ತರುಣನೆಂದು ಸೋಮವನ್ನು ವರ್ಣಿಸಿದೆ (೫-೪೫-೯ ; ೯-೯-೫).

ದ್ರೋಣಪಾತ್ರೆಗಳಲ್ಲಿ ಶುದ್ಧಿಮಾಡುತ್ತಿರುವಾಗ ಅಥವಾ ಕಲಶಗಳಿಗೆ ಪ್ರವಹಿಸುವಾಗ ಉಂಟಾಗುವ ಶಬ್ದವು ಮಳೆಯ ಶಬ್ದವನ್ನು ಹೋಲುತ್ತದೆ (೯-೪೧-೩). ಈ ಸಂದರ್ಭದಲ್ಲಿ ಅತಿಶಯೋಕ್ತಿಗಳೇ ಹೆಚ್ಚು. ಜರಡಿಯಿಂದ ಸೋಮ ಬಿಂದುಗಳು ಉಕ್ಕಿ ಹರಿಯುವಾಗ ಆಗುವ ಶಬ್ದವು ಯೋಧರು ಯುದ್ಧಮಾಡುವ ಶಬ್ದದಂತೆ ಇರುತ್ತದೆ (೯-೬೯-೨). ಈ ಶಬ್ದವನ್ನು ಸೂಚಿಸಲು, ಗರ್ಜಿಸು, ಅರಚು ಎಂಬರ್ಥಕೊಡುವ 'ಕ್ರಂದ್' 'ನದ್.' 'ಮಾ,' 'ರು,' 'ವಾಶ್' ಮೊದಲಾದ ಧಾತುಗಳು ಉಪಯೋಗಿಸಲ್ಪಟ್ಟಿವೆ. (೯-೯೧-೩ ; ೯-೯೫-೪ ಇತ್ಯಾದಿ). ಸ್ತನ್ (ಗುಡುಗು) ಧಾತುವೂ ಪ್ರಯೋಗಿಸಲ್ಪಟ್ಟಿದೆ (೯-೮೬-೯). ವಿಪ್ರರು ಘರ್ಜಿಸುತ್ತಿರುವ ಸೋಮಲತೆಗಳಿಂದ ರಸವನ್ನು ತೆಗೆಯುತ್ತಾರೆ (೯-೭೨-೬). ಸೋಮವನ್ನು ಶೋಧಿಸುವ ಸಂದರ್ಭದಲ್ಲಿ ಸಿಡಿಲೂ ಪ್ರಸಕ್ತವಾಗಿದೆ (೯-೪೧-೩ ; ೯-೮೦-೧ ; ೯-೮೪-೩ ; ೯-೮೬-೮). ಸ್ವರ್ಗೀಯ ಸೋಮರಸವನ್ನು ಶುದ್ಧಿಮಾಡುವ ಸಂದರ್ಭದಲ್ಲಿ ಈ ರೀತಿ ನಡೆದಿರಬಹುದು ಅಥವಾ ಮಳೆಗಾಳಿಗಳಿಗೆ ಸಂಬಂಧಿಸಿದ ವಾಕ್ಯಗಳಿರಬಹುದು.

ಸೋಮವು ಗರ್ಜಿಸುತ್ತದೆ ಎಂದು ಹೇಳುವಾಗ, ಸಾಧಾರಣವಾಗಿ ವೃಷಭಕ್ಕೆ ಹೋಲಿಕೆ, ಅಥವಾ ವೃಷಭವೆಂದೇ ಪ್ರಯೋಗವು ಇದೆ. ಗೂಳಿಯಂತೆ, ಕಾಡಿನಲ್ಲಿ ಅವನು ಗುಟುರು ಹಾಕುತ್ತಾನೆ (೯-೭-೩); ಕಂದುಬಣ್ಣದ ವೃಷಭವು ಗುಟುರು ಹಾಕುತ್ತದೆ ಮತ್ತು ಸೂರ್ಯನ ಜೊತೆಯಲ್ಲಿ (೯-೨-೬) ಪ್ರಕಾಶಿಸುತ್ತದೆ. ಸೋಮಕ್ಕೆ ಮಿಶ್ರಮಾಡುವ ನೀರು ಅಥವಾ ಹಾಲುನೀರುಗಳಿಗೆ ಗೋ ಎಂದು ಹೇಳಿರುವುದರಿಂದ, ಸೋಮ ಮತ್ತು ವಾಗಳಿಗೆ. ವೃಷಭ ಗೋವುಗಳಿಗಿರುವ ಸಂಬಂಧವೇ ಉಕ್ತವಾಗುತ್ತದೆ. ಗೋವುಗಳ ಮಧ್ಯದಲ್ಲಿ ವೃಷಭದಂತೆ ಇದಾನೆ (೯-೧೭-೬ ; ೯-೬೯-೪ ; ೯-೯೬-೭) ಅಥವಾ ಗೋವುಗಳಿಗೆಲ್ಲಾ ಒಡೆಯ (೯-೭೨-೪). ಗೋವುಗಳ ಮಧ್ಯೆ ಸಂಚರಿಸುವ ವೃಷಭದಂತೆ (೯-೭೧-೯) ಅಥವಾ ವೃಷಭವು ಗೋವುಗಳನ್ನುದ್ದೇಶಿಸಿ, ಗುಟುರು ಹಾಕುವಂತೆ ಗುಟುರು ಹಾಕುತ್ತಾನೆ (೯-೭೧-೭) ಮತ್ತು ಗೋವುಗಳೂ ಇವನನ್ನುದ್ದೇಶಿಸಿ ಅರಚುತ್ತವೆ (೯-೮೦-೨ ; ಇತ್ಯಾದಿ). ಅವನು ಭೂಮ್ಯಾಕಾಶಗಳ ಮತ್ತು ನದಿಗಳ ವೃಷಭ (೬-೪೪-೨೧). ಸೋಮದ ರಭಸವು ಅನೇಕ ಸಲ ಮಹಿಷಕ್ಕೆ ಹೋಲಿಸಿ ಹೇಳಲ್ಪಟ್ಟಿದೆ. ಸೋಮನನ್ನು 'ಪಶು' ವೆಂದೇ ಕರೆದಿದೆ (೯-೮೬-೪೩). ಗೋ (ವಾರಿ) ವುಗಳ ಮಧ್ಯೆ ವೃಷಭನಂತಿರುವುದರಿಂದ, ಸೋಮವು ನೀರನ್ನು (ಗೋವನ್ನು) ಫಲವತ್ತಾಗಿ ಮಾಡುತ್ತದೆ (೧೦-೩೬-೪ ; ೯-೧೯-೫ ನ್ನು ಹೋಲಿಸಿ), ಅವನು ವೀರ್ಯಾಧಾನ ಮಾಡುವವನೂ (ರೇತೋಧಾ) ಹೌದು; ಈ ವಿಶೇಷಣವು ಯಜುರ್ವೇದದಲ್ಲಿ ಹೆಚ್ಚಾಗಿ ಚಂದ್ರನಿಗೆ ಹೇಳಲ್ಪಟ್ಟಿದೆ (ವೈ. ಸಂ. ೧೬-೯). ಆದುದರಿಂದಲೇ ಫಲವತ್ತ್ವವನ್ನು ಅನುಗ್ರಹಿಸುವವನು (೯-೬೦-೪ ; ೯-೭೪-೫). ಸೋಮವನ್ನು ಪದೇ ಪದೇ ವೃಷಭನೆಂದು ಕರೆದಿರುವುದರಿಂದ (ಉಕ್ಷಾ, ವೃಷಾ, ವೃಷಭ), ಅವನ ಕೊಂಬುಗಳು ಚೂಪಾಗಿವೆಯೆಂದು (ತಿಗ್ಮಶೃಂಗ) ವರ್ಣನೆ. ಈ ಪದವು ಋಗ್ವೇದದಲ್ಲಿ ಆರು ಕಡೆ ಬಂದಿದೆ. ಅದರಲ್ಲಿ ಐದುಸಲ ವೃಷಭ ಎಂದರ್ಥಕೊಡುವ ಪದ ಸಹಚರಿತವಾಗಿಯೇ ಪ್ರಯೋಗವಿದೆ. ಇಂದ್ರನ ಪಾನೀಯವಾದ 'ಮಾಥ' ವು ಮೊನಚಾದ ಶೃಂಗಗಳುಳ್ಳ ವೃಷಭದಂತಿದೆ (೧೦-೮೬-೧೫). ಸೋಮದೇವತೆಯೂ ಅಗ್ನಿಯಂತೆ, ಶೃಂಗಗಳನ್ನು ಮಸೆಯುತ್ತಾನೆ (೯-೧೫-೪ ; ೯-೭೦-೭).

ಸೋಮವು ಚುರುಕಾದುದು. ಸೋಮರಸವು ಹರಿಯುವ ವೇಗವನ್ನು ಬಹಳ ಸಲ ಕುದುರೆಯ ವೇಗಕ್ಕೆ ಹೋಲಿಸಿದೆ. ಹತ್ತು ಜನ ಕನ್ಯೆಯರು (ಬೆರಳುಗಳು) ಸೋಮನನ್ನು ಉತ್ಸವಾಶ್ವದಂತೆ, ತೊಳೆಯು

ತ್ತಾರೆ (೯-೬-೫). ಇಂದ್ರನಿಗೆ ಮದವನ್ನುಂಟುಮಾಡುವ ಸೋಮರಸದ ಬಿಂದುವೂ ಒಂದು ಕಪಿಲವರ್ಣದ ಅಶ್ವ (೯-೬೩-೧೭). ದ್ರೋಣಪಾತ್ರೆಗಳಿಗೆ ಹರಿಯುತ್ತಿರುವ ಸೋಮರಸವನ್ನು ಹೀರುತ್ತಿರುವ ಪಕ್ಷಿಗೆ ಹೋಲಿಸಿದೆ (೯-೭೨-೫ ; ಇತ್ಯಾದಿ).

ರಸವು ಹರಿದ್ರವರ್ಣವಾಗಿರುವುದರಿಂದ ಸೋಮದ ಭೌತಿಕ ಗುಣಗಳಲ್ಲಿ ವಿಶೇಷವಾಗಿ ಚರ್ಚಿಸಿರುವುದು ಅದರ ಕಾಂತಿಯನ್ನು ಅವನ ಕಿರಣಗಳು ಪ್ರಸಕ್ತವಾಗುತ್ತವೆ. ಮತ್ತು ಸೂರ್ಯನಿಗೆ ಅವನನ್ನು ಮೇಲಿಂದ ಮೇಲೆ ಹೋಲಿಸುತ್ತಾರೆ. ಸೂರ್ಯನಂತೆ ಅಥವಾ ಸೂರ್ಯನೊಡನೆ ಪ್ರಕಾಶಿಸುತ್ತಾನೆ ಮತ್ತು ಸೂರ್ಯಕಿರಣಗಳಿಂದ ಆವೃತನಾಗುತ್ತಾನೆ. (೯-೭೬-೪ ; ೯-೮೬-೩೨ ; ೯-೭೧-೯ ನ್ನು ಹೋಲಿಸಿ) ಸೂರ್ಯನ ರಥವನ್ನೇರಿ ಸೂರ್ಯನಂತೆ ಸಮಸ್ತ ಪ್ರಾಣಿಗಳಿಗೂ ಮೇಲೆ ನಿಂತಿರುತ್ತಾನೆ. ಸೂರ್ಯನಂತೆಯೇ ಭೂಮ್ಯಾಕಾಶಗಳನ್ನು ಕಿರಣಗಳಿಂದ ಆವರಿಸುತ್ತಾನೆ (೯-೪೧-೫). ತೇಜಸ್ವಿಯಾಂದ ಪುತ್ರನಾಗಿ ಜನಿಸಿ, ಮಾತಾಪಿತೃಗಳನ್ನೂ ಕಾಂತಿಯುತರನ್ನಾಗಿ ಮಾಡಿದನು (೯-೯-೩). ಸೂರ್ಯಪುತ್ರಿಯು ಅವನನ್ನು ಶುದ್ಧೀಕರಿಸುತ್ತಾಳೆ (೯-೧-೬). ಈ ಮೇಲೆ ಉಕ್ತವಾದ ಕಾರಣಗಳಿಂದ, ಇವನು ಕತ್ತಲೊಡನೆ ಹೋರಾಡುತ್ತಾನೆ (೯-೯-೭). ಬೆಳಕಿನಿಂದ ಅದನ್ನು ನಿವಾರಿಸುತ್ತಾನೆ (೯-೪೬-೨೨) ಅಥವಾ ಕತ್ತಲನ್ನು ಹೋಗಲಾಡಿಸಿ ಉತ್ತಮವಾದ ಬೆಳಕನ್ನು ಕೊಡುತ್ತಾನೆ (೯-೬೬-೨೪ ; ೯-೧೦೦-೪ ; ೯-೧೦೪-೧೨ ಇತ್ಯಾದಿ) ಎಂಬುದಾಗಿ ಹೇಳಿರುವುದು.

ಸಾಧಾರಣವಾದ ಆಹಾರ ಅಥವಾ ಪಾನೀಯಗಳಲ್ಲಿ ಇರದೇ ಇರುವ, ಅನಿರ್ವಾಚ್ಯವಾದ ಒಂದು ಶಕ್ತಿ ಸೋಮರಸಕ್ಕೆ ಇದೆ. ಈ ಶಕ್ತಿಯಿಂದ ಮನುಷ್ಯರನ್ನು ಅಥವಾ ಅದನ್ನು ಪಾನ ಮಾಡಿದವರು ಯಾರೇ ಆಗಲಿ, ಅವರನ್ನು ಚೇತನಗೊಳಿಸಿ, ಮನುಷ್ಯರಿಗೆ ಸಾಧ್ಯವಲ್ಲದ ಕಾರ್ಯಗಳನ್ನೂ ಸಾಧಿಸುವಂತೆ ಮಾಡುತ್ತದೆ. ಆದುದರಿಂದಲೇ, ಇದು ದಿವ್ಯವಾದ ಪಾನೀಯ, ಅಮೃತಕ್ಕೆ ಸಮಾನವಾದುದು ಅಥವಾ ಅದೇ ಅಮೃತ ಎಂಬ ಭಾವನೆಗೆ ಅವಕಾಶವಾಗಿದೆ. ಇದನ್ನು ಪಾನಮಾಡಿದರೆ ಅಮರರಾಗುತ್ತಾರೆ ಎಂದು ಹೇಳಿದರೂ ಅತಿಶಯೋಕ್ತಿಯಾಗಲಾರದು. ದೇವತೆಗಳಿಗೆ ಪ್ರಿಯವಾದ (೯-೪೫-೨) ಮತ್ತು ಅಮರತ್ವಸಾಧಕವಾದ ಮದ್ಯ (೧-೪೪-೪) ; ಮನುಷ್ಯರಿಂದ ಸುತವಾಗಿ, ಕ್ಷೀರಮಿಶ್ರಿತವಾದ, ಈ ರಸವನ್ನು ದೇವತೆಗಳೆಲ್ಲರೂ ಪಾನಮಾಡುತ್ತಾರೆ (೯-೧೦೯-೧೫) ; ಇದರಿಂದ ಅವರಿಗೆ ಶೀಘ್ರವಾಗಿ ಉಲ್ಲಾಸವುಂಟಾಗುತ್ತದೆ (೪-೨-೧೪) ಮತ್ತು ಪಾನಮಾಡಿ ಹೃಷ್ಟರಾಗುತ್ತಾರೆ (೪-೫೪-೧೧). ಸೋಮವು ನಿತ್ಯವಾದುದು (೧-೪೩-೯ ; ೪-೪೪-೧೨ ; ೯-೩-೧ ಇತ್ಯಾದಿ). ದೇವತೆಗಳು ಅಮರತ್ವ ಪ್ರಾಪ್ತಿಗಾಗಿ ಅದನ್ನು ಪಾನಮಾಡಿದರು (೯-೧೦೬-೪). ಅವನು (ಸೋಮದೇವತೆಯು) ದೇವತೆಗಳಿಗೆ (೧-೯೧-೬ ; ೯-೧೦೪-೩) ಮತ್ತು ಮನುಷ್ಯರಿಗೆ ಅಮರತ್ವವನ್ನು ಅನುಗ್ರಹಿಸುತ್ತಾನೆ (೧-೯೧-೧ ; ೪-೪೪-೩.) ಶಾಶ್ವತವಾದ ತೇಜಸ್ಸು ಮತ್ತು ಯಶಸ್ಸುಗಳಿಗೆ ಸ್ಥಾನವೂ, ನಿತ್ಯವೂ, ಅವಿನಾಶಿಯೂ, ವೈವಸ್ವತನ ವಾಸಸ್ಥಳವೂ ಆದ ಲೋಕದಲ್ಲಿ, ತನ್ನ ಆರಾಧಕನನ್ನು ಅಮರನನ್ನಾಗಿ ಮಾಡಿ, ಇರಿಸುತ್ತಾನೆ (೯-೧೧೩-೭ ಮತ್ತು ೮).

ಆದುದರಿಂದ, ಸ್ವಾಭಾವಿಕವಾಗಿ, ಸೋಮನಿಗೆ ವೈದ್ಯಶಕ್ತಿಯೂ ಇರಬೇಕು. ರೋಗಿಗೆ ಸೋಮರಸವು ಔಷಧರೂಪವಾದುದು (೪-೬೧-೧೭). ಅದರಿಂದಲೇ ಸೋಮದೇವತೆಯು ಏನು ಕಾಯಿಲೆಯಿದ್ದರೂ ಅದನ್ನು ಗುಣಪಡಿಸುತ್ತಾನೆ; ಅಂಧರಿಗೆ ಕಣ್ಣನ್ನೂ, ಹೆಳವರಿಗೆ ಕಾಲನ್ನೂ ಕೊಡುತ್ತಾನೆ (೪-೬೮-೨; ೧೦-೯೫-೧೧). ಅವನು ಮನುಷ್ಯರ ದೇಹಗಳ ರಕ್ಷಕನು ; ಅವರ ಅಂಗಾಂಗಗಳೆಲ್ಲವನ್ನೂ ವ್ಯಾಪಿಸಿಕೊಂಡಿರುತ್ತಾನೆ (೪-೪೪-೯) ; ಇಹಲೋಕದಲ್ಲಿ ದೀರ್ಘಾಯುಸ್ಸನ್ನು ಅನುಗ್ರಹಿಸುತ್ತಾನೆ (೧-೯೧-೬ ; ೪-೪೪-೪ ಮತ್ತು ೭ ; ೯-೪-೬ ; ೯-೬೧-೬). ಸೋಮಪಾನ ಮಾಡಿದರೆ, ಹೃದ್ಗತವಾದ ಪಾಪವೂ ಪರಿಹೃತವಾಗುತ್ತದೆ. ಅಸತ್ಯವು ನಾಶವಾಗಿ, ಸತ್ಯವು ಪ್ರವೃದ್ಧವಾಗುತ್ತದೆ.

ಸೋಮರಸವು ದೇಹದೊಳಕ್ಕೆ ಪ್ರವೇಶಿಸಿ, ದೋಣಿಯನ್ನು ಅಂಬಿಗನು (೯-೯೫-೨) ಮುಂದೆ ಹೊರಡಿಸುವಂತೆ, ಉಚ್ಚಾರಣ ಶಕ್ತಿಯನ್ನು ಅಭಿವೃದ್ಧಿಪಡಿಸುತ್ತದೆ (೬-೪೭-೩ ; ೯-೪೪-೪ ; ೯-೯೫-೫ ; ೯-೯೭-೩೨). ಇದೇ ಕಾರಣದಿಂದ; ಸೋಮನಿಗೆ ವಾಚಸ್ಪತಿ (೯-೨೬-೪ ; ೯-೧೦೧-೫) ಅಥವಾ ವಾಕ್ಕಿನ ನಾಯಕ (ವಾಚೋ ಅಗ್ರಿಯ ಅಥವಾ ಅಗ್ರೇ, (೯-೭-೩ ; ೯-೬೨-೨೫ ಮತ್ತು ೨೬, ೯-೪೬-೧೨, ೯-೧೦೬-೧೮). ಸ್ವರ್ಗದಿಂದಲೂ ಅವನು ಕೂಗುತ್ತಾನೆ (೯-೬೪-೪) ಎಂದು ಹೇಳಿದೆ. ಬ್ರಾಹ್ಮಣಗಳಲ್ಲಿ, ದೇವತೆಗಳು ಸೋಮದ ಬೆಲೆಯಾಗಿ ವಾಕ್ಕನ್ನೇ ಕೊಟ್ಟರೆಂದು ಹೇಳಿದೆ. ಸೋಮವು ಪ್ರಬಲವಾದ ಭಾವನೆಗಳನ್ನೂ ಉದ್ರೇಕಗೊಳಿಸುತ್ತದೆ (೬-೪೭-೩). ಆರಾಧಕರು ಈರೀತಿ ಘೋಷಿಸುತ್ತಾರೆ. ನಾವು ಸೋಮಪಾನ ಮಾಡಿದೇವೆ ; ಅಮರರಾಗಿದ್ದೇವೆ ; ಬೆಳಕಿನ ಭಾಗಕ್ಕೆ ಬಂದಿದೇವೆ (ಜ್ಞಾನಿಗಳಾಗಿದೇವೆ) ; ದೇವತೆಗಳನ್ನು ತಿಳಿದುಕೊಂಡಿದೇವೆ (೮-೪೮-೩). ಸೋಮವು ಭಾವನೆಗಳಿಗೆ ಒಡೆಯ, ಮತ್ತು ಪ್ರಾರ್ಥನಾ ವಾಕ್ಯಗಳಿ ತಂದೆ, ನಾಯಕ ಅಥವಾ ಜನಕನೆಂದು ಉಕ್ತವಾಗಿದೆ. ಅವನು ಕವಿಗಳಿಗೆ ನಾಯಕನು ; ವಿಪ್ರರಲ್ಲಿ ಋಷಿಯು (ವಿಪ್ರಾಣಾಂ ಋಷಿಃ, ೯-೯೬-೬). ಋಷಿಗಳ ಮನಸ್ಸಿನಂತೆ ಮನಸ್ಸು ; ಋಷಿಗಳನ್ನೇ ಉತ್ಪತ್ತಿ ಮಾಡುವವನು (೯-೯೬-೧೫) ಮತ್ತು ಪ್ರಾರ್ಥನಾ ಮಂತ್ರಗಳ ರಕ್ಷಕನು (೬-೫೨-೩). ಯಜ್ಞದ ಆತ್ಮವೇ ಅವನು (೯-೨-೧೦ ; ೯-೬-೮), ದೇವತೆಗಳಿಗೆ 'ಬ್ರಹ್ಮ' ಎಂಬ ಋತ್ವಿಜನು (೯-೯೬-೬) ಮತ್ತು ಅವರವರ ಭಾಗಗಳನ್ನು ಅವರವರಿಗೆ ಹಂಚುತ್ತಾನೆ (೧೦-೮೫-೧೯). ಹೀಗೆ ಅವನ ಜ್ಞಾನವು ಪ್ರಸಕ್ತವಾಗುತ್ತದೆ. ಅವನೊಬ್ಬ ಜ್ಞಾನಿಯಾದ ಋಷಿ (೮-೬೮-೧). ದೇವತೆಗಳ ವಂಶಾವಳಿಯಲ್ಲವೂ ಅವನಿಗೆ ತಿಳಿದಿದೆ (೯-೮೧-೨ ; ೯ ೯೫-೨ ; ೯-೯೭-೭ ; ೯-೧೦೮-೩). ಮನುಷ್ಯರನ್ನು ವೀಕ್ಷಿಸುವ, ವಿವೇಕಿಯಾದ ಅಲೆ (೯-೭೮-೨). ಸೋಮದೇವತೆಯು ಪ್ರಾಣಿಗಳನ್ನೆಲ್ಲಾ ಸೂಕ್ಷ್ಮವಾಗಿ ಅವಲೋಕಿಸುತ್ತಾನೆ (೯-೭೧-೯). ಆದುದರಿಂದ, ಅವನಿಗೆ ಅನೇಕ ನೇತ್ರಗಳು (೯-೨೬-೫) ಮತ್ತು ಸಹಸ್ರ ನೇತ್ರಗಳು (೯-೬೦-೧).

ಸೋಮವು (ದೇವತೆಯು) ಪಿತೃಗಳನ್ನು ಕಾರ್ಯೋನ್ಮುಖರನ್ನಾಗಿ ಮಾಡಿತು (೯-೯೬-೧೧) ; ಅವನ ಮೂಲಕವೇ. ಅವರು ತೇಜಸ್ಸು ಮತ್ತು ಗೋವುಗಳನ್ನು ಸಂಪಾದಿಸಿದರು (೯-೯೭-೩೯). ಸೋಮನಿಗೆ ಪಿತೃಗಳೊಡನೆ ಬಾಂಧವ್ಯವಿದೆ (೮-೪೮-೩) ಅಥವಾ ಅವರಿಂದ ಯುಕ್ತನಾಗಿರುತ್ತಾನೆ (ಅ. ವೇ. ೧೮-೪-೧೩ ; ಶ ಬ್ರಾ. ೨-೬-೧-೪ ಇತ್ಯಾದಿ) ಪಿತೃದೇವತೆಗಳಿಗೆ ಸೋಮಪ್ರಿಯರು (ಸೋಮ್ಯ ೧೦-೧೪-೬ ; ಅ. ವೇ. ೨-೧೨-೫) ಎಂದು ಹೆಸರು.

ಸೋಮರಸದಿಂದ ಮನುಷ್ಯನಿಗೆ ಉತ್ಸಾಹವು ಹೆಚ್ಚುತ್ತದೆ. ಆದರೆ ಸೋಮರಸವು ಮುಖ್ಯವಾಗಿ ದೇವತೆಗಳಿಗೆ ಅರ್ಪಿತವಾಗುತ್ತದೆ. ಆದುದರಿಂದ ಸೋಮಜನ್ಯವಾದ ಸಂತೋಷ, ಉತ್ಸಾಹಗಳು ದೇವತೆಗಳಿಗೆ ಉಂಟಾಗುತ್ತವೆ. ಸೋಮಜನ್ಯವಾದ ಮದದ ಪರಿಣಾಮವು ಹೆಚ್ಚಾಗಿ ಇಂದ್ರನ ಮೇಲೆಯೇ ಆಗಿದೆ. ವಾಯು ಮಂಡಲದಲ್ಲಿರುವ ವಿರುದ್ಧ ಶಕ್ತಿಗಳನ್ನು ಅಡಗಿಸುವುದಕ್ಕೆ ಇಂದ್ರನಿಗೆ ಸಹಕಾರಿಯಾಗುತ್ತದೆ. ವೃತ್ರನೊಡನೆ ಯುದ್ಧಮಾಡಲು ಬೇಕಾದ ವಿಶೇಷ ಶಕ್ತಿಯು, ಸಾಮರ್ಥ್ಯವು ಸೋಮರಸದಿಂದ ಬಂದಿತೆಂದು ಅನೇಕ ಸಲ ಉಕ್ತವಾಗಿದೆ (೮-೮೧-೧೭ ಇತ್ಯಾದಿ). ಸೋಮರಸದಿಂದುಂಟಾದ ಮದದಲ್ಲಿ, ಇಂದ್ರನು ಎಲ್ಲಾ ಶತ್ರುಗಳನ್ನೂ ಸೋಲಿಸುತ್ತಾನೆ (೯-೧-೧೦) ಮತ್ತು ಸೋಮಪಾನ ಮಾಡಿದ ಇಂದ್ರನನ್ನು ಸಂಗ್ರಾಮದಲ್ಲಿ ಯಾರೂ ಎದುರಿಸುಲಾರರು (೬-೪೭-೧). ಸೋಮವೇ ಇಂದ್ರನ ಆತ್ಮ (೯-೮೫-೩) ; ಶುಭಕಾರಕನಾದ ಮಿತ್ರ (೧೦-೨೫-೯) ; ಇಂದ್ರನ ಪರಾಕ್ರಮವನ್ನು ಅಭಿವೃದ್ಧಿಪಡಿಸುತ್ತಾನೆ (೯-೭೬-೨) ; ಮತ್ತು ವೃತ್ರವಧೆಯಲ್ಲಿ ಸಹಾಯ ಮಾಡು

ತ್ತಾನೆ (೯-೬೧-೨೨). ಸೋಮಸಹಚರಿತನಾಗಿ, ಇಂದ್ರನು ಮನುಷ್ಯರಿಗೋಸ್ಕರ ನೀರು ಹರಿಯುವಂತೆ ಮಾಡಿದನು ಮತ್ತು ಸರ್ಪವನ್ನು ವಧಿಸಿದನು (೪-೨೪-೧). ಇದರಿಂದ ಒಂದೊಂದು ಸಲ ಸೋಮವೇ ಇಂದ್ರನ ವಜ್ರಾಯುಧವೆಂದೂ ಹೇಳಲ್ಪಡುತ್ತದೆ (೯-೭೨-೭ ; ೯-೭೭-೧ ; ೯-೧೧೧-೩). ಇಂದ್ರ ಸಂಬಂಧಿಯಾದ, ಈ ಸೋಮರಸವು ಸಹಸ್ರಜಯಪ್ರಾಪಕವಾದ ವಜ್ರಾಯುಧವಾಗುತ್ತದೆ (೯-೪೭-೩). ನೂರಾರು ದುರ್ಗಗಳನ್ನು ನಾಶಮಾಡಬಲ್ಲ ಮದ್ಯವು ಸೋಮರಸ (೯-೪೪-೨) ಮತ್ತು ವೃತ್ರವಧಕಾರಿಯೂ, ಮದಕಾರಿಯೂ ಆದ ಲತೆ (೬-೧೭-೧೧). ಈ ರೀತಿಯಲ್ಲಿ ಸೋಮದೇವತೆಯೇ ಇಂದ್ರನಂತೆ, ವೃತ್ರವಧೆಯನ್ನು ಮಾಡುವವನು ಮತ್ತು ದುರ್ಗಗಳನ್ನು ಭೇದಿಸುವವನು (೯-೪೪-೪) ಎನ್ನಿಸಿಕೊಳ್ಳುತ್ತಾನೆ. ಇಂದ್ರನ ವೈಯಕ್ತಿಕ ವಿಶೇಷಣವಾದ 'ವೃತ್ರಹಾ' ಎಂಬುದು ಸೋಮನಿಗೆ ಐದಾರು ಸಲ ಪ್ರಯೋಗಿಸಲ್ಪಟ್ಟಿದೆ.

ಇಂದ್ರನಿಂದ ಪಾನಮಾಡಲ್ಪಟ್ಟಾಗ, ಸೋಮರಸವು ಸೂರ್ಯನ ಉದಯಕ್ಕೆ ಕಾರಣವಾಯಿತು (೯-೪೬-೨೨). ಈ ಕಾರ್ಯವು ಸೋಮರಸಕ್ಕೆ ಸ್ವತಂತ್ರವಾಗಿಯೇ ಉಕ್ತವಾಗಿದೆ. ಸೂರ್ಯನು (೯-೨೪-೫, ೯-೫೭-೪) ಮತ್ತು ಆಕಾಶದಲ್ಲಿರುವ ಇತರ ತೇಜೋರಾಶಿಗಳು (೯-೪೫-೯) ಪ್ರಕಾಶಿಸುವಂತೆ ಸೋಮದೇವತೆಯು ಮಾಡಿದನು ಮತ್ತು ನೀರಿನಲ್ಲಿ ಸೂರ್ಯನನ್ನು ಉತ್ಪತ್ತಿಮಾಡಿದನು (೯-೪೨-೧). ಸೂರ್ಯೋದಯಕ್ಕೆ ಕಾರಣನು, ಪ್ರಬೋಧಕನು ; ಸೂರ್ಯನನ್ನು ಪಡೆದು ಪ್ರಪಂಚಕ್ಕೆ ಕೊಟ್ಟನು ; ಮತ್ತು ಉಷಸ್ಸುಗಳು ಉದಿಸುವಂತೆ ಮಾಡಿದನು. ತನ್ನ ಆರಾಧಕರೂ ಸೂರ್ಯೋದಯ ಕಾಲದಲ್ಲಿ ಭಾಗವಹಿಸುವಂತೆ ಮಾಡುತ್ತಾನೆ (೯-೪-೫) ಮತ್ತು ಅವರಿಗೋಸ್ಕರ ಬೆಳಕನ್ನು ಒದಗಿಸುತ್ತಾನೆ (೯-೩೫-೧). ಬೆಳಕನ್ನು ಕಂಡುಹಿಡಿದನು (೯-೫೯-೪) ಮತ್ತು ಬೆಳಕು ಮತ್ತು ಆಕಾಶಗಳನ್ನು ಸಂಪಾದಿಸುತ್ತಾನೆ (೯-೩-೨). ಘೃತವು ಅಮೃತತ್ವಕ್ಕೆ ಕೇಂದ್ರವಾಗಿದೆ ಮತ್ತು ಪ್ರಪಂಚವೆಲ್ಲಾ ಅದರ ಮೇಲೆಯೇ ನಿಂತಿದೆ ಎಂದು ಹೇಳಿದೆ (೪-೫೪-೧ ಮತ್ತು ೧೧). ಅದರಂತೆಯೇ ಸೋಮರಸ ಅಥವಾ ದೇವತೆಗೂ ಸಮಸ್ತ ಪ್ರಪಂಚದ ಆಧಿಪತ್ಯವು ಉಕ್ತವಾಗಿದೆ. (೯-೪೬-೨೮, ೨೯) ; ಅವನು ದಿಕ್ಕುಗಳಿಗೆಲ್ಲಾ ಅಧಿಪತಿ (೯-೧೧೩-೨) ; ಎರಡು ಪ್ರಪಂಚಗಳ ಸೃಷ್ಟಿಕಾರ್ಯವನ್ನು ಮಾಡುತ್ತಾನೆ (೯-೯೦-೧) ; ಭೂಮ್ಯಾಕಾಶಗಳ ಸೃಷ್ಟಿ ಮತ್ತು ಸ್ಥಿತಿ, ಆಕಾಶಕ್ಕೆ ಆಧಾರನಾಗಿರುವುದು ಮತ್ತು ಸೂರ್ಯನಲ್ಲಿ ತೇಜಸ್ಸನ್ನು ಸ್ಥಾಪಿಸುವುದು, ಈ ಕಾರ್ಯಗಳನ್ನು ಮಾಡುತ್ತಾನೆ (೬-೪೪-೨೩ ಮತ್ತು ೨೪ ; ೬-೪೭-೩ ಮತ್ತು ೪).

ವೃತ್ರಾಸುರನೊಡನೆ ಯುದ್ಧಮಾಡುವಾಗ, ಇಂದ್ರನಿಗೆ ಸಹಕಾರಿಯಾಗಿದ್ದ ಸೋಮನಿಗೆ ಸ್ವತಃ ಯೋಧನೆಂಬ ಪ್ರತೀತಿ ಬಂದಿದೆ. ಅವನು ಜಯಶಾಲಿ, ಅಜೇಯ ಮತ್ತು ಯುದ್ಧಕ್ಕೋಸ್ಕರವೇ ಜನಿಸಿರುವವನು (೧-೯೧-೨೧). ಶೂರರಲ್ಲಿ ಶೂರನೂ, ಭಯಂಕರರಲ್ಲಿ ಅತಿಭಯಂಕರನೂ, ಆದ ಸೋಮನು ಸದಾ ಜಯಶಾಲಿಯು (೯-೬೬-೧೬ ಮತ್ತು ೧೭). ತನ್ನ ಆರಾಧಕರಿಗೋಸ್ಕರ, ಇವನು, ಗೋವುಗಳು, ರಥಗಳು, ಅಶ್ವಗಳು, ಸುವರ್ಣ, ಸ್ವರ್ಗ, ನೀರು ಮತ್ತು ಇತರ ಸಾವಿರಾರು ವರಗಳನ್ನು (೯-೭೮-೪), ಏಕೆ, ಸಮಸ್ತ ವಸ್ತುಗಳನ್ನೂ ಯುದ್ಧದಲ್ಲಿ ಸಂಪಾದಿಸುತ್ತಾನೆ (೮-೬೮-೧). ಶೌರ್ಯಾದಿ ಪ್ರಶಂಸೆಯಿಲ್ಲದೇ, ಸರ್ವದಾ ಗವಾದಿ ಪದಾರ್ಥಗಳ ಮತ್ತು ಸ್ವರ್ಗದ ದಾತೃವೆಂದೂ (೯-೪೫-೩; ೯-೪೯-೪ ; ೯-೫೨-೧ ; ಇತ್ಯಾದಿ) ಉಕ್ತನಾಗಿದಾನೆ. ಅವನೇ ದೇವತೆಗಳ ನಿಧಿ (೯-೪೮-೩) ಅಥವಾ ಐಶ್ವರ್ಯ (ಶ. ಬ್ರಾ. ೧-೬-೪.೫). ಸೋಮದೇವತೆಯು ಶತ್ರುಗಳಿಂದ ರಕ್ಷಿಸಲೂ ಬಲ್ಲನು (೧೦-೨೫-೭). ಪಿಶಾಚಗಳನ್ನು ಓಡಿಸಬಲ್ಲನು (೯-೪೯-೫) ಮತ್ತು ಇತರ ಕೆಲವು ದೇವತೆಗಳಂತೆ, ಆದರೆ ಅವರಿಗಿಂತ ಹೆಚ್ಚುಸಲ 'ರಕ್ಷೋಹಾ' ಎನ್ನಿಸಿಕೊಂಡಿದಾನೆ. ದುಷ್ಟವಧೆ ಮಾಡುವ

ವನು ಇವನೊಬ್ಬನೇ (೯-೨೪-೬, ಇತ್ಯಾದಿ). ಸೋಮಪಾನ ಮಾಡಿದ ಬ್ರಾಹ್ಮಣರು ಕಣ್ಣಿನಿಂದಲೇ ವಧೆ ಮಾಡಲಲ್ಲರು (ಮೈ. ಸಂ. ೪-೪-೨).

ಯೋಧನಾದುದರಿಂದ, ಈತನಿಗೂ ಆಯುಧಗಳಿವೆ (೯; ೯೬-೧೬). ಶೂರನಂತೆ ಹರಿತವಾದ (೯-೬೧-೩೦; ೯-೯೦-೩). ಆ ಆಯುಧಗಳನ್ನು ತನ್ನ ಹಸ್ತಗಳಲ್ಲಿ ಬಲವಾಗಿ ಹಿಡಿದುಕೊಳ್ಳುತ್ತಾನೆ (೯-೭೬-೨). ವೈರಸ್ವಭಾವದವನಾದ ತನ್ನ ತಂದೆಯಿಂದ ಆಯುಧಗಳನ್ನು ಕಸಿದುಕೊಂಡನೆಂದು (೬-೪೪.೨೨) ಹೇಳಿದೆ. ಸಹಸ್ರ ಅಲುಗುಗಳುಳ್ಳ ಬಾಣವನ್ನು ಉಪಯೋಗಿಸುತ್ತಾನೆ (೯-೪೩-೫, ೯-೪೬.೪೦) ಅವನ ಬಿಲ್ಲು ಬಹಳ ವೇಗಶಾಲಿಯಾದುದು (೯-೯೦-೩).

ಸೋಮದೇವತೆ ಮತ್ತು ಇಂದ್ರರು ಒಂದೇ ರಥದಲ್ಲಿ ಸಂಚರಿಸುತ್ತಾರೆ (೯-೪೭-೯-೯;೯೬-೨; ೯-೧೦೩-೫). ರಥದಲ್ಲಿ ಯುದ್ಧಮಾಡುವ ಇಂದ್ರನಿಗೆ ಸೋಮನು ಸಾರಥಿಯು (ಅ. ವೇ. ೪-೪-೨೩). ದಿವ್ಯವಾದ (೯-೧೧೧-೩) ಒಂದು ರಥದಲ್ಲಿ ಸಂಚರಿಸುತ್ತಾನೆ (೯-೩-೫). ಬೆಳಕು (೯-೪೬-೪೫) ಅಥವಾ ಜರಡಿಯು ಅವನ ರಥ (೯-೪೩-೫). ರಥಿಕರಲ್ಲಿ ಅತ್ಯುತ್ತಮನು (೯.೬೬-೨೬). ಒಳ್ಳೆಯ ರೆಕ್ಕೆಗಳುಳ್ಳ ಹೆಣ್ಣುಕುದುರೆಗಳು (೯-೪೬-೩೭) ಅಥವಾ, ವಾಯುವಿನಂತೆ, ಕುದುರೆಗಳ ತಂಡವೇ (೯-೪೪-೩) ಇದೆ.

ಇಂದ್ರನ ಸಹಚಾರಿಗಳಾದ ಮರುತ್ತ್ಗಳೊಡನೆ ಒಂದೊಂದು ಸಲ ಸಹವಾಸವುಂಟು. ಅವರು ಆಕಾಶದ ವೃಷಭವನ್ನು ಸೋಮವನ್ನು ದೋಹನಮಾಡುತ್ತಾರೆ (೯-೧೦೪-೧೧, ೯-೫೪-೧ನ್ನು ಹೋಲಿಸಿ) ಮತ್ತು ಶಿಶುವು ಜನಿಸಿದ ಕೂಡಲೇ, ಅದನ್ನು ಅಲಂಕರಿಸುತ್ತಾರೆ (೯-೯೬-೧೭). ಇಂದ್ರನಂತೆ, ಇವನನ್ನೂ ಮರುತ್ತುಗಳು (೬-೪೭.೫) ಅಥವಾ ಮರುದ್ಗಣವು (೯-೬೬-೨೨) ಸೋಮನನ್ನು ಪರಿಚರಿಸುತ್ತದೆ. ಆ ಗಾಳಿಗಳೂ ಕೂಡ ಸೋಮನಿಗೆ ಆನಂದದಾಯಕಗಳು (೯-೩೧-೩) ಮತ್ತು ವಾಯುವು ಸೋಮರಕ್ಷಕ (೧೦-೪೫-೫) ಅಗ್ನಿ, ಪೂಷಣ ಮತ್ತು ರುದ್ರರೊಡನೆ, ದ್ವಂದ್ವದೇವತೆಯಾಗಿ ಪರಿಗಣಿತನಾಗಿದಾನೆ (೨-೪೦, ೬-೭೪, ಇತ್ಯಾದಿ). ಕೆಲವು ವೇಳೆ ವರುಣನಿಗೂ ಸೋಮನಿಗೂ ಸಮಾನತ್ವವು ಉಕ್ತವಾಗಿದೆ. ಇದು ಹೇಗೆ ಎಂಬುದು ಅತೀಂದ್ರಿಯವಾದ ವಿಷಯ (೯-೭೭-೫, ೯-೯೫-೪, ಮತ್ತು ೯-೭೩-೩ ಮತ್ತು ೯, ೪-೪೧-೪ಗಳನ್ನು ಹೋಲಿಸಿ).

ಸೋಮಲತೆಯನ್ನು ಮೌಂಜವತ (ಮೂಜವತ್ ಎಂಬ ಪರ್ವತದಲ್ಲಿ ಬೆಳೆದುದು) ಎಂದು ವರ್ಣಿಸಿದೆ (೧೦-೩೪-೧). ಇದೇ ರೀತಿ, ಅನೇಕಸಲ ಗಿರಿಷ್ಠ (ಪರ್ವತದಲ್ಲಿರುವುದು) ಅಥವಾ ಪರ್ವತವ್ಯಧ್ (ಪರ್ವತದಲ್ಲಿ ಬೆಳೆಯುವುದು (೯-೪೬-೧) ಎಂಬುದಾಗಿ ಸೋಮಲತೆಯನ್ನು ವರ್ಣಿಸಿದೆ. ಸೋಮವನ್ನು ಬೆನ್ನಿನ ಮೇಲೆ ಇಟ್ಟುಕೊಂಡಿವೆ ಎಂದು ಪರ್ವತಗಳಿಗೂ ಹೇಳುವುದುಂಟು (ಅ. ವೇ. ೩-೨೧-೧೦). ಸೋಮರಸವನ್ನು ತೆಗೆಯಲು ಉಪಯೋಗಿಸುವ ಕಲ್ಲುಗಳಿಂದ (ಅದ್ರಯಃ ೯-೫೨-೨). ಈ ರೀತಿ ವರ್ಣನೆ ಇರಬಹುದು. ಈ ಎಲ್ಲ ಸಂದರ್ಭಗಳಲ್ಲೂ, ಭೂಲೋಕದ ಪರ್ವತಗಳೇ ಅಭಿಪ್ರೇತವಾಗಿರಬಹುದು (೯-೪೨-೩ನ್ನು ಹೋಲಿಸಿ). ಆಕಾಶಗುಮ್ಮಟದಲ್ಲಿ ಸವಿನುಡಿಯಾಡುವ ಸ್ನೇಹಿತರು ಪರ್ವತದ ಮೇಲೆ ವಾಸಿಸುವ ವೃಷಭವನ್ನು ದೋಹನ ಮಾಡಿದರು (೯-೪೫-೧೦, ೯-೯೫-೪ನ್ನು ಹೋಲಿಸಿ). ವರುಣನು, ವಾರಿಗಳಲ್ಲಿ ಅಗ್ನಿಯನ್ನೂ, ಆಕಾಶದಲ್ಲಿ ಸೂರ್ಯನನ್ನೂ, ಶಿಲೆಯಲ್ಲಿ ಸೋಮವನ್ನೂ ಇಟ್ಟನು (೫-೪೫-೨) ಅಥವಾ ಆಕಾಶದಿಂದ ಒಬ್ಬನನ್ನು (ಅಗ್ನಿಯನ್ನು) ಮಾತರಿಶ್ವನು ತಂದನು ಮತ್ತು ಮತ್ತೊಬ್ಬನನ್ನೂ (ಸೋಮವನ್ನು) ಶಿಲೆಯಿಂದ ಶ್ಯೇನವು ಎತ್ತಿಕೊಂಡುಹೋಯಿತು (೧-೯೩-೬). ಈ ಸಂದರ್ಭಗಳಲ್ಲೂ ಭೂಲೋಕದ ಪರ್ವತಗಳೇ ಉದ್ದಿಷ್ಟವಾಗಿರದೇಕು.

ಆದರೆ, ಪರ್ವತ, ಶಿಲೆ, ಇವುಗಳೆಲ್ಲಾ ಇತಿಹಾಸಗಳಲ್ಲಿ ಮೇಘಗಳೆಂಬ ಅಭಿಪ್ರಾಯಕೊಡುವುದರಿಂದ ಸ್ವಲ್ಪ ಸಂಶಯಕ್ಕವಕಾಶವಿದೆ.

ಸೋಮಲತೆಯು ಪ್ರಾರ್ಥಿಸಸ್ಯವಾದರೂ, ಅದು ದಿವ್ಯವೂ ಹೌದು (೧೦-೧೧೬-೩), ವಾಸ್ತವವಾಗಿ, ಅದರ ಮೂಲ ಮತ್ತು ಅಧಿಷ್ಠಾನವು ಸ್ವರ್ಗಲೋಕವು ಎಂದೇ ಭಾವನೆ. ಆ ಗಿಡವು ಮೇಲು ಲೋಕದಲ್ಲಿ ಹುಟ್ಟಿ, ಅಲ್ಲಿಂದ ಭೂಮಿಗೆ ಬಂದಿತು (೯-೬೧-೧೦). ಅದರ ಮದಕಾರಿಯಾದ ರಸವು ಸ್ವರ್ಗಲೋಕದ ಶಿಶುವು (೯-೩೪-೫). ಸೂರ್ಯನಿಂದ ಜನಿಸಿದುದು ಎಂದು ಒಂದು ವಾಕ್ಯದಲ್ಲೂ (೯-೯೩-೧), ಆ ದೊಡ್ಡ ಪಕ್ಷಿಗೆ ಪರ್ಜನ್ಯನು ಜನಕನೆಂದು ಇನ್ನೊಂದು ವಾಕ್ಯದಲ್ಲಿಯೂ (೯-೮೨-೩, ೯-೧೧೩-೩ನ್ನು ಹೋಲಿಸಿ) ಹೇಳಿದೆ. ಅಥರ್ವ ವೇದದಲ್ಲಿ, ಅಮೃತಕ್ಕೆ ಮೂಲವು ಪರ್ಜನ್ಯನಿಂದ ಉಪ್ತವಾದ ಬೀಜವೆಂದು (ಅ. ವೇ. ೮-೭-೨೧) ಉಕ್ತವಾಗಿದೆ, ಅನೇಕ ಕಡೆ, ಸೋಮರಸಕ್ಕೆ,ಶಿಶು (೯-೯೬-೧೭) ಅಥವಾ ಯುವಕ ಎಂದು ಕರೆದಿರುವುದು, ಅದೂ ಅಗ್ನಿಯಂತೆ ಪುನಃ ಪುನಃ ತಯಾರಿಸಲ್ಪಡುವುದರಿಂದ ಇರಬೇಕು ಸೋಮರಸವು ಸ್ವರ್ಗಲೋಕದ ಪೀಯೂಷ (ಕ್ಷೀರ, ೯-೫೧-೨, ಇತ್ಯಾದಿ) ಮತ್ತು ಸ್ವರ್ಗಲೋಕದಲ್ಲಿ ಶುದ್ಧಿಮಾಡಲ್ಪಡುತ್ತದೆ (೯-೮೩-೨, ೯-೮೬-೨೨, ಇತ್ಯಾದಿ). ಪ್ರಿಯವಾದ ಸ್ವರ್ಗದ ಪ್ರದೇಶಗಳಿಗೆ, ತನ್ನ ಪ್ರವಾಹಗಳ ಮೂಲಕ ಹರಿದುಹೋಗುತ್ತಾನೆ (೯-೩-೭) ಸ್ವರ್ಗದಲ್ಲಿ ನೆಲೆಸುತ್ತಾನೆ (೯-೮೫-೯), ಸ್ವರ್ಗದಲ್ಲಿದಾನೆ (ಶ. ಬ್ರಾ. ೩-೪-೩-೧೩) ಅಥವಾ ಸ್ವರ್ಗದ ಅಧಿಪತಿ (೯-೮೬-೧೧ ಮತ್ತು ೧೩). ಸ್ವರ್ಗಲೋಕದ ಪಕ್ಷಿಯಂತೆ, ಭೂಮಿಯನ್ನು ವೀಕ್ಷಿಸುತ್ತಾನೆ ಮತ್ತು ಎಲ್ಲಾ ಪ್ರಣಿಗಳನ್ನೂ ಅವಲೋಕಿಸುತ್ತಾನೆ (೯-೭೧-೯). ಸೂರ್ಯನಂತೆ ಎಲ್ಲಾ ಲೋಕಗಳಿಗೂ ಮೇಲುಗಡೆ ಇದಾನೆ (೯-೫೪-೩). ಶುದ್ಧವಾದ ಸೋಮಬಿಂದುಗಳು ಸ್ವರ್ಗದಿಂದ, ಆಕಾಶದಿಂದ, ಭೂಮಿಯ ಮೇಲೆ ಬೀಳುತ್ತವೆ (೯-೬೩-೨೭), ಅವನು ಅಂತರಿಕ್ಷ ಸಂಚಾರಿ (೪-೪೪-೪; ೪-೧೦೪-೭). ಕ್ಷೀರದಿಂದ ಆವೃತನಾದ ಅವನನ್ನು ಬೆರಳುಗಳು ಉಜ್ಜುತ್ತವೆ (೯-೪೬-೨೭). ಅತ್ಯುನ್ನತವಾದ ಆಕಾಶದಲ್ಲಿ (೩-೩೨-೧೦, ೪-೨೬-೬, ೯-೪೬-೧೫) ಅಥವಾ ಮೂರನೆಯ ಸ್ವರ್ಗದಲ್ಲಿ (ತೈ. ಸಂ. ೩-೫-೭-೧, ಇತ್ಯಾದಿ) ಅವನ ವಾಸ. ಇಲ್ಲೆಲ್ಲಾ, ವ್ಯೋಮ, ದ್ಯೌಃ ಮೊದಲಾದ ಪದಗಳೆಲ್ಲಾ ಜರಡಿಯ ಪರ್ಯಾಯ ಶಬ್ದಗಳಿಂದೇ ತೋರುತ್ತದೆ. ಸ್ವರ್ಗದ ನಾಭಿಯಲ್ಲಿ, ಊರ್ಣಾಮಯವಾದ ಜರಡಿಯಲ್ಲಿ ಸೋಮವಿದೆ (೯-೧೨-೪), ಸೂರ್ಯನೊಡನೆ ಆಕಾಶದಲ್ಲಿ, ಜರಡಿಯ ಮೇಲೆ ಧಾವಿಸುತ್ತದೆ (೯-೨೭-೫) ಕೆಲವು ಸ್ಥಳಗಳಲ್ಲಿ (೯-೩೭-೩, ೯-೪೫-೯, ೯-೪೬-೪ನ್ನು ಹೋಲಿಸಿ) ಜರಡಿಯೇ ಅಭಿಪ್ರೇತವೆಂದು ಸ್ಪಷ್ಟವಾಗಿದೆ. ಇವುಗಳೆಲ್ಲವೂ ಭೂಮಿಯಲ್ಲಿರುವ ಸೋಮಕ್ಕೇ ಅನ್ವಯಿಸಬೇಕು. ಸ್ವರ್ಗೀಯ ಸೋಮ ಅಥವಾ ಅಮೃತಕ್ಕೆ ಸ್ವರ್ಗವೇ ಅವಾಸಸ್ಥಾನವೆಂಬುದು ಸಿದ್ಧವಾದ ಅಂಶವಾಗಿದೆ.

ಸೋಮರಸವು ಸ್ವರ್ಗದಿಂದ ಆನೀತವಾಗಿದೆ (೯-೬೩-೨೭, ೯-೬೬-೫೦). ಸೋಮ ಮತ್ತು ಶ್ಯೇನದ ಇತಿಹಾಸವೇ ಈ ಅಭಿಪ್ರಾಯಕ್ಕೆ ಆಧಾರ. ಸೋಮವು ಶ್ಯೇನನಿಂದ ತರಲ್ಪಟ್ಟಿತು (೧೦-೮೦-೨). ಉನ್ನತವಾದ ಸ್ವರ್ಗಲೋಕದಿಂದ ಆ ಪಕ್ಷಿಯು ಸೋಮವನ್ನು ತಂದಿತು (೪-೨೬-೬). ಪಕ್ಷಿಯು ಸೋಮ ಅಥವಾ ಮಧುವನ್ನು ಇಂದ್ರನಿಗೆ ತಂದುಕೊಟ್ಟಿತು (೩-೪೩-೭, ೪-೧೪-೧೩). ಶೀಘ್ರಗಾಮಿಯಾದ ಗಿಡುಗವು ಸೋಮಲತೆಯ ಹತ್ತಿರಕ್ಕೂ ಹಾರಿಹೋಯಿತು (೫-೪೫-೯), ಆ ಗಿಡದ ಸಿಹಿಯಾದ ಕಾಂಡದ ಭಾಗವನ್ನು ಇಂದ್ರನಿಗೋಸ್ಕರ ಕಿತ್ತುತಂದಿತು (೪-೨೦-೬). ತನ್ನ ಕಾಲಿನಲ್ಲಿ ಹಿಡಿದುಕೊಂಡು, ಆಕಾಶದ ಮೂಲಕ, ಇಂದ್ರನಿಗೋಸ್ಕರ ತಂದಿತು (೪-೨೧-೯). ಮನೋವೇಗದಿಂದ ಹಾರುತ್ತಾ, ಪಕ್ಷಿಯು ಕಬ್ಬಿಣದ ದುರ್ಗವನ್ನು ಭೇದಿಸಿ (೪-೨೭-೧೧ನ್ನು ಹೋಲಿಸಿ), ವಜ್ರಾಯುಧಧಾರಿಗೋಸ್ಕರ, ಸ್ವರ್ಗಕ್ಕೆ ಹೋಗಿ, ಸೋಮರಸವನ್ನು ತಂದಿ

(೮-೮೯-೮). ಬಹಳ ದೂರದಿಂದ ಸ್ವರ್ಗದಿಂದ, ಗಿಡವನ್ನೇ ಹೊತ್ತು ತಂದಿತು (೯-೬೮-೬, ೯-೭೭-೨, ೯-೮೬-೨೪, ೧೦-೧೧-೪, ೧೦-೯೯-೮, ೧೦-೧೪೪-೪). ಈ ಕಥೆಯು ೪-೨೬ ಮತ್ತು ೪-೨೭ನೆಯ ಸೂಕ್ತಗಳಲ್ಲಿ ವಿವರವಾಗಿದೆ. ಬ್ರಾಹ್ಮಣಗಳಲ್ಲಿ, ಅಗ್ನಿಯ ಒಂದು ವಿಶೇಷರೂಪವಾದ 'ಗಾಯತ್ರಿ'ಯು ಸೋಮವನ್ನು ಎತ್ತಿಕೊಂಡು ಹೋಗುತ್ತದೆ ಎಂದು ಹೇಳಿದೆ. ಇಂದ್ರ ಮತ್ತು ಶ್ಯೇನರು ಭಿನ್ನರು; ಶ್ಯೇನನೇ ಯಾವಾಗಲೂ ಸೋಮವನ್ನು ಇಂದ್ರನಿಗೆ ತಂದುಕೊಡುತ್ತದೆ. ಈ ಇತಿಹಾಸಕ್ಕೆ ಸಂಬಂಧಪಡದ ಮಂತ್ರವೊಂದರಲ್ಲಿ ಇಂದ್ರನನ್ನೇ ಶ್ಯೇನವೆಂದು (೧೦-೯೯-೮) ಕರೆದಿದೆ. ದ್ಯುಲೋಕದ ಶ್ಯೇನನೆಂದು ಒಂದು ಕಡೆ ಅಗ್ನಿಗೆ (೭-೧೫-೪), ಎರಡು ಸಲ ಮರುತರಿಗೆ ಹೇಳಿದೆ. ವೈದ್ಯುತಾಗ್ನಿಗೇ ಶ್ಯೇನನೆಂಬುದು ವಿಶೇಷವಾಗಿ ಉಕ್ತವಾಗಿರುವುದು (ತೈ. ಬ್ರಾ. ೩-೧೦-೫-೧, ೧೨-೧-೨ನ್ನು ಹೋಲಿಸಿ) ಮತ್ತು ಅಗ್ನಿಯನ್ನು ಪಕ್ಷಿಯೆಂದು ಅನೇಕ ಸಲ ಕರೆದಿದೆ. ಸಿಡಿಲು ಬಡಿಯುವುದನ್ನೆ ಈ ರೀತಿ ವರ್ಣಿಸಿದಾರೆಂದು ಕೆಲವರ ಮತ, ಅಯೋಮಯವಾದ ದುರ್ಗವೇ ಮೇಘ; ಇದರಿಂದ ಹೊರಡುವ ಸಿಡಿಲೇ ಶ್ಯೇನದಿಂದ ಸೋಮಾಪನಯನ, ಜಲವರ್ಷಣವೇ ಸೋಮಬಿಂದುಗಳ ವರ್ಷಣ, ಇತ್ಯಾದಿ. ಇದಕ್ಕೆ ಆಧಾರವಾಗಿ ಕೆಲವು ವಾಕ್ಯಗಳೂ ಉದಹರಿಸಲ್ಪಟ್ಟಿವೆ. ಸೋಮ ಮತ್ತು ಅಗ್ನಿಗಳಿಬ್ಬರೂ ಭೂಮಿಗೆ ಇಳಿದು ಬಂದಿರುವುದು ಪ್ರಸಕ್ತವಾಗಿದೆ (೧-೯೩-೬). ಸೋಮವನ್ನು ಎತ್ತಿಕೊಂಡು ಹೋಗುತ್ತಿದ್ದ ಶ್ಯೇನನನ್ನು ಬಾಣದಿಂದ ಹೊಡೆದು, ಒಂದು ಗರಿಯನ್ನು ಕೃಶಾನು ಎಂಬ ಧನುರ್ಧಾರಿಯು ಬೀಳಿಸಿದನೆಂಬುದೂ ಕವಿಯ ವರ್ಣನಾವೈಖರಿಗೆ ಸೇರಿದ್ದೆನ್ನಬಹುದು. ಇದು ಬ್ರಾಹ್ಮಣಗಳಲ್ಲಿ ಇನ್ನೂ ವಿಸ್ತಾರವಾಗಿದೆ. ಗರಿ ಅಥವಾ ಉಗುರೇ ಭೂಮಿಗೆ ಬಿದ್ದು ಪರ್ಣ ಅಥವಾ ಶಲ್ಯಕವೃಕ್ಷವಾಯಿತು. ಈ ವೃಕ್ಷಕ್ಕೆ ಬಹಳ ಪೂಜ್ಯವಾದ ಸ್ಥಾನವಿದೆ.

ಅತಿ ಮುಖ್ಯವಾದ ಲತೆಯಾದುದರಿಂದ, ಸೋಮಲತೆಯನ್ನು ಸಸ್ಯಗಳಿಗೆಲ್ಲಾ ಅಧಿಪತಿಯೆಂತಲೂ) (೯-೧೧೪-೨), ರಾಜನೆಂತಲೂ (೯-೯೭-೧೮ ಮತ್ತು ೧೯). ವನಸ್ಪತಿ (೧-೯೧-೬ ; ೯-೧೨-೭) ಮತ್ತು ಸಸ್ಯಗಳಿಗೆಲ್ಲಾ ಮೂಲಭೂತವಾದುದು (೧-೯೧-೨೨) ಎಂದು ಹೇಳಿದೆ. ಬ್ರಾಹ್ಮಣಗಳಲ್ಲಿ ವೃಕ್ಷಗಳಿಗೆಲ್ಲಾ, ಸೌಮ್ಯ (ಸೋಮಬಂಧುಳ್ಳವು, ಶ. ಬ್ರಾ. ೧೨-೧-೧-೨) ಎಂದು ಹೆಸರಿದೆ. ಅಲ್ಲದೆ, ಇತರ ಪ್ರಮುಖ ದೇವತೆಗಳಂತೆ, ಸೋಮನಿಗೂ ರಾಜನೆಂಬ ಹೆಸರಿದೆ. ನದಿಗಳಿಗೆ (೯-೮೯-೨) ಇಡೀ ಪ್ರಪಂಚಕ್ಕೆ (೯-೯೭-೫೮) ರಾಜನು. ದೇವತೆಗಳಿಗೆ ರಾಜ ಅಥವಾ ತಂದೆ (೯-೮೬-೧೦ ; ೯-೮೭-೨ ; ೯-೧೦೯-೪); ದೇವಮಾನವರಿಗೆ (೯-೯೭-೨೪), ಬ್ರಾಹ್ಮಣರಿಗೆ (ವಾ. ಸಂ. ೯-೪೦; ತೈ. ಸಂ. ೧-೮-೧೦ ; ವೈ. ಸಂ. ೨-೬-೯) ರಾಜನು. ದೇವತೆಯೆಂಬುದೇನೋ ಅನೇಕಸಲ ಹೇಳಲ್ಪಟ್ಟಿದೆ; ಒಂದು ಕಡೆ ಮಾತ್ರ ಅವನು ದೇವತೆಗಳಿಗೋಸ್ಕರ ಸುತ (ಹಿಂಡಲ್ಪಡುವನಾಗುವ ದೇವತೆ (೯-೩-೬ ಮತ್ತು ೭) ಎಂದು ಉಕ್ತವಾಗಿದೆ.

ಈಚಿನ ಸಾಹಿತ್ಯದಲ್ಲಿ 'ಸೋಮ' ಎಂಬುದು ಚಂದ್ರನ ಹೆಸರು. ದೇವತೆಗಳು ಇವನನ್ನು ಪಾನ ಮಾಡಿದುದರಿಂದ, ಅವನು ಕ್ಷಯಿಸಿಹೋದಾಗ, ಸೂರ್ಯನು ಅವನನ್ನು ಪೂರ್ಣಮಾಡುತ್ತಾನೆ. ಛಾಂದೋಗ್ಯೋಪನಿಷತ್ತಿನಲ್ಲಿ (೫-೧೦-೧), ಚಂದ್ರನೇ ಸೋಮನೆಂದೂ, ಅವನು ದೇವತೆಗಳ ಆಹಾರವೆಂದೂ, ಅವರು ಅವನನ್ನು ಪಾನಮಾಡಿಬಿಡುವರೆಂದೂ ಇದೆ. ಬ್ರಾಹ್ಮಣಗಳಲ್ಲಿಯೇ ಚಂದ್ರ ಸೋಮರ ಐಕ್ಯವು ಸಾಧಾರಣವಾದ ವಿಷಯವಾಗಿದೆ. ಐತರೇಯ ಬ್ರಾಹ್ಮಣದಲ್ಲಿ (೭-೧೧) ಚಂದ್ರನು ದೇವತೆಗಳ ಸೋಮವೆಂದು ಉಕ್ತವಾಗಿದೆ; ರಾಜನಾದ ಸೋಮನು ದೇವತೆಗಳ ಆಹಾರ ಮತ್ತು ಅವನೇ ಚಂದ್ರ (ಶ. ಬ್ರಾ. ೧-೬-೪-೫); ಯಾಗೋಪಯುಕ್ತವಾದ ಆ ಗಿಡ ಅಥವಾ ಅದರ ರಸವು ಚಂದ್ರ ದೇವತೆಯನ್ನು ಸೂಚಿಸುತ್ತದೆ (ಕೌ. ಬ್ರಾ. ೭-೧೦ ; ೪-೪), ಪಿತೃಗಳು ಮತ್ತು ದೇವತೆಗಳು ಅಮೃತಸ್ವರೂಪಿಯಾದ ಅವನನ್ನು ಭಕ್ಷಿಸುವುದರಿಂದ ಚಂದ್ರನು

ದಿನೇ ದಿನೇ ಕ್ಷಯಿಸಿಹೋಗುತ್ತಾನೆ ಎಂಬುದೇ ಬ್ರಾಹ್ಮಣಗಳ ಅಭಿಪ್ರಾಯ. ಯಜುರ್ವೇದದಲ್ಲಿ, ಚಂದ್ರನಿಗೆ ಪ್ರಜಾಪತಿಯ ಪುತ್ರಿಯರು ಪತ್ನಿಯರೆಂದೂ, ಅವರೇ ನಕ್ಷತ್ರಪುಂಜವೆಂದೂ ಉಕ್ತವಾಗಿದೆ. ಅಥರ್ವ ವೇದದಲ್ಲಿ (ಅ. ವೇ. ೭-೮೧-೩ ದುತ್ತು ೪ ; ೧೧-೬-೭ ಇತ್ಯಾದಿ) ಸಾಧಾರಣವಾಗಿ ಸೋಮ ಎಂದಿರುವೆಡೆಯಲ್ಲೆಲ್ಲಾ ಚಂದ್ರ ನೆಂದೇ ಅಭಿಪ್ರಾಯ. ಚಂದ್ರ ಸೋಮರ ಐಕ್ಯವನ್ನು ಹೇಳುವ ವಾಕ್ಯಗಳಲ್ಲಿ ಸೋಮ ಮತ್ತು ಸೂರ್ಯೆಯರ ವಿವಾಹವನ್ನು ವರ್ಣಿಸುವ ೧೦-೮೫ ನೇ ಸೂಕ್ತವೇ ಮುಖ್ಯವಾದುದು. ಇಲ್ಲಿ ಸೋಮವು ನಕ್ಷತ್ರಗಳ ಅಂಕ ದಲ್ಲಿದೆ, ಋತ್ವಿಜರಿಗೆ ಪರಿಚಿತವಾದ ಸೋಮವನ್ನು ಯಾರೂ ಭುಜಿಸುವುದಿಲ್ಲ ಮತ್ತು ಈ ಸೋಮಕ್ಕೂ, ಅವರು ಅಭಿಷವ ಮಾಡಬೇಕಾದುದಕ್ಕೂ ಭೇಧವಿದೆ ಎಂದು ಹೇಳಿದೆ. ಇವರ ಗುಟ್ಟು ಬ್ರಾಹ್ಮಣರಿಗೆ ಮಾತ್ರ ತಿಳಿದಿದೆ. ಸೋಮವು ಸ್ವರ್ಗೀಯ, ಕಾಂತಿಯುಕ್ತ, ತಮೋನಿವಾರಕ ಇತ್ಯಾದಿಯಾಗಿ ವರ್ಣನೆಗಳು ಇದ್ದೇ ಇವೆ ; ಅಲ್ಲದೆ ಅದಕ್ಕೆ ' ಇಂದು ' ಎಂದು ಹೆಸರು (೬-೪೪-೨೧). ಪಾತ್ರೆಗಳಲ್ಲಿರುವ ಸೋಮವನ್ನು ನೀರಿನಲ್ಲಿ ಪ್ರತಿಬಿಂಬಿತವಾದ ಚಂದ್ರನಿಗೆ ಹೋಲಿಸಿದೆ (೮-೭೧-೮ ; ೧-೧೦೫-೧ ನ್ನು ಹೋಲಿಸಿ). ದ್ರಪ್ಸ (ಹನಿ, ಬಿಂದು) ಎಂದು ವರ್ಣಿತ ವಾಗಿ, ಸಮುದ್ರಕ್ಕೆ ಹೋಗುವ (೧೦-೧೨೩-೮) ಸೋಮವೂ ಚಂದ್ರನೇ ಇರಬೇಕು.

ಕೆಲವರ ಅಭಿಪ್ರಾಯದಲ್ಲಿ ಸೋಮವೆಂದರೆ ಚಂದ್ರನೇ ಹೊರತು ಬೇರೆ ದೇವತೆಯೇ ಅಲ್ಲ. ಒಂಭತ್ತ ನೆಯ ಮಂಡಲವೆಲ್ಲ ಈ ಚಂದ್ರನನ್ನೇ ಸ್ತುತಿಸುತ್ತವೆ. ಋಗ್ವೇದದಲ್ಲಿ ಈ ಪದವು ಎಲ್ಲಿ ಬಂದರೂ ಸೋಮಲತೆ ಅಥವಾ ಚಂದ್ರ ಇವೆರಡನ್ನೇ ಸೂಚಿಸುವುದು. ಆ ಲತೆಯಿಂದ ಬರುವ ರಸವೇ ಅಮೃತವೆಂತಲೂ, ಆ ಅಮೃ ತಕ್ಕೆ ಚಂದ್ರನು ಆಶ್ರಯನೆಂತಲೂ ಸೂರ್ಯನಿಗಿಂತಲೂ, ಚಂದ್ರನೇ ಮುಖ್ಯದೇವತೆ, ಮತ್ತು ಇವನನಂತರ ಇಂದ್ರನು ಎಂತಲೂ ವಾದಿಸುತ್ತಾರೆ.

ಮತ್ತೆ ಕೆಲವರು ಈ ಮೇಲಿನ ಅಭಿಪ್ರಾಯಕ್ಕೆ ಋಗ್ವೇದದಲ್ಲಿ ಆಧಾರ ಸಾಲದು ಅಥವಾ ಇಲ್ಲವೆಂತಲೇ ಹೇಳುತ್ತಾರೆ. ಈಚಿನ ಗ್ರಂಥಗಳಲ್ಲಿ ಚಂದ್ರಸೋಮರ ಐಕ್ಯಕ್ಕೆ ಪುಷ್ಟಿಯು ಎಷ್ಟೇ ದೊರೆತರೂ ಋಗ್ವೇದದಲ್ಲಿ ಸೋಮದೇವತಾಕವಾದ ನೂರಾರು ವಾಕ್ಯಗಳಲ್ಲಿ ಅಪರೂಪವಾಗಿ ಒಂದೊಂದು ಕಡೆ ಇದು ಸೂಚಿತವಾದರೂ ಸ್ಪಷ್ಟವಾಗಿ ಎಲ್ಲಿಯೂ ಹೇಳಿಲ್ಲ. ಅದೂ ಅಲ್ಲದೆ ವ್ಯಾಖ್ಯಾನಕಾರರು ಯಾರೂ ಈ ಅಂಶಕ್ಕೆ ವೇದದಲ್ಲಿ ಆಧಾರ ವಿದೆಯೆಂದು ಹೇಳಿಲ್ಲ.

ಭಾವನಾರೂಪ ದೇವತೆಗಳು.

ಅಮೂರ್ತಗಳೂ, ಮನೋಮಾತ್ರಗ್ರಾಹ್ಯಗಳೂ ಆದ ಭಾವನೆಗಳೂ ದೇವತೆಗಳೆಂಬ ವ್ಯವಹಾರವಿದೆ. ಇವುಗಳಲ್ಲಿ ಮುಖ್ಯವಾಗಿ ಎರಡುವಿಧ. ಇಚ್ಛಾದ್ವೇಷಾದಿ ಮನೋವ್ಯಾಪಾರಗಳನ್ನು ನಿರ್ದೇಶಿಸುವ ನಾಮಗಳು ಒಂದು ವಿಧ. ನಾನಾಕ್ರಿಯೆಗಳನ್ನೂ ನಿರ್ದೇಶಿಸುವ ನಾಮಗಳು ಮತ್ತೊಂದು ವಿಧ. ಮೊದಲನೆಯ ಜಾತಿಯವು ಅಪರೂಪ. ಎರಡನೆಯದೇ ಬಹುಸಂಖ್ಯೆಯಲ್ಲಿ ಕಂಡು ಬರುವುದು. ಇಂತಹ ಗುಣ ಅಥವಾ ಕ್ರಿಯಾವಾಚಕ ಗಳು ಬರುಬರುತ್ತಾ ತದ್ವಿಶಿಷ್ಟವಸ್ತುಗಳಿಂದ ಬೇರೆಯಾಗಿ ಸ್ವತಂತ್ರಸ್ಥಾನವನ್ನು ಪಡೆದುವು.

1. ಕಾರ್ಯಧಾರೀ ದೇವತೆಗಳು.

ಈ ದೇವತೆಗಳನ್ನು ಸೂಚಿಸುವ ಪದಗಳೆಲ್ಲಾ ಸಾಧಾರಣವಾಗಿ ಆಯಾ ಕ್ರಿಯಾಸೂಚಕವಾದ ಧಾತು ಗಳಿಗೆ ' ತೃ ' ಪ್ರತ್ಯಯವನ್ನು ಹಚ್ಚಿ ನಿಷ್ಪತ್ತಿ ಮಾಡಲ್ಪಟ್ಟವೆ, ಸವಿತೃ, ಧಾತೃ, ವಿಧಾತೃ ಮೊದಲಾದುವು. ಸವಿತೃವು ಅತಿ ಮುಖ್ಯ ದೇವತೆ. ಹಿಂದೆಯೇ ಪ್ರತ್ಯೇಕ ದೇವತೆಯಾಗಿ ಚರ್ಚಿಸಲ್ಪಟ್ಟಿದೆ. ಇತರ ದೇವತೆಗಳು ಅಪರೂಪವಾಗಿ ಪ್ರಸಕ್ತವಾಗುತ್ತವೆ.

ಧಾತೃ—ಈ ಪದವು ಸಾಧಾರಣವಾಗಿ ಋತ್ವಿಜರಿಗೆ, ಯಜ್ಞಸ್ಥಾಪನೆ ಮಾಡುವವರು ಎನ್ನುವ ಅರ್ಥದಲ್ಲಿ ವಿಶೇಷಣವಾಗಿಯೇ ಉಪಯೋಗಿಸಿದೆ. ಸುಮಾರು ಹನ್ನೆರಡುಸಲ ಮಾತ್ರ ದೇವತೆಯ ಹೆಸರಾಗಿ ಪ್ರಯೋಗಿಸಲ್ಪಟ್ಟಿದೆ. ಒಂದು ಸಲ (೭-೭೫-೩) ಹೊರತಾಗಿ, ಉಳಿದುವೆಲ್ಲವೂ ಹತ್ತನೆಯ ಮಂಡಲದಲ್ಲಿಯೇ ಇದೆ. ಇವುಗಳಲ್ಲಿ, ಒಂದು ಸಲ (೧೦-೧೬೭-೩) ಇಂದ್ರನಿಗೂ, ಮತ್ತೊಂದು ಸಲ (೧೦-೮೨-೨) ವಿಶ್ವಕರ್ಮನಿಗೂ ಹೆಸರಾಗಿ ಉಪಯೋಗಿಸಿದೆ. ನಾನಾ ದೇವತೆಗಳಿಗೆ ಪ್ರಾಪಂಚಿಕ ಕರ್ಮಗಳನ್ನು ಹಂಚಿಕೊಡುವ ಕ್ರಿಯೆಯೇ, ಬರುಬರುತ್ತಾ ಬೇರೆ ದೇವತೆಯಾಗಿ ಕಲ್ಪಿತವಾಗಿದೆ. ಅಂತೆಯೇ, ಧಾತೃವು ಸೂರ್ಯ, ಚಂದ್ರ, ಸ್ವರ್ಗ, ಭೂಮಿ ಮತ್ತು ಆಕಾಶಗಳನ್ನು (೧೦-೧೯೦-೩) ಸೃಜಿಸಿದನು. ಅವನೇ ಪ್ರಪಂಚಕ್ಕೆಲ್ಲಾ ಅಧಿಪತಿ (೧೦–೧೮೫-೭). ಸೂರ್ಯ ಸೂಕ್ತವೊಂದರಲ್ಲಿ (೧೦-೧೫೮-೩) ಧಾತೃವು ಸ್ಪಷ್ಟವಾದ ದೃಷ್ಟಿಯನ್ನನುಗ್ರಹಿಸಬೇಕೆಂದು ಪ್ರಾರ್ಥಿತನಾಗಿದಾನೆ. ವಿಷ್ಣು, ತ್ವಷ್ಟೃ, ಪ್ರಜಾಪತಿ ಇವರುಗಳ ಜೊತೆಯಲ್ಲಿ ಸಂತಾನಕ್ಕಾಗಿಯೂ (೧೦-೧೮೪-೧) ಮತ್ತು ಸ್ವತಂತ್ರವಾಗಿ ದೀರ್ಘಾಯುಸ್ಸಿಗಾಗಿಯೂ ಪ್ರಾರ್ಥನೆಯಿದೆ (೧೦-೧೮ ೫). ಪ್ರತಿಫಲಾಪೇಕ್ಷೆಯಿಲ್ಲದೇ, ವಿಷ್ಣು ಸವಿತೃಗಳೊಡನೆಯೂ (೧೦-೧೮೧-೧೦ರಿಂದಕ್ಕೆ) ಅಥವಾ ಮಾತರಿಶ್ವ ಮತ್ತು ದೇವಿಷ್ಟಿಗಳೊಡನೆಯೂ (೧೦-೪೫-೪೭) ಸ್ತುತನಾಗಿದಾನೆ. ನಿರುಕ್ತದಲ್ಲಿ (೫-೫). ಧಾತೃವು ಮಧ್ಯಲೋಕದ ದೇವತೆಗಳ ಪಟ್ಟಿಯಲ್ಲಿ ಸೇರಿಸಲ್ಪಟ್ಟಿದಾನೆ ಮತ್ತು ಧಾತೃವೆಂದರೆ, ಸರ್ವನಿಯಾಮಕನೆಂದರ್ಥವೂ ಉಕ್ತವಾಗಿದೆ. ಪುರಾಣಾದಿಗಳಲ್ಲಿ ಧಾತೃವು ಪ್ರಪಂಚದ ಸೃಷ್ಟಿ ಸ್ಥಿತಿಗಳಿಗೆ ಕಾರಣನು ಮತ್ತು ಧಾತೃ, ಪ್ರಜಾಪತಿ, ಬ್ರಹ್ಮ ಎಲ್ಲರೂ ಒಂದೇ.

ವಿಧಾತೃ—ನಿರ್ವಹಿಸುವವನು ಎಂಬರ್ಥ ಕೊಡುವ ಈ ಪದವು ಇಂದ್ರ (೧೦-೧೮೭-೩) ಮತ್ತು ವಿಶ್ವಕರ್ಮ [೧೦-೮೨-೨] ಇವರುಗಳಿಗೆ ವಿಶೇಷಣವಾಗಿ ಎರಡು ಸಂದರ್ಭಗಳಲ್ಲಿ ಉಪಯೋಗಿಸಿರುವುದು ಕಂಡುಬರುತ್ತದೆ; ಆದರೆ ಮತ್ತೆರಡು ಸಂದರ್ಭಗಳಲ್ಲಿ ಸ್ವತಂತ್ರ ದೇವತೆಯಾಗಿ, ಇತರ ಕೆಲವು ದೇವತೆಗಳೊಡನೆ ಬಂದಿದೆ [೬-೫೦-೧೨ ; ೯-೮೧-೫].

ಧರ್ತಾ—'ಆಶ್ರಯವಾಗಿರುವುದು, ಆಸರೆ' ಈ ಅರ್ಥದ ಈ ಪದವು ಪ್ರಾಯಶಃ ಇಂದ್ರಾದಿಗಳಿಗೆ ವಿಶೇಷಣವಾಗಿಯೇ ಪ್ರಯೋಗ. ಒಂದೇ ಒಂದು ಸಲ [೭-೩೫-೩], ಧಾತೃ ಮೊದಲಾದುವುಗಳೊಡನೆ ಸ್ವತಂತ್ರ ದೇವತೆ ಎಂದು ಪರಿಗಣಿತವಾಗಿದೆ.

ತ್ರಾತಾ—ಇದೂ ಧಾತೃವಿನಂತೆ, ಅಗ್ನಿ ಆದಿತ್ಯರು, ಅಥವಾ ಇಂದ್ರರಿಗೆ, 'ರಕ್ಷಕ' ಎಂಬರ್ಥದಲ್ಲಿ, ವಿಶೇಷಣವಾಗಿಯೂ, ಸ್ವತಂತ್ರವಾಗಿ ಇತರ ದೇವತೆಗಳೊಡನೆ ಐದು ಸಂದರ್ಭಗಳಲ್ಲಿ 'ರಕ್ಷಣಾ ದೇವತೆ' ಎಂಬುದಾಗಿಯೂ [೧-೧೦೬-೭ ; ೪-೫೫-೫ ಮತ್ತು ೭ ; ೮-೧೮-೨೦ ; ೧೦-೧೨೮-೭], ಉಪಯೋಗಿಸಿದೆ. ಸವಿತೃ ಅಥವಾ ಭಗ ದೇವತೆಗಳೇ ಈ ಹೆಸರಿನಿಂದ ಉದ್ದಿಷ್ಟರೆಂದು ಕೆಲವರ ಮತ.

ದೇವ ನೇತೃ ಎಂಬ ದೇವತೆಯೊಂದು ಎರಡು ಮೂರು ಸಲ ಒಂದು ಸೂಕ್ತದ ಜೀವನದಲ್ಲಿ ಶ್ರೇಯಸ್ಸಿಗೆ ಮಾರ್ಗದರ್ಶಕವೆಂದು ಸ್ತುತವಾಗಿದೆ (೫-೫೦).

ತ್ವಷ್ಟೃ:—ಈ ಜಾತಿಯ ದೇವತೆಗಳಲ್ಲಿ ಸವಿತೃವನ್ನು ಬಿಟ್ಟರೆ, ತ್ವಷ್ಟೃವಿನ ಹೆಸರೇ ಅಲ್ಲಲ್ಲಿ ಕಂಡುಬರುವುದು. ಸುಮಾರು ೬೦ ಸಲ ಈ ಹೆಸರು ಬರುತ್ತದೆ. ಎರಡನೆಯದರಿಂದ ಏಳು ಮಂಡಲಗಳಲ್ಲಿಯೇ ಹೆಚ್ಚಾಗಿ ಈ ಪದಪ್ರಯೋಗ. ಆದರೆ ಈ ದೇವತಾಕವಾದ ಸೂಕ್ತವೊಂದಾದರೂ ಇಲ್ಲ.

ತ್ವಷ್ಟೃವಿನ ದೇಹಾದಿವರ್ಣನೆ ಬಹಳ ಕಡಿಮೆ. ಅವನ ಬಾಹು ಅಥವಾ ಹಸ್ತವೊಂದು ಮಾತ್ರ ಪದೇ ಪದೇ ಪ್ರಸಕ್ತವಾಗುತ್ತದೆ. ಕಬ್ಬಿಣದ ಕೊಡಲಿಯನ್ನು ಆಯುಧವಾಗಿ ಧರಿಸುವುದು ಅವನದೊಂದು ವಿಶೇಷ ಲಕ್ಷಣ (೮-೨೯-೩). ರಥಕ್ಕೆ ಎರಡು ಕುದುರೆಗಳನ್ನು ಹೂಡುತ್ತಾನೆ ಮತ್ತು ಥಳಥಳಿಸುತ್ತಿದಾನೆ (೬-೪೭-೧೯). ತ್ವಷ್ಟೃವಿಗೆ ಸುಂದರವಾದ ಬಾಹುಗಳು (ಸುಗಭಸ್ತಿಃ ೬-೪೯-೯) ಅಥವಾ ಸುಂದರವಾದ ಹಸ್ತಗಳು (ಸುಪಾಣೇಃ ೬-೪೯-೯). ಈ ಎರಡನೆಯದು ಸವಿತೃ ಮತ್ತು ತ್ವಷ್ಟೃ ಇವರಿಬ್ಬರಿಗೇ ವಿಶೇಷವಾಗಿ ಪ್ರಯೋಗ.

ಬಹಳ ಕುಶಲನಾದ ಕೆಲಸಗಾರ (೧-೮೫-೯ ; ೩-೫೪-೧೨). ತನ್ನ ದಕ್ಷತೆಯನ್ನು ವ್ಯಕ್ತಪಡಿಸುವ ನಾನಾ ಪದಾರ್ಥಗಳನ್ನು ಮಾಡಿದಾನೆ. ವಾಸ್ತವವಾಗಿ, ಅವನಷ್ಟು ದಕ್ಷರಾದ ಕೆಲಸಗಾರರೇ ಇಲ್ಲ. ಬಹಳ ಬುದ್ಧಿವಂತಿಕೆಯಿಂದ ವಿಧವಿಧವಾದ ಯಂತ್ರಗಳನ್ನು ತಯಾರಿಸಿದಾನೆ (೧೦-೫೩-೯). ಇಂದ್ರನ ವಜ್ರಾಯುಧಕ್ಕೆ ರೂಪುಗೊಟ್ಟವನು ತ್ವಷ್ಟೃವೆಂದು ಬಹಳ ಕಡೆ ಹೇಳಿದೆ (೫-೩೧-೪ ; ಇತ್ಯಾದಿ). ಬ್ರಹ್ಮಣಸ್ಪತಿಯ ಕಬ್ಬಿಣದ ಕೊಡಲಿಯನ್ನು ಹರಿತಮಾಡುತ್ತಾನೆ (೧೦-೫೩-೯). ದೇವತೆಗಳ (೧-೧೬೧-೫ ; ೩-೫೫-೫) ಅಥವಾ 'ಅಸುರ'ನ (೧-೧೫೦-೩) ಆಹಾರವು ತುಂಬಿದ್ದ ಒಂದು ಹೊಸಬಟ್ಟಲನ್ನು (೧-೨೦-೬) ತಯಾರಿಸಿದನು. ಅಥರ್ವವೇದದಲ್ಲಿ (ಅ. ವೇ. ೯-೪-೩ ಮತ್ತು ೬). ಐಶ್ವರ್ಯದಿಂದ ತುಂಬಿದ ಪಾತ್ರೆಯೊಂದನ್ನೂ, ಸೋಮರಸದ ಬಟ್ಟಲೊಂದನ್ನೂ ಹಿಡಿದುಕೊಂಡಿರುವ ವೃದ್ಧನೆಂದು ವರ್ಣಿಸಿದೆ. ವೇಗಶಾಲಿಯಾದ ಅಶ್ವವು ಅವನಿಂದ ಸೃಷ್ಟವಾಯಿತು (ವಾ. ಸಂ. ೨೯-೯) ಮತ್ತು ಅಶ್ವಗಳಿಗೆ ವೇಗವನ್ನು ಅನುಗ್ರಹಿಸುವವನೂ ಅವನೇ (ಅ. ವೇ. ೬-೯೨-೧).

ಎಲ್ಲಾ ವಸ್ತುಗಳಿಗೂ ಆಕಾರವನ್ನು ಕೊಟ್ಟವನೇ ತ್ವಷ್ಟೃವು (೧೦-೧೧೦-೯). ಗರ್ಭಕೋಶದಲ್ಲಿ ಗರ್ಭವನ್ನು ಬೆಳೆಸುವವನೂ, ಮನುಷ್ಯ ಮತ್ತು ಪ್ರಾಣಿವರ್ಗಕ್ಕೆಲ್ಲಾ ಆಕಾರವನ್ನು ಕೊಡುವವನೂ ಅವನೇ (೧-೧೮೪-೯ ; ೪-೯೧-೪ ; ೧೦-೧೮೪-೧). ಇತರ ವೇದಗಳಲ್ಲಿಯೂ ಇದೇ ಅಭಿಪ್ರಾಯ ಬರುವ ವಾಕ್ಯಗಳಿವೆ (ಅ. ವೇ. ೨-೨೬-೧ ; ಇತ್ಯಾದಿ). ಎಲ್ಲಾ ಸಂದರ್ಭಗಳಲ್ಲಿಯೂ ಈ ಗುಣವು ಅವನಿಗೇ ವಿಶೇಷವಾಗಿ ಉಕ್ತವಾಗಿದೆ (ಶ. ಬ್ರಾ ೧೧-೪-೩) ; ತೈ. ಬ್ರಾ. ೧-೪-೭-೧). ಋಗ್ವೇದದಲ್ಲಿ, ಇತರ ಎಲ್ಲಾ ದೇವತೆಗಳಿಗಿಂತ ಹೆಚ್ಚು ಸಲ ಇವನಿಗೇ ವಿಶ್ವರೂಪ (ಸರ್ವ ವಿಧವಾದ ರೂಪಗಳುಳ್ಳವನು) ಎಂಬ ಹೆಸರು ಸಂದಿದೆ. ಪ್ರಾಣಿವರ್ಗಕ್ಕೆಲ್ಲಾ ರೂಪವನ್ನು ಕೊಡುವವನಾದುದರಿಂದ, ವಂಶಾಭಿವೃದ್ಧಿ ಮೊದಲಾದ ಕಾರ್ಯಗಳಿಗೆಲ್ಲಾ ಇವನೇ ನಿಯಾಮಕನೆಂದು (೩-೪-೯ ಇತ್ಯಾದಿ) ಹೇಳಿದೆ. ಗರ್ಭದೆಸೆಯಿಂದಲೂ ಪತಿಪತ್ನಿಯರನ್ನು ಗೊತ್ತುಮಾಡುವವನು ಇವನೇ (೧೦-೧೦-೫ ; ಅ. ವೇ. ೬-೭೮-೩). ಅನೇಕ ವಿಧ ಜೀವಂಗೆ ಇವನು ಸೃಷ್ಟಿ ಮತ್ತು ಬೆಳೆವ ಪೈಗೆಗಳಿಗೆ ಕಾರಣನು (೩-೫೫-೧೯). ಮೃಗಗಳೆಲ್ಲವೂ ತ್ವಷ್ಟೃವಿಗೇ ಸೇರಿವೆ (ಶ. ಬ್ರಾ. ೩-೭-೩-೧೧ ; ಶ. ಬ್ರಾ ೩-೮-೩-೧೧). ಪ್ರಪಂಚವೆಲ್ಲವೂ ಅವನಿಂದಲೇ ಸೃಷ್ಟವಾದುದರಿಂದ ಅವನು ಜಗಜ್ಜನಕನು (ವಾ. ಸಂ. ೨೯-೯).

ಇವನ ಮಗಳೂ, ವಿವಸ್ವತನ ಪತ್ನಿಯೂ ಆದ ಶರಣ್ಯವು. ಆದಿ ಸೃಷ್ಟಿಯ ಯಮಳರಾದ ಯಮ ಮತ್ತು ಯಮಿಯರಿಗೆ ತಾಯಿಯು ; ಆದುದರಿಂದ ಇವನೂ ಮನುಷ್ಯವರ್ಗಕ್ಕೇ ಮೂಲಪುರುಷನೆನ್ನಬಹುದು (೧೦-೧೭-೧ಮತ್ತು ೨; ೫-೪೨-೧೫ನ್ನು ಹೋಲಿಸಿ). ಒಂದು ಸಲ ವಾಯುವು ಇವನ ಅಳಿಯನೆಂದು (೮-೨೬-೨೧) ಹೇಳಿದೆ. ತ್ವಷ್ಟೃವಿನಿಂದ ಬೃಹಸ್ಪತಿಯು ಜನಿಸಿದನು (೨-೨೩-೧೭). ಹತ್ತು ಬೆರಳುಗಳಿಂದ (ಅರಣಿಯಲ್ಲಿ

ಜನಿತನಾದ ಅಗ್ನಿಯೂ ತ್ವಷ್ಟೃವಿನಿಂದ ಹುಟ್ಟಿದವನು (೧-೯೫-೨); ಭೂಮಿ, ಆಕಾಶ, ನೀರು, ಭೃಗುಗಳು ಮತ್ತು ಅಗ್ನಿ ಇವರುಗಳನ್ನು ತ್ವಷ್ಟೃವು ಉತ್ಪತ್ತಿಮಾಡಿದನು (೧೦-೨-೭; ೧೦-೪೬-೯). ಇಂದ್ರನೂ ತ್ವಷ್ಟೃ ಪುತ್ರನೆಂದು ಊಹಿಸಬೇಕಾಗುತ್ತದೆ (೩-೪೮-೨; ೪-೧೮-೩; ೪-೧೮-೧೨). ತ್ವಷ್ಟೃವು ಸೋಮರಸದ ರಕ್ಷಕನೆಂಬುದು ಸಿದ್ಧವಾದ ವಿಷಯ (೧-೧೧೭-೨೨). ಅವನ ಮನೆಯಲ್ಲಿಯೇ ಇಂದ್ರನು ಸೋಮರಸವನ್ನು ಕದ್ದು ಪಾನಮಾಡುವುದು ಮತ್ತು ಅದನ್ನು ಪಡೆಯುವುದಕ್ಕೋಸ್ಕರ, ತಂದೆಯನ್ನು ಕೊಲ್ಲುವುದು. ಈ ವಿಶ್ವರೂಪನಾದ ತ್ವಷ್ಟೃವಿಗೆ ವಿಶ್ವರೂಪನೆಂಬೊಬ್ಬ ಮಗನಿದ್ದಾನೆ; ಇವನ ಅಧೀನವಲ್ಲಿಯೇ ಗೋವುಗಳಿದ್ದುದು. ಸೋಮರಸವನ್ನು ಪಡೆಯಲು ತ್ವಷ್ಟೃವಿನೊಡನೆ ಜಗಳವಾಡಿದಂತೆ, ಗೋವುಗಳನ್ನು ಪಡೆಯಲು, ಅವನ ಮಗ ವಿಶ್ವರೂಪನೊಡನೆ ಇಂದ್ರನು ಯುದ್ಧಮಾಡುತ್ತಾನೆ. ಇಂದ್ರನ ಕೋಪಕ್ಕೆ, ತ್ವಷ್ಟೃವೂ ಹೆದರಿದಾನೆ (೧-೮೦-೧೪). ಇಂದ್ರನು ಸಾಧಿಸಿದ ಕಾರ್ಯಗಳನ್ನು ತ್ವಷ್ಟೃವೂ (೧೦-೪೯-೧೦) ಮಾಡಲಿಲ್ಲವಾದುದರಿಂದ, ಅವನು ಇಂದ್ರನಿಗಿಂತಲೂ ಕಡಿಮೆಯೆಂದೇ ಭಾವನೆ. ಪುತ್ರನನ್ನು ಕೊಂದವನೆಂದು, ತಾನು ಆಚರಿಸಿದ ಸೋಮಯಾಗದಲ್ಲಿ ಇಂದ್ರನು ಭಾಗ ವಹಿಸಲು ತ್ವಷ್ಟೃವು ಅವಕಾಶಕೊಡಲಿಲ್ಲ; ಆಗ ಇಂದ್ರನು ಬಲಾತ್ಕಾರವಾಗಿ ಸೋಮರಸವನ್ನು ಪಾನಮಾಡಿದನು (ತೈ. ಸಂ. ೨-೪-೧೨-೧) ಎಂದು ಹೇಳಿದೆ. ಇತರ ಬ್ರಾಹ್ಮಣಗಳಲ್ಲಿಯೂ ಇದೇ ರೀತಿಯ ಕಥೆ ಉಕ್ತವಾಗಿದೆ (ಶ. ಬ್ರಾ. ೧-೬-೩-೬; ಇತ್ಯಾದಿ).

ಗರ್ಭಾಶಯದಲ್ಲಿ, ಗರ್ಭೋತ್ಪತ್ತಿ ಕಾರ್ಯಗಳಲ್ಲಿ ತ್ವಷ್ಟೃವಿಗೆ, ಒಂದು ಮುಖ್ಯಪಾತ್ರವಿರುವುದರಿಂದ, ಅವನಿಗೂ ಸ್ವರ್ಗಲೋಕದ ಸ್ತ್ರೀಯರಿಗೂ (ಗ್ನಾಃ, ಜನಯಃ) ಮೈತ್ರಿಯಿದೆ; ಅವರೇ ಅವನ ಅನುಜ್ಞಾಕಾರಿಣಿಯರು (೧-೨೨-೯; ಇತ್ಯಾದಿ). ಪೂಷಣ, ಸವಿತಾ, ಧಾತಾ, ಪ್ರಜಾಪತಿ ಮೊದಲಾದ ದೇವತೆಗಳೊಡನೆಯೇ ಅವನು ವಿಶೇಷವಾಗಿ ಸೇರಿರುವುದು. ಎರಡು ಸಂದರ್ಭಗಳಲ್ಲಿ 'ಸವಿತಾ' ಎನ್ನುವುದು ಅವನಿಗೆ ವಿಶೇಷಣ (೩-೫೫-೧೯; ೧೦-೧೦-೫). ಈ ಎರಡೂ ಸಂದರ್ಭಗಳಲ್ಲಿ, ಅವನ ಸೃಷ್ಟಿಕರ್ತೃತ್ವವು ಪ್ರಸಕ್ತವಾಗಿದೆ. ಕೌಶೀತಕೀ ಸೂತ್ರದಲ್ಲಿ, ತ್ವಷ್ಟೃ, ಸವಿತೃ ಮತ್ತು ಪ್ರಜಾಪತಿಗಳೂ ಒಂದೇ ದೇವತೆಯ ಹೆಸರುಗಳೆಂದೂ, ಮಾರ್ಕಂಡೇಯ ಪುರಾಣದಲ್ಲಿ, ತ್ವಷ್ಟಾ, ವಿಶ್ವಕರ್ಮಾ ಮತ್ತು ಪ್ರಜಾಪತಿಗಳು ಒಂದೇ ಎಂದೂ ಹೇಳಿದೆ. ಪುರಾಣಾದಿಗಳಲ್ಲಿ ತ್ವಷ್ಟಾ ಎಂಬುದು ದ್ವಾದಶಾದಿತ್ಯರಲ್ಲಿ ಒಬ್ಬನೆಂದು ಗಣನೆಯಿದೆ.

ಅವನಿಗೆ, ಇನ್ನೂ ಕೆಲವು ಲಕ್ಷಣಗಳು ಉಕ್ತವಾಗಿವೆ. ಇವುಗಳಿಂದ ಯಾವುದೊಂದು ನಿರ್ದಿಷ್ಟವಾದ ಗುಣವೂ ವ್ಯಕ್ತವಾಗುವುದಿಲ್ಲ. ಅವನೇ ಮೊದಲನೆಯವನು (೧-೧೩-೧೦) ಅಥವಾ ಮೊದಲು ಜನಿಸಿದವನು (ಅಗ್ರಜ) ಮತ್ತು ಮುಂದೆ ಹೋಗುವವನು (೯-೫-೯). ಅಂಗಿರಸರ ಜೊತೆಗಾರನಾದುದರಿಂದ, ದೇವತೆಗಳ ಲೋಕವೆಲ್ಲಾ ಅವನಿಗೆ ಪರಿಚಿತವಾಗಿದೆ (೧೦-೬೦-೯); ಭೂವ್ಯೋಮಾಕಾಶಗಳ ನಡುವೆ ಇರುವ (ನೈ. ಸಂ. ೪-೧೪-೯) ದೇವತೆಗಳ ವಾಸಸ್ಥಾನಕ್ಕೆ ಹೋಗುತ್ತಾನೆ (೨-೧-೯). ವರಗಳನ್ನನುಗ್ರಹಿಸುತ್ತಾನೆ ಮತ್ತು ಶ್ರೇಷ್ಠವಾದ ಐಶ್ವರ್ಯವುಳ್ಳವನು (೧೦-೬೦-೯; ೧೦-೯೨-೧೧). ಆರಾಧಕರ ಸ್ತುತಿಗಳಿಂದ ತೃಪ್ತನಾಗಿ, ಅವರಿಗೆ ಸಂಪದಾದಿಗಳನ್ನು ಅನುಗ್ರಹಿಸಬೇಕೆಂದು ಪ್ರಾರ್ಥನೆ (೭-೩೪-೨೧). ಅವನಿಂದ ದೀರ್ಘಾಯುಸ್ಸೂ ಲಭ್ಯವಾಗಿದೆ (೧೦-೧೪-೬; ಅ. ವೇ. ೬-೭೮-೩).

ತ್ವಕ್ಷ್ ಎಂಬ ಧಾತುವಿನಿಂದ ನಿಷ್ಪನ್ನವಾಗಿದೆ. ಈ ಧಾತುವೂ 'ತಕ್ಷ್' ಎಂಬ ಧಾತುವೂ ಏಕಾರ್ಥಕವಿರಬೇಕು. ಇಂದ್ರನ ವಜ್ರಾಯುಧವನ್ನು ತಯಾರಿಸಿದನು ಎನ್ನುವಾಗ ಈ ಧಾತು ಉಪಯೋಗಿಸಲ್ಪಟ್ಟಿದೆ. ಇದರಿಂದ 'ತ್ವಷ್ಟಾ' ಎಂಬುದಕ್ಕೂ ನಿರ್ಮಾಪಕ ಎಂದರ್ಥ.

ವೈದಿಕ ದೇವತೆಗಳಲ್ಲಿ ಅತ್ಯಂತ ಅಪ್ರಸಿದ್ಧನಾದ ದೇವತೆ. ಇವನ ಮೂಲವೇನು, ಸ್ವಭಾವವೇನು ಮುಂತಾದುವು ದುರ್ಜ್ಞೇಯವಾದ ವಿಷಯ. ಒಬ್ಬೊಬ್ಬ ಪಂಡಿತರು ಒಂದೊಂದು ವಿಧವಾದ ಅಭಿಪ್ರಾಯ ಕೊಟ್ಟಿದಾರೆ. ಸೂರ್ಯ, ಸಂವತ್ಸರಾಭಿಮಾನಿದೇವತೆ, ಚಂದ್ರ, ಇತ್ಯಾದಿ ನಾನಾ ಊಹೆಗಳಿಗೆ ಅವಕಾಶಕೊಟ್ಟಿದೆ.

ವಿಶ್ವಕರ್ಮಾ-ಪ್ರಜಾಪತಿ.

ಮತ್ತು ಕೆಲವು ಭಾವನಾರೂಪದೇವತೆಗಳು ಅಂದರೆ ಪ್ರಯಾದಾಚಕೆಗಳಿಗೆ ದೇವತೆಗಳೆಂಬ ವ್ಯವಹಾರವು ಕಂಡು ಬರುತ್ತದೆ. ಈ ಕ್ರಿಯೆಗಳೆಲ್ಲ. ಸರ್ವೋತ್ತಮನಾದ ಒಬ್ಬ ದೇವನಿಗೆ ಸೇರಿವೆ. ವಿಶ್ವಕರ್ಮಾ ಎಂಬುದು ಇಂತಹ ನಾಮಗಳಲ್ಲಿ ಒಂದು. ಹತ್ತನೆಯ ಮಂಡಲ ಒಂದರಲ್ಲಿ ಮಾತ್ರ, ಕೇವಲ ಐದುಸಲ ಈ ಹೆಸರು ಬಂದಿದೆ. ಈ ದೇವತೆಯನ್ನು ಸ್ತುತಿಸುವ ಎಂಡು ಸೂಕ್ತಗಳು (೧೦-೮೧; ೧೦-೮೨) ಇವೆ. ಇದೇ ವಿಶ್ವಕರ್ಮಾ ಎಂಬುದು ಒಂದುಸಲ ಇಂದ್ರನಿಗೆ (೮-೮೬-೨) ವಿಶೇಷಣವಾಗಿಯೂ ಒಂದು ಸಲ (೧೦-೧೭೦-೪) ಸಮಸ್ತವನ್ನೂ ಸೃಜಿಸುವ ಸೂರ್ಯನಿಗೆ ವಿಶೇಷಣವಾಗಿಯೇ ಪ್ರಯೋಗಿಸಿದೆ. ಇತರ ವೇದಗಳಲ್ಲಿ ವಿಶೇಷಣವಾಗಿ ಪ್ರಯೋಗವು ಸಾಮಾನ್ಯವಾಗಿದೆ. ಪ್ರಜಾಪತಿಗೂ ವಿಶೇಷಣವಾಗಿದೆ (ವಾ. ಸಂ. ೧೨-೬೧) ಋಗ್ವೇದದ ಎರಡು ಸೂಕ್ತಗಳಲ್ಲಿ ವಿಶ್ವಕರ್ಮನು ಈ ರೀತಿ ವರ್ಣಿತನಾಗಿದಾನೆ. ಅವನು ಸರ್ವದರ್ಶಿ; ಅವನಿಗೆ ಎಲ್ಲಾ ಪಾರ್ಶ್ವಗಳಲ್ಲೂ ಕಣ್ಣುಗಳು, ಒಂದುಮುಖ, ಬಾಹುಗಳು, ಪಾದಗಳು ಇವೆ. ಈ ವರ್ಣನೆಯಂತೆ, ವಿಶ್ವಕರ್ಮನು, ಚತುರ್ಮುಖನೂ, ಚತುರ್ಬಾಹುವೂ ಆದ ಬ್ರಹ್ಮನನ್ನು ಹೋಲುತ್ತಾನೆ. ಅವನಿಗೆ ರೆಕ್ಕೆಗಳೂ ಇವೆ. ಅತನು ಒಬ್ಬ ಋಷಿ, ಪುರೋಹಿತ ಮತ್ತು ಜನಕ ಅವನು ವಾಚಸ್ಪತಿ; ಮನೋವೇಗವುಳ್ಳವನು; ಉಪಕಾರಿ; ಸಮಸ್ತ ವಿಧವಾದ ಅಭಿವೃದ್ಧಿಗೂ ಮೂಲಭೂತನು. ಅವನಿಗೆ ಎಲ್ಲಾ ಪ್ರದೇಶಗಳೂ, ಎಲಾ ಪ್ರಾಣಿಗಳೂ ಪರಿಚಿತವಾಗಿವೆ; ಅವನೇ ದೇವತೆಗಳಿಗೆಲ್ಲಾ ಅವುಗಳ ಹೆಸರನ್ನು ತಿಳಿಸುವವನು. ಜ್ಞಾನಿ ಮತ್ತು ಸಮರ್ಥ; ಅತಿಮಾನುಷ ವ್ಯಕ್ತಿಗಳಲ್ಲಿ ಪರಮೋತ್ತಮನು. ಸಮಸ್ತಕ್ಕೂ ಅಧಾರಭೂತನು ಮತ್ತು ನಿಯಾಮಕನು; ಅವನೇ ಭೂಮಿಯನ್ನು ಸೃಜಿಸಿ, ಆಕಾಶವನ್ನು ಪ್ರಕಾಶಕ್ಕೆ ತಂದವನು. ಪ್ರಾಯಶಃ, ಈ ಪದವು ಮೊದಲು ಮುಖ್ಯವಾಗಿ ಸೂರ್ಯನ ವಿಶೇಷಣವಾಗಿ ಪ್ರಯೋಗಿಸಲ್ಪಡುತ್ತಿದ್ದು, ಮುಂದೆ ಬೇರೆ ಒಂದು ದೇವತೆಯೆಂದು ಪರಿಗಣಿತವಾಗಿರಬಹುದು ಶಿಲ್ಪಕಲೆಯೇ ಈ ದೇವತೆಯ ವೈಶಿಷ್ಟ್ಯ. ಬ್ರಾಹ್ಮಣಗಳಲ್ಲಿ ವಿಶ್ವಕರ್ಮಾ ಮತ್ತು ಪ್ರಜಾಪತಿಗಳು ಒಂದೇ ಎಂದು ಸ್ಪಷ್ಟವಾಗಿ ಹೇಳಿದೆ (ಶ. ಬ್ರಾ. ೮-೨-೧-೧೦; ೮-೨-೩-೧೩; ಐ. ಬ್ರಾ. ೪-೨೨ನ್ನು ಹೋಲಿಸಿ). ಪುರಾಣಾದಿಗಳಲ್ಲಿ ವಿಶ್ವಕರ್ಮನು ದೇವತೆಗಳ ಬಡಗಿ.

ಪ್ರಜಾಪತಿಃ—ಸವಿತೃವು ಆಕಾಶಕ್ಕೆ ಆಧಾರಭೂತನು ಮತ್ತು ಪ್ರಪಂಚಕ್ಕೆ ಪ್ರಜಾಪತಿಯು ಆಧಾರಭೂತನು [೪-೫೩-೨) ಎಂದು ಒಂದು ಕಡೆಯೂ, ತ್ವಷ್ಟೃ ಮತ್ತು ಇಂದ್ರರಿಗೆ ಸೋಮದೇವತೆಯನ್ನು ಹೋಲಿಸುವ ಸಂದರ್ಭವೊಂದರಲ್ಲಿ ಸೋಮದೇವತೆಗೆ ವಿಶೇಷಣವಾಗಿಯೂ ಈ ಪದವು ಪ್ರಯುಕ್ತವಾಗಿದೆ. ಪ್ರತ್ಯೇಕವಾಗಿ ಒಂದು ದೇವತೆಯ ನಾಮವಾಗಿ ಬಂದಿರುವುದು ನಾಲ್ಕೇ ಸಲ, ಅದೂ ಹತ್ತನೆಯ ಮಂಡಲದಲ್ಲಿಯೇ. ಪ್ರಜಾಪತಿಯು ನಮಗೆ ಪ್ರಜೆ (ಸಂತಾನ) ಯನ್ನು ಅನುಗ್ರಹಿಸಲಿ (೧೦-೮೫-೪೩), ವಿಷ್ಣು, ತ್ವಷ್ಟೃ ಮತ್ತು ಧಾತೃ ಇವರುಗಳಿಂದ ಸಹಿತನಾಗಿ ಸಂತಾನವನ್ನನುಗ್ರಹಿಸಲಿ (೧೦-೧೮೪-೧) ಮತ್ತು ಗೋಧನವನ್ನು ಅಭಿವೃದ್ಧಿಪಡಿಸಲಿ (೧೦-೧೬೯-೪) ಎಂದು ಮುಂತಾಗಿ ಪ್ರಾರ್ಥಿತನಾಗಿದಾನೆ. ಸಂತತಿ ಮತ್ತು ಪ್ರಾಣಿಗಳ ರಕ್ಷಕನೆಂದು ಅಥರ್ವವೇದದಲ್ಲಿಯೂ ಉಕ್ತವಾಗಿದೆ. ಈ ದೇವತಾದ್ಯೋತಕವಾಗಿರುವ ಒಂದೇ ಸೂಕ್ತದಲ್ಲಿ (೧೦-೧೨೧) ದೇವತೆಯ ಹೆಸರು ಬರುವುದು ಕಡೆಯ ಋಕ್ಕಿನಲ್ಲಿ ಮಾತ್ರ ಈ ಸೂಕ್ತದಲ್ಲಿ ಅವನೇ ದ್ಯಾವಾಭೂಮಿಗಳನ್ನು, ಉದಕವನ್ನೂ, ಸಮಸ್ತ ಪ್ರಾಣಿಗಳನ್ನೂ ಸೃಜಿಸಿದವನು, ಸತ್ತಾದ (ಈಗ ಇರುವ) ಸಮಸ್ತಕ್ಕೂ ಒಬ್ಬನೇ ಯಜಮಾನ (ಪತಿ)

ನಾಗಿ ಜನಿಸಿರುವವನು, ಉಸಿರಾಡುವ ಮತ್ತು ಚಲಿಸುವ ಸಮಸ್ತಕ್ಕೂ ರಾಜನು, ದೇವತೆಗಳಿಗೆಲ್ಲಾ ಅಧಿದೇವನು ಇವನ ಅಪ್ಪಣೆಗಳನ್ನು ಸಮಸ್ತ ಪ್ರಾಣಿಗಳೂ ಮತ್ತು ದೇವತೆಗಳೂ ಪಾಲಿಸುತ್ತಾರೆ. ಅವನೇ ಭೂಮ್ಯಾಕಾಶಗಳನ್ನು ಸ್ಥಾಪಿಸಿದವನು. ಅಂತರಿಕ್ಷದಲ್ಲಿ ಸಂಚರಿಸಬಲ್ಲವನು ಮತ್ತು ತನ್ನ ಬಾಹುಗಳಿಂದ ಇಡೀ ಪ್ರಪಂಚವನ್ನು ಮತ್ತು ಸಮಸ್ತ ಪ್ರಾಣಿಗಳನ್ನು ಆಲಂಗಿಸಿಕೊಳ್ಳುತ್ತಾನೆ. ಇದೇ ಮೊದಲಾಗಿ ವರ್ಣಿಸಿದೆ. ಇಲ್ಲಿ ಪ್ರಜಾಪತಿಯೆಂದರೆ ಪರಮಾತ್ಮನೇ ಇರಬೇಕು. ಋಗ್ವೇದದಲ್ಲಿ ಪರಮಾತ್ಮನೆಂಬರ್ಥದಲ್ಲಿ ಒಂದೇ ಒಂದು ಸಲ ಪ್ರಯೋಗಿಸಿದ್ದರೂ, ಅಥರ್ವವೇದ ಮತ್ತು ವಾಜಸನೇಯಿ ಸಂಹಿತೆಗಳಲ್ಲಿ ಸಾಧಾರಣವಾಗಿ ಮತ್ತು ಬ್ರಾಹ್ಮಣಗಳಲ್ಲಿ ನಿಯತವಾಗಿ, ಪ್ರಜಾಪತಿಯೆಂದರೆ ಪುರುಷೋತ್ತಮನೇ ಅಭಿಪ್ರೇತನು. ದೇವತೆಗಳಿಗೆಲ್ಲಾ ಜನಕನು (ಶ. ಬ್ರಾ. ೧೧-೧-೬-೧೪; ತೈ. ಬ್ರಾ. ೮-೧-೩-೪ ; ಇತ್ಯಾದಿ) ; ಆದಿಯಲ್ಲಿ ಒಬ್ಬನೇ ಇದ್ದನು (ಶ್ರ. ಬ್ರಾ. ೨-೨-೪-೧). ಅವನು ರಾಕ್ಷಸರನ್ನೂ ಸೃಜಿಸಿದನು (ತೈ. ಬ್ರಾ. ೨-೨-೨-೩). ಮೊದಲು ಯಜ್ಞಮಾಡಿದವನೂ ಅವನೇ (ಶ. ಬ್ರಾ. ೨-೪-೪-೧; ೬-೨-೩-೧). ಸೂತ್ರಗಳಲ್ಲಿ ಬ್ರಹ್ಮನಿಗೆ ಪ್ರಜಾಪತಿಯೆಂದು ವ್ಯವಹಾರ (ಆ. ಗೃ. ಸೂ. ೩-೪ ; ಇತ್ಯಾದಿ). ಈ ಪುರುಷೋತ್ತಮ ಅಥವಾ ಪರಮಾತ್ಮನ ಬದಲಾಗಿ, ಉಪನಿಷತ್ತುಗಳಲ್ಲಿ 'ಬ್ರಹ್ಮ' ಎಂಬುದು ರೂಢವಾಗಿದೆ.

ವೈತ್ರಾಯಣೀ ಸಂಹಿತೆಯಲ್ಲಿ (ವೈ. ಸಂ. ೪-೨-೧೨) ಒಂದು ಕಥೆಯಿದೆ. ಪ್ರಜಾಪತಿಯು ತನ್ನ ದುಹಿತೃವಾದ ಉಷೋದೇವಿಯಲ್ಲಿ ಅನುರಕ್ತನಾದನು, ಆಕೆಯು ಜಿಂಕೆಯ ರೂಪವನ್ನು ತಾಳಿದಳು ; ಅವನೂ ಅದೇ ರೂಪವನ್ನು ತಾಳಿದನು. ಇದನ್ನು ನೋಡಿ ರುದ್ರನಿಗೆ ಕೋಪಬಂದು, ಬಾಣಬಿಡಲು ಉದ್ಯುಕ್ತನಾದನು, ಆಗ ಪ್ರಜಾಪತಿಯು ನಿನ್ನನ್ನು ಕಾಡು ಮೃಗಗಳಿಗೆಲ್ಲಾ ಅಧಿಪತಿಯಾಗಿ ಮಾಡುತ್ತೇನೆ, ಬಾಣ ಬಿಡಬೇಡ ಎಂದು ರುದ್ರನಿಗೆ ಹೇಳಿದನೆಂದು ಇದೆ (೧೦-೬೧-೭ನ್ನು ಹೋಲಿಸಿ). ಈ ಕಥೆಯು ಅನೇಕ ಸಲ ಬ್ರಾಹ್ಮಣಗಳಲ್ಲಿ ಪ್ರಸಕ್ತನಾಗಿದೆ (ಐ. ಬ್ರಾ. ೩-೩೩ ; ಶ. ಬ್ರಾ. ೧-೭-೪-೧ ; ಪಂ. ಬ್ರಾ. ೮-೨-೧೦). ತಂದೆಯು (ಪ್ರಾಯಶಃ ದ್ಯುದೇವತೆ) ತನ್ನ ಮಗಳಲ್ಲಿ (ಪ್ರಾಯಶಃ ಭೂಮಿ) ಉಗಮ್ಯುಗಮನ ಮಾಡಿದನೆಂಬ ಪ್ರಸಕ್ತಿಯಿರುವ ನಾಲ್ಕು ಋಕ್ಕುಗಳು (೧-೭೧-೫ ; ೧೦-೬೧-೫, ೬, ೭) ಈ ಕಥೆಗೆ ಆಧಾರವಾಗಿರುವಂತೆ ಕಾಣುತ್ತದೆ.

೧೦-೧೨೧ನೆಯ ಸೂಕ್ತದ ಮೊದಲು ಒಂಭತ್ತು ಮಂತ್ರಗಳ ಪಲ್ಲವಿಯಲ್ಲಿಯೂ ಕಸ್ಮೈ (ಯಾರಿಗೆ) ಅಂದರೆ ಸರ್ವೋತ್ತಮನಾದ ದೇವತೆಯು ಯಾರೆಂಬುದು ಗೊತ್ತಿಲ್ಲವೆಂದೇ ಹೇಳಿದೆ. ಹತ್ತನೆಯ ಮಂತ್ರದಲ್ಲಿ ಪ್ರಜಾಪತಿಯೇ ಸರ್ವವ್ಯಾಪಕನೆಂದು ಉತ್ತರವಿದೆ. ಇದರ ಆಧಾರದ ಮೇಲೆಯೇ, ಮುಂದೆ 'ಕ' ಎಂಬ ಪದಕ್ಕೆ ಪ್ರಜಾಪತಿಯೆಂದರ್ಥವು ವ್ಯವಹಾರರೂಢಿಗೆ ಬಂದಿದೆ (ಐ. ಬ್ರಾ. ೩-೨೨-೭). ಅಷ್ಟೇ ಅಲ್ಲ, ಅದೇ ಆ ದೇವತೆಯ ಹೆಸರು (ವೈ. ಸಂ. ೩-೧೨-೫). ತೈತ್ತಿರೀಯ ಸಂಹಿತೆಯಲ್ಲಿ (ತೈ. ಸಂ. ೧-೭-೬-೬) ಕಃ ಮತ್ತು ಪ್ರಜಾಪತಿಗಳು ಒಂದೇ ಎಂದು ಸ್ಪಷ್ಟವಾಗಿ ಹೇಳಿದೆ.

೧೦-೧೨೧ನೆಯ ಸೂಕ್ತದ ಮೊದಲನೆಯ ಮಂತ್ರದಲ್ಲಿ, ಪ್ರಜಾಪತಿಗೆ ಹಿರಣ್ಯಗರ್ಭ ಎಂದು ಪ್ರಯೋಗಿಸಿದೆ. ಋಗ್ವೇದದಲ್ಲಿ 'ಹಿರಣ್ಯಗರ್ಭ' ಎಂಬ ಪದದ ಪ್ರಯೋಗವು ಒಂದೇ ಸಲ. ಆದರೆ ಅಥರ್ವವೇದ ಮತ್ತು ಬ್ರಾಹ್ಮಣಗಳಲ್ಲಿ ಇದು ಸಾಧಾರಣ. ಅಥರ್ವವೇದದ (ಅ. ವೇ. ೪-೨-೭) ಒಂದು ಮಂತ್ರದಲ್ಲಿ, ಉದಕವು ಒಂದು ಗರ್ಭಾಣುವನ್ನು ಸೃಜಿಸಿತೆಂದೂ, ಜನಿಸುವಾಗ ಈ ಗರ್ಭಾಣುವು ಹಿರಣ್ಮಯವಾಗಿದ್ದಿತೆಂತಲೂ ಇದೆ. ತೈತ್ತಿರೀಯಸಂಹಿತೆಯಲ್ಲಿ ಇದೂ ಒಂದು ಪ್ರಜಾಪತಿಯ ನಾಮಧೇಯ (ತೈ. ಸಂ. ೫-೫-೧-೨). ವೇದಗಳಿಗಿಂತ ಈಚಿನ ಸಾಹಿತ್ಯದಲ್ಲಿ ಹಿರಣ್ಯಗರ್ಭ ಎಂಬುದು ಸೃಷ್ಟಿಕರ್ತೃವಾದ ಬ್ರಹ್ಮನ ನಾಮಗಳಲ್ಲಿ ಒಂದು.

ಮನ್ಯು, ಶ್ರದ್ಧಾ ಮೊದಲಾದುವು.

ಇನ್ನೂ ಅನೇಕ ಭಾವವಾಚಕಗಳು ದೇವತಾತ್ವೇನ ಪರಿಗಣಿತವಾಗಿವೆ. ಮನ್ಯು (ಕೋಪ) ವೂ ದೇವತೆಯೆಂದು ಭಾವಿತವಾಗಿದೆ. ಇದನ್ನು ಹೊಗಳುವ ಸೂಕ್ತಗಳು ಎರಡು (೧೦-೮೩ಮತ್ತು-೮೪). ಅವನ (ಮನ್ಯು ದೇವತೆ) ಶಕ್ತಿಯು ಅಪ್ರತಿಹತವಾದುದು ಮತ್ತು ಸ್ವಸಾಮರ್ಥ್ಯದಿಂದಲೇ ಇರಬಲ್ಲುದು. ಅಗ್ನಿಯಂತೆ ಜ್ವಲಿಸುತ್ತಾನೆ. ಇಂದ್ರ, ವರುಣ ಮತ್ತು ಜಾತವೇದಸರಿನ್ನಿಸಿಕೊಳ್ಳುವ ದೇವತೆಯೇ ಅವನು. ವೃತ್ರವಧೆ ಮಾಡುತ್ತಾನೆ; ಮರುತರಿಂದ ಅನುಸೃತನು; ಇಂದ್ರನಂತೆ ಜಯವನ್ನು, ಸಂಪತ್ತನ್ನು ಅನುಗ್ರಹಿಸಬಲ್ಲನು. 'ತಪಸ್ಸಿ'ನಿಂದ ಯುಕ್ತನಾಗಿ, ಆರಾಧಕರನ್ನು ರಕ್ಷಿಸಿ, ದ್ವೇಷಿಗಳನ್ನು ವಧಿಸುತ್ತಾನೆ.

ಒಂದೇ ಒಂದು ಸಣ್ಣ ಸೂಕ್ತವು 'ಶ್ರದ್ಧೆ' (ನಂಬಿಕೆ) ಯನ್ನು ಸ್ತುತಿಸುತ್ತದೆ. ಪ್ರಾತಃಕಾಲ, ಮಧ್ಯಾಹ್ನ ಮತ್ತು ಸಾಯಂಕಾಲಗಳಲ್ಲಿ ಆಕೆ ಸ್ತುತಳಾಗುತ್ತಾಳೆ. ಶ್ರದ್ಧೆಯ ಮೂಲಕವೇ, ಅಗ್ನ್ಯುದ್ದೀಪನ ಮತ್ತು ಆಜ್ಯಹೋಮಗಳು ನಡೆಯುವುದು. ಶ್ರದ್ಧೆಯಿಂದಲೇ ಐಶ್ವರ್ಯ ಲಾಭವಾಗುವುದು. ಬ್ರಾಹ್ಮಣಗಳಲ್ಲಿ, ಶ್ರದ್ಧೆಯು ಸೂರ್ಯನ (ಶ್ರ. ಬ್ರಾ. ೧೨-೭-೩-೧೧) ಅಥವಾ ಪ್ರಜಾಪತಿಯ (ತೈ. ಬ್ರಾ. ೨ ೩-೧೦-೧) ಪುತ್ರಿ. ಪುರಾಣೇತಿಹಾಸಗಳಲ್ಲಿ ಅವಳ ಸಂಬಂಧಿಗಳು ಇನ್ನೂ ಅನೇಕರು ಉಕ್ತರಾಗಿದಾರೆ.

ಅನುಮತಿ (ದೇವತೆಗಳ ಅನುಗ್ರಹ)ಯೆಂಬುದೂ ದೇವತೆಯಾಗಿ ಎರಡು ಸಲ ಉಕ್ತವಾಗಿದೆ. ಅನುಕೂಲಳಾಗಿರಬೇಕೆಂದೂ, ಆರಾಧಕರು ಸೂರ್ಯನನ್ನು ನೋಡಲು ಅವಕಾಶ ಕಲ್ಪಿಸಬೇಕೆಂದೂ (೧೦-೫೯-೬) ಪ್ರಾರ್ಥಿತಳಾಗಿದಾಳೆ; ಆಕೆಯ ರಕ್ಷಣಾಕಾರ್ಯವೂ ಪ್ರಸಕ್ತವಾಗಿದೆ (೧೦-೧೬೭-೩). ಅಥರ್ವವೇದ ಮತ್ತು ವಾಜಸನೇಯಿ ಸಂಹಿತೆಗಳಲ್ಲಿ ಆಕೆಯು ಪ್ರೇಮದ ಅಧಿದೇವತೆಯಾಗಿ, ಸಂತಾನಾಭಿವೃದ್ಧಿಕಾರ್ಯಕ್ಕೆ ಪ್ರೇರಕಳಾಗುತ್ತಾಳೆ. ಮುಂದೆ ಕರ್ಮಗಳಲ್ಲಿ ಆಕೆಗೂ ಚಂದ್ರನಿಗೂ ಸಂಬಂಧ ಕಲ್ಪಿತವಾಗಿದೆ; ಪೂರ್ಣಮಿಯ ಹಿಂದಿನ ದಿನಕ್ಕೆ ಅಭಿಮಾನದೇವತೆಯೆಂದು ಭಾವನೆ. ಅರಮತಿ (ಭಕ್ತಿ ಅಥವಾ ಧರ್ಮ) ಎಂಬುದೂ ಒಂದು ದೇವತೆಯೆಂದು ಅಪರೂಪವಾಗಿ ಹೇಳಿದೆ. ಸೂನೃತಾ (ಔದಾರ್ಯ) ಎಂಬುದೂ ಒಂದು ದೇವತೆ. ಎರಡು ಮೂರು ಕಡೆ ಪ್ರಯೋಗವಿದೆ (೧-೪೦-೩; ೧೦-೧೪೧-೨). 'ಅನುನೀತಿ'ಯನ್ನು (೧೦-೫೯-೫, ೬) ದೀರ್ಘಾಯುಸ್ಸು ಮತ್ತು ಬಲ, ಪುಷ್ಟಿಗಳಿಗಾಗಿ ಪ್ರಾರ್ಥಿಸಿದಾರೆ. ನಿರ್ಋತಿ (ರೋಗ, ಕ್ಷೀಣತೆ)ಯೂ, ಸುಮಾರು ಹನ್ನೆರಡು ಸಲ ಮೃತ್ಯುವಿಗೆ ಅಭಿಮಾನಿದೇವತೆಯಾಗಿ ಪ್ರಸಕ್ತವಾಗಿದೆ.

ಇತರ ಕೆಲವು ಭಾವವಾಚಕಗಳು ಯಜುರಾದಿ ವೇದಗಳಲ್ಲಿ ದೇವತೆಗಳೆಂದು ಉಕ್ತವಾಗಿವೆ. ಕಾಮವು ಅಥರ್ವವೇದದಲ್ಲಿ ದೇವತ್ವವನ್ನು ಪಡೆದಿದೆ (ಅ. ವೇ. ೯-೨; ೧೯-೫೨). ಇಲ್ಲಿ ಕಾಮನು ಈಚಿನ ಸಾಹಿತ್ಯದಲ್ಲಿರುವಂತೆ, ಅನುರಾಗ ಅಥವಾ ಪ್ರಣಯಕ್ಕೆ ಮಾತ್ರ ದೇವತೆಯಲ್ಲ. ಅವನಿಂದ ಎಲ್ಲಾ ಇಷ್ಟಾರ್ಥವನ್ನೂ ಪಡೆಯಬಹುದು. ಹೃದಯಗಳನ್ನು ಭೇದಿಸುವ ಅವನ ಬಾಣಗಳ ಪ್ರಸಾಪವಿದೆ (ಅ. ವೇ. ೩-೨೫-೧). ಜನ್ಮ ತಾಳಿದವರಲ್ಲಿ ಅವನೇ ಮೊದಲನೆಯವನು (ಅ. ವೇ. ೯-೨-೧೯). ಋಗ್ವೇದದಲ್ಲಿ (೧೦-೧೨೯-೪), ಮನಸ್ಸಿನ ಪ್ರಥಮ ಅಂಕುರವೇ ಕಾಮ(ಆಸೆ)ವೆಂಬ ವಾಕ್ಯದ ಆಧಾರದ ಮೇಲೆಯೇ ಇವೆಲ್ಲವೂ ಹೊರಟಿರಬಹುದು. ಕಾಲವೂ ಒಂದು ವಿಶ್ವಶಕ್ತಿಯೆಂಬ ಅಭಿಪ್ರಾಯದಲ್ಲಿ ವ್ಯಕ್ತಿತ್ವಾರೋಪಣೆಗೆ ಒಳಗಾಗಿದೆ(ಅ.ವೇ. ೧೯-೫೩, ೫೪). ಪ್ರಜಾಪತಿಯಿಂದ ಸೃಷ್ಟವಾದ ಪ್ರಪಂಚವನ್ನು ಎತ್ತಿ ಹಿಡಿಯುವ ಶಕ್ತಿಯೊಂದು ಬೇಕೆಂಬುದರಿಂದಲೇ, ಸ್ಕಂಭ ಎಂಬ ದೇವತೆಯೊಂದು ಕಲ್ಪಿತವಾದಂತಿದೆ (ಅ. ವೇ. ೧೦-೮-೨). ಪ್ರಾಣವೂ (ಉಸಿರು) ಪ್ರಜಾಪತಿಯ ಒಂದು

ನಾಮ (ಅ ವೇ. ೧೧-೪-೧೨ ; ಇತ್ಯಾದಿ). ಅಥರ್ವ ವೇದದಲ್ಲಿ ಇಂತಹ ದೇವತೆಗಳು ಇನ್ನೂ ಅನೇಕ ಸಿಗುತ್ತವೆ. 'ಶ್ರೀ' ಎಂಬುದು ಸೌಂದರ್ಯ ಅಥವಾ ಐಶ್ವರ್ಯದ ಅಧಿದೇವತೆಯಾಗಿ ಪ್ರಸಕ್ತವಾಗಿರುವುದು ಮೊದಲು ಶತಪಥಬ್ರಾಹ್ಮಣದಲ್ಲಿ (ಶ. ಬ್ರಾ. ೧೧-೪-೩-೧).

ಅದಿತಿ

ಈ ಸ್ತ್ರೀದೇವತೆಯನ್ನು ಸ್ತುತಿಸುವ ಪೂರ್ತ ಸೂಕ್ತವಾವುದೂ ಇಲ್ಲ. ಆದರೆ ಅನೇಕ ಕಡೆ, ಸುಮಾರು ಎಂಬತ್ತು ಸಲ ಪ್ರಾಸಂಗಿಕವಾಗಿ ಸ್ತುತಳಾಗಿದಾಳೆ. ಒಂಟಿಯಾಗಿ ಸ್ತುತಳಾಗಿರುವುದು ಬಹಳ ಅಪರೂಪ (೮-೧೯-೧೪). ಸಾಧಾರಣವಾಗಿ ಅವಳ ಪುತ್ರರಾದ ಆದಿತ್ಯರೊಡನೆಯೇ ಆಕೆಯನ್ನು ಸ್ತುತಿಸುವುದು.

ಆಕೆಯ ದೇಹವರ್ಣನೆ ಸ್ಪಷ್ಟವಾಗಿಲ್ಲ. ಪ್ರಾಯಶಃ ದೇವಿಯೆಂದೇ ಸಂಬೋಧನೆ; ಅನರ್ವಾ (ಅಖಂಡವಾಗಿರುವವಳು, ಕುಂದಿಲ್ಲದವಳು) ಎಂದೂ ಅಲ್ಲಲ್ಲಿ ಹೇಳಿದೆ (೨-೪೦-೬ ; ೭-೪೦-೪). ಹೆಚ್ಚಾಗಿ ವಿಸ್ತೃತಳಾಗಿದಾಳೆ (೫-೪೬-೬). ಅಗಾಧಳು, ದೊಡ್ಡ ದೊಡ್ಡ ಗೋಶಾಲೆಗಳಿಗೆ (ಉರುವ್ರಜ) ಒಡೆಯಳು (೮-೬೭-೧೨). ಆಕೆಯು ಶುಭ್ರಳು ಮತ್ತು ಕಾಂತಿಯುಕ್ತಳು, ಪ್ರಾಣಿಗಳಿಗೆ ಆಧಾರಭೂತಳು (೧-೧೩೬-೩ ; ಸಾಧಾರಣವಾಗಿ ಮಿತ್ರಾವರುಣರಿಗೆ ಮಾತ್ರ ಅನ್ವಯಿಸುತ್ತದೆ.) ಎಲ್ಲಾ ಮನುಷ್ಯರಿಗೂ ಸೇರಿದವಳು (೭-೧೦-೪, ಭೂಮ್ಯಾಕಾಶಗಳಿಗೂ ಉಕ್ತವಾಗಿದೆ). ಪ್ರಾತಃಕಾಲ, ಮಧ್ಯಾಹ್ನ ಮತ್ತು ಸಾಯಂಕಾಲಗಳಲ್ಲಿ ಆಹೂತಳಾಗುತ್ತಾಳೆ (೫-೬೯-೩).

ಅದಿತಿಯು ಮಿತ್ರ ಮತ್ತು ವರುಣರ (೮-೨೫-೩ ; ೧೦-೩೬-೩ ; ೧೦-೧೩೨-೬) ಮತ್ತು ಅರ್ಯಮನ (೮-೪೭-೯) ಮಾತೆ. ಆದುದರಿಂದಲೇ ಅವಳನ್ನು ರಾಜರುಗಳ (೨-೨೭-೭), ಶ್ರೇಷ್ಠರಾದ ಪುತ್ರರ (೩-೪-೧೧), ಬಲಾಢ್ಯರಾದ ಪುತ್ರರ (೮-೫೬-೧೧), ಶೂರರಾದ ಪುತ್ರರ (ಅ. ವೇ. ೩-೮-೩ ; ೧೧-೧-೧೧) ಅಥವಾ ಎಂಟು ಜನ ಮುಕ್ಕಳ (೧೦-೭೨-೮ ; ಅ. ವೇ. ೮-೯-೨೧) ಜನನಿಯೆಂದು ಕರೆದಿರುವುದು. ಒಂದು ಕಡೆ, ಆಕೆಯು ರುದ್ರರ ತಾಯಿ, ವಸುಗಳ ದುಹಿತೃ ಮತ್ತು ಆದಿತ್ಯರ ಭಗಿನಿ (೮-೯೦-೧೫) ಎಂದು ಹೇಳಿದೆ. ಅಥರ್ವವೇದದಲ್ಲಿ (ಅ. ವೇ. ೬-೪-೧), ಆಕೆಯ ಸೋದರರು ಮತ್ತು ಮಕ್ಕಳು ಎಲ್ಲರೂ ಪ್ರಸಕ್ತರಾಗಿದಾರೆ. ಮತ್ತೊಂದು ಕಡೆ (ಅ. ವೇ. ೭-೬-೨, ವಾ. ಸಂ. ೨೧-೫), ಭಕ್ತರ ಮಾತೆ, ಋತದ ಪ್ರಿಯೆ, ಸಮರ್ಥಳು, ನಾಶರಹಿತಳು, ಅತ್ಯಂತ ವಿಸ್ತೃತಳು, ರಕ್ಷಕಳು ಮತ್ತು ಕುಶಲಳಾದ ನೇತ್ರಿ ಎಂದು ಆಕೆಯನ್ನು ಸ್ತುತಿಸಿದೆ. ಇಂತಹ ವಾಕ್ಯಗಳೂ ಮತ್ತು ಅವಳ ಪುತ್ರರಾದ ಆದಿತ್ಯರೊಡನೆಯೇ ಆಕೆಯಸ್ತುತಿ, ಇವುಗಳೂ, ತಾಯ್ತನವು ಆಕೆಯ ವಿಶೇಷ ಲಕ್ಷಣವೆಂದು ಸೂಚಿಸುತ್ತದೆ. ಪತ್ನ್ಯಾ (ಗೃಹಿಣಿ) ಎಂಬುದೂ ಆಕೆಯ ಒಂದು ವಿಶೇಷಣ (೪-೫೫-೩ ; ೮-೨೭-೫). ಇದೂ ಆಕೆಯ ತಾಯ್ತನವನ್ನೇ ಸೂಚಿಸಬಹುದು. ಇತಿಹಾಸ ಮತ್ತು ಪುರಾಣಗಳಲ್ಲಿ ಅದಿತಿಯು ದಕ್ಷ ಎಂಬುವನ ಪುತ್ರಿ, ಸಾಧಾರಣವಾಗಿ ಎಲ್ಲಾ ದೇವತೆಗಳಿಗೂ ಜನನಿ, ಮುಖ್ಯವಾಗಿ ವಿವಸ್ವತ, ಸೂರ್ಯ ಮತ್ತು ವಾಮನರೂಪೀವಿಷ್ಣು ಇವರುಗಳ ತಾಯಿ. ವಿಷ್ಣುವಿನ ಪತ್ನಿಯೆಂದು ವಾಜಸನೇಯಿ ಸಂಹಿತೆಯಲ್ಲಿ (ವಾ. ಸಂ. ೨೯-೬೦; ತೈ. ಸಂ. ೭-೫-೧೪) ಹೇಳಿದೆ.

ಕಷ್ಟದಿಂದ (ಅಂಹಸಃ) ಪಾರುಮಾಡುವವಳೆಂದೂ ಮತ್ತು ಕ್ಷೇಮ ಮತ್ತು ಸುರಕ್ಷಿತೆಗಳನ್ನು ಅನುಗ್ರಹಿಸುವವಳೆಂದೂ ಅನೇಕ ಕಡೆ (೧೦-೧೦೦ ; ೧-೯೪-೧೫) ಹೇಳಿದೆ; ಆದರೆ ಹೆಚ್ಚು ಸಲ, ಪಾಪದಿಂದ ಬಿಡುಗಡೆ ಮಾಡಬೇಕೆಂದು ಆಕೆಯನ್ನು ಪ್ರಾರ್ಥಿಸಿದೆ. ಅದಿತಿಯ ವಿಷಯದಲ್ಲಿ ತಪ್ಪು ಮಾಡದಂತೆ, ಕಾಪಾಡ

ಬೇಕೆಂದು' ವರುಣ (೧-೨೪-೧೫), ಅಗ್ನಿ (೪-೧೨-೪) ಮತ್ತು ಸವಿತೃ (೫-೮೨-೬)ಗಳು ಪ್ರಾರ್ಥಿತರಾಗಿದಾರೆ. ಪಾಪಗಳನ್ನು ಕ್ಷಮಿಸಬೇಕೆಂದು ಅದಿತಿ, ಮಿತ್ರ ಮತ್ತು ವರುಣರನ್ನೂ (೨-೨೭-೧೪), ಪಾಪದ ಬಂಧನಗಳನ್ನು ಬಿಡಿಸಬೇಕೆಂದು ಅದಿತಿ ಮತ್ತು ಅರ್ಯಮರನ್ನೂ (೪-೯೩-೭) ಬೇಡುತ್ತಾರೆ. ಆರಾಧಕರು ತಮ್ಮನ್ನು ಪಾಪರಹಿತರನ್ನಾಗಿ ಮಾಡೆಂದು ಅದಿತಿಯನ್ನು ಅಂಗಲಾಚಿ ಬೇಡುತ್ತಾರೆ (೧-೧೬೨-೨೨); ಆಕೆಯ ನಿಯಮಗಳನ್ನು ಅನುಸರಿಸುವವರಾಗಿ, ವರುಣನ ವಿಷಯದಲ್ಲಿ ತಪ್ಪುಗಳನ್ನು ಮಾಡದೇ ಇರುವಂತೆ ಅನುಗ್ರಹಿಸಬೇಕೆಂದೂ (೪-೪೭-೭) ಮತ್ತು ಪಾಪಿಷ್ಠರನ್ನು ದೂರೀಕರಿಸಬೇಕೆಂದೂ ಪ್ರಾರ್ಥನೆ (೧೦-೪೭-೧೪). ಅಗ್ನಿ (೩-೫೪-೧೦), ಸವಿತೃ (೪-೪೪-೩), ಸೂರ್ಯ, ಉಷಸ್ಸು, ಭೂಮಿ, ಆಕಾಶ (೧೦-೩೫-೨, ೩)ಗಳು ತಪ್ಪುಗಳನ್ನು ಕ್ಷಮಿಸಬೇಕೆಂದು ಪ್ರಾರ್ಥಿತರಾದರೂ, ಪಾಪವಿಮೋಚನಾ ಕಾರ್ಯವು ಅದಿತಿ ಮತ್ತು ಅವಳ ಮಗ ವರುಣರಿಗೇ ಸೇರಿದುದು; ವರುಣನ ಪಾಶವು ಪ್ರಸಿದ್ಧವಾದುದು; ಪ್ರೀತನಾದ ವರುಣನು ಪಾಶವನ್ನು ಹಗ್ಗದಂತೆ ಬಿಚ್ಚಿ, ತೆಗೆದುಹಾಕುತ್ತಾನೆ (೫-೨-೭).

'ಅದಿತಿ' ಪದದ ನಿಷ್ಪತ್ತಿಯೂ ಇದೇ ಅರ್ಥವನ್ನೇ ಪೋಷಿಸಬಹುದು. ದಾ ಎಂಬ ಧಾತುವಿಗೆ ಬಂಧಿಸು, ಕಟ್ಟಿಹಾಕು ಎಂದರ್ಥ. ಅದರಿಂದ ನಿಷ್ಪನ್ನವಾದ 'ದಿತಿ'ಗೆ ಬಂಧನ ಎಂದಾಗುತ್ತದೆ. ಅದುದರಿಂದ ಅದಿತಿ ಎಂದರೆ ಬಿಡಿಸುವುದು, ಬಂಧನರಾಹಿತ್ಯ ಎಂದಾಗುವುದು. ಇದೇ ಅರ್ಥದಲ್ಲೇ, ಶುನಃಶೇಪನು ಯೂಪಕ್ಕೆ ನಿದಿತ (ಕಟ್ಟಲ್ಪಟ್ಟ) ನಾದನು ಎಂದು ಹೇಳಿದೆ (೫-೨-೭). ಬದ್ಧನಾಗಿರುವ ಸ್ತೇನನನ್ನು ಬಿಡಿಸುವಂತೆ, ಆರಾಧಕರನ್ನು ವಿಮೋಚನ ಮಾಡಬೇಕೆಂದು ಅದಿತಿಯನ್ನು ಪ್ರಾರ್ಥಿಸುವುದು ಸ್ವಾಭಾವಿಕವೇ ಆಗಿದೆ (೪-೬೭-೧೪). ಸ್ವಾತಂತ್ರ್ಯ ಎಂಬ ಅರ್ಥದಲ್ಲಿಯೂ ಅಲ್ಲಲ್ಲಿ ಪ್ರಯೋಗಿಸಿದೆ. ನನ್ನ ತಂದೆತಾಯಿಗಳನ್ನು ನೋಡಲು ಬೇಕಾದಾಗ ಅದಿತಿ (ಸ್ವಾತಂತ್ರ್ಯ)ಯನ್ನು ನಮಗೆ ಕೊಡುವವರಾರು ಎಂದು ಒಂದು ಕಡೆ ಇದೆ (೧-೨೪-೧). ಹೋಮವನ್ನು ಪಾಪರಹಿತವನ್ನಾಗಿಯೂ (ಅನಾಗಸ್ತ್ವೇ), ಸ್ವಾತಂತ್ರ್ಯಯುಕ್ತವನ್ನಾಗಿಯೂ (ಅದಿತ್ಯೈ) ಮಾಡಬೇಕೆಂದು ಆದಿತ್ಯರು ಪ್ರಾರ್ಥಿತರಾಗಿದಾರೆ (೭-೫೧-೧). ಭೂಮ್ಯಾಕಾಶಗಳಿಂದ ದೃಢವೂ, ಅಪಾರವೂ ಆದ ಅದಿತಿಯನ್ನು ಅಪೇಕ್ಷಿಸುವಾಗಲೂ, ಅದಿತಿಯೆಂದರೆ ಇದೇ ಅರ್ಥವಿರಬೇಕು (೧-೧೮೫-೩). ಅಪಾರ ಎಂಬರ್ಥದ ವಿಶೇಷಣವಾಗಿಯೂ ಅದಿತಿ ಶಬ್ದವು ಅನೇಕ ಸಲ ಪ್ರಯೋಗಿಸಲ್ಪಟ್ಟಿದೆ. ಈ ಅರ್ಥದಲ್ಲಿ ದ್ಯುದೇವತೆಗೆ ವಿಶೇಷಣವಾಗಿ ಎರಡು ಸಲವೂ (೫-೫೯-೪; ೧೦-೬೩-೩) ಅಗ್ನಿಗೆ ವಿಶೇಷಣವಾಗಿ ಅನೇಕ ಸಲವೂ (೧-೪೪-೧೫; ೪-೧-೨೦; ೭-೯-೩; ೪-೧೯-೧೪) ಉಪಯೋಗಿಸಿದೆ.

ಈ ಹೆಸರು ಈರೀತಿಯಲ್ಲಿ ನಿರ್ದಿಷ್ಟವಾದ ಯಾವುದೊಂದು ಅರ್ಥವನ್ನೂ ಕೂಡದೇ ಇರುವುದರಿಂದ, ನಾನಾ ಊಹೆಗಳಿಗೆ ಎಡೆಕೊಟ್ಟಿದೆ. ದೇವತಾ ವಂಶಾವಳಿ ಮತ್ತು ವಿಶ್ವಸೃಷ್ಟಿಗಳು ಪ್ರಸಕ್ತವಾದಾಗ ಅದಿತಿಯು ನಾನಾ ದೇವತೆಗಳಿಗೆ ಹೆಸರಾಗಿದೆ. ದೇವತೆಗಳು ಅದಿತಿ, ನೀರು ಮತ್ತು ಭೂಮಿ (೧೦-೬೩-೨)ಗಳಿಂದ ಜನಿಸಿದರು. ಅನಂತವಾದ ಆಕಾಶವು (ದ್ಯೌರದಿತಿಃ) ಆ ದೇವತೆಗಳಿಗೆಲ್ಲಾ ಪೀಯೂಷವನ್ನು ಒದಗಿಸಿತು (೧೦-೬೩-೩). ಬೇರೆಕೆಡೆ (೧-೭೨-೯; ಅ. ವೇ. ೧೩-೧-೩೮), ಅದಿತಿಯೂ ಭೂಮಿಯೂ ಒಂದೇ ಎಂದು ಹೇಳಿದೆ; ಇವೆರಡರ ಐಕ್ಯವು ತೈತ್ತಿರೀಯ ಸಂಹಿತೆ ಮತ್ತು ಶತಪಥಬ್ರಾಹ್ಮಣಗಳಲ್ಲಿ ವಿಶೇಷವಾಗಿ ಉಕ್ತವಾಗಿದೆ. ನಿರುಕ್ತದಲ್ಲಿ, ಅದಿತಿಯು ಭೂಮಿಯನ್ನೂ ಮತ್ತು ಅದಿತಿ ಶಬ್ದವು ದ್ವಿವಚನದಲ್ಲಿ ದ್ಯಾವಾಭೂಮಿಗಳನ್ನೂ ಸೂಚಿಸುತ್ತದೆ ಎಂದು ಹೇಳಿದೆ. ಆದರೆ ಋಗ್ವೇದದಲ್ಲಿ ಇವು ಬೇರೆ ಬೇರೆ ಎಂದು ಭಾವನೆ; ಒಂದೇ ಮಂತ್ರದಲ್ಲಿ ಭ್ಯಾವ್ಯಾಕಾಶಗಳು ಮತ್ತು ಅದಿತಿಯೂ (೧೦-೬೩-೧೦, ಇತ್ಯಾದಿ) ಉಕ್ತರಾಗಿದಾರೆ. ಮತ್ತೊಂದು ಕಡೆ, ಅದಿತಿಯೆಂದರೆ ಪ್ರಕೃತಿ ಎಂದಾಗುತ್ತದೆ (೧-೮೯-೧೦)- ಅದಿತಿಯು ಆಕಾಶ, ವಾಯು, ತಾಯಿ ತಂದೆ,

ಮತ್ತು ಮಗ; ಅದಿತಿಯೇ ಎಲ್ಲಾ ದೇವತೆಗಳು ಮತ್ತು ಐದು ಪಂಗಡಗಳು; ಜನಿಸಿರುವುದೆಲ್ಲಾ ಅಥವಾ ಮುಂದೆ ಜನಿಸುವುದೆಲ್ಲಾ ಅದಿತಿಯೇ (ಕಠೋಪನಿಷತ್ತು ೪-೭).

ಋಗ್ವೇದದ ಇತಿಹಾಸಗಳಲ್ಲಿ ಹೇಳಿರುವಂತೆ ಅದಿತಿಯು ದಕ್ಷನಾಮಕನಾದ ಆದಿತ್ಯನ ತಾಯಿಯು. (೨-೨೭-೧) ಆದರೆ, ವಿಶ್ವಸೃಷ್ಟಿಯನ್ನು ಪ್ರಸ್ತಾಪಿಸಿರುವ ಸೂಕ್ತವೊಂದರಲ್ಲಿ (೧೦-೭೨-೪, ೫) ಅದಿತಿಯು ದಕ್ಷನ ತಾಯಿಯು ಹೌದು. ಮತ್ತು ಮಗಳೂ ಹೌದು; ಈ ರೀತಿಯ ಸಂಬಂಧವು ಋಗ್ವೇದದಲ್ಲಿ ಹೊಸದಲ್ಲ (೧೦-೯೦-೫ ನ್ನು ಹೋಲಿಸಿ). ಮತ್ತೆ ಎರಡು ಸ್ಥಳಗಳಲ್ಲಿ (೧೦-೫-೭; ೧೦-೬೪-೫) ಈ ದಕ್ಷ ಮತ್ತು ಅದಿತಿಯರ ಪರಸ್ಪರ ಸಂಬಂಧವು ತೀರ ವಿಲಕ್ಷಣವಾಗಿದೆ; ಅದಿತಿಯನ್ನು ದಕ್ಷನ ತಾಯಿಯೆಂದು ಹೇಳುವುದೇ ಸಾಧ್ಯವಾಗಿ ಕಂಡು ಬರುವುದಿಲ್ಲ; ಆಕೆಯು ಅವನಿಗೆ ಅಧೀನಳಾಗಿರುವಂತೆ ತೋರುತ್ತದೆ. ಕೆಲವು ಪ್ರಮುಖ ದೇವತೆಗಳಿಗೆ ತಾಯಿಯಾದರೂ, ಕೇವಲ ಸಾಧಾರಣವಾದ ಪಾತ್ರ ಆಕೆಯದು. ತನ್ನ ಪುತ್ರರಿ ವರುಣ, ಮಿತ್ರ ಮತ್ತು ವರುಣರ ಜೊತೆಯಲ್ಲದ್ದುಕೊಂಡು ಸವಿತೃವನ್ನು ಸ್ತುತಿಸುತ್ತಾಳೆ (೭-೫೧-೫) ಮತ್ತು ಇಂದ್ರನಿಗೋಸ್ಕರ ಒಂದು ಸ್ತುತಿಯನ್ನು ರಚಿಸಿದಳೆಂದು (೮-೧೨-೧೪; ೫-೩೧-೫ ನ್ನು ಹೋಲಿಸಿ) ಇದೆ.

ತೇಜೋವಿಶಿಷ್ಟರಾದ ಆದಿತ್ಯರ ತಾಯಿಯಾದುದರಿಂದ ತೇಜಸ್ಸಿನ ಸಂಬಂಧವೂ ಸ್ವಲ್ಪ ಇದೆ. ಬೆಳಕನ್ನು ಕೊಡೆಂದು (೪-೨೫-೩; ೧೦-೩೬-೩ನ್ನು ಹೋಲಿಸಿ) ಪ್ರಾರ್ಥಿತಳಾಗಿದಾಳೆ; ನಾಶರಹಿತವಾದ ಅವಳ ಪ್ರಕಾಶವು ಹೊಗಳಲ್ಪಟ್ಟಿದೆ- (೭-೮೨-೧೦) ಮತ್ತು ಉಷಸ್ಸು ಆಕೆಯ ಮುಖವೆಂದು (೧-೧೧೩-೯) ಹೇಳಿದೆ. ಅಪರೂಪವಾಗಿ ಇತರ ದೇವತೆಗಳಂತೆ ಸಾಧಾರಣವಾದ ಬೇಡಿಕೆಗಳೂ ಈಕೆಯನ್ನು ಉದ್ದೇಶಿಸಿ ಹೇಳಲ್ಪಡುತ್ತದೆ ಆರಾಧಕರು ಅವರ ಸಂತತಿ ಮತ್ತು ಗೋವು ಇವುಗಳನ್ನು ರಕ್ಷಿಸಬೇಕು ಅಥವಾ ಆಶೀರ್ವದಿಸಬೇಕೆಂಬ ಪ್ರಾರ್ಥನೆ (೮-೧೮-೬, ೭; ೧-೪೩-೨) ಇದೆ. ಐಶ್ವರ್ಯವೂ ಅವಳಿಂದ (೭-೪೦-೨) ಪ್ರಾಪ್ಯವಾದುದು; ಶುದ್ಧವೂ-ಅಖಂಡವೂ, ದಿವ್ಯವೂ, ಅವಿನಾಶಿಯೂ ಆದ ಆಕೆಯ ಅನುಗ್ರಹವನ್ನು ಬೇಡಿದೆ. (೧-೧೪೫-೩) ಮತ್ತು ಮರುತರ ಅನುಗ್ರಹವನ್ನು ಅದಿತಿಯ ಉಪಕಾರಕೃತಿಗಳಿಗೆ ಹೋಲಿಸಿದೆ. (೧-೧೬೬-೧೨)

ಋಗ್ವೇದದ ಕೆಲವು ವಾಕ್ಯಗಳಲ್ಲಿ (೧-೧೫೩-೩; ೪-೯೦-೧೫; ೧೦-೧೧-೧; ಇತ್ಯಾದಿ) ಮತ್ತು ಇತರ ವೇದಗಳಲ್ಲಿ (ವಾ. ಸಂ. ೧೩-೪೩ರಿಂದ೪೯) ಅದಿತಿಯನ್ನು ಗೋವೆಂದು ವ್ಯವಹರಿಸಿದೆ ಮತ್ತು ಯಜ್ಞಗಳಲ್ಲಿಯೂ, ಗೋವು ಒಂದಕ್ಕೆ ಅದಿತಿಯೆಂದು ಹೆಸರು. ಭೂಮಿಯ ಸೋಮರಸವನ್ನು ಅದಿತಿಯ ಸ್ತನ್ಯಕ್ಕೆ ಹೋಲಿಸಿದೆ. (೯-೯೬-೧೫) ದ್ರೋಣಪಾತ್ರೆಗೆ ಪ್ರವಹಿಸುತ್ತಿರುವ ಸೋಮಕ್ಕೆ ವಶಳಾಗುವ ಅದಿತಿಪುತ್ರಿಯೆಂಬಲ್ಲಿಯೂ ಕ್ಷೀರವೇ ಅಭಿಪ್ರೇತವಾಗಿರಬೇಕು. (೯-೬೯-೩) ಋತ್ವಿಜರು ತಮ್ಮ ಹತ್ತು ಬೆರಳುಗಳಿಂದ ಅದಿತಿಯ ಅಂಕದಲ್ಲಿರುವ ಸೋಮವನ್ನು ಶುದ್ಧಿಮಾಡುತ್ತಾರೆ (೯-೨೬-೧; ೯-೭೧-೫) ಎನ್ನುವ ಸಂದರ್ಭದಲ್ಲಿಯೂ ಇದೇ ಅಭಿಪ್ರಾಯ ವಿರಬೇಕು.

ಮೇಲೆ ಉದಹರಿಸಿರುವ ವಾಕ್ಯಗಳಿಂದ ಅದಿತಿಯ ಎರಡು ಗುಣಗಳು ಎದ್ದು ಕಾಣುತ್ತವೆ. ಮೊದಲನೆಯದು ತಾಯ್ತನ. ಆಕೆಯ ಹೆಸರಿನಿಂದ ನಿಷ್ಪನ್ನವಾದ ಆದಿತ್ಯ, ಆದಿತೇಯ ಮೊದಲಾದ ಹೆಸರುಗಳುಳ್ಳ ದೇವತೆಗಳಿಗೆ ಆಕೆಯು ತಾಯಿ. ಎರಡನೆಯದು-ಆ ಪದದ ಮೂಲಧಾತುವಿನಿಂದ ಸೂಚಿತವಾಗುವುದೂ ಅದೇ ಕಾಯ ಕ್ಲೇಶ ಮತ್ತು ನೈತಿಕ ಪತನಗಳಿಂದ ಉದ್ಧರಿಸುವ ಶಕ್ತಿ. ಮಿತಿಯೇ ಇಲ್ಲದ ಸಮೃದ್ಧಿಸೂಚಕವಾಗಿ ಆಕೆಯನ್ನು ಗೋವು ಅಥವಾ ಭೂಮಿ, ಸ್ವರ್ಗ ಅಥವಾ ಪ್ರಪಂಚವೆಂದು ಊಹಿಸಬಹುದು. ಇದರಿಂದ ಆಕೆಯು ಆದಿತ್ಯರ

ತಾಯಿಯೆಂಬುದನ್ನು ಸಮರ್ಥಿಸುವುದು ಅಸಾಧ್ಯವಾಗುತ್ತದೆ. 'ದ್ಯೌರದಿತಿಃ' ಅನಂತವಾದ ಆಕಾಶರೂಪಳಾದ ಜನನಿಯು ದೇವತೆಗಳಿಗೆ ಕ್ಷೀರವನ್ನು ಒದಗಿಸುತ್ತಾಳೆ (೧೦-೬೩-೩) ಎಂಬುದರಿಂದ ಅದಿತಿಯು ಆದಿತ್ಯರೇ ಮೊದಲಾದವರಿಗೆ ತಾಯಿಯೆಂಬ ಭಾವನೆ ಬಂದಿದೆ ಎಂದು ಕೆಲವರು ಅಭಿಪ್ರಾಯಪಡುತ್ತಾರೆ. ಈ ಅಭಿಪ್ರಾಯವನ್ನು ತೆಗೆದುಕೊಂಡರೆ ಅಕೆಯ ಬಂಧವಿಮೋಚನಶಕ್ತಿಯು ತೃಪ್ತಿಕರವಾಗಿ ಸಾಧಿತನಾಗುವುದಿಲ್ಲ. ಬೇರೊಂದು ವಿಧವಾಗಿ ವಿವರಿಸಬಹುದು. ಆದಿತ್ಯರಿಗೆ ಅನೇಕಸಲ ಉಪಯೋಗಿಸಿರುವ ಅದಿತೇಃ ಪುತ್ರಾಃ ಎಂಬುದಕ್ಕೆ ಸ್ವಾತಂತ್ರ್ಯದ ಮಕ್ಕಳು ಎಂದರ್ಥವಾಗಬಹುದು. ಶವಸಃ ಸೂನುಂ ಸಹಸಃ ಪುತ್ರಾಃ ಎಂಬ ಪ್ರಯೋಗಗಳು ಇದನ್ನು ಸಮರ್ಥಿಸುತ್ತವೆ. ಶವಸಃ ಸೂನುಂ ಎಂಬುದರಿಂದ ಇಂದ್ರನ ತಾಯಿಯ ಹೆಸರು ಶವಸೀ ಎಂದೂ, ಶಚೀಪತಿ ಎಂಬುದರಿಂದ ಶಚೀ ಎಂಬುವಳು ಇಂದ್ರನ ಪತ್ನಿಯೆಂದೂ ರೂಢಿಗೆ ಬಂದಿರುವಂತೆ, ಅದಿತೇಃ ಪುತ್ರಾಃ ಎಂಬುದರಿಂದ ಅದಿತಿಯೂ ಒಬ್ಬ ದೇವತೆ ಎಂಬ ಭಾವನೆ ಬಂದಿರಬೇಕು. ಅದಿತಿ ಪದದ ಸ್ವಾತಂತ್ರ್ಯ ಎಂಬ ಅರ್ಥದಿಂದ ಈ ದೇವತೆ 'ಅದಿತಿ'ಗೆ ಬಂಧನರಾಹಿತ್ಯಕ್ಕೆ ಕಾರಣಳು ಎಂಬ ಗುಣವು ಬಂದೇ ಬರುತ್ತದೆ. ಆದಿತ್ಯ ಮೊದಲಾದವರ ಸಂಪರ್ಕದಿಂದ ತೇಜಸ್ಸು ಮೊದಲಾದವುಗಳು ಆರೋಪಿತವಾಗುತ್ತವೆ. ಮುಖ್ಯ ದೇವತೆಗಳು ಕೆಲವರಿಗೆ ಅಥವಾ ದೇವತಾಸಾಮಾನ್ಯಕ್ಕೆ ತಾಯಿಯಾಗುದರಿಂದ ಅಕೆಯನ್ನು ಭೂಮಿ, ಆಕಾಶ ಅಥವಾ ಪ್ರಪಂಚ ಅಥವಾ ದ್ಯುದೇವತೆಯೊಡನೆ ಸೇರಿ ಜಗಜ್ಜನನಿ ಮೊದಲಾದ ವರ್ಣನೆಗಳು ಸಹಜವಾಗಿಯೇ ಇವೆ.

ನಿರುಕ್ತದಲ್ಲಿ ಅದಿತಿ ಎಂಬುದು ಪೃಥ್ವೀ, ವಾಕ್, ಗೋ, ದ್ವಿವಚನಾಂತವಾಗಿ (ಅದಿತೀ) ದ್ಯಾವಾಪೃಥಿವಿಗಳು ಇವುಗಳಿಗೆ ಸಮವೆಂದೂ ಹೇಳಿದೆ. ಯಾಸ್ಕರು ಅದಿತಿಯನ್ನು ದೇವತೆಗಳ ಜನನಿಯೆಂದು ವರ್ಣಿಸಿ, ಅಕೆಯನ್ನು ವಾಯುಮಂಡಲದಲ್ಲಿಯೂ, ಆದಿತ್ಯರನ್ನು ಸ್ವರ್ಗಲೋಕದಲ್ಲಿಯೂ ವರುಣನನ್ನು ಎರಡುಕಡೆಯೂ ಇರತಕ್ಕವರೆಂದು ಹೇಳಿದಾರೆ.

ದಿತಿ

ಈ 'ದಿತಿ' ಎಂಬ ಪದವು ಋಗ್ವೇದದಲ್ಲಿ ಮೂರೇ ಸಲ ಬಂದಿರುವುದು. ಅದರಲ್ಲಿಯೂ ಎರಡುಸಲ ಅದಿತಿಯ ಜೊತೆಯಲ್ಲಿ ಬಂದಿದೆ. ಮಿತ್ರ ಮತ್ತು ವರುಣರು ತಮ್ಮ ರಥದಲ್ಲಿ ಕುಳಿತು ಅದಿತಿ ಮತ್ತು ದಿತಿಯರನ್ನು ನೋಡುತ್ತಾರೆ (೫-೬೨-೮) ಇಲ್ಲಿ ಸಾಯಣಾಚಾರ್ಯರು ಅದಿತಿಶಬ್ದಕ್ಕೆ ಅಖಂಡವಾದ ಪೃಥ್ವೀ ಎಂತಲೂ, ದಿತಿಶಬ್ದಕ್ಕೆ ಭೂಮಿಯ ಮೇಲಿರುವ ಭಿನ್ನಭಿನ್ನರಾದ ಪ್ರಾಣಿವರ್ಗವೆಂತಲೂ ಅರ್ಥಮಾಡಿದಾರೆ. ರಾತ್ (Roth) ಎಂಬ ಆಧುನಿಕ ವಿದ್ವಾಂಸರು ಈ ಪದಗಳಿಗೆ ನಿತ್ಯ ಮತ್ತು ಅನಿತ್ಯ ಅಥವಾ ಶಾಶ್ವತ ಮತ್ತು ನಶ್ವರ ಪದಾರ್ಥಗಳೆಂದು ಅರ್ಥಮಾಡಿದಾರೆ. ಎರಡನೆಯ ವಾಕ್ಯದಲ್ಲಿ (೪-೨-೧೧) ದಿತಿಯ ಅನುಗ್ರಹವೂ ಅದಿತಿಯ ರಕ್ಷಣೆಯೂ ಅಗ್ನಿಯಿಂದ ಪ್ರಾರ್ಥಿತವಾಗಿವೆ. ಸಾಯಣರ ಪ್ರಕಾರ ಇಲ್ಲಿ ದಿತಿಯೆಂದರೆ ಉದಾರಿಯಾದ ದಾನಿ ಎಂತಲೂ ಅದಿತಿ ಎಂದರೆ ಕೃಪಣನಾದ ದಾನಿಯೆಂತಲೂ ಅರ್ಥ. ರಾತ್ (Roth) ಎಂಬುವರು ಸಿರಿತನ ಮತ್ತು ಬಡತನಗಳೆಂದು ಅಭಿಪ್ರಾಯಪಡುತ್ತಾರೆ. ಬರ್ಗೈನ್ (Bergaigne) ಎಂಬುವರ ಮತದಲ್ಲಿ ಅದಿತಿ ಮತ್ತು ದಿತಿ, ಎಂಬ ಸ್ತ್ರೀ ದೇವತೆಗಳೇ ಅಭಿಪ್ರೇತರು. ಅದರೆ ಇಲ್ಲಿ ಆ ರೀತಿ ಇರಲಾರದು. ದಾ (ಕೊಡು) ಎಂಬರ್ಥದ ಧಾತುವಿನಿಂದ ನಿಷ್ಪನ್ನವಾಗಿ ಇವುಗಳು ಕೊಡುವ ಮತ್ತು ಕೊಡದೇ ಇರುವ ಎಂಬ ಅರ್ಥಗಳನ್ನೇ ಕೊಡುತ್ತವೆ ಎಂದು ಹೇಳುವುದೇ ಸೂಕ್ತವಾಗಿ ಕಾಣುತ್ತದೆ. ಈ ಅರ್ಥವು ಸಂದರ್ಭ ಮತ್ತು ಪದಗಳ ಪ್ರಯೋಗಿಸಿರುವ ಕ್ರಮ ಇವೆರಡು ದೃಷ್ಟಿಯಿಂದಲೂ ಸಮಂಜಸವಾಗಿರುವಂತೆ ತೋರುತ್ತದೆ. ಮೂರನೆಯ ವಾಕ್ಯದಲ್ಲಿ (೭-೧೫-೧೨) ದಿತಿ ಪದ

ಪೊಂದೇ, ಅಗ್ನಿ, ಸವಿತೃ ಮತ್ತು ಭಗ ಇವರುಗಳೊಡನೆ, ಅಪೇಕ್ಷಣೀಯವಾದ ವಸ್ತುಗಳನ್ನು ಕೊಡುವವಳು ಎಂಬ ಅಭಿಪ್ರಾಯದಲ್ಲಿ ಪ್ರಯೋಗಿಸಲ್ಪಟ್ಟಿದೆ. ಇತರ ಸಂಹಿತೆಗಳಲ್ಲೂ 'ದಿತಿ' ಯು 'ಅದಿತಿ' ಯೊಡನೆ ಪ್ರಯುಕ್ತವಾಗಿದೆ (ವಾ. ಸಂ. ೧೪-೩೨; ಅ. ವೇ. ೧೫-೧೪-೪; ೧೬-೬-೭). ಅಥರ್ವವೇದದಲ್ಲಿ ಅಕೆಯು ಪುತ್ರರೂ ಪ್ರಸಕ್ತರಾಗುತ್ತಾರೆ (ಅ. ವೇ. ೭-೭-೧); ಅವರೇ ದೈತ್ಯರು. ಮುಂದೆ ಇವರು ದೇವತೆಗಳ ಶತ್ರುಗಳಾಗಿ ಪರಿಣತರಾಗುತ್ತಾರೆ. ಅಸುರ (ರಾಕ್ಷಸ) ಎಂಬುದರಿಂದ ಸುರ (ದೇವತೆ) ಎಂಬುದು ಪ್ರಯೋಗದಲ್ಲಿ ಬಂದಿರುವಂತೆ, ಅದಿತಿಗೆ ವಿರುದ್ಧವಾಗಿ ದಿತಿ ದೇವತೆಯೆಂದು ಕಲ್ಪಿತವಾಗಿದೆಯೇ ಹೊರತು, ದಿತಿ ಎಂಬ ದೇವತೆ ಪ್ರತ್ಯೇಕವಾಗಿ ಇದ್ದಂತೆ ಕಾಣುವುದಿಲ್ಲ.

ಸ್ತ್ರೀ ದೇವತೆಗಳು

ವೈದಿಕ ಮತ ಮತ್ತು ಕರ್ಮಗಳಲ್ಲಿ ಸ್ತ್ರೀ ದೇವತೆಗಳ ಸ್ಥಾನವು ಬಹಳ ಅಪ್ರಧಾನವಾದುದು; ಪ್ರಪಂಚದ ಆಡಳಿತದಲ್ಲಿ ಅವರ ಕೈವಾಡವೇ ಇಲ್ಲವೆನ್ನಬಹುದು. ಸ್ತ್ರೀ ದೇವತೆಗಳಲ್ಲಿ ಬಹಳ ಮುಖ್ಯಳಾದವಳು ಉಷಾ ದೇವಿ. ಋಕ್ಸಂಖ್ಯೆಯನ್ನು ತೆಗೆದುಕೊಂಡರೆ, ಅಕೆ ಮೂರನೆಯ ದರ್ಜೆಯ ದೇವತೆ. ಆದರೆ ಪುರುಷ ದೇವತೆಗಳಿಗಿರುವಂತೆ, ಉಷೋದೇವಿಗೆ ಸೋಮ ಭಾಗವಿಲ್ಲ. ಉಷೋದೇವಿಯನಂತರ ಮುಖ್ಯ ಸ್ತ್ರೀ ದೇವತೆಯೆಂದರೆ ಸರಸ್ವತಿ; ಆದರೆ ಅಕೆಯನ್ನು ಕಡೇ ದರ್ಜೆಯ ದೇವತೆಯೆಂದು ಎಣಿಸುತ್ತಾರೆ. ಮತ್ತೆ ಕೆಲವರು ಒಂದೊಂದು ಸೂಕ್ತದಲ್ಲಿ ಸ್ತುತರಾಗಿದಾರೆ- ಪೃಥ್ವಿಯನ್ನು ದ್ಯುದೇವತೆಯಿಂದ ಪ್ರತ್ಯೇಕಿಸಲು ಸಾಧ್ಯವೇ ಇಲ್ಲವೆನ್ನಬಹುದು; ಅಕೆಯನ್ನು ಸ್ತುತಿಸುವ ಸೂಕ್ತದಲ್ಲಿ ಮೂರೇ ಮಂತ್ರಗಳಿವೆ. ರಾತ್ರಿ ದೇವತೆಯೂ ಒಂದು ಸೂಕ್ತದಲ್ಲಿ ಹೊಗಳಲ್ಪಟ್ಟಿದಾಳೆ (೧೦-೧೨೭). ಅವಳೆ ಸೋದರಿಯಾದ ಉಷೋದೇವಿಯಂತೆ, ಅವಳೂ ಆಕಾಶ (ದ್ಯೌಃ) ದ ಮಗಳು. ರಾತ್ರಿಯೆಂದರೆ ಕಪ್ಪಾದದ್ದಲ್ಲ; ನಕ್ಷತ್ರರಂಜಿತವೂ, ಪ್ರಕಾಶಯುಕ್ತವೂ ಆದ ರಾತ್ರಿಯೆಂತಲೇ ಅಭಿಪ್ರಾಯ. ತನ್ನ ಅನೇಕ ನೇತ್ರಗಳಿಂದ ನಾನಾರೂಪಳಾಗಿ ಪ್ರಕಾಶಿಸುತ್ತಾಳೆ. ಎಲ್ಲಾ ವಿಧವಾದ ಜ್ಯೋತಿಗಳಿಂದ ಅಲಂಕೃತಳಾಗಿ, ತನ್ನ ಬೆಳಕಿನಿಂದ ಕತ್ತಲನ್ನೋಡಿಸುತ್ತಾ, ಪರ್ವತ, ಕಣಿವೆಗಳೆಲ್ಲವನ್ನೂ ಆವರಿಸುತ್ತಾಳೆ. ಆಕೆಯು ಸಮೀಪಿಸುತ್ತಲು, ಮನುಷ್ಯರೆಲ್ಲರೂ, ಪಕ್ಷಿಗಳು ಗೂಡುಗಳನ್ನು ಸೇರುವಂತೆ, ಮನೆಗಳಿಗೆ ಹಿಂದಿರುಗುತ್ತಾರೆ. ರಾತ್ರಿಯ ಕಾಲದಲ್ಲಿ, ಕಳ್ಳರು, ತೋಳಗಳು ಮೊದಲಾದುವುಗಳನ್ನು ಓಡಿಸಿ ಮನುಷ್ಯರನ್ನು ಸುರಕ್ಷಿತವಾದ ಸ್ಥಳಕ್ಕೆ ಸೇರಿಸಬೇಕೆಂದು ಪ್ರಾರ್ಥಿತಳಾಗಿದಾಳೆ. ಉಷೋದೇವಿಯೊಡನೆ ದ್ವಂದ್ವದೇವತೆಯಾಗಿ ಅನೇಕ ಸಲ ಸ್ತುತಳಾಗಿದಾಳೆ. ಉಷಸ್ಸಿಗೆ ಪ್ರತಿಯೊಂದು ರಾತ್ರಿಗೂ ದೇವತಾತ್ವ ಆರೋಪಿತವಾಗಬಹುದು.

ಭಾಷೆಯನ್ನು ವ್ಯಕ್ತಿಯೆಂದು ಭಾವಿಸಿ, ವಾಕ್ ಎಂಬುದಾಗಿ ಒಂದು ಸೂಕ್ತವು (೧೦-೧೨೫) ಆಕ್ಷೆಯನ್ನು ಸ್ತುತಿಸಿದೆ. ಈ ಸೂಕ್ತದಲ್ಲಿ ದೇವತೆಯು ತನ್ನನ್ನು ತಾನೇ ವರ್ಣಿಸಿಕೊಳ್ಳುತ್ತಾಳೆ. ಆಕೆಯು ಎಲಾ ದೇವತೆಗಳನ್ನೂ ಅನುಸರಿಸುತ್ತಾಳೆ ಮತ್ತು ಮಿತ್ರ-ವರುಣ, ಇಂದ್ರ ಅಗ್ನಿ ಮತ್ತು ಅಶ್ವಿನಿಗಳಿಗೆ ಬೆಂಬಲಳಾಗಿದಾಳೆ. ಶ್ರದ್ಧೆಯಿಲ್ಲದವನಕಡೆ ರುದ್ರನ ಧನುಸ್ಸನ್ನು ತಿರುಗಿಸುತ್ತಾಳೆ. ನೀರಿನಲ್ಲಿ, ಸಮುದ್ರದಲ್ಲಿ ಆಕೆಯಸ್ಥಾನ, ಎಲ್ಲಾ ಜೀವರನ್ನು ಆವರಿಸುತ್ತಾಳೆ. ಮತ್ತೊಂದು ಕಡೆ (೮-೧೦೦-೧೦, ೧೧). ದೇವತೆಗಳ ರಾಣಿ ಮತ್ತು ದೇವಿ (ದೇವೀಂವಾಚಂ) ಎಂದೂ ಹೇಳಿದೆ. ನಿರುಕ್ತದಲ್ಲಿ (ನಿ.೫-೫), ವಾಕ್ಕು, ಅಂತರಿಕ್ಷ ದೇವತೆಗಳಲ್ಲಿ ಒಂದು ಗುಡುಗು. ಅಥವಾ ನಿರುಕ್ತ ವ್ಯಾಖ್ಯಾನಕಾರರು ಹೇಳುವಂತೆ ಮಾಧ್ಯಮಿಕ ವಾಕ್ (ಮಧ್ಯಲೋಕದ ಶಬ್ದಃ ನಿ. ೧೧-೨೭) ಎಂಬುದೇ ವ್ಯಕ್ತೀಕರಣಕ್ಕೆ ಪ್ರಾರಂಭದೆಶೆಯಿರಬಹುದು. ವಾಕ್ಕಿಗೆ ಸಂಬಂಧಿಸಿದಂತೆ ಒಂದು ಕಥೆಯೂ ಬ್ರಾಹ್ಮಣಗಳಲ್ಲಿ ಉಕ್ತವಾಗಿದೆ. ಗಂಧರ್ವರುಗಳ ಸಮೀಪದಿಂದ ಸೋಮರಸವನ್ನು ತರುವಾಗ, ವಾಕ್ಕನ್ನು ಒಬ್ಬ

ಸ್ತ್ರೀಯಾಗಿ ಪರಿವರ್ತಿಸಿ, ಸೋಮರಸಕ್ಕೆ ಬೆಲೆಯಾಗಿ ಕೊಟ್ಟರಂತೆ (ಐ. ಬ್ರಾ. ೧-೨೭). ಋಗ್ವೇದದಲ್ಲಿ ಸುಮಾರು ಒಂಬತ್ತು ಸಲ ಬರುವ ಪುರಂಧಿಯು ಸಮೃದ್ಧಿಯ ಅಭಿಮಾನಿದೇವತೆ. ಸಾಧಾರಣವಾಗಿ ಭಗನ ಜೊತೆಯಲ್ಲೇ ಪ್ರಯೋಗ; ಎರಡು ಮೂರುಸಲ ಮಾತ್ರ ಪೂಷಣ ಮತ್ತು ಸವಿತೃಗಳೊಡನೆಯೂ, ಒಂದುಸಲ ವಿಷ್ಣು ಮತ್ತು ಅಗ್ನಿಗಳೊಡನೆಯೂ ಪ್ರಯೋಗಿಸಿದೆ. ಇದೇ ಸಮೃದ್ಧಿದ್ಯೋತಕಳಾದ ಮತ್ತೊಬ್ಬ ದೇವತೆ ಧಿಷಣಾ ಎಂಬುವಳು ಸುಮಾರು ಹನ್ನೆರಡುಸಲ ಕಂಡುಬರುತ್ತಾಳೆ. ಇಳಾ ಎಂಬುದು ಮತ್ತೊಂದು. ಹನ್ನೆರಡಕ್ಕೂ ಕಡಿಮೆ ಸಲ ಬಂದಿದೆ. ಹಾಲು ಬೆಣ್ಣೆಗಳ ಹೋಮವೇ, ಗೋಸಮೃದ್ಧ್ಯಭಿಮಾನಿ ದೇವತೆಯಾಗಿ ಪರಿಣತವಾಗಿದೆ. ಬ್ರಾಹ್ಮಣಗಳಲ್ಲಿ. ಇಡಾ ಎಂಬುದು ಗೋವಿಗೆ ಹೆಸರಲ್ಲದಿದ್ದರೂ, ಗೋವುಗೂಳಡನೆ ಪದೇ ಪದೇ ಉಪಯೋಗಿಸಲ್ಪಡುತ್ತದೆ. ನಿರುಕ್ತದಲ್ಲಿ ಇಡಾ, ಇಳಾ ಎಂಬುದು ಗೋವಿನ ನಾಮಗಳಲ್ಲಿ ಒಂದು (ನಿ.೨-೧೧). ಹೋಮದ ಸ್ವರೂಪದಿಂದಲೇ ಇರಬೇಕು, ಇಳೆಯನ್ನು ಘೃತಹಸ್ತಾ (೭-೧೬-೮) ಮತ್ತು ಘೃತಪದೀ (೧೦-೭೦-೮) ಎಂದು ವರ್ಣಿಸಿರುವುದು. ಈ ಇಳೆಯು ದೇವತಾರೂಪದಿಂದ, ಸಾಧಾರಣವಾಗಿ ಆಪ್ರೀ ಸೂಕ್ತಗಳಲ್ಲಿಯೇ ಬರಬಹುದು; ಅಲ್ಲಿಯೂ ಸರಸ್ವತೀ ಮತ್ತು ಮಹೀ ಅಥವಾ ಭಾರತೀ ಇವರುಗಳೊಡನೆ, ಒಂದು ಗುಂಪಾಗಿಯೇ (ದೇವತಾತ್ರಯ) ಪ್ರಯೋಗ. 'ಇಳಾಯಾಃ ಪದೇ' ಎಂಬಲ್ಲಿ ಅಭಿಪ್ರೇತವಾದುದು ಸಾಧಾರಣವಾದ ಅರ್ಥವೇ ಅಥವಾ ದೇವತೆಯೇ ಎಂಬುದು ಸಂದಿಗ್ಧ ವಿಷಯ. ಒಂದು ಸಲ ಅಗ್ನಿಯನ್ನು ಇಳೆಯ ಪುತ್ರನೆಂದು (೩-೨೯-೯, ೧೦) ಕರೆದಿದೆ. ಪುರೂರವನೂ ಆಕೆಯ ಮಗ (೧೦-೯೫-೧೪). ಒಂದು ಸಲ ಆಕೆಯನ್ನು ಹಿಂಡಿನ (ಯೂಥಸ್ಯ ಮಾತಾ) ತಾಯಿಯೆಂದೂ ಊರ್ವಶಿಯೊಡನೆ ಸಂಬಂಧವುಳ್ಳವಳೆಂದೂ (೫-೪೧-೧೯) ಹೇಳಿದೆ. ಪ್ರಾತಸ್ಸವನದ ವಿಷಯವನ್ನು ಪ್ರಸ್ತಾಪಿಸುವಾಗ, ದಧಿಕ್ರಾವ ಮತ್ತು ಅಶ್ವಿನಿಗಳ ಜೊತೆಯಲ್ಲಿ ಆಕೆ ಉಕ್ತಳಾಗಿದಾಳೆ (೭-೪೪-೨). ಶತಪಥ ಬ್ರಾಹ್ಮಣದಲ್ಲಿ, ಆಕೆಯನ್ನು ಮನುವಿನ (೧-೮-೧-೮; ೧೧-೫-೩-೫) ಮತ್ತು ಮಿತ್ರಾವರುಣರ (೧-೮-೧-೨೭; ೧೪-೯-೪-೨೭; ಆ. ಶ್ರೌ. ಸೂ. ೧-೭-೭) ಪುತ್ರಿಯೆಂದು ಕರೆದಿದೆ.

ಬೃಹದ್ದಿವಾ ಎಂಬ ದೇವತೆಯ ಹೆಸರು ವಿಶ್ವೇದೇವತೆಗಳ ಸೂಕ್ತಗಳಲ್ಲಿ ನಾಲ್ಕು ಸಲ ಬಂದಿದೆ. ಇವಳನ್ನು ಮಾತಾ ಎಂದು ಒಂದು ಕಡೆ (೧೦-೬೪-೧೦) ಕರೆದಿದೆ. ಇಳೆಯ ಜೊತೆಯಲ್ಲಿ ಎರಡು ಸಲವೂ (೨-೩೧-೪; ೫-೪೧-೧೯), ಸರಸ್ವತಿ ಮತ್ತು ರಾಕಾ ಇವರುಗಳೊಡನೆ ಒಂದು ಸಲವೂ (೫-೪೨-೧೨) ಪ್ರಸಕ್ತವಾಗಿದೆ. ರಾಕಾ (ಕೊಡು ಎಂಬರ್ಥಕೊಡುವ 'ರಾ' ಧಾತುವಿನಿಂದ ನಿಷ್ಪನ್ನವಾದುದು ಇರಬಹುದು) ಎಂಬ ಸಂಪದ್ಯುಕ್ತಳೂ, ಸಮೃದ್ಧಳೂ ಆದ ದೇವತೆಯು ಇತರ ದೇವತೆಗಳೊಡನೆ ಎರಡು ಸ್ಥಳಗಳಲ್ಲಿ (೨-೩೨-೭; ೫-೪೨-೧೨) ಸ್ತುತಳಾಗಿದಾಳೆ. ಸಿನೀವಾಲೀ ಎಂಬ ಹೆಸರು ಎರಡು ಸೂಕ್ತಗಳಲ್ಲಿ ಪ್ರಸಕ್ತವಾಗಿದೆ (೨-೩೨; ೧೦-೧೮೪). ಅವಳು ದೇವತೆಗಳ ಸೋದರಿ; ಸುಂದರವಾದ ಬಾಹುಗಳು ಮತ್ತು ಬೆರಳುಗಳುಳ್ಳವಳು; ಸಮೃದ್ಧಳು; ಸಂಸಾರಕ್ಕೆ ಯಜಮಾನಿ; ಸಂತತಿಪ್ರದಾನ ಮಾಡೆಂದು ಪ್ರಾರ್ಥಿತಳಾಗಿದಾಳೆ. ಸರಸ್ವತಿ, ರಾಕಾ ಮತ್ತು ಗುಂಗೂ, ಇವರುಗಳೊಡನೆ ಸ್ತುತಳಾಗಿದಾಳೆ (ಗುಂಗೂ ಎಂಬುದು ಇದೊಂದೇ ಕಡೆ ಪ್ರಯೋಗಿಸಿರುವುದು). ಅಥರ್ವವೇದದಲ್ಲಿ (ಅ. ವೇ. ೮-೪೬-೩), ಸಿನೀವಾಲಿಯು ವಿಷ್ಣುವಿನ ಪತ್ನಿ. ಇತರ ವೇದ ಮತ್ತು ಬ್ರಾಹ್ಮಣಗಳಲ್ಲಿ, ಕುಹೂ ಎಂಬ ಅಮಾವಾಸ್ಯೆಯ ಅಭಿಮಾನಿದೇವತೆಯು ಉಕ್ತಳಾಗಿದಾಳೆ. ಇತರ ವೇದಗಳಲ್ಲಿ ರಾಕಾ ಎಂಬುವಳು ಹುಣ್ಣಿಮೆಯ ದಿನದ ಅಧಿದೇವತೆಯೆಂದೂ, ಸಿನೀವಾಲಿಯು ಅಮಾವಾಸ್ಯೆಯ ಹಿಂದಿನ ದಿನದ ಅಭಿಮಾನಿದೇವತೆಯೆಂದೂ ಭಾವನೆ ಇದೆ. ಋಗ್ವೇದದಲ್ಲಿ ಇದಕ್ಕೆ ಆಧಾರವಿಲ್ಲ.

ಪ್ರಸಂಗ ಬಿದ್ದಾಗ ಹಿಂದೆಯೇ ಇತರ ಕೆಲವು ಸ್ತ್ರೀದೇವತೆಗಳ ಪ್ರಸ್ತಾಪ ಮಾಡಿದೆ. ಮರುತ್ತುಗಳ ತಾಯಿಯಾದ ಪೃಶ್ನಿಯು (೧-೨೩-೧೦). ವಿವಿಧವರ್ಣದ ಮುಳೆಮೋಡವಿರಬೇಕು. ಈ ಪದವು ಚುಕ್ಕೆಚುಕ್ಕೆ

ಯಾಗಿರುವ ಎಂಬರ್ಥಕೊಡುವ ವಿಶೇಷಣವಾಗಿ, ಏಕವಚನದಲ್ಲಿ ವೃಷಭ ಮತ್ತು ಹಸುಗಳೆರಡಕ್ಕೂ, ಬಹುವಚನದಲ್ಲಿ, ಇಂದ್ರನಿಗೋಸ್ಕರ ಸೋಮರಸವನ್ನು ದೋಹನಮಾಡುವ ಹಸುಗಳಿಗೂ ವಿಶೇಷಣವಾಗಿ ಉಪಯೋಗಿಸಿದೆ (೧-೪೪-೧೦, ೧೧ ; ೪-೬-೧೯ ; ೪-೭-೧೦ ; ೪-೫೮-೩). ಹೀಗೆ ಪೃಶ್ನಿ ಎಂದರೆ ಬಣ್ಣಬಣ್ಣದ ಹಸು, ಮೇಘ ಎಂದರ್ಥವಾಗಿದೆ. ವಿವಸ್ವತನ ಪತ್ನಿಯೂ, ತ್ವಷ್ಟೃಪುತ್ರಿಯೂ ಆದ ಸರಣ್ಯುವೂ ಒಂದು ಸಲ (೧೧-೧೭-೨) ಉಕ್ತಳಾಗಿದಾಳೆ. ಈ ಸರಣ್ಯುವು ಸೂರ್ಯೆ ಅಥವಾ ಉಷಸ್ಸು ಇರಬಹುದು. ಈ ಪದಕ್ಕೆ ಚುರುಕಾಗಿರುವ ಅಥವಾ ವೇಗವಾಗಿರುವ ಎಂತಲೂ ಅರ್ಥ. ಈ ಅರ್ಥದಲ್ಲಿ ನಾಲ್ಕು ಸಲ ಉಪಯೋಗಿಸಿರುವುದು ಕಂಡು ಬರುತ್ತದೆ. ಸರಣ (ವೇಗಃ ' ಸೃ ' ಓಡು ಧಾತುವಿನಿಂದ ನಿಷ್ಪನ್ನವಾದುದು) ಎಂಬುದಕ್ಕೆ ' ಯು ' ಪ್ರತ್ಯಯ ಸೇರಿಸಿ ಸಾಧಿಸಿರುವ ಪದವೇ ಇದಿರಬೇಕು.

ಈ ಸ್ತ್ರೀದೇವತೆಗಳು ದೊಡ್ಡದೊಡ್ಡ ದೇವತೆಗಳ ಪತ್ನಿಯರಾಗಿದ್ದರೂ ಅಷ್ಟು ಶ್ರಮುಖಪಾತ್ರವನ್ನೇನೂ ವಹಿಸಿಲ್ಲ. ಇಂದ್ರಾದಿ ದೇವತೆಗಳಿಗೆ ಪತ್ನಿಯರಿದ್ದೇ ಇರಬೇಕು. ಆದುದರಿಂದ ಇವರ ಹೆಸರುಗಳು ಪ್ರಸಕ್ತವಾಗಿವೆ. ಅವರ ಹೆಸರು ಹೊರತಾಗಿ ಮತ್ತೇನೂ ಹೇಳಿಲ್ಲ. ಆ ಹೆಸರುಗಳೂ ಸಾಧಾರಣವಾಗಿ ಹೊಸದಲ್ಲ. ಇಂದ್ರಾದಿ ಪದಗಳಿಗೇ ಅನೀ ಎಂಬ ಪ್ರತ್ಯಯವನ್ನು ಸೇರಿಸಿ ಇಂದ್ರಾಣೀ, ವರುಣಾನೀ, ಅಗ್ನಾಯೀ ಮೊದಲಾದ ಪದಗಳು ಉಪಯೋಗಿಸಲ್ಪಟ್ಟವೆ. ರುದ್ರಾಣೀ ಎಂಬುದು ಸೂತ್ರಗಳಲ್ಲಿ ಮಾತ್ರ ಕಂಡುಬರುತ್ತದೆ. ಆದರೆ ರುದ್ರಾಣಿಯಷ್ಟು ಇಂದ್ರಾಣೀ ಮೊದಲಾದವರು ಶ್ರೌತಕರ್ಮಗಳಲ್ಲಿ ಮುಖ್ಯರಲ್ಲ. ಅಶ್ವಿನಿಗಳ ಪತ್ನಿಯು ಅಶ್ವಿನೀ. ಋಗ್ವೇದದಲ್ಲಿ ಅಪರೂಪವಾಗಿ ಪ್ರಯೋಗಿಸಲ್ಪಡುವ (ದೇವನಾಂ ಪತ್ನೀಃ) ದೇವತೆಗಳ ಪತ್ನಿಯರಿಗೆ ಬ್ರಾಹ್ಮಣಾದಿಗಳಲ್ಲಿ ಪ್ರತ್ಯೇಕ ಸ್ಥಾನವಿದೆ (ಶ. ಬ್ರಾ. ೧-೯-೩-೧೧).

ದೇವತಾ ದ್ವಂದ್ವಗಳು.

ವೈದಿಕ ಇತಿಹಾಸದ ವೈಲಕ್ಷಣ್ಯವೆಂದರೆ ಅನೇಕ ದೇವತೆಗಳನ್ನು ಎರಡೆರಡಾಗಿ ಜೋಡಿಸಿ ಸ್ತುತಿಸುವುದು. ಈ ದ್ವಂದ್ವಗಳಲ್ಲಿ ಎರಡು ಪದಗಳಿಗೂ ವಿಭಕ್ತಿ ಪ್ರತ್ಯಯ ಮತ್ತು ಸ್ವರಗಳುಂಟು. ಸುಮಾರು ಹನ್ನೆರಡು ದೇವತೆಗಳು ಈರೀತಿ ದ್ವಂದ್ವ ದೇವತೆಗಳಾಗಿ ಸುಮಾರು ಅರವತ್ತು ಸೂಕ್ತಗಳಲ್ಲಿ ಸ್ತುತರಾಗಿದಾರೆ. ಇದರಲ್ಲಿ ಹೆಚ್ಚಾಗಿ ಇಂದ್ರನೇ ಇತರ ದೇವತೆಗಳೊಡನೆ ಸಂಯೋಜಿತನಾಗಿರುವುದು. ಏಳು ದ್ವಂದ್ವ ಅಥವಾ ಇನ್ನೂ ಹೆಚ್ಚು ದ್ವಂದ್ವಗಳಲ್ಲಿ ಇಂದ್ರನೇ ಕಾಣಿಸಿಕೊಳ್ಳುತ್ತಾನೆ. ಆದರೆ, ಹೆಚ್ಚು ಸೂಕ್ತಗಳಲ್ಲಿ ಇಪ್ಪತ್ತುಮೂರು ಸೂಕ್ತಗಳು ಮತ್ತು ಕೆಲವು ಸೂಕ್ತಭಾಗಗಳು. ಪ್ರತಿಪಾದಿತವಾಗಿರುವುದು ಮಿತ್ರಾವರುಣರ ದ್ವಂದ್ವ. ಹನ್ನೊಂದು ಇಂದಾಗ್ನಿಗಳಿಗೂ, ಒಂಬತ್ತು ಇಂದ್ರಾವರುಣರಿಗೂ, ಏಳು ಇಂದ್ರ ವಾಯುಗಳಿಗೂ, ಆರು ದ್ಯಾವಾಪೃಥಿವಿಗಳಿಗೂ, ಇಂದ್ರಾ ಸೋಮ ಮತ್ತು ಇಂದ್ರಾ ಬೃಹಸ್ಪತಿಗಳಿಗೆ ಎರಡೆರಡೂ, ಇಂದ್ರಾವಿಷ್ಣು, ಇಂದ್ರಾಪೂಷಣ, ಸೋಮಾಪೂಷಣ, ಸೋಮಾರುದ್ರ ಮತ್ತು ಅಗ್ನೀಸೋಮರಿಗೆ ಒಂದೊಂದೂ, ಸೂಕ್ತಗಳಿವೆ. ಮೇಲೆ ಹೇಳಿದ ದೇವತೆಗಳ ಜೊತೆಗೆ ಅವರಲ್ಲದೆ ಬೇರೆ ಎಂಟು ಒಂಬತ್ತು ದೇವತೆಗಳಿಂದ ಯುಕ್ತವಾದ ಮತ್ತೆ ಕೆಲವು ಯುಗ್ಮಗಳು ಬಿಡೀ ಮಂತ್ರಗಳಲ್ಲಿ ಸ್ತುತಿಸಲ್ಪಡುತ್ತವೆ. ಇಂದ್ರಾನಾಸತ್ಯಾ, ಇಂದ್ರಾಪರ್ವತಾ, ಇಂದ್ರಾಮರುತಃ ಅಗ್ನೀಪರ್ಜನ್ಯಾ, ಪರ್ಜನ್ಯಾವಾತಾ (ಒಂದು ಸಲ ವಾತಾಪರ್ಜನ್ಯಾ), ಉಷಾಸಾನಕ್ತಾ, ನಕ್ತೋಷಾಸಾ, ಸೂರ್ಯಾಮಾಸಾ ಮತ್ತು ಸೂರ್ಯಾಚಂದ್ರಮಸಾ ಇತ್ಯಾದಿ.

ದ್ಯಾವಾಪೃಥಿವಿಗಳಿಂದಲೇ, ವೇದಗಳಲ್ಲಿ ಕಂಡುಬರುವ ಈ ಅಚ್ಚುಮೆಚ್ಚಿನ ಪದಗಳ ಜೋಡನೆ ಪ್ರಾರಂಭವಾಗಿರಬೇಕು. ಪ್ರಕೃತಿಯಲ್ಲಿ ದ್ಯಾವಾಪೃಥಿವಿಗಳಷ್ಟು ದೃಢವಾಗಿ ಸಂಬಂಧಹೊಂದಿರುವ ವಸ್ತುಗಳು

ಬೇರೆ ಇಲ್ಲ. ಇದ್ದು ಕ್ರಮೇಣ ಅವೆರಡೂ ದಂಪತಿಗಳೆಂಬ ಭಾವನೆಗೆ ಅವಕಾಶಕೊಟ್ಟಿತು. ಋಗ್ವೇದದಲ್ಲಿ ದ್ಯಾವಾಪೃಥಿವೀದ್ಯೋತಕವಾದ ಆರು ಸೂಕ್ತಗಳಲ್ಲಿ ಒಂದಾದರೂ ದ್ಯುದೇವತೆಯನ್ನು ಸ್ತುತಿಸುವುದಿಲ್ಲ. ಮೂರು ಋಕ್ಕಿನ ಒಂದು ಸಣ್ಣ ಸೂಕ್ತವು ಮಾತ್ರ ಪೃಥಿವಿಯನ್ನು ಸ್ತುತಿಸುತ್ತದೆ. ಅವರಲ್ಲಿಯೂ ದ್ಯುದೇವತೆಗೆ ನಿರ್ದೇಶವಿದ್ದೇ ಇದೆ (೫-೮೪-೩). ಈ ದೇವತೆಗಳ ಹೆಸರು ಪ್ರತ್ಯೇಕವಾಗಿ ಬರುವುದಕ್ಕಿಂತ ಹೆಚ್ಚುಸಲ ಅವುಗಳ ಜೋಡಿಯು ಬರುತ್ತದೆ. ದ್ಯಾವಾಕ್ಷಾಮಾ, ದ್ಯಾವಾಭೂಮೀ ಎಂಬ ಅಪರೂಪ ಪ್ರಯೋಗಗಳನ್ನೂ ಸೇರಿಸಿಕೊಂಡರೆ, ಸುಮಾರು ನೂರು ಪ್ರಯೋಗವಿದೆ. ಇಷ್ಟುಸಲ ಮತ್ಯಾವ ಜೋಡಿಯೂ ಉಕ್ತವಾಗಿಲ್ಲ. ಆಕಾಶ ಮತ್ತು ಭೂಮಿಗಳಿಗೆ ರೋದಸೀ ಎಂತಲೂ ಹೆಸರು (ಸಹೋದರಿಯರೆಂದು ಹೇಳಿದೆ ೧-೧೮೫-೫). ಇದು ಸುಮಾರು ನೂರ ಸಲ ಬರುತ್ತದೆ. ಭೂಮ್ಯಾಕಾಶಗಳು ಪಿತೃಗಳು; ಅವುಗಳಿಗೆ ಪಿತರಾ, ಮಾತರಾ, ಜನಿತ್ರೀ ಮೊದಲಾದ ವಿಶೇಷಣಗಳು ಇವೆ; ಪ್ರತ್ಯೇಕವಾಗಿ ತಂದೆ ಮತ್ತು ತಾಯಿ ಎಂದೂ ಸಂಬೋಧನೆಯುಂಟು (೧-೧೫೯-೧, ೩; ೧-೧೬೦-೨). ಅವರು ಜಗತ್ತಿಗೆ ಮೂಲಪುರುಷರು (೭-೫೩-೨; ೧೦-೬೫-೪). ಐತರೇಯ ಬ್ರಾಹ್ಮಣದಲ್ಲಿ ಅವರಿಬ್ಬರ ವಿವಾಹವು ಪ್ರಸಕ್ತವಾಗಿದೆ (ಐ. ಬ್ರಾ. ೪-೨೭-೫, ೬). ಅವರು ಎಲ್ಲಾ ಪ್ರಾಣಿಗಳನ್ನೂ ಸೃಜಿಸಿದಾರೆ; ಅವರೇ ಅವುಗಳ ಸ್ಥಿತಿಗೆ ಕಾರಣರು (೧-೧೫೯-೨; ೧-೧೬೦-೨; ೧-೧೮೫-೧). ಅವರು ಸ್ವತಃ ಪಾದರಹಿತರಾದರೂ, ಅನೇಕ ಪ್ರಜೆಗಳನ್ನು ಕಾಲಿನ ಮೇಲೆ ನಿಲ್ಲಿಸುತ್ತಾರೆ (೧-೧೮೫-೨). ಅವರು ದೇವತೆಗಳಿಗೂ ಮಾತಾಪಿತೃಗಳು; ಅವರಿಗೆ ಮಾತ್ರ ದೇವಪುತ್ರೀ (ದೇವತೆಗಳನ್ನು ಮಕ್ಕಳಾಗಿ ಪಡೆದಿರುವವರು) ಎಂದು ಹೆಸರು. ವಿಶೇಷವಾಗಿ, ಅವರು ಬೃಹಸ್ಪತಿಗೆ ತಂದೆತಾಯಿಗಳು (೭-೯೭-೮); ಮತ್ತು ಜಲಗಳು ವೃತ್ರ ತ್ವಷ್ಟೃ, ಇವರುಗಳಿಂದ ಯುಕ್ತರಾಗಿ ಅಗ್ನಿಯನ್ನು ಉತ್ಪತ್ತಿಮಾಡಿದರು (೧೦ ೨-೭). ಅವರೇ ಬೇರೆ ಕೆಲವು ದೇವತೆಗಳಿಂದ ಸೃಷ್ಟರಾದರು ಎಂತಲೂ ಹೇಳಿದೆ. ಭೂಮ್ಯಾಕಾಶಗಳನ್ನು ಸೃಷ್ಟಿಮಾಡಿದವನು ಅತ್ಯಂತ ಕುಶಲನಾದ ಕೆಲಸಗಾರನಿರಬೇಕು (೧-೧೬೦-೪; ೪-೫೬-೩). ಇಂದ್ರನು ಅವರನ್ನು ಸೃಜಿಸಿದನು ಅಥವಾ ರೂಪುಗೊಳಿಸಿದನು (೬-೩೦-೫; ೮-೩೬-೪; ೧೦-೨೯-೬; ೧೦-೫೪-೩). ವಿಶ್ವಕರ್ಮನು ಅವರನ್ನು ರಚಿಸಿದನು (೧೦-೮೧-೨; ಅ. ವೇ. ೧೨-೧-೬೦ನ್ನು ಹೋಲಿಸಿ). ಅವರು ತ್ವಷ್ಟೃವಿನಿಂದ ದೇಹವನ್ನು ಪಡೆದರು (೧೦-೧೧೦-೯). ಅವರು ಕ್ರಮವಾಗಿ ವಿರಾಟ್ಪುರುಷನ ತಲೆ ಮತ್ತು ಪಾದಗಳಿಂದ ಜನಿಸಿದರು (೧೮-೯೦-೧೪). ಅವರಿಬ್ಬರು ಹೇಗೆ ಉತ್ಪನ್ನರಾದರು? ಅವರಿಬ್ಬರಲ್ಲಿ ಮೊದಲು ಯಾರು ಹುಟ್ಟಿದರು? ಎಂದು ಒಂದು ಕಡೆ ಇದೆ (೧-೧೮೫-೧). ದ್ಯಾವಾಪೃಥಿವಿಗಳ ವಿಶೇಷಣಗಳಲ್ಲಿ ಅನೇಕ ಅವರ ಭೌತಿಕ ಲಕ್ಷಣಗಳಿಂದ ಬಂದವು. ಒಬ್ಬನು ದೊಡ್ಡ ವೃಷಭ, ಮತ್ತೊಬ್ಬಳು ನಾನಾ ವರ್ಣದ ಹಸು (೧-೧೬೦-೩). ಇಬ್ಬರೂ ಭೂರಿರೇತಸ್ಕರು (೧-೧೫೯-೩; ೬-೭೦-೧, ೨). ಇಬ್ಬರೂ ಹಾಲು, ತುಪ್ಪ, ಜೇನುತುಪ್ಪ ಇವುಗಳನ್ನು ಹೇರಳವಾಗಿ ದೋಹನ ಮಾಡುತ್ತಾರೆ ೬-೭೦-೧೦೦ನ ೫) ಮತ್ತು ಅಮೃತವನ್ನು ಉತ್ಪತ್ತಿಮಾಡುತ್ತಾರೆ (೧-೧೫೯-೨; ೧-೧೮೫-೬). ಅವರು ಮುದುಕರಾಗುವುದೇ ಇಲ್ಲ (೬-೭೦-೧). ಅವರು ಮಹನೀಯರು (೧-೧೫೯-೧) ಮತ್ತು ವಿಸ್ತಾರವಾಗಿರುವವರು (೧-೧೬೦-೨). ಅಗಲವಾದ ಮತ್ತು ದೊಡ್ಡ ವಾಸ್ಥಳಗಳು (೧-೧೮೫-೬). ಮನೋಹರವಾದ ಮುಖವುಳ್ಳವರು, ವಿಸ್ತೃತರು, ನಾನಾ ರೂಪಿಗಳು (೧-೧೮೫-೬, ೭). ಒಂದೊಂದು ಸಲ ನೈತಿಕಗುಣಗಳೂ ಉಕ್ತವಾಗುತ್ತವೆ. ಜ್ಞಾನಿಗಳು, ಧರ್ಮವನ್ನು ಪ್ರೋತ್ಸಾಹಿಸುತ್ತಾರೆ (೧-೧೫೯-೧). ತಂದೆ ತಾಯಿಗಳಾದ ಇವರು ಜೀವಿಗಳನ್ನು ರಕ್ಷಿಸುತ್ತಾರೆ (೧-೧೬೦-೨) ಮತ್ತು ಅವರಿಗೆ ಅವಮಾನ ಮತ್ತು ದೌರ್ಭಾಗ್ಯಗಳು ಆಗದಂತೆ ನೋಡಿಕೊಳ್ಳುತ್ತಾರೆ (೧-೧೮೫-೧೦). ಆಹಾರ ಮತ್ತು ಐಶ್ವರ್ಯಗಳನ್ನು (೬-೭೦-೬; ೧-೧೫೯-೫) ಅಥವಾ ಯಶಸ್ಸು ಮತ್ತು ಅಧಿಕಾರಗಳನ್ನು (೧-೧೬೦-೫) ಅನುಗ್ರಹಿಸುತ್ತಾರೆ. ಯಾಗದಲ್ಲಿ ನಾಯಕರು; ಯಜ್ಞ

ಕುಂಡದ ಸುತ್ತಲೂ ಕುಳಿತಿರುತ್ತಾರೆ (೪-೫೬-೨, ೭) ; ಸ್ವರ್ಗದ ಇತರ ಪ್ರಜೆಗಳೊಡನೆ ಯಾಗಕ್ಕೆ ಬರುತ್ತಾರೆ (೭-೫೩-೨) ಅಥವಾ ದೇವತೆಗಳಿಗೆ ಯಾಗ ಭಾಗಗಳನ್ನು ತೆಗೆದುಕೊಂಡು ಹೋಗಿ ಸೇರಿಸುತ್ತಾರೆ (೨-೪೧-೨೦). ಆದರೆ ಯಾಗಗಳಲ್ಲಿ ಇತರ ದೇವತೆಗಳಷ್ಟು ಮುಖ್ಯಸ್ಥಾನವಿಲ್ಲ. ಈ ಇಬ್ಬರು ದೇವತೆಗಳಿಗೂ ಸಮಾನ ಸ್ಥಾನ ಮಾನಗಳು. ಬೇರೆ ದೇವತಾಯುಗ್ಮಗಳಲ್ಲಿ, ಒಂದು ದೇವತೆಗೇ ಹೆಚ್ಚು ಪ್ರಾಮುಖ್ಯತೆ. ಆ ದೇವತೆಯ ಅನೇಕ ಗುಣಗಳೇ ಇನ್ನೊಂದು ದೇವತೆಯಲ್ಲಿಯೂ ಕಂಡುಬರುತ್ತವೆ. ಉದಾಹರಣೆಗಾಗಿ, ಇಂದ್ರ-ಅಗ್ನಿಗಳಿಬ್ಬರೂ ವಜ್ರಾಯುಧಧಾರಿಗಳು ಮತ್ತು ವೃತ್ರನನ್ನು ಕೊಂದವರು. ಅಪರೂಪವಾಗಿ, ಅಮುಖ್ಯದೇವತೆಯ ಗುಣವು ಮುಖ್ಯದೇವತೆಗೂ ಉಕ್ತವಾಗುತ್ತದೆ. ಇಂದ್ರಾ ವಿಷ್ಣುಗಳಿಬ್ಬರೂ ದೂರದೂರ ಹೆಜ್ಜೆಗಳನ್ನಿಟ್ಟರು (೬-೬೯-೫). ಈ ರೀತಿ ಪದೇಪದೇ ಹೇಳುವುದರಿಂದ, ದೇವತೆಯಲ್ಲಿ ಸ್ವಾಭಾವಿಕವಾಗಿ ಕಂಡು ಬರದೇ ಇದ್ದ ಗುಣವೂ ಆ ದೇವತೆಗೆ ವಾಚ್ಯವಾಗುತ್ತದೆ. ಹೀಗೆಯೇ, ಅಗ್ನಿಯು ವೃತ್ರನನ್ನು ಕೊಂದನೆಂದು ಹೇಳಿರುವುದು. ಕೆಲವು ವಾಕ್ಯಗಳಲ್ಲಿ ಅವರವರ ಗುಣಗಳು ಪ್ರತ್ಯೇಕವಾಗಿಯೂ ಹೇಳಲ್ಪಡುತ್ತವೆ.

ದ್ಯಾವಾಪೃಥಿವಿಗಳನ್ನು ಬಿಟ್ಟರೆ, ಮುಖ್ಯವಾದ ದೇವತಾದ್ವಂದ್ವವೆಂದರೆ- ಮಿತ್ರಾವರುಣರು. ಅವರಿಬ್ಬರಿಗೂ ಪ್ರತ್ಯೇಕವಾಗಿ ಉಕ್ತವಾಗಿರುವ ಸೂಕ್ತಸಂಖ್ಯೆಗಿಂತ, ಈ ಜೋಡಿಯನ್ನು ಹೊಗಳುವ ಸೂಕ್ತ ಸಂಖ್ಯೆಯೇ ಹೆಚ್ಚು. ಮಿತ್ರನ ವೈಯಕ್ತಿಕ ಗುಣಗಳು ಬಹಳ ಕಡಿಮೆ ಅಥವಾ ಇಲ್ಲವೇ ಇಲ್ಲವೆನ್ನಬಹುದು. ಆದುದರಿಂದ, ವರುಣನ ವಿಶೇಷ ಲಕ್ಷಣಗಳೆಲ್ಲ, ಮಿತ್ರಾವರುಣಯುಗ್ಮಕ್ಕೆ ಹೇಳಿದೆ. ವರುಣದೇವತೆಯ ವಿಷಯವನ್ನು ವಿಸ್ತಾರವಾಗಿ ಪ್ರಸ್ತಾಪಿಸಿದ ಮೇಲೆ ಈ ಜೋಡಿಯ ವಿಷಯವನ್ನು ಹೇಳುವುದೇ ಅನವಶ್ಯಕ. ಅವರಿಬ್ಬರೂ ಯುವಕರು(೩-೫೪-೧೦ ;೭-೬೨-೫). ಇತರ ಅನೇಕ ದೇವತೆಗಳಂತೆ, ಇವರೂ ಹೊಳೆಯುತ್ತಿರುತ್ತಾರೆ, (ಚಂದ್ರಾ), ಶುಚಿಯಾಗಿರುತ್ತಾರೆ (ಶುಚೀ), ಸೂರ್ಯನಂತೆ ಇರುತ್ತಾರೆ. ಮಾಸಲು ಕೆಂಪುವರ್ಣದವರು ಮತ್ತು ಘೋರರು. ಈ ಜೋಡಿಯಲ್ಲಿ ಯಾವಾಗಲೂ ಮೊದಲನೆಯ ಪದವು ಮಿತ್ರನೇ ಆಗಿರುವುದನ್ನು ನೋಡಿದರೆ, ಮಿತ್ರನೇ ಮುಖ್ಯದೇವತೆಯಾಗಿದ್ದು, ಕಾರಣಾಂತರದಿಂದ ಈಗ ಅಮುಖ್ಯದೇವತೆಯಾಗಿರಬಹುದು. ಅಥವಾ' ಕಡಿಮೆ ಅಕ್ಷರವಿರುವ ಪದವನ್ನು ಸಮಸ್ತಪದದ ಆದಿಯಲ್ಲಿ ಹಾಕುವುದು ರೂಢಿಯಲ್ಲಿದ್ದಿರಬಹುದು.

ಇಂದ್ರಾವರುಣರು ಜಗನ್ನಾಯಕರು (೧-೧೭-೧) ; ನೀರು ಹರಿಯುವುದಕ್ಕೋಸ್ಕರ ಕಾಲುವೆಗಳನ್ನು ತೋಡಿದರು ಮತ್ತು ಅಂತರಿಕ್ಷದಲ್ಲಿ ಸೂರ್ಯನು ಚಲಿಸುವಂತೆ ಮಾಡಿದರು (೭-೮೨-೩). ವೃತ್ರಾಸುರನನ್ನು ನಿರ್ನಾಮ ಮಾಡಿದವರು ಅವರು(೬-೬೮-೨) ; ಯುದ್ಧದಲ್ಲಿ ಸಹಾಯ ಮಾಡುತ್ತಾರೆ (೪-೪೧-೧೧) ; ಮತ್ತು ಜಯವನ್ನು ಅನುಗ್ರಹಿಸುತ್ತಾರೆ (೧-೧೭-೭). ದುಸ್ತರವೆಲೆ ತಮ್ಮ ಪ್ರಚಂಡವಾದ ವಜ್ರಾಯುಧವನ್ನು ಪ್ರಯೋಗಿಸುತ್ತಾರೆ (೪-೪೧-೪). ರಕ್ಷಣೆ, ಅಭಿವೃದ್ಧಿ (೧-೧೭-೭, ೪), ಕೀರ್ತಿ, ಐಶ್ವರ್ಯ, ಅಸಂಖ್ಯಾತವಾದ ಅಶ್ವಗಳು (೪-೪೧-೨, ೧೦ ; ೬-೬೮-೪), ಇವುಗಳನ್ನು ದಯಪಾಲಿಸುತ್ತಾರೆ. ಸುತವಾದ ಸೋಮವನ್ನು ಪಾನಮಾಡುತ್ತಾರೆ; ಅವರ ರಥವು ಯಾಗಕ್ಕೆ ಬರುತ್ತದೆ ; ಕುಶಾಸನದಲ್ಲಿ ಕುಳಿತು, ಸೋಮಪಾನಮಾಡಿ ತೃಪ್ತರಾಗಬೇಕೆಂದು ಪ್ರಾರ್ಥಿಸಿದೆ (೬-೬೮–೧೦, ೧೧). ಇನ್ನು ಕೆಲವು ವಾಕ್ಯಗಳಲ್ಲಿ, ಇಬ್ಬರ ವೈಯಕ್ತಿಕ ಲಕ್ಷಣಗಳನ್ನೂ ಪ್ರತ್ಯೇಕವಾಗಿ ಹೇಳುತ್ತಾರೆ. ಆರಾಧಕರ ಮೇಲೆ ಕೋಪಮಾಡಬಾರದೆಂದು ವರುಣನನ್ನೂ, ತಮಗೆ ವಿಸ್ತಾರವಾದ ಪ್ರದೇಶವನ್ನು ದೊರಕಿಸಬೇಕೆಂದು ಇಂದ್ರನನ್ನೂ ಪ್ರಾರ್ಥಿಸುತ್ತಾರೆ (೭-೮೪-೨). ಇಂದ್ರನು ಯುದ್ಧಪ್ರಿಯನಾದ ದೇವತೆ, ವೃತ್ರಾಸುರನನ್ನು ವಧಿಸುತ್ತಾನೆ, ಆದರೆ ಇದಕ್ಕೆ ವಿರುದ್ಧವಾಗಿ, ವರುಣನು ಮನುಷ್ಯರಿಗೆ ಜ್ಞಾನ ಮತ್ತು ಶಾಂತಿಪ್ರದನಾಗಿದಾನೆ (೬-೬೮-೩ ;೭-೮೨-೫, ೬ ; ೭-೮೫-೩). ಇಂದ್ರ ಮತ್ತು ಅಗ್ನಿಗಳ ಸಂಬಂಧವು ಬಹಳ ಗಾಢವಾ

ದುದು ; ಇಂದ್ರಾಗ್ನಿಗಳ ದ್ವಂದ್ವವನ್ನು ಸ್ತುತಿಸುವಷ್ಟು ಸೂಕ್ತಗಳು, ಇಂದ್ರ ಮತ್ತು ಇನ್ಯಾವ ದೇವತೆಯ ಜೋಡಿಯನ್ನೂ ಸ್ತುತಿಸುವುದಿಲ್ಲ. ಅದೂ ಅಲ್ಲದೆ ಅಗ್ನಿಯು ಇಂದ್ರನ ಜೊತೆಯಲ್ಲಿ ಬಿಟ್ಟರೆ, ಬೇರೆ ದೇವತೆಗಳೊಡನೆ ದ್ವಂದ್ವವಾಗಿ ಪರಿಗಣಿತನಾಗಿರುವದೇ ಅಪರೂಪ ; ಅಗ್ನೀಷೋಮರನ್ನು ಒಂದು ಸೂಕ್ತ ಮತ್ತು ಎರಡು ಮಂತ್ರಗಳಲ್ಲಿಯೂ, ಅಗ್ನೀಪರ್ಜನ್ಯರನ್ನು ಒಂದು ಮಂತ್ರದಲ್ಲಿಯೂ ಸ್ತುತಿಸಿದೆ. ಸೋಮಪಾನ ಮಾಡುವವರಿಗೆಲ್ಲಾ ಇಂದ್ರ-ಅಗ್ನಿಗಳೇ ಅಗ್ರಗಣ್ಯರು (೧-೨೧-೧) ; ಸೋಮಪಾನ ಮಾಡುವುದಕ್ಕಾಗಿ, ತಮ್ಮ ರಥದಲ್ಲಿ ಬರುತ್ತಾರೆ (೧-೧೦೮-೧). ಇಬ್ಬರೂ ಒಟ್ಟಿಗೆ ಬಂದು ಪಾನಮಾಡಬೇಕು (೭-೯೩-೬ ; ೮-೩೫-೪, ೭,೮,೯) ; ಕುಶಾಸನದಲ್ಲಿ ಸುಖಾಸೀನರಾಗಿ, ಸುತವಾದ ಸೋಮವನ್ನು ಯಥೇಚ್ಛವಾಗಿ ಪಾನಮಾಡಿ, ಮತ್ತರಾಗಬೇಕೆಂದು (೧-೧೦೯-೫) ಆಹ್ವಾನ. ಅವರಿಬ್ಬರೂ ಮಿಲಿತರಾಗಿಯೇ ವೃತ್ರವಧ ಮಾಡುತ್ತಾರೆ ಎಂದು ಹೇಳಿದೆ. ಅವರು ವಜ್ರಾಯುಧ ಧಾರಿಗಳು (೬-೫೯-೩ ; ಇತ್ಯಾದಿ,) ಅವರ ಸಿಡಿಲು ಬಹಳ ತೀಕ್ಷ್ಣವಾದುದು (೫ ೮೬-೩). ಅವರು ಒಟ್ಟಾಗಿ ಸೇರಿ ತೊಂಬತ್ತೊಂಬತ್ತು ಕೋಟೆಗಳನ್ನುರುಳಿಸಿದರು (೩-೧೨-೬) ಮತ್ತು ಯುದ್ಧದಲ್ಲಿ ಅವರನ್ನು ಎದುರಿಸಲ್ಕಾಗುವುದಿಲ್ಲ (೫-೮೬-೨). ನಿರುದ್ಧವಾಗಿದ್ದ ನದಿಗಳನ್ನು ಬಿಡುಗಡೆ ಮಾಡಿದರು (೮-೪೮-೩) ಮತ್ತು ಜೊತೆಯಾಗಿಯೇ ಇನ್ನೂ ಅನೇಕ ಪರಾಕ್ರಮ ಕಾರ್ಯಗಳನ್ನು ಮಾಡಿದಾರೆ (೧-೧೦೮-೫). ಅವರು ಉದಾರಂಗಳು (೫-೮೬-೩). ಈ ಮೇಲೆ ಹೇಳಿರುವವುಗಳೆಲ್ಲವೂ ಇಂದ್ರನ ವೈಶಿಷ್ಟ್ಯಗಳು ಇಂದ್ರ ಅಗ್ನಿಗಳು ಯಾಗದ ಇಬ್ಬರು ಋತ್ವಿಜರೆನ್ನಿಸಿಕೊಳ್ಳುತ್ತಾರೆ (೮-೩೮-೧) ಮತ್ತು ಜ್ಞಾನಿಗಳು (೮-೪೦-೩). ಅವರೇ ಮನೆಯ ಯಜಮಾನರು ಮತ್ತು ಪಿಶಾಚಗಳನ್ನು ಓಡಿಸುತ್ತಾರೆ (೧-೨೧-೫). ಈ ಗುಣಗಳು ಅಗ್ನಿಗೆ ಸಲ್ಲುತ್ತವೆ ಎನ್ನುವುದೇ ಸೂಕ್ತವಾಗಿದೆ. ಅವರಿಬ್ಬರು ಒಬ್ಬತಂದೆಯ ಮಕ್ಕಳು ಮತ್ತು ಯಮಳರು (೬-೫೯-೨). ಈ ಸಮೀಪ ಬಾಂಧವ್ಯದಿಂದಲೇ ಇರಬೇಕು, ಅವರನ್ನು ಒಂದು ಸಲ ಅಶ್ವಿನಿಗಳು ಎಂದು ಕರೆದಿರುವುದು (೧-೧೦೯-೪). ಅವರು ಆಹಾರ, ಐಶ್ವರ್ಯ, ಬಲ, ಗೋವುಗಳು ಮತ್ತು ಎಲ್ಲವನ್ನೂ ಅನುಗ್ರಹಿಸುತ್ತಾರೆ (೪-೬೦-೧೩, ೧೪), ಭೂಮ್ಯಾಕಾಶಗಳು, ನದಿಗಳು, ಮತ್ತು ಪರ್ವತಗಳು, ಎಲ್ಲಕ್ಕಿಂತಲೂ ಮಿಗಿಲಾದವರು (೧-೧೦೯-೬). ಇವರಿಬ್ಬರಿಗೂ ಇರುವ ಒಂದು ವ್ಯತ್ಯಾಸವನ್ನು ಒಂದುಕಡೆ ಹೇಳಿದೆ ; ಆದರೆ ಅಲ್ಲಿ ದ್ವಂದ್ವದೇವತೆಯನ್ನು ಉದ್ದೇಶಿಸಿ ಹೇಳಿಲ್ಲ. ಇಂದ್ರನು ದಸ್ಯುಗಳನ್ನು ಕೊಂದರೆ, ಅಗ್ನಿಯು ಅವರನ್ನು ಸುಡುತ್ತಾನೆ (೬-೨೮-೪). ಇಂದ್ರ ಬೃಹಸ್ಪತಿಗಳನ್ನು ಹೊಗಳಿರುವುದು ಎರಡೇ ಸೂಕ್ತಗಳಲ್ಲಿ (೪-೪೯ ; ೭-೯೭) ; ಅಲ್ಲಿ, ಮುಖ್ಯವಾಗಿ ಸೋಮಪಾನಕ್ಕೆ ಆಹ್ವಾನವೂ, ಅಶ್ವಾದಿಯುಕ್ತವಾದ ಸಂಪದನುಗ್ರಹ ಮತ್ತು ಭಕ್ತಿಯ ಅಭಿವೃದ್ಧಿಯೂ ಪ್ರಸಕ್ತವಾಗಿವೆ. ಇಂದ್ರ ವಾಯುಗಳ ವಿಷಯದಲ್ಲಿ, ಸೋಮಪಾನಕ್ಕಾಗಿ ಸತತವಾದ ಆಹ್ವಾನ ಹೊರತು, ಬೇರೆ ಏನೂ ಹೇಳಿಲ್ಲ (೧-೨೩-೧, ೨ ; ಇತ್ಯಾದಿ) ತಮ್ಮ ಅಶ್ವಗಳೊಡನೆ (೪-೪೭-೨, ೩, ೪) ಅಥವಾ ಸುವರ್ಣಾಸನವುಳ್ಳ ರಥದಲ್ಲಿ (೪-೪೬-೪) ಬಂದು, ಯಾಗಶಾಲೆಯಲ್ಲಿರುವ ಕುಶಾಸನದ ಮೇಲೆ ಮಂಡಿಸುತ್ತಾರೆ (೭-೯೧-೪). ಅವರು ಸಹಸ್ರಾಕ್ಷರು ಮತ್ತು ಬುದ್ಧಿಗೆ (೧-೨೩-೩) ಮತ್ತು ಬಲಕ್ಕೆ (೪-೪೭-೩) ಅಧಿಪತಿಗಳು. ಯುದ್ಧದಲ್ಲಿ ಸಹಾಯ ಮಾಡುತ್ತಾರೆ (೭-೯೨-೪) ಮತ್ತು ಗೋ, ಅಶ್ವ, ಹಿರಣ್ಯರೂಪವಾದ ಸಂಪತ್ತನ್ನು ಕೊಡುತ್ತಾರೆ (೭-೯೦-೬). ಇಂದ್ರ-ಸೋಮರು ಇಂದ್ರನ ವಿಶೇಷ ಲಕ್ಷಣಗಳಿಂದ ಸಾಹಸಕಾರ್ಯಗಳನ್ನು ಮಾಡುತ್ತಾರೆ ಅಥವಾ ಇಂದ್ರನಿಂದ ಕೃತವಾದ ವಿಶ್ವಸೃಷ್ಟಿ ಸಂಬಂಧವಾದ ಕಾರ್ಯಗಳನ್ನು ಮಾಡುತ್ತಾರೆ. ಮನುಷ್ಯನ ಉಪಯೋಗಕ್ಕೋಸ್ಕರ ನೀರು ಹರಿಯುವಂತೆ ಮಾಡಿದರು ; ಏಳು ನದಿಗಳನ್ನು ವಿಮೋಚನ ಮಾಡಿದರು ; ಸರ್ಪವನ್ನು ವಧಿಸಿದರು ; ಮತ್ತು ಸೂರ್ಯನ ರಥಚಕ್ರವನ್ನು ಕೆಳಕ್ಕಿಳಿಸಿದರು (೪-೩೮-೧, ೨ ; ೬-೭೨-೩). ಅವರು ಮಾಡಿದ ಮಹದುಪಕಾರವೆಂದರೆ, ಶತ್ರುಗಳನ್ನು ನಾಶಮಾಡಿ, ಬಂಡೆಗಳಲ್ಲಿ ಹುದುಗಿಟ್ಟ ಪದಾರ್ಥಗಳನ್ನು ಹೊರಗೆಡಹಿದುದು (೮-೨೮-೪, ೫). ಸೂರ್ಯ ಮತ್ತು ಬೆಳಕುಗಳನ್ನು ಕಂಡುಹಿಡಿ-

ದುದು. ತಮಸ್ಸನ್ನು ಪರಿಹರಿಸಿದುದು, ಸೂರ್ಯನು ಪ್ರಕಾಶಿಸುವಂತೆ ಮಾಡಿದುದು. ಆಕಾಶವನ್ನು ಬೀಳದಂತೆ ನಿಲ್ಲಿಸಿದುದು ಮತ್ತು ಭೂಮಿಯನ್ನು ಹರಡಿದುದು, ಇವೇ ಅವರು ಸೃಷ್ಟಿಯ ಅದಿಯಲ್ಲಿ ಸಾಧಿಸಿದ ಮಹತ್ಕಾರ್ಯಗಳು (೬-೭೨-೧,೨). ಗೋವುಗಳಲ್ಲಿ ಪಕ್ವವಾದ ಕ್ಷೀರವನ್ನುಂಟುಮಾಡಿದವರೂ ಅವರೇ (೬-೭೨-೪) ಮನುಷ್ಯರಿಗೆ ಜಯಸಾಧಕವಾದ ಶಕ್ತಿಸಾಮರ್ಥ್ಯಗಳನ್ನು ಅನುಗ್ರಹಿಸುತ್ತಾರೆ (೬-೭೨-೫). ಇಂದ್ರ- ವಿಷ್ಣುಗಳು ಸೋಮರಸಕ್ಕೆ ಆಶ್ರಯಸ್ಥಾನೀಯರು; ಮದಪತೀ (ಸೋಮರಸದಿಂದಾಗುವ ಮದಕ್ಕೆ ಒಡೆಯರು) ಎಂದೇ ಅವರಿಗೆ ಹೆಸರು; ಅವರನ್ನು ಅಶ್ವಗಳ ಸಹಿತರಾಗಿ ಬಂದು ಸೋಮಪಾನಮಾಡಿ, ತಮ್ಮ ಹೊಟ್ಟೆಗಳನ್ನು ತುಂಬಿಸಿಕೊಳ್ಳಬೇಕೆಂದು ಆಹ್ವಾನವಿತ್ತಿದ್ದಾರೆ. ಸೋಮಪಾನಮಾಡಿ ಮತ್ತರಾಗಿ, ಸಂಚಾರ ಹೊರಟು, ವಾಯುಮಂಡಲವನ್ನು ವಿಸ್ತರಿಸಿ, ಜನಗಳು ವಾಸಮಾಡುವುದಕ್ಕೋಸ್ಕರ, ಭೂ ಪ್ರದೇಶಗಳನ್ನು ವಿಸ್ತಾರ ಪಡಿಸಿದರು. ಸರ್ವದಾ ಜಯಶಾಲಿಗಳಾದ ಇವರಿಬ್ಬರು ಐಶ್ವರ್ಯವನ್ನನುಗ್ರಹಿಸುತ್ತಾರೆ ಮತ್ತು ಕಷ್ಟಗಳಿಂದ ಪಾರುಮಾಡುತ್ತಾರೆ. ಎಲ್ಲಾ ಸ್ತುತಿ ವಾಕ್ಯಗಳಿಗೂ ಮೂಲಭೂತರು; ಆರಾಧಕರ ಸ್ತೋತ್ರಗಳನ್ನು ಲಾಲಿಸಬೇಕೆಂದು ಪ್ರಾರ್ಥಿತರಾಗಿದ್ದಾರೆ (೬-೬೯). ಇಂದ್ರ-ಪೂಷಣರು ಒಂದು ಸಣ್ಣ ಸೂಕ್ತದಲ್ಲಿ ಮಾತ್ರ ಸ್ತುತರಾಗಿದ್ದಾರೆ (೬-೫೭), ಮತ್ತು ಈ ಇಂದ್ರಾ-ಪೂಷಣ ಎಂಬ ದ್ವಂದ್ವವು ಎರಡೇ ಸಲ ಬಂದಿರುವದು. ಇಂದ್ರನು ನೀರನ್ನು ಹರಿಯುವಂತೆ ಮಾಡಿದಾಗ ಪೂಷಣನು ಅವನ ಜೊತೆಗಾರ. ಪೂಷಣನಿಂದ ಸಹಚರಿತನಾಗಿ, ಇಂದ್ರನು ವೃತ್ರಾಸುರನನ್ನು ವಧಿಸುತ್ತಾನೆ (೬-೫೭-೨). ಅವರಲ್ಲಿ ಒಬ್ಬನು ಸೋಮಪಾನ ಮಾಡುತ್ತಾನೆ, ಅಶ್ವಗಳು ಅವನ ರಥವನ್ನು ಎಳೆಯುತ್ತವೆ ಮತ್ತು ಅವನು ವೃತ್ರಾಸುರನನ್ನು ವಧಿಸುತ್ತಾನೆ; ಮತ್ತೊಬ್ಬನ ರಥಕ್ಕೆ ಮೇಕೆಗಳು ವಾಹಕಗಳು ಮತ್ತು ಅವನು ಪಾನಮಾಡುವುದು ಗಂಜಿಯನ್ನು. ಇಂದ್ರಾ-ಪೂಷಣರ ನಿವಾಸವು ಒಂದು ಕಡೆ (೧-೧೬೨-೨) ಪ್ರಸ್ತಾಪಿಸಲ್ಪಟ್ಟಿದೆ; ಇಲ್ಲಿಗೆ ಒಂದು ಮೇಕೆಯು ಯಜ್ಞಾಶ್ವವನ್ನು ಕರೆದುಕೊಂಡು ಹೋಗುತ್ತದೆ; ಇವರಿಬ್ಬರಿಂದಲೂ ಕ್ಷೇಮ, ಐಶ್ವರ್ಯಾದಿಗಳು ಅಪೇಕ್ಷಿಸಲ್ಪಟ್ಟಿವೆ.

ಸೋಮ-ಪೂಷಣರು (೨-೪೦) ಕತ್ತಲನ್ನು ಓಡಿಸುತ್ತಾರೆ ಮತ್ತು ಏಳು ಚಕ್ರದ ಮತ್ತು ಐದು ಲಗಾಮಿನ ರಥವನ್ನು ವೇಗವಾಗಿ ಓಡಿಸಿ, ಅದರಿಂದ ಆಕಾಶದ ಪರಿಮಿತಿಯನ್ನು ನಿರ್ಧರಿಸಬೇಕೆಂದು ಪ್ರಾರ್ಥಿತರಾಗಿದ್ದಾರೆ. ಇವರೇ ಐಶ್ವರ್ಯ ಮತ್ತು ಭೂವ್ಯೋಮಾಕಾಶಗಳನ್ನು ಸೃಷ್ಟಿಮಾಡಿದವರು ಮತ್ತು ಜಗತ್ಪಾಲಕರು (೧೦-೧೭೭-೩ನ್ನು ಹೋಲಿಸಿ); ಇವರನ್ನು ದೇವತೆಗಳು ನಿತ್ಯತ್ವ ಅಥವಾ ಅಮೃತ್ವಕ್ಕೆ ಸ್ಥಾನೀಯರನ್ನಾಗಿ ಮಾಡಿದರು. ಇವರಿಗೋಸ್ಕರ ಗೋವುಗಳಲ್ಲಿ ಉತ್ತಮವಾದ ಕ್ಷೀರವನ್ನು ಉಂಟುಮಾಡಬೇಕೆಂದು ಇಂದ್ರನು ಪ್ರಾರ್ಥಿತನಾಗಿದ್ದಾನೆ. ಇಬ್ಬರೂ ಒಟ್ಟಾಗಿಯೇ ಇದ್ದು, ಶತ್ರುಗಳ ಮೇಲೆ ಜಯವನ್ನೂ, ಅಪಾರವಾದ ಸಂಪತ್ತು ಮತ್ತು ಆಹಾರಗಳನ್ನೂ ಅನುಗ್ರಹಿಸುತ್ತಾರೆ. ಅವರಿಬ್ಬರಿಗೂ ವ್ಯತ್ಯಾಸವೂ ಇದೆ. ಒಬ್ಬನು ಅಂತರಿಕ್ಷದಲ್ಲಿ ಬಹಳ ಎತ್ತರವಾದ ಪ್ರದೇಶದಲ್ಲಿ ವಾಸಮಾಡಿದರೆ, ಮತ್ತೊಬ್ಬನು ಭೂಮಿ ಅಥವಾ ವಾಯುಮಂಡಲದಲ್ಲಿ ವಾಸಿಸುತ್ತಾನೆ. ಒಬ್ಬನು ಎಲ್ಲಾ ಪ್ರಾಣಿಗಳನ್ನೂ ಸೃಜಿಸಿದನು; ಮತ್ತೊಬ್ಬನು ಎಲ್ಲಾ ಪ್ರಾಣಿಗಳನ್ನೂ ವೀಕ್ಷಿಸುತ್ತಾ, ಸಂಚರಿಸುತ್ತಾನೆ. ಸೋಮ-ರುದ್ರರು (೬-೭೪) ನೆಯ ಸೂಕ್ತದಲ್ಲಿ ಸ್ತುತರಾಗಿದ್ದಾರೆ. ಮನೆಯಲ್ಲಿರುವ ರೋಗರುಜಿನಗಳನ್ನು ದೂರ ಓಡಿಸಬೇಕು ಆರಾಧಕರ ದೇಹಗಳಲ್ಲಿ ಸಮಸ್ತ ಔಷಧಿಗಳೂ ಸರ್ವದಾ ಇರಬೇಕು, ಪಾಪರಹಿತರಾಗಿರಬೇಕು, ಮತ್ತು ವರುಣಪಾಶದಿಂದ ವಿಮೋಚಿತರಾಗಿರಬೇಕು, ಈ ರೀತಿ ಮಾಡಬೇಕೆಂದು ಸೋಮರುದ್ರರು ಪ್ರಾರ್ಥಿತರಾಗುತ್ತಾರೆ. ತೀಕ್ಷ್ಣವಾದ ಆಯುಧಧಾರಿಗಳಾದ ಇವರು ದಯಾಶಾಲಿಗಳಾಗಿರಬೇಕೆಂದೂ ಬೇಡಿದೆ. ನಿರುದ್ಧವಾಗಿದ್ದ ಪ್ರವಾಹಗಳನ್ನು ಬಿಡುಗಡೆ ಮಾಡಿದವರು, ಬೆಳಕನ್ನು ಸಂಪಾದಿಸಿದವರು ಮತ್ತು ಆಕಾಶದಲ್ಲಿ ತೇಜೋರಾಶಿಗಳನ್ನು ಇರಿಸಿದವರೆಂದು ಅಗ್ನಿ-ಸೋಮರು ಹೊಗಳಲ್ಪಟ್ಟಿದ್ದಾರೆ. ಆದರೆ ಇವರಿಬ್ಬರ

ಮೂಲಸ್ಥಾನದ ವಿಷಯದಲ್ಲಿ ವ್ಯತ್ಯಾಸವಿದೆ. ಒಬ್ಬನನ್ನು ಸ್ವರ್ಗದಿಂದ ತಂದಿತೆಂದೂ ಹೇಳಿದೆ (೧-೯೩). ಅವರಿಬ್ಬರೂ ಮಿಲಿತರಾಗಿಯೇ ಸಹಾಯಮಾಡಬೇಕೆಂದೂ ಮತ್ತು ಗೋವುಗಳು, ಅಶ್ವಗಳು, ಸಂತತಿ, ಆರೋಗ್ಯ, ಸೌಖ್ಯ ಮತ್ತು ಐಶ್ವರ್ಯಗಳನ್ನು ಅನುಗ್ರಹಿಸಬೇಕೆಂದೂ ಕೋರಿಕೆ (೧೦-೧೯-೧ ; ೧೦-೬೬-೭). ಈ ದ್ವಂದ್ವವು ಅಥರ್ವವೇದದಲ್ಲಿ ಅನೇಕಬಾರಿ ಬಂದಿದೆ. ಮೈತ್ರಾಯಣೀ ಸಂಹಿತೆಯಲ್ಲಿ (ಮೈ. ಸಂ.೩-೭-೧), ಇವರಿಬ್ಬರನ್ನೂ ಎರಡುನೇತ್ರಗಳೆಂದಿದಾರೆ. ಶತಪಥಬ್ರಾಹ್ಮಣದಲ್ಲಿ (ಶ. ಬಾ. ೧೧-೧-೬-೧೯), ಇವರಿಬ್ಬರೂ ಸೋದರರು ; ಸೂರ್ಯನು ಅಗ್ನಿಗೆ ಸೇರಿದವನು ಮತ್ತು ಚಂದ್ರನು ಸೋಮನಿಗೆ ಸೇರಿದವನು (ಶ. ಬ್ರಾ. ೧-೬-೩-೨೪), ಯಾಗಗಳಲ್ಲಿ ಅಗ್ನಿ ಸೋಮರಿಗೆ ಸೋಮಭಾಗವೇ ಇಲ್ಲ ; ಅವರಿಗೆ ಪುರೋಡಾಶ ಮತ್ತು ಪಶುಗಳೆನ್ನುಮಾತ್ರ ಅರ್ಪಿಸುತ್ತಾರೆ. ಅಗ್ನೀಸೋಮದ್ವಂದ್ವವು ಯಾಗಗಳಲ್ಲಿ ಪದೇ ಪದೇ ಬರುತ್ತಲೇ ಇರುತ್ತದೆ. ಆದರೆ ವೇದದಲ್ಲಿ ಅವರನ್ನು ಸ್ತುತಿಸುವುದು ಒಂದೇಸೂಕ್ತ (೧-೯೩). ಅದನ್ನು ಬಿಟ್ಟರೆ, ಎರಡೇ ಸಲ, ಆ ಜೋಡಿಯು ಹೆಸರು ಇಡೀ ಋಗ್ವೇದದಲ್ಲಿ ಬಂದಿರುವುದು. ಇಷ್ಟು ಮುಖ್ಯವಾದ ದೇವತಾದ್ವಂದಕ್ಕೆ ಇಷ್ಟು ಅಮುಖ್ಯಸ್ಥಾನವಿರುವುದು ಆಶ್ಚರ್ಯ.

ಇನ್ನು ಕೆಲವು ದೇವತಾದ್ವಂದ್ವಗಳು ಅಲ್ಲೊಂದು ಇಲ್ಲೊಂದು ಮಂತ್ರದಲ್ಲಿ ಸ್ತುತವಾಗಿವೆ. ಅಗ್ನಿ-ಪರ್ಜನ್ಯರು (೬-೫೨-೧೬) ಒಂದು ಮಂತ್ರದಲ್ಲಿ ಹೊಗಳಲ್ಪಟ್ಟಿದಾರೆ. ಆಹಾರ ಮತ್ತು ಸಂತಾನಗಳು ಇಬ್ಬರಿಂದಲೂ ಅಪೇಕ್ಷಿತವಾಗಿವೆ ; ಆದರೆ, ಒಬ್ಬನು ಹೋಮವನ್ನೂ (ಇಳಾಂ) ಮತ್ತೊಬ್ಬನು ಗರ್ಭಾಣುವನ್ನೂ (ಗರ್ಭಂ) ಉತ್ಪತ್ತಿಮಾಡಿದರೆಂದು ಹೇಳಿದೆ. ಪರ್ಜನ್ಯ-ವಾತರದು ನಾಲ್ಕು ಮಂತ್ರಗಳಿವೆ. ಭೂಮಿಯಲ್ಲಿರುವ ವೃಷಭರೂಪರಾದ ಇವರು (೬-೪೯-೬) ಅವಿಯನ್ನು ಹೊರಡಿಸುವಂತೆ ಮಾಡಬೇಕೆಂದು ಪ್ರಾರ್ಥಿತರಾಗಿದಾರೆ. ಇಂದ್ರಾವಾಯು ಮತ್ತು ಇತರ ದೇವತೆಗಳೊಡನೆ, ಇವರನ್ನೂ ಅವಿಯಿಂದ ಕೂಡಿದ ಗೂಳಿಗಳೆಂದು ಕರೆದಿದಾರೆ (೧೦-೬೫-೯). ಈದೇ ರೀತಿಯ ಇನ್ನೊಂದು ದೇವತೆಗಳ ಪಟ್ಟಿಯಲ್ಲಿ, ಇವರು ಅಮಿತವಾದ ಆಹಾರವನ್ನು ಅನುಗ್ರಹಿಸುತ್ತಾರೆ (೬-೫೦-೧೨). ಒಂದು ಕಡೆ (೧೦-೬೬-೧೦ ; ನಿರು. ೭-೧೦ ನ್ನೂ ಹೋಲಿಸಿ), ಗರ್ಜಿಸುವ ಮಹಿಷ (ಪ್ರಾಯಶಃ ದ್ಯುದೇವತೆ) ಕ್ಕೆ ಸಂಬಂಧಿಸಿದವರೆಂದೂ ಹೇಳಿದೆ. ಉಷಸ್ಸು ಮತ್ತು ರಾತ್ರಿಗಳು ಅನೇಕಸಾರಿ ಸ್ತೋತ್ರಮಾಡಲ್ಪಟ್ಟಿದಾರೆ. ವಿಶ್ವೇದೇವತಾಕವಾದ ಸೂಕ್ತಗಳಲ್ಲಿ, ಉಷಸಾ-ನಕ್ತಾ ದೇವತೆಗಳು ಪ್ರತ್ಯೇಕವಾಗಿ ಉಕ್ತರಾಗಿದಾರೆ. ಅವರು ಧನಾಢ್ಯರಾದ ಸ್ತ್ರೀದೇವತೆಗಳು (೨-೩೧-೫ ; ೧೦-೭೧-೬) ; ದೇವಲೋಕದ ಕನ್ಯೆಯರು (೭-೨-೬ ; ೧೦-೧೧೦-೬) ; ಮತ್ತು ಆಕಾಶದ ಪುತ್ರಿಯರು (೫-೪೧-೭ ; ೧೦-೭೦-೬). ಅವರು ಇಬ್ಬರು ಪತ್ನಿಯರಂತಿದಾರೆ (೧-೧೩೨-೨) ಮತ್ತು ಯಥೇಚ್ಛವಾದಷ್ಟು ಕ್ಷೀರವಿದೆ (೨-೩-೬) ತಮ್ಮ ವರ್ಣವನ್ನು ಬದಲಾಯಿಸಿಕೊಳ್ಳುತ್ತಾ ಅವರಿಬ್ಬರೂ ಒಂದೇ ಮಗುವಿಗೆ ಸ್ತನ್ಯವನ್ನು ಕೊಟ್ಟು ಬೆಳೆಸುತ್ತಾರೆ. ಆ ಮಗುವು ಭೂಮ್ಯಾಕಾಶಗಳ ಮಧ್ಯೆ ಪ್ರಕಾಶಿಸುತ್ತದೆ. (೧-೯೬-೫) ಅವರಿಬ್ಬರೂ ಸೋದರಿಯರು. ಮನಸ್ಸು ಒಂದೇ ಆದರೂ ಬಣ್ಣ ಮಾತ್ರ ಬೇರೆ ಬೇರೆ. ಇಬ್ಬರ ಸಂಚಾರಮಾರ್ಗವೂ ಒಂದೇ ಮತ್ತು ಅದಕ್ಕೆ ಕೊನೆಯೇ ಇಲ್ಲ. ದೇವತೆಗಳಿಂದ ಉಪದಿಷ್ಟರಾಗಿ ಒಬ್ಬರಾದಮೇಲೊಬ್ಬರು ಚಲಿಸುತ್ತಾರೆ ; ಎದುರು ತಾಗುವುದಿಲ್ಲ. ಮತ್ತು ನಿಶ್ಚಲರಾಗಿಯೂ ಇರುವುದಿಲ್ಲ. (೧-೧೧೩-೩) ಅವರಿಬ್ಬರೂ ಋತ (ಸತ್ಯ, ನಿಯಮ, ಯಜ್ಞ) ದ ತಾಯಿಯರು. (೧-೧೪೨-೨ ; ಯಜ್ಞಾಂಗವಾದ ಪ್ರತಿಯೊಂದು ಕರ್ಮವನ್ನೂ ತಮ್ಮ ಕಿರಣಗಳಿಂದ ಬೆಳಗುವಂತೆ ಮಾಡುತ್ತಾರೆ. (೫-೪೧-೨) ಮತ್ತು ಯಜ್ಞಕರ್ಮಗಳನ್ನೂ ಸಾಂಗವಾಗಿ ನೆರವೇರಿಸುತ್ತಾರೆ. (೨-೩-೬) ಉದಾರಿಗಳು, ಮಹನೀಯರು ಮತ್ತು ಕುಶಾಸನದ ಮೇಲೆ ಕುಳಿತಿರುತ್ತಾರೆ (೭-೨-೬) ಮಾಹಾತ್ಮ್ಯೋತ್ಕರ್ಷೇತರರು ಮತ್ತು ಚೆನ್ನಾಗಿ

ಅಲಂಕೃತರು (೧೦-೩೬-೧ ; ೧೦-೧೧೦-೬ ; ೧-೧೩೫-೭ ; ೧-೧೪೨-೭). ಒಬ್ಬರಾದನಂತರ ಒಬ್ಬರು ಪ್ರಕಾಶಿಸುತ್ತಾ, ಎಲ್ಲಾ ಪ್ರಾಣಿಗಳನ್ನು ಜಾಗೃತರನ್ನಾಗಿ ಮಾಡುತ್ತಾರೆ (೨-೩೧-೫). ಸೂರ್ಯ ಮತ್ತು ಚಂದ್ರರು, ಸೂರ್ಯಮಾಸಾ ಎಂಬುದಾಗಿ ಐದು ಸಲವೂ, ಸೂರ್ಯಾಚಂದ್ರಮಾಸಾ ಎಂಬುದಾಗಿ ಮೂರು ಸಲವೂ ಹೇಳಲ್ಪಟ್ಟಿದಾರೆ. ಅನೇಕ ಸಂದರ್ಭಗಳಲ್ಲಿ, ನಮಗೆ ಕಾಣಿಸುವ ತೇಜಃಪುಂಜವಾದ ಮಂಡಲಗಳೇ ಅಭಿಪ್ರೇತವೆಂದು ಕಾಣುತ್ತದೆ. ನಮಗೆ ಕಾಣಿಸುವುದಕ್ಕೋಸ್ಕರ, ಅವು ಒಂದಾದ ಮೇಲೊಂದು ಚಲಿಸುತ್ತವೆ (೧-೧೦೨-೨). ಸೂರ್ಯಚಂದ್ರರು ಒಬ್ಬರಾದ ಮೇಲೊಬ್ಬರು ಚಲಿಸುವುದು ಬೃಹಸ್ಪತಿಯು ಆಜ್ಞಾನುಸಾರವಾಗಿ (೧೦-೬೮-೧೦). ಸೃಷ್ಟಿಕರ್ತನು ಸೂರ್ಯಚಂದ್ರರ ಆಕೃತಿಗಳನ್ನು ರಚಿಸಿದನು (೧೦-೧೯೦-೩). ಸೂರ್ಯಚಂದ್ರರಂತೆ ನಾವು ನಮ್ಮ ನಿಶ್ಚಿತ ಮಾರ್ಗಗಳಲ್ಲಿ ಸಂಚರಿಸೋಣ ಎಂದು ಒಂದು ಕಡೆ ಇದೆ (೫-೫೧-೧೫). ಇತರ ದೇವತೆಗಳ ಜೊತೆಯಲ್ಲಿ ಹೊಗಳಲ್ಪಟ್ಟಾಗ, ಅವರು ದೇವತೆಗಳೆಂಬ ಭಾವನೆ ಇದ್ದಂತೆ ಇದೆ (೧೦-೬೪-೩ ; ೧೦-೯೨-೧೨ ; ೧೦-೯೩-೫). ಕೆಲವು ವಾಕ್ಯಗಳಲ್ಲಿ ಸೂರ್ಯಚಂದ್ರಯುಗ್ಮದ ಹೆಸರು ಸ್ಪಷ್ಟವಾಗಿಲ್ಲದಿದ್ದರೂ, ಅವರಿಬ್ಬರನ್ನು ಉದ್ದೇಶಿಸಿಯೇ ಹೇಳಿರುವಂತೆ ತೋರುತ್ತದೆ. ಆ ಇಬ್ಬರೂ, ಮಕ್ಕಳಂತೆ, ಯಾಗದ ಸುತ್ತಲೂ ತಿರುಗುತ್ತಾರೆ ; ಒಬ್ಬನು ಎಲ್ಲಾ ಪ್ರಾಣಿಗಳನ್ನೂ ನೋಡುತ್ತಾನೆ ; ಇನ್ನೊಬ್ಬನು ಋತುಗಳನ್ನು ನಿಯಮ ಮಾಡುತ್ತಾ ಪುನಃ ಜನಿಸುತ್ತಾನೆ (೧೦-೮೫-೧೯). ವರುಣನ ಎರಡು ಕಾಂತಿಯುಕ್ತವಾದ ಕಣ್ಣುಗಳು (೮-೪೧-೯), ಮತ್ತು ಅಮರರಿಂದ ರಚಿತವಾದ ಆಕಾಶದ ಎರಡು ಕಣ್ಣುಗಳು (೧-೭೨-೧೦) ಈ ಎರಡು ಸಂದರ್ಭಗಳಲ್ಲಿಯೂ ಸೂರ್ಯಚಂದ್ರರೇ ಅಭಿಪ್ರೇತರಿರಬೇಕು.

ದೇವತಾಗಣಗಳು.

ಯಾವುದಾದರೂ ಒಂದು ಪ್ರಮುಖದೇವತೆಗೆ ಸಂಬಂಧಪಟ್ಟಿರುವ ಕೆಲವು ದೇವತಾಗಣಗಳು ರೂಢಿಯಲ್ಲಿವೆ. ಇಪ್ಪುಗಳಲ್ಲಿ ಮುಖ್ಯವಾದುದು ಮರುದ್ಗಣ. ಈ ಗಣದಲ್ಲಿ ಇರುವ ದೇವತೆಗಳ ಸಂಖ್ಯೆ, ಋಗ್ವೇದದಲ್ಲಿರುವಂತೆ, ಇಪ್ಪತ್ತೊಂದರಿಂದ ಒಂದುನೂರ ಎಂಬತ್ತರವರೆಗೂ ಇದೆ (೮-೮೫-೮ ; ೧-೧೩೩-೬) ಮತ್ತು ಹಿಂದೆಯೇ ಹೇಳಿರುವಂತೆ, ಸರ್ವದಾ, ಇಂದ್ರನಿಗೆ ಅವನ ಸಾಹಸಕರ್ಮಗಳಲ್ಲಿ ಸಹಾಯಕರಾಗಿರುತ್ತಾರೆ. ಇದೇ ಗಣಕ್ಕೆ ಒಂದೊಂದು ಸಲ, ಅವರ ತಂದೆಯಾದ ರುದ್ರನ ಹೆಸರಿನ ಮೇಲೆ ರುದ್ರರೆಂದು ಹೇಳುವುದೂ ಉಂಟು (೭-೧೦-೪ ; ೭-೩೫-೬). ಬ್ರಾಹ್ಮಣಗಳಲ್ಲಿ ರುದ್ರರು ಎಂಬುವರು ಬೇರೆ ಒಂದು ಗಣ. ಈ ಗಣದಲ್ಲಿ ಹನ್ನೊಂದು (ಐ. ಬ್ರಾ. ಮತ್ತು ಶ. ಬ್ರಾ.) ಅಥವಾ ಮೂವತ್ತುಮೂರು (ತೈ. ಸಂ. ೧-೪-೧೧-೧) ದೇವತೆಗಳಿದಾರೆ. ಆದಿತ್ಯರು ಇದಕ್ಕಿಂತ ಚಿಕ್ಕ ಗಣ. ಇದರಲ್ಲಿ ಏಳು ಅಥವಾ ಎಂಟು ಜನ (೯-೧೧೪-೩; ೧೦-೭೨-೮) ; ಆದರೆ ಬ್ರಾಹ್ಮಣಗಳಲ್ಲಿ ಇದೇ ಗಣದಲ್ಲಿರುವ ದೇವತಾಸಂಖ್ಯೆ ಹನ್ನೆರಡು. ಋಗ್ವೇದದಲ್ಲಿ ಯಾವಾಗಲೂ ತಾಯಿಯಾದ ಅದಿತಿ (೭-೧೦-೪) ಅಥವಾ ಆವರ ಮುಖಂಡನಾದ ವರುಣನ (೭-೩೫-೬) ಜೊತೆಯಲ್ಲಿಯೇ ಇರುತ್ತಾರೆ. ಮರುದ್ಗಣಕ್ಕಿಂತಲೂ, ಈ ಆದಿತ್ಯರ ಗಣವು ಹೆಚ್ಚು ಸ್ಪಷ್ಟವಾಗಿದೆ. ಆದಿತ್ಯಗಣದಲ್ಲಿ ಪ್ರತಿಯೊಂದು ದೇವತೆಗೂ ಒಂದೊಂದು ಪ್ರತ್ಯೇಕವಾದ ನಾಮವಿದೆ. ಋಗ್ವೇದದಲ್ಲಿ ಅನೇಕ ಸಲ ಪ್ರಸಕ್ತವಾಗುವ ಮತ್ತೊಂದು ವಸುಗಳೆಂಬ ಗುಂಪಿದೆ. ಮರುತ್ ಮತ್ತು ಆದಿತ್ಯಗಣಗಳಿಗಿಂತ, ಈಗಣವು ಅಸ್ಪಷ್ಟ. ಒಂದು ವಾಕ್ಯದಲ್ಲಿ, ಅದಿತಿ ಅಥವಾ ವರುಣನೊಡನೆ ಆದಿತ್ಯರೂ, ರುದ್ರನೊಡನೆ ರುದ್ರರೂ ಸ್ತುತರಾಗುವಂತೆ, ಇಂದ್ರನೊಡನೆ ವಸುಗಳೂ ಸ್ತುತರಾಗಿದಾರೆ (೭-೧೦-೪ ; ೭-೩೫-೬). ಇದರಿಂದ ವಸುಗಳಿಗೆ ಇಂದ್ರನು ಮುಖಂಡನೆನ್ನಬಹುದು. ಆದರೆ ಇತರ ವೇದಗಳು ಮತ್ತು ಬ್ರಾಹ್ಮಣಗಳಲ್ಲಿ,

ಅಗ್ನಿಯೇ ವಸುಗಣದ ಮುಖಂಡನು. ಐತರೇಯ ಮತ್ತು ಶತಪಥ ಬ್ರಾಹ್ಮಣಗಳಲ್ಲಿ, ಇವರ ಸಂಖ್ಯೆ ಎಂಟು; ಆದರೆ ತೈತ್ತಿರೀಯ ಸಂಹಿತೆಯಲ್ಲಿ (ತೈ.ಸಂ. ೫-೫-೨-೫), ಅವರು ೩೩೩ ಜನ. ಆದಿತ್ಯ, ರುದ್ರ ಮತ್ತು ವಸುಗಣಗಳು ಮೂರೂ, ಒಟ್ಟಾಗಿ ಕೆಲವು ಕಡೆ ಸ್ತುತವಾಗಿವೆ (೨-೩೧-೧; ೧೦-೬೬-೧೨; ೭-೧೦-೪ ಮತ್ತು ೭-೩೫-೬ ಗಳನ್ನು ಹೋಲಿಸಿ). ಈ ಮೂರು ಗಣಗಳಿಗೂ ಬ್ರಾಹ್ಮಣಗಳಲ್ಲಿ ಈರೀತಿ ವ್ಯತ್ಯಾಸವನ್ನು ಕಲ್ಪಿಸಿದಾರೆ. ಪೃಥ್ವಿಯಲ್ಲಿ ವಸುಗಳೂ, ವಾಯುವಿನಲ್ಲಿ ರುದ್ರರೂ, ಸ್ವರ್ಗದಲ್ಲಿ ಆದಿತ್ಯರೂ ಇದಾರೆ (ಶ. ಬ್ರಾ. ೧೧-೩-೪-೧೨; ೪-೩-೫-೧). ಛಾಂದೋಗ್ಯೋಪನಿಷತ್ತಿನಲ್ಲಿ (೩-೬ರಿಂದ ೧೦) ಐದು ಗಣಗಳು ಹೇಳಲ್ಪಟ್ಟಿವೆ. ವಸುಗಳು ಅಗ್ನಿಯೊಡನೆಯೂ, ರುದ್ರರು ಇಂದ್ರನೊಡನೆಯೂ, ಆದಿತ್ಯರು ವರುಣನೊಡನೆಯೂ, ಮರುತರು ಸೋಮನೊಡನೆಯೂ ಮತ್ತು ಸಾಧ್ಯರು ಬ್ರಹ್ಮನೊಡನೆಯೂ ಸೇರಿಸಲ್ಪಟ್ಟಿದಾರೆ (೧೦-೯-೭, ೧೬ನ್ನು ಹೋಲಿಸಿ). ಸ್ವಲ್ಪ ಹೆಚ್ಚು ಕಡಿಮೆ ದೇವತೆಗಳಿಂದೇ ಪರಿಗಣಿತರಾದ ಅಂಗಿರಸರೆಂಬುವರ ಗುಂಪೊಂದು, ಬೃಹಸ್ಪತಿಗೆ ಸಂಬಂಧಿಸಿದೆ. ಸಾಧಾರಣವಾಗಿ ಸರ್ವದಾ ಇಂದ್ರನೊಡನೆ ಸೇರಿರುವ ಮೂರು ಜನಗಳುಳ್ಳ ಋಭುಗಳ ಗುಂಪೊಂದಿದೆ. ಕಡೆಯದಾಗಿ ವಿಶ್ವೇದೇವಾಃ (ಎಲ್ಲಾ ದೇವತೆಗಳು) ಎಂಬುದೊಂದು ಗಣ. ಇದು ಯಾಗದಲ್ಲಿ ಬಹಳ ಮುಖ್ಯಸ್ಥಾನ ಪಡೆದಿದೆ. ಐವತ್ತು ಸೂಕ್ತಗಳು ಇವರ ಸ್ತುತಿಗೆ ವಿನಿಯೋಗವಾಗಿವೆ. ಪ್ರಾಯಶಃ, ಎಲ್ಲಾ ದೇವತೆಗಳೂ ಉದ್ದಿಷ್ಟರಾದಾಗ, ಯಾರೊಬ್ಬರೂ ಬಿಟ್ಟುಹೋಗಬಾರದೆಂಬ ಉದ್ದೇಶದಿಂದ ಈ ಗಣವನ್ನು ಏರ್ಪಡಿಸಿಕೊಂಡಿರಬಹುದು. ಆದರೆ ಒಂದೊಂದು ವೇಳೆ, ವಸುಗಳು ಮತ್ತು ಆದಿತ್ಯರು ಮೊದಲಾದವರೊಡನೆ ಸ್ತುತಿಸಲ್ಪಟ್ಟಾಗ, ವಿಶ್ವೇದೇವತೆಗಳು ಎಂದರೆ ಸಮಸ್ತದೇವತೆಗಳೂ ಉದ್ದಿಷ್ಟರಲ್ಲವೆಂದೂ ತೋರುತ್ತದೆ.

ಅಧಮದೇವತೆಗಳು—ಋಭುಗಳು.

ಋಗ್ವೇದದಲ್ಲಿ, ಪ್ರಸಕ್ತರಾಗಿರುವ ಉತ್ತಮದೇವತೆಗಳಲ್ಲದೆ, ಸ್ವಾಭಾವಿಕವಾದ ಮತ್ತು ಸಂಪೂರ್ಣವಾದ ದೇವತ್ವವನ್ನು ಹೊಂದದೇ ಇರುವ ಕೆಲವು ಕಾಲ್ಪನಿಕ ವ್ಯಕ್ತಿಗಳಿವೆ. ಇವರಲ್ಲಿ ಬಹಳ ಮುಖ್ಯರಾದವರು ಋಭುಗಳು. ಇವರನ್ನು ಹೊಗಳುವ ಸೂಕ್ತಗಳು ಹನ್ನೊಂದಿವೆ ಮತ್ತು ಅವರ ಹೆಸರು ನೂರಕ್ಕಿಂತಲೂ ಹೆಚ್ಚು ಸಲ ಬರುತ್ತದೆ. ಅವರದು ಒಂದು ದೇವತಾತ್ರಯ (ಮೂರು ದೇವತೆಗಳ ಗುಂಪು). ಅವರ ಪ್ರತ್ಯೇಕವಾದ ನಾಮಗಳು ಋಭು ಅಥವಾ ಒಂದೊಂದು ಸಲ ಋಭುಕ್ಷಾ (ಋಭುಗಳ ಯಜಮಾನ), ವಾಜ ಮತ್ತು ವಿಭ್ವಾ. ಅನೇಕ ಸಲ, ಈ ಮೂರು ಹೆಸರುಗಳೂ ಒಟ್ಟಾಗಿ ಹೇಳಲ್ಪಡುತ್ತವೆ; ಒಂದೊಂದು ಸಲ ಋಭು ಮಾತ್ರ ಹೇಳಲ್ಪಡುತ್ತದೆ ಅಥವಾ ಬಹುವಚನದಲ್ಲಿ ಋಭವಃ ಎಂತಲೂ ಹೇಳುವುದುಂಟು. ಮೂವರ ಹೆಸರುಗಳಲ್ಲಿ ಯಾವುದೊಂದರ ಬಹುವಚನ ಪ್ರಯೋಗವಿದ್ದರೂ, ದೇವತಾತ್ರಯವೆಂತಲೇ ಭಾವನೆ. ಒಂದೊಂದು ಸಲ ಮೂರು ಪದಗಳ ಬಹುವಚನರೂಪಗಳೂ (೪-೩೬-೩; ೮-೪೮-೧) ಅಥವಾ ಎರಡು ಪದಗಳ ಬಹುವಚನರೂಪಗಳೂ ಅನಾವಶ್ಯಕವಾಗಿ, ಪ್ರಯೋಗಿಸುವುದುಂಟು. ಒಂದು ಕಡೆ (೪-೩೬-೬), ವಾಜೋ ವಿಭ್ವಾ ಋಭವಃ ಎಂಬ ಪ್ರಯೋಗವಿದೆ. ಕೆಲವು ಕಡೆ, ಈ ಪದಗಳಿಂದ ವಿಶ್ವೇದೇವತೆಗಳನ್ನು ಕರೆದಿರುವಂತೆ ಕಾಣುತ್ತದೆ; (ವಿಶ್ವೇ) ಎಲ್ಲಾ ಋಭುಗಳು (೭-೫೧-೩)' ಋಭುಗಳಿಂದ ಯುಕ್ತನಾದ ಋಭು, ಮತ್ತು ವಿಭುಗಳಿಂದ ಯುಕ್ತನಾದ ವಿಭ್ವಾ (೭-೪೮-೨), ಇವರುಗಳು ಆಹೂತರಾಗಿದಾರೆ. ಋಭುಗಳಲ್ಲಿ ಜ್ಯೇಷ್ಠ, ಕನಿಷ್ಠ ಮತ್ತು ಮಧ್ಯವಯಸ್ಕನೆಂದು ವಯೋನುಗುಣವಾಗಿಯೂ ಅವರವರ ಭಿನ್ನತೆಯನ್ನು ವ್ಯಕ್ತಪಡಿಸಿದಾರೆ (೪-೩೬-೫).

ಸುಧನ್ವಾನ್ ಎಂದರೆ 'ಒಳ್ಳೆಯ ಧನುರ್ಧಾರಿ' ಇವನ ಪುತ್ರರು ಸೌಧನ್ವನರೆಂದು ಋಭುಗಳಿಗೆ ಹನ್ನೆರಡು ಕಡೆಹೇಳಿದೆ. ಮೂವರಿಗೂ ಒಟ್ಟಾಗಿ ಇಂದ್ರನ ಪುತ್ರನೆಂದೂ (೪-೩೭-೪) ಹೇಳಿದೆ. ಅದೇ ಮಂತ್ರದಲ್ಲಿ ಅವರನ್ನು

ಸಾಮರ್ಥ್ಯದ ಮಕ್ಕಳು (ಶವಸೋ ನಪಾತಃ) ಎಂತಲೂ ಕರೆದಿದೆ. ಈ ವಿಶೇಷಣವು, ಮಿತ್ರಾವರುಣರಿಗೆ ಒಂದು ಸಲ ಹೊರತಾಗಿ, ಉಳಿದ ಕಡೆಗಳಲ್ಲೆಲ್ಲಾ (ಐದು ಸಲ) ಇವರಿಗೇ ಸಂದಿದೆ. ೩-೬೦-೩ರಲ್ಲಿ ಅವರು ಮನುವಿನ ಮಕ್ಕಳು ಎಂದು ಹೇಳಿದೆ. ಅವರ ಪಿತೃಗಳೂ ಅನೇಕ ಕಡೆ ಹೇಳಲ್ಪಟ್ಟಿದಾರೆ. ಒಂದು ಸೂಕ್ತದಲ್ಲಿ ಅಗ್ನಿಯನ್ನು ಅವರ ಸೋದರನೆಂದು ಕರೆದಿದಾರೆ (೧-೧೬೧-೧, ೩).

ಯಾಗಶಾಲೆಗೆ ಬಂದು (೪-೩೪-೪ ; ೪-೩೬-೨ ; ೭-೪೮-೧) ಸೋಮರಸವನ್ನು ಪಾನಮಾಡಬೇಕೆಂದು (೪-೩೪-೧, ೩ ; ೪-೩೭-೧) ಅವರನ್ನು ಮೇಲೆ ಮೇಲೆ ಕರೆದಿದಾರೆ. ಅವರ ವಾಸಸ್ಥಳವು ಮೇಲುಲೋಕವಾದುದರಿಂದ, ಅವರನ್ನು ಸೋಮರಸವಿರುವ ಈ ಕೆಳಗಿನ ಲೋಕಕ್ಕೆ ಬರಬೇಕೆಂದು (೪-೩೭-೩) ಅಹ್ವಾನವೀಯುತ್ತಾರೆ. ಈ ಸಂದರ್ಭದಲ್ಲಿ, ಅವರು ಸಾಧಾರಣವಾಗಿ ಇಂದ್ರನ ಜೊತೆಯಲ್ಲಿರುತ್ತಾರೆ (೩-೬೦-೪ರಿಂದ ೬ ; ೪-೩೩-೩ ; ೪-೩೪-೬ ; ೪-೩೫-೭) ; ಕೆಲವು ಸಲ ಮರುತರೊಡನೆ (೧-೨೦-೫ ; ೧-೧೧೧-೪ ; ೪-೩೪-೧೧), ಒಂದು ಸಲ, ಆದಿತ್ಯರು, ಸವಿತೃ, ಪರ್ವತಗಳು ಮತ್ತು ನದಿಗಳೊಡನೆ (೪-೩೪-೮). ಇತರ ವಿಷಯಗಳಲ್ಲಿಯೂ, ಇವರಿಗೂ ಇಂದ್ರನಿಗೂ ಬಹಳ ಸಮೀಪಬಾಂಧವ್ಯ. ಅವರು ಇಂದ್ರನಂತಿದಾರೆ (೪-೩೭-೫) ಮತ್ತು ಋಭುವು ಒಬ್ಬ ಹೊಸ ಇಂದ್ರನಂತಿದಾನೆ (೧-೧೧೦-೭). ಇಂದ್ರನಿಂದ ಯುಕ್ತರಾಗಿ, ಅವರು ಶತ್ರುಜಯಕಾರ್ಯದಲ್ಲಿ ಮನುಷ್ಯರಿಗೆ ಸಹಾಯಕರಾಗುತ್ತಾರೆ (೪-೩೭-೬) ಮತ್ತು ಶತ್ರುಗಳನ್ನು ಜಯಿಸುವುದಕ್ಕೆ ಸಹಾಯ ಮಾಡಬೇಕೆಂದು ಇಂದ್ರನೊಡನೆ ಪ್ರಾರ್ಥಿತರಾಗಿದಾರೆ (೭-೪೮-೩). ಇಂದ್ರನ ಅಶ್ವಗಳ ಆಕೃತಿಯನ್ನು ಮೊದಲು ರಚಿಸಿದವರು ಋಭುಗಳು ; ಇವರ ಈ ಕಲಾಕೌಶಲ್ಯದಿಂದಲೇ ಇವರು ಇಂದ್ರನ ಸ್ನೇಹವನ್ನು ಗಳಿಸಿದುದು (೩-೬೦-೩, ೪-೩೫-೭, ೯). ಅವರನ್ನು ಸ್ತುತಿಸುವ ಸೂಕ್ತಗಳಲ್ಲಿ, ಇಂದ್ರನಲ್ಲದೆ ಬೇರೆ ಯಾವ ದೇವತೆಯೊಡನೆಯೂ ಅವರು ಸ್ತುತರಾಗಿಯೇ ಇಲ್ಲ, ಒಂದೇ ಒಂದು ಮಂತ್ರದಲ್ಲಿ ಮಾತ್ರ (೪-೩೪-೮) ಇಂದ್ರನ ಹೆಸರು ಹೇಳಿಲ್ಲ. ಇಂದ್ರನಿಗೂ ಇವರಿಗೂ ಇರುವ ಸಂಬಂಧವು ಎಷ್ಟು ನಿಕಟವಾದುದು ಎಂದರೆ, ಋಭುಗಳ ಮುಖಂಡನೆಂದರ್ಥ ಕೊಡುವ 'ಋಭುಕ್ಷಾ' ಎಂಬ ಪದವು ಇಂದ್ರನಿಗೂ ಉಪಯೋಗಿಸಲ್ಪಡುತ್ತದೆ ಅದರಂತೆ, ಮರುತರಿಗೂ ೨-೩ ಸಲ ಈ ಪದವು ಪ್ರಯೋಗಿಸಲ್ಪಟ್ಟಿದೆ. ವಿಶ್ವೇದೇವತಾಕವಾದ ಸೂಕ್ತಗಳಲ್ಲ, ಇತರ ಕೆಲವು ದೇವತೆಗಳೊಡನೆಯೂ, (ಮುಖ್ಯವಾಗಿ ತ್ವಷ್ಟೃವಿನೊಡನೆ) ಇವರು ಸೇರಿಸಲ್ಪಟ್ಟಿದಾರೆ.

ಋಭುಗಳ ದೇಹ ಅಥವಾ ಆಯುಧಾದಿಸಾಮಗ್ರಿಗಳ ವರ್ಣನೆ ಬಹಳ ಕಡಿಮೆ. ಅವರು ರೂಪದಲ್ಲಿ ಸೂರ್ಯನಂತಿದಾರೆ (೧-೧೧೦-೪). ಅಶ್ವಗಳಿಂದ ಎಳೆಯಲ್ಪಡುವ (೭-೪೮-೧) ರಥವೊಂದಿದೆ (೧-೧೬೧-೭). ಅವರ ರಥವು ಹೊಳೆಯುತ್ತಿದೆ ಮತ್ತು ಅಶ್ವಗಳು ಪುಷ್ಟವಾಗಿವೆ, ಲೋಹದ ಶಿರಸ್ತ್ರಾಣಗಳನ್ನೂ, ರಮಣೀಯವಾದ ಕಂಠಹಾರಗಳನ್ನೂ ಧರಿಸುತ್ತಾರೆ (೪-೩೭-೪). ಋಭುವೂ ಒಬ್ಬ ಅಶ್ವಗಳುಳ್ಳವನು (ಅಶ್ವಿನಾ ೪-೩೭-೫). ಋಭುಗಳದು ವಿಲಕ್ಷಣವಾದ ಚತುರತೆ ಮತ್ತು ಕೈಚಳಕ (೪-೩೩-೧, ೪, ಇತ್ಯಾದಿ), ಅವರ ಕುಶಲ ಕೆಲಸಗಳನ್ನು ಅನುಕರಿಸುವುದು ಅಸಾಧ್ಯ (೩-೬೦-೪). ಅವರು ತಮ್ಮ ಕೌಶಲ್ಯದಿಂದಲೇ ದೇವತ್ವವನ್ನು ಪಡೆದರೆಂದು ಬಾರಿಬಾರಿಗೂ ಹೇಳಿದೆ. ಅವರ ಅಶ್ಚರ್ಯಕರವಾದ ಕೃತಿಗಳಿಂದ ದೇವತ್ವವನ್ನು ಪಡೆದರು (೩-೬೦-೧). ತಮ್ಮ ಕುಶಲಕರ್ಮಗಳಿಂದ, ಅವರು ದೇವತ್ವವನ್ನೂ ಅಮರತ್ವವನ್ನೂ ಪಡೆದು, ಗಿಡುಗಗಳಂತೆ ಸ್ವರ್ಗದಲ್ಲಿ ಳಿದರು (೪-೩೫-೪). ಅವರು ವಾಯುಮಂಡಲದ ಮನುಷ್ಯರು, ಸ್ವಶಕ್ತಿಯಿಂದಲೇ ಸ್ವರ್ಗವನ್ನು ಏರಿದರು (೧-೧೧೦-೬). ಅವರು ತಮ್ಮ ಬುದ್ಧಿವಂತಿಕೆಯ ಕೆಲಸಗಳಿಂದ, ಅಮರತ್ವದ ಮಾರ್ಗವಾಗಿ, ದೇವತೆಗಳನ್ನು ಸೇರಿದರು (೪-೩೫-೩), ದೇವತೆಗಳಂತೆ ಅಮರರಾಗಿ, ಅವರ ಸ್ನೇಹವನ್ನೂ ಸಂಪಾದಿಸಿದರು (೪-೩೩-೩, ೪,

೪-೩೫-೩, ೪-೩೬-೪). ಅವರು ಮೊದಲು ಮರ್ತ್ಯರು, ಮನುವಿನ ಮಕ್ಕಳಾಗಿದ್ದು, ಅನಂತರ ದೇವತ್ವವನ್ನು ಕಪ್ಪಪಟ್ಟು ಗಳಿಸಿದರು (೩-೬೦-೩; ೧-೧೧೦-೪). ಐತರೇಯ ಬ್ರಾಹ್ಮಣದಲ್ಲಿ (ಐ. ಬ್ರಾ. ೩-೩೦-೨), ಮನುಷ್ಯರಾಗಿದ್ದ ಋಭುಗಳು, ತಮ್ಮ ತಪೋಮಹಿಮೆಯಿಂದ, ದೇವತೆಗಳಂತೆ ಸೋಮಪಾನಾರ್ಹತೆಯನ್ನು ಸಂಪಾದಿಸಿದರೆಂದಿದೆ. ಇವರ ಕೆಲಸದಿಂದ ದೇವತೆಗಳಿಗೆ ಬಹಳ ಸಂತೋಷವಾಯಿತು, ಅದರಿಂದಲೇ ವಾಜನು ದೇವತೆಗಳಿಗೂ, ಋಭುಕ್ಷನು ಇಂದ್ರನಿಗೂ, ವಿಭ್ವನು ವರುಣನಿಗೂ ಶಿಲ್ಪಿಗಳಾದರು (೪-೩೩-೯). ಅವರು ದೇವತೆಗಳನ್ನು ಸಮೀಪಿಸಿ, ತಮ್ಮ ಚತುರತೆಯನ್ನು ತೋರಿಸಿ, ತನ್ಮೂಲಕ ಯಾಗವನ್ನು ಅಥವಾ ಯಾಗ ಭಾಗವನ್ನು ಸಂಪಾದಿಸಿದರು (೧-೨೦-೧, ೪; ೧-೧೨೧-೬, ೭). ಆದುದರಿಂದಲೇ ಮೂರನೆಯ ಅಥವಾ ಸಾಯಂಕಾಲದ ಸವನವು ಅವರಿಗೆ ಸೇರಿದುದು. ಅವರು ಅದನ್ನು ತಮ್ಮ ಕುಶಲ ಕೆಲಸದಿಂದ ಪಡೆದರು (೧-೧೬೧-೪, ೪-೩೩-೧೧, ೪-೩೪-೪, ೪-೩೫-೯). ಆದುದರಿಂದ, ಅವರು ಒಂದೊಂದು ಸಲ ಸ್ಪಷ್ಟವಾಗಿ ದೇವತೆಗಳೆಂದೇ ಆಹೂತರಾಗುತ್ತಾರೆ (೪-೩೬-೫, ೪-೩೭-೧).

ದೊಡ್ಡ ದೊಡ್ಡ ದೇವತೆಗಳನ್ನು ಪ್ರಾರ್ಥಿಸುವಂತೆ, ಇವರನ್ನೂ, ಸಮೃದ್ಧಿ ಮತ್ತು ಐಶ್ವರ್ಯವನ್ನೂ (೪-೩೩-೪, ೪-೩೭-೫), ಗೋವುಗಳು, ಅಶ್ವಗಳು ಮತ್ತು ಶೂರರಾದ ಪುತ್ರರು, ಇವುಗಳನ್ನೂ (೪-೩೪-೧೦) ಮತ್ತು ಶಕ್ತಿ, ಪುಷ್ಟಿ, ಸಂತತಿ ಮತ್ತು ಚತುರತೆಗಳನ್ನೂ (೧-೧೧೧-೨) ಅನುಗ್ರಹಿಸಬೇಕೆಂದು ಪ್ರಾರ್ಥಿಸಿದೆ. ಸೋಮರಸವನ್ನು ಹಿಂಡುವವನಿಗೆ, ಋಭುಗಳು ಸಂಪತ್ತನ್ನು ದಯಪಾಲಿಸುತ್ತಾರೆ (೧-೨೦-೭, ೪-೩೫-೬). ಅವರ ಸಹಾಯ ಪಡೆದವನು ಯುದ್ಧದಲ್ಲಿ ಅಜೇಯನಾಗುತ್ತಾನೆ (೪-೩೬-೬) ಮತ್ತು ಯುದ್ಧದಲ್ಲಿ ಸಹಾಯ ಮಾಡಿ, ಲಾಭವನ್ನು ಗಳಿಸಿಕೊಡಬೇಕೆಂದು ಋಭು ಮತ್ತು ವಾಜರನ್ನು ಬೇಡಿದಾರೆ (೧-೧೧೫-೫).

ಇವರು ಮಾಡಿದ ಕುಶಲ ಕರ್ಮಗಳನ್ನು ವರ್ಣಿಸುವಾಗಲೂ ಸಾಧಾರಣವಾಗಿ, ತ್ವಷ್ಟೃವಿಗೆ ಉಪಯೋಗಿಸಿರುವ 'ತಕ್ಷ್' ಧಾತುವೇ ಉಪಯೋಗಿಸಲ್ಪಡುತ್ತದೆ. ಇವರು ಸಾಧಿಸಿರುವುದು ಐದು ಮಹಾ ಕಾರ್ಯಗಳನ್ನು. ಸಾಧಾರಣವಾಗಿ ಋಭುಗಳನ್ನು ಸ್ತುತಿಸುವ ಪ್ರತಿಯೊಂದು ಸೂಕ್ತದಲ್ಲಿಯೂ ಈ ಕಾರ್ಯಗಳಿಗೆ ನಿರ್ದೇಶವಿದ್ದೇ ಇರುತ್ತದೆ. ಅವರು ಅಶ್ವಗಳಿಲ್ಲದ, ಲಗಾಮಿಲ್ಲದ, ಮೂರು ಚಕ್ರದ ಮತ್ತು ಅಂತರಾಳದಲ್ಲಿ ಸಂಚರಿಸಬಲ್ಲ (೪-೩೬-೧) ರಥವೊಂದನ್ನು ರಚಿಸಿದರು (೧-೧೧೧-೧; ೧-೧೬೧-೩; ೪-೩೩-೪; ೪-೩೬-೨). ಚಕ್ರಾಕಾರವಾಗಿ ತಿರುಗುವ ರಥವನ್ನು, ಅಶ್ವನೀದೇವತೆಗಳಿಗೊಸ್ಕರ ಋಭುಗಳು ರಚಿಸಿದರು (೧-೨೦-೩; ೧-೧೬೧-೬; ೧೦-೩೯-೧೨). ೪-೩೪-೯ನೆಯ ಮಂತ್ರದಲ್ಲಿ, ಅವರ ಒಂದೊಂದು ಕಾರ್ಯವೂ ಒಂದೊಂದು ಪದದಿಂದ ಉಕ್ತವಾಗಿದೆ. ಇಲ್ಲಿ ಅವರು ಅಶ್ವಿನೀದೇವತೆಗಳನ್ನು ನಿರ್ಮಿಸಿದರು ಎಂದಿದೆ. ಇದೂ ಕೂಡ ಆ ದೇವತೆಗಳ ರಥ ನಿರ್ಮಾಣಕ್ಕೇ ಅನ್ವಯಿಸಬಹುದು.

ಇಂದ್ರನಿಗೋಸ್ಕರ, ಅವರು ಎರಡು ಕಪಿಲವರ್ಣದ ಅಶ್ವ (ಹರೀ)ಗಳನ್ನು ಸೃಜಿಸಿದರು; ಈ ಅಶ್ವಗಳು ಅವನನ್ನು ಗಾಳಿಯಲ್ಲಿ ತೇಲಿಸಿಕೊಂಡು ಹೋಗುತ್ತವೆ (೪-೩೩-೧೦; ಇತ್ಯಾದಿ). ಅಶ್ವವನ್ನು ನಿರ್ಮಿಸಬೇಕೆಂದು ಇಚ್ಛೆಪಟ್ಟರು ಅಥವಾ ಒಂದಾದ ಮೇಲೊಂದು ಎರಡು ಅಶ್ವಗಳನ್ನು ಸೃಜಿಸಿದರು ಎಂದಿರುವಾಗಲೂ, ಅವರ ಈ ಮೇಲೆ ಹೇಳಿದ ಕಾರ್ಯವೇ ಅಭಿಪ್ರೇತವಾಗಿರಬೇಕು (೧-೧೬೧-೩, ೭).

ಅಮೃತವನ್ನು ಕೊಡುವ (೧-೨೦-೩) ಮತ್ತು ಉತ್ತೇಜಕವೂ, ವಿಶ್ವರೂಪಿಯೂ (೪-೩೩-೪) ಆದ ಗೋವು ಒಂದು ಅವರಿಂದ ರಚಿತವಾಯಿತು (೧-೧೬೧-೩; ೪-೩೪-೯). ಋಭುಗಳು ಈ ಗೋವನ್ನು ಚರ್ಮದಿಂದ ಮಾಡಿದರು (೧-೧೧೦-೪) ಅಥವಾ ಚರ್ಮದಿಂದ ಹೊರತೆಗೆದರು (೧-೧೬೧-೭; ಇತ್ಯಾದಿ). ಅವರೇ

ಅದನ್ನು ಕಾಪಾಡಿದರು ಮತ್ತು ಅದರ ಮಾಂಸವನ್ನು ಬೆಳೆಸಿದರು (೪-೩೩-೪). ಇಂದ್ರನು ಋಭುಗಳಿಂದ ಸೃಷ್ಟವಾದ ಕಪಿಲವರ್ಣದ ಎರಡು ಅಶ್ವಗಳನ್ನು ರಥಕ್ಕೆ ಹೂಡಿದನು; ಅಶ್ವಿನಿಗಳು ರಥವನ್ನು ಕಟ್ಟಿದರು ಮತ್ತು ಬೃಹಸ್ಪತಿಯು ವಿಶ್ವರೂಪೀ ಗೋವನ್ನು ಹೊರಡಿಸಿದನು (೧-೧೬೧-೬). ಈ ವಾಕ್ಯದಿಂದ, ಬೃಹಸ್ಪತಿಗಾಗಿ ಆ ಗೋವನ್ನು ಋಭುಗಳು ರಚಿಸಿದರೆಂದು ಹೇಳಬಹುದು. ಇನ್ನೊಂದು ಸಾಧಾರಣವಾದ ಕಾರ್ಯವೂ ಹೇಳಲ್ಪಟ್ಟಿದೆ; ಪ್ರಾಯಶಃ ಈ ಹಿಂದಿನ ಗೋಸೃಷ್ಟಿಗೇ ಸಂಬಂಧಿಸಿದುದೆಂದು ಹೇಳಬಹುದು; ಅದೇನೆಂದರೆ, ಆಗಲಿದ್ದ ಒಂದು ಅಕಳು ಮತ್ತು ಅದರ ಕರುವನ್ನು ಪುನಃ ಒಂದುಗೂಡಿಸಿದರು (೧.೧೧೦-೪; ೧-೧೧೧-೧).

ಬಹಳ ಶಿಥಿಲರೂ, ಹುಳುಹಿಡಿದ ಕಂಭಗಳಂತೆ ಇದ್ದ (೧-೧೧೦-೪; ೪-೩೩-೨, ೩) ತಮ್ಮ ತಂದೆ ತಾಯಿಗಳನ್ನು ಪುನರುಜ್ಜೀವನಗೊಳಿಸಿದರು (೧–೨೦-೪; ೧-೧೧೧-೧; ೪-೩೫-೫). ಮುದುಕರಾಗಿದ್ದ ಇಬ್ಬರನ್ನು (ತಂದೆ-ತಾಯಿ) ಪುನಃ ಯುವಕರನ್ನಾಗಿ ಮಾಡಿದರು (೧-೧೬೧–೩, ೭). ೪-೩೪-೯ರಲ್ಲಿ, ಅವರು ಸಾಧಿಸಿದ ಕಾರ್ಯಗಳನ್ನು ಸಂಕ್ಷೇಪವಾಗಿ ಹೇಳುವಾಗ, ಅವರು ತಮ್ಮ ಮಾತಾಪಿತೃಗಳಿಗೆ ಆಕೃತಿಯನ್ನು ಕೊಟ್ಟರು ಎಂದಿದೆ. ಅಲ್ಲಿಯೂ ಇದೇ ಪುನರುಜ್ಜೀವನವೇ ಅಭಿಪ್ರಾಯವಾಗಿರಬೇಕು. ವೃದ್ಧರಾದ ಮಾತಾಪಿತೃಗಳಿಗೆ ತಾರುಣ್ಯವನ್ನು ಕೊಟ್ಟು ಅವರು ಪುನಃ ಓಡಾಡುವಂತೆ ಮಾಡಿದುದು, ದೇವತೆಗಳೆಲ್ಲರಿಂದಲೂ ಸ್ತುತ್ಯವಾಗಿದೆ (೪-೩೬-೩). ಅದೇ ಸೂಕ್ತದ (೪-೩೬) ಮೊದಲನೆಯ ಮಂತ್ರದಲ್ಲಿ, ದ್ಯಾವಾಪೃಥಿವಿಗಳನ್ನು ಅಭಿವೃದ್ಧವಾಗುವಂತೆ ಮಾಡಿದುದು (ಪ್ರಾಯಶಃ ಮಾತಾಪಿತೃಗಳ ಪುನರುಜ್ಜೀವನಕಾರ್ಯ) ಅವರಿಗೆ ದೈವೀಶಕ್ತಿಯಿದೆಯೆಂಬುದನ್ನು ಘೋಷಿಸುತ್ತದೆ ಎಂದು ಹೇಳಿದೆ.

ಇವರ ಚತುರತೆಯೇ ವಿಶೇಷವಾಗಿ ಪ್ರಶಸ್ಯವಾಗಿರುವುದು ಮತ್ತು ಅದೇ ಅವರ ಶ್ರೇಷ್ಠವಾದ ಗುಣ. ಈ ಅಂಶದಲ್ಲಿಯೇ, ಅವರು ತ್ವಷ್ಟೃವಿನಿಂದ ರಚಿತವಾದ ಒಂದು ವಿಲಕ್ಷಣವಾದ ಬಟ್ಟಲನ್ನು, ಈ ಋಭುಗಳು ನಾಲ್ಕು ಸಮಾನವಾದ ಬಟ್ಟಲುಗಳಾಗಿ ಮಾಡಿದಾರೆ (೧-೨೦-೬; ೧-೧೧೦-೩; ೪-೩೫-೨, ೩; ೪-೩೬-೪). ಈ ಬಟ್ಟಲು ದೇವತೆಗಳು (೧-೧೬೧-೫; ೪-೩೫–೫) ಅಥವಾ 'ಅಸುರ'ನು (೧-೧೧೦-೩) ಪಾನ ಮಾಡುವ ಸಾಧನ. ದೇವತೆಗಳೇ ಅಗ್ನಿಯ ಮೂಲಕ ಋಭುಗಳಿಗೆ ಮರದಿಂದ ಮಾಡಿದ ಈ ಒಂದು ಬಟ್ಟಲನ್ನು ನಾಲ್ಕಾಗಿ ಮಾಡಿದರೆ, ನಿಮಗೂ ದೇವತೆಗಳಂತೆ ಪೂಜೆಗೆ ಅರ್ಹತೆಯನ್ನು ಅನುಗ್ರಹಿಸುತ್ತೇವೆ ಎಂದು ಹೇಳಿಕಳುಹಿಸಿದರು (೧-೧೬೧-೧, ೨). ತ್ವಷ್ಟೃ ಒಂದು ಬಟ್ಟಲನ್ನು ಎರಡು, ಮೂರು ಅಥವಾ ನಾಲ್ಕಾಗಿ ಮಾಡುವ ಋಭುಗಳ ಈ ಪ್ರಯತ್ನವನ್ನು ಪ್ರಶಂಸಿಸಿ, ನಾಲ್ಕು ಬಟ್ಟಲುಗಳು ರಚಿತವಾದಮೇಲೆ, ಅವುಗಳನ್ನು ಒಪ್ಪಿದನು (೪-೩೩-೫,೬). ಬೇರೆ ಒಂದುವಾಕ್ಯದಲ್ಲಿ ಇದಕ್ಕೆ ವಿರುದ್ಧವಾಗಿದೆ (೧–೧೬೧-೪,೫). ಈ ನಾಲ್ಕುಬಟ್ಟಲುಗಳನ್ನು ನೋಡಿದ ಕೂಡಲೇ, ಋಭುವು ಹೆಂಗಸರ ಗುಂಪಿನಲ್ಲಿ ಅಡಗಿಕೊಂಡು, ತಾನುಮಾಡಿದ ದೇವತೆಗಳು ಪಾನಮಾಡುವ ಬಟ್ಟಲನ್ನು ಅಪವಿತ್ರಮಾಡಿದ ಋಭುಗಳನ್ನು ವಧಿಸಲು ಇಚ್ಛಿಸಿದನು: ಆದರೆ ಅದರ ಹಿಂದಿನ ಮಂತ್ರದಲ್ಲಿಯೇ ಆದನ್ನು ಅಪವಿತ್ರ ಮಾಡುವ ಇಚ್ಛೆ ತಮಗಿಲ್ಲವೆಂಬುದನ್ನು ಋಭುಗಳು ಹೇಳಿದಾರೆ. ದೇವತೆಗಳಲ್ಲಿ ಯಶಸ್ಸನ್ನು ಸಂಪಾದಿಸಬೇಕೆಂದು, ಋಭುಗಳು, ಜಮೀನನ್ನು ಅಳೆಯುವಂತೆ ಆ ಅಗಲವಾದ ಬಟ್ಟಲನ್ನು ಅಳೆದರು ಎಂದು (೧-೧೧೦-೧) ವರ್ಣನೆಯಿದೆ. ಇದನ್ನೇ ಸ್ವಲ್ಪ ಅಸ್ಪಷ್ಟವಾಗಿ, ಬಟ್ಟಲುಗಳನ್ನು ರಚಿಸಿದರು ಅಥವಾ ಬಟ್ಟಲುಗಳಿಗೆ ಆಕಾರವನ್ನು ಕೊಟ್ಟರು (೧-೧೬೧-೯; ೩-೬೦–೨;೪-೩೫-೫ ನ್ನು ಹೋಲಿಸಿ) ಎಂದು ಹೇಳಿದೆ.

ಪ್ರಾರ್ಥನಾ ವಾಕ್ಯಗಳನ್ನು (೧೦-೮೦-೭), ಯಾಗವನ್ನು (೩-೫೪-೧೨) ರೂಢಿಗೆ ತಂದರು. ಮತ್ತು ಎರಡು ಲೋಕಗಳನ್ನು ರಚಿಸಿದರು (೪-೩೪-೯) ಅಥವಾ ಆಕಾಶಕ್ಕೆ ಆಧಾರರಿಗಿದಾರೆ (೧೦–೬೬-೧೦) ಎನ್ನುವಾಗಲೂ ಅವರ ಕೌಶಲ್ಯವೇ ವ್ಯಕ್ತವಾಗುತ್ತದೆ.

ಮತ್ತೊಂದು ಕಥೆಯು ಅವರಿಗೂ ಸವಿತೃವಿಗೂ ಸಂಬಂಧವನ್ನು ಕಲ್ಪಿಸುತ್ತದೆ. ಅವರು ಗಾಳಿಯಿಂದ ತೂರಲ್ಪಟ್ಟು, ವೇಗವಾಗಿ ಆಕಾಶದ ಸುತ್ತಲೂ ಸಂಚರಿಸಿದರು (೪-೩೩-೧ ;೧-೧೬೧-೧೨ನ್ನು ಹೋಲಿಸಿ). ಬಹಳ ಸುತ್ತಿದ ಮೇಲೆ, ಅಗೋಹ್ಯ ನೆಂಬ ಸವಿತೃವಿನ ಗೃಹಕ್ಕೆ ಆಗಮಿಸಿದರು. ಆಗ ಸವಿತೃವು ಅವರಿಗೆ ಅಮರತ್ವವನ್ನು ಅನುಗ್ರಹಿಸಿದನು. (೧-೧೧೦-೨,೩). ಅನಂತರ, ಅವನ ಆಥಿತ್ಯವನ್ನು ಸ್ವೀಕರಿಸಿ, ಸಂತುಷ್ಟರಾಗಿ, ಅಲ್ಲೇ ಹನ್ನೆರಡು ದಿನಗಳು ನಿದ್ರಾಮಗ್ನರಾದರು. ; ಆಗ ಉತ್ತಮ ಕ್ಷೇತ್ರಗಳನ್ನುಂಟುಮಾಡಿ, ಅಲ್ಲಿಗೆ ನೀರು ಹರಿಯುವಂತೆ ಮಾಡಿದರು ; ಬಂಜರು ಭೂಮಿಯೆಲ್ಲಿ ಸಸ್ಯಗಳು ಬೆಳೆದವು ಮತ್ತು ತಗ್ಗು ಪ್ರದೇಶಗಳನ್ನೆಲ್ಲಾ ನೀರು ಆವರಿಸಿತು (೪-೩೩-೭). ನಿದ್ರಿಸುತ್ತಿರುವಾಗಲೇ ತಮ್ಮ ಸಾಮರ್ಥ್ಯದಿಂದ, ಉನ್ನತಪ್ರದೇಶಗಳಲ್ಲೆಲ್ಲಾ ಹುಲ್ಲು ಬೆಳೆಯುವಂತೆಯೂ, ಆಳವಾದ ಸ್ಥಳಗಳಲ್ಲಿ ನೀರು ನಿಲ್ಲುವಂತೆಯೂ ಮಾಡಿದರು. (೧-೧೬೧-೧೧). ನಿದ್ರೆಮಾಡಿ ಎದ್ದು ತಮ್ಮನ್ನು, ಎಚ್ಚರಗೊಳಿಸಿದವರಾರೆಂದು ಅಗೋಹ್ಯ (ಸವಿತೃ) ನನ್ನು ಪ್ರಶ್ನಿಸಿದರು ; ಒಂದು ವರ್ಷವಾದ ಮೇಲೆ ಸುತ್ತಲೂ ನೋಡಿದರು. (೧-೧೬೧-೧೩)

ಋಭು ಎಂಬ ಪದವು ವ್ಯಾಯಶಃ ರಭ್ (ಹಿಡಿದಿಕೋ) ಧಾತುವಿನಿಂದ ನಿಷ್ಪನ್ನವಾಗಿದೆ. (೨-೩೨ನ್ನು ಹೋಲಿಸಿ) ; ಆದುದರಿಂದಲೇ ಆ ಪದಕ್ಕೆ 'ಸಮಯಕ್ಕೆ ಒದಗುವ' 'ಕೈಚಳಕವುಳ್ಳ' ಎಂದು ಅರ್ಥವಾಗಿದೆ. ಈ ಋಭುಪದವು ಇದೇ ಅರ್ಥದಲ್ಲಿ ವಿಶೇಷಣವಾಗಿ ಇಂದ್ರ, ಅಗ್ನಿ, ಮತ್ತು ಆದಿತ್ಯರುಗಳಿಗೆ ಅನೇಕ ಸಲ ಉಪಯೋಗಿಸಲ್ಪಟ್ಟಿದೆ. ವಾಜ ಎಂಬ ಪದಕ್ಕೆ ಸಮರ್ಥ ಎಂತಲೂ ವಿಭ್ವಾ ಎಂಬುದಕ್ಕೆ ಪ್ರಸಿದ್ಧನಾದ ಎಂತಲೂ ಅರ್ಥವಾಗುತ್ತದೆ. ಆದುದರಿಂದ ಋಭು ಮೊದಲಾದ ಪದಗಳು, ಅವರುಗಳ ಕೌಶಲ್ಯವನ್ನೂ ಸೂಚಿಸುವ ಅನ್ವರ್ಥನಾಮಗಳಾಗಿವೆ.

ಇವರು ಮೊದಲು ದೇವತೆಗಳಾಗಿರಲಿಲ್ಲವೆಂಬುದು ಸ್ಪಷ್ಟವಾದ ವಿಷಯ. ಆದರೆ ದೇವತೆಗಳಾಗುವ ಮುಂಚೆ ಅವರ ಸ್ವಭಾವವೇನು ಎಂಬುದು ಸ್ಪಷ್ಟವಾಗಿಲ್ಲ. ಸೌಧನ್ವನರು ಎಂದು ಹೇಳಿದಾಗಲೂ ಅವರು ಯಾರೆಂಬುದು ಗೊತ್ತಾಗುವುದಿಲ್ಲ. ಸುಧನ್ವಾನ್ ಎಂಬುದು ರುದ್ರ ಮತ್ತು ಮರುತರಿಗೆ ಅನ್ವಯಿಸುವಂತೆ ಎರಡೇ ಸಲ ಋಗ್ವೇದದಲ್ಲಿ ಪ್ರಯೋಗಿಸಲ್ಪಟ್ಟಿರುವುದು. ಅನೇಕ ಕಡೆ ಹೇಳಿರುವಂತೆ, ದ್ಯಾವಾಭೂಮಿಗಳು ಅವರ ಮಾತಾಪಿತೃಗಳಿರಬಹುದು. ಮರಿಮಾಡಲಸಾಧ್ಯವಾದ ಸವಿತೃವಿನ ಮನೆಯಲ್ಲಿದ್ದುದರಿಂದ ಅವರಿಗೆ ಭೂಮಿಯನ್ನು ಫಲವತ್ತಾಗಿ ಮಾಡುವ ಶಕ್ತಿಯಿದೆಯೆಂದು ಹೇಳಿರಬಹುದು. ಅನೇಕ ವಿದ್ವಾಂಸರು, ಈ ಮೂವರೂ ಮೂರು ಋತುಗಳ ಅಭಿಮಾನಿಗಳೆಂದೂ, ಅವರು ಹನ್ನೆರಡು ದಿನಗಳು ನಿದ್ರಿಸಿದರೆಂಬುದು ಮಕರಸಂಕ್ರಾಂತಿ ಕಾಲದಲ್ಲಿ ಋತುಗಳು ಹನ್ನೆರಡು ದಿವಸ ಚಲಿಸದೇ ಇರುವುದಕ್ಕೆ ಅನ್ವಯಿಸುತ್ತದೆಯೆಂತಲೂ, ಬಟ್ಟಲೆಂಬುದು ಚಂದ್ರನೆಂತಲೂ, ಅದುನಾಲ್ಕು ಆಯಿತೆಂಬುದು ಚಂದ್ರನ ನಾಲ್ಕು ರೂಪಗಳೆಂತಲೂ ಅಭಿಪ್ರಾಯಪಡುತ್ತಾರೆ. ಒಟ್ಟಿನಲ್ಲ ಇವರು ಭೂಮಿ ಅಥವಾ ವಾಯುಮಂಡಲದಲ್ಲಿರುವ ಅಪ್ರಾಕೃತವ್ಯಕ್ತಿಗಳೆಂದೂ, ಅವರ ಕೌಶಲ್ಯವು ಅವರ ವಿಷಯವಾಗಿ ಅನೇಕ ಸಾಹಸಕರ್ಮಗಳ ಕಥೆಗಳು ಹೊರಡುವಂತೆ ಮಾಡಿತೆಂದೂ ಹೇಳಬಹುದು- ಆದರೆ ಋಗ್ವೇದವೊಂದನ್ನೇ ಆಧಾರವಾಗಿಟ್ಟುಕೊಳ್ಳುವುದಾದರೆ ಯಾವ ನಿಶ್ಚಿತಅಭಿಪ್ರಾಯಕ್ಕೂ ಅವಕಾಶವಿಲ್ಲ.

ಅಪ್ಸರ ಸ್ತ್ರೀಯರು

ಅಪ್ಸರೆಯರ ವಿಷಯವಾಗಿ ಋಗ್ವೇದದಲ್ಲಿ ಹೆಚ್ಚು ಆಧಾರಗಳೇನೂ ಸಿಗುವುದಿಲ್ಲ. ಈ ಹೆಸರು ಕೇವಲ ಐದೇಸಲ ಬರುತ್ತದೆ. ಇವರಿಗೆ ಪೃಕೃತಿಯ ಯಾವ ಅಂಶದ ಆಧಾರವೂ ಇಲ್ಲ. ಆಕಾಶದ ಅತ್ಯುನ್ನತ ಪ್ರದೇಶದಲ್ಲಿ, ಅಪ್ಸರೆಯು ತನ್ನ ಪ್ರಿಯನ ಮೇಲೆ (ಹಿಂದಿನ ಮಂತ್ರದಲ್ಲಿ ಉಕ್ತನಾಗಿರುವ ಗಂಧರ್ವ) ಮುಂದ

ಹಾಸನನ್ನು ಬೀರುತ್ತಾಳೆ (೧೦-೧೩೩-೫). ಈ ಅಪ್ಸರೆಯಿಂದಲೇ ವಸಿಷ್ಠನು ಜನಿಸಿದನು (೭-೩೩-೧೨); ಅಪ್ಸರ ಸ್ತ್ರೀಯರ ಸಮೂಹದಲ್ಲಿ ವಸಿಷ್ಠರು ಕುಳಿತುಕೊಳ್ಳುತ್ತಾರೆ (೭-೩೩-೯). ಸಮುದ್ರದ ಅಪ್ಸರೆಯರ ಸೋಮರಸದ ಕಡೆಗೆ ಪ್ರವಹಿಸುತ್ತಾರೆ (೯-೭೮-೩). ಇಲ್ಲಿ ಸೋಮರಸಕ್ಕೆ ಬೆರಸುವ ನೀರಿಗೆ ಅಪ್ಸರೆಯರೆಂದು ಹೇಳಿರಬೇಕು. ಉದ್ದವಾದ ಕೂದಲುಗಳುಳ್ಳ ವಿದ್ವಾಂಸನು ಅಪ್ಸರಸ್ತ್ರೀಯರ ಮತ್ತು ಗಂಧರ್ವರ ಮಾರ್ಗದಲ್ಲಿ ಸಂಚರಿಸಬಲ್ಲನು (೧೦-೧೩೬-೬). ನೀರಿನಲ್ಲಿರುವ ಗಂಧರ್ವನ ಪತ್ನಿಯಾದ ಜಲದೇವತೆಯೂ (ಅಪ್ಯಾ ಯೋಷಾ) ಅಪ್ಸರೆಯೇ ಇರಬೇಕು (೧೦-೧೦-೪).

ಈ ಅಪ್ಸರೆಯರ ವಿಷಯವು ಇನ್ನೂ ಹೆಚ್ಚು ವಿಶದವಾಗಿ ಅಥರ್ವವೇದದಲ್ಲಿ ತಿಳಿದುಬರುತ್ತದೆ. ಅವರ ವಾಸಸ್ಥಳವು ನೀರಿನಲ್ಲಿದೆ; ಒಂದು ಕ್ಷಣದಲ್ಲಿ ಮೇಲೆ ಬಂದು, ಪುನಃ ಹೊರಟುಹೋಗುತ್ತಾರೆ (ಅ. ವೇ. ೨-೨-೩); ಮನುಷ್ಯರ ಸುತ್ತಮುತ್ತಲ ಪ್ರದೇಶದಿಂದ ನದಿಗೆ ಅಥವಾ ಜಲಾಶಯದ ತೀರಕ್ಕೆ ಹೊರಟುಹೋಗಿರೆಂದು ಅವರು ಪ್ರಾರ್ಥಿತರಾಗಿದಾರೆ (ಅ. ವೇ. ೪-೩೭-೩). ವಿಶ್ವಾವಸು ಎಂಬ ಗಂಧರ್ವನ ಸಹಚಾರಿಣಿಯರಾದ ಸ್ತ್ರೀದೇವತೆಗಳಿಗೂ, ಮೇಘ, ವಿದ್ಯುತ್ತು ಮತ್ತು ನಕ್ಷತ್ರಗಳಿಗೂ ಸಂಬಂಧವಿದೆಯೆಂದು (ಅ.ವೇ. ೨-೨-೪) ವರ್ಣಿಸಿದೆ. ಅಪ್ಸರೆಯರು ಗಂಧರ್ವರ ಪತ್ನಿಯರೆಂದು ಸ್ಪಷ್ಟವಾಗಿಯೇ ಹೇಳಿದೆ (ಅ. ವೇ. ೨-೨-೫); ಈ ಗಂಧರ್ವಾಪ್ಸರೆಯರ ಸಂಬಂಧವು ಇತರ ಸಂಹಿತೆಗಳಲ್ಲಿ ಸೂತ್ರಪ್ರಾಯವಾಗಿದೆ (ವಾ. ಸಂ. ೩೦-೮; ಅ. ವೇ. ೮-೯-೯; ಇತ್ಯಾದಿ). ಶತಪಥಬ್ರಾಹ್ಮಣದಲ್ಲಿ (ಶ. ಬ್ರಾ. ೧೧-೫-೧-೪), ಅಪ್ಸರೆಯರು, ಒಂದು ಜಾತಿಯ ನೀರಿನಲ್ಲಿರುವ ಪಕ್ಷಿಯ ರೂಪವನ್ನು ತಾಳಿದರೆಂದು ಹೇಳಿದೆ (ಆತಯಃ ೯-೫-೯ನ್ನು ಹೋಲಿಸಿ). ಪುರಾಣಾದಿಗಳಲ್ಲಿ, ಅಪ್ಸರಸ್ತ್ರೀಯರು ನದಿಗಳ ಮತ್ತು ಸರೋವರಗಳ ಸಮೀಪಕ್ಕೆ ಪದೇಪದೇ ಬರುತ್ತಿರುತ್ತಾರೆ. ಅದರಲ್ಲಿಯೂ ಗಂಗಾನದಿಗೆ ಬರುವುದು ಬಹಳ ಸಾಧಾರಣವಾತು, ಮತ್ತು ವರುಣನ ಅರಮನೆಯಲ್ಲಿ ಇರುತ್ತಾರೆ ಎಂದು ಹೇಳಿದೆ. ಈ ಪದದ ಶಬ್ದರಚನೆಯ ಪ್ರಕಾರವಾಗಿಯೂ, ಇದಕ್ಕೆ ನೀರಿನಲ್ಲಿ ಸಂಚರಿಸುವವರು ಎಂದೇ ಅರ್ಥವಾಗುತ್ತದೆ.

ಮೇಲೆ ಹೇಳಿರುವ ಅಂಶಗಳಿಂದ, ಅಪ್ಸರೆಯರು ಗಂಧರ್ವಸಹಚಾರಿಣಿಯರು, ದೇವಲೋಕದಲ್ಲಿರುವ ಜಲದೇವತೆಗಳು ಎಂದು ಸ್ಪಷ್ಟವಾಗುತ್ತದೆ. ಆದರೆ, ಇತರ ವೇದಗಳಲ್ಲಿ, ಭೂಲೋಕವು, ಅದರಲ್ಲಿಯೂ ವೃಕ್ಷಗಳು ಅವರ ಕ್ರೀಡಾಕ್ಷೇತ್ರಗಳಾಗುತ್ತವೆ. ಅವರು ನ್ಯಗ್ರೋಧ ಮತ್ತು ಅಶ್ವತ್ಥ ವೃಕ್ಷಗಳಲ್ಲಿ ವಾಸಿಸುತ್ತಾರೆ ಮತ್ತು ಅವರ ವೀಣೆ ಮತ್ತು ತಾಳದ ಶಬ್ದವು ಆ ವೃಕ್ಷಗಳಿಂದ ಕೇಳಿಬರುತ್ತದೆ (ಅ. ವೇ. ೪-೩೭-೪-). ಬೇರೆ ಸ್ಥಳಗಳಲ್ಲಿ (ತೈ. ಸಂ. ೩-೪-೮-೪), ನ್ಯಗ್ರೋಧ- ಅಶ್ವತ್ಥ, ಉದುಂಬರ, ಪ್ಲಕ್ಷ ಮೊದಲಾದ ವೃಕ್ಷಗಳು ಗಂಧರ್ವ ಮತ್ತು ಅಪ್ಸರೆಯರ ವಾಸಸ್ಥಳಗಳು. ಆ ವೃಕ್ಷಗಳಲ್ಲಿ ವಾಸಿಸುವ ಗಂಧರ್ವಾಪ್ಸರೆಯರು ಅವುಗಳನ್ನು ಹಾದು ಹೋಗುವ ಮದುವೆ ಮೆರವಣಿಗೆಗಳಿಗೆ ಅನುಕೂಲರಾಗಿರಬೇಕೆಂದು ಪ್ರಾರ್ಥಿಸಿದೆ (ಅ. ವೇ. ೧೪-೨-೯). ಶತಪಥ ಬ್ರಾಹ್ಮಣದಲ್ಲಿ (ಶ. ಬ್ರಾ. ೧-೧-೬-೧), ಅಪ್ಸರೆಯರು ನೃತ್ಯ ಗೀತ ವಾದ್ಯಗಳಲ್ಲಿ ಮಗ್ನರಾಗಿರುತ್ತಾರೆ ಎಂದು ಹೇಳಿದೆ. ಈ ಎರಡು ಗುಂಪಿನವರು ವಾಸ್ತವವಾದ ಮತ್ತು ಐತಿಹಾಸಿಕ ಪರ್ವತಗಳಲ್ಲಿ ವಾಸಿಸುತ್ತಾರೆ ಎಂದು ಪುರಾಣಾದಿಗಳಲ್ಲಿ ಉಕ್ತವಾಗಿದೆ. ಅಥರ್ವವೇದದ ಪ್ರಕಾರ, ಅಪ್ಸರೆಯರಿಗೆ ಪಗಡೆಯಾಟದಲ್ಲಿ ಅಭಿರುಚಿ ಹೆಚ್ಚು ಮತ್ತು ಆಡುವವರಿಗೆ ಒಳ್ಳೆಯ ಅದೃಷ್ಟವನ್ನುಂಟುಮಾಡುತ್ತಾರೆ (ಅ. ವೇ. ೨-೨-೫; ಇತ್ಯಾದಿ). ಆದರೆ ಅವರಿಂದ ತೊಂದರೆಯೂ ಉಂಟು. ಬುದ್ಧಿವೈಕಲ್ಯವನ್ನುಂಟುಮಾಡುತ್ತಾರೆ ಎಂಬ ಹದರಿಕೆಯಿದೆ. ಇದನ್ನು ಪರಿಹರಿಸಿಕೊಳ್ಳಲು, ಮಂತ್ರ ವಿದ್ಯೆಯನ್ನು ಉಪಯೋಗಿಸುವುದುಂಟು (ಅ. ವೇ. ೭-೩-೫-; ಇತ್ಯಾದಿ)

ಅಪೂರ್ವ ಸುಂದರಿಯರಾದ (ಶ. ಬ್ರಾ. ೧೩-೪- ೩-೭, ೮ ಗಳನ್ನು ಹೋಲಿಸಿ). ಅಪ್ಸರಸ್ತ್ರೀಯರ ಪ್ರೇಮವು ಗಂಧರ್ವರಿಗೇ ವಿಾಸಲಾಗಿಲ್ಲ ; ಆಗಾಗ ಮನುಷ್ಯರಿಗೂ ಅದರಿಂದ ಸುಖವುಂಟು (೧೦-೯೫-೯ ನ್ನು ಹೋಲಿಸಿ) ಇಂತಹ ಮನುಷ್ಯಮತ್ತು ಒಬ್ಬ ಅಪ್ಸರಸ್ತ್ರೀಯ ಪ್ರೇಮದ ಕಥೆಯು ವೇದದಲ್ಲಿ ಉಕ್ತವಾಗಿದೆ. ಇತರ ಕೆಲವು ಅಪ್ಸರಸ್ತ್ರೀಯರ ಹೆಸರು ಮಾತ್ರ ಹೇಳಿದೆ. ಅಥರ್ವವೇದದಲ್ಲಿ, ಉಗ್ರಜಿತ್, ಉಗ್ರಂಪಶ್ಯಾ, ಮತ್ತು ರಾಷ್ಟ್ರಭೃತ್ (ಅ. ವೇ. ೧೬-೧೧೮-೧, ೨) ಎಂಬ ಮೂವರನ್ನೂ ವಾಜಸನೇಯಿ ಸಂಹಿತೆಯಲ್ಲಿ (ವಾ. ಸಂ. ೧೫-೧೫ ರಿಂದ ೧೯), ಊರ್ವಶೀ ಮೇನಕೆ ಮೊದಲಾದವರನ್ನು ಹೇಳಿದೆ. ಶತಪಥಬ್ರಾಹ್ಮಣದಲ್ಲಿ ಶಕುಂತಲೆ (ಶ. ಬ್ರಾ. ೧೩.೫-೪-೧೩) ಮತ್ತು ಊರ್ವಶಿ (ಶ. ಬ್ರಾ. ೧೧-೫-೧-೧) ಯರನ್ನು ಸ್ಪಷ್ಟವಾಗಿ ನಿರ್ದೇಶ ಮಾಡಿದೆ.

ಋಗ್ವೇದದಲ್ಲಿ ಪ್ರಸಕ್ತಾಪವಿರುವುದು ಊರ್ವಶಿಯೊಬ್ಬಳದೇ. ವಸಿಷ್ಠನು ಊರ್ವಶಿಯಿಂದ ಜನಿಸಿದನು ಎಂದು ಒಂದು ಮಂತ್ರದಲ್ಲಿಯೂ, ಅದರ ಮುಂದಿನ ಮಂತ್ರದಲ್ಲಿ ಅಪ್ಸರೆಯಿಂದ ಜನಿಸಿದನೆಂದೂ ಇದೆ. ಇದರಿಂದ ಊರ್ವಶಿಯೇ ಆ ಅಪ್ಸರೆಯೆಂದೂ ಊಹಿಸಬೇಕು (೭-೩೩-೧೧, ೧೨). ಒಂದು ಕಡೆ (೫-೪೧-೧೯), ನದಿಗಳ ಜೊತೆಯಲ್ಲಿ ಊರ್ವಶಿಯೂ ಸ್ತುತಳಾಗಿದಾಳೆ. ಇವೆರಡು ಸ್ಥಳಗಳನ್ನು ಬಿಟ್ಟರೆ ಹತ್ತನೆಯ ಮಂಡಲದಲ್ಲಿ ಒಂದು ಸೂಕ್ತದಲ್ಲಿ ಮಾತ್ರ ಈ ಹೆಸರು ಬರುತ್ತದೆ. ಇಲ್ಲಿ ಅವಳಿಗೂ ಇಳೆಯ ಮಗನಾದ ಪುರೂರವನಿಗೂ ನಡೆಯುವ ಸಂಭಾಷಣೆಯು ಇದೆ. (೧೦-೯೫-೧೦, ೧೭). ಅಲ್ಲಿ ಅವಳು ಜಲರೂಪಿಣಿ, ವಾಯುಮಂಡಲವನ್ನೆಲ್ಲಾ ಆವರಿಸಿರುತ್ತಾಳೆ ಮತ್ತು ಗಗನ ಸಂಚಾರಿ (ಈ ಕಡೆಯ ವಿಷಯವು ಗಂಧರ್ವನಿಗೂ ೧೦-೧೩೯-೫ ರಲ್ಲಿ ಅನ್ವಯಿಸಿದೆ). ಅವಳು ಮನುಷ್ಯರ ಮಧ್ಯದಲ್ಲಿ ನಾಲ್ಕು ವರ್ಷಗಳಿದ್ದು (೧೦-೯೫-೧೮), ಅನಂತರ ಹಿಂತಿರುಗಬೇಕೆಂದು ಉಕ್ತಳಾಗಿದಾಳೆ. ಆದರೆ ಈ ಪ್ರಾರ್ಥನೆ ನಿರಾಕೃತವಾಗುತ್ತದೆ. ಆದರೆ ಅವನ ಮಕ್ಕಳು ದೇವತೆಗಳಿಗೆ ಹವಿರಾದಿಗಳನ್ನು ಅರ್ಪಿಸಿದರೆ ಅವನು ಸ್ವರ್ಗದಲ್ಲಿ ಸುಖಿಯಾಗಿರಬಹುದೆಂದು ಪುರೂರವನಿಗೆ ಆಶ್ವಾಸನವಿತ್ತಿದೆ. (೧೦-೯೫-೧೫). ಶತಪಥ ಬ್ರಾಹ್ಮಣದಲ್ಲಿ (ಶ. ಬ್ರಾ. ೧೧-೫-೧). ಋಗ್ವೇದದ ಈ ಸೂಕ್ತದ ಕೆಲವು ಮಂತ್ರಗಳನ್ನು ತೆಗೆದುಕೊಂಡು, ಅಖಂಡವಾದ ಒಂದು ಕಥೆಯೇ ರಚಿಸಲ್ಪಟ್ಟಿದೆ. ಅಲ್ಲಿ ಕಥೆಯು ಈ ರೀತಿ ಇದೆ. ಇಳೆಯ ಮಗನಾದ ಪುರೂರವನನ್ನು ಊರ್ವಶಿಯು ತಾನೇ ಒಂದು ಷರತ್ತಿನಮೇಲೆ ವರಿಸುತ್ತಾಳೆ; ಅವನು ನಗ್ನನಾಗಿ ಆಕೆಗೆ ಕಾಣಿಸಿಕೊಳ್ಳಬಾರದೆಂಬುದೇ ಆ ಷರತ್ತು. ರಾತ್ರಿ ಮಲಗಿರುವಾಗ, ಗಂಧರ್ವರು ಒಂದು ಅಪೂರ್ವನಾದ ಶಬ್ದವನ್ನುಂಟುಮಾಡುತ್ತಾರೆ. ಮಲಗಿದ್ದ ಪುರೂರವನು ನಗ್ನನಾಗಿಯೇ ಹಾಸಿಗೆಯಿಂದ ಏಳುತ್ತಾನೆ. ಅದೇ ಸಮಯದಲ್ಲಿ ಮಿಂಚುತ್ತದೆ. ಆ ಮಿಂಚಿನ ಬೆಳಕಿನಲ್ಲಿ ಊರ್ವಶಿಯು ಅವನನ್ನು ನೋಡಿ, ತನ್ನ ಷರತ್ತಿನಂತೆ ಕಣ್ಮರೆಯಾಗುತ್ತಾಳೆ. ಪುರೂರವನು ಅವಳನ್ನು ಹುಡುಕುತ್ತಾ ಅಲೆಯುತ್ತಿರುತ್ತಾನೆ. ಕಡೆಗೆ ಕಮಲ ಸರೋವರವೊಂದರಲ್ಲಿ, ಇತರ ಅಪ್ಸರೆಯರೊಂದಿದೆ ಪಕ್ಷಿರೂಪದಲ್ಲಿ ವಿಹರಿಸುತ್ತಿದ್ದ ಊರ್ವಶಿಯನ್ನು ಕಾಣುತ್ತಾನೆ. ಊರ್ವಶಿಯೇ ಅವನಿಗೆ ನಿಜರೂಪದಿಂದ ಕಾಣಿಸಿಕೊಳ್ಳುತ್ತಾಳೆ. ಪುರೂರವನು ಬಹಳ ಕೇಳಿಕೊಂಡಮೇಲೆ, ಒಂದು ವರ್ಷದನಂತರ ಒಂದು ರಾತ್ರಿ ಮಾತ್ರ ಅವನೊಡನೆ ಇರುವುದಾಗಿ ವಚನವೀಯುತ್ತಾಳೆ. ಗೊತ್ತಾದ ಕಾಲಕ್ಕೆ ಪುರೂರವನು ಆ ಸ್ಥಳಕ್ಕೆ ಬರುತ್ತಾನೆ. ಮೂರನೆಯ ದಿನ ಗಂಧರ್ವರು, ಒಂದು ವಿಲಕ್ಷಣವಾಗಿ ಅಗ್ನಿಶುದ್ಧೀಕರಣ ಮಾಡುವುದರಿಂದ, ಅವನನ್ನು ತಮ್ಮಲ್ಲಿ ಒಬ್ಬನಾಗುವಂತೆ ಅನುಗ್ರಹಿಸುತ್ತಾರೆ. ಈ ೧೦-೯೫ ನೆಯ ಸೂಕ್ತದಲ್ಲಿ ಬಿಟ್ಟರೆ, ಇನ್ನೊಂದು ಸ್ಥಳದಲ್ಲಿ ಈ ಪುರೂರುವ ಎಂಬ ಶಬ್ದವು ಬರುವುದು. ಸನ್ಮಾರ್ಗಗಾಮಿಯಾದ ಪುರೂರವನಿಗೋಸ್ಕರ, ಅಗ್ನಿಯು ಗಗನದಲ್ಲಿ ಗುಡುಗನ್ನುಂಟುಮಾಡುತ್ತಾನೆ (೧-೩೧-೪). ಈ ಸಂದರ್ಭದಲ್ಲಿ ಪುರೂರವ ಎಂಬುದು ವಿಶೇಷಣವಾಗಿರಬಹುದು. ಕೆಲವು ವಿದ್ವಾಂಸರು ಪುರೂರವ ಮತ್ತು ಊರ್ವಶಿಯರನ್ನು ಸೂರ್ಯ ಮತ್ತು ಉಷಸ್ಸುಗಳೆಂದು ಭಾವಿಸುತ್ತಾರೆ.

ಗಂಧರ್ವರು.

ಹಿಂದೆಯೇ ಹೇಳಿರುವಂತೆ, ಅಪ್ಸರೆಯರಿಗೆ ಸಂಬಂಧಿಸಿದಂತೆ ಗಂಧರ್ವ ಅಥವಾ ಗಂಧರ್ವರೆಂಬ ಒಬ್ಬ ಪುರುಷ ಅಥವಾ ಒಂದು ಪುರುಷಜಾತಿಯಿದೆ. ಋಗ್ವೇದದಲ್ಲಿ ಪ್ರಸಕ್ತವಾಗುವ ಇಪ್ಪತ್ತು ಸ್ಥಳಗಳಲ್ಲಿ, ಮೂರೇಸಲ ಅದು ಬಹುವಚನದಲ್ಲಿರುವುದು. ಅಥರ್ವನೇದದಲ್ಲಿರುವ ಮೂವತ್ತೆರಡರಲ್ಲಿ, ಅರ್ಧದಷ್ಟು ಬಹುವಚನದಲ್ಲಿದೆ. ಇದನ್ನು ನೋಡಿದರೆ, ಮೊದಲು ಒಬ್ಬನೇ ಇದ್ದು, ಬರುಬರುತ್ತಾ, ಸಂಖ್ಯೆ ಹೆಚ್ಚುತ್ತಾ ಬಂದಿರುವಂತೆ ತೋರುತ್ತದೆ. ಇತರ ವೇದಗಳಲ್ಲಿ, ದೇವತೆಗಳು, ಪಿತೃಗಳು, ಅಸುರರು, ಇವರಂತೆ, ಗಂಧರ್ವರೂ ಒಂದುಗಣ (ಅ. ವೇ. ೧೧-೫-೨; ತೈ. ಸಂ. ೭-೮೫-೨). ಯಜುರ್ವೇದದಲ್ಲಿ ಅವರ ಸಂಖ್ಯೆ ೨೭ ಇದ್ದದ್ದು, ಅಥರ್ವ ವೇದದಲ್ಲಿ ಸುಮಾರು ೬೫೫ (ಅ. ವೇ, ೧೧-೫-೨) ಆಗಿದೆ. ಮೊದಲಿನಿಂದ ಇವರ ಲಕ್ಷಣ ಮತ್ತು ಸ್ವಭಾವ ಗಳೇನು ಎಂಬುದನ್ನು ನಿರ್ಧರಿಸಲು, ಋಗ್ವೇದದಲ್ಲಿ ಆಧಾರವೇನೂ ಸಿಗುವುದಿಲ್ಲ. ಈ ಸಂದರ್ಭದಲ್ಲಿ, ಯಾವ ಯಾವ ಮಂಡಲಗಳಲ್ಲಿ ಈ ಪದಪ್ರಯೋಗಗಳು ಕಂಡುಬರುತ್ತವೆ ಎಂಬುದೂ ಮುಖ್ಯವಾದ ಸಂಗತಿಯೇ. ಎರಡರಿಂದ ಏಳು ಮಂಡಲಗಳಲ್ಲಿ ಪೂರ್ತಿ ಒಂದೇ ಸಲವೂ, ಎಂಟನೆಯದರಲ್ಲಿ ಇಂದ್ರನಿಗೆ ವಿರುದ್ಧರೆಂದು ಎರಡು ಸಲವೂ ಬಂದಿದೆ. ಅಥವಾ ಈ ಪದವನ್ನು ವಿಶೇಷಣವೆಂದೇ ಭಾವಿಸಬಹುದೆಂದು ತೋರುತ್ತದೆ. ಒಂದೊಂದು ಸಲ ವಿಶ್ವಾವಸು ಎಂಬ ಹೆಸರ ಜೊತೆಯಲ್ಲಿ ಪ್ರಯೋಗಿಸಿದೆ (೯-೮೬-೩೬ ; ೧೦-೧೩೯-೪,೫ ; ಅ. ವೇ. ೨-೨-೪ ; ವಾ. ಸಂ. ೨-೩). ಒಂದು ಸಂದರ್ಭದಲ್ಲಿ ಗಂಧರ್ವನನ್ನು ಸೂಚಿಸುವುದಕ್ಕೆ ವಿಶ್ವಾವಸು ಎಂದೂ ಪ್ರಯೋಗವಿದೆ (೧೦-೮೫-೨೧,೨೨ ; ೧೦-೮೫-೪೦, ೪೧ ಗಳನ್ನು ಹೋಲಿಸಿ). ಇತರ ಸಂಹಿತಗಳು, ಬ್ರಾಹ್ಮಣಗಳು ಮತ್ತು ಪುರಾಣಾದಿಗಳಲ್ಲಿ, ವಿಶ್ವಾವಸು ಎಂಬುದು ಒಬ್ಬ ಗಂಧರ್ವನ ಹೆಸರು.

ಋಗ್ವೇದದ ಪ್ರಕಾರ ಗಂಧರ್ವನು ವಾಯುಮಂಡಲ ಅಥವಾ ಆಕಾಶದ ಅತ್ಯಂತ ಎತ್ತರವಾದ ಪ್ರದೇಶದಲ್ಲಿ ವಾಸಿಸುವವನು. ಅವನು ಆಕಾಶವನ್ನು ಅಳೆಯುವವನು (೧೦-೧೩೯-೫) ಅಗಾಧವಾದ ವಾಯುಮಂಡಲ ಪ್ರದೇಶಗಳಲ್ಲಿ ಇರುತ್ತಾನೆ (೮-೬೬-೫) ದೇವತಾ ಸ್ವಭಾವವುಳ್ಳವನು, ಅಂತರಿಕ್ಷದಲ್ಲಿ ನೇರವಾಗಿ ನಿಂತಿರುತ್ತಾನೆ (೧೦-೧೨೩-೭). ಇವನ ಮೇಲೆಯೇ ಅಪ್ಸರೆಯು ಮಂದಹಾಸವನ್ನು ಬೀರುವುದು (೧೦-೧೨೩-೫). ಸ್ವರ್ಗದಲ್ಲಿದೆ ಅವನ ವಾಸಸ್ಥಳ (ಅ. ವೇ. ೨-೨-೧, ೨). ಮತ್ತು ಪುಣ್ಯವಂತರು ಗಂಧರ್ವರೊಡನೆ ವಾಸಿಸುತ್ತಾರೆ. (ಅ. ವೇ. ೪-೩೪-೩) ಕೆಲವು ವಾಕ್ಯಗಳಲ್ಲಿ, ಗಂಧರ್ವರಿಗೆ ಯಾವುದಾದರೊಂದು ವಿಧವಾದಸ್ವರ್ಗೀಯ ಬೆಳಕಿನೊಡನೆ ಸಂಬಂಧವಿದೆಯೆಂದು ಹೇಳಿದೆ. ವರುಣನ ದೂತನಾದ, ಸುವರ್ಣಮಯವಾದ ಪಕ್ಷ ಗಳುಳ್ಳ ಸೂರ್ಯನೊಡನೆಯೂ(೧೦-೧೨೩-೬), ಸೂರ್ಯಪಕ್ಷಿಯೊಡನೆಯೂ (೧೦-೧೨೨-೨), ಸೂರ್ಯಾಶ್ವದೊಡನೆಯೂ (೧-೧೬೩-೨), ಮತ್ತು ಸೂರ್ಯನಂತಿರುವ ಸೋಮದೊಡನೆಯೂ (೯-೮೫-೧೨) ಸೇರಿಸಲ್ಪಟ್ಟಿದಾನೆ. ಇದೂ ಅಲ್ಲದೆ ಚಂದ್ರ ಪಥದಲ್ಲಿರುವ ಇಪ್ಪತ್ತೇಳು ನಕ್ಷತ್ರಗಳು (ವಾ. ಸಂ. ೯-೭) ವಿಶೇಷವಾಗಿ ರೋಹಿಣೀ ನಕ್ಷತ್ರ (ಅ. ವೇ. ೧೩-೧-೨೩) ಇವುಗಳೊಡನೆ ಸಂಬಂಧ ಕಲ್ಪಿತವಾಗಿದೆ. ವಾಜಸನೇಯಿ ಸಂಹಿತೆಯಲ್ಲಿ (ವಾ. ಸಂ. ೧೪-೩೦,) ಅಗ್ನಿ, ಸೂರ್ಯ, ಚಂದ್ರ, ವಾಯುಗಳೊಡನೆ ಗಂಧರ್ವನೂ ದೇವತೆಯೆಂದು ಪರಿಗಣಿತನಾಗಿದಾನೆ. ಪುರಾಣಗಳಲ್ಲಿ ಗಂಧರ್ವನಗರ (ಪುರ) ಎಂಬುದು ಮರೀಚಿಕೆಯ ಒಂದು ಹೆಸರು.

ಗಂಧರ್ವನ ಹೆಸರು ವಿಶೇಷವಾಗಿ ಒಂಬತ್ತನೆಯ ಮಂಡಲದಲ್ಲಿ ಸೋಮನೊಡನೆ ಹೇಳಲ್ಪಟ್ಟಿದೆ. ಸೋಮದ ಸ್ಥಳವನ್ನು ಮತ್ತು ದೇವತೆಗಳ ವಂಶವನ್ನು ರಕ್ಷಿಸುತ್ತಾನೆ (೯-೮೩-೪ ; ೧-೨೨-೧೪ನ್ನು ಹೋಲಿಸಿ). ಸೋಮರಸದ ಅವಸ್ಥಾವಿಶೇಷಗಳನ್ನೆಲ್ಲಾ ವೀಕ್ಷಿಸುತ್ತಾ ಗಗನಮಂಡಲದಲ್ಲಿ ನಿಂತಿರುತ್ತಾನೆ (೯-೮೫-೧೨). ಪರ್ಜನ್ಯ ಮತ್ತು ಸೂರ್ಯ ಪುತ್ರಿಯೊಡನೆ, ಗಂಧರ್ವರು ಸೋಮರಸವನ್ನು ಅಭಿವೃದ್ಧಿಪಡಿಸುತ್ತಾರೆ (೯-೧೧೩-೩) ಗಂಧರ್ವನ ಬಾಯಿಂದಲೇ, ದೇವತೆಗಳು ಸೋಮಪಾನ ಮಾಡುತ್ತಾರೆ (ಅ. ವೇ. ೭-೭೩-೩)- ದೇವತೆಗಳಿಗೋ

ಸ್ಯರ ಗಂಧರ್ವರು ಸೋಮರಸವನ್ನು ಕಾಪಾಡುತ್ತಿದ್ದರೆಂದೂ, ಅಪಹೃತವಾಗಲು ಅವಕಾಶಕೊಟ್ಟರೆಂದೂ, ಅದಕ್ಕೆ ಶಿಕ್ಷೆಯಾಗಿ ಗಂಧರ್ವರಿಗೆ ಸೋಮಪಾನ ನಿಷಿದ್ಧವಾಯಿತೆಂದೂ (ಮೈ. ಸಂ. ೩-೮-೧೦) ಹೇಳಿದೆ. ಈ ಸೋಮ ರಸದ ಸಂಬಂಧದಿಂದಲೇ ಗಂಧರ್ವರಿಗೆ ಸಸ್ಯಗಳ ಪರಿಚಯವಿದೆಯೆಂದು ಹೇಳಿರುವುದು (ಅ. ವೇ. ೪-೪-೧). ಸೋಮರಕ್ಷಣೆಯಲ್ಲಿ ಬದ್ಧಾದರನಾದ ಗಂಧರ್ವನೇ ಇಂದ್ರನ ಅಪ್ರೀತಿಯನ್ನು ಗಳಿಸಿ, ವಾಯುಮಂಡಲದಲ್ಲಿ ಅವ ನಿಂದ ಇರಿಯಲ್ಪಡುವುದು (೪-೬೬-೫). ಮತ್ತು ಇದೇ ಕಾರಣದಿಂದಲೇ, ಸ್ತೋತ್ರಗಳು, ಇವನನ್ನು ಸೋಲಿ ಸೆಂದು ಇಂದ್ರನನ್ನು ಸ್ತುತಿಸುವುದು (೪-೧೧-೧೧). ಬೇರೆ ಒಂದು ಸ್ಥಳದಲ್ಲಿ (ತೈ. ಸಂ. ೧-೨-೯-೧), ವಿಶ್ವಾವಸು ಗಂಧರ್ವನಿಂದ ತಪ್ಪಿಸಿಕೊಳ್ಳಲು, ಶ್ಯೇನರೂಪದಿಂದ ಬರಬೇಕೆಂದು ಸೋಮಕ್ಕೆ ಸೂಚಿಸಿರುವುದೂ ಕಂಡುಬರು ತ್ತದೆ. ಸೋಮರಸವು ಗಂಧರ್ವರ ಮಧ್ಯದಲ್ಲಿ ಇತ್ತು ಅಥವಾ ವಿಶ್ವಾವಸು ಗಂಧರ್ವನಿಂದ ಅಪಹೃತವಾಗಿತ್ತು; ಸ್ತ್ರೀಲಂಪಟರಾದ ಗಂಧರ್ವರಿಗೆ, ವಾಗ್ದೇವತೆಯನ್ನು ಬೆಲೆಯಾಗಿ ಕೊಟ್ಟು, ಗಂಧರ್ವರಿಂದ ಸೋಮವನ್ನು ಪಡೆದ ರೆಂದು ಇದೆ (ಐ. ಬ್ರಾ. ೧-೨೭; ತೈ. ಸಂ. ೬-೧-೬-೫; ಮೈ. ಸಂ. ೩-೭-೩) ಸೋಮವನ್ನು ಎತ್ತಿಕೊಂಡು ಹೋಗುತ್ತಿರುವ ಶ್ಯೇನದ ಮೇಲೆ ಬಾಣಬಿಡುವ ಕೃಶಾನುವೂ ಒಬ್ಬ ಗಂಧರ್ವನೇ ಇರಬೇಕು. ತೈತ್ತಿರೀಯ ಆರಣ್ಯಕ (ತೈ. ಆ. ೧-೯-೩) ದಲ್ಲಿ ಕೃಶಾನುವೂ ಗಂಧರ್ವನೆಂದೇ ಸ್ಪಷ್ಟವಾಗಿ ಹೇಳಿದೆ.

ಗಂಧರ್ವರಿಗೂ ನೀರಿಗೂ ಸಂಪರ್ಕವಿದೆ. ನೀರಿನಲ್ಲಿರುವ ಗಂಧರ್ವ ಮತ್ತು ಜಲರೂಪಳಾದ ಅಪ್ಸರೆ ಯರು, ಯಮ ಮತ್ತು ಯಮಿಗಳಿಗೆ ಜನಕರೆಂದು (೧೦-೧೦-೪-) ಹೇಳಿದೆ. ನೀರಿನಲ್ಲಿ ಸುರಿದಿರುವ ಸೋಮ ರಸಕ್ಕೆ ನೀರಿನ ಗಂಧರ್ವನೆಂದು (೯-೪೬-೩೬) ಕರೆದಿದೆ. ಅಪ್ಸರೆಯರೊಡನೆ ಸಂಯೋಜಿತರಾಗಿರುವ ಗಂಧರ್ವರೂ ನೀರಿನಲ್ಲಿ ವಾಸಿಸುತ್ತಾರೆ (ಅ. ವೇ. ೨-೨-೩ ; ೪-೩೭-೧೨).

ಗಂಧರ್ವ ಮತ್ತು ಅಪ್ಸರೆಯರ ಸಂಯೋಗವು ವಿವಾಹಸೂಚಕವಾಗಿದೆ. ಆದುದರಿಂದ ಗಂಧರ್ವರಿಗೂ ವಿವಾಹ ಸಮಾರಂಭಕ್ಕೂ ಸಂಬಂಧ ಕಲ್ಪಿತವಾಗಿದೆ. ಅವಿವಾಹಿತಳಾದ ಕನ್ಯೆಯು ಗಂಧರ್ವ, ಸೋಮ ಮತ್ತು ಅಗ್ನಿ ಇವರಿಗೆ ಸೇರಿದವಳು (೧೦-೮೫-೪೦,೪೧). ವಿವಾಹದ ಮೊದಲದಿನಗಳಲ್ಲಿ, ವಿಶ್ವಾವಸುವು ವರನಿಗೆ ಪ್ರತಿ ಸ್ಪರ್ಧಿ (೧೦-೮೫-೨೨). ಗಂಧರ್ವರಿಗೆ ಸ್ತ್ರೀಯರ ವಿಷಯದಲ್ಲಿರವ ಪ್ರೇಮವು ಇತರ ವೇದಗಳಲ್ಲಿ ಪ್ರಸಿದ್ಧವಾಗಿದೆ (ಮೈ. ಸಂ. ೩-೭-೩) ಗಂಧರ್ವರು ಮತ್ತು ಅಪ್ಸರೆಯರು ಫಲಶಕ್ತಿಗೆ ಅಭಿಮಾನಿ ದೇವತೆಗಳು ಮತ್ತು ಸಂತತಿ ಯನ್ನಪೇಕ್ಷಿಸುವವರು ಅವರನ್ನು ಸ್ತುತಿಸುತ್ತಾರೆ (ಪಂ. ಬ್ರಾ ೧೯-೩-೨).

ಗಂಧರ್ವರು ದೇವಗಾಯಕರೆಂದು ಪುರಾಣಾದಿಗಳಲ್ಲಿ ಪ್ರಸಿದ್ಧಿ ಬಂದಿರುವುದಕ್ಕೆ ಋಗ್ವೇದದಲ್ಲಿ ಎಲ್ಲಿಯೂ ಆಧಾರವಿಲ್ಲ (೧೦-೧೨೭-೨ : ೧೦-೧೧-೨ ಗಳನ್ನು ಹೋಲಿಸಿ).

ಅವರ ದೇಹಾದಿಗಳ ವಿಷಯವಾಗಿ ಒಂದೆರಡು ಕಡೆ ಮಾತ್ರ ನಿರ್ದೇಶವಿದೆ. ಅವರಿಗೆ ಗಾಳಿಯೇ ಕೇಶ (೩-೩೮-೬) ಮತ್ತು ಅವರಲ್ಲಿ ಹೊಳೆಯುತ್ತಿರುವ ಆಯುಧಗಳಿವೆ (೧೦-೧೨೩-೭). ಈ ವಿಷಯದಲ್ಲಿ ಅಥರ್ವ ವೇದವು ಹೆಚ್ಚು ಸ್ಪಷ್ಟವಾಗಿದೆ (ಅ. ವೇ. ೪- ೩-೭ ; ೪-೬-೧ ಗಳು ವಿಶೇಷವಾಗಿ). ಇಲ್ಲಿ, ಅವರು ಲೋಮಶ ರೆಂದೂ, ಅರ್ಧ ಪ್ರಾಣಿಗಳಂತಿರುವ ದೇಹವುಳ್ಳವರೆಂದೂ, ಮನುಷ್ಯರಿಗೆ ಅನೇಕ ವಿಧದಲ್ಲಿ ವಿಪತ್ಕಾರಕರೆಂದೂ ಹೇಳಿದೆ. ಮತ್ತೆ ಕೆಲವು ಕಡೆ ಅವರು ಸುಂದರರೆಂದೂ ಇದೆ (ಶ. ಬ್ರಾ. ೧೩-೪-೩-೭,೮). ಋಗ್ವೇದದಲ್ಲಿ, ಗಂಧರ್ವರು ಸುವಾಸನೆಯುಳ್ಳ ಉಡುಪುಗಳನ್ನು ಧರಿಸುತ್ತಾರೆ (೧೦-೧೨೩-೭) ಎಂದೂ, ಅಥರ್ವವೇದದಲ್ಲಿ, ಭೂಮಿಯಿಂದ ಸುಗಂಧವು ಗಂಧರ್ವರನ್ನು ಸೇರುತ್ತದೆಂದೂ (ಅ. ವೇ. ೧೨-೧-೨೩) ಹೇಳಿದೆ.

ಇದರಿಂದ ಗಂಧರ್ವ ಎಂಬ ಪದವು ಗಂಧ ಎಂಬುದರಿಂದ ಆಗಿದೆ ಎಂದು ಹೇಳಬಹುದು. ಇದೇ ಸರಿಯಾದ ನಿಷ್ಪತ್ತಿಯಾದರೂ, ಗಂಧರ್ವನ ಸ್ವಭಾವ ಅಥವಾ ಲಕ್ಷಣವೇನೂ ತಿಳಿದಂತಾಗುವುದಿಲ್ಲ. ಮೇಲೆ ಕಂಡುಬರುವ ವಿವರಣೆಗಳಿಂದ, ಗಂಧರ್ವನೂ ಒಬ್ಬ ತೇಜಸ್ವಿಯಾದ ದಿವ್ಯಪುರುಷ. ತನ್ನ ಜೊತೆಗಾತಿ ಅಪ್ಸರೆ

ಯೊಡನೆ ನೀರಿನಲ್ಲಿ ವಾಸವಮಾಡುವವನು ಎಂದಿಷ್ಟು ಮಾತ್ರ ನಿರ್ದಿಷ್ಟವಾಗಿ ಹೇಳಬಹುದು. ನಾನಾ ವಿದ್ವಾಂಸರು, ವಾಯುವಿನಲ್ಲಿ ಸೇರಿಕೊಂಡಿರುವ ಅಮೂರ್ತ ವ್ಯಕ್ತಿಗಳೆಂದೂ, ಕಾಮನಬಿಲ್ಲು, ಚಂದ್ರ, ಸೋಮ ಉದಿತನಾಗುತ್ತಿರುವ ಸೂರ್ಯ ಅಥವಾ ಮೇಘಾಭಿಮಾನಿದೇವತೆ ಇತ್ಯಾದಿ ನಾನಾ ಅಭಿಪ್ರಾಯಗಳನ್ನೂ ವ್ಯಕ್ತಪಡಿಸಿದಾರೆ

ರಕ್ಷಕದೇವತೆಗಳು.

ವಾಸ್ತೋಷ್ಪತಿಯೆಂಬ ಹೆಸರು ಏಳು ಸಲ ಋಗ್ವೇದದಲ್ಲಿ ಬಂದಿದೆ. ಮೂರು ಋಕ್ಕಿನ ಒಂದು ಸೂಕ್ತದಲ್ಲಿ (೭-೫೪) ಈ ದೇವತೆ ಸ್ತುತವಾಗಿದೆ. ಇಲ್ಲಿ ಅನುಕೂಲವಾದ ಗೃಹಪ್ರವೇಶ, ರೋಗಪರಿಹಾರ, ಮನುಷ್ಯ ಮತ್ತು ಪ್ರಾಣಿಗಳಿಗೆ ಶುಭಾಶೀರ್ವಾದ, ಗೋವುಗಳು, ಅಶ್ವಗಳು ಮೊದಲಾದವುಗಳ ಸಮೃದ್ಧಿ ಮತ್ತು ಸತತವಾದ ರಕ್ಷಣೆ, ಇವುಗಳು ಪ್ರಾರ್ಥಿತವಾಗಿವೆ. ಅದರ ಮುಂದಿನ ಸೂಕ್ತದಲ್ಲಿ (೭-೫೫-೧), ವಾಸ್ತೋಷ್ಪತಿಯು ರೋಗಪರಿಹಾರಕನೆಂದೂ, ವಿಶ್ವರೂಪನೆಂದೂ ವರ್ಣಿಸಿದೆ. ಒಂದು ಸಲ (೭-೫೪-೨). ವಾಸ್ತೋಷ್ಪತಿಗೆ ಇಂದು ವೆಂಬ ಹೆಸರು ಉಪಯೋಗಿಸಲ್ಪಟ್ಟಿದೆ. ವಿಶ್ವೇದೇವತೆಗಳ ಸೂಕ್ತವೊಂದರಲ್ಲಿ, ತ್ವಷ್ಟೃವಿನ ಜೊತೆಯಲ್ಲಿ, ಅಥವಾ ದೇವತೆಗಳ ಬಡಗಿಯಾದ ತ್ವಷ್ಟೃವೂ ಇವನೂ ಒಂದೇ ಎಂಬಂತೆ, ಸ್ತುತಿಸಿದೆ ೮-೧೮-೧೪ರಲ್ಲಿ, ವಾಸ್ತೋಷ್ಪತಿಯು ದೃಢವಾಗಿರುವ ಸ್ತಂಭವೆಂತಲೂ, ಇಂದ್ರನೇ ಎಂತಲೂ ಹೇಳಿದೆ. ಹತ್ತನೆಯ ಮಂಡಲದಲ್ಲಿ ನಿಯಮಪಾಲಕನೆಂದೂ, ಬ್ರಹ್ಮನುತ್ತು ದೇವತೆಗಳು ಇವನನ್ನು ರೂಪುಗೊಳಿಸಿದರೆಂತಲೂ (೧೦-೬೧-೭) ಇದೆ. ಮೇಲೆ ಹೇಳಿದಂತೆ, ವಾಸ್ತೋಷ್ಪತಿಯನ್ನು ಅನೇಕ ದೇವತೆಗಳಿಗೆ ಸಮನೆಂದು ಅಲ್ಲಲ್ಲೇ ಹೇಳಿದ್ದರೂ, ಅಗ್ನಿಗೆ ಗೃಹಪತಿ ಎಂದು ಹೇಳುವಂತೆ ಯಾವುದಾದರೊಂದು ದೇವತೆಗೆ ಈ ಹೆಸರೆಂದು ಖಚಿತವಾಗಿ ಹೇಳಲಾಗುವುದಿಲ್ಲ. ಗೃಹ್ಯಸೂತ್ರಗಳಲ್ಲಿ (ಆ. ಗೃ. ಸೂ. ೨-೬-೬; ಸಾಂ. ಗೃ. ಸೂ. ೩-೪; ಪಾ. ಗೃ. ಸೂ. ೩-೪-೭), ನೂತನ ಗೃಹಪ್ರವೇಶಕಾಲದಲ್ಲಿ ವಾಸ್ತೋಷ್ಪತಿಯನ್ನು ತೃಪ್ತಿಪಡಿಸಬೇಕೆಂದು ವಿಧಿಸಿದೆ. ಸೂತ್ರಗಳಲ್ಲಿರುವ ಈ ವಿಧಿ ಮತ್ತು ಆ ದೇವತಾಕವಾದ ಸೂಕ್ತದಲ್ಲಿರುವ ವಿಷಯಗಳನ್ನು ಪರಿಶೀಲಿಸಿದರೆ, ಈ ದೇವತೆಯು ಗೃಹಾಭಿಮಾನಿ ಅಥವಾ ರಕ್ಷಕದೇವತೆ ಮಾತ್ರ ಆಗಿದ್ದನೆಂದು ಹೇಳಬಹುದು. ವೃಕ್ಷ ಅಥವಾ ಪರ್ವತಾಭಿಮಾನಿ ದೇವತೆಗಳಂತೆ, ಈ ದೇವತೆಯೂ ಒಬ್ಬನಿರಬಹುದು.

'ಕ್ಷೇತ್ರಸ್ಯಪತಿ' ಎಂಬ ದೇವತೆಯೂ ವಾಸ್ತೋಷ್ಪತಿಯ ಜಾತಿಗೆ ಸೇರಿದುದು ಈ ದೇವತೆ ಭೂರಕ್ಷಕ. ೪-೫೭ನೆಯ ಸೂಕ್ತದ ಮೊದಲನೆಯ ಮೂರು ಮಂತ್ರಗಳಲ್ಲಿ ಈತನಿಂದ, ಗೋವುಗಳು, ಅಶ್ವಗಳು, ಮತ್ತು ಭೂವ್ಯಾಕಾಶಗಳು, ವೃಕ್ಷಗಳು, ನೀರು ಇವುಗಳಲ್ಲಿ ಮಾಧುರ್ಯ ಮೊದಲಾದವುಗಳು ಅಪೇಕ್ಷಿತವಾಗಿವೆ. ವಿಶ್ವೇದೇವತಾಕವಾದ ಸೂಕ್ತವೊಂದರಲ್ಲಿ (೭-೩೫-೧೦); ಸವಿತೃ, ಉಷೋದೇವಿಯರು, ಪರ್ಜನ್ಯ, ಇವರೊಡನೆ ಈತನೂ ಸಮೃದ್ಧಿದಾಯಕನಾಗಬೇಕೆಂದು ಪ್ರಾರ್ಥಿತನಾಗಿದಾನೆ. ೧೦-೬೬-೧೩ರಲ್ಲಿ ಆರಾಧಕರು ಈತನನ್ನು ತಮ್ಮ ನೆರೆಯಲ್ಲಿರಬೇಕೆಂದು ಆಶಿಸಿದಾರೆ. ಭೂಮಿಯನ್ನು ಉಳುವುದಕ್ಕೆ ಪ್ರಾರಂಭಿಸುವಾಗ ಈ ದೇವತೆಯನ್ನು ಪೂಜಿಸಬೇಕು ಅಥವಾ ದೇವತೆಯನ್ನುದ್ದೇಶಿಸಿ ಹೋಮಮಾಡಬೇಕೆಂದು ಹೇಳಿದೆ (ಆ. ಗೃ. ಸೂ. ೨-೧೦-೪; ಶಾಂ. ಗೃ. ಸೂ. ೪-೧೩-೫). ವ್ಯವಸಾಯ ಸಂಬಂಧವಾದ ದೇವತೆಗಳನ್ನು ಸ್ತುತಿಸುವ ಸೂಕ್ತವೊಂದರಲ್ಲಿ (೪-೫೭-೬). ಸೀತಾ (ನೇಗಿಲುಗೆರೆ) ಎಂಬ ದೇವತೆಯಿಂದ ಉತ್ತಮವಾದ ಬೆಳೆಯು ಪ್ರಾರ್ಥಿತವಾಗಿದೆ. ಪಾರಸ್ಕರ ಗೃಹ್ಯಸೂತ್ರದಲ್ಲಿ (ಪಾ. ಗೃ. ಸೂ. ೨-೧೭-೯). ಇದೇ ಸೀತೆಯು ಇಂದ್ರನ ಪತ್ನಿಯೆಂದು ಮತ್ತು ಅವಳಿಗೆ ತಂದೆಯ ಹೆಸರಿನ ಆಧಾರದ ಮೇಲೆ ಸಾವಿತ್ರಿ ಎಂದು ಹೆಸರೆಂದು (ತೈ. ಬಾ. ೨-೩-೧೦-೧) ಹೇಳಿದೆ. ಇದೇ ಪಾರಸ್ಕರ ಗೃಹ್ಯಸೂತ್ರದಲ್ಲಿ ಊರ್ವರಾ (ವ್ಯವಸಾಯಕ್ಕೆ ಅನುಕೂಲವಾಗಿರುವ ಜಮೀನು) ಎಂಬೊಂದು ದೇವತೆ ಉಕ್ತವಾಗಿದೆ.

(ಕಾಲ್ಪನಿಕ.)

ಐತಿಹಾಸಿಕ ಋತ್ವಿಜರು ಮತ್ತು ದೇವಾಂಶಪುರುಷರು.

ಮನು:—ಮನು ಅಥವಾ ಮನುಗಳು ಎಂಬುದಾಗಿ ಮನುಷ್ಯಸಾಮಾನ್ಯರು ಉದ್ದಿಷ್ಟರಾದಾಗಲೂ ಪ್ರಯೋಗವಿರುವುದರಿಂದ, ಯಾವಾಗ ಮನುಷ್ಯರು ಉದ್ದಿಷ್ಟರು ಅಥವಾ ಯಾವಾಗ ಮನು ಎಂಬುವನು ಎಂದು ತಿಳಿಯುವುದು ಕಷ್ಟಸಾಧ್ಯ. ಎರಡನೆಯ ಅರ್ಥದಲ್ಲಿ, ಮನು ಎಂಬುದಾಗಿ ಏಕವಚನದಲ್ಲಿ ಸುಮಾರು ೨೦ ಸಲವೂ, ಬಹುವಚನದಲ್ಲಿಯೂ ಸುಮಾರು ಅಷ್ಟೇ ಸಲವೂ ಪ್ರಯೋಗವಿದೆ. ಮನುವನ್ನು ಐದು ಸಲ ತಂದೆ ಎಂತಲೂ, ಅವುಗಳಲ್ಲಿ ಎರಡು ಕಡೆ, ಇನ್ನೂ ಸ್ಪಷ್ಟವಾಗಿ ನಮ್ಮ ತಂದೆ ಎಂತಲೂ, ಅವುಗಳಲ್ಲಿ ಎರಡು ಕಡೆ, ಇನ್ನೂ ಸ್ಪಷ್ಟವಾಗಿ ನಮ್ಮ ತಂದೆ (೨-೩೩-೧೩ ; ಇತ್ಯಾದಿ) ಎಂತಲೂ ಕರೆದಿದೆ. ಯಾಗ ಕರ್ತೃಗಳಿಗೆ ಮನುವಿನ ಪ್ರಜೆಗಳೆಂದು (ವಿಶಃ ೪-೩೭-೧ ; ಇತ್ಯಾದಿ) ಹೆಸರು ; ಮನುವಿನ ಸಂತತಿಯಲ್ಲಿ ಅಗ್ನಿಯು ವಾಸಿಸುತ್ತಾನೆ (೧-೬೪-೪). ಯಾಗಗಳನ್ನು ಆರಂಭಿಸಿದವನೇ ಮನುವು. ಅಗ್ನಿಯನ್ನು ಉದ್ದೀಪನಗೊಳಿಸಿ, ಸಪ್ತರ್ಷಿಸಹಿತನಾಗಿ ದೇವತೆಗಳಿಗೆ ಮೊದಲನೆಯ ಆಹುತಿಯನ್ನು ಕೊಟ್ಟನು (೧೦-೬೩-೭). ಮನುವಿನಿಂದ ಆಚರಿತವಾದ ಯಾಗವನ್ನೇ ಈಗ ಎಲ್ಲರೂ ಆಚರಿಸುತ್ತಿರುವುದು. ಮನುಗಳು ದೇವತೆಗಳನ್ನುದ್ದೇಶಿಸಿ ಮಾಡಿದ ಯಾಗಕ್ಕೇ ಈಗಿನ ಯಾಗವನ್ನು ಹೋಲಿಸಿರುವುದು (೧-೭೬-೫). ಮನುಸ್ವತ್ (ಮನುವಿನಂತೆ) ಎನ್ನುವ ಕ್ರಿಯಾವಿಶೇಷಣದಿಂದ, ಪದೇ ಪದೇ ಯಾಗಕರ್ಮಗಳು ಹೋಲಿಸಲ್ಪಡುತ್ತವೆ. ಮನುಗಳಂತೆ, ಆರಾಧಕರು ಅಗ್ನಿಯಿಂದ ಯಾಗವನ್ನು ಪೂರ್ತಿಗೊಳಿಸುತ್ತಾರೆ (೧-೪೪-೧೧). ಮನುಗಳಂತೆ, ಅಗ್ನಿಯನ್ನು ಹೊತ್ತಿಸುತ್ತಾರೆ (೫-೨೧-೧ ಇತ್ಯಾದಿ). ಮನುವಿನಿಂದ ಉದ್ದೀಪಿತನಾದ ಅಗ್ನಿಯನ್ನು, ಮನುವಿನಂತೆಯೇ ಸ್ತುತಿಸುತ್ತಾರೆ (೭-೨-೩). ಮನುಗಳಂತೆ, ಸೋಮರಸವನ್ನು ಅರ್ಪಿಸುತ್ತಾರೆ (೪-೩೭-೩). ಹಿಂದೆ ಮನುವಿಗೋಸ್ಕರ ಪ್ರವಹಿಸಿದಂತೆ, ಈಗ ತಮಗೋಸ್ಕರ ಪ್ರವಹಿಸಬೇಕೆಂದು ಸೋಮವನ್ನು ಪ್ರಾರ್ಥಿಸಿದಾರೆ (೯-೯೬-೧೨). ಎಲ್ಲಾ ಪ್ರಜೆಗಳಿಗೆ ಬೆಳಕಾಗಿರಲೆಂದು, ಅಗ್ನಿಯನ್ನು ಮನುವು ಸ್ಥಾಪಿಸಿದನು (೧-೩೬-೧೯). ಪುರಾತನ ಯಾಗಕರ್ತೃಗಳಾದ ಅಂಗಿರಸರು ಮತ್ತು ಯಯಾತಿಗಳೊಡನೆ (೧-೩೧-೧೭), ಭೃಗು ಮತ್ತು ಅಂಗಿರಸರೊಡನೆ (೮-೪೩-೧೩) ಅಥರ್ವ ಮತ್ತು ದಧ್ಯಂಚರೊಡನೆ (೧-೮೦-೧೬) ಮತ್ತು ದಧ್ಯಂಚ, ಅಂಗಿರಸರು, ಅತ್ರಿ ಮತ್ತು ಕಣ್ವರೊಡನೆ (೧-೧೩೯-೧) ಮನುವೂ, ಸೇರಿಸಲ್ಪಟ್ಟಿದಾನೆ. ದೇವತೆಗಳು (೧-೩೬-೧೦). ಮತರಿಶ್ವಾ (೧-೧೨೮-೨) ಮಾತರಿಶ್ವಾ ಮತ್ತು ದೇವತೆಗಳು (೧-೪೬-೯) ಅಥವಾ ಕಾವ್ಯ ಉಶನಾ (೮-೨೩-೧೭), ಇವರುಗಳು ಅಗ್ನಿಯನ್ನು ಮನುವಿಗೆ ಕೊಟ್ಟರು ಅಥವಾ ಮನುವಿನ ಋತ್ವಿಜನನ್ನಾಗಿ ನೇಮಿಸಿದರು. ನಾಲ್ಕು ಸಂದರ್ಭಗಳಲ್ಲಿ ಮನು ಎಂದರೆ ಮನುಷ್ಯನೆಂದಿರಬೇಕು.

ಇಂದ್ರನು ವಿವಸ್ವತನ ಮಗನಾದ ಮನುವಿನ (ವಾ. ೪-೧) ಅಥವಾ ಮನುಸಾಂವರಣಿಯ (ವಾ. ೩-೧) ಜೊತೆಯಲ್ಲಿ ಸೋಮಪಾನ ಮಾಡಿದನು. ವೃತ್ರಾಸುರನೊಡನೆ ಯುದ್ಧ ಮಾಡುವುದಕ್ಕೆ ಬೇಕಾದ ಶಕ್ತಿಯನ್ನು ಪಡೆಯುವುದಕ್ಕೆ, ಮೂರು ಸರೋವರದಷ್ಟು ಮನುಗಳಿಗೆ ಸೇರಿದ ಸೋಮರಸವನ್ನು ಇಂದ್ರನು ಪಾನಮಾಡಿದನು (೫-೨೯-೭). ಪಕ್ಷಿಯು ಸೋಮರಸವನ್ನು ಮನುವಿಗೆ ತಂದುಕೊಟ್ಟಿತು (೪-೨೬-೪). ತೈತ್ತಿರೀಯ ಸಂಹಿತೆ ಮತ್ತು ಶತಪಥಬ್ರಾಹ್ಮಣಗಳಲ್ಲಿ ಮನುವನ್ನು ಧಾರ್ಮಿಕ ಕರ್ಮಗಳ ಪೋಷಕನೆಂದು ವರ್ಣಿಸಿದೆ.

ಮನುವು ವಿವಸ್ವತನ ಮಗನೆಂದು ಭಾವನೆ; ಅವನಿಗೆ ವಿವಸ್ವತ ಮನುವೆಂಬ ನಾಮಧೇಯವಿದೆ (ವಾ. ೪-೧ ; ೩-೧ನ್ನು ಹೋಲಿಸಿ). ಅಥರ್ವವೇದ (ಅ. ವೇ. ೪-೧೦-೨೪), ಶತಪಥಬ್ರಾಹ್ಮಣ (ಶ. ಬ್ರಾ.

೧೩-೪-೩-೩) ಮತ್ತು ಪುರಾಣಾದಿಗಳಲ್ಲಿ, ಮನುವಿಗೆ ವೈವಸ್ವತನೆಂದೇ ಹೆಸರು ರೂಢಿಯಾಗಿದೆ. ವಿವಸ್ವತನ ಮಕ್ಕಳಲ್ಲಿ ಯಮನೂ ಒಬ್ಬನು ಮತ್ತು ಅವನು ಮಾನವರಲ್ಲಿ ಮೊದಲನೆಯವನು. ಅಂದರೆ ಮನು ಮತ್ತು ಯಮರು ಮನುಷ್ಯರ ಮೂಲಪುರುಷದ್ವಯವೆನ್ನಬಹುದು. ಆದರೆ ಮನುವು ಜೀವದಿಂದಿರುವವರಲ್ಲಿ ಮೊದಲನೆಯವನಾದರೆ, ಯಮನು ಮೃತರಾದವರಲ್ಲಿ ಮೊದಲನೆಯವನಾಗಿ, ಮೃತರಲೋಕದ ಒಡೆಯನಾದನು. ಶತಪಥ ಬ್ರಾಹ್ಮಣದಲ್ಲಿ, ವೈವಸ್ವತಮನುವನ್ನು ಮನುಷ್ಯರ ರಾಜನೆಂದೂ, ಯಮನನ್ನು ಮೃತರ ರಾಜನೆಂದೂ ಹೇಳಿದೆ (ಶ. ಬ್ರಾ. ೧೩-೪-೩-೩, ೫), ನಿರುಕ್ತದಲ್ಲಿ (ನಿ. ೧೨-೧೦), ಮನುವನ್ನು ವಿವಸ್ವತನೆಂಬ ಆದಿತ್ಯನ ಮಗ ಮತ್ತು ಸವರ್ಣಾ (ಸರಣ್ಯು ಎಂಬುದರ ಸ್ಥಾನದಲ್ಲಿ ಪ್ರಯೋಗಿಸಿರಬಹುದು) ಎಂಬುವಳ ಮಗನೆಂದು ವಿವರಿಸಿ (೧೦-೧೬-೨ನ್ನು ಹೋಲಿಸಿ), ಸ್ವರ್ಗಲೋಕದ ದೇವತೆಗಳಲ್ಲಿ (ನಿ. ೫-೬) ಒಬ್ಬನೆಂದು ನಿರ್ದೇಶಿಸಿದಾರೆ (ನಿ. ೧೨-೩೪).

ಪ್ರಳಯ ಕಾಲದಲ್ಲಿ, ಇತರ ಎಲ್ಲಾ ಪ್ರಾಣಿಗಳೂ ಮುಳುಗಿಹೋದರೂ, ಮನುವೊಬ್ಬನೇ ಒಂದು ಹಡಗಿನಲ್ಲಿ ಒಂದು ಮತ್ಸ್ಯದಿಂದ (ವಿಷ್ಣುವಿನ ಅವತಾರ) ರಕ್ಷಿಸಲ್ಪಟ್ಟನೆಂಬ ಕಥೆಯೊಂದು ಶತಪಥಬ್ರಾಹ್ಮಣದಲ್ಲಿದೆ (ಶ. ಬ್ರಾ. ೧-೮-೧-೧೦ರಿಂದ ೧೦). ಆಗಲೇ ಮನುವು, ಆಹುತಿಗಳಿಂದ ಜನಿತಳಾದ ಇಡಾ (ಇಳಾ) ಎಂಬ ತನ್ನ ಮಗಳ ಮೂಲಕ ಮಾನವ ವರ್ಗಕ್ಕೆ ಕಾರಣಭೂತನಾದುದು. ಈ ಪ್ರಳಯದ ಕಥೆಯು ಅಥರ್ವವೇದದಲ್ಲಿಯೂ ಪ್ರಸಕ್ತವಾಗಿದೆ (ಅ. ವೇ. ೧೯-೩೯-೮).

ಭೃಗುಗಳು.

ಭೃಗು ಎಂಬುದು ಋಗ್ವೇದದಲ್ಲಿ ಇಪ್ಪತ್ತೊಂದು ಸಲ ಬರುತ್ತದೆ. ಇದಲ್ಲದೆ ಭೃಗುವತ್ ಎಂಬುದಾಗಿಯೂ ಎರಡುಸಲ ಪ್ರಯೋಗಿಸಲ್ಪಟ್ಟಿದೆ. ಭೃಗು ಎಂಬುದಾಗಿ ಏಕವಚನದಲ್ಲಿ ಪ್ರಯೋಗಿಸಿರುವುದು ಒಂದೇ ಒಂದು ಸಲ. ಆದುದರಿಂದ ಈ ಭೃಗುಗಳು ಪೌರಾಣಿಕ ವ್ಯಕ್ತಿಗಳ ಒಂದು ಗಣವನ್ನೇ ನಿರ್ದೇಶಿಸಬಹುದು. ಅಗ್ನಿದೇವತಾಕವಾದ ಸೂಕ್ತಗಳಲ್ಲೇ ಸುಮಾರು ಹನ್ನೆರಡು ಸಲ ಬರುತ್ತದೆ. ಅದೂ ಸಾಧಾರಣವಾಗಿ ಮನುಷ್ಯರು ಅಗ್ನಿಯನ್ನು ಪಡೆದುದನ್ನು ವರ್ಣಿಸುವ ಸಂದರ್ಭದಲ್ಲೇ. ಮಾತರಿಶ್ವನು ಅಗ್ನಿಯನ್ನು ಭೃಗುವಿಗೆ ಒಂದು ನಿಧಿರೂಪದಲ್ಲಿ ತಂದುಕೊಟ್ಟನು (೧-೬೦-೧), ಅಥವಾ ನಿಗೂಢನಾಗಿದ್ದ ಅಗ್ನಿಯನ್ನು ಭೃಗುಗಳಿಗೋಸ್ಕರ ಉದ್ದೀಪನಗೊಳಿಸಿದನು (೩-೫-೧೦). ಮಾತರಿಶ್ವಾ ಮತ್ತು ದೇವತೆಗಳು ಅಗ್ನಿಯನ್ನು ರಚಿಸಿದರು; ಭೃಗುಗಳು ತಮ್ಮ ಶಕ್ತಿ ಬಲವನ್ನು ಪ್ರಯೋಗಿಸಿ, ಅಗ್ನಿಯನ್ನು ಉತ್ಪತ್ತಿಮಾಡಿದರು(೧೦-೪೬-೯). ನೀರಿನಲ್ಲಿ ಅಡಗಿಕೊಂಡಿದ್ದ ಅಗ್ನಿಯನ್ನು ಭೃಗುಗಳು ಕಂಡು (೧೦-೪೬-೨), ಅಲ್ಲೇ ಅವನನ್ನು ಆರಾಧಿಸಿ, (ಆಯು) ಮನುಷ್ಯರ ಗೃಹಗಳಲ್ಲಿ ಸ್ಥಾಪಿಸಿದರು (೨-೪-೨ ; ೨-೪-೪ನ್ನು ಹೋಲಿಸಿ). ಅವರು ಅಗ್ನಿಯನ್ನು ಕಾಡಿನಲ್ಲಿ ಚೆನ್ನಾಗಿ ನೆಲಸುವಂತೆ ಮಾಡಿದರು (೬-೧೫-೨) ಅಥವಾ ಮನುಷ್ಯರ ಮಧ್ಯದಲ್ಲಿ, ಒಂದು ನಿಧಿಯಂತೆ ಇಟ್ಟರು. (೧-೫೮-೬). ಅಗ್ನಿಯು ಭೃಗುಗಳಿಂದ ದತ್ತವಾಗಿ ಬಂದ ವಸ್ತು (೩-೨-೪). ಚೆನ್ನಾಗಿ ಮಥನಮಾಡಿ ಅವನನ್ನು ಸ್ತುತಿವಾಕ್ಯಗಳಿಂದ ಸ್ತುತಿಸಿದರು (೧-೧೨೭-೭). ಸ್ತುತಿರೂಪವಾದ ಗಾನಗಳಿಂದ ಅವನನ್ನು ತೃಪ್ತಿಪಡಿಸಿ ಚೆನ್ನಾಗಿ ಪ್ರಕಾಶಿಸುವಂತೆ ಮಾಡಿ (೧೦-೧೨೨-೫), ಅನಂತರ ವನಗಳಲ್ಲಿರುವಂತೆ ಮಾಡಿದರು (೪-೭-೧). ಭೂಮಿಯ ನಾಭಿಪ್ರದೇಶಕ್ಕೆ ಕರತಂದರು. (೧-೧೪೩-೪). ಹೋಮ ಮುಂತಾದವುಗಳಿಂದ ವಿಶಿಷ್ಟವಾದ ಕರ್ಮಗಳನ್ನು ಅಥರ್ವನು ವಿಧಿಸಿದನು; ಭೃಗುಗಳು ತಮ್ಮ ಕೌಶಲ್ಯದಿಂದ ದೇವತಾ ಲಕ್ಷಣಗಳನ್ನು ವ್ಯಕ್ತಪಡಿಸಿದರು (೧೦-೯೨-೧೦) ಅಗ್ನ್ಯುತ್ಪತ್ತಿಯಲ್ಲೇ ಅವರ ಚತುರತೆ ಕಂಡು ಬಂದಿದ್ದರೂ, ಅದನ್ನೂ ಒಂದು ಕಲೆಯೆಂದೇ ಭಾವಿಸಿ

ದಾರೆ. ಭೃಗುಗಳು ರಥವನ್ನು ರಚಿಸಿದಂತೆ, ಇಂದ್ರ ಅಥವಾ ಅಶ್ವಿನೀ ದೇವತೆಗಳ ಸ್ತುತಿಯನ್ನು, ಸ್ತೋತೃಗಳು ರಚಿಸುತ್ತಾರೆ (೪-೧೬-೨೦ ; ೧೦-೩೯-೧೪).

ಭೃಗುಗಳು ಬಹಳ ಪುರಾತನರಿರಬೇಕು. ಯಾಗಕರ್ತೃಗಳು, ಅಂಗಿರಸರು, ಅಥರ್ವರು ಇವರುಗಳ ಜೊತೆಯಲ್ಲಿ, ಭೃಗುಗಳನ್ನೂ ಸೇರಿಸಿ, ಎಲ್ಲರೂ ಸೋಮರಸಪ್ರಿಯರಾದ ತಮ್ಮ ಪಿತೃಗಳೆಂದು (೧೦-೧೪-೬) ಹೇಳಿಕೊಂಡಿದಾರೆ, ಮತ್ತು ಭೃಗುಗಳು, ಅಂಗಿರಸರು ಮತ್ತು ಮನು, ಇವರುಗಳಂತೆ ಅಗ್ನಿಯನ್ನು ಸ್ತುತಿಸುತ್ತಾರೆ (೪-೪೩-೧೩). ಯತಿಗಳ ಮತ್ತು ಭೃಗುಗಳ ಪ್ರಾರ್ಥನೆಯನ್ನು ಲಾಲಿಸಿದಂತೆ, ತಮ್ಮ ಪ್ರಾರ್ಥನೆಯನ್ನೂ ಲಾಲಿಸಬೇಕೆಂದು (೪-೬-೧೪) ಅಥವಾ, ಯತಿಗಳು, ಭೃಗುಗಳು ಮತ್ತು ಪ್ರಸ್ಕಣ್ವರಿಗೆ ಸಹಾಯ ನೀಡಿದಂತೆ, ತಮಗೂ ಸಹಾಯ ನೀಡಬೇಕೆಂದು, ಇಂದ್ರನನ್ನು ಬೇಡಿಕೊಂಡಿದಾರೆ (೪-೩-೯). ದ್ರುಹ್ಯರು ಮತ್ತು ತುರ್ವಶ, ಇವರುಗಳೊಡನೆ, ಭೃಗುಗಳೂ, ಸುದಾಸನ ಶತ್ರುಗಳೆಂದು ಹೇಳಿದೆ (೭-೧೪-೬). ಈ ಮೇಲಿನ ಮೂರು ವಾಕ್ಯಗಳಲ್ಲಿ (೭-೬-೧೪ ; ೪-೩-೯ ; ೭-೧೪-೬), ಭೃಗುಗಳು ಯಾವುದೋ ಒಂದು ಸಣ್ಣ ಜನಾಂಗವನ್ನು ನಿರ್ದೆಶಿಸುವಂತೆ ತೋರುತ್ತದೆ. ಮೂವತ್ತುಮೂರುದೇವತೆಗಳು, ಅಶ್ವಿನೀದೇವತೆಗಳು, ಮರುತರು ಜಲಾಭಿಮಾನಿದೇವತೆಗಳು, ಅಶ್ವಿನೀದೇವತೆಗಳು, ಉಷಸ್ಸು ಮತ್ತು ಸೂರ್ಯ, ಇವರೊಡನೆ ಸೋಮಪಾನಕ್ಕೆ ಭೃಗುಗಳಿಗೂ ಆಹ್ವಾನವಿದೆ (೪-೩೫-೩). ಅವರನ್ನು ಸೂರ್ಯರಿಗೆ ಹೋಲಿಸಿದೆ ಮತ್ತು ಅವರನ್ನು ಸಂಪೂರ್ಣಕಾಮರೆಂದೂ ಹೇಳಿದೆ. (೪-೩-೧೬ ; ೯-೧೦೧-೧೩) ರಲ್ಲಿ, ಭೃಗುಗಳು ರಾಕ್ಷಸನನ್ನು ಓಡಿಸಿದಂತೆ, ಕೃಪಣರನ್ನು ಓಡಿಸಬೇಕೆಂದು ಆರಾಧಕರು ಪ್ರಾರ್ಥಿಸಿದಾರೆ. ಇಲ್ಲಿ ಭೃಗುಗಳು ಓಡಿಸಿದ ರಾಕ್ಷಸರು ಯಾರು, ಈ ಕಥೆಯಲ್ಲಿ ಪ್ರಸಕ್ತವಾಗಿದೆ, ಎಂಬುದು ತಿಳಿದಿಲ್ಲ.

ಋಗ್ವೇದಕ್ಕೆ ಸಂಬಂಧಿಸಿದ ವಸಿಷ್ಠಾದಿ ಋಷಿಗಳಂತೆ, ಭೃಗುಗಳು ಈಗ ಬಳಕೆಯಲ್ಲಿರುವ ಋಷಿಗಳ ಗುಂಪಿಗೆ ಸೇರಿದವರಲ್ಲವೆನ್ನಬಹುದು. ಅಂಗಿರಸರಿಗೆ ಅಂಗಿರಸನೂ, ವಸಿಷ್ಠರಿಗೆ ವಸಿಷ್ಠನೂ ನಾಯಕರಾಗಿರುವಂತೆ, ಭೃಗುವೂ ಭೃಗು ಎಂಬ ಒಂದು ಋಷಿಗಣಕ್ಕೆ ನಾಯಕನಿರಬೇಕು.

ಸ್ವರ್ಗದಿಂದ ಅಗ್ನಿಯು ಇಳಿದು ಬರುವುದು ಮತ್ತು ಅದು ಮನುಷ್ಯನಿಗೆ ದತ್ತವಾಗುವುದು, ಇವುಗಳಿಗೆ ಮಾತರಿಶ್ವ ಮತ್ತು ಭೃಗುಗಳೇ ಸಂಬಂಧಿಸಿದವರು. ಅದರಲ್ಲಿ ಮಾತರಿಶ್ವನು ಸ್ವರ್ಗದಿಂದ ಅಗ್ನಿಯನ್ನು ತರುವವನಾದರೆ, ಭೂಮಿಯಲ್ಲಿ ಯಾಗಾದಿ ಕರ್ಮಗಳ ಪ್ರಾರಂಭ ಮತ್ತು ಆಚರಣೆಗೆ ತರುವ ಕೆಲಸ ಭೃಗುಗಳದು.

ಇತರ ವೇದಗಳಲ್ಲಿ ಭೃಗುವು ಒಂದು ಗೋತ್ರದ ಪ್ರತಿನಿಧಿ (ಅ. ವೇ. ೫-೧೯-೧ ; ಐ. ಬ್ರಾ. ೩-೨೦-೭). ಪ್ರಜಾಪತಿಯ ರೇತಸ್ಸಿನಿಂದ ಉತ್ಪನ್ನನಾಗಿ ವರುಣನಿಂದ ತನ್ನ ಪುತ್ರನಾಗಿ ಸ್ವೀಕೃತನಾಗುತ್ತಾನೆ ; ಇದರಿಂದ ಅವನಿಗೆ ವಾರುಣಿ ಎಂಬ ಹೆಸರು ಬರುತ್ತದೆ (ಐ ಬ್ರಾ. ೩-೩೪-೧ ; ಪಂ. ಬ್ರಾ. ೧೪-೯-೧೨) ; ವರುಣನ ಮಗನೆಂದು ಸ್ಪಷ್ಟವಾಗಿಯೂ ಉಕ್ತವಾಗಿದೆ (೧೧-೧-೧).

ಭೃಗು ಎಂಬ ಪದವು ಭ್ರಾಜ್ (ಬೆಳಗು ಪ್ರಕಾಶಿಸು) ಎಂಬ ಧಾತುವಿನಿಂದ ನಿಷ್ಪನ್ನವಾಗಿದೆ. ಭೃಗುವು ಅಗ್ನಿಯ ಒಂದು ಹೆಸರೆಂದು ಕೆಲವರೂ, ಅಗ್ನಿಯ ಶಿಡಿಲಿನ ರೂಪಕ್ಕೆ ಈ ಹೆಸರೆಂದು ಕೆಲವರೂ ಅಭಿಪ್ರಾಯಪಡುತ್ತಾರೆ.

ಅಥರ್ವಾ.

ಅಥರ್ವಾ ಎಂಬುದು ಹದಿನಾಲ್ಕು ಸಲ, ಅದರಲ್ಲಿ ಮೂರು ಸಲ ಬಹುವಚನದಲ್ಲಿ, ಬರುತ್ತದೆ. ಅಥರ್ವ ವೇದದಲ್ಲಿಯೂ ಅನೇಕ ಸಲ ಪ್ರಸಕ್ತವಾಗುತ್ತದೆ. ಸಾಧಾರಣವಾಗಿ ಅಥರ್ವನು ಪುರಾತನ ಋತ್ವಿಜ ಅಥವಾ ಅಥವಾ ಋಷಿ. ಅವನು ಅಗ್ನಿಯನ್ನು ಮಥಿಸಿದನು (೬-೧೬-೧೩) ಮತ್ತು ಅಥರ್ವನು ಅಗ್ನಿಯನ್ನು ಮಥಿಸಿದಂತೆ, ಋತ್ವಿಜರು ಅಗ್ನಿಯನ್ನು ಮಥಿಸುತ್ತಾರೆ (೬-೧೫-೧೭). ಅಥರ್ವನಿಂದ ಉತ್ಪತ್ತಿ ಮಾಡಲ್ಪಟ್ಟ ಅಗ್ನಿಯು ವಿವಸ್ವತನ ದೂತನಾದನು (೧೦-೨೧-೫). ಅಥರ್ವನೇ ಮೊದಲು ಆಹುತಿಗಳ ಮೂಲಕ ಋತ (ಯಾಗ)ವನ್ನು ಆಚರಣೆಗೆ ತಂದವನು (೧೦-೯೨-೧೦). ಆಹುತಿಗಳ ಮೂಲಕ ಅಥರ್ವನು (ಸೂರ್ಯ) ಪಥಗಳನ್ನು ವಿಸ್ತರಿಸಿದನು; ಅನಂತರ ಸೂರ್ಯನು ಉತ್ಪನ್ನನಾದನು (೧೦೨೩-೫). ಮನು ಮತ್ತು ದಧ್ಯಂಚರೊಡನೆ, ಅಥರ್ವನು (ಶ್ರದ್ಧೆಯನ್ನು) ಧರ್ಮವನ್ನು ಆಚರಣೆಗೆ ತಂದನು (೧೦೪೦-೧೬). ಇಂದ್ರನು ಅಥರ್ವ, ತ್ರಿತ, ದಧ್ಯಂಚ ಮತ್ತು ಮಾತರಿಶ್ವರಿಗೆ ಸಹಾಯಕನು (೧೦-೪೮-೨). ದುಷ್ಟ ಪಿಶಾಚಗಳನ್ನು ನಾಶಮಾಡುವ ಅಗ್ನಿಯು ತನ್ನ ದಿವ್ಯವಾದ ಜ್ವಾಲೆಗಳಿಂದ ಅಜ್ಞಾನಿಯನ್ನು ಅಥರ್ವನು ದಹಿಸುವಂತೆ, ದಹಿಸಿಬಿಡಬೇಕೆಂದು ಪ್ರಾರ್ಥನೆ (೧೦-೮೭-೧೨) ಇದೆ. ಅಥರ್ವವೇದದಲ್ಲಿ ಇನ್ನೂ ಕೆಲವು ಲಕ್ಷಣಗಳು ಉಕ್ತವಾಗಿವೆ. ಅಥರ್ವನು ಒಂದು ಬಟ್ಟಲು ಸೋಮರಸವನ್ನು ಇಂದ್ರನಿಗೆ ತಂದುಕೊಟ್ಟನು (ಅ. ವೇ. ೧೪-೩.೫೪). ಅವನಿಗೆ ವರುಣನಿಂದ ಒಂದು ಆಶ್ಚರ್ಯಕರವಾದ ಗೋವು ಕೊಡಲ್ಪಟ್ಟಿತು (ಅ.ವೇ. ೫-೧೧; ೭-೧೦-೪). ಅಥರ್ವನು ದೇವತೆಗಳ ಸಹಚರನು, ಅವರಿಗೆ ಬಂಧುವು ಮತ್ತು ಸ್ವರ್ಗದಲ್ಲೇ ವಾಸಿಸುತ್ತಾನೆ (ಅ. ವೇ. ೪-೧-೭; ಇತ್ಯಾದಿ). ಶತಪಥಬ್ರಾಹ್ಮಣದಲ್ಲಿ, ಅಥರ್ವನು ಒಬ್ಬ ಪುರಾತನ ಉಪಾಧ್ಯಾಯನು (೧೪-೫-೫-೨೨; ೧೪-೭-೩-೨೮).

ಬಹುವಚನದಲ್ಲಿ, ಅಥರ್ವರು (ಅಥರ್ವಾಣಃ), ಅಂಗಿರಸರು, ನವಗ್ವರು ಮತ್ತು ಭೃಗುಗಳು, ಇವರೆಲ್ಲರೂ ಪಿತೃಗಳೆಂದು (೧೦-೧೪-೭) ಎಣಿಸಲ್ಪಟ್ಟಿದಾರೆ. ಅವರು ವಾಸಿಸುವುದು ಸ್ವರ್ಗದಲ್ಲಿ ಮತ್ತು ದೇವತೆಗಳೆಂದೇ ಅವರಿಗೆ ನಾಮಧೇಯ (ಅ. ವೇ. ೧೮-೭-೧೩). ಒಂದು ಆಶ್ಚರ್ಯಕರವಾದ ಬೇರಿನ ಪ್ರಭಾವದಿಂದ ಅವರು ಪಿಶಾಚಗಳನ್ನು ನಾಶಮಾಡುತ್ತಾರೆ (ಅ. ವೇ. ೪-೩೭-೭).

ಋಗ್ವೇದದ ಕೆಲವು ವಾಕ್ಯಗಳಲ್ಲಿ, ಅಥರ್ವಎಂದರೆ ಸಾಧಾರಣವಾಗಿ ಋತ್ವಿಜ ಅಥವಾ ಪುರೋಹಿತ ಎಂದರ್ಥವಿರುವಂತೆ ತೋರುತ್ತದೆ. ೧೦-೧೩೦-೯ರಲ್ಲಿ (೧೦-೧೩೦-೪ನ್ನು ಹೋಲಿಸಿ), ಅಥರ್ವ ಎಂಬ ಪದವು, ಸ್ತುತಿ ವಾಕ್ಯಗಳನ್ನು ರಚಿಸುವ ಬೃಹದ್ದಿವ ಎಂಬುವನಿಗೆ ವಿಶೇಷಣವಾಗಿದೆ. ಅಥರ್ವನ ಮೇಲೆ ಆಹುತಿಯನ್ನು ಋಷಿಯು ಹಾಕುತ್ತಾನೆ (೮-೯-೭) ಎಂಬಲ್ಲಿ 'ಅಥರ್ವ' ಪದವನ್ನು ಅಗ್ನಿಗೆ ಉಪಯೋಗಿಸಿರುವಂತೆ ಕಾಣುತ್ತದೆ. ಅಥರ್ವರು ಸೋಮರಸವನ್ನು ಬೆರಸುತ್ತಾರೆ (೯-೪-೨) ಅಥವಾ ಅಥರ್ವರು ಒಬ್ಬ ದಾತೃವಿನಿಂದ ನೂರು ಗೋವುಗಳನ್ನು ಪಡೆಯುತ್ತಾರೆ (೬-೪೭-೨೪), ಈ ಸಂದರ್ಭಗಳಲ್ಲಿ ಋತ್ವಿಜನೆಂಬ ಅರ್ಥದಲ್ಲಿ ಪ್ರಯೋಗವಿದೆ. ಅಗ್ನಿಗೆ ಅಥರ್ಯು (ಅಥರ್-ಯು), ಜ್ವಾಲಾವಿಶಿಷ್ಟನು ಎಂದು ಹೆಸರು, ಈ ಅಥರ್ (ಜ್ವಾಲೆ) ಎಂಬುದರಿಂದ ಅಥರ್ವ (ಋತ್ವಿಜರು) ಎಂಬ ಋತ್ವಿಜರ ಗುಂಪೊಂದು ರೂಢಿಗೆ ಬಂದಿರಬಹುದು.

ದಧ್ಯಂಚ.

ಅಥರ್ವನ ಮಗನಾದ ದಧ್ಯಂಚನ (೬-೧೬-೧೪; ೧-೧೧೬-೧೨; ೧-೧೧೭-೨೨) ಹೆಸರು ಒಂಬತ್ತು ಸಲ ಬರುತ್ತದೆ. ಅದರಲ್ಲಿ ಒಂದು ಸಲ ಬಿಟ್ಟರೆ ಉಳಿದುವೆಲ್ಲ, ೯, ೧೦ ಮತ್ತು ೧೦ನೆಯ ಮಂಡಲಗಳಲ್ಲೇ

ಕಂಡುಬರುತ್ತದೆ. ಆತನು ಅಗ್ನಿಯನ್ನು ಉದ್ದೀಪನಗೊಳಿಸಿದ ಋಷಿ (೬-೧೬-೧೪) ಮತ್ತು ಅಥರ್ವ, ಅಂಗಿರಸರು, ಮನು ಮತ್ತು ಇತರ ಪುರಾತನ ಋಷಿಗಳ ಪಟ್ಟಿಯಲ್ಲಿ ಸೇರಿಸಲ್ಪಟ್ಟಿದಾನೆ (೧-೮೦-೧೬ ; ೧-೧೩೯-೯).

ಅಥರ್ವ ಪುತ್ರನಾದ ದಧ್ಯಂಚನಿಗೆ ಅಶ್ವಿನೀದೇವತೆಗಳು ಅಶ್ವಶಿರಸ್ಸನ್ನು ಅನುಗ್ರಹಿಸಿದರು ; ಅನಂತರ ಆತನು ಅವರಿಗೆ ಮಧುವಿದ್ಯೆಯನ್ನು ಉಪದೇಶಮಾಡಿದನು (೧-೧೧೭-೨೨). ಕುದುರೆಯ ತಲೆಯುಳ್ಳ ದಧ್ಯಂಚನು ಅಶ್ವಿನೀದೇವತೆಗಳಿಗೆ ಮಧುವು ಇರುವ ಸ್ಥಳವನ್ನು ತಿಳಿಸಿದನು (೧-೧೧೬-೧೭). ಅಶ್ವಿನೀದೇವತೆಗಳು ದಧ್ಯಂಚನ ಹೃದಯವನ್ನು ಸೂರಿಗೊಂಡರು ; ಅನಂತರ ಅಶ್ವಶಿರವು ಅವರನ್ನು ಉದ್ದೇಶಿಸಿ ಮಾತನಾಡಿತು (೧-೧೧೯-೯). ಈ ಕಥೆಗೆ ಇಂದ್ರನೂ ಸಂಬಂಧಿಸಿದಾನೆ. ಪರ್ವತಗಳಲ್ಲಿ ಹುದುಗಿಟ್ಟಿದ್ದ ಅಶ್ವಶಿರಸ್ಸನ್ನು ಹುಡುಕುತ್ತಾ, ಶರಣ್ಯಾವತದಲ್ಲಿ ಅದನ್ನು ಕಂಡು, ದಧ್ಯಂಚನ ಮೂಳೆಗಳಿಂದ ವೃತ್ರಾಸುರನನ್ನು ವಧಿಸಿದನು (೧-೮೪-೧೩, ೧೪). ತ್ರಿತನಿಗೋಸ್ಕರ, ಸರ್ಪದ ಹತ್ತಿರವಿದ್ದ ಗೋವುಗಳನ್ನು ಪಡೆದುದಲ್ಲದೆ, ದಧ್ಯಂಚ ಮತ್ತು ಮಾತರಿಶ್ವನಿಗೆ ಗೋಶಾಲೆಗಳನ್ನು ಕೊಟ್ಟನು (೧೦-೪೮-೨). ಸೋಮರಸದ ಪ್ರಭಾವದಿಂದ ದಧ್ಯಂಚನು ತೆರೆಯುವ ಗೋಶಾಲೆಗಳೇ (೯-೧೦೮-೪) ಇವುಗಳಿರಬೇಕು. ಎರಡರಿಂದ ಎಂಟು ಮಂಡಲಗಳಲ್ಲಿ ದಧ್ಯಂಚನ ಹೆಸರು ಬರುವುದು ಒಂದೇ ಕಡೆ (೬-೧೬-೧೪). ಇಲ್ಲಿ ದಧ್ಯಂಚನು ಅಥರ್ವನ ಮಗನು ; ತಂದೆಯಂತೆ ಇವನೂ ಬೆಂಕಿಯನ್ನು ಹೊತ್ತಿಸುವ ಕಾರ್ಯದಲ್ಲಿ ತೊಡಗಿದಾನೆ. ಇದಲ್ಲದೇ ಇದ್ದರೆ, ಸಾಧಾರಣವಾಗಿ ಸೋಮದ ಗುಪ್ತ ಸ್ಥಾನ, ಇಂದ್ರನಿಂದ ಗೋವಿಮೋಚನಕಾರ್ಯ ಇವುಗಳ ಸಂಬಂಧವೇ ಈತನಿಗೆ ಹೆಚ್ಚು. ಈತನಿಗೂ ಕುದುರೆಯ ತಲೆ ಎಂದು ಹೇಳಿರುವುದರಿಂದ, ಈತನಿಗೂ ದಧಿಕ್ರಾ ಎಂಬ ಅಶ್ವಕ್ಕೂ ಸಂಬಂಧವಿದೆ ಎಂದು ಹೇಳಿದರೂ ಹೇಳಬಹುದು. ಪದದ ನಿಷ್ಪತ್ತಿಯನ್ನು ತೆಗೆದುಕೊಂಡರೆ, (ದಧಿ-ಅಂಚ್) ಮೊಸರಿನ ಅಭಿಮುಖವಾಗಿರುವವನು ಅಂದರೆ ಮೊಸರಿನಲ್ಲಿ ಅಭಿಮಾನವುಳ್ಳವನು ಎಂದಾಗಬಹುದು. ಕೆಲವರು ದಧ್ಯಂಚ ಮತ್ತು ಸೋಮ ಎರಡೂ ಒಂದೇ ಎಂದು ಅಭಿಪ್ರಾಯಪಡುತ್ತಾರೆ. ಆದರೆ ಈ ನಿರ್ಣಯಕ್ಕೆ ಬರಲು ಆಧಾರ ಸಾಲದು. ದಧ್ಯಂಚನೆಂದರೆ ಶಿಡಿಲುರೂಪವಾದ ಅಗ್ನಿಯೆಂದರೆ ತಪ್ಪಾಗಲಾರದು. ಅಶ್ವಶಿರಸ್ಸಿನಿಂದ ವೇಗವೂ, ಅದರ ಧ್ವನಿಯಿಂದ ಗುಡುಗೂ, ಮೂಳೆಯಿಂದ ಶಿಡಿಲೂ ಎಂದು ತಿಳಿದುಕೊಳ್ಳಬಹುದು. ಸೋಮರಸದೊಡನೆ ಅದಕ್ಕಿರುವ ಸಂಬಂಧವನ್ನು ನೋಡಿದರೆ, ಸೋಮ-ಶ್ಯೇನಗಳ ಸಂಬಂಧವು ಸೂಚಿತವಾಗುತ್ತದೆ. ಹೆಸರಿನಿಂದ ಚಂಡಮಾರುತವು ಬೀಸುವಾಗ ಉಂಟಾಗುವ ಕ್ಷೋಭೆಯು ಸೂಚಿತವಾಗುತ್ತದೆ. ಪುರಾಣಾದಿಗಳಲ್ಲಿ ಇದು ದಧೀಚ ಎಂದು ರೂಪಾಂತರ ಹೊಂದಿ, ಇವನ ಮೂಳೆಗಳಿಂದಲೇ ಇಂದ್ರನು ವಜ್ರಾಯುಧವನ್ನು ಮಾಡಿಕೊಂಡು, ವೃತ್ರಾಸುರನನ್ನು ವಧಿಸಿದನೆಂದು ಇದೆ.

ಅಂಗಿರಸರು.

ಒಟ್ಟು ಸುಮಾರು ೬೦ ಪ್ರಯೋಗಗಳಲ್ಲಿ, ಮೂವತ್ತು ಬಹುವಚನದಲ್ಲಿದೆ. ಈ ಪದದಿಂದ ನಿಷ್ಪನ್ನವಾದ ರೂಪಗಳೂ ಮೂವತ್ತು ಇವೆ. ೧೦-೬೨ನೆಯ ಸೂಕ್ತ ಪೂರ್ತಿಯಾಗಿ ಈ ಗಣವನ್ನು ಹೊಗಳುತ್ತದೆ.

ಅಂಗಿರಸರು ಆಕಾಶದ ಪುತ್ರರು (೩-೫೬-೭ ; ೧೦-೬೭-೨ ; ೪-೨-೧೫ನ್ನು ಹೋಲಿಸಿ). ಅವರು ದೇವತೆಗಳ ಪುತ್ರರಾದ ಋಷಿಗಳು (೧೦-೬೨-೪). ಅವರಲ್ಲಿಯೇ ಒಬ್ಬ ಅಂಗಿರಸನು ಮೂಲಪುರುಷನೆಂದೂ ಉಳಿದವರು ಅವನ ಪುತ್ರರೆಂದೂ (೧೦-೬೨-೫) ಭಾವನೆ. ಮಂತ್ರಗಳಲ್ಲಿ, ಪಿತೃಗಳು (೧೦-೬೨-೨), ನಮ್ಮ ಪಿತೃಗಳು (೧-೭೧-೨) ಅಥವಾ ನಮ್ಮ ಪುರಾತನ ಪಿತೃಗಳು (೧-೬೨-೨) ಎಂದು ಕರೆಯಲ್ಪಟ್ಟಿದ್ದಾರೆ. ಅಥರ್ವರು, ಭೃಗುಗಳು ಇವರೊಡನೆ ಅಂಗಿರಸರೂ ಪಿತೃಗಳೆಂದು ಎನಿಸಿಕೊಂಡಿದಾರೆ (೧೦-೧೪-೬) ; ವಿಶೇಷವಾಗಿ ಯಮ

ಮತ್ತು ಅಂಗಿರಸರು ಪಿತೃಗಳೆಂದು ಪರಿಗಣಿತರಾಗಿದಾರೆ (೧೦-೧೪-೩ರಿಂದ ೫). ಒಂದೊಂದು ಕಡೆ ದೇವತಾ ಗಣಗಳಿಗೆ ಸಾಮ್ಯವೂ ಹೇಳದೆ. ಆದಿತ್ಯರು, ವಸುಗಳು ಮತ್ತು ಮರುತರೊಡನೆ (೭-೪೪-೪ ; ೮-೩೫-೧೪), ಕೆಲವು ಸಂದರ್ಭಗಳಲ್ಲಿ ಆದಿತ್ಯರು, ರುದ್ರರು, ವಸುಗಳು ಮತ್ತು ಅಥರ್ವರೊಡನೆ (ಅ. ವೇ. ೧೮-೪-೧೩) ಕೆಲವು ಕಡೆ. ಅವರಿಗೆ ಸೋಮರಸವು ಅರ್ಪಿತವಾಗಿದೆ (೯-೬೨-೯) ಮತ್ತು ದೇವತೆಗಳಂತೆ ಸ್ತುತರಾಗಿದಾರೆ (೩-೫೩-೭ ; ೧೦-೬-೨). ಅವರು ಯಾಗಗಳಲ್ಲಿ 'ಬ್ರಹ್ಮ'ನ ಸ್ಥಾನದಲ್ಲಿರುವವರು (೭-೪೨-೧). ವನಗಳಲ್ಲಿ ಅಡಗಿದ್ದ ಅಗ್ನಿಯನ್ನು ಕಂಡುಹಿಡಿದರು (೫-೧೧-೬) ಮತ್ತು ಯಾಗಸಂಬಂಧವಾದ ಮೊದಲನೆಯ ನಿಯಮವನ್ನು ಚಿಂತಿಸಿದರು (೧೦-೬೭-೨). ಯಾಗದಿಂದಲೇ ಅವರು ಅಮರತ್ವವನ್ನೂ ಇಂದ್ರನ ಮೈತ್ರಿಯನ್ನೂ ಗಳಿಸಿದರು (೧೦-೬೨-೧).

ಇಂದ್ರನಿಗೂ ಇವರಿಗೂ ಬಹಳ ಸಮೀಪ ಸಂಬಂಧವಿದೆ ಇವರಿಗೇ ಇಂದ್ರನು ಗೋವುಗಳನ್ನು ತೋರಿಸಿದುದು (೮-೫೨-೩). ಇವರಿಗೋಸ್ಕರಲೇ, ಗೋಶಾಲೆಗಳ ದ್ವಾರಗಳನ್ನು ತೆರೆದುದು (೧-೫೧-೩ ; (೧-೧೩೪-೪) ವಲನನ್ನು ಉರುಳಿಸಿ, ಗೋವುಗಳನ್ನು ಹೊರಗೆ ಹೊರಡಿಸಿದುದು (೮-೧೪-೮). ಇವರಿಂದ ಸಹ ಚರಿತನಾಗಿಯೇ ಇಂದ್ರನು ವಲನನ್ನು ಇರಿದು (೨-೧೧-೨೦), ಹಸುಗಳನ್ನು ಹೊರಕ್ಕೆ ಓಡಿಸಿದುದು (೬-೧೭-೬). ಇವರಿಗೆ ಮುಖಂಡನೆಂಬ ಅಭಿಪ್ರಾಯದಿಂದಲೇ, ಇಂದ್ರನನ್ನು ಎರಡು ಸಂದರ್ಭಗಳಲ್ಲಿ (೧-೧೦೦-೪ ; ೧-೧೩೦-೩) ಅಂಗಿರಸ್ತಮ ಎಂದು ಕರೆದಿರುವುದು. ಇಂದ್ರನಿಗೆ ಉತ್ಸಾಹದಾಯಕವಾದ ಸೋಮವೂ ಅಂಗಿರಸರ ಗೊಸ್ಕರ ಗೋಶಾಲೆಗಳ ದ್ವಾರಗಳನ್ನು ತೆರೆಯಿತೆಂದು ಇದೆ (೯-೮೬-೨೫). ಗೋವಿಮೋಚನದ ಪ್ರಸಂಗದಲ್ಲಿ, ಅಂಗಿರಸರ ಗಾನವು ವಿಲಕ್ಷಣವಾದುದು. ಅವರಿಂದ ಸ್ತುತನಾಗಿ, ಇಂದ್ರನು ವಲನನ್ನು ಇರಿದನು (೨-೧೫-೮) ಗೋಶಾಲಾ ದ್ವಾರಗಳನ್ನು ಭೇದಿಸಿದನು (೪-೧೬-೧೮), ವಲನನ್ನು ಕೊಂದು, ಅವನ ದುರ್ಗದ್ವಾರಗಳನ್ನು ತೆರೆದನು (೬-೧೮-೫) ಅಥವಾ ಕತ್ತಲನ್ನು ಓಡಿಸಿ, ಭೂಮಿಯನ್ನು ವಿಸ್ತರಿಸಿ ಆಕಾಶದ ಅಧಃಪ್ರದೇಶಗಳನ್ನು ಸ್ಥಾಪಿಸಿದನು (೧-೬೨-೫). ನಾನಾ ವಿಧವಾಗಿ ಗಾನವಮಾಡುವ ಮರುತರ ಗಾನವನ್ನೂ ಅಂಗಿರಸರು ಹಾಡುವುದಕ್ಕೆ ಹೋಲಿಸಿದೆ (೧೦-೭೮-೫) ಮತ್ತು ಅಂಗಿರಸರ ಗೀತೆಗಳಿಂದಲೇ, ದೇವತೆಗಳನ್ನು ಯಾಗಕ್ಕೆ ಕರೆಯುವುದು (೧-೧೦೭-೨) ಎಂದಮೇಲೆ ಅವರ ಹಾಡುಗಾರಿಕೆಯ ನೈಶಿಷ್ಟ್ಯವನ್ನು ಊಹಿಸಿಕೊಳ್ಳಬಹುದು. ಸಾಧಾರಣ ಋತ್ವಿಜರಿಂದ ಉಚ್ಚರಿಸಲ್ಪಡುವ ಸ್ತುತಿವಾಕ್ಯಗಳನ್ನೂ ಅಂಗಿರಸರ ಸ್ತುತಿಗೆ ಹೋಲಿಸುತ್ತಾರೆ (೧-೬೨-೧, ೨ ; ಇತ್ಯಾದಿ). ಗೋವುಗಳ ಇತಿಹಾಸದಲ್ಲಿ, ಪ್ರಸಂಗವಶಾತ್, ಅಂಗಿರಸರ ಪಾತ್ರವು ಇಂದ್ರನ ಪಾತ್ರಕಿಂತ ಹೆಚ್ಚೆಂದು ಕಾಣುತ್ತದೆ. ಇಂದ್ರನನ್ನು ಜೊತೆಯಲ್ಲಿಟ್ಟುಕೊಂಡು, ಅಂಗಿರಸರು, ಗೋ ಮತ್ತು ಅಶ್ವಶಾಲೆಗಳನ್ನು ಬರಿದು ಮಾಡಿದರು (೧೦-೬೭-೬). ಮುಂದೆ ಈ ಕೆಲಸವನ್ನು ಅಂಗಿರಸರೇ ಮಾಡಿದರು, ಅದರಲ್ಲಿ ಇಂದ್ರನ ಕೈವಾಡವೇ ಇಲ್ಲವೆನ್ನುವುದಕ್ಕೆ ಇದು ಮೊದಲನೆಯ ಹೆಜ್ಜೆ ಎನ್ನಬಹುದು. ತಾವು ಆಚರಿಸಿದ ಕರ್ಮ ಬಲದಿಂದ, ಅವರು ಹಸುಗಳನ್ನು ಹೊರಕ್ಕೆ ಅಟ್ಟಿ, ವಲನನ್ನು ಇರಿದು ಕೊಂದರು (೧೦-೬೭-೭), ಸೂರ್ಯನು ಆಕಾಶದಲ್ಲಿ ಏರುವಂತೆ ಮಾಡಿದರು ಮತ್ತು ಭೂಮಿಯನ್ನು ವಿಸ್ತಾರವಾಗಿ ಹರಡಿದರು (೧೦-೬೭-೩). ತಾವು ಆಚರಿಸಿದ ಯಾಗ ಕರ್ಮದ ಬಲದಿಂದ ಬಂಡೆಯನ್ನು ಒಡೆದು, ಗೋವುಗಳೊಡನೆ ತಾವೂ (ಸಂತೋಷದಿಂದ) ಕಿರಿಚಿಕೊಂಡರು (೪-೩-೧೧). ಗಾನ ಮಾಡುತ್ತಾ ಅವರು ಗೋವುಗಳನ್ನು ಕಂಡರು (೧-೬೭-೨). ತಮ್ಮ ಗಾನಗಳಿಂದ, ಅವರು ಬಂಡೆಯನ್ನು ಒಡೆದು, ಬೆಳಕನ್ನು ಕಂಡರು (೧-೬೭-೨). ಇಂದ್ರನಿಗೋಸ್ಕರ, ಪಣಿ ನಾಮಕ ಅಸುರನಿಂದ ಅಪಹೃತವಾಗಿದ್ದ ಗೋವುಗಳನ್ನು ಸರಮೆಯು ಪತ್ತೆಹಚ್ಚಿದ ಪ್ರಸಂಗದಲ್ಲಿಯೂ, ಅಂಗಿರಸರ ಪಾತ್ರವಿದೆ (೧೦-೧೦೮-೮, ೧೦), ಸರಮೆಯು ಗೋವುಗಳನ್ನು ಗೊತ್ತುಹಚ್ಚುವುದರಲ್ಲಿ, ಇಂದ್ರ ಮತ್ತು ಅಂಗಿ

ರಸರಿಗೆ ಸಹಾಯವಮಾಡಿತು (೧-೬೨-೩ ; ೧-೬೨-೮ನ್ನು ಹೋಲಿಸಿ.) ಅಂಗಿರಸರೇ ಸ್ವತಃ ಪಣಿಸಂಬಂಧವಾದ ಗೋವು ಮತ್ತು ಅಶ್ವಗಳನ್ನು ಕಂಡುಹಿಡಿದರೆಂದೂ ಇದೆ (೧-೮೩-೪). ಪಣಿಸಂಬಂಧವಾದ ಗೋವುಗಳ ವಿಮೋಚನಾ ಕಾರ್ಯದಲ್ಲಿ ಬೃಹಸ್ಪತಿಯೂ ಸೇರಿದಾನೆ (೧೦-೧೦೮-೬, ೧೧); ಪರ್ವತವನ್ನು ಛೇದಿಸಿ, ಗೋಗ್ರಹಣ ಮಾಡುವಾಗ, ಅವನಿಗೂ ಅಂಗಿರಸನೆಂಬ ವಿಶೇಷಣವಿದೆ (೬-೭೩-೧), ಭಗನು ಅನುಗ್ರಹಿಸುವಂತೆ ಗೋವುಗಳನ್ನು ಅನುಗ್ರಹಿಸುವಾಗಲೂ, ಬೃಹಸ್ಪತಿಗೆ ಇದೇ ವಿಶೇಷಣ (೧೦-೬೮-೨).

ಇಂದ್ರನ ಜೊತೆಯಲ್ಲಿದ್ದು, ಗೋವುಗಳನ್ನು ಓಡಿಸಿ, ನೀರನ್ನು ಹರಿಯುವಂತೆ ಮಾಡಿದಾಗ, ಬೃಹಸ್ಪತಿಯನ್ನು ಅಂಗಿರಸನೆಂತಲೇ ಕರೆದಿರುವುದು (೨-೨೩-೧೪). ಇದೊಂದು ಸಂದರ್ಭವನ್ನು ಬಿಟ್ಟರೆ, ಉಳಿದ ಏಕವಚನ ಪ್ರಯೋಗವೆಲ್ಲಾ ಅಗ್ನಿಪರವೇ. ಅಗ್ನಿಯು ಮೊದಲನೆಯ ಋಷಿಯಾದ ಅಂಗಿರಸನು (೧-೩೧-೧), ಪುರಾತನ ಅಂಗಿರಸನು (೧೦-೯೨-೧೫), ಅಥವಾ ಅಂಗಿರಸರಲ್ಲಿ ಒಬಳ ಪುರಾತನನೂ (೧-೧೩೭-೨), ಹೆಚ್ಚು ಸ್ಫೂರ್ತಿಯುಳ್ಳವನೂ (೬-೧೧-೩) ಆದವನು. ಅಗ್ನಿಯನ್ನು ಅನೇಕ ಸಲ ಅಂಗಿರಸರಲ್ಲಿ ಮುಖಂಡನೆಂದು ಕರೆದಿದೆ (೧-೭೫-೨ ; ಇತ್ಯಾದಿ). ಆದರೆ, ಇದೇ ಅಂಗಿರಸ್ತಮ (ಅಂಗಿರಸರ ಮುಖಂಡ) ಎಂಬುವುದು, ಒಂದೆರಡುಸಲ, ಇಂದ್ರ, ಉಷಸ್ಸು ಮತ್ತು ಸೋಮರಿಗೂ ಉಪಯೋಗಿಸಿದೆ. ಅಗ್ನಿ ಮೊದಲಾದೆವರಿಗೇ ಯಾರಿಗೂ ಅನ್ವಯಿಸದಂತೆ ಪ್ರಯೋಗಿಸಿರುವುದೂ ಉಂಟು ; ಪಿತೃಗಣದಲ್ಲಿ ಪುರಾತನ ಅಂಗಿರಸನೂ ಒಬ್ಬನು (೧-೧೩೯-೧) ಅಥವಾ ಅಂಗಿರಸ್ವತ್' ಎಂಬ ಪ್ರಯೋಗದಲ್ಲಿ (೧-೪೫-೩) ಸಂದರ್ಭಾನುಸಾರವಾಗಿ ಏಕವಚನಾರ್ಥವು ಉದ್ದಿಷ್ಟವಾದಾಗಲೂ, ಅದೇ ಅನನ್ವಿತವಾದ ಪ್ರಯೋಗ. ಎಲೈ ಅಗ್ನಿಯೇ, ಅಂಗಿರಸನೇ, ಮನು ಮತ್ತು ಅಂಗಿರಸರ ಆಹ್ವಾನಕ್ಕೆ ಮನ್ನಣೆ ಕೊಟ್ಟಂತೆ, (ನಮ್ಮ ಆಹ್ವಾನವನ್ನೂ ಮನ್ನಿಸಿ) ನಮ್ಮ ಸಮೀಪಕ್ಕೆ ಆಗಮಿಸು ಎಂಬಲ್ಲಿ (೧-೩೧-೧೭), ಅಗ್ನಿ ಮತ್ತು ಪಿತೃಗಳು ಇಬ್ಬರೂ ಆ ಪದದಿಂದ ಉದ್ದಿಷ್ಟರು.

ಅನುಕ್ರಮಣಿಯಲ್ಲಿ, ಅಂಗಿರಸರು ಒಂದು ಪುರೋಹಿತರ ವಂಶದವರು. ಒಂಬತ್ತನೆಯ ಮಂಡಲದ ಮಂತ್ರದ್ರಷ್ಟೃಗಳು. ಅಥರ್ವ-ಅಂಗಿರಸರು ಎಂಬಲ್ಲಿಯೂ ಅವರೇ ಉದ್ದಿಷ್ಟರು. ಅಥರ್ವ ವೇದಕ್ಕೇ ಅಥರ್ವಾಂಗಿರಸ ಎಂದು ಹೆಸರು (ಅ. ವೇ. ೧೦-೭-೨೦). ಇದೇ ಅಭಿಪ್ರಾಯ ಶತಪಥಬ್ರಾಹ್ಮಣದಲ್ಲಿಯೂ ಇದೆ (ಶ. ಬ್ರಾ. ೧೧-೫-೬-೭ ; ಇತ್ಯಾದಿ).

ಈ ಗುಂಪು ಮನುಷ್ಯರಿಗಿಂತ ಸ್ವಲ್ಪ ಉತ್ತಮರು, ದೇವಮಾನವರಿಗೆ ಮಧ್ಯದಲ್ಲಿ ಓಡಾಡಿಕೊಂಡಿದ್ದರು. ಅಥವಾ ದೇವದೂತನಾದ ಅಗ್ನಿಯ ದೂತರು ಎಂದು ಹೇಳಬಹುದು. ಅವರು ವ್ಯಕ್ತೀಕೃತವಾದ ಅಗ್ನಿಯ ಜ್ವಾಲೆಗಳು ಎನ್ನಬಹುದು.

ವಿರೂಪಾಃ.

ಅಂಗಿರಸರೊಡನೆ ಸಂಬಂಧ ಹೊಂದಿರುವ ವಿರೂಪರೆಂಬುವರ ಹೆಸರು ಬಹುವಚನದಲ್ಲಿ ಮೂರು ಕಡೆ ಬಂದಿದೆ. ಅಂಗಿರಸರು ಮತ್ತು ವಿರೂಪರು ದ್ಯುದೇವತೆಯ ಪುತ್ರರು (ದಿವಸ್ಪುತ್ರಾಃ ೩-೫೩-೭). ವಿರೂಪರು ಋಷಿಗಳು, ಅಂಗಿರಸನ ಪುತ್ರರು, ಅಗ್ನಿಯಿಂದ, ಆಕಾಶದಿಂದ ಜನಿಸಿದವರು (೧೦-೬೨-೫, ೬). ಅಗ್ನಿಯನ್ನು ಸ್ತುತಿಸುವವನೆಂದು ಏಕವಚನದಲ್ಲಿ 'ವಿರೂಪ' ಎಂದು ಒಂದು ಕಡೆ (೮-೬೪-೬) ಇದೆ. ೧-೪೫-೩ರಲ್ಲಿ, ಪ್ರಿಯಮೇಧಾವತ್, ಅತ್ರಿವತ್, ಅಂಗಿರಸ್ವತ್ ಇವುಗಳಂತೆ, ವಿರೂಪವತ್ (ವಿರೂಪನಂತೆ) ಎಂಬುದಾಗಿ ಏಕವಚನಾರ್ಥಕವಾಗಿ ಪ್ರಯೋಗಿಸಿದೆ. ೧೦-೧೪-೫ರಲ್ಲಿ ಅಂಗಿರಸರು, ವೈರೂಪರು (ವಿರೂಪನ ಮಕ್ಕಳು) ಮತ್ತು ಯಮ ಇವರುಗಳು ಒಟ್ಟಿಗೆ ಸ್ತುತರಾಗಿದಾರೆ. ವಿರೂಪ ಎಂದರೆ ಬದಲಾಯಿಸುವ ರೂಪವುಳ್ಳ ಎಂದರ್ಥವಾಗುತ್ತದೆ ;

ಪ್ರಾಯಶಃ ಈ ಪದವು ಅಂಗಿರಾಃ ಎಂಬ ಪದದ ಜೊತೆಯಲ್ಲಿಯೇ ಪ್ರಯೋಗಿಸಲ್ಪಟ್ಟಿರುವುದು; ಆದುದರಿಂದ ಇದು ಅಂಗಿರಸ ಅಥವಾ ಅಂಗಿರಸರ ವಿಶೇಷಣವೆಂದೇ ಭಾವಿಸಬಹುದು.

ನವಗ್ವಾಃ.

ಅರುಸಲ ಅಂಗಿರಸರೊಡನೆ ಬರುವುದನ್ನೂ ಸೇರಿಸಿಕೊಂಡು, ಒಟ್ಟು ಹದಿನಾಲ್ಕು ಕಡೆ ಈ ಪದವು ಬರುತ್ತದೆ. ಅವರು ನಮ್ಮ ಪುರಾತನ ಪಿತೃಗಳು (೬-೨೨-೨) ಅಥವಾ, ಅಂಗಿರಸರು, ಅಥರ್ವರು, ಭೃಗುಗಳು ಮತ್ತು ನವಗ್ವರು ನಮ್ಮ ಪಿತೃಗಳು (೧೦-೧೪-೬). ಇಂದ್ರ, ಸರಮಾ ಮತ್ತು ಪಣಿಸಂಬಂಧವಾದ ಗೋವುಗಳು, ಈ ವಿಷಯಕವಾದ ಗೋವುಗಳು, ಈ ವಿಷಯಕವಾದ ಇತಿಹಾಸದಲ್ಲಿ ನವಗ್ವರೂ ಸೇರಿದಾರೆ (೧-೬೨-೩, ೪; ೫-೪೫-೭; ೧೦-೧೦೮-೪). ನವಗ್ವರನ್ನು ಸ್ನೇಹಿತರಾಗಿಟ್ಟುಕೊಂಡು, ಇಂದ್ರನು ಗೋವುಗಳನ್ನು ಹುಡುಕಿದನು (೩-೩೯-೫). ಸೋಮರಸವನ್ನು ಸಿದ್ಧಪಡಿಸುತ್ತಾ, ಅವರು ಗಾನಗಳಿಂದ ಇಂದ್ರನನ್ನು ಸ್ತುತಿಸುತ್ತಾರೆ; ಗೋಶಾಲೆಗಳ ದ್ವಾರಗಳನ್ನು ಒಡೆಯುತ್ತಾರೆ (೫-೨೯-೧೨). ಸೋಮವನ್ನು ಹಿಂಡುವ ಶಿಲೆಗಳೊಡನೆ ಅವರು ಹತ್ತು ತಿಂಗಳು ಗಾನಮಾಡಿದರು (೫-೪೫-೭, ೧೧). ಬಹುವಚನದಲ್ಲಿ, ಎರಡು ಸಲ ಪ್ರಯೋಗವಿದೆ; ಅದರಲ್ಲಿ ಒಂದು ಸಲ ಅಗ್ನಿಕಿರಣಗಳಿಗೆ ವಿಶೇಷಣವಾಗಿದೆ (೬-೬-೩). ಅಂಗಿರಸ (೪-೫೧-೪; ೧೦-೬೨-೬) ಅಥವಾ ದಧ್ಯಂಚ (೯-೧೦೪-೪)ರಿಗೆ ವಿಶೇಷಣವಾಗಿ ಏಕವಚನದಲ್ಲಿ ಮೂರು ಸಲ ಪ್ರಯೋಗವಿದೆ. ಆ ಪದಕ್ಕೆ ಒಂಭತ್ತು ಜನ (ಗುಂಪಾಗಿ) ಹೋಗುವುದು ಎಂದರ್ಥ. ಪ್ರಾಯಶಃ ಒಂಬತ್ತು ಜನ ಪುರಾತನ ಋಷಿಗಳನ್ನು ಸೂಚಿಸಬಹುದು.

ದಶಗ್ವಾಃ.

ಇದು ಏಳು ಸಲ—ಮೂರು ಸಲ ಏಕವಚನದಲ್ಲಿ, ಏಳರಲ್ಲಿ ಎರಡೇ ಸಲ ಪ್ರತ್ಯೇಕವಾಗಿ—ಸಾಧಾರಣವಾಗಿ ನವಗ್ವರ ಜೊತೆಯಲ್ಲಿಯೇ, ಬಂದಿದೆ. ಇವರೇ ಮೊದಲು ಯಾಗಮಾಡಿದವರು (೨-೩೪-೧೨). ಇಂದ್ರನು ನವಗ್ವರಿಂದ ಸಹಚರಿತನಾಗಿ ಗೋವುಗಳನ್ನು ಹುಡುಕಿದನು ಮತ್ತು ದಶಗ್ವರ ಸಹವಾಸದಲ್ಲಿ ಸೂರ್ಯನನ್ನು ಕಂಡನು. (೩-೩೯-೫) ನವಗ್ವರು ಮತ್ತು ದಶಗ್ವರೊಡನೆ ಕೂಡಿ, ಇಂದ್ರನು ಪರ್ವತ ಮತ್ತು ವಲರನ್ನು ಛೇದಿಸಿದನು (೧-೬೨-೪). ನವಗ್ವದಶಗ್ವರು ಇಂದ್ರನನ್ನು ಸ್ತುತಿಸಿ, ಗೋಶಾಲೆಗಳನ್ನು ಒಡೆದು ತೆರೆದರು (೫-೨೯-೧೨). ನವಗ್ವ ಆಂಗಿರಸ ಮತ್ತು ಏಳು ಮುಖದ ದಶಗ್ವನ ಮೇಲೆ ಉಷಸ್ಸು ಪ್ರಕಾಶಿಸಿತು (೪-೫೧-೪). ನವಗ್ವ ಸಹಚರಿತನಾದ ದಶಗ್ವನನ್ನು ಅಂಗಿರಸ್ತಮನೆಂದು (೧೦-೬೨-೬) ಕರೆದಿದೆ. ಇಂದ್ರನು ದಶಗ್ವನಿಗೆ ಕಷ್ಟ ಬಂದಾಗ ಸಹಾಯಮಾಡಿದನೆಂದು (೮-೧೨-೨) ಇದೆ. ನವಗ್ವದಶಗ್ವರು ಸಂಖ್ಯಾವ್ಯತ್ಯಾಸವಿದ್ದರೂ, ಒಂದೇ ವಿಧವಾದವರು ಎನ್ನಬಹುದು.

ಸಪ್ತರ್ಷಿಗಳು.

ಈ ಸಪ್ತರ್ಷಿಗಳೆಂದು ಪ್ರಖ್ಯಾತವಾದ ಋಷಿಗಣವು ಋಗ್ವೇದದಲ್ಲಿ ನಾಲ್ಕೇ ಕಡೆ ಕಂಡುಬರುತ್ತದೆ. ನಮ್ಮ ಪಿತೃಗಳು, ಏಳು ಜನ ಋಷಿಗಳು (೪-೪೨-೪). ದೇವತಾ ಸ್ವಭಾವವುಳ್ಳವರು (೧೦-೧೩೦-೭), ದೇವತೆಗಳೊಡನೆ ಸಂಬಂಧವುಳ್ಳವರು (೧೦-೧೦೯-೪). ೨-೧-೨ನಲ್ಲಿ ಉಕ್ತವಾಗಿರುವ ಏಳು ಜನ ಋತ್ವಿಜರಿಂದ, ಈ ಸಂಖ್ಯೆ ಸೂಚಿತವಾಗಿರಬಹುದು; ಆ ಏಳು ಜನಗಳೇ ಸಪ್ತಋಷಿಗಳಿರಬಹುದು. ಶತಪಥಬ್ರಾಹ್ಮಣದಲ್ಲಿ ಈ ಏಳು ಜನಕ್ಕೂ ಒಂದೊಂದು ಹೆಸರಿದೆ (೪. ಬ್ರಾ. ೧೪-೫-೨-೬; ಬೃಹದಾ. ಉಪ. ೨-೨-೬). ಅದೇ ಬ್ರಾಹ್ಮಣದಲ್ಲಿ (೨-೧-೨-೪; ಋ. ವೇ. ೪-೧-೧೦೦ನ್ನು ಹೋಲಿಸಿ), ಆ ಏಳು ಜನಗಳೂ ಸಪ್ತರ್ಷಿಮಂಡಲದ ಏಳು

ನಕ್ಷತ್ರಗಳೆಂದೂ ಮೊದಲು ಕರಡಿಗಳಾಗಿದ್ದರೆಂದೂ ಹೇಳಿದೆ. ಋಕ್ಷ ಎಂಬ ಪದಕ್ಕೆ ನಕ್ಷತ್ರ (೧-೨೪-೧೦) ಮತ್ತು ಕರಡಿ (೫-೫೬-೩) ಎಂಬ ಎರಡು ಅರ್ಥಗಳಿರುವುದರಿಂದಲೂ, ಎರಡು ಸಂದರ್ಭಗಳಲ್ಲಿಯೂ ಸಂಖ್ಯೆ ಒಂದೇ ಆಗಿರುವುದರಿಂದಲೂ, ಈ ಅಭಿಪ್ರಾಯ ಬಂದಿರಬಹುದು.

ಏಳು ಜನ ವಿಪ್ರರು ಮತ್ತು ನವಗ್ವರು ಇಂದ್ರನನ್ನು ಸ್ತುತಿಸಿದರು (೬-೨೨-೨; ೩-೩೧-೫ನ್ನು ಹೋಲಿಸಿ; ೪-೨-೧೫) ಎಂಬಲ್ಲಿ ಏಳು ವಿಪ್ರರು ಸಪ್ತರ್ಷಿಗಳೇ ಇರಬೇಕು. ಏಳುಜನ ಹೋತೃಗಳು ಮನುವಿನಿಂದ ಸಹಿತರಾಗಿ ದೇವತೆಗಳಿಗೆ ಮೊದಲನೆಯ ಆಹುತಿಯನ್ನು ಕೊಟ್ಟರು (೧೦-೬೩-೭) ಎಂಬಲ್ಲಿಯೂ ಇದೇ ಅಭಿಪ್ರಾಯವಿರಬೇಕು.

ಅತ್ರಿ

ಋಗ್ವೇದದಲ್ಲಿ ಪೆಚ್ಚು ಸಲ ಪ್ರಸಕ್ತರಾಗುವ ಪುರಾತನ ಋಷಿಗಳಲ್ಲಿ ಒಬ್ಬನು. ಏಕವಚನದಲ್ಲಿ ಐವತ್ತು ಸಲವೂ, ಅತ್ರಿ ಗೋತ್ರದವರು ಎಂಬರ್ಥದಲ್ಲಿ ಬಹುವಚನಾಂತವಾಗಿ ಮೂರು ಸಲವೂ ಪ್ರಯೋಗವಿದೆ. ಐದು ಪಂಗಡಗಳಿಗೆ ಸೇರಿದ ಋಷಿ (೧-೧೧೭-೩), ಮನು ಮೊದಲಾದ ಮಾನವ ವರ್ಗದ ಮೂಲಪುರುಷರಲ್ಲಿ ಒಬ್ಬನು (೧-೩೯-೯).

ಅಗ್ನಿಯು ಅತ್ರಿ (೭-೧೫-೫) ಮತ್ತು ಇತರ ಪುರಾತನ ಋಷಿಗಳಿಗೆ ಸಹಾಯ ಮಾಡಿದನು (೧-೪೫-೩; ೧೦-೧೫೦-೫). ಇಂದ್ರನೂ ಕೂಡ ಅತ್ರಿಯ ಪ್ರಾರ್ಥನೆಯನ್ನು ಕೇಳಿ (೮-೩೬-೭) ತಂಗಿರಸರು ಮತ್ತು ಅತ್ರಿಗೋಸ್ಕರ ಗೋಶಾಲೆಯನ್ನು ತೆರೆದನು (೧-೫೫-೧೩). ಆದರೆ, ಅತ್ರಿಯು ಮುಖ್ಯವಾಗಿ ಅಶ್ವಿನೀದೇವತೆಗಳ ಆಶ್ರಿತನೆಂದೇ ಪ್ರತಿಪಾದಿಸಿರುವುದು ಮತ್ತು ಅತ್ರಿವಿಷಯಕವಾದ ಇತಿಹಾಸವೂ ಅಶ್ವಿನೀದೇವತೆಗಳಿಗೆ ಸಂಬಂಧಿಸಿದೆ. ಅತ್ರಿಯನ್ನು ತಮಸ್ಸಿನಿಂದ ಬಿಡುಗಡೆ ಮಾಡಿದರು (೬-೬೦ ೧೦; ೮-೮೫-೬). ದುಷ್ಟವಾಕ್ಷಸನ ಮಾಯಾಜಾಲಗಳನ್ನು ಪರಿಹರಿಸಿ (೧-೧೧೭-೩), ಪರಿವಾರಸಮೇತನಾದ (೧-೧೧೬-೮; ೧-೧೧೭-೩), ಅತ್ರಿಯನ್ನು ಕನುರಿಯಿಂದ ಮೇಲಕ್ಕೆ ಎತ್ತಿದರು (೫-೭೮-೪). ಅತ್ರಿಯು ಬಿದ್ದಿದ್ದ ಮತ್ತು ಅಶ್ವಿನೀದೇವತೆಗಳು ಅವನನ್ನು ಮೇಲಕ್ಕೆ ಎತ್ತಿದ ಹಳ್ಳವು ಒಂದು ದೊಡ್ಡ ಅಗ್ನಿಕುಂಡ; ಆದರೆ, ಅವರು ಅವನಿಗೆ ಪುನರುಜ್ಜೀವಕವಾದ ಪಾನೀಯವನ್ನು ಕೊಡುತ್ತಾರೆ (೧-೧೧೬-೮; ೧-೧೧೮-೭). ಅಥವಾ, ಅವನು ಬಿದ್ದಿದ್ದ ಅಗ್ನಿಕುಂಡವೇ ಅವನಿಗೆ ಹಿತವಾಗಿರುವಂತೆ ಮತ್ತು ಅವನ ವಾಸಗೃಹವು ಅವನಿಗೆ ಅನುಕೂಲವಾಗಿರುವಂತೆ ಮಾಡಿದರು (೧೦-೩೯-೯; ೮-೬೨-೭); ಅಗ್ನಿಯು ಅವನನ್ನು ದಹಿಸದಂತೆ ಅಡ್ಡಿಪಡಿಸುತ್ತಾರೆ (೮-೬೨-೮); ಬೆಂಕಿಯ ಕಾವಿನಿಂದ ದಹಿಸಲ್ಪಡುತ್ತಿದ್ದ ಅತ್ರಿಯನ್ನು ಉಳಿಸಿದರು (೧೦-೮೦-೩), ಶೈತ್ಯವನ್ನುಂಟುಮಾಡಿ, ತಾಪ ಪರಿಹಾರ ಮಾಡಿದರು (೧-೧೧೯-೬; ೮-೬೨-೩) ಮತ್ತು ಉರಿಯುವ ಬೇಗೆಯೇ ಅವನಿಗೆ ಹಿತವಾಗಿರುವಂತೆ ಅನುಗ್ರಹಿಸಿದರು (೧-೧೧೭-೭). ವೃದ್ಧನಾಗಿದ್ದ ಅತ್ರಿಯನ್ನು ಪುನಃ ಯುವಕನನ್ನಾಗಿ ಮಾಡಿದರು (೧೦-೧೪೩-೧೨).

ಸ್ವರ್ಭಾನುವಿನಿಂದ ನಿರೂಹಿತನಾಗಿದ್ದ ಸೂರ್ಯನನ್ನು ಅತ್ರಿಯು ಹೆತ್ತೆಹೆಚ್ಚಿ, ಪುನಃ ಆಕಾಶದಲ್ಲಿ ಸ್ಥಾಪಿಸಿದನು (೫-೪೦-೬, ೮). ಅದರ ಮುಂದಿನ ಮಂತ್ರದಲ್ಲಿ, ಈ ಮಹಾಕಾರ್ಯವನ್ನು ಸಾಧಿಸಿದವರು ಅತ್ರಿಗಳು ಎಂದು ಹೇಳಿದೆ. ಅಥರ್ವ ವೇದದಲ್ಲಿಯೂ, ಈ ಸೂರ್ಯನನ್ನು ಕಂಡುಹಿಡಿದು ಆಕಾಶದಲ್ಲಿ ಸ್ಥಾಪಿಸಿದ ವಿಷಯ ಪ್ರಸ್ತಾಪಿತವಾಗಿದೆ (ಅವೇ. ೧೩-೨-೪, ೧೨, ೩೬). ಶತಪಥಬ್ರಾಹ್ಮಣದಲ್ಲಿ, ಅತ್ರಿಯು ತಮಃಪರಿಹಾರಕನಾದ ಪುರೋಹಿತ (ಶ. ಬ್ರಾ. ೪-೩-೪-೨೧), ವಾಗ್ದೇವತೆಯಿಂದ ಜನಿಸಿದವನು (೧-೪-೫-೧೩) ಮತ್ತು ಅವನೇ ವಾಗ್ದೇವತೆಯೆಂತಲೂ (೧೪-೫-೨-೫) ಹೇಳಿದೆ.

ಐದನೆಯ ಮಂಡಲ ಪೂರ್ತಿಯಾಗಿ ಅತ್ರಿಋಷಿ ದೃಷ್ಟವು ಅತ್ರಿ ಅಥವಾ ಅತ್ರಿಗಳೇ ಐದನೆಯ ಮಂಡಲದ ಮಂತ್ರದ್ರಷ್ಟೃಗಳು. ಏಕವಚನ ಅಥವಾ ಬಹುವಚನದಲ್ಲಿರುವ ಅತ್ರಿಪದ ಪ್ರಯೋಗದಲ್ಲಿ ಕಾಲುಭಾಗ ಈ ಮಂಡಲದಲ್ಲಿಯೇ ಇದೆ. ಅತ್ರಯಃ ಎಂಬ ಬಹುವಚನ ಪದದಿಂದ ಆ ಗೋತ್ರದ ಋಷಿಗಳು ಉದ್ದಿಷ್ಟರು.

ಅದ್ (ತಿನ್ನು) ಧಾತುವಿನಿಂದ ನಿಷ್ಪನ್ನವಾಗಿರಬಹುದು. ಅತ್ರಿನ್ (ನುಂಗುವವನು) ಎಂಬ ಪದವು ಈ ಧಾತುವಿನಿಂದ ನಿಷ್ಪನ್ನವಾಗಿ, ರಾಕ್ಷಸಾದಿಗಳಿಗೆ ವಿಶೇಷಣವಾಗಿ ಋಗ್ವೇದದಲ್ಲಿ ಉಪಯೋಗಿಸಲ್ಪಟ್ಟಿದೆ. ಪ್ರಾಯಶಃ ಈ ಅರ್ಥದಲ್ಲಿಯೇ, ಅತ್ರಿ ಎಂಬುದು ಅಗ್ನಿಗೆ ವಿಶೇಷಣವಾಗಿರುವುದು (೨-೮-೫). ಅತ್ರಿ ಪದದ ಜೊತೆಗೆ ಸಪ್ತವಧ್ರಿ ಎಂಬ ಪದಯುಕ್ತವಾಗಿ ಸುಮಾರು ನಾಲ್ಕು ಕಡೆ ಬಂದಿದೆ. ಸಪ್ತವಧ್ರಿಯು ಅಶ್ವಿನೀ ದೇವತೆಗಳ ಆಶ್ರಿತ; ಇವನನ್ನೇ ಬಂಧನದಿಂದ ವಿಮೋಚನೆ ಮಾಡಬೇಕೆಂದು ಅಶ್ವಿನೀ ದೇವತೆಗಳು ಪ್ರಾರ್ಥಿತರಾಗಿದಾರೆ (೫-೭೮-೫, ೬) ಮತ್ತು ಸಪ್ತವಧ್ರಿಯು ಅಗ್ನಿಯ ಅಲುಗನ್ನು (ಜ್ವಾಲೆ) ತನ್ನ ಸ್ತುತಿಯಿಂದ ಹರಿತವನ್ನಾಗಿ ಮಾಡಿದನು (೮-೬೨-೮). ಸುಡುತ್ತಿದ್ದ ಗರ್ತಪ್ರದೇಶವನ್ನು ಅತ್ರಿಸಪ್ತವಧ್ರಿಗೋಸ್ಕರವೇ, ಅಶ್ವಿನೀ ದೇವತೆಗಳು ಹಿತವಾಗಿರುವಂತೆ ಮಾಡಿದುದು (೧೦-೩೯-೯) ಪ್ರಾಯಶಃ, ಅತ್ರಿ ಮತ್ತು ಸಪ್ತ ವಧ್ರಿಗಳು ಒಂದೇ ವ್ಯಕ್ತಿಯ ಎರಡು ಹೆಸರುಗಳಿರಬಹುದು.

ಕಣ್ವ ಮೊದಲಾದವರು.

ಕಣ್ವ

ಈ ಹೆಸರು ಸುಮಾರು ಅರವತ್ತು ಸಲ ಬಂದಿದೆ. ಈತನೂ ಒಬ್ಬ ಪುರಾತನ ಋಷಿ ಮತ್ತು ಕಣ್ವರು ಅವನ ವಂಶೀಕರು. ಏಕವಚನ ಬಹುವಚನಗಳಲ್ಲಿ ಸುಮಾರು ಸಮನಾದ ಪ್ರಯೋಗಗಳಿವೆ. ಕಣ್ವನು ನೃಷದನ ಮಗ (೧೦-೩೧-೧೧). ಅದರಿಂದಲೇ ಅವನಿಗೆ ನಾರ್ಷದನೆಂದು ಹೆಸರು (೧-೧೧೭ ೪; ಅ. ವೇ. ೪-೧೯-೨). ಪ್ರಪಂಚದ ಮೂಲಪುರುಷರಾದ ಮನು, ಅಂಗಿರಸರು ಮೊದಲಾದವರ ಪಟ್ಟಿಯೊಂದರಲ್ಲಿ ಕಣ್ವರ ಹೆಸರೂ ಸೇರಿದೆ (೧-೧೩೯-೯). ಕಣ್ವ ಮೊದಲಾದವರಿಗೆ ಅಗ್ನಿಯು ದೇವತೆಗಳಿಂದ ದತ್ತವಾಯಿತು. ಅವರಿಂದ ಉದ್ದೀಪಿತನಾದ ಅಗ್ನಿಯು ಅವರುಗಳನ್ನು ಅನುಗ್ರಹಿಸಿದನು (೧-೩೬-೧೦, ೧೧, ೧೭). ಅಗ್ನಿಯು ಕಣ್ವ, ಅತ್ರಿ, ತ್ರಸದಸ್ಯು ಮೊದಲಾದವರಿಗೆ ಯುದ್ಧದಲ್ಲಿ ಸಹಾಯಮಾಡಿದನು (೧೦-೫೦-೫), ಮತ್ತು ಅವನು ಕಣ್ವಾದಿಗಳಿಗೆ ನಾಯಕ ಮತ್ತು ಮಿತ್ರ (೧೦-೧೧೫-೫). ಇಂದ್ರನು ಕಣ್ವ, ತ್ರಸದಸ್ಯು ಮೊದಲಾದವರಿಗೆ ಸುವರ್ಣ ಮತ್ತು ಗೋವುಗಳನ್ನನುಗ್ರಹಿಸಿದನು (ವಾ. ೧-೧೦; ೨-೧೦); ತುರುಶ್ವ ಮತ್ತು ಯದುಗಳಿಂದ ಯುಕ್ತನಾದ ಕಣ್ವನಿಗೆ ಮರುತ್ತುಗಳು ಸಂಪತ್ತನ್ನು ದಯಪಾಲಿಸಿದರು (೮-೭-೧೮). ಅಶ್ವಿನೀದೇವತೆಗಳು ಕಣ್ವನಿಗೆ ಅನೇಕ ಸಲ ಸಹಾಯ ಮಾಡಿದಾರೆ (೧-೪೭-೫; ೧-೧೧೨-೫; ೮-೫೫-೨; ೮-೮೫-೨೦). ಅಶ್ವಿನೀ ದೇವತೆಗಳಿಂದ ಉದ್ಧರಿಸಲ್ಪಟ್ಟಾಗ, ಕಣ್ವನು ಅಂಧನಾಗಿದ್ದನು (೮-೫೫-೩೩); ಅವರು ಅವನಿಗೆ ಕಣ್ಣನ್ನು ಕೊಟ್ಟರು (೧-೧೧೮-೭).

ಎಂಟನೆಯ ಮಂಡಲದ ಬಹಳ ಭಾಗಕ್ಕೆ ಕಣ್ವರೇ ಋಷಿಗಳು. ಮಂತ್ರಗಳಲ್ಲಿಯೇ ಋಷಿಗಳ ಹೆಸರು ಕೆಣ್ವರೆಂದು ಇದೆ. ಆದರೆ 'ಅಂಧನಾದ ಕಣ್ವ'ನ ವಿಷಯ ಪ್ರಸ್ತಾಪಿತವಾಗಿಲ್ಲ. ಅಂಧ ಕಣ್ವನು, ರಾತ್ರಿಯ ಕಾಲದ ಸೂರ್ಯ ಅಥವಾ ನಿಗೂಢನಾದ ಅಗ್ನಿ ಅಥವಾ ಸೋಮನೆಂದು ಕೆಲವರು ಅಭಿಪ್ರಾಯಪಡುತ್ತಾರೆ.

ಮೇಧ್ಯಾತಿಥಿ

(ಮೇಧಾತಿಥಿ)—ಕಣ್ವವಂಶದವನು ಮತ್ತು ಕಾಣ್ವನೆಂದೂ ಹೆಸರು (೮-೨-೪೦). ಒಂಭತ್ತು ಸಲ ಈ ಹೆಸರು ಬಂದಿದೆ. ಅದರೂಪವಾಗಿ, ಪೂರ್ವಿಕರ ಪಟ್ಟಿಗಳಲ್ಲಿ, ಕಣ್ವ ಮೊದಲಾದವರೊಡನೆ

ಪ್ರಯೋಗವಿದೆ (೧-೩೬-೧೦, ೧೧, ೧೭). ಯಜ್ಞಸಂಬಂಧವಾದ ಅತಿಥಿಯುಳ್ಳವನು (ಅಂದರೆ ಅಗ್ನಿ) ಎಂದು ಈ ಪದಕ್ಕೆ ಅರ್ಥವಾಗುತ್ತದೆ. ಪ್ರಿಯಮೇಧಾ—ಕಣ್ವಾದಿಗಳ ಜೊತೆಯಲ್ಲಿ ಐದಾರು ಕಡೆ ಬಂದಿದೆ (೮-೫೨೫). ಅವನ ವಂಶಜರಿಗೆ ಪ್ರಿಯಮೇಧರೆಂದು ಹೆಸರು.

ಕುತ್ಸ.

ಇಂದ್ರಸಂಬಂಧವಾದ ಇತಿಹಾಸಗಳಲ್ಲಿ ಈ ಯೋಧನ ಪರಿಚಯವಾಗುತ್ತದೆ. ಸುಮಾರು ಅರವತ್ತು ಸಲ ಪ್ರಸಕ್ತವಾಗಿದೆ. ಒಂದೇ ಒಂದು ಸಲ ಮಾತ್ರ ಬಹುವಚನದಲ್ಲಿ, ಇಂದ್ರನನ್ನು ಉದ್ದೇಶಿಸಿ ಗಾನಮಾಡುವ ಗಾಯಕರು ಎಂಬರ್ಥದಲ್ಲಿ ಪ್ರಯೋಗವಿದೆ (೭-೨೫-೫). ಅರ್ಜುನ ಎಂಬುವನ ಮಗನಾದುದರಿಂದ ಆರ್ಜುನೇಯ ಎಂತಲೂ ಹೆಸರು (೧-೧೧೨-೨೫). ಇವನಿಗೆ, ದಸ್ಯುವಿನೊಡನೆ ಹೋರಾಟದಲ್ಲಿ ಇಂದ್ರನ ಸಹಾಯ ಪಡೆದ ಮಗನೊಬ್ಬನಿದಾನೆ (೧೦-೧೦೫-೧೧). ಕುತ್ಸನು ಯುವಕ ಮತ್ತು ತೇಜಸ್ವಿ (೧-೬೩-೩). ಗರ್ಭದಲ್ಲಿ ಬೀಳಿಸಲ್ಪಟ್ಟಾಗ, ಇಂದ್ರನನ್ನು ಸಹಾಯ ಮಾಡೆಂದು ಪ್ರಾರ್ಥಿಸಿದ ಋಷಿಯು ಈತನೇ (೧-೧೦೬-೬). ಕುತ್ಸನೂ ಮತ್ತು ಇಂದ್ರನೂ ಒಂದೇ ರಥದಲ್ಲಿ ಸಂಚರಿಸುತ್ತಾರೆ (೪-೧೬-೧೧ ; ೫-೨೯-೯) ; ಇಂದ್ರನು ಕುತ್ಸನನ್ನು ಗಾಳಿಯಲ್ಲಿ ತೇಲಿಸಿಕೊಂಡು ಹೋಗುತ್ತಾನೆ (೫-೩೧-೪ ; ೪-೧-೧೧) ; ಅಥವಾ ತನ್ನ ಸಾರಥಿಯಾಗಿ ಮಾಡಿಕೊಳ್ಳುತ್ತಾನೆ (೨-೧೯-೬ ; ೬-೨೦-೫). ಕುತ್ಸನು ಇಂದ್ರನಂತೆಯೇ ಇದಾನೆ (೪-೧೬-೧೦) ; ಇಂದ್ರಾ ಕುತ್ಸರೆಂಬ ದೇವತಾದ್ವಯವು ರಥದಲ್ಲಿ ಆಗಮಿಸಬೇಕೆಂದು ಪ್ರಾರ್ಥಿತವಾಗಿದೆ (೫-೩೧-೯).

ಶುಷ್ಣ ಎಂಬ ಶತ್ರುವನ್ನು ಪರಾಜಯಗೊಳಿಸುವ ಸಂದರ್ಭದಲ್ಲಿ ಇಂದ್ರ ಮತ್ತು ಕುತ್ಸರು ಒಟ್ಟಾಗಿ ಸೇರುತ್ತಾರೆ. ಕುತ್ಸನಿಗೋಸ್ಕರ ಇಂದ್ರನು ಶುಷ್ಣನನ್ನು ಹೊಡೆದನು (೧-೬೩-೩ ; ೧-೧೨೧-೯ ; ೪-೧೬-೧೨ ; ೬-೨೬-೩) ; ಶುಷ್ಣನಿಗೆ ಪ್ರತಿಕಕ್ಷಿಯಾದ ಕುತ್ಸನಿಗೆ ಸಹಾಯ ಮಾಡಿದನು (೧-೫೧-೬) ; ಶುಷ್ಣನನ್ನು ಕುತ್ಸನಿಗೆ ಅಧೀನಪಡಿಸಿದನು (೭-೧೯-೨) ; ಅಥವಾ ಕುತ್ಸ ಮತ್ತು ಇತರ ದೇವತೆಗಳಿಂದ ಯುಕ್ತನಾಗಿ, ಶುಷ್ಣನನ್ನು ಸಂಪೂರ್ಣವಾಗಿ ಪರಾಭವಗೊಳಿಸಿದನು (೫-೨೯-೯). ಕುತ್ಸನ ಪಕ್ಷವನ್ನು ವಹಿಸಿ, ಶುಷ್ಣನ ಮೇಲೆ ಯುದ್ಧ ಮಾಡೆಂದು (೬-೩೧-೩) ಅಥವಾ ಕುತ್ಸನದ್ದು ಶುಷ್ಣನ ವಧೆಗೋಸ್ಕರ ಕರತಲವಾಗಬೇಕೆಂದು (೧-೧೭೫-೪) ಇಂದ್ರನನ್ನು ಪ್ರಾರ್ಥಿಸಿದೆ. ಇಂದ್ರನು ಕುತ್ಸನಿಗೋಸ್ಕರ ದೇವತೆಗಳ ಮೇಲೂ (೪-೩೦-೨ರಿಂದ ೫), ಅಥವಾ ಗಂಧರ್ವರ ಮೇಲೂ (೮-೧-೧೧), ಯುದ್ಧಮಾಡುತ್ತಾನೆ. ಸೂರ್ಯ ರಥವನ್ನು ಕದಿಯುವುದೇ, ಶುಷ್ಣನೊಡನೆ ಯುದ್ಧ ಮಾಡುವುದರ ಪರಿಣಾಮ (೧-೧೭೫-೪ ; ೬-೩೧-೩). ಶತ್ರುಗಳಿಂದ ಪೀಡಿತನಾದ ಕುತ್ಸನಿಗೋಸ್ಕರಲೇ, ಇಂದ್ರನು ಸೂರ್ಯರಥದ ಚಕ್ರವನ್ನು ಕೆತ್ತಿ (೪-೩೦-೪), ಕುತ್ಸನು ಉಪಯೋಗಿಸಲೆಂದು, ಅವನಿಗೆ ಕೊಟ್ಟನು (೫-೨೯-೧೦). ಇಂದ್ರನು ಮನುಷ್ಯರ ಸುಖಕ್ಕೋಸ್ಕರ ಸೂರ್ಯನನ್ನು ಸಂಪಾದಿಸಿದನು ಎಂಬುದೇ, ಸೂರ್ಯನನ್ನು ಚಲಿಸದಂತೆ ಮಾಡಿದನೆಂದು ಉಕ್ತವಾಗಿರುವಂತೆ ಕಾಣುತ್ತದೆ (೧-೧೭೧-೧೦ ; ೧೦-೧೩೮-೩ಗಳನ್ನು ಹೋಲಿಸಿರಿ). ಸೂರ್ಯನನ್ನು ಜಯಿಸಿ, ಇಂದ್ರನು ಸಾರಥಿಯಾದ ಕುತ್ಸನ ಸಂಚಾರಕ್ಕೆ ಅಗಲವಾದ ದಾರಿಯನ್ನು ಮಾಡಿದನು (೬-೨೦-೫). ಕುತ್ಸನಿಂದ ಯುಕ್ತನಾಗಿ, ದುಷ್ಟರನ್ನು ಧ್ವಂಸಮಾಡಿ, ಸೂರ್ಯನ ಚಕ್ರವನ್ನು ಉರುಳುವಂತೆ ಮಾಡಬೇಕೆಂದು ಪ್ರಾರ್ಥಿಸಿದೆ (೪-೧೬-೧೨). ಶುಷ್ಣನಲ್ಲದೆ, ಇತರ ಶತ್ರುಗಳೂ (ತುಗ್ರ, ಸ್ಮದಿಭ ಮತ್ತು ವೇತಸುಗಳು) ಕುತ್ಸನಿಗೆ ಇಂದ್ರನಿಂದ ವಶಪಡಿಸಲ್ಪಟ್ಟರು (೧೦-೪೯-೪).

ಇಂದ್ರನಿಂದ ಸಹಾಯಪಡೆದವನೂ, ಅವನ ಪ್ರೀತಿಪಾತ್ರನೂ ಆದ (೧-೫೩-೧೪) ಕುತ್ಸನು ಒಂದೊಂದು ಸಲ ಇಂದ್ರನ ಶತ್ರುವಾಗಿ ಕಾಣುತ್ತಾನೆ. ಕುತ್ಸ, ಆಯು ಮತ್ತು ಅತಿಥಿಗ್ವರ ಯೋಧರನ್ನು

ಇಂದ್ರನು ಬಡಿದು ಉರುಳಿಸಿದನು (೨-೧೪-೭), ಅಯು, ಕುತ್ಸ ಮತ್ತು ಆ ೦ಥಿಗ್ವರನ್ನು ಪೀಡಿಸಿದನು (ವಾಲ. ೫-೨), ಈ ಮೂವರನ್ನೂ ತೂರ್ವಯಾಣನೆಂಬ ತರುಣನಾದ ರಾಜನಿಗೆ ಹಿಡಿದುಕೊಟ್ಟನು (೧-೫೩-೧೦) ಅಥವಾ ಆ ರಾಜನಿಗೋಸ್ಕರ, ಮೂವರನ್ನೂ ಹೊಡೆದು ನೆಲಕ್ಕುರುಳಿಸಿದನು (೬-೧೪-೧೫). ನಿರುಕ್ತದಲ್ಲಿ (೨-೨೦) ಕುತ್ಸ ಎಂಬುದು ವಜ್ರಾಯುಧದ ನಾಮಗಳಲ್ಲಿ ಒಂದು.

ಕಾವ್ಯ ಉಶನಾ

ಉಶನಾ ಎಂಬ ಋಷಿಯ ಹೆಸರು ಹನ್ನೊಂದು ಕಡೆ ಪ್ರಸಕ್ತವಾಗಿದೆ. ಎರಡು ಸಲ ಕವಿ ಎಂಬುದಾಗಿಯೂ, ಐದು ಸಲ ಕಾವ್ಯ ಎಂಬುದಾಗಿಯೂ ಕರೆಯಲ್ಪಟ್ಟಿದಾನೆ. ಜ್ಞಾನವು ಅವನ ವೈಶಿಷ್ಟ್ಯ; ಬುದ್ಧಿಯ ಮಾತುಗಳನ್ನು ಹೇಳುತ್ತಿರುವ ಸೋಮನು ಉಶನನಿಗೆ ಉಪಮಿತನಾಗಿದಾನೆ (೯-೯೭-೭) ಮತ್ತು ಆದೇಕಾರಣದಿಂದ, ಸೋಮನೇ ಉಶನ ಎಂದೂ ಹೇಳಿದೆ (೯-೮೭-೩). ಕಾವ್ಯ ಉಶನನೇ ಅಗ್ನಿಯನ್ನು ಯಜ್ಞದಲ್ಲಿ ಹೋತೃಸ್ಥಾನದಲ್ಲಿ ಸ್ಥಾಪಿಸಿದನು (೮-೨೩-೧೭). ಅವನೇ ಗೋವುಗಳನ್ನು ಈ ಕಡೆ (ಭೂಮಿಯ ಕಡೆ) ಓಡಿಸಿದನು (೧-೮೩-೫). ಅವನು ಇಂದ್ರನ ಆಶ್ರಿತ (೬-೨೦-೧೧); ಇಂದ್ರನು ಅವನ ಸಹವಾಸದಲ್ಲಿ ಸಂತೋಷದಿಂದ ಇದ್ದನು (೧-೫೧–೧೧); ಕುತ್ಸ, ಉಶನಾ ಮೊದಲಾದವರೂ, ತಾನೂ ಒಂದೇ ಎಂದು ಇಂದ್ರನೇ ಹೇಳಿಕೊಂಡಿದಾನೆ (೪-೨೬-೧). ಕುತ್ಸ ಸಹಚರಿತನಾಗಿ, ಇಂದ್ರನು ಶುಷ್ಣನನ್ನು ನಿರ್ಮೂಲ ಮಾಡುವುದರಲ್ಲಿ, ಉಶನನೂ ಭಾಗವಹಿಸಿದ್ದನು (೫-೨೯-೯). ವೃತ್ರಾಸುರ ವಧೆಗೆ ಉಪಯೋಗಿಸಿದ ವಜ್ರಾಯುಧ ರಚನೆಯಲ್ಲಿಯೂ, ಉಶನನ ಕೈವಾಡವಿತ್ತು (೧-೧೨೧-೧೨; ೫-೩೪-೨; ೧-೫೧-೧೦ನ್ನು ಹೋಲಿಸಿ).

ಇನ್ನೂ ಅನೇಕ ಪುರಾತನ ಋಷಿಗಳು ಹೇಳಲ್ಪಟ್ಟಿದಾರೆ. ಗೋತಮ, ವಿಶ್ವಾಮಿತ್ರ, ವಾಮದೇವ, ಭರದ್ವಾಜ, ವಸಿಷ್ಠ ಮೊದಲಾದವರು, ಅವರಲ್ಲಿ ಕೆಲವರು. ಇವರು ಅಥವಾ ಇವರ ವಂಶಜರು, ಕ್ರಮವಾಗಿ, ಎರಡು, ಮೂರು, ನಾಲ್ಕು, ಆರು ಮತ್ತು ಏಳನೆಯ ಮಂಡಲದ ಮಂತ್ರಗಳಿಗೆ ಋಷಿಗಳು. ಋಗ್ವೇದದಲ್ಲಿ ಅನೇಕ ಸಲ ಪ್ರಸಕ್ತರಾಗುವ ಋಷಿಗಳಲ್ಲಿ ಅಗಸ್ತ್ಯನೂ ಒಬ್ಬನು. ಪ್ರಸಿದ್ಧರಾದ ಪುರಾತನ ಯೋಧರಲ್ಲಿ, ಸುದಾಸ, ಪುರುಕುತ್ಸ ಮತ್ತು ಅವನ ಮಗ ತ್ರಸದಸ್ಯು, ಮತ್ತು ದಿವೋದಾಸ ಅತಿಥಿಗ್ವ ಇವರುಗಳು, ಕೆಲವರು.

ಹಿಂದೆ ಪ್ರಸಕ್ತರಾಗಿರುವ ಋಷಿಗಳು, ಯಜ್ಞಕರ್ಮಗಳಲ್ಲಿ ಎಷ್ಟು ಪ್ರಾಮುಖ್ಯತೆಯನ್ನು ಪಡೆದಿದ್ದರೆಂಬುದನ್ನು ಪ್ರತಿಪಾದಿಸುವುದಕ್ಕೋಸ್ಕರ, ಬಹಳ ಪುರಾತನರು, ಮಾನವ ವರ್ಗಕ್ಕೆ ಮೂಲಪುರುಷರು, ಅಮಾನುಷ ಕರ್ಮಗಳನ್ನು ಮಾಡಿದವರು, ದೇವತೆಗಳಿಗೆ ಸಮಾನರಾಗಿ ಅವರ ಕಾರ್ಯಗಳಲ್ಲಿ ಭಾಗವಹಿಸಿದವರು, ಇತ್ಯಾದಿಯಾಗಿ ಚಿತ್ರಿಸಿದಾರೆ ಎಂದು ಹೇಳಬಹುದೇ ಹೊರತು ಇವರುಗಳು ನಿಜವಾಗಿ ಪ್ರಕೃತಿಯ ನಾನಾ ಅಂಶಗಳನ್ನು ಪ್ರತಿಬಿಂಬಿಸುತ್ತಾರೆ ಮತ್ತು ದೇವತೆಗಳೇ ಭಿನ್ನರಾಗಿ ಭೂಮಿಗೆ ಇಳಿದು ಬಂದು ಈ ರೂಪದಲ್ಲಿ ಸಂಚರಿಸುತ್ತಿದ್ದಾರೆ ಎಂದು ಹೇಳುವುದು ಅಷ್ಟು ಸಾಧುವಾಗಿ ಕಾಣುವುದಿಲ್ಲ.

ಪ್ರಾಣಿಗಳು ಮತ್ತು ನಿರ್ಜೀವ ವಸ್ತುಗಳು.

ವೈದಿಕ ಇತಿಹಾಸಗಳಲ್ಲಿ ಪ್ರಾಣಿಗಳಿಗೂ ತಕ್ಕಮಟ್ಟಿನ ಶ್ರೇಷ್ಠವಾದ ಸ್ಥಾನವಿದೆ. ಈ ಇತಿಹಾಸಗಳನ್ನು ಪರಿಶೀಲಿಸಿದರೆ, ಮನುಷ್ಯರಿಗೂ ಪ್ರಾಣಿಗಳಿಗೂ ಇರುವ ವ್ಯತ್ಯಾಸಗಳು ಹೆಚ್ಚಾಗಿ ವ್ಯಕ್ತವಾಗಿಲ್ಲ. ದೇವತೆಗಳಿಗೂ ನಾನಾ ಪ್ರಾಣಿಗಳ ರೂಪಗಳು ಉಂಟು. ಉತ್ತಮ ದೇವತೆಗಳೇ ಒಂದೊಂದು ಸಲ ಪ್ರಾಣಿಗಳ ರೂಪಗಳನ್ನು ಧರಿಸುವುದುಂಟು. ಅಂದಮೇಲೆ ಗೋವು ಮೊದಲಾದ ಉಪಯುಕ್ತವಾದ ಪ್ರಾಣಿಗಳ

ರೂಪಧಾರಿಗಳಾದ ಅತಿಮಾನುಷ ವ್ಯಕ್ತಿಗಳು ಮಧ್ಯಮ ವರ್ಗದವರೆಂದೂ ಮತ್ತು ಹಿಂಸ್ರ ಜಂತುಗಳ ರೂಪವುಳ್ಳವರು ಅವರಿಗಿಂತ ಕಡಿಮೆ ಅಥವಾ ರಾಕ್ಷಸ ಸ್ವಭಾವದವರು ಎಂದೂ ಭಾವನೆಯಿದೆ. ಅಲ್ಲದೇ ಮನುಷ್ಯನಿಗೆ ಉಪಯುಕ್ತವಾದ ಚತುಷ್ಪಾದ ಜಂತುಗಳು ಅವನ ಸುತ್ತಮುತ್ತಲೂ ವಾಸಿಸುವಂತೆ, ದೇವತೆಗಳ ಸಮೀಪದ ಲ್ಲಿಯೂ ದೇವಲೋಕದ ಪ್ರಾಣಿಗಳು ಇವೆಯೆಂದೇ ನಂಬಿಕೆ. ಕಡೆಯದಾಗಿ, ಯಾಗಗಳಲ್ಲಿ, ಕೆಲವು ಪ್ರಾಣಿಗಳು, ಆಯಾ ಆಕೃತಿವಿಶಿಷ್ಟರೆಂದು ಪರಿಗಣಿತರಾದ ದೇವತೆಗಳ ಪ್ರತಿನಿಧಿಗಳಾಗಿ ಉಪಯೋಗಿಸಲ್ಪಟ್ಟಿವೆ. ಈ ಪ್ರತಿನಿಧಿ ಪೂಜೆ ಈಚೆಗೆ ಹೆಚ್ಚು ಬಳಕೆಯಿಲ್ಲ, ಏಕೆಂದರೆ, ದೇವತೆಗಳು ಮಹಾಮಹಿಮರು, ಸ್ವರ್ಗಲೋಕ ವಾಸಿಗಳು, ತಮ್ಮ ಸಾಮರ್ಥ್ಯದಿಂದ ಯಾಗಶಾಲೆಗೆ ಅದೃಶ್ಯರಾಗಿಯೇ ಬಂದು ತಮ್ಮ ಹವಿರ್ಭಾಗಗಳನ್ನು ಸ್ವೀಕರಿಸುತ್ತಾರೆ ಎಂಬ ಉದಾತ್ತಭಾವನೆಗೆ ಇದರಿಂದ ಚ್ಯುತಿಯಾದೀತೆಂಬ ಭಯವಿದೆ.

ಅಶ್ವ ದಧಿಕ್ರಾ

ದೇವತೆಗಳ ರಥವಾಹಕಗಳಾದ ಅಶ್ವಗಳಲ್ಲದೆ, ಕೆಲವು ಅಶ್ವಗಳನ್ನು ವೈಯಕ್ತಿಕವಾಗಿ ನಿರ್ದೇಶಿಸುವುದುಂಟು. ಇಂತಹ ವೈಶಿಷ್ಟ್ಯವುಳ್ಳ ಅಶ್ವಗಳಲ್ಲಿ ಮುಖ್ಯವಾದುದು ದಧಿಕ್ರಾ ಎಂಬುದು. ನಾಲು ಸೂಕ್ತಗಳಲ್ಲಿ ಈ ಅಶ್ವದ ಪ್ರಸ್ತಾಪವಿದೆ (೪-೩೮, ೩೯, ೪೦; ೭-೪೪). ಅವುಗಳಲ್ಲಿ ದಧಿಕ್ರಾ ಎಂಬುದಾಗಿ ಹನ್ನೆರಡು ಸಲ ದಧಿಕ್ರಾವನ್ ಎಂಬುದಾಗಿ ಹತ್ತು ಸಲ. ಇತರ ವೇದಗಳಲ್ಲಿ ಇದರ ಪ್ರಸ್ತಾಪವಿಲ್ಲವೇ ಇಲ್ಲವೆನ್ನಬಹುದು. ದಧಿಕ್ರಾ ಎಂಬುದು ಒಂದು ಕುದುರೆಯ ಹೆಸರೆಂಬುದಕ್ಕೆ, ನಿರುಕ್ತದಲ್ಲಿ ಇದನ್ನು ಅಶ್ವ ನಾಮಗಳಲ್ಲಿ ಒಂದಾಗಿ ಸೇರಿಸಿರುವುದೇ ಸಾಕ್ಷಿ (ನಿ. ೧೨-೧೪). ಅದು ಬಹಳ ವೇಗಶಾಲಿ (೪-೩೮-೨, ೯; ೪-೩೯-೧); ಅನೇಕ ರಥಗಳ ಸಾಲಿನಲ್ಲಿ ಮೊದಲನೆಯ ಅಶ್ವವಾಗಿದೆ (೭-೪೪-೪); ರಥಗಳನ್ನು ನಾಶವಾಡುತ್ತದೆ. ಮತ್ತು ವಾಯುವೇಗದಿಂದ ಓಡುತ್ತದೆ (೪-೩೮-೩). ಅದರ ವೇಗವನ್ನು ಜನರೆಲ್ಲರೂ ಪ್ರಶಂಸಿಸುತ್ತಾರೆ (೪-೩೮-೯, ೩). ರಸ್ತೆಗಳ ತಿರುವುಗಳಲ್ಲಿಯೂ ಧಾವಿಸುತ್ತದೆ (೪-೪೦-೪). ಇದಕ್ಕೆ ರೆಕ್ಕೆಗಳೂ ಉಂಟು. ಅದು ಪಕ್ಷಿಯಂತೆ ಇದೆ. ಮತ್ತು ಅದರ ಪಕ್ಷಗಳು ಒಂದು ಪಕ್ಷಿಯ ಅಥವಾ ಶ್ಯೇನಪಕ್ಷಿಯ ಪಕ್ಷಗಳಿಗೆ ಹೋಲಿಸಲ್ಪಟ್ಟಿವೆ (೪.೪೦-೨, ೩). ಮೇಲಿನಿಂದ ಬಂದು ಬೀಳುವ ಶ್ಯೇನಪಕ್ಷಿಗೆ ಹೋಲಿಸಿದೆ ಮತ್ತು ಶ್ಯೇನವೆಂದೇ ಕರೆಯಲ್ಪಟ್ಟಿದೆ (೪-೩೮-೫, ೨). ೪-೪೦-೫ರಲ್ಲಿ, ಬೆಳಕಿನಲ್ಲಿ ವಾಸಿಸುವ ಹಂಸ, ಅಂತರಿಕ್ಷದಲ್ಲಿರುವ ವಸು, ವೇದಿಕೆಯ ಮೇಲೆ ಆಸೀನನಾಗಿರುವ ಹೋತೃ, ಮನೆಯಲ್ಲಿ ಸುಖವಾಗಿ ಆಸೀನನಾಗಿರುವ ಅತಿಥಿ—ಮೊದಲಾಗಿ ಅಗ್ನಿಗೆ ಅನ್ವಯಿಸುವ ವಿಶೇಷಣಗಳಿಂದ, ಈ ಅಶ್ವವು ವರ್ಣಿತವಾಗಿದೆ.

ದಧಿಕ್ರನೂ ಒಬ್ಬ ವೀರ, ದಸ್ಯುಗಳನ್ನು ಹೊಡೆಯುತ್ತಾನೆ ಮತ್ತು ಜಯಶಾಲಿಯಾಗುತ್ತಾನೆ (೪-೩೮-೧, ೨, ೩, ೭). ಸಹಸ್ರಾರು ಜನಗಳನ್ನೆದುರಿಸಿ ಯುದ್ಧವಾಡುವಾಗ, ಶತ್ರುಗಳು ಅವನಿಗೆ ಹೆದರುತ್ತಾರೆ; ಯುದ್ಧಗಳಲ್ಲಿ ಕೊಳ್ಳಿ ಹೊಡೆಯುತ್ತಾನೆ; ಯುದ್ಧಗಳಲ್ಲಿ ನಾನಾ ಪಂಗಡಗಳು ಅವನನ್ನುದ್ದೇಶಿಸಿ ಕೂಗಿಕೊಳ್ಳುತ್ತವೆ (೪-೩೮-೮, ೫, ೪). ಒಂದು ಹಾರವನ್ನು ಧರಿಸಿಕೊಂಡು, ಧೂಳನ್ನೆಬ್ಬಿಸುತ್ತಾ, ತನ್ನ ಹುಬ್ಬುಗಳ ಮೇಲಿಂದ ಅದು ಉದುರಿಸುತ್ತದೆ (೪-೩೮-೬, ೭). ಅದು ಎಲ್ಲಾ ಪಂಗಡಗಳಿಗೂ ಸೇರಿದೆ; ತನ್ನ ಸಾಮರ್ಥ್ಯದಿಂದ ಐದು ಪಂಗಡಗಳನ್ನೂ, ಸೂರ್ಯನು ತನ್ನ ತೇಜಸ್ಸಿನಿಂದ ನೀರನ್ನಾವರಿಸಿರುವಂತೆ, ಆವರಿಸಿಕೊಂಡಿದೆ (೪-೩೮-೨, ೧೦, ೪). ಜಯಶಾಲಿಯಾದ ಈ ಅಶ್ವವನ್ನು ಮಿತ್ರಾವರುಣರು ಪೂರುಗಳಿಗೆ ಕೊಟ್ಟರು (೪-೩೯-೨; ೪-೩೮-೧, ೨ ಗಳನ್ನು ಹೋಲಿಸಿ); ಮನುಷ್ಯನ ಅನುಗ್ರಹಾರ್ಥವಾಗಿ ಅವರು ದಧಿಕ್ರಾ ಎಂಬ ಅಶ್ವವನ್ನು ಕೊಟ್ಟರು.

ಅರುಣೋದಯಕಾಲದಲ್ಲಿ ಅಗ್ನಿ ಪ್ರದೀಪನಮಾಡುವಾಗ, ದಧಿಕ್ರಾವನೆಂಬ ಅಶ್ವವನ್ನು ಸ್ತುತಿಸುತ್ತಾರೆ. ೭-೪೧-೬) ಉಷೋದೇವಿಯರ ಜೊತೆಯಲ್ಲಿ ಅವನೂ ಆಹೂತನಾಗಿದಾನೆ. (೪-೫೯-೧ ; ೪-೪೦-೧) ದಧಿಕ್ರಾವನಂತೆ ಯಜ್ಞಾಭಿಮುಖರಾಗಬೇಕೆಂದು ಉಷೋದೇವಿಯರನ್ನು ಪ್ರಾರ್ಥಿಸಿದೆ (೭-೪೧-೬). ನಿಯತವಾಗಿ ಉಷೋದೇವಿಯೊಡನೆ, ಅಶ್ವೀ ಸಲ ಅಗ್ನಿಯೊಡನೆ ಮತ್ತು ಅಶ್ವಿನೀದೇವತೆಗಳು, ಸೂರ್ಯ ಮತ್ತು ಇತರ ದೇವತೆಗಳೊಡನೆ ಕೆಲವು ಸಲವೂ ಸ್ತುತನಾಗಿದಾನೆ (೩-೨೦-೧, ೫ ; ೭-೯೪-೧೦ರಿಂದ ೪ ; ೧೦-೧೦೧-೧); ಆದರೆ ದಧಿಕ್ರಾವನಿಗೇ ಮೊದಲನೆಯ ಆಹ್ವಾನ (೭-೪೪-೧).

ಪದದ ನಿಷ್ಪತ್ತಿಯಿಂದ, ಈ ಅಶ್ವದ ಸ್ವಭಾವ ಮತ್ತು ಲಕ್ಷಣಗಳು ಏನೂ ತಿಳಿದು ಬರುವುದಿಲ್ಲ. ಪದದ ಉತ್ತರ ಭಾಗಕ್ಕೆ (ಕ್ರಾ) ಚದುರಿಸುವ ಎಂದರ್ಥವಾಗಬಹುದು ; ಎಂದರೆ ದಧಿಯನ್ನು–ಸೂರ್ಯೋದಯ ಕಾಲದಲ್ಲಿ ಕಂಡುಬರುವ ಹಿಮವನ್ನು ಚದುರಿಸುವವನು ಎಂದಾಗಬಹುದು. ಉದಿಸುತ್ತಿರುವ ಸೂರ್ಯನ ಮಂಡಲವೇ ದಧಿಕ್ರನಿರಬಹುದೆಂದು ಕೆಲವರ ಅಭಿಪ್ರಾಯ. ದಧಿಕ್ರನಿಗೆ ವಿಶೇಷ ಸಂಬಂಧವಿರುವುದು ಉಷೋದೇವಿಯೊಡನೆ; ಸೂರ್ಯನಿಗೂ ಅಶ್ವ ಅಥವಾ ಪಕ್ಷಿಯೆಂದು ಅನೇಕ ವೇಳೆ ಹೆಸರಿದೆ ಮತ್ತು ಅವನು ಯೋಧನ ಸ್ವಭಾವವುಳ್ಳವನೆಂದು ಒಂದೊಂದು ಕಡೆ ಉಕ್ತವಾಗಿದೆ. ಇವಗಳಿಂದಲೂ, ದಧಿಕ್ರನು ಸೂರ್ಯಮಂಡಲವೇ ಇರಬಹುದೆಂದು ಹೇಳಬಹುದು. ದಧಿಕ್ರನು ಅಗ್ನಿಯ ರೂಪ ವಿಶೇಷವೆಂದು ಕೆಲವರ ಅಭಿಪ್ರಾಯ. ಮತ್ತು ಕೆಲವರು ಇದು ದೇವತೆಯೇ ಅಲ್ಲ, ಒಂದು ಉತ್ತಮಾಶ್ವ ಎನ್ನುತ್ತಾರೆ.

ದಧ್ಯಂಚ ಮತ್ತು ದಧಿಕ್ರ, ಈ ಎರಡು ಹೆಸರುಗಳಲ್ಲಿಯೂ ಒಂದು ಸಾಮ್ಯವಿದೆ ಮತ್ತು ದಧ್ಯಂಚನಿಗೂ ಅಶ್ವಶಿರಸ್ಸಾದುದರಿಂದ, ಸ್ವಭಾವದಲ್ಲಿಯೂ ಇಬ್ಬರಿಗೂ ಸಾಮ್ಯವಿರಬಹುದು.

ತಾರ್ಕ್ಷ್ಯ.—ದಧಿಕ್ರನಿಗೆ ಸಂಬಂಧಿಸಿದ ಈ ಹೆಸರು ಎರಡೇ ಕಡೆ ಬರುತ್ತದೆ (೧-೮೯-೬ ; ೧೦-೧೭೮-೧). ಮೂರು ಋಕ್ಕುಗಳ ಒಂದು ಸೂಕ್ತವು ಇದನ್ನು ಸ್ತುತಿಸುತ್ತದೆ (೧೦-೧೭೮). ದೇವತೆಗಳಿಂದ ಪ್ರೇರಿತವಾಗುವ ಉತ್ತಮಾಶ್ವ, ರಥಗಳನ್ನು ಧ್ವಂಸಮಾಡುವುದು (೬-೪೪-೪ನ್ನು ಹೋಲಿಸಿ), ವೇಗಶಾಲಿ ಮತ್ತು ಯುದ್ಧರಂಗಕ್ಕೆ ಅಭಿಮುಖವಾಗಿ ಓಡುತ್ತದೆ. ಇಂದ್ರನಿಂದ ದತ್ತವಾದುದು. (ದಧಿಕ್ರನಿಗೆ ಉಪಯೋಗಿಸಿರುವ ಪದಗಳಿಂದಲೇ) ಐದು ಪಂಗಡಗಳನ್ನೂ ಆವರಿಸಿಕೊಳ್ಳುತ್ತಾನೆ (೪-೩೮-೧೦) ಎಂದು ಹೇಳಿದೆ. ಇದಕ್ಕೆ ಅರಿಷ್ಟನೇಮಿ ಎಂತಲೂ ಹೆಸರು (೧-೮೯-೬). ಆದರೆ ವಾಜಸನೇಯಿ ಸಂಹಿತೆಯಲ್ಲಿ, ತಾರ್ಕ್ಷ್ಯ ಮತ್ತು ಗರುಡಗಳಂತೆ ಅರಿಷ್ಟನೇಮಿಯೂ ಒಂದು ಸ್ವತಂತ್ರವಾದ ಹೆಸರು (ವಾ. ಸಂ. ೧೫-೧೪). ನಿರುಕ್ತದಲ್ಲಿ (ನಿ. ೧-೧೪). 'ತಾರ್ಕ್ಷ್ಯ'ವೂ ಅಶ್ವದ ನಾಮಗಳಲ್ಲಿ ಒಂದು. ಇತರ ವೇದಗಳಲ್ಲಿ 'ತಾರ್ಕ್ಷ್ಯ'ವು ಪಕ್ಷಿ ಎಂಬ ಅಭಿಪ್ರಾಯವಿದೆ ; ಪುರಾಣಾದಿಗಳಲ್ಲಿ ಇದು ಗರುಡನ ಅನೇಕ ನಾಮಗಳಲ್ಲಿ ಒಂದು. ಪ್ರಾಯಶಃ ಇದು ಅಶ್ವರೂಪೀ ಸೂರ್ಯನ ಹೆಸರಿರಬಹುದು. ತ್ರಸದಸ್ಯವ ಅಥವಾ ತೃಷಿ ಎಂಬ ಹೆಸರಿನ ವ್ಯಕ್ತಿಗೂ ಇದಕ್ಕೂ ಏನಾದರೂ ಸಂಬಂಧವಿರಬಹುದು (೮-೨೨-೭). ಈ ಆಧಾರದ ಮೇಲೆ, ಕೆಲವರು, ತೃಷಿಯ ಎಂಬ ಒಂದು ಅಶ್ವವೇ ಈ ತಾರ್ಕ್ಷ್ಯನೆಂದು ಕೆಲವರು ಅಭಿಪ್ರಾಯಪಡುತ್ತಾರೆ.

ಪೈದ್ವಃ,—ಅಶ್ವಿನಿಗಳು ಪೇದು ಎಂಬುವನಿಗೆ ತಂದು ಕೊಟ್ಟ ಅಶ್ವವೂ ಈ ಕಾಲ್ಪನಿಕ ಅಶ್ವಗಳಲ್ಲಿ ಒಂದು (೧-೧೧೯-೧೦; ೭-೭೧-೫), ಅದುದರಿಂದ ಇದಕ್ಕೆ ಪೈದ್ವ ಎಂದು ಒಂದು ಹೆಸರು (೧-೧೧೬-೬; ೯-೮೪-೪). ಪೇದುವಿನ ಅಪ್ರಯೋಜಕ ಅಶ್ವಕ್ಕೆ ಬದಲಾಗಿ ಉತ್ತಮಾಶ್ವವನ್ನು ಕೊಡುವುದೇ, ಈ ದಾನದ ಉದ್ದೇಶ (೧-೧೧೬-೬). ಅದು ಪ್ರಶಂಸಾರ್ಹವಾದುದು (೧-೧೧೯-೧೦ ; ೧೦-೬೯-೧೦ ; ೪-೩೮-೨ನ್ನು ಹೋಲಿಸಿ) ;

ಭಗನಂತೆ (೧೦-೩೯-೧೦) ಇದೂ ಮನುಷ್ಯರಿಂದ ಸ್ತುತ್ಯವಾದುದು (೧-೧೧೬-೬). ಇಂದ್ರನಿಗೆ ಹೋಲಿಸಿದೆ (೧-೧೧೯-೧೦) ಮತ್ತು ಅಹಿಹನೆಂದು (ಸರ್ಪವನ್ನು ಕೊಲ್ಲುವವನು) ಹೆಸರು (೧-೧೧೭-೯ ; ೧-೧೧೮-೯ ; ೯-೮೮-೪ನ್ನು ಹೋಲಿಸಿ) ; ಸಾಧಾರಣವಾಗಿ ಇದು ಇಂದ್ರನಿಗೇ ಅನ್ವಯಿಸುವುದು. ಯುದ್ಧಗಳಲ್ಲಿ ಅಜೇಯನು ಮತ್ತು ಸ್ವರ್ಗಾಭಿಲಾಷಿ (೧-೧೧೯-೧೦). ಇದೂ ಸೂರ್ಯನನ್ನೇ ಸೂಚಿಸುತ್ತದೆ ಎನ್ನಬಹುದು.

ಏತಶ.——ವೇಗಶಾಲಿಯಾದ ಎಂಬರ್ಥದಲ್ಲಿ, ಈ ಪದವು ಕೆಲವು ಸಲವೂ, ಹೆಚ್ಚಾಗಿ ಕುದುರೆಯನ್ನು ನಿರ್ದೇಶಿಸುವುದಕ್ಕೂ ಉಪಯೋಗಿಸಿದೆ. ಇದೇ ಪದವು ಬಹುವಚನದಲ್ಲಿ ಸೂರ್ಯಾಶ್ವಗಳನ್ನು ಸೂಚಿಸುತ್ತದೆ (೭-೬೨-೨ ; ೧೦-೩೭-೩ ; ೧೦-೪೯-೭). ಸುಮಾರು ಹನ್ನೆರಡು ಸಲ ಅಂಕಿತನಾಮವಾಗಿ, ಸೂರ್ಯನಿಗೆ ಸಂಬಂಧಿಸಿದಂತೆ ಪ್ರಯೋಗವಿದೆ ; ಈ ಸಂದರ್ಭಗಳಲ್ಲಿ ವಿಶೇಷವಾಗಿ ಸೂರ್ಯರಥದ ಚಕ್ರಕ್ಕೇ ಇದು ಅನ್ವಯಿಸುವುದು. ಭೂಭಾಗಗಳ ಪರಿಮಿತಿಯನ್ನು ಗೊತ್ತು ಮಾಡಿದವನು ಸವಿತೃ ಎಂಬ ಅಶ್ವ (ಏತಶಃ ೫-೮೧-೩). ವೇಗಶಾಲಿಯಾದ ಏತಶ ಎಂಬ ದೇವತೆಯು (ಅಶ್ವವು) ಸೂರ್ಯನನ್ನು ಎಳೆಯುತ್ತಾನೆ (೭-೬೬-೧೪). ರಥದ ಮೂಕಿಗೆ ಕಟ್ಟಲ್ಪಟ್ಟು, ಏತಶವು (ಅಶ್ವವು) ಸೂರ್ಯನ ರಥದ ಚಕ್ರವು ಚಲಿಸುವಂತೆ ಮಾಡುತ್ತದೆ (೭-೬೩-೨) ; ಅದು ಸೂರ್ಯನ ರಥದ ಚಕ್ರವನ್ನು ಕರತಂದಿತು (೧-೧೨೧-೧೩ ; ೫-೩೧-೧೧) ; ಇಂದ್ರನು ಸೂರ್ಯಾಶ್ವವನ್ನು ಹರಿದುಂಬಿಸುತ್ತಾನೆ (೮-೧-೧೧ ; ೯-೬೩-೮ನ್ನು ಹೋಲಿಸಿ). ಸೂರ್ಯೆಯೊಡನೆ ಪದ್ಯದಲ್ಲಿ ಭಾಗವಹಿಸಿದ್ದ ಏತಶನಿಗೆ ಇಂದ್ರನು ಸಹಾಯ ಮಾಡಿದನು (೧-೬೧-೧೫). ನಷ್ಟವಾಗಿದ್ದ ಸೂರ್ಯರಥದ ಚಕ್ರವನ್ನು ಎತ್ತಿಕೊಂಡು ಹೋಗಿ ರಥಕ್ಕೆ ಸೇರಿಸಿ, ಪದ್ಯದಲ್ಲಿ ಮುಂದಾಗಿ ಬಂದುದರಿಂದ, ಸೂರ್ಯನು ತನ್ನ ರಥದ ಮುಂಬಾಗದಲ್ಲಿ ಏತಶನಿಗೆ ಸ್ಥಾನವನ್ನು ಅನುಗ್ರಹಿಸಿದನು ಎಂದು ಊಹಿಸಬಹುದು. ಈ ಪದ್ಯದ ನಿಜವಾದ ಅರ್ಥವೇನೆಂದು ಹೇಳಲಾಗುವುದಿಲ್ಲ. ಆದರೆ, ಏತಶ ಎಂಬುದು ಸೂರ್ಯಾಶ್ವವೆಂದು ಖಚಿತವಾಗಿ ಹೇಳಬಹುದು.

ಸೂರ್ಯ ಮತ್ತು ಅಗ್ನಿಗಳ ಲಾಂಛನವಾದ ಅಶ್ವವು.—ಅಶ್ವವು ಸೂರ್ಯನ ಲಾಂಛನವೆಂಬುದು ಕೆಲವು ವಾಕ್ಯಗಳಿಂದ ಸ್ಪಷ್ಟವಾಗುತ್ತದೆ. ಉಷೋದೇವಿಯು ಒಂದು ಶ್ವೇತಾಶ್ವವನ್ನು ನಡೆಯಿಸಿಕೊಂಡು ಬರುತ್ತಾಳೆ (೭-೭೭-೩) ; ಯಜ್ಞಾಶ್ವವನ್ನು ಸೂರ್ಯನಿಂದ ದೇವತೆಗಳು ರಚಿಸಿದರು (೧-೧೬೩-೨). ಸೋಮಯಾಗ ವಿಶೇಷವೊಂದರಲ್ಲಿ, ಅಶ್ವವು ಸೂರ್ಯನ ಪ್ರತೀಕವಾಗಿದೆ.

ವೇಗಶಾಲಿಯೂ ಚಟುವಟಿಕೆಯುಳ್ಳವನೂ ಆದ ಅಗ್ನಿಯೂ ಅನೇಕ ವೇಳೆ ಅಶ್ವವೆಂದೇ ವ್ಯವಹರಿಸಲ್ಪಟ್ಟಿದಾನೆ. ಕರ್ಮಗಳಲ್ಲಿ ಕುದುರೆಯು ಅಗ್ನಿಯ ಪ್ರತಿಬಿಂಬ. ಅಗ್ನಿಮಥನ ಮಾಡುವ ಪ್ರದೇಶವು ಕಾಣಿಸುವಂತೆ, ಒಂದು ಅಶ್ವವನ್ನು ತಂದು ನಿಲ್ಲಿಸುತ್ತಾರೆ. ಪೂರ್ವದಿಕ್ಕಿಗೆ ಅಗ್ನಿಯನ್ನು ತೆಗೆದುಕೊಂಡು ಹೋಗುವಾಗ ಮುಂದೆ ನಡೆದು ಹೋಗುತ್ತಿರುವ ಕುದುರೆಯ ಹಜ್ಜೆಯನ್ನನುಸರಿಸಿಯೇ ಹಾಗೆ ಮಾಡುವುದು. ಅಶ್ವವನ್ನು ದ್ದೇಶಿಸಿ, ಹೀಗೆ ಹೇಳುತ್ತಾರೆ—ನಿನ್ನ ಜನ್ಮಸ್ಥಳವು ಸ್ವರ್ಗವು ; ಅಂತರಿಕ್ಷದಲ್ಲಿ ನಿನ್ನ ನಾಭಿ ಪ್ರದೇಶವಿದೆ ; ಭೂಮಿಯಲ್ಲಿ ನಿನ್ನ ಮನೆ (ವಾ. ಸಂ. ೧೧-೧೨). ಶತಪಥಬ್ರಾಹ್ಮಣದಲ್ಲಿ ವಿದ್ಯುತ್ತನ್ನು, ನೀರಿನಲ್ಲಿ ಅಥವಾ ಮೋಡಗಳಲ್ಲಿ ಜನಿಸಿದ ಅಶ್ವವೆಂದು ಹೇಳಿಗೆ (ಶ. ಬ್ರಾ. ೫-೧-೪-೫ ; ೭-೫-೨-೧೮).

ವೃಷಭ.

ಇಂದ್ರನಿಗೇ ಹೆಚ್ಚಾಗಿ ವೃಷಭನೆಂದು ಸಂಕೇತವಿರುವುದು. ಅದಕ್ಕಿಂತ ಕಡಿಮೆ ಸಲ ಅಗ್ನಿಗೂ, ದ್ಯು ಮೊದಲಾದ ದೇವತೆಗಳಿಗೂ ಅವರೂಪವಾಗಿಯೂ ಉಪಯೋಗಿಸಿದೆ. ಅಥರ್ವ ವೇದದಲ್ಲಿ ಒಂದು ವೃಷಭ

ವನ್ನು ಇಂದ್ರನೆಂದು ಕರೆದಿದೆ (ಅ. ವೇ. ೯-೪-೯). ಶತಪಥಬ್ರಾಹ್ಮಣದಲ್ಲಿ, ವೃಷಭವು ಇಂದ್ರನ ರೂಪವಿಶೇಷವೆಂದು ಹೇಳಿದೆ (ಶ. ಬ್ರಾ. ೨-೫-೩-೧೪). ವೈದಿಕ ಕರ್ಮಗಳಲ್ಲೊಂದರಲ್ಲಿ, ವೃಷಭವು ರುದ್ರನ ಪ್ರತಿನಿಧಿ. 'ಮುದ್ಗಲ ಮತ್ತು ಮುದ್ಗಲಾನೀ' ಇತಿಹಾಸದಲ್ಲಿ ವೃಷಭವು ಪಾತ್ರವಹಿಸಿದೆ (೧೦-೧೦೨).

ಗೋವು.

ಪ್ರಪಂಚದಲ್ಲಿ ಗೋವಿನ ಹೆಚ್ಚಾದ ಉಪಯೋಗಕ್ಕನುಸಾರವಾಗಿ, ವೈದಿಕ ಇತಿಹಾಸದಲ್ಲಿಯೂ, ಅದಕ್ಕೆ ಮುಖ್ಯಸ್ಥಾನವಿದೆ. ಉಷಃಕಾಲದ ಕಿರಣಗಳನ್ನೂ ಗೋವುಗಳೆಂದೂ, ಅವುಗಳೇ ಉಷೋದೇವಿಯ ರಥವನ್ನು ಎಳೆಯುತ್ತವೆಯೆಂದೂ ಭಾವನೆ. ಮಳೆ ಮೋಡವೂ ಒಂದು ಗೋವು; ಅದಕ್ಕೆ ಒಂದು ಕರುವೂ (ಶಿಡಿಲು) ಇದೆ. ಈ ಮೇಘರೂಪವಾದ ಗೋವಿಗೆ ಪೃಶ್ನಿ ಎಂದು ಹೆಸರು ರೂಢಿಯಾಗಿದೆ; ಅಕೆಯು ಮರುತರ ತಾಯಿ (ವಾ. ಸಂ. ೨-೧೬). ಅಕೆಯ ಕ್ಷೀರ (೬-೪೮-೨೨) ಮತ್ತು ಕೆಚ್ಚಲುಗಳು ಪದೇ ಪದೇ ಪ್ರಸಕ್ತವಾಗಿವೆ "ಉತ್ತಮರು ವಾಸಿಸುವ ಸ್ವರ್ಗಲೋಕದಲ್ಲಿ ಬೇಕಾದುದನ್ನು ದೋಹನ ಮಾಡುವ (ಕಾಮದುಘಾ) ಚಿತ್ರವರ್ಣದ ಗೋವುಗಳು" ಈ ಮೇಘಗಳೇ ಇರಬೇಕು (ಅ. ವೇ. ೪-೩೪-೪); ಮುಂದೆ ಪುರಾಣಾದಿಗಳಲ್ಲಿ ಪ್ರಸಿದ್ಧವಾಗಿರುವ ಕಾಮಧೇನುವಿಗೆ, ಇವುಗಳೇ ಮೂಲ. ಹಾಲು ಮತ್ತು ಬೆಣ್ಣೆಗಳ ಆಹುತಿರೂಪವಾದ ಇಳಾ (ಇಡಾ) ಎಂಬ ದೇವತೆಯನ್ನೂ ಗೋವೆಂದು ಭಾವಿಸುವುದೂ ವಾಡಿಕೆಯಾಗಿದೆ. ಅದಿತಿಯನ್ನೂ ಒಂದೊಂದು ಸಲ ಆಕಳೆಂದು ಭಾವಿಸುವುದುಂಟು. ದೇವತೆಗಳೂ ಗೋವಿನಿಂದ ಜನಿಸಿದರೆಂದು (ಗೋಜಾತಾಃ) ಹೇಳುವುದುಂಟು. ಆದರೆ ವೇದದಲ್ಲಿ ಗೋವಿನ ಪ್ರಸಕ್ತಿಯಿರುವುದು, ಪರ್ವತ ಪ್ರದೇಶದಲ್ಲಿದ್ದ ಗೋವುಗಳನ್ನು ಇಂದ್ರನು ವಿನೋಚನೆ ಮಾಡುವ ಸಂದರ್ಭದಲ್ಲಿಯೇ ಹೆಚ್ಚು.

ಭೂಲೋಕದ ಹಸುವೂ ಪಾವಿತ್ರ್ಯವನ್ನು ಪಡೆದಿದೆ. ಅವುಗಳನ್ನೂ ಅದಿತಿ, ದೇವತೆ ಮೊದಲಾಗಿ ಕರೆಯುವುದುಂಟು ಮತ್ತು ಗೋವಧೆ ಮಾಡಬಾರದೆಂದು ಹೇಳಿದೆ (೮-೯೦-೧೫, ೧೬; ವಾ.ಸಂ. ೪-೧೯,೨೦ನ್ನು ಹೋಲಿಸಿ). ಹಸುವಿಗೆ ಅಘ್ನ್ಯಾ (ಅವಧ್ಯ) ಎಂಬುದಾಗಿ ಹದಿನಾರು ಸಲ ಪ್ರಯೋಗಿಸಿರುವುದರಿಂದ, ಅದು ಎಷ್ಟು ಪವಿತ್ರವೆಂಬ ಭಾವನೆಯಿತ್ತು ಎಂಬುದು ವ್ಯಕ್ತವಾಗುತ್ತದೆ. ಹಸುವನ್ನು ಪವಿತ್ರವಾದ ಪ್ರಾಣಿಯೆಂದೂ, ಅದನ್ನು ಪೂಜಿಸಬೇಕೆಂಬುದೂ ಅಥರ್ವವೇದದಲ್ಲಿ ಸಿದ್ಧವಾದ ವಿಷಯ (ಅ. ವೇ. ೧೨-೪-೫). ಗೋಮಾಂಸ ಭಕ್ಷಣೆ ಮಾಡುವವನು ಭೂಮಿಯಲ್ಲಿ ದುಷ್ಟನೆಂದು ಪ್ರಖ್ಯಾತನಾಗಿ ಪುನಃ ಜನಿಸುತ್ತಾನೆ (ಶ. ಬ್ರಾ. ೩-೧-೨-೨೧); ಆದರೆ, ಅತಿಥಿಗೋಸ್ಕರ ಗೋಮಾಂಸವನ್ನು ಪಾಕ ಮಾಡಬಹುದು (ಶ. ಬ್ರಾ. ೩-೪-೧-೨).

ಅಜಃ.—ಪೂಷಣನ ರಥವನ್ನು ಎಳೆಯುತ್ತದೆ. ಅಜ ಏಕವಾದ (ಒಂದು ಕಾಲಿನ ಅಜ) ಎಂಬ ದೇವತೆಯಾಗಿಯೂ ಕಂಡುಬರುತ್ತದೆ. ಇತರ ವೇದಗಳಲ್ಲಿ ಅನೇಕ ಸಲ ಅಜಕ್ಕೂ ಅಗ್ನಿಗೂ ಸಂಬಂಧವು ಉಕ್ತವಾಗಿದೆ; ಒಂದೊಂದು ಸಲ ಅಗ್ನಿಯನ್ನು ಅಜವೆಂದೇ ವ್ಯವಹರಿಸಿರುವುದೂ ಉಂಟು.

ಗರ್ದಭ.—ವಿಶೇಷವಾಗಿ ಅಶ್ವಿನೀದೇವತೆಗಳ ರಥವಾಹಕವಾಗಿದೆ.

ನಾಯಿ.—ಯೈಮೇಲೆ ಚುಕ್ಕೆಗಳುಳ್ಳ, ಸಾರಮೇಯವೆಂಬ ಎರಡು ಬೇಟೆ ನಾಯಿಗಳು ಯಮನಿಗೆ ಸೇರಿವೆ. ಈ ಹೆಸರಿನಿಂದ (ಸಾರಮೇಯ), ಅವೆರಡು ನಾಯಿಗಳು, ಇಂದ್ರನ ದೂತಿಯಾಗಿ ಕೆಲಸ ಮಾಡಿದ ಸರಮಾ ಎಂಬುದರ ವಂಶಜರೆಂದು ಹೇಳಬಹುದು. ಸರಮೆಯು ಹೆಣ್ಣುನಾಯಿಯೆನ್ನುವುದಕ್ಕೆ ಋಗ್ವೇದದಲ್ಲಿ ಆಧಾರವಿಲ್ಲ; ಆದರೆ ಇತರ ವೇದಗಳಲ್ಲಿ ಇದಕ್ಕೆ ಆಧಾರವಿದೆ ಮತ್ತು ನಿರುಕ್ತದಲ್ಲಿ (ನಿ. ೧೧-೨೫) ಸರಮೆಯು ದೇವತೆಗಳ ಹೆಣ್ಣುನಾಯಿಯೆಂದು ವಿವರಿಸಿದೆ.

ವರಾಹ.—ರುದ್ರ, ಮರುತರು ಮತ್ತು ವೃತ್ರರನ್ನು ಲಾಕ್ಷಣಿಕವಾಗಿ **ವರಾಹ**ವೆಂದು ಕರೆದಿದೆ. ತೈತ್ತಿರೀಯ ಸಂಹಿತೆ ಮತ್ತು ಬ್ರಾಹ್ಮಣಗಳಲ್ಲಿ ಪೃಥ್ವಿಯನ್ನು ಜಲಮಧ್ಯದಿಂದ ಮೇಲೆತ್ತಲು, ಸೃಷ್ಟಿಕರ್ತನು ಸ್ವೀಕರಿಸಿದ ರೂಪವಿದು. ಮುಂದೆ ಇದೇ ವಿಷ್ಣುವಿನ ಒಂದು ಅವತಾರವೆಂದು ಪ್ರಸಿದ್ಧಿಗೆ ಬಂದಿದೆ.

ಕೂರ್ಮ.—ಇತರ ವೇದಗಳಲ್ಲಿ, ನೀರಿಗೆಲ್ಲಾ ಒಡೆಯನೆಂಬುದಾಗಿ, ಕೂರ್ಮಕ್ಕೆ ಅರ್ಧದೇವತ್ವವು ಕೊಡಲ್ಪಟ್ಟಿದೆ (ವಾ. ಸಂ. ೧೩-೩೧) ಅಥವಾ ಕಶ್ಯಪ ಎಂಬ ಹೆಸರಿನಿಂದ ಪ್ರಜಾಪತಿಯ ಪಾರ್ಶ್ವದಲ್ಲಿ ಅಥವಾ ಪ್ರಜಾಪತಿಯೇ ಆಗಿ ಕಾಣಿಸುತ್ತದೆ; ಈ ರೂಪದಲ್ಲಿ ಸ್ವಯಂಭೂ ಎಂತಲೂ ವ್ಯವಹಾರವಿದೆ (ಅ. ವೇ. ೧೯-೫೩-೧೦). ಐತರೇಯ ಬ್ರಾಹ್ಮಣದಲ್ಲಿ, ಈ ಕಶ್ಯಪನಿಗೇ, ವಿಶ್ವಕರ್ಮನು ಭೂಮಿಯನ್ನು ಕೊಡುತ್ತೇನೆಂದು ಮಾತುಕೊಟ್ಟಿದ್ದನು (ಐ. ಬ್ರಾ. ೮-೨೧-೧೦) ಎಂದಿದೆ. ಶತಪಥಬ್ರಾಹ್ಮಣದಲ್ಲಿ ಪ್ರಜಾಪತಿಯು ಕೂರ್ಮರೂಪವನ್ನು ತಾಳಿ (ಶ. ಬ್ರಾ. ೭-೫-೧೫), ಸಮಸ್ತ ಪ್ರಾಣಿಗಳನ್ನೂ ಸೃಜಿಸಿದನೆಂದು (ಶ. ಬ್ರಾ. ೭-೫-೧-೧) ಇದೆ. ಈ ರೂಪವೇ, ಪುರಾಣಗಳಲ್ಲಿ ವಿಷ್ಣುವಿನ ಕೂರ್ಮಾವತಾರವೆಂದು ಪ್ರಸಿದ್ಧವಾಗಿದೆ. ತೈತ್ತಿರೀಯ ಸಂಹಿತೆಯಲ್ಲಿ (ತೈ. ಸಂ. ೨-೬-೩-೩), ಪುರೋಡಾಶವು ಕೂರ್ಮವಾಗಿ ಪರಿಣಮಿಸುತ್ತದೆ ಎಂದು ಹೇಳಿದೆ.

ವಾನರಃ—೧೦-೯೬ರಲ್ಲಿ, ಇಂದ್ರನಿಗೆ ಪ್ರಿಯವಾದ ಒಂದು ಕಪಿಯ ಪ್ರಸಕ್ತಿ ಇದೆ; ಇದರ ಜೇಷ್ಠೆಯಿಂದ ಕುಪಿತಳಾದ ಇಂದ್ರಾಣಿಯು ಇದನ್ನು ಓಡಿಸಿಬಿಡುತ್ತಾಳೆ; ಕೊನೆಗೆ ಮೊದಲಿನ ಸ್ಥಾನವು ದೊರಕುತ್ತದೆ.

ಕಪ್ಪೆ.—ಮಳೆಯಿಂದ ಏಳಿಸಲ್ಪಟ್ಟ ಕಪ್ಪೆಗಳು (೭-೧೦೩) ಗೋವುಗಳು ಮತ್ತು ದೀರ್ಘಾಯುಸ್ಸನ್ನು ಕೊಡುತ್ತವೆ ಎಂಬ ಪ್ರಶಂಸೆ ಇದೆ ಮತ್ತು ಅವುಗಳಿಗೆ ಮಂತ್ರ ವಿದ್ಯೆಯೂ ಬರುತ್ತದೆಂದು ನಂಬಿಕೆ.

ಪಕ್ಷಿಃ.—ವೈದಿಕ ಇತಿಹಾಸದಲ್ಲಿ ಪಕ್ಷಿಗಳಿಗೂ ಒಂದು ಪಾತ್ರವಿದೆ. ಸೋಮವನ್ನು ಪಕ್ಷಿಗೆ ಹೋಲಿಸಿದಾರೆ, ಪಕ್ಷಿಯೆಂದೇ ಕರೆದಿದಾರೆ. ವಿಶೇಷವಾಗಿ ಅಗ್ನಿಯನ್ನು ಪಕ್ಷಿಗಳಿಗೆ ಹೋಲಿಸಿರುವುದು ಅಥವಾ ಪಕ್ಷಿ ಎಂದು ಕರೆದಿರುವುದು. ಸೂರ್ಯನಿಗೂ ಪಕ್ಷಿಯೆಂಬ ಹೆಸರಿದೆ; ಎರಡು ಸಂದರ್ಭಗಳಲ್ಲಿ ಗರುತ್ಮಾನ್ ಎಂಬ ಹೆಸರಿದೆ. ಪುರಾಣಗಳಲ್ಲಿ ವಿಷ್ಣುವಿನ ವಾಹನವು ಗರುಡನೆಂದು ಬಂದಿರುವುದೂ ಇದೇ ಆಧಾರದ ಮೇಲಿರಬೇಕು. ವೇದದಲ್ಲಿ ಪಕ್ಷಿಯ ಮುಖ್ಯ ಕರ್ಮವೆಂದರೆ, ಶ್ಯೇನರೂಪದಲ್ಲಿ, ಇಂದ್ರನಿಗೋಸ್ಕರ ಸೋಮರಸವನ್ನು ತರುವುದು. ಕಾಠಕೋಪನಿಷತ್ತಿನ ತ್ರಕಾರ, ಇಂದ್ರನೇ ಶ್ಯೇನರೂಪಿಯಾಗಿ, ಸೋಮ ಅಥವಾ ಅಮೃತವನ್ನು ತೆಗೆದು ಕೊಳ್ಳುತ್ತಾನೆ.

ಶಕುನಪಕ್ಷಿಗಳು ಮತ್ತು ಪ್ರಾಣಿಗಳು, ಕೆಲವು ದೇವತೆಗಳಿಂದ ಕಳುಹಿಸಲ್ಪಡುತ್ತವೆ. ಗೂಬೆ ಮತ್ತು ಪಾರಿವಾಳಗಳು ಯಮನ ದೂತರು. ಸೂತ್ರಗ್ರಂಥಗಳಲ್ಲಿ, ಗೂಬೆಯು ದುರ್ದೇವತೆಗಳ ದೂತ ಮತ್ತು ರಕ್ತ ಸಿಕ್ತವಾದ ಹಿಂಸ್ರಪಕ್ಷಿ ಮತ್ತು ರಣಹದ್ದುಗಳು ಯಮನ ದೂತರು. ಋಗ್ವೇದದಲ್ಲಿ, ಉತ್ತಮ ಶಕುನಗಳನ್ನೇ ಸೂಚಿಸಬೇಕೆಂದು ಒಂದು ಶಕುನಪಕ್ಷಿಗೆ ಪ್ರಾರ್ಥನೆಯಿದೆ (೨-೪೨-೪೩).

ಹಿಂಸ್ರಪಶುಗಳು:—ಇವುಗಳು ರಾಕ್ಷಸರಾಗಿ ಅಥವಾ ರಾಕ್ಷಸಲಕ್ಷಣಯುಕ್ತಗಳಾಗಿಯೇ ಕಂಡುಬರುತ್ತವೆ. ಋಗ್ವೇದದಲ್ಲಿ, ರಾಕ್ಷಸರನ್ನು ಸೂಚಿಸಲು, 'ಮೃಗ' ಎಂಬ ಪದವನ್ನು ಪಯೋಗಿಸುವುದೂ ಉಂಟು (೧ ೮೦-೭ ; ೫-೨೯-೪ ; ೫-೩೨-೩). ಔರ್ಣವಾಭ (ಜೇಡರ ಹುಳುವಿನ ಜಾತಿ) ನೆಂಬ ರಾಕ್ಷಸನು ಮೂರು ಸಲ ಹೇಳಲ್ಪಟ್ಟಿದಾನೆ (೨-೧೧-೮ ; ೮-೩೨-೨೭ ; ೮-೭೭-೨); ಮತ್ತೊಬ್ಬನು ಊರಣ ಎಂದರೆ ಟಗರು (೨-೧೪-೪).

ಅಹಿ (ಸರ್ಪ) ಎಂಬುದೇ ಹೆಚ್ಚಾಗಿ, ಈ ರೀತಿ ರಾಕ್ಷಸರನ್ನು ಸೂಚಿಸಲು ಉಪಯೋಗಿಸಿರುವುದು; ಅದು ಸಾಧಾರಣವಾಗಿ ವೃತ್ರಾಸುರನ ಮತ್ತೊಂದು ಹೆಸರು; ಸರ್ಪವು ಪ್ರಾಣಿಗಳನ್ನು ಸುತ್ತಿಕೊಳ್ಳುವಂತೆ, ಇವನೂ ಮನುಷ್ಯರನ್ನು ಆವರಿಸುತ್ತಿದ್ದುದರಿಂದ ಈ ಹೆಸರು ಬಂದಿರಬಹುದು. ವೃತ್ರಾಸುರನನ್ನು ಕೊಂದ ಇಂದ್ರನೇ ಅಹಿಯನ್ನು ಕೊಲ್ಲುತ್ತಾನೆ (೮-೮೨-೨; ೪-೧೭-೧ ನ್ನು ಹೋಲಿಸಿ). ಅಹಿ ವೃತ್ರಗಳಿಬ್ಬರೂ ಒಂದೇ ವ್ಯಕ್ತಿಗೆ ಅನ್ವಯಿಸುತ್ತವೆ ಎಂಬುದು ೧-೩೨-೧, ರಿಂದ ೧೪ ನೆಯ ಮಂತ್ರಗಳಲ್ಲಿ ಸ್ಪಷ್ಟವಾಗುತ್ತದೆ. ಈ ವಾಕ್ಯಗಳಲ್ಲಿ ವೃತ್ರನೆಂದು ಹೇಳಬೇಕಾದ ಸ್ಥಳಗಳಲ್ಲಿಯೂ ಅಹಿಯೆಂದೇ ಉಪಯೋಗಿಸಿದೆ. ಅದೇ ರೀತಿ ಅಹಿ ಶಬ್ದದ ಬದಲು ವೃತ್ರನೆಂದೂ ಹೇಳಿದೆ. ೧-೩೨-೩, ೪ ರಲ್ಲಿರುವ ಆದಿಯಲ್ಲಿ ಜನಿಸಿದ ಅಹಿಯೂ ವೃತ್ರನಲ್ಲದೆ ಬೇರೆ ಇರಲಾರದು ಇನ್ನೂ ಅನೇಕ ವಾಕ್ಯಗಳಲ್ಲೂ ಎರಡು ಪದಗಳೂ ಅಕ್ಕಪಕ್ಕಗಳಲ್ಲಿಯೇ ಇವೆ. ಅಹಿರೂಪನಾದ ವೃತ್ರನೆಂದೇ ಹೇಳಬಹುದು. ಅಹಿ ಒಬ್ಬನನ್ನೇ ಹೇಳಿದಾಗಲೂ, ಇಂದ್ರನ ಜಯದ ಪರಿಣಾಮವು, ವೃತ್ರನನ್ನು ವಧಿಸಿದಾಗ ಆಗುವ ಜಲವಿಮೋಚನ ಮತ್ತು ಗೋಲಾಭಗಳು. ಅಹಿಯು ನೀರನ್ನು ಸುತ್ತುಗಟ್ಟಿಕೊಂಡಿದಾನೆ ಎಂಬುದಾಗಿ ಹೇಳುವಾಗಲೂ ವೃ (ಆವರಿಸು) ಎಂಬ ಧಾತುವೇ ಪ್ರಯೋಗಿಸಲ್ಪಟ್ಟಿದೆ ಅದೇ ರೀತಿ, ಸರ್ಪವು ನೀರನ್ನು ನುಂಗಿಬಿಟ್ಟಿದೆ (ಗ್ರಸ್ ಧಾತು; ೪-೧೭-೧; ೧೦-೧೧೧-೯). ಸಿಡಿಲು, ಗುಡುಗು ಮುಂತಾದುವು ಅಹಿಯ ಆಯುಧಗಳು (೧-೩೨-೧೩). ಅವನೂ ತೇಜಸ್ವಿ; ಮರುತರಿಗೆ 'ಅಹಿಭಾನವಃ' ಎಂದರೆ ಅಹಿಯಂತೆ ಪ್ರಕಾಶಯುಕ್ತರು ಎಂದು ವಿಶೇಷಣ (೧-೧೭೨-೧). ಅಗ್ನಿಗೂ ಈ ಪದವನ್ನು ಪ್ರಯೋಗಿಸಿದಾರೆ; ರಭಸದಿಂದ ಬೀಸುತ್ತಿರುವ ಗಾಳಿಯಂತೆ ಬುಸುಗುಟ್ಟುತ್ತಿರುವ ಸರ್ಪವೆಂದು ಅವನನ್ನು ವರ್ಣಿಸಿದೆ (೧-೭೯-೧). ಶತ್ರುವನ್ನು ಅಹಿಗೆ ಒಪ್ಪಿಸಿಬಿಡು ಎಂದು ಸೋಮನನ್ನು ಪ್ರಾರ್ಥಿಸಿದಾರೆ (೭-೧೦೪-೯) ಅಹಯಃ ಎಂದು ಬಹುವಚನದಲ್ಲಿ ರಾಕ್ಷಸ ವಂಶವು ಉಕ್ತವಾಗಿದೆ (೯-೪೪-೪; ೧೦-೧೩೯-೭); ಅವರಲ್ಲಿ ಅಹಿಯೇ ಮೊದಲು ಹುಟ್ಟಿದವನು (೧-೩೨-೩, ೪). ಅಹಿ ಬುಧ್ನ್ಯ ಎಂಬ ಹೆಸರಿನಿಂದ, ಈ ಸರ್ಪವು ದೇವತೆಯಾಗಿ ಪರಿಗಣಿತವಾಗಿದೆ.

ಇತರ ವೇದಗಳಲ್ಲಿ, ಸರ್ಪಗಳೂ, ಗಂಧರ್ವರು ಮೊದಲಾದವರಂತೆ, ಅರ್ಧದೇವಜಾತಿಗೆ ಸೇರಿದವರೆಂದು ಗಣನೆಯಿದೆ. ಅವರುಗಳೂ ಭೂಮ್ಯಾಕಾಶಗಳು ಮತ್ತು ಸ್ವರ್ಗಲೋಕಗಳಲ್ಲಿರುತ್ತಾರೆ (ವಾ. ಸಂ. ೧೩-೬; ತೈ. ಬ್ರಾ. ೩-೧-೧-೭ನ್ನು ಹೋಲಿಸಿ). ಅಥರ್ವವೇದದಲ್ಲಿ ಬಹಳ ಕಡೆ ಇವುಗಳ ಪ್ರಸಕ್ತಿಯಿದೆ. ಸರ್ಪ ದೇವತೆಗಳ ಸ್ತುತಿಗಾಗಿ ಒಂದು ಸೂಕ್ತವೇ ವಿನಿಯೋಗವಾಗಿರುವಂತಿದೆ (ಅ. ವೇ ೧೧-೯). ಸೂತ್ರಗಳಲ್ಲಿ, ಭೂಮಿ, ಅಂತರಿಕ್ಷ ಮತ್ತು ಸ್ವರ್ಗದ ದೇವತೆಗಳಿಗೆ ಪ್ರತ್ಯೇಕವಾಗಿ ಆಹುತಿಗಳು ವಿಹಿತವಾಗಿವೆ (ಆ. ಗೃ. ಸೂ. ೨-೧೦; ಪಾ. ಗೃ. ಸೂ. ೨-೧೪-೯). ದೇವತೆಗಳು, ಸಸ್ಯಗಳು, ರಾಕ್ಷಸರು ಇವರ ಜೊತೆಗೆ ಸರ್ಪಗಳಿಗೂ ಪೂಜೆಯುಂಟು (ಶಾಂ. ಗೃ. ಸೂ. ೪-೯-೩; ೪-೧೫-೪; ಆ. ಗೃ. ಸೂ. ೩-೪-೧); ಅವುಗಳಿಗೋಸ್ಕರ ರಕ್ತವನ್ನು ಸುರಿಯುತ್ತಾರೆ (ಆ. ಗೃ. ಸೂ. ೪-೮-೨೭). ಸರ್ಪವು ಹಿಂಸ್ರಜಂತುವಾದುದರಿಂದ, ರಾಕ್ಷಸ ಸ್ವಭಾವವುಳ್ಳದ್ದೆಂದೂ, ಅದನ್ನು ತೃಪ್ತಿಪಡಿಸಲೇಬೇಕೆಂದೂ ನಂಬಿಕೆ. ಇದೇರೀತಿ ಇರುವೆಗಳಿಗೂ ಆಹುತಿಯುಂಟು (ಕೌ. ಸೂ. ೧೧೬).

ದೇವತೆಗಳೆಂದು ಭಾವಿಸಲ್ಪಟ್ಟ ಭೌತಿಕ ವಸ್ತುಗಳು.

ಸ್ವರ್ಗ ಮತ್ತು ಅಂತರಿಕ್ಷಗಳಿಗೆ ಸಂಬಂಧಪಟ್ಟಂತೆ ಕಂಡುಬರುವ ಪ್ರಾಕೃತಿಕ ಘಟನೆಗಳು ಮತ್ತು ಶಕ್ತಿಗಳನ್ನಷ್ಟೆ, ಪಾರ್ಥಿವ ವಸ್ತುಗಳನ್ನೂ ದೇವತೆಗಳೆಂದು ಭಾವಿಸುವುದೂ ಋಗ್ವೇದದಲ್ಲಿ ರೂಢಿಗೆ ಬಂದಿದೆ. ಈ ರೀತಿ ದೇವತಾರೂಪಕ್ಕೆ ಒಳಗಾಗುವ ವಸ್ತುಗಳು, ಸಾಧಾರಣವಾಗಿ ಮನುಷ್ಯನಿಗೆ ಅತ್ಯಂತ ಉಪಯುಕ್ತವಾದವುಗಳು ಮಾತ್ರ. ಈ ರೀತಿಯ ಪೂಜೆಯನ್ನು ಸರ್ವದೇವತಾರಾಧನೆ ಅಥವಾ, ವಿಶ್ವೇ ದೇವರು, ದೇವರೇ

ವಿಶ್ವವೆಂಬ ವಾದವೆಂದಾಗಲೀ ಭಾವಿಸಬಾರದು. ಇಲ್ಲಿ ಪ್ರತಿಯೊಂದು ವಸ್ತುವಿಗೂ ಪ್ರತ್ಯೇಕ ಸ್ಥಾನವಿದೆ. ಇದನ್ನು ಕೇವಲ ವಸ್ತುಪೂಜೆಯೆನ್ನಬಹುದು.

ದೇವತಾ ಸ್ವರೂಪಗಳಾದ ನದಿಗಳು ಹಿಂದೆಯೇ ಚರ್ಚಿಸಲ್ಪಟ್ಟಿವೆ-

ಪರ್ವತಗಳು ದಿವ್ಯಚೇತನವಿಶಿಷ್ಟವಾಗಿವೆ. ಸುಮಾರು ಇಪ್ಪತ್ತು ಸಲ ಬಹುವಚನದಲ್ಲಿಯೂ, ನಾಲ್ಕು ಸಲ ಏಕವಚನದಲ್ಲಿಯೂ ಹೊಗಳಲ್ಪಟ್ಟಿವೆ. ಈ ರೀತಿ ಪರ್ವತಗಳನ್ನು ಮಾತ್ರ ಎಲ್ಲಿಯೂ ಸ್ತುತಿಸಿಲ್ಲ; ಸಾಧಾರಣವಾಗಿ ಉದಕ, ನದಿಗಳು, ಗಿಡಗಳು, ಮರಗಳು, ಸ್ವರ್ಗ ಮತ್ತು ಭೂಮಿ ಇವುಗಳೊಡನೆ (೭-೩೪-೨೩; ಇತ್ಯಾದಿ) ಅಥವಾ ಸವಿತೃ, ಇಂದ್ರ ಮೊದಲಾದ ದೇವತೆಗಳೊಡನೆ (೬-೪೯-೧೪; ಇತ್ಯಾದಿ) ಪೌರುಷಯುಕ್ತರು, ದೃಢವಾಗಿರುವವರು ಮತ್ತು ಸಮೃದ್ಧರಾಗಿ ಸಂತುಷ್ಟರಾಗಿರುವರು (೩-೫೪-೨೦). ಇಂದ್ರಾಪರ್ವತಾ ಎಂಬುದಾಗಿ ಇಂದ್ರನಿಗೆ ಸಮಾನವಾದ ಸ್ಥಾನವೂ ಅಭಿಪ್ರೇತವೆಂದು ಕಾಣುತ್ತದೆ. (೧-೧೨೨-೩; ೧-೧೩೨-೬). ಅವರಿಬ್ಬರೂ ಒಂದು ದೊಡ್ಡ ರಥದಲ್ಲಿ ಸಂಚರಿಸುತ್ತಾರೆ; ಇಬ್ಬರೂ ಕೂಡಿಯೇ ಯಾಗಕ್ಕೆ ಬರಬೇಕೆಂದು ಆಹ್ವಾನ (೩-೫೩-೧). ಇಲ್ಲಿ ಪರ್ವತವು ಪರ್ವತ ದೇವತೆ ಮತ್ತು ಇಂದ್ರನ ಸಹಚರ.

ಓಷಧಿಗಳೂ (ಗಿಡಗಳು) ದೇವತ್ವವನ್ನು ಪಡೆದಿವೆ. ೧೦-೯೭ ನೆಯ ಸೂಕ್ತ ಪೂರ್ತಿಯಾಗಿ ಇವುಗಳ ರೋಗಗಳನ್ನು ಗುಣಪಡಿಸುವ ಶಕ್ತಿಯನ್ನು ಹೊಗಳಿದೆ. ಜನನಿಯರು, ದೇವತೆಗಳು ಮೊದಲಾಗಿ ವರ್ಣಿಸಿದೆ. ಸೋಮಲತೆಗೆ ಎಲ್ಲಾ ಸಸ್ಯಗಳೂ ಅಧೀನ ಮತ್ತು ಸೋಮವು ಎಲ್ಲರಿಗೂ ದೊರೆ. ಔಷಧಿಗೆ ಉಪಯೋಗವಾಗುವ ಸಸ್ಯವೊಂದನ್ನು ಭೂದೇವಿಯಲ್ಲಿ ಜನಿಸಿದ ದೇವಿಯೆಂದು ಹೊಗಳಿದೆ (ಅ. ವೇ. ೬-೧೩೬-೧). ಸಂತತಿಗೆ ಅಡ್ಡಿ ಬಾರದಿರಲೆಂದು, ಈ ಓಷಧಿಗಳಿಗೆ ಒಂದು ಪಶು ಬಲಿಯೂ ಕೊಡಲ್ಪಡುತ್ತದೆ (ತೈ. ಸಂ. ೨-೧-೫-೩).

ವನಸ್ಪತಿಗಳು (ಮರಗಳು), ಬಹುವಚನದಲ್ಲಿ (೭-೩೪-೨೩; ೧೦-೬೪-೪) ಅಥವಾ ಏಕವಚನದಲ್ಲಿ (೧-೯೦-೪; ವಾಲ. ೬-೪), ನೀರು ಮತ್ತು ಪರ್ವತಗಳೊಡನೆ, ದೇವತೆಗಳೆಂದು ಭಾವಿಸಲ್ಪಟ್ಟಿವೆ. ವಿವಾಹ ಸಮಾರಂಭಗಳಲ್ಲಿ, ದೊಡ್ಡ ದೊಡ್ಡ ಮರಗಳ (ಅಶ್ವತ್ಥ ಮೊದಲಾದುವು) ಪೂಜೆಯು ವಿಹಿತವಾಗಿದೆ.

೧೦-೧೪೬ ನೆಯ ಸೂಕ್ತದಲ್ಲಿ ಅರಣ್ಯಾನೀ ಎಂಬ ಹೆಸರಿನಿಂದ ವನದೇವತೆಯು (ಕಾಡಿನ ಅಭಿಮಾನಿ ದೇವತೆ) ವರ್ಣಿತಳಾಗಿದಾಳೆ. ಕಾಡು ಮೃಗಗಳಿಗೆ ಜನನಿ, ವ್ಯವಸಾಯವಿಲ್ಲದಿದ್ದರೂ ಆಹಾರಕ್ಕೆ ಕೊರತೆಯಿಲ್ಲ. ಕಾಡಿನಲ್ಲಿ ಕೇಳಬರುವ ನಾನಾ ಶಬ್ದಗಳನ್ನು ನಾನಾ ವಿಧವಾಗಿ ವರ್ಣಿಸಿದಾರೆ. ಆದರೆ, ಈ ಸಸ್ಯಗಳು ಮತ್ತು ವನದೇವತೆಗಳ ಪಾತ್ರವು, ವೇದಗಳಲ್ಲಿ ಮಾತ್ರವಲ್ಲ, ಯಜ್ಞಾದಿ ಕರ್ಮಗಳಲ್ಲಿಯೂ, ಅಪ್ರಧಾನವಾದುದು. ಬೌದ್ಧಗ್ರಂಥಗಳಲ್ಲಿ ಮಾತ್ರ, ಇವುಗಳಿಗೂ ಮನುಷ್ಯರಿಗೂ ಬಹಳ ಸಮೀಪ ಬಾಂಧವ್ಯವೇರ್ಪಟ್ಟಿದೆ.

ಉಪಕರಣಗಳು.

ವ್ಯಕ್ತೀಕರಣ ಮತ್ತು ದೇವತ್ವಾರೋಪಗಳಿಗೆ ಒಳಗಾಗಿರುವ ಇನ್ನೊಂದು ವಸ್ತುಚಯವೆಂದರೆ ಯಾಗೋಪಕರಣಗಳು. ಇವುಗಳಲ್ಲಿ ಮುಖ್ಯವಾದುದು ಯೂಪಸ್ತಂಭ. ಇದಕ್ಕೆ ವನಸ್ಪತಿ ಮತ್ತು ಸ್ವರು ಎಂಬ ಹೆಸರುಗಳೂ ಉಂಟು. ಇವೆರಡೂ ೩-೮ ರಲ್ಲಿ ದೇವತಾ ಸ್ವರೂಪರೆಂದು ಸ್ತುತವಾಗಿವೆ. ಋತ್ವಿಜರಿಂದ ಶುದ್ಧಿ ಮಾಡಲ್ಪಟ್ಟು, ಅಲಂಕರಿಸಲ್ಪಟ್ಟಿವೆ. ಋತ್ವಿಜರಿಂದ ನಿಲ್ಲಿಸಲ್ಪಟ್ಟ ಸ್ತಂಭಗಳೂ ದೇವತೆಗಳೇ ಮತ್ತು ಇತರ ದೇವತೆಗಳಂತೆ, ದೇವತೆಗಳ ಸಮೀಪಕ್ಕೆ ಹೋಗುತ್ತವೆ. ಆಪ್ರೀ ಸೂಕ್ತದ ಹತ್ತು ಮತ್ತು ಹನ್ನೊಂದನೆಯ ಮಂತ್ರಗಳಲ್ಲಿ, ಹೀಗೆ ಹೇಳಿದೆ; ಯೂಪಸ್ತಂಭವು ಮೂರು ಸಲ ಘೃತದಿಂದ ಶುದ್ಧಿಮಾಡಲ್ಪಟ್ಟು, ಅಗ್ನಿಯು

ಪಾರ್ಶ್ವದಲ್ಲಿ ಸ್ಥಾಪಿತವಾಗಿ, ಹುತವಾದ ಪದಾರ್ಥಗಳನ್ನು ದೇವತೆಗಳ ಬಳಿಗೆ ಹೋಗಗೊಡಬೇಕೆಂದು ಪ್ರಾರ್ಥಿತವಾಗುತ್ತದೆ. ಅದೇ ಸೂಕ್ತದಲ್ಲಿ (೨-೩-೪ ; ೧೦-೭೦-೪). ದರ್ಭೆಯನ್ನೂ ದೇವತೆಯೆಂದು ಹೇಳಿದೆ. ಯಾಗಶಾಲೆಯ ದ್ವಾರಗಳನ್ನು ದೇವತೆಗಳೆಂದು ಹೆಚ್ಚುಸಲ ಕರೆದಿದಾರೆ (ದೇವೀಃ ದ್ವಾರಃ).

ಸೋಮರಸವನ್ನು ಹಿಂಡುವುದಕ್ಕೆ ಉಪಯೋಗಿಸುವ ಶಿಲೆಗಳು (ಗಾವಾ, ಅದ್ರಿ) ಮೂರು ಸೂಕ್ತಗಳಲ್ಲಿ ದೇವತೆಗಳೆಂದು ಭಾವಿತವಾಗಿವೆ (೧೦-೭೬, ೯೪, ೧೭೫). ಅವುಗಳಿಗೆ ನಾಶವಿಲ್ಲ. ವಾರ್ಧಕ್ಯವಿಲ್ಲ, ಮತ್ತು ಅವು ಸ್ವರ್ಗಕ್ಕಿಂತಲೂ ಮಹತ್ತಾದವು. ಸೋಮಾಭಿಷವಕಾಲದಲ್ಲಿ, ಅವು ಅಶ್ವಗಳು ಅಥವಾ ವೃಷಭಗಳಂತೆ ಇರುತ್ತವೆ ಮತ್ತು ಅವುಗಳಿಂದ ಜನಿತವಾದ ಶಬ್ದವು ಸ್ವರ್ಗವನ್ನೂ ಮುಟ್ಟುತ್ತದೆ. ರಾಕ್ಷಸರು ಮತ್ತು ಅಪಘಾತಗಳನ್ನು ನಿವಾರಿಸಿ, ಐಶ್ವರ್ಯ, ಸಂತಾನಗಳನ್ನು ಅನುಗ್ರಹಿಸಬೇಕೆಂದು ಪ್ರಾರ್ಥನೆ. ೧-೩೮-೫, ೬ ರಲ್ಲಿ, ಕಲಬತ್ತು ಮತ್ತು ಕುಟ್ಟಣಿಗಳು, ಗಟ್ಟಿಯಾಗಿ ಶಬ್ದಮಾಡುತ್ತಾ, ಸೋಮರಸವನ್ನು ಹಿಂಡಬೇಕೆಂದು ಪ್ರಾರ್ಥಿತವಾಗಿವೆ.

ಅಥರ್ವವೇದದಲ್ಲಿ, ಹೋಮಶೇಷಕ್ಕೆ (ಉಚ್ಚಿಷ್ಟ) ಹೆಚ್ಚಾದ ದೈವೀಶಕ್ತಿ ಇದೆಯೆಂದು ಹೇಳಿದೆ (ಅ.ವೇ. ೧೧-೭) ; ಅದೇ ರೀತಿ ಯಾಗದಲ್ಲಿ ಉಪಯೋಗಿಸುವ ಸ್ರುಕ್ ಸ್ರುವಾದಿಗಳಿಗೂ ಶಕ್ತಿಯುಂಟು.

ಶುನ ಸೀರ ಎಂಬ ವ್ಯವಸಾಯೋಪಕರಣಗಳಿಗೂ ಕೆಲವು ಸ್ತುತಿವಾಕ್ಯಗಳಿವೆ (೪-೫೭-೫ ರಿಂದ ೮) ಮತ್ತು ಅವುಗಳಿಗೆ ಪುರೋಡಾಶವು ವಿಹಿತವಾಗಿದೆ (ಶ. ಬ್ರಾ. ೨-೬-೩-೧೫).

ಆಯುಧಗಳಿಗೂ ದೇವತಾ ಸ್ವರೂಪವುಂಟು. ೬-೭೫ ನೆಯ ಸೂಕ್ತ ಪೂರ್ತಿಯಾಗಿ, ಬಿಲ್ಲುಬಾಣಗಳು, ಬತ್ತಳಿಕೆ ಮೊದಲಾದ ಯುದ್ಧೋಪಕರಣಗಳ ಸ್ತುತಿಗೆ ವಿನಿಯೋಸಲಾಗಿದೆ. ಬಾಣವೂ ದಿವ್ಯವಾದುದು ; ರಕ್ಷಣೆ ಮಾಡಬೇಕು ಮತ್ತು ಶತ್ರುಗಳನ್ನು ಹೊಡೆಯಬೇಕೆಂದು ಪ್ರಾರ್ಥನೆ. ದುಂದುಭಿಯೂ ಇದೇರೀತಿ, ಅಪಶತ್ರು, ಶತ್ರುಗಳು ಮತ್ತು ರಾಕ್ಷಸರು, ಇವರನ್ನು ಓಡಿಸಬೇಕೆಂದು ಪ್ರಾರ್ಥಿತವಾಗಿದೆ. ಅಥರ್ವ ವೇದದ ಒಂದು ಇಡೀ ಸೂಕ್ತವೇ ಅದನ್ನು ಸ್ತುತಿಸುತ್ತದೆ (ಅ. ವೇ. ೪-೩೦).

ಲಾಂಛನಗಳು—ಪ್ರತಿಮೆಗಳು.

ಸಾಧಾರಣ ವಸ್ತುಗಳನ್ನು ದೇವತೆಗಳ ಪ್ರತಿನಿಧಿಗಳನ್ನಾಗಿ ಹೇಳುವುದು ಇತರ ವೇದಗಳಲ್ಲಿ ಸ್ವಲ್ಪಮಟ್ಟಿಗೆ ಕಂಡುಬರುತ್ತದೆ. ನನ್ನ ಈ ಇಂದ್ರನನ್ನು ಹತ್ತು ಗೋವುಗಳಿಗೆ ಯಾರು ಕೊಂಡುಕೊಳ್ಳುತ್ತಾರೆ? ತನ್ನ ಶತ್ರುಗಳನ್ನು ಸೋಲಿಸಿದ ಮೇಲೆ ಹಿಂದಕ್ಕೆ ಕೊಡಬಹುದು (೪-೨೪-೧೦; ೪-೧-೫ ನ್ನು ಹೋಲಿಸಿ) ಎಂಬಲ್ಲಿ, ಇಂತಹುದೇ ಒಂದು ಇಂದ್ರ ಪ್ರತಿಮೆಯೇ ಕ್ರಯವಸ್ತುವಾಗಿರಬೇಕು. ಬ್ರಾಹ್ಮಣಗಳು ಮತ್ತು ಸೂತ್ರಗಳಲ್ಲಿ ಪ್ರತಿಮೆಗಳ ನಿರ್ದೇಶವು ಹೆಚ್ಚುತ್ತಾ ಬರುತ್ತದೆ.

ಕೆಲವು ಕರ್ಮಗಳಲ್ಲಿ, ಸೂರ್ಯನ ಪ್ರತಿನಿಧಿ (ಆಕಾರ ಮತ್ತು ಚಲನ ಸೂಚಕ) ಯಾಗಿ, ಚಕ್ರವನ್ನು ಉಪಯೋಗಿಸುವುದುಂಟು. ವಾಜಪೇಯ ಯಾಗದಲ್ಲಿ, ಅಗ್ನ್ಯಾಧಾನ ಸಮಯದಲ್ಲಿ, ಈ ರೀತಿ ಉಪಯೋಗಿಸುತ್ತಾರೆ. ಪುರಾಣಗಳಲ್ಲಂತೂ, ಚಕ್ರವು ವಿಷ್ಣುವಿನ ಒಂದು ಆಯುಧವಾಗಿದೆ.

ಸೂರ್ಯಾಸ್ತಮಾನವಾದ ಮೇಲೆ, ನೀರು ಸೇದುವ ಸಂದರ್ಭದಲ್ಲಿ ಸೂರ್ಯನ ಸ್ಥಾನದಲ್ಲಿ ಭಂಗಾರವನ್ನು ಅಥವಾ ಉರಿಯುವ ಕೊಳ್ಳಿಯನ್ನು ಇಟ್ಟುಕೊಳ್ಳುತ್ತಾರೆ (ಶ. ಬ್ರಾ. ೩-೯-೨-೯) ; ಆದರೆ ಚಿನ್ನವು ಸೂರ್ಯನಿರು

ವಾಗಲೂ ಅದೇ ಕೆಲಸಕ್ಕೆ ಉಪಯೋಗವಾಗುತ್ತಿತ್ತು (ಶ. ಬ್ರಾ. ೧೨-೪-೪-೬). ಅಗ್ನಿಕುಂಡನಿರ್ಮಾಣ ಮಾಡುವಾಗ, ಸೂರ್ಯನ ಬದಲು, ಗುಂಡಾಗಿರುವ ಚಿನ್ನದ ತಗಡೊಂದನ್ನು ಉಪಯೋಗಿಸುತ್ತಾರೆ (ಶ. ಬ್ರಾ. ೭-೪-೧-೧೦).

ಶಿಶ್ನಪೂಜೆಯು ರೂಢಿಯಲ್ಲಿತ್ತೆಂದೂ ತೋರುತ್ತದೆ; ಶಿಶ್ನದೇವಾಃ ಎಂದು ಎರಡು ಕಡೆ ಬರುತ್ತದೆ. ಆದರೆ ಈ ಪೂಜೆಯು ವೈದಿಕ ಅಭಿಪ್ರಾಯಗಳಿಗೆ ವಿರುದ್ಧವಾಗಿತ್ತೆಂದು ಹೇಳಬಹುದು; ಶಿಶ್ನದೇವತೆಗಳನ್ನು ಯಾಗದ ಸನಿಹಾಪಕ್ಕೆ ಬರಗೊಡಬೇಡವೆಂದು ಇಂದ್ರನು ಪ್ರಾರ್ಥಿತನಾಗಿದಾನೆ (೭-೨೧-೫); ಶತದ್ವಾರಗಳುಳ್ಳ ದುರ್ಗದ ಸಂಪತ್ತನ್ನು ಸಂಪಾದಿಸುವಾಗ, ಇಂದ್ರನು ಶಿಶ್ನದೇವತೆಗಳನ್ನು ವಧಿಸಿದನೆಂದು ಇದೆ (೧೦.೯೯.೩). ಪುರಾಣಗಳಲ್ಲಿ, ಶಿವನ ಸೃಷ್ಟಿಕರ್ತೃತ್ವ ಸೂಚಕವಾಗಿ, ಶಿಶ್ನ ಅಥವಾ ಲಿಂಗಪೂಜೆಯು ಬಳಕೆಗೆ ಬಂದಿದೆ.

ಪಾಪದೇವತೆಗಳು ಮತ್ತು ಪಿಶಾಚಿಗಳು.

ಅಸುರರು:—ಮಂಗಳಕರವಾದ ದೇವತೆಗಳಿಗೆ ವಿರೋಧಿಗಳೂ ಹಿಂಸಕರೂ ಆದ ಕೆಲವು ವ್ಯಕ್ತಿಗಳು ಅನೇಕ ನಾಮಗಳಿಂದ ಕರೆಯಲ್ಪಟ್ಟಿದಾರೆ. ವೇದಗಳಲ್ಲೆಲ್ಲಾ ಅಸುರರೆಂದರೆ ಸ್ವರ್ಗಲೋಕದ ರಾಕ್ಷಸರು; ನಿಯತವಾಗಿ ದೇವತೆಗಳ ವಿರೋಧಿಗಳು; ಸರ್ವದಾ ಅವರೊಡನೆ ಐತಿಹಾಸಿಕ ಯುದ್ಧಗಳಲ್ಲಿ ಹೊಡೆದಾಡುತ್ತಿರುತ್ತಾರೆ; ಎಲ್ಲೋ ಅಪರೂಪವಾಗಿ ಮನುಷ್ಯನಿಗೆ ವಿರೋಧಿಗಳು (ಅ. ವೇ. ೮-೬-೫; ಕೌ. ಸೂ. ೮೭-೧೬; ೮೮-೧) ಆಗುತ್ತಾರೆ. ಆದರೆ ಋಗ್ವೇದದಲ್ಲಿ ಈ ಪದಕ್ಕೆ ಈ ಅರ್ಥವಿರುವುದು ಅಪರೂಪ. ಬಹುವಚನದಲ್ಲಿ, ರಾಕ್ಷಸರೆಂಬರ್ಥದಲ್ಲಿ ನಾಲ್ಕೇ ಸಲ ಪ್ರಯೋಗವಿದೆ. ದೈವಭಕ್ತಿಯಿಲ್ಲದ ಅಸುರರನ್ನು ಓಡಿಸೆಂದು ಇಂದ್ರನಿಗೆ ಪ್ರಾರ್ಥನೆ (೮-೮೫-೯). ಉಳಿದ ಮೂರು ಪ್ರಯೋಗಗಳು ಹತ್ತನೆಯ ಮಂಡಲದಲ್ಲೇ ಇವೆ. ದೇವತೆಗಳು ಅಸುರರನ್ನು ಹೊಡೆದರು (೧೦-೧೫೭-೪) ಅಸುರರನ್ನು ನಿರ್ಮೂಲ ಮಾಡುವ ಉಪಾಯವೊಂದನ್ನು ತಾನು ಕಂಡು ಹಿಡಿಯುತ್ತೇನೆಂದು ಅಗ್ನಿಯು ಮಾತುಕೊಡುತ್ತಾನೆ (೧೦-೫೩-೪). ದುರ್ಜೇಯರಾದ ಅಸುರರಲ್ಲಿ ದೇವತೆಗಳು ನಂಬಿಕೆಯನ್ನು ಇಟ್ಟಿದ್ದರು ಎಂದಿದೆ (೧೦-೧೫೧-೩). ಏಕವಚನದಲ್ಲಿ ಮೂರು ಸಲ ಒಬ್ಬ ರಾಕ್ಷಸನನ್ನು ಸೂಚಿಸುತ್ತದೆ. ಅಸುರನ ಯೋಧರನ್ನು ಕಾದ ಕಲ್ಲಿನಿಂದ ಇರಿಯುವಂತೆ ಬೃಹಸ್ಪತಿಯು ಪ್ರಾರ್ಥಿತನಾಗಿದಾನೆ (೨-೩೦-೪). ಮಾಯಿಯಾದ ಪಿಪ್ರು ಎಂಬ ಅಸುರನ ದುರ್ಗಗಳನ್ನು ಇಂದ್ರನು ಧ್ವಂಸಮಾಡಿದನು (೧೦-೧೩೮-೩); ವರ್ಚಿ ಎಂಬ ಅಸುರನ ಒಂದು ಲಕ್ಷ ಯೋಧರನ್ನು ಇಂದ್ರಾವಿಷ್ಣುಗಳು ಬಡಿದರು (೭-೯೯-೫). ಇಂದ್ರ (೬-೨೨-೪), ಅಗ್ನಿ (೭-೧೩-೧) ಮತ್ತು ಸೂರ್ಯ (೧೦-೧೭೦-೨)ರಿಗೆ ಅನ್ವಯಿಸುವ 'ಅಸುರಹಾ' (ಅಸುರನನ್ನು ವಧಿಸುವವನು) ಎಂಬ ವಿಶೇಷಣದಲ್ಲಿಯೂ ಅಸುರ ಎಂದರೆ ರಾಕ್ಷಸನೇ. ಈ ದೇವಾಸುರಯುದ್ಧವೆಂಬುದು ಮೊದಲು ಇಂದ್ರನೆಂಬ ಒಬ್ಬ ದೇವತೆ ಮತ್ತು ವೃತ್ರನೆಂಬ ಒಬ್ಬ ಅಸುರನಿಗೂ ಪ್ರಾರಂಭವಾಗಿ, ಬರುಬರುತ್ತಾ, ದೇವತೆಗಳದೇ ಒಂದು ಗುಂಪು, ರಾಕ್ಷಸರದೇ ಒಂದು ಗುಂಪು, ಈ ಎರಡು ಪಂಗಡಗಳಿಗೂ ಸತತ ಯುದ್ಧವಾಗಿ ಪರಿಣತವಾಗಿರುವಂತೆ ಕಾಣುತ್ತದೆ. ಇದೇ ಅಭಿಪ್ರಾಯವೇ ಬ್ರಾಹ್ಮಣಗಳಲ್ಲಿ ವ್ಯಕ್ತವಾಗುವುದು. ಈ ಯುದ್ಧಗಳಲ್ಲಿ ಒಂದು ವೈಶಿಷ್ಟ್ಯವೂ ಇದೆ. ಪ್ರಾರಂಭದಲ್ಲಿ ಅಸುರರದೇ ಮೇಲುಗೈಯಾಗಿದ್ದು, ಕೊನೆಗೆ ದೇವತೆಗಳು ಉಪಾಯನಿಂಗ ಜಯಿಸುತ್ತಾರೆ. ವಿಷ್ಣುವು ತ್ರಿವಿಕ್ರಮಾವತಾರದಿಂದ ಮೂರು ಹೆಜ್ಜೆ ಭೂಮಿಯ ನೆಪದಲ್ಲಿ ದೇವತೆಗಳಿಗೆ ಅವರ ರಾಜ್ಯವನ್ನು ಹಿಂದಕ್ಕೆ ಕೊಡಿಸುವುದು ಬಹು ಮುಖ್ಯವಾದ ಉದಾಹರಣೆ.

ಬ್ರಾಹ್ಮಣಗಳಲ್ಲಿ ಅಸುರರಿಗೂ ಅಂಧಕಾರಕ್ಕೂ ಸಂಬಂಧ ಕಲ್ಪಿತವಾಗಿದೆ (ಶ. ಬ್ರಾ. ೨-೪-೨-೫). ಹಗಲು ದೇವತೆಗಳಿಗೂ, ರಾತ್ರಿಯು ರಾಕ್ಷಸರಿಗೂ ಸೇರಿದುದು (ತೈ. ಸಂ. ೧-೫-೯-೨). ಆದರೆ, ಅಸುರರೂ

ಪ್ರಜಾಪತಿಯಿಂದ ಜನಿಸಿದವರೇ ; ಆದಿಯಲ್ಲಿ ದೇವತೆಗಳಂತೆ ಮತ್ತು ದೇವತೆಗಳಿಗೆ ಸಮರಾಗಿಯೇ ಇದ್ದರು. ದೇವ ಎಂಬ ಪದದಿಂದ ಕೆಲವು ಹಾನಿಕರರಾದ ವ್ಯಕ್ತಿಗಳೂ ವಾಚ್ಯರಾಗಿರುವುದು ಈ ಕಾರಣದಿಂದಲೇ ಇರ ಬಹುದು (ತೈ. ಸಂ. ೩-೫-೪-೧ ; ಅ. ವೇ. ೩-೧೫-೫).

ಅಥರ್ವವೇದದಿಂದೀಚೆಗೆ, ಅಸುರ ಎಂದರೆ ರಾಕ್ಷಸರು ಮಾತ್ರ ; ಆದರೆ, ಋಗ್ವೇದದಲ್ಲಿ ಮುಖ್ಯವಾಗಿ ದೇವತೆಗಳೇ ಈ ಪದದಿಂದ ಅಭಿಪ್ರೇತರು. ಮೊದಲು ದೇವತೆಗಳಿಗೇ ಹೆಚ್ಚಾಗಿ ಉಪಯೋಗಿಸುತ್ತಿದ್ದ ಈ ಪದಕ್ಕೆ ರಾಕ್ಷಸರೆಂಬ ಅರ್ಥವು ರೂಢಿಗೆ ಬಂದಿರುವುದು ಈರೀತಿ ಇರಬಹುದು. ಅಸುರ ಎಂಬುದಕ್ಕೆ ಒಂದು ವಿಲಕ್ಷಣ ವಾದ ಅರ್ಥವಿರುವಂತೆ ತೋರುತ್ತದೆ. ಇದು ಸಾಧಾರಣವಾಗಿ ವರುಣ ಅಥವಾ ಮಿತ್ರಾ-ವರುಣರಿಗೇ ಉಪ ಯೋಗಿಸಲ್ಪಟ್ಟಿದೆ ಮತ್ತು ಇವರಿಬ್ಬರ 'ಮಾಯಾ' ಶಕ್ತಿಯು ಅವರ ವೈಶಿಷ್ಟ್ಯ. ಆದರೆ ಮಾಯಾ ಎಂದರೆ ಕಪಟತನ ಅಥವಾ ಕೇಡುಮಾಡುವ ಶಕ್ತಿ ಎಂತಲೂ ಆಗುತ್ತದೆ. ಇದು ಮತ್ತು ಅಸುರಪದಕ್ಕೆ ಇರುವ ದುಷ್ಟ ಅರ್ಥಗಳೂ (೧೦-೧೨೪-೩ ; ೧೦-೧೩೮-೩) ಸೇರಿ, ಅಸುರ ಪದವು ದೇವತೆಗಳಿಗೆ ಅನರ್ಹವೆಂಬ ನಿರ್ಣಯಕ್ಕೆ ಅವಕಾಶಕೊಟ್ಟಿರಬಹುದು. ಒಂದು ಸೂಕ್ತದಲ್ಲಿ (೧೦-೧೨೪) ಈ ಪದವು ಎರಡು ಅರ್ಥಗಳಲ್ಲಿಯೂ ಉಪ ಯೋಗಿಸಿರುವಂತೆ ತೋರುತ್ತದೆ. ಬರುಬರುತ್ತಾ ದೇವತೆ ಎಂಬರ್ಥದಲ್ಲಿ ಈ ಪದದ ಪ್ರಯೋಗವೇ ಕಡಿಮೆ ಯಾಗುತ್ತಾ ಬಂದಿದೆ. ಅಲ್ಲದೇ ಮಹಾಬಲಿಷ್ಠರೂ, ಸುರರಿಗೆ ವಿರೋಧಿಗಳೂ ಆದವರಿಗೆ ಒಂದು ಪ್ರತ್ಯೇಕ ಹೆಸರಿನ ಅವಶ್ಯಕತೆಯೂ, ಒಂದು ಕಾರಣ. ಆದುದರಿಂದ ಸುರ (ದೇವತೆಗಳು-ಮೊದಲು ಉಪನಿಷತ್ತಿನಲ್ಲಿ ಕಂಡುಬರುತ್ತದೆ) ರಲ್ಲದವರು ಅಸುರರು ಎಂದು, ರಾಕ್ಷಸರಿಗೆ ಈ ಹೆಸರು ರೂಢಿಗೆ ಬಂದಿರಬಹುದು.

ಪಣಿಗಳು.—ವಾಯುಮಂಡಲದಲ್ಲಿರುವ ಪಣಿಗಳೆಂಬುವರು ಮುಖ್ಯವಾಗಿ ಇಂದ್ರನಿಗೆ (೬-೨೦-೪ ; ೬-೩೯-೨), ಮತ್ತು ಅವನ ಮಿತ್ರರು, ಸೋಮ, ಅಗ್ನಿ, ಬೃಹಸ್ಪತಿ, ಮತ್ತು ಅಂಗಿರಸರಿಗೆ ಶತ್ರುಗಳು. ಈ ರಾಕ್ಷಸರ ಹೆಸರು ಬರುವ ಸ್ಥಳಗಳಲ್ಲೆಲ್ಲಾ, ಅವರ ಗೋವುಗಳು, ಸ್ಪಷ್ಟವಾಗಿ (೧೦-೧೦೮ ; ೬-೩೯-೨) ಅಥವಾ ಪಣಿಗಳ ನಿಧಿ ಅಥವಾ ಸಂಪತ್ತು ಎಂಬ ಹೆಸರಿನಿಂದ (೨-೨೪-೬ ; ೯-೧೧೧-೨) ಪ್ರಸಕ್ತವಾಗಿಯೇ ಇವೆ. ಪಣಿಯಿಂದ ಗೋವಿನಲ್ಲಿ ನಿಗೂಹಿತನಾಗಿದ್ದ ಘೃತವನ್ನು ದೇವತೆಗಳು ಕಂಡುಹಿಡಿದರೆಂದು ಇದೆ (೪-೫೮-೪). ಸಾಮರ್ಥ್ಯದಲ್ಲಿ ಇಂದ್ರನು ಇವರನ್ನು ವಿಚಾರಿಸಿದಾನೆ (೬-೫೬-೧೦), ಆದರೆ ಮಿತ್ರಾವರುಣರಷ್ಟು ಸಾಮರ್ಥ್ಯ ವನ್ನು ಅವರು ಪಡೆದಿಲ್ಲ (೧-೧೫೧-೯) ಎಂದ ಮೇಲೆ, ಇವರೂ ತಕ್ಕಮಟ್ಟಿಗೆ ಪ್ರಬಲರೇ.

ಹದಿನಾರು ಸಲ ಬಹುವಚನದಲ್ಲಿ, ನಾಲ್ಕು ಸಲ ಏಕವಚನದಲ್ಲಿ ಇದೆ. ಇಂದ್ರ ಅಥವಾ ಅಗ್ನಿ-ಸೋಮರು ಪಣಿಯಿಂದ ಗೋವುಗಳನ್ನು ಕಸಿದುಕೊಂಡರು (೧೦-೬೭-೬ ; ೧-೯೩-೪) ; ವೃಕರೂಪನಾಗಿರುವ ಪಣಿಯನ್ನು ಹೊಡೆದು ಕೆಡವಬೇಕೆಂದು ಸೋಮದೇವತೆಯು ಸ್ವಾರ್ಥಿತನಾಗಿದಾನೆ (೬-೫೧-೧೪).

'ಪಣಿ' ಪದವು ಏಕವಚನದಲ್ಲಿ ಇನ್ನೂ ಅನೇಕ ಸಲ ಉಪಯೋಗಿಸಲ್ಪಟ್ಟಿದೆ, ಆದರೆ ರಾಕ್ಷಸ ಸೂಚಕವಾಗಿ ಅಲ್ಲ ; ಕೃಪಣನೆಂಬರ್ಥದಲ್ಲಿ. ಅದರಲ್ಲಿಯೂ, ಯಾಗಗಳಲ್ಲಿ ದಾನ ಮತ್ತು ಹೋಮ ಮಾಡುವ ವಿಷಯದಲ್ಲಿ ಕಾರ್ಪಣ್ಯಸೂಚಕವಾಗಿ ಉಗಯೋಗಿಸಿರುವುದು. ಸ್ವರ್ಗೀಯ ಸಂಪದಾದಿಗಳನ್ನು ಒಬ್ಬರಿಗೂ ಸಿಗದಂತೆ ಮಾಡುತ್ತಾರೆ ಎಂಬುದರಿಂದ, ಪಣಿಗಳೂ ರಾಕ್ಷಸರೆಂಬ ಭಾವನೆ ಬಂದಿರಬಹುದು.

ದಾಸ ಅಥವಾ ದಸ್ಯು.—ದಾಸ ಅಥವಾ ಅದರ ಸಮಾನವಾದ ದಸ್ಯು ಎಂಬ ಪದದಿಂದಲೂ, ವಾಯುಮಂಡಲದ ರಾಕ್ಷಸರು ವಾಚ್ಯರಾಗುತ್ತಾರೆ. ಇವರು ಪ್ರಾಯಶಃ ಮೊದಲು ಮನುಷ್ಯರೇ ಆಗಿದ್ದು,

ಅವರಲ್ಲಿ ಕಂಡುಬಂದ ಕೆಲವು ಅನಿಷ್ಟಗುಣಗಳಿಂದ ರಾಕ್ಷಸತ್ವಾರೋಪಕ್ಕೆ ಒಳಗಾಗಿರಬಹುದು. ಕೆಲವು ಗೊತ್ತಾದ ರಾಕ್ಷಸರ ಹೆಸರುಗಳಿಗೆ ಐತಿಹಾಸಿಕ ಪ್ರಾಮುಖ್ಯತೆಯೂ ಇರುವಂತೆ ಕಾಣುತ್ತದೆ.

ಏಕವಚನದ (೨.೧೨-೧೦ ; ಇತ್ಯಾದಿ) ಮತ್ತು ಬಹುವಚನದ (೧-೧೦೧-೫) ರೂಪಗಳು ಇಂದ್ರನಿಂದ ಧ್ವಂಸಿತರಾದ ರಾಕ್ಷಸರನ್ನು ನಿರ್ದೇಶಿಸುತ್ತವೆ ; ಅನೇಕ ಸಲ, ಈ ಪದಗಳು ' ವೃತ್ರ ' ಪದದ ಜೊತೆಯಲ್ಲಿ ಪ್ರಯುಕ್ತವಾಗಿವೆ (೬-೨೩-೨ ; ಇತ್ಯಾದಿ). ಈ ಕಾರಣದಿಂದಲೇ, ಇಂದ್ರನಿಗೆ ದಸ್ಯುಹಾ ಎಂದೂ ೧-೧೦೦-೧೨ ; ಇತ್ಯಾದಿ) ಈ ಕಾರ್ಯಕ್ಕೆ ದಸ್ಯುಹತ್ಯಾ (೧-೫೧-೫, ೬ ; ಇತ್ಯಾದಿ) ಎಂತಲೂ ಹೆಸರು ಬಂದಿರುವುದು. ತನ್ನನ್ನು ಆಶ್ರಯಿಸಿದವರ ರಕ್ಷಣಾರ್ಥವಾಗಿ, ಇಂದ್ರನು ಮೂವತ್ತು ಸಹಸ್ರ ದಸ್ಯುಗಳನ್ನೂ ದೀರ್ಘ ನಿದ್ರಾಮಗ್ನರನ್ನಾಗಿ ಮಾಡಿದನು (೪-೩೦-೨೧) ; ಸಹಸ್ರ ದಸ್ಯುಗಳನ್ನು ಬಂಧಿಸಿದನು (೨-೧೫-೯) ; ಅಥವಾ ದಭ್ಯಂಚ ಮತ್ತು ಮಾತರಿಶ್ವರಿಗೋಸ್ಯರ, ದಸ್ಯುಗಳಿಂದ ಗೋಶಾಲೆಗಳನ್ನು ಪಡೆದನು (೧೦-೪೮-೨). ಆರ್ಯ ಮತ್ತು ದಸ್ಯುರೂಪರಾದ ಶತ್ರುಗಳ ಮೇಲೆ ಇಂದ್ರನ ಸಹಾಯವನ್ನು ಅಪೇಕ್ಷಿಸಿದಾಗಲೂ (೧೦-೩೮-೩ ; ಇತ್ಯಾದಿ), ಅಥವಾ ಆರ್ಯ ದಸ್ಯುಗಳಲ್ಲಿ ಭೇದವನ್ನೆಣಿಸುತ್ತಾನೆ ಎಂದು ಹೇಳುವಾಗಲೂ (೧-೫೧-೮ ; ೧೦-೪೬-೧೯), ಭೂಮಿಯಲ್ಲಿರುವ ಶತ್ರು ಸಾಮಾನ್ಯರೇ ಅಭಿಪ್ರೇತರು. ಆರ್ಯವರ್ಣೋಸ್ಯರ, ಇಂದ್ರನು ದಸ್ಯುಗಳ ಮೇಲೆ ಯುದ್ಧಮಾಡುತ್ತಾನೆ ಎನ್ನುವಾಗಲೂ ಇದೇ ಅಭಿಪ್ರಾಯ (೬-೧೪-೩ ; ೬-೨೫-೨). ಹೀಗೆ ಯುದ್ಧಗಳಲ್ಲಿ, ಆರ್ಯರು ದಾಸ ಅಥವಾ ದಸ್ಯುಗಳನ್ನು ಬಂದಿಗಳನ್ನಾಗಿ ಹಿಡಿಯುವುದರಿಂದ, ದಾಸ ಎಂಬ ಪದವು ಈಗ ರೂಢಿಯಲ್ಲಿರುವ ' ಗುಲಾಮು ' ಎಂಬರ್ಥದಲ್ಲಿ ಎರಡು ಮೂರು ಸಲ ಉಗಯೋಗಿಸಲ್ಪಟ್ಟಿರುವಂತೆ ಕಾಣುತ್ತದೆ (೭-೮೬-೭ ; ವಾಲ ೮-೩). ಸ್ವರ್ಗವನ್ನು ಆರೋಹಿಸಿ, ಇಂದ್ರನಿಂದ ಕೆಳಗೆ ಬೀಳಿಸಲ್ಪಟ್ಟ (೮-೧೪-೧೪ ; ೨-೧೨-೧೨ನ್ನು ಹೋಲಿಸಿ) ಅಥವಾ ಸ್ವರ್ಗದಲ್ಲಿ ದಹಿಸಲ್ಪಟ್ಟು ಕೆಳಗೆ ತಳ್ಳಲ್ಪಟ್ಟ (೧-೩೩-೭) ಅಥವಾ ಜನಿಸಿದ ಕೂಡಲೇ ಇಂದ್ರನಿಂದ ಧ್ವಂಸಮಾಡಲ್ಪಟ್ಟ (೧-೫೧-೬ ; ೮-೬೬-೧೧ರಿಂದ ೩) ಅಥವಾ ಯಾರ ಮೇಲೆ ಯುದ್ಧ ಕ್ಕೋಸ್ಕರ ಇಂದ್ರನು ದೇವತೆಗಳಿಗೆ ಸಹಾಯ ಮಾಡುತ್ತಾನೋ ಆ (೧೦-೫೪-೧) ದಸ್ಯುಗಳಾದರೋ, ರಾಕ್ಷಸರಾಗಿಯೇ ಉಳಿದರು. ಮಂಜು ಮತ್ತು ಕತ್ತಲನ್ನು ಹೋಗಲಾಡಿಸುತ್ತಾ, ಇಂದ್ರನು ದಸ್ಯುಗಳನ್ನು ಆಕ್ರಮಿಸುತ್ತಾನೆ (೧೦-೭೩-೫), ದಸ್ಯುಗಳನ್ನು ವಧಮಾಡಿ, ಸೂರ್ಯ ಮತ್ತು ನೀರುಗಳನ್ನು ಸಂಪಾದಿಸುತ್ತಾನೆ (೧.೧೦೦-೧೮) ಮತ್ತು ದೇವತೆಗಳೂ ಮತ್ತು ದಸ್ಯುಗಳೂ ಪರಸ್ಪರ ಶತ್ರುಗಳು (೩-೨೯-೯) ಮೊದಲಾದ ಸಂದರ್ಭಗಳಲ್ಲಿಯೂ ಇದೇ ಅಭಿಪ್ರಾಯ. ನೀರುಗಳ (ಜಲಾಭಿಮಾನಿದೇವತೆಗಳ) ಪತಿಯಾದ ದಾಸನೂ ಒಬ್ಬ ರಾಕ್ಷಸನೇ ಇರಬೇಕು (೧-೩೨-೧೧ : ೫-೩೦-೫ : ೮-೮೫-೧೮) ; ಇವನನ್ನು ಜಯಿಸಿ, ಇಂದ್ರನು ಆ ಜಲದೇವತೆಗಳನ್ನು ಉತ್ತಮದೇವತೆಯ ಪತ್ನಿಯರನ್ನಾಗಿ ಮಾಡುತ್ತಾನೆ (೧೦-೪೩-೮). ವೃತ್ರನ ಪುರಗಳಂತೆ (೧-೧೭೪-೨) ಶಾರದೀ ಎನ್ನಿಸಿಕೊಳ್ಳುವ (೬-೨೦-೧೦ ; ೭-೧೦೩-೯ನ್ನು ಹೋಲಿಸಿ), ' ದಾಸ 'ರ ಏಳು ದುರ್ಗಗಳೂ ವಾಯುಮಂಡಲಕ್ಕೆ ಸಂಬಧಿಸಿದವು.

ದಾಸ ಮತ್ತು ದಸ್ಯುಗಳಿಗೆರಡಕ್ಕೂ ಒಟ್ಟಾಗಿ ಪಿಶಾಚಗಳು ಎಂದು ಹೇಳುವುದು ಅನುಕೂಲವಾಗಿರುತ್ತದೆ. ಜಾತಿವಾಚಕಗಳಾಗಿ, ಈ ಪದಗಳು ಇಂದ್ರನೊಡನೆ ಯುದ್ಧಗಳಲ್ಲಿ ಪ್ರಸಕ್ತರಾಗುವ ಒಂದೊಂದು ಪಿಶಾಚಿಗೂ ಉಪಯೋಗಿಸಲ್ಪಟ್ಟಿದೆ. ನಮುಚಿ (೫-೩೦-೭ರಿಂದ ೯ ; ಇತ್ಯಾದಿ), ಶಂಬರ (೫-೩೦-೧೪ ; ಇತ್ಯಾದಿ), ಶುಷ್ಣ (೭.೧೯-೨ ; ಇತ್ಯಾದಿ), ಒಂದೊಂದು ಸಲ ಪಿಪ್ರು (೮-೩೨-೨ ; ೧೦-೧೩೮-೩), ಚುಮುರಿ ಮತ್ತು ಧುನಿ (೨-೧೫-೯ ; ೭-೧೯-೪), ವರ್ಚೀ (೪-೩೦-೧೫ ; ೬-೪೭-೨೧), ನವವಾಸ್ತ್ವ (೧೦-೪೯-೬, ೭), ಒಂದು ಸಲ ತ್ವಾಷ್ಟ್ರ (೨-೧೧-೧೯) ಮತ್ತು ಅಹಿನಾಮಕಸರ್ಪ (೨-೧೧-೨).

ವೃತ್ರ.

ವಾಯುಮಂಡಲದ ರಾಕ್ಷಸರುಗಳಲ್ಲಿ ಬಹಳ ಮುಖ್ಯನಾದವನು ವೃತ್ರನು. ಇವನ ಪ್ರಸ್ತಾಪ ಬರುವಷ್ಟು ಸಲ ಇನ್ನಾವ್ಯವ ರಾಕ್ಷಸನ ಪ್ರಸ್ತಾಪವೂ ಇಲ್ಲ. ಇವನೇ ಇಂದ್ರನ ಮುಖ್ಯ ಶತ್ರು ಮತ್ತು ಇವನ ವಧೆಗೋಸ್ಕರಲೇ ಇಂದ್ರನು ಜನಿಸಿದುದು ಅಥವಾ ಬೆಳೆದುದು (೮-೭೮-೫; ೧೦-೫೫). ವೃತ್ರಹಾ ಎನ್ನುವುದು ಇಂದ್ರನ ವೈಯಕ್ತಿಕ ವಿಶೇಷಣ. ಈ ಪದದ ಅರ್ಥವನ್ನು ಎರಡು ಸಂದರ್ಭಗಳಲ್ಲಿ ಬಿಡಿಸಿ ಹೇಳಿದ್ದಾರೆ. ವೃತ್ರಹನು (ವೃತ್ರಾಸುರನನ್ನು ಕೊಲ್ಲುವವನು) ವೃತ್ರಾಸುರನನ್ನು ವಧಿಸಲಿ (೮-೭೮-೩) ಮತ್ತು ಎಲೈ ವೃತ್ರಹನೇ (ವೃತ್ರಹನ್) ವೃತ್ರಾಸುರನನ್ನು ವಧಿಸು (೮-೧೭-೯). ಇಂದ್ರನ ಈ ಕಾರ್ಯವು ವೃತ್ರಹತ್ಯಾ (ವೃತ್ರವಧೆ) ಮತ್ತು ಒಂದೊಂದು ಸಲ ವೃತ್ರತೂರ್ಯಾ (ವೃತ್ರಾಸುರನನ್ನು ಜಯಿಸುವುದು) ಎಂಬ ಪದಗಳಿಂದ ವಾಚ್ಯವಾಗಿದೆ.

ವೃತ್ರನಿಗೆ ಸರ್ಪಾಕೃತಿಯುಂಟೆಂಬುದು ಮೊದಲೇ ತಿಳಿದಿದೆ. ಆದುದರಿಂದ ಅವನಿಗೆ ಕೈಕಾಲುಗಳಿಲ್ಲ (೧-೩೨-೭; ೩-೩೦-೮). ಇಂದ್ರನಿಂದ ಇರಿಯಲ್ಪಡುವ ಅವನ ಶಿರಸ್ಸು (೧-೫೨-೧೦; ೮-೬-೬; ೮-೬೫-೨), ವಜ್ರಾಯುಧದಿಂದ ಆಹತವಾಗುವ ಕವನ ವಸಡುಗಳು (೧-೫೨-೬) ಅನೇಕ ಸಲ ಹೇಳಲ್ಪಡುತ್ತದೆ. ಅವನು ಬುಸುಗುಟ್ಟುತ್ತಾನೆ ಅಥವಾ ಘೂಂಕರಿಸುತ್ತಾನೆ (೮-೮೫-೭, ೫-೨೯-೪, ೧-೫೨-೧೦, ೧-೬೧-೧೦ ಮತ್ತು ೬-೧೭-೧೦ಗಳನ್ನು ಹೋಲಿಸಿ). ಗುಡುಗು (೧-೮೦-೨), ಸಿಡಿಲು, ಹೊಗೆ ಮೊದಲಾದವು (೧-೩೨-೧೩) ಅವನ ಅಧೀನದಲ್ಲಿವೆ.

ವೃತ್ರನ ತಾಯಿಗೆ ದಾನು ಎಂದು ಹೆಸರು ಮತ್ತು ಅವಳನ್ನು ಗೋವಿಗೆ ಹೋಲಿಸಿದೆ (೧-೩೨-೯). ಇದೇ ಪದವು (ದಾನು) ನಪುಂಸಕ ಲಿಂಗದಲ್ಲಿ ಪ್ರವಾಹವನ್ನೂ, ಸ್ತ್ರೀಲಿಂಗದಲ್ಲಿ ಸ್ವರ್ಗೀಯೋದಕವನ್ನೂ ಸೂಚಿಸುತ್ತದೆ. ಈ ಎರಡು ಪದಗಳೂ ಒಂದೇ ಇರಬಹುದು. ಇದೇ ಪದವನ್ನು ಪುಲ್ಲಿಂಗದಲ್ಲಿ ವೃತ್ರಾಸುರನಿಗೆ ಉಪಯೋಗಿಸಿದೆ. ಪ್ರಾಯಶಃ ದಾನುವಿನ ಮಗನಾದುದರಿಂದ ಆ ಹೆಸರಿರಬಹುದು (೨-೧೪-೧೧, ೪-೩೦-೭). ಅದೇ ರೀತಿ ಔರ್ಣವಾಭ (೨-೧೧-೧೪) ಮತ್ತು ಇಂದ್ರನಿಂದ ಹತರಾದ ಎಳು ಜನ ರಾಕ್ಷಸ (೧೦-೧೨೦-೬)ರಿಗೂ ಅದೇ ಹೆಸರಿದೆ. 'ದಾನು' ಪದದಿಂದ (ದಾನುವಿನ ಮಗನೆಂದರ್ಥಕೊಡುವ) ನಿಷ್ಪನ್ನವಾದ ದಾನವ ಎಂಬ ಪದವು, ಇಂದ್ರನೊಡನೆ ಯುದ್ಧಮಾಡಿದ ರಾಕ್ಷಸನನ್ನು (ಬಹುಶಃ ವೃತ್ರಾಸುರನೇ) ಸೂಚಿಸುತ್ತದೆ. ಕಪಟಿಯಾದ ದಾನವನ ಮಾಯೆಗಳನ್ನೆಲ್ಲಾ ಇಂದ್ರನು ಪರಿಹರಿಸಿದನು (೨-೧೧-೧೦); ಘೂಂಕರಿಸುತ್ತಿದ್ದ ದಾನವನನ್ನು ಹೊಡೆದು ಕೆಡವಿದನು (೫-೨೯-೪), ಅನಂತರ ನೀರುಗಳನ್ನು ಬಿಡುಗಡೆ ಮಾಡಿದನು (೫-೩೨-೧).

ವೃತ್ರಾಸುರನಿಗೆ ಗುಪ್ತವಾದ ವಾಸಸ್ಥಾನವೊಂದಿದೆ, ಇಂದ್ರನಿಂದ ವಿವೇಚಿತವಾಗಿ, ನೀರುಗಳು ಅಹಿಯನ್ನು ಮೀರಿ ಹರಿದು, ಈ ವಾಸಗೃಹದಿಂದ ಹೊರಡುತ್ತವೆ (೧-೩೨-೧೦). ವೃತ್ರಾಸುರನು ನೀರಿನ ಮೇಲೆ ಮಲಗಿರುತ್ತಾನೆ (೧-೧೨೧-೧೧, ೨-೧೧-೧೯), ಅಥವಾ ಅಂತರಿಕ್ಷದ ಅಧೋಭಾಗದಲ್ಲಿ, ನೀರಿನಿಂದಾವೃತನಾಗಿ ಬಿದ್ದಿರುತ್ತಾನೆ (೧-೫೨-೬). ಇಂದ್ರನು ನೀರನ್ನು ಪ್ರವಹಿಸುವಂತೆ ಮಾಡಿದಾಗ, ವೃತ್ರಾಸುರನು ಎತ್ತರವಾದ ಪ್ರದೇಶದಲ್ಲಿ ಮಲಗಿದ್ದನು (೧-೮೦-೫) ಅಥವಾ ಬಹಳ ಎತ್ತರವಾದ ಪ್ರದೇಶಗಳಿಂದ, ಇಂದ್ರನು ಅವನನ್ನು ಕೆಳಗೆ ತಳ್ಳುತ್ತಾನೆ (೮-೩-೧೯). ವೃತ್ರಾಸುರನನ್ನು ವಧಿಸಿದಾಗ, ಇಂದ್ರನು ಅವನ ತೊಂಭತ್ತೊಂಭತ್ತು (೭-೧೯-೫, ೮-೮೨-೨) ಕೋಟೆಗಳನ್ನು ಭೇದಿಸುತ್ತಾನೆ (೧೦-೮೯-೭).

ವೃ (ಎಂದರೆ ಆವರಿಸು, ಸುತ್ತುಗಟ್ಟು) ಎಂಬ ಧಾತುವಿನಿಂದಲೇ ವೃತ್ರ ಎಂಬ ಪದವು ನಿಷ್ಪನ್ನವಾಗಿರುವುದರಲ್ಲಿ ಸಂದೇಹವಿಲ್ಲ. ಅಪೋವರಿವಾಂಸಂ (೨-೧೪-೨, ಇತ್ಯಾದಿ ನೀರನ್ನು ಆವರಿಸಿಕೊಂಡಿರುವ) ಅಥವಾ

ವೃತ್ವೀ (೧-೫೨-೬) ಅಥವಾ, ನದೀವೃತ್ (೧-೫೨-೨, ೪-೧೨-೨೬, ೬-೩೦-೪ ಮತ್ತು ೭-೨೧-೩ಗಳನ್ನು ಹೋಲಿಸಿ). ಮೊದಲಾದವುಗಳು ಈ ಮೇಲೆ ಹೇಳಿದ ಪದನಿಷ್ಪತ್ತಿಯನ್ನೇ ಸಮರ್ಥಿಸುತ್ತವೆ. ವೃತ್ರಂ ಅವೃಣೋತ್ (೩-೪೩-೩). ಅಪಾವೃಣೋತ್ (೧-೩೨-೧೧, ೧-೫೮-೪) ಮೊದಲಾದ ಪ್ರಯೋಗಗಳಲ್ಲಿ ಈ ಪದದ ಶ್ಲೇಷವಿದಂತೆ ತೋರುತ್ತದೆ. ವೃತ್ರನು ನದಿಗಳನ್ನು ಸುತ್ತುವರಿದಿದ್ದಾನೆ (ಪರಿಧಿಃ ೩-೩೩-೬).

ವೃತ್ರಹಾ ಎಂಬ ಪದದಿಂದ ವೃತ್ರಾಸುರನ ವಧೆ ಮಾತ್ರವಲ್ಲದೆ, ವೃತ್ರರ ವಧೆಯೂ ಅಭಿಪ್ರೇತವು. ವೃತ್ರಾ ಎಂಬುದಾಗಿ ಬಹುವಚನಾಂತವಾಗಿ ಮತ್ತು ನಪುಂಸಕಲಿಂಗದಲ್ಲಿ (ಭೂರೀಣಿ ವೃತ್ರಾ. ೭-೧೪-೪), ಬೇರೆ ಬೇರೆ ಪಿಶಾಚಗಳನ್ನು ಸೂಚಿಸುವುದಕ್ಕೆ ಉಪಯೋಗಿಸಿದೆ (೭-೧೯-೪; ೧೦-೪೯-೬). ಈ ಪಿಶಾಚಗಳೊಡನೆ ಇಂದ್ರನ ಯುದ್ಧದ ಪರಿಣಾಮವೂ, ಜಲವಿಮೋಚನೆ (೭-೩೪-೩) ಅಥವಾ ನದಿಗಳ ಬಿಡುಗಡೆ (೪-೪೫-೧೪); ಇವುಗಳೂ ಪಿಶಾಚಗಳಿಂದ ಆವರಿಸಲ್ಪಟ್ಟಿದ್ದುವು (ವೃತಾ೯ ೪-೪೨-೭). ಜನಿಸಿದ ಕೂಡಲೇ, ಇವುಗಳನ್ನು ಹೊಡೆಯುವುದಕ್ಕೋಸ್ಕರ (೬-೨೯-೬) ಮತ್ತು ಧ್ವಂಸ ಮಾಡುವುದಕ್ಕೋಸ್ಕರ (೩-೪೪-೧೧), ಇಂದ್ರನು ದೇವತೆಗಳಿಂದ ಸೃಜಿಸಲ್ಪಟ್ಟಿದಾನೆ. ದಧ್ಯಂಚನ ಅಸ್ಥಿಯಂದ ವೃತ್ರಾಸುರನ ತೊಂಭತ್ತೊಂಭತ್ತು ದುರ್ಗಗಳನ್ನು ನಾಶಮಾಡಿದಂತೆ (೭-೧೯-೫), ತೊಂಭತ್ತೊಂಭತ್ತು ವೃತ್ರರನ್ನೂ ಧ್ವಂಸಮಾಡಿದಾನೆ (೧-೪೪-೧೩).

ಈ ವೃತ್ರ ಎಂಬ ಬಹುವಚನಾಂತ ಪದದಿಂದ ಭೂಮಿಯಲ್ಲಿರುವ ಶತ್ರುಗಳೂ ವಾಚ್ಯರಾಗುತ್ತಾರೆ. ಆರ್ಯರು ಮತ್ತು ದಾಸರು ಎರಡು ವಿಧವಾದ ವೃತ್ರರು (೬-೨೨-೧೦; ೬-೩೩-೩). ಅನೇಕ ವಾಕ್ಯಗಳಲ್ಲಿ, ದೇವತೆಗಳ ಶತ್ರುಗಳಂತೆ, ಮನುಷ್ಯರ ಶತ್ರುಗಳೂ ಅಭಿಪ್ರೇತರಾಗುತ್ತಾರೆ. ಇಂತಹ ಸಂದರ್ಭಗಳಲ್ಲಿ, ವೃತ್ರ ಎಂದರೆ ಶತ್ರು ಅಥವಾ ಅಮಿತ್ರನು ಮಾತ್ರವಲ್ಲ, ವೃತ್ರಾಸುರನ ಗುಣಗಳ ಕಡೆಯೂ ದೃಷ್ಟಿಯಿದ್ದೇ ಇದೆ. ನಪುಂಸಕಲಿಂಗದ ಈ ಪದಕ್ಕೆ ಮೊದಲು ಸಾಧಾರಣವಾಗಿ 'ಅಡ್ಡಿ' 'ಅಡಚಣೆ' ಎಂಬರ್ಥವಿದ್ದು, ಅನಂತರ ಪಿಶಾಚಿಗಳೆಂಬ ಅರ್ಥ ಬಂದಿರಬೇಕು.

ಬ್ರಾಹ್ಮಣಗಳಲ್ಲಿ ವೃತ್ರನೆಂದರೆ ಚಂದ್ರನೆಂದೂ, ಅಮಾವಾಸ್ಯೆಯ ದಿನ, ಸೂರ್ಯರೂಪಿಯಾದ ಇಂದ್ರನು ಅವನನ್ನು ನುಂಗಿಬಿಡುತ್ತಾನೆ ಎಂದೂ ಇದೆ.

ವಲ.

ಸುಮಾರು ಇಪ್ಪತ್ತು ನಾಲ್ಕು ಸಲ ಬಂದಿದೆ. ಇಂದ್ರ ಅಥವಾ ಅವನ ಜೊತೆಗಾರರು ವಿಶೇಷವಾಗಿ ಅಂಗಿರಸರು. ಇವರಿಂದ ಗೋವಿಮೋಚನೆಯ ಸಂಬಂಧವಾಗಿಯೇ ಇವರ ಪ್ರಸ್ತಾಪವಿರುವುದು. ಪಣಿಯ ಗೋವುಗಳನ್ನು ಕಸಿದುಕೊಂಡಾಗ ಇಂದ್ರನು, ಆ ಗೋವುಗಳ ರಕ್ಷಕನಾಗಿದ್ದ ವಲನನ್ನು ಧ್ವಂಸಮಾಡಿದನು (೧೦-೬೭-೬; ೬-೪೯-೨ನ್ನು ಹೋಲಿಸಿ). ಬೃಹಸ್ಪತಿಯು ಅವುಗಳನ್ನು ಹಿಡಿದುಕೊಂಡು ಹೋದಾಗ, ವಲನು ಅವುಗಳಿಗಾಗಿ ದುಃಖಿಸುತ್ತಾನೆ (೧೦-೬೮-೧೦; ೧೦-೬೭-೬ನ್ನು ಹೋಲಿಸಿ). ಅವನ ಕೋಟೆಗಳನ್ನು ಇಂದ್ರನು ಬಲಾತ್ಕಾರವತಗಿ ತೆಗೆಯಿಸಿದನು (೬-೧೪-೧೫); ಬೇಲಿಗಳನ್ನು ಇಂದ್ರನು ಕತ್ತರಿಸಿದನು (೧-೫೨-೫); ಮತ್ತು ಅಖಂಡವಾದ ಉನ್ನತ ಪ್ರದೇಶವನ್ನು (ಸಾನು) ಇಂದ್ರನು ಮುರಿದನು (೬-೩೯-೨). ಪೈತ್ತಿರೀಯ ಸಂಹಿತೆಯಲ್ಲಿ, ಇಂದ್ರನು ವಲನ ಬಿಲವನ್ನು ತೆರೆದು, ಅದರಲ್ಲಿದ್ದ ಅತ್ಯುತ್ತಮ ಪ್ರಾಣಿಯನ್ನು ಹೊರಗೆ ಹಾಕಿದನು; ಉಳಿದ ಪ್ರಾಣಿಗಳು ಅದನ್ನು ಅನುಸರಿಸಿದವು (ತೈ. ಸಂ. ೨-೧-೫-೧). ಯಾವ ವ್ಯಕ್ತಿಗೂ ಅನ್ವಯಿಸದಂತೆ, ಹೊದಿಕೆ, ಆವರಣ ಅಥವಾ ಗುಹೆ ಎಂಬರ್ಥದಲ್ಲಿ, ಅನೇಕ ಸಲ ಉಪಯೋಗಿಸಿರುವಂತೆ ತೋರುತ್ತದೆ. ಎರಡು

ಸಂದರ್ಭಗಳಲ್ಲಿ (೧-೬೨-೪, ೪-೫೦-೫) ನೀರಿಗೆ ಆಶ್ರಯವಾದ (೮-೩೨-೨೫) ಫಲಿಗದ ಜೊತೆಗೆ ಉಪಯೋಗಿಸಿದೆ; ನಿರುಕ್ತದಲ್ಲಿ (ನಿ. ೧-೧೦) ವಲ ಎಂಬುದೂ ಮೇಘದ ನಾಮಗಳಲ್ಲಿ ಒಂದು. ಇಂದ್ರನು ಗೋವುಗಳನ್ನೆಲ್ಲಾ ಹೊರಕ್ಕೆ ಓಡಿಸಿ, ವಲದ ದ್ವಾರವನ್ನು ತೆರೆದನು (೨-೧೪-೩); ಅಥವಾ ಗೋವುಗಳನ್ನೊಡಗೊಂಡಿದ್ದ (೧-೧೧-೫) ವಲದ ಬಿಲವನ್ನು ತೆರೆದನು. ಪಂಚವಿಂಶ ಬ್ರಾಹ್ಮಣದಲ್ಲಿ, ಅಸುರರ ಗುಹೆ (ವಲ)ಯು, ಶಿಲೆಯಿಂದ ಮುಚ್ಚಲ್ಪಟ್ಟಿತ್ತು ಎಂದಿದೆ (ಪಂ. ಬ್ರಾ. ೧೯-೭). ಮತ್ತು ಕೆಲವು ವಾಕ್ಯಗಳಲ್ಲಿ ಈ ಪದವು ವಲನೆಂಬ ವ್ಯಕ್ತಿಯನ್ನು ಅಥವಾ ಗುಹಾದಿಗಳನ್ನು ನಿರ್ದೇಶಿಸಬಹುದು (೧-೫೨-೫, ೨-೧೩-೩, ೩-೩೪-೧೦). 'ವೃತ್ರಖಾದ' ಎಂಬುದರೊಡನೆ ಇಂದ್ರನಿಗೆ ವಿಶೇಷಣವಾಗಿರುವ 'ವಲಂರುಜ' ಎಂಬುದರಲ್ಲಿ ವಲನೆಂಬ ರಾಕ್ಷಸನೇ ಉದ್ದಿಷ್ಟನಿರಬಹುದು (೩-೪೫-೨, ೨-೧೨-೩ರನ್ನು ಹೋಲಿಸಿ). ಗುಹೆ ಎಂಬರ್ಥದಿಂದ ವ್ಯಕ್ತಿಸೂಚಕವಾಗಿ ಬದಲಾವಣೆ, ೩-೩೦-೧೦ ರಲ್ಲಿ ಸ್ಪಷ್ಟವಾಗಿದೆ. ವಲನೇ ಒಂದು ಗೋವ್ರಜ, ಇಂದ್ರನು ಹೊಡೆಯುತ್ತಾನೆಂಬ ಹೆದರಿಕೆಗೆ, ಈ ವಲನು ವ್ರಜದ ಬಾಗಿಲನ್ನು ತೆರೆಯುತ್ತಾನೆ. ವಲನ ವಧೆಯನ್ನು ಸೂಚಿಸುವುದಕ್ಕೆ, ಹನ್ ಧಾತುವನ್ನು ಉಪಯೋಗಿಸದೇ, ಭಿದ್, ದೃ ಅಥವಾ ರುಜ್ ಧಾತುಗಳನ್ನೇ ಉಪಯೋಗಿಸುವುದರಿಂದ, ವ್ಯಕ್ತೀಕರಣವು ಸಂಪೂರ್ಣವಾಗಿಲ್ಲವೆನ್ನಬಹುದು. ವಲಭಿತ್ ಎಂಬುದು ಇಂದ್ರನಿಗೆ ವಿಶೇಷಣ. ಪುರಾಣಗಳಲ್ಲಿ ಇದು ವಿಶೇಷವಾಗಿ ಕಂಡುಬರುತ್ತದೆ. ಇಲ್ಲಿ ವಲನು ವೃತ್ರನ ಸಹೋದರ ಮತ್ತು ಇಬ್ಬರನ್ನೂ ಇಂದ್ರನು ವಧಿಸುತ್ತಾನೆ (ವಲ-ವೃತ್ರ-ಹಾ).

ಅರ್ಬುದ.—ಏಳು ಕಡೆ ಬಂದಿದೆ, ಯಾವಾಗಲೂ ಇಂದ್ರನ ಶತ್ರುವಾಗಿಯೇ. ಅಪನು ಕಪಟ, ಅವನ ಹಸುಗಳನ್ನು ಇಂದ್ರನು ಹೊರಕ್ಕೆ ಅಟ್ಟಿದನು (೮-೩-೧೯). ಇಂದ್ರನು ಅವನನ್ನು ಕೆಳಕ್ಕೆ ಎಸೆದನು (೨-೧೧-೨೦, ೨-೧೪-೪, ೮-೩೨-೩ನ್ನು ಹೋಲಿಸಿ), ತನ್ನ ಕಾಲಿನಿಂದ ತುಳಿದನು (೧-೫೧-೬), ಅಥವಾ ಅವನ ತಲೆಯನ್ನು ಕತ್ತರಿಸಿದನು (೧೦-೬೭-೧೨). ಎರಡು ಮೂರು ಸಲ ವೃತ್ರ (ಅಹಿ) ನೊಡನೆ ಉಕ್ತನಾಗಿದಾನೆ, ಸ್ವಭಾವದಲ್ಲಿ ಅವನ ಜಾತಿಗೇ ಸೇರಿದವನು.

ವಿಶ್ವರೂಪ.—ತ್ವಷ್ಟೃಪುತ್ರ, ಮೂರು ತಲೆಗಳು, ಇಂದ್ರ ಮತ್ತು ತ್ರಿತರಿಬ್ಬರೂ ಅವನನ್ನು ವಧಿಸಿ, ಅವನ ಗೋವುಗಳನ್ನು ವಶಪಡಿಸಿಕೊಂಡಿದಾರೆ (೧೦-೮-೮, ೯). ಬೇರೆ ಎರಡು ಮೂರು ಸಂದರ್ಭಗಳಲ್ಲಿ ತ್ವಾಷ್ಟ್ರ ಎಂಬ ಪದದಿಂದಲೇ ನಿರ್ದೇಶವಿದೆ. ತ್ವಾಷ್ಟ್ರನು ಗೋ, ಅಶ್ವಾದಿಗಳಲ್ಲಿ ಸಮೃದ್ಧನು (೧೦-೭೬-೩), ಇಂದ್ರನು ಅವನನ್ನು ಹಿಡಿದು ತಿತ್ರನಿಗೆ ಒಪ್ಪಿಸಿದನು (೨-೧೧-೧೯). ತೈತ್ತಿರೀಯ ಸಂಹಿತೆಯಲ್ಲಿ (ತೈ. ಸಂ. ೨-೫-೧-೧), ವಿಶ್ವರೂಪನು ಅಸುರ ಸಂಬಂಧಿಯಾದರೂ, ದೇವತೆಗಳ ಪುರೋಹಿತ ಮಹಾಭಾರತದಲ್ಲಿ, ಮೂರು ತಲೆಯ ತ್ವಾಷ್ಟ್ರನೂ ವೃತ್ರಾಸುರನೂ ಒಬ್ಬನೇ ಎಂಬ ಭಾವನೆ.

ಸ್ವರ್ಭಾನು.—ಇವನೂ ಒಬ್ಬ ಅಸುರಸ್ವಭಾವದವನು. ಒಂದೇ ಸೂಕ್ತದಲ್ಲಿ (೫-೪೦) ನಾಲ್ಕು ಸಲ ಪ್ರಸಕ್ತನಾಗಿದಾನೆ. ಇವನು ಸೂರ್ಯನನ್ನು ತಮಸ್ಸಿನಿಂದ ಮರೆಮಾಡುತ್ತಾನೆ. ಇವನ ಮಾಯೆಗಳನ್ನೆದುರಿಸಿ, ಇಂದ್ರನು ಯುದ್ಧಮಾಡಿದನು ಮತ್ತು ಅತ್ರಿಯು ಸೂರ್ಯನ ನೇತ್ರವನ್ನು ಪುನಃ ಅಂತರಿಕ್ಷದಲ್ಲಿ ಸ್ಥಾಪಿಸಿದನು. ಬ್ರಾಹ್ಮಣಗಳಲ್ಲಿಯೂ ಇವನ ಪ್ರಸ್ತಾಪವು ಅನೇಕ ಕಡೆ ಇದೆ. ಪುರಾಣಗಳಲ್ಲಿ ಸ್ವರ್ಭಾನುವಿನ ಸ್ಥಾನದಲ್ಲಿ ರಾಹುವಿದಾನೆ. ಈ ಪದಕ್ಕೆ, ಸೂರ್ಯನ ಬೆಳಕನ್ನು ತಡೆಯುವವನು ಎಂದರ್ಥ.

ಉರಣ.—ತೊಂಭತ್ತೊಂಭತ್ತು ಬಾಹುಗಳುಳ್ಳ ಇವನು ಇಂದ್ರನಿಂದ ಹತನಾದನು (೨-೧೪-೪).

ದಾಸಾಃ—ದಸ್ಯುಗಳು.

ಶುಷ್ಣ.—ಇವನ ಹೆಸರು ಸುಮಾರು ೪೦ ಸಲ ಬರುತ್ತದೆ. ಕುತ್ಸನ ಮುಖ್ಯ ಶತ್ರು. ಈ ಕುತ್ಸನಿಗೋಸ್ಕರ ಅಥವಾ ಕುತ್ಸನ ಜೊತೆಯಲ್ಲಿ, ಇಂದ್ರನು ಶುಷ್ಣನನ್ನು ನಿರ್ಮೂಲ ಮಾಡುತ್ತಾನೆ (೪-೧೬-೧೨,

೫-೨೯-೯, ಇತ್ಯಾದಿ). ಅವನಿಗೆ ಕೊಂಬುಗಳಿವೆ (೧-೩೩-೧೨). ಮೊಟ್ಟೆಗಳಿವೆ (೬-೪೦-೧೦, ೧೧) ಅಂದರೆ ಮೊಟ್ಟೆಗಳಿಂದಾದ ಮರಿಗಳು (೧೦-೧೨-೧೧ನ್ನು ಹೋಲಿಸಿ), ಇದರಿಂದ ಶುಷ್ಣನೂ ಒಂದು ಸರ್ಪವೆನ್ನಬಹುದು. ಬುಸುಗುಟ್ಟುತ್ತಾನೆ (ಶ್ವಸನಃ ೧-೫೪-೫). ಆರು ಸಲ ಇವನಿಗೆ ಅಶುಷ (ನುಂಗುವ) ಎಂಬ ವಿಶೇಷಣವು ಅಗ್ನಿಗೆ ಮಾತ್ರ ಉಪಯೋಗಿಸಲ್ಪಟ್ಟಿದೆ. ಅವನಿಗೆ ಬಲವಾದ ಕೋಟೆಗಳು (೧-೫೧-೧೧) ಅಥವಾ ಕೋಟೆ (೪-೩೦-೧೩) ಇದೆ, ಇವು ಚಲಿಸುವ ಕೋಟೆಗಳು (೮-೧-೨೮). ಇದ್ರನು ಶುಷ್ಣನ ಕೋಟೆಗಳನ್ನು ನಾಶಮಾಡಿ ನೀರುಗಳನ್ನು ಬಿಡುಗಡೆಮಾಡುತ್ತಾನೆ (೧-೫೧-೧೧), ಶುಷ್ಣನನ್ನು ಬಡಿದು ಜಲಧಿಯನ್ನು ಸಂಪಾದಿಸುತ್ತಾನೆ (ವಾ॥ ೩-೮) ಅಥವಾ ಶುಷ್ಣನ ವಂಶವನ್ನು ನಿರ್ಮೂಲಮಾಡಿ, ಸ್ವರ್ಗೀಯೋದಕವನ್ನು (ಸ್ವರ್ವತೀಃ) ಗಳಿಸುತ್ತಾನೆ (೮-೪೦-೧೦). ನಾಲ್ಕು ಸಲ ಶುಷ್ಣನಿಗೆ 'ಕುಯವ' (ಕೆಟ್ಟ ಧಾನ್ಯವನ್ನುಂಟುಮಾಡುವವನು) ಎಂಬ ವಿಶೇಷಣವಿದೆ. ಕುಯವ ಎಂಬುದೇ ಎರಡು ಸಲ ಪ್ರಾಯಶಃ ಶುಷ್ಣನಿಗೆ ಬದಲಾಗಿ ಉಪಯೋಗಿಸಿರುವಂತೆ ಇದೆ (೧-೧೦೩-೮, ೧-೧೦೪-೩). ಇಂದ್ರ ಶುಷ್ಣರ ಯುದ್ಧದ ಪರಿಣಾಮವು ಜಲವಿಮೋಚನೆ ಮಾತ್ರವಲ್ಲ, ಗೋವುಗಳ ಅಥವಾ ಸೂರ್ಯನ ಪ್ರಾಪ್ತಿಯೂ ಆಗಬಹುದು (೮-೮೫-೧೭). ಇಂದ್ರನೊಡನೆ ಯುದ್ಧಮಾಡುವಾಗ, ಶುಷ್ಣನು ಅಂಧಕಾರದಲ್ಲಿ ಓಡಾಡುತ್ತಾನೆ. ಹಿಮದ ಮಗ ಮತ್ತು ದಾನವನೆನ್ನಿಸಿಕೊಳ್ಳುತ್ತಾನೆ (೫-೩೨-೪). ಶುಷ್ಣನು ಅಮೃತವನ್ನು ತನ್ನಲ್ಲಿ ಇಟ್ಟುಕೊಂಡಿರುವ ದಾನವನು (ಕಾಠಕ).

ಮೇಲೆ ಹೇಳಿದ ವಾಕ್ಯಗಳಿಂದ ಶುಷ್ಣನು ಅನಾವೃಷ್ಟಿಕಾರಕನೆನ್ನಬಹುದು. 'ಶುಷ್ಣ' ಪದದ ಮೂಲವಾದ ಶುಷ್ ಧಾತುವಿಗೆ ಬುಸುಗುಟ್ಟು ಅಥವ ಒಣಗಿಸು ಎಂದರ್ಥ. ಇದೂ ಅನಾವೃಷ್ಟಿಕಾರಕನೆಂಬು ದನ್ನು ಸಮರ್ಥಿಸುತ್ತದೆ.

ಶಂಬರಃ.—ಈ ಹೆಸರು ಸುಮಾರು ಇಪ್ಪತ್ತು ಸಲ ಬರುತ್ತದೆ. ಇತರ ಪಿಶಾಚಿಗಳೊಡನೆಯೇ ಶಂಬರನು ಪ್ರಸಕ್ತನಾಗಿರುವುದು. ಅದರಲ್ಲಿಯೂ ಹೆಚ್ಚಾಗಿ ಶುಷ್ಣ, ಪಿಪ್ರು (೧-೧೦೧-೨, ೧-೧೦೩-೮, ೨-೧೯-೬, ೬-೧೮-೮) ಮತ್ತು ವರ್ಚಿಗಳೊಡನೆ ; ಅಹಿ ಮತ್ತು ಶಂಬರರ ಮೇಲೆ ಯುದ್ಧಮಾಡುವಾಗ, ಮರ ತರು ಇಂದ್ರನಿಗೆ ಸಹಾಯ ಮಾಡಿದರು (೩-೪೭-೪), ಶಂಬರನನ್ನು ಭೇದಿಸಿದಾಗ, ಇಂದ್ರನು ಆಕಾಶವನ್ನೇ ನಡುಗಿಸಿದನು (೧-೫೪-೪). ಪರ್ವತದ ಮೇಲೆ ವಾಸಿಸುತ್ತಿದ್ದ ಶಂಬರನನ್ನು ಹುಡುಕಿ (೨-೧೨-೧೧), ಪರ್ವತ ದಿಂದ ಕೆಳಕ್ಕುರುಳಿಸಿದದು (೧-೧೩೦-೭, ೬-೨೬-೫). ಕುಲಿತರನ ಪುತ್ರನಾದ ಶಂಬರನೆಂಬ ದಾಸನನ್ನು ಇಂದ್ರನು ದೊಡ್ಡ ಪರ್ವತದಿಂದ ಉರುಳಿಸಿದನು (೪-೩೦-೧೪). ತಾನೊಬ್ಬ ಸಣ್ಣ ದೇವತೆಯೆಂದು ತಿಳಿದು ಕೊಂಡಿದ್ದು, ಶಂಬರನನ್ನು ಹೊಡೆದು, ಉನ್ನತ ಪ್ರದೇಶದಿಂದ ಬೀಳಿಸಿದನು (೭-೧೪-೨೦). ತೊಂಭತ್ತು (೧-೧೩೦-೭), ಸಾಧಾರಣವಾಗಿ ತೊಂಭತ್ತೊಂಭತ್ತು (೨-೧೯-೬, ಇತ್ಯಾದಿ) ಅಥವಾ ನೂರು (೨-೧೪-೬, ಇತ್ಯಾದಿ) ದುರ್ಗಗಳು ಅವನ ಅಧೀನದಲ್ಲಿವೆ. ಒಂದು ಸಲ, ನಪುಂಸಕಾಂತವಾದ ಈ ಪದಕ್ಕೆ ಶಂಬರನ ಕೋಟೆಗಳು ಎಂಬರ್ಥವಿದೆ. ಇವುಗಳನ್ನು ಬೃಹಸ್ಪತಿಯು ಭೇದಿಸಿ, ನಿಧಿಗಳಿಂದ ಯುಕ್ತವಾಗಿದ್ದ ಪರ್ವತ ಪ್ರದೇಶವನ್ನು ಪ್ರವೇಶಿಸಿದನು (೨-೨೪-೨). ಅತಿಥಿಗ್ವ (೧-೫೧-೬), ಸಾಧಾರಣವಾಗಿ ದಿವೋದಾಸ (೨-೧೯-೬, ಇತ್ಯಾದಿ). ಒಂದೊಂದು ಸಲ ಇಬ್ಬರೂ (೧-೧೩೦-೭, ೪-೨೬-೩), ಇವರುಗಳಿಗೋಸ್ಕರ, ಇಂದ್ರನು ಶಂಬರ ನನ್ನು ಧ್ವಂಸಮಾಡುತ್ತಾನೆ ಶಂಬರ ಮತ್ತು ದಿವೋದಾಸ ಎಂಬ ಎರಡೂ ಒಬ್ಬನ ಹೆಸರಿರಬಹುದು.

ಪಿಪ್ರು—ಇಂದ್ರನ ಆಶ್ರಿತನಾದ (ವಾಲ. ೧-೧೦) ಋಜಿಶ್ವನ ಶತ್ರು ; ಈ ಋಜಿಶ್ವನು ಇಂದ್ರನಿಗೆ ಸೋಮರಸವನ್ನರ್ಪಿಸಿ, ಪಿಪ್ರುವಿನ ಮೇಲೆ ಯುದ್ಧದಲ್ಲಿ, ಸಹಾಯ ಪಡೆಯುತ್ತಾನೆ (೫-೨೯-೧೧ ; ೧೦-೪೯-೧೧).

ಇದ್ರನು ಋಜಿಶ್ವನಿಂದ ಯುಕ್ತನಾಗಿ (೧-೧೦೧-೧, ೨ ; ೧೦-೧೩೮-೩) ಅಥವಾ ಅವನಿಗೋಸ್ಕರ (೪-೧೬-೧೩ ; ೬-೨೦-೭) ಪಿಪ್ರುವನ್ನು ಸೊಲಿಸಿದನು. ಅಹಿಯ ಮಾಯೆಗಳಿಂದ ಯುಕ್ತನಾದ ಪಿಪ್ರುವಿನ ಅಧೀನದಲ್ಲಿ ಅನೇಕ ಕೋಟೆಗಳವೆ ; ಇಂದ್ರನು ಇವುಗಳನ್ನು ಭೇದಿಸುತ್ತಾನೆ (೧-೫೧-೫, ೬-೨೦-೭). ಪಿಪ್ರುವೆಂಬ ದಾಸ ಮತ್ತು ಕೆಲವರನ್ನು ಇಂದ್ರನು ವಧಿಸಿ, ನೀರುಗಳನ್ನು ಹೊರಡಿಸಿದನು (೮-೩೨-೨). ಸೂರ್ಯನು ಆಕಾಶ ಮಧ್ಯದಲ್ಲಿ, ತನ್ನ ರಥವನ್ನು ಬಿಚ್ಚಿದಾಗ, ಪಿಪ್ರುವಿಗೆ ಅನುರೂಪನಾದ ಯೋಧನನ್ನು ಆರ್ಯನು ಕಂಡನು ; ಋಜಿಶ್ವಯುಕ್ತನಾದ ಇಂದ್ರನು, ಮಾಯಿಯಾದ ಪಿಪ್ರು ಎಂಬ ಅಸುರನ ಬಲವಾದ ಕೋಟೆಗಳನ್ನು ಧ್ವಂಸ ಮಾಡಿದನು (೧೦-೧೩೮-೩). ಕಾಡುಮೃಗರೂಪನಾದ ಪಿಪ್ರುವನ್ನು ಇಂದ್ರನು ಋಜಿಶ್ವನಿಗೆ ಒಪ್ಪಿಸಿದನು ; ಐವತ್ತು ಸಾವಿರ ಕಪ್ಪುಜನರನ್ನು ಸೋಲಿಸಿ, ದುರ್ಗಗಳನ್ನು ಭೇದಿಸಿದನು (೪-೧೬-೧೩). ಋಜಿಶ್ವನೊಡನೆ ಸೇರಿಕೊಂಡು, ಇಂದ್ರನು ಕೃಷ್ಣವರ್ಣದವರ ಸಂತತಿಯನ್ನೇ ನಾಶಮಾಡಿದನು (೧-೧೦೧-೧). ಇವನಿಗೆ ಅಸುರ, ದಾಸ ಎಂಬ ಎರಡೂ ವಿಶೇಷಣಗಳಿರುವುದರಿಂದ, ಮನುಷ್ಯರ ಶತ್ರುವೂ ಆಗಿರಬಹುದೆಂದು ಕೆಲವರ ಅಭಿಪ್ರಾಯ.

ನಮುಚಿಃ.—ಋಗ್ವೇದದಲ್ಲಿ ಒಂಭತ್ತು ಸಲವಲ್ಲದೆ, ವಾಜಸನೇಯಿಸಂಹಿತೆ, ತೈತ್ತಿರೀಯಬ್ರಾಹ್ಮಣ ಮತ್ತು ಶತಪಥಬ್ರಾಹ್ಮಣಗಳಲ್ಲಿಯೂ, ಈ ಹೆಸರು ಕಂಡುಬರುತ್ತದೆ. ಅಸುರ (ಅಸುರಸ್ವಭಾವವುಳ್ಳವನು) ಎಂಬ ವಿಶೇಷಣವಿದೆ (೧೦-೧೩೧-೪ ; ಶ. ಬ್ರಾ. ೧೨-೭-೧-೧೦) ಮತ್ತು ಇತರ ವೇದಗಳಲ್ಲಿ ಅಸುರ ಎಂತಲೇ ಕರೆಸಿಕ್ಕೊಳ್ಳುತ್ತಾನೆ. ದಾಸನೆಂತಲೂ ಮೂರು ನಾಲ್ಕು ವಾಕ್ಯಗಳಲ್ಲಿ ಇದೆ (೫-೩೦-೭, ೮, ಇತ್ಯಾದಿ) ಮತ್ತು ಮಾಯಿ ಎಂದು ಒಂದುಕಡೆ (೧-೫೩-೭). ನಮುಚಿಯನ್ನು ಸೇರಿಸುವಾಗ, ಇಂದ್ರನ ಸಹಚರನು ನಮೀ ಸಾಪ್ಯನೆಂಬ ಆಶ್ರಿತ (೧-೫೩-೭, ೬-೨೦-೬). ಇತರ ಅನೇಕ ಪಿಶಾಚಿಗಳಂತೆ ನಮುಚಿಯೂ ಇಂದ್ರನಿಂದ ಹತನಾಗಿದಾನೆ (೨-೧೪-೫, ೭-೧೯-೫) ಅಥವಾ ಹೊಡೆದು ಕೆಡವಲ್ಪಟ್ಟಿದಾನೆ (೧-೫೩-೭). ವೃತ್ರನಮುಚಿಗಳನ್ನು ವಧಿಸಿ, ಇಂದ್ರನು ನೂರು ಕೋಟೆಗಳನ್ನು ನಾಶಮಾಡಿದನು (೭-೧೯-೫). ವೃತ್ರಾಸುರನ ತಲೆಯನ್ನು ಛೇದಿಸುತ್ತಾನೆ ಆದರೆ ನಮುಚಿಯ ತಲೆಯನ್ನು ಗಿರಕಿ ಹೊಡೆಸುತ್ತಾನೆ (೫-೩೦-೪ ; ೬-೨೦-೬). ಇದ್ರನು ನಮುಚಿಯ ಶಿರಸ್ಸನ್ನು ತಿರಿಚುತ್ತಾನೆ (೫-೩೦-೭) ಅಥವಾ ನೀರಿನ ನೊರೆಯಿಂದ ನುಲಚಿದ್ದಾನೆ (೮-೧೪-೧೩). ಬ್ರಾಹ್ಮಣಗಳಲ್ಲಿ ಶಿರಸ್ಸನ್ನು ಕತ್ತರಿಸಿದನು ಎಂತಲೂ ಇದೆ. ಇಂದ್ರನು ನಮುಚಿಯ ಪಾರ್ಶ್ವದಲ್ಲಿ ಕುಳಿತು ಮದ್ಯವನ್ನು ಕುಡಿದನು ; ಆಗ ಅಶ್ವಿನೀದೇವತೆಗಳ ಸಹಾಯದಿಂದ, ಸರಸ್ವತಿಯು ಗುಣಪಡಿಸಿದಳು (೧೦-೧೩೧-೪, ೫).

ಪಾಣಿನಿಯ ಪ್ರಕಾರ (೬-೩-೭೫), ನಮುಚಿ ಎಂದರೆ (ನ-ಮುಚಿ) ಬಿಟ್ಟುಕೊಡುವವನಲ್ಲ, ಅಂದರೆ ನೀರನ್ನು ತಡೆದಿರುವ ಪಿಶಾಚಿ ಎನ್ನಬಹುದು.

ಧುನಿ ಮತ್ತು ಚುಮುರಿಃ.—ಸಾಧಾರಣವಾಗಿ ಎರಡು ಹೆಸರುಗಳೂ ಒಟ್ಟಿಗೇ ಬರುತ್ತವೆ. ಒಂದು ಸಲ ಚುಮುರಿಯೊಂದೇ ಬಂದಿದೆ. ಒಂದು ಸಲ ದ್ವಂದ್ವವಾಗಿಯೂ (೬-೨೦-೧೩) ಉಪಯೋಗಿಸಿದೆ, ಇದರಿಂದ ಇವರಿಬ್ಬರದೂ ಸಂಬಂಧ ಎಷ್ಟು ನಿಕಟವಾದುದೆಂದು ತಿಳಿದು ಬರುತ್ತದೆ. ಇಂದ್ರನು ಇವರಿಬ್ಬರನ್ನು ನಿದ್ರಾಮಗ್ನರನ್ನಾಗಿ ಮಾಡಿದನು (೨-೧೫-೯, ೬-೨೦-೧೩ ; ೭-೧೯-೪), ಚುಮುರಿ ಒಬ್ಬನಿಗೂ ಇದೇ ರೀತಿ ಆಗಿದೆ (೬-೨೬-೬). ಶಂಬರ, ಪಿಪ್ರು, ಶುಷ್ಣ ಮೊದಲಾದವರೊಡನೆ, ಇವರನ್ನೂ ಇಂದ್ರನು ಧ್ವಂಸಮಾಡಿ, ಅವರ ಕೋಟೆಗಳನ್ನು ನಾಶಮಾಡಿದನು (೬-೧೮-೪). ತನಗೋಸ್ಕರ ಸೋಮರಸವನ್ನು ಸಿದ್ಧಪಡಿಸಿದ (೬-೨೦-೧೩) ದಭೀತಿಗೋಸ್ಕರ ಇವರಿಬ್ಬರು ಇಂದ್ರನಿಂದ ನಾಶಮಾಡಲ್ಪಟ್ಟರು ಅಥವಾ ನಿದ್ರಿತರಾಗಿ ಮಾಡಲ್ಪಟ್ಟರು

ಅಥವಾ ನಿದ್ರಿತರಾಗಿ ಮಾಡಲ್ಪಟ್ಟರು (೧೦-೧೧೩-೯), ಮತ್ತು ದಭೀತಿಯು ಅವನ ಭಕ್ತಿಗೆ ತಕ್ಕ ಪ್ರಫಲವನ್ನು ದೇವತೆಗಳಿಂದ ಪಡೆದನು (೬-೨೬-೬). ಇಂದ್ರನು ದಭೀತಿಗೋಸ್ಕರ ಮೂವತ್ತುಸಾವಿರ ದಸ್ಯುಗಳಿಗೆ ನಿದ್ರೆ ಬರುವಂತೆ ಮಾಡಿ (೪-೩೦-೨೧), ಅವನಿಗೋಸ್ಕರ ದಸ್ಯುಗಳನ್ನು ಹಗ್ಗವಿಲ್ಲದೆ ಬಂಧಿಸಿದನು (೨-೧೩-೯).

ಥುನಿ ಎಂದರೆ ಗರ್ಜಿಸುವವನು ಎಂದರ್ಥ.

ವರ್ಚೀ ಮತ್ತು ಇತರರು.—ಶಂಬರನ ಜೊತೆಯಲ್ಲಿ ನಾಲ್ಕು ಸಲ ಇವನ ಪ್ರಸ್ತಾಪವಿದೆ. ಇವನೂ ಒಬ್ಬ ಅಸುರ (೭-೯೯-೫), ಆದರೆ ಶಂಬರ ನುತ್ತು ಇವನಿಗೆ 'ದಾಸ'ರೆಂದು ಹೆಸರು (೬-೪೭—೨೧). ಇಂದ್ರನು ಶಂಬರನ ಕೋಟೆಗಳನ್ನು ಒಡೆದು, ವರ್ಚಿಯ ಒಂದು ಲಕ್ಷ ಯೋಧರನ್ನು ನಾಶಮಾಡಿದನು (೨-೧೪-೬, ೪-೩೦—೧೫). ವರ್ಚೀ ಎಂದರೆ ಹೊಳೆಯುತ್ತಿರುವವನು ಎಂದಾಗುತ್ತದೆ.

ವಲ, ಶುಷ್ಣ, ನಮುಚಿ ಮೊದಲಾದವರೊಡನೆ ಇನ್ನೂ ಕೆಲವು ಪಿಶಾಚಿಗಳ ಹೆಸರು ಬಂದಿವೆ, ಅವರೂ ಇಂದ್ರನಿಂದ ನಾಶಮಾಡಲ್ಪಟ್ಟವರೆ. ದೃಭೀಕ, ರುಧಿಕ್ರ (೨-೧೪-೩, ೫), ಅನರ್ಶನಿ, ಸ್ಪಬಿಂದ (೮-೩೨-೨) ಮತ್ತು ಇಲೀಬಿಶ (೧-೩೩—೧೨), ಇವರುಗಳು ಆ ಗುಂಪಿಗೆ ಸೇರಿದವರು.

ರಕ್ಷಸಃ.

ಭೂಮಿಯಲ್ಲಿರುವ ಪಿಶಾಚಿಗಳು ಅಥವಾ ಭೂತಗಳು—ಮನುಷ್ಯರ ದ್ವೇಷಿಗಳು. ಇವರನ್ನು ಹೇಳುವ ಜಾತಿವಾಚಕವು ರಕ್ಷಃ ಎಂಬುದು. ಐವತ್ತಕ್ಕಿಂತ ಹೆಚ್ಚು ಸಲ ಏಕವಚನ ಮತ್ತು ಬಹುವಚನಗಳಲ್ಲಿ ಬಂದಿದೆ; ಸಾಧಾರಣವಾಗಿ ಯಾವುದಾದರೊಂದು ದೇವತೆಯೊಡನೆ, ರಾಕ್ಷಸನನ್ನು ಧ್ವಂಸಮಾಡೆಂದು ಪ್ರಾರ್ಥನಾ ರೂಪವಾಗಿ, ಅಥವಾ ರಾಕ್ಷಸನನ್ನು ವಧಿಸಿದೆ ಎಂದು ಸ್ತುತಿರೂಪವಾಗಿಯೇ ಬರುತ್ತದೆ. ೭-೧೦೪ ಮತ್ತು ೧೦—೮೭ನೆಯ ಸೂಕ್ತಗಳಲ್ಲಿ ಇವರ ಪ್ರಸ್ತಾಪವೇ ಇದೆ, ಇಲ್ಲಿ ರಕ್ಷಸಃ, ಯಾತು, ಯಾತುಧಾನ ಮೊದಲಾದ ಪದಗಳು ಇವರನ್ನು ಸೂಚಿಸುತ್ತವೆ. ರಕ್ಷಸಃ ಎಂಬುದು ದುರ್ದೇವತೆಗಳು, ಪಿಶಾಚಿಗಳು ಎಲ್ಲಕ್ಕೂ ಹೆಸರಾದುದರಿಂದ, ಅದನ್ನು ಜಾತಿವಾಚಕವೆಂತಲೂ, ಯಾತು ಎಂಬುದನ್ನು ಉಪಜಾತಿವಾಚಕವೆಂತಲೂ ತಿಳಿಯಬಹುದು.

ಈ ಪಿಶಾಚಿಗಳು ಅಥವಾ ಭೂತಗಳಿಗೆ, ನಾಯಿ, ರಣಹದ್ದು, ಗೂಬೆ ಮತ್ತು ಇತರ ಪಕ್ಷಿಗಳ ರೂಪಗಳು (೭-೧೦೪-೨೦ರಿಂದ ೨೨). ಪಕ್ಷಿರೂಪರಾಗಿ, ರಾತ್ರಿಯವೇಳೆ ಹಾರಾಡುತ್ತಾರೆ (೭-೧೦೪-೧೪). ಭಾತೃ, ಭರ್ತೃ ಅಥವಾ ಪ್ರಿಯನ ರೂಪವನ್ನು ಧರಿಸಿ, ಸ್ತ್ರೀಯರನ್ನು ಸಮೀಪಿಸಿ, ಅವರ ಮಕ್ಕಳನ್ನು ನಾಶಪಡಿಸಲು ಇಚ್ಛಿಸುತ್ತಾರೆ (೧೦-೧೬೨-೫). ನಾಯಿ ಅಥವಾ ಕಪಿರೂಪವಾಗಿ, ಹೆಂಗಸರ ಮೇಲೆ ಬೀಳಲು ಕಾದಿರುತ್ತಾರೆ (ಅ. ವೇ. ೪-೩೭-೧೧). ಆದುದರಿಂದ ಗರ್ಭಿಣಿಯರಿಗೆ ಮತ್ತು ಮಕ್ಕಳಿಗೆ ಇವರಿಂದ ತೊಂದರೆಯುಂಟು (ಅ. ವೇ. ೮-೬). ವಿವಾಹಕಾಲದಲ್ಲಿ, ವಧುವಿನ ಸುತ್ತಲೂ ಓಡಾಡುತ್ತಿರುತ್ತಾರೆ, ಇವರ ಕಣ್ಣುಗಳನ್ನು ಚುಚ್ಚಲೆಂದು, ಸಣ್ಣ ಬಾಣಗಳನ್ನು ಅಂತರಿಕ್ಷದಲ್ಲಿ ಬಿಡುತ್ತಾರೆ (ಮಾ. ಗೃ. ಸೂ. ೧-೧೦). ಅಥರ್ವವೇದದಲ್ಲಿಯೇ ಇವರ ರೂಪ ಮೊದಲಾದವುಗಳ ವರ್ಣನೆಯಿರುವುದು. ಅವರು ವಿಶೇಷವಾಗಿ ಮನುಷ್ಯರಂತೆ ರೂಪವನ್ನು ಧರಿಸುತ್ತಾರೆ. ಅವರ ಶಿರಸ್ಸು, ಕಣ್ಣು, ಹೃದಯ ಮೊದಲಾದ ಅಂಗಾಂಗಗಳ ಪ್ರಸಕ್ತಿಯಿದೆ; ಆದರೆ ಏನಾದರೊಂದು ವೈರೂಪ್ಯವಿದ್ದೇ ಇರುತ್ತದೆ. ಮೂರು ತಲೆ, ಎರಡು ಬಾಯಿ, ನಾಲ್ಕು ಕಣ್ಣು, ಐದು ಪಾದಗಳು, ಬೆರಳುಗಳಿಲ್ಲ, ಪಾದಗಳು ಹಿಂದು ಮುಂದಾಗಿರುವುದು ಅಥವಾ ಕೈಮೇಲೆ ಕೊಂಬುಗಳು, ಇತ್ಯಾದಿ (ಅ. ವೇ. ೮-೬;

ಹಿ. ಗೃ. ಸೂ. ೨-೩-೭). ನೀಲಿ, ಹಳದಿ ಅಥವಾ ಹಸುರು ಪಿಶಾಚಿಗಳೂ ಉಕ್ತರಾಗಿದಾರೆ. (ಅ. ವೇ. ೧೯-೨೨-೪, ೫). ಅವರಲ್ಲಿಯೂ ಗಂಡು ಹೆಣ್ಣುಗಳೂ, ಸಂಸಾರಗಳೂ, ರಾಜರೂ (ಅ. ವೇ. ೫-೨೨-೧೩; ಹಿ. ಗೃ. ಸೂ ೨-೩-೭) ಉಂಟು; ಅವರೂ ಮರಣಶೀಲರು. (ಅ. ವೇ. ೬-೩೨-೨; ಇತ್ಯಾದಿ).

ಯಾತುಧಾನರು ಮನುಷ್ಯರ ಮತ್ತು ಅಶ್ವಗಳ ಮಾಂಸವನ್ನು ತಿನ್ನುತ್ತಾರೆ. ಮತ್ತು ಗೋಕ್ಷೀರವನ್ನು ಪಾನಮಾಡುತ್ತಾರೆ. (೧೦-೮೬-೧೬, ೧೭) ತಮ್ಮ ರಕ್ತ ಮತ್ತು ಮಾಂಸದ ಆಶೆಯನ್ನು ತೀರಿಸಿಕೊಳ್ಳಲು ರಾಕ್ಷಸರು ಮನುಷ್ಯರನ್ನು ಆಕ್ರಮಿಸುತ್ತಾರೆ; ಈ ಆಕ್ರಮಣವು ಸಾಧಾರಣವಾಗಿ ಅವರನ್ನು ಪ್ರವೇಶಮಾಡುವ ಮೂಲಕವೇ. ಆರಾಧಕರನ್ನು ಪ್ರವೇಶಿಸದಂತೆ ರಾಕ್ಷಸರನ್ನು ತಡೆಗಟ್ಟಬೇಕೆಂದು ಅಗ್ನಿಗೆ ಪ್ರಾರ್ಥನೆ. (೮-೪೮-೨೦) ಅಲ್ಲಿಂದಿಲ್ಲಿ ಹಾರಾಡುತ್ತಿರುವ ರೋಗಾಭಿಮಾನಿಯಾದ ಪಿಶಾಚಿಯೊಂದು ಮನುಷ್ಯರನ್ನು ಪ್ರವೇಶಿಸುತ್ತದೆ. (ಅ. ವೇ. ೭-೭೬-೪) ಈ ಭೂತಪ್ರೇತಗಳು ಸಾಧಾರಣವಾಗಿ ನಾವು ತಿನ್ನುವಾಗ ಅಥವಾ ಕುಡಿಯುವಾಗ ನಮ್ಮ ಬಾಯಿ ಮೂಲಕವೇ ನಮ್ಮನ್ನು ಪ್ರವೇಶಿಸುತ್ತವೆ (ಅ. ವೇ. ೫.೨೯-೬ರಿಂದ ೮); ಇತರ ದ್ವಾರಗಳಿಂದಲೂ ಪ್ರವೇಶಿಸುವುದುಂಟು (ಅ. ವೇ ೮-೬-೩). ಒಳಗೆ ಪ್ರವೇಶಮಾಡುವುದೇ ತಡ, ಮನುಷ್ಯನ ಮಾಂಸವನ್ನು ಕಿತ್ತು, ತಿಂದು, ರೋಗವನ್ನುಂಟು ಮಾಡುತ್ತಾರೆ (ಅ. ವೇ. ೫.೨೯-೫, ೧೦). ಹುಚ್ಚತನವನ್ನುಂಟು ಮಾಡುತ್ತಾರೆ ಮತ್ತು ವಾಕ್ಸ್ಪಟತ್ವವನ್ನು ನಾಶಗೊಳಿಸುತ್ತಾರೆ (ಅ. ವೇ. ೬.೧೧೧-೩; ಹಿ. ಗೃ. ಸೂ ೧-೧೫-೫). ಮನುಷ್ಯರ ವಾಸಗೃಹಗಳನ್ನು ಆಕ್ರಮಿಸುತ್ತಾರೆ. (ಕೌ. ಸೂ. ೧೩೫-೯) ಕೆಲವು ಭೂತಗಳು ಸಾಯಂಕಾಲದ ವೇಳೆಯಲ್ಲಿ ಮನೆಗಳ ಸುತ್ತಲೂ ಕುಣಿಯುತ್ತಾ ಕತ್ತೆಗಳಂತೆ ಅರಚುತ್ತಾ, ತಿರುಗುತ್ತಿರುತ್ತವೆ ಅಥವಾ ಕಾಡುಗಳಲ್ಲಿ ತಿರುಗುತ್ತಿರುತ್ತವೆ ಅಥವಾ ಗಟ್ಟಿಯಾಗಿ ನಗುತ್ತಾ ಇಲ್ಲವೇ ಕಪಾಲಗಳಿಂದ ಪಾನ ಮಾಡುತ್ತಾ ಇರುತ್ತವೆ (ಅ. ವೇ. ೮-೬-೧೦,೧೧,೧೪ ; ಹಿ. ಗೃ. ಸೂ೨-೩-೩).

ಅವರ ಸಂಚಾರಕಾಲವು ರಾತ್ರಿ ಅಥವಾ ಸಾಯಂಕಾಲ (೭-೧೦೪-೮). ಪೂರ್ವದಿಕ್ಕಿನಲ್ಲಿ ಅವರ ಆಟವೇನೂ ನಡೆಯುವುದಿಲ್ಲ; ಅಲ್ಲಿ ಉದಿಸುವ ಸೂರ್ಯನು ಅವರನ್ನು ಓಡಿಸಿಬಿಡುತ್ತಾನೆ. (ತೈ. ಸಂ. ೩-೬-೬-೩). ಬೀಳುತ್ತಿರುವ ಉಲ್ಕೆಯು ಭೂತದ ರೂಪವೆಂದು ಭಾವನೆ. (ಕೌ ಸೂ. ೧೩೬-೯) ಅಮಾವಾಸ್ಯೆಯ ಕಗ್ಗತ್ತಲೆಯು ಪ್ರೇತಗಳ ಸಂಚಾರಕ್ಕೆ ಯೋಗ್ಯವಾಗಿರುವಂತೆ ಭೂತಗಳಿಗೂ ಅದೇ ಅನುಕೂಲಕಾಲ. (ಅ. ವೇ. ೧-೧೬-೧ ; ೪-೩೬-೩.)

ಯಜ್ಞಗಳಿಗೆ ಇವರಿಂದ ಇರುವಷ್ಟು ಆಪತ್ತು ಯಾವುದಕ್ಕೂ ಇಲ್ಲ. ದೇವಯೋಗ್ಯವಾದ ಯಜ್ಞಗಳಲ್ಲಿ ಪಿಶಾಚಿಗಳು, ಲೋಪದೋಷಗಳನ್ನುಂಟುಮಾಡುತ್ತವೆ. ಮತ್ತು ಯಾತುಗಳು ಅರ್ಪಿತವಾದ ಆಹುತಿಗಳನ್ನು ಚಲ್ಲಾಪಿಲ್ಲಿಯಾಗಿ ಎರಚುತ್ತವೆ. (೭-೧೦೪-೧೮, ೨೧) ಸ್ತೋತ್ರವನ್ನು ಕಂಡರೆ ಅವರಿಗಾಗದು. (೧೦-೧೪೨-೩) ಯಜ್ಞಕ್ಕೆ ಶಾಪ ತಗಲದಂತೆ, ಭೂತಾದಿಗಳನ್ನು ದಹಿಸಿಬಿಡೆಂದು ಅಗ್ನಿಗೆ ಪ್ರಾರ್ಥನೆ. (೧-೭೬-೩) ಯಾತುಧಾನರು ಮತ್ತು ರಕ್ಷೋಗಣಗಳ ಮಾಯೆಯಿಂದ ಶತ್ರುವಿನ ಯಾಗವನ್ನು ಊರ್ಜಿತವಾಗದಂತೆ ಮಾಡುವ ಮಂತ್ರವೊಂದಿದೆ. (ಅ. ವೇ. ೭-೭೦-೨) ಮೃತರಿಗೆ ಆಹುತಿಕೊಡುವ ಅನ್ನೋದಕಗಳಿಗೆ ಪ್ರೇತರೂಪದಲ್ಲಿ ಅತ್ತಿಯಾಗಿ ಬರುತ್ತಾರೆ. (ಅ. ವೇ. ೧೪-೨-೫೪ ; ವಾ. ಸಂ. ೨-೨೯ನ್ನು ಹೋಲಿಸಿ). ಪುರಾಣಗಳಲ್ಲಿ ಈ ರಕ್ಷೋಗಣಗಳು (ರಾಕ್ಷಸರಿಂತಲೇ ವ್ಯವಹಾರ) ಯೋಗಿಗಳಿಗೆ ತೊಂದರೆಮಾಡುತ್ತಾರೆ ಎಂಬುದು ಸಾಮಾನ್ಯವಾಗಿದೆ.

ಕರ್ತೃವನ್ನು ಹೋಗಲಾಡಿಸುವವನೂ, ಯಾಗಕ್ಕೆ ಯಜಮಾನನೂ ಆದ ಅಗ್ನಿಗೂ ಇವರಿಗೂ ಬದ್ಧದ್ವೇಷ. ಇವರನ್ನು ದಹಿಸು, ಓಡಿಸು ಅಥವಾ ನಾಶಮಾಡು ಎಂದು ಅಗ್ನಿಯನ್ನೇ ಪ್ರಾರ್ಥಿಸುವುದು. (೧೦-೮೭-೩-೬ ಇತ್ಯಾದಿ) ಈ ಕಾರ್ಯದಿಂದಲೇ ಅಗ್ನಿ ಮತ್ತು ಇತರ ಕೆಲವು ದೇವತೆಗಳಿಗೆ 'ರಕ್ಷೋಹಾ' ಎಂಬ ಹೆಸರು ಬಂದಿರುವುದು.

ಈ ಭೂತಗಳು ಸ್ವಭಾವತಃ ಹಾನಿಕರಗಳು ಮಾತ್ರವಲ್ಲ; ಇತರರಿಂದ ಪ್ರೇರಿತರಾಗಿಯೂ ಹಾನಿಯುಂಟುಮಾಡುವುದುಂಟು. ರಕ್ಷೋಯುಜಃ (ರಾಕ್ಷಸರನ್ನು ಪ್ರೇರಿಸುವವರು) ಎಂಬುದು ಕಂಡುಬರುತ್ತದೆ. (೬-೬೨-೯) ಮತ್ತು ಮಂತ್ರಗಾರರ ಭೂತಗಳು ಮತ್ತು ಯಾತುಗಳು ಅಲ್ಲಲ್ಲಿ ಇವೆ. (೭-೧೦೪.೨೩; ೮-೬೦-೨೦) ಶತ್ರುವಿನಿಂದ ಪ್ರೇರಿತವಾದ ಭೂತದ ಕಾಟಕ್ಕೆ ಒಳಗಾದವನು, ಯವಿಷ್ಠಾಗ್ನಿಗೆ ಹೋಮಮಾಡಿ ಅವುಗಳನ್ನು ಓಡಿಸಬಹುದು. (ತೈ. ಸಂ. ೨-೨-೩-೨) ಮತ್ತು ಪ್ರೇರಿಸುವವನನ್ನೇ ನುಂಗಿಬಿಡು ಎಂದು ಆ ಭೂತಗಳಿಗೇ ಅಪ್ಪಣೆ ಇದೆ. (ಅ. ವೇ. ೨-೨-೪)

ಭೂತಗಳು ಎಂಬರ್ಥದಲ್ಲಿ ರಕ್ಷಃ ಎಂಬ ಪದವು ಪುಲ್ಲಿಂಗ ಸ್ತ್ರೀಲಿಂಗಗಳೆರಡರಲ್ಲಿಯೂ ಪ್ರಯೋಗಿಸಲ್ಪಟ್ಟಿದೆ. ನಪುಂಸಕದಲ್ಲಿ ಅಪಾಯ ಎಂತಲೂ ಅರ್ಥವುಂಟು. ರಕ್ಷ್ (ತೊಂದರೆ ಮಾಡು) ಎಂಬ ಧಾತುವಿನಿಂದ ರಕ್ಷಃ ಎಂದಾಗಿರಬಹುದು (ಋಕ್ವಾ ಅಪಾಯಕರವಾದ); ಆದರೆ ಈ ಪ್ರಯೋಗವು ಬಹಳ ಅಪರೂಪ. ಸಾಧಾರಣವಾದ ರಕ್ಷ್— ಕಾಪಾಡು ಎಂಬುದರಿಂದಲೂ ಆಗಿರಬಹುದು. ಈ ಸಂದರ್ಭದಲ್ಲಿ, ರಕ್ಷಃ ಎಂದರೆ ತಪ್ಪಿಸಿಕೊಳ್ಳಬೇಕಾದುದು ಎಂದರ್ಥವಾಗುತ್ತದೆ.

ಪಿಶಾಚಾಃ.—ಭೂತಗಳಲ್ಲಿ ಮೂರನೆಯ ಜಾತಿ ಪಿಶಾಚಿಗಳು. ಋಗ್ವೇದದಲ್ಲಿ ಒಂದೇ ಒಂದು ಕಡೆ (೧-೧೩೩-೫), ಪಿಶಾಚಿ ಎಂಬುದಾಗಿ ಏಕವಚನಾಂತವಾಗಿ ಬಂದಿದೆ. ಹರಿದ್ರವರ್ಣದ ಕಿರೀಟವುಳ್ಳ ಮತ್ತು ಜಲಮಯವಾದ ಪಿಶಾಚಿಯನ್ನು ಧ್ವಂಸಮಾಡಿ, ಪ್ರತಿಯೊಂದು ಭೂತವನ್ನೂ ಹೊಡೆದು ಕೆಡವಬೇಕೆಂದು ಇಂದ್ರನಿಗೆ ಪ್ರಾರ್ಥನೆ. ಅಸುರರು, ರಾಕ್ಷಸರು ಮತ್ತು ಪಿಶಾಚಿಗಳು ಕ್ರಮವಾಗಿ ದೇವತೆಗಳು, ಮನುಷ್ಯರು ಮತ್ತು ಪಿತೃಗಳಿಗೆ ಶತ್ರುಗಳು. ಪಿಶಾಚಿಗಳಿಗೆ ವಿಶೇಷವಾಗಿ ಪ್ರೇತಗಳೊಡನೆಯೇ ವ್ಯವಹಾರವಿರಬೇಕು. ಪ್ರೇತಗಳಿಗೆ ಕ್ರವ್ಯಾದರಿಂತಲೂ (ಹಸಿಮಾಂಸ ಅಥವಾ ಮೃತದೇಹವನ್ನು ತಿನ್ನುವವರು) ಹೆಸರು (ಅ. ವೇ. ೫-೨೯-೯, ಇತ್ಯಾದಿ); ಇದು ಪಿಶಾಚ ಎಂಬುದಕ್ಕೆ ಸಮಾನವಾದ ಪದ. ಪಿಶಾಚಿಗಳಿಂದ ಭಕ್ಷಿತವಾದ ರೋಗಿಯ ಮಾಂಸವನ್ನು ಹಿಂದಕ್ಕೆ ಕೊಡಿಸಬೇಕೆಂದು ಅಗ್ನಿಗೆ ಪ್ರಾರ್ಥನೆ (ಅ. ವೇ. ೫-೨೯-೫). ಆದುದರಿಂದ ಅವೂ ಒಂದು ಜಾತಿಯ ಹೆಣತಿನ್ನುವ ಪಿಶಾಚಿಗಳು. ಪಿಶಾಚಿಗಳು ನೀರಿನಲ್ಲಿ ಹೊಳೆಯುತ್ತಿರುತ್ತವೆ (ಅ. ವೇ. ೪-೩೦-೯, ೪-೩೭-೧೦) ಅಥವಾ ಮನುಷ್ಯರ ಮನೆಗಳನ್ನು, ಗ್ರಾಮಗಳನ್ನು ಕಾಡುತ್ತಿರುತ್ತವೆ (ಅ. ವೇ. ೪-೩೬-೬).

ಆರಾತಿ (ಕಾರ್ಪಣ್ಯ) ಎಂಬ ಸ್ತ್ರೀಲಿಂಗಪದವೂ, ದ್ರುಹಃ (ಅಪಾಯ, ತೊಂದರೆ ಉಂಟುಮಾಡುವ) ಎಂಬ ಪುಲಿಂಗ ಮತ್ತು ಸ್ತ್ರೀಲಿಂಗಗಳ ಪದವೂ, ಒಂದೊಂದು ಜಾತಿಯ ಪಿಶಾಚಿಗಳೆಂದು ಪರಿಗಣಿತವಾಗಿವೆ.

ಕಿಮೀದೀ ಎಂಬುದೊಂದು ಭೂತಗಣ (೭-೧೦೪-೨೩; ೧೦-೮೬-೨೪).

ನಮ್ಮ ನಿತ್ಯಗಟ್ಟಲೆ ಜೀವನಕ್ಕೆ ಸಂಬಂಧಿಸಿದಂತೆ ಅನೇಕ ಪಿಶಾಚಿಗಳಿವೆ. ಅವುಗಳ ಹೆಸರಿನಿಂದಲೇ, ಅವುಗಳಿಂದಾಗುವ ತೊಂದರೆಯನ್ನು ತಿಳಿಯಬಹುದು. ಇವುಗಳಿಗೂ ಪ್ರಕೃತಿಗೂ ಏನೂ ಸಂಬಂಧವಿಲ್ಲ. ಸಾಧಾರಣವಾಗಿ, ನಮಗೆ ದ್ವೇಷಿಗಳಾಗಿದ್ದು, ಮೃತವಾದವರೇ ಈ ರೂಪರಾಗಿ ಬಂದು ನಮಗೆ ಹಿಂಸೆ ಕೊಡುತ್ತಾರೆಂದು ನಂಬಿಕೆ. ಇವುಗಳಿಗೂ ಕಡಿಮೆಯಾಗಿ ವ್ಯಕ್ತಿಸಂಬಂಧಹೊಂದಿದ್ದು, ಮನುಷ್ಯರಿಗೆ ರೋಗ, ಮಕ್ಕಳಿಲ್ಲದಿರುವಿಕೆ, ಪಾಪ, ಮೊದಲಾದ ಫಲಗನ್ನುಂಟುಮಾಡುವ ಕೆಲವು ಶಕ್ತಿಗಳು ಗಾಳಿಯಲ್ಲಿ ಓಡಾಡಿಕೊಂಡಿದ್ದು, ತೊಂದರೆಯನ್ನುಂಟುಮಾಡುತ್ತವೆ. ಇವುಗಳನ್ನು ನಮಗಾಗದವರ ಕಡೆ ತಿರುಗಿಸುವುದೇ ಮಂತ್ರವಿದ್ಯೆಯ ಮುಖ್ಯ ಉಪಯೋಗ.

ಭೂಮಿಯ ಮೇಲೆ ಸಂಚರಿಸುವ ಕೆಲವು ಪಿಶಾಚಿಗಳು ಅಪಾಯಕರವೇ ಅಲ್ಲ; ಅವುಗಳಿಂದ ನಮಗೆ ಸಹಾಯವೇ ಆಗುತ್ತದೆ. ಪೈರು ಕೀಳುವುದರಲ್ಲಿ ಸಹಾಯ, ವಧುವಿಗೆ ದೀರ್ಘಾಯುಸ್ಸು ಇವುಗಳನ್ನು ಕೊಡು

ತ್ತವೆ. ಅರ್ಬುದ ಎಂಬುದೇ ಮುಖ್ಯವಾದ ಒಂದು ಪಿಶಾಚಿಗಳ ಗುಂಪು, ಶತ್ರುಗಳಿಗೆ ಭಯವನ್ನುಂಟುಮಾಡಿ, ನಮಗೆ ಯುದ್ಧಗಳಲ್ಲಿ ಸಹಾಯ ಮಾಡುತ್ತವೆ (ಅ. ವೇ. ೩-೨೪; ೩-೨೫-೧; ೧೪-೧-೪೫; ೧೧-೯-೧೨).

ಅಂತಿಮಗತಿ ಶಾಸ್ತ್ರ.

ಅಂತ್ಯಕ್ರಿಯೆ—ವೇದಗಳಲ್ಲಿ ಸಾವಿಗೆ ಸಂಬಂಧಿಸಿದ ವಾಕ್ಯಗಳೇ ಕಡಿಮೆ. ಅಪರೂಪವಾಗಿ ಪ್ರಸಕ್ತವಾದರೂ ಮರಣವು ಶತ್ರುಗಳಿಗೆ ಉಂಟಾಗಲೆಂದೂ, ತಮಗೆ ದೀರ್ಘಾಯುಸ್ಸು ಇರಲೆಂದೂ ಬೇಡುವುದಕ್ಕೆ ಮಾತ್ರ. ಶವಸಂಸ್ಕಾರ ಕಾಲದಲ್ಲಿ ಮಾತ್ರ ಅಮುಷ್ಮಿಕದ ಯೋಚನೆ ಬರುತ್ತದೆ. ಶವಗಳನ್ನು ಸುಡುವುದು ಮತ್ತು ಹೂಳುವುದು, ಎರಡೂ ರೂಢಿಯಲ್ಲಿದ್ದುವು. ೧೦-೧೬ರಲ್ಲಿ, ದಹನ ಸಂಸ್ಕಾರವೂ, ಮತ್ತೊಂದರಲ್ಲಿ (೧೦-೧೪-೧೦ರಿಂದ ೧೩) ಹೂಳುವುದೂ ಉಕ್ತವಾಗಿವೆ. 'ಮಣ್ಣಿನ ಮನೆಯೂ ಒಂದು ಕಡೆ ಉಕ್ತವಾಗಿದೆ (೭-೮೯-೧). ಅಗ್ನಿಯಲ್ಲಿ ದಗ್ಧರಾದ ಪಿತೃಗಳು ಮತ್ತು ದಗ್ಧರಾಗದೇ ಇದ್ದವರು, ಎರಡು ತರಹವೂ ಕಂಡು ಬರುತ್ತದೆ (೧೦-೧೫-೧೪, ಅ. ವೇ. ೧೪-೨-೩೪). ಮೃತರು ಊರ್ಧ್ವಲೋಕಕ್ಕೆ ಹೋಗಲು ದಹನವೇ ಸರಿಯಾದ ಮಾರ್ಗ. ಕರ್ಮಗಳನ್ನು ವಿವರಿಸುವ ಗ್ರಂಥಗಳಲ್ಲಿ, ದಗ್ಧರಾದವರ ಭಸ್ಮ ಮತ್ತು ಅಸ್ಥಿ, ಶಿಶುಗಳು ಮತ್ತು ಸನ್ಯಾಸಿಗಳನ್ನು ಮಾತ್ರ ಹೂಳಬೇಕೆಂದು ವಿಧಿಯಿದೆ (ಆ. ಗೃ. ಸೂ. ೪-೧ನ್ನು ಹೋಲಿಸಿ).

ಅಂತ್ಯಕ್ರಿಯೆಯೊಡನೆಯೇ, ಅಮುಷ್ಮಿಕಜೀವನದ ಇತಿಹಾಸವು ಸಂಬಂಧಿಸಿದೆ. ಅಗ್ನಿಯು ಮೃತ ದೇಹವನ್ನು ಬೇರೆ ಲೋಕಕ್ಕೆ, ಪಿತೃಗಳ ಮತ್ತು ದೇವತೆಗಳ ಸಮೀಪಕ್ಕೆ ತೆಗೆದುಕೊಂಡು ಹೋಗುತ್ತಾನೆ (೧೦-೧೬-೧೦ರಿಂದ ೪; ೧೦-೧೬-೩). ಮರ್ತ್ಯನನ್ನು ಅತಿಶ್ರೇಷ್ಠವಾದ ಅಮೃತತ್ವದಲ್ಲಿ ಇಡುತ್ತಾನೆ (೧-೩೧-೭). ಪುರಾತನರೂ, ಆದಿಯಲ್ಲಿ ಜನಿಸಿದವರೂ ಆದ ಋಷಿಗಳು ಹೋಗಿರುವ, ಅತ್ಯುನ್ನತವಾದ ಸೂರ್ಯನ ಸ್ಥಾನಕ್ಕೆ, ಅತ್ಯಂತ ಎತ್ತರದಲ್ಲಿರುವ ಸ್ವರ್ಗಕ್ಕೆ, ಅಥವಾ ಸತ್ಪುರುಷರ ಲೋಕಕ್ಕೆ, ದೇವಲೋಕದ ಪಕ್ಷಿಯಾದ ಅಗ್ನಿಯ ಮೂಲಕ, ಮನುಷ್ಯರು ಹೋಗುತ್ತಾರೆ (ವಾ. ಸಂ. ೧೪-೫೧, ೫೨), ಗಾರ್ಹಪತ್ಯಾಗ್ನಿಯು ಮೃತರನ್ನು ಸತ್ಪುರುಷರ ಲೋಕಕ್ಕೆ ಒಯ್ಯುತ್ತಾನೆ (ಅ. ವೇ. ೬-೧೨೦-೧). ಅಗ್ನಿಯು ಮೊದಲು ಮೃತನ ದೇಹವನ್ನು ದಹಿಸಿ, ಆನಂತರ ಸಜ್ಜೀವಿಗಳ ಲೋಕದಲ್ಲಿ ಇಡುತ್ತಾನೆ (ಅ. ವೇ ೧೪-೩-೭೧). ಶವಗಳನ್ನು ದಹಿಸುವ ಅಗ್ನಿಯ, (ಕ್ರವ್ಯಾದ) ದೇವತೆಗಳಿಗೆ ಆಹುತಿಯನ್ನು ವಹಿಸುವ ಅಗ್ನಿಗಿಂತಲೂ ಭಿನ್ನನು (೧೦-೧೬-೯). ತನ್ನ ಭಾಗವಾದ ಅಜವನ್ನು ದಹಿಸಿ, ದೇಹವನ್ನು ಕಾಪಾಡಬೇಕೆಂದು ಅಗ್ನಿಗೆ ಪ್ರಾರ್ಥನೆ (೧೦-೧೬.೪). ಕರ್ಮಮಾಡುವಾಗ ಶವವನ್ನು ಕೃಷ್ಣವರ್ಣದ ಅಜದ ಚರ್ಮದ ಮೇಲಿಡುತ್ತಾರೆ ಮತ್ತು ಬಲಿಕೊಡುವ ಸಂದರ್ಭದಲ್ಲಿ ಗೋವು ಅಥವಾ ಅಜವನ್ನು ಬಲಿಕೊಡುತ್ತಾರೆ. ದೇಹಕ್ಕೆ, ಯಾವುದಾದರೂ ಪಕ್ಷಿ, ಮೃಗ, ಇರುವೆ, ಅಥವಾ ಹಾವಿನಿಂದ ಆಗಿರಬಹುದಾದ ಗಾಯಗಳನ್ನು ಗುಣಪಡಿಸಬೇಕೆಂದು ಅಗ್ನಿ ಮತ್ತು ಸೋಮರಿಗೆ ಕರ್ಮಕಾಲದಲ್ಲಿ ಪ್ರಾರ್ಥನೆ ಸಲ್ಲಿಸುತ್ತಾರೆ (೧೦-೧೬-೬).

ಮೃತಾತ್ಮನು ಧೂಮದೊಡನೆ ಸ್ವರ್ಗಲೋಕಕ್ಕೆ ಹೋಗುತ್ತಾನೆಂದು ನಂಬಿಕೆ (ಆ. ಗೃ. ಸೂ. ೪-೪-೭). ಅದು ಬಹಳ ದೂರದ ದಾರಿ; ಅಲ್ಲಿ ಪೂಷಣನು ರಕ್ಷಕನು ಮತ್ತು ಸವಿತೃವು ದಾರಿ ತೋರಿಸುವವನು (೧೦-೧೭-೪). ಹುತವಾದ ಅಜವು ಪಿತೃಗಳ ಸಮೀಪಕ್ಕೆ ಮುಂಚೆ ಹೋಗಿ, ಮೃತಾತ್ಮನ ಆಗಮನವನ್ನು ತಿಳಿಸುತ್ತದೆ; ಹೀಗೆ ಹೋಗುವಾಗ, ಮಾರ್ಗದಲ್ಲಿ ಕಗ್ಗತ್ತಲೆಯನ್ನು ಹಾದು, ಅನಂತರ, ಪಿತೃಗಳ ಸ್ಥಾನವಾದ ಸ್ವರ್ಗದ ಮೂರನೆಯ ಅಂತಸ್ತನ್ನು ಸೇರಬೇಕು (೪. ವೇ. ೯-೫-೧, ೩; ೪-೧-೪ನ್ನು ಹೋಲಿಸು).

ಅಮುಷ್ಮಿಕ ಜೀವನಕ್ಕೆ ಉಪಯೋಗವಾಗಲೆಂದು, ಮೃತಜೀವನಿಗೆ, ಆಭರಣಗಳು ಮತ್ತು ವಸ್ತ್ರಗಳನ್ನು ಒದಗಿಸುತ್ತಾರೆ; ಈ ಪದ್ಧತಿಯು ಈಗಲೂ ರೂಢಿಯಲ್ಲಿದೆ (೧೪-೪-೩೧). ಅವನ ಪತ್ನಿ ಮತ್ತು

ಆಯುಧಗಳನ್ನೂ, ಶವದೊಡನೆ ದಹಿಸುತ್ತಿದ್ದರೆಂಬುದಕ್ಕೆ ಅಲ್ಲಲ್ಲಿ ಚಿಹ್ನೆಗಳಿವೆ (೧೦-೧೮-೮, ೯). ಶವಕ್ಕೆ ಒಂದು ಹೂರಿ ಕಟ್ಟುಗೆಯನ್ನು ಕಟ್ಟುತ್ತಿದ್ದರು. ಮೃತನ ಪ್ರೇತವು ವಾಪಸ್ಸು ಬರುವುದಕ್ಕೆ ದಾರಿ ತಿಳಿಯದಿರ ಲೆಂಬುದೇ ಇದರ ಉದ್ದೇಶ (ಅ. ವೇ. ೫-೧೯-೧೨; ಋ. ವೇ. ೧೦-೧೮-೨ ಮತ್ತು ೧೯-೬೭-೧೬ಗಳನ್ನು ಹೋಲಿಸಿ).

ಆತ್ಮ.— ಅಗ್ನಿ ಅಥವಾ ಸಮಾಧಿಗಳು ದೇಹವನ್ನು ಮಾತ್ರ ಅಳಿಸುತ್ತವೆ; ಆದರೆ ಮೃತನ ವ್ಯಕ್ತಿತ್ವ ವನ್ನು ಅಳಿಸಲಾರವು. ಅಜ್ಞಾನಾವಸ್ಥೆಯಲ್ಲಿಯೂ ಜೀವವನ್ನು ದೇಹದಿಂದ ಬೇರ್ಪಡಿಸಬಹುದು ಮತ್ತು ದೇಹ ನಷ್ಟವಾದ ಮೇಲೂ ಜೀವವಿರುತ್ತದೆ ಎಂತಲೇ ನಂಬಿಕೆ. ೧೦-೫೮ನೆಯ ಸೂಕ್ತ ಪೂರ್ತಿಯಾಗಿ, ಸತ್ತವನಂತೆ ಬಿದ್ದಿರುವವನ ಜೀವವನ್ನು ಹಿಂದಕ್ಕೆ ಬಾರೆಂದು ಕರೆದಿದೆ. ಋಗ್ವೇದದಲ್ಲಿ ಜೀವನಿಗೆ ದೇಹಾಂತರ ಪ್ರಾಪ್ತಿ ಯುಂಟೆಂಬ ನಂಬಿಕೆಗೆ ಆಧಾರವಿದ್ದಂತೆ ತೋರುವುದಿಲ್ಲ; ಆದರೆ ಬ್ರಾಹ್ಮಣದಲ್ಲಿ, ಯಾಗವನ್ನು ವಿಹಿತರೀತಿ ಯಲ್ಲಿ ಮಾಡದೇ ಇದ್ದವನು, ಮೃತನಾಗಿ ಪುನಃ ಜನ್ಮವೆತ್ತಿ, ಮರಣಾಧೀನನಾಗುತ್ತಾನೆ ಎಂದು ಹೇಳಿದೆ (ಶ. ಬ್ರಾ. ೧೦-೪-೩-೧೦). ಪ್ರಾಣ, ಆತ್ಮಾ, ಅಸು (ದೇಹಶಕ್ತಿ, ೧-೧೧೩-೧೬; ೧-೧೪೦-೪), ಮನಸ್ಸು (ಯೋಚನೆ ಮತ್ತು ಭಾವನೆಗಳಿಗೆ ಆಶ್ರಯ ಮತ್ತು ಹೃದಯದಲ್ಲಿರುವುದು; (೪-೪೯-೫), ಇವುಗಳೆಲ್ಲವೂ ಜೀವ ವಾಚಕಗಳು. ಅನೇಕ ವಾಕ್ಯಗಳು ಅಥರ್ವವೇದದಲ್ಲಿ ವಿಶೇಷವಾಗಿ—ಅಸು ಅಥವಾ ಮನಸ್ಸು ಇದ್ದರೆ ಬದುಕು, ಇಲ್ಲದಿದ್ದರೆ ಸಾವು ಎಂದು ಹೇಳುತ್ತವೆ. ಅಸುನೀತಿ ಅಥವಾ ಅಸುನೀತ ಎಂಬುದು, ಮೃತರ ಜೀವಗಳನ್ನು ಈ ಲೋಕದಿಂದ ಊರ್ಧ್ವಲೋಕಕ್ಕೆ ಕರೆದುಕೊಂಡು ಹೋಗುವ ದಾರಿಗೆ ಹೆಸರು (೧೦-೧೫-೪; ೧೦-೧೬-೨). ಅಂತ್ಯಕ್ರಿಯೆಯಲ್ಲಿ ಪ್ರಯೋಗಿಸುವ ಮಂತ್ರಗಳಲ್ಲಿ ಅಸು ಅಥವಾ ಮನಸ್ ಎಂಬ ಶಬ್ದಗಳನ್ನು ಉಪಯೋಗಿಸು ವುದಿಲ್ಲ; ಪಿತೃ, ಮಾತೃ ಮೊದಲಾದವುಗಳನ್ನೇ ಉಪಯೋಗಿಸುತ್ತಾರೆ. ಆದುದರಿಂದ ಆತ್ಮನೆಂಬುದು ನೆರಳಿ ನಂತಲ್ಲ; ಅದಕ್ಕೂ ವ್ಯಕ್ತಿತ್ವವಿದೆ. ಮನುಷ್ಯರು ದೇಹವನ್ನು ತ್ಯಜಿಸಿದ ಮೇಲೆಯೇ, ಅವರಿಗೆ ಅಮರತ್ವ ಪ್ರಾಪ್ತಿ (ಶ. ಬ್ರಾ. ೧೦-೪-೩-೯) ಯಾದರೂ, ಸ್ವರ್ಗಾದಿ ಲೋಕಗಳೂ ಪ್ರಾಕೃತವೇ ಆದುದರಿಂದ, ಶವಕ್ಕೂ ಮುಖ್ಯಸ್ಥಾನವಿದೆ. ಬೇರೆ ಲೋಕಗಳ ಅಸ್ತಿತ್ವದಲ್ಲಿ ದೇಹಕ್ಕೂ ಭಾಗವಿದೆ (೧೦-೧೬-೫, ಅ. ವೇ. ೧೪-೨-೨೬). ದೋಷಗಳು ಯಾವುದೂ ಇಲ್ಲದ (ಅ. ವೇ. ೬-೧೨೦-೩) ದೇಹವನ್ನು ಸಾಧಾರಣವಾದ ಪಾರ್ಥಿವ ದೇಹವೆನ್ನುವುದು ಸಾಧುವಲ್ಲ, ಅಗ್ನಿಯ ಪ್ರಭಾವದಿಂದ ಪರಿಪೂತವಾದ (೧೦-೧೬-೬ನ್ನು ಹೋಲಿಸಿ) ದೇಹ ಅಥವಾ ಈಚಿನ ವೇದಾಂತಿಗಳ 'ಸೂಕ್ಷ್ಮದೇಹ'ವೆನ್ನಬಹುದು. ದಹನವಾದ ಮೇಲೆ ಶೇಖರಿಸಬೇಕಾದ ಅಸ್ಥಿ ಗಳು ನಾಶವಾದರೆ, ಅದೇ ಕಠಿಣವಾದ ಶಿಕ್ಷೆಯೆಂದು ಹೇಳಿದೆ (ಶ. ಬ್ರಾ. ೧೧-೬-೩-೧೧; ೧೪-೬-೯-೨೮); ಇದ ರಿಂದ ಶವದ ಸ್ಥಾನವು ಎಷ್ಟು ಮಹತ್ತರವಾದುದೆಂದು ತಿಳಿಯಬಹುದು. ೧೦-೧೬-೩ರಲ್ಲಿ, ಮೃತನ ನೇತ್ರವನ್ನು ಸೂರ್ಯನ ಸಮೀಪಕ್ಕೂ, ಶ್ವಾಸವನ್ನು ವಾಯುವಿನ ಹತ್ತಿರಕ್ಕೂ ಹೋಗೆಂದು ಹೇಳಿದೆ. ಅಗ್ನಿಯು ಮೃತನನ್ನು ಪರಲೋಕಕ್ಕೆ ಕರೆದುಕೊಂಡು ಹೋಗುತ್ತಾನೆ ಎಂದ ಮೇಲೆ, ಒಂದೊಂದು ಅಂಗವು ಒಂದೊಂದು ಕಡೆ ಹೋಗು ತ್ತದೆ ಎಂಬುದು ಸೂಕ್ತವಾಗಿ ಕಾಣುವುದಿಲ್ಲ. ಪ್ರಾಯಶಃ ವಿರಾಟ್ಪುರುಷನ ವರ್ಣನೆಗನುಸಾರವಾಗಿ ಈ ರೀತಿ ಹೇಳಿರಬಹುದು. ಅದೇ ವಾಕ್ಯದಲ್ಲಿ (೧೦-೧೬-೩; ೧೦-೫೮-೭ರಲ್ಲಿಯೂ ಇದೆ), ಮೃತನ ಜೀವವು ನೀರು ಅಥವಾ ಸಸ್ಯಗಳನ್ನು ಪ್ರವೇಶಿಸುತ್ತದೆ ಎಂದಿದೆ; ಪ್ರಾಯಶಃ ಇದು 'ದೇಹಾಂತರ ಪ್ರವೇಶ'ದ ಪ್ರಾರಂಭದೆಶೆ.

ಪಿತೃಗಳು ಅನುಸರಿಸಿದ ಮಾರ್ಗದಲ್ಲೇ ಮುಂದುವರೆಯುತ್ತಾ (೧೦-೧೪-೭), ಮೃತನ ಜೀವವು ನಿತ್ಯ ತೇಜಸ್ಸಿನ ಲೋಕಕ್ಕೆ ಹೋಗುತ್ತದೆ (೯-೧೧೩-೭); ಆಗ ದೇವತೆಗಳಿಗೆ ಸಮವಾದ ಕಾಂತಿವಿಶಿಷ್ಟವಾಗಿ (ಅ. ವೇ. ೧೯-೧-೩೭) ರಥದಲ್ಲಿ ಅಥವಾ ರೆಕ್ಕೆಗಳ ಮೇಲೆ (ಅ. ವೇ. ೪-೩೪-೪) ಅಥವಾ ಭೂತಗಳನ್ನು ಕೊಲ್ಲುವಾಗ

ಅಗ್ನಿಯು ಉಪಯೋಗಿಸುವ ರೆಕ್ಕೆಗಳ ಮೇಲೆ (ವಾ. ಸ. ೧೪-೫೨) ಹೋಗುತ್ತಾನೆ. ಮರುತರಿಂದ ಮೇಲಕ್ಕೆ ತೇಲಿಸಲ್ಪಟ್ಟು, ಹಿತವಾದ ವಾಯುವನ್ನು ಸೇವಿಸುತ್ತಾ ಮತ್ತು ಮಳೆ ಹನಿಗಳಿಂದ ತಂಪುಮಾಡಲ್ಪಟ್ಟು, ಜೀವನು ತನ್ನ ಪುರಾತನ ರೂಪವನ್ನು ಪುನಃ ಪಡೆಯುತ್ತಾನೆ (ಅ. ವೇ. ೧೪-೨-೨೧ರಿಂದ ೨೬) ಮತ್ತು ವೈಭವ ವಿಶಿಷ್ಟನಾಗಿ, ಯಮನ ಜೊತೆಯಲ್ಲಿ, ಪಿತೃಗಳು ಸಂತೋಷದಿಂದ ಕಾಲ ಕಳೆಯುತ್ತಿರುವ- ಅತ್ಯುನ್ನತವಾದ ಸ್ವರ್ಗವನ್ನು ಸೇರುತ್ತಾನೆ (೧೦-೧೪-೮, ೧೦; ೧೦-೧೫೪-೪, ೫). ಈರೀತಿ ಸ್ವರ್ಗಪ್ರಾಪ್ತಿಗೆ ಮನೆಗೆ ವಾಪಸ್ಸು ಬರುವುದು ಎಂದು ಹೇಳಿದೆ (ಆಸ್ತಂ : ೧೦-೧೪-೮). ಯಮನು, ಈತನನ್ನು ಸ್ವಕೀಯನೆಂದು ತಿಳಿದು (ಅ. ವೇ. ೧೪-೨-೩೭), ಅವನಿಗೂ ಒಂದು ವಿಶ್ರಾಂತಿ ಸ್ಥಾನವನ್ನು ಕೊಡುತ್ತಾನೆ (೧೦-೧೪-೯).

ಶತಪಥಬ್ರಾಹ್ಮಣದ ಪ್ರಕಾರ, ಮೃತರು ಈ ಲೋಕವನ್ನು ಬಿಟ್ಟು ಹೊರಟು, ಎರಡು ಬೆಂಕಿಗಳ ಮಧ್ಯೆ ಹಾದುಹೋಗುತ್ತಾರೆ; ಆ ಬೆಂಕಿಗಳು ಕೆಟ್ಟ ಜೀವಗಳನ್ನು ಸುಡುತ್ತವೆ; ಉತ್ತಮರನ್ನು ಮಾತ್ರ ಮುಂದಕ್ಕೆ ಹೋಗಲು ಬಿಡುತ್ತವೆ. ಹೀಗೆ ಮುಂದೆ ಹೊರಟ ಉತ್ತಮ ಜೀವಿಗಳು ಪಿತೃಗಳ ಸವಿುಪಕ್ಕೆ ಹೋಗುವ ದಾರಿಯನ್ನೋ ಅಥವಾ ಸೂರ್ಯನ ಹತ್ತಿರ ಹೋಗುವ ದಾರಿಯನ್ನೋ ಹಿಡಿದು ಮುಂದೆ ಸಾಗುತ್ತಾರೆ (ಶ. ಬ್ರಾ. ೧೪-೪-೩-೨; ಇತ್ಯಾದಿ). ಉಪನಿಷತ್ತುಗಳಲ್ಲಿ, ಬ್ರಹ್ಮಜ್ಞಾನ ಪಡೆದಿರುವವರಿಗೆ ಎರಡು ದಾರಿಗಳು ಉಕ್ತವಾಗಿವೆ: ಒಂದು (ಪರಿಪೂರ್ಣ ಜ್ಞಾನಿಗಳಿಗೆ) 'ಬ್ರಹ್ಮ' ನಲ್ಲಿಗೆ ಹೋಗುವುದು, ಎರಡನೆಯದು ಸ್ವರ್ಗದ ದಾರಿ. ತಮ್ಮ ಪುಣ್ಯಕರ್ಮಗಳ ಫಲ ಮುಗಿದೊಡನೆಯೇ, ಈ ಸ್ವರ್ಗಲೋಕದಿಂದ ಬಂದು, ಪುನಃ ಭೂಮಿಯಲ್ಲಿ ಜನಿಸುತ್ತಾರೆ. 'ಆತ್ಮ'ದ ಪರಿಚಯವೇ ಇಲ್ಲದವರು ದುರ್ದೇವತೆಗಳ ಅಥವಾ ಭೂತಪ್ರೇತಗಳ ಲೋಕಕ್ಕೆ ಹೋಗುತ್ತಾರೆ ಅಥವಾ ದುಷ್ಪರಾಗಿ, ಭೂಮಿಯಲ್ಲಿ ಪುನಃ ಜನ್ಮವೆತ್ತುತ್ತಾರೆ.

ಸ್ವರ್ಗ :—ಪಿತೃಗಳೂ ಮತ್ತು ಯಮನು ವಾಸಿಸುವ ಸ್ಥಾನವು ನಿತ್ಯವಾದ ತೇಜಸ್ಸಿಗೆ ನೆಲೆಯಾದ ಆಕಾಶದ ಮಧ್ಯದಲ್ಲಿ (೧೦-೧೫-೧೪), ಅತ್ಯಂತ ಎತ್ತರವಾದ ಸ್ವರ್ಗದಲ್ಲಿ (೧೦-೧೪-೮), ಮೂರನೆಯ ಸ್ವರ್ಗದಲ್ಲಿ, ಆಕಾಶದ ಅತ್ಯಂತ ಗಹನವಾದ ಪ್ರದೇಶಗಳಲ್ಲಿ, (೯-೧೧೩-೭ರಿಂದ ೯) ಇದೆ. ಅಥರ್ವ ವೇದದಲ್ಲಿಯೂ ಇದೇ ರೀತಿ, ಅತ್ಯುನ್ನತವಾದ (ಅ. ವೇ. ೧೧-೪-೧೧) ಮತ್ತು ತೇಜಃಪುಂಜವಾದ ಲೋಕ (೪-೩೪-೨), ಆಕಾಶದ ತುದಿ (ಅ. ವೇ. ೧೪-೨-೪೭), ಮೂರನೆಯ ಆಕಾಶ (ಅ. ವೇ. ೯-೫-೧, ೮; ೧೪-೪-೩) ಮತ್ತು ಮೂರನೆಯ ಸ್ವರ್ಗ (ಅ. ವೇ. ೧೪-೨-೪೪), ಇವುಗಳೇ ಪಿತೃಲೋಕಗಳ ಮತ್ತು ಯಮನ ಸ್ಥಾನವೆಂದು ಹೇಳಿದೆ. ಮೈತ್ರಾಯಿಣೀ ಸಂಹಿತೆಯಲ್ಲಿ (ಮೈ. ಸಂ. ೧-೧೦-೧೪; ೨-೩-೯), ಪಿತೃಲೋಕವೇ ಮೂರನೆಯ ಲೋಕ. ಪಿತೃಲೋಕವು ಸೂರ್ಯಮಂಡಲದ ಅತ್ಯಂತ ಎತ್ತರವಾದ ಪ್ರದೇಶ (೯-೧೧೩-೯). ಪಿತೃಗಳು ಸೂರ್ಯನೊಡನೆ ಸೇರಿಹೋಗಿದಾರೆ ಅಥವಾ ಸೂರ್ಯನನ್ನು ರಕ್ಷಿಸುತ್ತಾರೆ (೧೦-೧೦೭-೨; ೧೦-೧೫೪-೫) ಅಥವಾ ಸೂರ್ಯ ರಶ್ಮಿಗಳೊಡನೆ ಸೇರಿದಾರೆ (೧-೧೦೯-೭; ಶ. ಬ್ರಾ. ೧೪-೪-೩-೧೦ನ್ನು ಹೋಲಿಸಿ) ಮತ್ತು ಸೂರ್ಯನು ಅವರಿಗೋಸ್ಕರಲೇ ಪ್ರಕಾಶಿಸುತ್ತಾನೆ (೫-೧೫೫-೬), ವಿಷ್ಣುವಿನ ಪಾದಕ್ಕೂ ಇವರಿಗೂ ಸಂಬಂಧವಿದೆ (೧೦-೧೫೫-೩) ಮತ್ತು ಧರ್ಮಿಷ್ಠರಾದವರು ಆ ಪ್ರಿಯವಾದ ವಾಸಸ್ಥಳದಲ್ಲಿ ವಿಷ್ಣುವಿನ ಮೂರನೆಯ ಹೆಜ್ಜೆಯಲ್ಲಿ ಆನಂದಿಸುತ್ತಾರೆ (೧-೧೫೪-೫) ಎಂದಿದೆ. ದೇವತೆಗಳು ಆನಂದಿಸುವ ಪ್ರದೇಶಕ್ಕೆ ಮೂರು ಹೆಜ್ಜೆಗಳನ್ನು ವಿಷ್ಣುವು ಇಟ್ಟು ಕೊಂಡು ಹೋದಂತೆ, ಸತ್ಪುರುಷರು ಆಹುತಿಯನ್ನು ಕೊಡುವ ಸ್ಥಳಕ್ಕೆ, ಸೂರ್ಯನೂ, ಉಷಸ್ಸನ್ನು ಹಿಂಬಾಲಿಸಿ ಕೊಂಡು, ಹೋಗುತ್ತಾನೆ.

ಸ್ವರ್ಗಲೋಕಕ್ಕೆ ಹೋಗುತ್ತಿರುವ ಸತ್ಪುರುಷರ ತೇಜಸ್ಸುಗಳೇ ನಕ್ಷತ್ರಗಳು (ತೈ. ಸಂ. ೫-೪-೧೦-೩; ಶ. ಬ್ರಾ. ೬-೫-೪-೮) ಮತ್ತು ಪುರಾತನರಾದ ಏಳು ಜನ ಋಷಿಗಳು ನಕ್ಷತ್ರ ಮಂಡಲಕ್ಕೆ ಏರಿಸಲ್ಪಟ್ಟರು (ತೈ. ಆ. ೧-೨೧-೧-೨).

ಋಗ್ವೇದದಲ್ಲಿ ಒಂದು ವೃಕ್ಷದ ಪ್ರಸ್ತಾಪವಿದೆ. ಇದರ ಸಮೀಪದಲ್ಲಿ ಯಮನು ದೇವತೆಗಳೊಡನೆ ಕುಳಿತು ಪಾನವಾಡುತ್ತಾನೆ (೧೦ ೧೩೫-೧). ಅಥರ್ವವೇದದಲ್ಲಿ (೪. ವೇ. ೫-೪-೩), ಇದು ಒಂದು ಅತ್ತಿಯ ಮರವೆಂದು ಹೇಳಿದೆ.

ಪರಲೋಕಜೀವನದ ಪ್ರಸ್ತಾಪವು ವಿಶೇಷವಾಗಿ ಒಂಭತ್ತು ಮತ್ತು ಹತ್ತನೆಯ ಮಂಡಲಗಳಲ್ಲಿ ಹೆಚ್ಚಾಗಿಯೂ, ಮೊದಲನೆಯದರಲ್ಲಿ ಸಾಧಾರಣವಾಗಿಯೂ ಇದೆ. ಕಠಿಣ ತಪಸ್ಸನ್ನಾಚರಿಸುವವರಿಗೆ ಅವರ ತಪಸ್ಸಿನ ಫಲವು ಸ್ವರ್ಗ; ಮತ್ತು ಯುದ್ಧದಲ್ಲಿ ಮೃತರಾದವರಿಗೂ ಇದೇ ಫಲ (೧೦-೧೫೪-೨ರಿಂದ ೫), ಆದರೆ ಇವರಿಲ್ಲರಿಗಿಂತಲೂ ಹೆಚ್ಚಾಗಿ, ಉದಾರವಾಗಿ ಹೋಮದ್ರವ್ಯಗಳನ್ನರ್ಪಿಸುವವರಿಗೆ ಈ ಸ್ವರ್ಗವು ಫಲರೂಪವಾಗಿದೆ (೧೦-೧೫೪-೩; ೧-೧೨೫-೫; ೧೦-೧೦೭-೨). ಈ ಯಾಗಾದಿ ಕರ್ತೃಗಳಿಗೆ ದೊರಕುವ ಫಲಗಳ ವಿಷಯ ಅಥರ್ವವೇದದಲ್ಲಿ ಬಹಳ ಹೆಚ್ಚಾಗಿ ಹೇಳಿದೆ.

ಮೃತರಾದವರು ಸ್ವರ್ಗದಲ್ಲಿ, ಬಹಳ ಆಹ್ಲಾದಕರವಾದ ಜೀವನವನ್ನು ಅನುಭವಿಸುತ್ತಾರೆ (೧೦-೧೪-೮; ೧೦-೧೫-೧೪; ೧೦-೧೬-೨, ೫); ಇಲ್ಲಿ ಎಲ್ಲಾ ಇಷ್ಟಾರ್ಥಗಳೂ ಕೈಗೊಡುತ್ತವೆ (೯-೧೧೩-೯, ೧೧); ದೇವತೆಗಳ ಮಧ್ಯದಲ್ಲಿ (೧೦-೧೪-೧೪), ಅದರಲ್ಲೆಯೂ ಯಮ ಮತ್ತು ವರುಣರ ಸನ್ನಿಧಿಯಲ್ಲಿ ಈರೀತಿ ಜೀವನ (೧೦-೧೪-೭). ವಾರ್ಧಕ್ಯವೆಂಬ ಮಾತೇ ಇಲ್ಲ (೧೦-೨೭-೨೧). ಸುಂದರವಾದ ದೇಹವಿಶಿಷ್ಟರಾಗಿ, ದೇವತೆಗಳಿಗೆ ಪ್ರಿಯರೂ, ಇಷ್ಟರೂ ಆಗುತ್ತಾರೆ (೧೦-೧೪-೮; ೧೦-೧೬-೫; ೧೦-೫೬-೧). ಅಲ್ಲಿ ತಂದೆ, ತಾಯಿ, ಮಕ್ಕಳು ಮೊದಲಾದವರನ್ನು ನೋಡುತ್ತಾರೆ (೪. ವೇ. ೬-೧೨೦-೩) ಮತ್ತು ಪತ್ನೀ ಪುತ್ರಾದಿಗಳೊಡನೆ ಪುನಃ ಮಿಲಿತರಾಗುತ್ತಾರೆ (೪. ವೇ. ೧೨-೩-೧೭). ಜೀವನದಲ್ಲಿ ಲೋಪದೋಷಗಳ ಲವಲೇಶವೂ ಇಲ್ಲ; ಅದರಂತೆ ಶಾರೀರಕ ಕಷ್ಟಗಳೂ ಇಲ್ಲ (೧೦-೧೪-೮; ೪. ವೇ. ೬-೧೨೦-೩). ರೋಗರುಜಿನಗಳೆಲ್ಲಾ ಭೂಮಿಯಲ್ಲೇ ಉಳಿದುಕೊಳ್ಳುತ್ತವೆ; ಕೈಕಾಲುಗಳು, ಸೊಟ್ಟ ಅಥವಾ ಕುಂಟು, ಇಂತಹ ದೋಷಗಳೇನೂ ಇಲ್ಲ (೪. ವೇ. ೩-೨೮-೫). ಆ ಲೋಕದಲ್ಲಿ ಸಂಪೂರ್ಣವಾದ ದೇಹದಿಂದ ಕೂಡಿರುತ್ತಾರೆ ಎಂದು ಅಥರ್ವವೇದ ಮತ್ತು ಶತಪಥ ಬ್ರಾಹ್ಮಣಗಳಲ್ಲಿ ಹೇಳಿದೆ.

ಮೃತರು ಸ್ವರ್ಗದಲ್ಲಿ ಸುಖವಾಗಿರುತ್ತಾರೆ, ಆನಂದಿಸುತ್ತಾರೆ (ಮದಂತಿ, ವಾದಯಂತೇ: ೧೦-೧೪-೧೦; ೧೦-೧೫-೧೪; ಇತ್ಯಾದಿ). ಸ್ವರ್ಗಜೀವನದ ಸೌಖ್ಯವು ಬಹಳ ವಿಶದವಾಗಿ ೯-೧೧೩-೭ರಿಂದ ೧೧ರಲ್ಲಿ ಕೊಟ್ಟಿದೆ. ಅಲ್ಲಿ ಬೆಳಕು ಸತತವಾಗಿರುತ್ತದೆ; ನೀರು ವೇಗವಾಗಿ ಹರಿಯುತ್ತದೆ; ಪ್ರವಾಹಕ್ಕೆ ಅಡ್ಡಿಯೇ ಇಲ್ಲ (ತೈ. ಬ್ರಾ ೩-೧೨-೨-೯ನ್ನು ಹೋಲಿಸಿ). ಅಲ್ಲಿ ಸ್ವಧಾರೂಪವಾದ (ಪಿತೃಗಳಿಗೆ ಅರ್ಪಿತವಾಗುವ ಆಹಾರ) ಆಹಾರವೂ, ತೃಪ್ತಿಯೂ ಉಂಟು; ಸಂತೋಷ, ಆನಂದ, ಇಷ್ಟಾರ್ಥಸಿದ್ಧಿ ಮೊದಲಾದವುಗಳಿಲ್ಲವೂ ಇವೆ. ಅಸ್ಪಷ್ಟವಾಗಿ ಆನಂದ, ಸಂತೋಷ ಎಂದು ಹೇಳಿರುವುದನ್ನು ಮುಂದೆ ವಿಷಯಸುಖವೆಂದು ವಿವರಿಸಿದೆ (ತೈ. ಬ್ರಾ. ೨-೪-೬-೬; ಶ. ಬ್ರಾ. ೧೦-೪-೪-೪ನ್ನು ಹೋಲಿಸಿ). ಅಥರ್ವವೇದದಲ್ಲಿ, ವಿಷಯ ಸುಖವು ಯಥೇಚ್ಛವಾಗಿ ಸಿಗುತ್ತದೆ ಎಂದು ಹೇಳಿದೆ (೪. ವೇ. ೪-೩೪-೨) ಭೂಮಿಯಲ್ಲಿ ಅನುಭವಿಸುವ ಅತ್ಯಂತ ಹೆಚ್ಚು ಸುಖಕ್ಕೆ ನೂರರಷ್ಟು ಹೆಚ್ಚು ಸುಖವು ಅಲ್ಲಿ ಅನುಭವಿಸಲ್ಪಡುತ್ತದೆ (ಶ. ಬ್ರಾ. ೧೪-೭-೧-೩೨, ೩೩). ಪುಣ್ಯಶಾಲಿಗಳಿರುವ ಆ ಲೋಕದಲ್ಲಿ, ವೇಣುನಾದವೂ ಮತ್ತು ಗಾನವೂ ಕೇಳಿಬರುತ್ತವೆ (೧೦-೧೩೫-೭); ಅವರಿಗೋಸ್ಕರ, ಸೋಮರಸ, ಘೃತ ಮತ್ತು ಜೇನುತುಪ್ಪಗಳು ಪ್ರವಹಿಸುತ್ತವೆ (೪. ವೇ. ೪-೩೪-೫, ೬; ಶ. ಬ್ರಾ. ೧೧-೫-೬-೪). ಸ್ವಚ್ಛವೂ, ನಾನಾ ವರ್ಣದವೂ, ಇಷ್ಟಾರ್ಥಪ್ರದಗಳೂ ಆದ ಗೋವುಗಳು ಸರ್ವದಾ ಸಿದ್ಧವಾಗಿರುತ್ತವೆ (ಕಾಮದುಘಾಃ ೪. ವೇ. ೪-೩೪-೪). ಅಲ್ಲಿ ಬಡವರು ಶ್ರೀಮಂತರು, ದೊಡ್ಡವರು ಚಿಕ್ಕ

ವರು ಎಂಬ ಭೇದವಿಲ್ಲ (ಅ. ವೇ. ೩-೨೯-೩). ಸಂಹಿತೆ ಮತ್ತು ಬ್ರಾಹ್ಮಣಗಳಲ್ಲಿ ವರ್ಣಿತವಾಗಿರುವ ಈ ಸ್ವರ್ಗಸುಖವು, ಉಪನಿಷತ್ತುಗಳಲ್ಲಿ, ಅಶಾಶ್ವತವೆಂದೂ ಉತ್ತಮವಲ್ಲವೆಂದೂ, ಅಮೃತತ್ವದ ತತ್ತ್ವವನ್ನು ತಿಳಿದ ವರಿಗೆ ಮಾತ್ರ, ಬ್ರಹ್ಮೈಕ್ಯವೂ, ತಜ್ಜನ್ಯವಾದ ಶಾಶ್ವತ ಸುಖವೂ ದೊರಕುತ್ತದೆ ಎಂತಲೂ ಉಕ್ತವಾಗಿದೆ. ಆದು ದರಿಂದ ಸತ್ಕರ್ಮ ಮಾಡಿದವರು ಮರಣಾನಂತರ, ಸ್ವರ್ಗಲೋಕದಲ್ಲಿ, ಸುಖಲೋಲುಪರಾಗಿ, ಸೋಮಾರಿಗಳಂತೆ ಕಾಲಕಳೆಯುತ್ತಾರೆ ಎಂದು ಭಾವನೆ.

ಸ್ವರ್ಗವು ಈ ಲೋಕಕ್ಕಿಂತಲೂ ಹೆಚ್ಚು ವೈಭವವಿಶಿಷ್ಟವಾದುದು ಮತ್ತು ವೈಷಯಿಕಸುಖಪೂರ್ಣವಾದುದು. ಆದು ಸತ್ಕರ್ಮಿಗಳ ಲೋಕ (೧೦-೧೬-೪); ಇಲ್ಲಿ ಕರ್ಮಜ್ಞಾನವುಳ್ಳವರು ಆನಂದದಿಂದ ಕಾಲ ಕಳೆಯುತ್ತಾರೆ. ತಾವು ಮಾಡಿದ ಹೋಮಗಳ ಮತ್ತು ಮಾಡಿದ ದಾನಗಳ ಫಲವನ್ನನುಭವಿಸುತ್ತಾರೆ, ಆದರ ಲ್ಲಿಯೂ ಋತ್ವಿಜರು ಮೊದಲಾದವರಿಗೆ, ಎಷ್ಟು ಹೆಚ್ಚಾಗಿ ದಾನಮಾಡಿದರೆ, ಸುಖವೂ ಅಷ್ಟು ಹೆಚ್ಚುತ್ತದೆ (೧೦-೧೫೪-೩). ವಿಹಿತವಾದ ರೀತಿಯಲ್ಲಿ ಯಜ್ಞಕರ್ಮಾನುಷ್ಠಾನ ಮಾಡಿದವರು, ಆದಿತ್ಯ ಮತ್ತು ಅಗ್ನಿ ಲೋಕಗಳು ಮಾತ್ರವಲ್ಲದೆ, ವಾಯು, ಇಂದ್ರ, ವರುಣ, ಬೃಹಸ್ಪತಿ, ಪ್ರಜಾಪತಿ, ಮತ್ತು ಬ್ರಹ್ಮಾ ಇವರುಗಳ ಲೋಕಗಳೊಡನೆ ಐಕ್ಯವನ್ನು ಪಡೆಯುತ್ತಾರೆ (ಶ. ಬ್ರಾ. ೨-೬-೪-೮; ೧೧-೪-೪-೨೧; ೧೧-೬-೨-೩, ೩; ತೈ. ಬ್ರಾ. ೩-೧೦-೧೧-೬). ಒಬ್ಬ ಋಷಿಯು ತನ್ನ ಜ್ಞಾನದ ಬಲದಿಂದ ಬಂಗಾರದ ಹಂಸರೂಪವನ್ನು ತಾಳಿ, ಸ್ವರ್ಗ ಲೋಕಕ್ಕೆ ಹೋಗಿ, ಸೂರ್ಯನೊಡನೆ ಐಕ್ಯವನ್ನು ಪಡೆದನೆಂದು (ತೈ. ಬ್ರಾ. ೩-೧೦-೯-೧೧) ಹೇಳಿದೆ. ತೈತ್ತಿರೀಯ ಸಂಹಿತೆಯಲ್ಲಿ—ಕೆಲವು ಕರ್ಮಗಳನ್ನು ಮಾಡಿದರೆ, ಮನುಷ್ಯನು ಈ ಭೌತಿಕ ದೇಹವಿಶಿಷ್ಟನಾಗಿಯೇ ಸ್ವರ್ಗವನ್ನು ಪಡೆಯುಬಹುದೆಂಬ ಅಭಿಪ್ರಾಯವಿದೆ (ತೈ. ಬ್ರಾ. ೬-೩-೯-೨).

ವೇದವನ್ನು ವಿಹಿತವಾದ ವಿಧಾನದಲ್ಲಿ ಅಭ್ಯಾಸಮಾಡಿದವರು ಜನನ ಮರಣಗಳ ಭಯರಹಿತರಾಗಿ, ಬ್ರಹ್ಮನೊಡನೆ ಸಮತ್ವವನ್ನು ಪಡೆಯಬಹುದು (ಶ. ಬ್ರಾ. ೧೦-೫-೬-೯). ಯಾವುದೋ ಒಂದು ರಹಸ್ಯ ವಿಷಯವನ್ನು ತಿಳಿದುದರ ಫಲವಾಗಿ, ಮನುಷ್ಯನು ಪುನಃ ಜನಿಸುತ್ತಾನೆ (ಶ. ಬ್ರಾ. ೧೦-೫-೩-೧೪). ಇವುಗಳಲ್ಲ ಪಾಪ ಫಲ ಮತ್ತು ದೇಹಾಂತರ ಪ್ರಾಪ್ತಿ ವಾದಗಳ ಪ್ರಾರಂಭವನ್ನು ಕಾಣಬಹುದು. ಛಾಂದೋಗ್ಯ, ಬೃಹದಾರಣ್ಯಕ, ಕಠ ಮೊದಲಾದ ಉಪನಿಷತ್ತುಗಳಲ್ಲಿ ಮತ್ತು ಸೂತ್ರಗಳಲ್ಲಿ ಇವುಗಳು ಸಂಪೂರ್ಣವಾಗಿ ಪ್ರತಿಪಾದಿತವಾಗಿವೆ. ಕಠೋಪನಿಷತ್ತಿನಲ್ಲಿ ನಚಿಕೇತನೆಂಬುವನ ಕಥೆಯಿದೆ; ಅದರಲ್ಲಿ ಮುಖ್ಯಭಾಗವು ನಚಿಕೇತ ಮತ್ತು ಯಮ ಇವರ ಸಂವಾದ. ಸ್ವರ್ಗ ಮತ್ತು ಮುಕ್ತಿಗಳಿಗೆ ಅರ್ಹತೆಯಿಲ್ಲದವರು ಪುನಃ ಪುನಃ ಮರಣಾಧೀನರಾಗಿ ಸಂಸಾರ ಚಕ್ರಕ್ಕೆ ಸಿಕ್ಕಿ, ದೇಹಧಾರಿಗಳಾಗಿ ಇಲ್ಲವೇ, ಜಡ ಪದಾರ್ಥವಾಗಿ ಭೂಮಿಯಲ್ಲಿ ಜನಿಸುತ್ತಾರೆ; ಆತ್ಮಸಂಯಮನ ಶಕ್ತಿಯುಳ್ಳವನು ವಿಷ್ಣುವಿನ ಲೋಕವನ್ನು ಸಾಧಿಸಬಲ್ಲನು; ಮುಕ್ತಿಯನ್ನು ಸಾಧಿಸಲು ಅಸಮರ್ಥರಾದ ವರಿಗೆ ನರಕವಿಲ್ಲ; ಎಂದು ಯಮನು ನಚಿಕೇತನಿಗೆ ಉಪದೇಶ ಮಾಡಿದಾನೆ.

ನರಕ.

ಸತ್ಪುರುಷರಿಗೆ ಅಮುಷ್ಮಿಕದಲ್ಲಿ ಸ್ವರ್ಗಾದಿ ಫಲವು ಲಭಿಸುತ್ತದೆ ಎಂದ ಮೇಲೆ, ಪಾಪಿಷ್ಠರಿಗೆ ಶಿಕ್ಷೆಯನ್ನು ವಿಧಿಸದಿದ್ದರೂ, ಅವರಿಗೆ ಪ್ರತ್ಯೇಕ ಸ್ಥಳವಿರಲೇಬೇಕು. ಅಥರ್ವವೇದ ಮತ್ತು ಕಠೋಪನಿಷತ್ತು ಇಂತಹವರು ನರಕದಲ್ಲಿ ತಮ್ಮ ಪಾಪ ಕರ್ಮಗಳ ಫಲವನ್ನನುಭವಿಸುತ್ತಾರೆ ಎಂದು ಸ್ಪಷ್ಟವಾಗಿ ಹೇಳಿದೆ. ಸ್ವರ್ಗಲೋಕಕ್ಕೆ ಪ್ರತಿಯಾಗಿ (ಅ. ವೇ. ೧೨-೪-೩೬) ಹೆಣ್ಣು ಪಿಶಾಚಿಗಳು ಮೊದಲಾದುವು ವಾಸಿಸುವ ನರಕ ಲೋಕ (ಅಧೋಲೋಕ)ವಿದೆ (ಅ. ವೇ ೨-೧೪-೩; ೫-೧೯-೩); ಈ ಲೋಕದಲ್ಲೇ ಕೊಲೆಪಾತಕನು ಶಿಕ್ಷೆಯನ್ನನುಭವಿಸುವುದು (ವಾ. ಸಂ. ೩೦-೫). ಅತ್ಯಂತ ತಗ್ಗಾದ ಪ್ರದೇಶದಲ್ಲಿ ತಮಸ್ಸು (ಅ. ವೇ. ೮-೨-೨೪;

ಇತ್ಯಾದಿ), ಅಂಧಕಾರಾವೃತವಾದ ತಮಸ್ಸು (ಅ. ವೇ. ೫-೩೦-೧೧), ಅಂಧಂತಮಸ್ಸು (ಅ. ವೇ. ೧೪-೩-೩) ಇತ್ಯಾದಿಗಳಾಗಿ ಈ ಲೋಕವು ವರ್ಣಿತವಾಗಿದೆ. ನರಕದ ದುಃಖಗಳು ಅ. ವೆ. ೫-೧೯ರಲ್ಲಿಯೂ, ಇನ್ನೂ ಹೆಚ್ಚು ವಿಶದವಾಗಿ ಶ. ಬ್ರಾ. ೧೧-೬-೧ರಲ್ಲಿಯೂ ವರ್ಣಿತವಾಗಿವೆ. ಅದೇ ಬ್ರಾಹ್ಮಣದಲ್ಲಿ ಹೀಗೆ ಹೇಳಿದೆ. ಪ್ರತಿಯೊಬ್ಬನೂ ಮರಣಾನಂತರ ಪುನಃ ಜನಿಸುತ್ತಾನೆ; ಅವನ ಕರ್ಮಗಳನ್ನು ತಕ್ಕಡಿಯಲ್ಲಿ ತೂಕ ಮಾಡುತ್ತಾರೆ; ಸತ್ಕರ್ಮ ದುಷ್ಕರ್ಮಾನುಸಾರವಾಗಿ ಸುಖದುಃಖಗಳನ್ನು ಅನುಭವಿಸುತ್ತಾನೆ (ಶ. ಬ್ರಾ. ೧೧-೨-೭-೩೩; ೧೨-೯-೧-೧ನ್ನು ಹೋಲಿಸಿ). ಆದರೆ, ಋಗ್ವೇದದಲ್ಲಿಯೂ, ಇಂತಹದೊಂದು ದುಃಖಾನುಭವ ಪ್ರದೇಶವಿದೆ ಯೆಂಬುದಕ್ಕೆ ಆಧಾರವಿಲ್ಲದೇ ಇಲ್ಲ. (ಇದಂಗಭೀರಂ ಪದಂ) 'ಈ ಆಳವಾದ ಪ್ರದೇಶವು ಪಾಪಿಷ್ಠರು, ಅನೃತವಾದಿಗಳು ಮತ್ತು ಅಸತ್ಯವಂತರಿಗೋಸ್ಕರ ಸೃಜಿಸಲ್ಪಟ್ಟಿದೆ (೪-೫೫-೫). ಪಾಪಿಷ್ಠರನ್ನು ಪಾತಾಳ ಲೋಕಕ್ಕೆ, ಅಗಾಧವಾದ ತಮಸ್ಸಿಗೆ, ಅವರಲ್ಲಿ ಒಬ್ಬರೂ ಮೇಲಕ್ಕೆ ಏಳದಂತೆ ಎಸೆಯಬೇಕೆಂದು ಇಂದ್ರಾ-ಸೋಮರು ಪ್ರಾರ್ಥಿತರಾಗಿದಾರೆ (೭-೧೦೪-೩); ಗೂಬೆಯಂತೆ, ಯಾರಿಗೂ ಕಾಣಿಸದ ರೀತಿಯಲ್ಲಿ ಸಂಚರಿಸುವ ರಾಕ್ಷಸಿಯೂ ತಮಸ್ಸಿನಲ್ಲಿ ಬೀಳಲಿ (೭-೧೦೪-೧೭); ದ್ವೇಷಿ ಮತ್ತು ದರೋಡೆಕೋರರೂ ಮೂರು ಪೃಥಿವಿಗಳಗೂ ಕೆಳಭಾಗದಲ್ಲಿ ಬೀಳಲಿ (೭-೧೦೪-೧೧). ಈ ವಾಕ್ಯಗಳು, ಭೂಮಿಗೆ ಕೆಳಭಾಗದಲ್ಲಿ ಒಂದು ಅಂಧಕಾರಾವೃತವಾದ ಪ್ರದೇಶವಿದೆಯೆಂದು ಮಾತ್ರ ತಿಳಿಸುತ್ತವೆ. ಭೂಲೋಕದ ಸುಖವೇ ಮುಖ್ಯ ಉದ್ದೇಶವೇ ಹೊರತು, ಮರಣಾನಂತರದ ಸುಖದುಃಖಗಳು ಅಷ್ಟಾಗಿ ಮುಖ್ಯವಲ್ಲ. ಬ್ರಾಹ್ಮಣಗಳಲ್ಲಿ, ಸತ್ಕರ್ಮ ಮಾಡಿದವರೂ ಮತ್ತು ದುಷ್ಕರ್ಮ ಮಾಡಿದವರೂ ಪುನಃ ಮತ್ತೊಂದು ಲೋಕದಲ್ಲಿ ಜನಿಸಿ, ತಮ್ಮ ತಮ್ಮ ಕರ್ಮಗಳ ಫಲಗಳನ್ನು ಅನುಭವಿಸುತ್ತಾರೆ (ಶ. ಬ್ರಾ. ೬-೨-೨-೨೭; ೧೦-೬-೩-೧)' ಎಂದು ಹೇಳಿದೆಯೇ ಹೊರತು, ಈ ಬಹುಮಾನ ಅಥವಾ ಶಿಕ್ಷೆಗಳ ಕಾಲಾವಧಿಯನ್ನು ಸೂಚಿಸಿಲ್ಲ. ಯಜ್ಞಾಂಗ ಕರ್ಮಗಳ ವಿಧಾನವನ್ನು ಸರಿಯಾಗಿ ತಿಳಿದು, ಆಚರಿಸದೇ ಇರುವವರು, ಭೂಲೋಕದಲ್ಲಿ, ತಮಗೆ ನಿಯತವಾದ ಕಾಲಕ್ಕಿಂತ ಮುಂಚೆಯೇ ಬೇರೆ ಲೋಕಕ್ಕೆ ತೆರಳುತ್ತಾರೆ (ಶ. ಬ್ರಾ. ೧೧-೨-೭-೩೩) ಎಂಬುದೂ ಒಂದು ನಂಬಿಕೆ.

ಮರಣಾನಂತರ, ಪ್ರತಿಯೊಬ್ಬನೂ ತನ್ನ ತನ್ನ ಕರ್ಮಾನುಸಾರವಾಗಿ ಒಳ್ಳೆಯವನನು ಅಥವಾ ಕೆಟ್ಟವನೆಂಬ ತೀರ್ಪಿಗೆ ಒಳಗಾಗುತ್ತಾನೆ ಎಂಬ ನಂಬಿಕೆಗೆ ವೇದಗಳಲ್ಲಿ ಆಧಾರವಿಲ್ಲವೆನ್ನಬಹುದು. ಮೇಲೆ ಉದಹರಿಸಿರುವ ಒಂದೆರಡು ವಾಕ್ಯಗಳೂ ಸ್ಪಷ್ಟವಾಗಿಲ್ಲ. ತೈತ್ತಿರೀಯಾರಣ್ಯಕದಲ್ಲಿ (ತೈ. ಆ. ೬-೫೫-೧೩), ಯಮನು ಸನ್ಮಾರ್ಗಗಾಮಿಗಳನ್ನೂ, ಅಸನ್ಮಾರ್ಗಗಾಮಿಗಳನ್ನೂ ವಿಂಗಡಿಸುತ್ತಾನೆ ಎಂದು ಹೇಳಿದೆಯೇ ಹೊರತು, ಅವನೇ ಈ ನಿರ್ಣಯಮಾಡುವುದಕ್ಕೆ ಪರಮಾಧಿಕಾರವುಳ್ಳವನೆಂದು ಹೇಳಿಲ್ಲ.

ಪಿತೃಗಳು

ಮೃತರಾದವರಲ್ಲಿ ಪುಣ್ಯಶಾಲಿಗಳು ಮೂರನೆಯ ಸ್ವರ್ಗದಲ್ಲಿ ವಾಸಿಸುತ್ತಾರೆ; ಇವರಿಗೇ ಪಿತೃಗಳೆಂದು ಹೆಸರು. ಪುರಾತನವಾದ ಮಾರ್ಗಗಳನ್ನು ಅನುಸರಿಸಿದ, ಮೂಲಪುರುಷರೇ ಇವರು (೧೦-೧೫-೮, ೧೦); ಮೃತರಾದವರು, ಈ ಋಷಿಗಳು ಏರ್ಪಡಿಸಿದ ದಾರಿಯನ್ನೇ ಅನುಸರಿಸಿ, ಅವರ ಸಮೀಪಕ್ಕೇ ಹೋಗುತ್ತಾರೆ (೧೦-೧೪-೨, ೭, ೧೫). ವಿಷ್ಣುವಿನ ಮೂರನೆಯ ಪಾದಕ್ಕೆ ಸಂಬಂಧಿಸಿದಾರೆ (೧೦-೧೫-೩; ೧-೧೫೪-೫ನ್ನು ಹೋಲಿಸಿ). ಎರಡು ಸೂಕ್ತಗಳು ಪಿತೃದೇವತಾಕವಾದವು. (೧೦-೧೫; ೧೦-೫೪).

ಪಿತೃಗಳಲ್ಲಿ, ನವಗ್ವರು, ವಿರೂಪರು, ಅಂಗಿರಸರು, ಅಥರ್ವರು, ಭೃಗುಗಳು ಮತ್ತು ವಸಿಷ್ಠರೆಂಬ (೧೦-೧೪-೪ರಿಂದ ೬; ೧೦-೧೫-೮) ಗಣಗಳಿವೆ; ಇವುಗಳಲ್ಲಿ ಕಡೆಯ ನಾಲ್ಕು ಹೆಸರುಗಳು, ಅಥರ್ವವೇದ ಮತ್ತು ಋಗ್ವೇದದ ಎರಡನೆಯ ಮತ್ತು ಏಳನೆಯ ಮಂಡಲಗಳ ಋಷಿಗಳ ಹೆಸರುಗಳೇ ಆಗಿವೆ. ಇವರಲ್ಲಿ

ಅಂಗಿರಸರಿಗೂ ಯಮನಿಗೂ ವಿಶೇಷ ಸಂಬಂಧವಿದೆ (೧೦-೧೪-೩,೫) ಪಿತೃಗಳಲ್ಲಿ ಅವರಾಃ (ಕೆಳ ದರ್ಜೆಯವರು), ಪರಾಃ (ಉತ್ತಮ ದರ್ಜೆಯವರು) ಮತ್ತು ಮಧ್ಯಮಾಃ (ಮಧ್ಯ ದರ್ಜೆಯವರು) ಎಂತಲೂ ವಿಭಾಗಗಳಿವೆ; ಇವರೆಲ್ಲರೂ ಅವರ ವಂಶಜರಿಂದ ಜ್ಞಾತರಲ್ಲದಿದ್ದರೂ, ಅಗ್ನಿಗೆ ಇವರೆಲ್ಲರ ಪರಿಚಯವೂ ಇದೆ (೧೦-೧೫-೧, ೨, ೧೩). ಉಷಸ್ಸುಗಳು, ನದಿಗಳು, ಪರ್ವತಗಳು, ಭೂಮ್ಯಾಕಾಶಗಳು, ಪೂಷಣ ಮತ್ತು ಋಭುಗಳು, ಇವರುಗಳ ಜೊತೆಯಲ್ಲಿ ಪಿತೃಗಳ ಅನುಗ್ರಹವೂ ಪ್ರಾರ್ಥಿತವಾಗಿದೆ (೬-೫೨-೪; ೬-೭೫-೧೦; ೭-೩೫-೧೨; ೧-೧೦೬-೩). ಅವರ ಕಟಾಕ್ಷವನ್ನು ಬೇಡುವ (೧೦-೧೪-೬) ಅವರ ವಂಶಜರಿಗೆ, ಸಂಪತ್ತು, ಸಂತಾನ ಮತ್ತು ದೀರ್ಘಾಯುಸ್ಸುಗಳನ್ನು ಕೊಡಬೇಕೆಂದು ಪ್ರಾರ್ಥನೆ (೧೦-೧೫-೭, ೧೧; ಅ. ವೇ. ೧೮-೩-೧೪; ೧೮-೪-೬೨). ತಮ್ಮ ವಂಶೀಕರಿಗೆ ಸಹಾಯಮಾಡಬೇಕೆಂದು ವಸಿಷ್ಠರನ್ನು ಪ್ರಾರ್ಥಿಸಿದೆ (೭-೩೩-೧; ೧೦-೧೫-೪ನ್ನು ಹೋಲಿಸಿ); ತುರುಷ್ಪ, ಯದು ಮತ್ತು ಉಗ್ರದೇವ ಎಂಬುವರು ಒಂಟಿಯಾಗಿಯೂ ಸ್ತುತರಾಗಿದ್ದಾರೆ (೧-೩೬-೧೮).

ಪಿತೃಗಳೂ ಅಮರರು (ಅ. ವೇ. ೬-೪೧-೩); ದೇವತೆಗಳಿಂತಲೂ ಕರೆಯಲ್ಪಟ್ಟಿದ್ದಾರೆ (೧೦-೫೬-೪). ಅಂಗಿರಸರು ಮತ್ತು ಕೆಲವು ಗಣಗಳಲ್ಲಿ, ದೇವತ್ವದ ಜೊತೆಗೆ ಋತ್ವಿಜತ್ವವೂ ಸೇರಿದೆ. ಸೃಷ್ಟಿಕಾರ್ಯಗಳು ಕೆಲವು ಪಿತೃಗಳಿಗೂ ಉಕ್ತವಾಗಿವೆ: ಆಕಾಶವನ್ನು ನಕ್ಷತ್ರರಂಜಿತವನ್ನಾಗಿ ಮಾಡಿದವರು ಅವರೇ; ಹಗಲು ಹೊತ್ತಿನಲ್ಲಿ ಬೆಳಕೂ, ರಾತ್ರಿ ಕತ್ತಲೂ, ಅವರಿಂದಲೇ ಆಯಿತು (೧೦-೬೮-೧೧); ಅಡಗಿಕೊಂಡಿದ್ದ ಬೆಳಕನ್ನು ಕಂಡು ಹಿಡಿದು, ಉಷಸ್ಸನ್ನು ಉಂಟುಮಾಡಿದರು (೭-೭೬-೪; ೧೦-೧೦೭-೧ನ್ನು ಹೋಲಿಸಿ); ಮತ್ತು ಸೋಮನೊಡನೆ ಸೇರಿಕೊಂಡ, ಭೂಮ್ಯಾಕಾಶಗಳನ್ನು ವಿಸ್ತರಿಸಿದರು. (೮-೪೮-೧೩). ದೇವತೆಗಳಿಗೆ ಹೋಮದ್ರವ್ಯವನ್ನು ವಹಿಸುವ ಅಗ್ನಿಗೂ (ಹವ್ಯವಾಹ) ಮತ್ತು ಶವನನ್ನು ದಹಿಸುವ ಅಗ್ನಿಗೂ (ಕ್ರವ್ಯಾದ) ವ್ಯತ್ಯಾಸವಿರುವಂತೆ (೧೦-೧೬-೯), ದೇವಮಾರ್ಗ ಪಿತೃಮಾರ್ಗಗಳಿಗೂ ವ್ಯತ್ಯಾಸವಿದೆ (೧೦-೨-೭; ೧೦-೧೪-೧; ೧೦-೪೪-೧೫ನ್ನು ಹೋಲಿಸಿ). ಆದೇ ರೀತಿ, ಸ್ವರ್ಗಲೋಕಕ್ಕೂ ಪಿತೃಲೋಕಕ್ಕೂ ಭೇದವು ಉಕ್ತವಾಗಿದೆ; ದೇವಲೋಕದ ದ್ವಾರವು ಈಶಾನ್ಯ ದಿಕ್ಕಿನಲ್ಲಿಯೂ (ಶ. ಬ್ರಾ. ೬-೬-೨-೯), ಪಿತೃಲೋಕ ದ್ವಾರವು ಆಗ್ನೇಯದಲ್ಲಿಯೂ (ಶ. ಬ್ರಾ. ೧೩-೮-೧-೫) ಇವೆಯೆಂದು ಉಕ್ತವಾಗಿದೆ. ಪಿತೃಗಳೂ ಮನುಷ್ಯರೂ ಬೇರೆ ಬೇರೆ ವರ್ಗದವರು ಮತ್ತು ಸೃಷ್ಟಿಯೂ ಬೇರೆ ಬೇರೆ (ತೈ. ಬ್ರಾ. ೨-೩-೮.೨). ಪಿತೃಗಳು ಭೂಮಿ, ಆಂತರಿಕ್ಷ ಮತ್ತು ಸ್ವರ್ಗವಾಸಿಗಳು (ಅ. ವೇ. ೧೮-೨-೪೯; ಋ. ವೇ. ೧೦-೧೫೨ನ್ನು ಹೋಲಿಸಿ).

ಪುರಾತನ ಪಿತೃಗಳೇ ಒಂದು ಸಲ ಸೋಮಾಹುತಿಯನ್ನು ಅರ್ಪಿಸಿದರು (೧೦-೧೫-೮). ಅವರು ಯಮನೊಡನೆ ಸಂತೋಷದಿಂದ ಕಾಲಕಳೆಯುತ್ತಾರೆ (೧೦-೧೪-೧; ೧೦-೧೩೫-೧ ಮತ್ತು ಅ. ವೇ. ೧೮-೪-೧೧ ಗಳನ್ನು ಹೋಲಿಸಿ) ಮತ್ತು ದೇವತೆಗಳೊಡನೆ ಭೋಜನ ಮಾಡುತ್ತಾರೆ (೭-೭೬-೪). ದೇವತೆಗಳಿಗೆ ಸಮಾನರಾಗಿ ಜೀವಿಸುತ್ತಾ, ಒಂದೊಂದು ಸಲ ದೇವತೆಗಳಿಗೆ ಯೋಗ್ಯವಾದ ಪೂಜೆಗಳನ್ನೂ ಪಡೆಯುತ್ತಾರೆ. ಇಂದ್ರ ಮತ್ತು ದೇವತೆಗಳಿಗೆ ಯೋಗ್ಯವಾದ ಪೂಜೆಗಳನ್ನೂ ಪಡೆಯುತ್ತಾರೆ. ಇಂದ್ರ ಮತ್ತು ದೇವತೆಗಳೆ ರಥದಲ್ಲಿಯೇ ಅವರೂ ಬರುತ್ತಾರೆ (೧೦-೧೫-೧೦). ಅವರಿಗೂ ಸೋಮರಸದಲ್ಲಿ ಅಭಿಲಾಷೆ (೧೦-೧೫-೫, ೬); ದರ್ಭಾಸನದಲ್ಲಿ ದಕ್ಷಿಣಾಭಿಮುಖವಾಗಿ ಕುಳಿತು, ಸುತವಾದ ಪಾನೀಯವನ್ನು ಪಾನಮಾಡುತ್ತಾರೆ (೧೦-೧೫-೫, ೬). ತಮಗೋಸ್ಕರ ಸಿದ್ಧವಾದ ಸೋಮರಸವನ್ನು ಪಾನಮಾಡಲು ಆತುರರಾಗಿದ್ದಾರೆ; ಯಮ ಅವನ ತಂದೆ ವಿವಸ್ವತ ಮತ್ತು ಅಗ್ನಿಗಳೊಡನೆ ಬಂದು, ಅವರೊಡನೆಯೇ, ಹುತವಾದವುಗಳನ್ನು ಸ್ವೀಕರಿಸಬೇಕೆಂದು ಅವರಿಗೆ ಆಹ್ವಾನವಿದೆ (೧೦-೧೫-೮ರಿಂದ ೧೧; ೧೦-೧೪-೪, ೫). ಸಾವಿರಗಟ್ಟಲೆ ಬಂದು, ದರ್ಭಾಸನದಲ್ಲಿ ಕ್ರಮವಾಗಿ ಕುಳಿತು

ಕೊಳ್ಳುತ್ತಾರೆ (೧೦-೧೫-೧೦, ೧೧) ಪಿತೃಗಳು ಯಾಗಶಾಲೆಗೆ ಬಂದಾಗ, ಕೆಲವು ಪಿಶಾಚಿಗಳೂ, ಅವರ ಸ್ನೇಹಿತರ ರೂಪದಲ್ಲಿ, ಅವರೊಡನೆ ಬೆರೆಯುವುದುಂಟು. (ಅ. ವೇ. ೧೪-೨-೨೬).

ದೇವತೆಗಳಿಗೆ ಆಹಾರವು ಅರ್ಪಿತವಾಗುವಾಗ 'ಸ್ವಾಹಾ' ಎಂತಲೂ, ಪಿತೃಗಳಿಗೆ ಕೊಡುವಾಗ 'ಸ್ವಧಾ' ಎಂತಲೂ (೧೦-೧೪-೩) ಹೇಳುತ್ತಾರೆ; ಎಲ್ಲಾ ಕರ್ಮಗಳಲ್ಲಿಯೂ ದೇವ ಮತ್ತು ಪಿತೃಭಾಗಗಳಿಗೆ ಈ ವ್ಯತ್ಯಾಸ ವಿದ್ದೇ ಇರಬೇಕು (ಶ. ಬ್ರಾ. ೪-೪-೨-೨). ಅವರಿಗೂ ಪೂಜೆಯುಂಟು, ಅನುಯಾಯಿಗಳ ಪ್ರಾರ್ಥನೆಯನ್ನು ಆಲಿಸಿ, ಅವರ ಪಕ್ಷವನ್ನು ವಹಿಸಬೇಕು, ಸ್ವಾಭಾವಿಕವಾಗಿ ನಡೆದುಹೋಗುವ ಪ್ರಮಾದಗಳನ್ನು ಮನ್ನಿಸಬೇಕು ಇತ್ಯಾದಿ ಪ್ರಾರ್ಥನೆ (೧೦-೧೫-೨, ೫, ೬; ೩-೪೫-೨ನ್ನು ಹೋಲಿಸಿ).

ಯಮ.

ಮೃತರಲ್ಲಿ ಪುಣ್ಯವಂತರಿಗೆಲ್ಲಾ ಯಮನು ಮುಖಂಡನು. ವೇದಗಳಲ್ಲಿ ಪರಲೋಕದ ವಿಷಯವೇ ಹೆಚ್ಚು ಪ್ರಸಕ್ತಿಯಿಲ್ಲದಿರುವುದರಿಂದ, ಯಮನನ್ನು ಸ್ತುತಿಸುವುದು ಮೂರೇ ಸೂಕ್ತಗಳಲ್ಲಿ (೧೦-೧೪, ೧೩೫, ೧೩೫). ಮತ್ತೊಂದರಲ್ಲಿ (೧೦-೧೦), ಯಮ ಮತ್ತು ಅವನ ಸೋದರಿ ಯಮಿಗೆ ನಡೆದ ಸಂವಾದವಿದೆ. ಯಮನ ಹೆಸರು ಸುಮಾರು ಐವತ್ತು ಕಡೆ ಸಾಧಾರಣವಾಗಿ ಒಂದು ಮತ್ತು ಹತ್ತನೆಯ ಮಂಡಲಗಳಲ್ಲಿ, ಅದರಲ್ಲೂ ಹತ್ತನೆಯ ಮಂಡಲದಲ್ಲಿಯೇ ವಿಶೇಷವಾಗಿ ಬಂದಿದೆ.

ಅವನು ದೇವತೆಗಳೊಡನೆ ಕ್ರೀಡಾಮಗ್ನನಾಗಿರುತ್ತಾನೆ (೭-೫೫-೪; ೧೦-೧೩೫-೧). ವರುಣ (೧೦-೧೪-೭), ಬೃಹಸ್ಪತಿ (೧೦-೧೩-೪; ೧೦-೧೪ ೩), ಮತ್ತು ವಿಶೇಷವಾಗಿ ಸವಿತೃವನ್ನು ಬೇರೆ ಲೋಕಗಳಿಗೆ ಸಾಗಿಸುವ ಅಗ್ನಿ, ಇವರುಗಳೊಡನೆ ಉಕ್ತನಾಗಿದ್ದಾನೆ. ಅಗ್ನಿಯು ಯಮನ ಸ್ನೇಹಿತ (೧೦—೮೫-೪) ಮತ್ತು ಪುರೋಹಿತ (೧೦-೧೪೨-೩). ಒಬ್ಬ ದೇವತೆ ಮತ್ತು ಯಮ (ಇಬ್ಬರೂ ಒಂದೇ ಎಂದು ಸೂಚಿತವಾಗುತ್ತದೆ)ನೂ ಸೇರಿ, ಅಡಗಿಕೊಂಡಿದ್ದ ಅಗ್ನಿಯನ್ನು ಕಂಡುಹಿಡಿದರು (೧೦ ೫೧-೩). ಅಗ್ನಿ, ಯಮ ಮತ್ತು ಮಾತರಿಶ್ವ ಇವು ಮೂರೂ ಒಬ್ಬನ ಹೆಸರುಗಳು (೧-೧೬೪-೧೬). ಅಗ್ನಿ ಮೊದಲಾದ ದೇವತೆಗಳ ಪಟ್ಟಿಯಲ್ಲಿ ಯಮನೂ ಸೇರಿದ್ದಾನೆ (೧೦-೬೪-೫; ೧೦-೯೨ ೧೧).

ಈ ಮೇಲೆ ಹೇಳಿದ ವಾಕ್ಯಗಳಿಂದ ಯಮನು ಒಬ್ಬ ದೇವತೆಯೆಂದು ಊಹಿಸಬಹುದು. ದೇವತೆ ಎಂದು ಸ್ಪಷ್ಟವಾಗಿ ಕರೆದಿಲ್ಲ; ಮೃತರಾದವರಿಗೆ ರಾಜನೆಂದು ಹೇಳಿದೆ (ಯಮೋ ರಾಜೋದ್ಯತ ೧೦-೧೪-೯). ಸತ್ತ ನಂತರ, ಜೀವನು ಕಾಣುವುದು. ಯಮ ಮತ್ತು ವರುಣದೇವ ಇವರಿಬ್ಬರನ್ನು (೧೦-೧೪-೭). ಒಂದು ಸೂಕ್ತ ಪ್ರೌರ್ತಿಯಾಗಿ (೧೦-೧೪). ಯಮ ಮತ್ತು ಪಿತೃಗಳಿಗಿರುವ ಸಂಬಂಧದಲ್ಲಿ ಅದರಲ್ಲಿಯೂ ಅಂಗಿರಸರಿಗೆ ಉಕ್ತವಾಗಿದೆ. ಯಮನು ಅವರೊಡನೆ ಯಾಗಕ್ಕೆ ಬರುತ್ತಾನೆ ಮತ್ತು ಸಂತೋಷಪಡುತ್ತಾನೆ (೧೦-೧೪-೩, ೪; ೧೦-೧೫-೮). ಬಂಗಾರದಂತೆ ಕಣ್ಣುಗಳೂ, ತಬ್ಬಿಣದ ಗೊರಸೂ ಉಳ್ಳ ಅವನ ಅಶ್ವಗಳ ವಿಷಯವು ಪ್ರಸ್ತಾಪಿತವಾಗಿದೆ (ತೈ. ಆ. ೬-೫-೨; ತಪ. ಶ್ರೌ. ಸೂ. ೧೬-೬). ಅವನು ಜನಗಳನ್ನೆಲ್ಲಾ ಒಂದುಗೂಡಿಸುವವನು (೧೦-೧೪-೧), ಮೃತರಾದವರಿಗೆ ವಿಶ್ರಾಂತಿ ಸ್ಥಾನವನ್ನು ಕಲ್ಪಿಸುತ್ತಾನೆ (೧೦-೧೪-೯; ಅ. ವೇ. ೧೪-೨-೩೭;) ಮತ್ತು ಅವನಿಗೆ ಒಂದು ಪ್ರತ್ಯೇಕ ವಾಸಗೃಹವನ್ನು ಕಲ್ಪಿಸುತ್ತಾನೆ (೧೦-೧೪ ೧೩).

ಯಮನ ಸ್ಥಾನವು ಆಕಾಶದ ಒಂದು ಮೂಲೆಯಲ್ಲಿದೆ (೯-೧೧೩-೪). ಮೂರು ಸ್ವರ್ಗಗಳಲ್ಲಿ, ಎರಡು ಸವಿತೃವಿಗೂ, ಒಂದು ಯಮನಿಗೂ ಸೇರಿದೆ (೧-೩೫-೬; ೧-೧೫೫-೬ನ್ನು ಹೋಲಿಸಿ); ಯಮನ ಲೋಕವೇ ಮೂರನೆಯದು ಮತ್ತು ಅತ್ಯುನ್ನತವಾದುದು. ವಾಜಸನೇಯ ಸಂಹಿತೆಯಲ್ಲಿ (೧೯-೬೩), ಯಮನು ಯಮಿಯೊಡಗೂಡಿ, ಈ ಅಂತ್ಯದ ಎತ್ತರದಲ್ಲಿ ಸ್ವರ್ಗದಲ್ಲಿ ವಾಸಿಸುತ್ತಾನೆ ಎಂದಿದೆ. ಅವನ ಈ ಸ್ಥಾನದಲ್ಲಿ—

ಇದೇ ದೇವತೆಗಳ ಸ್ಥಾನವೂ ಹೌದು.—ಯಮನ ಸುತ್ತಲೂ ವೇಣುನಾದವೂ, ಗಾನವೂ ಕೇಳಿಬರುತ್ತವೆ (೧೦-೧೩೫-೭).

ಯಮನಿಗೋಸ್ಕರ ಸೋಮರಸವು ಸಿದ್ಧಪಡಿಸಲ್ಪಡುತ್ತದೆ; ಅವನಿಗೆ ಘೃತವು ಅರ್ಪಿತವಾಗುತ್ತದೆ (೧೦-೧೪-೧೩, ೧೪); ಮತ್ತು ಯಾಗಶಾಲೆಗೆ ಬಂದು, ಆಸನದಲ್ಲಿ ಆಸೀನನಾಗಬೇಕೆಂದು ಪ್ರಾರ್ಥನೆ (೧೦-೧೪-೪) ಇದೆ.

ವಿವಸ್ವತನು ಅವನ ಜನಕ (೧೦-೧೪-೫) ಮತ್ತು ಸರಣ್ಯು ಎಂಬುವಳು ತಾಯಿಯೆಂದು ಉಕ್ತವಾಗಿದೆ (೧೦-೧೭-೧). ಅನೇಕ ಸಲ ವೈವಸ್ವತನೆಂದು ಕರೆದಿದೆ (೧೦-೧೪-೧; ಇತ್ಯಾದಿ). ಅವನಿಗೆ ಅಧಿಕರಾರೂ ಇಲ್ಲದುದರಿಂದ, ಯಮನೇ ವಿವಸ್ವತನಿಗಿಂತ ಶ್ರೇಷ್ಠನು (ಅ. ವೇ. ೧೮-೩-೩೨; ೧೮-೩-೬೧, ೬೨ಗಳನ್ನು ಹೋಲಿಸಿ).

ಯಮ ಯಮಿಗಳ ಸಂವಾದದಲ್ಲಿ ತಾವಿಬ್ಬರೂ ಗಂಧರ್ವ ಮತ್ತು ಜಲದೇವತೆಯ (ಅಪ್ಯಾ ಯೋಷಾ) ಮಕ್ಕಳೆಂದು ಹೇಳಿಕೊಂಡಿದಾರೆ (೧೦-೧೦-೪). ಯಮನೊಬ್ಬನೇ ಮರ್ತ್ಯನೆಂದು ಯಮಿಯು ಹೇಳುತ್ತಾಳೆ (೧೦-೧೦-೩). ಯಮನು ದೇಹವನ್ನು ತ್ಯಜಿಸಿ, ಮೃತ್ಯುವನ್ನೇ ಅಪೇಕ್ಷಿಸಿದನೆಂದು ಇದೆ (೧೦-೧೩-೪). ಅವನು ಅನಂತರ ಬರುವ ಅನೇಕರಿಗೆ ದಾರಿಯನ್ನು ತೋರಿಸುತ್ತಾ, ದೂರ ಲೋಕಕ್ಕೆ ಹೋದನು; ಇಲ್ಲಿಗೇ ಪುರಾತನರಾದ ಪಿತೃಗಳೂ ಹೋಗಿರುವುದು (೧೦-೧೪-೧,೨). ಅವನೇ ಮೃತರಾದ ಮರ್ತ್ಯರಿಗೆಲ್ಲಾ ಮೊದಲಿನವನು (ಅ. ವೇ. ೧೮-೩-೧೩). ಇಲ್ಲಿ ಮರ್ತ್ಯರೆಂದರೆ ಮನುಷ್ಯರೇ ಇರಬೇಕು; ಆದರೆ, ಬೇರೆ ಕೆಲವು ಸಂದರ್ಭಗಳಲ್ಲಿ, ಮರ್ತ್ಯರದದಿಂದ ದೇವತೆಗಳೂ ಉದ್ದಿಷ್ಟರಾಗಿದ್ದಾರೆ. ಸತ್ತವರಲ್ಲಿ ಮೊದಲನೆಯವನೂ, ಬಹಳ ಪುರಾತನನೂ ಆದುದರಿಂದ, ಎಲ್ಲರಿಗೆಲ್ಲಾ ಒಡೆಯನೆನ್ನಿಸಿಕೊಳ್ಳುವುದು ಸ್ವಾಭಾವಿಕವೇ. ಅವನಿಗೆ ಪಶ್ಪತಿ (ನೆಲಸಿದವರೆಲ್ಲರ ಒಡೆಯ), ನಮ್ಮ ತಂದೆ ಎಂಬ ವಿಶೇಷಣಗಳಿವೆ (೧೦-೧೪೫-೧). ಯಮನ ಮೂಲಕವೇ, ಮುಂದೆ ಮನುಷ್ಯರಿಗೆಲ್ಲಾ, ವಿವಸ್ವಾನ್ ಆದಿತ್ಯನ ವಂಶಜರೆಂಬ ನಾಮಧೇಯವು ಬಂದಿರುವುದು (ತೈ. ಸಂ. ೬-೫-೬-೫; ಶ. ಬ್ರಾ. ೩-೧-೩-೪ ಮತ್ತು ಋ. ವೇ. ೧-೧೮೫-೪ಗಳನ್ನು ಹೋಲಿಸಿ). ಯಮನಿಂದ ಪತ್ತವಾದ 'ಆಕಾಶದಲ್ಲಿ ಸಂಚರಿಸುವ ಅಸ್ತ್ರ'ವು, ಸಮರದಾಗತಕ್ಷತ್ರಿಯರಿಗೆ ಯಮನು ಕೊಡುವ ಸ್ವರ್ಗವೇ ಇರಬಹುದು (೧೦-೧೬೫-೩; ೧೦-೪೫-೫೫ನ್ನು ಹೋಲಿಸಿ); ಹೀಗೆಯೇ ಯಮನಿಗೂ ಆದಿತ್ಯನಿಗೂ ಸಂಬಂಧವು ಋಗ್ವೇದದಲ್ಲಿಯೂ ಉಕ್ತವಾಗಿದೆಯನ್ನಬಹುದು.

ಮೃತ್ಯುವೇ ಯಮನ ಮಾರ್ಗ (೧-೩೮-೫) ಮತ್ತು ಒಂದು ಪಲ (೧೦೮೫-೪; ವೈ. ಸಂ. ೩-೫-೬ ಮತ್ತು ಅ. ವೇ. ೬-೨೮-೩೧ ಮತ್ತು ೬-೯೩-೧ಗಳನ್ನು ಹೋಲಿಸಿ) ಅವನೇ ಮೃತ್ಯುವೆಂತಲೂ ಹೇಳಿದೆ. ಯಮನು ಉಪಯೋಗಿಸುವ ಶೃಂಖಲೆಗಳು ಮರಣ ಪಾಶಕ್ಕೆ ಉಪಮಿತವಾಗಿವೆ (೧೦-೯೭-೧೬). ಇಂತಹ ವಾಕ್ಯಗಳು ಮತ್ತು ಅವನ ದೂತರ ಲಕ್ಷಣಗಳಿಂದ ಯಮನು ಭಯಂಕರನೆಂದು ತೋರಬಹುದು. ಅಥರ್ವ ವೇದದಲ್ಲಿ ಮತ್ತು ಇತರ ವೈದಿಕ ಇತಿಹಾಸಗಳಲ್ಲಿ, ಮರಣ ಮತ್ತು ಮರಣಾನಂತರದ ದುಃಖಾನುಭವಗಳು ಯಮಕರ್ತೃಕವಾದುವೆಂದು ಹೇಳಿರುವುದರಿಂದ, ಯಮನೇ ಮೃತ್ಯುದೇವತೆಯೆಂದು ಪರಿಗಣಿತನಾಗಿದಾನೆ. ಆದರೆ ಪುರಾಣಗಳಲ್ಲಂತೂ ಕೂಡ, ನರಕವೊಂದೇ ಯಮನ ರಾಜ್ಯವಲ್ಲವೆಂದು ಸ್ಪಷ್ಟವಾಗಿದೆ ಇತರ ಸಂಹಿತೆಗಳಲ್ಲಿಯೂ, ಅಂತಕ, ಮೃತ್ಯು, ನಿರ್ಋತಿ (ರೋಗ) ಇವರುಗಳ ಪಟ್ಟಿಯಲ್ಲಿ ಯಮನೂ ಒಬ್ಬನು (ವಾ. ಸಂ. ೩೯-೧೩; ಅ. ವೇ. ೬-೨೮-೩; ವೈ. ಸಂ. ೨-೫-೬) ಮತ್ತು ಮೃತ್ಯುವು ಅವನ ದೂತ (ಅ. ವೇ. ೫-೨೦-೧೨; ೧೮-೨-೨೭; ಇತ್ಯಾದಿ). ಮೃತ್ಯುವು ಮನುಷ್ಯರಿಗೆ ಅಧಿಪತಿಯೆಂದೂ ಯಮನು ಪ್ರೇತಗಳಿಗೆ ಅಧಿಪತಿಯೆಂದೂ

(ಅ. ವೇ. ೫-೨೪-೧೩, ೧೪), ನಿದ್ರೆಯು (ನಿದ್ರಾಧಿದೇವತೆಯು) ಯಮನ ರಾಜ್ಯದಿಂದ ಬರುತ್ತಾಳೆಂದೂ (ಅ. ವೇ. ೧೯-೫೬-೧) ಹೇಳಿದೆ.

ಯಮ ಎಂಬ ಪದಕ್ಕೆ 'ಅವಳಿ' ಎಂಬರ್ಥದಲ್ಲಿಯೂ ಪ್ರಯೋಗವಿದೆ. ಸಾಧಾರಣವಾಗಿ ಪುಲ್ಲಿಂಗ ಅಥವಾ ಸ್ತ್ರೀಲಿಂಗ ದ್ವಿವಚನದಲ್ಲಿ—ಮತ್ತು ಲಗಾಮು ಅಥವಾ ಮಾರ್ಗದರ್ಶಕ ಎಂಬರ್ಥದಲ್ಲಿಯೂ ಕೆಲವು ಪ್ರಯೋಗಗಳಿವೆ. ಯಮ ಮತ್ತು ಯಮಿಗಳು ಯಮಳರೆಂದೇ ಭಾವನೆ (೧೦-೧೦). ಇತರ ಗ್ರಂಥಗಳಲ್ಲಿ, ಯಮನನ್ನು ಮೃತ್ಯುದೇವತೆ, ದುಷ್ಪಶಿಕ್ಷಕ ಮೊದಲಾದ ರೀತಿಯಲ್ಲಿ ವರ್ಣಿಸುವಾಗ, ಈ ಪದವು ಯಮ್ (ಹತೋಟಿಯಲ್ಲಿಟ್ಟುಕೋ) ಧಾತುವಿನಿಂದ ನಿಷ್ಪನ್ನವಾದುದೆಂದು ಅಭಿಪ್ರಾಯವಿದ್ದರೂ, ಇದಕ್ಕೆ ವೇದಗಳಲ್ಲಿ ಆಧಾರ ವಿಲ್ಲವೇ ಇಲ್ಲವೆನ್ನಬಹುದು.

ಒಂದು ಪಕ್ಷಿಯು—ಸಾಧಾರಣವಾಗಿ ಗೂಬೆ ಅಥವಾ ಕಪೋತ—ಯಮನ ದೂತ (೧೦-೧೬೫-೪; ೧೦-೧೭೩-೬ನ್ನು ಹೋಲಿಸಿ); ಇಲ್ಲೆಲ್ಲಾ ಯಮನೇ ಮೃತ್ಯುವೆಂದು ಭಾವನೆ; ಆದುದರಿಂದ ಯಮ ಮತ್ತು ಮೃತ್ಯುಗಳಿಗೆ ಒಬ್ಬನೇ ದೂತನು (ಅ. ವೇ. ೮-೮-೧೧). ಇನ್ನೂ ಸ್ವಲ್ಪ ವಿಶದವಾಗಿ ಚರ್ಚಿಸಲ್ಪಟ್ಟಿರುವುದು ಯಮನ ನಿಯತ ದೂತರಾದ ಎರಡು ನಾಯಿಗಳ ವಿಷಯ (೧೦-೧೪-೧೦ರಿಂದ ೧೨). ಅವುಗಳಿಗೆ ನಾಲ್ಕು ಕಣ್ಣುಗಳು, ಅಗಲವಾದ ಮೂಗುಗಳು; ಮೈಮೇಲೆಲ್ಲಾ ಚುಕ್ಕೆ ಚುಕ್ಕೆಗಳು ಮತ್ತು ಕಂದುಬಣ್ಣ; ಅವು ಸರಮೆಯ ಮಕ್ಕಳು (ಸಾರಮೇಯ). ಯಮಲೋಕದ ಮಾರ್ಗವನ್ನು ರಕ್ಷಿಸುವ ರಕ್ಷಕರು (೧೦-೧೪-೧೧). ಅಥವಾ ಆ ದಾರಿಯಲ್ಲಿ ಕುಳಿತಿರುತ್ತವೆ (ಅ. ವೇ. ೧೪-೨-೧೨). ಈ ಎರಡು ನಾಯಿಗಳನ್ನೂ ಹಾದು, ಬೇಗ ಬೇಗ ಹೋಗಿ ಪಿತೃಗಳನ್ನು ಸೇರಿಕೋ ಎಂದು ಮೃತನಿಗೆ ಬುದ್ಧಿವಾದ (೧೦-೧೪-೧೦); ಮೃತನನ್ನು ಪಿತೃಗಳಿಗೆ ಒಪ್ಪಿಸಿ, ಅವನಿಗೆ ಕ್ಷೇಮಾರೋಗ್ಯಗಳನ್ನು ಅನುಗ್ರಹಿಸೆಂದು ಯಮನಿಗೆ ಪ್ರಾರ್ಥನೆ. ತಮ್ಮ ಜೀವರೂಪದಲ್ಲಿಯೇ ತೃಪ್ತರಾಗಿ, ಯಮನ ದೂತರಂತೆ, ಮನುಷ್ಯರ ಮಧ್ಯದಲ್ಲಿ ಸಂಚರಿಸುತ್ತಾರೆ. ಸೂರ್ಯನ ಬೆಳಕನ್ನು ಶಾಶ್ವತವಾಗಿ ಅನುಭವಿಸುವಂತೆ ಮನುಷ್ಯರಿಗೆ ಅನುಗ್ರಹ ಮಾಡಬೇಕೆಂದು ಅವರಿಗೂ (ನಾಯಿಗಳಿಗೂ) ಪ್ರಾರ್ಥನ ಇದೆ. ಮನುಷ್ಯರಲ್ಲಿ ಯಾವ ಯಾವ ಕಾಲದಲ್ಲಿ ಯಾರು ಯಾರು ಸಾಯಬೇಕೆಂಬುದನ್ನು ನಿರೀಕ್ಷಿಸುತ್ತಿದ್ದು, ಯಮಲೋಕದ ಮಾರ್ಗದಲ್ಲಿ, ಅಂಥವರನ್ನು ರಕ್ಷಿಸುವುದೇ ಇವರ ಕರ್ಮವಿರಬೇಕು. ದುಷ್ಟರನ್ನು ಈ ಮಾರ್ಗದಲ್ಲಿ, ಈ ನಾಯಿಗಳು ಹೋಗಗೊಡುವುದಿಲ್ಲವೆಂಬುದಕ್ಕೆ ಆಧಾರ ಸಾಲದು. ೭-೫೫-೨ರಿಂದ ೫ ವಾಕ್ಯಗಳಲ್ಲಿ ಈ ಅಭಿಪ್ರಾಯ ಬರುತ್ತದೆಂದು ಹೇಳಬಹುದು. ಅಥರ್ವವೇದದಲ್ಲಿ ಯಮನ ದೂತರನ್ನು ನಿರ್ದೇಶಿಸಲು, ಬಹುವಚನ ಮತ್ತು ದ್ವಿವಚನಗಳೆರಡಲ್ಲಿಯೂ ಪದಗಳು ಪ್ರಯೋಗಿಸಲ್ಪಟ್ಟಿವೆ (ಅ. ವೇ. ೮-೨-೧೧; ೮-೮-೧೧ ಜೊತೆ ೩-೩೦-೬). ಎರಡು ನಾಯಿಗಳಲ್ಲಿ ಒಂದು ಶಬಲಾ, ಮತ್ತೊಂದು ಶ್ಯಾಮ (ಅ. ವೇ. ೮-೧-೯). ಯವ; ಯಮಿಗಳೇ ಈ ಎರಡು ನಾಯಿಗಳೆಂದು ಕೆಲವರೂ, ಸೂರ್ಯ ಚಂದ್ರರೆಂದು ಕೆಲವರೂ ಅಭಿಪ್ರಾಯಪಡುತ್ತಾರೆ. ಯಮನು ಪ್ರಕೃತಿಯ ಒಂದಂಶದ ಪ್ರತಿನಿಧಿಯೆಂದೂ, ಅಗ್ನಿಯರೂಪ ವಿಶೇಷ, ಸೂರ್ಯ, ಸಂಧ್ಯಾಕಾಲ, ಅಥವಾ ಅಸ್ತಮಿಸುವ ಸೂರ್ಯ, ಆದುದರಿಂದ ಮೃತ್ಯು ದೇವತೆ ಇರಬಹುದೆಂದೂ ಅಭಿಪ್ರಾಯಪಡುತ್ತಾರೆ.

ಶ್ರೀ ಚಾಮುಂಡೇಶ್ವರೀ ಎಲೆಕ್ಟ್ರಿಕ್ ಪ್ರೆಸ್, ಕ್ಲಾಕ್ ಟವರ್ ಸ್ಕ್ವೇರ್
ಮೈಸೂರು, 1950